ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೪೧
ವಿಚಾರ ಸಾಹಿತ್ಯಮಾಲೆ – ೫೫

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

# ಸರಹದ್ದುಗಳಿಲ್ಲದ ಸಂತ
## ಸ್ವಾಮಿ ರಂಗನಾಥಾನಂದ ಅವರನ್ನು ಕುರಿತ ನೆನಪುಗಳು

# ಸರಹದ್ದುಗಳಿಲ್ಲದ ಸಂತ

## ಸ್ವಾಮಿ ರಂಗನಾಥಾನಂದ ಅವರನ್ನು ಕುರಿತ ನೆನಪುಗಳು

ಜನ್ಮ ಶತಮಾನೋತ್ಸವ ಕಾಣಿಕೆ

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ

ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ

ಬೆಂಗಳೂರು – ೫೬೦ ೦೫೬

**SARAHADDUGALILLADA SANTA;** (Kannada translation of the anthology of reminiscences relating to Swami Ranganathananda entitled The Monk without Frontiers, edited by Swaraj Mazumdar; Kannada translation by various scholars; Editor-in-Chief of the Kannada edition : **Dr. Pradhan Gurudatta**; Published by **Sri P. Narayana Swamy, Registrar, Kuvempu Bhasha Bharathi Pradhikara**; Kalagrama, Jnana Bharathi, Behind Bangalore University Campus, Mallattahalli, Bangalore - 560 056 ; 2013 ; Pp. xx + 612 (Including Photographs of 16 pages.); Price : Rs. 250/-

Published with the kind permission of Swami Ranganathananda Birth Certenary Celebration Commitiee, HA 244, Sector III, Salt Lake, Kolkata-700097

ಕನ್ನಡ ಆವೃತ್ತಿಯ ಹಕ್ಕುಗಳು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು-೫೬೦೦೫೬

ಪ್ರಥಮ ಮುದ್ರಣ : ೨೦೧೩
ಪುಟಗಳು : xx + ೬೧೨ (ಚಿತ್ರಸಂಪುಟದ ೧೬ ಪುಟಗಳು ಸೇರಿ)
ಬೆಲೆ : ರೂ. ೨೫೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು - ೫೬೦ ೦೫೬

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಶ್ರೀ ವಿಶ್ವನಾಥ್ ಶೆಟ್ಟಿಗಾರ್**

**ISBN : 978-81-921758-2-9**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು - ೫೬೦೦೨೦. ದೂ : ೨೩೩೪೨೭೨೪

ಕರ್ನಾಟಕ ಸರ್ಕಾರ

**ಜಗದೀಶ್ ಶೆಟ್ಟರ್**
ಮುಖ್ಯ ಮಂತ್ರಿ

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಮೊದಲ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ನಿರಂತರವಾಗಿ ಉಪಯುಕ್ತ ಪುಸ್ತಕಗಳ ಪ್ರಕಟಣೆಯೂ ಸೇರಿದಂತೆ ಕನ್ನಡ ನಾಡು ಹಾಗೂ ನುಡಿಯ ವಿಕಾಸಕ್ಕೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಸಂತಸದ ಸಂಗತಿ.

ರಾಷ್ಟ್ರಕವಿ ಕುವೆಂಪುರವರ ಹೆಸರಿನಲ್ಲಿರುವ ಭಾಷಾ ಭಾರತಿ ಪ್ರಾಧಿಕಾರ ತನ್ನ ಹೆಸರನ್ನು ಅನ್ವರ್ಥ ಮಾಡಿಕೊಳ್ಳುವ ರೀತಿಯಲ್ಲಿ ಕ್ರಿಯಾಶೀಲವಾಗಿರುವುದು ಶ್ಲಾಘನೀಯ. ವಿಲ್ ಡ್ಯೂರಾಂಟ್‌ರವರ **''ನಾಗರಿಕತೆಯ ಇತಿಹಾಸ'',** ಜೆ.ಡಿ. ಬರ್ನಾಲ್‌ರವರ **''ಇತಿಹಾಸದಲ್ಲಿ ವಿಜ್ಞಾನ''** ಮುಂತಾದ ಸಂಪುಟಗಳ ಕನ್ನಡ ಅನುವಾದ, ಡಾ. ಬಿ.ಆರ್. ಅಂಬೇಡ್ಕರ್‌ರವರ ಕೃತಿಗಳ ಪರಿಷ್ಕೃತ ಆವೃತ್ತಿಗಳ ಪ್ರಕಟಣೆ, ಭಾರತೀಯ ವಿದ್ಯಾಭವನದ ಸಹಯೋಗದೊಂದಿಗೆ ಹಲವಾರು ಗ್ರಂಥಗಳ, ವೈದ್ಯವಿಜ್ಞಾನ, ವಿಜ್ಞಾನ ತಂತ್ರಜ್ಞಾನಗಳಿಗೆ ಸಂಬಂಧಪಟ್ಟಂತಹ ಬಹುಕ್ಷೇತ್ರಗಳ ಉಪಯುಕ್ತ ಪ್ರಕಟಣೆಗಳ ಹಾಗೂ ಇತರ ಅಗತ್ಯ ಚಟುವಟಿಕೆಗಳ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವ್ಯಕ್ತಪಡಿಸಿರುವ ಬದ್ಧತೆ ಶ್ಲಾಘನೀಯ.

ಕನ್ನಡ ನಾಡಿನ ಜನತೆ ಪ್ರಾಧಿಕಾರದ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಎಲ್ಲ ಪ್ರಕಟಣೆಗಳನ್ನು ಪ್ರೀತಿ ವಿಶ್ವಾಸದಿಂದ ಸ್ವಾಗತಿಸಲಿ ಎಂದು ಆಶಿಸುತ್ತಾ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಎಲ್ಲ ರೀತಿಯಲ್ಲಿಯೂ ಶುಭ ಹಾರೈಸುತ್ತೇನೆ.

**(ಜಗದೀಶ್ ಶೆಟ್ಟರ್)**

ಕರ್ನಾಟಕ ಸರ್ಕಾರ

**ಗೋವಿಂದ ಕಾರಜೋಳ**
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿರುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**

ಕರ್ನಾಟಕ ಸರ್ಕಾರ

**ಬಸವರಾಜು,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

18/12/11

(ಬಸವರಾಜು)

ಕರ್ನಾಟಕ ಸರ್ಕಾರ

**ಕೆ.ಆರ್. ರಾಮಕೃಷ್ಣ,** ಕ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

## ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಕೆ. ಆರ್. ರಾಮಕೃಷ್ಣ)

# ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ-ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ-ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ **'ಶ್ರೀ ರಾಮಾಯಣ ದರ್ಶನಂ'** ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ-ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ.ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'**ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ-ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. **'ಕುವೆಂಪು ಭಾಷಾ ಭಾರತಿ'** ಕುವೆಂಪು ಸಾಹಿತ್ಯದ ಪ್ರಚಾರ-ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ-ಗರಿಮೆಗಳನ್ನು ರಾಷ್ಟ್ರೀಯ-ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರು **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ, ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ-ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೦) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ಸಂತರ ಪರಂಪರೆಯಲ್ಲೇ ವಿಶಿಷ್ಟರೆಂದು ಖ್ಯಾತಿಯನ್ನು ಗಳಿಸಿದ್ದ ಸ್ವಾಮಿ ವಿವೇಕಾನಂದರ ಅಪರಾವತಾರವೆಂದೇ ಪರಿಗಣಿಸಲಾಗಿದ್ದ ಸ್ವಾಮಿ ರಂಗನಾಥಾನಂದರು ವಿವೇಕಾನಂದರಂತೆಯೇ ದೇಶ-ವಿದೇಶಗಳಲ್ಲಿ ಖ್ಯಾತಿಯನ್ನು ಗಳಿಸಿದ್ದರು. ರಾಷ್ಟ್ರೀಯ ಭಾವೈಕ್ಯಕ್ಕಾಗಿ ಇರುವ ಇಂದಿರಾಗಾಂಧಿ ಪ್ರಶಸ್ತಿಯನ್ನು ಅವರಿಗೆ ನೀಡಲಾಗಿತ್ತು. ಅವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಸ್ವಾಮಿ ರಂಗನಾಥಾನಂದ ಜನ್ಮಶತಮಾನೋತ್ಸವ ಸಮಿತಿ ಹೊರತಂದ *Monk without Frontiers* ಎಂಬ ಸಂಸ್ಮರಣ ಗ್ರಂಥ ಈ ವಿಶಿಷ್ಟ ಸಂತರ ಅಪೂರ್ವ ಪ್ರತಿಭೆ, ಜಾತ್ಯತೀತ ಮನೋಧರ್ಮ, ನೈಜ ಧರ್ಮಶ್ರದ್ಧೆ, ವಿಶ್ವಪ್ರೇಮ ಮತ್ತು ಸಾಮಾಜಿಕ ಕಳಕಳಿಯಿಂದ ಕೂಡಿದ್ದ ಅವರ ಬಹುಮುಖೀ ವ್ಯಕ್ತಿತ್ವ ಇವನ್ನು ಮನಗಾಣಿಸುವ ಲೇಖನಗಳನ್ನು ಒಳಗೊಂಡಿದೆ.

ಶ್ರೀ ರಾಮಕೃಷ್ಣ ಮಠಕ್ಕೆ ಸೇರಿದ ವಿವಿಧ ಸ್ವಾಮಿಗಳು, ಶಾರದಾಮಠ ಮತ್ತು ಶಾರದಾ ರಾಮಕೃಷ್ಣ ಮಿಷನ್ನಿನ ಹಲವು ಪರಿವ್ರಾಜಿಕೆಯರು ಹಾಗೂ ಶ್ರೀ ರಂಗನಾಥಾನಂದರ ಭಕ್ತರು ಮತ್ತು ಅಭಿಮಾನಿಗಳು ಕಂಡಿರುವ ಶ್ರೀ ರಂಗನಾಥಾನಂದರ ಸಮಗ್ರ ವ್ಯಕ್ತಿತ್ವದ ವಿವಿಧ ಮುಖಗಳನ್ನು ಚಿತ್ರಿಸಿರುವ ಮೂರು ವಿಭಾಗಗಳನ್ನು ಒಳಗೊಂಡಿದೆ ಈ ಗ್ರಂಥ. ಮೊದಲ ಭಾಗದಲ್ಲಿ ಅವರಿಗೆ ಅರ್ಪಿಸಲಾದ ಪ್ರಶಸ್ತಿ ಪತ್ರವನ್ನೂ ಸೇರಿಸಲಾಗಿದೆ. ಈ ಮಹನೀಯರ ವಿಶಿಷ್ಟ ವ್ಯಕ್ತಿತ್ವವನ್ನು ಮನಗಾಣಿಸಿರುವ ಮಹದ್-ವ್ಯಕ್ತಿಗಳಲ್ಲಿ ರಾಷ್ಟ್ರಪತಿಗಳು, ಪ್ರಧಾನಮಂತ್ರಿಗಳು, ರಾಷ್ಟ್ರೀಯ ಖ್ಯಾತಿಯ ರಾಜಕಾರಣಿಗಳು, ಸಂತರು, ರಾಯಭಾರಿಗಳು, ರಾಜ್ಯಪಾಲರುಗಳು, ವಿದ್ವಾಂಸರು, ದೇಶ-ವಿದೇಶಗಳಲ್ಲಿನ ಅಭಿಮಾನಿಗಳು, ಅನುಯಾಯಿಗಳು, ಸಮಾಜದ ವಿವಿಧ ವರ್ಗಗಳಿಗೆ ಸೇರಿದ ವ್ಯಕ್ತಿಗಳು ಸೇರಿದ್ದಾರೆ. ಒಬ್ಬ ವ್ಯಕ್ತಿ ಹೇಗೆ ವಿಶ್ವಾದರಣೀಯರಾಗಿದ್ದರು ಎಂಬುದು ಆಶ್ಚರ್ಯ-ಆನಂದಗಳನ್ನು ಉಂಟುಮಾಡುತ್ತದೆ. ತತ್ತ್ವಶಾಸ್ತ್ರದ ಮೂಲಚೂಲಗಳನ್ನು ಅರಿತಿದ್ದ, ವಿವಿಧ ಧರ್ಮಗಳ ಸಾರಭೂತ ಅಂಶಗಳನ್ನು ಮೈಗೂಡಿಸಿಕೊಂಡಿದ್ದ, ಆಧುನಿಕ ವೈಜ್ಞಾನಿಕ ಬೆಳವಣಿಗೆಗಳನ್ನು ಅಧ್ಯಾತ್ಮದೊಡನೆ ಮೇಳವಿಸಿ ನಿರೂಪಿಸಬಲ್ಲವರಾಗಿದ್ದ, ಆಬಾಲವೃದ್ಧರಾದಿಯಾಗಿ ಎಲ್ಲರೊಡನೆ ಮುಕ್ತ ಹೃದಯದೊಂದಿಗೆ ಬೆರೆಯಬಲ್ಲವರಾಗಿದ್ದ, ಪ್ರಕಾಂಡ ಪಂಡಿತರಾಗಿದ್ದು, ಅಧ್ಯಾತ್ಮ ವಿಚಾರಗಳನ್ನು ಸುಲಭಗಮ್ಯವಾಗುವಂಥ ಸರಳವೂ, ಉದ್ಬೋಧಕವೂ ಆದ ರೀತಿಯಲ್ಲಿ ನಿರೂಪಿಸಬಲ್ಲಂಥ ಅತ್ಯಂತ ಪ್ರಭಾವಶಾಲಿ ಭಾಷಣಕಾರರಾಗಿದ್ದ ಶ್ರೀ ರಂಗನಾಥಾನಂದರು ಅಪರೂಪದ ಸಾಧಕರಾಗಿದ್ದಾರೆ.

ಅವರ ಈ ಬಹುಮುಖೀ ಸಾಧನೆಯನ್ನು ಮನಗಾಣಿಸುವ ೧೩೩ ಲೇಖನಗಳ ಜೊತೆಗೆ ತಮ್ಮ ಗಮನಕ್ಕೆ ಬಂದ, ಬೇರೆಡೆಗಳಲ್ಲಿ ಪ್ರಕಟವಾಗಿದ್ದ ಇನ್ನೂ ಎರಡು ಲೇಖನಗಳನ್ನು ಅನುಬಂಧವಾಗಿ ಸೇರಿಸಿ, ಈ ಕನ್ನಡ ಆವೃತ್ತಿಯನ್ನು ಹೊರತರಲಾಗುತ್ತಿದೆ. ಕೊನೆಯ ಭಾಗದಲ್ಲಿ ಶ್ರೀ ರಂಗನಾಥಾನಂದರ ಬಹುಮುಖೀ ವ್ಯಕ್ತಿತ್ವ ಮತ್ತು ಸಾಧನೆಯ ಪ್ರತೀಕವಾಗಿರುವ ಚಿತ್ರಸಂಪುಟವನ್ನು ಅಳವಡಿಸಲಾಗಿದೆ. ಸದ್ಧರ್ಮ ಬೋಧಕವಾದ, ನಾಡಿನ ಜನತೆಯನ್ನು ಋಜುಪಥದಲ್ಲಿ ಕೊಂಡೊಯ್ಯಬಹುದಾದ, ಯುವಜನತೆಗೆ ಪ್ರೇರಣೆ-ಪ್ರೋತ್ಸಾಹಗಳನ್ನು ನೀಡಬಲ್ಲಂಥ ಈ ಗ್ರಂಥ ಯಾವುದೇ ಭಾಷೆಗೆ ಗೌರವಪ್ರಾಯವಾಗಬಲ್ಲದು. ಅವರು ರಚಿಸಿರುವ ಅನೇಕ ಗ್ರಂಥಗಳು ಇಂಗ್ಲಿಷ್ ಭಾಷೆಯಲ್ಲಿ ಮಾತ್ರವಲ್ಲದೆ, ಹಲವು ವಿದೇಶೀ ಭಾಷೆಗಳಲ್ಲೂ ಬೆಳಕುಕಂಡಿವೆ. ಕೆಲವು ಗ್ರಂಥಗಳು ಕನ್ನಡದಲ್ಲೂ ಹೊರಬಂದಿವೆ.

ಇಂಥ ಗ್ರಂಥವೊಂದನ್ನು ಹೊರತರಬೇಕಾಗಿರುವ ಔಚಿತ್ಯ ಮತ್ತು ಅರ್ಥಪೂರ್ಣತೆಗಳನ್ನು ಅರಿವು ಮಾಡಿಕೊಟ್ಟ ಪ್ರಸಿದ್ಧ ಸಾಹಿತಿಗಳೂ, ಶ್ರೇಷ್ಠ ಪ್ರಾಧ್ಯಾಪಕರೂ, ಬಹುಭಾಷಾತಜ್ಞರೂ ಆದ ಡಾ. ಪ್ರಭುಶಂಕರ ಅವರಿಗೆ, ಇದಕ್ಕೆ ಅಗತ್ಯವಾಗಿದ್ದ ಅನುಮತಿಯನ್ನು ಉದಾರವಾಗಿ ನೀಡಿದ ಕೋಲ್ಕತ್ತಾದ ಸಂಸ್ಮರಣ ಸಮಿತಿಯ ಪದಾಧಿಕಾರಿಗಳಿಗೆ, ಹೆಚ್ಚಿನ ಮಾಹಿತಿ ಮತ್ತು ಇತರ ವಿವರಗಳನ್ನು ಒದಗಿಸಿದ ಮೈಸೂರಿನ ಶ್ರೀ ರಾಮಕೃಷ್ಣಾಶ್ರಮದ ಸ್ವಾಮೀಜಿಯವರಿಗೆ ಪ್ರಾಧಿಕಾರದ ಕೃತಜ್ಞತಾಪೂರ್ವಕ ವಂದನೆಗಳು.

ಪ್ರಾಧಿಕಾರದ ಕೆಲಸ ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಶ್ರೀ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೂ, ಈ ಸಂಪುಟಗಳು ಸುಂದರವಾಗಿ ಹೊರಬರಲು ಕಾರಣರಾಗಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೂ, ನಮ್ಮ ವಂದನೆಗಳು.

೨೩-೩-೨೦೧೩
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ

# ಪರಿವಿಡಿ


ಮೊದಲಮಾತು v
ಶುಭಾಕಾಂಕ್ಷೆ vi
ಹಾರೈಕೆ vii
ಪ್ರಾಸ್ತಾವಿಕ ನುಡಿ viii
ಪೀಠಿಕೆ ix


## ಭಾಗ ೧
## ಇಂದಿರಾ ಗಾಂಧೀ ಪ್ರಶಸ್ತಿ ನೀಡಿಕೆ ಸನ್ಮಾನ ಪತ್ರ

## ಭಾಗ ೨
## ರಾಮಕೃಷ್ಣ ಮಠದ ಸಂನ್ಯಾಸಿಗಳ ದೃಷ್ಟಿಯಲ್ಲಿ


೧. ಅಸಾಧಾರಣ ಆಧ್ಯಾತ್ಮಿಕ ಶಕ್ತಿ : ಸ್ವಾಮಿ ಆತ್ಮಸ್ಥಾನಂದ; ಅನು: ಎಚ್. ಎನ್. ಮುರಳೀಧರ ೯
೨. ಮುನ್ನಡೆಗಾಗಿ ಹಿನ್ನೋಟ : ಸ್ವಾಮಿ ಪ್ರಭಾನಂದ; ಅನು: ಎಚ್. ಎನ್. ಮುರಳೀಧರ ೧೨
೩. ವಿಶಿಷ್ಟ ಜೀವನ : ಸ್ವಾಮಿ ಸ್ಮರಣಾನಂದ; ಅನು: ಎಚ್. ಎನ್. ಮುರಳೀಧರ ೧೬
೪. ಶ್ರೇಷ್ಠತೆಯ ಸಾಕಾರ : ಸ್ವಾಮಿ ಭಜನಾನಂದ; ಅನು: ಎಚ್. ಎನ್. ಮುರಳೀಧರ ೨೦
೫. ರಾಮಕೃಷ್ಣ ಆಂದೋಲನದ ಉತ್ಕೃಷ್ಟ ಸಂದೇಶಕಾರ : ಸ್ವಾಮಿ ಜಿತಾತ್ಮಾನಂದ; ಅನು: ಎಚ್. ಎನ್. ಮುರಳೀಧರ ೨೮
೬. ಶೋಭಾಯಮಾನವಾದ ಮತ್ತು ವಿಶೇಷವಾದ ಜೀವನ : ಸ್ವಾಮಿ ತಥಾಗತಾನಂದ; ಅನು: ಎಚ್. ಎನ್. ಮುರಳೀಧರ ೪೦
೭. ಮಹಾನತೆಯ ಪ್ರಪಂಚದ ಒಂದು ಕಿಡಿ : ಸ್ವಾಮಿ ಬಾಣೇಶಾನಂದ; ಅನು: ವಿ. ರಘು ೫೦
೮. ಸ್ವಾಮಿ ರಂಗನಾಥಾನಂದಜೀಯವರ ದಿವ್ಯಸ್ಮೃತಿ : ಸ್ವಾಮಿ ಮುಖ್ಯಾನಂದ; ಅನು: ವಿ. ರಘು ೫೨
೯. ಮಾನವ ರೂಪದ ದೈವತ್ವ : ಸ್ವಾಮಿ ಒಬ್ಬ ಸಂನ್ಯಾಸಿ; ಅನು: ವಿ. ರಘು ೬೦
೧೦. ಅವರೊಬ್ಬ ಮಹಾತ್ಮ : ಸ್ವಾಮಿ ಸರ್ವಾಗತಾನಂದ; ಅನು: ವಿ. ರಘು ೬೩
೧೧. ತುಳಿತಕ್ಕೊಳಗಾದವರ ಬಗೆಗಿನ ಅಪಾರ ಕಾಳಜಿ : ಸ್ವಾಮಿ ನಿಖಾಲಾತ್ಮಾನಂದ; ಅನು: ವಿ. ರಘು ೬೭
೧೨. ಮಹಾತ್ಮ : ಸ್ವಾಮಿ ಗೋಲೋಕಾನಂದ; ಅನು: ವಿ. ರಘು ೭೨
೧೩. ಕೆಲವು ನೆನಪುಗಳು : ಸ್ವಾಮಿ ಅನನ್ಯಾನಂದ; ಅನು: ವಿ. ರಘು ೭೫
೧೪. ಕಟ್ಟಾ ಪರಿಪೂರ್ಣತಾವಾದಿ : ಸ್ವಾಮಿ ನಿಖಿಲೇಶ್ವರಾನಂದ; ಅನು: ವಿ. ರಘು ೮೪
೧೫. ಮಹಾ ಚೇತನಕ್ಕೆ ಶ್ರದ್ಧಾಂಜಲಿ : ಸ್ವಾಮಿ ಹರ್ಷಾನಂದ; ಅನು: ವಿ. ರಘು ೮೭
೧೬. ಅವರ ಮಾನವೀಯ ಮತ್ತು ದಿವ್ಯ ವ್ಯಕ್ತಿತ್ವದ ಇಣುಕುನೋಟಗಳು : ಸ್ವಾಮಿ ಕೀರ್ತಿದಾನಂದ; ಅನು: ಡಾ. ಪ್ರಭುಶಂಕರ ೮೯

೧೭. ನಾನು ಸ್ವಾಮೀಜಿಯವರ ಕಾರ್ಯಕ್ಕಾಗಿ ಮತ್ತೆ ಬರುತ್ತೇನೆ : ಸ್ವಾಮಿ ನಿರ್ಮುಕ್ತಾನಂದ;
ಅನು: ಜಿ. ಎಸ್. ಜಯದೇವ ೧೦೫
೧೮. ಅವರ ಪ್ರೀತಿ ನಮ್ಮನ್ನು ಸಮ್ಮೋಹಗೊಳಿಸಿತ್ತು : ಸ್ವಾಮಿ ತತ್ತ್ವಬೋಧಾನಂದ;
ಅನು: ಜಿ. ಎಸ್. ಜಯದೇವ ೧೦೭
೧೯. ಧ್ಯೇಯವಾದಿ ಸನ್ಯಾಸಿ : ಸ್ವಾಮಿ ಸುನಿರ್ಮಲಾನಂದ; ಅನು: ಜಿ. ಎಸ್. ಜಯದೇವ ೧೧೨
೨೦. ವಾಸ್ತವಾರ್ಥದಲ್ಲಿನ ವೇದಾಂತಿ : ಸ್ವಾಮಿ ಶಿತಿಕಂಠಾನಂದ; ಅನು: ಜಿ. ಎಸ್. ಜಯದೇವ ೧೧೬
೨೧. ಅವರದು ವಿಶ್ವವ್ಯಾಪಕವಾದ ವ್ಯಕ್ತಿತ್ವ : ಸ್ವಾಮಿ ವೀತಮೋಹನಾನಂದ; ಅನು: ಜಿ. ಎಸ್. ಜಯದೇವ ೧೧೮
೨೨. ಪವಿತ್ರ ಸಹವಾಸದಲ್ಲಿ ಬೆಳಕನ್ನು ಪಡೆದ ಕ್ಷಣಗಳು : ಸ್ವಾಮಿ ಶಶಾಂಕಾನಂದ;
ಅನು: ಜಿ. ಎಸ್. ಜಯದೇವ ೧೨೦
೨೩. ನಾವು ಅವರ ಸಮಾನರು ಎಂಬಂತೆ : ಸ್ವಾಮಿ ನಿಃಸ್ವಾನಂದ; ಅನು: ಜಿ. ಎಸ್. ಜಯದೇವ ೧೩೧
೨೪. ಅವರು ಬ್ರಹ್ಮಜ್ಞಾನಿಗಳು ಎಂಬುದನ್ನು ಅರಿತುಕೊಳ್ಳಿ : ಸ್ವಾಮಿ ವೇದಪುರುಷಾನಂದ;
ಅನು: ವಿ. ಕೃಷ್ಣ ೧೩೨
೨೫. ಎಲ್ಲರ ಗೆಳೆಯ : ಸ್ವಾಮಿ ಶಕ್ತಾನಂದ; ಅನು: ವಿ. ಕೃಷ್ಣ ೧೩೭
೨೬. ಸ್ವಂತ ಬೆಳಕಿನಲ್ಲಿ ಬೆಳಗಿದವರು : ಸ್ವಾಮಿ ಮುಕ್ತಿರೂಪಾನಂದ; ಅನು: ವಿ. ಕೃಷ್ಣ ೧೩೮
೨೭. ಪರಮಹಂಸರ ನಿಜವಾದ ಭಕ್ತ : ಸ್ವಾಮಿ ಶಿವಪ್ರಸಾದಾನಂದ; ಅನು: ವಿ. ಕೃಷ್ಣ ೧೪೨
೨೮. ಸ್ವಾಮಿ ರಂಗನಾಥಾನಂದರು– ನಾನು ಕಂಡಂತೆ : ಸ್ವಾಮಿ ಸುರೇಶಾನಂದ; ಅನು: ವಿ. ಕೃಷ್ಣ ೧೪೩
೨೯. ಕ್ರಿಯಾತ್ಮಕ ವ್ಯಕ್ತಿತ್ವ : ಸ್ವಾಮಿ ಆತ್ಮಘನಾನಂದ; ಅನು: ವಿ. ಕೃಷ್ಣ ೧೪೮
೩೦. ಮಾನವರಲ್ಲಿ ದೇವರನ್ನು ಕಂಡ ವಿಶ್ವಮಾನವ : ಸ್ವಾಮಿ ಆತ್ಮೇಶಾನಂದ; ಅನು: ವಿ. ಕೃಷ್ಣ ೧೪೯
೩೧. ಬೇರೆಯವರಲ್ಲಿರುವ ಉತ್ತಮಾಂಶಗಳನ್ನು ಹೊರಗೆಳೆಯುತ್ತಿದ್ದ ಮಹಾರಾಜ್ :
ಸ್ವಾಮಿ ರಾಮಾನುಜಾನಂದ; ಅನು: ವಿ. ಕೃಷ್ಣ ೧೫೨
೩೨. ಆತ್ಮಶಕ್ತಿ ಮತ್ತು ಭಗವತ್ಕೃಪೆ ಮನುಷ್ಯನನ್ನು ಶ್ರೇಷ್ಠನನ್ನಾಗಿಸುತ್ತವೆ : ಸ್ವಾಮಿ ಬೋಧಿಸತ್ವಾನಂದ;
ಅನು: ವಿ. ಕೃಷ್ಣ ೧೫೪
೩೩. ಕೋಪವನ್ನು ಗೆಲ್ಲುವ ಬಗೆಯನ್ನು ಅವರು ನನಗೆ ತಿಳಿಸಿಕೊಟ್ಟರು : ಸ್ವಾಮಿ ಸ್ವಪ್ರಭಾನಂದ;
ಅನು: ವಿ. ಕೃಷ್ಣ ೧೬೦
೩೪. ದೇವರ ಬಗೆಗಿದ್ದ ತೀವ್ರಾಸಕ್ತಿ, ಮಾನವರ ಬಗೆಗಿದ್ದ ಪ್ರೀತಿ– ಇವುಗಳ ಮೂರ್ತಸ್ವರೂಪ:
ಸ್ವಾಮಿ ಅಸೀಮಾತ್ಮಾನಂದ; ಅನು: ವಿ. ಕೃಷ್ಣ ೧೬೨
೩೫. ಸ್ವಾಮಿ ರಂಗನಾಥಾನಂದಜೀ ಮಹಾರಾಜ್ ಅವರ ನೆನಪುಗಳು : ಸ್ವಾಮಿ ಆಸಕ್ತಾನಂದ;
ಅನು: ವಿ. ಕೃಷ್ಣ ೧೭೬
೩೬. ಸ್ವಾಮಿ ರಂಗನಾಥಾನಂದ ಅವರ ನೆನಪುಗಳು : ಸ್ವಾಮಿ ಸತ್ಯಲೋಕಾನಂದ; ಅನು: ವಿ. ಕೃಷ್ಣ ೧೮೪
೩೭. ಆದರ್ಶಪ್ರಾಯರಾದ ಋಷಿ : ಸ್ವಾಮಿ ಬುದ್ಧದೇವಾನಂದ; ಅನು: ವಿ. ಕೃಷ್ಣ ೧೯೨

**ಭಾಗ ೩**

**ಶಾರದಾಮಠದ ಮತ್ತು ರಾಮಕೃಷ್ಣ ಶಾರದಾ ಮಿಷನ್ನಿನ ಸಂನ್ಯಾಸಿನಿಯರ ದೃಷ್ಟಿಯಲ್ಲಿ**

೩೮. ಅವರು ನಮಗೆ ಶಕ್ತಿ, ಬೆಂಬಲ, ಧೈರ್ಯ ಮತ್ತು ಸ್ಫೂರ್ತಿಗಳನ್ನು ನೀಡಿದರು :
ಪ್ರವ್ರಾಜಿಕಾ ಅಜಯಪ್ರಾಣಾ; ಅನು: ಆತ್ಮಜನಾನಂದ ೨೦೩

೩೯. ಅವರು ‘ನಮ್ಮವರೇ’ ಆಗಿದ್ದರು : ಪ್ರವ್ರಾಜಿಕಾ ಧ್ರುವಪ್ರಾಣಾ; ಅನು: ಆತ್ಮಜನಾನಂದ ೨೦೭
೪೦. ಪರಿಪೂರ್ಣ ವೇದಾಂತಿ : ಪ್ರವ್ರಾಜಿಕಾ ಆತ್ಮಪ್ರಾಣಾ; ಅನು: ಆತ್ಮಜನಾನಂದ ೨೧೦
೪೧. ನಾನು ಆಶ್ರಮಕ್ಕೆ ಧಾವಿಸಿದೆ : ಪ್ರವ್ರಾಜಿಕಾ ಶ್ರೀಕಾಂತಪ್ರಾಣಾ; ಅನು: ಆತ್ಮಜನಾನಂದ ೨೧೨

## ಭಾಗ ೪
## ಭಕ್ತರ ಮತ್ತು ಅಭಿಮಾನಿಗಳ ದೃಷ್ಟಿಯಲ್ಲಿ

೪೨. ಒಬ್ಬ ಅಸಾಧಾರಣ ವ್ಯಕ್ತಿ : ಶ್ರೀಮತಿ ಇಂದಿರಾಗಾಂಧಿ; ಅನು: ಆತ್ಮಜನಾನಂದ ೨೧೯
೪೩. ನಮ್ಮ ದೇಶದ ಸಂಸ್ಕೃತಿ ಮೂರ್ತಿವೆತ್ತ ರಾಯಭಾರಿ : ಶ್ರೀ ಬಿ. ಡಿ. ಜತ್ತಿ; ಅನು: ಆತ್ಮಜನಾನಂದ ೨೨೦
೪೪. ನಿಜವಾದ ಸಂನ್ಯಾಸಿ : ಡಾ. ಮನಮೋಹನ್ ಸಿಂಗ್; ಅನು: ಆತ್ಮಜನಾನಂದ ೨೨೧
೪೫. ಸ್ವಾಮಿ ರಂಗನಾಥಾನಂದರ ಪಾದದಡಿಯಲ್ಲಿ : ಶ್ರೀ ಎಲ್. ಕೆ. ಅಡ್ವಾಣಿ; ಅನು: ಆತ್ಮಜನಾನಂದ ೨೨೩
೪೬. ಆಜನ್ಮ ಶಿಕ್ಷಕ : ಶ್ರೀ ಪಿ. ಸಿ. ಅಲೆಕ್ಸಾಂಡರ್; ಅನು: ಆತ್ಮಜನಾನಂದ ೨೨೭
೪೭. ಸ್ವಾಮಿ ರಂಗನಾಥಾನಂದರಿಗೆ ಶ್ರದ್ಧಾಂಜಲಿ : ಡಾ. ಕರಣ್‌ಸಿಂಗ್; ಅನು: ಆತ್ಮಜನಾನಂದ ೨೩೦
೪೮. ಒಬ್ಬ ಮಹಾತ್ಮನಿಗೆ ಶ್ರದ್ಧಾಂಜಲಿ : ಶ್ರೀ ಐ. ಕೆ. ಗುಜ್ರಾಲ್; ಅನು: ಆತ್ಮಜನಾನಂದ ೨೩೨
೪೯. ನನ್ನ ಮಾನಸ ಗುರು : ಶ್ರೀ ಆರ್. ಕೆ. ತ್ರಿವೇದಿ; ಅನು: ಆತ್ಮಜನಾನಂದ ೨೩೫
೫೦. ಒಂದು ದೇದೀಪ್ಯಮಾನ ಆತ್ಮ : ಸ್ರೀ ಟಿ. ಎನ್. ಚತುರ್ವೇದಿ; ಅನು: ಕೆ. ಆರ್. ಮೋಹನ್ ೨೩೭
೫೧. ಮರೆಯಲಾಗದ ಸ್ವಾಮಿ ರಂಗನಾಥಾನಂದ : ಶ್ರೀ ನಿತೇಶ್ ಸೇನ್‌ಗುಪ್ತ;
ಅನು: ಕೆ. ಆರ್. ಮೋಹನ್ ೨೪೨
೫೨. ಒಬ್ಬ ಉಜ್ವಲ ವ್ಯಕ್ತಿಯ ನೆನಪುಗಳು : ಶ್ರೀ ಗಿರೀಶ್ ಎನ್. ಮೆಹ್ರಾ; ಅನು: ಕೆ. ಆರ್. ಮೋಹನ್ ೨೪೪
೫೩. ವಿದ್ವತ್‌ಪೂರ್ಣ, ಕಾಂತಿಯುಕ್ತ, ಪ್ರಶಾಂತ ಮಹಾಜ್ಞಾನಿ : ಶ್ರೀ ಜೆ. ರಾಮಬಾಬು;
ಅನು: ಕೆ. ಆರ್. ಮೋಹನ್ ೨೪೭
೫೪. ಇವತ್ತು ನಾನೇದರೂ ಆಗಿದ್ದರೆ, ಅದು ಅವರ ಅನುಗ್ರಹ : ಶ್ರೀ ಕೆ. ಕೆ. ಚೋಪ್ರಾ;
ಅನು: ಕೆ. ಆರ್. ಮೋಹನ್ ೨೫೩
೫೫. ಕಾಶ್ಮೀರದಲ್ಲಿ ಕೆಲವು ಪ್ರಮುಖ ಘಟನೆಗಳು : ಶ್ರೀ ಸಿ. ಎಲ್. ಸಪ್ರು;
ಅನು: ಕೆ. ಆರ್. ಮೋಹನ್ ೨೫೬
೫೬. ಒಬ್ಬ ಪ್ರಾಮಾಣಿಕ ಗುರು : ಶ್ರೀ ಲಾಲೀ ರಾಮು ರಾಮದಾಸ್; ಅನು: ಕೆ. ಆರ್. ಮೋಹನ್ ೨೫೯
೫೭. ಒಬ್ಬ ಮಹಾನ್ ಸಂತ ಮತ್ತು ಮಾನವತಾವಾದಿ : ಶ್ರೀ ಎಂ. ಲಕ್ಷ್ಮೀಕುಮಾರ್;
ಅನು: ಕೆ. ಆರ್. ಮೋಹನ್ ೨೬೧
೫೮. ಸ್ವಾಮಿ ರಂಗನಾಥಾನಂದ : ಶ್ರೀಮತಿ ಕಪಿಲಾ ವಾತ್ಸ್ಯಾಯನ; ಅನು: ಕೆ. ಆರ್. ಮೋಹನ್ ೨೬೪
೫೯. ಭಾರತದ ಮಹಾಪ್ರಾಜ್ಞರಲ್ಲಿ ಓರ್ವರು : ಶ್ರೀ ಎ.ಎಲ್. ನಾರಾಯಣನ್;
ಅನು: ಕೆ. ಆರ್. ಮೋಹನ್ ೨೬೮
೬೦. ಭಾರತೀಯ ವಿದ್ಯಾಭವನ ಮತ್ತು ಸ್ವಾಮಿ ರಂಗನಾಥಾನಂದ : ಶ್ರೀ ಮತ್ತೂರು ಕೃಷ್ಣಮೂರ್ತಿ;
ಅನು: ಕೆ. ಆರ್. ಮೋಹನ್ ೨೬೯
೬೧. ನನ್ನ ಪ್ರಾಮಾಣಿಕ ಮಿತ್ರ ಮತ್ತು ಗುರು : ಶ್ರೀ ಇ. ಪಿ. ಚೆಲಿಶೆವ್; ಅನು: ಕೆ. ಆರ್. ಮೋಹನ್ ೨೭೦

೬೨. ಸ್ವಾಮಿ ರಂಗನಾಥಾನಂದರ ಜತೆ ನನ್ನ ಭೇಟಿಗಳು : ಶ್ರೀ ಇರಿನಾ ಪಿ. ಚೆಲಿಶೇವ್;
ಅನು: ಕೆ. ಆರ್. ಮೋಹನ್ ೨೭೬
೬೩. ಸ್ವಾಮಿ ರಂಗನಾಥಾನಂದ: ಒಂದು ಅಚ್ಚಳಿಯದ ಸಾನ್ನಿಧ್ಯ : ಶ್ರೀ ಎಂ. ಶಿವರಾಮಕೃಷ್ಣ;
ಅನು: ಕೆ. ಆರ್. ಮೋಹನ್ ೨೭೯
೬೪. ಮಹಾತ್ಮರ ನೆನಪುಗಳು : ಶ್ರೀ ರತ್ನಪ್ರೊವಾ ಸೇಠ್; ಅನು: ನಿತ್ಯಸ್ಥಾನಂದ ೨೮೬
೬೫. ಮಹಾಪುರುಷರೊಬ್ಬರ ನಿತ್ಯನೂತನ ಸ್ಮೃತಿ : ಶ್ರೀ ಪಿ. ಪರಮೇಶ್ವರನ್;
ಅನು: ನಿತ್ಯಸ್ಥಾನಂದ ೨೯೬
೬೬. ವಿವೇಕಾನಂದ ಕೇಂದ್ರದ ಶಕ್ತಿನಿಧಿ : ಶ್ರೀಮತಿ ನಿವೇದಿತಾ ರಘುನಾಥ ಭಿಡೇ;
ಅನು: ನಿತ್ಯಸ್ಥಾನಂದ ೩೦೦
೬೭. ಪ್ರೇಮಮೂರ್ತಿ : ಶ್ರೀ ಕೇದಾರನಾಥ ಲಾಭ್; ಅನು: ನಿತ್ಯಸ್ಥಾನಂದ ೩೦೪
೬೮. ಕೇಳುಗರನ್ನು ಮಂತ್ರಮುಗ್ಧರಾಗಿಸಿರುವ ಮಹಾ ವಾಗ್ಮಿ : ಡಾ. ಪ್ರಭುಶಂಕರ;
ಅನು: ಡಾ. ಪ್ರಭುಶಂಕರ ೩೦೯
೬೯. ಅವರು ನನ್ನ ಬಾಳಿಗೆ ರಾಮಕೃಷ್ಣರನ್ನು ತಂದುಕೊಟ್ಟರು : ಶ್ರೀಮತಿ ಕಮಲಾ ಜಯರಾಮ್;
ಅನು: ವಿ. ಕೃಷ್ಣ ೩೧೭
೭೦. ಸ್ವಾಮಿ ರಂಗನಾಥಾನಂದರ ನೆನಪು ನಮ್ಮಲ್ಲಿ ಅಮರವಾಗಿದೆ : ಶ್ರೀಮತಿ ಸಮಿತಾರಾಯ್;
ಅನು: ವಿ. ಕೃಷ್ಣ ೩೨೬
೭೧. ವಿಶ್ವವ್ಯಾಪಿ ಸ್ವಾಮಿ ರಂಗನಾಥಾನಂದರು : ಶ್ರೀ ಯೋ ವಾನ್ ಓರ್ಷೋವೆನ್; ಅನು: ವಿ. ಕೃಷ್ಣ ೩೩೨
೭೨. ಹೃದಯದಾಳದಿಂದ ಮೂಡಿಬಂದ ನೆನಪುಗಳು :
ಶ್ರೀಮತಿ ಮಾರಿಯಾ ಟ್ರಾಂಪ್ ಮತ್ತು ಹರ್ಮಾ ವ್ಯಾನ್ ಜೋನ್; ಅನು: ವಿ. ಕೃಷ್ಣ ೩೩೪
೭೩. ನನ್ನಲ್ಲಿ ಅಧ್ಯಾತ್ಮದ ಅರಿವನ್ನು ಜಾಗೃತಗೊಳಿಸಿದವರು :
ಶ್ರೀಮತಿ ಆಂಟೊಯ್ನೆಟ್ ಡಬ್ಲ್ಯು. ಎಮ್. ಥೋಯೆನ್ (ಚಂದ್ರಾವಳಿ); ಅನು: ವಿ. ಕೃಷ್ಣ ೩೩೮
೭೪. ಸಾಕ್ಷಾತ್ಕಾರವನ್ನು ಪಡೆದ ಮಹಾನುಭಾವ : ಸಿಗ್‌ಫ್ರೈಡ್ ವ್ಯಾನ್ ಹೇಕ್; ಅನು: ವಿ. ಕೃಷ್ಣ ೩೪೧
೭೫. ಶ್ರೀ ರಂಗನಾಥಾನಂದರ ಭೇಟಿ – ಒಂದು ಆಹ್ಲಾದಕರ ಅನುಭವ : ಶ್ರೀ ಸೂರ್ಯಗ್ರೀನ್;
ಅನು: ವಿ. ಕೃಷ್ಣ ೩೪೩
೭೬. ನನ್ನ ಆಧ್ಯಾತ್ಮಿಕ ಮಾತೆ : ಶ್ರೀಮತಿ ರಿಯಾ ಕೆಲ್ಡರ್‌ಮನ್ – ಡಿ ವಾರ್ಡ್; ಅನು: ವಿ. ಕೃಷ್ಣ ೩೫೩
೭೭. ಅಸಾಧಾರಣ ಪ್ರತಿಭಾಶಾಲಿ : ಶ್ರೀ ರಘುರಾಮನ್; ಅನು: ವಿ. ಕೃಷ್ಣ ೩೫೫
೭೮. ಅಧ್ಯಾತ್ಮಕ್ಷೇತ್ರದ ದೈತ್ಯ : ಶ್ರೀ ಅಮೃತಲಿಂಗಂ ಚಿನ್ನತಂಬಿ; ಅನು: ವಿ. ಕೃಷ್ಣ ೩೫೯
೭೯. ಎರಡನೆಯ ವಿವೇಕಾನಂದ : ಶ್ರೀ ಸುಮಿತ್ರನೋಮ; ಅನು: ವಿ. ಕೃಷ್ಣ ೩೬೧
೮೦. ಅವರ ಮಲೇಷಿಯಾ ಭೇಟಿಗಳು– ಕೆಲವು ಚಿಂತನೆಗಳು :
ತೋ ಪುಆನ್ (ಶ್ರೀಮತಿ) ಉಮಾಸುಂದರಿ ಸಂಬಂಧನ್; ಅನು: ವಿ. ಕೃಷ್ಣ ೩೬೩
೮೧. ಅವಕಾಶವಂಚಿತರ ಸೇವೆಯನ್ನು ಮಾಡಲು ನಮ್ಮನ್ನು ಪ್ರೋತ್ಸಾಹಿಸಿದವರು ಅವರು
ಶ್ರೀಮತಿ ಸುಮನ್ ರಾಜ್ಯಾಧ್ಯಕ್ಷ; ಅನು: ವಿ. ಕೃಷ್ಣ ೩೬೬
೮೨. ಮಹಾಪುರುಷ ಸ್ವಾಮಿ ರಂಗನಾಥಾನಂದರು : ಶ್ರೀ ಎಸ್. ಜಯರಾಮನ್;
ಅನು: ಎಚ್. ಸಿ. ವಿಶ್ವನಾಥ್ ೩೬೮

೮೩. ಅವರನ್ನು ನಾನು ಹೇಗೆ ಮರೆಯಲಿ? : ಶ್ರೀ ಇ. ವಿ. ಎನ್. ಚಾರಿ;
ಅನು: ಎಚ್. ಸಿ. ವಿಶ್ವನಾಥ್ ೩೭೫
೮೪. ಅವರ ಉಪಸ್ಥಿತಿಯನ್ನು ನಾನು ಯಾವಾಗಲೂ ಅನುಭವಿಸುತ್ತೇನೆ : ಶ್ರೀ ಕೃಷ್ಣ ಮುರಾರಿ;
ಅನು: ಎಚ್. ಸಿ. ವಿಶ್ವನಾಥ್ ೩೭೮
೮೫. ನನ್ನ ಮಿತ್ರ, ತತ್ತ್ವಜ್ಞಾನಿ ಮತ್ತು ಮಾರ್ಗದರ್ಶಕ : ಡಾ. ಶುನಿಲಾ ಮಲಿಕ್;
ಅನು: ಎಚ್. ಸಿ. ವಿಶ್ವನಾಥ್ ೩೮೨
೮೬. ಅವರು ನಮ್ಮ ಜೀವನಗಳನ್ನು ರೂಪಿಸಿದರು: ಶ್ರೀಮತಿ ಎಸ್. ಲಕ್ಷ್ಮೀದೇವಿ;
ಅನು: ಎಚ್. ಸಿ. ವಿಶ್ವನಾಥ್ ೩೮೭
೮೭. ನನ್ನ ಜೀವನದ ಇಂಧನ : ಶ್ರೀಮತಿ ತಾರಾದೇವಿ ಎಸ್. ಅಶೋಕ್;
ಅನು: ಎಚ್. ಸಿ. ವಿಶ್ವನಾಥ್ ೩೮೯
೮೮. ಅವರು ನನಗೆ ಮಾರ್ಗದರ್ಶನ ಮಾಡುತ್ತಲೇ ಇರುತ್ತಾರೆ : ಶ್ರೀಮತಿ ಎಸ್. ಉಮಾದೇವಿ;
ಅನು: ಎಚ್. ಸಿ. ವಿಶ್ವನಾಥ್ ೩೯೨
೮೯. ಮಹಾನ್ ಆತ್ಮ ಮತ್ತು ಗುರುವಿನ ಸ್ಮರಣೆಯಲ್ಲಿ : ಶ್ರೀಮತಿ ಜಯಾ ಎಡಿತ್ ಕೌಲ್‌ಸನ್;
ಅನು: ಎಚ್. ಸಿ. ವಿಶ್ವನಾಥ್ ೩೯೫
೯೦. ಒಂದು ಮಹಾಸೌಭಾಗ್ಯ : ಶ್ರೀ ರಾಜಕುಮಾರ್ ವೀರ್; ಅನು: ಎಚ್. ಸಿ. ವಿಶ್ವನಾಥ್ ೩೯೭
೯೧. ಪ್ರೀತಿಯ ಕ್ಷೇತ್ರ : ಶ್ರೀಮತಿ ಸುಜಾತಾ ಲೀಮನ್; ಅನು: ಎಚ್. ಸಿ. ವಿಶ್ವನಾಥ್ ೩೯೯
೯೨. ಪೂಜ್ಯ ಸ್ವಾಮೀಜಿಯವರ ಬಗೆಗಿನ ಮೊದಲ ನೆನಪುಗಳು : ಶ್ರೀಮತಿ ನಿರ್ಮಲಾ ಬಿಡಾನಿ;
ಅನು: ಎಚ್. ಸಿ. ವಿಶ್ವನಾಥ್ ೪೦೨
೯೩. ಸರಳ ಜೀವನ, ಉನ್ನತ ಚಿಂತನ : ಶ್ರೀಮತಿ ಮೀನಾಕ್ಷಿ ಶಿವರಾಮಕೃಷ್ಣನ್;
ಅನು: ಎಚ್. ಸಿ. ವಿಶ್ವನಾಥ್ ೪೦೯
೯೪. ಅದ್ಭುತವಾದ ಸ್ವಾಮೀಜಿ : ಶ್ರೀಮತಿ ಫಾಂಟೇನ್ ಎಪ್‌ಲರ್; ಅನು: ಎಚ್. ಸಿ. ವಿಶ್ವನಾಥ್ ೪೧೨
೯೫. ಪ್ರಬುದ್ಧಮಯಿ ಗುರು : ಶ್ರೀಮತಿ ವೊನೆ ಮ್ಯಾಲಿಕೆ; ಅನು: ಡಾ. ಶ್ರೀರಾಮಭಟ್ಟ ೪೧೩
೯೬. ಜ್ಞಾನ ಪ್ರದೀಪ : ಶ್ರೀಮತಿ ವೀಣಾರಾವ್; ಅನು: ಡಾ. ಶ್ರೀರಾಮಭಟ್ಟ ೪೨೦
೯೭. ಬರ್ಲಿನ್ ಉಪನ್ಯಾಸಗಳು ಮತ್ತು ಅವುಗಳ ಸಮಕಾಲೀನ ಪ್ರಸ್ತುತತೆ : ಶ್ರೀ ಹಿಲ್ಬ್ರೂಡ್ ರುಸ್ತೌ;
ಅನು: ಡಾ. ಶ್ರೀರಾಮಭಟ್ಟ ೪೨೩
೯೮. ಅವರು ಈ ಜಗದ ವಿಶೇಷ ಸೃಷ್ಟಿ : ಶ್ರೀ ದಿಗಂಬರ್ ಪಾತ್ರ; ಅನು: ಡಾ. ಶ್ರೀ ರಾಮಭಟ್ಟ ೪೩೨
೯೯. ನನ್ನ ದೌರ್ಬಲ್ಯವನ್ನು ಮೀರಿನಿಲ್ಲಲು ನನಗವರು ನೆರವಾದರು : ಶ್ರೀ ಜಿ. ಅಖಿಲಾಂಡಮ್;
ಅನು: ಡಾ. ಶ್ರೀರಾಮಭಟ್ಟ ೪೩೫
೧೦೦. ತಂದೆಯೂ ನೀನೆ, ತಾಯಿಯೂ ನೀನೆ : ಶ್ರೀ ಗ್ಯಾಬ್ರಿಯೆಲ್ ಅರ್ಪಿತಾ ಸ್ಪೀಯರ್;
ಅನು: ಡಾ. ಶ್ರೀರಾಮಭಟ್ಟ ೪೩೯
೧೦೧. ನನ್ನ ಬದುಕಿಗೆ ಅವರು ನೀಡಿದ ವಿಭಿನ್ನ ತಿರುವು : ಶ್ರೀಮತಿ ಗೀತಾ ದಾಸ್;
ಅನು: ಡಾ. ಶ್ರೀರಾಮಭಟ್ಟ ೪೪೬
೧೦೨. ವಿಜ್ಞಾನ–ತಂತ್ರಜ್ಞಾನಗಳ ನಡುವಣ ಸೇತುಬಂಧ : ಶ್ರೀ ಎಂ.ಎಸ್. ವಲಿಯಾತನ್;
ಅನು: ಡಾ. ಶ್ರೀರಾಮಭಟ್ಟ ೪೫೫

೧೦೩. ರೂಪಾಂತರಿಸುವ ದರ್ಶನ : ಶ್ರೀಮತಿ ಲಲಿತ ಸುಕುಮಾರನ್; ಅನು: ಡಾ. ಶ್ರೀರಾಮಭಟ್ಟ ೪೫೭
೧೦೪. ಬೋನು : ಶ್ರೀ ಜಿ. ಎಸ್. ಶ್ಯಾಮ್; ಅನು: ಜಿ. ಎನ್. ರಂಗನಾಥರಾವ್ ೪೬೩
೧೦೫. ಅಯಾಚಿತ ಕೃಪೆ : ಶ್ರೀ ಭೋಗೀಲಾಲ್ ಪಟೇಲ್; ಅನು: ಜಿ. ಎನ್. ರಂಗನಾಥರಾವ್ ೪೭೦
೧೦೬. ಒಬ್ಬ ಅಸಾಮಾನ್ಯ ಸನ್ಯಾಸಿ : ಸ್ರೀಮತಿ ಸರಸ್ವತೀ ಗೌರಿಶಂಕರ್;
ಅನು: ಜಿ. ಎನ್. ರಂಗನಾಥರಾವ್ ೪೭೨
೧೦೭. ವಿರಕ್ತ ಚೆಲುವ : ಶ್ರೀಮತಿ ಲಲಿತಾ ರಾಮದಾಸ್; ಅನು: ಜಿ. ಎನ್. ರಂಗನಾಥರಾವ್ ೪೭೬
೧೦೮. ಪ್ರೀತಿಯ ಅಕ್ಷಯಪಾತ್ರೆ : ಶ್ರೀಮತಿ ಲೀಲಾ ರಾಮ್‌ಜೀ; ಅನು: ಜಿ. ಎನ್. ರಂಗನಾಥರಾವ್ ೪೮೦
೧೦೯. ಸ್ವಾಮಿ ರಂಗನಾಥಾನಂದ — ನನ್ನ ನೆನವರಿಕೆಗಳು : ಶ್ರೀ ಪಿ. ಬಾಪಿ ರಾಜು;
ಅನು: ಜಿ. ಎನ್. ರಂಗನಾಥರಾವ್ ೪೮೨
೧೧೦. ಸರ್ವಸ್ವವೂ ಸಗುಣಾತ್ಮಕ : ಶ್ರೀಮತಿ ಭಾರತೀ ಸೇನ್; ಅನು: ಜಿ. ಎನ್. ರಂಗನಾಥರಾವ್ ೪೮೭
೧೧೧. ಅವರ ವೈಯಕ್ತಿಕ ಚಿಂತನೆಗಳು ಮತ್ತು ಭಾವನೆಗಳು : ಶ್ರೀ ಇ. ಸುರೇಶ್‌ಕುಮಾರ್;
ಅನು: ಜಿ. ಎನ್. ರಂಗನಾಥರಾವ್ ೪೯೩
೧೧೨. ಡಲ್ಲಾಸ್‌ನಲ್ಲಿ ರಂಗನಾಥಾನಂದಜೀ : ಶ್ರೀ ಭೂಷಣ್ ಡಿ ಬಜಾಜ್;
ಅನು: ಜಿ. ಎನ್. ರಂಗನಾಥರಾವ್ ೪೯೫
೧೧೩. ಹೊಸ ಪ್ರಪಂಚದ ಪ್ರವಾದಿ : ಶ್ರೀಮತಿ ಸುಲಾಚನಾ ನಾಯರ್;
ಅನು: ಜಿ. ಎನ್. ರಂಗನಾಥರಾವ್ ೪೯೯
೧೧೪. ಅಪರಿಮಿತ ಅನುಗ್ರಹ : ಶ್ರೀಮತಿ ಇಳಾ ಬಸು; ಅನು: ಜಿ. ಎನ್. ರಂಗನಾಥರಾವ್ ೫೦೨
೧೧೫. ನನ್ನ ಅನುಕರಣೀಯ ಆದರ್ಶ : ಶ್ರೀ ಎಂ. ಕೆ. ಸತ್ಯನಾರಾಯಣರಾಜು;
ಅನು: ಜಿ. ಎನ್. ರಂಗನಾಥರಾವ್ ೫೦೫
೧೧೬. ಮಾನವ ಧರ್ಮದ ಜೀವಂತ ಪ್ರತೀಕ : ಶ್ರೀ ಸುಬ್ರತ ಮೈತ್ರ;
ಅನು: ಜಿ. ಎನ್. ರಂಗನಾಥರಾವ್ ೫೦೭
೧೧೭. ಅತ್ಯುತ್ತಮ ಮಿತ್ರರೊಬ್ಬರ ಬಗೆಗಿನ ಯಾದೃಚ್ಛಿಕ ಚಿಂತನೆಗಳು : ಶ್ರೀಮತಿ ಗೀತಾ ಮೆಹ್ತಾ
ಅನು: ಶ್ರೀಮತಿ ಎಲ್. ವಿ. ಶಾಂತಕುಮಾರಿ ೫೧೧
೧೧೮. ಸ್ವಾಮಿ ರಂಗನಾಥಾನಂದ : ಶ್ರೀ ಎನ್. ಕೃಷ್ಣಸ್ವಾಮಿ; ಅನು: ಶ್ರೀಮತಿ ಎಲ್. ವಿ. ಶಾಂತಕುಮಾರಿ ೫೧೩
೧೧೯. ಸ್ವಾಮಿ ರಂಗನಾಥಾನಂದರು : ಪ್ರಕಾಶದ ಒಂದು ಪುಂಜ : ಶ್ರೀಮತಿ ಪೂನಮ್ ಕೋಹ್ಲಿ;
ಅನು: ಶ್ರೀಮತಿ ಎಲ್. ವಿ. ಶಾಂತಕುಮಾರಿ ೫೨೦
೧೨೦. ಒಂದು ಪ್ರಕಟಣೆಯ ಪ್ರಸಂಗ : ಶ್ರೀಮತಿ ಎಲ್ವಾ ಲಿನ್ನಿಯಾ ನೆಲ್ಸನ್;
ಅನು: ಶ್ರೀಮತಿ ಎಲ್. ವಿ. ಶಾಂತಕುಮಾರಿ ೫೨೯
೧೨೧. ಆತ್ಮಸಂಯಮದ ಅತ್ಯದ್ಭುತ ಆಧ್ಯಾತ್ಮಿಕ ಶಕ್ತಿ : ಶ್ರೀ ಸ್ಟೀಫನ್ ಎಫ್ ವಾಕರ್
ಅನು: ಶ್ರೀಮತಿ ಎಲ್. ವಿ. ಶಾಂತಕುಮಾರಿ ೫೩೧
೧೨೨. ಅವರ ದೃಷ್ಟಿಯಲ್ಲಿ ಪ್ರತಿಯೊಬ್ಬನೂ ದೈವಿಕವಾಗಿದ್ದನು : ಶ್ರೀಮತಿ ಮಾಲಿನೀ ಮೆನನ್;
ಅನು: ಶ್ರೀಮತಿ ಎಲ್. ವಿ. ಶಾಂತಕುಮಾರಿ ೫೩೪
೧೨೩. ಶ್ರೀ ರಾಮಕೃಷ್ಣರ ಒಂದು ಪವಾಡ : ಶ್ರೀ ರಾಕೇಶ್ ಪುರಿ;
ಅನು: ಶ್ರೀಮತಿ ಎಲ್. ವಿ. ಶಾಂತಕುಮಾರಿ ೫೩೬

೧೨೪. ಮೂರ್ತೀಭವಿಸಿದ ಮಾತೃರೂಪ : ಶ್ರೀ ಸುದೀನ್ ಚೌಧುರಿ;
ಅನು: ಶ್ರೀಮತಿ ಎಲ್. ವಿ. ಶಾಂತಕುಮಾರಿ ೫೪೧
೧೨೫. ಶ್ರೇಷ್ಠ ಸನ್ಯಾಸಿ : ಶ್ರೀಮತಿ ಶಾಂತಿ ದೇವರಾಜ್ ಗುರುಮೂರ್ತಿ;
ಅನು: ಶ್ರೀಮತಿ ಎಲ್. ವಿ. ಶಾಂತಕುಮಾರಿ ೫೪೪
೧೨೬. ಮಹಾರಾಜ್ ಅವರು ನನ್ನ ಸಂಪೂರ್ಣ ಜೀವನವನ್ನು ಪರಿವರ್ತಿಸಿದರು :
ಶ್ರೀಮತಿ ಲೀಲಾ ಸಬರ್‌ವಾಲ್; ಅನು: ಶ್ರೀಮತಿ ಎಲ್. ವಿ. ಶಾಂತಕುಮಾರಿ ೫೪೬
೧೨೭. ಸ್ಫೂರ್ತಿಯ ಸೆಲೆ : ಶ್ರೀ ಎಸ್. ರಾಮಮೋಹನ್; ಅನು: ಶ್ರೀಮತಿ ಎಲ್. ವಿ. ಶಾಂತಕುಮಾರಿ ೫೫೦
೧೨೮. ಕೆಲವು ನೆನಪುಗಳು : ಶ್ರೀ ಸುಭಾಷ್ ಟಂಡನ್; ಅನು: ಶ್ರೀಮತಿ ಎಲ್. ವಿ. ಶಾಂತಕುಮಾರಿ ೫೫೨
೧೨೯. ನನ್ನ ಜೀವನದಲ್ಲಿನ ಅತ್ಯಂತ ದೊಡ್ಡ ಪ್ರಭಾವ : ಶ್ರೀ ಮಹಾಲಿಂಗಮ್ ಚಿನ್ನತಂಬಿ;
ಅನು: ಶ್ರೀಮತಿ ಎಲ್. ವಿ. ಶಾಂತಕುಮಾರಿ ೫೫೫
೧೩೦. ಸ್ವಾಮಿ ರಂಗನಾಥಾನಂದಜೀ: ಪಿತೃತ್ವದ ಮೂರ್ತ ಪ್ರತಿಮೆ : ಶ್ರೀಮತಿ ತ್ರಿವೇಣಿ ಪೋಪಟ್;
ಅನು: ಶ್ರೀಮತಿ ಎಲ್. ವಿ. ಶಾಂತಕುಮಾರಿ ೫೫೭
೧೩೧. ಆಂಧ್ರ ಪ್ರದೇಶದಲ್ಲಿ ಜಾಗೃತಿ : ಶ್ರೀ ನಾಗೇಶ್ವರ ರಾವ್; ಅನು: ಶ್ರೀಮತಿ ಎಲ್. ವಿ. ಶಾಂತಕುಮಾರಿ ೫೬೩
೧೩೨. ಮಾನವನ ಶ್ರೇಷ್ಠತೆಯ ಸಮರ್ಥ ಹೋರಾಟಗಾರ : ಡಾ. ಪಿ. ಎಸ್. ಕೃಷ್ಣಮೂರ್ತಿ;
ಅನು: ಶ್ರೀಮತಿ ಎಲ್. ವಿ. ಶಾಂತಕುಮಾರಿ ೫೬೯

## ಅನುಬಂಧ

೧೩೩. ಮರೆಯಲಾಗದ ಕ್ಷಣಗಳು : ಸ್ವಾಮಿ ಸತ್ಯಪ್ರಭಾನಂದ; ಅನು: ವಿ. ಕೃಷ್ಣ ೫೭೫
೧೩೪. ಪ್ರಾಯೋಗಿಕ ವೇದಾಂತದ ಸರ್ವೋತ್ತಮ ಭಾಷ್ಯಕಾರ : ಶ್ರೀ ದೀಪಂಕರ್ ಮುಖ್ಯೋಪಾಧ್ಯಾಯ;
ಅನು: ವಿ. ಕೃಷ್ಣ ೫೯೩
೧೩೫. ಆತ್ಮಸಂಯಮದ ಅತ್ಯದ್ಭುತ ಆಧ್ಯಾತ್ಮಿಕ ಶಕ್ತಿ : ಸ್ಟೀಫನ್ ಎಫ್. ವಾಕರ್; ಅನು: ವಿ. ಕೃಷ್ಣ ೫೯೫

ಕೃತಜ್ಞತೆಗಳು:

**ಶ್ರೀಮತ್ ಸ್ವಾಮಿ ರಂಗನಾಥಾನಂದ ಪ್ರಣತಿ**

## ಭಾಗ ೫

## ಚಿತ್ರ ಸಂಪುಟ


೧. ಬ್ರಿಟನ್ನಿನ ಮಾಜಿ ಪ್ರಧಾನ ಮಂತ್ರಿ ಜೇಮ್ಸ್ ಕ್ಯಾಲಘನ್ ಅವರೊಡನೆ
೨. ಶ್ರೀಮತಿ ಇಂದಿರಾಗಾಂಧಿ ಅವರೊಡನೆ
೩. ಡಾ. ಎಸ್. ರಾಧಾಕೃಷ್ಣನ್ ಅವರೊಡನೆ
೪. ಪಂಡಿತ್ ಜವಾಹರಲಾಲ್ ನೆಹರೂ ಅವರೊಡನೆ
೫. ಕೆನ್ನೆತ್ ಗಾಲ್‌ಬ್ರೈತ್ ಅವರೊಡನೆ
೬. ಚಿಲಿಯ ಸ್ಯಾಂಟಿಯಾಗೊ ಪೊಲೀಸ್ ಅಧಿಕಾರಿಗಳ ತರಬೇತಿ ಶಾಲೆಯಲ್ಲಿ ಸ್ವಾಮಿಗಳಿಗೆ ಸ್ವಾಗತ
೭. ಮಹಾಮಾನ್ಯ ರಾಜ ಮಹೇಂದ್ರ ಮತ್ತು ಶ್ರೀಮನ್ ನಾರಾಯಣ್ (ಭಾರತದ ರಾಯಭಾರಿಗಳು) ಅವರೊಂದಿಗೆ
೮. ಶ್ರೀಮತಿ ಸಿರಿಮಾವೋ ಬಂಡಾರ್‌ನಾಯಿಕೆ (ಶ್ರೀಲಂಕಾದ ಪ್ರಧಾನ ಮಂತ್ರಿಗಳು) ಅವರೊಂದಿಗೆ

೯. ಡಾ. ರಾಜೇಂದ್ರ ಪ್ರಸಾದ್ (ಭಾರತದ ಪ್ರಥಮ ರಾಷ್ಟ್ರಪತಿ) ಅವರೊಂದಿಗೆ
೧೦. ಶ್ರೀ ರಾಜೀವ್ ಗಾಂಧಿ ಅವರೊಂದಿಗೆ
೧೧. ಶ್ರೀ ವೆಂಗಲರಾವ್ ಮತ್ತು ಶ್ರೀಮತಿ ಶಾರದಾ ಮುಖರ್ಜಿ ಅವರೊಂದಿಗೆ
೧೨. ಶ್ರೀಮತಿ ಮತ್ತು ಶ್ರೀ ಪಿ. ಸಿ. ಅಲೆಕ್ಸಾಂಡರ್ ಅವರೊಂದಿಗೆ
೧೩. ಶ್ರೀ ಎನ್. ಟಿ. ರಾಮರಾವ್ ಮತ್ತು ಶ್ರೀ ಸುಬ್ರಹ್ಮಣ್ಯಂ ಅವರೊಂದಿಗೆ
೧೪. ಶ್ರೀಮತಿ ಇಂದಿರಾಗಾಂಧಿ ಮತ್ತು ಶ್ರೀ ಏಕನಾಥ್ ಜೀ ರಾನಡೆ ಅವರೊಂದಿಗೆ
೧೫. ಶ್ರೀ ಶೇಕ್ ಫಾರೂಕ್ ಅಬ್ದುಲ್ಲಾ ಅವರೊಂದಿಗೆ
೧೬. ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿ ಅವರೊಂದಿಗೆ
೧೭. ಶ್ರೀ ಎಲ್. ಕೆ. ಅಡ್ವಾಣಿ ಅವರೊಂದಿಗೆ
೧೮. ಡಾ. ಎ. ಪಿ. ಜೆ. ಅಬ್ದುಲ್ ಕಲಾಂ ಅವರೊಂದಿಗೆ
೧೯. ರಾಷ್ಟ್ರಪತಿ ಶ್ರೀ ಕೆ. ಆರ್. ನಾರಾಯಣನ್ ಅವರಿಂದ ಸ್ವಾಮೀಜಿ ಅವರು ಗಾಂಧಿ ಶಾಂತಿ ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವುದು.
೨೦. ಡಾ. ಕರ್ಣಸಿಂಹ ಅವರೊಂದಿಗೆ
೨೧. ಶ್ರೀ ಇ. ವಿ. ಚೆಲಿಶೇವ್ ಅವರೊಂದಿಗೆ
೨೨. ಅಮೆರಿಕಾ ಸಂಯುಕ್ತ ಸಂಸ್ಥಾನದ ಹೂಸ್ಟನ್‌ನಲ್ಲಿ ಸ್ವಾಮೀಜಿ
೨೩. ಆಸ್ಟ್ರೇಲಿಯಾದ ಲೌರಾದ ಗಣೇಶ ಆಶ್ರಮದಲ್ಲಿ ಭಕ್ತರೊಂದಿಗೆ
೨೪. ಆಸ್ಟ್ರೇಲಿಯಾದಲ್ಲಿ
೨೫. ಆಸ್ಟ್ರೇಲಿಯಾದಲ್ಲಿ (ಸ್ವಾಮಿ ರುದ್ರಾತ್ಮಾನಂದ ಅವರೊಡನೆ)
೨೬. ಆಸ್ಟ್ರೇಲಿಯಾದ ಲೌರಾದ ಗಣೇಶ ಆಶ್ರಮದಲ್ಲಿ
೨೭. ಸ್ವಾಮೀಜಿಯವರ ಡಚ್ ನಿವಾಸ, ಆರ್ಷೋವೆನ್ ಕುಟುಂಬದ ಮನೆ
೨೮. ಹಾಲೆಂಡಿನಲ್ಲಿ ಭಕ್ತರೊಂದಿಗೆ
೨೯. ಮಲೇಷ್ಯಾದಲ್ಲಿ
೩೦. ಬಲ್ಗೇರಿಯಾದ ರಾಯಭಾರಿಯೊಂದಿಗೆ
೩೧. ಪಶ್ಚಿಮ ಜರ್ಮನಿಯಲ್ಲಿ ಮುಲ್‌ಹೀಮ್ ವೇದಾಂತ ಅಧ್ಯಯನ ವಿಹಾರದ ಭಾಗಿಗಳೊಂದಿಗೆ
೩೨. ಜಪಾನ್‌ನಲ್ಲಿ ಥೇರಜಾವಾ ಮತ್ತು ಅವರ ಕುಟುಂಬದೊಂದಿಗೆ– ಜೊತೆಗೆ ಇರುವವರು ಪ್ರೊ. ಹಿದೆನೋರಿ ಕಿತಗಾವಾ ಮತ್ತು ಪ್ರೊ. ಹೊಕ್ಕಯೋ
೩೩. ಚಿಲಿಯ ಸ್ಯಾಂಟಿಯಾಗೋದಲ್ಲಿನ ಪೊಲೀಸ್ ಅಧಿಕಾರಿಗಳ ತರಬೇತಿ ಶಾಲೆಯಲ್ಲಿ ಅಧಿಕಾರಿಗಳನ್ನು ಉದ್ದೇಶಿಸಿ ಭಾಷಣಮಾಡುತ್ತಿರುವುದು.
೩೪. ಜ಼ಾಂಬಿಯಾದಲ್ಲಿ ಜ಼ಾಂಬಿಯಾ ಸಂಪುಟದ ಸಚಿವರೊಂದಿಗೆ
೩೫. ಕೊಲಂಬಿಯಾ ಜಿಲ್ಲೆಯ ವಾಷಿಂಗ್‌ಟನ್ನಿನಲ್ಲಿನ ಭಾರತೀಯ ದೂತಾವಾಸದಲ್ಲಿ – ಮೇಖಲಾ ಝಾ ಅವರು ಸ್ವಾಮೀಜಿ ಅವರನ್ನು ಪರಿಚಯಿಸಿ ಕೊಡುತ್ತಿರುವುದು.
೩೬. ಕಾಬೂಲ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ನೀಡುತ್ತಿರುವುದು – ಅವರ ಜೊತೆಯಲ್ಲಿ ಇರುವವರು (ಅಂದಿನ ಭಾರತೀಯ ರಾಯಭಾರಿ) ಶ್ರೀ ಕೆ. ಎಲ್. ಮೆಹ್ತಾ

**ರಾಷ್ಟ್ರೀಯ ಸಮಗ್ರತೆಗಾಗಿ ನೀಡಲಾಗುವ ೧೯೮೫ನೇ ಸಾಲಿನ**
**ಇಂದಿರಾ ಗಾಂಧಿ ಪ್ರಶಸ್ತಿ ನೀಡಿಕೆಯ ಸಂದರ್ಭದಲ್ಲಿ**
**ಸ್ವಾಮಿ ರಂಗನಾಥಾನಂದರಿಗೆ ಸಮರ್ಪಿಸಲಾದ ಸನ್ಮಾನ ಪತ್ರ**

## ಭಾಗ ೧

# ಇಂದಿರಾಗಾಂಧಿ ಪ್ರಶಸ್ತಿ ನೀಡಿಕೆ ಸನ್ಮಾನ ಪತ್ರ



ಸ್ವಾಮಿ ರಂಗನಾಥಾನಂದರು (ಆಸ್ಟ್ರೇಲಿಯಾದ ಲೌರಾದಲ್ಲಿ)



ಪ್ರಪ್ರಥಮ ಇಂದಿರಾಗಾಂಧಿ ರಾಷ್ಟ್ರೀಯ ಸಮಗ್ರತಾ ಪ್ರಶಸ್ತಿಯನ್ನು (ಅಂದಿನ ಪ್ರಧಾನ ಮಂತ್ರಿಗಳಾಗಿದ್ದ)
ಶ್ರೀ ರಾಜೀವ್‌ಗಾಂಧಿ ಅವರಿಂದ ಸ್ವೀಕರಿಸುತ್ತಿರುವುದು– ವಿಜ್ಞಾನ ಭವನ, ನವದೆಹಲಿ, ೩೧ ಅಕ್ಟೋಬರ್ ೧೯೮೭



ಶ್ರೀ ರಂಗನಾಥಾನಂದರು ಸದರಿ ಸಮಾರಂಭದಲ್ಲಿ ಶ್ರೀ ರಾಜೀವ್‌ಗಾಂಧಿ ಮತ್ತು
ಶ್ರೀ ಪಿ. ವಿ. ನರಸಿಂಹರಾವ್ ಅವರೊಡನೆ

# ಸನ್ಮಾನ ಪತ್ರ

ರಾಷ್ಟ್ರೀಯ ಭಾವೈಕ್ಯಕ್ಕಾಗಿ ಇಂದಿರಾಗಾಂಧಿ ಪ್ರಶಸ್ತಿಯನ್ನು ಸ್ಥಾಪಿಸಿರುವುದು ರಾಷ್ಟ್ರೀಯ ಭಾವೈಕ್ಯ ಹಾಗೂ ಸಕಾರಾತ್ಮಕ ಜಾತ್ಯತೀತತೆಯ ಆದರ್ಶಗಳನ್ನು ಪೋಷಿಸುವುದಕ್ಕಾಗಿ. ಈ ಆದರ್ಶಗಳನ್ನು ಅಶೋಕ, ಅಕ್ಬರ್ ಮೊದಲಾದ ಭಾರತದ ಮಹಾಪುತ್ರರು ಎತ್ತಿ ಹಿಡಿದಿದ್ದಾರೆ. ಈಚಿನ ದಿನಗಳಲ್ಲಿ ಮಹಾತ್ಮಾ ಗಾಂಧಿ, ಜವಾಹರಲಾಲ್ ನೆಹರೂ ಮತ್ತು ಶ್ರೀಮತಿ ಇಂದಿರಾ ಗಾಂಧಿಯವರು ಇದನ್ನೇ ಮಾಡಿದ್ದಾರೆ. ಹೀಗೆ ಸ್ಥಾಪಿಸಲಾದ ಪ್ರಶಸ್ತಿಯನ್ನು ಮೊದಲನೆಯದಾಗಿ ಸ್ವಾಮಿ ರಂಗನಾಥಾನಂದರು, ಸೇವೆ ಸಮರ್ಪಣೆ ಪಾಂಡಿತ್ಯಗಳ ಸಾಕಾರಮೂರ್ತಿಯಾಗಿರುವವರು, ಪಡೆಯುತ್ತಿರುವುದು ನಮಗೆ ಸಂತಸವನ್ನು ತಂದಿದೆ. ಅವರು ರಾಷ್ಟ್ರೀಯ ಭಾವೈಕ್ಯದ ವಿಭಿನ್ನ ಮುಖಗಳ ಪ್ರಾತಿನಿಧಿಕ ರೂಪವಾಗಿದ್ದು, ವಿಶ್ವದಾದ್ಯಂತ ಹರಡಿರುವ ಮಾನವಕುಲವನ್ನು ಒಂದುಗೂಡಿಸುವ ಮಹತ್ಕಾರ್ಯವನ್ನು ಸಾಗರದಾಚೆಗೂ ಹೋಗಿ ಮಾಡುತ್ತಿದ್ದಾರೆ.

೧೯೦೮ರ ಡಿಸೆಂಬರ್ ೧೫ರಂದು ಕೇರಳದ ತ್ರಿಕ್ಕೂರಿನಲ್ಲಿ ಜನಿಸಿದ ಸ್ವಾಮೀಜಿಯವರು ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿ ರಾಮಕೃಷ್ಣ ಮಹಾಸಂಘವನ್ನು ಸೇರಿ ೧೯೩೩ರಲ್ಲಿ ಸಂನ್ಯಾಸ ದೀಕ್ಷೆಯನ್ನು ಪಡೆದರು.

ತಮ್ಮ ಆಧ್ಯಾತ್ಮಿಕ ಮಾರ್ಗದರ್ಶನವನ್ನು ಪ್ರಪಂಚದ ಎಲ್ಲೆಡೆಗಳಲ್ಲೂ, ಬಯಸಿದ ಎಲ್ಲ ಬಗೆಯ ಜನರಿಗೂ – ಶ್ರೀಮಂತರು ಮತ್ತು ಬಡವರು, ಬೌದ್ಧಿಕರು ಮತ್ತು ಸರಳ ಮನಸ್ಕರು, ಪಟ್ಟಣ ಪ್ರದೇಶದವರು ಮತ್ತು ಹಳ್ಳಿಗರು – ನೀಡುವುದರೊಂದಿಗೆ ಮಾನವ ಸೇವೆಯ ಕ್ಷೇತ್ರದಲ್ಲಿ ಅವರು ಮಹತ್ಸಾಧನೆಯನ್ನು ಮಾಡಿದ್ದಾರೆ. ೧೯೪೩ರ ಬಂಗಾಳದ ಕ್ಷಾಮವಿರಬಹುದು, ೧೯೪೭ರ ಭಾರತ ವಿಭಜನೆಯ ನಂತರ ಜನಗಳು ಪಟ್ಟ ಕಷ್ಟವಿರಬಹುದು, ಅಥವಾ ದೇಶದ ನಾನಾ ಭಾಗಗಳಲ್ಲಿ ಆಗಾಗ್ಗೆ ಕಾಣಿಸಿಕೊಂಡ ಪ್ರವಾಹಗಳಿರಬಹುದು, ಸಂತ್ರಸ್ತರ ಪರಿಹಾರ ಮತ್ತು ಪುನರ್ವಸತಿಗಳನ್ನು ಸಂಘಟಿಸುವಲ್ಲಿ ಅವರು ಸದಾ ಮುಂಚೂಣಿಯಲ್ಲಿರುತ್ತಿದ್ದರು. ಶಿಕ್ಷಣ, ಸಾಮಾಜಿಕ ಜಾಗೃತಿ ಹಾಗೂ ಆಧ್ಯಾತ್ಮಿಕ ತಿಳಿವಳಿಕೆಗಳಿಗೆ ಸಂಬಂಧಿಸಿದಂತೆ ಅವರು ಸದಾ ದೇಶ ವಿದೇಶಗಳಲ್ಲಿ ಪ್ರವಾಸಗಳನ್ನು ಕೈಗೊಂಡು ತಮ್ಮ ಅದ್ಭುತ ಉಪನ್ಯಾಸಗಳ ಮೂಲಕ ವೇದಾಂತದ ಅಡಿಪಾಯವಾಗಿರುವ ಸಮನ್ವಯ ತತ್ತ್ವ, ಭಾರತದಲ್ಲಿ ಹಾಸುಹೊಕ್ಕಾಗಿರುವ ಪರಂಪರೆ–ಸಂಸ್ಕೃತಿಗಳು ಮತ್ತು ಮಾನವ ವ್ಯಾಪಾರಗಳಿಗೆ ಸಂಬಂಧಿಸಿದಂತೆ ವಿಜ್ಞಾನ–ತಂತ್ರಜ್ಞಾನಗಳ ಹೊಸ ಸಂದರ್ಭದಲ್ಲಿ ಅವುಗಳ ಪಾತ್ರ ಇವುಗಳ ಕುರಿತಾಗಿ ಜನರನ್ನು ಸ್ಫೂರ್ತಗೊಳಿಸುತ್ತಿದ್ದಾರೆ.

ರಾಷ್ಟ್ರದ ಒಗ್ಗಟ್ಟು, ಏಕತೆ ಮತ್ತು ಅಖಂಡತೆಗಳಲ್ಲಿ ದೃಢ ವಿಶ್ವಾಸವನ್ನು ಹೊಂದಿರುವ ಸ್ವಾಮಿಜಿಯವರು ಅದರ ಆಧ್ಯಾತ್ಮಿಕ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮುನ್ನಡೆಗೆ ಅಗತ್ಯವಾದ ನೈತಿಕ ಮೌಲ್ಯಗಳನ್ನು ಪ್ರಸಾರ ಮಾಡುವುದರೊಂದಿಗೆ ರಾಷ್ಟ್ರೀಯ ಭಾವೈಕ್ಯಕ್ಕಾಗಿ ತಮ್ಮನ್ನು ದಣಿವರಿಯದಂತೆ ತೊಡಗಿಸಿಕೊಂಡಿದ್ದಾರೆ. ೧೯೬೬–೬೭ರಷ್ಟು ಹಿಂದೆಯೇ ಮುಂಬೈನಲ್ಲಿ ಅವರು ರಾಷ್ಟ್ರೀಯ ಭಾವೈಕ್ಯದ ಸಂವಾದಗೋಷ್ಠಿಯನ್ನು ಏರ್ಪಡಿಸಿದ್ದರು. ಅವರು ತಮ್ಮ ಬರೆವಣಿಗೆಗಳ ಮೂಲಕ, ಉಪನ್ಯಾಸಗಳು ಮತ್ತು ಸೇವಾಕಾರ್ಯಗಳ ಮೂಲಕ ಎಲ್ಲ ಮಾನವ ಸಮುದಾಯಗಳ ನಡುವೆ ಸಾಮರಸ್ಯ, ಭ್ರಾತೃತ್ವ ಮತ್ತು ಏಕತೆಯನ್ನು ಉಂಟುಮಾಡಲು ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಸ್ವಾಮೀಜಿಯವರು ತಮ್ಮ ಲೇಖನಕಾರ್ಯದ ಜೊತೆಗೆ ಪಂಜಾಬ್ ಪ್ರಾಂತ್ಯದ ಉದ್ದಗಲಕ್ಕೂ ಸಂಚರಿಸಿ ಧರ್ಮ ಸಮನ್ವಯದ ಬಗೆಗೆ ಗುರು ನಾನಕರ ಸಂದೇಶವನ್ನು ಪ್ರಸಾರ ಮಾಡುವುದರ ಮೂಲಕ ಭಾವೈಕ್ಯ ಸ್ಥಾಪನೆಗೆ ನೆರವಾಗಿದ್ದಾರೆ.

ಅನೇಕ ಪಾಂಡಿತ್ಯಪೂರ್ಣ ಬರೆವಣಿಗೆಗಳನ್ನು ಹೊರತಂದಿರುವ ಸ್ವಾಮೀಜಿಯವರ ಆಸಕ್ತಿ ಮತ್ತು ಕಾಳಜಿಗಳ ವಲಯ ಅತ್ಯಂತ ವಿಸ್ತಾರವಾದುದು. ಕೆಲವು ಶೀರ್ಷಿಕೆಗಳನ್ನು ಹೆಸರಿಸುವುದಾದರೆ: ನಾವು ಆರಾಧಿಸುವ *ಕ್ರಿಸ್ತ*, *ಭಾರತೀಯ ಸಂಸ್ಕೃತಿಯ ಸಾರ*, *ಭಗವಾನ್ ಬುದ್ಧ ಮತ್ತು ನಮ್ಮ ಪರಂಪರೆ*, *ವೇದಾಂತ ಮತ್ತು ವಿಜ್ಞಾನ*, *ಭಾರತೀಯ ಸಮಾಜಕಾರ್ಯದ ತಾತ್ತ್ವಿಕತೆ*, *ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು* (ನಾಲ್ಕು ಸಂಪುಟಗಳಲ್ಲಿ), *ಯಾತ್ರಿಕನು ಕಂಡ ಜಗತ್ತು* (ಎರಡು ಸಂಪುಟಗಳಲ್ಲಿ) ಮತ್ತು *ಉಪನಿಷತ್ತುಗಳ ಸಂದೇಶ*. ಅವರ ಇತ್ತೀಚಿನ ಪ್ರಕಟಣೆಗಳು:

* *ಸಾರ್ವಜನಿಕ ಆಡಳಿತದ ಸಾಮಾಜಿಕ ಜವಾಬ್ದಾರಿಗಳು*
* *ವಿಜ್ಞಾನ ಮತ್ತು ಧರ್ಮ*
* *ಮಾನವನ ಶಕ್ತಿ ಸಂಪನ್ಮೂಲಗಳ ವಿಜ್ಞಾನ*
* *ಸಮಗ್ರ ಮಾನವ ಅಭಿವೃದ್ಧಿಯ ರಾಜಕಾರಣ ಮತ್ತು ಆಡಳಿತ*
* *ವೇದಾಂತ ಮತ್ತು ಮಾನವತೆಯ ಭವಿಷ್ಯ*.

ಶ್ರೀಮದ್ ಭಾಗವತವೂ ಸೇರಿದಂತೆ ಮೇಲಿನ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಸ್ವಾಮಿಜಿಯವರ ಉಪನ್ಯಾಸಗಳ ಧ್ವನಿಮುದ್ರಿಕೆಗಳೂ ಲಭ್ಯವಿವೆ.

ಸ್ವಾಮಿ ರಂಗನಾಥಾನಂದಜಿಯವರಿಗೆ ೧೯೮೬ನೇ ಸಾಲಿನ ಇಂದಿರಾಗಾಂಧಿ ರಾಷ್ಟ್ರೀಯ ಭಾವೈಕ್ಯ ಪ್ರಶಸ್ತಿಯನ್ನು ಪ್ರದಾನ ಮಾಡುತ್ತಿರುವುದು ರಾಷ್ಟ್ರೀಯ ಭಾವೈಕ್ಯದ ಸಾಧನೆಗಾಗಿ ರಾಷ್ಟ್ರಪ್ರೇಮ ಹಾಗೂ ಸಮರ್ಪಣಾಭಾವಗಳಿಂದ ಅವರು ಸಲ್ಲಿಸಿರುವ ಸೇವೆಯನ್ನು ಗುರುತಿಸಿರುವುದರ ದ್ಯೋತಕವಾಗಿದೆ.*

ನವದೆಹಲಿ
೩೧ ಅಕ್ಟೋಬರ್, ೧೯೮೭

**ಪಿ.ವಿ.ನರಸಿಂಹರಾವ್**
ಅಧ್ಯಕ್ಷರು
ಸಲಹಾ ಮಂಡಲಿ
ಇಂದಿರಾ ಗಾಂಧಿ ರಾಷ್ಟ್ರೀಯ ಭಾವೈಕ್ಯ ಪ್ರಶಸ್ತಿ

# ಭಾಗ ೨
# ರಾಮಕೃಷ್ಣ ಮಠದ ಸಂನ್ಯಾಸಿಗಳ ದೃಷ್ಟಿಯಲ್ಲಿ

# ೧. ಅಸಾಧಾರಣ ಆಧ್ಯಾತ್ಮಿಕ ಶಕ್ತಿ

–ಸ್ವಾಮಿ ಆತ್ಮಸ್ಥಾನಂದ*

ಯುಗಾವತಾರನೊಬ್ಬನು ಬರುವಾಗ ಅವನು ತನ್ನೊಂದಿಗೆ ತನ್ನ ಪರಿವಾರವನ್ನೂ ಕರೆತಂದು ಜನರಿಗೆ ತನ್ನ ಆಗಮನದ ಉದ್ದೇಶ, ತನ್ನ ಸಾಧನೆ–ತಪಶ್ಚರ್ಯೆಗಳ ಅರ್ಥವನ್ನು ಮನಗಾಣಿಸುತ್ತಾನೆ. ಶ್ರೀರಾಮಕೃಷ್ಣರು ತಮ್ಮ ಲೀಲಾನಾಟಕದಲ್ಲಿ ಸಹಕರಿಸಲು ಕೆಲವು ಸಮೀಪವರ್ತಿಗಳನ್ನು ಹೊಂದಿದ್ದರೆಂಬುದು ನಮಗೆ ತಿಳಿದಿದೆ. ಆದರೆ ಅವರ ನಿರ್ಗಮನದ ಬಳಿಕ ಅವರ ಆಧ್ಯಾತ್ಮಿಕ ಸಂದೇಶದ ಪ್ರಸಾರ ನಿಲ್ಲುವಂತಿಲ್ಲ. ಅದು ಮುಂದುವರಿಯಲೇಬೇಕು. ಅಲ್ಲದೆ ಶ್ರೀ ರಾಮಕೃಷ್ಣರ ಸಂದೇಶ ಪ್ರಸಾರಕಾರ್ಯವನ್ನು ಮುಂದುವರಿಸಿಕೊಂಡು ಹೋಗಲು ಸಮರ್ಥ ಉತ್ತರಾಧಿಕಾರಿಗಳು ಬೇಕು. ನಮ್ಮ ಪೂಜ್ಯ ರಂಗನಾಥಾನಂದಜಿ ಮಹಾರಾಜರು ಅಂತಹ ಸಮರ್ಥ ಉತ್ತರಾಧಿಕಾರಿಗಳಲ್ಲೊಬ್ಬರು ಎಂದು ನನ್ನ ನಂಬಿಕೆ.

ಅವರಿಗೆ ಬಾಲ್ಯದಲ್ಲಿ ಒಳ್ಳೆಯ ವಿದ್ಯಾಭ್ಯಾಸವಿರಲಿಲ್ಲ; ಅಥವಾ ಮುಂದೆ ಡಾಕ್ಟರೇಟ್ ಮಾಡಿ ಪಾಂಡಿತ್ಯದ ವಿಶೇಷ ಪದವಿಗಳನ್ನು ಗಳಿಸಲೂ ಇಲ್ಲ. ಹಾಗೆ ನೋಡಿದರೆ ಅವರು ಪಡೆದ ಔಪಚಾರಿಕ ಶಿಕ್ಷಣ ಬಹಳ ಕಡಮೆ. ಅವರೊಂದು ಕಾಲೇಜಿನಲ್ಲೊ ವಿಶ್ವವಿದ್ಯಾಲಯದಲ್ಲೊ ಎಂದೂ ಓದಲಿಲ್ಲ. ಆದರೆ ಅವರ ಶಾಸ್ತ್ರ ಜ್ಞಾನವನ್ನು ನೋಡಿ! ಅವರು ಅಷ್ಟೊಂದು ಶಾಸ್ತ್ರಗ್ರಂಥಗಳನ್ನು, ಬೇರೆ ಬೇರೆ ಭಾಷೆಗಳನ್ನು ಹೇಗೆ ಕಲಿತರೆನ್ನುವುದು, ಬೇರೆ ಬೇರೆ ತತ್ತ್ವಶಾಸ್ತ್ರಗಳು–ವೇದ ವೇದಾಂತಗಳು–ಗೀತೆ–ಭಾಗವತ–ರಾಮಾಯಣ–ಮಹಾಭಾರತ–ಪುರಾಣಗಳು–ತಂತ್ರಗಳು– ಇವೆಲ್ಲದರ ಗಾಢವಾದ, ಘನವಾದ ಚಿಂತನೆಗಳನ್ನು ಹೇಗೆ ಅರಗಿಸಿಕೊಂಡು ಪ್ರಪಂಚದಾದ್ಯಂತ ಪ್ರಸಾರ ಮಾಡಿದರೆನ್ನುವುದು ನಿಜಕ್ಕೂ ಆಶ್ಚರ್ಯವನ್ನುಂಟುಮಾಡುತ್ತದೆ. ಶ್ರೀರಾಮಕೃಷ್ಣ– ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಜೀವನಗಳ ಅರ್ಥ ಹಾಗೂ ಪರಿಣಾಮಗಳ ಬಗ್ಗೆ ಅವರಿಗಿದ್ದ ಗಹನವಾದ ತಿಳಿವಳಿಕೆ ಕೇವಲ ಅದ್ಭುತವೇ ಸರಿ!

ನಾನು ಹೇಳುವುದರಲ್ಲಿ ತಪ್ಪಿದ್ದರೆ ಕ್ಷಮಿಸಿ– ಸ್ವಾಮಿ ವಿವೇಕಾನಂದರ ಬಳಿಕ ಭಾರತದ ಆಧ್ಯಾತ್ಮಿಕ ಚಿಂತನೆಯನ್ನು ಜಗತ್ತಿನಲ್ಲಿ ಸ್ವಾಮಿ ರಂಗನಥಾನಂದಜಿ ಮಹಾರಾಜರಂತೆ ಹರಡಿದವರು ಯಾರೂ ಇಲ್ಲ ಎಂದು ನನ್ನ ತಿಳಿವಳಿಕೆ. ಇದ್ದರೆ ನನಗಂತೂ ಗೊತ್ತಿಲ್ಲ. ಬೇರೆಬೇರೆ ಪಂಥಗಳಿಗೆ ಸೇರಿದ ಸಂನ್ಯಾಸಿಗಳು ಮತ್ತು ಭಕ್ತರಿದ್ದಾರೆ; ಎಷ್ಟೋ ಜನ ವಾಗ್ಮಿಗಳಿದ್ದಾರೆ; ನಮ್ಮ ದೇಶದಲ್ಲೂ ವಿದೇಶಗಳಲ್ಲೂ ಎಷ್ಟೋ ಧಾರ್ಮಿಕ ಸಂಘಸಂಸ್ಥೆಗಳಿವೆ. ಸ್ವಾಮಿ ವಿವೇಕಾನಂದರ ಬಳಿಕ ಅವರ ಸಂನ್ಯಾಸಿಸಹೋದರರೇ ಬಹುಕಾಲ ವಿದೇಶದಲ್ಲಿದ್ದುಕೊಂಡು ಬಹಳಷ್ಟು ಕೆಲಸ ಮಾಡಿದರೆನ್ನುವುದೂ ನಿಜವೆ. ಆದರೆ ಶ್ರೀರಾಮಕೃಷ್ಣರು ಸ್ವಾಮಿ ರಂಗನಾಥಾನಂದರಿಗೆ ಮಹಾರಾಜರ ಮೂಲಕ ಕೆಲಸ ಮಾಡಿಸಿಕೊಂಡ ರೀತಿಯನ್ನು ಭಗವಂತನ ಪವಾಡವೆಂದೇ ಹೇಳಬೇಕು! ಅದು ಆಶ್ಚರ್ಯ, ಪರಮಾಶ್ಚರ್ಯ!

ನನಗೊಂದು ಅದ್ಭುತವಾದ ಘಟನೆ ನೆನಪಾಗುತ್ತದೆ. ಪರಮಪೂಜ್ಯ ಭೂತೇಶಾ ನಂದಜಿ ಮಹಾರಾಜರು ಮತ್ತು ಪರಮಪೂಜ್ಯ ರಂಗನಾಥಾನಂದಜಿ ಮಹಾರಾಜರು ಇಬ್ಬರಿಗೂ ತೀವ್ರ ಅನಾರೋಗ್ಯ. ಇಬ್ಬರೂ ಆಸ್ಪತ್ರೆಯಲ್ಲಿದ್ದರು. ಸ್ವಾಮಿ ಭೂತೇಶಾ ನಂದರು ಒಂದು ಕೋಣೆಯಲ್ಲಿ; ಸ್ವಾಮಿ ರಂಗನಾಥಾನಂದರು ಇನ್ನೊಂದರಲ್ಲಿ.

---

* ಅಧ್ಯಕ್ಷರು, ರಾಮಕೃಷ್ಣ ಮಠ ಮತ್ತು ಮಿಷನ್

ಇಬ್ಬರ ಪರಿಸ್ಥಿತಿಯೂ ಗಂಭೀರ. ಕೊನೆಗೆ ಆಗ ಸಂಘದ ಅಧ್ಯಕ್ಷರಾಗಿದ್ದ ಸ್ವಾಮಿ ಭೂತೇಶಾನಂದರು ತೀರಿಕೊಂಡರು. ಕೆಲವು ದಿನಗಳ ಬಳಿಕ ನಾವು ಬೇಲೂರು ಮಠದಲ್ಲಿ ಸಭೆಗಳನ್ನು ನಡೆಸಿ ಸ್ವಾಮಿ ರಂಗನಾಥಾನಂದಜಿ ಮಹಾರಾಜರು ಸಂಘದ ನೂತನ ಅಧ್ಯಕ್ಷರಾಗಬೇಕೆಂದು ('ಸಂಘಗುರು') ತೀರ್ಮಾನಿಸಿದೆವು. ಈ ಆಯ್ಕೆಯ ಬಳಿಕ ನಾವು ಅವರನ್ನು ನೋಡಲು ಆಸ್ಪತ್ರೆಗೆ ಹೋದೆವು. ನಾವು ಅವರಿಗೆ ಹಾರವನ್ನು ಹಾಕಿ ಈ ಸಂತೋಷದ ಸುದ್ದಿಯನ್ನು ಹೇಳಿದಾಗ ಅವರೆಂದರು: "ಶ್ರೀ ರಾಮಕೃಷ್ಣರ ಅದ್ಭುತ ಲೀಲೆಯನ್ನು ನೋಡಿ! ಮೈಸೂರು ಆಶ್ರಮದಲ್ಲಿ ಅಡುಗೆ ಮಾಡುತ್ತಿದ್ದಾಗ ಇಂದು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಅಧ್ಯಕ್ಷ!"

ಅವರು ಹೀಗೆ ಹೇಳಿದ್ದೇಕೆಂದರೆ ಮೈಸೂರು ಆಶ್ರಮದಲ್ಲಿ ಅವರು ಅಡುಗೆ ಕೆಲಸ ಮಾಡುತ್ತಿದ್ದರು. ಅವರು ಅವೆಲ್ಲದರ ನಡುವೆ ಅಧ್ಯಯನ ಮಾಡಿ ನಿಧಾನವಾಗಿ ಮುಂದೆಬಂದರು. ಅಲ್ಲದೆ, ಅವರು ಅಂತಿಮವಾಗಿ ಏನಾದರೆಂಬುದನ್ನು ನಾವೆಲ್ಲ ಕಂಡಿದ್ದೇವೆ. ಅವರು ಅಷ್ಟೊಂದನ್ನೆಲ್ಲ ಹೇಗೆ ಓದಿದರು, ಆ ವಿಚಾರಗಳನ್ನೆಲ್ಲ ಜನರಿಗೆ ಸುಲಭವಾಗಿ ಅರ್ಥವಾಗುವಂತೆ ಹೇಗೆ ವಿವರಿಸುತ್ತಿದ್ದರು ಎನ್ನುವುದು ನಿಜಕ್ಕೂ ಆಶ್ಚರ್ಯಕರ.

ಅವರು ಎಲ್ಲೇ ಹೋದರೂ ಮೊದಮೊದಲು ಅವರ ಉಪನ್ಯಾಸಗಳಿಗೆ ಹೆಚ್ಚು ಜನ ಸೇರುತ್ತಿರಲಿಲ್ಲ. ಆದರೆ, ಒಂದೆರಡು ಉಪನ್ಯಾಸಗಳಾದ ಮೇಲೆ, ಸುದ್ದಿ ಹರಡಿ ಜನರ ದಂಡೇ ಬಂದು ಸೇರುತ್ತಿತ್ತು. ದೆಹಲಿಯಲ್ಲಿ ಅವರ ಉಪನ್ಯಾಸಗಳು ನಡೆಯುತ್ತಿದ್ದುದು ಶಾಮಿಯಾನದಲ್ಲೇ ಹೊರತು ಹಜಾರವೊಂದರಲ್ಲಿ ಅಲ್ಲ. ಅವರ ವಾರದ ಉಪನ್ಯಾಸಗಳಿಗೆ ಎಷ್ಟೊಂದು ಜನ ಸೇರುತ್ತಿದ್ದರೆಂದರೆ ದೇವಾಲಯದ ನೆಲಅಂತಸ್ತು ಕೂಡ ಸಾಲುತ್ತಿರಲಿಲ್ಲ. ಆದ್ದರಿಂದಲೇ ಹೊರಗೆ ಒಂದು ಶಾಮಿಯಾನ ಹಾಕಬೇಕಾಗಿ ಬರುತ್ತಿತ್ತು. ಇಂಥದೆಲ್ಲ ಸಾಧ್ಯವಾದದ್ದು ಹೇಗೆ? ಇದಕ್ಕೆ ಉತ್ತರ ಇಷ್ಟೆ: ಅವರು ಮಾಡುತ್ತಿದ್ದುದು ಭಗವಂತನ ಕೆಲಸ; ಆ ಕೆಲಸಕ್ಕೆ ಬೇಕಾದ ವ್ಯವಸ್ಥೆ ಯನ್ನೆಲ್ಲ ಸ್ವಯಂ ಭಗವಂತನೇ ಮಾಡಿಕೊಡುತ್ತಾನೆ.

ಸ್ವಾಮಿ ರಂಗನಾಥಾನಂದರದು ಅತ್ಯಂತ ಶಿಸ್ತಿನ ಜೀವನ. ರಾಮಕೃಷ್ಣ ಮಠ ಮತ್ತು ಮಿಷನ್ ರಾಮಕೃಷ್ಣ ವಿವೇಕಾನಂದರ ಯಾವ ಆದರ್ಶಗಳ ಮೇಲೆ ನಡೆದು ಕೊಂಡು ಹೋಗುತ್ತಿದೆಯೋ ಅವುಗಳನ್ನು ಅವರು ಚಾಚೂತಪ್ಪದಂತೆ ಪಾಲಿಸುತ್ತಿದ್ದರು. ಆದರೆ, ಇದೆಲ್ಲದರ ಜೊತೆಗೆ ಸಮಯ ಹಾಗೂ ಸನ್ನಿವೇಶಗಳಿಗೆ ಅಗತ್ಯವಾದ ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದರು. ಇದಕ್ಕೊಂದು ದೊಡ್ಡ ನಿದರ್ಶನ ವೆಂದರೆ ಹೈದರಾಬಾದ್ ಆಶ್ರಮ. ಅಲ್ಲಿ ಅವರು ಏನನ್ನು ತಾನೇ ಸಾಧಿಸಿಲ್ಲ! ಮೊದಲು ಆ ಜಾಗದಲ್ಲಿ ಏನೇನೂ ಇರಲಿಲ್ಲ. ಆದರೆ, ಆಮೇಲೆ ಅವರೇನು ಮಾಡಿದರು ನೋಡಿ! ಇದು ಅವರಿಗೆ ಹೇಗೆ ಸಾಧ್ಯವಾಯಿತು? ನಿಜಕ್ಕೂ ಅವರು ಅಲ್ಲಿ ಎಂತಹ ಅದ್ಭುತಗಳನ್ನು ಸಾಧಿಸಿದರು! ಪರಮಾಶ್ಚರ್ಯ! ಭಗವಂತ ಅವರಿಗೆ ಶಕ್ತಿಯನ್ನು ಕೊಟ್ಟಿದ್ದ. ಆ ಶಕ್ತಿ ಕ್ರಮೇಣ ಅವರಲ್ಲಿ ವ್ಯಕ್ತವಾಗುತ್ತಿತ್ತು.

ಪೂಜ್ಯ ರಂಗನಾಥಾನಂದಜಿಯವರು ಪ್ರತಿಯೊಬ್ಬರನ್ನೂ ಪ್ರೋತ್ಸಾಹಿಸು ತ್ತಿದ್ದರು. ಸಂನ್ಯಾಸಿಗಳಾಗಲಿ, ಬ್ರಹ್ಮಚಾರಿಗಳಾಗಲಿ, ಭಕ್ತರಾಗಲಿ ಪ್ರತಿಯೊಬ್ಬರನ್ನೂ ಮುನ್ನಡೆಯುವಂತೆ ಹುರಿದುಂಬಿಸುತ್ತಿದ್ದರು. ಹಾಗೆ ನೋಡಿದರೆ ಇದು ಎಲ್ಲ ಸಂತರಲ್ಲೂ ಕಂಡುಬರುವ ಒಂದು ಅನನ್ಯವಾದ ಗುಣ. ಇದರ ಪರಿಣಾಮವಾಗಿ ಮಾನವನಲ್ಲಿ ಸುಪ್ತವಾಗಿರುವ ಚೈತನ್ಯ ಜಾಗೃತಗೊಳ್ಳುತ್ತದೆ. ಸ್ವಾಮಿ ರಂಗನಾಥಾನಂದಜಿಯವರು ಇದನ್ನು ತಮ್ಮ ಜೀವನದುದ್ದಕ್ಕೂ ಮಾಡಿದರು.

ಕೊನೆಯ ಕೆಲವು ವರ್ಷಗಳು ಬೇಲೂರುಮಠದಲ್ಲಿದ್ದಾಗ ಅವರಿಗೆ ಹಲವಾರು ಕಾಯಿಲೆಗಳು. ಆಗಲೂ ಕೂಡ ಅವರು ತಮ್ಮ ಅಧ್ಯಯನವನ್ನು ನಿಲ್ಲಿಸಲಿಲ್ಲ; ಭಕ್ತರಿಗೆ ಮಂತ್ರದೀಕ್ಷೆಯನ್ನು ಕೊಡುವುದನ್ನೂ ನಿಲ್ಲಿಸಲಿಲ್ಲ; ವೈದ್ಯರು ಮತ್ತು ಸಹಾಯಕರು ಅವರಿಗೆ ಕಟ್ಟುನಿಟ್ಟಿನ ನಿರ್ಬಂಧವನ್ನು ವಿಧಿಸಿದ್ದರೂ ಅವರ ಕೃಪೆ ಮತ್ತು ಕರುಣೆಯ ಪ್ರವಾಹ ಹರಿಯುತ್ತಲೇ ಇತ್ತು.

ಅವರು ಬೇಲೂರುಮಠಕ್ಕೆ ಅಧ್ಯಕ್ಷರಾಗಿ ಬಂದಾಗ ತಮ್ಮ ವರ್ತನೆಯಿಂದ ನಮ್ಮನ್ನು ಮಂತ್ರಮುಗ್ಧರನ್ನಾಗಿಸಿಬಿಟ್ಟರು. ಕೆಲವೊಮ್ಮೆ ನಾನವರನ್ನು ಕಾಣಲು ಹೋದಾಗ, ಅವರು ಮಂಚದ ಮೇಲೆ

ಮಲಗಿರುತ್ತಿದ್ದರು. ಆದರೂ ಅವರು ನಾನಲ್ಲೇ, ಅವರ ಪಕ್ಕದಲ್ಲೇ ಕುಳಿತುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದರು. ನಾನವರ ಬಳಿಗೆ ಹೋದಾಗಲೆಲ್ಲ ಅವರು ನನ್ನ ಕೈಹಿಡಿದುಕೊಂಡು ಪಕ್ಕದಲ್ಲೇ ಕೂಡಿಸಿಕೊಳ್ಳುತ್ತಿದ್ದರು. ಆದರೆ ನಾನು ಅವರ ಹಾಸಿಗೆಯ ಮೇಲೆ ಕುಳಿತುಕೊಳ್ಳುವುದು ಹೇಗೆ? ಅವರು ಸಂಘಗುರು. ಆದರೆ ನಾನು ಕುಳಿತುಕೊಳ್ಳಲೇಬೇಕಾಗುತ್ತಿತ್ತು. ನಾನು ಹೇಗೋ ಏನೋ ಮಾತು ಮುಗಿಸಿ ಜಾಗ ಖಾಲಿಮಾಡುತ್ತಿದ್ದೆ. ಅವರು ಇದೇ ಪ್ರೀತಿಯನ್ನು ಎಲ್ಲರ ಮೇಲೂ ಹರಿಸಿದರು. ಅವರೊಂದು ಅಸಾಧಾರಣ ಶಕ್ತಿ.

ಒಮ್ಮೆ ಅವರು ದೆಹಲಿಯಲ್ಲಿದ್ದಾಗ ನಾನು ಯಾವುದೋ ಕೆಲಸದ ಮೇಲೆ ಅಲ್ಲಿಗೆ ಹೋಗಬೇಕಾಯಿತು. ನಾನು ಇದ್ದಕ್ಕಿದ್ದಂತೆ ಅಲ್ಲಿಗೆ ಭೇಟಿ ನೀಡಿದ್ದರಿಂದ ನನಗೆ ಆಶ್ರಮದಲ್ಲಿ ಉಳಿದುಕೊಳ್ಳಲು ಜಾಗವಿರಲಿಲ್ಲ. ಆದರೂ ರಂಗನಾಥಾನಂದಜಿ ಮಹಾರಾಜರು ನಾನು ಅವರ ಹಾಸಿಗೆಯ ಮೇಲೆಯೇ ಮಲಗುವಂತೆ ಮಾಡಿದರು. ನಾನು ಹೇಳಿದೆ: "ಮಹಾರಾಜ್, ನಿಮ್ಮ ಮುಂದೆ ನಾನು ಏನೂ ಅಲ್ಲ. ನಾನು ನಿಮ್ಮ ಹಾಸಿಗೆಯ ಮೇಲೆ ಹೇಗೆ ಮಲಗಿಕೊಳ್ಳಲಿ?" ಆದರೆ ಅವರು ಒತ್ತಿ ಹೇಳಿದರು: "ಇಲ್ಲ, ಇಲ್ಲ, ನೀವು ನನ್ನ ಸಹೋದರ; ಹಾಗೆಲ್ಲ ಮಾತನಾಡಬೇಡಿ!" ಎಂತಹ ವಿಶೇಷ ವ್ಯಕ್ತಿ ಅವರು!

ಸರಳವಾಗಿ ಹೇಳಬೇಕೆಂದರೆ, ಶ್ರೀರಾಮಕೃಷ್ಣರು ಅವರ ಮೂಲಕ ಕೆಲಸ ಮಾಡಿದರು. ಇದು ನಮ್ಮ ಬಲವಾದ ನಂಬಿಕೆ. ಇಲ್ಲದಿದ್ದರೆ ಕೇರಳದ ಆ ಹುಡುಗ ಹೀಗಾಗಲು ಸಾಧ್ಯವಿರಲಿಲ್ಲ. ಅವರ ಬಗೆಗೆ ಮುಂದೆ ಬಹಳಷ್ಟು ಪುಸ್ತಕಗಳು ಬರುತ್ತವೆ. ಅವುಗಳನ್ನು ಓದಿ. ಬೇರೆ ಬೇರೆ ಕಡೆಗಳಿಂದ ಅವರ ಜೀವನಚರಿತ್ರೆಗಳು ಪ್ರಕಟವಾಗಿವೆ. ನೀವು ಅವುಗಳನ್ನು ಓದಿದಂತೆಲ್ಲ ಅವರು ಎಂತಹ ಅಸಾಧಾರಣ ವ್ಯಕ್ತಿ ಎನ್ನುವುದು ನಿಮಗೆ ಹೆಚ್ಚು ಹೆಚ್ಚು ಗೊತ್ತಾಗುತ್ತದೆ! ಯಾರು ಯೋಗ್ಯ ವ್ಯಕ್ತಿಗಳೋ ಅವರ ಮೂಲಕ ಭಗವಂತ ಕೆಲಸ ಮಾಡುತ್ತಾನೆ. ಅವನು ಅವರ ಯೋಗ್ಯತೆ ಅರಳುವಂತೆ ಮಾಡಿ ಅವರನ್ನು ತನ್ನ ಕೆಲಸಕ್ಕೆ ಬಳಸಿಕೊಳ್ಳುತ್ತಾನೆ. ಸ್ವಾಮಿ ರಂಗನಾಥಾನಂದಜಿಯವರು ಕೊನೆಯಲ್ಲಿ ಮಹಾಗುರುವಾದ ಅಂತಹ ಒಬ್ಬ ವ್ಯಕ್ತಿ.

ಅವರು ಎಂತಹ ಅಪರೂಪದ ಕರ್ಮಯೋಗಿ! ಅಲ್ಲದೆ, ಅವರಲ್ಲಿ ಜ್ಞಾನ ಯೋಗಿಯ ವಿಶಿಷ್ಟ ಲಕ್ಷಣಗಳನ್ನೂ ಕಾಣಬಹುದಾಗಿತ್ತು. ಆಮೇಲೆ, ಅವರ ಭಕ್ತಿಯನ್ನು ನೋಡಿ. ಒಟ್ಟಿನಲ್ಲಿ ಅತ್ಯಂತ ಅಸಾಧಾರಣ ನಿದರ್ಶನ! ಯಾರು ಶ್ರೀ ರಾಮಕೃಷ್ಣರ ಆಧ್ಯಾತ್ಮಿಕ ಪೀಠವನ್ನು ಅಲಂಕರಿಸುತ್ತಾರೋ [ಎಂದರೆ ಸಂಘದ ಅಧ್ಯಕ್ಷರಾಗುತ್ತಾರೋ] ಅವರ ಮೂಲಕ ಶ್ರೀರಾಮಕೃಷ್ಣರು ತಮ್ಮ ವಿಶೇಷ ಶಕ್ತಿಯನ್ನು ಪ್ರಕಟಿಸುತ್ತಾರೆ. ಸ್ವಾಮಿ ರಂಗನಾಥಾನಂದಜಿ ಮಹಾರಾಜರು ಈ ಸತ್ಯದ ಉಜ್ವಲ ನಿದರ್ಶನ. ಅವರಿಗೆ ವಯಸ್ಸಾಗಿತ್ತು. ಅವರ ಕೆಲಸ ಮುಗಿದಿತ್ತು. ಶ್ರೀರಾಮಕೃಷ್ಣರು ಅವರಿಗೆ ಬಿಡುಗಡೆ ನೀಡಿದರು; ಅವರು ಇಲ್ಲಿಂದ ತೆರಳಿದರು. ನಮಗಿದು ಅತ್ಯಂತ ನೋವಿನ ಸಂಗತಿ. ಏಕೆಂದರೆ ಅವರು ಬದುಕಿದ್ದಷ್ಟು ಕಾಲ ಸಂತೋಷ ತುಂಬಿತ್ತು. ಆದರೆ ಶ್ರೀರಾಮಕೃಷ್ಣರು ತಮ್ಮ ಪುತ್ರನನ್ನು ಹಿಂದಕ್ಕೆ ಕರೆದುಕೊಂಡಿದ್ದಾರೆ. ಈಗ ಅವರು ಶ್ರೀರಾಮಕೃಷ್ಣರು ಹಾಗೂ ಶ್ರೀಮಾತೆಯವರೊಂದಿಗೆ ಸಂತೋಷವಾಗಿದ್ದಾರೆ. ನಾವಿನ್ನೇನು ತಾನೇ ಹೇಳಲು ಸಾಧ್ಯ? ನಾವು ಅವರಿಗೆ ನಮ್ಮ ಪ್ರಣಾಮಗಳನ್ನು ಸಮರ್ಪಿಸಿ ಅವರ ಆಶೀರ್ವಾದವನ್ನು ಪಡೆಯೋಣ.*

* * * *

---

* ಲೇಖಕರು ಬೇಲೂರು ಮಠದಲ್ಲಿ ೭.೫.೨೦೦೫ರಂದು ಬೇಲೂರು ಮಠದಲ್ಲಿ ಮತ್ತು ೧೭.೧೨.೨೦೦೫ರಂದು ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನಲ್ಲಿ ಮಾಡಿದ ಬಂಗಾಳಿ ಭಾಷಣಗಳಿಂದ ತೆಗೆದುಕೊಂಡಿದೆ. ಇಂಗ್ಲಿಷ್ ಅನುವಾದ ಶ್ರೀಮತಿ ಸೋಮಾ ದಾಸ್.

# ೨. ಮುನ್ನಡೆಗಾಗಿ ಹಿನ್ನೋಟ

–ಸ್ವಾಮಿ ಪ್ರಭಾನಂದ*

ಪೂಜ್ಯ ಸ್ವಾಮಿ ರಂಗನಾಥಾನಂದಜಿ ಅವರ ನೆನಪುಗಳನ್ನು ಬರೆದು ಕೊಡಬೇಕೆಂದು ನನ್ನನ್ನು ಮತ್ತೆ ಮತ್ತೆ ಒತ್ತಾಯಿಸಿದಾಗ ನಾನು ಅನಿವಾರ್ಯವಾಗಿ ನನ್ನೆಲ್ಲ ಹಳೆಯ ನೆನಪುಗಳತ್ತ ಪಯಣಿಸಬೇಕಾಯಿತು. ಅದೆಷ್ಟೋ ಘಟನೆಗಳು– ದೊಡ್ಡವು ಮತ್ತು ಸಣ್ಣವು– ನಿಧಾನವಾಗಿ ನನ್ನ ಮನಸ್ಸಿಗೆ ಬರಲಾರಂಭಿಸಿದವು. ಆದರೆ ಅವುಗಳಲ್ಲಿ ಯಾವುದಾದರೊಂದರ ಆಳಕ್ಕೆ ನಾನು ಮುಳುಗುವುದಕ್ಕೆ ಮುನ್ನವೇ ಇದ್ದಕ್ಕಿದ್ದಂತೆ ಪೂಜ್ಯ ಮಹಾರಾಜರ ದನಿ ನನ್ನನ್ನು ಕೇಳುತ್ತಿರುವಂತೆ ತೋರಿತು: "ನಿಮ್ಮ ಕೈಗಡಿಯಾರವೆಲ್ಲಿ?" ಇದರಿಂದ ಪ್ರೇರಿತವಾಗಿ ನನ್ನ ಮನಸ್ಸು ಇತ್ತೀಚಿನ ಹೃದಯಸ್ಪರ್ಶಿ ಘಟನೆಯೊಂದರ ಕಡೆಗೆ ಜಾರಿತು.

ಮಹಾರಾಜರ ವಿಶೇಷ ಪ್ರೀತಿ ಮತ್ತು ಆಶೀರ್ವಾದಗಳಿಗೆ ಪಾತ್ರರಾಗಿದ್ದವರಲ್ಲಿ ನಾನೊಬ್ಬನಾಗಿದ್ದೆನ್ನುವುದು ನಿಜಕ್ಕೂ ನನ್ನ ಅದೃಷ್ಟ. ಅದರಲ್ಲೂ ಅವರು ಸಂಘದ ಅಧ್ಯಕ್ಷರಾಗಿ ನೇಮಕಗೊಂಡ ಮೇಲೆ ಪ್ರೀತಿ–ಆಶೀರ್ವಾದಗಳು ಹೆಚ್ಚಿನ ಪ್ರಮಾಣದಲ್ಲಿ ಹರಿಯಲಾರಂಭಿಸಿದ್ದವು. ಒಂದು ದಿನ ನಾನು ಅವರ ಕೋಣೆಗೆ ಹೋದೆ. ಎಂದಿನಂತೆ ಅವರು ತಮ್ಮ ಮಂಚದ ಮೇಲೆ ಮಲಗಿಕೊಂಡು ಪುಸ್ತಕವೊಂದನ್ನು ಓದುತ್ತಿದ್ದರು. ನನ್ನನ್ನು ನೋಡಿ, ಒಂದು ಕುರ್ಚಿ ಹಾಕಿಕೊಂಡು ತಮ್ಮ ಪಕ್ಕ ಕುಳಿತುಕೊಳ್ಳುವಂತೆ ಹೇಳಿದರು. ಸುಮಾರು ಹದಿನೈದು ನಿಮಿಷಗಳು ಕಳೆದವು. ಅವರಿಗೆ ಸಮಯವನ್ನು ತಿಳಿದುಕೊಳ್ಳಬೇಕಾಯಿತು. ಆದರೆ ಅವರ ಕೋಣೆಯಲ್ಲೆಲ್ಲೂ ಗಡಿಯಾರ ಕಾಣಲಿಲ್ಲ. ನಾನು ಹೊರಗೆ ಹೋಗಿ ವೇಳೆ ನೋಡಿಕೊಂಡುಬಂದು ಅವರಿಗೆ ತಿಳಿಸಿದೆ. ಅವರು ತಕ್ಷಣ ಹೇಳಿದರು: "ನಿಮ್ಮ ಕೈಗಡಿಯಾರವೆಲ್ಲಿ?" ಅದಕ್ಕೆ ನಾನು ನಿಧಾನವಾಗಿ ಉತ್ತರಿಸಿದೆ: "ನನ್ನ ಹತ್ತಿರ ಕೈಗಡಿಯಾರ ಇಲ್ಲ." ಮಹಾರಾಜರು ಕೇಳಿದರು: "ಏಕೆ?" ನಾನೆಂದೆ: "ಅದಕ್ಕೆ ಬದಲಗಿ ನನ್ನ ಹತ್ತಿರ ಜೇಬಿನ ಗಡಿಯಾರ ಇದೆ. ಸಾಮಾನ್ಯವಾಗಿ ನಾನು ಹೊರಗೆ ಹೋಗುವಾಗ ಅದನ್ನು ಜೇಬಿನಲ್ಲಿಟ್ಟು ಕೊಂಡಿರುತ್ತೇನೆ." ಆ ಸಂಭಾಷಣೆ ಅಲ್ಲಿಗೆ ಮುಗಿಯಿತು.

ಇದಾದ ಸುಮಾರು ಒಂದು ತಿಂಗಳ ತರುವಾಯ ಒಂದು ಘಟನೆ ನಡೆಯಿತು. ಅದನ್ನು ನಾನೆಂದೂ ಮರೆಯುವಂತಿಲ್ಲ. ನಾನು ಮಹಾರಾಜರನ್ನು ಟ್ರಸ್ಟಿಗಳ ಸಭೆಯಲ್ಲಿ ಭೇಟಿ ಮಾಡಿದಾಗ ಅವರು ನನಗೆ ಆಮೇಲೆ ತಮ್ಮ ಕೋಣೆಗೆ ಬಂದು ಕಾಣುವಂತೆ ಹೇಳಿದರು. ಸಭೆಯ ಬಳಿಕ ಅವರು ಕೋಣೆಗೆ ಹಿಂದಿರುಗಿ ಮಂಚದ ಮೇಲೆ ಒರಗಿಕೊಂಡು ಪುಸ್ತಕವೊಂದನ್ನು ಓದಲಾರಂಭಿಸಿದರು. ನಾನೂ ಅವರೊಂದಿಗೆ ಹೋಗಿ ಅವರ ಪಕ್ಕ ಒಂದು ಕುರ್ಚಿಯ ಮೇಲೆ ಕುಳಿತುಕೊಂಡೆ. ಆಗ ಅವರು ಸಭೆಯಲ್ಲಿ ಚರ್ಚೆಗೆ ಬಂದಿದ್ದ ಒಂದು ವಿಷಯದ ಬಗೆಗೆ ಮಾತನಾಡ ತೊಡಗಿದರು. ಬಳಿಕ ಇದ್ದಕ್ಕಿದ್ದಂತೆ ನನ್ನ ಎಡಗೈಯನ್ನು ಹಿಡಿದುಕೊಂಡು ಕೇಳಿದರು: "ಒಳ್ಳೇದು, ನಾನು ನಿಮ್ಮನ್ನು ಏನೋ ಒಂದನ್ನು ಕೇಳುತ್ತೇನೆ. ನನ್ನ ಮಾತನ್ನು ನಡೆಸಿಕೊಡುತ್ತೀರಾ?" ನನಗೆ ಇದು ಅರ್ಥವಾಗಲಿಲ್ಲ. ಅವರ ಮನಸ್ಸಿನಲ್ಲಿ ಏನಿದೆಯೆಂಬುದೂ ತಿಳಿಯಲಿಲ್ಲ. ಆದರೂ ಸಹಜವಾಗಿಯೇ ಉತ್ತರಿಸಿದೆ: "ಮಹಾರಾಜ್, ನೀವು ನಮ್ಮ ಅಧ್ಯಕ್ಷರು. ನಿಮ್ಮ ಮಾತನ್ನು ನಡೆಸದೆ ಇರಲು ಸಾಧ್ಯವೇ?" ಅವರು ಹೇಳಿದರು: "ಆ ನೀತಿ ನಿಯಮಗಳನ್ನೆಲ್ಲ ಪಕ್ಕಕ್ಕಿಡಿ. ನನ್ನ ಮಾತನ್ನು ನಡೆಸುತ್ತೀರೋ ಇಲ್ಲವೋ ನೇರವಾಗಿ

---

* ಪ್ರಧಾನ ಕಾರ್ಯದರ್ಶಿ, ರಾಮಕೃಷ್ಣ ಮಠ ಮತ್ತು ಮಿಷನ್

ಹೇಳಿ." ನಾನೆಂದೆ: "ಮಹಾರಾಜ್, ನನ್ನಿಂದ ಸಾಧ್ಯವಾಗುವಂತಿದ್ದರೆ ನಾನು ಖಂಡಿತ ನಡೆಸಿಕೊಡುತ್ತೇನೆ." ಅದಕ್ಕೆ ಅವರ ಪ್ರತಿಕ್ರಿಯೆ: "ಸುಮ್ಮನೆ ಸುತ್ತಿಬಳಸಿ ಮಾತನಾಡಬೇಡಿ. ಮಾಡುತ್ತೀರೋ ಇಲ್ಲವೊ ನೇರವಾಗಿ ಹೇಳಿ." ನನಗೆ ದಿಕ್ಕು ತೋಚಲಿಲ್ಲ. ಅವರ ಉದ್ದೇಶವೇನೆಂಬುದೂ ತಿಳಿಯಲಿಲ್ಲ. ಕೊನೆಗೆ ಶರಣಾಗತನಾಗಿ ಹೇಳಿದೆ: "ಆಗಲಿ ಮಹಾರಾಜ್, ನೀವು ಹೇಳಿದಂತೆ ಮಾಡುತ್ತೇನೆ." ಇಷ್ಟೆಲ್ಲ ನಡೆಯುವಾಗ ಅವರು ನನ್ನ ಎಡಗೈಯನ್ನು ಹಿಡಿದುಕೊಂಡೇ ಇದ್ದರು. ಈಗ ಇದ್ದಕ್ಕಿದ್ದಂತೆ ಅವರ ತಲೆದಿಂಬಿನ ಕೆಳಗಿನಿಂದ ಬಲಗೈಯಲ್ಲಿ ಒಂದು ಸುಂದರವಾದ ಕೈಗಡಿಯಾರವನ್ನು ತೆಗೆದರು. ಅದು ನನಗೆ ಅರಿವಾಗುವ ಹೊತ್ತಿಗೆ ತುಂಬ ತಡವಾಗಿತ್ತು. ಆದರೂ ನಾನು ಪ್ರತಿಭಟಿಸಿದೆ. ಆಗ ಅವರು ಮೃದುವಾಗಿ ಹೇಳಿದರು: "ಈಗ ಸುಮ್ಮನಿರಿ. ನೀವು ನನಗೆ ಮೂರು ಸಲ ಮಾತು ಕೊಟ್ಟಿದ್ದೀರಿ." ಅವರು ಅದನ್ನು ನನ್ನ ಕೈಗೆ ಕಟ್ಟಿ, "ನೀವಿದನ್ನು ಯಾವಾಗಲೂ ಕಟ್ಟಿ ಕೊಂಡಿರಬೇಕು; ನಾನು ಆಗಾಗ ಪರೀಕ್ಷೆ ಮಾಡುತ್ತೇನೆ" ಎಂದರು. ಆಗಿನಿಂದ ಆಗಾಗ ನನ್ನ ಕಿವಿಯಲ್ಲಿ ಮಹಾರಾಜರ ಮಾತು ಕೇಳುತ್ತಿರುತ್ತದೆ: "ನಿಮ್ಮ ಕೈಗಡಿಯಾರ ಎಲ್ಲಿ?"

ಇದೊಂದು ಸಾಮಾನ್ಯ ಘಟನೆ. ಆದರೂ ನನ್ನ ಮನಸ್ಸಿನಲ್ಲಿ ಅಳಿಸಲಾಗದ ಗುರುತನ್ನು ಉಳಿಸಿತು. ನನ್ನ ಮನಸ್ಸಿನಲ್ಲಿ ನಾನು ಯಾವುದೋ ಒಂದು ಸಂಕುಚಿತ ಭಾವನೆಗೆ ಅವಕಾಶ ಮಾಡಿಕೊಟ್ಟಿದ್ದೆನೆಂಬುದನ್ನು ನಾನು ಕಂಡುಕೊಂಡೆ. ಮಹಾರಾಜ್ ಇದನ್ನು ಅರ್ಥ ಮಾಡಿಕೊಂಡು ಆ ಪೂರ್ವಗ್ರಹವನ್ನು ಮೀರಲು ನೆರವಾದರು. ಕೆಲವು ದಿನಗಳ ಬಳಿಕ ಅವರು ನನಗೆ ಹೇಳಿದರು: "ಯಾವಾಗಲೂ ವಿಚಾರ ಮಾಡಿ ಸದ್ಯದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿ. ಇಪ್ಪತ್ತು ವರ್ಷಗಳ ಹಿಂದೆ ಯಾವುದು ದುಬಾರಿಯಾಗಿತ್ತೋ ಅದು ಬಹುಶಃ ಇಂದಿನ ಬದಲಾಗುತ್ತಿರುವ ಸನ್ನಿವೇಶದಲ್ಲಿ ಅಗತ್ಯವಸ್ತುವಾಗಿರಬಹುದು. ಪರಿಸ್ಥಿತಿಯನ್ನೆಲ್ಲ ಸಮಗ್ರವಾಗಿ ಪರಿಶೀಲಿಸಿ ನೀವು ನಿಮ್ಮ ನಿರ್ಧಾರಕ್ಕೆ ಬರಬೇಕು."

ಪೂಜ್ಯ ಸ್ವಾಮಿಜಿಯವರನ್ನು ಜನ ಮೆಚ್ಚಿಕೊಳ್ಳುತ್ತಿದ್ದುದಕ್ಕೆ ಅತ್ಯಂತ ಮುಖ್ಯ ಕಾರಣವೆಂದರೆ ಅವರ ವಾಗ್ಮಿತೆ; ಆ ಬಳಿಕ ಅವರ ಪಾಂಡಿತ್ಯ. ಸ್ವಾಮೀಜಿಯವರನ್ನು ಸರಸ್ವತಿಯ ವರಪುತ್ರನೆಂದು ಕರೆದಿರುವುದು ಖಂಡಿತವಾಗಿ ಸತ್ಯ. ಅರುವತ್ತು ವರ್ಷಗಳ ಹಿಂದೆ, ಅಕ್ಟೋಬರ್ ೧೯೫೮ರಲ್ಲಿ ಒಂದು ಭಾನುವಾರ ದೆಹಲಿಯ ಆಶ್ರಮದ ಸಭಾಂಗಣದಲ್ಲಿ ನಾನವರ ಉಪನ್ಯಾಸವನ್ನು ಕೇಳಿದೆ. ಕಿಕ್ಕಿರಿದು ತುಂಬಿದ್ದ ಜನ ಸಭಾಂಗಣದ ಅಕ್ಕಪಕ್ಕದ ವರಾಂಡಗಳಲ್ಲಿ, ಮೆಟ್ಟಿಲುಗಳ ಮೇಲೆ, ಹೊರಗಡೆಯ ಹುಲ್ಲುಹಾಸಿನ ಮೇಲೆಲ್ಲ ಕುಳಿತುಬಿಟ್ಟಿದ್ದರು. ಅಲ್ಲಿ ಸೇರಿದ್ದ ಉಳಿದವರ ಹಾಗೆಯೇ ನಾನೂ ಕೂಡ ಸ್ವಾಮೀಜಿಯವರ ಪ್ರಖರ ವಾಗ್ಮಿತೆ ಹಾಗೂ ಉನ್ನತ ವಿಚಾರಗಳಿಂದ ಅಚ್ಚರಿಗೊಂಡೆ.

ಇದಾದ ಬಳಿಕ ನಾನವರ ಉಪನ್ಯಾಸವನ್ನು ಹಲವಾರು ಬಾರಿ ಕೇಳಿದ್ದೇನೆ. ಜನವರಿ ೧೯೬೮ರಲ್ಲಿ ನಮ್ಮ ಆತ್ಮೀಯ ಮಹಾರಾಜರ ಜೊತೆಗಿದ್ದ ಇನ್ನೊಂದು ದಿನ ನನಗೆ ನೆನಪಾಗುತ್ತದೆ. ಆಗ ನಾನು ನಾಗಪುರದ ಆಶ್ರಮದಲ್ಲಿ ಇಳಿದುಕೊಂಡಿದ್ದೆ. ಒಂದು ದಿನ ಬೆಳಗ್ಗೆ ಅಲ್ಲಿ ಪೂಜ್ಯ ಮಹಾರಾಜರನ್ನು ಕಂಡು ನನಗೆ ಆಶ್ಚರ್ಯ ವಾಯಿತು. ನನ್ನನ್ನು ನೋಡಿ ಅವರು ತಾವು ಹೊರಗೆ ಹೋಗುವಾಗ ನಾನೂ ಅವರ ಜೊತೆಗೆ ಹೋಗಬೇಕೆಂದು ಬಯಸಿದರು. ಅವರ ಮೊದಲ ಉಪನ್ಯಾಸ ವಿಶ್ವವಿದ್ಯಾಲಯದ ಸೆನೆಟ್ ಭವನದಲ್ಲಿ ಬೆಳಗ್ಗೆ ಸುಮಾರು ಎಂಟು ಗಂಟೆಗೆ. ವಿಷಯ: ಕೇನೋಪನಿಷತ್. ಆ ದಿನ ಅವರು ಐದು ಉಪನ್ಯಾಸಗಳನ್ನು ಮಾಡಿದರು. ದೀರ್ಘವಾದ ಉಪನ್ಯಾಸ ಒಂದು ಮಹಿಳಾ ಕಾಲೇಜಿನಲ್ಲಿ; ಅತ್ಯಂತ ಸಂಕ್ಷಿಪ್ತ ಉಪನ್ಯಾಸ, ಐದೇ ನಿಮಿಷಗಳ ಅವಧಿಯದು, ಗಾಂಧೀಜಿಯವರ ವಾರ್ಧಾ ಆಶ್ರಮದಲ್ಲಿ.

ದಿವಂಗತರಾದ ಲೇಡಿ ರಾಣು ಮುಖರ್ಜಿಯವರ ಸಹೋದರಿಯಾದ ಆಶಾದೇವಿಯವರು ಗಾಂಧೀಜಿಯವರನ್ನು ಕುರಿತು ಹಾಡಿದ ಹಾಡು ಎದೆ ಕರಗಿಸುವಂತಿತ್ತು. ಆ ಹಾಡಿನ ಬಳಿಕ ಸ್ವಾಮಿ

ರಂಗನಾಥಾನಂದಜಿಯವರು ಇಂಗ್ಲಿಷಿನಲ್ಲಿ ಕೇವಲ ಐದು ನಿಮಿಷಗಳ ಕಾಲ ಮಾತನಾಡಿದರು. ಆದರೆ ಅದು ಅತ್ಯಂತ ಅಸಾಧಾರಣವಾಗಿತ್ತು. ಅವರು ಅಷ್ಟು ಚಿಕ್ಕ ಉಪನ್ಯಾಸದಲ್ಲಿ ಅಷ್ಟೊಂದು ವಿಚಾರಗಳನ್ನು, ಉನ್ನತ ಭಾವನೆಗಳನ್ನೂ ಹೇಗೆ ಅಡಕಗೊಳಿಸಿದ್ದರೆಂಬುದು ನಂಬುವುದಕ್ಕೇ ಅಸಾಧ್ಯ. ಉಪನ್ಯಾಸದಿಂದ ಆಶ್ರಮವಾಸಿಗಳು ತುಂಬ ಸಂತೋಷಪಟ್ಟರು. ನಾನು ಮೂಕ ವಿಸ್ಮಿತನಾಗಿಬಿಟ್ಟೆ. ಭುವನೇಶ್ವರದಲ್ಲಿ ಮಹಾರಾಜ್ ತೊಂಬತ್ತೈದು ನಿಮಿಷಗಳು. ಮಾತನಾಡಿದ್ದನ್ನೂ ನಾನು ಕೇಳಿದ್ದೆ; ವಾರ್ಧಾದಲ್ಲಿ ಮಾತನಾಡಿದ್ದು ಐದು ನಿಮಿಷಗಳು ಎರಡೂ ಸಂದರ್ಭಗಳಲ್ಲಿ ಅವರು ತಮ್ಮ ಅಭಿವ್ಯಕ್ತಿಯ ಅತ್ಯುತ್ಕೃಷ್ಟ ಸ್ಥಿತಿಯಲ್ಲಿದ್ದಾರೆ ಎಂದು ನನಗೆ ತೋರಿತ್ತು.

ಮಹಾರಾಜ್ ೨೦೦೧ರಲ್ಲಿ ಬೆಂಗಳೂರಿನಲ್ಲಿದ್ದಾಗ ಇದ್ದಕ್ಕಿದ್ದಂತೆ ಮಿದುಳಿನ ಪಾರ್ಶ್ವವಾಯುವಿನಿಂದ ಅವರ ಶರೀರದ ಎಡ ಅರ್ಧಭಾಗ ನಿಷ್ಕ್ರಿಯಗೊಂಡಿತು. ಕೂಡಲೇ ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತು. ಇದಾದ ಆರು ದಿನಗಳ ಬಳಿಕ ಪೂಜ್ಯ ಸ್ಮರಣಾನಂದಜಿಯವರು ಮತ್ತು ನಾನು ಅವರನ್ನು ನೋಡಲು ಹೋದೆವು. ನಾವು ಮೊದಲು ವಿಶೇಷಜ್ಞ ವೈದ್ಯರನ್ನು ಕಂಡು, ಅವರೊಂದಿಗೆ ಪೂಜ್ಯ ಮಹಾರಾಜರ ಆರೋಗ್ಯಸ್ಥಿತಿಯ ಬಗ್ಗೆ ಮಾತನಾಡಿ, ಬಳಿಕ ಪೂಜ್ಯ ಮಹಾರಾಜರ ಬಳಿಗೆ ಹೋದೆವು. ನಮ್ಮನ್ನು ನೋಡಿ ಅವರಿಗೆ ಸಂತೋಷವಾಯಿತು. ಅವರು ಬೇಲೂರು ಮಠಕ್ಕೆ ಹಿಂದಿರುಗಿ, ಹೊಸದಾಗಿ ನಿರ್ಮಾಣಗೊಂಡಿದ್ದ ರಾಮಕೃಷ್ಣ ವಸ್ತು ಸಂಗ್ರಹಾಲಯವನ್ನು ಉದ್ಘಾಟನೆ ಮಾಡಬೇಕೆಂದು ಈ ಮೊದಲೇ ನಿರ್ಧರಿಸ ಲಾಗಿತ್ತು ಮತ್ತು ಅದಕ್ಕಾಗಿ ತಾತ್ಪೂರ್ತಿಕವಾಗಿ ಒಂದು ದಿನಾಂಕವನ್ನೂ ಗೊತ್ತು ಪಡಿಸಲಾಗಿತ್ತು. ನಾನು ಬೆಂಗಳೂರಿನಲ್ಲಿ ಅವರನ್ನು ಭೇಟಿ ಮಾಡಿದ ತಕ್ಷಣ ಅವರು ಇದನ್ನು ನೆನಪು ಮಾಡಿಕೊಂಡು, ಅವರ ಮಾತು ತೊದಲುತ್ತಿದ್ದರೂ ಕೈಸನ್ನೆಯ ಸಹಾಯದಿಂದ ತಿಳಿಸಿದರು– ತಾವು ಬೇಲೂರು ಮಠಕ್ಕೆ ಹಿಂದಿರುಗಿ ನಿಗದಿತ ದಿನದಂದು ವಸ್ತುಸಂಗ್ರಹಾಲಯವನ್ನು ಉದ್ಘಾಟನೆ ಮಾಡುತ್ತೇನೆ ಎಂದು. ಬೇಡವೆನ್ನುವ ನಮ್ಮ ಒತ್ತಾಯಕ್ಕೆ ಅವರು ಮಣಿಯುವ ಸೂಚನೆ ಕಾಣಲಿಲ್ಲ. ಇದ್ದಕ್ಕಿದ್ದಂತೆ ನನ್ನ ಮನಸ್ಸಿನಲ್ಲಿ ಒಂದು ಉಪಾಯ ಹೊಳೆಯಿತು. ಮಹಾರಾಜರಿಗೆ ಬುದ್ಧ ಜಯಂತಿಯ ದಿನದ ಬಗೆಗೆ ವಿಶೇಷವಾದ ಒಲವು ಎನ್ನುವುದು ನನಗೆ ನೆನಪಾಯಿತು. ಆ ವರ್ಷ ಮೇ ೭ನೇ ತಾರೀಖು ಬುದ್ಧಜಯಂತಿ. ನಿಗದಿಪಡಿಸಿದ್ದ ದಿನಕ್ಕೆ ಬದಲಾಗಿ ಆ ದಿನವನ್ನು ನಾನು ಸೂಚಿಸಿದೆ. ಮಹಾರಾಜ್ ತಕ್ಷಣ ಒಪ್ಪಿಕೊಂಡರು. ಕ್ರಮೇಣ ಮಹಾರಾಜ್ ಮುಕ್ಕಾಲು ಭಾಗ ಚೇತರಿಸಿಕೊಂಡರು. ಅವರು ಬೇಲೂರುಮಠಕ್ಕೆ ಹಿಂದಿರುಗಿ ೨೦೧೦ರ ಮೇ ಏಳರಂದು ವಸ್ತು ಸಂಗ್ರಹಾಲಯವನ್ನು ಉದ್ಘಾಟನೆ ಮಾಡಿದರು. ಮಹಾರಾಜರ ಜೀವನದಲ್ಲಿ ನಾವು ನೋಡಿದ ಇಂತಹ ಎಷ್ಟೋ ಘಟನೆಗಳು ಇತ್ಯಾತ್ಮಕ ಹಾಗೂ ಉನ್ನತ ಆದರ್ಶಗಳಿಗೆ ಅಂಟಿಕೊಳ್ಳಲು, ಉತ್ತಮವಾದ ಸಲಹೆಗಳಿಗೆ ನಮ್ಮ ಮನಸ್ಸನ್ನು ತೆರೆದಿಟ್ಟುಕೊಳ್ಳಲು ನಮ್ಮನ್ನು ಪ್ರೋತ್ಸಾಹಿಸುತ್ತದೆ.

ಸ್ವಾಮಿ ವಿವೇಕಾನಂದರ ಕಟ್ಟಾ ಅಭಿಮಾನಿಯಾಗಿದ್ದ ಪೂಜ್ಯ ಮಹಾರಾಜರು ಯಾವಾಗಲೂ ಇತ್ಯಾತ್ಮಕ ಭಾವನೆಗಳನ್ನು, ಸ್ಫೂರ್ತಿಗೊಳಿಸುವ ವಿಚಾರಗಳನ್ನು ಮತ್ತು ಎದೆಗಾರಿಕೆಯ ಕೆಲಸಗಳನ್ನು ಪ್ರತಿಪಾದಿಸುತ್ತಿದ್ದರು. ನಿರಾಶೆ ಎಂದರೆ ಅವರಿಗೆ ಆಗುತ್ತಿರಲಿಲ್ಲ. ಜನರಿಗೆ ಅವರು ಸದಾ ಭರವಸೆ ಮತ್ತು ಉತ್ತೇಜನದ ಮಾತುಗಳನ್ನು ಆಡುತ್ತಿದ್ದರು. ಅವರಾಡುತ್ತಿದ್ದ ಮಾತುಗಳಿಗೆ ಅತ್ಯುತ್ತಮ ನಿದರ್ಶನ ಸ್ವತಃ ಅವರೇ ಆಗಿದ್ದರು.

ಆಲೋಚಿಸುತ್ತ ಹೋದಂತೆ ವಿಸ್ಮೃತಿಯ ಮೋಡವನ್ನು ಭೇದಿಸಿಕೊಂಡು ವಿವಿಧ ಘಟನೆಗಳ ನೆನಪುಗಳು ನಾ ಮುಂದು ತಾ ಮುಂದು ಎಂದು ನುಗ್ಗ ತೊಡಗುತ್ತವೆ. ಅಂತಹ ಇನ್ನೊಂದು ಘಟನೆ ಇಲ್ಲಿದೆ. ಇದು ನಡೆದದ್ದು ೧೯೮೬ರಲ್ಲಿ. ನಮ್ಮ ಮುಂಬೈ ಆಶ್ರಮವು ಗ್ರಂಥಾಲಯ ಕಟ್ಟಡದ ನೆಲಅಂತಸ್ತಿನಲ್ಲಿ ಮೂರು ದಿನಗಳ ಯುವ ಸಮ್ಮೇಳನವನ್ನು ಆಯೋಜಿಸಿತ್ತು. ಮೂರನೆಯ ದಿನದ ಕಡೆಯ ಗೋಷ್ಠಿಯಲ್ಲಿ ಒಂದು ವಿಚಿತ್ರ ನಡೆಯಿತು. ಹಿಂದಿನ ಸಂಜೆ ಪೂಜ್ಯ ರಂಗನಾಥಾ ನಂದಜಿಯವರು ಆಯೋಜಕರಿಗೆ ಒಂದು ಹೊಸ ಬಗೆಯ ಕಾರ್ಯಕ್ರಮದ ಸಲಹೆ ನೀಡಿದ್ದರು. "ಇಂದಿನ ದಿನಗಳಲ್ಲಿ ಕೆಲಸವಿಲ್ಲದೆ ಕುಳಿತಿರುವ ಹಲವಾರು ಜನ

ನಿರುದ್ಯೋಗಿ ಯುವಕರಿದ್ದಾರೆ. ಅವರ ಮನಸ್ಸನ್ನು ನಿರಾಸೆ–ಅನಿಶ್ಚಿತತೆಗಳು ಆವರಿಸಿವೆ. ನಾವು ಕೆಲವು ಪ್ರಮುಖ ಕೈಗಾರಿಕೋದ್ಯಮಿಗಳನ್ನು ನಮ್ಮ ಕಾರ್ಯಕ್ರಮಕ್ಕೆ ಕರೆಯೋಣ. ಅವರು ನಮ್ಮ ಯುವಕ–ಯುವತಿಯರಿಗೆ ಏನಾದರೂ ಒಂದಿಷ್ಟು ನೆರವಾದರೂ ಆಗಬಹುದು.'' ಮೂವರು ಹಿರಿಯ ಕೈಗಾರಿಕೋದ್ಯಮಿಗಳು ನಮ್ಮ ಆಹ್ವಾನವನ್ನು ಒಪ್ಪಿಕೊಂಡಿದ್ದರು. ವೇದಪಠಣದ ಬಳಿಕ ಕೊನೆಯ ಅಧಿವೇಶನ ಪ್ರಾರಂಭವಾಯಿತು. ಇದ್ದಕ್ಕಿದ್ದಂತೆ ಹದಿವಯಸ್ಸಿನ ಯುವಕನೊಬ್ಬ ಎದ್ದುನಿಂತು ನಿರೂಪಕರನ್ನು ಉದ್ದೇಶಿಸಿ ಕೂಗಿ ಹೇಳಿದ: ''ಆ ಮುದಿಗೊಡ್ಡುಗಳೆಲ್ಲ ವೇದಿಕೆಯ ಮೇಲೆ ಯಾಕಿದ್ದಾರೆ? ಇದು ಯುವ ಸಮ್ಮೇಳನ!'' ಅವನ ಕೂಗಾಟ ಗೊಂದಲಕ್ಕೀಡು ಮಾಡಿತು. ಒಂದು ವಿಚಿತ್ರ ಸನ್ನಿವೇಶ ನಿರ್ಮಾಣವಾಯಿತು. ಆ ಯುವಕನನ್ನು ಸಮಾಧಾನಪಡಿಸಲು ಮಾಡಿದ ಪ್ರಯತ್ನಗಳೆಲ್ಲ ವಿಫಲವಾದವು. ಆಗ ಪೂಜ್ಯ ರಂಗನಾಥಾನಂದಜಿಯವರು ಎದ್ದುನಿಂತು ಹೇಳಿದರು: ''ನನ್ನ ಬಗ್ಗೆ ಏನು ಹೇಳುತ್ತೀರಾ? ನಾನೂ ಎಪ್ಪತ್ತೆಂದು ವರ್ಷದ ಮುದುಕ!'' ಅದಕ್ಕೆ ಆ ಯುವಕ ಹೇಳಿದ: ''ನಿಮ್ಮ ಬಗೆಗೆ ನಮ್ಮದೇನೂ ಅಭ್ಯಂತರವಿಲ್ಲ. ನೀವು ದೈಹಿಕವಾಗಿ ವಯಸ್ಸಿನಲ್ಲಿ ಮುಂದಿರಬಹುದು. ಆದರೆ ನೀವು ಯಾವಾಗಲೂ ಯುವಜನರನ್ನು ಪ್ರೋತ್ಸಾಹಿಸುತ್ತೀರಿ. ಅವರ ಕೆಲಸಕ್ಕೆ ನಿಮ್ಮ ಬೆಂಬಲ ಕೊಡುತ್ತೀರಿ. ಆದರೆ ಈ ಮುದುಕರು ಯಾವಾಗಲೂ ಯುವಕರ ತಪ್ಪನ್ನೇ ಕಂಡುಹಿಡಿಯುತ್ತಿರುತ್ತಾರೆ. ನಿನ್ನೆ ಇವರಲ್ಲೊಬ್ಬರು ರೇಡಿಯೋನಲ್ಲಿ ಭಾಷಣ ಮಾಡಿ ಯುವಜನರು ನಾಲಾಯಕ್ಕೆಂದು ಹೀಯಾಳಿಸಿದರು.'' ಆ ಯುವಕನ ಮಾತುಗಳು ಸಭಿಕರ ಒಂದು ವಲಯದಲ್ಲಿ ಕೋಲಾಹಲವನ್ನೇ ಉಂಟುಮಾಡಿದವು. ಆಗ ಪೂಜ್ಯ ಮಹಾರಾಜರು ಮತ್ತೆ ಮತ್ತೆ ಒತ್ತಿ ಒತ್ತಿ ತಿಳಿಯಹೇಳಿದರು: ಆಹ್ವಾನಿತರು ನಮ್ಮ ಸನ್ಮಾನ್ಯ ಅತಿಥಿಗಳು; ಆದ್ದರಿಂದ ಅವರನ್ನು ಆಹ್ವಾನಿಸಿದ ಸಂಸ್ಥೆ ಅಥವಾ ಆಯೋಜಕರ ಗೌರವಕ್ಕೆ ಧಕ್ಕೆ ತರುವಂತಹ ಮಾತುಗಳನ್ನು ಆಡಬಾರದು ಎಂದು. ಯುವಕ ಕೊನೆಗೆ ಸುಮ್ಮನಾದ. ನಾವೂ ಸಮಾಧಾನದ ನಿಟ್ಟುಸಿರುಬಿಟ್ಟೆವು. ಮಹಾರಜರು ಎಷ್ಟು ಕೌಶಲದಿಂದ ಆ ಸನ್ನಿವೇಶವನ್ನು ನಿಭಾಯಿಸಿದರೆಂದರೆ, ಅದು ನನ್ನ ಮನಸ್ಸಿನಲ್ಲಿ ಅಚ್ಚಳಿಯದ ಗುರುತನ್ನು ಮೂಡಿಸಿತು.

ಪೂಜ್ಯ ಮಹಾರಾಜರು ಎಲ್ಲ ಸನ್ನಿವೇಶಗಳಲ್ಲೂ ಕಾರ್ಯಗೌರವವನ್ನು ಎತ್ತಿ ಹಿಡಿಯುತ್ತಿದ್ದರು. ನೌಕರರು ಹಾಗೂ ಕಾರ್ಮಿಕರ ವಿಷಯದಲ್ಲಿ ಅವರು ನಡೆದುಕೊಳ್ಳುತ್ತಿದ್ದ ರೀತಿ ನಮ್ಮಲ್ಲಿ ಅನೇಕರಿಗೆ ಕಣ್ತೆರೆಸುವಂತಿತ್ತು. ಹಲವಾರು ಸನ್ನಿವೇಶಗಳಲ್ಲಿ ವ್ಯಕ್ತವಾಗುತ್ತಿದ್ದ ಅವರ ವ್ಯಕ್ತಿತ್ವದ ಈ ಅಂಶ ವಿಶೇಷವಾಗಿ ನನ್ನ ಮೇಲೆ ಪರಿಣಾಮ ಬೀರಿದೆ. ಅವರು ಜನರನ್ನು ನಡೆಸಿಕೊಳ್ಳುತ್ತಿದ್ದ ರೀತಿ ಅನುಕರಣೀಯ.

ನಾನು ಹಿಂದಿರುಗಿ ನೋಡಿ ಪೂಜ್ಯ ಮಹಾರಾಜರ ಜೀವನ ಮತ್ತು ನುಡಿಗಳನ್ನು ನೆನೆಸಿಕೊಂಡಂತೆಲ್ಲ, ಜೀವನದ ಸವಾಲುಗಳನ್ನು ಧೈರ್ಯದಿಂದ ಎದುರಿಸುವ ಸ್ಫೂರ್ತಿ ನನ್ನಲ್ಲಿ ಸಹಜವಾಗಿಯೇ ಉಂಟಾಗುತ್ತದೆ.

* * * *

# ೩. ವಿಶಿಷ್ಟ ಜೀವನ

–ಸ್ವಾಮಿ ಸ್ಮರಣಾನಂದ*

ಪೂಜ್ಯ ಸ್ವಾಮಿ ರಂಗನಾಥಾನಂದಜಿಯವರು ವಿಶಿಷ್ಟ ಜೀವನವನ್ನು ನಡೆಸಿದರು. ಅವರು ರಾಮಕೃಷ್ಣಾಶ್ರಮವನ್ನು ಸೇರಿದುದು ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿ; ಅವರು ಸಮಾಧಿಸ್ಥರಾದುದು ತೊಂಬತ್ತಾರನೆಯ ವಯಸ್ಸಿನಲ್ಲಿ, ಎಂಬತ್ತೈದು ವರ್ಷಗಳ ದೀರ್ಘಕಾಲದ ಸೇವೆ ಸಲ್ಲಿಸಿದ ಬಳಿಕ. ಈ ಪರಿಶುದ್ಧ ದೀರ್ಘ ತಾಪಸ ಜೀವನದ ಅವಧಿಯಲ್ಲಿ ಅವರು ಪಡೆದುಕೊಂಡ ಅನುಭವ ಶ್ರೀಮಂತಿಕೆ ಅದೆಂತಹುದು! ೧೯೯೮ರಲ್ಲಿ ಅವರು ಶ್ರೀ ರಾಮಕೃಷ್ಣ ಮಠ ಮತ್ತು ಶ್ರೀ ರಾಮಕೃಷ್ಣ ಮಿಷನ್‌ನ ಅಧ್ಯಕ್ಷರಾದುದನ್ನು ತಿಳಿದಾಗ ಅವರು ಉತ್ತರಿಸಿದುದು ನನಗಿನ್ನೂ ನೆನಪಿದೆ: "ಮೈಸೂರು ಆಶ್ರಮದ ಅಡುಗೆಯವನೀಗ ಅಧ್ಯಕ್ಷನಾಗಿ ನೇಮಿತನಾಗಿದ್ದಾನೆ." ಮೈಸೂರು ಆಶ್ರಮವನ್ನು ಸೇರಿದಾಗ ಅಡುಗೆ ಮಾಡುವುದು, ತೋಟಗಾರಿಕೆ, ಪಾತ್ರೆಗಳನ್ನು ತೊಳೆಯುವುದೂ ಸೇರಿದಂತೆ ಎಲ್ಲ ರೀತಿಯ ಕೆಲಸಗಳನ್ನು ಅವರು ಮಾಡಬೇಕಿತ್ತು. ಹೀಗಾಗಿಯೇ ಅವರು ಈ ಚಟಾಕಿಯನ್ನು ಹಾರಿಸಿದುದು. ಇದು ಗಮನಾರ್ಹವಾದುದಾಗಿತ್ತು!

ಅವರ ವ್ಯಕ್ತಿತ್ವದ ಅತ್ಯಂತ ವಿಶಿಷ್ಟ ಅಂಶವೆಂದರೆ ಅವರ ಜ್ಞಾನದಾಹ. ಅವರು ಅದು ಹೇಗೆ ಅಂತಹ ಶ್ರೇಷ್ಠ ವಿದ್ವಾಂಸರೂ, ವಾಗ್ಮಿಯೂ ಆದರು? ಅವರ ವಿದ್ಯಾ ದಾಹದಿಂದ. ಅವರು ಹಸಿವುತೀರದ ಓದುಗರಾಗಿದ್ದರು. ಪುಸ್ತಕಗಳೆಂದರೆ ಅವರಿಗೆ ಹುಚ್ಚು. ಮಠದ ಹತ್ತನೆಯ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ವೀರೇಶ್ವರಾನಂದಜಿಯವರು ರಂಗನಾಥಾನಂದಜೀಯವರನ್ನು 'ಶಂಕರ' ಎಂದು ಕರೆಯುತ್ತಿದ್ದರು. ಅವರು ಹೇಳುತ್ತಿದ್ದರು: "ಉಪನ್ಯಾಸವೆಂದರೆ ಶಂಕರನಿಗೆ ಊಟವಿದ್ದಂತೆ. ಆತನಿಗೆ ಬೇರೇನೂ ಬೇಕಿಲ್ಲ. ಒಂದೆರಡು ಉಪನ್ಯಾಸಗಳನ್ನು ಕೊಟ್ಟರೆ ಸಾಕು ಆತನ ಹಸಿವು ನೀಗುತ್ತದೆ." ಇದು ವಾಸ್ತವವೂ ಆಗಿತ್ತು. ಎಂತಹ ಅನಾರೋಗ್ಯ ಪರಿಸ್ಥಿತಿಯಲ್ಲಿಯೂ ರಂಗನಾಥಾನಂದರು ನಿಷ್ಕ್ರಿಯವಾಗಿದ್ದುದನ್ನು ನಾನು ಕಂಡಿಲ್ಲ. ಅವರ ಕೈಯಲ್ಲಿ ಸದಾ ಒಂದು ಪುಸ್ತಕವಿರುತ್ತಿತ್ತು; ಅದರಲ್ಲಿ ಮುಖ್ಯ ಸಾಲುಗಳನ್ನು ಅವರು ಪೆನ್ಸಿಲಿನಿಂದ ಗೆರೆಯೆಳೆಯುತ್ತಿರುತ್ತಿದ್ದರು. ವೈವಿಧ್ಯಮಯ ವಿಷಯಗಳ ಅತ್ಯಂತ ಕ್ಲಿಷ್ಟಕರವಾದ ಪುಸ್ತಕಗಳನ್ನು ಅವರು ಓದುತ್ತಿದ್ದರು. ಅಂತಹ ಅದ್ಭುತ ಪುಸ್ತಕಗಳು ಅವರ ಸಂಗ್ರಹಕ್ಕೆ ಸತತವಾಗಿ ಸೇರುತ್ತಲೇ ಇದ್ದವು. ಅವರ ಈ ಜ್ಞಾನೋತ್ಸಾಹ ಅನುಪಮವಾದುದು.

ಅವರ ಜೀವನದ ಇನ್ನೊಂದು ಅಂಶವನ್ನು ತೋರಿಸುವ ಇನ್ನೊಂದು ಘಟನೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುವೆ. ತಮ್ಮ ಬಾಲ್ಯದಿಂದಲೂ ಅವರು ಕ್ರಮವಾಗಿ ವ್ಯಾಯಾಮ ಮಾಡುತ್ತಿದ್ದರು ಮತ್ತು ವಿವಿಧ ಆಟಗಳಲ್ಲಿ ಅವರಿಗೆ ಆಳವಾದ ಆಸಕ್ತಿಯಿತ್ತು. ಒಮ್ಮೆ ಸ್ವತಃ ಅವರೇ ಈ ಘಟನೆಯನ್ನು ನನಗೆ ಹೇಳಿದ್ದರು. ಕರಾಚಿಯಲ್ಲಿದ್ದಾಗ ಸಿಂಧೂನದಿಯಲ್ಲಿ ಇತರರೊಂದಿಗೆ ದೋಣಿಯಲ್ಲಿ ಹೋಗಿದ್ದರು. ಒಂದೇ ಸಲಕ್ಕೆ ಅವರು ದೋಣಿಯಿಂದ ಜಿಗಿದು ಈಜಲಾರಂಭಿಸಿದರು. ಸ್ವಲ್ಪ ಕಾಲ ಅವರು ಕಣ್ಣಿಗೆ ಕಾಣಿಸದಂತಾದಾಗ ಎಲ್ಲರೂ ಗಾಬರಿಯಾದರು. ಅವರು ಹೇಗೆ ತಾನೆ ಕಂಡಾರು? ಸ್ವಾಮೀಜಿ ನೀರಿನಡಿಯಲ್ಲಿ ಈಜುತ್ತಿದ್ದರು. ಅವರೆಲ್ಲ ಏನೋ ಅನಾಹುತವಾಗುತ್ತದೆಂದು ನಿರೀಕ್ಷಿಸುತ್ತಿದ್ದಾಗ, ಒಮ್ಮೆಗೆ ಸ್ವಾಮೀಜಿಯವರ ತಲೆ ನೀರಿನಿಂದ ನೇಲೆದ್ದಿತು ಮತ್ತು ಸ್ವಾಮೀಜಿಯವರು ಗೆಲುವಿನಿಂದ ಈಜುತ್ತಿದ್ದರು. ಎಲ್ಲರೂ ನಿರಾಳವಾಗಿ ನಿಟ್ಟುಸಿರುಬಿಟ್ಟರು. ಮಹಾರಾಜ್

---

* ಉಪಾಧ್ಯಕ್ಷರು, ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್

ಹೇಳಿದರು, "ನಾನು ಸ್ವಲ್ಪ ಕಾಲ ಈಜಿ ಮತ್ತೆ ದೋಣಿ ಸೇರಿದೆ." ಮಹಾರಾಜ್ ದಿಟವಾದರೂ ಒಳ್ಳೆಯ ಈಜುಗಾರರಾಗಿದ್ದರು. ಏನೇ ಆಗಲಿ ಅವರು ಕೇರಳದವರಲ್ಲವೆ? ಕೇರಳ ಹಿನ್ನೀರಿನಿಂದ ಮತ್ತು ಕಾಲುವೆಗಳಿಂದ ತುಂಬಿದ ರಾಜ್ಯವಷ್ಟೆ. ಅವರಿಗೆ ಈಜು ಎಂದರೆ ಇಷ್ಟವೆಂಬುದೇನಚ್ಚರಿ! ಅವರ ಜೀವನ ಬಹುಮುಖಿಯಾದದ್ದು; ಆದರೆ ಲೋಕ ತಿಳಿದಿರುವುದು ಅವರು ದೊಡ್ಡ ವಿದ್ವಾಂಸ ಮತ್ತು ಸಂನ್ಯಾಸಿಯೆಂದು ಮಾತ್ರ.

ಅವರ ವ್ಯಕ್ತಿತ್ವದ ಇನ್ನೊಂದು ಮುಖ ಜನರಿಗೆ ಅಷ್ಟೇನೂ ಪರಿಚಿತವಾದುದಲ್ಲ. ಅದು ಅವರ ಕರುಣಾಮಯವಾದ ಸ್ವಭಾವ. ದುಃಖಿಗಳಾದವರ ಅದರಲ್ಲೂ ವಿಶೇಷವಾಗಿ ಹಿಂದುಳಿದ ವರ್ಗದವರ ಮತ್ತು ದಮನಕ್ಕೊಳಗಾದವರ ಬಗ್ಗೆ ಅವರಿಗೆ ಅಪಾರವಾದ ಸಹಾನುಭೂತಿಯಿತ್ತು. ಅಂತಹವರ ವಿಷಯದಲ್ಲಿ ಅವರಿಗೆ ಸರ್ವದಾ ಕಾಳಜಿಯಿತ್ತು. ಯುದ್ಧದ ಕ್ರೌರ್ಯ (ಮೃಗತ್ವ) ಮತ್ತು ಮಾನವ ಜನಾಂಗ ಪಡಬೇಕಾದ ಹಿಂಸೆಯ ಬಗ್ಗೆಯೂ ಅವರು ಪದೇ ಪದೇ ವ್ಯಗ್ರರಾಗು ತ್ತಿದ್ದರು. ಆಶ್ರಮದ ಅಧ್ಯಕ್ಷರಾಗಿ ತಮ್ಮ ಬಿಡುವಿಲ್ಲದ ಕಾರ್ಯಕ್ರಮದ ನಡುವೆಯೂ ಅವರು ಈ ವಿಷಯಗಳ ಕುರಿತು ಗಂಭೀರವಾಗಿ ಚಿಂತಿಸುತ್ತಿದ್ದರು.

ಉನ್ನತಾತ್ಮರಾದ ವ್ಯಕ್ತಿಗಳ ಔನ್ನತ್ಯವನ್ನು ನಾವು ತಿಳಿಯಬೇಕಾದರೆ ಅವರು ಸಣ್ಣಪುಟ್ಟ ಕೆಲಸಗಳನ್ನು ಮಾಡುವ ರೀತಿಯನ್ನು, ಅನುದಿನದ ಜೀವನದಲ್ಲಿ ಅವರು ನಡೆದುಕೊಳ್ಳುವುದನ್ನು ಗಮನಿಸಬೇಕು ಎಂದು ಸ್ವಾಮಿ ವಿವೇಕಾನಂದರು ಒಮ್ಮೆ ಹೇಳಿದ್ದರು. ಗೀತೆಯಲ್ಲಿ ಅರ್ಜುನನೂ ಶ್ರೀಕೃಷ್ಣನನ್ನು ಕೇಳುತ್ತಾನೆ:

**ಸ್ಥಿತಪ್ರಜ್ಞಸ್ಯ ಕಾ ಭಾಷಾ ಸಮಾಧಿಸ್ಥಸ್ಯ ಕೇಶವಃ**
**ಸ್ಥಿತಧೀಃ ಕಿಂ ಪ್ರಭಾಷೇತ ಕಿಮಾಸೀತ ವ್ರಜೇತ ಕಿಂ॥**

ಅಂದರೆ ಸ್ಥಿತಪ್ರಜ್ಞನಾದವನು (ಆತ್ಮಜ್ಞಾನಿಯಾದವನು) ಹೇಗೆ ನಡೆದು ಕೊಳ್ಳುತ್ತಾನೆ?

ಜೀವನದ ಸಾಮಾನ್ಯ ಸಂದರ್ಭದಲ್ಲಿ ಅವರು ಹೇಗೆ ನಡೆದುಕೊಳ್ಳುತ್ತಿದ್ದ ರೆಂಬುದನ್ನು ಕಾಣುವ ಅವಕಾಶಗಳು ನನಗೆ ದೊರಕಿದವು. ಒಮ್ಮೆ ನಾನು ಪೂಜ್ಯ ಶ್ರೀ ರಂಗನಾಥಾನಂದಜಿ ಮಹಾರಾಜ್‌ರವರೊಂದಿಗೆ ಹೈದರಾಬಾದಿಗೆ ವಿಮಾನದಲ್ಲಿ ಪ್ರಯಾಣಿಸುತ್ತಿದ್ದೆ. ವಿಮಾನ ಏರಿದ ಬಳಿಕ ಮಾಮೂಲಿನಂತೆ ಅವರು ಪುಸ್ತಕವೊಂದನ್ನು ಓದಲಾರಂಬಿಸಿದರು. ನಾನು ಅವರ ಪಕ್ಕದಲ್ಲಿಯೇ ಕುಳಿತಿದ್ದೆ. ಸ್ವಲ್ಪ ಹೊತ್ತಿನ ಮೇಲೆ ಗಗನಸಖಿಯು ಎಲ್ಲರಿಗೂ ಊಟದ ಪೊಟ್ಟಣಗಳನ್ನು ನೀಡತೊಡಗಿದಳು. ಸ್ವಾಮಿ ರಂಗನಾಥಾನಂದರ ಬಳಿ ಬಂದಾಗ ಅವರೂ ಅದನ್ನು ಸ್ವೀಕರಿಸಿದರು. ಜೇನು, ಮಜ್ಜಿಗೆ ಮತ್ತು ತರಕಾರಿ ಬೆರೆಸಿದ ಒಂದಿಷ್ಟು ಅನ್ನದ ಗಂಜಿಯನ್ನು ಮಾತ್ರ ಅವರು ಸೇವಿಸುವುದೆಂದು ಅರಿತಿದ್ದ ನನಗೆ ಅವರೇಕೆ ಊಟದ ಪೊಟ್ಟಣವನ್ನು ತೆಗೆದುಕೊಂಡರೆಂದು ಆಶ್ಚರ್ಯವಾಯಿತು. ಅವರು ಅಷ್ಟನ್ನು ಮಾತ್ರ, ದಿನಕ್ಕೆ ಮೂರು–ನಾಲ್ಕು ಬಾರಿ ತೆಗೆದುಕೊಳ್ಳುತ್ತಿದ್ದರು. ಹೀಗಾಗಿ ಅವರು ಊಟದ ಪೊಟ್ಟಣವನ್ನು ಸ್ವೀಕರಿಸಿದ್ದು ಒಗಟಾಯಿತು. ಆದರೆ ಮಹಾರಾಜ್ ಅದನ್ನು ಆರಾಮಾಗಿ ಪಕ್ಕದಲ್ಲಿಟ್ಟು ಮತ್ತೆ ಓದಿನಲ್ಲಿ ಮುಳುಗಿದರು. ಹೈದರಾಬಾದಿನಲ್ಲಿ ನಾವು ಇಳಿದಾಗ, ಮಹಾರಾಜ್ ಅವರು ನಿಲ್ದಾಣದಲ್ಲಿ ಒಬ್ಬ ನಿರ್ದಿಷ್ಟ ಅಂಗವಿಕಲ ಹುಡುಗನಿಗಾಗಿ ಕಾತರದಿಂದ ಹುಡುಕುತ್ತಿದ್ದುದನ್ನು ಕಂಡೆ. ಅಂದರೆ, ಅವರು ಆ ಊಟದ ಪೊಟ್ಟಣವನ್ನು ಪಡೆದುಕೊಂಡಿದ್ದು ಆ ಹುಡುಗನಿಗಾಗಿ. ಈ ಅಸಹಾಯಕ ಅಂಗವಿಕಲ ಹುಡುಗ ಹೈದರಾಬಾದಿನ ನಿಲ್ದಾಣದಲ್ಲಿ ಇರುತ್ತಿದ್ದುದು ಅವರಿಗೆ ತಿಳಿದಿತ್ತು. ಈಗ ಈ ಊಟವನ್ನು ಅವನಿಗೆ ಕೊಡಲೆಂದು ಅವನನ್ನು ಹುಡುಕುತ್ತಿದ್ದರು. ತಮ್ಮೆಲ್ಲ ಓದು ಮತ್ತು ಬಿಡುವಿಲ್ಲದ ಕೆಲಸಗಳ ನಡುವೆಯೂ ಅವರು ಆ ಅಂಗವಿಕಲ ಹುಡುಗನನ್ನು ಮರೆಯಲಿಲ್ಲ.

ಇನ್ನೊಮ್ಮೆ ನಾವು ಸ್ವಾಮಿ ರಂಗನಾಥಾನಂದಜಿಯವರೊಡನೆ ಒರಿಸ್ಸಾದ ಸಂಬಲಪುರಕ್ಕೆ ಹೋಗಿದ್ದೆವು. ಅವರು ಭಾಷಣ ಮಾಡುತ್ತಿದ್ದ ಕಡೆಗಳಿಗೆಲ್ಲ ನಾವೂ ಹಾರುತ್ತಿದ್ದೆವು. ಅವರು ಏನೋ ಹೊಟ್ಟೆಯ

ಇರುಸುಮುರುಸಿನಿಂದ ಬಾಧೆ ಪಡುತ್ತಿದ್ದುದು ಒಮ್ಮೆಗೇ ನನ್ನ ಗಮನಕ್ಕೆ ಬಂದಿತು. ಅದಾಗಲೇ ನಾವು ೨೦೦ರಿಂದ ೨೫೦ ಕಿ.ಮೀ.ಗಳನ್ನು ಕ್ರಮಿಸಿಯಾಗಿತ್ತು. ಅವರು ಅಷ್ಟುಹೊತ್ತಿಗೆ ಮೂರು ಭಾಷಣಗಳನ್ನು ಮಾಡಿದ್ದರು ಮತ್ತು ತಮ್ಮ ಜೀವಧಾರಣೆಗೆ ಸೇವಿಸಿದ್ದುದು ಕೆಲವು ಗುಟುಕು ನೀರು ಮಾತ್ರ. ಇಪ್ಪತ್ತನಾಲ್ಕು ಗಂಟೆಗಳಲ್ಲಿ ಅವರು ಯಾವುದೇ ಆಹಾರವನ್ನು ಸೇವಿಸಲಿಲ್ಲ. ತಮ್ಮ ಆರೋಗ್ಯದ ಬಗೆಗಾಗಲಿ, ದೇಹ ಸ್ಥಿತಿಯ ಬಗೆಗಾಗಲಿ ಯಾರಿಗೂ ಏನನ್ನೂ ಅವರು ಹೇಳಲಿಲ್ಲ. ಇಂತಹುದು ಅವರ ಸ್ವಭಾವ.

ಅಲ್ಲಿ ಅವರ ದೀರ್ಘಕಾಲದ ಚಿಕಿತ್ಸೆಯ ಸಂದರ್ಭಗಳಲ್ಲಿ ತಮ್ಮ ದೇಹದ ಮೇಲಿನ ಹಲವು ರೀತಿಯ ಹಿಂಸೆಗಳನ್ನು ಅವರು ಸಹಿಸಬೇಕಾಯಿತು. ರಕ್ತ ಪರೀಕ್ಷೆ ಮತ್ತಿತರ ಹಲವು ಪರೀಕ್ಷೆಗಳಿಗಾಗಿ ಹಲವೆಡೆ, ಅವರ ದೇಹವನ್ನು ಚುಚ್ಚಿದರು. ಆದರೆ, 'ಮಹಾರಾಜ್, ಹೇಗಿದ್ದೀರಿ?' ಎಂಬ ನನ್ನ ಪ್ರಶ್ನೆಗೆ ಅವರದು ಒಂದೇ ಉತ್ತರ: 'ಚೆನ್ನಾಗಿದ್ದೇನೆ; ಈಗ ಸ್ವಲ್ಪ ವಾಸಿ.' ಅವರು ಅಗಲುವ ಹಿಂದಿನ ದಿನವೂ 'ಈಗ ವಾಸಿ' ಎಂದೇ ಹೇಳಿದ್ದರು. ಅದೊಂದೇ ಬಾರಿ ಅವರು 'ಸ್ವಲ್ಪ ನಿಶ್ಶಕ್ತಿ' ಎಂದು ಹೇಳಿದ್ದು.

ಸ್ವಾಮಿ ರಂಗನಾಥಾನಂದಜೀಯವರಿಗೆ ಸಮಸ್ತ ಮಾನವಕುಲದ ಬಗ್ಗೆ ಪ್ರೀತಿ–ಅನುಭೂತಿ ಇದ್ದವು. ಆದುದರಿಂದಲೇ ಮಾನವ ಬದಲಾಗುವುದರ ಕುರಿತು ಮಾತನಾಡುವುದರಲ್ಲಿ ಅವರಿಗೆ ದಣಿವೇ ಇರಲಿಲ್ಲ. ತಾವು 'ಜಡಧರ್ಮ' ಎಂದು ಕರೆಯುತ್ತಿದ್ದ ಬರಿಯ ಆಚರಣೆಗಳಲ್ಲಿ ಅವರಿಗೆ ಆಸಕ್ತಿ ಇರಲಿಲ್ಲ. ಅಂತಹ ಧರ್ಮವೊಂದು ಉನ್ನತ ಶೀಲದ ಸ್ತ್ರೀ–ಪುರುಷರನ್ನು ರೂಪಿಸುವುದು ಸಾಧ್ಯವಿಲ್ಲವೆಂದು ಅವರು ನಂಬಿದ್ದರು. ಅದಕ್ಕೆ 'ಜಂಗಮ ಆಧ್ಯಾತ್ಮಿಕತೆ' ಅಗತ್ಯವೆಂದು ಅವರು ಹೇಳುತ್ತಿದ್ದರು. ಅಧ್ಯಾತ್ಮವಾಗಲಿ ಅಥವಾ ಇನ್ನೇನೇ ಆಗಲಿ ಅವರಲ್ಲಿ ಪ್ರತಿಯೊಂದೂ ಜಂಗಮವೇ ಆಗಿತ್ತು.

ಅವರ ಪುಸ್ತಕ ಪ್ರೀತಿ ಅಗಾಧವಾದುದು. ಶ್ರೀಮದ್ ಭಾಗವತ ಮತ್ತು ಸ್ವಾಮಿ ವಿವೇಕಾನಂದರ ಸಂಪೂರ್ಣ ಕೃತಿಗಳೆಂದರೆ ಅವರಿಗೆ ಬಹುಪ್ರೀತಿ. ಈ ಗ್ರಂಥಗಳನ್ನು ಅವರು ಹಲವಾರು ಬಾರಿ ಓದಿದ್ದರು. ಭಾಗವತದ ಹಲವು ಶ್ಲೋಕಗಳೆಂದರೆ ಅವರಿಗೆ ತುಂಬ ಪ್ರೀತಿ. ಅವುಗಳಲ್ಲಿ ಕಪಿಲಮುನಿಯು ತನ್ನ ತಾಯಿ ದೇವಾಹುತಿಯೊಂದಿಗೆ ಹೇಳಿದ ಉನ್ನತ ಆಧ್ಯಾತ್ಮಿಕ ಸತ್ಯಗಳ ಶ್ಲೋಕವೊಂದನ್ನು ಅವರು ಪದೇ ಪದೇ ಉದ್ಧರಿಸುತ್ತಿದ್ದರು. ಅದರಲ್ಲಿ ದೇವರನ್ನು ಹೇಗೆ ಪೂಜಿಸಬೇಕೆಂಬುದನ್ನು ಕಪಿಲನು ವಿವರಿಸುತ್ತಾನೆ; ಅದು ವಿಗ್ರಹವನ್ನು ಎಲ್ಲ ರೀತಿಗಳಲ್ಲಿ ಅಲಂಕರಿಸುವುದರ ಮೂಲಕ ಪೂಜ್ಯ ಶಾರದಾ ಮಾತೆಯ ಬದುಕಿನಲ್ಲಿ ನಡೆದ ಸಂದರ್ಭವೊಂದನ್ನು ಅವರು ಉದಾಹರಿಸುತ್ತಿದ್ದರು. ಒಂದು ದಿನ ಒಬ್ಬ ಪುರುಷಭಕ್ತನು ಪೂಜ್ಯ ಮಾತಾಜಿಯವರ ದರ್ಶನಕ್ಕಾಗಿ ಬಂದನು. ಆಕೆಯ ಪಾದದ ಬಳಿ ಕುಳಿತು ಆತನು ಉಸಿರಾಟದ ವ್ಯಾಯಾಮವನ್ನಾರಂಭಿಸಿದರು. ಇದು ಬಹುಸಮಯದವರೆಗೆ ನಡೆಯಿತು. ಗೋಲಪ್ ಮಾತೆಯು ಇದನ್ನು ಗಮನಿಸಿ 'ಆಕೆಯನ್ನು ಏನೆಂದುಕೊಂಡೆ? ಕಲ್ಲಿನ ವಿಗ್ರಹವೆಂದೆ?' ಎಂದು ಗದರಿಸಿದರು.

ಭಾರತದಲ್ಲಿ ಇಂತಹ ಸಾಂಪ್ರದಾಯಿಕ–ನಿರ್ಜೀವ, ಶುಷ್ಕ– ಪೂಜೆಯು ನಮಗೆ ಅಭ್ಯಾಸವಾಗಿದೆ. ಕೂಡದು! ರಂಗನಾಥಾನಂದಜಿಯವರು ಭಾಗವತರನ್ನು ಉದ್ಧರಿಸುತ್ತ ಮನುಷ್ಯನನ್ನು ಸ್ವಯಂನಾರಾಯಣನೆಂದೇ ಭಾವಿಸಿ ಅಥವಾ ಶ್ರೀ ರಾಮಕೃಷ್ಣರು ಹೇಳಿದಂತೆ 'ಜೀವಸಮಸ್ತವೂ ಶಿವನಂತೆ' ಎಂದು ತಿಳಿದು ಸೇವಿಸಬೇಕೆಂದು ಹೇಳುತ್ತಿದ್ದಳು. ಸಜೀವ ದೇವರನ್ನು ಪೂಜಿಸಿ, ಆತನಿಗೆ ಪ್ರೀತಿ; ಆದರಗಳೊಡನೆ, ಎಲ್ಲವೂ ಒಂದೇ ಎಂಬ ಸಮಾನದೃಷ್ಟಿಯಿಂದ (ದಾನೇನ ಅಭಿನ್ನೇನ ಚಕ್ಷುಷಾ) ನೀಡಿ.

ಸ್ವಾಮಿ ವಿವೇಕಾನಂದರು ಅಮೆರಿಕದಲ್ಲಿ ಹೇಳಿದ್ದರು: "ಉನ್ನತ ಪೀಠದ ಮೇಲೆ ನಿಂತು, ಕೈಯಲ್ಲಿ ಐದು ಸೆಂಟು ಹಿಡಿದು, 'ಹಿಡಿ ಇದನ್ನು, ದರಿದ್ರ' ಎಂದೆನ್ನಬೇಡಿ. ಆದರೆ, ಆತನಿಗೆ ಭಿಕ್ಷೆ ನೀಡುವುದರ ಮೂಲಕ ನಿಮ್ಮ ಆತ್ಮೋದ್ಧಾರಕಕ್ಕೆ ಕಾರಣವಾದ ಆತನ ಬಗ್ಗೆ ನಿಮಗೆ ಕೃತಜ್ಞತೆ ಇರಬೇಕು. ಕೊಡುವವನು ಧನ್ಯ, ಪಡೆದುಕೊಳ್ಳುವವನಲ್ಲ.

ನಿಮ್ಮ ಕರುಣೆ ಮತ್ತು ಧನದ ಶಕ್ತಿಯ ಸದ್ಬಳಕೆಗೆ ಅವಕಾಶ ದೊರಕಿತೆಂದು ಮತ್ತು ಅದರ ಮೂಲಕ ಶುದ್ಧರೂ ಪರಿಪೂರ್ಣರೂ ಆಗಲು ಅವಕಾಶವಾಯಿತೆಂದು ಕೃತಜ್ಞರಾಗಿರಿ."

ಆದುದರಿಂದಲೇ ಉಪನಿಷತ್ತು ಹೇಳುತ್ತದೆ: ಶ್ರದ್ಧೆಯಾ ದೇಯಮ್, ಅಶ್ರದ್ಧೆಯಾ ಅದೇಯಮ್, ಅಂದರೆ ಕೊಡುವುದನ್ನು ಶ್ರದ್ಧೆಯಿಂದ ಕೊಡಿರಿ. ನಿಮ್ಮಿಂದ ಪಡೆಯುವವರನ್ನು ಗೌರವಿಸಿ. ಏಕೆಂದರೆ ಕೊಡುವ ಅವಕಾಶ ಅವರಿಂದ ನಿಮಗೆ ದೊರಕಿದೆ. ಸ್ವೀಕರಿಸುವವನ ಬಗ್ಗೆ ಕೃತಜ್ಞರಾಗಿರಬೇಕೆಂದು ಮಹಾರಾಜ್ ಒತ್ತಿ ಹೇಳುತ್ತಿದ್ದರು. ಅವರು ಪದೇ ಪದೇ ಉದ್ಧರಿಸುತ್ತಿದ್ದ ಇನ್ನೊಂದು ಶ್ಲೋಕ ಎಂದರೆ:

**ಅಹಂ ಸರ್ವೇಷು ಭೂತೇಷು ಭೂತಾತ್ಮಾವಸ್ಥಿತಃ ಸದಾ**
**ತಂ ಅವಜ್ಞಾಯ ಮಾಮ್ ಮರ್ತ್ಯಃ ಕುರುತೇ ಅರ್ಚಾವಿಡಂಬನಮ್॥**

ಅಂದರೆ ಭಗವಂತ ಹೇಳುತ್ತಾನೆ: ನಾನು ಎಲ್ಲ ಜೀವಿಗಳಲ್ಲೂ ಇದ್ದೇನೆ. ಆದರೆ ನಾನು ಉಪಸ್ಥಿತನಾಗಿರುವ ಮನುಷ್ಯರನ್ನು ಅವಮಾನಿಸಿ, ವಿಗ್ರಹವನ್ನು ನೀವು ಪೂಜಿಸುತ್ತೀರಿ.

ಅಂತಹ ಪೂಜೆ ವ್ಯರ್ಥ. ಹಾಗಾಗಿಯೇ ಮನುಷ್ಯರನು ದೇವಸ್ಥಾನವೆಂದು ತಿಳಿಯುವತನಕ ನಾವು ನಮ್ಮ ಗುರಿಯಿಂದ ದೂರವಾಗಿಯೇ ಇರುತ್ತೇವೆ. ಸ್ವಾಮಿ ವಿವೇಕಾನಂದರು ಹೇಳಿದರು: 'ಮನುಷ್ಯ ಶ್ರೇಷ್ಠತಮ' ದೇವಸ್ಥಾನ. ಅಲ್ಲಿ ನಾನು ಪೂಜಿಸಲಾರೆನಾದರೆ ಇನ್ನಾವ ದೇವಸ್ಥಾನವೂ ಅಪ್ರಯೋಜಕ.' ಹೀಗೆ ಭಗವಂತ ನಿರುವ ಅತ್ಯಂತ ಶ್ರೇಷ್ಠ ದೇವಸ್ಥಾನ ಮನುಷ್ಯ. ಆದರೆ ನಾವು ಮನುಷ್ಯನನ್ನೇ ಅಗೌರವದಿಂದ ಕಾಣುತ್ತೇವೆ! ಇಂತಹ ಉನ್ನತ ವಿಚಾರಗಳನ್ನು ಮಹಾರಾಜ್ ತುಂಬ ಶಕ್ತವಾಗಿ ವ್ಯಕ್ತಪಡಿಸುತ್ತಿದ್ದರು. ಭಾಗವತದ ಕುರಿತಾದ ಅವರ ಉಪನ್ಯಾಸಗಳು ಎಲ್ಲರಿಗೂ ಸ್ಫೂರ್ತಿದಾಯಕವಾಗಿರುತ್ತಿದ್ದವು.

ಪೂಜ್ಯ ರಂಗನಾಥಾನಂದಜಿಯವರು ಶ್ರೇಷ್ಠರಾದುದು, ದೊಡ್ಡವರಾದುದು ಬರಿಯ ವಾಗ್ಮಿತೆಯಿಂದಲ್ಲ. ಸದ್ವಿಷಯಗಳ ಬಗ್ಗೆ ಭಾಷಣ ಮಾಡಬಲ್ಲವರು ಹಲವರಿದ್ದಾರೆ. ಆದರೆ ಅವರ ಜೀವನರೀತಿಯೇ ಬೇರೆ, ಉಪದೇಶವೇ ಬೇರೆ. ಆದರೆ ಸ್ವಾಮಿ ರಂಗನಾಥಾನಂದರ ಜೀವನದಲ್ಲಿ ನಾವು ಕಂಡುದೇನು? ತಾವು ನುಡಿದಂತೆಯೇ ತನ್ನ ನಡೆಯೂ ಇರಬೇಕೆಂದು ಅವರ ಎಚ್ಚರಿಕೆಯಾಗಿತ್ತು. ಅವರ ಬದುಕೂ ಮಾತು ಒಂದೇ ಆಗಿದ್ದವು. ಇದರ ಫಲವಾಗಿ, ಇತರರಿಗೆ ಸಹಾಯ ಮಾಡಲು ಅವರು ಯಾವಾಗಲೂ ಕಾತರರಾಗಿದ್ದರು. ಅವರು ಸುಖದಿಂದಿರ ಬೇಕೆಂದೂ ಅವರ ಕಾಳಜಿಯಾಗಿತ್ತು. ಅವರು ಮನುಷ್ಯರಿಗೆ ಬೆಲೆ ಮತ್ತು ಗೌರವ ಕೊಡುತ್ತಿದ್ದರು.

ಈ ಗುಣಗಳು ಅವರ ವ್ಯಕ್ತಿತ್ವದ ಅವಿಭಾಜ್ಯ ಅಂಗಗಳಾಗಿದ್ದವು. ಅವರು ಯಾರನ್ನೇ ಆಗಲಿ, ಅಗೌರವಿಸುವುದನ್ನು ಕೀಳಾಗಿ ಕಾಣುವುದನ್ನು ನಾವು ಎಂದೂ ನೋಡಿರಲಿಲ್ಲ. ಅವರ ದೃಷ್ಟಿಯಲ್ಲಿ ಎಲ್ಲರೂ ಸಮಾನರಾಗಿದ್ದರು. ಅವರು ಎಲ್ಲರನ್ನೂ ಸ್ವಾಗತಿಸುತ್ತಿದ್ದರು, ಅವರ ಅಂತಶ್ಶಕ್ತಿಯನ್ನು ಹೊಸದಾದ ಮತ್ತು ಸೂಕ್ತವಾದ ದಿಕ್ಕಿನಲ್ಲಿ ಹರಿಸಲು ಪ್ರಯತ್ನಿಸುತ್ತಿದ್ದರು.

ಇಂದು ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರು ಭೌತಿಕವಾಗಿ ನಮ್ಮೊಂದಿಗಿಲ್ಲ. ಅವರು ಬರಿಯ ರಾಮಕೃಷ್ಣ ಮಠ ಹಾಗೂ ಮಿಷನ್‌ಗೆ ಸೇರಿದವರಲ್ಲ; ಅವರು ಎಲ್ಲರಿಗೂ ಸ್ಫೂರ್ತಿಯ ಸೆಲೆಯಾಗಿದ್ದರು.*

* * * *

* ಇದು ಪೂಜ್ಯ ಸ್ವಾಮಿ ಸ್ಮರಣಾನಂದಜೀ ಮಹಾರಾಜ್ ಅವರು ಬೇಲೂರು ಮಠದಲ್ಲಿ ೭–೫–೨೦೦೫ರಂದು ಬಂಗಾಳಿ ಭಾಷೆಯಲ್ಲಿ ನೀಡಿದ ಭಾಷಣದ ಇಂಗ್ಲಿಷ್ ಅನುವಾದವನ್ನು ಆಧರಿಸಿ ಮಾಡಲಾಗಿರುವ ಕನ್ನಡ ಅನುವಾದ.

# ೪. ಶ್ರೇಷ್ಠತೆಯ ಸಾಕಾರ

–ಸ್ವಾಮಿ ಭಜನಾನಂದ*

ಪ್ರಪಂಚದಲ್ಲಿ ಹಲವರು ಉತ್ತಮರಿದ್ದಾರೆ. ಆದರೆ ನಿಜವಾಗಿಯೂ ಶ್ರೇಷ್ಠರೆನಿಸಿ ಕೊಳ್ಳಬಲ್ಲವರು ಕೆಲವರು ಮಾತ್ರ. ಅತ್ಯಂತ ಮಿತಸಂಖ್ಯೆಯಲ್ಲಿಯೇ ಆದರೂ, ಶ್ರೇಷ್ಠ ಸ್ತ್ರೀ–ಪುರುಷರು ಪ್ರಪಂಚದ ಎಲ್ಲೆಡೆಯಲ್ಲಿಯೂ ಕಂಡುಬರುತ್ತಾರೆ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಭಿನ್ನತೆಗಳ ಹೊರತಾಗಿಯೂ ಅವರು ಕೆಲವು ಸಾಮಾನ್ಯ ಗುಣಲಕ್ಷಣಗಳನ್ನು ಹೊಂದಿರುತ್ತಾರೆ; ಅವರು ಜೀವನದ ಕ್ಷುಲ್ಲಕತೆಗಳನ್ನು ಮತ್ತು ವ್ಯಕ್ತಿತ್ವದ ದೌರ್ಬಲ್ಯಗಳನ್ನು ಮೀರಿ ಇರುತ್ತಾರೆ; ಇಡಿಯ ಮಾನವಜನಾಂಗದೊಂದಿಗೆ ಅವರಿಗೆ ಬಾಂಧವ್ಯವಿರುತ್ತದೆ; ಜೀವನದ ಒಂದು ಅದಮ್ಯ ಘನ ಉದ್ದೇಶ ಅವರನ್ನು ಪ್ರೇರೇಪಿಸುತ್ತಿರುತ್ತದೆ. ೨೦೦೫ರ ಏಪ್ರಿಲ್ ೨೫ರಂದು ಗತಿಸಿದ, ರಾಮಕೃಷ್ಣಾಶ್ರಮದ ೧೩ನೇ ಅಧ್ಯಕ್ಷರಾದ ಸ್ವಾಮಿ ರಂಗನಾಥಾ ನಂದಜಿಯವರಲ್ಲಿ ಈ ಗುಣಗಳು ಯಥೇಚ್ಛವಾಗಿದ್ದವು.

## ಶ್ರೇಷ್ಠತೆಯ ಲಕ್ಷಣಗಳು

ಸ್ವಾಮಿ ರಂಗನಾಥಾನಂದಜಿಯವರು ತಮ್ಮ ಮನಸ್ಸನ್ನು ಸದಾ ಉನ್ನತ ಸ್ತರದಲ್ಲಿರಿಸಿದ್ದರು. ಅವರು ಸತತ ಸ್ಫೂರ್ತ ವ್ಯಕ್ತಿಯಾಗಿದ್ದರು. ರಾಮಕೃಷ್ಣ–ವಿವೇಕಾನಂದರ ಸಂದೇಶ ಉಪನಿಷತ್ತುಗಳ ಬೆಳಕು, ಗೀತೆಯ ಸತ್ತ್ವ ಮತ್ತು ಆಧುನಿಕ ವಿಜ್ಞಾನ ತರಂಗಗಳ ಜ್ವಾಲೆಯಲ್ಲಿ ಅವರ ಆತ್ಮ ಉದ್ದೀಪ್ತವಾದಂತಿರುತ್ತಿತ್ತು. ಅವರ ಸಂಪರ್ಕಕ್ಕೆ ಬಂದವರೆಲ್ಲ ಅವರ ಆತ್ಮದ ಆಳದ ವಿಶ್ವಾಸ ಮತ್ತು ದೃಢಭಾವದಿಂದ ಹೊಮ್ಮುವ ಸತ್ತ್ವಪೂರ್ಣ ವಿಚಾರಗಳಿಂದ ತಮ್ಮ ಮನಸ್ಸು ಪ್ರೇರಿತವಾದುದನ್ನು ಕಂಡುಕೊಳ್ಳುತ್ತಿದ್ದರು.

ಅವರು ಮೇರೆಗಳನ್ನು ಮೀರಿದವರು, ಪೂರ್ಣ ಮಾನವ ಕುಲವನ್ನು ಒಂದು ಬೃಹತ್ ಕುಟುಂಬವೆಂದು ಪರಿಭಾವಿಸಿದ್ದವರು. ಅವರು ಅದರ ಕ್ಷೇಮ ಮತ್ತು ಪ್ರಗತಿಯ ಬಗೆಗೆ ಅವರಿಗೆ ಕಾಳಜಿಯಿತ್ತು. ಅವರ ಸ್ನೇಹಿತರು, ಮೆಚ್ಚಿದವರು ಮತ್ತು ಶಿಷ್ಯಂದಿರಲ್ಲಿ ಎಲ್ಲ ಜಾತಿಗಳ, ಧರ್ಮಗಳ, ಪ್ರಾಂತ್ಯಗಳ ಮತ್ತು ವಿವಿಧ ಉದ್ಯೋಗಗಳ ಸ್ತ್ರೀ–ಪುರುಷರು ಸೇರಿದ್ದರು. ಅವರು ಎಲ್ಲರಿಗೂ ಸುಲಭರಾಗಿದ್ದರು. ಪಂಡಿತ ನೆಹರೂ, ಇಂದಿರಾಗಾಂಧಿ, ಶೇಕ್ ಅಬ್ದುಲ್ಲ, ಡಾ॥ ಸುಕರ್ಣೋ ಮತ್ತು ಆಂಗ್ ಸೇನ್‌ರಂತಹ ರಾಜಕಾರಣಿಗಳು, ಜ್ಯೂಲಿಯಟ್ ಹಕ್ಸ್‌ಲೀ, ಡಾ॥ ರಾಧಾಕೃಷ್ಣನ್ ಮತ್ತಿತರ ವಿಜ್ಞಾನಿ–ತತ್ತ್ವಜ್ಞಾನಿಗಳೊಂದಿಗೆ ಹೇಗೋ ಹಾಗೆಯೇ ಆಶ್ರಮದ ತೋಟದ ಆಳುಗಳೊಂದಿಗೂ ಅವರು ಸಮಾನಸ್ನೇಹದಿಂದಿದ್ದರು. ವಿಶ್ವಾದ್ಯಂತ ಹರಡಿದ ಸಂನ್ಯಾಸಿಗಳ ಮಠದ ಅಧ್ಯಕ್ಷರಾಗಿದ್ದರೂ, ಅದು ಉಸಿರುಕಟ್ಟಿಸುವ ನಿರ್ಬಂಧ ದಂತಾಗಲು ಅವರು ಅವಕಾಶ ಕೊಡಲಿಲ್ಲ. ಬದಲಾಗಿ, ಸನ್ಯಾಸವು ಅವರನ್ನು ಅಜ್ಞಾನ, ಆಸೆಗಳು, ದ್ವೇಷ, ಭಯಗಳ ಸಂಕಲೆಯಿಂದ ಅವರಿಗೆ ಬಿಡುಗಡೆ ಕೊಟ್ಟಿತು. ಹೀಗೆ ಸ್ವಾತಂತ್ರ್ಯ ಪಡೆದ ಅವರ ಆತ್ಮವು ಜಿಗಿಯಲು ಮತ್ತು ಸ್ವೇಚ್ಛೆಯಿಂದ ವಿಶ್ವಪ್ರಜ್ಞೆ, ಪ್ರೀತಿ ಹಾಗೂ ಸದ್ಭಾವದ ಅನಂತ ಆಗಸದಲ್ಲಿ ವಿಹರಿಸಲು ಸನ್ಯಾಸವನ್ನು ಒಂದು ರೀತಿಯ ವಿಮಾನ ನಿಲ್ದಾಣದಂತೆ ಬಳಸಿತು.

---

* ಸಹಾಯಕ ಕಾರ್ಯದರ್ಶಿ, ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್

ರಂಗನಾಥಾನಂದಜೀಯವರು ಬೀರುತ್ತಿದ್ದ ಆಕರ್ಷಣೆಯ ಪ್ರಭೆಯನ್ನು ಒಂದು ಚಿಕ್ಕ ಘಟನೆಯು ಬಣ್ಣಿಸಬಹುದು. ೧೯೬೭ರಲ್ಲಿ ಭಾರತದ ಸರ್ಕಾರವು ಅವರನ್ನು ನಾಗಾಲ್ಯಾಂಡ್‌ಗೆ ಕಳುಹಿಸಿತು. ಆಗ ಅಲ್ಲಿ ರಾಜಕೀಯವಾಗಿ ಬಿಗುವಿನ ವಾತಾವರಣವಿತ್ತು. ನಗರವೊಂದರ ಕಾಲೇಜಿನ ಸಭಾಂಗಣದಲ್ಲಿ ಅವರ ಉಪನ್ಯಾಸದ ಏರ್ಪಾಡಾಗಿತ್ತು. ಅಲ್ಲಿ ಹೆಚ್ಚಿನವರು ಕ್ರಿಶ್ಚಿಯನ್ ನಾಗಾಗಳಾಗಿದ್ದರು ಮತ್ತು ಅವರು ಸ್ನೇಹಪರರಾಗಿರಲಿಲ್ಲವೆಂಬ ಅನಿಸಿಕೆಯಿತ್ತು. ಸಭೆಗೆ ಹತ್ತು–ಹನ್ನೆರಡಕ್ಕಿಂತ ಹೆಚ್ಚಿನ ಜನ ಬಂದಾರೆಂಬ ನಿರೀಕ್ಷೆ ಬೇಡ ಎಂದು ಮಹಾರಾಜ್‌ಗೆ ತಿಳಿಸಲಾಗಿತ್ತು. ಆದರೆ ಅವರು ಆ ಸ್ಥಳವನ್ನು ತಲುಪಿದಾಗ ಸಭಾಂಗಣವನ್ನು ಮತ್ತು ಹೊರಗಣ ಹುಲ್ಲಿನ ಆವರಣವನ್ನು ೨೦೦೦ಕ್ಕೂ ಹೆಚ್ಚಿಗೆ ಜನರು ಕಿಕ್ಕಿರಿದಿದ್ದರು. ಅವರು ಸ್ವಾಮೀಜಿಯವರ ಮಾತನ್ನು ಮಂತ್ರಮುಗ್ಧರಾಗಿ ಕೇಳಿದರು. ಭಾಷಣದ ಮಧ್ಯೆ ಅವರು ಹೇಳಿದರು:

ನೀವು ನಮ್ಮವರು, ನಮ್ಮದೇ ರಕ್ತ–ಮಾಂಸ. ಭಾರತವು ನಿಮ್ಮ ಮೇಲೆ, ನನ್ನ ಮೇಲೆ, ನಿಮ್ಮಂತಹ ಲಕ್ಷಾಂತರ ಸಾಮಾನ್ಯರ ಮೇಲೆ ಅವಲಂಬಿಸಿದೆ. ಯಾವುದೇ ಒಂದು ಭಾಗವು ಇತರ ಭಾಗ ಅಥವಾ ಗುಂಪನ್ನು ಆಳುತ್ತಿಲ್ಲ. ಭಾರತವು ಪ್ರಜಾಪ್ರಭುತ್ವದ ಗಣತಂತ್ರ; ತನ್ನೆಲ್ಲ ಜನರನ್ನು ಆರ್ಥಿಕ ಸಬಲತೆ ಮತ್ತು ಸಾಮಾಜಿಕ ಘನತೆಗೆ ಏರಿಸಲು ಭಾರತ ಯತ್ನಿಸುತ್ತಿದೆ. ಭಾಷಣ ಮುಗಿದ ಮೇಲೆ ಜನರು, ಹೆಚ್ಚಾಗಿ ಯುವಕ–ಯುವತಿಯರು, ಅವರನ್ನು ಸುತ್ತುವರೆದರು. ತಮ್ಮನ್ನು ಮತ್ತು ತಮ್ಮ ಧರ್ಮವನ್ನು ತನ್ನದೆಂದೇ ತಿಳಿದ ಹಾಗೂ ತಮ್ಮ ಕ್ಷೇಮದಲ್ಲಿ ತೀವ್ರ ಆಸಕ್ತಿ ತೋರಿದ ಕಾವಿಯುಟ್ಟ ಸನ್ಯಾಸಿಯನ್ನು ಅವರು ಮೊದಲ ಬಾರಿಗೆ ನೋಡಿದ್ದರು.

ಕೆಲವು ವರ್ಷಗಳ ಬಳಿಕ ಅವರು ಮತ್ತೊಮ್ಮೆ ನಾಗಾಲ್ಯಾಂಡಿಗೆ ಭೇಟಿಯಿತ್ತರು. ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಮಾತನಾಡಿದರು. ಅಂತಹದೊಂದು ಸಭೆಯಲ್ಲಿ ದಿಮಾಪುರ ನಗರದ ನಾಗಾ ಅಧ್ಯಕ್ಷ ಹೇಳಿದರು, "ಸ್ವಾಮೀಜಿ, ನಿಮ್ಮನ್ನು ನಾಗಾ ಲ್ಯಾಂಡಿಗೆ ಪುನಃ ಪುನಃ ಆಹ್ವಾನಿಸುವಂತೆ ನಾನು ಮುಖ್ಯಮಂತ್ರಿಯವರನ್ನು ವಿನಂತಿಸಲಿದ್ದೇನೆ. ನಮಗೆ ನೀವು ಬೇಕು, ನಿಮ್ಮ ಆಲೋಚನೆಗಳು ಬೇಕು."

ಅವರು ಶ್ರೀ ರಾಮಕೃಷ್ಣ ವಚನವೇದ ಮತ್ತು ಸ್ವಾಮಿ ವಿವೇಕಾನಂದರ ಉಪನ್ಯಾಸಗಳನ್ನು ತಮ್ಮ ೧೪ನೆಯ ವಯಸ್ಸಿನಲ್ಲಿ ಮೊದಲ ಬಾರಿ ಓದಿದಾಗ, ಜೀವನದ ಗುರಿಯ ಬಗ್ಗೆ ಸ್ಪಷ್ಟ ಕಲ್ಪನೆ ಹಾಗೂ ಘನ ಉದ್ದೇಶದ ಭಾವ ಅವರ ಬದುಕಿನಲ್ಲಿ ಪ್ರವೇಶಿಸಿದವು. ಶ್ರೀ ರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಸಂದೇಶವನ್ನು ಹರಡುವುದರ ಮೂಲಕ ತಮ್ಮ ಪೂರ್ಣ ಜೀವನವನ್ನು ದೇವರ ಮತ್ತು ಮಾನವಕುಲದ ಸೇವೆಗೆ ಮುಡಿಪಾಗಿಡುವ ನಿರ್ಧಾರವನ್ನು ಆಗ ಅವರು ಕೈಗೊಂಡರು. ಒಂದು ಶ್ರೇಷ್ಠ ಉದ್ದೇಶಕ್ಕಾಗಿಟ್ಟ ಈ ಮುಡಿಪು, ಕಡೆಯವರೆಗೂ ಅವರ ಜೀವನದ ಗೀಳಾಗಿ, ಉದ್ದೇಶವಾಗಿ ಉಳಿಯಿತು.

## ಸ್ವ–ರೂಪಿತ ವ್ಯಕ್ತಿ

ಅವರು ಸ್ವ–ರೂಪಿತ ವ್ಯಕ್ತಿಯಾಗಿದ್ದರು. ಸಂನ್ಯಾಸ ಕೈಗೊಂಡಾಗ ಅವರಿಗೆ ಹದಿನೆಂಟೂ ತುಂಬಿರದಿದ್ದುದರಿಂದ ಅವರ ಶಾಲಾ ವಿದ್ಯಾಭ್ಯಾಸವು ಪ್ರೌಢಶಾಲೆಯ ಕಡೆಯ ಹಂತವನ್ನು ದಾಟಲಿಲ್ಲ. ಈ ಕೊರತೆಯನ್ನು ಶಿಸ್ತುಬದ್ಧ, ವ್ಯವಸ್ಥಿತ ಅಧ್ಯಯನದ ಮೂಲಕ ಅವರು ಸಮರ್ಥವಾಗಿ ತುಂಬಿಕೊಂಡರು. ಅವರ ಆರಂಭದ ದಿನಗಳಲ್ಲಿ ಅವರಿಗೆ ಅಡುಗೆ ಮಾಡುವುದು, ಪಾತ್ರೆ ತೊಳೆಯುವುದು ಮೊದಲಾದ ಕರ್ತವ್ಯಗಳನ್ನು ವಹಿಸಲಾಯಿತು. ತಮ್ಮ ಕೆಲಸದ ಸ್ಥಳದಲ್ಲಿಯೂ ಅವರು ತಮ್ಮ ಅಧ್ಯಯನವನ್ನು ಮುಂದುವರೆಸುತ್ತಿದ್ದರು. ಅನ್ನ–ತರಕಾರಿಗಳು ಒಲೆಯ ಮೇಲೆ ಬೇಯುತ್ತಿದ್ದಂತೆ ಹತ್ತಿರದ ಸ್ಟೂಲಿನ ಮೇಲೆ ಕುಳಿತು ಅವರು ಪುಸ್ತಕಗಳನ್ನು ಓದುತ್ತಿದ್ದರು. ಆಶ್ರಮ ಜೀವನದ ಆ ಆರಂಭದ ದಿನಗಳಲ್ಲಿ ಅವರು ಓದುತ್ತಿದ್ದ ಪುಸ್ತಕಗಳಲ್ಲಿ ಎ.ಜೆ.ಥಾಮ್ಸನ್‌ನ 'Introduction to Science', ಹೆಚ್.ಜಿ.ವೆಲ್ಸ್‌ನ 'Outline of History', ಜೂಲಿಯನ್ ಹಕ್ಸ್‌ಲಿ ಮತ್ತು

ಎಚ್.ಜಿ.ವೆಲ್ಸರ 'Science of Life', ಮ್ಯಾಕ್‌ಡಗಲ್‌ನ 'Introduction to Psychology', ಹರ್ಬರ್ಟ್ ಸ್ಪೆನ್ಸರ್‌ನ 'First Principles' ಮತ್ತು ಥಿಲ್ಲಿಯ 'History of Philosopy' ಇವನ್ನು ಹೆಸರಿಸ ಬಹುದು. ಇವು ತಮ್ಮ ವಿಷಯಗಳ ಮೂಲಾಂಶಗಳನ್ನು ವ್ಯವಸ್ಥಿತವಾಗಿ ಮತ್ತು ಅಡಕವಾಗಿ ಚರ್ಚಿಸುತ್ತಿದ್ದವು. ಇವು ಅವರಿಗೆ ಉಪನಿಷತ್ತುಗಳು, ಗೀತೆ, ಸ್ವಾಮಿ ವಿವೇಕಾನಂದರ ಕೃತಿಗಳು, ಶ್ರೀ ರಾಮಕೃಷ್ಣರ ಉಪದೇಶ– ಇವುಗಳ ಅದ್ಭುತ ಪ್ರಸ್ತುತತೆ ಮತ್ತು ಆ ವಿಚಾರಗಳ ಪ್ರಾಮುಖ್ಯವನ್ನು ಅರಿಯಲು ಹಾಗೂ ಇಂದಿನ ಪರಿಭಾಷೆಯಲ್ಲಿ ಅವನ್ನು ಅರ್ಥೈಸಿಕೊಳ್ಳಲು ಅಗತ್ಯವಾದ ವಿಸ್ತಾರವಾದ ಹಿನ್ನೆಲೆಯ ಜ್ಞಾನವನ್ನು ಒದಗಿಸದವು.

ಮೈಸೂರಿನಲ್ಲಿ ಆ ಆರಂಭಿಕ ದಿನಗಳಲ್ಲಿ ಸಂಸ್ಕೃತಕ್ಕೆ ಒಳ್ಳೆಯ ತಳಹದಿ ಮತ್ತು ಇಂಗ್ಲಿಷ್ ಭಾಷೆಯ ಮೇಲೆ ಪ್ರಭುತ್ವವನ್ನು ಅವರು ಪಡೆದುಕೊಂಡರು. ಅವರ ಸ್ಮರಣಶಕ್ತಿ ಅದ್ಭುತವಾಗಿತ್ತು. ಸಂಪೂರ್ಣ ಭಗವದ್ಗೀತೆ ಅವರಿಗೆ ಕಂಠಸ್ಥವಾಗಿದ್ದುದೇ ಅಲ್ಲದೆ, ಉಪನಿಷತ್ತುಗಳಿಂದ, ಭಾಗವತ, ಶಂಕರಾಚಾರ್ಯರ ಭಾಷ್ಯಗಳು ಮತ್ತು ಸ್ವಾಮಿ ವಿವೇಕಾನಂದರ ಭಾಷಣ ಮತ್ತು ಲೇಖನಗಳಿಂದ ಪುಂಖಾನುಪುಂಖವಾಗಿ ಉದ್ಧರಿಸಬಲ್ಲವರಾಗಿದ್ದರು, ಅವರ ಎಲ್ಲ ಅಧ್ಯಯನ ಹಾಗೂ ಚಿಂತನೆಯ ಕೇಂದ್ರ ಸ್ವಾಮಿ ವಿವೇಕಾನಂದರ ಕೃತಿಗಳಾಗಿದ್ದವು. ವಿವೇಕಾನಂದರ ಕೃತಿಗಳನ್ನು ಈ ಪ್ರಪಂಚದಲ್ಲಿ ಬೇರೆ ಯಾರಾದರೂ ರಂಗನಾಥಾನಂದಜಿಯವರಷ್ಟು ಆಮೂಲಾಗ್ರವಾಗಿ, ವಿಶೇಷತಃ ಸ್ವಾಮೀಜಿಯವರ ಚಿಂತನೆಗಳನ್ನು ಬದುಕಿನಲ್ಲಿ ಅನ್ವಯಿಸುವ ದೃಷ್ಟಿಯಿಂದ, ಅಧ್ಯಯನ ಮಾಡಿರುವುದು ಸಂದೇಹಾಸ್ಪದ.

ಸ್ವಾಮಿ ವಿವೇಕಾನಂದರ ಚಿಂತನೆಗಳು ಮತ್ತು ಆದರ್ಶಗಳು ರಂಗನಾಥಾ ನಂದಜಿಯವರ ಸಮಗ್ರ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಆವರಿಸಿಕೊಂಡಿದ್ದವು ಹಾಗೂ ಅವರ ಜೀವನದೃಷ್ಟಿಯನ್ನು, ಅವರ ವಿಚಾರಗಳನ್ನು, ಕೃತಿಗಳನ್ನು ರೂಪಿಸಿದ್ದವು. ಅವರದು ಅಧಿಕೃತ ಜೀವನ. ಶ್ರೀರಾಮಕೃಷ್ಣರು ಹೇಳುತ್ತಿದ್ದರು: ಸ್ವತಃ ಅನುಷ್ಠಾನಕ್ಕೆ ತರುವುದರ ಮೂಲಕ ಇತರರಿಗೆ ಕಲಿಸಿ, ತಾವು ಕಲಿಸಿದುದನ್ನೇ ರಂಗನಾಥಾನಂದಜೀಯವರು ಅನುಷ್ಠಾನಕ್ಕೆ ತರುತ್ತಿದ್ದರು.

**ಸರ್ವರಲ್ಲಿ ಗೌರವ**

ಇಲ್ಲಿ ನಾನೀಗ ವಿವೇಕಾನಂದರ ಸಂದೇಶದಲ್ಲಿದ್ದ ಮೂರು ಪ್ರಮುಖಾಂಶ ಗಳನ್ನು ಮತ್ತು ಅವು ಹೇಗೆ ರಂಗನಾಥಾನಂದಜೀಯವರ ಜೀವನದಲ್ಲಿ ಅಭಿವ್ಯಕ್ತ ಗೊಂಡಿದ್ದವು ಎಂಬುದನ್ನು ಹೇಳುತ್ತೇವೆ. ಸ್ವಾಮಿ ವಿವೇಕಾನಂದರ ಸಂದೇಶದ ಅತ್ಯಂತ ಕೇಂದ್ರಭಾಗವೆಂದರೆ ಆತ್ಮದ ಸುಪ್ತ ದಿವತ್ಯತೆ. ಸ್ವಾಮೀಜಿಯವರ ಮಾತುಗಳಲ್ಲಿ ಹೇಳುವುದಾದರೆ– ಪ್ರತಿಯೊಂದು ಆತ್ಮವೂ ಸುಪ್ತವಾಗಿ ದಿವ್ಯವಾದದ್ದು. ಅಂತರ್ಗತ ವಾಗಿರುವ ಈ ದಿವ್ಯತೆಯನ್ನು ಪ್ರಕಟಗೊಳಿಸುವುದೇ ಗುರಿ. ಮನುಷ್ಯ ಜೀವನದ ವಿವಿಧ ಕ್ಷೇತ್ರಗಳಲ್ಲಿ ಇದರ ಅನ್ವಯದ ಅಗಾಧ ಸಾಧ್ಯತೆ ಈ ಸತ್ ಪರಿಕಲ್ಪನೆಯಲ್ಲಿ ಅಡಗಿದೆ. ಪ್ರತಿಯೊಬ್ಬ ವ್ಯಕ್ತಿಗೂ ಆತನ ಸಾಮಾಜಿಕ ಅಥವಾ ಆರ್ಥಿಕ ಸ್ಥಿತಿ–ಗತಿಯನ್ನು ಗಣಿಸದೆ, ಒಂದು ಅಂತರ್ಗತವಾದ, ಬೇರ್ಪಡಿಸಲಾಗದ ಘನತೆಯನ್ನು ಇದು ತಂದುಕೊಡುತ್ತದೆ. ಜೀವನದ ವಿವಿಧ ಕ್ಷೇತ್ರಗಳ ಜನರೊಂದಿಗೆ ವ್ಯವಹರಿಸುವಾಗ ರಂಗನಾಥಾನಂದಜಿಯವರಿಗೆ ಈ ಪರಿಕಲ್ಪನೆಯೇ ಮಾರ್ಗದರ್ಶಕವಾಗಿತ್ತು.

ಅವರು ಪ್ರತಿ ವ್ಯಕ್ತಿಯನ್ನು ಗೌರವದಿಂದ ಕಾಣುತ್ತಿದ್ದರು. ಅವರ ದೃಷ್ಟಿಯಲ್ಲಿ ಒಬ್ಬ ಕಸಗುಡಿಸುವವನಿಂದ ಹಿಡಿದು ಉನ್ನತ ಸರ್ಕಾರಿ ಅಧಿಕಾರಿಯವರೆಗೆ ಎಲ್ಲರೂ ಸಮಾನರಾಗಿದ್ದರು. ದೆಹಲಿಯ ರಾಮಕೃಷ್ಣ ಮಿಷನ್‌ನ ಅಧ್ಯಕ್ಷರಾಗಿದ್ದಾಗ ಅವರು ಊಟಕ್ಕೆ, ಸನ್ಯಾಸಿಗಳ ಮತ್ತು ಅತಿಥಿಗಳ ಮೊದಲ ಪಂಕ್ತಿಯು ಮುಗಿದ ಬಳಿಕವೇ ಊಟದ ಸಭಾಂಗಣಕ್ಕೆ ಬರುತ್ತಿದ್ದರು. ಅಡುಗೆಯವರೊಂದಿಗೆ ಹಾಗೂ ಆಳು ಗಳೊಂದಿಗೆ ಸಹಪಂಕ್ತಿಯಲ್ಲಿ

ಕುಳಿತುಕೊಳ್ಳಬಹುದೆಂಬುದೇ ಇದರ ಉದ್ದೇಶ ವಾಗಿತ್ತು. ಎಲ್ಲ ಸೇವಕರಿಗೆ, ಕೂಲಿಯಾಳುಗಳಿಗೆ– ಇವರನ್ನು ಸಹಾಯಕರೆಂದು ಕರೆಯಲಾಗುತ್ತಿತ್ತು– ಸುಸಜ್ಜಿತವಾದ (ಪ್ರತಿ ಕೋಣೆಗೂ ಫ್ಯಾನ್ ಇರುತ್ತಿತ್ತು) ನಿವಾಸದ ಕೋಣೆಗಳನ್ನು ಕೊಡಲಾಗುತ್ತಿತ್ತು. ತನ್ನ ಬಳಿ ಬಂದ ಯಾರನ್ನೂ ಅವರು ಅವಗಣಿಸುತ್ತಿರಲಿಲ್ಲ. ಯಾರಾದರೂ ಪ್ರಣಾಮಕ್ಕೆಂದು ಅವರ ಪಾದಸ್ಪರ್ಶ ಮಾಡಿದರೆ, ತಾವು ಯಾವುದೇ ಕೆಲಸದಲ್ಲಿ ತೊಡಗಿರಲಿ, ಅಥವಾ ವಿಶೇಷ ಆಹ್ವಾನಿತ ರೊಂದಿಗೆ ಸಂಭಾಷಣೆಯಲ್ಲಿರಲಿ, ಆ ವ್ಯಕ್ತಿಯತ್ತ ತಿರುಗಿ, ಆತ ಎಷ್ಟೇ ಕಿರಿಯನಿರಲಿ, ಹೊಸದಾಗಿ ಸೇರಿದವರಿರಲಿ, ಬಡವನಿರಲಿ – ಕೈ ಜೋಡಿಸಿ ನಮಸ್ಕರಿಸುತ್ತಿದ್ದರು ಅಥವಾ ಕನಿಷ್ಠತಮ ತಲೆಯಲ್ಲಾಡಿಸುತ್ತಿದ್ದರು. ಹಿರಿಯ ಸನ್ಯಾಸಿಗಳು ಅವರಿಗೆ ನಮಸ್ಕರಿಸಿದಾಗ ಅವರೊಂದಿಗೆ ಕೈ ಕುಲುಕುತ್ತಿದ್ದರು. 'ನಾವಿಬ್ಬರೂ ಸಮಾನರು' ಎಂದು ಅವರು ತಿಳಿಸುವ ಪರಿಯಾಗಿತ್ತು ಇದು.

ಉತ್ತರ ಪ್ರದೇಶದ ವಿಶ್ವವಿದ್ಯಾಲಯವೊಂದರ ಉಪಕುಲಪತಿಗಳು ಇವರನ್ನು ಮನೆಯಲ್ಲಿ ಚರ್ಚೆಗೆ ಕರೆದಿದ್ದರು. ದಿವಾನಖಾನೆಯು ಪ್ರಾಧ್ಯಾಪಕರುಗಳು, ಇನ್ನಿತರ ಅಧ್ಯಾಪಕರು, ಅವರ ಕುಟುಂಬಗಳಿಂದ ತುಂಬಿತ್ತು. ಅವಿದ್ಯಾವಂತ ಬ್ರಾಹ್ಮಣನಾದ ಉಪಕುಲಪತಿಗಳ ಅಡುಗೆಯವನೂ ಮೂಲೆಯಲ್ಲಿ ಮುದುರಿ ಕುಳಿತಿದ್ದ. ರಂಗನಾಥಾ ನಂದಜಿಯವರು ಅವರನ್ನೆಲ್ಲ ಕುರಿತು ಇಂಗ್ಲಿಷ್‌ನಲ್ಲಿ ಮಾತನಾಡಿದರು. ಆದರೆ ನಡುನಡುವೆ ಸಲ್ಲಿಸಿ, ಆ ಅಡುಗೆಯವನಿಗಾಗಿ ತಾವು ಇಂಗ್ಲಿಷ್‌ನಲ್ಲಿ ಹೇಳಿದುದರ ಸಾರಾಂಶವನ್ನು ಹಿಂದಿಯಲ್ಲಿ ಹೇಳುತ್ತಿದ್ದರು. ಈ ಸಹಾನುಭೂತಿಪರತೆಯು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು ಎಂದು ಹೇಳಬೇಕಾಗಿಲ್ಲ.

**ಸಕಾರಾತ್ಮಕ ದೃಷ್ಟಿ**

ಆತ್ಮದ ಸಪ್ತ ದಿವ್ಯತೆಯನ್ನು ತತ್ತ್ವದ ಶಿಖರಪ್ರಾಯವಾಗಿ ಸ್ವಾಮಿ ವಿವೇಕಾನಂದರು ಆತ್ಮವಿಶ್ವಾಸ, ಶಕ್ತಿ ಮತ್ತು ನಿರ್ಭಯತೆಗಳ ಆಧಾರದ ಮೇಲೆ ಬೆಳೆಸುವ ಸಕಾರಾತ್ಮಕ ಧೋರಣೆಯನ್ನು ಉಪದೇಶಿಸಿದರು. ಈ ತತ್ತ್ವದ ಪರಿಪೂರ್ಣ ಮೂರ್ತರೂಪವೇ ಶ್ರೀರಂಗನಾಥಾನಂದಜಿಯವರಾಗಿದ್ದರು. ರಂಗನಾಥಾನಂದಜೀ ಯವರ ವ್ಯಕ್ತಿತ್ವದ ವಿಶಿಷ್ಟ ಲಕ್ಷಣಗಳಾದ ಅದ್ಭುತ ಆತ್ಮವಿಶ್ವಾಸ, ಅಂತಃಸತ್ವ, ನಿರ್ಭಯತೆ ಮತ್ತು ಜೀವನ ದೃಷ್ಟಿಗಳ ರಹಸ್ಯವೇ ಇದಾಗಿತ್ತು. ಆಧ್ಯಾತ್ಮಿಕ ಶಕ್ತಿಯ ಅಂತರ ಗಂಗೆಯನ್ನು ತಮ್ಮ ಅಂತರಂಗದ ಆಳದಲ್ಲೆಲ್ಲೋ ಅವರು ಹರಿಸಿದ್ದರು. ಈ ಗುಣಗಳು ಅವರಿಗೆ ಅಸಂಖ್ಯಾತ ಸಮಸ್ಯೆಗಳನ್ನು ಮತ್ತು ಜೀವನದ ಸಂಕಟದ ಗಳಿಗೆಗಳನ್ನು ಎದುರಿಸುವ ಮತ್ತು ಕಿರಿಯ ವಯಸ್ಸಿನಲ್ಲಿಯೇ ದೊಡ್ಡ ಜವಾಬ್ದಾರಿಗಳನ್ನು ವಹಿಸಿಕೊಳ್ಳುವ ಶಕ್ತಿಯನ್ನು ಕೊಟ್ಟಿದ್ದವು. ರಂಗೂನಿನ ರಾಮಕೃಷ್ಣಾಶ್ರಮದ ನೇತೃತ್ವವನ್ನು ಅವರು ಮೂವತ್ತೊಂದನೆಯ ವಯಸ್ಸಿನಲ್ಲಿ ವಹಿಸಿಕೊಂಡರು.

೧೯೪೮ರಿಂದ ೧೯೭೭ರವರೆಗೆ ಐವತ್ತಕ್ಕೂ ಹೆಚ್ಚು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹಾಗೂ ಪುನಃ ೧೯೭೭ರಿಂದ ೧೯೮೬ರವರೆಗೆ ಅಮೆರಿಕ, ಆಸ್ಟ್ರೇಲಿಯಾ ಮತ್ತಿತರ ರಾಷ್ಟ್ರಗಳಲ್ಲಿ ಸಂಚರಿಸಿ, ರಾಮಕೃಷ್ಣ–ವಿವೇಕಾನಂದರು ವಿವರಿಸಿದ ವೇದಾಂತದ ಸಂದೇಶವನ್ನು ಅವರು ಪ್ರಚುರಪಡಿಸಿದರು. ಹೋದಲ್ಲೆಲ್ಲ ಸ್ತ್ರೀ–ಪುರುಷರ ಮನಸ್ಸುಗಳನ್ನು ಉದ್ಬೋಧಿಸುತ್ತಿದ್ದರು. ಬರಿಯ ಅಮೆರಿಕದಲ್ಲಿಯೇ ಅವರು ಮುನ್ನೂರು ಉಪನ್ಯಾಸಗಳನ್ನು ನೀಡಿದರು. ಸತತವಾದ ಪ್ರಯಾಣ, ಭಾಷಣ ಮತ್ತು ಜನರನ್ನು ಭೇಟಿ ಮಾಡುವುದು ಅವರಿಗೆ ದಣಿವುಂಟುಮಾಡುತ್ತಿರಲಿಲ್ಲ. ಅವರು ಆಕಳಿಸಿದುದನ್ನು ಯಾರೂ ನೋಡಿರಲಿಲ್ಲ; ಅವರು ಖಿನ್ನರಾದುದನ್ನಾಗಲಿ ಆಲಸ್ಯದಿಂದಿರುವುದನ್ನಾಗಲಿ ಯಾರೂ ಕಂಡಿರಲಿಲ್ಲ. ಅವರು ಸರ್ವದಾ ಎಚ್ಚರದಿಂದ, ಲಕ್ಷ್ಯಪೂರ್ಣರಾಗಿ ಲವಲವಿಕೆಯಿಂದ ಇರುವುದನ್ನು ಕಾಣಬಹುದಿತ್ತು.

ಅವರಿಗೆ ತಮ್ಮಲ್ಲಿಯೇ ಅಲ್ಲದೆ, ಇತರರಲ್ಲಿಯೂ ನಂಬಿಕೆ ಇತ್ತು. ಪ್ರತಿಯೊಬ್ಬ ರಲ್ಲಿಯೂ ಅಗಾಧ ಸಾಧ್ಯತೆಯನ್ನು ಅವರು ಕಾಣುತ್ತಿದ್ದರು. ತಮ್ಮಲ್ಲಿ ಸುಪ್ತವಾದ ಪ್ರತಿಭೆಯನ್ನು ಬೆಳೆಸಿಕೊಳ್ಳಲು ಅವರು ಜನರನ್ನು ಉತ್ತೇಜಿಸುತ್ತಿದ್ದರು. ಯಾರಾದರೂ ಒಳ್ಳೆಯದನ್ನು ಮಾಡುತ್ತಿದ್ದುದನ್ನು ಕಂಡರೆ ತಮ್ಮ ಮೆಚ್ಚುಗೆಯನ್ನು ಅಳುಕಿಲ್ಲದೆ ವ್ಯಕ್ತಪಡಿಸುತ್ತಿದ್ದರು. ಬೇರೆಯವರ ಬಗ್ಗೆ ಒಳ್ಳೆಯದನ್ನು ಕೇಳುವುದಕ್ಕಿಂತ ಹೆಚ್ಚಿನ ಸಂತೋಷವು ಇನ್ನು ಯಾವುದರಿಂದಲೂ ಅವರಿಗೆ ದೊರಕುತ್ತಿರಲಿಲ್ಲ. ಇತರರ ಬಗೆಗೆ ಕೆಟ್ಟದ್ದನ್ನು ಹೇಳುವುದರಲ್ಲಿ ಕಾಣುವ ನೇತ್ಯಾತ್ಮಕ ಧೋರಣೆಯನ್ನು ಅವರು ಎಂದೂ ಇಷ್ಟಪಡುತ್ತಿರಲಿಲ್ಲ.

ಬರಿಯ ಜನರ ಕುರಿತಾಗಿಯೇ ಅಲ್ಲ, ಇತರ ವಸ್ತುಗಳ ಬಗ್ಗೆಯೂ ಅವರಿಗೆ ಸಕಾರಾತ್ಮಕ ಧೋರಣೆಯಿತ್ತು. ಅನೇಕ ಸಂಖ್ಯೆಯ ಪುಸ್ತಕಗಳು, ಜರ್ನಲ್ಲುಗಳು ಮತ್ತು ನಿಯತಕಾಲಿಕಗಳು ಅವರಿಗೆ ಬರುತ್ತಿದ್ದವು. ಅವೆಲ್ಲವನ್ನು ಓದುವುದು ಸಾಧ್ಯ ವಿಲ್ಲದುದರಿಂದ, ಕೆಲವನ್ನು ಅವರು ನನಗೆ ಕೊಡುತ್ತಿದ್ದರು. ಮರುದಿನ ಯಾವುದಾದರೂ ಪುಸ್ತಕ ಅಥವಾ ಜರ್ನಲ್ಲಿನ ಬಗ್ಗೆ ನನ್ನನ್ನು ಕೇಳುತ್ತಿದ್ದರು. ಕೆಲವು ಪುಸ್ತಕಗಳು ಮತ್ತು ಜರ್ನಲ್ಲುಗಳು ವಾಸ್ತವವಾಗಿಯೂ ಅಪ್ರಯೋಜಕವಾಗಿರುತ್ತಿದ್ದವು ಮತ್ತು ನಾನು ನೇರವಾಗಿ ಅದನ್ನೇ ಅವರಿಗೆ ಹೇಳುತ್ತಿದ್ದೆ. ಆಗ ಅವರು ಮೌನವಾಗಿರುತ್ತಿದ್ದರು. ನನ್ನ ವಿಮರ್ಶೆ ಅವರಿಗೆ ರುಚಿಸಲಿಲ್ಲವೆಂಬುದು ನನಗೆ ತಿಳಿಯುತ್ತಿತ್ತು. ನಾನು ಪಾಠ ಕಲಿತೆ. ಆಮೇಲೆ ಅವರು ಅಂತಹ ಪುಸ್ತಕ, ಜರ್ನಲ್ಲುಗಳನ್ನು ನನಗೆ ಕೊಟ್ಟಾಗ, ಅವುಗಳಲ್ಲಿ ಒಂದೆರಡಾದರೂ ಉತ್ತಮ ಅಂಶಗಳನ್ನು ನಾನು ಕಾಣಲು ಯತ್ನಿಸುತ್ತಿದ್ದೆ. ನನ್ನ ಅಭಿಪ್ರಾಯವನ್ನು ಕೇಳಿದಾಗ ಹೇಳುತ್ತಿದ್ದೆ. 'ಅದರಲ್ಲಿ ಒಂದೆರಡು ಒಳ್ಳೆಯ ಅಂಶಗಳಿವೆ.' ಅವರು ನಾನು ಮಾತನ್ನು ಪೂರೈಸಲು ಬಿಡುತ್ತಿರಲಿಲ್ಲ. 'ಅದರಲ್ಲಿ ಒಂದೆರಡು ಒಳ್ಳೆಯ ಅಂಶಗಳಿವೆ, ತುಂಬ ಒಳ್ಳೆಯದು' ಎಂದು ಚರ್ಚೆಯನ್ನೇ ಮುಕ್ತಾಯ ಮಾಡುತ್ತಿದ್ದರು! ಅವರಿಗೆ ವಿಮರ್ಶಾತ್ಮಕ ಶಕ್ತಿ ಇರಲಿಲ್ಲವೆಂದು ಇದರರ್ಥವಲ್ಲ. ಜನರು ಪ್ರೀತಿ–ಗೌರವಗಳೊಡನೆ ತಮಗೆ ಕಳುಹಿಸಿದ ವಸ್ತುಗಳಲ್ಲಿ ಒಳಿತನ್ನೇ ಕಾಣಬೇಕೆಂಬುದು ಅವರ ದೃಷ್ಟಿಯಾಗಿತ್ತು.

**ಆಜೀವ ಸೇವೆ**

ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಿಷನ್‌ಗೆ ಎರಡು ಅಂಶಗಳ ಧ್ಯೇಯ ವಾಕ್ಯವನ್ನು ಕೊಟ್ಟರು (ಇದು ಎಲ್ಲ ಭಾರತೀಯರಿಗೂ, ಮತ್ತು ಇಡಿಯ ಮಾನವ ಕುಲಕ್ಕೇ ಧ್ಯೇಯವಾಕ್ಯವಾಗಬಹುದಾದುದು): 'ಆತ್ಮನೋ ಮೋಕ್ಷಾರ್ಥಂ ಜಗದ್ಧಿ ತಾಯ ಚ' 'ತನ್ನ ಮೋಕ್ಷಕ್ಕಾಗಿ ಹಾಗೂ ವಿಶ್ವಕ್ಷೇಮಕ್ಕಾಗಿ.' ವಾಕ್ಯದ ದ್ವಿತೀಯಾರ್ಧ–ವಿಶ್ವಕ್ಷೇಮ–ವನ್ನು ಪೂರ್ಣಗೊಳಿಸಲು ಸ್ವಾಮೀಜಿ ಕರ್ಮಯೋಗವನ್ನು ಕಲಿಸಿದರು. ಕರ್ಮಯೋಗವು ಎರಡು ತತ್ತ್ವಗಳ ಮೇಲೆ ನಿಂತಿದೆ. ಇವುಗಳಲ್ಲೊಂದು, 'ಕಾಯಕವೇ ಕೈಲಾಸ.' ಎಲ್ಲ ಕರ್ಮವನ್ನೂ ಅತ್ಯುನ್ನತ ಆತ್ಮಕ್ಕೆ ಅರ್ಪಣೆಯೊಂದು ಮಾಡಬೇಕು ಎಂದು ಇದರ ಅರ್ಥ. ಎರಡನೆಯ ತತ್ತ್ವ 'ಜನಸೇವೆಯೇ ಜನಾರ್ದನ ಸೇವೆ.'

ರಂಗನಾಥಾನಂದಜಿಯವರು ಕರ್ಮಯೋಗದ ಈ ಎರಡು ತತ್ತ್ವಗಳ ಉತ್ಕೃಷ್ಟ ಮಾದರಿಯಾಗಿದ್ದರು. ಅವರು ಆಧುನಿಕ ಕಾಲದ ಶ್ರೇಷ್ಠ ಕರ್ಮಯೋಗಿ ಗಳಲ್ಲೊಬ್ಬರಾಗಿದ್ದರು. ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿ ಆಶ್ರಮವನ್ನು ಸೇರಿದಾರಭ್ಯ ತೊಂಬತ್ತಾರನೆಯ ವಯಸ್ಸಿನಲ್ಲಿ ತಾವು ಕಾಲವಾಗುವವರೆಗೆ ಅವರು ಲೋಕ ಕ್ಷೇಮಕ್ಕಾಗಿ ಸತತವಾಗಿ ದುಡಿದರು. ತಮ್ಮ ತೊಂಬತ್ತಾರನೆಯ ವರ್ಷದಲ್ಲಿ, ಹಲವು ರೀತಿಯ ಅನಾರೋಗ್ಯಪೀಡಿತರಾದಾಗ್ಯೂ, ಅಧಿಕೃತ ಸಭೆಗಳ ಅಧ್ಯಕ್ಷತೆ ವಹಿಸುವುದು, ಆಸಕ್ತರಿಗೆ ಆಧ್ಯಾತ್ಮಿಕ ಮಾರ್ಗದರ್ಶನ ನೀಡುವುದು, ತಮ್ಮ ಸುತ್ತಲೂ ಕಿಕ್ಕಿರಿದ ನೂರಾರು ಜನರನ್ನು ಸಾಂತ್ವನಗೊಳಿಸುವುದೇ ಮೊದಲಾದ ಕೆಲಸಗಳನ್ನು ಮಾಡುತ್ತಲೇ ಇದ್ದರು.

ಅವರ ಸದ್ಯದ ಕಾರ್ಯಕ್ಷೇತ್ರ ಮಧ್ಯಮವರ್ಗದ ಜನರೇ ಆಗಿದ್ದರೂ, ಅವರಿಗೆ ಬಡವರ ಬಗೆಗೆ, ದಮನಕ್ಕೊಳಗಾದವರ ಬಗ್ಗೆ ತೀವ್ರವಾದ ಕಾಳಜಿಯಿತ್ತು. ಬಡವರ ಸೇವೆಯ ಎಲ್ಲ ಚಟುವಟಿಕೆಗಳಲ್ಲಿಯೂ ಅವರು ಸಕ್ರಿಯವಾದ ಆಸಕ್ತಿಯನ್ನು ತೋರಿಸುತ್ತಿದ್ದರು. ಚತ್ತೀಸ್‌ಘರ್, ಜಾರ್ಖಂಡ್, ಅರುಣಾಚಲಪ್ರದೇಶ ಮತ್ತಿತರ ಪ್ರದೇಶಗಳ ಆದಿವಾಸಿ ಜನರ ಕುರಿತಾದ ಆಶ್ರಮದ ಕೆಲಸದಲ್ಲಿ ಅವರಿಗೆ ವಿಶೇಷವಾದ ಆಸಕ್ತಿಯಿತ್ತು. ಕೆಲವು ವರ್ಷಗಳ ಹಿಂದೆ ಉತ್ತರ ಕೇರಳದ ತೀವ್ರವಾದ ಹಿಂದುಳಿದ ಆದಿವಾಸಿ ಜನರಿಗಾಗಿ ಕೆಲಸ ಮಾಡುತ್ತಿದ್ದ ಸಂಸ್ಥೆಯೊಂದು ರಂಗನಾಥಾನಂದಜಿ ಯವರಿಂದ ಆರ್ಥಿಕ ಸಹಾಯವನ್ನು ಅಪೇಕ್ಷಿಸಿತು. ಆದರೆ ಆ ಸಂಸ್ಥೆಯು ರಾಮಕೃಷ್ಣ ಮಿಷನ್‌ಗೆ ಸೇರಿದಿದ್ದುದರಿಂದ ಅದಕ್ಕೆ ಸಹಾಯ ಮಾಡುವುದಕ್ಕೆ ಆಕ್ಷೇಪಣೆಗಳು ಬಂದವು. ಆದರೆ ರಂಗನಾಥಾನಂದಜಿಯವರು ಆಕ್ಷೇಪಗಳನ್ನು ಲೆಕ್ಕಿಸದೆ ಆ ಸಂಸ್ಥೆಗೆ ಘನವಾದ ಕೊಡುಗೆಯನ್ನು ಕಳುಹಿಸಿದರು.

ಹಾಗೆಯೇ ಸ್ತ್ರೀಯರ ಯೋಗಕ್ಷೇಮದ ಬಗೆಗೂ ಅವರಿಗೆ ಆಳವಾದ ಕಾಳಜಿಯಿತ್ತು. ನೂರಾರು ಸ್ತ್ರೀಯರು ಮತ್ತು ಮಹಿಳಾ ಸಂಘಟನೆಗಳು ಅವರಿಂದ ಸಹಾಯ ಪಡೆದವು. ೧೯೫೪ರಲ್ಲಿ ಬೇಲೂರು ಮಠದ ಅಧಿಕಾರಿಗಳು ಸ್ತ್ರೀಯರಿ ಗಾಗಿಯೇ ಪ್ರತ್ಯೇಕವಾದ ಸನ್ಯಾಸ ವ್ಯವಸ್ಥೆಯನ್ನು ಶ್ರೀ ಶಾರದಾಮಠವೆಂಬ ಹೆಸರಿನಲ್ಲಿ ಪ್ರಾರಂಭಿಸಿದರು. ಕ್ರಮೇಣ ಅದು ಪೂರ್ಣ ಸ್ವತಂತ್ರ ಸಂಸ್ಥೆಯಾಯಿತು. ಜೀವಿತಾಂತ್ಯದ ವರೆಗೂ ರಂಗನಾಥಾನಂದಜಿಯವರು ಈ ಸಂಸ್ಥೆಗೆ ಮತ್ತು ರಾಮಕೃಷ್ಣ-ಶಾರದಾ ಮಿಷನ್ ಎಂಬ ಹೆಸರಿನ ಅದರ ಸಮಾಜಸೇವಾ ಅಂಗಕ್ಕೆ ಗಟ್ಟಿ ಬೆಂಬಲ ನೀಡಿದರು.

**ದಿಟವಾದ ಸನ್ಯಾಸಿ**

ಈ ಸಂದರ್ಭದಲ್ಲಿ ಅವರ ವ್ಯಕ್ತಿತ್ವದ ಇನ್ನೆರಡು ಲಕ್ಷಣಗಳನ್ನು ತಿಳಿಸಬೇಕು. ಮೊದಲನೆಯದೆಂದರೆ, ಪ್ರಪಂಚದಾದ್ಯಂತ ಹಲವು ಬಾರಿ ಸಂಚರಿಸಿ, ವಿವಿಧ ವರ್ಗದ ಜನರೊಂದಿಗೆ ಬೆರೆತರೂ, ಸನ್ಯಾಸಿಯ ಎರಡು ಮೂಲ ನಿಯಮಗಳಾದ ಬ್ರಹ್ಮಚರ್ಯ (ನೈಷ್ಠಿಕತೆ) ಮತ್ತು ಅಪರಿಗ್ರಹಗಳನ್ನು ಚಾಚೂತಪ್ಪದೆ ಪಾಲಿಸುತ್ತ, ಶುದ್ಧ ಸನ್ಯಾಸಿಯಾಗಿದ್ದರು. ಅವರಿಗೆ ಯಾವುದೇ ಹಣ ಬಂದರೂ, ಅದನ್ನು ತಡಮಾಡದೆ, ಹಿಂದೆಮುಂದೆ ನೋಡದೆ ಹಂಚಿಬಿಡುತ್ತಿದ್ದರು. ಪರದೇಶ ಸಂಚಾರ ದಲ್ಲಿದ್ದಾಗಲೂ ಸ್ನೇಹಿತರ ಸಹಾಯಹಸ್ತದ ಮೇಲೆಯೇ ಅವಲಂಬಿಸುತ್ತ ತಮ್ಮೊಂದಿಗೆ ಹಣವನ್ನು ಒಯ್ಯುತ್ತಿರಲಿಲ್ಲ.

ತನ್ನ ವೈಯಕ್ತಿಕ ಜೀವನದಲ್ಲಿ ಅತ್ಯಗತ್ಯ ವಸ್ತುಗಳ ಮತ್ತು ಕನಿಷ್ಠತಮ ಸೌಲಭ್ಯಗಳನ್ನು ಹೊರತುಪಡಿಸಿ ಇನ್ನೇನನ್ನೂ ಬಳಸುತ್ತಿರಲಿಲ್ಲ. ಅವರು ಸನ್ಯಾಸ ಭಾವದಿಂದ ಎಂತಹ ಸರಳತಮ ಜೀವನ ನಡೆಸುತ್ತಿದ್ದರೆಂದರೆ ಅದನ್ನು ಅನುಕರಿಸುವುದು ಅಸಾಧ್ಯವಾಗಿತ್ತು. ಭಾಷಣಕಾರನ ವಾಗ್ಮಿತೆಗಿಂತ ಆತನ ಚಾರಿತ್ರ್ಯ ಶಕ್ತಿ ಕೇಳುಗರ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ ಎಂದು ಸ್ವಾಮಿ ವಿವೇಕಾ ನಂದರು ಒಮ್ಮೆ ಸೋದರಿ ನಿವೇದಿತಾ ಅವರಿಗೆ ಹೇಳಿದ್ದರು. ಇದು ರಂಗನಾಥಾ ನಂದಜೀಯವರ ವಿಷಯದಲ್ಲಿ ಅತ್ಯಂತ ಸತ್ಯವಾಗಿದ್ದಿತು.

ಅವರ ಪರಿಶುದ್ಧ ಜೀವನ ಕ್ರಮ, ಬೌದ್ಧಿಕ ದೃಷ್ಟಿಕೋನ ಮತ್ತು ಕಾರ್ಯ ದಕ್ಷತೆಯ ಹಿಂದೆ ಅತ್ಯಂತ ಕರುಣಾಮಯವಾದ ಪ್ರೀತಿತುಂಬಿದ ಹೃದಯ ಅಡಗಿತ್ತು. ಅವರು ಗಾಢವಾದ ವೈಯಕ್ತಿಕ ಸಂಬಂಧಗಳನ್ನು ಪೋಷಿಸುತ್ತಿದ್ದರು. ಇದು ಜೀವನ ಪರ್ಯಂತದ ನಿಷ್ಠೆಯನ್ನು ಪ್ರೇರಿಸುತ್ತಿತ್ತು. ಅವರ ಪ್ರೀತಿಯು ಬರಿಯ ಭಾವುಕವಾದ ತೋರಿಕೆಯ ಹುಮ್ಮಸ್ಸು ಮಾತ್ರವಾಗಿರಲಿಲ್ಲ. ಅದು ಕಾಲ-ದೇಶಗಳಿಂದ ಅಬಾಧಿತವಾದ ಸ್ಥಿರವಾದ, ದೃಢವಾದ ಆಧ್ಯಾತ್ಮಿಕ ಬಾಂಧವ್ಯವಾಗಿತ್ತು.

**ಅವರ ಕೊಡುಗೆ**

ಪ್ರಸ್ತುತ ಪ್ರಪಂಚದಲ್ಲಿ ಮಾನವಕ್ಷೇಮ ಮತ್ತು ಅಭಿವೃದ್ಧಿಗಳಿಗೆ ರಂಗ ನಾಥಾನಂದಜಿಯವರ ಕೊಡುಗೆ ಗಮನಾರ್ಹವಾದದ್ದು. ಅವರ ಕೊಡುಗೆಗಳಲ್ಲಿ ಸರ್ವವಿದಿತವಾದದ್ದು ಪರದೇಶಗಳಲ್ಲಿ ಭಾರತದ ಸಾಂಸ್ಕೃತಿಕ ರಾಯಭಾರಿಯಾಗಿ ಅವರ ಪಾತ್ರ. ಭಾರತವು ಹಾವಾಡಿಗರ, ಭಿಕ್ಷುಕರ, ಗೋಪೂಜೆಯ, ರೋಗ–ರುಜಿನಗಳ ದೇಶವೆಂದು ಪರಿಗಣಿತವಾಗಿದ್ದ ಸಂದರ್ಭದಲ್ಲಿ ಭಾರತೀಯ ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯ ಭವ್ಯತೆಯನ್ನು ಕುರಿತು ರಂಗನಾಥಾನಂದಜೀಯವರ ಸೊಗಸಾದ ವಾಗ್ಮಿತೆಯ ಮಂಡನೆಗಳು ಪಾಶ್ಚಾತ್ಯ ಬುದ್ಧಿಜೀವಿಗಳಲ್ಲಿ ಈ ದೇಶದ ಬಗ್ಗೆ ಉತ್ತಮ ಚಿತ್ರವನ್ನು ಮೂಡಿಸುವಲ್ಲಿ ಸಹಾಯಕವಾದವು. ವ್ಯಂಗ್ಯ ವೆಂದರೆ ಆ ದೇಶಗಳಲ್ಲಿ ವಾಸಿಸುತ್ತಿದ್ದ ಭಾರತೀಯರೇ, ಭಾರತೀಯ ಸಾಂಸ್ಕೃತಿಕ ಪರಂಪರೆಯ ಬಗೆಗೆ ಅಜ್ಞಾನಿಗಳಾಗಿದ್ದರು ಮತ್ತು ತಮ್ಮ ಮಾತೃಭೂಮಿಯ ವಿಷಯದಲ್ಲಿ ಕೀಳರಿಮೆಯನ್ನು ಬೆಳೆಸಿಕೊಂಡಿದ್ದರು. ರಂಗನಾಥಾನಂದಜಿಯವರ ಉಪನ್ಯಾಸಗಳನ್ನು ಕೇಳಿದಾಗ ಅವರ ಕಣ್ತೆರೆದವು. ಭಾರತದಲ್ಲಿಯೂ ಹಲವಾರು ಬುದ್ಧಿಜೀವಿಗಳು, ಸರ್ಕಾರಿ ಅಧಿಕಾರಿಗಳು– ವಿಶೇಷವಾಗಿ ಆಡಳಿತ ಸೇವೆಗೆ ಸೇರಿದವರು, ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾರತೀಯ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ರಂಗನಾಥಾನಂದರ ಉಪನ್ಯಾಸ ಮತ್ತು ಪುಸ್ತಕಗಳಿಗೆ ಋಣಿಯಾಗಿದ್ದಾರೆ.

ಅಷ್ಟೇ ಮಹತ್ವದ ಅವರ ಇನ್ನೊಂದು ಕೊಡುಗೆಯೆಂದರೆ ಸ್ವಾಮಿ ವಿವೇಕಾನಂದರ ಶ್ರೇಷ್ಠ ಚಿಂತನೆಗಳನ್ನು ವಿವರಿಸಿ ಜನಪ್ರಿಯಗೊಳಿಸಿದುದು. ವೇದಾಂತದ ಸಂಜೀವಿನಿಯಂತಹ ಅನಂತ ಸತ್ಯಗಳನ್ನು ಅಜ್ಞಾನ ಶಾಸ್ತ್ರಗಳಿಂದ ಹೊರತೆಗೆದು, ಅವುಗಳನ್ನು ಆಧುನಿಕ ಪರಿಭಾಷೆಯಲ್ಲಿ ಅರ್ಥೈಸಿ ಜೀವನದ ಸಮಸ್ಯೆಗಳ ಪರಿಹಾರಕ್ಕೆ ಅವುಗಳನ್ನು ಅನ್ವಯಿಸುವಲ್ಲಿ ವಿವೇಕಾನಂದರೇ ಮೊದಲಿಗರು. ವಿವೇಕಾನಂದರ ಜ್ಞಾನಪ್ರದೀಪಕವಾದ ಸಂದೇಶವನ್ನು ಜನವಿದಿತವಾಗಿಸಬೇಕಿತ್ತು, ಪುನಶ್ಚೇತನಗೊಳಿಸಿ, ತೀವ್ರಗತಿಯಿಂದ ಬದಲಾಗುತ್ತಿದ್ದ ಆಧುನಿಕ ವಿಜ್ಞಾನ ಮತ್ತು ಸಾಮಾಜಿಕ–ಆರ್ಥಿಕ ಜೀವನದ ಚಿಂತನೆಗಳಿಗನುವಾಗುವಂತೆ ಪುನರ್ವ್ಯಾಖ್ಯಾನಿಸ ಬೇಕಿತ್ತು. ತಮ್ಮ ಅಂತಃಶಕ್ತಿಯ ಉತ್ಕೃಷ್ಟಾಂಶವನ್ನು ರಂಗನಾಥಾನಂದಜಿ ಇದಕ್ಕಾಗಿ ಮೀಸಲಿಟ್ಟರು.

ವಿಜ್ಞಾನ ಮತ್ತು ಧರ್ಮದ ಅಥವಾ, ಹೆಚ್ಚು ಸರಿಯಾಗಿ, ವಿಜ್ಞಾನ ಮತ್ತು ವೇದಾಂತಗಳ ಸಮನ್ವಯಕ್ಕೆ ಯತ್ನಿಸಿದ ಮೊದಲ ಶ್ರೇಷ್ಠಚಿಂತಕ ಸ್ವಾಮಿ ವಿವೇಕಾ ನಂದರು. ವಿಜ್ಞಾನ ಮತ್ತು ಧರ್ಮ ಮನುಷ್ಯ ಪ್ರಜ್ಞೆಯ ಎರಡು ವಿಭಿನ್ನ ಸ್ತರಗಳಿಗೆ ಸೇರಿದವಾದರೂ, ಅವು ಪರಸ್ಪರ ವಿರೋಧವಲ್ಲ; ಆದರೆ, ಪರಸ್ಪರ ಪೂರಕ ಮತ್ತು ಅವುಗಳ ನಡುವೆ ಹಲವು ಸಾಮಾನ್ಯಾಂಶಗಳಿವೆ ಎಂದು ಸ್ವಾಮೀಜಿ ತೋರಿಸಿ ಕೊಟ್ಟರು. ಇಪ್ಪತ್ತನೆಯ ಶತಮಾನದ ಮಧ್ಯದ ಹೊತ್ತಿಗೆ, ಸಾಪೇಕ್ಷ ಸಿದ್ಧಾಂತ, ಕ್ವಾಂಟಮ್ ಸಿದ್ಧಾಂತ, ಅಣುಭೌತಶಾಸ್ತ್ರ, ಗಣಕಶಾಸ್ತ್ರ, ಮತ್ತಿತರ ಕ್ಷೇತ್ರಗಳಲ್ಲಿ ವಿಜ್ಞಾನವು ಮನಸ್ಸನ್ನು ಕೆಣಕುವಂತೆ ಬೆಳೆದಿತ್ತು. ಸ್ವಾಮಿ ವಿವೇಕಾನಂದರು ಅರ್ಥೈಸಿದ ವೇದಾಂತದ ಸಾರ್ವಕಾಲಿಕ ಪರಿಕಲ್ಪನೆಗಳನ್ನು ವಿಜ್ಞಾನದ ಹೊಸ ಬೆಳವಣಿಗೆಯ ದೃಷ್ಟಿಯಲ್ಲಿ ಪ್ರಸ್ತುತಪಡಿಸುವ ಅಗತ್ಯವಿತ್ತು. ರಂಗನಾಥಾನಂದಜಿಯವರು ಈ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಇದು ಆಧುನಿಕ ವಿಚಾರಕ್ಕೆ ಅವರದೇ ಆದ ನವಮಾರ್ಗಪ್ರವರ್ತಕವಾದ ಕಾಣಿಕೆ.

ಸುಮಾರು ಅರ್ಧ ಶತಮಾನದಷ್ಟು ಕಾಲ ರಂಗನಾಥಾನಂದಜಿಯವರು ಭಾರತೀಯ ಸಮಾಜದಲ್ಲಿ ಬೆಳೆಯುತ್ತಿದ್ದ ವಿಷಯಾಸಕ್ತಿ, ಅನೈತಿಕತೆ ಮತ್ತು ಭ್ರಷ್ಟಾಚಾರದ ಬಲವನ್ನು ವಿರೋಧಿಸಲು ಅಗತ್ಯವಾದ ನೈತಿಕ ಶಕ್ತಿಯನ್ನು ಕೊಟ್ಟರು. ದೇಶದ ವಿವಿಧ ಮೂಲೆಗಳಲ್ಲಿ ಅನುರಣಿಸುತ್ತಿದ್ದ ಅವರ ಪ್ರಾಮಾಣಿಕ ಧ್ವನಿ ಸಮಾಜದ ನಾಯಕರು, ಅಧಿಕಾರಿವರ್ಗದವರು, ವ್ಯಾಪಾರಿಗಳು ಮತ್ತು ಒಟ್ಟಾರೆ ಶಿಕ್ಷಿತರಿಗೆ ಹೆಂಗಸರು ಮತ್ತು ಬಡವರ ವಿಷಯದಲ್ಲಿ ಅವರ ಕರ್ತವ್ಯವನ್ನು ಜ್ಞಾಪಿಸಿಕೊಟ್ಟವು. ಕೆಲವು ರಾಜ್ಯಗಳಲ್ಲಿ ಇನ್ನೂ ರೂಢಿಯಲ್ಲಿದ್ದ ಅಸ್ಪೃಶ್ಯತೆ

ಮತ್ತು ನಿಮ್ನವರ್ಗದವರ ದಮನದ ವಿರುದ್ಧವಾಗಿ ಅವರು ಮಾತನಾಡಿದರು. ಅವರು ಎಲ್ಲ ರೀತಿಯ ಶೋಷಣೆಯ ವಿರೋಧಿಗಳಾಗಿದ್ದರು.

ಒಂದು ಹೊಸ ಬಗೆಯ (ಪ್ರಜ್ಞಾಪೂರ್ವಕ) ಜ್ಞಾನೋದಯದ ಜೀವನ ಮಾರ್ಗಕ್ಕೆ ಅವರು ಮಾದರಿಯಾದರು. ಸನ್ಯಾಸವು ಕೈಕಟ್ಟುವ (ಬಂಧನದ) ನೇಮವಾಗದೆ, ಬಿಡುಗಡೆಯ ಪ್ರಭಾವವಾಗಬಲ್ಲದೆಂದು ಅವರ ಬದುಕು ತೋರಿಸಿ ಕೊಟ್ಟಿತು. ಆಧ್ಯಾತ್ಮಿಕ ಅರಿವು ಮತ್ತು ಯಶಸ್ಸುಗಳನ್ನು ಬದುಕಿನಲ್ಲಿ ಹೇಗೆ ಸಮೀಕರಿಸ ಬಹುದೆಂಬುದನ್ನು, ಮಾನವಕುಲದ ಸೇವೆಗೆ ತನ್ನನ್ನು ತಾನು ಮುಡಿಪಾಗಿಡುವುದರ ಮೂಲಕ ಹೇಗೆ ವ್ಯಕ್ತಿಯು ಅತ್ಯುನ್ನತ ಪರಿಪೂರ್ಣತೆಯನ್ನು (ಸಾರ್ಥಕ್ಯವನ್ನು) ಪಡೆಯಬಹುದೆಂಬುದನ್ನು ಅವರ ಜೀವನ ತೋರಿಸಿಕೊಟ್ಟಿತು. ನೂರು ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದ ಆನ್ವಯಿಕ ವೇದಾಂತದ ಪ್ರಸ್ತುತತೆಯ ಸ್ಪಷ್ಟ ದೃಷ್ಟಾಂತ ಅವರ ಜೀವನವಾಗಿತ್ತು.

ಸುಮಾರು ಅರ್ಧ ಶತಮಾನದ ಕಾಲ ರಂಗನಾಥಾನಂದಜಿಯವರು ಭಾರತದ ಸಾಂಸ್ಕೃತಿಕ ಐಕ್ಯತೆಯ ಸಂಕೇತವಾಗಿದ್ದರು; ಭಾರತೀಯರಿಗೆ ಐಕಮತ್ಯದ ಕೇಂದ್ರ ವಾಗಿದ್ದರು. ಭಾರತದ ಎಲ್ಲ ಭಾಗಗಳ, ಎಲ್ಲ ಧರ್ಮಗಳ, ಸಮಾಜದ ಎಲ್ಲ ವರ್ಗಗಳ, ರಾಜಕೀಯ ಪಂಗಡಗಳ ಜನರು ಅವರಲ್ಲಿ ತಮಗೆ ಪ್ರಸ್ತುತವಾದುದನ್ನು ಕಂಡರು. ರಂಗನಾಥಾನಂದಜಿಯವರ ಮರಣದಿಂದ ಐಕ್ಯತೆಯ ಕೇಂದ್ರ ಮತ್ತು ಸಂಕೇತ ಕಣ್ಮರೆಯಾಗಿದೆ. ಇದು ದೇಶದ ಸಂಯುಕ್ತ ಪ್ರಜ್ಞೆಯಲ್ಲಿ ದೊಡ್ಡ ನಿರ್ವಾತ ವನ್ನುಂಟುಮಾಡಿದೆ.

ಶ್ರೇಷ್ಠರ ಕುರಿತಾದ ಸ್ಟೀಫನ್ ಸ್ಪೆಂಡರ್‌ನ ಈ ಸಾಲುಗಳು ರಂಗನಾಥಾ ನಂದಜೀಯವರ ಚಿತ್ರವನ್ನು ಸಮರ್ಪಕವಾಗಿ ಸಮಾರೋಪಗೊಳಿಸುತ್ತವೆ:

**ಸೂರ್ಯನಿಂದ ಉದಿಸಿದ ಅವರು, ಸೂರ್ಯನತ್ತ ಕೆಲಕಾಲ ನಡೆದರು,**
**ಮತ್ತು ಸಜೀವ ಗಾಳಿಯಲ್ಲಿ ತಮ್ಮ ಔನ್ನತ್ಯದ ಗುರುತನ್ನು ಬಿಟ್ಟುಹೋದರು.**

* * * *

# ೫. ರಾಮಕೃಷ್ಣ ಆಂದೋಲನದ ಉತ್ಕೃಷ್ಟ ಸಂದೇಶಕಾರ

**–ಸ್ವಾಮಿ ಜಿತಾತ್ಮಾನಂದ**

ಸ್ವಾಮಿ ರಂಗನಾಥಾನಂದಜೀಯವರಂತಹ ಮಹಾನ್ ವ್ಯಕ್ತಿತ್ವದ ಬಗ್ಗೆ ಬರೆಯುವುದು ತುಂಬ ಕಷ್ಟ; ಅತ್ಯುನ್ನತ ಮಟ್ಟದ ಅಪರೂಪದ ಸನ್ಯಾಸಿಯಗಿದ್ದ ಅವರು ಸದಾ ಎಲೆಯ ಮರೆಯ ಕಾಯಾಗಿಯೇ ಇರಬಯಸುತ್ತಿದ್ದರು. ಸೂಕ್ಷ್ಮಮತಿ ಗಳಾದವರು ಅವರು ಬಚ್ಚಿಡಬಯಸುವ ಶಕ್ತಿಯನ್ನು ಕಾಣಯತ್ನಿಸಬಹುದಿತ್ತು. ಆದರೆ, ತನಗೆ ವಹಿಸಿದ ಕರ್ತವ್ಯದ ಬಗ್ಗೆ ಅವರಿಗೆ ಪೂರ್ಣ ಅರಿವಿತ್ತು. ಅವರೊಂದಿಗೆ ಹಲವು ವರ್ಷಗಳನ್ನು ಹತ್ತಿರವಾಗಿ ಕಳೆಯುವ ಮತ್ತು ಅವರ ಜತೆಗೂಡಿ ಕೆಲಸ ಮಾಡುವ ಅಪರೂಪದ ಅವಕಾಶ ನನಗೆ ದೊರಕಿತ್ತು. ಸ್ವಾಮಿ ಅದ್ಭುತಾನಂದಜಿ ಯವರ ಜೀವನದಲ್ಲಿ ಪವಾಡವನ್ನು ನಾವು ಕಂಡಿದ್ದೇವೆ. ನಿರಕ್ಷರಕುಕ್ಷಿಯಾಗಿದ್ದ ಕುರುಬರ ಬಾಲಕನನ್ನು ರಾಮಕೃಷ್ಣರು ಕೈಗೆತ್ತಿಕೊಂಡು ಅತ್ಯುನ್ನತ ಮಟ್ಟದ ಸಾಧುವನ್ನಾಗಿ ಪರಿವರ್ತಿಸಿದರು. ಆತನ ಜ್ಞಾನ ರಾಮಕೃಷ್ಣರನ್ನೂ ಸ್ತಂಭಿತಗೊಳಿಸಿತು. ಸ್ವಲ್ಪ ಅದನ್ನೇ ಹೋಲುವ, ಅದಕ್ಕಿಂತ ಏನೂ ಕಡಿಮೆಯಲ್ಲದ ರೂಪಾಂತರ ಕೇರಳದ ಹದಿನಾಲ್ಕು ವರ್ಷದ ಸಣ್ಣ ಹುಡುಗನದು. ರಾಮಕೃಷ್ಣರ ಸಂದೇಶವನ್ನು ಆತ ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿ ಓದಿದಾಗ ಗುರುಗಳ ಕರೆಗೆ ಓಗೊಟ್ಟ. ದಹ್ಯದ್ರಾವಕವು ಸಿದ್ಧವಾಗಿತ್ತು; ಉರುವಲು ಒಣಗಿ ತರಗಾಗಿತ್ತು; ಅದಕ್ಕೆ ಬೇಕಾಗಿದ್ದುದು ಕಿಡಿ ಹೊತ್ತಿಸುವ ಬೆಂಕಿಕಡ್ಡಿ ಮಾತ್ರ; ಇದಕ್ಕೆ ಈ ಪುಸ್ತಕ ಸಾಕಾಯಿತು. ಈ ಪುಸ್ತಕ ಬೆಂಕಿ ಹೊತ್ತಿಸುವ ಚಕಮಕಿಕಲ್ಲಿನ ಕಿಡಿಯಂತಿತ್ತು. ಈ ಹುಡುಗ ತನ್ನ ದೈವೀ ನಿಯಾಮಕಕ್ಕೆ ಸಿದ್ಧನಾದ. ದಕ್ಷಿಣೇಶ್ವರದ ಮುದುಕನ ಕರೆ ಒಮ್ಮೆ ಕೇಳಿಸಿದರೆ ಸಾಕು, ನೀವು ಬೆನ್ನು ತಿರುಗಿಸಲಾರಿರಿ. ರಂಗನಾಥಾನಂದಜೀಯವರು ಹಿಂತಿರುಗಲಿಲ್ಲ. ಕೇರಳದ ಹಳ್ಳಿಯಿಂದ ಬಂದು, ರಾಮಕೃಷ್ಣ ಮಿಷನ್‌ನ ಮೈಸೂರಿನ ಕೇಂದ್ರದಲ್ಲಿ ಅಡುಗೆಯವನಾಗುವುದರ ಮೂಲಕ ಅವರು ರಾಮಕೃಷ್ಣ ಸಂಘಟನೆಯನ್ನು ಸೇರಿದರು. ದಿವ್ಯ ಭವಿಷ್ಯದ ಬಗೆಗಿನ ಆಳವಾದ ವಿಶ್ವಾಸ ಅವರ ಅಂತರಂಗವನ್ನು ಕಲಕಿತು. "ಕರೆಯಲ್ಪಡುವವರು ಹಲವರು ಆದರೆ ಆಯ್ಕೆಯಾಗುವವರು ಕೆಲವರು" ಎಂದು ಜೀಸಸ್ ಹೇಳಿದ.

ಹಲವಾರು ವರ್ಷಗಳ ಬಳಿಕ, ೧೯೮೪ರಲ್ಲಿ, ಜಗತ್ತಿನ ಶ್ರೇಷ್ಠ ಹೋಮಿಯೋಪತಿ ವೈದ್ಯ ಡಾ॥ ಜಾರ್ಜ್ ಬೆಥೊಕ್ಲಾಸ್, ರಂಗನಾಥಾನಂದರನ್ನು ಕಾಣಲು ಬಂದಾಗ ಆತ ಕೇಳಿದ ಮೊದಲ ಪ್ರಶ್ನೆ, "ನಿಮ್ಮ ಅತಿ ದೊಡ್ಡ ಆಧ್ಯಾತ್ಮಿಕ ಅನುಭವ ಯಾವುದು?" ಬಂದಿತು ಉತ್ತರ ಒಮ್ಮೆಗೇ, "ನನ್ನ ಹದಿನಾಲ್ಕನೆಯ ವಯಸ್ಸಿನಲ್ಲಿ 'The Gospel of Sri Ramakrishna' ಪುಸ್ತಕವನ್ನು ಮೊದಲ ಬಾರಿ ಓದಿದುದು ನನ್ನ ಅತಿ ದೊಡ್ಡ ಆಧ್ಯಾತ್ಮಿಕ ಅನುಭವ." ಹದಿನಾಲ್ಕನೆಯ ವಯಸ್ಸಿನಲ್ಲಿ ಹುಡುಗ ಕರೆಯನ್ನು ಕೇಳಿದ ಮತ್ತು ರೂಪಾಂತರ ಆರಂಭವಾಯಿತು. ಸರಳ ಹಳ್ಳಿಯ–ಹುಡುಗ ಕಾಲಕ್ರಮೇಣ ೨೦ನೇ ಶತಮಾನದ ಮಧ್ಯಭಾಗದಿಂದ ರಾಮಕೃಷ್ಣ–ವಿವೇಕಾನಂದ ಪಂಥದ ವಿಶ್ವಶ್ರೇಷ್ಠ ಸಂದೇಶವಾಹಕನಾದ, "ದೇವರು ಮೂರ್ಖರನ್ನು ಸೃಷ್ಟಿಸಿದುದು ಜಾಣರನ್ನು ಗೊಂದಲಕ್ಕೀಡುಮಾಡಲು."

ಹಲವು ವರ್ಷಗಳ ಬಳಿಕ, ೧೯೮೨ರಲ್ಲಿ, ಬ್ರಿಟನ್ನಿನ ಮಾಜಿ ಪ್ರಧಾನಿ ಶ್ರೀ ಜೇಮ್ಸ್ ಕ್ಯಾಲಗನ್ ಹೈದರಾಬಾದಿನ ನಮ್ಮ ಮಠದಲ್ಲಿ ಉಪನ್ಯಾಸ ಕೊಡಲು ಬಂದರು. ಭಾರತ–ಯುರೋಪಿಯನ್ ಸಂಬಂಧಗಳು ಮತ್ತು ವೇದಾಂತದ ಬಗ್ಗೆ ಒಂದು ವಿಶೇಷ ಸೆಷನ್ ಇತ್ತು. ಶ್ರೀ ಸಿ.ಸುಬ್ರಹ್ಮಣ್ಯಂ ಮತ್ತು ಶ್ರೀ ರಾಮಕೃಷ್ಣನ್ ಕೂಡ ಉಪಸ್ಥಿತರಿದ್ದರು. ಜೇಮ್ಸ್ ಮಾತನಾಡಿದರು. ಕಡೆಯಲ್ಲಿ ಪೂಜ್ಯ ಶಂಕರ್ ಮಹಾರಾಜ್ (ಸ್ವಾಮಿ ರಂಗನಾಥಾನಂದಜಿ)

ಮಾತನಾಡಲು ಎದ್ದರು. ಅವರು ಸರಳವಾದ ಉಡುಪಿನಲ್ಲಿದ್ದರು– ಗಡ್ಡ ತೆಗೆದಿರಲಿಲ್ಲ, ಒಂದು ಸರಳವಾದ ಸ್ವೆಟರ್ ಚಳಿಗಾಲದ ಮುಂಜಾನೆಗೆಂದು– ಅವರು ಮಾತನಾಡಿದರು ಮತ್ತು ಇಡಿಯ ಸಭೆಯಲ್ಲಿ ಪ್ರವಾಹ ಹರಿಸಿದರು. ಜೇಮ್ಸ್ ಅವರತ್ತ ನೋಡಿದರು. ಇತರ ಸನ್ಯಾಸಿಗಳೂ ಅವರತ್ತ ನೋಡಿದರು. ಅವರು ಪೂರ್ಣ ವಿಷಯದ ರಹಸ್ಯವನ್ನು ಅರಿತವರಂತೆ, ಅದು ತನ್ನ ಕರತಲಾಮಲಕವೆಂಬಂತೆ, ಇಡಿಯ ಸಭಾಂಗಣವನ್ನು ಪ್ರವಾಹದಲ್ಲಿ ಕೊಚ್ಚಿಸುವ ಸಾಮರ್ಥ್ಯವಿದ್ದವರಂತೆ ಮಾತನಾಡಿದರು. ಮಾತು ಮುಗಿದ ಬಳಿಕ ಸರಳ–ಮುಗ್ಧ ವ್ಯಕ್ತಿಯಂತೆ ಹೊರಬಂದರು. ಅವರು ಅಂತಹ ಭಾಷಣವನ್ನು ಮಾಡಿದ್ದರೆಂದು ಯಾರಿಗೂ ತಿಳಿಯುವಂತಿರಲಿಲ್ಲ. ತಾನು ಒಂದು ವಾಕ್ಯವನ್ನೂ ಮಾತನಾಡಿಲ್ಲವೆಂಬಂತೆ ಸ್ವಲ್ಪವೂ ಅಹಮಿಕೆ ಇರಲಿಲ್ಲ.

ದೆಹಲಿಯಲ್ಲಿ ಶ್ರೇಷ್ಠ ಇತಿಹಾಸಕಾರ ಆರ್ನಾಲ್ಡ್ ಟಾಯ್ನ್‌ಬೀ ಮಾತನಾಡಲು ಬಂದರು (ಆಗ ನಾನು ಅಲ್ಲಿರಲಿಲ್ಲ, ನನ್ನ ಸೋದರನಿದ್ದ). ಆದರೆ ಸ್ವಾಮೀಜಿಯವರು ಮಾತನಾಡಿದ ಬಳಿಕ ಟಾಯ್ನ್‌ಬೀಯ ಮಾತು ಪೇಲವವಾಗಿ, ಸ್ಫೂರ್ತಿರಹಿತವಾಗಿ ಕಂಡಿತೆಂದು ಜನರು ಹೇಳಿದರು. ಸ್ವಾಮೀಜಿಯವರ ಮಾತು ಎಷ್ಟು ಪ್ರಭಾವಯುತ ವಾಗಿತ್ತೆಂದರೆ, ಶ್ರೇಷ್ಠ ಇತಿಹಾಸಕಾರ ಟಾಯ್ನ್‌ಬೀಗಿಂತ ಇವರಿಗೆ ಹೆಚ್ಚು ತಿಳಿದಿತ್ತೆಂದು ಅನ್ನಿಸುವಂತಿತ್ತು. ಅಷ್ಟೇ ಅಲ್ಲ, ಅದು ವಾಸ್ತವವೂ ಆಗಿತ್ತು. ಆಮೇಲೆ ೧೯೮೬ರ ಅಕ್ಟೋಬರ್ ೩೧ರಂದು, ದೆಹಲಿಯ ವಿಜ್ಞಾನ ಭವನದ ದೊಡ್ಡ ಹಾಲ್‌ನಲ್ಲಿ ಭಾರತದ ಐಕಮತ್ಯಕ್ಕಾಗಿ ಮೊದಲ ಇಂದಿರಾಗಾಂಧಿ ಪ್ರಶಸ್ತಿಯನ್ನು ಪಡೆದಾಗ, ಶ್ರೀರಾಮಕೃಷ್ಣ–ವಿವೇಕಾನಂದರ ಮೇಲಿನ ತಮ್ಮ ಸ್ಫೂರ್ತಿಪ್ರದವಾದ ಭಾಷಣದಿಂದ ಸಭೆಯಲ್ಲಿ ಸಂಚಲನವನ್ನುಂಟುಮಾಡಿದರು. ನಾನು ಅಂದು ಮಾಯಾವತಿಯ ಅದ್ವೈತ ಆಶ್ರಮಕ್ಕೆ ಹೊರಡುವುದಿತ್ತು. ಸ್ವಾಮೀಜಿ ಎಂದರು "ನೀನು ಬರಲೇಬೇಕು." ನಾನೆಂದೆ, "ನಾನು ಬರಲಾರೆ, ನನಗೆ ಇಂತಿಂಥ ಕೆಲಸಗಳಿವೆ." "ಇಲ್ಲ, ನೀನು ಬರಲೇ ಬೇಕಾಗುತ್ತದೆ. ಸಮಾರಂಭ ಮುಗಿದ ಮೇಲೆಯೇ ನೀನು ಹೊರಡುವೆ." ನನಗೆ ಹೋಗಲು ಸಮಯ ಸಿಕ್ಕಿತು. ಅವರು ಕಾರಿನಲ್ಲಿ ನನ್ನನ್ನೇ ತಮ್ಮ ಪಕ್ಕದಲ್ಲಿ ಕುಳ್ಳಿರಿಸಿಕೊಂಡರು. ಸಾಧುಗಳು ಮೂರ್ಖರನ್ನು ಆಯ್ಕೆ ಮಾಡಿಕೊಳ್ಳುವುದು ಅವರ ಕೃಪಾವಿಶೇಷವಷ್ಟೆ. ಅವರು ನನ್ನ ಕೈಯಲ್ಲಿ ತಮ್ಮ ಕೈಯಿಟ್ಟುಕೊಂಡಿದ್ದರು. ಅವರಿಗೆ ಸಶಕ್ತ ಭಾವ ಉಂಟುಮಾಡಲು ಒಬ್ಬರ ಬೆಂಬಲದ ಅಗತ್ಯವಿತ್ತು. ನರಸಿಂಹರಾವ್ ಮತ್ತು ರಾಜೀವ್‌ಗಾಂಧಿಯವರ ಉಪಸ್ಥಿತಿಯಲ್ಲಿ ಸ್ವಾಮೀಜಿಯವರು ಅಲ್ಲಿದ್ದರು. ಸ್ವಾಮೀಜಿಯವರು ಮಾತನಾಡಿದರು; ಅವರು ಆಡಿದ ಮೊಟ್ಟ ಮೊದಲ ವಾಕ್ಯವೆಂದರೆ– 'The Gospel of Sri Ramakrishna ನನ್ನ ಜೀವನವನ್ನು ಬದಲಾಯಿಸಿತು.' ಬಳಿಕ ಅವರು ದೇಶದ ಐಕಮತ್ಯದ ಕುರಿತು ವಿವರವಾಗಿ ಮಾತನಾಡಿದರು. ರಾಯಭಾರಿಗಳು, ಹಿರಿಯ ಸರ್ಕಾರಿ ಅಧಿಕಾರಿಗಳು, ರಾಜ್ಯಪಾಲರು ಗಳಿಂದ ಸಭಾಂಗಣವು ತುಂಬಿತ್ತು; ಬಂಗಾಳದ ರಾಜ್ಯಪಾಲರೂ ನಮ್ಮ ಹಿಂದೆ ಇದ್ದರು. ಅದೊಂದು ರೋಮಾಂಚಕ ಅನುಭವವಾಗಿತ್ತು. ಮಾನವಕುಲದ ಉಳಿವಿಗೆ ರಾಮಕೃಷ್ಣ ವೇದಾಂತವೇ ಮಾರ್ಗ ಮತ್ತು ರಾಮಕೃಷ್ಣರಿಗೆ ತೆರೆದುಕೊಳ್ಳದಿದ್ದರೆ, ಆತ್ಮಹತ್ಯೆಯೇ ಗತಿಯೆಂದು ಎಲ್ಲರಿಗೂ ಅನಿಸಿತು. ದೆಹಲಿಯ ಮತ್ತು ಭಾರತ ಸರ್ಕಾರದ ಶ್ರೇಷ್ಠರೆಲ್ಲರನ್ನೂ ಸ್ವಾಮೀಜಿಯ ಮಾತು ಕೇಳಲೆಂದೇ ಆಹ್ವಾನಿಸಲಾಗಿತ್ತು. ಅವರ ಮುಖದಿಂದ ಹರಿದುಬರುತ್ತಿದ್ದುದು ರಾಮಕೃಷ್ಣ ಪ್ರಜ್ಞಾಸಾಗರ. ಎಂದಿನಂತೆ, ಮೊದಲ ನಾಲ್ಕೈದು ವಾಕ್ಯಗಳ ಬಳಿಕ ಸ್ವಾಮೀಜಿಯವರು ರಾಮಕೃಷ್ಣ ಪ್ರಜ್ಞೆಯ ಬಲದ ಮೇಲೆ ತೇಲುತ್ತಿದ್ದರು. ಅವರನ್ನು ಆಯ್ಕೆ ಮಾಡಿದ ಠಾಕೂರರು ದೈವೀ ಕೃಪೆಗೆ ಪಾತ್ರರು.

ಬಾಲಕ ಶಂಕರನ್‌ಅನ್ನು ಸ್ವಾಮಿ ಸಿದ್ಧೇಶ್ವರಾನಂದಜಿಯವರು ಸ್ವಾಮಿ ಶಿವಾನಂದಜಿ ಮಹಾರಾಜ್‌ರವರ ಬಳಿ ಕರೆದೊಯ್ದರು. ಅಲ್ಲಿ ಅವರು ಠಾಕೂರರ ಮಕ್ಕಳ ಕೃಪೆಯನ್ನು ಅನುಭವಿಸಿದರು– ಅದು ಸ್ವರ್ಗದಿಂದವತರಿಸಿದ ಕೃಪೆಯಾಗಿತ್ತು. ಅವರು ಬೇಲೂರು ಮಠದಿಂದ ಬ್ರಹ್ಮಚರ್ಯಕ್ಕಾಗಿ ಬಂದು ಸರಗಾಚಿಗೆ ಧಾವಿಸಿದರು. ಒಮ್ಮೆ ನಾನು ಅವರನ್ನು ಆತ್ಮೀಯವಾಗಿ ಕೇಳಿದ್ದೆ– "ಮಹಾರಾಜ್, ನಿಮ್ಮ ಶಕ್ತಿಯ ಮೂಲವೇನು? ನೀವು ಹೇಗೆ

ಅಷ್ಟು ಪ್ರಭಾವಶಾಲಿಯಾಗಿ ಮಾತನಾಡುತ್ತೀರಿ ಮತ್ತು ಜನರನ್ನು ಮುಟ್ಟುತ್ತೀರಿ?" ಅವರು ಹೇಳಿದರು, "ನೋಡು, ನಾನು ಸ್ವಾಮಿ ಅಖಂಡಾನಂದರನ್ನು ಕಾಣಲು ಹೋದೆ." ನಾನು ಅವರಿಗೆ ಹೇಳಿದೆ, 'ಮಹಾರಾಜ್, ನಾನು ಸ್ವಾಮೀಜಿಯವರನ್ನು ಕಂಡಿಲ್ಲ. ಆದರೆ ನೀವು ಸ್ವಾಮೀಜಿಯವರಿಗೆ ಅತ್ಯಂತ ಪ್ರೀತಿಯವರು. ನೀವು ನನ್ನ ತಲೆಯನ್ನು ಸ್ಪರ್ಶಿಸಿದರೆ, ನೀವು ಆಶೀರ್ವದಿಸಿದರೆ, ನಾನು ಸ್ವಾಮೀಜಿಯವರ ಶಕ್ತಿಯನ್ನು ಪಡೆಯುವೆ.' ಸ್ವಾಮಿ ಅಖಂಡಾನಂದರು ಆತನನ್ನು ಹೃತ್ಪೂರ್ವಕವಾಗಿ ಆಶೀರ್ವದಿಸಿದರು. ಮೂರು ದಿನಗಳ ಕಾಲ ಅವರು ಚಹದ ಸಮಯದಲ್ಲಿ ತನ್ನ ಕುರ್ಚಿ(ಆಸನ)ಯಂತಹುದೇ ಕುರ್ಚಿಯ ಮೇಲೆ ತಮ್ಮ ಸಮೀಪದಲ್ಲಿಯೇ ಆ ಹುಡುಗನನ್ನು ಕೂರಿಸುತ್ತಿದ್ದರು ಮತ್ತು ತನಗೆ ಬಡಿಸುವಂತಹುದೇ ತಟ್ಟೆ ಲೋಟಗಳಲ್ಲಿ, ಅದೇ ಪೂಜ್ಯಭಾವದಿಂದ, ಅದೇ ರೀತಿಯಲ್ಲಿ ಶಂಕರನ್‌ಗೂ ಬಡಿಸುವಂತೆ ಉಳಿದ ಸನ್ಯಾಸಿಗಳನ್ನು ಕೇಳಿದರು. ಮಹಾರಾಜ್‌ಗೆ (ಸ್ವಾಮೀಜಿಗೆ) ಮೆಚ್ಚುಗೆಯಾದರೂ ಸ್ವಲ್ಪ ಹಿಂಜರಿಕೆಯಾಯಿತು. ಅದನ್ನು ಕಂಡು ಸ್ವಾಮಿ ಅಖಂಡಾನಂದಜಿಯವರು ತನ್ನ ಬಳಿಯೇ ಕೂರುವಂತೆ ತಿಳಿಸಿದರು. ಸ್ವಾಮೀಜಿಯವರ ಕೆಲಸದ ಯಶಸ್ಸು ಈ ಹುಡುಗನಲ್ಲಿತ್ತೆಂದು ಅವರಿಗೆ ತಿಳಿದಿತ್ತು. ಮೂರು ದಿನಗಳ ಬಳಿಕ ರಂಗನಾಥಾನಂದಜಿಯವರು ಹಿಂತಿರುಗಿ ಬಂದಾಗ, ಅವರ ಬದುಕು ಬೇಗ ಬದಲಾಗಲಾರಂಭಿಸಿತು. ತನ್ನ ಕೆಲಸಗಳ ಮಧ್ಯೆ ಸ್ವಾಮೀಜಿಯವರ ಪುಸ್ತಕಗಳನ್ನು ಓದಲಾರಂಭಿಸಿದರು ಮತ್ತು ಒಂದು ರೀತಿಯ ಆವೇಶ ಮತ್ತು ಕಸುವು ಅವರಲ್ಲಿ ಪ್ರವೇಶಿಸಿದಂತಾಯಿತು. ಅವರು ಸ್ವಾಮೀಜಿಯವರ ಪುಸ್ತಕಗಳನ್ನು ಸತತವಾಗಿ ಓದಿದರು ಮತ್ತು ಅವರ ಭವಿಷ್ಯದ ಮಾರ್ಗ ತೆರೆದುಕೊಂಡಿತು, ಕಣ್ತೆರೆಯಲಾರಂಭಿಸಿದವು. ಆದರೆ ಅತ್ಯಂತ ತಳದ ತಳಪಾಲು– ಶ್ರೀ ರಾಮಕೃಷ್ಣ– ಹಾಗೆಯೇ ಉಳಿಯಿತು.

### ಮೊದಲ ಪ್ರಮುಖ ಸ್ಥಾನ

ಅವರ ಮೊದಲ ಪೋಸ್ಟಿಂಗ್ ರಂಗೂನಿನಲ್ಲಾಗಿತ್ತು. ದ್ವಿತೀಯ ಮಹಾಯುದ್ಧದ ಬಳಿಕ ಅಲ್ಲಿ ಆದ ಭಯಂಕರ ಅನಾಹುತದಿಂದ ಅವರು ರಂಗೂನ್‌ನಿಂದ ಕಲ್ಕತ್ತಾಗೆ ನಡೆದು ಬರುವಂತಾಯಿತು. ಅದು ಭಯಂಕರವಾಗಿತ್ತು. ಅವರ ಆರೋಗ್ಯ ಕೆಟ್ಟಿತು. ಅವರು ೩೬ ಕೆ.ಜಿ.ಗಳಷ್ಟು ತೂಕ ಕಳೆದುಕೊಂಡರು. ತಕ್ಷಣ ಅವರನ್ನು ಕಂಖಾಲ್‌ಗೆ ವರ್ಗಾಯಿಸಲಾಯಿತು. ಠಾಕೂರ್ ಅವರ ಜೀವವನ್ನು ಅವರಿಗೆ ಹಿಂತಿರುಗಿಸಿದರು. ನಂತರ ಅವರನ್ನು ಕರಾಚಿಗೆ ಕಳುಹಿಸಲಾಯಿತು. ಅಲ್ಲಿ ಐದು ವರ್ಷಗಳಲ್ಲಿ ಅವರು ಬೀರಿದ ಪ್ರಭಾವ ಎಷ್ಟು ಗಾಢವೆಂದರೆ, ಅವರ ಮಾತನ್ನು ಅಂದು ಕೇಳಿದ ಜನರು ಇಂದಿಗೂ ಅವರನ್ನು ಮರೆತಿಲ್ಲ. ಏಕೆಂದರೆ ಅವರ ಮಾತು ಗಳಲ್ಲಿ ಅಂತಹ ಕಸುವಿತ್ತು. ಅದು ಇತರರನ್ನು ಸಂಪೂರ್ಣವಾಗಿ ಬದಲಾಯಿಸಬಲ್ಲ ಕಸುವು. ಅನಂತರ ಅವರು ದೆಹಲಿಗೆ ಬಂದರು. ದೆಹಲಿಯಲ್ಲವರು ಭಾರತೇಶ್ ರಾಜಗುರು– ಭಾರತದ ಆಧ್ಯಾತ್ಮಿಕ ರಾಜಗುರುವಾಗಿ ಹೊರಹೊಮ್ಮಿದರು. ಕಾಲ ಪಕ್ವವಾಗಿತ್ತು. ಪಂಡಿತ ಜವಹರಲಾಲ್ ನೆಹ್ರೂ ಮತ್ತು ಲಕ್ಷ್ಮೀ ಮೆನನ್ ಸೇರಿದಂತೆ ಉನ್ನತ ರಾಷ್ಟ್ರನಾಯಕರು, ರಾಜಕಾರಣಿಗಳು, ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು ಮಹಾರಾಜ್ ಬಳಿ ಆಗಾಗ ಬರುತ್ತಿದ್ದರು. ಅವರಲ್ಲಿ ಠಾಕೂರರ ಅಸ್ತಿತ್ವವನ್ನು ಕಾಣುತ್ತಿದ್ದರು. ದೆಹಲಿಯಿಂದ ಅವರನ್ನು ಭಾರತದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ರಾಯಭಾರಿಯನ್ನಾಗಿ ಆಯ್ಕೆ ಮಾಡಲಾಯಿತು. ನಂತರ ಅವರು ಕೆಲಕಾಲ ಕಲ್ಕತ್ತ ಸಾಂಸ್ಕೃತಿಕ ಸಂಸ್ಥೆ, ಗೋಲ್‌ಪಾರ್ಕ್‌ಗೆ ಬಂದರು. ಅನಂತರ ಸ್ವಾಮೀಜಿ ಅವರ ಪ್ರಪಂಚಪರ್ಯಟನೆಯ ಮೊದಲ ಸುತ್ತನ್ನು ಆರಂಭಿಸಿದರು– ಸಿಂಗಪುರ್, ಮಲೇಷಿಯಾ, ಬ್ಯಾಂಕಾಕ್, ಜಪಾನ್, ಸಿಡ್ನಿ, ಮೆಲ್‌ಬರ್ನ್, ಅಲ್ಲಿಂದ ಲಾಸ್ ಏಂಜಲೀಸ್ ಮತ್ತು ಪೂರ್ಣ ಅಮೆರಿಕ ಖಂಡ, ಅಲ್ಲಿಂದ ಲಂಡನ್, ಜರ್ಮನಿ, ಫ್ರಾನ್ಸ್, ಆಮ್ಸ್ಟರ್‌ಡಾಂ ಮತ್ತೆ ರಷ್ಯಾ. ಮಾಸ್ಕೊ ವಿಶ್ವವಿದ್ಯಾನಿಲಯದಲ್ಲಿ 'ವಿವೇಕಾನಂದರ ಮಾನವೀಯತತ್ತ್ವ' ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದರು. ರಷ್ಯದಲ್ಲಿ ವಿವೇಕಾನಂದ–ವೇದಾಂತದ

ಘಂಟಾರವ ರಿಂಗಣಿಸಿದುದು ಅದೇ ಮೊದಲು ಎಂದೆನಿಸುತ್ತದೆ. ಮನುಷ್ಯ ದಿವ್ಯನಾಗಬೇಕು, ಇಲ್ಲವಾದರೆ ಅಕ್ಷರಶಃ ಆಧ್ಯಾತ್ಮರಹಿತ ಸಂಸ್ಕೃತಿಯೊಂದು ಕುಸಿಯುತ್ತದೆ ಎಂದು ತಿಳಿಸಿತು.

ಕಲ್ಕತ್ತದಿಂದ ಅವರು ಹೈದರಾಬಾದಿಗೆ ಬಂದರು. ನಾವು ಅವರಲ್ಲಿ ಉತ್ಕೃಷ್ಟ ಸಂಘಟನಾ ನಾಯಕನನ್ನು ಕಂಡೆವು. ನಿರಹಂಕಾರದ ಅವರು ಮುಂದಾಗುವುದನ್ನು ಮುಂಗಾಣಬಲ್ಲ, ಕನಸುಗಳು, ಅಂತರ್ಬೋಧೆಯ, ಅನುಭಾವಿಯಾಗಿದ್ದರು. ಆಂಧ್ರದಲ್ಲಿ ರಾಮಕೃಷ್ಣ ಆಂದೋಲನ ಮೊದಲ ಬಾರಿ ಆರಂಭವಾಗಿದ್ದ ಬೇಗಂ ಪೇಟ್‌ನ ಸಣ್ಣ ಮನೆಯೊಂದನ್ನು ಅವರಿಗೆ ಕೊಡಲಾಯಿತು. ಅನತಿ ಕಾಲದಲ್ಲೇ ಅವರು ಸಿಕಂದರಾಬಾದ್‌ನ ದೊಡ್ಡ ಆಶ್ರಮಕ್ಕೆ ಬದಲಾಯಿಸಿದರು. ಅಲ್ಲಿ ಎಂಟು ವರ್ಷಗಳ ಕಾಲ ಇದ್ದು ಹೈದರಾಬಾದ್‌ಗೆ ಹಿಂತಿರುಗಿದರು. ಈ ವೇಳೆಗೆ ಅವರ ಉಪನ್ಯಾಸಗಳು ಮತ್ತು ಚಟುವಟಿಕೆಗಳು ಹೈದರಾಬಾದ್–ಸಿಕಂದರಾಬಾದ್‌ನ ಅರ್ಧದಷ್ಟು ಜನರನ್ನು ರಾಮಕೃಷ್ಣ ಪಂಥದೆಡೆ ಸೆಳೆದಿದ್ದವು. ೧೯೮೧ರ ಫೆಬ್ರವರಿ ೬ರಂದು ಹೈದರಾಬಾದ್‌ನ ಭವ್ಯ ಹೊಸ ಕೇಂದ್ರ ಆರಂಭವಾಯಿತು. ಠಾಕೂರರ ಹೊಸ ದೇವಸ್ಥನಕ್ಕೆ ಬೆನ್ನುಮುರಿ ದುಡಿತ ಮತ್ತು ಮನೆಯಿಂದ ಮನೆಗೆ ಹೋಗಿ ಧನಸಂಗ್ರಹದ ಮೂಲಕ ಎಂಬುದನ್ನು ಹೇಳಬೇಕಾಗಿಲ್ಲ. ಅದೃಷ್ಟವಶಾತ್ ಅಂದಿನಿಂದ ದೀರ್ಘಕಾಲದವರೆಗೆ ಅವರೊಂದಿಗೆ ಇರುವ ಸದವಕಾಶ ನನಗೆ ದೊರಕಿತು. ನಂತರ ಅವರು ವರ್ಷಕ್ಕೆ ಹತ್ತು ವಾರಗಳಷ್ಟು ಕಾಲದ ಪ್ರಪಂಚದ ಸುತ್ತಾಟವನ್ನು ಹೊಸಕೇಂದ್ರದಿಂದ ಪುನಃ ಆರಂಭಿಸಿದರು. ಪ್ರಪಂಚದ ಮೇಲೆಲ್ಲ ತಿರುಗಾಟ–ಬರಿಯ ಒಂದು ಸೂಟ್‌ಕೇಸ್ ಒಂದಿಗೆ! ಅವರು ಯಾವಾಗಲೂ ಸರಳರೂ, ಶುದ್ಧರೂ ಆಗಿರುತ್ತಿದ್ದರು. ನಾಲ್ಕು ಪಂಚೆ, ನಾಲ್ಕು ಅಂಗಿ, ಎರಡು ಬನಿಯನ್, ಔಷಧಗಳು ತುಂಬಿದ ಒಂದು ಸಣ್ಣ ಚೀಲ, ಒಂದು ದೊಡ್ಡ ಲಾಂಗ್ ಕೋಟು ಒಂದು ಟೋಪಿ ಇವಿಷ್ಟನ್ನು ನಾವೇ ಪ್ಯಾಕ್ ಮಾಡುತ್ತಿದೆವು. ಒಮ್ಮೆ ಪ್ರವಾಸವನ್ನು ಆರಂಭಿಸುವ ಮೊದಲು ಸ್ವಾಮೀಜಿ ಹೇಳಿದರು. 'ಈ ಲಾಂಗ್‌ಕೋಟು ತುಂಬ ಭಾರ.' 'ಅದನ್ನೇಕೆ ಸುಮ್ಮನೆ ಒಯ್ಯುತ್ತೀರಿ?' ಎಂದು ನಾವು ಕೇಳಿದೆವು. 'ನಿಮಗೆ ತಿಳಿಯದೆ? ಆಮ್ಸ್ಟರ್‌ಡಾಂ ಮತ್ತು ಬಾಸ್ಟನ್‌ನಲ್ಲಿ ತುಂಬ ಹಿಮ ಸುರಿಯುತ್ತದೆ' ಎಂದು ಅವರು ಉತ್ತರಿಸಿದರು. ಆ ಪ್ರವಾಸದಲ್ಲಿ ವಿಪರೀತ ಹಿಮ ಸುರಿದೇ ಸುರಿಯಿತು. ಒಂದು ದೊಡ್ಡ ಕೋಟು ಮತ್ತು ಒಂದು ಸಣ್ಣ ಚೀಲ ಪ್ರಪಂಚದ ಸುತ್ತ– ಅದೂ ಅಷ್ಟೊಂದು ಬಾರಿ! ನೀವು ಸಿಡ್ನಿ, ಚಿಕ್ಯಾಗೊ, ಸ್ಯಾನ್‌ಫ್ರಾನ್ಸಿಸ್ಕೋ, ಲಾಸ್ ಏಂಜಲೀಸ್ ಅಥವಾ ಫ್ರಾನ್ಸ್‌ಗೆ ಹೋದರೆ, ಇಂದಿಗೂ ಅಲ್ಲಿಯ ಜನರು ಅವರು ಹಿಂತಿರುಗಲೆಂದು ಹಾತೊರೆಯುತ್ತಾರೆ. ಆಮ್‌ಸ್ಟರ್‌ಡಾಂನಲ್ಲಿ ಭಕ್ತರು ನನ್ನ ಬಳಿ ಬಂದು (ಮೂರು ವರ್ಷ) ಸ್ವಾಮಿ ರಂಗನಾಥಾನಂದಜಿಯವರನ್ನು ಒಮ್ಮೆ ಕಾಣಲು ತಾವು ಹೇಗೆ ಕಂಬನಿ ಹರಿಸುತ್ತಿದ್ದೆವೆಂದು ಹೇಳಿದರು. "ನಾವು ರಾಮಕೃಷ್ಣರನ್ನು ಕಂಡಿಲ್ಲ. ಆದರೆ ಸ್ವಾಮಿ ರಂಗನಾಥಾನಂದಜೀಯವರನ್ನು ಕಂಡಿದ್ದೇವೆ. ನಾವು ಅವರಲ್ಲಿ ಠಾಕೂರರನ್ನು ಕಂಡಿದ್ದೇವೆ" ಎಂದರು.

ನಾನು ತಿಳಿಸಿದಂತೆ ಸ್ವಾಮಿ ರಂಗನಾಥಾನಂದರು ತನ್ನ ಜೀವನವನ್ನು ತುಂಬ ಸರಳವಾಗಿ ಆರಂಭಿಸಿದರು. ಆದರೆ ರಾಮಕೃಷ್ಣರು ಅವರ ಮೂಲಶಕ್ತಿ ಯಾಗಿದ್ದರು. ಅವರು ಮಾತೆಯ ಕುರಿತು ಮಾತನಾಡಿದುದು ತುಂಬ ಅಪರೂಪ. ಅವರು ಮಾತೆಯ ಕುರಿತು ಮಾತನಾಡಿದುದನ್ನು ನಾನು ಬಹಳ ಬಾರಿ ಕಂಡಿಲ್ಲ. ಆದರೆ, ಮಾತೆಯು ದುರ್ಗೆ ಮತ್ತು ಕಾಳಿಯೇ ಎಂದು ಅವರ ದೃಢವಿಶ್ವಾಸವಾಗಿತ್ತು. ಅವರು ಪರ ಸ್ತ್ರೀಯನ್ನು ದುರ್ಗೆ ಮತ್ತು ಕಾಳಿಯೆಂಬ ನೈಜಭಾವದಿಂದ ಗೌರವಿಸುತ್ತಿದ್ದರು. ಆದರೆ ಠಾಕೂರರೊಂದಿಗೆ ಅವರ ಸಂಬಂಧ ತುಂಬ ಗಹನವಾಗಿತ್ತು; ಅದು ವರ್ಣನೆಗೆ ನಿಲುಕದ್ದು.

ಒಮ್ಮೆ ಹೈದರಾಬಾದಿನ ಮಠದಲ್ಲಿ ಒಬ್ಬ ಕೆಲಸಗಾರನಿಗೆ ಸಂಬಂಧಿಸಿದಂತೆ ಒಂದು ಸಮಸ್ಯೆ ಉಂಟಾಯಿತು. ನಾನು ಅವರ ಬಳಿ ಹೋದೆ. ಆ ರಾತ್ರಿ ಮಹಾರಾಜರು ಆತಂಕದಿಂದ ಹೊರಳಾಡುತ್ತಿದ್ದರು. ನಾವು ಹೇಳಿದೆವು, "ಸ್ವಾಮೀಜಿ, ಆತಂಕ ಬೇಡ. ನಾವಿದ್ದೇವೆ, ಗೋಡೆ ಮಗುಚಿದರೆ ನಮ್ಮ ಮೇಲೆ ಬೀಳಲಿ." ಅವರು ಹೇಳಿದರು:

"ಹಾಗೇನು?" ನಾನು ಹೌದೆಂದೆ, ಸರಿ ಎಂದು ಅವರು ಸ್ವಲ್ಪ ಶಾಂತವಾದಂತೆ ಕಂಡರು. ನಾನು ಮರುದಿನ ಬೆಳಿಗ್ಗೆ ಅವರನ್ನು ನೋಡಲು ಹೋದೆ. ಅವರು ಇನ್ನೂ ಸ್ವಲ್ಪ ಚಿಂತೆಯಲ್ಲಿದ್ದರು. ಹೈದರಾಬಾದ್ ಮಠದ ದೇವಸ್ಥಾನಕ್ಕೆ ಅವರು ಹೋಗುತ್ತಿದ್ದುದು ಅಪರೂಪ. ಅಂದು ಅವರು ಹೇಳಿದರು: "ನಾನು ಠಾಕೂರರ ಬಳಿ ಹೋಗಿ, ಇಂದು ಎಲ್ಲವನ್ನೂ ಬಗೆಹರಿಸಲು ಹೇಳುತ್ತೇನೆ." ಸುಮಾರು ೭.೩೦ರ ಹೊತ್ತಿಗೆ ಅವರು ನೇರವಾಗಿ ದೇವಸ್ಥಾನಕ್ಕೆ ಹೋದರು. ನಾನು ದೇವಸ್ಥಾನದ ಬಾಗಿಲ ಬಳಿಯೇ ನಿಂತೆ. ನಾನು ಅವರನ್ನು ಹಿಂಬಾಲಿಸಲಿಲ್ಲ. ನನಗೆ ಹೋಗಲು ಧೈರ್ಯವಾಗಲಿಲ್ಲ. ಹೊರಕ್ಕೆ ಬಂದಾಗ ಅವರು ಹೇಳಿದರು "ನಾನು ಅವರಿಗೆ ಹೇಳಿದೆ. ನಾನು ಈಗ ಅಗತ್ಯವಿರುವುದನ್ನು ಮಾಡಲು ಹೇಳಿದೆ."

ಅರ್ಧ ಗಂಟೆಯೊಳಗೆ ಆ ಕೆಲಸಗಾರ ಬಂದು, ಅವರ ಕಾಲಿಗೆ ಬಿದ್ದ. ಕೇಸನ್ನು ಹಿಂದಕ್ಕೆ ತೆಗೆದುಕೊಂಡು ಕ್ಷಮೆ ಯಾಚಿಸಿದ. ಎರಡು ಗಂಟೆಗಳಲ್ಲಿ ಇಡೀ ಪ್ರಕರಣವೇ ಮುಗಿದಿತ್ತು. ನಾನು ನಿಶ್ಚೇಷ್ಟಿತನಾದೆ! ನಾನು ಪವಾಡ ನಡೆದದ್ದನ್ನು ಕಂಡೆ! ಅವರ ಬಳಿ ಬಂದು ಹೇಳಿದೆ, "ನೀವು ಸ್ವಾಮಿ ಲೋಕೇಶ್ವರಾನಂದರಂತೆ. ಠಾಕೂರರೊಂದಿಗೆ ನಿಮ್ಮಿಬ್ಬರಿಗೂ ವಿಶಿಷ್ಟ ಸಂಬಂದವಿದೆ. ಆದರೆ, ನೀವು ಬಚ್ಚಿಡುತ್ತಿದ್ದೀರ." ಇದು ಅವರು ಯಾವಾಗಲೂ ಮುಚ್ಚಿಡುತ್ತಿದ್ದ ರಾಮಕೃಷ್ಣರೊಂದಿಗಿನ 'ತಂದೆ-ಮಗನ' ಸಂಬಂಧ ಎಂಬುದನ್ನು ನಾನು ಅರಿತೆ. ಠಾಕೂರರ ಹುಟ್ಟಿದ ದಿನದಂದು ಅವರು ದೇವಸ್ಥಾನಕ್ಕೆ ಹೋಗುತ್ತಿರಲಿಲ್ಲ. ಅಂದು ಬೆಳಿಗ್ಗೆ ಮೊದಲು ಮಂಗಳಾರತಿಯಾಗುತ್ತಿತ್ತು. ನಂತರ ಮಂತ್ರಪಠಣ, ಭಜನೆ ಮತ್ತೆ The Gospelನಿಂದ ಓದುವುದು. ರಾಮಕೃಷ್ಣರ ಮಕ್ಕಳಿಗೆ ಅದು ಅತಿ ಮಹತ್ತ್ವದ ದಿನ. ಆದರೆ ಮಹಾರಾಜ್ ಅವರು ಹೋಗುತ್ತಿರಲಿಲ್ಲ. ಆದರೆ ಒಬ್ಬ ಬ್ರಹ್ಮಚಾರಿಯನ್ನು ದೇವಸ್ಥಾನದ ಬಳಿ ನಿಲ್ಲಿಸಿರುತ್ತಿದ್ದರು. ಪೂಜೆಯ ಮುಕ್ತಾಯವಾದೊಡನೆ ಆತನು ನನ್ನ ಬಳಿ ಬಂದು "ಮಹಾರಾಜ್ ಕರೆಯುತ್ತಿದ್ದಾರೆ" ಎನ್ನುತ್ತಿದ್ದ, ನಾನು ಅಲ್ಲಿಗೆ ಧಾವಿಸುತ್ತಿದ್ದೆ. ಬೆಳಿಗ್ಗೆ ಬೇಗನೆದ್ದು ಮಹಾರಾಜ್ ಅಲ್ಲಿ ಚೆನ್ನಾಗಿ ದಿರಿಸು ಧರಿಸಿ- ನಗುನಗುತ್ತ, ಪ್ರಕಾಶ ಮಾನರಾಗಿ, ಹಾಸಿಗೆಯ ಮೇಲೆ ಕುಳಿತಿರುತ್ತಿದ್ದರು. ನನ್ನನ್ನು ನೋಡಿ 'ಬಾ, ಬಾ' ಎಂದು, ನನ್ನನ್ನು ತುಂಬ ಹೊತ್ತು ಆಲಿಂಗಿಸುತ್ತಿದ್ದರು. ವಚನಾತೀತವಾದ ಪೂಜ್ಯ ಭಾವದೊಂದಿಗೆ ನಾನು ಅವರ ಕಾಲಿಗೆ ಬೀಳುತ್ತಿದ್ದೆ. ಠಾಕೂರರ ಆಚರಣೆಗಳು ಎಷ್ಟು ಸರಳ, ಎಷ್ಟು ಗಹನ! ಯಾವುದೇ ವಿಧಿ-ವಿಧಾನಗಳಿಲ್ಲದೆಯೇ ಅವರು ದೇವರೊಂದಿಗೆ ಹೇಗೆ ಸಂಪರ್ಕದಲ್ಲಿರುತ್ತಿದ್ದರು. ದಿಙ್ಮೂಢಗೊಳಿಸುವಂತಹ ಜ್ಞಾನ, ಸುಂದರ ಮತ್ತು ಪ್ರೀತ್ಯರ್ಹರಾದ ಅವರಲ್ಲಿ ಠಾಕೂರರು ಸಚೇತನರಾಗಿದ್ದರು. ಈ ವಿದ್ಯಮಾನವನ್ನು ನಾವು ಅವರಲ್ಲಿ ಹಲವು ಬಾರಿ ಕಂಡಿದ್ದೇವೆ. ಒಂದು ದಿನ, ನಾನು ಅವರೊಂದಿಗೆ, ಹಲವು ವಿಷಯಗಳನ್ನು ಚರ್ಚಿಸುತ್ತಿದ್ದಾಗ, ಅವರು ನೇರವಾಗಿ ಹೇಳಿದರು: 'ನಾನು ಠಾಕೂರರಿಗೆ ಸೇರಿದವನು, ನೀನು ಸ್ವಾಮೀಜಿಗೆ ಸೇರಿದವನು.' ಆದುದರಿಂದ ವಾದವಾಗಲಿಲ್ಲ. ಇದರರ್ಥ ನೀನು ನನ್ನೊಡನೆ ವಾದಿಸಬೇಡ ಅಥವಾ ನಾನು ನಿನ್ನೊಂದಿಗೆ ವಾದಿಸುವುದಿಲ್ಲ. ನಾನು ಸ್ವಾಮೀಜಿಯ ಬಗ್ಗೆ ಮಾತನಾಡುತ್ತಿದ್ದಾಗ ಅವರು ಶಾಂತವಾಗಿ ಗಮನವಿಟ್ಟು ಕೇಳುತ್ತಿದ್ದರು. ಆದರೆ ಅವರು ಠಾಕೂರರ ಬಗ್ಗೆ ಮಾತನಾಡುವಾಗ, ಅದು ಸ್ವಲ್ಪವೇ ಆದರೂ, ಅವರ ಮುಖವು ಕೆಂಪೇರಿದುದನ್ನು ಕಾಣಬಹುದಿತ್ತು. ಅವರ ಬದುಕಿನಲ್ಲಿ ಯಾವುದೋ ಸಾಕ್ಷಾತ್ಕಾರವಾಗುತ್ತಿತ್ತು. ಅದು ಅತಿ ಅಪರೂಪದ ಬದುಕಲ್ಲವೆ? ಸ್ವಾಮಿ ರಂಗನಾಥಾನಂದರ ಜೀವನ ಶ್ರೀ ರಾಮಕೃಷ್ಣರೆಂಬ ಹೂದೋಟದಲ್ಲಿ ಅರಳಿದ ಅತ್ಯುತ್ಕೃಷ್ಟ ಹೂಗಳಲ್ಲಿ ಒಂದು. ಆ ಹೂವು ಪವಾಡಸದೃಶವಾದ ಹೂವು, ಸ್ವಾಮಿ ಅದ್ಭುತಾನಂದರ ಮಾತಿನಲ್ಲಿ- ಸೊನ್ನೆಯಿಂದ ಸರ್ವಸ್ವಕ್ಕೆ!

## ಅವರ ಭಾಷೆ

ಅವರ ಭಾಷೆ ತುಂಬ ಸೊಗಸಿನದೂ, ಎತ್ತರಿಸುವಂತಹುದೂ ಆಗಿತ್ತು. ಅವರು ಮಗುವಾಗಿದ್ದಾಗ ಅವರ ತಾಯಿ ಆಶೀರ್ವದಿಸುತ್ತಿದ್ದರಂತೆ– "ನಿನ್ನ ನಾಲಗೆಯನ್ನು ಅಪಶಬ್ದಗಳಿಗೆ ಬಳಸಬೇಡ. ನಿನ್ನ ನಾಲಗೆಯ ಮೇಲೆ ದೇವಿ ಸರಸ್ವತಿ ನೆಲೆಸಿದ್ದಾಳೆ." ಇದು ಒಂದು ತಿರುವಿನಕ್ಷಣವಾಗಿತ್ತು. ಅವರು ತಾಯಿಯ ಮಾತುಗಳನ್ನು ಎಂದೂ ಮರೆಯಲಿಲ್ಲ ಮತ್ತು ಅದನ್ನು ನಮ್ಮ ಬಳಿ ಹಲವು ಬಾರಿ ಹೇಳುತ್ತಿದ್ದರು. ಅವರ ಮಾತು ನಾಲಗೆಯ ಸಂಪೂರ್ಣ ನಿಯಂತ್ರಣದಲ್ಲಿತ್ತು. ಅವರಿಂದ ನಾವು ಕೇಳಿದ ವಾಕ್ಯ ವಾಕ್ಯದಲ್ಲಿಯೂ ವೇದಾಂತಸತ್ತ್ವದ ಘನತೆ ಮತ್ತು ಔನ್ನತ್ಯ ಇರುತ್ತಿತ್ತು. ಆಂಧ್ರದ ನಮ್ಮ ಗ್ರಾಮೀಣ ಕೇಂದ್ರಗಳಿಂದ ಹಲವು ಸಂದರ್ಭಗಳಲ್ಲಿ ಅವರಿಗೆ ಠಾಕೂರರ ಚಿತ್ರವಿರುವ ಸರಳ ಆಹ್ವಾನಪತ್ರಿಕೆಗಳು ಬರುತ್ತಿದ್ದವು. ಅವರು ನನ್ನನ್ನು ಕರೆದು ಹೇಳುತ್ತಿದ್ದರು– 'ಈ ಆಹ್ವಾನಪತ್ರಿಕೆಗಳನ್ನು ನೋಡು. ನಾನು ಇವುಗಳನ್ನು ಕಸದ ಬುಟ್ಟಿಗೆ ಎಸೆಯಲಾರೆ." 'ಏಕೆ' ಎಂದು ನಾನು ಕೇಳುತ್ತಿದ್ದೆ. "ಕಾಣೆಯಾ? ಇಲ್ಲಿ ಠಾಕೂರರ ಚಿತ್ರವಿದೆ. ಅವನ್ನು ತೆಗೆದುಕೊಂಡು ಹೋಗು." ನಾನು ಅವುಗಳನ್ನು ಇನ್ನೆಲ್ಲೋ ಸಾಗಿಸುತ್ತಿದ್ದೆ. ಎಂತಹ ಪ್ರೀತಿ! ಎಂತಹ ಮೌಲ್ಯ! ಎಂತಹ ಆರಾಧನೆ!

ಪೂಜ್ಯ ಮಾತೆಯವರ ವಿಷಯದಲ್ಲಿಯೂ ಹಾಗೆಯೇ. ಅವರಿಗೆ ಎಲ್ಲೆಡೆಯ ತಾಯಂದಿರ ಬಗೆಗೆ ಆಳವಾದ ಪೂಜ್ಯಭಾವವಿತ್ತು. ಸ್ವಾಮಿ ರಂಗನಾಥಾನಂದರಲ್ಲಿ ಸ್ತ್ರೀಪರ ಹೋರಾಟಗಾರರನ್ನು, ವಿಶೇಷವಾಗಿ ಸಂಕಷ್ಟದಲ್ಲಿದ್ದಾಗ, ಕಂಡಿದ್ದೇವೆ. ಅವರಿಗೆ ಸ್ತ್ರೀಯರ ಬಗ್ಗೆ ಅಂತಹ ಗೌರವವಿತ್ತು. ಶಾರದಾಮಾತೆಯೇ ಅವರಿಗೆ ಅಂತಹ ಗುಣವನ್ನು ಕೊಟ್ಟಂತೆ ಕಾಣಿಸುತ್ತಿತ್ತು. ೧೯೬೫ರಲ್ಲಿ ಮಾಯಾವತಿಯಲ್ಲಿ ಅವರಿಗೆ ಶಾರದಾಮಾತೆಯ ಪ್ರಥಮ ದರ್ಶನವಾಯಿತು. ಅದನ್ನು ಅವರು ಒಂದು ಪೇಪರ್ ತುಣುಕಿನ ಮೇಲೆ ಬರೆದು, ದಾರವೊಂದಕ್ಕೆ ಕಟ್ಟಿ, ತನ್ನ ಹಳೆಯ ತಗಡಿನ ಡಬ್ಬದ ಮೂಲೆಯಲ್ಲಿಟ್ಟಿದ್ದರು. ೧೯೯೦ರ ಏಪ್ರಿಲ್‌ನಲ್ಲಿ ನನ್ನನ್ನು ಕರೆದು ಆ ಡಬ್ಬವನ್ನು ತೆಗೆಯಲು ಹೇಳಿದರು. ನಾನು ತೆಗೆದೆ. ಆ ಪೇಪರಿನ ತುಂಡನ್ನು ತೆರೆಯಲು ಹೇಳಿದರು. ಅದು ಒಣಗಿ ತರಗಾಗಿತ್ತು! "ಈಗ ಅದನ್ನು ಓದು" ಎಂದು ಹೇಳಿದರು. ಅವರಿಗೆ ಮಾಯಾವತಿಯಲ್ಲಿ ದೊರಕಿದ ಮಾತೆಯ ದರ್ಶನದ ಅದ್ಭುತ ವರ್ಣನೆ ಯಾಗಿತ್ತಿದು. ಅವರು ನನ್ನೆಡೆ ಪ್ರಶ್ನಾರ್ಥಕವಾಗಿ ನೋಡಿದರು. ನಾನು ದೃಢಪಡಿಸಿದೆ: "ಹೌದು, ಸರಿ, ಸ್ವಾಮೀಜಿ."

ಹೈದರಾಬಾದಿನಲ್ಲಿ ಒಮ್ಮೆ ಅವರು ಶಂಕರಾಚಾರ್ಯರ ಚಲನಚಿತ್ರವನ್ನು ನೋಡಲು ನಮ್ಮನ್ನು ಕರೆದುಕೊಂಡು ಹೋದರು. ಅದು ಉತ್ತಮ ಚಿತ್ರವಾಗಿತ್ತು. ಅದರಲ್ಲಿ ಒಂದು ಹೃದಯಸ್ಪರ್ಶಿ ದೃಶ್ಯವಿತ್ತು. ಆ ದೃಶ್ಯದಲ್ಲಿ ಶಂಕರಾಚಾರ್ಯರ ತಾಯಿಯು ಸನ್ಯಾಸ ತೆಗೆದುಕೊಳ್ಳಲು ಹೊರಟಿದ್ದ ಎಂಟು ವರ್ಷದ ಬಾಲಕ ಶಂಕರನಿಗೆ ವಿದಾಯ ಹೇಳುತ್ತಿದ್ದಳು. ಆಕೆಯ ಮುಖವು ಆ ಕ್ಷಣದಲ್ಲಿ ತೀವ್ರ ಉನ್ನತಭಾವದಲ್ಲಿತ್ತು. ಶಂಕರರು ಅಳುತ್ತಿದ್ದರು ಮತ್ತು ಅವರ ತಾಯಿಯೂ ಅಳುತ್ತಿದ್ದರು. ಅಂತಹ ಸಂದರ್ಭದಲ್ಲಿ ಸ್ವಾಮೀಜಿ ನನ್ನನ್ನು ತಮ್ಮ ಪಕ್ಕದಲ್ಲಿ ಕೂರಿಸಿಕೊಳ್ಳುತ್ತಿದ್ದರು. ಅಂದು ನನ್ನ ಕೈಯನ್ನು ಮೃದುವಾಗಿ ಸ್ಪರ್ಶಿಸಿ ಅವರು ಹೇಳಿದರು "ನೋಡು, ನಮ್ಮೆಲ್ಲರ ತಾಯಂದಿರೂ ಹೀಗೆಯೇ." ಅವರ ಕಣ್ಣುಗಳಲ್ಲಿ ನೀರನ್ನು ನೋಡಿದೆ.

ಯಾವುದೇ ಸ್ತ್ರೀ, ಪ್ರಪಂಚದಲ್ಲಿ ಎಲ್ಲೇ ಆಗಲಿ, ಕಷ್ಟ ಕ್ಲೇಶದಲ್ಲಿದ್ದರೆ ಶಂಕರ ಮಹಾರಾಜ್ ನೆರವಿಗೆ ಅಲ್ಲಿರುತ್ತಿದ್ದರು. ಇದು ನಾವು ಅವರ ಜೀವನದಲ್ಲಿ ಕಂಡ ಅತಿ ವಿಶಿಷ್ಟ ಲಕ್ಷಣ. ಶಾರದಾ ಮಠದ ಸನ್ಯಾಸಿನಿಯರಿಗೆ ಸಹಾಯ ಹಾಗೂ ಮಾರ್ಗದರ್ಶನಕ್ಕೆ ಅವರನ್ನು ಸೆಳೆದುದು ಇದೂ ಒಂದು ಕಾರಣವಿರಬಹುದು. ಸ್ತ್ರೀಯರ ಇಡಿಯ ಆಂದೋಲನಕ್ಕೆ ಅವರು ಪಿತೃಸಮಾನರಾದರು.

ಒಮ್ಮೆ ಸೀತಾ ಎಂಬ ಮಹಿಳೆಯೊಬ್ಬರು ಅಮ್ಲಾಪುರಂ(ಆಂಧ್ರ)ನಿಂದ ಬಂದರು. ಅವರು ಬಸ್ ನಿರ್ವಾಹಕರೊಬ್ಬರ ಹೆಂಡತಿ. ಆತ ಠಾಕೂರರ ಪರಮಭಕ್ತರಾಗಿದ್ದರು. ಆಕೆ ತನ್ನ ಆಭರಣಗಳನ್ನು ಮಾರಿದರು.

ಆಕೆಯ ಕೆಲವು ಸ್ನೇಹಿತೆಯರು ಸೇರಿದರು; ಅವರ ಆಭರಣಗಳನ್ನು ಮಾರಿ, ಅಮ್ಲಾಪುರಂನಲ್ಲಿ ಠಾಕೂರರ ದೇವಸ್ಥಾನವೊಂದನ್ನು ಕಟ್ಟಲು ರಾಮಕೃಷ್ಣ ಸಮಿತಿಗಾಗಿ ನಿವೇಶನವನ್ನು ಕೊಂಡರು. ಆದರೆ ಆಕೆ ತನ್ನ ಚಿನ್ನದ ಬಳೆಗಳನ್ನು ಮಾತ್ರವಲ್ಲದೆ, ರಾಜಮನೆತನದ ಸದಸ್ಯರ ಬಳೆಗಳನ್ನೂ ಮಾರಿದ್ದರೆಂಬುದು ಎಲ್ಲರಿಗೂ ತಿಳಿದುಬಂದಿತು. ಅವಳ ಮೇಲೆ ಆಪಾದನೆ ಹೊರಿಸಿ, ಆ ಆಭರಣಗಳ ಹಣವನ್ನು ಹಿಂತಿರುಗಿಸಲು ಅವರು ಹೇಳಿದರು. ಆಕೆ ಸ್ವಾಮಿ ರಂಗನಾಥಾನಂದಜಿಯವರ ಬಳಿ ಓಡಿಬಂದು, 'ನನ್ನನ್ನು ಕಾಪಾಡಿ, ನನಗೀಗ ಹಣದ ಅಗತ್ಯವಿದೆ' ಎಂದಳು. ನಾನು ಕಛೇರಿಯಲ್ಲಿದ್ದೆ. ಸ್ವಾಮೀಜಿ ನನ್ನನ್ನು ಕರೆದು, ಆಜ್ಞೆಯನ್ನೇ ಮಾಡಿದರು 'ಈಕೆ ಸೀತೆ. ಅವರೊಂದಿಗೆ ಮಾತನಾಡು. ಆಕೆಯ ಹಳ್ಳಿಗೆ ಹೋಗಿ ಆಕೆಗಾಗಿ ಧನಸಂಗ್ರಹ ಮಾಡು.' ನಾಲ್ಕೇ ವಾಕ್ಯಗಳು, ಅಲ್ಲಿಗೆ ಮುಗಿಯಿತು. ನಾನು ಆಕೆಯೊಂದಿಗೆ ಮಾತನಾಡಿದೆ, ಆಕೆಯ ಹಳ್ಳಿಗೆ ಹೋದೆ ಮತ್ತು ತಕ್ಕಷ್ಟು ಹಣವನ್ನು ಸಂಗ್ರಹಿಸಿದೆ. ಆಕೆ ಪುನಶ್ಚೇತನಗೊಂಡ ಆತ್ಮವಿಶ್ವಾಸದೊಂದಿಗೆ ಹಿಂತಿರುಗಿಬಂದಳು. ಕೆಲವು ವರ್ಷಗಳ ಬಳಿಕ ನಾನು ಅಲ್ಲಿಗೆ ಹೋದೆ ಮತ್ತು ಸ್ತಂಭೀಭೂತನಾದೆ. ಆ ವೇಳೆ ಸಾಕಷ್ಟು ಧನಸಂಗ್ರಹವಾಗಿತ್ತು ಮತ್ತು ಸೀತಾ ಅಧ್ಯಕ್ಷಳಾಗಿದ್ದಳು. ಅವರು ಠಾಕೂರರ ಸೊಗಸಾದ ದೇವಸ್ಥಾನವನ್ನು ಕಟ್ಟಿದ್ದರು. ರಂಗನಾಥಾನಂದಜಿಯವರು ಆ ದೇವಸ್ಥಾನವನ್ನು ನೋಡಬೇಕಾಗಿತ್ತು ಎಂದು ನನಗನ್ನಿಸುತ್ತದೆ. ಏಕೆಂದರೆ ಅದು ಅವರ ಮಾತುಗಳ ಅವರ ಚಿಂತನೆಯ ಸೃಷ್ಟಿಯಾಗಿತ್ತು.

ಹೈದರಾಬಾದಿನಲ್ಲಿ ನಾನು ಅವರೊಂದಿಗೆ ಎರಡು ಗಂಟೆಗಳು ಮಾತ ನಾಡುತ್ತಿದ್ದೆ ಮತ್ತು ಪ್ರತಿನಿತ್ಯ ಅವರೊಂದಿಗೆ ತಮಾಷೆಮಾಡುತ್ತಿದ್ದೆ. ಪ್ರಾಪಂಚಿಕ ಆಗು–ಹೋಗುಗಳ ಬಗ್ಗೆ ಅವರಿಗೆ ಹೇಳುವುದು ಮತ್ತು ತಮಾಷೆಯಿಂದಿರುವುದು ನನ್ನ ಕೆಲಸವಾಗಿತ್ತು. ಅವರು ಹೇಳುತ್ತಿದ್ದರು: "ನೋಡು, ನಾನು ಬೇಗ ತಿನ್ನಲಾರೆ. ನಾನು ನಿಧಾನವಾಗಿ ತಿನ್ನಬೇಕೆಂದು ನನ್ನ ವೈದ್ಯರು ನನಗೆ ಸೂಚಿಸಿದ್ದಾರೆ. ನೀನು ನನ್ನೊಂದಿಗಿರು." ಆರು ವರ್ಷಗಳ ಕಾಲ ನಾನು ಊಟದ ಹಾಲ್‌ನಲ್ಲಿ– ದಿನಕ್ಕೆ ಮೂರು ಬಾರಿ– ಅವರ ನಿಧಾನಭೋಜನ ಮುಗಿಯುವವರೆಗೂ ಅವರೊಂದಿಗಿರುತ್ತಿದ್ದೆ. ಆದರೆ ಪ್ರತಿನಿತ್ಯ ಜ್ಞಾನದ ವಿಷಯದಲ್ಲಿ ಅವರ ಗಗನವಿಹಾರ ನಡೆಯುತ್ತಿತ್ತು. ಯಾರೂ ಕೇಳದಿದ್ದಾಗ ಅವರು ಧರ್ಮ, ಇತಿಹಾಸ ಮತ್ತು ವಿಜ್ಞಾನದಂತಹ ಮಹದ್ವಿಷಯಗಳ ಮೇಲೆ ಸರಳವಾಗಿ ಹೇಳುತ್ತಿರುತ್ತಿದ್ದರು. ಅವರ ಪೂರ್ಣ ದೇಹವು ಜ್ಞಾನದೀಪ್ತವಾಗಿತ್ತು. ಸತ್ಯಂ ಜ್ಞಾನಮ್ ಅನಂತಮ್ ಬ್ರಹ್ಮಾ. ಋಷಿಯ ಹೃದಯದಿಂದ ಕೇಳಿದಾಗ ಆನಂದ ದೊರಕುತ್ತದೆ. ಅದು ಸ್ವಾಮಿ ರಂಗನಾಥಾನಂದಜೀ.

ಅವರೊಂದಿಗೆ ಕುಳಿತು ನಲ್ವತ್ತೈದು ನಿಮಿಷಗಳಷ್ಟೂ ಮಾತನಾಡುವುದು ನನ್ನ ಕರ್ತವ್ಯವಾಗಿತ್ತು. ಒಮ್ಮೆ ಅವರನ್ನು ಕೇಳಿದೆ. 'ಸ್ವಾಮಿ, ನೀವೇಕೆ ನಿಧಾನಗತಿಯಿಂದ ತಿನ್ನುತ್ತೀರಿ?' ಅವರೊಂದು ಅದ್ಭುತವಾದ ಉತ್ತರ ಕೊಟ್ಟರು: 'ನೋಡು, ನಾನೀ ದೇಹವನ್ನು ಠಾಕೂರರಿಗೆ ಕೊಟ್ಟು ಬಿಟ್ಟಿದ್ದೇನೆ. ಈ ದೇಹ ನನ್ನದಲ್ಲ. ನಾನು ಈ ಆಸ್ತಿಯನ್ನು ನೋಡಿಕೊಳ್ಳಬೇಕು.' ನನ್ನ ಮನಸ್ಸನ್ನು ಕಲಕಿತು. ಆದರೆ ಬಡವರ ಬಗೆಗೆ ಅವರಿಗೆ ಇನ್ನೂ ಹೆಚ್ಚಿನ ಗೌರವವಿತ್ತು. ಹೈದರಾಬಾದಿನಲ್ಲಿ ಅವರ ಅಡುಗೆಯ ಸುರೇನ್ ಮತ್ತು ಪಾತ್ರೆ ತೊಳೆಯುವ ನಾರಾಯಣ ಇದ್ದರು. ಮಹಾರಾಜ್ ಅವರು ಅವರನ್ನು ತನ್ನ ಎದುರುಗಡೆಯೇ ಇರುವ, ತನ್ನದೇ ತರಹದ ಕುರ್ಚಿಗಳಲ್ಲಿ ಕೂಡಿಸು ತ್ತಿದ್ದರು. ಊಟದ ಸಮಯದಲ್ಲಿ ಅವರನ್ನು ನೈಜಗೌರವದಿಂದ ಮಾತನಾಡಿಸುತ್ತಿದ್ದರು. ಬಡವರನ್ನು ಕುರಿತ ಇಂತಹ ನೈಜವಾದ, ಸದ್ಭಾವದ ಗೌರವ ತುಂಬ ಅಪರೂಪ.

ಮಹಾರಾಜ್‌ರಿಗೆ ಯಾವುದೇ ದೊಡ್ಡ ಮೊತ್ತ ದೊರಕಿದರೆ, ಅದನ್ನು ತಕ್ಷಣವೇ ನಾರಾಯಣಪುರ ಅಥವಾ ಪೂರಿಯಲ್ಲಿರುವ ಅಥವಾ ಇನ್ನಾವುದೇ ಬಡ ವಿದ್ಯಾರ್ಥಿಗಳು ಓದುತ್ತಿರುವ ನಮ್ಮ ಕೇಂದ್ರಕ್ಕೆ ವರ್ಗಾಯಿಸುತ್ತಿದ್ದರು. ಇಂತಹ ಕೇಂದ್ರಗಳ ದೊಡ್ಡಪಟ್ಟಿ ಅವರಲ್ಲಿತ್ತು. ಒಮ್ಮೆ ಬಿರ್ಲಾ ಬಂದಾಗ ಅವರು

ದೊಡ್ಡದೊಂದು ಮೊತ್ತವನ್ನು ಕೊಟ್ಟರು. ತಕ್ಷಣ ಅದನ್ನು ಪೂರಿ ಆಶ್ರಮಕ್ಕೆ ಕಳುಹಿಸುತ್ತ, 'ಅಲ್ಲಿ ನಮ್ಮ ಬುಡಕಟ್ಟಿನ ವಿದ್ಯಾರ್ಥಿಗಳಿದ್ದಾರೆ' ಎಂದರು. ಹೇಗೋ, ಇನ್ನೊಮ್ಮೆ ಹಣ ಬಂದರೆ, 'ಅದನ್ನು ಚಿರಾಪುಂಜಿಗೆ ಕಳುಹಿಸಿ' ಅಥವಾ 'ಬುಡಕಟ್ಟು ಹುಡುಗ–ಹುಡುಗಿಯರು ಕಲಿಯುತ್ತಿರುವ ಸಿಲ್ಚಾರ್ ಆಶ್ರಮಕ್ಕೆ ಕಳುಹಿಸಿ'– ಇವು ಅವರ ಸಾಮಾನ್ಯ ಉತ್ತರಗಳಾಗಿದ್ದುವು. ಬಡವರ ಬಗ್ಗೆ ಅವರಿಗೆ ಇಂತಹ ಪ್ರೀತಿ ಮತ್ತು ತಕ್ಷಣದ ಕಾಳಜಿ ಅವರಿಗಿತ್ತು. ಜ್ಞಾನಾಧಾರಿತವಾದ ರಾಜಗಾಂಭೀರ್ಯದ ಸಂತನ ಹಿಂದೆ ಆಳವಾದ ಬದ್ಧತೆಯ ವಿವೇಕಾನಂದರ ಆತ್ಮ ಮತ್ತು ಬಡವರಿಗಾಗಿ ಮೌನದ ಮಿಡಿತ ಹಾಗೂ ನೈಜ ಭಾವನೆಗಳಿದ್ದವು. ಎಂದಿಗೂ ಅಲುಗದ, ಕೊಚ್ಚಿಹೋಗದ ಕಲ್ಲಿನ ಮೇಲೆ ನಿಂತ ನಗರವೆಂದೆನ್ನಲಾಗುವ ರಾಮಕೃಷ್ಣ ಮಿಷನ್‌ನ ಅಸ್ತಿ ಭಾರ, ಇದು. ರಂಗನಾಥಾನಂದಜೀಯವರ ಜೀವನವು ಬಹು ದೊಡ್ಡದು. ಏಕೆಂದರೆ, ಅವರ ಜೀವನವು ದೀನರಿಗೆ ಮತ್ತು ಅಪಮಾನಿತರಿಗೆ ಸೇವೆ ಮಾಡುವ ಹಾಗೂ ಬಡವರ ಕಣ್ಣೀರೊರೆಸುವ ಆಧಾರದ ಮೇಲೆ ಕಟ್ಟಿದ್ದು.

ಅವರ ಬದುಕು ಪರಿಶುದ್ಧವಾಗಿತ್ತು. ಸರಳತಮವಾಗಿತ್ತು. ನಾನು ಹೇಳುತ್ತಿದ್ದೆ, 'ಸ್ವಾಮೀಜಿ, ನಾನು ತುಂಬ ತಿನ್ನುತ್ತಿದ್ದೇನೆ.' ಮುಗುಳ್ನಕ್ಕು ಅವರು ಹೇಳುತ್ತಿದ್ದರು, 'ತಿನ್ನುತ್ತಿರು, ಠಾಕೂರರು ನನಗೆ ಸಣ್ಣ ಹೊಟ್ಟೆಯನ್ನಿತ್ತಿದ್ದಾರೆ.' ದೂರದ ವಿಮಾನ ಪ್ರಯಾಣಗಳಲ್ಲಿ ನಾನು ಆಗೀಗ ಅವರ ಸಹಪ್ರಯಾಣಿಕನಾಗಿರುತ್ತಿದ್ದೆ. ನಮ್ಮ ಆಹಾರದ ತಟ್ಟೆಗಳು ಬಂದಾಗ ಅವರು ಹೇಳುತ್ತಿದ್ದರು– 'ಶ್ಯಾಮಲ್, ಎರಡೂ ತಟ್ಟೆಗಳ ಆ ಆಹಾರವನ್ನು ನೀನು ತೆಗೆದುಕೋ.' ಎರಡನ್ನೂ ಒಬ್ಬನೇ ತಿನ್ನುವುದು ಹೇಗೆ? ಅವರು ಮಗುವಿನಂತೆ ನಗುತ್ತಿದ್ದರು. ನಾನು ಅವರ ಪ್ರೀತಿಗೆ ಮಣಿದು ಇಬ್ಬರ ಊಟವನ್ನೂ ನುಂಗಬೇಕಿತ್ತು. ವರ್ಷಗಟ್ಟಲೆ ಅವರಿಗೆ ಆಹಾರದ ಬಗ್ಗೆ ಆಲೋಚನೆಯೇ ಇರಲಿಲ್ಲ. ಒಂದು ಚಿಕ್ಕ ಪ್ಲಾಸ್ಟಿಕ್ ಪೊಟ್ಟಣದಿಂದ ಅವರು ಅನ್ನ, ಬಾಳೆಕಾಯಿ, ಮೊಸರು ಮತ್ತು ಪಪಾಯವನ್ನು, ವಿಮಾನನಿಲ್ದಾಣದ ಜನಜಂಗುಳಿಯ ನಡುವೆಯೇ ತಿನ್ನುತ್ತಿದ್ದರು. ಅಹಂಕಾರವಿಲ್ಲ, ಆಹಾರದ ಅಗತ್ಯವಿಲ್ಲ, ವಿಶ್ರಾಂತಿ ಬೇಕಿಲ್ಲ, ಬರಿಯ ಠಾಕೂರರ ಉದ್ದೇಶದ ಬಗೆಗೆ ಅಗಾಧವಾದ ಪ್ರೀತಿ!

**ಸಂಸ್ಥೆಯ ಬಗ್ಗೆ ಪ್ರೀತಿ**

ಸಂಸ್ಥೆಯ ಬಗ್ಗೆ ಮಹಾರಾಜ್‌ರ ಪ್ರೀತಿ ಇನ್ನೂ ಆಳವಾಗಿತ್ತು– ರಾಮಕೃಷ್ಣ ಸಂಸ್ಥೆ ಅವರ ಜೀವವಾಗಿತ್ತು. ಯಾರೇ ಬ್ರಹ್ಮಚಾರಿಯಾಗಿರಲಿ ಅಥವಾ ಸಂಸ್ಥೆಯ ಯಾವುದೇ ಕೇಂದ್ರದ ಸನ್ಯಾಸಿಯಾಗಿರಲಿ, ಸ್ವಾಮೀಜಿ ಅವರೊಂದಿಗೆ ತಮ್ಮನ್ನು ಸಮೀಕರಿಸಿಕೊಳ್ಳುತ್ತಿದ್ದರು. ಅವರು ಯಾರೇ ಆಗಲಿ ಅಥವಾ ಯಾವುದೇ ಕೇಂದ್ರವಾಗಲಿ ಅವರ ಮನಸ್ಸನ್ನು ತಟ್ಟುತ್ತಿತ್ತು. ಆದರೆ ಅದಕ್ಕೆ ಬಾಹ್ಯ ಅಭಿವ್ಯಕ್ತಿ ಕೊಡುತ್ತಿರಲಿಲ್ಲ. ಹಾಗಿದ್ದರೂ ಸ್ವಾಮಿ ರಂಗನಾಥಾನಂದಜೀ ಯಾವುದೇ ಸಾಂಸ್ಥಿಕ ಮಿತಿಗಳನ್ನು ಮೀರಿದ್ದರು. ಅವರ ಗುರು ರಾಮಕೃಷ್ಣರು ಹಾಗೆ ಮೀರಿದ್ದರು. ಅವರ ಗುರು ಹಿಂದುವಾಗಲಿ, ಕ್ರಿಶ್ಚಿಯನ್ನಾಗಲಿ, ಮುಸ್ಲಿಮಾಗಲಿ ಆಗಿರಲಿಲ್ಲ. ಅವರು ಭಾರತೀಯನೂ ಆಗಿರಲಿಲ್ಲ. ಅವರ ಎರಡನೆಯ ಗುರು ಸ್ವಾಮೀಜಿಯೂ ಹಾಗೆಯೇ– ಅವರೂ ಹಿಂದುವೂ ಆಗಿರಲಿಲ್ಲ, ಕ್ರಿಶ್ಚಿಯನ್ನೂ ಅಲ್ಲ, ಮುಸ್ಲಿಮನೂ ಆಗಿರಲಿಲ್ಲ. ಅವರು ವಿಶ್ವಾತ್ಮನಾಗಿದ್ದರು. ಈ ಆಯಾಮಗಳು ರಂಗನಾಥಾನಂದರ ಅಂತರಂಗವನ್ನು ಸೇರಿದವು ಮತ್ತು ಅವರು ಅವುಗಳ ಮೇಲೆ ನೆಲೆಯಾದರು. ಬೃಹದಾರಣ್ಯಕ ಉಪನಿಷತ್ ಹೇಳುತ್ತದೆ:

> **ತತ್ರ ಪಿತಾ ಅಪಿತಾ ಭವತಿ, ಮಾತಾ ಅಮಾತಾ,**
> **ಲೋಕಃ ಅಲೋಕಃ, ವೇದಃ ಅವೇದಃ**
> **ದೇವಃ ಅದೇವಃ ಭವತಿ**

"ಅತ್ಯುನ್ನತ ಸಾಕ್ಷಾತ್ಕಾರವನ್ನು ಪಡೆದವನಿಗೆ ಅವನ ತಾಯಿ ಅವನ ತಾಯಿಯಾಗಿ ಉಳಿಯುವುದಿಲ್ಲ, ತಂದೆ ಅವನ ತಂದೆಯಾಗಿರುವುದಿಲ್ಲ, ಅವನ ಸಂದೇಶ ಅವನ ದೇಶವಾಗಿ ಉಳಿಯದು, ವೇದಗಳು ವೇದವಾಗಿರವು, ಅವನ ದೇವ–ದೇವತೆಗಳು ಅವನ ದೇವ–ದೇವತೆಗಳಲ್ಲ. ಆತ ವಿಶ್ವ ಕುಟುಂಬಿಯಾಗುತ್ತಾನೆ."

ಸ್ವಾಮೀಜಿಯವರ ಬೇರುಗಳು ಇಲ್ಲಿ ದಕ್ಷಿಣೇಶ್ವರದ ಬೇಲೂರುಮಠದಲ್ಲಿವೆ. ಆದರೆ ಅವರ ಚಿಂತನೆಯ ಟೊಂಗೆಗಳು ಪ್ರಪಂಚದ ಎಲ್ಲೆಡೆ, ಸಂತ ಬಾರಬರಾ, ನ್ಯೂಯಾರ್ಕ್, ಚಿಕಾಗೊವರೆಗೆ ಹರಡಿವೆ. ಎಂದಾದರೂ, ಯಾವುದಾದರೂ ಕೇಂದ್ರದಿಂದ ಯಾರಾದರೂ ತಮ್ಮ ಕೇಂದ್ರಕ್ಕೆ ಬಂದರೆ, ಆ ವ್ಯಕ್ತಿಯನ್ನು ಕೇಳುತ್ತಿದ್ದರು. 'ಕೇಂದ್ರದಲ್ಲಿ ಎಲ್ಲ ಹೇಗೆ ನಡೆಯುತ್ತಿದೆ?' 'ಸ್ವಾಮಿ ಎಲ್ಲಿಂದ ಬಂದಿದ್ದಾರೆ? ಸ್ಯಾನ್ ಫ್ರಾನ್ಸಿಸ್ಕೋ, ಲಂಡನ್ ಅಥವಾ ಚಿಕಾಗೋ?'

ಅವರಿಂದ ಜ್ಞಾನಪ್ರಭೆ ಹೊಮ್ಮುತ್ತಿತ್ತು. ಅವರು ಎಲ್ಲ ಬಗೆಯ ವೃತ್ತಿಪರರೊಂದಿಗೆ ಅಥವಾ ಆಡಳಿತಗಾರರೊಂದಿಗೆ ಸುಲಭವಾಗಿ ಬೆರೆಯಬಲ್ಲವರಾಗಿದ್ದರು. ಪ್ರತಿ ಉಪನ್ಯಾಸಕ್ಕೆ ಮೊದಲು ಅವರು ಮೌನವಾಗಿದ್ದು ಧ್ಯಾನಸ್ಥರಾಗಿರುತ್ತಿದ್ದರು. ಠಾಕೂರರು ಹೇಳುತ್ತಿದ್ದರು: ಜ್ಞಾನಿಯ ಧ್ಯಾನ ಎಂತಹುದೆಂದು ನಿಮಗೆ ತಿಳಿದಿದೆಯೆ? ಅದು ಪಕ್ಷಿಯೊಂದು ಸ್ವೇಚ್ಛೆಯಿಂದ ಗಗನದಲ್ಲಿ ಹಾರಾಡಿದಂತೆ, ಅದರ ಆನಂದ ಅಸೀಮವಾದುದು. ರಂಗನಾಥಾನಂದಜಿಯವರ ಭಾಷಣ ಅದನ್ನೇ ಹೋಲುತ್ತಿತ್ತು. ಮೈಕಿನ ಮುಂದೆ ನಿಂತು ಮಾತನಾಡಲು ಆರಂಭಿಸಿದರೆ ಸಾಕು, ಅನಂತ ಜ್ಞಾನಾಕಾಶದಲ್ಲಿ ಸ್ವತಂತ್ರವಾಗಿ ವಿಹರಿಸುತ್ತಿದ್ದರು ಮತ್ತು ಕೇಳುಗರನ್ನು ತನ್ನೊಂದಿಗೇ ಕರೆದೊಯ್ಯುತ್ತಿದ್ದರು. ಜ್ಞಾನವೇ ಆನಂದ. ಜ್ಞಾನ ನಮ್ಮನ್ನು ಅನಂತದೆಡೆಗೆ ಒಯ್ಯುತ್ತದೆ, ದೇವರೆಡೆಗೆ ಕರೆದೊಯ್ಯುತ್ತದೆ– ಸತ್ಯಂ ಜ್ಞಾನಂ ಅನಂತಂ ಬ್ರಹ್ಮಾ. ರಂಗನಾಥಾ ನಂದಜಿಯವರ ಭಾಷಣ ನಮಗೆ ಉನ್ನತ ಆಯಾಮದ ಇಣುಕುನೋಟ ಕೊಡುತ್ತಿತ್ತು, ಅವರು ನಮ್ಮನ್ನು ಕ್ಷಣಕ್ಷಣ ಉನ್ನತಿಗೆ ಏರಿಸುತ್ತಿದ್ದರು. ಆಗ ನಾವು ಒಮ್ಮೆಲೆ ಅನಂತದ ಸ್ಪರ್ಶವನ್ನು ಭಗವಂತನ ಸ್ಪರ್ಶವನ್ನು ಅನುಭವಿಸುತ್ತಿದ್ದೆವು. ಅವರ ಅತ್ಯುನ್ನತ ಜ್ಞಾನಕ್ಕೆ, ಅವರ ಸ್ಫೂರ್ತಿದಾಯಕ ಭಾಷಣಗಳಿಗೆ ಅವರು ಪ್ರಶಸ್ತಿಗಳನ್ನು ಪಡೆದಿದ್ದರೂ, ಜ್ಞಾನಯೋಗಿಯಾಗಿದ್ದರೂ ಅವರ ಬೇರುಗಳು ಮಣ್ಣಿನ ಆಳಕ್ಕೆ ಇಳಿದಿದ್ದವು. ಅವರಿಗೆ ಪೂರ್ಣತ್ವದ ಬಗ್ಗೆ ಮಾಂತ್ರಿಕ ಆಕರ್ಷಣೆಯೂ ಅದರೊಂದಿಗೆ, ಓತಪ್ರೋತವಾದ ಐಕ್ಯತೆಯೂ ಇದ್ದವು. ಇದನ್ನು ಹಲವು ಸಲ ಕಾಣಬಹುದಿತ್ತು.

**ಆಂಧ್ರಪ್ರದೇಶದಲ್ಲಿ ಚಂಡಮಾರುತ**

೧೯೯೦. ಆಂಧ್ರಪ್ರದೇಶದಲ್ಲಿ ಸರ್ವನಾಶಕವಾದ ಚಂಡಮಾರುತ ಉಂಟಾಯಿತು. ಆರು ತಿಂಗಳುಗಳ ಬಳಿಕ ಇನ್ನೊಂದು ಪ್ರವಾಹ ಬಂದು, ಪ್ರಾಂತ್ಯದ ಅಣೆಕಟ್ಟು ಒಡೆಯಿತು. ಹೊಸದಾಗಿ ಕಟ್ಟಿದ ನಗರದೊಳಗೆ ಪ್ರವಾಹದ ನೀರು ತೇಲುತ್ತಿದ್ದ ಸತ್ತ ಪ್ರಾಣಿಗಳೊಂದಿಗೆ ಒಳನುಗ್ಗಿತು. ರಂಗನಾಥಾನಂದಜಿ ತಾವು ಬರುವುದಾಗಿ ಹೇಳಿದರು. ನಾನು 'ದಯವಿಟ್ಟು ಬರಬೇಡಿ. ಅಲ್ಲಿಗೆ ಬರಲು ದಾರಿಯಿಲ್ಲ. ಅಲ್ಲಿ ಎಷ್ಟೊಂದು ನೀರಿದೆಯೆಂದರೆ ನಿಮಗೆ ಬರಲಾಗುವುದಿಲ್ಲ' ಎಂದು ಬೇಡಿಕೊಂಡೆ. ಎಲ್ಲ ವ್ಯರ್ಥವಾಯಿತು. ಸನ್ಯಾಸಿಯಾದವರು ಒಮ್ಮೆ ಹೊರಟರೆಂದರೆ ಅವರನ್ನು ತಡೆಯಲಾಗುವುದಿಲ್ಲ. ಹಾಗೆ ಅವರು ಬಂದರು, ಅವರನ್ನು ಹಿಂಬಾಲಿಸಿ ನಾಲ್ವರು ಐಎಎಸ್ ಅಧಿಕಾರಿಗಳು ಕೊಚ್ಚೆ–ಜಾರುವ ನೀರಿನಲ್ಲಿ ಬಂದರು. ನಾನು ಅವರ ಕೆಸರು ಅಂಟಿದ ಚಪ್ಪಲಿಗಳನ್ನು ತೆಗೆದುಬಿಟ್ಟೆ. ಸುತ್ತಲೂ ಕೆಸರು ಮಣ್ಣಿತ್ತು ಮತ್ತು ಸರಿಯಾದ ಸ್ನಾನದ ಮನೆ ಅಲ್ಲೆಲ್ಲೂ ಇರಲಿಲ್ಲ. ನಾವು ಒಂದು ಸರಳವಾದ ಮೇಲ್ಛಾವಣಿಯಿಲ್ಲದ ಸ್ನಾನದಮನೆಯನ್ನು ಮಾಡಿಕೊಂಡೆವು. ನಾನೆಂದೆ, 'ಮಹಾರಾಜ್, ನಾನು ನಿಮಗೆ ಸ್ನಾನದ ಕೋಣೆಯ ವ್ಯವಸ್ಥೆಯನ್ನು ನಗರದಲ್ಲಿ ಮಾಡಿದ್ದೇನೆ.' ಅವರು ತಕ್ಷಣ ಉತ್ತರಿಸಿದರು. 'ಬೇಡ, ನಾನು ಇಲ್ಲಿಯೇ ಇರುವೆ. ನಿನ್ನ ಹಾಸಿಗೆಯನ್ನು ಕೊಡು.' ಹಾಸಿಗೆಯ ಮೇಲೆ ಅವರು ನಿದ್ರಿಸಲಾರಂಭಿಸಿದರು.

ಅದು ಸುತ್ತಲೂ ಗೋಡೆಗಳಿರದ ಕೊಟ್ಟಿಗೆಯಾಗಿತ್ತು! ನಾನು ಕಣ್ಣೀರು ತುಂಬಿದವನಾಗಿ ಶಿಬಿರದ ಬೇರೆಡೆ ಹೊರಟುಹೋದೆ. ಆ ಮಧ್ಯಾಹ್ನ ಅವರು ಹಳ್ಳಿಗರನ್ನುದ್ದೇಶಿಸಿ ಮಾತನಾಡಿದರು. ಒಂದು ಮುರಿದ ಮೇಜಿನ ಮೇಲೆ ಕುಳಿತು ಮಾತನಾಡಲು ಆರಂಭಿಸಿದರು. ಆ ನಾಲ್ವರೂ ಐಎಎಸ್ ಅಧಿಕಾರಿಗಳು ಜತೆಸೇರಿದರು. ಅವರಲ್ಲೊಬ್ಬರು ಭಾಷಣವನ್ನು ಅನುವಾದಿಸಲು ಆರಂಭಿಸಿದರು. ಇನ್ನೊಬ್ಬರು ಅವರಿಗೆ ಸಹಾಯ ಮಾಡಿದರೆ, ಉಳಿದವರು ಬೇರೆ ಕೆಲಸಗಳಲ್ಲಿ ತೊಡಗಿಕೊಂಡರು. ಆಗ ನಡೆದದ್ದನ್ನು ನಾನು ವಿವರಿಸಲಾರೆ. ಎಲ್ಲ ಹಳ್ಳಿಗರು– ಬಡಜನರು, ವಿಧವೆಯರು, ವಸತಿಹೀನರು, ಬಟೆಯಿಲ್ಲದ ಮೀನುಗಾರರು– ಬಂದರು. ಅವರ ಹೆಸರೇ ಮೋಡಿ ಮೂಡಿಸಿತು. ಐದಾರು ಹಳ್ಳಿಗಳ ಜನರು ಬಂದರು. ನಾವು ಆ ಹಳ್ಳಿಯಲ್ಲಿ ಅಷ್ಟೊಂದು ಜನರನ್ನು ಎಂದೂ ಕಂಡಿರಲಿಲ್ಲ! ಅವರು ಮಾತನಾಡುತ್ತ ಹೋದಂತೆ ಪ್ರತಿ ವಾಕ್ಯವನ್ನು ಅನುವಾದಿಸಲಾಯಿತು. ಅವರ ಭಾಷಣ ಮುಗಿದ ಮೇಲೆ ಮುದುಕಿಯರು, ಸ್ಥೈರ್ಯಕಳೆದುಕೊಂಡವರು ಅವರ ಬಳಿ ಬಂದು, ಪಾದಸ್ಪರ್ಶ ಮಾಡಿ ಧನ್ಯತಾ ಭಾವವನ್ನು ಅನುಭವಿಸಿದರು. ಸಾಯಂಕಾಲ ನಮ್ಮ ಕೊಟ್ಟಿಗೆ ಶಿಬಿರವನ್ನು ತೊರೆದು ಅವರು ಸಂತೋಷದಿಂದ ಹಿಂತಿರುಗಿದರು.

ಕಾನ್ಪುರದ ಐಐಟಿಯಲ್ಲಿ ಅವರು ಉಪನ್ಯಾಸ ಕೊಟ್ಟಿದ್ದರು. ನನ್ನ ವಿದ್ಯಾರ್ಥಿ ಯೊಬ್ಬ ಅಂದು ಅಲ್ಲಿದ್ದ. ಎಂದಿನಂತೆ ಸ್ವಾಮೀಜಿ ಅದ್ಭುತವಾಗಿ ಮಾತನಾಡಿದರು. ಅಂದು ಸಂಜೆ ನಿರ್ದೇಶಕರ ಮನೆಯಲ್ಲಿ ಪ್ರಶ್ನೋತ್ತರಗಳ ವಿಶೇಷ ಗೋಷ್ಠಿಯಿತ್ತು. ಮಹಾರಾಜ್‌ರವರಿಗೆ ಹಲವು ಪ್ರಶ್ನೆಗಳನ್ನು ಕೇಳಲಾಯಿತು. ಮೂಲೆಯಲ್ಲಿ ಬಾಗಿಲು ಕಾಯುವವ ಕುಳಿತಿದ್ದ– ಆತನಿಗೆ ಇಂಗ್ಲಿಷ್ ಬರುತ್ತಿರಲಿಲ್ಲ. ಅವನು ಸ್ವಾಮೀಜಿ ಯವರನ್ನು ತುಂಬ ಗೌರವದಿಂದ ನೋಡುತ್ತಿದ್ದ. ಸ್ವಾಮೀಜಿ ಅವನನ್ನು 'ನಿನಗೇನಾಯಿತು?' ಎಂದು ಕೇಳಿದರು. ಬಳಿಕ ಅದುವರೆಗೆ ತಾನು ಅವರಿಗೆಲ್ಲ ಹೇಳಿದುದನ್ನು ಹರಕು–ಮುರುಕು ಹಿಂದಿಯಲ್ಲಿ ಇವನಿಗೆ ಹೇಳಿದರು.

**ಅವರ ಕನಸು**

ಅವರಿಗೆ ಯಾವಾಗಲೂ ಒಂದು ಕನಸಿತ್ತು. ಆ ಕನಸಿಗಾಗಿ ಅವರು ಬದುಕಿದ್ದರು, ಹೋರಾಡಿದ್ದರು. ತಾವು ಸ್ವಾಮೀಜಿಯ ವೇದಾಂತ ಉಪದೇಶಿಸಲೆಂದೇ ವಿಧಿಯಿಂದ ನೇಮಿತನಾಗಿದ್ದೇನೆಂಬುದು ಅವರ ದೃಢವಿಶ್ವಾಸವಾಗಿತ್ತು. ಈ ವಿಷಯದ ಬಗ್ಗೆ ಅವರು ಬರೆದಿದರು, ಮಾತನಾಡಿದ್ದರು. ಈ ಉದ್ದೇಶಕ್ಕಾಗಿ ಅವರು ಬಹಳ ಶ್ರಮಪಟ್ಟಿದ್ದರು. ವಿಶೇಷವಾಗಿ ಚಳಿಗಾಲದಲ್ಲಿ ತುಂಬ ಹಿಮಾಮೃತ ವಾಗಿರುವ ಡೆಟ್ರಾಯಿಟ್‌ನಿಂದ ಚಿಕಾಗೋವರೆಗೆ, ಒಮ್ಮೆ ಅಂತಹ ಚಳಿಗಾಲದಲ್ಲಿ ಹಿಮದ ಸುರಿತದಿಂದಾಗಿ ಹಾರಾಟವನ್ನು ರದ್ದುಮಾಡುವ ಪರಿಸ್ಥಿತಿಯಿದ್ದಾಗ ಅವರು ವಿಮಾನವನ್ನು ಹತ್ತಿದರು. ಅವರು ಠಾಕೂರರನ್ನು ಪ್ರಾರ್ಥಿಸಿದರು. ಸುರಿಯುತ್ತಿದ್ದ ಹಿಮದ ನಡುವೆ ತುಂಬ ಕಷ್ಟದಿಂದ ವಿಮಾನವು ಹೊರಟಿತು. ಅದೊಂದು ಹುಚ್ಚು ಸ್ವಾಮೀಜಿಯವರ ವೇದಾಂತವಿಲ್ಲದೆ ನಾಗರಿಕತೆಯೇ ಪತನವಾದೀತು ಮತ್ತು ಅದನ್ನು ಹರಡಲು ತನ್ನ ಕೈಯಲ್ಲಿ ಸಾಧ್ಯವಿದ್ದಷ್ಟು ಮಾಡಬೇಕು ಎಂಬುದು ಅವರ ದೃಷ್ಟಿಯಾಗಿತ್ತು.

ಒಮ್ಮೆ ಮಹಾರಾಜ್ ದೀಕ್ಷೆ ಕೊಡಲು ರಾಜ್‌ಕೋಟ್‌ನ ಆಶ್ರಮಕ್ಕೆ ಬಂದರು. ಒಂದು ಮುಂಜಾನೆ ನಸುಕಿನಲ್ಲಿ ನಾನು ಅವರನ್ನು ನೋಡಲು ಹೋದೆ. ಅವರು ಅಪರೂಪವಾಗಿ ಮಗುವಿನಂತೆ ಆನಂದದಿಂದಿದ್ದುದನ್ನು ಕಂಡೆ. ಬಿಳಿಯ ಸ್ವೆಟರ್‌ನಲ್ಲಿ ಸುಂದರವಾಗಿದ್ದ ಅವರು ಸೋಫಾದ ಮೇಲೆ ಕುಳಿತಿದ್ದರು. ನಾನು ಒಳಕ್ಕೆ ಹೋದಾಗ ದೊಡ್ಡ ಮುಗುಳ್ನಗುವನ್ನು ಬೀರಿದರು. ನಾನು ಕೇಳಿದೆ 'ಏನಾಗಿದೆ ಮಹಾರಾಜ್? ನೀವು ಇಷ್ಟೊಂದು ಪ್ರಫುಲ್ಲರಾಗಿದ್ದೀರಿ ಇಂದು!' ಅವರೆಂದರು, 'ನಾನು ನಿನಗಾಗಿಯೇ ಕಾಯುತ್ತಿದ್ದೆ.' 'ಏಕೆ ಮಹಾರಾಜ್?' ನಾನು ಕೇಳಿದೆ, ಏನಾದರೂ ಔಷಧ ಬೇಕಾಗಿ ತ್ತೇನೋ ಎಂಬ ದೃಷ್ಟಿಯಲ್ಲಿ. ಆದರೆ ವಿಷಯ ಅದಾಗಿರಲಿಲ್ಲ.

'ನೆನ್ನೆ ರಾತ್ರಿ ನಾನೊಂದು ನಿರ್ಧಾರಕ್ಕೆ ಬಂದೆ.' 'ಏನು ನಿರ್ಧಾರ, ಮಹಾರಾಜ್?' 'ನಾನು ಮತ್ತೊಮ್ಮೆ ಹುಟ್ಟಬೇಕೆಂದು ನಿರ್ಧರಿಸಿದ್ದೇನೆ.' ನಾನೆಂದೆ, 'ಮಹಾರಾಜ್, ಇದು ಅಪಾಯಕಾರಿ! ಕೆ.ಜಿ. ಯಿಂದ, ಎಂ.ಎಸ್ಸಿವರೆಗೆ ನೀವು "ಯೆಸ್ ಸರ್" ಎನ್ನಬೇಕು. ಈ ನಿರ್ಧಾರವನ್ನು ಕೈಗೊಳ್ಳಬೇಡಿ.' ಆದರೆ ಅವರು ಹಠದಿಂದಿದ್ದರು. 'ಇಲ್ಲ, ಅದೇನೇ ಇರಲಿ, ನಾನು ಮತ್ತೊಮ್ಮೆ ಹುಟ್ಟಿ ಬರಲು ನಿರ್ಧರಿಸಿದ್ದೇನೆ. ಏಕೆಂದರೆ ಸ್ವಾಮೀಜಿಯವರ ವೇದಾಂತ ಉಕ್ಕಿ ಪ್ರವಹಿಸುತ್ತಿದೆ. ಅದು ಇಡಿಯ ನಾಗರಿಕತೆಯನ್ನು ಹೇಗೆ ರೂಪಾಂತರಿಸುತ್ತದೆ ಯೆಂದು ನಾನು ನೋಡಬೇಕಾಗಿದೆ. ಠಾಕೂರರು ನಾಗರಿಕತೆಯನ್ನು ಕಾಪಾಡಲು ಬಂದಿದ್ದಾರೆ ಮತ್ತು ಸ್ವಾಮೀಜಿಯವರ ವೇದಾಂತ ಅದನ್ನು ಮಾಡುತ್ತದೆ. ಅದಕ್ಕೆ ನಾನು ಮತ್ತೊಮ್ಮೆ ಹುಟ್ಟುವೆ.' ನಾನು ಕೇಳಿದೆ 'ಯಾವ ದೇಶದಲ್ಲಿ? ಚೈನಾ, ಕೆನಡಾ, ರಷ್ಯಾ, ಜಪಾನ್?' ಅವರೆಂದರು, 'ಯಾವ ದೇಶವಾದರೂ ಸರಿ.' ನನಗೆ ಸ್ವಾಮೀಜಿ ನೆನಪಾಗುತ್ತಾರೆ. ಸ್ವಾಮೀಜಿ ಹೇಳಿದರು. 'ನಾನು ಮತ್ತೆ ಬರಬೇಕಾಗುತ್ತದೆ. ಏಕೆಂದರೆ ನಾನು ಮನುಷ್ಯರನ್ನು ಪ್ರೀತಿಸುತ್ತೇನೆ.' ಸ್ವಾಮಿ ರಂಗನಾಥಾನಂದಜೀ ಮತ್ತೆ ಬರಬೇಕಾಗುತ್ತದೆ. ಹೀಗೆಂದು ನನ್ನ ವೈಯಕ್ತಿಕ ನಂಬಿಕೆ. ಏಕೆಂದರೆ ಅವರು ತಾವು ಜನಿಸಿದ ಘನ ಉದ್ದೇಶವನ್ನು ಪ್ರೀತಿಸುತ್ತಿದ್ದರು– ವಿಶಿಷ್ಟ ಸಂಸ್ಕೃತಿಯೊಂದನ್ನು ಸೃಷ್ಟಿಸಲು ರಾಮಕೃಷ್ಣ ವೇದಾಂತವನ್ನು ಪ್ರಚುರಪಡಿಸುವುದು. ಭಾರತದಲ್ಲಿ ಅವರು ಆರಂಭ ಮಾಡಿದರು. ರಂಗನಾಥಾನಂದಜಿಯವರ ಹೊಸ ಚಿಂತನಾಪ್ರವಾಹವನ್ನು ಹರಿಯಬಿಟ್ಟಿದ್ದಾರೆ– ಅದೆಂದರೆ ಸಮಾಜ, ರಾಜಕೀಯ ಅಥವಾ ಇನ್ನೆಲ್ಲೇ ಆಗಲಿ ಸ್ತ್ರೀಪುರುಷರನ್ನು ದೇವತೆ–ದೇವರೆಂದು ಭಾವಿಸಿ ಗೌರವಿಸುವ ತನಕ ನಮ್ಮ ದೇಶಕ್ಕಾಗಲಿ, ನಾಗರಿಕತೆಗಾಗಲಿ ಉಳಿಗಾಲವಿಲ್ಲ.

**ಮಕ್ಕಳೊಂದಿಗೆ**

ಅವರೆಷ್ಟು ಇಷ್ಟವಾಗುವಂತಹವರು, ವಿಶೇವಾಗಿ ಮಕ್ಕಳಿಗೆ. ಅವರಿಗೆ ಮಕ್ಕಳ ಬಗ್ಗೆ ವಿಶೇಷವಾದ, ಅನಿರ್ವಚನೀಯವಾದ ಭಾವವಿತ್ತು. 'ಮಕ್ಕಳೆಂದರೆ ದೇವರೇ, ಅವರಿಗೆ ಮಂತ್ರದೀಕ್ಷೆ ಕೊಡೋಣ.' ಹೀಗೆ ನಾವು ಯಾವುದೇ ಪುಟ್ಟ ಮಗುವನ್ನು ಮಹಾರಾಜ್ ಬಳಿ ದೀಕ್ಷೆಗೆ ಕರೆದೊಯ್ದರೆ, 'ನಿನಗೆ ಅರ್ಥವಾಗುತ್ತದೆಯೆ?' ಎಂದು ಅವರು ಕೇಳುತ್ತಿದ್ದರು. ಉತ್ತರ ಹೌದೆಂದಾದರೆ ಮಹಾರಾಜ್ ತಕ್ಷಣ ಹೇಳುತ್ತಿದರು 'ಸ್ವೀಕರಿಸು ಮಂತ್ರವನ್ನು.' ಒಮ್ಮೆ ರಾಜ್‌ಕೋಟ್‌ನಲ್ಲಿ ಇಪ್ಪತ್ತೈದು ಆದಿವಾಸಿ ಜನರನ್ನು ಅವರ ಬಳಿ ಕರೆತಂದೆ. ಅವರಲ್ಲಿ ಡಕಾಯಿತರು, ಕೊಲೆಗಾರರು, ಕುಡುಕರು, ಪುನರ್ಶಿಕ್ಷೆಗೆ ಒಳಗಾದ ಕಳ್ಳರು ಮತ್ತು ಯಾರಿರಲಿಲ್ಲ ಅವರಲ್ಲಿ! ಆದರೆ ಅವರಿಗೆ ರಂಗನಾಥಾನಂದಜಿಯವರಲ್ಲಿ ಪ್ರೀತಿಯಿತ್ತು. ಅವರು ಹೇಳಿದರು 'ತಂದೆ, ನಮಗೆ ನಿಮ್ಮಿಂದ ದೀಕ್ಷೆ ಬೇಕಾಗಿದೆ.' ನಾನೆಂದೆ, 'ಮಹಾರಾಜ್, ಈ ಜನರು ಅಂತಹ ಹಿನ್ನೆಲೆಯಿಂದ ಬಂದಿದ್ದಾರೆ.' ಅವರ ತಕ್ಷಣದ ಉತ್ತರ 'ಅವರನ್ನು ದೀಕ್ಷೆಗೆ ಕರೆದುಕೊಂಡು ಬಾ.' ಅವರು ದೀಕ್ಷೆ ಪಡೆದರು. ಆದರೆ ಕೆಲವು ದಿನಗಳ ಬಳಿಕ ಅವರು, ಮಂತ್ರವೂ ಸೇರಿದಂತೆ, ಎಲ್ಲವನ್ನೂ ಮರೆತರು. ನಾನು ಮಹಾರಾಜ್‌ಗೆ ತಿಳಿಸಿದೆ. ಅವರು ನನ್ನನ್ನು ಬೇಲೂರುಮಠದಿಂದ ಕರೆಸಿ ಹೇಳಿದರು, "ಆ ಹಳ್ಳಿಗೆ ಹೋಗು. ಪ್ರತಿ ಮಂತ್ರವನ್ನೂ ಪರೀಕ್ಷಿಸು. ಅದನ್ನು ಅವರು ಪ್ರತಿನಿತ್ಯವೂ ಜಪಿಸುವಂತೆ ಮಾಡು. ಏನೇ ಆಗಲಿ, ಅವರು ಕಷ್ಟಪಟ್ಟವರು." ನಾನು ಅಲ್ಲಿಗೆ ಹೋಗಿ ಅವರು ಹೇಳಿದಂತೆ ಮಾಡಿದೆ. ಅವರಿಗೆ ದೂರವಾಣಿಯಲ್ಲಿ ಹೇಳಿದೆ, 'ಮಹಾರಾಜ್, ನೀವು ಹೇಳಿದ್ದನ್ನು ಮಾಡಿದ್ದೇನೆ' ಅವರಿಗೆ ತುಂಬ ಸಂತೋಷವಾಯಿತು.

ಛಾಂದೋಗ್ಯ ಉಪನಿಷತ್ ಹೇಳುತ್ತದೆ, 'ಆತ್ಯಂತಿಕ ಸಾಕ್ಷಾತ್ಕಾರದಲ್ಲಿ, ಮನುಷ್ಯ ತನ್ನ ದೇಹವನ್ನು ಮೀರುತ್ತಾನೆ– ದೇಹಾತೀತನಾಗುತ್ತಾನೆ. ಅವನು ಬೇರೊಂದು ದೇಹವಾಗುತ್ತಾನೆ ಮತ್ತು ಅವನು ಜ್ಞಾನದ ದಿವ್ಯಪ್ರಭೆಯಲ್ಲಿ ಜೀವಿಸಿ ಚಲಿಸುತ್ತಾನೆ. ("ಸ್ವೇನ ಜ್ಯೋತಿರುಪಸಂಪಾದ್ಯ ಸ್ವೇನ ರೂಪೇಣ ಅಭಿನಿಷ್ಪದ್ಯತೇ")

ಸಾಕ್ಷಾತ್ಕಾರದ ಬಳಿಕ ಮನುಷ್ಯ ಪೂರ್ಣತೃಪ್ತನಾಗುತ್ತಾನೆ. ವ್ಯಕ್ತಿ ದೇವರು ಎಂಬ ಆಳವಾದ ಭಾವದಿಂದ ಅವನನ್ನು ಯಾವುದೂ ವಿಚಲಿತಗೊಳಿಸದು; ಇದನ್ನು ಅರಿತವನು ವಿಶ್ವಾತ್ಮನಾಗುತ್ತಾನೆ. ಅಂತಹ ದೇಹವು ತನ್ನದೇ ಆಳವಾದ ಆಧ್ಯಾತ್ಮಿಕ ವಿಶ್ವಾಸದ ಬೆಳಕಿನಲ್ಲಿ ಚಲಿಸುತ್ತದೆ. ರಂಗನಾಥಾನಂದಜಿಯವರನ್ನು ಆಜ್ಞಾಪಿಸಬಲ್ಲವರು ಯಾರೂ ಇರಲಿಲ್ಲ. ವೇದಾಂತ ಕಾರಣವೊಂದರ ಹೊರತಾಗಿ ಅವರು ಯಾವುದೇ ಕಾರಣಕ್ಕೂ ತಮ್ಮ ನಿರ್ಧಾರವನ್ನು ಬದಲಿಸುತ್ತಿರಲಿಲ್ಲ. ಯಾವುದೇ ರೀತಿಯ ಆಜ್ಞೆ–ನಿಷೇಧಗಳನ್ನು ಅವರು ಲೆಕ್ಕಿಸುತ್ತಿರಲಿಲ್ಲ. ಅವರು ದಿವ್ಯ ಸ್ವಪ್ರಜ್ಞೆಯ ಶಕ್ತಪ್ರಭೆಯಲ್ಲಿ ಚಲಿಸುತ್ತಿದ್ದರು ಮತ್ತ ಉಸಿರಾಡುತ್ತಿದ್ದರು.

ಸ್ವಾಮಿ ರಂಗನಾಥಾನಂದಜಿಯವರು ಆಧುನಿಕ ಯುಗದಲ್ಲಿ ಶ್ರೀರಾಮಕೃಷ್ಣರ ಸುಪುತ್ರರಲ್ಲೊಬ್ಬರಾಗಿದ್ದರು. ಅವರು ಮಾನವಕುಲಕ್ಕೆ ಶ್ರೀರಾಮಕೃಷ್ಣರ ಉತ್ಕೃಷ್ಟ ಕೊಡುಗೆಗಳಲ್ಲೊಬ್ಬರಾಗಿದ್ದಾರೆ. ನಾಗರಿಕತೆಯನ್ನು ಉಳಿಸಲು ಠಾಕೂರರು ಜನ್ಮವೆತ್ತಿದರು. ಠಾಕೂರರು ಸ್ವಾಮಿ ವಿವೇಕಾನಂದರನಂತರ ಸ್ವಾಮಿ ರಂಗನಾಥಾ ನಂದಜಿಯವರನ್ನು ನಮಗೆ ನೀಡಿದರು. ಆದುದರಿಂದಲೇ ಅವರು ಸಾವುಗಳ ಬಳಿಕ ಸಾವುಗಳನ್ನು ಅನುಭವಿಸಿದರು. ‘ನಾನು ಎಂಬತ್ತರ ವಯಸ್ಸಿನಲ್ಲಿ ಸಾಯು ತ್ತೇನೆಂದು ಜ್ಯೋತಿಷ್ಯ ಹೇಳುತ್ತದೆ.’ ಅವರು ತೊಂಬತ್ತಾರನೆಯ ಪಕ್ವ ವಯಸ್ಸಿನವರೆಗೆ ಬದುಕಿದರು. ಈ ಹದಿನೇಳು ವರ್ಷಗಳು ಶ್ರೀರಾಮಕೃಷ್ಣರು ಅವರಿಗೆ ನೀಡಿದ ವಿಶೇಷ ಕೊಡುಗೆ. ಜ್ಯೋತಿಷ್ಯರೀತ್ಯ ತಾನು ೧೯೮೭ರಲ್ಲಿ ಮೃತನಾಗಿದ್ದೆನೆಂದು ಅವರು ನನಗೆ ಬರೆದರು. ಆ ಪತ್ರ ನನ್ನ ಬಳಿ ಇಲ್ಲ. ಆದರೆ ಈ ಹದಿನೇಳು ವರ್ಷಗಳು ಶ್ರೀ ರಾಮಕೃಷ್ಣರು ಅವರ ಮುಖೇನ ಕೆಲಸ ಮಾಡಿದರು. ಇಂದ್ರಿಯಗ್ರಾಹ್ಯ ನಾಗರಿಕತೆಯನ್ನು ತರ್ಕಬದ್ಧ ಮತ್ತು ಸಾರ್ವಕಾಲಿಕ ವೇದಾಂತದೆಡೆಗೆ ತಿರುಗಿಸುವುದಕ್ಕೆ ಅವರು ವಿಧಿನಿರ್ದೇಶಿತರಾಗಿದ್ದರು. ಗ್ರೀಕ್ ನಾಗರಿಕತೆಯು ತನ್ನ ಶ್ರೇಷ್ಠ ತತ್ತ್ವಜ್ಞಾನಿಗಳು ಮುಟ್ಟಿದ ಔನ್ನತ್ಯದ ಹೊರತಾಗಿಯೂ, ನಾಶವಾಯಿತು. ಏಕೆಂದರೆ ಸಾಮಾನ್ಯರನ್ನು ಎತ್ತರಿಸಲೆಂದು ಅವರು ಕೆಳಕ್ಕಿಳಿದು ಬರಲಿಲ್ಲ. ಸ್ವಾಮಿ ರಂಗನಾಥಾನಂದಜಿಯವರಂತಹ ಶ್ರೇಷ್ಠರಿಂದಾಗಿ ಭಾರತೀಯ ನಾಗರಿಕತೆ ಸಾಯಲಿಲ್ಲ. ಮನುಷ್ಯನ ದಿವ್ಯತ್ವದ ಸಂದೇಶವನ್ನು ಸಾಮಾನ್ಯಾತಿಸಾಮಾನ್ಯರಿಗೆ ಸಾರಲು ಬಿರುಗಾಳಿಯಂತೆ ಸಂಚರಿಸಿದ, ಭಾರತದ ಮಣ್ಣಿನಲ್ಲಿ ಸ್ವಾಮಿ ವಿವೇಕಾನಂದರ ಅನಂತರ ಹುಟ್ಟಿದ ಮೊದಲ ಸನ್ಯಾಸಿ ಅವರು. ನಮ್ಮ ಜಗತ್ತಿನಲ್ಲಿ ನವ ರಾಮಕೃಷ್ಣ ವೇದಾಂತ ಸಂಸ್ಕೃತಿಯ ಪುಟಗಳಲ್ಲಿ ಅವರು ನಾಯಕನಾಗಿ ವಿಜೃಂಭಿಸಿದರು.

* * * *

# ೬. ಶೋಭಾಯಮಾನವಾದ ಮತ್ತು ವಿಶೇಷವಾದ ಜೀವನ

–ಸ್ವಾಮಿ ತಥಾಗಥಾನಂದ*

ಬಂಗಾಳ ಪಂಚಾಂಗದ ಅನ್ವಯ ಶ್ರೀಮಾತೆಯವರ ಜನ್ಮದಿನದಂದೇ, ೧೯೦೮ರಲ್ಲಿ ಶಂಕರನ್ ಎಂಬ ಬಾಲಕ ಕೇರಳದಲ್ಲಿ ಜನಿಸಿದ. ಪ್ರೌಢಶಾಲಾ ವಿದ್ಯಾಭ್ಯಾಸ ಮುಗಿಸಿದ ಬಳಿಕ ತ್ರಿಶ್ಯೂರಿನ ತನ್ನ ಮನೆಯನ್ನು ಬಿಟ್ಟು ಹುಟ್ಟೂರಿನಿಂದ ಹತ್ತು ಕಿಲೋಮೀಟರ್ ದೂರದ ತ್ರಿಶ್ಶೂರಿಗೆ ಬಂದು ನೆಲೆಸಿದ. ಜೊತೆಯಲ್ಲಿ ಒಂದು ಧೋತಿ, ಒಂದು ಅಂಗಿ ಮತ್ತು ಒಂದು ಚೌಕ ಅಲ್ಲದೆ ಜೇಬಿನಲ್ಲಿ ಮೂರು ರೂಪಾಯಿಗಳಿದ್ದವು. ಬಾಲಕ ಎಂಟನೇ ವರ್ಗದಲ್ಲಿದ್ದಾಗ ೧೯೨೨ರಲ್ಲಿ ರಾಮಕೃಷ್ಣ ವಚನ ವೇದ (ಆಂಗ್ಲ ಆವೃತ್ತಿ: ಗಾಸ್ಪೆಲ್ ಆಫ್ ಶ್ರೀರಾಮಕೃಷ್ಣ) ಅಕಸ್ಮತ್ತಾಗಿ ಅವನ ಕೈ ಸೇರಿತು. ಮೊದಲ ಓದಿನಲ್ಲೇ ಅವನಲ್ಲಿ ಆಧ್ಯಾತ್ಮಿಕ ಭಾವ ಉದ್ದೀಪನಗೊಂಡು ಒಂದೇ ಬಾರಿಗೆ ನೂರು ಪುಟಗಳನ್ನು ಓದಿದ. ಬಳಿಕ ಇಡೀ ಪುಸ್ತಕವನ್ನು ಓದಿ ಮುಗಿಸಿದ್ದೇ ಅಲ್ಲದೆ ಸ್ವಾಮೀಜಿಯ(ವಿವೇಕಾನಂದರ) ಪುಸ್ತಕಗಳನ್ನು, ಸಂಬಂಧಿಸಿದ ಇತರ ಪುಸ್ತಕಗಳನ್ನು ತ್ರಿಶ್ಶೂರಿನ ವಿವೇಕೋದಯಂ ಪ್ರೌಢಶಾಲೆಯ ಗ್ರಂಥಾಲಯದಿಂದ ಪಡೆದು ಓದಿದ. ಇದರೊಂದಿಗೆ ಶ್ರೀಮಾತೆ ಶಾರದಾದೇವಿಯವರ ಸ್ತೋತ್ರ ಶ್ಲೋಕ 'ಪ್ರಕೃತಿಂ ಪರಮಾಮಭಯಾಂ...' ಬಾಯಿಪಾಠ ಮಾಡಿದ. ಹೀಗೆ ಅವನ ಆಧ್ಯಾತ್ಮಿಕ ಜೀವನ ಉತ್ತಮವಾಗಿ ಆರಂಭಗೊಂಡಿತು.

ರಾಮಕೃಷ್ಣ ಮಹಾಸಂಘವನ್ನು ಸೇರಬೇಕೆಂದು ಶಂಕರ ತನ್ನ ಹದಿನೈದೂವರೆ ವಯಸ್ಸಿನಲ್ಲೆ ನಿರ್ಧರಿಸಿದ. ಆದರೆ ಈ ಬಯಕೆ ಈಡೇರಿದ್ದು ೧೯೨೬ರಲ್ಲಿ. ರಾಮಕೃಷ್ಣ ಮಠದ ಮದ್ರಾಸ್ ಶಾಖೆಗೆ, ತಾನು ಮಹಾಸಂಘವನ್ನು ಸೇರಬಯಸ ತಿಳಿಸಿ, ಅವರ ಅಪ್ಪಣೆ ಕೋರಿ ತ್ರಿಶ್ಶೂರಿನಿಂದ ಪತ್ರ ಬರೆದ. ತಮ್ಮಲ್ಲಿ ಸ್ಥಳಾವಕಾಶವಿಲ್ಲವೆಂದು ಆದರೆ ಮೈಸೂರಿನಲ್ಲಿ ಆರಂಭವಾಗಿರುವ ನೂತನ ಆಶ್ರಮದಲ್ಲಿ ಅವನು ಸೇರಬಹುದೆಂದು ಸೂಚಿಸಿ ಮದ್ರಾಸಿನಿಂದ ಉತ್ತರ ಬಂದಿತು. ಅದೃಷ್ಟವಶಾತ್ ಅವನ ಹುಟ್ಟೂರಿಗೆ ಮೈಸೂರು ಆಶ್ರಮದ ಮುಖ್ಯಸ್ಥರಾದ ಪೂಜ್ಯ ಗೋಪಾಲ್ ಮಹಾರಾಜ್(ಸ್ವಾಮಿ ಸಿದ್ಧೇಶ್ವರಾನಂದಾಜಿ) ಭೇಟಿ ನೀಡಿದ ಸಂದರ್ಭದಲ್ಲಿ ಶಂಕರ ತನ್ನ ಮನದ ಅಳಲನ್ನು, ಹಂಬಲವನ್ನು ತೋಡಿಕೊಂಡ. ಆದರೆ ಸ್ವಾಮಿಗಳು ತಮ್ಮ ಊಟಿ ಪ್ರಯಾಣದ ಮಾರ್ಗಮಧ್ಯದಲ್ಲಿ ವಿಶ್ರಮಿಸಲಷ್ಟೇ ತ್ರಿಶ್ಶೂರಿಗೆ ಬಂದಿದ್ದರು. ಅವರು ಊಟಿಯಲ್ಲಿ ಮಹಾಪುರುಷ ಮಹಾರಾಜರನ್ನು(ಸ್ವಾಮಿ ಶಿವಾನಂದರನ್ನು) ಭೇಟಿಯಾಗುವುದಿತ್ತು. ಊಟಿ ಮಾರ್ಗವಾಗಿ ಮೈಸೂರು ತಲುಪಲು ಬೇಕಾದ ಪ್ರಯಾಣದ ಖರ್ಚಿನ ಹಣ ನಿನ್ನಲಿದೆಯೇ ಎಂದು ಸಿದ್ಧೇಶ್ವರಾನಂದಜಿ ಪ್ರಶ್ನಿಸಿದಾಗ ಬಾಲಕ ತನ್ನಲ್ಲಿದ್ದ ಸ್ವಲ್ಪ ಹಣವನ್ನು ತೋರಿದ ಮತ್ತು ಅದು ಪ್ರಯಾಣದ ಖರ್ಚಿಗೆ ಸಾಕಾಗಲಾರದು ಎಂದು ಖೇದದಿಂದ ತ್ರಿಶ್ಶೂರಿನ ಪ್ರೌಢಶಾಲೆಯ ಪೂಜಾಮಂದಿರದಲ್ಲಿದ್ದ ಶ್ರೀರಾಕೃಷ್ಣರ ಭಾವಚಿತ್ರದ ಮುಂದೆ ಕುಳಿತು ತನಗೆ ಸಿದ್ಧೇಶ್ವರಾನಂದಜಿಯವರೊಂದಿಗೆ ಪಯಣಿಸಿ ಮೈಸೂರಿನ ಶ್ರೀರಾಮಕೃಷ್ಣಾಶ್ರಮವನ್ನು ಸೇರಲು ಅನುವು ಮಾಡಿಕೊಡಬೇಕೆಂದು ಪ್ರಾರ್ಥಿಸಿದ. ಆರ್ತಭಾವದ ಕಣ್ಣೀರಿನ ಕರೆ ರಾಮಕೃಷ್ಣರನ್ನು ತಲುಪಿತೋ ಎಂಬಂತೆ ಸ್ವಾಮಿ ಸಿದ್ಧೇಶ್ವರಾನಂದರು ಶಂಕರನನ್ನು ಕರೆದೊಯ್ಯಲು ಒಪ್ಪಿದ್ದೇ ಅಲ್ಲದೆ ಪ್ರಯಾಣದ ಖರ್ಚನ್ನು ತಾವೇ ಭರಿಸುವುದಾಗಿ ತಿಳಿಸಿದರು.

---

* ರಾಮಕೃಷ್ಣ ಮಹಾಸಂಘದ ಹಿರಿಯ ಸಾಧುಗಳು ಮತ್ತು ನ್ಯೂಯಾರ್ಕ್‌ನ ವೇದಾಂತ ಸೊಸೈಟಿಯ ಮಹಂತರು.

ಊಟಿಯಲ್ಲಿ ಶಂಕರನಿಗೆ ತನ್ನ ಗುರುವಾದ ಸ್ವಾಮಿ ಶಿವಾನಂದರ ಪ್ರಥಮ ದರ್ಶನವಾಯಿತು ಮತ್ತು ಅವರಿಂದ ಮಂತ್ರದೀಕ್ಷೆಯೂ ದೊರೆಯಿತು. ಸ್ವಾಮಿ ಶಿವಾನಂದರನ್ನು ಕಾಣುತ್ತಿದ್ದಂತೆಯೇ ಶಂಕರನಿಗೆ ಬಾಲ್ಯದ ಸ್ವಪ್ನವೊಂದರ ನೆನಪಾಯಿತು. ಎರಡು ವರ್ಷದ ಹಿಂದೆ ಶಂಕರ ತನ್ನ ಊರಿನ ಶಿವನ ದೇವಾಲಯದಲ್ಲಿ ಸಾಕ್ಷಾತ್ ಶಿವನೇ ತನ್ನನ್ನು ಆಶೀರ್ವದಿಸುತ್ತಿರುವಂತೆ ಸ್ವಪ್ನವಾಗಿತ್ತು. ಸುಮಾರು ಒಂದು ವಾರದ ಬಳಿಕ ಸ್ವಾಮಿ ಸಿದ್ಧೇಶ್ವರಾನಂದರೊಂದಿಗೆ ಮೈಸೂರಿನತ್ತ ಪ್ರಯಾಣ ಆರಂಭವಾಯಿತು. ಸ್ವಾಮಿ ಶಿವಾನಂದರು ಶಂಕರನಿಗೆ ಆದೇಶಿಸಿದ್ದರು: "ಗೋಪಾಲನ (ಸ್ವಾಮಿ ಸಿದ್ಧೇಶ್ವರಾನಂದರ) ಸೇವೆ ಮಾಡು." ಬಾಲಕ ಈ ಮಾತುಗಳನ್ನು ಅಕ್ಷರಶಃ ಪಾಲಿಸಿದ. ಮುಂದಿನ ಒಂಬತ್ತು ವರ್ಷ ಮೈಸೂರಿನಲ್ಲಿ, ಬಳಿಕ ಮೂರು ವರ್ಷ ಬೆಂಗಳೂರಿನ ಆಶ್ರಮದಲ್ಲಿ ಸ್ವಾಮಿ ಸಿದ್ಧೇಶ್ವರಾನಂದರ ಸೇವೆಮಾಡಿದ. ಅನಂತರ ಅವರು ಫ್ರಾನ್ಸ್‌ಗೆ ತೆರಳಿದರು. ಈ ಮಧ್ಯೆ ಮಹಾಪುರುಷ ಮಹಾರಾಜರೊಂದಿಗೆ ಶಂಕರ ಪತ್ರಮುಖೇನ ಸಂಪರ್ಕವಿರಿಸಿಕೊಂಡಿದ್ದ. ೧೯೨೭–೧೯೩೧ರ ಅವಧಿಯಲ್ಲಿ ಆಧ್ಯಾತ್ಮಿಕ ನಿರ್ದೇಶನ ಕೋರಿ ಎಂಟು ಪತ್ರಗಳನ್ನು ಬರೆದಿದ್ದ ಗುರುಗಳು ಸೂಕ್ತ ಉತ್ತರಗಳನ್ನೂ ನೀಡಿದ್ದರು. ೧೯೨೭ರಲ್ಲಿ ಬನಾರಸ್‌ನಿಂದ ಸ್ವಾಮಿ ಶಿವಾನಂದಜಿ ಅವನಿಗೆ ಬರೆದಿದ್ದರು:

> "ನಿನ್ನ ಪತ್ರದಿಂದ ಸಂತೋಷವಾಯಿತು..... ನಿನಗೆ ನಿನ್ನಲ್ಲಿ ಶ್ರದ್ಧೆಯಿದ್ದರೆ ಮತ್ತು ಶ್ರೀರಾಮಕೃಷ್ಣರ ಕೃಪೆಯಲ್ಲಿ ವಿಶ್ವಾಸವಿದ್ದರೆ ಖಂಡಿತ ವಿಜಯಿಯಾಗುವೆ. ಪ್ರಯತ್ನಶೀಲರನ್ನು ಅವರು ಪುರಸ್ಕರಿಸುತ್ತಾರೆ–ಇದು ಅವರ ಸ್ವಭಾವ. ಇಲ್ಲವಾದಲ್ಲಿ ಬಹಳ ಹಿಂದೆಯೇ ನೀನು ಮರೆಯಾಗಿ, ಸಾಮಾನ್ಯ ಮನುಷ್ಯನಾಗಿ ಜೀವನ ಸಾಗಿಸಬೇಕಾಗುತ್ತಿತ್ತು. ನೀನು ಹೆದರಬೇಡ.... ಅವರ ಕೃಪೆಯಿಂದ ನಿನ್ನ ಮನಸ್ಸಿನ ಸ್ವಭಾವ ಬದಲಾಗಿ ಅದು ನಿನ್ನ ಕೈಗೆಲಸದವಳಂತೆ ಸಹಾಯಕನಾಗಿ ನಿನ್ನ ಬಳಿಯಿರುತ್ತದೆ."

ಮತ್ತೆ ಬೇಲೂರು ಮಠದಿಂದ ೧೯೩೦ರ ಜುಲೈ ೭ರಂದು ಅವರು ಪತ್ರದಲ್ಲಿ ಬರೆಯುತ್ತಾರೆ:

"ನೀನು ಎಲ್ಲಿರುವೆಯೊ ಅಲ್ಲಿಂದಲೇ ಶ್ರೀ ಗುರುಮಹಾರಾಜರನ್ನು ಪ್ರಾರ್ಥಿಸು. ಅವರ ಕೃಪೆಯಿಂದ ಮಾತ್ರ ನೀನು ಶಾಂತಿ ಗಳಿಸಬಲ್ಲೆ. ಅಲ್ಲಿ ಇಲ್ಲಿ ಯಾತ್ರೆ ಮಾಡುವುದರಿಂದಲ್ಲ. ಕೆಲಸ ಮಾಡುವುದನ್ನು ಬಿಡಬೇಡ; ಪ್ರಾರ್ಥನೆ, ಧ್ಯಾನಗಳೊಂದಿಗೆ ಕೆಲಸಕಾರ್ಯಗಳನ್ನು ಮೇಳೈಸು."

ರಾಮಕೃಷ್ಣ ಮಹಾಸಂಘದ ಸದಸ್ಯನಾದ್ದು ಶಂಕರನಲ್ಲಿ ಅಪಾರವಾದ ಸಂತೋಷ ಸಂಭ್ರಮಗಳನ್ನು ತುಂಬಿತು. ಹಿಂದೆಯೇ ಕುಟುಂಬಜೀವನದಲ್ಲಿ ಇತರರಿಗೆ ನೆರವಾಗುವ ಅಭ್ಯಾಸವನ್ನು ಶಂಕರ ಗಳಿಸಿದ್ದ. ತನ್ನ ೧೨ರಿಂದ ೧೪ ವರ್ಷದ ವಯಸ್ಸಿನಲ್ಲೇ ಇಡೀ ಕುಟುಂಬಕ್ಕೆ ಅಡುಗೆ ಮಾಡಿದ್ದರಿಂದ ಅವನಲ್ಲಿ ಪಾಕಕಲೆ ಮೈಗೂಡಿತ್ತು. ಅವನೀಗ ಉತ್ಸಾಹದಿಂದ ಆಶ್ರಮದಲ್ಲಿಯೂ ಮನೆವಾರ್ತೆಯ ಕೆಲಸಗಳಲ್ಲಿ ತೊಡಗಿದ. ಅಡುಗೆ ಮಾಡುವುದು, ಪಾತ್ರೆ ತೊಳೆಯುವುದು, ಮಾರುಕಟ್ಟೆಗೆ ಹೋಗಿ ಬರುವುದು, ತೋಟದ ಕೆಲಸ, ಭಕ್ತಾದಿಗಳಿಂದ ಕಾಣಿಕೆಸಂಗ್ರಹ–ಹೀಗೆ ಎಲ್ಲವನ್ನೂ ಮಾಡುತ್ತಿದ್ದ. ಅವನ ಮೊದಲ 'ಹೊಟ್ಟೆ ಬಿರಿಯುವ' ಊಟ ಮಾಡಿದ್ದು ಅವನು ಮೈಸೂರು ಆಶ್ರಮಕ್ಕೆ ಕಾಲಿರಿಸಿದಂದು ಸಂಜೆ; ಒಂದು ಲೋಟ ಹಾಲು ಮತ್ತು ಎರಡು ಚಪಾತಿ, ಅದಕ್ಕೂ ಮುನ್ನ ಅವನು ಹಾಲಿನ ರುಚಿಯನ್ನ ಕಂಡವನೇ ಅಲ್ಲ. ಶಂಕರ ೧೯೨೭ರಲ್ಲಿ ಆಶ್ರಮಕ್ಕೆ ಕಾಲಿರಿಸಿದ ನಾಲ್ಕು ಅಥವಾ ಐದನೇ ತಿಂಗಳಲ್ಲಿ, ಮಹಾಪುರುಷ ಮಹಾರಾಜರು ಅವನಿಗೆ ಕಾಷಾಯ ವಸ್ತ್ರ ಧರಿಸಲು ಅನುಮತಿ ನೀಡಿದರು.

ಆರಂಭದಿಂದಲೇ ಶಂಕರ ತನ್ನ ಜೀವನ ಮತ್ತು ಎಲ್ಲ ಕಾರ್ಯಗಳನ್ನು ಶ್ರೀರಾಮಕೃಷ್ಣ ವಿವೇಕಾನಂದರಿಗೆ ಅರ್ಪಿಸಿಬಿಟ್ಟಿದ್ದ. ಮುಂದೊಮ್ಮೆ ಸ್ವಾಮಿ ರಂಗನಾಥಾನಂದರು ಹೀಗೆ ಹೇಳಿದ್ದಾರೆ:

"ನಾನು ಮಹಾಸಂಘವನ್ನು ಸೇರಿದ ದಿನದಿಂದಲೇ ತಪಸ್ಸಿನಲ್ಲಿ ತೊಡಗಿದ್ದೇನೆ. ಮಹಾಸಂಘದಲ್ಲಿನ ನನ್ನ ಜೀವನ–ಕಾರ್ಯಗಳೆಲ್ಲ ತಪಸ್ಸು. ಸ್ವಾಮಿ ವಿವೇಕಾನಂದರ ಪತ್ರದಲ್ಲಿನ ಒಂದು ವಾಕ್ಯ ನನ್ನಲ್ಲಿ ಸ್ಫೂರ್ತಿ ತುಂಬಿ ನನ್ನ ವ್ಯಕ್ತಿತ್ವವನ್ನು ನಿರ್ಮಾಣ ಮಾಡಿದ ಆ ವಾಕ್ಯ: 'ಗಾಂಭೀರ್ಯದೊಂದಿಗೆ ಶಿಶುಸಹಜ ಸರಳತೆಯನ್ನು ರೂಢಿಸಿಕೊ."

ಅಧ್ಯಯನತತ್ಪರತೆ ಜೊತೆಗೆ ಅಗಾಧ ಧಾರಣಶಕ್ತಿ ಅವರು ಓದಿದ್ದೆಲ್ಲವನ್ನು ಗ್ರಹಿಸಲು, ಮನುಕುಲದ ಮೇಲೆ ಪ್ರಭಾವ ಬೀರಿದ ಚಿಂತನೆಗಳ ವೈಶಾಲ್ಯವನ್ನು ಅರಿಯಲು ಸಾಧ್ಯವಾಯಿತು. ಅವರು ಹಿಂದೂ ಧಾರ್ಮಿಕ ಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿದರು ಮತ್ತು *ಗೀತೆ* ಹಾಗೂ *ವಿವೇಕಚೂಡಾಮಣಿ*ಯನ್ನು ಕಂಠಪಾಠ ಮಾಡಿದರು. ವ್ಯವಸ್ಥಿತವಾಗಿ ವಿಶದವಾಗಿ ಸೂಕ್ಷ್ಮವಿಚಾರಗಳನ್ನು ಮಂಡಿಸುವ ಪಾಶ್ಚಾತ್ಯ ಕೃತಿಗಳು ಕೂಡ ಸ್ವಾಮಿ ರಂಗನಾಥಾನಂದರನ್ನು ಆಕರ್ಷಿಸಿದವು. ಅವರ ವಿಶಾಲ ಅಧ್ಯಯನ ಪರಿಧಿಯಲ್ಲಿ ಚರಿತ್ರೆ, ತತ್ತ್ವಶಾಸ್ತ್ರ ಮತ್ತು ವಿಜ್ಞಾನದ ಸಂಪುಟಗಳು ಒಳಗೊಂಡಿದ್ದವು ಎಚ್.ಜಿ.ವೆಲ್ಸ್ ಅವರ *ಔಟ್‌ಲೈನ್ ಆಫ್ ಹಿಸ್ಟರಿ*, ಟಿಲ್ಲಿಯವರ *ಹಿಸ್ಟರಿ ಆಫ್ ಫಿಲಾಸಫಿ*, ಜ್ಯುಲಿಯನ್ ಹಕ್ಸ್ಲಿ ಮತ್ತು ಎಚ್.ಜಿ.ವೆಲ್ಸ್ ಅವರ *ಸೈನ್ಸ್ ಆಫ್ ಲೈಫ್*, ಎ.ಜೆ ಥಾಮ್ಸನ್ ಅವರ *ಇಂಟ್ರಡಕ್ಷನ್ ಟು ಸೈನ್ಸ್*, ಹರ್ಬರ್ಟ್ ಸ್ಪೆನ್ಸರ್ ಅವರ *ಫಸ್ಟ್ ಪ್ರಿನ್ಸಿಪಲ್ಸ್* ಮತ್ತು ಮೆಕಡಗಾಲ್ ಅವರ *ಇಂಟ್ರಡಕ್ಷನ್ ಟು ಸೈಕಾಲಜಿ* ಸ್ವಾಮಿ ರಂಗನಾಥಾನಂದರು ಅಧ್ಯಯನ ಮಾಡಿದ ಪ್ರಮುಖ ಕೃತಿಗಳು. ಧಾರ್ಮಿಕ ಮತ್ತು ಲೌಕಿಕ ಗ್ರಂಥಗಳನ್ನು ಕುರಿತ ಆಸಕ್ತಿ, ಅಧ್ಯಯನಶೀಲತೆ ಅವರ ಜೀವನಪರ್ಯಂತ ಮುಂದುವರೆಯಿತು.

ಕೆಲವು ವರ್ಷಗಳ ಬಳಿಕ, ೧೯೨೯ರಲ್ಲಿ ಅವರು ಬೇಲೂರು ಮಠಕ್ಕೆ ಪ್ರಥಮ ಭೇಟಿ ನೀಡಿದರು ಮತ್ತು ಆ ಸಂದರ್ಭದಲ್ಲಿ ಅವರು ಬ್ರಹ್ಮಚರ್ಯೆ ದೀಕ್ಷೆ ಪಡೆದು ನಾಲ್ಕು ತಿಂಗಳ ಕಾಲ ನೆಲೆಸಿದರು. ೧೯೨೯ರ ಮೇ ೨೩ರಂದು ಬುದ್ಧ ಪೂರ್ಣಿಮೆಯ ದಿನ ಅವರು ಬ್ರಹ್ಮಚರ್ಯ ದೀಕ್ಷೆ ಪಡೆದರು.

ಆ ದಿನಗಳಲ್ಲಿ ಅವರು ಬಹಳ ಸಂತೋಷದಿಂದ ಬೇಲೂರು ಮಠದಲ್ಲಿ ವಿವಿಧ ಕೆಲಸಗಳನ್ನು ಮಾಡುತ್ತಿದ್ದರು. ಮಠದ ಮುಂದಿನ ವಿಶಾಲ ಅಂಗಳವನ್ನು ಪ್ರತಿದಿನವೂ ಗುಡಿಸಿ ಸ್ವಚ್ಛಗೊಳಿಸುತ್ತಿದ್ದರು. ವಿಪರೀತ ಗಾಳಿಯ ಪರಿಣಾಮವಾಗಿ ಧೂಳು ಶೇಕರಣೆಯಾಗುತ್ತಿದ್ದ ಕಾರಣ ಕೆಲವೊಮ್ಮೆ ಅವು ಅಂಗಳವನ್ನು ದಿನವೊಂದರಲ್ಲೇ ಹಲವಾರು ಬಾರಿ ಗುಡಿಸಬೇಕಾಗುತ್ತಿತ್ತು. ಠಾಕೂರರ ಪೂಜೆಗೆ ಬೇಕಾದ ಪಾತ್ರೆಗಳನ್ನು (ಪೂಜಾ ಸಲಕರಣೆಗಳನ್ನು) ತೊಳೆದಿಡುತ್ತಿದ್ದರು, ಮಹಾಸಂಘದ ಸದಸ್ಯರುಗಳಿಗೆ ಚಹಾ ನೀಡುವುದು, ಮಹಾಪುರುಷ ಮಹಾರಾಜರ ಸ್ನಾನಕ್ಕಾಗಿ ಕೊಳವೆಬಾವಿಯಿಂದ ನೀರು ತರುವುದು ಜೊತೆಗೆ ಇತರ ಕೆಲಸಗಳನ್ನು ಮಾಡುತ್ತಿದ್ದರು. ಮಧ್ಯಾಹ್ನದ ಮತ್ತು ರಾತ್ರಿಯ ಊಟದ ನಂತರದ ಸಮಯವನ್ನು ಹೊರತುಪಡಿಸಿದಂತೆ ಹಸಿವು ಸದಾ ಅವರನ್ನು ಕಾಡುತಿತ್ತು. ಬೆಳಗಿನ ಉಪಾಹಾರವೆಂದರೆ ಚಹಾದೊಂದಿಗೆ ದೊರೆಯುತ್ತಿದ್ದ, 'ಚಾಕುವಿನಷ್ಟೆ ತೆಳುವಾದ' ಬ್ರೆಡ್. ಅವರ ದಿನದ ಅಗಾಧ ಕೆಲಸದ ರಾಶಿಯನ್ನು ಮುಗಿಸಲು ಈ ಉಪಾಹಾರ ಸಾಲುತ್ತಿರಲಿಲ್ಲ. ಆದುದರಿಂದ ಹಸಿವು ಹಿಂಗಿಸಲು ಜೇಬಿನಲ್ಲಿ ಸದಾ ಪುರಿಯನ್ನು ತುಂಬಿಕೊಂಡಿರುತ್ತಿದ್ದರು.

೧೯೩೩ರಲ್ಲಿ ಅವರು ಮತ್ತೆ ಬೇಲೂರು ಮಠಕ್ಕೆ ಬಂದು ಸಂನ್ಯಾಸ ದೀಕ್ಷೆ ನಾಲ್ಕು ತಿಂಗಳ ಕಾಲ ನೆಲೆಸಿದರು. ೧೯೩೩ರ ಜನವರಿ ೨೩ರಂದು, ಸ್ವಾಮಿ ವಿವೇಕಾನಂದರ ಜನ್ಮದಿನದ ಪುಣ್ಯದಿನದಂದು ಅವರು ಸಂನ್ಯಾಸ ದೀಕ್ಷೆ ಪಡೆದರು. ಒಂದು ದಿನ ಸಂಘದ ಸಾಮಾನ್ಯ ಕಾರ್ಯದರ್ಶಿ ಪೂಜ್ಯ ಸ್ವಾಮಿ ಶುದ್ಧಾನಂದಜಿಯವರು ರಂಗನಾಥಾನಂದರ ಸುದೀರ್ಘ ಕಾಲ ಬೇಲೂರಿನಲ್ಲಿ ನೆಲೆಸಿರುವುದನ್ನು ಪ್ರಸ್ತಾಪಿಸಿ ಅವರು ಮೈಸೂರಿಗೆ ಹಿಂದಿರುಗಬೇಕೆಂದು ಸೂಚಿಸಿದರು. ಆದುದರಿಂದ ರಂಗನಾಥಾನಂದಜಿ ಅಲ್ಲಿಂದ ಸರ್ಗಾಚಿಗೆ ಪ್ರಯಾಣ ಬೆಳೆಸಿದರು. ಅಲ್ಲಿ ಸ್ವಾಮಿ ಅಖಂಡಾನಂದರು ಇವರನ್ನು ಒಬ್ಬ ಬಹು ಮುಖ್ಯ ವ್ಯಕ್ತಿಯಂತೆ ಆದರಿಸಿದರು.

ಇವರಿಗೇ ಪ್ರತ್ಯೇಕವಾದ ಕಪ್, ಸಾಸರ್, ಚಹಾಪಾತ್ರೆ ಮೀಸಲಾದವು. ಅಲ್ಲಿ ಮೂರು ದಿನ ನೆಲೆಸಿದರು. ಈ ಅಲ್ಪ ಸಮಯದಲ್ಲೇ ರಂಗನಾಥಾನಂದರು ಅಖಂಡಾನಂದರೊಂದಿಗೆ ಆತ್ಮೀಯ ಸಂಬಂಧ ಹೊಂದಿದರು. ಶ್ರೀ ರಾಮಕೃಷ್ಣರ ನೇರ ಶಿಷ್ಯರೂ ಕರುಣಾಮಯಿಗಳೂ ಆದ ಅಖಂಡಾನಂದರನ್ನು, ಅಲ್ಲಿಂದ ಹೊರಡುವ ಮುನ್ನ, ತಾವು ಸ್ವಾಮಿ ವಿವೇಕಾನಂದರ ಸಂದೇಶ ಪ್ರಸರಿಸಲು ಸಾಮರ್ಥ್ಯಗಳಿಸುವಂತೆ ಆಶೀರ್ವದಿಸಬೇಕೆಂದು ಸ್ವಾಮಿ ರಂಗನಾಥನಂದರು ಬೇಡಿಕೊಂಡರು. ಅಖಂಡಾನಂದರು ತಮ್ಮ ಹಸ್ತಗಳನ್ನು ಇವರ ತಲೆಯ ಮೇಲಿರಿಸಿ " ನನಗೆ ನನ್ನ ಆಶೀರ್ವಾದವಿದೆ, ಆಶೀರ್ವಾದವಿದೆ!" ಎಂದು ಹರಸಿದರು. ತಮ್ಮೊಳಗೆ ವಿಶೇಷ ಆಧ್ಯಾತ್ಮಿಕ ಶಕ್ತಿಯೊಂದು ಪ್ರವಹಿಸಿ ತಾವು ಉನ್ನತ ನೆಲೆ ತಲುಪಿದಂತೆ ರಂಗನಾಥಾನಂದರಿಗೆ  ಭಾಸವಾಯಿತು. ಇದು ಸಾಮಾನ್ಯ ಆಶೀರ್ವಾದವಲ್ಲ, ಅದರ ಶಕ್ತಿ ತಮ್ಮೊಳಗೆ ನುಗ್ಗಿ ಹೊಸ ರೂಪದಲ್ಲಿ ತಮ್ಮೊಳಗೆ ನೆಲೆಯಾದುದನ್ನು ರಂಗನಾಥಾನಂದರು ಕಂಡರು. ಅಖಂಡಾನಂದರಿಗೆ ಪ್ರಣಾಮ ಸಲ್ಲಿಸಿ ಸರ್ಗಾಚಿಯಿಂದ ಬೀಳ್ಕೊಂಡರು. ಅಖಂಡಾನಂದರು, ಅವರು ಕಣ್ಮರೆಯಾಗುವ ವರೆಗೆ, ರೈಲ್ವೆನಿಲ್ದಾಣಕ್ಕೆ ಪ್ರವೇಶಿಸುವವರೆಗೆ ಅವರನ್ನೇ ವಾತ್ಸಲ್ಯದಿಂದ ದಿಟ್ಟಿಸುತ್ತಲೇ ಇದ್ದರು.

**ಸಹಜ ಪ್ರವೃತ್ತಿಗಳ ದಮನದಿಂದ ಶಕ್ತಿಸಂಗ್ರಹ**

ಸ್ವಾಮಿ ರಂಗನಾಥಾನಂದರು ಸ್ವಭಾವತಃ ಧೈರ್ಯಶಾಲಿಗಳು, ಸಾಹಸಿಗಳು ಮತ್ತು ಯೌವನದಲ್ಲಂತೂ ಉಕ್ಕಿಹರಿಯುವ ಶಕ್ತಿಯನ್ನು ಹೊಂದಿದ್ದರು. ಇತರ ಯುವಕರಂತೆ ವಿವಿಧ ಕ್ರೀಡೆ, ಅಂಗಸಾಧನೆಯಲ್ಲಿ ಆಸಕ್ತರು. ಹೀಗಾಗಿ ಅವರು ಜೀವನಪರ್ಯಂತ ಸಾಹಸ ಮನೋಭಾವ, ಕ್ರಿಯಾಶೀಲರಾಗಿದ್ದು ದೇಹದ ಕಸುವನ್ನು ಕಾಪಾಡಿಕೊಂಡಿದ್ದರು. ಯುವಸಹಜ ಪ್ರವೃತ್ತಿ ಅವರ ಈಜಾಟ, ವಾಲಿಬಾಲ್ ಆಟಗಳಲ್ಲಿ ವ್ಯಕ್ತವಾಗುತ್ತಿತ್ತು. ಬಾಲ್ಯದಲ್ಲಿ ಅವರು ಕಲಿತ ಈಜು ಪರಿಣತಿ ಜೀವನದುದ್ದಕ್ಕೂ ಉಳಿಯಿತು. ಅವಕಾಶ ಸಿಕ್ಕಾಗಲೆಲ್ಲ ಅವರು ನೀರಿಗೆ ಧುಮುಕುತಿದ್ದರು. ಅವರು ಬಾಲಕರಾಗಿದ್ದಾಗಲೇ ತ್ರಿಕ್ಕೂರಿನ ಅಂಚಿನಲ್ಲಿದ್ದ ಮನಾಲಿ ನದಿಯನ್ನು ಈಜಿಕೊಂಡು ದಾಟಿ ಒಳ್ಳೂರಿನ ಪ್ರೌಢಶಾಲೆ ತಲುಪುತ್ತಿದ್ದರು. ನದಿ ದಾಟಲು ಆಗ ಸೇತುವೆ ಇರಲಿಲ್ಲ. ಆನಂತರದಲ್ಲಿ ಅವರು ಗೋಲ್ ಪಾರ್ಕ್‌ನ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್‌ನಲ್ಲಿದ್ದ ಸಂದರ್ಭದಲ್ಲಿ ಬಲ್ಗೇರಿಯಾ ವಿದ್ಯಾರ್ಥಿ ನಿಲಯದಲ್ಲಿದ್ದ ಚಿಕ್ಕ ಕೊಳದಲ್ಲಿ ಈಜುತ್ತಿದ್ದರು. ೧೯೭೦ರ ದಶಕದಲ್ಲಿ ಅಮೇರಿಕ ತಹೋಯ್ ಸರೋವರಕ್ಕೆ, ಅದು ಕ್ಯಾಲಿಫೋರ್ನಿಯಾ ನೆವಾಡ ಸರಹದ್ದು ಪ್ರಾಂತ್ಯದಲ್ಲಿ ಸಿಯೆರಾ ನೆವಾಡ ಪರ್ವತಗಳಲ್ಲಿದೆ. ಭೇಟಿಯಿತ್ತ ಸಂದರ್ಭ. ಸಮುದ್ರದ  ಮಟ್ಟದಿಂದ ೬,೨೨೮ ಅಡಿ ಎತ್ತರದಲ್ಲಿ, ೨೨ ಮೈಲಿ ಉದ್ದ, ೧೨ ಮೈಲಿ ಅಗಲ ಮತ್ತು ೧೬೪೫ ಅಡಿ ಆಳವಿದೆ. ಈ ಸರೋವರ! ಸ್ವಾಮಿ ಪ್ರಬುದ್ಧಾನಂದರು ಮತ್ತು ಇತರರೊಡನೆ ರಂಗನಾಥಾನಂದರು ಈ ಸರೋವರದಲ್ಲಿ ದೋಣಿವಿಹಾರಕ್ಕೆಂದು ಹೊರಟರು. ದೋಣಿ ಸುಮಾರು ದೂರ ಚಲಿಸಿದ ಬಳಿಕ ಸ್ವಾಮಿ ರಂಗನಾಥಾನಂದರು ಮತ್ತು ಒಬ್ಬ ಬ್ರಹ್ಮಚಾರಿಗಳು ಸದ್ದಿಲ್ಲದೆ ನೀರಿಗೆ ಇಳಿದು ಕೆಲಕಾಲ ಆ ತಣ್ಣನೆಯ ನೀರಿನಲ್ಲಿ ಈಜಾಡಿದರು.

ಸ್ವಾಮೀಜಿಯವರಿಗೆ ನಡಿಗೆಯ ಅಭ್ಯಾಸವೂ ಇತ್ತು. ಎಷ್ಟೋ ದೂರದ ಪಯಣಗಳನ್ನು ಕಾಲ್ನಡಿಗೆಯಲ್ಲೇ ಮುಗಿಸುತ್ತಿದ್ದರು. ಜಪಾನ್ ಬರ್ಮಾ ದೇಶಕ್ಕೆ ದಾಳಿಯಿಟ್ಟ ಎರಡನೇ ಮಹಾಯುದ್ಧದ ಸಂದರ್ಭ, ಅಲ್ಲಿನ ಕೇಂದ್ರವನ್ನು ಮುಚ್ಚಿ ಭಾರತಕ್ಕೆ ಹಿಂದಿರುಗಬೇಕಾಯಿತು. ವಿಮಾನ ಅಥವಾ ದೋಣಿಯಲ್ಲಿ ಪಯಣಿಸುವ ಬದಲು ಚಾರಣದ ಮೂಲಕ ಕಡಿದಾದ, ಅಪಾಯಕರವಾದ  ಮಾರ್ಗದಲ್ಲಿ ಢಾಕಾಕ್ಕೆ ಹಿಂದಿರುಗುವ ಮಾರ್ಗವನ್ನು ರಂಗನಾಥಾನಂದಜಿ ಆಯ್ದುಕೊಂಡ ಮಾರ್ಗದುದ್ದಕ್ಕೂ ಅವರು ಇತರರ ಕಷ್ಟಗಳಿಗೆ ಸ್ಪಂದಿಸುತ್ತಾ ಅವರಿಗೆ ನೆರವಾಗುತ್ತಾ ಬಂದರು. ಅವರ ನೋವುಗಳಿಗೆ ಪ್ರಾಮಾಣಿಕ ಅನುಕಂಪೆ ತೋರುತ್ತಾ, ಧೈರ್ಯ ತಾತ್ವಿಕ

ಮಾರ್ಗದರ್ಶನ ನೀಡುತ್ತಾ ಸ್ವಾಮೀಜಿ ನಿರಾಶ್ರಿತರನ್ನು ಹುರಿದುಂಬಿಸುತ್ತಿದ್ದರು. ಅವರ ಢಾಕಾ ತಲುಪುವ ವೇಳೆಗೆ ಅವರು ಅಸ್ಥಿಪಂಜರದಂತಾಗಿಬಿಟ್ಟಿದ್ದರು. ಬೇಲೂರು ಮಠದಲ್ಲಿ ಅವರನ್ನು ಕಂಡ ಅಂದಿನ ಸಹಾಯಕ ಕಾರ್ಯದರ್ಶಿಗಳಾದ ಪೂಜ್ಯ ಸ್ವಾಮಿ ವೀರೇಶ್ವರನಂದಜಿ ಅವರು, ರಂಗನಾಥಾನಂದರನ್ನು ಆರೋಗ್ಯ ಸುಧಾರಣೆಗಾಗಿ ಖಂಖಲ್ ಆಶ್ರಮಕ್ಕೆ ಕಳಿಸಿದರು. ಖಂಖಲ್‌ನ ನಾರಾಯಣ ಮಹಾರಾಜ್ (ಮುಂದೆ ಸ್ವಾಮಿ ಸರ್ವಗಥಾನಂದ) ಅವರನ್ನು ಕಕ್ಕುಲತೆಯಿಂದ ನೋಡಿಕೊಂಡರು. ಕೇವಲ ಒಂದೇ ತಿಂಗಳಿನಲ್ಲಿ ಸ್ವಾಮೀಜಿ ಪೂರ್ವದ ಆರೋಗ್ಯ ಪಡೆದುಕೊಂಡು ಇತರ ಆಶ್ರಮವಾಸಿಗಳೊಂದಿಗೆ ವಾಲಿಬಾಲ್ ಆಡುವಂತಾದರು!

**ಶಾಶ್ವತ ಮೌಲ್ಯಗಳ ಪ್ರಚಾರಕ**

ಖಂಖಲ್‌ನಲ್ಲಿ ನೆಲೆಸಿ ಅನಾರೋಗ್ಯದಿಂದ ಚೇತರಿಸಿಕೊಂಡ ಬಳಿಕ ಸ್ವಾಮಿ ರಂಗನಾಥಾನಂದರನ್ನು ಕರಾಚಿಯ ರಾಮಕೃಷ್ಣ ಮಿಷನ್ ಆಶ್ರಮಕ್ಕೆ ಕಳಿಸಿಕೊಡಲಾಯಿತು. ಇಲ್ಲಿ ಸ್ವಾಮೀಜಿ ೧೯೪೨–೧೯೪೮ರ ಅವಧಿಯಲ್ಲಿ ಭಾಷಣಕಲೆಯನ್ನು ಸಿದ್ಧಿಸಿಕೊಂಡರು. ಆರಂಭದಲ್ಲಿ ಅವರ ವಾರದ ಭಗವದ್ಗೀತಾ ಪ್ರವಚನಕ್ಕೆ ಐವತ್ತು ಜನ ಬರುತ್ತಿದ್ದರು. ಕೆಲವು ವರ್ಷಗಳಲ್ಲಿ ಅವರ ವಾರದ ಉಪನ್ಯಾಸವೊಂದಕ್ಕೆ ಸಹಸ್ರಾರು ಜನ ಆಕರ್ಷಿತರಾಗಲಾರಂಭಿಸಿದರು. ಜ್ಞಾನಭರಿತವಾದ ಈ ಉಪನ್ಯಾಸ ಕೇಳಲು ಇತರ ಮತದವರೂ ಅಂದರೆ ಮುಸಲ್ಮಾನರು, ಕ್ರೈಸ್ತರು ಮತ್ತು ಪಾರ್ಸಿಗಳು ಕೂಡ ಬರಲಾರಂಭಿಸಿದರು. ಭಾರತ ವಿಭಜನೆಯ ಮುನ್ನಾದಿನಗಳಲ್ಲಿ ಭುಗಿಲೆದ್ದ ಮತೀಯ ಗಲಭೆ, ಹಿಂಸೆಗಳ ಕಾರಣದಿಂದ ಅವರು ಕರಾಚಿಯನ್ನು ಬಿಟ್ಟು ಭಾರತಕ್ಕೆ ಹಿಂದಿರುಗಬೇಕಾಯಿತು.

ಅವರ ಮುಂದಿನ ನೇಮಕ ದೆಹಲಿ ಕೇಂದ್ರದ ಮುಖ್ಯಸ್ಥರಾಗಿ. ೧೯೪೯ರಿಂದ ೧೯೬೨ರವರೆಗೆ ಅವರು ಇಲ್ಲಿ ಸೇವೆ ಸಲ್ಲಿಸಿದರು. ಕಾಲೇಜು ವಿದ್ಯಾರ್ಥಿಗಳಿಗೆ ಉಪಯೋಗಿಯಾದ ಪಠ್ಯಪುಸ್ತಕಗಳ ಗ್ರಂಥಾಲಯವೊಂದನ್ನು ಅವರು ಆಶ್ರಮದಲ್ಲಿ ಸ್ಥಾಪಿಸಿ, ಉದ್ಘಾಟಿಸಿ 'ಹೊಸ ಜೀವ' ನೀಡಿದರು. ಅಲ್ಲಿನ ದೇವಸ್ಥಾನವನ್ನು ನಿರ್ಮಿಸಿ ಕೇಂದ್ರಕ್ಕೆ ಮತ್ತಷ್ಟು ಶೋಭೆ, ಶಕ್ತಿ ನೀಡಿದರು. ದೆಹಲಿ ಕೇಂದ್ರದಲ್ಲಿ ವಾರದ ಉಪನ್ಯಾಸಗಳ ಮೂಲಕ ಅವರು ತಾವೊಬ್ಬ ಉತ್ತಮ ವಾಗ್ಮಿ ಎಂದು ಮತ್ತೊಮ್ಮೆ ಸ್ಥಿರಪಡಿಸಿದರು. ಅವರ ಉಪನ್ಯಾಸಕ್ಕೆ ಎರಡು ಸಾವಿರಕ್ಕೂ ಹೆಚ್ಚು ಜನ ಆಕರ್ಷಿತರಾಗುತ್ತಿದ್ದರು. ಇವರಲ್ಲಿ ಗಣ್ಯಾತಿಗಣ್ಯ ವ್ಯಕ್ತಿಗಳು, ವಿದೇಶಿ ರಾಯಭಾರಿಗಳೂ ಸೇರಿದ್ದರು. ಕೆಲದಿನಗಳ ಬಳಿಕ, ೧೯೬೨ರಲ್ಲಿ ಗೋಲ್ ಪಾರ್ಕ್‌ನ ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್‌ನ ಮುಖ್ಯಸ್ಥರಾಗಿ ಇವರಿಗೆ ಜವಾಬ್ದಾರಿ ನೀಡಲಾಯಿತು. ಅಲ್ಲಿಯೂ ಅವರು ಉಪನಿಷತ್ತುಗಳ ಸಂದೇಶವನ್ನು ಕುರಿತು ಮಾತನಾಡುತ್ತಿದ್ದ ವಾರದ ಉಪನ್ಯಾಸಗಳು ಬಹಳ ಪರಿಣಾಮಕಾರಿಯಾಗಿರುತ್ತಿತ್ತು. ಮುಂದೆ ಇವು 'ದಿ ಮೆಸೇಜ್ ಆಫ್ ಉಪನಿಷದ್ಸ್' (೧೯೬೮) ಎಂಬ ಶೀರ್ಷಿಕೆ ಅಡಿಯಲ್ಲಿ ಪ್ರಕಟಗೊಂಡವು.

ಸ್ವಾಮಿ ರಂಗನಾಥಾನಂದರ ಆರಂಭದ ಹಾರೈಕೆ ಕೈಗೂಡಿತು. ಭಾರತ, ಏಷ್ಯಾಖಂಡ, ಮತ್ತು ಪಾಶ್ಚಾತ್ಯ ದೇಶಗಳಲ್ಲಿ ಅವರ ಉಪನ್ಯಾಸಗಳು ಪ್ರಸಿದ್ಧಿ ಪಡೆದವು. ಚೈನಾ ಹೊರತುಪಡಿಸಿದಮತೆ ವಿಶ್ವದ ಬಹುತೇಕ ಎಲ್ಲ ರಾಷ್ಟ್ರಗಳಿಗೆ ಅವರು ಭೇಟಿಯಿತ್ತರು. ೧೯೫೮ರಲ್ಲಿ ಭಾರತದ ಶಿಕ್ಷಣ ಇಲಾಖೆ, ಜಪಾನಿನ ವಿಶ್ವ ವಿದ್ಯಾಲಯಗಳಲ್ಲಿ ಮತ್ತು ಏಷಿಯಾದ ದೇಶಗಳಿಗೆ ಉಪನ್ಯಾಸ ಮಾಡಬೇಕೆಂದು ಕೋರಿಕೊಂಡಿತು. ೧೯೬೧ರ ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಅವರು ಯೂರೋಪಿನ ರಾಷ್ಟ್ರಗಳಿಗೆ –ಜೆಕೊಸ್ಲೊವಾಕಿಯಾ, ಪೋಲೆಂಡ್, ರಷ್ಯಾ, ಸ್ಪೇನ್ ದೇಶಗಳನ್ನು ಒಳಗೊಂಡಂತೆ ಭೇಟಿ ನೀಡುವುದಿತ್ತು. ಈ ಸುದೀರ್ಘ ಪ್ರವಾಸ ಕೈಗೊಳ್ಳುವ ಮುನ್ನ

ಅವರು ಹೃಷಿಕೇಶಕ್ಕೆ ಭೇಟಿಯಿತ್ತು, ತಮ್ಮ ಉದ್ದೇಶದ ಸಾರ್ಥಕತೆಗಾಗಿ ಅಲ್ಲಿನ ಎಲ್ಲ ಸಾಧುಗಳ ಆಶೀರ್ವಾದ ಪಡೆದುಕೊಂಡರು.

ಈ ಪ್ರವಾಸಗಳು ಬಳಿಕ ನಡೆದವೂ ಸ್ವಾಮೀಜಿ ಶ್ರೇಷ್ಠ ವಾಗ್ಮಿ ಎಂದು ಸಿದ್ಧಪಡಿಸಿದವು. ಅವರ ಸ್ಫೂರ್ತಿಯುತ ವಾಗ್ಸ್ಫುರಿ ಪಂಡಿತ–ಪಾಮರರಾದಿಯಾಗಿ ಎಲ್ಲರಿಗೂ ಪ್ರಿಯವಾದವು. ಭಾರತದ ಸನಾತನ ಸಂದೇಶವನ್ನು ಬೌದ್ಧಿಕ, ತಾರ್ಕಿಕ ನೆಲೆಯಲ್ಲಿ ವಿವರಿಸುತ್ತಾ ಪಂಡಿತರ ಮನಮುಟ್ಟುತ್ತಿದ್ದರು. ಆಧುನಿಕ ಜೀವನಕ್ಕೆ ನೆಲೆಯಾಗಬಲ್ಲ ಭಾರತೀಯ ಮೌಲ್ಯದ ಮಹತ್ವವನ್ನು ಸರ್ ಜ್ಯುಲಿಯನ್ ಹಕ್ಸ್ಲಿ ಅರಿತಿದ್ದರು. ಇವರು ಸ್ವಾಮಿ ರಂಗನಾಥಾನಂದರೊಂದಿಗೆ ನಡೆಸಿದ ದೀರ್ಘ ಪತ್ರ ವ್ಯವಹಾರಗಳು 'ಮನೇಜ್ ಆಫ್ ದಿ ಉಪನಿಷದ್ಸ್' ಗ್ರಂಥದಲ್ಲಿ ದಾಖಲಾಗಿದೆ. ಸ್ವಾಮಿ ರಂಗನಾಥನಂದರು ವಿದ್ವಜ್ಜನರನ್ನು, ಚರಿತ್ರಕಾರರನ್ನು, ವಿವಿಧ ಮತಪಂಥಗಳ ಧಾರ್ಮಿಕ ಮುಖಂಡರನ್ನು, ರಾಯಭಾರಿಗಳನ್ನು ರಾಜಕೀಯ ನಾಯಕರನ್ನು ಭೇಟಿಯಾಗುತ್ತಿದ್ದರು. ಇವರೆಲ್ಲ ಸ್ವಾಮೀಜಿಯವರ ವಿಶೇಷವಾದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಸತ್ವದಿಂದ ಆಕರ್ಷಿತರಾಗಿರುತ್ತಿದ್ದರು,

ದೆಹಲಿಯಲ್ಲಿರುತ್ತಿದ್ದ ದಿನಗಳಿಂದ ಮೊದಲ್ಗೊಂಡು ಸತತವಾಗಿ ಮತ್ತು ನಿಯತವಾಗಿ ಸ್ವಾಮಿ ರಂಗನಾಥಾನಂದರು ವಿದೇಶಗಳಿಗೆ ಪ್ರಯಾಣ ಮಾಡುತ್ತಿದ್ದರು. ೧೯೫೬ರಿಂದ ೧೯೮೬ರವರೆಗೆ ಅವರು ಕೈಗೊಂಡ ಪ್ರಯಾಣಗಳ ಮುಖ್ಯ ಉದ್ದೇಶ ವಿದೇಶಗಳಲ್ಲಿ ಭಾರತದ ಧಾರ್ಮಿಕ ಮೌಲ್ಯಗಳನ್ನು ಪ್ರಸರಿಸುವುದೇ ಆಗಿತ್ತು. ಭೋಗವಾದದ ಹಿನ್ನೆಲೆಯಲ್ಲಿ ಪ್ರಾಪಂಚಿಕ ಜೀವನದಲ್ಲಿ ಮುಳುಗಿಹೋಗಿದ್ದ ಜನರಿಗೆ ಈ ಮೌಲ್ಯಗಳ ಪ್ರಸ್ತುತತೆಯನ್ನು ಮನಗಾಣಿಸುವ ಅವರ ಸಾಮರ್ಥ್ಯ ಅವರ ಯಶಸ್ಸಿಗೆ ಮುಖ್ಯ ಕಾರಣ. ಸಮಸ್ಥಿತಿಯ ಭ್ರಮನಿರಸನಕ್ಕೆ ಒಳಗಾಗಿದ್ದ ಜನರಿಗೆ ಭಾರತದ ಸಾರ್ವಕಾಲಿಕ, ಪುರಾತನ ಸತ್ವಗಳನ್ನು ಶ್ರೀರಾಮಕೃಷ್ಣ ವಿವೇಕಾನಂದರ ಜೀವನದ ಹಿನ್ನೆಲೆಯಲ್ಲಿ ತಿಳಿಸಿಕೊಡುತ್ತಿದ್ದುದು ಇವರ ವಿಶೇಷತೆಯಾಗಿತ್ತು. ತಮ್ಮ ಆರಂಭದ ಕಾಲದಿಂದ ಅಂತ್ಯದ ದಿನಗಳವರೆಗೂ ಜನಸಾಮಾನ್ಯರನ್ನು ಮತ್ತು ಪಂಡಿತ ವರ್ಗವನ್ನು ಅವರು ತಲುಪಬಲ್ಲವರಾಗಿದ್ದರು. ಪಾಂಡಿತ್ಯದ ಜೊತೆಗೇ ಅವರಲ್ಲಿದ್ದ ದಯಾಭಾವ ಮತ್ತು ಆರ್ದ್ರತೆಯ ಕಾರಣದಿಂದ ಇದು ಸಾಧ್ಯವಾಯಿತು.

ಒಮ್ಮೆ ಅವರು ದೆಹಲಿಯಲ್ಲಿದ್ದ ದಿನಗಳಲ್ಲಿ ಒಬ್ಬ ಭಕ್ತರು ಅವರನ್ನು ತಮ್ಮ ಮನೆಗೆ ಭೋಜನಕ್ಕೆ ಆಹ್ವಾನಿಸಿದ್ದರು. ಈ ಸಂದರ್ಭದಲ್ಲಿ ಆಹ್ವಾನಿತರಾಗಿ ಬಂದಿದ್ದ ಹತ್ತು–ಹದಿನೈದು ಜನರಿಗೆ, ಭೋಜನಕ್ಕೆ ಮುನ್ನ ಕಠೋಪನಿಷತ್ತಿನ ಮುಖ್ಯಾಂಶಗಳನ್ನು ಕುರಿತು ಒಂದು ಕಿರುಉಪನ್ಯಾಸ ನೀಡಿದರು. ಉಪನ್ಯಾಸದ ಬಳಿಕ ಪ್ರಶ್ನೆಗಳನ್ನು ಆಹ್ವಾನಿಸಿದರು. ಆದರೆ ಯಾರೂ ಪ್ರಶ್ನೆ ಕೇಳುವ ಸಾಹಸಕ್ಕೆ ಕೈಹಾಕಲಿಲ್ಲ. ಸ್ವಲ್ಪ ಸಮಯದ ಬಳಿಕ, ಬಹಳ ಅಳುಕಿನಿಂದಲೇ ಯುವ ಗೃಹಿಣಿಯೊಬ್ಬಳು "ನಾನು ನನ್ನ ಅತ್ತೆ–ಮಾವಂದಿರನ್ನು ಹೇಗೆ ಸಂಭಾಳಿಸಬೇಕು?" ಎಂದು ಪ್ರಶ್ನಿಸಿದಳು. ಅತಿ ಸಹಜ, ಸಾಮಾನ್ಯವಾದ ಈ ಸಮಸ್ಯೆ, ಪ್ರಶ್ನೆ ಕೇಳಿ ಇತರರು ಘೊಳ್ಳೆಂದು ನಕ್ಕರು. ಕಠೋಪನಿಷತ್ತಿನ ನಚಿಕೇತ ಬದುಕಿನ ಸೂಕ್ಷ್ಮ ಜಲ್ವಂತ ಆಧ್ಯಾತ್ಮಿಕ ಅನ್ವೇಷಣೆಯಲ್ಲಿದ್ದರೆ ಈ ಯುವತಿಗಿದ್ದ ಈ ಮೂಲಭೂತ ಪ್ರಶ್ನೆ ನಿತ್ಯಜೀವನದಲ್ಲಿ ಅತ್ತೆ–ಮಾವಂದಿರನ್ನು ಸಂಭಾಳಿಸುವುದು ಹೇಗೆಂಬ ಸಮಸ್ಯೆ! ಆದರೆ ಸ್ವಾಮೀಜಿಯವರಿಗೆ ಈ ಬಗೆಯ ಅತ್ಯಂತ ಜೀವನನಿಷ್ಠ ಪ್ರಶ್ನೆಗಳಿಗೆ ಉತ್ತರಿಸುವ ಕಲೆ ಕರಗತವಾಗಿತ್ತು.

ನಾನು ೧೯೫೮–೧೯೬೦ರ ಅವಧಿಯಲ್ಲಿ ಬೇಲೂರು ಮಠದ ತರಬೇತಿ ಕೇಂದ್ರದಲ್ಲಿದ್ದಾಗ ಅವರು ೧೨ ಜನ ಬ್ರಹ್ಮಚಾರಿಗಳಿದ್ದ ನಮ್ಮ ತರಗತಿಗೆ ಭಗವದ್ಗೀತೆಯ ಹದಿಮೂರನೇ ಅಧ್ಯಾಯದ ಬಗ್ಗೆ ಉಪನ್ಯಾಸ ಮಾಡಿದರು. ಬಳಿಕ ಪ್ರತಿ ಯೊಬ್ಬರಿಗೂ ಅವರ *'ಎಟರ್ನಲ್ ವ್ಯಾಲ್ಯೂಸ್ ಫಾರ್ ಎ ಚೇಂಜಿಂಗ್ ಸೊಸೈಟಿ'*

(೧೯೫೮) ಪುಸ್ತಕದ ಪ್ರತಿಯನ್ನು ನೀಡಿದರು. ಜೊತೆಗೆ ನಮ್ಮ ಪ್ರಾಂಶುಪಾಲರಾಗಿದ್ದ ಸ್ವಾಮಿ ಬೋಧಾತ್ಮನಂದರ ಕೈಯಿಂದ ಸ್ವಾಮಿ ಗಂಭೀರಾನಂದರು ಉಪನಿಷತ್ತುಗಳ ಬಗ್ಗೆ ಬರೆದಿದ್ದ ಪುಸ್ತಕವನ್ನು ಕೊಡಿಸಿದರು. ಬೇಲೂರು ಮಠದಲ್ಲಿದ್ದಾಗ ಅವರು ಯಾವುದೇ ಉಪನ್ಯಾಸ ನೀಡುವ ಮುನ್ನ ಮಠದ ಹಳೆಯ ಮಂದಿರದಲ್ಲಿ ಕೆಲಕಾಲ ಧ್ಯಾನಸ್ಥರಾಗುವುದನ್ನು ಕಾಣುತ್ತಿದ್ದೆ. ಬೇಲೂರು ಮಠದ ಹೊರಗೆಯೂ ಅವರು ಉಪನ್ಯಾಸಕ್ಕೆ ಮುನ್ನ ರಾಮಕೃಷ್ಣ ಮಂದಿರದಲ್ಲಿ ಧ್ಯಾನ ಮಾಡುತ್ತಿದ್ದರು.

ನಾನು ತರಬೇತಿ ಕೇಂದ್ರದಲ್ಲಿ ಇದ್ದಾಗಲೊಮ್ಮೆ ಅವರು ಬಲರಾಮ ಮಂದಿರದಲ್ಲಿ ಬಂಗಾಳಿಯಲ್ಲಿ ಕಠೋಪನಿಷತ್ತಿನ ಬಗ್ಗೆ ಉಪನ್ಯಾಸ ನೀಡುವ ಕಾರ್ಯಕ್ರಮ ನಿಗದಿಯಾಗಿತ್ತು. ಸ್ವಾಮೀಜಿ ಮೂಲತಃ ಕೇರಳದವರು, ಅವರ ಬಂಗಾಳಿ ಉಪನ್ಯಾಸ ಹೇಗಿರಬಹುದೆಂಬ ಕುತೂಹಲ ನನಗೆ! ಈ ವಿಶೇಷ ಉಪ ನ್ಯಾಸಕ್ಕೆ ಹಾಜರಾಗಲು ನಾನು ಪ್ರಾಂಶುಪಾಲರ ಅಪ್ಪಣೆ ಬೇಡಿ, ದೊರಕಿಸಿಕೊಂಡೆ. ಅವರ ಉಪನ್ಯಾಸ ಕೇಳಿ ನಾನು ಆಶ್ಚರ್ಯಚಕಿತನಾದೆ. ಅವರು ಪುಂಖಾನು ಪುಂಖವಾಗಿ ಮೂಲ ಸಂಸ್ಕೃತ ಶ್ಲೋಕಗಳನ್ನು ಉದ್ಧರಿಸುತ್ತಾ ನಿರರ್ಗಳವಾಗಿ ಬಂಗಾಳಿಯಲ್ಲಿ ವಿವರಣೆ ನೀಡಬಲ್ಲವರಾಗಿದ್ದರು.

ಆಧ್ಯಾತ್ಮಿಕ ವಿಷಯಗಳನ್ನು ಕುರಿತಂತೆ ಉಪನ್ಯಾಸ ನೀಡುವ ಅವರ ಒಲವು ಎಷ್ಟು ಬಲವಾಗಿತ್ತೆಂದರೆ ಅವರು ತಮಗೆ ಬರುತ್ತಿದ್ದ ಯಾವುದೇ ಆಹ್ವಾನವನ್ನು ತಿರಸ್ಕರಿಸುತ್ತಿರಲಿಲ್ಲ. ಅವರು ಕಂಕಲ್‌ನ ರೋಟರಿ ಕ್ಲಬ್‌ನಲ್ಲಿ ಕೇವಲ ೧೫-೨೦ ಜನರಿಗೆ ಉಪನ್ಯಾಸ ನೀಡಿದ್ದನ್ನು ಕಂಡಿದ್ದೇನೆ. ಹಾಗೇ ಮದ್ರಾಸಿನಲ್ಲಿ ೩೦೦-೪೦೦ ಮಂದಿ ತುಂಬಿರುವ ಸಭೆಗೆ ಉಪನ್ಯಾಸ ಮಾಡುವುದನ್ನೂ ಕಂಡಿದ್ದೇನೆ. ಒಮ್ಮೆ ಅವರು ಮದ್ರಾಸಿನಲ್ಲಿ ಲೈಬ್ರರಿ ಹಾಲ್‌ನಲ್ಲಿ ಶನಿವಾರ ಮತ್ತು ಭಾನುವಾರ ಬೆಳಗ್ಗೆ ಭಾಗವತದ ವಿಷಯವಾಗಿ ಉಪನ್ಯಾಸ ನೀಡಲು ಆಸ್ಥೆ ತೋರಿದರು. ಇದನ್ನು ಅಲ್ಲಿನ ಅಧ್ಯಕ್ಷರಾಗಿದ್ದ ಪೂಜ್ಯ ಸ್ವಾಮಿ ತಪಸ್ಯಾನಂದಜಿ ಒಪ್ಪಿ ಸಭೆಗೆ ಅನುಮತಿಸಿದರು. ಐವತ್ತಕ್ಕೂ ಹೆಚ್ಚು ಮಂದಿ ಈ ಉಪನ್ಯಾಸಗಳಿಗೆ ಹಾಜರಾದರು. ಇದೊಂದು ವಿನೂತನ ಪ್ರಯೋಗವಾಗಿತ್ತು. ಏಕೆಂದರೆ ಸಾಮಾನ್ಯವಾಗಿ ಉಪನ್ಯಾಸಗಳು ನಡೆಯುತ್ತಿದ್ದುದು ಮಧ್ಯಾಹ್ನದ ಮೇಲೆಯೇ.

ಸ್ವಾಮಿ ರಂಗನಾಥಾನಂದರು ಸತತವಾಗಿ ಅನೇಕ ವರ್ಷಗಳ ಕಾಲ ಹಾಲೆಂಡ್ ಪ್ರವಾಸ ಕೈಗೊಂಡರು. ಕ್ರಮೇಣ ಅಲ್ಲಿನ ಭಕ್ತಾದಿಗಳೆಲ್ಲ ಸೇರಿ ಒಂದು ಆಶ್ರಮವನ್ನು ಸ್ಥಾಪಿಸಿದರು. ಇಂದು ಹಾಲೆಂಡಿನ ರಾಮಕೃಷ್ಣ ಆಶ್ರಮದ ಪ್ರಗತಿಯ ಹಿನ್ನೆಲೆಯಲ್ಲಿ ಸ್ವಾಮೀಜಿಯವರ ಪರಿಶ್ರಮ ಸ್ಪಷ್ಟ, ಅದರ ಫಲವೇ ಆಶ್ರಮದ ಸ್ಥಾಪನೆ, ಮುನ್ನಡೆ.

ಅವರ ಸತತ ಸಿಡ್ನಿ, ಆಸ್ಟ್ರೇಲಿಯಾ ಪ್ರವಾಸದ ಫಲವಾಗಿ ಅಲ್ಲಿಯೂ ಶಾರದಾ ಮಠದ ಸ್ಥಾಪನೆಯಾಯಿತು. ಜೊತೆಗೆ ಸಿಡ್ನಿಯಲ್ಲಿ ರಾಮಕೃಷ್ಣ ಮಿಷನ್ ಕೇಂದ್ರ ಸ್ಥಾಪನೆಗೊಂಡು ಸುತ್ತ ಹಲವಾರು ಉಪಕೇಂದ್ರಗಳು ಕಾರ್ಯಾರಂಭ ಮಾಡಿದವು.

ಭಾರತೀಯ ಸನಾತನ ಧರ್ಮದ ತಿರುಳನ್ನು ಬೋಧಿಸುತ್ತಾ ಸ್ವಾಮಿ ವಿವೇಕಾನಂದರಂತೆ ಪ್ರವಾಸಗಳನ್ನು ಕೈಗೊಂಡು ಅವರು ಮೂಡಿಸಿದ ಹಾದಿಯಲ್ಲೇ ಹೆಜ್ಜೆ ಹಾಕಿದರು. ಧೈರ್ಯಶಾಲಿಯೂ, ಸಾಹಸಿಯೂ, ಕ್ರಿಯಾಶೀಲರೂ ಆಗಿದ್ದ ಸ್ವಾಮೀಜಿ ಸತ್ಯಪಥಕ್ಕೆ ನೂತನ ಹಾದಿಗಳನ್ನು, ಪರಿಪುಷ್ಟ ಫಲಗಳನ್ನು ಅನ್ವೇಷಿಸಲು ಶಕ್ತರಾದರು. ತೈತ್ತಿರೀಯ ಉಪನಿಷತ್ತು (೧.೯.೧) ಅಧ್ಯಯನ ಮತ್ತು ಪ್ರವಚನ ಒಟ್ಟಾಗಿ ಸಾಗಬೇಕು ಎಂದು ಸೂಚಿಸುತ್ತದೆ. ಸ್ವಾಮಿ ರಂಗನಾಥನಂದರು ಈ ಸೂತ್ರವನ್ನು ಜೀವನಪರ್ಯಂತ ಕಟ್ಟುನಿಟ್ಟಾಗಿ ಪಾಲಿಸಿದರು. ರಾಮಕೃಷ್ಣ – ವಿವೇಕಾನಂದ, ಉಪನಿಷತ್ತು, ಶಾಸ್ತ್ರಾದಿಗಳ ವಿಚಾರವಾಗಿ ಮಾತನಾಡುವಲ್ಲಿ ಅವರನ್ನು ದಣಿವು ಆವರಿಸಲೇ ಇಲ್ಲ.

## ಮಾನವೀಯ ಮುಖ

ಸ್ವಾಮಿ ರಂಗನಾಥಾನಂದರಿಗೆ ಜನಸಾಮಾನ್ಯರನ್ನು ಕಂಡರೆ ಅಪಾರ ಪ್ರೇಮ. ಅದರಲ್ಲೂ ಭಾರತದ ಬಡವರ್ಗ, ಸೇವಕವರ್ಗವನ್ನು ಕಂಡು ಅವರು ಪರಿತಪಿಸುತ್ತಿದ್ದರು. ತಾವು ಇದ್ದೆಡೆಯೆಲ್ಲ ಆಶ್ರಮದ ಸೇವಕವರ್ಗಕ್ಕೆ ಸಾಧ್ಯವಾದ ರೀತಿಯಲ್ಲೆಲ್ಲ ನೆರವಾಗಲು ಪ್ರಯತ್ನಿಸುತ್ತಿದ್ದರು. ಜನಸಾಮಾನ್ಯರ ಬಗೆಗಿನ ಅವರ ಪ್ರೇಮ, ಕಾಳಜಿ ಅವರ ಮಹಾನ್ ವ್ಯಕ್ತಿತ್ವದ ಪ್ರಮುಖ ಅಂಶವಾಗಿತ್ತು. ಈ ಬಗ್ಗೆ ಹಲವಾರು ಘಟನೆಗಳು ನೆನಪಿಗೆ ಬರುತ್ತವೆ. ದೆಹಲಿಯ ರಾಮಕೃಷ್ಣ ದೇಗುಲದ ಉದ್ಘಾಟನಾ ಸಮಾರಂಭದ ಸಂದರ್ಭ, ದೆಹಲಿಯ ರಾಮಕೃಷ್ಣ ಮಿಷನ್ ಕೇಂದ್ರದ ಮುಖ್ಯಸ್ಥರಾಗಿದ್ದ ರಂಗನಾಥಾನಂದಜಿ ನೆರೆದಿರುವ ಹಿರಿಯ – ಕಿರಿಯ ಸಾಧುಗಳು, ಭಕ್ತವೃಂದ, ಗಣ್ಯ ಸಮುದಾಯದ ಎದುರಿಗೆ ದೇಗುಲದ ಕಟ್ಟಡ ಕಟ್ಟಿದ ಮುಖ್ಯ ಕೆಲಸಗಾರನನ್ನು ಕರೆಸಿ ಅವನಿಗೆ ಪ್ರಶಸ್ತಿಯಿತ್ತು ಗೌರವಿಸಿದರು. ಇದು ಅವರ ಶ್ರಮಿಕ ವರ್ಗದವರ ಬಗ್ಗೆ ಹೊಂದಿದ್ದ ಪ್ರೇಮಕ್ಕೆ ದ್ಯೋತಕವಾಗಿತ್ತು. ರಾಷ್ಟ್ರೀಯ ಭಾವೈಕ್ಯತೆಗಾಗಿ ಅವರು ೧೯೮೫ರ ಪರ್ಯಂತ ಶ್ರಮಿಸಿದ್ದಕ್ಕಾಗಿ ೧೯೮೭ ರ ಅಕ್ಟೋಬರ್ ೩೧ರಂದು ರಂಗನಾಥಾನಂದರಿಗೆ ಇಂದಿರಾಗಾಂಧಿ ಭಾವೈಕ್ಯತಾ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಗೌರವಧನವಾಗಿ ಅವರಿಗೆ ಕೊಡಮಾಡಿದ ಒಂದು ಲಕ್ಷರೂಪಾಯಿಗಳ ಇಡೀ ಮೊತ್ತವನ್ನು ಅವರು ಗಿರಿಜನರ ಸೇವೆಗೆ ಮುಡಿಪಾಗಿದ್ದ ಛತ್ತೀಸ್‌ಘಡದ ನಾರಾಯಣಪುರದ ಕೇಂದ್ರಕ್ಕೆ ನೀಡಿದರು. ಇದು ಅವರು ಹಿಂದುಳಿದ ವರ್ಗಗಳ ಬಗ್ಗೆ ಹೊಂದಿದ್ದ ಕಾಳಜಿಗೆ ಸಾಕ್ಷಿಯಾಗಿತ್ತು.

೧೯೪೩ರಲ್ಲಿ, ಅವರು ಕರಾಚಿಯಲ್ಲಿದ್ದ ದಿನಗಳಲ್ಲಿ ಬಂಗಾಳವು ಕ್ಷಾಮದಿಂದ ತತ್ತರಿಸುತ್ತಿತ್ತು. ಬಂಗಾಳದ ಜನತೆಗೆ ನೆರವು ಕೋರಿ ಮಿಷನ್ ಆಶ್ರಮವು ಪ್ರಕಟಣೆ ಹೊರಡಿಸಿದಾಗ ಕರಾಚಿಯ ವರ್ತಕ ಸಮುದಾಯ ೫ ಲಕ್ಷ ರೂಪಾಯಿಗಳ ಮೊತ್ತವನ್ನು ಕಾಣಿಕೆಯಾಗಿ ನೀಡಿತು. ಈ ಧನದಿಂದ ೧,೨೪೦ ಟನ್ ಅಕ್ಕಿಯನ್ನು ಖರೀದಿಸಿದ ಕರಾಚಿ ಆಶ್ರಮ ಅದನ್ನು ರಫ್ತು ಮಾಡಲು ಪರವಾನಗಿಯನ್ನು ಕೋರಿ ಸಿಂಧ್ ಸರ್ಕಾರಕ್ಕೆ ಅರ್ಜಿ ಸಲ್ಲಿಸಿತು. ಬಳಿಕ ಸಾಗಾಣಿಕೆ ವೆಚ್ಚದಿಂದ ಮುಕ್ತವಾದ ಈ ಅಮೂಲ್ಯ ಸರಕು ವಿಶೇಷ ಸ್ಟೀಮರ್‌ನಲ್ಲಿ ಶ್ರೀಲಂಕಾ ಮಾರ್ಗವಾಗಿ ಕಲ್ಕತ್ತವನ್ನು ತಲುಪಿತು.

ನನಗೆ ನೆನಪಿರುವಂತೆ ರಂಗನಾಥಾನಂದರು ಅಮೆರಿಕೆಗೆ ಬಂದಾಗಲೆಲ್ಲ ತಪ್ಪದೆ ನಮ್ಮ ಕೇಂದ್ರಕ್ಕೆ ಭೇಟಿ ನೀಡುತ್ತಿದ್ದರು. ಅವರು ಪ್ರತಿವರ್ಷವೂ ನ್ಯೂಯಾರ್ಕ್‌ನಿಂದ ಹಾಲೆಂಡ್ ಅಥವಾ ಸಿಡ್ನಿಗೆ, ಒಮ್ಮೊಮ್ಮೆ ಎರಡಕ್ಕೂ ಪ್ರಯಾಣ ಬೆಳಸುತ್ತಿದ್ದರು. ಅವರು ಸದಾ ಸಾಧಾರಣ, ಸರಳ ಉಡುಪಿನಲ್ಲಿರುತ್ತಿದ್ದರು ಮತ್ತು ಪ್ರಯಾಣಕ್ಕೆ ಅಗತ್ಯವಾದ ಹಣಕ್ಕಿಂತ ಹೆಚ್ಚಿನ ಹಣವನ್ನು ಎಂದೂ ಒಯ್ಯುತ್ತಿರಲಿಲ್ಲ.

ಒಮ್ಮೆ ಅವರು ಸಿಡ್ನಿಗೆ ಬಂದಿಳಿದಾಗ, ತಮ್ಮನ್ನು ಕರೆದೊಯ್ಯಲು ಯಾವ ಸ್ನೇಹಿತರೂ ಬಂದಿಲ್ಲದಿರುವುದನ್ನು ಕಂಡು ಚಕಿತರಾದರು. ಸಂವಹನದ ಅಡಚಣೆಯಿಂದಲೊ ಅಥವಾ ಬೇರಾವ ತಪ್ಪು ಗ್ರಹಿಕೆಯಿಂದ ಹೀಗಾಯಿತೆಂದು ತಿಳಿಯದಾದರು. ಆದರೆ ಸ್ವಾಮಿ ರಂಗನಾಥಾನಂದರು ಧೈರ್ಯಶಾಲಿ ಮತ್ತು ಸಾಹಸಿಗಳು. ತಮ್ಮ ಆತಿಥೇಯರನ್ನು ದೂರವಾಣಿಯಲ್ಲಿ ಸಂಪರ್ಕಿಸಲು ಮುಂದಾದರು. ಆದರೆ ಅವರ ಬಳಿ ಹಣವಿರಲಿಲ್ಲ ! ಹತ್ತಿರದಲ್ಲಿದ್ದ ವ್ಯಕ್ತಿಯ ಬಳಿ ಹೋಗಿ ಹಣ ಕೇಳಿದರು. ಆದರೆ ಆ ಮನುಷ್ಯ ಆ ಅಲ್ಪ ಮೊತ್ತವನ್ನು ನೀಡಲು ನಿರಾಕರಿಸಿದ. ಪದೇ ಪದೇ ಕೋರಿದರೂ ಅವನು ನಿರಾಕರಿಸಿದ. ಕೊನೆಗೂ ರಂಗನಾಥಾನಂದರೇ ಗೆದ್ದರು, ಅವರು ಹಠಬಿಡದೆ ಕೇಳಿದ್ದರಿಂದ ಅವನು ತಿರಸ್ಕಾರದಿಂದಲೇ ಅವರತ್ತ ಕೆಲವು ನಾಣ್ಯಗಳನ್ನು ಎಸೆದ. ಅವುಗಳ ಸಹಾಯದಿಂದ ಸ್ವಾಮೀಜಿ ತಮ್ಮ ಮಿತ್ರರನ್ನು ದೂರವಾಣಿಯಲ್ಲಿ ಸಂಪರ್ಕಿಸಿದರು. ಕೆಲವೇ ಕ್ಷಣಗಳಲ್ಲಿ ಆ ಮಿತ್ರರು ವಿಮಾನನಿಲ್ದಾಣಕ್ಕೆ ಬಂದರು. ಈಗ ಸ್ವಾಮೀಜಿ, ಆ ಮನುಷ್ಯನಿಗೆ ಹಣ ಹಿಂದಿರುಗಿಸಲು ಪ್ರಯತ್ನಿಸಿದಾಗ ಅವನು ಹಿಂಪಡೆಯಲು ನಿರಾಕರಿಸಿದ!

ರಂಗನಾಥಾನಂದರು ತಮ್ಮ ಆತಿಥೇಯರ ಮನೆ ತಲುಪಿದಾಗ ಅವರು ಅಡುಗೆ ಕಾರ್ಯದಲ್ಲಿ ನಿರತರಾಗಿದ್ದರು. ಯಥಾಪ್ರಕಾರ ಸ್ವಾಮೀಜಿ ಅವರೊಂದಿಗೆ ಕೈಜೋಡಿಸಿ ನೆರವಾದರಲ್ಲದೆ ಅಂದು ಸಂಜೆಯ ಆಧ್ಯಾತ್ಮಿಕ ಪ್ರವಚನಕ್ಕೆ ಅವರ ಮಿತ್ರರನ್ನೂ ಆಹ್ವಾನಿಸುವಂತೆ ಸೂಚಿಸಿದರು. ಅವರಲ್ಲಿ ರಕ್ತಗತವಾಗಿದ್ದ ಸ್ವಭಾವ ಇದು. ಪ್ರತಿಯೊಂದು ಅವಕಾಶವನ್ನೂ, ಅವರು ಜನಜೀವನದಲ್ಲಿ ಉನ್ನತ ಹಂತಕ್ಕೇರುವ ಪ್ರಯತ್ನವಾಗಿ ಪರಿವರ್ತಿಸಿಕೊಳ್ಳುವಂತೆ ಪ್ರೋತ್ಸಾಹಿಸುತ್ತಿದ್ದರು.

ಒಮ್ಮೆ ಅವರು ನಮ್ಮ ಕೇಂದ್ರದಲ್ಲಿ ಕೆಲವು ಘಂಟೆಗಳನ್ನು ಕಳೆದರು. ಉಪಾಹಾರ ನಡೆಯುತ್ತಿದ್ದಾಗ ನಮ್ಮ ಸದಸ್ಯರೊಬ್ಬರು ಸ್ತರಪುಂಜಮೇಘ (ಸ್ಟ್ರಾಟೊಸ್ಫಿಯರ್) ವಿಷಯವನ್ನು ಪ್ರಸ್ತಾಪಿಸಿದರು. ವಿಸ್ತಾರವಾದ ಜ್ಞಾನವನ್ನು, ವಿಜ್ಞಾನವನ್ನು ಒಳಗೊಂಡಂತೆ ಬಹುಮುಖೀ ಆಸಕ್ತಿಯನ್ನು, ಸರ್ವವಿಷಯ ಕುತೂಹಲವನ್ನು ಹೊಂದಿದ್ದ ರಂಗನಾಥಾನಂದರು ಈ ಹೊಸ ವಿಷಯ ಕುರಿತು ಬಹಳ ಹೊತ್ತು ಚರ್ಚಿಸಿದರು. ಊಟಕ್ಕೆ ಮುನ್ನ ಹಲವು ಘಂಟೆಗಳು ಬಿಡುವಿತ್ತು. ಅವರು ನನ್ನತ್ತ ತಿರುಗಿ, "ನಡಿ, ಎಂಪೈರ್ ಸ್ಟೇಟ್ ಕಟ್ಟಡಕ್ಕೆ ಹೋಗೋಣ!" ಎಂದರು. ನಾನು, ಅವರು ಮತ್ತು ಮತ್ತೋರ್ವ ಭಕ್ತ (ಸ್ಟ್ಯಾನ್ಲಿ) ಎಂಪೈರ್ ಸ್ಟೇಟ್ ಕಟ್ಟಡಕ್ಕೆ ತೆರಳಿದೆವು. ತಲೆಗವಸು ಹೊಂದಿರುವ ನನ್ನ ಚಳಿಗಾಲದ ಕೋಟು ಧರಿಸಿ ಸ್ವಾಮೀಜಿ ಕಟ್ಟಡದ ಎತ್ತರದ ಚಳಿಯನ್ನು ಎದುರಿಸಲು ಸಿದ್ಧರಾಗಿದ್ದರು. ತುದಿಯಲ್ಲಿ ವಿಶಾಲವಾದ ಆಕಾಶವನ್ನು ದಿಟ್ಟಿಸುತ್ತಾ ಮಗುವಿನ ಮುಗ್ಧತೆಯಿಂದ ಹರ್ಷಿಸಿದರು. ಈ ಸಂತೋಷ ಸರ್ವತ್ರ ಗುರಿಕೇಂದ್ರಿತವಾದ ಅವರ ಮನಸ್ಸನ್ನು ವಿಚಲಿತಗೊಳಿಸಲಿಲ್ಲ. ಆಕಾಶವನ್ನು ಮರೆಮಾಚುವ ಗಗನಚುಂಬಿ ಕಟ್ಟಡಗಳನ್ನು ಹೊಂದಿರುವ ನಗರಗಳಲ್ಲಿನ ಮಾನವ ಮನಸ್ಸುಗಳು ವೈಶಾಲ್ಯದ ಅನುಭವದಿಂದ ವಂಚಿತವಾಗುತ್ತವೆ ಎಂಬ ಅಭಿಪ್ರಾಯವನ್ನು ಅವರು ತಿಳಿಸಿದರು.

**ಸಮಾರೋಪ**

ಮಹಾತ್ಮರ ಮಹಾನತೆ ಅವರ ಸಣ್ಣಪುಟ್ಟ ಕಾರ್ಯಗಳಿಂದ ವ್ಯಕ್ತವಾಗುತ್ತವೆ ಎಂದಿದ್ದಾರೆ ಸ್ವಾಮಿ ವಿವೇಕಾನಂದರು. ನಾನು ಬಂಗಾಳಿಯಲ್ಲಿ ಬರೆದ 'ರಾಮಾಯಣ– ಕಥಾ' ಉದ್ಬೋಧನದಿಂದ ಪ್ರಕಟಗೊಂಡಿತು. ರಂಗನಾಥಾನಂದರು ಉದ್ಬೋಧನಕ್ಕೆ ಭೇಟಿಯಿತ್ತಾಗ ಅವರಿಗೆ ಪ್ರಕಾಶಕರು ಈ ಪುಸ್ತಕವನ್ನು ನೀಡಿದ್ದರು. ಕೆಲದಿನಗಳಲ್ಲೇ ಸ್ವಾಮೀಜಿಯಿಂದ ನನಗೊಂದು ಪತ್ರ ಬಂದಿತು. ಪತ್ರ ನೋಡಿ ನನ್ನಲ್ಲಿ ಕೃತಜ್ಞತಾಭಾವಮೂಡಿತಲ್ಲದೇ, ಅವರಂತಹ ಹಿರಿಯರು ನೇರವಾಗಿ ಬರೆದಿದ್ದರ ಬಗ್ಗೆ ಚಕಿತನೂ ಆದೆ. ಕೈ ಬರಹದಲ್ಲಿ ಮೂಡಿದ್ದ ಆ ಪತ್ರ ಇಂತಿದೆ.

ಪ್ರಿಯ ತಥಾಗಥಾನಂದ,

ನಾನು ಈ ಪತ್ರವನ್ನು ವಿಶೇಷ ಉದ್ದೇಶದಿಂದ ಬರೆಯುತ್ತಿದ್ದೇನೆ. ಕೆಲವು ವಾರಗಳ ಹಿಂದೆ ಉದ್ಬೋಧನದ ಸ್ವಾಮಿ ಸತ್ಯವ್ರತಾನಂದರು ನೀನು ಬಂಗಾಳಿಯಲ್ಲಿ ಬರೆದ ರಾಮಾಯಣದ ಪುಸ್ತಕ ನೀಡಿದರು. ಸ್ವಲ್ಪ ಓದಿದೆ, ಆಸಕ್ತಿ ಮೂಡಿದ್ದರಿಂದ ಸತತವಾಗಿ ಓದಿ ಅನೇಕ ಪುಟಗಳನ್ನು ಮುಗಿಸಿದೆ. ಪ್ರತಿ ಅಂಶವನ್ನೂ ಬಹಳ ಆನಂದಿಸಿದೆ. ನಾಲ್ಕು ಜನ ಸಹೋದರರನ್ನು, ಸೀತೆ ಮತ್ತು ಹನುಮಂತನನ್ನು ನೀನು ಚಿತ್ರಿಸಿರುವ ರೀತಿ ಬಹಳ ಆಕರ್ಷಕವಾಗಿದೆ. ನನ್ನ ಮೆಚ್ಚುಗೆಯನ್ನು ಸೂಸಿ ಪತ್ರ ಬರೆಯಬೇಕು, ಪ್ರಶಂಸೆ ದಾಖಲಿಸಬೇಕು ಎನಿಸಿತು. ಆದ್ದರಿಂದ ಈ ಪತ್ರ.

ನಿನಗೂ ಮತ್ತು ಇತರರಿಗೂ ನನ್ನ ಪ್ರೇಮಾಶೀರ್ವಾದಗಳು.

ನಿನ್ನ ಪ್ರೀತಿಯ

**(ಸ್ವಾಮಿ ರಂಗನಾಥಾನಂದ)**

ಸ್ವಾಮಿ ರಂಗನಾಥಾನಂದಜಿ ಅವರದು ವಿಶೇಷವಾದ, ಶೋಭಾಯಮಾನವಾದ ಬದುಕು. ತಮ್ಮ ಬಹುಮುಖೀ ಪ್ರಭಾವೀ ವ್ಯಕ್ತಿತ್ವದಿಂದ ಅವರು ಹೋದೆಡೆಯೆಲ್ಲೆಲ್ಲ ಜನರಿಗೆ ಸ್ಫೂರ್ತಿ ನೀಡುತ್ತಾ ಸಾಗಿದರು. ಅವರ ಮಹಾಮೇಧಾವಿತನ, ಅದ್ಭುತ ಸ್ಮರಣಶಕ್ತಿ, ದಣಿವರಿಯದ ಉತ್ಸಾಹ ಮತ್ತು ಸದಾ ಪ್ರಗತಿ ಹೊಂದುವ ಹಂಬಲ ನಮಗೆ ಅನನ್ಯ ನೆನಪಾಗಿ ಉಳಿಯುತ್ತವೆ. ಮೇಲಿನ ಗುಣಗಳ ಜೊತೆಗೇ ಅವರಲ್ಲಿದ್ದ ಸರಳತೆ, ಸಮಾನತಾ ಭಾವ, ಎಲ್ಲರೊಂದಿಗೆ ಬೆರೆಯುವ ವಿಶಾಲತೆ, ಸರ್ವವಿಷಯದಲ್ಲಿ ಆಸಕ್ತಿ, ಕಲಿಕೆ ಅವರ ವ್ಯಕ್ತಿತ್ವದ ಪ್ರಧಾನ ಅಂಶಗಳು. ಮುಖ್ಯವಾಗಿ ಅವರು ತಮ್ಮ ಹೃದಯ–ಬುದ್ಧಿಗಳನ್ನು ಭಗವಂತನಲ್ಲಿ ನೆಲೆಗೊಳಿಸಿದ್ದರು. ಅವರು ನಮ್ಮ ರಾಮಕೃಷ್ಣ ಮಹಾಸಂಘದ ಒಬ್ಬ ಅನುಪಮ ಸಾಧು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

* * * *

# ೭. ಮಹಾನತೆಯ ಪ್ರಪಂಚದ ಒಂದು ಕಿಡಿ

**–ಸ್ವಾಮಿ ಬಾಣೇಶಾನಂದ***

ಸ್ವಾಮಿ ರಂಗನಾಥಾನಂದರನ್ನು ಪ್ರಥಮ ಬಾರಿ ಭೇಟಿಯಾದ ನೆನಪು ನನಗೆ ಸ್ಪಷ್ಟವಾಗಿಲ್ಲ. ವಿದ್ಯಾರ್ಥಿಯಾಗಿ ಅವರ ಹೆಸರು ಕೇಳಿದ್ದೆ. ಅವರು ದೊಡ್ಡ ಹೆಸರು ಗಳಿಸಿದ್ದರಿಂದ ಎತ್ತರ, ಗಾತ್ರದ ವ್ಯಕ್ತಿಯೂ ಆಗಿರಬಹುದೆಂದು ಭಾವಿಸಿದ್ದೆ. ದೈಹಿಕವಾಗಿಯೂ ಅವರು ಎತ್ತರದವರೇ ನಿಜ, ಆದರೆ ಆಧ್ಯಾತ್ಮಿಕ ಶಕ್ತಿ, ಮಾನಸಿಕ ಶಕ್ತಿಯ ವಿಚಾರದಲ್ಲಿ ಅವರು ಬಹಳ ದೊಡ್ಡವರು, ಎತ್ತರದವರು.

ಅವರ ಬಗ್ಗೆ ಬರೆಯುವುದು ಎರಡು ರೀತಿಯಿಂದ ನನಗೆ ಕಷ್ಟ– ಮೊದಲನೆಯದಾಗಿ ಬರವಣಿಗೆಯ ಕೌಶಲ್ಯ ನನಗಿಲ್ಲ ಮತ್ತು ಎರಡನೆಯದಾಗಿ ನನ್ನಲ್ಲಿ ಚಾರಿತ್ರಿಕ ಪ್ರಜ್ಞೆ ಕಡಿಮೆ.

ಮಹಾತ್ಮರು ಒಮ್ಮೆ ಭೇಟಿಯಾದವರನ್ನು ಹಾಗೆಯೇ ನೆನಪಿಟ್ಟುಕೊಳ್ಳುತ್ತಾರೆ ಎಂಬುದನ್ನು ಕೇಳಿದ್ದೆ, ಕಂಡಿದ್ದೆ. ಸ್ವಾಮಿ ರಂಗನಾಥಾನಂದರು (ಇನ್ನು ಮುಂದೆ ಮಹಾರಾಜ್ ಎಂದು ಸಂಬೋಧಿಸುತ್ತೇನೆ) ಅಂತವರಲ್ಲಿ ಒಬ್ಬರು. ನನ್ನ ಈ ಅನುಭವಕ್ಕೆ ಆಧಾರವಾಗಿ ಒಂದು ಘಟನೆಯನ್ನು ದಾಖಲಿಸುತ್ತೇನೆ. ಅದು ೧೯೭೯ ಅಥವಾ ೧೯೮೦ರ ಜುಲೈ ತಿಂಗಳ ಬೇಸಿಗೆಯ ಒಂದು ದಿನ. ರಾಮಕೃಷ್ಣ ಮಠ ಮತ್ತು ಮಿಷನ್ನಿನ ಬೋರ್ಡ್ ಮೀಟಿಂಗ್ ಬೇಲೂರು ಮಠದಲ್ಲಿ ನಡೆದ ಸಂದರ್ಭ. ನಾನಾಗ ಇನ್ನೂ ಬ್ರಹ್ಮಚಾರಿ, ಸ್ವಾಮಿ ಭೂತೇಶಾನಂದ (ಮಹಾಸಂಘದ ಅಂದಿನ ಉಪಾಧ್ಯಕ್ಷರು ) ಅವರ ಆಪ್ತಸಹಾಯಕರಲ್ಲಿ ಒಬ್ಬನಾಗಿ ನೇಮಕಗೊಂಡಿದ್ದೆ. ಈ ಸಭೆಗೆ ಹಾಜರಾಗಲು ಅವರು ಆಗಮಿಸಿದ್ದರು. ಬೇಲೂರು ಮಠದ ಮುಖ್ಯ ದೇವಸ್ಥಾನದ ದಕ್ಷಿಣ ದಿಕ್ಕಿನಲ್ಲಿದ್ದ ಮಹಾಸಂಘದ ಕಚೇರಿಯ ಎದುರಿನಲ್ಲಿ ಈ ಘಟನೆ ನಡೆಯಿತು. ಮೊದಲ ಮಹಡಿಯ ಅಂಗಳದಲ್ಲಿ ನಾನು ನಿಂತಿದ್ದೆ, ಸ್ವಾಮಿ ಭೂತೇಶಾನಂದಜಿ ಅದೇ ಮಹಡಿಯಲ್ಲಿ ನಡೆಯುತ್ತಿದ್ದ ಸಭೆಯಲ್ಲಿ ಭಾಗವಹಿಸಲು ಕೊಠಡಿಯೊಳಕ್ಕೆ ಹೋಗಿಯಾಗಿತ್ತು. ಕೆಳಗೆ ಒಂದಷ್ಟು ಜನರು ನಿಂತಿದ್ದರು. ಟ್ರಸ್ಟಿಗಳಲ್ಲಿ ಒಬ್ಬರಾದ ಸ್ವಾಮಿ ರಂಗನಾಥಾನಂದಜಿ ಲಗುಬಗೆಯಿಂದ ಧಾವಿಸಿದರು. ಎತ್ತರದ, ಗಂಭೀರದ ನಡಿಗೆಯ ಪ್ರಸಿದ್ಧ ರಂಗನಾಥಾನಂದರನ್ನು ನನ್ನ ಕಣ್ಣುಗಳು ಹಿಂಬಾಲಿಸುತ್ತಿದ್ದವು. ಅವರು ಮಹಡಿಯೇರುವ ತರಾತುರಿಯಲ್ಲಿದ್ದರು.

ಇದ್ದಕ್ಕಿದ್ದಂತೆ ನೆರೆದ ಜನರ ಗುಂಪಿನಿಂದ ಒಬ್ಬ ಯುವಕ ನುಗ್ಗಿ ಬಂದು ಸ್ವಾಮಿ ರಂಗನಾಥಾನಂದರಿಗೆ ದೀರ್ಘದಂಡ ಪ್ರಣಾಮ ಮಾಡಿದ. ಬಳಿಕ ಎದ್ದು ನಿಂತು ತನ್ನನ್ನು ಪರಿಚಯಿಸಿಕೊಳ್ಳಲು ತಡಬಡಾಯಿಸುತ್ತಿದ್ದ. ಅವನನ್ನು ದಿಟ್ಟಿಸಿದ ಸ್ವಾಮೀಜಿ ನುಡಿದರು. “ನನಗೆ ನೀನು ಗೊತ್ತು. ನೀನು ....... ಅಲ್ಲವೆ?” (ದುರದೃಷ್ಟವಶಾತ್ ಆ ವ್ಯಕ್ತಿಯ ಹೆಸರು ನೆನಪಿಲ್ಲ.) ಬಳಿಕ ಅವನೊಂದಿಗೆ ಕೆಲವು ಮಾತಾಡಿದರು. ಅನಂತರ ನನ್ನತ್ತ ತಿರುಗಿ, “ದಯವಿಟ್ಟು ಇವನನ್ನು ಮಠದ ಕಚೇರಿಗೆ ಕರೆದೊಯ್ಯಿ ಮತ್ತು ಮಧ್ಯಾಹ್ನದ ಪ್ರಸಾದದ (ಊಟದ) ವ್ಯವಸ್ಥೆ ಮಾಡು. ಜೊತೆಗೆ ಅವನು ಆನಂತರದಲ್ಲಿ ಮಠದಲ್ಲಿ ನನ್ನನ್ನು ಎಲ್ಲಿ ಭೇಟಿ ಮಾಡಬಹುದು ಎಂಬುದನ್ನು ಸೂಚಿಸು” ಎಂದರು.

ಆ ವ್ಯಕ್ತಿಯ ಕಣ್ಣುಗಳಲ್ಲಿ ನೀರು, ಆನಂದಬಾಷ್ಪ ! ಅವನನ್ನು ಕರೆದುಕೊಂಡು ಮಠದ ಕಚೇರಿಯತ್ತ ನಡೆದೆ. ಮಾರ್ಗಮಧ್ಯದಲ್ಲಿ ಮಾತನಾಡುತ್ತಾ ಅವನು ತಿಳಿಸಿದ ವಿಚಾರವೆಂದರೆ, ಅವನು ಸಿಂಗಪುರ (ಅಥವಾ

* ಜರ್ಮನಿಯ ವೇದಾಂತ– ಗೆಸೆಲ್ ಶಾಫ್ಟ್‌ನ ಮಿನಿಸ್ಟರ್ –ಇನ್–ಚಾರ್ಜ್

ಮಲೇಷ್ಯಾ) ನಗರದಲ್ಲಿ ಒಬ್ಬರ ಮನೆಯಲ್ಲಿ ಕಾರುಚಾಲಕನಾಗಿದ್ದ. ಸ್ವಾಮೀಜಿ ಆ ಮನೆಯಲ್ಲಿ ಅತಿಥಿಯಾಗಿ ತಂಗಿದ್ದರು. ಈಗ ಅವನು ರಂಗನಾಥಾನಂದಜಿ ಅವರಿಂದ ಯಾವುದೋ ಕೆಲಸಕ್ಕಾಗಿ ಶಿಫಾರಸು ಪಡೆಯಲು ಬಂದಿದ್ದ. ಇಷ್ಟೊಂದು ಪ್ರಸಿದ್ಧರಾದ ಸ್ವಾಮಿಗಳೊಬ್ಬರು ಯಕಃಶ್ಚಿತ್ ಚಾಲಕನೊಬ್ಬನ ಹೆಸರು ನೆನಪಿಟ್ಟುಕೊಂಡಿರುತ್ತಾರೆ ಎಂದು ಅವನು ನಿರೀಕ್ಷಿಸಿರಲಿಲ್ಲ! ಅದಕ್ಕಾಗಿ ಭಾವುಕನಾಗಿ ಆ ಆನಂದಬಾಷ್ಪ!

ಈ ಮಹಾನತೆಯ ಮಹಾಪೂರದ ಅರಿವಿರದೆಯೇ ನಾನಂದು ಆ ಅದೃಷ್ಟವಂತನ ಜೊತೆ ಹೆಜ್ಜೆ ಹಾಕುತ್ತಾ ಮಠದ ಕಚೇರಿ ತಲುಪಿದ್ದೆ.

* * * *

# ೮. ಸ್ವಾಮಿ ರಂಗನಾಥಾನಂದಜೀಯವರ ದಿವ್ಯಸ್ಮೃತಿ

–ಸ್ವಾಮಿ ಮುಖ್ಯಾನಂದ*

ನಾನು ಮತ್ತು ನನ್ನ ಕೆಲವು ಸ್ನೇಹಿತರು ಸ್ವಾಮಿ ರಂಗನಾಥಾನಂದರ ಸಂಪರ್ಕಕ್ಕೆ ಬಂದಾಗ ನಾವಿನ್ನೂ ಬಾಲಕರು, ಅವರೂ ಅಷ್ಟೆ ಬೆಂಗಳೂರಿನ ಆಶ್ರಮದಲ್ಲಿ ೨೬ –೨೭ ವಯಸ್ಸಿನ ಸಂನ್ಯಾಸಿಗಳಾಗಿದ್ದರು. ನಾನು ೧೯೩೫ರಲ್ಲಿ ನನ್ನ ೧೬ನೇ ವಯಸ್ಸಿನಲ್ಲಿ ಬೆಂಗಳೂರಿನ ರಾಮಕೃಷ್ಣಾಶ್ರಮಕ್ಕೆ ನನ್ನ ಸೋದರ ಸಂಬಂಧಿಯೊಂದಿಗೆ ಕಾಲಿಟ್ಟಾಗ ಅಲ್ಲೊಂದು ದೃಶ್ಯ ಕಂಡೆ. ಮಠದ ಮುಖ್ಯಸ್ಥರಾದ ಸ್ವಾಮಿ ಸಿದ್ಧೇಶ್ವರಾನಂದರು (ಗೋಪಾಲ್ ಮಹಾರಾಜ್) ಮತ್ತು ಒಬ್ಬ ಕಿರಿಯ ವಯಸ್ಸಿನ ಸ್ವಾಮಿಗಳು ಆಶ್ರಮದ ಮುಂದಿನ ಅಂಗಳದಲ್ಲಿ ಅತ್ತಿಂದಿತ್ತ ಓಡಾಡುತ್ತಿದ್ದರು. ಹಾಗೆ ನಡೆಯುವಾಗ ಉತ್ಸಾಹದಿಂದ ಮಾತನಾಡುತ್ತಾ ಜೋರಾಗಿ ನಗುತ್ತಾ ನಡೆಯುತ್ತಿದ್ದರು. ಈ ಖುಷಿಯ ವಾತಾವರಣ ನನಗೆ ಬಹಳ ಮೆಚ್ಚುಗೆಯಾಯಿತು. ನಾವು ಅವರ ಬಳಿ ಸಾಗಿ ನಾವಿಬ್ಬರು ಬಳಿಯಿದ್ದ ನ್ಯಾಷನಲ್ ಹೈಸ್ಕೂಲ್‌ನ ವಿದ್ಯಾರ್ಥಿಗಳೆಂದು ಪರಿಚಯ ಮಾಡಿಕೊಂಡೆವು. ಚಿಕ್ಕ ವಯಸ್ಸಿನ ಸ್ವಾಮಿಗಳು ರಂಗನಾಥಾನಂದರೆಂದು ತಿಳಿಯಿತು. ಆದರೆ ಹೆಚ್ಚಾಗಿ ಅವರು ಶಂಕರ್ ಮಹಾರಾಜ್ ಎಂದೇ ಪ್ರಸಿದ್ಧರು. ಅವರು ಗೋಪಾಲ್ ಮಹಾರಾಜ್ ಅವರಿಗೆ ಸಹಾಯಕರಾಗಿದ್ದರು. ನಮ್ಮ ಒಡನಾಟ ಹೆಚ್ಚಾಗಿ ಇವರೊಂದಿಗೇ. ಶಂಕರ್ ಮಹಾರಾಜ್ ಸದಾ ಉತ್ಸಾಹಿ  ಮತ್ತು ಗೋಪಾಲ್ ಮಹಾರಾಜ್ ಇವರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದರು. ಇಬ್ಬರೂ ಮೂಲತಃ ಕೇರಳದವರೇ. ಅಲ್ಲದೆ ಶಂಕರ್ ಮಹಾರಾಜ್ ಚಿಕ್ಕ ವಯಸ್ಸಿನಲ್ಲೇ, ವಿದ್ಯಾರ್ಥಿಯಾಗಿದ್ದಾಗಲೇ ಅವರು ಬ್ರಹ್ಮಚಾರಿಯಾಗಿ ಸೇರಿದ್ದರಿಂದ ಅವರನ್ನು ಪ್ರೀತಿ, ಸಲುಗೆಯಿಂದ ಸರಳವಾಗಿ 'ಶಂಕರ್' ಎಂದೇ ಸಂಬೋಧಿಸುತ್ತಿದ್ದರು.

ಶಂಕರ್ ಮಹಾರಾಜ್ ಸ್ವಾಮಿ ವಿವೇಕಾನಂದರ ಅಭಿಮಾನಿ ಮತ್ತು ವಿವೇಕಾನಂದರ ಬಗ್ಗೆ ಅಪ್ರತಿಮ ಒಲವುಳ್ಳವರಾಗಿದ್ದರು. ತಾವೇ ಸ್ವತಃ ಉತ್ಸಾಹಿಗಳು, ಯುವಜನ ಪ್ರೀತಿಯುಳ್ಳವರಾಗಿದ್ದರಿಂದ ಅನೇಕ ಯುವಕರು ಅವರಿಂದ ಆಕರ್ಷಿತರಾಗುತ್ತಿದ್ದರು. ಹೀಗೆ ಆಕರ್ಷಿತರಾದವರಲ್ಲಿ ವಿವೇಕಾನಂದರ ಸ್ಫೂರ್ತಿಯನ್ನು ತುಂಬಿಬಿಡುತ್ತಿದ್ದರು ರಂಗನಾಥಾನಂದಜಿ. ನಾವು ಆಶ್ರಮಕ್ಕೆ ಪದೇ ಪದೇ ಭೇಟಿ ನೀಡಲು ಆರಂಭಿಸಿದೆವು ಮತ್ತು ಅವರನ್ನು ಭೇಟಿಯಾಗುತ್ತಿದ್ದೆವು. ಸುಮಾರು ೧೦–೧೨ ಜನ ನಾವು ಒಟ್ಟಾಗಿ ರಂಗನಾಥಾನಂದರನ್ನು ಕಾಣುತ್ತಿದ್ದೆವಾದರೂ ಕೊಂಚ ಆಧ್ಯಾತ್ಮಿಕ ಒಲವು ಇದ್ದುದರಿಂದ ಮತ್ತು ವಿವೇಕಾನಂದರ ಜೀವನ–ಸಂದೇಶಗಳಿಂದ ಪ್ರಭಾವಿತನಾದ್ದರಿಂದ ಅವರು ನನ್ನೊಂದಿಗೆ ಹೆಚ್ಚು ಆತ್ಮೀಯರಾಗಿದ್ದರು. ನಮ್ಮ ಮನೆ ಆಶ್ರಮದಿಂದ ಕೇವಲ ಒಂದು ಕಿ.ಮೀ. ದೂರದಲ್ಲಿತ್ತು. ಹೀಗಾಗಿ ನಾನು ಆಶ್ರಮದಲ್ಲೇ ಹೆಚ್ಚು ಇರುತ್ತಿದ್ದೆ. ನನ್ನನ್ನು ಲಕ್ಷ್ಮಣ ಎಂದು ಕರೆಯುತ್ತಿದ್ದರು. ಹಗಲು ಹೊತ್ತಿನಲ್ಲಿ ಆಶ್ರಮದ ಕೆಲಸಗಳಲ್ಲಿ ಕೈಗೂಡಿಸುತ್ತಿದ್ದೆ, ತೋಟದ ಉಸ್ತುವಾರಿ, ಗಿಡಗಳಿಗೆ ನೀರೆರೆಯುವುದು, ಆಶ್ರಮದ ಇತರ ಕೆಲಸಗಳು, ಆಶ್ರಮದ ಕೆಲಸದ ಮೇಲೆ ಮಾರುಕಟ್ಟೆ ಇತ್ಯಾದಿಗಳಿಗೆ ಹೋಗಿಬರುವುದು – ಹೀಗೆ ಹಲವಾರು ಕೆಲಸ ಮಾಡುತ್ತಿದ್ದೆ. ಕೆಲವೊಮ್ಮೆ ರಾತ್ರಿಯನ್ನು ಅಲ್ಲೇ ಕಳೆಯುತ್ತಿದ್ದೆ. ಆದುದರಿಂದ ಕ್ರಮೇಣ ಆಶ್ರಮದ ಇತರ ಸದಸ್ಯರಿಗೂ ಹತ್ತಿರದವನಾದೆ.

---

* ಬೇಲೂರು ಮಠದ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಒಬ್ಬ ಹಿರಿಯ ಸಾಧು.

ನಾವು ಶಂಕರ ಮಹಾರಾಜರನ್ನು ಸ್ವಾಮೀಜಿ ಎಂದು ಸಂಬೋಧಿಸುತ್ತಿದ್ದೆವು. ಅವರು ನಮಗೆ 'ಸ್ವಾಮೀಜಿ'ಯನ್ನು ಕುರಿತು (ಮಹಾಸಂಘದಲ್ಲಿ ಸ್ವಾಮಿ ವಿವೇಕಾನಂದರನ್ನು 'ಸ್ವಾಮೀಜಿ' ಎಂದು ಸಂಬೋಧಿಸುತ್ತಾರೆ.) ಬಹಳ ಸ್ಫೂರ್ತಿದಾಯಕ ಘಟನೆಗಳನ್ನು ಅವರ ಜೀವನ– ಸಾಧನೆಗಳ ಮಹತ್ವವನ್ನು ಕುರಿತು ಹೇಳುತ್ತಿದ್ದರು. ಸ್ವಯಂಸೇವಕರಾದ ನಾವು ವಿವೇಕಾನಂದರ ಚಿಂತನೆಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಿದ್ದೆವು. ಶಕ್ತಿ ಚಾರಿತ್ರ್ಯಗಳ ಬಗ್ಗೆ ಅವರು ಒತ್ತು ನೀಡಿದ್ದರು. ಆಶ್ರಮದ ಆವರಣದಲ್ಲಿ ಬಿದಿರು ಮತ್ತು ಇತರ ಸರಳ ಸರಂಜಾಮುಗಳಿಂದ ಒಂದು ವ್ಯಾಯಾಮಶಾಲೆ ಆರಂಭಿಸಿದೆವು. ರಂಗನಾಥಾನಂದಜಿ ಇದರಲ್ಲಿ ಭಾಗವಹಿಸುತ್ತಿದ್ದರು. ಗರಡಿಯಲ್ಲಿ ಅವರೊಂದಿಗೆ, ನಾನು ಕುಸ್ತಿ ಮಾಡಿದ ನೆನಪಿದೆ. ಬೇರೆ ಬೇರೆ ಆಟಗಳನ್ನು ಕೂಡ, ವಾಲಿಬಾಲ್ ಮುಂತಾದ ಆಟಗಳನ್ನು ಸಹ ಆಡುತ್ತಿದ್ದೆವು. ವಿದ್ಯಾರ್ಥಿಗಳ, ಯುವಕರ ಸರ್ವತೋಮುಖ ಬೆಳವಣಿಗೆಗೆ ಇವುಗಳು ಅವಶ್ಯ ಎಂದು ಭಾವಿಸಿದ್ದ ರಂಗನಾಥಾನಂಧರು ಇವೆಲ್ಲದರಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದರು. ಆಶ್ರಮದಿಂದ ೧೦–೧೨ ಮೈಲಿ ದೂರದ ಪುಣ್ಯ ಸ್ಥಳಗಳಿಗೆ ಪ್ರವಾಸವನ್ನು ರಂಗನಾಥಾನಂದಜಿ ಆಯೋಜಿಸುತ್ತಿದ್ದರು. ಸಹಬಾಳ್ವೆ, ಪರಸ್ಪರ ಪ್ರೀತಿಯ ಬೆಳವಣಿಗೆಗೆ ಇದು ಪೂರಕ ಎಂದು ಅವರು ಭಾವಿಸಿದ್ದರು. ನಾವು ಈ ಸ್ಥಳಗಳಿಗೆ ನಡೆದೇ ಹೋಗುತ್ತಿದ್ದೆವು. ಮಾರ್ಗದಲ್ಲಿ ಯಥಾಪ್ರಕಾರ ವಿವೇಕಾನಂದರ ಚಿಂತನೆ, ಅವರ ಆದರ್ಶಗಳ ಬೋಧನೆ ನಡೆಯುತ್ತಿತ್ತು. ಬೇಸಗೆ ರಜೆಯ ಸಮಯದಲ್ಲಿ ಗ್ರಾಮಗಳ ಪುನರ್‌ನಿರ್ಮಾಣ, ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿತ್ತು.

ಈ ಉದ್ದೇಶಕ್ಕಾಗಿ ಹಣ ಸಂಗ್ರಹಿಸಲು ನಾಟಕ ಪ್ರದರ್ಶನ ನೀಡುತ್ತಿದ್ದೆವು. ವಯಸ್ಕರ ಶಿಕ್ಷಣಕ್ಕಾಗಿ ರಾತ್ರಿಶಾಲೆಯನ್ನು ಆರಂಭಿಸಿದೆವು. ಶ್ರಮಿಕ ವರ್ಗದವರು, ರೈತರನ್ನು ಮನಸ್ಸಿನಲ್ಲಿಟ್ಟುಕೊಂಡು ಇದನ್ನು ಆರಂಭಿಸಲಾಯಿತು. 'ವಿವೇಕವಾಣಿ' ಎಂಬ ಕೈಬರಹದ ಪತ್ರಿಕೆಯನ್ನು ಪ್ರತಿ ತಿಂಗಳೂ ಹೊರತರುತ್ತಿದ್ದೆವು. ಇದರಲ್ಲಿ ಎಲ್ಲ ಲೇಖನಗಳನ್ನು ನಾವೇ ಬರೆಯುತ್ತಿದ್ದೆವು.

೧೯೩೬ರಲ್ಲಿ ರಾಮಕೃಷ್ಣರ ಜನ್ಮಶತಮಾನೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಶ್ರಮದಲ್ಲಿ ಆಚರಿಸಲಾಯಿತು. ಆಗ ನಡೆದ ಎಲ್ಲ ಕಾರ್ಯಕ್ರಮ, ಚಟುವಟಿಕೆಗಳಲ್ಲಿ ನಾವು ಉತ್ಸಾಹದಿಂದ ಭಾಗವಹಿಸಿದೆವು.

ಆಶ್ರಮದಿಂದ ೭–೮ ಮೈಲಿ ದೂರದಲ್ಲಿದ್ದ ಅಲಸೂರು ಆಶ್ರಮಕ್ಕೆ ಬಂದು ನೆಲಸಿದ್ದ ಸ್ವಾಮಿ ನಿರ್ಮಲಾನಂದರನ್ನು ಭೇಟಿಯಾಗಲು ನಮ್ಮನ್ನು ಹಲವಾರು ಬಾರಿ ಕಳಿಸಿದ್ದರು. ನಿರ್ಮಲಾನಂದರು ಶ್ರೀ ರಾಮಕೃಷ್ಣರನ್ನು ಅನೇಕ ಬಾರಿ ಭೇಟಿಯಾಗಿದ್ದವರು. ನಮ್ಮಲ್ಲಿ, ನಾನೂ ಒಳಗೊಂಡಂತೆ ಆರು ಜನರನ್ನು, ೧೯೩೯ರ ಏಪ್ರಿಲ್‌ನಲ್ಲಿ ಮದ್ರಾಸಿಗೆ ಕಳಿಸಿ ಸ್ವಾಮಿ ವಿರಜಾನಂದರಿಂದ ಮಂತ್ರದೀಕ್ಷೆ ಪಡೆಯಲು ನೆರವಾದರು. ವಿರಜಾನಂದಜಿ ಮಹಾರಾಜ್ ಅಕ್ಟೋಬರ್ (೧೯೩೮)ತಿಂಗಳಲ್ಲಿ ಮಹಾಸಂಘದ ಅಧ್ಯಕ್ಷರಾಗಿದ್ದರು. ಅಧ್ಯಕ್ಷರಾಗಿ ಇದು ಅವರ ಪ್ರಥಮ ಭೇಟಿಯಾಗಿತ್ತು. ಬಹುಶಃ ರಂಗನಾಥಾನಂದಜಿ ನಮ್ಮಲ್ಲಿ ಕೆಲವರನ್ನು ೧೯೩೭ರಲ್ಲಿ ದುರ್ಗಾಪೂಜೆಯಲ್ಲಿ ಭಾಗವಹಿಸಲು ಮದ್ರಾಸಿನ ಮಠಕ್ಕೆ ಕಳಿಸಿಕೊಟ್ಟಿದ್ದರು.

೧೯೩೭ರ ಅಂತ್ಯದ ವೇಳೆಗೆ ಗೋಪಾಲ್ ಮಹಾರಾಜ್ ಪ್ಯಾರೀಸ್‌ನಲ್ಲಿ ಆರಂಭವಾದ ನೂತನ ಕೇಂದ್ರವೊಂದರ ಅಧ್ಯಕ್ಷರಾಗಿ ಅಲ್ಲಿಗೆ ತೆರಳಿದರು. ಕೇರಳ ದವರೇ ಆದ ಮತ್ತೊಬ್ಬರು, ಸ್ವಾಮಿ ತ್ಯಾಗೀಶಾನಂದರು ಬೆಂಗಳೂರು ಆಶ್ರಮದ ಅಧ್ಯಕ್ಷರಾಗಿ ಬಂದರು. ದೊಡ್ಡ ಮಟ್ಟದ ಸಂತರೂ ಒಳ್ಳೆಯ ವಿದ್ವಾಂಸರೂ ಆಗಿದ್ದರು ಇವರು. ೧೯೩೯ರಲ್ಲಿ ರಂಗೂನಿನ ರಾಮಕೃಷ್ಣ ಮಿಷನ್ ಸೊಸೈಟಿಯ ಕಾರ್ಯದರ್ಶಿಯಾಗಿ ಮತ್ತು ಅದರ ಗ್ರಂಥಪಾಲಕರಾಗಿ ರಂಗನಾಥಾನಂದರನ್ನು ನಿಯೋಜಿಸಲಾಯಿತು. ಅಲ್ಲಿ ಅವರು ತಮ್ಮ ಗೀತಾ ಪ್ರವಚನದಿಂದ ಮತ್ತು ಇತರ ಧಾರ್ಮಿಕ – ಸಾಂಸ್ಕೃತಿಕ ಉಪನ್ಯಾಸಗಳ ಮೂಲಕ ಬಹಳ ಬೇಗ ಪ್ರಸಿದ್ಧರಾದರು. ಬೆಂಗಳೂರಿನಲ್ಲಿದ್ದಾಗಲೇ ಅವರು ಅಲ್ಲಲ್ಲಿ ಉಪನ್ಯಾಸ ನೀಡುತ್ತಿದ್ದರು. ಆದರೆ ಅವರ ರಂಗೂನಿನ ಉಪನ್ಯಾಸಗಳು

ಹೆಚ್ಚೆಚ್ಚು ಜನರನ್ನು ಆಕರ್ಷಿಸುತ್ತಿದ್ದವು, ಜೊತೆಗೆ ಅಲ್ಲಿನ ಗ್ರಂಥಾಲಯವನ್ನು ಮತ್ತು ಆಸ್ಪತ್ರೆಯನ್ನು ಕೂಡ ಅವರು ಅಭಿವೃದ್ಧಿಪಡಿಸಿದರು.

ಎರಡನೆ ಮಹಾಯುದ್ಧದ ಸಂದರ್ಭದಲ್ಲಿ ೧೯೪೨ರಲ್ಲಿ ಬರ್ಮಾ ಮತ್ತು ರಂಗೂನ್ ದಾಳಿಗೆ ತುತ್ತಾದವು. ಸ್ವಾಮಿ ರಂಗನಾಥಾನಂದರು ಭಾರತದತ್ತ ಹೊರಟಿದ್ದ ಭಕ್ತರ ತಂಡದೊಂದಿಗೆ ಕಾಲ್ನಡಿಗೆಯಲ್ಲಿ ದುರ್ಗಮವಾದ, ದಟ್ಟ ಕಾಡಿನಲ್ಲಿ ನಡೆಯುತ್ತ ಬಂದರು. ಪ್ರಯಾಣಕ್ಕೆ ಸೂಕ್ತ ವ್ಯವಸ್ಥೆಗಳಿಲ್ಲದ್ದರಿಂದ ಅವರೇ ಹೇಳಿದಂತೆ ಬಹಳ ಕಷ್ಟದಿಂದಲೇ ನಡೆದರು. ತಂಡಕ್ಕೆ ನಾಯಕರಾಗಿ ಸ್ವಾಮೀಜಿ ನಡೆದುಕೊಂಡರು. ಕಾಡಿನಲ್ಲಿ ಸಾಗುವಾಗ ಕಷ್ಟಗಳನ್ನು ಎದುರಿಸಲು ಚತುರೋಪಾಯಗಳನ್ನು ಕಂಡುಕೊಂಡರು. ನೀರಿನ ಕೊಳ್ಳಗಳನ್ನು, ನದಿಗಳನ್ನು ದಾಟುವಾಗ ಮತ್ತು ತಂಡದ ಹೆಂಗಸರು ಸ್ನಾನ ಇತ್ಯಾದಿಗಳಿಗಾಗಿ ಗೌಪ್ಯತೆ ಕಾಪಾಡಿಕೊಳ್ಳಬೇಕಾದಾಗ – ಇಂತಹ ಕ್ಲಿಷ್ಟ ಹಾಗೂ ಸೂಕ್ಷ್ಮ ಸಂದರ್ಭಗಳಲ್ಲಿ ತಕ್ಕ ಪರಿಹಾರ, ವ್ಯವಸ್ಥೆ ರೂಪಿಸುವ ಸಾಮರ್ಥ್ಯ ಪ್ರದರ್ಶಿಸಿದರು.

ಸ್ವಾಮಿ ರಂಗನಾಥಾನಂದರು ಭಾರತ ತಲುಪಿದ ಬಳಿಕ ೧೯೪೨ರಲ್ಲಿ ಅವರನ್ನು ಕರಾಚಿ ಆಶ್ರಮದ ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ಆಗ ಅದೊಂದು ಸಣ್ಣ ಕೇಂದ್ರ. ಆಶ್ರಮದ ಬಗ್ಗೆಯಾಗಲೀ, ಶ್ರೀರಾಮಕೃಷ್ಣರ ಬಗ್ಗೆಯಾಗಲೀ ಆಗ ಕೆಲವೇ ಜನರಿಗೆ ಮಾತ್ರ ತಿಳಿದಿತ್ತು. ಶ್ರೀರಾಮಕೃಷ್ಣ ಎಂದರೆ ಶ್ರೀ ರಾಮತೀರ್ಥರೆಂದು ಅಲ್ಲಿನ ಜನ ತಿಳಿದಿದ್ದರು! ಆದರೆ ರಂಗನಾಥಾನಂದರ ಕ್ರಿಯಾಶೀಲತೆ, ಕಾರ್ಯಕ್ಷಮತೆಯಿಂದ ಆಶ್ರಮ ಬಹುಬೇಗ ವರ್ಧಿಸಿತು. ಬೆಂಗಳೂರಿನಲ್ಲಿ ಅವರೊಂದಿಗೆ ಆತ್ಮೀಯ ರಾಗಿದ್ದ ನಾವು ಐದು–ಆರು ಜನ ಒಬ್ಬೊಬ್ಬರಾಗಿ ಅಲ್ಲಿಗೆ ಹೋಗಿ ಬ್ರಹ್ಮಚಾರಿಗಳಾಗಿ ಸೇರಿದೆವು. ನಾನು ೧೯೪೩ರಲ್ಲಿ ಸೇರಿದೆ. ಆಮೇಲೆ ಇನ್ನೂ ಹಲವಾರು ಸೇರಿದರು. ಅಲ್ಲೊಂದು ಪ್ರೇಮಮಯ, ಉಲ್ಲಾಸಭರಿತ ವಾತಾವರಣ ನಿರ್ಮಾಣವಾಯಿತು. ನಾವೆಲ್ಲ ಸ್ವಾಮಿ ರಂಗನಾಥಾನಂದರ ನೇತೃತ್ವದಲ್ಲಿ ಹರ್ಷದಿಂದ ಒಟ್ಟಾಗಿ ಕೆಲಸ ಮಾಡುತ್ತಿದ್ದೆವು, ಆಟವಾಡುತ್ತಿದ್ದೆವು. ಸ್ವಾಮೀಜಿ ವಾಲಿಬಾಲ್ ಆಟದಲ್ಲಿ ಪಾಲ್ಗೊಳ್ಳುತ್ತಿದ್ದರು. ಕರಾಚಿ ಕೇಂದ್ರ ಭ್ರಾತೃತ್ವಕ್ಕೆ ಹೆಸರುವಾಸಿಯಾಯಿತು.

ಎರಡು–ಮೂರು ವರ್ಷಗಳಲ್ಲಿ ಕೇಂದ್ರ ಬೆಳವಣಿಗೆ ಸಾಧಿಸಿತು. ಸಾಂಸ್ಕೃತಿಕ ವಲಯದಲ್ಲಿ ಮತ್ತು ವೈದ್ಯಕೀಯ ಸೇವಾಕ್ಷೇತ್ರದ ವಲಯದಲ್ಲಿ – ಎರಡರಲ್ಲೂ ಬೆಳೆಯಿತು. ಕಣ್ಣಿನ ಚಿಕಿತ್ಸಾ ಕೇಂದ್ರ, ಅಲೋಪತಿ, ಹೋಮಿಯೋಪತಿ ಔಷಧಾಲಯಗಳು ಆರಂಭವಾದವು. ಕ್ಲಿಫ್ಟನ್ ತೀರದಲ್ಲಿ ಭಿಲ್ಲ ಗ್ರಾಮಸ್ಥರಿಗಾಗಿ ಶಿಕ್ಷಣ ಕಾರ್ಯ ಪ್ರಾರಂಭವಾಯಿತು. ಕರಾಚಿಯನ್ನು ರಾಜಧಾನಿಯಾಗಿ ಹೊಂದಿದ್ದ ಸಿಂಧ್ ಪ್ರಾಂತ್ಯದಲ್ಲಿ ಆಶ್ರಮವು ಬಹಳ ಪ್ರಸಿದ್ಧಿ ಪಡೆಯಿತು. ಸ್ವಾಮೀಜಿಯವರ ವಾರದ ಗೀತಾ ಪ್ರವಚನಕ್ಕೆ ಸಾಧಾರಣವಾಗಿ ೮೦೦ರಿಂದ ೧೦೦೦ಜನ ಇರುತ್ತಿದ್ದರು. ಒಮ್ಮೊಮ್ಮೆ ಈ ಸಂಖ್ಯೆ ೧೫೦೦ ಮುಟ್ಟುತ್ತಿತ್ತು. ಆಶ್ರಮದ ಹಿಂದಿನ ಬಯಲಿನಲ್ಲಿ ಈ ಉಪನ್ಯಾಸ ನಡೆಯುತ್ತಿತ್ತು.

ಕೆಲವೊಮ್ಮೆ ಜನರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದಾಗ ಅವರನ್ನು ಕುಳ್ಳಿರಿಸಲು ವಿಶೇಷ ವ್ಯವಸ್ಥೆಗಳನ್ನು ಕೈಗೊಳ್ಳಬೇಕಾಗುತ್ತಿತ್ತು. ಆಶ್ರಮದಲ್ಲಿ ಉಪನ್ಯಾಸ ನೀಡುವುದಷ್ಟೇ ಅಲ್ಲದೆ ಆಹ್ವಾನದ ಮೇರೆಗೆ ಸಿಂಧ್‌ನ ವಿವಿಧ ಪ್ರಾಂತ್ಯಗಳಲ್ಲಿ ಅವರು ಉಪನ್ಯಾಸ ಉಪನ್ಯಾಸ ನೀಡುತ್ತಿದ್ದರು. ಕರಾಚಿಯಿಂದ ೨೫೦ ಕಿ.ಮೀ ದೂರದಲ್ಲಿದ್ದ ಹೈದರಾಬಾದ್‌ನಲ್ಲಿ ಅವರು ಹದಿನೈದು ದಿನಗಳಿಗೊಮ್ಮೆ ಉಪನ್ಯಾಸ, ತರಗತಿಗಳು ನಡೆಸುತ್ತಿದ್ದರು. ಹಲವಾರು ಬಾರಿ ಅವರು ಈ ಪಯಣದ ಸಂದರ್ಭದಲ್ಲಿ ನನ್ನನ್ನು ಕರೆದೊಯ್ಯುತ್ತಿದ್ದರು. ಅವರ ಭಾಷಣವನ್ನು ನಾನು ಶೀಘ್ರಲಿಪಿಯಲ್ಲಿ ಬರೆದುಕೊಂಡು ಬಳಿಕ ಅದನ್ನು ಬೆರಳಚ್ಚು ಮಾಡಿ ಅವರಿಗೆ ನೀಡುತ್ತಿದ್ದೆ. ಕರಾಚಿ ಯಲ್ಲಿಯೂ ನಾನು ಅವರ ಗೀತೆಯ ಬಗೆಗಿನ ಉಪನ್ಯಾಸವನ್ನು ಬರೆದುಕೊಳ್ಳುತ್ತಿದ್ದೆ.

ಹೀಗೆ ತನ್ನ ಸಾಂಸ್ಕೃತಿಕ ಮತ್ತು ಸೇವಾ ಚಟುವಟಿಕೆಗಳಿಂದ ಕರಾಚಿ ಕೇಂದ್ರವು ಎಲ್ಲ ವರ್ಗದ, ಎಲ್ಲ ಜನರ, ಎಲ್ಲ ಮತಧರ್ಮದವರ ವಿಶ್ವಾಸಕ್ಕೆ ಪಾತ್ರವಾಯಿತು. ವಿದ್ವಾಂಸರು, ವಿದ್ಯಾರ್ಥಿಗಳು, ಸರ್ಕಾರಿ ಅಧಿಕಾರಿಗಳು

ಮತ್ತು ಜನಸಾಮಾನ್ಯರು – ಎಲ್ಲರೂ ಮೆಚ್ಚಿಕೊಂಡರು. ಗ್ರಂಥಾಲಯ ಬೆಳೆಯಿತು, ನಾನು ಅದರ ನಿರ್ವಹಣೆ ಮಾಡುತ್ತಿದ್ದೆ. ಒಂದು ಚಿಕ್ಕ ಚೊಕ್ಕ ಮಂದಿರ ತಲೆಯೆತ್ತಿತ್ತು. ಬೆಂಗಳೂರಿನಲ್ಲಾದಂತೆ ಇಲ್ಲೂ ಒಂದು ಕೈಬರಹದ ಪತ್ರಿಕೆ ಆಂಗ್ಲಭಾಷೆಯಲ್ಲಿ ಆರಂಭವಾಯಿತು. 'ಯೂನಿಟಿ' ಹೆಸರಿನ ಈ ಪತ್ರಿಕೆಯನ್ನು ಎಲ್ಲ ಬ್ರಹ್ಮಚಾರಿಗಳು ಸೇರಿ ನಡೆಸುತ್ತಿದ್ದರು. ಭಕ್ತವರ್ಗದಲ್ಲಿ ಇದು ಪ್ರಸಾರವಾಗುತ್ತಿತ್ತು, ಸಂಪಾದಕನಾಗಿ ನಾನು ಜವಾಬ್ದಾರಿ ಹೊತ್ತಿದ್ದೆ, ಮತ್ತು ಅದನ್ನು ಬೆರಳಚ್ಚು ಮಾಡಿ ಸಿದ್ಧಪಡಿಸುವುದೂ ನನ್ನ ಪಾಲಿಗಿತ್ತು. ಸ್ವಾಮೀಜಿ ಸಂಸ್ಕೃತ ಶಾಸ್ತ್ರಗ್ರಂಥಗಳನ್ನು ಕುರಿತು ನಮಗೆ ತರಗತಿಗಳನ್ನು ನಡೆಸುತ್ತಿದ್ದರು. ಜೊತೆಗೆ ಅವರಿಂದ ಪ್ರತಿದಿನವೂ ಬೆಳಗಿನ ಹೊತ್ತು ಗೀತೆ, ಉಪನಿಷತ್ತುಗಳು ಮತ್ತು ಶಂಕರಭಾಷ್ಯದ ಪಾಠವಿತ್ತು.

ಸ್ವಾಮಿ ರಂಗನಾಥಾನಂದರಲ್ಲಿದ್ದ ಒಂದು ವಿಶೇಷ ಗುಣವನ್ನು ವ್ಯಕ್ತಪಡಿಸುವ ಒಂದು ಘಟನೆ ನನಗೆ ನೆನಪಾಗುತ್ತದೆ. ಕರಾಚಿ ಆಶ್ರಮಕ್ಕೆ ಆಗಾಗ ಬಂದು ಅಲ್ಲಿ ಕೆಲ ಸಮಯ ನಮ್ಮೊಂದಿಗೆ ಕಳೆಯುತ್ತಿದ್ದ ಫಿರೋಜ್ ಎಂಬ ಪಾರ್ಸಿ ಯುವಕನಿದ್ದ. ಅವನು ನಮ್ಮೊಂದಿಗೂ ಆತ್ಮೀಯನಾಗಿದ್ದ. ಒಂದು ದಿನ ಅವನು ಬಹಳ ಉದ್ರಿಕ್ತನಾಗಿ ಬಂದಿದ್ದ. ಏಕೆಂದು ನನಗೆ ಗೊತ್ತಿಲ್ಲ, ಆದರೆ ಆ ಸ್ಥಿತಿಯಲ್ಲೇ ಅವನು ರಂಗನಾಥಾ ನಂದರನ್ನು ಕಂಡು ಬಹಳ ಹೊತ್ತು ಏರುದನಿಯಲ್ಲಿ ಅವರೊಂದಿಗೆ ಮಾತನಾಡಿದ. ಅವರೊಂದಿಗೆ ಜಗಳ ಕಾಯುತ್ತಿರುವವನಂತೆ ಮಾತನಾಡುತ್ತಿದ್ದ. ಆದರೆ ಸ್ವಾಮೀಜಿ ಯಾವುದೇ ಮನಃಕ್ಷೋಭೆ ಇಲ್ಲದೆ ಶಾಂತವಾಗಿ ಕುಳಿತಿದ್ದರು. ಸದ್ದಿಲ್ಲದೆ ಕುಳಿತು ಏನೂ ಮಾತಾಡದೆ ಇದ್ದರು. ಸ್ವಲ್ಪಸಮಯದ ಬಳಿಕ ಯುವಕ ಕಣ್ಣೀರಿನಲಿ ಕರಗಿಹೋದ, ತನ್ನ ಅನುಚಿತ ವರ್ತನೆಯನ್ನು ಕ್ಷಮಿಸುವಂತೆ ಅವನು ರಂಗನಾಥಾನಂದರನ್ನು ಬೇಡಿಕೊಳ್ಳುತ್ತಿರುವುದು ಕಂಡುಬಂದಿತು. ಸ್ವಾಮೀಜಿಯವರ ತಾಳ್ಮೆ ಹೀಗೆ ಎಲ್ಲ ಸಂದರ್ಭಗಳಲ್ಲೂ ಇರುತ್ತಿತ್ತು. ಅವರು ಉದ್ರಿಕ್ತರಾಗಿದ್ದುದನ್ನು ನಾನೆಂದೂ ಕಾಣಲಿಲ್ಲ. ಬಾಹ್ಯದಲ್ಲಿ ಅವರು ದೃಢರೂ, ಕ್ರಿಯಾಶೀಲರೂ ಆಗಿದ್ದರೂ ಅಂತರಂಗದಲ್ಲಿ ಶಾಂತ–ಸಮಚಿತ್ತರಾಗಿದ್ದರು.

೧೯೪೭ರವರೆಗೆ ಕರಾಚಿ ಜೀವನ ಸಾಗಿತು. ೧೯೪೭ರ ದೇಶ ವಿಭಜನೆಯ ಕಾರಣದಿಂದ ಕರಾಚಿ ಮತ್ತಿತರ ಸ್ಥಳಗಳಲ್ಲಿ ವ್ಯವಸ್ಥಿತವಾಗಿ ಹಿಂದೂಗಳನ್ನು ಹೊರಹಾಕಲು ಯೋಜನಾಬದ್ಧ ಎನ್ನುವಂತಹ ದೊಡ್ಡಮಟ್ಟದ ಹಿಂಸಾಕೃತ್ಯಗಳು ನಡೆದವು. ೧೯೪೮ರ ಜನವರಿ ೬ರಂದು ಶಸ್ತ್ರಾಸ್ತ್ರಸಹಿತ ಪುಂಡರ ಗುಂಪೊಂದು ನಮ್ಮ ಆಶ್ರಮವನ್ನು ಲೂಟಿಮಾಡಿತು. ನಾನು, ಇಬ್ಬರು ಬ್ರಹ್ಮಚಾರಿಗಳು ಮತ್ತು ಒಬ್ಬ ಅಡುಗೆಯವನು ಈ ಸಮಯದಲ್ಲಿ ಆಶ್ರಮದಲ್ಲಿದ್ದೆವು. ಠಾಕೂರರ (ಶ್ರೀ ರಾಮಕೃಷ್ಣರ) ಕೃಪೆಯಿಂದ ನಾವು ಬುದ್ಧಿ ಉಪಯೋಗಿಸಿ ಪಕ್ಕದಲ್ಲಿದ್ದ ಬಂಗಾಳಿ ಮುಸಲ್ಮಾನರ ಮನೆಯಲ್ಲಿ ಆಶ್ರಯ ಪಡೆದು ಜೀವ ಉಳಿಸಿಕೊಂಡೆವು. ಆಶ್ರಮದ ಮತ್ತಿಬ್ಬರು ಆ ಸಮಯದಲ್ಲಿ ಬಜಾರಿಗೆ ತೆರಳಿದ್ದರು. ಸ್ವಾಮಿ ರಂಗನಾಥಾನಂದರು ಕಾರ್ಯನಿಮಿತ್ತ ಕಲ್ಕತ್ತಕ್ಕೆ ತೆರಳಿದ್ದರು. ಲೂಟಿಯ ವಿಷಯ ಕೇಳಿದ ಸ್ವಾಮೀಜಿ ತಕ್ಷಣ ಕರಾಚಿಗೆ ಹಿಂದಿರುಗಿದರು. ಆವೇಳೆಗಾಗಲೇ ಆಶ್ರಮವನ್ನು ಒಬ್ಬ ಮುಸ್ಲಿಂ ಅಧಿಕಾರಿ ಆಕ್ರಮಿಸಿಕೊಂಡಿದ್ದ. ಅಲ್ಲಿಂದ ಒಂದು ಕಿಲೋಮೀಟರ್ ದೂರದಲ್ಲಿದ್ದ ನಮ್ಮ ಆಸ್ಪತ್ರೆಯ ಕಟ್ಟಡದಲ್ಲೇ ನೆಲೆಸಿ ಆಶ್ರಮದ ಚಟುವಟಿಕೆಗಳನ್ನು ಮುಂದುವರಿಸಲು ಪ್ರಯತ್ನಿಸಿದೆವು. ಕೇವಲ ನಮ್ಮ ಆಶ್ರಮವೊಂದೇ ಲೂಟಿ ಯಾಗಿರಲಿಲ್ಲ, ಇಡೀ ಕರಾಚಿಯಲ್ಲಿ ಮುಸ್ಲಿಮೇತರನ್ನು ಅಟ್ಟಾಡಿಸಿಬಿಟ್ಟಿದ್ದರು. ಎಲ್ಲವನ್ನೂ ಕಳೆದುಕೊಂಡು ನಿರ್ಗತಿಕರಾಗಿ ಅವರೆಲ್ಲ ಬೀದಿಪಾಲಾಗಿದ್ದರು.

ಬಾಂಬೆ ಸ್ಟೀಮ್ ನ್ಯಾವಿಗೇಷನ್ ಕಂಪನಿಯ ಮೇನೇಜರ್ ಆಗಿದ್ದ ಶ್ರೀ ನವೀನ್ ಟಿ. ಖಂಡವಾಲಾ ಅವರು ಆಶ್ರಮದ ಭಕ್ತವರ್ಗಕ್ಕೆ ಸೇರಿದವರು. ಅವರ ನೆರವಿನಿಂದ ಸ್ವಾಮೀಜಿ ಮತ್ತು ನಾವು ಸೇರಿ ಸಿಂಧಿ ನಿರಾಶ್ರಿತರನ್ನು ಭಾರತದ ದಡ ತಲುಪಿಸಿದೆವು. ನಾವು ಮತ್ತು ಮತ್ತೊಬ್ಬ ಬ್ರಹ್ಮಚಾರಿಗಳು ಕೂಡ ಹಡಗಿನಲ್ಲಿ ಭಾರತಕ್ಕೆ ಬಂದೆವು. ಅಲ್ಲಿ ಎಲ್ಲೆಡೆ ಅತಂತ್ರ, ಆತಂಕದ ವಾತಾವರಣ, ಇರಲು ಸುರಕ್ಷಿತ ತಾಣವಿರಲಿಲ್ಲ.

ಆಹಾರದ ವ್ಯವಸ್ಥೆ ಮಾಡಿಕೊಳ್ಳುವುದೂ ಕಷ್ಟಕರವಾಗಿತ್ತು. ನಾವು ಗುಜರಾತಿನ ಮೂಲಕ ದ್ವಾರಕ ಮೊದಲಾದ ಕ್ಷೇತ್ರಗಳನ್ನು ಸಂದರ್ಶಿಸಿ ಬಾಂಬೆ ಮುಟ್ಟಿ, ಅಲ್ಲಿಂದ ಬೇಲೂರುಮಠಕ್ಕೆ ಬಂದೆವು. ಗುಜಾರಾತಿನಲ್ಲಿ ನಾವು ರಾಜಕೋಟದಲ್ಲಿ ಸ್ವಾಮಿ ಭೂತೇಶಾನಂದಜಿ ಮಹಾರಾಜ್ (ಮುಂದೆ ಮಹಾಸಂಘದ ೧೨ನೇ ಅಧ್ಯಕ್ಷರಾದವರು) ಅವರನ್ನು ಭೇಟಿಯಾದೆವು. ಬೇಲೂರಿನ ಮಠದಲ್ಲಿ ನಾವು ಬ್ರಹ್ಮಚರ್ಯದೀಕ್ಷೆ ಪಡೆದೆವು (ಲಕ್ಷ್ಮಣ್ ಮಹಾರಾಜ್ ಆಗಿದ್ದ ನನಗೆ ಈಗ ತುರೀಯ ಚೈತನ್ಯ ಎಂಬ ನಾಮಧೇಯವಾಯಿತು). ದೀಕ್ಷೆಯ ಬಳಿಕ ೧೯೪೮ರ ಏಪ್ರಿಲ್‌ನಲ್ಲಿ ಕರಾಚಿಗೆ ಹಿಂದಿರುಗಿದೆವು. ಈ ಮೂರು ತಿಂಗಳಲ್ಲಿ ಪರಿಸ್ಥಿತಿ ಕೊಂಚ ಸುಧಾರಿಸಿತ್ತು. ಸ್ವಾಮೀಜಿ ಮತ್ತು ನಾವು ನಾಲ್ಕು–ಐದು ಮಂದಿ ಸೇರಿ ಅಲ್ಲಿನ ಪ್ರಕ್ಷುಬ್ಧ, ಸೂಕ್ಷ್ಮ ವಾತಾವರಣದಲ್ಲೂ ಕಾರ್ಯಚಟುವಟಿಕೆ ನಡೆಸಲು ಪ್ರಯತ್ನಿಸಿದೆವು. ಆದರೆ, ಅಂತಿಮವಾಗಿ ಬೇಲೂರುಮಠದ ಮುಖ್ಯ ಕಚೇರಿಯ ಆದೇಶದಂತೆ ಕರಾಚಿ ಕೇಂದ್ರವನ್ನು ಮುಚ್ಚಲಾಯಿತು. ಸ್ವಾಮೀಜಿ ಆಶ್ರಮದ ಆಸ್ತಿಗಳೆಲ್ಲವನ್ನು ಮಾರಿದರು. (ಈವೇಳೆಗೆ ಅವರು ಆಶ್ರಮವನ್ನು ಆಕ್ರಮಿಸಿಕೊಂಡಿದ್ದ ಮುಸ್ಲಿಮ್ ಅಧಿಕಾರಿಯನ್ನು ಹೊರಹಾಕಿಸಿದ್ದರು.) ೧೯೪೮ರ ಆಗಸ್ಟ್ ೮ರಂದು ನಾವೆಲ್ಲ ವಿಮಾನದಲ್ಲಿ ದೆಹಲಿಗೆ ಬಂದಿಳಿದೆವು. ಮಾರಾಟದಿಂದ ದೊರೆತ ಹಣವನ್ನೆಲ್ಲ ಮುಂಬೈನಲ್ಲಿ ಡಿಪಾಜಿಟ್ ಇರಿಸಿ ಸಿಂಧ್ ನಿರಾಶ್ರಿತರ ಪರಿಹಾರಕ್ಕಾಗಿ ಅದನ್ನು ಬಳಸಿಕೊಳ್ಳಲಾಯಿತು. ಲಾಹೋರ್‌ನಲ್ಲಿದ್ದ ನಮ್ಮ ಕೇಂದ್ರವನ್ನು ಸಹ ಮುಚ್ಚಲಾಯಿತು. ಆ ಹಣದಿಂದ ಮುಂದೆ ಚಂಡೀಗಡದಲ್ಲಿ ಮತ್ತೆ ಕೇಂದ್ರವೊಂದನ್ನು ಆರಂಭಿಸಲಾಯಿತು.

ನಾನು ಸ್ವಾಮೀಜಿಯವರೊಂದಿಗೆ ಬೆಂಗಳೂರಿನಲ್ಲಿ ೧೯೩೫ರಿಂದ ೧೯೩೯ರವರೆಗೆ, ಮತ್ತು ಕರಾಚಿಯಲ್ಲಿ ಬ್ರಹ್ಮಚಾರಿಯಾಗಿ ಐದು ವರ್ಷ ೧೯೪೩ರಿಂದ ೧೯೪೮ರವರೆಗೆ ಬಹಳ ಆತ್ಮೀಯ ಒಡನಾಟ ಅನುಭವಿಸಿದ್ದೆ.

ಭಾರತಕ್ಕೆ ಹಿಂದಿರುಗಿದ ಬಳಿಕ ಸ್ವಾಮೀಜಿ ದೆಹಲಿಯ ರಾಮಕೃಷ್ಣ ಮಿಷನ್ನಿನ ಜವಾಬ್ದಾರಿ ವಹಿಸಿಕೊಂಡರು. ನನ್ನನ್ನು ಪ್ರಬುದ್ಧ ಭಾರತ ಮಹಾಸಂಘದ ಮಾಸಪತ್ರಿಕೆಯ ಸಹಾಯಕ ಸಂಪಾದಕನನ್ನಾಗಿ ನೇಮಿಸಿ ಮಾಯಾವತಿಯ ಅದ್ವೈತ ಆಶ್ರಮಕ್ಕೆ ಕಳಿಸಿಕೊಟ್ಟರು. ಸ್ವಾಮಿ ರಂಗನಾಥಾನಂದರು ದೆಹಲಿಯ ಮಿಷನ್ನಿನ ಅಧ್ಯಕ್ಷರಾಗಿ ೧೯೪೯ರಿಂದ ೧೯೬೨ರವರೆಗೆ ಸೇವೆ ಸಲ್ಲಿಸಿದರು. ಅವರು ಅಲ್ಲಿ ಜವಾಬ್ದಾರಿ ವಹಿಸಿಕೊಂಡಾಗ ಅದೊಂದು ಪುಟ್ಟ ಕೇಂದ್ರವಾಗಿದ್ದು, ಹೆಚ್ಚು ಜನರಿಗೆ ಅದರ ಬಗ್ಗೆ ಗೊತ್ತಿರಲಿಲ್ಲ. ಆದರೆ ಅವರ ಅವಧಿಯಲ್ಲಿ ಅದು ಬಹುಮುಖಿ ಅಭಿವೃದ್ಧಿ ಹೊಂದಿತು ಮತ್ತು ಜನಪ್ರಿಯವೂ ಆಯಿತು. ಸಾಧುನಿವಾಸ, ದೊಡ್ಡ ಗ್ರಂಥಾಲಯ, ಸಭಾಂಗಣ, ಮಿಷನ್ ಆವರಣದಲ್ಲಿ ಚಿಕಿತ್ಸಾಕೇಂದ್ರ ಮತ್ತು ಕರೋಲ್‌ಬಾಘ್‌ನಲ್ಲಿ ಒಂದು ಕ್ಷಯರೋಗ ಚಿಕಿತ್ಸಾ ಕೇಂದ್ರ – ಇವೆಲ್ಲವೂ ಅವರ ಕಾಲದಲ್ಲಿ ನಿರ್ಮಿತವಾದವು. ಯಥಾಪ್ರಕಾರ ಅವರ ಉಪನ್ಯಾಸಗಳು ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸಿತು. ವಿದ್ವಾಂಸರು, ಸರ್ಕಾರಿ ಅಧಿಕಾರಿಗಳು, ವಿದೇಶೀ ದೂತ ವಾಸದ ಸಿಬ್ಬಂದಿಗಳು ಸ್ವಾಮೀಜಿಯವರ ಪ್ರಭಾವಲಯದಿಂದ ಆಕರ್ಷಿತರಾದರು. ಬೇರೆ ಬೇರೆ ದೇಶಗಳಲ್ಲಿ ಉಪನ್ಯಾಸ ನೀಡಲು ಅವರಿಗೆ ಆಹ್ವಾನಗಳು ಬಂದವು. ೧೯೫೬ರಲ್ಲಿ ಹೀಗೆ ಆರಂಭವಾದ ಅವರ ವಿದೇಶ ಪ್ರವಾಸ, ಉಪನ್ಯಾಸಗಳು ೧೯೮೬ರವರೆಗೆ ದೆಹಲಿಯಿಂದ, ಬಳಿಕ ಕಲ್ಕತ್ತದಿಂದ ಮುಂದುವರೆಯಿತು. ಡೆಹರಾಡೂನಿನಲ್ಲಿರುವ ಮಿಲಿಟರಿ ಅಕಾಡೆಮಿಯ ಅಧಿಕಾರಿಗಳನ್ನುದ್ದೇಶಿಸಿ ಮಾತನಾಡಲು ಭಾರತ ಸರ್ಕಾರ ಅವರನ್ನು ನಿಯೋಜಿಸಿತು.

೧೯೫೨ರಲ್ಲಿ ನಾನು ಮಾಯಾವತಿಯಿಂದ ಬೇಲೂರು ಮಠಕ್ಕೆ ಹಿಂದಿರುಗಿದೆ ಮತ್ತು ಸಂನ್ಯಾಸದೀಕ್ಷೆ ಸ್ವೀಕರಿಸಿದೆ. ಕಲ್ಕತ್ತದ ಅದ್ವೈತ ಆಶ್ರಮದಲ್ಲಿ ಮತ್ತು ಇನ್ಸ್ಟಿಟ್ಯೂಟ್ ಆಫ್ ಕಲ್ಚರ್‌ನಲ್ಲಿ ಕೆಲಸ ಮಾಡಿದೆ. ೧೯೫೮ರಲ್ಲಿ ಇಂಗ್ಲೆಂಡ್ ನಲ್ಲಿರುವ ನಮ್ಮ ಕೇಂದ್ರದ ಸಹಾಯಕ ಮಹಂತನಾಗಿ ವರ್ಗಾವಣೆಗೊಂಡೆ. ಎರಡು ವರ್ಷದ ಬಳಿಕ ದೆಹಲಿಗೆ ಹತ್ತಿರವೇ ಇದ್ದ ಚಂಡೀಗಡದ ವ್ಯವಸ್ಥಾಪಕನಾಗಿ ನೇಮಕಗೊಂಡು ಭಾರತಕ್ಕೆ ಹಿಂದಿರುಗಿದೆ. ದೆಹಲಿಯಲ್ಲಿದ್ದ ಸ್ವಾಮಿ ರಂಗನಾಥಾನಂದರು, ಅಧಿಕಾರಿವಲಯದಲ್ಲಿ ತಮಗಿದ್ದ ಪ್ರಭಾವವನ್ನು

ಬಳಸಿ ಈ ನೂತನ ಕೇಂದ್ರ ಚೆನ್ನಾಗಿ ನಡೆಯುವಂತಾಗಲೂ ಆರ್ಥಿಕ ನೆರವು ನೀಡಿದರು. ನಾನು ಬೇಲೂರು ಮಠಕ್ಕೆ ಹೋಗುವಾಗ ಅಥವಾ ಅಲ್ಲಿಂದ ಹಿಂದಿರುಗುವಾಗ ಮಾರ್ಗದಲ್ಲಿದ್ದ ದೆಹಲಿಯಲ್ಲಿ ಉಳಿದು ಸ್ವಾಮೀಜಿಯವರನ್ನು ಭೇಟಿಯಾಗುತ್ತಿದ್ದೆ. ಪಂಜಾಬಿನಲ್ಲಿ ಅವರ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದೆ. ಸ್ವಾಮೀಜಿ ೧೯೬೨ರವರೆಗೆ ದೆಹಲಿಯಲ್ಲಿದ್ದರು. ದೆಹಲಿ ಕೇಂದ್ರದ ಸರ್ವತೋಮುಖ ಬೆಳವಣಿಗೆ ಸಾಧಿಸಿದ ಬಳಿಕ ಅವರು ಕಲ್ಕತ್ತದ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನ ಜವಾಬ್ದಾರಿ ವಹಿಸಿಕೊಂಡು ೧೯೬೭ರವರೆಗೆ ಕಾರ್ಯನಿರ್ವಹಿಸಿದರು. ಅಲ್ಲಿ ಅನೇಕ ವಿದೇಶೀ ವಿದ್ವಾಂಸರು ಅವರನ್ನು ಭೇಟಿಯಾಗುತ್ತಿದ್ದರು, ಅನೇಕರು ತಮ್ಮ ದೇಶಕ್ಕೆ ಆಹ್ವಾನಿಸುತ್ತಿದ್ದರು. ಅವರ ವಿದೇಶ ಪ್ರವಾಸ ಮುಂದುವರಿಯಿತು. ದೆಹಲಿಯಲ್ಲಿದ್ದಾಗಲೇ ಆರಂಭವಾಗಿದ್ದ ಈ ಪ್ರವಾಸಗಳಲ್ಲಿ ಅವರು ವೇದಾಂತ, ಸಂಸ್ಕೃತಿಗಳನ್ನು ಪ್ರಚಾರ ಮಾಡುತ್ತಿದ್ದರು. ಅವರ ಎರಡು ಗ್ರಂಥಗಳಾದ ಎ ಪಿಲಿಗ್ರಿಮ್ ಲುಕ್ಸ್ ಅಟ್ ದ ವರ್ಲ್ಡ್ (೧೯೯೦) ಮತ್ತು ಎ ಟ್ರಾವಲರ್ ಲುಕ್ಸ್ ಅಟ್ ದ ವರ್ಲ್ಡ್ (೧೯೯೫) ಅವರ ವಿದೇಶ ಪ್ರವಾಸಗಳ ಅನುಭವಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸುತ್ತವೆ.

ಸ್ವಾಮಿ ರಂಗನಾಥಾನಂದರ ಸೃಜನಶಕ್ತಿ ಮತ್ತು ಕ್ರಿಯಾಶೀಲ ವ್ಯಕ್ತಿತ್ವ ಪೂರ್ಣ ಹೊರಹೊಮ್ಮಿದ್ದು ಅವರು ಹೈದರಾಬಾದ್ ಕೇಂದ್ರದ ಜವಾಬ್ದಾರಿಯನ್ನು ವಹಿಸಿಕೊಂಡಾಗ. ೧೯೭೩ರಲ್ಲಿ ಅದನ್ನು ವಹಿಸಿಕೊಂಡಾಗ ಅದು ಯಾವ ಲೆಕ್ಕಕ್ಕೂ ಬಾರದ ಚಿಕ್ಕ ಕೇಂದ್ರ . ಅದು ಬೇಗಂಪೇಟ್ ವಿಮಾನನಿಲ್ದಾಣ ಪ್ರದೇಶದಲ್ಲಿ ಇತ್ತು. ಹಳೆಯ ಕಟ್ಟಡಗಳನ್ನು ಹೊಂದಿದ್ದ ಚಿಕ್ಕ ಕೇಂದ್ರ ಅದು. ಸ್ವಾಮೀಜಿ ಅದನ್ನು ಕ್ಷಿಪ್ರವಾಗಿ ಸಿಕಂದರಾಬಾದಿನ ಮಾರುಕಟ್ಟೆ ಪ್ರದೇಶಕ್ಕೆ ವರ್ಗಾಯಿಸಿದರು. ಸರ್ಕಾರದ, ಅಧಿಕಾರಿಗಳ ವಲಯದಲ್ಲಿ ಅವರ ಪ್ರಭಾವದ ಅರಿವು ಮೂಡಲಾರಂಭಿಸಿತು. ಇದರ ಪರಿಣಾಮವಾಗಿ ೧೯೭೮ರಲ್ಲಿ ಪ್ರಸ್ತುತ ಈಗ ಹೈದರಾಬಾದ್‌ನಲ್ಲಿ ಆಶ್ರಮ ಇರುವ ಸ್ಥಳಕ್ಕೆ ಕೇಂದ್ರ ವರ್ಗಾವಣೆಗೊಂಡಿತು. ವಿಶಾಲವೂ, ಪ್ರಸಿದ್ಧವೂ ಆದ ಪ್ರದೇಶದಲ್ಲಿ ಆಶ್ರಮ ನೆಲೆ ಕಂಡುಕೊಂಡಿತು. ಇಲ್ಲಿ ದೊಡ್ಡ ಸಭಾಂಗಣ, ವಿವೇಕಾನಂದ ಇನ್‌ಸ್ಟಿಟ್ಯೂಟ್ ಆಫ್ ಹ್ಯೂಮನ್ ಎಕ್ಸಲೆನ್ಸ್ (ಕಲ್ಕತ್ತದ ಇನ್ಸಟಿಟ್ಯೂಟ್ ಆಫ್ ಕಲ್ಚರ್ ಮಾದರಿಯಲ್ಲಿ), ಭವ್ಯವಾದ ಶ್ರೀ ರಾಮಕೃಷ್ಣ ಮಂದಿರ, ದೊಡ್ಡ ಗ್ರಂಥಾಲಯ ಮತ್ತು ಒಂದು ಸಂಗ್ರಹಾಲಯ ಹಾಗೂ ಇತರೆ ವೈದ್ಯಕಿಯ ಮತ್ತು ಸಾಂಸ್ಕೃತಿಕ ವಿಭಾಗಗಳು ತಲೆಯೆತ್ತಿದವು. ಮಾಮೂಲಿನಂತೆ ಅವರ ಗೀತೆ, ಉಪನಿಷತ್ತುಗಳ ಮೇಲಿನ ಉಪನ್ಯಾಸಗಳು ದೊಡ್ಡ ಪ್ರಮಾಣದಲ್ಲಿ ಜನರನ್ನು ಆಕರ್ಷಿಸುತ್ತಿದ್ದವು. ಗೀತೆ ಉಪನಿಷತ್ತುಗಳನ್ನು ಕುರಿತು ಅವರು ರಚಿಸಿದ ಗ್ರಂಥಗಳು ಪ್ರಕಟಗೊಂಡವು. ೧೯೯೮ರವರೆಗೆ ಅವರು ಹೈದರಾಬಾದ್‌ನಲ್ಲಿದ್ದರು. ಪಾಂಡಿತ್ಯವಷ್ಟೇ ಅಲ್ಲದೆ ಅವರ ಸರಳತೆ, ಶುದ್ಧ ಚಾರಿತ್ರ್ಯ ಮತ್ತು ಮುಗ್ಧತೆ ಎಲ್ಲರನ್ನೂ ಅವರತ್ತ ಸೆಳೆಯುತ್ತಿತ್ತು.

೧೯೮೯ರಲ್ಲಿ ಅವರು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾಗಿ ಆಯ್ಕೆಯಾದರು. ಆದರೆ ೧೯೯೮ರವರೆಗೂ, ಮಹಾಸಂಘದ ೧೩ನೇ ಅಧ್ಯಕ್ಷರಾಗಿ ಆಯ್ಕೆಯಾಗುವವರೆಗೂ ಅವರು ಹೈದರಬಾದಿನಲ್ಲಿದ್ದರು. ಅವರು ಹೈದರಾಬಾದಿನಲ್ಲಿದ್ದಷ್ಟೂ ಕಾಲವೂ ನನ್ನ-ಅವರ ಭೇಟಿ ಆಗುತ್ತಿದ್ದುದು ಅವರು ಬೇಲೂರು ಮಠಕ್ಕೆ ಬಂದ ಸಂದರ್ಭಗಳಲ್ಲಿ ಮಾತ್ರ. ನಾನು ತರಬೇತಿ ಕೇಂದ್ರದ ಆಚಾರ್ಯರಲ್ಲಿ ಒಬ್ಬನಾಗಿ ಸೇವೆ ಸಲ್ಲಿಸುತ್ತಿದ್ದೆ. ಹೈದರಬಾದಿಗೆ ಒಮ್ಮೆ ಅಥವಾ ಎರಡು ಬಾರಿ ಭೇಟಿ ನೀಡಿದ ನೆನಪು. ಸ್ವಾಮೀಜಿ ನನಗೆ ಅಲ್ಲಿನ ಪ್ರೇಕ್ಷಣೀಯ ಸ್ಥಳಗಳನ್ನು, ಧಾರ್ಮಿಕ ಚಾರಿತ್ರಿಕ ಕ್ಷೇತ್ರಗಳನ್ನು ಸಂದರ್ಶಿಸಲು ವ್ಯವಸ್ಥೆ ಮಾಡಿದ್ದರು. ನಮ್ಮಿಬ್ಬರ ನಡುವೆ ಪ್ರತವ್ಯವಹಾರವೂ ಇತ್ತು. ನಾನು ಬರೆದ ಪುಸ್ತಕಗಳು ಮುದ್ರಣಗೊಂಡಾಗಲೆಲ್ಲ ಮರೆಯದೆ ಅವರಿಗೊಂದು ಪ್ರತಿ ಕಳುಹಿಸಿಕೊಡುತ್ತಿದ್ದೆ.

೧೯೯೮ರಲ್ಲಿ ಅವರು ಅಧ್ಯಕ್ಷರಾದ ಬಳಿಕ ಬೇಲೂರು ಮಠದಲ್ಲಿ ನೆಲೆಸಿದರು. ನಾನು ಆಗಾಗ ಅವರನ್ನು ಭೇಟಿಯಾಗಿ ಪ್ರಣಾಮ ಸಲ್ಲಿಸುತ್ತದೆ. ನಮ್ಮಿಬ್ಬರ ನಡುವಣ ಆತ್ಮೀಯತೆಯ ಕಾರಣದಿಂದ, ನಾನು ಅವರ ಹಾಸಿಗೆಯ ಮೇಲೆ ಕುಳಿತು ಹಳೆಯ ಸಂಗತಿಗಳನ್ನು ಕುರಿತು, ಕರಾಚಿಯಲ್ಲಿದ್ದ ಸಂದರ್ಭದಲ್ಲಿ ನಮ್ಮೊಡನಿದ್ದವರನ್ನು ಕುರಿತು, ಮುಂದೆ ಹೈದರಾಬಾದ್ ಕೇಂದ್ರದ ಮುಖ್ಯಸ್ಥರಾಗಿ ನಿಯೋಜಿತರಾದ ಸ್ವಾಮಿ ಅನನ್ಯಾನಂದರನ್ನು ಕುರಿತು – ಹೀಗೆ ಹಲವಾರು ವಿಷಯಗಳ ಬಗ್ಗೆ ಹರಟುತ್ತಿದ್ದೆವು.

**ವಿಶಾಲ ದೃಷ್ಟಿ**

ಆರಂಭದಿಂದಲೂ ಸ್ವಾಮೀಜಿಯವರದು ಘನವಾದ ಗುಣ, ಸಂಪನ್ನತೆ. ಅವರ ಎಲ್ಲ ಚಟುವಟಿಕೆಗಳೂ ಅವರ ವಿಶಾಲದೃಷ್ಟಿಗೆ ದ್ಯೋತಕವಾಗಿದ್ದವು. ತಾವೊಂದು ಕೇಂದ್ರದ ಮುಖ್ಯಸ್ಥರಾಗಿದ್ದುಕೊಂಡು ಕೇವಲ ಆ ಕೇಂದ್ರದ ಅಭಿವೃದ್ಧಿಗಷ್ಟೇ ಶ್ರಮಿಸದೆ, ಬೆಳವಣಿಗೆ ಕಾಣಬೇಕಾದ ಇತರ ಕೇಂದ್ರಗಳಿಗೂ ನೆರವು ಕೋರುತ್ತಿದ್ದರು. ಭಕ್ತರ ಬಳಿ ಇದಕ್ಕಾಗಿ ಮನವಿ ಸಲ್ಲಿಸುತ್ತಿದ್ದರು. ಅವರು ಸಂಘವನ್ನು ಇಡಿಯಾಗಿ ಕಾಣುತ್ತಿದ್ದರು. ಅದರ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸುತ್ತಿದ್ದರು.

ಸ್ವಾಮೀಜಿಯವರದು ಬಹುಮುಖೀ ವ್ಯಕ್ತಿತ್ವ. ಅವರು ಆಧ್ಯಾತ್ಮಿಕ ಮತ್ತು ಪ್ರಾಪಂಚಿಕ –ಎರಡೂ ಕ್ಷೇತ್ರಗಳಲ್ಲಿ ಪರಿಣತರು. ಅವರದು ಅದ್ಭುತ ಜ್ಞಾಪಕಶಕ್ತಿ. ತಮ್ಮ ಎಲ್ಲಾ ಭಕ್ತರನ್ನು ನೆನಪಿಟ್ಟುಕೊಂಡಿದ್ದರು. ಹಿಂದಿನ ಘಟನೆಗಳನ್ನು– ಸಣ್ಣ ಪುಟ್ಟವನ್ನೂ ಸಹ– ನೆನಪಿಟ್ಟುಕೊಂಡಿದ್ದರು.

ಸ್ವಾಮಿ ರಂಗನಾಥಾನಂದರಲ್ಲಿ ನಾವು ಸ್ವಾಮಿ ವಿವೇಕಾನಂದ ಪ್ರತಿ ಫಲನವನ್ನೇ ಕಾಣುತ್ತೇವೆ. ವಿವೇಕಾನಂದರ ಪ್ರೇರಣೆ, ಚಿಂತನೆ, ಆದರ್ಶಗಳೇ ಇವರಲ್ಲಿ ಮೈದೋರಿದ್ದವು. ಸ್ವಾಮಿ ವಿವೇಕಾನಂದರು ಸಮನ್ವಯದ ಬದುಕನ್ನು ರೂಪಿಸಿಕೊಳ್ಳಬೇಕೆಂಬ ಆಶಯವನ್ನು ಮುಂದಿಟ್ಟಿದ್ದಾರೆ. ವ್ಯಕ್ತಿತ್ವದ ಎಲ್ಲ ಅಂಶಗಳ– ದೇಹ, ಬುದ್ಧಿ, ಚೈತನ್ಯಗಳ ಸಮನ್ವಯ ಆಗಬೇಕು. ಅದ್ಭುತವಾದ ಕಾರ್ಯ ಗಳಾಗಬೇಕು, ಆತ್ಮಪೂರ್ವಕ ಪೂಜೆ, ಪಾಂಡಿತ್ಯಪೂರ್ಣ ಅಧ್ಯಯನ ಮತ್ತು ಆಳವಾದ ಧ್ಯಾನ – ಇವುಗಳ ಸಮನ್ವಯವಾಗಬೇಕು ಎಂದರು ವಿವೇಕಾನಂದರು. ನಮ್ಮ ವ್ಯಕ್ತಿತ್ವ ಸಾಗರದಷ್ಟು ಆಳವೂ ಆಕಾಶದಷ್ಟು ಅಗಲವೂ ಆಗಬೇಕು ಎಂದು ಸ್ವಾಮೀಜಿ ಬಯಸಿದ್ದರು. ಅವರೆಂದರು : ನೀವೀಗ ಹೊಲ ಉಳಲು ತಯಾರಾಗಿರಬೇಕು, ಹೊಲದ ಉತ್ಪನ್ನಗಳನ್ನು ಮಾರುಕಟ್ಟೆಗೆ ಒಯ್ದು ಮಾರಲು ಕಲಿತಿರಬೇಕು. ಹಾಗೇ ವಿವಿಧ ವಿಷಯಗಳ ಮೇಲೆ ಪಾಂಡಿತ್ಯಪೂರ್ಣ ಉಪನ್ಯಾಸ ಮಾಡಲು ಬರ ಬೇಕು. ಬಳಿಕ ದೀರ್ಘ ಧ್ಯಾನದಲ್ಲಿ ಮುಳುಗಲೂ ಸಿದ್ಧರಿರಬೇಕು. ವಿವೇಕಾನಂದರು ಮಹಾ ಸಂಘಕ್ಕೆ ಹಂಸದ ಚಿತ್ರವನ್ನುಳ್ಳ ಕರ್ಮ– ಭಕ್ತಿ–ಜ್ಞಾನ–ಧ್ಯಾನಗಳ ಸಂಕೇತಗಳನ್ನೊಳ ಗೊಂಡ ಪರಮಹಂಸ ಗುರಿ ಸೂಚಕವಾದ ಒಂದು ಚಿಹ್ನೆಯನ್ನು ರೂಪಿಸಿದರು. ಸ್ವಾಮಿ ವಿವೇಕಾನಂದರು ಈ ಆದರ್ಶವನ್ನು ತಮ್ಮ ಜೀವನದಲ್ಲಿ ಅಳವಡಿಸಿ ಕೊಂಡಿದ್ದರು. ಅವರಿಗೆ ಏಕಮುಖೀ ವ್ಯಕ್ತಿತ್ವ ಹಿಡಿಸುತ್ತಿರಲಿಲ್ಲ. ಅವರು 'ರಾಮಕೃಷ್ಣ ಸ್ತೋತ್ರ' ದಲ್ಲಿ ತಮ್ಮ ಗುರುಗಳನ್ನು ಸಂಸ್ಕೃತದಲ್ಲಿ ಹೀಗೆಂದು ಬಣ್ಣಿಸುತ್ತಾರೆ:

**ಅದ್ವಯ ತತ್ತ್ವ ಸಮಾಹಿತ ಚಿತ್ತಂ**
**ಪ್ರೋಜ್ವಲಭಕ್ತಿ ಪಟಾವೃತ ವೃತ್ತಂ;**
**ಕರ್ಮಕಲೇವರಮದ್ಭುತ ಚೇಷ್ಟಮ್**
**ಯಾಮಿ ಗುರುಮ್ ಶರಣಂ ಭವವೈದ್ಯಮ್.**

(ಅದ್ವೈತದಲ್ಲಿ ಮುಳುಗಿದ ಮನಸ್ಸಿನಲ್ಲಿ
ಪ್ರೋಜ್ವಲ ಭಕ್ತಿಯ ತೆರೆಯನ್ನು ಸುತ್ತಿಕೊಂಡು
ಕರ್ಮಭರಿತ ದೇಹದಿಂದ ವಿವಿಧ ಕಾರ್ಯದಲ್ಲಿ ತೊಡಗಿದ್ದೂ
ಭವವೈದ್ಯನಾದ ಗುರುವಿನಲ್ಲಿ ಶರಣಾಗುತ್ತೇನೆ.)

ಸ್ವಾಮಿ ರಂಗನಾಥಾನಂದರು ಈ ಆದರ್ಶಗಳನ್ನು ಅನುಷ್ಠಾನಕ್ಕೆ ತಂದಿದ್ದರು ಮತ್ತು ಇತರರೂ ಅದನ್ನು ಅಳವಡಿಸಿಕೊಳ್ಳಲು ಹುರಿದುಂಬಿಸುತ್ತಿದ್ದರು. ಅವರೊಂದಿಗಿದ್ದಷ್ಟೂ ದಿನವೂ ನನಗೆ ಅವರಲ್ಲಿ ಅಪಾರವಾದ ಭಕ್ತಿ, ಗೌರವ. ೨೦೦೫ರ ಏಪ್ರಿಲ್ ೨೫ರಂದು ಅವರು ನಮ್ಮನ್ನಗಲಿದರು, ಅವರ ಸಿಹಿನೆನಪುಗಳು ಉಳಿದಿವೆ. ಅವರು ಬೇಲೂರು ಮಠದಲ್ಲಿ ಮಹಾಸಮಾಧಿ ಹೊಂದಿದ ಕಾರಣ ಅಂತಿಮ ಶ್ರದ್ಧಾಂಜಲಿ ಅರ್ಪಿಸುವ ಅವಕಾಶ ದೊರೆಯಿತು.

* * * *

# ೯. ಮಾನವ ರೂಪದ ದೈವತ್ವ

–ಒಬ್ಬ ಸಂನ್ಯಾಸಿ

೧೯೭೫ರ ಆರಂಭದ ದಿನಗಳು. ಮುಮುಕ್ಷುವೊಬ್ಬ ರಾಮಕೃಷ್ಣ ಮಹಾಸಂಘದ ಕೇಂದ್ರವೊಂದನ್ನು ಸೇರಿದ್ದಾನೆ. ಕೆಲವು ತಿಂಗಳ ಬಳಿಕ ಸ್ವಾಮಿ ರಂಗನಾಥಾನಂದರು ಆ ಕೇಂದ್ರಕ್ಕೆ ಬರುವ ಸುದ್ದಿ. ಆ ದಿನ ಸ್ವಾಮೀಜಿ ವಿಮಾನನಿಲ್ದಾಣದಿಂದ ಕಾರಿನಲ್ಲಿ ಕೇಂದ್ರಕ್ಕೆ ಬಂದರು, ಕಾರು ನಿಲ್ಲುತ್ತಿದ್ದಂತೆ ಈ ಹೊಸ ಬ್ರಹ್ಮಚಾರಿ ಕಾರಿನ ಬಾಗಿಲು ತೆಗೆದ. ರಂಗನಾಥಾನಂದರ ಅಯಸ್ಕಾಂತೀಯ ವ್ಯಕ್ತಿತ್ವ ಕ್ಷಣಮಾತ್ರದಲ್ಲಿ ಈ ಬ್ರಹ್ಮಚಾರಿಯನ್ನು ಆಪಾದಮಸ್ತಕ ವೀಕ್ಷಿಸಿತು, ಮುಖ್ಯವಾಗಿ ಅವನ ನಗೆಮುಖವನ್ನು ಗಮನಿಸಿತು. ರಂಗನಾಥಾನಂದರು ಬ್ರಹ್ಮಚಾರಿಗೆ ಹೇಳಿದ ಮೊದಲ ಮಾತುಗಳು, "ಈ ನಗೆಯನ್ನು ಜೀವನದುದ್ದಕ್ಕೂ ಕಾಪಾಡಿಕೊ!"

ಆ ಬ್ರಹ್ಮಚಾರಿಗೆ ಇದು ಮರೆಯಲಾಗದ ಸಂದೇಶ. ಆದರೆ ವರ್ಷಗಳು ಉರುಳುತ್ತಿದ್ದಂತೆ ಅವನಿಗೆ ಅರಿವಾದದ್ದು ಈ ಸಂದೇಶವನ್ನು ಜೀವನದ ಪ್ರತಿಕ್ಷಣದಲ್ಲೂ ಪಾಲಿಸುವುದು ಸುಲಭಸಾಧ್ಯವಲ್ಲ ಎಂಬ ಅಂಶ.

ರಂಗನಾಥನಂದರು ಶಕ್ತಿಯ ಗಣಿ, ಉತ್ಸಾಹದ ಖನಿ, ಸದಾ ಹರ್ಷಚಿತ್ತರು ಮತ್ತು ಕ್ರಿಯಾಶೀಲರು. ಈ ಬ್ರಹ್ಮಚಾರಿಗೆ ಅವರೊಂದಿಗೆ ಪ್ರಯಾಣ ಮಾಡುವ, ಅವರನ್ನು ಹಲವಾರು ಸಾರ್ವಜನಿಕ ಸಮಾರಂಭಗಳಿಗೆ ಮತ್ತು ಖಾಸಗಿ ಮಾತುಕತೆ ಗಳಿಗೆ ಕರೆದೊಯ್ಯುವ ಅವಕಾಶ ದೊರಕಿತ್ತು. ಎಷ್ಟೇ ಶ್ರಮದಾಯಕ, ಸತತ ಕೆಲಸ ಕಾರ್ಯದ ನಡುವೆಯೂ ಅವರು ಆಕಳಿಸಿದ್ದನ್ನು ಎಂದೂ ಕಾಣೆವು. ಅವರು ಸಮಾಜದ ಉನ್ನತ ವರ್ಗದವರೊಂದಿಗೆ ಬೆರೆಯುತ್ತಿದ್ದರು. ಆದರೆ ಆ ವರ್ಗದ ವಾಸನೆಯನ್ನು ಅವರು ಮೆತ್ತಿಕೊಳ್ಳಲಿಲ್ಲ. ಅವರು ಒರೆಯಿಂದ ಸೆಳೆದ ಕತ್ತಿಯಂತಿದ್ದರು. ಕೆಸರಿನಲ್ಲಿರುವ ಸುಂದರ ಕಮಲದಂತೆ, ಕೆಸರನ್ನು ಮೈಗೆ ಹತ್ತಿಸಿಕೊಳ್ಳದಂತೆ ಅವರಿದ್ದರು.

ಕೆಳವರ್ಗದ, ಬಡವರ ಬಗೆಗಿದ್ದ ಅವರ ಕಾಳಜಿ, ಸೇವಾಭಾವ ಅಪರಿಮಿತವಾದದ್ದು. ಅವರು ಸಾರ್ವಜನಿಕ ಸಮಾರಂಭಗಳಲ್ಲಿ ಭಾಗವಹಿಸಿದಾಗ, ಮೂರು ದಿನದ ಪುದುವಟ್ಟಿನ (ಎಂಡೋಮೆಂಟ್) ಉಪನ್ಯಾಸ ಮಾಡಿದಾಗ ವ್ಯವಸ್ಥಾಪಕರು ಅವರಿಗೆ ಒಂದು ಮೊತ್ತವನ್ನು ಕೊಟ್ಟುಕಳಿಸುತ್ತಿದ್ದರು. ಅದು ಸಾಮಾನ್ಯವಾಗಿ ಉತ್ತಮ ಮೊತ್ತವೇ ಆಗಿರುತ್ತಿತ್ತು. ಅವರು ಮಠದ ಆವರಣವನ್ನು ಪ್ರವೇಶಿಸು ತ್ತಿದ್ದಂತೆಯೇ, ತಮ್ಮ ಕೋಣೆಗೆ ಹೋಗುವ ಮೊದಲೇ ಮಠದ ಕಚೇರಿಗೆ ಹೋಗಿ ಅಲ್ಲಿಗೆ ಸ್ವಾಮಿಗಳಗೆ ಸಹಾಯದ ಆವಶ್ಯಕತೆಯಿರುವ ಸಂಸ್ಥೆ ಮತ್ತು ವ್ಯಕ್ತಿಗಳ ಪಟ್ಟಿ ತಯಾರಿಸಲು ಸೂಚಿಸುತ್ತಿದ್ದರು. "ನೋಡಿ, ...ಅವರ ಮಗನ ವಿದ್ಯಾಭ್ಯಾಸಕ್ಕೆ ಹಣದ ತೊಂದರೆಯಾಗಿದೆ, ...ಅವರು ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದಾರೆ. ...ಅವರ, ಮಗಳ ಮದುವೆಗೆ ಹಣ ಬೇಕಿದೆ, ...ಇವರದೆಲ್ಲ ಪಟ್ಟಿ ಮಾಡಿ. ಅವರಿಗೆ ಸಹಾಯದ ಅಗತ್ಯವಿದೆ" ಎಂದು ಹೇಳುತ್ತಾ ತಮ್ಮಲ್ಲಿದ್ದ ಹಣವನ್ನು ಹಂಚುತ್ತಿದ್ದರು. ಹೀಗೆ ಇಡೀ ಮೊತ್ತ ಖಾಲಿಯಾದ ಬಳಿಕ, "ಮುಗಿಯಿತಲ್ಲವೆ? ಹಣವನ್ನೆಲ್ಲ ಹಂಚಿಯಾಯಿತಲ್ಲವೆ? ನಾನೀಗ ಮುಕ್ತ !" ಎನ್ನುತ್ತಾ ತಮ್ಮ ಕೋಣೆಗೆ ಹೋಗುತ್ತಿದ್ದರು. ಹಣದ ಕೆಲ ನಿಮಿಷದ ಜವಾಬ್ದಾರಿಯಿಂದ ಮುಕ್ತರಾದ ಬಗ್ಗೆ ಅವರಿಗೆ ಅಷ್ಟೊಂದು ತೃಪ್ತಿ, ಸಂತೋಷ. ರೋಗಿಗಳನ್ನು, ಬಡವರನ್ನು, ಅಸಹಾಯಕರನ್ನು ಕಂಡರೆ ಅಪಾರ ಕನಿಕರ. ಅಹಮ್ಮಿನ, ಜಮೀನ್ದಾರ ಮನೋವೃತ್ತಿಯನ್ನು ಕಂಡರಾಗುತ್ತಿರಲಿಲ್ಲ. ಸ್ವಾಮೀಜಿಯವರಿಗೆ. ಯಾರೇ ಆಗಲಿ, ಸ್ವಾಮಿ ರಂಗನಾಥಾನಂದರನ್ನು ಭೇಟಿಯಾಗಲು ಹೋದರೆ ಆ ವ್ಯಕ್ತಿ ಪೂರ್ಣ ಉಲ್ಲಾಸದಿಂದ, ಹೃದಯ–ಮನಭಾರರಹಿತನಾಗಿ ಹೆಚ್ಚು ಶಕ್ತಿ, ಧೈರ್ಯಗಳನ್ನು ಭಾವಿಸುತ್ತಾ ಹಿಂದಿರುಗುತ್ತಿದ್ದ. ತಮ್ಮ ಆದರ್ಶ

ನಾಯಕ ವಿವೇಕಾನಂದರಂತೆ ಎರಡು ಮುಖ್ಯ ಗುಣಗಳನ್ನು ಪ್ರಶಂಸಿಸುತ್ತಿದ್ದರು: ಶಕ್ತಿ ಮತ್ತು ನಿರ್ಭಯತೆ. ಅವರು ಯಾವಾಗಲೂ ಸೇನಾ ವ್ಯಕ್ತಿಯಂತೆ ನಡೆಯುತ್ತಿದ್ದರು – ಎಷ್ಟೇ ಆಗಲಿ ಅವರು ವಿವೇಕಾನಂದರ ಸೈನಿಕರು–ನೇರವಾದ, ದೃಢವಾದ ನಡಿಗೆ, ಎತ್ತಿದ ತಲೆ ಆತ್ಮವಿಶ್ವಾಸ ಸೂಸುವ ಹೆಜ್ಜೆ. ಸಂನ್ಯಾಸಿಗಳು ಎಂದೂ ಬಾಗಿದ ಅಥವಾ ಡೊಂಕಾದ ದೇಹಭಂಗಿ ಹೊಂದಿರಬಾರದು, ಆತ್ಮವಿಶ್ವಾಸ, ಆತ್ಮಸಂತೋಷದ ಕೊರತೆಯನ್ನು ಅದು ತೋರುತ್ತದೆ ಎಂದು ಅವರು ಭಾವಿಸಿದ್ದರು. ಹಾಗೆ ಯಾರಾದರೂ ನಡೆಯುತ್ತಿದ್ದದು ಕಂಡುಬಂದರೆ ಅವರನ್ನು ಕರೆದು ಹೇಳುತ್ತಿದ್ದರು: “ನೀನು ಸ್ವಾಮಿ ವಿವೇಕಾನಂದರ ಸೈನಿಕ, ನೆನಪಿರಲಿ!” ಹೀಗೆ ಆ ವ್ಯಕ್ತಿಯಲ್ಲಿ ಜೀವ, ಶಕ್ತಿ ತುಂಬುತ್ತಿದ್ದರು.

ಅವರು ಮಗುವಿನಂತೆ ನಗುತ್ತಿದ್ದರು. ಸರಳ ಸಹಜ ನಗೆಯದು. “ಅಹಂಕಾರದ ಎಳೆಗಳಿಂದ ಮುಕ್ತನಾದ ವ್ಯಕ್ತಿ ಮಾತ್ರ ಮುಕ್ತವಾಗಿ ನಗಬಲ್ಲ, ಇತರರನ್ನು ನಗಿಸಬಲ್ಲ” ಎನ್ನುತ್ತಿದ್ದರು ಸ್ವಾಮೀಜಿ. ಬುದ್ಧಿ, ಚಾತುರ್ಯ, ಹಾಸ್ಯ ಮತ್ತು ಸರಳತೆಗಳ ಸರಿಯಾದ ಹದದಿಂದ ಕೂಡಿದ ವ್ಯಕ್ತಿತ್ವ ಸ್ವಾಮೀಜಿಯವರದು. ತಮ್ಮ ಬಟ್ಟೆಗಳ ಬಗ್ಗೆ ಅವರು ಹೆಚ್ಚಿನ ಗಮನ ನೀಡುತ್ತಿರಲಿಲ್ಲ. ಅವು ಚೆನ್ನಾಗಿ ಮಡಿಸಿಟ್ಟವೆ ಅಥವಾ ಇಸ್ತ್ರಿ ಮಾಡಿದಂತಹವೆ ಎಂದೆಲ್ಲ ಗಮನಿಸುತ್ತಿರಲಿಲ್ಲ. ಒಮ್ಮೆ ಯುರೋಪಿನ ಒಂದು ದೇಶದ ರಾಯಭಾರಿಯೊಬ್ಬರು, ರಂಗನಾಥಾನಂದರನ್ನು ಚೆನ್ನಾಗಿ ಬಲ್ಲವರು, ಅವರನ್ನು ತಾವು ಏರ್ಪಡಿಸಿದ್ದ ಸಭೆಗೆ ಆಹ್ವಾನಿಸಿದ್ದರು. ಸ್ವಾಮೀಜಿ ತಯಾರಾಗಿ ಹೊರಟರು, ಅವರೊಂದಿಗೆ ಹೊಗಲು ಮತ್ತೊಬ್ಬರು ಸ್ವಾಮಿಗಳು ಅಣಿಯಾಗಿ ಹೊರಟುನಿಂತರು. ಅವರಿಬ್ಬರ ದಿರಿಸುಗಳಲ್ಲಿ ಅಜಗಜಾಂತರ! ಅವರಿಬ್ಬರು ಹೊರಡುತ್ತಿದ್ದಂತೆ, ಸ್ವಾಮೀಜಿಯ ಧೋತಿಯ ಹಿಂಭಾಗದಲ್ಲಿ ಕಲೆಯಿದ್ದುದು ಕಂಡುಬಂತು. ಅದನ್ನು ಅವರ ಗಮನಕ್ಕೆ ತರಲಾಯಿತು. ಜೊತೆಗೆ ಅಂಚಿನ  ಒಂದು ಭಾಗ ಜೂಲುಜೂಲಾಗಿತ್ತು. ಸ್ವಾಮಿಗಳು ನಗುತ್ತಾ, ನಡೆಯುತ್ತಾ ನುಡಿದರು, “ನಾನು ಏನು ಮಾತನಾಡುತ್ತೇನೆಂದು ಜನರು ಗಮನಹರಿಸುತ್ತಾರೆಯೇ ಹೊರತು ನನ್ನ ಬಟ್ಟೆಯ ಬಗ್ಗೆ ಅವರು ಯೋಚಿಸುವುದಿಲ್ಲ.”

ರಂಗನಾಥಾನಂದರಲ್ಲಿದ್ದ ಮತ್ತೊಂದು ವಿಶೇಷ ಗುಣವೆಂದರೆ, ವ್ಯಕ್ತಿಗಳನ್ನು ಅವರ ನಿಜವಾದ ಸಾಮರ್ಥ್ಯಕ್ಕಿಂಥ ಹೆಚ್ಚಿದನ್ನು ಕಾಣುವಂತೆ ಮಾಡುವುದು. ಮತ್ತು ಜನರನ್ನು ಹಾಗೇ ಎತ್ತರದಲ್ಲಿಟ್ಟು ನೋಡುತ್ತಿದ್ದರು. ಕರುಣೆ, ಸ್ವಾರ್ಥರಹಿತ ಪ್ರೀತಿಗಳಿಂದ ಕೂಡಿದ ಅವರ ದಿವ್ಯಸ್ಪರ್ಶ. ಒಡನಾಟ ಜನರು ಅವರನ್ನು ಮನುಷ್ಯರೂಪದ ದೇವರು ಎಂದು ಭಾವಿಸುವಂತಾಗುತ್ತಿತ್ತು. ಇದಕ್ಕೆ ಪೂರಕವಾದ ಒಂದು ಘಟನೆಯನ್ನು ನಾನಿಲ್ಲಿ ತಿಳಿಸುತ್ತೇನೆ.

೧೯೭೦ರ ದಶಕದ ಕೊನೆಯ ವರ್ಷಗಳಲ್ಲಿ ನಡೆದ ಘಟನೆ. ಸರ್ಕಾರೀ ಸೇವೆಯಿಂದ ನಿವೃತ್ತರಾದ ಒಬ್ಬ ಹಿರಿಯರು ಆಶ್ರಮವನ್ನು  ಪ್ರವೇಶಿಸಿ ಕಚೇರಿಗೆ ಬಂದು ಸ್ವಾಮಿ ರಂಗನಾಥಾನಂದರು ಎಲ್ಲಿದ್ದಾರೆ, ಅವರನ್ನು ಸಂಪರ್ಕಿಸಬಹುದೆ? ಎಂದು ವಿಚಾರಿಸುತ್ತಿದ್ದರು. ಅವರು ಬಹಳ ಕಳಕಳಿಯಿಂದ ಕೇಳುತ್ತಿದ್ದರು ಮತ್ತು ಹಾಗೆ ಕೇಳುತ್ತಿರುವಾಗಲೇ ಭಾವುಕರಾಗುತ್ತಿರುವುದು ಕಂಡುಬರುತ್ತಿತ್ತು. ಹೆಚ್ಚಿನ ವಿವರಗಳನ್ನು ಹೇಳುವಂತೆ ಅವರನ್ನು ಒತ್ತಾಯಿಸಿದಾಗ ಅವರು ಕೆಳಗಿನ ಪ್ರಸಂಗವನ್ನು ನಿರೂಪಿಸಿದರು:

ನೋಡಿ, ನಾನು ಪೋಸ್ಟ ಮ್ಯಾನ್ ವೃತ್ತಿಯವನು. ಪ್ರತಿದಿನ ಈ ಆಶ್ರಮಕ್ಕೆ, ಸ್ವಾಮಿ ರಂಗನಾಥನಂದರು ಅಧ್ಯಕ್ಷರಾಗಿದ್ದ ೧೯೬೦ರ ದಶಕಗಳಲ್ಲಿ ಕಾಗದಪತ್ರಗಳನ್ನು ತಲುಪಿಸುತ್ತಿದ್ದೆ. ಆಗ ಇಲ್ಲಿಗೆ ಬಹಳ ಜನ ಬರುತ್ತಿದ್ದರು. ಬೇಸಗೆಯಲ್ಲಿ ವಿಪರೀತ ಬಿಸಿಲು. ಮೈತುಂಬ ಬೆವರಿಳಿಸುತ್ತಾ, ಕಾಗದ ಪತ್ರಗಳನ್ನು ಕೈತುಂಬ ಹೊತ್ತು ಬರುತ್ತಿದ್ದೆ. ಹಾಗೆ ನಾನು ಬಂದ ಸಮಯದಲ್ಲಿ ಈ ಸ್ವಾಮಿಗಳೇನಾದರು ನನ್ನನ್ನು ಕಂಡರೆ ಮೊದಲಿಗೆ ನನ್ನನ್ನು ಪ್ರೀತಿಯಿಂದ ಕಚೇರಿಯ ಒಳಕ್ಕೆ ಕರೆಯುತ್ತಿದ್ದರು. ಫ್ಯಾನಿನ ಕೆಳಗೆ ಕೂರಿಸಿ ಅದನ್ನು ಚಾಲೂ ಮಾಡುತ್ತಿದ್ದರು. ಬಳಿಕ ಯಾರನ್ನಾದರು ಕರೆದು ಅಡುಗೆಮನೆಯಿಂದ ಒಂದು ಲೋಟ ಮಜ್ಜಿಗೆ ತರಿಸಿಕೊಡುತ್ತಿದ್ದರು. ಬಳಿಕ ಹೇಳುತ್ತಿದ್ದರು– ‘ಮಜ್ಜಿಗೆ ಕುಡಿದಾದ ಮೇಲೆ, ಒಂದಷ್ಟು ಹೊತ್ತು ಫ್ಯಾನಿನ ಕೆಳಗೆ ಕುಳಿತಿದ್ದು ಆಮೇಲೆ ನಿನ್ನ ಕೆಲಸದ ಮೇಲೆ

ಹೊರಡು.' ಕೆಲವೊಮ್ಮೆ ನಾನಿವರಿಗೆ ಧನ್ಯವಾದ ತಿಳಿಸುವುದನ್ನೂ ಮರೆತುಬಿಡುತ್ತಿದ್ದೆ. ನನ್ನ ಕುಟುಂಬದ ಸದಸ್ಯರಿಂದಲೂ ಪಡೆಯದಿದ್ದ ಪ್ರೀತಿ, ಪ್ರೇಮ, ಆತ್ಮೀಯತೆಗಳನ್ನು ಅವರಿಂದ ನಾನು ಪಡೆದುಕೊಂಡೆ. ವರ್ಷಗಳುರುಳಿ ನನಗೆ ವಯಸ್ಸಾಗುತ್ತಿದ್ದಂತೆ ನಾನಂದುಕೊಳ್ಳುತ್ತೇನೆ. "ನಾನು ದೇವರನ್ನು ನೋಡಿಲ್ಲ, ನಿಜ. ಆದರೆ ಸ್ವಾಮಿ ರಂಗನಾಥಾನಂದರಲ್ಲಿ ದೇವ-ಮಾನವನನ್ನು ಕಂಡಿದ್ದೇನೆ."

ಈ ಮಾತುಗಳನ್ನು ಆಡುತ್ತಿರುವಾಗಲೇ ಕಣ್ಣೀರ ಹನಿಯೊಂದು ಆ ವೃದ್ಧನ ಕಪೋಲಗಳ ಮೇಲೆ ಇಳಿಯಿತು.

* * * *

# ೧೦. ಅವರೊಬ್ಬ ಮಹಾತ್ಮ

–ಸ್ವಾಮಿ ಸರ್ವಾಗತಾನಂದ*

ಸ್ವಾಮಿ ರಂಗನಾಥಾನಂದರ ಬಗ್ಗೆ ಹೇಳಲು ಬಹಳ ಸಂತೋಷವಾಗುತ್ತದೆ. ಏಕೆಂದರೆ ಅವರಿಗೆ ಬಹಳ ಹತ್ತಿರದವನಾಗಿದ್ದೆ ಮತ್ತು ಅವರಿಂದ ಬಹಳ ಸ್ಫೂರ್ತಿ ಪಡೆದಿದ್ದೇನೆ. ಬಹುಶಃ ೧೯೪೨ರ ಏಪ್ರಿಲ್ ಎಂದು ಕಾಣುತ್ತದೆ. ಕಲ್ಕತ್ತದಿಂದ ಸುದ್ದಿ ಬಂತು, ರಂಗನಾಥಾನಂದರು ಬಹಳ ಅನಾರೋಗ್ಯದಿಂದಿದ್ದಾರೆ, ಅವರನ್ನು ಕಂಖಲ್ ಆಶ್ರಮಕ್ಕೆ ಕಳಿಸಿಕೊಡಲಾಗುತ್ತದೆ ಮತ್ತು ನಾನು ಅವರತ್ತ ಪೂರ್ಣ ಗಮನ ನೀಡಬೇಕು ಎಂಬ ಆದೇಶವಿತ್ತು. ಜಪಾನೀಯರು ರಂಗೂನ್ ನಗರದ ಮೇಲೆ ಬಾಂಬ್ ದಾಳಿ ನಡೆಸುತ್ತಾರೆಂಬ ಖಚಿತ ವರದಿ ಬಂದ ಕಾರಣ ರಂಗನಾಥಾನಂದರು ಭಾರತಕ್ಕೆ ಕಾಲ್ನಡಿಗೆಯಲ್ಲಿ ಹಿಂದಿರುಗಿದ್ದರು. ಅವರ ಪ್ರಯಾಣಕ್ಕೆ ಹಡಗು, ವಿಮಾನದಲ್ಲಿ ಅವಕಾಶ ನೀಡಿದರೂ ಅವರು ಅದನ್ನು ನಿರಾಕರಿಸಿ, "ಸಹಸ್ರ ಸಹಸ್ರ ನಿರಾಶ್ರಿತರು ನಡೆದು ಸಾಗಿದ್ದಾರೆ. ನಾನು ಅವರೊಂದಿಗೆ ಬರುತ್ತೇನೆ" ಎಂದಿದ್ದರು. ಅದರಂತೆಯೇ ಅನೇಕ ಅಪಾಯ ಸಂಕಟಗಳನ್ನು ಎದುರಿಸಿ ನಡೆದು ಬಂದರು. ಅವರು ಬೇಲೂರು ಮಠ ತಲುಪುವ ವೇಳೆಗೆ ಬಹಳ ಕೃಶರಾಗಿದ್ದರು, ಕೇವಲ ಮೂಳೆ–ಚಕ್ಕಳವಿತ್ತು, ತೂಕ ೩೬ ಕೆ.ಜಿ! ಆಗ ಎಲ್ಲ ಸ್ವಾಮಿಗಳು ಸೇರಿ ಅವರನ್ನು ಕಂಖಲ್‌ಗೆ (ಹರಿದ್ವಾರದ ಬಳಿ) ಕಳಿಸಿ ನನ್ನ ಉಸ್ತುವಾರಿಗೆ ಒಪ್ಪಿಸಬೇಕೆಂದು ನಿರ್ಧರಿಸಿದರು. ಕಂಖಲ್‌ನ ಆಸ್ಪತ್ರೆಯಲ್ಲಿ ನನ್ನ ಸುಪರ್ದಿನಲ್ಲಿ ಒಳ್ಳೆಯ ವೈದ್ಯರ ತಂಡವಿತ್ತು.

ಬೆಂಗಳೂರು ಮತ್ತು ಮೈಸೂರು ಆಶ್ರಮಗಳಲ್ಲಿ ಅವರನ್ನು ಕಂಡಿದ್ದ ನನಗೆ ಅವರು ಎತ್ತರದ, ಕುಸ್ತಿಪಟುವಿನಂತೆ ದೃಢಕಾಯರಾದ ವ್ಯಕ್ತಿ ಎಂಬ ಚಿತ್ರಣ ಇತ್ತು. ನಾನು ಅವರನ್ನು ಬರಮಾಡಿಕೊಳ್ಳಲು ರೈಲುನಿಲ್ದಾಣಕ್ಕೆ ಹೋದಾಗ ಇಂತಹ ವ್ಯಕ್ತಿಗಾಗಿ ಹುಡುಕಾಡಿದೆ. ಆಮೇಲೆ ರೈಲಿನ ಬದಿಯಲ್ಲಿ ನಿಂತಿದ್ದ ಒಬ್ಬ ಸಣ್ಣ ಹುಡುಗನನ್ನು ನೋಡಿದೆ, ಅವನ ಬಳಿಗೆ ನಡೆದು ಕೇಳಿದೆ. "ನೀವು ...ಸ್ವಾಮಿ ರಂಗನಾಥಾನಂದರೆ?' ಆ ವ್ಯಕ್ತಿ 'ಹೌದು' ಎಂದಾಗ ನಾನು ಬಹಳ ದುಃಖದಿಂದ ಅಳಲಾರಂಭಿಸಿದೆ. ಅವರನ್ನು ಆ ಸ್ಥಿತಿಯಲ್ಲಿ ನೋಡಲು ನನ್ನಿಂದಾಗಲಿಲ್ಲ. ನನ್ನ ಕಲ್ಪನೆಗೂ ಅವರಿದ್ದದ್ದಕ್ಕೂ ಇದ್ದ ಅಗಾಧ ವ್ಯತ್ಯಾಸವನ್ನು ಅರಗಿಸಿಕೊಳ್ಳಲಾಗಲಿಲ್ಲ.

ಅವರನ್ನು ನಮ್ಮ ಆಸ್ಪತ್ರೆಗೆ ಕರೆತಂದೆವು. ಅಲ್ಲಿ ಒಳ್ಳೆಯ ವೈದ್ಯರಿದ್ದರು. ಹೊರಗಡೆಯಲ್ಲೂ ನುರಿತ ವೈದ್ಯರಿದ್ದರು. ಅವರನ್ನೆಲ್ಲ ಸೇರಿಸಿ ರಂಗನಾಥಾನಂದರಿಗೆ ಏನಾಗಿದೆ ಎಂದು ಪರೀಕ್ಷಿಸಿ ಹೇಳಿ ಎಂದು ಕೇಳಿಕೊಂಡೆ. ಅವರನ್ನು ಸಂಪೂರ್ಣವಾಗಿ ತಪಾಸಿಸಿದ ಬಳಿಕ ವೈದ್ಯರು ಅವರಿಗೆ ಒಂದು ವಿಶೇಷ ಪಥ್ಯವನ್ನು ಸೂಚಿಸಿದರು. ಬಾಸುಮತಿ ಅನ್ನಕ್ಕೆ , ತುಪ್ಪ ಬೆರೆಸಿ ಸ್ವಲ್ಪ, ಸ್ವಲ್ಪವೇ ತಿನ್ನಬೇಕು, ನಿಧಾನವಾಗಿ ಸೇವಿಸಬೇಕು, ಒಟ್ಟಿಗೇ ಹೆಚ್ಚಾಗಿ ಸೇವಿಸಬಾರದು ಎಂದು ಹೇಳಿದರು. ರಂಗನಾಥಾನಂದರು ವೈದ್ಯರ ನಿರ್ದೇಶನಗಳನ್ನು ಪಾಲಿಸಿದರು. ಮೂರ್‍ನಾಲ್ಕು ತಿಂಗಳಲ್ಲಿ ಅವರ ತೂಕ ಸುಧಾರಿಸಿತು.

ನಡೆಯಲು ಆರಂಭಿಸಿದರು. ಕೆಲ ತಿಂಗಳಲ್ಲಿ, ನಾವು ವಾಲಿಬಾಲ್ ಆಡುವಾಗ ಅವರೂ ನಮ್ಮ ಜತೆಗೂಡಿ ಆಡಲು ಆರಂಭಿಸಿದರು. ಅವರು ಉತ್ತಮ ಆಟಗಾರರು. ಅವರಿಗೆ ಹಿಂದಿನ ದೇಹಶಕ್ತಿ ಮರುಕಳಿಸಿತು. ಆದರೆ ವೈದ್ಯರು ಇನ್ನೂ ಮೂರು ತಿಂಗಳು ಆ ಪಥ್ಯವನ್ನು ಮುಂದುವರೆಸಲು ತಿಳಿಸಿದರು.

---

* ಅಮೆರಿಕೆಯ ಬೋಸ್ಟನ್ ನಗರದ ರಾಮಕೃಷ್ಣ ವೇದಾಂತ ಸೊಸೈಟಿಯ ಹಿರಿಯ ಸಾಧು.

ಸ್ವಾಮಿ ರಂಗನಾಥಾನಂದರು ಪೂರ್ಣವಾಗಿ ಸುಧಾರಿಸಿದ ಬಳಿಕ, ಕರಾಚಿಗೆ ಹೋಗಿ ಅಲ್ಲಿನ ಕೇಂದ್ರದ ಜವಾಬ್ದಾರಿ ವಹಿಸಿಕೊಳ್ಳುವಂತೆ ಬೇಲೂರು ಮಠದ ಕೇಂದ್ರ ಕಚೇರಿಯಿಂದ ಅವರಿಗೆ ನಿರ್ದೇಶನ ದೊರೆಯಿತು. ೧೯೪೨ರ ಆಗಸ್ಟ್ ನಲ್ಲಿ ಸ್ವಾಮೀಜಿ ಕರಾಚಿಗೆ ಹೊರಟರು.

ಆನಂತರ ನಾನು ಬಂಗಾಳದ ಕ್ಷಾಮ ಪರಿಹಾರ ಕಾರ್ಯಕ್ಕಾಗಿ ಬೇಲೂರು ಮಠಕ್ಕೆ ತೆರಳಿದೆ. ಅದೆಷ್ಟು ಭಯಂಕರ ಕ್ಷಾಮವೆಂದರೆ ಹಲವು ಮಿಲಿಯನ್ ಜನರು ಮರಣವನ್ನಪ್ಪಿದ್ದರು. ರಂಗನಾಥಾನಂದರಿಗೆ ವಿಷಯ ತಿಳಿದು ಅವರು ಬಹಳ ದುಃಖಿತರಾದರು. ಕರಾಚಿಯಿಂದ ಅವರು ಸುಮಾರು ೧೨೪೦ ಟನ್ ಅಕ್ಕಿಯನ್ನು ಕಳಿಸಿಕೊಟ್ಟರು. ಸಿಂಧಿಯಾ ಸ್ಟೀಮ್ ಕಂಪನಿಯ ವಿಶೇಷ ಹಡಗಿನಲ್ಲಿ ಈ ಸರಕು ಸಾಗಾಣಿಕೆ ವೆಚ್ಚವಿಲ್ಲದೆಯೇ ನಮ್ಮನ್ನು ಮುಟ್ಟಿತು. ಬಡ ಹಳ್ಳಿಗರಿಗೆ ಅದೆಲ್ಲವನ್ನು ತಲುಪಿಸಿದ್ದು ಅದೆಂತಹ ಸಂತೋಷಕಾರ್ಯ ! ಪರಿಹಾರಕಾರ್ಯ ಮುಗಿದ ಮೇಲೆ ನಾನು ಹರಿದ್ವಾರಕ್ಕೆ ಹಿಂದಿರುಗಿದೆ.

೧೯೪೪ರಲ್ಲಿ ನಾನು ಕರಾಚಿಯಲ್ಲಿ ಸ್ವಾಮಿ ರಂಗನಾಥಾನಂದರನ್ನು ಸೇರಿಕೊಂಡೆ. ಆ ವೇಳೆಗಾಗಲೆ ಅವರು ಅಲ್ಲಿ ಚೆನ್ನಾಗಿ ನೆಲೆನಿಂತಿದ್ದರು. ಶನಿವಾರದ ಅವರ ಉಪನ್ಯಾಸಕ್ಕೆ ಅಲ್ಲಿ ೧೫೦೦ ಜನ ಸೇರುತ್ತಿದ್ದರು. ಕಾಲೇಜು ವಿದ್ಯಾರ್ಥಿಗಳು, ಪ್ರಾಂಶುಪಾಲರುಗಳು, ಪ್ರಮುಖ ನಾಗರಿಕರು, ಕಮಿಟಿ ಸದಸ್ಯರು ಮತ್ತು ತರಬೇತಿ ಪಡೆಯುತ್ತಿರುವವರು ಎಲ್ಲರೂ ಕರಾಚಿಯ ಕೇಂದ್ರಕ್ಕೆ ಬರುತ್ತಿದ್ದರು. ನಾವು ಕರಾಚಿಯಲ್ಲಿದ್ದಾಗಲೇ, ಹೆಸರಾಂತ ತತ್ತ್ವಜ್ಞಾನಿಗಳೂ ಮತ್ತು ಮುಂದೆ ಭಾರತದ ರಾಷ್ಟ್ರಪತಿಗಳೂ ಆದ ಡಾ. ಎಸ್ ರಾಧಾಕೃಷ್ಣನ್ ಅವರು ಭೇಟಿ ನೀಡಿದರು. ಅವರು ಅನೇಕ ಬಾರಿ ಬಂದರು. ಒಮ್ಮೆ ಅವರು ಆಶ್ರಮದಲ್ಲಿ ೧೫೦೦ ಜನರಿದ್ದ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ನಾನಾಗ ಅಲ್ಲಿ ಉಪಸ್ಥಿತನಿದ್ದೆ. ಮೊದಲಿಗೆ ರಾಧಾಕೃಷ್ಣನ್ ಮಾತನಾಡಿದರು. ಬಳಿಕ ರಂಗನಾಥಾನಂದಜಿ. ರಾಧಾಕೃಷ್ಣನ್ ಪಾಂಡಿತ್ಯಪೂರ್ಣವಾಗಿ ಭಾಷಣ ಮಾಡಿದರು ಆದರೆ ಅವರು ರಂಗನಾಥಾನಂದರ ಭಾಷಣವನ್ನು ಬಹಳ ಕೊಂಡಾಡಿದರು. ಸ್ವಾಮಿ ರಂಗನಾಥಾ ನಂದರು ನಮಗೆ ತರಗತಿಗಳನ್ನು ನಡೆಸುವಾಗ ರಾಧಾಕೃಷ್ಣನ್ ಕೂಡ ಹಾಜರಾಗುತ್ತಿದ್ದರು; ತರಗತಿಗಳು ಪೂರ್ತಿ ಮುಗಿಯುವವರೆಗೂ ಕುಳಿತಿರುತ್ತಿದ್ದರು; ಮತ್ತು ಸ್ವಾಮೀಜಿಯವರ ತರಬೇತಿ ತರಗತಿಗಳನ್ನು ಬಹಳ ಮೆಚ್ಚಿಕೊಳ್ಳುತ್ತಿದ್ದರು. ರಂಗನಾಥಾನಂದರು ಆಗಾಗ 'ಶಾರದಾ ಮಂದಿರ '– ಶಾಲೆಗೆ ಭೇಟಿ ನೀಡುತ್ತಿದ್ದರು. ಮಹಿಳಾ ಭಕ್ತರೊಬ್ಬರು ನಡೆಸುತ್ತಿದ್ದ ಶಾಲೆ ಅದು. ಅಂತಹ ಶಾಲೆ ಅದೊಂದೇ. ಈ ಮಹಿಳೆ ಸ್ವಾಮೀಜಿಯವರ ಆಪ್ತ ಭಕ್ತರು. ದುರದೃಷ್ಟವಶಾತ್ ದೇಶವಿಭಜನೆಯ ಸಂದರ್ಭದಲ್ಲಿ ಆಶ್ರಮ ಸಂಪೂರ್ಣ ಧ್ವಂಸವಾಯಿತು ಮತ್ತು ನಾವು ಕರಾಚಿಯನ್ನು ಬಿಡಬೇಕಾಯಿತು. ಇದಾದದ್ದು ೧೯೪೮ರಲ್ಲಿ.

ಮುಂದೆ ಸ್ವಾಮಿ ರಂಗನಾಥಾನಂದರಿಗೆ ದೆಹಲಿ ಮಿಷನ್ ಕೇಂದ್ರವನ್ನು ನಡೆಸುವಂತೆ ನಿರ್ದೇಶಿಸಲಾಯಿತು. ಈಗ ನಮ್ಮ ಭೇಟಿ ನಿರಂತರವಾಯಿತು. ನೆಹರೂ ಅವರು ಕೂಡ ರಂಗನಾಥಾನಂದರ ಭಾನುವಾರದ ಉಪನ್ಯಾಸಗಳಿಗೆ ನಿಯತವಾಗಿ ಹಾಜರಾಗುತ್ತಿದ್ದರು. ೧೯೫೪ರಲ್ಲಿ ನನಗೆ ಬೋಸ್ಟನ್‌ಗೆ ಹೋಗಲು ಸೂಚಿಸಿದಾಗ ನಾನವರನ್ನು ಭೇಟಿಯಾಗಿ ಅವರ ಸಲಹೆ ಕೋರಿದೆ. ಅವರೆಂದರು, "ಹೌದು ನೀನು ಹೋಗಬೇಕು. ಅಲ್ಲಿರುವ ಸ್ವಾಮಿಗಳಿಗೆ ನಿನ್ನ ಅವಶ್ಯಕತೆಯಿದೆ." ನಾನು ಬೋಸ್ಟನ್‌ಗೆ ಹೋದೆ.

ಸ್ವಾಮಿ ರಂಗನಾಥಾನಂದರು ದೆಹಲಿಯಲ್ಲಿದ್ದಾಗ ಅವರ ಉಪನ್ಯಾಸಗಳನ್ನು ಕೇಳಲು ಅಮೆರಿಕದ ರಾಯಭಾರಿಗಳಾದ ಚೆಸ್ಟರ್ ಬೌಲ್ಸ್ (೧೯೫೧–೫೩), ಶೆರ್ಮನ್ ಕೂಪರ್ (೧೯೫೫–೫೬), ಸೆನೆಟರ್ ಕೀಟಿಂಗ್ ಮತ್ತು ಜಾನ್ ಕೆನ್ನೆತ್ ಗಾಲ್‌ಬ್ರೈತ್ ಅವರು ಆಗಮಿಸುತ್ತಿದ್ದರು. ಈ ನಾಲ್ಕು ಜನ ಸತತವಾಗಿ, ನಿಯತವಾಗಿ ಉಪನ್ಯಾಸಗಳಿಗೆ ಹಾಜರಾಗುತ್ತಿದ್ದರು. ಅವರು ನನ್ನ ಬಳಿ ಬಂದು ಸ್ವಾಮೀಜಿ ಅದ್ಭುತ ವ್ಯಕ್ತಿ ಎಂದು ತಿಳಿಸಿದರು. ಕಾಲಾಂತರದಲ್ಲಿ ಭಾರತ ಸರ್ಕಾರ ಸ್ವಾಮಿ ರಂಗನಾಥಾನಂದರನ್ನು ಭಾರತದ ಸಾಂಸ್ಕೃತಿಕ–

ಆಧ್ಯಾತ್ಮಿಕ ರಾಯಭಾರಿಯಾಗ ಬೇಕೆಂದು ಕೋರಿತು. ಈ ಪದವಿಯಲ್ಲಿ ಅವರು ವಿವಿಧ ದೇಶಗಳ ದೂತಾವಾಸಗಳಿಗೆ ಭೇಟಿ ನೀಡಿದರು. ಮೊದಲಿಗೆ ಅವರು ಬೋಸ್ಟನ್‌ಗೆ ಬಂದು ನಮ್ಮೊಡನಿದ್ದರು. ಅವರು ನಮ್ಮೊಂದಿಗಿದ್ದು ನಮಗೆ ಮಹದಾನಂದ. ಹಾಗೇ ಅವರೂ ಬಹಳ ಸಂತೋಷಿಸಿದರು.

ಸ್ವಾಮೀಜಿ ಪ್ರತಿ ವರ್ಷ ಬೋಸ್ಟನ್ ಗೆ ಬಂದು ಉಪನ್ಯಾಸ ನೀಡುತ್ತಿದ್ದರು. ಅವರು ಅಮೆರಿಕೆಯ ಹಾರ್ವರ್ಡ್, ಚಿಕಾಗೂ ಮತ್ತಿತರ ವಿಶ್ವವಿದ್ಯಾಲಗಳಲ್ಲಿ ಭಾಷಣ ಮಾಡಿದರು. ಅವರು ಎಮ್.ಐ.ಟಿ (M.I.T.) ಯಲ್ಲೂ ಅನೇಕ ಬಾರಿ ಮಾತನಾಡಿದರು. ನಾನು ಈ ಭಾಷಣಗಳೆಲ್ಲವನ್ನು ಕೇಳಿದೆ. ಅವರು ನಿಜವಾಗಿಯೂ ಒಬ್ಬ ಅದ್ಭುತ ವ್ಯಕ್ತಿ. ಪ್ರತಿವರ್ಷವೂ ಅವರು ಇಲ್ಲಿಗೆ ಆಗಮಿಸುತ್ತಿದ್ದರು. ಇಲ್ಲಿಂದ ಬೇರೆ ದೇಶಗಳತ್ತ ಹೊರಡುತ್ತಿದ್ದರು. ಬೋಸ್ಟನ್‌ಗೆ ಬಂದಾಗಲೆಲ್ಲ ಅವರು ಅದ್ಭುತವೆನಿಸುವಂತಹ ಉಪನ್ಯಾಸ ನೀಡುತ್ತಿದ್ದರು. ಈ ಉಪನ್ಯಾಸಗಳನ್ನು ಆಲಿಸಿದ ಪ್ರತಿಯೊಬ್ಬರೂ ಹರ್ಷಿಸುತ್ತಿದ್ದರು. ಹೀಗೆ ಹಲವಾರು ವರ್ಷ ನಡೆಯಿತು. ನಾವು ಅನೇಕ ಜಾಗಗಳಿಗೆ ಹೋದೆವು, ದೊಡ್ಡ ನಗರಗಳು, ರಾಯಭಾರ ಕಚೇರಿಗಳು, ದೂತಾವಾಸಗಳು – ಎಲ್ಲೆಡೆ ಅವರ ಉಪನ್ಯಾಸ ಆನಂದ ನೀಡಿತು. ಸಾಮಾನ್ಯವಾಗಿ ನಾನು ಕೊನೆಯಲ್ಲಿ ಅವರ ಭಾಷಣದ ಸಾರಾಂಶ ತಿಳಿಸಿ ಮುಕ್ತಾಯ ಭಾಷಣ ಮಾಡುತ್ತಿದೆ.

ಹೀಗೆ ಅವರಿ ಟೊರಾಂಟೊ ನಗರಕ್ಕೆ ಹೋಗಿ ಅಲ್ಲೊಂದು ಕೇಂದ್ರವನ್ನು ಆರಂಭಿಸಿದರು. ಅವರು ಎಷ್ಟರಮಟ್ಟಿಗೆ ಅಲ್ಲಿನ ಜನರಲ್ಲಿ ಸ್ಫೂರ್ತಿ ತುಂಬಿದರೆಂದರೆ ಅಲ್ಲಿ ಕೇಂದ್ರ ಬಹುಬೇಗ ಕಾರ್ಯಾರಂಭ ಮಾಡಿತು. ಅವರು ವಾಷಿಂಗ್ಟನ್ ಡಿ.ಸಿಗೆ ಹೋದರು, ಅಲ್ಲೊಂದು ಕೇಂದ್ರ ಆರಂಭವಾಯಿತು. ರಂಗನಾಥಾನಂದರು ವರ್ಜಿನಿಯಾದಲ್ಲಿ ತಂಗಿದ್ದರು. ಅಲ್ಲಿಂದ ಅವರು ೧೯೭೦ರಲ್ಲಿ ಗ್ರೇಟರ್ ವಾಷಿಂಗ್ಟನ್‌ನ ವೇದಾಂತ ಸೊಸೈಟಿ ಆರಂಭಿಸಿದರು. ಕಾಲಾಂತರದಲ್ಲಿ ಈ ಕೇಂದ್ರ ಮೇರಿಲ್ಯಾಂಡ್‌ಗೆ ಸ್ಥಳಾಂತರಗೊಂಡಿತಾದರೂ ಹೆಸರು ಮಾತ್ರ ಅದೇ ಉಳಿಯಿತು.

ನನಗೆ ನೆನಪಿರುವಂತೆ, ನಾನು ನ್ಯೂಯಾರ್ಕ್‌ನಲ್ಲಿದ್ದಾಗ ಸ್ವಾಮೀಜಿ ಯುನೈಟೆಡ್ ನೇಷನ್ಸ್‌ನ ಸೆಕ್ರಟರಿ ಜನರಲ್ ಶ್ರೀ ಯು. ಥಾಂಟ್ ಅವರ ಬಗ್ಗೆ ಹೇಳಿದ್ದರು. ಸ್ವಾಮೀಜಿ ರಂಗೂನ್‌ನಲ್ಲಿದ್ದಾಗ ಯು. ಥಾಂಟ್ ಅವರು ರಾಮಕೃಷ್ಣ ಮಿಷನ್ ಸೊಸೈಟಿಯ ಸದಸ್ಯರಾಗಿದ್ದರು ಎಂದು ತಿಳಿಸಿದರು. ಅಲ್ಲದೆ ಸ್ವಾಮೀಜಿ ಅವರ ಉಪನ್ಯಾಸ ಕೇಳಲು ನಿಯತವಾಗಿ ಬರುತ್ತಿದ್ದಂತೆ. ೧೯೬೩ ರಲ್ಲಿ, ಯು. ಥಾಂಟ್ ಅವರು ನನ್ನನ್ನು ಭೇಟಿಯಾದಾಗ ಸ್ವಾಮೀಜಿ ಅದ್ಭುತ ವಾಗ್ಮಿ ಮತ್ತು ಅಸಾಧಾರಣ ಸಜ್ಜನ ಎಂದು ತಿಳಿಸಿದರು.

ಸ್ವಾಮಿ ರಂಗನಾಥಾನಂದರು ಬೋಸ್ಟನ್‌ಗೆ ಕಡೆಯ ಭೇಟಿ ನೀಡಿದ್ದು ೧೯೮೭ರಲ್ಲಿ. ೧೯೮೯ರಲ್ಲಿ ಅವರು ಮಹಾಸಂಘದ ಉಪಾಧ್ಯಕ್ಷರಾದರು ಮತ್ತು ೧೯೯೮ ರಲ್ಲಿ ಅಧ್ಯಕ್ಷರಾದ ಮೇಲಂತೂ ಅವರು ಎಲ್ಲಿಗೂ ಹೋಗಲೇ ಇಲ್ಲ. ಅವರು ನನಗೆ ಹೇಳಿದ್ದರು, "ನಾನಲ್ಲಿಗೆ ಬರಲಾರೆ. ನೀನೇ ಇಲ್ಲಿಗೆ ಬರುವುದು ಉತ್ತಮ." ನನಗಾಗ ಆರೋಗ್ಯ ಸರಿಯಿರಲಿಲ್ಲ. ಅದೂ ಒಂದು ಕಾರಣವಾಗಿ ಬೇಲೂರು ಮಠಕ್ಕೆ ಬಂದೆ. ನನ್ನೊಂದಿಗೆ ಇನ್ನೂ ಹಲವರು ಬಂದಿದ್ದರು. ಅಲ್ಲಿ ಎರಡು ವಾರ ಕಳೆದೆ. ಪ್ರತಿ ದಿನ ನಾನು ಅವರನ್ನು ಭೇಟಿಯಾಗುತ್ತಿದ್ದೆ. ಸಂಜೆ ೪ರಿಂದ ೬ರ ಸಮಯದಲ್ಲಿ ಅವರು ಸಂದರ್ಶನ ನೀಡುತ್ತಿದ್ದರು. ನಾನೂ ಅಲ್ಲಿರುತ್ತಿದ್ದೆ, ಅವರನ್ನು ಅಲ್ಲಿ ಹಾಗೆ ಕಾಣುವುದೇ ಪರಮಾನಂದ. ೧೯೪೨ರಲ್ಲಿ ಅವರೊಂದಿಗೆ ಇದ್ದಾಗಿನಿಂದಲೂ ಅನುಭವಿಸುತ್ತಿದ್ದ ಆನಂದ ಅದು. ಅವರ ಸಂಪರ್ಕ, ಸಹವಾಸ ಎಲ್ಲವೂ ಜೀವಮಾನದ ವಿಶೇಷ ಅವಕಾಶ ಎಂಬ ಭಾವ ಗಟ್ಟಿಯಾಗಿತ್ತು. ನಿಜವಾಗಿಯೂ ಅವರೊಬ್ಬ ಮಹಾತ್ಮರೇ ಸರಿ.

ಅವರ ಗ್ರಂಥಗಳಲ್ಲೆಲ್ಲ, '*ಎಟರ್ನಲ್ ವ್ಯಾಲ್ಯೂಸ್ ಫಾರ್ ಎ ಚೇಂಜಿಂಗ್ ಸೊಸೈಟಿ*' ಎಂಬ ನಾಲ್ಕು ಸಂಪುಟಗಳು ಪ್ರಮುಖವಾದದ್ದು. *ಭಗವದ್ಗೀತೆ*ಯನ್ನು ಕುರಿತ ಮೂರು ಸಂಪುಟಗಳು ಇಂದಿನ ಆಧುನಿಕ

ಜನಾಂಗಕ್ಕೆ ಹಿಡಿಸುವ ಕೃತಿ. ನಾವಂತೂ ಅವರ ಎಲ್ಲ ಕೃತಿಗಳನ್ನು ಗೌರವಿಸುತ್ತೇವೆ. ಒಳಾರ್ಥವನ್ನು ನೀಡುವ, ಆಧ್ಯಾತ್ಮಿಕ ಮೌಲ್ಯಗಳ ಋಣಾತ್ಮಕ ವಿಮರ್ಶೆ ಮಾಡುವ ಕೃತಿಗಳು. ಅವರು ಪ್ರಪಂಚದ ಎಲ್ಲ ಪ್ರವಾದಿಗಳ ಬಗ್ಗೆ ಸಕಾರಾತ್ಮಕ ಮನೋಭಾವ ಹೊಂದಿದ್ದರು.

ಅವರಿ ಅದ್ಭುತ ವ್ಯಕ್ತಿ. ಅವರ ಬಗ್ಗೆ ಆಲೋಚಿಸುವುದೇ ಸಂತಸ. ಅವರೊಂದಿಗೆ ಹತ್ತು ಹಲವು ವರ್ಷ ಕಳೆದುದೇ ಒಂದು ದಿವ್ಯ ಅವಕಾಶ. ಅವರೊಂದಿಗೆ ನಮ್ಮ ಬಗೆಯ ಸಂಪರ್ಕಗಳಲ್ಲಿ ಮುಖ್ಯವಾದುದು ಅಧ್ಯಾತ್ಮಿಕ ಸಂಪರ್ಕ. ಇಂದಿಗೂ "ಅವರು ತೀರಿಹೋಗಿದ್ದಾರೆ" ಎಂದು ನನಗನಿಸುವುದಿಲ್ಲ. ಅವರು ಭೌತಿಕ ದೇಹ ತ್ಯಜಿಸಿದ್ದಾರೆ ಆದರೆ ನಾನು ಕಣ್ಣುಮುಚ್ಚಿ ಅವರ ಬಗ್ಗೆ ಆಲೋಚಿಸಿದ ಕೂಡಲೆ ಅವರ ಆಧ್ಯಾತ್ಮಿಕ ಅಸ್ತಿತ್ವದ ಅರಿವಾಗುತ್ತದೆ. ಅವರು ನಮಗೆ ಬಹಳ ಆತ್ಮೀಯರು, ಏಕೆಂದರೆ ಅವರು ಸೂಕ್ಷ್ಮರೂಪದಲ್ಲಿ ಈಗಲೂ ನಮ್ಮೊಂದಿಗಿದ್ದಾರೆ.*

* * * *

* ಸ್ವಾಮಿ ರಂಗನಾಥಾನಂದಜಿ ಮಹಾಸಮಾಧಿ ಹೊಂದಿದ ದಿನ ಬೋಸ್ಟನ್ನಿನಲ್ಲಿ ಸ್ವಾಮಿ ಸರ್ವಾಗತಾನಂದರು ನೀಡಿದ ಭಾಷಣದ ಧ್ವನಿಮುದ್ರಿಕೆಯನ್ನು ಈ ಲೇಖನ ರೂಪಕ್ಕೆ ಲಿಪ್ಯಂತರಿಸಲಾಗಿದೆ. ಭಾಷಣವನ್ನು ಸೂಕ್ತವಾಗಿ ಸಂಪಾದಿಸಲಾಗಿದೆ.

# ೧೧. ತುಳಿತಕ್ಕೊಳಗಾದವರ ಬಗೆಗಿನ ಅಪಾರ ಕಾಳಜಿ

–ಸ್ವಾಮಿ ನಿಖಿಲಾತ್ಮಾನಂದ*

ನನಗೆ ಸ್ವಾಮಿ ರಂಗನಾಥಾನಂದಜಿಯವರ ಸಂಪರ್ಕ ಅತ್ಯಲ್ಪವೆ. ಆದರೆ ಆದ ಕೆಲವೇ ಭೇಟಿ, ಸಂಪರ್ಕದ ನೆನಪು ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ.

ನಾನು ನಾಗಪುರದ ರಾಮಕೃಷ್ಣ ಮಠದಲ್ಲಿದ್ದ ಸ್ಟುಡೆಂಟ್ಸ್ ಹೋಮ್‌ನಲ್ಲಿ ನೆಲೆಸಿದ ದಿನಗಳಲ್ಲಿ, ಇಂಟರ್‌ಮೀಡಿಯೇಟ್ ಓದುತ್ತಿದ್ದ ದಿನಗಳಲ್ಲಿ ೧೯೫೬ರಲ್ಲಿ ಅವರನ್ನು ಪ್ರಥಮ ಬಾರಿ ಭೇಟಿಯಾದೆ. ಆಗ ಅವರು ಆಶ್ರಮದ ಯಾವುದೋ ವಿಶೇಷ ಕಾರ್ಯಕ್ರಮಕ್ಕಾಗಿ ಡಿಸೆಂಬರ್‌ನಲ್ಲಿ ಆಗಮಿಸಿದ್ದರು. ಈ ಸಂದರ್ಭದಲ್ಲಿ ಅವರು ಸ್ವಾಮಿ ವಿವೇಕಾನಂದರ ಬಗ್ಗೆ ಮೂರು ಉಪನ್ಯಾಸಗಳನ್ನು ನೀಡಿದರು. ಈ ಭಾಷಣದ ನೆನಪು ಇನ್ನೂ ಹಸಿರಾಗಿದೆ. ಮೂರು ದಿನ ಅವರು ಮೂರು ವಿಷಯಗಳ ಮೇಲೆ ಮಾತನಾಡಿದರು – 'ನರೇಂದ್ರನಾಥ ಸ್ವಾಮಿ ವಿವೇಕಾನಂದ ಆದುದು', 'ಪಶ್ಚಿಮಕ್ಕೆ ಸ್ವಾಮಿ ವಿವೇಕಾನಂದರ ಸಂದೇಶ', ಮತ್ತು 'ಭಾರತಕ್ಕೆ ಸ್ವಾಮಿ ವಿವೇಕಾನಂದರ ಸಂದೇಶ'. ಈ ಮೂರು ಭಾಷಣಗಳು ನನ್ನ ಮೇಲೆ ಪರಿಣಾಮ ಬೀರಿದವು, ನಾನು ಪ್ರಭಾವಿತನಾದೆ. ಭಾಷೆ ಸರಳವಾಗಿತ್ತು. ಆದರೆ, ಶಕ್ತಿಯುತವಾಗಿತ್ತು. ನಾನು ವಿದ್ಯಾರ್ಥಿದೆಸೆಯಲ್ಲಿಯೇ ವಿವೇಕಾನಂದರ ಬಗ್ಗೆ ಆಳವಾದ ಅಧ್ಯಯನ ಕೈಗೊಳ್ಳಲೂ ಸ್ಫೂರ್ತಿನೀಡಿದ್ದು ಈ ಭಾಷಣಗಳು.

'ವಿದ್ಯಾರ್ಥಿ ಭವನ' ದ ವಿದ್ಯಾರ್ಥಿಗಳನ್ನುದ್ದೇಶಿಸಿ ಅವರು ಮಾತನಾಡಿದ್ದರು. ಭಾಷಣದ ನಂತರ ಪ್ರಶ್ನೋತ್ತರಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಈ ಸಂದರ್ಭದಲ್ಲಿ ಅವರು ಹೇಳಿದ ಹಾಸ್ಯದ ತುಣುಕುಗಳು ನನಗಿನ್ನೂ ನೆನಪಿವೆ. ಜೀವನದ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದು ಹೇಗೆ ಎಂದು ಯಾರೋ ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ಉದ್ದೇಶ, ಗುರಿಗಳನ್ನು ನಮ್ಮ ಕೈಗೆಟುಕುವಂತಹ ವ್ಯಾಪ್ತಿಯಲ್ಲಿರಿಸಿಕೊಳ್ಳಬೇಕು. ಕಾಲ್ಪನಿಕವಾದವನ್ನು ಬೆನ್ನು ಹತ್ತಿ ಹೋಗಬಾರದೆಂದರು. ಇದಕ್ಕೆ ಪೂರಕವಾಗಿ ಕಾಡಿನೊಳಗಿದ್ದ ಎರಡು ಕತ್ತೆಗಳ ಕತೆಯನ್ನು ಹೇಳಿದರು. ಈ ಎರಡು ಕತ್ತೆಗಳು ಕಾಡಿನಲ್ಲಿ ಮುಕ್ತವಾಗಿ, ಆರೋಗ್ಯವಾಗಿ ಇದ್ದವು. ಒಂದು ದಿನ ಇವೆರಡೂ ಹತ್ತಿರದ ನಗರಕ್ಕೆ ಹೋಗಿ ಸರ್ಕಸ್ ನೋಡಿದವು. ಅಲ್ಲಿ ಒಂದು ಪ್ರಾಣಿಗಳ ಪ್ರಪಂಚವೇ ಇದ್ದುದನ್ನು ಕಂಡವು. ಒಂದು ಕತ್ತೆ ಹೇಳಿತು, "ನಾವೂ ಸರ್ಕಸ್ ತಂಡವನ್ನು ಸೇರಿಬಿಡೋಣ. ಹೊಸ ಸ್ನೇಹಿತರು ದೊರೆಯುತ್ತಾರೆ. ಜೊತೆಗೆ ನಮ್ಮ ಕಸರತ್ತುಗಳಿಂದ ಹೆಸರು, ಕೀರ್ತಿ ಗಳಿಸಬಹುದು!" ಅದಕ್ಕೆ ಮತ್ತೊಂದು ಕತ್ತೆ ಉತ್ತರಿಸಿತು, "ಇಲ್ಲ, ಅಲ್ಲಿ ಸೇರಿ ನನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದು ನನಗೆ ಇಷ್ಟವಿಲ್ಲ." ಮೊದಲನೆ ಕತ್ತೆ ಸರ್ಕಸ್ ಆವರಣದೊಳಕ್ಕೆ ನಡೆದು ಹೋಯಿತು. ಆರೋಗ್ಯಯುಕ್ತವಾಗಿದ್ದ ಕತ್ತೆಯನ್ನು ಕಂಡಿದ್ದೇ ತಡ, ಸರ್ಕಸ್ ಜನರು ಅದನ್ನು ಹಿಡಿದು ಕಟ್ಟಿದರು. ಇದನ್ನು ನೋಡುತ್ತಿದ್ದ ಎರಡನೆ ಕತ್ತೆ ವೇಗವಾಗಿ ಓಡಿ ಕಾಡು ಸೇರಿಕೊಂಡಿತು.

ಒಂದು ವರ್ಷದ ಬಳಿಕ, ಮತ್ತೆ ಸರ್ಕಸ್ ತಂಡ ಊರಿಗೆ ಮರಳಿತು. ಕಾಡಿನಲ್ಲಿದ್ದ ಕತ್ತೆ ತನ್ನ ಮಿತ್ರನನ್ನು ಕಾಣಲು ಬಂತು. ಇದನ್ನು ನೋಡಿ ಒಳಗಿದ್ದ ಕತ್ತೆ ಹೊರಗೆ ಬಂದು ಭೇಟಿಯಾಯಿತು. ಸೊರಗಿ ಸೋತುಹೋಗಿದ್ದ ಸರ್ಕಸ್ ಕತ್ತೆಯನ್ನು ನೋಡಿ ಕಾಡಿನ ಕತ್ತೆ ಕೇಳಿತು: "ಏಕೆ ಈ ಚಿಂತಾಜನಕ ಸ್ಥಿತಿಯಲ್ಲಿದ್ದೀಯಾ? ಏನಾಗಿದೆ ನಿನಗೆ?" ಆಗ ಆ ಮಿತ್ರ ತಾನು ಹೇಗೆ ಹಗಲು ದುಡಿದೆ ಮತ್ತು ರಾತ್ರಿಯಿಡೀ ಕಸರತ್ತು ಪ್ರದರ್ಶಿಸುವಂತೆ ಒತ್ತಡ

---

* ಛತ್ತೀಸ್‌ಗಢದ ನಾರಾಯಣಪುರ ರಾಮಕೃಷ್ಣ ಮಿಷನ್ ಆಶ್ರಮದ ಕಾರ್ಯದರ್ಶಿಗಳು.

ಹೇರಲಾಯಿತು ಮತ್ತು ತಿನ್ನಲು ಸ್ವಲವೇ ಆಹಾರ ನೀಡಿದರು ಎಂದೆಲ್ಲ ವಿವರ ನೀಡಿತು. ಕಾಡಿನ ಕತ್ತೆ ಹೇಳಿತು, "ಹಾಗಾದರೆ ತಡವೇಕೆ? ಬಂದುಬಿಡು ಓಡಿಹೋಗಿ ಕಾಡು ಸೇರೋಣ" ಎಂದಿತು. ಆದರೆ ಈ ಕತ್ತೆ ನಿರಾಕರಿಸಿತು. ಚಕಿತಗೊಂಡ ಕಾಡಿನ ಕತ್ತೆ ಕೇಳಿತು: "ನೀನೇಕೆ ಇಂತಹ ಕಠಿಣ ಪರಿಸರದಲ್ಲಿ ಇರಬಯಸುತ್ತೀಯ?" ಸರ್ಕಸ್ ಕತ್ತೆ ಹೇಳಿತು: "ನೋಡು ಪ್ರತಿ ರಾತ್ರಿ ನಾನೊಂದು ವಿಶೇಷ ಕಸರತ್ತು ನಡೆಸುತ್ತೇನೆ. ಅದರಲ್ಲಿ ನನ್ನ ಯಜಮಾನನ ಮಗಳು ಒಂದೇ ಕಾಲಿನಲ್ಲಿ ನನ್ನ ಬೆನ್ನಮೇಲೆ ನಿಂತಿರುತ್ತಾಳೆ. ನಾನು ಸುತ್ತಲು ಓಡುತ್ತೇನೆ. ನನ್ನ ಯಜಮಾನನು ಮಗಳಿಗೆ ಎಚ್ಚರಿಕೆ ನೀಡಿದ್ದಾನೆ. ಅವಳು ನನ್ನ ಬೆನ್ನ ಮೇಲಿಂದ ಜಾರಿ ಬಿದ್ದ ದಿನ ಅವಳನ್ನು ನನಗೆ ಮದುವೆ ಮಾಡಿಸುತ್ತೇನೆ ಎಂದು. ಈ ಒಳ್ಳೆಯ ಭವಿಷ್ಯ ಕಾದಿದೆ, ಈ ಉದ್ದೇಶ ಸಾಧನೆಯಿರುವುದರಿಂದ ನಾನು ನಿನ್ನೊಂದಿಗೆ ಬರಲಾಗುವುದಿಲ್ಲ."

ಅವರು ಹೇಳುತ್ತಿದ್ದ ಮತ್ತೊಂದು ಕತೆ ಒಬ್ಬ ಜೀವವಿಜ್ಞಾನಿಯನ್ನು ಕುರಿತದ್ದು. ಅವನು ಹಲ್ಲುನೋವಿನಿಂದ ಬಹಳ ನರಳುತ್ತಿದ್ದ. ವೈದ್ಯರು ಹಲ್ಲು ಕೀಳಿಸುವಂತೆ ಅವನಿಗೆ ಸಲಹೆಯಿತ್ತರು. ಆದರೆ ಅದು ಬಹಳ ನೋವು ಉಂಟುಮಾಡುತ್ತದೆ ಎಂದು ಅವನು ಹೆದರುತ್ತಿದ್ದ. ಒಬ್ಬ ಕರಿಯ (ನಾಟಿ) ವೈದ್ಯನಲ್ಲಿಗೆ ಹೋಗಿ ಹಲ್ಲು ಕೀಳಿಸಬಹುದೆಂದು, ಅಲ್ಲಿ ಹಲ್ಲು ನೋವೇ ಗೊತ್ತಾಗುವುದಿಲ್ಲ ಎಂದೂ ಅವನ ಮಿತ್ರನೊಬ್ಬ ಸಲಹೆ ನೀಡಿದ. ಜೀವವಿಜ್ಞಾನಿ ಆ ಚಿಕಿತ್ಸಕನ ಹರಕು ಮುರುಕು ಚಿಕಿತ್ಸಾಲಯಕ್ಕೆ ಹೋಗಿ ಹಲ್ಲುನೋವಿನ ವರದಿ ಒಪ್ಪಿಸಿದ. ಹಲ್ಲಿನ ನೋವೇ ತಿಳಿಯದಂತೆ ಅದನ್ನು ಕೀಳಬೇಕೆಂಬ ಕೋರಿಕೆಯನ್ನು ಸಲ್ಲಿಸಿದ. ಈ ವೈದ್ಯ ಅವನನ್ನು ಸ್ಟೂಲ್ ಮೇಲೆ ಕುರಿಸಿ ಹೇಳಿದ, "ಹೌದು, ಹಲ್ಲು ಕೀಳುವಾಗ ನಿನಗೆ ಅದರ ನೋವೆ ತಿಳಿಯುವುದಿಲ್ಲ" ಹೀಗೆನ್ನುತ್ತ ಇಕ್ಕಳವನ್ನು ಹುಳುಕುಹಲ್ಲಿಗೆ ಹಾಕಿ ಇಡಿದ. ಜೀವವಿಜ್ಞಾನಿ ಹೆದರಿಬಿಟ್ಟಿದ್ದ. ಆದರೆ ವೈದ್ಯ ಆಶ್ವಾಸನೆ ನೀಡಿದ." ಹೆದರಬೇಡ ನಿನಗೆ ಹಲ್ಲಿನ ನೋವು ಗೊತ್ತಾಗುವುದೇ ಇಲ್ಲ!" ಎನ್ನುತ್ತಾ ತನ್ನ ಸಹಾಯಕನಿಗೆ ಸಂಜ್ಞೆ ಮಾಡಿದ. ಆ ಕೂಡಲೆ ಸಹಾಯಕ ಜೀವವಿಜ್ಞಾನಿಯ ಪೃಷ್ಠಕ್ಕೆ ಜಾಡಿಸಿ ಒದ್ದ. ಜೀವವಿಜ್ಞಾನಿ ಆ ನೋವಿಗೆ ಚೀರಿದ, ಆ ಕ್ಷಣಮಾತ್ರದಲ್ಲಿ ವೈದ್ಯ ಹಲ್ಲು ಕಿತ್ತುಬಿಟ್ಟಿದ್ದ. ಜೀವವಿಜ್ಞಾನಿಗೆ ವಿಪರೀತ ಕೋಪ ಬಂತು, ಏಕೆಂದರೆ ಅವನಿಗೆ ಅಂಡಿನ ಮೇಲೆ ಒದೆತ ಅಷ್ಟು ಜೋರಾಗಿತ್ತು. ವೈದ್ಯರು ಅದರ ಬಗ್ಗೆ ತಲೆಕೆಡಿಸಿಕೊಳ್ಳದೆ ಅವನಿಗೆ ಹೇಳಿದರು, "ನೋಡು ನಿನ್ನ ಹುಳುಕು ಹಲ್ಲು ಕಿತ್ತಾಯಿತು. ಮತ್ತು ಅದನ್ನು ಕೀಳುವ ನೋವು ನಿನಗೆ ಗೊತ್ತಾಗಲಿಲ್ಲ." ಜೀವವಿಜ್ಞಾನಿಯ ಪೃಷ್ಠ ಎಷ್ಟೊಂದು ನೋಯುತ್ತಿತ್ತೆಂದರೆ ಅವನು ಹಲ್ಲುನೋವನ್ನು ಮರೆತೇಬಿಟ್ಟಿದ್ದ. ಕಿತ್ತುಹಾಕಿದ್ದ ಹಲ್ಲನ್ನೇ ಕ್ಷಣಕಾಲ ದಿಟ್ಟಿಸಿ ಬಳಿಕ ನೋಡಿದ, "ನೀವು ಇಂದು ನನಗೊಂದು ಹೊಚ್ಚ ಹೊಸ ಸತ್ಯದ ಅನ್ವೇಷಣೆ ಮಾಡಿಕೊಟ್ಟಿರಿ. ಡಾರ್ವಿನ್ ಮೊದಲಾದ ವಿಜ್ಞಾನಿಗಳಿಗೂ ತಿಳಿಯದ ಈ ಸತ್ಯವೇನೆಂದರೆ ಹಲ್ಲಿನ ಬೇರುಗಳು ದವಡೆಯಲ್ಲಿಲ್ಲ, ಆದರೆ ಬೆನ್ನಿನ ಬುಡದಲ್ಲಿವೆ!"

ನಾನು ಮತ್ತೆ ಸ್ವಾಮಿ ರಂಗನಾಥಾನಂದಜಿ ಅವರನ್ನು ಭೇಟಿಯಾದದ್ದು ೧೯೫೮ರಲ್ಲಿ. ಅವರು ಆಗ ರಾಯಪುರಕ್ಕೆ ಬಂದಿದ್ದರು. ನಾನು ರಾಯಪುರದ ವಿಜ್ಞಾನದ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಕೆಲವು ಸ್ನೇಹಿತರೊಂದಿಗೆ ಶ್ರೀರಾಮಕೃಷ್ಣರ ಭಕ್ತರಾದ ಶ್ರೀ ಆಶುತೋಷ ಬಿಶ್ವಾಸ್ ಅವರ ಮನೆಗೆ ಭಜನೆಗೆ ಹೋಗುತ್ತಿದ್ದೆ. ಶ್ರೀ ಬಿಶ್ವಾಸ್ ಅವರು ಸ್ವಾಮಿ ವಿರಜಾನಂದಜಿ ಮಹಾರಾಜ್ ಅವರ ಶಿಷ್ಯರು. ಇವರ ಮನೆಗೆ ಅನೇಕ ಹೆಸರಾಂತ ಸ್ವಾಮಿಗಳು ಭೇಟಿ ನೀಡುತ್ತಿದ್ದರು. ಈ ಬಾರಿ ಬಿಶ್ವಾಸ್ ಸ್ವಾಮಿ ರಂಗನಾಥಾನಂದಜಿ ಅವರನ್ನು ಆಹ್ವಾನಿಸಿದ್ದರು. ನಾವು ಸರ್ಕಾರಿ ವಿಜ್ಞಾನ ಕಾಲೇಜು, ರಾಜ್‌ಕುಮಾರ್ ಕಾಲೇಜು, ದುರ್ಗ ಆರ್ಟ್ಸ್ ಕಾಲೇಜುಗಳಲ್ಲಿ ಅವರ ಉಪನ್ಯಾಸ ಏರ್ಪಡಿಸಿದ್ದೆವು. ಜೊತೆಗೆ ಕೆಲವು ಸಾರ್ವಜನಿಕ ಸಭೆಗಳನ್ನೂ ಆಯೋಜಿಸಿದ್ದೆವು. ಅವರ ಭಾಷಣಗಳು ಬಹಳ ಮೆಚ್ಚುಗೆಗೆ ಪಾತ್ರವಾದವು. ಮತ್ತು ಅವರಿಗೂ ಯುವಸ್ವಯಂಸೇವಕರ ಉತ್ಸಾಹ ಮೆಚ್ಚುಗೆಯಾಯಿತು. ಆಗ ಶ್ರೀರಾಮಕೃಷ್ಣರ ಹೆಸರಿನಲ್ಲಿ ನೊಂದಾಯಿತ ಸಂಸ್ಥೆಗಳಾವುವೂ ಇರಲಿಲ್ಲ. ಆದುದರಿಂದ

ಅವರು ಭಕ್ತರಿಗೆ ಶ್ರೀರಾಮಕೃಷ್ಣ ಸೇವಾ ಸಮಿತಿ ಎಂಬ ಹೆಸರನ್ನು ನೊಂದಾಯಿಸಿ ಅದರಡಿಯಲ್ಲಿ ಕಾರ್ಯಕ್ರಮಗಳನ್ನು ಯೋಜಿಸುವಂತೆ ಸೂಚಿಸಿದರು. ಆಮೇಲೆ ಈ ಸೇವಾ ಸಮಿತಿಯು ಸ್ವಾಮಿ ಆತ್ಮಾನಂದಜಿ ಮಹಾರಾಜ್ ಅವರ ಪ್ರಯತ್ನಗಳ ಮೂಲಕ ರಾಮಕೃಷ್ಣ ಮಿಷನ್‌ನ ಸ್ವರೂಪ ಪಡೆಯಿತು. ಸ್ವಾಮಿ ರಂಗನಾಥಾನಂದರ ಉಪನ್ಯಾಸಗಳನ್ನು ಕೇಳಲು ಬಂದ ಗಣ್ಯರನೇಕರು ಸಮಿತಿಯ ಸದಸ್ಯರು, ಪದಾಧಿಕಾರಿಗಳು ಆಗಲು ಸಂತೋಷದಿಂದ ಒಪ್ಪಿದರು. ಸ್ವಾಮೀಜಿಯ ಉಪನ್ಯಾಸ ಕಾರ್ಯಕ್ರಮಗಳೆಲ್ಲ ಮುಗಿದ ಮೇಲೆ ಅವರು ದೆಹಲಿಗೆ ಹೊರಟರು. ಅವರನ್ನು ಬೀಳ್ಕೊಡಲು ನಾವು ಕೂಡ ರೈಲುನಿಲ್ದಾಣಕ್ಕೆ ಹೋದೆವು. ರೈಲು ಹತ್ತಿದಾಗ ಅವರಿಗೆ ತಿಳಿದು ಬಂತು, ತಮ್ಮ ಬರ್ತ್ ಬೇರೆಯವರಿಗೆ ದೊರಕಿಬಿಟ್ಟಿದೆ (ಅಲಾಟಾಗಿದೆ) ಎಂದು. ಸಹಜವಾಗಿ ನಮಗೆಲ್ಲ ಚಿಂತೆಯಾಯಿತು. ಆದರೆ ಅವರು ಶಾಂತರಾಗಿ, ಸಮಚಿತ್ತರಾಗಿ ಏನೂ ಆಗಿಲ್ಲವೇನೋ ಎಂಬಂತೆ ಇದ್ದರು. ಹಿರಿಯ ಅಧಿಕಾರಿಗಳೊಬ್ಬರಿಂದ ಸಮಸ್ಯೆ ಪರಿಹಾರ ಕಂಡಿತು. ಅವರ ಶಾಂತಚಿತ್ತತೆ ನಮ್ಮೆಲ್ಲರ ಮೇಲೆ ಬಹಳ ಪ್ರಭಾವ ಬೀರಿತು.

ನಾನು ಮಿಷನ್ ಸೇರಿದ ಮೇಲೆ ಸ್ವಾಮಿ ರಂಗನಾಥಾನಂದರನ್ನು ಹಲವಾರು ಬಾರಿ ಭೇಟಿಯಾದೆ. ಅವರು ಆಗ ಶಿಕ್ಷಣದ ಬಗ್ಗೆ, ಬಡತನ ನಿವಾರಣೆಯ ಬಗ್ಗೆ, ಹಿಂದುಳಿದ ಜಾತಿ, ವರ್ಗಗಳ ಏಳ್ಗೆಗೆ ಮಾಡಬೇಕಾದ ಕಾರ್ಯಗಳನ್ನು ಕುರಿತು ಬಹಳ ಹೊತ್ತು ಮಾತನಾಡುತ್ತಿದ್ದರು. ನಾರಾಯಣಪುರದಲ್ಲಿ ೧೯೮೫ರಲ್ಲಿ ಸ್ವಾಮಿ ಅತ್ಮಾನಂದರು ಅಬುಜಮಾರ ಬುಡಕಟ್ಟಿನವರಿಗೆ ಅಭಿವೃದ್ಧಿ ಕೇಂದ್ರ ತೆರೆದಾಗ ರಂಗನಾಥಾನಂದರು ಬಹಳ ಸಂತೋಷಪಟ್ಟರು. ೧೯೮೬ರಲ್ಲಿ ಅವರು ನಾರಾಯಣಪುರಕ್ಕೆ ಭೇಟಿ ನೀಡಿದರು. ಆಗ ಕೇಂದ್ರವು ಒಂದು ತಗಡಿನ ಶೆಡ್ಡಿನ ನೆರಳಿನಲ್ಲಿ ಕಾರ್ಯನಿರ್ವಹಿಸುತಿತ್ತು ಮತ್ತು ಆ ಗಿರಿಜನರ ಬಾಲಕರಿಗಾಗಿ ಅದಾಗ ತಾನೆ ಒಂದು ಪ್ರಾಥಮಿಕ ಶಾಲೆ ಆರಂಭವಾಗಿತ್ತು. ನಾರಾಯಣಪುರದ ಗಿರಿಜನ ಕಲ್ಯಾಣ ಕಾರ್ಯದ ಪೂರ್ಣ ಜವಾಬ್ದಾರಿ ನನಗೆ ನೀಡಲಾಗಿತ್ತು. ಅದೊಂದು ಕಷ್ಟದ ಸವಾಲು, ಆದರೆ ರಂಗನಾಥಾನಂದರು ನನ್ನನ್ನು ಯಾವಾಗಲೂ ಪ್ರೋತ್ಸಾಹಿಸುತ್ತಿದ್ದರು. ೧೯೮೫ರ ಸಾಲಿನ ಇಂದಿರಾ ಗಾಂಧಿ ಅವಾರ್ಡ್ ಫಾರ್ ಇಂಟೀಗ್ರೇಷನ್ ಪ್ರಶಸ್ತಿ ೧೯೮೬ರ ಅಕ್ಟೋಬರ್ ೩೧ರಂದು ಅವರಿಗೆ ಸಂದಿತು. ಅದರ ಸಲುವಾಗಿ ಬಂದ ಇಡೀ ಮೊತ್ತ (ರೂ. ೧ ಲಕ್ಷ) ಮತ್ತು ಒಂದು ಉಣ್ಣೆಯ ಶಾಲನ್ನು ಸ್ವಾಮಿ ಆತ್ಮಾನಂದರ ಕೈಗೆ ಹಾಕಿ ಅವರು ಹೇಳಿದರು, "ಈ ಹಣವನ್ನು ಗಿರಿಜನ ಕಾರ್ಯಕ್ಕೆ ಬಳಸಿಕೊಳ್ಳಿ ಮತ್ತು ಶಾಲನ್ನು ನಿಖಿಲಾತ್ಮನಂದರಿಗೆ ಕೊಡಿ, ಅವರು ಆ ಪ್ರದೇಶದಲ್ಲಿ ಬಹಳ ಶ್ರಮವಹಿಸಿ ಕೆಲಸಮಾಡುತ್ತಿದ್ದಾರೆ."

೧೯೮೮ರಲ್ಲಿ ಅವರು ಹೈದರಾಬಾದ್ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಸಮಯದಲ್ಲಿ ಅವರನ್ನು ಭೇಟಿಯಾಗಿದ್ದೆ. ಆಗ ಅವರು ಗಿರಿಜನರ ಕಲ್ಯಾಣ ಯೊಜನೆ ಕುರಿತು ಹಲವು ಬಹು ಉಪಯೋಗಿ ಸಲಹೆಗಳನ್ನು ನೀಡಿದರು. ೧೯೯೦ರಲ್ಲಿ ರಾಮಕೃಷ್ಣ ಮಠದ ಕಾರ್ಯ ನಡೆಸುವಂತೆ ನನ್ನನ್ನು ಅಲಹಾಬಾದಿಗೆ ಕಳಿಸಿದರು. ಅಲ್ಲಿಂದ ನಾನು ಆಹ್ವಾನದ ಮೇರೆಗೆ ಮಧ್ಯಪ್ರದೇಶದ ರೇವಾಕ್ಕೆ ಹೋಗಿಬರುತ್ತಿದ್ದೆ. ಸ್ವಾಮಿ ರಂಗನಾಥಾನಂದು ಕೂಡ ಹಿಂದೆ ರೇವಾಕ್ಕೆ ಭೇಟಿ ನೀಡಿ ಉಪನ್ಯಾಸಗಳನ್ನು ನೀಡಿದ್ದರು. ೧೯೮೭ರಲ್ಲಿ ಭಕ್ತರೆಲ್ಲ ಸೇರಿ ಶ್ರೀರಾಮಕೃಷ್ಣ ಸೇವಾ ಸಂಸ್ಥಾನ ಎಂಬ ಸಮಿತಿ ಸ್ಥಾಪಿಸಿಕೊಂಡರು. ಸ್ವಲ್ಪ ಜಮೀನನ್ನು ಖರೀದಿಸಿ ಅದರಲ್ಲಿ ಒಂದು ಮಂದಿರ, ಸಾಧುನಿವಾಸ, ಕಚೇರಿ, ಗ್ರಂಥಾಲಯ ಇವುಗಳನ್ನೆಲ್ಲ ಕಟ್ಟಿಸಿದರು. ಉದ್ಘಾಟನೆಗೆ ಸಂಘದ ಹಿರಿಯ ಸ್ವಾಮಿಗಳೊಬ್ಬರನ್ನು ಕರೆಸುವಂತೆ ನನ್ನನ್ನು ಕೇಳಿಕೊಂಡರು. ಹೈದರಾಬಾದ್‌ನಲ್ಲಿದ್ದ ಸ್ವಾಮಿ ರಂಗನಾಥಾನಂದರಿಗೆ ಪತ್ರ ಬರೆದು ಕಟ್ಟಡದ ಉದ್ಘಾಟನೆಗೆ ರೇವಾಗೆ ಬರಬೇಕೆಂದು ಕೋರಿದೆ. ಆ ವೇಳೆಗೆ ಅವರು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಉಪಾಧ್ಯಾಕ್ಷರಾಗಿದ್ದರು. ಅವರು ಬಹಳ ಪ್ರಾಮಾಣಿಕವಾಗಿ ಉತ್ತರ ಬರೆದು ತಾವು ದೆಹಲಿಗೆ ಬರುತ್ತಿರುವುದಾಗಿಯೂ, ಅಲ್ಲಿಂದ ಅಲಹಾಬಾದಿಗೆ ಬಂದು, ಮುಂದೆ ರೇವಾಗೆ ಪ್ರಯಾಣ

ಬೆಳೆಸುತ್ತೇವೆಂದೂ ತಿಳಿಸಿದರು. ಅವರು ಅಲಹಾಬಾದಿನಲ್ಲಿ ಒಂದೆರಡು ದಿನವಿದ್ದು ಕಾರಿನಲ್ಲಿ ರೇವಾಕ್ಕೆ ಹೊರಟರು. ರಸ್ತೆ ಬಹಳ ಅವ್ಯವಸ್ಥೆ. ಜೊತೆಗೆ ಅವರಿಗೆ ಪಥ್ಯಾಹಾರ. ಕ್ಲುಪ್ತ ಸಮಯದಲ್ಲಿ ಅವರು ಆಹಾರ ಸೇವಿಸಬೇಕಾದ್ದರಿಂದ ಮಾರ್ಗಮಧ್ಯದಲ್ಲಿ ಉಪಾಹಾರಕ್ಕೆಂದು ನಿಲ್ಲಿಸಿದೆವು. ರಸ್ತೆಬದಿಯಲ್ಲಿಯೇ ಆಹಾರ ಸೇವಿಸಬೇಕಾಗಿಬಂದುದರ ಬಗ್ಗೆ ಅವರು ಕೊಂಚವೂ ಬೇಸರಿಸಲಿಲ್ಲ. ನಾಲ್ಕು ಗಂಟೆಯ ಕಾಲದ ಪ್ರಯಾಣದ ಬಳಿಕ ರೇವಾ ತಲುಪಿದೆವು. ಅಲ್ಲಿ ಅವರನ್ನು ಇಳಿಸಿದ ಕೋಣೆಗೆ ಲಗತ್ತಾದ ಶೌಚಾಲಯ ಇರಲಿಲ್ಲ. ಅಲ್ಲಿದ್ದ ಇತರ ಎರಡು ಕೋಣೆಗಳಲ್ಲಿ ಅವರ ಕಾರ್ಯದರ್ಶಿ, ಸಹಾಯಕ ಮತ್ತು ನಾನು ಉಳಿದುಕೊಂಡಿದ್ದೆವು. ಅಲ್ಲಿದ್ದ ಸಾಮಾನ್ಯ ಶೌಚಾಲಯ ಬಳಸಿ ಹೊರಬಂದು ಅವರೆಂದರು, "ಮೂರು ಕೊಠಡಿಗಳಿಗೆ ಒಂದೇ ಶೌಚಾಲಯ – ಚಿಂತೆಯಿಲ್ಲ. ಬೆಳಗಿನ ಪ್ರಾತಃವಿಧಿಗಳನ್ನು ನಾನು ೬ ಗಂಟೆಗೆ ಮುಗಿಸಿಬಿಡುತ್ತೇನೆ. ಆ ಬಳಿಕ ನೀವು ಬಳಸಿಕೊಳ್ಳಬಹುದು." ಅವರ ಉದಾಹರತೆಗೆ, ಮಹಾನತೆಗೆ ನಾನು ಮೂಕನಾದೆ. ಆದರೆ ನಾವು ಆ ಶೌಚಾಲಯ ಬಳಸದೆ ಕೆಳಗಿನ ಅಂತಸ್ತಿನಲ್ಲಿದ್ದುದನ್ನು ಬಳಸಿದೆವು.

೧೯೯೧ರ ಸೆಪ್ಟಂಬರ್ ೩ರಂದು ಜನ್ಮಾಷ್ಟಮಿಯ ಶುಭದಿನದಂದು ಮಂದಿರದ ಲೋಕಾರ್ಪಣೆಯಾಯಿತು. ಕಾರ್ಯಕ್ರಮದ ಬಳಿಕ ಭಕ್ತರು ಸಾಲು ಸಾಲಾಗಿ ಬಂದು ರಂಗನಾಥಾನಂದರಿಗೆ ಪ್ರಣಾಮ ಸಲ್ಲಿಸಿದರು. ಕೆಲವರು ಅವರ ಮುಂದೆ ಶಿಸ್ತಾಗಿ ಕುಳಿತರು. ಆಗ ಸ್ವಾಮೀಜಿ ಹಿಂದಿ ಭಾಷೆಯಲ್ಲಿ ಶ್ರೀಕೃಷ್ಣ ಮತ್ತು ಅವನಲ್ಲಿ ಗೋಪಿಯರಿಟ್ಟಿದ್ದ ದಿವ್ಯ ಪ್ರೇಮ – ಇವುಗಳನ್ನು ಕುರಿತು ಅರ್ಧಘಂಟೆ ಮಾತನಾಡಿದರು. ಈ ಕಾರ್ಯಕ್ರಮ ನಿಗದಿತವಾಗಿರಲಿಲ್ಲ. ಅದು ಸ್ವಯಂ ಸ್ಫೂರ್ತಿಯಿಂದ ನಡೆದದ್ದು. ಸಹಜವಾಗಿ ಮೂಡಿಬಂದ ಶ್ರೀಕೃಷ್ಣನನ್ನು ಕುರಿತ ವ್ಯಾಖ್ಯಾನ ಎಲ್ಲರ ಮನಗೆದ್ದಿತು. ನಗರದ ಮಾನಸ ಭವನದಲ್ಲಿ ಅವರು ಹಿಂದಿಯಲ್ಲಿ ಮತ್ತೊಂದು ಉಪನ್ಯಾಸ ನೀಡಿದರು. ರೇವಾದಲ್ಲಿದ್ದ ಖಾಸಗಿ ಆಶ್ರಮದಲ್ಲಿ ಅನೇಕ ಅನನುಕೂಲತೆಗಳಿದ್ದರೂ ಸ್ವಾಮೀಜಿ ಕೊಂಚವೂ ಬೇಸರಿಸಲಿಲ್ಲ. ಅಷ್ಟೇ ಅಲ್ಲ ಅಲ್ಲಿನ ಭಕ್ತರಿಗೆ ಹಾಗೇ ದಿವ್ಯತ್ರಯರ ಕೆಲಸ ಮುಂದುವರೆಸುವಂತೆ ಪ್ರೋತ್ಸಾಹಿಸಿದರು.

ಚಾಪ್ರಾದಲ್ಲಿ ಒಂದು ಖಾಸಗಿ ರಾಮಕೃಷ್ಣ ಕೇಂದ್ರ ಆರಂಭವಾಗುವುದಕ್ಕೂ ಸ್ವಾಮಿ ರಂಗನಾಥಾನಂದರು ಕಾರಣರಾದರು. ಚಾಪ್ರಾ ಸ್ವಾಮಿ ಅದ್ಭುತಾನಂದ ಮಹಾರಾಜರ ಜನ್ಮಸ್ಥಳ. ಅಲ್ಲಿದ್ದ ಭಕ್ತರನ್ನು, ಮುಖ್ಯವಾಗಿ ಹಿಂದಿ ಪ್ರೊಫೆಸರ್ ಆಗಿದ್ದ ಡಾ. ಕೇದಾರನಾಥ. ಲಾಭ್ ಅವರನ್ನು ಕಾರ್ಯ ನಡೆಸುವಂತೆ ಪ್ರೋತ್ಸಾಹಿಸಿದರು. ಅದಕ್ಕೂ ಮುಂಚೆ ಸ್ವಾಮಿ ಆತ್ಮಾನಂದರ ಪ್ರೋತ್ಸಾಹದಿಂದ ಚಾಪ್ರಾದಲ್ಲಿ ರಾಮಕೃಷ್ಣ ಅದ್ಭುತಾನಂದ ಆಶ್ರಮಕ್ಕಾಗಿ ಉತ್ತಮವಾದ ಜಾಗವನ್ನು ಖರೀದಿಸಲಾಗಿತ್ತು. ಆದರೆ ಕಟ್ಟಡದ ಕೆಲಸಗಳಿಗೆ ಹಣವಿರಲಿಲ್ಲ. ಸ್ವಾಮಿ ರಂಗನಾಥಾನಂದರು ೭,೦೦,೦೦೦/– ರೂ.ಗಳ ದಾನ ಪಡೆಯುವಲ್ಲಿ ಯಶಸ್ವಿಯಾದರು. ಈ ಹಣದಲ್ಲಿ ದೇವಾಲಯ, ಸಾಧುನಿವಾಸ ಕಚೇರಿ, ಪುಸ್ತಕ ಮಳಿಗೆ ಮೊದಲಾದುವನ್ನೆಲ್ಲ ಒಳಗೊಂಡ ಒಂದು ಸಂಕೀರ್ಣ ಕಟ್ಟಡದ ನಿರ್ಮಾಣವಾಯಿತು. ಸ್ವಾಮಿ ರಂಗನಾಥಾನಂದರು ಕಟ್ಟಡದ ಉದ್ಘಾಟನೆಗೆ ಬಂದರು ಮತ್ತು ಮಂತ್ರದೀಕ್ಷೆಯನ್ನು ಸಹ ನೀಡಿದರು. ಅವರ ಪ್ರಯತ್ನದ ಫಲವಾಗಿಯೇ ರಾಮಕೃಷ್ಣ ಅದ್ಭುತಾನಂದ ಆಶ್ರಮ ಈಗ ರಾಮಕೃಷ್ಣ ಮಿಷನ್ನಿನ ಒಂದು ಭಾಗವೇ ಆಗಿ ರಾಮಕೃಷ್ಣ ಮಿಷನ್ ಆಶ್ರಮ ಎನಿಸಿಕೊಂಡಿದೆ. ಸ್ವಾಮೀಜಿ ದೂರದ ಹೈದರಾಬಾದಿನಿಂದ ಬಂದು ದೇಗುಲವನ್ನು ಉದ್ಘಾಟಿಸಿದರು. ಆಗ ಅವರು 'ಗೃಹಸ್ಥ ಜೀವನದ ಕರ್ತವ್ಯಗಳು' ಎಂಬ ವಿಷಯವಾಗಿ ಹಿಂದಿಯಲ್ಲಿ ಉಪನ್ಯಾಸ ನೀಡಿದರು. ಅದನ್ನು ಆನಂತರದಲ್ಲಿ ಇಂಗ್ಲಿಷ್‌ಗೆ ಅನುವಾದಿಸಲಾಯಿತು. ಎರಡೂ ಅವತರಣಿಕೆಗಳು ಮುದ್ರಿತ ರೂಪದಲ್ಲಿ ಹೊರಬಂದಿವೆ, ಭಕ್ತವರ್ಗದಲ್ಲಿ ಬಹಳ ಜನಪ್ರಿಯವಾಗಿವೆ. ಸ್ವಾಮಿ ರಂಗನಾಥಾನಂದಜಿ ಅವರಿಂದ ಆರ್ಥಿಕ ನೆರವು ಪಡೆದ ಎಷ್ಟೋ ಖಾಸಗಿ ಆಶ್ರಮಗಳಿವೆ.

ಸ್ವಾಮಿ ರಂಗನಾಥಾನಂದಜಿ ಅವರೊಂದಿಗಿನ ನನ್ನ ಸಂಬಂಧ ಅಷ್ಟೇನೂ ನಿಕಟವಾದದ್ದಲ್ಲವಾದರೂ ಅವರಿಗೆ ಜನಸಾಮಾನ್ಯರಲ್ಲಿದ್ದ ಕಳಕಳಿ, ಸಾಮಾಜಿಕ ಸಂಕಟಗಳನ್ನು ದೂರಮಾಡಬೇಕೆನ್ನುವ ಹಂಬಲ, ಯುವಜನಶಕ್ತಿಯ ಜಾಗೃತಿ ಮತ್ತು ದೇಶದ ಸರ್ವಾಂಗೀಣ ಬೆಳವಣಿಗೆಯಲ್ಲಿ ಆಸಕ್ತಿ – ಈ ಎಲ್ಲ ಅಂಶಗಳು ನನ್ನ ಹೃದಯಕ್ಕೆ ಪ್ರಿಯವಾದವು, ತಟ್ಟಿದವು. ಅವರು ನನ್ನೊಂದಿಗೆ ಆಧ್ಯಾತ್ಮ ಅಥವಾ ತತ್ಸಂಬಂಧಿ ವಿಚಾರವನ್ನಾಗಲೀ ಮಾತನಾಡುತ್ತಿರಲಿಲ್ಲ, ಅವರನ್ನು ಬೇಲೂರು ಮಠದಲ್ಲಿ ಭೇಟಿಯಾದಾಗಲೆಲ್ಲ ಅವರು ತುಳಿತಕ್ಕೊಳಗಾದವರನ್ನು ಮೇಲೆತ್ತುವ ಬಗಗೇ ಮಾತನಾಡುತ್ತಿದ್ದರ ಸ್ವಾಮಿ ರಂಗನಾಥಾನಂದರ ಸರಳ ನಿಸ್ಪೃಹ ಜೀವನ ನನಗೆ ಯಾವಾಗಲೂ ಸ್ಫೂರ್ತಿಯ ಸೆಲೆ.

* * * *

# ೧೨. ಮಹಾತ್ಮ

–ಸ್ವಾಮಿ ಗೋಲೋಕಾನಂದ*

ಸ್ವಾಮಿ ರಂಗನಾಥಾನಂದಜಿ ಅವರೊಂದಿಗಿನ ನನ್ನ ಒಡನಾಟ ಕಾಲ ಸುಮಾರು ಅರ್ಧ ಶತಮಾನದಷ್ಟು. ನಾನು ಮೈಲಾಪುರ ರಾಮಕೃಷ್ಣ ಮಿಷನ್ ಸೇರಿದ ಕೆಲವೇ ತಿಂಗಳೊಳಗೆ ಅವರು ಶಶಿಮಹಾರಾಜ್ (ಸ್ವಾಮಿ ರಾಮಕೃಷ್ಣಾನಂದರ) ಜಯಂತ್ಯುತ್ಸವಕ್ಕೆಂದು ಅಲ್ಲಿಗೆ ಸ್ವಾಮಿ ರಂಗನಾಥಾನಂದರು ಬಂದಿದ್ದರು. ಹೊಸದಾಗಿ ಸೇರಿದ್ದ ನನ್ನನ್ನು ಮಾತನಾಡಿಸಿದರು. ಅವರ ದನಿಯಲ್ಲಿದ್ದ ಪ್ರೀತಿಯ ಒರತೆ, ಆಧ್ಯಾತ್ಮಿಕ ಸ್ತರದ್ದು ನನ್ನ ಅನುಭವಕ್ಕೆ ಬಂದಿತು. ನಮ್ಮ ದೇಶದ ಅಷ್ಟೇಕೆ ಇಡೀ ಪ್ರಪಂಚದಲ್ಲಿ ಈ ಕಾಲಘಟ್ಟಗಳಲ್ಲಿ ಅವರೊಬ್ಬ ಮಹಾಪುರುಷರು. ಹೀಗೆನ್ನುವುದು ಯಾವ ಉತ್ಪ್ರೇಕ್ಷೆಯೂ ಅಲ್ಲ. ಅವರು ನಿಸ್ಸಂದೇಹವಾಗಿ, ಪದದ ನಿಜಾರ್ಥದಲ್ಲಿ ಮಹಾತ್ಮರೇ ಸರಿ.

ನಾನು ಸಂನ್ಯಾಸ ಸ್ವೀಕರಿಸಿದ ಬಳಿಕ ಕಲ್ಕತ್ತದಲ್ಲಿದ್ದ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್ ನೋಡಲೆಂದು ಹೋಗಿದ್ದೆ. ಆಗ ಅಲ್ಲಿ ಕಾರ್ಯದರ್ಶಿಗಳಾಗಿ ಇದ್ದುದು ಸ್ವಾಮಿ ರಂಗನಾಥಾನಂದರು. ಆ ಇಡೀ ಸಂಜೆಯನ್ನು ಅವರು ನನ್ನೊಂದಿಗೆ ಕಳೆದರು. ಪ್ರಾರ್ಥನೆಯ ಸಮಯದಲ್ಲಿ ಅವರು ನಮ್ಮೊಂದಿಗೆ ಕುಳಿತು ಕೆಲವು ಭಕ್ತಿಗೀತೆಗಳನ್ನು ಹಾಡಿದರು. ಅದರಲ್ಲಿ ಕೆಲವು ಮಲಯಾಳಂ ಭಾಷೆಯ ಗೀತೆಗಳೂ ಇದ್ದವು ಅವರ ಧ್ವನಿ ದೃಢವಾಗಿತ್ತು. ನನಗೆ ಹಾಡಲು ಸೂಚಿಸಿದರು. ನನ್ನ ಧ್ವನಿ ನಡುಗಲಾರಂಭಿಸಿತು, ನಾನು ಸ್ವರ, ತಾಳ ತಪ್ಪಿದಾಗ ಅವರು ಸರಿಪಡಿಸಿದರು. ಮರುದಿನ ಅವರೇ ನನ್ನನ್ನು ಬೇಲೂರು ಮಠಕ್ಕೆ ಕರದೊಯ್ದರು. ಅವರೆಂತಹ ಮಹಾತ್ಮರು, ನಾನಾದರೂ ಕೆಲಸಕ್ಕೆ, ಲಕ್ಕಕ್ಕೆ ಸಿಗದ ಯುವ ಸಂನ್ಯಾಸಿ! ಆದರೆ ಅವರು ಅದೆಷ್ಟು ಕಾಳಜಿ ವಹಿಸಿದರು!

ಸ್ವಾಮಿ ರಂಗನಾಥಾನಂದರಿಗೆ ಆಟೋಟಗಳಲ್ಲಿ ಆಸಕ್ತಿ ಎಂದು ತಿಳಿದಿತ್ತು  ಅದರಲ್ಲೂ ವಾಲಿಬಾಲ್ ಅವರಿಗಿಷ್ಟ. ಅವರು ಒಮ್ಮೆ ಮದರಾಸಿನ ಮಠಕ್ಕೆ ಬಂದಿದ್ದರು. ಆಗ ನಾನಿನ್ನೂ ಬ್ರಹ್ಮಚಾರಿ. ಯುವಜನರೆಲ್ಲ ಸೇರಿ ವಾಲಿಬಾಲ್ ಆಡುತ್ತಿದ್ದೆವು. ಸ್ವಾಮಿ ಕೈಲಾಸಾನಂದ ಮಹಾರಾಜರು ಆಡಲು ಅನುಮತಿ ನೀಡಿದ್ದರು. ಏಕೆಂದರೆ ಶಾಲೆ ಕಾಲೇಜು ಬಿಟ್ಟು ಓಡಿ ಬಂದವರಿಗೆ ವಾಲಿಬಾಲ್ ಆಸಕ್ತಿ ಎಂದು ಅರಿತಿದ್ದರು. ಸ್ವಾಮಿ ರಂಗನಾಥಾನಂದರು ಆಟದಲ್ಲಿ ನಮ್ಮೊಂದಿಗೆ ಸೇರಿಕೊಳ್ಳುತ್ತಿದ್ದರು. ಯೋಗಿವರ್ಯರ ಶ್ರೇಣಿಗೆ ಸೇರುವ ಸಂತನ ಯುವೋತ್ಸಾಹ ಈ ಬಗೆಯದು.

ಭಗವಾನ್ ಬುದ್ಧನ ೨೫೦೦ನೇ ಜಯಂತಿಗಾಗಿ ಕೊಲಂಬೊಗೆ ಸ್ವಾಮೀಜಿ ತೆರಳಿದ್ದರು. ಶ್ರೀಲಂಕಾ ಸರ್ಕಾರದ ಆಹ್ವಾನದ ಮೇರೆಗೆ ಅವರಲ್ಲಿಗೆ ಹೋಗಿದ್ದರು. ಹಿಂದಿರುಗುವಾಗ ಮದ್ರಾಸಿಗೆ ೨–೩ ದಿನ ಬಂದಿದ್ದರು. ಆ ಸಂದರ್ಭದಲ್ಲಿ ಅನೇಕ ಉಪನ್ಯಾಸಗಳನ್ನು ನೀಡಿದರು. ಸಹಜವಾಗಿ ಅವರು ಸುಸ್ತಾಗಿದ್ದರು. ಅವರು ಆಗ ತಮಾಷೆಗಾಗಿ ಹೇಳಿದರು. "ನಾವು ಪ್ರಾಣಿಗಳನ್ನು ಶೋಷಿಸುವುದರ ಬಗ್ಗೆ ಮಾತನಾಡುತ್ತೇವೆ. ಆದರೆ ಹೀಗೆ ಮನುಷ್ಯನನ್ನು ದಿನವೊಂದಕ್ಕೆ ಹಲವಾರು ಬಾರಿ ಮಾತನಾಡಲು ಕರೆಯುವುದು ಮಾನವಶೋಷಣೆಯಲ್ಲವೆ?" ನನಗೆ ಆಗ ಒಂದು ಅದ್ಭುತ ಯೋಚನೆ ಹೊಳೆಯಿತು– ಸ್ವಾಮಿಗಳ ಮತ್ತು ಬ್ರಹ್ಮಚಾರಿಗಳ ನಡುವೆ ಒಂದು ವಾಲಿಬಾಲ್ ಪಂದ್ಯ ನಡೆಸುವುದು. ನನ್ನ ಮನಸ್ಸಿನಲ್ಲಿ ಹುಡುಗಾಟಿಕೆಯ

---

* ಕೇರಳದ ಕೋಟಿಕೋಡ್‌ನ ರಾಮಕೃಷ್ಣ ಮಿಷನ್ ಸೇವಾಶ್ರಮದ ಒಬ್ಬ ಹಿರಿಯ ಸಾಧು.

ಆಸೆಯೊಂದು ಚಿಗುರಿತು, ಏಕೆಂದರೆ ಸ್ವಾಮಿಗಳಾದ ಸ್ವಾಮಿ ರಂಗನಾಥಾನಂದ, ದಾಮೋದರ್ ಮಹಾರಾಜ್ ಮೊದಲಾದವರನ್ನು ಸೋಲಿಸುವುದು! ಆದರೆ ಈ ಪಂದಕ್ಕೆ ದಿನಾಂಕ, ಸಮಯ ಹೊಂದಿಸುವುದು ಬಹಳ ಕಷ್ಟವಾಯಿತು. ಕೊನೆಗೆ ರಂಗನಾಥಾನಂದರು ಆಶ್ರಮದಲ್ಲಿ ಉಪನ್ಯಾಸ ನೀಡುವ ದಿನದಂದು ಪಂದ್ಯ ಆಡುವುದೆಂದು ನಿರ್ಧಾರವಾಯಿತು. ಉಪನ್ಯಾಸ ಸಂಜೆ ೫.೩೦ಕ್ಕೆ ನಿಗದಿಯಾಗಿತ್ತು. ಪಂದ್ಯ ಆರಂಭವಾಗುವುದು ೪:೧೫ಕ್ಕೆ ಎಂದು ತೀರ್ಮಾನವಾಗಿತ್ತು. ನಾನು ಎರಡು ಪಂದ್ಯಗಳನ್ನು ನಾವೇ ಗೆದ್ದು ಆಟವನ್ನು ನಮ್ಮದಾಗಿಸಿಕೊಳ್ಳುವುದು ಎಂದು ಭಾವಿಸಿದ್ದೆ. ಆದರೆ ಅಲ್ಲಿ ನಡೆದದ್ದೇ ಬೇರೆ. ದಾಮೋದರ ಮಹಾರಾಜ್ ಕೆಣಕಿದಾಗ ಹುಲಿಯಂತೆ ವ್ಯಾಘ್ರನಂತೆ ಜಿಗಿಯುತ್ತ ಚೆಂಡನ್ನು  ಯಾವ ರೀತಿಯಿಂದ ನಮ್ಮ ಅಂಗಣಕ್ಕೆ ಬಾರಿಸುತ್ತಿದ್ದರೆಂದರೆ ನಾವು ಅದನ್ನು ಮುಟ್ಟಲಾಗುತ್ತಿರಲಿಲ್ಲ; ಮತ್ತೊಂದೆಡೆಯಲ್ಲಿ ಸ್ವಾಮಿ ರಂಗನಾಥಾನಂದರು ಬಹಳ ಬುದ್ಧಿವಂತಿಕೆಯಿಂದ ಚೆಂಡು ನಮ್ಮ ತಲೆಯ ಹಿಂದೆ ಬೀಳುವಂತೆ ಬಡಿಯುತ್ತಿದ್ದರು, ಆಗಲೂ ನಾವೇನೂ ಮಾಡಲಾಗುತ್ತಿರಲಿಲ್ಲ. ಸ್ವಾಮಿಗಳ ತಂಡ ಎರಡೂ ಪಂದ್ಯವನ್ನು ಗೆದ್ದು  ಆಟವನ್ನು ತನ್ನದಾಗಿಸಿಕೊಂಡಿತು!

ಐದು ಘಂಟೆಯ ವೇಳೆಗಾಗಲೇ ಬಹಳ ಮಂದಿ ಭಕ್ತರು ಅವರ ಭಾಷಣ ಕೇಳಲು ಮಠದ ಮುಖ್ಯ ಅಂಗಳದಲ್ಲಿ ಸೇರಿದ್ದರು. ವಿವೇಕಾನಂದ ಕಾಲೇಜಿನ ಕೆಲವು ಪ್ರೊಫೆಸರ್‌ಗಳು ಸಹಿತ ಬಂದಿದ್ದರು. ಅವರು ಸ್ವಾಮೀಜಿ ಅವರೊಂದಿಗೆ ಕೆಲವು ಚರ್ಚೆ ನಡೆಸಬೇಕೆಂದಿದ್ದರು. ಆದರೆ ಅವರಿಗೆ ಸ್ವಾಮೀಜಿ ವಾಲಿಬಾಲ್ ಆಡುತ್ತಿದ್ದಾರೆ ಎಂದು ಗೊತ್ತಾದಾಗ ಕೆಲವರು ಮೂಗು ಮುರಿದರು, “ಏನಿದು! ಇಲ್ಲಿ ಇಷ್ಟೊಂದು ಜನ ಅವರ ಭಾಷಣ ಕೇಳಲು ಕಾಯುತ್ತಿದ್ದಾರೆ. ಅವರು ವಾಲಿಬಾಲ್ ಆಡುತ್ತಿದ್ದಾರೆ!”

ಆದರೆ ರಂಗನಾಥಾನಂದರು ಶಾಂತವಾಗಿದ್ದರು. ದೇವಪ್ರಜ್ಞೆಯಲ್ಲಿ ಆಧ್ಯಾತ್ಮಿಕ ಜ್ಞಾನದಲ್ಲಿ ನೆಲೆನಿಂತ ಸ್ಥಿತಪ್ರಜ್ಞರು ಅವರು. ಆಟ ಮುಗಿದ ಕೂಡಲೆ ಅವರು ಬಿಲ್ಲಿನಿಂದ ಬಿಟ್ಟ ಬಾಣದಂತೆ ನೇರವಾಗಿ ತಮ್ಮ ಕೋಣೆಗೆ ಬಂದು ಫ್ಯಾನ್ ಚಲಾಯಿಸಿ ಅದರಡಿಯಲ್ಲಿ ವಿಗ್ರಹದೋಪಾದಿಯಲ್ಲಿ ಹತ್ತು ನಿಮಿಷ ಕುಳಿತರು. ಹೀಗೆ ದಣಿವಾರಿಸಿಕೊಂಡು ಬಳಿಕ ಸ್ನಾನದ ಮನೆಗೆ ಹೋಗಿ ಲಗುಬಗೆಯಿಂದ ಸ್ನಾನ ಮುಗಿಸಿ ತಯಾರಾಗಿ ಸರಿಯಾಗಿ ೫.೩೦ಕ್ಕೆ ಸಭಾಂಗಣದಲ್ಲಿದ್ದರು. ಅವರನ್ನು ಸ್ವಾಗತ–ಪರಿಚಯ ಮಾಡಿಕೊಡುವ ವ್ಯಕ್ತಿ ತನ್ನ ಭಾಷಣವನ್ನು ಕೊಂಚ ದೀರ್ಘಗೊಳಿಸಿದ್ದರಿಂದ ಅವರಿಗೆ ವೇದಿಕೆಯಲ್ಲಿ ಮತ್ತೆ ಹತ್ತು ನಿಮಿಷ ವಿಶ್ರಾಂತಿ ದೊರೆಯಿತು. ಅವನ ಮಾತು ಮುಗಿಯುತ್ತಿದ್ದಂತೆ ರಂಗನಾಥಾನಂದಜಿ ತಮ್ಮ ಕಂಚುಕಂಠದಲ್ಲಿ ಭಾಷಣ ಆರಂಭಿಸಿದರು.

ಈ ಹಿಂದೆ ಕೆಲವು ಸ್ವಾಮಿಗಳು ನನ್ನನ್ನು ಬೈದಿದ್ದರು. “ಏನಿದು? ನೀನು ಸ್ವಾಮಿಗಳಿಗೆ ಭಾಷಣ ಕಡೆಗಣಿಸಿ ವಾಲಿಬಾಲ್ ಆಡುವಂತೆ ಮಾಡುತ್ತಿಯಾ? ನೀನು ಭಾಷಣ ಹಾಳುಮಾಡಿಬಿಡುತ್ತೀಯೆ!” ಆದರೆ ಹಾಗಾಗಲಿಲ್ಲ! ಅವರು ಅಂದು ಭಾಷಣ ನೀಡಿದರೆಂದರೆ ಯಾವ ಕಾಲೇಜು ಪ್ರೊಫೆಸರನೂ ತನ್ನ ಕನಸಿನಲ್ಲೂ ನೀಡಲಾಗದಂತಹ ಸತ್ವ ಸಂಪನ್ನ ಭಾಷಣ ಅದು.

ಸ್ವಾಮಿ ರಂಗನಾಥಾನಂದರು ಒಂದೆಡೆ ಹೇಳುತ್ತಾರೆ, “ನೀನು ಈ ಕ್ಷಣ ಆಳವಾದ ಧ್ಯಾನಕ್ಕೆ ತೊಡಗಲು ಸಿದ್ಧನಿರಬೇಕು, ಮಠದ ವಿಶಾಲ  ಜಾಗೆಯತ್ತ ಕೈ ತೋರಿ ಮರುಕ್ಷಣ ಹೊಲಕ್ಕೆ ಹೋಗಿ ಬೇಸಾಯ ಮಾಡಲು ತಯಾರಿರಬೇಕು. ಅತ್ಯಂತ ಸೂಕ್ಷ್ಮವಾಗಿ ಶಾಸ್ತ್ರವ್ಯಾಖ್ಯಾನ ಮಾಡಲು ಒಂದು ಕ್ಷಣದಲ್ಲಿ ಸಿದ್ಧರಿರಬೇಕು. ಹಾಗೆಯೇ ಮರುಕ್ಷಣದಲ್ಲಿ ಹೊಲದ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಮಾರಿಬರಲು ತಯಾರಾಗಿರಬೇಕು...” ಸ್ವಾಮಿ ರಂಗನಾಥಾನಂದರು ಅಂತಹ ಸಂನ್ಯಾಸಿ ಮತ್ತು ತಮ್ಮ ಶಿಷ್ಯರೂ ಹೀಗೆಯೆ ಬಹುಮುಖ ವ್ಯಕ್ತಿತ್ವ ಹೊಂದಿರಬೇಕು ಎಂದು ಬಯಸಿದ್ದರು.

ಸ್ವಾಮಿ ರಂಗನಾಥಾನಂದರು ಎಲ್ಲೇ ಭಾಷಣ ಮಾಡುವಿದಿದ್ದರೂ, ಭಾಷಣಕ್ಕೆ ಮುನ್ನ ಒಂದು ಕ್ಷಣ ತಮ್ಮ ಮನಸ್ಸನ್ನು ಎಲ್ಲದರಿಂದ ಹಿಂದಕ್ಕೆ ಸೆಳೆದುಕೊಂಡು ಭಗವತ್ಪ್ರಜ್ಞೆಯಲ್ಲಿ ಲೀನಗೊಳಿಸುತ್ತಿದ್ದರು. ಇದರಿಂದ ಇಡೀ ವಾತಾವರಣದಲ್ಲಿ ಒಂದು ಬಗೆಯ ಶಾಂತಗಂಭೀರತೆ ನೆಲೆಸಿರುತ್ತಿತ್ತು. ಮತ್ತು ಕೇಳುಗರ ಮನಸ್ಸು ಕೂಡ ಒಂದು ರೀತಿಯ ಧ್ಯಾನದ ಸೆಳೆತಕ್ಕೆ ಒಳಗಾದಂತೆ ಭಾಸವಾಗುತ್ತಿತ್ತು. ಈ ನಿಟ್ಟಿನಲ್ಲಿ ಅವರು ಸ್ವಾಮಿ ವಿವೇಕಾನಂದರ ಶಿಷ್ಯರೇ ಸರಿ. ಅವರು ನಮಗೆ ಹೇಳುತ್ತಿದ್ದರು, "ನಿಮ್ಮ ಬುದ್ಧಿಶಕ್ತಿ ಜೀವಂತ ಸ್ಪಂದನದಂತಿರಬೇಕು. ಮೆದುಮೆದುವಾದ ಭಕ್ತಿ ಸಾಲದು. ಅದು ಬೇಡ. ನಿಮ್ಮ ಜೀವನ, ಜೀವನಕ್ರಿಯೆಗಳೆಲ್ಲವನ್ನು ವ್ಯಾಪಿಸುವ ಸ್ಪಂದನಾಶೀಲ ಬುದ್ಧಿಶಕ್ತಿ ಇರಬೇಕು."

ಅವರೊಂದಿಗೆ ಮಾತನಾಡುವುದೇ ಸಂತಸ. ಏಕೆಂದರೆ ಅವರಲ್ಲಿ ಒಳ್ಳೆಯ ಆಲೋಚನೆಗಳು ಸದಾ ಇದ್ದವು. ಒಮ್ಮೆ ಅವರನ್ನು ಶ್ರೀ ರಾಮಕೃಷ್ಣರ ನೇರ ಶಿಷ್ಯರನ್ನು ಕುರಿತು ಮಾತನಾಡುವಂತೆ ಕೋರಿಕೊಂಡೆವು. ಏಕೆಂದರೆ ಅವರಲ್ಲಿ ಹಲವರ ನೇರ ಸಂಪರ್ಕ ಇವರಿಗೆ ಆಗಿತ್ತು. ತಮ್ಮ ಗುರುಗಳಾದ ಮಹಾಪುರುಷ ಮಹಾರಾಜರನ್ನು ನೆನಪಿಸಿಕೊಂಡರೆ ಸಾಕು ತಾವು ತುರೀಯ ಅವಸ್ಥೆ ತಲುಪುತ್ತೇವೆ ಎಂದು ಅವರು ತಿಳಿಸಿದರು. ಸ್ವಾಮಿ ಅಖಂಡಾನಂದರೊಂದಿಗೂ ರಂಗನಾಥಾನಂದರಿಗೆ ನಿಕಟ ಸಂಪರ್ಕವಿತ್ತು.

ರಂಗನಾಥಾನಂದರು ದೆಹಲಿಯಲ್ಲಿದ್ದಾಗ ಕಿರೀಟರಹಿತ ರಾಜಕುಮಾರನೇ ಸರಿ. ಏಕೆಂದರೆ ಪ್ರತಿಷ್ಠಿತ ಐ.ಎ.ಎಸ್ ಅಧಿಕಾರಿಗಳ ದಂಡೇ ಅವರ ಉಪನ್ಯಾಸಗಳನ್ನು ಕೇಳಲು ಬರುತ್ತಿತ್ತು. ಆಗ ಅಲ್ಲಿನ ಮಿಷನ್ ಆಶ್ರಮದಲ್ಲಿ ಸಭಾಭವನವೂ ಇರಲಿಲ್ಲ. ಎಲ್ಲರೂ ಬಂದು ಹುಲ್ಲುಹಾಸಿನ ಮೇಲೆ ಕುಳಿತು ಸ್ವಾಮೀಜಿಯವರ ಉಪನ್ಯಾಸ ಕೇಳುತ್ತಿದ್ದರು. ಸ್ವಾತಂತ್ರ್ಯಾನಂತರದ ಆರಂಭದ ಆ ವರ್ಷಗಳಲ್ಲಿ ಭಗವದ್ಗೀತೆ ಮತ್ತು ಉಪನಿಷತ್ತುಗಳ ಬಲವಾದ ಸಂದೇಶವನ್ನು ಸ್ವಾಮೀಜಿ ಜನರಿಗೆ ಉಣಬಡಿಸುತ್ತಿದ್ದರು. ಸ್ವಾಮಿ ರಂಗನಾಥಾನಂದರ ಶಿಷ್ಯರಾದ ಪೋಸ್ಟ್ ಮಾಸ್ಟರ್ ಜನರಲ್ ಒಬ್ಬರು ತಾವು ಹಿಂದೆ ಭಾನುವಾರಗಳಂದು ಸಿನಿಮಾಕ್ಕೆ ಹೋಗುತ್ತಿದ್ದೆವೆಂದು ನನಗೆ ಹೇಳಿದರು. "ಆದರೆ ಒಮ್ಮೆ ಅವರ ತರಗತಿಗಳು (ಉಪನ್ಯಾಸಗಳು) ಆರಂಭವಾದ ಮೇಲೆ ಅಲ್ಲಿಗೆ ತಪ್ಪದೆ ಬರಲಾರಂಭಿಸಿದೆವು. ಅವರು ಹೇಳುತ್ತಿದುದೆಲ್ಲ ನಮಗೆ ಅರ್ಥವಾಗುತ್ತಿತ್ತು ಎಂದೇನಲ್ಲ. ಆದರೆ ಅವರ ವಾಣಿಯನ್ನು ಕೇಳುವುದೇ ಒಂದು ಪ್ರಸಾದ. ನಾವು ಹುಲ್ಲುಹಾಸಿನ ಮೇಲೆ ಕುಳಿತು ಕಣ್ಮುಚ್ಚಿ ಅವರ ಉಪನ್ಯಾಸವನ್ನು ಕೇಳಿ ಆನಂದಿಸುತ್ತಿದ್ದೆವು." ಈ ರೀತಿಯಾಗಿ ಅವರು ಬುದ್ಧಿಶಾಲಿವರ್ಗದ ಮೇಲೆ ಪ್ರಭಾವ ಬೀರಿದ್ದರು. ಗೀತೆಯ ಸಂದೇಶವನ್ನು ಪ್ರಭಾವಶಾಲಿಯಾಗಿ ಪ್ರಸಾರ ಮಾಡಿದವರಲ್ಲಿ ರಂಗನಾಥನಂದರೂ ಒಬ್ಬರು. ಚಿನ್ಮಯ ಮಿಷನ್ನಿನ ಸ್ವಾಮಿ ಚಿನ್ಮಯಾನಂದರು ಕೂಡ ರಂಗನಾಥಾನಂದರ ಗೀತಾ ಉಪನ್ಯಾಸವನ್ನು ಆಲಿಸುತ್ತಿದ್ದವರಲ್ಲಿ ಒಬ್ಬರು. ಮುಂದೆ ಸ್ವಾಮಿ ಚಿನ್ಮಯಾನಂದರು ತಾವೇ ಗೀತಾ ಉಪನ್ಯಾಸ ಮಾಲೆ ಆರಂಭಿಸಲು ಇಚ್ಛಿಸಿದಾಗ ಸ್ವಾಮಿ ರಂಗನಾಥಾನಂದರೇ ಅದನ್ನು ಉದ್ಘಾಟಿಸಿದರು.

ಒಮ್ಮೆ ಅವರು ನನಗೊಂದು ವಿಶೇಷ ಸಲಹೆ ನೀಡಿದರು. ಅವರೆಂದರು, "ಗೋಪಾಲ, ನೀನು ಒಬ್ಬ ಒಳ್ಳೆಯ ಹುಡುಗನಾಗಿದ್ದರಷ್ಟೆ ಸಾಲದು. ನೀನು ಸಾಮರ್ಥ್ಯಶೀಲನೂ ಆಗಿರಬೇಕು."

* * * *

# ೧೩. ಕೆಲವು ನೆನಪುಗಳು

**–ಸ್ವಾಮಿ ಅನನ್ಯಾನಂದ***

೧೯೩೬ರ ಜೂನ್ ತಿಂಗಳಿನಲ್ಲಿ ನನ್ನ ಮಿತ್ರರೊಬ್ಬರು ನನ್ನನ್ನು ಬೆಂಗಳೂರಿನ ಆಶ್ರಮಕ್ಕೆ ಕರೆದೊಯ್ದರು. ನಾನು ಸ್ವಾಮಿ ರಂಗನಾಥಾನಂದರನ್ನು ಆಗ ಪ್ರಥಮ ಬಾರಿಗೆ ಭೇಟಿಯಾದೆ. ಆಗ ಅವರು ಹಾಸಿಗೆಯ ಮೇಲೆ ಒರಗಿಕೊಂಡಿದ್ದರು. ನನ್ನ ಮಿತ್ರ ಔಪಚಾರಿಕವಾಗಿ ನನ್ನನ್ನು ಪರಿಚಯಿಸಿದ. ಸಾಧುಗಳಿಗೆ ಪಾದಮುಟ್ಟಿ ನಮಸ್ಕರಿಸಬೇಕೆಂಬ ಶಿಷ್ಟಾಚಾರ ನನಗಿನ್ನೂ ಗೊತ್ತಿರಲಿಲ್ಲ. ನಾನಾ ಎರಡೂ ಕೈ ಜೋಡಿಸಿ 'ನಮಸ್ತೆ ಸ್ವಾಮೀಜಿ' ಎಂದೆ. ನನ್ನ ಮಿತ್ರ ಹೊರಟುಹೋದ. ಸ್ವಾಮೀಜಿ ಇನ್ನೂ ಹಾಸಿಗೆಯ ಮೇಲೆಯೇ ಇದ್ದರು. ಅಷ್ಟೇ ಅಲ್ಲದೆ ನನ್ನನ್ನೂ ಹಾಸಿಗೆಯ ಮೇಲೆ ಕುಳಿತುಕೊಳ್ಳುವಂತೆ ಹೇಳಿದರು. ನಾನು ಹಿಂಜರಿದೆ. ಏನು ಮಾಡಬೇಕೆಂದು ಅರಿಯದಾದೆ, ಅದು ನನ್ನ ಪ್ರಥಮ ಭೇಟಿ. ಅವರ ಹಾಸಿಗೆಯ ಮೇಲೆ ಕೂರುವುದು ಹೇಗೆಂದು ಚಿಂತಿಸಿದೆ. ಆದರೆ ಅವರು, "ಬಾ, ಬಾ, ಇಲ್ಲೇ ಕುಳಿತುಕೊ ಬಾ" ಎಂದರು. ಈಗ ವಿಧಿಯಿಲ್ಲದೆ ಕುಳಿತೆ. ಬಳಿಕ ಅವರು ನನ್ನ ಮನೆತನ, ಹಿನ್ನಲೆ ಎಲ್ಲವನ್ನೂ ವಿಚಾರಿಸಿಕೊಂಡರು. ಆ ದಿನ ಅವರೊಂದಿಗೆ ಸುಮಾರು ಅರ್ಧ ಗಂಟೆ ಕಳೆದೆ.

ನಾನಾಗ ಬಹಳ ಸಣ್ಣಗೆ ಕೃಶನಾಗಿದ್ದೆ. ಆದುದರಿಂದ ಅವರು ನನಗೆ ಹೇಳಿದರು, "ನೀನು ಆರೋಗ್ಯವನ್ನು ವೃದ್ಧಿಸಿಕೊಳ್ಳಬೇಕು." ಈಜು ಕಲಿಯುವಂತೆ, ಕೊಂಚ ವ್ಯಾಯಮ ಮಾಡುವಂತೆ ಅವರು ನನಗೆ ಸೂಚಿಸಿದರು. ಸ್ವತಃ ಅವರು ಉತ್ತಮ ಈಜುಗಾರರು. ಈ ಸಂಭಾಷಣೆಗಳೆಲ್ಲ ಮುಗಿಯುವ ವೇಳೆಗೆ ನಾವು ಬಹಳ ಆತ್ಮೀಯರಾಗಿಬಿಟ್ಟೆವು. ನಾನಿನ್ನೂ ಆಗ ೧೭ ವಯಸ್ಸಿನ ವಿದ್ಯಾರ್ಥಿ.

೧೯೩೬ರ ಶ್ರೀರಾಮಕೃಷ್ಣ ಜಯಂತಿ ಶತಮಾನೋತ್ಸವಕ್ಕೆ ಮುನ್ನ ನಮ್ಮ ಯುವಕರ ತಂಡವನ್ನು ಕರೆದು ಸ್ವಾಮೀಜಿ ನಾವು ಸ್ವಯಂಸೇವಕರಾಗಿ ಪಾದರಕ್ಷೆ, ಸೈಕಲ್‌ಗಳನ್ನು ನೋಡಿಕೊಳ್ಳಬೇಕು, ಭಕ್ತಾದಿಗಳಿಗೆ ಟೋಕನ್ ವಿತರಿಸಬೇಕು ಮೊದಲಾದ ಕಾರ್ಯ ಮಾಡಬೇಕು ಎಂದು ಸೂಚಿಸಿದರು. ಈ ಎಲ್ಲ ಕೆಲಸಗಳ ಮೂಲಕ ನಾವು ಮತ್ತಷ್ಟು ಹತ್ತಿರವಾದೆವು. ೧೯೩೭ರಲ್ಲಿ ರಂಗನಾಥಾನಂದರ ಮಾರ್ಗದರ್ಶಕರಾದ ಸ್ವಾಮಿ ಸಿದ್ಧೇಶ್ವರಾನಂದರು ಪ್ಯಾರಿಸ್ಸಿಗೆ ಹೊರಟರು. ನಾವೆಲ್ಲ ಅವರನ್ನು ಬೀಳ್ಕೊಟ್ಟು ಬಂದೆವು. ಈ ಮಧ್ಯದಲ್ಲಿ ನನ್ನ ಮೆಟ್ರಿಕ್ಯುಲೇಷನ್ ಪರೀಕ್ಷೆ ಪಾಸಾಯಿತು.

ಒಂದೆರೆಡು ವರ್ಷದಲ್ಲಿ ಸ್ವಾಮಿ ರಂಗನಾಥಾನಂದರ ಒಡನಾಟದಿಂದ ನನ್ನ ಮನದಲ್ಲಿ ಪರಿವರ್ತನೆಗಳಾಗತೊಡಗಿದವು. ಸ್ವಾಮಿ ರಂಗನಾಥಾನಂದರು, "ನೀನು ಉಪನಿಷತ್ತುಗಳನ್ನು ಓದಬೇಕು. ಮತ್ತು ಸ್ವಾಮಿ ವಿವೇಕಾನಂದರನ್ನು ಅಧ್ಯಯನ ಮಾಡಬೇಕು" ಎಂದರು. ನಾನು ಉಪನಿಷತ್ತುಗಳನ್ನು ಓದತೊಡಗಿದೆ. ಮುಖ್ಯವಾಗಿ ಈಶ ಉಪನಿಷತ್ತು ಮತ್ತು ಸ್ವಾಮಿ ವಿವೇಕಾನಂದರ ಕೃತಿಗಳನ್ನು ಮಹಾಸಂಘಕ್ಕೆ ಸೇರುವ ಮುನ್ನವೇ ಓದಿದ್ದೆ.

ಆ ದಿನಗಳಲ್ಲಿ ಅವರು ನಿಯತವಾಗಿ ನಮಗೆ ತರಗತಿಗಳನ್ನು ನಡೆಸುತ್ತಿದ್ದರು. ಜೊತೆಗೆ ಕಬಡ್ಡಿ, ವಾಲಿಬಾಲ್ ಆಟಗಳಲ್ಲಿ ನಮ್ಮೊಡನಿರುತ್ತಿದ್ದರು. ಈ ಪರಿಪಾಠ ಹೈದರಾಬಾದಿನಲ್ಲೂ ಮುಂದುವರಿಯಿತು. ಸ್ವಾಮಿ

---

* ಬೇಲೂರು ಮಠದ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಹಿರಿಯ ಸಾಧುಗಳು.

ರಂಗನಾಥಾನಂದರು ಉತ್ತಮ ಸ್ಕ್ವಾಶರ್. ಅವರೆನ್ನುತ್ತಿದ್ದರು, "ಗೋವಿಂದ ಚೆಂಡನ್ನು ಪಾಸ್ ಮಾಡುತ್ತಾನೆ ನಾನದನ್ನು ಸ್ಮ್ಯಾಶ್ ಮಾಡುತ್ತೇನೆ."

೧೯೩೮ರಲ್ಲಿ ನಾನು ಮಹಾಸಂಘ ಸೇರುವುದೆಂದು ನಿರ್ಧರಿಸಿದೆ. ಅದರ ಮುನ್ನ ವರ್ಷ ಅಂದರೆ ೧೯೩೭ರಲ್ಲಿ ಅವರು ನಮ್ಮಲ್ಲಿ ಐದಾರು ಜನರನ್ನು (ಇವರೆಲ್ಲ ಮುಂದೆ ಬ್ರಹ್ಮಚಾರಿಗಳಾಗಿ ಮಹಾಸಂಘ ಸೇರಿದರು) ದುರ್ಗಾಪೂಜೆ ವೀಕ್ಷಿಸಲು ಮದ್ರಾಸು ಮಠಕ್ಕೆ ಕಳಿಸಿದರು. ಅವರೂ ಅಲ್ಲಿಗೆ ಬಂದರು. ಆ ಸಮಯದಲ್ಲಿ ಮದ್ರಾಸ್ ಮಠದ ಜವಾಬ್ದಾರಿ ಹೊತ್ತಿದ್ದ ಸ್ವಾಮಿಗಳು ತುರ್ತು ಕಾರ್ಯಭಾರದ ಮೇಲೆ ರಂಗೂನಿಗೆ ಹೊರಟರು. ಹೋಗುವ ಮುನ್ನ ಅವರು ರಂಗನಾಥಾನಂದರನ್ನು ಕುರಿತು, "ನೀವು ಇಲ್ಲಿ ೩–೪ ತಿಂಗಳು ಉಳಿಯಿರಿ. ಆ ಬಳಿಕ ಹೊರಡುವಿರಂತೆ" ಎಂದರು. ಸ್ವಾಮೀಜಿ ಅಲ್ಲಿ ಉಳಿದರು. ಈ ಅವಧಿಯಲ್ಲಿ ನಾವು ಮತ್ತಷ್ಟು ಹತ್ತಿರವಾದೆವು.

ಆ ದಿನಗಳಲ್ಲಿ, ನನಗೆ ನೆನಪಿರುವಂತೆ 'ವೇದಾಂತ ಕೇಸರಿ' ಪತ್ರಿಕೆಯ ವಾರ್ಷಿಕ ಚಂದಾ ಮೂರು ರೂಪಾಯಿ. ರಂಗನಾಥಾನಂದರು ಮನೆಯಿಂದ ಮನೆಗೆ ಹೋಗಿ ಚಂದಾ ಸಂಗ್ರಹಿಸುತ್ತಿದ್ದರು. ಪುಣೆಯ ಒಬ್ಬ ವ್ಯಕ್ತಿ ಸ್ವಾಮೀಜಿಗೆ, "ನೀವೇಕೆ ಹೀಗೆ ತಿರುಗುತ್ತೀರಿ? ನಾನು ನಿಮಗೆ ಹಣ ನೀಡುತ್ತೇನೆ. ನಿಮಗೆಷ್ಟು ಬೇಕು? ೫೦೦ ಜನರ ಚಂದಾ ಹಣ ನೀಡಲೇ" ಎಂದು ಕೇಳಿದರು. ಸ್ವಾಮಿ ರಂಗನಾಥಾನಂದರು ಹೀಗೆ ಉತ್ತರಿಸಿದರು, "ಬೇಡ, ಬೇಡ. ನನಗೆ ಕೇವಲ ಹಣ ಬೇಡ. ಹೆಚ್ಚು ಜನರು ಪತ್ರಿಕೆ ಓದುವಂತಾಗಬೇಕು ಅಷ್ಟೆ."

೧೯೩೯ರ ಜುಲೈನಲ್ಲಿ ಸ್ವಾಮಿ ರಂಗನಾಥಾನಂದರು ರಂಗೂವಿನ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳಾಗಿ ಅಲ್ಲಿನ ಜವಾಬ್ದಾರಿ ವಹಿಸಿಕೊಂಡರು. ೧೯೪೨ರಲ್ಲಿ ಜಪಾನ್ ರಂಗೂನಿನ ಮೇಲೆ ಬಾಂಬ್ ದಾಳಿ ನಡೆಸಿದಾಗ ಭಾರತೀಯರೆಲ್ಲ ಅಲ್ಲಿಂದ ಹೊರಬೀಳಲು ತಯಾರಿ ನಡೆಸಿದರು. ಸ್ವಾಮೀಜಿಗೆ ಜಹಜಿನಲ್ಲಿ ಹಿಂದಿರುಗುವ ಅವಕಾಶವಿದ್ದರೂ ಅದನ್ನು ನಿರಾಕರಿಸಿ ಸಾಮಾನ್ಯರ ಜೊತೆಯಲ್ಲಿ ಅವರ ನೋವು ಸಂಕಟಗಳನ್ನು ಹಂಚಿಕೊಂಡು ಕಾಲ್ನಡಿಗೆಯಲ್ಲಿ ಬಂದರು. ನೀರು ಮತ್ತು ಆಹಾರದ ಕೊರತೆ ದಾರಿಯುದ್ದಕ್ಕೂ ಈ ತಂಡವನ್ನು ಕಾಡಿತು. ಅಲ್ಲಿಯೂ ಸ್ವಾಮೀಜಿ ಆ ನಿರಾಶ್ರಿತರಲ್ಲೇ ಒಂದು ಸ್ವಯಂಸೇವಕ ಪಡೆ ರಚಿಸಿ, ಆ ಪಡೆಯ ಮೂಲಕ ಅತಿ ನೊಂದವರಿಗೆ ನೆರವು ತಲುಪಿಸಲು ವ್ಯವಸ್ಥೆ ಮಾಡಿದರು. ಕೊನೆಯ ಹಂತದಲ್ಲಿ ಈ ನಿರಾಶ್ರಿತರೆಲ್ಲ ಹಡಗಿನ ಮೂಲಕ ಚಿತ್ತಗಾಂಗ್ (ಅಥವ ಢಾಕಾ?) ತಲುಪಬೇಕಿತ್ತು. ಹಡಗಿನಲ್ಲಿ ಸ್ವಾಮೀಜಿ ಬಹಳ ಅಸ್ವಸ್ಥರಾದರು. ಜನರೆಲ್ಲ ಆತಂಕಪಟ್ಟರು. ಅಷ್ಟು ಸಾಲದೆಂಬಂತೆ ಜೋರಾದ ಬಿರುಗಾಳಿ ಬೀಸತೊಡಗಿತು. ಜನರಿಗೆಲ್ಲ ಮತ್ತಷ್ಟು ಭಯವಾಗಿ ಮುಂದೇನಾಗುವುದೊ ಎಂಬ ಬೇಗುದಿಯಿಂದ ಬಳಲಿದರು. ಅದೃಷ್ಟವಶಾತ್ ಯಾವ ಅಪಾಯವೂ ಇಲ್ಲದಂತೆ ಹಡಗು ದಡ ಸೇರಿತು.

ಈ ಸಮಯದಲ್ಲೇ ಇಲ್ಲಿ ಇನ್ನೊಂದು ಅಂಶ ಹೇಳಬಯಸುತ್ತೇನೆ. ನಾನು ಮಹಾಸಂಘವನ್ನು ಸೇರಿದ್ದು ಮದ್ರಾಸ್‌ನಲ್ಲಿ. ನನ್ನ ಹಿರಿಯ ಸೋದರನೂ ಸಂನ್ಯಾಸ ಸ್ವೀಕರಿಸಿದ. ಅವನು ಮಹಾಸಂಘ ಸೇರಿದ ಎರಡು ವರ್ಷದ ಬಳಿಕ ಅವನನ್ನು ಕರಾಚಿಗೆ ಕಳಿಸಲಾಯಿತು. ಅವನಲ್ಲಿ ನಾಲ್ಕು ವರ್ಷವಿದ್ದ. ಆಗ ಸ್ವಾಮಿ ರಂಗನಾಥಾನಂದರು ಕರಾಚಿಯ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿದ್ದರು. ೧೯೪೨–೪೩ರಲ್ಲಿ ಪೂಜ್ಯ ಸ್ವಾಮೀಜಿ ಬರೆದರು, "ನೀನು ಈಗ ಮದ್ರಾಸ್ ಆಶ್ರಮದಲ್ಲಿ ಆರು ವರ್ಷ ಕಳೆದಾಯ್ತು. ಈಗ ನೀನು ಅಪೇಕ್ಷಿಸಿದರೆ ನಿನ್ನನ್ನು ಇಲ್ಲಿಗೆ ಕರೆಸಿಕೊಳ್ಳಬಹುದು." ನಾನು ಉತ್ತರ ಬರೆದೆ, "ಮಹಾರಾಜ್, ಆಯ್ಕೆ ನನ್ನದಲ್ಲ. ನಿಮಗೆ ಬೇಕೆನಿಸಿದರೆ ನಾನು ಬರಬಲ್ಲೆ. ಆದರೆ ಬೇಲೂರು ಮಠ ಒಪ್ಪಬೇಕು." ಬೇಲೂರು ಮಠ ಒಪ್ಪಿತು. ಕೊಡು–ಕೊಳುಗೆಯ ಮಾದರಿಯಲ್ಲಿ ಇದಾಯಿತು. ನನ್ನ ಅಣ್ಣನನ್ನು ಮದ್ರಾಸ್ ಕೇಂದ್ರಕ್ಕೆ ವರ್ಗಾಯಿಸಿ, ಮದ್ರಾಸ್‌ನಲ್ಲಿದ್ದ ನನ್ನನ್ನು ಕರಾಚಿಗೆ ವರ್ಗಾಯಿಸಲಾಯಿತು. ಅದು ನಡೆದಿದ್ದು ೧೯೪೫ರಲ್ಲಿ, ಆಗ ಎರಡನೆ

ಮಹಾಯುದ್ಧದ ಸಮಯ, ಪ್ರಯಾಣ ಬಹಳ ಕಷ್ಟ. ಮದ್ರಾಸಿನ ಕೈಲಾಶ ಮಹಾರಾಜ್ ಕೇಳಿದ್ದರು, "ನೀನೇಕೆ ಹೋಗಬೇಕು?" ನಾನು ಹೇಳಿದೆ, "ಮಹಾರಾಜ್ ನಾನು ಈಗಾಗಲೇ ೫ –೬ ವರ್ಷ ಇಲ್ಲಿ ಕಳೆದಿದ್ದೇನೆ. ಸ್ವಾಮಿ ರಂಗನಾಥಾನಂದರು ಅಪೇಕ್ಷಿಸಿದ್ದಾರೆ, ಆದುದರಿಂದ ನಾನು ಹೋಗಬೇಕೆನಿಸುತ್ತದೆ. ಅವರೆಂದರೆ ನನಗೆ ಬಲು ಇಷ್ಟ." ಆಗ ಅವರೆಂದರು, "ಆಗಲಿ, ಹೋಗಿ ಬಾ."

ನಾನು ಮೊದಲು ಮುಂಬಯಿಗೆ ಹೋದೆ. ಮಾಧವಾನಂದ ಮಹಾರಾಜ್ ಒಂದು ಕಾರ್ಯಸಂಬಂಧವಾಗಿ ಅಲ್ಲಿಗೆ ಬಂದಿದ್ದರು. ಅವರು ಕರಾಚಿಗೆ ಬಂದಿದ್ದರು, ರಂಗನಾಥಾನಂದರ ಉಪನ್ಯಾಸಗಳನ್ನು ಕೇಳಿದ್ದರು. ನಾನು ಅವರನ್ನು ಕೇಳಿದೆ, "ಮಹಾರಾಜ್ ನಿಮ್ಮ ಅಭಿಪ್ರಾಯವೇನು?" ಅವರೆಂದರು, "ಅದ್ಭುತ ! ಅದ್ಭುತ !" ಮುಂದುವರೆದು ಹೇಳಿದರು, "ಠಾಕೂರು ಶಂಕರ್ ಕೆ ಕೋಲೆ ನಿಯೇ ಖೇಲಾ ಕೊರ್‌ಚೆನ್." (ಶಂಕರನನ್ನು ತೊಡೆಯ ಮೇಲಿರಿಸಿಕೊಂಡು ಠಾಕೂರ್ ಲೀಲೆಯಲ್ಲಿ ತೊಡಗಿದ್ದಾರೆ.)

ಸ್ವಾಮಿ ರಂಗನಾಥಾನಂದರು ನನ್ನನ್ನು ಕರಾಚಿಗೆ ಕರೆದೊಯ್ಯಲು ವ್ಯಕ್ತಿಯೊಬ್ಬರನ್ನು ಕಳಸಿದ್ದರು. ಜಾಗವೂ ಭಾಷೆಯೂ ನನಗೆ ಹೊಸತು ಎಂದು ಅವರು ಮುಂದಾಲೋಚಿಸಿದ್ದರು. ರಾತ್ರಿ ಸುಮಾರು ೯ ಘಂಟೆಯ ವೇಳೆಗೆ ನಾವು ಆಶ್ರಮ ತಲುಪಿದೆವು. ಅಚ್ಚರಿಯೆಂದರೆ ಆಗಿನ್ನೂ ಸಾಕಷ್ಟು ಬೆಳಕಿತ್ತು. ನನ್ನನ್ನು ನೋಡಿದ ಕೂಡಲೆ ಸ್ವಾಮಿ ರಂಗನಾಥಾನಂದರು ನನ್ನ ಉಡುಗೆಯನ್ನು ಉಡುಪಿನ ಶೈಲಿಯನ್ನು ಬದಲಿಸಬೇಕೆಂದರು. ನನಗೇ ಅಚ್ಚರಿಯಾಯಿತು, ಅವರೆಂದರು, "ಇದು ಮದ್ರಾಸ್ ಅಲ್ಲ. ನೀನು ಉಡುಗೆಯನ್ನು ಬದಲಿಸಬೇಕು." ಮತ್ತೆ ಮರುದಿನ ಹೇಳಿದರು, "ನೀನು ಬನಿಯನ್ ಮತ್ತು ಅಂಗಿ ಹಾಕಿಕೊ, ಬರೀ ಮೈಯಲ್ಲಿ ಓಡಾಡಬೇಡ."

ಡಾ. ಎಸ್. ರಾಧಾಕೃಷ್ಣನ್ ಕರಾಚಿ ರಾಮಕೃಷ್ಣ ಆಶ್ರಮಕ್ಕೆ ಬರುತ್ತಿದ್ದರು. ಅವರು ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದರು. ಪ್ರತಿ ವರ್ಷ ಆಕ್ಸ್‌ಫರ್ಡ್‌ಗೆ ಹೋಗುತ್ತಿದ್ದರು. ಮಾರ್ಗಮಧ್ಯದಲ್ಲಿ ಒಂದೆರಡು ದಿನ ಆಶ್ರಮದಲ್ಲಿ ಉಳಿಯುತ್ತಿದ್ದರು. ಸ್ವಾಮೀಜಿ ತಮ್ಮ ಕೋಣೆಯನ್ನು ಅವರಿಗೆ ಬಿಟ್ಟುಕೊಟ್ಟು ತಾವು ಬೇರೆ ಕೋಣೆಯಲ್ಲಿರುತ್ತಿದ್ದರು. ಇಲ್ಲಿ ಡಾ. ರಾಧಾಕೃಷ್ಣನ್ ತಮ್ಮ ಭಾರತೀಯ ಉಡುಪು ತ್ಯಜಿಸಿ ಪಾಶ್ಚಾತ್ಯ ಉಡುಪಾದ ಕಾಲರ್, ಕೋಟು, ಟೋಪಿ ಧರಿಸುತ್ತಿದ್ದರು, ಪೇಟವೂ ಇಲ್ಲ. ಮೂರು ನಾಲ್ಕು ತಿಂಗಳ ನಂತರ ಭಾರತಕ್ಕೆ ಹಿಂದಿರುಗಲು ಬಂದಾಗ ಈ ದಿರಿಸು ಕಳಚಿ ಭಾರತೀಯ ಉಡುಪು ಧರಿಸುತ್ತಿದ್ದರು. ಧೋತಿ, ಕುರ್ತ ಧರಿಸಿ ಪೇಟ ಧರಿಸುತ್ತಿದ್ದರು. ಅವರು ನಮ್ಮೊಂದಿಗೆ ಭಜನೆಯಲ್ಲಿ ಭಾಗವಹಿಸುತ್ತಿರಲಿಲ್ಲ ಆದರೆ ದೇವಾಸ್ಥಾನಕ್ಕೆ ಮಾತ್ರ ಭೇಟಿ ನೀಡುತ್ತಿದ್ದರು. ಒಂದು ದಿನ ಅವರು ತಾವು ಬನಾರಸ್ ಹಿಂದೂ ವಿಶ್ವವಿದ್ಯಾಲಯಕ್ಕೆ ಹಣ ಸಂಗ್ರಹಿಸುತ್ತಿರುವುದಾಗಿ ತಿಳಿಸಿದರು. ಅವರ ಉಪನ್ಯಾಸದ ಸಮಯದಲ್ಲಿ ರಂಗನಾಥಾನಂದರು ಅವರನ್ನು ಪರಿಚಯಿಸುತ್ತಾ, "ನೀವು ಕಾಣಿಕೆಗಳನ್ನು ನೀಡಿದರೆ ನಮಗೆ ಬಹಳ ಸಂತೋಷವಾಗುತ್ತದೆ" ಎಂದರು. ಒಬ್ಬ ಮನುಷ್ಯ ಎದ್ದು ನಿಂತ. ಅವನು ಆಗರ್ಭಶ್ರೀಮಂತ. ಅವನು "ಆಗಲಿ" ಎಂದ. ಆಬಳಿಕ ಡಾ. ರಾಧಾಕೃಷ್ಣನ್ ಅವರನ್ನು ಭೇಟಿಯಾಗಿ ಅವರು ತಮ್ಮ ಮನೆಯಲ್ಲಿ ಔತಣ ಸ್ವೀಕರಿಸಿದರೆ ಮಾತ್ರ ದೇಣಿಗೆ ನೀಡುವುದಾಗಿ ತಿಳಿಸಿದ. ರಾಧಾಕೃಷ್ಣನ್ ಒಪ್ಪಿದರು ಮತ್ತು ರಾಧಾಕೃಷ್ಣನ್ ಹಾಗೂ ಸ್ವಾಮೀಜಿ ಅವರೊಂದಿಗೆ ನಾವೂ ಆ ಮಹಾಶಯನ ಮನೆಗೆ ಹೋದೆವು. ಅಲ್ಲಿ ಡಾ. ರಾಧಾಕೃಷ್ಣನ್ ಮತ್ತು ಸ್ವಾಮೀಜಿಯವರಿಗೆ ಚಿನ್ನದ ತಟ್ಟೆ–ಬಟ್ಟಲುಗಳಲ್ಲಿ ಊಟ ಬಡಿಸಿದ, ಜೊತೆಯಲ್ಲಿದ್ದ ನಾವು ಹತ್ತು ಮಂದಿಗೆ ಬೆಳ್ಳಿಯ ತಟ್ಟೆ–ಬಟ್ಟಲಲ್ಲಿ ಊಟ ನೀಡಿದ.

ಕರಾಚಿ ಆಶ್ರಮದಲ್ಲಿ ನಮ್ಮದೊಂದು ಹೋಮಿಯೊಪತಿ ಔಷಧಾಲಯ, ಒಂದು ನೇತ್ರಚಿಕಿತ್ಸಾ ಕೇಂದ್ರ ಮತ್ತು ಒಂದು ಗ್ರಂಥಾಲಯವಿತ್ತು. ಅದು ಬಹಳ ಪ್ರಸಿದ್ಧಿ ಪಡೆಯಿತು. ಇದಕ್ಕೆ ಮುಖ್ಯ ಕಾರಣ ರಂಗನಾಥಾನಂದಜಿ. ಎಲ್ಲ ಮತಗಳ ಜನರು – ಹಿಂದೂ, ಮುಸ್ಲಿಮ್, ಪಾರ್ಸಿ ಎಲ್ಲರೂ ಯಾವ ಭೇದಭಾವವೂ ಇಲ್ಲದೆ ಆಶ್ರಮಕ್ಕೆ

ಬರುತ್ತಿದ್ದರು. ನಾವು ಪುಸ್ತಕಗಳನ್ನೂ ಮಾರಾಟ ಮಾಡುತ್ತಿದ್ದೆವು. ಆದರೆ ಕೆಲವು ಪುಸ್ತಕಗಳು ಮಾರಾಟವಾಗದೆ ಉಳದುಬಿಡುತ್ತಿದ್ದವು. ಸ್ವಾಮೀಜಿ "ಯಾವ ಪುಸ್ತಕಗಳು ಉಳಿದಿವೆ?" ಎಂದು ಕೇಳಿ ತಿಳಿದುಕೊಳ್ಳುತ್ತಿದ್ದರು. ಬಳಿಕ ತಮ್ಮ ಉಪನ್ಯಾಸದ ನಡುವೆ ಆ ಪುಸ್ತಕದ ಹೆಸರು ಸೂಚಿಸುತ್ತಿದ್ದರು. ಇದರ ಪರಿಣಾಮವಾಗಿ ಅವರ ಉಪನ್ಯಾಸ ಮುಗಿಯುತ್ತಿದ್ದಂತೆಯೇ ಆ ಪುಸ್ತಕಗಳು ಮಾರಾಟ ಆಗಿಬಿಡುತ್ತಿದ್ದವು.

೧೯೪೭ರಲ್ಲಿ ಬೇಲೂರು ಮಠವು, ಮೂರ್‍ನಾಲ್ಕು ಕಾರ್ಯಕರ್ತರನ್ನು ನಿರಾಶ್ರಿತರ ಪರಿಹಾರಕಾರ್ಯಕ್ಕೆ ಕಳಿಸಿಕೊಡುವಂತೆ ಸ್ವಾಮಿ ರಂಗನಾಥಾನಂದರನ್ನು ಕೋರಿಕೊಂಡಿತು. ಕುರುಕ್ಷೇತ್ರ ಪ್ರದೇಶದಲ್ಲಿ ಈ ಕಾರ್ಯ ಆರಂಭವಾಗಿತ್ತು. ಸ್ವಾಮೀಜಿ ಕಾರ್ಯಕರ್ತರನ್ನು ಕಳಿಸಿಕೊಟ್ಟರು, ಅವರಲ್ಲಿ ನಾನೂ ಒಬ್ಬ. ಮೊದಲು ಮುಂಬಯಿಗೆ ನಾವು ಜಹಜಿನಲ್ಲಿ ಬಂದೆವು. ಸಾಮಾನ್ಯವಾಗಿ. ಈ ಜಹಜುಗಳಲ್ಲಿ ೨೦೦-೩೦೦ ಜನ ಪಯಣಿಸುತ್ತಾರೆ. ಆದರೆ ಎಲ್ಲ ನಿರಾಶ್ರಿತರಿಗೆ ಭಾರತ ತಲುಪುವ ತವಕ, ಜಹಜು ತುಂಬಿತುಳುಕಿತು. ಸುಮಾರು ೧೦೦೦ ಜನರನ್ನು ಅದು ಹೊರಬೇಕಾಯಿತು. ಬೆಂಗಳೂರಿನತ್ತ ಹೊರಟಿದ್ದ ವೃದ್ಧ ದಂಪತಿಗಳಿದ್ದರು. ಅವರು ನನ್ನ ರಕ್ಷಣೆಯಲ್ಲಿದ್ದರು. ಕರಾಚಿ ಆಶ್ರಮಕ್ಕೆ ಪ್ರತಿ ವರ್ಷ ೫೦,೦೦೦ ರೂ.ಗಳನ್ನು ಇವರು ಸಲ್ಲಿಸುತ್ತಿದ್ದರು. ನಾವು ಅಲ್ಲಿಂದ ಹೊರಡುವ ಮುನ್ನ ರಂಗನಾಥಾನಂದಜಿ, "ನೀನು ಅವರ ಯೋಗಕ್ಷೇಮ ನೋಡಿಕೊಳ್ಳಬೇಕು" ಎಂದು ಅಪ್ಪಣೆ ನೀಡಿದ್ದರು. ನಾನು ಅದನ್ನು ಪಾಲಿಸಿದೆ ಎಂದು ನಂಬಿದ್ದೇನೆ.

ನಿರಾಶ್ರಿತರ ವಸತಿ ಕೇಂದ್ರಗಳನ್ನು ನೋಡಿ ಹೃದಯ ಕರಗುತ್ತಿತ್ತು. ಬಹಳ ಜನರು, ಅದರಲ್ಲೂ ಕೆಲವರು ಶ್ರೀಮಂತರೂ ತಮ್ಮ ಆಸ್ತಿಪಾಸ್ತಿ ಬಿಟ್ಟು ಮೈಲಿಗಟ್ಟಲೆ ನಡೆದುಬಂದಿದ್ದರು. ನಾವು ಅಲ್ಲಿಗೆ ಹೋಗಿ ಮೊದಲಿಗೆ ತಲೆ ಎಣಿಕೆ ಮಾಡುತ್ತಿದ್ದೆವು ಮತ್ತು ಅವರ ಕುಟುಂಬದ ಇತರ ಸದಸ್ಯರು ಅಂದರೆ ಗಂಡ, ಹೆಂಡತಿ, ಮಗ, ಮಗಳು ಇತ್ಯಾದಿ ಕ್ಯಾಂಪ್‌ನಲ್ಲಿ ಆಶ್ರಯ ಪಡೆದಿದ್ದಾರೆಯೆ ಎಂದು ಪತ್ತೆಹಚ್ಚಲು ಪ್ರಯತ್ನಿಸುತ್ತಿದ್ದೆವು. ಬಹಳ ಜನ ಕಿರಿಯ ವಯಸ್ಸಿನ ಹೆಣ್ಣುಮಕ್ಕಳು ನಾಪತ್ತೆ ಯಾಗಿದ್ದರು– ಎಷ್ಟು ಮಂದಿ? ನಮಗೆ ಗೊತ್ತೇ ಇಲ್ಲ ! ಮೊದಲ ಕೆಲವು ದಿನ ನಾನು ಸ್ವಾಮೀಜಿಗೆ ಈ ದುರಂತಗಳ ಕಥನವನ್ನು ವಿವರವಾಗಿ ಬರೆದು ತಿಳಿಸುತ್ತಿದ್ದೆ. ಅವರು ಒಮ್ಮೆ ಉತ್ತರಿಸಿದರು, "ಮಾನುಷ ಸಂಕಟಗಳ ಬಗ್ಗೆ ಬರೆಯಬೇಡ – ಮರೆತುಬಿಡು."

೧೯೪೮ರ ಜನವರಿ ೬ರಂದು ಕರಾಚಿ ಆಶ್ರಮ ಲೂಟಿಯಾಯಿತು. ಆ ದಿನ ಸ್ವಾಮೀಜಿ ಅಲ್ಲಿರಲಿಲ್ಲ. ಏನೋ ಕೆಲಸದ ಮೇಲೆ ಭಾರತಕ್ಕೆ ಬಂದಿದ್ದರು. ವಿಷಯ ತಿಳಿದ ಮರುದಿನವೇ ಅವರು ಅಲ್ಲಿಗೆ ಬಂದರು. ಸಿಂಧಿಯಾ ಸ್ಟೀಮ್ ನ್ಯಾವಿಗೇಷನ್ ಕಂಪನಿಯ ಮಾಲಿಕರು ಸ್ವಾಮೀಜಿಯವರನ್ನು ಭೇಟಿಯಾಗಿ, "ಮಹಾರಾಜ್ ನನಗೆ ದೊಡ್ಡಮನೆ ಬೇಕಿಲ್ಲ. ನನ್ನ ಕುಟುಂಬದವರೆಲ್ಲ ಈಗಾಗಲೇ ಭಾರತದಲ್ಲಿದ್ದಾರೆ. ನಾನು ಮುಂಜಾನೆ ೯-೧೦ ಗಂಟೆಗೆ ಕಚೇರಿಗೆ ಹೋಗುತ್ತೇನೆ. ನೀವು ನನ್ನ ಮನೆಯನ್ನು ಬೇಕಾದರೆ ಉಪಯೋಗಿಸಿಕೊಳ್ಳಿ" ಎಂದರು. ಇದು ಠಾಕೂರರ ಕೃಪೆ ಎಂದೇ ಭಾವಿಸಿದ ಸ್ವಾಮೀಜಿ ಅವನ ಮನೆಯಲ್ಲಿ ಉಳಿಯಲು ಒಪ್ಪಿದರು. "ನಾವು ಅಮೆರಿಕ, ಸಿಂಗಪೂರ, ಅಲ್ಲಿ-ಇಲ್ಲಿ ಎಲ್ಲ ಹಾಗೆ ಇರಬಹುದಾದರೆ ಪಾಕಿಸ್ತಾನದಲ್ಲೇಕೆ ಆಗಬಾರದು?" ಎಂದರು ಸ್ವಾಮೀಜಿ. ಹೀಗೆ ಈ ಲೂಟಿಯ ಘಟನೆಯಾದ ನಂತರದ ಎಂಟು ತಿಂಗಳು ಈ ವ್ಯವಸ್ಥೆ ಮುಂದುವರಿಯಿತು.

ಈ ದಿನಗಳನ್ನು ಕುರಿತ ಒಂದು ಘಟನೆಯನ್ನು ಸ್ವಾಮೀಜಿ ನಮಗೆ ಆ ನಂತರದಲ್ಲಿ ತಿಳಿಸಿದರು. ಅವರು ಒಬ್ಬ ಮುಸ್ಲಿಮ್ ವ್ಯಕ್ತಿಯೊಂದಿಗೆ ಬಹಳ ಆತ್ಮೀಯರಾಗಿದ್ದರಂತೆ. ಅವನೊಮ್ಮೆ ತನ್ನ ಹೆಂಡತಿ ಹಾಗೂ ಮಗನನ್ನು ಬಿಟ್ಟು ಲಾಹೋರಿಗೊ ಮತ್ತೆಲ್ಲಿಗೊ ಹೋಗಬೇಕಾದ ಸಂದರ್ಭ ಬಂತಂತೆ. ಆಗ ಅವನು ಸ್ವಾಮೀಜಿಯ ಬಳಿ ಬಂದು, "ಮಹಾರಾಜ್, ನಾನು ಅವರನ್ನು ಇಲ್ಲಿ ಇಡಬಯಸುತ್ತೇನೆ. ನಾನು ಬಲ್ಲ ಬೇರಾವುದೇ ಜಾಗಕ್ಕಿಂತ ಇದು ಸುರಕ್ಷಿತ" ಎಂದನಂತೆ. ಆಗ ಅವನಿಗಾಗಿ ನೆಲ ಅಂತಸ್ತನ್ನು ತೆರವು ಮಾಡಿಕೊಡಲಾಯಿತು.

ಒಂದು ದಿನ ಡಾ. ರಾಧಾಕೃಷ್ಣನ್ ಅಲ್ಲಿಗೆ ಬಂದು ಸ್ವಾಮೀಜಿಯವರನ್ನು ಭೇಟಿಯಾದರು. ಅವರೆಂದರು, "ಏನು ಮಾಡುತ್ತಿದ್ದೀರಿ ಇಲ್ಲಿ? ಕೆಲವು ತರಗತಿಗಳು ಅದು–ಇದು?" ಕೆಲವು ದಿನಗಳ ಬಳಿಕ ರಾಧಾಕೃಷ್ಣನ್ ಕಲ್ಕತ್ತಕ್ಕೆ ಬಂದು ಸ್ವಾಮಿ ಮಾಧವಾನಂದರನ್ನು ಕಂಡು, "ನೀವು ಕರಾಚಿಯಲ್ಲಿ ಸ್ವಾಮಿ ರಂಗನಾಥಾನಂದರ ಪ್ರತಿಭೆಯನ್ನು ದಂಡ ಮಾಡುತ್ತಿದ್ದೀರಿ" ಎಂದರು. ಆಗ ಸ್ವಾಮಿ ಮಾಧವಾನಂದರು ರಂಗನಾಥಾನಂದರಿಗೆ ಕಲ್ಕತ್ತೆಗೆ ಹಿಂದಿರುಗಲು ಸೂಚಿಸಿದರು. ಸ್ವಾಮಿ ರಂಗನಾಥಾನಂದರು ಸರಿಯಾಗಿ ಆರು ವರ್ಷ ಕರಾಚಿಯಲ್ಲಿದ್ದರು. ಆಗಸ್ಟ್ ೯, ೧೯೪೨ ಅವರು ಅಲ್ಲಿನ ಕೇಂದ್ರದ ಜವಾಬ್ದಾರಿ ವಹಿಸಿಕೊಂಡಿದ್ದರು ಮತ್ತು ೧೯೪೮ರ ಆಗಸ್ಟ್ ೯ ಅಲ್ಲಿಂದ ಕಲ್ಕತ್ತಕ್ಕೆ ಹೊರಟರು.

ಕಲ್ಕತ್ತದಲ್ಲಿನ ಅವಧಿಯಲ್ಲಿ ಅವರು ತೀವ್ರ ಮಾನಸಿಕ ಒತ್ತಡಕ್ಕೆ ಒಳಗಾದರು. ಭೇಟಿಯಾದವರೆಲ್ಲ ಅವರನ್ನು ಕರಾಚಿಯ ಕರಾಳ ಪ್ರಸಂಗಗಳನ್ನು ಕುರಿತು ಕೇಳುತ್ತಿದ್ದರು. ಎರಡೇ ತಿಂಗಳಲ್ಲಿ ಅವರ ತಲೆಗೂದಲು ಪೂರ್ತಿ ಹಣ್ಣಾಯಿತು. ಅವರು ಒಂದು ವರ್ಷ ಬೇಲೂರು ಮಠದಿಂದ ದೂರ ಉಳಿದರು. ೧೯೪೯ರಲ್ಲಿ ಅವರು ದೆಹಲಿಯ ರಾಮಕೃಷ್ಣ ಮಿಷನ್‌ನ ಕಾರ್ಯದರ್ಶಿಗಳಾಗಿ ಜವಾಬ್ದಾರಿ ವಹಿಸಿಕೊಂಡರು. ಈಗಾಗಲೇ ಒಳ್ಳೆಯ ವಾಗ್ಮಿ ಎಂದು ಹೆಸರುಗಳಿಸಿದ್ದ ಅವರು ದೆಹಲಿಯತ್ತ ನಡೆದರು. ಆಗ ಅಲ್ಲಿನ ಮಿಷನ್‌ನಲ್ಲಿ ಸಭಾಂಗಣ ಇರಲಿಲ್ಲ. ಅವರೆಂದರು, "ಮೊದಲಿಗೆ ನಮಗೆ ಬೇಕಾಗಿರುವುದು ಒಂದು ಸಭಾಂಗಣ." ಅದು ೧೯೫೭ರಲ್ಲಿ ನಿರ್ಮಾಣಗೊಂಡಿತು. ಅದಕ್ಕೂ ಮುನ್ನ ಸಾಧು ನಿವಾಸದ ಮೊದಲ ಮಹಡಿಯನ್ನು, ಬಳಿಕ ರಾಮಕೃಷ್ಣ ಮಂದಿರವನ್ನು ನಿರ್ಮಿಸಿದ್ದರು. ಅವರು ತಮಗೆ ಬರುತ್ತಿದ್ದ ಕಾಣಿಕೆಗಳೆಲ್ಲವನ್ನು ಆಶ್ರಮಕ್ಕೆ ಬಳಸುತ್ತಿದ್ದರು. ಪ್ರಖ್ಯಾತ ಸಂಗೀತ ವಿದುಷಿ ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿ ಅಂದಿನ ಕಾಲದಲ್ಲೇ ೯೨,೦೦೦ ರೂಪಾಯಿಗಳನ್ನು ದಾನ ಮಾಡಿದ್ದರು. ಅವರು ಸ್ವಾಮಿ ರಂಗನಾಥಾನಂದರ ದೊಡ್ಡ ಅಭಿಮಾನಿಗಳು. ಪಂಡಿತ್ ನೆಹರೂ ಅವರು ಕೂಡ ಸ್ವಾಮೀಜಿಯವರ ಅಭಿಮಾನಿಗಳು. ಒಮ್ಮೆ ಸ್ವಾಮೀಜಿ, "ಪಂಡಿತ್‌ಜಿ ಸುಬ್ಬುಲಕ್ಷ್ಮಿಯವರು ಬರುತ್ತಿದ್ದಾರೆ. ನೀವು ಕೂಡ ಕಾರ್ಯಕ್ರಮಕ್ಕೆ ಬರಬೇಕು. ನೀವು ಬಹಳ ಕೆಲಸವುಳ್ಳವರು, ಬಿಡುವಿಲ್ಲದವರೆಂದು ಬಲ್ಲೆವು. ಆದರೂ ನಮ್ಮೊಡನೆ ನೀವು ಕೊಂಚ ಸಮಯ ಇರಬೇಕು. ದಯವಿಟ್ಟು ಬನ್ನಿ" ಎಂದರು. ಪಂಡಿತ್ ನೆಹರೂ "ಆಗಲಿ, ಬರುತ್ತೇನೆ" ಎಂಬ ಆಶ್ವಾಸನೆಯಿತ್ತರು. ಬಳಿಕ ಕಾರ್ಯಕ್ರಮದ ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದರು. ಸ್ವಲ್ಪ ಹೊತ್ತಿಗೇ ಅವರ ಆಪ್ತ ಕಾರ್ಯದರ್ಶಿ "ಸರ್, ನಾವು ಹೊರಡಬೇಕು" ಎಂದು ನೆನಪಿಸಿದ. "ಸುಮ್ಮನಿರು" ಎಂದು ಗದರಿದ ನೆಹರೂ ಮೂರು ಘಂಟೆಯ ಅವಧಿಯ ಆ ಇಡೀ ಕಾರ್ಯಕ್ರಮದಲ್ಲಿ ಕುಳಿತದ್ದೇ ಅಲ್ಲದೆ ಕೊನೆಯಲ್ಲಿ ಸುಬ್ಬುಲಕ್ಷ್ಮಿ ಅವರಿಗೆ ಒಂದು ಬೆಳ್ಳಿಯ ಫಲಕವನ್ನು ನೀಡಿದರು. "ಸಂಗೀತ ಸಾಮ್ರಾಜ್ಞಿ ನೀವು, ನಾನಾದರೊ ಕೇವಲ ಒಬ್ಬ ಪ್ರಧಾನಮಂತ್ರಿ" ಎಂಬೀ ಮಾತುಗಳನ್ನೇ ಅವು ಅಕ್ಷರಶಃ ಈ ಸಂದರ್ಭದಲ್ಲಿ ಆಡಿದರು.

ದೆಹಲಿ ಮಿಷನ್‌ನಲ್ಲಿ ಸಭಾಂಗಣವನ್ನು ನಿರ್ಮಿಸಲಾಯಿತು. ಅಲ್ಲಿ ೧೦೦೦ ಜನ ಕುಳಿತು ಕಾರ್ಯಕ್ರಮಗಳನ್ನು ಕೇಳಬಹುದಿತ್ತು, ನೋಡಬಹುದಿತ್ತು. ಸ್ವಾಮಿ ರಂಗನಾಥಾನಂದರ ಉಪನ್ಯಾಸ ಆರಂಭವಾಗುವ ಬಹಳ ಹೊತ್ತಿಗೆ ಮುಂಚೆಯೇ ಈ ಆಸನಗಳೆಲ್ಲ ಭರ್ತಿಯಾಗಿಬಿಡುತ್ತಿದ್ದವು. ಅವರೆಂತಹ ಅದ್ಭುತ ವಾಗ್ಮಿಯೆಂದರೆ ಅವರ ಉಪನ್ಯಾಸಗಳನ್ನು ಕೇಳಲು ಸರ್ಕಾರದ ಬಹುಮುಖ್ಯ ವ್ಯಕ್ತಿಗಳು, ವಿವಿಧ ಇಲಾಖೆಯ ಕಾರ್ಯದರ್ಶಿಗಳು ಬರುತ್ತಿದ್ದರು. ರಂಗನಾಥಾನಂದರು ಸಮಯಕ್ಕೆ ಬಹಳ ಗೌರವ ನೀಡುತ್ತಿದ್ದರು. ಆರು ಗಂಟೆಗೆ ಎಂದರೆ ಆರು ಗಂಟೆಗೆ ಸರಿಯಾಗಿ ಉಪನ್ಯಾಸ ಆರಂಭ ಆಗುತ್ತಿತ್ತು. ಕಾರ್ಯದರ್ಶಿಗಳು, ಇತರ ಹಿರಿಯ ಅಧಿಕಾರಿಗಳು ಸರಿಯಾದ ಸಮಯಕ್ಕೆ ಬರಲಾಗುತ್ತಿರಲಿಲ್ಲ. ಆದುದರಿಂದ ತಮ್ಮ ಕಡೆಯವರನ್ನು ಮುಂಚಿತವಾಗಿ ಕಳಿಸಿ ಸ್ಥಳ ಕಾದಿರಿಸುತ್ತಿದ್ದರು. ಇದು ಸ್ವಾಮೀಜಿಯವರ ಗಮನಕ್ಕೆ ಬಂತು. ಒಂದು ದಿನ ಘೋಷಿಸಿದರು,

“ಕಾದಿರುವಿಕೆಗೆ ಇಲ್ಲಿ ಅವಕಾಶವಿಲ್ಲ. ಇಲ್ಲಿ ಎಲ್ಲರೂ ಸಮಾನರು.” ಸಹಜವಾಗಿ ಈ ಬಹುಮುಖ್ಯ ವ್ಯಕ್ತಿಗಳು ಕೂಡ ಸಭಾಂಗಣಕ್ಕೆ ಹಾಜರಾಗುವುದು ಅನಿವಾರ್ಯವಾಯಿತು. ೧೯೬೨ರವರೆಗೆ ರಂಗನಾಥಾನಂದಜಿ ದೆಹಲಿಯಲ್ಲಿದ್ದರು.

ತೊಂದರೆಯಲ್ಲಿದ್ದವರಿಗೆ ಸ್ವಾಮೀಜಿ ಎಷ್ಟೊಂದು ಗುಟ್ಟಾಗಿ ನೆರವು ಒದಗಿಸುತ್ತಿದ್ದರೆಂದರೆ ಹತ್ತಿರದಲ್ಲಿದ್ದ ಕೆಲವೇ ಕೆಲವರಿಗೆ ಮಾತ್ರ ಈ ವಿಚಾರ ತಿಳಿಯುತ್ತಿತ್ತು. ಕೇರಳದ ಒಬ್ಬಾಕೆ ಖಾಯಿಲೆಯಿಂದ ನರಳುತ್ತಿದ್ದಳು. ಬಹಳ ಹಿಂದೆ, ಅವಳ ಗಂಡ ಮೈಸೂರಿನಲ್ಲಿ ಎಲೆಕ್ಟ್ರಿಷಿಯನ್ ಆಗಿದ್ದ ಎಂಬ ನೆನಪು. ಆಕೆ ಸ್ವಾಮೀಜಿಗೆ ಪತ್ರ ಬರೆದಳು. ಬಳಿಕ ಮುಖತಃ ಭೇಟಿಯಾಗಲು ಬಂದಳು. ಸ್ವಾಮೀಜಿ, “ನೀನು ಹೋಗು. ನಾನು ಚೆಕ್ ಮುಖಾಂತರ ಹಣ ಕಳಿಸುತ್ತೇನೆ” ಎಂದರು. ಆದರೆ ಆಕೆ ಎಷ್ಟು ಬಡವಿ ಎಂದರೆ ಅವಳಲ್ಲಿ ಬ್ಯಾಂಕ್ ಖಾತೆಯೂ ಇರಲಿಲ್ಲ. ಆಗ ರಂಗನಾಥಾನಂದರು ಅಲ್ಲಿದ್ದವರೊಬ್ಬರಿಗೆ ಹೇಳಿದರು, “ಆಯಿತು, ನೀನು ಅವಳಿಗೆ ನಗದು ಹಣ ನೀಡು, ನಾನು ನಿನಗೆ ಅದನ್ನು ತುಂಬಿಕೊಡುತ್ತೇನೆ.”

‘ಪ್ರಬುದ್ಧ ಭಾರತ’ ಪತ್ರಿಕೆಯ ಸಂಪಾದಕನಾಗಿ ಮೂರು ವರ್ಷ ನಾನು ಮಾಯಾವತಿಯಲ್ಲಿದ್ದೆ. ಸ್ವಾಮಿ ರಂಗನಾಥಾನಂದರು ದೆಹಲಿಯಲ್ಲಿದ್ದಾಗ ಒಂದು ಅಥವಾ ಎರಡು ಬಾರಿ ಕೆಲವು ಮಹಿಳಾ ಭಕ್ತರೊಂದಿಗೆ ಮಾಯಾವತಿಗೆ ಬಂದಿದ್ದರು. ಅವರಲ್ಲಿ ವಿದೇಶಾಂಗ ಖಾತೆಯ ಉಪಮಂತ್ರಿಗಳಾದ ಲಕ್ಷ್ಮಿಮೆನನ್ ಕೂಡ ಒಬ್ಬರೆಂದು ಸ್ಪಷ್ಟ ನೆನಪು. ಇನ್ನೂ ೩–೪ ಜನ ಮಹಿಳೆಯರಿದ್ದರು, ಅದರಲ್ಲೊಬ್ಬರು ವಿದೇಶಾಂಗ ಸಚಿವರ ಪತ್ನಿ. ಇವರೆಲ್ಲ ಉಪಾಹಾರ, ಊಟಗಳಿಗೆ ಆಶ್ರಮಕ್ಕೆ ಬರುತ್ತಿದ್ದರು. ಮಧ್ಯಾಹ್ನ ಕೊಂಚ ವಿಶ್ರಾಂತಿಯ ಬಳಿಕ ಚಹಾಕ್ಕೆ ಬಂದು ಬಳಿಕ ಸ್ವಾಮಿ ರಂಗನಾಥಾನಂದರೊಂದಿಗೆ ಮಾತುಕತೆ ನಡೆಸುತ್ತಿದ್ದರು. ಸಂಜೆ ನಾವೆಲ್ಲ ಸ್ವಲ್ಪಹೊತ್ತು ತಿರುಗಾಡಲು ಹೋಗುತ್ತಿದ್ದೆವು. ಬಳಿಕ ಒಂದು ಸುಂದರ ಜಾಗದಲ್ಲಿ ಕುಳಿತು ಕೆಲಕಾಲ ಭಕ್ತಿಗೀತೆಗಳನ್ನು ಹಾಡಿ ಅನಂತರ ನಮ್ಮ ನಮ್ಮ ತಾಣಗಳಿಗೆ ಹಿಂದಿರುಗುತ್ತಿದೆವು.

೧೯೭೨ರಲ್ಲಿ ಸ್ವಾಮಿ ಗಂಭೀರಾನಂದರು ಹೈದರಾಬಾದಿಗೆ ಬಂದರು. ೧೯೭೩ರಲ್ಲಿ ಬೇಗಂಪೇಟೆಯಲ್ಲಿದ್ದ ಖಾಸಗಿ ಆಶ್ರಮವೊಂದರಲ್ಲಿ ನನ್ನನ್ನು ಭೇಟಿಯಾಗಿದ್ದ ಸ್ವಾಮಿ ರಂಗನಾಥಾನಂದಜಿ ಹೇಳಿದರು, “ನೋಡು, ಹೈದರಾಬಾದ್ ಆಶ್ರಮವನ್ನು ಮಿಷನ್ ವಹಿಸಿಕೊಳ್ಳುವ ಸಾಧ್ಯತೆಗಳಿವೆ. ನನ್ನನ್ನು ಇಲ್ಲಿಗೆ ನೇಮಿಸುತ್ತಾರೆ. ನೀನು ಕೂಡ ಬರಬೇಕು.” ನಾನೆಂದೆ, “ಸ್ವಾಮೀಜಿ, ತಾವು ನರಕಕ್ಕೆ ಹೋದರೂ, ನಿಮ್ಮೊಂದಿಗೆ ಬರುತ್ತೇನೆ. ಆದರೆ ಅದು ಕ್ರಮಬದ್ಧವಾಗಿರಬೇಕು ಅಷ್ಟೆ.” ಅಲ್ಲಿಂದ ಮೊದಲೇ ನಿರ್ದೇಶಿತ ಸ್ಥಾನವಾದ ನಟ್ರಂಪಲ್ಲಿಗೆ ಹೋಗಿ, ನನ್ನ ದೈನಂದಿನ ಚಟುವಟಿಕೆ ಮುಂದುವರೆಸಿದೆ. ಇದಾದ ಕೆಲವೇ ದಿನಗಳಲ್ಲಿ ಸ್ವಾಮೀಜಿ ನನ್ನನ್ನು ಸೇಲಂಗೆ ಆಹ್ವಾನಿಸಿದರು. ಅಲ್ಲಿ ಏಳು ಉಪನ್ಯಾಸಗಳನ್ನು ನೀಡಿದರು. ನಾನು ಎಲ್ಲ ಉಪನ್ಯಾಸಗಳನ್ನು ಕೇಳಿದೆ. ಕಡೆಯ ಉಪನ್ಯಾಸ ಅತ್ಯುತ್ತಮವಾಗಿತ್ತು. ಎಂದು ನನ್ನ ಅಭಿಪ್ರಾಯ. ಏಕೆಂದರೆ ಕೇಳುಗರ ಮಟ್ಟಕ್ಕೆ ಇಳಿದು ಅವರು ಮಾತನಾಡಿದ್ದರು. ಇದು ಅವರ ವಿಶೇಷತೆ.

೧೯೮೫ರಲ್ಲಿ ರಾಮಕೃಷ್ಣ ಮಠ ಮತ್ತು ಮಿಷನ್ ಯುವಸಮ್ಮೇಳನ ನಡೆಸಿತು. ನೂರಾರು ಯುವಕ–ಯುವತಿಯರು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಿದವರು ಇವರೊಬ್ಬರೇ, ವೇದಿಕೆಯ ಮೇಲೆ ಒಬ್ಬರೆ ಕುಳಿತು ಪ್ರಶ್ನವರ್ಷವನ್ನು ಶಾಂತವಾಗಿ ಎದುರಿಸಿದರು. ಅಷ್ಟೇ ಅಲ್ಲ, ಪ್ರತಿ ಉತ್ತರದ ಬಳಿಕವೂ ಪ್ರಶ್ನಿಸಿದವರನ್ನು “ನಿಮಗೆ ತೃಪ್ತಿಯಾಯಿತೆ? ಹಾಗಾದರೆ ಕುಳಿತುಕೊಳ್ಳಿ” ಎಂದು ಸಮಾಧಾನದಿಂದ ವ್ಯವಹರಿಸಿದರು.

ಈಗ, ಪ್ರಸ್ತುತ ಹೈದರಾಬಾದ್ ಮಠ ಕುರಿತು ಕೆಲವು ಹಿನ್ನೆಲೆ ಹೇಳಬೇಕು. ಮುಂಚೆ ಅದೊಂದು ಜೌಗು ಪ್ರದೇಶ. ಸುತ್ತಲೂ ಗಟಾರ, ದೊಡ್ಡಮೋರಿಗಳು. ಹತ್ತಿರದಲ್ಲಿ ಯಾವ ಕಟ್ಟಡಗಳೂ ಇರಲಿಲ್ಲ. ಒಂದು ದಿನ ಸ್ವಾಮಿ ರಂಗನಾಥಾನಂದರು ಈ ಜಾಗೆಯನ್ನು ನೋಡಿ ನನ್ನನ್ನು ಕೇಳಿದರು, “ಈ ಜಾಗದ ಮಾಲಿಕರು

ಯಾರು?" ಆತ ದೈಹಿಕ ಶಿಕ್ಷಣ ಇಲಾಖೆಯಲ್ಲಿ ಉದ್ಯೋಗಿ ಎಂದು ಪತ್ತೆ ಮಾಡಿದೆ. ಆಗ ಅವರೆಂದರು, "ಈ ಜಾಗ ನಮಗೆ ದೊರೆತರೆ ಚೆನ್ನ. ನಮಗೆ ಬೇಕಾದಂತೆ ಇದನ್ನು ಅಭಿವೃದ್ಧಿಪಡಿಸಬಹುದು." ಮರುವರ್ಷ ಫೆಬ್ರವರಿ ಅಥವಾ ಮಾರ್ಚ್‌ನಲ್ಲಿ, ಠಾಕೂರರ ಜಯಂತಿಯ ಮುನ್ನಾದಿನ ಸುಮಾರು ರಾತ್ರಿ ೨ ಗಂಟೆ ಹೊತ್ತಿನಲ್ಲಿ ಅವರ ಕೋಣೆಯಿಂದ ಟಕ–ಟಕ– ಟಕ ಶಬ್ದ ಬರುತ್ತಿತ್ತು. ನಾನು ಮೆಲ್ಲಗೆ ಅವರ ಕೋಣೆಗೆ ಹೋಗಿ ಕೇಳಿದೆ, "ಸ್ವಾಮೀಜಿ, ಏನು ನಡೆಸಿದ್ದೀರಿ?" "ನಾಳೆ ನಿನಗೆ ಗೊತ್ತಾಗುತ್ತದೆ" ಎಂದರು ಅವರು. ಸ್ವಾಮೀಜಿ ಒಂದೇ ಬೆರಳಿನಲ್ಲಿ ಬೆರಳಚ್ಚು ಮಾಡುತ್ತಿದ್ದರು.

ಮಾರನೆ ದಿನ ಠಾಕೂರರ ಜಯಂತಿ. ಆ ಜೌಗು ಪ್ರದೇಶವನ್ನು ತೆಗೆದುಕೊಳ್ಳಬೇಕು ಎಂದು ಆ ವೇಳೆಗೆ ಸ್ವಾಮೀಜಿ ನಿರ್ಧರಿಸಿಬಿಟ್ಟಿದ್ದರು. ತಮಗೆ ಪರಿಚಯವಿದ್ದ ಒಬ್ಬ ಪ್ರಭಾವೀ ಮಹಿಳೆಯ ಮೂಲಕ ಅಂದಿನ ಕಾಂಗ್ರೆಸ್ ಮುಖ್ಯಮಂತ್ರಿಗಳಾದ ಶ್ರೀ ವೆಂಗಲರಾವ್ ಅವರನ್ನು ಭೇಟಿಯಾಗಿ ತಾವು ಸಿಕಂದರಾಬಾದ್ ಆಶ್ರಮದ ಚಟುವಟಿಕೆಗಳನ್ನು ವಿಸ್ತರಿಸುತ್ತಿದ್ದೇವೆಂದು ಅದಕ್ಕಾಗಿ ಹೈದರಾಬಾದಿನ ಪಾಳುಬಿದ್ದ ಜೌಗು ಪ್ರದೇಶ ಲಗತ್ತಾಗಿದೆ ಎಂದು ತಿಳಿಸಿದರು. ಮುಖ್ಯಮಂತ್ರಿಗಳು "ಸರಿ"ಎಂದರು. ಸಂಬಂಧಪಟ್ಟ ವ್ಯಕ್ತಿಯನ್ನು, ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳನ್ನು ಕರೆದು, "ಈ ಜಾಗವನ್ನು ಯಾವುದೇ ಅಡೆತಡೆಯಿಲ್ಲದೆ ಇವರಿಗೆ ಮಾಡಿಕೊಡಿ" ಎಂದರು. ಸ್ವಾಮಿ ರಂಗನಾಥಾನಂದರು, "ಬೇಕಾದರೆ ನಾನು ಮತ್ತೆ ಬಂದು ತಮ್ಮನ್ನು ಕಾಣುತ್ತೇನೆ" ಎಂದರು. "ಅದರ ಅಗತ್ಯವಿಲ್ಲ ಸ್ವಾಮೀಜಿ, ಕಾರ್ಯದರ್ಶಿಗಳನ್ನು ನೀವಿರುವಲ್ಲಿಗೆ ನಾನೇ ಕಳಿಸಿಕೊಡುತ್ತೇನೆ" ಎಂದರು ವೆಂಗಲ ರಾವ್. ಅಂತೆಯೇ ಕೆಲವೇ ದಿನಗಳಲ್ಲಿ ಶಿಕ್ಷಣ ಇಲಾಖೆ, ಹಣಕಾಸು ಇಲಾಖೆ ಮತ್ತು ಕಂದಾಯ ಇಲಾಖೆ– ಈ ಮೂರು ಕಾರ್ಯದರ್ಶಿಗಳು ನಮ್ಮ ಸಿಕಂದರಾಬಾದ್ ಆಶ್ರಮಕ್ಕೆ ಬಂದರು. ಬಯಸಿದ ಭೂಮಿ ಆಶ್ರಮದ ಕೈ ಸೇರಿತು. ಈಗ ಮುಂದೆ ಬಂದು ನಿಂತದ್ದು ಹಣದ ಪ್ರಶ್ನೆ. ಸ್ವಾಮಿ ರಂಗನಾಥಾನಂದರು ಅದೇನು ದೊಡ್ಡ ಸಮಸ್ಯೆಯಲ್ಲವೆಂದರು. ಈ ನೂತನ ಕೇಂದ್ರದ ನಿರ್ಮಾಣವೆಚ್ಚದ ಪ್ರತಿಯೊಂದು ಪೈಸೆಯೂ ಆಂಧ್ರದಿಂದಲೇ ಬರಬೇಕು ಎಂಬುದು ಸ್ವಾಮೀಜಿಯ ಅಪೇಕ್ಷೆ. ಹೀಗೆಯೇ ಅವರು ಒಟ್ಟು ೫೦ ಲಕ್ಷ ರೂ. ದೇಣಿಗೆ ಸಂಗ್ರಹಿಸಿದರು. ಪ್ರಸ್ತುತ ಹೈದರಾಬಾದ್ ಆಶ್ರಮ ಅವರ ಮುಂಗಾಣ್ಕೆಯ, ದಿವ್ಯ ಪರಿಶ್ರಮದ ಫಲ. ೧೯೭೩ರಿಂದ ೧೯೯೩ರವರೆಗೆ ಅವರು ಈ ಕೇಂದ್ರದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

೧೯೯೩ರಲ್ಲಿ ನನ್ನ ಎಡಗಾಲು ತೊಂದರೆ ಕೊಡುತ್ತಿತ್ತು, ತೀವ್ರ ನೋವಿನಿಂದ ಬಳಲುತ್ತಿದ್ದೆ. ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವಂತೆ ಸ್ವಾಮೀಜಿ ಸಲಹೆ ನೀಡಿದರು. ಅವರ ಹತ್ತಿರದ ಭಕ್ತರೊಬ್ಬರು "ನಾನು ಎಲ್ಲ ವ್ಯವಸ್ಥೆ ಮಾಡುತ್ತೇನೆ" ಎಂದರು. ನಾನು ಆಗಸ್ಟ್ ೧೫ ಅಥವಾ ೧೬ರಂದು ದೆಹಲಿಗೆ ಹೊರಡುವುದಿತ್ತು. ಸ್ವಾಮೀಜಿ ಎಂದರು, "ನಾನೂ ಬರುತ್ತೇನೆ." ನಾನು "ಮಹಾರಾಜ್ ನೀವೇಕೆ ಬರಬೇಕು?" ಎಂದೆ. "ಆಪರೇಷನ್ ಹೇಗೆ ನಡೆಯುತ್ತದೆ ಎಂದು ನಾನು ನೋಡಬೇಕು." ಎಂದರವರು. ಆಗ ಅವರಿಗೆ ವಿಪರೀತ ಜ್ವರ ಬಂದಿತ್ತು. ಆದುದರಿಂದ ನಾನು ಹೇಳಿದೆ, "ಸ್ವಾಮೀಜಿ, ನೀವು ವಿಶ್ರಾಂತಿ ಪಡೆಯಿರಿ. ನಾನು ಹೋಗಲೇ ಬೇಕು, ಏಕೆಂದರೆ ಶಸ್ತ್ರಚಿಕಿತ್ಸೆಗೆ ಎಲ್ಲವೂ ಅಣಿಯಾಗಿಬಿಟ್ಟಿದೆ." ನಾನು ಒಬ್ಬನೇ ಹೋದೆ. ಆದರೆ ಕೆಲವೇ ದಿನಗಳಲ್ಲಿ ಅವರು ನನ್ನನ್ನು ನೋಡಲು ದೆಹಲಿಗೆ ಬಂದರು. ಆಸ್ಪತ್ರೆಯಲ್ಲಿದ್ದ ನರ್ಸ್‌ಗಳು, ಇತರ ಸಿಬ್ಬಂದಿಯವರು ಮಲೆಯಾಳದವರು. ನನ್ನನ್ನು ನೋಡಿಕೊಳ್ಳಲು ನ್ನನೊಂದಿಗಿದ್ದ ಮತ್ತೊಬ್ಬರು ಸ್ವಾಮಿಗಳು ಕೂಡ ಕೇರಳದವರು. ನನ್ನನ್ನು ನೋಡಲು ಬಂದ ರಂಗನಾಥಾನಂದರೊಂದಿಗೆ ಆಸ್ಪತ್ರೆಯ ಸಿಬ್ಬಂದಿ ವರ್ಗ, ನರ್ಸ್‌ಗಳು, ಮಲೆಯಾಳದಲ್ಲಿ ಮಾತನಾಡಿ ಬಹಳ ಸಂತೋಷಪಟ್ಟರು.

ಶ್ರೀಮತಿ ಇಂದಿರಾಗಾಂಧಿ ಅವರು ಕೂಡ ರಂಗನಾಥಾನಂದರಿಗೆ ಬಹಳ ನಿಕಟವಾಗಿದ್ದರು. ಅವರ ಪತಿ ತೀರಿಕೊಂಡಾಗ ಇಂದಿರಾಗಾಂಧಿ, "ಮಹಾರಾಜ್, ಕೆಲವು ದಿನ ಎಲ್ಲಾದರೂ ಶಾಂತವಾಗಿ ಇರಬೇಕು."

ಎಂದರು. ರಂಗನಾಥಾನಂದರು ತಕ್ಷಣ ಕಿಶನ್‌ಪುರದಲ್ಲಿ ವ್ಯವಸ್ಥೆ ಮಾಡಿದರು. ಅಲ್ಲಿ ಇಂದಿರಾಗಾಂಧಿ ತಮ್ಮ ಮಕ್ಕಳೊಡನೆ ಹನ್ನೊಂದು ದಿನವಿದ್ದರು. ಮುಂದೆ ೧೯೭೦ರಲ್ಲಿ ವಿವೇಕಾನಂದ ಸ್ಮಾರಕ ನಿರ್ಮಾಣವಾದಾಗ, ಸ್ಮಾರಕ ಸಮಿತಿಯವರು ಒಂದು ವಾರ ಕಾಲ ಪ್ರಾರಂಭೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಶ್ರೀಮತಿ ಗಾಂಧಿ ಅವರು ರಂಗನಾಥಾನಂದಜಿಯವರಿಗೆ ದೂರವಾಣಿ ಕರೆ ಮಾಡಿ, "ಸ್ವಾಮೀಜಿ, ನೀವು ಅಲ್ಲಿಗೆ ಹೋಗುತ್ತಿದ್ದೀರಾ?" ಎಂದು ಕೇಳಿದರು. ಸ್ವಾಮೀಜಿ "ಹೌದು" ಎಂದಾಗ "ಹಾಗಾದರೆ ನಾನೂ ಬರುತ್ತೇನೆ" ಎಂದು ಹೊರಟರು ಶ್ರೀಮತಿ ಗಾಂಧಿ.

ವಿವೇಕಾನಂದ ಶಿಲಾ ಸ್ಮಾರಕ ಸಮಿತಿಯ ಸ್ಥಾಪಕರಾದ ಏಕನಾಥ ರಾನಡೆ ಅವರು ಆರ್.ಎಸ್.ಎಸ್.ನವರು. ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಅವರೂ ಬಂಧನಕ್ಕೊಳಗಾಗಬೇಕಿತ್ತು. ಆದರೆ ರಂಗನಾಥಾನಂದರು ಸಂಬಂಧಿಸಿದ ಅಧಿಕಾರಿಗಳಿಗೆ, "ಬೇಡ, ಹಾಗೆ ಮಾಡಬೇಡಿ" ಎಂದರು. ಪರಿಣಾಮವಾಗಿ ರಾನಡೆ ಅವರು ಬಂಧನಕ್ಕೊಳಗಾಗಲಿಲ್ಲ. ಮುಂದೆ ಭಾನುವಾರಗಳಂದು ಸ್ವಾಮೀಜಿ ಕಲ್ಕತ್ತದಿಂದ ದೆಹಲಿಗೆ ಪಯಣಿಸಿ ಉಪನ್ಯಾಸ ಮಾಡುತ್ತಿದ್ದ ದಿನಗಳಲ್ಲಿ ಇಂದಿರಾಗಾಂಧಿ ಪ್ರಧಾನಮಂತ್ರಿಗಳಾಗಿದ್ದವರು ಹೇಳಿದರು, "ಮಹಾರಾಜ್, ನಿಮ್ಮ ಉಪನ್ಯಾಸಗಳನ್ನು ಕೇಳಬೇಕೆಂದು ನನಗೂ ಆಸೆ!" ಸ್ವಾಮೀಜಿ ಉತ್ತರಿಸಿದರು, "ನಿಮಗೆ ಸದಾ ಸ್ವಾಗತ. ಆಶ್ರಮದ ಬಾಗಿಲುಗಳು ಸದಾ ತೆರೆದಿವೆ. ಆದರೆ ನಿಮ್ಮ ಭದ್ರತೆಯದೇ ಸಮಸ್ಯೆ!"

### ಸ್ವಾಮೀಜಿಯವರ ಹಾಸ್ಯ ಪ್ರಜ್ಞೆ

ಸ್ವಾಮಿ ರಂಗನಾಥಾನಂದಜಿ ಶುಷ್ಕ ಸಂನ್ಯಾಸಿಯಾಗಿರಲಿಲ್ಲ. ಅವರಿಗೆ ಹೆಚ್ಚು ಹಾಸ್ಯ ಪ್ರಜ್ಞೆಯೂ ಇತ್ತು. ಒಂದು ದಿನ ಮಠದ ಆಸ್ಪತ್ರೆಯ ವೈದ್ಯರೊಬ್ಬರು ಇಂಜೆಕ್ಷನ್ ನೀಡಿದ ಬಳಿಕ ಸಿರಿಂಜ್‌ನ್ನು ಎಸೆದುಬಿಟ್ಟರು. ರಂಗನಾಥಾನಂದರು ಕುತೂಹಲದಿಂದ ಸಿರಿಂಜ್‌ನ್ನು ದಂಡ ಮಾಡಿದ್ದೇಕೆ ಎಂದು ಕೇಳಿದರು. ಅದಕ್ಕೆ ಆ ವೈದ್ಯ, "ಇವು ಬಳಸಿ ಬಿಸಾಕುವಂತಹವು. ಹಿಂದೆ ನಾವು ಬಳಸುತ್ತಿದ್ದ ಸಿರಿಂಜ್‌ಗಳು ಗಾಜಿನದಾಗಿದ್ದು ಬಳಸಿದ ಮೇಲೆ ಅವುಗಳನ್ನು ಸ್ಟೆರಿಲೈಜ್ ಮಾಡಿ ಮತ್ತೆ ಬಳಸುತ್ತಿದ್ದೆವು. ಈಗ ಕಾಲ ಬದಲಾಗಿದೆ. ಒಮ್ಮೆ ಮಾತ್ರ ಬಳಸಿ ಬಿಸಾಕಿಬಿಡುತ್ತೇವೆ."

ಸ್ವಾಮೀಜಿ ಎಂದರು, "ನೀವು ಅಮೆರಿಕನ್ ಪತ್ನಿಯರಂತೆ. ಮೊದಲ ಪತಿ– ಅವನನ್ನು ಬಿಸಾಕು! ಎರಡನೆಯವನು– ಅವನನ್ನೂ ಬಿಸಾಕು! ಅವರು ಕಾರುಗಳನ್ನು ಬಿಸಾಕುತ್ತಾರೆ. ಅವುಗಳನ್ನು ಇಟ್ಟುಕೊಳ್ಳಲು ಅವರಲ್ಲಿ ಜಾಗವೇ ಇಲ್ಲ!"

ಒಮ್ಮೆ ರಂಗನಾಥಾನಂದರಿಗೆ ಕೆಲವು ಔಷಧಿಗಳನ್ನು ನೀಡಿದ್ದರು. ತಮ್ಮ ಕೈಲಿದ್ದ ಮಾತ್ರೆಗಳನ್ನು ಯಾವ ಬಗೆಯವು ಎಂದು ವಿಚಾರಿಸಿಕೊಂಡರು. ನಂತರ, "ಇದನ್ನು ಸ್ವಾಮಿ ಅನನ್ಯಾನಂದರಿಗೆ ಕೊಡಿ" ಎಂದರು. ನಾನು ಹೌಹಾರಿ, "ಸ್ವಾಮೀಜಿ ನನಗೆ ಯಾವ ಖಾಯಿಲೆಯೂ ಇಲ್ಲ, ನಾನೇಕೆ ಔಷಧಿ ತೆಗೆದುಕೊಳ್ಳಬೇಕು?" ಎಂದು ಪ್ರತಿಭಟಿಸಿದೆ. ಸ್ವಾಮೀಜಿ, "ಹಾಗಾದರೆ ಅವುಗಳನ್ನು ಪ್ರಸಾದವಾಗಿ ತೆಗೆದುಕೊ!" ಎಂದರು. ವಿಚಾರಿಸಲಾಗಿ ಆ ಔಷಧಿಗಳು ಬಿ–ಕಾಂಪ್ಲೆಕ್ಸ್ ವಿಟಮಿನ್ ಮಾತ್ರೆಗಳು ಎಂದು ಆಮೇಲೆ ತಿಳಿಯಿತು.

ಸ್ವಾಮೀಜಿ ಬೇಲೂರು ಮಠಕ್ಕೆ ಹೋಗುವಾಗ ಅಥವಾ ಅಲ್ಲಿಂದ ಹಿಂದಿರುಗುವಾಗ ಅದ್ವೈತ ಆಶ್ರಮಕ್ಕೆ ಬಂದು ಕಡೇ ಪಕ್ಷ ಒಂದು ದಿನವಾದರೂ ಉಳಿಯುತ್ತಿದ್ದರು. ಒಮ್ಮೆ ಬೇಲೂರು ಮಠದಲ್ಲಿ ಮೀಟಿಂಗ್, ಊಟ ಮುಗಿಸಿ ಹೈದರಾಬಾದಿಗೆ ಹೊರಡುವವರಿದ್ದರು. ಅವರು ಮಧ್ಯಾಹ್ನದ ಊಟ ಮುಗಿಸಿ ಹೊರಟಾಗ ಅವರಿಗೆ ವಿದಾಯ ಹೇಳಲು ಎಲ್ಲ ಸೋದರ ಸಂನ್ಯಾಸಿಗಳು ನೆರೆದಿದ್ದರು. ಅವರಲ್ಲೊಬ್ಬರು ಕೇಳಿದರು: "ನಿಮ್ಮ ಟಿಕೆಟ್ ಓ.ಕೆ ಅಲ್ಲವೇ ಸ್ವಾಮೀಜಿ?" ಸ್ವಾಮೀಜಿ ಏನೂ ಉತ್ತರಿಸದೆ ಸುಮ್ಮನೆ ಮುಗುಳ್ನಕ್ಕರು.

ರಾತ್ರಿ ೮ ಗಂಟೆಯ ವೇಳೆಗೆ ದೊಡ್ಡ ನಗೆ ಹೊತ್ತು ರಂಗನಾಥಾನಂದರು ಅದ್ವೈತಾಶ್ರಮಕ್ಕೆ ಹಿಂದಿರುಗಿದರು ಮತ್ತು ನುಡಿದರು: "ನೋಡಿದಿರಾ, 'ಭಾರತೀಯ ಓ.ಕೆ' ನಿಜವಾದ ಓ.ಕೆ ಆಗಿರಲಿಕ್ಕಿಲ್ಲ!" ವಿಮಾನ ಸರಿಯಾದ ಸಮಯಕ್ಕೆ ಹೊರಟಿರಲಿಲ್ಲ. ಆದುದರಿಂದ ಸ್ವಾಮೀಜಿ ಟಿಕೆಟ್ ಬದಲಿಸಿಕೊಂಡು ಮರುದಿನ ಮುಂಜಾನೆ ಅಲ್ಲಿಂದ ಹೊರಟರು. ಹೀಗೆ ಸ್ವಾಮೀಜಿ ಪ್ರತಿಯೊಂದು ಪ್ರಸಂಗಕ್ಕೂ ತಿಳಿಹಾಸ್ಯದ ಲೇಪ ನೀಡುತ್ತಿದ್ದರು. ನಾನು ಯುವಕನಾಗಿದ್ದಾಗ ಅವರಿಂದ ಕೇಳಿದ ಹಾಸ್ಯ ಕಥನಗಳು ಅನೇಕ !

ನಾನು ಕಳೆದ ಬಾರಿ ಅಂದರೆ ೨೦೦೩ರಲ್ಲಿ ಸರ್ವಾಗತಾನಂದರೊಂದಿಗೆ ಬೇಲೂರು ಮಠಕ್ಕೆ ಹೋದಾಗ ರಂಗನಾಥಾನಂದರನ್ನು ಅವರಿದ್ದ ಅಧ್ಯಕ್ಷರ ನಿಲಯದಲ್ಲಿ ಭೇಟಿಯಾದೆ. ಅವರಾಗ ಪ್ರಣಾಮಗಳನ್ನು ಸ್ವೀಕರಿಸುತ್ತಿದ್ದರು. ಅವರ ಸಹಾಯಕ ಸುದರ್ಶನ, ನಾನು ಬಂದಿರುವುದಾಗಿ ಪ್ರಣಾಮಿ ಕಾರ್ಯ ಮುಗಿಯುವವರೆಗೆ ಕಾಯುವುದಾಗಿ ತಿಳಿಸಿದರು. ಅವರು ಸುದರ್ಶನ ಅವರಿಗೆ, "ಅವರನ್ನು ಇಲ್ಲಿಗೆ ಕರೆದು ತಾ" ಎಂದರು. ನಾನು, "ಬೇಡ, ಬೇಡ ನಾನೀಗ ಅಲ್ಲಿ ಬರಬಾರದು" ಎಂದೆ. ಸ್ವಾಮೀಜಿ ಒತ್ತಾಯ ಮಾಡಿ "ಇಲ್ಲ, ಇಲ್ಲ, ಅವರಿಲ್ಲಿ ಬರಲಿ, ಅವರಿಗೊಂದು ಕುರ್ಚಿ ಹಾಕು" ಎಂದರು. ಅನಿವಾರ್ಯವಾಗಿ ನಾನು ಪ್ರವೇಶಿಸಿದೆ. ಆದರೆ ಹೇಳಿದೆ, "ಸ್ವಾಮೀಜಿ ಅವರೆಲ್ಲ ಪ್ರಣಾಮ ಸಲ್ಲಿಸುವುದು ಮುಗಿಯಲಿ." ಅವರು ಅಧಿಕಾರವಾಣಿಯಲ್ಲಿ ಹೇಳಿದರು, "ಪರವಾಯಿಲ್ಲ, ನೀನು ಕುಳಿತುಕೊ ಅವರು ಪ್ರಣಾಮ ಮಾಡಲಿ" ವಿಧಿಯಿಲ್ಲದೆ ನಾನು ಅಲ್ಲಿ ಕುಳಿತುಕೊಂಡೆ. ೧೫–೨೦ ನಿಮಿಷಗಳ ಬಳಿಕ ಇದೆಲ್ಲ ಮುಗಿದ ಮೇಲೆ ಅವರನ್ನು ಹಿಂಬಾಲಿಸಿ ಅವರ ಕೊಠಡಿಗೆ ಹೋದೆ. ಅಲ್ಲಿಯೂ ಒಂದರ್ಧ ಗಂಟೆ ಅವರೊಂದಿಗಿದ್ದೆ. ಆ ವೇಳೆಗೆ ಸಂಜೆಯ ಆರತಿಯೂ ಮುಗಿದಿತ್ತು.

ನಾವು ಹೈದರಾಬಾದಿನಲ್ಲಿದ್ದಾಗ ಸ್ವಾಮಿ ರಂಗನಾಥಾನಂದರು ನಮ್ಮೊಂದಿಗೆ ಬೃಹದಾರಣ್ಯಕ ಉಪನಿಷತ್ತು ಕುರಿತು ಚರ್ಚಿಸಿದ್ದರು. ಅವರು ತೀರಿಕೊಳ್ಳುವ ಒಂದು ವರ್ಷ ಮೊದಲು, ಅದು ಗ್ರಂಥರೂಪದಲ್ಲಿ ಪ್ರಕಟವಾಗುತ್ತಿರುವುದರ ಕುರಿತು 'ಪ್ರಬುದ್ಧ ಭಾರತ' ಪತ್ರಿಕೆಯಲ್ಲಿ ನಾನು ಜಾಹಿರಾತು ನೋಡಿದೆ. ನಾನು ಪ್ರಕಾಶಕರಿಗೆ ಪತ್ರ ಬರೆದೆ, "ನನಗೆ ಒಂದು ಪ್ರತಿ ಬೇಕು, ದಯವಿಟ್ಟು ಕಳಿಸಿಕೊಡಿ." ಆ ಪುಸ್ತಕ ಕೈ ಸೇರಿದ ದಿನವೇ ಮತ್ತೊಂದು ಸುದ್ದಿ ಬಂತು, ರಂಗನಾಥಾನಂದರು ನಮ್ಮನ್ನು ಅಗಲಿದ್ದಾರೆ ಎಂದು.

ಸ್ವಾಮಿ ರಂಗನಾಥಾನಂದರು ರಾಮಕೃಷ್ಣ ಮಹಾಸಂಘದಲ್ಲಿಯೇ ವಿಶೇಷ ಸಾಲಿಗೆ ಸೇರಿದವರು. ನಾನಂತಹ ಕರುಣಾಮಯ, ಸಹಾಯಕಾರಿ, ಮಹಾಉದಾರಿ ಸ್ವಾಮಿಗಳನ್ನು ಕೆಲವೇ ಕೆಲವು ಜನರನ್ನು ಕಂಡಿರುವೆ. ಯಾರು ಬೇಕಾದರೂ ಅವರ ಬಳಿಸಾರಬಹುದಿತ್ತು. ಕಾಣಬಹುದಿತ್ತು. ಅವರು ಅಷ್ಟೊಂದು ಪ್ರಸಿದ್ಧರಾದ ಆ ದಿನಗಳಲ್ಲಿ ನನ್ನಂತಹ ಒಬ್ಬ ಬ್ರಹ್ಮಚಾರಿ ಸುಲಭವಾಗಿ ಅವರನ್ನು ಭೇಟಿಯಾಗಬಹುದಿತ್ತು. ಅವರು ಕೋಪಗೊಂಡಿದ್ದನ್ನು, ದುಃಖಿತರಾಗಿರುವುದನ್ನು, ಖಿನ್ನರಾಗಿರುವುದನ್ನು ನಾನು ಕಾಣಲೇ ಇಲ್ಲ. ವಿವಿಧ ಬೇಡಿಕೆಗಳನ್ನು ಹೊತ್ತ ಜನ ನದಿಗಳಂತೆ ಅವರತ್ತ ಪ್ರವಹಿಸುತ್ತಿದ್ದರು. ಸ್ವಾಮೀಜಿ ಅವುಗಳನ್ನು ಈಡೇರಿಸಲು ತಮ್ಮ ಶಕ್ತಿಮೀರಿ ಪ್ರಯತ್ನಿಸುತ್ತಿದ್ದರು. ಆದರೆ ತಮಗಾಗಿ ಏನನ್ನೂ ಸಂಗ್ರಹಿಸಲಿಲ್ಲ, ಇಟ್ಟುಕೊಳ್ಳಲಿಲ್ಲ. ಕನಿಷ್ಠ ಆವಶ್ಯಕತೆಗಳೊಂದಿಗೆ ಕೊನೆಯ ದಿನದವರೆಗೂ ಬಾಳಿದರು. ಸ್ವಾಮಿ ರಂಗನಾಥಾನಂದರಿಗೆ ಅನೇಕ ನಗದು ಬಹುಮಾನಗಳು, ಪ್ರಶಸ್ತಿ ಪುರಸ್ಕಾರಗಳು ಬಂದವು. ಆದರೆ ಇವೆಲ್ಲದಕ್ಕೂ ಅವರ ಪ್ರತಿಕ್ರಿಯೆ: "ಬೇಲೂರು ಮಠ ಒಪ್ಪಬೇಕು. ನಾನು ಮಹಾಸಂಘದ ದಾಸ." ಇದು ಅವರ ಮಹಾನತೆ. 'ಇಂದಿರಾಗಾಂಧಿ ರಾಷ್ಟ್ರೀಯ ಭಾವೈಕ್ಯತಾ ಪ್ರಶಸ್ತಿ' ಅವರಿಗೆ ಅಲಭಿಸಿದಾಗಲೂ ಅವರು ಹೇಳಿದ್ದು: 'ಬೇಲೂರು ಮಠ ಒಪ್ಪಬೇಕು.'

* * * *

# ೧೪. ಕಟ್ಟಾ ಪರಿಪೂರ್ಣತಾವಾದಿ

–ಸ್ವಾಮಿ ನಿಖಿಲೇಶ್ವರಾನಂದ*

ತಾನು ಸ್ವಾಮಿ ರಂಗನಾಥಾನಂದಜಿಯವರನ್ನು ಪ್ರಥಮ ಬಾರಿಗೆ ಭೇಟಿ ಆದದ್ದು ೧೯೬೦ರಲ್ಲಿ. ಅವರು ರಾಯಪುರಕ್ಕೆ (ಈಗ ಅದು ಛತ್ತೀಸ್‌ಗಢ್ ನಲ್ಲಿದೆ.) ವೇದಾಂತವನ್ನು ಕುರಿತು ಉಪನ್ಯಾಸ ಮಾಡಲು ಬಂದಿದ್ದರು. ಅವರ ಭಾಷಣದಿಂದ ನಾನು ಬಹಳ ಪ್ರಭಾವಿತನಾದೆ. ಆದುದರಿಂದ ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡಿದೆ. ಅವರು ನನ್ನಲ್ಲಿ ತೀವ್ರ ಆಸಕ್ತಿ ತೋರಿಸರು ಮತ್ತು ನಾನು ಕೇವಲ ವಿದ್ಯಾರ್ಥಿಯಾಗಿದ್ದರೂ, ಬಹಳ ಮಂದಿ ಭೇಟಿಯಾಗಲು ಕಾದಿದ್ದರೂ ನನಗೆ ವಿಶೇಷ ಗಮನ ನೀಡಿದರು. ನಾನು ವಿವೇಕಾನಂದರನ್ನು ಕುರಿತು ಯಾವ ಪುಸ್ತಕಗಳನ್ನು ಓದಿದ್ದೇನೆ ಎಂದು ವಿಚಾರಿಸಿದರು. ನಾನು ಅದಾಗಲೇ ಹಲವಾರು ಗ್ರಂಥಗಳನ್ನು ಓದಿರುವುದನ್ನು ಮೆಚ್ಚಿ ಪ್ರೋತ್ಸಾಹಿಸಿದರು ಮತ್ತು ರಾಮಕೃಷ್ಣ – ವಿವೇಕಾನಂದ ಸಾಹಿತ್ಯವನ್ನು ಬಿಡದೆ ಅಭ್ಯಾಸ ಮಾಡಬೇಕು ಎಂದರು. ಇದು ಅವರು ಯುವಜನರ ಮೇಲೆ ಮತ್ತು ರಾಮಕೃಷ್ಣ–ವಿವೇಕಾನಂದ ಸಾಹಿತ್ಯದ ಮೇಲೆ ಇಟ್ಟಿರುವ ಪ್ರೀತಿಯನ್ನು ಬಿಂಬಿಸುತ್ತದೆ.

ರಂಗನಾಥಾನಂದರು ರಾಯಪುರಕ್ಕೆ ನೀಡಿದ ಎರಡನೆ ಭೇಟಿಯ ಸಂದರ್ಭದಲ್ಲಿ ಅವರ ವ್ಯಕ್ತಿತ್ವದ ಮತ್ತೊಂದು ಮುಖದ ಪರಿಚಯವಾಯಿತು. ಆ ವೇಳೆಗೆ ನಾನು ರಾಯಪುರದ ಆಶ್ರಮವನ್ನು ಸೇರಿದ್ದೆ, ಆದರೆ ಅದು ಅಧಿಕೃತ ವಾಗಿರಲಿಲ್ಲ. ನನಗೆ ಸ್ವಾಮಿ ರಂಗನಾಥಾನಂದರ ಆಪ್ತ ಪರಿಚಾರಕನ ಕೆಲಸ ನೀಡಿದ್ದರು.

ಪ್ರತಿಯೊಂದು ಕೆಲಸವನ್ನು ಸರಿಯಾಗಿ, ಸಮರ್ಥವಾಗಿ ಮಾಡಬೇಕು ಎಂಬುದು ಸ್ವಾಮೀಜಿಯವರ ನಿಲುವು. ಕೊಂಚ ತಡವಾದರೂ, ಕೆಲಸದ ಗುಣಮಟ್ಟ ಸ್ವಲ್ಪ ಇಳಿಮುಖವಾದರೂ ಅವರು ನನ್ನನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಆಗ ಚೆನ್ನಾಗಿ ಬೈದರೂ ಅನಂತರ ನಾನು ಮಾಡಿದ ತಪ್ಪುಗಳನ್ನು ತಾಳ್ಮೆಯಿಂದ, ಪ್ರೀತಿಯಿಂದ ತೋರಿಕೊಟ್ಟು ತಿದ್ದುತ್ತಿದ್ದರು. ಮುಂದೆ ಆ ತಪ್ಪುಗಳಾಗದಂತಿರಲು ಇದು ಸಹಾಯಕವಾಗುತ್ತಿತ್ತು. ಇದು ಅವರು ಕಟ್ಟಾ ಪರಿಪೂರ್ಣತಾವಾದಿ.

ನಾನು ಅಧಿಕೃತವಾಗಿ ರಾಮಕೃಷ್ಣ ಮಹಾಸಂಘವನ್ನು ೧೯೬೬ರಲ್ಲಿ ಬೇಲೂರು ಮಠದಲ್ಲಿ ಸೇರಿದೆ. ಆಗ ರಂಗನಾಥಾನಂದಜಿ ಮಹಾರಾಜ್ ಟ್ರಸ್ಟೀಗಳ ಮೀಟಿಂಗಿಗೆಂದು ಅಲ್ಲಿಗೆ ಬಂದಿದ್ದರು. ನಾನು ಮಹಾಸಂಘವನ್ನು ಸೇರಿರುವುದನ್ನು ಕೇಳಿ ಬಹಳ ಸಂತೋಷಪಟ್ಟರು ಮತ್ತು ತಾವಾಗಿಯೇ, ಸಂನ್ಯಾಸ –ತ್ಯಾಗ ಜೀವನ ಕುರಿತು ಅನೇಕ ಸಲಹೆಗಳನ್ನು ನೀಡಿದರು. ಜೊತೆಗೆ ಧಾರಾಳವಾಗಿ ಆಶೀರ್ವದಿಸಿದರು.

ಪೂಜ್ಯ ಸ್ವಾಮೀಜಿಯವರಿಗೆ ಶ್ರೀರಾಮಕೃಷ್ಣರ ನೇರಶಿಷ್ಯರನ್ನು ಕಂಡರೆ ಬಹಳ ಭಕ್ತಿ. ಒಮ್ಮೆ ನಾನವರನ್ನು ಬೇಲೂರು ಮಠದಲ್ಲಿ ಭೇಟಿಯಾಗಿ ಬಿಹಾರದ ಚಾಪ್ರಾದಲ್ಲಿ ಒಂದು ಕಾಲೇಜಿನ ಹಿಂದಿ ಪ್ರೊಫೆಸರ್ ಒಬ್ಬರು ಹಿಂದಿಯಲ್ಲಿ 'ವಿವೇಕ ಶಿಖಾ' ಎಂಬ ಮಾಸಪತ್ರಿಕೆ ಆರಂಭಿಸಿದ್ದಾರೆ ಎಂದು ತಿಳಿಸಿದೆ. ಮತ್ತು ಈ ಪತ್ರಿಕೆಗಾಗಿ ಚಂದಾದಾರರನ್ನು ನಾನು ಸೇರಿಸಲು ಪ್ರಯತ್ನಿಸುತ್ತಿದ್ದೇನೆ, ಭಕ್ತವರ್ಗದವರಿಗೂ ಅವರ ಬಂಧುಮಿತ್ರರಿಗೂ ಮನವಿ ಸಲ್ಲಿಸುತ್ತಿದ್ದೇನೆ ಎಂದು ತಿಳಿಸಿದೆ. ನಾನು ಈ ಮಾತುಗಳನ್ನು ಹೇಳುತ್ತಿರುವಾಗ ಅವರು ಹಾಸಿಗೆಯಲ್ಲಿ ಮಲಗಿ ವಿಶ್ರಮಿಸುತ್ತಿದ್ದರು. ನನ್ನ ಮಾತು ಮುಗಿಯುತ್ತಿದ್ದಂತೆ ಧಿಗ್ಗನೆದ್ದು ಕುಳಿತು, "ಏನೆಂದೆ? ಚಾಪ್ರಾ? ಓಹ್

---

* ಗುಜರಾತಿನ ವಡೋದರಾದ ರಾಮಕೃಷ್ಣ ಮಠ ಮತ್ತು ಮಿಷನ್ನಿನ ವಿವೇಕಾನಂದ ಮೆಮೋರಿಯಲ್‌ನ ಕಾರ್ಯದರ್ಶಿ.

ಅದು ಲಾಟು ಮಹಾರಾಜರ (ಸ್ವಾಮಿ ಅದ್ಭುತಾನಂದ) ಜನ್ಮಸ್ಥಳ!" ಅವರು ಡಾ. ಲಾಭ್ ಅವರಿಗೆ ತನ್ನನ್ನು ಸಂಪರ್ಕಿಸಲು ತಕ್ಷಣ ತಿಳಿಸಬೇಕು ಎಂದು ಸೂಚಿಸಿದರು. ಅಲ್ಲೊಂದು ಖಾಸಗಿ ಆಶ್ರಮ ಆರಂಭಿಸುವ ಪ್ರಯತ್ನ ನಡೆಸಬೇಕೆಂದು ಅವರಿಗೆ ತಿಳಿಸುವ ಇರಾದೆ ಸ್ವಾಮೀಜಿಯವರದು. ನಾನು ಸ್ವಾಮೀಜಿಯವರನ್ನು ಭೇಟಿಯಾದದ್ದು 'ವಿವೇಕ ಶಿಖಾ'ದ ಚಂದಾದಾರರ ಸಂಖ್ಯೆ ವೃದ್ಧಿಸುವ ಸಲುವಾಗಿ ಸಹಾಯ ಬೇಡಲು. ಆದರೆ ಆ ವಿಷಯದತ್ತ ಗಮನ ಹರಿಸದೆ ಅಲ್ಲೊಂದು ಖಾಸಗಿ ಆಶ್ರಮ ಆರಂಭಿಸುವ ವಿಚಾರಕ್ಕೆ ಒತ್ತುಕೊಡಲು ರಂಗನಾಥಾನಂದಜಿ ಆರಂಭಿಸಿದರು. ಭೇಟಿಯಾದಾಗಲೆಲ್ಲ ಅವರು ಚಾಪ್ರಾದ ಖಾಸಗಿ ಆಶ್ರಮದ ಪ್ರಗತಿಯ ವಿಚಾರವಾಗಿ ಪ್ರಶ್ನಿಸುತ್ತಿದ್ದರು. ಸ್ವಾಮಿ ರಂಗನಾಥಾನಂದರ ಸಲಹೆ ಸೂಚನೆಗಳ ಮೇರೆಗೆ ಡಾ. ಕೇದಾರನಾಥ್ ಲಾಭ್ ಅವರು ಈ ಖಾಸಗಿ ಆಶ್ರಮವನ್ನು ಆರಂಭಿಸಿದ್ದರು. ಅಷ್ಟೇ ಅಲ್ಲ ದೊಡ್ಡ ಮೊತ್ತದ ವಂತಿಗೆಯನ್ನು ಸಂಗ್ರಹಿಸಿ ಅದನ್ನು ಡಾ. ಲಾಭ್ ಅವರಿಗೆ ಕಳಿಸಿಕೊಟ್ಟರು. ಆ ಹಣದಿಂದ ಅಲ್ಲೊಂದು ರಾಮಕೃಷ್ಣ ಮಂದಿರ, ಸಾಧು ನಿವಾಸ ನಿರ್ಮಾಣವಾಯಿತು.

ಸ್ವಾಮಿ ರಂಗನಾಥಾನಂದರಲ್ಲಿ ಮಿಷನರಿ ಪ್ರವೃತ್ತಿ ಆಳವಾಗಿತ್ತು. ಅವರ ಉಪನ್ಯಾಸಗಳು ಮುಗಿದ ಮೇಲೆ ರಾಮಕೃಷ್ಣ – ವಿವೇಕಾನಂದ ಸಾಹಿತ್ಯ ಎಷ್ಟು ಮಾರಾಟವಾಯಿತು ಎಂದು ವಿಚಾರಿಸುತ್ತಿದ್ದರು. ತಮ್ಮ ಭಾಷಣದ ಮಧ್ಯೆ ಒಂದರೆಡು ಪುಸ್ತಕಗಳ ಹೆಸರನ್ನು ಉಲ್ಲೇಖಿಸಿಬಿಡುತ್ತಿದ್ದರು. ಭಾಷಣ ಮುಗಿಯುತ್ತಿದ್ದಂತೆ ಜನರು ಈ ಪುಸ್ತಕಗಳನ್ನು ಹೆಚ್ಚಾಗಿ ಕೊಳ್ಳುವುದು ಕಂಡುಬರುತ್ತಿತ್ತು. ಸ್ವಾಮಿ ವಿವೇಕಾನಂದರ ೧೨೫ನೇ ಜನ್ಮದಿನೋತ್ಸವವನ್ನು ರಾಷ್ಟ್ರಾದ್ಯಂತ ಬಹಳ ದೊಡ್ಡದಾಗಿ ಆಚರಿಸಲಾಯಿತು. ಸ್ವಾಮಿ ರಂಗನಾಥಾನಂದರು ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರ, ಆಯ್ದ ಭಾಷಣಗಳ ಪುಸ್ತಕವೊಂದನ್ನು 'ಸೆಲೆಕ್ಷನ್ಸ್ ಫ್ರಮ್ ಕಂಪ್ಲೀಟ್ ವರ್ಕ್ಸ್ ಆಫ್ ಸ್ವಾಮಿ ವಿವೇಕಾನಂದ' ಶೀರ್ಷಿಕೆಯಡಿಯಲ್ಲಿ ಪ್ರಕಟಿಸುವಲ್ಲಿ ವಿಶೇಷ ಆಸಕ್ತಿ ವಹಿಸಿದರು. ಈ ಪುಸ್ತಕ ವಿಶೇಷ ರಿಯಾಯಿತಿ ಬೆಲೆಯಲ್ಲಿ ಕೇವಲ ೧೦ ರೂ.ಗಳಿಗೆ ಜನರಿಗೆ ಲಭ್ಯವಾಯಿತು.

ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದಾಗ ಆ ದಿನಗಳಲ್ಲಿ ಸ್ವಾಮೀಜಿ ತಮಾಷೆಯಾಗಿ ಅವರಿಗೆ ಹೇಳುತ್ತಿದ್ದರು. "೫ ರೂ.ನ ಎರಡು ಸಿನೆಮಾ ಟಿಕೆಟ್ ಕ್ಯಾನ್ಸಲ್ ಮಾಡಿ ಈ ಪುಸ್ತಕ ಕೊಂಡುಕೊಳ್ಳಿ" ಇದರಿಂದ ನಿಮ್ಮ ಇಡೀ ಜೀವನವೇ ಪರಿವರ್ತನೆ ಹೊಂದುವುದು.

೧೯೮೯ರಲ್ಲಿ ಅವರು ರಾಜಕೋಟಕ್ಕೆ ಬಂದಿದ್ದರು. ಆ ಸಮಯದಲ್ಲಿ ನಾನು ಗುಜರಾತಿ ಮಾಸಪತ್ರಿಕೆ 'ಶ್ರೀ ರಾಮಕೃಷ್ಣ ಜ್ಯೋತ' ದ ಸಂಪಾದಕನಾಗಿದ್ದೆ. ಒಂದು ಮುಂಜಾನೆ (೧೪–೧೦–೧೯೮೯) ನಾನು ಅವರ ಬಳಿ ಹೋಗಿ ಅವರ ಪುಸ್ತಕ 'ಎಟರ್ನಲ್ ವ್ಯಾಲ್ಯೂಸ್ ಫಾರ್ ಎ ಚೇಂಜಿಂಗ್ ಸೊಸೈಟಿ'ಯ ಮೇಲೆ ಅವರ ಹಸ್ತಾಕ್ಷರ ಪಡೆದುಕೊಂಡೆ. ಆ ದಿನ ಅವರು ಒಳ್ಳೆಯ ಲಹರಿಯಲ್ಲಿದ್ದರು. ಬಹಳ ಹೊತ್ತು ನನ್ನೊಂದಿಗೆ ಮಾತನಾಡಿದರು. ಪತ್ರಿಕೆಯ ಗುಣಮಟ್ಟ ಮತ್ತು ಪ್ರಸಾರ ಹೆಚ್ಚಿಸುವ ಕುರಿತು ಅಮೂಲ್ಯ ಸಲಹೆ ಸೂಚನೆ ನೀಡಿದರು. ಜೊತೆಗೆ ದಿವ್ಯತ್ರಯರ ಜೀವನ ಸಂದೇಶಗಳನ್ನು ಆಧರಿಸಿ ವೇದಾಂತದ ಉಪನ್ಯಾಸಗಳನ್ನು ಮಾಡಲು ಪ್ರವಾಸಗಳನ್ನು ಕೈಗೊಳ್ಳಲು ಪ್ರೋತ್ಸಾಹಿಸಿದರು. ಅಲ್ಲದೆ ತಮ್ಮ ಎಲ್ಲ ಭಾಷಣಗಳ ಯಶಸ್ಸಿನ ಹಿಂದಿರುವ ಗುಟ್ಟನ್ನು ಬಿಚ್ಚಿಟ್ಟರು. ಅವರೆಂದರು, "ನಾನು ಭಾಷಣವನ್ನು ಆರಂಭಿಸುವುದಕ್ಕೆ , ಅವರ ಸಂದೇಶ ಪ್ರಸಾರಕ್ಕೆ ನನ್ನನ್ನೊಂದು ಉತ್ತಮ ಯಂತ್ರವನ್ನಾಗಿಸುವಂತೆ ಶ್ರೀ ರಾಮಕೃಷ್ಣರಲ್ಲಿ ಪ್ರಾರ್ಥಿಸುತ್ತೇನೆ. ಈ ಕಾರಣದಿಂದಾಗಿ ಒಂದೇ ಒಂದು ಭಾಷಣ ಕೂಡ ಸೋತಿಲ್ಲ. ನನಗೆ ಎಲ್ಲೆಡೆಯೂ ಅಪಾರ ಜಯ ದೊರೆಯಲು ಈ ಮನೋಭಾವವೇ ಕಾರಣ."

೧೯೭೮ರಲ್ಲಿ ಹೊಸದಾಗಿ ಆರಂಭವಾದ ಪೋರಬಂದರ ಕೇಂದ್ರವನ್ನು ವಹಿಸಿಕೊಳ್ಳುವಂತೆ ಕೇಂದ್ರಕಚೇರಿಯಿಂದ ನನಗೆ ಆದೇಶ ಬಂದಿತು. ಆದರೆ ಗುಜರಾತಿ ಮಾಸಪತ್ರಿಕೆಯ ಜವಾಬ್ದಾರಿಯನ್ನು

ಇನ್ನೂ ಎರಡು ವರ್ಷ ನಿರ್ವಹಿಸಬೇಕಾಗಿತ್ತು. ನನಗೆ ಇದು ಬಹಳ ಕಷ್ಟದ ಕೆಲಸ ಎನಿಸಿತು. ಆದುದರಿಂದ ವಿಶೇಷ ಆಶೀರ್ವಾದ ಗಳನ್ನು ಬೇಡಿ ರಂಗನಾಥಾನಂದರಿಗೆ ಪತ್ರ ಬರೆದೆ. ಅವರು ರವೀಂದ್ರನಾಥ ಠಾಗೋರರ ಸಾಲುಗಳನ್ನುದ್ಧರಿಸಿದ್ದ ಒಂದು ಸುಂದರ ಪತ್ರವನ್ನು ಬರೆದರು.

ಏಪ್ರಿಲ್ ೧೮ರಂದು ಗುಜರಾತ್ ಸರ್ಕಾರವು ಸ್ವಾಮಿ ವಿವೇಕಾನಂದರು ತಂಗಿದ್ದರಿಂದ ಪಾವನಗೊಂಡಿದ್ದ ಚಾರಿತ್ರಿಕವಾದ ದಿಲಾರಾಮ ಬಂಗಲೆಯನ್ನು ರಾಮಕೃಷ್ಣ ಮಿಷನ್‌ಗೆ ವಹಿಸಿಕೊಟ್ಟಿತು. ಅಲ್ಲಿ ಮಿಷನ್‌ನ ಹೊಸ ಕೇಂದ್ರ ಅದೇ ದಿನ ಕಾರ್ಯಾರಂಭ ಮಾಡಿತು. ಪೂಜ್ಯ ರಂಗನಾಥಾನಂದಜಿ ಅನಾರೋಗ್ಯದ ಕಾರಣದಿಂದ ಅಂದು ಬರಲಾಗಲಿಲ್ಲ. ಈ ಹಿಂದೆಯೇ ಆ ದಿನಕ್ಕಾಗಿ ಸಂದೇಶವೊಂದನ್ನು ಕಳಿಸುವಂತೆ ಕೋರಿ ಅವರಿಗೆ ಪತ್ರ ಬರೆದಿದ್ದೆ. ಆ ಸಮಯದಲ್ಲಿ ಅವರು ಕಲ್ಕತ್ತದ ಆಸ್ಪತ್ರೆಗೆ ದಾಖಲಾಗಿದ್ದರು. ಅವರು ಬೇಲೂರು ಮಠಕ್ಕೆ ಹಿಂದಿರುಗುತ್ತಿದ್ದಂತೆಯೇ ೨೦೦೫ರ ಏಪ್ರಿಲ್ ೧೩ರಂದು ದಿವ್ಯವಾದ ಸಂದೇಶವೊಂದನ್ನು ಕಳಿಸಿದರು. ಅವರು ನನ್ನನ್ನು ಗುಜರಾತಿಯಲ್ಲಿ 'ಪಾಟ್ ಪುಟಾನ ' ಎಂದು ಕರೆಯುತ್ತಿದ್ದರು, ಏಕೆಂದರೆ ಅವರ ಭಾಷಣಗಳನ್ನು ಗುಜರಾತಿಗೆ ಭಾಷಾಂತರಿಸುವಾಗಲೆಲ್ಲ ಈ ಪದವನ್ನು ಹೆಚ್ಚಾಗಿ ಬಳಸುತ್ತಿದ್ದರಂತೆ.

* * * *

# ೧೫. ಮಹಾ ಚೇತನಕ್ಕೆ ಶ್ರದ್ಧಾಂಜಲಿ

**–ಸ್ವಾಮಿ ಹರ್ಷಾನಂದ***

ಸ್ವಾಮಿ ರಂಗನಾಥಾನಂದರು ೨೦೦೫ರಲ್ಲಿ ಮಹಾಸಮಾಧಿ ಹೊಂದಿದಾಗ ಜಗತ್ತು ಬಡವಾಯಿತು. ಒಬ್ಬ ಧೀಮಂತ ನಾಯಕನನ್ನು, ಶಾಂತಿ ಸೌಹಾರ್ದತೆಗಳ ಹರಿಕಾರನನ್ನು ಕಳೆದುಕೊಂಡಿತು. ಸದಾ ಸುತ್ತುತ್ತಿರುವ ಈ ಪ್ರಪಂಚದಲ್ಲಿ ಜನರು ಹುಟ್ಟುತ್ತಾ ಮರಣ ಹೊಂದುತ್ತಾ ಇರುತ್ತಾರೆ ಎಂಬುದು ನಿಜವಾದರೂ ಇಂತಹ ಮಹಾತ್ಮರ ನಿರ್ಗಮನ ಸಾಮಾಜಿಕ ಹಂದರದಲ್ಲಿ ಒಂದು ಶೂನ್ಯವನ್ನು ಸೃಷ್ಟಿಸುತ್ತದೆ. ಏಕೆಂದರೆ ಸಮಾಜ ಸೌಹಾರ್ದತೆಗೆ ಇಂತಹವರ ಕೊಡುಗೆ ಅನನ್ಯವಾದುದು.

ಅವರ ಬಗೆಗಿನ ನನ್ನ ನೆನಪುಗಳಲ್ಲಿನ ಕೆಲವು ವಿಚಾರಗಳನ್ನು ಇಲ್ಲಿ ದಾಖಲಿಸುತ್ತೇನೆ. ೧೯೫೬ರಲ್ಲಿ ಪ್ರಥಮ ಬಾರಿಗೆ ನಾನು ಅವರನ್ನು ಬೆಂಗಳೂರಿನ ಆಶ್ರಮದಲ್ಲಿ ಕಂಡೆ. ಆ ಸಮಯದಲ್ಲಿ ಬೆಂಗಳೂರು ಆಶ್ರಮದ ಅಧ್ಯಕ್ಷರಾಗಿದ್ದವರು ಸ್ವಾಮಿ ಯತೀಶ್ವರಾನಂದರು. ಒಮ್ಮೆ ಯತೀಶ್ವರಾನಂದರು ಚಿಂತಿತರಾದರು. ಕಾರಣ, ಬೊಂಬಾಯಿಯ ಪ್ರಖ್ಯಾತ ಶಿಲ್ಪಿಯೊಬ್ಬರು ರಾಮಕೃಷ್ಣ ದೇಗುಲಕ್ಕೆ ಬಹಳ ಭವ್ಯವಾದ ನೀಲನಕ್ಷೆ ನೀಡಿದ್ದರು. ಇದನ್ನು ಕಾರ್ಯರೂಪಕ್ಕೆ ತರಲು ಬಹಳ ಖರ್ಚು ತಗಲುತ್ತಿತ್ತು. ಈ ಬಗ್ಗೆ ಸ್ವಾಮಿ ರಂಗನಾಥಾನಂದರ ಸಲಹೆ ಕೇಳಿದಾಗ ಅವರು ಒಂದು ಪರ್ಯಾಯ ಸೂಚಿಸಿದರು. ಇದು ಸರಳವೂ, ಸುಂದರವೂ, ಪ್ರಾಯೋಗಿಕವೂ ಮತ್ತು ಬಹಳ  ಖರ್ಚಿನದಲ್ಲದ್ದೂ ಆಗಿತ್ತು. ಇದನ್ನು ಸ್ವಾಮಿ ಯತೀಶ್ವರಾನಂದರು ಸಂತೋಷದಿಂದ ಒಪ್ಪಿಕೊಂಡರು, ಪರಿಣಾಮವೇ ಬೆಂಗಳೂರಿನಲ್ಲಿ ಇಂದು ನಾವು ಕಾಣುವ ದೇಗುಲ.

ನಾನು ೧೯೬೭ರಲ್ಲಿ ಕಲ್ಕತ್ತದಲ್ಲಿ ಅವರು ರಾಮಕೃಷ್ಣ ಮಿಷನ್ ಇನ್ಸ್ ಟಿಟ್ಯೂಟ್‌ನ ಮುಖ್ಯಸ್ಥರಾಗಿದ್ದ ಸಂದರ್ಭದಲ್ಲಿ ಭೇಟಿಯಾದೆನಾದರೂ ಅದು ಕೇವಲ ಕೆಲವು ತಾಸಿನ ಬೇಟಿ ಅಷ್ಟೆ. ಅವರು ನಮ್ಮ ಮೇಲೆ ಬಹಳ ಪ್ರಭಾವ ಬೀರಿದ ಮತ್ತೊಂದು ಸಂದರ್ಭದ ನೆನಪಾಗುತ್ತದೆ. ಮೇ ೧೯೬೬ರಲ್ಲಿ ಮೈಸೂರು ರಾಮಕೃಷ್ಣ ಆಶ್ರಮದ ಅಂದಿನ ಆಧ್ಯಕ್ಷರಾದ ಸ್ವಾಮಿ ಶಾಂಭವಾನಂದರು ಸ್ವಾಮಿ ರಂಗನಾಥಾನಂದರನ್ನು ಆಹ್ವಾನಿಸಿದ್ದರು. ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಆಧ್ಯಾತ್ಮಿಕ ಶಿಬಿರವನ್ನು ಉದ್ದೇಶಿಸಿ ಅವರು  ಮಾತನಾಡಬೇಕಿತ್ತು. ಕಾರ್ಯಕ್ರಮ ಶ್ರೀರಾಮಕೃಷ್ಣ  ವಿದ್ಯಾಶಾಲೆಯಲ್ಲಿ ಏರ್ಪಾಡಾಗಿತ್ತು. ವಿದ್ಯಾರ್ಥಿಮಿತ್ರರನ್ನು ಉದ್ದೇಶಿಸಿ ಸ್ಫೂರ್ತಿಯುತವಾಗಿ ಮಾತನಾಡಿದ್ದೇ ಅಲ್ಲದೆ ವಾಲಿಬಾಲ್, ಈಜು ಮೊದಲಾದ ಕ್ರೀಡೆಗಳಲ್ಲಿ ಸ್ವಾಮಿ ರಂಗನಾಥಾನಂದರು ಉತ್ಸಾಹದಿಂದ ಭಾಗವಹಿಸಿದರು. ಅವರು ಉತ್ತಮ ಈಜುಗಾರರೆಂದು ತಿಳಿದು ನಮಗೆ ಅಚ್ಚರಿಯಾಯಿತು.

ರಂಗನಾಥಾನಂದರು ಹೈದರಾಬಾದ್ ಆಶ್ರಮದ ಅಧ್ಯಕ್ಷರಾಗಿದ್ದಾಗ ಅಲ್ಲಿಗೆ ದೇಗುಲದ ಉದ್ಘಾಟನಾ ಸಮಾರಂಭದಲ್ಲಿ ಆಹ್ವಾನಿತವಾಗಿ ಭಾಗವಹಿಸುವ ಭಾಗ್ಯ ನನ್ನದಾಗಿತ್ತು. ಅನೇಕ ಬಾರಿ ಅವರನ್ನು ಹೈದರಾಬಾದಿನಲ್ಲಿ ಭೇಟಿಯಾಗಿ ಅವರ ಸಹವಾಸದಲ್ಲಿ ಕಾಲಕಳೆಯುವ ಅವಕಾಶವೂ ದೊರೆತಿತ್ತು.

---

* ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರು ಮತ್ತು ಹಿರಿಯ ಸಾಧುಗಳು.

ರಂಗನಾಥಾನಂದರು ಮಹಾಸಂಘದ ಉಪಾಧ್ಯಕ್ಷರಾದ ಮೇಲೆ, ಮುಂದೆ ಅಧ್ಯಕ್ಷರಾದ ಮೇಲೆ ಬೆಂಗಳೂರಿಗೆ  ಅನೇಕ ಬಾರಿ ಬಂದಿದ್ದರು. ಹೆಚ್ಚಾಗಿ ಅವರ ಭೇಟಿ ಮಠದ ಭಕ್ತರಿಗೆ ಮಂತ್ರದೀಕ್ಷೆ ನೀಡುವ ಸಂದರ್ಭವೇ ಆಗಿರುತ್ತಿತ್ತು. ಈ ಸಮಯಗಳಲ್ಲಿ ನಮಗೆ ಅವರನ್ನು ಹತ್ತಿರದಿಂದ ನೋಡುವ, ಹತ್ತಿರದ ಒಡನಾಟ ಪಡೆಯುವ ಅವಕಾಶವಾಗುತ್ತಿತ್ತು, ಅವರ ದಿವ್ಯಸಾನ್ನಿಧ್ಯದ ಅನುಭವವಾಗುತ್ತಿತ್ತು. ಅವರ ಮಹಾಸಮಾಧಿಯ ಸುದ್ದಿ ಮುಟ್ಟಿದಾಗ ಮಠದ ಸಂನ್ಯಾಸವರ್ಗದವರೆಲ್ಲ ದುಃಖತಪ್ತರಾದೆವು, ಆದರೆ ಮಹಾತ್ಮರು ಮರಣ ಹೊಂದುವುದಿಲ್ಲ. ಅವರು ನಮ್ಮ ಹೃದಯಗಳಲ್ಲಿ ಸದಾ ಜೀವಂತವಾಗಿರುತ್ತಾರೆ.

* * * *

## ೧೬. ಅವರ ಮಾನವೀಯ ಮತ್ತು ದಿವ್ಯ ವ್ಯಕ್ತಿತ್ವದ ಇಣುಕುನೋಟಗಳು

–ಸ್ವಾಮಿ ಕೀರ್ತಿದಾನಂದ*

### ಮಾನವೀಯ ಮತ್ತು ದಿವ್ಯ ವ್ಯಕ್ತಿತ್ವ

ಸ್ವಾಮಿ ರಂಗನಾಥಾನಂದರನ್ನು ಮೊದಲ ಸಲ ನಾನು ಕಂಡದ್ದು ೧೯೪೬ನೆಯ ಇಸವಿಯ ಮಧ್ಯಭಾಗದಲ್ಲಿ. ಎಂಟು ತಿಂಗಳ ಹಿಂದಷ್ಟೇ ನಾನು ಬಸವನಗುಡಿಯ ರಾಮಕೃಷ್ಣಾಶ್ರಮವನ್ನು ಸೇರಿದ್ದೆ. ನಾನಾಗ ಒಬ್ಬ ಬ್ರಹ್ಮಚಾರಿ. ಸ್ವಾಮಿ ರಂಗನಾಥಾನಂದರು ರಾಮಕೃಷ್ಣ ಮಹಾಸಂಘದ ಕರಾಚಿಶಾಖೆಯ ಮುಖ್ಯಸ್ಥರಾಗಿದ್ದರು. ಸುಮಾರು ಎಂಟು ವರ್ಷಗಳ ಅನಂತರ ಅವರು ಬೆಂಗಳೂರಿಗೆ ಬಂದಿದ್ದರು. ಅದಕ್ಕೆ ಹಿಂದೆ ಅವರು ಸ್ವಲ್ಪ ಕಾಲ ಬಸವನಗುಡಿ ಆಶ್ರಮದ ಹಂಗಾಮಿ ಅಧ್ಯಕ್ಷರಾಗಿದ್ದರು. ಅವರು ತೋರಿಸುತ್ತಿದ್ದ ಪ್ರೀತಿ, ತರುಣರಾಗಿದ್ದ ಅವರ ಶಕ್ತಿ ಪೂರ್ಣ ಚಟುವಟಿಕೆ, ಇವುಗಳಿಂದ ಆಕರ್ಷಿತರಾದ ಕೆಲವು ತರುಣರು ಕರಾಚಿಯಲ್ಲಿ ಬ್ರಹ್ಮಚಾರಿಗಳಾಗಿ ಸೇರಿಕೊಂಡರು. ಹಾಗೆ ಸೇರಿಕೊಂಡವರಲ್ಲಿ ಸ್ವಾಮಿ ಅನನ್ಯಾನಂದ ಮತ್ತು ಸ್ವಾಮಿ ಮುಖ್ಯಾನಂದರು ಈಗಲೂ ನಮ್ಮೊಂದಿಗಿದ್ದಾರೆ. ಮೊದಲಿನಿಂದಲೂ ಅವರು ನನ್ನ ಮೇಲೂ ಪ್ರೀತಿಯ ಮಳೆ ಕರೆದಿದ್ದಾರೆ. ನಾನೂ ಕರಾಚಿಯಲ್ಲಿ ಅವರೊಡನೆ ಇರಬೇಕೆಂದು ಬಯಸಿದರು. ಆದರೆ ಅದು ನೆರವೇರಲಿಲ್ಲ. ಏಕೆಂದರೆ ಮರುವರ್ಷವೇ ಕೆಲವು ತಂಟೆಕೋರರ ದುಷ್ಟತನದಿಂದಾಗಿ, ಕರಾಚಿ ಶಾಖೆಯನ್ನು ಮುಚ್ಚಬೇಕಾಯಿತು. ಇನ್ನೊಂದು ವಿಷಯವೆಂದರೆ, ಸ್ವಾಮಿ ರಂಗನಾಥಾನಂದರು ತಮ್ಮ ಬದುಕನ್ನು ರೂಪಿಸಿದವರು ಎಂದು ಯಾರನ್ನು ಹೇಳುತ್ತಿದ್ದರೋ ಅಂಥ ಹಿರಿಯರಾದ ಸ್ವಾಮಿ ಸಿದ್ಧೇಶ್ವರಾನಂದರು ಎರಡು ವಾರಗಳ ಹಿಂದೆಯಷ್ಟೇ ಬೆಂಗಳೂರಿಗೆ ಬಂದಿದ್ದರು. ಅವರು ಫ್ರಾನ್ಸಿನ ಗ್ರೆಟ್ಸ್ ಕೇಂದ್ರದ ಮುಖ್ಯಸ್ಥರಾಗಿದ್ದರು. ಗ್ರೆಟ್ಸ್‌ನ ಕೇಂದ್ರದ ಸ್ಥಾಪಕರೂ ಅವರೇ. ಅವರು, ಬೆಂಗಳೂರು ಆಶ್ರಮದ ಮುಖ್ಯಸ್ಥರೂ ಆಗಿದ್ದ ಸ್ವಾಮಿ ತ್ಯಾಗೀಶಾನಂದರೂ ಕೇರಳದ ತ್ರಿಶ್ಶೂರಿನವರು. ಇಬ್ಬರೂ ಸಮವಯಸ್ಕರು. ಇಬ್ಬರೂ ಶ್ರೀ ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾಗಿದ್ದ ಸ್ವಾಮಿ ಬ್ರಹ್ಮಾನಂದರಿಂದ ಒಂದೇ ದಿನ ಮಂತ್ರದೀಕ್ಷೆ ಪಡೆದಿದ್ದರು. ಸ್ವಾಮಿ ರಂಗನಾಥಾನಂದರು ನನಗೆ, ಸ್ವಾಮಿ ತ್ಯಾಗೀಶಾನಂದರ ವ್ಯಕ್ತಿತ್ವದ ಮಹಿಮೆಯನ್ನು ತಿಳಿಸುತ್ತಾ, ಅವರು 'ಮಹಾತ್ಮರು' ಎಂದು ವರ್ಣಿಸಿದರು. ಎಷ್ಟು ಸಾಧ್ಯವೋ ಅಷ್ಟು ದೀರ್ಘಕಾಲ ಆ ಮಹಾತ್ಮರೊಂದಿಗೆ ಇರುವಂತೆಯೂ ಸಲಹೆ ನೀಡಿದರು. ಆಧ್ಯಾತ್ಮಿಕವಾಗಿ ಅವರಿಂದ ಪಡೆಯಬಹುದಾದದ್ದು ಎಂಥ ಬಳುವಳಿ ಎಂಬುದು ನಿನಗೇ ಮುಂದೆ ಗೊತ್ತಾಗುತ್ತದೆ ಎಂದರು. ಅವರ ಉಪದೇಶ, ನನ್ನನ್ನು ಬೆಂಗಳೂರಿಗೆ ಕಟ್ಟಿಹಾಕಿತು. ನಾನು ಕರಾಚಿಗೆ ಹೋಗಲಿಲ್ಲ.

### ರಂಗನಾಥಾನಂದರ ಬದುಕಿನ ಸ್ಫೂರ್ತಿ ಕೇಂದ್ರ

ಸ್ವಾಮಿ ರಂಗನಾಥಾನಂದರೊಂದಿಗೆ ನಾನು ಮೊದಲ ಸಲ ಸಂಪರ್ಕವನ್ನು ಹೊಂದಿದ್ದರೂ ಅವರು ಸಂಪೂರ್ಣವಾಗಿ ಹೊಸಬರು ಎಂಬ ಭಾವನೆ ನನಗೆ ಬರಲಿಲ್ಲ. ಸ್ವಾಮಿ ತ್ಯಾಗೀಶಾನಂದರಿಂದ ಅವರ ಬಗ್ಗೆ

---

* ಅವರು ಹಿರಿಯ ಸಂನ್ಯಾಸಿಯಾಗಿದ್ದು, ೯ ಜೂನ್ ೨೦೦೭ರಂದು ಅಲಸೂರಿನಲ್ಲಿ ದಿವಂಗತರಾದರು. ರಾಮಕೃಷ್ಣ ಪಂಥದ ಕೆಲವು ಕೇಂದ್ರಗಳ ಮುಖ್ಯಸ್ಥರಾಗಿದ್ದುದಲ್ಲದೆ, ಅವರು 'ಪ್ರಬುದ್ಧ ಭಾರತ'ದ ಸಂಪಾದಕರೂ ಆಗಿದ್ದರು.

ಅನೇಕ ವಿಷಯವನ್ನು ತಿಳಿದುಕೊಂಡಿದ್ದೆ. ಅವರೂ ತ್ರಿಶೂರಿನವರೇ. ವಾಸ್ತವವಾಗಿ ಅವರು ತ್ರಿಶೂರು ಆಶ್ರಮದ ಅಧ್ಯಕ್ಷರಾಗಿದ್ದಾಗ, ರಂಗನಾಥಾನಂದರು– ಆಗ ಅವರಿನ್ನೂ ಶಂಕರನ್– ಅವರನ್ನು ಅಲ್ಲಿ ಭೇಟಿ ಮಾಡಿ ತಾವು ಅಲ್ಲಿನ ಆಶ್ರಮಕ್ಕೆ ಸೇರಲು ಪ್ರಯತ್ನಿಸಿದ್ದರು. ತ್ಯಾಗೀಶಾನಂದರು ಮುಂದೆ ರಂಗನಾಥಾನಂದರೆಂದು ಪ್ರಸಿದ್ಧರಾದ ತರುಣ ಶಂಕರನಿಗೆ ಕೊಟ್ಟ ಸಲಹೆ ಮೊದಲು ವಿದ್ಯಾಭ್ಯಾಸವನ್ನು ಪೂರ್ಣಗೊಳಿಸು ಎಂದು. ಹಾಗೆ ಸಲಹೆ ಕೊಡಲು ತ್ಯಾಗೀಶಾನಂದರಿಗೆ ತಮ್ಮದೇ ಕಾರಣಗಳು ಇದ್ದಿರಬಹುದು. ಮುಂದೆಯೂ ತ್ಯಾಗೀಶಾನಂದರು ಆಶ್ರಮವನ್ನು ಸೇರಲು ಬಂದ ತರುಣರಿಗೆ ಅದೇ ಉಪದೇಶವನ್ನು ನೀಡುತ್ತಿದ್ದರು. ಅನೇಕ ತರುಣರು ವಿದ್ಯಾಭ್ಯಾಸವನ್ನು ಪೂರೈಸದೆ ಆಶ್ರಮವನ್ನು ಸೇರಿದಾಗ ಮುಂದೆ ಕೀಳರಿಮೆಯ ಭಾವವನ್ನು ತಾಳುತ್ತಿದ್ದುದು ಅವರ ಗಮನಕ್ಕೆ ಬಂದಿತ್ತು. ತಮ್ಮ ಜೊತೆಯಲ್ಲಿದ್ದ ಕೆಲವರು ಹೆಚ್ಚು ವಿದ್ಯಾವಂತರಾಗಿದ್ದು, ಹೊಸದಾಗಿ ಸೇರಿದವರಿಗೆ, ತಾವು ಅವರಷ್ಟು ವಿದ್ಯಾವಂತರಾಗಲಿಲ್ಲ ಎಂಬ ಕಾರಣಕ್ಕೆ ಕೀಳರಿಮೆಯ ಭಾವನೆ ಬರುತ್ತಿದ್ದುದು ಸಹಜವಾಗಿರುತ್ತಿತ್ತು. ರಂಗನಾಥಾನಂದರಂತೆ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಒಬ್ಬರು ಅಂಥ ಕೀಳರಿಮೆಯಿಂದ ಖಿನ್ನರಾಗಿದ್ದ ಸಂಗತಿ ನನಗೆ ಗೊತ್ತಿತ್ತು. ೧೯೫೦ರಲ್ಲಿ ನಾನು ಮಾಯಾವತಿ ಶಾಖೆಯಲ್ಲಿದ್ದೆ. ಆಗ ಸ್ವಾಮಿ ರಂಗನಾಥಾನಂದರು ಮಿಷನ್ನಿನ ದೆಹಲಿ ಶಾಖೆಯ ಅಧ್ಯಕ್ಷರಾಗಿದ್ದರು. ಆಗ ಆ ಇನ್ನೊಬ್ಬ ಸ್ವಾಮೀಜಿ ನನಗೆ ಹೇಳಿದರು: "ನೋಡು, ನಾವಿಬ್ಬರೂ ಒಟ್ಟಿಗೇ ಮಿಷನ್ ಸೇರಿದವರು. ಅವರು ಮಿಷನ್ನಿನ ಮುಖ್ಯ ಶಾಖೆಯೊಂದರ ಅಧ್ಯಕ್ಷರಾಗಿದ್ದಾರೆ. ನಾನಾದರೋ ಇನ್ನೂ ಇಲ್ಲಿನ ಆಸ್ಪತ್ರೆಯಲ್ಲಿ ಕಾಂಪೌಂಡರ್ ಆಗಿದ್ದೇನೆ!" ನಾನು ಕೇಳಿದೆ: "ಹಾಗೇಕೆ ಹೇಳುತ್ತೀರಿ ಸ್ವಾಮೀಜಿ? ನೀವು ಇಲ್ಲಿನ ಆಸ್ಪತ್ರೆಯ ಮುಖ್ಯಸ್ಥರಾಗಿದ್ದೀರಿ. ಅಷ್ಟೇ ಅಲ್ಲ, ನೀವು ಒಳ್ಳೆಯ ಹಾಡುಗಾರರು. ಬಾಯಿ ಹಾಡುಗಾರಿಕೆ ಮಾತ್ರವಲ್ಲ, ತಬಲ, ಹಾರ್ಮೋನಿಯಂ ಮುಂತಾದ ವಾದ್ಯಗಳನ್ನೂ ನುಡಿಸುವುದರಲ್ಲಿ ಪರಿಣತರಾಗಿದ್ದೀರಿ. ರಂಗನಾಥಾನಂದರಿಗೆ ಸಂಗೀತದಲ್ಲಿ ಕೌಶಲ್ಯ ಎಲ್ಲಿದೆ?" ಆಗ ಅವರಿಗೆ ಜ್ಞಾನೋದಯವಾಯಿತು. ಅವರು ಹೇಳಿದರು: "ನಿಜ, ರಂಗನಾಥಾನಂದರು ಮೈಸೂರಿನ ಆಶ್ರಮದಲ್ಲಿ ಬ್ರಹ್ಮಚಾರಿಯಾಗಿದ್ದಾಗ ಬೆಳಗಿನ ಜಾವ ಬೇಗ ಎದ್ದು ಧ್ಯಾನಾದಿಗಳನ್ನು ಮುಗಿಸಿ, ಸ್ವಾಮಿ ವಿವೇಕಾನಂದರ ಕೃತಿಗಳನ್ನೂ, ಇತರ ಶಾಸ್ತ್ರ ಗ್ರಂಥಗಳನ್ನೂ ಬಾಯಿಪಾಠ ಮಾಡುತ್ತಿದ್ದರು. 'ನೀನೂ ಹೀಗೆ ಮಾಡು' ಎಂದು ಹೇಳುತ್ತಿದ್ದರು. ನಾನು ಒಂದು ವಾರವಷ್ಟೇ ಹಾಗೆ ಮಾಡಿ ಬಿಟ್ಟುಬಿಟ್ಟೆ. ಅವರು ಆ ಅಭ್ಯಾಸವನ್ನು ಮುಂದುವರಿಸಿ ಈಗ ಏನೆಲ್ಲ ಸಾಧಿಸಿದ್ದಾರೆ, ನೋಡು."

ಸ್ವಾಮಿ ತ್ಯಾಗೀಶಾನಂದರು ತರುಣ ಶಂಕರನಿಗೆ ವಿದ್ಯಾಭ್ಯಾಸವನ್ನು ಪೂರೈಸುವಂತೆ ಸಲಹೆ ನೀಡಿದಾಗ, ಬಹುಶಃ ಆತ ಮುಂದೆ ಏನಾಗುತ್ತಾನೆ ಎಂಬುದನ್ನು ಊಹಿಸಿರಲಿಲ್ಲ. ಇತರ ಸಾಧಕರಂಥಲ್ಲ ಆತ ಎಂಬುದು ಅವರಿಗೆ ಆಗಿನ್ನೂ ಗೊತ್ತಾಗಿರಲಿಲ್ಲ. ಆದರೆ ತರುಣ ಶಂಕರನ ವ್ಯಕ್ತಿತ್ವ ವಿಶಿಷ್ಟವಾದದ್ದು, ಅವನಿಗೆ ಅಸಾಧಾರಣವಾದ ಶಕ್ತಿಯಿದೆ ಎಂಬುದು ಅವರ ಅರಿವಿಗೆ ಬಂದಿತ್ತು. ತ್ಯಾಗೀಶಾನಂದರು ರಂಗನಾಥಾನಂದರ ಬಗ್ಗೆ ಪ್ರಸ್ತಾಪಿಸುವಾಗ ಬಳಸುತ್ತಿದ್ದ ಮಾತುಗಳು ನಾವೆಲ್ಲ ಅವರ ಬಗ್ಗೆ ಅಪಾರವಾದ ಗೌರವವನ್ನು ಬೆಳಸಿಕೊಳ್ಳುವಂತೆ ಮಾಡುತ್ತಿದ್ದುವು. ಆದರೆ, ನಾವು ಅವರನ್ನು ಭೇಟಿ ಮಾಡಿದಾಗ, ತಮ್ಮದೇ ಭಾಷಣಕಾರರ ಬಗ್ಗೆ, ಅವು ಶ್ರೋತೃಗಳ ಮೇಲೆ ಬೀರುತ್ತಿದ್ದ ಪ್ರಭಾವದ ಬಗ್ಗೆ ಹೇಳುತ್ತಿದ್ದುದನ್ನು ಕೇಳಿ ನಮಗೆ ಸಂಕೋಚವಾಗುತ್ತಿತ್ತು. ಸನ್ಯಾಸಿಯೊಬ್ಬರು ತಮ್ಮ ಭಾಷಣಗಳ ಬಗ್ಗೆ ತಾವೇ ಹೀಗೆ ಮಾತನಾಡಬಹುದೇ ಎಂದು ಕೇಳಿಕೊಳ್ಳುತ್ತಿದ್ದೆವು. ಆದರೆ ಒಂದು ದಿನ ಇದ್ದಕ್ಕಿದ್ದಂತೆ ಅವರು ಹೀಗೆ ಹೇಳಿದರು: "ನೋಡಿ, ಭಗವಂತನ ಕೃಪೆಯಿಂದ ನನಗೆ ಇಂತಹ ಭಾಷಣಕಲೆ ಲಭ್ಯವಾಗಿದೆ. ಇದನ್ನು ನಾನು ಶ್ರೀ ರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಉಪದೇಶಗಳನ್ನು ಪ್ರಸಾರ ಮಾಡುವುದಕ್ಕೆ ಬಳಸುತ್ತಿದ್ದೇನೆ. ಇದೇ ನಾನು ಭಗವಂತನಿಗೆ ಅರ್ಪಿಸುತ್ತಿರುವ ನೈವೇದ್ಯ." ಅದನ್ನು ಕೇಳಿ ನಾವು ಸಮಾಧಾನಪಟ್ಟುಕೊಂಡೆವು.

ಅವರ ಮನೋಭಾವ ಎಂಥದು ಎಂಬುದು ಮುಂದೊಂದು ದಿನ ಅವರು ಬರೆದ ಈ ಮಾತುಗಳಿಂದ ನಮಗೆ ಸ್ಪಷ್ಟವಾಯಿತು. 'ಡಿವೈನ್ ಗ್ರೇಸ್'–'ದೈವಾನುಗ್ರಹ' ಎಂಬ ತಮ್ಮ ಪುಸ್ತಕದಲ್ಲಿ ಅವರು ಹೀಗೆ ಹೇಳಿದ್ದಾರೆ: "ನಿಮ್ಮ ಅಹಂ ಅನ್ನು ನಿಮಗೆ ಎಷ್ಟು ಸಾಧ್ಯವೋ ಅಷ್ಟು ಬೆಳೆಸಿಕೊಳ್ಳಿ. ಅನಂತರ ಅದನ್ನು ಭಗವಂತನ ಪಾದಾರವಿಂದಗಳಿಗೆ ಸಮರ್ಪಿಸಿಬಿಡಿ." ಅವರ ಮಾತುಗಳು ಇವು: "ಭಾರತದಲ್ಲಿ ನಾನು ಎಲ್ಲಿಗೆ ಹೋದರೂ ಜನರು ಹೀಗೆ ಹೇಳುತ್ತಾರೆ: 'ಸ್ವಾಮೀಜಿ ನಾನು ತ್ಯಾಗ ಮಾಡಬಯಸುತ್ತೇನೆ. ನನ್ನ ಸರ್ವಸ್ವವನ್ನು ಭಗವಂತನಿಗೆ ಸಮರ್ಪಿಸಬಯಸುತ್ತೇನೆ.' ನಾನು ಅವರನ್ನು ಕೇಳುತ್ತೇನೆ: "ಸಮರ್ಪಿಸುವುದಕ್ಕೆ ನಿಮ್ಮಲ್ಲಿ ಇರುವುದಾದರೂ ಏನು? ನೀವು ತ್ಯಾಗ ಮಾಡುವುದಾದರೂ ಏನನ್ನು? ಬಲಿಷ್ಠವಾದ ದೇಹವಾಗಲಿ, ಸರಿಯಾಗಿ ಬೆಳೆದಿರುವ ಬುದ್ಧಿಯಾದರೂ ನಿಮ್ಮಲ್ಲಿಲ್ಲ, ಹೋಗಲಿ ಪ್ರತಿಭೆಯಾದರೂ ಇದೆಯೇ? ಜೇಬಿನಲ್ಲಾಗಲಿ, ಬ್ಯಾಂಕಿನಲ್ಲಾಗಲಿ ನಿಮ್ಮದಾದ ಹಣ ಇಲ್ಲ. ಹೋಗಲಿ, ಚೆನ್ನಾಗಿ ರೂಪಿತವಾದ ವ್ಯಕ್ತಿತ್ವವಾದರೂ ಇದೆಯೆ? ಅದೂ ಇಲ್ಲ. ಒಬ್ಬ ಬುದ್ಧ ತ್ಯಾಗ ಮಾಡಬಲ್ಲವನಾಗಿದ್ದ. ಅವನಿಗೆ ತ್ಯಾಗ ಮಾಡಲು ಒಂದು ರಾಜ್ಯವಿತ್ತು. ತಾರುಣ್ಯ ತುಂಬಿ ತುಳುಕುತ್ತಿದ್ದ ದೇಹವಿತ್ತು. ಅವನು ತ್ಯಾಗ ಮಾಡಲು ಭಾರೀ ಸಿದ್ಧಿಯಿತ್ತು. ಈಗ ಹೇಳಿ, ಇವುಗಳಲ್ಲಿ ಯಾವುದಿದೆ ನಿಮ್ಮಲ್ಲಿ?" ತ್ಯಾಗದ ವಿಷಯದಲ್ಲಿ ಆತ್ಮ ನಿರೂಪಣೆಯ ವಿಷಯದಲ್ಲಿ ಎಂಥ ಹೊಸ ನಿರೂಪಣೆ! ಎಂಥ ಆತ್ಮ ಸಮರ್ಪಣೆ! ಎಷ್ಟು ಹೊಸತನ, ಶಕ್ತಿದಾಯಕ ದೃಷ್ಟಿಕೋನ ಇದ್ದುವು ಅವರು ಮಾತುಗಳಲ್ಲಿ!

**ವ್ಯಕ್ತಿಗಿಂತ ಚಿಂತನೆಗಳು ಹೆಚ್ಚು ಮುಖ್ಯವಾದವು**

ಅವರು ನನ್ನನ್ನು ನೋಡಿದ ಮೊದಲ ದಿನದಿಂದಲೂ, ನಾನು ಈಗಾಗಲೇ ಹೇಳಿರುವಂತೆ, ನನ್ನ ವಿಷಯದಲ್ಲಿ ಅವರು ತೋರಿದ ವಾತ್ಸಲ್ಯ ಅಪಾರವಾದದ್ದು. ತಮ್ಮ ಹಾಸಿಗೆಯ ಮೇಲೆ, ದೀರ್ಘಕಾಲ ನನ್ನನ್ನು ಕುಳ್ಳಿರಿಸಿಕೊಂಡಿರುತ್ತಿದ್ದರು. ಆಗ ಅವರು ನನ್ನನ್ನು ಬಹುಕಾಲದಿಂದ ಬಲ್ಲವರಂತೆ ಆತ್ಮೀಯತೆ ತೋರಿ ಶ್ರೀ ರಾಮಕೃಷ್ಣರ ವಿಚಾರಗಳನ್ನು ಹೇಳುತ್ತಿದ್ದರು. ಆಶ್ಚರ್ಯದ ಸಂಗತಿ ಎಂದರೆ, ನಾಲ್ಕೈದು ವರ್ಷಗಳ ಹಿಂದೆ ಅವರು ಬೆಂಗಳೂರಿಗೆ ಬಂದಿದ್ದಾಗ, ತಾವು ಎಲ್ಲಿ ಕುಳಿತಿದ್ದರು ಮತ್ತು ಯಾವ ವಿಷಯಗಳನ್ನು ಕುರಿತು ಮಾತನಾಡಿದ್ದರು ಎಂಬುದನ್ನೆಲ್ಲ, ಇತ್ತೀಚೆಗೆ ನಡೆದದ್ದೋ ಎಂಬಂತೆ ಹೇಳುತ್ತಿದ್ದರು. ಪರಮಾಶ್ಚರ್ಯದ ವಿಷಯವೆಂದರೆ ಐವತ್ತು ಅರುವತ್ತು ವರ್ಷಗಳ ಅನಂತರವೂ, ಹೊಸ ಬ್ರಹ್ಮಚಾರಿಗಳೊಡನೆ ಮಾತನಾಡುವಾಗ, ಹಿಂದಿನ ಶೈಲಿಯಲ್ಲೇ, ಅವರು ಹಿಂದೆ ಹೇಳುತ್ತಿದ್ದ ರೀತಿಯಲ್ಲೇ, ಅವೇ ಮಾತುಗಳಲ್ಲಿ, ಅಂದಿನ ರೀತಿಯಲ್ಲೇ ಕೈಗಳನ್ನು ಆಡಿಸುತ್ತ, ಅಷ್ಟೇ ಉತ್ಸಾಹದಿಂದ ವಿಷಯಗಳನ್ನು ತಿಳಿಸುತ್ತಿದ್ದರು.

ಸ್ವಾಮಿ ರಂಗನಾಥರ ಪ್ರಕಾರ ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಉಪದೇಶಗಳು ಪ್ರಾಚೀನ ವೇದೋಪನಿಷತ್ತುಗಳ ಉಪದೇಶಗಳಿಗಿಂತ ಭಿನ್ನವಾದವಲ್ಲ. ಇಂದಿನ ಎಲ್ಲ ಸಮಸ್ಯೆಗಳಿಗೂ ಅವೇ ಪರಿಹಾರಗಳು. ಅವುಗಳನ್ನು ಜಗತ್ತಿನಾದ್ಯಂತ ಹರಡಬೇಕು ಎಂಬುದು ಅವರ ಜೀವಿತೋದ್ದೇಶವಾಗಿತ್ತು. ತಾವು ಮತ್ತೆ ಹುಟ್ಟಿ ಬರುತ್ತೇವೆ ಎಂದು ತಮ್ಮ ಜೀವನದ ಕೊನೆಯವರೆಗೂ ಹೇಳುತ್ತಿದ್ದವರು ಅವರೊಬ್ಬರೇ. ಅವರ ಜೀವನದ ಕೊನೆಯ ಭಾಗದಲ್ಲಿ ಸಾಧುವೊಬ್ಬರು 'ನಾನು ಮುಕ್ತಿಯನ್ನು ಪಡೆಯುತ್ತೇನೆಯೆ?' ಎಂದು ಪ್ರಶ್ನಿಸಿದಾಗ ಶ್ರೀ ಸ್ವಾಮಿ ರಂಗನಾಥಾನಂದರು ಕೊಟ್ಟ ಉತ್ತರ ಇದು! "ಹೌದು, ನಿಮಗೆ ಮುಕ್ತಿ ದೊರಕುತ್ತದೆ, ಆದರೆ ನನಗೆ ಮುಕ್ತಿ ಎಂಬುದಿಲ್ಲ. ನಾನು ಸ್ವಾಮಿ ವಿವೇಕಾನಂದರಿಗಾಗಿ ಮತ್ತೆ ದುಡಿಯಬೇಕಾಗಿದೆ." ಸ್ವಾಮೀಜಿಯವರ ವ್ಯಕ್ತಿತ್ವದ ಒಂದು ಭಾಗವಾಗಿದ್ದುದು ಎಂದರೆ ಈ ಶ್ರದ್ಧೆ.

ಸ್ವಾಮಿ ವಿವೇಕಾನಂದರು ಒಮ್ಮೆ ಹೇಳಿದ್ದರು: "ಜನರು ಒಬ್ಬ ವ್ಯಕ್ತಿಯನ್ನು ಪೂಜಿಸುತ್ತಾರೆ; ಆದರೆ ಅವನು ನೀಡುವ ಸಂದೇಶಗಳನ್ನು ಮರೆಯುತ್ತಾರೆ." ರಾಮಕೃಷ್ಣರ ಶಿಷ್ಯರು ಅಂಥ ತಪ್ಪನ್ನು ಮಾತ್ರ

ಮಾಡಕೂಡದು. ರಂಗನಾಥಾನಂದರು ವಿವೇಕಾನಂದರ ಈ ಉಪದೇಶವನ್ನು ಚಾಚೂ ತಪ್ಪದೆ ಪರಿಪಾಲಿಸಿದರು. ಅವರು ರಾಮಕೃಷ್ಣ ಮತ್ತು ವಿವೇಕಾನಂದರ ವ್ಯಕ್ತಿತ್ವಕ್ಕಿಂತ ಹೆಚ್ಚಾಗಿ ಅವರ ಚಿಂತನೆಗಳನ್ನು ಹೆಚ್ಚು ಪ್ರಚಾರಗೊಳಿಸಿದರು.

ಒಬ್ಬ ವ್ಯಕ್ತಿಯ ವ್ಯಕ್ತಿತ್ವವೆಂದರೆ ಅವನು ನೀಡುವ ಉಪದೇಶವೇ. ವಾಸ್ತವವಾಗಿ ಅವೆರಡೂ ಬೇರೆಬೇರೆಯಲ್ಲ. ಅವೆರಡರ ನಡುವೆ ಯಾವುದಾದರೂ ಒಂದನ್ನು ಆರಿಸಿಕೊಳ್ಳಬೇಕಾಗಿ ಬಂದರೆ ನಾವು ಆರಿಸಿಕೊಳ್ಳಬೇಕಾದದ್ದು ಅವನು ನೀಡುವ ಉಪದೇಶವನ್ನೇ. ಅವರ ಪ್ರಕಾರ ಮಂತ್ರದೀಕ್ಷೆ ನೀಡುವಾಗಲೂ ಇಷ್ಟ ದೇವತೆಗಿಂತ ಹೆಚ್ಚಾಗಿ ಆ ದೇವತೆಯು ನೀಡುವ ಸಂದೇಶವೇ ಅತ್ಯಂತ ಮುಖ್ಯವಾದದ್ದು. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾಗಿ ಮಾತ್ರ ದೀಕ್ಷೆ ನೀಡುವ ಅಧಿಕಾರವನ್ನು ಪಡೆದ ಮೇಲೂ ಅವರು ಸಾಂಪ್ರದಾಯಿಕವಾದ ರೀತಿಯಲ್ಲಿ ಮಂತ್ರದೀಕ್ಷೆ ನೀಡುತ್ತಿರಲಿಲ್ಲ. ಒಮ್ಮೆ, ರಾಮಕೃಷ್ಣ ಸಂಘದ ಉಪಕಾರ್ಯದರ್ಶಿಗಳಲ್ಲಿ ಒಬ್ಬರು ರಂಗನಾಥಾನಂದರನ್ನು "ಸ್ವಾಮೀಜಿ, ನೀವು ಮಂತ್ರದೀಕ್ಷೆ ನೀಡುವುದನ್ನು ಎಂದು ಪ್ರಾರಂಭಿಸುತ್ತೀರಿ?" ಅವರು ತಕ್ಷಣ ಹೇಳಿದರು: "ಮೊನ್ನೆಯಷ್ಟೇ ನಾನು ಮೂರು ಸಾವಿರ ಜನರಿಗೆ ಮಂತ್ರದೀಕ್ಷೆ ನೀಡಿದೆನಲ್ಲ!" ಉಪಕಾರ್ಯದರ್ಶಿಗಳು ಆಶ್ಚರ್ಯಚಕಿತರಾಗಿ ಕೇಳಿದರು: "ಎಲ್ಲಿ, ಯಾವಾಗ? ನಮಗೆ ಯಾರಿಗೂ ಗೊತ್ತೇ ಆಗಲಿಲ್ಲವಲ್ಲ?" ಅದಕ್ಕೆ ರಂಗನಾಥಾನಂದರ ಉತ್ತರ: "ದೆಹಲಿಯಲ್ಲಿ ಫಿಕ್ಕಿ(Ficci)ಯ ಸಭಾಂಗಣದಲ್ಲಿ ಮೂರು ದಿನಗಳ ಕಾಲ ಭಗವದ್ಗೀತೆಯನ್ನು ಕುರಿತು ಮಾತನಾಡಿದೆನಲ್ಲ (ಅದೇ ಮಂತ್ರದೀಕ್ಷೆ!)." ಅವರ ಈ ಉತ್ತರ ಅನೇಕರು ಆಶ್ಚರ್ಯ ಚಕಿತರಾಗುವಂತೆ ಮಾಡಿತು.

ಅವರು ತಮಾಷೆ ಮಾಡುತ್ತಿದ್ದಿರಬಹುದು: ಆದರೆ ಅವರ ಹೇಳಿಕೆಯ ಅಂತರಾರ್ಥ ಬೇರೆ. ದೀಕ್ಷೆ ಎಂಬುದಕ್ಕೆ ತನ್ನಷ್ಟಕ್ಕೇ ಯಾವ ಅರ್ಥವೂ ಇಲ್ಲ. ತಾನು ಯಾವ ವ್ಯಕ್ತಿಯನ್ನು ಕುರಿತು ಧ್ಯಾನ ಮಾಡಬೇಕೋ ಅವನು ಯಾವುದರ ಪ್ರತೀಕವೋ ಅದನ್ನ ಅರ್ಥ ಮಾಡಿಕೊಂಡರೆ ಮಾತ್ರ ಅದಕ್ಕೆ ಬೆಲೆ. ಅಷ್ಟು ಮಾತ್ರವಲ್ಲ, ಧ್ಯಾನ ಮೂರ್ತಿ ಯಾವುದರ ಪ್ರತೀಕವೋ ಅದನ್ನು ಅರ್ಥ ಮಾಡಿಕೊಂಡು ಅದನ್ನು ನಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತರುವುದು ಅತ್ಯವಶ್ಯಕ. ಪತಂಜಲಿ, ತಮ್ಮ ರಾಜಯೋಗ ಎಂಬ ಗ್ರಂಥದಲ್ಲಿ ಹೀಗೆ ಹೇಳಿದ್ದಾನೆ: "ತಜ್ಜಪಃ ತದರ್ಥಭಾವನಂ" ("ಸುಮ್ಮನೆ ನಾಮವನ್ನು ಉಚ್ಚಾರಣೆ ಮಾಡುತ್ತಿದ್ದರೆ ಸಾಲದು, ಆ ನಾಮದ ಅರ್ಥವೇನು ಎಂಬುದನ್ನು ತಿಳಿಯಬೇಕು.") ಹಾಗೆ ತಿಳಿದರೆ ಮಾತ್ರ ನಿಜವಾದ ಫಲಪ್ರಾಪ್ತಿ. ವಿವೇಕಾನಂದರು ಪದೇ ಪದೇ ಎತ್ತಿ ಹೇಳುತ್ತಿದ್ದ ಛಾಂದೋಗ್ಯ ಉಪನಿಷತ್ತಿನ ಈ ವಾಕ್ಯವನ್ನು ಗಮನಿಸಬೇಕು: "ಯದೇವ ವಿದ್ಯಯಾ ಕರೋತಿ ಶ್ರದ್ಧಯಾ ಉಪನಿಷದ ತದೇವ ವೀರ್ಯವತ್ತರಂ ಭವತಿ." ("ಯಾವುದನ್ನು ಅರ್ಥ ಮಾಡಿಕೊಂಡು ತಾಂತ್ರಿಕವಾದ ತಿಳಿವಳಿಕೆಯಿಂದ, ಶ್ರದ್ಧೆಯಿಂದ ಮತ್ತು ಆಳವಾದ ಧ್ಯಾನದಿಂದ ಮಾಡುತ್ತೇವೆಯೋ ಅದು ಅತ್ಯಂತ ಹೆಚ್ಚಿನ ಶಕ್ತಿಯಿಂದ ಕೂಡಿದ್ದಾಗಿರುತ್ತದೆ.")

**ಭಗವಂತನ ಸೇವೆಯಲ್ಲಿ ಯಾವ ಚ್ಯುತಿಯೂ ಇರತಕ್ಕದ್ದಲ್ಲ**

ಶ್ರೀ ರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರ ಸಂದೇಶಗಳನ್ನು ಪ್ರಚಾರ ಮಾಡುವ ಅವರ ಪ್ರಯತ್ನದಲ್ಲಿ "ಆಯಾಸ" ಎಂಬುದು ಅವರ ನಿಘಂಟಿನಲ್ಲೇ ಇರಲಿಲ್ಲ. ೧೯೮೧–೮೯ರ ಅವಧಿಯಲ್ಲಿ, ಚಂಡೀಗಡದ ನಮ್ಮ ಕೇಂದ್ರದ ಅಧ್ಯಕ್ಷನಾಗಿದ್ದಾಗ ನಾನು ಅವರನ್ನು ಅಲ್ಲಿನ ವಾರ್ಷಿಕ ಉತ್ಸವದ ಸಂದರ್ಭದಲ್ಲಿ ಆಹ್ವಾನಿಸುತ್ತಿದ್ದೆ. ಸಭೆಗಳು ಮತ್ತು ಖಾಸಗೀ ಮಾತುಕತೆಗಳೂ ಸೇರಿದಂತೆ ಕಾರ್ಯಕ್ರಮಗಳು ಬೆಳಗಿನ ೮ ಗಂಟೆಯಿಂದ ೧೨ರವರೆಗೂ ಇರುತ್ತಿದ್ದುವು. ಕಾರ್ಯಕರ್ತರಾದ ನಾವುಗಳೆಲ್ಲಾ ಬಳಲಿರುತ್ತಿದ್ದೆವು. ಆದರೆ ಅವರಿಗೆ ಮಾತ್ರ ಬಳಲಿಕೆ ಎಂಬುದೇ ಇರುತ್ತಿರಲಿಲ್ಲ. ಮರುದಿನ ಬೆಳಗ್ಗೆ ಅವರು ಬೇರಾವುದೇ ಕೇಂದ್ರದ

ಕಾರ್ಯಕ್ರಮಗಳಿಗೆ ಎಂದು ಹೋಗಿರುತ್ತಿದ್ದರು. ಅಲ್ಲೂ ಇಲ್ಲಿನಂತೆಯೇ ಕಾರ್ಯಕ್ರಮಗಳಲ್ಲಿ ಸ್ವಾಮೀಜಿ ಭಾಗವಹಿಸುತ್ತಿದ್ದರು.

ಕಲ್ಕತ್ತೆಯ ಇನ್ಸ್‌ಟಿಟ್ಯೂಟ್ ಆಫ್ ಕಲ್ಚರ್‌ನಲ್ಲಿ ಅವರು ಕಾರ್ಯದರ್ಶಿಯಾಗಿದ್ದಾಗ ನಾನು ಉಪಕಾರ್ಯದರ್ಶಿಯಾಗಿದ್ದೆ. ಅವರು ಭಾಗವತವನ್ನು ಕುರಿತು ಮೂರು ಉಪನ್ಯಾಸಗಳನ್ನು ನೀಡಬೇಕಾಯಿತು. ಅವರಿಗೆ ಆಗ ಭೇದಿ ಶುರುವಾಯಿತು. ಆದರೆ ಅವರು ವೇದಿಕೆಯನ್ನೇರಿ ಉಪನ್ಯಾಸಗಳನ್ನು ನೀಡುವಾಗ, ನನ್ನನ್ನು ಹೊರತುಪಡಿಸಿ ಬೇರೆ ಯಾರಿಗೂ ಅವರು ಭೇದಿಯಿಂದ ನರಳುತ್ತಿದ್ದಾರೆ ಎಂಬುದು ಗೊತ್ತೇ ಆಗಿರಲಿಲ್ಲ. ಅವರ ಬದುಕಿನಲ್ಲಿ ಇಂಥ ಘಟನೆಗಳು ಎಷ್ಟು ಬಾರಿ ನಡೆದುವೋ! ಮೇಲೆ ಹೇಳಿದ ಘಟನೆ ನಡೆದ ಮೇಲೆ ಒಮ್ಮೆ ಅವರು ಲಂಡನ್ನಿಗೆ ಹೋಗಿದ್ದರು. ಆಗ ಅಲ್ಲಿನ ವೈದ್ಯರು ಸ್ವಾಮೀಜಿಯ ಬಳಲಿಕೆ ಕಾಣದ ಸಹನಶಕ್ತಿಯನ್ನು ಕಂಡು ಆಶ್ಚರ್ಯಚಕಿತರಾಗಿದ್ದರು. ಅವರ ಹೊಟ್ಟೆಯನ್ನು ಪರೀಕ್ಷಿಸಿದ ವೈದ್ಯರು ಭಯದಿಂದ ಕಿರುಚಿದರು: "ವೈದ್ಯಶಾಸ್ತ್ರದ ದೃಷ್ಟಿಯಿಂದ ನೀವು ಸತ್ತು ಎಷ್ಟೋ ಕಾಲವಾಗಿರಬೇಕಾಗಿತ್ತು! ಆದರೆ ನೀವಿನ್ನೂ ಬದುಕಿದ್ದೀರಿ. ಅದೇ ಪರಮಾಶ್ಚರ್ಯ, ನಿಮ್ಮ ಹೊಟ್ಟೆಯ ಬದಲು ಒಂದು ಹಂದಿಯ ಹೊಟ್ಟೆ ಇಟ್ಟಿದ್ದರೆ ಮಾತ್ರ ನೀವು ಬದುಕಿರುವುದು ಸಾಧ್ಯವಾಗುತ್ತಿತ್ತು!"

ಅವರ ಬದುಕು ಎಲ್ಲ ಕಾಲದಲ್ಲೂ ಸುಗಮವಾಗಿತ್ತು; ಎಲ್ಲ ಸಮಯದಲ್ಲೂ ಸಂತೋಷಮಯವಾಗಿತ್ತು; ದುಃಖದ ಗಳಿಗೆಗಳು ಅವರ ಬದುಕಿನಲ್ಲಿ ಇರಲೇ ಇಲ್ಲ ಎಂದೇನೂ ಅಲ್ಲ. ಉಳಿದವರ ಬದುಕಿನಲ್ಲಿ ಹೇಗೋ ಹಾಗೆ ಅವರ ಬದುಕಿನಲ್ಲೂ ಏರಿಳಿತಗಳು ಇದ್ದೇ ಇದ್ದವು. ಆದರೆ ಅವರು ಯಾವುದಕ್ಕೂ ಜಗ್ಗಲಿಲ್ಲ. ಒಮ್ಮೆ ಅವರು ಕಲ್ಕತ್ತೆಯ ಬಿರ್ಲಾ ಸಭಾಂಗಣದಲ್ಲಿ ಉಪನಿಷತ್ತುಗಳನ್ನು ಕುರಿತು ಮೂರು ಉಪನ್ಯಾಸಗಳನ್ನು ನೀಡಬೇಕಿತ್ತು. ಸಭಾಂಗಣದಲ್ಲಿ ಸುಮಾರು ಒಂದೂವರೆ ಸಾವಿರ ಮಂದಿ ಕೂರಬಹುದಾಗಿತ್ತು. ಮೊದಲ ದಿನ ಅವರೊಂದಿಗೆ ಹೋಗಿದ್ದ ಸ್ವಾಮೀಜಿಯ ಪ್ರಕಾರ ಸಭಾಂಗಣ ತುಂಬಿತ್ತು. ಎರಡನೆಯ ದಿನ ಸ್ವಾಮೀಜಿಯನ್ನು ಜೊತೆಯಲ್ಲಿ ಕರೆದುಕೊಂಡು ಹೋದರು. ಅಂದು ಮಳೆ ಬೀಳುತ್ತಿತ್ತು. ನಾವು ಸಭಾಂಗಣಕ್ಕೆ ಹೋದಾಗ ಅಲ್ಲಿ ಕೇವಲ ಇಪ್ಪತ್ತು ಮಂದಿ ಮಾತ್ರ ಇದ್ದರು. ಆ ಸಂಖ್ಯೆಯಲ್ಲಿ ಸಭೆಯನ್ನು ಏರ್ಪಡಿಸಿದವರೂ ಸೇರಿದ್ದರು! ಸ್ವಾಮಿ ರಂಗನಾಥಾನಂದರು ಅಂಥ ಸಂದರ್ಭದಲ್ಲಿ ಏನು ಮಾಡುತ್ತಾರೋ ನೋಡಬೇಕು ಎಂಬ ಕುತೂಹಲ ನನ್ನದು. ನಮ್ಮ ಪ್ರವೃತ್ತಿಯಾದರೋ ಏನಾದರೂ ಮಾಡಿ ಸಭೆಯನ್ನು ಮುಂದೂಡುವುದು ಅಥವಾ ಹೆಚ್ಚು ಜನ ಸೇರುವವರೆಗೆ ಕಾಯುವುದು. ಆದರೆ ಸ್ವಾಮೀಜಿ ಮಾತ್ರ ವೇದಿಕೆಗೆ ನಡೆದು ಸಭಾಂಗಣ ತುಂಬಿದ್ದರೆ ಹೇಗೋ ಹಾಗೆ ಉಪನ್ಯಾಸ ಶುರುಮಾಡಿದರು. ಸಾವಿರದೈನೂರು ಜನ ಹಿಡಿಸುವ ಸಭಾಂಗಣದಲ್ಲಿ ಇದ್ದವರು ಇಪ್ಪತ್ತೇ ಜನ ಎಂಬುದನ್ನು ಕಲ್ಪಿಸಿಕೊಳ್ಳಿ. ಸ್ವಲ್ಪ ಸಮಯದ ಅನಂತರ ಸಭಿಕರ ಸಂಖ್ಯೆ ಇನ್ನೂರೈವತ್ತಕ್ಕೆ ಏರಿತು ಎಂಬುದು ಬೇರೆಯದೇ ವಿಷಯ.

ಮದರಾಸಿನಲ್ಲಿ ನಡೆದ ಇನ್ನೊಂದು ಘಟನೆ. ಸಂಜೆ ಅವರೂ ಸತ್ಯಸಾಯಿ ಬಾಬಾ ಅವರೂ ಹತ್ತು ಸಾವಿರ ಜನ ಸೇರಿದ್ದ ಒಂದು ಭಾರೀ ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದರು. ಅನಂತರ ಹತ್ತು ಗಂಟೆ ರಾತ್ರಿಗೆ ಮತ್ತೊಂದು ಸಭೆಯಲ್ಲಿ ಸ್ವಾಮೀಜಿ ಮಾತನಾಡಬೇಕಿತ್ತು. ಅಲ್ಲಿ ಕತ್ತಲೆಯೋ ಕತ್ತಲು. ನಮ್ಮನ್ನು ಸ್ವಾಗತಿಸಲು ಯಾರೂ ಇರಲಿಲ್ಲ. ನನಗೋ ತುಂಬ ಅಸಮಾಧಾನ. "ಹೋಗೋಣ, ನಡೆಯಿರಿ" ಎಂದೆ. ಆದರೆ ಅವರು ಶಾಂತಿಯಿಂದ ಹೇಳಿದರು: "ಸ್ವಲ್ಪ ಹೊತ್ತು ಸುಮ್ಮನಿರು, ಏನಾಗುತ್ತೋ ನೋಡೋಣ." ನಾವು ಕಾಯುತ್ತಿದ್ದೆವು. ಅನಂತರ ಸಭೆಯನ್ನು ಏರ್ಪಡಿಸಿದ್ದವರು ಬಂದರು. ಎಲ್ಲವೂ ಎಂದಿನಂತೆ ನಡೆದುವು.

ಇನ್ನೊಂದು ಘಟನೆ. ಪಂಜಾಬಿನ ಲೂಧಿಯಾನಾದಲ್ಲಿ ಸ್ವಾಮೀಜಿ ಒಂದು ಸಭೆಯನ್ನು ಉದ್ದೇಶಿಸಿ ಮಾತನಾಡಬೇಕಾಗಿತ್ತು. ನಾನಾಗ ಚಂಡೀಘಡದ ಆಶ್ರಮದ ಮುಖ್ಯಸ್ಥನಾಗಿದ್ದೆ. ನಮ್ಮ ಕೇಂದ್ರದ ಆಡಳಿತ

ಮಂಡಳಿಯ ಉಪಾಧ್ಯಕ್ಷರಲ್ಲಿ ಒಬ್ಬರಾಗಿದ್ದ ಶ್ರೀ ಸಾಬೂ ಅವರು ಸ್ವಾಮೀಜಿಯವರನ್ನು ನೇರವಾಗಿ ಸಂಪರ್ಕಿಸಿ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಸ್ವಾಮೀಜಿಯ ಹೊಟ್ಟೆಯ ಸ್ಥಿತಿಯನ್ನು ಸಾಬೂ ಅವರಿಗೆ ವಿವರಿಸಿ ನಾನು ಅವರಿಗಾಗಿ ವಿಶೇಷವಾದ ಆಹಾರವನ್ನು ತಯಾರಿಸಬೇಕಾಗುತ್ತದೆ ಎಂದು ಹೇಳಿದೆ.

ಯಾರಾದರೂ ಭಕ್ತರ ಮನೆಯಲ್ಲಿ ಊಟ ತಯಾರಿಸಿ ತರುತ್ತೇನೆ ಎಂದೂ ಹೇಳಿದೆ. ಸಾಬೂ ಅವರು "ಈ ಊರಿನ ರೋಟರಿ ಕ್ಲಬ್‌ನವರು ಅದನ್ನೆಲ್ಲ ನೋಡಿಕೊಳ್ಳುತ್ತಾರೆ. ನೀವೇನೂ ಯೋಚಿಸಬೇಡಿ" ಎಂದು ಹೇಳಿದರು. ಆಹಾರ ತಯಾರಿಸಬೇಕಾದವರು ಇವರ ಬೇಡಿಕೆಯನ್ನು ಕೇಳಿ "ಅವನ್ನೆಲ್ಲ ಒದಗಿಸುವುದು ಸಾಧ್ಯವಿಲ್ಲ" ಎಂದರಂತೆ. ಒಬ್ಬರು ಭಕ್ತರು ತಮ್ಮ ಮನೆಯ ಮಾಳಿಗೆಯಲ್ಲಿ ಒಂದು ಟೆಂಟ್–ಗುಡಾರ ಹಾಕಿದ್ದರು. ಅಲ್ಲಿ ನೆರೆದಿದ್ದ ಭಕ್ತರನ್ನುದ್ದೇಶಿಸಿ ಸ್ವಾಮಿ ರಂಗನಾಥಾನಂದರು ಭಾಷಣ ಮಾಡಿದರು. ಸ್ವಾಮೀಜಿ, ಭೋಜನ ಮತ್ತು ಭಾಷಣ ಎರಡೂ ಕಾರ್ಯಕ್ರಮಗಳನ್ನು ಸಂತೋಷವಾಗಿ ನೆರವೇರಿಸಿದರು. ಸರಳ ಭೋಜನವನ್ನು ಪಂಚತಾರಾ ಹೋಟೆಲಿನ ಭೋಜನವೋ ಎಂಬಂತೆ ಸವಿದರು. ಹಾಗೆ ಕೆಲವೇ ಕೆಲವರಿಗೆ ಮಾಡಿದ ಭಾಷಣ ನೂರಾರು ಜನ ಬುದ್ಧಿಜೀವಿ ಶ್ರೋತೃಗಳಿಗೆ ಮಾಡುತ್ತಿರುವ ಭಾಷಣ ಎಂಬಂತೆ ಇತ್ತು!

ಅದೇ ದಿನ ಬೆಳಗ್ಗೆ ನಡೆದಿದ್ದ ಒಂದು ಘಟನೆ. ಅದನ್ನು ಶ್ರೀ ಸಾಬೂ ಅವರು ನನಗೆ ಹೇಳಲಿಲ್ಲ. ಅನಂತರ ಶ್ರೀಮತಿ ಸಾಬೂ ಅವರು ನನಗೆ ಹೇಳಿದರು. ಸ್ವಾಮೀಜಿ ಅಂದು ಬೆಳಿಗ್ಗೆ ಚಂಡೀಘಡಕ್ಕೆ ವಾಣಿಜ್ಯ ವಿಮಾನದಲ್ಲಿ (commercial flight) ಬರಬೇಕಿತ್ತು. ಆದರೆ ವಿಮಾನ ಬರುವುದು ಅನಿಶ್ಚಿತವಾಗಿತ್ತು. ಹವಾಮಾನ ವೈಪರೀತ್ಯ ಆ ಅನಿಶ್ಚಿತತೆಗೆ ಕಾರಣವಾಗಿತ್ತು. ಕಾರ್ಯಕ್ರಮದ ಆಯೋಜಕರು ದೆಹಲಿಯಲ್ಲಿದ್ದ ರಂಗನಾಥಾನಂದರಿಗೆ ಫೋನ್ ಮಾಡಿ ಸ್ವಾಮೀಜಿ ವಿಮಾನದಲ್ಲಿ ಬರುತ್ತಾರೋ, ಇಲ್ಲವೋ ರಾತ್ರಿ ರೈಲಿನಲ್ಲಿ ಹೊರಟು ಕಾರ್ಯಕ್ರಮಕ್ಕೆ ಬರುತ್ತಾರೋ ಎಂದು ಕೇಳಿದರು. ಕಾರ್ಯಕ್ರಮಕ್ಕೆ ಕ್ಲುಪ್ತವಾಗಿ ಬರುವ ನಿಯಮವನ್ನು ಪಾಲಿಸುತ್ತಿದ್ದ ಸ್ವಾಮೀಜಿ, ಎರಡನೆಯ ವಿಧಾನವನ್ನೇ ಅನುಸರಿಸುವುದಾಗಿ ಹೇಳಿದರು. ಬೆಳಗಿನ ಜಾವ ಅವರು ಚಂಡೀಘಡ ತಲುಪಿದಾಗ ಅವರನ್ನು ಸ್ವಾಗತಿಸಲು ರೈಲ್ವೆ ನಿಲ್ದಾಣದಲ್ಲಿ ಯಾರೂ ಇರಲಿಲ್ಲ. ಆದದ್ದಾಗಲಿ ಎಂದು ಅವರು ರೈಲ್ವೆ ನಿಲ್ದಾಣದಲ್ಲಿ ದೇವರ ಮೇಲೆ ಭಾರ ಹಾಕಿ ಕುಳಿತಿದ್ದರು. ಅವರು ನಂಬಿದ್ದ ದೇವರು ಕೈಬಿಡಲಿಲ್ಲ. ರೋಟರಿ ಕ್ಲಬ್ಬಿನ ಸದಸ್ಯರೊಬ್ಬರು ಬಂದು ಅವರನ್ನು ಕರೆದೊಯ್ದರು. ಸ್ವಲ್ಪ ಸಮಯದ ಬಳಿಕ ನಾನು, ಶ್ರೀ ಸಾಬೂ ಅವರು ಸ್ವಾಮೀಜಿಯನ್ನು ಕರೆತರಲು ಹೋದಾಗ ಅವರು ಶಾಂತರಾಗಿ ಕುಳಿತು ತಮ್ಮ ಲೇಖನವೊಂದರ ಹಿಂದಿ ಅನುವಾದವನ್ನು ತಿದ್ದುತ್ತಾ ಕುಳಿತಿದ್ದರು! ತಮ್ಮನ್ನು ಕರೆದೊಯ್ಯಲು ಅದುವರೆಗೆ ಯಾರೂ ಬಾರದಿದ್ದ ಬಗ್ಗೆ ಅವರು ಒಂದೇ ಒಂದು ಮಾತನ್ನೂ ಆಡಲಿಲ್ಲ.

**ಬಿರುಗಾಳಿಯ ನಡುವೆ ಪ್ರಶಾಂತಿ**

ಒಮ್ಮೆ, ಬೇಲೂರು ಮಠದಲ್ಲಿ ತರುಣ ಸನ್ಯಾಸಿಯೊಬ್ಬರು ಮಂಕುಕವಿದ ಸ್ಥಿತಿಯಲ್ಲಿದ್ದರು. ಈ ಹಿಂದೆ ಅವರು ಒಂದು ಕಾಲೇಜಿನ ಪ್ರಿನ್ಸಿಪಾಲರೋ, ಇಲ್ಲವೇ ಒಂದು ಹೈಸ್ಕೂಲಿನ ಮುಖ್ಯೋಪಾಧ್ಯಾಯರೋ ಆಗಿದ್ದರು. ಈಗ ಅವರನ್ನು ತೋಟಗಾರಿಕೆಗೆ ವರ್ಗಾಯಿಸಿದ್ದರು. ಭಾರತೀಯರ ಪರಿಭಾಷೆಯಲ್ಲಿ ಹೇಳುವುದಾದರೆ ಅವರಿಗೆ ಹಿಂಬಡ್ತಿಯಾಗಿತ್ತು! ಅವರು ಮಠಕ್ಕೆ ಸೇರಿದಾಗಿನಿಂದ ಅವರನ್ನು ನಾನು ಬಲ್ಲವನಾಗಿದ್ದೆ. ಹೀಗಾಗಿ ಅವರನ್ನು ಭೇಟಿ ಮಾಡಿದಾಗಲೆಲ್ಲ ಅವರನ್ನು ಲೇವಡಿ ಮಾಡುತ್ತಿದ್ದೆ. ಆ ಸಂದರ್ಭದಲ್ಲಿ ಈ ಗೀತಾವಾಕ್ಯವನ್ನು ಹೇಳುತ್ತಿದ್ದೆ: "ಕ್ಷೀಣೇಪುಣ್ಯೇ ಮರ್ತ್ಯಲೋಕಂ ವಿಶಂತಿ" "[ಸ್ವರ್ಗದಲ್ಲಿ] ಒಳ್ಳೆಯ ಪುಣ್ಯಗಳನ್ನು ಅನುಭವಿಸಿ, ಅವುಗಳ ಫಲ ಮುಗಿದ ಮೇಲೆ ಈ ಲೋಕಕ್ಕೆ ಬರುತ್ತೇವೆ." ಮೊದಲು ಮೊದಲು ಅವರು ಗೊಂದಲಕ್ಕೆ ಸಿಕ್ಕಿದ್ದರೂ, ಅನಂತರ ಕ್ರಮಕ್ರಮವಾಗಿ, ಅದರ ಅರ್ಥ ತಿಳಿದಂತೆ ನಾನು ಹಾಗೆ ಹೇಳಿದಾಗ ಸಂತೋಷಗೊಳ್ಳುತ್ತಿದ್ದರು.

ಆದರೆ ಖಿನ್ನತೆಯ ಕಾರಣ ಅದಾಗಿರಲಿಲ್ಲ. ಏಕೆಂದರೆ ತೋಟದ ಕೆಲಸ ಅವರಿಗೆ ಸಂತೋಷವನ್ನೇ ನೀಡಿತ್ತು. ಆದರೆ ಹಿರಿಯ ಸನ್ಯಾಸಿಯೊಬ್ಬರ ಒಂದು ಮಾತು ಅವರಿಗೆ ದುಃಖವನ್ನು ತಂದಿತ್ತು. ಅವರೂ ಇವರಂತೆಯೇ ಪದವಿಯನ್ನು ಕಳೆದುಕೊಂಡಿದ್ದವರಾಗಿದ್ದರು. ಇವರು ಹೇಳಿದ್ದರು: ರಾಮಕೃಷ್ಣ–ವಿವೇಕಾನಂದ ಇವರೆಲ್ಲ ಸುಳ್ಳು ಎಂದು. ಹಿರಿಯ ಸನ್ಯಾಸಿಯೊಬ್ಬರು ಸಣ್ಣ ಕಾರಣಕ್ಕೆ ಹೀಗೆ ಹೇಳುವುದೇ? ಅವರಷ್ಟು ವಯಸ್ಸಾದಾಗ ನಮ್ಮ ಗತಿ ಏನಾಗುತ್ತದೆ? ಈ ಪ್ರಶ್ನೆಯೇ ಅವರನ್ನು ಕಾಡುತ್ತಿದ್ದುದು. ಒಂದು ಸಂಜೆ, ಪೂಜೆಯ ಅನಂತರ ಅವರು ಈ ವಿಷಯವನ್ನು ನನಗೆ ಹೇಳಿದರು. "ಅದಕ್ಕಾಗಿ ಚಿಂತಿಸಬೇಡಿ. ಹಾಗೆ ಹೇಳಿದ ಸ್ವಾಮೀಜಿಯನ್ನು ನಾವು ಅನುಕರಿಸಬೇಕಾಗಿಲ್ಲ. ರಾಮಕೃಷ್ಣ ಸಂಘದಲ್ಲಿ ನಾವು ಆದರ್ಶವಾಗಿ ಇಟ್ಟುಕೊಳ್ಳಬಹುದಾದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸ್ವಾಮಿ ರಂಗನಾಥಾನಂದರಿದ್ದಾರಲ್ಲ, ಹಾಗೆಯೇ ಇನ್ನೂ ಅನೇಕರಿದ್ದಾರೆ. ರಂಗನಾಥಾನಂದರು ರಾಮಕೃಷ್ಣ ಮಿಷನ್ ಕಲ್ಚರ್ ಸಂಸ್ಥೆಯಲ್ಲಿ ಎಷ್ಟೊಂದು ಒಳ್ಳೆಯ ಕೆಲಸ ಮಾಡಿದ್ದರು, ಏನು ಕಥೆ. ಆದರೆ ಅವರ ವಿರುದ್ಧವೂ ತಿರುಗಿಬಿದ್ದವರಿರಲಿಲ್ಲವೇ? ಅಷ್ಟಕ್ಕೂ ಅವರಿಂದ ಉಪಕಾರ ಪಡೆದಿದ್ದವರು! ಆದರೆ, ಅಂಥ ಸಂದರ್ಭದಲ್ಲೂ ರಂಗನಾಥಾನಂದರು ಎಷ್ಟು ಶಾಂತರಾಗಿದ್ದರು! ಹಾಗೆಲ್ಲ ಆದಾಗಲೂ ಶ್ರೀ ರಾಮಕೃಷ್ಣರು, ಶ್ರೀ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರಲ್ಲಿ ಅವರ ಭಕ್ತಿ, ಗೌರವಗಳು ಕಿಂಚಿತ್ತೂ ಕಡಮೆಯಾಗಲಿಲ್ಲ, ಅಲ್ಲವೆ?

ತೊಂದರೆ ಶುರುವಾದದ್ದು ಸ್ವಾಮಿ ರಂಗನಾಥಾನಂದರು ನಾಲ್ಕನೇ ವರ್ಗದ ನೌಕರರಿಗೆ ಸಮವಸ್ತ್ರವನ್ನು ಕಡ್ಡಾಯಗೊಳಿಸಿದಾಗ. ಅವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದವರು ಗೂರ್ಖರು. ಅವರೇನೋ ಈ ಸಮವಸ್ತ್ರಧಾರಣೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಆದರೆ ಗೂರ್ಖೇತರ ನೌಕರರು ಅದಕ್ಕೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು. ಅವರ ವಾದ ಇದು: "ನಾವು ನಾಲ್ಕನೇ ದರ್ಜೆಯ ನೌಕರರು ಹೌದು. ಆದರೆ ನೀವೇಕೆ ನಮ್ಮ ಮೇಲೆ ಮುದ್ರೆಯೊತ್ತಿ ಅದನ್ನು ಲೋಕಕ್ಕೆಲ್ಲ ಸಾರಿ ಹೇಳಬೇಕು? ನಾಲ್ಕನೆಯ ದರ್ಜೆಯ ನೌಕರರಾಗಿರುವುದೇ ಒಂದು ಅಪರಾಧವೇ?" ಅವರ ವಾದದಲ್ಲಿ ಹುರುಳಿತ್ತು ಎಂಬುದನ್ನು ನಾವು ಒಪ್ಪಲೇಬೇಕು. ಆದರೆ ನೌಕರರೆಲ್ಲರೂ ಕ್ವಾರ್ಟರ್ಸ್‌ನಲ್ಲಿರಬೇಕು ಎಂದು ಸ್ವಾಮೀಜಿ ಹೇಳಿದ್ದು ಸರಿ ಎಂದೇ ಹೇಳಬಹುದು. ಏಕೆಂದರೆ ಅವರಿಗಾಗಿಯೇ ಹೊಸದಾಗಿ ಕ್ವಾರ್ಟರ್ಸ್‌ಗಳನ್ನು ಕಟ್ಟಿದ್ದು ಹೌದು. ಸ್ವಾಮಿ ರಂಗನಾಥಾನಂದರ ಉದ್ದೇಶ ಉದಾತ್ತವಾದದ್ದಾಗಿತ್ತು. ಸಂಸ್ಥೆಗಾಗಿ ದುಡಿಯುತ್ತಿದ್ದವರಿಗೆ ವಾಸಯೋಗ್ಯವಾದ ಮನೆಗಳನ್ನು ಒದಗಿಸಬೇಕು ಎಂಬುದು ಅವರ ಉದ್ದೇಶವಾಗಿತ್ತು. ಮೇಲ್ಮಟ್ಟದ ಉದ್ಯೋಗಿಗಳಿಗೆ ಸುಸಜ್ಜಿತವಾದ ಕೊಠಡಿಗಳೂ, ಫ್ಲಾಟ್‌ಗಳೂ ಇದ್ದುವು. ಇತರ ವರ್ಗದವರಿಗೂ ಅವು ಲಭ್ಯವಾಗಿದ್ದುವು. ಆದರೆ ಒಂದು ಷರತ್ತಿತ್ತು. ಅದೆಂದರೆ ಒಂಟಿಯಾಗಿದ್ದವರು ಎಲ್ಲರೂ ಊಟ ಮಾಡುವ ಕ್ಯಾಂಟೀನ್‌ನಲ್ಲಿ ಊಟಮಾಡಬೇಕಾಗಿತ್ತು. ಅಲ್ಲಿ ಕೂಡ ಶುದ್ಧವಾದ, ಆರೋಗ್ಯಕರವಾದ ಆಹಾರ ಅತ್ಯಂತ ಕಡಮೆ ಬೆಲೆಗೆ ದೊರಕುತ್ತಿತ್ತು. ಅವರಿಗೆಲ್ಲ ಕುಳಿತು ಊಟ ಮಾಡಲು ಕುರ್ಚಿ, ಮೇಜುಗಳಿದ್ದುವು. ಕಲ್ಕತ್ತೆಯ ಸೆಖೆಯನ್ನು ಎದುರಿಸಲು ಫ್ಯಾನ್‌ಗಳು ಅವರ ತಲೆಯ ಮೇಲೆ ಸುತ್ತುತ್ತಿದ್ದುವು. ಆದರೆ, ನಾಲ್ಕನೆಯ ದರ್ಜೆಯ ನೌಕರರು ಅಲ್ಲಿ ಊಟಮಾಡಲು ನಿರಾಕರಿಸಿದರು. ಅವರಲ್ಲಿ ಹೆಚ್ಚಿನವರು ಬಿಹಾರಿಗಳು. ಉಳಿದೆಲ್ಲ ಸೌಕರ್ಯಗಳನ್ನು ಅವರು ಬಳಸುತ್ತಿದ್ದರು. ಆದರೆ ಕ್ಯಾಂಟೀನ್‌ನಲ್ಲಿ ಊಟಮಾಡಲು ನಿರಾಕರಿಸಿದರು. ತಾವೇ ಅಡುಗೆ ಮಾಡಿಕೊಳ್ಳಬಯಸಿದರು. ಅದೂ ಹೇಗೆ? ಬಯಲಿನಲ್ಲಿ ಇಟ್ಟಿಗೆಯಿಂದ ಮಾಡಿದ ಒಲೆಗಳ ಮೇಲೆ! ಪರಿಣಾಮ, ಸುತ್ತಮುತ್ತಲಿನ ಸ್ಥಳ ಅನಿವಾರ್ಯವಾಗಿ ಹೊಲಸುಗೊಂಡಿತು. ಈ ಹಕ್ಕಿಗಾಗಿ ಅವರು ಒಂದು ಚಳವಳಿ ನಡೆಸಿದರು. ಎಲ್ಲರೂ ಸೇರಿ ಒಟ್ಟಾಗಿ ಚಳವಳಿ ನಡೆಸಲು ಈಗ ಅವರಿಗೆ ಒಂದು ಸ್ಥಳವೂ ದೊರಕಿತ್ತು! ಚಳವಳಿಗೆ ಚಾಲನೆ ದೊರೆತಮೇಲೆ, ಬೇರೆ ಕಾರಣಗಳಿಗಾಗಿ ಅಸಮಾಧಾನಗೊಂಡಿದ್ದ ಉನ್ನತ ವರ್ಗದ ನೌಕರರೂ ಅವರೊಂದಿಗೆ ಸೇರಿಕೊಂಡರು. ಬೆಂದ ಮನೆಯಲ್ಲಿ ಸಿಕ್ಕಿದಷ್ಟನ್ನು ಹಿರಿಯಲು ನೌಕರರ ಸಂಘ ಸದಾ ಸಿದ್ಧವಾಗಿತ್ತು. ಕಿಡಿಯು ಬಹುಬೇಗ ಜ್ವಾಲೆಯ ಸ್ವರೂಪವನ್ನು ತಾಳಿತು. ರಂಗನಾಥಾನಂದರು ತಮ್ಮ

ಕೊಠಡಿಯಿಂದ ಆಫೀಸಿಗೆ ಹೋಗುವಾಗ ಅಡುಗೆಯವರು ಕೂಡ ಅವರ ವಿರುದ್ಧ ಘೋಷಣೆ ಕೂಗುತ್ತಿದ್ದರು. ಈ ಸಂದರ್ಭದಲ್ಲಿ ಮುಖ್ಯವಾದದ್ದು ಉದ್ಯೋಗಿಗಳು ಹೇಗೆ ವರ್ತಿಸಿದರು ಎಂಬುದಲ್ಲ; ರಂಗನಾಥಾನಂದರು ಇವಕ್ಕೆಲ್ಲ ಹೇಗೆ ಪ್ರತಿಕ್ರಿಯಿಸಿದರು; ಹೇಗೆ ಶಾಂತವಾಗಿ ಎಲ್ಲವನ್ನೂ ಸಹಿಸಿಕೊಂಡರು ಎಂಬುದು. ತೊಂದರೆಗಳ ಮೂಲ, ಅದು ಮುಂದೆ ತಾಳಿದ ಅಸಹ್ಯಕರವಾದ ಸ್ವರೂಪ ಎಲ್ಲ, ಸ್ವಾಮೀಜಿ ಅವನ್ನು ಎದುರಿಸಿದ ರೀತಿಯ ಮುಂದೆ ಕ್ಷುಲ್ಲಕ ಎನಿಸಿದುವು. ಬೇರೆಯವರಿಗಾಗಿದ್ದರೆ, ಎಚ್ಚರಿಕೆಯ ಮಾತುಗಳಿಗೆ ಕಿವಿಗೊಡದೆ ಅವಕ್ಕೆ ತಕ್ಕ ಪ್ರತಿಕ್ರಿಯೆಯನ್ನು ತೋರಿಸುತ್ತಿದ್ದರು. ಆದರೆ ಸ್ವಾಮೀಜಿ ಮಾತ್ರ ಶಾಂತವಾಗಿದ್ದರು. ಅಂಥ ಸ್ಥಿತಿ ನಿಜವಾದ ಅಧ್ಯಾತ್ಮವಲ್ಲದಿದ್ದರೆ ಬೇರೆ ಯಾವುದು ಅಧ್ಯಾತ್ಮ? ಭಗವದ್ಗೀತೆಯ ಸಾರ ಅದು. ಅದನ್ನೇ ಸ್ವಾಮಿ ರಂಗನಾಥಾನಂದರು ಮೆಚ್ಚಿ ಆರಾಧಿಸುತ್ತಿದ್ದುದು.

ಅವರು ತಾಳ್ಮೆಯನ್ನು ಕಳೆದುಕೊಳ್ಳುತ್ತಿದ್ದುದನ್ನಾಗಲಿ, ಕೋಪದಿಂದ ಕುದಿಯುತ್ತಿದ್ದುದನ್ನಾಗಲೀ ನಾನು ಕಂಡೇ ಇಲ್ಲ. ಹೆಚ್ಚೆಂದರೆ ಅವರು ಮೃದುವಾಗಿ ಪ್ರತಿಭಟಿಸುತ್ತಿದ್ದರು, ಇಲ್ಲವೆ ದನಿ ಎತ್ತರಿಸುತ್ತಿದ್ದರು. ಅದಕ್ಕೆ ಒಂದು ಉದಾಹರಣೆ ಅವರು ಕಲ್ಕತ್ತೆಯ ಕಲ್ಚರ್ ಇನ್ಸ್ಟಿಟ್ಯೂಟ್‌ನಲ್ಲಿದ್ದಾಗ ನಡೆದ ಘಟನೆ: ಆಗ ಆ ಸಂಸ್ಥೆಯಲ್ಲಿ ಸ್ವಾಮೀಜಿಯ ಜೊತೆ ಇದ್ದವರೆಂದರೆ ಮೂರು ಜನ ಜಪಾನೀ ಬ್ರಹ್ಮಚಾರಿಗಳು, ಒಬ್ಬ ಪಂಜಾಬಿ ಬ್ರಹ್ಮಚಾರಿ ಮತ್ತು ಸಹಾಯಕ ಕಾರ್ಯದರ್ಶಿಯಾಗಿದ್ದ ನಾನು. ಅಂದಿನ ಪದ್ಧತಿಯಂತೆ ದಿನದ ಆದಾಯವನ್ನು ಖಜಾಂಚಿಯು ಜಪಾನೀ ಬ್ರಹ್ಮಚಾರಿಯ ಕೈಯಲ್ಲಿಟ್ಟು, ಹಣವನ್ನು ಪೆಟ್ಟಿಗೆಯಲ್ಲಿಟ್ಟು ಬೀಗಮುದ್ರೆ ಹಾಕುವಂತೆ ಹೇಳುತ್ತಿದ್ದನು. ಆ ಬ್ರಹ್ಮಚಾರಿಯು ಬೌದ್ಧ ಧರ್ಮಕ್ಕೆ ಸೇರಿದವನಾಗಿದ್ದು, ತಾನು ಅದನ್ನು ಅರ್ಥ ಮಾಡಿಕೊಂಡಂತೆ ಆಚರಿಸುತ್ತಿದ್ದವನು. ಪೆಟ್ಟಿಗೆಗೆ ಬೀಗ ಹಾಕುತ್ತಲೇ ಇರಲಿಲ್ಲ. ಒಂದು ದಿನ ಬೆಳಗ್ಗೆ ನೋಡಿದರೆ ಹಣ ಮಾಯವಾಗಿತ್ತು! ಅಡುಗೆಯವನು ಮಾತ್ರ ಅದನ್ನು ಲಪಟಾಯಿಸುವ ಸಾಧ್ಯತೆ ಇತ್ತು. ಏಕೆಂದರೆ ಯಾವ ವಸ್ತು ಎಲ್ಲಿದೆ ಎಂಬುದು ಅವನಿಗೆ ಮಾತ್ರ ತಿಳಿದಿರುತ್ತಿತ್ತು. ಆದರೆ, ಯಾವ ಪುರಾವೆಯೂ ಇಲ್ಲದೆ ಅವನ ಮೇಲೆ ಆಪಾದನೆ ಹೊರಿಸುವಂತಿರಲಿಲ್ಲ. (ಕಳುವಾಗಿದ್ದುದು ಕೇವಲ ೮೦೦ ರೂ. ಮಾತ್ರ. ಅಂದಿನ ಕಾಲಕ್ಕೆ ಅದು ಬಹು ದೊಡ್ಡ ಮೊತ್ತ) "ಒಬ್ಬ ಬ್ರಹ್ಮಚಾರಿಗಿಂತ ಅಡುಗೆಯವನೊಬ್ಬನು ಹೆಚ್ಚು ಚಾಕಚಕ್ಯತೆಯನ್ನು ತೋರಿಸಿದನಲ್ಲ" ಎಂದಷ್ಟೇ ಸ್ವಾಮೀಜಿ ಹೇಳಿದ್ದು! ಆದರೆ ತಪ್ಪು ಮಾಡಿದ್ದ ಬ್ರಹ್ಮಚಾರಿಗೆ ಅಷ್ಟಕ್ಕೇ ಕೋಪ ಬಂದಿತು. ಅವನು ಊಟ ಬಿಟ್ಟು ಎದ್ದು ಓಡಿದ– ಜಪಾನೀ ರೀತಿಯಲ್ಲಿ ಹರಾಕಿರಿ (ಆತ್ಮಹತ್ಯೆ) ಮಾಡಿಕೊಳ್ಳುವುದಕ್ಕೆ! ನಾವು, ಸಹಜವಾಗಿಯೇ, ಅವನ ಹಿಂದೆ ಓಡಿಹೋಗಿ ಆಗಬಹುದಾಗಿದ್ದ ಅನಾಹುತವನ್ನು ತಪ್ಪಿಸಿದೆವು. ಆದರೆ ಪ್ರಸ್ತುತವಾದದ್ದೇನು ಎಂದರೆ ಅಂಥ ಸಂದರ್ಭದಲ್ಲಿ ಸ್ವಾಮಿ ರಂಗನಾಥಾನಂದರು ಮನಸ್ಸನ್ನು ಹತೋಟಿಯಲ್ಲಿಟುಟಕೊಂಡಿದ್ದು ಸಮಾಧಾನದಿಂದ ಇದ್ದ ರೀತಿ.

**ಭವ್ಯ ಕೃತಿಗಳ ಹಿಂದಿದ್ದ ದಿವ್ಯ ಮಾನವ**

ಈಗ ದೃಶ್ಯಾವಳಿಗಳು ಹೈದರಾಬಾದಿಗೆ ವರ್ಗಾವಣೆಗೊಳ್ಳುತ್ತವೆ. ಸ್ವಾಮೀಜಿಯ ಕಾರ್ಯಕ್ಷೇತ್ರ ಇನ್ನು ಮುಂದೆ ಅದೇ. ಮುಂದಿನ ಇಪ್ಪತ್ತು ವರ್ಷಗಳು ಅವರು ಅಲ್ಲಿನ ಆಶ್ರಮದ ಮುಖ್ಯಸ್ಥರಾಗಿದ್ದರು. ದೆಹಲಿಯಲ್ಲಿ ಹೇಗೋ ಅಲ್ಲಿಯೂ ಹಾಗೇ ಪವಾಡಗಳನ್ನು ಮಾಡಿದರು. ಹಿಂದಿನಂತೆ ಈಗ ಇಲ್ಲಿ ನಾನು ಪ್ರತ್ಯಕ್ಷದರ್ಶಿಯಲ್ಲ. ನಾನು ಅಲ್ಲಿನ ಸಂಗತಿಗಳನ್ನೆಲ್ಲ ಕೇಳಿದ್ದು ಸ್ವಾಮಿ ಅನನ್ಯಾನಂದರಿಂದ ಹೈದರಾಬಾದಿನ ಶಾಖೆ ಆರಂಭವಾದಾಗಿನಿಂದ ಅದರ ಆಗು–ಹೋಗುಗಳನ್ನೆಲ್ಲ ಬಲ್ಲವರು ಅವರು. ಮೊದಲು ಅವರು ಸ್ವಾಮಿ ರಂಗನಾಥಾನಂದರ ಮಾರ್ಗದರ್ಶನದಲ್ಲಿ ಕೆಲಸ ನಿರ್ವಹಿಸಿದರು. ಅವರ ನಂತರ ಇವರೇ – ಎಂದರೆ ಅನನ್ಯಾನಂದರು – ಆ ಕೇಂದ್ರದ ಅಧ್ಯಕ್ಷರಾದರು. ಆಗ ನಡೆದದ್ದೇನು ಎಂಬುದನ್ನು ನಾನು ದಾಖಲಿಸಲು ಬಯಸುತ್ತೇನೆ. ನಾನು ದಾಖಲಿಸುವ ಈ ಸಂಗತಿಗಳೂ ಬೇರೆಲ್ಲೂ ಇದುವರೆಗೆ ದಾಖಲಾಗಿಲ್ಲ.

ಯಾರಾದರೂ ಈಗ ನಮ್ಮ ಹೈದರಾಬಾದ್ ಶಾಖೆಗೆ ಹೋಗಿ ನೋಡಿದರೆ ಭವ್ಯವಾದ ದೇವಾಲಯ, ವಿವಿಧ ರೀತಿಯ ಚಟುವಟಿಕೆಗಳು ಅಲ್ಲಿರುವುದನ್ನು ಕಾಣಬಹುದು. ಅವೆಲ್ಲವೂ ಮೊದಲಿನಿಂದಲೂ ಹಾಗಿದ್ದುವು ಎಂದು ಭಾವಿಸಿದರೆ ಆ ಭಾವನೆ ಸುಳ್ಳಾಗುತ್ತದೆ. ಆಶ್ರಮವು ಈಗಿರುವ ಜಾಗ ಆಗ ಒಂದು ಜೌಗು ಪ್ರದೇಶವಾಗಿತ್ತು. ಅಷ್ಟೇ ಅಲ್ಲ, ಈಗಿರುವಂತೆ ಆ ಸ್ಥಳವು ಸೊಗಸಾದ ಆವರಣವನ್ನು ಹೊಂದಿರಲಿಲ್ಲ. ಅಲ್ಲಿಗೆ ತಲುಪಬೇಕಾದರೆ, ಸುಮಾರು ದೂರ, ಕೆಸರಿನಲ್ಲಿ ನಡೆದುಕೊಂಡು ಹೋಗಬೇಕಾಗಿತ್ತು. ಹೈದರಾಬಾದ್ ಸರ್ಕಾರವು ನೆಪಮಾತ್ರಕ್ಕೆ ಒಂದು ಮೊತ್ತವನ್ನು ಹೆಸರಿಸಿ ಆ ಜಾಗವನ್ನು ಆಶ್ರಮಕ್ಕೆ ಎಂದು ಕೊಟ್ಟಿತ್ತು. ಅದನ್ನು ಬಳಸಲು ಯೋಗ್ಯವಾದ ಜಾಗವನ್ನಾಗಿ ಮಾಡಲು ದೂರದ ಸ್ಥಳಗಳಿಂದ ಮಣ್ಣನ್ನು ತರಬೇಕಾಗಿತ್ತು. ಆಮೇಲಷ್ಟೇ ಅಲ್ಲವೆ, ಅಲ್ಲಿ ಕಟ್ಟಡಗಳನ್ನು ಕಟ್ಟುವ ಮಾತು? ಆಮೇಲಿನ ಸಮಸ್ಯೆ ಹಣ ಕೂಡಿಸುವುದು. ಆದರೆ ಸ್ವಾಮಿ ರಂಗನಾಥಾನಂದರು ನಿರಾಶರಾಗಲಿಲ್ಲ. ದಿವ್ಯಶಕ್ತಿಯ ವಿಷಯದಲ್ಲಿ ಅವರ ಶ್ರದ್ಧೆ ಚೂರೂ ಕಡಿಮೆಯಾಗಲಿಲ್ಲ. ಪರಿಸ್ಥಿತಿಯು ಎಂತಹ ಕಗ್ಗತ್ತಲನ್ನು ಸೃಷ್ಟಿಸಿದ್ದರೂ ಅವರು ನಿರಾಶಾವಾದಿಗಳಾಗಲಿಲ್ಲ. ಆ ಪರಿಸ್ಥಿತಿಯಲ್ಲಿ ಅವರು ಈ ಮುಂದೆ ಹೇಳುವವರಿಗೆ ಬರೆದ ಪತ್ರದ ಮಾತುಗಳು ಸ್ವಾಮೀಜಿಯ ಮನೋದಾರ್ಢ್ಯವನ್ನೂ, ಪರಮಾತ್ಮನಲ್ಲಿ ಅವರಿಗೆ ಇದ್ದ ಅಚಲವಾದ ಶ್ರದ್ಧೆಯನ್ನೂ ತೆರೆದು ತೋರಿಸುತ್ತವೆ. ಆಂಧ್ರ ಪ್ರದೇಶದ ಡಾ॥ ಎಂ.ಸಿ.ಆರ್.ಎಚ್.ಆರ್.ಡಿ. ಇನ್ಸ್ಟಿಟ್ಯೂಟಿನ ಡೈರೆಕ್ಟರ್, ಜನರಲ್ ಐ.ವಿ.ಆರ್.ಕೆ. ಪ್ರಸಾದ್ ಅವರಿಗೂ, ಆಂಧ್ರಪ್ರದೇಶದ ವಿಶೇಷ ಮುಖ್ಯ ಕಾರ್ಯದರ್ಶಿಯವರಿಗೂ, ಇತರ ಮುಖ್ಯ ವ್ಯಕ್ತಿಗಳಿಗೂ ಸ್ವಾಮೀಜಿ ಪತ್ರ ಬರೆದರು. ತಿರುಪತಿ ತಿರುಮಲೈ ದೇವಸ್ಥಾನದ ಡಿ.ಟಿ.ಡಿ. ಅವರಿಗೂ ಧನಸಹಾಯಕ್ಕೆಂದು ಪತ್ರ ಬರೆದರು. ಆದರೆ ಅವರಿಗೆ ಧನ ನೀಡಲು ತಮ್ಮದೇ ಆದ ತೊಂದರೆಯಿತ್ತು. ಆ ಸಂದರ್ಭದಲ್ಲಿ ಸ್ವಾಮಿ ರಂಗನಾಥಾನಂದರು ಬರೆದ ಮಾತುಗಳು ಇವು:

> "ಕಟ್ಟಡಗಳನ್ನು ಕಟ್ಟಲು ಆರಂಭಿಸಿದಾಗ ನಮ್ಮಲ್ಲಿ ಹೇಳಿಕೊಳ್ಳಬಹುದಾದಷ್ಟು ಹಣ ಇರಲೇ ಇಲ್ಲ. ಒಳ್ಳೆಯ ಕಾರ್ಯಕ್ಕೆ, ಅಗತ್ಯವಾದಷ್ಟು ಹಣವನ್ನು ಭಗವಂತನೇ ಒದಗಿಸುತ್ತಾನೆ ಎಂಬುದು ನನ್ನ ದೃಢವಾದ ನಂಬಿಕೆ. ಆದ್ದರಿಂದಲೇ ನಾನು ಈ ಮುಂದಿನವುಗಳನ್ನು ಒಳಗೊಂಡ ಯೋಜನೆಯನ್ನು ಕಾರ್ಯಗತ ಮಾಡಲು ಧೈರ್ಯವಾಗಿ ಮುನ್ನುಗ್ಗುತ್ತಿರುವುದು: ಒಂದು ಸಭಾಂಗಣ, ಅತಿಥಿ ಕೊಠಡಿಗಳು, ಸನ್ಯಾಸಿಗಳಿಗಾಗಿ ಕೊಠಡಿಗಳು, ಪ್ರಾರ್ಥನಾಮಂದಿರ, ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಸ್ಥಳ ಇತ್ಯಾದಿಗಳು. ಆದರೆ ಕೆಲಸ ಮುಂದುವರಿದಂತೆ, ನನ್ನ ನಿರೀಕ್ಷೆಯಂತೆ ಅನಿರೀಕ್ಷಿತವಾದ ಕಡೆಗಳಿಂದ ಹಣ ಹರಿದುಬರುತ್ತಿದೆ." (ನೋಡಿ: 'ಶ್ರೀ ರಾಮಕೃಷ್ಣ ಪ್ರಭಾ', ಮಾರ್ಚ್ ೨೦೦೫, ಪು.೨೬)

ಅಸ್ತಿಭಾರ ಹಾಕುವ ದಿನ ನಡೆದದ್ದು ಸ್ವಾಮಿ ರಂಗನಾಥಾನಂದರ ಧೈರ್ಯ, ಆತ್ಮವಿಶ್ವಾಸ, ಭಗವಂತನಲ್ಲಿ ಅನಂತವಾದ ನಂಬಿಕೆ ಇವುಗಳನ್ನು ಕುರಿತು ಅನೇಕ ಸಂಪುಟಗಳಲ್ಲಿ ವರ್ಣಿಸಬಹುದಾದಷ್ಟು ವಿಷಯಗಳನ್ನು ತಿಳಿಸುತ್ತದೆ. ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾದ ಸ್ವಾಮಿ ವೀರೇಶ್ವರಾನಂದರು ಮತ್ತು ಭರತ್ ಮಹಾರಾಜರು (ಸ್ವಾಮಿ ಅಭಯಾನಂದರು, ರಾಮಕೃಷ್ಣ ಮಹಾಸಂಘದ ಅತ್ಯಂತ ಹಿರಿಯ ಸಾಧು) ಹಾಜರಿದ್ದರು. ಚಪ್ಪರಗಳನ್ನು ಹಾಕಿದ್ದರು. ಇತರ ಎಲ್ಲ ಏರ್ಪಾಟುಗಳೂ ಆಗಿದ್ದುವು, ವೈಭವೋಪೇತವಾಗಿ, ಕಲಾತ್ಮಕವಾಗಿ. ಆಂಧ್ರಪ್ರದೇಶದ ರಾಜ್ಯಪಾಲರು ಆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಬೇಕಾಗಿತ್ತು. ಕಾರ್ಯಕ್ರಮ ಬೆಳಗಿನ ೮.೩೦ಕ್ಕೆ ಆರಂಭವಾಗಬೇಕಾಗಿತ್ತು. ಆದರೆ, ಬೆಳಗ್ಗೆ ಐದಕ್ಕೋ, ಆರಕ್ಕೋ ಮಳೆ ಶುರುವಾಯಿತು. ಚಪ್ಪರ ಕುಸಿದು ಬಿತ್ತು. ಇಡೀ ಪ್ರದೇಶ ಕೆಸರುಮಯವಾಯಿತು. ಆಗ ಉಂಟಾದ ಗೊಂದಲ, ಗಡಿಬಿಡಿ, ಕೋಪತಾಪಗಳು – ಇವನ್ನು ಕಲ್ಪಿಸಿಕೊಳ್ಳಿ– ಯಾರಿಗೇ ಆದರೂ ಇವಿಷ್ಟೂ ತಲೆಕೆಡಿಸುತ್ತಿದ್ದುವು ತಾನೆ? ಆದರೆ, ಶ್ರೀ ಸ್ವಾಮಿ ರಂಗನಾಥಾನಂದರಿಗಲ್ಲ! ಅವರು ಶಾಂತವಾಗಿಯೇ ಇದ್ದರು. ಒಂದು ಮೂಲೆಯಲ್ಲಿ ಕುಳಿತು, ಪರಿಸ್ಥಿತಿಯನ್ನು ಕುರಿತು ಗೋಳುಗರೆಯದೆ

ಅವರು ತಕ್ಷಣ ಪರಿಸ್ಥಿತಿಯನ್ನು ಹತೋಟಿಗೆ ತರುವ ಪ್ರಯತ್ನದಲ್ಲಿ ತೊಡಗಿದರು; ತಮ್ಮ ಎಂದಿನ ಶಾಂತಿಮೂರ್ತಿಯೇ ಆಗಿದ್ದರು! ಏನೂ ಆಗಲೇ ಇಲ್ಲವಂತೆ ಸಮಾರಂಭವು ಸುಸೂತ್ರವಾಗಿ ನಡೆಯಿತು. ಆ ಸಮಾರಂಭ ಆರಂಭವಾಗುವ ಮುನ್ನ ನಡೆದಿದ್ದ ಗೊಂದಲದ ಅರಿವೇ ಸಮಾರಂಭಕ್ಕೆ ಬಂದ ಯಾರಿಗೂ ಉಂಟಾಗಲೇ ಇಲ್ಲ!

ಈಗ ಹೈದರಾಬಾದಿನಲ್ಲಿರುವ ಆಶ್ರಮ ಆರಂಭವಾದದ್ದು ಸ್ವಾಮಿ ಯೋಗೇಶ್ವರಾನಂದರಿಂದ. ಅವರು ಶ್ರೀ ರಾಮಕೃಷ್ಣರ ಗೃಹೀಭಕ್ತರಾದ ರಾವಚಂದ್ರ ದತ್ತರ ಶಿಷ್ಯರು. ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಹೈದರಾಬಾದಿನ ಹೊರವಲಯದಲ್ಲಿ ಅದು ಸ್ಥಾಪನೆಗೊಂಡಿತ್ತು. ಅದನ್ನು ನಡೆಸುತ್ತಿದ್ದವರು ರಾಮಕೃಷ್ಣ ಮಿಷನ್ ಅದರ ಆಡಳಿತವನ್ನು ವಹಿಸಿಕೊಳ್ಳಬೇಕು ಎಂದು ಒತ್ತಾಯಿಸುತ್ತಲೇ ಇದ್ದರು. ಅದು ಸಾಧ್ಯವಾದದ್ದು ೧೯೭೦ರಲ್ಲಿ. ಸ್ವಾಮಿ ರಂಗನಾಥಾನಂದರು ಅಧ್ಯಕ್ಷರಾಗಿ ಬಂದಮೇಲೆ, ಸಿಕಂದರಾಬಾದಿನಲ್ಲಿ ಮೂರೋ ನಾಲ್ಕೋ ಮಹಡಿಗಳ ಒಂದು ಕಟ್ಟಡಕ್ಕೆ ಅದು ವರ್ಗಾವಣೆಗೊಂಡಮೇಲೆ ಅಲ್ಲಿಯವರೆಗೆ ಅನುಭವಿಸುತ್ತಿದ್ದ ದುಃಸ್ಥಿತಿಯಿಂದ ಪಾರಾಯಿತು. ಆದರೂ ಈಗ ಇದ್ದ ಸ್ಥಿತಿಯೂ ಸಮರ್ಪಕವಾಗಿತ್ತು ಎಂದು ಹೇಳುವಂತಿಲ್ಲ. ಬದುಕಿನ ಆವಶ್ಯಕತೆಗಳ ಪೂರೈಕೆ ಕನಿಷ್ಠ ಪ್ರಮಾಣದಲ್ಲಿತ್ತು. ತಳಮಟ್ಟದಲ್ಲೂ, ನೆಲ ಮಟ್ಟದಲ್ಲೂ ಮಳೆಯ ನೀರು ತುಂಬಿಕೊಳ್ಳುತ್ತಿತ್ತು. ೧೯೭೮ ಅಥವಾ ೧೯೭೯ರಲ್ಲಿ ಸ್ವಾಮಿ ಅನನ್ಯಾನಂದರ ನಂತರ ಅಧ್ಯಕ್ಷರಾದ ಪರಮಾರ್ಥಾನಂದರು ಹಿಂದೆ ಬೆಂಗಳೂರು ಆಶ್ರಮದಲ್ಲಿ ಬ್ರಹ್ಮಚಾರಿಯಾಗಿದ್ದರು. ಅಲ್ಲಿನ ಪರಿಸ್ಥಿತಿ ಉತ್ತಮವಾಗಿತ್ತು. ಆದರೆ ಅವರ ಕೈಬರಹ ಅಧ್ವಾನವಾಗಿತ್ತು. ಅದಕ್ಕೆ ಟೈಪ್‌ರೈಟರ್ ಬೇಕಾಯಿತು. ಅವರು ಹಾಡುವುದನ್ನು ಬಲ್ಲವರು. ಆದರೆ ಹಾಡುವುದಕ್ಕೆ ಹಿನ್ನೆಲೆಯಾಗಿ ಹಾರ್ಮೋನಿಯಂ ಬೇಕಾಗಿತ್ತು. ಆದರೆ ಅವಕ್ಕೆಲ್ಲ ಹಣ ಎಲ್ಲಿದೆ? ಇವಕ್ಕೆಲ್ಲ ಹಣ ಒದಗಿಸುವಂತೆ ಪರಮಾರ್ಥಾನಂದರು ಸ್ವಾಮಿ ರಂಗನಾಥಾನಂದರಿಗೆ ವರಾತ ಹಾಕುತ್ತಿದ್ದರು. ಅವರಾದರೋ "ತಾಳ್ಮೆ, ತಾಳ್ಮೆ, ಎಲ್ಲದಕ್ಕೂ ಹಣ ಬರುತ್ತದೆ" ಎಂದು ತಾಳ್ಮೆಯ ಮಂತ್ರವನ್ನು ಬೋಧಿಸುತ್ತಿದ್ದರು. ವಾಸ್ತವವಾಗಿ ಎಲ್ಲದಕ್ಕೂ ಹಣ ಒದಗಿ ಬಂತು, ಬೇಕಾದುದಕ್ಕಿಂತ ಹೆಚ್ಚಾಗಿಯೇ ಬಂತು! ಆಶ್ರಮದ ತುಂಬ ಹಾರ್ಮೋನಿಯಂಗಳು, ಕಂಪ್ಯೂಟರ್‌ಗಳು ತುಂಬಿ ತುಳುಕಾಡಿದುವು!

ಇಲ್ಲಿ ಹೇಳಬೇಕಾದ ಮತ್ತೊಂದು ಮಾತಿದೆ. ರಾಮಕೃಷ್ಣ ಮಹಾಸಂಘದ ಮೊದಲ ಅಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರು ತಮ್ಮ ಬಳಿಗೆ ಬಂದಿದ್ದ ತರುಣ ಸನ್ಯಾಸಿಯೊಬ್ಬರಿಗೆ ಹೀಗೆ ಹೇಳಿದರು ಎಂದು ದಾಖಲಾಗಿದೆ: ತರುಣ ಸನ್ಯಾಸಿ ಗರಿಗರಿಯಾದ ಬಟ್ಟೆ ತೊಟ್ಟು ಅವರ ಬಳಿಗೆ ಬಂದಿದ್ದ. ತಮಗೆ ಪ್ರಣಾಮ ಮಾಡಿದ ಆತನನ್ನು ನೋಡುತ್ತಾ ಹೇಳಿದರು: "ನೋಡಪ್ಪ, ಶ್ರೀ ರಾಮಕೃಷ್ಣರು ಈ ಯುಗದ ಅವತಾರ ಪುರುಷರು; ನೀನೇ ನೋಡುತ್ತಿರು, ಕಾಲ ಕಳೆದಂತೆ, ಅವರ ಹೆಸರಿನಲ್ಲಿ ಅನೇಕ ಶಾಲೆಗಳು, ಕಾಲೇಜುಗಳು, ಆಸ್ಪತ್ರೆಗಳು ಅಸ್ತಿತ್ವಕ್ಕೆ ಬರುತ್ತವೆ. ಅವಕ್ಕೆಲ್ಲ ದುಡ್ಡು ಹರಿದುಬರುತ್ತವೆ. ಆದರೆ, ಸಾಧುಗಳಾದ ನಾವು ನಮ್ಮ ಉಡುಗೆ ತೊಡುಗೆಗಳಲ್ಲಿ ಸಂಯಮದಿಂದ ಇರದಿದ್ದರೆ, ಯಾವುದಕ್ಕಾಗಿ ನಾವು ಎಲ್ಲವನ್ನೂ ತ್ಯಾಗ ಮಾಡಿ ಬಂದಿದ್ದೇವೆಯೋ ಆ ಆಧ್ಯಾತ್ಮಿಕ ಸಾಕ್ಷಾತ್ಕಾರ ಎಂಬುದು ದೂರದ ಕನಸಾಗಿ ಉಳಿಯುತ್ತದೆ."

ಅನೇಕ ವರ್ಷಗಳ ಹಿಂದೆ ದೆಹಲಿಯಲ್ಲಿ ಅದೇ ದೃಶ್ಯ ಪುನರಾವರ್ತಿತವಾಗಿತ್ತು. ಭಾರತ ವಿಭಜನೆಯ ಅನಂತರ ಕರಾಚಿಯ ನಮ್ಮ ಕೇಂದ್ರವನ್ನು ಮುಚ್ಚಬೇಕಾಯಿತು. ಅನಂತರ ಸ್ವಾಮಿ ರಂಗನಾಥಾನಂದರು ದೆಹಲಿಗೆ ಬಂದು ಹೆಚ್ಚು ಕಡಮೆ ಶೂನ್ಯದಿಂದ ಆ ಕೇಂದ್ರವನ್ನು ಅಭಿವೃದ್ಧಿಗೊಳಿಸಬೇಕಾಯಿತು. ಇದು ಉತ್ಪ್ರೇಕ್ಷೆಯ ಮಾತಲ್ಲ. ಅವರ ಅನಂತರ ಬಂದವರು ಅಲ್ಲೊಂದು, ಇಲ್ಲೊಂದು ಇಟ್ಟಿಗೆ ಸೇರಿಸಿರಬಹುದು ಅಷ್ಟೆ. ಆಗ ಅಲ್ಲಿದ್ದುದ್ದು ಮುಂಭಾಗದಲ್ಲಿ ಎರಡಂತಸ್ತಿನ ಒಂದು ಕಟ್ಟಡ. ಅದರಲ್ಲೇ ದೇವರಮನೆ, ಆಫೀಸು, ಪುಸ್ತಕದಂಗಡಿ, ಸನ್ಯಾಸಿಗಳ ವಾಸದ ಕೊಠಡಿಗಳು ಅಷ್ಟೇ ಇದ್ದದ್ದು. ಅಡುಗೆಮನೆ ಹಾಗೂ ಊಟದಮನೆಗಳೂ

ದೂರದಲ್ಲಿ, ಈಗ ಆಳುಕಾಳುಗಳ ವಾಸದ ಮನೆಗಳಿವೆಯಲ್ಲ, ಅಲ್ಲಿದ್ದುವು. ಅವರು ವಾರವಾರವೂ ತರಗತಿಗಳನ್ನು ನಡೆಸುತ್ತಿದ್ದುದು ಬಯಲಿನಲ್ಲಿ. ತಾವೇ ನಿರ್ಮಿಸಿದ ಎತ್ತರದ ವೇದಿಕೆಯ ಮೇಲೆ ಕುಳಿತು ಉಪನ್ಯಾಸ ನೀಡುತ್ತಿದ್ದರು. ಈಗ ಅದು ಅಲ್ಲಿಲ್ಲ. ಮಾಯಾವತಿಗೆ ಹೋಗುವಾಗ, ೧೯೫೭ರಲ್ಲಿ ನಾನು ಅದನ್ನು ನೋಡಿದ್ದೆ. ಮುಂದಿನ ಸಲ ಬಂದಾಗ ನೋಡುತ್ತೇನೆ, ಭವ್ಯವಾದ ದೇವಾಲಯ, ಉಪನ್ಯಾಸ ಭವನ, ಸಾಮಾನ್ಯ ಓದುಗರಿಗೂ, ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೂ ಉಪಯೋಗವಾಗುವ ಭವ್ಯವಾದ ಪುಸ್ತಕ ಭಂಡಾರಗಳು, ಸಾಧುಗಳು ವಾಸಿಸಲು ಹೊಸ ಕೊಠಡಿಗಳು, ವಿಸ್ತಾರವಾದ ಅಡುಗೆ ಮನೆ, ಊಟದ ಮನೆ ಎಲ್ಲ ಇದ್ದುವು.

ಗ್ರಂಥಾಲಯ ಮತ್ತು ಉಪನ್ಯಾಸ ಮಂದಿರಗಳಿಗೆ ಧನ ಕೂಡಿಸುವುದಕ್ಕಾಗಿ ಎಂ.ಎಸ್. ಸುಬ್ಬುಲಕ್ಷ್ಮಿಯವರು ನಡೆಸಿದ ಸಂಗೀತ ಕಛೇರಿಯನ್ನು ನಾನು ಎಂದೂ ಮರೆಯಲಾರೆ. ಅಷ್ಟೇ ಅಲ್ಲ, ಅಂದಿನ ಸಭೆಯಲ್ಲಿ ಅಧ್ಯಕ್ಷತೆ ವಹಿಸಿದ್ದ ಭಾರತದ ಪ್ರಧಾನಿ ಪಂಡಿತ್ ಜವಹರಲಾಲ್ ನೆಹ್ರೂ ಅವರು ಶ್ರೀಮತಿ ಸುಬ್ಬುಲಕ್ಷ್ಮಿಯವರನ್ನು ಕುರಿತು ಆಡಿದ ಗೌರವದ ನುಡಿಗಳನ್ನು ಯಾರು ತಾನೆ ಮರೆಯಲು ಸಾಧ್ಯ? ಅವರು ಹೇಳಿದರು: "ನಾನು ಏನು? ಕೇವಲ ಒಬ್ಬ ಪ್ರಧಾನಿ. ಆಕೆ ಸಂಗೀತ ಜಗತ್ತಿನ ಸಾಮ್ರಾಜ್ಞಿ." ಅವರ ಈ ಮಾತುಗಳು ಆಕೆಯನ್ನು ಅಂತರರಾಷ್ಟ್ರೀಯ ಖ್ಯಾತಿಯ ಶಿಖರಕ್ಕೆ ಮುಟ್ಟಿಸಿದುವು.

ಸ್ವಾಮಿ ರಂಗನಾಥಾನಂದರ ಕಾಲದಲ್ಲಿ ರಾಮಕೃಷ್ಣ ಮಿಷನ್ ತುಂಬ ಜನಪ್ರಿಯತೆಯನ್ನು ಪಡೆಯಿತು. ಜಾತಿ, ಮತ, ಧರ್ಮ, ಭಾಷೆಗಳ ಭೇದವಿಲ್ಲದೆ ಜನಸಾಮಾನ್ಯರಿಂದ ಹಿಡಿದು ಅತ್ಯಂತ ಮೇಧಾವಿಗಳನ್ನೂ ಅದು ಆಕರ್ಷಿಸಿತು. ಆ ಎರಡು ಸಂಸ್ಥೆಗಳ ಪ್ರತಿಯೊಂದು ಇಟ್ಟಿಗೆಯೂ ಸ್ವಾಮೀಜಿಯ ಮನಸ್ಸಿನ ಶಾಂತಿ, ಅದಮ್ಯವಾದ ಧೈರ್ಯ– ಅವರ ವ್ಯಕ್ತಿತ್ವದ ಹೆಗ್ಗುರುತು– ಅದು ಇವುಗಳನ್ನು ಸಾರಿ ಹೇಳುತ್ತವೆ.

### ಜನರ ಮನಶ್ಶಾಂತಿಯನ್ನೂ, ಸಂತೋಷವನ್ನೂ ಕೆಡಿಸದ ತತ್ವಜ್ಞಾನಿ

ಅವರು ಸದಾ ಇರುತ್ತಿದ್ದದ್ದು ಉನ್ನತವಾದ ಬೌದ್ಧಿಕ ಸ್ತರದಲ್ಲಿ. ಆದ್ದರಿಂದ ಅವರ ಜೊತೆಯಲ್ಲಿದ್ದವರು ಸ್ವಾಮೀಜಿ ಸದಾ ಗಂಭೀರವಾಗಿರಬೇಕು ಎಂದು ನಿರೀಕ್ಷಿಸುತ್ತಿದ್ದುದು ಸಹಜವಾಗಿಯೇ ಇದೆ. ಆದರೆ ಅವರಲ್ಲಿ ಹಾಸ್ಯ ಪ್ರವೃತ್ತಿ ನೆಲೆಯೂರಿತ್ತು. ಜೊತೆಗೆ ಸಂತೃಪ್ತಿಯೂ ಅವರ ನೈಜ ಗುಣವಾಗಿತ್ತು. ಅವರ ಮಾನವೀಯತೆ ಜನರ ವಿಷಯದಲ್ಲಿ ಅವರಿಗಿದ್ದ ಕಾಳಜಿ ಅವರ ವ್ಯಕ್ತಿತ್ವದ ಗಾಂಭೀರ್ಯವನ್ನು ಹೆಚ್ಚಿಸಿದ್ದುವು. ಜನರ ದೈನಂದಿನ ಸಮಸ್ಯೆಗಳು ಅವರ ಒಂದು ಮಂದಹಾಸದಿಂದ, ಅವರು ನೀಡುತ್ತಿದ್ದ ಸಲಹೆಗಳಿಂದ ಕ್ಷಣಾರ್ಧದಲ್ಲಿ ಪರಿಹಾರವಾಗುತ್ತಿದ್ದುವು. ಜನರ ಜೊತೆ ವ್ಯವಹರಿಸುವಾಗ ಅವರು ತೋರುತ್ತಿದ್ದ ಮಾನವೀಯತೆ ಅಗಾಧವಾದದ್ದು. ದುಃಖದಿಂದ ಅವರ ಬಳಿಗೆ ಬಂದವರು ಹಿಂದಿರುಗಿ ಹೋಗುವಾಗ ಅವರ ಒಂದೆರಡು ಸಮಾಧಾನದ ಮಾತುಗಳಿಂದ ಸಂತುಷ್ಟವಾಗಿ ಹಿಂದಿರುಗುತ್ತಿದ್ದರು. ಸಂದರ್ಭ ಒದಗಿದಾಗ ಸ್ವಾಮೀಜಿ ತಮ್ಮನ್ನು ನೋಡಲು ಬಂದ ಸ್ತ್ರೀ ಪುರುಷರು ಮತ್ತು ಮಕ್ಕಳೊಡನೆ ಆತ್ಮೀಯತೆ ತೋರುತ್ತಿದ್ದರು. ಬೆಂಗಳೂರು ಬಸವನಗುಡಿಯ ರಾಮಕೃಷ್ಣಾಶ್ರಮದಲ್ಲಿ ಅವರು ಹಂಗಾಮಿ ಅಧ್ಯಕ್ಷರಾಗಿದ್ದರು. ಹುಡುಗರೊಡನೆ ಕುಸ್ತಿ ಮಾಡುತ್ತಿದ್ದರು. ಅವರು ತೋರಿಸುತ್ತಿದ್ದ ಒಂದು ಆಟ, ಒಂದು ಪುಟ್ಟ ಕಲ್ಲನ್ನು ತುಂಬ ಎತ್ತರಕ್ಕೆ, ಅಥವಾ ತುಂಬ ದೂರಕ್ಕೆ ಚಿಮ್ಮಿಸುತ್ತಿದ್ದುದು ಎಲ್ಲರನ್ನೂ ಆಕರ್ಷಿಸುತ್ತಿತ್ತು. ಲೂಡೋ ಆಟದ ವಿಷಯದಲ್ಲಿ ಅವರಿಗೆ ಹೆಚ್ಚಿನ ತಿಳುವಳಿಕೆ ಇರಲಿಲ್ಲ– ಅದರಲ್ಲಿ ತಿಳಿದುಕೊಳ್ಳಬೇಕಾದದ್ದೂ ಹೆಚ್ಚಿನದೇನೂ ಇಲ್ಲ– ಆದರೆ ಅದು ನೀಡುತ್ತಿದ್ದ ಮನರಂಜನೆಯನ್ನು ಮಕ್ಕಳಂತೆ ಆಸ್ವಾದಿಸುತ್ತಿದ್ದರು.

ದೆಹಲಿಗೆ ಹೋದಾಗಲೆಲ್ಲ ನನ್ನನ್ನು ಆಕರ್ಷಿಸುತ್ತಿದ್ದುದು ಅವರು ನಡೆಸುತ್ತಿದ್ದ ರಾತ್ರಿಯ ತರಗತಿಗಳು. ತ್ರಿಶೂರಿನ ಸ್ವಾಮಿ ಅಂತರಾತ್ಮಾನಂದರು ಅಲ್ಲಿಗೆ ಬಂದಿದ್ದರಂತೂ ಎಲ್ಲರಿಗೂ ಆನಂದವೋ ಆನಂದ. ಕೇರಳದಲ್ಲಿ

ಕ್ರೈಸ್ತರು ಕೆಲಸ ಮಾಡುತ್ತಿದ್ದ ರೀತಿಯನ್ನು ಅಂತರಾತ್ಮಾನಂದರು ನಿರೂಪಿಸುತ್ತಿದ್ದ ರೀತಿ ಎಲ್ಲರೂ ನಕ್ಕು ಹೊರಳಾಡುವಂತೆ ಮಾಡುತ್ತಿತ್ತು. ಗಂಭೀರವಾದ ವಿಷಯಗಳನ್ನು ಕುರಿತು ಉಪನ್ಯಾಸಗಳ್ನು ನೀಡುತ್ತಿದ್ದ ರಂಗನಾಥಾನಂದರಿಗಂತೂ ಅಂತರಾತ್ಮಾನಂದರು ನಿರೂಫಿಸುತ್ತಿದ್ದ ಕಥೆಗಳು ತುಂಬ ಸಂತೋಷವನ್ನು ಒದಗಿಸುತ್ತಿದ್ದುವು. ಅವರು ಬಂದಾಗ ಅವರೇ ಕೇಂದ್ರಬಿಂದುವಾಗಿರುತ್ತಿದ್ದರು. ಕೆಲವು ಸಲ ರಂಗನಾಥಾನಂದರಿಗೆ ಆ ಸ್ಥಾನ ದೊರಕುತ್ತಿತ್ತು. ಒಮ್ಮೆ ಅವರಿಬ್ಬರೂ ಮಾಯಾವತಿಗೆ ಪ್ರಯಾಣ ಹೊರಟಿದ್ದರು. ಅಂದಿನ ದಿನಗಳಲ್ಲಿ ಅಲ್ಲಿಗೆ ಹೋಗುವುದು ತುಂಬ ತ್ರಾಸದಾಯಕವಾಗಿರುತ್ತಿತ್ತು. ಠಣಕ್‌ಪುರದಿಂದ ಮೂರು ನಾಲ್ಕು ದಿನಗಳು ಕಡಿದಾದ ದಾರಿಯನ್ನು ಏರುತ್ತ, ಐವತ್ತೇಳು ಮೈಲಿ ಪ್ರಯಾಣ ಮಾಡಿ ಗುರಿ ತಲುಪಬೇಕಾಗಿತ್ತು. ಹಾಗೆ ಹತ್ತಿಹೋಗುವ ರೂಢಿಯಿಲ್ಲದ ಅಂತರಾತ್ಮಾನಂದರು, ಸ್ವಾಮಿ ರಂಗನಾಥಾನಂದರಿಗಿಂತ ವಯಸ್ಸಿನಲ್ಲಿ ಚಿಕ್ಕವರಾಗಿದ್ದರೂ ಬೇಗ ಬಳಲುತ್ತಿದ್ದರು. ಇನ್ನು ಹತ್ತಲಾರೆ ಎಂದು ಹೇಳಿ ಅಲ್ಲಲ್ಲಿ ಕುಳಿತುಬಿಡುತ್ತಿದ್ದರು. ಒಮ್ಮೆ ಹಾಗೆ ಕುಳಿತಿದ್ದಾಗ ರಂಗನಾಥಾನಂದರು ತಾವು ಬಾಲಕರಾಗಿದ್ದ ಹರಿಕಥೆಯ ದಾಸರಿಂದ ಕೇಳಿದ್ದ ಒಂದು ಕಥೆಯನ್ನು ಹೇಳಿದರು. ಕಥಾವಸ್ತು ಶಿವ ಮತ್ತು ಅರ್ಜುನರಿಗೆ ನಡೆದ ಕಾಳಗಕ್ಕೆ ಸಂಬಂಧಿಸಿದ್ದು. ಅರ್ಜುನ ಬಂದಿದ್ದದ್ದು ಶಿವನಿಂದ ಅಸ್ತ್ರಗಳನ್ನು ಪಡೆಯುವುದಕ್ಕೆ. ಮುಂದೆ ನಡೆಯಲಿದ್ದ ಮಹಾಭಾರತ ಯುದ್ಧದಲ್ಲಿ ಬಳಸುವುದಕ್ಕೆಂದು ಆ ಅಸ್ತ್ರಗಳನ್ನು ಅವನು ಪಡೆಯಬೇಕಾಗಿತ್ತು. 'ಆ ಕಥೆಯಲ್ಲಿ ಮುಖ್ಯವಾದದ್ದು ಮಾತ್ಸರ್ಯ. ಅರ್ಜುನ ಶಿವನ ಮೇಲೆ ಬಾಣ ಪ್ರಯೋಗ ಮಾಡುತ್ತಿದ್ದ. ಬಾಣಗಳು ಕೆಲವು ಸಲ ಶಿವನ ಜಟೆಯ ಕಡೆ ಹೋಗುತ್ತಿದ್ದವು. ಅಲ್ಲಿ ಗಂಗಾದೇವಿ ಇರುತ್ತಿದ್ದಳು. ಶಿವನ ಪಕ್ಕದಲ್ಲೇ ಇದ್ದ ಪಾರ್ವತಿ ಸಂತೋಷಾತಿಶಯದಿಂದ ಹೊಡೆ, ಹೊಡೆ' ಎಂದು ಕೂಗುತ್ತಿದ್ದಳು. ಹರಿಕಥೆ ಮಾಡುತ್ತಿದ್ದ ದಾಸರನ್ನು ಅನುಕರಿಸಿ ರಂಗನಾಥಾನಂದರು 'ತೆ, ತೆ, ತೆ, ಹೊಡಿ ಹೊಡಿ' ಎಂದು ಹೇಳುತ್ತಿದ್ದಂತೆ ಅಂತರಾತ್ಮಾನಂದರು ನಗು ತಡೆಯಲಾರದೆ ಹೊರಳಾಡುತ್ತಿದ್ದರು. ಬೆಟ್ಟ ಏರಲಾರದೆ ಕುಳಿತಿದ್ದ ಸ್ವಾಮೀಜಿ ಎದ್ದು ಮುಂದುವರಿಯುತ್ತಿದ್ದರು. ಮುಂದಿನ ದಿನಗಳಲ್ಲಿ ರಂಗನಾಥಾನಂದರು ಈ ಘಟನೆಯನ್ನು ಮತ್ತೆ ಮತ್ತೆ ಹೇಳಿ ನಮಗೆಲ್ಲ ಸಂತೋಷ ಉಂಟುಮಾಡುತ್ತಿದ್ದರು.

ಮತ್ತೊಂದು ಘಟನೆ: ಇದನ್ನು ಎಷ್ಟು ಸಲ ಹೇಳಿದರೂ ಅವರಿಗೆ ಬೇಸರವಾಗುತ್ತಿರಲಿಲ್ಲ. ಅದೆಂದರೆ: ಕಟ್ಟಾ ಸನಾತನವಾದಿಗಳ ಅಭಿಪ್ರಾಯವನ್ನು ಬದಲಾಯಿಸಲು ಸಾಧ್ಯವಿಲ್ಲ ಎಂಬ ಅವರ ನಂಬಿಕೆ. ಮೈಸೂರಿನಲ್ಲಿ ಆಶ್ರಮದಲ್ಲಿ ನಡೆಯುತ್ತಿದ್ದ ಅಧ್ಯಯನ ಗೋಷ್ಠಿಯ ಸಾಧುಗಳಿಗೆ ವಿ. ಸುಬ್ರಹ್ಮಣ್ಯ ಅಯ್ಯರ್ ಎಂಬ ಮಹಾನ್ ವಿದ್ವಾಂಸರು ಮಾಂಡೂಕ್ಯಕಾರಿಕೆಯನ್ನು ಬೋಧಿಸುತ್ತಿದ್ದರು. ಅವರೋ ಕಟ್ಟಾ ಸನಾತನ ವಾದಿ. ಅವರ ವಾದವೇನೆಂದರೆ, ನಮ್ಮ ದಿನನಿತ್ಯದ ಅನುಭವದ ಆಧಾರವಿಲ್ಲದ ಯಾವುದನ್ನೂ, ಕೇವಲ ಪುಸ್ತಕಗಳ ಪ್ರಾಮಾಣ್ಯದ ಮೇಲೆ ಅಥವಾ ಯಾವನೋ ಆಚಾರ್ಯ ಪುರುಷ ಹೇಳಿದ ಎಂಬ ಕಾರಣಕ್ಕೆ ಒಪ್ಪಿಕೊಳ್ಳಕೂಡದು ಎಂದು. ಮಾಂಡೂಕ್ಯಕಾರಿಕೆಯು ಆಧ್ಯಾತ್ಮಿಕ ಸತ್ಯ ಎಂಬ ಅವಸ್ಥೆಯನ್ನು ವಿವರಿಸುತ್ತದೆ ಎಂಬುದನ್ನ ನಾವೆಲ್ಲರೂ ಬಲ್ಲೆವು. ಆ ಸ್ಥಿತಿಯನ್ನು ಅದು ತುರೀಯ ಎಂದು ಕರೆದಿದೆ. ಮಾಂಡೂಕ್ಯಕಾರಿಕೆಯ ಪ್ರಕಾರ ಅದು ನಮ್ಮ ಪ್ರಜ್ಞೆಯ ಮೂರು ಸ್ಥಿತಿಗಳಲ್ಲಿ ಒಂದು. ಇನ್ನೆರಡು ಸ್ಥಿತಿಗಳೆಂದರೆ ಸ್ವಪ್ನ ಮತ್ತು ಸುಷುಪ್ತಿ. ಈ ಮೂರೂ– ಜಾಗೃತ್, ಸ್ವಪ್ನ, ಸುಷುಪ್ತಿಗಳು ಪ್ರತಿಯೊಬ್ಬ ಮಾನವನ ಅನುಭವ ವಲಯಕ್ಕೆ ಸೇರಿದವು. ಶ್ರೀ ಸುಬ್ರಹ್ಮಣ್ಯ ಅಯ್ಯರ್ ಅವರು ಇವುಗಳನ್ನು ಕುರಿತು ಸಂಪ್ರದಾಯಸ್ಥ ಪಂಡಿತರೊಬ್ಬರೊಂದಿಗೆ ಚರ್ಚೆ ನಡೆಸುತ್ತಿದ್ದರು. ಅಯ್ಯರ್ ಅವರು ತಮ್ಮ ಅಭಿಪ್ರಾಯ ಸರಿಯಾದದ್ದು ಎಂಬ ದೃಢ ನಿಶ್ಚಯದಿಂದ ತಮ್ಮ ವಾದವನ್ನು ಮಂಡಿಸಿದ್ದರು. ಸುಷುಪ್ತಿಯ ಮಾತು ಬಂದಾಗ ಆ ವಿದ್ವಾಂಸರು ಸ್ವಪ್ನಗಳಿಲ್ಲದ ಸುಷುಪ್ತಿ – ಗಾಢನಿದ್ರೆ – ಎಂಬುದು ನನ್ನ ಅನುಭವಕ್ಕೆ ಎಂದೂ ಬಂದಿಲ್ಲ ಎಂದು ವಾದಿಸಿದರು. 'ನಾನು ನಿದ್ರೆ ಮಾಡುವಾಗ ಕನಸುಗಳು ಕಾಣಿಸಿಕೊಂಡೇ ತೀರುತ್ತವೆ' ಎಂದರು. ಅಯ್ಯರ್‌ರವರಿಗೆ ಆಘಾತವಾಯಿತು. 'ಅಂಥ ಸ್ಥಿತಿಯೊಂದು ಇಲ್ಲವೇ

ಇಲ್ಲ ಎಂದು ಹೇಳುತ್ತೀರಾ?' ಎಂದು ಹೇಳಿದರು. "ಹೌದು" ಎಂದರು ಪಂಡಿತರು. "ಹೇಗೆ?" ಎಂದು ಕೇಳಿದರು ಅಯ್ಯರ್ ಅವರು. 'ನಿಮಗೆ ಅನುಭವ ಆಗಿಲ್ಲವಲ್ಲ!' ಎಂದರು. ಪಂಡಿತರು ಹಿಡಿದ ಪಟ್ಟು ಬಿಡಲಿಲ್ಲ. ಶಾಂತವಾಗಿ ಹೇಳಿದರು: 'ಅಂಥ ಸ್ಥಿತಿ ಇದೆ ಎಂದು ಶಾಸ್ತ್ರಗಳು ಹೇಳುತ್ತವೆ. ನಾನು ಶಾಸ್ತ್ರ ವಾಕ್ಯಗಳನ್ನು ನಂಬುತ್ತೇನೆ.' ಹಾಗೆ ಹೇಳಿ ಅವರು ಭಗವದ್ ಗೀತಾ ವಾಕ್ಯವನ್ನು ಉದ್ಧರಿಸಿದರು. "ತಸ್ಮಾತ್ ಶಾಸ್ತ್ರಂ ಪ್ರಮಾಣಂ ತೆ ಕಾರ್ಯಾಕಾರ್ಯ ವ್ಯವಸ್ಥಿತೌ, XVI, ೨೪ ಅಯ್ಯರ್‌ರವರು ಸಂಪೂರ್ಣವಾಗಿ ನಿರಸ್ತ್ರರಾದರು. ಅವರು ಸೋತು ಸುಣ್ಣವಾದರು; ಪಂಡಿತರ ವಾದವನ್ನು ಖಂಡಿಸಲಾರದೇ ಹೋದರು.

ಇನ್ನೊಂದು ವಿಷಯವೆಂದರೆ, E.C.P.S., B.A. M.A. ಮುಂತಾದವುಗಳನ್ನು ಸ್ವಾಮೀಜಿ ವಿವರಿಸುತ್ತಿದ್ದ ವಿದಾನ. ಹಳೆಯ ಕಾಲದ, ಹಳೆಯ ಮೈಸೂರು ಪ್ರಾಂತದಲ್ಲೂ E.C.P.S. ಎಂದರೆ, ವಿದ್ಯಾರ್ಥಿಯು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಾನೆ/ಳೆ, ವಿಶ್ವವಿದ್ಯಾನಿಲಯವನ್ನು ಪ್ರವೇಶಿಸಬಹುದು ಎಂದು. E.C.P.S. ಎಂಬುದನ್ನು ಅಯ್ಯರ್‌ರವರು ವಿಸ್ತರಿಸುತ್ತಿದ್ದ ರೀತಿ: Education Completed and (all) Progress Stopped– "ವಿದ್ಯಾಭ್ಯಾಸ ಮುಗಿದಿದೆ, ಎಲ್ಲ ಪ್ರಗತಿಗೂ ಪೂರ್ಣ ವಿರಾಮ" ಎಂದು. ಎಲ್ಲವೂ ಪದವಿ ಪಡೆಯುವುದಕ್ಕಾಗಿ ಎಂಬ ಸೂಚನೆ ಇದರಲ್ಲಿದೆ. ಬಂಗಾಳದಲ್ಲಿ ಬಿಯೋ ಎಂದರೆ ಮದುವೆ. ಕೊರೆ ಎಂದರೆ ಮಾಡಿಕೊಂಡು ಎಂದು. ಈಗ ಏನಾದೆ ಕನ್ನಡದಲ್ಲಿ ಎಮ್ಮೆ ಎಂದರೆ ದಡ್ಡನಾದ್ಮೆ! ಎಂದು!

ಸ್ವಾಮಿ ರಂಗನಾಥಾನಂದರು ಯಾವುದೇ ಪರಿಸ್ಥಿತಿಗೂ– ಸ್ವಲ್ಪವೇ ಸ್ವಲ್ಪ ಗೊಂದಲಗೊಳ್ಳದೆ– ಹೊಂದಿಕೊಳ್ಳುತ್ತಿದ್ದರು. *ಜೆಖಾನೆ ಜೆಮೊನ್ ಸೆಖಾನೆ ತೆಮೊನ್, ಜರ್‌ಜೆಮೊನ್ ತರ್‌ತೆಮೊನ್* ಎಂದು ಶ್ರೀಮಾತೆ ಶಾರದಾದೇವಿಯವರು ಹೇಳುತ್ತಿದ್ದರು. ಎಂದರೆ, ನಿನ್ನ ನಡತೆಯು ಕಾಲ, ದೇಶ ಮತ್ತು ಜನರನ್ನು ಅನುಸರಿಸಿದಂತೆ ಇರಬೇಕು. ೧೯೭೭–೮೧ರ ಅವಧಿಯಲ್ಲಿ ನಾನು ಮದರಾಸಿನ ವಿದ್ಯಾರ್ಥಿಮಂದಿರದ ಆಡಳಿತವನ್ನು ನೋಡಿಕೊಳ್ಳುತ್ತಿದ್ದೆ. ಅಷ್ಟೇ ಅಲ್ಲದೆ, ತಮಿಳುನಾಡಿನ ಬರಪರಿಹಾರ ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯೂ ಆಗಿದ್ದೆ. ಅದರ ಅಧ್ಯಕ್ಷರು ಮದರಾಸು ಮಠದ ಅಧ್ಯಕ್ಷರು. ಸಮಿತಿಯು ತಮಿಳುನಾಡಿನ ಬರಪರಿಹಾರದ ಚಟುವಟಿಕೆಗಳನ್ನೂ ನೋಡಿಕೊಳ್ಳುತ್ತಿತ್ತು. ಅಂದಿನ ದಿನಗಳಲ್ಲಿ ಈಗಿನಂತೆ ಕೆಲಸ ಕಾರ್ಯಗಳು ಕೇಂದ್ರೀಕೃತವೂ ಆಗಿರಲಿಲ್ಲ. ೧೯೭೭ರಲ್ಲಿ ತಿರುಚಿನಾಪಳ್ಳಿಯ ಹತ್ತಿರದ ವೆಂಬನೂರಿನಲ್ಲಿ ಪರಿಹಾರ ಕಾರ್ಯವನ್ನು ನಡೆಸುತ್ತಿದ್ದೆವು. ಬರಪೀಡಿತ ಹಳ್ಳಿಗಳಲ್ಲಿ ಸೀರೆಗಳು, ಅಡುಗೆ ಪಾತ್ರಗಳು, ಅಕ್ಕಿ ಮುಂತಾದುವನ್ನು ಹಂಚಿದ್ದು. ಆದಮೇಲೆ ಹರಿಜನರ ವಾಸಕ್ಕೆಂದು ಮನೆಗಳನ್ನು ಕಟ್ಟಿಸುತ್ತಿದ್ದೆವು. ಮೊದಲನೆಯ ಗುಂಪಿನ ಮನೆಗಳನ್ನು ಮದರಾಸಿನ ರಾಜ್ಯಪಾಲರು ಉದ್ಘಾಟಿಸಿದ್ದರು. ಎರಡನೆಯದನ್ನು ರಂಗನಾಥ ಸ್ವಾಮಿಗಳು ಉದ್ಘಾಟಿಸಬೇಕಾಗಿತ್ತು. ಅವರು ಅದಕ್ಕೆಂದು ಬಂದವರು ವಿದ್ಯಾರ್ಥಿ ಮಂದಿರದಲ್ಲಿ ತಂಗಿದ್ದರು. ಅಂದೇ ಸಂಜೆ ನಾವು ತಿರುಚಿನಾಪಳ್ಳಿಗೆ ಹೋಗಬೇಕಿತ್ತು. ಸ್ವಾಮೀಜಿ ಮಧ್ಯಾಹ್ನ ಊಟ ಮುಗಿಸಿ ವಿದ್ಯಾರ್ಥಿ ಮಂದಿರದಲ್ಲಿ ಮಲಗಿ ವಿಶ್ರಮಿಸಿಕೊಳ್ಳಬೇಕಿತ್ತು. ಆದರೆ ಹಾಗೆ ವಿಶ್ರಮಿಸಿಕೊಳ್ಳಲು ಅಲ್ಲಿ ಅನುಕೂಲವಿರಲಿಲ್ಲ. ಆದ್ದರಿಂದ ನಾನು ಉಳಿದುಕೊಂಡಿದ್ದ ಕೊಠಡಿಯನ್ನು ಖಾಲಿ ಮಾಡಿ ಅವರು ಉಳಿದುಕೊಳ್ಳಲು ವ್ಯವಸ್ಥೆ ಮಾಡಬೇಕಾಗಿತ್ತು. ಊಟದ ನಂತರ ವಿದ್ಯಾರ್ಥಿಗಳು ಓಡಾಡುತ್ತಾ ತುಂಬಾ ಗಲಾಟೆ ಮಾಡುತ್ತಿದ್ದರು. ಅದರಿಂದ ಸ್ವಾಮೀಜಿಯ ವಿಶ್ರಾಂತಿಗೆ ಭಂಗ ಬರುತ್ತದೆ ಎಂಬ ಲೆಕ್ಕಾಚಾರ ನನ್ನದು. ಆದ್ದರಿಂದ ನಾನು ಹುಡುಗರನ್ನು ಒಂದು ಕಡೆಗೆ ಕರೆದು, ಅವರು ಗಲಾಟೆ ಮಾಡಕೂಡದು ಎಂದು ಹೇಳಿದೆ. ಅದು ರಂಗನಾಥಾನಂದರ ಕಿವಿಗೆ ಬಿತ್ತು. ಅವರು ಹೇಳಿದರು! 'ಮಕ್ಕಳಿಗೆ ತೊಂದರೆ ಕೊಡಬೇಡ... ಅವರಿಗೆ ಸಂತೋಷವಾಗಿ ಇರುವ ಕಾಲಾವಕಾಶ ಈಗ ಮಾತ್ರವಷ್ಟೆ? ಅವರು ತಮ್ಮ ಪಾಡಿಗೆ ತಾವು ಆಟವಾಡಿಕೊಂಡಿರಲಿ. ನನಗೆ ಏನೇನೂ ತೊಂದರೆಯಾಗುವುದಿಲ್ಲ."

ಕೆಲವು ವರ್ಷಗಳ ಅನಂತರ ಅವರು ಹೈದರಾಬಾದಿನಿಂದ ದೆಹಲಿಗೆ ಬಂದಿದ್ದರು. ಕುರುಕ್ಷೇತ್ರ ಎಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕರನ್ನೂ, ವಿದ್ಯಾರ್ಥಿಗಳನ್ನೂ ಉದ್ದೇಶಿಸಿ ಭಾಷಣ ಮಾಡಬೇಕಿತ್ತು. ಚಂಡೀಘಡ ಇಲ್ಲವೇ ದೆಹಲಿಯಿಂದ ಕುರುಕ್ಷೇತ್ರಕ್ಕೆ ಎರಡೂ ಗಂಟೆ ಪ್ರಯಾಣ. ನಾನು ಆಗ ನಮ್ಮ ಚಂಡೀಘಡದ ಆಶ್ರಯದ ಅಧ್ಯಕ್ಷನಾಗಿದ್ದೆ. ನಾವು ಉಪನ್ಯಾಸದ ಸ್ಥಳವನ್ನು ತಲುಪಿದಾಗ ಅಲ್ಲಿ ಅಂತರರಾಷ್ಟ್ರೀಯ ಖ್ಯಾತಿಯ ಸ್ವಾಮೀಜಿಯ ಭಾಷಣದ ಯಾವ ಲಕ್ಷಣವೂ ಇರಲಿಲ್ಲ. ಸ್ವಾಮೀಜಿಯ ಊಟ–ಉಪಚಾರ ತಂಗುವಿಕೆ ಮುಂತಾದುವಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ಎಂದು ಪ್ರಿನ್ಸಿಪಾಲರನ್ನು ಕೇಳಿದೆವು. ಆತ ಹಾರಿಕೆಯ ಉತ್ತರಗಳನ್ನು ಕೊಟ್ಟರು. ಎಲ್ಲೋ ಏನೋ ಲೆಕ್ಕಾಚಾರ ತಪ್ಪಿದೆ ಎಂದು ಭಾವಿಸಿ ನಾನು ಪ್ರಿನ್ಸಿಪಾಲರನ್ನು ನೇರವಾಗಿ ಕೇಳಿದೆ: "ಸ್ವಾಮೀಜಿಯನ್ನು ದೆಹಲಿಯಿಂದ ಕರೆದು ತರಲು ಏನು ಏರ್ಪಾಟಾಗಿದೆ?" ಪ್ರಿನ್ಸಿಪಾಲರು ಕೊಟ್ಟ ಉತ್ತರ ನನ್ನನ್ನ ಆಶ್ಚರ್ಯಗೊಳಿಸಿತು: "ಏಕೆ?– ಅವರು ಬರುವುದಕ್ಕೆ ತಾವೇ ಏರ್ಪಾಟು ಮಾಡಿಕೊಳ್ಳಬೇಕು!" ಪ್ರಿನ್ಸಿಪಾಲರು ಆಲೋಚಿಸಿದ್ದು ಹೀಗೆ: "ಸ್ವಾಮೀಜಿ, ರಾಜ್ಯಪಾಲರು ಅಥವಾ ಮುಖ್ಯ ಮಂತ್ರಿಗಳಂತೆ ತಮ್ಮದೇ ವಾಹನದಲ್ಲಿ ಬರುತ್ತಾರೆ!" ನಾನು ಪರಿನ್ಸಿಪಾಲರಿಗೆ ಹೇಳಿದೆ: "ಅವರು ಹಾಗೆ ಬರಬಹುದಿತ್ತು. ಆದರೆ ಈ ವಿಷಯವನ್ನು ನೀವು ಅವರ ಗಮನಕ್ಕೆ ತಂದಿದ್ದೀರಾ?" "ಇಲ್ಲ" ಎಂದರು ಅವರು. "ಈಗ ದೆಹಲಿಯಲ್ಲಿ ನಮ್ಮ ಆಶ್ರಮಕ್ಕೆ ಫೋನ್ ಮಾಡಿದಾಗ ಸ್ವಾಮೀಜಿಯೇ ಫೋನಿನಲ್ಲಿ ಮಾತನಾಡಿದರು. "ಎಲ್ಲಿದೆ ವಾಹನ? ನಾನು ಆಫೀಸಿನಲ್ಲಿ ಬೆಳಗಿನ ಏಳು ಗಂಟೆಯಿಂದ ಕಾಯುತ್ತಿದ್ದೇನೆ." "ಆಗಲೇ ಹನ್ನೆರಡು ಗಂಟೆಯಾಗಿತ್ತು. ಅಬ್ಬಾ! ಸ್ವಾಮೀಜಿಯ ತಾಳ್ಮೆ ಎಂಥದು."

ಇನ್ನೊಂದು ಸಂದರ್ಭ. ಸ್ವಾಮೀಜಿ ಕುರುಕ್ಷೇತ್ರ ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭದ ಉಪನ್ಯಾಸ ನೀಡಬೇಕಿತ್ತು. ಅವರು ಎಂದಿನಂತೆ ಒಂದು ರಾಶಿ ಪುಸ್ತಕಗಳೊಡನೆ ದೆಹಲಿಯಿಂದ ಹೊರಟು ಕುರುಕ್ಷೇತ್ರ ಸೇರಿದರು. ಅವರ ಭಕ್ತರ ದೊಡ್ಡ ಗುಂಪೊಂದು ಪುಸ್ತಕಗಳನ್ನು ಹೊತ್ತುಕೊಂಡು ಸ್ವಾಮೀಜಿಯವರೊಡನೆ ಬಂದಿಳಿದರು. ನಾನು ಚಂಡೀಘಡದಿಂದ ಹೊರಟು ಕುರುಕ್ಷೇತ್ರದಲ್ಲಿ ಸಮಾರಂಭದ ಸ್ಥಳ ತಲುಪಿದೆ. ಆತಿಥೇಯರು ನನಗೂ ಸ್ವಾಮಿರಂಗನಾಥಾನಂದರಿಗೂ ಎರಡು ಕೊಠಡಿಗಳನ್ನು ಕಾದಿರಿಸಿದ್ದರು. ಸ್ವಾಮೀಜಿಯ ಜೊತೆಯಲ್ಲಿ ಅಷ್ಟು ಜನ ಬರುತ್ತಾರೆಂಬುದು ತಿಳಿಯದೆ ಕಾಲೇಜಿನವರು, ಜೊತೆಯವರು ತಂಗಲು ಯಾವ ವ್ಯವಸ್ಥೆಯನ್ನು ಮಾಡಿರಲಿಲ್ಲ. ಸ್ವಾಮೀಜಿ ಹೇಳಿದರು: "ನೀನು ನನ್ನ ಕೊಠಡಿಯಲ್ಲೇ ಇರು. ಉಳಿದವರು ಇನ್ನೊಂದು ಕೊಠಡಿಯಲ್ಲಿರಲಿ. ಮತ್ತೆ ಹೇಳಿದರು: "ಒಂದು ಷರತ್ತಿದೆ, ನೀನು ಶೌಚಾಗೃಹಕ್ಕೆ ಹೋದರೆ, ಬಾಗಿಲನ್ನು ಮೃದುವಾಗಿ ಮುಚ್ಚಿಕೋ. ರಾತ್ರಿ ನಿದ್ದೆಯಲ್ಲಿ ಎದ್ದರೆ ನನಗೆ ಮತ್ತೆ ನಿದ್ದೆ ಬರುವುದಿಲ್ಲ! ಮಹಾತ್ಮಾಜಿ (ಮಹಾತ್ಮಾ ಗಾಂಧಿಯವರು ತಮಗೆ ಇಷ್ಟ ಬಂದಾಗ ಏಳಬಲ್ಲವರಾಗಿದ್ದರು. ಹಾಗೆಯೇ ಇಷ್ಟ ಬಂದಾಗ ನಿದ್ದೆ ಮಾಡಿ ಬಿಡುತ್ತಿದ್ದರು.) ನಾನು ಎಷ್ಟು ಹೊತ್ತು ಬೇಕಾದರೂ ಎದ್ದಿರಬಲ್ಲೆ. ಅಷ್ಟೇ ಅಲ್ಲ, ಯಾವಾಗ ಬೇಕಾದರೂ ನಿದ್ದೆಯಿಂದ ಏಳಬಲ್ಲೆ. ಆದರೆ ಬೇಕಾದಾಗ ನಿದ್ದೆ ಮಾಡಬಲ್ಲ ಶಕ್ತಿ ನನಗಿಲ್ಲ.!"

**ಸ್ವಾಮೀಜಿಯ ಸಾಧು ಪ್ರವೃತ್ತಿ**

ಅವರ ಬೌದ್ಧಿಕ ಶಕ್ತಿ ಮತ್ತು ಆಧ್ಯಾತ್ಮಿಕ ಸಿದ್ಧಿಗಳು ತುಂಬ ಉನ್ನತ ಮಟ್ಟದವು; ಆದರೆ, ಅವರು ತಾವು ಮೊದಲಿಗೆ ಸಾಧು ಮತ್ತು ಉಳಿದವೆಲ್ಲ ಅನಂತರದವು ಎಂಬುದನ್ನು ಎಂದೂ ಮರೆಯಲಿಲ್ಲ. ಇತರ ಸಾಧುಗಳಿಗೂ ಅವರು ನೀಡುತ್ತಿದ್ದ ಉಪದೇಶ, ಅವರೂ ತಮ್ಮಂತೆಯೇ ಆಲೋಚಿಸಬೇಕು ಎಂಬುದು. ಮುಂದೆ ರಾಮಕೃಷ್ಣ ಮಹಾಸಂಘದ ಲಂಡನ್ ಶಾಖೆಯ ಅಧ್ಯಕ್ಷರಾಗಿದ್ದ ಸ್ವಾಮಿ ಭವ್ಯಾನಂದರು (ಅರ್ಜುನ ಮಹಾರಾಜರು) ಬೆಂಗಳೂರಿನಲ್ಲಿದ್ದಾಗ ಸ್ವಾಮಿ ರಂಗನಾಥಾನಂದ ಅವರಿಂದ ಪ್ರಭಾವಿತರಾಗಿದ್ದರು. ರಂಗನಾಥಾನಂದರು

ಕರಾಚಿಯಲ್ಲಿದ್ದಾಗ ಭವ್ಯಾನಂದರು ರಾಮಕೃಷ್ಣ ಮಿಷನ್ನಿಗೆ ಸೇರಿದ್ದಾಗಿತ್ತು. ಅವರು ಮಿಷನ್ನಿಗೆ ಸೇರುವ ಮುಂಚೆ ವೈದ್ಯರಾಗಿದ್ದವರು. ಒಮ್ಮೆ ರಂಗನಾಥಾನಂದರು ಅವರನ್ನು ಕೇಳಿದರಂತೆ: ನೀನು ಡಾಕ್ಟರಾಗಿರುತ್ತೀಯೋ ಇಲ್ಲವೇ ಒಳ್ಳೆಯ ಸಾಧುವಾಗುತ್ತೀಯೋ? ರಾಮಕೃಷ್ಣ ಮಹಾಸಂಘದಲ್ಲಿ ಇವುಗಳಲ್ಲಿ ಯಾವುದಾದರೂ ಆಗಬಲ್ಲೆ, ಒಳ್ಳೆಯ ವೈದ್ಯನಾದರೆ ನೀನು ಎಂದೆಂದೂ ವೈದ್ಯನಾಗಿಯೇ ಇರುತ್ತೀಯೆ. ಹಾಗಲ್ಲದೆ ನೀನು ಸಾಧು ಜೀವನವನ್ನು ಆರಿಸಿಕೊಂಡರೆ, ಅನೇಕ ವೈದ್ಯರುಗಳಿಗೆ ಮಾರ್ಗದರ್ಶಕ ಶಕ್ತಿಯಾಗಬಲ್ಲೆ. ಅರ್ಜುನ ಮಹಾರಾಜರು ಸಹಜವಾಗಿಯೇ ನಾನು ಒಳ್ಳೆಯ ಸಾಧುವಾಗಿರಲು ಬಯಸುತ್ತೇನೆ."

ಈ ಸಂದರ್ಭದಲ್ಲಿ ಅವರು ೧೯೬೬ರಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನಲ್ಲಿ ಅದರ ಅಧ್ಯಕ್ಷರಾಗಿದ್ದ ಸಮಯದಲ್ಲಿ ನಡೆದ ಒಂದು ಘಟನೆ ಅವರ ಸ್ವಭಾವವನ್ನು ತೆರೆದು ತೋರಿಸುತ್ತದೆ. ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಘಟಿಕೋತ್ಸವ ಭಾಷಣವನ್ನು ನೀಡಲು ಅವರಿಗೆ ಆಹ್ವಾನ ಬಂದಿತ್ತು. ಅಂದಿನ ದಿನಗಳಲ್ಲಿ ಅಂತಹ ಆಹ್ವಾನವನ್ನು ಪಡೆದಿದ್ದ ಸಾಧು ಅವರೊಬ್ಬರೇ. ಅಂದಿನ ದಿನಗಳಲ್ಲಿ ಪ್ರಚುರವಾಗಿದ್ದಂತೆ ಸ್ವಾಮೀಜಿಯವರು ಗೌನ್ ಧರಿಸಬೇಕಾಗಿತ್ತು. ಸ್ವಾಮಿ ರಂಗನಾಥಾನಂದರು, ಭಾರತ ವಿಭಜನೆಯ ಮುನ್ನ ಕರಾಚಿ ಕೇಂದ್ರದಲ್ಲಿ ತಾವು ಮುಖ್ಯಸ್ಥರಾಗಿದ್ದಾಗ ನಡೆದ ಘಟನೆಯೊಂದನ್ನು ನಿರೂಪಿಸಿದರು. ಆ ಕಾಲದ ಎಲ್ಲ ಪ್ರಾಧ್ಯಾಪಕ ಮತ್ತು ಉಪನ್ಯಾಸಕರಲ್ಲಿ ಅಗ್ರಗಣ್ಯರಾಗಿದ್ದ ಡಾ. ಎಸ್. ರಾಧಾಕೃಷ್ಣನ್ ಅವರು ಕರಾಚಿ ಕೇಂದ್ರದಲ್ಲಿ ತಂಗಿದ್ದಾಗ ನಡೆದ ಒಂದು ಘಟನೆ ಅದು. ಅವರು ಲಂಡನ್ನಿಗೆ ಹೋಗುವ ಮುನ್ನ ಕರಾಚಿಯಲ್ಲಿ ಉಳೀಯಬೇಕಾಗಿತ್ತು. ಅವರು ವೈಭವೋಪೇತವಾದ ಹೋಟೇಲೊಂದರಲ್ಲಿ ಉಳಿಯಬಹುದಾಗಿತ್ತು. ಆದರೂ ಅವರು ಆಶ್ರಮದಲ್ಲೇ ಉಳಿಯುತ್ತಿದ್ದರು. ಅಂಥ ಒಂದು ಸಂದರ್ಭದಲ್ಲಿ ಅವರು ಹೇಳಿದರು: "ಸ್ವಾಮೀಜಿ, ನಿಮ್ಮ ಕಾವಿ ಬಟ್ಟೆಯನ್ನು ನೋಡಿದರೆ, ನನಗೆ ಅಸೂಯೆಯಾಗುತ್ತದೆ. ನಾನು ಗೌನ್ ಹಾಕಿಕೊಳ್ಳಲೇಬೇಕೆಂದರೆ, ನಾನು ಹಾಕಿಕೊಳ್ಳುತ್ತೇನೆ. ಆದರೆ, ಕಾವಿಗೆ ಸಮಾನವಾದದ್ದು ಯಾವುದಿದೆ? ಅದಿರುವಾಗ ಗೌನ್ ಧರಿಸಿದರೆ ಕಾವಿಗೆ ಅವಮಾನ ಮಾಡಿದಂತೆ ಅಲ್ಲವೆ?" ಅನಂತರ ಯಾರೂ ಅವರನನು ಗೌನ್ ಧರಿಸುವಂತೆ ಕೇಳಲಿಲ್ಲ.

**ಸಿದ್ಧಿಯ ಬದುಕು**

ಕೆಲವು ವರ್ಷಗಳ ಹಿಂದೆ ಸ್ವಾಮಿ ರಂಗನಾಥಾನಂದರು ಬೆಂಗಳೂರಿನ ಬಸವನಗುಡಿ ಆಶ್ರಮದಲ್ಲಿ ತಂಗಿದ್ದಾಗ ಭಕ್ತರೊಬ್ಬರು ಅವರನ್ನು ಕೇಳಿದರು: "ನಿಮಗೆ ಭಗವಂತನ ಸಾಕ್ಷಾತ್ಕಾರ ದೊರೆತಿದೆಯೆ?" ಸಾಮಾನ್ಯವಾಗಿ ಭಕ್ತರು ಸಾಧುಗಳನ್ನು ಕೇಳುವ ಪ್ರಶ್ನೆ ಅದು. ಸ್ವಾಮೀಜಿ ಹೇಳಿದರು: "ಇಲ್ಲ, ಆದರೆ ಆ ದಿಕ್ಕಿನಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟಿದ್ದೇನೆ. ಮೋಟರ್ ಕಾರಿನಲ್ಲಿ ಅಥವಾ ವಿಮಾಣದಲ್ಲಿ ಪ್ರಯಾಣ ಮಾಡಿದ್ದರಿಂದ ನೀವೂ ಅದೇ ದಾರಿಯಲ್ಲಿ ಮುಂದುವರಿಯುತ್ತಿದ್ದೀರಿ; ಆದರೆ ಎತ್ತಿನ ಗಾಡಿಯಲ್ಲಿ ಪ್ರಯಾಣ ಮಾಡುತ್ತಿರುವುದರಿಂದ ಸ್ವಲ್ಪ ಹಿಂದೆ ಇದ್ದೀರಿ. ಆದರೆ ನಾನು–ನೀವು ಇಬ್ಬರೂ ಕ್ರಮಿಸಬೇಕಾದ ದಾರಿ ತುಂಬ ಉದ್ದವಾಗಿದೆ" ಎಂದು ವರ್ಷದ ಹಿಂದೆ.

ಅವರ ಬಳಿ ಇಂಥ ಘಟನೆಗಳ ಭಂಡಾರವೇ ಇತ್ತು. ಮುಂದೆ ಹೇಳಿರುವುದು ಅಂಥವುಗಳಲ್ಲಿ ಒಂದು. ಅದು ಸ್ವಾಮಿ ರಂಗನಾಥಾನಂದರು ಸನ್ಯಾಸ ತೆಗೆದುಕೊಂಡಾಗ ಅವರು ಪಡೆದ ಸನ್ಯಾಸ ನಾಮಧೇಯಕ್ಕೆ ಸಂಬಂಧಿಸಿದ್ದು. ಮೈಸೂರು ಆಶ್ರಮದಲ್ಲಿ ವೈಷ್ಣವ ಧರ್ಮಕ್ಕೆ ಸೇರಿದವರೊಬ್ಬರು ಸನ್ಯಾಸಿಗಳಿಗೆ ಪಾಠ ಹೇಳುತ್ತಿದ್ದರು. ರಂಗನಾಥಾನಂದರನ್ನು ತೋರಿಸಿ, ಅವರು ಹೇಳುತ್ತಿದ್ದರು: "ಈತ ಮೊದಲು ಶಂಕರನ್ ಆಗಿದ್ದ ಎಂದರೆ ಶಿವನ ಭಕ್ತನಾಗಿದ್ದ; ಎಂದರೆ ಶಿವನ ಅನುಯಾಯಿಯಾಗಿದ್ದ. ಆದರೆ ಈಗ ವಿಷ್ಣು ಭಕ್ತನಾಗಿದ್ದಾನೆ ಎಂದರೆ ರಂಗನಾಥಾನಂದ ಆಗಿದ್ದಾನೆ!

ಮಾಂಡೂಕ್ಯಕಾರಿಕೆಯನ್ನು ಇವರಿಗೆ ಬೋಧಿಸುತ್ತಿದ್ದ ಗುರುಗಳು ಶ್ರೀ ವಿ. ಸುಬ್ರಹ್ಮಣ್ಯ ಅಯ್ಯರ್ ಅವರು. ಅವರು ಪಕ್ಕಾ ವಿಚಾರ ವಾದಿ. ಅವರ ಪ್ರಕಾರ ಯಾವುದೇ ಗ್ರಂಥವಾಗಲಿ, ಯಾರೇ ಗುರುಗಳಾಗಲಿ ಹೇಳಿದರು ಎಂದ ಮಾತ್ರಕ್ಕೆ ಗ್ರಂಥವಾಗಲಿ, ಯಾರೇ ಗುರುಗಳಾಗಲಿ ಹೇಳಿದರು ಎಂದಮಾತ್ರಕ್ಕೆ ಯಾವುದನ್ನೂ ಒಪ್ಪಿಕೊಳ್ಳಬಾರದು. ನಮ್ಮ ದಿನನಿತ್ಯದ ಅನುಭವದ ಆಧಾರದ ಮೇಲೆಯೇ ಯಾವುದನ್ನೇ ಆಗಲಿ, ಸ್ವೀಕರಿಸಬೇಕು. ಮಾಂಡೂಕ್ಯಕಾರಿಕೆಯು, ನಮಗೆಲ್ಲ ಗೊತ್ತಿರುವಂತೆ, ತುರೀಯವನ್ನು ಮೂರು ಅವಸ್ಥೆಗಳ ಜಾಗೃತ, ಸ್ವಪ್ನ, ಸಂಷುಪ್ತಿಗಳ ವಿಶ್ಲೇಷಣೆಯಿಂದ ವಿವರಿಸುತ್ತದೆ. ಒಮ್ಮೆ, ಶ್ರೀ ಸುಬ್ರಹ್ಮಣ್ಯ ಅಯ್ಯರ್ ಅವರು ಸಂಪ್ರದಾಯ ಪಾಲಕರಾದ ವಿದ್ವಾಂಸರೊಬ್ಬರೊಡನೆ ತುರೀಯದ ಸ್ವರೂಪವನ್ನು ಚರ್ಚಿಸುತ್ತಿದ್ದರು. ಆಗ ಆ ಸಂಪ್ರದಾಯಸ್ಥ ವಿದ್ವಾಂಸರು ಖಡಾಖಂಡಿತವಾಗಿ ಹೇಳಿದರು: "ಇಲ್ಲ, ನಾನು ಸ್ವಪ್ನಗಳೇ ಇಲ್ಲದ ಸಂಕ್ಷುಪ್ತಿಯ ಸ್ಥಿತಿಯನ್ನು ಅನುಭವಿಸಿಯೇ ಇಲ್ಲ! ನನ್ನ ಅನುಭವಕ್ಕೆ ಬಂದಿರುವುದು ಸ್ವಪ್ನಗಳು ಮಾತ್ರ!" ಭಯಗ್ರಸ್ಥರಾದ ಅಯ್ಯರ್ ಅವರು ಕೇಳಿದರು: "ಎಂದರೆ ನೀವು ಆ ಮೂರೂ ಸ್ಥಿತಿಗಳ ಅಸ್ತಿತ್ವವನ್ನು ಒಪ್ಪುವುದೇ ಇಲ್ಲವೇ?" ಆ ವಿದ್ವಾಂಸರ ಉತ್ತರ: "ಒಪ್ಪುತ್ತೇನೆ. ಏಕೆಂದರೆ ಶಾಸ್ತ್ರಗಳು ಅಂಥ ಸ್ಥಿತಿಗಳಿವೆ ಎಂದು ಹೇಳುತ್ತವೆ!" "ಭಗವದ್ಗೀತೆ ಹೇಳುತ್ತದೆ: "ತಸ್ಮಾತ್ ಶಾಸ್ತ್ರಂ ಪ್ರಮಾಣಮ್ ತೆ ಕಾರ್ಯಕಾರಣ ವ್ಯವಸ್ಥಿತಾ" ಅಯ್ಯರ್‌ರವರು ಏನೂ ಹೇಳಲಾರದವರಾದರು!

ಅಂದಿನ ವಿದ್ಯಾವ್ಯವಸ್ಥೆಯಲ್ಲಿ ಇ.ಸಿ.ಪಿ.ಎಸ್; ಬಿ.ಎ. ಎಂ.ಎ. ಮುಂತಾದ ಸಂಕ್ಷೇಪಾಕ್ಷರಗಳನ್ನು ಬಳಸುತ್ತಿದ್ದರಷ್ಟೆ. ಇ.ಸಿ.ಪಿ.ಎಸ್. ಎಂದರೆ ವಿಶ್ವವಿದ್ಯಾನಿಲಯಕ್ಕೆ ಪ್ರವೇಶಿಸಲು ಬೇಕಾದ ಅರ್ಹತೆ ಇದೆ ಎಂದರ್ಥ. ಶ್ರೀ ಅಯ್ಯರ್ ಅವರು E.C.P.S. ಎಂಬ ಅಕ್ಷರಗಳಿಗೆ ಕೊಡುತ್ತಿದ್ದ ವ್ಯಾಖ್ಯಾನ "Education Completed and (all) Progress Stopped" ಎಂದು. (ಎಂದರೆ ವಿದ್ಯಾಭ್ಯಾಸ ಮುಗಿದಿದೆ; ಆದರೆ ಎಲ್ಲ ಮುಂದುವರಿಕೆಗಳೂ ನಿಲುಗಡೆ ಹೊಂದಿವೆ ಎಂದು!) ನಮ್ಮ ವಿದ್ಯಾಭ್ಯಾಸ ಕ್ರಮವನ್ನು ಅಯ್ಯರ್‌ರವರು ಹೀಗೆ ಹಳಿಯುತ್ತಿದ್ದರು. ಬಂಗಾಳಿ ಭಾಷೆಯಲ್ಲಿ ಬಿಯೆ ಎಂದರೆ ಮದುವೆ ಎಂದರ್ಥ! ಎಂ.ಎ. ಎಂದರೆ ಕನ್ನಡದ ಎಮ್ಮೆ! ಎಂದರೆ ಆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವನು ಎಮ್ಮೆ ಎಂಬುದು ಅದರ ಗೂಡಾರ್ಥ. ಇದು ಐಯ್ಯರ್ ಅವರ ವ್ಯಾಖ್ಯಾನ!

ಸ್ವಾಮಿ ರಂಗನಾಥಾನಂದರು ಏನೊಂದೂ ರಂಪ ಮಾಡದೆ, ಯಾವುದೇ ಪರಿಸ್ಥಿತಿಗಾದರೂ ಹೊಂದಿಕೊಳ್ಳುತ್ತಿದ್ದರು– *ಜೆಖಾನೆ ಜೆಮಾನ್ ಸಿಖಾನೆ ತೆಮೊನ್, ಜೆಖಾನ್ ತೆಮೋನ್, ಜರ್ ಜೆಮೊನ್, ತರ್ ತೆನೊರ್ವ*– ಶ್ರೀ ಮಾತೆ ಶಾರದಾ ದೇವಿಯವರು "ನೀನು ಕಾಲ, ದೇಶ, ಜನ ಇವುಗಳಿಗೆ ಅನುಗುಣವಾಗಿ ನಡೆದುಕೊಳ್ಳಬೇಕು ಎಂದು ಹೇಳುತ್ತಿದ್ದರು. ೧೯೭೭ರಿಂದ ೧೯೮೧ರವರೆಗೆ ನಾನು (ಈ ಲೇಖನದ ಕರ್ತೃವಾದ ಕೀರ್ತಿದಾನಂದರು) ಮದರಾಸಿನ ವಿದ್ಯಾರ್ಥಿ ಮಂದಿರದಲ್ಲಿದ್ದೆ. ಆಗ ಅದರ ಆಡಳಿತವನ್ನು ನೋಡಿಕೊಳ್ಳುತ್ತಿದ್ದ "ತಮಿಳು ನಾಡು ಪರಿಹಾರ ಸಮಿತಿಯ ಇಬ್ಬರು ಸದಸ್ಯರಲ್ಲಿ ನಾನೂ ಒಬ್ಬ. ಮದರಾಸು ಮಠದ ಅಧ್ಯಕ್ಷರೇ ಆ ಸಮಿತಿಯ ಅಧ್ಯಕ್ಷರೂ ಆಗಿರುತ್ತಿದ್ದರು. ಆ ಸಮಿತಿಯೇ ಮದರಾಸು ಪ್ರಾಂತ್ಯದಲ್ಲಿ ಪರಿಹಾರ ಕಆರ್ಯವನ್ನೂ ನೋಡಿಕೊಳ್ಳುತ್ತಿತ್ತು. ೧೮೭೭ರಲ್ಲಿ ತಿರುಚನಾಪಳ್ಳಿಯ ಬಳಿಯ ವೆಂಬನೂರಿನಲ್ಲಿ ಪ್ರವಾಹ ಪರಿಹಾರ್ಯ ಭರದಿಂದ ನಡೆಯುತ್ತಿತ್ತು. ಅಲ್ಲಿ ನಾವು ಪ್ರವಾಹಪೀಡಿತರಿಗೆ ಪಾತ್ರೆ ಪಡಗಗಳು ಮತ್ತು ಸೀರೆಗಳು ಮುಂತಾದುವನ್ನು ಹಂಚುತ್ತಿದ್ದೆವು.

* * * *

# ೧೭. ನಾನು ಸ್ವಾಮೀಜಿಯವರ ಕಾರ್ಯಕ್ಕಾಗಿ ಮತ್ತೆ ಬರುತ್ತೇನೆ

–ಸ್ವಾಮಿ ನಿರ್ಮುಕ್ತಾನಂದ*

ಬಹಳ ಹಿಂದೆ, ೧೯೪೦ರ ದಶಕದಲ್ಲಿ, ನಾನು ಚಿಕಿತ್ಸೆಗಾಗಿ ರಂಗೂನಿನಲ್ಲಿದ್ದೆ. ರಾಮಕೃಷ್ಣ ಸಂಸ್ಥೆಯ ಆಸ್ಪತ್ರೆಯೊಂದು ಅಲ್ಲಿತ್ತು. ಗಾಂಧೀಜಿಯವರೂ ಒಮ್ಮೆ ಅಲ್ಲಿಗೆ ಬಂದಿದ್ದರು. ಅವರು ಅಲ್ಲಿಗೆ ಭೇಟಿ ಕೊಟ್ಟಮೇಲೆ ಆ ಆಸ್ಪತ್ರೆಯನ್ನು ಅಲ್ಲಿನ ಸ್ಥಳೀಯರು 'ಗಾಂಧಿ ಆಸ್ಪತ್ರೆ'ಯೆಂದೇ ಕರೆಯುತ್ತಿದ್ದರು. ಅಲ್ಲಿಗೆ ಬಹಳಷ್ಟು ಜನ ರೋಗಿಗಳು ಬಂದು ಸಂಪೂರ್ಣವಾಗಿ ಗುಣಹೊಂದುತ್ತಿದ್ದರು.

ಎರಡನೇ ವಿಶ್ವ ಮಹಾಯುದ್ಧವು ಆರಂಭವಾಗುವ ಸ್ವಲ್ಪ ಮೊದಲು ನಮಗೆ ಅಲ್ಲಿಂದ ಹೊರಟುಹೋಗಲು ಹೇಳಲಾಯಿತು. ಅಲ್ಲಿಂದ ಮೊದಮೊದಲು ಕಳುಹಿಸಲ್ಪಟ್ಟವರಲ್ಲಿ ನಾನೂ ಒಬ್ಬ. ಅಲ್ಲಿಂದ ಹೊರಟು ಹಡಗಿನಲ್ಲಿ ಪ್ರಯಾಣಿಸಿ ಖಿದಿರ್ಪುರ್‌ಗೆ ಬಂದಿಳಿದೆ. ಸ್ವಾಮಿ ರಂಗನಾಥಾನಂದ ಅವರು ಇನ್ನೂ ರಂಗೂನಿನಲ್ಲಿಯೇ ಇದ್ದರು. ಎಲ್ಲರೂ ಅವರಿಗೆ ಅಲ್ಲಿಂದ ತೆರಳಲು ಹೇಳಿದರೂ, ಅವರು ಮಾತ್ರ ಅದಕ್ಕೆ ಒಪ್ಪಲಿಲ್ಲ. ಅದಕ್ಕೆ ಅವರ ಉತ್ತರ ಅಲ್ಲಿರುವ ಅಸಹಾಯಕ ಜನರನ್ನು ತಾವು ಬಿಟ್ಟು ಹೋಗುವುದಿಲ್ಲ ಎಂಬುದು. ಆಗ ಅಲ್ಲಿದ್ದವರು, ಅವರಲ್ಲಿ ಹೆಚ್ಚಾಗಿ ಭಾರತೀಯರು, ಕಾಲುನಡಿಗೆಯ ಮೂಲಕ ಅರಣ್ಯವನ್ನು ಹಾಯ್ದು, ಅನ್ನನೀರುಗಳಿಲ್ಲದೆ, ಗಂಡಾಂತರಕಾರಿಯಾಗಿದ್ದ ಪ್ರಯಾಣವನ್ನು ಕೈಗೊಂಡು ಚಿತ್ತಗಾಂಗ್‌ಗೆ ಬಂದು ಸೇರಿದರು. ಅವರಲ್ಲಿ ಬಹಳಷ್ಟು ಜನ ಹೆಂಗಸರೂ ಇದ್ದರು. ಅವರೆಲ್ಲಾ ದೈಹಿಕವಾಗಿ ಬಳಲಿದ್ದರು. ಕೆಲವರು ಖಾಯಿಲೆಯಿಂದ ನರಳುತ್ತಿದ್ದರು. ಅವರ ಬಟ್ಟೆಬರೆಗಳು ಕೊಳೆಯಾಗಿ, ಹರಿದು ಚಿಂದಿಯಾಗಿದ್ದವು. ಕೆಲವರು ದಾರಿಯಲ್ಲೇ ಅಸುನೀಗಿದರು. ಸ್ವಾಮಿ ರಂಗನಾಥಾನಂದ ಅವರ ದೇಹಸ್ಥಿತಿಯೂ ಬಹಳಷ್ಟು ಚಿಂತಾಜನಕವಾಗಿದ್ದಿತು. ಆದರೆ ಅವರ ದೃಢತೆ ಅಗಾಧವಾಗಿದ್ದು, ಅವರು ಅತ್ಯಂತ ದಾರುಣವಾದ ಕಷ್ಟಗಳನ್ನು ತಾಳಿಕೊಳ್ಳಬಲ್ಲವರಾಗಿದ್ದರು. ಅವರಿಗೆ ಈ ಶಕ್ತಿ ಜನ್ಮಜಾತವಾಗಿ ಬಂದಿತ್ತು.

ಮತ್ತೆ ರಂಗೂನಿನ ಕಥೆಗೆ ಹಿಂದಿರುಗೋಣ. ಅಲ್ಲಿ ಒಂದು ಆಸ್ಪತ್ರೆ ಮತ್ತು ಒಂದು ಸೊಸೈಟಿ ಇತ್ತು. ಸ್ವಾಮಿ ರಂಗನಾಥಾನಂದ ಅವರು ಆ ಸೊಸೈಟಿಯ ಕಾರ್ಯದರ್ಶಿಯಾಗಿದ್ದರು. ನಾನು ಸೇವಾಶ್ರಮದಲ್ಲಿದ್ದೆ. ಮಹಾರಾಜ್ ಅವರು ಸೊಸೈಟಿಯಲ್ಲಿ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಅವರು ಆಶ್ರಮದಲ್ಲಿ ಇಂಗ್ಲೀಷ್‌ನಲ್ಲಿ ಉಪನ್ಯಾಸಗಳನ್ನು ನೀಡುತ್ತಿದ್ದುದು ನನಗೆ ನೆನಪಿನಲ್ಲಿದೆ. ಅವರು 'ವಿವೇಕಚೂಡಾಮಣಿ' ಮತ್ತು ಇತರ ಕೃತಿಗಳ ಮೇಲೆ ಮಾತನಾಡುತ್ತಿದ್ದರು. ಅವರು ಇಂಗ್ಲಿಷ್ ಭಾಷೆಯನ್ನು ಎಷ್ಟು ಸುಲಲಿತವಾಗಿ ಬಳಸುತ್ತಿದ್ದರೆಂದರೆ, ಅದು ಅವರ ಮಾತೃಭಾಷೆಯೆಂಬಂತ್ತಿರುತ್ತಿತ್ತು.

ಬರ್ಮಾದಲ್ಲಿ ಬೌದ್ಧ ಸನ್ಯಾಸಿಗಳನ್ನು 'ಫುಂಗಿ' ಎಂದು ಕರೆಯುತ್ತಿದ್ದರು. ವರ್ಷಕ್ಕೊಮ್ಮೆ ಈ ಸನ್ಯಾಸಿಗಳನ್ನು ಸೊಸೈಟಿಗೆ ಭೋಜನಕ್ಕೆ ಆಹ್ವಾನಿಸಲಾಗುತ್ತಿತ್ತು. ಅಂತಹ ಸಂದರ್ಭಗಳಲ್ಲಿ ಏರ್ಪಡಿಸಿದ ಭಕ್ಷ್ಯಗಳಲ್ಲಿ ಮಾಂಸಾಹಾರವೂ ಇರುತ್ತಿದ್ದಿತು. ಸ್ವಾಮಿ ರಂಗನಾಥಾನಂದರವರೇ ಈ ಭೋಜನಕೂಟದ ವ್ಯವಸ್ಥೆಯನ್ನು ಮಾಡಿದ್ದರು.

ಭಾರತಕ್ಕೆ ಹಿಂದಿರುಗಿದ ನಂತರ ಮಹಾರಾಜ್ ಅವರು ಕರಾಚಿ, ದೆಹಲಿ ಕೇಂದ್ರಗಳ ಮತ್ತು ಕೊಲ್ಕತ್ತಾದ ಸಾಂಸ್ಕೃತಿಕ ಕೇಂದ್ರದ ಹೊಣೆಯನ್ನು ಹೊತ್ತುಕೊಂಡರು. ಹೈದರಾಬಾದಿನ ರಾಮಕೃಷ್ಣಾಶ್ರಮದಲ್ಲಿ ಬಹಳಷ್ಟು

* ಬೇಲೂರು ಮಠದ ಹಿರಿಯ ಸನ್ಯಾಸಿ

ಕಾಲ ಇದ್ದನಂತರ ಅವರು ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಸಂಸ್ಥೆಯ ಅಧ್ಯಕ್ಷರಾಗಿ ಬೇಲೂರಿಗೆ ಬಂದರು.

ಸ್ವಾಮಿ ರಂಗನಾಥಾನಂದ ಮತ್ತು ನಾನು ಶ್ರೀ ರಾಮಕೃಷ್ಣ ಪರಮಹಂಸರ ನೇರ ಶಿಷ್ಯರಾಗಿದ್ದ ಸ್ವಾಮಿ ಶಿವಾನಂದ ಮಹಾರಾಜ್ ಅವರಿಂದ ದೀಕ್ಷೆ ಪಡೆದಿದ್ದೆವು. ಆದರೆ ಅವರು ನನಗಿಂತ ಬಹಳ ಹಿಂದೆ ದೀಕ್ಷೆಯನ್ನು ಪಡೆದಿದ್ದರು. ಆದರೂ ಅವರು ರಂಗೂನಿನಲ್ಲಿದ್ದಾಗ, ಬೇಲೂರಿಗೆ ಹಿಂದಿರುಗಿದ ಮೇಲೆಯೂ ಅವರೊಡನೆ ಇರುವ ಅದೃಷ್ಟ ನನಗೆ ಲಭಿಸಿತ್ತು. ಅವರು ನನ್ನನ್ನು ಆಗಾಗ್ಗೆ ತಮ್ಮ ನಿವಾಸಕ್ಕೆ ಆಹ್ವಾನಿಸುತ್ತಿದ್ದರು. ನಾನು ಅವರಿಗೆ ಗೌರವ ಸೂಚಿಸುವುದಕ್ಕಾಗಿ ಅಲ್ಲಿಗೆ ಹೋಗುತ್ತಿದ್ದೆ. ಒಂದು ಸಂದರ್ಭದಲ್ಲಿ ಅವರು ನನಗೆ ಹೇಳಿದರು "ನೋಡು, ನೀನು ನನ್ನ ಮರಣಾನಂತರ ಮತ್ತೆ (ಈ ಲೋಕಕ್ಕೆ) ಬರುವುದಿಲ್ಲ. ಆದರೆ ನಾನು ಸ್ವಾಮೀಜಿಯವರ ಕಾರ್ಯವನ್ನು ಮುಂದುವರಿಸುವುದಕ್ಕಾಗಿ ಮತ್ತೆ ಬರುತ್ತೇನೆ."

* * * *

# ೧೮. ಅವರ ಪ್ರೀತಿ ನಮ್ಮನ್ನು ಸಮ್ಮೋಹಗೊಳಿಸಿತ್ತು

–ಸ್ವಾಮಿ ತತ್ತ್ವಬೋಧಾನಂದ*

ಸ್ವಾಮಿ ರಂಗನಾಥಾನಂದ ಅವರು ದೆಹಲಿ ಆಶ್ರಮದ ಮುಖ್ಯಸ್ಥರಾಗಿದ್ದಾಗ, ನನ್ನನ್ನು ಕಂಖಾಲ್‌ಗೆ ವರ್ಗಾಯಿಸಿದ್ದರು. ಅವರು ವಿಶ್ರಾಂತಿಗಾಗಿ ಹಾಗೂ ತಮ್ಮ ಅಸ್ವಸ್ಥತೆಯಿಂದ ಚೇತರಿಸಿಕೊಳ್ಳಲು ಕಂಖಾಲ್ ಆಶ್ರಮಕ್ಕೆ ಬರುತ್ತಿದ್ದರು. ಅವರ ವ್ಯಕ್ತಿತ್ವ ಎಷ್ಟು ಆಕರ್ಷಕವಾಗಿತ್ತೆಂದರೆ, ಅವರ ಉಪಸ್ಥಿತಿಯೇ ನಮಗೆಲ್ಲಾ ಹರ್ಷವನ್ನು ತರುತ್ತಿದ್ದಿತು. ಅವರು ವಾಲಿಬಾಲ್ ಆಡುತ್ತಿದ್ದರು. ಅವರು ಒಳ್ಳೆಯ ಈಜುಗಾರರಾಗಿದ್ದರು ಮತ್ತು ನೀರಾಟವೆಂದರೆ ಅವರಿಗೆ ಬಹಳ ಪ್ರಿಯವಾಗಿದ್ದಿತು. ಅವರು ನೀರಿಗೆ ಧುಮುಕಿ, ಪ್ರವಾಹಕ್ಕೆ ಎದುರಾಗಿ ಈಜುತ್ತಿದ್ದರು. ಅವರು ಈಜುವಾಗ ನಾವೂ ಅವರೊಡನೆ ಸೇರುತ್ತಿದ್ದೆವು. ನಾವು ಅವರೊಡನೆ ಈಜುವುದಕ್ಕೆ ಹೋಗದಿದ್ದಾಗ ಅವರು ಹುಸಿಕೋಪವನ್ನು ತೋರುತ್ತಿದ್ದರು. ಅವರು ಈಜಿನ ವಿವಿಧ ಬೀಸುಗಳನ್ನು ಹೇಳಿಕೊಡುತ್ತಿದ್ದರು. ಅವರು ಈ ವಿಷಯದಲ್ಲಿ ತೋರುತ್ತಿದ್ದ ಹಠದಿಂದಾಗಿ ನಾವು ನಿರಾಕರಿಸುವಂತೆಯೇ ಇರಲಿಲ್ಲ. ಅವರು ನಮ್ಮನ್ನು ಹಿಡಿದು ಗಂಗೆಯ ಕಾಲುವೆಗೆ ಎಸೆಯುತ್ತಿದ್ದರು.

೧೯೫೩ರಲ್ಲಿ ನಾನು ಕಂಖಾಲ್ ಕೇಂದ್ರದಲ್ಲಿದ್ದೆ. ಆಗ ನಾನು ಅಲ್ಲಿ ಕಾವಿ ಧರಿಸಿದ್ದ ಒಬ್ಬ ನಿವಾಸಿಯಾಗಿದ್ದೆ. ಒಂದು ದಿನ ರಾತ್ರಿಯ ಊಟವಾದ ನಂತರ, ಸನ್ಯಾಸಿಗಳು ಮತ್ತು ಬ್ರಹ್ಮಚಾರಿಗಳಾಗಿ ನಡೆಸುತ್ತಿದ್ದ ಶಾಸ್ತ್ರದ ತರಗತಿಯನಂತರ ಮಹಾರಾಜ್ ಅವರು ನನ್ನನ್ನು ಕೇಳಿದರು 'ನೀನು ಕೊಡಗಿನವನೇ?' ನಾನು ಹೌದು ಎಂದು ಹೇಳಿದನಂತರ 'ನಿನಗೆ ಸ್ವಾಮಿ ಸಂಭವಾನಂದ ಅವರು ಗೊತ್ತೇ?' ಎಂದು ಕೇಳಿದರು. ಅದಕ್ಕೆ ನಾನು, ನನಗೆ ಅವರು ಗೊತ್ತಿದ್ದರೂ, ಅವರ ನಿಕಟ ಪರಿಚಯ ನನಗಿಲ್ಲ ಎಂದೆ. ಅವರ ಮುಂದಿನ ಪ್ರಶ್ನೆ 'ನಿನಗೆ ಸ್ವಾಮಿ ದೇಶಿಕಾನಂದ ಅವರು ಗೊತೇ?' ನಾನು 'ಸ್ವಾಮಿ ದೇಶಿಕಾನಂದ ಅವರು ನನ್ನ ತಾಯಿಯ ತಮ್ಮ, ಅಂದರೆ ನನ್ನ ಸೋದರಮಾವ' ಎಂದೆ. ಅವರಿಗೆ ನನ್ನಲ್ಲಿ ಆಸಕ್ತಿ ಮೊಳೆಯಿತು. ಅವರು ಕೇಳಿದರು. 'ನಿನಗೆ ಈ ಪಂಥಕ್ಕೆ ಸೇರಲು ಇಚ್ಛೆಯಿತ್ತು. ನಿನಗೆ ಸನ್ಯಾಸ ದೀಕ್ಷೆ ಯಾವಾಗ ಹಾಗೂ ಯಾರಿಂದ ದೊರಕಿತು?'

ಯಾರೂ ದೀಕ್ಷೆಯಿಲ್ಲದೆ ತಾವೇ ಕಾವಿ ಬಟ್ಟೆಯನ್ನು ತೊಟ್ಟುಕೊಳ್ಳುವ ಹಾಗೆ ಇರಲಿಲ್ಲ ಎಂಬುದು ನನಗೆ ತಿಳಿದಿರಲಿಲ್ಲ. ನಾನು ಮಂಕುಬಡಿದವನಂತೆ ಮೌನವಾಗಿ ಅವರ ಮುಂದೆ ನಿಂತಿದ್ದೆ. ಸ್ವಾಮೀಜಿಯವರು ಬೇರೆ ಯಾರಾದರೂ ನನಗೆ ಕಾವಿ ಬಟ್ಟೆಯನ್ನು ನೀಡಿದರೇ ಎಂದು ಇತರರನ್ನು ಕೇಳಿದರು. ನನ್ನಲ್ಲಿದ್ದ ಧೈರ್ಯವನ್ನೆಲ್ಲಾ ಒಟ್ಟುಗೂಡಿಸಿಕೊಂಡು, ನಾನೇ ನನ್ನ ಬಟ್ಟೆಗೆ ಕಾವಿ ಬಣ್ಣವನ್ನು ಹಾಕಿ ತೊಟ್ಟುಕೊಂಡಿದ್ದೆ. ನನಗೆ ಯಾರಿಂದಲೂ ಸನ್ಯಾಸ ದೀಕ್ಷೆ ದೊರಕಿಲ್ಲ ಎಂದು ನೇರವಾಗಿ ಅವರಿಗೆ ಹೇಳಿದೆ. ನನ್ನ ತಪ್ಪಿನ ಅರಿವಾಗಿ, ನಾನು ಬೇಲೂರು ಮಠಕ್ಕೆ ಹೋಗಿ ಅಲ್ಲಿ ನಿಗದಿತ ಅರ್ಜಿಯನ್ನು ಭರ್ತಿಮಾಡಿ ಅಗತ್ಯವಾದ ಅನುಮತಿ ಯನ್ನು ಪಡೆಯುವೆನೆಂದು ಹೇಳಿದೆ.

ಮಹಾರಾಜ್ ಅವರು ನನ್ನ ಮೇಲೆ ಕೋಪಗೊಳ್ಳಲಿಲ್ಲ. ಬದಲಿಗೆ, ಮುಗುಳ್ನಗುತ್ತಾ ನನ್ನತ್ತ ನೋಡಿದರು. ನಂತರ, ಕೆಲವು ವಿಧಿ ವಿಧಾನಗಳನ್ನು ಅನುಸರಿಸಿ ಈ ಪಂಥಕ್ಕೆ ಸೇರಿದ ಮೇಲೆ ಸನ್ಯಾಸಾಶ್ರಮದ ಪೂರ್ವಭಾವಿಯಾಗಿ

---

* ಹಿರಿಯ ಸನ್ಯಾಸಿ ಮತ್ತು ಕೋಲ್ಕತ್ತಾದ ಕೋಸಿಪೋರೆನಲ್ಲಿನ ರಾಮಕೃಷ್ಣ ಮಠದ ಅಧ್ಯಕ್ಷ.

ಬ್ರಹ್ಮಚರ್ಯಾಶ್ರಮದಲ್ಲಿದ್ದು, ಸನ್ಯಾಸಾಶ್ರಮಕ್ಕೆ ದೀಕ್ಷೆ ಪಡೆದ ಮೇಲಷ್ಟೇ ಕಾವಿಯನ್ನು ಧರಿಸುವ ಅರ್ಹತೆ ಬರುತ್ತದೆ ಎಂಬುದನ್ನು ತಿಳಿಸಿದರು.

ವಾಸ್ತವವಾಗಿ ನಾನು ಅಷ್ಟು ಹೊತ್ತಿಗಾಗಲೇ ಕಂಖಾಲ್ ಕೇಂದ್ರದಲ್ಲಿ ಆಶ್ರಮ ವಾಸಿಯಾಗಿ ಐದು ವರ್ಷಗಳನ್ನು ಕಳೆದಿದ್ದೆ. ನನಗೆ ಹೊರಗಿನವನಂತೆಯಾಗಲೀ, ಇತರ ಯಾವುದೋ ಪಂಥಕ್ಕೆ ಸೇರಿದ ಸನ್ಯಾಸಿಯೆಂದಾಗಲೀ ಅಲ್ಲಿನವರು ಪರಿಗಣಿಸಿರಲಿಲ್ಲ. ಮಹಾರಾಜ್ ಅವರು ನಾನು ಮಾಡಿದ ತಪ್ಪನ್ನು ತಿದ್ದಿಕೊಳ್ಳುವಂತೆ ಮಾಡಿದರು ಮತ್ತು ಈ ವಿಷಯದಲ್ಲಿ ತಾವೇ ಅಗತ್ಯ ಕ್ರಮಗಳನ್ನು ತೆಗೆದುಕೊಂಡರು. ಆ ರಾತ್ರಿಯೇ ಅಲ್ಲಿನ ವ್ಯವಸ್ಥಾಪಕ ಸನ್ಯಾಸಿಗಳ ಬಳಿಗೆ ಕರೆದುಕೊಂಡು ಹೋಗಿ ನನಗೆ ಹೊಸಬರಿಗೆ ನೀಡುವ ಬಿಳಿಯ ಬಟ್ಟೆಗಳನ್ನು ನೀಡುವಂತೆ ಹೇಳಿದರು. ನನ್ನನ್ನು ವೈದ್ಯಕೀಯ ಕೋಣೆಗೆ ಕರೆದುಕೊಂಡು ಹೋಗಿ, ತಾವೇ ತಂದಿದ್ದ ಎರಡು ಶಲ್ಯಗಳನ್ನೂ, ನಡುವಂಗಿಗಳನ್ನೂ ಇತ್ತರು. ಮರುದಿನ ಸ್ನಾನವಾದ ನಂತರ ನನ್ನ ಕಾವಿ ಬಟ್ಟೆಯನ್ನು ಬಿಟ್ಟು, ಬಿಳಿಯ ಉಡುಪುಗಳನ್ನು ಧರಿಸಿದೆ. ಸ್ವಲ್ಪ ದಿನಗಳ ನಂತರ ನನಗೆ ಸನ್ಯಾಸ ದೀಕ್ಷೆಯಾಯಿತು. ಅವರ ದೂರಾಲೋಚನೆ ಹಾಗೂ ನಿರ್ವ್ಯಾಜ ಪ್ರೇಮ ಮತ್ತು ದಯಾಪೂರ್ಣ ದೃಷ್ಟಿಗಾಗಿ ನಾನು ಯಾವಾಗಲೂ ಅವರನ್ನು ಕೃತಜ್ಞತಾಪೂರ್ವಕವಾಗಿ ನೆನೆಸಿಕೊಳ್ಳುತ್ತೇನೆ. ಅವರಿಂದಾಗಿಯೇ ನಾನು ಈ ಸಂಘದ ತೆಕ್ಕೆಗೆ ಬರಲು ಸಾಧ್ಯವಾಯಿತು. ನನ್ನ ಜೀವನದಲ್ಲಿ ಎಂತಹ ಅಮೋಘವಾದ ಪಾತ್ರವನ್ನು ಅವರು ವಹಿಸಿದರು ಎಂಬುದನ್ನು ಇದರಿಂದ ನೀವೇ ಊಹಿಸಬಹುದು.

ಮಹಾರಾಜ್ ಅವರ ದಯಾಪರತೆ ನನಗಷ್ಟೇ ಸೀಮಿತವಾಗಿರಲಿಲ್ಲ. ಯಾರಿಂದಲೂ ಏನನ್ನೂ ಬಯಸದೆ ಎಲ್ಲರನ್ನೂ ಪ್ರೀತಿಸುವುದು ಅವರ ಹುಟ್ಟುಗುಣವೇ ಆಗಿತ್ತು. ಅವರ ಈ ಅದಮ್ಯ ವ್ಯಕ್ತಿತ್ವ ಮೊದಲಿನಿಂದಲೂ ನನ್ನನ್ನು ಸಮ್ಮೋಹಗೊಳಿಸಿತ್ತು. ಸ್ವಾಮಿ ರಂಗನಾಥಾನಂದರ ಜೀವನ ಶ್ರೀ ರಾಮಕೃಷ್ಣ ಪರಮಹಂಸರ ಉಪದೇಶಗಳನ್ನು ನಮ್ಮ ಕಣ್ಣ ಮುಂದೆ ತರುತ್ತದೆ. ಒಮ್ಮೆ, ತಮ್ಮ ಕೋಣೆಯಲ್ಲಿ ನರೇಂದ್ರ ಮತ್ತಿತರ ಭಕ್ತರನ್ನು ಉದ್ದೇಶಿಸಿ ಶ್ರೀ ರಾಮಕೃಷ್ಣರು ವೈಷ್ಣವ ಸೇವೆ, ಧ್ಯಾನ ಮತ್ತು ಜಪದ ಬಗ್ಗೆ ಪ್ರೇಮ, ಹಾಗೂ ಸೇವೆಯೇ ಪೂಜಾವಿಧಾನ ಎಂಬ ಮೂರು ವಿಷಯಗಳನ್ನು ಹೇಳಿದ್ದರು. ಈ ಮೂರೂ ವಿಷಯಗಳು ಸ್ವಾಮಿ ರಂಗನಾಥಾನಂದ ಅವರ ಜೀವನ ಹಾಗೂ ಕಾರ್ಯ ವಿಧಾನಗಳಲ್ಲಿ ಸಂಪೂರ್ಣವಾಗಿ ಮೂಡಿಬಂದಿದ್ದುದು ನಮಗೆ ಕಾಣ ಬರುತ್ತಿತ್ತು.

ಶ್ರೀ ರಾಮಕೃಷ್ಣರು ಹೇಳುತ್ತಿದ್ದ ಈ ಮೂರು ವಿಷಯಗಳ ಬಗ್ಗೆ ಸ್ವಲ್ಪ ವಿವರಣೆ ಅಗತ್ಯ. ವೈಷ್ಣವ ಸೇವೆ ಎಂದರೇನು? ಇಲ್ಲಿನ ವೈಷ್ಣವ ಎಂಬ ಪದವು ವೈಷ್ಣವ ಪಂಥದವರನ್ನು ಕುರಿತದ್ದಲ್ಲ. ವೈಷ್ಣವ ಎಂದರೆ ಯಾರಲ್ಲಿ ನಾವು ಭಗವಂತನನ್ನು ಕಾಣಬಹುದೋ ಅಂತಹವರು ಎಂದು ಅರ್ಥ. ಅಲ್ಲದೆ, ಭಗವಂತನೇ ಅನೇಕ ಬಾರಿ ಮನುಷ್ಯ ರೂಪದಲ್ಲಿ ಅವತಾರವೆತ್ತಿದ್ದಾನೆ. ಪೂಜ್ಯ ಮಹಾರಾಜ್ ಅವರು ಮಾನವಕುಲವನ್ನೇ ಇಡಿಯಾಗಿ ಪ್ರೀತಿಸುತ್ತಿದ್ದರು. ಅವರ ದೃಷ್ಟಿಯಲ್ಲಿ ಶ್ರೀಮಂತ ಮತ್ತು ಬಡವ, ಮೇಲಿನವರು ಮತ್ತು ಕೆಳಗಿನವರು ಎಂಬ ಭೇದಭಾವವಿರುತ್ತಿರಲಿಲ್ಲ. ಅವರಿಗೆ ಎಲ್ಲರೂ ಸಮಾನರೇ. ಅಪರೂಪವಾದ ಸಮದರ್ಶಿತ್ವವು ಅವರಲ್ಲಿ ಮನೆ ಮಾಡಿತ್ತು. ಅವರು ಬೇರೆಯವರಲ್ಲಿ ಕುಂದನ್ನು ಕಾಣುತ್ತಿರಲಿಲ್ಲ. ಹೈದರಾಬಾದ್ ಕೇಂದ್ರದಲ್ಲಿನ ಊಟದ ಮನೆಯಲ್ಲಿ ಶ್ರೀಮಾತೆಯವರ ಉಪದೇಶವನ್ನು ದೊಡ್ಡದಾಗಿ ಬರೆಸಿ ಅದಕ್ಕೆ ಕಟ್ಟು ಹಾಕಿಸಿ ತೂಗುಹಾಕಿದ್ದರು. ಆ ಉಪದೇಶವನ್ನು ಅವರು ತಮ್ಮ ಜೀವನದಲ್ಲಿ ಚತು ತಪ್ಪದೆ ಅನುಸರಿಸುತ್ತಿದ್ದರು. ಅದೆಂದರೆ "ಇತರರಲ್ಲಿ ತಪ್ಪನ್ನೆಣಿಸಬೇಡ. ಯಾರೂ ಪರಕೀಯರಲ್ಲ. ಈ ಪ್ರಪಂಚ ನಿನ್ನದು." ಈ ಅದ್ಭುತವಾದ ಉಪದೇಶವನ್ನು ಮಹಾರಾಜ್ ಅವರು ಎಲ್ಲರ ಹೃದಯಕ್ಕೂ ತಟ್ಟುವಂತೆ ಮಾಡುತ್ತಿದ್ದರು. ನಿಜವಾದ ಅರ್ಥದಲ್ಲಿ ಅವರೊಬ್ಬ ಇಡೀ ಮಾನವಕುಲವನ್ನೇ ಪ್ರೀತಿಸುವ, ಯಾವ ರಾಷ್ಟ್ರದ ಭೌತಿಕ ಗಡಿಗೂ ಸೀಮಿತರಾಗದ ವಿಶ್ವಮಾನವರಾಗಿದ್ದರು.

ಈ ಅದ್ವಿತೀಯ ವಿಶ್ವಪ್ರೇಮ ಅವರ ವ್ಯಕ್ತಿತ್ವದಲ್ಲಿ ಎದ್ದುಕಾಣುತ್ತಿತ್ತು. ಮಹಾರಾಜ್ ಅವರು ಎಲ್ಲರನ್ನೂ– ಅವರು ಹಿರಿಯ ಸನ್ಯಾಸಿಗಳೇ ಆಗಿರಲಿ, ಅಥವಾ ಹೊಸದಾಗಿ ಸಂಘಕ್ಕೆ ಸೇರಿದ ಸದಸ್ಯರೇ ಆಗಿರಲಿ– ಎಲ್ಲರನ್ನೂ, ಸಮಾನವಾಗಿ ಪ್ರೀತಿಸುತ್ತಿದ್ದರು.

ಉಪನ್ಯಾಸಗಳಿಗಾಗಿ ಆಹ್ವಾನ ಬರುತ್ತಿದ್ದುದರಿಂದ, ಅವರು ಲೆಕ್ಕವಿಲ್ಲದಷ್ಟು ವಿದೇಶಗಳಿಗೆ ಹೋಗಿಬರುತ್ತಿದ್ದರು. ಅಲ್ಲಿನ ಭಕ್ತರು ಅವರಿಗೆಂದು ಕಾಣಿಕೆಯಾಗಿ ಹಲವಾರು ವಸ್ತುಗಳನ್ನು ನೀಡುತ್ತಿದ್ದರು. ಮಹಾರಾಜ್ ಅವರು ಅಂತಹ ವಸ್ತುಗಳನ್ನೆಲ್ಲಾ ಒಳ್ಳೆಯ ಉದ್ದೇಶಗಳಿಗಾಗಿ ಬಳಸುತ್ತಿದ್ದರು. ಅವರು ಈ ಎಲ್ಲಾ ವಸ್ತುಗಳನ್ನೂ ಸನ್ಯಾಸಿಗಳಿಗೆ ಹಂಚಿಬಿಡುತ್ತಿದ್ದರು. ವಯಸ್ಸಾದ ಸನ್ಯಾಸಿಗಳಿಗೆ ಉಣ್ಣೆಯ ಟೋಪಿ, ಕಾಲುಚೀಲ, ಸ್ವೆಟರ್, ಹೊದಿಕೆಗಳನ್ನು ಹಂಚುತ್ತಿದ್ದರು. ಹಲವಾರು ಬಾರಿ ನನಗೆ ಕೆಲವು ಒಳ್ಳೆಯ ಪೆನ್ನುಗಳನ್ನೂ, ಕೈಗಡಿಯಾರಗಳನ್ನೂ ಕೊಟ್ಟಿದ್ದರು. ಹೊಸದಾಗಿ ಸೇರಿದ್ದ ಬ್ರಹ್ಮಚಾರಿಗಳು ಅವರ ಬಳಿ ಏನಾದರೂ ಮಾತನಾಡಲು ಹೋದರೆ, ಅವರನ್ನು ತಮ್ಮ ಪಕ್ಕದಲ್ಲೇ ತಮ್ಮ ಮಂಚದ ಮೇಲೆಯೇ ಕೂರಿಸಿಕೊಂಡು ಅವರು ಹೇಳುವುದನ್ನೆಲ್ಲಾ ಶಾಂತವಾಗಿ ಕೇಳುತ್ತಿದ್ದರು. ಯಾರಾದರೂ ನಿಂತಿರುವುದನ್ನು ಕಂಡರೆ ಅವರನ್ನು ಕುರ್ಚಿಯ ಮೇಲೆ ಕೂರುವಂತೆ ಮಾಡುತ್ತಿದ್ದರು. ಇಂತಹ ವಿಷಯಗಳು ಅವರು ಇತರರಿಗೆ ತೋರುತ್ತಿದ್ದ ಪ್ರೀತಿ ಹಾಗೂ ಇತರರ ಬಗ್ಗೆ ಕೊಡುತ್ತಿದ್ದ ಲಕ್ಷ್ಯದ, ವೈಷ್ಣವಸೇವೆಯ ಮನೋಧರ್ಮದ ಸೂಚಕಗಳಾಗಿದ್ದವು. ಅವರ ಪಾಂಡಿತ್ಯದ ಬಗ್ಗೆಯೇ ಅಲ್ಲದೆ ಅವರ ಈ ನಿಸ್ವಾರ್ಥ ಪ್ರೇಮದ ಬಗ್ಗೆಯೂ ನಾವು ಸಮ್ಮೋಹಿತರಾಗಿದ್ದೆವು.

ಪರಮಹಂಸರ ಎರಡನೆಯ ಉಪದೇಶವೆಂದರೆ ನಾಮಜಪದ ಬಗ್ಗೆ ಪ್ರೀತಿಯನ್ನು ಇಟ್ಟುಕೊಳ್ಳುವುದು. ಅಂದರೆ ಭಗವಂತನ ನಾಮವನ್ನು ಜಪಿಸುವುದು, ಧ್ಯಾನ ಮಾಡುವುದು. ಮಹಾರಾಜ್ ಅವರು ವೇದಾಂತದ ಸಾರವನ್ನು ಪ್ರಸಾರ ಮಾಡುತ್ತಿದ್ದರೂ, ಆಧ್ಯಾತ್ಮಿಕತೆಯ ಹಾದಿಯಲ್ಲಿ ನಡೆಯಬಯಸುವವರಿಗೆ ದೀಕ್ಷೆ ಕೊಡುತ್ತಿದ್ದರೂ, ಜಪ ಮತ್ತು ಧ್ಯಾನದ ಮಾರ್ಗವನ್ನೂ ತೋರುತ್ತಿದ್ದರು. ಮಹಾರಾಜ್ ಅವರು ಕಂಖಾಲ್‌ಗೆ ಬಂದಾಗಲೆಲ್ಲಾ, ಜನರು ಅವರ ಉಪನ್ಯಾಸಗಳನ್ನು ಅತ್ಯಾಸಕ್ತಿಯಿಂದ ಕೇಳುತ್ತಿದ್ದರು. ಅವರ ಉಪನ್ಯಾಸಗಳು ಜನರನ್ನು ಬಹುವಾಗಿ ಆಕರ್ಷಿಸುತ್ತಿದ್ದವು. ಮಹಾರಾಜ್ ಅವರ ಅನುಮತಿಯನ್ನ ಪಡೆದು, ನಾನು ಅವರ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದೆ. ಕೆಲವು ವೇಳೆ, ವಲ್ಲಾ ಕಾಲೇಜಿನಲ್ಲಿ ಅವರ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದೆವು. ಅಲ್ಲಿಗೆ ಅವರು ಹಲವು ಸನ್ಯಾಸಿಗಳನ್ನೂ, ಬ್ರಹ್ಮಚಾರಿಗಳನ್ನೂ ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಚಂದೀಗಡ್ ವಿಶ್ವವಿದ್ಯಾನಿಲಯದ ಹಲವು ಕಾಲೇಜುಗಳಲ್ಲಿ ಏರ್ಪಡಿಸಿದ್ದ ಉಪನ್ಯಾಸಗಳಿಗೆ ನಾನು ಹೋಗಿದ್ದೆ. ಅವರೊಡನೆ, ಜಲಂಧರ್‌ನಲ್ಲಿ ಐದಾರು ದಿನಗಳ ಕಾಲ ತಂಗುವಂತಹ ಅದೃಷ್ಟ ನನ್ನದಾಗಿತ್ತು. ಮಹಾರಾಜ್ ಅವರು ಹೈದರಾಬಾದ್ ಆಶ್ರಮದಲ್ಲಿದ್ದಾಗ ಅವರು ಆಗಾಗ್ಗೆ ವಿಶಾಖಪಟ್ಟಣಕ್ಕೆ ಉಪನ್ಯಾಸಗಳಿಗಾಗಿ ಭೇಟಿ ಕೊಡುತ್ತಿದ್ದರು. ಅವರ ಉಪನ್ಯಾಸಗಳು ಅಪಾರ ಜನರನ್ನು ಆಕರ್ಷಿಸುತ್ತಿದ್ದುದರಿಂದ, ಅಷ್ಟೂ ಜನಕ್ಕೆ ಸ್ಥಳಾವಕಾಶವನ್ನು ಮಾಡಿಕೊಳ್ಳುವುದು ನಮಗೆ ಅಸಾಧ್ಯವಾಗುತ್ತಿತ್ತು. ಮಹಾರಾಜ್ ಅವರು ಉಪನ್ಯಾಸಗಳನ್ನು ನೀಡಲು ತಮಿಳುನಾಡಿನ ಕುಂಭಕೋಣಕ್ಕೆ ಹೋದಾಗ ಸ್ವಾಮಿ ಅನನ್ಯಾನಂದ ಮತ್ತು ನಾನು ಅವರೊಡನೆ ಹೋಗಿದ್ದೆವು. ಅಲ್ಲಿ, ಒಮ್ಮೆ ಡಾ॥ ಕರಣ್ ಸಿಂಗ್ ಅವರು ಮಹಾರಾಜ್ ಅವರನ್ನು ನೋಡಲು ಬಂದಿದ್ದರು. ಅವರು ಮಹಾರಾಜ್ ಅವರ ಮುಂದಾಳತ್ವವನ್ನು ಬಹುವಾಗಿ ಪ್ರಶಂಸಿಸಿ ಸಂಘ ಅವರ ಮುಖಂಡತ್ವವು ಭವಿಷ್ಯದಲ್ಲಿ ಸಮರ್ಪಕವಾಗಿ ಮುನ್ನಡೆಸುವುದೆಂದು ನುಡಿದಿದ್ದರು. ಅವರ ಮಾತುಗಳು ಎಷ್ಟು ನಿಜವಾದವು!

ನಾನು ರಾಂಚಿಯ ಮೋರಾಬಾದಿ ಕೇಂದ್ರದಲ್ಲಿದ್ದಾಗ ಮಹಾರಾಜ್ ಅವರು ಬಿಹಾರದ ಹಲಗಡ್‌ಗೆ ಭೇಟಿಕೊಟ್ಟರು. ಪ್ರತಿದಿನವೂ ಅವರು ಉಪನ್ಯಾಸಗಳನ್ನು ನೀಡುವುದಕ್ಕೆಂದು ನಾಲ್ಕು ಅಥವಾ ಐದು ಸ್ಥಳಗಳಿಗೆ

ಹೋಗುತ್ತಿದ್ದರು. ಅವರಿಗೆ ತಮ್ಮ ಆಹಾರ ಸೇವನೆಗೂ ಸಾಕಷ್ಟು ಸಮಯ ಸಿಗುತ್ತಿರಲಿಲ್ಲ. ಹಲವಾರು ದೊಡ್ಡ ವ್ಯಕ್ತಿಗಳು ಅವರ ಭಾಷಣಗಳನ್ನು ಕೇಳಲು ಬರುತ್ತಿದ್ದರು. ಮಹಾರಾಜ್ ಅವರು ಅವರೊಡನೆ ಮಾತುಕತೆಯಲ್ಲಿ ಸಮಯದ ಪರಿವೆಯೇ ಇಲ್ಲದೆ ತೊಡಗಿಕೊಳ್ಳ ಬೇಕಾಗುತ್ತಿತ್ತು. ನನಗೆ ಅವರ ಆರೋಗ್ಯದ್ದೇ ಚಿಂತೆಯಾಗಿರುತ್ತಿತ್ತು. "ನೀವು ಬಿಡುವಿಲ್ಲದೇ ಅರಿಯಾಗಿ ಕೆಲಸ ಮಾಡುತ್ತಿದ್ದೀರಿ" ಎಂದು ಒಮ್ಮೆ ಧೈರ್ಯಮಾಡಿ ಅವರಿಗೆ ಹೇಳಿದೆ. ನನ್ನ ಮಾತು ಮುಗಿಯುವ ಮುನ್ನವೇ ಹೇಳಿದರು. "ನೋಡು, ಇದೇ ನನ್ನ ಧ್ಯಾನದ ಮಾರ್ಗ." ಅವರು ಅಗತ್ಯಕ್ಕಾಗಿ ಮಾತ್ರ ಆಹಾರವನ್ನು ಸೇವಿಸುತ್ತಿದ್ದರು ಎಂಬುದನ್ನು ಇಲ್ಲಿ ನಾನು ಹೇಳಲೇಬೇಕು. ಅವರು ಉಣ್ಣುತ್ತಿದ್ದುದು ಬಹಳ ಸ್ವಲ್ಪ. ರುಚಿಯ ಬಗ್ಗೆ ಯೋಚಿಸದೇ, ಗೊಣಗದೇ ಅವರು ಆಹಾರವನ್ನು ಸೇವಿಸುತ್ತಿದ್ದರು. ತಮ್ಮ ಜೀವನದ ಕಡೆಯ ದಿನಗಳಲ್ಲಿ ಅವರು ಮೊಸರನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು. ಅವರು ವುಡ್‌ಲ್ಯಾಂಡ್ಸ್ ಆಸ್ಪತ್ರೆಯಲ್ಲಿ ಕೆಲವು ದಿನಗಳಿದ್ದಾಗ, ಬೇಯಿಸಿ ಚೆನ್ನಾಗಿ ಕಡೆದ ತರಕಾರಿಗಳನ್ನು ಸೇವಿಸುತ್ತಿದ್ದರು. ಅವರು ಆಹಾರವನ್ನು ಜೀವನದ ಏಕೈಕ ಅಭೀಷ್ಟ ವಸ್ತುವೆಂದು ಎಂದೂ ಗಣಿಸಿರಲಿಲ್ಲ.

ಒಮ್ಮೆ ಮಹಾರಾಜ್ ಅವರು ನಮ್ಮನ್ನು – ಅಂದರೆ ಸ್ವಾಮಿ ಅನನ್ಯಾನಂದ, ಆತ್ಮಾನಂದ, ದೇಶಪಾಂಡೆ ಮತ್ತು ನಾನು – ತಮ್ಮ ಸಂಗಡ ಹಲಗಡ್‌ಗೆ ಕರೆದು ಕೊಂಡು ಹೋದರು. ಹಲಗಡ್‌ನ ಜನರಿಗೆ ಶ್ರೀ ರಾಮಚಂದ್ರನಲ್ಲಿ ಅಪಾರವಾದ ನಂಬಿಕೆ ಇತ್ತು. ಅಲ್ಲಿ ಮಹಾವೀರನ ಒಂದು ದೇವಸ್ಥಾನವೂ ಇತ್ತು. ಅಲ್ಲಿ ಅಪಾರ ಜನಸಂದಣಿಯ ಮುಂದೆ ನಾವು ಉಪನ್ಯಾಸಗಳನ್ನು ಇತ್ತೆವು. ಮಾತನಾಡಿದವರಲ್ಲಿ ನಾನೇ ಮೊದಲಿಗ. ನನ್ನ ನಂತರ ಸ್ವಾಮಿ ಆತ್ಮಾನಂದ ಮತ್ತು ದೇಶಪಾಂಡೆ ಮಾತನಾಡಿದರು. ಕೊನೆಯಲ್ಲಿ ಮಹಾರಾಜ್ ಅವರ ಉಪನ್ಯಾಸವಿತ್ತು.

ನಾನು ವಿಶಾಖಪಟ್ಟಣದಲ್ಲಿ ಇದ್ದಾಗ, ನೂರಾರು ವಿದ್ಯಾರ್ಥಿಗಳಿಗೆ ಮಂತ್ರ ದೀಕ್ಷೆಯ ಕಾರ್ಯಕ್ರಮವನ್ನು ಏರ್ಪಡಿಸಿದ್ದೆ. ಮಹಾರಾಜ್ ಅವರು ದಣಿವರಿಯದೆ ಅವರೆಲ್ಲರಿಗೂ ದೀಕ್ಷೆಯನ್ನು ಕೊಟ್ಟರು. ಒಮ್ಮೆ, ಶ್ರೀಕಾಕುಲಂನಿಂದ ಕೆಲವು ಮೀನುಗಾರರು ತಮ್ಮ ಕುಟುಂಬದವರೊಂದಿಗೆ ಮಹಾರಾಜ್ ಅವರಿಂದ ದೀಕ್ಷೆಯನ್ನು ಪಡೆಯಲು ಬಂದಿದ್ದರು. ಮೊದಲನೆಯದಾಗಿ ಮಹಾರಾಜ್ ಅವರು ಅವರಿಗೆ ಶ್ರೀ ರಾಮಕೃಷ್ಣ, ಶ್ರೀ ಮಾತೆ ಹಾಗೂ ಸ್ವಾಮಿ ವಿವೇಕಾನಂದ ಇವರುಗಳ ಬಗ್ಗೆ ಏನಾದರೂ ತಿಳಿದಿದೆಯೇ ಎಂದು ಕೇಳಿದರು. ಮಹಾರಾಜ್ ಅವರು ನನ್ನತ್ತ ನೋಡಿದಾಗ ನಾನು ಆ ಮೀನುಗಾರರಲ್ಲಿ ಒಬ್ಬೊಬ್ಬರನ್ನೂ ಕೇಳಬೇಕೆಂದು ಸೂಚಿಸಿದೆ. ಕಾರಣ, ಅವರೆಲ್ಲರೂ ದೀಕ್ಷೆಯನ್ನು ಪಡೆಯಲು ಕಾತರರಾಗಿದ್ದರಿಂದ ಅವರು ಯಾರಾದರೂ ಒಬ್ಬ ಮಾಸ್ತರರಿಂದ ಶ್ರೀ ಪರಮಹಂಸರ ಬಗ್ಗೆ, ಶ್ರೀ ಮಾತೆಯವರ ಹಾಗೂ ವಿವೇಕಾನಂದರ ಬಗ್ಗೆ ತಿಳಿದುಕೊಂಡಿದ್ದಾರೆ ಮತ್ತು ಆ ಮಾಸ್ತರರು ಇವರಿಗೆ ಶ್ರೀ ರಾಮಕೃಷ್ಣರ ವಚನವೇದ, ಮಾತೆಯವರ ಉಪದೇಶ ಮತ್ತು ಸ್ವಾಮೀಜಿಯವರ ಉಪನ್ಯಾಸಗಳನ್ನು ಓದಿ ತಿಳಿಸಿರುತ್ತಾರೆ ಎಂಬುದು ನನ್ನ ಎಣಿಕೆಯಾಗಿತ್ತು. ಅವರನ್ನು ಒಬ್ಬೊಬ್ಬರನ್ನಾಗಿ ಮಹಾರಾಜ್ ಅವರ ಬಳಿಗೆ ಕಳುಹಿಸಿದೆ. ಈ ಅನಕ್ಷರಸ್ಥ ಜನರು ನಮ್ಮ ತ್ರಿಮೂರ್ತಿಗಳ ಬಗ್ಗೆ ಸಾಕಷ್ಟು ತಿಳಿದುಕೊಂಡಿರುವುದನ್ನು ನೋಡಿ ಮಹಾರಾಜ್ ಅವರು ಆಶ್ಚರ್ಯಚಕಿತರಾದರು. ಆ ಜನರಲ್ಲಿ ದೀಕ್ಷೆಯನ್ನು ಪಡೆಯುವುದರಲ್ಲಿದ್ದ ಆಸಕ್ತಿ, ಅವರ ಮಾಸ್ತರರು, ಆ ಮಾಸ್ತರರು ತೆಗೆದುಕೊಳ್ಳುತ್ತಿದ್ದ ತರಗತಿಗಳು, ಇವುಗಳ ಬಗ್ಗೆ ಕೇಳಿ ಮಹಾರಾಜ್ ಅವರಿಗೆ ಅತೀವ ಆನಂದವಾಯಿತು. ಅವರ ಬಗ್ಗೆ ಅತೀವ ಕಳಕಳಿಯನ್ನು ಹೊಂದಿದ್ದ ಮಹಾರಾಜ್ ಅವರು ಆ ಜನಗಳೊಡನೆ ನಿಂತುಕೊಂಡು ಫೋಟೋವನ್ನು ಕೂಡ ತೆಗೆಸಿಕೊಂಡರು. ಆ ಫೋಟೋವನ್ನು ಅವರು ಹೈದರಾಬಾದಿನಲ್ಲಿದ್ದ ತಮ್ಮ ಕೋಣೆಯ ಹೊರಗೆ ತೂಗುಹಾಕಿದರು. ಹೆಚ್ಚು ಕಡಿಮೆ ಏಳು ಸಾವಿರದಿಂದ ಎಂಟು ಸಾವಿರದಷ್ಟು ಜನರು ಮಹಾರಾಜ್ ಅವರಿಂದ ದೀಕ್ಷೆಯನ್ನು ಪಡೆದರು.

ಮಹಾರಾಜ್ ಅವರು ಪರಮಹಂಸರ ಉಪದೇಶಗಳನ್ನು ಪ್ರಚಾರ ಮಾಡುವುದರಲ್ಲಿ ಮತ್ತು ದೀಕ್ಷೆಯನ್ನು ಕೊಡುವುದರಲ್ಲಿ ಬಹಳ ಆಸಕ್ತರಾಗಿದ್ದರು.

ಪರಮಹಂಸರ ಮೂರನೆಯ ಉಪದೇಶವೆಂದರೆ ಜನಸೇವೆಯನ್ನೇ ಭಗವಂತನ ಸೇವೆಯೆಂದು ತಿಳಿದು ಮಾಡುವುದು. ಮಹಾರಾಜ್ ಅವರು ತಮ್ಮ ಜೀವಮಾನವನ್ನೆಲ್ಲಾ ಜನಸೇವೆಗೆಂದೇ ಮೀಸಲಿಟ್ಟಿದ್ದರು. ಕೆಲವು ಪ್ರಸಂಗಗಳು ಅವರ ಸೇವಾ ಮನೋಧರ್ಮವನ್ನು ಬಿಂಬಿಸುತ್ತವೆ. ಮಹಾರಾಜ್ ಅವರು ಕಂಖಾಲ್‌ನಲ್ಲಿ ಇದ್ದಾಗ, ರಾಷ್ಟ್ರದ ಇಬ್ಭಾಗದ ಪರಿಣಾಮವಾಗಿ ಬಹಳಷ್ಟು ಜನರು ನಿರಾಶ್ರಿತರಾಗಿ ಅಲ್ಲಿಗೆ ಬಂದರು. ಅವರಿಗೆ ಬಹುವಿಧದಲ್ಲಿ ಮಹಾರಾಜ್ ಅವರು ಸಹಾಯವನ್ನು ಒದಗಿಸಿದರು. ಅವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಣದ ಸಹಾಯವನ್ನು ನೀಡಿದರು. ಜಯಪುರದ ಆಶ್ರಮದ ಕಾರ್ಯದರ್ಶಿಯಾಗಿದ್ದ ಸ್ವಾಮಿ ಪೂಜ್ಯಾನಂದ ಅವರು ಮತ್ತು ನಾನು ಅವರಿಗೆ ಲಸಿಕೆ ಹಾಕುವುದಕ್ಕೆ ಏರ್ಪಾಟು ಮಾಡಿದೆವು. ಅದಕ್ಕೆ ಪ್ರಚಾರದ ಮೆರುಗು ದೊರೆಯದಿದ್ದರೂ, ಮಹಾರಾಜ್ ಅವರು ನಮ್ಮನ್ನು ಬಹುವಾಗಿ ಪ್ರೋತ್ಸಾಹಿಸಿದರು. ಅವರ ಪ್ರೋತ್ಸಾಹ ಮತ್ತು ಪ್ರೇರಣೆಯಿಂದಾಗಿ ಕಂಖಾಲದ ವಲ್ಲಾದ ಹುಡುಗನೊಬ್ಬನ ಪ್ರಗತಿ ಎದ್ದು ಕಾಣುವಂತೆ ಇತ್ತು. ಸ್ವಾಮಿ ಲೋಕೇಶ್ವರಾನಂದ ಅವರು ಅಲ್ಲಿದ್ದಾಗ ಆ ಹುಡುಗ ತನ್ನ ವಿದ್ಯಾಭ್ಯಾಸವನ್ನು ಪಡೆದು, ನಂತರ ಅಮೇರಿಕಕ್ಕೆ ಹೋಗಿ ಅಲ್ಲಿ ಬಹಳ ಖ್ಯಾತಿಯನ್ನು ಪಡೆದ. ಸ್ವಾಮಿ ರಂಗನಾಥಾನಂದರು ಅಲ್ಲಿನ ನಿರಾಶ್ರಿತರ ಮಕ್ಕಳಿಗೆ ಧನಸಹಾಯವನ್ನಷ್ಟೇ ಅಲ್ಲದೆ, ಅವರಿಗೆ ಸೂಕ್ತ ಸಲಹೆ, ಮಾರ್ಗ ದರ್ಶನಗಳನ್ನೂ ಕೊಡುತ್ತಿದ್ದರು. ರಾಷ್ಟ್ರೀಯ ಯುವದಿನವನ್ನು ಆಚರಿಸುವುದಕ್ಕೆ ಮಹಾರಾಜ್ ಅವರು ನಮಗೆ ಮಾರ್ಹದರ್ಶನ ಮಾಡಿದರು. ಸಂಗೀತ, ಪದ್ಯ ವಾಚನ, ಚಿತ್ರ ಬಿಡಿಸುವುದು, ಭಾಷಣ ಮುಂತಾದವುಗಳಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಿದ್ದೆವು. ಹರಿದ್ವಾರದ ಸುತ್ತಮುತ್ತಲಿನ ಎಲ್ಲಾ ಶಾಲೆಗಳವರೂ ಆ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

ಮಹಾರಾಜ್ ಅವರಿಗೆ ಬಡವರ ಬಗ್ಗೆ ತೀವ್ರವಾದ ಅನುಕಂಪವಿತ್ತು. ಆಂಧ್ರಪ್ರದೇಶದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯಾಭ್ಯಾಸವನ್ನು ಹರಡುವುದಕ್ಕಾಗಿ ನಾನು ಹೋಗುತ್ತಿದ್ದೆ. ಔಷಧಿ ಹಾಗು ಇನ್ನಿತರ ವೈದ್ಯಕೀಯ ಸಹಾಯವನ್ನು ನೀಡಲು ವಿಶಾಖಪಟ್ಟಣ ಹಾಗೂ ರಾಜಮಹೇಂದ್ರಿಯ ಗುಡ್ಡಗಾಡು ಪ್ರದೇಶಗಳಿಗೆ ನಾವು ವೈದ್ಯರೊಂದಿಗೆ ಹೋಗುತ್ತಿದ್ದೆವು. ಬಡವರ ಕಲ್ಯಾಣಕ್ಕಾಗಿ ನಾವು ಮಾಡುತ್ತಿದ್ದ ಈ ಕೆಲಸಗಳ ಬಗ್ಗೆ ಮಹಾರಾಜ್ ಅವರಿಗೆ ಬಹಳ ಸಂತೋಷವಾಗುತ್ತಿತ್ತು.

ಒಮ್ಮೆ ಒಂದು ದೊಡ್ಡ ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿತ್ತು. ಮಹಾರಾಜ್ ಅವರ ಲೋಕೋಪಕಾರದ ಕಾರ್ಯಗಳಿಗಾಗಿ ಅವರಿಗೆ ಒಂದು ಲಕ್ಷ ರೂಪಾಯಿಗಳ ಪ್ರಶಸ್ತಿಯನ್ನು ಕೊಡಲಾಯಿತು. ಮಹಾರಾಜ್ ಅವರ ಹೃದಯವೈಶಾಲ್ಯವೆಷ್ಟಿತ್ತೆಂದರೆ, ಆ ಹಣವನ್ನು ಸಂಚಾರಿ ಆಸ್ಪತ್ರೆಯ ಕಾರ್ಯವನ್ನು ಮುಂದುವರಿಸಲು ರಾಜಮಹೇಂದ್ರಿಯ ಕಾರ್ಯದರ್ಶಿಯವರಿಗೆ ಮತ್ತು ನನಗೆ ಅಲ್ಲಿಯೇ ನೀಡಿದರು. ಮಾನವಪ್ರೇಮದ ಒಂದು ಸಾಕಾರ ರೂಪವಾಗಿದ್ದರು ಅವರು. ಅವರು ಮಾಡುತ್ತಿದ್ದ ಎಲ್ಲ ಕೆಲಸಕಾರ್ಯಗಳಲ್ಲಿಯೂ ಅವರ ಮಾನವ ಪ್ರೇಮ ಮೂಡಿಬರುತ್ತಿತ್ತು. ಶ್ರೇಷ್ಠವಾದ ಅವರ ಜೀವನಕ್ರಮವು ಶ್ರೀ ರಾಮಕೃಷ್ಣರ ಮೂರೂ ಉಪದೇಶಗಳ ಮುಪ್ಪುರಿಯಾಗಿತ್ತು.*

* * * *

* ಇದು ಸ್ವಾಮಿ ತತ್ವಬೋಧಾನಂದರು ಬಂಗಾಳಿಯಲ್ಲಿ ಉಕ್ತಲೇಖನವಾಗಿ ಬರೆಸಿದ ಲೇಖನದ ಅನುವಾದ. ಅನುವಾದ ಮಾಡಿದವರು ಮೊನಿಕಾ ಸೇನ್‌ಗುಪ್ತ.

# ೧೯. ಧ್ಯೇಯವಾದಿ ಸನ್ಯಾಸಿ

–ಸ್ವಾಮಿ ಸುನಿರ್ಮಲಾನಂದ*

ಸ್ವಾಮಿ ರಂಗನಾಥಾನಂದ ಅವರ ಮರಣದಿಂದ ಭಾರತವು ಒಬ್ಬ ಮಹಾ ಸುಪುತ್ರನೊಬ್ಬನನ್ನು ಕಳೆದುಕೊಂಡಿತು. ದೊಡ್ಡ ಸನ್ಯಾಸಿಯೊಬ್ಬರು ನಮ್ಮನ್ನು ಅಗಲಿದರು. ಈ ಸನ್ಯಾಸಿಗೆ ಶ್ರೀ ರಾಮಕೃಷ್ಣರ ಶಿಷ್ಯರಾಗಿದ್ದ ಸ್ವಾಮಿ ಅಖಂಡಾನಂದ ಅವರು 'ನಿನ್ನ ನಾಲಗೆಯ ಮೇಲೆ ದೇವಿ ಸರಸ್ವತಿ ನರ್ತಿಸುತ್ತಾಳೆ' ಎಂದು ಆಶೀರ್ವದಿಸಿದ್ದರು. ಆ ಆಶೀರ್ವಾದ ಅಕ್ಷರಶಃ ನಿಜವಾಯಿತು. ರಾಮಕೃಷ್ಣ ಸಂಸ್ಥೆಯ ಸ್ವಾಮಿ ಶಿವಾನಂದ ಅವರ ನಿಜವಾದ ಶಿಷ್ಯರಾಗಿದ್ದ ಸ್ವಾಮಿ ರಂಗನಾಥಾನಂದ ಅವರು ತಮ್ಮ ಗುರುವಿನಂತೆಯೇ ಈ ಸಂಸ್ಥೆಯ ಮುಖ್ಯಸ್ಥರಾದರು ಮತ್ತು ತಮ್ಮ ಜೀವನದ ಕೊನೆಯವರೆಗೂ, ಆಧ್ಯಾತ್ಮದ ಚಳವಳಿಯ ಮುಂಚೂಣಿಯಲ್ಲಿದ್ದು ಅದನ್ನು ಮುನ್ನಡೆಸಿದರು.

"ಇತರರಿಗಾಗಿ ಬದುಕುವವರು ಮಾತ್ರ ಜೀವಿಸಿರುತ್ತಾರೆ. ಇತರರು ಜೀವಂತ ವಾಗಿದ್ದರೂ ಸತ್ತಂತೆಯೇ" ಎಂದು ಸ್ವಾಮಿ ವಿವೇಕಾನಂದರು ನುಡಿದಿದ್ದರು. 'ಇತರರಿಗಾಗಿ ಮಾತ್ರ' ಬದುಕಿದ್ದವರ ಉದಾಹರಣೆಯನ್ನು ನಾವು ಸ್ವಾಮಿ ರಂಗನಾಥಾನಂದರಲ್ಲಿ ಕಾಣಬಹುದಾಗಿತ್ತು. ಅವರು ಒಬ್ಬ ಪರಿಪೂರ್ಣ ವ್ಯಕ್ತಿಯಾಗಿದ್ದರು. ಆದರೆ ಅಂತಹ ವ್ಯಕ್ತಿತ್ವಗಳು ಸಾಮಾನ್ಯವಾಗಿ ವ್ಯಾಪಕ ಪ್ರಚಾರವನ್ನು ಪಡೆಯುವುದೇ ಇಲ್ಲ. ಸದಾಕಾಲವೂ ಕ್ಷುದ್ರ ರಾಜಕೀಯದಲ್ಲಿರುವವರು, ಕಳ್ಳರು, ಸಾಮಾಜಿಕ ದರೋಡೆಕೋರರ ವಿಷಯಗಳಲ್ಲಿಯೇ ಮಗ್ನರಾಗಿರುವ ಮಾಧ್ಯಮ ದವರು ಆಧ್ಯಾತ್ಮಿಕ ಕ್ಷೇತ್ರದ ಮಹಾನ್ ವ್ಯಕ್ತಿಗಳಿಗೆ ಪ್ರಾಶಸ್ತ್ಯವನ್ನು ಕೊಡುವುದು ಕಡಮೆಯೇ. ಇತರ ದೇಶಗಳ ಧಾರ್ಮಿಕ ಮುಖಂಡರು ನಿಧನರಾದಾಗ ನಮ್ಮ ರಾಜಕೀಯ ನೇತಾರರು ದುಃಖವನ್ನು ವ್ಯಕ್ತಪಡಿಸುತ್ತಾರೆ. ಆದರೆ, ನಮ್ಮ ಆಧ್ಯಾತ್ಮ ಕಣ್ಮಣಿಗಳು ಕಾಣೆಯಾದಾಗ ಅದನ್ನು ಅವರು ಅಷ್ಟೇನೂ ಹಚ್ಚಿಕೊಳ್ಳುವುದಿಲ್ಲ. ಇದು ಭಾರತದ ಗುಲಾಮೀ ಹಣೆಯಬರಹ. ಆದರೂ, ಮಹಾನ್ ವ್ಯಕ್ತಿಯಾದವನು ತನ್ನ ಲೋಕಸೇವೆಯನ್ನು ನಿಲ್ಲಿಸುವುದಿಲ್ಲ. ಎಲೆಯ ಮರೆಯ ಕಾಯಿಯ ಹಾಗೆ ಕೆಲಸ ಮಾಡುತ್ತಾ ಮಾನವಕುಲದ ಕಲ್ಯಾಣಕ್ಕಾಗಿ ಸಂಪೂರ್ಣವಾಗಿ ಮುಡಿಪಾಗಿದ್ದಂತಹ ಒಂದು ವ್ಯಕ್ತಿಯನ್ನು ನಾವಿಲ್ಲಿ ಕಾಣಬಹುದು.

ಇದು ಬಹಳ ಹಳೆಯದೇನೂ ಅಲ್ಲ. ನಾವಾಗ ಬೆಂಗಳೂರಿನಲ್ಲಿ ಇದ್ದೆವು. ಎಪ್ಪತ್ತರ ಹರೆಯದಲ್ಲಿದ್ದ ಸ್ವಾಮಿ ರಂಗನಾಥಾನಂದರು ಉಪನ್ಯಾಸಗಳನ್ನು ನೀಡಲು ಬೆಂಗಳೂರಿಗೆ ಬಂದಿದ್ದರು. ಪ್ರಾಥಮಿಕ–ಪೂರ್ವಶಾಲೆಗೆ ಹೋಗುವ ಮಗುವು ಕೊಂಡೊಯ್ಯುವ ಡಬ್ಬಿಯಷ್ಟಿದ್ದ ಒಂದು ಆಹಾರದ ಡಬ್ಬಿಯು ಅವರೊಡನೆ ಇತ್ತು. ಅವರು ಬೆಂಗಳೂರಿಗೆ ಬಂದಾಗ ರಾತ್ರಿ ಬಹಳ ಹೊತ್ತಾಗಿತ್ತು. ಬಂದೊಡನೆ ಆಶ್ರಮದಲ್ಲಿರುವ ಕುಶಲಪ್ರಶ್ನೆಯಾದ ನಂತರ ಒಂದು ಬೆಂಚಿನ ಮೇಲೆ ಕುಳಿತು ತಮ್ಮೊಡನೆ ತಂದಿದ್ದ ಆ ಡಬ್ಬಿಯಲ್ಲಿದ್ದ ಆಹಾರವನ್ನು ತಿಂದರು. ಅವರದು ಸ್ವಲ್ಪ ಪಥ್ಯದ ಆಹಾರವಾಗಿತ್ತು. ಕಾರಣ, ಅವರ ಜೀರ್ಣಶಕ್ತಿ ಕುಂದಿತ್ತು. ಸರಳವಾಗಿ ಹೇಳಬೇಕೆಂದರೆ, ಅವರು ಏನನ್ನೂ ಅರಗಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಬೇರೆಯವ ರಾಗಿದ್ದರೆ, ಆ ಸ್ಥಿತಿಯಲ್ಲಿ ಕೈಚೆಲ್ಲಿ ಕುಳಿತುಕೊಂಡುಬಿಡುತ್ತಿದ್ದರು. ಆದರೆ, ಸ್ವಾಮಿ ರಂಗನಾಥಾನಂದರದು ಅಂತಹ ಜೀವವಲ್ಲ. ನಿತ್ರಾಣಗೊಳಿಸುವ

---

* 'ಪ್ರಬುದ್ಧ ಭಾರತ'ದ ಸಂಪಾದಕರಾಗಿದ್ದವರು ಮತ್ತು ಪ್ರಸಕ್ತ ಬ್ರೆಜಿಲ್‌ನ ಸಾವೊ ಪಾಲೊದಲ್ಲಿರುವ ರಾಮಕೃಷ್ಣ ವೇದಾಂತ ಆಶ್ರಮದಲ್ಲಿರುವವರು.

ಅಸ್ವಸ್ಥತೆಯಲ್ಲಿಯೂ ಅವರು ಎಂದಿನಂತೆಯೇ ದೃಢತೆಯನ್ನು ಹೊಂದಿದ್ದರು ಮತ್ತು ಸೇವಾನಿರತರಾಗಿಯೇ ಇದ್ದರು. ಅವರು ತಮ್ಮ ತೊಂಬತ್ತರ ಹರಯದಲ್ಲಿಯೂ ನೆಟ್ಟಗೆ ನಡೆಯುತ್ತಿದ್ದರು ಮತ್ತು ಅವರ ನಡಗೆ ಸಿಂಹದ ನಡಗೆಯಂತಿರುತ್ತಿತ್ತು.

ಹೋದೆಡೆಯಲ್ಲೆಲ್ಲಾ ಅವರು ವಿವಿಧ ವಿಷಯಗಳ ಮೇಲೆ ಉಪನ್ಯಾಸಗಳನ್ನು ನೀಡಿ ಜನಗಳಲ್ಲಿ ಸ್ಫೂರ್ತಿಯನ್ನು ತುಂಬುತ್ತಿದ್ದರು. ಅವಾದರೂ ಎಂತಹ ಭವ್ಯ ಉಪನ್ಯಾಸಗಳು! ಉದಾಹರಣೆಗೆ, ಒಮ್ಮೆ ಅವರು ಬೆಂಗಳೂರಿನ ಆಶ್ರಮದಲ್ಲಿ ಭಾಗವತದ ಮೇಲೆ ಉಪನ್ಯಾಸವನ್ನು ನೀಡಿದರು. ಮೈನವಿರೇಳಿಸುವಂತಿದ್ದ ಆ ಎರಡು ಗಂಟೆಗಳ ಭಾಷಣದಲ್ಲಿ ಅವರು ಭಾಗವತದ ಇಡೀ ಸಾರವನ್ನೇ ಶ್ರೋತೃಗಳಿಗೆ ನೀಡಿದರು. ಅಷ್ಟು ದೊಡ್ಡ ಆಶ್ರಮವಾದರೂ ಎಲ್ಲರಿಗೂ ಕುಳಿತುಕೊಳ್ಳಲು ಸ್ಥಳ ಸಿಗಲಿಲ್ಲ. ಸಾವಿರಾರು ಮಂದಿ ಮೈಮರೆತು ಅವರ ಮಾತುಗಳನ್ನು ಆಲಿಸಿದರು. ಅವರ ವಾಗ್ಮಿತೆ ಅಂತಹುದು. ವೈದುಷ್ಯದ ನಡುವೆಯೂ ಅವರ ಹೃದಯ ಬಡವರ ಬಗ್ಗೆ ಮತ್ತು ಆರ್ತರ ಬಗ್ಗೆ ಮಿಡಿಯುತ್ತಿತ್ತು. ಉಪನ್ಯಾಸದ ನಂತರ ಒಬ್ಬರು ಸ್ವಾಮಿ ರಂಗಾನಾಥಾನಂದರ ಬಳಿಗೆ ಬಂದರು. ತಾವು ಅತಿಯಾದ ರಕ್ತದ ಒತ್ತಡ ಮತ್ತು ಇತರ ಸಮಸ್ಯೆಗಳಿಂದ ಬಳಲುತ್ತಿರುವುದಾಗಿಯೂ, ಅಲ್ಲದೆ ತಮಗೆ ಐದು ವರ್ಷಗಳಿಂದಲೂ ಪಿಂಚಣಿ ಹಣ ಬರುತ್ತಿಲ್ಲವೆಂದೂ ಅವರು ಹೇಳಿದರು. ತಕ್ಷಣವೇ ಮಹಾರಾಜ್ ಅವರು ಒಬ್ಬ ಅಧಿಕಾರಿಯೊಡನೆ ಮಾತನಾಡಿ ಸಮಸ್ಯೆಯನ್ನು ಅಲ್ಲಿಯೇ ಪರಿಹರಿಸಿಕೊಟ್ಟರು. ನೂರಾರು ಬಡಜನರಿಗೆ ಅವರು ತಮ್ಮ ಜೀವಿತಾವಧಿಯಲ್ಲಿ ಸಹಾಯಮಾಡಿದ್ದರು.

೧೯೫೬ ಮತ್ತು ೧೯೮೬ರ ನಡುವಿನ ಅವಧಿಯಲ್ಲಿ ಸ್ವಾಮಿ ರಂಗನಾಥಾನಂದರು ಐವತ್ತು ದೇಶಗಳಿಗೆ ಭೇಟಿಯಿತ್ತರು. ಅದೂ ಒಬ್ಬರೇ ಅಥವಾ ಹೆಚ್ಚಿನ ಸಹಾಯಕರಿಲ್ಲದೆಯೇ. ಅವರು ದೇವರ ಮೇಲೆ ಭಾರಹಾಕಿ ಬಂದದ್ದು ಬರಲಿ ಎಂಬ ಭಾವನೆಯಿಂದ ಹೊರಡುತ್ತಿದ್ದರು. ಪಶ್ಚಿಮಕ್ಕೆ ಅವರು ಭಾರತದ ಅಧ್ಯಾತ್ಮದ ರಾಯಭಾರಿಯಾಗಿದ್ದರು. ಅವರು ಅಭೇದ್ಯವೆನಿಸಿದ್ದ ರಷ್ಯಾದೊಳಕ್ಕೂ ನುಗ್ಗಿದ್ದರು, ಎರಡನೆಯ ವಿಶ್ವ ಮಹಾಯುದ್ಧವನ್ನು ಕಂಡಿದ್ದರು, ಅತ್ಯಂತ ಹೀನಾಯವೆನ್ನಬಹು ದಾದಂತಹ ಕೋಮುಗಲಭೆಗಳಿಗೆ ಸಾಕ್ಷಿಯಾಗಿದ್ದರು, ಅತ್ಯಂತ ಕಷ್ಟಪರಿಸ್ಥಿತಿಗಳಲ್ಲಿ ಸಾವಿರಾರು ಬಾರಿ ಹಾಯ್ದುಬಂದಿದ್ದರು. ಅವರು ಪ್ರವಾಸದಲ್ಲಿ ಆಸಕ್ತಿದಾಯಕವಾದ ಎಷ್ಟೊಂದು ಪ್ರಕರಣಗಳಿದ್ದವು! ನಾಸ್ತಿಕವೆನ್ನಬಹುದಾದ ರಾಷ್ಟ್ರಗಳಲ್ಲಿಯೂ ಅಧ್ಯಾತ್ಮದ ಬಗ್ಗೆ ಆಸಕ್ತಿಯಿರುವ ಜನರು ಇದ್ದಾರೆನ್ನುವುದು ಅವರ ಪ್ರವಾಸದಲ್ಲಿನ ಹಲವಾರು ಪ್ರಕರಣಗಳಲ್ಲಿ ಕಾಣಬಹುದು ಮತ್ತು ಅಂತಹ ನೂರಾರು ಜನರು ಸ್ವಾಮಿ ರಂಗನಾಥಾನಂದರ ಭಾಷಣಗಳನ್ನು ಬಹು ಆಸಕ್ತಿಯಿಂದ, ಭಯಭಕ್ತಿಯಿಂದ ಆಲಿಸುತ್ತಿದ್ದರು. ಸ್ವಾಮಿ ರಂಗನಾಥಾನಂದರ ಸ್ಫೂರ್ತಿಯಿಂದಲೇ ವಿಶ್ವದ ಹಲವೆಡೆಗಳಲ್ಲಿ ರಾಮಕೃಷ್ಣ ಸಂಸ್ಥೆಯ ಕೇಂದ್ರಗಳು ತಲೆಯೆತ್ತಿದವು.

ಬಾಲ್ಯದಿಂದಲೂ, ಸ್ವಾಮಿ ರಂಗನಾಥಾನಂದರು ಒಳ್ಳೆಯ ವಿದ್ಯಾರ್ಥಿಯಾಗಿದ್ದರು. ಜ್ಞಾನಕ್ಕಾಗಿ ತಹತಹಿಸುತ್ತಿದ್ದರು. ಅವರಿಗೆ ಲೌಕಿಕ ವಿದ್ಯಾಭ್ಯಾಸ ಅಷ್ಟಾಗಿ ದೊರೆಯದಿದ್ದರೂ ಅವರು ತಮ್ಮ ಅಪಾರ ವಿದ್ವತ್ತಿನಿಂದಾಗಿ ಭಗವಂತನ ಪವಾಡಸದೃಶ ಸೃಷ್ಟಿಯಾಗಿದ್ದರು. ಕಲಿಕೆಯೇ ಮೂರ್ತಿವೆತ್ತಂತಹ ವ್ಯಕ್ತಿಯಾಗಿದ್ದರು ಅವರು. ಅವರು ಸಂಸ್ಕೃತ, ಇಂಗ್ಲಿಷ್ ಭಾಷೆಗಳನ್ನೂ, ವೇದ, ಗೀತೆ, ಭಾರತೀಯ ಹಾಗೂ ಪಾಶ್ಚಾತ್ಯ ತತ್ತ್ವಶಾಸ್ತ್ರ, ತೌಲನಿಕ ಮತಧರ್ಮಶಾಸ್ತ್ರ ಮೊದಲಾದವುಗಳನ್ನು ಗಹನವಾಗಿ ಅಭ್ಯಸಿಸಿದ್ದರು. ಅವರು ಹಲವು ಭಾಷೆಗಳಲ್ಲಿ ಉಪನ್ಯಾವನ್ನು ನೀಡಬಲ್ಲವರಾಗಿದ್ದರು ಮತ್ತು ಇನ್ನೂ ಹೆಚ್ಚು ಭಾಷೆಗಳಲ್ಲಿ ಮಾತನಾಡಬಲ್ಲವರಾಗಿದ್ದರು. ಅವರೊಂದಿಗೆ ಪ್ರವಾಸದಲ್ಲಿ ಪಾಲುಗೊಂಡಿದ್ದ ರಾಮಕೃಷ್ಣ ಮಠದ ಹಿರಿಯ ಸನ್ಯಾಸಿಯೊಬ್ಬರು ಹೇಳಿದಂತೆ, ಸ್ವಾಮಿ ರಂಗನಾಥಾನಂದರು ತಮ್ಮ ಜೀವನದ ಒಂದು ಕ್ಷಣವನ್ನೂ ವ್ಯರ್ಥವಾಗಿ ಕಳೆಯುತ್ತಿರಲಿಲ್ಲ. ಬಸ್ಸಿನಲ್ಲಾಗಲೀ, ರೈಲಿನಲ್ಲಾಗಲೀ ಅಥವಾ ವಿಮಾನ ದಲ್ಲಾಗಲೀ ಅವರು ಓದುತ್ತಲೋ, ಟಿಪ್ಪಣಿಗಳನ್ನು ಮಾಡಿಕೊಳ್ಳುತ್ತಲೋ

ತಮ್ಮ ಸಮಯವನ್ನು ಸದುಪಯೋಗಮಾಡಿಕೊಳ್ಳುತ್ತಿದ್ದರು. ಅವರು ವೈಯಕ್ತಿಕವಾಗಿ ಸಂಗ್ರಹ ಮಾಡಿಟ್ಟುಕೊಂಡಿದ್ದ ಪುಸ್ತಕಗಳ ಸಂಖ್ಯೆ ಅಗಾಧವಾಗಿದ್ದು, ಅವುಗಳೆಲ್ಲವನ್ನೂ ಅವರು ಸಾದ್ಯಂತವಾಗಿ ಓದಿದ್ದರು ಮತ್ತು ಚೇತೋಹಾರಿಯಾದಂತಹ ಟಿಪ್ಪಣಿಗಳನ್ನು ಅವುಗಳಲ್ಲಿ ನಮೂದಿಸುತ್ತಿದ್ದರು. ತಮ್ಮ ಸಂಗ್ರಹದಿಂದ ಹಲವಾರು ಗ್ರಂಥಾಲಯಗಳಿಗೆ ಪುಸ್ತಕಗಳನ್ನು ದಾನ ಮಾಡುತ್ತಿದ್ದರು. ಈ ಮಹಾನ್ ರಾಮಕೃಷ್ಣ ಸಂಸ್ಥೆಗೆ ಸೇರಿದ್ದ ಅವರು ಸಹಜವಾಗಿಯೇ ಆಧ್ಯಾತ್ಮಿಕ ವಿಷಯಗಳಲ್ಲಿ ವಿಶೇಷವಾಗಿ ಆಸಕ್ತರಾಗಿದ್ದರು.

ಅವರು ತಮ್ಮ ಆಧ್ಯಾತ್ಮಿಕತೆ ಶಕ್ತಿ ಹಾಗೂ ಅತ್ಯುತ್ಕೃಷ್ಟ ತತ್ತ್ವಜ್ಞಾನದಿಂದಾಗಿ ಭಾರತದ ಪ್ರಾಚೀನ ಋಷಿಗಳ ಅದ್ಭುತವಾದ ಸಂದೇಶಗಳನ್ನು ಪ್ರಪಂಚದಲ್ಲೆಲ್ಲಾ ಹರಡಲು ಸೂಕ್ತ ವ್ಯಕ್ತಿಯಾಗಿದ್ದರು. ಭಾರತದ ಧ್ಯೇಯವೇ ಅವರ ಧ್ಯೇಯವಾಗಿತ್ತು. ವಿಶ್ವದಲ್ಲೆಲ್ಲಾ ಆಧ್ಯಾತ್ಮಿಕ ಜಾಗೃತಿಯನ್ನು ಹರಡುವ ಸ್ವಾಮಿ ವಿವೇಕಾನಂದರ ಧ್ಯೇಯವೇ ಅವರ ಉಸಿರಾಗಿತ್ತು. ದೇಶ–ದೇಶಗಳನ್ನು ಸುತ್ತುತ್ತಾ, ಜನಗಳನ್ನು ಭೇಟಿ ಮಾಡುತ್ತಾ, ವೇದಾಂತದ ಮಹತ್ವವನ್ನು ಸಾರುತ್ತಾ, ನೂರಾರು ಜನರ ಸಂಕಷ್ಟಗಳನ್ನು ಪರಿಹರಿಸುತ್ತಾ, ಜ್ಞಾನದತ್ತ ಮನಹರಿಸುವಂತಹ ಪ್ರೇರಣೆಯನ್ನು ಪ್ರತಿಯೊಬ್ಬರಿಗೂ ನೀಡುತ್ತಾ ಇದ್ದ ಅವರು ಈ ಕಾರಣದಿಂದಾಗಿಯೇ ಪಶ್ಚಿಮ ದೇಶಗಳಲ್ಲಿ ಭಾರತದ ಆಧ್ಯಾತ್ಮದ ರಾಯಭಾರಿಯಾಗಿದ್ದರು. ಉಪನಿಷತ್ತು. ಭಾಗವತ, ರಾಮಾಯಣ, ಆಧುನಿಕ ವೈಜ್ಞಾನಿಕ ವಿಷಯ, ಸಾಮಾಜಿಕ ಅಭಿವೃದ್ಧಿ – ವಿಷಯ ಯಾವುದೇ ಇರಲಿ, ಅವುಗಳ ಮೇಲೆ ಅವರು ಅದ್ಭುತವಾಗಿ ಉಪನ್ಯಾಸಗಳನ್ನು ನೀಡುತ್ತಿದ್ದರು ಮತ್ತು ಶ್ರೋತೃಗಳ ಹೃದಯವನ್ನು ತಟ್ಟಿ ಒಳ್ಳೆಯ ಜೀವನವನ್ನು ನಡೆಸಲು ಅಗತ್ಯವಾದ ಪ್ರೇರಣೆಯನ್ನು ಅವರಲ್ಲಿ ತುಂಬುತ್ತಿದ್ದರು.

"ವಿದ್ವಾನ್ ಸರ್ವತ್ರ ಪೂಜ್ಯತೇ" (ಎಂದರೆ, ವಿದ್ವಾಂಸನಾದವನಿಗೆ ಎಲ್ಲ ಕಡೆಯಲ್ಲಿಯೂ ಪೂಜ್ಯತೆ ಸಿಗುತ್ತದೆ) ಎಂದು ಸಂಸ್ಕೃತದ ಶ್ಲೋಕವೊಂದು ಹೇಳುತ್ತದೆ. ಜ್ಞಾನಿಯಾದವನು ಎಲ್ಲೆಡೆಯಲ್ಲಿಯೂ ಗೌರವಿಸಲ್ಪಡುತ್ತಾನೆ. ೧೯೬೦ರಷ್ಟು ಹಿಂದೆಯೇ ತಾವು ಸ್ವಾಮಿ ರಂಗನಾಥಾನಂದ ಅವರಿಂದ ಪಡೆದ ಸತ್ಪ್ರೇರಣೆಯನ್ನು ಬ್ರೆಜಿಲ್ ಮುಂತಾದ ಅತಿ ದೂರದ ದೇಶಗಳು ಇಂದಿಗೂ ಕೃತಜ್ಞತೆಯಿಂದ ನೆನಸಿಕೊಳ್ಳುತ್ತವೆ. ಸ್ವಾಮಿ ರಂಗನಾಥಾನಂದರು ದೆಹಲಿ ರಾಮಕೃಷ್ಣ ಸಂಘದ ಕಾರ್ಯದರ್ಶಿಯಾಗಿದ್ದಾಗ ಜವಹರ್ ಲಾಲ್ ನೆಹರೂ ಅವರಂತಹ ದೊಡ್ಡ ದೊಡ್ಡ ವ್ಯಕ್ತಿಗಳೂ ಕೂಡ ನೆಲದ ಮೇಲೆ ಕುಳಿತು ಸ್ವಾಮೀಜಿಯವರ ಮನಮೋಹಕ ಉಪನ್ಯಾಸಗಳನ್ನು ಆಲಿಸುತ್ತಿದ್ದರು ಎಂದು ಹೇಳುತ್ತಾರೆ. ಅವರನ್ನು ಮೆಚ್ಚುವವರು ವಿವಿಧ ಕಸುಬುಗಳಿಂದ ಬಂದಂತಹವರಿದ್ದರು. ರಂಗನಾಥಾನಂದರಿಗೆ ಕೇವಲ ಸ್ನೇಹಿತರನ್ನು ಮಾಡಿಕೊಳ್ಳುವುದು ಗೊತ್ತಿತ್ತೇ ಹೊರತು ಯಾರನ್ನೂ ಕಳೆದುಕೊಳ್ಳುವುದು ಗೊತ್ತಿರಲಿಲ್ಲ ಎಂಬುದು ಪ್ರಚಲಿತವಾಗಿದ್ದ ಒಂದು ಹೇಳಿಕೆ.

ವಿಶ್ವ ವಿಖ್ಯಾತವಾದ ಉಪನ್ಯಾಸಕಾರರಾಗಿದ್ದರೂ ಸ್ವಾಮಿ ರಂಗನಾಥಾನಂದ ಅವರು ಉತ್ತಮ ಬರಹಗಾರರೂ ಆಗಿದ್ದರು. ಅವರ ಅತ್ಯುತ್ತಮ ಕೃತಿಗಳೆಂದರೆ, *ಉಪನಿಷತ್ತುಗಳ ಸಂದೇಶ*, *ಜಗತ್ತಿನತ್ತ ಪ್ರವಾಸಿಯೊಬ್ಬನ ನೋಟ* (೨ ಸಂಪುಟಗಳು), ವಿಶ್ವಕ್ಕೆ *ಭಗವದ್ಗೀತೆಯ ಸಂದೇಶ*, *ಬೃಹದಾರಣ್ಯಕೋಪನಿಷತ್ತಿನ ಸಂದೇಶ*, *ಗೃಹಸ್ಥರ ಆಧ್ಯಾತ್ಮಿಕ ಜೀವನ*, *ಸ್ವಾಮಿ ವಿವೇಕಾನಂದ ಮತ್ತು ಮಾನವನ ಶ್ರೇಷ್ಠತೆ*, *ನಾವು ಪೂಜಿಸುವ ಕ್ರಿಸ್ತ* ಮುಂತಾದವು. ಅವರ ಪುಸ್ತಕಗಳು ಇತರ ಭಾಷೆಗಳಿಗೆ ಅನುವಾದಿತ ವಾಗಿದ್ದು, ಲಕ್ಷಾಂತರ ಪ್ರತಿಗಳು ಮಾರಾಟವಾಗಿವೆ. ಇಷ್ಟಲ್ಲದೆ, ಸ್ವಾಮಿ ರಂಗನಾಥಾ ನಂದರು ಒಳ್ಳೆಯ ಆಡಳಿತಗಾರರೂ ಆಗಿದ್ದರು. ರಂಗೂನಿನ ರಾಮಕೃಷ್ಣ ಸಂಘದ ಕೇಂದ್ರದಲ್ಲಿ ೧೯೩೯ರಿಂದ ೧೯೪೨ರವರೆಗೆ ಅವರು ಕಾರ್ಯದರ್ಶಿ ಹಾಗೂ ಗ್ರಂಥಪಾಲಕರಾಗಿದ್ದರು, ತದನಂತರ ೧೯೪೨ರಿಂದ ೧೯೪೮ರವರೆಗೆ ಕರಾಚಿಯ ರಾಮಕೃಷ್ಣ ಮಠ ಮತ್ತು ಸಂಘದ ಮುಖ್ಯಸ್ಥರಾಗಿ, ನಂತರ ೧೯೬೨ರವರೆಗೂ ನವದೆಹಲಿಯ ಕೇಂದ್ರದ ಮುಖ್ಯಸ್ಥರಾಗಿದ್ದರು. ಕೋಲ್ಕತ್ತಾದ ರಾಮಕೃಷ್ಣ ಸಂಸ್ಥೆಯ ಸಾಂಸ್ಕೃತಿಕ ಕೇಂದ್ರದ ಕಾರ್ಯದರ್ಶಿಯಾಗಿ ಹಲವು ವರ್ಷ ಮತ್ತು ಹೈದರಾಬಾದಿನ

ಕೇಂದ್ರದಲ್ಲಿ ಮುಖ್ಯಸ್ಥರಾಗಿ ಇಪ್ಪತ್ತು ವರ್ಷಗಳ ಕಾಲ ಕೆಲಸಮಾಡಿದರು. ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಸಂಸ್ಥೆಯ ವಿಶ್ವಸ್ಥ ಮಂಡಲಿಯಲ್ಲಿ ೪೦ ವರ್ಷಕ್ಕಿಂತಲೂ ಹೆಚ್ಚಿನ ಕಾಲ ಸದಸ್ಯರಾಗಿದ್ದರು. ಅವರು ತಾವು ಇದ್ದ ಕೇಂದ್ರಗಳನ್ನು ಅಧ್ಯಯನ ಹಾಗೂ ಆಧ್ಯಾತ್ಮಿಕ ಕೇಂದ್ರಗಳನ್ನಾಗಿ ಕಟ್ಟಿದರು. ಅವರ ಈ ಕರ್ತೃತ್ವಶಕ್ತಿಗೆ ನವದೆಹಲಿ ಮತ್ತು ಹೈದರಾಬಾದ್ ಕೇಂದ್ರಗಳು ಜೀವಂತ ಸಾಕ್ಷಿಗಳಾಗಿ ನಿಂತಿವೆ. ಭಾರತಕ್ಕೆ ಸ್ವಾತಂತ್ರ್ಯ ದೊರಕಿದಾಗ, ಅವರು ಕರಾಚಿಯ ರಾಮಕೃಷ್ಣ ಸಂಸ್ಥೆಯ ಮುಖ್ಯಸ್ಥ ರಾಗಿದ್ದರು. ದೇಶದ ವಿಭಜನೆಯ ನೋವಿನ ಪ್ರಸಂಗದಿಂದಾಗಿ, ಕರಾಚಿಯ ಕೇಂದ್ರದಲ್ಲಿನ ವೇದಾಂತದ ಅಧ್ಯಯನ ಚಟುವಟಿಕೆಗಳು ಸ್ಥಗಿತಗೊಂಡವು ಮತ್ತು ಅಲ್ಲಿನ ಕೇಂದ್ರವನ್ನೇ ಮುಚ್ಚಬೇಕಾಗಿ ಬಂದಿತು. ಸ್ವಾಮಿ ರಂಗನಾಥಾನಂದ ಮತ್ತು ಇತರರು ಅಲ್ಲಿಂದ ಭಾರತಕ್ಕೆ ಬರುವಾಗಿನ ಸನ್ನಿವೇಶ ಕ್ಲೇಶಪೂರ್ಣವಾಗಿತ್ತು. ಇದಕ್ಕೆ ಮೊದಲು, ೧೯೪೩ರಲ್ಲಿ ಬಂಗಾಳದಲ್ಲಿ ಭೀಕರ ಕ್ಷಾಮ ತಲೆದೋರಿದಾಗ ಸ್ವಾಮಿ ರಂಗನಾಥಾನಂದರು ಅಪಾರ ಪ್ರಮಾಣದ ಅಕ್ಕಿಯನ್ನು ಸಂಗ್ರಹಿಸಿ ಅಲ್ಲಿನ ಬಡಜನತೆಗಾಗಿ ಕಳುಹಿಸಿದ್ದರು. ಅವರು ತಮ್ಮ ಜೀವಿತಾವಧಿಯಲ್ಲಿ ಅಸಂಖ್ಯಾತ ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ಶಕ್ಯವಿರುವ ಎಲ್ಲಾ ವಿಧಾನಗಳಲ್ಲಿ ಸಹಾಯ ಮಾಡಿದರು.

ಸಂಘದ ಉಪಾಧ್ಯಕ್ಷರಾಗಿದ್ದ ದೀರ್ಘಾವಧಿಯಲ್ಲಿ ಹಾಗೂ ನಂತರ ಅಧ್ಯಕ್ಷರಾಗಿದ್ದ ಸಮಯದಲ್ಲಿ, ಸ್ವಾಮಿ ರಂಗನಾಥಾನಂದ ಅವರು ಸಾವಿರಾರು ಅಧ್ಯಾತ್ಮ ಆಕಾಂಕ್ಷಿಗಳಲ್ಲಿ ಆಧ್ಯಾತ್ಮಿಕ ಜೀವನದ ಬೆಳವಣಿಗೆಗೆ ಕಾರಣಕರ್ತರಾದರು. ಅವರು ಸ್ವಾಮಿ ವಿವೇಕಾನಂದರ ಕಟ್ಟಾ ಅಭಿಮಾನಿಯಾಗಿದ್ದರು. ಮತ್ತು ಅವರ ಸಂಪೂರ್ಣ ಕೃತಿಶ್ರೇಣಿಯನ್ನು ಕನಿಷ್ಠ ೭೫ ಬಾರಿಯಾದರೂ ಓದಿದ್ದರು! ಬಲಹೀನತೆಯನ್ನು ಮತ್ತು ಹತಾಶ ಭಾವನೆಯನ್ನು ಅವರು ಯಾವಾಗಲೂ ದ್ವೇಷಿಸುತ್ತಿದ್ದರು. ಬಲಹೀನತೆ, ಸಂಕುಚಿತ ಮನೋಭಾವನೆ – ಇಂತಹವು ಅವರ ಬಳಿಯೂ ಸುಳಿಯುತ್ತಿರಲಿಲ್ಲ. ಎಂಬತ್ತರ ಹರೆಯದಲ್ಲೂ ಅವರು ವಾಲಿಬಾಲ್ ಆಡುತ್ತಿದ್ದರು. ಇದು ಅವರ ಮನೋಧರ್ಮ. ತಮಗೆ ಸಿಗಬಹುದಾಗಿದ್ದ ಪ್ರಶಸ್ತಿ, ಗೌರವಗಳಿಗಿಂತಲೂ ಹೆಚ್ಚಿನದಕ್ಕೆ ಅರ್ಹರಾಗಿದ್ದ ಅವರು ಅವೆಲ್ಲವುಗಳಿಂದ ದೂರವಿದ್ದು ನಿಜವಾದ ಸನ್ಯಾಸಿಗಳಾಗಿದ್ದರು.

ದೈಹಿಕ ಶಕ್ತಿ ಮತ್ತು ಮಾನಸಿಕ ಬಲ, ಆಳವಾದ ಬೌದ್ಧಿಕ ಪ್ರಗಲ್ಭತೆ ಮತ್ತು ಚಲನಶೀಲವಾದ ಆಧ್ಯಾತ್ಮಿಕತೆ, ಸಹಜವಾಗಿ ಕಾರ್ಯಸಾಧ್ಯವಾದುದರ ಬಗೆಗೆ ಮನವರಿಕೆ ಮತ್ತು ಅಗಾಧವಾದ ಆದರ್ಶ ಇವುಗಳ ಸಮನ್ವಯವಾದ ಪ್ರಾಚೀನ ಹಾಗೂ ಚಿರಂತನವಾದ ಭಾರತೀಯ ಮೌಲ್ಯಗಳನ್ನು ಸ್ವಾಮಿ ರಂಗನಾಥಾನಂದ ಅವರು ಪ್ರತಿನಿಧಿಸುತ್ತಿದ್ದರು. ಆಧ್ಯಾತ್ಮಿಕ ಶಕ್ತಿಗಳ ಸಮ್ಮೇಳವಾದ ಅಂತಹ ಪುತ್ರರನ್ನು ಪಡೆಯುವುದು ಭಾರತಕ್ಕೆ ಮಾತ್ರ ಸಾಧ್ಯ. ಕೇರಳವು ಇಡೀ ವಿಶ್ವಕ್ಕೇ ನೀಡಿದ ದೊಡ್ಡ ಕೊಡುಗೆಯಾದ ಸ್ವಾಮಿ ರಂಗನಾಥಾನಂದ ಅವರು ಆ ರಾಜ್ಯದಲ್ಲಿ ೧೯೦೮ರ ಡಿಸೆಂಬರ್ ೧೫ರಂದು ಜನಿಸಿದರು. ತಾವು ಬದುಕಿದ್ದ ೯೬ ವರ್ಷಗಳಲ್ಲಿ ಪ್ರತಿಯೊಂದು ಕ್ಷಣವನ್ನೂ ಬದುಕಿದ ಅವರು ಕೊನೆಯವರೆಗೂ ತಮ್ಮ ಬಳಿ ಬಂದವರ ಜೀವನದಲ್ಲಿ ಚೈತನ್ಯವನ್ನು ತುಂಬಿದರು.

* * * *

# ೨೦. ವಾಸ್ತವಾರ್ಥದಲ್ಲಿನ ವೇದಾಂತಿ

–ಸ್ವಾಮಿ ಶಿತಿಕಂಠಾನಂದ*

ನಾನು ಹೈದರಾಬಾದಿನ ಮಠಕ್ಕೆ ಸೇರಿದ ಒಂದೆರಡು ದಿನಗಳನಂತರ ನನ್ನನ್ನು ಪುಸ್ತಕಗಳ ಮಳಿಗೆಯನ್ನು ನೋಡಿಕೊಳ್ಳಲು ನೇಮಿಸಿದರು. ಕೆಲವು ಭಕ್ತರಿಗೆ ಅಥವಾ ಸರಕಾರದ ಹಿರಿಯ ಅಧಿಕಾರಿಗಳಿಗೆ ಪುಸ್ತಕಗಳನ್ನು ಕಳುಹಿಸಿಕೊಡಲು ಪೂಜ್ಯ ಮಹಾರಾಜ್ ಅವರು ಅಲ್ಲಿಗೆ ಬರುತ್ತಿದ್ದರು. ತಮ್ಮ ನಿವಾಸದಿಂದ ಅವರು ಅಲ್ಲಿಗೆ ಬರುವಾಗ, ಸಾಮಾನ್ಯವಾಗಿ ನಮ್ಮ ಸನ್ಯಾಸಿಸೋದರರು ಅವರಿಗೆ ಪ್ರಣಾಮವನ್ನು ಸಲ್ಲಿಸುವ ವಾಡಿಕೆಯಿರಲಿಲ್ಲ. ಅವರೊಮ್ಮೆ ಅಲ್ಲಿಗೆ ಬಂದಾಗ ನಾನು ಅವರಿಗೆ ಪ್ರಣಾಮವನ್ನು ಸಲ್ಲಿಸಿದೆ. ಆದರೆ, ಪೂಜ್ಯ ಮಹಾರಾಜ್ ಅವರು ತಕ್ಷಣ ನನ್ನನ್ನು ತಡೆದು, 'ನಮ್ಮ ನಡುವೆ ಔಪಚಾರಿಕತೆಯ ಅವಶ್ಯಕತೆ ಇಲ್ಲ, ನಾವೆಲ್ಲರೂ ಸೋದರರು' ಎಂದರು.

ನಾನು ಮಠವನ್ನು ಸೇರಿ ಇನ್ನೂ ಮೂರೇ ದಿನ ಕಳೆದಿದ್ದರೂ, ಮಹಾರಾಜ್ ಅವರ ಹೃದಯವೈಶಾಲ್ಯ ನನ್ನನ್ನು ಅವರ ಸೋದರವರ್ಗದೊಳಕ್ಕೆ ಸೇರಿಸಿಕೊಂಡಿತ್ತು ಮತ್ತು ನನ್ನಲ್ಲಿದ್ದ ಸಂಕೋಚವನ್ನು ದೂರಮಾಡಿತ್ತು. ನಿಜವಾದ ಅರ್ಥದಲ್ಲಿ ಅವರು ವೇದಾಂತಿಯಾಗಿದ್ದರು. ಅವರು ಅದ್ವೈತವನ್ನು ಬೋಧಿಸುತ್ತಿದ್ದರು ಮತ್ತು ಅದನ್ನು ಆಚರಣೆಯಲ್ಲಿ ತಂದಿದ್ದರು. ಇತರರಿಗೆ ತಮ್ಮ ಪ್ರೀತಿಯನ್ನು ಹಂಚುವಾಗ ಮಧ್ಯೆ ಯಾವ ತಡೆಯನ್ನೂ ಅವರು ಅಡ್ಡಬರಲು ಬಿಡುತ್ತಿರಲಿಲ್ಲ. ಜಾತಿ, ಪಂಗಡ, ಸಿದ್ಧಾಂತ, ಲಿಂಗ, ವಯಸ್ಸು – ಇವಾವುಗಳನ್ನೂ ಅವರು ಪರಿಗಣಿಸದೆ, ಪ್ರತಿಯೊಬ್ಬನನ್ನೂ ಪವಿತ್ರ ಜೀವಿ ಮತ್ತು ಗೌರವಿಸಲ್ಪಡಲು ಮತ್ತು ಪ್ರೀತಿಸಲ್ಪಡಲು ಸರ್ವಥಾ ಯೋಗ್ಯರೆಂದೇ ಅವರು ಭಾವಿಸಿದ್ದರು. ಮಹಾರಾಜ್ ಅವರ ರೀತಿಯಲ್ಲಿ ವ್ಯಕ್ತಿಗಳ ಗೌರವವನ್ನು ಅಷ್ಟು ಔನ್ನತ್ಯಕ್ಕೆ ಕೊಂಡೊಯ್ದವರನ್ನು ನನ್ನ ಜೀವನದಲ್ಲಿ ನಾನು ನೋಡಿಲ್ಲ.

ಆಶ್ರಮವನ್ನು ಸೇರಿದ ಎರಡು ವಾರಗಳಲ್ಲಿ ನಾನು ಸರ್ಪಸುತ್ತಿನಿಂದ ಪೀಡಿತನಾದೆ. ನನ್ನ ತಲೆ ಊದಿತ್ತು. ನಾನು ಅದರಿಂದ ಗುಣಹೊಂದಿ ನನ್ನ ಮಾಮೂಲು ಕೆಲಸಕಾರ್ಯಗಳಲ್ಲಿ ತೊಡಗಿಕೊಳ್ಳುವುದಕ್ಕೆ ಹದಿನೈದು ದಿನ ಹಿಡಿಯಿತು. ಅದು ಸೋಂಕು ರೋಗವಾದದ್ದರಿಂದ ನಾನು ನನ್ನ ಕೊಠಡಿಯಲ್ಲಿಯೇ ಇರುತ್ತಿದ್ದೆ. ನನಗೆ ಆ ಸೋಂಕು ಹಿಡಿದ ಒಂದು ವಾರದ ನಂತರ, ದೀಕ್ಷಾ ಕಾರ್ಯಕ್ರಮಕ್ಕೆಂದು ಪ್ರವಾಸ ಹೋಗಿದ್ದ ಮಹಾರಾಜ್ ಅವರು ಹಿಂದಿರುಗಿಬಂದರು. ಮಾರನೆಯ ದಿನ ಇನ್ನೊಂದು ಕೇಂದ್ರಕ್ಕೆ ಇದೇ ಉದ್ದೇಶಕ್ಕೆಂದು ಹೊರಟರು. ಹಾಗೆ ಹೊರಡುವ ಮುನ್ನ ನನಗೆ ಬಂದಿದ್ದ ಸರ್ಪಸುತ್ತಿನ ವಿಷಯ ತಿಳಿಯಿತು. ಅದೊಂದು ಸೋಂಕು ರೋಗವಾದದ್ದರಿಂದ ನನ್ನ ಕೋಣೆಗೆ ಹೋಗಬೇಡಿ ಎಂದರೂ ಕೇಳದೆ ನನ್ನಲ್ಲಿಗೆ ಬಂದರು. ಆಶ್ರಮದ ಸೋದರ ಸನ್ಯಾಸಿಗಳು ಎಷ್ಟು ಹೇಳಿದರೂ ಕೇಳದೆ, ನನ್ನಲ್ಲಿಗೆ ಬಂದು 'ಹೆದರಬೇಡ, ನೀನು ಬೇಗ ಗುಣಹೊಂದುವೆ' ಎಂದು ಹೇಳಿದರು. ಅವರು ತಮ್ಮ ವೈಯಕ್ತಿಕ ಅಪಾಯಗಳ ಬಗ್ಗೆ ಒಂದು ರೀತಿಯ ಉದಾಸೀನವನ್ನು ಹೊಂದಿದ್ದರು. ತ್ಯಾಗದ ಈ ಮನೋಧರ್ಮ ಗುಣವನ್ನು ಅವರು ಸ್ವಾಮಿ ವಿವೇಕಾನಂದರಿಂದಲೇ ಮೈಗೂಡಿಸಿಕೊಂಡಿದ್ದರು.

ಒಮ್ಮೆ ನಮೀಬಿಯಾ ದೇಶದಿಂದ ಕೆಲವರು ಬಂದಿದ್ದರು. ಮಹಾರಾಜ್ ಅವರು ಅವರಿಗೆ ಕೆಲವು ಪುಸ್ತಕಗಳನ್ನು ಕೊಳ್ಳಲು ಹೇಳಿದ್ದರು. ಸಾಯಂಕಾಲ ನನ್ನನ್ನು ಅವರು ಕೈಸಾಲೆಯಲ್ಲಿ ನೋಡಿದಾಗ 'ಆ ನಮೀಬಿಯಾ ದೇಶದವರು ಪುಸ್ತಕಗಳನ್ನು ಕೊಂಡುಕೊಂಡರೇ' ಎಂದು ಕೇಳಿದರು. ನನಗೆ ಸರಿಯಾಗಿ ನೆನಪಿಲ್ಲವೆಂದೂ, ಸ್ವಲ್ಪ ಹೊತ್ತಿನ ನಂತರ ತಿಳಿಸುವುದಾಗಿ ನಾನು ಹೇಳಿದೆ. ದಿನವಹಿ ಮಾರಾಟದ ಪುಸ್ತಕದಲ್ಲಿ

* ಹೈದರಾಬಾದಿನ ರಾಮಕೃಷ್ಣ ಮಠದ ಸಂನ್ಯಾಸಿ

ನೋಡಿ, ಆ ಪುಸ್ತಕಗಳು ಮಾರಾಟವಾಗಿವೆಯೇ ಎಂಬುದನ್ನು ನೋಡಲು ನಾನು ಮರೆತೆ. ಆದರೆ ಮಹಾರಾಜ್ ಅವರು ಮರೆಯದೆ ಮಾರನೆಯ ದಿನ ಅದೇ ಪ್ರಶ್ನೆಯನ್ನು ಕೇಳಿದರು. ನಾನು 'ಮರೆತುಬಿಟ್ಟೆ' ಎಂದು ಹೇಳಿದೆ. ಮಹಾರಾಜ್ ಅವರು ಕೋಪಗೊಳ್ಳುವರೆಂದು ನಾನು ಎಣಿಸಿದ್ದೆ. ಪಕ್ಕದಲ್ಲಿ ಅವರ ಸಹಾಯಕರೊಬ್ಬರು ನನ್ನ ಈ ತಪ್ಪಿಗಾಗಿ ಕೋಪಗೊಂಡು ರೇಗಿದರು. ಮಹಾರಾಜ್ ಅವರಿಗೆ ಕೋಪ ತರಿಸುವುದು ಅಷ್ಟು ಸುಲಭವಾದ ಕೆಲಸವಾಗಿರಲಿಲ್ಲ. ಗಂಭೀರವಾದ ಆಚಾರದ ಅಥವಾ ಸನ್ಯಾಸಾಶ್ರಮದ ಆದರ್ಶಗಳನ್ನು ಉಲ್ಲಂಘಿಸಿದಂತಹ ಸಂದರ್ಭಗಳಲ್ಲಿ ಮಾತ್ರ ಅವರು ತೀವ್ರವಾಗಿ ಕೋಪಗೊಂಡಿದ್ದರು. ಉಳಿದಂತೆ, ಅವರು ಎಂತಹ ಸನ್ನಿವೇಶಗಳಲ್ಲಿಯೂ ಕ್ಷೋಭೆಗೊಳ್ಳುತ್ತಿರಲಿಲ್ಲ.

ಒಂದು ಶಿವರಾತ್ರಿಯಂದು ಪೂಜ್ಯ ಮಹಾರಾಜ್ ಅವರಿಂದ ಮಂತ್ರ ದೀಕ್ಷೆಯನ್ನು ಪಡೆಯುವ ಭಾಗ್ಯ ನನ್ನದಾಗಿತ್ತು. ನನಗೊಬ್ಬನಿಗೇ ೧೯೭೭ರ ಮಾರ್ಚ್ ೭ರಂದು ಕೃಪೆಯಿಟ್ಟು ದೀಕ್ಷೆಯನ್ನು ನೀಡಿದರು. ಅಂತಹ ಸಂದರ್ಭದಲ್ಲಿ ಹೂವಿನ ಹಾರ, ಹಣ್ಣುಗಳು ಮತ್ತು ವಸ್ತ್ರವನ್ನು ಗುರುದಕ್ಷಿಣೆಯನ್ನಾಗಿ ಕೊಡುವುದು ಸಂಪ್ರದಾಯ ವಾಗಿತ್ತು. ನಾನು ಹಾಗೆ ಕೊಡಲು ಉದ್ಯುಕ್ತನಾಗಿದ್ದಾಗ, ಮಹಾರಾಜ್ ಅವರು ನನ್ನನ್ನು ತಡೆದು, ಅದೆಲ್ಲಾ ಕೇವಲ ವಾಡಿಕೆಯದು ಎಂದರು. ಅವರ ಮಾತಿನ ಅರ್ಥವೆಂದರೆ, ಬಾಹ್ಯ ಆಚರಣೆಗಳು ಸಾಂಕೇತಿಕ ಮಾತ್ರ, ನಿಜವಾದ ಗೌರವ ಭಾವನೆ ಮನಸ್ಸಿನ ಆಳದಲ್ಲಿ ಮೂಡಬೇಕು ಎಂಬುದು.

ಮಹಾರಾಜ್ ಅವರಿಗೆ ದಣಿವೇ ಆಗುತ್ತಿರಲಿಲ್ಲ. 'ನನಗೆ ದಣಿವೆಂದರೆ ಏನೆಂಬುದೇ ತಿಳಿಯದು' ಎಂದು ಅವರು ಹೇಳುತ್ತಿದ್ದರು. ಅವರು ಸಂಘದ ಉಪಾಧ್ಯಕ್ಷರಾಗಿ, ಹೈದರಾಬಾದಿನಲ್ಲಿ ಇದ್ದಾಗ ದೀಕ್ಷೆಯನ್ನು ನೀಡುವುದಕ್ಕಾಗಿ ಹಲವಾರು ಕೇಂದ್ರಗಳಿಗೆ ಅವರು ಹೋಗಬೇಕಾಗಿರುತ್ತಿತ್ತು. ಅವರ ವಯಸ್ಸಿನಿಂದಾಗಿ, ಆರೋಗ್ಯದ ಸೂಕ್ಷ್ಮ ಸ್ಥಿತಿಯಿಂದಾಗಿ, ಮತ್ತು ಹವಾಮಾನದಲ್ಲಿನ ಬದಲಾವಣೆಯಿಂದಾಗಿ, ಹೈದರಾಬಾದಿಗೆ ಹಿಂದಿರುಗಿದ ತಕ್ಷಣ ಅವರು ನೆಗಡಿ ಅಥವಾ ಯಾವುದಾದರೂ ಸೋಂಕಿನ ಬಾಧೆಯಿಂದ ನರಳುತ್ತಿದ್ದರು. ತಾವೇ ಅಸ್ವಸ್ಥರಾಗಿದ್ದರೂ, ಪ್ರಣಾಮ ಮಾಡಲು ಬಂದವರನ್ನು 'ಆರೋಗ್ಯವಾಗಿದ್ದೀರಾ?' ಎಂದು ವಿಚಾರಿಸುತ್ತಿದ್ದರು.

ನಾವು 'ರಾಮಾಯಣ' ಮತ್ತು 'ಮಹಾಭಾರತ'ಗಳಿಂದ ಪಡೆಯಬಹುದಾದ ಸಂದೇಶವಾದ 'ನಡತೆಯು ಧರ್ಮ ಅಥವಾ ಆಧ್ಯಾತ್ಮಿಕತೆಯ ಇನ್ನೊಂದು ಹೆಸರು' ಎಂಬುದು ಮಹಾರಾಜ್ ಅವರ ಬೋಧನೆಯೂ ಆಗಿತ್ತು. ಉತ್ತಮ ನಡತೆಯನ್ನು ರೂಢಿಸಿಕೊಳ್ಳಬೇಕೆಂದು ಅವರು ಮತ್ತೆ ಮತ್ತೆ ಎಚ್ಚರಿಸುತ್ತಿದ್ದರು. ಅಧಿಕಾರ ಮತ್ತು ಪ್ರಭಾವವನ್ನು ಗಳಿಸುವುದು ಸುಲಭ ಆದರೆ ಉತ್ತಮ ನಡತೆಯಿಲ್ಲದಿದ್ದರೆ ಅದನ್ನು ಅರಗಿಸಿಕೊಳ್ಳುವುದು ಕಷ್ಟ ಎಂದು ಹೇಳುತ್ತಿದ್ದರು. ಅವರು ನಡತೆಗೆ ಎಷ್ಟು ಪ್ರಾಮುಖ್ಯವನ್ನು ಕೊಡುತ್ತಿದ್ದರೆಂದರೆ ಉಳಿದೆಲ್ಲವೂ ಅದರ ಮುಂದೆ ಏನೂ ಅಲ್ಲ ಎಂಬಂತೆ ಗಣಿಸುತ್ತಿದ್ದರು.

ಅವರು ಶರೀರದಲ್ಲಿದ್ದರೂ ಅದಕ್ಕಾಗಿ ಜೀವಿಸಿರಲಿಲ್ಲ. ದೇಹವು ಭಗವಂತನ ಕೈಯಲ್ಲಿರುವ ಸಾಧನವೆಂದು ಅವರು ತಿಳಿದು, ಅದನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಅವರು ತಮ್ಮ ದೇಹವನ್ನು ಶ್ರೀ ರಾಮಕೃಷ್ಣ ಅವರಿಗೆ ಒಪ್ಪಿಸಿದ್ದರು. ಅವರ ದೇಹದ ಕಲ್ಪನೆ ಉನ್ನತ ಮಟ್ಟದ್ದಾಗಿತ್ತು. ದೇಹವನ್ನು ಸರಿಯಾಗಿ ನೋಡಿಕೊಳ್ಳಬೇಕಾದುದು ದೇಹದ ದೃಷ್ಟಿಯಿಂದಲ್ಲ, ಆದರೆ ಅದರಲ್ಲಿ ವಾಸವಾಗಿರುವ ಅಂತರಾತ್ಮನಿಗಾಗಿ ಎಂದು ಅವರು ನಂಬಿದ್ದರು. ಅವರಲ್ಲಿ ಈ ಭಾವನೆ ಯಾವಾಗಲೂ ತುಂಬಿತ್ತೆಂದು ನನಗೆ ತೋರುತ್ತಿತ್ತು. ತಮ್ಮ ಪ್ರಾಣಾಂತ ಅಸ್ವಸ್ಥತೆಯ ಕ್ಷಣಗಳಲ್ಲಿಯೂ ಅವರು ಉಲ್ಲಾಸದಿಂದ ಇರುತ್ತಿದ್ದರು. ಅವರು ತಮ್ಮಲ್ಲಿ ಭಗವಂತನಲ್ಲಿ ಕೇಂದ್ರೀಕೃತವಾದ ಭಾವನೆಯನ್ನು ಇಟ್ಟುಕೊಂಡಿಲ್ಲದಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ.

* * * *

# ೨೧. ಅವರದು ವಿಶ್ವವ್ಯಾಪಕವಾದ ವ್ಯಕ್ತಿತ್ವ

–ಸ್ವಾಮಿ ವೀತಮೋಹನಾನಂದ*

ನಾನು ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ ಸ್ವಾಮಿ ರಂಗನಾಥಾನಂದ ಅವರನ್ನು ಭೇಟಿ ಮಾಡಿದ್ದೆ. ಅವರ ಉಪನ್ಯಾಸಗಳಿಗೆ ಹೋಗುತ್ತಿದ್ದೆ. ಅವರ ಉಪನ್ಯಾಸಗಳು ಇಂಗ್ಲಿಷ್‌ನಲ್ಲಿರುತ್ತಿದ್ದವು. ನನಗೆ ಇಂಗ್ಲಿಷ್ ಭಾಷೆಯ ಮೇಲೆ ಅಷ್ಟೊಂದು ಹಿಡಿತವಿರಲಿಲ್ಲ. ಆದರೂ ಅವರ ಭಾಷಣಗಳನ್ನು ನಾನು ಮೆಚ್ಚುತ್ತಿದ್ದೆ.

ನಾನು ಮದರಾಸಿನ ಆಶ್ರಮಕ್ಕೆ ಸೇರಿದ ಮೇಲೆ, ಅಲ್ಲಿಗೆ ಬರುತ್ತಿದ್ದ ಅವರನ್ನು ಹಲವು ಬಾರಿ ಭೇಟಿ ಮಾಡಿದ್ದೆ. ಅವರೊಮ್ಮೆ ಮದರಾಸಿಗೆ ಬಂದಾಗ ಖಾಯಿಲೆಯಾಗಿ ಸುಮಾರು ಒಂದು ತಿಂಗಳು ಮಲಗಿದ್ದರು. ಆಗ ಅವರ ಸೇವೆಯನ್ನು ಮಾಡುವ ಭಾಗ್ಯ ನನ್ನದಾಗಿತ್ತು. ಅವರು ಬಹಳ ಸೌಹಾರ್ದಯುತರೂ, ಕರುಣಾಮಯಿಗಳೂ ಆಗಿದ್ದರು.

ನಾನು ಮೈಸೂರಿನಲ್ಲಿದ್ದಾಗಲೂ ಅವರು ಅಲ್ಲಿಗೆ ಎರಡು ಅಥವಾ ಮೂರು ಬಾರಿ ಬಂದಿದ್ದರು. ಒಂದು ವಿಶೇಷವಾದ ಕಾರ್ಯಕ್ರಮಕ್ಕೆ ಅವರಿಗೆ ನಾನು ಆಹ್ವಾನವಿತ್ತಿದ್ದೆ. ತಮಗೆ ಬರುತ್ತಿದ್ದ ಎಲ್ಲ ಆಹ್ವಾನಗಳನ್ನೂ ಅವರು ಸಂತೋಷದಿಂದ ಒಪ್ಪಿಕೊಳ್ಳುತ್ತಿದ್ದರು ಮತ್ತು ನಮ್ಮ ಪ್ರತಿಯೊಂದು ಚಟುವಟಿಕೆಯನ್ನೂ ಮೆಚ್ಚುತ್ತಿದ್ದರು. ಅವರಲ್ಲಿ ಯಾವ ವಿಷಯದ ಬಗ್ಗೆಯೂ ನೇತ್ಯಾತ್ಮಕ ಭಾವನೆ ಇದ್ದುದು ನನಗೆ ಎಂದೂ ಕಂಡುಬರಲಿಲ್ಲ. ಅವರು ಎಲ್ಲರನ್ನೂ ರಚನಾತ್ಮಕ ದೃಷ್ಟಿಯಿಂದ ಹುರಿದುಂಬಿಸುತ್ತಿದ್ದರು.

ನಾನು ಫ್ರಾನ್ಸಿಗೆ ಹೊರಡುವ ಮುಂಚೆ ಅವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿದ್ದೆ. ಫ್ರಾನ್ಸಿಗೆ ಹೋಗುವಂತೆ ನನ್ನನ್ನು ಪ್ರೋತ್ಸಾಹ ಮಾಡಿದ ಸಂಘದ ಉನ್ನತಾಧಿಕಾರಿಗಳಲ್ಲಿ ಉಪಾಧ್ಯಕ್ಷರಾಗಿದ್ದ ಮಹಾರಾಜ್ ಅವರೇ ಮೊದಲಿಗರು. ಅಲ್ಲಿಗೆ ಮಾಡಿದ್ದ ವರ್ಗವನ್ನು ಒಪ್ಪಿಕೊಳ್ಳುವಂತೆ ಹುರಿದುಂಬಿಸಿದವರೇ ಅವರು. 'ಬೇಡ ಎನ್ನಬೇಡ, ನೀನು ಅದನ್ನು ಒಪ್ಪಿಕೊಂಡು ಅಲ್ಲಿಗೆ ಹೋಗಲೇಬೇಕು' ಎಂದು ಹೇಳಿದರು. ಅವರು ಸ್ವಾಮಿ ಸಿದ್ಧೇಶ್ವರಾನಂದರಿಗೆ ಹತ್ತಿರದವರಾಗಿದ್ದರಿಂದ ಅವರಿಗೆ ಫ್ರಾನ್ಸಿನ ಬಗ್ಗೆ ಚೆನ್ನಾಗಿ ಗೊತ್ತಿತ್ತು. ಸ್ವಾಮಿ ಸಿದ್ಧೇಶ್ವರಾನಂದರ ಪರಂಪರೆಯನ್ನು ಅಲ್ಲಿ ಮುಂದುವರೆಸಿಕೊಂಡು ಹೋಗಬೇಕೆಂದು ಅವರು ಬಯಸಿದ್ದರು. ಇಂದಿಗೂ ಅವರ ಪ್ರೇರಣೆಯೇ ನನ್ನನ್ನು ಇಲ್ಲಿ ಮುಂದುವರೆಯುವಂತೆ ಮಾಡುತ್ತಿದೆ. ನಾನು ಮಾನಸಿಕವಾಗಿ ಕುಗ್ಗಿರುತ್ತಿದ್ದಾಗ ಅವರು ನನಗೆ ಅಗತ್ಯವಾದ ಪ್ರೋತ್ಸಾಹವನ್ನೂ, ಬೆಂಬಲವನ್ನೂ ನೀಡುತ್ತಿದ್ದರು.

ನಾನು ಫ್ರಾನ್ಸಿಗೆ ಬಂದಮೇಲೆ ಎರಡು ಮೂರು ಬಾರಿ ಅವರನ್ನು ಭೇಟಿಯಾಗಿದ್ದೆ. ನನಗೆ ಬೇಕಾದ ಸಹಾಯವನ್ನು ಮಾಡಲು ಅವರು ಎಲ್ಲ ವಿಧದಿಂದಲೂ ಸಿದ್ಧರಿದ್ದರು. ನಾನು ಅವರನ್ನು ಹೈದರಾಬಾದಿನಲ್ಲಿ ಒಮ್ಮೆ ನೋಡಿದ್ದೆ. ಅವರದು ವಿಶ್ವಾಸ ತುಂಬಿದ ಮನಸ್ಸು. ಅವರನ್ನು ನೋಡಲು ನನ್ನೊಡನೆ ಬಂದಿದ್ದ ಎಲ್ಲರನ್ನೂ ಸಂತೋಷದಿಂದ ಬರಮಾಡಿಕೊಂಡರು. ಎಲ್ಲರನ್ನು ಅರ್ಥಮಾಡಿಕೊಂಡು ಎಲ್ಲರ ವ್ಯಕ್ತಿತ್ವವನ್ನೂ ಮೆಚ್ಚುವ ಅವರು ಸಾಮರ್ಥ್ಯದಿಂದಾಗಿ ಅವರದು ವಿಶ್ವವ್ಯಾಪಕ ವ್ಯಕ್ತಿತ್ವ ಎಂದು ನಾನು ಭಾವಿಸಿದ್ದೇನೆ.

ಸ್ವಾಮಿ ರಂಗನಾಥಾನಂದ ಅವರು ಅಧ್ಯಕ್ಷರಾದಾಗ, ಬೇಲೂರು ಮಠದಲ್ಲಿ ಅವರನ್ನು ಭೇಟಿಮಾಡಿ ಅವರ ಆಶೀರ್ವಾದವನ್ನು ಪಡೆದೆ. ಆ ಕ್ಷಣ ನನ್ನ ವರ್ಣನೆಯನ್ನು ಮೀರಿದುದಾಗಿತ್ತು. ಅಂದು ನನ್ನನ್ನು

---

* ಫ್ರಾನ್ಸಿನ ಗ್ರೆಟ್ಜ್‌ನ ರಾಮಕೃಷ್ಣ ವೇದಾಂತ ಕೇಂದ್ರದ ಮೇಲಧಿಕಾರಿ

ಭಾವಪೂರ್ಣವಾಗಿ ಎದುರುಗೊಂಡದ್ದಷ್ಟೇ ಅಲ್ಲದೆ, ಅಂದಿನ ರಾತ್ರಿ ಭೋಜನವನ್ನು ನನ್ನೊಡನೆಯೇ ಮಾಡಿದರು. ಅಂದಿನ ವಿಶೇಷ ಭಕ್ಷ್ಯಗಳೆಲ್ಲವೂ ಅವರೇ ನಿಗದಿಮಾಡಿದಂತಹವು. ಶ್ರೀಮಾತೆ ಯವರ ಬಗ್ಗೆ ಹೊರತಂದಿದ್ದ ಸಿ.ಡಿ.ಯೊಂದನ್ನು ಅವರು ನನಗೆ ನೀಡಿದರು. ಅವರು ಎಲ್ಲ ವಿಷಯಗಳಲ್ಲೂ ಸಂತೋಷದಿಂದ ಮಾತನಾಡಿದರು. ಅದರಲ್ಲೂ ಶ್ರೀ ರಾಮಕೃಷ್ಣ, ಶ್ರೀ ಮಾತೆ ಹಾಗೂ ಸ್ವಾಮಿ ವಿವೇಕಾನಂದರ ಬಗ್ಗೆ ಹೇಳವಾಗಲಂತೂ ಅವರ ಸಂತೋಷ ಉಕ್ಕಿ ಹರಿಯುತ್ತಿತ್ತು. ಜೊತೆಗೆ ಅವರು ವಿದೇಶಪ್ರವಾಸದಲ್ಲಿನ ತಮ್ಮ ಕೆಲವು ಅನುಭವವನ್ನು ನಮ್ಮೊಡನೆ ಹಂಚಿಕೊಂಡರು.

ಇಂದು ಫ್ರಾನ್ಸಿನ ಗ್ರೆಟ್ಜ್‌ನ ರಾಮಕೃಷ್ಣ ವೇದಾಂತ ಕೇಂದ್ರದಲ್ಲಿ ನಡೆಸುವ ಎಲ್ಲಾ ಕಾರ್ಯಕ್ರಮಗಳೂ ಹೆಚ್ಚು ಕಡಿಮೆ ಅವರ ಮಾರ್ಗದರ್ಶನದಲ್ಲಿಯೇ ಸಾಗುತ್ತಿವೆ.

ಸದ್ಯದಲ್ಲಿ ನಾವು 'ವೇದಾಂತ' ಪತ್ರಿಕೆ ಹಾಗೂ ಸ್ವಾಮಿ ರಂಗನಾಥಾನಂದರ 'ಉಪನಿಷತ್ತಿನ ಸಂದೇಶ'ವನ್ನು ಫ್ರೆಂಚ್‌ನಲ್ಲಿ ಪ್ರಕಟಿಸಲಿದ್ದೇವೆ. 'ವೇದಾಂತ'ದಲ್ಲಿ ಅವರ ಹಲವಾರು ಲೇಖನಗಳು ಪ್ರಕಟವಾಗಿವೆ. ಇವುಗಳು ಇಲ್ಲಿನ ಜನರ ಮನಸ್ಸನ್ನು ಗೆದ್ದಿವೆ.

* * * *

# ೨೨. ಪವಿತ್ರ ಸಹವಾಸದಲ್ಲಿ ಬೆಳಕನ್ನು ಪಡೆದ ಕ್ಷಣಗಳು

**–ಸ್ವಾಮಿ ಶಶಾಂಕಾನಂದ***

ಪರಮಪೂಜ್ಯ ಮತ್ತು ಪ್ರಿಯ ಸ್ವಾಮಿ ರಂಗನಾಥಾನಂದ ಮಹಾರಾಜ್ ಅವರಂತಹ ಜ್ಞಾನಿಗಳ ವಿಷಯದಲ್ಲಿ ಏನನ್ನಾದರೂ ಹೇಳುವುದಾಗಲೀ, ಅದಕ್ಕಿಂತ ಹೆಚ್ಚಾಗಿ ಬರೆಯುವುದಾಗಲೀ ಅಸಾಧ್ಯವೆಂದೆನಿಸುತ್ತದೆ. ಏಕೆಂದರೆ, ಅವರ ಬಾಹ್ಯ ಜೀವನವನ್ನು ಮಾತ್ರ ನೋಡಿ ಅಥವಾ ಅದರ ಕೆಲವಂಶಗಳನ್ನು ಮಾತ್ರ ಗುರುತಿಸಿರುವ ನಮಗೆ ಅವರ ಸೂಕ್ಷ್ಮ ಪರಿಚಯವೇ ಇರುವುದಿಲ್ಲ. ಆದರೂ, ಭಕ್ತರ ಇಚ್ಛೆಯ ಮೇರೆಗೆ, ಎಲ್ಲಾ ಧೈರ್ಯವನ್ನೂ ಒಟ್ಟುಗೂಡಿಸಿಕೊಂಡು ಅವರ ಬಗ್ಗೆ ಬರೆದು ನನ್ನ ಮನಸ್ಸನ್ನು ಪಾವನಗೊಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ.

೧೯೬೦ರಲ್ಲಿ ನಾನು ಅವರನ್ನು ಮೊಟ್ಟಮೊದಲಿಗೆ ನವದೆಹಲಿಯ ರಾಮಕೃಷ್ಣ ಸಂಸ್ಥೆಯಲ್ಲಿ ನೋಡಿದೆ. ಆಶ್ರಮದ ಸಭಾಂಗಣದ ವೇದಿಕೆಯ ಮೇಲೆ ಕುಳಿತು ಶ್ರೀಮದ್ಭಗವದ್ಗೀತೆಯ ಬಗ್ಗೆ ಉಪನ್ಯಾಸವನ್ನು ಕೊಡುತ್ತಿದ್ದರು. ಪ್ರತಿ ಭಾನುವಾರ ಬೆಳಗ್ಗೆ ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಅವರ ತರಗತಿಗಳಿಗೂ, ಆಶ್ರಮದಲ್ಲಿ ಅವರು ಸಂಜೆಯ ವೇಳೆ ನೀಡುತ್ತಿದ್ದ ಗೀತೆಯ ಉಪನ್ಯಾಸಗಳಿಗೂ ತಪ್ಪದೆ ಹಾಜರಾಗುತ್ತಿದ್ದೆ.

ಅವರದು ಭವ್ಯ ವ್ಯಕ್ತಿತ್ವ ಮತ್ತು ನಾನಾಗ ಇನ್ನೂ ಚಿಕ್ಕ ಹುಡುಗನಾಗಿದ್ದೆ. ಹಾಗಾಗಿ ಅವರ ಬಳಿ ಹೋಗುವ, ಅವರನ್ನು ಭೇಟಿ ಮಾಡುವ ಧೈರ್ಯ ನನಗಿರಲಿಲ್ಲ. ನಾನು ಕೇಂದ್ರ ಸರಕಾರದ ಸೇವೆಗೆ ಸೇರಿದ ಮೇಲೆ ಒಮ್ಮೆ ಅವರನ್ನು ನಮ್ಮ ಕಚೇರಿಯಲ್ಲಿ ಏರ್ಪಡಿಸಿದ್ದ ಒಂದು ಸಮಾರಂಭಕ್ಕೆ ಭಾಷಣ ಮಾಡಲು ಅವರನ್ನು ನಾವು ಆಹ್ವಾನಿಸಿದ್ದೆವು. ನಾನು ರಾಮಕೃಷ್ಣಾಶ್ರಮಕ್ಕೆ ನಿಯತವಾಗಿ ಹೋಗುತ್ತಿದ್ದುದರಿಂದ, ಮಹಾರಾಜ್ ಅವರ ಭಾಷಣದ ನಂತರ ಮಾತನಾಡಲು ನನ್ನನ್ನೇ ನಿಯಮಿಸಿದ್ದರು. ಇದರಿಂದಾಗಿ, ನಾನು ರಾಮಕೃಷ್ಣ ಸಂಸ್ಥೆಯನ್ನು ಸೇರುವ ಮೊದಲೇ, ಅವರೊಡನೆ ಕಾರಿನಲ್ಲಿ ಪ್ರಯಾಣ ಮಾಡುವಂತಹ ಒಂದು ಅವಕಾಶ ನನಗೆ ಸಿಕ್ಕಿತ್ತು. ಅವರ ಪಕ್ಕದಲ್ಲಿ ಕುಳಿತುಕೊಂಡಿದ್ದರಿಂದ ಒಂದು ಬಗೆಯ ಆಧ್ಯಾತ್ಮಿಕ ವಿದ್ಯುತ್ತು ನನ್ನಲ್ಲಿ ಸಂಚಾರವಾಗಿತ್ತು. ದಾರಿಯಲ್ಲಿ, ಆಶ್ರಮದ ಕಾಗದ ಪತ್ರಗಳನ್ನು ನೋಡಿ ಅವುಗಳಿಗೆ ಸಹಿಹಾಕುತ್ತಲೇ ಸಾಗುತ್ತಿದ್ದರು. ಆಶ್ರಮಕ್ಕೆ ಹಿಂದಿರುಗುವಾಗ ಅವರು ಕಾರಿನಲ್ಲಿ ಮೌನವಾಗಿ ಕುಳಿತಿದ್ದರು. ಅವರೊಡನೆ ಸಂಭಾಷಿಸುವ ಧೈರ್ಯ ನನಗೆ ಬರಲಿಲ್ಲ. ಆದರೂ ಅವರ ಪಕ್ಕದಲ್ಲಿ ಕೂರುವ ಸೌಭಾಗ್ಯ ದೊರಕಿದುದರಿಂದ ನಾನು ಒಂದು ರೀತಿಯ ಧನ್ಯತಾಭಾವವನ್ನು ಅನುಭವಿಸುತ್ತಿದ್ದೆ.

ಮಹಾರಾಜ್ ಅವರ ಉಪನ್ಯಾಸಗಳನ್ನು ಮುಂದಿನ ಸಾಲುಗಳಲ್ಲಿಯೇ ಕುಳಿತು ಕೇಳಲು ಪ್ರತಿ ಭಾನುವಾರ ನಿಗದಿತ ಸಮಯಕ್ಕಿಂತ ಒಂದು ಗಂಟೆ ಮುಂಚೆಯೇ ನಾನು ಪಹಾರ್‌ಗಂಜ್‌ನಲ್ಲಿರುವ ಕೇಂದ್ರಕ್ಕೆ ಹೋಗುತ್ತಿದ್ದೆ. ಮಹಾರಾಜ್ ಅವರು ಸಮಯಕ್ಕೆ ಸರಿಯಾಗಿ ಬರುತ್ತಿದ್ದರು. ನಿಗದಿತ ವೇಳೆಗೆ ಒಂದು ನಿಮಿಷ ಹಿಂದು ಮುಂದು ಆಗದಂತೆ ಅವರು ವೇದಿಕೆಗೆ ಬರುತ್ತಿದ್ದರು. ಅವರ ಉಪನ್ಯಾಸದ ವೇಳೆಯಲ್ಲಿ ಸಭೆ ಸಂಪೂರ್ಣವಾಗಿ ನಿಶ್ಶಬ್ದದಿಂದಿರುತ್ತಿತ್ತು. ಅಲ್ಲಿನ ಸಭಾಂಗಣ ಜನಗಳಿಂದ ಕಿಕ್ಕಿರಿದು ತುಂಬಿರುತ್ತತ್ತು. ಪಕ್ಕದ ಓಣಿಯಲ್ಲಿ ಹಾಗೂ ವೇದಿಕೆಯ ಮೆಟ್ಟಿಲ ಮೇಲೂ ಜನಗಳು ಕುಳಿತು ಕೇಳುತ್ತಿದ್ದರು. ಅಷ್ಟೇ ಅಲ್ಲದೆ, ಮುಂದಿನ ಹುಲ್ಲುಹಾಸಿನ

---

* ಜಾರ್‌ಖಂಡ್‌ನ ಮೋರಾಬಾಡಿಯಲ್ಲಿನ ರಾಮಕೃಷ್ಣ ಸಂಘದ ಆಶ್ರಮದ ಕಾರ್ಯದರ್ಶಿ.

ಮೇಲೂ ಜನ ನೆರೆದಿರುತ್ತಿದ್ದರು. ಈ ದೃಶ್ಯವನ್ನು ಪ್ರತಿ ಭಾನುವಾರವೂ ಕಾಣಬಹುದಾಗಿತ್ತು. ಹಾಗಿತ್ತು ಅವರ ವರ್ಚಸ್ಸು.

ಅಲ್ಲಿ ತರುಣ ಭಕ್ತರು ಸ್ವಯಂ ಸೇವಕರಾಗಿ ಪುಸ್ತಕಗಳನ್ನು ಮಾರುವುದು ಮತ್ತು ಇತರ ಸೇವೆಗಳಲ್ಲಿ ತೊಡಗಿರುವುದನ್ನು ನೋಡಿದಾಗ ನನಗೂ ಅವರೊಡನೆ ಸೇರಿಕೊಳ್ಳಬೇಕೆಂಬ ಬಯಕೆ ಕುಡಿಯೊಡೆಯುತ್ತಿತ್ತು. ಆಗ ದೆಹಲಿ ಆಶ್ರಮದ ವ್ಯವಸ್ಥಾಪಕರಾಗಿದ್ದ ಸ್ವಾಮಿ ಅಮೋಘಾನಂದ ಅವರನ್ನು ಭೇಟಿ ಮಾಡಿ ನನ್ನ ಬಯಕೆಯನ್ನು ತಿಳಿಸಿದಾಗ ಅವರು ಮುಗುಳುನಗುತ್ತಾ, 'ತಾಳು! ತಾಳು! ನಿನಗೆ ನಮ್ಮ ಸಂಘದ ಎಷ್ಟು ಕೆಲಸ ಕೊಡುತ್ತೇನೆಂದರೆ ನೀನು ಬಳಲಿಹೋಗಬೇಕು' ಎಂದರು. ಸ್ವಲ್ಪ ದಿನಗಳ ನಂತರ ಒಬ್ಬ ಸ್ವಯಂಸೇವಕರು ನನ್ನನ್ನು ಕರೆದು, ಮೆಟ್ಟಿಲಿನ ಬಳಿ ನಿಂತು ಚಿಕ್ಕಮಕ್ಕಳು ಮಹಡಿಯ ಮೇಲಕ್ಕೆ ಹೋಗದ ಹಾಗೆ ನೋಡಿಕೊಳ್ಳುವ ಕೆಲಸವನ್ನು ಹಚ್ಚಿದರು. ಸ್ವಾಮಿ ರಂಗನಾಥಾನಂದರು ಆ ಮೆಟ್ಟಿಲುಗಳ ಮೂಲಕವೇ ಮೇಲಿನ ಸಭಾಂಗಣಕ್ಕೆ ಹೋಗುವವರಿದ್ದರು. ಹಾಗೆ ಅವರು ಹೋಗುವಾಗ ಅವರನ್ನು ಅಷ್ಟು ಹತ್ತಿರದಿಂದ ನೋಡುವ, ಅವರಿಗೆ ಪ್ರಣಾಮವನ್ನು ಸಲ್ಲಿಸುವ ಅದೃಷ್ಟ ನನ್ನದಾಗಿತ್ತು. ಪ್ರತಿವಾರವೂ ಅಂತಹ ಕ್ಷಣಗಳಿಗಾಗಿ ನಾನು ಕಾತರದಿಂದ ಕಾಯುತ್ತಿದ್ದೆ.

ಶ್ರೀ ರಾಮಕೃಷ್ಣ, ಶ್ರೀ ಮಾತೆ ಹಾಗೂ ಸ್ವಾಮಿ ವಿವೇಕಾನಂದರ ಹುಟ್ಟುಹಬ್ಬದ ಸಂದರ್ಭಗಳಲ್ಲಿ ನಡೆಸುವ ಮಂಗಳಾರತಿಗೆ ತಪ್ಪದೆ ಹಾಜರಾಗುತ್ತಿದ್ದೆ. ಶ್ರೀ ಮಾತೆಯವರ ಜನ್ಮದಿನ ಸಾಮಾನ್ಯವಾಗಿ ಚಳಿಗಾಲದಲ್ಲಿ ಬರುತ್ತಿತ್ತು. ದೆಹಲಿಯಲ್ಲಿ ಚಳಿಗಾಲವು ತೀವ್ರವಾಗಿರುವುದರಿಂದ ಚಳಿಯಿಂದ ನಡುಗುತ್ತಲೇ ನಾವು ಆಶ್ರಮವನ್ನು ಸೇರುತ್ತಿದ್ದೆವು. ಆರತಿಯ ನಂತರ ಮಹಾರಾಜ್ ಅವರು 'ಶ್ರೀ ಮಾತೆಯವರ ಜೀವನ'ದಿಂದ ಕೆಲವು ಭಾಗಗಳನ್ನು ಓದುತ್ತಿದ್ದರು. ಚಳಿಯ ಕಾರಣದಿಂದಾಗಿ ಕೆಲವರು ಮಧ್ಯೆ ಮಧ್ಯೆ ಕೆಮ್ಮುತ್ತಿದ್ದರು. ಆಗ ಮಹಾರಾಜ್ ಅವರು 'ಇಲ್ಲಿಗೆ ಬರುವ ಮುಂಚೆ ಹೋಮಿಯೋಪತಿ ಗುಳಿಗೆಗಳನ್ನು ಸೇವಿಸಿ ಬನ್ನಿ' ಎಂದು ಹೇಳುತ್ತಿದ್ದರು.

**ಬೇಲೂರು ಮಠವು ನಮ್ಮ ತಾಯಿ–ತಂದೆ ಎಲ್ಲವೂ**

ಸ್ವಾಮಿ ರಂಗನಾಥಾನಂದರು ಕೊಲ್ಕತ್ತಾದ ಗೋಲ್ ಪಾರ್ಕ್‌ನ ರಾಮಕೃಷ್ಣ ಸಾಂಸ್ಕೃತಿಕ ಸಂಸ್ಥೆಗೆ ವರ್ಗಾಯಿಸಲ್ಪಟ್ಟಾಗ ದೆಹಲಿಯ ಭಕ್ತರು ಮತ್ತು ಅವರನ್ನು ಬಹುವಾಗಿ ಮೆಚ್ಚಿಕೊಂಡಿದ್ದವರು ಅವರು ದೆಹಲಿಯಿಂದ ಅಲ್ಲಿಗೆ ಹೋದರೆ ಅದು ಇಲ್ಲಿನವರೆಗೆ ಭಾರೀ ನಷ್ಟವೆಂದೂ, ಈ ವರ್ಗಾವಣೆಯನ್ನು ರದ್ದುಪಡಿಸಲು ತಮ್ಮಲ್ಲಿ ಕೆಲವರು ಬೇಲೂರು ಮಠಕ್ಕೆ ಹೋಗುವುದಾಗಿಯೂ ಹೇಳಿದರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತರಾಗಿದ್ದ ವಾಗ್ಮಿ ಹಾಗೂ ರಾಷ್ಟ್ರೀಯ ನಾಯಕರು ತಮ್ಮ ಮುಂದೆ ಮಂಡಿಯೂರುವಂತಿದ್ದ ಪೂಜ್ಯ ಮಹಾರಾಜ್ ಅವರು ಮಗುವಿನಂತೆ 'ನೀವೇನು ಹೇಳುತ್ತಿರುವಿರಿ? ಬೇಲೂರು ಮಠವು ನಮಗೆ ತಾಯಿ, ತಂದೆ ಎಲ್ಲವೂ. ಅಲ್ಲಿಂದ ಬಂದ ಆಜ್ಞೆ ಅನುಲ್ಲಂಘನೀಯ, ಅದನ್ನು ನಾನು ಪಾಲಿಸಲೇಬೇಕು. ಅವರು ಹೇಳಿದ ಕಡೆ ಸೇವೆ ಸಲ್ಲಿಸುವುದು ನನ್ನ ಕರ್ತವ್ಯ' ಎಂದರು. ಈ ಮಹಾನ್ ಸನ್ಯಾಸಿಯ ದೊಡ್ಡತನವನ್ನು ನೋಡಿ! ಅದೂ ಸಂಘದ ವಿಶ್ವಸ್ಥ ಸಮಿತಿಯ ಸದಸ್ಯರಾಗಿದ್ದ ಅವರಲ್ಲಿ ತಮ್ಮ ಸಂಸ್ಥೆಯ ಬಗ್ಗೆ ಎಂತಹ ವಿಧೇಯತೆ, ಗೌರವವಿತ್ತು! ನಗುನಗುತ್ತಲೇ, ಸ್ವಲ್ಪವೂ ಹಿಂದುಮುಂದೆ ನೋಡದೆ ಸಂಸ್ಥೆಯ ಆಣತಿಯನ್ನು ಪಾಲಿಸಲು ಒಂದು ಸಣ್ಣ ಮಗುವಿನಂತೆ ಅವರು ಹೊರಟೇಬಿಟ್ಟರು.

**ನಾನು ಸಂಘವನ್ನು ಸೇರಿದ ಮೇಲೆ**

ನಾನು ಚಂದೀಗಢದ ರಾಮಕೃಷ್ಣ ಆಶ್ರಮಕ್ಕೆ ಬ್ರಹ್ಮಚಾರಿಯಾಗಿ ೧೯೬೩ರ ಜುಲೈನಲ್ಲಿ ಸೇರಿದೆ. ನಾನು ಅಲ್ಲಿದ್ದಾಗ ಮಹಾರಾಜ್ ಅವರು ಚಂದೀಗಢ ವಿಶ್ವವಿದ್ಯಾನಿಲಯದಲ್ಲಿ ಒಂದು ಉಪನ್ಯಾಸವನ್ನು ಕೊಡುವುದಕ್ಕಾಗಿ

ಅಲ್ಲಿಗೆ ಬಂದಿದ್ದರು. ಸಾಧುಗಳಿಗೆ ಭೋಜನ ವ್ಯವಸ್ಥೆಯನ್ನು ಮಾಡಿದ್ದ ಗೃಹಸ್ಥರೊಬ್ಬರ ಮನೆಗೆ ನಾವು ಹೋದೆವು. ಮಹಾರಾಜ್ ಅವರು 'ರಾಮಕೃಷ್ಣ ಚರಣ ಸರೋಜೆ'ಯನ್ನು ಹಾಡಿದುದನ್ನು ಕೇಳುವ ಅವಕಾಶ ನನಗೆ ಅಲ್ಲಿ ಬಂದಿತು. ಆ ಸಮಯದಲ್ಲೂ ಮಹಾರಾಜ್ ಅವರ ಹತ್ತಿರ ಹೋಗುವ ಧೈರ್ಯ ನನ್ನಲ್ಲಿ ಮೂಡಿರಲಿಲ್ಲ.

**ಲಕ್ನೋದಲ್ಲಿ**

ರಾಮಕೃಷ್ಣ ಸಂಘ ಮತ್ತು ಸಂಸ್ಥೆಯ ಅಧ್ಯಕ್ಷರಾಗಿದ್ದ ಪರಮ ಪೂಜ್ಯ ಸ್ವಾಮಿ ಮಾಧವಾನಂದ ಅವರಿಂದ ದೀಕ್ಷೆಯನ್ನು ಪಡೆಯಲು ನಾನು ಲಕ್ನೋಗೆ ಹೋದೆ. ಅವರು ಅಲ್ಲಿಗೆ ಸ್ವಾಮಿ ವಿವೇಕಾನಂದರ ಶತಮಾನೋತ್ಸವಕ್ಕಾಗಿ ಬಂದಿದ್ದರು. ಅದೇ ಸಮಯಕ್ಕೆ ಸ್ವಾಮಿ ರಂಗನಾಥಾನಂದರೂ ಅಲ್ಲಿಗೆ ಬಂದರು. ಸ್ವಾಮಿ ರಂಗನಾಥಾನಂದರ ಪ್ರೀತಿ, ವಾತ್ಸಲ್ಯ ಮತ್ತು ಆ ಮಹಾನ್ ಜೀವದ ಸಾನ್ನಿಧ್ಯ ಇವುಗಳನ್ನು ಪಡೆದದ್ದು ಅಲ್ಲೇ. ನಾನು ಅವರ ಕೋಣೆಯನ್ನು ಸ್ವಚ್ಛಗೊಳಿಸುತ್ತಿದ್ದಾಗ ನಾನು ಓದಿರುವ ಪುಸ್ತಕಗಳ ಬಗ್ಗೆ ಅವರು ನನ್ನನ್ನು ಕೇಳಿದರು. ಅವರ ಮುಖ್ಯ ಉದ್ದೇಶ ನಾನು 'ಕೊಲೊಂಬೋದಿಂದ ಅಲ್ಮೋರಾಕ್ಕೆ', 'ಶಿಷ್ಯರೊಡನೆ ಸ್ವಾಮಿ ವಿವೇಕಾನಂದರ ಪತ್ರಗಳು ಮತ್ತು ಭಾಷಣಗಳು' ಎಂಬ ಪುಸ್ತಕಗಳನ್ನು ಓದಿದ್ದೇನೆಯೇ ಎಂಬುದನ್ನು ತಿಳಿದುಕೊಳ್ಳುವುದಾಗಿತ್ತು. ನಾನು ಅವುಗಳನ್ನು ಓದಿದ್ದೇನೆಂದು ಹೇಳಿದಾಗ ಅವರಿಗೆ ಸಂತೋಷವಾಯಿತು. ನನ್ನ ದೈನಂದಿನ ಕೆಲಸ ಕಾರ್ಯಗಳು, ಧ್ಯಾನ ಮೊದಲಾದ ಆಧ್ಯಾತ್ಮಿಕ ಚಟುವಟಿಕೆಗಳ ಬಗ್ಗೆ ವಿಚಾರಿಸಿದರು. ಕ್ಷೀರಾಮ್ಲ (ಲ್ಯಾಕ್ಟಿಕ್ ಆಸಿಡ್) ಉಪಯೋಗಿಸಿ ಅವರಿಗಾಗಿ ಹೇಗೆ ಹಾಲನ್ನು ತಯಾರಿಸುವುದು ಎಂಬುದನ್ನು ತಿಳಿದುಕೊಂಡೆ. ಹಾಗೆ ತಯಾರಿಸಿದ ಹಾಲು, ಹಣ್ಣಿನ ರಸ, ಅನ್ನ, ಮೊಸರು ಇವೇ ಅವರ ಇಡೀ ದಿನದ ಪಥ್ಯದ ಆಹಾರವಾಗಿತ್ತು. ಪ್ರತಿ ಮೂರು ಗಂಟೆಗೆ ಒಮ್ಮೆ ಅವರಿಗೆ ಏನಾದರೂ ಆಹಾರವನ್ನು ಕೊಡಬೇಕಾಗಿತ್ತು.

**ನವದೆಹಲಿಯಲ್ಲಿ**

೧೯೬೩ರ ನವೆಂಬರ್‌ನಲ್ಲಿ ನನ್ನನ್ನು ನವದೆಹಲಿಯ ರಾಮಕೃಷ್ಣ ಸಂಸ್ಥೆಗೆ ವರ್ಗಾಯಿಸಲಾಯಿತು. ಮಹಾರಾಜ್ ಅವರು ಉಪನ್ಯಾಸಗಳನ್ನು ನೀಡಲು ಅಲ್ಲಿಗೆ ಆಗಾಗ್ಗೆ ಬರುತ್ತಿದ್ದರು. ಅವರು ದೆಹಲಿಗೆ ಬಂದಾಗಲೆಲ್ಲಾ ಪ್ರತಿದಿನವೂ ಅವರ ಸೇವೆಯನ್ನು ಮಾಡುವ ಕೆಲಸ ನನ್ನದಾಗಿರುತ್ತಿತ್ತು. ಪ್ರತಿ ರಾತ್ರಿ ಅವರು ವಿಶ್ರಾಂತಿ ತೆಗೆದುಕೊಳ್ಳುವಾಗ, ಅವರ ಕಾಲುಗಳನ್ನೊತ್ತುವುದು ನನಗೆ ಅತ್ಯಂತ ಹರ್ಷದಾಯಕವಾದ ಕ್ಷಣಗಳಾಗಿರುತ್ತಿತ್ತು. ಅಂತಹ ಸಂದರ್ಭದಲ್ಲಿ ಅವರು ಅನೇಕ ಸ್ಫೂರ್ತಿದಾಯಕ ಪ್ರಸಂಗಗಳನ್ನು ಹೇಳುತ್ತಿದ್ದರು.

ಒಂದು ದಿನ ಸ್ವಾಮಿ ಶ್ರೀನಾಥಾನಂದ (ಮೈಸೂರಿನ ನಾರಾಯಣ ಮಹಾರಾಜ್) ಅವರಿಗೆ ತಮ್ಮ ಕಾಲನ್ನು ಒತ್ತಲು ಬರುವಂತೆ ಹೇಳಿದ್ದರು. ಆದರೆ ಅವರು ಬಹಳ ತಡವಾಗಿ ಬಂದರು. ಅಷ್ಟರಲ್ಲಿ ನಾನು ಅವರ ಕಾಲನ್ನು ಒತ್ತಲು ಆರಂಭಿಸಿದ್ದೆ. ನಾರಾಯಣ್ ಮಹಾರಾಜ್ ಅವರು ಒಳಗೆ ಬಂದಾಗ, ರಂಗನಾಥಾನಂದರು 'ನಾರಾಯಣ, ನಾನು ನಿನಗೆ ಮುಕ್ತಿಯನ್ನು ಕೊಡಲು ಬಯಸಿದ್ದೆ. ಆದರೆ ನೀನು ತಡವಾಗಿ ಬಂದೆ. ಹಾಗಾಗಿ ನಾನು ಅದನ್ನು ಮಹೇಶನಿಗೆ ಕೊಟ್ಟುಬಿಟ್ಟೆ' ಎಂದರು. ಇದು ಅವರು ತಮಾಷೆ ಮಾಡಿ ನಮ್ಮೆಲ್ಲರನ್ನೂ ನಗಿಸುತ್ತಿದ್ದ ರೀತಿ.

**ಅಂತ್ಯದವರೆಗೂ ಮಾನವನ ಸೇವೆಯನ್ನು ಮಾಡು**

ಒಮ್ಮೆ ಅವರು ದೆಹಲಿಗೆ ಬಂದಾಗ, ನಾನು ದೇವಸ್ಥಾನದಲ್ಲಿ ಕರ್ತವ್ಯನಿರತನಾಗಿದ್ದೆ. ಆಗ ನಾನು ಪ್ರತಿದಿನ ಅಲ್ಲಿನ ಪೂಜೆಯನ್ನು ಮಾಡುತ್ತಿದ್ದೆ. ಹಾಗಾಗಿ, ನಾನು ಒಬ್ಬ ಬ್ರಹ್ಮಚಾರಿಗೆ ಮಹಾರಾಜ್ ಅವರಿಗೆ ಆಹಾರವನ್ನು

ನೀಡುವಂತೆ ಹೇಳಿದೆ. ನಾನು ದೇವಸ್ಥಾನದಲ್ಲಿ ಪೂಜೆಯನ್ನು ಮುಗಿಸಿ, ಮಹಾರಾಜ್ ಅವರಿಗೆ ಪ್ರಣಾಮವನ್ನು ಸಲ್ಲಿಸಲು ಅವರ ಕೋಣೆಗೆ ಹೋದಾಗ ಅವರು 'ನನಗೆ ಆಹಾರವನ್ನು ನೀನು ಕೊಡಲಿಲ್ಲ' ಎಂದು ಹುಸಿಮುನಿಸಿನಿಂದ ಹೇಳಿದರು. ನಾನು ದೇವಸ್ಥಾನದಲ್ಲಿ ಕರ್ತವ್ಯನಿರತನಾಗಿದ್ದೆನೆಂದೂ, ಬ್ರಹ್ಮಚಾರಿಯೊಬ್ಬನಿಗೆ ಆಹಾರವನ್ನು ನೀಡುವಂತೆ ಹೇಳಿದ್ದಾಗಿಯೂ ಹೇಳಿದಾಗ ಅವರು, 'ನಾನೇಕೆ ಅವನಿಂದ ಆಹಾರ ಸ್ವೀಕರಿಸಬೇಕು' ಎಂದರು. ಒಂದೆರಡು ಕ್ಷಣಗಳ ನಂತರ ಮತ್ತೆ 'ಜ್ಞಾಪಕದಲ್ಲಿಟ್ಟುಕೊಂಡಿರು. ಪ್ರಾಣ ಹೋಗುವವರೆಗೂ ಅಪರಾಧಿಯನ್ನು ನೇಣು ಹಾಕುವ ಹಾಗೆ, ಒಬ್ಬ ಮನುಷ್ಯ ಸಾಯುವವರೆಗೆ ಅವನ ಸೇವೆಯನ್ನು ಮಾಡಬೇಕು' ಎಂದರು. ನಾನು ಕ್ಷಮಾಪಣೆಯನ್ನು ಕೇಳಿ, ಮತ್ತೆ ಇಂತಹ ತಪ್ಪು ನನ್ನಿಂದ ಆಗದು ಎಂದೆ. ಅವರು ಮುಗುಳ್ನಕ್ಕರು. ಅದೇ ನನಗೆ ಆಶೀರ್ವಾದವಾಗಿತ್ತು.

**ಅವರ ಪದತಳದಲ್ಲಿ ಇಂದಿರಾ ಗಾಂಧಿ**

ಮಹಾರಾಜ್ ಅವರು ಹಣ್ಣಿನ ರಸವನ್ನಾಗಲೀ, ಹಾಲನ್ನಾಗಲೀ ತೆಗೆದುಕೊಳ್ಳುವ ವೇಳೆ ನಿಗದಿತವಾಗಿದ್ದು, ಅದೇ ವೇಳೆಯಲ್ಲಿ ಅವರಿಗೆ ಅದನ್ನು ಕೊಡಬೇಕಾಗಿತ್ತು. ಒಂದು ದಿನ ಉಪನ್ಯಾಸದ ನಂತರ ಅವರನ್ನು ಕೆಲ ಭಕ್ತರು ಮೆಟ್ಟಿಲುಗಳ ಬಳಿ ನಿಲ್ಲಿಸಿಕೊಂಡುಬಿಟ್ಟರು. ಆದರೆ ಆ ಸಮಯದಲ್ಲಿ ನಾನು ಅವರಿಗೆ ಹಣ್ಣಿನ ರಸವನ್ನು ಕೊಡಬೇಕಾಗಿತ್ತು. ಆದ್ದರಿಂದ ನಾನು ಅದನ್ನು ಅಲ್ಲಿಯೇ ಅವರಿಗೆ ಕೊಟ್ಟುಬಿಟ್ಟೆ. ಅನಿಗದಿತ ಸ್ಥಳವಾದರೂ ಅವರು ರಸವನ್ನು ಕುಡಿಯುವಷ್ಟು ಸರಳವಾಗಿದ್ದರು.

ಒಮ್ಮೆ ನಾನು ಅವರಿಗೆ ಹಾಲನ್ನು ಕೊಡಲು ಅವರ ಕೋಣೆಗೆ ಹೋದಾಗ ಅಲ್ಲಿ ಶ್ರೀಮತಿ ಇಂದಿರಾ ಗಾಂಧಿ ಹಾಗೂ ಆಗಿನ ಮಾಹಿತಿ ಮತ್ತು ಪ್ರಸಾರ ಖಾತೆಯ ಸಚಿವರು ಅಲ್ಲಿದ್ದರು. ನಾನು ಒಳ ಹೊಕ್ಕೊಡನೆ ಇನ್ನೊಂದು ಫ್ಲಾಸ್ಕ್ ಹಾಲನ್ನು ಇಂದಿರಾ ಅವರಿಗಾಗಿ ತರುವಂತೆ ನನಗೆ ಹೇಳಿದರು. ನಾನು ಅದನ್ನು ತಂದು ಅವರಿಗೆ ಕೊಟ್ಟಾಗ ಮಹಾರಾಜ್ ಅವರು 'ನೋಡಿ, ಇದು ಎಂತಹ ಅದ್ಭುತವಾದ ಪಾಯಸ' ಎಂದರು. ಇಂದಿರಾ ಗಾಂಧಿಯವರೂ ಲ್ಯಾಕ್ಟಿಫೈಡ್ ಹಾಲನ್ನು ಕುಡಿದು ಆನಂದವನ್ನು ವ್ಯಕ್ತಪಡಿಸಿದರು.

**ಅಂಗಮರ್ದನದಲ್ಲಿ ತರಬೇತಿ**

ಒಂದು ರಾತ್ರಿ ದೆಹಲಿ ಆಶ್ರಮದಲ್ಲಿ ನಾನು ಊಟ ಮಾಡುತ್ತಿದ್ದಾಗ ಮಹಾರಾಜ್ ಅವರು ನನ್ನನ್ನು ತಮ್ಮ ಕೋಣೆಗೆ ಬರುವಂತೆ ಹೇಳಿ ಕಳುಹಿಸಿದರು. ನಾನು ಅಲ್ಲಿಗೆ ಹೋದಾಗ ಕೋಣೆಯ ಬಾಗಿಲಿನ ಚಿಲಕವನ್ನು ಒಳಗಿನಿಂದ ಹಾಕಲಾಗಿತ್ತು. ಬಾಗಿಲನ್ನು ತಟ್ಟಿದೆ. ಮಹಾರಾಜ್ ಅವರು 'ಒಳಗೆ ಬಾ' ಎಂದರು. ಆದರೆ ಹೋಗುವುದು ಹೇಗೆ? ಕಿಟಕಿಯಿಂದ ಇಣಿಕಿ ನೋಡಿದೆ. ಒಬ್ಬರು ಯಾವುದೊ ಒಂದು ಪುಡಿಯನ್ನು ಹಚ್ಚಿ ಮಹಾರಾಜ್ ಅವರ ಅಂಗಮರ್ದನ ಮಾಡುತ್ತಿದ್ದರು. ಮಹಾರಾಜ್ ಅವರಿಗೆ ಮತ್ತೆ ಎಂದಾದರೂ ಅಗತ್ಯ ಬಂದಾಗ ನಾನೂ ಹಾಗೇ ಮಾಡಬಹುದೆಂದು ಅವರು ಮಾಡುತ್ತಿದ್ದ ವಿಧಾನವನ್ನು ಗಮನವಿಟ್ಟು ನೋಡುತ್ತಿದ್ದೆ. ಮಹಾರಾಜ್ ಅವರಿಗೆ ಮತ್ತೆ ಅದರ ಅಗತ್ಯ ಬರದಿದ್ದರೂ, ಹೀಗೆ ಕಲಿತದ್ದು ಸ್ವಾಮಿ ಅತುಲಾನಂದರ ಸೇವೆಯನ್ನು ಮಾಡುವಾಗ ಉಪಯೋಗಕ್ಕೆ ಬಂದಿತು.

**ಪ್ರಚಂಡ ಚಿತ್ತೈಕಾಗ್ರತೆ ಎಂದರೇನು?**

ಒಮ್ಮೆ ಮಹಾರಾಜ್ ಅವರನ್ನು ಕಳಿಸಿಕೊಡುವುದಕ್ಕೆಂದು ದೆಹಲಿಯ ವಿಮಾನ ನಿಲ್ದಾಣಕ್ಕೆ ಹೋಗಿದ್ದೆ. ವಿಮಾನದ ನಿರ್ಗಮನವು ತಡವಾಗಿತ್ತು. ಆಗ ನಾನು ಕೇಳಿದೆ 'ಪ್ರಚಂಡ ಚಿತ್ತೈಕಾಗ್ರತೆ ಎಂದರೇನು?' ಅವರು

ಹೇಳಿದರು– 'ನೀನು ದೂರವಾಣಿಯ ಇ.ಪಿ.ಬಿ.ಎಕ್ಸ್. ನೋಡಿದ್ದೀಯಲ್ಲಾ. ಹೊರಗಿನಿಂದ ಒಂದು ಕರೆ ಬರುತ್ತದೆ, ಒಳಗಿನ ಯಾವುದೋ ವಿಸ್ತರಣವನ್ನು ಕೇಳುತ್ತಾರೆ. ಅಲ್ಲಿರುವ ಆಪರೇಟರ್‌ನ ಬಳಿ ಹಲವಾರು ತಂತಿಗಳು ಇರುತ್ತವೆ. ಅವುಗಳಲ್ಲಿ ಒಂದರ ಒಂದು ತುದಿಯನ್ನು ಅವರು ಕೇಳಿದ ವಿಸ್ತರಣದ ಫೋನಿಗೂ, ಇನ್ನೊಂದನ್ನು ಹೊರಗಿನಿಂದ ಬಂದ ಕರೆಗೂ ಚುಚ್ಚಿ ಸಂಪರ್ಕ ಕಲ್ಪಿಸುತ್ತಾನೆ. (ಆಗಿನ್ನು ಎಲೆಕ್ಟ್ರಾನಿಕ್ಸ್ ಉಪಕರಣ ಬಂದಿರಲಿಲ್ಲ.) ಆಗ ಈ ಇಬ್ಬರು ವ್ಯಕ್ತಿಗಳು ಮಾತ್ರ ಪರಸ್ಪರ ಮಾತನಾಡಿಕೊಳ್ಳುತ್ತಾರೆ. ಬೇರೆಯವರೊಂದಿಗೆ ಅವರ ಸಂಪರ್ಕವೇ ಇರುವುದಿಲ್ಲ. ಹಾಗೆಯೇ, ನಿನ್ನ ಮನಸ್ಸು ಒಂದು ವಿಷಯದ ಮೇಲೆಯೇ ಚಿಂತಿಸುತ್ತಾ ಇದ್ದರೆ, ನಿನಗೆ ಬೇರೆಯ ವಿಷಯದ ಮೇಲೆ ಗಮನವೇ ಇರುವುದಿಲ್ಲ. ಮುಂದಿನ ಕ್ಷಣದಲ್ಲಿ ಬೇರೊಂದು ವಿಷಯದ ಮೇಲೆ ಚಿಂತಿಸುತ್ತಾ ಇದ್ದರೆ, ಆ ವಿಷಯದ ಮೇಲೆಯೇ ನಿನ್ನ ಮನಸ್ಸು ಕೇಂದ್ರೀಕೃತ ವಾಗಿರುತ್ತದೆ. ಇಂತಹ ಸ್ಥಿತಿಯನ್ನೇ ಪ್ರಚಂಡ ಚಿತ್ತೈಕಾಗ್ರತೆ ಎನ್ನುವುದು.'

**ಅವರ ದೃಷ್ಟಿಯಲ್ಲಿ ಯಾರೂ ಚಿಕ್ಕವರಿರಲಿಲ್ಲ**

ನಾವು ನಿಲ್ದಾಣದ ಒಳಕ್ಕೆ ಹೋದಾಗ, ಉಪಾಹಾರದ ಕೂಪನ್‌ನ್ನು ಪಡೆದುಕೊಳ್ಳುವಂತೆ ಪ್ರಯಾಣಿಕರಿಗೆ ಹೇಳುತ್ತಿದ್ದರು. ಮಹಾರಾಜ್ ಅವರೂ ತಮ್ಮ ಕೂಪನ್‌ನ್ನು ತೆಗೆದುಕೊಂಡು ಅಲ್ಲಿನ ಉಪಾಹಾರಗೃಹದೊಳಕ್ಕೆ ಹೋದರು. ನಾನೂ ಅವರ ಹಿಂದೆಯೇ ಹೋದೆ. ನಾವು ಒಂದು ಮೇಜಿನ ಮುಂದೆ ಕುಳಿತೆವು. ಮಾಣಿಯೊಬ್ಬ ಬಂದು ಮಹಾರಾಜ್ ಅವರ ಬಳಿ ಇದ್ದ ಕೂಪನ್‌ನ್ನು ತೆಗೆದುಕೊಂಡು ಹೋಗಿ ಉಪಾಹಾರವನ್ನು ತಂದಿತ್ತ. ಮಹಾರಾಜ್ ಅವರು ಉಪಾಹಾರ ತೆಗೆದು ಕೊಳ್ಳುವರೆಂದು ಬಗೆದು, ನಾನು ಕಾರ್ನ್‌ಫ್ಲೇಕ್ಸ್‌ಗೆ ಹಾಲನ್ನು ಬೆರೆಸಿ ಕಲಕಲು ಆರಂಭಿಸಿದೆ. ನನ್ನನ್ನು ತಡೆದು, ಪ್ರೀತಿಯಿಂದ ಅವರೇ ಆ ಕೆಲಸವನ್ನು ಮಾಡಿ ಅದಕ್ಕೆ ಸಕ್ಕರೆಯನ್ನೂ ಸೇರಿಸಿ ಸೇವಿಸಲು ನನಗೆ ಕೊಟ್ಟರು. 'ಮಹಾರಾಜ್, ನೀವು ತೆಗೆದುಕೊಳ್ಳಿ, ನಾನು ಆಶ್ರಮದಲ್ಲಿ ನನ್ನ ಉಪಾಹಾರವನ್ನು ತೆಗೆದುಕೊಳ್ಳುತ್ತೇನೆ' ಎಂದೆ. ಆದರೆ ಅವರು ಕೇಳಲಿಲ್ಲ. ನಾನೇ ತೆಗೆದುಕೊಳ್ಳಬೇಕೆಂದು ಅವರು ಒತ್ತಾಯಿಸಿದರು. ನಾನಿನ್ನೂ ಹಾಗೇ ಒದ್ದಾಡುತ್ತಿರುವಾಗಲೇ, ಬ್ರೆಡ್‌ಗೆ ಬೆಣ್ಣೆಯನ್ನು ಹಚ್ಚಲು ಆರಂಭಿಸಿದರು. ಇದನ್ನಾದರೂ ಮಹಾರಾಜ್ ಅವರು ಸೇವಿಸುತ್ತಾರೆಂದು ಕೊಂಡೆ. ನಾನೇ ಬೆಣ್ಣೆ ಹಚ್ಚಿ ಕೊಡುವೆನೆಂದೆ. ಆದರೆ ಮಹಾರಾಜ್ ಅವರು ನಾನು ಮೊದಲು ಕಾರ್ನ್‌ಫ್ಲೇಕ್ಸ್‌ನ್ನು ತಿನ್ನುವಂತೆ ಹೇಳಿದರು. ನಾನು ಅದನ್ನು ತಿನ್ನಲು ಆರಂಭಿಸುತ್ತಿದ್ದಂತೆಯೇ, ಬ್ರೆಡ್‌ಅನ್ನು ನನ್ನ ಮುಂದಕ್ಕೇ ನೂಕಿದರು ಮತ್ತು ಪ್ರೀತಿಯಿಂದ, 'ಇದನ್ನೂ ತೆಗೆದುಕೊ' ಎಂದರು. ನಂತರ ತಾವೇ ನನಗೆ ಕಾಫಿಯನ್ನೂ ಸಿದ್ಧಪಡಿಸಿದರು. ನನಗೇ ಅತೀವ ಮುಜುಗರವಾಯಿತು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಪಡೆದ ಮತ್ತು ರಾಮಕೃಷ್ಣ ಸಂಸ್ಥೆಯ ಮತ್ತು ಸಂಘದ ಆಡಳಿತ ಮಂಡಳಿಯ ಸದಸ್ಯರಾಗಿದ್ದ ಸ್ವಾಮೀಜಿ ಇದೀಗ ಹೊಸದಾಗಿ ಸೇರಿದ್ದ ಬ್ರಹ್ಮಚಾರಿಯೊಬ್ಬನ ಸೇವೆಯನ್ನು ಮಾಡುತ್ತಿದ್ದರು. ಅದು ಅವರ ದೊಡ್ಡತನವನ್ನು ತೋರಿಸಿದರೂ ನನಗೆ ಮಾತ್ರ ಕಸಿವಿಸಿಯನ್ನು ಉಂಟುಮಾಡಿತ್ತು. ಆದರೆ ಒಂದು ರೀತಿಯಲ್ಲಿ ಅದು ನನಗೆ ಸಿಕ್ಕಿದ ಆಶೀರ್ವಾದವೂ ಆಗಿತ್ತು.

ನಂತರದ ದಿನಗಳಲ್ಲಿ ನಾನು ಬೇಲೂರು ಮಠದಲ್ಲಿ ಇದ್ದಾಗ ಊಟದ ಮನೆಗೆ ಹೋಗುವ ಮೊದಲು ಅವರ ಕೋಣೆಗೆ ಹೋಗುವುದು, ಮತ್ತು ಅವರಿಂದ ಪ್ರಸಾದವನ್ನು ಪಡೆಯುವುದು ಅಭ್ಯಾಸವಾಗಿತ್ತು. ನಾನು ಹಾಗೆ ಹೋದಾಗ, ಅಲ್ಲಿದ್ದ ಒಬ್ಬ ಬ್ರಹ್ಮಚಾರಿಯನ್ನು ಕರೆದು ಮತ್ತೊಂದು ತಟ್ಟೆಯನ್ನು ತರುವಂತೆ ಹೇಳುತ್ತಿದ್ದರು. ಆ ತಟ್ಟೆಗೆ ತಮ್ಮ ತಟ್ಟೆಯಲ್ಲಿದ್ದ ಆಹಾರದ ಸ್ವಲ್ಪ ಭಾಗವನ್ನು ಹಾಕುತ್ತಿದ್ದರು ಮತ್ತು ಅದರಲ್ಲಿನ ಅನ್ನ ಮತ್ತು ಬೇಯಿಸಿದ ತರಕಾರಿಗಳನ್ನು ತಿನ್ನುವಂತೆ ಹೇಳುತ್ತಿದ್ದರು. ಅದನ್ನು ನಾನು ಅಷ್ಟಾಗಿ ಇಷ್ಟಪಡದಿದ್ದರೂ, ಅವರ ಪ್ರಸಾದವೆಂದು ತೆಗೆದುಕೊಳ್ಳುತ್ತಿದ್ದೆ.

### ಮನಸ್ಸಿನ ಹುಚ್ಚಾಟಗಳಿಲ್ಲದ ಸಂನ್ಯಾಸ ಜೀವನ

ನನ್ನ ಗುರುದೇವರಾದ ಪೂಜ್ಯ ಸ್ವಾಮಿ ಮಾಧವಾನಂದ ಅವರ ಸಾವಿನಿಂದ ಬಹುವಾಗಿ ನೊಂದಿದ್ದ ನಾನು, ಗಂಗೆಯ ತೀರದಲ್ಲಿದ್ದ ಪ್ರಯಾಗಕ್ಕೆ ತಪಸ್ಸಿಗೆಂದು ಹೋದೆ. ಸ್ವಾಮಿ ರಂಗನಾಥಾನಂದರಿಗೆ ಇದು ತಿಳಿದು, ಅವರು ನನ್ನ ವಿಳಾಸವನ್ನು ಹೇಗೋ ಪತ್ತೆ ಹಚ್ಚಿ ನನಗೊಂದು ತಂತಿಸಂದೇಶವನ್ನು ಕಳಿಸಿದರು. ಹಿಂದೆಯೇ ಅವರ ಪತ್ರವೂ ಬಂದಿತು. ಮನಸ್ಸಿನ ಇಂತಹ ಹುಚ್ಚಾಟಗಳನ್ನು ಬಿಟ್ಟು, ಗೋಲ್ ಪಾರ್ಕ್‌ಗೆ ಬಂದು ತಮ್ಮನ್ನು ಕಾಣುವಂತೆ ತಿಳಿಸಿದ್ದರು. ನಾನು ಕೋಲ್ಕತ್ತಾಗೆ ಹೋಗದಿದ್ದರೂ, ಅವರ ಮಾತಿನಂತೆ ದೆಹಲಿ ಆಶ್ರಮಕ್ಕೆ ಹಿಂದಿರುಗಿದೆ. ನಾನು ನನ್ನ ಭಾವನೆಗಳನ್ನು ಹತ್ತಿಕ್ಕಲಾರದೆ ಪ್ರಯಾಗಕ್ಕೆ ಹೋಗಿದ್ದೆನಾದರೂ, ಅವರು ನಾನು ಅಲ್ಲಿಗೆ ಒಬ್ಬ ಗುರುವಾಗಲು ಹೋಗಿದ್ದೆ ಎಂದು ಭಾವಿಸಿದ್ದರು. ಇದಾದ ನಂತರ ದೆಹಲಿಗೆ ಅವರು ಬಂದಿದ್ದಾಗ ಹೇಳಿದ್ದರು 'ನೀನೊಬ್ಬ ಗುರುವಾಗಲು ಬಯಸಿ ಸಂಘವನ್ನು ತೊರೆದು ಹೋಗಿದ್ದೆಯಾ? ನಾನು ಹಾಗೆ ಮಾಡಿದ್ದಿದ್ದರೆ, ಇಂದಿರಾಗಾಂಧಿ ನನ್ನ ಮೊದಲ ಶಿಷ್ಯೆಯಾಗುತ್ತಿದ್ದರು. ಆದರೆ ನಾನು ಹಾಗೆಲ್ಲಾ ಯೋಚಿಸುವುದಿಲ್ಲ.' ನನಗೆ ಅಂತಹ ಯೋಚನೆ ಇರಲಿಲ್ಲವೆಂದೂ, ನನ್ನ ಗುರುಗಳ ಅಗಲಿಕೆಯ ನೋವಿನಿಂದ ಹಾಗೆ ಮಾಡಿದೆ ಎಂದೂ ನಾನು ಅವರಿಗೆ ಮನವರಿಕೆ ಮಾಡಿಕೊಟ್ಟೆ.

ಅವರಿಗೆ ತೋರಿಕೆಯ ನಡವಳಿಕೆ ಸಹ್ಯವಾಗುತ್ತಿರಲಿಲ್ಲ. ಯಾರಾದರೂ ಸನ್ಯಾಸಿ ಅಥವಾ ಬ್ರಹ್ಮಚಾರಿ ಉದ್ದನಾಗಿ ಗಡ್ಡ ಬಿಟ್ಟಿದ್ದರೆ ಅವರು 'ನೀನೇನು ಒಬ್ಬ ಗೂಂಡಾ ಆಗಬೇಕೆಂದಿದ್ದೀಯಾ? ಮೊದಲು ಕ್ಷೌರ ಮಾಡಿಕೊ' ಎಂದು ಹೇಳುತ್ತಿದ್ದರು. ನಾನೊಮ್ಮೆ ಕೇದಾರ, ಬದರಿ ಮತ್ತು ಉತ್ತರಕಾಶಿ ಇವುಗಳ ಪ್ರವಾಸದಿಂದ ಆಶ್ರಮಕ್ಕೆ ಬಂದೆ. ಅಷ್ಟರಲ್ಲಿ ಅಲ್ಲಿಗೆ ಮಹಾರಾಜ್ ಅವರು ಬಂದಿರುವುದು ಗೊತ್ತಾಯಿತು. ತಕ್ಷಣ ನನ್ನ ಉದ್ದವಾದ ಗಡ್ಡವನ್ನು ತೆಗೆದು ನಂತರ ಮಹಾರಾಜ್ ಅವರನ್ನು ನೋಡಲು ಹೋದೆ.

### ತರಬೇತಿಯ ಕೇಂದ್ರದಲ್ಲಿ

ನಾವು ಬೇಲೂರು ಮಠದಲ್ಲಿ ೧೯೬೭–೬೯ರ ಅವಧಿಯಲ್ಲಿ ತರಬೇತಿ ಪಡೆಯುತ್ತಿದ್ದಾಗ, ಮಹಾರಾಜ್ ಅವರು ಹೈದರಾಬಾದಿನ ಮಠದ ಅಧ್ಯಕ್ಷರಾಗಿದ್ದರು ಮತ್ತು ನಾಲ್ಕು ತಿಂಗಳಿಗೊಮ್ಮೆ ವಿಶ್ವಸ್ಥ ಮಂಡಳಿ ಹಾಗೂ ಆಡಳಿತ ಮಂಡಳಿಯ ಸಭೆಗೆಂದು ಬೇಲೂರಿಗೆ ಬರುತ್ತಿದ್ದರು. ಅಲ್ಲಿಗೆ ಬಂದಾಗಲೂ ಮಹಾರಾಜ್ ಅವರು ನನ್ನನ್ನು ತಮ್ಮ ಸೇವೆಗಾಗಿ ಕರೆಸಿಕೊಳ್ಳುತ್ತಿದ್ದರು. ಒಂದು ಬಾರಿ ನನಗೆ ಅಸ್ವಸ್ಥತೆ ಉಂಟಾಗಿದ್ದುದರಿಂದ ಅವರಲ್ಲಿಗೆ ಹೋಗಲಾಗಲಿಲ್ಲ. ಎರಡು ದಿನಗಳ ನಂತರ ಕರೆದು ನಾನು ಬಾರದಿದ್ದುದರ ಕಾರಣವನ್ನು ಕೇಳಿದರು. ನನಗೆ ಭೇದಿಯಾಗಿತ್ತೆಂದು ಹೇಳಿದೆ. ತಕ್ಷಣ ಅವರು 'ಎಂತಹ ಪೆದ್ದ ನೀನು, ನಾನು ಹೇಳಿಕೊಟ್ಟಿದ್ದ ಯೋಗಾಸನಗಳನ್ನು ಮಾಡಿದ್ದರೆ ನಿನಗೆ ಗುಣವಾಗುತ್ತಿರಲಿಲ್ಲವೇ?' ಎಂದು ಕೇಳಿದರು. ಮಹಾರಾಜ್ ಅವರು ಸ್ವತಃ ನಿಯತವಾಗಿ ಯೋಗಾಸನಗಳನ್ನು ಅಭ್ಯಾಸಮಾಡುತ್ತಿದ್ದರು. ಅವರು ತಮ್ಮ ಎಂಬತ್ತರ ಹರೆಯದಲ್ಲೂ ತರಬೇತಿ ಕೇಂದ್ರದಲ್ಲಿ ಬ್ರಹ್ಮಚಾರಿಗಳೊಡನೆ ವಾಲಿಬಾಲ್ ಆಡುತ್ತಿದ್ದುದನ್ನು ನಾವೇ ನೋಡಿದ್ದೇವೆ.

ನಾನು ಖೇತ್ರಿ, ನಂತರ ರಾಂಚಿ, ಮೋರಾಬಾಡಿ ಮತ್ತು ಅರುಣಾಚಲಗಳಲ್ಲಿದ್ದುದರಿಂದ ೧೯೬೯ರಿಂದ ೧೯೭೭ರ ಎಂಟು ವರ್ಷಗಳ ಸುದೀರ್ಘ ಅವಧಿಯಲ್ಲಿ ಅವರ ಸಂಪರ್ಕವನ್ನು ಇಟ್ಟುಕೊಂಡಿರಲು ಸಾಧ್ಯವಾಗಿರಲಿಲ್ಲ. ಈ ಅವಧಿಯಲ್ಲಿ ಒಮ್ಮೆ ಮಾತ್ರ ಅವರು ರಾಂಚಿಗೆ ಬಂದಿದ್ದರು. ರಾಂಚಿಯ ಮಹಿಳಾ ಕಾಲೇಜು ಮತ್ತು ರಾಂಚಿ ವಿಶ್ವವಿದ್ಯಾನಿಲಯದ ತತ್ತ್ವಶಾಸ್ತ್ರದ ವಿಭಾಗದಲ್ಲಿ ಅವರ ಉಪನ್ಯಾಸಗಳನ್ನು ಏರ್ಪಡಿಸಿದ್ದೆವು.

## ಆಂಧ್ರ ಪ್ರದೇಶದಲ್ಲಿ

೧೯೭೭ರ ಡಿಸೆಂಬರ್‌ನಲ್ಲಿ ಆಂಧ್ರಪ್ರದೇಶದ ದೀವಿ ಸೀಮೆಯಲ್ಲಿ ಭಾರೀ ಚಂಡಮಾರುತದಿಂದ ಅಪಾರ ಹಾನಿಯಾಗಿತ್ತು. ಆ ವರ್ಷದ ಡಿಸೆಂಬರ್‌ನಿಂದ ೧೯೭೮ರ ಜುಲೈವರೆಗೆ ಪರಿಹಾರ ಮತ್ತು ಪುನರ್ವಸತಿ ಕೆಲಸಗಳಿಗಾಗಿ ನಾನು ಅಲ್ಲಿರಬೇಕಿತ್ತು. ನನಗೆ ಮತ್ತೊಮ್ಮೆ ಮಹಾರಾಜ್ ಅವರ ಸನ್ನಿಧಿಯಲ್ಲಿರುವ, ಅವರ ಸೇವೆಮಾಡುವ ಅವಕಾಶ ಒದಗಿಬಂದಿತು. ಹೈದರಾಬಾದ್ ಆಂಧ್ರದ ರಾಜಧಾನಿಯಾಗಿರುವುದರಿಂದ, ನಾನು ಅಲ್ಲಿನ ಸಚಿವಾಲಯಕ್ಕೆ ಕಾರ್ಯನಿಮಿತ್ತ ಆಗಾಗ್ಗೆ ಹೋಗಬೇಕಾಗಿತ್ತು. ಪೂಜ್ಯ ಮಹಾರಾಜ್ ಅವರೂ ಹಲವು ಬಾರಿ ನಮ್ಮ ಪರಿಹಾರ ಶಿಬಿರಗಳಿಗೆ ಬಂದಿದ್ದರು.

ಸಂಸ್ಥೆಯ ಕೆಲಸದ ಮೇಲೆ ನಾನು ಹೈದರಾಬಾದಿಗೆ ಒಮ್ಮೆ ಹೋಗಿದ್ದೆ. ನಮ್ಮ ಕಾರಿನ ಚಾಲಕನಿಗೆ ಆ ಊರಿನಲ್ಲಿ ಕೆಲವರು ಬಂಧುಗಳಿದ್ದರು. ಊಟವಾದ ಮೇಲೆ ಆತ ಅವರನ್ನು ನೋಡಲು ಹೋಗಿದ್ದ. ಅದೇ ದಿನ ಯಾವುದೋ ಅತಿಥಿಗೃಹದಲ್ಲಿ ತಂಗಿದ್ದ ವಿದೇಶೀ ಅತಿಥಿಯೊಬ್ಬರು ಮಹಾರಾಜ್ ಅವರನ್ನು ನೋಡಲು ಬಂದರು. ರಾತ್ರಿಯ ಊಟವಾದನಂತರ ಅವರನ್ನು ಅವರ ಅತಿಥಿ ಗೃಹಕ್ಕೆ ಕರೆದುಕೊಂಡು ಹೋಗಿ ಬಿಡುವುದಕ್ಕೆ ನಮ್ಮ ಕಾರನ್ನು ಕಳುಹಿಸುವಂತೆ ಮಹಾರಾಜ್ ಅವರು ನನಗೆ ಬ್ರಹ್ಮಚಾರಿಯೊಬ್ಬರ ಮೂಲಕ ಹೇಳಿಕಳುಹಿಸಿದರು. ನಮ್ಮ ಕಾರಿನ ಚಾಲಕ ತನ್ನ ಬಂಧುಗಳನ್ನು ನೋಡಲು ಹೋಗಿರುವುದಾಗಿ ನಾನು ಬ್ರಹ್ಮಚಾರಿಗೆ ಹೇಳಿದೆ. ನನಗೆ ಕಾರು ನಡೆಸಲು ಬರುತ್ತದೆ ಎಂಬುದು ಆ ಬ್ರಹ್ಮಚಾರಿಗೆ ಹೇಗೋ ಗೊತ್ತಿತ್ತು. ಮಹಾರಾಜ್ ಅವರಿಗೆ ವಿಷಯ ತಿಳಿದ ಮೇಲೆ ಅವರು 'ಮಹೇಶ್ (ನನ್ನ ಪೂರ್ವಾಶ್ರಮದ ಹೆಸರು) ಕಾರು ನಡೆಸುತ್ತಾನೆಂದರೆ, ನಾನೂ ಕಾರಿನಲ್ಲಿ ಬರುತ್ತೇನೆ. ಈ ಬೆಳದಿಂಗಳಿನಲ್ಲಿ ಹಾಗೆಯೇ ಸುತ್ತಾಡಿಕೊಂಡು ಬರೋಣ' ಎಂದರು. ಆದರೆ, ಮಹಾರಾಜ್ ಅವರು ನನ್ನ ಪಕ್ಕದಲ್ಲಿ ಕುಳಿತಿದ್ದಾಗ ವಾಹನವನ್ನು ಚಲಿಸಲು ನನಗೆ ಅಳುಕು. ಅದನ್ನು ಗಮನಿಸಿದ ಮಹಾರಾಜ್, 'ಅಂಜಿಕೊಳ್ಳಬೇಡ, ಧೈರ್ಯದಿಂದ ನಡೆಸು' ಎಂದರು. ನನಗೆ ಧೈರ್ಯ ಬಂದು ನಂತರ ಸರಾಗವಾಗಿ ಕಾರನ್ನು ನಡೆಸಿಕೊಂಡು ಹೋದೆ. ಮಹಾರಾಜ್ ಅವರನ್ನು ಕೂರಿಸಿಕೊಂಡು ನಾನು ವಾಹನವನ್ನು ನಡೆಸಿದ ಆ ಕ್ಷಣಗಳಾದರೂ ಎಂತಹ ಅದ್ಭುತವಾದವು!

## ಅವರಿಗೆ ಮುಪ್ಪು ಬರಲೇ ಇಲ್ಲ

ನಾನಾಗಲೇ ಹೇಳಿದಂತೆ, ಮಹಾರಾಜ್ ಅವರು ಎಂಬತ್ತನೆಯ ವಯಸ್ಸಿನಲ್ಲಿಯೂ ವಾಲಿಬಾಲ್ ಆಡುತ್ತಿದ್ದರು ಮತ್ತು ನೇರವಾಗಿ ನಡೆಯುತ್ತಿದ್ದರು. ನಡೆಯುವಾಗ ಬೇರೆಯವರು ತಮಗೆ ನೆರವಾಗುವುದು ಅವರಿಗೆ ಹಿಡಿಸುತ್ತಿರಲಿಲ್ಲ. ಒಮ್ಮೆ, ಪರಿಹಾರ ಶಿಬಿರವೊಂದರಲ್ಲಿ ಊಟವಾದ ನಂತರ ಅವರ ಕೈಗೆ ನೀರನ್ನು ಹಾಕುತ್ತಿದ್ದೆ. ಆ ಸಂದರ್ಭದಲ್ಲಿ ಅವರು ತಮ್ಮ ಎರಡು ಕೃತಕ ಹಲ್ಲುಗಳನ್ನು ಹೊರತೆಗೆದರು. ನಾನಾಗ, 'ಮಹಾರಾಜ್, ನೀವು ಮುದುಕರಾದಿರಿ' ಎಂದೆ. 'ಇಲ್ಲ, ನನಗೆ ವಯಸ್ಸಾಗಿಲ್ಲ' ಎಂದರು ಅವರು. ಅವರಿಗಾಗ ೭೯ ವರ್ಷವಾಗಿತ್ತು.

## ಬಡವರು ಮತ್ತು ದೀನದಲಿತರ ಬಗೆಗಿನ ಕಾಳಜಿ

ಮಹಾರಾಜ್ ಅವರು ಹೊಸ ದೆಹಲಿಯ ರಾಮಕೃಷ್ಣ ಸಂಘದ ಕಾರ್ಯದರ್ಶಿಯಾಗಿದ್ದಾಗ, ಅವರು ಅಡುಗೆಯವರು, ಮಾಲಿ ಮೊದಲಾದವರ ಸಂಗಡ ಎರಡನೆಯ ಪಂಕ್ತಿಯಲ್ಲಿ ಊಟಕ್ಕೆ ಕೂರುತ್ತಿದ್ದರು. ದೀವಿ ಸೀಮಾ ಹಳ್ಳಿಯನ್ನು ಪುನಃ ವಸತಿಗೆ ಅರ್ಹವಾಗುವಂತೆ ಕಟ್ಟಿದ ಮೇಲೆ, ಅದನ್ನು ಉದ್ಘಾಟಿಸಲು ಅವರು ಬಂದಿದ್ದರು. ದಾರಿಯಲ್ಲಿನ ಸಕ್ಕರೆ ಕಾರ್ಖಾನೆಯೊಂದರ ಅತಿಥಿಗೃಹದಲ್ಲಿ ಅವರಿಗೆ ಭೋಜನ ಹಾಗೂ

ವಿಶ್ರಾಂತಿಯ ಏರ್ಪಾಟನ್ನು ಮಾಡಲಾಗಿತ್ತು. ಅಲ್ಲಿ ಸ್ವಲ್ಪಹೊತ್ತು ವಿರಮಿಸಿದ ನಂತರ ಅಲ್ಲಿನ ನೌಕರರನ್ನು ಕುರಿತು ಮಹಾರಾಜ್ ಅವರು ಮಾತನಾಡಿದರು. ಅವರ ಮಾತು, ಕಾರ್ಖಾನೆಯ ಮಾಲೀಕರು ತಮ್ಮ ನೌಕರರನ್ನು ಹೇಗೆ ನೋಡಿಕೊಳ್ಳಬೇಕೆಂಬುದನ್ನು ಕುರಿತದ್ದಾಗಿತ್ತು.

**ಅವರು ಎಲ್ಲರಲ್ಲಿಯೂ ಒಳಿತನ್ನೇ ಕಾಣುತ್ತಿದ್ದರು**

ಆಶ್ರಮದಲ್ಲಿ ಕೆಲಸಮಾಡುತ್ತಿದ್ದ ಬಡ ಕಾರ್ಮಿಕರ ಬಗ್ಗೆ ಅವರು ಯಾವಾಗಲೂ ಗೌರವಪೂರ್ವಕವಾಗಿ ವರ್ತಿಸುತ್ತಿದ್ದುದನ್ನು ನಾನು ನೋಡಿದ್ದೇನೆ. ಸಾಮಾನ್ಯ ಜನರನ್ನು ಹೊಗಳುವುದರ ಮೂಲಕ ಅವರಲ್ಲಿ ಅಂತರ್ಗತವಾಗಿರುವ ಶಕ್ತಿಯನ್ನು ಹೊರತರಲು ಅವರು ಸರ್ವದಾ ಪ್ರಯತ್ನಿಸುತ್ತಿದ್ದರು.

ನಾವು ಕೃಷ್ಣಾ ಜಿಲ್ಲೆಯ ಅವನಿಗಡ್ಡದ ಪರಿಹಾರ ಶಿಬಿರದಲ್ಲಿದ್ದಾಗ, ಅವರು 'ಇಂತಿಂತಹ ಸಂಸ್ಥೆಯವರು ನನ್ನನ್ನು ಭಾಷಣಮಾಡಲು ಆಹ್ವಾನಿಸಿದ್ದಾರೆ. ಆದರೆ ನನಗೆ ಬಿಡುವಿಲ್ಲದಿರುವುದರಿಂದ ನನಗೆ ಹೋಗಲಾಗುವುದಿಲ್ಲ. ಭಾಷಣಮಾಡಲು ಕರೆ ಬಂದರೆ ನೀನು ಅಲ್ಲಿಗೆ ಹೋಗಲು ಆಗುವುದಿಲ್ಲ ಎನ್ನಬೇಡ' ಎಂದು ಪತ್ರ ಬರೆಯುತ್ತಿದ್ದರು. ಇದು ನನಗೆ ಕಷ್ಟವಾಗಿರುತ್ತಿದ್ದರೂ ನನಗೆ ಬೇರೆ ದಾರಿಯೇ ಇರುತ್ತಿರಲಿಲ್ಲ. ಬಹುಶಃ ಅವರು ನನ್ನಲ್ಲಿದ್ದ ಕ್ರಿಯಾಶಕ್ತಿಯನ್ನು ಉದ್ದೀಪಿಸುವ ಉದ್ದೇಶವನ್ನು ಹೊಂದಿದ್ದರು ಎಂದು ಕಾಣಿಸುತ್ತಿತ್ತು. ನಾನು ಅಷ್ಟು ಹೊತ್ತಿಗೆ 'ಸ್ಕೌಟ್ ಒಬ್ಬನ ದೃಷ್ಟಿಯಲ್ಲಿ ಸ್ವಾಮಿ ವಿವೇಕಾನಂದರು' ಎಂಬ ಪುಸ್ತಕವನ್ನು ಬರೆದಿದ್ದು, ಅದು ನರೇಂದ್ರಪುರದ ರಾಮಕೃಷ್ಣ ಸಂಸ್ಥೆಯ ವತಿಯಿಂದ ಪ್ರಕಟವಾಗಿತ್ತು. ಅಂಜಿಕೆಯಿಂದಲೇ ಮಹಾರಾಜ್ ಅವರಿಗೆ ಒಂದು ಪ್ರತಿಯನ್ನು ಕೊಟ್ಟು ಆಶೀರ್ವಾದವನ್ನು ಬೇಡಿದ್ದೆ. ಮರುದಿನ ಅವರ ಕೋಣೆಗೆ ಹೋದಾಗ, ಅವರು 'ನಿನ್ನ ಪುಸ್ತಕವನ್ನು ನಾನು ಪೂರ್ಣವಾಗಿ ನೋಡಿದೆ. ಅದೊಂದು ಒಳ್ಳೆಯ ಪುಸ್ತಕ'ಎಂದಿದ್ದರು.

ಮತ್ತೊಂದು ಸಂದರ್ಭದಲ್ಲಿ, ನಾನು ಬೇಲೂರು ಮಠದಲ್ಲಿ ಅವರ ಕಾಲನ್ನು ಒತ್ತುತ್ತಾ ಇದ್ದೆ. ನಾನು 'ರಾಮಚರಿತಮಾನಸ'ದ ಮಾದರಿಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಜೀವನವನ್ನು ಕುರಿತು 'ಚೌಪಾಈ' ಮತ್ತು 'ದೋಹಾ'ಗಳನ್ನು ರಚಿಸಿದ್ದೇನೆಂದು ಯಾರೋ ಅವರಿಗೆ ಹೇಳಿದರು. ಮಹಾರಾಜ್ ಅವರು ಅವನ್ನು ಹಾಡಲು ಹೇಳಿದರು. ನಾನು ಹಾಡುತ್ತಿದ್ದಾಗ, ಮಹಾರಾಜ್ ಅವರು ತಮ್ಮ ಕೈಗಳಿಂದ ತಮ್ಮ ಹೊಟ್ಟೆಯ ಮೇಲೆ ತಾಳ ತಟ್ಟುತ್ತಿದ್ದರು. ನಂತರ ಅವರು 'ಚೆನ್ನಾಗಿದೆ. ಯಾವಾಗಲೂ ಶ್ರೀ ಶ್ರೀ ರಾಮಕೃಷ್ಣ ಲೀಲಾಪ್ರಸಂಗದಲ್ಲಿರುವುದನ್ನೇ ಅನುಸರಿಸು. ಏಕೆಂದರೆ, ಅದರಲ್ಲಿರುವ ಪ್ರಸಂಗಗಳು ವಿಶ್ವಾಸಾರ್ಹವಾದವು' ಎಂದರು. ಇಂತಹ ಸಣ್ಣ ಸಣ್ಣ ಪ್ರಯತ್ನಗಳನ್ನೂ ಮಹಾರಾಜ್ ಅವರು ಅದೆಷ್ಟು ಸೂಕ್ಷ್ಮವಾಗಿ ಗಮನಿಸುತ್ತಿದ್ದರು ಎಂಬುದನ್ನು ನೋಡಿ ನನಗೆ ಆಶ್ಚರ್ಯವಾಯಿತು.

ಪೂಜ್ಯ ಸ್ವಾಮಿ ರಂಗನಾಥಾನಂದರು ಒಮ್ಮೆ ರಾಮಕೃಷ್ಣ ಅದ್ಭುತಾನಂದ ಆಶ್ರಮವನ್ನು ಉದ್ಘಾಟಿಸಲು ಛಾಪ್ರಾಗೆ ಹೋಗಿದ್ದರು. ಆ ಸಮಾರಂಭದಲ್ಲಿ ಒಂದು ದಿನ ನಾನು ರಾಮಚರಿತಮಾನಸದ ಮೇಲೆ ಭಾಷಣವನ್ನು ಮಾಡಿದೆ. ನಾನು ಭಾಷಣ ಮಾಡುವುದಕ್ಕೆಂದು ವೇದಿಕೆಯ ಮೇಲೆ ಹೋದಾಗ, ಮಹಾರಾಜ್ ಅವರು ಬಂದು ಮೊದಲ ಸಾಲಿನಲ್ಲಿ ಶ್ರೋತೃಗಳ ನಡುವೆ ಕುಳಿತರು. ಸುಮಾರು ಒಂದೂವರೆ ಗಂಟೆಗಳ ಕಾಲ ಕುಳಿತು ನನ್ನ ಭಾಷಣವನ್ನು ಕಡೆಯವರೆಗೂ ಆಲಿಸಿದರು. ನಾನು ಅವರ ಕೋಣೆಗೆ ಹೋದಾಗ ಅವರು ಯಾರೊಡನೆಯೋ ಹೇಳುತ್ತಿದ್ದರು: 'ಹೌದು, ಅದೇ 'ರಾಮಚರಿತಮಾನಸ'ವನ್ನು ವ್ಯಾಖ್ಯಾನ ಮಾಡುವ ಸರಿಯಾದ ರೀತಿ.' ನಂತರ ನನ್ನತ್ತ ನೋಡಿ, 'ಹೀಗೆಯೇ ಮುಂದುವರಿಸು' ಎಂದು ಪ್ರೀತಿಯಿಂದ ಹೇಳಿ ಪ್ರೋತ್ಸಾಹಿಸಿದರು.

## ಬೇಲೂರು ಮಠದಲ್ಲಿ

ಆಂಧ್ರ ಪ್ರದೇಶದಲ್ಲಿನ ಪರಿಹಾರ ಕಾರ್ಯಕ್ರಮ ಮುಗಿದ ನಂತರ ನಾನು ಬೇಲೂರು ಮಠಕ್ಕೆ ಹಿಂದಿರುಗಿದೆ. ನನಗೆ ಅಲ್ಲಿ ಪರಿಹಾರ ಕೇಂದ್ರದ ಕಚೇರಿಯಲ್ಲಿ ರುವಂತೆ ನೇಮಿಸಿದರು. ನಂತರ ನಾವು 'ಪಲ್ಲಿಮಂಗಲ್' ಎಂಬ ಹೆಸರಿನಡಿಯಲ್ಲಿ ಸಮಗ್ರ ಗ್ರಾಮೀಣಾಭಿವೃದ್ಧಿಯ ಯೋಜನೆಯನ್ನು ಆರಂಭಿಸಿದೆವು. ಪೂಜ್ಯ ಸ್ವಾಮಿ ವೀರೇಶ್ವರಾನಂದ ಮಹಾರಾಜ್, ಸ್ವಾಮಿ ಆತ್ಮಸ್ಥಾನಂದ ಮಹಾರಾಜ್ ಅವರಂತೆಯೇ, ಸ್ವಾಮಿ ರಂಗನಾಥಾನಂದ ಅವರೂ ಈ ಯೋಜನೆಯ ಬಗ್ಗೆ ಬಹಳ ಉತ್ಸುಕ ರಾಗಿದ್ದರು. ಹೈದರಾಬಾದಿನಿಂದ ಅಲ್ಲಿಗೆ ಬಂದಾಗಲೆಲ್ಲಾ, ಅವರು ಪಲ್ಲಿಮಂಗಲ್ ಯೋಜನೆಯ ಬಗ್ಗೆ ವಿಚಾರಿಸುತ್ತಿದ್ದರು.

ಬಹುಶಃ ೧೯೮೦ರಲ್ಲಿರಬಹುದು, ಎಲ್ಲ ಮಠಗಳ ಮತ್ತು ಸಂಸ್ಥೆಗಳ ಮುಖ್ಯಸ್ಥರ ಸಭೆಗೆ ಬಂದಿದ್ದವರಲ್ಲಿ ಬಹುಪಾಲು ಮುಖ್ಯಸ್ಥರು ಕಾಮಾರ್‌ಪುಕುರ್ ಮತ್ತು ಜಯರಾಂಬಾಟಿಗಳಿಗೆ ಭೇಟಿಯಿತ್ತರು. ಅವರು ಅಲ್ಲಿ ಪಲ್ಲಿಮಂಗಲ್‌ನ ಚಟುವಟಿಕೆಗಳನ್ನು ನೋಡಿದರು. ಬಾಲಿದೇವನ್‌ಗಂಜ್‌ನಲ್ಲಿ ಪೂಜ್ಯ ರಂಗನಾಥಾನಂದರು ಊದುಬತ್ತಿ ಮತ್ತು ಸೆಣಬಿನ ವಸ್ತುಗಳನ್ನು ಮಾಡುವ ಯೋಜನೆಯನ್ನು ಉದ್ಘಾಟಿಸಿದರು. ಅದೊಂದು ಸಣ್ಣ ಪ್ರಮಾಣದ ಆರಂಭವಾಗಿದ್ದರೂ, ಅವರು ಅದರ ಬಗ್ಗೆ ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ನಾವು ಕಾಮಾರ್‌ಪುಕುರ್ ಮತ್ತು ಜಯರಾಂಬಾಟಿಯ ಮಹಿಳೆಯರಿಗಾಗಿ ಊದುಬತ್ತಿ ಮಾಡುವುದು, ನೇಯುವುದು, ಬೇಕರಿ ಮತ್ತು ಜೇನುಸಾಕಣೆ ಇತ್ಯಾದಿ ಕೆಲಸಗಳನ್ನು ನಡೆಸುತ್ತಿದ್ದೇವೆಂದು ತಿಳಿದಾಗ ಅವರು, ನನಗೆ ಅಲ್ಲಿನ ಮನೆಗಳಿಗೆ ಶೌಚಾಲಯಗಳನ್ನು ಕಟ್ಟಿಕೊಡುವಂತೆ ಹೇಳಿ, ಅದಕ್ಕೆ ಅಗತ್ಯವಾದ ಹಣವನ್ನು ತಾವು ಕೂಡಿಸುವುದಾಗಿ ಭರವಸೆಗಳನ್ನು ಕೊಟ್ಟರು. ಹಾಗೆಯೇ, ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಬಾಪಟ್ಲಾದಲ್ಲಿ ಚಂಡಮಾರುತದಲ್ಲಿ ಹಾನಿಗೊಳಗಾದವರಿಗಾಗಿ ೧೦೦ ಮನೆಗಳನ್ನು ಕಟ್ಟಿಕೊಟ್ಟಾಗ ಮಹಾರಾಜ್ ಅವರು 'ಅಲ್ಲಿನ ಪ್ರತಿಯೊಂದು ಮನೆಗೂ ಶೌಚಾಲಯವಿರಬೇಕು' ಎಂಬ ಷರತ್ತನ್ನು ಹಾಕಿ ನಮಗೆ ಧನಸಹಾಯ ಮಾಡಿದರು. ಅವರು ಹಾಸ್ಯವಾಗಿ ಹೇಳುತ್ತಿದ್ದರು: "ಪಶ್ಚಿಮದಲ್ಲಿ ಜನರು ಹೊರಗೆ ತಿನ್ನುತ್ತಾರೆ, ಶೌಚಾಲಯವನ್ನು ಖಾಸಗಿಯಾಗಿ ಉಪಯೋಗಿಸುತ್ತಾರೆ. ಆದರೆ ಭಾರತದಲ್ಲಿ ಜನರು ತಿನ್ನುವುದು ಮನೆಯ ಒಳಗೆ, ಆದರೆ ಉಪಯೋಗಿಸುವುದು ಬಯಲು ಶೌಚಾಲಯವನ್ನು."

## ಬಾಪಟ್ಲಾದಲ್ಲಿ

ಸ್ವಾಮಿ ರಂಗನಾಥಾನಂದರು ತಾವು ಹೈದರಾಬಾದಿನಿಂದ ಬಾಪಟ್ಲಾಗೆ ಹೋಗುತ್ತಿರುವುದಾಗಿಯೂ, ನಾನು ಅವರನ್ನು ವಿಜಯವಾಡದಲ್ಲಿ ಭೇಟಿಮಾಡಿ ಅವರನ್ನು ಬಾಪಟ್ಲಾಗೆ ಹೋಗುವ ರೈಲಿನಲ್ಲಿ ಕೂಡಿಸಬೇಕೆಂದೂ ಅವರು ನನಗೆ ಒಂದು ಸಂದೇಶವನ್ನು ಕಳುಹಿಸಿದರು. ನಾನು ನಮ್ಮ ಪರಿಹಾರ ಶಿಬಿರದಿಂದ, ವಿಜಯವಾಡಕ್ಕೆ ಹೋಗಿ ಅಲ್ಲಿನ ಕೆಲವು ಭಕ್ತರೊಂದಿಗೆ ವಿಜಯವಾಡ ರೈಲ್ವೆ ನಿಲ್ದಾಣಕ್ಕೆ ಹೋದೆ. ನಾವು ಮಹಾರಾಜ್ ಅವರನ್ನು ಬರಮಾಡಿಕೊಂಡು ನಂತರ ಬಾಪಟ್ಲಾಕ್ಕೆ ಹೋಗುವ ರೈಲಿನಲ್ಲಿ ಕೂರಿಸಿದೆವು. ರೈಲು ಇನ್ನೇನು ಹೊರಡುವಾಗ ನಾನು ಮಹಾರಾಜ್ ಅವರನ್ನು ಬೀಳ್ಕೊಡುವ ಸಂದರ್ಭದಲ್ಲಿ, 'ನೀನೆಲ್ಲಿಗೆ ಹೊರಟೆ? ನೀನೂ ನನ್ನೊಂದಿಗೆ ಬಾಪಟ್ಲಾಗೆ ಬರಬೇಕು' ಎಂದರು. ನಾನು ನಮ್ಮ ಕಾರನ್ನು ತಂದಿದ್ದೇನೆಂದೂ, ಮತ್ತೆ ಶಿಬಿರಕ್ಕೆ ಹೋಗಬೇಕೆಂದೂ, ಅಲ್ಲಿ ನನಗೆ ಕಾಯುತ್ತಿರುತ್ತಾರೆಂದು ಹೇಳಿದರೂ ಕೇಳದೆ ಅವರು ನಾನು ಬರಲೇಬೇಕೆಂದು ಹಠ ಹಿಡಿದರು. ನಾನು ಟಿಕೆಟ್ ಕೊಂಡಿಲ್ಲವೆಂದು ಹೇಳಿದಾಗ, ಅಲ್ಲಿದ್ದ ಟಿಕೆಟ್ ಕಲೆಕ್ಟರನ್ನು ಕರೆದು, ನನಗೆ ಒಂದು ಟಿಕೆಟ್ ತಂದುಕೊಡುವಂತೆ ಹೇಳಿ ತರಿಸಿಕೊಂಡರು. ನಾನು ಪ್ರಯಾಣಕ್ಕೆ ಬೇಕಾದ ಸಿದ್ಧತೆಯನ್ನು

ಮಾಡಿಕೊಂಡಿರಲಿಲ್ಲ. ಆದರೇನು ಮಾಡುವುದು? ಕಾರನ್ನು ವಿಜಯವಾಡದ ಆಶ್ರಮಕ್ಕೆ ತೆಗೆದುಕೊಂಡು ಹೋಗುವಂತೆ ಹೇಳಿ ನಾನು ಮಹಾರಾಜ್ ಅವರೊಡನೆ ಹೊರಟೆ.

ಬಾಪತ್ಲಾ ರೈಲುನಿಲ್ದಾಣದಲ್ಲಿ ಮಹಾರಾಜ್ ಅವರನ್ನು ನೂರಾರು ಭಕ್ತರು ಅತ್ಯಂತ ಆನಂದದಿಂದ ಎದುರುಗೊಂಡರು. ನಿಲ್ದಾಣದ ಹೊರಗೆ ಅವರಿಗೆ ಹೂಮಾಲೆಯನ್ನು ಹಾಕಿ ತೆರೆದ ವಾಹನದಲ್ಲಿ ಅವರನ್ನು ಕರೆದುಕೊಂಡುಹೋದರು. ಮಹಾರಾಜ್ ಅವರು ವಾಹನದಲ್ಲಿ ನಿಂತುಕೊಂಡು ರಸ್ತೆಯ ಇಬ್ಬದಿಯಲ್ಲಿಯೂ ನಿಂತಿದ್ದ ಜನರ ಅಭಿಮಾನಪೂರ್ವಕ ಸ್ವಾಗತವನ್ನು ಸ್ವೀಕರಿಸುತ್ತಾ ಮುನ್ನಡೆದರು. ಕೆಲವೆಡೆಗಳಲ್ಲಿ ವಾಹನವನ್ನು ನಿಲ್ಲಿಸಿ, ಮಹಾರಾಜರಿಗೆ ವಂದನೆ ಸಲ್ಲಿಸಿ ಜನರು ಆರತಿಯನ್ನು ಬೆಳಗಿದರು. ಅದೊಂದು ಸುಂದರ ಮೆರವಣಿಗೆಯಾಗಿತ್ತು. ಈ ಅದ್ಭುತವಾದ ದೃಶ್ಯವನ್ನು ನಾನು ಆನಂದದಿಂದ ಅನುಭವಿಸುತ್ತಿದ್ದೆ. ನಂತರ ಮಹಾರಾಜ್ ಅವರು ಬಾಪತ್ಲಾದ ಪ್ರಖ್ಯಾತ ದೇವಸ್ಥಾನಕ್ಕೆ ಭೇಟಿಯಿತ್ತು, ಚಂಡಮಾರುತದಿಂದ ಹಾನಿಗೊಳಗಾದವರಿಗಾಗಿ ಕಟ್ಟಿಕೊಟ್ಟಿದ್ದ ಮನೆಗಳನ್ನು ಉದ್ಘಾಟಿಸಿದರು.

**ಉಪಾಧ್ಯಕ್ಷರಾಗಿ**

ರಾಮಕೃಷ್ಣ ಮಠ ಮತ್ತು ಸಂಘದ ಉಪಾಧ್ಯಕ್ಷರಾದ ಮೇಲೂ ಅವರು ದೀಕ್ಷೆಯನ್ನು ನೀಡಲು ಹಿಂಜರಿಯುತ್ತಿದ್ದರು. ಬಹಳ ಕಾಲದವರೆಗೆ ಅವರು ದೀಕ್ಷೆಯನ್ನು ನೀಡಲು ಸಿದ್ಧರಾಗಿರಲಿಲ್ಲ. ಕೆಲವು ದಿನಗಳ ನಂತರ ಅವರು ಅಸ್ವಸ್ಥರಾಗಿ ಆಸ್ಪತ್ರೆಯನ್ನು ಸೇರಬೇಕಾಯಿತು. ಅವರು ಆಸ್ಪತ್ರೆಯಿಂದ ಬಂದಮೇಲೆ, ಬೇಲೂರು ಮಠದ ಆರೋಗ್ಯ ಭವನದಲ್ಲಿದ್ದಾಗ ನಾನು ಅವರನ್ನು ನೋಡಲು ಹೋದೆ. ಅವರು ತುಂಬಾ ಸಂತೋಷಗೊಂಡಿದ್ದರು ಮತ್ತು ಅವರ ಮುಖದಲ್ಲಿ ತೇಜಸ್ಸು ಇತ್ತು. ನನ್ನನ್ನು ನೋಡಿದೊಡನೆಯೇ ಅವರು ಮಗುವಿನಂತೆ 'ನಿನಗೆ ಪಾರ್ಥ (ಅವರ ಸೇವಕ) ಹೇಳಿದನೇ? ನಾನು ಕಾಸಿಪೋರ್ ಉದ್ಯಂಬಾಟಿಯಲ್ಲಿ ದೀಕ್ಷೆ ಕೊಡುತ್ತೇನೆ' ಎಂದರು. ಇತ್ತೀಚಿನವರೆಗೂ ತಾವು ದೀಕ್ಷೆಯನ್ನು ಕೊಡುವುದಿಲ್ಲವೆನ್ನುತ್ತಿದ್ದ ಅವರು, ಈಗ ದೀಕ್ಷೆಯನ್ನು ಕೊಡುತ್ತೇನೆ ಎಂದು ಉತ್ಸಾಹದಿಂದ ಹೇಳುತ್ತಾ ಇರುವುದನ್ನು ನೋಡಿ ನನಗೆ ಅತ್ಯಾಶ್ಚರ್ಯವಾಯಿತು. ಶ್ರೀ ಶ್ರೀ ಪರಮಹಂಸರು ಈ ಕಾರ್ಯಕ್ಕಾಗಿ ಅವರನ್ನು ಆಯ್ದುಕೊಂಡಿದ್ದಾರೆಂಬುದರಿಂದಲೇ ಈ ಬದಲಾವಣೆ ಅವರಲ್ಲಿ ಬಂದಿದೆ ಎಂಬುದು ನನಗೆ ಗೊತ್ತಾಯಿತು.

ಅವರು ಉಪಾಧ್ಯಕ್ಷರಾದ ಮೇಲೆ ನನಗೆ ಅವರನ್ನು ಭೇಟಿಮಾಡುವ ಅವಕಾಶ ಕಡಿಮೆಯಾಯಿತು. ಯಾವುದಾದರೂ ಕಾರಣಗಳನ್ನು ಹೇಳಿ, ಅವರ ಸಹಾಯಕರು ಮತ್ತು ಬ್ರಹ್ಮಚಾರಿಗಳು ನನ್ನ ಭೇಟಿಯನ್ನು ತಡೆಯುತ್ತಿದ್ದರು. ಜಯರಾಂಬಾಟಿಯಲ್ಲಿ ಒಂದು ದಿನ, ಅಲ್ಲಿದ್ದ ಬ್ರಹ್ಮಚಾರಿಯನ್ನು ಲಕ್ಷಿಸದೆ ನಾನು ಅವರು ಕೋಣೆಯೊಳಕ್ಕೆ ಹೋಗಿ, ದೂರು ಹೇಳುವ ರೀತಿಯಲ್ಲಿ ಹೇಳಿದೆ, 'ಮಹಾರಾಜ್, ನೀವು ಉಪಾಧ್ಯಕ್ಷರಾದ ಮೇಲೆ ನನ್ನಿಂದ ದೂರ ಹೋಗಿದ್ದೀರಿ. ಈಗ ನಿಮ್ಮನ್ನು ನೋಡಲು ಬಂದರೆ ಹೊರಗೆ ಕಾಯ್ದು ಅನುಮತಿಯನ್ನು ಪಡೆದು ಬರಬೇಕು.' ಅಷ್ಟರಲ್ಲಿ ಅಲ್ಲಿಗೆ ಅವರ ಸಹಾಯಕ ಒಳಕ್ಕೆ ಬಂದ. ಅವನನ್ನು ಕುರಿತು ಸ್ವಾಮಿ ರಂಗನಾಥಾನಂದರು (ನಮ್ಮ ನಡುವಿನ ದೂರವನ್ನು ಅಳೆಯುವುದಕ್ಕೇನೋ ಎಂಬಂತೆ) ತಾವು ಜಪಾನಿನಿಂದ ತಂದಿದ್ದ ಅಳತೆಯ ಟೇಪನ್ನು ತರುವಂತೆ ಹೇಳಿದರು.

**ಅಧ್ಯಕ್ಷರಾಗಿ**

ಅವರು ಅಧ್ಯಕ್ಷರಾದಮೇಲಂತೂ ಅವರನ್ನು ನೋಡುವುದು, ಪ್ರಣಾಮ ಮಾಡುವ ಸಮಯವನ್ನು ಹೊರತುಪಡಿಸಿ, ಬಹಳ ದುಸ್ತರವಾಗುತ್ತಿತ್ತು. ಕೆಲವು ಬುಡಕಟ್ಟು ಜನಾಂಗಗಳ ಸೇವೆಯನ್ನು ಮಾಡುವುದಕ್ಕಾಗಿ

ನನ್ನನ್ನು ೧೯೯೭ರಲ್ಲಿ ರಾಂಚಿಯ ಮೋರಾಬಾಡಿಗೆ ಕಳುಹಿಸಿದರು. ನಾನು ಬೇಲೂರು ಮಠಕ್ಕೆ ಹೋದಾಗಲೆಲ್ಲಾ ಅವರು ಮೋರಾಬಾಡಿನ ಹಿಂದುಳಿದ ಜನಾಂಗಗಳ ಬಗ್ಗೆ, ಅಲ್ಲಿ ನಮ್ಮ ಚಟುವಟಿಕೆಗಳ ಬಗ್ಗೆ ಕೇಳುತ್ತಿದ್ದರು. 'ಮಹಾರಾಜ್, ಜಾರ್‌ಖಂಡ್‌ನ ಜನರಿಗೆ ಏನಾದರೂ ಸಂದೇಶವಿದೆಯೇ?' ಎಂದ ತಕ್ಷಣ ಅವರು, 'ನಾನೊಬ್ಬ ಬುಡಕಟ್ಟು ಜನಾಂಗಕ್ಕೆ ಸೇರಿದವನು' ಎಂದಾಗ ಅಲ್ಲಿದ್ದವರೆಲ್ಲಾ ನಕ್ಕಿದ್ದೂ ನಕ್ಕಿದ್ದೇ.

**ಕೊನೆಯ ಸಂದೇಶ**

೨೦೦೫ರ ಫೆಬ್ರವರಿಯ ಎರಡನೆಯ ವಾರದಲ್ಲಿ ನನಗೆ ಪೂಜ್ಯ ಮಹಾರಾಜ್ ಅವರಿಂದ ಒಂದು ತುರ್ತು ಕರೆ ಬಂದಿತು. ಅದು ನನ್ನ ಕಲ್ಪನೆಗೂ ಮೀರಿದುದಾಗಿತ್ತು. ಆದರೆ, ಅದು ವಾಸ್ತವ. ನನಗೆ ಅವರ ಧ್ವನಿಯನ್ನು ಕೇಳಿ ರೋಮಾಂಚನವಾಯಿತು. 'ಮಹೇಶ್' ಎಂದಿತು ಅವರ ಧ್ವನಿ. 'ಹೇಳಿ ಮಹಾರಾಜ್' ಎಂದೆ. ಅವರು ಕೇಳಿದರು. 'ನೀನು ಹಳ್ಳಿಗಳಿಗೆ ಹೋಗುತ್ತಿದ್ದೀಯಾ? ಬುಡಕಟ್ಟು ಜನಗಳೊಡನೆ ಬೆರೆತು ಕೆಲಸಗಳನ್ನು ನಿರ್ವಹಿಸುತ್ತಿದ್ದೀಯಾ?' 'ಹೌದು, ಮಹಾರಾಜ್' ಎಂದೆ. 'ಹಾಗಿದ್ದರೆ ಅವರಿಗೆ ಭಗವದ್ಗೀತೆಯ ಸಂದೇಶಗಳನ್ನು ಮುಟ್ಟಿಸು. ಜಾತೀಯತೆ ಮತ್ತು ಅಸ್ಪೃಶ್ಯತೆಯನ್ನು ತೊಡೆದುಹಾಕಬೇಕು. ತಿಳಿಯಿತೇ?' ಎಂದರು. ನಾನು ಸರಿಯೆಂದೆ. 'ನೀನಿದನ್ನು ಮಾಡುತ್ತೀಯಾ?' ಮತ್ತೆ ಕೇಳಿದರು. 'ನಿಮ್ಮ ಆಶೀರ್ವಾದದೊಂದಿಗೆ ನಾನು ಇದನ್ನು ಖಂಡಿತವಾಗಿಯೂ ನನ್ನ ಕೈಲಾದ ಮಟ್ಟಿಗೆ ಮಾಡುತ್ತೇನೆ' ಎಂದೆ. ಅವರು 'ನೀನು ಮಾಡಲೇಬೇಕು' ಎಂದರು.

* * * *

## ೨೩. ನಾವು ಅವರ ಸಮಾನರು ಎಂಬಂತೆ

–ಸ್ವಾಮಿ ನಿಃಸ್ವಾನಂದ*

೧೯೮೧ರಿಂದ ೧೯೮೫ರವರೆಗೆ ನಾಲ್ಕು ವರ್ಷಗಳ ಕಾಲ ನಾನು ದೆಹಲಿಯ ರಾಮಕೃಷ್ಣ ಸಂಸ್ಥೆಯ ಮುಖ್ಯಸ್ಥನಾಗಿದ್ದೆ. ಆಗ ಐದು ದಿನಗಳ ಉಪನ್ಯಾಸ ಕಾರ್ಯಕ್ರಮಕ್ಕಾಗಿ ಪ್ರತಿ ವರ್ಷವೂ ಸ್ವಾಮಿರಂಗನಾಥಾನಂದ ಮಹಾರಾಜ್ ಅವರು ದೆಹಲಿಗೆ ಬರುತ್ತಿದ್ದರು. ಹಾಗೆ ಬಂದಾಗ ಅವರು 'ಭಾಗವತ'ದ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಅಲ್ಲಿನ ಸಂಸ್ಥೆಯ ಮುಖ್ಯಸ್ಥನಾಗಿ ನಾನು ಅವರಿಗೆ ಕಾರ್ಯಕ್ರಮದ ಕೊನೆಯಲ್ಲಿ ನಮ್ಮ ವಂದನೆಗಳನ್ನು ಸಲ್ಲಿಸಬೇಕಾಗಿತ್ತು. ಒಂದು ದಿನ, ಉಪನ್ಯಾಸ ಮುಗಿದ ಮೇಲೆ ನಾನು, ಕ್ರಿಶ್ಚಿಯನ್ ಸಂತರೊಬ್ಬರನ್ನು ಉದ್ಧರಿಸಿ, 'ಭಗವಂತ! ನೀನು ನಮಗೆ ಇಷ್ಟೆಲ್ಲಾ ಕೊಟ್ಟಿದ್ದೀಯೆ. ನಾನು ನಿನಗೆ ಹೇಗೆ ತಾನೆ ಕೃತಜ್ಞತೆಯನ್ನು ಅರ್ಪಿಸಲಿ? ನನ್ನ ಪರವಾಗಿ ನಿನಗೆ ನೀನೇ ಕೃತಜ್ಞತೆಯನ್ನು ಅರ್ಪಿಸಿಕೊ' ಎಂದು ಹೇಳಿ ಅವರಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿದೆ. ಅವರು ನನ್ನ ಬೆನ್ನು ತಟ್ಟಿದರು. ಆ ದೃಶ್ಯವನ್ನು ನೋಡಿ ಎಲ್ಲರಿಗೂ ಸಂತೋಷವಾಯಿತು.

ಅವರಲ್ಲಿನ ಒಂದು ಎದ್ದುಕಾಣುತ್ತಿದ್ದ ಗುಣವೆಂದರೆ, ಎಲ್ಲರನ್ನೂ ಸಮಾನವಾಗಿ ಕಾಣುವುದು. ಅವರು ಇಂದಿರಾಗಾಂಧಿಯವರನ್ನು ಹೇಗೆ ನೋಡುತ್ತಿದ್ದರೋ ಅದೇ ದೃಷ್ಟಿಯಿಂದಲೇ ಅಂಚೆಮಾಸ್ತರರನ್ನೂ ನೋಡುತ್ತಿದ್ದರು. ಅವರಿಬ್ಬರನ್ನೂ ಅವರು ಬರಮಾಡಿಕೊಳ್ಳುತ್ತಿದ್ದುದು ಅದೇ ಕೋಣೆಯಲ್ಲಿ, ಅದೇ ಆದರದಿಂದ. ಈ ಸಮಾನತೆಯನ್ನೇ 'ಗೀತೆ'ಯಲ್ಲಿ (೨.೪೮) "ಸಮತ್ವಂ ಯೋಗಮುಚ್ಯತೇ" ಎಂದು ಹೇಳಿರುವುದು. ಅಂತಹ ದೃಷ್ಟಿ ಕೇವಲ ಬ್ರಹ್ಮವನ್ನು ತಿಳಿದವರಿಗೆ ಮಾತ್ರ ಸಾಧ್ಯ. ಅಂತಹವರು ಮಾತ್ರ ಜನಗಳ ಜೊತೆ ಈ ರೀತಿ ನಡೆದುಕೊಳ್ಳಲು ಶಕ್ತರಾಗುತ್ತಾರೆ.

ನಾನು ಅವರ ಪ್ರೀತಿಯನ್ನು ಅನುಭವಿಸಿದೆ. ಅವರು ನಮ್ಮನ್ನು ತಮ್ಮ ಸಮಾನರೆಂದೇ ಭಾವಿಸಿ ನಡೆದುಕೊಳ್ಳುತ್ತಿದ್ದರು. ಅದು ಅವರಲ್ಲಿದ್ದ ವಿಶೇಷ ಗುಣ. ಸಾಮಾನ್ಯವಾಗಿ ನಾವು ಹಿರಿಯ ಸ್ವಾಮಿಗಳ ಹತ್ತಿರಕ್ಕೆ ಹೋಗದೆ ಗೌರವದಿಂದ ದೂರದಲ್ಲಿಯೇ ಇರುತ್ತೇವೆ. ಆದರೆ ಸ್ವಾಮಿ ರಂಗನಾಥಾನಂದ ಅವರ ಬಳಿ ಹಾಗಿರುವುದು ಕಷ್ಟವಾಗಿರುತ್ತಿತ್ತು. ನಾವು ತ್ರಿಶೂರಿನಲ್ಲಿ ಅವರ ಬಂಧುಗಳ ಮನೆಗೂ ಹೋಗಿದ್ದೆವು.

* * * *

---

* ಕೇರಳದ ನೆಟ್ಟಾಯಮ್‌ನಲ್ಲಿನ ರಾಮಕೃಷ್ಣಾಶ್ರಮದ ಹಿರಿಯ ಸಂನ್ಯಾಸಿ

# ೨೪. ಅವರು ಬ್ರಹ್ಮಜ್ಞಾನಿಗಳು ಎಂಬುದನ್ನು ಅರಿತುಕೊಳ್ಳಿ

–ಸ್ವಾಮಿ ವೇದಪುರುಷಾನಂದ*

ಮಹಾತ್ಮರ ಸಹವಾಸ ದೊರಕುವುದು ಬಹಳ ಕಷ್ಟ, ದುರವಗಾಹ್ಯ; ಆದರೆ, ಅವರ ಅನುಗ್ರಹದಿಂದ ಮಾತ್ರ ಲಭ್ಯವಾಗುವ ಸಹವಾಸ ಬಹಳ ಫಲಕಾರಿಯಾಗಿರುತ್ತದೆ ಎಂದು ಶಾಸ್ತ್ರಗಳು ಹೇಳುತ್ತವೆ. ೧೯೯೮ರಲ್ಲಿ ನಾನು ಈ ಪಂಥಕ್ಕೆ ಸೇರಿದ ನಂತರದ ಕೆಲವೇ ತಿಂಗಳಲ್ಲಿಯೇ ಪೂಜ್ಯ ಸ್ವಾಮಿ ರಂಗನಾಥಾನಂದ ಮಹಾರಾಜ್ ಅವರ ಸೇವೆಗೆ ನನ್ನನ್ನು ನೇಮಿಸಿದಾಗ ನನಗೆ ಈ ಹೇಳಿಕೆಯಲ್ಲಿನ ಸತ್ಯದ ಅನುಭವವಾಯಿತು. ಮಹಾರಾಜ್ ಅವರು ಆಗ ವುಡ್‌ಲ್ಯಾಂಡ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದರು. ಪೂಜ್ಯ ಮಹಾರಾಜ್ ಅವರ ಬಳಿಗೆ ನನ್ನನ್ನು ಕರೆದುಕೊಂಡು ಹೋದ ಸುದರ್ಶನ್ ಮಹಾರಾಜ್ ಅವರು (ಸ್ವಾಮಿ ಅಸೀಮಾತ್ಮಾ ನಂದರು) "ಮಹಾಕಾರ್ಯದರ್ಶಿ ಮಹಾರಾಜ್ ಅವರು ಈ ಹುಡುಗನನ್ನು ತಮ್ಮ ಸೇವೆಗೆಂದು ಕಳುಹಿಸಿದ್ದಾರೆ" ಎಂದು ನನ್ನನ್ನು ಪರಿಚಯಮಾಡಿಸಿದರು. ತಕ್ಷಣವೇ ಬಂದ ಮಹಾರಾಜರ ನಿಷ್ಠುರದ ಮಾತು 'ಏಕೆ? ಅದರ ಅಗತ್ಯವೇನಿತ್ತು? ನಿನಗೆ ನಿಭಾಯಿಸಲಾಗುವುದಿಲ್ಲವೇ?' ತಕ್ಷಣವೇ ನನ್ನನ್ನು ಮಹಾರಾಜರು ಹಿಂದಕ್ಕೆ ಕಳುಹಿಸಬಹುದೆಂದು ನಾನು ಅಂಜಿದೆ. ಅಂತಹ ಮಹಾತ್ಮರನ್ನು ಸೇವಿಸುವುದು ಅಷ್ಟು ಸುಲಭದ ಕೆಲಸವಲ್ಲವೆಂಬುದನ್ನು ನಾನು ಆಗ ಅರಿತುಕೊಂಡೆ.

ವುಡ್‌ಲ್ಯಾಂಡ್ಸ್ ಆಸ್ಪತ್ರೆಯಲ್ಲಿನ ಹಾಸಿಗೆಯಲ್ಲಿ ಮಲಗಿದ್ದ ಮಹಾರಾಜ್ ಅವರು ತಮ್ಮ ಕೈಕಾಲುಗಳನ್ನು ಚಲಿಸಲೂ ಆಗದಷ್ಟು ನಿಶ್ಶಕ್ತಿಯಿಂದ ಬಳಲುತ್ತಾ ಮಲಗಿದ್ದರು. ಈಶಾನ್ಯದ ಒಂದು ರಾಜ್ಯದ ರಾಜ್ಯಪಾಲರು ಅವರನ್ನು ನೋಡಲು ಬಂದರು. ಮಹಾರಾಜ್ ಅವರು ರಾಜ್ಯಪಾಲರಿಗೆ ಜನಸೇವೆ ಮಾಡಲು ಹೇಳಿದರು. ಅದಕ್ಕೆ ಆ ರಾಜ್ಯಪಾಲರು ತಮ್ಮ ಕೆಲಸಗಳಿಗೆ ಸ್ವಾಮೀಜಿಯವರ ಕೃತಿಗಳೇ ಸ್ಫೂರ್ತಿ ಎಂದು ನುಡಿದರು. ಸಂಭಾಷಣೆಯ ನಡುವೆ ಮಹಾರಾಜ್ ಅವರು ತಮ್ಮ ಎಡಗೈಯನ್ನು ಬಲವಾಗಿ ಚಲಿಸುತ್ತಾ ಹೇಳಿದರು: 'ನಮಗೆ ಶಕ್ತಿ ಬೇಕು, ಶಕ್ತಿ. ನಮ್ಮ ಸಮಾಜದ ಎಲ್ಲಾ ಕೆಡುಕುಗಳಿಗೂ ಅದೇ ಪರಿಹಾರ.' ಅವರನ್ನು ಸಮಾಧಾನ ಮಾಡಲು ಅವರ ಉತ್ಕಟತೆಯನ್ನು ನೋಡುತ್ತಿದ್ದ ಸುದರ್ಶನ್ ಮಹಾರಾಜ್ ಅವರೇ ಧಾವಿಸಬೇಕಾಯಿತು.

೧೯೯೮ರ ಆಗಸ್ಟ್‌ನಲ್ಲಿ ಆಸ್ಪತ್ರೆಯಿಂದ ಹೊರಬಂದ ಮಹಾರಾಜ್ ಅವರು ಗೋಲ್ ಪಾರ್ಕ್‌ನ ರಾಮಕೃಷ್ಣ ಸಾಂಸ್ಕೃತಿಕ ಸಂಘಕ್ಕೆ ಬಂದು ಆ ವರ್ಷದ ದುರ್ಗಾಪೂಜೆಯ ಆರಂಭದವರೆಗೂ ಅಲ್ಲಿಯೇ ಇದ್ದರು. ೧೯೬೦ರ ಸುಮಾರಿನಿಂದ ಅವರು ಸೇವಿಸುತ್ತಿದ್ದ ಮಿತಾಹಾರವನ್ನು ಅಲ್ಲಿ ಸಂಪೂರ್ಣವಾಗಿ ಬದಲಾಯಿಸಲಾಯಿತು. ಹಲವು ದಶಕಗಳ ನಂತರ ಬೇಯಿಸಿದ ತಾಜಾ ತರಕಾರಿಗಳನ್ನು ಸೇವಿಸಿದ ಮಹಾರಾಜ್ ಅವರ ಆನಂದ ಹೇಳತೀರದು. ಚಿಕ್ಕ ಮಗುವಿನಂತೆ ಅವರು ಆ ಆಹಾರದ ಸವಿಯನ್ನು ಸಂತೋಷದಿಂದ ಆಸ್ವಾದಿಸಿದರು. ಒಮ್ಮೆ 'ಓಹ್! ಬಹಳ ರುಚಿಯಾಗಿದೆ! ಇಷ್ಟು ದಿನ ಈ ಸವಿಯಿಂದ ನಾನು ದೂರವಿದ್ದೆ' ಎಂದರು. ಅವರಿಗೆ ನಾವು ಕೊಡುತ್ತಿದ್ದ ಆಹಾರದ ಪ್ರಮಾಣ ಎಚ್ಚರಿಕೆಯಿಂದ ನಿರ್ಧರಿಸಿದ್ದಾಗಿತ್ತು. ಮಹಾರಾಜ್ ಅವರೂ ಅದರ ಬಗ್ಗೆ ಬಹಳ ಕಟ್ಟುನಿಟ್ಟಿನವರಾಗಿದ್ದರು. ಅಡುಗೆಯನ್ನೆಲ್ಲಾ ನಾನೇ ಮಾಡುತ್ತಿದ್ದೆನಾದರೂ, ಮಹಾರಾಜ್ ಅವರು ಸುದರ್ಶನ್ ಮಹಾರಾಜ್ ಅವರೇ ಮಾಡುತ್ತಿದ್ದರೆಂದು ಅಂದುಕೊಂಡಿದ್ದರು. ಈ ತಂತ್ರವನ್ನು ಕಾಪಾಡಿಕೊಳ್ಳಲು,

---

* ನರೇಂದ್ರಪುರದ ರಾಮಕೃಷ್ಣಾಶ್ರಮದ ಸಂನ್ಯಾಸಿ

ಸುದರ್ಶನ್ ಮಹಾರಾಜ್ ಅವರು ಭೋಜನದ ವೇಳೆ ನನ್ನೊಂದಿಗೆ ಇದ್ದು ತಾವೇ ಆಹಾರವನ್ನು ತಯಾರಿಸಿದ್ದು ಎಂಬ ಅಭಿಪ್ರಾಯ ಬರುವಂತೆ ನೋಡಿಕೊಳ್ಳುತ್ತಿದ್ದರು.

ಆದರೆ, ಒಂದು ದಿನ ನಾವು ಸಿಕ್ಕಿಬಿದ್ದೆವು! ಒಮ್ಮೆ ಸುದರ್ಶನ್ ಮಹಾರಾಜ್ ಅವರು ಗೋಲ್ ಪಾರ್ಕ್‌ನಲ್ಲಿ ಒಂದು ಉಪನ್ಯಾಸವನ್ನು ಕೊಡುವುದಿತ್ತು. ಅವರು ನಾವು ಹೋಗುವ ಮುನ್ನ ಪೂಜ್ಯ ಮಹಾರಾಜ್ ಅವರನ್ನು ಕಂಡು, 'ತಾವು ಆಹಾರವನ್ನು ತಯಾರಿಸುವುದಾಗಿಯೂ, ನಾನು ಅದನ್ನು ಅವರಿಗೆ ನೀಡುತ್ತೇನೆ' ಎಂದು ಹೇಳಿದರು.

ಮಧ್ಯಾಹ್ನ ೧೨ ಘಂಟೆಗೆ ನಾನು ಆಹಾರವನ್ನು ತೆಗೆದುಕೊಂಡು ಹೋದೆ. ಮಹಾರಾಜ್ ಅವರು 'ಎಲ್ಲದರ ಪ್ರಮಾಣವನ್ನು ಸುದರ್ಶನ್ ನಿನಗೆ ತಿಳಿಸಿದನೆ?' ಎಂದು ಕೇಳಿದರು. 'ಹೌದು ಮಹಾರಾಜ್' ಎಂದೆ. 'ಅವನೇ ಇದನ್ನೆಲ್ಲಾ ತಯಾರಿಸಿದನೇ?' 'ಹೌದು ಮಹಾರಾಜ್'. 'ಇಲ್ಲಿಗೆ ಅದನ್ನು ತಂದುದಷ್ಟೇ ನಿನ್ನ ಕೆಲಸ ಅಲ್ಲವೇ?' 'ಹೌದು ಮಹಾರಾಜ್' ಮೂರನೆಯ ಬಾರಿಗೂ ಅದನ್ನೇ ಹೇಳಿದೆ. ಆಗ ಅವರಿಗೆ ಸಮಾಧಾನವಾಯಿತು, ಹೇಳಿದರು 'ಪ್ರಮಾಣವು ಬಹಳ ಮುಖ್ಯ. ಸರಿ, ನನಗೆ ಕೊಡಬೇಕಾದ ಔಷಧವನ್ನು ಕೊಡು.' ಪೂಜ್ಯ ಮಾತೆಯವರು ಒಳ್ಳೆಯ ಉದ್ದೇಶದಿಂದ ಆಹಾರವನ್ನು ಕೊಡುವಾಗ ಸಣ್ಣ ಸಣ್ಣ ಸುಳ್ಳನ್ನು ಹೇಳಬಹುದು ಎಂದು ಹೇಳಿದ್ದರು. ಅದನ್ನು ಮನಸ್ಸಿನಲ್ಲಿಟ್ಟುಕೊಂಡು, ನಾನು ಯಾವುದೇ ಅಳುಕಿಲ್ಲದೆ ನನ್ನ ಗುರುದೇವನಿಗೆ ಮೂರು ಬಾರಿ ಸುಳ್ಳನ್ನು ಹೇಳಿದೆ.

ವಿವೇಕಾನಂದ ಹಾಲ್‌ನ ಮೇಲ್ಭಾಗದಲ್ಲಿ ಬೆಳಗಿನ ಹೊತ್ತು ಓಡಾಡುವುದು ಮಹಾರಾಜ್ ಅವರ ಅಭ್ಯಾಸವಾಗಿತ್ತು. ಒಂದು ದಿನ ಹಾಗೆ ಓಡಾಡುತ್ತಿದ್ದಾಗ ಸಭಾಂಗಣದ ಎಲ್ಲಾ ಬಾಗಿಲುಗಳನ್ನೂ ತೆರೆಸಿ ಅದರ ಒಳಭಾಗವನ್ನೆಲ್ಲಾ ಒಮ್ಮೆ ನೋಡಿದರು. ಸ್ವಲ್ಪ ಹೊತ್ತಿನ ನಂತರ ಹೇಳಿದರು: "೧೯೬೦ರ ದಶಕದಲ್ಲಿ ನಾನು ಇಲ್ಲಿ ಉಪನಿಷತ್ತಿನ ಮೇಲೆ ಉಪನ್ಯಾಸವನ್ನು ನೀಡುತ್ತಿದ್ದಾಗ ಈ ಸಭಾಂಗಣ ತುಂಬಿತುಳುಕುತ್ತಿತ್ತು. ಮೆಟ್ಟಿಲು, ಕಿಟಕಿಗಳ ಮೇಲೆಲ್ಲಾ ಜನರು ಕುಳಿತಿರುತ್ತಿದ್ದರು. ನಾನು ಮೂರು ಗಂಟೆಗಳ ಕಾಲ ಸತತವಾಗಿ ಮಾತನಾಡುತ್ತಿದ್ದೆ. ಓಹ್! ಈಗ ಅದು ನನ್ನಿಂದ ಸಾಧ್ಯವಿಲ್ಲ." ತಮ್ಮ ಅಸಹಾಯಕತೆಯ ಬಗ್ಗೆ ಅವರ ಮನಸ್ಸಿನಲ್ಲಿ ವಿಷಾದವಿತ್ತು.

ಅವರ ಶ್ವಾಸಕೋಶದ ಸಾಮರ್ಥ್ಯವನ್ನು ಅಳೆಯಲು, ಪ್ರತಿ ದಿನ ಮಹಾರಾಜ್ ಅವರು ಒಂದು ಆಲಿಕೆಯಾಕಾರದ ಉಪಕರಣದ ಕೊಳವೆಯ ಮೂಲಕ ಗಾಳಿಯನ್ನು ಊದಬೇಕಿತ್ತು. ಅವರು ಗಾಳಿಯನ್ನು ಊದುವ ಸಾಮರ್ಥ್ಯಕ್ಕೆ ಅನುಗುಣವಾಗಿ ಅದರಲ್ಲಿದ್ದ ಸಣ್ಣ ಗೋಳವೊಂದು ಚಲಿಸುತ್ತಿತ್ತು. ಅದು ಹಾಗೆ ಎಲ್ಲಿಯವರೆಗೆ ಚಲಿಸುತ್ತಿತ್ತು ಎಂಬುದನ್ನು ಅದರ ಮೇಲಿನ ಮಾಪನಾಂಕದ ಸಹಾಯದಿಂದ ನಾವು ಪ್ರತಿದಿನ ಗಮನಿಸಬೇಕಿತ್ತು. ಈ ವಿಧಿ ಅವರಿಗೆ ಬಹಳ ಇಷ್ಟವಾಗಿದ್ದುದಾಗಿ, ಪ್ರತಿ ಬಾರಿಯೂ ಚಿಕ್ಕ ಮಗುವಿನ ಉತ್ಸಾಹದಿಂದ ಅದನ್ನು ಊದಿ ಆ ಗೋಳವು ಎಷ್ಟು ಮೇಲೇರುವುದು ಎಂಬುದನ್ನು ಕುತೂಹಲದಿಂದ ಗಮನಿಸುತ್ತಿದ್ದರು. ಹಿಂದಿನ ದಿನದಷ್ಟನ್ನು ಸಾಧಿಸಲಾಗದಿದ್ದರೆ ಮತ್ತೆ ಪ್ರಯತ್ನಿಸುತ್ತಿದ್ದರು. ಎಷ್ಟೋ ಬಾರಿ ನಾವು ಆ ಉಪಕರಣವನ್ನು ಅವರ ಕೈಯಿಂದ ಬಲವಂತವಾಗಿ ಕಿತ್ತುಕೊಳ್ಳಬೇಕಿತ್ತು.

ಒಮ್ಮೆ ನನಗೆ ಮಹಾರಾಜ್ ಅವರು "ರಾತ್ರಿಯೆಲ್ಲಾ ಓದುತ್ತಿದ್ದೆ ಮತ್ತು ಮಾರನೆಯ ದಿನ ಬೆಳಗ್ಗೆ ಆಹ್ಲಾದಪೂರಿತನಾಗಿರುತ್ತಿದ್ದೆ. ನನಗೆ ಓದುವುದೇ ವಿಶ್ರಾಂತಿ" ಎಂದರು. ಅವರಿಗೆ ಓದುವುದರಲ್ಲಿ ಅಪಾರ ಆಸಕ್ತಿ. ಹಾಗೆ ಓದುತ್ತಿರುವಾಗ ಹೊರಗಿನ ಪ್ರಪಂಚದ ಅರಿವೇ ಅವರಿಗೆ ಇರುತ್ತಿರಲಿಲ್ಲ. ಪ್ರತಿ ದಿನ ಪ್ರಾತಃಕಾಲ ೮ ಗಂಟೆಗೆ ತಮ್ಮ ಅಧ್ಯಯನದ ಮೇಜಿಗೆ ಬರುತ್ತಿದ್ದ ಅವರು ಮಧ್ಯಾಹ್ನ ೧೨ರವರೆಗೆ ತದೇಕಚಿತ್ತದಿಂದ, ಸತತವಾಗಿ ಓದುತ್ತಿದ್ದರು. ೧೦ ಗಂಟೆಗೆ ಅವರಿಗೆ ಒಂದು ಲೋಟ ಎಳನೀರನ್ನು ಕೊಡುವುದಕ್ಕೆ ಹೋದಾಗ, "ಈಗಲೇ

ಏಕೆ, ಈಗ ತಾನೇ ಉಪಾಹಾರ ತೆಗೆದುಕೊಂಡೆನಲ್ಲಾ? ಆಗಲೇ ಗಂಟೆ ಹತ್ತಾಯಿತೇ? ಹೊತ್ತು ಹೋದದ್ದೇ ನನಗೆ ತಿಳಿಯಲಿಲ್ಲ" ಎನ್ನುತ್ತಿದ್ದರು. ಊಟದ ಸಮಯದಲ್ಲಿ ಮತ್ತೆ ಇದೇ ಪುನರಾವೃತ್ತಿಯಾಗುತ್ತಿತ್ತು.

ವಯಸ್ಸಿನ ಹಾಗೂ ಖಾಯಿಲೆಗಳ ಕಾರಣದಿಂದ ಕುಂದಿದ್ದರೂ, ಅವರ ಬುದ್ಧಿ ಬಹಳ ಚುರುಕಾಗಿದ್ದಿತು. ವಿಜ್ಞಾನ, ಮತಧರ್ಮ ಮುಂತಾದ ಅತಿ ಗಹನವಾದ ವಿಷಯಗಳ ಮೇಲಿನ ಪುಸ್ತಕಗಳನ್ನು ಯಾವ ಆಯಾಸದ ಕುರುಹನ್ನೂ ತೋರದೆ ಅವರು ಓದುತ್ತಿದ್ದರು. ಹಾಗೆ ಒಮ್ಮೆ ಅವರು 'ಕ್ರಿಶ್ಚಿಯನ್ ಮತಧರ್ಮಶಾಸ್ತ್ರ ಹಾಗೂ ಆಧುನಿಕ ವಿಜ್ಞಾನ' ಎಂಬ ಪುಸ್ತಕವನ್ನು ಓದಿದರು. ಆ ಪುಸ್ತಕದ ಹಿಂಬದಿಯ ರಕ್ಷಾಕವಚದ ಒಳಭಾಗದಲ್ಲಿ ಅವರು ತಮ್ಮ ಅಭಿಪ್ರಾಯವನ್ನು ಹೀಗೆ ಬರೆದಿದ್ದರು: "ಈ ಲೇಖಕನು ಇಂದಿನ ವಿಜ್ಞಾನದ ಬೆಳವಣಿಗೆಗಳೆಲ್ಲವನ್ನೂ ಒಳಗೊಳ್ಳುವಂತೆ ಕ್ರಿಶ್ಚಿಯನ್ ಮತಧರ್ಮಶಾಸ್ತ್ರವನ್ನು ಹಿಂಜಲು ಪ್ರಯತ್ನಿಸುತ್ತಿದ್ದಾನೆ ಮತ್ತು ಹಾಗೆ ಮಾಡುವಲ್ಲಿ ಹೀನಾಯವಾಗಿ ಸೋತಿದ್ದಾನೆ." ಒಂದೇ ಒಂದು ವಾಕ್ಯದಲ್ಲಿ ಆ ಪುಸ್ತಕದ ಸಾರವನ್ನೆಲ್ಲಾ ಭಟ್ಟಿಯಿಳಿಸಿದ್ದರು. ಅವರ ಬೌದ್ಧಿಕಶಕ್ತಿ ಆ ಮಟ್ಟದ್ದಾಗಿತ್ತು.

ಮಹಾರಾಜ್ ಅವರ ಬದುಕು ಆದರ್ಶಪ್ರಾಯ ಸನ್ಯಾಸಿಯದಾಗಿತ್ತು. ಅವರಿಗೆ ಪ್ರಾಪಂಚಿಕ ಬಂಧನಗಳಾಗಲೀ, ಹೆಸರು, ಪ್ರಸಿದ್ಧಿಯ ಹಂಬಲವಾಗಲೀ ಇರಲಿಲ್ಲ. ಅವರು ಗಾಂಧಿ ಶಾಂತಿ ಪ್ರಶಸ್ತಿಗೆ ಆಯ್ಕೆಯಾಗಿರುವುದನ್ನು ಅವರಿಗೆ ಫೋನಿನ ಮೂಲಕ ತಿಳಿಸಿದಾಗ, ಅವರ ತಕ್ಷಣದ ಪ್ರತಿಕ್ರಿಯೆಯನ್ನು ನಾನು ಕಿವಿಯಾರೆ ಕೇಳಿದೆ: "ಛೇ! ಛೇ! ನಾನೊಬ್ಬ ಸಾಧು. ನಾನು ಈ ಪ್ರಶಸ್ತಿಯನ್ನು ಹೇಗೆ ತಾನೇ ಸ್ವೀಕರಿಸಲಿ? ಬೇಕಿದ್ದರೆ, ಈ ಪ್ರಶಸ್ತಿಯನ್ನು ಸಂಘಕ್ಕೆ ಕೊಡಿ." ಒಂದು ಕ್ಷಣವೂ ಯೋಚಿಸದೇ ಅವರು ಕೊಟ್ಟ ಈ ನೇರ ಉತ್ತರದಿಂದ ನಾನು ಬಹಳಷ್ಟು ಪ್ರಭಾವಿತನಾದೆ. ಫೋನನ್ನು ಕೆಳಗಿಟ್ಟು ನಮ್ಮ ಕಡೆ ತಿರುಗಿ ನುಡಿದರು: "ನಾನು ಯಾರು? ಈ ಸಂಘವಿಲ್ಲದೆ ಇದ್ದರೆ ನಾನೆಲ್ಲಿರುತ್ತಿದ್ದೆ? ವೈಯಕ್ತಿಕವಾಗಿ ಕೊಡುವುದರ ಬದಲು ಸಂಘಕ್ಕೆ ಪ್ರಶಸ್ತಿ ನೀಡಿದರೆ, ಪರಮಹಂಸರ, ಶ್ರೀಮಾತೆಯವರ ಹಾಗೂ ಸ್ವಾಮೀಜಿಯವರ ಸಂದೇಶವನ್ನು ಇಡೀ ಭಾರತದಲ್ಲಿ ಹರಡಲು ಮತ್ತು ಜನರಿಗಾಗಿ ಹಲವಾರು ಒಳ್ಳೆಯ ಕೆಲಸಗಳನ್ನು ಮಾಡಲು ಸಹಾಯಕವಾಗುತ್ತದೆ."

ಅವರು ಸ್ವಲ್ಪ ಅತಿ ಎನ್ನಿಸುವಷ್ಟರ ಮಟ್ಟಿಗೆ ಸ್ವಾವಲಂಬಿಯಾಗಿದ್ದರು ಮತ್ತು ತಮ್ಮೆಲ್ಲಾ ಕೆಲಸಗಳನ್ನೂ ತಾವೇ ಮಾಡಿಕೊಳ್ಳುತ್ತಿದ್ದರು. ಒಂದು ಸರಳ ಉದಾಹರಣೆ ಅವರ ಮನೋಧರ್ಮವನ್ನು ಸ್ಪಷ್ಟಪಡಿಸುತ್ತದೆ. ಫಿಸಿಯೋಥೆರಪಿಯ ಸಂದರ್ಭಗಳಲ್ಲಿ, ಬೇರೆಯವರು ಅವರಿಗೆ ಹೇಳಿಕೊಡುವುದನ್ನು, ಸಹಾಯ ಮಾಡುವುದನ್ನು ಅವರು ಒಪ್ಪುತ್ತಿರಲಿಲ್ಲ. ಬದಲಿಗೆ, ಎಲ್ಲ ವ್ಯಾಯಾಮಗಳನ್ನೂ ಬೇರೆಯವರ ಸಹಾಯವಿಲ್ಲದೇ ತಾವೇ ಸ್ವತಂತ್ರವಾಗಿ ಮಾಡುತ್ತಿದ್ದರು. ಇದನ್ನು ಸ್ವತಃ ವೈದ್ಯರೇ ಗಮನಿಸಿದ್ದರು. ಮೊದಲ ಪ್ರಯತ್ನದಲಲ್ಲಿಯೇ ಅವರಿಗೆ ಕೈಚೀಲಗಳನ್ನು ತೊಡಿಸುವಲ್ಲಿ ನಾನು ಯಶಸ್ವಿಯಾದರೆ ಮಾತ್ರ ಗೆದ್ದ ಹಾಗೆ. ಇಲ್ಲದಿದ್ದರೆ ಅವರು 'ನಾನೇ ತೊಟ್ಟುಕೊಳ್ಳುತ್ತೇನೆ, ಅದನ್ನು ಕೊಡು ಇಲ್ಲಿ' ಎಂದು ಹೇಳಿ ಮತ್ತೆ ಪ್ರಯತ್ನಿಸಲು ನನಗೆ ಅವಕಾಶವನ್ನೇ ಕೊಡುತ್ತಿರಲಿಲ್ಲ.

ಅವರು ನಮ್ಮ ಸಾಧು–ಜೀವನದ ರೀತಿಗಳನ್ನು ಗಮನಿಸುತ್ತಲೇ ಇರುತ್ತಿದ್ದರು. ಒಂದು ದಿನ ಕೇಳಿದರು 'ನೀನು ಬಂದು ಎಷ್ಟು ವರ್ಷಗಳಾದವು?' 'ನಾಲ್ಕು ತಿಂಗಳು, ಮಹಾರಾಜ್' ಎಂದೆ. ಅವರು ನಕ್ಕು, 'ಒಳ್ಳೆಯದು ಮಗು' ಎಂದರು. ಒಮ್ಮೆ ಅಧ್ಯಕ್ಷ ಮಹಾರಾಜ್ ಅವರ ನಿವಾಸಕ್ಕೆ ನಾನು ಬಹಳ ಬೇಗ ಬಂದುದನ್ನು ಗಮನಿಸಿ ಕೇಳಿದರು: 'ಇವನು ಇಷ್ಟು ಬೇಗ ಏಕೆ ಬರುತ್ತಾನೆ? ಅಂತಹ ಕೆಲಸವೇನಿದೆ ಇವನಿಗೆ ಅಲ್ಲಿ?' ನಾನು ಅಲ್ಲಿ ನೇಮಿಸಲ್ಪಟ್ಟಿರುವುದನ್ನು ಕೇಳಿ ನುಡಿದರು: "ಒಳ್ಳೆಯದು. ಒಳ್ಳೆಯ ಕೆಲಸ. ಸ್ವಾಮೀಜಿಯವರ ಕೆಲಸ ಅಲ್ಲಿ ಸಾಗುತ್ತಿದೆ. ನಿನಗೆ ಒಪ್ಪಿಸಿದ ಯಾವುದೇ ಕೆಲಸವಾದರೂ ಅದನ್ನು ಮನಃಪೂರ್ವಕವಾಗಿ ನಿಷ್ಠೆಯಿಂದ ಮಾಡು."

ಅವರ ಹಸ್ತಾಕ್ಷರವಿರುವ 'ಉಪನಿಷತ್ತುಗಳ ಸಂದೇಶ' ಪುಸ್ತಕವನ್ನು ಹೊಂದಬೇಕೆಂದು ಒಮ್ಮೆ ನನಗೆ ಆಸೆಯಾಯಿತು. ದುರದೃಷ್ಟವಶಾತ್, ಆ ಪುಸ್ತಕದ ಪ್ರತಿಗಳೆಲ್ಲವೂ ಮಾರಾಟವಾಗಿ ಹೋಗಿ ಒಂದು ಪ್ರತಿಯೂ ಸಿಗುತ್ತಿರಲಿಲ್ಲ. ಆಗ ಅಲ್ಲಿನ ಕಾರ್ಯಕರ್ತರೊಬ್ಬರು ತಮ್ಮಲ್ಲಿದ್ದ ಪ್ರತಿಯಲ್ಲಿಯೇ ಅವರ ಹಸ್ತಾಕ್ಷರವನ್ನು ಪಡೆಯಲು ಹೋದರು. ಅವರು ಮಹಾರಾಜ್ ಅವರು ಅದನ್ನು ಗಮನಿಸುವುದಿಲ್ಲ ಎಂದು ಬಗೆದಿದ್ದರು. ಆದರೆ ಮಹಾರಾಜ್ ಅವರು ಯಾವಾಗಲೂ ಚುರುಕಾಗಿ ರುತ್ತಿದ್ದರು. ಅವರಿಗೆ ಪ್ರಸ್ತುತ ಈ ಪುಸ್ತಕದ ಪ್ರತಿಗಳು ಮುಗಿದುಹೋಗಿದ್ದುದು ತಿಳಿದಿತ್ತು. 'ಈ ಪುಸ್ತಕ ಈಗ ಸಿಗುತ್ತಿಲ್ಲ. ನೀನು ಇದನ್ನು ಎಲ್ಲಿಂದ ತಂದೆ?' ಎಂದಾಗ ನಮಗೆಲ್ಲಾ ಆಶ್ಚರ್ಯ. ಆಗ ನಾವು ಸತ್ಯವನ್ನು ಹೇಳಲೇಬೇಕಾಗಿ ಬಂದಿತು.

೨೦೦೦ದಲ್ಲಿ ಒಮ್ಮೆ ನಾನು ಬೇಲೂರು ಮಠಕ್ಕೆ ಹೋಗಿದ್ದೆ. ಅಲ್ಲಿ ಅವರಿಗೆ ನನ್ನ ನಮನಗಳನ್ನು ಸಲ್ಲಿಸಲು ಹೋದಾಗ ಅವರು ನನ್ನ ಅಧ್ಯಯನ ಹೇಗೆ ಸಾಗುತ್ತಿದೆ ಎಂದು ಕೇಳಿದರು. ನಾನು ಈಗ 'ಗೀತೆ'ಯನ್ನು ಅಧ್ಯಯನ ಮಾಡುತ್ತಿದ್ದೇನೆ ಎಂದೆ. ಅದಕ್ಕಾಗಿ ಏನಾದರೂ ಬೇಕೇ ಎಂದು ನನ್ನನ್ನು ಕೇಳಿ, ನನ್ನ ಉತ್ತರಕ್ಕಾಗಿ ಕಾಯದೇ, ತಮ್ಮ ಕಾರ್ಯದರ್ಶಿಯವರಿಗೆ 'ಸಮಗ್ರ ಕೃತಿಗಳ' ಎಲ್ಲಾ ಸಂಪುಟಗಳನ್ನೂ ನನಗೆ ಕೊಡುವಂತೆ ಆದೇಶಿಸಿದರು. ಅದನ್ನು ಪಡೆದ ನಾನು ಅದರ ಮೇಲೆ ಅವರ ಹಸ್ತಾಕ್ಷರಕ್ಕಾಗಿ ಬೇಡಿದಾಗ, ತಮ್ಮ ಕೈಯಿಂದ ಆ ಪುಸ್ತಕಗಳ ಮೇಲೆ ಮೃದುವಾಗಿ ತಟ್ಟುತ್ತಾ, 'ಇವು ಸಾಕು! ಕೇವಲ ಹಸ್ತಾಕ್ಷರ ಏನು ಮಾಡೀತು? ನೀನು ಇವುಗಳನ್ನು ಓದಬೇಕು, ಅರಗಿಸಿಕೊಳ್ಳಬೇಕು. ಅಷ್ಟೇ ಅಲ್ಲದೆ, ಅವುಗಳನ್ನು ಆಚರಣೆಗೆ ತರಬೇಕು. ಸರಿ ತೆಗೆದುಕೊಂಡು ಹೋಗು' ಎಂದರು.

ಬ್ರಹ್ಮಚಾರಿಗಳಿಗೆ ಅವರು ಸಾಮಾನ್ಯವಾಗಿ ಕೊಡುತ್ತಿದ್ದ ಬುದ್ಧಿವಾದ: "ಸೇವೆ ಮಾಡಿ, ಸೇವೆ ಮಾಡಿ. "ಶಿವಜ್ಞಾನೇ ಜೀವ ಸೇವಾ" ಇದು ನಿಮ್ಮ ಆದರ್ಶವಾಗಬೇಕು. ಉತ್ತಮ ಸಾಧುಗಳಾಗಲು ಪ್ರಯತ್ನಿಸಿ, ಸಂಘಕ್ಕೆ, ಪರಮಹಂಸರಿಗೆ ಒಳ್ಳೆಯ ಹೆಸರನ್ನು ತನ್ನಿ. ಆಶ್ರಮದ ಶಾಂತಿಯನ್ನು ಕೆಡಿಸಬೇಡಿ, ಯಾವಾಗಲೂ ಹೊಂದಿಕೊಂಡು ಹೋಗುವುದಕ್ಕೆ ಪ್ರಯತ್ನಿಸುತ್ತಿರಿ.""

ಅವರ ಪತ್ರಗಳನ್ನು ನಾನೇ ಬರೆದುಕೊಡುತ್ತಿದ್ದೆ. ಭಕ್ತರಿಗೆ ಅವರು ಯಾವಾಗಲೂ ಕೊಡುತ್ತಿದ್ದ ಉತ್ತರ ಹೀಗಿರುತ್ತಿತ್ತು: 'ಯಾವುದೇ ಆದರೂ ಅದರಲ್ಲಿ ತೀರ ತೊಡಗಿಕೊಳ್ಳಬೇಡಿ. ಜಪ ಮಾಡಿ ಮತ್ತು ಮನುಷ್ಯರಿಗೆ ಸೇವೆ ಮಾಡುವ ಮೂಲಕ ಈಶ್ವರನನ್ನು ಪೂಜಿಸಿ. "ಶಿವಜ್ಞಾನೇ ಜೀವ ಸೇವಾ" ಎಂಬುದೇ ಈ ಯುಗದ ಮಂತ್ರ.' 'ಭಗವದ್ಗೀತೆ'ಯ ಆರನೆಯ ಅಧ್ಯಾಯದಿಂದ ಉದ್ಧರಿಸಿ ಅವರು ಆಗಾಗ್ಗೆ ಹೇಳುತ್ತಿದ್ದರು: 'ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್.' ಒಮ್ಮೆ ಭಕ್ತರೊಬ್ಬರು ತಮಗೆ ಬಿದ್ದ ಕನಸೊಂದನ್ನು ನಿವೇದಿಸಿದಾಗ, ಮಹಾರಾಜ್ ಅವರು 'ನಿಮಗೆ ಬಿದ್ದ ಕನಸು ಒಳ್ಳೆಯದರ ಸೂಚನೆಯೇ. ಆದರೆ ಅದನ್ನು ಇಲ್ಲಿಯೇ ಬಿಟ್ಟು ನೀವು ಮುಂದಕ್ಕೆ ಸಾಗಬೇಕು' ಎಂದರು. ವುಡ್‌ಲ್ಯಾಂಡ್ಸ್ ಆಸ್ಪತ್ರೆಯಲ್ಲಿದ್ದಾಗ ಮಹಾರಾಜ್ ಅವರು ತಮ್ಮ ಪುಸ್ತಕವೊಂದನ್ನು ಅಲ್ಲಿನ ದಾದಿಯೊಬ್ಬರಿಗೆ ಕೊಡುತ್ತಾ ಹೇಳಿದರು: "ನಮ್ಮ ಸ್ತ್ರೀಯರಲ್ಲಿ ಮೂಢನಂಬಿಕೆ ತುಂಬಿಕೊಂಡಿದೆ. ಅವರು ಶಾಸ್ತ್ರಸಂಬಂಧಿ ಪುಸ್ತಕಗಳನ್ನು ಓದುವುದಿಲ್ಲ. ಅವರು ಶಾಸ್ತ್ರಗಳ್ನೇ ಹಾಗೂ ಸ್ವಾಮೀಜಿಗಳ ಪುಸ್ತಕಗಳನ್ನು ಅವಶ್ಯ ಓದಬೇಕು."

ಮಹಾರಾಜ್ ಅವರು ಅತಿ ಗಂಭೀರರಾಗಿರುತ್ತಿದ್ದಿಲ್ಲ. ಹಾಸ್ಯಪ್ರಜ್ಞೆ ಯಾವಾಗಲೂ ಅವರ ಸ್ವಭಾವದೊಂದಿಗೆ ತಳುಕುಹಾಕಿಕೊಂಡಿರುತ್ತಿತ್ತು. ಆಸ್ಪತ್ರೆಯಲ್ಲಿ ಒಮ್ಮೆ ವೈದ್ಯರೊಬ್ಬರು ಹೇಳಿದರು: "ಮಹಾರಾಜ್, ಈ ಎಲ್ಲ ಔಷಧಿಗಳನ್ನು ಅರಗಿಸಿಕೊಳ್ಳುವ ನಿಮ್ಮ ಸಾಮರ್ಥ್ಯ ಅದ್ಭುತ. ಒಂದೇ ಒಂದು ಮಾತ್ರೆಯ ಸೇವೆಯ ನಮ್ಮಂತಹವರ ಪ್ರಕೃತಿಯನ್ನೇ ಅಲ್ಲಾಡಿಸಿಬಿಡುತ್ತದೆ." ತಕ್ಷಣ ಮಹಾರಾಜ್ ಉತ್ತರಿಸಿದರು– "ಇಲ್ಲ, ಇಲ್ಲ. ನಾನು ಔಷಧಿಗಳನ್ನು ಅರಗಿಸಿಕೊಳ್ಳುತ್ತಿಲ್ಲ, ಅವೇ ನನ್ನನ್ನು ನುಂಗಿಹಾಕುತ್ತಿವೆ." 'ಬೃಹದಾರಣ್ಯಕ ಉಪನಿಷತ್' ಮೊದಲಬಾರಿಗೆ

ಪ್ರಕಟವಾದಾಗ ತಮ್ಮ ಹತ್ತಿರವಿದ್ದ ಬ್ರಹ್ಮಚಾರಿಯೊಬ್ಬರಿಗೆ ಅದರ ಒಂದು ಪ್ರತಿಯನ್ನು ಸ್ವಾಮೀಜಿಯವರ ಮಂದಿರಕ್ಕೆ ಒಪ್ಪಿಸುವಂತೆ ಹೇಳಿದರು. ಆಗ ಆ ಬ್ರಹ್ಮಚಾರಿ 'ಮಹಾರಾಜ್, ತಾವು ಒಂದು ಪ್ರತಿಯನ್ನು ಸ್ವಾಮೀಜಿಯವರ ಮಂದಿರಕ್ಕೆ ಕೊಡುವಂತೆ ಹೇಳಿದಿರಿ. ಆದರೆ ಪರಮಹಂಸರ ಹಾಗೂ ಶ್ರೀಮಾತೆಯವರಿಗೆ ಕೊಡುವುದಿಲ್ಲವೇಕೆ?' ಎಂದು ಕೇಳಿದಾಗ, ಅವರು 'ನೋಡು, ನಮ್ಮ ಪರಮಹಂಸರಿಗೆ ಮತ್ತು ಶ್ರೀಮಾತೆಯವರಿಗೆ ಇಂಗ್ಲಿಷ್ ಬರುವುದಿಲ್ಲ' ಎಂದರು. ಮತ್ತೊಮ್ಮೆ, ಅವರು 'ಪ್ರಪಂಚದತ್ತ ಪ್ರವಾಸಿಯ ನೋಟ' ಎಂಬ ಪುಸ್ತಕದ ಎರಡನೆಯ ಮುದ್ರಣದ ಬಗ್ಗೆ ತಮ್ಮ ಬಳಿಯಿದ್ದ ಕಾರ್ಯಕರ್ತರೊಬ್ಬರ ಅಭಿಪ್ರಾಯವನ್ನು ಕೇಳಿದರು. ಅದಕ್ಕೆ ಆ ಕಾರ್ಯಕರ್ತರು ಅದು ಒಂದು ಒಣ ಪುಸ್ತಕ ಎಂದಾಗ, ಮಹಾರಾಜ್ ಅವರು 'ನೀನು ಕಾರ್ಯಕರ್ತನಲ್ಲ, ವಿಮರ್ಶಕನಾಗಿದ್ದೀಯೆ' ಎಂದಾಗ, ಅಲ್ಲಿದ್ದವರೆಲ್ಲರೂ ನಗೆಗಡಲಲ್ಲಿ ಮುಳುಗಿದರು.

ಸಂಘದ ಸೇವೆ ಮಾಡುವಲ್ಲಿ ಅವಿರತವಾಗಿ ತಮ್ಮ ವಾರ್ಧಕ್ಯದಲ್ಲೂ ಅವರು ತೊಡಗಿಸಿಕೊಳ್ಳುತ್ತಿದ್ದ ರೀತಿ ನಮಗೆಲ್ಲಾ ಆಶ್ಚರ್ಯವನ್ನು ತರುತ್ತಿತ್ತು. ಅವರು ಕಳೆದಬಾರಿ ಆಸ್ಪತ್ರೆಯಿಂದ ಬೇಲೂರು ಮಠಕ್ಕೆ ಹಿಂದಿರುಗಿ ಬಂದಾಗ, ಮಧ್ಯಾಹ್ನದ ಊಟಕ್ಕೆ ಇನ್ನೂ ೪೫ ನಿಮಿಷಗಳ ಸಮಯವಿತ್ತು. ಅವರು ವಿಶ್ರಾಂತಿ ತೆಗೆದುಕೊಳ್ಳಬಹುದೆಂದು ನಾವು ನಿರೀಕ್ಷಿಸಿದ್ದೆವು. ಆದರೆ, ಅವರು ತಮ್ಮ ಪುಸ್ತಕಗಳ ಕಟ್ಟನ್ನು ಬಿಚ್ಚಲು ನನಗೆ ಹೇಳಿದರು. ಮತ್ತು ಮಠದ ಸ್ವಾಮೀಜಿಗೆ ಬರೆಯಬೇಕಿದ್ದ ಒಂದು ಪತ್ರವನ್ನು ನನ್ನಿಂದ ಬರೆಸಲು ತೊಡಗಿದರು. ಕಲಿಯುವಿಕೆಯ ಬಗ್ಗೆ ಇದ್ದ ಅವರ ಹಂಬಲವೂ ಅದೇ ರೀತಿಯದು. ಮೊದಲು ಅವರು ತಮಿಳನ್ನು ಓದಬಲ್ಲವರಾಗಿದ್ದರು. ಒಮ್ಮೆ, ೨೦೦೫ರ ಜನವರಿಯಲ್ಲಿ ಒಂದು ತಮಿಳು ಪುಸ್ತಕವನ್ನು ಅವರಿಗೆ ನೀಡಿದಾಗ, ಪ್ರಯತ್ನಿಸಿದರೂ ಅವರಿಗೆ ಸಾಧ್ಯವಾಗಲಿಲ್ಲ. 'ನನಗೆ ಒಂದು ತಮಿಳು ಬಾಲಬೋಧೆಯನ್ನು ತಂದುಕೊಡು' ಎಂದು ತರಿಸಿಕೊಂಡು ಅದನ್ನು ಅಭ್ಯಸಿಸಿ ಮತ್ತೆ ತಮಿಳು ಪುಸ್ತಕವನ್ನು ಓದಲಾರಂಭಿಸಿದರು. 'ಬದುಕಿರುವವರೆಗೂ ನಾನು ಕಲಿಯುತ್ತಲೇ ಇರಬೇಕು' ಎಂಬ ಪರಮಹಂಸರ ನುಡಿಗೆ ಜೀವಂತ ನಿದರ್ಶನವಾಗಿದ್ದರು ಮಹಾರಾಜ್ ಅವರು.

ಒಮ್ಮೆ ಪೂಜ್ಯ ಸ್ವಾಮಿ ತಥಾಗತಾನಂದ ಮಹಾರಾಜ್ ಅವರು ಮಹಾರಾಜ್ ಅವರನ್ನು ನೋಡಲೆಂದೇ ಬೇಲೂರು ಮಠಕ್ಕೆ ಅಮೇರಿಕದಿಂದ ಬಂದಿದ್ದರು. ಅವರಿಬ್ಬರೂ ಆಪ್ತ ಗೆಳೆಯರಾಗಿದ್ದರು. ನಮ್ಮ ನಡುವಿನ ಒಬ್ಬ ಬ್ರಹ್ಮಚಾರಿಯೊಬ್ಬರು ತಥಾಗತಾನಂದ ಮಹಾರಾಜ್ ಅವರನ್ನು ಕುರಿತು "ನಮ್ಮ ಸಂಘದಲ್ಲಿ ಬ್ರಹ್ಮಜ್ಞಾನಿ ಯಾರದರೂ ಇದ್ದಾರೆಯೇ?" ಎಂದು ಕೇಳಿದರು. ಸ್ವಾಮೀಜಿ ದೃಢವಾಗಿ ಉತ್ತರಿಸಿದರು: "ಈ ಅಧ್ಯಕ್ಷ ಮಹಾರಾಜ್ ಅವರನ್ನು ಏನೆಂದು ತಿಳಿದಿರುವಿರಿ? ಅವರು ಬ್ರಹ್ಮಜ್ಞಾನಿಗಳೇ. ಆದರೆ, ನೀವು ಬ್ರಹ್ಮ ಸಾಕ್ಷಾತ್ಕಾರವನ್ನು ಪಡೆದಿದ್ದೀರಾ ಎಂದು ಅವರನ್ನು ಕೇಳಿ ಅವರಿಗೆ ಮುಜುಗರವನ್ನು ಉಂಟುಮಾಡಬೇಡಿ."

* * * *

## ೨೫. ಎಲ್ಲರ ಗೆಳೆಯ

–ಸ್ವಾಮಿ ಶಕ್ರಾನಂದ*

ತ್ರಿಶೂರಿನಲ್ಲಿ ನಮ್ಮ ಮಠವು ಪ್ರತಿ ವರ್ಷವೂ ಡಿಸೆಂಬರ್ ೨೪ರಿಂದ ೨೯ರವರೆಗೆ ನಡೆಸುತ್ತಿದ್ದ ವಾರ್ಷಿಕ ಆಧ್ಯಾತ್ಮಿಕ ಸಮ್ಮೇಳನಕ್ಕೆ ಪೂಜ್ಯ ರಂಗನಾಥಾನಂದ ಮಹಾರಾಜ್ ಅವರು ಬರುತ್ತಿದ್ದರು. ಕೇರಳದ ಭಕ್ತರಿಗೆಲ್ಲ ಅದೊಂದು ಸಂಭ್ರಮದ ಹಬ್ಬವಾಗಿರುತ್ತಿತ್ತು. ಪ್ರತಿ ದಿನ ನಾಲ್ಕುನೂರರಿಂದ ಐನೂರು ಭಕ್ತರು ಅವರ ಪ್ರವಚನಗಳನ್ನು ಕೇಳಲು ಹಾಜರಿರುತ್ತಿದ್ದರು. ನಂತರ ಅವರು ಇಲ್ಲಿನ ಜನಗಳನ್ನು ಭೇಟಿಮಾಡುವ ಸಲುವಾಗಿ ಕೇರಳವನ್ನೆಲ್ಲಾ ಸುತ್ತುತ್ತಿದ್ದರು. ಅವರು ಎಲ್ಲೇ ಹೋದರೂ ಅವರ ಪ್ರವಚನಗಳನ್ನು ಕೇಳುವುದಕ್ಕೆ ಮತ್ತು ಅವರ ಪವಿತ್ರ ಸಾನ್ನಿಧ್ಯವನ್ನು ಅನುಭವಿಸುವುದಕ್ಕಾಗಿ ಸಮಾಜದ ಎಲ್ಲ ವರ್ಗಗಳ ಜನರೂ ಮುಗಿಬೀಳುತ್ತಿದ್ದರು. ಜಾತಿ, ಬಣ್ಣ, ಸಾಮಾಜಿಕ ಅಂತಸ್ತುಗಳ ಭೇದವಿಲ್ಲದೆ ಎಲ್ಲರೊಡನೆ ಗೆಳೆತನವನ್ನು ಸಾಧಿಸುತ್ತಿದ್ದ ಅವರ ರೀತಿ ಗಮನಾರ್ಹವಾಗಿರುತ್ತಿತ್ತು ಮತ್ತು 'ಭಗವದ್ಗೀತೆ'ಯಲ್ಲಿ ಭಗವಾನ್ ಶ್ರೀಕೃಷ್ಣನು ಹೇಳುವ "ಸುಹೃದಮ್ ಸರ್ವ ಭೂತಾನಾಮ್ (ಎಲ್ಲ ಜೀವಿಗಳ ಸ್ನೇಹಿತ)" ಎಂಬ ನುಡಿಯನ್ನು ನಮಗೆ ಜ್ಞಾಪಿಸುತ್ತಿತ್ತು.

ಒಂದು ಸಂದರ್ಭದಲ್ಲಿ ಈ ಆಶ್ರಮದ ಕಾರ್ಯಭಾರವನ್ನು ಹೊರುವುದು ನನ್ನಿಂದ ಸಾಧ್ಯವಾಗದು ಎಂದು ಅವರಲ್ಲಿ ಬಿನ್ನವಿಸಿದಾಗ ಅವರೆಂದರು: "ಅದಕ್ಕೇಕೆ ಯೋಚಿಸುತ್ತೀರಿ? ನಿಮಗೆ ಈ ಜವಾಬ್ದಾರಿಯನ್ನು ಕೊಟ್ಟಿರುವವನೇ ಅದನ್ನು ನಿಭಾಯಿಸಲು ಶಕ್ತಿಯನ್ನು ಕೊಡುತ್ತಾನೆ. ಮುಂಚೂಣಿಯಲ್ಲಿ ನಡೆಯಲು ನಿಮಗೆ ಧ್ವಜವನ್ನು ಕೊಟ್ಟಿರುವವನೇ ನಿಮಗೆ ಅದನ್ನು ಹೊತ್ತು ಮುನ್ನುಗ್ಗುವ ಸಾಮರ್ಥ್ಯವನ್ನೂ ನೀಡುತ್ತಾನೆ. ಅದು ನಿಮಗೆ ಸಂಬಂಧಪಟ್ಟ ವಿಷಯವಲ್ಲ. ಯೋಚಿಸಬೇಡಿ."

ಈ ಎಲ್ಲಾ ಸಂದರ್ಭಗಳಲ್ಲಿಯೂ ನನ್ನ ಕರ್ತವ್ಯಗಳನ್ನು ಪೂರ್ತಿಗೊಳಿಸಲು ಅಗತ್ಯವಾದ ಶಕ್ತಿ ಮತ್ತು ಪ್ರೋತ್ಸಾಹವನ್ನು ಪೂಜ್ಯ ಮಹಾರಾಜ್ ಅವರು ನೀಡಿದ್ದಾರೆ. ತಮ್ಮ ಬಳಿ ಬಂದು ಬೆಂಬಲ ಬೇಡಿದವರಿಗೆಲ್ಲಾ ಅವರು ಬೆಂಬಲವನ್ನು ಕೊಟ್ಟಿದ್ದಾರೆ. ಅವರನ್ನು ನೆನೆಯುವುದೇ ಸಂತೋಷವನ್ನು ಹಾಗೂ ಶಕ್ತಿಯನ್ನು ತಂದುಕೊಡುವ ಒಂದು ವಿಷಯ.

* * * *

* ಕೇರಳದ ನೆಟ್ಟಾಯಂನಲ್ಲಿರುವ ರಾಮಕೃಷ್ಣಾಶ್ರಮದ ಹಿರಿಯ ಸಂನ್ಯಾಸಿ.

# ೨೬. ಸ್ವಂತ ಬೆಳಕಿನಲ್ಲಿ ಬೆಳಗಿದವರು

–ಸ್ವಾಮಿ ಮುಕ್ತಿರೂಪಾನಂದ*

ಈ ಪ್ರಪಂಚದಲ್ಲಿನ ಬಹುಪಾಲು ಜನರು ಅಧಿಕಾರ, ಅಂತಸ್ತು, ಸ್ಥಾನಮಾನ ಇವುಗಳ ಬಲದಿಂದ, ಕ್ಷಣಭಂಗುರದ ಬಾಳನ್ನು ಬಾಳುವ ಮಿಂಚುಹುಳುವಿನಂತೆ ಮೆರೆಯುತಿರುತ್ತಾರೆ. ಈ ಬಲಗಳನ್ನು ಕಳೆದುಕೊಂಡ ಮರುಕ್ಷಣವೇ ಅವರು ತಮ್ಮೆಲ್ಲಾ ಪ್ರಭಾವವನ್ನೂ ಕಳೆದುಕೊಂಡು ಹೇಳಹೆಸರಿಲ್ಲದಾಗುತ್ತಾರೆ. ಆದರೆ ಕೆಲವು ಮಹಾವ್ಯಕ್ತಿಗಳಾಗಿದ್ದಾರೆ. ಅವರ ಅಂತಶ್ಶಕ್ತಿ, ಸ್ವಂತ ಸಾಮರ್ಥ್ಯ ಎಷ್ಟಿರುತ್ತದೆಂದರೆ ಅವರಿಗೆ ಯಾವ ಬಾಹ್ಯ ಬೆಂಬಲಗಳ ಅವಲಂಬನವೂ ಬೇಕಾಗುವುದಿಲ್ಲ. ಅಂತಹವರು ತಮ್ಮ ಸ್ವಂತ ಬೆಳಕಿನಲ್ಲಿಯೇ ಬೆಳಗುತ್ತಾರೆ. ಅವರು ಜನತೆಯ ಮಾರ್ಗದರ್ಶಕರಾಗಿ, ಗುರುಗಳಾಗಿ ಜನರ ಹೃದಯದಲ್ಲಿ ಶಾಶ್ವತವಾದ ನೆಲೆಯನ್ನು ಮಾಡಿಕೊಂಡು ಅಲ್ಲಿಯೇ ನೆಲಸಿರುತ್ತಾರೆ. ಅಂತಹ ಅಪರೂಪದ ಜೀವಿಗಳಲ್ಲಿ ಸ್ವಾಮಿ ರಂಗನಾಥಾನಂದರೂ ಒಬ್ಬರು. ಅವರು ತಮ್ಮ ಪಾರ್ಥಿವ ಶರೀರವನ್ನು ತ್ಯಜಿಸಿದಾಗ "ಅವರ ನಿಧನದಿಂದಾಗಿ ನಾವು ನಮ್ಮ ಕಾಲದ ಒಬ್ಬ ಮಹಾನ್ ಗುರುವನ್ನು ಕಳೆದುಕೊಂಡಿದ್ದೇವೆ" ಎಂದ ಭಾರತದ ಪ್ರಧಾನಿ ಡಾ॥ ಮನಮೋಹನ್ ಸಿಂಗ್ ಅವರ ನುಡಿ ಅತಿಶಯೋಕ್ತಿಯಲ್ಲ. ಹಾಗೆ ಹೇಳುವಾಗ ಅವರು ರಾಮಕೃಷ್ಣ ಸಂಘದ ಅಧ್ಯಕ್ಷರಾಗಿದ್ದರೆಂಬುದು ಮುಖ್ಯವಲ್ಲ. ರಂಗನಾಥಾನಂದಜೀಯವರು ಅಧ್ಯಕ್ಷರಾಗಿರದಿದ್ದರೂ ಅವರಿಗೆ ಗಣ್ಯವ್ಯಕ್ತಿಗಳಿಂದ ಹಾಗೂ ಜನಸಾಮಾನ್ಯರಿಂದ ಅಂತಹುದೇ ಶ್ರದ್ಧಾಂಜಲಿ ದೊರೆಯುತ್ತಿತ್ತು. ಇದು ಅವರ ಆಂತರಿಕ ವ್ಯಕ್ತಿತ್ವವನ್ನು ತೋರಿಸುತ್ತದೆ. ಅವರ ಅಮೋಘವಾದ ವ್ಯಕ್ತಿತ್ವದ ಮೇಲೆ ಅಂತಸ್ತು, ಸ್ಥಾನಮಾನ, ಮೊದಲಾದವು ಯಾವುದೇ ಪ್ರಭಾವವನ್ನು ಬೀರಲಿಲ್ಲ, ಬದಲಿಗೆ ಅವರು ತಮ್ಮ ಸ್ಥಾನಕ್ಕೆ ಗೌರವವನ್ನು ತಂದುಕೊಟ್ಟರು.

ಈ ಮಹಾನ್ ಸ್ವಾಮೀಜಿಯವರು ಅತ್ಯಂತ ಸರಳತೆ, ಘನತೆ ಹಾಗೂ ಶ್ರೇಷ್ಠತೆಯನ್ನು ಹೊಂದಿದ್ದರು. ಶ್ರೀ ರಾಮಕೃಷ್ಣ ಪರಮಹಂಸರ ಹಾಗೂ ಸ್ವಾಮಿ ವಿವೇಕಾನಂದರ ಉಪದೇಶಗಳನ್ನು ಹರಡುವುದು ಮತ್ತು ಜನತೆಯ ಸಂಕಷ್ಟಗಳನ್ನು ಕಡಮೆ ಮಾಡುವುದು – ಇವೇ ಅವರ ಗುರಿಗಳಾಗಿದ್ದವು. ಬೇರೆ ಯಾವುದರ ಹಿಂದೆಯೂ ಅವರು ಹೋಗಲಿಲ್ಲ. ಅವರ ಘನತೆ ಹಾಗೂ ಶ್ರೇಷ್ಠತೆಯನ್ನು ಎತ್ತಿ ತೋರಿಸುವ ಒಂದು ಉದಾಹರಣೆಯನ್ನು ಕೊಡುತ್ತೇನೆ. ಅವರು, ದೆಹಲಿಯಲ್ಲಿ ನಮ್ಮ ಕೇಂದ್ರದಲ್ಲಿ ಇದ್ದಾಗಲೆಲ್ಲ ಅವರನ್ನು ಕಾಣಲು ಸಂಪುಟ ಸಚಿವರು, ಲೋಕಸಭಾ ಸದಸ್ಯರು, ಸರಕಾರದ ಉನ್ನತ ಅಧಿಕಾರಿಗಳು ಬರುತ್ತಿದ್ದರು. ನಾನು ಆಗ ದೆಹಲಿ ಕೇಂದ್ರದಲ್ಲಿ ನೇಮಕವಾಗಿದ್ದು, ಹಾಗೆ ಬಂದ ಸಂದರ್ಶಕರ ವಿವರವನ್ನು ಸ್ವಾಮೀಜಿಯವರಿಗೆ ನೀಡುತ್ತಿದ್ದೆ. ಬಂದವರಿಗೆ ಸ್ವಲ್ಪ ಹೊತ್ತು ಕುಳಿತುಕೊಳ್ಳಲು ಹೇಳುವಂತೆ ನನಗೆ ಹೇಳುತ್ತಿದ್ದ ಸ್ವಾಮೀಜಿ, ಯಾವುದೇ ತರಹದ ಆತುರವನ್ನು ತೋರುತ್ತಿರಲಿಲ್ಲ. ತಾವು ಮಾಡುತ್ತಿದ್ದ ಕೆಲಸವನ್ನು– ಅದು ಪತ್ರ ಬರೆಯುವುದಾಗಿರಬಹುದು, ಕಾಗದಗಳನ್ನು ಫೈಲ್ ಮಾಡುವುದಾಗಿರಬಹುದು, ಅಥವಾ ಏನನ್ನಾದರೂ ಓದುವುದಾಗಿರಬಹುದು– ಅವುಗಳನ್ನು ಸಾವಕಾಶವಾಗಿ ಪೂರ್ಣಗೊಳಿಸುತ್ತಿದ್ದರು. ಬಂದವರು ಗಣ್ಯವ್ಯಕ್ತಿಗಳಾಗಿರಲಿ, ಭಕ್ತರಾಗಿರಲಿ, ಅಥವಾ ಬೇರಾರೇ ಆಗಿರಲಿ, ಎಲ್ಲರನ್ನೂ ಒಂದೇ ವಿಧವಾದ ಗೌರವ, ಪ್ರೀತಿಯಿಂದ ನಡೆದುಕೊಳ್ಳುತ್ತಿದ್ದುದನ್ನು ನಾವು ನೋಡಿದ್ದೇವೆ. ಅವರ ಸುತ್ತ ಯಾವಾಗಲೂ ತರುಣ ಬ್ರಹ್ಮಚಾರಿಗಳ ಹಾಗೂ ಹೊಸದಾಗಿ ಸೇರಿದ ಶಿಷ್ಯರ ಗುಂಪೇ

* ಸಿಂಗಪುರದ ರಾಮಕೃಷ್ಣ ಮಿಷನ್ನಿನ ಹಿರಿಯ ಸಂನ್ಯಾಸಿ ಹಾಗೂ ಕಾರ್ಯದರ್ಶಿ

ಇರುತ್ತಿತ್ತು. ಸ್ವಾಮೀಜಿಯವರು ಅಂತಹ ತರುಣರಲ್ಲಿ ಸ್ಫೂರ್ತಿಯನ್ನು ತುಂಬುತ್ತಿದ್ದರು ಮತ್ತು ಅವರ ತ್ಯಾಗದ ಅಗ್ನಿಯನ್ನು ಪ್ರಜ್ವಲಗೊಳಿಸುತ್ತಿದ್ದರು.

ಅವರು ಖಿನ್ನರಾಗಿದ್ದುದನ್ನು, ನಿರುತ್ಸಾಹದಿಂದಿದ್ದುದನ್ನು ನಾವು ಯಾವಾಗಲೂ ಕಂಡಿದ್ದಿಲ್ಲ. ಅವರಿಂದ ಶಕ್ತಿಯ, ಉತ್ಸಾಹದ ಮತ್ತು ರಚನಾತ್ಮಕ ದೃಷ್ಟಿಯ ಪ್ರಭೆ ಚಿಮ್ಮುತ್ತಿರುತ್ತಿತ್ತು. ಸದಾ ಗೊಣಗುತ್ತಿದ್ದವರ ಬಗ್ಗೆ, ಅದರಲ್ಲೂ ಅಂತಹ ಸಂನ್ಯಾಸಿಗಳ ಬಗ್ಗೆ ಅವರು ಜುಗುಪ್ಸೆಯನ್ನು ತೋರುತ್ತಿದ್ದರು ಮತ್ತು ಕಟುವಾಗಿ ಟೀಕಿಸುತ್ತಿದ್ದರು. ತಮ್ಮ ೯೩ನೆಯ ವಯಸ್ಸಿನಲ್ಲಿಯೂ ಅವರು ರಾತ್ರಿ ಹಗಲು ಕುಳಿತು 'ಗೀತೆ'ಯ ಮೂರು ಸಂಪುಟಗಳ ಸಂಪಾದನೆಯನ್ನು ಮುಗಿಸಿದರು.

**ನಿರ್ಲಿಪ್ತತೆ**

ಪುಸ್ತಕಗಳಲ್ಲದೆ, ಬೇರಾವುದೂ ಅವರ ಬಳಿಯಿರಲಿಲ್ಲ. ಆ ಪುಸ್ತಕಗಳನ್ನೂ ಅವರು ಬ್ರಹ್ಮಚಾರಿಗಳ ತರಬೇತಿ ಕೇಂದ್ರಕ್ಕೆ ದಾನಮಾಡಿದರು. ಅವರಿಗೆ ಲಕ್ಷಾಂತರ ರೂಪಾಯಿಗಳ ದೇಣಿಗೆ ಬರುತ್ತಿತ್ತು. ಅದನ್ನೆಲ್ಲಾ ಅವರು ಬೇರೆ ಬೇರೆಯ ಕೇಂದ್ರಗಳಿಗೆ ಹಂಚಿದರು. ಅವರ ಬಳಿ ಒಂದು ಟೈಪ್‌ರೈಟರ್ ಇತ್ತು. ಒಂದೇ ಬೆರಳಿನಲ್ಲಿ ಅವರು ಬೆರಳಚ್ಚು ಮಾಡುತ್ತಿದ್ದರು. ಭಾರತೀಯ ವಿದ್ಯಾಭವನವು ಅವರ ಕೆಲವು ಪುಸ್ತಕಗಳನ್ನು ಪ್ರಕಟಿಸಿದೆ. ಈ ಪುಸ್ತಕಗಳಿಂದ ಬರುವ ರಾಜಧನವು ಶಾರದಾ ಮಠಕ್ಕೆ ಹೋಗುತ್ತದೆ. ದೇಣಿಗೆಯನ್ನು ಸಂಗ್ರಹಿಸಲು ಅವರು ಎಂದೂ ಹೋದದ್ದೇ ಇಲ್ಲ. ಜನರು ತಾವಾಗಿಯೇ ಬಂದು ನೀಡುತ್ತಿದ್ದರು. ಅದರಿಂದಾಗಿಯೇ ಹತ್ತು ಹಲವು ಕೇಂದ್ರಗಳನ್ನು ಕಟ್ಟಲು ಅವರಿಗೆ ಸಾಧ್ಯವಾಯಿತು. ಅವರು ದೆಹಲಿ ಕೇಂದ್ರದ ಮುಖ್ಯಸ್ಥ ರಾಗಿದ್ದಾಗ, ಅಲ್ಲಿನ ಭಕ್ತರು ಒಂದು ಮಂದಿರವನ್ನು ಕಟ್ಟಬೇಕೆಂದೂ, ಅದಕ್ಕೆ ಅಗತ್ಯವಾದ ಹಣವನ್ನು ತಾವೇ ಸಂಗ್ರಹಿಸುವುದಾಗಿ ಸ್ವಾಮೀಜಿಯವರಲ್ಲಿ ಬಿನ್ನವಿಸಿಕೊಂಡರು. ಆದರೆ ಅದನ್ನು ನಿರಾಕರಿಸುತ್ತಾ ಸ್ವಾಮೀಜಿಯವರು, ಇಡೀ ವೆಚ್ಚವನ್ನು ಭರಿಸಲು ಶಕ್ತನಿರುವ ಒಬ್ಬನೇ ವ್ಯಕ್ತಿ ಮುಂದೆ ಬರುವವರೆಗೆ ತಾವು ಮಂದಿರವನ್ನು ಕಟ್ಟಲು ಮುಂದಾಗುವುದಿಲ್ಲ ಎಂದು ಹೇಳಿದರು. ಆಗ ಶ್ರೀ ದಾವರ್ ಎಂಬ ಶ್ರೀಮಂತರೊಬ್ಬರು ಮುಂದೆ ಬಂದು ಎಲ್ಲಾ ವೆಚ್ಚವನ್ನು ತಾವೊಬ್ಬರೇ ಭರಿಸಿದರು. ಕೆಲವು ವಿಶ್ವವಿದ್ಯಾಲಯಗಳು ಸ್ವಾಮೀಜಿಯವರಿಗೆ ಗೌರವ ಡಾಕ್ಟರೇಟ್ ಕೊಡಲು ಬಯಸಿದ್ದವು. ಭಾರತ ಸರಕಾರವು ಎರಡನೆಯ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಪದ್ಮ ವಿಭೂಷಣ' ಪ್ರಶಸ್ತಿಯನ್ನು ನೀಡಬಯಸಿತ್ತು. ಆದರೆ, ಸ್ವಾಮೀಜಿ ಅದೆಲ್ಲವನ್ನೂ ನಿರಾಕರಿಸಿದರು. ಎಲ್ಲ ಪ್ರಾಪಂಚಿಕ ಆಕರ್ಷಣೆಯನ್ನೂ ಮೀರಿದ ಅವರು ಒಬ್ಬ ಆದರ್ಶ ಸಂನ್ಯಾಸಿಯಾಗಿದ್ದರು.

**ಸರಳತೆ**

ಅವರೊಬ್ಬ ಸರಳ ಸಂನ್ಯಾಸಿ. ಅವರ ಆವಶ್ಯಕತೆಗಳು ಬಹಳ ಕಡಿಮೆಯಿದ್ದವು ಮತ್ತು ಅವರು ಸೇವಿಸುತ್ತಿದ್ದುದು ಮಿತಾಹಾರ. ಆಡಂಬರ, ಪ್ರದರ್ಶನಗಳಿಂದ ಅವರು ದೂರವೇ ಉಳಿದಿದ್ದರು. ಸರಳವಾದ ಹತ್ತಿ ಬಟ್ಟೆಯನ್ನೇ, ಅದೂ ಇಸ್ತ್ರಿಯನ್ನೂ ಮಾಡದ ಬಟ್ಟೆಯನ್ನೇ, ಅವರು ತೊಡುತ್ತಿದ್ದರು. ಪ್ರತಿಷ್ಠಿತರನ್ನು ನೋಡಲು ಹೋಗುವಾಗಲಾಗಲೀ, ಐ.ಎ.ಎಸ್ ಅಧಿಕಾರಿಗಳನ್ನು ಅಥವಾ ರಕ್ಷಣಾ ಇಲಾಖೆಯ ಶಿಕ್ಷಣ ಸಂಸ್ಥೆಗಳನ್ನು, ವಿಶ್ವವಿದ್ಯಾಲಯಗಳ ಘಟಿಕೋತ್ಸವಗಳನ್ನು ಉದ್ದೇಶಿಸಿ ಮಾತನಾಡಲು ಹೋಗುವಾಗಲಾಗಲೀ, ಅವರು ತೊಡುತ್ತಿದ್ದುದು ಇದೇ ವಸ್ತ್ರ. ಕೆಲವು ವೇಳೆ ಐಷಾರಾಮಿ ರೋಲ್ಸ್ ರಾಯ್ಸ್, ಹೊರ ದೇಶದ ಕಾರುಗಳಲ್ಲಿ ಹೋಗುತ್ತಿದ್ದ ಅವರು ಹಳೆಯ ಟ್ಯಾಕ್ಸಿ, ರಿಕ್ಷಾಗಳಲ್ಲಿಯೂ ಸಂಚರಿಸುತ್ತಿದ್ದರು. ಅವರು ಅವುಗಳ ಬಗ್ಗೆ ಗಮನ ಕೊಡುತ್ತಿರಲಿಲ್ಲ. ಬಹಳಷ್ಟು ಸಲ ಅವರು ರಿಕ್ಷಾಗಳಲ್ಲಿ ಹೋಗುವಾಗ ಅದರ ಕುಲುಕಾಟವನ್ನು ಆನಂದಿಸುತ್ತಿದ್ದರು.

ತಾವು ಯಾರಾದರೂ ಸಾಧುಗಳನ್ನು ನೋಡಿದರೆ, ತಾವೇ ಅವರ ಬಳಿಗೆ ಹೋಗಿ ಕುಶಲವನ್ನು ವಿಚಾರಿಸುತ್ತಿದ್ದರು. ತಾವು ದೊಡ್ಡವರು ಎಂಬ ಭಾವ ಅವರನ್ನು ಕಾಡಿದ್ದೇ ಇಲ್ಲ. ಪ್ರತಿಯೊಬ್ಬರೂ ಅವರನ್ನು ತಮ್ಮವರೆಂದೇ ಗುರುತಿಸುತ್ತಿದ್ದರು.

ನನಗೆ ಒಂದು ಪ್ರಸಂಗ ಜ್ಞಾಪಕಕ್ಕೆ ಬರುತ್ತದೆ. ನಾನಾಗ ದೆಹಲಿ ಕೇಂದ್ರದಲ್ಲಿ ತರುಣ ಬ್ರಹ್ಮಚಾರಿಯಾಗಿದ್ದೆ. ಒಂದು ಬಾರಿ ಮಂದಿರವನ್ನು ತೊಳೆದು ಒರೆಸುತ್ತಿದ್ದಾಗ ಜಾರಿ ಬಿದ್ದು ನನ್ನ ಕಣಕಾಲು ಉಳುಕಿತು. ವೈದ್ಯರು ನನಗೆ ಕೆಲವು ದಿನಗಳವರೆಗೆ ವಿಶ್ರಾಂತಿ ಪಡೆಯಲು ಸೂಚಿಸಿದರು. ಅಲ್ಲಿನ ಗ್ರಂಥಾಲಯದ ಆವರಣದಲ್ಲಿದ್ದ ಒಂದು ಚಿಕ್ಕ ಕೋಣೆ ನನ್ನ ನಿವಾಸಸ್ಥಾನವಾಗಿತ್ತು. ಒಂದು ದಿನ, ಯಾರೋ ಬಾಗಿಲನ್ನು ಬಡಿಯುತ್ತಿರುವ ಶಬ್ದವಾಯಿತು. ತೆರೆದು ನೋಡಿದರೆ, ಸ್ವತಃ ಸ್ವಾಮೀಜಿಯವರೇ ಎದುರಿಗೆ ನಿಂತಿದ್ದರು. ನನ್ನ ಉಳುಕಿದ ಕಣಕಾಲಿನ ಬಗ್ಗೆ ವಿಚಾರಿಸಿದ ಅವರು ನನಗೆ ಒಂದು ದೊಡ್ಡ ಪೊಟ್ಟಣವನ್ನು ಕೊಟ್ಟು ಹೇಳಿದರು: "ಇದರಲ್ಲಿ ಭಾರತೀಯ ವಿದ್ಯಾಭವನವು ಹೊರತರುತ್ತಿರುವ ನನ್ನ ಪುಸ್ತಕದ ಕರಡು ಪ್ರತಿಗಳಿವೆ. ಅವುಗಳನ್ನು ಆದಷ್ಟು ಬೇಗ ನೋಡಿ ಕೊಡು." ಅವರು ನನ್ನಲ್ಲಿಟ್ಟಿದ್ದ ವಿಶ್ವಾಸಕ್ಕೆ ನಾನು ಮಾರುಹೋದೆ. ನಾನು ಹಗಲು ರಾತ್ರಿ ಕುಳಿತು, ೩೦೦ ಪುಟಗಳ ಆ ಕರಡನ್ನು ಪರಿಶೀಲಿಸಿದೆ. ಅದು 'ಬದಲಾಗುತ್ತಿರುವ ಸಮಾಜಕ್ಕೆ ಶಾಶ್ವತ ಮೌಲ್ಯಗಳು' ಎಂಬ ಪುಸ್ತಕ. ನಂತರ ಶ್ರೀಮತಿ ಇಂದಿರಾ ಗಾಂಧಿಯವರಿಂದ ಅದು ಲೋಕಾರ್ಪಣಗೊಂಡಿತು.

೧೯೮೦ರಲ್ಲಿ ನಾನು ಹೈದರಾಬಾದಿಗೆ ಹೋದೆ. ಒಂದು ದಿನ ಸ್ವಾಮೀಜಿಯವರು ನನ್ನ ಕೋಣೆಗೆ ಬಂದು ಒಂದು ಪುಸ್ತಕವನ್ನು ಓದಲು ಕೊಟ್ಟರು. ಅವರು ಉನ್ನತ ನಾಗರಿಕ ಅಧಿಕಾರಿಗಳನ್ನು ಕುರಿತು ಮಾಡಿದ ಉಪನ್ಯಾಸಗಳ ಸಂಗ್ರಹವಾಗಿದ್ದ ಆ ಪುಸ್ತಕವನ್ನು ಭಾರತ ಸರಕಾರ ಪ್ರಕಟಿಸಿತ್ತು. ಅವರು ತಮ್ಮನ್ನು ಬೇರೆಯವರಿಂದ ಪ್ರತ್ಯೇಕವಾಗಿ ಗುರುತಿಸಿಕೊಂಡಿರಲಿಲ್ಲ ಮತ್ತು ಯಾವುದೇ ವಿಶೇಷ ಸವಲತ್ತು ಅಥವಾ ಉಪಚಾರಗಳನ್ನು ಬಯಸುತ್ತಿರಲಿಲ್ಲ. ಎಲ್ಲರೊಂದಿಗೆ ಸರಳವಾಗಿ ನಗುನಗುತ್ತಾ ಬೆರೆಯುತ್ತಿದ್ದರು, ಹಾಸ್ಯ ಚಟಾಕಿಗಳನ್ನು ಹಾರಿಸುತ್ತಿದ್ದರು. ಬೇಲೂರು ಮಠದಲ್ಲಿ ತರುಣ ಬ್ರಹ್ಮಚಾರಿಗಳೊಂದಿಗೆ ವಾಲಿಬಾಲ್ ಆಡುತ್ತಿದ್ದರು. ಅವರು ತಮ್ಮ ಸುತ್ತ ಹರಿಯಬಿಡುತ್ತಿದ್ದ ಸಂತೋಷದ ಪ್ರಭೆಯಾದರೂ ಎಂತಹುದು! ನಿಜವಾಗಿ ಅವರೊಬ್ಬ ಅಪರೂಪದ ವ್ಯಕ್ತಿಯಾಗಿದ್ದರು.

ತರುಣ ಸಂನ್ಯಾಸಿಯೊಬ್ಬರು ತಮ್ಮ ಹೈದರಾಬಾದ್ ಭೇಟಿಯ ಬಗ್ಗೆ ನನಗೆ ಹೇಳಿದರು. ಮೂವರು ತರುಣರು ಸಂನ್ಯಾಸ ಸ್ವೀಕರಿಸಿದ ನಂತರ ತಮ್ಮ ದಕ್ಷಿಣ ಭಾರತದ ಕೇಂದ್ರಗಳಿಗೆ ಹೋಗುವ ಮಾರ್ಗದಲ್ಲಿ ಹೈದರಾಬಾದಿನಲ್ಲಿ ಸ್ವಾಮೀಜಿಯವರನ್ನು ಭೇಟಿಯಾದರು. ಸ್ವಾಮೀಜಿಯವರು ಅವರನ್ನು ಪ್ರೀತಿಪೂರ್ವಕವಾಗಿ ಸ್ವಾಗತಿಸಿದುದಲ್ಲದೆ, ಮರುದಿನ ಅವರನ್ನು ಕೂರಿಸಿಕೊಂಡು ನೋಡಬೇಕಾದ ಮುಖ್ಯ ಸ್ಥಳಗಳನ್ನೆಲ್ಲಾ ವಿವರಿಸಿದರು. ಈ ಎಲ್ಲಾ ಸ್ಥಳಗಳನ್ನು ತೋರಿಸಲು ಅವರ ಜೊತೆಗೆ ಒಬ್ಬ ಮಾರ್ಗದರ್ಶಿಯನ್ನು ಕೂಡ ಕಳುಹಿಸಿದರು.

**ಹಾಸ್ಯಪ್ರಜ್ಞೆ**

ಉಪನ್ಯಾಸಗಳನ್ನು ನೀಡುವಾಗ ಅವರು ಗಂಭೀರವಾಗಿರುತ್ತಿದ್ದರು ಮತ್ತು ಅಂತರ್ಮುಖಿಯಾಗಿರುತ್ತಿದ್ದರು. ಆದರೆ ಉಳಿದಂತೆ ಅವರು ಸರಸವಾಗಿದ್ದು ತಮಾಷೆಯನ್ನು ಬಳಸುತ್ತಿದ್ದರು. ಅವರ ಬತ್ತಳಿಕೆಯಲ್ಲಿ ಅಪಾರವಾದ ಹಾಸ್ಯೋಕ್ತಿಗಳ ಬಾಣಗಳು ತುಂಬಿರುತ್ತಿದ್ದವು. ಮೈಸೂರಿನಲ್ಲಿ ಬಹಳ ಕಾಲದವರೆಗೆ ಇದ್ದುದರಿಂದ ಮೈಸೂರು ಮಹಾರಾಜರ ಬಗ್ಗೆ ಅನೇಕ ಹಾಸ್ಯಪ್ರಸಂಗಗಳನ್ನು ಅವರು ಕೇಳಿದ್ದರು. ಅವುಗಳನ್ನು ನಮಗೆಲ್ಲ ಹೇಳುತ್ತಿದ್ದರು.

ಮೈಸೂರಿನಲ್ಲಿ ಒಬ್ಬ ಭಕ್ತರಿದ್ದರು. ಆಶ್ರಮದಲ್ಲಿದ್ದ ಮಾವಿನಮರಗಳಿಗೆ ನೀರುಣಿಸುವುದು ಮತ್ತು ಅವುಗಳನ್ನು ನೋಡಿಕೊಳ್ಳುವುದು ಅವರ ಕೆಲಸವಾಗಿತ್ತು. ತಮ್ಮ ಬಳಿ ಯಾವುದಾದರೂ ಸ್ವಾಮಿಗಳು ಬರುತ್ತಿದ್ದರೆ ಅವರಿಗೆ

ಕೇಳುವಂತೆ ಇವರು ಜೋರಾಗಿ ಹೇಳುತ್ತಿದ್ದರು 'ಈ ಮರಗಳನ್ನು ನೋಡಿಕೊಳ್ಳುವುದಷ್ಟೇ ನನ್ನ ಕರ್ತವ್ಯ. ಅವುಗಳ ಹಣ್ಣುಗಳ ಮೇಲಿನ ಅಧಿಕಾರ ಸ್ವಾಮಿಗಳದ್ದು ಮಾತ್ರ.'

ದೆಹಲಿ ಕೇಂದ್ರದ ಮುಖ್ಯಸ್ಥರಾಗಿದ್ದಾಗ ಸ್ವಾಮೀಜಿಯವರು ಉತ್ಸವವೊಂದರ ಸಂದರ್ಭದಲ್ಲಿ ಪಂಡಿತರೊಬ್ಬರನ್ನು ಶ್ರೀ ರಾಮಕೃಷ್ಣರ ಬಗ್ಗೆ ಮಾತನಾಡಲು ಕರೆಸಿದ್ದರು. ಅವರಿಗೆ ನೀಡಿದ್ದ ಸಮಯ ೪೫ ನಿಮಿಷಗಳು. ಈ ಪಂಡಿತರು ರಾಮ, ಕೃಷ್ಣ ಪದಗಳ ವ್ಯುತ್ಪತ್ತಿಯ ಬಗ್ಗೆ, ಅವುಗಳೆರಡೂ ಕೂಡಿ ರಾಮಕೃಷ್ಣ ಆದ ಬಗ್ಗೆ, ಈ ಸಮಾಸದ ಬಗ್ಗೆ ಪಾಣಿನಿ, ಭರ್ತೃಹರಿ, ಪತಂಜಲಿ ಮೊದಲಾದ ವ್ಯಾಕರಣಕಾರರು ಏನೇನು ಹೇಳಿದ್ದಾರೆ ಎಂಬುದನ್ನೆಲ್ಲಾ ವಿಸ್ತಾರವಾಗಿ ಹೇಳುತ್ತಾ ಹೋದರು. ಅದು ಹಾಗೆಯೇ ಮುಂದುವರಿಯುತ್ತಾ ಹೋಯಿತು. ನಂತರ ಮಹಾರಾಜ್ ಅವರು 'ಈ ಪಂಡಿತರು ತಮ್ಮ ೪೫ ನಿಮಿಷಗಳನ್ನು ಮುಗಿಸುವ ವೇಳೆಗೆ ರಾಮಕೃಷ್ಣರು ಹುಟ್ಟಿರುವುದಿಲ್ಲ' ಎಂದು ಹಾಸ್ಯವಾಗಿ ಹೇಳಿದರು.

ಒಂದು ಬಾರಿ ದೀಪಾವಳಿಯ ಸಮಯದಲ್ಲಿ ನಾನು ಹೈದರಾಬಾದನಲ್ಲಿ ಇದ್ದೆ. ದೀಪಾವಳಿಯೆಂದರೆ ಸಿಹಿ ತಿನಿಸುಗಳ ಸುಗ್ಗಿಯೇ. ನಾವೆಲ್ಲ ಊಟಕ್ಕೆ ಕುಳಿತಿದ್ದಾಗ, ಊಟ ಬಡಿಸುತ್ತಿದ್ದವರು ವಿವಿದ ಸಿಹಿಗಳ ರಾಶಿಯನ್ನೇ ನನ್ನ ತಟ್ಟೆಗೆ ಅಡಕಿದರು. ನಾನು ಅವರನ್ನು ಕುರಿತು 'ನನಗೆ ಒಂದು ಪಾತ್ರೆಯನ್ನು ಕೊಡಿ, ಹೆಚ್ಚಾದ ಸಿಹಿಗಳನ್ನು ನಾನು ನನ್ನ ಕೊಠಡಿಗೆ ಕೊಂಡೊಯ್ಯುತ್ತೇನೆ' ಎಂದೆ. ನನ್ನ ಎದುರಿಗೆ ಕುಳಿತಿದ್ದ ಸ್ವಾಮೀಜಿಯವರು ತಕ್ಷಣ 'ಕೂಡದು, ನೀವು ಈ ಎಲ್ಲಾ ಸಿಹಿಯನ್ನೂ ಇಲ್ಲಿಯೇ ತಿನ್ನಬೇಕು. ನಾವು ನಿಮ್ಮನ್ನು ನಿಮ್ಮ ಕೊಠಡಿಗೆ ಕೊಂಡೊಯ್ದುಬಿಡುತ್ತೇವೆ' ಎಂದರು.

ಅವರ ಪಾಲಿಗೆ ಹಣ ಕೇವಲ ವ್ಯವಹಾರಾತ್ಮಕವಾದುದು. ಹಣದ ವ್ಯವಹಾರದ ಬಗ್ಗೆ ಅವರಿಗೆ ಹೆಚ್ಚೇನೂ ತಿಳಿಯದು. ಲೆಕ್ಕಪತ್ರಗಳ ಬಗ್ಗೆ ಅವರು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಆದಾಯ, ವೆಚ್ಚ, ಹಣ ಹೂಡಿಕೆ–ಇವುಗಳು ಅವರ ತಲೆಯ ಒಳಗೆ ಪ್ರವೇಶಿಸುತ್ತಲೇ ಇರಲಿಲ್ಲ. ಅವೆಲ್ಲಾ ಏನಿದ್ದರೂ ಇತರ ಸ್ವಾಮಿಗಳ ಪಾಲಿಗೆ. ಹೊರದೇಶಗಳಿಗೆ ಹೋಗುವಾಗಲೂ ಅವರು ಹಣವನ್ನು ಒಯ್ಯುತ್ತಿರಲಿಲ್ಲ. ತಮಗೆ ಜನತೆ ಕೊಟ್ಟ ಹಣವನ್ನೆಲ್ಲಾ ಅವರು ವಿವಿಧ ಕೇಂದ್ರಗಳಿಗೆ ಹಂಚುತ್ತಿದ್ದರು. ಆದರೆ ಅವರ ಮೇಲೆ ಲಕ್ಷ್ಮಿ ಹಾಗು ಸರಸ್ವತಿಯರಿಬ್ಬರ ಕೃಪೆಯೂ ಹೇರಳವಾಗಿತ್ತು.

ಅವರ ದುರ್ಬಲತೆಯೆಂದರೆ ಅವರು ಎಲ್ಲರನ್ನು, ಯಾವುದೇ ಅಂತರ ಮಾಡದೆ, ನಂಬುತ್ತಿದ್ದರು. ಹೀಗಾಗಿ ಹಲವರು ಅವರ ವಿಶ್ವಾಸವನ್ನು ಉಳಿಸಿಕೊಳ್ಳದೆ ಅವರಿಗೆ ಮೋಸಮಾಡಿದರು. ಇಂತಹವರಿಗಾಗಿ ಸ್ವಾಮೀಜಿಗಳು ಒಳಗೊಳಗೇ ನೋವನ್ನು ತಿನ್ನುತ್ತಿದ್ದರು. ಹಾಗಿದ್ದರೂ ಅವರಿಗೆ ಜನರ ಒಳ್ಳೆಯತನದಲ್ಲಿದ್ದ ಗಾಢ ನಂಬಿಕೆ ಎಂದೂ ಸಡಿಲವಾಗಲಿಲ್ಲ.

ಅವರ ನಿಧನದಿಂದಾಗಿ ರಾಮಕೃಷ್ಣ ಸಂಘಟನೆ ಮಾತ್ರ ಮಹಾತ್ಮನೊಬ್ಬನನ್ನು ಕಳೆದುಕೊಳ್ಳಲಿಲ್ಲ, ಭಾರತ ದೇಶವೇ ತನ್ನೊಬ್ಬ ಶ್ರೇಷ್ಠ ಪುತ್ರನನ್ನು ಕಳೆದುಕೊಂಡಿತು.

* * * *

# ೨೭. ಪರಮಹಂಸರ ನಿಜವಾದ ಭಕ್ತ

**–ಸ್ವಾಮಿ ಶಿವಪ್ರಸಾದಾನಂದ***

ನಾನು ನ್ಯೂಯಾರ್ಕಿನ ನಮ್ಮ ಆಶ್ರಮದಲ್ಲಿ (ರಾಮಕೃಷ್ಣ ವಿವೇಕಾನಂದ ಕೇಂದ್ರದಲ್ಲಿ) ಸ್ವಯಂಸೇವಕನಾಗಿದ್ದಾಗ ಸ್ವಾಮಿ ರಂಗನಾಥಾನಂದರ ಬಗ್ಗೆ ತಿಳಿದುಕೊಂಡೆ. ಇದು ಬಹುಶಃ ೧೯೬೫ರ ಆಸುಪಾಸಿನಲ್ಲಿ. ಆದರೆ ನನಗೆ ಅವರ ವ್ಯಕ್ತಿಗತ ಪರಿಚಯವಿರಲಿಲ್ಲ. ಇದು ನನಗೆ ದೊರಕಿದ್ದು, ೧೯೭೦ರಲ್ಲಿ, ಮಹಾರಾಜ್ ಅವರು ಥೌಸಂಡ್ ಐಲಂಡ್ ಪಾರ್ಕ್‌ಗೆ ಬಂದಿದ್ದಾಗ. ನಾನು ಸ್ವಾಮೀಜಿಯವರು ಇದ್ದ ವಿವೇಕಾನಂದ ಪಾರ್ಕ್‌ನಲ್ಲಿಯೇ ಇಳಿದುಕೊಂಡಿದ್ದೆ. ಅವರು ಅಲ್ಲಿಯ ಕೇಂದ್ರದ ಮುಖ್ಯಸ್ಥರಾಗಿದ್ದ ಸ್ವಾಮಿ ನಿಖಿಲಾನಂದ ಮಹಾರಾಜ್ ಅವರನ್ನು ಭೇಟಿಮಾಡಲು ಬಂದಿದ್ದರು.

ನಾನು ಅಡುಗೆ ಮೊದಲಾದ ಕೆಲಸದಲ್ಲಿ ಸಂಪೂರ್ಣವಾಗಿ ತೊಡಗಿಕೊಂಡಿದ್ದರಿಂದ, ಈ ಇಬ್ಬರು ಸ್ವಾಮೀಜಿಗಳು ಭೇಟಿಯಾದಾಗ ಅಲ್ಲಿರಲು ಸಾಧ್ಯ ವಾಗಿರಲಿಲ್ಲ. ನನ್ನ ಮನಸ್ಸನ್ನು ತಟ್ಟಿದ ವಿಷಯವೆಂದರೆ, ಸ್ವಾಮಿ ರಂಗನಾಥಾನಂದರ ನಿರಾಡಂಬರ ವ್ಯಕ್ತಿತ್ವ. ಅವರು ತಮ್ಮನ್ನು ದೊಡ್ಡವರೆಂದು ಎಂದೂ ತೋರಿಸಿ ಕೊಂಡಿದ್ದಿಲ್ಲ. ಬದಲಿಗೆ, ತಾವೂ ಒಬ್ಬ ಭಕ್ತರು ಎಂಬುದಷ್ಟೇ ಅವರ ಭಾವದಲ್ಲಿದ್ದ ಹಾಗೆ ತೋರುತ್ತಿತ್ತು. ನನ್ನಂತಹ ತರುಣರ ಅಥವಾ ಭಕ್ತರ ಮಧ್ಯೆ ಅತ್ಯಂತ ಸಂಭಾವಿತತೆಯಿಂದ ನಡೆದುಕೊಳ್ಳುತ್ತಿದ್ದರು. ಅಲ್ಲದೆ, ಹಿರಿಯ ಸ್ವಾಮೀಜಿಯವರನ್ನು ಬಹಳ ಪೂಜ್ಯ ಭಾವದಿಂದ, ಗೌರವದಿಂದ ನೋಡುತ್ತಿದ್ದರು.

ನಮ್ಮ ಆಶ್ರಮಕ್ಕೆ ಹತ್ತಿರದಲ್ಲಿದ್ದ ಸೇಂಟ್ ಲಾರೆನ್ಸ್ ನದಿಯ ತಣ್ಣಗಿನ ನೀರಿನಲ್ಲಿ ನಾವು ನಿತ್ಯವೂ ಮೀಯುತ್ತಿದ್ದೆವು. ಒಂದು ದಿನ ಸ್ವಾಮಿ ರಂಗನಾಥಾನಂದರೂ ನಮ್ಮೊಂದಿಗೆ ಬಂದು ಆ ನದಿಯಲ್ಲಿ ಈಜಿದರು. ಅವರೊಬ್ಬ ಉತ್ತಮ ಈಜುಗಾರರಾಗಿದ್ದರು. ಅಂದು ಅವರು ನಮ್ಮೊಂದಿಗೆ ಆ ತಣ್ಣಗಿನ ನದಿಯಲ್ಲಿ ಅರ್ಧ ಗಂಟೆ ಕಳೆದರು.

ಇಲ್ಲಿ ನಾನೊಂದು ಮಾತನ್ನು ಹೇಳಬೇಕು. ಆ ಭೇಟಿಯಲ್ಲಾಗಲೀ ಅಥವಾ ತದನಂತರದ ಹೈದರಾಬಾದ್, ಬೇಲೂರು ಮಠಗಳಲ್ಲಿ ಅವರನ್ನು ಸಂಧಿಸಿದಾಗಲಾಗಲೀ ನಾವು ಪರಸ್ಪರ ಹೆಚ್ಚು ಸಂಭಾಷಿಸಲಿಲ್ಲ. ನಾನು ಅವರ ಸಾನ್ನಿಧ್ಯದಲ್ಲಿ ಅನುಭವಿಸಿದ ಪ್ರಶಾಂತತೆಯಿಂದಾಗಿ, ಮಾತನಾಡಿ ಅದನ್ನು ಕೆಡಿಸಿಕೊಳ್ಳಲು ನಾನು ಬಯಸಲಿಲ್ಲ. ಅವರೊಡನೆ ನನ್ನ ವೈಯಕ್ತಿಕ ವಿಷಯಗಳನ್ನು ಪ್ರಸ್ತಾಪಿಸುವ ಅಗತ್ಯವೂ ನನಗೆ ಕಾಣಲಿಲ್ಲ. ಮಹಾರಾಜ್ ಅವರು ಯಾವಾಗಲೂ ವಿಷಯನಿಷ್ಠವಾಗಿ ಮಾತನಾಡುತ್ತಾರೆಂದೂ, ಬೌದ್ಧಿಕವಾಗಿ ಹಾಗೂ ಆಸಕ್ತಿಪೂರ್ಣವಾಗಿ ಇರುತ್ತದೆ ಎಂದೂ ನಾವು ಭಾವಿಸುತ್ತಿದ್ದೆವು. ಇದು ಎಂದೂ ಸುಳ್ಳಾಗಲಿಲ್ಲ.

ಸ್ವಾಮಿ ರಂಗನಾಥಾನಂದರು ನನ್ನನ್ನು ಗುರುತಿಸಿದರು ಮತ್ತು ನನ್ನೊಂದಿಗೆ ಕೊನೆಯವರೆಗೂ ಬಹಳ ಸ್ನೇಹಪೂರ್ಣವಾಗಿ ನಡೆದುಕೊಳ್ಳುತ್ತಿದ್ದರು. ಅವರ ಪರಿಚಯ, ಸಹವಾಸ ನನಗೆ ದೈವಕೃಪೆಯೆಂದೇ ಭಾವಿಸುತ್ತೇನೆ. ಸ್ವಾಮಿ ರಂಗನಾಥಾನಂದರು ಪರಮಹಂಸರ, ಶ್ರೀಮಾತೆಯವರ ಹಾಗೂ ಸ್ವಾಮೀಜಿಯವರ ಮತ್ತು ಗೀತೆ, ಉಪನಿಷತ್ತುಗಳ ನಿಜವಾದ ಭಕ್ತರಾಗಿದ್ದರು.

* * * *

---

* ಬಿಹಾರದ ಛಾಪ್ರಾದ ರಾಮಕೃಷ್ಣ ಮಿಷನ್ನಿನ ಆಶ್ರಮದ ಸಂನ್ಯಾಸಿ.

# ೨೮. ಸ್ವಾಮಿ ರಂಗನಾಥಾನಂದರು– ನಾನು ಕಂಡಂತೆ

–ಸ್ವಾಮಿ ಸುರೇಶಾನಂದ*

ಸುಮಾರು ೧೯೫೩ರಷ್ಟು ಹಿಂದೆ ಒಂದು ದಿನ ಸಂಜೆಯ ವಾಯುಸೇವನೆಯ ಸಮಯದಲ್ಲಿ ಪೂಜ್ಯ ಸ್ವಾಮಿ ಯತೀಶ್ವರಾನಂದರು ನನ್ನನ್ನು ಕುರಿತು ಹೇಳಿದರು: "ಶಂಕರ್ ಬರುತ್ತಿದ್ದಾನೆ. ಅವರಿಗೆ ಒಂದು ಅತಿಥಿ ಕೋಣೆಯನ್ನು (ನಮ್ಮಲ್ಲಿದ್ದ ಒಂದು ಅತಿಥಿ ಕೋಣೆಯನ್ನು) ಸಿದ್ಧವಾಗಿರಿಸು" ಎಂದರು. ಶಂಕರ್ ಎಂದು ಅವರು ಹೇಳಿದ್ದು ಪೂಜ್ಯ ಸ್ವಾಮಿ ರಂಗನಾಥಾನಂದರನ್ನು ಕುರಿತು. ನಮ್ಮ ಆಶ್ರಮದ ಸೋದರರ ಮೂಲಕವೂ ಅವರ ಹೆಸರನ್ನು ಹಲವು ಬಾರಿ ಕೇಳಿದ್ದೆ. ಅಲ್ಲದೆ, ಸ್ವಾಮೀಜಿಯವರು ಆಗ ದೆಹಲಿಯ ಕೇಂದ್ರದ ಮುಖ್ಯಸ್ಥರಾಗಿದ್ದರು. ಹೀಗಾಗಿ, ಅವರ ಬರವನ್ನು ನಾನು ಅತ್ಯಂತ ಕಾತರದಿಂದ ಎದುರುನೋಡುತ್ತಿದ್ದೆ. ಎತ್ತರದ ನಿಲುವಿನ, ನೆಟ್ಟಗೆ ನಡೆಯುತ್ತಿದ್ದ, ಸಪೂರ ದೇಹದ ಅವರು ಬಂದರು.

ಪರಿಚಯ ಸಾಲದುದರಿಂದ ಅವರಿಗೆ ಪ್ರಣಾಮವನ್ನು ಸಲ್ಲಿಸುವವರಲ್ಲಿ ನಾನೇ ಕೊನೆಯವನಾಗಿದ್ದೆ. ನಾನು ಸಂಕೋಚದಿಂದ ಹಿಂಜರಿಯುತ್ತಿದ್ದಾಗ ಅವರೇ 'ಬನ್ನಿ' ಎಂದರು. ಅವರು ನಮ್ಮಲ್ಲಿದ್ದ ಮುಂದಿನ ಎರಡು ಮೂರು ದಿನಗಳಲ್ಲಿ ಅವರ ಹೆಚ್ಚೇನೂ ಇಲ್ಲದ ಅಗತ್ಯಗಳನ್ನು ನೋಡಿಕೊಳ್ಳುವ ಭಾಗ್ಯ ನನದಾಗಿತ್ತು. ಅವರ ಅಗತ್ಯವೆಂದರೆ ಅವರ ಕೊಠಡಿಯಲ್ಲಿ ಇರಿಸಬೇಕಿದ್ದ ಒಂದು ಸಣ್ಣ ಚೆಂಬು ನೀರು ಮಾತ್ರ. ಅವರು ತಮ್ಮ ಬಟ್ಟೆಗಳನ್ನು ತಾವೇ ಒಗೆದುಕೊಳ್ಳುತ್ತಿದ್ದರು. ಅದನ್ನು ಒಣಗಿಸಲು ಹರಡುವುದಕ್ಕೆ ಮತ್ತು ಒಣಗಿದ ನಂತರ ಅವರಿಗೆ ತಂದುಕೊಡುವುದಕ್ಕೆ ಮಾತ್ರ ನನಗೆ ಅನುಮತಿ ಇರುತ್ತಿತ್ತು.

ಪೂಜ್ಯ ಮಹಾರಾಜ್ ಅವರು ಒಂದು ದಿನ ಒಂದು ಉಪನ್ಯಾಸವನ್ನು ನೀಡಿದರು. ಅದಕ್ಕೆ ಹಾಜರಾದವರ ಸಂಖ್ಯೆ, ಸಾಮಾನ್ಯವಾಗಿ ಭಾನುವಾರದ ಉಪನ್ಯಾಸಗಳಿಗೆ ಬರುವ ಜನಗಳ ಸಂಖ್ಯೆಗಿಂತ ಬಹಳ ಅಧಿಕವಾಗಿದ್ದಿತು. ಉಪನ್ಯಾಸ ಮುಗಿದ ನಂತರ ಅವರೊಡನೆ ಮಾತನಾಡಲು ಹಲವಾರು ಜನರು ಕಾಯುತ್ತಾ ಕುಳಿತಿದ್ದರು. ಅವರು ಬೆಂಗಳೂರಿನ ಆಶ್ರಮದಲ್ಲಿ ಅಮೂಲ್ಯ ಸೇವೆಯನ್ನು ಸಲ್ಲಿಸಿ, ಅಲ್ಲಿಂದ ತೆರಳಿ ಹದಿನೈದು ವರ್ಷಗಳಾಗಿದ್ದರೂ, ತಮ್ಮ ಸುತ್ತ ನೆರೆದಿದ್ದ ಜನರನ್ನು ಸುಲಭವಾಗಿ ಗುರುತಿಸುತ್ತಿದ್ದುದನ್ನು ನಾನು ನೋಡಿದೆ. ಅವರ ಹೆಸರುಗಳೂ ಅವರ ನೆನಪಿನಿಂದ ಮರೆಯಾಗಿರಲಿಲ್ಲ. ಅವರ ವೈಯಕ್ತಿಕ ವಿಷಯ, ಕುಟುಂಬದ ವಿಷಯಗಳನ್ನು ಅವರು ಕೇಳುತ್ತಿದ್ದರು.

ನಾವು ಬೆಂಗಳೂರು ಆಶ್ರಮದಲ್ಲಿ ಇದ್ದ ಹತ್ತೊಂಬತ್ತು ವರ್ಷಗಳಲ್ಲಿ ಮಹಾರಾಜ್ ಅವರು ಹಲವು ಬಾರಿ ಅಲ್ಲಿಗೆ ಬಂದಿದ್ದರು ಮತ್ತು ಅವರ ಸೇವೆ ನನ್ನ ಭಾಗ್ಯವಾಗಿತ್ತಷ್ಟೇ ಅಲ್ಲದೆ, ಅವರಿಗೆ ನಾನು ಹತ್ತಿರದವನಾಗಿದ್ದೆ. ಸಹಜವಾಗಿ ನಮ್ಮಿಬ್ಬರ ನಡುವೆ ಒಂದು ಬಗೆಯ ಆತ್ಮೀಯ ಸಂಬಂಧ ಬೆಳೆದಿತ್ತು. ೧೯೮೬ರಲ್ಲಿ ಒಮ್ಮೆ ನಮ್ಮಲ್ಲಿಗೆ ಬಂದಿದ್ದಾಗ, ಒಂದು ದಿನ ಅವರು ಇದ್ದಕ್ಕಿದ್ದ ಹಾಗೆ ತೆಂಗಿನ ಮರಗಳ ನಡುವೆ ಇದ್ದ ನನ್ನ ಕುಟೀರಕ್ಕೆ ದಯಮಾಡಿಸಿದರು. ಹಾಗೆ ಬಂದವರು ನಿನಗೆ ಅಮೇರಿಕಾಕ್ಕೆ ಹೋಗುವ ಅಸಕ್ತಿಯಿದೆಯೇ ಎಂದು ಕೇಳಿದರು. ನಾನು ದೃಢವಾಗಿ ಇಲ್ಲ ಎಂದೆ. "ಅಂದರೆ ನೀವು ಹಳ್ಳಿಯ ರೈತರಾಗಿಯೇ ಇರಬೇಕೆಂದಿರುವಿರಾ?" ಎಂದು ಕೇಳಿದರು. ನಾವಿಬ್ಬರೂ ನಗುತ್ತಾ ಆಶ್ರಮದ ಮುಖ್ಯ ಕಟ್ಟಡದತ್ತ ಬಂದೆವು.

---

* ಮೈಸೂರಿನ ರಾಮಕೃಷ್ಣಾಶ್ರಮದ ಹಿರಿಯ ಸಂನ್ಯಾಸಿ

೧೯೭೦ರಲ್ಲಿ ನನ್ನನ್ನು ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಮುಖ್ಯಸ್ಥನನ್ನಾಗಿ ನೇಮಿಸಿದ್ದರು. ೧೯೭೮ರಲ್ಲಿ ಅದರ ಬೆಳ್ಳಿಹಬ್ಬದ ಉತ್ಸವದಲ್ಲಿ ಭಾಗವಹಿಸಲು ನಾನು ಮಹಾರಾಜ್ ಅವರನ್ನು ಆಹ್ವಾನಿಸಿದೆ. ಅವರು ಬಂದು ಮೂರು ದಿನದ ಆ ಉತ್ಸವದ ಕಳೆಯನ್ನು ಹೆಚ್ಚಿಸಿದರು ಮತ್ತು ಪ್ರತಿ ಅಧಿವೇಶನದಲ್ಲಿಯೂ ಮಾತನಾಡಿದರು. ಅಲ್ಲಿ ನೆರೆದಿದ್ದ ಜನಗಳಿಗೆ, ಅದರಲ್ಲೂ ವಿದ್ಯಾಶಾಲೆಯ ವಿದ್ಯಾರ್ಥಿಗಳಿಗೆ ಅವರ ಭಾಷಣಗಳು ವಿಶೇಷ ಆಕರ್ಷಣೆಯಾಗಿದ್ದವು ಎಂಬುದನ್ನು ಹೇಳಬೇಕಾಗಿಯೇ ಇಲ್ಲ. ಉಲ್ಲಾಸಕರವಾಗಿದ್ದ ಅವರ ಭಾಷಣಗಳು ಎಲ್ಲರಿಗೂ ಬೌದ್ಧಿಕ ಪರ್ವದ ವಾತಾವರಣವನ್ನು ಸೃಷ್ಟಿಸಿದ್ದವು.

ಪೂಜ್ಯ ಮಹಾರಾಜ್ ಅವರಿಗೆ ಮೈಸೂರಿನ ಬಗ್ಗೆ ಒಂದು ವಿಶೇಷ ಆಕರ್ಷಣೆಯಿತ್ತು. ಪ್ರತಿಯೊಂದು ಸಣ್ಣ ಸಣ್ಣ ವಿಷಯಗಳನ್ನು, ಇಲ್ಲಿನ ತಾವು ಸಂಪರ್ಕಿಸಿದ ಜನಗಳನ್ನು, ಅವರು ನೆನೆಯುತ್ತಿದ್ದ ರೀತಿಯಲ್ಲಿ ಈ ಪ್ರೀತಿ ವ್ಯಕ್ತವಾಗುತ್ತಿತ್ತು. ಒಮ್ಮೆ ಅವರು ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳೊಂದಿಗೆ ೭೦ ಮೈಲಿ ದೂರದಲ್ಲಿರುವ ಬಿಳಿಗಿರಿ ರಂಗನ ಬೆಟ್ಟಕ್ಕೆ ಕಾಲುನಡಿಗೆಯಲ್ಲಿ ಪ್ರವಾಸ ಮಾಡಿದ್ದರು (ಅಂದರೆ ಹೋಗುತ್ತಾ ಬರುತ್ತಾ ಒಟ್ಟು ನೂರ ನಲವತ್ತು ಮೈಲಿ). ಅದರ ಸಂತೋಷ, ಎದುರಾದ ತೊಂದರೆಗಳು ಇವುಗಳನ್ನೆಲ್ಲಾ ಅವರು ವಿವರವಾಗಿ ಹೇಳುತ್ತಿದ್ದರು.

೧೯೪೪ರಲ್ಲಿ ನಡೆದ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸೆಮಿನಾರನ್ನು ಉದ್ಘಾಟಿಸಿ ಅದರಲ್ಲಿ ಭಾಗವಹಿಸಲು ಅವರನ್ನು ಆಹ್ವಾನಿಸಿದ್ದೆವು. ಆಗ ಸ್ವಲ್ಪ ಕಾಲದವರೆಗೆ ಮೈಸೂರು ಬೆಂಗಳೂರಿನ ನಡುವೆ ವಿಮಾನದ ಸೇವೆ ಇತ್ತು. ಡಾ. ಪ್ರಭುಶಂಕರ ಸ್ವಾಮೀಜಿಯವರನ್ನು ಕರೆತರಲು ವಿಮಾನ ನಿಲ್ದಾಣಕ್ಕೆ ಹೋಗಿದ್ದರು. ಬರುವಾಗ ಪೂಜ್ಯ ಮಹಾರಾಜ್ ಅವರು ಕನ್ನಡ ಸಾಹಿತ್ಯದ ಅಸಾಧಾರಣ ಪ್ರತಿಭೆಯಾದ ಹಾಗೂ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ॥ ಕೆ.ವಿ. ಪುಟ್ಟಪ್ಪನವರ ಬಗ್ಗೆ ವಿಚಾರಿಸಿದರು. ಇದ್ದಕ್ಕಿದ್ದ ಹಾಗೆ ಡಾ॥ ಪುಟ್ಟಪ್ಪನವರ ಮನೆಗೆ ತಮ್ಮನ್ನು ಕರೆದುಕೊಂಡು ಹೋಗುವಂತೆ ಕೇಳಿದರು. ಹಾಗೆ ಅಲ್ಲಿಗೆ ಹೋಗಿ ಸ್ವಾಮೀಜಿಯವರು ಡಾ॥ ಪುಟ್ಟಪ್ಪನವರ ಜೊತೆಯಲ್ಲಿ ಕಳೆದ ಆ ೪೫ ನಿಮಿಷಗಳ ರಸಪೂರ್ಣ ಅವಧಿ, ಪ್ರಭುಶಂಕರ ಹಾಗೂ ನನಗೆ ಒಂದು ಸಾಹಿತ್ಯದ ರಸದೌತಣವಾಗಿತ್ತು. ಅವರ ಸಂಭಾಷಣೆಯು ಹಾಸ್ಯಚಟಾಕಿಗಳಿಂದ, ಮಧುರ ಸ್ಮೃತಿಗಳಿಂದ ಕೂಡಿತ್ತು. ಡಾ॥ ಪುಟ್ಟಪ್ಪನವರು ವಿದ್ಯಾರ್ಥಿಯಾಗಿದ್ದಾಗ ಮತ್ತು ನಂತರ ಉಪನ್ಯಾಸಕರಾಗಿದ್ದಾಗ ಒಟ್ಟು ಹನ್ನೆರಡು ವರ್ಷಗಳು ಮೈಸೂರಿನ ಆಶ್ರಮದಲ್ಲಿ ಇದ್ದರು. ಇದರಿಂದಾಗಿ ಅವರು ಮತ್ತು ಸ್ವಾಮೀಜಿಯವರು ಆತ್ಮೀಯ ಗೆಳೆಯರಾಗಿದ್ದರು.

(ಇಲ್ಲಿ ಇನ್ನೊಂದು ಸಂಗತಿಯನ್ನು ಗಮನಿಸಬಹುದು. ಡಾ॥ ಪುಟ್ಟಪ್ಪನವರು ಬರೆದ ಶ್ರೀ ರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಗಳು ಇಂದಿನವರೆಗೂ ಕನ್ನಡದಲ್ಲಿ ಬಂದ ಜನಪ್ರಿಯ ಜೀವನ ಚರಿತ್ರೆಗಳಾಗಿವೆ. ಅವನ್ನು ಮೊದಲು ೧೯೩೨ರಲ್ಲಿ ಮೈಸೂರು ವಿಶ್ವವಿದ್ಯಾಲಯದ ವತಿಯಿಂದ ಪ್ರಕಟಿಸಲಾಗಿತ್ತು. ಅನಂತರ ನಮ್ಮ ಕೋರಿಕೆಯ ಮೇಲೆ ಅದರ ಎಲ್ಲಾ ಹಕ್ಕುಗಳನ್ನೂ ಆಶ್ರಮಕ್ಕೆ ನೀಡಲಾಗಿದೆ.)

ಒಮ್ಮೆ ಪೂಜ್ಯ ಮಹಾರಾಜ್ ಅವರು ಬೆಂಗಳೂರಿನಿಂದ ಮೈಸೂರಿಗೆ ಅತಿವೇಗದ ರೈಲಿನಲ್ಲಿ ಹೋಗುವ ಇಚ್ಛೆಯನ್ನು ವ್ಯಕ್ತಪಡಿಸಿದ್ದರು. ಮಾಮೂಲಿನಂತೆ ನಾನು ಅವರ ಸಂಗಡ ಹೊರಟೆ. ರೈಲಿನಲ್ಲಿ ತ್ರಿಶೂರು ಮಠದ ಮುಖ್ಯಸ್ಥರಾದ ಸ್ವಾಮಿ ಶಕ್ರಾನಂದ ಹಾಗು ನಾನು ಅವರ ಎರಡೂ ಬದಿಯಲ್ಲಿ ಕುಳಿತಿದ್ದೆವು. ಹಾಗೆ ಪ್ರಯಾಣ ಮಾಡುವಾಗ ನಮಗೆ ಅವರು ಒಂದು ಹಾಸ್ಯಪ್ರಸಂಗವನ್ನು ತಿಳಿಸಿದರು.

ಇಬ್ಬರು ಆಂಗ್ಲರು ಒಮ್ಮೆ ಕೇರಳದಲ್ಲಿ ರೈಲಿನ ಮೊದಲನೆಯ ದರ್ಜೆಯಲ್ಲಿ ಪ್ರಯಾಣ ಮಾಡುತ್ತಿದ್ದರು. ಅದು ಬ್ರಿಟಿಷರ ಆಳ್ವಿಕೆಯ ಕಾಲ. ಆಗ ಮೊದಲನೆಯ ದರ್ಜೆ ಹೆಚ್ಚೂ ಕಡಿಮೆ ಬಿಳಿಯರಿಗೇ ಮೀಸಲಾಗಿತ್ತು.

ಒಂದು ನಿಲ್ದಾಣದಲ್ಲಿ, ತಲೆಯಲ್ಲಿ ಶಿಖೆ, ಹಣೆಯಲ್ಲಿ ವಿಭೂತಿಯಿದ್ದ, ಮತ್ತು ಪಕ್ಕಾ ಕೇರಳದ ಸಾಂಪ್ರದಾಯಿಕ ಶೈಲಿಯಲ್ಲಿ ಬಟ್ಟೆ ತೊಟ್ಟಿದ್ದ ಒಬ್ಬ ಕಟ್ಟಾ ನಂಬೂದಿರಿ ಬ್ರಾಹ್ಮಣ ಈ ಬಿಳಿಯರಿಬ್ಬರ ನಡುವೆ ಒಂದು ಕುಳಿತ. ಅವರಿಬ್ಬರಿಗೂ ಕಿರಿಕಿರಿಯಾಯಿತು. ಅವರಲ್ಲಿ ಒಬ್ಬ 'ಎಂತಹ ಮೂರ್ಖ ಇವನು' ಎಂದರೆ, ಇನ್ನೊಬ್ಬ 'ಇವನೊಬ್ಬ ಕತ್ತೆ' ಎಂದ. ಆ ಬ್ರಾಹ್ಮಣ ಕೊಂಚವೂ ಕ್ಷೋಭೆಗೊಳ್ಳದೆ ಶಾಂತವಾಗಿಯೇ ಹೇಳಿದ: 'ನಾನು ಅವರಿಬ್ಬರ ನಡುವೆ ಕುಳಿತಿದ್ದೇನೆ ಎಂದುಕೊಂಡಿದ್ದೇನೆ.' ಇದನ್ನು ಕೇಳಿದ ನಾವಿಬ್ಬರಷ್ಟೇ ಅಲ್ಲದೆ, ಸುತ್ತ ಕುಳಿತಿದ್ದ ಪ್ರಯಾಣಿಕರೆಲ್ಲರೂ ನಗುವಿನಲ್ಲಿ ಮುಳುಗಿದರು. ಪ್ರಾಸಂಗಿಕವಾಗಿ ಹೇಳಬೇಕೆಂದರೆ, ಅಂದಿನ ನಂಬೂದಿರಿ ಬ್ರಾಹ್ಮಣರು ಇಂಗ್ಲಿಷ್ ಶಿಕ್ಷಣವನ್ನು ಪಡೆದಿದ್ದರೂ, ಅವರ ವೇಷಭೂಷಣಗಳಲ್ಲಿ ತಮ್ಮ ಸಂಪ್ರದಾಯವನ್ನು ಬಿಡದೆ ಪಾಲಿಸುತ್ತಿದ್ದರು.

ಪ್ರಾಯಶಃ ಓದುಗರಿಗೆ ಗೊತ್ತಿರಬಹುದು. ಪೂಜ್ಯ ಮಹಾರಾಜ್ ಅವರು ನಮ್ಮ ಸಂಘಕ್ಕೆ ಸೇರಿದುದು ಮೈಸೂರಿನಲ್ಲಿಯೇ. ಅವರು ಅಲ್ಲಿ ದಣಿವರಿಯದೇ ಒಂಬತ್ತು ವರ್ಷಗಳವರೆಗೆ ದುಡಿದರು. ಆಗ ಆಶ್ರಮಕ್ಕೆ ಬರುತ್ತಿದ್ದವರೆಲ್ಲರೂ ಮತ್ತು ಆಶ್ರಮದ ವಿದ್ಯಾರ್ಥಿನಿಲಯದಲ್ಲಿದ್ದ ವಿದ್ಯಾರ್ಥಿಗಳೆಲ್ಲರೂ ಪೂಜ್ಯ ಸ್ವಾಮೀಜಿಯವರ ಅಸಾಮಾನ್ಯ ಗುಣಗಳನ್ನು ಇಂದಿಗೂ ನಡೆಸಿಕೊಳ್ಳುತ್ತಿದ್ದಾರೆ. ನನಗೆ ತಿಳಿದಂತೆ, ಅವರು ಕೆಲಕಾಲ ವಿದ್ಯಾರ್ಥಿನಿಲಯದ ಮೇಲ್ವಿಚಾರಕರಾಗಿದ್ದರು.

೧೯೯೪ರಲ್ಲಿ ಪೂಜ್ಯ ಮಹಾರಾಜ್ ಅವರ ಆರೋಗ್ಯ ಸರಿಯಿರಲಿಲ್ಲ. ಅವರು ಹೈದರಾಬಾದಿನ ಮಠದಲ್ಲಿ ಚೇತರಿಸಿಕೊಳ್ಳುತ್ತಿದ್ದರು. ಅವರಲ್ಲಿ ಸ್ವಲ್ಪ ದಿನ ಕಳೆಯಲು ನಾನು ಅಲ್ಲಿಗೆ ಹೋದೆ. ಒಂದು ದಿನ ಬೆಳಗ್ಗೆ ಹಾಗೆಯೇ ಮಾತನಾಡುತ್ತಿದ್ದಾಗ ಆಗಿನ ಉಪರಾಷ್ಟ್ರಪತಿಯಾಗಿದ್ದ ಶ್ರೀ ಕೆ.ಆರ್. ನಾರಾಯಣನ್ ಅವರ ಪರಿಚಯವಿದೆಯೇ ಎಂದು ಅವರನ್ನು ಕೇಳಿದೆ. ೧೮೯೨ರಲ್ಲಿ ಸ್ವಾಮಿ ವಿವೇಕಾನಂದ ಅವರು ಮೈಸೂರಿಗೆ ಬಂದಿದ್ದರ ಶತಮಾನೋತ್ಸವ ಸಂದರ್ಭದಲ್ಲಿ ಮೈಸೂರಿನ ಪ್ರಮುಖ ಸ್ಥಳವೊಂದರಲ್ಲಿ ಸ್ವಾಮೀಜಿಯವರ ಪ್ರತಿಮೆಯ ಅನಾವರಣ ಮಾಡಲು ಶ್ರೀ ನಾರಾಯಣನ್ ಅವರನ್ನು ಆಹ್ವಾನಿಸುವ ಉದ್ದೇಶವಿತ್ತು. ನಾನು ಅವರಿಗೆ ಇದನ್ನೆಲ್ಲಾ ವಿವರಿಸಿದೆ. ತಕ್ಷಣ ಅವರು ಶ್ರೀ ನಾರಾಯಣನ್ ಅವರಿಗೆ ಬರೆಯಲು ತಮ್ಮ ಕಚೇರಿಯಿಂದ ಒಂದು ಪೋಸ್ಟ್ ಕಾರ್ಡನ್ನು ತರಲು ಹೇಳಿದರು. ಹಾಗೆ ಬರೆದ ಕಾರ್ಡನ್ನು ನನಗೆ ಕೊಟ್ಟು ಅದನ್ನು ಓದಿ ನಂತರ ಅಂಚೆಗೆ ಹಾಕುವಂತೆ ಹೇಳಿದರು. ಭಾರತದ ಉಪರಾಷ್ಟ್ರಪತಿಯವರಿಗೆ ಒಂದು ಸಾಮಾನ್ಯವಾದ ಪೋಸ್ಟ್ ಕಾರ್ಡ್! ಅವರಿಂದ ಆ ಕಾರ್ಡನ್ನು ತೆಗೆದುಕೊಂಡು, ಕಚೇರಿಗೆ ಹೋಗಿ, ಅದನ್ನು (ಬಹುಶಃ) ಲೆಟರ್‌ಹೆಡ್‌ನ ಮೇಲೆ ಬೆರಳಚ್ಚು ಮಾಡಿಸಿ ಮಹಾರಾಜ್ ಅವರ ಮುಂದೆ ಇಟ್ಟೆ. ಅವರು ಅದನ್ನು ಓದಿ ಅದಕ್ಕೆ ಸಹಿ ಮಾಡಿದರು. ಆದರೆ ತಾವು ಮೊದಲು ಬರೆದ ಕಾರ್ಡ್‌ನ ಬಗ್ಗೆ ಕೇಳಲಿಲ್ಲ. ನಾನು ಇದನ್ನು ಹೇಳುವ ಉದ್ದೇಶವೆಂದರೆ ಅವರು ದೇಶದ ಉನ್ನತ ಹುದ್ದೆಯಲ್ಲಿರುವವರ ಸಂಗಡ ಹೊಂದಿದ್ದ ಆತ್ಮೀಯತೆಯನ್ನು ತಿಳಿಸುವುದು. ಆದರೆ ಮಹಾರಾಜ್ ಅವರು ಈ ಸಂಬಂಧಗಳ ಉಪಯೋಗವನ್ನು ರಾಮಕೃಷ್ಣ ಮಿಷನ್ನಿನ ಕಾರ್ಯಗಳಿಗಾಗಿ ಮಾತ್ರ ಉಪಯೋಗಿಸಿಕೊಳ್ಳುತ್ತಿದ್ದರು. ಮರು ಟಪಾಲಿಯಲ್ಲಿಯೇ ಉಪರಾಷ್ಟ್ರಪತಿಯವರ ಉತ್ತರ ಬಂದಿತ್ತು. ಅದರಲ್ಲಿ ತಮ್ಮ ಕಾರ್ಯಭಾರದ ನಡುವೆ ನಮ್ಮ ಆಹ್ವಾನವನ್ನು ಮನ್ನಿಸಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದ್ದರು. ಈ ಸಮಾರಂಭವನ್ನು ಸದ್ಯಕ್ಕೆ ಮುಂದೂಡಿದೆವು. ಆಶ್ಚರ್ಯವೆಂದರೆ, ಅನಿರೀಕ್ಷಿತವಾಗಿ ಉಪರಾಷ್ಟ್ರಪತಿಯವರಿಂದ ಮತ್ತೊಂದು ಪತ್ರ ಬಂದಿತು. ಪ್ರತಿಮೆಯ ಅನಾವರಣದ ಆ ಸಮಾರಂಭ ಇನ್ನೂ ನಡೆಯದೆ ಇದ್ದರೆ, ಅದರಲ್ಲಿ ತಾವು ಭಾಗವಹಿಸುವ ಇಚ್ಛೆಯನ್ನು ಅವರು ವ್ಯಕ್ತಪಡಿಸಿದ್ದರು. ಇದು ನಮಗೆ ಅನುಕೂಲಕರವೇ ಆಗಿದ್ದಿತು. ರಾಜ್ಯ ಸರಕಾರ ಮತ್ತು ಮುನಿಸಿಪಲ್ ಕಾರ್ಪೊರೇಷನ್ನಿನವರು ಈ ಕಾರ್ಯಕ್ರಮವನ್ನು ನಡೆಸಿಕೊಡಲು ಮುಂದೆ ಬಂದರು. ರಾಜ್ಯದ ಮುಖ್ಯಮಂತ್ರಿಗಳು, ಅವರ ಸಂಪುಟದ

ಮಂತ್ರಿಗಳು, ಉನ್ನತ ಅಧಿಕಾರಿಗಳು ಭಾಗವಹಿಸಿದ್ದ ಆ ಸಮಾರಂಭ ಅಭೂತಪೂರ್ವವಾಗಿ ಎಂಬಂತೆ ನಡೆಯಿತು. ಮಹಾರಾಜ್ ಅವರ ಪತ್ರವೊಂದು ಇಂತಹ ಅದ್ಭುತ ಸಮಾರಂಭಕ್ಕೆ ಕಾರಣವಾಗಿ ಅದನ್ನು ನಡೆಸಿಕೊಟ್ಟಿತು. ಆದರೆ, ದುರಾದೃಷ್ಟವಶಾತ್, ತಮ್ಮ ಅನಾರೋಗ್ಯದ ನಿಮಿತ್ತದಿಂದ ಪೂಜ್ಯ ಮಹಾರಾಜ್ ಅವರು ಅದರಲ್ಲಿ ಭಾಗಹಿಸಲಾಗಲಿಲ್ಲ. ಬದಲಿಗೆ ಸ್ವಾಮಿ ಲೋಕೇಶ್ವರಾನಂದ ಅವರು ರಾಮಕೃಷ್ಣ ಮಿಷನ್ನನ್ನು ಪ್ರತಿನಿಧಿಸಿದ್ದರು.

ಪೂಜ್ಯ ರಂಗನಾಥಾನಂದ ಮಹಾರಾಜ್ ಅವರು ೧೯೮೯ರಲ್ಲಿ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಉಪಾಧ್ಯಕ್ಷರಾದರು. ೧೯೯೧ರಲ್ಲಿ ಒಮ್ಮೆ ಅವರು ಮೈಸೂರಿಗೆ ಬಂದಿದ್ದಾಗ, ೨–೩ ದಿನಗಳ ಭೇಟಿಗಾಗಿ ಕಾರಿನಲ್ಲಿ ಊಟಿಗೆ ಹೋಗಿದ್ದರು. ಅಲ್ಲಿ ಅವರು ಕೆಲವು ಭಕ್ತರಿಗೆ ದೀಕ್ಷೆಯನ್ನು ಕೊಟ್ಟರು. ನಂತರ ಇದ್ದಕ್ಕಿದ್ದ ಹಾಗೆ ತಾವು ಮಾರನೆಯ ದಿನ ಬೆಳಗ್ಗೆ ಕೂನೂರಿಗೆ ಹೋಗುವುದಾಗಿ ಹೇಳಿದರು. ಆದರೆ ಅದರ ಉದ್ದೇಶವನ್ನು ಯಾರಿಗೂ ಹೇಳಲಿಲ್ಲ. ಕೂನೂರನ್ನು ತಲುಪಿದ ಮೇಲೆ ನಮಗೆ ಒಂದು ಪೋಸ್ಟ್ ಕಾರ್ಡನ್ನು ಕೊಟ್ಟು ಅದರಲ್ಲಿ ಬರೆದಿರುವ ವಿಳಾಸವನ್ನು ಪತ್ತೆಹಚ್ಚಲು ಹೇಳಿದರು. ನಾವು ಆ ವಿಳಾಸದ ಮನೆಯನ್ನು ತಲುಪಿದಾಗ ಕೈಗೋಲಿನ ಸಹಾಯದಿಂದ ನಡೆಯುತ್ತಾ ಬಂದ ವಯಸ್ಸಾದ ಮಹಿಳೆಯೊಬ್ಬರು ಕೈಜೋಡಿಸಿ ಪೂಜ್ಯ ಮಹಾರಾಜ್ ಅವರಿಗೆ ನಮಸ್ಕರಿಸಿದರು. ಅವರಿಬ್ಬರೂ ಪಕ್ಕದ ಕೊಠಡಿಯಲ್ಲಿ ಸುಮಾರು ಅರ್ಧ ಗಂಟೆ ಇದ್ದು ಹೊರಬಂದರು. ನಾವು ಹಿಂತಿರುಗುತ್ತಿದ್ದಾಗ ಮಹಾರಾಜ್ ಅವರು ಅಲ್ಲಿನ ವಿಷಯವನ್ನು ತಿಳಿಸಿದರು. ಆ ವೃದ್ಧ ಮಹಿಳೆಗೆ ಮಹಾರಾಜ್ ಅವರಿಂದ ದೀಕ್ಷೆ ಪಡೆಯಬೇಕೆಂಬ ಹಂಬಲ, ಆದರೆ ಪಾರ್ಶ್ವವಾಯುವಿನಿಂದ ನರಳುತ್ತಿದ್ದ ಆಕೆಗೆ ಊಟಿಗೆ ಬರುವುದು ಸಾಧ್ಯವಾಗಿರಲಿಲ್ಲ. ಆಕೆಯಿಂದ ಬಂದ ಪತ್ರವನ್ನು ಓದಿದ ಮಹಾರಾಜ್ ಅವರು ತಾವೇ ಅವರ ಮನೆಗೆ ಹೋಗಿ ಆಕೆಗೆ ದೀಕ್ಷೆಯಿತ್ತಿದ್ದರು. ನಿಜವಾದ ಸಂತನ ಕರುಣೆಯೆಂದರೆ ಇದೇ ಅಲ್ಲವೇ!

ಬೇಲೂರು ಮಠದ ನಮ್ಮ ಸೋದರರಿಂದ ಮಹಾರಾಜ್ ಅವರ ಆರೋಗ್ಯ ಏನೇನೂ ಸರಿಯಿಲ್ಲವೆಂದು ತಿಳಿದುಬಂದಿತು. ಡಾ॥ ಪ್ರಭುಶಂಕರ ಮತ್ತು ನಾನು ಹೋಗಿ ಅವರ ದರ್ಶನವನ್ನು ಪಡೆದುಬರಬೇಕೆಂದುಕೊಂಡು ಅಲ್ಲಿಗೆ ಹೋದೆವು. ಅವರು ನಮ್ಮನ್ನು ನೋಡಿದ ತಕ್ಷಣವೇ ಕನ್ನಡದ ಹಾಸ್ಯಪೂರಿತವಾದ ದ್ವಿಪದಿಗಳನ್ನು ಹೇಳಿದರು. ಅದು ನಮ್ಮನ್ನು ಸ್ವಾಗತಿಸುವ ರೀತಿ.

ಓದುಗರು ಪೂಜ್ಯ ಸ್ವಾಮೀಜಿಯವರ ವಿಷಯದಲ್ಲಿ ಕುತೂಹಲಕರವಾದ ಒಂದು ಅಂಶವನ್ನು ಗಮನಿಸಬೇಕು. ಅವರು ಬೇರೆ ಬೇರೆ ಭಾಷೆಗಳನ್ನು ಕಲಿಯುವುರಲ್ಲಿ ಎತ್ತಿದ ಕೈ. ಅವರು ತಮ್ಮ ಮಾತೃಭಾಷೆಯಾದ ಮಲಯಾಳಂ ಅಲ್ಲದೆ, ತಮಿಳು, ಕನ್ನಡ, ಬಂಗಾಳಿ, ಇಂಗ್ಲಿಷ್, ಹಿಂದೀ ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡಬಲ್ಲ ಬಹುಭಾಷಾವಿದರಾಗಿದ್ದರು. ಅದರಲ್ಲೂ ಕನ್ನಡವು ಅವರಿಗೆ ಎರಡನೆಯ ಮಾತೃಭಾಷೆಯಾಗಿತ್ತು. ಮಹಾರಾಜ್ ಅವರು ತಾವು ಮೈಸೂರಿಗೆ ಬಂದ ಹೊಸತರಲ್ಲಿ ಒಮ್ಮೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಆಗಿದ್ದ ಕನ್ನಡ ಸಾಹಿತ್ಯದ ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರು ಭಾಗವಹಿಸಿದ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣಕಾರರಾಗಿದ್ದರು. ಸಭೆಯ ನಂತರ ಮಹಾರಾಜ್ ಅವರ ಭಾಷಣವನ್ನು ಕೇಳಿದ ಶ್ರೀಕಂಠಯ್ಯನವರು ಮಹಾರಾಜ್ ಅವರನ್ನು ಅಭಿನಂದಿಸುತ್ತಾ, ಅವರ ಕನ್ನಡದ ಮೇಲಿನ ಪ್ರಭುತ್ವಕ್ಕೆ ಅವರಿಗೆ ಶೇ. ೬೦ ಅಂಕಗಳನ್ನು ಕೊಡುವುದಾಗಿ ಹೇಳಿದರು. ಕನ್ನಡದಲ್ಲಿ ಶೇ ೭೦ ಅಂಕಗಳು ಬಂದರೆ ಅದೇ ಹಿರಿಮೆಯ ವಿಷಯವಾಗಿದ್ದ ಕಾಲವದು.

ನಾವು ಅಲ್ಲಿ ನಿಂತಿದ್ದ ೮–೧೦ ನಿಮಿಷಗಳ ಅವಧಿಯಲ್ಲಿ ಮಾತಿನ ಮಧ್ಯೆ ಅವರು ಮತ್ತು ನಾವು ಸಾಕಷ್ಟು ನಕ್ಕೆವು. ಅವರ ಮಾತು ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಹರಿಯುತ್ತಿತ್ತು. ಇಷ್ಟಾದರೂ ತಮ್ಮ

ಆರೋಗ್ಯದ ಬಗ್ಗೆ ಒಂದೇ ಒಂದು ಮಾತನ್ನೂ ಅವರು ಆಡಲಿಲ್ಲ. ಅವರನ್ನು ನೋಡಿಕೊಳ್ಳುತ್ತಿದ್ದವರು ನಮಗೆ ಕೊಟ್ಟಿದ್ದ ಕಾಲಾವಕಾಶ ಮುಗಿಯಿತೆಂದು ಹೇಳಿದಾಗ, ನೀರಿನಿಂದ ತುಂಬಿದ್ದ ಕಣ್ಣಿನಿಂದ ನಾವು ಅವರನ್ನು ಬೀಳ್ಕೊಟ್ಟೆವು. ನಮ್ಮೊಳಗೆ ದನಿಯೊಂದು ಇದೇ ನಮ್ಮ ಕೊನೆಯ ಭೇಟಿ ಎಂದು ಹೇಳುತ್ತಿತ್ತು. ದುರದೃಷ್ಟದಿಂದ ಅದು ನಿಜವೇ ಆಯಿತು. ಅವರು ಭೌತಿಕವಾಗಿ ನಮ್ಮೊಂದಿಗೆ ಇಲ್ಲದಿದ್ದರೂ, ಅವರ ಮಹಾನ್ ವ್ಯಕ್ತಿತ್ವದ ನೆನಪು ನಮ್ಮೊಂದಿಗೆ ಸದಾ ಕಾಲವೂ ಇರುತ್ತದೆ.

* * * *

# ೨೯. ಕ್ರಿಯಾತ್ಮಕ ವ್ಯಕ್ತಿತ್ವ

**–ಸ್ವಾಮಿ ಆತ್ಮಘನಾನಂದ***

ನಾನು ಶ್ರೀಲಂಕಾದಲ್ಲಿದ್ದಾಗ ಸ್ವಾಮಿ ವಿವೇಕಾನಂದರು ಶ್ರೀಲಂಕಾಗೆ ಭೇಟಿ ಕೊಟ್ಟ ನೂರನೇ ವರ್ಷದ ಸ್ಮರಣ ಸಮಾರಂಭದ ಸಂದರ್ಭದಲ್ಲಿ ಪರಮ ಪೂಜ್ಯ ರಂಗನಾಥಾನಂದ ಮಹಾರಾಜ್ ಅವರು ಬಂದಿದ್ದರು. ಆ ಸಮಾರಂಭ ನಡೆದದ್ದು ೧೯೯೭ರ ಜನವರಿಯಲ್ಲಿ.

ಭಾರತಕ್ಕೆ ಹಿಂದಿರುಗುವಾಗ ಕೊಲಂಬೋದಲ್ಲಿ ಸ್ವಾಮಿ ವಿವೇಕಾನಂದರು ಇಳಿದ ದಿನವಾದ ಜನವರಿ ೧೫ರಂದು ಸ್ವಾಮೀಜಿಯವರ ೯.೫ ಅಡಿ ಎತ್ತರದ ಕಂಚಿನ ಪ್ರತಿಮೆಯು ಅನಾವರಣವು ನಮ್ಮ ಸಮಾರಂಭದ ಮುಖ್ಯ ಕಾರ್ಯಕ್ರಮವಾಗಿತ್ತು. ಮಹಾರಾಜ್ ಅವರು ೧೧೦ ಮಂದಿ ಆಧ್ಯಾತ್ಮಿಕ ಪಿಪಾಸುಗಳಿಗೆ ದೀಕ್ಷೆಯನ್ನು ಕೊಟ್ಟರು. ಆಶ್ರಮದ ಸಭಾಂಗಣದಲ್ಲಿ, 'ಗೀತೆ' ಮತ್ತು 'ಉಪನಿಷತ್ತು'ಗಳ ಮೇಲೆ ಮಹಾರಾಜ್ ಅವರು ಅಂದು ಬೆಳಗ್ಗೆ ಮತ್ತು ಸಂಜೆ ಮಾತನಾಡಿದರು. ತಮ್ಮ ಆರೋಗ್ಯ ಸರಿಯಿಲ್ಲದೆ ಇದ್ದರೂ, ಅವರು ತಾವು ಶ್ರೀಲಂಕಾಗೆ ಬಂದ ಉದ್ದೇಶವನ್ನು ಪೂರ್ಣಗೊಳಿಸಲು ಬಹಳ ಉತ್ಸಾಹಪೂರ್ಣರಾಗಿದ್ದರು.

ಸ್ವಾಮಿ ರಂಗನಾಥಾನಂದರದು ಕ್ರಿಯಾತ್ಮಕ ವ್ಯಕ್ತಿತ್ವ. ತಮ್ಮ ಬಳಿ ಬಂದ ಯಾರಿಗೇ ಆಗಲಿ ಸಹಾಯ ಮಾಡುವುದಕ್ಕೆ ಮತ್ತು ಅವರಿಗೆ ಮಾರ್ಗದರ್ಶನ ನೀಡುವುದಕ್ಕೆ ಅವರು ಸದಾ ಸಿದ್ಧರಾಗಿರುತ್ತಿದ್ದರು. ಪ್ರತಿಯೊಬ್ಬರನ್ನೂ ಅವರು ಅತ್ಯಂತ ಪ್ರೀತಿ ಮತ್ತು ಕರುಣೆಯಿಂದ ನೋಡುತ್ತಿದ್ದರು. ಅವರ ಸಂವೇದನಾಶೀಲತೆ ಮತ್ತು ಅಂತರ್ದೃಷ್ಟಿ ಎಲ್ಲರನ್ನೂ ಅವರ ಹತ್ತಿರಕ್ಕೆ ಸೆಳೆಯುತ್ತಿತ್ತು. ತಾವು ವಿದ್ವಾಂಸರಾಗಿದ್ದರೂ, ಅದ್ಭುತವಾದ ವಾಕ್ಚಾತುರ್ಯವುಳ್ಳವರಾಗಿದ್ದರೂ ಅವರು ಮಾತ್ರ ಬಹಳ ಸರಳವಾಗಿದ್ದರು, ಯಾರೊಡನೆ ಬೇಕಾದರೂ ಸರಳವಾಗಿ ಬೆರೆಯಬಲ್ಲವರಾಗಿದ್ದರು. ತಮ್ಮ ಬಳಿ ಮಾರ್ಗದರ್ಶನಕ್ಕಾಗಿ ಬಂದವರೊಡನೆ ಬೆರೆತು ಅವರಿಗೆ ಸಲಹೆ ಕೊಡುವುದರಲ್ಲಿ ಅವರಿಗೆ ದಣಿವೇ ಇರುತ್ತಿರಲಿಲ್ಲ. ಅವರನ್ನು ಭೇಟಿ ಮಾಡಿದ, ಅವರ ಸ್ಫೂರ್ತಿದಾಯಕ ಮಾತುಗಳನ್ನು ಕೇಳಿದ ನಾವು ನಿಜವಾಗಿಯೂ ಅದೃಷ್ಟಶಾಲಿಗಳು.

* * * *

---

* ಚೆನ್ನೈನಲ್ಲಿರುವ ವಿವೇಕಾನಂದ ಕಾಲೇಜಿನ ಕಾರ್ಯದರ್ಶಿ

# ೩೦. ಮಾನವರಲ್ಲಿ ದೇವರನ್ನು ಕಂಡ ವಿಶ್ವಮಾನವ

–ಸ್ವಾಮಿ ಆತ್ಮೇಶಾನಂದ*

ಸ್ವಾಮಿ ರಂಗನಾಥಾನಂದರ ಬಗ್ಗೆ ನೆನಪುಗಳು ಕೆಲವೇ ಆದರೂ ಅವು ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿವೆ. ಅವರನ್ನು ಹಲವು ಸಲ ಭೇಟಿಯಾಗುವ ಹಾಗೂ ಆ ಮಹಾತ್ಮರಿಗೆ ಸ್ವತಃ ಸೇವೆ ಸಲ್ಲಿಸುವ ಸೌಭಾಗ್ಯ ನನ್ನದಾಗಿತ್ತು.

ಮಹಾರಾಜ್ ಅವರನ್ನು ನಾನು ಮೊದಲು ನೋಡಿದ್ದು ಬೇಲೂರು ಮಠಕ್ಕೆ ಹೊಸದಾಗಿ ೧೯೭೭ರಲ್ಲಿ ನಾನು ಸೇರಿದಾಗ. ಅವರ ವ್ಯಕ್ತಿತ್ವ ಸೂಜಿಗಲ್ಲಿನಂತೆ ನನ್ನನ್ನು ಆಕರ್ಷಿಸಿತು. ಶ್ರೀರಂಗಪಟ್ಟಣದಲ್ಲಿ ಮಲಗಿರುವ ಶ್ರೀರಂಗನಾಥನನ್ನು ಕಂಡಹಾಗೇ ಆಗುತ್ತಿತ್ತು. ಸಂನ್ಯಾಸಿಗಳಿಗಾಗಿ ಇರುವ ಮಂದಿರದ ಮೇಲ್ಮಹಡಿಯಲ್ಲಿ ಮಲಗಿದ್ದ ಅವರನ್ನು ನೋಡಿದಾಗ. ರಾಮಕೃಷ್ಣ ಮಂದಿರ ಕಡೆಗೆ ತಲೆಮಾಡಿ, ತಮ್ಮ ಎಡಗೈಯಿಂದ ತಮ್ಮ ತಲೆಯನ್ನು ಮೇಲಕ್ಕೆ ಎತ್ತಿ, ತಮ್ಮ ಹಾಸಿಗೆಯಲ್ಲಿ ಮಲಗಿಕೊಂಡು ತಮ್ಮ ಬಳಿಯಿದ್ದ ಸಂನ್ಯಾಸಿಗಳೊಂದಿಗೆ ಅವರು ಮಾತನಾಡುತ್ತಿದ್ದರು. ಹಾಗೆ ಮಾತನಾಡುತ್ತಿರುವಾಗ ಅವರು ಕಾಯ್ದುಕೊಳ್ಳುತ್ತಿದ್ದ ಶರೀರದ ಸಮತೋಲವನ್ನು ನೋಡಿದಾಗ ಆಶ್ಚರ್ಯವಾಗುತ್ತಿತ್ತು. ಹೆಚ್ಚು ಕಡಿಮೆ ಒಂದು ಗಂಟೆಯವರೆಗೆ ಅದೇ ಸ್ಥಿತಿಯಲ್ಲಿ ಮಲಗಿ ಮಾತನಾಡುತ್ತಿದ್ದರೂ, ಮಾತಿನ ಲಹರಿಗೆ ತಕ್ಕಂತೆ ಅವರ ಬಲಗೈ ಮತ್ತು ತಲೆ ಸ್ವಲ್ಪ ಅತ್ತಿತ್ತ ಚಲಿಸುತ್ತಿತ್ತೇ ಹೊರತು, ಉಳಿದಂತೆ ಅವರ ಭಂಗಿಯಲ್ಲಿ ಸ್ವಲ್ಪವೂ ಬದಲಾವಣೆ ಇರುತ್ತಿರಲಿಲ್ಲ. ಒಮ್ಮೆಯೂ ಅತ್ತಿತ್ತ ಹೊರಳುತ್ತಿರಲಿಲ್ಲ. ಅಷ್ಟು ನಿಶ್ಚಲವಾಗಿರುತ್ತಿದ್ದರು.

ಮತ್ತೊಮ್ಮೆ ಇಂತಹುದೇ ಅದ್ಭುತವನ್ನು ನೋಡಿದೆ. ಹಿಂದಿನ ಹಾಗೆಯೇ ಮಲಗಿದ್ದಾರೆ, ಅವರು ತಮ್ಮ ಎಡಗೈಯನ್ನು ಮಡಿಸಿ ತಲೆಗೆ ದಿಂಬಾಗುವಂತೆ ಇಟ್ಟುಕೊಂಡಿದ್ದಾರೆ. ಆದರೆ ಅವರ ತಲೆಯು ಅವರ ಎಡಗೈನ ಮೇಲಿರದೆ ಸ್ವಲ್ಪ ಮೇಲೆ ಇದೆ. ಸುಮಾರು ೪೫ ನಿಮಿಷಗಳಷ್ಟು ಕಾಲ ಅದೇ ಸ್ಥಿತಿಯಲ್ಲಿ ಅವರು ಇದ್ದರು. ಎಂತಹ ಅದ್ಭುತವಾದ ಸಮತೋಲನ! ಆಗ ಅವರ ವಯಸ್ಸು ೭೦ರ ಆಸುಪಾಸಿನಲ್ಲಿತ್ತು. ಇದಾದ ಕೆಲವು ದಿನಗಳ ನಂತರ ಇದರ ಚರಿತ್ರೆಯನ್ನು ನಮ್ಮೊಂದಿಗೆ ಒಮ್ಮೆ ಮಾತನಾಡುತ್ತಿರುವಾಗ ಸ್ವಾರಸ್ಯಪೂರ್ಣವಾಗಿ ಹೇಳಿದರು. ಅವರು ಸಂನ್ಯಾಸವನ್ನು ಸ್ವೀಕರಿಸಿದ ನಂತರ ಮೈಸೂರಿಗೆ ಹಿಂದಿರುಗಿದರು. ಅವರು ಅಂದಿನ ಯುವಕರ ನಡುವೆ ಅತಿ ಜನಪ್ರಿಯರಾಗಿದ್ದರು. ಅವರ ಸುತ್ತ ಯಾವಾಗಲೂ ತರುಣರ ಒಂದು ಗುಂಪೇ ಇರುತ್ತಿತ್ತು. ಮಹಾರಾಜ್ ಅವರು ತಮ್ಮ ಅತಿ ಪ್ರಿಯವಾದ ಈ ಭಂಗಿಯಲ್ಲಿ– ಎಂದರೆ ಒಂದು ತೋಳನ್ನೇ ತಲೆದಿಂಬಾಗಿ ಮಾಡಿಕೊಂಡು ಒಂದು ಪಕ್ಕಕ್ಕೆ ಮಲಗಿರುವ ಭಂಗಿಯಲ್ಲಿ– ಅವರೊಡನೆ ಮಾತನಾಡುತ್ತಿದ್ದರು.

ಆಗ ಮಹಾರಾಜ್ ಅವರ ಪ್ರೀತಿಯ ಬಳಗದಲ್ಲಿ, ಕನ್ನಡದ ಸಾಹಿತಿಗಳಾಗಿದ್ದ ಪ್ರೊ॥ ನಾ. ಕಸ್ತೂರಿಯವರೂ ಇದ್ದರು. ಕಸ್ತೂರಿಯವರು ಸ್ವತಃ ಸ್ವಾಮಿ ಶಿವಾನಂದ ಮಹಾರಾಜರ ಶಿಷ್ಯರಾಗಿದ್ದರು. ಒಳಗೆ ಬರುತ್ತಿದ್ದ ಕಸ್ತೂರಿಯವರು, ತಮ್ಮ ಮಾಮೂಲಿನ ಭಂಗಿಯಲ್ಲಿ ಮಲಗಿ ತರುಣರೊಂದಿಗೆ ಮಾತನಾಡುತ್ತಿದ್ದ ಸ್ವಾಮಿ ರಂಗನಾಥಾನಂದರನ್ನು ಕಂಡು, 'ಇವರು ನಿಜಕ್ಕೂ ಶ್ರೀ ರಂಗನಾಥನೇ' ಎನ್ನುತ್ತಿದ್ದರು. ಇದರಿಂದ ಅಲ್ಲಿದ್ದವರಲ್ಲಿ

---

* ಆಸ್ಟ್ರೇಲಿಯಾ ಸಿಡ್ನಿಯಲ್ಲಿರುವ ವೇದಾಂತ ಕೇಂದ್ರದಲ್ಲಿನ ಸಂನ್ಯಾಸಿ

ನಗೆಯ ಬುಗ್ಗೆಯೇ ಏಳುತ್ತಿತ್ತು. ಹಾಗೆ ಹೇಳುವಾಗ ಅವರು ಶ್ರೀರಂಗಪಟ್ಟಣದಲ್ಲಿ ಇದೇ ಭಂಗಿಯಲ್ಲಿ ಮಲಗಿರುವ ಶ್ರೀರಂಗನಾಥ ಸ್ವಾಮಿಯನ್ನು ಸ್ವಾಮೀಜಿಯವರಿಗೆ ಹೋಲಿಸುತ್ತಿದ್ದರು.

ಮಹಾರಾಜ್ ಅವರು ಮತ್ತೊಂದು ಪ್ರಸಂಗವನ್ನು ನನಗೆ ಹೇಳಿದರು. "ನಾನು ಬೇಲೂರು ಮಠವನ್ನು ಸೇರಿದಾಗ ನಿನ್ನಂತೆಯೇ ಚಿಕ್ಕ ಹುಡುಗನಾಗಿದ್ದೆ. ಮಠದ ಆವರಣವನ್ನು ನಾನು ಸ್ವಚ್ಛಗೊಳಿಸಬೇಕಿತ್ತು. ಒಂದು ದಿನ ನಾನು ಹಾಗೆ ಸ್ವಚ್ಛಗೊಳಿಸುತ್ತಿರುವಾಗ, ಅದನ್ನು ಮೇಲಿನಿಂದ ಸ್ವಾಮಿ ಶಿವಾನಂದರು ನೋಡುತ್ತಿದ್ದರು. ನಾನು ಆವರಣದಲ್ಲಿ ಉದುರಿದ್ದ ತರಗೆಲೆಗಳನ್ನೆಲ್ಲಾ ಗುಡಿಸುವ ಕೆಲಸವನ್ನು ಪೂರೈಸಿದ ಮೇಲೆ ಬೀಸಿದ ಗಾಳಿ ಮತ್ತಷ್ಟು ಎಲೆಗಳನ್ನು ಮರಗಳಿಂದ ನೆಲದ ಮೇಲಕ್ಕೆ ಸುರಿಯಿತು. ಬಹುಶಃ ನಾನು ನನ್ನ ಕೆಲಸದತ್ತ ಸರಿಯಾಗಿ ಲಕ್ಷ್ಯ ಕೊಟ್ಟಿಲ್ಲವೆಂದುಕೊಂಡ ಸ್ವಾಮಿ ಶಿವಾನಂದರು ನನ್ನನ್ನು ಕುರಿತು 'ಇಲ್ಲಿ ನೋಡು ಶಂಕರ್, ಇವುಗಳನ್ನು ಗುಡಿಸಿ ತೆಗೆ' ಎಂದರು. ಅದಕ್ಕೆ ನಾನು 'ಈಗತಾನೇ ತೆಗೆದೆನಲ್ಲಾ!' ಎಂದು ಉತ್ತರಿಸಿದೆ. ನಂತರ ಸ್ವಾಮಿ ಶಿವಾನಂದರು ತಮ್ಮ ಬಳಿಗೆ ಕರೆದು ಹೇಳಿದರು– "ನಾನು ನಿನಗೆ ಮತ್ತೆ ಗುಡಿಸಲು ಏಕೆ ಹೇಳಿದೆ ಗೊತ್ತೆ, ಶ್ರೀ ಪರಮಹಂಸರು ಇಲ್ಲೆಲ್ಲಾ ನಡೆದಾಡುತ್ತಾರೆ. ಅವರ ಶರೀರ ಬಹಳ ಸೂಕ್ಷ್ಮ. ಈ ತರಗೆಲೆಗಳಿಂದ ಅವರಿಗೆ ನೋವಾಗಬಾರದು ಅಲ್ಲವೇ?"

ನನಗೆ ಸ್ವಾಮಿ ರಂಗನಾಥಾನಂದರ ವ್ಯಕ್ತಿತ್ವದಲ್ಲಿ ಬಹಳ ಇಷ್ಟವಾದ ಅಂಶವೆಂದರೆ ಅವರು ಎಲ್ಲದರ ಒಳ್ಳೆಯ ಗುಣಗಳನ್ನು ಗ್ರಹಿಸುತ್ತಿದ್ದುದು. ನಾವು ಇದನ್ನು ಈ ಎರಡು ಪ್ರಸಂಗಗಳಲ್ಲಿ ಕಾಣಬಹುದು. ಒಂದು ಬಾರಿ, ಟ್ರಸ್ಟಿಗಳ ತ್ರೈಮಾಸಿಕ ಸಭೆಯಲ್ಲಿ ಭಾಗವಹಿಸಲು ಅವರು ಬೇಲೂರು ಮಠಕ್ಕೆ ಬಂದಿದ್ದರು. ಮಧ್ಯಾಹ್ನದ ಊಟದ ನಂತರ ನಾನು ಅವರಲ್ಲಿಗೆ ಹೋಗಿ ಅವರ ಪಾದಗಳ ಬಳಿ ಕುಳಿತು ಅವುಗಳನ್ನು ಮೃದುವಾಗಿ ಒತ್ತುತ್ತಿದ್ದೆ. ಅವರು ಹಿಂದಕ್ಕೆ ಒರಗಿ ವೃತ್ತಪತ್ರಿಕೆಯನ್ನು ಓದುತ್ತಿದ್ದರು. ಆ ಪತ್ರಿಕೆಯ ಮೇಲೆ ಕಣ್ಣಾಡಿಸಿದ ಮೇಲೆ, ಗಂಗೆಯ ಇನ್ನೊಂದು ಬದಿಯಿಂದ ಬರುತ್ತಿದ್ದ ಆಧುನಿಕ ಸಂಗೀತವನ್ನು ಆಲಿಸಿದರು. (ನದಿಯ ಇನ್ನೊಂದು ಬದಿಯಲ್ಲಿ ಯಾವುದೋ ಸಮಾರಂಭ ನಡೆಯುತ್ತಿದ್ದು, ಅವರು ಧ್ವನಿವರ್ಧಕಗಳನ್ನು ಬಳಸುತ್ತಿದ್ದರು.) ಆ ಸಂಗೀತವನ್ನು ಕೇಳುತ್ತಿದ್ದ ಸ್ವಾಮೀಜಿ, ಹರ್ಷಚಿತ್ತರಾಗಿ, ಹಾಡಿನ ಲಯಕ್ಕೆ ತಕ್ಕಂತೆ ತಾಳ ಹಾಕುತ್ತಿದ್ದರು. ಸ್ವಾಮೀಜಿಯವರು ಥಳುಕು ಬಳುಕಿನ, ಆಡಂಬರದ ಈ ಸಂಗೀತವನ್ನು ಆನಂದಿಸುತ್ತಿರುವುದನ್ನು ನೋಡಿ, ಸಂಪ್ರದಾಯಸ್ಥ ಹಿನ್ನೆಲೆಯಿಂದ ಬಂದ ನನಗೆ ಆಶ್ಚರ್ಯವಾಯಿತು. ಆ ಹಾಡು ಮುಗಿದ ನಂತರ ನನ್ನತ್ತ ತಿರುಗಿ ಮಹಾರಾಜ್ ಅವರು 'ಆ ಸಂಗೀತವನ್ನು ಕೇಳಿದೆಯಾ? ಸಂಗೀತ ದೈವತ್ವದತ್ತ ನಮ್ಮನ್ನು ಕೊಂಡೊಯ್ಯುವ ಸಾಧನ' ಎಂದರು. ಅವರು ಸಂಗೀತದಲ್ಲಿ 'ಪವಿತ್ರ', 'ಪವಿತ್ರವಲ್ಲದ್ದು' ಎಂಬ ಭೇದವನ್ನು ಮಾಡುತ್ತಿರಲಿಲ್ಲ. ನಮ್ಮ ಪ್ರಜ್ಞೆಯನ್ನು ಮೇಲಿನ ಸ್ತರಗಳಿಗೆ ಏರಿಸಬಲ್ಲ ಸಂಗೀತದ ಸಾಮರ್ಥ್ಯವನ್ನು ಅವರು ಗುರುತಿಸಿದ್ದರು.

ಇಂತಹುದೇ ಮತ್ತೊಂದು ಪ್ರಸಂಗ. ಒಂದು ಸಂಜೆ ನಾನು ಅವರ ಪಾದಗಳ ಬಳಿ ಕುಳಿತಿದ್ದೆ. ಬೇಲೂರಿನಿಂದ ಧ್ವನಿವರ್ಧಕಗಳ ಮೂಲಕ ಹರಿದು ಬರುತ್ತಿದ್ದ ಮುಸ್ಲಿಂ ಸ್ತೋತ್ರಗಳು ನಮ್ಮ ಕಿವಿಗಳ ಮೇಲೆ ಬೀಳುತ್ತಿದ್ದುವು. ಅದರ ಲಯಕ್ಕೆ ತಕ್ಕಂತೆ ತಲೆಯನ್ನು ತೂಗುತ್ತಿದ್ದ ಮಹಾರಾಜ್ ಅವರು ಹೇಳಿದರು: 'ಅವರ ಸ್ತೋತ್ರಗಳು ಎಷ್ಟು ಸುಂದರವಾಗಿವೆ!' ಅವರ ಮಾತು ನನಗೆ ಆಶ್ಚರ್ಯವನ್ನು ತಂದಿತು. ಕಾರಣ, ದೇಶದ ವಿಭಜನೆಯ ನಂತರ ಪಾಕೀಸ್ತಾನದ ಕರಾಚಿಯಲ್ಲಿ ಸ್ವಾಮೀಜಿಯವರು ಮುಖ್ಯಸ್ಥರಾಗಿದ್ದ ಆಶ್ರಮವನ್ನು ಲೂಟಿ ಮಾಡಿ, ಅಲ್ಲಿಂದ ತಮ್ಮನ್ನೆಲ್ಲಾ ಓಡಿಸಿದ ಮುಸಲ್ಮಾನರ ಬಗ್ಗೆ ಸ್ವಾಮೀಜಿಯವರು ಅಸಮಾಧಾನ ಹೊಂದಿರುತ್ತಾರೆ ಎಂಬುದು ನಮ್ಮ ಅಪ್ರಬುದ್ಧ ಕಲ್ಪನೆಯಾಗಿತ್ತು. ಯಾವುದೇ ಜನಾಂಗ, ಧರ್ಮ ಅಥವಾ ಬಣ್ಣಗಳ ಜನರ ಬಗ್ಗೆ ಅವರ ಹೃದಯದಲ್ಲಿ ಯಾವುದೇ ತರಹದ ಅಸಮಾಧಾನ ಇರುತ್ತಿರಲಿಲ್ಲ. ಇದರಿಂದಾಗಿಯೇ ಸ್ವಾಮಿ ರಂಗನಾಥಾನಂದರನ್ನು 'ಎಲ್ಲಾ ಮಾನವರ ಹೃದಯದಲ್ಲಿರುವ ಪರಮಾತ್ಮನನ್ನು ಪ್ರೀತಿಸುತ್ತಿದ್ದ ವಿಶ್ವಮಾನವ' ಎನ್ನಬಹುದು.

ಕರಾಚಿಯಲ್ಲಿ ಸ್ವಾಮಿ ರಂಗನಾಥಾನಂದರೊಂದಿಗೆ ಇದ್ದ ಸ್ವಾಮೀಜಿಯೊಬ್ಬರಿಂದ ನಾನು ಒಮ್ಮೆ ಕೇಳಿದ್ದು ಇದು. ಮುಂದೆ ಭಾರತದ ರಾಷ್ಟ್ರಪತಿಯಾದ ಡಾ॥ ರಾಧಾಕೃಷ್ಣನ್ ಅವರು ಒಮ್ಮೆ ಸ್ವಾಮಿ ರಂಗನಾಥಾನಂದರಿಗೆ ಹೇಳಿದರು: 'ಸ್ವಾಮೀಜಿ, ನಾನು ಏಕೆ ನಿಮ್ಮ ಪಾದಮುಟ್ಟಿ ನಮಸ್ಕರಿಸುತ್ತೇನೆ ಮತ್ತು ನಿಮ್ಮನ್ನು ಇಷ್ಟು ಗೌರವಿಸುತ್ತೇನೆ ಗೊತ್ತೆ? ನೀವು ನುಡಿದಂತೆ ನಡೆಯುವವರು. ನಾನಾದರೋ (ತಮ್ಮ ತಲೆಯನ್ನು ಬೆರಳಿನಿಂದ ತೋರಿಸುತ್ತಾ) ಇದು ಹೇಳಿದಂತೆ ಪಾಠ ಮಾಡುವವನು. ನಿಮ್ಮ ಬದುಕು ಹೃದಯದಿಂದ ಹರಿಯುವ ಗಂಗಾಜಲವಾದರೆ, ನನ್ನ ಬದುಕು ನನ್ನ ತಲೆ ತೋರಿಸಿದತ್ತ ಹರಿಯುತ್ತಿರುವ ಕುದುರೆಯಂತೆ.'

ಸ್ವಾಮಿ ರಂಗನಾಥಾನಂದರು ರಾಮಕೃಷ್ಣ ಸಂಘದ ಉಪಾಧ್ಯಕ್ಷರಾದ ಮೇಲೆ ಒಂದು ಸಲ ಬೆಂಗಳೂರಿಗೆ ಬಂದಿದ್ದರು. ಅದು ೧೯೮೯ರಲ್ಲಿ. ಆಗ ನಾನು ಬೆಂಗಳೂರಿನ ರಾಮಕೃಷ್ಣಾಶ್ರಮದಲ್ಲಿ (ಈಗ ಮಠ) ಸಂನ್ಯಾಸಿಯಾಗಿದ್ದೆ. ಭಾರತೀಯ ವಿದ್ಯಾ ಭವನದವರು ಏರ್ಪಡಿಸಿದ್ದ ಯಾವುದೋ ಒಂದು ಸಮಾರಂಭದಲ್ಲಿ ಉಪನ್ಯಾಸ ಕೊಡುವುದಕ್ಕಾಗಿ ಬಂದಿದ್ದ ಅವರು ನಮ್ಮ ಆಶ್ರಮದಲ್ಲಿಯೇ ಇಳಿದುಕೊಂಡಿದ್ದರು. ಒಂದು ಮಂಗಳವಾರ. ನಗರದ ಪ್ರಸಿದ್ಧ ವೇದಾಂತದ ಉಪನ್ಯಾಸಕರಾದ ಶ್ರೀ ಸುಬ್ಬರಾಯ ಶರ್ಮ ಅವರು ಶಾಸ್ತ್ರದ ಮೇಲೆ ಮಾತನಾಡುತ್ತಿದ್ದರು. ಅದನ್ನು ಕೇಳಲು ಬಂದ ಜನಗಳಿಗೆ ಸಭಾಂಗಣ ಸಾಲದಾಗಿ, ಹೊರಗಿನ ಮೆಟ್ಟಿಲುಗಳ ಮೇಲೆ, ಆವರಣದ ಮರಗಳ ಕೆಳಗೆ ಬಹಳಷ್ಟು ಜನರು ಕುಳಿತಿದ್ದರು. ಅಂದು ಸ್ವಲ್ಪ ಚಳಿ ಇದ್ದುದರಿಂದ, ತಮ್ಮ ಕೊಠಡಿಯಿಂದ ಹೊರಬಂದ ಮಹಾರಾಜ್ ಅವರು ಒಂದು ಶಾಲನ್ನು ಹೊದೆದಿದ್ದರು. ಹೊರಗೆ ಕುಳಿತಿದ್ದ ಜನರನ್ನು ನೋಡಿದ ಅವರು, ಈ ಜನಗಳು ತಮ್ಮನ್ನು ಗುರುತಿಸದಿರುವುದು ಒಳ್ಳೆಯದೆಂದುಕೊಂಡರು. ಹಾಗೆ ಗುರುತಿಸಿದರೆ ಅವರೆಲ್ಲ ತಮ್ಮ ಬಳಿಗೆ ಓಡಿಬಂದು ಪ್ರಣಾಮ ಮಾಡ ತೊಡಗುತ್ತಾರೆ ಎಂದುಕೊಂಡ ಸ್ವಾಮೀಜಿ ತಕ್ಷಣ ತಮ್ಮ ಶಾಲಿನಿಂದ ತಮ್ಮನ್ನು ಸಂಪೂರ್ಣವಾಗಿ ಮುಚ್ಚಿಕೊಂಡು ದೂರದ ಒಂದು ಮರದ ಕೆಳಗೆ, ಕನ್ನಡದಲ್ಲಿದ್ದ ಆ ಉಪನ್ಯಾಸವನ್ನು ಕೇಳುತ್ತಾ ಕುಳಿತುಕೊಂಡಿದ್ದರು. ಅಲ್ಲಿದವರಾರೂ ಇವರನ್ನು ಗುರುತಿಸಲಿಲ್ಲ. ಹಾಗೆ ಮರದ ಕೆಳಗೆ ಕುಳಿತಿದ್ದ ಮಹಾರಾಜ್ ಅವರನ್ನು ನೋಡಿದ ನಾನು ಅವರು ಆರಾಮವಾಗಿ ಕುಳಿತಿದ್ದಾರೆಯೋ ಇಲ್ಲವೋ ಎಂಬ ಆತಂಕದಿಂದ ಅವರತ್ತ ಧಾವಿಸಿದೆ. ನನಗೆ ನಿಶ್ಶಬ್ದವಾಗಿರುವಂತೆ ಸೂಚಿಸಿದ ಅವರು, ತಾವು ಅಲ್ಲಿ ಕುಳಿತಿರುವುದನ್ನು ಜನಗಳಿಗೆ ತಿಳಿಸಬೇಡ ಎಂದು ಹೇಳಿದರು. ಅದು ಅವರ ನಮ್ರತೆ.

ಸ್ವಾಮಿ ರಂಗನಾಥಾನಂದರು ನಿಯತವಾಗಿ ಆಸ್ಟ್ರೇಲಿಯಾಕ್ಕೆ ಭೇಟಿ ಕೊಡುತ್ತಿದ್ದರು. ಅಲ್ಲಿನ ಭಕ್ತರುಗಳ ವಿಷಯದಲ್ಲಿ ಅವರಿಗೆ ಒಂದು ವಿಶೇಷವಾದ ಸೆಳೆತವಿತ್ತು. ೨೦೦೨ರಲ್ಲಿ ಒಮ್ಮೆ ಬೇಲೂರು ಮಠಕ್ಕೆ ಹೋಗಿದ್ದ ನಾನು ಅವರನ್ನು ಕಂಡು ಪ್ರಣಾಮವನ್ನು ಸಲ್ಲಿಸಲು ಅವರ ಬಳಿಗೆ ಹೋದೆ. ಆಸ್ಟ್ರೇಲಿಯಾದ ಭಕ್ತರನ್ನು ಪ್ರೀತಿಯಿಂದ ನೆನೆಸಿಕೊಂಡ ಅವರು ಒಬ್ಬೊಬ್ಬರ ಹೆಸರನ್ನು ಹಿಡಿದು ಅವರುಗಳ ಬಗ್ಗೆ ವಿಚಾರಿಸಿದರು ಮತ್ತು ಅವರುಗಳಿಗೆಲ್ಲಾ ತಮ್ಮ ಆಶೀರ್ವಾದವನ್ನು ತಿಳಿಸುವಂತೆ ನನಗೆ ಹೇಳಿದರು. ಪರಮಾತ್ಮನ ಭಕ್ತರ ಯೋಗಕ್ಷೇಮದ ಮೇಲಿನ ಅವರು ಕಾಳಜಿಯನ್ನು ತೋರುತ್ತಿದ್ದ ಆ ಕ್ಷಣಗಳು ನಮಗೆ ಯಾವಾಗಲೂ ಹೃದಯಸ್ಪರ್ಶಿಯಾಗಿರುತ್ತಿದ್ದವು.

* * * *

# ೩೧. ಬೇರೆಯವರಲ್ಲಿರುವ ಉತ್ತಮಾಂಶಗಳನ್ನು ಹೊರಗೆಳೆಯುತ್ತಿದ್ದ ಮಹಾರಾಜ್

**–ಸ್ವಾಮಿ ರಾಮಾನುಜಾನಂದ***

ನಾನು ೧೯೫೮ರಲ್ಲಿ ಮದರಾಸಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ರಾಮಕೃಷ್ಣ ಸಂಘದ ಚಟುವಟಿಕೆಗಳ ಸಂಪರ್ಕಕ್ಕೆ ಬಂದೆ. ನಾನು ದೆಹಲಿಯಲ್ಲಿ ಈ ಸಂಘಕ್ಕೆ ಸೇರಿಕೊಂಡೆ. ನಾನು ದೆಹಲಿಯನ್ನು ತಲುಪುವಷ್ಟರಲ್ಲಿ, ಕೋಲ್ಕತ್ತದ ರಾಮಕೃಷ್ಣ ಮಿಷನ್‌ನ ಸಾಂಸ್ಕೃತಿಕ ಸಂಸ್ಥೆಯ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದ ಸ್ವಾಮಿ ರಂಗನಾಥಾನಂದರು ದೆಹಲಿಯನ್ನು ಬಿಟ್ಟಿದ್ದರು. ಇದು ನಡೆದದ್ದು ೧೯೬೨ರಲ್ಲಿ.

ಅವರು ದೆಹಲಿಗೆ ಆಗಾಗ್ಗೆ ಬರುತ್ತಿದ್ದರು. ಹಾಗೆ ಒಮ್ಮೆ ಅವರು ಬರುವ ಮುನ್ನ ನನ್ನ ಸೋದರ ಸಂನ್ಯಾಸಿಯೊಬ್ಬರು ನನಗೆ ಈ ಎಚ್ಚರಿಕೆಯನ್ನು ಕೊಟ್ಟರು. 'ನೋಡು, ಸ್ವಾಮಿ ರಂಗನಾಥಾನಂದರು ಪ್ರತಿಯೊಂದು ವಿಷಯವನ್ನು ಸೂಕ್ಷ್ಮವಾಗಿ ನೋಡುತ್ತಾರೆ. ಸ್ವಲ್ಪ ಲೋಪವಾದರೂ ಅವರಿಗೆ ಅಸಮಾಧಾನವಾಗುತ್ತದೆ. ನೀನು ಬಹಳ ಎಚ್ಚರಿಕೆಯಿಂದ ಇರಬೇಕು.' ನಾನು ಹೆದರಿದೆ. ನನ್ನ ಸೇವೆಯು ಅವರಿಗೆ ಒಪ್ಪಿಗೆಯಾಗುತ್ತದೆಯೋ ಇಲ್ಲವೋ ಎಂಬ ಆತಂಕದಲ್ಲಿದ್ದೆ. ಆಗ ನಾನೊಬ್ಬ ಅನನುಭವಿಯಾದ ಬ್ರಹ್ಮಚಾರಿ. ಸ್ವಾಮಿ ರಂಗನಾಥಾನಂದರು ಬರುತ್ತಿರುವ ವಿಮಾನ ತಡವಾಗಿದೆಯೆಂದೂ, ಅವರು ಬರುವುದು ಸಾಕಷ್ಟು ಹೊತ್ತಾಗಬಹುದು ಎಂದೂ ಇತರರು ನನಗೆ ಹೇಳಿದರು. ಅಲ್ಲದೆ, ತಾವು ವಿಶ್ರಾಂತಿ ತೆಗೆದುಕೊಳ್ಳಲು ಹೋಗುವುದಾಗಿಯೂ, ನಾನು ಅಲ್ಲಿಯೇ ಇದ್ದು, ಮಹಾರಾಜ್ ಅವರು ಬಂದಾಗ ತಮಗೆ ತಿಳಿಸಬೇಕೆಂದೂ ಅವರು ನನಗೆ ಹೇಳಿದರು. ಆ ಹೊಣೆ ನನಗಾಯಿತು.

ಆಗಿನ ಕಾಲದಲ್ಲಿ ಬರುವ ಫೋನ್ ಕರೆಗಳಿಗೆ ಉತ್ತರಿಸುವುದೇ ಒಂದು ದೊಡ್ಡ ಕೆಲಸ. ಮಹಾರಾಜ್ ಅವರು ಬಂದಮೇಲೆ ಅವರಿಗೆ ಬರುವ ಕರೆಗಳ ಪ್ರವಾಹ ತಬ್ಬಿಬ್ಬು ಹಿಡಿಸುವ ಹಾಗಿರುತ್ತಿತ್ತು. ಈ ಕೆಲಸ ನನ್ನ ಪಾಲಿಗೆ ಬಂದಿತ್ತು. ಪ್ರತಿ ಕರೆ ಬಂದಾಗಲೂ ನಾನು ಒಳಗೆ ಹೋಗಿ ಮಹಾರಾಜ್ ಅವರಿಗೆ ತಿಳಿಸಬೇಕಿತ್ತು. ಏಕೆಂದರೆ, ಆಗಿನ ದಿನಗಳಲ್ಲಿ, ಕೊಠಡಿಯ ಒಳಗೆ ಫೋನಿನ ವ್ಯವಸ್ಥೆ ಇರಲಿಲ್ಲ. ಇದ್ದ ಒಂದೇ ಫೋನು ಕಛೇರಿಯಲ್ಲಿತ್ತು. ಸಹಜವಾಗಿಯೇ ಅದು ಪ್ರಯಾಸದ ಕೆಲಸವಾಗಿದ್ದರೂ ನಾನು ಅದನ್ನು ನಿಭಾಯಿಸಬೇಕಾಗಿತ್ತು. 'ನಿನಗೆ ಆಪ್ತಸೇವೆಗೆ ಬೇಕಾಗಿರುವ ಮನೋಭಾವವಿಲ್ಲ. ಸಾಮಾನ್ಯವಾದ ಕೆಲಸಗಳನ್ನಷ್ಟೇ ನಿನಗೆ ಕೊಡಬೇಕು' ಎಂದು ಹೇಳಿದ್ದರು. ಸಾಮಾನ್ಯವಾದ ಕೆಲಸಗಳು ಎಂದರೆ ಬುದ್ಧಿಯ ಉಪಯೋಗದ ಅಗತ್ಯ ಇಲ್ಲದ ಕೆಲಸಗಳು ಎಂದು ಅರ್ಥ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಆಗ ಭಾರತ ಸರಕಾರದಲ್ಲಿ ಉಪ ವಿದೇಶಾಂಗ ಸಚಿವೆಯಾಗಿದ್ದ ಶ್ರೀಮತಿ ಲಕ್ಷ್ಮೀ ಮೆನನ್ ಅವರು ಸ್ವಾಮಿ ರಂಗನಾಥಾನಂದರನ್ನು ಮಧ್ಯಾಹ್ನ ೧೨ರಿಂದ ೧.೩೦ರ ನಡುವೆ ಭೇಟಿ ಮಾಡುವುದಾಗಿ ತಿಳಿಸಿದರು. ಅದು ನಮಗೆ ಅನನುಕೂಲವಾದ ಸಮಯವಾಗಿತ್ತು; ಕಾರಣ ಮಧ್ಯಾಹ್ನ ೧೨ರಿಂದ ೩.೩೦ರವರೆಗೆ ಆಶ್ರಮ ಮುಚ್ಚಿರುತ್ತಿತ್ತು. ಮಹಾರಾಜ್ ಅವರಿಗೆ ಇದನ್ನು ಹೇಳಿದಾಗ, ಅವರು, 'ನಾನು ಊಟವಾದ ನಂತರ ವಿಶ್ರಾಂತಿ ತೆಗೆದುಕೊಳ್ಳುತ್ತಿರುತ್ತೇನೆ. ಅವರು ಬಂದಾಗ ನನಗೆ ತಿಳಿಸು' ಎಂದರು. ಶ್ರೀಮತಿ ಮೆನನ್ ಅವರು ಬಂದಾಗ ನಾನು ಮಹಾರಾಜ್ ಅವರ ಕೊಠಡಿಗೆ ಹೋದೆ. ಅವರು ನಿದ್ರಿಸುತ್ತಿರಲಿಲ್ಲ. ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿದ್ದರು. ಒಳಗೆ ಹೋಗಿ ಅವರಿಗೆ

---

* ಕೇರಳದ ತ್ರಿಶೂರಿನಲ್ಲಿರುವ ರಾಮಕೃಷ್ಣಾಶ್ರಮದ ಹಿರಿಯ ಸಂನ್ಯಾಸಿ.

ವಿಷಯ ತಿಳಿಸದೆ ಇದ್ದರೆ, 'ಮಹಾರಾಜ್ ಅವರಿಗೆ ನೀನೇಕೆ ವಿಷಯ ತಿಳಿಸಲಿಲ್ಲ' ಎನ್ನುತ್ತಾರೆ. ತಿಳಿಸಿದರೆ 'ಅವರಿಗೇಕೆ ತೊಂದರೆಕೊಟ್ಟೆ ಎನ್ನುತ್ತಾರೆ' ಎಂಬ ಸಂದಿಗ್ಧದಲ್ಲಿ ನಾನಿದ್ದೆ. ಹೀಗೆ ಮನಸ್ಸಿನಲ್ಲಿ ಅಳೆದೂ ಸುರಿದೂ ಕೊನೆಗೆ ಸದ್ದುಮಾಡದಂತೆ ಅವರ ಕೊಠಡಿಯ ಬಾಗಿಲನ್ನು ಸರಿಸಿ ಒಳಗೆ ಹೋಗಿ 'ಅವರು ಬಂದಿದ್ದಾರೆ' ಎಂದೆ. ನನ್ನ ಪುಕ್ಕಲುತನವನ್ನು ಕಂಡ ಮಹಾರಾಜ್ ಅವರು 'ಅಷ್ಟೇಕೆ ಹೆದರುತ್ತೀಯೆ? ಚುರುಕಾಗಿರು' ಎಂದರು. ನಂತರ ಹೊರಬಂದು ಆಕೆಯನ್ನು ಭೇಟಿ ಮಾಡಿದರು. ನಂತರ ನಿಧಾನವಾಗಿ ನಾನು ಅವರೊಂದಿಗೆ ಒಂದು ಬಗೆಯ ಆತ್ಮೀಯತೆಯನ್ನು ಗಳಿಸಿಕೊಂಡೆ.

ಅವರ ವ್ಯಕ್ತಿತ್ವದ ವಿವಿಧ ಮುಖಗಳು ನನ್ನನ್ನು ಆಕರ್ಷಿಸಿದವು. ಅದರಲ್ಲೂ ಜೀವನವು ಒಂದು ಅರ್ಥಪೂರ್ಣ ಉದ್ದೇಶವನ್ನು ಹೊಂದಿರಬೇಕೆಂಬುದಕ್ಕೆ ಅವರು ನೀಡುತ್ತಿದ್ದ ನಿರಂತರವಾದ ಒತ್ತು ನನ್ನನ್ನು ಬಹುವಾಗಿ ಸೆಳೆಯುತ್ತಿತ್ತು. ಇನ್ನೊಂದು ಪ್ರಮುಖ ಆಕರ್ಷಣೆಯೆಂದರೆ ಅವರ ಸಕಾರಾತ್ಮಕವಾದ ಧೋರಣೆ. ಸಕಾರಾತ್ಮಕ ವಾದದ್ದರೆಲ್ಲಾ ಅವರು ತೊಡಗುತ್ತಿದ್ದರು. ಉದಾಹರಣೆಗೆ, ಅಂದಿನ ದಿನಗಳಲ್ಲಿ ಕೋಲ್ಕತಾದಲ್ಲಿ ನಕ್ಸಲರ ಹಾವಳಿ ವಿಪರೀತವಾಗಿತ್ತು. ಈ ಕ್ಷೋಭೆಯನ್ನು ದೆಹಲಿಯ ಜನರು ಬಹಳ ಆತಂಕದಿಂದ ಗಮನಿಸುತ್ತಿದ್ದರು. ಅಂತಹ ದಿನಗಳಲ್ಲಿ ಒಮ್ಮೆ ಸ್ವಾಮೀಜಿಯವರು ಒಂದು ಉಪನ್ಯಾಸ ನೀಡುವುದಕ್ಕಾಗಿ ದೆಹಲಿಗೆ ಬಂದರು. ಉಪನ್ಯಾಸದ ನಂತರ ಇಲ್ಲಿನ ಜನರು ಕೇಳಿದರು: 'ಮಹಾರಾಜ್, ನಾವು ಬದುಕುವು ದಾದರೂ ಹೇಗೆ? ನಮ್ಮ ದೇಶಕ್ಕೇ ಏನಾಗುತ್ತದೆ?' ಅವರು ಸ್ವಾಮೀಜಿಯವರಿಂದ ಒಂದು ದೊಡ್ಡ ಧರ್ಮೋಪದೇಶವನ್ನೇ ನಿರೀಕ್ಷಿಸಿದ್ದರೆಂದು ಕಾಣಿಸುತ್ತದೆ. ಸ್ವಾಮೀಜಿ ಉತ್ತರಿಸಿದರು: "ಸ್ವಾಮಿ ವಿವೇಕಾನಂದರು ಲಂಡನ್ನಿನಲ್ಲಿದ್ದಾಗ ಓರ್ವ ಮಹಿಳೆ ಅವರನ್ನು ಕುರಿತು ಹೇಳಿದಳು: 'ಭಾರತವು ನೈತಿಕ ಮೌಲ್ಯಗಳಿರುವ ದೇಶ. ಇದು ಸಂತೋಷದ ವಿಷಯ.' ತಕ್ಷಣ ಸ್ವಾಮೀಜಿಯವರು 'ಅದು ಹಾಗಿಲ್ಲದಿದ್ದರೇ ಚೆಂದವಿರುತ್ತಿತ್ತು' ಎಂದರು. ಆ ಮಹಿಳೆಗೆ ಅತ್ಯಾಶ್ಚರ್ಯವಾಯಿತು. ನಿಜವಾಗಿ ಈಗ ಆಗುತ್ತಿರುವುದೇನು? ಜನರಿಗೆ ಈಗ ಬಲ ಬರುತ್ತಿದೆ. ಅದರಿಂದಲೇ ಈಗ ಈ ಹಿಂಸಾಕಾರ್ಯಗಳು ನಡೆಯುತ್ತಿವೆ ಅಷ್ಟೆ. ಅದಕ್ಕೆ ಯೋಚಿಸಬೇಡಿ." ಎಂತಹ ಕ್ಷೋಭೆಯ ವಾತಾವರಣದಲ್ಲೂ ಅವರು ಬೆಳಕನ್ನು ಕಾಣುವ ಆಶಾವಾದಿಯಾಗಿದ್ದರು. ಆ ಆಶಾವಾದವನ್ನೇ ಅವರು ಎಲ್ಲೆಲ್ಲೂ ಬಿತ್ತುತ್ತಿದ್ದರು.

ಅವರು ಇತರರಲ್ಲಿ ಒಳ್ಳೆಯ ಅಂಶಗಳನ್ನು ಕಂಡರೆ ತಕ್ಷಣ ಅದನ್ನು ಗುರುತಿಸಿ ಪ್ರೋತ್ಸಾಹಿಸುತ್ತಿದ್ದರು. ಇದಕ್ಕೆ ಒಂದು ಪ್ರಸಂಗವನ್ನು ಉದಾಹರಿಸುತ್ತೇನೆ. ಇಂದಿರಾ ಗಾಂಧಿಯವರು ದೇಶದ ಪ್ರಧಾನಿಯಾಗಿದ್ದರು. ಅವರು ಮೊರಾರ್ಜಿ ದೇಸಾಯಿ ಯವರನ್ನು ಸೋಲಿಸಿದ್ದರು. ಅರುಣಾಚಲ ಪ್ರದೇಶದಲ್ಲಿರುವ ನಮ್ಮ ಅಲಾಂಗ್ ಕೇಂದ್ರದ ಬಗ್ಗೆ ಇಂದಿರಾಗಾಂಧಿ ಯವರಿಗೆ ಒಂದು ಪತ್ರವನ್ನು ಕೊಡಬೇಕಿತ್ತು. ಆದರೆ, ಮಹಾರಾಜ್ ಅವರು ಇನ್ನು ಹೊರಡುವುದಕ್ಕೆ ಕೇವಲ ೧೦ ನಿಮಿಷಗಳಿದ್ದವು. ನನಗೆ ಆ ಪತ್ರವನ್ನು ಬೆರಳಚ್ಚು ಮಾಡಲು ಹೇಳಿದರು. ನನಗೋ ಅಂಜಿಕೆ. ಹತ್ತು ನಿಮಿಷದಲ್ಲಿ ಪತ್ರವನ್ನು ಬೆರಳಚ್ಚು ಮಾಡುವುದು, ಅದರಲ್ಲೂ ಪತ್ರವನ್ನು ಕಳುಹಿಸುತ್ತಿರುವುದು ದೇಶದ ಪ್ರಧಾನಿಯವರಿಗೆ. ಅದರಲ್ಲಿ ಒಂದೂ ತಪ್ಪಿರದಂತೆ ಅಂದವಾಗಿ ಬೆರಳಚ್ಚು ಮಾಡಬೇಕು. ಆದರೆ ಆತುರದಲ್ಲಿ ಮಾಡಿದರೆ ತಪ್ಪುಗಳು ಬರುವುದು ಸಹಜವೆ. ನನಗೆ ಅಸಾಧ್ಯವಾದ ಕೆಲಸವನ್ನು ವಹಿಸಿದ್ದಾರೆ ಎನಿಸಿತು. ಆದರೆ, ಶ್ರೀ ಗುರು ಮಹಾರಾಜ್ ಅವರ ಕೃಪೆಯಿಂದ ಒಂದು ತಪ್ಪೂ ಇಲ್ಲದಂತೆ ಆ ಪತ್ರವನ್ನು ಬೆರಳಚ್ಚು ಮಾಡಿದೆ. ಅದನ್ನು ನೋಡಿದ ಮಹಾರಾಜ್ ಅವರು 'ಬಹಳ ಚೆನ್ನಾಗಿದೆ' ಎಂದು ನನ್ನ ಬೆನ್ನು ತಟ್ಟಿದರು. ಅಂತಹ ಹೊಗಳಿಕೆ ನನ್ನಲ್ಲಿ ಅತೀವ ಉತ್ಸಾಹವನ್ನು ತುಂಬಿತು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಮಹಾರಾಜ್ ಅವರು ಬೇರೆಯವರಲ್ಲಿರುವ ಒಳ್ಳೆಯ ಗುಣಗಳನ್ನು ಗುರುತಿಸಿ ಪ್ರೋತ್ಸಾಹಿಸುವಲ್ಲಿ ಸಿದ್ಧಹಸ್ತರಾಗಿದ್ದರು.

* * * *

# ೩೨. ಆತ್ಮಶಕ್ತಿ ಮತ್ತು ಭಗವತ್ಕೃಪೆ ಮನುಷ್ಯನನ್ನು ಶ್ರೇಷ್ಠನನ್ನಾಗಿಸುತ್ತವೆ

–ಸ್ವಾಮಿ ಬೋಧಿಸತ್ವಾನಂದ*

ನೀನು ದೇವರೆಡೆಗೆ ಒಂದು ಹೆಜ್ಜೆ ಇಟ್ಟರೆ, ಅವನು
ಹತ್ತು ಹೆಜ್ಜೆ ಇಡುತ್ತಾ ನಿನ್ನೆಡೆಗೆ ಬರುತ್ತಾನೆ

–ಶ್ರೀ ರಾಮಕೃಷ್ಣ

ಪರಮಪೂಜ್ಯ ಸ್ವಾಮಿ ರಂಗನಾಥಾನಂದ ಮಹಾರಾಜ್ ಅವರ ಜೀವನದಲ್ಲಿ ನಾವು ನೋಡುವುದು ಅವರ ಆತ್ಮಶಕ್ತಿ ದೇವರ ಕೃಪೆಯನ್ನು ತಮ್ಮೆಡೆಗೆ ಸೆಳೆದುಕೊಂಡಿತು; ಹೀಗಾಗಿ ಅವರು ತಮ್ಮ ಜೀವನದ ಗುರಿಯನ್ನು ಮುಟ್ಟಿದರು ಎಂಬುದು. ಅವರು ತಮ್ಮ ಸ್ವಂತ ಸಾಮರ್ಥ್ಯದಿಂದ ಮೇಲೇರಿ, ಭಗವಾನ್ ರಾಮಕೃಷ್ಣರ ಸಾಕ್ಷಾತ್ ಹಲವು ಶಿಷ್ಯರ ಆಶೀರ್ವಾದ, ಪ್ರೀತಿ, ಆದರಗಳನ್ನು ಗಳಿಸಿಕೊಳ್ಳಲು ಅರ್ಹರಾದರು. ತಮ್ಮ ಬಾಲ್ಯದಿಂದಲೂ ಅವರು ಎಲ್ಲ ಬಗೆಯ ಕಷ್ಟತರವಾದ ಹಾಗೂ ಸಾಹಸದ ಕೆಲಸಗಳನ್ನು ಮಾಡಲು ಇಷ್ಟಪಡುತ್ತಿದ್ದರು. ತಾವು ಮಾಡುವ ಕೆಲಸ ಎಷ್ಟೇ ಚಿಕ್ಕದಿರಲಿ, ಅದನ್ನು ಎಚ್ಚರಿಕೆಯಿಂದ, ಶ್ರದ್ಧೆಯಿಂದ ಹಾಗೂ ಭಕ್ತಿಯಿಂದ ಮಾಡುತ್ತಿದ್ದರು. ಅವರು ರಾಮಕೃಷ್ಣ ಸಂಘಕ್ಕೆ ಸೇರಿದಂದಿನಿಂದ ಅವರು ಮಾಡುವ ಕಾರ್ಯವೆಲ್ಲವೂ ಪೂಜೆಯೇ ಆಗಿರುತ್ತಿತ್ತು. ತಮ್ಮ ತಾಯಿನಾಡನ್ನು ಅವರು ಬಹಳವಾಗಿ ಪ್ರೀತಿಸುತ್ತಿದ್ದರು. ಆದ್ದರಿಂದಲೇ ಅವರು ರಾಮಕೃಷ್ಣರ ಆದರ್ಶವನ್ನು ಜಗತ್ತಿಗೆ ಸಾರಲು ಮತ್ತೆ ಜನ್ಮವೆತ್ತುತ್ತೇನೆ ಎನ್ನುತ್ತಿದ್ದರು. ಬದುಕಿರುವವರೆಗೂ ಅವರು ಯಾವುದೇ ತರಹದ ಸುಖ, ಸಹಾಯ, ಸಂತೋಷಗಳ ಹಿಂದೆ ಹೋಗುತ್ತಿರಲಿಲ್ಲ. ನಿಜವಾದ ಅರ್ಥದಲ್ಲಿ ತ್ಯಾಗ, ನಿರ್ಲಿಪ್ತತೆ ಮತ್ತು ಯಾವ ಭೇದಭಾವವನ್ನೂ ಮಾಡದೆ ಎಲ್ಲರ ಸೇವೆ ಮಾಡುವ ಮನೋಭಾವ– ಇವು ಅವರಲ್ಲಿ ಮನೆಮಾಡಿದ್ದವು.

ಆ ಲಸ್ಯವನ್ನು ಅವರು ಎಂದೂ ಸಹಿಸುತ್ತಿರಲಿಲ್ಲ. ಅವರ ಪೌರುಷ ಯುಕ್ತವಾದ ಕ್ರಿಯಾಶೀಲತೆ ನಮಗೆಲ್ಲಾ ಮೆಚ್ಚಿಕೆಯಾಗಿತ್ತು. ಯಾವುದನ್ನೇ ಆಗಲಿ ಪೋಲು ಮಾಡುವುದನ್ನು ಅವರು ದ್ವೇಷಿಸುತ್ತಿದ್ದರು. ಪೋಲು ಆಗುವುದನ್ನು ತಪ್ಪಿಸಲೆಂದೇ ಅವರು ಇತರ ಎಲ್ಲಾ ಸಂನ್ಯಾಸಿಗಳು, ಬ್ರಹ್ಮಚಾರಿಗಳು ಚಹವನ್ನು ತೆಗೆದುಕೊಂಡ ನಂತರ ಉಳಿದ ಅಷ್ಟೂ ಚಹವನ್ನು ತಾವು ಸೇವಿಸುತ್ತಿದ್ದರು. ಹೆಚ್ಚು ಚಹವನ್ನು ಕುಡಿಯಬೇಕೆಂಬುದು ಅವರ ಮತವಲ್ಲ. ಆದರೆ, ಅದಕ್ಕೆ ಉಪಯೋಗಿಸಿರುವ ಚಹಾಪುಡಿ, ಸಕ್ಕರೆ ಮತ್ತು ಹಾಲು– ಈ ಪದಾರ್ಥಗಳನ್ನು ಪೋಲು ಮಾಡಬಾರದು ಎಂಬುದಷ್ಟೇ ಆಗಿರುತ್ತಿತ್ತು. ಅಂದಿನ ಕಾರ್ಪಣ್ಯದ ದಿನಗಳಲ್ಲಿ ಮಾಡುತ್ತಿದ್ದ ಚಹ ಆದಷ್ಟೂ ನೀರಾಗಿ, ಎಷ್ಟೆಂದರೆ ಗಂಗೆಯ ನೀರಿನಂತೆ, ಇರುತ್ತಿತ್ತು. ಅದರಿಂದ ಹೊಟ್ಟೆಯು ಕೆಡುತ್ತಿತ್ತು. ಇದರಿಂದಾಗಿ ಅವರು ಚಹ ಕುಡಿಯುವುದನ್ನೇ ಬಿಟ್ಟುಬಿಟ್ಟರು. ನಾವು ಅವರಿಗೆ ಹಾಸ್ಯವಾಗಿ, 'ಮಹಾರಾಜ್, ನೀವು ನಿಮ್ಮ ಚಹಾದ ಕೋಟಾವನ್ನು ಮುಗಿಸಿಬಿಟ್ಟಿದ್ದೀರಿ' ಎನ್ನುತ್ತಿದ್ದೆವು. ಅವರು ನಸುನಗುತ್ತಾ 'ಹೌದು' ಎನ್ನುತ್ತಿದ್ದರು. ಹದಿನೆಂಟು ವರ್ಷದ ಹುಡುಗರಷ್ಟೇ ಚುರುಕಾಗಿದ್ದ ಅವರನ್ನು ಹಾಸ್ಯ ಪ್ರಸಂಗಗಳಲ್ಲಿ ಕೂಡ ಯಾರೂ ಮೀರಿಸಲಾಗುತ್ತಿರಲಿಲ್ಲ.

---

* ಸ್ವಾಮಿ ರಂಗನಾಥಾನಂದರ ಸಹಾಯಕರಾಗಿದ್ದು, ಪ್ರಸಕ್ತ ಬೇಲೂರು ಮಠದಲ್ಲಿದ್ದಾರೆ.

ಅವರ ಜೀವನ ಹೊರಗೆ ವೇದಾಂತ, ಒಳಗೆ ಭಕ್ತಿ– ಇವುಗಳ ಸೂಕ್ತ ಮಿಶ್ರಣವಾಗಿತ್ತು. ಅವರು ಹಳೆಗಾಲದವರಂತಿದ್ದರೂ ಆಧುನಿಕ ಯುಗದ ಉತ್ಸಾಹ ಅವರಲ್ಲಿ ಚಿಮ್ಮುತ್ತಿತ್ತು. ಅವರ ಅವಿಕಾರವಾದ ಮನಸ್ಸು ಸರಳ ಹಾಗೂ ಹರಿತವಾಗಿ ಇದ್ದಿತು. ಅಂತಹ ಅವಿಕಾರವಾದ ಮನಸ್ಸಿಗೆ ಅಗಾಧ ಶಕ್ತಿಯಿರುತ್ತದೆ. ಮನಸ್ಸು ಶುದ್ಧವಾದಷ್ಟೂ ಮನುಷ್ಯ ದೇವರಿಗೆ ಹತ್ತಿರದವನಾಗುತ್ತಾನೆ. ಅವರು ದಿನನಿತ್ಯದ ಕರ್ಮಗಳ ಕಡೆಗೆ ಹೆಚ್ಚು ಗಮನಕೊಡುತ್ತಿರಲಿಲ್ಲ. ರಾಮಕೃಷ್ಣ ಸಂಘಕ್ಕೆ ಸೇರಿದ ಮೇಲೆ ಅವರು ವಿಭೂತಿಯಿಡುವುದನ್ನು ಬಿಟ್ಟುಬಿಟ್ಟರು. 'ನಾನೀಗ ಠಾಕೂರ್ ಆಗಿದ್ದೇನೆ' ಎನ್ನುತ್ತಿದ್ದರು. ಆದರೆ ಅವರಲ್ಲಿ ಭಕ್ತಿಯ ಆವೇಶ ಇರುತ್ತಿತ್ತು. ಅದು ದುರ್ಗಾಪೂಜೆಯ, ಕುಮಾರಿಪೂಜೆಯ, ದುರ್ಗಾ ವಿಸರ್ಜನೆಯ ಸಂದರ್ಭಗಳಲ್ಲಿ, ಹಾಗೂ ಶ್ರೀ ರಾಮಕೃಷ್ಣರ, ಶ್ರೀಮಾತೆಯವರ, ಸ್ವಾಮಿ ವಿವೇಕಾನಂದರ ಪುಸ್ತಕಗಳನ್ನು ಓದುವಾಗ ಮೇರೆಮೀರಿ ಹರಿಯುತ್ತಿತ್ತು. ಅವರು ಶ್ರೀ ರಾಮಕೃಷ್ಣರಿಗೆ, ಶ್ರೀಮಾತೆಯವರಿಗೆ, ವಿವೇಕಾನಂದರಿಗೆ ಮತ್ತು ಸ್ವಾಮಿ ಬ್ರಹ್ಮಾನಂದರಿಗೆ ಪ್ರಣಾಮ ಸಲ್ಲಿಸುವ ವೇಳೆಯಲ್ಲಿ ಯಾವ ವೇದಾಂತವೂ ಅವರ ಬಳಿ ಸುಳಿಯುತ್ತಿರಲಿಲ್ಲ. ಬದಲಿಗೆ, ಅಂತಹ ಸಂದರ್ಭಗಳಲ್ಲಿ ಅವರ ಮನೋಭಾವ ದೇವರಿಗೆ ಸಂಪೂರ್ಣವಾಗಿ ಶ್ರದ್ಧಾಭಕ್ತಿಯಿಂದ ಶರಣಾದ ಮಗುವಿನ ಮನೋಭಾವದಂತಿರುತ್ತಿತ್ತು. ಆ ಉನ್ನತ ಸ್ತರದಿಂದ ಕೆಳಕ್ಕೆ ಇಳಿದು ವಾಸ್ತವಿಕ ಪ್ರಪಂಚಕ್ಕೆ ಬರುವುದಕ್ಕೆ ಅವರಿಗೆ ಸಾಕಷ್ಟು ಸಮಯ ಬೇಕಾಗುತ್ತಿತ್ತು. ಮೇಲಾಗಿ, ಅವರು ಆಡಂಬರದ ವ್ಯಕ್ತಿಯಾಗಿರಲಿಲ್ಲ. ಅದು ಅವರ ಸ್ವಭಾವಕ್ಕೆ ಹೊರತಾದುದು. ಹೊರಗೆ ಗಂಭೀರ ವ್ಯಕ್ತಿತ್ವದವರಂತೆ ಕಂಡರೂ, ಅವರ ಹೃದಯ ಬಹಳ ಮೃದುವಾಗಿ, ವಿನೀತವಾಗಿ, ಭಕ್ತಿಯಿಂದ ಕೂಡಿದುದಾಗಿ ಇತ್ತು. ಋಷಿ, ಸಂತರು ಹಾಗೂ ಮಹಾಪುರುಷರ ಬಗ್ಗೆ ಅವರಿಗೆ ತುಂಬು ಗೌರವವಿತ್ತು.

ಮಹಾರಾಜ್ ಅವರು ಒಮ್ಮೆ ಸ್ವಾಮಿ ಅಖಂಡಾನಂದ ಮಹಾರಾಜ್ ಅವರನ್ನು ಕುರಿತು ಹೇಳಿದರು: 'ಸ್ವಾಮಿ ವಿವೇಕಾನಂದರು ತಮ್ಮನ್ನು ಬಹಳವಾಗಿ ಪ್ರೀತಿಸುತ್ತಿದ್ದರು ಎಂದು ಕೇಳಿದ್ದೇನೆ. ತಾವು ನನ್ನನ್ನು ದಯವಿಟ್ಟು ಹರಸಿದರೆ, ನನಗೆ ಸ್ವಾಮಿ ವಿವೇಕಾನಂದರೇ ಹರಸಿದಂತೆ ಆಗುತ್ತದೆ.' ಇದನ್ನು ಕೇಳಿದ ಸ್ವಾಮಿ ಅಖಂಡಾನಂದ ಮಹಾರಾಜ್ ಅವರು ಸ್ವಾಮಿ ರಂಗನಾಥಾನಂದ ಮಹಾರಾಜ್ ಅವರನ್ನು ಮನದುಂಬಿ ಹರಸಿದರು.

ಪೂಜ್ಯ ಮಹಾರಾಜ್ ಅವರಿಗೆ ವಿವೇಕಾನಂದರಲ್ಲಿ ಅಪರಿಮಿತವಾದ ಭಕ್ತಿ. ಅದರಿಂದಾಗಿಯೇ ಅವರು 'ಸಮಾಜದ ದುರ್ಬಲ ವರ್ಗಗಳ ಸೇವೆ ಮಾಡಿ' ಎನ್ನುತ್ತಿದ್ದರು. ದೇಶದ ಬಡ ಹಾಗೂ ಅನಕ್ಷರಸ್ಥ ಜನರ ವಿಷಯದಲ್ಲಿ ಅವರ ಹೃದಯ ಯಾವಾಗಲೂ ತುಡಿಯುತ್ತಿತ್ತು. ರಾಮಕೃಷ್ಣ–ವಿವೇಕಾನಂದರ ಸಾಹಿತ್ಯವನ್ನು ಎಲ್ಲಾ ವರ್ಗದ ಜನತೆಗೂ ತಲುಪುವಂತೆ ಮಾಡಿದರು. ಅದನ್ನು ಓದಿ ಅರ್ಥ ಮಾಡಿಕೊಂಡರೆ ಅವರ ಜೀವನ ಉತ್ತಮವಾಗುತ್ತದೆ ಎಂಬುದು ಅವರ ನಂಬಿಕೆ. ನಾವು ಸ್ವಾಮೀಜಿಯವರನ್ನು 'ಹೀಗೇಕೆ ಎಲ್ಲರಿಗೂ ಈ ಪುಸ್ತಕಗಳನ್ನು ಕೊಡುತ್ತಿದ್ದೀರಿ' ಎಂದು ಕೇಳಿದಾಗ ಅವರು 'ಇದನ್ನು ಅವರು ಓದಿದರೆ, ಅವರು ಬದಲಾದ ಮನುಷ್ಯರಾಗುತ್ತಾರೆ' ಎಂದರು. ಅವರಿಗೆ ದೇಶದ ಪ್ರಗತಿಯ ಬಗ್ಗೆ ಅಪಾರ ಕಾಳಜಿ ಇತ್ತು. ಈ ವಿಷಯದಲ್ಲಿ ತಮ್ಮ ಆರೋಗ್ಯದ ಕಡೆಗೂ ಅವರು ಗಮನ ಕೊಡುತ್ತಿರಲಿಲ್ಲ. ಅವರಿಗೆ ಸಕಾರಾತ್ಮಕವಾದ ದೃಷ್ಟಿಕೋನದ ವಿಷಯದಲ್ಲಿ ಅತಿಯಾದ ಆತ್ಮವಿಶ್ವಾಸವಿರುತ್ತಿತ್ತು. ಅವರ ದೃಷ್ಟಿಕೋನವೆಲ್ಲವೂ ಸಕಾರಾತ್ಮಕವಾಗಿಯೇ ಇರುತ್ತಿತ್ತು. ಇದು ಅವರು ಮಾಡುತ್ತಿದ್ದ ಎಲ್ಲ ಕೆಲಸಗಳಲ್ಲೂ ಮತ್ತು ಯಾವುದೇ ವಿಷಯಗಳನ್ನು ಅವರು ಅಧ್ಯಯನ ಮಾಡುವಾಗಲೂ ಎದ್ದು ಕಾಣಿಸುತ್ತಿತ್ತು.

ಆಕಾಂಕ್ಷಿಗಳು ಪೂಜ್ಯ ಮಹಾರಾಜ್ ಅವರಿಂದ ದೀಕ್ಷೆ ಪಡೆಯಬೇಕಾದರೆ, ಮಹಾರಾಜ್ ಅವರು ವಿಧಿಸಿದ ಕೆಲವು ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕಿತ್ತು. ದೀಕ್ಷೆ ಪಡೆಯಬಯಸುವವರು ಮೊದಲು ಓದಲೇಬೇಕಾದ ಕೆಲವು ಪುಸ್ತಕಗಳ ಪಟ್ಟಿಯಿತ್ತು. ಅವುಗಳೆಂದರೆ– ೧) ಶ್ರೀ ಪರಮಹಂಸರ, ಶ್ರೀ ಮಾತೆಯವರ

ಹಾಗೂ ಸ್ವಾಮಿ ವಿವೇಕಾನಂದರ ಸಂಕ್ಷಿಪ್ತ ಜೀವನಚರಿತ್ರೆಗಳು, ೨) ಶ್ರೀ ರಾಮಕೃಷ್ಣ ವಚನವೇದ, ಮತ್ತು ೩) ಕೊಲಂಬೋದಿಂದ ಅಲ್ಮೋರಾವರೆಗಿನ ಉಪನ್ಯಾಸಗಳು. ಕೆಲವು ವೇಳೆ ಭಕ್ತರು ಈ ಪಟ್ಟಿಯಲ್ಲಿರುವ ಪುಸ್ತಕಗಳು ಗಹನವಾಗಿರುವುದರಿಂದ ಅದನ್ನು ಓದಿ ಪೂರೈಸುವುದು ತಮಗೆ ಕಷ್ಟವೆಂದೂ, ಅವುಗಳನ್ನು ಕಡಮೆ ಮಾಡ ಬೇಕೆಂದೂ ಪೂಜ್ಯ ಮಹಾರಾಜ್ ಅವರನ್ನು ಕೇಳಿಕೊಳ್ಳುತ್ತಿದ್ದರು. ಅದಕ್ಕೆ ಮಹಾರಾಜ್ ಅವರು 'ಸರಿ, ಹಾಗಿದ್ದರೆ ಆ ಪಟ್ಟಿಗೆ ಇನ್ನೊಂದು ಪುಸ್ತಕವನ್ನು ಸೇರಿಸಿಕೊಳ್ಳಿ. ಸ್ವಾಮಿ ವಿವೇಕಾನಂದ ಪತ್ರಗಳನ್ನೂ ಓದಿ' ಎಂದು ಮರುನುಡಿಯುತ್ತಿದ್ದರು.

ಪೂಜ್ಯ ಮಹಾರಾಜ್ ಅವರು ತರುಣ ವರ್ಗದಿಂದ ಬಹಳಷ್ಟನ್ನು ನಿರೀಕ್ಷಿಸುತ್ತಿದ್ದರು. ತಮ್ಮ ವೃದ್ಧಾಪ್ಯದಲ್ಲಿಯೂ, ತಮ್ಮ ಆರೋಗ್ಯವನ್ನು ಲೆಕ್ಕಿಸದೆ, ದಿನಕ್ಕೆ ಎಂಟು ಗಂಟೆಗಳ ಕಾಲ ಅವರು ಬೌದ್ಧಿಕ ಕಾರ್ಯಗಳಲ್ಲಿ ತೊಡಗಿಕೊಳ್ಳು ತ್ತಿದ್ದರು. ಪುಸ್ತಕಗಳನ್ನು ಓದುವಾಗ ಮಹಾರಾಜ್ ಅವರು ಊಟ, ವಿಶ್ರಾಂತಿ, ನಿದ್ದೆ ಹಾಗೂ ಸಮಯದ ಪರಿವೆಗಳನ್ನು ಮರೆತೇಬಿಡುತ್ತಿದ್ದರು. ಒಳ್ಳೆಯ ಪುಸ್ತಕ ವಿಷಯದಲ್ಲಿ ಅವರು 'ನಿಮಗೆ ಒಂದು ಒಳ್ಳೆಯದು (ಅಂದರೆ ಒಳ್ಳೆಯ ಪುಸ್ತಕ) ದೊರೆತರೆ ಅದನ್ನು ಇತರರೊಂದಿಗೂ ಹಂಚಿಕೊಳ್ಳಿ' ಎನ್ನುತ್ತಿದ್ದರು. ಅವರ ಓದು ಕೇವಲ ಧಾರ್ಮಿಕ ಪುಸ್ತಕಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಅವರು ವೇದಾಂತ, ವಿಜ್ಞಾನ, ಆರೋಗ್ಯ ಮೊದಲಾದ ವಿಷಯಗಳ ಪುಸ್ತಕಗಳನ್ನೂ ಓದುತ್ತಿದ್ದರು. ತಮಗೆ ಬಂದ ಎಲ್ಲಾ ಒಳ್ಳೆಯ ಪುಸ್ತಕಗಳನ್ನೂ ಅವರು ಉತ್ಸಾಹದಿಂದ ಓದುತ್ತಿದ್ದರು. ಅವರು 'ಉಪನಿಷತ್ತಿ'ನ, 'ಮಹಾಭಾರತ'ದ, 'ಭಗವದ್ಗೀತೆ'ಯ ಹಲವು ಶ್ಲೋಕಗಳನ್ನು ಸ್ವಾಮಿ ವಿವೇಕಾನಂದರ ಸಮಗ್ರ ಕೃತಿಶ್ರೇಣಿಯ ಹಲವು ಭಾಗಗಳನ್ನು ಹೃದ್ಗತಮಾಡಿಕೊಂಡಿದ್ದರು. ರಬೀಂದ್ರನಾಥ ಟಾಗೂರ್, ಆರ್ನಾಲ್ಡ್ ಟಾಯನ್‌ಬೀ, ಆಲ್ಡಸ್ ಹಕ್ಸ್ಲೀ ಮೊದಲಾದ ಪ್ರಖ್ಯಾತ ಲೇಖಕರ ಪುಸ್ತಕಗಳ ವಿಷಯದಲ್ಲಂತೂ ಹೇಳುವಂತೆಯೇ ಇರಲಿಲ್ಲ. ಅವರ ಜ್ಞಾನಪಿಪಾಸೆ ಇಂಗುತ್ತಲೇ ಇರಲಿಲ್ಲ.

೧೯೯೮ರಲ್ಲಿ ಅವರು ವುಡ್‌ಲ್ಯಾಂಡ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಸೇರಿಸಲ್ಪಟ್ಟಿದ್ದರು. ಅವರಿಗೆ ಕೃತಕ ಉಸಿರಾಟದ ಉಪಕರಣವನ್ನು ಅಳವಡಿಸಲಾಗಿತ್ತು. ಅಂತಹ ಸ್ಥಿತಿಯಲ್ಲಿಯೂ ಪೂರ್ಣಪ್ರಜ್ಞೆಯಿಂದ ಇದ್ದ ಅವರು ಅಲ್ಲಿನ ವೈದ್ಯರೊಬ್ಬರಿಗೆ ಅವರ ಹುಟ್ಟುಹಬ್ಬದ ಶುಭಾಶಯವನ್ನು ಬರೆದುಕೊಟ್ಟರು. ಅಲಸಿಕೆಯ, ಕಷ್ಟಗಳಿಲ್ಲದ ಆರಾಮ ಜೀವನವು ಅವರಿಗೆ ಹಿಡಿಸಿಸುತ್ತಿರಲಿಲ್ಲ. ಬದಲಿಗೆ ಸಂಕಷ್ಟಗಳ, ಸವಾಲಿನ, ಹೋರಾಟದ ಬದುಕನ್ನು ಬಹುವಾಗಿ ಇಷ್ಟಪಡುತ್ತಿದ್ದರು. 'ಕೈಯಲ್ಲಿ ಆಗುವುದಿಲ್ಲ' ಎಂಬ ಹೇಳಿಕೆಯನ್ನೇ ಅವರು ದ್ವೇಷಿಸುತ್ತಿದ್ದರು. ಅದನ್ನು ಅವರು ಉಪಯೋಗಿಸುತ್ತಿರಲೇ ಇಲ್ಲ.

ಮಹಾರಾಜ್ ಅವರು ನಮ್ಮ 'ಆರತಿ' ಎಂಬ ಸ್ತೋತ್ರಗಳ ಒಂದು ಸಣ್ಣ ಪುಸ್ತಕ ಮತ್ತು ಶ್ರೀ ಪರಮಹಂಸರ ಒಂದು ಭಾವಚಿತ್ರವನ್ನು ತಮ್ಮ ತಲೆದಿಂಬಿನ ಕೆಳಗೆ ಇಟ್ಟುಕೊಂಡಿರುತ್ತಿದ್ದರು. ಅವರು 'ಖಂಡನ ಭವಬಂಧನ'ವನ್ನು ಪಠಿಸುತ್ತಿದ್ದಲ್ಲದೇ ಧ್ಯಾನ, ಜಪ ಮಾಡುವಾಗ, ತಮ್ಮ ಬಳಿ ಇರಿಸಿಕೊಂಡಿದ್ದ ಸಣ್ಣದೊಂದು ಟಾರ್ಚಿನ ಸಹಾಯದಿಂದ ಶ್ರೀ ಪರಮಹಂಸರ ಭಾವಚಿತ್ರವನ್ನು ದೃಷ್ಟಿಸುತ್ತಿದ್ದರು. ಒಂದು ಬಾರಿ, ಸಂನ್ಯಾಸಿಯೊಬ್ಬರನ್ನು 'ಆರತಿ'ಯಲ್ಲಿರುವ ಎಲ್ಲಾ ಸ್ತೋತ್ರಗಳು ಬಾಯಿಗೆ ಬರುತ್ತವೆಯೇ ಎಂದು ಕೇಳಿದರು. ಆ ಸಂನ್ಯಾಸಿ ತನಗೆ ಅದು ಸಂಪೂರ್ಣವಾಗಿ ಬಾಯಿಪಾಠವಾಗಿಲ್ಲವೆಂದಾಗ, ಮಹಾರಾಜ್ ಅವರು ಅದನ್ನೆಲ್ಲಾ ಹೃದ್ಗತಮಾಡಿ ಕೊಂಡು ತಮಗೆ ತಪ್ಪದೆ ತಿಳಿಸುವಂತೆ ಹೇಳಿದರು.

ತಮ್ಮ ವಯಸ್ಸಿನ ಕಾರಣದಿಂದ ಮಹಾರಾಜ್ ಅವರು ದಣಿವುಗೊಳ್ಳುತ್ತಿದ್ದರು. ಅಂತಹ ಸಂದರ್ಭದಲ್ಲಿ ಮಲಗಿಕೊಂಡೇ ಜಪಮಾಡುವಂತೆ ವಿನಂತಿಸಿಕೊಳ್ಳುತ್ತಿದ್ದೆವು. 'ಉಹುಂ, ನಾನು ಕುಳಿತುಕೊಂಡೇ ಮಾಡುತ್ತೇನೆ' ಎಂದೋ, ಅಥವಾ 'ನಿಮಗೆ ಅದರ ಚಿಂತೆ ಬೇಡ' ಎಂದೋ ನಿಷ್ಠುರವಾಗಿ ನುಡಿಯುತ್ತಿದ್ದರು. ಅವರಿಗೆ ಭಜನೆಗಳೆಂದರೆ ಬಹಳ ಇಷ್ಟ. ಒಮ್ಮೆ, ತಮ್ಮ ಸಹಾಯಕರೊಬ್ಬರನ್ನು ರಾಮಪ್ರಸಾದರ ಬಹಳ ಪ್ರಸಿದ್ಧವಾದ

‘ಮನ್ ರೇ ಕೃಷಿಕಾಜ್ (?) ಜಾನೋ ನ’ ಎಂಬ ಸ್ತೋತ್ರವನ್ನು ಹಾಡಲು ಹೇಳಿದರು. ತಮಗೆ ಅದು ಸಂಪೂರ್ಣವಾಗಿ ಬರುವುದಿಲ್ಲವೆಂದು ಆ ಸಹಾಯಕರು ವಿಷಾದಿಸಿದಾಗ, ಅವರನ್ನು ಹುರಿದುಂಬಿಸುತ್ತಾ ಮಹಾರಾಜ್ ಅವರು, ‘ನೀನು ಹಾಡಲು ಆರಂಭಿಸು, ನಿನಗೆ ಮರೆತು ಹೋದ ಜಾಗದಲ್ಲಿ ನಾನು ಜ್ಞಾಪಿಸುತ್ತೇನೆ’ ಎಂದರು. ನಿಜವಾಗಿ, ವುಡ್‌ಲ್ಯಾಂಡ್ಸ್ ಆಸ್ಪತ್ರೆಯ ಸೋಫಾದ ಮೇಲೆ ಕುಳಿತು ಅಂದು ಸಂಜೆ ಸ್ವಾಮೀಜಿಯವರೇ ಆ ಸ್ತೋತ್ರವನ್ನು ಹಾಡಿದರು. ಸಮಯವನ್ನು ಪೋಲು ಮಾಡದಂತೆ ಅವರು ಸದಾ ಜಾಗರೂಕರಾಗಿರುತ್ತಿದ್ದರು. ತಮ್ಮ ನಿತ್ಯದ ಕಾರ್ಯಕ್ರಮಗಳನ್ನು ಅವರು ಈ ಪವಿತ್ರ ಸಂಘಕ್ಕೆ ಹೊಸದಾಗಿ ಸೇರಿದ ಹುಡುಗರಂತೆ ಕಟ್ಟುನಿಟ್ಟಾಗಿ ಅನುಸರಿಸುತ್ತಿದ್ದರು. ಅವರು ತಮ್ಮ ಅಧಿಕಾರವನ್ನು ನಮ್ಮಲ್ಲಿ ಯಾರ ಮೇಲೆಯೂ ಯಾವಾಗಲೂ ಚಲಾಯಿಸುತ್ತಿರಲಿಲ್ಲ. ಅವರದು ನಿಷ್ಠಾವಂತ ಜೀವನಕ್ರಮ. ಸುಖಭೋಗಗಳು ಅವರ ಜೀವನದಿಂದ ಯಾವಾಗಲೂ ದೂರದಲ್ಲಿದ್ದವು. ಈ ಸಂಬಂಧ ಒಂದು ನಿದರ್ಶನವನ್ನು ಕೊಡಬೇಕು. ಭಕ್ತರೊಬ್ಬರು ಒಮ್ಮೆ ಪೂಜ್ಯ ಮಹಾರಾಜ್ ಅವರಿಗೆಂದೇ ಲೋಹದ ಕಟ್ಟಿನ ಕನ್ನಡಕವನ್ನು ತಯಾರಿಸಿ ತಂದುಕೊಟ್ಟರು. ಮೊದಲು ಮಹಾರಾಜ್ ಅವರು ನಿರಾಕರಿಸಿದರೂ, ನಂತರ ಅವರ ಒತ್ತಾಯಕ್ಕೆ ಕಟ್ಟುಬಿದ್ದು ಅದನ್ನು ಧರಿಸಿದರು. ಆದರೆ ಸ್ವಲ್ಪ ದಿನಗಳ ನಂತರ ತಾವು ಮೊದಲು ಉಪಯೋಗಿಸುತ್ತಿದ್ದ ರೀತಿಯ ಸರಳವಾದ ಕನ್ನಡಕವನ್ನೆ ಕೊಡುವಂತೆ ತಮ್ಮ ಸಹಾಯಕರಿಗೆ ಹೇಳಿದರು.

ಕೆಲವು ವೇಳೆ ನಾವು ತಪ್ಪು ಮಾಡಿದರೆ, ಮಹಾರಾಜ್ ಅವರು ಅಲ್ಲಿಯೇ ನಮ್ಮನ್ನು ಗದರಿಸುತ್ತಿದ್ದರು. ಅದರ ತೀಕ್ಷ್ಣತೆಯನ್ನು ಸಹಿಸಲು ನಮಗೆ ಸಾಧ್ಯವಾಗುತ್ತಿರಲಿಲ್ಲ. ಆದರೆ ಮರುಗಳಿಗೆಯೇ ಅವರು ಅದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತಿರಲಿಲ್ಲ. ಅದನ್ನು ಮರೆಸುವಂತೆ, ನಸುನಗುತ್ತಾ, ‘ಬಾ, ಈಗ ಆದದ್ದಾದರೂ ಏನು’ ಎನ್ನುತ್ತಿದ್ದರು. ಮಹಾರಾಜ್ ಅವರು ಈ ಪ್ರಕರಣವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮತ್ತೆಂದಾದರೂ ಅದರ ಬಗ್ಗೆ ನಮ್ಮನ್ನು ಟೀಕಿಸಬಹುದು ಎಂದು ನಾವು ಬಹಳ ಹೆದರಿಕೊಳ್ಳುತ್ತಿದ್ದೆವು. ಆದರೆ, ಆ ಪ್ರಸಂಗ ಅಲ್ಲಿಗೇ ಮುಗಿಯುತ್ತಿತ್ತು. ಮಹಾರಾಜ್ ಅವರು ನಮ್ಮೊಡನೆ ಇರುವಾಗ ಅವರೂ ನಮ್ಮಲ್ಲಿ ಒಬ್ಬರೆಂಬಂತೆ, ನಮ್ಮ ಮಟ್ಟದವರೇ ಎನ್ನುವಂತೆ ನಡೆದುಕೊಳ್ಳುತ್ತಿದ್ದರು. ಇದು ಅವರಲ್ಲಿದ್ದ ಬಹು ದೊಡ್ಡ ಗುಣ.

ಅವರ ದೈನಂದಿನ ಅಗತ್ಯಗಳು ಬಹು ಹೆಚ್ಚೇನೂ ಇರುತ್ತಿರಲಿಲ್ಲ. ಹಾಗಾಗಿ ಅವರ ಕಡೆಯಿಂದ ಯಾವ ದೂರೂ ಇರುತ್ತಿರಲಿಲ್ಲ. ಅವರು ಯಾವಾಗಲೂ ಉಲ್ಲಾಸವಾಗಿ ಮತ್ತು ಜಾಗರೂಕರಾಗಿ ಇರುತ್ತಿದ್ದರು. ಇದಕ್ಕೆ ಕಾರಣವೆಂದರೆ ಅವರಲ್ಲಿದ್ದ ನಿಷ್ಕಪಟತೆ, ಸಹಜತೆ ಹಾಗೂ ಉದಾರದೃಷ್ಟಿ. ಅವರು ತಮ್ಮ ಹಿರಿತನವನ್ನು ಪ್ರದರ್ಶಿಸಿಕೊಳ್ಳಲು ಹೋಗುತ್ತಿರಲಿಲ್ಲ. ತಾವು ರಾಮಕೃಷ್ಣ ಸಂಘದ ಒಬ್ಬ ಸಂನ್ಯಾಸಿ ಎಂದು ಹೇಳಿಕೊಳ್ಳುವದರಲ್ಲಿ ತೃಪ್ತಿಪಟ್ಟುಕೊಳ್ಳುತ್ತಿದ್ದರು. ಅವರನ್ನು ಭಾರತ ಸರಕಾರ ಕೊಡಬಯಸಿದ್ದ ‘ಗಾಂಧಿ ಶಾಂತಿ ಪ್ರಶಸ್ತಿ’ಯನ್ನು ಒಪ್ಪಿಕೊಳ್ಳಲು ವಿನಂತಿಸಿಕೊಂಡಾಗ ಅವರು ವಿನಮ್ರವಾಗಿ ‘ಅದನ್ನು ನನಗೆ ಕೊಡಬೇಡಿ, ರಾಮಕೃಷ್ಣ ಮಿಷನ್ನಿಗೆ ಕೊಡಿ. ಮಿಷನ್ನಿನ ಪರವಾಗಿ ನಾನು ಸ್ವೀಕರಿಸುತ್ತೇನೆ’ ಎಂದರು. ಅವರ ಅಪೇಕ್ಷೆಯಂತೆ ಪ್ರಶಸ್ತಿಯನ್ನು ಮಿಷನ್ನಿಗೇ ನೀಡಲಾಯಿತು.

ಕೋಲ್ಕತ್ತಾದಲ್ಲಿನ ರಾಜಭವನಕ್ಕೆ ಈ ಪ್ರಶಸ್ತಿಯನ್ನು ಸ್ವೀಕರಿಸಲು ಹೊರಟಾಗ, ಮಹಾರಾಜ್ ಅವರು ತಮ್ಮ ಸಹಾಯಕರಿಗೆ ತಮಗೆ ಬಂದಿದ್ದ ಆಹ್ವಾನ ಪತ್ರಿಕೆಯನ್ನು ತೆಗೆದುಕೊಂಡು ಬರುವಂತೆ ಹೇಳಿದರು. ಅದರ ಅಗತ್ಯವಿಲ್ಲ ಎಂದು ಆ ಸಹಾಯಕರು ಹೇಳಿದಾಗ ‘ಹಾಗಲ್ಲ, ಅದಿಲ್ಲದಿದ್ದರೆ ನನ್ನನ್ನು ಪ್ರವೇಶದ್ವಾರದಲ್ಲಿ ಒಳಗೆ ಬಿಡದೆ ಇರಬಹುದು. ಆ ಪತ್ರವನ್ನು ತಂದು ನನ್ನ ಜೇಬಿನಲ್ಲಿಡು’ ಎಂದರು. ಸಾಮಾನ್ಯವಾಗಿ ಇಂತಹ ಪ್ರಶಸ್ತಿ ಪ್ರದಾನ ಸಮಾರಂಭಗಳು ನಡೆಯುವುದು ದೆಹಲಿಯಲ್ಲಿ. ಆದರೆ ಮಹಾರಾಜರ ಆರೋಗ್ಯ ಅಷ್ಟು ಸರಿಯಿಲ್ಲದಿದ್ದುದರಿಂದ, ರಾಷ್ಟ್ರಪತಿಯವರೇ ಕೋಲ್ಕತ್ತಾಗೆ ಬಂದು ಅದನ್ನು ಮಹಾರಾಜ್ ಅವರಿಗೆ ನೀಡುವ

ಕಾರ್ಯಕ್ರಮವಿತ್ತು. ಸ್ವತಃ ರಾಷ್ಟ್ರಪತಿಯವರೇ ಇಲ್ಲಿಗೆ ಬಂದು ಮಹಾರಾಜ್ ಅವರಿಗೆ ಪ್ರಶಸ್ತಿ ನೀಡುತ್ತಾರೆ, ಅಲ್ಲಿ ಪ್ರಖ್ಯಾತರಾದವರೆಲ್ಲ ಬಂದಿರುತ್ತಾರೆ ಎಂದರೆ ಸಂದರ್ಭದ ಭವ್ಯತೆಯನ್ನು ಊಹಿಸಿಕೊಳ್ಳಬಹುದು. ಆದರೆ ಮಹಾರಾಜ್ ಅವರು ಇತರ ಆಹ್ವಾನಿತರಂತೆ ತಾವೂ ಒಬ್ಬ ಅತಿ ಸಾಮಾನ್ಯ ವ್ಯಕ್ತಿ ಎಂಬಂತೆ ನಡೆದುಕೊಳ್ಳುವಷ್ಟು ಸರಳವಾಗಿದ್ದರು.

ತಮ್ಮ ಜೇಬಿನಲ್ಲಿ ಒಂದು ಬಿಡಿಗಾಸೂ ಇಲ್ಲದೇ, ಭಗವಂತದ ಮೇಲೆ ನಂಬಿಕೆ ಇರಿಸಿ ಅವರು ಭಾರತದಲ್ಲೆಲ್ಲಾ ಹಾಗೂ ವಿದೇಶಗಳಲ್ಲಿಯೂ ಸುತ್ತುತ್ತಿದ್ದರು. ಅವರಲ್ಲಿ ಪ್ರಬಲವಾದ ಆತ್ಮವಿಶ್ವಾಸವಿತ್ತು. ಒಮ್ಮೆ ಹಾಲೆಂಡ್‌ನಲ್ಲಿ ನಡೆದು ಹೋಗುತ್ತಿದ್ದಾಗ ಒಂದು ಅಗಲವಾದ ಕಾಲುವೆಯ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹಾರಿದರು. ಆಗ ಅವರ ವಯಸ್ಸು ಅರುವತ್ತು! ಇದನ್ನು ನೋಡಿದ ಕೆಲವು ತರುಣರು ಆಶ್ಚರ್ಯಚಕಿತರಾಗಿ ಮಹಾರಾಜ್ ಅವರನ್ನು ಇದು ಹೇಗೆ ಸಾಧ್ಯವಾಯಿತು ಎಂದು ಕೇಳಿದರು. ಅದಕ್ಕೆ ಮಹಾರಾಜ್ ಅವರ ಅದರ ಗುಟ್ಟನ್ನು ಆ ಹುಡುಗರಿಗೆ ಹೇಳಿದರು. ಏನದು? "ಮೊದಲು ನಾನು ನನ್ನ ಮನಸ್ಸಿಗೆ ಹೇಳಿದೆ 'ನೀನು ಈ ಕಾಲುವೆಯನ್ನು ದಾಟಬೇಕು' ಎಂದು. ನಂತರ ನಾನು ಹಾಗೆ ಮಾಡಿದೆ." ಇದನ್ನು ಕೇಳಿ ತಾವೂ ಪ್ರಯತ್ನಿಸಿದ ಆ ಹುಡುಗರು ಹಾಗೆ ಮಾಡಲು ಪ್ರಯತ್ನಿಸಿದರೂ, ಅದು ಅವರಿಗೆ ಸಾಧ್ಯವಾಗಲಿಲ್ಲ.

ಪುರುಷಪ್ರಯತ್ನದ ವಿಷಯದಲ್ಲಿ, ಮಹಾರಾಜ್ ಅವರು ಯಾವಾಗಲೂ ಗೀತೆಯ 'ಉದ್ಧೇರೇತಾತ್ಮನಾತ್ಮಾನಂ' (ನಿನ್ನ ಆತ್ಮದ ಉದ್ಧಾರಕ್ಕೆ ನೀನೇ ಶ್ರಮಿಸಬೇಕು) ಎಂಬ ವಾಕ್ಯವನ್ನು ಯಾವಾಗಲೂ ಒತ್ತುಕೊಟ್ಟು ಹೇಳುತ್ತಿದ್ದರು. ಸ್ವಂತಶಕ್ತಿಯ ಮೇಲೆ ವಿಶ್ವಾಸವಿಲ್ಲದ ಭಕ್ತರಿಗೆ 'ನನ್ನಿಂದ ಸಾಧ್ಯ' ಎಂದು ತಮಗೆ ತಾವೇ ಹೇಳಿಕೊಳ್ಳುತ್ತಿರಬೇಕು ಎನ್ನುತ್ತಿದ್ದರು. ಪರೀಕ್ಷೆಯ ಬಗ್ಗೆ ಆತ್ಮವಿಶ್ವಾಸವಿಲ್ಲದಿದ್ದ ಮಕ್ಕಳ ತಂದೆತಾಯಿಗಳಿಗೆ ಆ ಮಕ್ಕಳಲ್ಲಿ ಆತಂಕ ಹೆಚ್ಚಿಸದೆ, ಆತ್ಮವಿಶ್ವಾಸವನ್ನು ತುಂಬುವಂತೆ ಬುದ್ಧಿವಾದ ಕೊಡುತ್ತಿದ್ದರು.

ಮಹಾರಾಜ್ ಅವರು ಆತ್ಮ-ಶ್ರದ್ಧೆಗೆ ಬಹಳ ಮಹತ್ವವನ್ನು ಕೊಡುತ್ತಿದ್ದರು ಮತ್ತು ಎಲ್ಲರನ್ನೂ ಗೌರವದಿಂದ ನೋಡುತ್ತಿದ್ದರು. ಅವರು ಬೇರೆಯವರನ್ನು ಹೊಗಳುವಾಗ, ಹಿರಿಯರು-ಕಿರಿಯರು, ಪ್ರತಿಷ್ಠಿತರು-ಸಾಮಾನ್ಯರು ಎಂದು ಭೇದ ಮಾಡುತ್ತಿರಲಿಲ್ಲ. ಒಂದು ಸಣ್ಣ ಕೆಲಸವನ್ನೇ ಉತ್ತಮವಾಗಿ ಮಾಡಿದರೆ, ಸ್ವಾಮೀಜಿಯವರು ಅದನ್ನೇ ಬಾಯಿತುಂಬ ಹೊಗಳುತ್ತಿದ್ದರು. ಬೇರೆಯವರಿಗಾಗಿ ಬದುಕುವುದು ಅವರ ಪಾಲಿಗೆ ಬಹಳ ಸಂತೋಷದಾಯಕವಾಗಿರುತ್ತಿತ್ತು. ಅವರು ಧೈರ್ಯಶಾಲಿಯಾಗಿದ್ದರು. ಅವರು ವಿಷಣ್ಣವದನರಾಗಿದ್ದುದನ್ನು ನಾವು ನೋಡಿಯೇ ಇರಲಿಲ್ಲ.

ಮಹಾರಾಜ್ ಅವರು 'ಶಿವಜ್ಞಾನೇ ಜೀವ ಸೇವಾ' ಎಂಬ ತತ್ತ್ವವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. 'ಜೀವಂತವಾಗಿರುವ ಶಿವನ ಸೇವೆ ಮಾಡಿ, ಪ್ರತಿಫಲವನ್ನು ಬಯಸದೇ ಎಲ್ಲರನ್ನೂ ಪ್ರೀತಿಸಿ' ಎಂದು ಅವರು ಹೇಳುತ್ತಿದ್ದರು. ಅವರಿಗೆ ಪರಿಹಾರ ಕಾರ್ಯಗಳಲ್ಲಿ, ಕಲ್ಯಾಣಕಾರ್ಯಗಳಲ್ಲಿ, ಪುಸ್ತಕಗಳನ್ನು ವಿತರಿಸುವಲ್ಲಿ (ಅವರು ರಾಮಕೃಷ್ಣ-ವಿವೇಕಾನಂದರ ಸಾಹಿತ್ಯವನ್ನು ಮಾರಾಟ ಮಾಡುವುದನ್ನು ಹಾಗೂ ವಿತರಿಸುವುದನ್ನು ಬಹಳ ಇಷ್ಟಪಡುತ್ತಿದ್ದರು), ಆರೋಗ್ಯ ಸೇವೆಯಲ್ಲಿ ಹಾಗೂ ವಿದ್ಯಾ ಸಂಸ್ಥೆಗಳಲ್ಲಿ ಅತೀವ ಆಸಕ್ತಿಯಿತ್ತು.

ಎಲ್ಲಕ್ಕೂ ಮಿಗಿಲಾಗಿ, ಅವರಿಗೆ ಹೆಚ್ಚಿನ ಸಹಿಷ್ಣುತಾ ಶಕ್ತಿಯಿತ್ತು. 'ಸಹಿಷ್ಣುವಾದವನು ಬದುಕುತ್ತಾನೆ, ಇಲ್ಲದಿದ್ದವನು ನಾಶವಾಗುತ್ತಾನೆ' ಎಂಬ ಶ್ರೀ ರಾಮಕೃಷ್ಣ ಪರಮಹಂಸರ ಮಹಾ ಉಕ್ತಿಯನ್ನು ಅವರು ತಮ್ಮ ಜೀವನದಲ್ಲಿ ಅಕ್ಷರಶಃ ಪಾಲಿಸುತ್ತಿದ್ದರು. ತಮ್ಮ ಅಂತಿಮ ಕ್ಷಣಗಳಲ್ಲಿ, ಎಲ್ಲ ವೈದ್ಯಕೀಯ ವರದಿಗಳೂ ಅವರ ಉಳಿಯುವಿಕೆಯ ವಿಷಯದಲ್ಲಿ ಭಯವನ್ನು ಹುಟ್ಟಿಸುವಂತಿದ್ದರೂ, ಅವರು ಮಾತ್ರ ನಿರಾತಂಕವಾಗಿದ್ದರು. ಅವರಿಗೆ ತಮ್ಮ ಪರಿಮಿತಿಯ ಅರಿವಿತ್ತು. ವೈದ್ಯರು, ದಾದಿಯರು ಅವರನ್ನು 'ಮಹಾರಾಜ್, ಹೇಗಿದ್ದೀರಿ?'

ಎಂದು ವಿಚಾರಿಸಿದಾಗಲೆಲ್ಲಾ ಅವರು 'ಚೆನ್ನಾಗಿದ್ದೇನೆ' ಎಂದೇ ಉತ್ತರಿಸುತ್ತಿದ್ದರು. ಆಗಿನ ಪರಿಸ್ಥಿತಿಯಲ್ಲಿ ಅವರ ಕೈ ಕಾಲುಗಳು ಊದಿರುತ್ತಿದ್ದವು, ಸಕ್ಕರೆ ಪ್ರಮಾಣವನ್ನು ನೋಡಲು ಪದೇಪದೇ ಸೂಜಿಯಿಂದ ಚುಚ್ಚಿ ರಕ್ತ ತೆಗೆಯುತ್ತಿದ್ದರು (ಮಹಾರಾಜ್ ಅವರು ಕೆಲವು ಸಲ ಬಹಳ ನೋವಾಗುತ್ತದೆ, ಎಷ್ಟು ಸಲ ಚುಚ್ಚುತ್ತೀರಿ ಎನ್ನುತ್ತಿದ್ದರು). ಅವರಿಗೆ ತಾವಾಗಿಯೇ ಕೂರಲಾಗಲೀ, ಕೈಕಾಲುಗಳನ್ನು ಆಡಿಸುವುದಾಗಲೀ ಆಗುತ್ತಿರಲಿಲ್ಲ. ೨೦೦೫ರ ಏಪ್ರಿಲ್ ೨೫ರ ಮುಂಜಾನೆ ಮುಖ್ಯ ವೈದ್ಯರು ಕೇಳಿದರು 'ಮಹಾರಾಜ್, ಏನಾದರೂ ತೊಂದರೆ, ಸಮಸ್ಯೆಗಳಿವೆಯೇ? ಇದ್ದರೆ ದಯವಿಟ್ಟು ಹೇಳಿ, ನಾವು ಪರಿಹರಿಸಲು ಪ್ರಯತ್ನಿಸುತ್ತೇವೆ' ಎಂದರು. ಮಹಾರಾಜ್ ಅವರು 'ನಾನು ಚೆನ್ನಾಗಿಯೇ ಇದ್ದೇನೆ, ನನಗೆ ಯಾವ ತೊಂದರೆಯೂ ಇಲ್ಲ' ಎಂದು ಉತ್ತರ ಕೊಟ್ಟರು. ಅಷ್ಟು ಹೊತ್ತಿಗಾಗಲೇ ಅವರು ಭೂಮಿಯ ಮೇಲಿನ ಯಾವ ಶಕ್ತಿಯೂ ತಮ್ಮನ್ನು ಇಲ್ಲಿ ಕಟ್ಟಿ ಹಾಕಲಾರದು ಎಂಬುದನ್ನು ಅರಿತಿದ್ದರು. ಹಾಗಾಗಿ ಬೇಲೂರು ಮಠಕ್ಕೆ ತಮ್ಮನ್ನು ವಾಪಸ್ಸು ಕಳುಹಿಸಿ ಎಂದು ಕೇಳುವುದನ್ನಾಗಲೀ, ವೈದ್ಯಕೀಯ ವರದಿಗಳನ್ನು ನೋಡುವುದನ್ನಾಗಲೀ ಅವರು ನಿಲ್ಲಿಸಿದ್ದರು.

ಉಪನ್ಯಾಸ ನೀಡುವುದು ಮುಖ್ಯ. ಕರ್ತವ್ಯವೂ ಮುಖ್ಯ. ಆದರೆ ಅವೆಲ್ಲಕ್ಕಿಂತ ಜೀವನ ಮುಖ್ಯ. ಕಾರಣ, ಸಕ್ರಿಯವಾಗಿ ಬದುಕಿದ್ದರೆ ಮಾತ್ರ ನಾವು ಈ ಪ್ರಯೋಗಾಲಯದಲ್ಲಿ ಅವೆಲ್ಲವನ್ನೂ ಸ್ವತಃ ಮಾಡಿ ತೋರಿಸಬಹುದು.

* * * *

## ೩೩. ಕೋಪವನ್ನು ಗೆಲ್ಲುವ ಬಗೆಯನ್ನು ಅವರು ನನಗೆ ತಿಳಿಸಿಕೊಟ್ಟರು

**–ಸ್ವಾಮಿ ಸ್ವಪ್ರಭಾನಂದ***

ನಾನು ಸ್ವಾಮಿ ರಂಗನಾಥಾನಂದ ಮಹಾರಾಜ್ ಅವರನ್ನು ಮೊಟ್ಟ ಮೊದಲು ಸಂಧಿಸಿದ್ದು ೧೯೫೫ರಲ್ಲಿರಬಹುದು. ಅವರು ಆಗತಾನೇ ಜಪಾನ್ ಯಾತ್ರೆಯಿಂದ ಹಿಂದಿರುಗಿದ್ದರು. ಕಾಲಟಿಯಲ್ಲಿರುವ ನಮ್ಮ ಬ್ರಹ್ಮಾನಂದೋದಯಮ್ ಪ್ರೌಢಶಾಲೆಯಲ್ಲಿ ಇಂಗ್ಲಿಷಿನಲ್ಲಿ ಒಂದು ಉಪನ್ಯಾಸವನ್ನು ಕೊಟ್ಟರು. ಹೆಚ್ಚು ಕಡಿಮೆ ಎಲ್ಲಾ ವಿದ್ಯಾರ್ಥಿಗಳು ಅವರ ಉಪನ್ಯಾಸದ ಸಾರಾಂಶವನ್ನು ಅರ್ಥಮಾಡಿಕೊಂಡರು. ಮಹಾರಾಜ್ ಅವರು ವಿಷಯವನ್ನು ಪ್ರಸ್ತಾಪ ಮಾಡಿದ ರೀತಿ ವಿದ್ಯಾರ್ಥಿಗಳನ್ನೆಲ್ಲಾ ಮೂಕವಿಸ್ಮಿತರನ್ನಾಗಿಸಿತು. ಅವರು ತಮ್ಮ ಬಳಿಯಿದ್ದ ಕೇವಲ ಎಂಟು ಅಂಗುಲ ಉದ್ದವಿದ್ದ, ಮಡಿಸಿದ್ದ ಛತ್ರಿಯನ್ನು ನಮಗೆ ತೋರಿಸಿದರು. ಆದರೆ ಅದನ್ನು ಬಿಚ್ಚಿದಾಗ ಅದು ನಮ್ಮಲ್ಲಿ ಸಾಮಾನ್ಯವಾಗಿರುವ ದೊಡ್ಡ ಛತ್ರಿಯಷ್ಟೇ ದೊಡ್ಡದಿತ್ತು! ಅದನ್ನು ಜಪಾನಿನ ಸ್ನೇಹಿತರೊಬ್ಬರು ಅವರಿಗೆ ಕೊಡುಗೆಯಾಗಿ ಕೊಟ್ಟಿದ್ದರು. ಮಹಾರಾಜ್ ಅವರಿಗೆ ಜಪಾನಿನ ಜನರ ಉದ್ಯಮಶೀಲತೆ ಮತ್ತು ಅವರ ದೇಶಪ್ರೇಮದ ಬಗ್ಗೆ ಅಪಾರ ಮೆಚ್ಚುಗೆಯಿತ್ತು.

ಎರಡನೆಯ ಬಾರಿ ನಾನು ಅವರನ್ನು ನೋಡಿದ್ದು ಕಾಲಡಿಯ ಆಶ್ರಮದಲ್ಲಿ. ಹಾಲಿನಿಂದ ಕೊಬ್ಬನ್ನು ತೆಗೆದು, ಆ ಹಾಲನ್ನು ಅವರಿಗೆ ಕೊಡುವ ಭಾಗ್ಯ ನನ್ನದಾಗಿತ್ತು. ಅದು ೧೯೫೭ರಲ್ಲಿ ಎಂದು ನನ್ನ ಜ್ಞಾಪಕ. ಆಗ ಪ್ರಾಸಂಗಿಕವಾಗಿ ಸ್ವಾಮೀಜಿಯವರು 'ಯುದ್ಧ್ಯಸ್ವ ವಿಗತ ಜ್ವರಃ' ಎಂಬ ಶ್ಲೋಕವನ್ನು ಹೇಳಿದರು. ಅವರ ಪ್ರಕಾರ ಅದರ ಅರ್ಥ 'ಯಾವ ಬಗೆಯ ಯೋಚನೆಯೂ ಇಲ್ಲದೆ ಕೆಲಸವನ್ನು ಮಾಡು' ಎಂದು. ನಾನು ಅವರ ಈ ಅನುವಾದವನ್ನು ಬಹುವಾಗಿ ಮೆಚ್ಚಿಕೊಂಡೆ.

ಇದಾದ ನಂತರ ಹಲವು ಬಾರಿ ಅವನನ್ನು ಭೇಟಿಯಾದೆ, ಅವರೊಡನೆ ಮಾತಾಡಿದೆ. ಹಾಸ್ಯರಸ ಯಾವಾಗಲೂ ಹರಿಸುತ್ತಿದ್ದ ಮಾತಿನಿಂದ ಅವರು ತ್ರಿಶೂರಿನ ನಮ್ಮ ಆಶ್ರಮದಲ್ಲಿ ಉತ್ಸವದ ವಾತಾವರಣವನ್ನು ನಿರ್ಮಿಸುತ್ತಿದ್ದರು. ತ್ರಿಶೂರಿನ ಆಶ್ರಮದ ಪ್ರತಿ ವರ್ಷದ ಆಧ್ಯಾತ್ಮಿಕ ಮೇಳದಲ್ಲಿ ಅವರು ನನ್ನನ್ನು ಅಭಿನಂದಿಸಿ, ಪ್ರೋತ್ಸಾಹಿಸುತ್ತಿದ್ದರು. ನನಗೆ ಇಂತಹ ಸಮ್ಮೇಳನಗಳನ್ನು ನಡೆಸುವುದಕ್ಕೆ ಪ್ರೇರಣೆ ಕೊಟ್ಟವರು ಕೂಡ ಅವರೇ.

ಒಮ್ಮೆ ನನಗೆ ಯಾರ ಮೇಲೋ ಬಹಳ ಕೋಪ ಬಂದಿತ್ತು. ಅದು ಸ್ವಾಮೀಜಿಯವರಿಗೆ ಬೇರೆಯವರ ಮೂಲಕ ಗೊತ್ತಾಯಿತು. ನಂತರ ನಾನು ಅವರನ್ನು ಭೇಟಿಯಾದಾಗ ಅವರು, 'ಯಾರಲ್ಲಿ ಅಹಂಕಾರವು ಮಾಗುವುದಿಲ್ಲವೋ ಅವರು ಕೋಪಕ್ಕೆ ಬಲಿಯಾಗುತ್ತಾರೆ. ಆದ್ದರಿಂದ ನೀವು ನಿಮ್ಮ ಕೋಪವನ್ನು ಆದಷ್ಟು ಬೇಗ ಗೆಲ್ಲಬೇಕು' ಎಂದರು. ಅಲ್ಲದೆ, ಕೋಪವನ್ನು ಗೆಲ್ಲುವ ತಂತ್ರವನ್ನೂ ಅವರು ಹೇಳಿಕೊಟ್ಟು, ಅದನ್ನು ಅಭ್ಯಾಸ ಮಾಡುವಂತೆ ಸೂಚಿಸಿದರು. 'ಶ್ರೀ ರಾಮಕೃಷ್ಣರ ಹೆಸರಿನಲ್ಲಿ ಒಂದು ಹುಂಡಿಪೆಟ್ಟಿಗೆಯನ್ನು ಇಟ್ಟುಕೊಳ್ಳಿ. ನಿಮಗೆ ಕೋಪಬಂದಾಗ ಒಂದು ರೂಪಾಯಿಯನ್ನು ಅದರಲ್ಲಿ ಹಾಕುತ್ತಿರಿ. ಇಂತಹ ಪ್ರಸಂಗ ಬಂದಾಗಲೆಲ್ಲಾ ಇದೇ ಕ್ರಮವನ್ನು ಅನುಸರಿಸಿ' ಎಂದರು.

---

* ಕೇರಳದ ಕ್ವಿಲಾಂಡಿಯಲ್ಲಿರುವ ರಾಮಕೃಷ್ಣ ಮಠದ ಅಧ್ಯಕ್ಷರು.

ಒಮ್ಮೆ ಆಧ್ಯಾತ್ಮಿಕ ಸಮ್ಮೇಳನವೊಂದರಲ್ಲಿ ಧರ್ಮವನ್ನು ವಿರೋಧಿಸುವ ಕೆಲವು ಬುದ್ಧಿಜೀವಿಗಳು ವಾದಮಾಡುತ್ತಿದ್ದರು. ಅದನ್ನು ನೋಡಿದ ಸ್ವಾಮೀಜಿಯವರು 'ಧರ್ಮವೆಂದರೆ, ಮನುಷ್ಯನಲ್ಲಿರುವ ದೈವತ್ವವನ್ನು ಅರಿಯುವುದೇ ಆಗಿದೆ' ಎಂಬುದನ್ನು ಅವರಿಗೆ ಮನದಟ್ಟು ಮಾಡಿಕೊಟ್ಟಮೇಲೆ ಅವರೆಲ್ಲಾ ಒಮ್ಮತದಿಂದ 'ಸ್ವಾಮೀಜಿ, ತಾವು ಧರ್ಮದ ಬಗ್ಗೆ ನೀಡಿದ ಈ ವಿವರಣೆಯನ್ನು ನಾವು ಸ್ವಾಗತಿಸುತ್ತೇವೆ' ಎಂದು ಹೇಳಿದರು.

ಸದ್ಯದಲ್ಲಿ, ಸ್ವಾಮಿ ರಂಗನಾಥಾನಂದರ ಭಕ್ತರಲ್ಲಿ ಮತ್ತು ಅಭಿಮಾನಿಗಳಲ್ಲಿ ನಾನು ಅರಿಕೆ ಮಾಡಲಿರುವುದು ಇಷ್ಟು ಮಾತ್ರ.

* * * *

## ೨೪. ದೇವರ ಬಗೆಗಿದ್ದ ತೀವ್ರಾಸಕ್ತಿ, ಮಾನವರ ಬಗೆಗಿದ್ದ ಪ್ರೀತಿ– ಇವುಗಳ ಮೂರ್ತಸ್ವರೂಪ

–ಸ್ವಾಮಿ ಅಸೀಮಾತ್ಮಾನಂದ*

ತ್ರಿಕ್ಕೂರು ತ್ರಿಶೂರು ಜಿಲ್ಲೆಯಲ್ಲಿನ ಒಂದು ಸಣ್ಣ ಹಳ್ಳಿ. ಅಲ್ಲಿ ನೀಲಕಂಠ ಶಾಸ್ತ್ರಿ ಮತ್ತು ಲಕ್ಷ್ಮಿ ಕುಟ್ಟಿ ಅಮ್ಮ ಎಂಬ ದೈವಶ್ರದ್ಧೆಯುಳ್ಳ ದಂಪತಿಗಳು ವಾಸವಾಗಿದ್ದರು. ಅವರ ಏಳನೆಯ ಮಗ ೧೯೦೮ರ ಡಿಸೆಂಬರ್ ೧೫ರಂದು ಜನಿಸಿದ. ಅಂದಿನ ದಿನ ಪವಿತ್ರವಾಗಿತ್ತು. ಕಾರಣ ಅದು (ಜನ್ಮತಿಥಿಯ ಪ್ರಕಾರ) ಶ್ರೀ ಮಾತೆ ಶಾರದಾ ದೇವಿಯವರ ಜನ್ಮದಿನವಾಗಿತ್ತು. ಈ ಯೋಗಾಯೋಗ ಸಂಬಂಧ ಅರ್ಥಪೂರ್ಣವಾಗಿತ್ತು.

ಆ ದಂಪತಿಗಳ ಮೊದಲಿನ ಎಲ್ಲಾ ಆರು ಮಕ್ಕಳೂ ಗಂಡುಮಕ್ಕಳೇ ಆಗಿದ್ದವು. ಅವರಿಗೆ ಒಂದು ಹೆಣ್ಣು ಮಗುವಿನ ಬಯಕೆಯಿತ್ತು. ಅದಕ್ಕಾಗಿ ಅವರು ಬೆಂಗಳೂರಿನ ಶಂಕರಮಠಕ್ಕೇ ಹೋಗಿ ಶಂಕರಾಚಾರ್ಯರನ್ನು ಭಕ್ತಿಯಿಂದ ಪ್ರಾರ್ಥಿಸಿದ್ದರು. ಆದರೂ, ಅವರಿಗೆ ಈ ಬಾರಿಯೂ ಗಂಡು ಮಗುವೇ ಆಯಿತು. ಆ ಮಗುವೇ ಮುಂದೆ ಅಪೂರ್ವ ಆಧ್ಯಾತ್ಮಿಕ ವ್ಯಕ್ತಿತ್ವದ ಪೂಜ್ಯ ಸ್ವಾಮಿ ರಂಗನಾಥಾನಂದರೆಂದು ಪ್ರಖ್ಯಾತವಾಯಿತು. ಶಂಕರಾಚಾರ್ಯರ ಅನುಗ್ರಹದಿಂದ ಹುಟ್ಟಿದ ಆ ಮಗುವಿಗೆ ಶಂಕರನ್ ಎಂದೇ ನಾಮಕರಣವಾಯಿತು.

ಪರೋಪಕಾರ, ಧಾರ್ಮಿಕ ಹಾಗೂ ಧ್ಯಾನಾಸಕ್ತ ಮನೋಭಾವ ಶಂಕರನ್‌ರಲ್ಲಿ ಬಾಲ್ಯದಿಂದಲೂ ಮನೆಮಾಡಿತ್ತು. ಎಂಟು ವರ್ಷದವನಿದ್ದಾಗ ಇತರ ಬಾಲಕರೊಂದಿಗೆ ಶಾಲೆಗೆ ಹೋಗುತ್ತಿದ್ದ. ಒಂದು ದಿನ ಹಾಗೆ ಶಾಲೆಗೆ ಹೋಗುತ್ತಿರುವಾಗ ಅವನ ಕೈಯಲ್ಲಿದ್ದ ಒಂದು ಪುಸ್ತಕವು ಕೆಳಕ್ಕೆ ಜಾರಿ ಬಿದ್ದಿತು. ಅವರ ಗೆಳೆಯರಿಗೆ ಶಂಕರನ್‌ನಲ್ಲಿ ಏನಾದರೂ ಸಮಸ್ಯೆಯಿರಬಹುದೇ ಎಂದು ಆತಂಕವಾಯಿತು. ಆಗ ಶಂಕರನ್ ಹೇಳಿದ: 'ದೂರದಲ್ಲಿ ಕೆಲವರು ಅಸ್ಪೃಶ್ಯನೊಬ್ಬನನ್ನು ಥಳಿಸುತ್ತಿರುವುದನ್ನು ಕಂಡು ನನಗೆ ಸಂಕಟವಾಯಿತು. ಆಗ ನಾನು ಹಿಡಿದಿದ್ದ ಪುಸ್ತಕ ಕೈಯಿಂದ ಜಾರಿ ಬಿದ್ದಿತು.' ಆ ಕಾಲದ ಸಮಾಜದಲ್ಲಿ ಅಸ್ಪೃಶ್ಯತೆ ಬಹುವಾಗಿ ಆಚರಣೆಯಲ್ಲಿದ್ದಿತು. ಅಕಸ್ಮಾತ್ ಒಬ್ಬ ಅಸ್ಪೃಶ್ಯ ಮೇಲು ಜಾತಿಯವರ ಹತ್ತಿರ ಬಂದರೆ, ಅವನನ್ನು ಕಠಿಣವಾಗಿ ಶಿಕ್ಷಿಸುತ್ತಿದ್ದರು. ಅಲ್ಲದೆ ಮೈಲಿಗೆಯ ನಿವಾರಣೆಗಾಗಿ, ಆ ಅಸ್ಪೃಶ್ಯನ ಬಳಿ ಇದ್ದ ಬ್ರಾಹ್ಮಣನಾಗಲೀ, ಇತರ ಮೇಲುಜಾತಿಯವನಾಗಲೀ ಸ್ನಾನ ಮಾಡ ಬೇಕಾಗಿತ್ತು.

ಬಾಲಕ ಶಂಕರನಿಗೆ ಈ ಸಾಮಾಜಿಕ ಅನ್ಯಾಯವನ್ನು ಸಹಿಸಲಾಗಲಿಲ್ಲ. ಆ ನೋವಿನ ಪರಿಣಾಮ ಎಷ್ಟಿತ್ತೆಂದರೆ ಅವನು ಶಾಲೆಗೆ ಹೋಗದೆ ಮನೆಗೆ ಮರಳಿದ. ಆತ ಈ ಸಾಮಾಜಿಕ ಪದ್ಧತಿಯನ್ನು ಮುರಿದು ತನ್ನ ಮನೆಯ ಸಮೀಪದಲ್ಲಿ ವಾಸವಾಗಿದ್ದ ಅಸ್ಪೃಶ್ಯ ಕುಟುಂಬದೊಂದಿಗೆ ಒಡನಾಡುತ್ತಿದ್ದ. ಇದನ್ನು ನೆನಪಿಸಿಕೊಳ್ಳುತ್ತಾ ಸ್ವಾಮಿ ರಂಗನಾಥಾನಂದ ಮಹಾರಾಜ್ ಅವರು ತಾವು ತಮ್ಮ ಮನೆಯನ್ನು ಶಾಶ್ವತವಾಗಿ ತೊರೆದು ಹೊರಬಂದಾಗ ಆ ಅಸ್ಪೃಶ್ಯ ದಂಪತಿಗಳು ತಮಗೆ ಅತಿ ಹತ್ತಿರವಾಗಿದ್ದ ಜೀವವೊಂದು ತಮ್ಮನ್ನು ಅಗಲುತ್ತಿರುವುದನ್ನು ಸಹಿಸದೆ ಮನಕರಗುವಂತೆ ಅತ್ತರು ಎಂದು ಹೇಳಿದರು.

---

* ಪಶ್ಚಿಮ ಬಂಗಾಳದ ಕೋಲ್ಪಾರಾದಲ್ಲಿರುವ ರಾಮಕೃಷ್ಣ ಯೋಗಾಶ್ರಮದಲ್ಲಿ ಸಂನ್ಯಾಸಿಯಾಗಿರುವ ಇವರು, ಕೆಲವು ವರ್ಷಗಳ ಕಾಲ ಸ್ವಾಮಿ ರಂಗನಾಥಾನಂದಜೀ ಅವರ ಕಾರ್ಯದರ್ಶಿಯಾಗಿದ್ದರು.

ಶಂಕರನ್ ತನ್ನ ತಾಯಿಯಿಂದ ಬಹಳ ಪ್ರಭಾವಿತನಾಗಿದ್ದ. ಒಮ್ಮೆ ತನ್ನ ತಾಯಿಯ ಎದುರಿನಲ್ಲೇ ತನ್ನ ಸ್ನೇಹಿತನೊಂದಿಗೆ ಒರಟಾಗಿ ವರ್ತಿಸಿ ಕಟುವಾಗಿ ಮಾತನಾಡಿದ್ದ. ಆದರೆ ನೇರ ನಡೆಯ ಅವನ ತಾಯಿ ತನ್ನ ಮಗನನ್ನು ಅಲ್ಲಿಯೇ ತರಾಟೆಗೆ ತೆಗೆದುಕೊಳ್ಳಲು ಹಿಂಜರಿಯಲಿಲ್ಲ. ಆಕೆ 'ನಿನ್ನ ನಾಲಗೆ ಮತ್ತು ಮಾತು ಜ್ಞಾನದೇವತೆಯಾದ ಸರಸ್ವತಿಯ ಮಂದಿರ. ಕೆಟ್ಟ ಮಾತುಗಳನ್ನಾಡಿ ನುಡಿಯ ಪಾವಿತ್ರ್ಯತೆಯನ್ನು ಹಾಳುಮಾಡಬೇಡ ಮತ್ತು ದೇವಿಗೆ ಅವಮಾನ ಮಾಡಬೇಡ' ಎಂದು ಹೇಳಿದರು. 'ಅಂದು ತಮ್ಮ ತಾಯಿ ಹೇಳಿದ ಮಾತುಗಳು ತಮ್ಮ ಮೇಲೆ ಅಳಿಸಲಾಗದ ಪ್ರಭಾವವನ್ನು ಬೀರಿದವು ಮತ್ತು ಅದಾದ ಮೇಲೆ ಎಂದೂ ತಾವು ಯಾರ ವಿಷಯದಲ್ಲೂ ಕಟುವಾದ ಮಾತುಗಳನ್ನು ಬಳಸಿಲ್ಲ' ಎಂದು ಸ್ವಾಮೀಜಿ ಮಹಾರಾಜ್ ಹೇಳುತ್ತಿದ್ದರು.

ಹದಿನಾರು ಸದಸ್ಯರ ಅವರ ಕುಟುಂಬ ಆರ್ಥಿಕವಾಗಿ ಅಂತಹ ಒಳ್ಳೆಯ ಸ್ಥಿತಿಯಲ್ಲೇನೂ ಇರಲಿಲ್ಲ. ಬಾಲಕ ಶಂಕರನ್‌ಗೆ ಚೆನ್ನಾಗಿ ತಿಂದು ಅರಗಿಸಿಕೊಳ್ಳಬಲ್ಲ ಶಕ್ತಿಯಿತ್ತು. ಆದರೆ, ತಾನು ತನಗೆ ಬೇಕಾದಷ್ಟನ್ನು ತಿಂದರೆ ಬೇರೆಯವರಿಗೆ ಸಾಲದಾಗುತ್ತದೆ ಎಂಬುದು ಅವನಿಗೆ ಗೊತ್ತಿತ್ತು. ಹಾಗಾಗಿ ಅವನು ಅರೆಹೊಟ್ಟೆಗೇ ತೃಪ್ತಿಪಟ್ಟುಕೊಳ್ಳುತ್ತಿದ್ದ. ಸತತವಾಗಿ ಅರಹೊಟ್ಟೆಯ ಊಟದಿಂದ ಅವನು ನಿಶ್ಶಕ್ತನಾಗಿ ಹಲವಾರು ರೋಗಗಳಿಗೆ ತುತ್ತಾಗಬೇಕಾಯಿತು.

ಶಂಕರನ್‌ಗೆ ತನ್ನ ತಾಯಿ ಎಂದರೆ ಬಹು ಪ್ರೀತಿ. ಪಾತ್ರೆ ತೊಳೆಯುವುದೇ ಮೊದಲಾದ ಅಡುಗೆ ಮನೆಯ ಕೆಲಸಗಳಲ್ಲಿ ಅವನು ತನ್ನ ತಾಯಿಗೆ ನೆರವಾಗುತ್ತಿದ್ದ. ತುಂಬಾ ಸೂಕ್ಷ್ಮಬುದ್ಧಿಯ ಆತ, ತನ್ನ ತಂದೆಗೆ ಸಹಾಯವಾಗಲೆಂದು ತನ್ನ ಹದಿನಾಲ್ಕರ ಎಳೆಯ ವಯಸ್ಸಿನಲ್ಲಿಯೇ ದುಡಿಯಲು ಪ್ರಾರಂಭಿಸಿದ.

ಒಂದು ಪ್ರಸಂಗ ಅವನ ಬದುಕಿಗೇ ಒಂದು ಅನಿರೀಕ್ಷಿತ ತಿರುವನ್ನು ಕೊಟ್ಟಿತು. ಬೆರಳಚ್ಚು ಶಾಲೆಗೆ ಸೇರಿದ್ದ ಶಂಕರನ್ ಒಂದು ದಿನ ಅಲ್ಲಿಂದ ಮನೆಗೆ ಹಿಂದಿರುಗಿ ಬರುವಾಗ ತನ್ನ ಗೆಳೆಯನನ್ನು ಸಂಧಿಸಿದ. ಆ ಗೆಳೆಯನ ಬಳಿ ಒಂದು ಪುಸ್ತಕವಿತ್ತು ಮತ್ತು ಅದನ್ನು ಆತ ಶಂಕರನ್‌ಗೆ ಓದಲು ಕೊಟ್ಟ. ಶಂಕರನ್‌ಗೆ ಪುಸ್ತಕಗಳನ್ನು ಓದುವ ಹುಚ್ಚು ಬಹಳ. ಆತ ಅದನ್ನು ಬಹಳ ಆಸಕ್ತಿಯಿಂದ ಮನೆಗೆ ತಂದ. ಅದು 'ಶ್ರೀ ರಾಮಕೃಷ್ಣರ ವಚನವೇದ' ಎಂಬ ಪುಸ್ತಕ. ಅದನ್ನು ಓದಿದ ಬಾಲಕನ ಸಂತಸ ಹೇಳತೀರದು. ತನ್ನ ಕೈಗೆ ಬಂದುದು ಗಾಜಿನ ಚೂರಲ್ಲ, ಬಂಗಾರದ ಗಟ್ಟಿ ಎಂದೆನಿಸಿತು ಅವನಿಗೆ. ಆ 'ವಚನವೇದ'ವು ಅವನ ಮನಸ್ಸನ್ನು ಎಷ್ಟು ಸೆರೆ ಹಿಡಿಯಿತೆಂದರೆ, ಒಮ್ಮೆಗೇ ಅದರ ನೂರಾರು ಪುಟಗಳನ್ನು ಆತ ಓದಿದ. ಅದನ್ನು ಓದಿದ ನಂತರ 'ಜ್ಞಾನವೆಂದರೆ ದೇವರನ್ನು ಅರಿಯುವುದು, ದೇವರನ್ನು ಅರಿಯದಿರುವುದೇ ಅಜ್ಞಾನ' ಎಂದು ಆತನಿಗೆ ಅನ್ನಿಸಿತು. ಆ ಹುಡುಗನ ಮೇಲೆ 'ವಚನವೇದ' ಅದ್ಭುತವಾದ ಪರಿಣಾಮವನ್ನು ಬೀರಿತು. ನಂತರ ಅವನು ಶ್ರೀಮಾತೆ ಯವರ ಹಾಗೂ ಸ್ವಾಮಿ ವಿವೇಕಾನಂದರ ಬಗೆಗಿನ ಹಲವಾರು ಪುಸ್ತಕಗಳನ್ನು ಓದಿದ. ಈ ಓದು, ಅವನ ಜೀವನದ ದೃಷ್ಟಿಕೋನವನ್ನೇ ಬದಲಾಯಿಸಿತು, ಅವನ ದೃಷ್ಟಿಯನ್ನು ವಿಶಾಲಗೊಳಿಸಿತು ಅಲ್ಲದೆ ರಾಮಕೃಷ್ಣ ಸಂಘಕ್ಕೆ ಸೇರುವಂತೆ ಪ್ರಚೋದಿಸಿತು.

ಮೈಸೂರಿನಲ್ಲಿ ಹೊಸದಾಗಿ ಆರಂಭವಾಗಿದ್ದ ಕೇಂದ್ರದ ಮುಖ್ಯಸ್ಥರಾಗಿದ್ದ ಸ್ವಾಮಿ ಸಿದ್ಧೇಶ್ವರಾನಂದರು ಒಮ್ಮೆ ತ್ರಿಶೂರಿಗೆ ಬಂದಿದ್ದ ಸಮಯದಲ್ಲಿ ಅವರನ್ನು ಶಂಕರನ್ ಭೆಟ್ಟಿಯಾದ. ಅವನನ್ನು ಮೈಸೂರಿಗೆ ಕರೆದುಕೊಂಡು ಹೋಗಲು ಸಮ್ಮತಿಸಿದ ಸ್ವಾಮೀಜಿಯವರು ಮೈಸೂರಿಗೆ ಹೋಗುವ ಮಾರ್ಗದಲ್ಲಿ ಊಟಿಗೆ ಬಂದರು. ಅಲ್ಲಿ ಶ್ರೀ ರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಶಿವಾನಂದರು (ಮಹಾಪುರುಷ ಮಹಾರಾಜ್ ಅವರು) ಇಳಿದುಕೊಂಡಿದ್ದರು.

ಸ್ವಾಮಿ ಶಿವಾನಂದರು ಶ್ರೀ ರಾಮಕೃಷ್ಣರ ಅನುಪಮವಾದ ಸಂದೇಶವನ್ನು ದಕ್ಷಿಣ ಭಾರತದಲ್ಲಿ ಬಿತ್ತಲು ಇಲ್ಲಿಗೆ ಬಂದಿದ್ದರು. ಅವರನ್ನು ಅಲ್ಲಿ ಭೇಟಿಯಾದ ಶಂಕರನ್ ೧೯೨೬ರ ಜೂನ್ ೩೦ರಂದು ಅವರಿಂದ

ಮಂತ್ರ ದೀಕ್ಷೆಯನ್ನು ಪಡೆದ. ಮೈಸೂರಿಗೆ ಹೊರಡುವ ಮುನ್ನ ತನ್ನ ಪೂಜ್ಯ ಗುರುಗಳಿಗೆ ಗೌರವಪೂರ್ವಕವಾಗಿ ಪ್ರಣಾಮವನ್ನು ಸಲ್ಲಿಸಿದ. ಹೊಸದಾಗಿ ದೀಕ್ಷೆ ಪಡೆದ ಈ ಶಿಷ್ಯನನ್ನು ಹರಸಿದ ಮಹಾಪುರುಷ ಮಹಾರಾಜ್ ಅವರು ಅವನಿಗೆ ಗೋಪಾಲ ಮಹಾರಾಜ್ (ಸ್ವಾಮಿ ಸಿದ್ಧೇಶ್ವರಾನಂದ) ಅವರನ್ನು ಶ್ರದ್ಧೆಯಿಂದ ಸೇವಿಸುವಂತೆ ಆದೇಶಿಸಿದರು. ಗುರುವಿನ ಆಜ್ಞೆಯಂತೆ ಶಂಕರನ್ ಗೋಪಾಲ್ ಮಹಾರಾಜ್ ಅವರ ಸೇವೆಯನ್ನು ಅತ್ಯಂತ ಭಕ್ತಿಯಿಂದ ಮಾಡಿದ. ಇದರಿಂದಾಗಿ ಸೇವಾ ಮನೋಭಾವ ತಮ್ಮ ವ್ಯಕ್ತಿತ್ವದ ಭಾಗವಾಯಿತೆಂದು ಸ್ವಾಮಿ ರಂಗನಾಥಾನಂದ ಮಹಾರಾಜ್ ಅವರು ನಂತರ ಹೇಳುತ್ತಿದ್ದರು.

ಮಹಾರಾಜ್ ಅವರು ಸ್ವಾಮಿ ಶಿವಾನಂದ ಮಹಾರಾಜ್ ಅವರಿಗೆ ಪತ್ರ ಬರೆದು ತಾವು ಅವರ ಬಳಿಯೇ ಇದ್ದು ಅವರ ಸೇವೆಯನ್ನು ಮಾಡಿಕೊಂಡಿರುವ ತಮ್ಮ ಬಯಕೆಯನ್ನು ವ್ಯಕ್ತಪಡಿಸಿದರು. ಆದರೆ ಸ್ವಾಮಿ ಶಿವಾನಂದ ಮಹಾರಾಜ್ ಅವರು ಈ ಪತ್ರಕ್ಕೆ ಉತ್ತರಿಸಿ ಎಲ್ಲಾ ಶಿಷ್ಯರಿಗೂ ತಮ್ಮ ಗುರುಗಳ ಬಳಿಯೇ ಇದ್ದು ಸೇವೆ ಸಲ್ಲಿಸಲು ಸಾಧ್ಯವಿಲ್ಲ. ಇದನ್ನು ಅರಿತುಕೊಂಡು ಸಂಘದ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕೆಂದೂ, ಅದೇ ನಿಜವಾದ ಗುರುಸೇವೆಯೆಂದೂ ತಿಳಿಸಿದರು. ಆದರೂ ಸ್ವಾಮಿ ರಂಗನಾಥಾನಂದ ಮಹಾರಾಜ್ ಅವರಲ್ಲಿ ತಮ್ಮ ಗುರುವಿನ ಸೇವೆ ಮಾಡಬೇಕೆಂಬ ಹಂಬಲ ಇದ್ದೇ ಇತ್ತು. ಇವರ ಭಾವನೆಗಳನ್ನು ತಿದ್ದುವುದಕ್ಕಾಗಿಯೇ ಮಹಾಪುರುಷ ಮಹಾರಾಜ್ ಅವರು ಇವರಿಗೆ ಒಂದು ಪತ್ರದಲ್ಲಿ, 'ತಮ್ಮ ಪ್ರಾಕೃತಿಕ ಭಾವನೆಗಳನ್ನು ಅಡಗಿಸಲು ಪ್ರಯತ್ನಿಸುವವರಿಗೆ ಶ್ರೀ ರಾಮಕೃಷ್ಣರು ತಾವಾಗಿಯೇ ಸಹಾಯ ಮಾಡುತ್ತಾರೆ' ಎಂದು ತಿಳಿಸಿದರು. ಅಲ್ಲದೆ, 'ಶ್ರೀ ರಾಮಕೃಷ್ಣ ಪರಮಹಂಸರು ನಿನ್ನನ್ನು ಆಶೀರ್ವದಿಸಿದ್ದಾರೆ. ಹಾಗಾಗಿ ನೀನು ನಿಶ್ಚಿಂತನಾಗಿರು' ಎಂದು ತಿಳಿಸಿದರು. ತಮ್ಮ ಇನ್ನೊಂದು ಪತ್ರದಲ್ಲಿ ಮಹಾಪುರುಷ ಮಹಾರಾಜರು 'ನಿನಗೆ ನನ್ನ ಆಶೀರ್ವಾದವಿದೆ. ನೀನು ಬುದ್ಧನಂತೆ ವಿವೇಕ ಹಾಗೂ ವೈರಾಗ್ಯವನ್ನು ಪಡೆ' ಎಂದು ತಿಳಿಸಿದರು.

ಸಂನ್ಯಾಸ ದೀಕ್ಷೆಯನ್ನು ಪಡೆದ ನಂತರ ಮಹಾರಾಜ್ ಅವರಿಗೆ ಮೂರು ತಿಂಗಳಿಗೂ ಹೆಚ್ಚು ಕಾಲ ತಮ್ಮ ಗುರುವಿನ ಸೇವೆ ಮಾಡುವ ಅವಕಾಶ ಬೇಲೂರು ಮಠದಲ್ಲಿ ದೊರಕಿತು. ಈ ಅವಧಿಯಲ್ಲಿ ಅವರು ಕೊಳವೆ ಬಾವಿಯಿಂದ ನೀರನ್ನು ತರುವ ಕೆಲಸವನ್ನು ಮಾಡುತ್ತಿದ್ದರು. ಒಂದು ಭುಜದ ಮೇಲೆ ನೀರಿನ ಪಾತ್ರೆಯನ್ನೂ, ಮತ್ತೊಂದು ಕೈಯಲ್ಲಿ ಹೂವಿನ ಬುಟ್ಟಿಯನ್ನೂ ಅವರು ತರುತ್ತಿದ್ದರು. ಮಹಾರಾಜ್ ಅವರಿಗೆ ಶ್ರೀ ರಾಮಕೃಷ್ಣ ಪರಮಹಂಸರ ನೇರ ಶಿಷ್ಯರ ಸಂಪರ್ಕ ಮತ್ತು ಅವರ ಆಶೀರ್ವಾದ ಪಡೆಯುವ ಭಾಗ್ಯ ಲಭಿಸಿತ್ತು.

ಸ್ವಾಮಿ ಅಖಂಡಾನಂದ ಅವರನ್ನು ಸ್ವಾಮಿ ವಿವೇಕಾನಂದರು ಬಹಳ ಇಷ್ಟ ಪಡುತ್ತಿದ್ದ ವಿಷಯ ಮಹಾರಾಜ್ ಅವರಿಗೆ ತಿಳಿದಿತ್ತು. ಆದಕಾರಣ ಅವರಿಗೆ ತಮ್ಮ ವಂದನೆಗಳನ್ನು ಸಲ್ಲಿಸುವುದಕ್ಕೆ ಮಹಾರಾಜ್ ಅವರು ಕಾತರರಾಗಿದ್ದರು. ಒಮ್ಮೆ ಮಹಾಪುರುಷ ಮಹಾರಾಜ್ ಅವರಿಂದ ಅನುಮತಿ ಪಡೆದು ಅವರು ಸರ್ಗಾಚಿಗೆ ಹೋದರು. ತಮ್ಮ ಆಶೀರ್ವಾದವನ್ನು ಬಯಸಿದ ಸ್ವಾಮಿ ರಂಗನಾಥಾನಂದರ ತಲೆಯ ಮೇಲೆ ತಮ್ಮ ಎರಡೂ ಕೈಗಳನ್ನಿರಿಸಿದ ಸ್ವಾಮಿ ಅಖಂಡಾನಂದರು 'ನಾನು ನಿನ್ನನ್ನು ಆಶೀರ್ವದಿಸಿದ್ದೇನೆ' ಎಂದು ಎರಡು ಮೂರು ಬಾರಿ ಹೇಳಿದರು. ಅವರ ಆಶೀರ್ವಾದದಿಂದ ತಮ್ಮ ಆತ್ಮಕ್ಕೆ ಆಧ್ಯಾತ್ಮಿಕತೆಯ ಹಾಗೂ ದೈವಿಕ ಶಕ್ತಿ ಬಂದಿತೆಂದು ಸ್ವಾಮಿ ರಂಗನಾಥಾನಂದ ಮಹಾರಾಜ್ ಅವರು ನಮ್ಮೊಡನೆ ಹೇಳುತ್ತಿದ್ದರು.

ಮಹಾರಾಜ್ ಅವರು ಶ್ರೀ ರಾಮಕೃಷ್ಣರ ಮತ್ತೊಬ್ಬ ನೇರ ಶಿಷ್ಯರಾದ ಸ್ವಾಮಿ ಸುಬೋಧಾನಂದರಿಗೂ ವಂದನೆಗಳನ್ನು ಸಲ್ಲಿಸಲು ಹೋದರು. ಮಹಾರಾಜ್ ಹೇಳುತ್ತಿದ್ದರು. 'ಖೋಕಾ ಮಹಾರಾಜ್ (ಸ್ವಾಮಿ ಸುಬೋಧಾನಂದ) ಅವರು ಬಹು ಸರಳವಾಗಿದ್ದರು. ತಮ್ಮ ವೃದ್ಧಾಪ್ಯದಲ್ಲಿಯೂ ಅವರು ಮಗುವಿನಂತೆ ಮುಗ್ಧರಾಗಿದ್ದರು. ನನಗೆ ಅವರ ಆಶೀರ್ವಾದ ಸಿಕ್ಕಿದ್ದುದು ನನ್ನ ಪುಣ್ಯ. ಖೋಕಾ ಮಹಾರಾಜ್ ಅವರಿಗೆ ನಿಜವಾಗಿ ದೈವದರ್ಶನವಾಗಿದ್ದಿರಬೇಕು. ಕಾರಣ ಪರಿಶುದ್ಧ ಹೃದಯಿಯಲ್ಲದವನಿಗೆ ದೈವ ಸಾಕ್ಷಾತ್ಕಾರ ಸಾಧ್ಯವಿಲ್ಲ

ಎಂದು ಶ್ರೀ ರಾಮಕೃಷ್ಣರು ಹೇಳುತ್ತಿದ್ದರು." ಜೀಸಸ್ ಕೂಡ ಇದನ್ನೇ ಹೇಳುತ್ತಿದ್ದುದು– 'ನಿನ್ನ ಹೃದಯ ಮಗುವಿನ ಹೃದಯದಂತೆ ಪರಿಶುದ್ಧವಾಗದೆ ನಿನಗೆ ದೇವರ ರಾಜ್ಯದಲ್ಲಿ ಪ್ರವೇಶ ಸಿಗುವುದಿಲ್ಲ.' ಖೋಕಾ ಮಹಾರಾಜ್ ಅವರ ಸೇವೆ ಮಾಡುವ ಸಂದರ್ಭದಲ್ಲಿ ಅವರ ಮೈಮೇಲೆ ಕೈ ಇಟ್ಟಾಗಲೆಲ್ಲ ತಾವು ಜೀವಂತ ದೈವದ ಸೇವೆಯನ್ನೇ ಮಾಡುತ್ತಿರುವಂತೆ ಭಾಸವಾಗುತ್ತಿತ್ತು ಎಂದು ಮಹಾರಾಜ್ ಅವರು ಹೇಳುತ್ತಿದ್ದರು.

ಮಹಾರಾಜ್ ಅವರು ಸ್ವಲ್ಪ ಕಾಲ ಸ್ವಾಮಿ ವಿಜ್ಞಾನಾನಂದರ ಸೇವೆಯನ್ನೂ ಮಾಡಿದರು. ಮತ್ತು ಶ್ರೀ ಪರಮಹಂಸರ ಲೌಕಿಕ ಶಿಷ್ಯರಾಗಿದ್ದ ಹಾಗೂ 'ವಚನ ವೇದ'ದ ಸಂಗ್ರಾಹಕಾರಾದ ಶ್ರೀ ಎಂ. ಅವರನ್ನೂ ಅವರ ಮನೆಯಲ್ಲಿ ಭೇಟಿ ಮಾಡಿದರು. ಸುಮಾರು ಎರಡು ಗಂಟೆಗಳ ಕಾಲ ಅವರಿಬ್ಬರೂ ಆಧ್ಯಾತ್ಮಿಕತೆಯ ಬಗ್ಗೆ ಮಾತನಾಡುತ್ತಿದ್ದರು. ಶ್ರೀ ಎಂ. ಅವರು ಬೇಲೂರು ಮಠಕ್ಕೆ ಮಹಾರಾಜ್ ಅವರ ಮೂಲಕ ಸ್ವಲ್ಪ ಹಣ್ಣುಗಳನ್ನು ಕಳುಹಿಸಿಕೊಟ್ಟರು. ಮಹಾರಾಜ್ ಅವರನ್ನು ಪ್ರಭಾವಿಸಿದ್ದ ಮತ್ತೊಬ್ಬ ಸಂನ್ಯಾಸಿಯೆಂದರೆ ಸ್ವಾಮಿ ಸೋಮಾನಂದ.

ಮಂತ್ರದೀಕ್ಷೆಯಾದ ಮೇಲೆ ಮೈಸೂರಿನ ಆಶ್ರಮದಲ್ಲಿ ಮಹಾರಾಜ್ ಅವರು ಇದ್ದ ದಿನಗಳತ್ತ ತಿರುಗೋಣ. ಆ ದಿನಗಳಲ್ಲಿ ಆ ಕೇಂದ್ರದ ಹಣಕಾಸಿನ ಪರಿಸ್ಥಿತಿ ಶೋಚನೀಯವಾಗಿತ್ತು. ಅಲ್ಲಿ ಮಹಾರಾಜ್ ಅವರು ಅತ್ಯಂತ ನಿಷ್ಠುರ ಜೀವನವನ್ನು ನಡೆಸಿದರು. ಸಣ್ಣ ಸಣ್ಣ ವಂತಿಕೆಗಳನ್ನು ಸಂಗ್ರಹಿಸಲು ಅವರು ಸೈಕಲ್ಲಿನ ಮೇಲೆ ಹೋಗುತ್ತಿದ್ದರು. ಆಶ್ರಮದಲ್ಲಿ ಆಗ ಅಡುಗೆಯವರಾಗಲೀ, ಅಡುಗೆ ಅನಿಲವಾಗಲೀ ಇರಲಿಲ್ಲ. ಸ್ವಾಮೀಜಿಯವರೇ ಸೌದೆ ಒಲೆಯಲ್ಲಿ ಅಡುಗೆ ಮಾಡಬೇಕಾಗಿತ್ತು. ಇದರ ಜೊತೆಗೆ, ಅವರು ಪಾತ್ರೆಗಳನ್ನು ತೊಳೆಯುವುದು, ತೋಟವನ್ನು ನೋಡಿಕೊಳ್ಳುವುದು ಮತ್ತು ಶಾಸ್ತ್ರದ ತರಗತಿಗೆ ಬೇಕಾದ ಟಿಪ್ಪಣಿಗಳನ್ನು ತಯಾರಿಸುವುದು— ಈ ಎಲ್ಲಾ ಕೆಲಸಗಳನ್ನೂ ನಿಭಾಯಿಸಬೇಕಿತ್ತು. ಇವಿಷ್ಟರ ನಡುವೆಯೂ ಅವರು ತಮ್ಮ ಅಧ್ಯಯನಕ್ಕೆ ಹಾಗೂ ಧ್ಯಾನಕ್ಕೆ ಸಮಯವನ್ನು ಕಂಡುಕೊಳ್ಳುತ್ತಿದ್ದರು. ಅವರು ಇವೆಲ್ಲವನ್ನೂ ನಿವೇದನಾ ಭಾವದಿಂದ ಮಾಡುತ್ತಿದ್ದರು. ಕೆಲವು ಸ್ವಾರಸ್ಯಕರ ಪ್ರಸಂಗಗಳನ್ನು ಅವರು ನಮಗೆ ಹೇಳುತ್ತಿದ್ದರು. ಅಡುಗೆ ಮಾಡುವಾಗ ಇಂಧನವಾಗಿ ಸೌದೆಯನ್ನು ಒಲೆಗೆ ಹಾಕಬೇಕಿತ್ತು. ಅದು ಉರಿದ ಹಾಗೆಲ್ಲಾ ಅದನ್ನು ಮುಂದಕ್ಕೆ ನೂಕುತ್ತಿರಬೇಕಿತ್ತು. ಇದಕ್ಕಾಗಿ ಸದಾ ಒಲೆಯ ಮುಂದೆ ಕಾಯುತ್ತಾ ಕುಳಿತಿರಬೇಕಿತ್ತು. ಒಂದು ಕೈಯಲ್ಲಿ ಉರಿಯುತ್ತಿರುವ ಸೌದೆಯ ಹಿಂತುದಿಯನ್ನೂ ಮತ್ತು ಇನ್ನೊಂದು ಕೈಯಲ್ಲಿ ಪುಸ್ತಕವನ್ನೂ ಹಿಡಿದು ಓದುತ್ತಿದ್ದರು. ಆದರೆ, ಪಾತ್ರೆ ತೊಳೆಯುವಾಗ ಅವರು ಎರಡೂ ಕೈಗಳನ್ನು ಉಪಯೋಗಿಸಬೇಕಿದ್ದುದರಿಂದ ಆ ವೇಳೆಯಲ್ಲಿ ತಾವು ಓದಿದ್ದನ್ನು ಮನನ ಮಾಡುತ್ತಿದ್ದರು. ಎಲ್ಲಾ ಕೆಲಸಗಳ ನಡುವೆಯೂ ಅವರು ಶಾಸ್ತ್ರಗಳ ಅಧ್ಯಯನ ಮಾಡಿದರು. ಉಪನಿಷತ್ತುಗಳು, ಗೀತೆ, ವಿವೇಕ ಚೂಡಾಮಣಿ ಮೊದಲಾದವನ್ನು ಬಾಯಿಪಾಠ ಮಾಡಿಕೊಳ್ಳುತ್ತಿದ್ದರು ಮತ್ತು ಸಂನ್ಯಾಸಿಯಾಗಿ ಮಾಡಬೇಕಾದ ನಿತ್ಯಕರ್ಮಗಳನ್ನೂ ಆಚರಿಸುತ್ತಿದ್ದರು. ಮಿಗಿಲಾಗಿ, ಸ್ವಾಮಿ ಸೋಮಾನಂದರ ಆಣತಿಯಂತೆ 'ವಚನವೇದ', ಸ್ವಾಮಿ ವಿವೇಕಾನಂದರ ಕೃತಿಗಳು ಮತ್ತು ಭಾಷಣಗಳ ಬಗ್ಗೆ ಟಿಪ್ಪಣಿಗಳನ್ನು ತಯಾರಿಸಬೇಕಿತ್ತು. ಮೈಸೂರು ಜೈಲಿನಲ್ಲಿದ್ದ ಬಂದಿಗಳಿಗಾಗಿ ಈ ಟಿಪ್ಪಣಿಗಳನ್ನು ಓದುತ್ತಿದ್ದರು. ಸರಕಾರದಿಂದ ಸಹಾಯವನ್ನು ಪಡೆದು, ಜೈಲಿನ ಒಳಭಾಗದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಒಂದು ಚಿಕ್ಕದಾದ ಮಂದಿರವನ್ನು ನಿರ್ಮಿಸಿ ತಮ್ಮ ಬಹುದಿನದ ಬಯಕೆಯನ್ನು ಪೂರೈಸಿಕೊಂಡರು.

ಬೆಂಗಳೂರಿನಲ್ಲಿ ಇದ್ದ ಅವಧಿಯಲ್ಲಿ, ಮಹಾರಾಜ್ ಅವರು ಬೆಂಗಳೂರಿನ ಕೇಂದ್ರೀಯ ಕಾರಾಗೃಹದಲ್ಲಿನ ಬಂದಿಗಳಿಗೆ ಅಂತಹುದೇ ತರಗತಿಯನ್ನು ನಡೆಸುತ್ತಿದ್ದರು. ಪ್ರಾರಂಭದಲ್ಲಿ ಕೇವಲ ಮೂವತ್ತು–ನಲವತ್ತು ಜನ ಮಾತ್ರ ಹಾಜರಿರುತ್ತಿದ್ದ ಅವರ ತರಗತಿಗಳು ಕೆಲವು ದಿನಗಳ ನಂತರ ನೂರಕ್ಕೂ ಹೆಚ್ಚು ಜನರಿಂದ ತುಂಬಿರುತ್ತಿದ್ದವು. ಪ್ರೇಕ್ಷಕರಾಗಿ ಎಚ್. ಸಿ. ದಾಸಪ್ಪ, ಚೆಂಗಲರಾಯರೆಡ್ಡಿ ಹಾಗೂ ಮತ್ತಿತರರು ಬಂದು ಕೂರುತ್ತಿದ್ದರು. ಶ್ರೀ ರಾಮಕೃಷ್ಣರ ನೂರನೇ ಜನ್ಮದಿನೋತ್ಸವದ ಅಂಗವಾಗಿ ಕಾರಾಗೃಹದಲ್ಲಿ 'ಹರಿ–ಸಭೆ'ಯನ್ನು ಏರ್ಪಡಿಸಿದ್ದರು.

ಒಂದು ವಾರದವರೆಗೆ ನಡೆದ ಆ ಸಮಾರಂಭದಲ್ಲಿ ಮಹಾರಾಜ್ ಅವರು ಪ್ರತಿದಿನ ಅಲ್ಲಿದ್ದವರಿಗೆಲ್ಲಾ ಲಾಡುಗಳನ್ನು ಹಂಚುತ್ತಿದ್ದರು. ರಂಗೂನಿನಲ್ಲಿದ್ದಾಗಲೂ ಸ್ವಾಮೀಜಿ ಯವರು ಇಂತಹದೇ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಸ್ವಾಮಿ ರಂಗನಾಥಾನಂದರಲ್ಲಿ ಅವರ ಗುರುಗಳ ಕೃಪೆ ಸಂಪೂರ್ಣವಾಗಿದ್ದು ಅದು ಅವರ ಆಧ್ಯಾತ್ಮಿಕ ಸಾಧನೆಗೆ ಶಕ್ತಿಯಾಗಿತ್ತು. ಅವರ ಅದಮ್ಯ ಆಧ್ಯಾತ್ಮಿಕತೆಯೇ ದೇಶದ ಮೂಲೆ ಮೂಲೆಗಳಷ್ಟೇ ಅಲ್ಲದೆ, ವಿವಿಧ ದೇಶಗಳಲ್ಲಿ ಪೂಜ್ಯರಾದ ನಮ್ಮ ತ್ರಿಮೂರ್ತಿಗಳ (ಶ್ರೀ ರಾಮಕೃಷ್ಣ ಪರಮಹಂಸ, ಶ್ರೀಮಾತೆ ಮತ್ತು ಸ್ವಾಮಿ ವಿವೇಕಾನಂದರ) ಉಪದೇಶಗಳನ್ನು ಹರಡಲು ಅವರನ್ನು ಚೋದಿಸುತ್ತಿತ್ತು. ಈ ತ್ರಿಮೂರ್ತಿಗಳ ಉಪದೇಶವನ್ನು ಪ್ರಪಂಚದ ಎಲ್ಲಾ ಕಡೆ ಎಷ್ಟು ಬೇಗ ಹರಡಿದರೆ, ಶಾಂತಿ ಸ್ಥಾಪನೆ ಮತ್ತು ಮಾನವಕುಲದ ಒಳಿತು ಅಷ್ಟೂ ಬೇಗ ಸಾಧ್ಯವಾಗುತ್ತದೆ ಎಂಬುದು ಸ್ವಾಮೀಜಿಯವರ ಅಚಲ ನಂಬಿಕೆಯಾಗಿದ್ದಿತು.

ಎರಡನೆಯ ಜಾಗತಿಕ ಮಹಾಯುದ್ಧದ ಸಮಯದಲ್ಲಿ ಮಹಾರಾಜ್ ಅವರು ರಂಗೂನಿನ ರಾಮಕೃಷ್ಣ ಮಿಷನ್ ಸೊಸೈಟಿಯ ಮುಖ್ಯಸ್ಥರಾಗಿದ್ದರು. ಅದನ್ನು ಮುಚ್ಚಿ ಅವರು ಭಾರತಕ್ಕೆ ಬರಬೇಕಾಯಿತು. ವಸತಿಹೀನರಾದ ಅಲ್ಲಿನ ಇತರ ಭಾರತೀಯರಂತೆಯೇ ಮಹಾರಾಜ್ ಅವರೂ ಕಾಲ್ನಡಿಗೆಯಲ್ಲಿಯೇ, ದಾರಿಯುದ್ದಕ್ಕೂ ಎದುರಾದ ಕಷ್ಟಗಳನ್ನು ಅನುಭವಿಸುತ್ತಾ ಬರಬೇಕಾಯಿತು. ಹಲವು ನಿರಾಶ್ರಿತರು ಕಾಲರಾ ರೋಗದಿಂದ ಸಾವನ್ನಪ್ಪಿದರು. ಕೆಲವರು ಸಾಯುವ ಸ್ಥಿತಿಯಲ್ಲಿ ಇದ್ದರು. ಇಡೀ ಹಾದಿ ಸತ್ತವರ ಪಾರ್ಥಿವ ಶರೀರಗಳಿಂದ, ನರಳುತ್ತಿರುವ ರೋಗಿಗಳಿಂದ ತುಂಬಿತ್ತು. ಮಹಾರಾಜರ ಬಳಿ ಒಬ್ಬ ವೈದ್ಯರಿದ್ದರು ಮತ್ತು ಸ್ವಲ್ಪ ಔಷಧಗಳ ಸಂಗ್ರಹವಿತ್ತು. ಅವರು ರೋಗಿಗಳನ್ನು ಪರೀಕ್ಷಿಸಿ ಅವರಿಗೆ ಸೂಕ್ತ ಔಷಧಗಳನ್ನು ನೀಡುತ್ತಿದ್ದರು. ಇದರಿಂದ ಅವರ ಅದಮ್ಯ ಸೇವಾ ಮನೋಭಾವ ನಮಗೆ ಗೊತ್ತಾಗುತ್ತದೆ. ಹೀಗೆ ಸಾಗಿ ಅವರು ಕೆಲವು ನಿರಾಶ್ರಿತರೊಂದಿಗೆ ನದಿಯ ತೀರಕ್ಕೆ ಬಂದರು. ಅಲ್ಲಿ ಒಂದು ದೊಡ್ಡ ದೋಣಿಯಲ್ಲಿ ಇವರೆಲ್ಲಾ ಕುಳಿತರು. ಅವರ ದುರದೃಷ್ಟಕ್ಕೆ, ಬಿರುಗಾಳಿ ಅಪ್ಪಳಿಸಿ ಅವರಿದ್ದ ದೋಣಿಯಲ್ಲಿದ್ದವರಲ್ಲಿ ಬಹುಪಾಲು ನೀರುಪಾಲಾದರು. ಮಹಾರಾಜ್ ಅವರು, ದೋಣಿಯವನು ಹಾಗೂ ಕೆಲವೇ ಜನರು ಈಜಿ ಆಚೆ ದಡವನ್ನು ಸೇರಿ ಅಲ್ಲಿದ್ದ ಮಾಗ್ ಎಂಬ ಕಡಲುಗಳ್ಳರ ನೆಲೆಯಲ್ಲಿ ಆಶ್ರಯಪಡೆದರು. ಆ ಕಡಲ್ಗಳ್ಳರು ಜನರನ್ನು ಲೂಟಿಮಾಡುತ್ತಿದ್ದರು. ಇವರಲ್ಲಿಗೆ ಬಂದ ಕಳ್ಳರಿಗೆ ಈಗ ಬಂದವರಲ್ಲಿ ಒಬ್ಬ ಸಂನ್ಯಾಸಿ ಇದ್ದಾನೆಂದು ಅವರ ಭಾಷೆಯಲ್ಲಿ ಆ ದೋಣಿಯವನು ತಿಳಿಸಿದನು. ನಿಜವಾಗಿಯೂ ಅಲ್ಲೊಬ್ಬ ಸಂನ್ಯಾಸಿ ಇರುವನೇ ಎಂದು ತಿಳಿದುಕೊಳ್ಳುವುದಕ್ಕೆ ಮಹಾರಾಜ್ ಅವರು ಇರುವಲ್ಲಿಗೇ ಬಂದರು. ಹಾಗೆ ಬಂದವರೇ ಸ್ವಾಮೀಜಿಯನ್ನು ನೋಡಿ ಬಾಗಿ ವಂದಿಸಿ, ಅವರಿಗೆ ಯಾವ ತೊಂದರೆಯನ್ನೂ ಕೊಡದೆ ಬೇರೊಂದು ದೋಣಿಯ ವ್ಯವಸ್ಥೆಯನ್ನು ಮಾಡಿ ಅವರು ತಲುಪಬೇಕಾದ ಸ್ಥಳಕ್ಕೆ ಅವರನ್ನು ತಲುಪಿಸಿದರು. ಹೀಗೆ ಸ್ವಾಮೀಜಿ ತಮ್ಮ ವ್ಯಕ್ತಿತ್ವದ ಪ್ರಭಾವದಿಂದ ಕಟುಕ ಹೃದಯದ ಮನುಷ್ಯನನ್ನು ಪ್ರೀತಿ ತುಂಬಿದ ಮಾನವನನ್ನಾಗಿಸಿದರು. ಸ್ವಾಮೀಜಿಯವರು ರಂಗೂನಿನಲ್ಲಿ ಇದ್ದಷ್ಟು ದಿನ ಅಲ್ಲಿ ತಮ್ಮ ಆಧ್ಯಾತ್ಮಿಕ ಹಾಗೂ ಧರ್ಮನಿರಪೇಕ್ಷಕ ದೃಷ್ಟಿಗಳಿಂದ ಅಲ್ಲಿ ಅಪಾರ ಜನ ಮನ್ನಣೆಯನ್ನು ಗಳಿಸಿದ್ದರು.

ತಮ್ಮ ಆರೋಗ್ಯದ ಕಡೆಗೆ ಗಮನವನ್ನು ಕೊಡದೆ ಸ್ವಾಮೀಜಿ ದಣಿವರಿಯದೆ ದುಡಿದರು. ಇದರಿಂದಾಗಿ ಅವರ ಆರೋಗ್ಯ ಕೆಡುತ್ತಿತ್ತು. ರಂಗೂನಿನಿಂದ ಬಂದಮೇಲೆ ಅವರಿಗೆ ಕರಾಚಿಯಲ್ಲಿನ ಕೇಂದ್ರದ ಜವಾಬ್ದಾರಿಯನ್ನು ಕೊಡಲಾಯಿತು. ಅಲ್ಲಿ ಕೂಡ ಅವರು ಬಹಳ ಜನಪ್ರಿಯವಾದರು. ಜನರು ಅವರ ಭಾಷಣಗಳನ್ನು ಕೇಳಲು ಕಾತರರಾಗಿರುತ್ತಿದ್ದರು. ಎಲ್.ಕೆ. ಅದ್ವಾನಿ, ಐ.ಕೆ. ಗುಜ್ರಾಲ್, ಡಾ॥ ಸರ್ವೇಪಲ್ಲಿ ರಾಧಾಕೃಷ್ಣನ್ ಮುಂತಾದ ಮಹನೀಯರೆಲ್ಲ ಅವರ ಉದ್ಬೋಧಕವಾದ ಮಾತುಗಳನ್ನು ಕೇಳಿ ಸ್ಫೂರ್ತಿ ಪಡೆದರು. ದೇಶದ ವಿಭಜನೆಯ ನಂತರ ಅಲ್ಲಿನ ಜನಗಳ ಗೂಂಡಾಗಿರಿಯಿಂದಾಗಿ ಆಶ್ರಮವನ್ನು ನಡೆಸುವುದು ಬಹಳ ಕಷ್ಟವಾಯಿತು. ಆಶ್ರಮವನ್ನು

ಲೂಟಿ ಮಾಡಿದರು. ಈ ಕಾರಣದಿಂದಾಗಿ, ಸ್ವಾಮೀಜಿಯವರು ಅಲ್ಲಿದ್ದ ಮಠದ ಆಸ್ತಿಯನ್ನೆಲ್ಲಾ ಮಾರಿ ಭಾರತಕ್ಕೆ ಬಂದು ಆ ಹಣವನ್ನು ಬೇಲೂರು ಮಠದಲ್ಲಿ ಠೇವಣಿಯಿರಿಸಿದರು. ಅದರಿಂದ ಬರುತ್ತಿದ್ದ ಬಡ್ಡಿಯಿಂದ ಶ್ರೀ ರಾಮಕೃಷ್ಣ, ಶ್ರೀಮಾತೆ ಹಾಗೂ ಸ್ವಾಮಿ ವಿವೇಕಾನಂದರ ಪುಸ್ತಕಗಳನ್ನು ಅತಿ ಕಡಮೆ ಬೆಲೆಯಿಟ್ಟು ಪ್ರಕಟಿಸಿದರು. ಈ ಕಡಮೆ ಬೆಲೆಯ ಪುಸ್ತಕಗಳು ಜನಪ್ರಿಯವಾಗಿ ಬಹಳ ಜನಗಳನ್ನು ಮುಟ್ಟಿದವು. ಹೀಗೆ ಪರಮಹಂಸ–ಶ್ರೀಮಾತೆ–ಸ್ವಾಮಿ ವಿವೇಕಾನಂದರ ಸಂದೇಶಗಳು ಈ ಪುಸ್ತಕಗಳ ಮೂಲಕ ಎಲ್ಲ ಕಡೆಯಲ್ಲೂ ಹರಡುತ್ತಿವೆ. ಇದಕ್ಕೆಲ್ಲಾ ಸ್ವಾಮೀಜಿಯವರ ಚಿಂತನ, ದೂರದೃಷ್ಟಿಯೇ ಕಾರಣ.

ಮಹಾರಾಜ್ ಅವರು ೧೯೪೮ರ ಆಗಸ್ಟ್‌ನಲ್ಲಿ ಕರಾಚಿಯಿಂದ ಬಂದರು. ಅಕ್ಟೋಬರ್ ೧೯೪೯ರಲ್ಲಿ ಅವರನ್ನು ನವದೆಹಲಿಯ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಯನ್ನಾಗಿ ನೇಮಿಸಲಾಯಿತು. ಅದು ದೇಶಕ್ಕೆ ಸ್ವಾತಂತ್ರ್ಯ ಬಂದ ತರುಣದಲ್ಲಿಯೇ. ಆಗ ಅಲ್ಲಿನ ಸ್ಥಿತಿ ಕೂಡ ಗೊಂದಲಮಯವಾಗಿತ್ತು, ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಸೂಕ್ತ ಪುಸ್ತಕಗಳು ದೊರೆಯುತ್ತಿರಲಿಲ್ಲ. ವಿದೇಶದಿಂದ ಹಾಗೂ ದೇಶದ ವಿವಿಧ ಭಾಗಗಳಿಂದ ಬಹು ಮೌಲ್ಯಯುತವಾದ ಪುಸ್ತಕಗಳನ್ನು ತರಿಸಿ ಸ್ವಾಮೀಜಿಯವರು ಅಲ್ಲಿನ ವಿದ್ಯಾರ್ಥಿಗಳಿಗೆ ಹಂಚಿದರು. ಆಶ್ರಮದಲ್ಲಿ ಪಠ್ಯಪುಸ್ತಕಗಳ ಒಂದು ದೊಡ್ಡ ಗ್ರಂಥಾಲಯವನ್ನು ಹಾಗೂ ವಿಶಾಲವಾದ ಸಾರ್ವಜನಿಕ ಗ್ರಂಥಾಲಯವನ್ನು ಮಹಾರಾಜ್ ಅವರು ನಿರ್ಮಿಸಿದರು.

ಅವರ ಮುಂದಿನ ಜವಾಬ್ದಾರಿ ಗೋಲ್ ಪಾರ್ಕಿನಲ್ಲಿದ್ದ ರಾಮಕೃಷ್ಣ ಮಿಷನ್ ಇನ್ಸ್ಟಿಟ್ಯೂಟ್‌ನ ಕಾರ್ಯದರ್ಶಿಯ ಹುದ್ದೆ. ಅವರು ಅಲ್ಲಿ ೧೯೬೨ರಿಂದ ೧೯೬೭ರ ವರೆಗೆ ಇದ್ದರು. ಮುಂದಿನ ಇಪ್ಪತ್ತೈದು ವರ್ಷಗಳ ಕಾಲ ಅವರು ಹೈದರಾಬಾದ್ ಕೇಂದ್ರದಲ್ಲಿದ್ದರು. ತಮ್ಮ ಜೀವನದ ಕಡೆಯ ಏಳು ವರ್ಷಗಳನ್ನು ಅವರು ಬೇಲೂರು ಮಠದಲ್ಲಿ ಕಳೆದರು. ಸಂಗ್ರಹವಾಗಿ ಹೇಳಬೇಕೆಂದರೆ, ಇದು ಅವರು ತಮ್ಮ ಸಂನ್ಯಾಸಿ ಜೀವನವನ್ನು ಈ ರೀತಿ ಕಳೆದರು.

**ಕೆಲವು ನೆನಪುಗಳು**

ಈಗ ಅವರ ಕೆಲವು ನೆನಪುಗಳು. ಇವುಗಳನ್ನು ನಾವು ಮಹಾರಾಜ್ ಅವರಿಂದಲೇ ಕೇಳಿದ್ದು. ಒಮ್ಮೆ ಡಾ॥ ರಾಧಾಕೃಷ್ಣನ್ ಮತ್ತು ಮಹಾರಾಜ್ ಅವರು ಜೊತೆಯಲ್ಲಿದ್ದರು. ಅಲ್ಲಿಗೆ ಜ್ಯೋತಿಷಿಯೊಬ್ಬ ಬಂದ. ಮಹಾರಾಜ್ ಅವರ ಹಸ್ತ ರೇಖೆಗಳನ್ನು ನೋಡುವುದರಲ್ಲಿ ಆತ ಬಹಳ ಆಸಕ್ತನಾಗಿದ್ದ. ಆದರೆ ಅದರ ಬಗ್ಗೆ ಒಲವಿಲ್ಲದಿದ್ದರಿಂದ ಇವರು ಒಪ್ಪಲಿಲ್ಲ. ಆದರೆ, ಆತ ಪದೇ ಪದೇ ಪೀಡಿಸಿದಾಗ ಮಹಾರಾಜ್ ಅವರು ತಮ್ಮ ಹಸ್ತವನ್ನು ತೋರಿಸಿದರು. ಮಹಾರಾಜ್ ಹಾಗೂ ರಾಧಾಕೃಷ್ಣನ್– ಇಬ್ಬರ ಹಸ್ತರೇಖೆಗಳೂ ಒಂದೇ ತರಹವಿದ್ದುದನ್ನು ಕಂಡ ಅವನಿಗೆ ಆಶ್ಚರ್ಯವಾಯಿತು. ವಿಸ್ಮಯಕರವಾದ ರೀತಿಯಲ್ಲಿ, ಸ್ವಲ್ಪ ಸಮಯದಲ್ಲಿಯೇ ರಾಧಾಕೃಷ್ಣನ್ ಅವರು ದೇಶದ ಅಧ್ಯಕ್ಷರಾದರೆ, ಸ್ವಾಮಿ ರಂಗನಾಥಾನಂದರು ಜಾಗತಿಕ ಆಧ್ಯಾತ್ಮಿಕ ಸಂಘದ ಹಾಗೂ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಅಧ್ಯಕ್ಷರಾದರು. ರಾಧಾಕೃಷ್ಣನ್ ಅವರು ಮಹಾರಾಜ್ ಅವರ ಸಂಗಡ ಎಷ್ಟು ಆತ್ಮೀಯವಾಗಿದ್ದರು ಎಂಬುದನ್ನು ನಾನು ಈಗ ಹೇಳುತ್ತೇನೆ. ಒಮ್ಮೆ ರಾಧಾಕೃಷ್ಣನ್ ಅವರು ತಮಗೆ ಸಂನ್ಯಾಸಿಗಳು ಧರಿಸುವ ಕಾವಿಯನ್ನು ಧರಿಸುವ ಬಯಕೆಯಿದೆ ಎಂಬುದನ್ನು ಮಹಾರಾಜ್ ಅವರ ಬಳಿ ಹೇಳಿ ತಮಗೆ ಒಂದು ಕಾವಿಯ ಬಟ್ಟೆಯನ್ನು ಕೊಡಲು ಸಾಧ್ಯವೇ ಎಂದು ಕೇಳಿದರು. ತಕ್ಷಣ ಮಹಾರಾಜ್ ಅವರು ನಗುತ್ತಾ 'ಇಲ್ಲ, ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ. ಅದೇನಿದ್ದರೂ ಮುಂದಿನ ಜನ್ಮಕ್ಕೆ' ಎಂದರು.

ಮಹಾರಾಜ್ ಅವರ ವಿದ್ವತ್ತಿಗೆ ಚತುರೋಕ್ತಿ ಮತ್ತು ಹಾಸ್ಯಗಳು ಬೆಸುಗೆ ಹಾಕಿಕೊಂಡಿರುತ್ತಿದ್ದವು. ಅವರು ತಮ್ಮ ಬಗ್ಗೆಯೇ ಹಾಸ್ಯವಾಗಿ ಹೇಳುತ್ತಿದ್ದರು: 'ಸಾಮಾನ್ಯವಾಗಿ ಮನುಷ್ಯರ ದೇಹದಲ್ಲಿ ಎರಡು ಬಗೆಯ

ರಕ್ತಕಣಗಳಿರುತ್ತವೆ– ಒಂದು ಆರ್.ಬಿ.ಸಿ, ಇನ್ನೊಂದು ಡಬ್ಲ್ಯು.ಬಿ.ಸಿ. ಆದರೆ ನನ್ನ ಶರೀರದಲ್ಲಿ ಇನ್ನೂ ಒಂದು ಬಗೆಯ ರಕ್ತಕಣವಿದೆ. ಅದು ವಿ.ಬಿ.ಸಿ.– ವಿವೇಕಾನಂದ ಬ್ಲಡ್ ಕಾರ್ಪಸ್‌ಲ್ಸ್.' ಇದು ನಿಜ. ಅವರು ನಿಜಕ್ಕೂ ಸ್ವಾಮಿ ವಿವೇಕಾನಂದರ ಉಪದೇಶದ ಸಾಕಾರವೇ ಆಗಿದ್ದರು. ಅವರ ರಕ್ತದ ಕಣಕಣದಲ್ಲೂ ಸ್ವಾಮಿ ವಿವೇಕಾನಂದರ ಆದರ್ಶ ಬೆರೆತುಹೋಗಿತ್ತು. ಅದರಿಂದಲೇ ಅವರ ಎಲ್ಲ ಕ್ರಿಯೆಗಳಲ್ಲೂ ಸ್ವಾಮಿ ವಿವೇಕಾನಂದರ ಪ್ರಭಾವ ಎದ್ದುಕಾಣುತ್ತಿತ್ತು. ಅವರ 'ಕೃತಿ ಶ್ರೇಣಿ'ಯ ಆಳವಾದ ಅಧ್ಯಯನ ಮಹಾರಾಜ್ ಅವರ ದೃಷ್ಟಿಯನ್ನು ವಿಶಾಲಗೊಳಿಸಿತ್ತು. 'ಸ್ವಾಮಿ ವಿವೇಕಾನಂದರ ಸಮಗ್ರ ಕೃತಿ ಶ್ರೇಣಿ'ಯನ್ನು ಅವರು ಹಲವು ಬಾರಿ ಓದಿದ್ದರು. ನಿಮ್ಮ ಈ ವಿಶಾಲ ಜ್ಞಾನದ ಮೂಲ ಯಾವುದು ಎಂದು ಅವರನ್ನು ಕೇಳಿದರೆ ತಡೆಬಡೆಯಿಲ್ಲದೇ ಮಹಾರಾಜ್ ಅವರು 'ಸ್ವಾಮಿ ವಿವೇಕಾನಂದ' ಎಂದು ಹೇಳುತ್ತಿದ್ದರು. ಎಷ್ಟೋ ಜನ ಮಹಾರಾಜ್ ಅವರನ್ನು 'ಎರಡನೆಯ ವಿವೇಕಾನಂದ' ಎಂದೇ ನಂಬುತ್ತಿದ್ದರು. ಶ್ರೀ ರಾಮಕೃಷ್ಣರನ್ನು ಅರಿಯಬೇಕಾದರೆ ಸ್ವಾಮಿ ವಿವೇಕಾನಂದರ ಕೃತಿಗಳನ್ನು ಓದಬೇಕು ಎನ್ನುತ್ತಾರೆ.  ನನ್ನ ವೈಯಕ್ತಿಕ ಅಭಿಪ್ರಾಯವೆಂದರೆ, ಸ್ವಾಮಿ ವಿವೇಕಾನಂದರನ್ನು ಅರ್ಥಮಾಡಿಕೊಳ್ಳಬೇಕಾದರೆ, ಸ್ವಾಮಿ ರಂಗನಾಥಾನಂದರ ಕೃತಿಗಳನ್ನು, ಭಾಷಣಗಳನ್ನು ಓದಬೇಕು.

ಶ್ರೀ ರಾಮಕೃಷ್ಣರೊಂದಿಗೇ 'ಸತ್ಯಯುಗ'ವೂ ಹುಟ್ಟಿತೆಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಮಹಾರಾಜ್ ಅವರ ಅಭಿಪ್ರಾಯವೂ ಇದೇ ಆಗಿತ್ತು. ಆದರೆ, ತಮ್ಮ ಸುತ್ತೆಲ್ಲಾ ಗಲಭೆ, ಗೊಂದಲಗಳನ್ನೇ ಕಾಣುತ್ತಿರುವ ಭಕ್ತರಿಗೆ ಇದನ್ನು ನಂಬುವುದು ಸಾಧ್ಯವಾಗುತ್ತಿರಲಿಲ್ಲ. ಮಹಾರಾಜ್ ಅವರ ಮೇಲಿನ ಅಭಿಪ್ರಾಯದ ಬಗ್ಗೆ ಇನ್ನಷ್ಟು ವಿವರಣೆ ಕೇಳಿದಾಗ ಅವರು ಅನನ್ಯವಾದ ಹಾಗೂ ತಾರ್ಕಿಕವಾದ ಈ ಉತ್ತರವನ್ನು ಹೇಳುತ್ತಿದ್ದರು: 'ಮನೆಯನ್ನು ಕಟ್ಟಲು ಆರಂಭಿಸಿದಾಗ ಅದಕ್ಕೆ ವಿದ್ಯುತ್ತು, ನೀರು ಮೊದಲಾದ ಯಾವ ಸೌಲಭ್ಯಗಳನ್ನೂ ಪೂರೈಸಲು ಸಾಧ್ಯವಿರುವುದಿಲ್ಲ. ಈ ಎಲ್ಲಾ ಸೌಲಭ್ಯಗಳನ್ನು ಪಡೆಯುವವರೆಗೂ ಆ ಮನೆ ವಾಸಕ್ಕೆ ಅರ್ಹರಾಗಿರುವುದಿಲ್ಲ. ಹಾಗೆಯೇ ಈಗ ಸಾವಿರಾರು ಜನ ಶ್ರೀ ರಾಮಕೃಷ್ಣರತ್ತ ಧಾವಿಸುತ್ತಿದ್ದಾರೆ. ಇಷ್ಟರಲ್ಲಿಯೇ ಇಡಿ ಪ್ರಪಂಚದಲ್ಲಿ ಶ್ರೀ ರಾಮಕೃಷ್ಣರ ಪ್ರವಾಹ ತುಂಬಿ ಹರಿಯುತ್ತದೆ. ಆಗ, ಸತ್ಯಯುಗವು ತನ್ನೆಲ್ಲಾ ವೈಭವಗಳೊಂದಿಗೆ ಸ್ಥಾಪಿಸಲ್ಪಡುವುದನ್ನು ನೋಡಬಹುದು. ಮಹಾರಾಜ್ ಅವರು ಹಿಂದೆ ಸತ್ಯಯುಗದಲ್ಲಿ ಎಲ್ಲರೂ ಬ್ರಾಹ್ಮಣರೇ ಆಗಿದ್ದರು. ಈಗ ಬರುತ್ತಿರುವ ಸತ್ಯಯುಗದಲ್ಲಿ ಶ್ರೀ ರಾಮಕೃಷ್ಣರ ಮತವನ್ನು ಆಶ್ರಯಿಸುವುದರಿಂದ ಎಲ್ಲರೂ ನಿಜವಾದ ಅರ್ಥದಲ್ಲಿ ಬ್ರಾಹ್ಮಣರೇ ಆಗಿರುತ್ತಾರೆ.

'ಶ್ರೀ ರಾಮಕೃಷ್ಣ ಪರಮಹಂಸರು ಭಕ್ತಿಯೇ ಪುರುಷಾಕಾರವನ್ನು ತಾಳಿ ಬಂದಂತೆ ಕಾಣುತ್ತಿದ್ದರೂ, ಆಂತರ್ಯದಲ್ಲಿ ಅವರು ಒಂದು ಜ್ಞಾನಭಂಡಾರವೇ ಆಗಿದ್ದರು. ಹಾಗೆಯೇ ಸ್ವಾಮಿ ವಿವೇಕಾನಂದರು ಹೊರಗೆ ಜ್ಞಾನದ ಸಾಕಾರವೇ ಆಗಿದ್ದರೂ, ಅವರ ಮನಸ್ಸಿನಲ್ಲಿ ಭಕ್ತಿಯ ಗಂಗೆಯೇ ಹರಿಯುತ್ತಿತ್ತು' ಎಂದು ಮಹಾರಾಜ್ ಹೇಳುತ್ತಿದ್ದರು. ಅವರ ಅಭಿಪ್ರಾಯದಲ್ಲಿ, ಈ ಅಸಾಧಾರಣ ಗುರು ಹಾಗೂ ಸ್ವಾಮಿ ವಿವೇಕಾನಂದ– ಇಬ್ಬರೂ ಜ್ಞಾನ ಮತ್ತು ಭಕ್ತಿಗಳ ಸಂಗಮವಾಗಿದ್ದರು. ಸ್ವಾಮಿ ರಂಗನಾಥಾನಂದ ಅವರು ಒಬ್ಬ ನಿಷ್ಠಾವಂತ ವೇದಾಂತಿ, ಅವರಲ್ಲಿ ದಯೆ, ಅನುಕಂಪ ಮುಂತಾದ ಕೋಮಲ ಭಾವನೆಗಳು ಇಲ್ಲ ಎಂದು ಹಲವರು ಭಾವಿಸಿದ್ದರು. ಆದರೆ, ಅವರು ಪರಮಹಂಸ ಸ್ತೋತ್ರವನ್ನು ಆಧರಿಸಿ ನೀಡಿದ 'ಸಂಪದ ತವ ಶ್ರೀಪಾದ ಭವಗೋಷ್ಪದ ಬರೀಯತೇ' ಎಂಬ ಉಪನ್ಯಾಸವನ್ನು ಕೇಳಿದ ಯಾರಿಗಾದರೂ ಮಹಾರಾಜ್ ಅವರಲ್ಲಿ ಇದ್ದ ಭಕ್ತಿ ಹಾಗೂ ಸಮರ್ಪಣಾ ಮನೋಭಾವ ಎಂತಹುದು ಎಂಬುದು ತಿಳಿಯುತ್ತಿತ್ತು. ಅಲ್ಲಿನ ಶ್ರೋತೃಗಳಲ್ಲಿ ಒಂದು ಬಗೆಯ ವಿದ್ಯುತ್ಸಂಚಾರವಾಗುತ್ತಿತ್ತು.

ಒಮ್ಮೆ ತುರೀಯಾನಂದರು ಮಹಾರಾಜ್ ಅವರ ಬಗ್ಗೆ ಮಾತನಾಡುತ್ತಾ ಅವರ ವಿದ್ವತ್ತು ಮತ್ತು ವಾಗ್ಮಿತೆಯೇ ಅವರ ಪತನಕ್ಕೆ ಕಾರಣವಾಗಬಹುದು ಎಂದರು. ಅದನ್ನು ಕೇಳಿದ ಮಹಾರಾಜ್ ಅವರು

‘ಅಂತಹ ಪತನ ಅನಿವಾರ್ಯವೇ ಆದರೆ ಅದೂ ಒಳ್ಳೆಯದೇ. ಏಕೆಂದರೆ, ನಾನು ಬಿದ್ದರೆ ಶ್ರೀ ರಾಮಕೃಷ್ಣರ ಪಾದಕಮಲಗಳ ಬಳಿಯೇ ಬೀಳುತ್ತೇನೆ’ ಎಂದರು. ಇದು ಅವರ ಭಕ್ತಿ ಹಾಗೂ ಸಮರ್ಪಣಾ ಮನೋಭಾವದ ರೀತಿ.

ಅವರ ಅಮೋಘವಾದ ಈ ಭಕ್ತಿಯಿಂದ ಅವರು ದೈವಸಾಕ್ಷಾತ್ಕಾರವನ್ನು ಪಡೆದಿದ್ದರು ಎಂದು ನನ್ನ ಅನಿಸಿಕೆ. ಸ್ವಾಮಿ ವಿವೇಕಾನಂದರ ವಿಚಾರಗಳ ಪ್ರತಿಪಾದನೆಯೇ ಅವರ ಜೀವನದ ಧ್ಯೇಯವಾಗಿದ್ದಿತು. ಪರಮಹಂಸರು ಮತ್ತು ಶ್ರೀಮಾತೆಯವರಲ್ಲಿದ್ದ ಅವರ ಭಕ್ತಿ ಅನುಕರಣೀಯವಾಗಿದ್ದಿತು. ಶ್ರೀ ಮಾತೆಯವರು ದಿನದಲ್ಲಿ ಒಂದು ಬಾರಿಯಾದರೂ ತಮ್ಮ ನಿಜರೂಪದಲ್ಲಿ ತಮಗೆ ದರ್ಶನವನ್ನು ಕೊಡಬೇಕೆಂದು ಅವರು ಶ್ರದ್ಧಾಪೂರ್ವಕವಾಗಿ ಪ್ರಾರ್ಥಿಸುತ್ತಿದ್ದರು. ಶ್ರೀ ಶಾರದಾದೇವಿಯವರು ತಮ್ಮ ಈ ಸುಪುತ್ರನನ್ನು ಹರಸಿದ್ದರೆಂದು ಎಲ್ಲರ ಅನಿಸಿಕೆ. ಇದಕ್ಕೆ ಸಂಬಂಧಿಸಿದಂತೆ ಒಂದು ಉಲ್ಲೇಖವನ್ನು ನಾನು ಇಲ್ಲಿ ಕೊಡುತ್ತೇನೆ. ಒಮ್ಮೆ ದುರ್ಗಾ ಪೂಜೆಯ ನಂತರ, ದೇವಿಯ ಪ್ರತಿಮೆಯ ವಿಸರ್ಜನೆಗಾಗಿ ಅದನ್ನು ಗಂಗಾನದಿಯ ಬಳಿ ಕೊಂಡೊಯ್ಯುತ್ತಿದ್ದರು. ಆಗ ಮಹಾರಾಜ್ ಅವರು ಶ್ರೀಮಾತೆಯ ಮಂದಿರದ ಮುಂದಿನ ಜಗುಲಿಯ ಮೇಲೆ ಕುಳಿತಿದ್ದರು. ಅವರ ಸುತ್ತ ಕೆಲವು ಸಂನ್ಯಾಸಿಗಳು ಹಾಗೂ ಸಹಾಯಕರು, ಕಾರ್ಯಕರ್ತರು ಇದ್ದರು. ದೇವಿಯ ವಿಸರ್ಜನೆಯ ಕ್ಷಣದಲ್ಲಿ ಮಹಾರಾಜ್ ಅವರು ‘ನನಗೆ ಶ್ರೀಮಾತೆಯವರು ತಮ್ಮ ನಿಜರೂಪದಲ್ಲಿ ಕಾಣಿಸುತ್ತಿದ್ದಾರೆ. ಈ ವಿಸರ್ಜನೆಯನ್ನು ನಿಲ್ಲಿಸಿ’ ಎಂದು ಜೋರು ಸ್ವರದಲ್ಲಿ ಕೂಗಿದರು. ವಿಸರ್ಜನೆಯ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದ ಸಂನ್ಯಾಸಿಯು ಬಂದು ಕೇಳಿದಾಗ, ಮಹಾರಾಜ್ ಅವರು ‘ಜೀವಂತ ಇರುವ ದೇವಿಯನ್ನೇಕೆ ನೀರಿನಲ್ಲಿ ಮುಳುಗಿಸುತ್ತಿದ್ದೀರಿ’ ಎಂದು ಕೇಳಿದರು. ಆದರೆ ಸಾಂಪ್ರದಾಯಿಕ ವಿಧಿಗಳು ನಡೆಯಲೇಬೇಕಷ್ಟೆ! ಅದಾದ ನಂತರ ಮಹಾರಾಜ್ ಅವರು ದುರ್ಗಾವಿಸರ್ಜನೆಯ ಕಾರ್ಯಕ್ರಮಗಳಲ್ಲಿ ಎಂದೂ ಭಾಗವಹಿಸಲಿಲ್ಲ.

ಪ್ರತಿವರ್ಷ ನಡೆಯುವ ‘ಕುಮಾರಿ ಪೂಜೆ’ಯ ಸಂದರ್ಭದಲ್ಲಿ, ಕೊಡಗೂಸು ಹೆಣ್ಣುಮಗುವನ್ನು ಪೂಜಿಸುವಾಗ, ಮಹಾರಾಜ್ ಅವರು ಆ ಮಗುವಿನಲ್ಲಿ ಶ್ರೀಮಾತೆಯವರು ಆವಿರ್ಭಾವವಾಗಿರುವುದನ್ನು ಕಾಣುತ್ತಿದ್ದರು. ಈ ಪೂಜಾವಿಧಿಗಳನ್ನು ನೋಡುತ್ತಾ ಕುರ್ಚಿಯ ಮೇಲೆ ಕುಳಿತಿರುತ್ತಿದ್ದ ಅವರು, ತಮ್ಮ ಒಳಗಿನ ಭಾವನೆಗಳು ತಮ್ಮ ಹಿಡಿತದಿಂದ ತಪ್ಪಿಸಿಕೊಂಡು ಹೊರಬರದಿರಲೆಂದು ತಮ್ಮ ಬಾಯಿಯನ್ನು ಒಂದು ಬಟ್ಟೆಯಿಂದ ಮುಚ್ಚಿಕೊಂಡಿರುತ್ತಿದ್ದರು. ಶ್ರೀಮಾತೆಯವರ ವಿಷಯದಲ್ಲಿ ಅವರಿಗಿದ್ದ ಭಕ್ತಿ ಅಸಾಮಾನ್ಯವಾಗಿತ್ತು.

ಅಸಂಖ್ಯಾತ ಆತ್ಮಗಳಿಗೆ ಮಹಾರಾಜ್ ಅವರು ಸ್ಫೂರ್ತಿದಾಯಕರಾಗಿದ್ದರು. ತಮ್ಮ ತಮ್ಮ ಅಭಿಪ್ರಾಯ, ನಂಬಿಕೆಗಳು ಯಾವುದೇ ಇದ್ದರೂ, ಸಮಾಜದ ವಿವಿಧ ಸ್ತರಗಳ ಜನರು ಅವರಲ್ಲಿಗೆ ಬಂದು ತಮ್ಮ ಸಮಸ್ಯೆಗಳನ್ನು ನಿವೇದಿಸಿಕೊಳ್ಳುತ್ತಿದ್ದರು. ಹಾಗೆ ಬರುತ್ತಿದ್ದವರಲ್ಲಿ ವಿಜ್ಞಾನಿಗಳು, ಸಂಗೀತಗಾರರು, ಸಮಾಜ ಸೇವಾಕರ್ತರು, ರಾಜಕೀಯ ನೇತಾರರು, ತಲೆಮರೆಸಿಕೊಂಡು ತಿರುಗುತ್ತಿದ್ದ ನಕ್ಸಲ್ ನಾಯಕರು ಮೊದಲಾದವರು ಇರುತ್ತಿದ್ದರು. ಹಿಂದಿರುಗುವಾಗ ಅವರೆಲ್ಲರಿಗೂ ಸಮಾಧಾನ ಮತ್ತು ಸಾಂತ್ವನ ಸಿಕ್ಕಿರುತ್ತಿತ್ತು. ನಾನು ಹೈದರಾಬಾದಿನಲ್ಲಿ ನೇಮಕಗೊಂಡಿದ್ದಾಗ, ಮಹಾರಾಜ್ ಅವರ ದರ್ಶನಕ್ಕೆ ಕುಖ್ಯಾತ ನಕ್ಸಲ್ ನಾಯಕನಾದ ಸೀತಾರಾಮ್ ಕುಂದಯ ಇತರ ನಾಲ್ವರೊಂದಿಗೆ ಬಂದಿದ್ದ. ಅವನನ್ನು ಹುಡುಕಿಕೊಟ್ಟವರಿಗೆ ಇಪ್ಪತ್ತು ಲಕ್ಷ ರೂಪಾಯಿಗಳ ಬಹುಮಾನವನ್ನು ಸರಕಾರ ಘೋಷಿಸಿತ್ತು. ಆತ ತಲೆಮರೆಸಿಕೊಂಡಿದ್ದ. ಅವನು ಅಲ್ಲಿಗೆ ಬಂದದನ್ನು ನೋಡಿ ನನಗೆ ಭಯವಾಯಿತು. ನಾನು ಅವನನ್ನು ಒಳಗೆ ಬಿಡುವುದಕ್ಕೆ ಹಿಂಜರಿದೆ. ಆತ ತನ್ನ ಗುರುತನ್ನು ಹೇಳಿ, ತಾನು ಮಹಾರಾಜ್ ಅವರ ದರ್ಶನ ಪಡೆಯಲು ಬಂದಿರುವುದಾಗಿ ಹೇಳಿದ. ನಾನು ಒಳಗೆ ಹೋಗಿ ಮಹಾರಾಜ್ ಅವರಿಗೆ ಈ ವಿಷಯವನ್ನು ತಿಳಿಸಿದೆ. ಅವರು ಆತನನ್ನು ಒಳಗೆ ಕಳುಹಿಸುವಂತೆ ಹೇಳಿದರು. ಒಳಗೆ ಬಂದ ಆತ ಮಹಾರಾಜರ ಮುಂದೆ ಉದ್ದಂಡ ನಮಸ್ಕಾರ ಮಾಡಿ ಅಳಲು ಪ್ರಾರಂಭಿಸಿದ. ಸ್ವಲ್ಪ ಸಮಯದ ನಂತರ

ಮೇಲೆದ್ದ. ಅವನಿಗೆ ಸ್ವಲ್ಪ ನೀರನ್ನು ಕೊಡುವಂತೆ ಮಹಾರಾಜ್ ಹೇಳಿದರು. ನೀರನ್ನು ಕುಡಿದ ನಂತರ ಅವನು ಮಹಾರಾಜ್ ಅವರ ಬಳಿ ಏಕಾಂತವಾಗಿ ಮಾತನಾಡಬಯಸಿದ. ನಾನು ಆ ಕೊಠಡಿಯಿಂದ ಹೊರಹೋದೆ. ಸ್ವಲ್ಪ ಹೊತ್ತು ಅವರೊಡನೆ ಮಾತನಾಡಿ ನಂತರ ಹೊರಬಂದ ಅವನ ಮುಖವು ಪ್ರಸನ್ನವಾಗಿತ್ತು. ಅವರ ನಡುವೆ ನಡೆದ ಸಂಭಾಷಣೆಯು ನನಗೆ ಗೊತ್ತಿರಲಿಲ್ಲದಿದ್ದರೂ ಅವನಲ್ಲಾಗಿದ್ದ ಬದಲಾವಣೆ ಕಣ್ಣಿಗೆ ಕಾಣುವಂತಿತ್ತು.

ಮಹಾರಾಜ್ ಅವರ ಬಳಿಗೆ ಜನರು ಭಾರವಾದ ಹೃದಯದೊಂದಿಗೆ ಬರುತ್ತಿದ್ದರು. ಅವರು ತಮ್ಮ ತಳಮಳ ಹಾಗೂ ಅಶಾಂತತೆಯನ್ನು ಮಹಾರಾಜ್ ಅವರ ಬಳಿ ತೋಡಿಕೊಳ್ಳುತ್ತಿದ್ದರು. ಶ್ರೀ ರಾಮಕೃಷ್ಣ ಪರಮಹಂಸರು ಹೇಳಿದಂತೆಯೇ ಮಹಾರಾಜ್ ಅವರೂ 'ಶಾಂತಿಯೆಂಬುದು ನಿಮ್ಮ ಒಳಗೇ ಇದೆ. ಜ್ಞಾನ ಮತ್ತು ಅಜ್ಞಾನಗಳೆರಡೂ ನಿಮ್ಮ ಹೃದಯದಲ್ಲಿಯೇ ವಾಸಮಾಡುತ್ತಿರುತ್ತವೆ' ಎಂದು ಹೇಳುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ಅವರು

**ಸ್ವರ್ಗವೆಲ್ಲಿಹುದು,**
**ನರಕವೆಲ್ಲಿಹುದು,**
**ಅವು ಲೋಕಾಂತರದಲ್ಲಿಹುದೆಂದು ಹೇಳುವವರಾರು?**
**ಸ್ವರ್ಗ ನರಕಗಳೆರಡೂ ನಮ್ಮೊಳಗೇ ಇಹವು,**
**ದೇವರೂ ರಾಕ್ಷಸರೂ ನಮ್ಮೊಳಗೇ ಇಹರು.**

ಎಂಬ ಅರ್ಥ ಬರುವಂತಹ ಬಂಗಾಳಿಯ ಪದ್ಯವನ್ನು ಹೇಳುತ್ತಿದ್ದರು.

ಜನರು ತಮ್ಮ ಗೃಹಕಲಹ, ಹೊಡೆದಾಟಗಳನ್ನು ಮಹಾರಾಜರ ಬಳಿಗೆ ತರುತ್ತಿದ್ದರು. ಸ್ವಾಮೀಜಿಯವರದು ಯಾವಾಗಲೂ ಸಕಾರಾತ್ಮಕ ದೃಷ್ಟಿ. 'ನೀವು ಜಗಳವಾಡದೇ ಹೋದರೆ, ನಿಮ್ಮೊಡನೆ ಯಾರೂ ಜಗಳವಾಡುವುದಿಲ್ಲ ಅಲ್ಲವೇ? ಭಗವಂತನ ಸೃಷ್ಟಿಯ ಯಾವುದರಲ್ಲಿಯೂ ತಪ್ಪಿರುವುದಿಲ್ಲ. ಉಳಿದವರೆಲ್ಲರೂ ಸರಿಯಾಗಿಯೇ ಇದ್ದಾರೆ. ತಪ್ಪಿದ್ದರೆ ಅದು ನನ್ನಲ್ಲಿಯೇ ಇರಬಹುದು. ನನ್ನ ಆಲೋಚನೆಯ ರೀತಿಯೇ ವಿಚಿತ್ರವಾಗಿರಬಹುದು. ಆದ್ದರಿಂದ ನಾನೇ ತಪ್ಪು ಮಾಡುತ್ತಿರಬಹುದು ಎಂದು ಯೋಚಿಸಿ' ಎನ್ನುತ್ತಿದ್ದ ಅವರು, 'ನೋಡಿ, ಗಿಡದ ಎಲೆಗಳನ್ನು ನೋಡಿ, ಭಗವಂತ ಎಷ್ಟು ಕಲಾತ್ಮಕವಾಗಿ ಅವನ್ನು ಸೃಷ್ಟಿಸಿದ್ದಾನೆ ಎಂಬುದನ್ನು ಗಮನಿಸಿ. ನಾವು, ಅಂದರೆ ಮನುಷ್ಯರು, ಭಗವಂತನ ಸೃಷ್ಟಿಯಲ್ಲೆಲ್ಲಾ ಅತ್ಯುತ್ತಮರಾದವರು' ಎಂದೂ ಹೇಳುತ್ತಿದ್ದರು.

ಒಮ್ಮೆ ದೆಹಲಿಯ ರಸ್ತೆಯೊಂದರಲ್ಲಿ ಬಾಳೆಹಣ್ಣನ್ನು ತಿನ್ನುತ್ತಾ ನಡೆದುಕೊಂಡು ಹೋಗುತ್ತಿದ್ದ ಒಬ್ಬನು ಅದರ ಸಿಪ್ಪೆಯನ್ನು ದಾರಿಯಲ್ಲಿ ಬಿಸುಟು ಮುಂದೆಹೋದುದನ್ನು ಮಹಾರಾಜ್ ಅವರು ನೋಡಿದರು. ಅವನಿಗೆ ತನ್ನ ಸಾಮಾಜಿಕ ಹೊಣೆಯ ಅರಿವನ್ನು ಮೂಡಿಸುವುದಕ್ಕಾಗಿ ಮಹಾರಾಜ್ ಅವರು ತಕ್ಷಣ ಒಂದು ಆಟೋರಿಕ್ಷಾವನ್ನು ಹಿಡಿದು ಅವನನ್ನು ಬೆನ್ನಟ್ಟಿದರು. ಅವನನ್ನು ಹಿಡಿದು ಅವನು ಮಾಡಿದ ತಪ್ಪನ್ನು ಅವನಿಗೆ ಮನವರಿಕೆಮಾಡಿಸಿ, ಪ್ರತಿಯೊಬ್ಬರಿಗೂ ಇತರರ ಬಗ್ಗೆ ಕಳಕಳಿಯಿರಬೇಕೆಂದೂ, ತಮ್ಮ ಮನೆಯನ್ನು ಶುಚಿಯಾಗಿಟ್ಟುಕೊಳ್ಳುವ ಹಾಗೆ ಸಾರ್ವಜನಿಕ ರಸ್ತೆಯನ್ನೂ ಶುಚಿಯಾಗಿಡಬೇಕೆಂದೂ ತಿಳಿಸಿದರು.

ಇಂತಹುದೇ ಘಟನೆ ಮಹಾರಾಜ್ ಅವರು ಹೈದರಾಬಾದಿನಲ್ಲಿದ್ದಾಗ ನಡೆಯಿತು. ಒಂದು ದಿನ ಅವರು ದಾರಿಯಲ್ಲಿ ನಡೆದುಹೋಗುತ್ತಿದ್ದರು. ಅವರಿಗೆ ವಿಷಾದವಾದ ಸಂಗತಿಯೆಂದರೆ, ರಸ್ತೆಯ ಪಕ್ಕದಲ್ಲಿದ್ದ ಕಟ್ಟಡದ ಮೂರನೆಯ ಮಹಡಿಯಿಂದ ಆ ಮನೆಯಾಕೆ ಕಸ ತುಂಬಿದ್ದ ಒಂದು ಪೊಟ್ಟಣವನ್ನು ರಸ್ತೆಗೆ ಎಸೆದಳು. ಇದನ್ನು ನೋಡಿದ ಮಹಾರಾಜ್ ಅವರು ತಕ್ಷಣ ಮೂರು ಮಹಡಿಗಳನ್ನು ಹತ್ತಿ, ಆಕೆಯ ಮನೆಯ ಬಾಗಿಲನ್ನು ಬಡಿದರು. ಹೊರಗೆ ಬಂದ ಆಕೆಗೆ ಸಾವಿರಾರು ಜನರು ಓಡಾಡುವ ರಸ್ತೆಯಲ್ಲಿ ಹೀಗೆ ಕಸವನ್ನು

ಚೆಲ್ಲುವುದು ಅನಾಗರಿಕರ ಲಕ್ಷಣ ಎಂದು ಹೇಳಿದರು. ಕಸವನ್ನು ಕಸದ ತೊಟ್ಟಿಗೇ ಹಾಕಬೇಕು ಎಂಬುದನ್ನು ಆಕೆಗೆ ಮನದಟ್ಟುಮಾಡಿಕೊಟ್ಟರು.

ಇನ್ನೊಂದು ಸಂದರ್ಭದಲ್ಲಿ ಮಹಿಳೆಯೊಬ್ಬರು ಹೊಸದಾಗಿ ಬಂದಿದ್ದ ತನ್ನ ಸೊಸೆಯ ಸಂಗಡ ಮಹಾರಾಜ್ ಅವರ ಬಳಿಗೆ ಬಂದು 'ಮಹಾರಾಜ್, ಈಕೆಯನ್ನು ಆಶೀರ್ವದಿಸಿ' ಎಂದರು. ಮಹಾರಾಜ್ ಅವರು ನಗುತ್ತಾ 'ಆಕೆಗೆ ನೀವು ಏನಾಗಬೇಕು?' ಎಂದು ಆ ಮಹಿಳೆಯನ್ನು ಕೇಳಿದರು. ಅದಕ್ಕೆ ಆಕೆ "ಮದರ್–ಇನ್–ಲಾ" (ಅತ್ತೆ) ಎಂದರು. ಆಗ ಮಹಾರಾಜ್ ಅವರು ಮೃದುವಾಗಿ "ನೋಡಿ, ನೀವು ಆಕೆಗೆ 'ಮದರ್–ಇನ್–ಲವ್' ಆಗಬೇಕು. ಆಕೆ ನಿಮಗೆ 'ಡಾಟರ್–ಇನ್–ಲವ್' ಆಗಬೇಕು. ಸಂಬಂಧಗಳು 'ಲಾ' ಮೇಲೆ ನಿಂತಿರುವುದಕ್ಕಿಂತ ಮೂಲಭೂತವಾಗಿ 'ಲವ್' ಮೇಲೆ ಅವಲಂಬಿತವಾಗಿರಬೇಕು" ಎಂದರು. ಹೀಗೆ ಮಹಾರಾಜ್ ಅವರು ಐಹಿಕತೆಯನ್ನು ಜಾಣ್ಮೆಯಿಂದ ಪಾರಮಾರ್ಥಿಕತೆಯತ್ತ ತಿರುಗಿಸುತ್ತಿದ್ದರು.

ಒಂದು ಬಾರಿ ಕೆಲವು ವೈದ್ಯರು ಅವರ ಬಳಿ ಬಂದು ಪ್ರಣಾಮವನ್ನು ಸಲ್ಲಿಸಿದರು. ಆ ವೈದ್ಯರುಗಳು ಹಳ್ಳಿಗಾಡುಗಳಿಗೆ ಹೋಗಿ ಸೇವೆ ಸಲ್ಲಿಸುವ ಉದ್ದೇಶವನ್ನು ಹೊಂದಿದ್ದರು. ಪ್ರಣಾಮ ಮಾಡಿ ತಮ್ಮನ್ನು ಆಶೀರ್ವದಿಸುವಂತೆ ಮಹಾರಾಜ್ ಅವರನ್ನು ಪ್ರಾರ್ಥಿಸಿಸಿದರು. ಅದಕ್ಕೆ ಮಹಾರಾಜ್ ಅವರು 'ನೀವು ಮಾಡುವ ಪ್ರತಿಯೊಂದು ಒಳ್ಳೆಯ ಕೆಲಸದ ಹಿಂದೆಯೂ ಭಗವಂತನ ಆಶೀರ್ವಾದ ಇರುತ್ತದೆ. ಅದಕ್ಕೆ ನನ್ನ ಆಶೀರ್ವಾದವನ್ನೇಕೆ ಬಯಸುತ್ತೀರಿ? ನಿಮ್ಮ ಕೆಲಸ ಉತ್ತಮವಾಗಿದ್ದರೆ ನಿಮಗೆ ಮನಶಾಂತಿ ಸಿಗುತ್ತದೆ. ಮನಸ್ಸಿನ ಶಾಂತಿಯೆಂದರೆ ಅದೇ ಭಗವಂತನ ಆಶೀರ್ವಾದ' ಎಂದು ಹೇಳಿದರು.

ಮಹಿಳೆಯೊಬ್ಬರು ಮಹಾರಾಜ್ ಅವರಿಗೆ ಪತ್ರ ಬರೆದು, ತಮ್ಮ ಪತಿ ಇಲ್ಲದಿದ್ದಾಗ ತಮಗೆ ಒಂಟಿತನ ಹಾಗೂ ಖಿನ್ನತೆ ಆವರಿಸಿಕೊಳ್ಳುತ್ತದೆ ಎಂದು ತಿಳಿಸಿದ್ದರು. ಅವರಿಗೆ ಬರೆದ ಪತ್ರದಲ್ಲಿ ಮಹಾರಾಜ್ ಅವರು 'ಪರಿಸ್ಥಿತಿಗೆ ಹೊಂದಿಕೊಂಡು ಹೋಗುವುದನ್ನು ಅಭ್ಯಾಸ ಮಾಡಿಕೊಳ್ಳಿ. ಒಂಟಿಯಾಗಿರುವುದು ಭಗವಂತನೊಡನೆ ಸಂಭಾಷಿಸಲು ಸಿಕ್ಕಿದ ಅವಕಾಶವೆಂದು ತಿಳಿದುಕೊಳ್ಳಿ. ಇಂತಹ ಅಭ್ಯಾಸ ನಿಮ್ಮ ಬೇಸರವನ್ನು ನೀಗಿಸುವುದಲ್ಲದೆ ನಿಮ್ಮ ಬಾಳಿಗೆ ಹೊಸ ಅರ್ಥವನ್ನು ಕೊಡುತ್ತದೆ' ಎಂದು ತಿಳಿಸಿದರು. ಹೀಗೆ ಖಿನ್ನತೆಯ ನಡುವೆ ಇದ್ದ ಒಂದು ಜೀವದ ಗಮನವನ್ನು ಮಹಾರಾಜ್ ಅವರು ಭಗವಂತನತ್ತ ತಿರುಗಿಸಿದರು.

ಈ ಪ್ರಸಂಗಗಳೆಲ್ಲವೂ ಮಹಾರಾಜ್ ಅವರ ಸಕಾರಾತ್ಮಕ ಮನೋಭಾವವನ್ನೂ, ಮನುಕುಲದ ಬಗ್ಗೆ ಅವರಿಗಿದ್ದ ನಿಸ್ವಾರ್ಥ ಪ್ರೇಮವನ್ನೂ ತೋರುತ್ತವೆ. ಅವರಿಗೆ ದೇವರ ಬಗ್ಗೆ ಇದ್ದ ಪ್ರೀತಿಯೇ ಮಾನವ ಜನಾಂಗದ ಮೇಲೂ ಇತ್ತು. ಮಹಾರಾಜ್ ಅವರು ಕರಾಚಿಯಲ್ಲಿದ್ದಾಗ ಒಂದು ದಿನ ಅವರಿಗೆ ಬಂದಿದ್ದ ಪತ್ರವೊಂದನ್ನು ಕೊಡಲು ಅಂಚೆಯವನು ಬಂದ. ಆತ ಬಹಳವಾಗಿ ಬೆವರುತ್ತಿದ್ದ. ವಿಪರೀತ ಬಳಲಿದ್ದ ಆತನ ಬಂದವನೇ ನೆಲದ ಮೇಲೆ ಕುಸಿದು ಬಿದ್ದ. ಮಹಾರಾಜ್ ಅವರು ಅವನನ್ನು ಅಲ್ಲಿಯೇ ಇದ್ದ ಕುರ್ಚಿಯ ಮೇಲೆ ಕುಳಿತುಕೊಳ್ಳುವಂತೆ ಹೇಳಿದರು. ಆದರೆ ಆತ ಅವರ ಮುಂದೆ ಕುರ್ಚಿಯ ಮೇಲೆ ಕುಳಿತುಕೊಳ್ಳಲು ನಿರಾಕರಿಸಿದ. ತಾವು ಎಷ್ಟೇ ಹೇಳಿದರೂ ಆತ ಕೇಳುವುದಿಲ್ಲ ಎಂಬುದನ್ನು ಅರಿತ ಮಹಾರಾಜ್ ಅವರು ತಮ್ಮ ಕುರ್ಚಿಯಿಂದ ಮೇಲೆದ್ದು ತಾವೇ ಹಿಡಿದು ಅವನನ್ನು ಮೇಲೆಬ್ಬಿಸಿ ಬಲವಂತವಾಗಿ ಕುರ್ಚಿಯ ಮೇಲೆ ಕೂರಿಸಿದರು. ಅವರ ಕರುಣೆಯ ವಿಸ್ತಾರ ಅಂತಹುದು.

ಒಮ್ಮೆ ಸ್ವಾಮಿ ವಿವೇಕಾನಂದರ ಪ್ರತಿಮೆಯ ಅನಾವರಣಕ್ಕೆಂದು ಮಹಾರಾಜ್ ಅವರು ತಿರುಪತಿಗೆ ಹೋಗಿದ್ದರು. ಅಲ್ಲಿ ಅವರು ತಿರುಪತಿಯ ದೇವಸ್ಥಾನದ ಅತಿಥಿಗೃಹದಲ್ಲಿ ತಂಗಿದ್ದರು. ಅವರು ಮಾರನೆಯ ದಿನ ಬೆಳಗ್ಗೆ ವೆಂಕಟೇಶ್ವರನ ದರ್ಶನ ಪಡೆಯುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಅವರು ದೇವಸ್ಥಾನಕ್ಕೆ ಹೋದಾಗ ಜನಜಂಗುಳಿಯನ್ನು ತಪ್ಪಿಸಲಿಕ್ಕಾಗಿ ಹತ್ತು ನಿಮಿಷಗಳ ಕಾಲ ದೇವಸ್ಥಾನದ ಮುಖ್ಯದ್ವಾರವನ್ನು

ಮುಚ್ಚಿರಬೇಕೆಂದೂ ಮತ್ತು ಮಹಾರಾಜ್ ಅವರು ದೇವರ ದರ್ಶನವನ್ನು ಪಡೆದ ನಂತರ ಮತ್ತೆ ಅದನ್ನು ತೆರೆಯಬೇಕೆಂದೂ ತೀರ್ಮಾನಿಸಲಾಗಿತ್ತು. ಇದು ಅವರಿಗೆ ಗೊತ್ತಾದಗ ತಮ್ಮಿಂದಾಗಿ ಸಾವಿರಾರು ಜನರಿಗೆ ದೇವರ ದರ್ಶನ ಪಡೆಯುವಲ್ಲಿ ತೊಂದರೆಯಾಗಬಾರದೆಂದು, ತಾವು ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಪಡೆಯಲು ಮಹಾರಾಜ್ ಅವರು ನಿರಾಕರಿಸಿದರು. ಸಾಮಾನ್ಯ ಜನರ ದರ್ಶನಾವಕಾಶವನ್ನು ಕಸಿದುಕೊಂಡು ತಾವು ದರ್ಶನ ಪಡೆಯುವುದು ಅವರಿಗೆ ಸರಿಕಾಣಲಿಲ್ಲ. ದೇವರೆಡೆಗಿನ ತಮ್ಮ ಪ್ರೀತಿಯನ್ನು ಮನುಷ್ಯರತ್ತ ತಿರುಗಿಸುವ ಅವರ ದೃಷ್ಟಿ ಮತ್ತು ಧ್ಯೇಯವನ್ನು ನಾವು ಇಂತಹ ಪ್ರಸಂಗಗಳಿಂದ ಕಾಣಬಹುದು.

ಒಮ್ಮೆ ಅವರು ಉತ್ತರ ಪ್ರದೇಶದ ವಿಶ್ವವಿದ್ಯಾನಿಲಯವೊಂದರಲ್ಲಿ ಉಪನ್ಯಾಸ ಕೊಡಲು ಹೋಗಿದ್ದರು. ಅಲ್ಲಿನ ಶ್ರೋತೃಗಳಲ್ಲಿ ಬಹಳಷ್ಟು ಜನ ಸುಶಿಕ್ಷಿತರು, ಪಂಡಿತರು ಇದ್ದರು. ಮಹಾರಾಜ್ ಅವರ ಉಪನ್ಯಾಸ ಇಂಗ್ಲಿಷ್‌ನಲ್ಲಿದ್ದರೂ, ಅವರು ಮಧ್ಯೆ ಮಧ್ಯೆ ಹಿಂದಿಯನ್ನೂ ಉಪಯೋಗಿಸುತ್ತಿದ್ದರು. ಉಪನ್ಯಾಸವು ಮುಗಿದ ಬಳಿಕ ಪ್ರೊಫೆಸರ್ ಒಬ್ಬರು ತಮ್ಮ ಇಂಗ್ಲಿಷ್ ಭಾಷೆಯು ಅದ್ಭುತವಾಗಿದ್ದರೂ, ಹಿಂದಿಯಲ್ಲೇಕೆ ಮಾತನಾಡಿದಿರಿ ಎಂದು ಅವರನ್ನು ಕೇಳಿದಾಗ, ಮಹಾರಾಜ್ ಅವರು 'ನೋಡಿ, ಹಿಂದಿನ ಬಾಗಿಲಿನ ಬಳಿ ವಾಹನದ ಚಾಲಕರು ನಿಂತಿದ್ದಾರೆ. ಅವರಿಗೆ ಇಂಗ್ಲಿಷ್ ಅರ್ಥವಾಗುವುದಿಲ್ಲ. ಅದಕ್ಕೆಂದೇ ನಾನು ಹಿಂದಿಯಲ್ಲೂ ಆಗಾಗ್ಗೆ ಮಾತನಾಡುತ್ತಿದ್ದೆ' ಎಂದರು. ತಮ್ಮ ಉಪನ್ಯಾಸವು ಅಂತಹವರಿಗೂ ಮುಟ್ಟಬೇಕೆಂಬುದು ಅವರ ಉದ್ದೇಶವಾಗಿತ್ತು.

ಒಮ್ಮೆ ಅವರು ಹೈದರಾಬಾದಿನ ಆಶ್ರಮದಲ್ಲಿದ್ದರು. ಆಶ್ರಮದ ಬಾಗಿಲು ಕಾಯುವವನು ಮನೆಗೆ ಹೋಗುವ ಮುಂಚೆ ಮಹಾರಾಜ್ ಅವರಿಗೆ ನಮಸ್ಕಾರ ಮಾಡಲು ಬಂದ. ಮಹಾರಾಜ್ ಅವರಿಗೆ ತಮ್ಮ ಪ್ರೀತಿಯ ಕುರುಹಾಗಿ ಅವನಿಗೆ ಏನನ್ನಾದರೂ ಕೊಡಬೇಕು ಎನಿಸಿತು. ಏನನ್ನು ಕೊಡುವುದು ಎಂದು ಯೋಚಿಸುತ್ತಿದ್ದರು. ಅಲ್ಲಿಯೇ ಇದ್ದ ತಮ್ಮ ಕೋಟನ್ನು ನೋಡಿ ಅದನ್ನೇ ಅವನಿಗೆ ಕೊಡುವಂತೆ ನನಗೆ ಹೇಳಿದರು. 'ಇರುವುದರಲ್ಲಿ ಅದೇ ಉತ್ತಮವಾದ ಕೋಟ್. ಅದು ನಿಮ್ಮ ಉಪಯೋಗಕ್ಕೆ ಬೇಕು. ಅದರ ಬದಲಿಗೆ ಬೇರೆ ಏನನ್ನಾದರೂ ಕೊಡಬಹುದು' ಎಂದು ಅವರಿಗೆ ಸೂಚಿಸಿದೆ. ಆದರೆ ನನ್ನ ಅಭಿಪ್ರಾಯಕ್ಕೆ ಒಪ್ಪದ ಮಹಾರಾಜ್ ಅವರು, 'ಅದರ ಅಗತ್ಯ ನನಗಿಂತ ಅವನಿಗೇ ಹೆಚ್ಚು' ಎಂದು ಅದನ್ನು ಅವನಿಗೆ ಕೊಟ್ಟರು.

ಒಮ್ಮೆ ಮಂತ್ರದೀಕ್ಷೆ ಕೊಡಲು ಮಹಾರಾಜ್ ಅವರು ಹೈದರಾಬಾದಿಗೆ ಹೋಗಿದ್ದರು. ಅವರ ಆರೋಗ್ಯ ಸರಿಯಿಲ್ಲದಿದ್ದುದರಿಂದ, ಮೊದಲನೆಯ ದಿನ ನಲವತ್ತೈದು ವೈದ್ಯರಿಗೂ, ಮಾರನೆಯ ದಿನ ಅರುವತ್ತೈದು ಮೀನುಗಾರರಿಗೂ ದೀಕ್ಷೆಯನ್ನು ಕೊಡುವಂತೆ ಕಾರ್ಯಕ್ರಮವನ್ನು ನಿಗದಿಗೊಳಿಸಲಾಗಿತ್ತು. ಇದರಿಂದಾಗಿ ಮಹಾರಾಜ್ ಅವರ ಅನಾರೋಗ್ಯ ಹೆಚ್ಚಾದರೆ, ದೀಕ್ಷೆ ಪಡೆಯುವಲ್ಲಿ ವೈದ್ಯರಿಗೆ ಆದ್ಯತೆಯಿರಬೇಕೆಂದೂ, ಮಾರನೆಯ ದಿನ ಮೀನುಗಾರರಿಗೆ ಅದು ತಪ್ಪಿದರೂ ಪರವಾಗಿಲ್ಲ ಎಂಬುದೂ ಇದರ ಉದ್ದೇಶವಾಗಿತ್ತು. ಮಹಾರಾಜ್ ಅವರ ಅರಿವಿಗೆ ಇದು ಬಂದಿತು. ಆಗ ಮೊದಲು ಆದ್ಯತೆ ಸಮಾಜದ ದುರ್ಬಲ ಹಾಗೂ ಬಡ ಜನತೆಗೆ ಸಿಗಬೇಕು ಎಂದು ಹೇಳಿದರು.

ಮೊದಮೊದಲು ಮಹಾರಾಜ್ ಅವರು ದೀಕ್ಷೆಕೊಡುವುದಕ್ಕೆ ಒಪ್ಪುತ್ತಿರಲಿಲ್ಲ. 'ನಾನೇನಿದ್ದರೂ ಪರಮಹಂಸರ ಉಪದೇಶವನ್ನು ಸಾರುವವನು, ನಾನು ದೀಕ್ಷೆಯನ್ನು ಏಕೆ ಕೊಡಬೇಕು?' ಎನ್ನುತ್ತಿದ್ದರು. ಆದರೆ ಸ್ವಲ್ಪಕಾಲದ ನಂತರ ಎರಡೂ ಕೆಲಸಗಳನ್ನು ಅವರು ಮಾಡುತ್ತಿದ್ದರು.

ಒಮ್ಮೆ ಅಮೆರಿಕಾದಿಂದ ದೀಕ್ಷೆಯನ್ನು ಪಡೆಯಲು ಭಕ್ತರೊಬ್ಬರು ಬಂದಿದ್ದರು. ಆಗ ಮಹಾರಾಜ್ ಅವರು ವುಡ್‌ಲ್ಯಾಂಡ್ಸ್ ಆಸ್ಪತ್ರೆಯಲ್ಲಿದ್ದರು. ಹಾಗಾಗಿ ದೀಕ್ಷಾ ಕಾರ್ಯಕ್ರಮ ರದ್ದಾಯಿತು. ತಾವು ಅಮೆರಿಕಾಕ್ಕೆ ಮರಳುವ ಮುನ್ನ ಮಹಾರಾಜ್ ಅವರನ್ನು ಕಂಡು ಅವರಿಗೆ ಪ್ರಣಾಮವನ್ನು ಸಲ್ಲಿಸಲು ಆ ಭಕ್ತರು ಆಸ್ಪತ್ರೆಗೇ ಬಂದರು. ನಾನು ಮಹಾರಾಜ್ ಅವರಿಗೆ ಈ ಭಕ್ತರ ವಿಷಯವನ್ನು ಹೇಳಿದೆ. ಮಹಾರಾಜ್ ಅವರು ಆಸ್ಪತ್ರೆಯಲ್ಲಿಯೇ

ಅವರಿಗೆ ಮಂತ್ರದೀಕ್ಷೆ ಕೊಡಲು ತೀರ್ಮಾನಿಸಿದರು. ಹಾಸಿಗೆಯಲ್ಲಿ ಮಲಗಿಯೇ ಆ ಭಕ್ತರಿಗೆ ದೀಕ್ಷೆಯನ್ನು ಕೊಟ್ಟರು. ಅದಾದ ಬಳಿಕ ಅವರು ನನಗೆ ತಮ್ಮ ಹೊಸ ಶಿಷ್ಯರಿಗೇ ಏನಾದರೂ ಪ್ರಸಾದವನ್ನು ಕೊಡುವಂತೆ ಹೇಳಿದರು. ಆದರೆ ಆಸ್ಪತ್ರೆಯಲ್ಲಿ 'ಎಲೆಕ್ಟ್ರಾಲ್' ಹೊರತು ಬೇರೇನೂ ಇರಲಿಲ್ಲ. ಈ ಅಸದೃಶ ಗುರು ಆ ಅನನ್ಯ ಶಿಷ್ಯನಿಗೆ 'ಎಲೆಕ್ಟ್ರಾಲ್'ನ್ನೇ ಪ್ರಸಾದವನ್ನಾಗಿ ನೀಡಿ, ಅದನ್ನೇ ಸ್ವಲ್ಪಸ್ವಲ್ಪವಾಗಿ ತೆಗೆದುಕೊಳ್ಳುವಂತೆ ಸೂಚಿಸಿದರು. ಹಾಗೆ ಕೊಡುತ್ತಾ 'ನಾವು ನಮ್ಮ ಪರಿಸ್ಥಿತಿಗೆ ಹೊಂದಿಕೊಳ್ಳಬೇಕು. ರೋಮಿನಲ್ಲಿರುವಾಗ ರೋಮನರಂತೆ ಇರಬೇಕು' ಎಂಬ ಅಭಿಪ್ರಾಯದ ಶ್ರೀಮಾತೆಯವರ ನುಡಿಯನ್ನು ಉದ್ಧರಿಸಿದರು.

ಆಧ್ಯಾತ್ಮಿಕ ಜೀವನವೆಂದರೆ ಅದು ನಮ್ಮ ದೈನಂದಿನ ಜೀವನಕ್ಕೆ ಹೊರತಾದುದಲ್ಲ ಎಂದು ಮಹಾರಾಜ್ ಅವರು ಹೇಳುತ್ತಿದ್ದರು. ಎಲ್ಲಾ ಮನುಷ್ಯರಲ್ಲಿಯೂ ಮೂರು ವಿಧವಾ ಶಕ್ತಿಗಳಿರುತ್ತವೆ. ಅವೆಂದರೆ, ಶರೀರದ ಅಥವಾ ಭೌತಿಕ ಶಕ್ತಿ, ಬುದ್ಧಿಶಕ್ತಿ ಹಾಗೂ ಮನಸ್ಸಿನ ಅಥವಾ ಆತ್ಮದ ಶಕ್ತಿ (ಆತ್ಮಶಕ್ತಿ). ನಮ್ಮ ನಿಜವಾದ ಆಸ್ತಿಯೆಂದರೆ ಆತ್ಮಶಕ್ತಿ. ನಮ್ಮ ಚಾರಿತ್ರ್ಯದ ಆಧಾರಸ್ತಂಭವೇ ಅದು. ಚಾರಿತ್ರ್ಯವು ದೃಢವಾಗಿದ್ದವನು ಎಂತಹ ಆಮಿಷಗಳಿಗೂ ಬಲಿಯಾಗಲಾರ. ನಮ್ಮ ಜೀವನದಲ್ಲಿ ಲೌಕಿಕತೆ ಮತ್ತು ಪಾರಲೌಕಿಕತೆಗಳೆರಡೂ ಒಂದಕ್ಕೊಂದು ತಳುಕುಹಾಕಿಕೊಂಡಿರುತ್ತವೆ ಎಂದು ಅವರು ಹೇಳುತ್ತಿದ್ದರು.

ನನ್ನ ಮನಸ್ಸಿನಲ್ಲಿ ಇಂತಹ ನೂರಾರು ಪ್ರಸಂಗಗಳು ತುಂಬಿಕೊಂಡಿವೆ. ಅವರ ನೆನಪುಗಳ ಅಪಾರವಾದ ಭಂಡಾರವೇ ಇದೆ. ನಾನು ಹದಿಮೂರು ವರ್ಷ ಅವರ ಸೇವೆಯನ್ನು ಮಾಡಿದೆ, ಆದರೂ ಅವರನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದು ನನಗೆ ಸಾಧ್ಯವಾಗಲಿಲ್ಲ. ನಾನು ಅವರಿಗೆ ಆಪ್ತನಾಗಿದ್ದರೂ, ಅವರ ದೊಡ್ಡತನವನ್ನು ಅರಿಯಲಾಗಲಿಲ್ಲ. ಆದರೆ ಅವರ ವ್ಯಕ್ತಿತ್ವದ ವೈಶಾಲ್ಯವನ್ನು ಅರ್ಥಮಾಡಿಕೊಳ್ಳುವ ಅವಕಾಶವನ್ನೇ ಈಗ ನಾನು ಕಳೆದುಕೊಂಡಿದ್ದೇನೆ. ನಾನೀಗ ಅನುಭವಿಸುತ್ತಿರುವದೆಂದರೆ, ಅವರಿಂದ ನನಗೆ ದೊರೆಯುತ್ತಿದ್ದ ತಾಯಿಯ ಪ್ರೀತಿ. ಅವರ ಪ್ರೀತಿಯಲ್ಲಿ ಅಸಮಾನವಾದ ಮಾರ್ದವತೆ ಇರುತ್ತಿತ್ತು. ಈಗ ಅವರ ಸರಳತೆ ಹಾಗೂ ನನ್ನ ಬಗ್ಗೆ ತೋರುತ್ತಿದ್ದ ಪ್ರೀತಿಯ ಬಗ್ಗೆ ಕೆಲವು ಪ್ರಸಂಗವನ್ನು ನಿವೇದಿಸುತ್ತೇನೆ.

ಅವರು ಹೈದರಾಬಾದಿನ ಆಶ್ರಮದಲ್ಲಿ ಇರುವಾಗ, ಒಮ್ಮೆ ನಾನು ಅವರ ರಕ್ತಪರೀಕ್ಷೆಯ ವರದಿಯನ್ನು ತರಲು ವಿಜಯಾ ಡಯಾಬಿಟಿಕ್ ಸೆಂಟರ್‌ಗೆ ಹೋಗಿದ್ದೆ. ವರದಿಯು ಇನ್ನೂ ಸಿದ್ಧವಾಗಿರಲಿಲ್ಲ. ಅಲ್ಲಿ ಕುಳಿತು ಕಾಲವ್ಯಯ ಮಾಡುವುದರ ಬದಲು ಹಣ್ಣನ್ನಾದರೂ ಖರೀದಿಸೋಣವೆಂದು ಹೊರಗೆ ಹೋದೆ. ದುರದೃಷ್ಟವಶಾತ್, ನಾನು ತಿರುಗಿ ಬರುವುದು ಸುಮಾರು ಒಂದು ಗಂಟೆ ತಡವಾಯಿತು. ನಾನು ಅರ್ಧ ಗಂಟೆಯ ಒಳಗೆ ವರದಿಯನ್ನು ತೆಗೆದುಕೊಂಡು ಆಶ್ರಮಕ್ಕೆ ಮರಳಿಬರುವ ನಿರೀಕ್ಷೆ ಮಹಾರಾಜ್ ಅವರದು. ನನ್ನ ಬಗ್ಗೆ ಅವರು ಆತಂಕಗೊಂಡಿದ್ದರು. ನನ್ನ ಬದಲಿಗೆ ಬೇರೆಯವರು ಅವರಿಗೆ ಆಹಾರ ನೀಡಿದಾಗ ಅವರ ಆತಂಕ ಇನ್ನೂ ಹೆಚ್ಚಾಯಿತು. ಅವರು ಡಯಾಬಿಟಿಕ್ ಸೆಂಟರ್‌ಗೆ ದೂರವಾಣಿ ಕರೆಮಾಡಿ ನನ್ನ ಬಗ್ಗೆ ವಿಚಾರಿಸಿದರು. ಆ ಸೆಂಟರ್‌ನವರು ನಾನು ಈ ಮುಂಚೆ ಹೊರಗೆ ಹೋದುದನ್ನು ಅವರಿಗೆ ಹೇಳಿದಾಗ ಅವರ ಆತಂಕ ಮಿತಿಮೀರಿತು. ನಾನು ತಿರುಗಿ ಬರುತ್ತಿರುವಾಗ ನಾನೊಬ್ಬ ಭೋಳೇವ್ಯಕ್ತಿ ಎಂದುಕೊಂಡು ನನ್ನನ್ನು ಯಾರೋ ಅಪಹರಿಸಿರಬಹುದು ಎಂಬ ಭಯ ಅವರನ್ನು ಆವರಿಸಿತು. ನನ್ನಂತಹ ಬೆಳೆದ ವ್ಯಕ್ತಿಯನ್ನು ಯಾರಾದರೂ ಅಪಹರಿಸುತ್ತಾರೆಯೇ ಎಂದು ಆಶ್ರಮದಲ್ಲಿದ್ದವರೆಲ್ಲಾ ನಗುತ್ತಿದ್ದರೂ, ಮಹಾರಾಜ್ ಅವರು ಮಾತ್ರ ಅವರ ಪ್ರತಿಕ್ರಿಯೆಗೆ ಬೆಲೆ ಕೊಡಲಿಲ್ಲ. ಅವರಾಗಲೇ ಪೋಲಿಸಿಗೆ ದೂರುಕೊಡಲು ಮುಂದಾಗುತ್ತಿದ್ದರು. ಆದರೆ ಅಷ್ಟರಲ್ಲಿ ನಾನು ಕ್ಷೇಮವಾಗಿ ಆಶ್ರಮವನ್ನು ಸೇರಿದೆ. ನಾನು ಕ್ಷೇಮವಾಗಿ ಬಂದುದನ್ನು ನೋಡಿದ ಮೇಲೆ ಮಹಾರಾಜ್ ಅವರ ಆತಂಕ ನಿವಾರಣೆಯಾಯಿತು. ಈ ಆತಂಕ ಅವರು ನನ್ನಲ್ಲಿಟ್ಟಿದ್ದ ಪ್ರೀತಿಯಿಂದ ಬಂದುದಾಗಿತ್ತು.

ಅವರು ಬೆಂಗಳೂರಿನ ಆಶ್ರಮದಲ್ಲಿದ್ದಾಗ ಒಮ್ಮೆ ಅವರನ್ನು ಮಸ್ತಿಷ್ಕದ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಲಾಗಿತ್ತು. ಅವರಿಗೆ ತಮ್ಮ ಕೈಕಾಲುಗಳ ಮೇಲಿನ ಸ್ವಾಧೀನ ತಪ್ಪಿತ್ತು. ಆದರೂ ತಮ್ಮನ್ನು ಶೌಚಾಲಯಕ್ಕೆ ಕರೆದುಕೊಂಡು ಹೋಗಲು ಒಬ್ಬರೇ ಸಹಾಯಕರು ಸಾಕೆಂದು ಅವರು ಪಟ್ಟುಹಿಡಿಯುತ್ತಿದ್ದರು. ಹಾಗೆ ಒಮ್ಮೆ ಶೌಚಾಲಯವನ್ನು ಪ್ರವೇಶಿಸಿ, ಅಲ್ಲಿ ತಟ್ಟಾಡುತ್ತ ಕೆಳಕ್ಕೆ ಬಿದ್ದರು. ಅವರನ್ನು ಆ ಸಹಾಯಕರು ಹೊರಗೆ ಕರೆತಂದು, ಮಂಚದ ಮೇಲೆ ಮಲಗಿಸಿದರು. ಮಹಾರಾಜ್ ಅವರಿಗೆ ತಮ್ಮ ಚಿಂತೆಯಿರಲಿಲ್ಲ, ಬದಲಿಗೆ ಅವನಿಗೇನಾದರೂ (ಆ ಸಹಾಯಕರಿಗೇನಾದರೂ) ಪೆಟ್ಟು ತಗುಲಿತೋ ಎಂದು ಚಡಪಡಿಸುತ್ತಿದ್ದರು.

ಒಮ್ಮೆ ನಾನು ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ಸಾಮಾನುಗಳನ್ನು ಬುಕ್ ಮಾಡಲು ಹೋಗಿದ್ದೆ. ಮಹಾರಾಜ್ ಅವರು ಗಣ್ಯವ್ಯಕ್ತಿಗಳಿಗಾಗಿರುವ ಆರಾಮ ಶಾಲೆಯಲ್ಲಿ ಕುಳಿತಿರಬೇಕಿತ್ತು. ಆದರೆ ಆ ಸಂದಣಿಯಲ್ಲಿ ನಾನು ಕಳೆದುಹೋಗಬಹುದು ಎಂದು ಅವರು ಚಡಪಡಿಸುತ್ತಾ, ಇತರ ಸಂನ್ಯಾಸಿಗಳು, ಭಕ್ತರು ಎಷ್ಟು ಹೇಳಿದರೂ ಕೇಳದೆ, ಹೊರಗಡೆಯೇ ನನಗಾಗಿ ಕಾಯುತ್ತಾ ನಿಂತಿದ್ದರು. ಇದು ಅವರು ನನ್ನಲ್ಲಿರಿಸಿದ್ದ ವಾತ್ಸಲ್ಯ.

ಅವರು ನನ್ನಿಂದ ಸಹಾಯವನ್ನು ತೆಗೆದುಕೊಳ್ಳಲು ಸಂಕೋಚಪಡುತ್ತಿದ್ದುದನ್ನು ಕುರಿತು ನನಗೆ ಒಂದು ಪ್ರಸಂಗ ನೆನಪಿಗೆ ಬರುತ್ತದೆ. ನಾವು ಒಮ್ಮೆ ಹೊರಗೆ ಹೋಗಿದ್ದೆವು. ಮಹಾರಾಜ್ ಅವರು ತಮ್ಮ ಮೇಲಂಗಿಯನ್ನು ತರುವುದನ್ನು ಮರೆತಿದ್ದರು. ಮಾರನೆಯ ದಿನ ಬೆಳಗ್ಗೆ ಅವರಿಗೆ ನನ್ನ ಮೇಲಂಗಿಯನ್ನೇ ಕೊಟ್ಟೆ. ಸಂಕೋಚಪಡುತ್ತಲೇ ಅವರು ಅದನ್ನು ತೊಟ್ಟುಕೊಂಡರು. ಸುಮಾರು ಒಂದು ಗಂಟೆಯ ನಂತರ ಅದು ತಮಗೆ ಬಿಗಿ ಮತ್ತು ಚಿಕ್ಕದಾಗುತ್ತದೆಂದು ಹೇಳುತ್ತಾ ಅದನ್ನು ಮತ್ತೆ ನನಗೇ ಹಿಂದಿರುಗಿಸಿದರು. ಮತ್ತೊಮ್ಮೆ ಅವರು ಕೈಗಡಿಯಾರವನ್ನು ಮರೆತಿದ್ದಾಗ, ನಾನು ನನ್ನ ಕೈಗಡಿಯಾರವನ್ನೇ ಅವರಿಗೆ ಕೊಟ್ಟಿದ್ದೆ. ನನ್ನ ಮತ್ತು ಅವರ ಸಂಬಂಧ ಹೀಗೆ ಆತ್ಮೀಯವಾಗಿತ್ತು.

ಮಹಾರಾಜ್ ಅವರ ಆರೋಗ್ಯ ಸರಿಯಿರಲಿಲ್ಲ. ವೈದ್ಯರು ಅವರಿಗೆ ಅರ್ಧ ಗಂಟೆಗಿಂತ ಹೆಚ್ಚು ಉಪನ್ಯಾಸವನ್ನು ಕೊಡಬೇಡಿ ಎಂದು ಸಲಹೆ ಕೊಟ್ಟಿದ್ದರು. ಒಮ್ಮೆ ದೆಹಲಿ ಕೇಂದ್ರದಲ್ಲಿ ಅವರ ಉಪನ್ಯಾಸವಿತ್ತು. ಶ್ರೋತೃಗಳು ಅಪಾರ ಸಂಖ್ಯೆಯಲ್ಲಿ ಬಂದಿದ್ದರು. ಅರ್ಧಗಂಟೆಯಾದ ತಕ್ಷಣ ಉಪನ್ಯಾಸವನ್ನು ನಿಲ್ಲಿಸುವಂತೆ ಮಾಡಲು ನಾನು ಅಲ್ಲಿಯೇ ಪಕ್ಕದಲ್ಲಿಯೇ ನಿಂತುಕೊಂಡಿದ್ದೆ. ನಾನು ಅದಕ್ಕೆ ಪ್ರಯತ್ನಿಸುವ ಮೊದಲೇ, ನನ್ನ ಉದ್ದೇಶವನ್ನು ತಿಳಿದ ಅವರು, ನನಗೆ 'ಹೋಗು, ಅತ್ತ ಹೋಗು' ಎಂದರು. ಅಷ್ಟು ಜನರ ಮುಂದೆ ಅವರು 'ಅತ್ತ ಹೋಗು' ಎಂದದ್ದು ನನಗೆ ಒಂದು ರೀತಿಯ ಆಘಾತವನ್ನುಂಟುಮಾಡಿತ್ತು. ನಾನು ಮಾತನಾಡದೇ ಅಲ್ಲಿಂದ ಹೊರಟು ನನ್ನ ಕೊಠಡಿಗೆ ಬಂದು ಬಾಗಿಲನ್ನು ಹಾಕಿಕೊಂಡು ಭಾರವಾದ ಹೃದಯದಿಂದ ಮಲಗಿಕೊಂಡೆ. ಆ ರಾತ್ರಿ ನಾನು ಅವರಿಗೆ ಆಹಾರವನ್ನು ಕೊಡಲು ಕೂಡ ಹೋಗಲಿಲ್ಲ. ಮಾರನೆಯ ದಿನ ಬೆಳಗ್ಗೆ ಏಳು ಗಂಟೆಗೆ ಎಂದಿನಂತೆ ಅವರನ್ನು ನೋಡಲು ಕೂಡ ಹೋಗಲಿಲ್ಲ. ಆದರೆ ಮಹಾರಾಜ್ ಅವರೇ ನನ್ನ ಕೊಠಡಿಗೆ ಬಂದು ಬಾಗಿಲು ಬಡಿದು ಹೇಳಿದರು– 'ಸುದರ್ಶನ್, ನಿನ್ನ ಮೇಲಂಗಿಯನ್ನು ತೊಟ್ಟುಕೊಂಡು ಹೊರಗೆ ಬಾ.' ನಾನು ಹೊರಗೆ ಬಂದಾಗ ಹೇಳಿದರು– 'ಏನಾಯಿತು ನಿನಗೆ? ಈಗಾಗಲೇ ಏಳು ಗಂಟೆಯಾಗಿದೆ, ಆದರೂ ನೀನು ನನ್ನನ್ನು ನೋಡಲು ಬರಲಿಲ್ಲ!' ನಾನು ನನ್ನ ಅಹಂಕಾರದಲ್ಲಿ ಮುಳುಗಿ, ಮಹಾರಾಜ್ ಅವರನ್ನು ದೂರಮಾಡಿದ್ದೆ. ಆದರೆ ಅವರ ನಿರ್ವ್ಯಾಜ ಪ್ರೇಮ ಅವರನ್ನು ತಪ್ಪುಮಾಡಿದ ಮಗುವನ್ನು ಅರಸುತ್ತಾ ಬರುವಂತೆ ನನ್ನ ಬಳಿಗೆ ಎಳೆದುಕೊಂಡುಬಂದಿತ್ತು.

ಸಂಘದ ಅಧ್ಯಕ್ಷರಾಗಿದ್ದ ಅವರು ನನ್ನಂಥ ಸಾಮಾನ್ಯ ಸಂನ್ಯಾಸಿಯನ್ನು ಅಷ್ಟು ಪ್ರೀತಿಸುತ್ತಿದ್ದರು! ಅವರ ಸೇವೆಯನ್ನು ಮಾಡಲು ಸಾವಿರಾರು ಜನ ಉತ್ಸಾಹದಿಂದ ಕಾಯುತ್ತಿದ್ದರು. ಆದರೆ ನನಗೆ ಸಿಕ್ಕಿದ್ದ ಅವರ ಬಳಿ

ಇರುವ, ಅವರ ಸೇವೆಯನ್ನು ಮಾಡುವ ಮತ್ತು ಅವರ ಪ್ರೀತಿಗೆ ಪಾತ್ರನಾಗುವ ಆ ಅನುಪಮವಾದ ಅವಕಾಶ ಎಂಬುದನ್ನು ನಾನು ಸರಿಯಾಗಿ ತಿಳಿದುಕೊಳ್ಳಲಿಲ್ಲ.

(೧೫.೧೨.೨೦೦೫ರಂದು ಕೊಲ್ಕತ್ತಾದಲ್ಲಿನ ಕಲಾಮಂದಿರದಲ್ಲಿ, ೨೯.೪.೨೦೦೬ರಂದು ಕೊಲ್ಕತ್ತಾದ ಜ್ಞಾನ ಮಂದಿರದಲ್ಲಿ ಹಾಗೂ ೧೫.೧೨.೨೦೦೬ರಂದು ಕೊಲ್ಕತ್ತಾದ ಬಿರ್ಲಾ ಅಕಾಡೆಮಿಯಲ್ಲಿ ಸ್ವಾಮಿ ಅಸೀಮಾತ್ಮಾನಂದ ಅವರು ಬಂಗಾಳಿಯಲ್ಲಿ ನೀಡಿದ ಭಾಷಣದಿಂದ ಹೆಕ್ಕಿತೆಗೆದ ಭಾಗಗಳು– ಇಂಗ್ಲೀಷಿಗೆ ಅನುವಾದಿಸಿದವರು ಮೋನಿಕಾ ಸೇನ್‌ಗುಪ್ತ ಅವರು.)

* * * *

# ೩೫. ಸ್ವಾಮಿ ರಂಗನಾಥಾನಂದಜೀ ಮಹಾರಾಜ್ ಅವರ ನೆನಪುಗಳು

–ಸ್ವಾಮಿ ಆಸಕ್ತಾನಂದ*

**ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಂ**
**ಯತ್ಕೃಪಾತ್ತಮಹಂ ವಂದೇ ಪರಮಾನಂದಮಾಧವಮ್॥**

(ಯಾರ ಕೃಪೆಯಿಂದ ಮೂಕನು ಮಾತನಾಡುತ್ತಾನೋ, ಕುಂಟನು ಗಿರಿಯನ್ನು ಹತ್ತುತ್ತಾನೋ ಅಂತಹ ಪರಮಾನಂದಮಯನಾದ ಮಾಧವನಿಗೆ ವಂದಿಸುತ್ತೇನೆ)

ನನ್ನ ಕಾಲೇಜು ದಿನಗಳಿಂದ ನಾನು ಶ್ರೀಮತ್ ಸ್ವಾಮಿ ರಂಗನಾಥಾನಂದಜೀಯವರನ್ನು ಬಲ್ಲೆ. ಅಲ್ಲಿಯವರೆಗೆ ಅವರ ಬಗ್ಗೆ ಕೇಳಿದ್ದರೂ, ಅವರ ಸಾರ್ವಜನಿಕ ಉಪನ್ಯಾಸಗಳನ್ನು ಕೇಳಿರಲಿಲ್ಲ. ನಾನು ಅವರ ಮಾತುಗಳನ್ನು ಕೇಳಿದುದು ಅವರು ದೆಹಲಿ ಕೇಂದ್ರದಲ್ಲಿ ಇದ್ದಾಗ. ಅದು ಬಹಳ ವರ್ಷಗಳ ಹಿಂದೆ. ಅವರ ಉಪನ್ಯಾಸಗಳಿಗೆ ದೊಡ್ಡ ದೊಡ್ಡ ವಿದ್ವಾಂಸರುಗಳು ಬರುತ್ತಿದ್ದರು. ಸಭಾಂಗಣವು ತುಂಬಿರುತ್ತಿದ್ದುದರಿಂದ ಜಾಗ ಸಿಗುವುದೇ ದುಸ್ತರವಾಗಿರುತ್ತಿತ್ತು. ಆಗಿನ್ನೂ ದೂರದರ್ಶನವು ಬಂದಿರಲಿಲ್ಲ. ಹೊರಗೆಲ್ಲಾ ಧ್ವನಿವರ್ಧಕಗಳನ್ನು ಅಳವಡಿಸುತ್ತಿದ್ದರು. ಪ್ರಖ್ಯಾತ ವಿದ್ವಾಂಸರು, ವಿಶ್ವವಿದ್ಯಾನಿಲಯದ ಪ್ರೊಫೆಸರ್‌ಗಳು ಅಲ್ಲಿ ಹೊರಗೆ ಹುಲ್ಲುಹಾಸಿನ ಮೇಲೆ ಕುಳಿತುಕೊಳ್ಳುತ್ತಿದ್ದರು. ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಪಂ. ಜವಹರ್ ಲಾಲ್ ನೆಹರೂ ಅವರು ಕೂಡ ಬರುತ್ತಿದ್ದರು. ಬಂದವರು ಪ್ರಧಾನ ಮಂತ್ರಿಗಳಾಗಲಿ, ವಿಶ್ವವಿದ್ಯಾನಿಲಯದ ಕುಲಪತಿಗಳಾಗಲಿ, ಸಮಾಜದ ಇತರ ಘನ ವ್ಯಕ್ತಿಗಳೇ ಆಗಲಿ, ಎಲ್ಲರಿಗೂ ಸ್ವಾಮೀಜಿಯವರ ಮಾತಿನಿಂದ ಏನಾದರೂ ದೊರಕುತ್ತಿತ್ತು. ಅವರ ವ್ಯಕ್ತಿತ್ವವೇ ಹಾಗಿತ್ತು. ಅವರು ಹೋಗಿಬಂದ ಕಡೆಯಲ್ಲೆಲ್ಲಾ ಅವರು ಗುರುತು ಅಚ್ಚಳಿಯದಂತೆ ಉಳಿಯುತ್ತಿತ್ತು. ಮಾನವಜನ್ಮವನ್ನೆತ್ತಿದ ಮೇಲೆ ಈ ಪ್ರಪಂಚದಲ್ಲಿ ನಮ್ಮ ಗುರುತನ್ನು ಬಿಟ್ಟುಹೋಗಬೇಕು ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಸ್ವಾಮಿ ರಂಗನಾಥಾನಂದರು ಅಂತಹ ಒಂದಲ್ಲ, ಅಸಂಖ್ಯಾತ ಗುರುತುಗಳನ್ನು ನಿಮಗಾಗಿ, ನಮ್ಮೆಲ್ಲರಿಗಾಗಿ ಮತ್ತು ಮುಂದಿನ ಪೀಳಿಗೆಗಾಗಿ ಬಿಟ್ಟುಹೋಗಿದ್ದಾರೆ. ಅವರು ಬರೆದಿರುವ ಹಲವು ಪುಸ್ತಕಗಳು ನಮಗೆ ಸ್ಫೂರ್ತಿದಾಯಕವಾಗಿವೆ.

ನಾನು ಅವರ ಭಾಷಣಗಳನ್ನು ಕೇಳಿ ಆಶ್ಚರ್ಯಚಕಿತನಾಗಿದ್ದೆ. ಸ್ವಾಮಿ ಪ್ರೇಮೇಶಾನಂದಜೀ ಅವರು ವಿವೇಕಾನಂದರನ್ನು ಕುರಿತು ಒಂದು ಹಾಡನ್ನು ಬರೆದಿದ್ದರು. ಅದರ ಒಂದು ಸಾಲು ಈ ಅರ್ಥವನ್ನು ಕೊಡುತ್ತಿತ್ತು: 'ಪರಿಚಯವನ್ನು ಹೇಗೆ ಮಾಡಲಿ? ನನ್ನ ಮನಸ್ಸೆಲ್ಲಾ ಶ್ರೀ ರಾಮಕೃಷ್ಣರಿಂದ ತುಂಬಿದೆ.' ಸ್ವಾಮಿ ರಂಗನಾಥಾನಂದಜೀಯವರ ಭಾಷಣವನ್ನು ಕೇಳಿದ ಅಂದಿನ ಯುವಕರ ಹಾಡು ಹೀಗಿತ್ತು: 'ಪರಿಚಯವನ್ನು ಹೇಗೆ ಮಾಡಲಿ? (ಅವರ) ಮನಸ್ಸೆಲ್ಲಾ ವಿವೇಕಾನಂದಮಯವಾಗಿದೆ.' ಸ್ವಾಮಿ ರಂಗನಾಥಾನಂದರು ಸ್ವಾಮಿ ವಿವೇಕಾನಂದರ ವೇದಾಂತವನ್ನು ಎಲ್ಲರಿಗೂ ಉಪದೇಶಿಸುತ್ತಿದ್ದರು. ಅವರ ಮಾತುಗಳು ಎಷ್ಟು ಸರಳವಾಗಿರುತ್ತಿದ್ದವೆಂದರೆ ಸಾಮಾನ್ಯ ಜನಗಳನ್ನು ಕೂಡ ಅವು ತಟ್ಟುತ್ತಿದ್ದವು. ಅವರು ಕಷ್ಟಕರವಾದ ಪದಗಳನ್ನು ಉಪಯೋಗಿಸದೇ ಸರಳವಾದ ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದರು. ಆ ಕಾಲದ ಹಲವಾರು ಉಪನ್ಯಾಸಕಾರರು

---

* ನರೇಂದ್ರಪುರದಲ್ಲಿರುವ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿ ಮತ್ತು ಹಿರಿಯ ಸಂನ್ಯಾಸಿ.

ಉಪಯೋಗಿಸುತ್ತಿದ್ದ ಭಾಷೆ ಕಬ್ಬಿಣದ ಕಡಲೆಯಂತಿರುತ್ತಿತ್ತು. ಸ್ವಾಮಿ ರಂಗನಾಥಾನಂದಜೀಯವರು ಮಾತ್ರ ಹಾಗೆ ಮಾಡುತ್ತಿರಲಿಲ್ಲ.

ಮಹಾರಾಜ್ ಅವರು ಎಲ್ಲರೊಂದಿಗೆ ಸರಳವಾಗಿ ಬೆರೆಯುತ್ತಿದ್ದರು. ಅವರಿಗೆ ಚಿಕ್ಕವರು ದೊಡ್ಡವರು ಎಂಬ ಭೇದವಿರುತ್ತಿರಲಿಲ್ಲ. ನಾನೊಮ್ಮೆ ದೆಹಲಿಯ ಕೇಂದ್ರಕ್ಕೆ ಹೋದೆ. ಅಲ್ಲಿ ಉಳಿದುಕೊಳ್ಳಲು ನನಗೊಂದು ಕೊಠಡಿಯನ್ನು ಕೊಟ್ಟಿದ್ದರು. ಸಂಜೆ ೭.೪೫ಕ್ಕೆ ಮಹಾರಾಜ್ ಅವರೇ ನನ್ನ ರೂಮಿಗೆ ಬಂದರು. ನಾನು ತಕ್ಷಣ ಎದ್ದುನಿಂತೆ. ಅವರು ಕುಳಿತುಕೊ, ಕುಳಿತುಕೊ ವಿಷ್ಣು' ಎಂದರು. ನಾನು ಅವರಿಗೆ ಕುಳಿತುಕೊಳ್ಳಲು ಕುರ್ಚಿಯನ್ನು ಕೊಟ್ಟೆ. ಅದರಲ್ಲಿ ಕೂರದೆ, ಅವರು ನನ್ನ ಮಂಚದ ಮೇಲೆಯೇ ಕುಳಿತರು. ನಾನು 'ಇದೇನು ಮಹಾರಾಜ್, ತಾವು ನನ್ನ ಮಂಚದ ಮೇಲೆ ಕೂರುವುದೇ?' ಎಂದೆ. ಅವರು ಅದರ ಬಗ್ಗೆ ತಲೆಕೆಡಿಸಿಕೊಳ್ಳದೆ, ಮಂಚದ ಮೇಲೆ ಕುಳಿತೇ ನನ್ನೊಡನೆ ಮಾತನಾಡಿದರು. ಮಾತು ಯಾವ ಗಹನವಾದ ವಿಷಯದ ಮೇಲೂ ಇರದೆ, ಕೇವಲ ಉಭಯಕುಶಲೋಪರಿಯ ರೀತಿಯದಾಗಿತ್ತು. ಅವರು 'ಹೇಗಿದ್ದೀಯಾ? ನಿನ್ನ ಹಾಸಿಗೆ ಮೃದುವಾಗಿಲ್ಲ' ಎಂದರು. ನಾನು 'ಹಾಸಿಗೆ ಗಟ್ಟಿಯಾಗಿರುವುದೇ ಒಳ್ಳೆಯದು, ಮಹಾರಾಜ್' ಎಂದೆ. ಅದಕ್ಕೆ ಅವರು 'ಹಾಗಲ್ಲ, ಹಾಸಿಗೆ ಯಾವಾಗಲೂ ಮೃದುವಾಗಿರಬೇಕು. ಇದು ಬಹಳ ಗಟ್ಟಿಯಾಗಿದೆ' ಎಂದರು. ಅವರ ಪ್ರೀತಿ ಅದ್ಭುತವಾಗಿರುತ್ತಿತ್ತು.

ಹೀಗಾಗಿ ನಾನು ಚಿಕ್ಕವನಾಗಿದ್ದಾಗಿನಿಂದ ಅವರನ್ನು ಬಲ್ಲೆ. ಕೆಲವು ಕಾಲ ನಾನು ಅವರೊಡನೆ ಸಂಕೋಚವಿಲ್ಲದೆ ಬೆರೆಯುತ್ತಿದ್ದೆ. ನಾನು ಸುಮಾರು ಒಂಬತ್ತು ವರ್ಷಗಳ ಕಾಲ ಹಾಲಿವುಡ್‌ನಲ್ಲಿದ್ದೆ. ಆ ಅವಧಿಯಲ್ಲಿ ಮಹಾರಾಜ್ ಅವರು ಆರು ಬಾರಿ ಅಲ್ಲಿಗೆ ಬಂದಿದ್ದರು. ಅವರು ನನ್ನ ಕೊಠಡಿಯಲ್ಲೇ ತಂಗುತ್ತಿದ್ದರು. ಮೊದಮೊದಲು ಅಲ್ಲಿಗೆ ಬಂದಾಗ ಅವರು ಅಲ್ಲಿನ ಹಲವು ಸ್ಥಳಗಳನ್ನು ನೋಡಿರಲಿಲ್ಲ. 'ನೀನು ಕೆಲವು ಸ್ಥಳಗಳಿಗೆ ನನ್ನನ್ನು ಕರೆದುಕೊಂಡು ಹೋಗಬೇಕು' ಎಂದರು. 'ಇಲ್ಲಿ ಹಲವಾರು ಜಾಗಗಳಿವೆ– ಫನ್ ಸೆಂಟರ್, ಮಂದಿರ, ಟ್ರಬುಕೊ ಆಶ್ರಮ ಮತ್ತು ಹಾಲಿವುಡ್. ಇವುಗಳಲ್ಲಿ ನೀವು ಎಲ್ಲಿಗೆ ಹೋಗಬೇಕು. ಹಾಗೆ ಹೋದರೆ ಸ್ವಾಮಿ ಪ್ರಭವಾನಂದಜೀಯವರು ಏನೂ ತಿಳಿದುಕೊಳ್ಳುವುದಿಲ್ಲವೆ?' ಎಂದೆ. ಅದಕ್ಕೆ ಮಹಾರಾಜ್ ಅವರು 'ನಾನು ಹೋದರೆ ಅವರೇನೆಂದುಕೊಳ್ಳುತ್ತಾರೆ? ನಾನು ಬೇರೆಯ ಕಡೆಗೂ ಹೋಗುತ್ತೇನೆ. ಬೆಟ್ಟದ ಮೇಲೆ ಸ್ವಾಮಿ ಪರಮಾನಂದಜೀಯವರು ಸ್ಥಾಪಿಸಿರುವ ಆಶ್ರಮಕ್ಕೂ ಹೋಗುತ್ತೇನೆ' ಎಂದರು. ನಾನು 'ಹೇಗಾದರೂ ತಾವು ಸ್ವಾಮಿ ಪ್ರಭವಾನಂದಜೀಯವರಿಗೆ ದಯವಿಟ್ಟು ಇದನ್ನು ತಿಳಿಸಿ' ಎಂದು ಕೇಳಿಕೊಂಡೆ. ಬಳಿಕ ನಾನು ಅವರನ್ನು ಸ್ವಾಮಿ ಪ್ರಭವಾನಂದಜೀಯವರ ಬಳಿಗೆ ಕರೆದುಕೊಂಡು ಹೋದೆ. ಸ್ವಾಮಿ ರಂಗನಾಥಾನಂದಜೀಯವರು ಸ್ವಾಮಿ ಪ್ರಭವಾನಂದಜೀಯವರನ್ನು ಕೇಳಿದರು 'ಮಹಾರಾಜ್, ಲಾ ಕ್ರೆಸೆಂಟಾದಲ್ಲಿರುವ ಆನಂದಾಶ್ರಮಕ್ಕೆ ನಾನು ಹೋಗಿ ಬರಬಹುದೇ?' ಎಂದು ಕೇಳಿದರು. ಸ್ವಾಮಿ ಪ್ರಭವಾನಂದಜೀಯವರು 'ನಿಮಗೆ ಬೇಕಿದ್ದರೆ ಹೋಗಿಬನ್ನಿ' ಎಂದು ಅವರಿಗೆ ಹೇಳಿ, ನನ್ನ ಕಡೆ ತಿರುಗಿ 'ಆಸಕ್ತಾನಂದ, ನೀವೂ ಇವರ ಸಂಗಡ ಹೋಗಿಬನ್ನಿ' ಎಂದರು.

ನಾನು ಸ್ವಾಮಿ ರಂಗನಾಥಾನಂದಜೀಯವರನ್ನು ಆನಂದಾಶ್ರಮಕ್ಕೆ ಕರೆದುಕೊಂಡು ಹೋದೆ. ನಾವು ಅಲ್ಲಿ ಸುಮಾರು ಒಂದು ಗಂಟೆಯ ಕಾಲ ಇದ್ದೆವು. ಅಲ್ಲಿಯ ತೋಟಗಾರನೂ ಸೇರಿದಂತೆ ಆಶ್ರಮದಲ್ಲಿದ್ದ ಎಲ್ಲರೊಡನೆ ಮಹಾರಾಜ್ ಅವರು ಮಾತನಾಡಿದರು. ಮಹಾರಾಜ್ ಅವರು ಕುರ್ಚಿಯ ಮೇಲೆ ಕುಳಿತಿದ್ದರು. ತೋಟದ ಮಾಲಿ ದೂರದಲ್ಲಿ ಕುಳಿತಿದ್ದ. ಮಹಾರಾಜ್‌ರವರು ಅವನನ್ನು 'ಅಷ್ಟು ದೂರದಲ್ಲೇಕೆ ಕುಳಿತಿದ್ದೀಯೆ, ಹತ್ತಿರ ಬಾ' ಎಂದು ಕರೆದರು. 'ನಾನು ಬಂದಾಗ ನೀನು ತೋಟದ ಕೆಲಸವನ್ನು ಮಾಡುತ್ತಿರಲಿಲ್ಲವೇ?' ಎಂದು ಕೇಳಿದರು. ಆತ ತಾನು ಆಶ್ರಮದ ತೋಟವನ್ನು ನೋಡಿಕೊಳ್ಳುತ್ತಿದ್ದೇನೆ ಎಂದು ಹೇಳಿದ. ಅದನ್ನು ಕೇಳಿದ

ಮಹಾರಾಜ್ ಅವರು 'ನೋಡು, ಈ ಆಶ್ರಮದಲ್ಲಿರುವ ಮರ, ಹೂವು, ಬಳ್ಳಿ ಎಲ್ಲವೂ ದೇವರ ಸೇವೆಯನ್ನು ಮಾಡುತ್ತಿವೆ. ನೀನು ಅವುಗಳನ್ನು ನೋಡಿಕೊಳ್ಳುತ್ತಿದ್ದೀಯೆ. ಆದ್ದರಿಂದ ನೀನೂ ದೇವರ ಸೇವಕನೇ' ಎಂದರು. ಅವರ ಈ ಮಾತುಗಳಿಂದ ಅವರ ಮನೋಭಾವವನ್ನು ಯಾರಾದರೂ ಅರ್ಥಮಾಡಿಕೊಳ್ಳಬಹುದು.

ಮಹಾರಾಜ್ ಅವರು ಎಂತಹ ಕಷ್ಟದ ಪರಿಸ್ಥಿತಿಯಲ್ಲಿ ತಮ್ಮ ವಿದ್ಯಾಭ್ಯಾಸ ಮಾಡಿದರು ಎಂಬುದು ನಿಮಗೆ ಗೊತ್ತು. ಸಾಮಾನ್ಯ ಮನುಷ್ಯರು ಕಷ್ಟಪಟ್ಟು ದುಡಿದು ಮೇಲೆ ಬಂದು ಹೇಗೆ ಮಹಾತ್ಮರಾಗಬಲ್ಲರು ಎಂಬುದಕ್ಕೆ ಅವರ ಜೀವನವೇ ಒಂದು ಉತ್ತಮ ಉದಾಹರಣೆ. ಒಂದು ದಿನ ಅವರು ನನಗೆ 'ನಾನು ಸ್ವಾಮಿ ವಿವೇಕಾನಂದರ ಸಮಗ್ರ ಕೃತಿಗಳನ್ನು ಕಡಿಮೆ ಎಂದರೆ ನೂರು ಸಲವಾದರೂ ಓದಿದ್ದೇನೆ' ಎಂದರು. ಅವರಿಗೆ ಆ ಕೃತಿಗಳೆಲ್ಲಾ ಬಾಯಿಪಾಠವಾಗಿರಬೇಕು ಎನಿಸಿತು. ಅವರು ತಮ್ಮ ಭಾಷಣದಲ್ಲಿ ಆ ಕೃತಿಗಳಿಂದ ಪುಟಗಟ್ಟಲೆ ಉದ್ಧರಿಸುತ್ತಿದ್ದರು. ಅವರ ನೆನಪಿನ ಶಕ್ತಿ ಅಗಾಧವಾಗಿತ್ತು. ಅವರು ತಮ್ಮ ದೇಹಾಂತ್ಯದವರೆಗೆ ಆ ಶಕ್ತಿಯನ್ನು ಉಳಿಸಿಕೊಂಡಿದ್ದರು.

ಮಹಾರಾಜ್ ಅವರು ಡಿಸ್ನಿಲ್ಯಾಂಡಿಗೆ ಹೋದರು. ಅಲ್ಲಿನ ಹಲವಾರು ವಿಷಯಗಳು ಮನಮೋಹಕವಾಗಿದ್ದವು. ಆದರೆ ಅವೆಲ್ಲವೂ ಕೃತಕವಾದವುಗಳು. ಅವುಗಳಲ್ಲಿ ಒಂದು ಕಡಲ್ಗಳ್ಳರು ಹಡಗೊಂದನ್ನು ಲೂಟಿ ಮಾಡುವುದು. ಅವರು ಹಡಗನ್ನು ಆಕ್ರಮಿಸುವುದು, ಅದರ ರಕ್ಷಣೆಗಾಗಿ ಹಡಗಿನವರು ಹೊಡೆದಾಡುವುದು, ಇವೆಲ್ಲವನ್ನೂ ಚಿತ್ರದ ಮೂಲಕ ತೋರಿಸುತ್ತಿದ್ದರು. ಒಂದು ದೃಶ್ಯದಲ್ಲಿ, ಆ ಹಡಗು ಒಂದು ಕಡಲ್ಗಾಲುವೆಯ ಮೂಲಕ ಹೋಗುತ್ತಿರುತ್ತದೆ. ಇದ್ದಕ್ಕಿದ್ದಂತೆ ಭಯಂಕರ ಸ್ಫೋಟವಾಗುತ್ತದೆ ಮತ್ತು ಅದೆಲ್ಲಾ ನಿಜವೋ ಎಂಬಂತೆ ಹೊಗೆ ತುಂಬಿಕೊಳ್ಳುತ್ತದೆ. ಅದೆಲ್ಲ ಯಂತ್ರಗಳಿಂದ ಸೃಷ್ಟಿಯಾಗಿದ್ದರೂ, ನಿಜವಾದುವೆಂಬಂತೆಯೇ ತೋರುತ್ತಿದ್ದವು. ಇದನ್ನೆಲ್ಲಾ ನೋಡುತ್ತಿದ್ದ ಮಹಾರಾಜ್ ಅವರು ಆಶ್ಚರ್ಯದಿಂದ ಉದ್ಗರಿಸಿದರು. 'ನೋಡು, ಎಷ್ಟು ನೈಜವಾಗಿವೆ ಅವು, ಎಷ್ಟು ಸಹಜವಾಗಿ ಮಾಡಿದ್ದಾರೆ.' ಅವರು ಚಿಕ್ಕಮಗುವಿನಂತೆ ಸಂತೋಷಪಟ್ಟರು. ನಾನು 'ಇದನ್ನೆಲ್ಲಾ ಅವರು ಹೇಗೆ ಮಾಡುತ್ತಾರೆ? ಮಹಾರಾಜ್ ಇದೆಲ್ಲ ಭಗವಂತನ ಸೃಷ್ಟಿ' ಎಂದೆ. ಅದಕ್ಕೆ ಮಹಾರಾಜ್ ಅವರು, 'ಹೌದು, ನಿಜವಾಗಿ ಇದೆಲ್ಲಾ ಭಗವಂತನ ಸೃಷ್ಟಿಯೇ. ಮೊದಲು ಅವನು ಮನುಷ್ಯರಿಗೆ ಬುದ್ಧಿಯನ್ನು ಸೃಷ್ಟಿಸಿ ಕೊಟ್ಟ. ಅದರಿಂದಾಗಿ ಇವೆಲ್ಲ ಬಂದಿವೆ' ಎಂದರು.

ನಾನು ಗಮನಿಸಿದಂತೆ, ಮಹಾರಾಜ್ ಅವರು ಭಗವಂತನೊಂದಿಗೆ ಎಲ್ಲಕ್ಕೂ ಸಂಬಂಧವನ್ನು ಕಲ್ಪಿಸುತ್ತಿದ್ದರು. ಅವರು ತಮ್ಮ ಅನನುಕರಣೀಯ ರೀತಿಯಲ್ಲಿ ವೇದಾಂತದ 'ಸರ್ವಂ ಖಲ್ವಿದಂ ಬ್ರಹ್ಮ' (ನಿಜವಾಗಿ ಈ ವಿಶ್ವವೆಲ್ಲವೂ ಬ್ರಹ್ಮವೇ) ಎಂಬ ಮಹಾವಾಕ್ಯದ ಪ್ರಕಾರ ಇವೆಲ್ಲವೂ ಬ್ರಹ್ಮವೇ ಎಂಬಲ್ಲಿಗೆ ತಮ್ಮ ಮಾತನ್ನು ತಂದು ನಿಲ್ಲಿಸುತ್ತಿದ್ದರು.

ಅವರು ಹಾಲಿವುಡ್‌ನಲ್ಲಿದ್ದಾಗ ರಾತ್ರಿಯ ವೇಳೆ ನಾನು ಅವರೊಡನೆ ಅವರ ಕೊಠಡಿಯಲ್ಲಿ ಸಂಭಾಷಿಸುತ್ತಿದ್ದೆ. ಹಲವು ದಿನ ರಾತ್ರಿ ಬಹಳ ಹೊತ್ತಿನವರೆಗೆ ನಾನು ಅಲ್ಲಿರುತ್ತಿದ್ದೆ. ಉಳಿದ ಸಂನ್ಯಾಸಿಗಳು ತಮ್ಮ ತಮ್ಮ ಕೊಠಡಿಗಳಿಗೆ ಹಿಂದಿರುಗಿದ್ದರೂ ನಾನು ಮಾತ್ರ ಮಹಾರಾಜ್ ಅವರ ಬಳಿಯೇ ಇರುತ್ತಿದ್ದೆ. ಕೆಲವು ಬಾರಿ ನಾನು ಅವರನ್ನು 'ಮಹಾರಾಜ್, ನೀವು ಮಲಗುವುದಿಲ್ಲವೇ? ಮಲಗುವುದು ಹೊತ್ತಾದರೆ, ಬೆಳಗ್ಗೆ ಬೇಗ ಏಳುವುದಕ್ಕೆ ತೊಂದರೆಯಾಗುವುದಿಲ್ಲವೇ?' ಎಂದು ಕೇಳುತ್ತಿದ್ದೆ. ಆಗ ಅವರು 'ಸರಿ ಹಾಗಾದರೆ, ಮಲಗುತ್ತೇನೆ' ಎಂದು ಹೇಳಿ ಆಗ ಮಲಗಲು ಹೋಗುತ್ತಿದ್ದರು. ನಮ್ಮಿಬ್ಬರ ನಡುವಿನ ಸಂಬಂಧ ಅಷ್ಟು ಆಪ್ತವಾಗಿತ್ತು. ಅವರು ರಾಮಕೃಷ್ಣ ಸಂಘದ ಅಧ್ಯಕ್ಷರಾದಮೇಲೂ ಈ ಸಂಬಂಧ ಇದೇ ರೀತಿ ಮುಂದುವರಿದಿತ್ತು. ನಾನು ಬೇಲೂರು ಮಠದಲ್ಲಿ ಅವರನ್ನು ನೋಡಲು ಹೋಗುವಾಗ ಎಷ್ಟೋ ಬಾರಿ 'ನಾನು ಹೀಗೆ ಮಹಾರಾಜ್ ಅವರನ್ನು

ಅನೌಪಚಾರಿಕವಾಗಿ ಭೇಟಿಮಾಡುತ್ತಿದ್ದರೆ ಬೇರೆಯವರು ಏನೆಂದುಕೊಳ್ಳುತ್ತಾರೆ. ಅವರು ಮೊದಲಿನ ಹಾಗೆಯೇ ನನ್ನನ್ನು ಅಪ್ಪಿಕೊಂಡರೆ ಅವರ ಬಳಿಯಿರುವ ಅವರ ಸಹಾಯಕರು ಏನೆಂದುಕೊಂಡಾರು' ಎಂಬ ಅಳುಕು ಕಾಡುತ್ತಿತ್ತು. ಕಾರಣ, ನನ್ನ ಬಗ್ಗೆ ಮಹಾರಾಜ್ ಅವರ ಪ್ರೀತಿ ಸ್ವಲ್ಪವೂ ಕುಂದಿರಲಿಲ್ಲ.

ಅವರು ಹಾಲಿವುಡ್‌ನ ಸುಂದರವಾದ ಮಂದಿರದಲ್ಲಿ ಧ್ಯಾನ ಮಾಡುತ್ತಿದ್ದುದನ್ನು ನೋಡಿದ್ದೇನೆ. ಪದ್ಮಾಸನದಲ್ಲಿ ನೆಟ್ಟಗೆ ಕುಳಿತು ಒಂದು ಗಂಟೆಗೂ ಹೆಚ್ಚು ಕಾಲ ಕುಳಿತು ಧ್ಯಾನ ಮಾಡುತ್ತಿದ್ದರು. ಹಾಗೆ ಕುಳಿತಿದ್ದಾಗ ಅವರ ಶರೀರ ಸ್ವಲ್ಪವೂ ಅಲ್ಲಾಡುತ್ತಿರಲಿಲ್ಲ. ಒಂದು ಬಾರಿ ಅಲ್ಲಿನ ಸಂನ್ಯಾಸಿ ಸೋದರರೆಲ್ಲರೂ ಒಬ್ಬೊಬ್ಬರಾಗಿ ಮಂದಿರದಿಂದ ಹೋದರೂ, ಮಹಾರಾಜ್ ಅವರು ಮಾತ್ರ ನಿಶ್ಚಲವಾಗಿ ಕುಳಿತು ಧ್ಯಾನ ಮಾಡುತ್ತಿದ್ದರು. ನಾನು ಅವರ ಹಿಂಬದಿಯಲ್ಲಿಯೇ ಕುಳಿತಿದ್ದೆ. ಹಾಲಿವುಡ್‌ನಲ್ಲಿ ಸಂಜೆ ೭.೩೦ಕ್ಕೆ ಸರಿಯಾಗಿ ರಾತ್ರಿ ಊಟದ ಗಂಟೆ ಬಾರಿಸಲ್ಪಡುತ್ತಿತ್ತು. ಆ ಮಂದಿರವನ್ನು ಮುಚ್ಚಲು ಅಲ್ಲಿನವರು ಚಡಪಡಿಸುತ್ತಿದ್ದರು. ಆದರೆ, ಕಲ್ಲಿನಂತೆ ಕುಳಿತು ಧ್ಯಾನಮಾಡುತ್ತಿದ್ದ ಮಹಾರಾಜ್ ಅವರ ಧ್ಯಾನಕ್ಕೆ ಭಂಗತರಲು ನಾನು ಇಷ್ಟಪಡಲಿಲ್ಲ. ಅವರಾಗಿಯೇ ಏಳುವುದನ್ನು ಕಾಯುತ್ತಿದ್ದೆ. ಆ ಮಂದಿರದವರೊಬ್ಬರು ನನ್ನ ಬಳಿಗೆ ಬಂದು ಕಿವಿಯಲ್ಲಿ ಹೊತ್ತಾಗುತ್ತಿದೆ ಎಂದು ಪಿಸುಗುಟ್ಟಿದರು. ನಾನು 'ಆದರೆ ಏನು? ನಾನು ಮಂದಿರದ ಬಾಗಿಲನ್ನು ಹಾಕುತ್ತೇನೆ. ನೀವು ಹೋಗಬಹುದು. ಮಹಾರಾಜ್ ಅವರು ನಮ್ಮ ಅತಿಥಿ. ಅವರು ಧ್ಯಾನ ಮುಗಿಸಿದ ಬಳಿಕವೇ ನಾವು ಊಟವನ್ನು ಮಾಡುತ್ತೇವೆ' ಎಂದೆ. ನಾನು ಗಮನಿಸಿದ ಹಾಗೆ ಮಹಾರಾಜ್ ಅವರು ಒಂದು ಗಂಟೆ ಹದಿನೈದು ನಿಮಿಷಗಳಷ್ಟು ಕಾಲ ಧ್ಯಾನ ಮಾಡುತ್ತಿದ್ದರು. ಅವರು ಕುಳಿತು ಧ್ಯಾನ ಮಾಡುತ್ತಿದ್ದ ಮಂದಿರದ ಹಾಗೆಯೇ, ಅವರ ಧ್ಯಾನವು ಕೂಡ ಅದ್ಭುತವಾಗಿತ್ತು.

ಹಾಲಿವುಡ್‌ನಿಂದ ಸುಮಾರು ೮೦ ಮೈಲಿ ದೂರದಲ್ಲಿರುವ ಸಂತ ಬಾರ್ಬರಾ ಎಂಬ ಸುಂದರವಾದ ಊರಿಗೆ ಕರೆದುಕೊಂಡುಹೋದೆ. ಅಲ್ಲಿನ ನಮ್ಮ ಆಶ್ರಮವನ್ನು ತೋರಿಸಿದ ಮೇಲೆ ಅಲ್ಲಿಯೇ ಇದ್ದ ಕಾನ್ವೆಂಟಿಗೆ ಅವರನ್ನು ಕರೆದೊಯ್ದೆ. ಸಂತ ಬಾರ್ಬರಾಗೆ ಹೋಗುವಾಗ, ಫೆಸಿಫಿಕ್ ಸಾಗರದ ದಂಡೆಯಮೇಲೆ ನಡೆಯುತ್ತಾ ನಾನು ಹೇಳಿದೆ 'ಮಹಾರಾಜ್, ಈ ಪರ್ವತಶ್ರೇಣಿ ಹಿಮಾಲಯಕ್ಕಿಂತ ಚಿಕ್ಕದಾದರೂ, ಹಿಮಾಲಯಕ್ಕಿಂತ ಹಳೆಯದು' ಎಂದೆ. 'ನಿನಗೆ ಹೇಗೆ ಗೊತ್ತು?' ಎಂದು ಕೇಳಿದರು. 'ನೀವು ಗಣೇಶ್ ಅವರನ್ನು ಕೇಳಿ' ಎಂದೆ. ಗಣೇಶ್ ಅವರು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಲ್ಲಿ ಭೂಗರ್ಭಶಾಸ್ತ್ರದ ಪ್ರೊಫೆಸರ್ ಆಗಿದ್ದರು. ಮಹಾರಾಜ್ ಅವರು 'ಈ ಪರ್ವತಗಳು ಹಿಮಾಲಯಕ್ಕಿಂತ ಹಳೆಯವು ಎಂಬ ಹೊಸ ವಿಷಯವನ್ನು ನಾನು ಇಂದು ಕಲಿತೆ' ಎಂದರು.

ಸಂತ ಬಾರ್ಬರಾದಲ್ಲಿನ ಸಂನ್ಯಾಸಿಗಳ ನಿವಾಸದಲ್ಲಿ ಒಂದು ರಾತ್ರಿ ಮಹಾರಾಜ್ ಅವರು ತಂಗಿದ್ದರು. ಅವರಿದ್ದ ಜಾಗದಿಂದ ಪೆಸಿಫಿಕ್ ಸಾಗರವನ್ನು ನೋಡಬಹುದಾಗಿದ್ದಿತು. ಒಂದು ಕಡೆ ಸಾಗರ, ಮತ್ತೊಂದು ಕಡೆ ಪರ್ವತಗಳು– ಎಂತಹ ರಮಣೀಯ ದೃಶ್ಯ. ಸಂತ ಬಾರ್ಬರದ ಪರ್ವತದ ಮೇಲಿನಿಂದ ನೋಡಿದರೆ ಆ ದೃಶ್ಯ ಮತ್ತಷ್ಟು ಮನಮೋಹಕವಾಗಿ ಕಾಣಿಸುತ್ತಿತ್ತು. ಆದರೆ ಈಗ ಅಲ್ಲಿ ಹಲವಾರು ಕಟ್ಟಡಗಳನ್ನು ಕಟ್ಟಿರುವುದರಿಂದ ಆಶ್ರಮದಿಂದ ಹಿಂದಿನ ಸುಂದರ ದೃಶ್ಯಗಳನ್ನು ಕಾಣುವುದು ಸಾಧ್ಯವಿಲ್ಲ. ಈ ಎಲ್ಲಾ ಸ್ಥಳಗಳಲ್ಲಿ ನಾನು ಮಹಾರಾಜ್ ಅವರೊಂದಿಗೆ ಹಲವು ದಿನಗಳನ್ನು ಕಳೆದೆ.

ಒಂದು ದಿನ ಮಹಾರಾಜ್ ಅವರು ಸ್ವಾಮಿ ಪ್ರಭವಾನಂದಜೀಯವರಿಗೆ ಹೇಳಿದರು: 'ಸ್ವಾಮೀಜಿ, ನಾನು ಸ್ಯಾನ್‌ಫ್ರಾನ್ಸಿಸ್ಕೊಗೆ ಆಶ್ರಮಕ್ಕೆ ಹೋಗಿಬರ ಬೇಕೆಂದಿದ್ದೇನೆ.' ಅದಕ್ಕೆ ಅವರು ಎಷ್ಟು ದಿನಗಳ ಮಟ್ಟಿಗೆ ಎಂದು ಕೇಳಿದಾಗ ಮಹಾರಾಜ್ ಅವರು ಸುಮಾರು ಇಪ್ಪತ್ತು ದಿನಗಳು ಎಂದರು. ಪ್ರಭವಾನಂದಜೀಯವರು ಹೋಗಿಬನ್ನಿ ಎಂದರು.

ನಾನು ಮಹಾರಾಜ್ ಅವರ ಸಂಗಡ ಸ್ಯಾನ್‌ಫ್ರಾನ್ಸಿಸ್ಕೊಗೆ ಹೋದೆ. ನಾವು ಒಲೆಮಾದಲ್ಲಿರುವ ಕಾನ್ವೆಂಟಿಗೆ ಹಾಗೂ ಆಶ್ರಮಕ್ಕೆ ಮತ್ತು ತಾಹೊ ಸರೋವರಕ್ಕೆ ಭೇಟಿಕೊಟ್ಟೆವು. ಅದು ಏಳು ಮೈಲಿ ಉದ್ದ ಹಾಗೂ ಮೂರು ಮೈಲಿ ಅಗಲ ಇರುವ ಒಂದು ಬೃಹತ್ ಸರೋವರ. ಸರೋವರದಲ್ಲಿ ವೇಗವಾಗಿ ಚಲಿಸುವ ದೋಣಿಗಳಲ್ಲಿ ಪ್ರವಾಸಿಗರು ಹೋಗುತ್ತಿದ್ದರು. ಆಶ್ರಮದ ಇತರ ಕೆಲವು ಸಂನ್ಯಾಸಿ ಸೋದರರೊಂದಿಗೆ ತಾವೂ ದೋಣಿಯಲ್ಲಿ ಹೋಗಬೇಕು ಎಂದು ಮಹಾರಾಜ್ ಅವರು ಬಯಸಿದರು. ಸ್ವಾಮಿ ಪ್ರಬುದ್ಧಾನಂದಜಿ ಮತ್ತು ಸ್ವಾಮಿ ಸ್ವಾಹಾನಂದಜೀ ಅವರೂ ಜೊತೆಯಲ್ಲಿ ಇದ್ದರು. ನಾವೆಲ್ಲಾ ದೋಣಿಯಲ್ಲಿ ಕುಳಿತೆವು. ಬಹುಶಃ ನಾವು ಒಂದು ಮೈಲಿಯಷ್ಟು ಹೋಗಿರಬಹುದು, ಮಹಾರಾಜ್ ಅವರು ತಕ್ಷಣ ಸರೋವರಕ್ಕೆ ಧುಮುಕಿದರು. ಅವರ ಹಿಂದೆಯೇ ಅಮೆರಿಕನ್ನರೊಬ್ಬರು ಕೂಡ ನೀರಿಗೆ ಹಾರಿ ಅವರನ್ನು ದೋಣಿಗೆ ಎಳೆದು ತಂದರು. ಅಷ್ಟು ಸ್ವಲ್ಪ ಹೊತ್ತಿನಲ್ಲಿಯೇ ಸಾಕಷ್ಟು ನೀರು ಮಹಾರಾಜ್ ಅವರ ಶ್ವಾಸಕೋಶದೊಳಗೆ ಸೇರಿಕೊಂಡಿತ್ತು. ಅವರ ಎದೆಯನ್ನು ಅಮುಕಿ ಅಮುಕಿ ನೀರನ್ನೆಲ್ಲಾ ಹೊರತೆಗೆಯಲಾಯಿತು. ಶ್ರೀ ರಾಮಕೃಷ್ಣರ ದಯೆ ಅವರನ್ನು ಅಂದು ಬದುಕಿಸಿತು. ಇಲ್ಲದಿದ್ದರೆ, ವೇದಾಂತದ ಬಗ್ಗೆ ಅಧಿಕಾರಯುತವಾಗಿ ಮಾತನಾಡಬಲ್ಲಂತಹ ಮಹಾಮಹಿಮರೊಬ್ಬರನ್ನು ನಾವು ಅಂದು ಕಳೆದುಕೊಳ್ಳಬೇಕಾಗಿತ್ತು.

ಮಹಾರಾಜ್ ಅವರು ವೇದಾಂತದ ಸಂದೇಶವನ್ನು ಸಾರದ ದೇಶವೇ ಇಲ್ಲವೆನ್ನಬಹುದು. ಅವರು ಆಸ್ಟ್ರೇಲಿಯಾ, ಜಪಾನ್, ರಷ್ಯಾ ಮತ್ತು ಗ್ರೀನ್‌ಲ್ಯಾಂಡಿಗೆ ಕೂಡ ಹೋಗಿಬಂದಿದ್ದರು. ಒಂದು ಸಮಯದಲ್ಲಿ, ಅವರನ್ನು ಅರಿಯದವರೇ ಯೂರೋಪ್ ಅಥವಾ ಅಮೇರಿಕಾದಲ್ಲಿ ಇರಲಿಲ್ಲ ಎನ್ನಬಹುದು. ಅವರ ಮಾತನ್ನು ಕೇಳಿದ ಪ್ರತಿಯೊಬ್ಬರೂ ಮಂತ್ರಮುಗ್ಧರಾಗುತ್ತಿದ್ದರು. ಅವರ ಆಧುನಿಕ ವೈಜ್ಞಾನಿಕ ದೃಷ್ಟಿ ನನ್ನನ್ನು ಸಮ್ಮೋಹಗೊಳಿಸಿತ್ತು. ಅವರು ಮಾತನಾಡುವಾಗ ಕಠಿಣ ಪದಗಳನ್ನು ಬಳಸದೆ, ಸರಳವಾದ ಭಾಷೆಯನ್ನು ಉಪಯೋಗಿಸುತ್ತಿದ್ದರು. ಎಂತಹ ಅದ್ಭುತ! ಅವರ ಮಾತು ನಿರರ್ಗಳವಾಗಿ ಹರಿಯುತ್ತಿತ್ತು. ಅವರ ಮಾತನ್ನು ಕೇಳಿದರೆ ದೇವಿ ಸರಸ್ವತಿ ತಾನೇ ಅವರಿಗೆ ಪದಸಂಪತ್ತನ್ನು ಒದಗಿಸುತ್ತಿದ್ದಾಳೋ ಎಂಬಂತೆ ಇರುತ್ತಿತ್ತು.

ಅವರ ಬಾಲ್ಯದಲ್ಲಿ ಅವರ ತಾಯಿ ಒಮ್ಮೆ ಅವರಿಗೆ ಹೇಳಿದ್ದರು: 'ಯಾರ ಬಗ್ಗೆಯೂ ಕಠಿಣವಾಗಿ ಮಾತನಾಡಬೇಡ, ಯಾರೊಂದಿಗೂ ಒರಟಾಗಿ ನಡೆದು ಕೊಳ್ಳಬೇಡ.' ಅದನ್ನು ಕೇಳಿದ ಅವರು 'ಏಕೆ ಮಾತನಾಡಬಾರದು? ಬೇರೆಯವರು ನನ್ನನ್ನು ಬಯ್ದರೂ, ಕೆಟ್ಟ ಮಾತುಗಳನ್ನಾಡಿದರೂ ಕೇಳಿಕೊಂಡು ನಾನು ಸುಮ್ಮನಿರಬೇಕೇ' ಎಂದು ಕೇಳಿದರು. ಅದಕ್ಕೆ ಅವರು ತಾಯಿ 'ಇಲ್ಲ, ಬೇರೆಯವರು ಹಾಗೆ ಮಾಡಿದಾಗಲೂ ನೀನು ಕೆಟ್ಟ ಮಾತನ್ನಾಡಬಾರದು. ಏಕೆ ಗೊತ್ತೆ? ನಿನ್ನ ನಾಲಗೆಯಲ್ಲಿ ತಾಯಿ ಸರಸ್ವತಿ ಇದ್ದಾಳೆ' ಎಂದರು. ಎಂತಹ ಪ್ರಶಂಸನೀಯ ನುಡಿಗಳು! ಮಹಾರಾಜ್ ಅವರು ತಾಯಿಯ ಆ ಉಪದೇಶವನ್ನು ತಮ್ಮ ಜೀವನವಿಡೀ ಪಾಲಿಸಿದರು. ಅವರು ಕಠಿಣವಾಗಿ ಯಾರೊಡನೆಯಾದರೂ ಮಾತನಾಡಿದುದನ್ನು ನಾನು ನೋಡಿಲ್ಲ. ತಮಗೆ ಬೇಕಾದ ಹಾಗೆ ಇರಲಿಲ್ಲವೆಂಬ ಕಾರಣಕ್ಕಾಗಿ ಬಿಸಿ ಕಾಫಿಯನ್ನು ತಮ್ಮ ಸಹಾಯಕರ ತಲೆಯ ಮೇಲೆ ಸುರಿದಂತಹ ಸಂನ್ಯಾಸಿಗಳನ್ನು ನೋಡಿದ್ದೇನೆ. ಆದರೆ, ತಮಗೆ ಕೊಟ್ಟ ಕಾಫಿ ಬಿಸಿಯಾಗಿದೆಯೋ, ತಣ್ಣಗಿದೆಯೋ ಎಂದು ಮಹಾರಾಜ್ ಅವರು ಎಂದೂ ತಲೆಕೆಡಿಸಿಕೊಂಡವರಲ್ಲ. ಅವರಿಗೆ ಬಿಸಿ, ತಂಪು ಎರಡೂ ಒಂದೇ ಆಗಿತ್ತು. ತಮ್ಮ ಮೈಮೇಲೆ ಅವರಿಗೆ ಅರಿವೇ ಇಲ್ಲವೇನೋ ಎಂದು ಎಷ್ಟೋ ಬಾರಿ ನಮಗೆ ಅನಿಸಿದೆ. ಶ್ರೀ ರಾಮಕೃಷ್ಣರ ಕೃಪೆಯಿಂದ ನಮಗೆ ಅಂತಹ ಸಂನ್ಯಾಸಿಗಳ ಒಡನಾಟ ಸಿಕ್ಕಿತ್ತು.

ಸ್ಯಾನ್‌ಫ್ರಾನ್ಸಿಸ್ಕೊನಲ್ಲಿ ನಾವಿದ್ದಾಗ ಒಮ್ಮೆ ಅವರು ನನ್ನನ್ನು ಅವರ ಕೊಠಡಿಗೆ ಕರೆದು 'ನಿನಗೆ ಈಜುಬರುವುದೇ?' ಎಂದು ಕೇಳಿದರು. ನನಗೆ ಈಜು ಚೆನ್ನಾಗಿ ಬರುತ್ತಿತ್ತು. ಬರುತ್ತದೆ ಎಂದೆ. ಮುಂದಿನ ಸಂಭಾಷಣೆ ಹೀಗೆ ಸಾಗಿತ್ತು.

ರಂ.ಆನಂದಜೀ : ನಿನಗೆ ನೀರಿನ ಒಳಗೆ ಈಜಲು ಬರುತ್ತಿದೆಯೇ?

ನಾನು : ಬರುತ್ತದೆ.

ರಂ : ನೀರಿನೊಳಗೆ ಎಷ್ಟು ಹೊತ್ತು ಇರಬಲ್ಲೆ?

ನಾ : ಎರಡು ನಿಮಿಷ ಹತ್ತು ಸೆಕೆಂಡುಗಳು.

ರಂ : ಅಷ್ಟು ಹೊತ್ತು!

ನಾ : ಹೌದು.

ರಂ : ನೀನು ನದಿಗೆ ಅಡ್ಡವಾಗಿ ಈಜಿದ್ದೀಯಾ?

ನಾ : ನಾನು ನನ್ನ ಕಾಲು ಆಚೆಯ ದಡವನ್ನು ಮುಟ್ಟುವಷ್ಟು ಹೋಗಿದ್ದೇನೆ.

ರಂ : ನಿನಗೆ ಈಜಲು ಚೆನ್ನಾಗಿ ಬರುತ್ತದೆ. ನಿನಗೆ ದೋಣಿ ನಡೆಸಲು ಬರುತ್ತದೆಯೇ?

ನಾ : ಬರುತ್ತದೆ.

ರಂ : ಮೀನು ಹಿಡಿಯಲು ಬರುತ್ತದೆಯೇ?

ನಾ : ಬರುತ್ತದೆ.

ರಂ : ಮೀನುಗಳನ್ನು ಹೇಗೆ ಹಿಡಿಯುತ್ತೀಯೆ?

ನಾ : ಗಾಳವನ್ನು ಉಪಯೋಗಿಸಿ ಹಿಡಿಯುತ್ತೇನೆ. ಗಾಳವನ್ನು ಉಪಯೋಗಿಸಿ ದೊಡ್ಡ ದೊಡ್ಡ ಮೀನುಗಳನ್ನು ಹಿಡಿದಿದ್ದೇನೆ.

ರಂ : ನಾನೂ ಮೀನು ಹಿಡಿಯುತ್ತಿದ್ದೆ. ನಿನಗೆ ಗೊತ್ತೇ, ಆದರೆ ನಾನು ಅದನ್ನು ಕೊಲ್ಲುವುದಕ್ಕಲ್ಲ. ಅವುಗಳನ್ನು ಹಿಡಿದು ಮತ್ತೆ ನೀರಿಗೇ ಬಿಡುತ್ತಿದ್ದೆ. ನಿನಗೆ ಗೊತ್ತಿರಬಹುದು. ಕೇರಳದಲ್ಲಿ ಬಹಳಷ್ಟು ಕಾಲುವೆಗಳು, ನದಿಗಳು ಇವೆ. ನಾನು ತುಂಬಾ ಈಜುತ್ತಿದ್ದೆ. ಮೀನಿನಂತೆಯೇ ಈಜುತ್ತಿದ್ದೆ.

ಮಹಾರಾಜ್ ಅವರು ಸಾಗರದಲ್ಲಿ ಈಜಿದ್ದವರು ಮತ್ತು ಭಕ್ತರಿಗೂ ಹಾಗೆಯೇ ಈಜುವ ರೀತಿಯನ್ನು ತೋರಿಸಿದ್ದರು. ಅವರು ಆಧ್ಯಾತ್ಮಿಕ ದೀಕ್ಷೆಯನ್ನು ಕೊಡುತ್ತಿದ್ದರು. ಭೌತಿಕ ಸಾಗರದಲ್ಲಿ ಈಜುವುದು ಹಾಗೂ ಆಧ್ಯಾತ್ಮಿಕ ಸಾಗರದಲ್ಲಿ ಈಜುವುದರ ನಡುವೆ ಅಷ್ಟೇನೂ ವ್ಯತ್ಯಾಸವಿಲ್ಲ. ಈಜುವವರು ಮೊದಲನೆಯದರಲ್ಲಿ ನೀರಿನ ಸಮುದ್ರದಲ್ಲಿ ಇದ್ದರೆ, ಎರಡನೆಯದರಲ್ಲಿ ಆಧ್ಯಾತ್ಮಿಕತೆ, ಪ್ರೇಮ, ಸೌಂದರ್ಯ, ನಿರ್ಮಲತೆ ಮತ್ತು ದಯೆಯ ಸಮುದ್ರದಲ್ಲಿ ಇರುತ್ತಾರೆ ಅಷ್ಟೇ. ಎರಡನೆಯದು ಪರಾನುಭೂತಿಯ ಸಾಗರ. 'ನಿನ್ನ ಮುಕ್ತಿಯಷ್ಟೇ ನಿನ್ನ ಗುರಿಯೇ?' ಎಂದು ಶ್ರೀ ರಾಮಕೃಷ್ಣರು ಸ್ವಾಮಿ ವಿವೇಕಾನಂದರನ್ನು ಕೇಳಿದ್ದರು. ಸ್ವಾಮಿ ವಿವೇಕಾನಂದರು ಬೇರೆಯವರ ಮುಕ್ತಿಗಾಗಿ ಶ್ರಮಿಸಬೇಕೆಂದು ಶ್ರೀ ರಾಮಕೃಷ್ಣರು ಬಯಸುತ್ತಿದ್ದರು. ಮಹಾರಾಜ್ ಅವರು ತಾವು ಕೂಡ ಸಹಸ್ರಾರು ಜನರಿಗೆ ಮುಕ್ತಿಯ ಮಾರ್ಗವನ್ನು ತೋರುವ ಆಶಯವನ್ನು ಹೊಂದಿದ್ದರು. ಈ ಹುಟ್ಟು-ಸಾವುಗಳ ಚಕ್ರವನ್ನು ಮೀರಿ ಹೋಗುವವಮಾರ್ಗವನ್ನು ತೋರಬೇಕೆಂದು ಬಯಸುತ್ತಿದ್ದರು. ತಾವು ಈ ಭವಸಾಗರದಲ್ಲಿ ಈಜುವಂತೆಯೇ, ತಮ್ಮ ಭಕ್ತರನ್ನೂ ಆಚೆಯ ದಡಕ್ಕೆ ಒಯ್ಯಬೇಕೆಂದು ಅಪೇಕ್ಷಿಸುತ್ತಿದ್ದರು. ಆಧ್ಯಾತ್ಮಿಕ ಸಾಗರದಲ್ಲಿ ಅವರೊಬ್ಬ ಪರಿಣತ ಈಜುಗಾರರಾಗಿದ್ದರು. ಗಂಗಾನದಿಯಲ್ಲಾಗಲೀ, ದೊಡ್ಡ ಕೆರೆಯಲ್ಲಾಗಲೀ ಈಜುವಷ್ಟೇ ಸುಲಭವಾಗಿ ಅವರು ಭವಸಾಗರದಲ್ಲೂ ಈಜಬಲ್ಲವರಾಗಿದ್ದರು. ಇತರರನ್ನೂ ಈ ಭವಸಾಗರದಿಂದ ಆಚೆಗೆ ಕೊಂಡೊಯ್ಯುವ ಅವರ ತವಕ ಮತ್ತು ಸಪ್ರೇಮಪ್ರಯತ್ನ ಅನುಪಮವಾಗಿದ್ದಿತು.

ಸ್ವಾಮಿ ರಂಗನಾಥಾನಂದಜೀ ಅವರು ಕೋಮಲ ಭಾವನೆಗಳಿದ್ದ ಒಬ್ಬ ಸರಳ ವ್ಯಕ್ತಿಯಾಗಿದ್ದರು. ಅವರು ಯಾವಾಗಲೂ ಜಾಗರೂಕರಾಗಿರುತ್ತಿದ್ದರು. ಈ ಜಾಗರೂಕತೆಯನ್ನು ಅವರು ತಮ್ಮ ಕಡೆಯ ಗಳಿಗೆಯವರೆಗೂ ಕಾಪಾಡಿಕೊಂಡಿದ್ದರು. ಅವರು ಅನಾರೋಗ್ಯಪೀಡಿತರಾಗಿ ಆಸ್ಪತ್ರೆಯಲ್ಲಿದ್ದಾಗ ಒಮ್ಮೆ ನಾನು ಅವರನ್ನು ನೋಡಲು ಹೋದೆ. ನಾನು ಅವರು ಕೊಠಡಿಯ ಒಳಗೆ ಪ್ರವೇಶಿಸುತ್ತಲೇ ಅವರು 'ವಿಷ್ಣು, ಬಾ, ಬಾ' ಎಂದು ಕರೆದರು. ನನ್ನನ್ನು ಹತ್ತಿರಕ್ಕೆ ಕರೆದು, ನನ್ನ ಕೈಯನ್ನು ಹಿಡಿದುಕೊಂಡು ನನ್ನನ್ನು ಅಪ್ಪಿಕೊಳ್ಳಲು ಪ್ರಯತ್ನಿಸಿದರು. ಆ ಗಳಿಗೆಯಲ್ಲೂ ಅಷ್ಟು ಪ್ರಜ್ಞಾವಂತರಾಗಿದ್ದರು. ಧ್ಯಾನದ ಮೂಲಕ ಪರಮಾತ್ಮನಲ್ಲಿ ಒಂದಾಗದವರಿಗೆ ಇಂತಹ ಪ್ರಜ್ಞಾವಂತಿಕೆ ಲಭಿಸುವುದಿಲ್ಲ. ಅಪ್ರಮತ್ತ ಹಾಗೂ ಅಪ್ರಮದನಾಗಿರುವವನು ತಪ್ಪನ್ನೆಸಗುವುದಿಲ್ಲ ಎಂದು ನಮ್ಮ ಶಾಸ್ತ್ರಗಳು ಹೇಳುತ್ತವೆ. ಅಂತಹವರು ಮಾತ್ರ ಬ್ರಾಹ್ಮಣರೆಂದು ಕರೆಸಿಕೊಳ್ಳಲು ಅರ್ಹರಾಗಿರುತ್ತಾರೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಮುಂದುವರಿದಷ್ಟೂ, ಮನುಷ್ಯನು ದೇವರ ಕಡೆಗೆ ಚಲಿಸುತ್ತಿರುತ್ತಾನೆ. ಅಲ್ಲದೆ ಅವನು ಮಾಡುವ ಪ್ರಮಾದಗಳ ಪರಿಮಾಣವೂ ತಗ್ಗುತ್ತಾ ಹೋಗುತ್ತದೆ. ಅಂತಹವರು ಮಾಡುವ ಎಲ್ಲಾ ಕಾರ್ಯಗಳೂ, ಅದು ಧ್ಯಾನವಾಗಿರ ಬಹುದು, ಸ್ತೋತ್ರಗಳನ್ನು ಪಠಿಸುವುದಾಗಿರಬಹುದು, ಜಪ ಮಾಡುವುದಾಗಿರಬಹುದು, ಎಲ್ಲಾ ಕಾರ್ಯಗಳೂ ಕೊರತೆಗಳಿಲ್ಲದೆ ಪರಿಪೂರ್ಣವಾಗಿರುತ್ತದೆ.

ಮಹಾರಾಜ್ ಅವರು ನಮ್ಮ ಈ ಮಾನವ ವ್ಯಕ್ತಿತ್ವದಲ್ಲಿ ತುಂಬಿದ್ದ ಸ್ಫೂರ್ತಿ ಎಂದೂ ಅಪವ್ಯಯವಾಗುವುದಿಲ್ಲ. ಅವರು ತಮ್ಮ ಭೌತಿಕ ಶರೀರವನ್ನು ಬಿಟ್ಟುಹೋಗಿರುವುದರಿಂದ ಈ ಸ್ಫೂರ್ತಿ ಸ್ವಲ್ಪ ಕುಂದಿದೆಯೆಂಬಂತೆ ಕಂಡರೂ, ಅವರ ಸಂದೇಶ ಭಾರತದ ಚಿರಕಾಲದ ಸಂದೇಶವೇ ಆಗಿರುವದರಿಂದ, ಯಾವಾಗಲೂ ಚಿನ್ಮಯವಾದ ಅಂತರ್ಗಂಗೆಯಂತೆ ಹರಿಯುತ್ತಲೇ ಇರುತ್ತದೆ. ಈ ಸಂದೇಶವು ಮುಂದೆ ಜನ್ಮವೆತ್ತುವವರನ್ನೂ ಸೇರಿದಂತೆ ಇಡೀ ಮಾನವಕುಲಕ್ಕೆ ಸದಾಕಾಲಕ್ಕೂ ಸ್ಫೂರ್ತಿಯ ಚಿಲುಮೆಯಾಗಿಯೇ ಇರುತ್ತದೆ. 'ನಾನು ಪ್ರಸಕ್ತ ಜನಾಂಗವನ್ನಷ್ಟೇ ಅಲ್ಲ, ಮುಂದಿನ ಜನಾಂಗವನ್ನೂ ಹರಸುತ್ತೇನೆ, ನಾನು ಎಲ್ಲರನ್ನೂ ಆಶೀರ್ವದಿಸುತ್ತೇನೆ' ಎಂದು ಶ್ರೀಮಾತೆಯವರು ಹೇಳುತ್ತಿದ್ದರು. 'ಅದು ಅನುಭವದಿಂದ ಅರಿಯಬೇಕಾದುದು; ಅನುಭವವಿಲ್ಲದೆ ಅರಿಯುವುದು ಹೇಗೆ?' ಎಂಬ ಅರ್ಥದ ಹಾಡೊಂದು ಇದೆ. ಹಾಗೆಯೇ, ನಾವು ಮಹಾರಾಜ್ ಅವರ ಬಗ್ಗೆ ಯೋಚಿಸಿದಷ್ಟೂ ನಮ್ಮ ಮನಸ್ಸು ಸಂತೋಷದಿಂದ ತುಂಬುತ್ತದೆ. ಕಾರಣ ಅಂತಹ ಆಶ್ಚರ್ಯಕರವಾದ ವ್ಯಕ್ತಿ ಅವರು. ಅವರು ಎಲ್ಲರಿಗೂ ಅಪರಿಮಿತ ಪ್ರೀತಿಯನ್ನು ತೋರಿಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಅವರಂತಹ ವಾಗ್ಮಿ, ಮಾನವಕುಲದ ಪ್ರೇಮಿಯನ್ನು ಕಾಣುವುದು ಸಾಧ್ಯವಿಲ್ಲ. ಒಮ್ಮೆ ನಾನು ಅವರನ್ನು ದೆಹಲಿಯಲ್ಲಿ ಭೇಟಿಯಾದಾಗ ಹೇಳಿದರು– 'ನೀನು ಕೊಳೆಗೇರಿಯವರಿಗಾಗಿ ಮನೆಗಳನ್ನು ಕಟ್ಟಿಸಿಕೊಡುತ್ತಿರುವೆ ಎಂದು ಕೇಳಿದೆ. ಹೌದು. ಅಂತಹ ಕೆಲಸದ ಅಗತ್ಯ ಬಹಳವಿದೆ. ಅಂತಹ ಕೆಲಸಗಳಲ್ಲಿ ತೊಡಗಿಕೊಳ್ಳುವ ಅವಕಾಶ ಪಡೆದ ನೀನು ನಿಜಕ್ಕೂ ಅದೃಷ್ಟಶಾಲಿ.'

ಮತ್ತೊಮ್ಮೆ ಅವರೊಡನೆ ಮಾತನಾಡುತ್ತಾ 'ವಿವೇಕಾನಂದ ಶಿಶು ಅಭಿವೃದ್ಧಿ ನಿಧಿ' ಎಂಬ ಹೆಸರಿನ ಸಂಚಯ ನಿಧಿಯೊಂದನ್ನು ಸಂಗ್ರಹಿಸುವ ಬಯಕೆಯನ್ನು ನಿವೇದಿಸಿದೆ. ಅದನ್ನು ಕೇಳುತ್ತಲೇ ಮಹಾರಾಜ್ ಅವರು 'ಮಾಡು, ಮಾಡು' ಎಂದು ಹುರಿದುಂಬಿಸಿದರು. ಎಂತಹ ಪ್ರೋತ್ಸಾಹಕರ ನುಡಿಗಳು! ಅಷ್ಟಕ್ಕೇ ನಿಲ್ಲದೆ ಅವರು ತಾವೂ ಅದಕ್ಕಾಗಿ ಹಣವನ್ನು ಸಂಗ್ರಹಿಸುವುದಾಗಿ ತಿಳಿಸಿದರು. ಅವರು ಆಗಾಗ್ಗೆ ಸಂಗ್ರಹಿಸುತ್ತಿದ್ದ ಐದು ಸಾವಿರ, ಹತ್ತು ಸಾವಿರ ರೂಪಾಯಿಗಳ ಮೊತ್ತಗಳು ಈ ನಿಧಿಯನ್ನು ಸಂಗ್ರಹಿಸುವಲ್ಲಿ ನೆರವಾದವು. ಕೆಲವು ವೇಳೆ, ಅಸೀಮಾತ್ಮನಂದಜಿ ಮಹಾರಾಜ್ ಅವರೊಂದಿಗೆ ತಾವು ಸಂಗ್ರಹಿಸಿದ ಹಣವನ್ನು ನರೇಂದ್ರಪುರಕ್ಕೆ ಕಳುಹಿಸುತ್ತಿದ್ದರು. ಮಹಾರಾಜ್ ಅವರ ಆಶೀರ್ವಾದದೊಂದಿಗೆ ಆರಂಭವಾದ ಈ ನಿಧಿಯ ಸಂಗ್ರಹ ಈಗ ಸುಮಾರು ಎಂಬತ್ತು ಲಕ್ಷ ರೂಪಾಯಿಗಳಷ್ಟಾಗಿದೆ ಎಂದು ಹೇಳಿಕೊಳ್ಳುವುದು ನನಗೆ ಹೆಮ್ಮೆಯ ವಿಷಯವಾಗಿದೆ.

ಈ ನಿಧಿಯಿಂದ, ಪಶ್ಚಿಮ ಬಂಗಾಳದ ವಿವಿಧ ಜಿಲ್ಲೆಗಳಲ್ಲಿ ನಮ್ಮ ಒಟ್ಟು ೨೨೫ ಕೇಂದ್ರಗಳ ಮೂಲಕ ನಮ್ಮ ಆಶಯವನ್ನು ಕಾರ್ಯಗತಗೊಳಿಸುತ್ತಿದ್ದೇವೆ. ಮಹಾರಾಜ್ ಅವರ ಕೃಪೆ ಇಲ್ಲದಿದ್ದರೆ ಈ ಕೆಲಸ ಸಾಧ್ಯವಾಗುತ್ತಿರಲಿಲ್ಲ.

'ನಾನು ಮತ್ತೊಮ್ಮೆ ಹುಟ್ಟಿಬಂದರೆ ನಾನು ಮನುಷ್ಯರ ಸೇವೆಯನ್ನು ಮಾಡುತ್ತೇನೆ. ಜನಸೇವೆಯನ್ನು ಮಾಡುವುದಕ್ಕೆಂದೇ ಹುಟ್ಟಿ ಬರುತ್ತೇನೆ' ಎಂದು ಮಹಾರಾಜ್ ಹೇಳುತ್ತಿದ್ದರು. ಇದು ಅವರ ಜೀವನದ ಧ್ಯೇಯವಾಗಿತ್ತು. ಹಸಿವಿನಿಂದ ಬಳಲುತ್ತಿರುವ ಒಂದು ನಾಯಿ ಈ ದೇಶದಲ್ಲಿ ಇರುವವರೆಗೆ ತಾವು ಮತ್ತೆ ಮತ್ತೆ ಜನ್ಮವೆತ್ತುತ್ತಲೇ ಇರುವುದಾಗಿ ಅವರು ಹೇಳುತ್ತಿದ್ದರು.

ಭಗವಂತನು ಮನುಷ್ಯನಲ್ಲಿ ಇದ್ದಾನೆ, ಅವನು ಮನುಷ್ಯರಲ್ಲಿ ಮಾತ್ರ ತನ್ನ ಅಭಿವ್ಯಕ್ತಿಯನ್ನು ಪ್ರಕಟಗೊಳಿಸುತ್ತಾನೆ. ದೈವತ್ವದ ಆವಿರ್ಭಾವವೇ ಮಾನವ ಶರೀರದ ಉದ್ದೇಶ ಎಂಬ ಭಾವದ 'ಭಗವದ್ಗೀತೆ'ಯ ಶ್ಲೋಕವನ್ನು ಅವರು ಉದ್ಧರಿಸುತ್ತಿದ್ದರು. ನಾವು ಈ ಜನ್ಮದಲ್ಲಿಯೇ ನಮ್ಮಲ್ಲಿರುವ ಭಗವಂತನನ್ನು ಕಾಣುವಂತಾಗಲೆಂದು ನಾನು ಶ್ರೀ ರಾಮಕೃಷ್ಣ, ಶ್ರೀಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದ ಹಾಗೂ ಶ್ರೀ ರಾಮಕೃಷ್ಣರ ಸಂನ್ಯಾಸಿ ಶಿಷ್ಯರನ್ನು ಪ್ರಾರ್ಥಿಸುತ್ತೇನೆ.*

* * * *

* ಈ ಲೇಖನವು ೨೯.೪.೨೦೦೬ರಂದು ಇದೇ ಲೇಖಕರು ನೀಡಿದ ಬಂಗಾಳಿ ಉಪನ್ಯಾಸದ ಇಂಗ್ಲಿಷ್ ಭಾಷಾಂತರ. ಭಾಷಾಂತರವನ್ನು ಮಾಡಿದವರು ಅದ್ವೈತಾಶ್ರಮದ ಸ್ವಾಮಿ ನರಸಿಂಹಾನಂದಜೀ ಅವರು.

# ೩೬. ಸ್ವಾಮಿ ರಂಗನಾಥಾನಂದ ಅವರ ನೆನಪುಗಳು

**–ಸ್ವಾಮಿ ಸತ್ಯಲೋಕಾನಂದ***

ನಾನು ಬೇಲೂರು ಮಠದ ರಾಮಕೃಷ್ಣ ಸಂಘಕ್ಕೆ ಸೇರಿದ ಒಂದು ವರ್ಷದ ನಂತರ, ಅಂದರೆ ೧೯೭೭ರ ಮಾರ್ಚ್‌ನಲ್ಲಿ, ನನ್ನನ್ನು ಹೈದರಾಬಾದಿನ ನಮ್ಮ ಕೇಂದ್ರಕ್ಕೆ ವರ್ಗಾಯಿಸಿದರು. ಅಲ್ಲಿಂದ ೧೯೯೬ರ ಏಪ್ರಿಲ್‌ವರೆಗೆ ಪೂಜ್ಯ ರಂಗನಾಥಾನಂದಜಿ ಮಹಾರಾಜ್ ಅವರ ಪ್ರೇಮಪೂರ್ವಕ ಆಶ್ರಯದಲ್ಲಿರುವ ಅದೃಷ್ಟ ನನ್ನದಾಗಿತ್ತು. ಅದರಲ್ಲೂ ೧೯೮೭ರಿಂದ ಅವರು ಪ್ರಯಾಣ ಮಾಡುವಾಗಲೆಲ್ಲಾ, ಮೊದಲು ಅವರು ಸಹಾಯಕನಾಗಿ, ನಂತರ ಅವರ ಕಾರ್ಯದರ್ಶಿಯಾಗಿ, ಅವರೊಡನೆ ಇರುವ ಅಪರೂಪದ ಸುಯೋಗ ನನಗೆ ಒದಗಿತು.

ಅವರ ಅಯಸ್ಕಾಂತೀಯ ವ್ಯಕ್ತಿತ್ವದಿಂದ ಆಕರ್ಷಿತರಾಗಿ ಬರುತ್ತಿದ್ದ ಸಮಾಜದ ವಿವಿಧ ಸ್ತರಗಳ ಜನರಿಗೆ ಅವರು ಸ್ಫೂರ್ತಿ, ಸಂತೋಷ ಹಾಗು ಪ್ರೋತ್ಸಾಹಗಳನ್ನು ಕೊಡುತ್ತಿದ್ದರು. ಅವರು ಹೋದೆಡೆಗಳೆಲ್ಲಾ ಸಂತೋಷದ ತಾಣಗಳಾಗುತ್ತಿದ್ದವು. 'ದೈನಂದಿನ ಜೀವನದಲ್ಲಿ ಭಾವೋತ್ಕರ್ಷತೆ' ಎಂಬ ಅವರು ಒಂದು ಭಾಷಣದಲ್ಲಿ ಹೀಗೆ ಹೇಳಿದ್ದಾರೆ.

**ನಿತ್ಯೋತ್ಸವಮ್ ಭವತ್ಯೇಷಾಮ್ ನಿತ್ಯಮ್ ಶ್ರೀ ನಿತ್ಯಮಂಗಲಂ**
**ಯೇಷಾಮ್ ಹೃದಿಸ್ಥೋ ಭಗವಾನ್ ಮಂಗಲಾಯತನೋ ಹರಿಃ ॥**

(ಮಂಗಳತೆಗೆ ಆವಾಸಸ್ಥಾನನಾಗಿರುವ ಹರಿಯು ಯಾರ ಹೃದಯದಲ್ಲಿ ನೆಲೆಸಿರುತ್ತಾನೋ ಅವರಿಗೆ ಉತ್ಸವ, ಸುಯೋಗ ಮತ್ತು ಮಂಗಳ– ಇವು ಶಾಶ್ವತವಾಗಿ ಸಿಗುತ್ತವೆ.)

ಅವರು ತಮ್ಮ ಹೃದಯದಲ್ಲಿ ಶ್ರೀ ರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರನ್ನು ಪ್ರತಿಷ್ಠಾಪಿಸಿದ್ದರಾಗಿ, ಅವರಿಗೆ ಪ್ರತಿದಿನವೂ ಹರ್ಷದ, ಮಂಗಳವಾದ ದಿನವೇ, ಹಬ್ಬದ ದಿನವೇ ಆಗಿತ್ತು. ಅವರು ಯಾರನ್ನಾದರೂ 'ಹೇಗಿದ್ದೀರಿ?' ಎಂದು ಕೇಳಿದಾಗ 'ಪರವಾಗಿಲ್ಲ, ಏನೋ ನಡೆಯುತ್ತಿದೆ' ಎಂಬಂತಹ ಉತ್ತರವನ್ನು ಅವರು ಇಷ್ಟಪಡುತ್ತಿರಲಿಲ್ಲ. ಯಾವಾಗಲೂ ಸಕಾರಾತ್ಮಕ ಪ್ರತಿಕ್ರಿಯೆಯನ್ನು ಅವರು ನಿರೀಕ್ಷಿಸುತ್ತಿದ್ದರು.

ಅವರು ತಾವು ಹೋದೆಡೆಯಲ್ಲೆಲ್ಲಾ ಶ್ರೀ ರಾಮಕೃಷ್ಣರ, ಸ್ವಾಮಿ ವಿವೇಕಾನಂದರ ಮತ್ತು ವೇದಾಂತದ ಸಂದೇಶಗಳನ್ನು ಪ್ರಸಾರಮಾಡುತ್ತಿದ್ದರು. ಅಲ್ಲದೆ, ಈ ಸಂದೇಶಗಳು ಜನರನ್ನು ಪುನೀತರನ್ನಾಗಿಸುತ್ತವೆ, ಅವರಿಗೆ ಬಲವನ್ನೀಯುತ್ತವೆ ಮತ್ತು ಇವು ಇಡೀ ವಿಶ್ವಕ್ಕೇ ಅನ್ವಯಿಸುವಂತಹವುಗಳು ಎಂದು ಹೇಳುತ್ತಿದ್ದರು. ಅವರು ಪರಿಶುದ್ಧತೆಯ, ಶಕ್ತಿಯ ಹಾಗೂ ವಿಶ್ವವ್ಯಾಪಕತೆಯ ಸಾಕಾರರೂಪವೇ ಆಗಿದ್ದರು ಎಂದು ನನ್ನ ನಂಬಿಕೆ. ಆದ್ದರಿಂದ ಈ ವಿಷಯಗಳ ದೃಷ್ಟಿಯಿಂದ ನಾನು ಅವರ ನೆನಪನ್ನು ನಿವೇದಿಸುತ್ತೇನೆ.

---

* ಇವರು ಕೆಲವು ವರ್ಷ ಸ್ವಾಮಿ ರಂಗಾನಾಥಾನಂದರ ಕಾರ್ಯದರ್ಶಿಯಾಗಿದ್ದರು. ಪ್ರಸ್ತುತ ಸಿಂಗಪುರದ ರಾಮಕೃಷ್ಣ ಮಿಷನ್ ಕೇಂದ್ರದಲ್ಲಿದ್ದಾರೆ.

**ಪರಿಶುದ್ಧತೆ:**

ಕರುಣೆ, ಸರಳತೆ, ವಿನಮ್ರತೆ, ನಿಷ್ಕಪಟತೆ– ಈ ಮುಂತಾದ ಗುಣಗಳಲ್ಲಿ ಪರಿಶುದ್ಧತೆಯು ಕಾಣಿಸಿಕೊಳ್ಳಬಹುದು.

**ಕರುಣೆ:** ಯಾರು ಬೇಕಾದರೂ ಮತ್ತೊಬ್ಬರ ವಿಷಯದಲ್ಲಿ ಕರುಣೆ ತೋರಬಹುದು. ಆದರೆ ಕೆಲವರು ಮಾತ್ರ ಬೇರೆಯವರ ಸಂಕಷ್ಟಗಳನ್ನು ಕಡಿಮೆಮಾಡಲು ಪ್ರಯತ್ನಿಸುತ್ತಾರೆ. ಪೂಜ್ಯ ಮಹಾರಾಜ್ ಅವರು ಅನೇಕ ಬಡವರಿಗೆ ಮತ್ತು ಒಳ್ಳೆಯ ಕೆಲಸಗಳನ್ನು ಮಾಡುತ್ತಿರುವ ಸಂಸ್ಥೆಗಳಿಗೆ ಸಹಾಯ ಮಾಡಿದ್ದಾರೆ. ಹಾಗೆ ಅವರಿಂದ ಸಹಾಯವನ್ನು ಪಡೆದ ವ್ಯಕ್ತಿಗಳ ಮತ್ತು ಸಂಸ್ಥೆಗಳ ಸಂಖ್ಯೆ ಅಪಾರ. ಬಹಳ ಜನರು ಸಹಾಯಕ್ಕಾಗಿ ಮೊರೆಯಿಡುತ್ತಿದ್ದರು. ಮಹಾರಾಜ್ ಅವರು ಬಹು ಜಾಗ್ರತೆಯಾಗಿ ಅಂತಹ ಬೇಡಿಕೆಗಳಿಗೆ ಸ್ಪಂದಿಸುತ್ತಿದ್ದರು. ಅಂತಹ ಒಂದು ಪ್ರಸಂಗ ನೆನಪಿಗೆ ಬರುತ್ತದೆ.

ದೆಹಲಿಯ ಕುಷ್ಠರೋಗಿಗಳ ಕಾಲೋನಿಯಲ್ಲಿ ಕೆಲವು ಮಹಿಳಾ ಭಕ್ತರು ಆರಂಭಿಸಿದ ಸೇವೆಯ ಬಗ್ಗೆ ನಾನು ಮಹಾರಾಜ್ ಅವರಿಂದಲೇ ಹಲವು ಬಾರಿ ಕೇಳಿದ್ದೇನೆ. ಅಲ್ಲಿನ ಪರಿಸ್ಥಿತಿಯ ಬಗ್ಗೆ ವಿವರಿಸುತ್ತಾ ಒಬ್ಬರು ಮಹಾರಾಜ್ ಅವರಿಗೆ ಒಬ್ಬ ಮಹಿಳೆ ಚರಂಡಿಯಲ್ಲೇ ಮಗುವಿಗೆ ಜನ್ಮವಿತ್ತ ಸಂಗತಿಯನ್ನು ಹೇಳಿದರು. ಅದನ್ನು ಕೇಳಿ ಅವರ ಮನಸ್ಸು ಕರಗಿ ತಕ್ಷಣವೇ ಕೆಲವು ಮಹಿಳೆಯರಿಗೆ ಪ್ರೋತ್ಸಾಹವಿತ್ತು, ಅವರು ಒಂದು ಸಂಘವನ್ನು ಸಂಘಟಿಸಿದರು. ಆ ಸಂಘದವರು ಕುಷ್ಠರೋಗಿಗಳ ಕಾಲೋನಿಗೆ ಅಗತ್ಯವಾದ ಸೇವೆಯನ್ನು ಇವತ್ತಿನವರೆಗೂ ಸಲ್ಲಿಸುತ್ತಾ ಬಂದಿದ್ದಾರೆ. ಇಂತಹ ಹಲವಾರು ಸಂಘಟನೆಗಳನ್ನು ಕಟ್ಟಲು ಜನರನ್ನು ಪ್ರಚೋದಿಸಿ, ಸಂಘಗಳನ್ನು ಕಟ್ಟಿ ಅವುಗಳ ಮೂಲಕ ಜನರಿಗೆ ಸೇವೆ ಸಿಗುವಂತೆ ಮಾಡಿದರು.

ಪೂಜ್ಯ ಮಹಾರಾಜ್ ಅವರು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹಲವಾರು ವಿದ್ಯಾರ್ಥಿಗಳಿಗೆ ಮತ್ತು ಬಡವರಿಗೆ ಆರ್ಥಿಕ ಸಹಾಯವನ್ನು ಮಾಡಿದ್ದಾರೆ. ಅವುಗಳಲ್ಲಿ ಒಂದನ್ನು ಇಲ್ಲಿ ಹೇಳಬಹುದು:

ಮಹಾರಾಜ್ ಅವರು ದೆಹಲಿಯಲ್ಲಿದ್ದಾಗ, ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿ ಅವರಿಂದ ಒಂದು ಸಹಾಯಾರ್ಥ ಸಂಗೀತ ಕಛೇರಿಯನ್ನು ಏರ್ಪಡಿಸಿದ್ದರು. ಅದಕ್ಕೆ ಪ್ರಧಾನ ಮಂತ್ರಿ ಜವಾಹರ್‌ಲಾಲ್ ನೆಹರೂ ಅವರು ಗೌರವ ಅತಿಥಿಗಳಾಗಿ ಬಂದಿದ್ದರು. ಅದರಿಂದ ಬಂದ ಹಣವನ್ನು ಆಶ್ರಮದ ಸಭಾಂಗಣವನ್ನು ಕಟ್ಟಲು ಉಪಯೋಗಿಸಿಕೊಳ್ಳಲಾಯಿತು. ಅಂದಿನಿಂದ ಮಹಾರಾಜ್ ಅವರು ಶ್ರೀಮತಿ ಸುಬ್ಬುಲಕ್ಷ್ಮಿಯವರಿಗೆ ಬಹಳ ಆಪ್ತರಾದರು. ಹೈದರಾಬಾದಿನ ಕೇಂದ್ರಕ್ಕೆ ಬಂದಾಗಲೆಲ್ಲಾ ಅವರು ಸುಮಾರು ಅರ್ಧಗಂಟೆಯ ಕಾಲ ಅಲ್ಲಿನ ಮಂದಿರದಲ್ಲಿ ಹಾಡುತ್ತಿದ್ದರು. ಶ್ರೀಮತಿ ಸುಬ್ಬುಲಕ್ಷ್ಮಿಯವರು ನಮ್ಮ ಮಿಷನ್‌ಗಾಗಿ ಹಲವಾರು ಸಹಾಯಾರ್ಥ ಕಛೇರಿಗಳನ್ನು ನಡೆಸಿಕೊಟ್ಟಿದ್ದಾರೆ. ಅಲ್ಲದೆ, ತಮ್ಮ ಭಜನೆಗಳಿಂದ ಬರುವ ರಾಜಧನದ ಹಕ್ಕನ್ನು ಮಿಷನ್ನಿಗೇ ವರ್ಗಾಯಿಸಿದ್ದಾರೆ. ತಾವು ನಮಗಾಗಿ ನಡೆಸಿಕೊಡುತ್ತಿದ್ದ ಕಛೇರಿಗಳಿಗೆ ಅವರು ಯಾವ ಹಣವನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಅಂತಹ ಸಹಾಯಾರ್ಥ ಕಛೇರಿಗಳಿಂದ ಹಲವಾರು ಸಂಘಸಂಸ್ಥೆಗಳಿಗೆ ಸಹಾಯ ಮಾಡಿದ್ದಾರೆ. ಅವರು ಒಮ್ಮೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ವಿಷಯವನ್ನು ತಿಳಿದ ಮಹಾರಾಜ್ ಅವರು ಶ್ರೀಮತಿ ಸುಬ್ಬುಲಕ್ಷ್ಮಿಯವರಿಗಾಗಿ ಬಹು ನೊಂದುಕೊಂಡರು. 'ಸಮಾಜಕ್ಕಾಗಿ ಇಷ್ಟು ಸೇವೆ ಸಲ್ಲಿಸಿರುವ ಅವರಿಗೆ ಈ ಪರಿಸ್ಥಿತಿ ಬಂದಿರುವುದು ದುಃಖಕರ ವಿಷಯ' ಎಂದ ಅವರು ತಕ್ಷಣವೇ ಬೇಲೂರು ಮಠದ ಕೇಂದ್ರ ಕಾರ್ಯಾಲಯದಲ್ಲಿ 'ಪವಿತ್ರ ಮಾತೆಯ ಹರಕೆಯ ನಿಧಿ' ಎಂಬ ನಿಧಿಯನ್ನು ಸ್ಥಾಪಿಸಿದರು. ಅದರಿಂದ ಪ್ರತಿ ತಿಂಗಳೂ ಸುಬ್ಬುಲಕ್ಷ್ಮಿಯವರಿಗೆ ಹಣವನ್ನು ಕಳುಹಿಸುತ್ತಿದ್ದರು. ಕೆಲವು ವರ್ಷಗಳಾದ ಮೇಲೆ ಆಕೆ ತಮ್ಮ ಆರ್ಥಿಕ ಪರಿಸ್ಥಿತಿ ಈಗ ಸುಧಾರಿಸಿದೆಯೆಂದೂ, ಇನ್ನು ಮುಂದೆ ಹಣವನ್ನು ಕಳುಹಿಸುವುದನ್ನು ನಿಲ್ಲಿಸಬೇಕೆಂದೂ ತಿಳಿಸಿ, ಅಷ್ಟು ದಿನ ನೀಡಿದ ಸಹಾಯಕ್ಕೆ ತಮ್ಮ ಕೃತಜ್ಞತೆಯನ್ನು ಅರ್ಪಿಸಿದರು.

**ಸರಳತೆ:** 'ನಾನು ಬೆಳೆದ ಹಾಗೆಲ್ಲಾ, ನಾನು ಸಣ್ಣ ಸಣ್ಣದರಿಂದ ದೊಡ್ಡತನವನ್ನು ನಿರೀಕ್ಷಿಸುತ್ತಿದ್ದೇನೆ ಎಂಬುದನ್ನು ಗಮನಿಸುತ್ತಿದ್ದೇನೆ. ದೊಡ್ಡವರು ಯಾವ ಆಹಾರವನ್ನು ಸೇವಿಸುತ್ತಾರೆ, ಎಂತಹ ಉಡುಪನ್ನು ಧರಿಸುತ್ತಾರೆ, ಅವರು ತಮ್ಮ ಸೇವಕರೊಂದಿಗೆ ಹೇಗೆ ಮಾತನಾಡುತ್ತಾರೆ ಎಂಬುದನ್ನು ನಾನು ತಿಳಿದುಕೊಳ್ಳಬೇಕು' ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಪೂಜ್ಯ ಮಹಾರಾಜ್ ಅವರು ತಾವು ಅರಗಿಸಿಕೊಳ್ಳಬಹುದಾದನ್ನು ಮಾತ್ರ ಸೇವಿಸುತ್ತಿದ್ದರು. ಅವರು ತೆಗೆದುಕೊಳ್ಳುತ್ತಿದ್ದ ಆಹಾರ ಕಡಿಮೆಯಾಗಿದ್ದರೂ, ಅವರು ಸದಾ ಚೈತನ್ಯಪೂರ್ಣ ರಾಗಿರುತ್ತಿದ್ದರು. ಅವರು ಹಳೆಯ ಬಟ್ಟೆ, ಕೆಲವೊಮ್ಮೆ ಹರಿದುಹೋದ ಬಟ್ಟೆಗಳನ್ನೂ ತೊಡುತ್ತಿದ್ದರು. ಮತ್ತು ಸೇವಕರೊಂದಿಗೆ ಗೌರವದಿಂದ ಮತ್ತು ಕಾಳಜಿಯಿಂದ ಮಾತನಾಡುತ್ತಿದ್ದರು.

ಹೈದರಾಬಾದಿನ ಮಠದಲ್ಲಿದ್ದಾಗ, ಊಟದ ಸಮಯದಲ್ಲಿ ಅವರು ತಾವು ಮೈಸೂರು, ಬೆಂಗಳೂರು, ಬರ್ಮ, ಕರಾಚಿ ಮತ್ತು ನವದೆಹಲಿಯ ಕೇಂದ್ರಗಳಲ್ಲಿ ದ್ದಾಗಿನ ಹಲವಾರು ನೆನಪುಗಳನ್ನು ಹೇಳುತ್ತಿದ್ದರು. ಅವರು ಉನ್ನತ ಸ್ಥಾನಗಳಲ್ಲಿದ್ದರೂ, ಅತ್ಯುನ್ನತ ವ್ಯಕ್ತಿತ್ವವನ್ನು ಹೊಂದಿದ್ದರೂ, ಅವರಲ್ಲಿದ್ದ ಮಗುವಿನ ಸರಳತೆ ಮತ್ತು ಮುಗ್ಧತೆಗಳ ಹೊಳಪನ್ನು ಅಂತಹ ಸಂದರ್ಭಗಳಲ್ಲಿ ನಾವು ಕಾಣುತ್ತಿದ್ದೆವು. ಅವರ ಹೆಸರನ್ನು ಸಂಘದ ಉಪಾಧ್ಯಕ್ಷ ಸ್ಥಾನಕ್ಕೆ ಪ್ರಸ್ತಾಪಿಸಿದಾಗ, ಹೈದರಾಬಾದಿನ ಮಠದಲ್ಲಿದ್ದ ನಾವು ಸಂಘದ ಉಪಾಧ್ಯಕ್ಷರಾಗಿ ಯಾರು ಬರಬಹುದು ಎಂಬುದನ್ನು ತಿಳಿದುಕೊಳ್ಳಲು ಉತ್ಸುಕರಾಗಿದ್ದೆವು. ಬೇಲೂರು ಮಠದಿಂದ ಬಂದ ಮಹಾರಾಜ್ ಅವರನ್ನು ನಾವು ಈ ಬಗ್ಗೆ ಕೇಳಿದಾಗ ಅವರು ಮುಜುಗರಗೊಂಡ ಅವರು, ಸ್ವಲ್ಪಹೊತ್ತು ಸುಮ್ಮನಿದ್ದು ಬಳಿಕ 'ಇದನ್ನು ಹೇಳಲು ನನಗೆ ಸಂಕೋಚವಾಗುತ್ತದೆ' ಎಂದರು. ಇದು ಅವರ ಸೌಜನ್ಯಯುತವಾದ ಸ್ವಭಾವ.

ಅವರ ಜೀವನಕ್ರಮವೂ ಬಹಳ ಸರಳವಾಗಿತ್ತು. ಅವರ ದಿನನಿತ್ಯದ ಅಗತ್ಯಗಳು ಕನಿಷ್ಠವಾಗಿದ್ದವು. ಅವರು ಯಾವುದನ್ನೂ ಪೋಲುಮಾಡುತ್ತಿರಲಿಲ್ಲ. ಅವರು ಎಲ್ಲವನ್ನೂ ಅವು ಮತ್ತೆ ಉಪಯೋಗಿಸಲು ಸಾಧ್ಯವಿಲ್ಲ ಎಂಬ ಸ್ಥಿತಿಯನ್ನು ತಲುಪುವವರೆಗೂ ಉಪಯೋಗಿಸುತ್ತಿದ್ದರು. ತಮ್ಮ ಹರಿದ ಒಳ ಅಂಗಿಗಳನ್ನು ಎಸೆಯಲು ನನಗೆ ಅವಕಾಶಕೊಡದೆ, ಅವುಗಳನ್ನು ತೊಟ್ಟುಕೊಳ್ಳುತ್ತಿದ್ದರು. ನಾವು ಅವರಿಗೆ ಒಂದು ಹೊಸ ಹೆಗಲು ಚೀಲವನ್ನು ತಂದುಕೊಡುತ್ತೇವೆಂದರೂ ಕೇಳದೆ ಚರ್ಮದ ಪಟ್ಟಿಗಳು ಹರಿದುಹೋಗಿದ್ದ ತಮ್ಮ ಹಳೆಯ ಹೆಗಲುಚೀಲವನ್ನೇ ಉಪಯೋಗಿಸುತ್ತಿದ್ದರು. ಭೌತಿಕ ವಸ್ತುಗಳ ವಿಷಯದಲ್ಲಿ ಅವರು ಒಲವನ್ನು ಹೊಂದಿರಲಿಲ್ಲ. ತಮ್ಮಲ್ಲಿದ್ದ ವಸ್ತುಗಳ ಬೆಲೆಯ ಬಗೆಗೂ, ಗುಣಮಟ್ಟದ ಬಗೆಗೂ ಚಿಂತಿಸುತ್ತಿರಲಿಲ್ಲ. ತಮಗೆ ಯಾರಾದರೂ ಒಳ್ಳೆಯ ಶಾಲುಗಳನ್ನು ಕೊಟ್ಟರೆ, ತಕ್ಷಣವೇ ಅವನ್ನು ಯಾರಿಗಾದರೂ ಕೊಟ್ಟು, ತಾವು ಒಂದೆರಡು ಕಡೆ ತೂತಾಗಿದ್ದ ಹಳೆಯ ಶಾಲನ್ನೇ ಉಪಯೋಗಿಸುತ್ತಿದ್ದರು. ಇದಕ್ಕೆ ಒಂದು ಉದಾಹರಣೆಯೆಂದರೆ, ಅವರಿಗೆ ಇಂದಿರಾಗಾಂಧಿ ರಾಷ್ಟ್ರೀಯ ಭಾವೈಕ್ಯತಾ ಪ್ರಶಸ್ತಿಯನ್ನು ನೀಡಿದಾಗ ಅವರಿಗೆ ಬಂದ ಶಾಲನ್ನು ನಾರಾಯಣಪುರದ ಆಶ್ರಮದ ಮುಖ್ಯಸ್ಥರಾಗಿದ್ದ ಸನ್ಯಾಸಿಗಳಿಗೆ ಮತ್ತು ಪ್ರಶಸ್ತಿಯ ಹಣವನ್ನು ಆ ಆಶ್ರಮಕ್ಕೇ ನೀಡಿದರು.

**ವಿನಮ್ರತೆ:** ಬಹಳಷ್ಟು ಜನರು ತಮ್ಮ ಜೀವನದಲ್ಲಿ ತಮ್ಮದೇ ಆದ ಧ್ಯೇಯಗಳಿವೆ ಎಂದುಕೊಳ್ಳುತ್ತಾರೆ. ಪೂಜ್ಯ ಮಹಾರಾಜ್ ಅವರು ದೇಶದ ಅತಿ ಉನ್ನತ ಮಟ್ಟದ ವಾಗ್ಮಿಯಾಗಿದ್ದರು ಮತ್ತು ಹಲವಾರು ಪ್ರತಿಷ್ಠಿತ ವ್ಯಕ್ತಿಗಳ ಸಂಪರ್ಕವಿತ್ತು. ಆ ಸ್ಥಾನದಲ್ಲಿ ಬೇರೆ ಯಾರಾದರೂ ಇದ್ದರೆ, ಆ ಹೆಸರು, ಪ್ರಸಿದ್ಧಿಗಳಿಗೆ ಬಲಿಯಾಗುತ್ತಿದ್ದರು. ಆದರೆ ಮಹಾರಾಜ್ ಅವರು ಶ್ರೀ ರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ವಿನಮ್ರ ಸೇವಕರಾಗಿಯೇ ಇದ್ದರು. ಅವರು 'ನಮಗೆ ಯಾವ ಧ್ಯೇಯವೂ ಇಲ್ಲ. ಶ್ರೀ ರಾಮಕೃಷ್ಣರಿಗೆ ಮತ್ತು ಸ್ವಾಮಿ ವಿವೇಕಾನಂದರಿಗೆ ಧ್ಯೇಯಗಳು ಇದ್ದವು. ನಾವು ಕೇವಲ ಅವರ ಕೈನಲ್ಲಿರುವ ಉಪಕರಣಗಳು ಅಷ್ಟೆ' ಎನ್ನುತ್ತಿದ್ದರು. ಅವರು ಹಾಸ್ಯವಾಗಿ ಹೇಳುತ್ತಿದ್ದರು: 'ನಿಮಗೆ ಗೊತ್ತೆ, ಎಲ್ಲರ ದೇಹದಲ್ಲಿ ಕೇವಲ ಎರಡು ಬಗೆಯ ರಕ್ತಕಣಗಳಿದ್ದರೆ,

ನನ್ನಲ್ಲಿ ಮೂರು ಬಗೆಯವು ಇವೆ. ನನ್ನ ತೋಳಿನಿಂದ ನೀವು ಪರೀಕ್ಷಿಸಿದರೆ ನನ್ನಲ್ಲಿರುವುವು ಕೆಂಪು ರಕ್ತಕಣ, ಬಿಳಿಯ ರಕ್ತಕಣ, ಮತ್ತು ಸ್ವಾಮಿ ವಿವೇಕಾನಂದ ರಕ್ತಕಣ.' ಅವರ ಬದುಕೆಲ್ಲಾ ಶ್ರೀ ರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ಸುತ್ತಲೇ ಸುತ್ತುತ್ತಿತ್ತು.

**ನಿಷ್ಕಪಟತೆ:** ರಹಸ್ಯ, ಮರೆಮಾಚುವುದು– ಇವು ಇವರಿಗೆ ಹಿಡಿಸುತ್ತಿರಲಿಲ್ಲ. ಅವರು ಬುದ್ಧನ ಹೇಳಿಕೆಯನ್ನು ಉದ್ಧರಿಸುತ್ತಿದ್ದರು. 'ತಥಾಗತನಿಗೆ ಗುಟ್ಟು ಎಂದರೆ ಆಗುತ್ತಿರಲಿಲ್ಲ. ಗುಟ್ಟು ಮಾಡುವುದು ಮೂವರು ಮಾತ್ರ. ಅವರೆಂದರೆ ಬ್ರಾಹ್ಮಣ, ಕಳ್ಳ ಹಾಗೂ ವೇಶ್ಯೆ.' ಸಾಧುಗಳು ಏನನ್ನೂ ಮುಚ್ಚಿಡಬಾರದು. ರಹಸ್ಯವೆಂಬುದು ಇರಲೇಬಾರದು ಎಂಬುದನ್ನು ಅವರು ಒತ್ತಿ ಹೇಳುತ್ತಿದ್ದರು. ರಹಸ್ಯಗಳನ್ನು ಕಾಪಾಡುವುದಕ್ಕಾಗಿ ದೊಡ್ಡ ದೊಡ್ಡವರೆನಿಸಿಕೊಂಡವರು ಪತನ ಹೊಂದಿದ ಹಲವಾರು ಪ್ರಸಂಗಗಳನ್ನು ಅವರು ಹೇಳುತ್ತಿದ್ದರು. ಮರೆಮಾಚುಗಳಿಲ್ಲದ ಅವರ ಜೀವನ ನಿಷ್ಕಳಂಕವಾಗಿತ್ತು. ಅವರು ಹೈದರಾಬಾದಿನಲ್ಲಿದ್ದಾಗ ಅವರ ಕೊಠಡಿಯ ಬಾಗಿಲುಗಳು ಯಾವಾಗಲೂ ತೆರೆದಿರುತ್ತಿದ್ದವು. ಯಾರು ಬೇಕಾದರೂ ಅವರ ಬಳಿಗೆ ಹೋಗಬಹುದಾಗಿತ್ತು. ಇದರಿಂದಾಗಿಯೇ ಪ್ರತಿಯೊಬ್ಬರೂ ಅವರಲ್ಲಿ ತಮ್ಮ ಸ್ನೇಹಿತನನ್ನು ಕಾಣುತ್ತಿದ್ದರು.

## ಶಕ್ತಿ

'ಉಪನಿಷತ್ತು'ಗಳು ಶಕ್ತಿಯನ್ನೇ ಉಪದೇಶಿಸುತ್ತವೆ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ನಾನು ಎಂದರೆ ಆತ್ಮ, ನಾನು ಈ ದೇಹ, ಮನಸ್ಸುಗಳಲ್ಲ ಎಂದು ಅರಿತುಕೊಂಡರೆ ಶಕ್ತಿ ಬರುತ್ತದೆ. ಮಹಾರಾಜ್ ಅವರಿಗೆ ಆನ್ವಯಿಕ ವೇದಾಂತದ ಅಂತರಾರ್ಥವೆಂದರೆ ಇದೇ ಆಗಿತ್ತು. ಇದನ್ನು ಸಂಪೂರ್ಣವಾಗಿ ಅರಿತಿದ್ದ ಮಹಾರಾಜ್ ಅವರು ಉದಾಹರಣೆಗಳ ಮೂಲಕ ಇದನ್ನೇ ಉಪದೇಶಿಸಿ ದೈನಂದಿನ ಜೀವನದಲ್ಲಿ ನಾವು ಅದನ್ನು ಅನ್ವಯಿಸಿಕೊಳ್ಳುವಂತೆ ಮಾಡುತ್ತಿದ್ದರು. ಅವರು ಮಾತುಗಳನ್ನು ಕೇಳಿದ ಬಳಿಕ ಅಥವಾ ಅವರ ಪುಸ್ತಕಗಳನ್ನು ಓದಿದ ನಂತರ ಹಲವಾರು ಜನಗಳ ಜೀವನ ಬದಲಾಯಿತು.

ಮಹಾರಾಜ್ ಅವರ ಉಪನ್ಯಾಸಗಳನ್ನು ಕೇಳಿದ ಮೇಲೆ ತಮ್ಮ ಜೀವನ ಹೇಗೆ ಉತ್ತಮಗೊಂಡಿತು ಎಂಬುದನ್ನು ಹೈದರಾಬಾದಿನ ಹಲವಾರು ಜನರು ಹೇಳುವುದನ್ನು ಕೇಳಿದ್ದೇನೆ. ತಮ್ಮ ಸ್ನೇಹಿತರು ಮಹಾರಾಜ್ ಅವರ ಉಪನ್ಯಾಸಗಳನ್ನು ಕೇಳುವಂತೆ ಸಲಹೆ ಮಾಡಿದಾಗ ಧಾರ್ಮಿಕ ಪ್ರವಚನಗಳು ನೀರಸವಾಗಿದ್ದು ಬೇಸರ ತರಿಸುತ್ತವೆ ಮತ್ತು ಅವು ತಮ್ಮಂತಹವರಿಗಲ್ಲ ಎಂದು ಕೆಲವರು ಮೊದಮೊದಲು ಭಾವಿಸುತ್ತಿದ್ದರು. ಅಂತಹವರು ತಮ್ಮ ಸ್ನೇಹಿತರ ಬಲವಂತಕ್ಕೆ ಕಟ್ಟುಬಿದ್ದು ಮನಸ್ಸಿಲ್ಲದ ಮನಸ್ಸಿನಿಂದ ಉಪನ್ಯಾಸವನ್ನು ಕೇಳಲು ಬರುತ್ತಿದ್ದರು. ಒಮ್ಮೆ ಮಹಾರಾಜ ಅವರ ಉಪನ್ಯಾಸವನ್ನು ಕೇಳಿದರೆ ಸಾಕು, ನಿಜವಾದ ಅರ್ಥಪೂರ್ಣವಾದ ಬದುಕನ್ನು ಹೇಗೆ ಬಾಳಬಹುದು ಮತ್ತು ಜೀವನದ ಸವಾಲುಗಳನ್ನು ಹೇಗೆ ಎದುರಿಸಬಹುದು ಎಂಬುದರ ಬಗ್ಗೆ ಅದು ಅವರ ಕಣ್ಣುಗಳನ್ನು ತೆರೆಸುತ್ತಿದ್ದಿತು. ಇಂತಹುದೇ ಪರಿವರ್ತನೆ ಪ್ರಪಂಚದಾದ್ಯಂತ ನಡೆದಿದೆ.

ಅಂತಹ ಎರಡು ಪ್ರಸಂಗಗಳನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಪೂಜ್ಯ ಮಹಾರಾಜ್ ಅವರು ರಂಗೂನಿನಲ್ಲಿ ನಡೆದ ಅಂತಹ ಘಟನೆಯೊಂದನ್ನು ಹೇಳುತ್ತಿದ್ದರು. ಅವರ ಉಪನ್ಯಾಸಗಳಿಗೆ ವೈದ್ಯರೊಬ್ಬರ ಪತ್ನಿ ಬರುತ್ತಿದ್ದರು. ಆದರೆ, ಆ ವೈದ್ಯರು ಮಾತ್ರ ಬರುತ್ತಿರಲಿಲ್ಲ. ಒಂದು ಭಾನುವಾರ ಆ ಮಹಿಳೆ ಹೇಗೋ ತಮ್ಮ ಪತಿಯನ್ನು ಒಪ್ಪಿಸಿ ಅವರನ್ನು ಮಹಾರಾಜ್ ಅವರ ಉಪನ್ಯಾಸಕ್ಕೆ ಕರೆದುಕೊಂಡುಬಂದರು. ಅವರು ತಮ್ಮ ಪತ್ನಿಯ ಜೊತೆಯಲ್ಲಿ ಬಂದರು. ಉಪನ್ಯಾಸವಾದ ಬಳಿಕ, ಅವರಿಬ್ಬರೂ ಮಹಾರಾಜ್ ಅವರನ್ನು ಭೇಟಿ ಮಾಡಿದರು. ಆ ವೈದ್ಯರು 'ಮಹಾರಾಜ್, ನಮ್ಮ ಇಂದಿನ ಜೀವನಕ್ಕೆ ಪ್ರಕೃತವಾದ ಇಷ್ಟು ವಿಚಾರಗಳು 'ಗೀತೆ'ಯಲ್ಲಿವೆ ಎಂದುದು ನನಗೆ ಗೊತ್ತೇ ಇರಲಿಲ್ಲ. ಇನ್ನು ಮುಂದೆ ನನ್ನ ಪತ್ನಿಯು ಬರಲಿ, ಬಿಡಲಿ,

ನಾನಂತೂ ನಿಮ್ಮ ಉಪನ್ಯಾಸಗಳಿಗೆ ಬಂದೇ ಬರುತ್ತೇನೆ' ಎಂದರು. ಮಹಾರಾಜ್ ಅವರು ಕರಾಚಿಯಲ್ಲಿನ ಕೇಂದ್ರದ ಜವಾಬ್ದಾರಿಯನ್ನು ವಹಿಸಿಕೊಂಡಾಗ, ಅಲ್ಲಿ ಇದೇ ವೈದ್ಯರು ಮಹಾರಾಜ್ ಅವರನ್ನು ಭೇಟಿಯಾಗಿ 'ನಾವು ಬರ್ಮಾದಿಂದ ಹೊರದೂಡಲ್ಪಟ್ಟಾಗ ಎಷ್ಟು ಕಷ್ಟವನ್ನು ಅನುಭವಿಸಿದೆವು ಗೊತ್ತೇ ಮಹಾರಾಜ್. ಹಲವು ವೇಳೆ ನೇತ್ಯಾತ್ಮಕ ಭಾವನೆಗಳು ನಮ್ಮನ್ನು ಮುತ್ತಿಕೊಳ್ಳುತ್ತಿದ್ದವು. ಆದರೆ, ಅಂತಹ ಸಮಯದಲ್ಲಿ 'ಗೀತೆ'ಯ ಮೇಲಿನ ನಿಮ್ಮ ಉಪನ್ಯಾಸಗಳು ನಮಗೆ ಧೈರ್ಯವನ್ನು ತುಂಬಿ ಆ ಸಂಕಷ್ಟಗಳನ್ನೆಲ್ಲಾ ಎದುರಿಸಿ ಮುನ್ನಡೆಯಲು ಸಹಾಯಮಾಡಿದವು. ಸ್ಫೂರ್ತಿದಾಯಕವಾದ, ಪ್ರೋತ್ಸಾಹಕರವಾದ ನಿಮ್ಮ ಭಾಷಣಗಳು ನನ್ನನ್ನು ನಿಜವಾಗಿ ಪಾರುಮಾಡಿದವು' ಎಂದು ಹೇಳಿದರು.

ಇನ್ನೊಂದು ಪ್ರಸಂಗ ಬಂಗಾಳದ ಗ್ರಾಮಾಂತರ ಪ್ರದೇಶದ ಮಹಿಳೆಯೊಬ್ಬಳದು. ಆಕೆ ಗೃಹಿಣಿ ಅಥವಾ ಮನೆಗೆಲಸದವಳಿರಬಹುದು. ಮಹಾರಾಜ್ ಅವರು ಕಲ್ಯಾಣಿ, ಕೃಷ್ಣಾನಗರಗಳಲ್ಲಿ ದೀಕ್ಷೆಯನ್ನು ಕೊಡಲು ಹೋಗಿದ್ದಾಗ ಅಲ್ಲಿ ಸ್ವಾಮಿ ವಿವೇಕಾನಂದರ ಬಗ್ಗೆ ಬಂಗಾಳಿಯಲ್ಲಿ ಭಾಷಣ ಮಾಡಿದರು. ಮಹಾರಾಜ್ ಅವರು ಹೈದರಾಬಾದಿಗೆ ಹಿಂದಿರುಗಿದ ಮೇಲೆ ಅವರಿಗೆ ಒಂದು ಪತ್ರ ಬಂದಿತು. ಅದರಲ್ಲಿ ಆ ಮಹಿಳೆಯು ತಾನೊಬ್ಬ ಸಾಮಾನ್ಯ ಮನೆಗೆಲಸದವಳು, ಮೊದಲು ತನಗೆ ಆತ್ಮವಿಶ್ವಾಸವೇ ಇರಲಿಲ್ಲ. ಮಹಾರಾಜ್ ಅವರ ಭಾಷಣವನ್ನು ಕೇಳಿದ ಮೇಲೆ ತನಗೆ ಒಂದು ಬಗೆಯ ಶಕ್ತಿ ಬಂದಿತೆಂದೂ, ತಾನೂ ಏನನ್ನಾದರೂ ಸಾಧಿಸಬಲ್ಲೆ ಎಂಬ ವಿಶ್ವಾಸ ಮೂಡಿತೆಂದೂ ಬರೆದಿದ್ದಳು. ಆ ಪತ್ರ ಬಂದಾಗ ಮಹಾರಾಜ್ ಅವರು ಬಹಳ ಸಂತೋಷಪಟ್ಟರು.

ನಾವು 'ಛಾಂದೋಗ್ಯ ಉಪನಿಷತ್ತಿ'ನಲ್ಲಿ ಓದಿದ್ದೇವೆ 'ಯದೇವ ವಿದ್ಯಯಾ ಕರೋತಿ ಶ್ರದ್ಧಯಾ ಉಪನಿಷದ ತದೇವ ವೀರ್ಯವತ್ತರಂ ಭವತಿ ಇತಿ' (ಯಾವುದನ್ನು ನಾವು ಪ್ರಜ್ಞಾಪೂರ್ವಕವಾಗಿ, ಶ್ರದ್ಧೆ ಮತ್ತು ಏಕಾಗ್ರತೆಯಿಂದ ಮಾಡುತ್ತೇವೆಯೋ, ಅದು ಶಕ್ತಿಯುತವಾಗುತ್ತದೆ.) ಇದನ್ನು ಮಹಾರಾಜ್ ಅವರು ಸದಾ ಗಮನದಲ್ಲಿಟ್ಟು ಕೊಂಡಿರುತ್ತಿದ್ದರು ಮತ್ತು ತಮ್ಮ ಎಲ್ಲಾ ಕಾರ್ಯಗಳಲ್ಲೂ ಇದನ್ನು ಅನುಷ್ಠಾನಕ್ಕೆ ತರುತ್ತಿದ್ದರು. ಇದರಿಂದಾಗಿ ಅವರು ಶಕ್ತಿಯ ಆಗರವೇ ಆಗಿದ್ದರು. ಅವರು ಈ ಶಕ್ತಿಯನ್ನು ಬೇರೆಯವರಿಗೆ ನೀಡಲು ಬಲ್ಲವರು ಅಥವಾ ಈ ಶಕ್ತಿಯಿಂದ ಬೇರೆಯವರಲ್ಲಿ ಆತ್ಮಶ್ರದ್ಧೆಯನ್ನು ಉದ್ದೀಪಿಸಬಲ್ಲವರು ಆಗಿದ್ದರು.

### ವಿಶ್ವವ್ಯಾಪಕತೆ:

'ವಿಶ್ವವ್ಯಾಪಕತೆಯ ಭಾವವನ್ನು ಉಳಿಸಿಕೊಳ್ಳಲು ಏನನ್ನು ಬೇಕಾದರೂ ತ್ಯಾಗ ಮಾಡಬಹುದು. ನಾನು ಬದುಕಿರಲಿ ಅಥವಾ ಇಲ್ಲದಿರಲಿ, ನಾನು ಭಾರತಕ್ಕೆ ಹಿಂದಿರುಗಲಿ ಅಥವಾ ಇಲ್ಲದಿರಲಿ ಒಂದು ವಿಷಯವನ್ನು ಮಾತ್ರ ನೆನಪಿನಲ್ಲಿಟ್ಟುಕೊಂಡಿರಿ, ಅದನ್ನು ವಿಶ್ವವ್ಯಾಪಕತೆಯಿಂದ – ಅಂದರೆ, ಸಹಿಷ್ಣುತೆಯಷ್ಟೇ ಅಲ್ಲ, ಬದಲಿಗೆ ಎಲ್ಲವನ್ನೂ ಒಳಗೊಳ್ಳುವುದರಿಂದ ಮಾತ್ರವೇ ನಾವು ಉಪದೇಶಿಸಬಹುದು ಮತ್ತು ಉಪದೇಶಿಸಿದುದನ್ನು ಸಾಧಿಸಬಹುದು' ಎಂದು ಶಶಿ ಮಹಾರಾಜ್ ಅವರಿಗೆ ಬರೆದ ಒಂದು ಪತ್ರದಲ್ಲಿ ಸ್ವಾಮಿ ವಿವೇಕಾನಂದರು ತಿಳಿಸಿದ್ದರು.

ಸ್ವಾಮಿ ರಂಗನಾಥಾನಂದಜೀಯವರ ಉಪನ್ಯಾಸಗಳು ಸಾರ್ವತ್ರಿಕವಾಗಿ ಎಲ್ಲರಿಗೂ ಮೆಚ್ಚುಗೆಯಾಗುತ್ತಿದ್ದವು. ಅವರು ಶ್ರೀ ರಾಮಕೃಷ್ಣ, ಸ್ವಾಮಿ ವಿವೇಕಾನಂದ ಮತ್ತು ವೇದಾಂತಗಳ ಬಲದಿಂದ ಯಾವ ವಿಷಯದ ಮೇಲೆ ಬೇಕಾದರೂ ಮಾತನಾಡಬಲ್ಲವರಾಗಿದ್ದರು. ಅವರ ಪುಸ್ತಕವೊಂದರ ಶೀರ್ಷಿಕೆ ಹೇಳುವಂತೆ, 'ಸನಾತನ ಮೌಲ್ಯಗಳು' ಧರ್ಮ, ಜನಾಂಗ, ಜಾತಿಗಳ ಕಟ್ಟನ್ನು ಮೀರಿ ಎಲ್ಲಾ ಮಾನವರಿಗೂ ಅನ್ವಯವಾಗುತ್ತದೆ ಎಂದು ಒತ್ತಿ ಹೇಳುತ್ತಿದ್ದರು. ಅದಕ್ಕಾಗಿಯೇ ಅವರಿಗೆ ಜಗತ್ತಿನ ಎಲ್ಲೆಡೆ ಸ್ನೇಹಿತರಿದ್ದರು. ನಾನೀಗ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ.

ಮಹಾರಾಜರು ಬರ್ಮಾದ ರಂಗೂನಿನಲ್ಲಿದ್ದಾಗ ಅವರ ಉಪನ್ಯಾಸಗಳಿಗೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಯು ಥಾಂಟ್ ಅವರು ಬರುತ್ತಿದ್ದರು. ತಮ್ಮನ್ನು ೧೯೬೩ರಲ್ಲಿ ನಮ್ಮ ಸ್ವಾಮೀಜಿಯೊಬ್ಬರು ಅಮೆರಿಕಾದಲ್ಲಿ ಭೇಟಿಯಾದಾಗ, ಯು ಥಾಂಟ್ ಅವರು 'ಮಹಾರಾಜ್ ಅವರು ಒಳ್ಳೆಯ ವಾಗ್ಮಿ ಮತ್ತು ಒಬ್ಬ ಸಭ್ಯವ್ಯಕ್ತಿ' ಎಂದು ಹೇಳಿದರಂತೆ. ಬರ್ಮಾದ ಮೇಡಂ ಆಂಗ್ ಸ್ಯಾನ ಸೂ ಕಿ ಅವರ ತಂದೆ ರಾಷ್ಟ್ರೀಯ ನಾಯಕರಾದ ಆಂಗ್ ಸ್ಯಾನ್ ಮತ್ತು ತಾಯಿ ಡಾ ಖಿನ್ ಕಿ ಅವರಿಗೆ ಮಹಾರಾಜ್ ಅವರು ಪರಿಚಿತರಾಗಿದ್ದರು. ಡಾ ಖಿನ್ ಕಿ ಅವರು ಭಾರತದಲ್ಲಿ ಬರ್ಮಾದ ಹೈಕಮೀಷನರ್ ಆಗಿದ್ದಾಗ, ಅವರು ಮಹಾರಾಜ್ ಅವರು 'ಗೀತೆ'ಯ ಮೇಲೆ ಭಾನುವಾರಗಳಂದು ನೀಡುತ್ತಿದ್ದ ಉಪನ್ಯಾಸಗಳಿಗೆ ಹಾಜರಿರುತ್ತಿದ್ದರು.

ಕೋಲ್ಕತ್ತಾದ ಮಹಿಳಾ ಸಂಘವೊಂದು ಒಮ್ಮೆ ಶ್ರೀ ಶ್ರೀ ದಲೈ ಲಾಮಾ ಮತ್ತು ಮಹಾರಾಜ್ ಅವರ ನಡುವೆ ಒಂದು ಸಂಭಾಷಣೆಯನ್ನು ಏರ್ಪಡಿಸಿತ್ತು. ದಲೈ ಲಾಮಾ ಅವರು ಮಹಾರಾಜ್ ಅವರಿಂದ ಬಹಳ ಪ್ರಭಾವಿತರಾಗಿದ್ದರು. ಹಾಗಾಗಿ ತಮಗೆ ನೊಬೆಲ್ ಶಾಂತಿ ಪುರಸ್ಕಾರ ಬಂದ ಮೇಲೆ ದಲೈ ಲಾಮಾ ಅವರು ತಾವು ಸ್ಥಾಪಿಸಿದ ಶಾಂತಿ ಪ್ರತಿಷ್ಠಾನಕ್ಕೆ ಪೋಷಕರಾಗಿರುವಂತೆ ಮಹಾರಾಜ್ ಅವರನ್ನು ಪ್ರಾರ್ಥಿಸಿದರು.

ಹೈದರಾಬಾದಿನಲ್ಲಿ ಸ್ವಾಮೀಜಿಯವರು 'ಗೀತೆ'ಯ ಮೇಲೆ ನೀಡುತ್ತಿದ್ದ ಉಪನ್ಯಾಸಗಳಿಗೆ ಕೆಲವು ಕ್ರಿಶ್ಚಿಯನ್ ಸಂನ್ಯಾಸಿನಿಯರು ಬರುತ್ತಿದ್ದರು. ಆಗ ಹೈದರಾಬಾದಿನಲ್ಲಿದ್ದ ಪ್ರಧಾನ ಬಿಷಪ್ ಅವರು ಮಹಾರಾಜ್ ಅವರ ಉಪನ್ಯಾಸಗಳು ತಮ್ಮ ಸಂನ್ಯಾಸಿನಿಯರಿಗೂ ಉಪಯುಕ್ತವಾಗುವುದೆಂದು ಅರಿತು, ಅವರಿಗೆ ಅನುಮತಿಯನ್ನು ಕೊಟ್ಟಿದ್ದರು. ಒಮ್ಮೆ ಮೂವರು ಸಂನ್ಯಾಸಿನಿಯರು ಮಹಾರಾಜ್ ಅವರನ್ನು ನೋಡಲು ಬಂದರು. ಅವರು ಈ ಮೊದಲೇ ಮಹಾರಾಜ್ ಅವರ 'ಆಧುನಿಕ ಭಾರತದ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಹಾಗೂ ಜವಾಬ್ದಾರಿಗಳು' ಎಂಬ ಪುಸ್ತಿಕೆಯನ್ನು ಓದಿದ್ದರು. ಅದು ಅವರ ಮೇಲೆ ಗಾಢವಾದ ಪ್ರಭಾವವನ್ನು ಬೀರಿತ್ತು. ಅದಕ್ಕಾಗಿ ಮಹಾರಾಜ್ ಅವರಿಗೆ ಅಭಿನಂದನೆಯನ್ನು ಸಲ್ಲಿಸಲು ಮತ್ತು ಅವರಿಂದ ಮಾರ್ಗದರ್ಶನವನ್ನು ಪಡೆಯಲು ಅವರು ಬಂದಿದ್ದರು.

ಭಾರತೀಯ ವಾಯುಪಡೆಯ ವಿಂಗ್ ಕಮಾಂಡರ್ ಒಬ್ಬರು ಒಂದು ದಿನ ಮಹಾರಾಜ್ ಅವರ ಬಳಿಗೆ ಬಂದರು. ಅವರು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರಾಗಿದ್ದರು. ಅವರಿಗೆ ಕೆಲವು ಅತೀಂದ್ರಿಯ ಅನುಭವಗಳಾಗಿದ್ದುವಂತೆ, ಫಾದರ್ ಬಿಡೆ ಗ್ರಿಫಿತ್ ಅವರ ಬಳಿ 'ಭಾರತೀಕರಣಗೊಂಡ ಕ್ರಿಶ್ಚಿಯನ್ ಧರ್ಮ'ದ ಬಗ್ಗೆ ಅಧ್ಯಯನ ನಡೆಸಿದ್ದ ಅವರಿಗೆ ವೇದಾಂತವನ್ನು ಅಧ್ಯಯನ ಮಾಡುವ ಇಚ್ಛೆಯಿತ್ತು. ಅವರ ಕನಸಿನಲ್ಲಿ ಪೂಜ್ಯ ರಂಗನಾಥಾನಂದಜೀ ಅವರು ಕಾಣಿಸಿಕೊಂಡಿದ್ದರಂತೆ. ಈ ಕಾರಣಕ್ಕಾಗಿ ಬಂದ ಅವರು ಮಹಾರಾಜ್ ಅವರಿಗೆ ಬಹಳ ಹತ್ತಿರದವರಾಗಿ ಅವರನ್ನು 'ನನ್ನ ತಂದೆ' ಎಂದು ಸಂಬೋಧಿಸುತ್ತಿದ್ದರು.

ಅವರ ಅಭಿಮಾನಿಗಳಲ್ಲಿ ಕೆಲವು ಮುಸ್ಲಿಮರೂ ಇದ್ದರು. ಅಂತಹವರಲ್ಲಿ ಅತ್ಯುಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಬಿ. ಅವರೂ ಒಬ್ಬರು. ಒಮ್ಮೆ ಅತ್ಯುಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಿಗೆ ಉಪನ್ಯಾಸವೊಂದನ್ನು ನೀಡುವಂತೆ ಮಹಾರಾಜ್ ಅವರಿಗೆ ಆಹ್ವಾನ ಬಂದಿತು. ತಮ್ಮ ಭಾಷಣವನ್ನು ವಿನೋದವಾಗಿ ಪ್ರಾರಂಭಿಸಿದ ಅವರು ಪೂರ್ಣ ಪೀಠ ಹಾಜರಿದೆಯೇ (ನ್ಯಾಯಮೂರ್ತಿಗಳ ಪತ್ನಿಯರನ್ನು ಪರೋಕ್ಷವಾಗಿ ಕುರಿತು), ಈ ನ್ಯಾಯಾಧೀಶರುಗಳಿಗೂ ಮೇಲಿರುವ ನ್ಯಾಯಾಲಯವೂ ಬಂದಿದೆಯೇ ಎಂದು ಕೇಳಿದರು. ಮಹಾರಾಜ್ ಅವರ ಉಪನ್ಯಾಸವನ್ನು ಕೇಳಿದ ಎಲ್ಲರೂ ಅದನ್ನು ಬಹುವಾಗಿ ಮೆಚ್ಚಿಕೊಂಡರು. ನ್ಯಾಯಮೂರ್ತಿ ಬಿ. ಅವರಂತೂ ಮಹಾರಾಜರ ಉತ್ಕಟ ಅಭಿಮಾನಿಯಾದರು. ಮಹಾರಾಜ್ ಅವರು ಕರಾಚಿಯಲ್ಲಿದ್ದಾಗ ಒಮ್ಮೆ ಕಮ್ಯುನಿಸ್ಟರೂ ಅವರನ್ನು ಭಾಷಣ ಮಾಡಲು ಕೋರಿದ್ದರು.

ಸಮಾಜದ ವಿವಿಧ ಸ್ತರಗಳ ಜನರು ಮಹಾರಾಜ್ ಅವರತ್ತ ಆಕರ್ಷಿತರಾಗಿದ್ದರು. ವಿಶ್ವವಿದ್ಯಾನಿಲಯದ ಪ್ರೊಫೆಸರ್‌ಗಳಿಗೆ ಸಲೀಸಾಗಿ ಉಪನ್ಯಾಸಗಳನ್ನು ನೀಡುತ್ತಿದ್ದಂತೆಯೇ, ಅಷ್ಟೇ ಸಲೀಸಾಗಿ ವಿದ್ಯಾರ್ಥಿಗಳು, ಆಟೋರಿಕ್ಷಾ ಚಾಲಕರು ಇವರನ್ನು ಕುರಿತೂ ಭಾಷಣ ಮಾಡುತ್ತಿದ್ದರು. ಒಮ್ಮೆ ಅವರ ಭಾಷಣಗಳನ್ನು ಕೇಳಿದ ಯಾರಾದರೂ ಅದರಲ್ಲಿನ ಮೋಹಕತೆಗೆ, ಶಕ್ತಿಗೆ ಮತ್ತು ಸೌಂದರ್ಯಕ್ಕೆ ಮಾರುಹೋಗುತ್ತಿದ್ದರು. ಅವರ ಮಾತುಗಳಷ್ಟೇ ಅಲ್ಲ, ಅವರ ಜೀವನವೂ ಇತರರಿಗೆ ಸ್ಫೂರ್ತಿದಾಯಕವಾಗಿರುತ್ತಿತ್ತು. ಅವರು ಎಲ್ಲರ ಸ್ನೇಹಿತರಾಗಿದ್ದರು. ಅವರಿಗೆ ಬಹು ಇಷ್ಟವಾದ ಪದವೆಂದರೆ 'ಅಜಾತಶತ್ರು'– ಶತ್ರುಗಳೇ ಇಲ್ಲದವನು. ಅವರು ಹೇಳುತ್ತಿದ್ದರು 'ಸ್ನೇಹಿತರನ್ನು ಹೊಂದಿರುವುದು ಸಾಮಾನ್ಯ ವಿಷಯ, ಕಾರಣ ಅಂತಹವನಿಗೆ ಶತ್ರುಗಳೂ ಇರಬಹುದು. ಆದರೆ ಅಜಾತಶತ್ರುವು ಎಷ್ಟು ದೊಡ್ಡವನೆಂದರೆ ಅವನ ಶತ್ರುವು ಇನ್ನೂ ಹುಟ್ಟಿಯೇ ಇಲ್ಲ. ಯಾರೂ ಅವನ ಶತ್ರುಗಳಾಗುವುದಿಲ್ಲ.' ಅವರ ಸ್ವಭಾವವೇ ಹಾಗಿತ್ತು ಎನಿಸುತ್ತದೆ. ಎಲ್ಲರೂ ಅವರನ್ನು ಪ್ರೀತಿಸುತ್ತಿದ್ದರು. ಅವರಿಗೆ ಶತ್ರುಗಳೇ ಇರಲಿಲ್ಲ.

ಈ ಲೇಖನವನ್ನು ನನ್ನ ಅನುಭವವೊಂದನ್ನು ನಿರೂಪಿಸುವುದರ ಮೂಲಕ ಮುಗಿಸುತ್ತೇನೆ. ನಾನು ಹೈದರಾಬಾದಿನ ಕೇಂದ್ರದಲ್ಲಿ ಪೂಜಾರಿಯಾಗಿದ್ದ ಸಮಯದಲ್ಲಿ ಒಮ್ಮೆ, ಕೆಲವು ಬಂಗಾಳಿ ಭಕ್ತರು ನಮ್ಮ ಶ್ರೀ ರಾಮಕೃಷ್ಣ ಮಂದಿರಕ್ಕೆ ಬಂದರು. ಮಹಾರಾಜ್ ಅವರು ಮಂದಿರದ ಒಳಗೆ ಯಾವಾಗಲೂ ನಿಶ್ಶಬ್ದತೆಯನ್ನು ಬಯಸುತ್ತಿದ್ದರಿಂದ ನಾನು ಅದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದೆ. ಆ ಬಂಗಾಳಿ ಭಕ್ತರು ಮಂದಿರದ ಒಳಗೆ ಬಂದು ಗಟ್ಟಿಯಾಗಿ ಮಾತನಾಡುತ್ತಿದ್ದರು. ನಾನು ಶ್ರೀ ರಾಮಕೃಷ್ಣರ ಮಲಗುವ ಕೋಣೆಯಲ್ಲಿದ್ದೆ. ಅವರು ಗಟ್ಟಿಯಾಗಿ ಮಾತನಾಡುವುದನ್ನು ಹಾಗೆಯೇ ಮುಂದುವರಿಸಿದ್ದರಿಂದ, ನಾನು ಹೊರಗೆ ಬಂದು ಅವರಿಗೆ ನಿಶ್ಶಬ್ದವಾಗಿರುವಂತೆ ಸೂಚಿಸಿದೆ. ಆ ಸಂದರ್ಭದಲ್ಲಿ ಬೇರೆ ಯಾರೂ ಇಲ್ಲದ್ದರಿಂದ ತಾವು ಗಟ್ಟಿಯಾಗಿ ಮಾತನಾಡಿದರೆ ಯಾರಿಗೆ ತೊಂದರೆಯಾಗುತ್ತದೆ ಎಂದು ಅವರು ಪ್ರತಿ ಉತ್ತರ ನೀಡಿದರು. ಈ ಮಂದಿರದಲ್ಲಿ ಅಲ್ಲದಿದ್ದರೆ, ಹೊರಗೆ ಪಕ್ಕದಲ್ಲಿ ಧ್ಯಾನ ಮಾಡುತ್ತಿರುವವರಿಗೆ ತೊಂದರೆಯಾಗುತ್ತದೆ ಎಂದು ನಾನು ಕಠಿಣವಾಗಿ ಹೇಳಿದಾಗ ಅವರು ಸುಮ್ಮನಾದರು.

ನಾನು ಈ ಘಟನೆಯನ್ನು ಸಂಪೂರ್ಣವಾಗಿ ಮರೆತೇಬಿಟ್ಟಿದ್ದೆ. ಒಂದೆರಡು ತಿಂಗಳ ನಂತರ ಪೂಜ್ಯ ರಂಗನಾಥಾನಂದಜೀ ಅವರು ನನ್ನನ್ನು ಕರೆದು 'ಕೆಲವು ಭಕ್ತರು ಇಲ್ಲಿನ ಬ್ರಹ್ಮಚಾರಿಯೊಬ್ಬರು ತಾವು ಇಲ್ಲಿನ ಮಂದಿರಕ್ಕೆ ಬಂದಿದ್ದಾಗ ತಮ್ಮನ್ನು ಗದರಿಸಿದುದಾಗಿ ಸಂಘದ ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ. ಇದು ನಿಜವೆ' ಎಂದು ಕೇಳಿದರು. ನಾನು ಅವರಿಗೆ ನಡೆದ ಈ ಸಂಗತಿಯನ್ನು ವಿವರವಾಗಿ ಹೇಳಿದೆ. ಅದನ್ನು ಕೇಳಿದ ಮಹಾರಾಜ್ ಅವರು ಒಂದು ಫೈಲನ್ನು ಹುಡುಕಿ ಅದರಲ್ಲಿದ್ದ ಡೇವಿಡ್ ಬೇಟ್ಸ್ ಅವರು ಬರೆದಿದ್ದ ಒಂದು ಇಂಗ್ಲಿಷ್ ಪದ್ಯವನ್ನು ತೆಗೆದು ತೋರಿಸಿದರು. ಸ್ಥೂಲವಾಗಿ ಅದರ ಭಾವಾರ್ಥ ಹೀಗಿತ್ತು:

**ಹಿತವಾಗಿ ನುಡಿ; ಪ್ರೀತಿಯಿಂದ ನುಡಿ**
**ಬೆದರಿಕೆಯ ನುಡಿಗಿಂತ ನೂರು ಮಡಿ**
**ನಯವಾಗಿ ನುಡಿ, ನಮ್ಮ ಒರಟು ಮಾತು**
**ಹಾಳುಗೆಡವುವುದು ಬೇಡ ನಮ್ಮ ಸತ್ಕಾರ್ಯವನು.**

**ಮೃದುವಾಗಿ ಮಾತಾಡಿದರೆ ಮಗುವಿನೊಡನೆ,**
**ನೀನದರ ಪ್ರೀತಿಯನ್ನು ಗೆಲ್ಲಬಹುದು,**
**ಹಿತವಾದ ಕೋಮಲದ ನುಡಿಗಳನ್ನು ನುಡಿದೊಡೆ**
**ಮಾರ್ದವತೆ ಚಿರಕಾಲ ಉಳಿಯಬಹುದು.**

**ಹಿರಿಯರಿಗೆ ಕಟು ನುಡಿಗಳನ್ನು ಆಡಬೇಡ.**
**ಚಿಂತೆಯಲಿ ಬಾಳಿದವರ ಮತ್ತಷ್ಟು ಅಳಲಿಸಬೇಡ,**
**ನಡೆಯಲು ಇರುವ ದಾರಿ ಹೆಚ್ಚೇನು ಇಲ್ಲ**
**ಉಳಿದಷ್ಟು ನಡೆಯಲು ನೆಮ್ಮದಿಯು ಬೇಕಲ್ಲ.**

**ನಿರ್ಗತಿಕರಿಗೆ ಕಟುನುಡಿಗಳನ್ನು ನುಡಿಯಬೇಡ,**
**ಅವರ ಕಿವಿಗಳನ್ನು ಶೂಲದಿ ತಿವಿಯಬೇಡ**
**ಅವರ ಹೊರೆಯೇ ಹೊರಲಾಗದ ಹೊರೆ**
**ಮುಳುಗಿಸದಿರಲಿ ಅವರ ನಿನ್ನಯ ಪರುಷದ ತೊರೆ**

**ತಪ್ಪು ಮಾಡಿದವರಿಗೂ ಇರಲಿ ಕರುಣೆ,**
**ನಿಷ್ಕರುಣೆಯೇ ಇರಬಹುದು ಇದಕೆ ಹೊಣೆ,**
**ಕೋಟಲೆಗಳ ಭಾರದಿ ಬಸವಳಿದಿರಲುಬಹುದು**
**ಕರುಣೆಯ ನುಡಿ ಅವರ ಬೆಳಗಲೂ ಬಹುದು.**

ಅದನ್ನು ಓದಲು ನನಗೆ ಹೇಳಿದರು. ನಾನು ಅದನ್ನು ಓದಿದ ಮೇಲೆ ತಮ್ಮ ತಾಯಿ ತಾವು ಚಿಕ್ಕವರಿದ್ದಾಗ, ಒಮ್ಮೆ ಕೆಟ್ಟ ಮಾತುಗಳನ್ನಾಡಿದುದಕ್ಕಾಗಿ ತಮ್ಮನ್ನು ದಂಡಿಸಿದುದನ್ನು ಹೇಳಿದರು. ಆ ತಾಯಿ 'ಮಗು, ನಿನ್ನ ನಾಲಗೆ ದೇವಿ ಸರಸ್ವತಿಯ ಆವಾಸಸ್ಥಾನ. ಆದ್ದರಿಂದ ನಿನ್ನ ನಾಲಿಲಗೆಯಿಂದ ಒಂದು ಕೆಟ್ಟ ಶಬ್ದವೂ ಬರಬಾರದು' ಎಂದು ಹೇಳಿದ್ದರಂತೆ. ಮಹಾರಾಜ್ ಅವರು ಅಂದಿನಿಂದ ತಮ್ಮ ಬಾಯಲ್ಲಿ ಕೆಟ್ಟ ಮಾತು ಬರದ ಹಾಗೆ ಎಚ್ಚರ ವಹಿಸಿದ್ದರು. ನನಗೂ ಹಾಗೇ ಮಾಡಲು ಉಪದೇಶಿಸಿದ್ದರು.

ಅವರ ಅನುಕರಣೀಯ ಜೀವನ ನಮಗೆ ಉತ್ತಮ ಸಂನ್ಯಾಸಿಯಾಗಿ ಹೇಗೆ ಬದುಕಬೇಕೆಂಬ ಒಂದು ದೊಡ್ಡ ಪಾಠವನ್ನು ಕಲಿಸಿದೆ. ಎಲ್ಲ ಬಂಧನಗಳಿಂದ ಮುಕ್ತರಾಗಿದ್ದ, ಸದಾ ತೃಪ್ತ ಜೀವನವನವನ್ನು ನಡೆಸುತ್ತಿದ್ದ, ಇತರರಿಗೆ ಸಹಾಯ ಮಾಡಲು ಯಾವಾಗಲೂ ಸಿದ್ಧವಿರುತ್ತಿದ್ದ ಮತ್ತು ಘನತೆಯಿಂದ ಕೂಡಿದ್ದ ಅವರು ನಿಜವಾದ ಸಂನ್ಯಾಸಿಗಳಾಗಿದ್ದರು. ಅವರು ಯತಿರಾಜರಾಗಿದ್ದರು. ಅವರು ನನಗೆ ತೋರುತ್ತಿದ್ದ ಅನುಪಮವಾದ ಪ್ರೀತಿ, ತೆಗೆದುಕೊಳ್ಳುತ್ತಿದ್ದ ಜತನ, ಅವರಿಗೆ ನನ್ನ ಅಳಿಲುಸೇವೆಯನ್ನು ಸಲ್ಲಿಸಲು ಅವರು ಕೊಟ್ಟಿದ್ದ ಅವಕಾಶ ಇವುಗಳೆಲ್ಲಕ್ಕೂ ನಾನು ಅವರಿಗೆ ಚಿರಋಣಿಯಾಗಿದ್ದೇನೆ.

* * * *

# ೩೭. ಆದರ್ಶಪ್ರಾಯರಾದ ಋಷಿ

–ಸ್ವಾಮಿ ಬುದ್ಧದೇವಾನಂದ*

ಪೂಜ್ಯ ಸ್ವಾಮಿ ರಂಗನಾಥಾನಂದ ಅವರು ನಡೆಸುತ್ತಿದ್ದ ದೀಕ್ಷಾ ಕಾರ್ಯಕ್ರಮಗಳನ್ನು ಏರ್ಪಡಿಸುವ ಸಂಬಂಧದಲ್ಲಿ ಕೆಲವು ವರ್ಷಗಳು ಅವರೊಡನೆ ಇರುವಂತಹ ಅವಕಾಶ ನನಗೆ ದೊರಕಿತ್ತು. ಆಗ ಅವರು ರಾಮಕೃಷ್ಣ ಮಠ ಮತ್ತು ಸಂಘದ ಉಪಾಧ್ಯಕ್ಷರಾಗಿದ್ದರು. ನಾನು ಅವರ ಆಪ್ತಸಹಾಯಕನಾಗಿ ಕೆಲವು ಕಾಲ ಸೇವೆ ಸಲ್ಲಿಸಿದೆ. ಪಾವನವಾದ ಅವರ ಸ್ಮೃತಿಗಳನ್ನು ಮತ್ತೆ ಮನಸಿನಂಗಳಕ್ಕೆ ತರುವುದು ಮತ್ತು ಅವುಗಳನ್ನು ಅವರ ಅಭಿಮಾನಿಗಳೊಡನೆ ಹಂಚಿಕೊಳ್ಳುವುದು ನನಗೆ ಸಂತೋಷದ ವಿಷಯ.

ಸ್ವಾಮಿ ರಂಗನಾಥಾನಂದರು ನಮ್ಮ ಪವಿತ್ರವಾದ ಈ ಸಂಘಕ್ಕೆ ಉಪಾಧ್ಯಕ್ಷರಾಗಿ ೧೯೮೯ರಲ್ಲಿ ಆಯ್ಕೆಯಾಗಿದ್ದರು. ಚಿರ್ರಾಪುಂಜಿಯಲ್ಲಿದ್ದ ನನ್ನ ಹೊಸ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ೧೯೯೦ರ ಏಪ್ರಿಲ್‌ನಲ್ಲಿ ಬೇಲೂರು ಮಠಕ್ಕೆ ಬಂದೆ. ಉಪನ್ಯಾಸಗಳಿಗಾಗಿ ಪ್ರಪಂಚದಲ್ಲೆಲ್ಲಾ ಅವಿರತವಾಗಿ ಸುತ್ತುತ್ತಿದ್ದ ಪರಿಣಾಮವಾಗಿ ಅವರ ಆರೋಗ್ಯ ಸರಿಯಿಲ್ಲದ್ದುದರಿಂದ ಪೂಜ್ಯ ಮಹಾರಾಜ್ ಅವರು ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿದ್ದರು. ಆರೋಗ್ಯ ಸುಧಾರಿಸಿ ಮಾಮೂಲಿನಂತೆ ತಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ನಡೆಸಿಕೊಂಡುಹೋಗಲು ಅವರು ಸಮರ್ಥರಾದಾಗ, ಆಧ್ಯಾತ್ಮಿಕ ಆಕಾಂಕ್ಷಿಗಳಿಗೆ ಮಂತ್ರದೀಕ್ಷೆಯನ್ನು ನೀಡುವ ಹೆಚ್ಚುವರಿ ಕಾರ್ಯವನ್ನೂ ನಡೆಸಿಕೊಡುವಂತೆ ಅವರನ್ನು ಬೇಲೂರು ಮಠದ ಹಿರಿಯ ಸ್ವಾಮಿಗಳು ಕೇಳಿಕೊಂಡರು.

ಒಂದು ದಿನ, ಬೇಲೂರು ಮಠದ ಹಿರಿಯ ಸಂನ್ಯಾಸಿಯೊಬ್ಬರು ನನಗೆ ಒಂದು ಫೈಲನ್ನು ಕೊಟ್ಟು ಅದನ್ನು ಓದಿ, ದೀಕ್ಷಾಕಾರ್ಯಕ್ರಮವನ್ನು ಏರ್ಪಡಿಸುವ ವಿಷಯದಲ್ಲಿ ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚಿಸಿದರು. ಅಂದು ರಾತ್ರಿ ನಾನು ಆ ಫೈಲನ್ನು ತೆರೆದು ನೋಡಿದಾಗ ಅದರಲ್ಲಿ ಹಲವು ಆಕಾಂಕ್ಷಿಗಳು, ಭಕ್ತರು ಸ್ವಾಮಿ ರಂಗನಾಥಾನಂದರಿಂದ ದೀಕ್ಷೆ ಹಾಗೂ ಅವರ ಆಶೀರ್ವಾದವನ್ನು ಪಡೆಯಲು ಬಯಸಿ ಬರೆದಿದ್ದ ಪತ್ರಗಳು ಇದ್ದವು. ಮಹಾರಾಜ್ ಅವರು ಜಗತ್ತಿನಾದ್ಯಂತ ಇರುವ ಅಸಂಖ್ಯಾತ ಆಕಾಂಕ್ಷಿಗಳ ಜ್ಞಾನದ ಹಸಿವನ್ನು ತಮ್ಮ ಪ್ರವಚನಗಳ ಮೂಲಕ ಇಂಗಿಸುವ ತಮ್ಮ ಕಾರ್ಯಕ್ಕೆ ಅಡಚಣೆಯನ್ನುಂಟುಮಾಡುತ್ತದೆ ಎಂಬ ಕಾರಣದಿಂದ ದೀಕ್ಷೆ ನೀಡುವ ಜವಾಬ್ದಾರಿಯನ್ನು ಹೊರಲು ಹಿಂದೆಮುಂದೆ ನೋಡುತ್ತಿದ್ದರು. ಮಾರನೆಯ ದಿನ ಬೆಳಗ್ಗೆ ಆರೋಗ್ಯ ಭವನದಲ್ಲಿದ್ದ ಪೂಜ್ಯ ಮಹಾರಾಜರನ್ನು ನೋಡಿ ಆಪ್ತವಾಗಿ ಮಾತನಾಡಲು ಅಲ್ಲಿಗೆ ಹೋದೆ. ಎಲ್ಲಾ ಆಕಾಂಕ್ಷಿಗಳ ಪರವಾಗಿ, ಅತ್ಯಂತ ವಿನಮ್ರವಾಗಿ ಅವರಿಗೆ ಆ ಫೈಲನ್ನು ಕೊಟ್ಟೆ. ಸೇವಾ ಪ್ರತಿಷ್ಠಾನದ ಹಲವಾರು ವಿದ್ಯಾರ್ಥಿಗಳು ಮತ್ತು ದಾದಿಯರು ಮಹಾರಾಜ್ ಅವರಿಂದ ದೀಕ್ಷೆ ಹಾಗೂ ಆಶೀರ್ವಾದವನ್ನು ಪಡೆಯಲು ಉತ್ಸುಕರಾಗಿದ್ದಾರೆಂದು ಹೇಳಿದೆ. ಅವರ ಮುಖದ ಮೇಲೆ ಮುಗುಳುನಗೆಯು ಮೂಡಿತು. ಫೈಲನ್ನು ತೆಗೆದುಕೊಂಡು ಅದನ್ನು ಓದಿದರು. ನಂತರ ಆಕಾಂಕ್ಷಿಗಳ ಸಂದರ್ಶನವನ್ನು ಮಾಡಿ ದೀಕ್ಷಾ ಕಾರ್ಯಕ್ರಮಕ್ಕಾಗಿ ಅನುಕೂಲಕರವಾದ ಒಂದು ದಿನ ಹಾಗೂ ಜಾಗವನ್ನು ಗೊತ್ತುಪಡಿಸಲು ನನಗೆ ಹೇಳಿದರು. ಅಲ್ಲದೆ ಸ್ವಾಮಿ ವಿವೇಕಾನಂದರ 'ಕೊಲಂಬೋನಿಂದ ಆಲ್ಮೊರದವರೆಗೆ'ನ ಭಾಷಣಗಳನ್ನು ಮತ್ತು

---

* ಬರಿಶಾದಲ್ಲಿರುವ ರಾಮಕೃಷ್ಣ ಮಠದ ಸಂನ್ಯಾಸಿ

ಪವಿತ್ರ ತ್ರಿಮೂರ್ತಿಗಳಾದ ಶ್ರೀ ರಾಮಕೃಷ್ಣ, ಶ್ರೀಮಾತೆ ಮತ್ತು ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಗಳನ್ನು ಆಕಾಂಕ್ಷಿಗಳೆಲ್ಲರೂ ಓದಲೇಬೇಕೆಂದು ತಿಳಿಸಿದರು. ಮಹಾರಾಜ್ ಅವರು ದೀಕ್ಷಾಕಾರ್ಯಕ್ರಮವನ್ನು ಬುದ್ಧಪೂರ್ಣಿಮೆಯಂದೇ ಆರಂಭಿಸಿದುದು ಅರ್ಥಪೂರ್ಣವಾಗಿದ್ದಿತು. ೧೯೯೦ರ ಮೇ ೯ರಂದು ಕಾಸಿಪೋರ್ ಗಾರ್ಡನ್‌ನಲ್ಲಿ ನಡೆದ ಆ ಕಾರ್ಯಕ್ರಮದಲ್ಲಿ ೩೫ ಜನ ಅದೃಷ್ಟಶಾಲಿಗಳು ಪವಿತ್ರ ಮಂತ್ರೋಪದೇಶವನ್ನು ಪಡೆದರು.

ದೀಕ್ಷಾವಿಧಿಯಲ್ಲಿ ಅವರು ಹಲವಾರು ಬದಲಾವಣೆಗಳನ್ನು ಮಾಡಿದರು. ಗುರುದಕ್ಷಿಣಾ ವಿಧಿಯನ್ನು ಬಹಳ ಸರಳಗೊಳಿಸಿ ಆಕಾಂಕ್ಷಿಗಳು ಕೇವಲ ಮೂರು ಹಣ್ಣು ಮತ್ತು ಮೂರು ಹೂಗಳನ್ನು ಮಾತ್ರ ತರಬೇಕೆಂದು ವಿಧಿಸಿದರು. ಅವರು ಮಹಾಪುರುಷ್ ಮಹಾರಾಜ್ ಅವರಿಂದ ತಾವು ದೀಕ್ಷೆ ತೆಗೆದುಕೊಂಡ ಪ್ರಸಂಗವನ್ನು ಹೇಳುತ್ತಾ ತಾವು ಗುರುದಕ್ಷಿಣೆಯಾಗಿ ಒಂದು ಅಳಲೆಕಾಯಿಯನ್ನು ಮಾತ್ರ ಕೊಟ್ಟಿದ್ದಾಗಿ ಹೇಳುತ್ತಿದ್ದರು.

ದೀಕ್ಷೆ ತೆಗೆದುಕೊಳ್ಳುವ ಭಕ್ತರ ಹಿಂದಿನ ವಿವರಗಳನ್ನು ದಾಖಲಿಸಿಡುವುದು ಬೇಲೂರು ಮಠದಲ್ಲಿ ಪದ್ಧತಿಯಾಗಿ ಬಂದಿದೆ. ಈ ಸಂಬಂಧ ಹಿಂದಿನ ಅಧ್ಯಕ್ಷ ಮಹಾರಾಜ್ ಅವರುಗಳು ಉಪಯೋಗಿಸುತ್ತಿದ್ದ ಅರ್ಜಿ ನಮೂನೆಗಳನ್ನೆಲ್ಲಾ ಪರಿಶೀಲಿಸಿ, ನಾನು ಹೊಸದಾಗಿ ಒಂದು ನಮೂನೆಯನ್ನು ರೂಪಿಸಿದೆ. ಇದನ್ನು ಅಧಿಕೃತವಾಗಿ ಉಪಯೋಗಿಸಲು ಪೂಜ್ಯ ಮಹಾರಾಜ್ ಅವರ ಒಪ್ಪಿಗೆಯನ್ನು ಪಡೆಯಬೇಕಿತ್ತು. ಹಿಂದೆ ಉಪಯೋಗಿಸುತ್ತಿದ್ದ ನಮೂನೆಗಳಲ್ಲಿ ಮಹಿಳೆಯರು ವಿವಾಹಿತರೆ, ಅವಿವಾಹಿತರೆ ಎಂಬುದನ್ನು ನಮೂದಿಸಬೇಕಿತ್ತು ಮತ್ತು ತಾವು ದೀಕ್ಷೆ ತೆಗೆದುಕೊಳ್ಳುವುದಕ್ಕೆ ತಮ್ಮ ತಂದೆ/ಪತಿ/ತಮ್ಮ ಮನೆಯ ಹಿರಿಯ ಪುರುಷ ಸದಸ್ಯರಿಂದ ಅನುಮತಿಯನ್ನೂ ಪಡೆಯಬೇಕಿತ್ತು. ಸ್ವಾಮಿ ರಂಗನಾಥಾನಂದರು ಇದನ್ನು ಕಟುವಾಗಿ ವಿರೋಧಿಸಿದರು. ಅವರ ದೃಷ್ಟಿಯಲ್ಲಿ ಮಹಿಳೆಯರು ತಮಗೆ ಬೇಕಾದ ಆಧ್ಯಾತ್ಮಿಕ ಮಾರ್ಗವನ್ನು ಆಯ್ದುಕೊಳ್ಳಲು ಸ್ವತಂತ್ರರು ಮತ್ತು ಅದಕ್ಕೆ ಅವರು ಯಾರ ಅನುಮತಿಯನ್ನೂ ಪಡೆಯಬೇಕಾಗಿರಲಿಲ್ಲ. ಸರ್ವಾಂಗೀಣ ಅಭಿವೃದ್ಧಿಗೆ ಮಹಿಳಾ ಸ್ವಾತಂತ್ರ್ಯ ಅಗತ್ಯವೆಂದು ಪ್ರತಿಪಾದಿಸುತ್ತಿದ್ದ ಅವರು ಮಹಿಳೆಯರ ವಿರುದ್ಧ ನಡೆಯುವ ಅತಿರೇಕಗಳನ್ನು ಸಹಿಸುತ್ತಿರಲಿಲ್ಲ. ತಮ್ಮ ಜೀವಮಾನಪೂರ್ತಿ ಅವರು ಅನೇಕ ಮಹಿಳಾ ಸಂಘಟನೆಗಳಿಗೆ ಧಾರಾಳವಾಗಿ ಸಹಾಯಮಾಡಿ ಅವು ತಮ್ಮ ಸ್ವಂತ ಬಲದ ಮೇಲೆ ನಿಂತುಕೊಳ್ಳುವಂತೆ ಮಾಡುತ್ತಿದ್ದರು.

ಕಾಸಿಪೋರ್‌ನ ಕಾರ್ಯಕ್ರಮದ ನಂತರ ಅವರು ಕಾಮಾರ್‌ಪುಕುರ, ಜಯರಾಮ್‌ಬಾಟಿ, ಕಲ್ಯಾಣಿ, ಕೃಷ್ಣನಗರ, ಬರಾಸತ್, ಸಿಕ್ರಕುಲಿನ್, ಬರ್ದ್ವಾನ್, ಧನ್‌ಬಾದ್, ಪುರುಲಿಯಾ ಮುಂತಾದ ಸ್ಥಳಗಳಲ್ಲಿ ಶಿಷ್ಯರಿಗೆ ದೀಕ್ಷೆಕೊಟ್ಟರು. ಹೋದಲ್ಲೆಲ್ಲಾ ಅವರು ಅರ್ಹರನ್ನು ಶ್ರೀ ರಾಮಕೃಷ್ಣ ಪಂಥಕ್ಕೆ ಸೇರಿಸಿಕೊಳ್ಳುತ್ತಿದ್ದರು ಮತ್ತು ಸ್ಫೂರ್ತಿದಾಯಕವಾದ ಉಪನ್ಯಾಸಗಳನ್ನು ನೀಡುತ್ತಿದ್ದರು. ಅವರು ತಮ್ಮ ಭಾಷಣಗಳಲ್ಲಿ ಬಂಗಾಳದ ಮಹಾಕವಿಗಳಾದ ರಬೀಂದ್ರನಾಥ ಟಾಗೂರ್ ಮತ್ತು ಕಾಜಿ ನಜ್ರುಲ್ ಇಸ್ಲಾಂ ಅವರನ್ನು ಮತ್ತೆ ಮತ್ತೆ ಉದ್ಧರಿಸುತ್ತಿದ್ದರು. ಅವರು ನಜ್ರುಲ್ ಅವರ 'ಓ ಮಹಾ ಪ್ರವಾದಿಯೇ, ನೀನು ಆ ಆಧುನಿಕ ಯುಗದಲ್ಲಿ ವೇದಗಳ ಪುಣ್ಯದರ್ಶನವನ್ನು ಮತ್ತೆ ತಂದೆ' ಎಂಬ ಹೇಳಿಕೆಯನ್ನು ಉಲ್ಲೇಖಿಸುತ್ತಿದ್ದರು. ಶ್ರೀ ರಾಮಕೃಷ್ಣರ ಬಗೆಗೆ ಈ ಕೆಳಗಿನ ಸಾಲುಗಳಲ್ಲಿ ವ್ಯಕ್ತವಾಗಿರುವ ಟಾಗೂರ್ ಅವರ ಮೆಚ್ಚುಗೆಯನ್ನು ಅವರು ಒತ್ತಿ ಹೇಳುತ್ತಿದ್ದರು:

> **ವಿವಿಧ ಧರ್ಮಗಳ ಅರ್ಚನಾ ವಿಧಿಗಳು ವಿವಿಧ ಮನೋಭಾವಗಳಿಂದ ಚಿಮ್ಮಿ ಬಂದು ನಿನ್ನಲ್ಲಿ ಒಂದುಗೂಡಿರುವುದನ್ನು ಕಂಡೆ. ಪರಮಾನಂದದ ಆವಿರ್ಭಾವದ ಬೇರೆಬೇರೆಯ ವಿಧಾನಗಳು ನಿನ್ನ ಜೀವನದಲ್ಲಿ**

**ಸಂಗಮಗೊಂಡಿವೆ. ಜಗತ್ತಿನ ಬೇರೆಬೇರೆ ಕಡೆಯಿಂದ ನಮನ ಸಲ್ಲಿಸುತ್ತಿರುವ ಜನಗಳ ಮಧ್ಯದಲ್ಲಿ ನಾನೂ ಸೇರಿಕೊಂಡು ನಿನಗೆ ವಂದಿಸುತ್ತೇನೆ.**

ನಾನು ಅವರೊಡನೆ ದೇಶದ ಬೇಗೆ ಬೇರೆಯ ಭಾಗಗಳಿಗೆ ಪ್ರಯಾಣಮಾಡಿದ್ದೆ. ಅವರೊಡನೆ ಪ್ರಯಾಣ ಮಾಡುವುದೆಂದರೆ ಅದೊಂದು ಅವಿರತವಾದ ಜ್ಞಾನಸಂಪಾದನೆ ಮಾಡುವ ಅವಕಾಶವಾಗಿರುತ್ತಿತ್ತು. ಗಹನವಾದ ಅವರ ವಿಚಾರಗಳು 'ಉಪನಿಷತ್ತು', 'ಭಗವದ್ಗೀತೆ' ಮತ್ತು ಇತರ ಶಾಸ್ತ್ರಗ್ರಂಥಗಳ ಮೇಲಿನ ದಿಟವಾದ ಭಾಷ್ಯಗಳಿರುತ್ತಿದ್ದವು. ಅವರು ವಿವಿಧ ವಿಚಾರಗಳನ್ನು ಕುರಿತು ನೀಡಿದ್ದ ಉಪನ್ಯಾಸಗಳು ಈಗ ಪುಸ್ತಕರೂಪದಲ್ಲಿ ದೊರಕುತ್ತಿವೆ. ಅವರ ಪುಸ್ತಕಗಳಲ್ಲಿ ಬಂದಿರದ ಅವರ ಕ್ರಿಯಾಶೀಲ ಚಿಂತನೆಗಳನ್ನು, ಪ್ರಸಂಗಗಳನ್ನು ದಾಖಲಿಸಲು ನಾನು ಉತ್ಸುಕನಾಗಿದ್ದೇನೆ.

ಒಮ್ಮೆ ನಾವು ದುರ್ಗಾಪುರದಿಂದ ಕೊಲ್ಕೊತ್ತಾಗೆ ರೈಲಿನ ಮೂಲಕ ಬರುತ್ತಿದ್ದೆವು. ಅದು ರಾತ್ರಿಯ ಪ್ರಯಾಣವಾಗಿದ್ದು, ಪೂಜ್ಯ ಮಹಾರಾಜ್ ಅವರು ಕೆಳಗಿನ ಸಾಲಿನ ಆಸನದಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಅವರಿಗೆ ಸಾಕಷ್ಟು ಜಾಗ ಸಿಗಲಿ ಎಂದು ನಾನು ಅವರ ಪಾದಗಳ ಬಳಿ ಕುಳಿತಿದ್ದೆ. ಅದನ್ನು ನೋಡಿದ ಅವರು 'ಇದು ಸರಿಯಲ್ಲ, ಬಾ ನನ್ನ ಹತ್ತಿರ ಬಾ' ಎಂದರು. ನಾನು ಸಂಕೋಚಪಡುತ್ತಿದ್ದುದನ್ನು ಕಂಡ ಅವರು, 'ಸಂಕೋಚಪಟ್ಟುಕೊಳ್ಳಬೇಡ, ಇಲ್ಲಿ ಬಾ, ಹತ್ತಿರಕ್ಕೆ ಬಂದು ನನ್ನ ಕಾಲುಗಳಿಗೆ ಒರಗಿ ಕುಳಿತುಕೊ. ಅದರಿಂದ ನನಗೆ ಹಾಯ್ ಎನಿಸುತ್ತದೆ' ಎಂದರು. ತಮ್ಮ ಕೆಲಸ, ಆಲೋಚನೆಗಳ ನಡುವೆಯೂ ಅವರು ನಮ್ಮ ಬಗ್ಗೆ ವಹಿಸುತ್ತಿದ್ದ ಕಾಳಜಿಯನ್ನು ಕಂಡು ನಾನು ಮಾರುಹೋದೆ.

ಪ್ರಯಾಣದ ವೇಳೆಯಲ್ಲಿ ಅವರು ನಮ್ಮೊಂದಿಗೆ ವಿವಿಧ ವಿಷಯಗಳ ಮೇಲೆ ಮಾತನಾಡುತ್ತಲಿದ್ದರು. ಒಮ್ಮೆ ಇದ್ದಕ್ಕಿದ್ದಂತೆ ಅವರು ನನ್ನನ್ನು 'ಸಾಗುತ್ತಿರುವ ರೈಲು ಏನು ಹೇಳುತ್ತದೆ ಗೊತ್ತೇ?' ಎಂದು ಕೇಳಿದರು. ನನಗೆ ಉತ್ತರ ಹೊಳೆಯಲಿಲ್ಲ. 'ಗೊತ್ತಿಲ್ಲ ಮಹಾರಾಜ್' ಎಂದೆ. ಪೂಜ್ಯ ಮಹಾರಾಜ್ ಅವರ ಕಣ್ಣುಗಳು ಮಿಂಚಿದವು. ಅದಕ್ಕೆ ಅವರು 'ನೀನೊಬ್ಬ ಮೂರ್ಖ! ರೈಲು ತಾನು ವೇಗವಾಗಿ ಹೋಗುತ್ತಿರುವಾಗ ನಾನು ಮಾಡಬಲ್ಲೆ, ನಾನು ಮಾಡಬಲ್ಲೆ ಎನ್ನುತ್ತಿರುತ್ತದೆ. ಆದರೆ ಅದರ ವೇಗ ತಗ್ಗಿದಾಗ, ನಾನು ಮಾಡಬಲ್ಲೆ ಎಂದುಕೊಂಡಿದ್ದೆ ಎನ್ನುತ್ತದೆ' ಎಂದರು. ಹಾಗೆ ಹೇಳುವಾಗ ಅವರ ನುಡಿಗಳ ಲಯ ರೈಲಿನ ಓಟದ ಲಯಕ್ಕೆ ಅನುಗುಣವಾಗಿತ್ತು. ಅವರು ರೈಲನ್ನು ಒಂದು ವ್ಯಕ್ತಿಯನ್ನಾಗಿ ನೋಡುತ್ತಿದ್ದರು. ಅದನ್ನು ಅವರು ಲಲಿತವಾದ ಶೈಲಿಯಲ್ಲಿ ಹೇಳಿದ್ದರೂ, ಅದರಲ್ಲಿ ಅಗಾಧವಾದ ಸತ್ಯವೊಂದು ಅಡಗಿತ್ತು. ಅದೆಂದರೆ 'ನಮ್ಮ ಅಹಂಕಾರ ಎಂತಹ ಪರಿಸ್ಥಿತಿಯನ್ನಾದರೂ ಎದುರಿಸಬಲ್ಲೆ ಎಂದು ಹೇಳುತ್ತದೆ. ಆದರೆ ಅಹಂಕಾರ ತಗ್ಗಿದಾಗ, ಭಗವಂತನ ಅನುಗ್ರಹವಿಲ್ಲದೆ ನಾವು ಅಜ್ಞಾನದ ಈ ಭವಸಾಗರವನ್ನು ದಾಟಲು ಅಸಮರ್ಥರಿದ್ದೇವೆ ಎಂಬುದನ್ನು ಅರಿತುಕೊಳ್ಳುತ್ತೇವೆ' ಎಂಬುದು.

ಹೈದರಾಬಾದಿನಲ್ಲಿ ಅವರು ಪ್ರತಿ ಭಾನುವಾರ ಸಂಜೆ 'ಭಗವದ್ಗೀತೆ'ಯ ಮೇಲೆ ಉಪನ್ಯಾಸವನ್ನು ಕೊಡುತ್ತಿದ್ದರು. ಹಾಗೆ ಉಪನ್ಯಾಸ ಕೊಡುವ ಮೊದಲು, ಅವರು ತಮ್ಮ ಕೊಠಡಿಯಲ್ಲಿ ಕುಳಿತು ಒಂದು ಗಂಟೆ ಧ್ಯಾನ ಮಾಡುತ್ತಿದ್ದರು. ಅವರು ಕೊಠಡಿಯಿಂದ ಸಭಾಂಗಣಕ್ಕೆ ಹೋಗುವಾಗ ಅವರ ಸಂಗಡ ಹೋಗುವುದು ನನ್ನ ಕರ್ತವ್ಯವಾಗಿತ್ತು. ಒಂದು ದಿನ ಹಾಗೆ ಹೋಗುವಾಗ ಬಹುಶಃ ಜೋರಾಗಿ ಬೀಸಿದ ಗಾಳಿಯ ಹೊಡೆತಕ್ಕೆ ಸಿಕ್ಕಿದ ಬಳ್ಳಿಯೊಂದು ಕೆಳಕ್ಕೆ ಬಿದ್ದಿದ್ದನ್ನು ಗಮನಿಸಿದರು. ಅಲ್ಲಿಯೇ ನಿಂತು, 'ನೋಡು, ಆ ಬಳ್ಳಿ ಗೋಡೆಯ ಮೇಲೆ ಹಬ್ಬಲು ಅದಕ್ಕೆ ಆಶ್ರಯ ಬೇಕು. ಅದಕ್ಕೆ ಒಂದು ಬೊಂಬನ್ನು ಆಧಾರವಾಗಿ ನೀನೇಕೆ ಕೊಡಬಾರದು?' ಎಂದು ಕೇಳಿದರು. ಮಾರನೆಯ ದಿನ ನಾನು ಹಾಗೆ ಮಾಡಿದಾಗ ಅವರಿಗೆ ಬಹಳ ಸಂತೋಷವಾಯಿತು.

ಒಮ್ಮೆ ನಾವು ಭುವನೇಶ್ವರಕ್ಕೆ ಹೋಗುತ್ತಿದ್ದೆವು. ಭುವನೇಶ್ವರದಲ್ಲಿ ಇಳಿದಾಗ, ನಾವು ಇಟ್ಟುಕೊಂಡಿದ್ದ ತಿನ್ನದೆ ಹಾಗೆಯೇ ಇರಿಸಿಕೊಂಡಿದ್ದ ಬಾಳೆಯ ಹಣ್ಣನ್ನು ಅಲ್ಲಿಯೇ ಬಿಟ್ಟುಬಂದಿದ್ದೆವು. ನಾವೆಲ್ಲಾ ಹೊರ ದ್ವಾರದತ್ತ ಹೋಗುತ್ತಿದ್ದೆವು. ಅಷ್ಟರಲ್ಲಿ ಪೂಜ್ಯ ಮಹಾರಾಜರು ಅಲ್ಲಿದ್ದ ಬಡ ಬಾಲಕನೊಬ್ಬನಿಗೆ ಸನ್ನೆ ಮಾಡಿ ಹತ್ತಿರ ಕರೆದರು. ಆ ಹುಡುಗ ಹತ್ತಿರಕ್ಕೆ ಬಂದ ಮೇಲೆ ಅವರು ಅವನಿಗೆ ತಮ್ಮ ಜೇಬಿನಲ್ಲಿದ್ದ ಬಾಳೆಹಣ್ಣನ್ನು ಕೊಟ್ಟರು. ನೋಡಿದರೆ, ನಾವು ಯಃಕಶ್ಚಿತ್ ಎಂದು ಬಿಟ್ಟುಬಂದಿದ್ದ ಬಾಳೆಯ ಹಣ್ಣೇ ಅದು.

ನಾವೊಮ್ಮೆ ತ್ರಿಪುರಾಗೆ ಹೋಗುತ್ತಿದ್ದೆವು ದಾರಿಯಲ್ಲಿ ಮಹಾರಾಜ್ ಅವರು ಅತಿಸಾರದಿಂದಾಗಿ ಅತಿಯಾಗಿ ಬಳಲಿದ್ದರು. ವೈದ್ಯರು ಅವರಿಗೆ ಐದು ದಿನಗಳ ಸಂಪೂರ್ಣ ವಿಶ್ರಾಂತಿಯನ್ನು ವಿಧಿಸಿದರು. ಅವರು ಆಗ ಗಟ್ಟಿ ಆಹಾರವನ್ನು ಸೇವಿಸದೆ, ಕೇವಲ ಗ್ಲೂಕೋಸ್ ದ್ರವದಿಂದ ಪೋಷಣೆಯನ್ನು ಪಡೆಯುತ್ತಿದ್ದರು. ಆದರೆ ಅವರಿಂದ ದೀಕ್ಷೆ ಪಡೆಯಲು ೯೦೦ ಭಕ್ತರ ದೊಡ್ಡ ಪಟ್ಟಿಯೇ ಇತ್ತು. ಮಹಾರಾಜ್ ಅವರ ಅಸ್ವಸ್ಥತೆಯಿಂದಾಗಿ ನಾವು ಈಗಾಗಲೇ ಐದು ದಿನಗಳನ್ನು ಕಳೆದುಕೊಂಡಿದ್ದುದರಿಂದ ನಮಗೆ ಉಳಿದದ್ದು ಎರಡೇ ಆಯ್ಕೆಗಳು– ಒಂದು, ದೀಕ್ಷೆ ತೆಗೆದುಕೊಳ್ಳಲಿರುವ ಭಕ್ತರ ಸಂಖ್ಯೆಯನ್ನು ಕಡಿಮೆಮಾಡುವುದು ಅಥವಾ ನಮ್ಮ ತ್ರಿಪುರಾದ ಮೊಕ್ಕಾಮಿನ ಅವಧಿಯನ್ನು ಹೆಚ್ಚಿಸುವುದು. ಇವೆರಡನ್ನೂ ತಿರಸ್ಕರಿಸಿದ ಮಹಾರಾಜ್ ಅವರು, ನಿಗದಿತ ವೇಳೆಯೊಳಗೇ ಎಲ್ಲರಿಗೂ ದೀಕ್ಷೆ ಕೊಡುವುದಾಗಿ ನಿರ್ಧರಿಸಿದರು. ಅವರು ಕಾರ್ಯಕ್ರಮ ಆರಂಭವಾದ ಮೇಲೆ ಒಂದು ದಿನದ ವಿಶ್ರಾಂತಿಯನ್ನೂ ತೆಗೆದುಕೊಳ್ಳಲಿಲ್ಲ. ಕಾರ್ಯಕ್ರಮದ ಕಡೆಯ ದಿನದಂದು, ಸಾರಿಗೆ ಅನನುಕೂಲದಿಂದಾಗಿ ನಿಗದಿತ ವೇಳೆಗೆ ಭಕ್ತರು ಬರಲಾಗಲಿಲ್ಲ. ಅವರು ಬಂದಾಗ ಮಧ್ಯಾಹ್ನ ೨ ಗಂಟೆಯಾಗಿತ್ತು. ಮಹಾರಾಜ್ ಅವರು ಊಟವನ್ನು ಮಾಡುತ್ತಿದ್ದರು. ಬಂದ ಭಕ್ತರಿಗೆ ಸಹಜವಾಗಿಯೇ ಬಹಳ ನಿರಾಶೆಯಾಯಿತು. ಇದನ್ನು ಮಹಾರಾಜ್ ಅವರಿಗೆ ತಿಳಿಸಿದಾಗ ಅವರು 'ಅವರನ್ನು ಮಂದಿರಕ್ಕೆ ಕರೆದುಕೊಂಡು ಹೋಗಿ, ಅವರಿಗೆ ಆರಂಭಿಕ ವಿಧಿಗಳನ್ನು ನೆರವೇರಿಸಲು ಹೇಳಿ' ಎಂದರು. ಭೋಜನದ ನಂತರ ಸ್ವತಃ ತಾವೇ ರಾಮಕೃಷ್ಣರ ಮಕ್ಕಳಿಗೆ ಅವರ ಆಸೆಯನ್ನು ನೆರವೇರಿಸಿಕೊಳ್ಳಲು ಸಹಾಯ ಮಾಡಿದುದಷ್ಟೇ ಅಲ್ಲದೆ, ನಿಗದಿತ ವೇಳಾಪಟ್ಟಿಯಂತೆಯೇ ತಮ್ಮ ಕಾರ್ಯಕ್ರಮವನ್ನು ಪೂರೈಸಿದರು. ನಾವು ಅಸಾಧ್ಯವೆಂದೇ ಎಣಿಸಿದ್ದ ಕಾರ್ಯವನ್ನು ಅವರು ಸುಲಲಿತವಾಗಿ ಸಾಧಿಸಿದರು. ಈ ಮೂಲಕ ನನಗೆ ಅವರು ಒಂದು ದೊಡ್ಡ ಪಾಠವನ್ನೇ ಕಲಿಸಿದರು.

ಅವರ ಆಹಾರ ಬಹಳ ಸರಳವಾಗಿತ್ತು. ಅವರ ಆಹಾರ ಕೇವಲ ಬೇಯಿಸಿದ ತರಕಾರಿ ಹಾಗೂ ಮೊಸರನ್ನ. ಪ್ರಯಾಣದ ಸಮಯದಲ್ಲಿ ಮೊದಲೇ ಅದನ್ನು ನಾವು ತಯಾರಿಸಿ ನಮ್ಮೊಂದಿಗೆ ಒಯ್ಯುತ್ತಿದ್ದೆವು. ನಾವು ವಿಮಾನದಲ್ಲಿ ಹೋಗುವಾಗಲೂ ಇದನ್ನೇ ಅನುಸರಿಸುತ್ತಿದ್ದೆವು. ಗಗನ ಸಖಿಯರು ನಮಗೆ ಊಟದ ಪೊಟ್ಟಣಗಳನ್ನು ಕೊಡಲು ಬಂದಾಗ ನನ್ನ ಕಿವಿಯಲ್ಲಿ ಮೆಲ್ಲಗೆ 'ನಾವು ಅದಕ್ಕೆ ದುಡ್ಡನ್ನು ಕೊಟ್ಟಿದ್ದೇವೆ, ಅದನ್ನೇಕೆ ಬಿಡಬೇಕು? ನಮ್ಮಿಬ್ಬರ ಪೊಟ್ಟಣಗಳನ್ನೂ ತೆಗೆದುಕೊ. ನೀನಿನ್ನೂ ಯುವಕ, ಆ ಎರಡು ಪೊಟ್ಟಣಗಳನ್ನೂ ತಿನ್ನಬಲ್ಲೆ' ಎಂದು ಹೇಳುತ್ತಿದ್ದುದಲ್ಲದೆ, ಅವೆರಡನ್ನೂ ನಾನೇ ತಿನ್ನುವಂತೆ ಬಲವಂತ ಮಾಡುತ್ತಿದ್ದರು.

ನಮ್ಮ ದಕ್ಷಿಣ ಭಾರತದ ಪ್ರವಾಸಕಾಲದಲ್ಲಿ ನಾವು ಮೈಸೂರಿಗೆ ಹೋಗಿದೆವು. ಪೂಜ್ಯ ಮಹಾರಾಜರೊಂದಿಗೆ ಆ ನಗರಕ್ಕೆ ನಾನು ಹೋದದ್ದು ಅದೇ ಮೊದಲು. ಅಲ್ಲಿ ಹಲವಾರು ಭಕ್ತರಿಗೆ ದೀಕ್ಷೆಯನ್ನು ಕೊಟ್ಟ ಮಹಾರಾಜ್ ಅವರು ಉಪನಿಷತ್ತಿನ ಮೇಲೆ ಉಪನ್ಯಾಸಗಳನ್ನು ನೀಡಿದರು. ನಾನು ಮೈಸೂರಿಗೆ ಹೊಸಬನಾಗಿದುದ್ದರಿಂದ ಮಹಾರಾಜ್ ಅವರು ಅಲ್ಲಿನ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಬರುವಂತೆ ವ್ಯವಸ್ಥೆಮಾಡಿದರು. ಹಾಗೆ ವ್ಯವಸ್ಥೆಯನ್ನು ಮಾಡಿ ಸ್ವತಃ ತಾವೇ ನನ್ನ ಸಂಗಡ ಬಂದರು. ಕೆಲವು ಸ್ಥಳಗಳನ್ನು ನೋಡಿದ ಮೇಲೆ ನಾವು ಬೃಂದಾವನಕ್ಕೆ ಹೋದೆವು. ಅಲ್ಲಿ ಸುತ್ತಾಡುತ್ತಿರುವಾಗ ಅಲ್ಲಿದ್ದ ಮನಮೋಹಕವಾದ ಬಣ್ಣದ ಕಾರಂಜಿಯನ್ನು

ಉತ್ಸಾಹದಿಂದ ನೋಡಿದ ಅವರು, 'ನೋಡು, ಇವೆಲ್ಲಾ ಮಾಯೆಯ ಕಾರ್ಯಗಳು' ಎಂದರು. ಅವರ ಮಾತುಗಳು ಸರಳವಾಗಿ ಕಂಡರೂ, ಅವು ಇಡೀ ವಿಶ್ವವೇ ಮಾಯೆಯ ಕಾರ್ಯ ಎಂಬುದನ್ನು ಸರಳವಾಗಿ ಹಾಗೂ ನೇರವಾಗಿ ತಿಳಿಸುವ ರೀತಿಯಾಗಿತ್ತು.

ಮೈಸೂರಿನಿಂದ ನಾವು ನೀಲಗಿರಿಯ ಕಡೆಗೆ ಹೊರಟೆವು. ನಾವು ಹೋಗುತ್ತಿದ್ದ ರಸ್ತೆ, ನದಿಯ ಪಾತ್ರದಂತೆ ಸುತ್ತು ಬಳಸಿನದಾಗಿತ್ತು. ಊಟಿ ನೀಲಗಿರಿ ಬೆಟ್ಟದ ಮೇಲಿನ ಒಂದು ಗಿರಿಧಾಮ. ಅಲ್ಲಿರುವ ನಮ್ಮ ಚಿಕ್ಕ ಆಶ್ರಮದಲ್ಲಿ ನಾವು ಇಳಿದುಕೊಂಡೆವು. ಆ ಸ್ಥಳದ ಬಗ್ಗೆ ಮಹಾರಾಜ್ ಅವರು ವಿಶೇಷವಾಗಿ ಭಾವುಕರಾಗುತ್ತಿದ್ದರು. ಕಾರಣ ಅದು ಅವರ ತಮ್ಮ ಹದಿನಾರನೆಯ ಎಳೆಯ ವಯಸ್ಸಿನಲ್ಲಿ ಸ್ವಾಮಿ ಶಿವಾನಂದ ಮಹಾರಾಜ್ ಅವರಿಂದ ಆಶೀರ್ವಾದ ಹಾಗೂ ದೀಕ್ಷೆಯನ್ನು ಪಡೆದ ಸ್ಥಳವಾಗಿತ್ತು. ಅಲ್ಲಿಂದ ನಾವು ಕೇರಳದ ಪಾಲ್ಘಾಟ್‌ನ್ನು ನೋಡಬಹುದಿತ್ತು. ಅದು ಮಹಾರಾಜ್ ಅವರ ಹುಟ್ಟೂರಿರುವ ಜಿಲ್ಲೆ. ಮಹಾರಾಜ್ ಅವರು ತಮ್ಮ ಹದಿನಾರನೆಯ ವಯಸ್ಸಿನಲ್ಲಿಯೇ ಆಧ್ಯಾತ್ಮದ ಬೆಳಕನ್ನು ಅರಸಿ ಮನೆಯನ್ನು ತೊರೆದು ಬಂದಿದ್ದರು. ಸ್ವಾಮಿ ಶಿವಾನಂದರ ದರ್ಶನವನ್ನು ಪಡೆಯಲು ಅವರು ಊಟಿಯವರೆಗೂ ಬಂದಿದ್ದರು. ಊಟಿಯಲ್ಲಿದ್ದಾಗ ಅವರು ಬೇರೆಯೇ ಆದ ಯಾವುದೋ ಲೋಕದಲ್ಲಿದ್ದಂತೆ ಕಾಣುತ್ತಿದ್ದರು. ತಮ್ಮ ಹಿಂದಿನ ದಿನಗಳನ್ನು ಮತ್ತೆ ನೆನಪು ಮಾಡಿಕೊಳ್ಳುತ್ತಿದ್ದರೆಂದು ತೋರುತ್ತದೆ. ಊಟಿಯಲ್ಲಿ ಕೆಲವು ಆಕಾಂಕ್ಷಿಗಳಿಗೆ ದೀಕ್ಷೆಯನ್ನು ಕೊಟ್ಟ ಮಹಾರಾಜ್ ಅವರು ಅವರಿಗೆ ತಮಿಳಿನಲ್ಲಿಯೇ ಬೋಧಿಸುತ್ತಿದ್ದರು. ತಮ್ಮ ಮಾತೃಭಾಷೆ ಮಲೆಯಾಳಂ ಆಗಿದ್ದರೂ ಅವರು ತಮಿಳನ್ನು ಚೆನ್ನಾಗಿ ಮಾತನಾಡಬಲ್ಲವರಾಗಿದ್ದರು. ಹಾಗೆ ತಮಿಳಿನಲ್ಲಿ ಮಾತನಾಡುವಾಗ ಅವರು ಆಗಾಗ್ಗೆ ನನ್ನ ಕಡೆ ತಿರುಗಿ 'ನಿನಗೆ ಇದರ ಒಂದು ಪದವೂ ಅರ್ಥವಾಗುವುದಿಲ್ಲ' ಎಂಬ ಅರ್ಥ ಬರುವ ಹಾಗೆ ತಮ್ಮ ಹೆಬ್ಬೆರಳನ್ನು ಆಡಿಸುತ್ತಿದ್ದರು.

ಅವರ ವ್ಯಕ್ತಿತ್ವದ ಸರಳತೆಗೆ ಒಂದು ಉದಾಹರಣೆ. ಒಂದು ದಿನ ನಾನು ಅವರ ಪಾದಗಳನ್ನು ಒತ್ತುತ್ತಾ ಕುಳಿತಿದ್ದೆ. ಅನಿರೀಕ್ಷಿತವಾಗಿ ಅವರು 'ನನ್ನ ಮಾಂಸಖಂಡಗಳು ದೃಢವಾಗಿಲ್ಲವೇ?' ಎಂದು ಕೇಳಿದರು. 'ದೃಢವಾಗಿವೆ' ಎಂದು ನಾನು ಉತ್ತರಿಸಿದೆ. ಆಗ ಅವರು ತಮ್ಮ ಬಾಲ್ಯದ ನೆನಪುಗಳನ್ನು ಕೆದಕುತ್ತಾ ಹೋದರು. ಅವರು ಹುಡುಗನಾಗಿದ್ದಾಗ ಕುಸ್ತಿ ಹಾಗೂ ಈಜುವುದರಲ್ಲಿ ಎತ್ತಿದ ಕೈ ಆಗಿದ್ದರಂತೆ. ತಮ್ಮ ಶಾಲೆಗೆ ಹೋಗುವ ದಾರಿಯಲ್ಲಿಯೇ ಇದ್ದಕ್ಕಿದ್ದ ಹಾಗೆ ಒಂದು ದಿನ ಕುಸ್ತಿಯಾಡುವ ಹುಮ್ಮಸ್ಸು ಬಂದು ತಾವು ಎಲ್ಲಿರುವೆವೆಂಬುದನ್ನೂ ಮರೆತು ಓಡಾಡುವವರಿಗೆ ತೊಂದರೆಯಾದುದನ್ನೂ ಗಮನಿಸದೆ ದಾರಿಗೆ ಅಡ್ಡಲಾಗಿ ನಿಂತು ಕುಸ್ತಿಯಾಡಲು ಪ್ರಾರಂಭಿಸಿದರಂತೆ. ದಾರಿಯಲ್ಲಿ ಹೋಗುವವರೊಬ್ಬರು ಬಂದು ಇವರನ್ನು ಮುಂದೆ ಹೋಗುವಂತೆ ಗದರಿಸುವವರೆಗೂ ಇವರ ಕುಸ್ತಿಯ ಆಟ ಮುಂದುವರಿದೇ ಇತ್ತಂತೆ.

ಊಟಿಯ ಮಂದಿರದಲ್ಲಿ ಒಮ್ಮೆ ಸಂಜೆಯ ಆರತಿಯ ನಂತರ ನಾನು ಆದಿ ಶಂಕರಾಚಾರ್ಯರ 'ಮನೋ–ಬುದ್ಧಿ–ಅಹಂಕಾರ–ಚಿತ್ತಾನಿ ನಾಹಂ' ಎಂಬ ಸ್ತೋತ್ರವನ್ನು ಹಾಡುತ್ತಿದ್ದೆ. ಸ್ವಾಮಿ ವಿವೇಕಾನಂದರು ಅದನ್ನು 'ನಾನು ಮನಸ್ಸಲ್ಲ, ಬುದ್ಧಿಯಲ್ಲ, ಅಹಂಕಾರವಲ್ಲ, ಚಿತ್ತವಲ್ಲ, ನಾನು ಪರಮಾತ್ಮನೇ' ಎಂಬ ಭಾವ ಬರುವಂತೆ ಭಾಷಾಂತರಿಸಿದ್ದಾರೆ. ಆರತಿಯಾದ ನಂತರ ಕೆಲವು ಭಕ್ತರು ಮಹಾರಾಜ್ ಅವರಿಗೆ ಪ್ರಣಾಮಗಳನ್ನು ಸಲ್ಲಿಸಲು ಕಾಯುತ್ತಿದ್ದರು. ಆದರೆ ಮಹಾರಾಜ್ ಅವರು ತಮ್ಮ ಕೊಠಡಿಯಲ್ಲಾಗಲೀ, ಮಠದ ಆವರಣದಲ್ಲಾಗಲೀ ಕಾಣಿಸಲಿಲ್ಲ. ಕಡೆಗೆ ದೂರದ ಪ್ರಶಾಂತವಾಗಿದ್ದ ಕತ್ತಲೆಯ ಮಂದಿರವೊಂದರಲ್ಲಿ ಧ್ಯಾನದಲ್ಲಿ ಮುಳುಗಿದ್ದರು. ಸುಮಾರು ಒಂದು ಗಂಟೆಯನಂತರ ತಮ್ಮ ಆಸನದಿಂದ ಮೇಲೆದ್ದ ಅವರು ಒಂದು ಶಬ್ದವನ್ನೂ ಉಚ್ಚರಿಸದೆ ಸಂದರ್ಶಕರ ಕೊಠಡಿಗೆ ಹೋದರು. ಅಲ್ಲಿ ಭಕ್ತರಿಂದ ಪ್ರಣಾಮಗಳನ್ನು ಸ್ವೀಕರಿಸಿ ನಂತರ ನಿಶ್ಶಬ್ದವಾಗಿ ತಮ್ಮ ಕೊಠಡಿಗೆ ತೆರಳಿದರು. ರಾತ್ರಿಯ ಊಟದ ನಂತರ ನಾನು ಮಾಮೂಲಿನಂತೆ ಅವರ

ಪಾದಗಳನ್ನು ಒತ್ತಲು ಅವರ ಬಳಿಗೆ ಹೋದೆ. ಅವರು ನಿಧಾನವಾಗಿ 'ನೀನು ಹಾಡುತ್ತಿದ್ದ ಸ್ತೋತ್ರವೇ ಅಂತಿಮ ಸತ್ಯ. ಅದು ಬಹಳ ಸುಂದರವಾಗಿತ್ತು' ಎಂದರು. ಆಗ ನನಗೆ ಅವರು ಹಾಗೆ ಇದ್ದಕ್ಕಿದ್ದ ಹಾಗೆ ಧ್ಯಾನಾಸಕ್ತರಾದುದಕ್ಕೆ ಕಾರಣ ಸಿಕ್ಕಿತ್ತು.

ಊಟಿಯಲ್ಲಿದ್ದಾಗ ಸುತ್ತಮುತ್ತಿನ ಸ್ಥಳಗಳನ್ನು ನೋಡಿಬರಲು ಮಹಾರಾಜ್ ಅವರು ನಮ್ಮೊಂದಿಗೆ ಬಂದರು. ಅವರು ನಮ್ಮನ್ನು ಹಳೆಯ ಚರ್ಚಿಗೆ ಮತ್ತು ಸ್ವಾಮಿ ವಿವೇಕಾನಂದರ ಶಿಷ್ಯರಾದ ಗುಡ್‌ವಿನ್ ಅವರ ಸಮಾಧಿಯ ಬಳಿಗೆ ಕರೆದುಕೊಂಡು ಹೋದರು. ಯಾರ ಶ್ರಮವಿಲ್ಲದಿದ್ದರೆ ಸ್ವಾಮಿ ವಿವೇಕಾನಂದರ ಮಾತುಗಳು ನಮಗೆ ಸಿಗುತ್ತಿರಲಿಲ್ಲವೋ ಅಂತಹ ಗುಡ್‌ವಿನ್ ಅವರ ಸಮಾಧಿ ಯಾರ ಅರಿವಿಗೂ ಬರದಂತೆ ಯಾವುದೋ ಒಂದು ಮೂಲೆಯಲ್ಲಿತ್ತು. ಇದು ಮಹಾರಾಜ್ ಅವರ ಮನಸ್ಸಿಗೆ ಬರಲಿಲ್ಲ. ತರುಣ ಸಂನ್ಯಾಸಿಯಾಗಿ ಊಟಿಗೆ ಬಂದಿದ್ದ ಸಮಯದಲ್ಲಿ ಅವರು ಹಳೆಯ ದಾಖಲೆಗಳನ್ನೆಲ್ಲಾ ಹುಡುಕಿ ನೋಡಿ, ಗುಡ್‌ವಿನ್ ಅವರ ಸಮಾಧಿಯ ಸ್ಥಳವನ್ನು ಪತ್ತೆ ಹಚ್ಚಿದ್ದರು. ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸಿ, ಅನುಪಮವಾದ ಕೊಡುಗೆಯನ್ನು ನೀಡಿದ್ದ ಗುಡ್‌ವಿನ್ ಅವರ ಸಮಾಧಿಯ ಮೇಲೆ ಒಂದು ಸ್ಮಾರಕವನ್ನು ನಿರ್ಮಿಸಿ, ಅಲ್ಲಿನ ಕಲ್ಲಿನ ಮೇಲೆ ಅವರ ಸಂಕ್ಷಿಪ್ತ ಜೀವನಚರಿತ್ರೆಯನ್ನೂ ಮತ್ತು ಅವರ ಕೊಡುಗೆಯನ್ನೂ ಕೊರೆಸಿದ್ದರು. ಇದಕ್ಕಾಗಿ ನಾವೆಲ್ಲರೂ ಮಹಾರಾಜ್ ಅವರಿಗೆ ಸದಾ ಕೃತಜ್ಞರಾಗಿರಬೇಕು.

ಅಂದು ಸಂಜೆ ಅವರು ಊಟಿಯ ಪುರಭವನದಲ್ಲಿ ವೇದಾಂತ ಮತ್ತು ಬೌದ್ಧಧರ್ಮದ ಕ್ಷಣಿಕ–ವಿಜ್ಞಾನವಾದ ಮತ್ತು ನಿರ್ವಾಣ ಇವುಗಳ ತೌಲನಿಕ ಅಧ್ಯಯನದ ದೃಷ್ಟಿಯಿಂದ 'ಪಿಂಡಾಂಡ ಮತ್ತು ಬ್ರಹ್ಮಾಂಡ'ಗಳ ಮೇಲೆ ಒಂದು ಉಪನ್ಯಾಸವನ್ನು ನೀಡಿದರು. ಬೌದ್ಧಯುಗದಲ್ಲಿ ಬೌದ್ಧ ಸಂನ್ಯಾಸಿಗಳು ಮಾಡಿದ ಕಠಿಣ ತಪಸ್ಸಿನ ಫಲವಾಗಿ ಊಟಿಯಲ್ಲಿ ಒಂದು ಬಗೆಯ ಆಧ್ಯಾತ್ಮಿಕತೆಯ ಅಂತರ್ಗಂಗೆ ಹರಿಯುತ್ತಿದೆ ಎಂದು ಮಹಾಪುರುಷ್ ಮಹಾರಾಜ್ (ಸ್ವಾಮಿ ಶಿವಾನಂದರು) ಹೇಳುತ್ತಿದ್ದರು ಎಂದು ಮಹಾರಾಜ್ ಅವರು ಅಂದು ರಾತ್ರಿ ನನಗೆ ಹೇಳಿದರು.

ಅವರ ಬಹುಮುಖವಾದ ಜ್ಞಾನ, ಅತ್ಯಂತ ಉಜ್ವಲವಾದ ಆಧ್ಯಾತ್ಮಿಕ ವ್ಯಕ್ತಿತ್ವ ನನಗೆ ಸ್ಫೂರ್ತಿದಾಯಕವಾಗಿದ್ದರೂ, ಅವರ ತ್ಯಾಗಮಯ ಸ್ವಭಾವ ಅತ್ಯಂತ ಪ್ರಿಯವಾಗಿತ್ತು. ಹೈದರಾಬಾದಿನಲ್ಲಿದ್ದ ಅವರ ಮಲಗುವ ಕೋಣೆ ಒಂದು ಚಿಕ್ಕ ಗ್ರಂಥಾಲಯವೇ ಆಗಿತ್ತು. ಅವರ ಆಸ್ತಿಯೆಂದರೆ ಅವರ ಪುಸ್ತಕಗಳಷ್ಟೇ. ತಮಗೆ ಬರುತ್ತಿದ್ದ ಎಲ್ಲ ಕಾಣಿಕೆಗಳನ್ನೂ ಅವರ ಜನೋಪಯೋಗೀ ಕೆಲಸಗಳಲ್ಲಿ ತೊಡಗಿ ಕೊಂಡಿರುವ ಇತರರಿಗೆ ಕೊಟ್ಟುಬಿಡುತ್ತಿದ್ದರು. ಪುಸ್ತಕಗಳನ್ನು ಬಿಟ್ಟರೆ ಅವರ ಬಳಿ ಇದ್ದುದು ಮಲಗಲು ಒಂದು ಸಣ್ಣ ಮಂಚ, ಕುಳಿತುಕೊಂಡು ಬರೆಯಲು ಉಪಯೋಗಿಸುತ್ತಿದ್ದ ಒಂದು ಕುರ್ಚಿ ಮತ್ತು ಒಂದು ಮೇಜು ಅಷ್ಟೆ. ಪ್ರಪಂಚದ ಮೂಲೆಮೂಲೆಗೂ ಹೋಗಿ, ಪ್ರಖ್ಯಾತ ವಿಶ್ವವಿದ್ಯಾನಿಲಯಗಳಲ್ಲಿ ಅವಿಸ್ಮರಣೀಯವಾದ ಪ್ರವಚನಗಳನ್ನು ನೀಡುತ್ತಿದ್ದ ಅವರ ಉಡುಗೆಯೆಂದರೆ ಸಂನ್ಯಾಸಿಯ ಕಾವಿ ಅಂಗಿ ಮತ್ತು ಶಾಲುಗಳು ಮಾತ್ರ.

ಒಮ್ಮೆ ಜಯರಾಮ್ ಬಾಟಿ ಮತ್ತು ಕಾಮಾರ್‌ಪುಕುರ್‌ಗೆ ಭೇಟಿಯಿತ್ತಾಗ, ಅಂತ್‌ಪುರ್‌ಗೆ ಬಂದೆವು. ಆ ಜಾಗದಲ್ಲಿ ಸ್ವಾಮಿ ವಿವೇಕಾನಂದರು ಮತ್ತು ಅವರ ಸೋದರ ಸಂನ್ಯಾಸಿಗಳು ತಾವು ಸಂನ್ಯಾಸಿಗಳಾಗುವ ನಿರ್ಧಾರವನ್ನು ತೆಗೆದುಕೊಂಡಿದ್ದರು ಮತ್ತು ಇಲ್ಲಿಂದಲೇ ಶ್ರೀ ರಾಮಕೃಷ್ಣ ಸಂಘದ ಅಂಕುರಾರ್ಪಣ ಹಾಗೂ 'ಆತ್ಮನೋ ಮೋಕ್ಷಾರ್ಥಂ ಜಗತ್ ಹಿತಾಯ ಚ' ಎಂಬ ತ್ಯಾಗ ಮತ್ತು ಸೇವೆಯ ತತ್ತ್ವದ ಉಗಮವೂ ಆಗಿತ್ತು ಎಂಬ ಕಥೆಯನ್ನು ಹೇಳಿ ನಮ್ಮನ್ನು ರೋಮಾಂಚನಗೊಳಿಸಿದರು. ಅಲ್ಲಿನ ಧುನಿ–ಮಂಟಪದಲ್ಲಿ ಅವರು ಧ್ಯಾನ ಮಾಡಿದರು, ನಮ್ಮನ್ನೂ ಮಾಡುವಂತೆ ಹೇಳಿದರು.

ಒಂದು ದಿನ ಅವರು ನನಗೆ ಸ್ವಾರಸ್ಯಕರವಾಗಿ ಹೇಳಿದರು, 'ಸಾಮಾನ್ಯವಾಗಿ ಮನುಷ್ಯರಲ್ಲಿ ಎರಡು ಬಗೆಯ ರಕ್ತಕಣಗಳಿರುತ್ತವೆ. ಆದರೆ ನನ್ನ ಶರೀರದಲ್ಲಿ ಮೂರು ಬಗೆಯ ರಕ್ತಕಣಗಳಿವೆ' ಎಂದರು. ನಾನು ಆಶ್ಚರ್ಯಚಕಿತನಾಗಿ 'ಅದು ಹೇಗೆ ಸಾಧ್ಯ?' ಎಂದೆ. ನನ್ನ ಸಂಶಯವನ್ನು ನಿವಾರಿಸುತ್ತಾ ಅವರು 'ನೋಡು, ಕೆಂಪು ರಕ್ತಕಣ ಮತ್ತು ಬಿಳಿ ರಕ್ತಕಣ ಎಂಬ ಎರಡು ಬಗೆಯಿರುತ್ತವೆ. ನನ್ನಲ್ಲಿರುವ ಮೂರನೆಯ ರಕ್ತಕಣವೆಂದರೆ ಸ್ವಾಮಿ ವಿವೇಕಾನಂದ ರಕ್ತಕಣ' ಎಂದರು.

ನಾನು ಪೂಜ್ಯ ಮಹಾರಾಜ್ ಅವರನ್ನು ಕೊನೆಯ ಬಾರಿ ನೋಡಿದ ಸಂದರ್ಭವನ್ನು ಮರೆಯಲು ಸಾಧ್ಯವೇ ಇಲ್ಲ. ಅದು ನಡೆದದ್ದು ನಾನು ಮೇಲೆ ಹೇಳಿದ ಘಟನೆಗಳೆಲ್ಲವೂ ನಡೆದ ಹಲವು ವರ್ಷಗಳ ನಂತರ. ಅವರ ಆರೋಗ್ಯ ಬಹುಮಟ್ಟಿಗೆ ಕ್ಷೀಣಿಸಿದ್ದು ಅವರು ವುಡ್‌ಲ್ಯಾಂಡ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರು ನಿಧನರಾಗುವುದಕ್ಕೆ ಮುಂಚೆ ಹಲವು ಬಾರಿ ನಾನು ಆಸ್ಪತ್ರೆಗೆ ಹೋಗಿದ್ದೆ. ಕಡೆಯ ಬಾರಿ ಹೋಗಿದ್ದಾಗ ಅಲ್ಲಿನ ವೈದ್ಯರು ಮಹಾರಾಜ್ ಅವರನ್ನು ಎಚ್ಚರಿಸದ ಹಾಗೆ ಹೋಗಿ ಅವರಿಗೆ ಪ್ರಣಾಮಗಳನ್ನು ಸಲ್ಲಿಸಲು ಅವರ ಕೊಠಡಿಗೆ ಹೋದೆ. ಆದರೆ ನಾನು ಅಂದುಕೊಂಡ ಹಾಗೆ ನಡೆಯಲಿಲ್ಲ. ಕಳ್ಳಹೆಜ್ಜೆಯಿಟ್ಟು ನಾನು ಹೊರಹೋಗುತ್ತಿದ್ದುದನ್ನು ಅಂತಹ ಸ್ಥಿತಿಯಲ್ಲಿಯೂ ಅವರು ಗಮನಿಸಿ, ಹತ್ತಿರ ಬರುವಂತೆ ಸನ್ನೆ ಮಾಡಿದರು. ಸಂಪೂರ್ಣವಾಗಿ ಹಾಸಿಗೆಹಿಡಿದು ಮಲಗಿದ್ದರೂ ಅವರು ತಮ್ಮ ಕೈಯನ್ನು ಎತ್ತಿ ಪ್ರೀತಿಯಿಂದ ನನ್ನನ್ನು ಹರಸಿದರು. ನನ್ನ ತಲೆ ಮತ್ತು ಎದೆಯ ಮೇಲೆ ಮೃದುವಾಗಿ ನೇವರಿಸಿದರು. ಆಗಿನ ನನ್ನ ಮನಸ್ಸಿನ ಪರಿಸ್ಥಿತಿಯನ್ನು ಬಣ್ಣಿಸಲು ಪದಗಳೇ ಬರುತ್ತಿಲ್ಲ. ನಾನು ಅವರೊಡನೆ ಇದ್ದ, ಮತ್ತು ನನ್ನೊಡನೆ ಹಂಚಿಕೊಂಡಿದ್ದ ಜೀವನದ ಅತುಲ್ಯವಾದ ವಿಸ್ಮಯಗಳನ್ನು ಅವರು ಮರೆತಿರಲಿಲ್ಲ.

ವೇದಾಂತದ ಸಂದೇಶವನ್ನು ಪಶ್ಚಿಮಕ್ಕೆ ಕೊಂಡೊಯ್ದ ಮಹಾಮಹಿಮರ ದೊಡ್ಡ ಪಟ್ಟಿಯಲ್ಲಿರುವ ಆದರ್ಶ ಋಷಿಗಳಲ್ಲಿ ಸ್ವಾಮಿ ರಂಗನಾಥಾನಂದರೂ ಒಬ್ಬರು. ಆದರೆ, ಇಪ್ಪತ್ತನೆಯ ಶತಮಾನದ ವ್ಯಕ್ತಿಗಳಲ್ಲಿ ಅವರ ಕೃತಿ ಒಂದು ರೀತಿಯಲ್ಲಿ ವಿಶೇಷವಾಗಿತ್ತು. ಸತ್ಯದ ಅನ್ವೇಷಣೆಯಲ್ಲಿ ವಿಜ್ಞಾನ ಮತ್ತು ಆಧ್ಯಾತ್ಮಿಕತೆ ಇವೆರಡೂ ಒಂದು ದಿನ ಸಂಧಿಸುತ್ತವೆ. ಅಲ್ಲದೆ, ಆಧ್ಯಾತ್ಮಿಕ ವಿದ್ಯೆ ಮತ್ತು ಭೌತಿಕ ವಿಜ್ಞಾನಗಳು ತಮಗೆರಡಕ್ಕೂ ಸಾಮಾನ್ಯವಾದ ನೆಲಗಟ್ಟೊಂದನ್ನು ಪತ್ತೆ ಹಚ್ಚುತ್ತವೆ ಮತ್ತು ಅಲ್ಲಿಂದ ಈ ವಿಶ್ವದ ಸತ್ಯ ಹಾಗೂ ಅಸ್ತಿತ್ವದಲ್ಲಿನ ಏಕತೆಗಳನ್ನು ಕಾಣಲು ಸಾಧ್ಯ ಎಂದು ಸ್ವಾಮಿ ವಿವೇಕಾನಂದರು ಕನಸುಕಂಡಿದ್ದರು. ಈ ಕನಸನ್ನು ಸಾಕಾರಗೊಳಿಸುವ ದಿಕ್ಕಿನಲ್ಲಿ ಮಹಾರಾಜ್ ಅವರು ವಿಜ್ಞಾನ ಕ್ಷೇತ್ರಗಳಲ್ಲಿನ ಇತ್ತೀಚಿನ ಸಂಶೋಧನೆಗಳು, ಪರಮಾಣು ಕ್ಷೇತ್ರದಲ್ಲಿನ ಬೆಳವಣಿಗೆಗಳು, ತಳಿಶಾಸ್ತ್ರ, ನರವಿಜ್ಞಾನ, ಅರಿವಿಗೆ ಸಂಬಂಧಿಸಿದ ಶಾಸ್ತ್ರ ಇವುಗಳನ್ನೆಲ್ಲಾ ಆತ್ಮೀಕರಿಸಿಕೊಳ್ಳಲು ತಮ್ಮ ಇಡೀ ಜೀವನವನ್ನೇ ವ್ಯಯಿಸಿದರು. ವಿಜ್ಞಾನದ ಆವಿಷ್ಕಾರಗಳು ಮತ್ತು ಸನಾತನ ಋಷಿಗಳ ದರ್ಶನಗಳು ಒಟ್ಟುಗೂಡಿದಾಗ ಉಂಟಾಗುವ ಪರಿಣಾಮವನ್ನು ಕಂಡುಹಿಡಿಯುವುದರಲ್ಲಿ ಅವರು ಉದ್ಯುಕ್ತರಾಗಿದ್ದರು. ತತ್ತ್ವಶಾಸ್ತ್ರ ಮತ್ತು ಆಧ್ಯಾತ್ಮಿಕತೆಗಳನ್ನು ವಿಜ್ಞಾನದ ಅವಿಭಾಜ್ಯ ಅಂಗವನ್ನಾಗಿಸಲು ಅವರು ಜೀವನಪೂರ್ತಿ ಪ್ರಯತ್ನಿಸಿದರು. ಇವುಗಳ ಸಾಮರಸ್ಯದಿಂದ ಮಾತ್ರ ಮಾನವಕುಲಕ್ಕೆ ಅದರ ಪರಮ ಗುರಿಯಾಗಿರುವ ಚಿದಾನಂದದ ಸ್ಥಿತಿಯು ದೊರಕುತ್ತದೆ ಎಂಬುದನ್ನು ಅವರು ಅರಿತಿದ್ದರು.

ಆಧುನಿಕ ಮತಧರ್ಮಗಳ ಚರಿತ್ರೆಯನ್ನು ಬರೆಯುವವರು, ಭಾರತದ ಆಧ್ಯಾತ್ಮಿಕ ಜ್ಞಾನವನ್ನು ಪ್ರಪಂಚದಲ್ಲೆಲ್ಲಾ ಹಂಚಿದ, ಭಾರತದ ಏಕತೆ ಹಾಗೂ ಅಭಿವೃದ್ಧಿಗಾಗಿ ಶ್ರಮಿಸಿದ, ವಿಜ್ಞಾನ ಮತ್ತು ಆಧ್ಯಾತ್ಮಿಕಗಳ ನಡುವಣ ಸಾಮರಸ್ಯವನ್ನು ಕಂಡುಹಿಡಿಯಲು ಪ್ರಯತ್ನಿಸಿ ಕ್ಷೇತ್ರಗಳಿಗೆ ಅಮೂಲ್ಯವಾದ ಕೊಡುಗೆಗಳನ್ನು ಕೊಟ್ಟಿರುವ ಪೂಜ್ಯ ಸ್ವಾಮಿ ರಂಗನಾಥಾನಂದ ಅವರ ಪಾತ್ರಕ್ಕೆ ಸೂಕ್ತ ಮಹತ್ವವನ್ನು ಕೊಡಲಿ ಎಂಬುದು ಎಲ್ಲರ ಆಶಯ.

ಹಾಗಿಲ್ಲದಿದ್ದರೆ, ಪ್ರಪಂಚದ ಧಾರ್ಮಿಕ ಮತ್ತು ಸಾಮಾಜಿಕ ಚರಿತ್ರೆಯು ಅಸಂಪೂರ್ಣವಾಗುತ್ತದೆ ಎಂಬುದು ನನ್ನ ಅನಿಸಿಕೆ.

ತಮ್ಮ ಆದರ್ಶಪ್ರಾಯವಾದ ಬದುಕಿನಿಂದ, ಆನಂದದಾಯಕವಾದ ತಮ್ಮ ಉಪಸ್ಥಿತಿಯಿಂದ ಜಗತ್ತಿನ ಲಕ್ಷಾಂತರ ಜೀವಿಗಳ ಬಾಳಿನಲ್ಲಿ ಬೆಳಕನ್ನು ಮೂಡಿಸಿದ ಪೂಜ್ಯ ಸ್ವಾಮಿ ರಂಗನಾಥಾನಂದರಿಗೆ ಈ ಮೂಲಕ ನನ್ನ ಗೌರವವನ್ನು ಅರ್ಪಿಸುತ್ತೇನೆ.

* * * *

Blank

# ಭಾಗ ೩

# ಶಾರದಾಮಠದ ಮತ್ತು
# ರಾಮಕೃಷ್ಣ ಶಾರದಾ ಮಿಷನ್ನಿನ ಸಂನ್ಯಾಸಿನಿಯರ ದೃಷ್ಟಿಯಲ್ಲಿ

Blank

## ೩೮. ಅವರು ನಮಗೆ ಶಕ್ತಿ, ಬೆಂಬಲ, ಧೈರ್ಯ ಮತ್ತು ಸ್ಫೂರ್ತಿಗಳನ್ನು ನೀಡಿದರು

–ಪ್ರವ್ರಾಜಿಕಾ ಅಜಯಪ್ರಾಣಾ*

ಪೂಜ್ಯ ಸ್ವಾಮಿ ರಂಗನಾಥಾನಂದಜೀ ಅವರನ್ನು ನಾನು ಮೊದಲು ಸಂಧಿಸಿದ್ದು ೧೯೪೫–೪೬ರಲ್ಲಿ. ಕೇರಳದ ತ್ರಿಶೂರಿಗೆ ತಮ್ಮ ತಾಯಿಯನ್ನು ನೋಡಲು ಬಂದಿದ್ದರು. ಹಾಗೂ ತ್ರಿಶೂರಿನ ರಾಮಕೃಷ್ಣ ಆಶ್ರಮದಲ್ಲಿ ತಂಗಿದ್ದರು. ಕರಾಚಿಯ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದರು ಅವರು. ತ್ರಿಶೂರಿನಿಂದ ಎರಡು ಮೈಲು ದೂರದಲ್ಲಿದ್ದ ನಮ್ಮ ಮನೆಯಿಂದ ಆಶ್ರಮದ ಸುಂದರ ವಾತಾವರಣದಲ್ಲಿ ಸಮಯ ಕಳೆಯಲು ಪ್ರತಿ ದಿನ ಬೆಳಿಗ್ಗೆ ಹೋಗುತ್ತಿದ್ದೆ. ಸ್ಥಾನೀಯ ಕಾಲೇಜುಗಳ ಅಧ್ಯಾಪಕ ವರ್ಗದವರಿಗೆ ಮತ್ತು ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಹಾಗೂ ಆಶ್ರಮದ ಭಕ್ತರಿಗೆ ಸ್ವಾಮೀಜಿ ನೀಡುತ್ತಿದ್ದ ವಿಚಾರಪೂರ್ಣ ಪ್ರವಚನಗಳನ್ನು ಕೇಳುವ ಭಾಗ್ಯವೂ ನನ್ನದಾಯಿತು. ಪೂರ್ವ ಹಾಗೂ ಪಾಶ್ಚಾತ್ಯಗಳ ಚಿಂತಕರ ಹಾಗೂ ವಿಜ್ಞಾನಿಗಳ ಉಕ್ತಿಗಳೊಂದಿಗೆ ವೇದಾಂತದ ತತ್ತ್ವಗಳನ್ನು ಹೋಲಿಸಿ ಸುಲಲಿತ ಭಾಷೆಯ ಮೂಲಕ ತಿಳಿಯಹೇಳುವ ಅವರ ಅದ್ಭುತ ವಾಕ್‌ಸಾಮರ್ಥ್ಯ ನನ್ನನ್ನು ಸೆಳೆಯಿತು. ವಿಶ್ವ, ಮಾನವ ಹಾಗೂ ವೇದಾಂತದ ದೃಷ್ಟಿಕೋನ, ಆಧುನಿಕ ವೈಜ್ಞಾನಿಕ ಮನೋಭಾವ–ಇವೆಲ್ಲವನ್ನು ಸರಿಯಾಗಿ ತಿಳಿಯಲು ಅವರ ಪ್ರವಚನಗಳು ಕಾರಣವಾದುವು. ನಾನು ಈ ಎಲ್ಲ ವಿಚಾರಗಳನ್ನು ಸರಿಯಾಗಿ ತಿಳಿಯಲು ಅವರೇ ಕಾರಣ. ಅವರೊಂದಿಗೆ ಬಹಳ ಹೊತ್ತು ಮಾತನಾಡುತ್ತಿದ್ದೆ. ನಾನು ಆಶ್ರಮವನ್ನು ಸೇರಬಯಸುತ್ತಿರುವುದನ್ನು ತಿಳಿದು ಅವರಿಗೆ ಬಹಳ ಸಂತೋಷವಾಯಿತು. ಕೋಲ್ಕತ್ತಾದ ಆಶಾದೇವಿ (ಅನಂತರ ಪ್ರವ್ರಾಜಿಕಾ ಮುಕ್ತಿಪ್ರಾಣಾ) ಹಾಗೂ ಮುಂಬೈನ ಕಲ್ಪಲತಾ ದೇವಿ (ಅನಂತರ ಪ್ರವ್ರಾಜಿಕಾ ಆತ್ಮಪ್ರಾಣಾ) – ಇವರಿಬ್ಬರ ಹೆಸರು ಹಾಗೂ ವಿಳಾಸವನ್ನು ನನಗೆ ನೀಡಿದರು. ಅವರುಗಳ ಪರಿಚಯವಿಲ್ಲದಿದ್ದರೂ ಕೂಡಲೇ ಅವರೊಂದಿಗೆ ಪತ್ರಸಂಪರ್ಕ ಪ್ರಾರಂಭಿಸಿದೆ.

೧೯೪೬ರಿಂದ ಸತತವಾಗಿ ರಂಗನಾಥಾನಂದಜೀ ಮಹಾರಾಜರ ಸಂಪರ್ಕದಲ್ಲಿದ್ದೆ. ನಾನು ಸಂನ್ಯಾಸಿನಿಯಾಗುವುದರ ಬಗ್ಗೆ ನನ್ನ ತಂದೆಯವರು ಸಂಪೂರ್ಣ ವಿರೋಧವಾಗಿದ್ದುದು ಅವರಿಗೆ ಗೊತ್ತಿತ್ತು. ನನಗೆ ಯಾವಾಗಲೂ ಪ್ರೋತ್ಸಾಹ ನೀಡಿ ನನ್ನ ನಿರ್ಧಾರಕ್ಕೆ ಸಮ್ಮತಿ ನೀಡಿದರು. ಹಲವಾರು ವರ್ಷಗಳ ಕಾಲ ನಾನು ಅವರಿಗೆ ಬರೆಯುತ್ತಿದ್ದ ಪ್ರತಿಯೊಂದು ಕಾಗದಕ್ಕೂ ತಪ್ಪದೇ ಉತ್ತರಿಸುತ್ತಿದ್ದರು ಹಾಗೂ ಎಲ್ಲ ವಿಧಗಳಿಂದಲೂ ಪ್ರೋತ್ಸಾಹಿಸುತ್ತಿದ್ದರು.

೧೯೭೧ರ ಜೂಲೈ ತಿಂಗಳಲ್ಲಿ ಪರ್ತ್ ನಗರದಲ್ಲಿ ರಾಮಕೃಷ್ಣ ವೇದಾಂತ ಸೊಸೈಟಿಯನ್ನು ಸ್ವಾಮಿ ರಂಗನಾಥಾನಂದಜೀ ಉದ್ಘಾಟಿಸಿದರು. ಸುಮಾರು ೩೫೦೦ ಕಿಲೋಮೀಟರುಗಳಿಗಿಂತ ದೂರದ ಸಿಡ್ನಿಯಿಂದ ಶ್ರೀಮತಿ ವಿಲ್ಮಾ ಸ್ಪೆನ್ಸರ್ ಈ ಕಾರ್ಯಕ್ರಮಕ್ಕೆ ಬಂದಿದ್ದರು. ಇಂಡಿಯನ್ ಪೆಸಿಫಿಕ್ ಎಂಬ ಬಹುವೇಗ ರೈಲು ಗಾಡಿಯಲ್ಲಿ ಮೂರು ದಿನಗಳ ಕಾಲ ಪ್ರಯಾಣ ಮಾಡಿದ್ದರು ಈಕೆ. ಆ ರೈಲು ನಾಲ್ಕು ಕಡೆಗಳಲ್ಲಿ ಮಾತ್ರ ನಿಲ್ಲುತ್ತಿತ್ತು. ಸಿಡ್ನಿಯಲ್ಲಿ ರಾಮಕೃಷ್ಣ ಮಿಷನ್ನಿನ ಪ್ರಕಟಣೆಗಳನ್ನು ಈಕೆ ಮಾರಾಟಮಾಡುತ್ತಿದ್ದರು. ಅಮರ ಚಿತ್ರ ಕಥೆಗಳೆಂಬ ಸರಣಿಯಲ್ಲಿ ಪ್ರಕಟವಾಗಿದ್ದ ಸಾವಿತ್ರಿ, ಶಕುಂತಲಾ, ಪಾಂಡವರಾಜಪುತ್ರರು ಇತ್ಯಾದಿ ಪುಸ್ತಕಗಳು ಒಂದು ಪೂರ್ಣ ಕಂತನ್ನೇ ಆಕೆಗೆ ಸ್ವಾಮೀಜಿ ಕಳಿಸಿದ್ದರು. ಆ ಪುಸ್ತಕಗಳ ಶೀರ್ಷಿಕೆ, ಚಿತ್ರಗಳು, ಒಳಗಿನ

---

* ಸಂನ್ಯಾಸಿನಿ ಮತ್ತು ರಾಮಕೃಷ್ಣ ಶಾರದಾ ವೇದಾಂತ ಸೊಸೈಟಿ, ಎನ್‌ಎಸ್‌ಡಬ್ಲ್ಯು, ಆಸ್ಟ್ರೇಲಿಯಾ– ಇದರ ಅಧ್ಯಕ್ಷೆ

ಬಣ್ಣಗಳು ಎಲ್ಲವೂ ಆಕರ್ಷಕವಾಗಿದ್ದವು; ಬೆಲೆಯೂ ಕಡಿಮೆ. ಸ್ವಾಮೀಜಿ ಇದರಿಂದ ಒಂದು ಮಹದುದ್ದೇಶವನ್ನೇ ಸಾಧಿಸಲು ಬಯಸಿದ್ದರು. ಮಕ್ಕಳ ಮನಸ್ಸನ್ನು ಸೆಳೆಯುವ ಚಿತ್ರಕಥಾ ಪುಸ್ತಕಗಳು ಎಲ್ಲೆಡೆ ಪ್ರಸಿದ್ಧವಾಗುತ್ತಿದ್ದು ಸಾಮಾನ್ಯವಾದ ವಿಚಾರಗಳನ್ನೇ ಅವು ಪ್ರತಿಪಾದಿಸುತ್ತಿದ್ದುವು. ಭಾರತೀಯ ಪರಂಪರೆಯ ಉನ್ನತ ತತ್ತ್ವಗಳನ್ನು ತಿಳಿಯ ಹೇಳುವ ಈ ಚಿತ್ರಕಥಾ ಪುಸ್ತಕಗಳು ಮಕ್ಕಳಿಗೆ ದೊರೆತರೆ, ಅದರಲ್ಲಿನ ವಿಚಾರಗಳು ಅವರ ಕೋಮಲ ಮನಸ್ಸುಗಳ ಮೇಲೆ ಅಚ್ಚಳಿಯದ ಇತ್ಯಾತ್ಮಕ ಪ್ರಭಾವ ಬೀರುವುವು ಎಂಬುದು ಸ್ವಾಮೀಜಿಯ ಆಶಯವಾಗಿತ್ತು. ಇಂತಹ ಪುಸ್ತಕಗಳನ್ನು ಸಂಗ್ರಹಿಸಿ ಅವುಗಳನ್ನು ಅಚ್ಚುಕಟ್ಟಾಗಿ ಕೂಡಿಸಿ ಷಿಕಾಗೋದ ವಿವೇಕಾನಂದ ವೇದಾಂತ ಸೊಸೈಟಿಗೆ, ಟೊರಾನ್ಟೊದ ವೇದಾಂತ ಸೊಸೈಟಿಗೆ, ವಾಷಿಂಗ್‌ಟನ್‌ನ ರಾಮಕೃಷ್ಣ ವೇದಾಂತ ಸೊಸೈಟಿಗೆ ಹಾಗೂ ಜಪಾನಿನಲ್ಲಿರುವ ನಿಪ್ಪಾನ್ ವೇದಾಂತ ಸೊಸೈಟಿಗಳಿಗೆ ಕಳಿಸಿದರು. ೧೯೭೧ರಲ್ಲಿ ಸ್ವಾಮೀಜಿ ಪರ್ತ್‌ಗೆ ಬಂದಾಗ ರಾಮಕೃಷ್ಣ ಆಶ್ರಮದ ಅನೇಕ ಪ್ರಕಟಣೆಗಳನ್ನು ಹಾಗೂ ಚಿತ್ರಕಥೆಗಳ ಪುಸ್ತಕಗಳನ್ನು ಭಕ್ತರು ಕೊಂಡುಕೊಂಡರು.

೧೯೭೪ರಲ್ಲಿ ಸಿಡ್ನಿಯ ನ್ಯೂ ಸೌತ್‌ವೇಲ್ಸ್‌ನಲ್ಲಿ ರಾಮಕೃಷ್ಣ ವೇದಾಂತ ಸೊಸೈಟಿಯು ಪ್ರಾರಂಭವಾದಾಗ ಸ್ವಾಮಿ ರಂಗನಾಥಾನಂದಜೀ ಅದರ ಪೋಷಕರಾದರು. ಪ್ರತಿವರ್ಷವೂ ಬಂದು, ಸೊಸೈಟಿಯು ಆಯೋಜಿಸುತ್ತಿದ್ದ ಆಧ್ಯಾತ್ಮಿಕ ಶಿಬಿರಗಳಲ್ಲಿ ಎರಡು–ಮೂರು ವಾರಗಳ ಕಾಲ ಭಾಗವಹಿಸುತ್ತಿದ್ದರು. ಭಕ್ತರು ರಮಣೀಯವಾದ ತಾಣಗಳನ್ನು ಶಿಬಿರಗಳಿಗಾಗಿ ಆಯ್ದುಕೊಳ್ಳುತ್ತಿದ್ದರು. ನಗರದ ಸದ್ದುಗದ್ದಲಗಳಿಂದ ದೂರವಿದ್ದು, ಶಿಬಿರದ ನಿಃಶಬ್ದತೆಯಲ್ಲಿ ಸ್ವಾಮೀಜಿಯ ಸಾನ್ನಿಧ್ಯವನ್ನು ಪಡೆಯುವ ಸೌಭಾಗ್ಯ ದೊರೆಯುತ್ತಿತ್ತು. ಅವರು ಹೇಳುತ್ತಿದ್ದ ಉದಾತ್ತ ವಿಚಾರಗಳನ್ನು ಕೇಳುತ್ತ, ಅವರೊಂದಿಗೆ ಧ್ಯಾನದ ಅಧಿವೇಶನಗಳಲ್ಲಿ ಪಾಲ್ಗೊಳ್ಳುತ್ತ, ಧನ್ಯತೆಯನ್ನು ಅನುಭವಿಸುತ್ತಿದ್ದೆವು. ಅವರ ಆತ್ಮೀಯ, ಸರಳ ಹಾಗೂ ಆಪ್ಯಾಯಮಾನ ವರ್ತನೆ ಎಲ್ಲರನ್ನೂ ಸೆಳೆಯುತ್ತಿತ್ತು.

ರಂಗನಾಥಾನಂದಜೀ ತುಂಬ ಎತ್ತರದ ವ್ಯಕ್ತಿಯಲ್ಲ; ಆರಡಿಗಿಂತ ಕಡಿಮೆಯೇ. ಆದರೆ ಅವರು ನಡೆಯುತ್ತಿದ್ದ ರೀತಿ, ಅವರ ಗಂಭೀರ ನಿಲುವು ಹಾಗೂ ನಡತೆ ಬಹಳ ಎತ್ತರದ ಘನ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತಿದ್ದವು. ಶಿಬಿರಗಳಲ್ಲಿ ಭಾಗವಹಿಸುತ್ತಿದ್ದ ಭಕ್ತರು ಸಾಮಾನ್ಯವಾಗಿ ಕೆಳಗೇ ಕುಳಿತುಕೊಳ್ಳುತ್ತಿದ್ದರು. ವಯಸ್ಕರಿಗಾಗಿ ಕೆಲವು ಕುರ್ಚಿಗಳನ್ನು ಹಿಂಬದಿಯಲ್ಲಿ ಇಡಲಾಗುತ್ತಿತ್ತು. ಸರಿಯಾದ ವೇಳೆಗೆ ತಮ್ಮ ಕೋಣೆಯಿಂದ ಹೊರಬರುತ್ತಿದ್ದ ಸ್ವಾಮೀಜಿ ಕುಳಿತಿದ್ದ ಭಕ್ತರ ನಡುವೆ ನಡೆಯುತ್ತ ತಮ್ಮ ಆಸನದತ್ತ ಹೋಗುತ್ತಿದ್ದರು. ಅವರು ಹಾಗೆ ನಡೆದು ಹೋಗುತ್ತಿದ್ದಾಗ ಬಹಳ ಎತ್ತರವಾಗಿ ಗೋಚರಿಸುತ್ತಿದ್ದರು ಎಂದು ಭಕ್ತರು ಹೇಳುತ್ತಿದ್ದರು. ನೇರವಾಗಿ ನಡೆಯುತ್ತಿದ್ದರು ಹಾಗೂ ರಾಜಗಾಂಭೀರ್ಯವಿತ್ತು ಅವರ ನಡಿಗೆಯಲ್ಲಿ. ಅವರ ವ್ಯಕ್ತಿತ್ವದ ಒಂದು ವಿಶೇಷ ಅಂಶ ಇದು.

ಪ್ರಪಂಚದ ಎಲ್ಲೆಡೆಯಿಂದ ಅವರ ಪ್ರವಚನಗಳಿಗೆ ಬೇಡಿಕೆ ಬರಲು ಪ್ರಾರಂಭಿಸಿದಾಗ ಅಷ್ಟೊಂದು ಕಾರ್ಯಕ್ರಮಗಳನ್ನು ಹಾಗೂ ಪ್ರಯಾಣವನ್ನು ನಿಭಾಯಿಸುವುದು ಅಸಾಧ್ಯವಾಯಿತು. ಪ್ರತಿವರ್ಷವೂ ಬರುವುದು ಬಹಳ ಪ್ರಯಾಸವಾಗುತ್ತಿದೆಯೆಂದು ಆಸ್ಟ್ರೇಲಿಯಾದ ಭಕ್ತರಿಗೆ ತಿಳಿಸಿದರು. ಸಿಡ್ನಿಗೆ ಒಬ್ಬರು ಸ್ವಾಮಿಗಳನ್ನು ಖಾಯಂ ನೇಮಿಸಬೇಕೆಂದು ಕೇಳಿಕೊಂಡು, ಭಕ್ತರು ಬೇಲೂರು ಮಠಕ್ಕೆ ಮನವಿ ಸಲ್ಲಿಸಿದರು. ಈ ರೀತಿಯಾಗಿ ಕೇಳಿಕೊಳ್ಳಲು ಸಲಹೆಯಿತ್ತದ್ದು ರಂಗನಾಥಾನಂದರೇ. ಈ ಖಂಡದಲ್ಲಿ ಒಂದು ಹೊಸ ಕೇಂದ್ರವನ್ನು ಪ್ರಾರಂಭಿಸಲು ಆಗ ಬೇಲೂರು ಮಠ ತಯಾರಿರಲಿಲ್ಲ. ಆದ್ದರಿಂದ ಸ್ವಾಮಿ ರಂಗನಾಥಾನಂದಜೀಯವರ ನಿರ್ದೇಶನದಂತೆ ಭಕ್ತರು ಶ್ರೀ ಶಾರದಾ ಮಠವನ್ನು ಸಂಪರ್ಕಿಸಿ ಒಂದು ಕೇಂದ್ರವನ್ನು ಸ್ಥಾಪಿಸಬೇಕೆಂದೂ ಒಬ್ಬರು ಸಂನ್ಯಾಸಿನಿಯನ್ನು ನೇಮಿಸಬೇಕೆಂದೂ ಕೇಳಿಕೊಂಡರು. ಭಕ್ತರು ಮನವಿ ಸಲ್ಲಿಸಿದಾಗ ರಂಗನಾಥಾನಂದರೂ ವೈಯಕ್ತಿಕವಾಗಿ ಶಾರದಾ ಮಠದ ಅಧಿಕಾರಿಗಳನ್ನು ಒತ್ತಾಯಿಸಿದರು. ಆಸ್ಟ್ರೇಲಿಯಾದ ಈ ಹೊಸ ಜವಾಬ್ದಾರಿಯನ್ನು ಯಾರು

ನಿಭಾಯಿಸಬೇಕು ಎಂಬ ಪ್ರಶ್ನೆ ಬಂದಾಗ, ಕೆಲವು ಹೆಸರುಗಳನ್ನು ಪಟ್ಟಿಮಾಡಲಾಯಿತು. ಆದರೆ ಆ ಪಟ್ಟಿಯಲ್ಲಿದ್ದವರೆಲ್ಲ ಈಗಾಗಲೇ ತಮ್ಮ ತಮ್ಮ ಕೇಂದ್ರಗಳಲ್ಲಿ ನಾನಾ ಕೆಲಸ ಕಾರ್ಯಗಳಲ್ಲಿ ಸಿಕ್ಕಿಹಾಕಿಕೊಂಡಿದ್ದರು. ಆಗ ನನ್ನ ಹೆಸರನ್ನು ಸೂಚಿಸಲಾಯಿತು ಹಾಗೂ ಸ್ವಾಮೀಜಿಯೂ ನನ್ನ ಹೆಸರನ್ನು ಅನುಮೋದಿಸಿದರು.

ಸಿಡ್ನಿಗೆ ಆರು ತಿಂಗಳ ಕಾಲ ಹೋಗುವ ಮುನ್ನ, ೧೯೭೭ರಲ್ಲಿ, ಅವರನ್ನು ಭೇಟಿಯಾದಾಗ ನಾನು ಕೇಳಿದೆ: "ತಮ್ಮ ಉದಾತ್ತ ವೇದಾಂತ ವಿಚಾರಗಳು, ಅದ್ಭುತ ಶೈಲಿ ಹಾಗೂ ಮಧುರವಾದ ಭಾಷೆಗೆ ಒಗ್ಗಿಹೋಗಿರುವ ಆ ಜನರಿಗೆ ನಾನು ಏನು ತಾನೇ ನೀಡಬಲ್ಲೆ? ನಾನು ಅತಿ ಸಾಮಾನ್ಯಳು, ನನ್ನ ಪ್ರವಚನಗಳು ಬಹಳ ಸಹಜ ಸಾಧಾರಣ." ಅವರ ಉತ್ತರ ಚೆನ್ನಾಗಿತ್ತು: "ನನ್ನಂತೆ ಉಪನ್ಯಾಸ ಮಾಡೋದಾದರೆ ನೀನು ಅಲ್ಲಿಗೆ ಹೋಗಬೇಕಾಗಿಲ್ಲ, ಅದರಿಂದ ಪ್ರಯೋಜನವಿಲ್ಲ. ನನಗೆ ಸಮಯ ದೊರೆತಾಗ ನಾನೇ ಹೋದರೆ ಆದೀತು" ಎಂದರು. ಮತ್ತೆ ಮುಗುಳ್ನಗುತ್ತ ಹೇಳಿದರು: "ಆದರೆ ನೀನು ಎರಡು ಕಾರ್ಯಗಳನ್ನು ಮಾಡಬಲ್ಲೆ ಎಂಬುದು ನನಗೆ ತಿಳಿದಿದೆ. ಜನರನ್ನು ಪ್ರೀತಿಸು ಮತ್ತು ನಮ್ಮ ಉಪದೇಶದಂತೆ ಜೀವನ ನಡೆಸು." ಅವರು ಕೂಡ ಇದನ್ನೇ ತಾನೇ ಮಾಡಿಕೊಂಡು ಬಂದಿರುವುದು ಯಾವಾಗಲೂ! ನಾನೂ ಹಾಗೇ ಇರಲು ಪ್ರಯತ್ನಿಸುತ್ತಿರುವೆ. ಅವರ ಮಾತುಗಳು ಈಗಲೂ ನನ್ನ ಕಿವಿಯಲ್ಲಿ ಅನುರಣಿತವಾಗುತ್ತಿವೆ; ಈ ದೇಶದಲ್ಲಿ ಎಲ್ಲ ಪರಿಸ್ಥಿತಿಗಳಲ್ಲೂ ನನಗೆ ಆಸರೆಯಾಗಿವೆ.

ಸಿಡ್ನಿಯ ಮಾರ್ಟ್‌ಡೇಲ್‌ನಲ್ಲಿ ಬಾಡಿಗೆಯ ಮನೆಯೊಂದರಲ್ಲಿ ನ್ಯೂ ಸೌತ್ ವೇಲ್ಸ್‌ನ ರಾಮಕೃಷ್ಣ ಶಾರದಾ ವೇದಾಂತ ಸೊಸೈಟಿಯನ್ನು ೧೯೮೨ರ ಜೂನ್ ೨೦ರಂದು ಸ್ವಾಮೀಜೀ ಉದ್ಘಾಟಿಸಿದರು. ವಿದೇಶದಲ್ಲಿ ಶ್ರೀ ಶಾರದಾ ಮಠದ ಕೇಂದ್ರವೊಂದನ್ನು ಸ್ಥಾಪಿಸಬೇಕೆಂಬ ಅವರ ಬಹುದಿನಗಳ ಆಸೆ ಈಡೇರಿದಾಗ ಅವರಿಗೆ ಬಹಳ ಸಂತೋಷ ಹಾಗೂ ಹೆಮ್ಮೆ. ಹೊಸದಾಗಿ ಜನ್ಮತಾಳಿದ ಆ ಕೇಂದ್ರವನ್ನು, ಭಾರತದಿಂದ ಬಂದಿದ್ದ ನಾವಿಬ್ಬರು ಸಂನ್ಯಾಸಿನಿಯರನ್ನು ಹಾಗೂ ಸಿಡ್ನಿಯ ಸುತ್ತಮುತ್ತಲಿಂದ ಮತ್ತು ದಕ್ಷಿಣ ಆಸ್ಟ್ರೇಲಿಯಾದ ಅಡಿಲೈಡ್‌ನಿಂದ ಬಂದಿದ್ದ ಭಕ್ತರನ್ನು ಆಶೀರ್ವದಿಸಿದರು. ಪೌರುಷತ್ವದ ಬೀಡಾಗಿರುವ ಈ ದೇಶಕ್ಕೆ ಶಾರದಾದೇವಿಯಂತಹ ಮಾತೃಮೂರ್ತಿಯ ಆವಶ್ಯಕತೆಯಿದೆ, ಅದರ ಆಧ್ಯಾತ್ಮಿಕತೆಯನ್ನು ಪೋಷಿಸಿ ಕಾಪಾಡಲು ಎಂದು ಸ್ವಾಮಿ ರಂಗನಾಥಾನಂದಜೀ ಹೇಳುತ್ತಿದ್ದರು.

ಸಿಡ್ನಿಯ ಹೊರವಲಯದಲ್ಲಿರುವ ಬರ್‌ವುಡ್ ಎಂಬ ಉತ್ತಮ ಬಡಾವಣೆಯಲ್ಲಿ ಮನೆ ದೊರೆಯುವ ತನಕ ವರ್ಷಕ್ಕೊಂದು ಬಾರಿಯೆಂಬಂತೆ ಮನೆ ಬದಲಾಯಿಸುತ್ತ, ಮೂರು ವರ್ಷಗಳ ಅನಂತರ, ೧೯೮೫ರಲ್ಲಿ ಸ್ಥಾಯಿಯಾದ ನಿವಾಸ ಹೊಂದಿದೆವು. ನಮ್ಮದೇ ಆದ ಮಠದ ಜಾಗದಲ್ಲಿ ನಾವು ನೆಲೆನಿಂತಿದ್ದನ್ನು ಕಂಡು ಅವರಿಗೆ ಸಂತಸವಾಯಿತು. ಚಿಕ್ಕದಾಗಿದ್ದರೂ, ನಿಃಶಬ್ದತೆ ಹಾಗೂ ಶುಭಗಳ ಬೀಡಾಗಿತ್ತು. ನಾವು ನಮ್ಮ ಚಟುವಟಿಕೆಗಳನ್ನು ಸ್ವಲ್ಪ ವಿಸ್ತರಿಸಿದರೂ ಸ್ವಾಮೀಜಿ ತೃಪ್ತಿಯನ್ನು ವ್ಯಕ್ತಪಡಿಸಿ ಪತ್ರ ಬರೆಯುತ್ತಿದ್ದರು. ೧೯೮೬ರ ನಂತರ ಅವರು ಆಸ್ಟ್ರೇಲಿಯಾಕ್ಕೆ ಬರುವುದು ನಿಂತುಹೋದುದರಿಂದ, ನಂತರದ ಅಭಿವೃದ್ಧಿ ಕಾರ್ಯಗಳನ್ನು ಕಣ್ಣಾರೆ ನೋಡಲಾಗಲಿಲ್ಲ ಅವರು ಎಂಬುದು ವಿಷಾದನೀಯ.

ಈಗಿರುವ ಮಠದ ಜಾಗವನ್ನು ಕೊಳ್ಳಲು, ಸಿಡ್ನಿಯಿಂದ ಎರಡು ಮೈಲು ದೂರವಿರುವ ರಾಬರ್ಟ್‌ಸನ್‌ನಲ್ಲಿನ ಸಂಪತ್ತಾಗಿದ್ದ ದರಮ ಎಂಬ ಜಾಗಕ್ಕೆ ವರ್ಗಾವಣೆಗೊಳ್ಳಬೇಕಾಯಿತು. ಭಕ್ತರಿಂದ ಅಷ್ಟೊಂದು ದೂರದಲ್ಲಿ, ಯಾವುದೋ ಕಾಡುಪ್ರದೇಶಕ್ಕೆ ನಾವು ಹೋಗುವೆವು ಎಂಬುದನ್ನು ಕೇಳಿ ಸ್ವಾಮೀಜಿ ಬಹಳ ಚಿಂತಿತರಾದರು. ಆ ಸಣ್ಣಮನೆಯನ್ನು ಮಾರಿ, ಸೌಕರ್ಯವಿರುವ ದೊಡ್ಡ ಮನೆಯೊಂದನ್ನು ಕೊಂಡುಕೊಳ್ಳುವ ತನಕ, ಒಂದೆರಡು ತಿಂಗಳ ಕಾಲ ನಾವು ರಾಬರ್ಟ್‌ಸನ್‌ನಲ್ಲಿ ಇರಬೇಕಾಗಬಹುದು ಎಂದು ನಾನು ಅವರಿಗೆ ತಿಳಿಸಿದಾಗ, ಬಹಳ ಕಳಕಳಿಯಿಂದ 'ಆ ಕಾಡಿನಲ್ಲಿ ಹೇಗೆ ವಾಸಮಾಡುತ್ತಿರುವೆ?' ಎಂದು ಕೇಳಿದ್ದರು. ಅದು ಕಾಡಲ್ಲ, ಆಸ್ಟ್ರೇಲಿಯಾದ ಗ್ರಾಮ್ಯ ಪರಿಸರ ಎಂದು ನಾನು ವಿವರಿಸಿದೆ. ಇತರ ದೇಶಗಳಂತೆ ಆಸ್ಟ್ರೇಲಿಯಾದಲ್ಲಿ ಎಲ್ಲೂ ಕಾಡುಪ್ರಾಣಿಗಳಿರಲಿಲ್ಲ.

ನೂರು ಎಕರೆಗಳಿಗಿಂತ ವಿಸ್ತಾರವಾದ ಪ್ರದೇಶವನ್ನು ಅಲ್ಲಿನ ಪ್ರತಿಯೊಬ್ಬರೂ ಹೊಂದಿದ್ದರಾದರೂ ಪಕ್ಕದ ಮನೆಯನ್ನು ನಮ್ಮ ಮನೆಯೊಳಗಿನಿಂದ ನೋಡಬಹುದಾಗಿತ್ತು. ಹರಿದಾಸಿ ಎಂಬ ಆಸ್ಟ್ರೇಲಿಯಾದ ಮಹಿಳಾ ಭಕ್ತೆ ರಾತ್ರಿಯ ಹೊತ್ತು ನಮ್ಮಲ್ಲಿಗೆ ಬಂದು ಮಲಗುತ್ತಿದ್ದರು. ತುರ್ತು ಪರಿಸ್ಥಿತಿಯೇನಾದರೂ ಬಂದಲ್ಲಿ, ಆಕೆಯ ಬಳಿ ಇದ್ದ ವಾಹನದ ಸೌಲಭ್ಯ ನಮಗೆ ದೊರೆಯುತ್ತಿತ್ತು. ಆಕೆಯ ಪತಿಯೂ ಇದಕ್ಕೆ ಒಪ್ಪಿದ್ದರು. ವಾರದಲ್ಲಿ ಆರು ದಿನಗಳು ನಮ್ಮಲ್ಲಿ ಮಲಗುತ್ತಿದ್ದರು ಆಕೆ. ವಾರಾಂತ್ಯಗಳಂದು ಸಿಡ್ನಿಯಿಂದ ಕೆಲವು ಭಕ್ತರು ಬರುತ್ತಿದ್ದರು. ಇದನ್ನೆಲ್ಲ ತಿಳಿಸಿದಾಗ ಸ್ವಾಮೀಜಿ ಸಮಾಧಾನಗೊಂಡು ತಮ್ಮ ಪ್ರತಿಯೊಂದು ಕಾಗದದಲ್ಲೂ 'ನನ್ನ ದೇವತೆ' ಹರಿದಾಸಿ ಹೇಗಿರುವಳು ಎಂದು ವಿಚಾರಿಸುತ್ತಿದ್ದರು. ಈ ಕೇಂದ್ರದ ಬಗ್ಗೆ ನಮ್ಮಗಳ ಬಗ್ಗೆ ಇಲ್ಲಿನ ಭಕ್ತರಿಗಿದ್ದ ಅಕ್ಕರೆ ಊಹಿಸಲಾಗದಂಥದ್ದು. ನಮ್ಮ ಎಲ್ಲ ಅಡೆತಡೆಗಳನ್ನು ಅತಿಕ್ರಮಿಸಲು ಅದು ನಮಗೆ ಶಕ್ತಿ, ಧೈರ್ಯ, ಪ್ರೇರಣೆ ಹಾಗೂ ಆಸರೆಯ ಸೆಲೆಯಾಯಿತು.

* * * *

# ೩೯. ಅವರು 'ನಮ್ಮವರೇ' ಆಗಿದ್ದರು

–ಪ್ರವ್ರಾಜಿಕಾ ಧ್ರುವಪ್ರಾಣಾ*

ಸಾಮಾನ್ಯ ವ್ಯಕ್ತಿಗಳಂತೆ ಮಹಾಪುರುಷರು ಕೂಡ ಈ ಜಗತ್ತಿಗೆ ಬರುತ್ತಾರೆ, ಜೀವಿಸುತ್ತಾರೆ ಹಾಗೂ ನಿರ್ಗಮಿಸುತ್ತಾರೆ. ಆದರೆ ಈ ಮಹಾಪುರುಷರು ಜಗತ್ತನ್ನು ಬಿಟ್ಟುಹೋದ ನಂತರವೂ ಜನರ ಹೃದಯದಲ್ಲಿ ಉಳಿಯುತ್ತಾರೆ. ತಮ್ಮ ಉಜ್ಜ್ವಲ ಜೀವನದಿಂದ ಜನರ ಮೇಲೆ ಅದೆಂತಹ ಅಚ್ಚಳಿಯದ ಪ್ರಭಾವ ಬೀರುತ್ತಾರೆಂದರೆ ಎಂದೆಂದೂ ಅವರನ್ನು ಗೌರವದಿಂದ ಸ್ಮರಿಸಿಕೊಳ್ಳುತ್ತ ಅನುಸರಿಸುತ್ತಾರೆ. ಪರಮ ಪೂಜ್ಯ ಸ್ವಾಮಿ ರಂಗನಾಥಾನಂದಜೀ ಇಡೀ ಜಗತ್ತೇ ಗೌರವಿಸುವಂತಹ ಮಹಾಪುರುಷ. ಅಂತಹ ಮಹಾವ್ಯಕ್ತಿಯ ಬಗ್ಗೆ ಭಾವಿಸುವುದು, ಹೇಳುವುದು ಮತ್ತು ಸ್ಮರಿಸುವುದು ಆನಂದದಾಯಕ.

ನಾನು ಶ್ರೀಮತ್ ಸ್ವಾಮಿ ರಂಗನಾಥಾನಂದರನ್ನು ಮೊದಲ ಬಾರಿ ಭೇಟಿಯಾದದ್ದು ೧೯೫೮ರಲ್ಲಿ ಅವರು ದೆಹಲಿಯ ರಾಮಕೃಷ್ಣ ಮಠದ ಅಧ್ಯಕ್ಷ ರಾಗಿದ್ದಾಗ. ನಾನಾಗ ಕಲ್ಲಿಕೋಟೆಯಲ್ಲಿರುವ ರಾಮಕೃಷ್ಣ ಮಿಷನ್ ಪ್ರೌಢಶಾಲೆಯಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಮತ್ತು ನನ್ನ ಇಬ್ಬರು ಸಹೋದ್ಯೋಗಿಗಳು ಉತ್ತರ ಭಾರತದಲ್ಲಿರುವ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಕೇಂದ್ರಗಳನ್ನು ನೋಡಿಬರುವಂತೆ ನಮ್ಮ ಶಾಲೆಯ ಅಧ್ಯಕ್ಷರಾಗಿದ್ದ ಸ್ವಾಮಿಗಳು ಎಲ್ಲ ವ್ಯವಸ್ಥೆ ಮಾಡಿಕೊಟ್ಟಿದ್ದರು. ಬೇಸಿಗೆಯ ರಜೆಯಲ್ಲಿ ಬೇಲೂರು ಮಠಕ್ಕೆ ಹೋದೆವು. ಶ್ರೀ ಶ್ರೀ ಗುರುಮಹಾರಾಜ್, ಶ್ರೀಮಾತೆ ಹಾಗೂ ಸ್ವಾಮೀಜಿಯೊಂದಿಗೆ ಸಂಬಂಧಿಸಿದ ಪ್ರಮುಖ ಸ್ಥಳಗಳನ್ನೆಲ್ಲ ನೋಡಿಯಾದ ಮೇಲೆ ನಾವು ಬನಾರಸ್ ಮತ್ತು ಅಲಹಾಬಾದಿಗೆ ಹೋದೆವು. ಅಲ್ಲಿಂದ ದೆಹಲಿಗೆ ಹೋದೆವು. ಅಲ್ಲಿ ಸ್ವಾಮಿ ರಂಗನಾಥಾನಂದಜಿ ಅವರನ್ನು ಭೇಟಿಯಾದಾಗ, ಅವರು ಮೂಲತಃ ಕೇರಳದವರು ಎಂಬುದು ನನಗೆ ತಿಳಿದಿರಲಿಲ್ಲ. ಅವರು ಮಲಯಾಳಂ ಭಾಷೆಯಲ್ಲಿ ಮಾತನಡಿದಾಗ ಮಾತ್ರ ಅವರು ಮಲೆಯಾಳಿಯೆಂಬುದು ತಿಳಿದುಬಂದಿತು. ನಮ್ಮ ವಸತಿ ಇತ್ಯಾದಿಗಳನ್ನು ಭಕ್ತರೊಬ್ಬರ ಮನೆಯಲ್ಲಿ ಮಾಡಲಾಗಿತ್ತು. ಅವರ ನಿರ್ದೇಶನದಂತೆ ಆಕೆ ದೆಹಲಿಯ ಎಲ್ಲ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಿಗೆ ನಮ್ಮನ್ನು ಕರೆದೊಯ್ದರು. ಒಂದು ಸಂಜೆ ಸ್ವಾಮೀಜಿ ನೀಡಿದ 'ಗೀತಾ' ಪ್ರವಚನವನ್ನು ಆಲಿಸುವ ಸೌಭಾಗ್ಯ ದೊರೆಯಿತು. ಸಭಾಂಗಣವು ಜನರಿಂದ ತುಂಬಿಹೋಗಿದ್ದು, ಹೊರಗಡೆ ಅನೇಕ ಆಸಕ್ತರು ನಿಂತಿರುವುದನ್ನು ಕಂಡು ನನಗೆ ಆಶ್ಚರ್ಯವಾಯಿತು. ಎಲ್ಲೆಡೆ ನಿಶ್ಶಬ್ದತೆಯಿತ್ತು. ಅವರ ಪ್ರವಚನದಿಂದ ನಾನು ಅದೆಷ್ಟು ಆಕರ್ಷಿತಳಾಗಿದ್ದೆನೆಂದರೆ ಅವರು ಯಾವಾಗ ಸಮಾಪ್ತಿ ಮಾಡಿದರು ಎಂಬುದೇ ತಿಳಿಯಲಿಲ್ಲ. ಅವರ ಸಾನ್ನಿಧ್ಯ ಆನಂದದಾಯಕವಾಗಿತ್ತು. ನಾವು ಕಂಖಲ್ ಆಶ್ರಮ ಮತ್ತು ವೃಂದಾವನವನ್ನು ದರ್ಶನ ಮಾಡಲು ಎಲ್ಲ ವ್ಯವಸ್ಥೆಯನ್ನೂ ಮಾಡಿಕೊಟ್ಟರು. ನಾನು ಕಲ್ಲಿಕೋಟೆಗೆ ಹಿಂದಿರುಗಿದ ಮೇಲೂ ಅವರ ಅದ್ಭುತ ವಾಣಿ ಕಿವಿಯಲ್ಲಿ ಅನುರಣಿತವಾಗುತ್ತಿತ್ತು. ಅವರೊಂದಿಗೆ ಸಂಪರ್ಕ ಇಟ್ಟುಕೊಳ್ಳಬೇಕು ಎಂಬ ಬಯಕೆಯಿತ್ತಾದರೂ, ಅಂತಹ ಮಹಾವ್ಯಕ್ತಿಗೆ ಕಾಗದ ಬರೆಯುವುದು ಹೇಗೆ ಎಂಬ ಸಂಕೋಚದಿಂದಾಗಿ ಅದು ಆಸೆಯಾಗಿಯೇ ಉಳಿಯಿತು.

ನಾನು ೧೯೬೩ರಲ್ಲಿಯೇ ಸಂಘವನ್ನು ಸೇರಿದೆನಾದರೂ ದಕ್ಷಿಣೇಶ್ವರದ ಶ್ರೀ ಶಾರದಾ ಮಠಕ್ಕೆ ೧೯೬೪ರ ಜನವರಿ ೧ರಂದು ತಲುಪಿದೆ. ಮಠದ ಹಿರಿಯ ಸಂನ್ಯಾಸಿನಿಯರಿಂದ ಪೂಜ್ಯ ಮಹಾರಾಜರ ಬಗ್ಗೆ ತಿಳಿಯುತ್ತಿದ್ದೆನಾದರೂ ಅವರನ್ನು ಭೇಟಿಯಾಗುವ ಅವಕಾಶ ದೊರೆಯಲಿಲ್ಲ. ಅವರು ಆಗ ಕಲ್ಕತ್ತೆಯಲ್ಲಿರುವ

* ಸಂನ್ಯಾಸಿನಿ ಮತ್ತು ಕಾರ್ಯದರ್ಶಿನಿ, ರಾಮಕೃಷ್ಣ ಶಾರದಾ ಮಿಶನ್, ತಿರುವನಂತಿಪುರಂ, ಕೇರಳ.

ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನ ಪ್ರಮುಖರಾಗಿದ್ದರು. ಒಂದು ದಿನ 'ಶ್ರೀ ಗುರುವಾಯೂರಪ್ಪನ್' ಎಂಬ ಮಲಯಾಳಿ ಚಲನಚಿತ್ರವನ್ನು ಇನ್‌ಸ್ಟಿಟ್ಯೂಟ್‌ನಲ್ಲಿ ತೋರಿಸುವುದಾಗಿಯೂ, ಅದನ್ನು ನೋಡಲು ಬರಬೇಕೆಂದೂ ನಮ್ಮ ಪ್ರಧಾನ ಸಂಪಾದಕರಿಗೆ ತಿಳಿಸಿದ್ದರು. ಮಲಯಾಳಿಗಳನ್ನು ಕಳಿಸಬೇಕೆಂದು ವಿಶೇಷವಾಗಿ ಕೇಳಿಕೊಂಡಿದ್ದರು. ಹೀಗಾಗಿ ನನ್ನನ್ನೂ ಕಳಿಸಲಾಯಿತು. ಪರಮಪೂಜ್ಯ ಶ್ರದ್ಧಾಪ್ರಾಣಾಜೀ ಹಾಗೂ ಸಂಘದ ಇತರ ಸದಸ್ಯರು ನನ್ನೊಂದಿಗೆ ಇದ್ದರು. ನಾವು ಮಹಾರಾಜರನ್ನು ಭೇಟಿಯಾದೊಡನೆ ಯಾರಾದರೂ ಮಲಯಾಳಿಗಳು ಬಂದಿದ್ದಾರೆಯೇ ಎಂದು ಮೊದಲು ಕೇಳಿದರು. ಶ್ರದ್ಧಾಪ್ರಾಣಾಜೀ ನನ್ನ ಹೆಸರನ್ನು ಹೇಳಿ ನನ್ನತ್ತ ಕೈ ತೋರಿದಾಗ, ಆಶ್ಚರ್ಯವೆಂದರೆ, ನನ್ನನ್ನು ದೆಹಲಿಯಲ್ಲಿ ನೋಡಿರುವುದಾಗಿ ಮಹಾರಾಜರು ಹೇಳಿದರು. ಎಂಟು ವರ್ಷಗಳ ಹಿಂದೆ ಭೇಟಿಯಾಗಿದ್ದ ನನ್ನನ್ನು – ಅತಿ ಸಾಮಾನ್ಯಳನ್ನು – ಈ ಮಹಾನ್ ವ್ಯಕ್ತಿ ನೆನಪಿಟ್ಟುಕೊಂಡಿರುವರಲ್ಲ ಎಂದು ನನಗೆ ಅಚ್ಚರಿಯಾಯಿತು. ಶ್ರದ್ಧಾಪ್ರಾಣಾಜೀ ಅವರಿಗೆ ಚಲನಚಿತ್ರದ ವಿವಿಧ ಪ್ರಸಂಗಗಳನ್ನು ಬಂಗಾಳಿಯಲ್ಲಿ ವಿವರಿಸುವಂತೆ ನನಗೆ ಹೇಳಿದರು.

ನಾನು ಮಠವನ್ನು ಸೇರಿಕೊಂಡ ಮೇಲೆ ಮಹಾರಾಜರೊಂದಿಗೆ ಸಂಪರ್ಕದಲ್ಲಿರಲು ಅವಕಾಶಗಳು ದೊರೆತವು. ನಾನು ತ್ರಿಶೂರಿನಲ್ಲಿದ್ದೆ ಹಾಗೂ ಅವರು ಪ್ರತಿ ವರ್ಷ ಆಧ್ಯಾತ್ಮಿಕ ಶಿಬಿರಗಳಲ್ಲಿ 'ಗೀತೆ'ಯನ್ನು ಕುರಿತು ಪ್ರವಚನಗಳನ್ನು ನೀಡಲು ತ್ರಿಶೂರಿಗೆ ಬರುತ್ತಿದ್ದರು. ನಾವು ಅವರ ಪ್ರವಚನಗಳನ್ನು ಕೇಳಲು ಹೋಗುತ್ತಿದ್ದೆವು ಹಾಗೂ ಅವರನ್ನು ಭೇಟಿಯಾಗುತ್ತಿದ್ದೆವು.

೧೯೮೩ರಲ್ಲಿ ನಾನು ತಿರುವನಂತಪುರದಲ್ಲಿರುವ ರಾಮಕೃಷ್ಣ ಶಾರದಾ ಮಿಷನ್ನಿಗೆ ವರ್ಗವಾದೆ. ಆ ಕೇಂದ್ರದಲ್ಲಿದ್ದ ಪ್ರಾರ್ಥನಾ ಮಂದಿರವು ಬಹಳ ಚಿಕ್ಕದಾಗಿ ಇತ್ತಾದ್ದರಿಂದ ಹೊಸತೊಂದನ್ನು ನಿರ್ಮಿಸಲು ತೀರ್ಮಾನಿಸಿದೆವು. ೧೯೮೭ರ ಸೆಪ್ಟೆಂಬರ್ ೫ರಂದು ಪೂಜ್ಯ ಸ್ವಾಮೀಜಿ ದೇವಸ್ಥಾನದ ಶಂಕುಸ್ಥಾಪನೆಯನ್ನು ಮಾಡಿದರು. ಅದರ ನಂತರ ನಡೆದ ಧರ್ಮಸಭೆಯಲ್ಲಿ ಭಕ್ತರಿಗೆ ಹೇಳಿದರು, 'ಆರು ತಿಂಗಳುಗಳಲ್ಲಿ ದೇವಸ್ಥಾನದ ನಿರ್ಮಾಣ ಕಾರ್ಯ ಸಂಪೂರ್ಣವಾಗಬೇಕು!' ಅದಕ್ಕೆ ಬೇಕಾಗುವ ಹಣವನ್ನು ಹೇಗೆ ಸಂಗ್ರಹಿಸುವುದು ಎಂಬ ಚಿಂತೆ ನಮ್ಮನ್ನು ಕಾಡಲಾರಂಭಿಸಿತು. ಆದರೆ ದಿವ್ಯತ್ರಯರ ಹಾಗೂ ಪೂಜ್ಯ ಸ್ವಾಮೀಜಿಯ ಕೃಪೆ ಮತ್ತು ಆಶೀರ್ವಾದಗಳಿಂದ ಹಣವೂ ಬಂದಿತು, ಕೆಲಸವೂ ಸಂಪೂರ್ಣವಾಯಿತು. ಮಾರ್ಚ್ ೩೦ರಂದು ನೂತನ ಪ್ರಾರ್ಥನಾ ಮಂದಿರದ ಉದ್ಘಾಟನೆ ಯಾಯಿತು. ಉದ್ಘಾಟನಾ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ನೋಡಿ ಸಂತೋಷಗೊಂಡು, ಸ್ವಾಮೀಜಿ ಆಶೀರ್ವಚನಗಳನ್ನು ಕಳಿಸಿದರು.

ಸ್ವಾಮೀಜಿ ಹೈದರಾಬಾದಿನಲ್ಲಿದ್ದಾಗ, ತ್ರಿಶೂರಿನ ಶಾರದಾ ಮಠದ ಮೂವರು ಸಾಧ್ವಿಗಳೊಂದಿಗೆ ನಾನು ಅಲ್ಲಿಗೆ ಹೋಗಬಯಸಿದೆ. ನನ್ನ ಬಯಕೆಯನ್ನು ತಿಳಿಸಿ ಅವರಿಗೆ ಕಾಗದವನ್ನು ಬರೆದೆ. ಈಗ ತಾವು ಉಪಾಧ್ಯಕ್ಷರೆಂದೂ, ಸ್ವಾಮಿ ಪರಮಾರ್ಥಾನಂದರು ಹೈದರಾಬಾದ್ ಮಠದ ಅಧ್ಯಕ್ಷರೆಂದೂ, ಅವರಿಗೇ ಕಾಗದವನ್ನು ಬರೆಯಬೇಕೆಂದು ನಮಗೆ ಉತ್ತರ ಬರೆದರು. ಅವರ ಸಲಹೆಯಂತೆ ಸ್ವಾಮಿ ಪರಮಾರ್ಥಾನಂದರಿಗೆ ಕಾಗದ ಬರೆದು, ಮಠದ ಅತಿಥಿ ಗೃಹದಲ್ಲಿ ತಂಗುವ ಅನುಮತಿ ಪಡೆದುಕೊಂಡೆವು. ನಾವು ಅಲ್ಲಿಗೆ ಹೋಗಿ ಸ್ವಾಮಿ ರಂಗನಾಥಾನಂದರೊಂದಿಗೆ ಪ್ರತಿನಿತ್ಯವೂ ಒಂದು ಘಂಟೆ ಕಳೆಯುತ್ತಿದ್ದೆವು. ಅವರು ನಮ್ಮೊಂದಿಗೆ ಮಲಯಾಳಂ ಭಾಷೆಯಲ್ಲೇ ಮಾತನಾಡುತ್ತಿದ್ದರು. ಅವರೊಂದಿಗೆ ಮಾತನಾಡುತ್ತಿದ್ದಾಗ ಸಮಯ ಹೋಗುತ್ತಿದ್ದುದೇ ಗೊತ್ತಾಗುತ್ತಿರಲಿಲ್ಲ. ಕೆಲವೊಮ್ಮೆ ಅವರ ಸೇವಕರಾಗಿದ್ದ ಸುದರ್ಶನ್ ಮಹಾರಾಜರು ನಮಗೆ ನೀಡಿದ್ದ ಸಮಯದ ಅವಧಿ ಮುಗಿದಿದೆ ಎಂದು ಜ್ಞಾಪಿಸುತ್ತಿದ್ದರು. ನಮ್ಮೊಂದಿಗಿದ್ದ ಇಬ್ಬರು ಹೊಸಬರು ಮಹಾರಾಜರಿಂದ ದೀಕ್ಷೆ ಪಡೆದರು. ದೀಕ್ಷೆಯಾದ ನಂತರ ನಾವೆಲ್ಲರೂ ಅವರಿಗೆ ಪ್ರಣಾಮ ಸಲ್ಲಿಸಿದೆವು. ನಮ್ಮೆಗಳ ತಲೆಯ ಮೇಲೆ ಹಸ್ತವನ್ನಿಟ್ಟು ಆಶೀರ್ವಾದ ಮಾಡಿದರು ಸ್ವಾಮೀಜಿ. ಅದೊಂದು ಅದ್ಭುತ ಅನುಭವ ನಮಗೆ.

ನಾವು ಕೇರಳಕ್ಕೆ ಹಿಂದಿರುಗುವ ಮುನ್ನ ನಡೆದ ಒಂದು ಘಟನೆ ತನ್ನ ಲಘುತನದಿಂದ ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ. ನನಗೆ ನೆನಪಿರುವಂತೆ, ಬೆಳಿಗ್ಗೆ ೧೦.೩೦ಕ್ಕೆ ಹೈದರಾಬಾದಿನಿಂದ ಹೊರಡಬೇಕಿತ್ತು ನಮ್ಮ ರೈಲುಗಾಡಿ. ಹೊರಡುವ ಮುನ್ನ ಒಮ್ಮೆ ಭೇಟಿಯಾಗಿ ಎಂದು ಪೂಜ್ಯ ಮಹಾರಾಜರು ನಮಗೆ ಹೇಳಿದ್ದರು. ನಮ್ಮ ವಸ್ತುಗಳನ್ನೆಲ್ಲ ಜೋಡಿಸಿಕೊಂಡ ಮೇಲೆ ೯.೦೦ ಘಂಟೆಗೆ ಅವರ ಬಳಿಗೆ ಹೋದೆವು. ಅವರು ನಮ್ಮೊಂದಿಗೆ ಮಾತನಾಡಲು ಪ್ರಾರಂಭಿಸಿದರು. ನಾವು ಗಡಿಯಾರ ನೋಡಿಕೊಂಡಾಗ ೯.೩೦ ಆಗಿತ್ತು! ಒಬ್ಬ ಬ್ರಹ್ಮಚಾರಿಯು ಬಂದು ನಮಗಾಗಿ ಗಾಡಿ ರೆಡಿಯಿದೆಯೆಂದು ತಿಳಿಸಿದರು. ಆದರೆ, ಸ್ವಾಮಿಗಳು ಮಾತನಾಡುತ್ತಲೇ ಇದ್ದರು. ರೈಲು ತಪ್ಪಿಹೋಗುವುದೆಂದೇ ನಾವು ಭಾವಿಸಿದ್ದೆವು. ಇಂತಹುದೇ ಒಂದು ಘಟನೆ ತಮ್ಮ ಜೀವನದಲ್ಲೂ ಆಗಿತ್ತೆಂದು ಹೇಳಲಾರಂಭಿಸಿದರು. ಒಮ್ಮೆ ಅವರು ಬೆಂಗಳೂರಿಗೆ ಟ್ರೈನ್‌ನಲ್ಲಿ ಹೋಗಬೇಕಿತ್ತು. ಆದರೆ, ಹೈದರಾಬಾದ್ ರೈಲುನಿಲ್ದಾಣಕ್ಕೆ ಹೋದಾಗ, ಗಾಡಿ ಆಗಲೇ ಹೊರಟುಹೋಗಿತ್ತು. ಮುಂದಿನ ನಿಲ್ದಾಣವಾದ ಸಿಕಂದರಾಬಾದಿಗೆ ಹೋದರು. ಅಲ್ಲಿಯೂ ಗಾಡಿಯಿರಲಿಲ್ಲ. ಅಲ್ಲಿಂದಲೂ ಹೊರಟುಹೋಗಿತ್ತು. ಹೀಗೆ ರೈಲನ್ನು ಹತ್ತಲಾಗದೆ, ಬೆಂಗಳೂರಿಗೆ ಕಾರಿನಲ್ಲೇ ಹೋಗಬೇಕಾಯಿತು. ಅವರ ಈ ಘಟನೆಯನ್ನು ಕೇಳಿ ನಗುತ್ತ ನಾವು ಅವರ ಅನುಮತಿಯೊಂದಿಗೆ ಅತಿಥಿಗೃಹಕ್ಕೆ ಹೊರಟೆವು. ಆಶ್ಚರ್ಯವೇನೆಂದರೆ, ನಮ್ಮೊಂದಿಗೆ ಗಾಡಿಯ ತನಕ ಬಂದು, ನಾವು ಹೊರಡುವ ತನಕ ನಿಂತಿದ್ದರು. ನಾನು ಆ ಚಿತ್ರವನ್ನು ಎಂದಿಗೂ ಮರೆಯಲಾರೆ – ನಾವು ಹೊರಡುವುದನ್ನೇ ನೋಡುತ್ತ ನಮಗಾಗಿ ನಿಂತಿದ್ದ ಮಹಾರಾಜರು! ಅದು ನನಗೆ ಶ್ರೀಮಾತೆಯ ನೆನಪನ್ನು ತಂದಿತು. ಭಕ್ತರು ಹೊರಡುತ್ತಿದ್ದಾಗ, ಶ್ರೀಮಾತೆ ಅದೆಷ್ಟು ಪ್ರೀತಿಯಿಂದ ಬಹುಕಾಲದ ತನಕ ಅವರತ್ತ ನೋಡುತ್ತಿದ್ದರೆಂಬುದನ್ನು ನಾವು ಕೇಳಿರುವೆವು. ಭಕ್ತರು ಕಾಣಿಸುವ ತನಕ ಅವರು ಕದಲುತ್ತಿರಲಿಲ್ಲ. ಸ್ವಾಮಿ ರಂಗನಾಥಾನಂದಜಿಯ ಮಾತೃವಾತ್ಸಲ್ಯವನ್ನು ನಾವು ಈ ಘಟನೆಯಲ್ಲಿ ಕಾಣುತ್ತೇವೆ.

ಅವರು ಸಂಘದ ಅಧ್ಯಕ್ಷರಾದ ಮೇಲೆ ವರ್ಷಕ್ಕೆ ಎರಡು ಬಾರಿ ಅವರನ್ನು ಭೇಟಿಯಾಗುವ ಅವಕಾಶ ನನಗಿರುತ್ತಿತ್ತು. ನಾನು ಭೇಟಿಯಾದಾಗಲೆಲ್ಲ ಅವರು ಮಲಯಾಳಂನಲ್ಲಿಯೇ ಮಾತನಾಡುತ್ತಿದ್ದರು. ಕೇರಳದಲ್ಲಿ ಅವರಿಗೆ ಪರಿಚಯವಿದ್ದ ಭಕ್ತರ ಬಗ್ಗೆಯೂ ತಪ್ಪದೆ ವಿಚಾರಿಸುತ್ತಿದ್ದರು. ಅವರೆಲ್ಲರನ್ನೂ ನೆನಪಿನಲ್ಲಿ ಇಟ್ಟುಕೊಂಡಿದ್ದರು. ನಾನೊಮ್ಮೆ ಹಿರಿಯ ಮಾತಾಜಿಯವರೊಂದಿಗೆ ಮಹಾರಾಜರನ್ನು ನೋಡಲು ಹೋದೆ. ಅವರ ಕೋಣೆಯನ್ನು ಪ್ರವೇಶಿಸಿದ ಮೇಲೆ ನಾನು ಅವರೆಲ್ಲರ ಹಿಂದೆ ನಿಂತಿದ್ದೆ. ಆದರೆ, ಅವರು ನನ್ನನ್ನು ಕಂಡೊಡನೆ ತಮಾಷೆ ಮಾಡುತ್ತ ಹೇಳಿದರು: 'ನಿಮ್ಮ ಮುಖ್ಯಮಂತ್ರಿ ಬದಲಾಗಿದ್ದಾರೆ' ಹೊಸ ಮುಖ್ಯಮಂತ್ರಿಯ ಹೆಸರನ್ನೂ ಹೇಳಿದರು. ಭಾಗ್ಯವಶಾತ್ ನಾನು ಅಂದಿನ ದಿನಪತ್ರಿಕೆಯನ್ನು ಓದಿದ್ದೆ. ಹಿಂದಿನ ಮತ್ತು ಈಗಿನ ಮಂತ್ರಿಗಳ ಹೆಸರುಗಳನ್ನು ನಾನು ತಿಳಿಸಿದೆ. ಹೀಗೆ, ಅವರು ಈ ಎಲ್ಲದರ ಬಗ್ಗೆ ಆಸಕ್ತಿ ವಹಿಸುತ್ತಿದ್ದರು.

೨೦೦೫ರ ಮಾರ್ಚ್ ತಿಂಗಳಲ್ಲಿ ಅವರನ್ನು ಕಡೆಯ ಬಾರಿ ಭೇಟಿಯಾದೆ. ಆಗ ಅವರು ಭಕ್ತರೊಂದಿಗೆ ಮಾತನಾಡಬಾರದು ಎಂದು ನಿಯಮ ಮಾಡಿಕೊಂಡಿದ್ದರು; ಭಕ್ತರಿಗೂ ಅವರೊಂದಿಗೆ ಮಾತನಾಡಲು ಅವಕಾಶವಿರಲಿಲ್ಲ. ಅವರಿಗೆ ಪ್ರಣಾಮವನ್ನು ಮಾತ್ರ ಮಾಡಬಹುದಾಗಿತ್ತು. ನಾನು ಪ್ರಣಾಮ ಮಾಡಿದಾಗ, ಅವರು ಅದೇನೋ ಕೇಳಬಯಸಿದ್ದರು. ಆದರೆ ಸೇವಕ ಮಹಾರಾಜರು ನಾನು ಮಾತನಾಡಬಾರದು ಎಂದು ಹೇಳಿದರು. ನಾನು ಸುಮ್ಮನಿರಬೇಕಾಯಿತು. ಒಳಗೊಳಗೇ ನನಗೆ ಬಹಳ ದುಃಖವಾಯಿತು. ಈಗಲೂ ಅವರನ್ನು ನೆನಪಿಸಿ ಕೊಂಡಾಗ, ಅವರನ್ನು 'ನಮ್ಮವರು' ಎಂದೇ ಭಾವಿಸುತ್ತೇನೆ. ಮಹಾತ್ಮರೇ ಹಾಗೆ, ಎಲ್ಲರೂ ಅವರನ್ನು ತಮ್ಮವರೆಂದೇ ತಿಳಿಯುತ್ತಾರೆ.

* * * *

# ೪೦. ಪರಿಪೂರ್ಣ ವೇದಾಂತಿ

–ಪ್ರವ್ರಾಜಿಕಾ ಆತ್ಮಪ್ರಾಣಾ*

ಸ್ವಾಮಿ ರಂಗನಾಥಾನಂದರೊಂದಿಗೆ ನನ್ನ ಮೊದಲ ಭೇಟಿಯಾಗಿದ್ದು ಪಾಕಿಸ್ತಾನದ ಕರಾಚಿಯಲ್ಲಿ. ನಾನು ನನ್ನ ಭಗಿನಿಯ ಮನೆಯಲ್ಲಿ ವಾಸವಾಗಿದ್ದೆ ಹಾಗೂ ಆಗಿನ್ನೂ ಸಂಘವನ್ನು ಸೇರಿಕೊಂಡಿರಲಿಲ್ಲ. ಅವರ ಘನಗಂಭೀರ ನಡತೆ ಹಾಗೂ ವ್ಯಕ್ತಿತ್ವದ ಪ್ರಭಾವಶಾಲೀ ತೇಜಸ್ಸು ಎಲ್ಲರನ್ನೂ ಆಕರ್ಷಿಸುತ್ತಿದ್ದವು. ನಾನು ಮುಂಬೈನಲ್ಲಿ ವಾಸವಾಗಿದ್ದಾಗ, ಅಲ್ಲಿನ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಅವರನ್ನು ಮತ್ತೊಮ್ಮೆ ಭೇಟಿಯಾಗಿದ್ದೆ. ಅವರು ಯಾವಾಗಲೂ ಸ್ನೇಹಶೀಲರಾಗಿದ್ದರು ಹಾಗೂ ಅಕ್ಕರೆಯಿಂದ ಮಾತನಾಡಿಸುತ್ತಿದ್ದರು. ತಮ್ಮ ಬಳಿಗೆ ಸಲಹೆಗಾಗಿ ಬರುತ್ತಿದ್ದ ಪ್ರತಿಯೊಬ್ಬರ ಬಗ್ಗೆ ನಿಜವಾದ ಕಾಳಜಿಯಿತ್ತು ಅವರಲ್ಲಿ. ನಾನು ದರ್ಶನಶಾಸ್ತ್ರದ ವಿದ್ಯಾರ್ಥಿನಿಯಾಗಿದುದ್ದರಿಂದ ಅವರೊಂದಿಗೆ ಸಂಧಿಸಿದಾಗಲೆಲ್ಲ ಆ ವಿಷಯವನ್ನು ಕುರಿತೇ ಚರ್ಚಿಸುತ್ತಿದ್ದೆವು. ಅವರೊಡನೆ ಮಾತನಾಡುವುದೆಂದರೆ ಅದು ಬೋಧಪ್ರದವಾಗಿರುತ್ತಿತ್ತು. ಅವರದು ಬಹಳ ಆಪ್ಯಾಯಮಾನ ವ್ಯಕ್ತಿತ್ವ. ತಮ್ಮ ಬಳಿ ಸಂಶಯಗಳನ್ನೋ ಅಥವಾ ಸಮಸ್ಯೆಗಳನ್ನೋ ಬಗೆಹರಿಸಿಕೊಳ್ಳಬಂದವರಿಗೆ ಸಾಂತ್ವನ ನೀಡುತ್ತ ಎಲ್ಲವನ್ನೂ ಆಲಿಸುತ್ತಿದ್ದರು. ನನಗೆ ಇಸವಿ ನೆನಪಿಲ್ಲ; ಬಹುಶಃ ೧೯೪೦ರ ಸುಮಾರು. ಅದು ಬಹಳ ಮುದ ನೀಡಿದ ಘಟನೆ; ನಾನು ಖಾರ್ ಕೇಂದ್ರಕ್ಕೆ ಹೋದಾಗಲೆಲ್ಲ ಬಹಳಷ್ಟು ಸಹಾಯ ನೀಡಿ, ತಮ್ಮ ಸ್ಫೂರ್ತಿಯುತ ವಾಣಿಯಿಂದ ನನಗೆ ಜೀವನದಲ್ಲಿ ಬಹುಮೂಲ್ಯ ಜ್ಞಾನವನ್ನು ನೀಡಿದ್ದಾರೆ. ಅವರು ನೀಡಿದ ಉಪದೇಶಗಳೆಲ್ಲ ಅದೆಷ್ಟು ಸಹಜವಾಗಿದ್ದವು; ಅವು ಅವರ ಅರಿವಿನಿಂದ ಮೂಡಿಬರುತ್ತಿದ್ದವು. ಅವರು ನಿಜವಾಗಿಯೂ ಪರಿಪೂರ್ಣ ವೇದಾಂತಿ.

ಅವರು ಪೂರ್ಣಜ್ಞಾನಿ. ತಮ್ಮ ಚಿಂತನೆಗಳಲ್ಲಿ ಬಹಳಷ್ಟು ದೃಢವಾಗಿದ್ದರೂ ಯಾರನ್ನೂ ಬೈಯುತ್ತಿರಲಿಲ್ಲ. ಯಾವುದೋ ವಿಚಾರವನ್ನು ತಿಳಿಯಲು ಅಥವಾ ಏನನ್ನಾದರೂ ಬಯಸಿ ಅವರ ಬಳಿಗೆ ಬರುತ್ತಿದ್ದ ಅತ್ಯಂತ ದರಿದ್ರನನ್ನೂ ಎಲ್ಲರಂತೆ ಅಕ್ಕರೆ ಹಾಗೂ ವಿಶ್ವಾಸದಿಂದ ಬರಮಾಡಿಕೊಂಡು ತಮ್ಮ ಸಮದೃಷ್ಟಿಯನ್ನು ನಿರೂಪಿಸುತ್ತಿದ್ದರು. ಅವರು ಅತ್ಯುತ್ತಮ ದಾರ್ಶನಿಕರು, ಅದರೊಂದಿಗೆ ಪ್ರತಿಭಾನ್ವಿತ ವಾಗ್ಮಿಗಳು. ಅವರ ಮಾತಿನ ಶೈಲಿ ಹೇಗಿತ್ತೆಂದರೆ, ಎಲ್ಲವೂ ಅರ್ಥವಾಗುತ್ತಿತ್ತು ಕೇಳುವವರಿಗೆ. ನಾನು ಅವರಿಂದ ಯಾವುದಾದರೂ ವಿಷಯವನ್ನು ತಿಳಿಯ ಬಯಸಿದಾಗ ಅವರು ಅತ್ಯಂತ ಸೌಜನ್ಯದಿಂದ ಮೊದಲು ನನಗೆ ಕುಳಿತುಕೊಳ್ಳಲು ಹೇಳಿ ನನ್ನ ಹೆಸರನ್ನು ಕೇಳುತ್ತಿದ್ದರು. ಹೀಗಿತ್ತು ಅವರ ಸ್ನೇಹಶೀಲ ನಡತೆ. "ಮಹಾರಾಜ್, ನಾನು ನಿಮ್ಮಿಂದ ಈ ವಿಷಯ ತಿಳಿಯಲು ಪ್ರಶ್ನೆ ಕೇಳಬಯಸುವೆ" ಎಂದು ಅತಿ ಸಾಮಾನ್ಯ ವ್ಯಕ್ತಿ ಬಂದು ಹೇಳಿದರೂ ಕೂಡಲೇ ಪ್ರತಿಸ್ಪಂದಿಸಿ ಪ್ರಶ್ನೆಗೆ ಸಮರ್ಪಕ ಉತ್ತರ ನೀಡಿ ತಿಳಿಯಹೇಳಲು ಕಾತರರಾಗುತ್ತಿದ್ದರು. ಬಹಳ ಅಕ್ಕರೆಯಿಂದ ನಾವು ಮಾಡುತ್ತಿದ್ದ ಕೆಲಸ ಹಾಗೂ ಇನ್ನಿತರ ವಿವರಗಳ ಬಗ್ಗೆ ವಿಚಾರಿಸಿ ನಮ್ಮನ್ನು ತಮ್ಮವರಾಗಿಸಿಕೊಳ್ಳುತ್ತಿದ್ದರು.

ದೇಶದ ವಿಭಜನೆಯಾಗಿ ಪಾಕಿಸ್ತಾನ ರೂಪಿತವಾದಾಗ ಆಶ್ರಮ ಸಂಪೂರ್ಣವಾಗಿ ಧ್ವಂಸವಾಯಿತು. ಆದರೆ, ಅವರು ಇದರ ಬಗ್ಗೆ ಕ್ರೋಧವನ್ನಾಗಲೀ, ತಿರಸ್ಕಾರವನ್ನಾಗಲೀ ಎಂದೂ ವ್ಯಕ್ತಪಡಿಸಲಿಲ್ಲ. ಎಲ್ಲರ ಬಗ್ಗೆ ಅಸಾಧ್ಯವಾದ ಸಹನೆ ಹಾಗೂ ಅನುಕಂಪೆಗಳಿದ್ದವು ಅವರಲ್ಲಿ. ನನಗೆ ಆ ಕಾಲ ಇನ್ನೂ ನೆನಪಿದೆ. ಅವರು

---

* ದಿಲ್ಲಿಯ ರಾಮಕೃಷ್ಣ ಶಾರದಾ ಮಿಷನ್ನಿನ ಅಧ್ಯಕ್ಷರು ಹಾಗೂ ಹಿರಿಯ ಸಂನ್ಯಾಸಿನಿ.

ಆಗಲೇ ಪುಸ್ತಕಗಳನ್ನು ಬರೆಯಲು ಪ್ರಾರಂಭಿಸಿದ್ದರು. ಕರಾಚಿಯನ್ನು ಬಿಟ್ಟು ಬಂದು ಖಾರ್‌ನಲ್ಲಿನ ಆಶ್ರಮದಲ್ಲಿದ್ದರು. ಖಾರ್‌ನ–ಸಾಂತಾಕ್ರೂಜ್‌ನಲ್ಲಿರುವ ಒಂದು ಶಾಲೆಯಲ್ಲಿ ನಾನು ಆಗ ಅಧ್ಯಾಪಕಿಯಾಗಿದ್ದೆ. ವಿಭಿನ್ನ ತಾತ್ತ್ವಿಕ ವಿಷಯಗಳ ಬಗ್ಗೆ ಅವರು ನೀಡುತ್ತಿದ್ದ ಪ್ರವಚನಗಳನ್ನು ಕೇಳಲು ಹಾಗೂ ಅವರೊಂದಿಗೆ ಇಂತಹ ವಿಷಯಗಳ ಬಗ್ಗೆ ಚರ್ಚೆಮಾಡಲು ನಾನು ಅವರ ಬಳಿಗೆ ಹೋಗುತ್ತಿದ್ದೆ. ಎಲ್ಲರೊಂದಿಗೆ ಸಮಾನವಾದ ಸ್ನೇಹಶೀಲತೆ, ಅತ್ಯಂತ ಸರಳವಾದ ನಡತೆ ಹಾಗೂ ಸಭ್ಯತನದ ವ್ಯಕ್ತಿತ್ವ – ಇವು ಅವರಲ್ಲಿ ಎದ್ದುಕಾಣುತ್ತಿದ್ದ ಗುಣಗಳು. ನಾನು ದರ್ಶನಶಾಸ್ತ್ರವನ್ನು ನನ್ನ ಅಧ್ಯಯನದ ವಿಷಯವಾಗಿ ಆಯ್ದುಕೊಂಡದ್ದು ಹಾಗೂ ಸ್ಥೈರ್ಯ–ಜ್ಞಾನಗಳ ಭಂಡಾರವೇ ಆಗಿದ್ದ ಗುರುಗಳ ಸಾಮೀಪ್ಯವನ್ನು ಪಡೆದದ್ದು ಇದೆಲ್ಲ ನನ್ನ ಭಾಗ್ಯವೇ. ನಾರಿಯರ ಶಿಕ್ಷಣ ಹಾಗೂ ಅವರ ಉನ್ನತಿಯ ಬಗ್ಗೆ ಅವರು ಯಾವಾಗಲೂ ಉತ್ಸಾಹ ತೋರುತ್ತಿದ್ದರು. ನಾರಿಯರಿಗೆ ಅವರು ಯಾವುದೇ ಹಂತದಲ್ಲಿರಲಿ, ಸಹಾಯಹಸ್ತ ನೀಡಲು ಎಂದೂ ಹಿಂಜರಿಯುತ್ತಿರಲಿಲ್ಲ. ಸ್ವಾಮೀಜಿ, ನಾರಿಯರಿಗೆ ಆಶಾಕಿರಣವಾಗಿದ್ದರು.

* * * *

# ೪೧. ನಾನು ಆಶ್ರಮಕ್ಕೆ ಧಾವಿಸಿದೆ

**–ಪ್ರವ್ರಾಜಿಕಾ ಶ್ರೀಕಾಂತಪ್ರಾಣಾ***

೧೯೭೩ ಅಥವಾ ೧೯೭೪ ಇರಬೇಕು, ನನಗೆ ಸರಿಯಾಗಿ ನೆನಪಿಲ್ಲ, ನನ್ನ ಪರೀಕ್ಷೆಗಳು ಸಮೀಪಿಸುತ್ತಿದ್ದುವು. ಆಗ ನಮ್ಮ ಮನೆಯ ಸಮೀಪದಲ್ಲೇ ಇದ್ದ ಬೆಂಗಳೂರಿನ ರಾಮಕೃಷ್ಣ ಆಶ್ರಮಕ್ಕೆ ಪೂಜ್ಯ ರಂಗನಾಥಾನಂದಜೀ ಮಹಾರಾಜ್ ಭೇಟಿಯಿತ್ತರು. ನಮ್ಮ ಮನೆಯ ಸದಸ್ಯರಿಂದ ಅವರ ಬಗ್ಗೆ ನಾನು ಈಗಾಗಲೇ ಬಹಳಷ್ಟು ಕೇಳಿದ್ದೆನಾದರೂ ಅವರೊಂದಿಗೆ ಭೇಟಿಯಾಗುವ ಸೌಭಾಗ್ಯ ದೊರೆತಿರಲಿಲ್ಲ.

ನಮ್ಮ ಮನೆಯ ಮಂದಿಯೆಲ್ಲ ಅವರ ದರ್ಶನ ಪಡೆಯಲು ಒಬ್ಬೊಬ್ಬರಾಗಿ ಹೋದರು. ನಾನು ಕೂಡ ಕೇವಲ ಐದೇ ನಿಮಿಷಗಳಾದರೂ ಸರಿ, ಅವರ ದರ್ಶನ ಪಡೆಯಲೇಬೇಕು ಎಂದು ಕೆಲವರು ಸಲಹೆ ನೀಡಿದರು. ಸಾಧು ದರ್ಶನಕ್ಕಿಂತ ನನ್ನ ಅಧ್ಯಯನ ಹಾಗೂ ಮುಂದಿದ್ದ ಪರೀಕ್ಷೆಗಳೇ ಮುಖ್ಯ ಎಂದು ನಾನು ಭಾವಿಸಿದೆ. ನನ್ನ ಪುಸ್ತಕಗಳೊಂದಿಗೆ ನಾನು ಒಂಟಿಯಾಗಿ ಕುಳಿತೆ. ನನ್ನ ಕಣ್ಣ ಮುಂದೆ ಪುಸ್ತಕಗಳ ಹಾಳೆ ತೆರೆದಿದ್ದರೂ ನಾನು ಏನನ್ನೂ ಓದಲಾಗಲಿಲ್ಲ. ಓದಿದ್ದೂ ಬುದ್ಧಿಗ್ರಾಹ್ಯವೂ ಆಗುತ್ತಿರಲಿಲ್ಲ. ಅದಾವುದೋ ಅಪರಿಚಿತ ಶಕ್ತಿಯೊಂದು ಬೇರೊಂದೆಡೆಗೆ ನನ್ನನ್ನು ಸೆಳೆಯುತ್ತಿತ್ತು. ಒಂದು ತಡೆಹಿಡಿಯಲಾರದ ಆಧ್ಯಾತ್ಮಿಕ ಸೆಳೆತವು ಮಹಾರಾಜರತ್ತ ನನ್ನನ್ನು ಸಾಗಿಸುತ್ತಿದೆ ಎಂಬುದು ನನಗೆ ಗೊತ್ತಾಯಿತು. ದೀರ್ಘಕಾಲ ನಡೆದ ಈ ಭಾವನಾತ್ಮಕ ಸಂಗ್ರಾಮದ ನಂತರ ನನ್ನೊಳಗಿನಿಂದ ಯಾರೋ ಮಾತನಾಡಿದಂತೆ "ಮಹಾಪುರುಷ ಮಹಾರಾಜ್ (ಸ್ವಾಮಿ ಶಿವಾನಂದಜೀ) ಹಾಗೂ ಶ್ರೀ ಶ್ರೀ ರಾಮಕೃಷ್ಣ ಪರಮಹಂಸರ ಇನ್ನಿತರ ನೇರ ಶಿಷ್ಯರ ಕೃಪೆಗೆ ಪಾತ್ರರಾಗುವ ಸೌಭಾಗ್ಯ ಅವರಿಗೆ ದೊರಕಿದೆ. ಅವರ ಅನುಗ್ರಹ ಪಡೆಯಲು ಬಹಳ ದೂರದಿಂದ ಜನ ಬರುತ್ತಾರೆ. ಮುಂದೆ ಅವರನ್ನು ಭೇಟಿಯಾಗಲು ನಿನಗೆ ಯಾವುದೇ ಅವಕಾಶ ದೊರೆಯದೇಹೋದರೆ, ಏನು ಮಾಡುತ್ತೀಯೆ?"

ಕಡೆಗೆ, ಪುಸ್ತಕಗಳನ್ನು ಮೇಜಿನ ಮೇಲೆ ತೆರೆದಿಟ್ಟೇ ನಾನು ಆಶ್ರಮಕ್ಕೆ ಧಾವಿಸಿದೆ. ಸುಮಾರು ಎಂಟು ಕಿಲೋಮೀಟರ್‌ನಷ್ಟು ದೂರದಲ್ಲಿತ್ತು ಆಶ್ರಮ. ನಾನು ತಲುಪಿದಾಗ ಮೇಲಿನ ಹಾಲ್‌ನಲ್ಲಿ ಒಂದು ಇಂಚಿನಷ್ಟೂ ಜಾಗವಿಲ್ಲದ್ದನ್ನು ಕಂಡೆ. ಬಂದ ಜನರು ಕುಳಿತುಕೊಳ್ಳಲು ಕೆಳಗಡೆ ವ್ಯವಸ್ಥೆ ಮಾಡಲಾಗಿತ್ತು. ಯಾವುದೋ ಅಲೌಕಿಕ ಆನಂದವನ್ನು ಅನುಭವಿಸಿದ ತೃಪ್ತಿಯು ಅಲ್ಲಿದ್ದವರ ಮುಖದಲ್ಲಿ ಕಾಣುತ್ತಿತ್ತು. ನಾನು ಹೋದ ಕೆಲವೇ ಕ್ಷಣಗಳಲ್ಲಿ ತಾವು ಹೇಳುತ್ತಿದ್ದ ವಿಷಯವನ್ನು ಮುಗಿಸಿ ಮಹಾರಾಜ್, "ಶ್ರೀಮಾತೆ, ಶ್ರೀರಾಮಕೃಷ್ಣರು ಹಾಗೂ ಸ್ವಾಮಿ ವಿವೇಕಾನಂದರು ನಿಮ್ಮನ್ನೆಲ್ಲಾ ಹರಸಲಿ"ಎಂದು ಹೇಳಿದರು.

ಜನರ ಸಂತೆಯೇ ಅಲ್ಲಿ ಸೇರಿದ್ದರಿಂದ ಅಂದಿನ ದಿನ ನಾನು ಮಹಾರಾಜ ರೊಂದಿಗೆ ವೈಯಕ್ತಿಕವಾಗಿ ಮಾತನಾಡಲು ಸಾಧ್ಯವಾಗಲಿಲ್ಲ. ಮಾರನೆಯ ದಿನದಂದು ನನ್ನ ಪರೀಕ್ಷೆಯನ್ನು ಮುಗಿಸಿಕೊಂಡು ನಾನು ಅವರನ್ನು ಭೇಟಿಯಾಗಲು ಮತ್ತೆ ಹೋದೆ. ನನ್ನ ತಂದೆ ನನ್ನೊಂದಿಗೆ ಇದ್ದರು. ನನ್ನ ಸಮಕ್ಷಮದಲ್ಲಿ ಮಹಾರಾಜರಿಗೆ ಹೇಳಿದರು: "ನಿಮ್ಮಂತಹ ಅತಿ ಪವಿತ್ರ ಹಾಗೂ ಉತ್ತಮ ಸಂನ್ಯಾಸಿಗಳ ಸಾನ್ನಿಧ್ಯ ದೊರೆತದ್ದು ನಮ್ಮ ಭಾಗ್ಯ. ನನಗೆ ಏಳು ಜನ ಮಕ್ಕಳು. ಅದರಲ್ಲಿ ಯಾರಾದರೊಬ್ಬರು ಸಂನ್ಯಾಸಿಯಾಗಬೇಕೆಂದು ನನ್ನ ಇಚ್ಛೆ– ಆದರೆ ಅಂತಹ ಭಾಗ್ಯವನ್ನು ಊಹಿಸುವುದೂ ನನಗೆ ಅಸಾಧ್ಯ."

---

* ಕೇರಳದ ತಿರುವನಂತಪುರಂನ ರಾಮಕೃಷ್ಣ ಶಾರದಾ ಮಿಷನ್ನಿನ ಹಿರಿಯ ಸಂನ್ಯಾಸಿನಿ.

ಮಹಾರಾಜ್ ಯಾವುದೇ ಉತ್ತರ ನೀಡದೆ ಮುಗುಳ್ನಕ್ಕರು. ನಾನು ಮನೆಗೆ ಹಿಂತಿರುಗಿ ಬಂದಾಗ ಜೋರಾಗಿ ಚರ್ಚೆ ನಡೆಯುತ್ತಿದ್ದುದು ಕೇಳಿಬಂತು. ಕೇವಲ ಮನೆಯನ್ನು ತ್ಯಜಿಸಿದರೆ ಸಾಲದು, ಸಂನ್ಯಾಸಿಯಾಗುವುದಿದ್ದರೆ ಸ್ವಾಮಿಗಳಂತೆ ಆಗಬೇಕು ಎಂಬುದೇ ಚರ್ಚೆಯ ಮೂಲ ವಿಷಯ. ಅದೇನೋ ನಗಣ್ಯ ಚರ್ಚೆಯಾಗಿರಬಹುದು. ಆದರೆ ಅದು ನನ್ನ ಮನಸ್ಸಿನ ಮೇಲೆ ಆಳವಾದ ಪರಿಣಾಮವನ್ನು ಬೀರಿತು.

ನಾನು ಮಹಾರಾಜರನ್ನು ಎರಡನೆಯ ಬಾರಿ ಸಂಧಿಸಿದ್ದು ಕೇರಳದಲ್ಲಿ. ಅಲ್ಲಿನ ರಾಜವಂಶದವರು ಆಯೋಜಿಸುತ್ತಿದ್ದ ಕಾರ್ಯಕ್ರಮದಲ್ಲಿ ಅವರು ಪ್ರತಿವರ್ಷ ಭಾಗವಹಿಸುತ್ತಿದ್ದರು. ನಾನು ಈಗಾಗಲೇ ಶಾರದಾ ಮಠವನ್ನು ಸೇರಿಕೊಂಡಿದ್ದೆ. ಪೂಜ್ಯರಾದ ಅಜಯಪ್ರಾಣಾ ಮಾತಾಜೀ ನನ್ನನ್ನು ಮಹಾರಾಜರಿಗೆ ಪರಿಚಯಿಸುತ್ತ ಹೇಳಿದರು, "ಮಹಾರಾಜ್, ಈ ಹುಡುಗಿ ಕರ್ನಾಟಕದವಳು." ಕೂಡಲೇ ಮಹಾರಾಜರು ನಮ್ಮೊಂದಿಗೆ ಕನ್ನಡದಲ್ಲಿ ಮಾತನಾಡಲು ಪ್ರಾರಂಭಿಸಿದರು. "ನಾನು ಕರ್ನಾಟಕದ ಮೈಸೂರಿನಲ್ಲಿ ಸಂಘವನ್ನು ಸೇರಿಕೊಂಡೆ. ಆ ದಿನಗಳು ನಿಜಕ್ಕೂ ಅದ್ಭುತವಾಗಿದ್ದವು. ಅವುಗಳ ಬಗ್ಗೆ ನೆನೆಸಿಕೊಂಡರೆ ನನಗೆ ಈಗಲೂ ಸಂತಸ ವಾಗುತ್ತದೆ" ಎಂದರು. ಇತರರೊಂದಿಗೆ ಈ ಮಧ್ಯೆ ಮಲಯಾಳಂನಲ್ಲಿ ಮಾತನಾಡುತ್ತಿದ್ದರು. ಸ್ವಾಭಾವಿಕವಾಗಿ ನಾನು ಆಶ್ಚರ್ಯಚಕಿತಳಾದೆ. ನನ್ನ ಆಶ್ಚರ್ಯವನ್ನು ಕಂಡು, ನನ್ನತ್ತ ನೋಡಿ ಮತ್ತೆ ಹೇಳಿದರು, "ನೋಡು, ಕನ್ನಡಕ್ಕೂ ಮಲಯಾಳಂಗೂ ಹೆಚ್ಚು ವ್ಯತ್ಯಾಸವಿಲ್ಲ. ನೀನು 'ಪ' ಇರುವಲ್ಲೆಲ್ಲ 'ಹ' ಉಚ್ಚರಿಸಿದರೆ ಸಾಕು, ಉದಾಹರಣೆಗೆ 'ಪಾಲು' ಎಂಬ ಮಲಯಾಳಂ ಶಬ್ದ ಕನ್ನಡದಲ್ಲಿ 'ಹಾಲು' ಎಂದಾಗುತ್ತದೆ. ಮಲಯಾಳಂನ 'ಪೋಗು' ಕನ್ನಡದಲ್ಲಿ 'ಹೋಗು' ಆಗುತ್ತದೆ. ಹೀಗೆ ಅನೇಕ ಉದಾಹರಣೆಗಳನ್ನು ನೀಡುತ್ತಲೇ ಹೋದರು. ಆ ವರ್ಷ ಅವರು ಕೇರಳದಲ್ಲಿ ನೀಡಿದ ಎಲ್ಲ ಉಪನ್ಯಾಸಗಳನ್ನೂ ನಾನು ಕೇಳಿದೆ. ಉಪನ್ಯಾಸದ ನಂತರ ನಾನು ಅವರಿಗೆ ಪ್ರಣಾಮ ಸಲ್ಲಿಸಲು ಹೋದಾಗಲೆಲ್ಲ ಅವರು, 'ಓ! ನೀನು ಇಲ್ಲಿಗೆ ಬಂದಿರುವೆಯಾ' ಅಥವಾ 'ಓ! ಮತ್ತೆ ನೀನು ಬಂದೆಯಾ' ಎಂದು ಮಾತನಾಡಿಸುತ್ತಿದ್ದರು.

ನಾನು ಎರ್ನಾಕುಲಂಗೆ ವರ್ಗವಾಗಿ ಹೋದೆ. ತಿರುವನಂತಪುರಂನಲ್ಲಿ 'ವಿದ್ಯಾರ್ಥಿನೀ ಮಂದಿರಂ' ಅನ್ನು ಉದ್ಘಾಟನೆ ಮಾಡಲು ಮಹಾರಾಜ್ ಬಂದಾಗ, ಬ್ರಹ್ಮಚಾರಿಣಿಯಾಗಿದ್ದ ನಾನೂ ಹೋಗಿದ್ದೆ. ಎರ್ನಾಕುಲಂನ ದೇವಸ್ಥಾನದ ಉದ್ಘಾಟನಾ ಸಮಾರಂಭದಲ್ಲಿಯೂ ನಾನು ಭಾಗವಹಿಸಿದೆ. ಕಡೆಯಲ್ಲಿ ಅವರು ತ್ರಿಶೂರಿಗೆ ಹೋದಾಗಲೂ ಮತ್ತೊಮ್ಮೆ ಅವರ ಪವಿತ್ರ ಸಾನ್ನಿಧ್ಯದಲ್ಲಿ ಇರುವ ಅವಕಾಶ ದೊರೆಯಿತು. ಪೂಜ್ಯರಾದ ಧೀರಪ್ರಾಣಾ ಮಾತಾಜೀ ಅವರು ತಮಾಷೆ ಮಾಡುತ್ತಿದ್ದರು:. "ಮಹಾರಾಜರು ಬರುವ ಮುಂಚೆಯೇ ಮೀರಾಳ ಆಗಮನ ವಾಗಿರುತ್ತದೆ." ಒಂದರ್ಥದಲ್ಲಿ ಅದು ಸತ್ಯವೇ. ಮಹಾರಾಜರ ಪ್ರಯಾಣದ ವಿವರಗಳ ಯಾವುದೇ ಪರಿಚಯವಿಲ್ಲದೆ ನಾನು ಯಾವುದೋ ಊರಿಗೆ ಹೋದಾಗ, ಭಗವಂತನ ಅಪಾರ ಕರುಣೆಯಿಂದ, ಇನ್ನು ಕೆಲವೇ ದಿನಗಳಲ್ಲಿ ಮಹಾರಾಜರು ಅಲ್ಲಿಗೆ ಬರುವವರಿದ್ದಾರೆ ಎಂಬುದು ತಿಳಿದುಬರುತ್ತಿತ್ತು.

ಬೇಲೂರು ಮಠಕ್ಕೆ ಹೋದಾಗಲೆಲ್ಲ, ನನಗೇ ಗೊತ್ತಿಲ್ಲದ ಕಾರಣಗಳಿಗಾಗಿ, ಹಿರಿಯರು ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಪರಮಪೂಜ್ಯ ಭೂತೇಶಾನಂದಜಿ ಮಹಾರಾಜರೊಂದಿಗೆ ಹೆಚ್ಚಾಗಿ ಪರಿಚಯ ಹೊಂದುವ ಸೌಭಾಗ್ಯ ನನಗಿರಲಿಲ್ಲ. ಆದರೆ ತಮ್ಮ ಪವಿತ್ರ ಸಾನ್ನಿಧ್ಯದಿಂದ ಪೂಜ್ಯಸ್ವಾಮಿ ರಂಗನಾಥಾನಂದಜೀ ಈ ಕೊರತೆಯನ್ನು ನೀಗಿಸಿದ್ದರು. ನಾನು ಇಬ್ಬರನ್ನೂ ಸಮಾನವಾಗಿ ಗೌರವಿಸುತ್ತಿದ್ದೆನಾದ್ದರಿಂದ ಯಾವುದೇ ಸಂಕೋಚವಿಲ್ಲದೆ ನನ್ನ ಜಪಮಾಲೆಯನ್ನು ಪವಿತ್ರಗೊಳಿಸಲು ರಂಗನಾಥಾನಂದರನ್ನೇ ಕೇಳಿಕೊಂಡೆ.

ನಾನು ತಿರುವನಂತಪುರಂನಲ್ಲಿದ್ದಾಗ ಭಕ್ತರಿಗಾಗಿ ನಿಯಮಿತ ಉಪನ್ಯಾಸಗಳನ್ನು ನೀಡುವ ಜವಾಬ್ದಾರಿಯು ನನ್ನ ಪಾಲಿಗೆ ಬಂದಿತು. ನಾನು ಮೊದಲು ಹಿಂಜರಿದೆ, ಇದರ ಬಗ್ಗೆ ನನಗೆ ಸಾಕಷ್ಟು ಅನುಭವವಿಲ್ಲ ಎಂದು ನನಗೆ ಚಿಂತೆ ಪ್ರಾರಂಭವಾಯಿತು. ಯಾವ ವಿಷಯದ ಬಗ್ಗೆ ಮಾತನಾಡಬೇಕು ಎಂದು ಆಲೋಚಿಸತೊಡಗಿದೆ.

ಪೂಜ್ಯ ಮಹಾರಾಜರ 'Divine Grace'– ('ಈಶ್ವರ ಕೃಪೆ') ಎಂಬ ಕಿರುಗ್ರಂಥವನ್ನೇ ನಾನು ಕಡೆಯಲ್ಲಿ ಆಯ್ದುಕೊಂಡೆ. ನಾನಿನ್ನೂ ಮೊದಲನೇ ಉಪನ್ಯಾಸವನ್ನು ಮುಗಿಸುವಷ್ಟರಲ್ಲಿ ತ್ರಿಶೂರಿನಿಂದ ದೂರವಾಣಿ ಬಂದಿತು. ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಮೇಲೆ ಮಹಾರಾಜರು ಮೊದಲ ಬಾರಿಗೆ ಅಲ್ಲಿಗೆ ಬಂದಿದ್ದರು. ಅವರು ತಿರುವನಂತಪುರಂಗೆ ಬರುವ ಯೋಚನೆ ಇಲ್ಲದಿದ್ದರಿಂದ ನಾವು ತ್ರಿಶೂರಿಗೇ ಹೋಗಿ ಅವರ ಆಶೀರ್ವಾದವನ್ನು ಪಡೆದುಕೊಳ್ಳಬಹುದು ಎಂದು ಆದೇಶಿಸಲಾಯಿತು. ನಾನು ಬಹಳ ಶ್ರದ್ಧೆಯಿಂದ ತ್ರಿಶೂರಿಗೆ ಹೊರಟೆ. ಆದರೆ, ಅಲ್ಲಿಗೆ ಹೋಗಿ ತಲುಪಿದಾಗ, ಪ್ರಣಾಮ ಸಲ್ಲಿಸಲು ನಿಗದಿಪಡಿಸಿದ್ದ ಅವಧಿ ಮುಗಿದು ಹೋಗಿತ್ತು. ನಾನು ಒಬ್ಬ ಸಾಧುಗಳನ್ನು ಕೇಳಿದೆ: "ನಾನು ಇಷ್ಟು ದೂರ ಪ್ರಯಾಣ ಮಾಡಿದ್ದು ವ್ಯರ್ಥವಾಯಿತೇ? ನಾನು ನಿಜವಾಗಿಯೂ ನಿರ್ಭಾಗ್ಯಳು!" ಮಹಾರಾಜರಿಗೆ ಆ ಸಾಧು ಇದನ್ನು ತಿಳಿಸಿದಾಗ, ಅವರು "ಏಕೆ? ಅದೇಕೆ? ಆಕೆ ಮಾತ್ರ ನಿರ್ಭಾಗ್ಯಳೇತಕ್ಕೆ? ಆಕೆಯನ್ನು ಕರೆ, ಇಲ್ಲಿಗೆ ಕಳಿಸು. ನಾನೀಗ ವಿಶ್ರಮಿಸುತ್ತಿರುವೆ. ಆಕೆಯೊಂದಿಗೆ ಮಾತನಾಡುವೆ" ಎಂದು ಹೇಳುತ್ತಿರುವುದು ಕೇಳಿಸಿತು. ನಾನು ಅವರ ಬಳಿಗೆ ಹೋದಾಗ, ಅವರು ತಮಾಷೆ ಮಾಡುತ್ತ ಹೇಳಿದರು: "ಇಲ್ಲ, ನಾನು ಮಲಗಿರುತ್ತೇನೆ. ಅಂದು ಆಕೆ ಮಾತನಾಡುತ್ತಿರುತ್ತಾಳೆ." 'Human Excellence' (ಮಾನವನ ಉತ್ಕೃಷ್ಟತೆ) ಎಂಬ ತಮ್ಮ ಹಸ್ತಾಕ್ಷರವಿದ್ದ ಪುಸ್ತಕವನ್ನು ನನಗೆ ಉಪಹಾರವಾಗಿ ನೀಡಿದರು ಮಹಾರಾಜರು. ನಾನು ಏನಾದರೂ ಹೇಳುವ ಮೊದಲೇ ಅವರು ಕೇಳಿದರು: "ನೀನೀಗ ಏನು ಮಾಡುತ್ತಿರುವೆ? ಅಲ್ಲಿ ಯಾವ ಯಾವ ಸೇವೆ ಸಲ್ಲಿಸುತ್ತಿರುವೆ?" ಇದು ಕೇವಲ ಭಗವಂತನ ದಯೆಯೆಂದೇ ನನಗೆ ತೋರಿತು.

ಇದಕ್ಕಿಂತ ಮುಂಚೆ, ೧೯೯೭ರಲ್ಲಿ, ಬೇಲೂರು ಮಠದ ಶತಮಾನೋತ್ಸವದಲ್ಲಿ ಭಾಗವಹಿಸುವ ಅವಕಾಶ ನನಗೆ ದೊರಕಿತ್ತು. ಆಗ ಮಹಾರಾಜರನ್ನು ವೈಯಕ್ತಿಕವಾಗಿ ಭೇಟಿಯಾಗಿದ್ದೆ. ಪೂಜ್ಯರಿಂದ ಅಮಲಾಪ್ರಾಣಾ ಮಾತಾಜಿಯವರು ಒಂದು ದಿನ ಮಹಾರಾಜರಿಗೆ ಒಂದು ಪೊಟ್ಟಣವನ್ನು ಕೊಟ್ಟುಬಾರೆಂದು ಆದೇಶವಿತ್ತರು. ನಾನು ಅವರ ಕೋಣೆಯನ್ನು ತಲುಪಿದಾಗ, ಅವರು ಸಿಸ್ಟರ್ ಗಾರ್ಗಿಯೊಂದಿಗೆ ಪುಸ್ತಕವೊಂದರ ಬಗ್ಗೆ ಚರ್ಚಿಸುತ್ತಿರುವುದನ್ನು ಕಂಡೆ. ಅವರ ಮಾತುಕತೆಯ ನಂತರ ನನ್ನನ್ನು ಕೇಳಿದರು, "ನೀನು ಯಾವ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿರುವೆ?" ಎಂದು. ನಾನು "ತಿರುವನಂತಪುರ, ಮಹಾರಾಜ್" ಎಂದು ಉತ್ತರಿಸಿದೆ. ನಾನು ಹೇಳಿದ್ದನ್ನು ಕೇಳಿಸಿಕೊಂಡು, ಧ್ರುವಪ್ರಾಣಾಜೀ ಹಾಗೂ ಅಜಯಪ್ರಾಣಾಜಿ ಅವರುಗಳ ಆರೋಗ್ಯದ ಬಗ್ಗೆ ವಿಚಾರಿಸಿದರು. ತಾವು ಬಯಸಿದ್ದ ಒಂದು ಅನುವಾದ ಗ್ರಂಥವು ಇನ್ನೂ ಕೈಸೇರಿಲ್ಲವೆಂಬ ಸುದ್ದಿಯನ್ನು ನನಗೆ ಅವಕಾಶ ದೊರೆತಾಗ ಅಲ್ಲಿನ ಸ್ವಾಮಿ ಲೋಖಿತ್ಯರಿಗೆ ತಿಳಿಸಲು ಹೇಳಿದರು.

ಮತ್ತೆ ನನ್ನನ್ನು ಕೇಳಿದರು "ನೀನು ಈಗ ಏನು ಮಾಡುತ್ತಿರುವೆ?" ನಾನು ಸ್ವಾಮಿ ಪುರುಷೋತ್ತಮಾನಂದರ 'ಶ್ರೀ ಶಾರದಾ ದೇವಿ ಸಂದೇಶಮಂದಾರ' ಗ್ರಂಥವನ್ನು ಅನುವಾದ ಮಾಡುತ್ತಿರುವುದನ್ನು ತಿಳಿದು ಉತ್ತೇಜಿತರಾಗಿ, "ಎಲ್ಲಿ? ಎಲ್ಲಿದೆ ಅದು? ಅನುವಾದ ಮುಗಿದಿದೆಯಾ? ನೋಡೋಣ" ಎಂದರು. ನಾನು ಅದನ್ನು ಜೊತೆಯಲ್ಲಿ ತಂದಿರಲಿಲ್ಲ ಎಂದು ತಿಳಿಸಿದೆ. ನಾನು ಮಾಡುತ್ತಿರುವ ಕೆಲಸದಲ್ಲಿ ಶುಭವನ್ನು ಕೋರಿದರು.

ಮಹಾರಾಜರ ಸೇವೆಯ ಸೌಭಾಗ್ಯ ನನಗೆ ದೊರೆಯಲಿಲ್ಲ ಎಂಬ ಕೊರತೆ ನನ್ನನ್ನು ಸದಾ ಕಾಡುತ್ತಿತ್ತು. ಆ ದಿನದಂದು ರಕ್ತಪರೀಕ್ಷೆಗಾಗಿ ರಕ್ತವನ್ನು ಸೆಳೆಯುತ್ತಿದ್ದಾಗ, ಐದು ನಿಮಿಷಗಳ ಕಾಲ ಅವರ ಕೈಯನ್ನು ಹಿಡಿದು ಆ ಇಚ್ಛೆಯನ್ನು ಪೂರೈಸಿಕೊಂಡೆ. ಅದಾದ ನಂತರ ನಾನು ಹಿಂತಿರುಗಲು ಹೊರಟುನಿಂತಾದ ಅದೇ ಕೈಯಿಂದ ನನ್ನ ತಲೆಯನ್ನು ಮತ್ತೆ ಮತ್ತೆ ತಟ್ಟುತ್ತ ಆಶೀರ್ವದಿಸಿದರು. ಗಾರ್ಗಿ ಚಿಂತಿತರಾಗಿ ಹೇಳಿದರು: "ಮಹಾರಾಜ್ ನಿಮಗೆ ಆಮೇಲೆ ತುಂಬಾ ನೋವಾಗುತ್ತದೆ." ಮಹಾರಾಜ್ ಉತ್ತರಿಸಿದರು, "ಇಲ್ಲ, ಇಲ್ಲ. ಇದರಲ್ಲೇನೂ ನೋವಿಲ್ಲ." ನಾನು ಅವರನ್ನು ಕಂಡದ್ದು ಅದೇ ಕಡೆಯ ಬಾರಿ.

ನಾನು ಮಹಾರಾಜರನ್ನು ಒಮ್ಮೆ ಕೇಳಿದೆ: "ಮಹಾರಾಜ್! ನೀವು ಓದುವ ಅತಿ ಸೂಕ್ಷ್ಮ ವಿಚಾರಗಳನ್ನೂ ಅದು ಹೇಗೆ ನೆನಪಿಟ್ಟುಕೊಳ್ಳುವಿರಿ?" ಉತ್ತರ ನೀಡುತ್ತ ಮಹಾರಾಜ್ ಹೇಳಿದರು: "ನೋಡು, ಅದೇನೂ ಬಹಳ ಕಷ್ಟವಲ್ಲ. ಯಾವ ವಿಚಾರವನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕೋ ಅದಕ್ಕೆ ಗಮನ ಕೊಡಬೇಕು. ಬೇರಾವುದಕ್ಕೂ ಅಲ್ಲ. ನೀನು ಒಂದು ಚಿತ್ರವನ್ನು ನೋಡಿದಾಗ ಕೇವಲ ಆ ಚಿತ್ರವನ್ನು ಹೇಗೆ ನೋಡುವೆಯೋ ಹಾಗೇನೇ." "ಮಹಾರಾಜ್, ನಾನು ಶಾಸ್ತ್ರಗಳನ್ನೆಲ್ಲ ನೆನಪಿಟ್ಟುಕೊಳ್ಳುವಂತೆ ಆಶೀರ್ವಾದ ಮಾಡಿ" ಎಂದು ಕೇಳಿಕೊಂಡೆ. ಮಹಾರಾಜ್ ಹೇಳಿದರು. "ಅದಕ್ಕೆ ಆಶೀರ್ವಾದ ಏತಕ್ಕೆ ಬೇಕು? ಎಲ್ಲ ಜ್ಞಾನವನ್ನು ನೀಡುವ ಶ್ರೀಮಾತೆ ಶಾರದಾದೇವಿಯವರ ಪಾದಪದ್ಮದಲ್ಲಿ ನೀನು ಶರಣಾಗತಳಾಗಿರುವೆ. ಆಕೆಯ ಕೃಪೆಗಿಂತ ಮಿಗಿಲಾದದ್ದು ಏನಿದೆ?" ಈ ರೀತಿಯಾಗಿ ನಮಗೆ ಉತ್ತೇಜನ ನೀಡುತ್ತಿದ್ದರು.

ಇದಕ್ಕಿಂತಲೂ ಮುಂಚೆ, ಬೆಂಗಳೂರಿನಲ್ಲಿ ನಾನೊಮ್ಮೆ ಅವರನ್ನು ಕೇಳಿದ್ದೆ: "ಮಹಾರಾಜ್, ನಾನು ಶ್ರೀ ರಾಮಕೃಷ್ಣರನ್ನು ನೋಡಿಲ್ಲ. ತಮ್ಮಂತಹ ಯತಿಗಳಿಂದ ಪ್ರೇರಣೆಯನ್ನು ಪಡೆದು ಸಂನ್ಯಾಸಜೀವನವನ್ನು ಆಯ್ದುಕೊಂಡಿರುವೆ. ಆದರೆ, ನಾನು ಜ್ಞಾನವನ್ನೋ ಭಕ್ತಿಯನ್ನೋ ಯಾವ ಆಧ್ಯಾತ್ಮಿಕ ಪಥವನ್ನು ನನ್ನದಾಗಿಸಿಕೊಳ್ಳಬೇಕೆಂಬುದು ತಿಳಿಯುತ್ತಿಲ್ಲ." ಮಹಾರಾಜ್ ಆಂಗ್ಲ ಭಾಷೆಯಲ್ಲಿ ಉತ್ತರವಿತ್ತರು: "ನೋಡು, ಇದು ಒಂದು ಸರಪಳಿಯಂತೆ. ಒಂದು ದೊರೆತರೆ ಎಲ್ಲವೂ ದೊರೆತಂತೆ. ನಿನಗೆ ಜ್ಞಾನ ದೊರೆತರೆ, ಭಕ್ತಿಯೂ ದೊರೆಯುತ್ತದೆ; ಮುಕ್ತಿಯಂತೂ ಇದ್ದೇ ಇದೆ – ಆದರೆ ಇವುಗಳ ಬಗ್ಗೆ ನೀನು ಚಿಂತಿಸಬೇಡ. ನಿನಗೆ ಠಾಕೂರ್ ಶ್ರೀರಾಮ ಕೃಷ್ಣರಿದ್ದಾರೆ. ಅವರನ್ನು ಸ್ಮರಿಸು. ಅವರೇ ನಿನಗೆ ಜ್ಞಾನ, ಭಕ್ತಿ, ಮುಕ್ತಿಗಳೆಲ್ಲವನ್ನೂ ಕರುಣಿಸುತ್ತಾರೆ. ನೀನು ಒಂದೊಂದನ್ನು ಆಯ್ದುಕೊಳ್ಳುವುದು ಬೇಕಾಗಿಲ್ಲ. ಇವೆಲ್ಲದರ ಒಡೆಯ ಅವರು. ಅವರೇ ಕೇಂದ್ರಬಿಂದು. ಏನೇನು ಬೇಕು ಎಂಬುದು ಅವರಿಗೆ ತಿಳಿದಿದೆ."

ಒಮ್ಮೆ ಬೆಂಗಳೂರಿನಲ್ಲಿ ಒಬ್ಬ ಭಕ್ತರು ಬಹಳ ಸಂಕೋಚದೊಂದಿಗೆ ಮಹಾರಾಜರಿಗೆ ಹೇಳಿದರು: "ಮಹಾರಾಜ್, ನನ್ನ ಮನೆಯಲ್ಲಿ ಎಲ್ಲರೂ ವಿಷ್ಣುಭಕ್ತರು, ನಮ್ಮ ಮನೆಯ ದೇವರಾದ ಶ್ರೀ ವೆಂಕಟೇಶ್ವರನಿಗೆ ಮನೆಯಲ್ಲಿ ನಿತ್ಯಪೂಜೆ ನಡೆಯುತ್ತದೆ. ನಾನೊಬ್ಬನೇ ಇದಕ್ಕೆ ವ್ಯತಿರೇಕ. ನಾನು ಸ್ವಾಮಿ ವಿವೇಕಾನಂದರ ಪುಸ್ತಕಗಳನ್ನು ಓದಿ ಪ್ರೇರಣೆಗೊಂಡು ಮಠಕ್ಕೆ ಬಂದಿರುವೆ." ಮಹಾರಾಜರು ಆ ಭಕ್ತರಿಗೆ ಸಾಂತ್ವನ ನೀಡುತ್ತ ಹೇಳಿದರು: "ಇದು ಯೋಚಿಸಬೇಕಾದ ವಿಷಯವಲ್ಲ, ನಿಮ್ಮ ವೆಂಕಟೇಶ್ವರ ಅಥವಾ ವಿಷ್ಣುವೇ ರಾಮಕೃಷ್ಣರು. ಅದರಲ್ಲಿ ಯಾವುದೇ ಭೇದವಿಲ್ಲ. ಸರಿಯಾದ ಸಮಯ ಬಂದಾಗ ನಿನ್ನ ಎಲ್ಲ ಸಂದೇಹಗಳೂ ಪರಿಹಾರವಾಗುತ್ತವೆ. ಯೋಚಿಸಬೇಡ, ನಡೆ, ಹೋಗಿ ಬಾ ನರಸಿಂಹ."

ದೇಹತೂಕ ಹೆಚ್ಚಾಗಿದ್ದ ಬ್ರಹ್ಮಚಾರಿಣಿಯರಿಗೆ ಯಾವುದಾದರೂ ವ್ಯಾಯಾಮವನ್ನು ಮಾಡಿರೆಂದು ಮಹಾರಾಜರು ಯಾವಾಗಲೂ ತಿಳಿಯಹೇಳುತ್ತಿದ್ದರು. ನಾನು ಸುಮಾರಾಗಿ ಸಣ್ಣಗಿದ್ದೆ, ಆದ್ದರಿಂದ ತಮಾಷೆ ಮಾಡಲು ಹೇಳುತ್ತಿದ್ದರು: "ಇಲ್ಲ, ಇಲ್ಲ, ನೀನು ಸರಿಯಾಗೇ ಇರುವೆ." ಅವರು ಎಲ್ಲರಿಗೂ ಹೇಳುತ್ತಿದ್ದರು "ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಿ, ಸ್ವಾಮೀಜಿಯವರ ಕೆಲಸವನ್ನು ಮಾಡಬೇಕಾದರೆ ನಿಮ್ಮ ದೇಹ ಆರೋಗ್ಯಕರವಾಗಿರಬೇಕು. ಕೆಲಸ ಮಾಡುವ ಸಾಮರ್ಥ್ಯ ಹಾಗೂ ಪ್ರಾರ್ಥನೆ, ಎರಡೂ ಮುಖ್ಯ."

ಅವರು ನನ್ನನ್ನು ಗೇಲಿಮಾಡುತ್ತ ಹೇಳುತ್ತಿದ್ದರು. "ಠಾಕೂರರು ಭಜನೆಯನ್ನು ಕೇಳುತ್ತ ತನ್ಮಯರಾಗುತ್ತಿದ್ದರು. ನಿನ್ನ ಹೆಸರು ಮೀರಾ, ಮೀರಾಳಂತೆ ನೀನು ಹಾಡಬಲ್ಲೆಯಾ?"

* * * *

Blank

ಭಾಗ ೪

# ಭಕ್ತರ ಮತ್ತು ಅಭಿಮಾನಿಗಳ ದೃಷ್ಟಿಯಲ್ಲಿ

# ೪೨. ಒಬ್ಬ ಅಸಾಧಾರಣ ವ್ಯಕ್ತಿ

–ಶ್ರೀಮತಿ ಇಂದಿರಾಗಾಂಧಿ*

ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ನನಗೆ ಬಹಳ ಸಂತಸವಾಗುತ್ತಿದೆ. ನೀವು ಸಮರ್ಪಕವಾಗಿ ಪ್ರತಿನಿಧಿಸುತ್ತಿರುವ ಮಹಾನ್ ರಾಮಕೃಷ್ಣ ಸಂಘದ ಬಗ್ಗೆ ಹಾಗೂ ತಮ್ಮ ಬಗ್ಗೆ ನನಗೆ ಇರುವ ಶ್ರದ್ಧೆ ಅಭಿಮಾನಗಳೇ ಇದಕ್ಕೆ ಕಾರಣ. ನಮ್ಮ ದೇಶವು ಚಿಂತನೆ, ತನ್ನ ತತ್ತ್ವಶಾಸ್ತ್ರ ಹಾಗೂ ಸಂಸ್ಕೃತಿಯಲ್ಲಿ ಸಮೃದ್ಧ. ಆದರೆ, ಏಕೋ ಏನೋ, ಇದನ್ನೆಲ್ಲ ಹೊರಗಿನವರಿಗೆ ಹಾಗೂ ನಮ್ಮ ದೇಶದ ಎಲ್ಲ ಜನರಿಗೆ ಇದನ್ನು ತಲುಪಿಸಲಾಗದೆ ಹೋಗಿರುವೆವು. ಇವುಗಳ ಬಗ್ಗೆ ಇಲ್ಲಿ ಅನೇಕರಿಗೆ ಆಳವಾದ ಜ್ಞಾನವಿಲ್ಲದಿರುವುದೇ ಇದಕ್ಕೆ ಕಾರಣ. ಸ್ವಾಮಿ ವಿವೇಕಾನಂದರು ಹಾಗೂ ಸ್ವಾಮಿ ರಂಗನಾಥಾನಂದಜೀ ಇದಕ್ಕೆ ಗಮನಾರ್ಹ ಅಪವಾದಗಳು. ರಾಮಕೃಷ್ಣ ಮಿಷನ್ನಿನ ವಿವಿಧ ಕೇಂದ್ರಗಳು ಮಾಡುತ್ತಿರುವ ಅಸಾಧಾರಣ ಸೇವಾಕಾರ್ಯಗಳು ಈ ಕೊರತೆಯನ್ನು ಸ್ವಲ್ಪ ಮಟ್ಟಿಗಾದರೂ ನೀಗಿಸಿವೆ... [ಭವನ್ಸ್ ಜರ್ನಲ್ (ಪತ್ರಿಕೆ), ೨೭, ಜೂನ್ ೧೯೭೧ರಿಂದ)

ಸ್ವಾಮಿ ರಂಗನಾಥಾನಂದರು ಒಬ್ಬ ಅಸಾಧಾರಣ ವ್ಯಕ್ತಿ, ಉತ್ತಮ ಪಾಂಡಿತ್ಯವುಳ್ಳವರು; ಹಾಗೂ ಮಾನವರ ಸಮಸ್ಯೆಗಳನ್ನು ಚೆನ್ನಾಗಿ ತಿಳಿದಿರುವವರು. ಮಾನವಕುಲವನ್ನು ಒಂದು ಪರಿವಾರದಂತೆ ಕಾಣುತ್ತ, ನಾವುಗಳೂ ಪ್ರಯತ್ನಿಸುತ್ತಿರುವಂತೆ, ಅವರು ತಮ್ಮ ಅಂತರ್ದೃಷ್ಟಿ ಹಾಗೂ ಸುಲಲಿತ ವಾಗ್ಮಿತ್ವದಿಂದ ಪುರುಷರು ಹಾಗೂ ಸ್ತ್ರೀಯರು ತಮ್ಮ ಬೌದ್ಧಿಕ ಹಾಗೂ ಆಧ್ಯಾತ್ಮಿಕ ಅನ್ವೇಷಣೆಯನ್ನು ಮುಂದುವರಿಸುವಲ್ಲಿ ಸಹಕರಿಸುತ್ತಿದ್ದಾರೆ. ಬಹಳಷ್ಟು ಸಂಚಾರ ಮಾಡಿ ಇತರರು ತಮ್ಮ ತಮ್ಮ ಪಥವನ್ನು ಕಂಡುಕೊಳ್ಳುವಲ್ಲಿ ಸಹಾಯ ನೀಡಿದ್ದಾರೆ. (ವಿಜಯವಾಡ ಶ್ರೀ ರಾಮಕೃಷ್ಣ ಸಮಿತಿಯಿಂದ ಪ್ರಕಾಶಿತ 'A Pictorial Profile' ಗ್ರಂಥದಿಂದ)

* * * *

---

* ಭಾರತದ ದಿವಂಗತ ಪ್ರಧಾನ ಮಂತ್ರಿ

## ೪೩. ನಮ್ಮ ದೇಶದ ಸಂಸ್ಕೃತಿ ಮೂರ್ತಿವೆತ್ತ ರಾಯಭಾರಿ

–ಬಿ.ಡಿ. ಜತ್ತಿ*

ಸ್ವಾಮಿ ರಂಗನಾಥಾನಂದರು ನಮ್ಮ ದೇಶದ ಅನಧಿಕೃತ ಸಾಂಸ್ಕೃತಿಕ ರಾಯಭಾರಿಯಾಗಿ ರಾಮಕೃಷ್ಣ ಮಿಷನ್‌ನ ಪ್ರಸಿದ್ಧ ಸಂಸ್ಥಾಪಕರಾದ ಸ್ವಾಮಿ ವಿವೇಕಾನಂದರು ತೋರಿದ ದಿವ್ಯಪಥದಲ್ಲಿ ಪಯಣಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾರೆ. ಟೋಕಿಯೋದಿಂದ ಟೊರೊಂಟೋದವರೆಗೆ ಹಾಗೂ ನವದೆಹಲಿಯಿಂದ ನ್ಯೂಯಾರ್ಕ್‌ನವರೆಗೆ ಸ್ವಾಮೀಜಿಯ ಸ್ಫೂರ್ತಿದಾಯಕ ಉಪನ್ಯಾಸಗಳನ್ನು ಕೇಳಲು ಮುತ್ತುತ್ತಿದ್ದ ಜನಸಮೂಹವನ್ನು ಮಂತ್ರಮುಗ್ಧಗೊಳಿಸಿ, ನಮ್ಮ ಪರಿಪೂರ್ಣ ಆನಂದದ ಹಾಗೂ ಜ್ಞಾನದ ಅನೇಕ ಮಹಿಮಾನ್ವಿತ ವಿಚಾರಗಳ ಕಂಪನ್ನು ಯಶಸ್ವಿಯಾಗಿ ಹರಡಿದ್ದಾರೆ. (ವಿಜಯವಾಡದ ಶ್ರೀ ರಾಮಕೃಷ್ಣ ಸಮಿತಿಯಿಂದ ಪ್ರಕಾಶಿತ *A Pictorial Profile* ಗ್ರಂಥದಿಂದ).

* * * *

---

* ಭಾರತದ ದಿವಂಗತ ಉಪರಾಷ್ಟ್ರಪತಿಗಳು

# ೪೪. ನಿಜವಾದ ಸಂನ್ಯಾಸಿ

–ಡಾ॥ ಮನಮೋಹನ್ ಸಿಂಗ್*

ಅತಿಯಾದ ದುಃಖ ಹಾಗೂ ಅಮೂಲ್ಯವಾದದ್ದನ್ನು ಕಳೆದುಕೊಂಡಿರುವ ಗಂಭೀರ ಭಾವನೆಗಳೊಂದಿಗೆ ಆಧುನಿಕ ಕಾಲದ ಅತ್ಯಂತ ಶ್ರೇಷ್ಠ ಆಚಾರ್ಯರಾದ ಸ್ವಾಮಿ ರಂಗನಾಥಾನಂದಜೀ ಅವರ ದೇಹಾಂತ್ಯವನ್ನು ಸ್ಮರಿಸುತ್ತೇನೆ. ನಮ್ಮ ದೇಶದ ಕೋಟ್ಯಂತರ ಮಾನವರೊಂದಿಗೆ ನಾನು ಕೂಡ ಅಂತರಂಗದ ಶೋಕವನ್ನು ವ್ಯಕ್ತಪಡಿಸುತ್ತೇನೆ.

ನಮ್ಮ ದೇಶದ ಪುರಾತನ ಸಂಸ್ಕೃತಿಯ ಅತ್ಯುತ್ತಮ ಪರಂಪರೆಗಳ ನಿಷ್ಠಾವಂತ ಮಾನವೀಯ ಪ್ರತಿನಿಧಿಯಾಗಿದ್ದ ಸ್ವಾಮೀಜಿ ಆಚಾರ್ಯರು, ಪಂಡಿತರು, ಯತಿಗಳು, ಆರ್ತರ ಒಡನಾಡಿಗಳು ಹಾಗೂ ಎಲ್ಲಕ್ಕಿಂತ ಮಿಗಿಲಾಗಿ ಸಂಪೂರ್ಣ ಆಧ್ಯಾತ್ಮಿಕ ವ್ಯಕ್ತಿ. ದೇಶವಿದೇಶಗಳಲ್ಲಿ ರಾಮಕೃಷ್ಣ ಮಿಷನ್ನಿನ ಶಿಕ್ಷಣ ಹಾಗೂ ಧ್ಯಾನದ ಕೇಂದ್ರಗಳನ್ನು ಸೃಷ್ಟಿಸಿ ಕಟ್ಟಿದ ಇವರು ನಿರ್ಮಾಣ ಕಾರ್ಯಗಳಲ್ಲೂ ಪರಿಣತರು. ನಮ್ಮ ಅತ್ಯುತ್ತಮ ಶಾಸ್ತ್ರ ಪುರಾಣಗಳ ಉಪದೇಶಗಳನ್ನು ಭಾರತೀಯರ ಕೆಲವು ತಲೆಮಾರುಗಳೇ ಇವರ ಪಾದದಡಿಯಲ್ಲಿ ಕುಳಿತು ಕಲಿತಿವೆ. ನಮಗೆ ನೆನಪಿರುವಂತೆ, ಗೀತೆಯ ವ್ಯಾಖ್ಯಾನ ಮಾಡುವಲ್ಲಿ ಇವರಷ್ಟು ಪರಿಣತರು ಮತ್ತಾರೂ ಇಲ್ಲ ಎಂಬುದು ನಿಸ್ಸಂದೇಹ. ಗೀತೆಯಲ್ಲಿನ ತತ್ತ್ವಗಳನ್ನು ಕಾವ್ಯದಂತೆ ವಿವರಿಸುವ ಇವರ ವಿಶೇಷ ಸಾಮರ್ಥ್ಯ ಅದ್ವಿತೀಯ.

ನಮ್ಮ ವಿಶಾಲವಾದ ದೇಶದ ವಿವಿಧೆಡೆಗಳಲ್ಲಿ ಸ್ವಾಮೀಜಿ ತಮ್ಮ ತುಂಬು ಜೀವನವನ್ನು ನಡೆಸಿ ಪ್ರೀತಿ, ತ್ಯಾಗ, ವಿದ್ಯೆ, ಪವಿತ್ರತೆ ಹಾಗೂ ವಿಚಾರವಂತಿಕೆಯ ಪ್ರಾಮುಖ್ಯವನ್ನು ಸಾರಿದರು. ದಕ್ಷಿಣ ಏಷಿಯಾದ ಮೂಲೆಮೂಲೆಗಳಲ್ಲಿ ಹಾಗೂ ಪ್ರಪಂಚದ ಎಲ್ಲೆಡೆ ತಮ್ಮ ಶಿಷ್ಯರಿಗೆ ಜ್ಞಾನಾರ್ಜನೆಯ ಹಿರಿಮೆಯನ್ನು ಮನಗಾಣಿಸಿದರು. ರಾಮಕೃಷ್ಣ ಸಂಘದ ಇತರ ಸದಸ್ಯರು ಇವರನ್ನು 'ದ್ವಿತೀಯ ಸ್ವಾಮಿ ವಿವೇಕಾನಂದರು' ಎಂದೇ ಪರಿಗಣಿಸುತ್ತಿದ್ದರು. ಇದು ಸಮರ್ಪಕವೇ ಸರಿ. ನಮ್ಮ ಪ್ರಾಚೀನ ಶಾಸ್ತ್ರಗಳನ್ನು ಆಧುನಿಕ ರೀತಿಯಲ್ಲಿ ವ್ಯಾಖ್ಯಾನಿಸಿ, ಮಾನವೀಯ ಹಾಗೂ ಮುಕ್ತ ಭಾವನೆಗಳಿಗೆ ಹೆಚ್ಚು ಒತ್ತು ನೀಡಿದರು. ಈ ಮೌಲ್ಯಗಳು ಸ್ವಾಮಿ ವಿವೇಕಾನಂದರಿಗೂ ಅತ್ಯಂತ ಪ್ರಿಯವಾಗಿದ್ದವು ಹಾಗೂ ಹಿಂದೂ ಧರ್ಮದ ವ್ಯಾಖ್ಯಾನದಲ್ಲಿ ಇವುಗಳನ್ನೇ ಅವರು ಎತ್ತಿ ಹಿಡಿದಿದ್ದರು.

ಸ್ವಾಮಿ ರಂಗನಾಥಾನಂದರದು ಅಗಾಧ ಪಾಂಡಿತ್ಯವಷ್ಟೇ ಅಲ್ಲ, ಅವರು ಉತ್ತಮ ಆಚಾರ್ಯರೂ ಕೂಡ. ಸರ್ವೇಪಲ್ಲಿ ರಾಧಾಕೃಷ್ಣನ್‌ರ ಲೇಖನಗಳಂತೆ ಸ್ವಾಮೀಜಿಯವರು ಪಾಂಡಿತ್ಯಪೂರ್ಣ ಬರೆವಣಿಗೆಗಳು ಸಹಸ್ರಾರು ಯುವಕ ಯುವತಿಯರಿಗೆ ನಮ್ಮ ಪ್ರಾಚೀನ ದೇಶದ ಮಹಾನ್ ಧರ್ಮಗಳಲ್ಲಿನ ಮೌಲ್ಯಗಳನ್ನು ಗ್ರಹಿಸುವಲ್ಲಿ ಸಹಕರಿಸಿವೆ. ಕೇರಳದಲ್ಲೋ ಅಥವಾ ಕೊಲ್ಕತ್ತಾದಲ್ಲೋ, ಹೈದರಾಬಾದಿನಲ್ಲೋ ಅಥವಾ ನವ ದೆಹಲಿಯಲ್ಲೋ – ಸ್ವಾಮೀಜಿ ಎಲ್ಲೆಲ್ಲಿ ಇದ್ದರೋ ಅಲ್ಲೆಲ್ಲಾ ಪ್ರಬುದ್ಧ ಯುವಜನಾಂಗದ ಪೀಳಿಗೆಯನ್ನೇ ಬಿಟ್ಟುಬಂದರು. ಇವರಿಂದ ಪ್ರೇರಿತರಾದ ಯುವಜನಾಂಗ ಮಾನವಸೇವೆಗಾಗಿ ಹಾಗೂ ನಮ್ಮ ಜನರ ಕಲ್ಯಾಣಕ್ಕಾಗಿ ತಮ್ಮ ಜೀವನವನ್ನೇ ಮುಡಿಪಿಟ್ಟಿದ್ದಾರೆ.

---

* ಭಾರತದ ಪ್ರಧಾನ ಮಂತ್ರಿಗಳು

ಅವರ ಪ್ರವಚನಗಳನ್ನು ಆಲಿಸಲು ಎಲ್ಲ ವಯಸ್ಸಿನವರೂ ಬರುತ್ತಿದ್ದರು. ಯುವಪೀಳಿಗೆಯಷ್ಟೇ ವಯೋವೃದ್ಧರಿಗೂ ಅವು ಪ್ರಿಯವಾಗಿದ್ದವು. ಕೆಲವರು ಜ್ಞಾನಕ್ಕಾಗಿ ಬರುತ್ತಿದ್ದರು, ಮತ್ತೆ ಕೆಲವರು ಪ್ರೇರಣೆಗಾಗಿ. ಆದರೆ, ಶಾಂತಿ ನೆಮ್ಮದಿಗಾಗಿ ಬಂದವರೇ ಇವರೆಲ್ಲ. ಅವರ ಸುಮಧುರ ಕಂಠ, ಸುಂದರ ವ್ಯಕ್ತಿತ್ವ, ಮಾನವೀಯ ದೃಷ್ಟಿ ಹಾಗೂ ಇದರೊಂದಿಗೆ ಆಳವಾದ ಪಾಂಡಿತ್ಯ– ಇವು ಬೃಹತ್ ಪ್ರಮಾಣದ ಪ್ರೇಕ್ಷಕರನ್ನು ಆಕರ್ಷಿಸುತ್ತಿದ್ದುವು. ಅವರೊಬ್ಬ ಮಹಾನ್ ಸಂಭಾಷಣಕಾರರು.

ಸ್ವಾಮಿ ರಂಗನಾಥಾನಂದರ ತಿರೋಧಾನದಿಂದ ಜಗತ್ತು ಒಬ್ಬ ನಿಜವಾದ ಸಂನ್ಯಾಸಿಯನ್ನು– ಆ ಪದದ ಎಲ್ಲ ಅರ್ಥಗಳಲ್ಲಿ– ಕಳೆದುಕೊಂಡಿದೆ. ನಾವಿಂದು ಈ ವಿಷಯದಲ್ಲಿ ದರಿದ್ರರಾದೆವು. ಜಗತ್ತಿನಾದ್ಯಂತ ಈ ವೈಯಕ್ತಿಕ ನಷ್ಟವನ್ನು ಸಹಿಸುತ್ತಿರುವ ಅವರ ಎಲ್ಲ ಶಿಷ್ಯರೊಂದಿಗೆ ನಾನೂ ಒಂದಾಗಿದ್ದೇನೆ.

* * * *

# ೪೫. ಸ್ವಾಮಿ ರಂಗನಾಥಾನಂದರ ಪಾದದಡಿಯಲ್ಲಿ

–ಎಲ್.ಕೆ. ಅಡ್ವಾಣಿ*

ಕರಾಚಿಯಲ್ಲಿ ನಾನು ಜೀವಿಸುತ್ತಿದ್ದಾಗ, ಆ ಅವಧಿಯ ಕಡೆಯ ಮೂರು ವರ್ಷಗಳ ಕಾಲ ನನ್ನ ಜೀವನದ ಕ್ರಮವನ್ನೇ ಬದಲಾಯಿಸಿದಂತಹ ಮತ್ತೊಂದು ಪ್ರಭಾವಕ್ಕೊಳಗಾದೆ. ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಸ್ವಾಮಿ ರಂಗನಾಥಾನಂದರು ನೀಡುತ್ತಿದ್ದ 'ಭಗವದ್ ಗೀತಾ' ಉಪನ್ಯಾಸಗಳನ್ನು ಆಲಿಸಲು ಹೋಗಲಾರಂಭಿಸಿದೆ. ಮಹಾಭಾರತದ ಯುದ್ಧದಲ್ಲಿ ಕುರುಕ್ಷೇತ್ರದ ಸಂಗ್ರಾಮದಲ್ಲಿ ಯೋಧನಾದ ಅರ್ಜುನನೊಂದಿಗೆ ಶ್ರೀಕೃಷ್ಣನು ನಡೆಸಿದ ಅತ್ಯಂತ ಆಕರ್ಷಕವಾದ ದಾರ್ಶನಿಕ ಸಂವಾದವನ್ನು ಸ್ಪಷ್ಟವಾಗಿ, ನೇರವಾಗಿ ಹಾಗೂ ಅರ್ಥಗರ್ಭಿತವಾಗಿ ವ್ಯಾಖ್ಯಾನ ಮಾಡುತ್ತಿದ್ದ ಸ್ವಾಮಿಗಳ ವ್ಯಕ್ತಿತ್ವ ಹಾಗೂ ವಾಕ್‌ಶಕ್ತಿಯಿಂದ ಆಕರ್ಷಿತನಾಗಿದ್ದೆ.

ಆಗ, ಆರು ವರ್ಷಗಳ ಕಾಲ ಕರಾಚಿಯ ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾಗಿದ್ದ ಸ್ವಾಮೀಜಿ, ರಾಮಕೃಷ್ಣ ಪರಮಹಂಸರ ಹಾಗೂ ಅವರ ಶಿಷ್ಯರಾದ ಸ್ವಾಮಿ ವಿವೇಕಾನಂದರ ಉಪದೇಶಗಳನ್ನು ಪ್ರಚಾರಮಾಡುತ್ತಿದ್ದರು. ದೂರದ ಬರ್ಮಾದ ರಾಮಕೃಷ್ಣ ಮಿಷನ್ನಿನಲ್ಲಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿ ಕರಾಚಿಗೆ ಬಂದಿದ್ದರು. ಅವರು ಜನಿಸಿದ್ದು ಕೇರಳದಲ್ಲಿ! ತಮ್ಮ ಬಹಳ ಸಣ್ಣಪ್ರಾಯದಲ್ಲೇ ಆಧ್ಯಾತ್ಮಿಕ ಹಾಗೂ ಮಾನವಸೇವೆಯ ಪಥವನ್ನು ಆಯ್ದುಕೊಂಡಿದ್ದ ಸ್ವಾಮೀಜಿ ಅತ್ಯಂತ ಸರಳವ್ಯಕ್ತಿಗಳು ಹಾಗೂ ಆಪ್ಯಾಯಮಾನರಾಗಿದ್ದರು. ನನ್ನ ಬಗ್ಗೆ ಅವರು ಬಹುಬೇಗ ಮಮತೆಯನ್ನು ತೋರಿದರು. ನಾನೂ ಕೂಡ ಬಹುಬೇಗ ಅವರ ನಿಷ್ಠೆ, ಪಾಂಡಿತ್ಯ ಹಾಗೂ ಸೇವಾಬದ್ಧ ವ್ಯಕ್ತಿತ್ವದಿಂದ ಬಹಳ ಆಕೃಷ್ಟನಾದೆ. "ಈ ಗುಣಗಳನ್ನು ನಾನೂ ಬೆಳೆಸಿಕೊಳ್ಳಬೇಕು" ಎಂದು ನನಗೇ ಹೇಳಿಕೊಂಡೆ.

ಮೊದಮೊದಲು 'ಗೀತೆ'ಯ ಉಪನ್ಯಾಸಗಳಿಗೆ ಬರುತ್ತಿದ್ದವರ ಸಂಖ್ಯೆ ಕಡಿಮೆಯೇ– ಐವತ್ತರಿಂದ ನೂರರಷ್ಟು, ಆದರೆ ಆ ಸಂಖ್ಯೆ ವಾರಗಳು ಕಳೆದಂತೆ ವರ್ಧಿಸುತ್ತಲೇ ಹೋಯಿತು ಹಾಗೂ ಒಂದು ಸಾವಿರವನ್ನು ಮುಟ್ಟಿತು. ಆಶ್ರಮವು ಮುಸ್ಲಿಮರಿದ್ದ ಪ್ರದೇಶದಲ್ಲಿ ಇದ್ದುದರಿಂದ ಕೆಲವು ಮುಸ್ಲಿಮರೂ ಉಪನ್ಯಾಸಗಳಿಗೆ ಬರಲಾರಂಭಿಸಿದರು. ಕೆಲವು ಕ್ರಿಶ್ಚಿಯನ್ನರು ಹಾಗೂ ಕರಾಚಿಯ ಹಿಂದಿನ ಮಹಾ ನಾಗರಿಕರಾಗಿದ್ದ ಜಮ್‌ಶೇಡ್ ನಸರ್ವಾಂಜೀ ಮೆಹ್ತಾ ಅವರೂ ಸೇರಿದಂತೆ ಪಾರ್ಸಿಗಳೂ ಬರುತ್ತಿದ್ದರು. ಸ್ವಯಂಸೇವೆಯ ಕಾರ್ಯಕ್ರಮಗಳಲ್ಲಿ ನಾನೂ ಕೂಡ ನನ್ನ ಕೈಲಾದದನ್ನು ಮಾಡಿದೆ. ಆಶ್ರಮವು ಚಟುವಟಿಕೆಯಿಂದ ಕೂಡಿತ್ತು. ಬ್ರಿಟಿಷರ ಯುದ್ಧಕಾಲದ ನಿಯಮಗಳಿಂದಾಗಿ, ೧೯೪೩ರಲ್ಲಿ ಬಂಗಾಳದ ಕ್ಷಾಮದ ಅವಧಿಯಲ್ಲಿ ಹತ್ತಾರು ಲಕ್ಷ ಜನರು ಅಸುನೀಗಿದ್ದು ನನಗೆ ನೆನಪಿದೆ. ಆ ಸಂತ್ರಸ್ತ ಜನರಿಗಾಗಿ ಆಹಾರ ಹಾಗೂ ಇತರ ಪರಿತ್ರಾಣ ಪದಾರ್ಥಗಳನ್ನು ಸಂಗ್ರಹಿಸಲೋಸುಗ ಸ್ವಾಮಿಗಳು ಒಂದು ಬಿನ್ನಹಪತ್ರವನ್ನು ಹೊರಡಿಸಿದರು. ಇದಕ್ಕೆ ಒಳ್ಳೆಯ ಉದಾರ ಪ್ರತಿಕ್ರಿಯೆ ದೊರೆತು, ಬಹಳ ಬೇಗದಲ್ಲೇ ಸುಮಾರು ಐದು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಲಾಯಿತು. ಆ ಹಣದಿಂದ ಸ್ವಾಮಿಗಳು ಅಕ್ಕಿಯನ್ನು ಖರೀದಿಸಿದರು. ಶ್ರೀಲಂಕಾದ ಮೂಲಕ ಬಂಗಾಳಕ್ಕೆ ಅದನ್ನು ಸ್ಟೀಮರ್‌ನಲ್ಲಿ ರವಾನಿಸಲು ಹಾಗೂ ಅದಕ್ಕಾಗಿ ಬೇಕಾಗುವ ಎಕ್ಸ್‌ಪೋರ್ಟ್ ಅನುಮತಿಯನ್ನು ಪಡೆದುಕೊಳ್ಳಲು ಸಿಂಧ್‌ನ ರಾಜ್ಯಾಡಳಿತವನ್ನು ಕೇಳಿಕೊಂಡರು. "ನಿಮ್ಮ ಸರದಿಗಾಗಿ ನೀವು ಕಾಯಬೇಕು. ಇದೇ ಕಾರಣಕ್ಕಾಗಿ ಮುಸ್ಲಿಮ್ ಲೀಗ್‌ನವರೂ

---

* ಹಿಂದಿನ ಉಪ ಪ್ರಧಾನಮಂತ್ರಿಗಳು ಹಾಗೂ ಭಾರತದ ಗೃಹಮಂತ್ರಿಗಳು. ಈ ಲೇಖನದ ಅಂಶವನ್ನು ಲೇಖಕರ *'My Country My Life'* Rupa & Co., ೨೦೦೮ ಗ್ರಂಥದ ೪೬–೪೯ ಪುಟದಿಂದ ಕೃತಜ್ಞತಾಪೂರ್ವಕವಾಗಿ ಪುನರ್ಮುದ್ರಿಸಲಾಗಿದೆ.

ಕೂಡ ಎಕ್ಸ್‌ಪೋರ್ಟ್ ಅನುಮತಿಯನ್ನು ಬಯಸಿದ್ದಾರೆ. ಅವರದನ್ನು ಅವರು ಬಳಸಿಕೊಂಡ ನಂತರ ನಿಮ್ಮ ಕೋಟಾ ಕೊಡಲು ಸಾಧ್ಯ" ಎಂದು ಒಬ್ಬ ಅಧಿಕಾರಿ ಹೇಳಿದ. ಕೆಲವು ವಾರಗಳ ಅನಂತರ ಅದೇ ಅಧಿಕಾರಿಯು ಸ್ವಾಮಿಗಳಿಗೆ ಹೇಳಿದ, "ಮುಸ್ಲಿಮ್ ಲೀಗ್‌ನವರು ಕೇವಲ ಅರವತ್ತು ಟನ್ ಕಳಿಸಿದರು. ಇನ್ನು ಉಳಿದಿರುವ ಕೋಟಾ ಸಂಪೂರ್ಣವಾಗಿ ನಿಮ್ಮದು." ಆಶ್ರಮವು ೧೨೪೦ ಟನ್ ಅಕ್ಕಿಯನ್ನು ಕಳಿಸಿತು.

ಸ್ವಾಮಿಗಳು ಅನೇಕ ವಿಶಿಷ್ಟ ವ್ಯಕ್ತಿಗಳನ್ನು ಆಶ್ರಮಕ್ಕೆ ಆಹ್ವಾನಿಸುತ್ತಿದ್ದರು. ೧೯೪೫ರ ಅಕ್ಟೋಬರ್‌ನಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ(BHU)ದ ಕುಲಪತಿಗಳೂ ಹಾಗೂ ಮಹಾನ್ ತತ್ತ್ವಜ್ಞಾನಿಗಳೂ ಆಗಿದ್ದ ಡಾ॥ ಎಸ್. ರಾಧಾ ಕೃಷ್ಣನ್* ಅವರ ಭೇಟಿ ಅವಿಸ್ಮರಣೀಯ. ಅವರು ಎರಡು ಪ್ರವಚನಗಳನ್ನು ನೀಡಿದರು. ಒಂದು, ಆಶ್ರಮದಲ್ಲಿ; ಮತ್ತೊಂದು ಡಿ.ಜೆ. ಸಿಂಧ್ ಕಾಲೇಜಿನಲ್ಲಿ. ಎರಡರಲ್ಲೂ ಜನಸಮೂಹವೇ ಸೇರಿತ್ತು. BHUಗಾಗಿ ಸ್ವಲ್ಪ ದೇಣಿಗೆಯನ್ನು ಸಂಗ್ರಹಿಸಿರೆಂದು ಡಾ॥ ರಾಧಾಕೃಷ್ಣನ್ ಸ್ವಾಮಿಗಳಲ್ಲಿ ವಿನಂತಿಸಿಕೊಂಡಿದ್ದರು. ಕರಾಚಿಯ ನಿವಾಸಿಗಳು ಅವರಿಗೆ ೫೦,೦೦೦ ರೂ.ಗಳ ಒಂದು ಹಣದ ಚೀಲವನ್ನು ನೀಡಿದರು. ಆಗಿನ ದಿನಗಳಲ್ಲಿ ಅದೊಂದು ಬಹಳ ಗಣನೀಯ ಮೊತ್ತ.

ನಾನು ೧೯೪೭ರ ಸೆಪ್ಟೆಂಬರ್‌ನಲ್ಲಿ ಕರಾಚಿಯನ್ನು ಬಿಟ್ಟುಬಂದೆ. ಆ ನಗರದಲ್ಲಿ ರಾಮಕೃಷ್ಣ ಮಿಷನ್ನಿನ ಕಾರ್ಯಕ್ರಮಗಳನ್ನು ಮುಂದುವರಿಸುವುದು ಅಸಾಧ್ಯವಾಗುವ ತನಕ ಸ್ವಾಮಿಗಳು ಅಲ್ಲೇ ವಾಸವಾಗಿದ್ದರು. ೧೯೪೮ರ ಆಗಸ್ಟ್‌ನಲ್ಲಿ ಖಿನ್ನರಾಗಿ, ಮಿಷನ್ ಕೇಂದ್ರವನ್ನು ಮುಚ್ಚಿಹಾಕಿ ಕರಾಚಿಯನ್ನು ಬಿಟ್ಟುಬಂದರು. ತೊಂಬತ್ತೆಂಟು [ನಿಜವಾಗಿ ತೊಂಬತ್ತಾರು] ವರ್ಷಗಳ ತುಂಬುಜೀವನದ ಕಡೆಯ ತನಕ ಅವರೊಡನೆ ನನ್ನ ಸಂಪರ್ಕ ಮುಂದುವರಿಯಿತು. ೨೦೦೫ರ ಫೆಬ್ರವರಿಯಲ್ಲಿ ಅವರು ದೇಹವನ್ನು ಬಿಟ್ಟದ್ದು. ೧೯೬೦ರಲ್ಲಿ ಅವರು ದೆಹಲಿಯ ರಾಮಕೃಷ್ಣ ಮಿಷನ್ನಿನ ಮುಖ್ಯಸ್ಥರಾಗಿದ್ದಾಗ ನಾನು ಅವರನ್ನು ನಿಯಮಿತವಾಗಿ ಭೇಟಿಯಾಗುತ್ತಿದ್ದೆ. ಅದಾದನಂತರ ಅವರು ಹೈದರಾಬಾದಿನಲ್ಲಿ ದೀರ್ಘಕಾಲ ರಾಮಕೃಷ್ಣ ಮಿಷನ್ನಿನ ಮುಖ್ಯಸ್ಥರಾಗಿದ್ದಾಗಲೂ ಅವರನ್ನು ಕಾಣುತ್ತಿದ್ದೆ. ಅವರೊಡನೆ ನನ್ನ ಕಡೆಯ ಭೇಟಿಯಾಗಿದ್ದು ೨೦೦೩ರಲ್ಲಿ, ನಾನು ಕಲ್ಕತ್ತೆಗೆ ಒಂದು ಕಾರ್ಯಕ್ರಮಕ್ಕಾಗಿ ಹೋಗಿದ್ದಾಗ. ಆಗ ಸ್ವಾಮಿಗಳು ಇಡೀ ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾಗಿದ್ದರು ಹಾಗೂ ಅದರ ಪ್ರಧಾನ ಕೇಂದ್ರವಾದ ಬೇಲೂರು ಮಠದಲ್ಲಿ ವಾಸವಾಗಿದ್ದರು.

ಈ ಕಡೆಯ ಭೇಟಿಯಲ್ಲಿ ನಾವು ಕರಾಚಿಯಲ್ಲಿ ಕಳೆದ ದಿನಗಳ ಬಗ್ಗೆ ಹೆಚ್ಚು ಮಾತನಾಡಿದೆವು; ವಿಭಜನೆಯಿಂದಾಗಿ ಉಂಟದ ಹೃದಯವಿದ್ರಾವಕ ಘಟನೆಗಳು ಹಾಗೂ ಮೊಹಮ್ಮದ್ ಅಲಿ ಜಿನ್ನಾರ ಪಾತ್ರದ ಕುರಿತು. ೧೯೪೭ರ ಆಗಸ್ಟ್ ೧೧ರಂದು ಪಾಕೀಸ್ತಾನದ ಸಂಸದೀಯ ಮಂಡಳಿಯಲ್ಲಿ ಜಿನ್ನಾ ನೀಡಿದ ಐತಿಹಾಸಿಕ ಉಪನ್ಯಾಸವನ್ನು ಸ್ವಾಮಿಗಳು ವಿಶೇಷವಾಗಿ ಹೊಗಳಿದರು ಹಾಗೂ ಹೇಳಿದರು: "ಸೆಕ್ಯೂಲರಿಸಂನ ಸರಿಯಾದ ವಿವರಣೆಯನ್ನು ಈ ಪ್ರವಚನದಲ್ಲಿ ಕಾಣಬಹುದು." ೨೦೦೫ರ ಮೇ–ಜೂನ್‌ನಲ್ಲಿ ನಾನು ಪಾಕೀಸ್ತಾನಕ್ಕೆ ಹೋದಾಗ, ಜಿನ್ನಾರ ಬಗ್ಗೆ ನಾನು ಹೇಳಿದ ವಿಚಾರಗಳು ಸ್ವಾಮಿಗಳೊಂದಿಗೆ ನಾನು ನಡೆಸಿದ್ದ ಈ ಕಡೆಯ ಸಂಭಾಷಣೆಯಿಂದ ಪ್ರಭಾವಿತವಾಗಿದ್ದುವು, ನನಗೇ ತಿಳಿಯದಂತೆ.

ಸ್ವಾಮಿ ರಂಗನಾಥಾನಂದರು ಈಗಿನ ಕಾಲದ ಭಾರತದ ಸಮಾಜದಲ್ಲಿ ಬೆಳಗಿದ ಅತ್ಯುತ್ಕೃಷ್ಟ ಆಧ್ಯಾತ್ಮಿಕ ತಾರೆಗಳಲ್ಲಿ ಒಬ್ಬರು. ಅವರು ಸಂಪೂರ್ಣ ವಿಕಾಸವನ್ನು ಹೊಂದಿದ್ದ ಚೇತನ. ರಾಮಕೃಷ್ಣ ಮಠದಲ್ಲಿ ಸೇರಿದಾಗ ಅಡುಗೆ ಮಾಡುತ್ತ, ಪಾತ್ರೆಗಳನ್ನು ತೊಳೆಯುತ್ತ ಪ್ರಾರಂಭವಾದ ಅವರ ಸಾಧನಾಮಯ ಜೀವನ ದೇಶವಿದೇಶಗಳಲ್ಲಿ

---

* ಡಾ॥ ಎಸ್. ರಾಧಾಕೃಷ್ಣನ್ ಇಪ್ಪತ್ತನೆಯ ಶತಮಾನದ ಅಂತಾರಾಷ್ಟ್ರೀಯ ಪ್ರಸಿದ್ಧಿ ಗಳಿಸಿದ ಭಾರತೀಯ ತತ್ತ್ವಜ್ಞಾನಿ ಹಾಗೂ ಶಿಕ್ಷಣತಜ್ಞರು. ಭಾರತದ ಪ್ರಥಮ ಉಪರಾಷ್ಟ್ರಪತಿಗಳು ಹಾಗೂ ಎರಡನೆಯ ರಾಷ್ಟ್ರಪತಿಗಳಾಗಿದ್ದರು.

ರಾಮಕೃಷ್ಣ–ವಿವೇಕಾನಂದರ ಉಪದೇಶಗಳ ಅತ್ಯುತ್ತಮ ಪ್ರತಿನಿಧಿಯಾಗುವ ತನಕ ತಲುಪಿತು. ಅವರನ್ನು ಅತ್ಯಂತ ಶ್ರದ್ಧೆಯಿಂದ ಎಲ್ಲರೂ ಗೌರವಿಸುತ್ತಿದ್ದರು. ಒಬ್ಬ ವ್ಯಕ್ತಿಯ ವೈಯಕ್ತಿಕ ಆತ್ಮಾನುಭೂತಿಯ ಬಗ್ಗೆ ಹೆಚ್ಚು ಗಮನ ನೀಡುವಂತಹ ಸಾಂಪ್ರದಾಯಿಕ ಗುರುವಾಗಿರಲಿಲ್ಲ ಅವರು. ಅವರೇ ರೂಪಿಸಿದ ಪ್ರೇರಣಾದಾಯಕ ಉಕ್ತಿ, "ಮಾನವ ಪ್ರೇಮವಾಗಿ ಪರಿವರ್ತನೆಗೊಂಡ ಭಗವತ್‌ಪ್ರೇಮ." ಈ ಜಗತ್ತನ್ನು ಕಾಡುತ್ತಿರುವ ಅಸಂಖ್ಯ ತೊಂದರೆ–ಸಮಸ್ಯೆಗಳನ್ನು ಎದುರಿಸಬೇಕಾದರೆ, ಇರುವ ಒಂದೇ ಉಪಾಯವೆಂದರೆ ಮಾನವನ ಎಲ್ಲ ಆಗುಹೋಗುಗಳನ್ನೂ ಆಮೂಲಾಗ್ರವಾಗಿ ಆಧ್ಯಾತ್ಮಿಕಗೊಳಿಸುವುದು. ಜಗತ್ತಿಗೆ ಇದನ್ನು ಸಾರುವುದೇ ಅವರ ಜೀವನದ ಗುರಿಯಾಗಿತ್ತು.

ಮಾತು ಹಾಗೂ ಬರೆವಣಿಗೆ– ಎರಡರಲ್ಲೂ ಸ್ವಾಮಿಗಳು ಶ್ರೀಮಂತರಾಗಿದ್ದರು. ಭಾರತದೆಲ್ಲೆಡೆ ಹಾಗೂ ನಾನಾ ದೇಶಗಳಲ್ಲಿ ಸಾವಿರಾರು ಪ್ರವಚನಗಳನ್ನು ನೀಡಿದ ಪರಿವ್ರಾಜಕ ಸಂನ್ಯಾಸಿ ಅವರು. ಜಾಗತಿಕ ಪ್ರಪಂಚದಿಂದ ಸಂಪೂರ್ಣವಾಗಿ ವಿರಕ್ತರಾಗಿದ್ದ ಆಧ್ಯಾತ್ಮಿಕ ಮುಖಂಡರಾಗಿದ್ದರೂ ರಾಷ್ಟ್ರನಿರ್ಮಾಣದಲ್ಲಿ ಶಿಕ್ಷಕರ, ಆಡಳಿತ ವರ್ಗದವರ, ವಿಜ್ಞಾನಿಗಳ ಹಾಗೂ ವಾಣಿಜ್ಯದಲ್ಲಿರುವವರ ಪಾತ್ರ ಮುಂತಾದ ವಿಭಿನ್ನ ವಿಷಯಗಳ ಬಗ್ಗೆ ಅವರ ಪ್ರವಚನ ಹಾಗೂ ಬರೆವಣಿಗೆಗಳು ಇದ್ದವು. ವಿಭಿನ್ನ ಹಿನ್ನೆಲೆಗಳ ರಾಜನೀತಿ ಹಾಗೂ ಸಾಮಾಜಿಕ ಮುಖಂಡರೊಂದಿಗೆ ಅವರು ಸಂವಾದ ನಡೆಸಿದರು ಹಾಗೂ ಅವರೆಲ್ಲರ ಮೇಲೆ ಸಕಾರಾತ್ಮಕ ಪ್ರಭಾವ ಬೀರಿದರು. '*Eternal Values for a Changing Society*' ('ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು') ಎಂಬ ನಾಲ್ಕು ಸಂಪುಟಗಳ ಕೃತಿ ಎಲ್ಲ ಧರ್ಮಗಳ ಉಪದೇಶಗಳ ಬಗ್ಗೆ ಶ್ರದ್ಧೆಯನ್ನು ವ್ಯಕ್ತಪಡಿಸುತ್ತದೆ.

ಅವರ ಜನ್ಮಸ್ಥಳದ ಸಮೀಪದಲ್ಲಿರುವ ಕೇರಳದ ತ್ರಿಶೂರಿನ ಜಿಲ್ಲೆಯ ಪರನುತ್ತುಕರದ ರಾಮಕೃಷ್ಣ ಮಠದಲ್ಲಿ ಸ್ವಾಮಿ ರಂಗನಾಥಾನಂದರ ಜೀವನ ಚರಿತ್ರೆಯನ್ನು ಬಿಡುಗಡೆ ಮಾಡಲು ೨೦೦೭ರ ಸೆಪ್ಟೆಂಬರ್‌ನಲ್ಲಿ ಆಹ್ವಾನಿತನಾಗಿದ್ದೆ. ಆ ಜೀವನಕಥೆಯಲ್ಲಿ ಸ್ವಾಮಿಗಳೊಂದಿಗೆ ದೀರ್ಘ ಕಾಲದ ಸಂಪರ್ಕ ಹೊಂದಿದ್ದ ಡಾ॥ ಟಿ.ಎಲ್. ರಾಧಾಕೃಷ್ಣನ್ ಅವರು ಬರೆದಿರುವ ಲೇಖನದಲ್ಲಿ ಒಂದು ಮನಸೆಳೆಯುವ ಘಟನೆಯನ್ನು ಅವರು ದಾಖಲಿಸಿರುವುದನ್ನು ಕಂಡೆ. ಒಮ್ಮೆ ಸ್ವಾಮಿಗಳು ಕರಾಚಿಯಲ್ಲಿ ಇಸ್ಲಾಂ ಹಾಗೂ ಪ್ರವಾದಿ ಮೊಹಮ್ಮದರ ಸಂಬಂಧವಾಗಿ ಪ್ರವಚನ ನೀಡುತ್ತಿದ್ದಾಗ, ಒಬ್ಬ ವ್ಯಕ್ತಿ ಸಭೆಯನ್ನು ಪ್ರವೇಶಿಸಿ ಕಡೆಯ ಸಾಲಿನಲ್ಲಿ ಕುಳಿತರು. ಆ ವ್ಯಕ್ತಿ ಮೊಹಮ್ಮದ್ ಅಲಿ ಜಿನ್ನಾ. ಪ್ರವಚನವು ಮುಗಿದ ನಂತರ, ಜಿನ್ನಾರವರು ವೇದಿಕೆಗೆ ಓಡಿಹೋಗಿ ಹೇಳಿದರಂತೆ: "ಸ್ವಾಮೀಜಿ, ಇಲ್ಲಿ ನಾನೊಬ್ಬ ನಿಜವಾದ ಮುಸಲ್ಮಾನ ಎಂದು ನಂಬಿದ್ದೆ. ನಿಮ್ಮ ಪ್ರವಚನವನ್ನು ಆಲಿಸಿದ ನಂತರ ನಾನು ಹಾಗಲ್ಲ ಎಂದು ಮನವರಿಕೆಯಾಗಿದೆ. ಆದರೆ ನಿಮ್ಮ ಆಶೀರ್ವಾದದಿಂದ ನಾನೊಬ್ಬ ನಿಜವಾದ ಮುಸಲ್ಮಾನನಾಗಲು ಪ್ರಯತ್ನಿಸುವೆ." ಈ ಲೇಖಕರು ಹೇಳುತ್ತಾರೆ 'The Christ we Adore'– (ನಾನು ಆರಾಧಿಸುವ ಏಸುಕ್ರಿಸ್ತ) ಎಂಬ ವಿಷಯದ ಬಗ್ಗೆ ಸ್ವಾಮೀಜಿ ಮಾತನಾಡಿದಾಗ ಕ್ರೈಸ್ತ ಅನುಯಾಯಿಗಳಿಂದಲೂ ಇದೇ ರೀತಿಯ ಪ್ರತಿಕ್ರಿಯೆ ಬಂದಿತ್ತಂತೆ.

ಸ್ವಾಮಿ ರಂಗನಾಥಾನಂದರು* ಕೇರಳದ ತ್ರಿಶೂರಿನಲ್ಲಿ ೧೯೦೮ರಲ್ಲಿ ಜನಿಸಿದರು ಎಂದು ಓದಿದಾಗ ಅವರ ಜನ್ಮಸ್ಥಳವು ಆದಿ ಶಂಕರಾಚಾರ್ಯರ ಜನ್ಮಸ್ಥಳವಾದ ಕಾಲಟಿಗೆ ಸಮೀಪವೆಂಬುದು ನನ್ನ ಮನಸ್ಸಿಗೆ ಹೊಳೆಯಿತು. ಆಧುನಿಕ ಕಾಲದ ಆದಿ ಶಂಕರರೇ ನಮ್ಮ ಸ್ವಾಮಿ ರಂಗನಾಥಾನಂದರು ಎಂದು ನನಗೆ ತೋರುತ್ತದೆ. 'ಭಗವದ್‌ಗೀತಾ', ಉಪನಿಷತ್ತುಗಳು, ಪುರಾಣಗಳು ಹಾಗೂ ಇತರ ಶಾಸ್ತ್ರಗಳಲ್ಲಿನ ಕಠಿಣ ತತ್ತ್ವಗಳಿಗೆ ಸುಲಭವಾಗಿ ಅರ್ಥವಾಗುವಂತಹ ವ್ಯಾಖ್ಯಾನವನ್ನು ನೀಡಿದ ಮಹಾನ್ ಪಂಡಿತರು ಹಾಗೂ

* ೧೫.೫.೨೦೦೫ರಂದು ಲೇಖಕರು ಸ್ವಾಮಿ ರಂಗನಾಥಾನಂದರ ಬಗ್ಗೆ ನವದೆಹಲಿಯ ರಾಮಕೃಷ್ಣ ಮಿಷನ್‌ನಲ್ಲಿ ಹಿಂದಿಯಲ್ಲಿ ನೀಡಿದ ಭಾಷಣದಿಂದ ಆಯ್ದ ಭಾಗ. ಇದರ ಆಂಗ್ಲ ಅನುವಾದವನ್ನು ಮಾಡಿದವರು ಮೋನಿಕಾ ಸೇನ್ ಗುಪ್ತ.

ಮಹಾನ್ ಮತಿಗಳು ಆದಿಶಂಕರಾಚಾರ್ಯರು. ಆದಿಶಂಕರಾಚಾರ್ಯರ ನಂತರ ಕೆಲವು ಶತಮಾನಗಳು ಕಳೆದ ಮೇಲೆ ಬಂದ ಸ್ವಾಮಿ ರಂಗನಾಥಾನಂದರು ತಮ್ಮ ಹಿಂದಿನವರಂತೆ ಎಲ್ಲ ಅಸಾಧಾರಣ ಗುಣಗಳನ್ನೂ ವಿಶೇಷಣಗಳನ್ನೂ ಹೊಂದಿದ್ದರು. ಎಲ್ಲ ರೀತಿಯಲ್ಲೂ ಸ್ವಾಮಿಗಳು ಶಂಕರಾಚಾರ್ಯರಿಗೆ ಸಮಾನರಾಗಿದ್ದರು.

ಸ್ವಾಮಿಗಳು ಕರಾಚಿಯಿಂದ ದೆಹಲಿಯ ರಾಮಕೃಷ್ಣ ಮಿಷನ್ ಕೇಂದ್ರಕ್ಕೆ ಅದರ ಮುಖ್ಯಸ್ಥರಾಗಿ ಬಂದಾಗ ನಾನು ಅವರ ಪ್ರವಚನಗಳಿಗೆ ಹೋಗುತ್ತಿದ್ದೆ. ಅಲ್ಲಿಂದ ಅವರು ಹೈದರಾಬಾದಿಗೆ ನೇಮಿಸಲ್ಪಟ್ಟರು. ಆದರೆ ಅವರು ದೆಹಲಿಗೆ ಬಂದಾಗಲೆಲ್ಲ ಅವರನ್ನು ಸಂದರ್ಶಿಸುವ ಅವಕಾಶಗಳು ನನಗೆ ದೊರೆತವು. ನಮ್ಮ ದೇಶದ ನಿರ್ಮಾಣದಲ್ಲಿ ನಿಷ್ಠೆ ತೋರಿದ ಪ್ರಮುಖ ವ್ಯಕ್ತಿಗಳಾದ ಪಂಡಿತ್ ಜವಾಹರಲಾಲ್ ನೆಹರೂ, ಇಂದಿರಾಗಾಂಧೀ, ರಾಜೀವ್ ಗಾಂಧೀ, ವಾಜಪೇಯಿಜಿ ಹಾಗೂ ಉಳಿದವರೆಲ್ಲರೂ ಇವರನ್ನು ಭೇಟಿಯಾಗುತ್ತಿದ್ದರು, ಸ್ಫೂರ್ತಿಗಾಗಿ ಹಾಗೂ ಬುದ್ಧಿವಾದಕ್ಕಾಗಿ. ಇದು ನಿಜವಾಗಿಯೂ ಅನುಪಮ ಸಂಗತಿ. ಅವರ ಅತ್ಯುನ್ನತ ವ್ಯಕ್ತಿತ್ವ ಹಾಗೂ ಮಹನೀಯತೆಗಳಿಗೆ ಇದು ಕೈಗನ್ನಡಿ.

* * * *

# ೪೬. ಆಜನ್ಮ ಶಿಕ್ಷಕ

**–ಪಿ.ಸಿ. ಅಲೆಕ್ಸಾಂಡರ್***

ಸ್ವಾಮಿ ರಂಗನಾಥಾನಂದರೊಡನೆ ಭೇಟಿಯಾಗಲು ನನಗೆ ಮತ್ತು ನನ್ನ ಧರ್ಮಪತ್ನಿ ಅಕ್ಕಮಾಗೆ ಅವಕಾಶ ಮೊದಲು ದೊರೆತದ್ದು ಇಪ್ಪತ್ತು ವರ್ಷಗಳ ಹಿಂದೆ, ಬೆಂಗಳೂರಿನಲ್ಲಿ. ಹತ್ತು ಅಥವಾ ಹದಿನೈದು ನಿಮಿಷಗಳ ಆ ಔಪಚಾರಿಕ ಭೇಟಿಯು ಅಷ್ಟಕ್ಕೇ ನಿಲ್ಲದೆ, ಒಂದು ಪೂರ್ಣ ಗಂಟೆಯ ಕಾಲ ನಡೆಯಿತು. ಆಗಿನ ಕಾಲದಲ್ಲಿ ನಾನು 'ಗೀತೆ' ಹಾಗೂ ಉಪನಿಷತ್ತುಗಳ ಕೆಲವು ಗ್ರಂಥಗಳನ್ನು ಅಧ್ಯಯನ ಮಾಡುತ್ತಿದ್ದೆನಾದ್ದರಿಂದ ನನ್ನಂತಹ ಸಾಮಾನ್ಯ ವ್ಯಕ್ತಿಗಳು ಈ ಮಹತ್ ಗ್ರಂಥಗಳ ಅನೇಕ ಅಂಶಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ತೋರುವ ಸಮಸ್ಯೆಗಳ ಕುರಿತು ನಾವು ಸಂಭಾಷಿಸಿದೆವು. 'ಗೀತೆ'ಗಿಂತ ಉಪನಿಷತ್ತುಗಳಲ್ಲಿ ನನಗೆ ಹೆಚ್ಚು ಸಮಸ್ಯೆಗಳು ಎದುರಾಗಿದ್ದವು. ಉಪನಿಷತ್ತುಗಳಂತಹ ಆಧ್ಯಾತ್ಮಿಕ ಗ್ರಂಥಗಳನ್ನು ಹೇಗೆ ಅಧ್ಯಯನ ಮಾಡಬೇಕೆಂದು ಸುಮಾರು ಅರ್ಧಗಂಟೆಯೊಳಗೆ ಸ್ವಾಮಿಗಳು ವಿವರಿಸಿದರು. ಸನಾತನ ಧರ್ಮದ ತತ್ತ್ವಗಳ ಬಗ್ಗೆ ನನ್ನಂತಹ ಹೊಸಬನಿಗೆ ಅದೊಂದು ಅಮೂಲ್ಯ ಪರಿಚಯವಾಗಿತ್ತು ಹಾಗೂ ಇದರಿಂದ 'ಆಜನ್ಮ ಶಿಕ್ಷಕ' ಎಂಬ ಅವರ ಖ್ಯಾತಿ ಅದೆಷ್ಟು ಸಮರ್ಪಕವೆಂಬುದು ನನಗೆ ಕೂಡಲೇ ಮನವರಿಕೆಯಾಯಿತು. ಭಾರತದ ತತ್ತ್ವಶಾಸ್ತ್ರ ಹಾಗೂ ಆಧ್ಯಾತ್ಮಿಕ ಚಿಂತನೆಗಳಲ್ಲಿ ಹಾಗೂ ನನ್ನ ಧರ್ಮವಾದ ಕ್ರಿಶ್ಚಿಯಾನಿಟಿಯೂ ಸೇರಿದಂತೆ ಇತರ ಧರ್ಮಗಳಲ್ಲೂ ಅವರಿಗಿದ್ದ ಆಳವಾದ ಜ್ಞಾನವನ್ನು ಕಂಡು ನಾನು ಬಹಳ ಪ್ರಭಾವಿತನಾದೆ. ಅಂದಿನಿಂದ ನಾನು ಹಾಗೂ ನನ್ನ ಪತ್ನಿ ಈ ಮಹಾನ್ ಸಂತನನ್ನು ಸಂಪೂರ್ಣವಾಗಿ ಮೆಚ್ಚಿಕೊಂಡಿರುವುದಷ್ಟೇ ಅಲ್ಲದೆ, ಆಧುನಿಕ ಕಾಲದ ಉತ್ತಮೋತ್ತಮ ಗುರುಗಳಲ್ಲಿ ಒಬ್ಬರೆಂದು ಅತ್ಯಂತ ಶ್ರದ್ಧೆಯಿಂದಲೂ ಕಾಣುತ್ತೇವೆ. ಅನಂತರ ಅನೇಕ ಸಂದರ್ಭಗಳಲ್ಲಿ ಅವರ ಉಪನ್ಯಾಸಗಳನ್ನು ಆಲಿಸುವ ಹಾಗೂ ಅವರೊಂದಿಗೆ ಒಂದೇ ವೇದಿಕೆಯ ಮೇಲೆ ಕುಳಿತುಕೊಳ್ಳುವ ಭಾಗ್ಯವೂ ನನಗೆ ದೊರೆತಿದೆ.

ನಾನು ಅವರ ಪ್ರವಚನಗಳನ್ನು ಕೇಳಿದಾಗಲೆಲ್ಲ ನನಗೆ ನೆನಪು ಬರುತ್ತಿದ್ದುದು ಅನೇಕ ಸಂದರ್ಭಗಳಲ್ಲಿ ನನಗೆ ಕೇಳುವ ಸೌಭಾಗ್ಯ ದೊರೆತಿದ್ದ ಡಾ॥ ಎಸ್. ರಾಧಾ ಕೃಷ್ಣನ್ ಅವರ ಉಪನ್ಯಾಸಗಳು. ೧೯೬೯ರ ಸೆಪ್ಟೆಂಬರ್‌ನಲ್ಲಿ ಸ್ವಾಮಿ ರಂಗನಾಥಾನಂದರ ಅಧ್ಯಕ್ಷತೆಯಲ್ಲಿ ನಡೆದ ಒಂದು ಸಮಾರಂಭದಲ್ಲಿ ನಾನು ಡಾ॥ ರಾಧಾಕೃಷ್ಣನ್‌ರ ಬಗ್ಗೆ ಮಾತನಾಡಿದ್ದು ನನಗೆ ನೆನಪು ಬರುತ್ತಿದೆ. ದರ್ಶನಶಾಸ್ತ್ರಕ್ಕೆ ಡಾ॥ ರಾಧಾಕೃಷ್ಣನ್ ನೀಡಿದ ಕೊಡುಗೆಗಳ ಬಗ್ಗೆ ಬಹಳ ಪ್ರಶಂಸೆಯನ್ನು ವ್ಯಕ್ತಪಡಿಸಿದ ನಂತರ, ತಮ್ಮ ದೈನಂದಿನ ಜೀವನದಲ್ಲಿ ಭಾರತೀಯರು 'ಗೀತೆ' ಹಾಗೂ ಉಪನಿಷತ್ತುಗಳನ್ನು ಪ್ರಾಸಂಗಿಕಗೊಳಿಸಿಕೊಳ್ಳುವುದರ ಬಗ್ಗೆ ಶ್ರೀರಾಮಕೃಷ್ಣ ಪರಮಹಂಸರು ಹಾಗೂ ಸ್ವಾಮಿ ವಿವೇಕಾನಂದರು ನೀಡಿದ ಕೊಡುಗೆಯನ್ನು ವಿವರಿಸಿದರು.

ಸ್ವಾಮಿ ರಂಗನಾಥಾನಂದರು ೫೦ಕ್ಕೂ ಹೆಚ್ಚು ದೇಶಗಳಲ್ಲಿ ಸಂಚರಿಸಿ, ವಿಭಿನ್ನ ಧರ್ಮಗಳ ಅನುಯಾಯಿಗಳು ಭಾಗವಹಿಸುತ್ತಿದ್ದ ನೂರಾರು ಸಮಾರಂಭಗಳಲ್ಲಿ ಪ್ರವಚನ ನೀಡಿದ್ದಾರೆ. ಎಲ್ಲ ಧರ್ಮಗಳೂ ಸಾರುವ ಸಾರ್ವತ್ರಿಕ ಸತ್ಯವನ್ನು ಹಾಗೂ ಭಗವಂತನು ಒಬ್ಬನೇ ಎಂಬ ಹಿಂದೂ ಧರ್ಮದ ಮೂಲತತ್ತ್ವವನ್ನು ಅವರಿಗೆಲ್ಲ

---

* ವಿಶಿಷ್ಟ ಸರ್ಕಾರಿ ಅಧಿಕಾರಿಗಳು ಹಾಗೂ ಆಡಳಿತತಜ್ಞರು; ವಾಣಿಜ್ಯ ಮಂತ್ರಿಮಂಡಳಿಯ ಪ್ರಾಕ್ತನ ಕಾರ್ಯಾಧ್ಯಕ್ಷರು, ಪ್ರಧಾನಮಂತ್ರಿಯ ಪ್ರಧಾನ ಕಾರ್ಯಾಧ್ಯಕ್ಷರು, ಲಂಡನ್‌ನಲ್ಲಿ ಭಾರತದ ಹಿರಿಯ ಕಮಿಶನರ್, ತಮಿಳುನಾಡು ಹಾಗೂ ಮಹಾರಾಷ್ಟ್ರಗಳ ರಾಜ್ಯಪಾಲರೂ ಹಾಗೂ ಇದೀಗ ರಾಜ್ಯಸಭೆ ಸದಸ್ಯರು.

ವಿವರಿಸಿದ್ದಾರೆ. ವಾಗ್ಮಿತ್ವದಲ್ಲಿ ಸ್ವಾಮಿ ರಂಗನಾಥಾನಂದರನ್ನು ಆಗಿಂದಾಗ್ಗೆ ಡಾ॥ ರಾಧಾಕೃಷ್ಣನ್‌ರೊಂದಿಗೆ ಹೋಲಿಸಲಾಗಿದೆ. ಆದರೆ, ಇದು ಸಮರ್ಪಕವಾದ ಹೋಲಿಕೆಯಲ್ಲ. ಅವರುಗಳ ಮಾತಿನ ಶೈಲಿ ಭಿನ್ನವಾಗಿತ್ತು. ಸಾಮಾನ್ಯ ಅಂಶವೆಂದರೆ ಅವರಿಬ್ಬರಿಗೂ ಮಾತನಾಡುವಾಗ ಯಾವುದೇ ಟಿಪ್ಪಣಿಗಳ ಅಥವಾ ಬರೆದಿರುವ ಹಾಳೆಗಳ ಸಹಾಯ ಬೇಕಿರಲಿಲ್ಲ. ಉಚ್ಚಾರಣೆಯ ಮಾಧುರ್ಯಕ್ಕಾಗಿ, ಸುಲಲಿತ ಪ್ರವಚನಕ್ಕಾಗಿ ಹಾಗೂ ಇದೆಲ್ಲಕ್ಕಿಂತ ಮುಖ್ಯವಾಗಿ ವಿಚಾರಗಳ ಸಂಪತ್ತಿಗಾಗಿ ಡಾ॥ ರಾಧಾಕೃಷ್ಣನ್‌ರನ್ನು ಎಲ್ಲರೂ ಬಹಳ ಮೆಚ್ಚುತ್ತಿದ್ದರು. ವಾಗ್ಮಿಯಾಗಿ ಸ್ವಾಮಿ ರಂಗನಾಥಾನಂದರ ಮಹತಿಯಿದ್ದುದು ಅವರಿಗೇ ಸಹಜವಾಗಿದ್ದ ಭಾಷೆಯ ಸರಳತೆ ಹಾಗೂ ಮಾತನಾಡುತ್ತಿದ್ದ ಶೈಲಿಯ ನಿರಾಡಂಬರತೆಯಲ್ಲಿ. ದೊಡ್ಡ ಸಮಾವೇಶಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದಾಗ ಅತ್ಯಂತ ಸಾಮಾನ್ಯನಿಗೂ ಅರ್ಥವಾಗುವಂತಹ ರೀತಿಯಲ್ಲಿ ಅವರು ಮಾತನಾಡುತ್ತಿದ್ದರು. ಅನೇಕ ವೇಳೆ ಒಬ್ಬ ಅಧ್ಯಾಪಕನು ಕಠಿಣವಾದ ಪಾಠವನ್ನು ತನ್ನ ವಿದ್ಯಾರ್ಥಿಗಳಿಗೆ ಪಾಠಶಾಲೆಯಲ್ಲಿ ವಿವರಿಸುತ್ತಿರುವಂತೆ ಅವರ ಪ್ರವಚನಗಳು ತೋರುತ್ತಿದ್ದವು.

ಸ್ವಾಮಿಗಳೊಂದಿಗೆ ನನ್ನ ಕಡೆಯ ಭೇಟಿಯಾದದ್ದು ೨೦೦೫ರ ಏಪ್ರಿಲ್‌ನಲ್ಲಿ, ಅವರು ಮಹಾಸಮಾಧಿ ಹೊಂದುವ ಕೆಲವೇ ತಿಂಗಳುಗಳ ಮುಂಚೆ. ನಾನು ನನ್ನ ಪತ್ನಿಯೊಂದಿಗೆ ಬೇಲೂರು ಮಠಕ್ಕೆ ಹೋಗಿದ್ದೆ. ಸ್ವಾಮಿಗಳ ಆರೋಗ್ಯ ಕ್ಷೀಣಿಸಿದೆಯೆಂದೂ, ನಾನು ಅವರನ್ನು ಭೇಟಿಯಾದಾಗ ಅವರು ಹೆಚ್ಚು ಮಾತನಾಡಲಾರರು ಎಂದೂ ಮಠದವರು ನನಗೆ ತಿಳಿಸಿದ್ದರು. ಆದರೆ ಅವರು ತುಂಬು ಆರೋಗ್ಯದಲ್ಲಿದ್ದವರಂತೆ ದೀರ್ಘ ಕಾಲ ಮಾತನಾಡಿದರು. ಅಷ್ಟೇ ಅಲ್ಲ, ನಮಗಾಗಿ ಬಹಳ ಸಮಯವನ್ನು ನೀಡಲು ಸಿದ್ಧರಾಗಿದ್ದರು. ಮಠದಲ್ಲಿದ್ದ ತಮ್ಮ ಕೋಣೆಯಿಂದ ನಮ್ಮ ಗಾಡಿಯತನಕ ಬೀಳ್ಕೊಡಲು ಬರುವೆನೆಂದು ಅವರು ಹಠ ಹಿಡಿದದ್ದು ನಮ್ಮಗಳ ಹೃದಯವನ್ನೇ ಮುಟ್ಟಿತು. ಅವರು ಬಹಳ ದುರ್ಬಲರಾಗಿದ್ದುದನ್ನು ಕಂಡು ನಮ್ಮೊಂದಿಗೆ ಗಾಡಿಯತನಕ ಬರುವ ಪ್ರಯಾಸ ಬೇಡವೆಂದು ಗೋಗರೆದುಕೊಂಡರೂ ಅವರು ತಾವು ಚೆನ್ನಾಗಿರುವುದಾಗಿಯೂ, ನಡೆಯುವುದರಲ್ಲಿ ಯಾವುದೇ ತೊಂದರೆಯೂ ಇಲ್ಲವೆಂದೂ ಒತ್ತಾಯಮಾಡಿದರು. ಅವರಲ್ಲಿ ಸದಾಕಾಲ ಕಂಡುಬರುತ್ತಿದ್ದ ಮಹಾನ್ ಗುಣಗಳಾದ ವಿನಯಶೀಲತೆ ಹಾಗೂ ಸೌಜನ್ಯಗಳ ಅಭಿವ್ಯಕ್ತಿಯೇ ಇದು.

ಸ್ವಾಮಿ ರಂಗನಾಥಾನಂದರ ಬಗ್ಗೆ ನನಗಿರುವ ಮರೆಯಲಾಗದ ಸ್ಮೃತಿಯೆಂದರೆ ೨೦೦೧ರ ಫೆಬ್ರವರಿಯಲ್ಲಿ ಅವರು ಮುಂಬೈನ ರಾಜ್‌ಭವನಕ್ಕೆ ಬಂದದ್ದು. ಇದೊಂದು ವಿಶೇಷ ಸಂದರ್ಭವಾಗಿತ್ತು. ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಪರಮಾಧ್ಯಕ್ಷರಾಗಿ, ಆ ಜವಾಬ್ದಾರಿಗಳನ್ನೆಲ್ಲ ಸ್ವೀಕರಿಸಿದ ನಂತರ ಮುಂಬೈಗೆ ಮೊದಲ ಬಾರಿ ಅವರು ಬರುತ್ತಿದ್ದರಿಂದ ಈ ಅವಕಾಶವನ್ನು ಬಳಸಿಕೊಂಡು ಮುಂಬೈನ ಜನರು ಅವರಿಗೆ ಅಭಿನಂದನೆಗಳನ್ನು ಅರ್ಪಿಸಲು ಬಯಸಿದ್ದರು. ಈ ಸಮಾರಂಭವದಲ್ಲಿ 'ಭಗವದ್ಗೀತೆಯ ವಿಶ್ವಸಂದೇಶ' ಎಂಬ ಅವರ ಗ್ರಂಥದ ಎರಡನೆಯ ಭಾಗವನ್ನು ಬಿಡುಗಡೆ ಮಾಡುವ ಗೌರವಯುತ ಅವಕಾಶವನ್ನು ಸ್ವಾಮಿಗಳು ನನಗೆ ನೀಡಿದರು. ರಾಜ್‌ಭವನದ ದರ್ಬಾರ್ ಹಾಲ್ ತುಂಬಿಹೋಗಿ ಅದರ ಸುತ್ತಲೂ ಇದ್ದ ಹುಲ್ಲುಗಾವಲು ಅವರ ಪ್ರವಚನವನ್ನು ಕೇಳಲು ಬಂದಿದ್ದವರಿಂದ ತುಂಬಿ ತುಳುಕುತ್ತಿತ್ತು. ಅನೇಕ ಅಧ್ಯಾಪಕರು, ಪಂಡಿತರು, ವಾಣಿಜ್ಯ ಕ್ಷೇತ್ರದವರು ಹಾಗೂ ಸರ್ಕಾರದ ಆಡಳಿತ ವರ್ಗದವರು ಅಲ್ಲಿದ್ದರು. ಸ್ವಾಮಿಗಳು 'ಗೀತೆ'ಯ ಕುರಿತು ೪೫ ನಿಮಿಷಗಳ ಕಾಲ ಮಾತನಾಡುವುದು ಹಾಗೂ ನಾನು ೧೫ ನಿಮಿಷಗಳ ಕಾಲ ಮಾತನಾಡುವುದು ಎಂದೂ ಅಪೇಕ್ಷಿಸಲಾಗಿತ್ತು. ಆದರೆ ಸಭೆಗೆ ಬಂದಾಗ ತಮ್ಮ ಆರೋಗ್ಯ ಅಷ್ಟೊಂದು ಚೆನ್ನಾಗಿಲ್ಲವೆಂದೂ ತಾವು ಕೇವಲ ೧೫ ನಿಮಿಷಗಳ ಕಾಲ ಮಾತನಾಡುವುದಾಗಿಯೂ 'ನಾನು 'ಗೀತೆ'ಯ ಕುರಿತು ೪೫ ನಿಮಿಷಗಳ ಕಾಲ ಮಾತನಾಡಬೇಕೆಂದೂ' ಹೇಳಿದರು. 'ಗೀತೆ'ಯ ಬಗ್ಗೆ ಅದರಲ್ಲೂ ಆ ವಿಷಯದಲ್ಲಿ ಅತ್ಯುತ್ತಮ ಪಾಂಡಿತ್ಯವನ್ನು ಹೊಂದಿದ್ದ ವ್ಯಕ್ತಿಯ ಸಮಕ್ಷಮದಲ್ಲಿ ಮಾತನಾಡುವುದು ನನಗೆ ಬಹಳ ಸಂಕೋಚವನ್ನು ಉಂಟುಮಾಡಿತಾದರೂ

ಆ ಸಭೆಯನ್ನು ಆಯೋಜಿಸಿದ್ದ ನನಗೆ ಅವರ ಬಯಕೆಯೇ ಆದೇಶವಾಗಿತ್ತು. ನಾನು 'ಗೀತೆ'ಯ ಕುರಿತು ೪೫ ನಿಮಿಷಗಳ ಕಾಲ ಮಾತನಾಡಿದೆ. ಸ್ವಾಮಿಗಳು ಸುಮಾರು ೨೦ ನಿಮಿಷಗಳಷ್ಟೇ ಮಾತನಾಡಿದರೂ ಆ ಮಹಾನ್ ಋಷಿಯ ಕ್ಷೀಣಕಾಯದಿಂದ ಹೊರಹೊಮ್ಮಿದ ಆಧ್ಯಾತ್ಮಿಕ ಜ್ಞಾನದ ಮಣಿಗಳಿಂದ ಸಭಿಕರೆಲ್ಲ ಪ್ರಭಾವಿತರಾದರು. ಆ ದಿನದಂದು ಅವರ ಕೇಳುಗರಿಗೆಲ್ಲ ಅವರಲ್ಲಿ ಕಂಡುಬಂದದ್ದು ಉತ್ತಮ ಬುದ್ಧಿಮತ್ತೆಯ ಹಾಗೂ ಆಧ್ಯಾತ್ಮಿಕತೆಯ ಅಪೂರ್ವ ಸಮ್ಮಿಲನ. ಪ್ರಪಂಚದ ಯಾವುದೇ ಭಾಗದ ಅತ್ಯುತ್ತಮ ಬುದ್ಧಿವಂತರಿಗೆ ಸಮನಾಗಿ ನಿಲ್ಲಬಲ್ಲ ಸರ್ವಶ್ರೇಷ್ಠ ಚಿಂತಕರನ್ನು ಭಾರತವು ನೀಡಿದೆ. ಹಲವಾರು ಆಧ್ಯಾತ್ಮಿಕ ದಿಗ್ಗಜರನ್ನು ಭಾರತ ನೀಡಿದೆ. ಆದರೆ ತೀಕ್ಷ್ಣ ಬುದ್ಧಿಶಕ್ತಿಯೊಂದಿಗೆ ಆಧ್ಯಾತ್ಮಿಕತೆಯನ್ನು ಮೇಳೈಸಿಕೊಂಡಿರುವವರ ಸಂಖ್ಯೆ ಬಹಳ ಕಡಿಮೆ. ಸ್ವಾಮಿಗಳು ಅಂತಹ ಅಸಾಮಾನ್ಯ ವ್ಯಕ್ತಿಗಳಲ್ಲಿ ಒಬ್ಬರು.

ರಾಮಕೃಷ್ಣ ಸಂಘದ ಸಂನ್ಯಾಸಿಯಾಗಿ ಸ್ವಾಮಿ ರಂಗನಾಥಾನಂದರು ಪಡೆದಿದ್ದ ತೀವ್ರವಾದ ತರಬೇತಿಯು ಇತರ ಎಲ್ಲ ವಿಶ್ವಧರ್ಮಗಳ ಮಹತ್ವವನ್ನು ತಿಳಿಯುವಂತಹ ದೃಷ್ಟಿ ವಿಶಾಲತೆ ಹಾಗೂ ಸಹಿಷ್ಣುತೆಯನ್ನು ನೀಡಿತ್ತು. ಆಧ್ಯಾತ್ಮಿಕ ಆಶೀರ್ವಾದವನ್ನು ವಿಪುಲವಾಗಿ ಪಡೆದಿದ್ದ ಸ್ವಾಮಿ ರಂಗನಾಥಾನಂದರು ಉತ್ತಮ ತರಬೇತಿ ಹಾಗೂ ದೀರ್ಘ ಜೀವನದ ಮೂಲಕ ರಾಮಕೃಷ್ಣ ಭಾವಾಂದೋಲನಕ್ಕೆ, ಅದರ ಮಹಾನ್ ಸಂಸ್ಥಾಪಕ ಬಯಸಿದಂತೆ ಮಹತ್ತರವಾದ ಕೊಡುಗೆಗಳನ್ನು ನೀಡಿದ್ದಾರೆ. ಸಂಸ್ಥೆಯ ಬೆಳವಣಿಗೆಗೆ ಸಹಾಯಕರಾದವರೆಂದು ಅವರನ್ನು ಸದಾಕಾಲ ಕೃತಜ್ಞತೆಯೊಂದಿಗೆ ಸ್ಮರಿಸಲಾಗುತ್ತದೆ.

೨೦೦೧ರ ಫೆಬ್ರವರಿಯಲ್ಲಿ ರಾಜಭವನದಲ್ಲಿ ಅವರ 'ಭಗವದ್ಗೀತೆಯ ವಿಶ್ವ ಸಂದೇಶ' ಗ್ರಂಥದ ಎರಡನೆಯ ಭಾಗವನ್ನು ಬಿಡುಗಡೆ ಮಾಡುತ್ತ ನಾನು ಹೇಳಿದ್ದ ಭಾಷಣದ ಒಂದಂಶವನ್ನು ಮತ್ತೆ ಇಲ್ಲಿ ಉಲ್ಲೇಖಿಸಿ ಈ ಮಹಾನ್ ಸಂತರನ್ನೇ ಕುರಿತು ನನ್ನ ನೆನಪುಗಳಿಗೆ ವಿರಾಮ ಹೇಳಬಯಸುತ್ತೇನೆ. ಅಮೆರಿಕದ ಮಹಾನ್ ದಾರ್ಶನಿಕರೂ ಹಾಗೂ ಭಾರತೀಯ ಸಂಸ್ಕೃತಿಯ ಬಗ್ಗೆ ಅಂತರಂಗದ ಮೆಚ್ಚುಗೆಯನ್ನೂ ಹೊಂದಿದ್ದ ವಿಲ್ ಡ್ಯುರಾಂಟ್‌ರ ಮಾತುಗಳನ್ನು ನಾನು ಅಂದು ಉಲ್ಲೇಖಿಸಿದ್ದೆ. ಪಾಶ್ಚಾತ್ಯಕ್ಕೆ ಭಾರತವು ಜ್ಞಾನವನ್ನು ನೀಡಬಲ್ಲುದು ಎಂಬುದನ್ನು ಹೇಳುತ್ತ ಡ್ಯುರಾಂಟ್ ಹೇಳುತ್ತಾರೆ: "ಪರಿಪಕ್ವ ಮನಸ್ಸಿನ ಸಹಿಷ್ಣುತೆ ಹಾಗೂ ಮೃದುತ್ವ, ಬಯಕೆಗಳಿಲ್ಲದ ಆತ್ಮಸಂತೃಪ್ತಿ, ತಿಳಿವಳಿಕೆಯಿಂದ ಹೊರಹೊಮ್ಮುವ ಸಮಾಧಾನ ಹಾಗೂ ಎಲ್ಲ ಜೀವಿಗಳ ಬಗ್ಗೆ ಐಕ್ಯತೆಯ ಹಾಗೂ ಶಾಂತಿಯ ಪ್ರೀತಿಯ ಸಂದೇಶ." ಇದನ್ನು ಹೇಳಿದ ನಂತರ ನಾನು ಭಾಷಣವನ್ನು ಹೀಗೆ ಮುಕ್ತಾಯಗೊಳಿಸಿದ್ದೆ: "ವಿಲ್ ಡ್ಯುರಾಂಟರು ಹೇಳಿರುವ ಈ ಎಲ್ಲ ಮಹಾನ್ ಗುಣಗಳ ಮೂರ್ತರೂಪವಾಗಿದ್ದು, ಈ ನಮ್ಮ ಕಾಲದ ಆಧ್ಯಾತ್ಮಿಕ ಗುರುಗಳ ಒಂದು ಒಳ್ಳೆಯ ಉದಾಹರಣೆಯನ್ನು ನಾನು ನೀಡಬೇಕಿದ್ದರೆ, ಯಾವುದೇ ಸಂದೇಹವಿಲ್ಲದೆ ಬೇಲೂರು ಮಠದ ಮಹಾನ್ ಸಂತರಾದ ಸ್ವಾಮಿ ರಂಗನಾಥಾನಂದರನ್ನು ತೋರಿಸುವೆ."

ಈಗಲೂ, ಈ ಸಂದರ್ಭದಲ್ಲಿಯೂ ನಾನು ನೀಡಬಯಸುವ ಅತ್ಯಂತ ಪ್ರಾಮಾಣಿಕ ಹಾಗೂ ವಿನಯಪೂರ್ಣ ಶ್ರದ್ಧಾಂಜಲಿ ಇದೇ.

* * * *

# ೪೭. ಸ್ವಾಮಿ ರಂಗನಾಥಾನಂದರಿಗೆ ಶ್ರದ್ಧಾಂಜಲಿ

–ಡಾ॥ ಕರಣ್‌ಸಿಂಗ್*

ಸ್ವಾಮಿ ರಂಗನಾಥಾನಂದರನ್ನು ನಾನು ಮೊದಲು ಭೇಟಿಯಾದದ್ದು ೧೯೬೦ರ ದಶಕದ ಮಧ್ಯದಲ್ಲಿ. ಶ್ರೀನಗರದಲ್ಲಿ ರಾಮಕೃಷ್ಣ ಮಿಷನ್ನಿನ ಕೇಂದ್ರವೊಂದನ್ನು ಪ್ರಾರಂಭಿಸುವುದರ ಸಾಧ್ಯತೆಗಳ ಬಗ್ಗೆ ನಾನು ಉತ್ತಮ ದಾರ್ಶನಿಕರೂ ರಾಷ್ಟ್ರಪತಿಗಳೂ ಆದ ಡಾ॥ ಎಸ್.ರಾಧಾಕೃಷ್ಣನ್‌ರ ಸಲಹೆಯನ್ನು ಕೇಳಿದ್ದೆ. ದೆಹಲಿಯ ಆಶ್ರಮದ ಮೇಲ್ವಿಚಾರಕರಾಗಿದ್ದ ಯುವ ಸಂನ್ಯಾಸಿಗಳಿಗೆ ನನ್ನೊಂದಿಗೆ ಭೇಟಿಯಾಗಲು ತಿಳಿಸುವೆ ಎಂದು ಅವರು ಹೇಳಿದ್ದರು. ನಾನು ಅಶೋಕ ಹೋಟೆಲಿನಲ್ಲಿ ತಂಗಿದ್ದೆ. ನನ್ನೊಡನೆ ಭೇಟಿಯಾಗಲು ಸ್ವಾಮಿಗಳು ಅಲ್ಲಿಗೇ ಬಂದರು. ಆ ಕ್ಷಣದಿಂದ ಅವರು ತೀರಿಕೊಳ್ಳುವ ಕೆಲವೇ ವಾರಗಳ ತನಕ ನಮ್ಮಿಬ್ಬರ ನಡುವೆ ಬಹಳ ಹತ್ತಿರದ ಸಂಬಂಧಿಕರಂತೆ ಬಾಂಧವ್ಯ ಹಾಗೂ ಮಮತೆ ಬೆಳೆಯಿತು. ನನಗೆ ಚೆನ್ನಾಗಿ ನೆನಪಿದೆ, ಸ್ವಾಮಿಗಳು ಮುಂದೆ ಒಂದು ದಿನ ರಾಮಕೃಷ್ಣಮಿಷನ್ನಿನ ಪರಮಾಧ್ಯಕ್ಷರಾಗುವರು ಎಂದು ಡಾ॥ ರಾಧಾಕೃಷ್ಣನ್ ಹೇಳಿದ್ದರು.

ದೆಹಲಿಯಲ್ಲಿ ರಾಮಕೃಷ್ಣ ಮಿಷನ್ನಿನ ಕೇಂದ್ರವನ್ನು ಪ್ರಾರಂಬಿಸಿ, ಸುಂದರವಾದ ದೇವಸ್ಥಾನವನ್ನು ಕಟ್ಟಿಸಿದ್ದು ಸ್ವಾಮಿಗಳ ಒಂದು ಮಹತ್ ಸಾಧನೆ. ಅಸಾಧಾರಣವಾದ ಸಂಘಟನಾ ಶಕ್ತಿ, ಹಿಡಿದ ಕೆಲಸವನ್ನು ಸಾಧಿಸುವ ಛಲ ಹಾಗೂ ಇದೆಲ್ಲಕ್ಕಿಂತ ಅವರ ಅದ್ಭುತ ಪ್ರವಚನಗಳನ್ನು ಹೊರಹೊಮ್ಮಿಸುತ್ತಿದ್ದ ಅಸಾಧಾರಣ ಮನಸ್ಸು–ಇವೆಲ್ಲ ಅವರಲ್ಲಿ ಅನನ್ಯವಾದ ರೀತಿಯಲ್ಲಿ ಮೇಳೈಸಿದ್ದವು. ಉಪನಿಷತ್ತುಗಳು, 'ಗೀತೆ', ಶ್ರೀರಾಮಕೃಷ್ಣ ಹಾಗೂ ಸ್ವಾಮಿ ವಿವೇಕಾನಮದರ ಬಗ್ಗೆ ಅವರು ನೀಡುತ್ತಿದ್ದ ಉಪನ್ಯಾಸಗಳು ಭಾರತದಲ್ಲಷ್ಟೇ ಅಲ್ಲ, ಜಗತ್ತಿನೆಲ್ಲೆಡೆ ಪ್ರಸಿದ್ಧವಾದವು.

ದೆಹಲಿಯನ್ನು ಬಿಟ್ಟನಂತರ ಸ್ವಾಮಿಗಳು ಹೈದರಾಬಾದಿಗೆ ಹೋಗಿ, ಮತ್ತೊಮ್ಮೆ ರಾಮಕೃಷ್ಣ ಮಿಷನ್ನಿನ ಒಂದು ಜ್ಞಾನಕೇಂದ್ರವನ್ನು ಹಾಗೂ ಉತ್ತಮವಾದ ದೇವಸ್ಥಾನವನ್ನು ನಿರ್ಮಿಸಿದರು. ಅವರು ಭಾರತದಲ್ಲಿ ಹಾಗೂ ವಿದೇಶಗಳಲ್ಲಿ ನಿರಂತರವಾಗಿ ಸಂಚರಿಸುತ್ತಿದ್ದರು ಹಾಗೂ ಶಿಕ್ಷಣ ಸಂಸ್ಥೆಗಳಿಂದ, ರೋಟರಿ ಕ್ಲಬ್‌ಗಳಿಂದ ಮತ್ತು ಆಧ್ಯಾತ್ಮಿಕ ಹಾಗೂ ಬೌದ್ಧಿಕ ಸಂಸ್ಥೆಗಳಿಂದ ಬಹಳ ಬೇಡಿಕೆಗಳೂ ಬರುತ್ತಿದ್ದವು. ಸಂಸ್ಕೃತ ಹಾಗೂ ಆಂಗ್ಲ ಭಾಷೆಗಳಲ್ಲಿ ಒಳ್ಳೆಯ ಹಿಡಿತವನ್ನು ಸಾಧಿಸಿದ್ದ ಅವರು ಭಾಷಣ ನೀಡಿದಾಗ ಅದನ್ನು ಕೇಳುವುದು ಮಹದಾನಂದದಾಯಕವಾಗಿತ್ತು.

ಸ್ವಾಮಿಗಳು ಎರಡು ಬಾರಿಯಾದರೂ ಕಾಶ್ಮೀರದಲ್ಲಿ ನಮ್ಮನ್ನು ಭೇಟಿಯಾಗಿದ್ದರು. ಮೊದಲ ಭೇಟಿಯಲ್ಲಿ ನಮ್ಮ ಶ್ರೀನಗರದ ಶ್ರೀನಿವಾಸ–ಕರಣ್ ಮಹಲ್‌ನಲ್ಲಿ ನಮ್ಮೊಂದಿಗೇ ಉಳಿದರು. ಆಗ ಅವರ ಆರೋಗ್ಯಸ್ಥಿತಿ ಚೆನ್ನಾಗಿರಲಿಲ್ಲವಾದ್ದರಿಂದ ನನ್ನ ಮಡದಿಯು ವಿಶೇಷ ಮುತುವರ್ಜಿಯಿಂದ ವೈದ್ಯರ ಸಲಹೆಯಂತೆ ಅವರ ಆಹಾರವನ್ನು ತಯಾರಿಸುತ್ತಿದ್ದಳು. ನಮ್ಮೊಂದಿಗಿದ್ದ ಆ ದಿನಗಳಲ್ಲಿ ಅವರು ಹಾರ್ಮೋನಿಯಂ ನುಡಿಸಿದ್ದರು ಹಾಗೂ ಸ್ವಾದಿಷ್ಟವಾದ ಕೇರಳದ ಪಾಯಸವನ್ನು ತಯಾರುಮಾಡಿದ್ದರು. ಅಂತಹ ರುಚಿಕರವಾದ ಪಾಯಸವನ್ನು ಮತ್ತೆ ನಾವು ತಿನ್ನಲಿಲ್ಲ. ಅವರು ಜಮ್ಮುವಿಗೂ ಬಂದಿದ್ದರು. ಅವರು ಮಾಡಿದ ಪ್ರಾರಂಭದ ಪರಿಣಾಮವಾಗಿ

---

* ಪ್ರಸಿದ್ಧ ವಿದ್ವಾಂಸರು ಹಾಗೂ ಆಡಳಿತಗಾರರು; ಅಮೆರಿಕದ ಸಂಯುಕ್ತ ರಾಷ್ಟ್ರಗಳಿಗೆ ಭಾರತದ ಹಿಂದಿನ ರಾಯಭಾರಿಗಳು; ವಾರಾಣಸೀ ಹಿಂದೂ ವಿಶ್ವವಿದ್ಯಾಲಯ, ಜಮ್ಮು ಮತ್ತು ಕಾಶ್ಮೀರ ವಿಶ್ವವಿದ್ಯಾಲಯ ಹಾಗೂ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯಗಳ ಕುಲಪತಿಗಳು; ಇದೀಗ ರಾಜ್ಯಸಭೆಯ ಸದಸ್ಯರು.

ನಗರದ ಬಳಿ ಒಂದು ಉತ್ತಮ ಶ್ರೀ ರಾಮಕೃಷ್ಣ ಮಿಷನ್ ಕೇಂದ್ರವೇ ಕಟ್ಟಲ್ಪಟ್ಟಿತು. ನಾನು ಅವರನ್ನು ಕಡೆಯ ಬಾರಿ ಭೇಟಿಯಾದಾಗ ಅವರ ಆರೋಗ್ಯ ಬಹಳ ಹದಗೆಟ್ಟಿತ್ತು. ಆದರೂ ನನ್ನನ್ನು ಬಹಳ ಆದರದಿಂದ ಬರಮಾಡಿಕೊಂಡರು. ಆಗ ಅವರು ಬೇಲೂರು ಮಠದಲ್ಲಿದ್ದರು. ಅದಾದ ಕೆಲವೇ ತಿಂಗಳುಗಳಲ್ಲಿ ಸ್ವಾಮಿಗಳು ಇಹಲೋಕವನ್ನು ತ್ಯಜಿಸಿದರು.

ಈ ಪ್ರಕಟಣೆಯ ಪುಟಗಳ ಮೂಲಕ, ನಾನೊಬ್ಬ ಸಂನ್ಯಾಸಿಗೆ, ಅಸದೃಶ ಸಂಭಾಷಣಾಪಟುವಿಗೆ ಹಾಗೂ ಜ್ಞಾನಯೋಗ, ಕರ್ಮಯೋಗ ಮತ್ತು ಭಕ್ತಿಯೋಗಗಳ ಸಮನ್ವಯ ಮೂರ್ತಿಗೆ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತೇನೆ.

* * * *

# ೪೮. ಒಬ್ಬ ಮಹಾತ್ಮನಿಗೆ ಶ್ರದ್ಧಾಂಜಲಿ

–ಐ.ಕೆ. ಗುಜ್ರಾಲ್*

ಸ್ವಾಮಿ ರಂಗನಾಥಾನಂದರ ಸಹೃದಯತೆಯ ಸವಿಯನ್ನು ಅನುಭವಿಸುವ ಭಾಗ್ಯ ನನಗೆ ದೊರೆತದ್ದು ನಮ್ಮ ದೇಶದ ವಿಭಜನೆಗೂ ಮೊದಲೇ. ಅಂದು ಭೇಟಿಯಾದಾಗಿನಿಂದಲೂ ಅವರ ಸ್ನೇಹಪಾತ್ರನಾದೆ. ಸ್ವಾಮಿಗಳು ಪ್ರತಿ ವಾರವೂ ನೀಡುತ್ತಿದ್ದ ಪ್ರವಚನಗಳಿಗೆ ಬಹಳಷ್ಟು ಸಂಖ್ಯೆಯಲ್ಲಿ ಶ್ರೋತೃಗಳು ಬರುತ್ತಿದ್ದರು. ಎಲ್ಲ ಧರ್ಮದವರೂ ಬರುತ್ತಿದ್ದರು. ನನ್ನ ಮನಸ್ಸಿನ ಮೇಲೂ ಅವರ ತತ್ತ್ವಪೂರ್ಣ ಪ್ರವಚನಗಳು ಆಳವಾದ ಪ್ರಭಾವಬೀರಿದವು. ಇಂದಿಗೂ ಆ ಪ್ರಭಾವದ ಅನುಭವವಾಗುತ್ತದೆ.

ಲಾಹೋರಿನ ವಿಶ್ವವಿದ್ಯಾನಿಲಯದಲ್ಲಿ ನನ್ನ ವ್ಯಾಸಂಗವನ್ನು ಮುಗಿಸಿದ ನಂತರ ಕರಾಚಿಯಲ್ಲಿ ನಾನು ನೆಲೆಸಿದೆ. ಅಂದಿನ ದಿನಗಳಲ್ಲಿ ಕರಾಚಿಯಲ್ಲಿನ ಜೀವನವು ಬೇರೆ ತೆರನಾಗಿತ್ತು. ಸ್ವಾಮೀಜಿಯ ವೈಶಿಷ್ಟ್ಯ ಅವರನ್ನು ಸುಪ್ರಸಿದ್ಧರನ್ನಾಗಿಸಿತು. ಪ್ರತಿ ಭಾನುವಾರದಂದು ಅವರು ರಾಮಕೃಷ್ಣ ಮಿಷನ್ನಿನ ಕರಾಚಿಯ ಕೇಂದ್ರದಲ್ಲಿ ಪ್ರವಚನ ನೀಡುತ್ತಿದ್ದರು. ಆ ವಿದ್ವತ್ಪೂರ್ಣ ಹಾಗೂ ವಿಖ್ಯಾತ ಉಪನ್ಯಾಸಗಳನ್ನು ಕೇಳಲು ಸಮಾಜದ ಗಣ್ಯ ವ್ಯಕ್ತಿಗಳೆಲ್ಲ ತಪ್ಪದೇ ಬರುತ್ತಿದ್ದರು. ಆ ಸಮಯದಲ್ಲಿ ಭಾರತದ ವಿಭಜನೆಗೆ ಕಾರಣವಾದ ಕೋಮುವಾದದ ಹೇಯಭಾವನೆಗಳು ನಿಧಾನವಾಗಿ ಜನಸಾಮಾನ್ಯರ ಮಧ್ಯೆ ಹರಡುತ್ತಿದ್ದುವು. ಆದರೂ, ವಿಚಾರಶೀಲ ಮನಸ್ಸುಳ್ಳ ವ್ಯಕ್ತಿಗಳು ತಮ್ಮ ವೈಮನಸ್ಯಗಳನ್ನು ಹಾಗೂ ವೈಯಕ್ತಿಕ ಧಾರ್ಮಿಕ ನಂಬಿಕೆಗಳನ್ನು ಬದಿಗೊತ್ತಿ, ತುಂಬು ಆಸ್ಥೆಯಿಂದ ಅವರ ಪ್ರವಚನಗಳಿಗೆ ಹಾಜರಾಗಿರುತ್ತಿದ್ದರು.

ಸ್ವಾಮಿ ರಂಗನಾಥಾನಂದರು, ಆಶ್ರಮದ ನಿಧಿಸಂಗ್ರಹಕ್ಕಾಗಿ ಒಂದು ಸಣ್ಣ ಕೇಂದ್ರ ಮಂಡಳಿಯನ್ನು ರಚಿಸಿದರು. ಆಗ, ದೆಹಲಿಯಲ್ಲಿ ಈಗ ವಾಸವಾಗಿರುವ ಶ್ರೀಮತಿ ಸುಂದರಿ ಶ್ರೀಧರಾಣಿ ಕರಾಚಿಯಲ್ಲಿದ್ದರು. ಸುಂದರಿ ಬಗುನಾನಿ ಎಂಬುದು ಆಕೆಯ ಕನ್ಯಾನಾಮವಾಗಿತ್ತು. ಆಕೆಯು ಶಾಂತಿನಿಕೇತನದಿಂದ ನೃತ್ಯದ ತರಬೇತಿ ಪಡೆದು ಉತ್ತೀರ್ಣರಾಗಿದ್ದರು. ಆಶ್ರಮಕ್ಕೆ ಹಣ ಸಂಗ್ರಹಿಸಲು ಕರಾಚಿಯಲ್ಲಿ ಸುಂದರಿಯವರ ನೃತ್ಯ ಪ್ರದರ್ಶನವನ್ನು ಏರ್ಪಡಿಸಲಾಯಿತು. ಸ್ವಾಮಿಗಳು ಒಂದು ಅದ್ಭುತ ವಿಚಾರವನ್ನು ನಮಗೆ ತಿಳಿಸಿದರು. ವಿಭಿನ್ನ ಧರ್ಮೀಯ ಮತಗಳ ಅನುಯಾಯಿಗಳು ಆಶ್ರಮಕ್ಕಾಗಿ ಹಣ ಸಂಗ್ರಹಿಸಬೇಕೆಂದರು. ಇದು ಸ್ವಾಮಿಗಳ ಅಸಾಧಾರಣ ಚಿಂತನಸಾಮರ್ಥ್ಯ ಹಾಗೂ ದೂರದರ್ಶಿತ್ವದ ನಿದರ್ಶನವೇ ಆಗಿತ್ತು.

ಅದಾದ ಕೆಲವೇ ದಿನಗಳಲ್ಲಿ ದೇಶದ ವಿಭಜನೆಯಾಯಿತು. ತಮಗೆ ಉಳಿಯಲು ದೊರೆತ ಸ್ಥಳಗಳಲ್ಲಿ ಜನರು ಹೊಸತಾಗಿ ನೆಲೆಸಲು ಪ್ರಾರಂಭಿಸಿದರು. ನಾನೂ ಕ್ರಮೇಣ ದೆಹಲಿಗೆ ಬಂದು ನೆಲೆಸಿದೆ. ಸ್ವಾಮೀಜಿ ಹೈದರಾಬಾದಿಗೆ ಹೋದರು. ಆದರೆ ನಮ್ಮಗಳ ಭೇಟಿ ನಿಂತುಹೋಗಲಿಲ್ಲ.

ನಾನು ಸೋವಿಯತ್ ರಷ್ಯಾದ ರಾಯಭಾರಿಯಾಗಿ ಮಾಸ್ಕೋದಲ್ಲಿ ಕಾರ್ಯನಿರತನಾಗಿದ್ದಾಗ ಸ್ವಾಮಿಗಳಿಂದ ಒಂದು ಪತ್ರವನ್ನು ಪಡೆದೆ. ಮಾಸ್ಕೋದ ವಿಶ್ವವಿದ್ಯಾನಿಲಯದ ಆಹ್ವಾನಕ್ಕನುಸಾರ ಅವರು ಪ್ರವಚನಗಳನ್ನು ನೀಡಲು ಮಾಸ್ಕೋಗೆ ಭೇಟಿನೀಡುತ್ತಿರುವುದಾಗಿ ಬರೆದಿದ್ದರು. ಅವರು ಮಾಸ್ಕೋಗೆ ಭೇಟಿಯಿತ್ತಾಗ ನನ್ನೊಡನೆ

---

* ಭಾರತದ ಹಿಂದಿನ ಪ್ರಧಾನಮಂತ್ರಿಗಳು; ಸೋವಿಯತ್ ಯೂನಿಯನ್‌ಗೆ ಭಾರತದ ರಾಯಭಾರಿಗಳು; ಮಾಸ್ಕೋದಲ್ಲಿ ಭಾರತದ ಪ್ರತಿನಿಧಿ ಹಾಗೂ ಭಾರತದ ಪ್ರಸಾರ ಹಾಗೂ ಮಾಹಿತಿ ಕೇಂದ್ರ ಸಚಿವರು; ಈಚೆಗಷ್ಟೇ ಅವರು ನಿಧನರಾದರು.

ಉಳಿಯಬೇಕೆಂದು ನಾನು ದೂರವಾಣಿಯ ಮೂಲಕ ವಿನಂತಿಸಿಕೊಂಡೆ. ಸ್ವಾಮಿಗಳು ಒಪ್ಪಿಕೊಂಡು ನನ್ನ ಮನೆಯಲ್ಲಿ ಒಂದು ವಾರ ಉಳಿದರು. ಇದು ನಿಸ್ಸಂದೇಹವಾಗಿ, ನನಗೆ ದೊರೆತ ಒಂದು ಮಹದ್ ಕೃಪೆ. ಆ ಕಮ್ಯೂನಿಸ್ಟ್ ದೇಶದಲ್ಲಿ ಏನು ಮಾಡುತ್ತಾರೆ, ಏನು ತಾನೇ ಹೇಳುತ್ತಾರೆ ಎಂಬ ಚಿಂತೆ ನನ್ನನ್ನು ಕಾಡಲಾರಂಭಿಸಿತು. ಅನೇಕ ಭಾಷೆಗಳಲ್ಲಿ ಅವರಿಗೆ ಪಾಂಡಿತ್ಯವಿದ್ದರೂ, ನಿಸ್ಸಂದೇಹವಾಗಿ ಅವರಿಗೆ ರಷ್ಯನ್ ಭಾಷೆ ಗೊತ್ತಿಲ್ಲವೆಂಬುದು ನನಗೆ ತಿಳಿದಿತ್ತು.

ಮಹಾರಾಜರು ಮಾಸ್ಕೋದಲ್ಲಿ ನನ್ನೊಂದಿಗೆ ಉಳಿದುಕೊಂಡದ್ದು ನನ್ನ ಜೀವನದ ಅತ್ಯಂತ ಪ್ರಮುಖ ಘಟನೆಯೆಂಬುದು ನಿಶ್ಚಿತ. ಅಂತಹ ಒಬ್ಬ ಮಹಾನ್ ವ್ಯಕ್ತಿಯನ್ನು ಅಷ್ಟೊಂದು ಸನಿಹದಿಂದ ತಿಳಿಯುವ ಅವರನ್ನು ವಿಭಿನ್ನ ಆಯಾಮಗಳಿಂದ ನೋಡುತ್ತ ವಿಭಿನ್ನ ಮುಖಗಳ ಪರಿಚಯ ಪಡೆದುಕೊಳ್ಳುವ ಆ ಸುಯೋಗ ವಿರಳವೇ ಸರಿ. ಕೆಲವೊಮ್ಮೆ ಅತಿ ಪರಿಚಯದಿಂದ ಆಗುವ ಪರಿಣಾಮ ಒಳ್ಳೆಯದಾಗಬಹುದು, ಕೆಟ್ಟದ್ದೂ ಆಗಬಹುದು. ಆದರೆ ನಾನು ಸ್ವಾಮಿಗಳನ್ನು ಹೆಚ್ಚಾಗಿ ನೋಡಿದಷ್ಟೂ ಅವರ ಬಗ್ಗೆ ನನಗಿದ್ದ ಪ್ರೀತಿ ಹಾಗೂ ಶ್ರದ್ಧೆಗಳು ಹೆಚ್ಚುತ್ತಲೇ ಹೋದವು.

ಮಾಸ್ಕೋ ವಿಶ್ವವಿದ್ಯಾನಿಲಯದಲ್ಲಿ ಮಹಾರಾಜರು ಮೂರು ಪ್ರವಚನಗಳನ್ನು ನೀಡಬೇಕಿತ್ತು. ಕುಲಪತಿಗಳು ನನ್ನನ್ನು ದೂರವಾಣಿಯ ಮೂಲಕ ಸಂಪರ್ಕಿಸಿ ಸ್ವಾಮಿಗಳು ಯಾವ ವಿಷಯವನ್ನು ಕುರಿತು ಮಾತನಾಡುವರೆಂದು ಕೇಳಿದರು. ನಾನು ಮಹಾರಾಜರನ್ನು ವಿಷಯದ ಬಗ್ಗೆ ಕೇಳಿದಾಗ ನನಗೆ ಆಶ್ಚರ್ಯ ಕಾದಿತ್ತು. ಅವರು 'ಮಾರ್ಕ್ಸ್ ಮತ್ತು ಮಾನವ ಜನಾಂಗ' ಎಂಬ ವಿಷಯದ ಬಗ್ಗೆ ಮಾತನಾಡುವುದಾಗಿ ತಿಳಿಸಿದರು. ಇದನ್ನು ಕುಲಪತಿಗಳಿಗೆ ತಿಳಿಸಿದಾಗ, ಮಹಾರಾಜರು ಮಾರ್ಕ್ಸ್‌ವಾದವನ್ನು ಖಂಡಿಸಬಹುದು ಎಂದು ಭಾವಿಸಿ ಅವರಿಗೆ ಕಸಿವಿಸಿಯಾಯಿತು.

ಮಹಾರಾಜರು ತಮ್ಮ ಪ್ರವಚನವನ್ನು ಆಂಗ್ಲಭಾಷೆಯಲ್ಲಿ ನೀಡುವರಿದ್ದರು. ಸಭೆಯಲ್ಲಿ ರಷ್ಯಾ ದೇಶದವರೇ ಇರುವರು ಹಾಗೂ ಅವರಿಗೆ ಆಂಗ್ಲ ಭಾಷೆ ತಿಳಿದಿರಲಾರದು. ಹೀಗಾದರೆ. ಸ್ವಾಮಿಗಳು ಹಾಗೂ ಸಭಿಕರ ನಡುವೆ ವಿಚಾರ ವಿನಿಮಯ ಸಾಧ್ಯವಾಗದು ಎಂದು ಶಂಕಿಸುತ್ತ ನನ್ನ ಚಿಂತೆಯನ್ನು ಸ್ವಾಮಿಗಳಿಗೆ ತಿಳಿಸಿದೆ. ಒಬ್ಬ ಅನುವಾದಕರನ್ನು ನೇಮಿಸಲು ಹೇಳಿದ ಸ್ವಾಮಿಗಳು ಆ ಅನುವಾದಕರು ಪ್ರವಚನದ ಮುನ್ನಾ ದಿನವೇ ಬಂದು ಸ್ವಾಮಿಗಳನ್ನು ಭೇಟಿಯಾಗಿ ಅವರು ಮಾತನಾಡುವ ವಿಷಯದ ಬಗ್ಗೆ ಪರಿಚಯ ಮಾಡಿಕೊಳ್ಳುವಂತೆ ನನಗೆ ತಿಳಿಸಿದರು.

ನನ್ನ ರಾಯಭಾರಿ ಕಛೇರಿಯಲ್ಲಿ ಶ್ರೀ ಗಂಗೂಲಿ ಎಂಬ ಒಬ್ಬ ಅನುವಾದಕರು ಹಾಗೂ ಭಾಷಾಂತರ ಮಾಡುವವರು ಇದ್ದರು. ಈಗಿನ ದಿನಗಳಲ್ಲಿ ಅವರು ದೆಹಲಿಯಲ್ಲಿರುತ್ತಾರೆ. ಅವರು ಒಂದೆರಡು ದಿನ ಸ್ವಾಮಿಗಳ ಬಳಿ ಬಂದರು. ಮಹಾರಾಜರು ತಮ್ಮ ಪ್ರವಚನದ ಟಿಪ್ಪಣಿಗಳನ್ನು ವಿವರಿಸಿದರು. ಅನುವಾದಕರ ಸಹಾಯದಿಂದ ವಾಚಿಕ ಹಾಗೂ ಲಿಖಿತ ವಿವರಣೆಯನ್ನು ನೀಡಬಯಸಿದರು. ಅವರು ನೀಡಿದ ಮೂರೂ ಪ್ರವಚನಗಳು ಮಾರ್ಕ್ಸ್‌ವಾದವನ್ನು ಕುರಿತೇ, ಅವರ ವಿಚಾರಪೂರ್ಣ ಪ್ರವಚನಗಳಿಂದ ಜನರೆಲ್ಲ ಬಹಳ ಪ್ರಭಾವಿತರಾದರು. ಸಂಯುಕ್ತ ಸೋವಿಯತ್‌ನ ನಾಸ್ತಿಕ ಸಮಾಜವು ಇಂತಹ ವಿದ್ವತ್‌ಪೂರ್ಣ ಪ್ರವಚನಗಳನ್ನು ಎಂದೂ ಕೇಳಿರಲೇ ಇಲ್ಲ. ಸ್ವಾಮಿಗಳ ವಿಚಾರಗಳಿಂದ ಅವರು ಅದೆಷ್ಟು ಪ್ರಭಾವಿತರಾಗಿದ್ದರೆಂದರೆ ಕೆಲವರು ಸ್ವಾಮಿಗಳಿಗೆ ಗೌರವ ಸಲ್ಲಿಸಲು ನನ್ನ ನಿವಾಸಕ್ಕೂ ಬಂದರು. ಅವರಲ್ಲಿ ಆಡಳಿತ ವರ್ಗದವರು, ಮುಖಂಡರು ಹಾಗೂ ಪಂಡಿತರೂ ಇದ್ದರು. ನನಗೆ ಸ್ವಾಮಿಗಳ ಬಗ್ಗೆ ನಿಜವಾಗಿ ಅಭಿಮಾನವುಂಟಾಯಿತು.

ಮತ್ತೆ ಇಂದಿರಾಗಾಂಧಿ ಅವರು ಪ್ರಧಾನ ಮಂತ್ರಿಗಳಾಗಿದ್ದಾಗ ನಾನು ಅವರ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದೆ. ಆಗ ಆಕೆಯು ಸ್ವಾಮಿಗಳ ಪ್ರವಚನ ಮಾಲೆಯನ್ನು ಆಯೋಜಿಸಿದ್ದರು. ಅವರ ಪ್ರವಚನಗಳನ್ನು

ಆಲಿಸುವುದು ಒಂದು ಅವಿಸ್ಮರಣೀಯ ಅದ್ಭುತ ಅನುಭವ. ನಾನು ಆಧ್ಯಾತ್ಮಿಕ ವ್ಯಕ್ತಿ ಅಲ್ಲದಿದ್ದರೂ ಸ್ವಾಮಿಗಳ ವಿಚಾರಗಳು ಹಾಗೂ ಶೈಲಿ ನನ್ನ ಮನಸ್ಸಿನ ಮೇಲೆ ಆಳವಾದ ಪ್ರಭಾವವನ್ನು ಬೀರಿವೆ. ಆ ಪ್ರವಚನಗಳ ಧ್ವನಿಸುರುಳಿಗಳನ್ನು ಮಾಡದೇ ಹೋದದ್ದು ನಮ್ಮ ದೌರ್ಭಾಗ್ಯ. ಆಗಿನ ದಿನಗಳಲ್ಲಿ ಅಂತಹ ಸೌಲಭ್ಯಗಳಿರಲಿಲ್ಲ, ಪ್ರಚಲನೆಯೂ ಇರಲಿಲ್ಲ. ಅವುಗಳನ್ನು ಸಂರಕ್ಷಿಸಿದ್ದರೆ, ಬಹು ಅಮೂಲ್ಯವಾದ ನಿಧಿಯಾಗುತ್ತಿದ್ದವು ಎಂಬುದರಲ್ಲಿ ಸಂದೇಹವಿಲ್ಲ.*

* * * *

* ಇದರ ಮೂಲ: ಶ್ರೀ ಐ.ಕೆ. ಗುಜ್ರಾಲ್ ಅವರು ಸ್ವಾಮಿ ರಂಗನಾಥಾನಂದ ಮಹಾರಾಜರ ಕುರಿತು ನೀಡಿದ ಹಿಂದಿಯ ಪ್ರವಚನದ ಆಂಗ್ಲ ಅನುವಾದ. ಈ ಪ್ರವಚನವನ್ನು ೧೫.೦೫.೨೦೦೫ರಂದು ನವದೆಹಲಿಯ ರಾಮಕೃಷ್ಣ ಮಿಷನ್ ಕೇಂದ್ರದಲ್ಲಿ ನೀಡಿದ್ದರು. ಆಂಗ್ಲ ಅನುವಾದವನ್ನು ಮೋನಿಕಾ ಸೇನ್ ಗುಪ್ತಾ ಮಾಡಿರುತ್ತಾರೆ.

# ೪೯. ನನ್ನ ಮಾನಸ ಗುರು

–ಆರ್.ಕೆ.ತ್ರಿವೇದಿ*

೧೯೩೯ನೇ ಇಸವಿಯಲ್ಲಿ ಉನ್ನತ ವಿದ್ಯಾಭ್ಯಾಸಕ್ಕಾಗಿ ನಾನು ರಂಗೂನಿಂದ ಭಾರತಕ್ಕೆ ಹೊರಟಾಗ ಸ್ವಾಮಿ ರಂಗನಾಥಾನಂದರನ್ನು ಭೇಟಿಮಾಡುವ ಸುಯೋಗ ದೊರಕಿತು. ಪ್ರಥಮ ಭೇಟಿಯಲ್ಲಿಯೇ ನಮ್ಮ ಪ್ರಾಚೀನ ಸಂಸ್ಕೃತಿ ಮತ್ತು ಜ್ಞಾನಗಳ ಪ್ರಸಾರದಲ್ಲಿ ಆಳವಾಗಿ ತೊಡಗಿಕೊಂಡಿರುವ ಹಾಗೂ ಅವುಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸುವುದರಲ್ಲಿ ಸಮಾನ ಆಸಕ್ತರಾದ ಜ್ಞಾನಿ ಸಂತರಾಗಿ ಅವರು ನನ್ನ ಮೇಲೆ ಪ್ರಭಾವ ಬೀರಿದರು.

ದೆಹಲಿಯಲ್ಲಿ ಸ್ವಾಮಿಜಿಗಳು ಇದ್ದಾಗ, ದೆಹಲಿಯ ಐ.ಎ.ಎಸ್. ಪ್ರಶಿಕ್ಷಣ ಸಂಸ್ಥೆಗೆ ನನಗೆ ವರ್ಗವಾಯಿತು. ಅವರು ನಡೆಸುತ್ತಿದ್ದ ಪ್ರವಚನಗಳಿಗೆ ತಪ್ಪದೆ ಹೋಗುತ್ತಿದ್ದೆ. ಯುವಜನ ಸಮುದಾಯಕ್ಕೆ ರುಚಿಸುವ ಹಾಗೆ ಶಾಸ್ತ್ರಜ್ಞಾನವನ್ನು ಸಾದರಪಡಿಸುವ ಕೌಶಲವನ್ನು ಅವರಲ್ಲಿ ಕಂಡೆ. ಐ.ಎ.ಎಸ್. ಮತ್ತು ಐ.ಪಿ.ಎಸ್. ಅಭ್ಯರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಲು ಸ್ವಾಮಿಜಿಯವರಿಗೆ ಆಹ್ವಾನ ನೀಡಿದೆ. ಆನಂತರ ಮಸ್ಸೂರಿಯಲ್ಲಿ ಐ.ಎ.ಎಸ್. ಸ್ಕೂಲ್ ಮತ್ತು ನ್ಯಾಷನಲ್ ಅಕಾಡೆಮಿ ಆಫ್ ಅಡ್ಮಿನಿಸ್ಟ್ರೇಷನ್‌ನಲ್ಲಿ ನಾನು ಆರು ವರ್ಷ ಇದ್ದಾಗ ಆರು ಭಾಷಣ ಮಾಲಿಕೆಗಳನ್ನು ಅವರು ಪ್ರತಿ ವರ್ಷ ಮಾಡಿದರು. ಲಖನೌ, ದೆಹಲಿ ಅಥವಾ ಮಸ್ಸೂರಿಯಲ್ಲಿದ್ದಾಗ ಸ್ವಾಮಿಗಳ ಆತಿಥ್ಯ ಮಾಡುವ ಅವಕಾಶಗಳು ಸಿಕ್ಕಿದವು. ಆ ಮೂಲಕ ನಾವು ಪರಸ್ಪರ ಆತ್ಮೀಯರಾದೆವು. ಉಪನಿಷತ್ತು ಮತ್ತು ಶಾಸ್ತ್ರಗ್ರಂಥಗಳಲ್ಲಿ ಇದ್ದ ಕೆಲವು ಕ್ಲಿಷ್ಟ ಅನುಮಾನಗಳನ್ನು ಅವರಿಂದ ಪರಿಹಾರ ಮಾಡಿಕೊಂಡೆ. ಹಿಂದೆ ಇದ್ದ ಪರಿಸ್ಥಿತಿಗೆ ಹೋಲಿಸಿ, ಈಗಿರುವ ಕುಂದು–ಕೊರತೆಗಳ ಬಗ್ಗೆ ಸ್ವಾಮಿ ವಿವೇಕಾನಂದರಂತೆ ಮುಚ್ಚುಮರೆಯಿಲ್ಲದೆ ಹೇಳುತ್ತಿದ್ದರು.

ಸ್ವಾಮಿಜಿ ಬಹುಶ್ರುತರಿದ್ದು, ಯಾವ ಪೂರ್ವಸಿದ್ಧತೆಯಿಲ್ಲದೆ ಪ್ರವಚನ ಮಾಡುತ್ತಿದ್ದರು. ಯುವಜನಾಂಗಕ್ಕೆ ಪ್ರಯೋಜನವಾಗುವ ಹಾಗೆ ಕೆಲವು ಪುಸ್ತಕಗಳನ್ನು ಬರೆಯಲು ನಾನು ಅಕಾಡೆಮಿಯಲ್ಲಿದ್ದಾಗ ವಿನಂತಿ ಮಾಡಿದ್ದೆ. 'ನಾನು ಇನ್ನೂ ಜ್ಞಾನ ಸಂಪಾದನೆ ಮಾಡಬೇಕಾಗಿದೆ. ಸೂಕ್ತ ಸಮಯದಲ್ಲಿ ಬರೆಯುತ್ತೇನೆ' ಎಂದು ಹೇಳಿದರು. ೬೦ ಮತ್ತು ೭೦ ದಶಕದಲ್ಲಿ ಅವರ ಕೃತಿಗಳು ಪ್ರಕಟವಾಗಲು ಪ್ರಾರಂಭವಾಗಿ ಪ್ರಾಜ್ಞರಲ್ಲಿ ಬಹಳ ಜನಪ್ರಿಯವಾಯಿತು. ಚೆನ್ನಾಗಿ ಓದಿಸಿಕೊಂಡು ಹೋಗುವ ಅವರ ಸಂದೇಶ ಮತ್ತು ಉಪನ್ಯಾಸಗಳನ್ನು ತಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಈಗಿನ ಯುವಪೀಳಿಗೆಗೆ ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ನಮ್ಮ ಪುರಾತನ ವಿಚಾರಗಳನ್ನು ಚೆನ್ನಾಗಿ ವಿವರಿಸುವ ಕೃತಿಗಳ ಅವರ ಬಗ್ಗೆ ಇತ್ತೀಚಿಗೆ ಒಬ್ಬ ತರುಣ ನನ್ನನ್ನು ಕೇಳಿದ. ಸ್ವಾಮಿಜಿಯವರು ಬರೆದ 'ಎಟರ್ನಲ್ ವ್ಯಾಲ್ಯೂಸ್ ಫಾರ್, ಚೇಂಜಿಂಗ್ ವರ್ಲ್ಡ್' ಮುಂತಾದ ಕೃತಿಗಳನ್ನು ಸಂಪಾದಿಸಿ ಅಧ್ಯಯನ ಮಾಡಲು ಹೇಳಿದೆ. ಇತರರಿಗೂ ಇದು ನನ್ನ ಸವಿನಯ ಸಲಹೆ.

---

* ಮಾಜಿ ಗುಜರಾತ್‌ನ ರಾಜ್ಯಪಾಲರು ಹಾಗೂ ನಿವೃತ್ತ ಮುಖ್ಯ ಚುನಾವಣಾ ಆಯುಕ್ತರು.

ಸ್ವಾಮಿಗಳಿಗೆ ಆತಿಥ್ಯ ನೀಡುವಾಗ ನಾನು ಒಂದು ಪಾಠ ಕಲಿತೆ. ಅವರು ಆರಿಸಿ, ಅತ್ಯಲ್ಪ ಆಹಾರ ಸೇವಿಸುತ್ತಿದ್ದರು. ಆದರೆ ಆಹಾರ, ನಿದ್ರೆ ಅಥವಾ ಕೆಲಸ ಕ್ಲಪ್ತಕಾಲದಲ್ಲಿ ಮಾಡುತ್ತಿದ್ದರು. ಸಾಧನೆಯ ಸಮಯವನ್ನು ಬಿಟ್ಟರೆ, ಬಾಕಿ ವೇಳೆಯಲ್ಲಿ ಅಧ್ಯಯನ, ಪ್ರವಚನ ಅಥವಾ ಬರೆವಣಿಗೆಯಲ್ಲಿ ನಿರತರಾಗಿರುತ್ತಿದ್ದರು. ಇವತ್ತು ಯುವಜನಾಂಗಕ್ಕೆ ಸ್ಫೂರ್ತಿ ಕೊಡಲು ಸ್ವಾಮಿಜಿಯಂತಹ ಜನರ ಅಗತ್ಯವಿದೆ. ನನ್ನ 'ಮಾನಸ ಗುರು'ವಿನ ಸ್ಮರಣೆಮಾಡಿ ಈ ಕಿರುಲೇಖನದ ಮೂಲಕ ವಿನಮ್ರ ಗೌರವ ಸಲ್ಲಿಸುತ್ತೇನೆ.

* * * *

# ೫೦. ಒಂದು ದೇದೀಪ್ಯಮಾನ ಆತ್ಮ

–ಟಿ.ಎನ್.ಚತುರ್ವೇದಿ*

ದೆಹಲಿಯ 'ಮೆಟ್‌ಕಾಫೆ ಹೌಸ್'ನಲ್ಲಿದ್ದ ಐ.ಎ.ಎಸ್. ಪ್ರಶಿಕ್ಷಣ ಕೇಂದ್ರಕ್ಕೆ ೧೯೫೦ ಇಸವಿ ಆಗಸ್ಟ್/ಸೆಪ್ಟಂಬರ್ ತಿಂಗಳಿನಲ್ಲಿ ನಾನು ಅಭ್ಯರ್ಥಿಯಾಗಿ ಸೇರಿದಾಗ ಪೂಜ್ಯ ಸ್ವಾಮಿ ರಂಗನಾಥಾನಂದ ಮಹಾರಾಜ್‌ರವರನ್ನು ನೋಡಿದೆ. ಶ್ರೀ ಜೆ.ಡಿ.ಶುಕ್ಲಾ ಎಂಬ ಐ.ಸಿ.ಎಸ್ ಅಧಿಕಾರಿ ಶಾಲೆಯ ಉಪನಿರ್ವಾಹಕರಾಗಿದ್ದರು. ಸುಮಾರು ೪೦ ಜನ ಅಭ್ಯರ್ಥಿಗಳನ್ನು ಉದ್ದೇಶಿಸಿ ಮಾತನಾಡಲು ಸ್ವಾಮಿಜಿಯವರನ್ನು ಆಮಂತ್ರಿಸಿದ್ದರು. ಅವರು ಭಾರತೀಯ ಸಂಸ್ಕೃತಿಯ ವಿಕಸನದ ಬಗ್ಗೆ ಮಾತನಾಡಿದರು. ಅತ್ಯಂತ ವ್ಯಾಪಕ ವಿಶ್ಲೇಷಣೆ, ವಿಷಯ ನಿರೂಪಣೆ ಮತ್ತು ವಾಗ್ಮಿತೆಯಿಂದ ಸಭೆಯಲ್ಲಿದ್ದ ಎಲ್ಲರನ್ನೂ ಸ್ವಾಮಿಗಳು ಮಂತ್ರಮುಗ್ಧರನ್ನಾಗಿ ಮಾಡಿದರು. ಇದರ ಪ್ರಭಾವದಿಂದ ಕೆಲವರು ಸ್ವಾಮಿಗಳ ಬಳಿ ಹೋದರು. ಆಗ ಅವರು ರಾಮಕೃಷ್ಣ ಮಿಷನ್ ದೆಹಲಿ ಕೇಂದ್ರದ ನಿರ್ವಾಹಕರಾಗಿದ್ದರು. ಅವರ ವ್ಯಕ್ತಿತ್ವಕ್ಕೆ ಮಾರುಹೋಗಿ, ನಾನು ಅವಕಾಶ ಸಿಕ್ಕಿದಾಗಲೆಲ್ಲಾ ಅವರನ್ನು ಭೇಟಿಮಾಡುತ್ತಿದ್ದೆ. ಈ ಪ್ರೀತಿಯ ಒಡನಾಟ ಸ್ವಾಮಿಜಿ ಮಹಾಸಮಾಧಿಯಾಗುವತನಕ ನಡೆದಬಂದಿತ್ತು.

೨೦೦೩ನೆಯ ಇಸವಿ ಡಿಸೆಂಬರ್ ಕೊನೆಯಲ್ಲಿ ಬೆಂಗಳೂರಿನಿಂದ ಹೊರಟು ಅವರನ್ನು ಭೇಟಿ ಮಾಡಬೇಕೆಂದು ನಾನು ಏಕಾಏಕಿ ನಿರ್ಧಾರ ಮಾಡಿದೆ. ಸ್ವಾಮಿಗಳು ಇಹಲೋಕವನ್ನು ಬಿಡುವ ಕೆಲವು ತಿಂಗಳ ಮುಂಚೆ ಅವರ ದರ್ಶನ ಸಾಧ್ಯವಾಯಿತು. ಕೋಲ್ಕತ್ತ ತಲುಪಿದ ಮೇಲೆ ನನ್ನ ಆಪ್ತಕಾರ್ಯದರ್ಶಿ ಬೇಲೂರು ಮಠವನ್ನು ಸಂಪರ್ಕಿಸಿದಾಗ ಮರು ದಿನ ಬೆಳಿಗ್ಗೆ ಸ್ವಾಮೀಜಿ ನನ್ನನ್ನು ಸಂತೋಷದಿಂದ ಭೇಟಿಮಾಡಲು ಒಪ್ಪಿದ್ದಾರೆಂದು ನನಗೆ ವರ್ತಮಾನ ಬಂತು. ಈ ನನ್ನ ಕೊನೆಯ ಭೇಟಿ, ಮೊದಲನೆ ಭೇಟಿಯಷ್ಟೇ ಪ್ರಭಾವಶಾಲಿಯಾಗಿತ್ತು. ಎಲ್ಲರೂ ಅಪೇಕ್ಷಿಸತಕ್ಕ ಸ್ವಾಮಿಜಿಯವರ ವಾಕ್ಪಟುತ್ವ, ಆಗ ಕುಂದಿಹೋಗಿ ಸ್ಪಷ್ಟವಾಗಿ ಮಾತನಾಡಲು ಕಷ್ಟಪಡುತ್ತಿದ್ದರು. ಇದನ್ನು ನೋಡಿ ಬಹಳ ದುಃಖವಾಯಿತು. ಆದರೆ ಅವರ ಪ್ರೀತಿ, ಉತ್ಸಾಹ, ಕಣ್ಣಿನ ಹೊಳಪು, ಸ್ಪಷ್ಟ ಚಿಂತನೆ ಮತ್ತು ಅದ್ಭುತ ಜ್ಞಾಪಕಶಕ್ತಿ ಎಲ್ಲವೂ ಮುಂಚಿನ ಹಾಗೆ ಇದ್ದವು. ನನ್ನ ಬಗ್ಗೆ, ಬೆಂಗಳೂರು ವಾಸ್ತವ್ಯದ ಬಗ್ಗೆ ಹಾಗೂ ನನ್ನ ಕುಟುಂಬದವರ ಬಗ್ಗೆ ವಿಚಾರಿಸಿದರು. ಅನಂತರ ರಾಷ್ಟ್ರೀಯ ವಿಚಾರ ಮಜಲುಗಳ ಬಗ್ಗೆ ಮುಂಚಿನಂತೆ ಮಾತನಾಡಿ, ಶ್ರೀ ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರ ವಿಚಾರಗಳನ್ನು ಮತ್ತು ಆದರ್ಶಗಳನ್ನು ಪ್ರಸಾರಮಾಡುವ ಅವರ ಯೋಜನೆ ಮತ್ತು ಕಾರ್ಯಕ್ರಮಗಳನ್ನು ವಿವರಿಸಿದರು. ಶಾರೀರಿಕ ಅಶಕ್ತತೆಯನ್ನು ಗಮನಿಸಿ, ಅವರು ವಿಶ್ರಾಂತಿ ಪಡೆಯುವ ಸಲುವಾಗಿ ಹೇಗಾದರೂ ಮಾಡಿ ಅಲ್ಲಿಂದ ಹೊರಡುವುದು ಸೂಕ್ತವೆಂದು ಭಾವಿಸಿದೆ. ಎಂದಿನಂತೆ ಸ್ವಾಮಿಗಳು ನಗುತ್ತಾ ನನ್ನನ್ನು ಆಶೀರ್ವದಿಸಿ ಮುಂದೆ ಪರಸ್ಪರ ಸಂಪರ್ಕದಲ್ಲಿರಬೇಕೆಂದು ತಿಳಿಸಿದರು. ಅಲ್ಲಿಂದ ಹೊರಡುವ ಮುಂಚೆ ಸ್ವಾಮಿ ಹರ್ಷಾನಂದರು ಮತ್ತು ಬೆಂಗಳೂರಿನ ರಾಮಕೃಷ್ಣ ಮಿಷನ್ ಬಗ್ಗೆ ವಿಚಾರಿಸಿದರು. ಮತ್ತೊಮ್ಮೆ ಅವರಿಗೆ ಪ್ರಣಾಮ ಸಲ್ಲಿಸಿ ನನ್ನ ಕಾರನ್ನು ಹತ್ತಿದೆ. ಭೌತಿಕ ಶರೀರದಲ್ಲಿದ್ದ ಸ್ವಾಮಿ ರಂಗನಾಥಾನಂದರ ಭೇಟಿ ಅದೇ ಕೊನೆಯದು.

---

* ಯುನೆಸ್ಕೋ ಸಂಸ್ಥೆಯ ಕಾರ್ಯಕಾರಿ ಮಂಡಳಿಯ ಹಿಂದಿನ ಸದಸ್ಯರು, ಪ್ಯಾರಿಸ್; ರಾಜ್ಯಪಾಲರು, ಕರ್ನಾಟಕ ಮತ್ತು ಕೇರಳ; ಪದ್ಮವಿಭೂಷಣ ಪ್ರಶಸ್ತಿಯಿಂದ ಅಲಂಕೃತರು

ಗತಕಾಲದ ನೆನಪಿನ ಪ್ರಯಾಣಕ್ಕೆ ಕರೆದುಕೊಂಡು ಹೋಗುತ್ತೇನೆ. ೧೯೫೧ ಇಸವಿಯಲ್ಲಿ ನನಗೆ ಅಲಹಾಬಾದಿಗೆ ವರ್ಗವಾಯಿತು. ಅಲ್ಲಿ ಮತ್ತು ಮೊರಾದಾಬಾದಿನಲ್ಲಿ ಎರಡು ವರ್ಷ ಕೆಲಸಮಾಡಿದ ನಂತರ ರಾಜಸ್ಥಾನದ ಮುಖ್ಯಮಂತ್ರಿಗಳ ಕಾರ್ಯದರ್ಶಿಯಾದೆ. ಆಗ ಮೇಲಿಂದ ಮೇಲೆ ದೆಹಲಿಗೆ ಹೋಗುವ ಅವಕಾಶಗಳು ಒದಗಿ ಸ್ವಾಮಿಗಳ ಸಂಪರ್ಕ ಮುಂದುವರಿಯಿತು. ಸ್ವಾಮಿಗಳ ಪ್ರತಿಯೊಂದು ಭೇಟಿಯಲ್ಲಿ ಜ್ಞಾನೋದಯದ ಅನುಭವವಾಗುತ್ತಿತ್ತು. ಸ್ವಾಮಿಗಳ ಸರಳತನ ಹಾಗೂ ಪಾಂಡಿತ್ಯ ಪ್ರದರ್ಶನವಿಲ್ಲದ ಆತ್ಮೀಯ ಮಾತುಕತೆಗಳಿಂದ ನನ್ನ ಹೆಂಡತಿಯೂ ಪ್ರಭಾವಿತಳಾದಳು. ಪ್ರಚಲಿತ ಘಟನೆ ಮತ್ತು ದೃಷ್ಟಾಂತಗಳನ್ನು ತೆಗೆದುಕೊಂಡು ಕ್ಲಿಷ್ಟ ವಿಚಾರಗಳನ್ನು ಸರಳವಾದ ಭಾಷೆಯಲ್ಲಿ ವಿವರಿಸುತ್ತಿದ್ದರು. ಗೃಹಕೃತ್ಯಗಳ ವಿಚಾರದಲ್ಲಿ ನನಗೆ ಮತ್ತು ನನ್ನ ಹೆಂಡತಿಗೆ ಸ್ವಾಮಿಜಿಯವರು ತಮ್ಮದೇ ಆದ ಅಸಮಾನವಾದ ರೀತಿಯಲ್ಲಿ ಸಲಹೆ ಕೊಟ್ಟರು. ೧೯೬೫ರ ಜುಲೈನಲ್ಲಿ ಜೈಪುರವನ್ನು ಬಿಟ್ಟು, ನಾನು ಮಸ್ಸೂರಿಯಲ್ಲಿರುವ ನ್ಯಾಷನಲ್ ಅಕಾಡೆಮಿಗೆ ಜಂಟಿ ಡೈರೆಕ್ಟರ್ ಆಗಿ ಹೋದೆ. ಮಸ್ಸೂರಿಗೆ ಬರುವ ಮುಂಚೆ ನಮ್ಮ ಕೊನೆಯ ಮಗಳು ತೀರಿಕೊಂಡಿದ್ದಳು. ಇದನ್ನು ನಾನು ಸ್ವಾಮಿಗಳಿಗೆ ತಿಳಿಸಿರಲಿಲ್ಲ. ಒಂದು ದಿನ ಏಕಾಏಕಿ ಪ್ರಧಾನಿ ಇಂದಿರಾ ಗಾಂಧಿಯವರ ಜಂಟಿ ಕಾರ್ಯದರ್ಶಿ ಶ್ರೀ ಬಿಷನ್ ಟಂಡನ್ ಫೋನು ಮಾಡಿ, ಪ್ರತಿವರ್ಷ ಐ.ಎ.ಎಸ್. ಅಭ್ಯರ್ಥಿಗಳನ್ನು ಉದ್ದೇಶಿಸಿ ಮಾತನಾಡಲು ಸ್ವಾಮಿ ರಂಗನಾಥಾನಂದರನ್ನು ಕರೆಯುವ ಸಂಪ್ರದಾಯವನ್ನು ಅಕಾಡೆಮಿ ಯಾಕೆ ನಿಲ್ಲಿಸಿದೆ ಎಂದು ವಿಚಾರಿಸಿದರು. ಡೈರೆಕ್ಟರ್‌ರವರು ದೆಹಲಿಗೆ ವರ್ಗವಾಗಿ ಹೋಗಿದ್ದಾರೆ. ಸ್ವಾಮಿಜಿಯವರ ಉಪನ್ಯಾಸವನ್ನು ಅವರು ಯಾಕೆ ನಿಲ್ಲಿಸಿದರು ಎಂದು ವಿಚಾರಿಸಿ ತಿಳಿಸುತ್ತೇನೆ, ಆದರೆ ಉಪನ್ಯಾಸ ಮಾಡಲು ಸ್ವಾಮಿಗಳಿಗೆ ಸ್ವಾಗತವಿದೆ ಎಂದು ತಿಳಿಸಿದೆ. ಆಮೇಲೆ ನಾನು ಕೋಲ್ಕತ್ತದಲ್ಲಿದ್ದ ಸ್ವಾಮೀಜಿಗಳನ್ನು ಸಂಪರ್ಕಿಸಿದೆ. ಆ ವರ್ಷ ಮೂರು ಸಾರಿ ಸ್ವಾಮಿಗಳು ಬಂದು ಅಭ್ಯರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ವ್ಯಕ್ತಿಗತವಾಗಿ ವಿಚಾರ ವಿನಿಮಯ ನಡೆಸಿದರು. ಆಫೀಸರ್ಸ್ ಪರಂಪರೆಯವರಿಗೆ ಸ್ಫೂರ್ತಿದಾಯಕವಾಗಿದ್ದರು. ಮಸೂರಿಗೆ ಬಂದಾಗ, ನಮ್ಮ ಮನೆಗೆ ಅವರನ್ನು ಆಹ್ವಾನಿಸುತ್ತಿದ್ದೆ. ಆಗ ಕೆಲವು ಅಭ್ಯರ್ಥಿಗಳನ್ನು ಕರೆಯುತ್ತಿದ್ದೆ. ಇಂತಹ ಒಂದು ಸಮಾವೇಶದಲ್ಲಿ ನನ್ನ ಕೊನೆಯ ಮಗಳು ತೀರಿಹೋದ ವಿಚಾರ ಗೊತ್ತಾಯಿತು. ನನ್ನ ಹೆಂಡತಿ ದುಃಖದ ಆಘಾತದಿಂದ ಇನ್ನೂ ಚೇತರಿಸಿಕೊಂಡಿರಲಿಲ್ಲ. ಅವಳಿಗೆ ಸ್ವಾಮಿಗಳು ಬಹಳ ಪ್ರೀತಿಪೂರ್ವಕವಾಗಿ ಸಾಂತ್ವನ ಹೇಳಿದರು. ಹೀಗೆ ಗೃಹಸ್ಥರ ಸಾಂಸಾರಿಕ ದುಃಖ ಮತ್ತು ಸಮಸ್ಯೆಗಳಿಗೆ ಸ್ವಾಮಿಜಿ ಸ್ಪಂದಿಸುತ್ತಿದ್ದರು. ಸ್ವಾಮಿಗಳು ದಯಾವಂತರು ಮತ್ತು ಪರಹಿತಚಿಂತಕರು ಆಗಿದ್ದರು.

ಮಸೂರಿಯಿಂದ ನಾನು ದೆಹಲಿ ಪ್ರಶಾಸನದ ಮುಖ್ಯಕಾರ್ಯದರ್ಶಿಯಾಗಿ ವಾಪಸ್ಸು ಬಂದೆ. ಸ್ವಾಮಿಗಳು ದೆಹಲಿಗೆ ಬಂದಾಗ ಭೇಟಿಯಾಗುತ್ತಿದ್ದೆ. ಆಗ ಅವರು ಮಿಷನ್ ಮತ್ತು ಇತರ ಸಂಸ್ಥೆಗಳಲ್ಲಿ ಭಾಷಣಮಾಡುತ್ತಿದ್ದರು. ಸ್ವಾಮಿಗಳು ನೇರವಾಗಿ, ಖಂಡತುಂಡವಾಗಿ ಮಾತನಾಡುತ್ತಿದ್ದರು. ಅಗತ್ಯವೆನಿಸಿದರೆ ಅವರಿಗೆ ಸರಿಬರದ ಸಮಾಜದ ಓರೆಕೋರೆಗಳನ್ನು ಖಂಡಿಸುತ್ತಿದ್ದರು. ಇಷ್ಟಾಗಿಯೂ, ನಿಗರ್ವಿ ಸ್ವಾಮಿಗಳಿಗೆ ಸಿಗುತ್ತಿದ್ದ ಗೌರವ, ಪ್ರೀತಿ ಮತ್ತು ವಿಶ್ವಾಸಗಳನ್ನು ನೋಡಿ ಆಶ್ಚರ್ಯವಾಗುತ್ತದೆ. ಅವರ ಜೊತೆ ಸುದೀರ್ಘ ಸಂಭಾಷಣೆ ಮಾಡಿದ ಸಂದರ್ಭದಲ್ಲಿ ಯಾರ ಬಗ್ಗೆಯೂ ಅವರಿಗೆ ದ್ವೇಷ ಅಥವಾ ಅಹಿತಕರ ಭಾವನೆಗಳು ಇರಲಿಲ್ಲವೆಂದು ನನಗೆ ಗೊತ್ತಾಯಿತು.

ದೆಹಲಿಯ 'ಇಂಡಿಯಾ ಇನ್‌ವೆಸ್ಟ್‌ಮೆಂಟ್ ಸೆಂಟರ್' ಸಂಸ್ಥೆಯ ಕಾರ್ಯನಿರ್ವಾಹಕ ಡೈರೆಕ್ಟರ್ ಆಗಿ ನೇಮಕಗೊಂಡ ಮೇಲೆ ನಾನು ಕೋಲ್ಕತ್ತಕ್ಕೆ ಹೋಗಿ ಸಾರಗಾಚಿ ಆಶ್ರಮದಲ್ಲಿ ತಂಗಿದ್ದ ಸ್ವಾಮಿಗಳನ್ನು ಭೇಟಿಮಾಡಿದೆ. ಆಗ ಅವರು ಕೊಲಂಬೋನಿಂದ ವಾಪಸ್ಸು ಬಂದು ಹೈದರಾಬಾದಿನ ಆಶ್ರಮದ ಅಧ್ಯಕ್ಷರಾಗಿ ಹೋಗುವವರಿದ್ದರು. ಯಾವಾಗಲೂ ಉತ್ಸಾಹ ಮತ್ತು ಶಕ್ತಿಭರಿತರಾಗಿದ್ದ ಅವರು ಈಗ ಕಾಯಿಲೆಯಾಗಿ ಹಾಸಿಗೆಯಲ್ಲಿ ಮಲಗಿರುವುದನ್ನು

ನೋಡಿ ನನಗೆ ದಿಗ್ಭ್ರಮೆಯಾಯಿತು. ತಮಗೆ ಹೊಟ್ಟೆನೋವು, ಗಂಟಲಿನ ತ್ರಾಸ ಮತ್ತು ಇನ್ನಿತರ ತೊಂದರೆಗಳು ಕೊಲಂಬೋದಲ್ಲಿ ಏಕದಂ ಬಾಧಿಸಲು ಶುರುವಾದುವು ಎಂದು ಅವರು ತಿಳಿಸಿದರು. ಅದೃಷ್ಟವಶಾತ್ ಅವರು ಬೇಗನೆ ಚೇತರಿಸಿಕೊಂಡು ತಮ್ಮ ಮುಂಚಿನ ಸಾಮರ್ಥ್ಯ, ಉತ್ಸಾಹ ಮತ್ತು ಜೀವಂತಿಕೆಯನ್ನು ಪಡೆದುಕೊಂಡರು. ಕೊಲಂಬೋ ಭೇಟಿಯಿಂದ ಅವರ ಆರೋಗ್ಯದ ಮೇಲೆ ದುಷ್ಪರಿಣಾಮವಾಗಿದ್ದು ಇನ್ನು ಮುಂದೆ ಆರೋಗ್ಯದ ಬಗ್ಗೆ ಜಾಗರೂಕರಾಗಿರಬೇಕೆಂದು ಮತ್ತು ಚಟುವಟಿಕೆಗಳನ್ನು ಸ್ವಲ್ಪ ಕಡಿಮೆ ಮಾಡಬೇಕೆಂದು ಡಾಕ್ಟರುಗಳು ಸಲಹೆ ಮಾಡಿದರು. ಮುಂದೆ ನಾನು ನೋಡಿದ ಹಾಗೆ ಅವರು ಆಗಾಗ ಆರೋಗ್ಯ ತಪಾಸಣೆ ಮಾಡಿಕೊಳ್ಳುತ್ತಿದ್ದರು. ಆದರೆ ಅವರ ಕಾರ್ಯಚಟುವಟಿಕೆಗಳು ಕಮ್ಮಿಯಾಗಲಿಲ್ಲ.

ನಾನು ಹೈದರಾಬಾದಿಗೆ ಹೋದಾಗ, ಸ್ವಾಮಿಗಳ ಭೇಟಿಮಾಡುತ್ತಿದ್ದೆ. ಆಗ ಅವರು ಅಲ್ಲಿನ ಹಳೆ ಆಶ್ರಮವನ್ನು ನೋಡಿಕೊಂಡು, ಹೊಸ ಆಶ್ರಮದ ಸ್ಥಾಪನೆ ಸಲುವಾಗಿ ಕೆಲಸಮಾಡುತ್ತಿದ್ದರು. ಮುಂಚಿನ ಹಾಗೆ ಉತ್ಸಾಹ ಮತ್ತು ಸಾಮರ್ಥ್ಯದಿಂದ ಆಶ್ರಮಕ್ಕೆ ಬರಲು ಹೇಳಿ, ಅಲ್ಲಿಂದ ಹೊಸ ಆಶ್ರಮ ನಿರ್ಮಾಣವಾಗುತ್ತಿರುವ ಜಾಗಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಹೊಸ ಕೇಂದ್ರದ ಬಗ್ಗೆ ಅವರಿಗಿದ್ದ ಸಮಗ್ರ ರೂಪರೇಷೆಯನ್ನು ನೋಡಿ ನನಗೆ ಆಶ್ಚರ್ಯವಾಯಿತು. ಸ್ವಾಮಿಗಳ ಕಲ್ಪನಾಶಕ್ತಿ ಮತ್ತು ಸಮರ್ಪಣ ಭಾವನೆಯಿಂದ ನಿರ್ಮಿತವಾದ ಒಂದು ಭವ್ಯ ಕಟ್ಟಡವನ್ನು ಈಗ ಹೈದರಾಬಾದಿನಲ್ಲಿ ನೋಡಬಹುದು. ಜನಹಿತಪರ ಕಾರ್ಯಕ್ರಮ ಗಳಿಂದ ಆಶ್ರಮ ಬಹಳ ಜನಪ್ರಿಯವಾಗಿದೆ. ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಅವಕಾಶಗಳು ಕೂಡ ಇವೆ. ಅವರು ಬೃಹತ್ ಸಂಸ್ಥಾ ನಿರ್ಮಾಪಕರು ಎಂದು ನಾನು ಭಾವಿಸುತ್ತೇನೆ. ರಾಮಕೃಷ್ಣ ಮಿಷನ್ ಮತ್ತು ಅದರ ಅಂಗಸಂಸ್ಥೆಗಳ ಮೂಲಕ ತಮ್ಮ ಆದರ್ಶಗುರು ಸ್ವಾಮಿ ವಿವೇಕಾನಂದರಂತೆ ಸ್ವಾಮಿ ರಂಗನಾಥಾನಂದರು ವ್ಯಕ್ತಿ ವಿಕಸನ, ಚಾರಿತ್ರ್ಯ ನಿರ್ಮಾಣ, ಭವ್ಯ ಭಾರತ ನಿರ್ಮಾಣ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಇದ್ದರು. ಮಿಷನ್ ಮೂಲಕ ಅವುಗಳ ಅಪಾರ ಸಾಧ್ಯತೆಗಳನ್ನು ಅವರು ಕಂಡಿದ್ದರು.

ಮುಂದೆ ಭಾರತ ಸರ್ಕಾರದ ಶಿಕ್ಷಣ ಕಾರ್ಯದರ್ಶಿ, ಗೃಹಕಾರ್ಯದರ್ಶಿ ಮುಂತಾದ ಹುದ್ದೆಗಳಲ್ಲಿ ನಾನಿದ್ದಾಗ ಸ್ವಾಮಿಗಳ ಸಂಪರ್ಕದಲ್ಲಿರುವ ಅದೃಷ್ಟವಿತ್ತು. ನಾನು ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಹುದ್ದೆಯಲ್ಲಿ ಇದ್ದಾಗ ಒಂದು ದಿನ ಸ್ವಾಮಿಜಿ ಟೆಲಿಫೋನು ಮಾಡಿ ಬಿಹಾರಿನ ಛಾತ್ರದಲ್ಲಿ ಮಿಷನ್‌ನ ಕೇಂದ್ರ ಸದ್ಯದಲ್ಲಿ ಪ್ರಾರಂಭವಾಗುತ್ತದೆ. ಅದು ಪರಮಹಂಸರ ನೇರ ಶಿಷ್ಯ ಸ್ವಾಮಿ ಅದ್ಭುತಾನಂದರ ಊರು. ಜಾಗವನ್ನು ದಾನಮಾಡಿದವರಿಗೆ ಇನ್‌ಕಮ್ ಟ್ಯಾಕ್ಸ್ ಸರ್ಟಿಫಿಕೇಟ್ ಸಿಗದೆ ತೊಂದರೆಯಾಗಿದೆ. ಬೋರ್ಡ್ ಆಫ್ ಡೈರೆಕ್ಟ್ ಟ್ಯಾಕ್ಸ್‌ನ ಚೇರಮನ್‌ರನ್ನು ಸಂಪರ್ಕಿಸಿ, ಉಂಟಾಗಿರುವ ತೊಂದರೆ ಪರಿಹಾರ ಮಾಡಲು ಸಾಧ್ಯವೇ ಎಂದು ನನ್ನನ್ನು ವಿಚಾರಿಸಿದರು. ಅದೃಷ್ಟವಶಾತ್, ಚೇರ್‌ಮನ್ ನನಗೆ ಪರಿಚಿತರಾಗಿದ್ದರು. ಅವರ ಹತ್ತಿರ ಪ್ರಸ್ತಾಪ ಮಾಡಿದಾಗ, ಆದಷ್ಟು ಬೇಗನೆ ತೊಂದರೆ ನಿವಾರಣೆ ಮಾಡುತ್ತೇವೆಂದು ಸ್ವಾಮಿಗಳಿಗೆ ಭರವಸೆ ಕೊಡಿ ಎಂದು ಹೇಳಿದರು. ಆ ಪ್ರಕಾರ ಬೇಗನೆ ತೊಂದರೆ ನಿವಾರಣೆಯಾಯಿತು. ಹೀಗೆ ಎಲ್ಲರಿಂದಲೂ ಸ್ವಾಮಿಜಿ ಗೌರವಪಡೆಯುತ್ತಿದ್ದರು. ಪ್ರತಿ ವಿಷಯದಲ್ಲಿ ಅವರು ಸೂಕ್ಷ್ಮ ವಿವರಗಳನ್ನು ಗಮನಿಸುತ್ತಿದ್ದರು. ಮಿಷನ್‌ನ ಸ್ವಾಮಿಗಳು ಮತ್ತು ಬ್ರಹ್ಮಚಾರಿಗಳು ತಮ್ಮ ಸಮಸ್ಯೆಗಳ ಬಗ್ಗೆ ಅವರ ಹತ್ತಿರ ಯಾವಾಗಲೂ ಹೋಗುತ್ತಿದ್ದರು. ಅವರಿಗೆಲ್ಲಾ ಸೂಕ್ತ ಸಲಹೆ ಕೊಡುತ್ತಿದ್ದರು. ನಾನು ರಾಜ್ಯಸಭಾ ಸದಸ್ಯನಾಗಿ ಆಯ್ಕೆಯಾದಾಗ, ಸ್ವಾಮಿಗಳು ಆಶೀರ್ವಾದ ಮತ್ತು ಶುಭಾಶಯಗಳನ್ನು ಕಳುಹಿಸಿ ಜನರ ಸೇವೆಯಲ್ಲಿ ಚೆನ್ನಾಗಿ ತೊಡಗಿಕೊಳ್ಳಲು ಪ್ರೋತ್ಸಾಹಿಸಿದರು. ಅವರ ನಿರೀಕ್ಷೆಗೆ ಆಶಾಭಂಗವನ್ನು ನಾನು ಉಂಟುಮಾಡಲಿಲ್ಲ.

೨೦೦೨ನೆಯ ಇಸವಿ ಆಗಸ್ಟ್ ತಿಂಗಳಲ್ಲಿ ನಾನು ಕರ್ನಾಟಕ ರಾಜ್ಯಪಾಲನಾಗಿ ಬೆಂಗಳೂರಿಗೆ ಹೋದೆ. ನಾನು ಅಲ್ಲಿನ ಮಿಷನ್ ಕೇಂದ್ರಕ್ಕೆ ಹೋದಾಗ, ಅಧ್ಯಕ್ಷರಾದ ಸ್ವಾಮಿ ಹರ್ಷಾನಂದರು, ತಮಗೆ ಸ್ವಾಮಿ

ರಂಗನಾಥಾನಂದರಿಂದ ಪತ್ರ ಬಂದಿದ್ದು, ಅದರಲ್ಲಿ ಮಿಷನ್ ಜತೆ ನನಗೆ ೫೦ ವರ್ಷಕ್ಕಿಂತ ಹೆಚ್ಚಾಗಿ ಸಂಪರ್ಕವಿರುವ ವಿಚಾರವನ್ನು ಪ್ರಸ್ತಾವಿಸಿದ್ದಾರೆ ಎಂದು ತಿಳಿಸಿದರು.

ನನ್ನ ರಾಜ್ಯಪಾಲ ನೇಮಕಾತಿ ಬಗ್ಗೆ ಅವರಿಗೆ ಬರೆದಿರಲಿಲ್ಲ. ಬಹುಶಃ ಸ್ವಾಮಿಗಳು ವೃತ್ತಪತ್ರಿಕೆಯನ್ನು ನೋಡಿ ತಿಳಿದುಕೊಂಡಿದ್ದರು. ನಮ್ಮ ಸುಯೋಗವೆಂಬಂತೆ ನಾನು ಕರ್ನಾಟಕದಲ್ಲಿದ್ದಾಗ ಮಹಾಸಂಘದ ಅಧ್ಯಕ್ಷರಾಗಿ ಸ್ವಾಮಿಗಳು ಬೆಂಗಳೂರು ಮತ್ತು ಮೈಸೂರಿಗೆ ಭೇಟಿಕೊಟ್ಟರು. ಹಿಂದೆ ಮೈಸೂರಿನ ಕೇಂದ್ರದಲ್ಲಿ ಯುವ ಬ್ರಹ್ಮಚಾರಿ ಮತ್ತು ಸಂನ್ಯಾಸಿಯಾಗಿ ಸ್ವಾಮಿಗಳು ತರಬೇತಿ ಪಡೆದು ರೂಪುಗೊಂಡಿದ್ದರು. ಆ ಕಾರಣ ಮೈಸೂರಿನ ಬಗ್ಗೆ ಅವರಿಗೆ ವಿಶೇಷ ಪ್ರೀತಿ. ಮೈಸೂರಿನಲ್ಲಿ ತರಬೇತಿ ಪಡೆದ ಬಗ್ಗೆ ಅಲ್ಲಿನ ಜನರ ಬಗ್ಗೆ ಮತ್ತು ಸುತ್ತಮುತ್ತಲಿನ ನೋಡಿದ ಪ್ರದೇಶಗಳ ಬಗ್ಗೆ ಸ್ವಾಮಿಜಿ ರಸವತ್ತಾಗಿ ಹೇಳುತ್ತಿದ್ದರು. ಕರ್ನಾಟಕದ ಎರಡನೇ ಭೇಟಿಯಲ್ಲಿ ಇನ್ನೊಮ್ಮೆ ಮೈಸೂರಿಗೆ ಭೇಟಿಕೊಡಬೇಕೆಂದು ಅವರು ಆಸೆಪಟ್ಟಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ. ಬೆಂಗಳೂರಿನ ವಾಸ್ತವ್ಯದಲ್ಲಿ ನನ್ನ ಸ್ವಂತ ಪ್ರಯೋಜನಕ್ಕಾಗಿ ಅವರ ಸಮಯವನ್ನು ಬಹಳಷ್ಟು ತೆಗೆದುಕೊಂಡೆ. ಪ್ರತಿ ಭೇಟಿಯಲ್ಲಿ ಪ್ರತಿಭಾಶಕ್ತಿಯ ಹೊಳಪನ್ನು ಅನುಭವಿಸಬಹುದಿತ್ತು. ಸಾರ್ವಜನಿಕ ಜೀವನದಲ್ಲಿ ನೈತಿಕ ಮೌಲ್ಯಗಳು ಇಳಿಮುಖವಾಗುತ್ತಿರುವ ಬಗ್ಗೆ ಸ್ವಾಮಿಗಳ ಕಳವಳ ಒಂದು ಘಟನೆಯಿಂದ ವಿದಿತವಾಗುತ್ತದೆ. ಹೋದ ಸಾರ್ವತ್ರಿಕ ಚುನಾವಣೆಯಲ್ಲಿ ಆರಿಸಿಬಂದ ಸಂಸದರಿಗೆ ತಮ್ಮ ಭಾಷಣದ ಒಂದು ಪುಸ್ತಕದ ಪ್ರತಿಯನ್ನು ಕಳಿಸಬೇಕೆಂದು ಇಷ್ಟಪಟ್ಟರು. ಲೋಕಸಭೆಯ ಪ್ರಧಾನಕಾರ್ಯದರ್ಶಿಯ ಮೂಲಕ ಎಲ್ಲರಿಗೂ ಹಂಚುವ ವ್ಯವಸ್ಥೆಯನ್ನು ಮಾಡಲು ನನಗೆ ಹೇಳಿದರು. ಆ ಪ್ರಕಾರ ನಾನು ಮಾಡಿಕೊಟ್ಟೆ. ಅದೇ ರೀತಿ ಕರ್ನಾಟಕದ ಶಾಸಕರಿಗೆ ಕನ್ನಡ ಪ್ರತಿಯನ್ನು ಕಳುಹಿಸಲು ಇಚ್ಛೆಪಟ್ಟರು. ಅವಕಾಶ ಸಿಕ್ಕಿದಾಗ ಇಂತಹ ಜಾಗೃತಿ ಕಾರ್ಯಗಳನ್ನು ಸ್ವಾಮಿಜಿಯವರು ಮಾಡುತ್ತಿದ್ದರು. ವಿಶ್ವವಿದ್ಯಾನಿಲಯ ಪ್ರಶಿಕ್ಷಣ ಕೇಂದ್ರ ಮತ್ತು ಇತರ ವಿವಿಧ ಸಂಸ್ಥೆಗಳಲ್ಲಿ ನೈತಿಕ ಮೌಲ್ಯಗಳ ಬಗ್ಗೆ ನೂರಾರು ಪ್ರವಚನಗಳನ್ನು ಮಾಡಿದರು. ನಾನು 'ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್' ಡೈರೆಕ್ಟರ್ ಆಗಿ ಇದ್ದಾಗ ಅಲ್ಲಿ ಸ್ವಾಮಿಗಳು ಭಾಷಣ ಮಾಡಿದರು. ನನ್ನ ಕೋರಿಕೆಯ ಮೇಲೆ ಪೌರತನ, ಸಾರ್ವಜನಿಕ ಆಡಳಿತ, ನೈತಿಕ ಮೌಲ್ಯಗಳು ಮುಂತಾದ ವಿಚಾರಗಳ ಬಗ್ಗೆ ಸ್ವಾಮಿಜಿಯವರು ಬರೆದ ಲೇಖನ ಮತ್ತು ಭಾಷಣಗಳನ್ನು ಒಂದು ಪುಸ್ತಕ ರೂಪದಲ್ಲಿ ನಮ್ಮ ಸಂಸ್ಥೆಯ ವತಿಯಿಂದ ಪ್ರಕಟಿಸಲು ಒಪ್ಪಿಗೆ ಕೊಟ್ಟರು. ಇದನ್ನು ಪ್ರಜ್ಞಾವಂತರು ಬಹಳವಾಗಿ ಸ್ವಾಗತಿಸಿದರು.

ನನ್ನ ಹಾಗೆ ಸ್ವಾಮಿಗಳಿಗೆ ಸಾವಿರಾರು ಅಭಿಮಾನಿಗಳಿದ್ದರು. ಕೆಲ ಸಂದರ್ಭಗಳಲ್ಲಿ ಜನಹಿತ ಕಾರ್ಯಗಳಿಗೆ ಹೇಗೆ ವ್ಯಕ್ತಿಗಳು ಸಹಾಯವಾಗಬಹುದೆಂಬುದು ಸ್ವಾಮಿಜಿಗೆ ಗೊತ್ತಿತ್ತು. ಜನರ ಮನೋಭಾವದ ಬಗ್ಗೆ ಅವರಿಗೆ ನಿಜವಾದ ಅಂತರ್‌ದೃಷ್ಟಿ ಇತ್ತು. ವ್ಯಕ್ತಿ ವಿಕಸನ ನಿರ್ವಹಣೆ ಬಗ್ಗೆ ವಿಶೇಷ ಕೌಶಲವಿತ್ತು. ಅವರ ಸಂಘಟನಾ ಶಕ್ತಿ ನಿಜವಾಗಿಯೂ ಅಲೌಕಿಕವಾಗಿತ್ತು. ಅಧೈರ್ಯಗೊಳಿಸುವ ಎಷ್ಟೋ ಚಿಕ್ಕ ಅಥವಾ ದೊಡ್ಡ ರಾಷ್ಟ್ರೀಯ ವಿಚಾರಗಳ ಬಗ್ಗೆ ಸ್ವಾಮಿಗಳು ಆಶಾಜನಕವಾಗಿ ಮಾತನಾಡಿ, ಮನದಟ್ಟು ಮಾಡಿಕೊಡುತ್ತಿದ್ದರು.

ದೆಹಲಿಯಲ್ಲಿ ನಾನು ಕೇಂದ್ರದ ಗೃಹಕಾರ್ಯದರ್ಶಿ, ನಿಯಂತ್ರಕ ಮತ್ತು ಪ್ರಧಾನ ಲೆಕ್ಕಪತ್ರ ಪರೀಕ್ಷಕ ಹಾಗೂ ರಾಜ್ಯಸಭಾ ಸದಸ್ಯನಾಗಿದ್ದಾಗ ಕೆಲವೊಮ್ಮೆ ನನ್ನ ಹತ್ತಿರ ಮಾತನಾಡಿ ಕೆಲವು ವಿಚಾರಗಳಲ್ಲಿ ತಮ್ಮ ನಿರ್ದಿಷ್ಟ ಅಭಿಪ್ರಾಯಗಳನ್ನು ತಿಳಿಸಿ ಅವುಗಳನ್ನು ಪ್ರಧಾನಿ, ಇತರ ಮಂತ್ರಿಗಳಿಗೆ ಹಾಗೂ ಪ್ರಭಾವಿ ರಾಜಕೀಯ ವ್ಯಕ್ತಿಗಳಿಗೆ ತಿಳಿಸಲು ನನಗೆ ಹೇಳುತ್ತಿದ್ದರು. ಅವರು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ರಾಜಕೀಯದಲ್ಲಿ ಆಸಕ್ತಿ ವಹಿಸುತ್ತಿರಲಿಲ್ಲ. ಆದರೆ ರಾಷ್ಟ್ರದ ಸಮಸ್ಯೆ ಬಗ್ಗೆ ಪರಿಣಾಮಕಾರಿಯಾಗಿ ಅಭಿಪ್ರಾಯಗಳನ್ನು ವ್ಯಕ್ತಮಾಡುತ್ತಿದ್ದರು. ಶ್ರೀಮತಿ ಇಂದಿರಾ ಗಾಂಧಿಯವರಿಗೆ ಸ್ವಾಮಿಗಳ ಮೇಲೆ ಅಪಾರ ಗೌರವ. ಅವರನ್ನು ಸದಾ ಭೇಟಿಮಾಡಲು ಇಷ್ಟಪಡುತ್ತಿದ್ದರು. ಕೆಲವೊಮ್ಮೆ ಸ್ವಾಮಿಗಳನ್ನು ನೋಡಲು ಖುದ್ದಾಗಿ ಬರುತ್ತಿದ್ದರು. ಶ್ರೀ ಅಟಲ್ ಬಿಹಾರಿ

ವಾಜಪೇಯಿಯವರು ಪ್ರಧಾನಿಯಾಗಿದ್ದಾಗ, ಸ್ವಾಮಿಗಳ ಪ್ರವಚನವನ್ನು ಕೇಳಲು ಮಿಷನ್ ಕೇಂದ್ರ ಮತ್ತು ಇತರ ಸ್ಥಳಗಳಿಗೆ ಹೋಗಿದ್ದನ್ನು ನಾನು ನೋಡಿದ್ದೇನೆ. ಮಹಿಳೆಯರ, ಮಕ್ಕಳ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ, ಅವಕಾಶ ವಂಚಿತ ವರ್ಗಗಳ ಮತ್ತು ದುರ್ಬಲ ವರ್ಗದವರ ಸಮಸ್ಯೆಗಳ ಬಗ್ಗೆ ಪ್ರಧಾನಿಗಳ ಹತ್ತಿರ ಸ್ವಾಮಿಜಿ ಬಹಳ ಸಮರ್ಥವಾಗಿ ಮಾತನಾಡುತ್ತಿದ್ದರು. ಯಾವುದೇ ವ್ಯಕ್ತಿಯ ಉನ್ನತ ಪದವಿಯಿಂದ ಅವರು ಅಧೀರರಾಗಲಿಲ್ಲ. ಚಾರಿತ್ರ್ಯ ಮತ್ತು ಜನಹಿತ ಬಗ್ಗೆ ಮಾತ್ರ ಅವರಿಗೆ ಕಾಳಜಿ ಇತ್ತು.

ತಮ್ಮ ಆದರ್ಶದ ಸ್ವಾಮಿ ವಿವೇಕಾನಂದರ ಅಚ್ಚೊತ್ತಿನಲ್ಲಿ ಸ್ವಾಮಿ ರಂಗನಾಥಾನಂದರು ರೂಪಗೊಂಡರು. ಪ್ರಾಯೋಗಿಕ ಆಧ್ಯಾತ್ಮ ಮತ್ತು ಪ್ರಾಯೋಗಿಕ ವೇದಾಂತ ಅವರ ಪ್ರವಚನಗಳಲ್ಲಿ ಸರ್ವೇಸಾಮಾನ್ಯವಾಗಿರುತ್ತಿತ್ತು. ಆಧ್ಯಾತ್ಮಿಕ ಒತ್ತಾಸೆಯಷ್ಟೇ ಸಾಮಾಜಿಕ ಸಮಸ್ಯೆಗಳಿಗೆ ತೀವ್ರ ಸಂವೇದಿಯಾಗಿದ್ದರು. ೭೦–೮೦ ದಶಕಗಳಲ್ಲಿ ಅವರು ದೆಹಲಿ ರಾಮಕೃಷ್ಣ ಮಿಷನ್ ಅಧ್ಯಕ್ಷರಾದ ಸ್ವಾಮಿ ಬುಧಾನಂದರ ಮೂಲಕ ಜಾಗ್ರತ ಪ್ರಜ್ಞಾವಂತ ಪೌರತನ ಉಪನ್ಯಾಸ ಸರಣಿಯನ್ನು ಆಯೋಜಿಸಿ ಅದರ ಪ್ರಾಸ್ತಾವಿಕ ಭಾಷಣವನ್ನು ಸ್ವಾಮಿಗಳು ಮಾಡಿದರು. ಶ್ರೀ ಕೆ.ಆರ್.ನಾರಾಯಣನ್ ಮುಂತಾದ ಪ್ರತಿಷ್ಠಿತ ವ್ಯಕ್ತಿಗಳ ಹೆಸರು ಕೊಟ್ಟು ಅವರಿಂದ ಉಪನ್ಯಾಸಗಳನ್ನು ಮಾಡಿಸಿದರು. ನನ್ನನ್ನೂ ಉಪನ್ಯಾಸ ಮಾಡಲು ಆಹ್ವಾನಿಸಿದರು. ಈ ಎಲ್ಲಾ ಉಪನ್ಯಾಸಗಳು ಇಂಗ್ಲೀಷ್ ಭಾಷೆಯಲ್ಲಿ ಪ್ರಕಟವಾಗಿ ಜನರ ಮೆಚ್ಚುಗೆ ಪಡೆದುವು. 'ಜಾಗೃತ ಪೌರತನ' ಹಿಂದಿ ಮತ್ತು ಕೆಲವು ಪ್ರಾದೇಶಿಕ ಭಾಷೆಗಳಿಗೆ ಅನುವಾದವಾಯಿತು. ಹೀಗೆ ದೇಶ ಮತ್ತು ಯುವ ಜನಾಂಗದ ಭವಿಷ್ಯದ ಬಗ್ಗೆ ಅವರಿಗೆ ಕಾಳಜಿ ಇತ್ತು.

ನೈತಿಕ ಮೌಲ್ಯಗಳ ಜತೆಗೆ ಇನ್ನೊಂದು ಸಾಮಾಜಿಕ ವಿಚಾರದ ಬಗ್ಗೆ ಸ್ವಾಮಿಗಳಿಗೆ ಬಹಳ ಕಾಳಜಿ ಇತ್ತು. ಅದು ರಾಷ್ಟ್ರಿಯ ಸಂಘಟನೆ ಮತ್ತು ಭಾರತೀಯ ಸಂಸ್ಕೃತಿ ಆಧ್ಯಾತ್ಮಿಕ ಪರಂಪರೆ ಬಗ್ಗೆ ಗೌರವ ಸಂವರ್ಧನೆ. ಯಾವುದೇ ವಿಚಾರದ ಬಗ್ಗೆ ನೇರ ಮತ್ತು ಮುಕ್ತವಾಗಿ ಚರ್ಚಿಸಲು ಅವಕಾಶಗಳನ್ನು ಕೊಡುತ್ತಿದ್ದರು. ತಮ್ಮ ಅಭಿಪ್ರಾಯಗಳನ್ನು ನನ್ನ ಮೇಲೆ ಎಂದೂ ಹೇರಲಿಲ್ಲ. ನಿಸ್ವಾರ್ಥತೆ ಮತ್ತು ವಿದ್ವತ್‌ಪೂರ್ಣತೆಯಿಂದ ಕೂಡಿದ ಅವರ ಪ್ರೇರಿಸುವ ಗುಣ ಅವರ ವಿಚಾರ ಧಾರೆಯನ್ನು ಮನವರಿಕೆಮಾಡಿಕೊಡುತ್ತಿತ್ತು. ರಾಮಕೃಷ್ಣ ಮಠ ಮತ್ತು ಮಿಷನ್‌ನ ಉತ್ಕೃಷ್ಟ ಕೃತಿಗಳು ಸಮಾಜದ ಎಲ್ಲಾ ವರ್ಗಗಳಿಗೆ ಮುಖ್ಯವಾಗಿ ಮಹಿಳೆಯರಿಗೆ ಮತ್ತು ಯುವಜನರಿಗೆ ತಲುಪಿ, ಅವರಿಗೆ ಅವುಗಳ ಪೂರ್ಣ ದರ್ಶನವಾಗಬೇಕೆಂದು ಸ್ವಾಮಿಗಳು ಉತ್ಸುಕತೆ ತೋರುತ್ತಿದ್ದರು..

ತಮ್ಮ ವಿಪುಲ ಸಾಹಿತ್ಯ ಮತ್ತು ಆಧ್ಯಾತ್ಮಿಕ ಬರವಣಿಗೆಯ ಮೂಲಕ ಮಾತ್ರವಲ್ಲದೆ, ಜೀವಿತ ಕಾಲದಲ್ಲಿ ನಡೆದ ಪ್ರೀತಿಯ ಮತ್ತು ಉದಾತ್ತ ಒಡನಾಟದ ನೆನಪಿನ ಮೂಲಕ ತಮ್ಮ ಶಿಷ್ಯರ, ಭಕ್ತರ, ಅಭಿಮಾನಿಗಳ ಪಾಲಿಗೆ ಸ್ವಾಮಿ ರಂಗನಾಥಾನಂದರು ಜೀವಂತವಾಗಿ ಇರುತ್ತಾರೆ. ಆ ದೇದೀಪ್ಯಮಾನ ಆತ್ಮದ ಪವಿತ್ರ ಸ್ಮೃತಿಗೆ ನಾನು ಗೌರವ ಸಲ್ಲಿಸುತ್ತೇನೆ.

* * * *

# ೫೧. ಮರೆಯಲಾಗದ ಸ್ವಾಮಿ ರಂಗನಾಥಾನಂದ

–ನಿತೀಶ್ ಸೇನ್‌ಗುಪ್ತ*

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಬಳಿಕ, ಸ್ವಾಮಿ ರಂಗನಾಥಾನಂದರು ವೇದಾಂತ ತತ್ವದ ಮಹಾನ್ ಪ್ರತಿಪಾದಕ ಎನಿಸಿದ್ದರು. ಅವರ ಉಪನ್ಯಾಸಗಳು ಮತ್ತು ಬರವಣಿಗೆಗಳು ದೇಶವಿದೇಶಗಳಲ್ಲಿ ಜಾಗೃತಿಯನ್ನು ಉಂಟುಮಾಡಿದ್ದುವು. ಅವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಮತ್ತು ಮುಂದೆಯೂ ಅವರ ಮಾತು ಮತ್ತು ಕೃತಿಗಳು ಆಧ್ಯಾತ್ಮ ಆಸಕ್ತರಿಗೆ ಮಾರ್ಗದರ್ಶನವಾಗಲಿವೆ. ಉಪನಿಷತ್ತಿನ ವಿಚಾರಗಳನ್ನು ಆಧುನಿಕ ವಿಜ್ಞಾನ ಜತೆ ಸಮನ್ವಯ ಮಾಡುವ ಮತ್ತು ಪ್ರಸ್ತುತ ಸಮಾಜಕ್ಕೆ ಅವುಗಳ ಸಂಗತತೆಯನ್ನು ವಿಶದಪಡಿಸುವ ಅಪೂರ್ವ ಕೌಶಲ್ಯ ಸ್ವಾಮಿಗಳಿಗಿದ್ದು, ಅವರ ಬರವಣಿಗೆ ಮತ್ತು ಉಪನ್ಯಾಸಗಳು ಸಹಜವಾದ ಹಾಸ್ಯ ಮತ್ತು ಸರಸೋಕ್ತಿಗಳಿಂದ ಸಮೃದ್ಧವಾಗಿರುತ್ತಿದ್ದುವು. ಈ ಮಹಾನ್ ಸಂನ್ಯಾಸಿಯನ್ನು ನಾನು ೧೯೫೭ರಲ್ಲಿ ಪ್ರಥಮವಾಗಿ ನೋಡಿದೆ. ಆಗ ನಾನು ದೆಹಲಿಯಲ್ಲಿ ಐ.ಎ.ಎಸ್. ತರಬೇತಿ ಶಾಲೆಯಲ್ಲಿದ್ದೆ. ನಮ್ಮನ್ನು ಉದ್ದೇಶಿಸಿ (೧) ಉಪನಿಷತ್ತಿನ ಅಂತಃಸತ್ವ, (೨) ಶ್ರೀ ರಾಮಕೃಷ್ಣರ ಜೀವನ ಮತ್ತು ಉಪದೇಶಗಳು, (೩) ಸ್ವಾಮಿ ವಿವೇಕಾನಂದರ ಜೀವನ ಮತ್ತು ಉಪದೇಶಗಳು– ಮೂರು ಉಪನ್ಯಾಸಗಳನ್ನು ಮಾಡಿದರು. ಆಗ ನಾನು ದೇವರನ್ನು ನಂಬುತ್ತಿರಲಿಲ್ಲ. ಆದರೆ ಅವರ ಉಪನ್ಯಾಸಗಳು ನನ್ನನ್ನು ಸಂಮೋಹಗೊಳಿಸಿದವು. ಮುಂದೆ ಯಾವಾಗಲಾದರೂ ನಾನು ದೀಕ್ಷೆ ತೆಗೆದುಕೊಳ್ಳುವ ನಿರ್ಧಾರ ಮಾಡಿದರೆ, ಅದನ್ನು ಈ ಪ್ರಜ್ಞಾವಂತ ಸಂನ್ಯಾಸಿಯಿಂದ ಪಡೆಯುತ್ತೇನೆ ಎಂದು ಆಗ ಮನಸ್ಸಿನಲ್ಲಿ ನಿಶ್ಚಯಿಸಿದೆ. ೧೯೫ರಲ್ಲಿ ನಾನು ನಿವೃತ್ತನಾದಾಗ, ನನ್ನ ಆಸೆ ಫಲಿಸಿತು.

ಸ್ವಾಮಿಗಳ ಜೀವನ ಬಹಳ ಅವಿಶ್ರಾಂತ ಮತ್ತು ಮಹತ್ವದ ಘಟನೆಗಳಿಂದ ಕೂಡಿತ್ತು. ನನಗೆ ಬಹಳ ಆಶ್ಚರ್ಯವಾಗಿದ್ದು ಏನೆಂದರೆ ರಂಗೂನ್ ಮತ್ತು ಕರಾಚಿಯಲ್ಲಿದ್ದ ಆಶ್ರಮಗಳನ್ನು ಬಂದ್ ಮಾಡಿ, ಭಾರತಕ್ಕೆ ನಿರಾಶ್ರಿತರಾಗಿ ಬಂದರೂ, ಒಬ್ಬ ನಿಜವಾದ ಯೋಗಿಯಂತೆ, ವಿಚಲಿತರಾಗದೆ ಮತ್ತೆ ಹೊಸ ಉತ್ಸಾಹದಿಂದ ಹೊಸ ಆಶ್ರಮಗಳನ್ನು ಪ್ರಾರಂಭಮಾಡಿದ್ದು. ೧೯೭೭ರಲ್ಲಿ ಆಗಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಸತತವಾಗಿ ಮೂರು ದಿನ ಸ್ವಾಮಿಗಳ 'ಕಠೋಪನಿಷತ್ತಿ'ನ ಪ್ರವಚನಗಳಿಗೆ ಬಂದಿದ್ದರು ಎಂದು ನನ್ನ ನೆನಪು.

ಪೂಜ್ಯ ಮಹಾರಾಜರ ಹಾಸ್ಯಪ್ರಜ್ಞೆ ಅಪಾರವಾಗಿತ್ತು. ಗಂಭೀರ ಚರ್ಚೆಯಲ್ಲಿದ್ದಾಗ ಅವರ ಸರಸೋಕ್ತಿಯಿಂದ ಉಂಟಾಗುವ ನಗುವಿನ ಬಿರಿತ ಅವಿಸ್ಮರಣೀಯ. "ಮಿಷನ್ ಗೋಲ್ ಪಾರ್ಕ್‌ನಲ್ಲಿರುವ ಇನ್‌ಸ್ಟಿಟ್ಯೂಟ್‌ನ ಅತಿಥಿಗಳಿಂದ ನಾನಾ ತರಹದ ದೂರನ್ನು ನಾನು ಅಲ್ಲಿದ್ದಾಗ ಕೇಳಬೇಕಾಗಿತ್ತು. ಉದಾಹರಣೆಗೆ ಒಬ್ಬರು ತಮ್ಮ ಕೋಣೆಯಲ್ಲಿರುವ ನೆಲಗಂಬಳಿ ಸಣ್ಣದಾಗಿದೆ ಎಂದರೆ, ಇನ್ನೊಬ್ಬರು ಮೊನ್ನೆ ಬೇಯಿಸಿದ ಮೀನು ಹಳೆಯದಾಗಿತ್ತು ಎನ್ನುವರು ಇತ್ಯಾದಿ." ಒಂದು ದಿನ ಇಂತಹ ದೂರುಗಳಿಂದ ಬೇಜಾರಾಗಿ, ಶ್ರೀ ರಾಮಕೃಷ್ಣರಿಗೆ ಪ್ರಾರ್ಥನೆ ಮಾಡಿ, "ಠಾಕೂರ್ ನಾನು ಆಧ್ಯಾತ್ಮ ಜೀವನ ನಡೆಸಲು ಇಲ್ಲಿಗೆ ಬಂದೆ. ನೀವು ನನ್ನನ್ನು ಹೋಟೆಲ್ ಮ್ಯಾನೇಜರ್ ಆಗಿ ಮಾಡಿದಿರಿ" ಎಂದು ಹೇಳಿದೆ, ಎಂದೊಮ್ಮೆ ಹೇಳಿದ್ದರು.

"ದೆಹಲಿಯಲ್ಲಿ ಕೆಲವು ಉನ್ನತ ಅಧಿಕಾರಿಗಳು ತಮ್ಮ ಮಹತ್ವದ ಕುರ್ಚಿಯ ಬಗ್ಗೆ ಎಷ್ಟು ಜಾಗೃತರಾಗಿದ್ದರಾಗಿದ್ದಾರೆಂದರೆ, ಸಾಧ್ಯವಾದರೆ ಹೋಗುವಾಗ ಅವುಗಳನ್ನು ತಮ್ಮ ಜತೆಯಲ್ಲಿ ತೆಗೆದುಕೊಂಡು ಹೋಗುತ್ತಾರೆ" ಎಂದು ಒಮ್ಮೆ ಹೇಳಿದರು.

---

* ನಿವೃತ್ತ ಐ.ಎ.ಎಸ್. ಅಧಿಕಾರಿ, ಮಾಜಿ ಲೋಕಸಭಾ ಸದಸ್ಯರು.

ಚಾರಿತ್ರ್ಯ ನಿರ್ಮಾಣ ಮತ್ತು ಸುಪ್ತವಾಗಿರುವ ದೈವೀಪ್ರಜ್ಞೆಯ ವಿಕಸನ ಸ್ವಾಮಿಯವರ ಮುಖ್ಯ ಸಂದೇಶ. ಸ್ವಾಮಿ ವಿವೇಕಾನಂದರ ಆದರ್ಶದಂತೆ, ಆಧ್ಯಾತ್ಮದಿಂದ ಜನಸಾಮಾನ್ಯರ ಸಾಮಾಜಿಕ, ಆರ್ಥಿಕ ಬೆಳವಣಿಗೆ ಮತ್ತು ವ್ಯಕ್ತಿತ್ವ ನಿರ್ಮಾಣವಾಗಬೇಕೆಂಬುದು ಅವರ ಇಚ್ಛೆಯಾಗಿತ್ತು.

ಭೌತಿಕ ಶರೀರದಲ್ಲಿ ಸ್ವಾಮಿ ರಂಗನಾಥಾನಂದರು ಈಗಿಲ್ಲ. ಅಸಂಖ್ಯಾತ ಕೃತಿಗಳ, ಉಪನ್ಯಾಸಗಳ ಮೇಲಾಗಿ ನೆನಪಿನ ಮೂಲಕ ಅವರು ಸದಾ ಜೀವಂತರಾಗಿದ್ದಾರೆ.*

* * * *

* ಮೂಲ ಬಂಗಾಳೀ ಲೇಖನವನ್ನು ಇಂಗ್ಲಿಷ್‌ಗೆ ಅನುವಾದಿಸಿರುವವರು ಶ್ರೀಮತಿ ಮೊನಾಲಿ ಚೌಧುರಿ

# ೫೨. ಒಬ್ಬ ಉಜ್ವಲ ವ್ಯಕ್ತಿಯ ನೆನಪುಗಳು

–ಗಿರೀಶ್ ಎನ್. ಮೆಹ್ರಾ*

೧೯೫೧ ಅಥವಾ ೫೨ರ ಸುಮಾರು ಒಂದು ಬೇಸಿಗೆಯ ಸಂಜೆ ನಾನು ಮತ್ತು ನನ್ನ ಅಣ್ಣ ರಾಮಕೃಷ್ಣ ಮಿಷನ್‌ನ ಸ್ವಾಮಿಗಳ ಪ್ರವಚನವನ್ನು ಕೇಳಲು ದೆಹಲಿಗೆ ಬಂದೆವು. ಸ್ವಾಮಿಗಳು ಇಂಗ್ಲಿಷ್‌ನಲ್ಲಿ ಪ್ರವಚನ ಮಾಡುತ್ತಿದ್ದರು. ಕೇಳಲು ಅಪಾರ ಜನರು ಬರುತ್ತಾರೆಂದು. ನಮಗೆ ಮಿತ್ರರು ತಿಳಿಸಿದ್ದರು. ಆಶ್ರಮವನ್ನು ತಲುಪಿದಾಗ ಜಾಗವೆಲ್ಲಾ ಭರ್ತಿಯಾಗಿತ್ತು. ನೂರಾರು ಜನರ ಹಾಗೆ ನಾವು ರಸ್ತೆ ಬದಿಯಲ್ಲಿ ಕುಳಿತುಕೊಳ್ಳಬೇಕಾಯಿತು. ಪ್ರವಚನ ಪ್ರಾರಂಭವಾಯಿತು. ಯಾವುದೇ ಅಡೆತಡೆಯಿಲ್ಲದೆ ಸ್ವಾಮಿಗಳ ತುಂಬುನಾದ ಮೃದುವಾಗಿ ಹರಿದುಬರುತ್ತಿತ್ತು. ಅವರ ಮುಖವನ್ನು ನೋಡದಿದ್ದರೂ ಅವರ ಧ್ವನಿಗೆ ಮಾರುಹೋದೆ. ಸುಮಾರು ಒಂದು ಘಂಟೆ ನಂತರ ಅವರ ಪ್ರವಚನ ಮುಗಿಯಿತು. ಅವರ ದರ್ಶನ ಮಾಡಬೇಕೆಂಬ ಪ್ರಬಲ ಇಚ್ಛೆಯಿದ್ದರೂ, ನಮಗೆ ಸಾಧ್ಯವಾಗಲಿಲ್ಲ. ಇದು ಸ್ವಾಮಿ ರಂಗನಾಥಾನಂದರ ಜತೆ ನನ್ನ ಪ್ರಥಮ ಭೇಟಿ.

೧೯೫೫ರಲ್ಲಿ ನಾನು ಐ.ಎ.ಎಸ್ ಅಭ್ಯರ್ಥಿಯಾಗಿ ಸೇರಿದಾಗ, ಅವರು ಸರಣಿ ಉಪನ್ಯಾಸ ಮಾಡಲು ಬಂದಾಗ, ಅವರನ್ನು ನೋಡಿದೆ. ಹಿಂದೆ ಅವರ ಧ್ವನಿಗೆ ಮಾರುಹೋದ ಹಾಗೆ ಈಗ ಅವರ ಮುಖವನ್ನು ನೋಡಿ ಮಾರುಹೋದೆ. ಅವರ ಶಾಂತ, ಕೋಮಲ ಮುಖಭಾವ, ಕಣ್ಣಿನ ತೀಕ್ಷ್ಣ ನೋಟ, ತೆಳು ಆದರೆ ತಂತಿಯಂತೆ ಗಟ್ಟಿಯಾದ ಮೈಕಟ್ಟು, ಪ್ರಶಾಂತ ಹಾಗೂ ಗಂಭೀರ ಚರ್ಮ ಎಲ್ಲಾ ಸೇರಿ ಶ್ರೀಮಂತ ಅನುಭವ ನೀಡಿತು. ಒಂದು ಸಾಂದರ್ಭಿಕ ಪ್ರಶ್ನೆಯನ್ನು ಕೇಳುವುದು ಬಿಟ್ಟರೆ, ಅವರ ಜೊತೆ ಮಾತನಾಡಲು ಅವಕಾಶವಾಗಲಿಲ್ಲ.

೧೯೬೦ರ ಮಾರ್ಚಿನಲ್ಲಿ ನನಗೆ ಆಲ್ಮೋರ ಜಿಲ್ಲಾಧಿಕಾರಿಯಾಗಿ ವರ್ಗವಾದಾಗ, ಅಲ್ಲಿನ ಆಶ್ರಮಕ್ಕೆ ಸ್ವಾಮಿಗಳು ಭೇಟಿಕೊಟ್ಟಾಗ, ಅವರ ಜತೆ ಸ್ವಲ್ಪ ಸಮಯ ಇದ್ದೆ. ಸಂಕೋಚದಿಂದ ನಮ್ಮ ಮನೆಗೆ ಭೋಜನಕ್ಕೆ ಬರಲು ಆಹ್ವಾನಿಸಿದೆ. ಅವರು ಯಾವುದೇ ನಸೆನಸೆಯಿಲ್ಲದೆ ನಾಳೆ ಬೆಳಗಿನ ಉಪಾಹಾರಕ್ಕೆ ನಿಮ್ಮಲ್ಲಿ ಬರುತ್ತೇನೆಂದು ಹೇಳಿದಾಗ ನನ್ನ ಹೃದಯ ತುಂಬಿ ಬಂತು. ತಮ್ಮ ಸರಳ ಮತ್ತು ಮಿತ ಉಪಾಹಾರದ ಬಗೆಗೆ ಸೂಚನೆ ಕೊಟ್ಟರು. ಮರುದಿನ ಒಂದು ಘಂಟೆಗಿಂತ ಜಾಸ್ತಿ ಸಮಯ ನಮ್ಮ ಜತೆ ಇದ್ದರು. ನನ್ನ ಎರಡು ವರ್ಷದ ಹಿರಿಯ ಮಗನಿಗೆ 'ಮಾಧವ' ಎಂದು ನಾಮಕರಣ ಮಾಡಿದರು. ರಾಮಕೃಷ್ಣ ಮಿಷನ್ ಜತೆ ಸಂಪರ್ಕ ಇಟ್ಟುಕೊಳ್ಳಲು ಹೇಳಿದರು. ಮತ್ತೊಮ್ಮೆ ಭೇಟಿ ಮಾಡುವುದಾಗಿ ತಿಳಿಸಿದರು.

ಅನಂತರ ಸ್ವಾಮಿಗಳು ಕಾನ್‌ಪುರದ ರಾಮಕೃಷ್ಣ ಆಶ್ರಮಕ್ಕೆ ಬಂದಾಗ ಭೇಟಿ ಮಾಡಿದೆ. ನಮ್ಮ ಮನೆಗೆ ಅವರು ಬಂದಿದ್ದು ನಮ್ಮ ಸುಯೋಗ. ಆಗ ಹೋಳಿ ಸಮಯ. ನನ್ನ ಮಗ ಮಾಧವ, ಸ್ವಾಮಿಜಿಯವರ ಎದುರಿನಲ್ಲಿ ನೀರಿನ ಪಿಚಕಾರಿಗಾಗಿ ಹಠಮಾಡುತ್ತಿದ್ದ. ಅವನಿಗೆ ಸ್ವಾಮಿಜಿಯವರು ನಮ್ಮ ಕೈಯನ್ನು ಪಿಚಕಾರಿಯಾಗಿ ಹೇಗೆ ಉಪಯೋಗಿಸಬಹುದೆಂದು ತೋರಿಸುತ್ತೇನೆ ಎಂದು ಹೇಳಿ, ಸ್ವಲ್ಪ ನೀರನ್ನು ತಮ್ಮ ಕೈಯಲ್ಲಿ ತುಂಬಿಸಿಕೊಂಡು ಜೋರಾಗಿ ಒತ್ತಿ ದೂರದ ತನಕ ನೀರನ್ನು ವೇಗವಾಗಿ ಚಿಮ್ಮಿಸಿದರು. ಕೈಗಳನ್ನು ಹೇಗೆ ಕವಣೆಯಾಗಿ ಉಪಯೋಗಿಸಬಹುದೆಂದು ನಮ್ಮ ಮಕ್ಕಳಿಗೆ ತೋರಿಸಿದರು. ಒಂದು ಸಣ್ಣ ಕಲ್ಲನ್ನು ತೆಗೆದುಕೊಂಡು ಹೆಬ್ಬೆರಳು

---

* ನಿವೃತ್ತಿ ಐ.ಎ.ಎಸ್. ಅಧಿಕಾರಿ. ಹಿಂದಿನ ಕಾರ್ಯದರ್ಶಿ, ವಾರ್ತಾ ಮತ್ತು ಪ್ರಸಾರ ಇಲಾಖೆ; ಹಿಂದಿನ ಕಾರ್ಯದರ್ಶಿ, ಸಾರ್ವಜನಿಕ ಉದ್ಯಮಗಳು ಮತ್ತು ಕಂಪೆನಿ ವ್ಯವಹಾರಗಳ ಇಲಾಖೆ ಮತ್ತು ಕೆನಡಾದಲ್ಲಿನ ಭಾರತೀಯ ಉಚ್ಚ ಆಯುಕ್ತರು.

ಮತ್ತು ಬೆರಳುಗಳ ಮಧ್ಯೆ ವಿಶೇಷ ರೀತಿಯಲ್ಲಿ ಇಟ್ಟುಕೊಂಡು ತೂರಿದರು. ಸ್ವಿಷ್ ಶಬ್ದ ಮಾಡುತ್ತಾ ನಲವತ್ತು ಅಡಿ ಎತ್ತರವಿದ್ದ ಮರವನ್ನು ದಾಟಿ ಗಾಳಿಯಲ್ಲಿ, ಮಾಮೂಲು ಕವಣೆಯಿಂದ ಹೊಡೆದ ರೀತಿಯಲ್ಲಿ ಹೋಯಿತು. ಸ್ವಾಮಿಯವರ ಅಸಾಧಾರಣ ಕೈಚಳಕವನ್ನು ನೋಡಿ ನಾವು ದಂಗಾದೆವು. ೧೯೭೬ರಲ್ಲಿ ಸ್ವಾಮಿಜಿ ದೆಹಲಿಗೆ ಬಂದಾಗ ಅವರನ್ನು ಮತ್ತು ಶ್ರೀ ಟಿ.ಎನ್. ಚತುರ್ವೇದಿ (ಮಾಜಿ ರಾಜ್ಯಪಾಲರು) ಅವರನ್ನು ರಾತ್ರಿ ಭೋಜನಕ್ಕೆ ಆಹ್ವಾನಮಾಡಿದ್ದೆ. ಆ ಸಂಜೆ ವರ್ತಮಾನ ಪರಿಸ್ಥಿತಿಯ ಬಗ್ಗೆ ಮತ್ತು ಆದರ್ಶಗಳು ಮತ್ತು ಭಾವಸಮುಚ್ಚಯಗಳು ಶಿಥಿಲವಾಗುತ್ತಿರುವಾಗ, ಅಧಿಕಾರಿವರ್ಗ ಹೇಗೆ ಸರಿಯಾಗಿ ನಡೆದುಕೊಳ್ಳಬೇಕು ಮುಂತಾದ ಬಗೆಗೆ ನಡೆದ ಚರ್ಚೆಗಳು ಚಿರಸ್ಮರಣೀಯ.

ಸ್ವಾಮಿಜಿಯವರು ಬಂದಾಗ ನಡೆದ ಒಂದು ಘಟನೆ ಈಗಲೂ ಜ್ಞಾಪಕವಿದೆ. ನಮ್ಮ ಮನೆಯಲ್ಲಿದ್ದ ಭೂತಾನಿನ ಟೆರಿಯರ್ ನಾಯಿಗೆ 'ಲಿಶಿ' ಎಂದು ಕರೆಯುತ್ತಿದ್ದೆವು. ಅದು ನೆಲದ ಮೇಲೆ ಕುಳಿತುಕೊಳ್ಳದೆ ಹಾರಿ ಸೋಫಾದ ಮೇಲೆ ಯಾವಾಗಲೂ ಕೂಡುತ್ತಿತ್ತು. ಸ್ವಾಮಿಗಳು ಬಂದಾಗ ಅದು ಹಾರಿ ಸೋಫಾದಲ್ಲಿ ಅವರ ಪಕ್ಕದಲ್ಲಿ ಕುಳಿತುಕೊಂಡಿತು. ನಾನು ಮತ್ತು ನನ್ನ ಹೆಂಡತಿ ಅದನ್ನು ಅಲ್ಲಿಂದ ಸರಿಸಲು ಪ್ರಯತ್ನಮಾಡಿದೆವು. ಆದರೆ ಅಲ್ಲಿಂದ ಅದು ಅಲುಗಾಡಲಿಲ್ಲ. ಲಿಶಿ ಯಾವಾಗಲೂ ಹಾಸಿಗೆ, ಸೋಫಾ ಅಥವಾ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತದೆ. ಯಾರಾದರೂ ಕಾಲಿನಿಂದ ಮುಟ್ಟಿದರೆ ಅದು ತಿರುಗಿಬೀಳುತ್ತದೆ ಎಂದು ಸ್ವಾಮಿಯವರಿಗೆ ತಿಳಿಸಿದಾಗ, ಹಿಂದಿನ ಜನ್ಮದಲ್ಲಿ ಅದು ರಾಜನಾಗಿದ್ದು, ಈಗ ನಾಯಿಯ ಜನ್ಮ ತಾಳಿದ್ದರೂ ರಾಜೋಚಿತ ಚರ್ಯೆ ಮತ್ತು ನಡತೆಯನ್ನು ಹೊತ್ತುಕೊಂಡು ಬಂದಿದೆ ಎಂದು ಅವರು ಹೇಳಿದರು. ಸ್ವಾಮಿಜಿ ಇರುವಷ್ಟು ಸಮಯ ಅದು ಅವರ ಪಕ್ಕ ಸೋಫಾದಲ್ಲಿ ಕುಳಿತುಕೊಂಡಿತ್ತು.

ನಾನು ಬೋಶಿ ಸೇನ್ ಮತ್ತು ಅವರ ಪತ್ನಿ ಗೆರ್‌ಟ್ರೂಡ್ ಎಮರ್‌ಸನ್ (ಅಂದರೆ ನನ್ನ ಅಣ್ಣ ಮತ್ತು ಅತ್ತಿಗೆ) ಬಗ್ಗೆ ಪುಸ್ತಕ ಬರೆಯುತ್ತಿದ್ದೇನೆಂದು ತಿಳಿಸಿದಾಗ ಅವರು ಮನಃಪೂರ್ತಿಯಾಗಿ ಪ್ರೋತ್ಸಾಹಿಸಿದರು. "೧೯೨೦ರಲ್ಲಿ ನಾನು ಮೈಸೂರು ಆಶ್ರಮದಲ್ಲಿ ಬ್ರಹ್ಮಚಾರಿಯಾಗಿದ್ದೆ. ಆಗ ತಾನೇ ಪ್ರಾರಂಭವಾಗಿದ್ದ 'ಏಷ್ಯಾ ಮ್ಯಾಗಜಿನ್'ನಲ್ಲಿ ಮಿಸ್ ಎಮರ್‌ಸನ್ ಬರೆದ ಲೇಖನಗಳನ್ನು ಬಹಳ ಆಸೆಯಿಂದ ಓದುತ್ತಿದ್ದೆ. ಕೆಲವು ವರ್ಷಗಳಾದ ನಂತರ ಅವಳು ಬೋಶಿದಾರನ್ನು ಮದುವೆಯಾಗಿ ನಮ್ಮ ಅತ್ತಿಗೆಯಾದಾಗ ನನಗಾದ ಸಂತೋಷ ಊಹಿಸಲು ಅಸಾಧ್ಯ" ಎಂದು ಸ್ವಾಮಿಜಿ ತಿಳಿಸಿದರು. ಮುಂದೆ ನಾನು ಹೈದರಾಬಾದ್, ದೆಹಲಿ ಅಥವಾ ಕೊಲ್ಕತ್ತಾದಲ್ಲಿ ಸ್ವಾಮಿಜಿಯವರನ್ನು ಭೇಟಿಯಾದಾಗ ನನ್ನ ಪುಸ್ತಕದ ಪ್ರಗತಿಯ ಬಗ್ಗೆ ವಿಚಾರಿಸುತ್ತಿದ್ದರು ಮತ್ತು ಅಲ್ಲಿದ್ದ ಬೇರೆ ಸ್ವಾಮಿಗಳಿಗೆ "ಗಿರೀಶ್‌ನನ್ನು ಭೇಟಿಯಾಗಿ; ಅವರು ನಮ್ಮ ಬೋಶಿದಾ ಮತ್ತು ಬೊಹುದೀ ಮೇಲೆ ಒಂದು ಸುಂದರ ಪುಸ್ತಕ ಬರೆಯುತ್ತಿದ್ದಾರೆ" ಎಂದು ನನ್ನ ಪರಿಚಯ ಮಾಡುತ್ತಿದ್ದರು. ತನ್ನ ಮಗನ ಬಗ್ಗೆ ಒಬ್ಬ ತಂದೆ ಹೇಗೆ ಹೆಮ್ಮೆಪಡುತ್ತಾನೋ ಹಾಗೆ ಸ್ವಾಮಿಯವರ ಮಾತಿನಲ್ಲಿ ಅನುರಾಗವಿತ್ತು. ನನ್ನ ಧನ್ಯತೆ ದ್ವಿಗುಣವಾಯಿತು.

ಸ್ವಾಮಿ ರಂಗನಾಥಾನಂದರದು ಉಜ್ವಲ ವ್ಯಕ್ತಿತ್ವ. ಮನುಷ್ಯನಾಗಿ ಮಾನವ ಸಹಜ ಕೆಲಸ ಮಾಡಿದರು. ಸನ್ಯಾಸಿಯಾಗಿ ದೈವತ್ವ ಬೋಧನೆ ಮಾಡಿದರು. ಸರ್ವೋತ್ಕೃಷ್ಟ ವಾಗ್ಮಿಯಾಗಿ ಇನ್ನೊಂದು ಲೋಕಕ್ಕೆ ಶ್ರೋತೃಗಳನ್ನು ಕರೆದೊಯ್ಯುವ ಅನುಭವ ನೀಡಿದರು. ೧೮೯೩ರಲ್ಲಿ ಅಮೆರಿಕದಲ್ಲಿ, ಅನಂತರ ಇಡೀ ಪ್ರಪಂಚದಲ್ಲಿ ಮಿಲಿಯಾಂತರ ಜನರನ್ನು ತಮ್ಮ ವಾಗ್ಮಿತೆಯ ಪ್ರಭಾವದಲ್ಲಿ ಸ್ವಾಮಿ ವಿವೇಕಾನಂದರು ಸೆಳೆದರೋ ಅಂತಹ ಒಂದು ಚಿತ್ರಣವನ್ನು ಇತ್ತೀಚಿನ ದಿನಗಳಲ್ಲಿ ಸ್ವಾಮಿಯವರ ಜ್ವಲಂತ ಶಬ್ದಗಳಲ್ಲಿ ಕಾಣಬಹುದಾಗಿತ್ತು. ಅವರ ಜೀವನ ಉಪನಿಷತ್ತಿನ ಸಾರವಾದ 'ನೀನೇ ಅದು' ಎಂಬುದರ ನಿರೂಪಣೆಯಾಗಿತ್ತು. ಜೀವನದ ಎಲ್ಲಾ ಸ್ತರದ ವ್ಯಕ್ತಿಗಳು ಅವರಿಂದ

ಆಕರ್ಷಿತರಾಗುತ್ತಿದ್ದುದರಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ ಅಂತಹ ಆಕರ್ಷಣ ಶಕ್ತಿ ಯಾರು ಸದಾ ದೈವೀ ಚಿಂತನೆಯಲ್ಲಿರುವರೋ ಅಂತಹವರಿಗೆ ಬರುತ್ತದೆ.

ದೇಶದ ನೈತಿಕ ಚೌಕಟ್ಟು ಛಿದ್ರವಾಗಿ ನೈತಿಕ ಪ್ರಭಾವ ಒಟ್ಟುಗಟ್ಟಲೆಯಾಗಿ ಸವೆಯುತ್ತಿರುವುದನ್ನು ನೋಡಿ ಒಮ್ಮೆ ನಾನು ಅತಿಯಾಗಿ ಖಿನ್ನನಾಗಿ ಸ್ವಾಮಿಯವರ ಹತ್ತಿರ ನನ್ನ ಹೃದಯದ ಅಳಲನ್ನು ತೋಡಿಕೊಂಡೆ. ಬಹಳ ಪ್ರೀತಿ ಮತ್ತು ಕರುಣೆಯಿಂದ ತಮ್ಮ ಕೈಯನ್ನು ನನ್ನ ತಲೆಯ ಮೇಲೆ ಇಟ್ಟು 'ಗಿರೀಶ್, ಪರಿಸ್ಥಿತಿ ಚೆನ್ನಾಗಿಲ್ಲವೆಂದು ನಾನು ಒಪ್ಪುತ್ತೇನೆ. ಆದರೆ ಭಾರತ ನಾಶವಾಗುವುದಿಲ್ಲ ಮತ್ತು ಅದು ಸಾಧ್ಯವೂ ಇಲ್ಲ ಎಂದು ಯಾವಾಗಲೂ ನೆನಪಿನಲ್ಲಿಡು' ಎಂದು ಹೇಳಿದರು. ಇದನ್ನು ನಾನು ಯಾವಾಗಲೂ ಸ್ಮರಿಸುತ್ತೇನೆ. ಭಾರತ ಎಂದಿಗೂ ನಾಶವಾಗುವುದಿಲ್ಲ ಎಂಬ ಸ್ವಾಮಿ ರಂಗನಾಥಾನಂದರ ನುಡಿ ಸಿನಿಕಭಾವದ ವಿರುದ್ಧ ಶ್ರೀರಕ್ಷೆ ಮತ್ತು ಆಶಾದೀಪವಾಗಿ ನನ್ನಲ್ಲಿ ಉಳಿದಿದೆ.

* * * *

# ೫೩. ವಿದ್ವತ್ಪೂರ್ಣ, ಕಾಂತಿಯುಕ್ತ, ಪ್ರಶಾಂತ ಮಹಾಜ್ಞಾನಿ

–ಜೆ.ರಾಮಬಾಬು*

ಹಲವಾರು ಜನರು ಮತ್ತು ಸಂಸ್ಥೆಗಳು ನನ್ನ ವ್ಯಕ್ತಿತ್ವ ಮತ್ತು ಜೀವನವನ್ನು ರೂಪಿಸಿದರು. ಬುದ್ಧ, ಆದಿಶಂಕರ, ಶ್ರೀ ರಾಮಕೃಷ್ಣ, ಸ್ವಾಮಿ ವಿವೇಕಾನಂದ, ಬರ್ಟ್ರೆಂಡ್ ರಸಲ್, ಮಹಾತ್ಮ ಗಾಂಧಿ, ಭಗವಾನ್ ರಮಣ ಮಹರ್ಷಿ ಮತ್ತು ಜಿಡ್ಡು ಕೃಷ್ಣಮೂರ್ತಿ ಮುಂತಾದವರ ಹೆಸರನ್ನು ಹೇಳಬಹುದು. ಆದರೆ ಅವರ ಬರವಣಿಗೆ ಮತ್ತು ಸಂದೇಶಗಳ ಮೂಲಕ ಮಾತ್ರ ಅವರನ್ನು ತಿಳಿದಿದ್ದೆ. ಅವರ ಜತೆ ಮುಖತಃ ವಿಚಾರ ವಿನಿಮಯ ಮಾಡುವ ಸುಯೋಗ ದೊರಕಿರಲಿಲ್ಲ. ಈ ಕೊರತೆಯನ್ನು ದೈವವಶಾತ್ ಸ್ವಾಮಿ ಚಿನ್ಮಯಾನಂದರ ಮತ್ತು ಸ್ವಾಮಿ ರಂಗನಾಥಾನಂದರ ಆಕಸ್ಮಿಕ ಭೇಟಿ ಮತ್ತು ಆತ್ಮೀಯ ಒಡನಾಟ ಅಗತ್ಯಕ್ಕಿಂತ ಹೆಚ್ಚಿಗೆ ನೀಗಿಸಿತು. ಈ ಇಬ್ಬರು ಸ್ವಾಮಿಗಳು ನನ್ನ ಜೀವಿತ ಕಾಲದಲ್ಲಿ ನಾನು ನೋಡದೆ ಇದ್ದ ಸಂತರ ಮತ್ತು ಚಿಂತಕರ ಬೋಧನೆ ಮತ್ತು ಅನುಷ್ಠಾನದ ಪ್ರತೀಕವಾಗಿದ್ದರು.

ನನ್ನ ತಾರುಣ್ಯದಿಂದ ಮೂವತ್ತರ ಮಧ್ಯ ವಯಸ್ಸಿನ ತನಕ – ಅಂದರೆ ಸುಮಾರು ಎರಡು ದಶಕಗಳಿಗೂ ಹೆಚ್ಚು ಕಾಲ ಸ್ವಾಮಿ ಚಿನ್ಮಯಾನಂದರು ನನ್ನ ಮೇಲೆ ಪ್ರಭಾವ ಬೀರಿದ್ದರು. ಅವರು ರಭಸವಾಗಿ ಧುಮುಕುವ ಜಲಪಾತ ಅಥವಾ ಮಾನವ–ಬಿರುಗಾಳಿಯಂತೆ ಇದ್ದು, ಅವರ ಜತೆ ಸಂಪರ್ಕಕ್ಕೆ ಬಂದವರು ಕೂಡಲೆ ಭಾವಪರವಶರಾಗಿ ಕೊಚ್ಚಿಕೊಂಡು ಹೋಗುತ್ತಿದ್ದರು. ಸ್ವಾಮಿ ರಂಗನಾಥಾನಂದರ ಚಿತ್ರಣ ಬೇರೆ, ಆದರೆ ಇಬ್ಬರ ಗುರಿ ಮತ್ತು ಉದ್ದೇಶಗಳು ಸಮಾನವಾಗಿದ್ದವು. ಸ್ವಾಮಿ ರಂಗನಾಥಾನಂದರು ಹೊರಗೆ ನೋಡಲು ಸಾಗರದಂತೆ ಶಾಂತ, ಆದರೆ ಅವರ ಆಳವಾದ ಜ್ಞಾನ ಮತ್ತು ಗುರಿಮುಟ್ಟುವ ಕಾರ್ಯಕಲಾಪಗಳು ಬಲವಾದ ಅಂತಃಪ್ರವಾಹದಂತೆ ಗುಪ್ತವಾಗಿದ್ದವು. ಅವರು ಪ್ರಶಾಂತ ಗಂಗಾ ನದಿಯಂತೆ ಇದ್ದು, ಬಂದವರಿಗೆ ದೈವಿಕ ಶಾಂತಿಯನ್ನು ನೀಡುತ್ತಿದ್ದರು. ಪ್ರಶಾಂತತೆಯ ಮೂರ್ತಿ ಸ್ವರೂಪರಾಗಿದ್ದರು. ಅವರ ಒಡನಾಟ, ಸಂಪರ್ಕ ಮತ್ತು ಮಾತು ದೇವಸ್ಥಾನದ ಸುಗಂಧ ಪರಿಮಳದಂತೆ ಅಥವಾ ಪೂರ್ಣ ವಿಕಸಿತ ಉದ್ಯಾನ ಪುಷ್ಪದ ಪರಿಮಳದಂತೆ ಇದ್ದವು; ಅವು ಮನಸ್ಸಿಗೆ ನಾಟಿ ಉದ್ದೀಪನದ ಅನುಭವ ಕೊಡುತ್ತಿದ್ದುವು. ಸ್ವಾಮಿಯವರು ಆಸಕ್ತರನ್ನು ಧ್ಯಾನಾವಸ್ಥೆಗೆ ಕೂಡಲೇ ಒಯ್ಯುತ್ತಿದ್ದರು. ಅವರ ತಿಳಿಹಾಸ್ಯ ಕಚುಗುಳಿಯ ಹಾಗೆ. ಅದು ಯಾರಿಗೂ ನೋವು ಅಥವಾ ಅವಮಾನ ಉಂಟುಮಾಡುತ್ತಿರಲಿಲ್ಲ. ಬದಲಾಗಿ ಬೋಧಪ್ರದವಾಗಿರುತ್ತಿತ್ತು. ಅವರ ವಿಮರ್ಶಾತ್ಮಕ ಟೀಕೆಗಳು ಸರಿಯಾದ ಜೀವನ ದೃಷ್ಟಿಕೋನಕ್ಕೆ ಸ್ಫೂರ್ತಿಕೊಡುತ್ತಿದ್ದುವೇ ವಿನಾ ಯಾರ ಬಗೆಗೂ ಅವಹೇಳನ ಇರುತ್ತಿರಲಿಲ್ಲ. ಸ್ವಾಮಿಗಳ ಸಂಭಾಷಣೆ ನಮಗೆ ಗೌತಮ ಬುದ್ಧ, ಆದಿಶಂಕರ, ಶ್ರೀ ರಾಮಕೃಷ್ಣ, ಸ್ವಾಮಿ ವಿವೇಕಾನಂದ ಮತ್ತು ಭಗವಾನ್ ರಮಣ ಮಹರ್ಷಿಗಳ ಜತೆಗಿನ ಒಡನಾಟದ ಅನುಭವ ಕೊಡುತ್ತಿತ್ತು. ಒಟ್ಟಿನಲ್ಲಿ ಸ್ವಾಮಿಗಳ ಸಂಪರ್ಕವೇ ಒಂದು ಬಗೆಯ ಆಳವಾದ, ಪ್ರಶಾಂತ ಮತ್ತು ತೇಜೋಮಯ ಧ್ಯಾನ. ಪರಮ ಪೂಜ್ಯ ಸ್ವಾಮಿ ರಂಗನಾಥಾನಂದರಿಗೆ ನಮೋನಮಃ.

ದೈವಾನುಗ್ರಹದಿಂದ ೧೯೭೮ರಲ್ಲಿ ಸ್ವಾಮಿ ರಂಗನಾಥಾನಂದ ಮಹರಾಜರ ಸಂಪರ್ಕವಾಯಿತು. ಜಿಲ್ಲಾಧಿಕಾರಿಯಾಗಿ ಕೆಲಸ ಮಾಡಿದ ನಂತರ ಐದು ತಿಂಗಳ ಮಟ್ಟಿಗೆ ನನಗೆ ಹೈದರಾಬಾದಿಗೆ ವರ್ಗವಾಗಿತ್ತು.

* ನಿವೃತ್ತ ಐ.ಎ.ಎಸ್. ಅಧಿಕಾರಿ, ಮಾಜಿ ಅಧ್ಯಕ್ಷರು, ಆಂಧ್ರಪ್ರದೇಶ ರಾಜ್ಯ ಹಣಕಾಸು ನಿಗಮ ಹೈದರಾಬಾದ್. ಅವರು ವಿವಿಧ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳಾಗಿದ್ದರು (ಕಲೆಕ್ಟರ್).

ಆ ಐದು ತಿಂಗಳು ನನಗೆ ಬಹಳ ಮಹತ್ವದ್ದಾಗಿತ್ತು. ಏಕೆಂದರೆ ಬಿಡುವಿಲ್ಲದ ಕಲಾಪಗಳು, ಪ್ರತಿಭಟನೆಗಳಿಂದ ಮತ್ತು ಪ್ರಬಲ ಸಂಶಯಗಳಿಂದ ನನ್ನ ವೈಯಕ್ತಿಕ ಮತ್ತು ಅಧಿಕಾರದ ಜೀವನ ತುಂಬಿತ್ತು. ರಾಮಕೃಷ್ಣ ಮಠದಲ್ಲಿ ನಡೆಯುತ್ತಿದ್ದ ಭಾನುವಾರದ ಪ್ರವಚನಗಳಿಗೆ ಹೋಗುವ ಅಭ್ಯಾಸ ಮಾಡಿಕೊಂಡೆ. ಆಗ ಅನಿಶ್ಚಿತತೆ ಮತ್ತೆ ತಲೆದೋರಿತ್ತು. ನನ್ನ ಆಧ್ಯಾತ್ಮ ಗ್ರಹಣ ಶಿಥಿಲವಾಗಿತ್ತು. ಅವರ ಪ್ರವಚನಗಳು ಶಾಶ್ವತ ಪ್ರಭಾವಬೀರಿ ನನ್ನ ಮನಸ್ಸಿನಲ್ಲಿದ್ದ ಸಂಶಯಗಳನ್ನು ಸಂಪೂರ್ಣವಾಗಿ ದೂರಮಾಡಿದುವು. ಭಗವದ್ಗೀತೆ ಮತ್ತು ಉಪನಿಷತ್ತುಗಳು ಹೇಗೆ ಪ್ರಸಕ್ತ ಮತ್ತು ಸಮಕಾಲೀನ ಎಂಬ ಅವರ ಬೋಧನ ವಿಧಾನ ನನಗೆ ಹಿಡಿಸಿತು. ಬೇರೆ ಧರ್ಮಗಳ ಬೋಧನೆಗಳ ಉಲ್ಲೇಖಮಾಡಿ ವೇದಾಂತದ ಪರಮ ಸತ್ಯಗಳನ್ನು ಎತ್ತಿಹಿಡಿಯುತ್ತಿದ್ದರು. ವಿಜ್ಞಾನ, ತಂತ್ರಜ್ಞಾನ ಮತ್ತು ಬೇರೆ ಜ್ಞಾನ ಕ್ಷೇತ್ರಗಳ ಹೊಸ ಬೆಳವಣಿಗೆಗಳನ್ನು ಸೂಕ್ತವಾಗಿ ಜೋಡಿಸುತ್ತಿದ್ದರು. ಒಟ್ಟಿನಲ್ಲಿ ಹಲವು ಜ್ಞಾನಗಳನ್ನು ಆಪ್ಯಾಯಮಾನವಾಗಿ ಒಂದುಗೂಡಿಸುವ ಅದ್ಭುತ ಪರಿಶ್ರಮವಾಗಿರುತ್ತಿತ್ತು. ಆಪ್ಯಾಯಮಾನವಾಗಿರುವ ಅವರ ಪ್ರವಚನ ಕೇಳುವ ಅಭ್ಯಾಸವಾಯಿತು. ಅವರ ಸರಳತನ, ಮುಕ್ತವಾಗಿ ನಮ್ಮೊಡನೆ ಸೇರುವುದು ಮತ್ತು ಹಾಸ್ಯಪ್ರಜ್ಞೆ ನನಗೆ ಮೆಚ್ಚುಗೆಯಾಯಿತು. ಅಲ್ಲಿ ಪ್ರಗಲ್ಭ ಪಾಂಡಿತ್ಯ ಪ್ರದರ್ಶನವಿರಲಿಲ್ಲ. ಅವರು ತಮ್ಮ ಉನ್ನತ ಆಧ್ಯಾತ್ಮ ಸಾಧನೆಗಳನ್ನು ಬಹಿರಂಗಪಡಿಸಲು ಇಷ್ಟಪಡುತ್ತಿರಲಿಲ್ಲ. ತಮ್ಮ ಹತ್ತಿರ ಬಂದವರನ್ನು ಸಾಂತ್ವನಗೊಳಿಸಿ, ಆತ್ಮೀಯರನ್ನಾಗಿ ಮಾಡಿ ಜೀವನಪರ್ಯಂತ ಅವರನ್ನು ತಮ್ಮ ಅಭಿಮಾನಿ ಅಥವಾ ಶಿಷ್ಯರಾಗಿ ಪರಿವರ್ತಿಸಿಕೊಳ್ಳುತ್ತಿದ್ದರು. ಸ್ವಾಮಿಯವರು ಪ್ರತಿಪಾದನೆ ಮಾಡುತ್ತಿದ್ದ 'ಪ್ರಾಯೋಗಿಕ ವೇದಾಂತ'ದ ಬಗ್ಗೆ ಸೂಕ್ಷ್ಮ ಪರಿಜ್ಞಾನ ಪಡೆದದ್ದು ನನ್ನ ಜೀವನದ ಫಲಪ್ರದವಾದ ಕಾಲ.

೧೯೭೭ನೆ ಇಸವಿಯ ಕೊನೆಯ ಭಾಗದಲ್ಲಿ ಬಂಗಾಳಕೊಲ್ಲಿಯಲ್ಲಿ ಸಮುದ್ರದ ವಿಧ್ವಂಸಕ ಉಬ್ಬರವಿಳಿತದಿಂದ ಸುಮಾರು ೧೦೦೦೦ ಜನರು ಮತ್ತು ಲಕ್ಷಾಂತರ ಪ್ರಾಣಿಪಕ್ಷಿಗಳು ಸಾವಿಗೀಡಾದವು. ಈ ಸಂಕಟದಲ್ಲಿ ಬಲಿಯಾದವರ ಪರಿಹಾರ ಮತ್ತು ಪುನರ್ವಸತಿ ಕಾರ್ಯಕ್ರಮಗಳನ್ನು ನಾನು ನೋಡಬೇಕಾಯಿತು. ಯಾವ ಸುಳಿವೂ ಇಲ್ಲದೆ ನೂರಾರು ಗ್ರಾಮಗಳು ನಿರ್ನಾಮವಾಗಿತ್ತು. ಹಿಂದೆಂದೂ ಕಂಡಿಲ್ಲದ ಪ್ರಮಾಣದಲ್ಲಿ ಬೆಳೆ ಮತ್ತು ಆಸ್ತಿಗಳು ಹಾನಿಯಾಗಿದ್ದವು. ಅದೇ ವೇಳೆಯಲ್ಲಿ ರಾಜಕೀಯ ಪರಿಸ್ಥಿತಿ ಸಂದಿಗ್ಧವಾಗಿತ್ತು. ಪ್ರತಿಕೂಲ ಪರಿಸ್ಥಿತಿ ಇದ್ದರೂ ಆಡಳಿತ ಆದರ್ಶಪ್ರಾಯವಾದ ನಿಷ್ಠೆಯಿಂದ ಪರಿಹಾರ ಕೆಲಸಮಾಡಿತು. ನೊಂದವರ ಸಹಾಯಕ್ಕೆ ದೇಶದ ಬೇರೆ ಬೇರೆ ಭಾಗಗಳಿಂದ ಸ್ವಯಂಸೇವಕರ ಪ್ರವಾಹವೇ ಬಂತು. ಹಣ ಮತ್ತು ಧಾನ್ಯರೂಪದಲ್ಲಿ ಅಪಾರ ವಂತಿಗೆಯ ಸಂಗ್ರಹವಾಯಿತು. ಸಿನೆಮಾ ಸಮುದಾಯದವರು ಶ್ರೀ ಎನ್.ಟಿ.ರಾಮಾರಾವ್ ನೇತೃತ್ವದಲ್ಲಿ ಇಡಿ ರಾಜ್ಯದಲ್ಲಿ ಪ್ರವಾಸ ಮಾಡಿ ವಂತಿಗೆ ಸಂಗ್ರಹಣೆ ಸಲುವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿದರು. ಸಂಗ್ರಹವಾದ ವಂತಿಗೆಯ ಸದ್ವಿನಿಯೋಗ ರಾಮಕೃಷ್ಣ ಮಠದ ಮೂಲಕವೇ ಸಾಧ್ಯವೆಂದು ಚಿತ್ರರಂಗದವರು ಮತ್ತು ಇತರ ಸ್ವಯಂ ಸಂಸ್ಥೆಗಳು ಭಾವಿಸಿ ಎಲ್ಲವನ್ನೂ ಮಠಕ್ಕೆ ಒಪ್ಪಿಸಿದರು. ಸ್ವಾಮಿಗಳ ಉದಾತ್ತ ವ್ಯಕ್ತಿತ್ವ ಈ ಪವಾಡಮಾಡಿತು. ಪರಿಹಾರಕಾರ್ಯದಲ್ಲಿ ನುರಿತ ಸ್ವಾಮಿಗಳನ್ನು ರಾಮಕೃಷ್ಣ ಮಿಷನ್‌ನವರು ಕಳುಹಿಸಿದರು. ಅವರು ಮಾಡಿದ ಪರಿಹಾರ ಕಾರ್ಯಕ್ರಮಗಳನ್ನು ಎಲ್ಲರೂ ಮೆಚ್ಚಿದರು. ಇದು 'ಆತ್ಮನೋ ಮೋಕ್ಷಾರ್ಥಂ ಜಗತ್ ಹಿತಾಯ ಚ' ಎಂಬ ಸುಲಭ ಗ್ರಾಹ್ಯ ಧ್ಯೇಯವಾಕ್ಯ ಮತ್ತು ಪ್ರಾಯೋಗಿಕ ವೇದಾಂತದ ಒಂದು ನಿದರ್ಶನ.

೧೯೭೮ ರಿಂದ ೮೧ ನಾನು ಗುಂಟೂರು ಜಿಲ್ಲಾಧಿಕಾರಿಯಾಗಿದ್ದೆ. ಸ್ಥಳೀಯ ರಾಮಕೃಷ್ಣ ಸೇವಾಸಮಿತಿಯವರು ನಿರ್ಮಿಸಿದ್ದ ಒಂದು ಕಾಲೋನಿಯ ಉದ್ಘಾಟನೆಗಾಗಿ ಸ್ವಾಮಿಗಳು ಜಿಲ್ಲೆಗೆ ಬಂದಿದ್ದರು. ಕಾಲೋನಿ ಹತ್ತಿರ ಗ್ರಾಮದೇವತೆಯ ದೇವಸ್ಥಾನವಿತ್ತು. ದೇವಿಯ ಶಕ್ತಿ ಮತ್ತು ಪ್ರಕೃತಿ ಭಾವರೂಪದ ತತ್ತ್ವವನ್ನು ಸಾಮಿಗಳು ವಿವರಿಸಿದರು. ಭೂಯಿಷ್ಠವಾದ ಸಂಸ್ಕೃತದ ಹೆಸರಿನಿಂದ ಅಥವಾ ಪ್ರಾದೇಶಿಕ ಭಾಷೆಯ ಸರಳ

ಹೆಸರಿನಿಂದ ದೇವಿಯನ್ನು ಕರೆಯುವುದು ಒಂದೇ ಎಂದು ತಿಳಿಸಿದರು. ಅವರ ಈ ವಿವರಣೆ ಎಲ್ಲರನ್ನೂ ಚಕಿತಗೊಳಿಸಿತು. ಹಳ್ಳಿಗಳಲ್ಲಿ ಮೇಲ್ಜಾತಿಯವರು ಪೌರಾಣಿಕ ದೇವರನ್ನೂ, ಕೆಳಜಾತಿಯವರು ಮತ್ತು ದಲಿತರು ಗ್ರಾಮದೇವತೆಯನ್ನು ಪೂಜೆ ಮಾಡುತ್ತಿದ್ದರು. ತಮ್ಮ ಒಂದೇ ಪ್ರಹಾರದಿಂದ ಪೂಜೆಯಲ್ಲಿದ್ದ ಜಾತಿ ತಾರತಮ್ಯವನ್ನು ಸ್ವಾಮಿಗಳು ಹೋಗಲಾಡಿಸಿದರು. ಗ್ರಾಮದೇವತೆಯನ್ನು ತಿರಸ್ಕಾರವಾಗಿ ನೋಡುವ ಮೇಲ್ಜಾತಿಯವರ ದೃಷ್ಟಿಯನ್ನು ಕಿತ್ತುಹಾಕಿದರು. ನಾಮರೂಪ ಮುಖ್ಯವಲ್ಲ, ಅವುಗಳ ಹಿಂದೆ ಇರುವ ಸತ್ಯ ಮುಖ್ಯವೆಂದು ಸ್ವಾಮಿಗಳು ತಿಳಿಸಿದರು.

೧೯೮೨ರಲ್ಲಿ ಸರ್ಕಾರದವರು ನನ್ನನ್ನು ಉನ್ನತ ವಿದ್ಯಾಭ್ಯಾಸಕ್ಕೆ ಲಂಡನ್ ವಿಶ್ವವಿದ್ಯಾಲಯಕ್ಕೆ ಕಳುಹಿಸಿದರು. ಹೊರಡುವ ಮುಂಚೆ ಸ್ವಾಮಿಗಳ ಆಶೀರ್ವಾದವನ್ನು ಕೋರಿದೆ. ಮಠದಲ್ಲಿ ಪ್ರಸಾದ ಸ್ವೀಕರಿಸಿದೆ. ನನ್ನ ಅಧ್ಯಯನ ಮತ್ತು ಮಾರ್ಗದರ್ಶನದ ಸಲುವಾಗಿ ನನ್ನ ಜತೆ ಒಯ್ಯಲು ಕೆಲವು ಪುಸ್ತಕಗಳನ್ನು ಸೂಚಿಸಲು ವಿನಂತಿಮಾಡಿದೆ. ಅವರು ಹೇಳಿದ ಪುಸ್ತಕಗಳ ಪೈಕಿ 'ಲೆಟರ್ಸ್ ಆಫ್ ಸ್ವಾಮಿ ವಿವೇಕಾನಂದ' ಒಂದು. ಅದನ್ನು ಮತ್ತು ಸ್ವಾಮಿಗಳು ಶಿಫಾರಸು ಮಾಡಿದ ಬೇರೆ ಪುಸ್ತಕಗಳನ್ನು ಅದೃಷ್ಟವಶಾತ್ ತೆಗೆದುಕೊಂಡುಹೋಗಿದ್ದೆ. ಸ್ವಾಮಿ ವಿವೇಕಾನಂದರ ವೇದಾಂತ ಸಂದೇಶ ಮತ್ತು ರಾಷ್ಟ್ರದ ಪ್ರಗತಿ, ಜನರ ಉದ್ಧಾರ ಮತ್ತು ವೇದಾಂತ ಧರ್ಮ ಸರಿತೂಗುವುದಿಲ್ಲ ಮತ್ತು ದುರ್ಬಲ ಮತ್ತು ದಲಿತರ ಶೋಷಣೆಗಳಿಗೆ ವೇದಾಂತ ಸ್ಪಂದಿಸುವುದಿಲ್ಲವೆಂಬ ಕೆಲವು ಅಜ್ಞ ವಿದ್ವಾಂಸರ ಪ್ರತಿಪಾದನೆಯಲ್ಲಿ ತಥ್ಯವಿಲ್ಲವೆಂದು 'ಲೆಟರ್ಸ್ ಆಫ್ ಸ್ವಾಮಿ ವಿವೇಕಾನಂದ' ಪುಸ್ತಕವನ್ನು ಗಾಢವಾಗಿ ಮತ್ತು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಿದ ಮೇಲೆ ನನಗೆ ವಿದಿತವಾಯಿತು. ಮಹಾನ್ ದ್ರಷ್ಟಾರ ಸ್ವಾಮಿ ವಿವೇಕಾನಂದರು ಆಧ್ಯಾತ್ಮ ಮತ್ತು ಪ್ರಾಪಂಚಿಕ ಪ್ರಗತಿಯನ್ನು ಒಂದುಗೂಡಿಸಿದ ವಿಧಾನವನ್ನು ತಿಳಿಯಬೇಕಾದರೆ, ಸ್ವಾಮಿ ರಂಗನಾಥಾನಂದರು ತಮ್ಮ ಜೀವನದಲ್ಲಿ ವೇದಾಂತವನ್ನು ಹೇಗೆ ಪ್ರಯೋಗಿಸಿದ್ದಾರೆಂಬುದನ್ನು ಗಮನಿಸಿದರೆ ಸಾಕು. ಅವರು ಸ್ವಾಮಿ ವಿವೇಕಾನಂದರು ಮತ್ತು ಅವರ ಜೀವನ ಧ್ಯೇಯದ ನಿಜವಾದ ಪ್ರತಿನಿಧಿಗಳಾಗಿದ್ದರು. ತಾವು ರಾಮಕೃಷ್ಣ ಸಂಘಕ್ಕೆ ಸೇರಲು ಸ್ವಾಮಿ ವಿವೇಕಾನಂದರೇ ಪ್ರಥಮ ಸ್ಫೂರ್ತಿಯೆಂದು ಸ್ವಾಮಿಯವರಿಗೆ ಎಷ್ಟು ಹೇಳಿದರೂ ತೃಪ್ತಿಯಿಲ್ಲ.

೧೯೮೩ರ ನಂತರ ನಾನು ಹೈದರಾಬಾದಿನಲ್ಲಿ ಉಳಿದೆ. ಆಗ ಭಾನುವಾರ ಮಠದಲ್ಲಿ ಅವರ ಸ್ಫೂರ್ತಿದಾಯಕ ಉಪನ್ಯಾಸಗಳನ್ನು ಕೇಳುತ್ತಿದ್ದೆ. ಗಹನ ಮತ್ತು ಕ್ಷುಲ್ಲಕ ಅನುಮಾನಗಳನ್ನು ಸ್ವಾಮಿಗಳಿಂದ ಪರಿಹಾರ ಮಾಡಿಕೊಳ್ಳುತ್ತಿದ್ದೆ. ಇದಕ್ಕಾಗಿ ಪ್ರೀತಿಯ ಸ್ವಾಮಿಯವರಿಗೆ ನಾನು ಸದಾ ಕೃತಜ್ಞ.

ಮಠದ ವಿವೇಕಾನಂದ ಸಭಾಂಗಣದಲ್ಲಿ ನನ್ನ ಹತ್ತಿರ ಕೆಲಸ ಮಾಡುವ ಉದ್ಯೋಗಿಗಳನ್ನು ಉದ್ದೇಶಿಸಿ ಉಪನ್ಯಾಸ ಮಾಡಲು ವಿನಂತಿ ಮಾಡಿದೆ. ಅವರು ಯಾವ ಪೂರ್ವಸಿದ್ಧತೆಯೂ ಇಲ್ಲದೆ ಉಜ್ವಲ ಉಪನ್ಯಾಸ ಮಾಡಿದರು. ಈ ಉಪನ್ಯಾಸವನ್ನು ತಮಗಾಗಿಯೇ ಮಾಡಿದ್ದಾರೆ ಮತ್ತು ಇದು ತಮಗೆ ಪ್ರಸ್ತುತ ಎಂಬ ಅನುಭವ ಪ್ರತಿಯೊಬ್ಬರಿಗೂ ಆಯಿತು. ಕೇವಲ ಒಂದು ತಾಸಿನ ಅವಧಿಯಲ್ಲಿ ಅವರು ಸ್ಫೂರ್ತಿದಾಯಕವಾಗಿ ವೇದಾಂತದ ಸಮಗ್ರ ನಿರೂಪಣೆ ಮಾಡಿದರು. ಸ್ವಾಮಿಗಳ ಉಪನ್ಯಾಸ ಕೇಳಿದ ಮೇಲೆ ಹಿಂದೂ ಧರ್ಮದ ಬಗ್ಗೆ ನನ್ನ ತಪ್ಪು ಕಲ್ಪನೆಗಳೆಲ್ಲಾ ನಿರ್ಮೂಲವಾಯಿತು ಎಂದು ಶ್ರದ್ಧಾವಂತ ಮುಸ್ಲಿಂ ಆಗಿದ್ದ ನನ್ನ ಸಂಸ್ಥೆಯ ಹಿರಿಯ ಅಧಿಕಾರಿಯು ನಿಜವಾಗಿ ಪ್ರಭಾವಿತರಾಗಿ, ಸ್ವಾಮಿಗಳ ಪಾದಗಳ ಮುಟ್ಟಿ, ತಮ್ಮ ಮೆಚ್ಚುಗೆಯನ್ನು ತಿಳಿಸಿ, ಆಶೀರ್ವಾದ ಕೋರಿದರು. ಇಂತಹ ಪರಿವರ್ತನೆಯನ್ನು ನನ್ನ ಜೀವನದಲ್ಲಿ ಹಿಂದೆಂದೂ ನೋಡಿರಲಿಲ್ಲ. ಸಂಕುಚಿತ ಮತ ಸಿದ್ಧಾಂತಗಳನ್ನು ಮೀರಿ ವೇದಾಂತದ ಪರಮಸತ್ಯಗಳು ಸಾರ್ವತ್ರಿಕ ಸತ್ಯಗಳೆಂಬ ಸ್ವಾಮಿಗಳ ಪ್ರತಿಪಾದನೆ ಕೇಳುಗರ ಹೃದಯವನ್ನು ತಟ್ಟುತ್ತಿತ್ತು.

ಬೇರೆ ಬೇರೆ ಕೆಲಸಗಳನ್ನು ವಹಿಸಲು ಸೂಕ್ತ ವ್ಯಕ್ತಿಗಳನ್ನು ಗುರುತಿಸುವ ವಿಶೇಷ ಕೌಶಲ ಸ್ವಾಮಿಗಳಿಗೆ ಇತ್ತು. ಪ್ರತಿಯೊಬ್ಬರೂ ಸ್ವಾಮಿಗಳ ಹೃದಯದಲ್ಲಿ ತಮಗೆ ಪ್ರತ್ಯೇಕ ಸ್ಥಾನವಿದೆ ಮತ್ತು ತಾವು ಸ್ವಾಮಿಗಳಿಗೆ ಬಹಳ ಆಪ್ತರೆಂದು ಭಾವಿಸುತ್ತಿದ್ದರು. ಕೆಲವೊಮ್ಮೆ ಸರ್ಕಾರದಲ್ಲಿ ನೆನೆಗುದಿಗೆ ಬಿದ್ದ ಕೆಲಸಗಳನ್ನು ಬೆಂಬತ್ತಿ ಹೋಗಲು ನನಗೆ ಹೇಳುತ್ತಿದ್ದರು. ವಿವೇಕಾನಂದ ಇನ್‌ಸ್ಟಿಟ್ಯೂಟ್ ಆಫ್ ಹ್ಯೂಮನ್ ಎಕ್ಸಲೆನ್ಸ್ ಎಂಬ ಸಂಸ್ಥೆಯನ್ನು ಕಟ್ಟುವ ವಿಚಾರ ಸ್ವಾಮಿಗಳಿಗೆ ಬಂತು. ಆಗ ನಾನು ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ ತಿರುಮಲ ತಿರುಪತಿ ದೇವಸ್ಥಾನ (ಟಿ.ಟಿ.ಡಿ.) ಸಮಿತಿಯ ಅಧ್ಯಕ್ಷನಾಗಿದ್ದೆ. ಧನಸಹಾಯವನ್ನು ನೀಡಲು ನನಗೆ ಹೇಳಿದರು. ಆದರೆ ಸ್ವಾಮಿಗಳು ಕೇಳಿದ ದೊಡ್ಡ ಮೊತ್ತದ ವಂತಿಗೆಯನ್ನು ಟಿ.ಟಿ.ಡಿ.ಯಿಂದ ಕೊಡಲು ಅವಕಾಶವಿರಲಿಲ್ಲ. ಬಹಳ ವಿಚಾರ ಮಾಡಿದ ನಂತರ, ವಂತಿಗೆ ಕೊಡಲು ಒಂದು ಹೊಸ ದಾರಿ ಕಂಡುಹಿಡಿದೆವು. ಅದರ ಪ್ರಕಾರ ಹೊಸ ಸಂಸ್ಥೆಯ ಭಾಗವಾಗಿ ಬಾಲಾಜಿ ಧ್ಯಾನಮಂದಿರವನ್ನು ಟಿ.ಟಿ.ಡಿ.ಯವರು ಕಟ್ಟಿಸಿಕೊಡಲಿದ್ದರು. ಈ ವ್ಯವಸ್ಥೆಗೆ ಸ್ವಾಮಿ ಕೂಡಲೇ ಒಪ್ಪಿದರು. ಹೀಗೆ ಟಿ.ಟಿ.ಡಿ. ವತಿಯಿಂದ ಕಟ್ಟಿಸಿದ ಇನ್‌ಸ್ಟಿಟ್ಯೂಟಿನ ಒಂದು ಮಹಡಿಯಲ್ಲಿ ವೆಂಕಟೇಶ್ವರ ವಿಗ್ರಹವಿದೆ. ಸ್ವಾಮಿಯವರ ಹೆಸರು ಮತ್ತು ಪ್ರತಿಷ್ಠೆಗಳನ್ನು ಧಾರಾಳವಾಗಿ ಬಳಸಿ ಎಲ್ಲಾ ಹಂತದಲ್ಲಿ ಮನಸ್ಸಿಲ್ಲದ ಅಧಿಕಾರಿಗಳ ಒಪ್ಪಿಗೆಯನ್ನು ಪಡೆದೆವು.

ರಾಮಕೃಷ್ಣ ಮಠದ ಸುಪರ್ದಿನಲ್ಲಿದ್ದ ಬಹಳ ಬೆಲೆ ಬಾಳುವ ವಿಸ್ತಾರವಾದ ಜಾಗವನ್ನು ಆಗಿನ ಮುಖ್ಯಮಂತ್ರಿ ಶ್ರೀ ಜಲಗಂ ವೆಂಗಲರಾಯರು ಕೊಟ್ಟಿದ್ದರು. ಮುಖ್ಯಮಂತ್ರಿಗಳ ತತ್‌ಕ್ಷಣದ ಸಹಾಯದ ಬಗ್ಗೆ ಸ್ವಾಮಿಗಳಿಗೆ ಎಷ್ಟು ಹೇಳಿದರೂ ತೃಪ್ತಿಯಿರಲಿಲ್ಲ.

ನನಗೆ ಪರಸ್ಪರ ವಿರುದ್ಧ ಅಭಿಪ್ರಾಯ ಮತ್ತು ವಿಚಾರಗಳಿದ್ದ ಕೃತಿಗಳನ್ನು ಓದುವ ಹವ್ಯಾಸ. ವಿಜ್ಞಾನ, ಧರ್ಮ, ಆಧ್ಯಾತ್ಮ ಮುಂತಾದ ಕೃತಿಗಳ ಜತೆ ನಾಸ್ತಿಕವಾದದ, ಮಾರ್ಕ್ಸ್‌ರ ಕೃತಿಗಳನ್ನೂ ಓದುತ್ತಿದ್ದೆ. ಇಂತಹ ಓದಿನಿಂದ ಮನಸ್ಸಿಗೆ ಗೊಂದಲವಾಗುತ್ತಿತ್ತು. ಒಂದು ಭೇಟಿಯಲ್ಲಿ ಸ್ವಾಮಿಗಳ ಹತ್ತಿರ ವೈರುಧ್ಯಗಳ ಬಗ್ಗೆ ತಿಳಿವಳಿಕೆ ಕೊಡಲು ವಿನಂತಿಮಾಡಿದೆ. ಸ್ವಾಮಿ ಸುಮ್ಮನೆ ನಕ್ಕುಬಿಟ್ಟು ವೇದಾಂತದಲ್ಲಿ ಆಸಕ್ತಿಯಿದ್ದವನಿಗೆ ಯಾತರ ಭಯವಿಲ್ಲ. ನಾಸ್ತಿಕರನ್ನು ಮತ್ತು ಮಾರ್ಕ್ಸ್‌ವಾದಿಗಳನ್ನು ನನ್ನ ಹತ್ತಿರ ಕರೆದುಕೊಂಡು ಬನ್ನಿ. ವೇದಾಂತ ಅವರನ್ನು ಯಾವ ಭಯವೂ ಇಲ್ಲದೆ ಸ್ವೀಕರಿಸುತ್ತದೆ ಎಂದು ಹಾಸ್ಯವಾಗಿ ಹೇಳಿದರು. ಇದರ ನಿಜವಾದ ಅರ್ಥ ಮುಂದೆ ಪೂರ್ತಿಯಾಗಿ ತಿಳಿಯಿತು. ಒಮ್ಮೆ ಸ್ವಾಮಿಗಳನ್ನು ನೋಡಲು ಹೋದೆ. ಒಳಗಡೆ ಅವರ ಜತೆ ಇನ್ನೊಬ್ಬ ಸಂದರ್ಶಕರಿದ್ದರು. ಅವರು ಹೋದ ಮೇಲೆ ನಾನು ಒಳಗಡೆ ಹೋದೆ. ಸ್ವಾಮಿಗಳು 'ಈಗ ಹೋದ ಸಂದರ್ಶಕರು ಗೊತ್ತಾ' ಎಂದು ಕೇಳಿದರು. ಅವರು 'ಪೀಪಲ್ಸ್ ವಾರ್ ಗ್ರೂಪ್'ನ (ಉಗ್ರಗಾಮಿ ನಕ್ಸಲೀಯರ ಒಂದು ಶಾಖೆ) ಸ್ಥಾಪಕ ಕೊಂಡಪಲ್ಲಿ ಸೀತಾರಾಮಯ್ಯ ಎಂದು ತಿಳಿಸಿದಾಗ ನನಗೆ ಬಹಳ ಆಶ್ಚರ್ಯವಾಯಿತು. ಕೂಡಲೇ ವೇದಾಂತ ಮಾರ್ಕ್ಸ್‌ವಾದಿಗಳನ್ನು ಸ್ವೀಕರಿಸುತ್ತದೆ ಎಂದು ಸ್ವಾಮಿಗಳು ಹಿಂದೆ ಹೇಳಿದ ಮಾತು ನೆನಪಾಗಿ ಅದರ ರುಜುವಾತನ್ನು ನನ್ನ ಎದುರೇ ನೋಡಿದೆ. ಜೀವಿತದ ಕೊನೆಯಲ್ಲಿ ಕೊಂಡಪಲ್ಲಿ ಸೀತಾರಾಮಯ್ಯನವರಲ್ಲಿ ಆದ ಹೃದಯ ಪರಿವರ್ತನೆ ಅವರ ಬಹಳ ಅಭಿಮಾನಿಗಳಿಗೆ ಗೊತ್ತಿಲ್ಲ. ಸ್ವಾಮಿಗಳ ಕ್ರಿಯಾಶೀಲ ಆಧ್ಯಾತ್ಮಿಕ ಶಕ್ತಿಯ ಬಗ್ಗೆ ಇನ್ನು ಯಾವ ರುಜುವಾತು ಬೇಕು? ಜೀವನಪೂರ್ತಿ ಕಮ್ಯುನಿಸ್ಟ್ ಸದಸ್ಯರಾಗಿದ್ದ ಮತ್ತೊಬ್ಬ ಖ್ಯಾತ ತೆಲುಗು ಕವಿ ಶ್ರೀ ಗಜ್ಜೇಲ ಮಲ್ಲಾರೆಡ್ಡಿಯವರು ಸ್ವಾಮಿಗಳ ಮೋಹಕ ಪ್ರಭಾವಕ್ಕೆ ಒಳಗಾಗಿ, ಶ್ರದ್ಧಾವಂತ ಆಸ್ತಿಕರಾದರು.

ಸ್ವಾಮಿಗಳು ತಮ್ಮ ಹಾಸ್ಯಪ್ರಜ್ಞೆಯನ್ನು ಪರಿಣಾಮಕಾರಿಯಾಗಿ ಬಳಸುತ್ತಿದ್ದರು. ತಮ್ಮ ಬಗ್ಗೆಯೇ ಹಾಸ್ಯ ಮಾಡಿಕೊಳ್ಳುವ ಪ್ರವೃತ್ತಿ ಕೂಡ ಇತ್ತು. ಅವರಿಗೆ ಅತಿ ಸಂವೇದನಾಶೀಲವಾದ ಜೀರ್ಣಾಂಗ ವ್ಯವಸ್ಥೆಯಿತ್ತು. ಅದಕ್ಕೆ ತಾವು ಶ್ರೀಮಂತರ ಹೊಟ್ಟೆಯುಳ್ಳ ಸಂನ್ಯಾಸಿಯೆಂದು ಹೆಚ್ಚಾಗಿ ಹೇಳುತ್ತಿದ್ದರು.

ಒಮ್ಮೆ ಅಭಿನಯ ಕೌಶಲವಿದ್ದ ಒಬ್ಬ ಪ್ರಮುಖ ರಾಜಕಾರಣಿ ಮಠದಿಂದ ಆಯೋಜಿಸಿದ ಕಾರ್ಯಕ್ರಮಕ್ಕೆ ಬಂದಿದ್ದರು. ಅವರು ನಾಟಕೀಯವಾಗಿ ಕುರ್ಚಿಯಿಂದ ಎದ್ದು ವೇದಿಕೆಯ ನೆಲದ ಮೇಲೆ ಕುಳಿತು ಪ್ರೇಕ್ಷಕರ ಮೇಲೆ ಪ್ರಭಾವ ಬೀರಲು ಪ್ರಯತ್ನಮಾಡಿದರು. ತಾನು ಮಾಡಿದ ಹಾಗೆ ಸ್ವಾಮಿಗಳು ಮತ್ತು ವೇದಿಕೆ ಮೇಲಿದ್ದ ಇತರ ಗಣ್ಯರು ಮಾಡಬೇಕೆಂಬುದು ಅವರ ಇಂಗಿತವಾಗಿತ್ತು. ಈ ಘಟನೆಯನ್ನು ತುಂಟತನದ ನಗೆ ನಗುತ್ತಾ ಸ್ವಾಮಿಗಳು ವಿವರಿಸಿದರು. ತಾವು ಮತ್ತು ಇತರ ಗಣ್ಯರು ಕಾರ್ಯಕ್ರಮ ಮುಗಿಯುವ ತನಕ ವೇದಿಕೆ ಮೇಲೆ ಕುಳಿತು, ರಾಜಕಾರಣಿಯ ವರ್ತನೆ ಹೇಗೆ ಅಸಮಂಜಸ ಮತ್ತು ವಿನೋದ ಪ್ರದರ್ಶಕ ಎಂದು ತೋರಿಸಿದರು. ಸರಳತನ ಮತ್ತು ವಿನಮ್ರತೆ ಆಂತರಿಕವಾಗಿ ಬರಬೇಕು. ಅವುಗಳ ತೋರ್ಕೆಯ ಪ್ರದರ್ಶನ ವಿರೋಧಾಭಾಸವಾಗುತ್ತದೆ. ಬೂಟಾಟಿಕೆಯನ್ನು ಸ್ವಾಮಿಗಳು ಸಹಿಸುತ್ತಿರಲಿಲ್ಲ ಮತ್ತು ಅದರ ನಿವಾರಣೆಯ ಕೆಲಸವನ್ನು ಸದ್ದಿಲ್ಲದೆ ಮಾಡುತ್ತಿದ್ದರು.

ಮಠದಲ್ಲಿ ನಡೆಯುವ ದೊಡ್ಡ ಆಧ್ಯಾತ್ಮಿಕ ಕಾರ್ಯಕ್ರಮಗಳಿಗೆ ಆರ್ಥಿಕ ಸಹಾಯದ ಅಗತ್ಯವಿತ್ತು. ಅದಕ್ಕಾಗಿ ಅವರು ಒಂದು ನಾಗರಿಕ ಸಮಿತಿಯನ್ನು ರಚಿಸಿ ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ಸಮಿತಿಯವರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಅವರು ಸಣ್ಣ ಪುಟ್ಟ ವಿಚಾರಗಳಲ್ಲಿ ಎಂದೂ ತಲೆಹಾಕುತ್ತಿರಲಿಲ್ಲ. ಕಾರ್ಯಕ್ರಮದ ಯಶಸ್ಸಿಗೆ ತಾವು ಜವಾಬುದಾರರು ಎಂದು ಭಾವಿಸಿ ಅದಕ್ಕಾಗಿ ಸಮಿತಿ ಸದಸ್ಯರು ಮನಃಪೂರ್ವಕವಾಗಿ ದುಡಿಯುತ್ತಿದ್ದರು. ಕಾರ್ಯಕ್ರಮ ಮುಗಿದ ಮೇಲೆ ಸ್ವಾಮಿಗಳು ಎಲ್ಲರಿಗೂ ಆಶೀರ್ವಾದ ಮಾಡಿ ಎಷ್ಟು ಪುಸ್ತಕಗಳು ಮಾರಾಟವಾದವು ಮತ್ತು ಅವುಗಳ ಮೊತ್ತವೆಷ್ಟು ಎಂಬುದನ್ನು ತಪ್ಪದೆ ತಿಳಿಸುತ್ತಿದ್ದರು. ಸ್ವಾಮಿಗಳಿಗೆ ಬೃಹತ್ತಾದ ಸಮಾರಂಭಕ್ಕಿಂತ ವೇದಾಂತದ ಪ್ರಸಾರ ಬಹಳ ಪ್ರಾಮುಖ್ಯವಾಗಿತ್ತು.

ನೋವು ಆಗದಂತೆ ಇತರರ ತಪ್ಪುಗಳನ್ನು ಸ್ವಾಮಿಗಳು ತಿದ್ದುತ್ತಿದ್ದರು. ನಾನು ಒಂದು ಸಾಂಸ್ಕೃತಿಕ ಸಂಘಟನೆಯಲ್ಲಿದ್ದೆ. ಮಠದ ಸಂಪ್ರದಾಯ ತಿಳಿಯದೆ ನಾನು ಮಠದ ಆವರಣದಲ್ಲಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಏರ್ಪಡಿಸಲು ಸ್ವಾಮಿಗಳ ಅಪ್ಪಣೆ ಕೇಳಿದೆ. ಕೂಡಲೆ ಒಪ್ಪಿಗೆ ಕೊಟ್ಟರು. ಇನ್ನೊಮ್ಮೆ ಡ್ಯಾನ್ಸ್ ಕಾರ್ಯಕ್ರಮಕ್ಕೆ ಅಪ್ಪಣೆ ಕೇಳಿದಾಗ ಅದು ಮಠದ ಸಂಪ್ರದಾಯಕ್ಕೆ ವಿರುದ್ಧವಿದೆ ಎಂದು ಅಪ್ಪಣೆ ನಿರಾಕರಿಸಿದರು. ಅವರ ಇಂಗಿತ ಅರ್ಥವಾಯಿತು. ಲೌಕಿಕ ಕಾರ್ಯಕ್ರಮಗಳಿಗೆ ಮಠದ ಆವರಣವನ್ನು ಉಪಯೋಗಿಸುವ ತಪ್ಪನ್ನು ಮುಂದೆ ಮಾಡಲಿಲ್ಲ.

ಮಕ್ಕಳ ಒಡನಾಟದಿಂದ ಸ್ವಾಮಿಗಳು ಸಂತೋಷಪಡುತ್ತಿದ್ದರು. ಹಲವಾರು ಸಲ ಸ್ವಾಮಿಗಳ ಆಶೀರ್ವಾದ ಪಡೆಯಲು ನನ್ನ ಇಬ್ಬರು ಗಂಡು ಮಕ್ಕಳನ್ನು ಕರೆದುಕೊಂಡುಹೋಗುತ್ತಿದ್ದೆ. ಅವರ ಮೇಲೆ ಬಹಳ ಪ್ರೀತಿ ತೋರಿಸುತ್ತಿದ್ದರು. ತಾವು ಹೇಳುವ ವಿಚಾರಗಳನ್ನು ಅವರಿಗೆ ಸಣ್ಣ ಕಥೆಗಳ ಮೂಲಕ ಹೇಳುತ್ತಿದ್ದರು. ತಮ್ಮ ಬಳಿಯಲ್ಲಿದ್ದ ಜಾಡಿಯಿಂದ ಎಷ್ಟು ಬೇಕೋ ಅಷ್ಟು ಟಾಫಿಗಳನ್ನು ತೆಗೆದುಕೊಳ್ಳಲು ಪುಸಲಾಯಿಸುತ್ತಿದ್ದರು. ನನ್ನ ಮಕ್ಕಳು ಮತ್ತು ನನ್ನ ಶ್ರೀಮತಿ ಸ್ವಾಮಿಗಳನ್ನು ಈಗ ಕೂಡ ನೆನಪಿಸಿಕೊಳ್ಳುತ್ತೇವೆ. ನನ್ನ ಶ್ರೀಮತಿ ವೃತ್ತಿಯಿಂದ ವಿಜ್ಞಾನಿಯಾದರೂ, ಅವಳದು ಧಾರ್ಮಿಕ ಪ್ರವೃತ್ತಿ. ಅವಳಿಗೆ ವೇದಾಂತದ ಬಗ್ಗೆ ಒಲವಿರಲಿಲ್ಲ. ಆದರೆ ಸ್ವಾಮಿಗಳ ಭಾನುವಾರದ ಪ್ರವಚನಕ್ಕೆ ಚುಂಬಕದಂತೆ ಆಕರ್ಷಿತಳಾಗಿದ್ದಳು. ಬಹಳ ಶ್ರದ್ಧಾಭಕ್ತಿಯಿಂದ ಇವತ್ತು ಕೂಡ ಅವರನ್ನು ನೆನೆಯುತ್ತಾಳೆ.

ಪತ್ರವ್ಯವಹಾರದ ಬಗ್ಗೆ ಸ್ವಾಮಿಗಳು ಬಹಳ ಸೂಕ್ಷ್ಮ ಗಮನ ಕೊಡುತ್ತಿದ್ದರು. ಅವರು ಮಹಾಸಂಘದ ಅಧ್ಯಕ್ಷರಾದಾಗ ನಾನು ಭಾವನಾತ್ಮಕವಾದ ಪತ್ರ ಬರೆದೆ. ಕೂಡಲೇ ಒಂದು ಕಾರ್ಡ್ ಮೂಲಕ ಉತ್ತರಿಸಿದರು. ಈಗ ನನಗೆ ಅದು ಅಮೂಲ್ಯ ನಿಧಿಯಾಗಿದೆ.

ಅಸಂಖ್ಯಾತ ವಿಷಯಗಳ ಅಪಾರ ಮಾಹಿತಿಗಳನ್ನು ಸಮೀಕರಿಸಿ ನೆನಪಿನಲ್ಲಿ ಇಟ್ಟುಕೊಳ್ಳುವ ಅದ್ಭುತ ಕೌಶಲ್ಯವನ್ನು ಸ್ವಾಮಿಗಳು ಹೊಂದಿದ್ದರು. ಪ್ರಸ್ತುತ ವಿದ್ಯಮಾನಗಳ ಬಗ್ಗೆ ಸಮಗ್ರವಾದ ಸಮೀಚೀನ ದೃಷ್ಟಿ

ಹೊಂದಿದ್ದರು. ಹಾಗಾಗಿ ಅವರು ಹೇಳುವುದು ಯಥಾರ್ಥ ಮತ್ತು ಪ್ರಸಕ್ತವಾಗಿರುತ್ತಿತ್ತು. ಅವರು ನಡೆದಾಡುವ ವಿಶ್ವಕೋಶವಾಗಿದ್ದರು. ನಿಜವಾದ ಸಂನ್ಯಾಸಿಯ ಸರಳತನವನ್ನು ಮೈಗೂಡಿಸಿಕೊಂಡಿದ್ದರು. ಅವರ ರಾಷ್ಟ್ರಭಕ್ತಿ ಮತ್ತು ವೇದಾಂತದಲ್ಲಿದ್ದ ಬಲವಾದ ನೆಲೆಗಟ್ಟು ಸರಿಸಮಾನವಾಗಿದ್ದುವು. ದೇಶದ ಪ್ರಗತಿಗಾಗಿ ಜಾತಿ ಪಂಥಗಳನ್ನು ಮೀರಿ ಸ್ವಚ್ಛ ನೈತಿಕ ಮತ್ತು ಫಲಪ್ರದ ಜೀವನ ನಡೆಸಲು ಸ್ವಾಮಿಗಳು ಕೊಟ್ಟ ಪ್ರಬೋಧನೆ ಎಲ್ಲರನ್ನೂ ಚುರುಕುಗೊಳಿಸುತ್ತಿತ್ತು. ಪ್ರತಿಷ್ಠಿತ ಪ್ರಶಿಕ್ಷಣ ಸಂಸ್ಥೆಗಳಿಂದ, ಮುಖ್ಯವಾಗಿ ಐ.ಎ.ಎಸ್. ಉಪನ್ಯಾಸಕ್ಕೆ ಅವರಿಗೆ ಅಪಾರ ಬೇಡಿಕೆ. ಅವರದು ಕೆರಳಿಸದ ಪ್ರಚೋದನೆ, ಕೃತಕತೆ ಇಲ್ಲದ ಸ್ಫೂರ್ತಿ, ಉಪದೇಶವಿಲ್ಲದ ಬೋಧನೆ ಮತ್ತು ಆಡಂಬರವಿಲ್ಲದ ತಿಳುವಳಿಕೆ. ಅವರ ಸಂದೇಶ ನೇರವಾಗಿ ಹೃದಯ ತಲುಪಿ ಸ್ಥಾಯಿಯಾಗಿ ಇರುತ್ತಿತ್ತು. ಅವರು ನಮ್ಮ ಪುರಾತನ ಭಾರತದ ಭವ್ಯ ಪರಂಪರೆಯ ಸಾರವತ್ತಾದ ಸಂನ್ಯಾಸಿ. ಅವರ ತುಂಬು ನಾದ ಮತ್ತು ಕರುಣಾಪೂರಿತ ಬುದ್ಧಿವಾದಗಳನ್ನು ನಾವು ಕಳೆದುಕೊಂಡಿದ್ದೇವೆ. ಅತ್ಯುಚ್ಚ ಸಂತರಿಗೆ ನನ್ನ ವಿನಮ್ರ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

* * * *

## ೫೪. ಇವತ್ತು ನಾನೇದರೂ ಆಗಿದ್ದರೆ, ಅದು ಅವರ ಅನುಗ್ರಹ

**–ಕೆ.ಕೆ.ಚೋಪ್ರಾ**

೧೯೭೩ರಲ್ಲಿ ಕಾಬೂಲಿನಲ್ಲಿ ನನ್ನ ಬಳಿ ಸ್ವಾಮಿ ರಂಗನಾಥಾನಂದರು ಹತ್ತು ದಿನಗಳನ್ನು ಉಳಿದುಕೊಂಡಿದ್ದು ನನ್ನ ಸುಯೋಗ. ಕಾಬೂಲಿನಲ್ಲಿ ಆಶ್ರಮವಿರಲಿಲ್ಲ. ಹಾಗಾಗಿ ನನ್ನಲ್ಲಿ ಉಳಿದರು ಮತ್ತು ಅವರನ್ನು ಅತಿ ಸಮೀಪದಿಂದ ಗಮನಿಸಿದೆ. ಅವರು ಮಹಾನ್ ವ್ಯಕ್ತಿ. ಅವರನ್ನು ಕಳೆದುಕೊಂಡಿದ್ದು ನಿಜ. ಆದರೆ ಅವರ ಸಂದೇಶಗಳು ಇವೆ. ಅವಕ್ಕೆ ಗಮನಕೊಟ್ಟು ನಮ್ಮ ಜೀವನವನ್ನು ರೂಪಿಸಬೇಕು.

ಉಟ್ಟ ಬಟ್ಟೆಗಳನ್ನು ಸ್ವತಃ ಒಗೆಯುವುದನ್ನು, ಊಟ ಮಾಡಿದ ತಟ್ಟೆಯನ್ನು ಸ್ವತಃ ಸ್ವಾಮಿಗಳು ತೆಗೆದುಕೊಂಡು ಹೋಗುವುದನ್ನು ನಾನು ನೋಡಿದ್ದೇನೆ. 'ಮಹರಾಜ್' ಈ ಕೆಲಸಗಳನ್ನು ನಾನು ಮಾಡುತ್ತೇನೆ ಅಥವಾ ನನ್ನ ಕೆಲಸದವರು ಮಾಡುತ್ತಾರೆ' ಎಂದು ನಾನು ಹೇಳಿದೆ. 'ಬೇಡ' ಎಂಬುದು ಅವರ ಉತ್ತರ. ಕಾಬೂಲಿನಲ್ಲಿ ವಾಸವಾಗಿರುವ ಭಾರತೀಯರನ್ನು ಉದ್ದೇಶಿಸಿ ಬೆಳಿಗ್ಗೆ ೮ ಘಂಟೆಗೆ ಉಪನ್ಯಾಸ ಮಾಡಲು ಸ್ವಾಮಿಗಳನ್ನು ಭಾರತದ ರಾಯಭಾರಿ ಶ್ರೀ ಮೆಹತಾ ಆಹ್ವಾನಿಸಿದ್ದರು. ಆ ದಿನ ಮಾತ್ರ ಅವರ ಬಟ್ಟೆಗಳನ್ನು ಒಗೆಯುವ ಸುಯೋಗ ನನಗೆ ದೊರಕಿತು. ಮಹಾರಾಜ್‌ರು ಬೆಳಿಗ್ಗೆ ೫.೩೦ಕ್ಕೆ ಎದ್ದು, ತಮ್ಮ ದಿನಚರಿಯನ್ನು ನಿಮಿಷ ನಿಮಿಷದಂತೆ ಪಾಲಿಸುತ್ತಿದ್ದರು. ಇದರಿಂದ ನಮಗೆ ಸ್ಫೂರ್ತಿ ದೊರೆಯಿತು.

೧೯೫೬ರಲ್ಲಿ ಅವರ ಸಂಪರ್ಕವಾಯಿತು. ೧೯೬೦ರ ಮೇ ತಿಂಗಳ ನಂತರ ಬಹಳ ಹತ್ತಿರವಾದೆ. ಮೇ ೧೯೬೦ರಲ್ಲಿ ಕೊಲ್ಕತ್ತ ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್ ಉಪನ್ಯಾಸ ಮುಗಿದ ಮೇಲೆ ವೇದಿಕೆಯ ಮೇಲೆ ಕುಳಿತು ಭಕ್ತಾದಿಗಳಿಂದ ಪ್ರಣಾಮಗಳನ್ನು ಸ್ವೀಕರಿಸುತ್ತಿದ್ದರು. ನನ್ನ ಸರದಿ ಬಂದಾಗ, ನನ್ನ ಅಧ್ಯಕ್ಷರು 'ಇವರು ಕೆ.ಕೆ.ಚೋಪ್ರಾ, ರಿಸರ್ವ್ ಬ್ಯಾಂಕಿನಿಂದ' ಎಂದು ನನ್ನ ಪರಿಚಯ ಮಾಡಿಕೊಟ್ಟರು. 'ಒಳ್ಳೆಯದು, ನಾಳೆ ಬೆಳಿಗ್ಗೆ ನನ್ನನ್ನು ಆಫೀಸಿನಲ್ಲಿ ಭೇಟಿ ಮಾಡಿ' ಎಂದು ಹೇಳಿದರು. ಮರುದಿನ ನಾನು ಅವರಿಗೆ ಪ್ರಣಾಮ ಸಲ್ಲಿಸಿದಾಗ 'ಚೋಪ್ರ, ಇನ್‌ಸ್ಟಿಟ್ಯೂಟ್‌ನ ಕೆಲವು ನಿರ್ಮಾಣದ ಕೆಲಸಕ್ಕೆ ಒಂದು ಲಕ್ಷ ರೂಪಾಯಿ ಬೇಕಾಗಿದೆ, ನನಗೆ ಹೊಂದಿಸಿಕೊಡಲು ಸಾಧ್ಯವೇ' ಎಂದು ಹೇಳಿದರು. 'ಮಹರಾಜ್, ಶಕ್ತಿಮೀರಿ ಪ್ರಯತ್ನಮಾಡುತ್ತೇನೆ' ಎಂದು ಹೇಳಿದೆ.

ರಿಸರ್ವ್ ಬ್ಯಾಂಕಿನಲ್ಲಿದ್ದ ಕಾರಣ ನಾನು ಕೆಲವು ವಾಣಿಜ್ಯ ಬ್ಯಾಂಕ್‌ಗಳನ್ನು ಫೋನ್ ಮೂಲಕ ಸಂಪರ್ಕ ಮಾಡಿ 'ನನಗೆ ರೂ ೧,೦೦,೦೦೦ ಬೇಕು, ನಿಮ್ಮಿಂದ ರೂ ೧೫,೦೦೦ದಷ್ಟು ದೇಣಿಗೆ ಬರಲಿ' ಎಂದು ಹೇಳಿದೆ. ಸಂಜೆ ಹೊತ್ತಿಗೆ ಎಲ್ಲಾ ಸಂಗ್ರಹವಾಯಿತು. ಮರುದಿನ ಸಂಗ್ರಹವಾದ ಒಂದು ಲಕ್ಷ ರೂಪಾಯಿಗಳನ್ನು ಅವರ ಪಾದಗಳ ಬಳಿ ಇಟ್ಟೆ. 'ಕೂಡಲೇ ಹಣ ಸಂಗ್ರಹ ಮಾಡಿದ್ದೀಯೆ. ನಿಜವಾಗಿ ನೀನು ಮಹಾನ್ ಪುರುಷ' ಎಂದು ನನ್ನನ್ನು ನೋಡಿ ಹೇಳಿದರು. ಅನಂತರ ನನ್ನನ್ನು ಭರವಸೆಯಿಡಬಹುದಾದ ಜವಾಬುದಾರಿ ಮನುಷ್ಯನೆಂದು ಪರಿಗಣಿಸಿದರು.

'ನಾಳೆ ಬೆಳಿಗ್ಗೆ ೭ ಘಂಟೆಗೆ ನನ್ನ ಆಫೀಸಿಗೆ ಬಂದು ಭೇಟಿಮಾಡು' ಸ್ವಾಮಿಗಳು ಹೇಳಿದರು. ಉಪನ್ಯಾಸ ಕೊಡಲು ಆಗಾಗ ಜನರು ಆಹ್ವಾನಿಸುತ್ತಿದ್ದರು. ಬೆಳಿಗ್ಗೆ ೭ ಘಂಟೆಗೆ ಹೋಗಿ ೧೦ ಘಂಟೆಯ ತನಕ ಅವರ ಜತೆ

---

* ನಿವೃತ್ತ ರಿಸರ್ವ್‌ಬ್ಯಾಂಕ್ ಅಧ್ಯಕ್ಷರು

ಇರುತ್ತಿದ್ದೆ. ಪ್ರತಿ ಭಾನುವಾರ ಅವರಿಗೆ ಉಪನ್ಯಾಸಕ್ಕೆ ಆಹ್ವಾನ ಬರುತ್ತಿತ್ತು. ಅವರ ಜತೆ ಹೋಗುತ್ತ, ಅವರ ಚೀಲವನ್ನು ನಾನು ಒಯ್ಯುತ್ತಿದ್ದೆ. ಹೀಗೆ ಏಳೂವರೆ ವರ್ಷ ನಾನು ಅವರ ಖಾಸಗಿ ಕಾರ್ಯದರ್ಶಿ ಮತ್ತು ಚೇಲಾ ಆಗಿದ್ದೆ.

೧೯೬೦ರ ತನಕ ನಾನು ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿದ್ದೆ. ಆನಂತರ ರಿಸರ್ವ್‌ಬ್ಯಾಂಕಿಗೆ ಸೇರಿದೆ. ಆಗ ಹಿರಿಯ ಸರಕಾರಿ ಸಲಹೆಗಾರನಾಗಿ ಭಾರತ ಸರಕಾರ ನನ್ನನ್ನು ಕಾಬೂಲಿಗೆ ವರ್ಗಮಾಡಿತ್ತು. ಅಲ್ಲಿ ಸುಮಾರು ೨೦೦೦ ಹಿಂದೂಗಳಿದ್ದರು. ಅವರಿಗೆ ಭಾರತೀಯ ಸಂಸ್ಕೃತಿಯ ಪರಿಚಯವಿರಲಿಲ್ಲ. ಶ್ರೀ ಬಿ.ಎನ್.ಮೆಹತಾ ಭಾರತೀಯ ರಾಯಭಾರಿಯಾಗಿದ್ದರು. ಕಾಬೂಲ್ ಸರಕಾರದ ವತಿಯಿಂದ ಸ್ವಾಮಿ ರಂಗನಾಥಾನಂದರಿಗೆ ಉಪನ್ಯಾಸಕ್ಕೆ ಆಹ್ವಾನ ಕೊಡಲು ಮೆಹತಾರವರಿಗೆ ಹೇಳಿದೆ. ಅವರಿಗೆ ಮಹಾರಾಜರ ಪರಿಚಯವಿತ್ತು. ಅವರು ಭಾರತ ಸರಕಾರ ಮತ್ತು ಆಫ್‌ಘನ್ ಸರಕಾರದ ವತಿಯಿಂದ ಸ್ವಾಮಿಗಳನ್ನು ಆಹ್ವಾನಿಸುವ ವ್ಯವಸ್ಥೆಮಾಡಿದರು. ಕಾಬೂಲು ವಿಶ್ವವಿದ್ಯಾಲಯದಲ್ಲಿ ಅವರ ಉಪನ್ಯಾಸ ಮತ್ತು ಹೊಟೆಲ್‌ನಲ್ಲಿ ಇಳಿದುಕೊಳ್ಳುವ ವ್ಯವಸ್ಥೆಯಾಯಿತು. ವಿಮಾನನಿಲ್ದಾಣದಲ್ಲಿ ಸರಕಾರದ ಪ್ರತಿನಿಧಿ 'ಮಹರಾಜ್ ಹೋಟೆಲ್‌ನಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಮಾಡಿದ್ದೇವೆ' ಎಂದು ತಿಳಿಸಿದಾಗ, ಸ್ವಾಮಿಗಳು 'ಅಲ್ಲಿ ಬೇಡ' ಎಂದರು. 'ನಮ್ಮಲ್ಲಿ ಉಳಿದುಕೊಳ್ಳಬಹುದು' ಎಂದು ಮೆಹತಾ ಹೇಳಿದರು. 'ಇಲ್ಲಾ, ನಾನು ಚೋಪ್ರಾರಲ್ಲಿ ಉಳಿದುಕೊಳ್ಳುತ್ತೇನೆ' ಎಂದು ರಂಗನಾಥಾನಂದಜಿಯವರು ತಿಳಿಸಿದರು. ಹೀಗೆ ಅವರು ನಮ್ಮ ಮನೆಯಲ್ಲಿ ಹತ್ತು ದಿನ ತಂಗಿದ್ದರು.

ಕಾಬೂಲಿನಲ್ಲಿ ಎರಡು ಉಪನ್ಯಾಸ ಮಾಡಿದರು. ಆಫ್ಘಾನಿಸ್ತಾನ ಮುಸ್ಲಿಂ ದೇಶವಾದ್ದರಿಂದ ರಾಮಕೃಷ್ಣ ಮತ್ತು ವಿವೇಕಾನಂದರ ಹೆಸರನ್ನು ಪ್ರಸ್ತಾಪ ಮಾಡಲಿಲ್ಲ. ಬದಲಾಗಿ ಜೀವನದಲ್ಲಿ ಮಾನವೀಯ ಮೌಲ್ಯಗಳ ಬಗ್ಗೆ ಸೊಗಸಾದ ಉಪನ್ಯಾಸ ಮಾಡಿದರು.

ಇವತ್ತು ನಾನೇನಾದರೂ ಆಗಿದ್ದರೆ, ಅದು ಸ್ವಾಮಿಗಳ ಅನುಗ್ರಹ; ಇಲ್ಲದಿದ್ದರೆ ನಾನು ಒಂದು ಸೊನ್ನೆ. ಶಾಸ್ತ್ರ ಮತ್ತು ಇತರ ವಿಚಾರಗಳನ್ನು ಅವರಿಂದ ಕಲಿತೆ. ಅವರು ಮಹಾನ್ ವ್ಯಕ್ತಿ. ಅವರ ಮಹತ್ವದ ಆಳವನ್ನು ತಿಳಿಯಬೇಕಾದರೆ ಅವರ ಜತೆ ಆತ್ಮೀಯರಾಗಿರಬೇಕು. ನನ್ನ ಜೀವನದಲ್ಲಿ ಭೇಟಿಮಾಡಿದ ಅತ್ಯಂತ ಉತ್ಕೃಷ್ಟ ವ್ಯಕ್ತಿಗಳ ಪೈಕಿ ಅವರೊಬ್ಬರು ಸಂಪೂರ್ಣ ಜ್ಞಾನಿ.

ಒಮ್ಮೆ ಡಾ.ಕರಣ್ ಸಿಂಗ್‌ರವರ ಉಪನ್ಯಾಸವಿತ್ತು. ಮುಗಿದ ಮೇಲೆ ತಾವು ಬರೆದ ಒಂದು ಪುಸ್ತಕವನ್ನು ಸ್ವಾಮಿ ರಂಗನಾಥಾನಂದರಿಗೆ ಕೊಡಲು ನನಗೆ ಹೇಳಿದರು. ಮರುದಿನ ಅದನ್ನು ಕೊಡಲು ಹೋದಾಗ ಮಹಾರಾಜರು 'ಚೋಪ್ರಾ, ಪುಸ್ತಕವನ್ನು ವಾಪಸ್ಸು ತೆಗೆದುಕೊಂಡು ಹೋಗು' ಎಂದು ಹೇಳಿದರು. 'ಯಾಕೆ?' ಎಂದು ನಾನು ವಿಚಾರಿಸಿದೆ. 'ನಾನು ಆಗಲೇ ಓದಿಯಾಗಿದೆ' ಎಂದು ಅವರು ಉತ್ತರಿಸಿದರು.

ಅವರದು ಸಂಪೂರ್ಣ ನಿರ್ಭಯ ಚೇತನ. ವಿವರಿಸುವುದು ಕಷ್ಟ. ನನ್ನ ಇಡೀ ಜೀವನ ಅವರ ಮೇಲೆ ಅವಲಂಬಿತ. ನನ್ನ ಜೀವನದಲ್ಲಿ ಯಾವುದೋ ಆಧ್ಯಾತ್ಮಿಕತೆ ಪ್ರವೇಶವಾಗಿದ್ದರೆ, ಅದು ಸ್ವಾಮಿ ರಂಗನಾಥಾನಂದರ ದೆಸೆಯಿಂದಲೇ.

ಸ್ವಾಮಿಗಳು ಸದಾ ಮಂದಹಾಸದಿಂದಿರುತ್ತಿದ್ದರು. ಎಂದೂ ಜೋಲು ಮೋರೆ ಇರಲಿಲ್ಲ. ಶಿಸ್ತಿನ ಮನುಷ್ಯ. ಮಕ್ಕಳ ಜತೆಯಲ್ಲಿ ಬಹಳ ನಲಿವು. ನಮ್ಮ ಮನೆಯಲ್ಲಿ ಎರಡು ವರ್ಷದ ಮಗುವಿನ ಜತೆ ಆಟವಾಡುತ್ತಿದ್ದರು. ಅದನ್ನು ತಮ್ಮ ಹೆಗಲಮೇಲೆ ಕೂರಿಸಿಕೊಳ್ಳುತ್ತಿದ್ದರು. ಅಗತ್ಯವಿದ್ದಾಗ ಪರಿಹಾಸ ಮಾಡುವರು. ಇಲ್ಲದಿದ್ದರೆ ಬಹಳ ಗಂಭೀರವಾಗಿರುವರು.

ಪ್ರತಿದಿನ ಹಾರ್ಲಿಕ್ಸ್‌ನ್ನು ಮೂರು ಸಲ ತೆಗೆದುಕೊಳ್ಳಲು ಡಾಕ್ಟರ್ ಸಲಹೆ ಮಾಡಿದ್ದರು. ಆ ಪ್ರಕಾರ ಹಲವಾರು ವರ್ಷ ಅದನ್ನು ತೆಗೆದುಕೊಳ್ಳುತ್ತಿದ್ದರು. ಒಂದು ದಿನ ಅವರನ್ನು ಭೇಟಿಮಾಡಿದಾಗ, ಬಹಳ

ಸಂತೋಷವಾಗಿದ್ದರು. 'ಚೋಪ್ರಾ, ತಾಯಿ ನನ್ನ ಉದರಬಾಧೆ ನಿವಾರಣೆ ಮಾಡಿದ್ದಾಳೆ. ಇವತ್ತು ತೊವ್ವೆ ಮತ್ತು ಅನ್ನ ಸೇವಿಸಲು ಸಲಹೆ ಮಾಡಿದರು. ನಾನು ಅವುಗಳನ್ನು ತೆಗೆದುಕೊಂಡು ಜೀರ್ಣಮಾಡಿಕೊಂಡೆ' ಎಂದು ಹೇಳಿದರು. ಆ ದಿನದಿಂದ ನಿಧಾನವಾಗಿ ತಮ್ಮ ಯಥಾಸ್ಥಿತಿಗೆ ಬಂದರು. ಆನಂತರ ಅವರ ಆಹಾರ ಅನ್ನ ತೊವ್ವೆ, ಮೊಸರು ಮತ್ತು ಹಾರ್ಲಿಕ್ಸ್.

ಸಂತೋಷದಿಂದ ಜನರು ಅವರಿಗೆ ವಿಧೇಯರಾಗಿದ್ದರು. ಅವರು ಜನರ ಮನೋಭಾವವನ್ನು ತಿಳಿದಿದ್ದರು. ಅವರಿಗೆ ಯಾರಿಂದ ಯಾವ ಕೆಲಸ ಮಾಡಿಸಿಕೊಳ್ಳಬೇಕೆಂಬ ಪರಿಜ್ಞಾನವಿತ್ತು. ಎಂದೂ ಯಾರಿಗೂ ನೇರವಾಗಿ ಬುದ್ಧಿವಾದ ಹೇಳುತ್ತಿರಲಿಲ್ಲ. ಯಾವಾಗಲೂ ಪರೋಕ್ಷವಾಗಿ ತಿಳಿದುಕೊಳ್ಳುವಂತೆ ಮಾಡುತ್ತಿದ್ದರು.

ಅವರು ಬರೆದ ಎಲ್ಲ ಕೃತಿಗಳನ್ನೂ ಓದಿದ್ದೇನೆ. ಪ್ರತಿಯೊಂದು ಪುಟ ನನಗೆ ಗೊತ್ತಿದೆ. ಆದರೆ ಬದಲಾವಣೆ ಯಾವಾಗಲೂ ಗುಪ್ತವಾಗಿರುತ್ತದೆ. ಮೌಲ್ಯಗಳು ಸುಪ್ತ ಮನಸ್ಸಿನಲ್ಲಿ ಹೊಕ್ಕು ಸ್ವಭಾವದಲ್ಲಿ ಬದಲಾವಣೆ ಆಗುತ್ತದೆ. ಇದು ಹೊರಗಡೆ ವಿದಿತವಾಗುವುದಿಲ್ಲ.

ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನಲ್ಲಿ ಅವರಿಗೆ ತಮ್ಮದೇ ಆದ ಚಿಕ್ಕ ಪೂಜಾಗೃಹವಿತ್ತು. ಠಾಕೂರ್, ಶ್ರೀಮಾತೆ ಮತ್ತು ಸ್ವಾಮಿ ವಿವೇಕಾನಂದರು ಅಲ್ಲಿದ್ದರು.

"ನಿಮ್ಮ ವಿಚಾರಗಳನ್ನು ಮಕ್ಕಳ ಮೇಲೆ ಹೇರಬೇಡಿ. ಇದು ಮಾಡು, ಅದನ್ನು ಮಾಡಬೇಡ ಎಂದು ಹೇಳಬೇಡಿ. ನಿಮ್ಮ ಕೆಲಸಗಳನ್ನು ಸುಮ್ಮನೆ ಮಾಡಿಕೊಂಡು ಹೋಗಿ. ಅವರಿಗೆ ಏನು ಹೇಳಬೇಕೆಂದು ಇದ್ದೀರೋ ಅದನ್ನು ಮೊದಲು ನಿಮ್ಮ ಜೀವನದಲ್ಲಿ ಅನುಷ್ಠಾನ ಮಾಡಿ. ಏಕೆಂದರೆ ಅವರು ನಿಮ್ಮನ್ನು ಗಮನಿಸುತ್ತಾರೆ ಮತ್ತು ನಿಮ್ಮನ್ನು ಅನುಸರಿಸುತ್ತಾರೆ" ಎಂದು ನನ್ನ ಶ್ರೀಮತಿಗೆ ಕಿವಿಮಾತು ಹೇಳುತ್ತಿದ್ದರು.

* * * *

# ೫೫. ಕಾಶ್ಮೀರದಲ್ಲಿ ಕೆಲವು ಪ್ರಮುಖ ಘಟನೆಗಳು

–ಸಿ.ಎಲ್.ಸಪ್ರು*

ಸ್ವಾಮಿ ರಂಗನಾಥಾನಂದರಿಗೆ ಕಾಶ್ಮೀರವೆಂದರೆ ಬಹಳ ಪ್ರೀತಿ. ರಾಮಕೃಷ್ಣ ಸಂಘದ ಕರಾಚಿ ಕೇಂದ್ರದ ಅಧ್ಯಕ್ಷರಾಗಿದ್ದಾಗ, ಅವರು ೧೯೪೫ರಲ್ಲಿ ಕಾಶ್ಮೀರಕ್ಕೆ ಪ್ರಥಮ ಭೇಟಿ ಕೊಟ್ಟಿದ್ದರು. ಆಗ ಖಾನ್ ಅಬ್ದುಲ್ ಗಫಾರ್ ಖಾನ್ (ಗಡಿನಾಡ ಗಾಂಧಿ), ಮೌಲಾನಾ ಅಬುಲ್ ಕಲಾಂ ಅಜಾದ್ ಮತ್ತು ಪಂಡಿತ ಜವಾಹರಲಾಲ್ ನೆಹರೂ ಕಾಶ್ಮೀರದಲ್ಲಿದ್ದರು. ಶೇಖ್ ಮೊಹಮದ್ ಅಬ್ದುಲ್ಲಾ ಕಾಶ್ಮೀರದ ದೊಡ್ಡ ರಾಜಕೀಯ ನೇತಾರ. 'ಶೇರ್‌ಲೇ–ಕಾಶ್ಮೀರ್' ಎಂದು ಜನಪ್ರಿಯರಾಗಿದ್ದರು. ಸ್ವಾಮಿಗಳು ಎಲ್ಲರನ್ನೂ ಭೇಟಿಮಾಡಿದರು. ಸ್ವಾಮಿಗಳ ವಿದ್ವತ್ ಮತ್ತು ಪ್ರೇರಕಶಕ್ತಿಯಿಂದ ನೆಹರೂ ಪ್ರಭಾವಿತರಾದರು. ಮುಂದೆ ಸ್ವಾಮಿಜಿಯವರು ದೆಹಲಿ ಕೇಂದ್ರದ ಕಾರ್ಯದರ್ಶಿಯಾದಾಗ ನೆಹರೂ ಸಂಪರ್ಕ ನಿಕಟವಾಯಿತು. ಶೇಖ್ ಅಬ್ದುಲ್ಲಾ ಕೂಡ ಸ್ವಾಮಿಗಳ ವ್ಯಕ್ತಿತ್ವದಿಂದ ಪ್ರಭಾವಿತರಾದರು. ೧೯೫೩ರ ಘಟನೆ ನಂತರ ಶೇಖ್‌ರನ್ನು ದಕ್ಷಿಣ ಭಾರತದ ಕೊಡೈಕೆನಾಲಿನ ವಿಶೇಷ ಕಾರಾಗೃಹದಲ್ಲಿ ಬಂಧನದಲ್ಲಿ ಇಟ್ಟಾಗ, ಸ್ವಾಮಿಗಳು ಅವರನ್ನು ಭೇಟಿಮಾಡಿ ಸಂಕುಚಿತ ರಾಜಕೀಯವನ್ನು ತ್ಯಜಿಸಿ, ಕಾಶ್ಮೀರಕ್ಕೆ ಸೀಮಿತಗೊಳಿಸದೆ ಇಡೀ ರಾಷ್ಟ್ರದ ಬಗ್ಗೆ ಚಿಂತನೆ ಮಾಡಲು ಹೇಳಿದರು. ಶೇಖ್‌ರು ಎರಡನೇ ಬಾರಿ ಕಾಶ್ಮೀರದ ಮುಖ್ಯ ಮಂತ್ರಿಯಾಗಿದ್ದಾಗ ನಮ್ಮ ಪ್ರಾರ್ಥನೆ ಮೇರೆ ಸ್ವಾಮಿಗಳು ಬಂದು ಕೆಲವು ಉಪನ್ಯಾಸಗಳನ್ನು ಕೊಟ್ಟರು. ಬಹಳಷ್ಟು ಪ್ರಜ್ಞಾಶಾಲಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು. ಒಂದು ಕಾರ್ಯಕ್ರಮಕ್ಕೆ ಶೇಖ್ ಅಧ್ಯಕ್ಷತೆ ವಹಿಸಿದ್ದರು. ಅವರು ಮಾಡಿದ ಭಾಷಣವನ್ನು ಶ್ರೀ ರಾಮಕೃಷ್ಣ ಸಂಘದ ಪತ್ರಿಕೆಯಲ್ಲಿ ಪ್ರಕಟ ಮಾಡಿದ್ದರು.

ಆಗಿನ ರಾಜ್ಯಪಾಲ ಡಾ.ಕರಣಸಿಂಗರು ಮುಂಚೆ ದೆಹಲಿಯಲ್ಲಿ ವಿದ್ಯಾರ್ಥಿಯಾಗಿದ್ದಾಗ ಉಪನಿಷತ್ತುಗಳನ್ನು ಅಧ್ಯಯನ ಮಾಡಬೇಕೆಂದು ಇಚ್ಛೆಪಟ್ಟರು. ಇದರ ಬಗ್ಗೆ ಡಾ.ರಾಧಾಕೃಷ್ಣನ್ ಬಳಿ ಪ್ರಸ್ತಾಪವಾದಾಗ ಅವರು ಸ್ವಾಮಿ ರಂಗನಾಥಾನಂದರನ್ನು ಭೇಟಿ ಮಾಡಲು ಹೇಳಿದರು.

೧೯೫೪ರಲ್ಲಿ ಸ್ವಾಮಿಗಳು ಶ್ರೀನಗರಕ್ಕೆ ಬಂದು ಕರಣನಗರದಲ್ಲಿ ಒಂದು ಬಾಡಿಗೆ ಮನೆಯಲ್ಲಿ ರಾಮಕೃಷ್ಣ ಕೇಂದ್ರವನ್ನು ಆರಂಭಿಸಿ ಎರಡು ತಿಂಗಳು ತಂಗಿದ್ದರು. ವಾರಾಂತ್ಯ ಉಪನ್ಯಾಸಗಳನ್ನು ಮಾಡುತ್ತಿದ್ದರು. ಡಾ. ಕರಣಸಿಂಗರು ಈ ಕೇಂದ್ರಕ್ಕೆ ಬಹಳ ಸಲ ಬಂದರು. ನಾನು ಆಗ ವಿದ್ಯಾರ್ಥಿಯಾಗಿದ್ದೆ. 'ಗೀತೆ' ಮತ್ತು ಉಪನಿಷತ್ತುಗಳ ಮೇಲೆ ಸ್ವಾಮಿಗಳು ಮಾಡುವ ಉಪನ್ಯಾಸಗಳಿಗೆ ಹೋಗುತ್ತಿದ್ದೆ. ದುರದೃಷ್ಟವಶಾತ್ ಎರಡು ವರ್ಷದ ನಂತರ ಈ ಕೇಂದ್ರ ಮುಚ್ಚಿಹೋಯಿತು. ಸ್ಥಳೀಯ ಭಕ್ತರೆಲ್ಲಾ ಸೇರಿ ಶಿವಾಲಯದಲ್ಲಿ ಇನ್ನೊಂದು ಖಾಸಗಿ ಕೇಂದ್ರ ಶುರುಮಾಡಿದರು. ಆಗ ನಾನು ಅದರ ಸಂಸ್ಥಾಪಕ ಕಾರ್ಯದರ್ಶಿಯಾದೆ. ಈಗ ಇದು ಸಂಘದ ಪರಿಪೂರ್ಣ ಕೇಂದ್ರವಾಗಿದೆ.

೧೮೯೭ ಮತ್ತು ೧೮೯೮ರಲ್ಲಿ ಸ್ವಾಮಿ ವಿವೇಕಾನಂದರು ಕಾಶ್ಮೀರಕ್ಕೆ ಭೇಟಿಕೊಟ್ಟಾಗ, ಅವರಿಗೆ ಒಂದು ಸಂಸ್ಕೃತ ಕಾಲೇಜು ಮತ್ತು ಮಠದ ಕೇಂದ್ರವನ್ನು ಪ್ರಾರಂಭ ಮಾಡುವ ಪ್ರಬಲ ಇಚ್ಛೆಯಿತ್ತು. ಅವರ ಕನಸನ್ನು

---

* ಶ್ರೀನಗರದ ರಾಮಕೃಷ್ಣ ಆಶ್ರಮದೊಂದಿಗೆ ನಿಕಟ ಸಂಬಂಧವನ್ನು ಇಟ್ಟುಕೊಂಡಿದ್ದವರು' 'ಶ್ರೀರಾಮಕೃಷ್ಣ ವಚನ ವೇದ'ವನ್ನು ಕಾಶ್ಮೀರಿ ಭಾಷೆಗೆ ಅನುವಾದ ಮಾಡಿದವರು.

ಸ್ವಾಮಿ ರಂಗನಾಥಾನಂದರು ಸತತ ಪ್ರಯತ್ನದಿಂದ ನನಸು ಮಾಡಿದರು. ೬೦ ಮತ್ತು ೮೦ರ ದಶಕದಲ್ಲಿ ಇಲ್ಲಿನ ಕೇಂದ್ರದಲ್ಲಿ ಬಹಳ ದಿನ ಉಳಿದು ಇಲ್ಲಿನ ಭಕ್ತಾದಿಗಳಿಗೆ ಸ್ಫೂರ್ತಿ ನೀಡಿದರು. ಜಮ್ಮುವಿನಲ್ಲಿ ಹೊಸ ಕೇಂದ್ರ ಪ್ರಾರಂಭವಾಗಿದೆ. ಈಗ ಇವು ಸಂಘದ ಪ್ರಮುಖ ಕೇಂದ್ರಗಳಾಗಿವೆ.

ಸ್ವಾಮಿಗಳ ವಾಸ್ತವ್ಯದಲ್ಲಿ ನಾನು ವಿಶ್ವವಿದ್ಯಾಲಯ ಮತ್ತು ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಅವರ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದೆ. ಬಾರಾಮುಲ್ಲಾದಲ್ಲಿರುವ ಮಿಲಿಟರಿ ಕೇಂದ್ರಕ್ಕೆ ಭೇಟಿಕೊಟ್ಟಾಗ, ಒಬ್ಬ ಸೇನಾನಾಯಕ ತನ್ನ ಸಹೋದ್ಯೋಗಿಗಳಿಗೆ ಕೊಡುವ ರೀತಿಯಲ್ಲಿ, ಅಧಿಕಾರಿಗಳಿಗೆ ಸ್ವಾಮಿಗಳು ಕೆಲವು ಅಮೂಲ್ಯ ಸಲಹೆಗಳನ್ನು ಕೊಟ್ಟರು.

ಒಂದು ಸಲ ಪಂಡಿತ ಮೋಹನ ಕ್ರಿಷನ್ ಟಿಕ್ಕೂ ಸ್ವಾಮಿಗಳನ್ನು ತಮ್ಮ ಮನೆಗೆ ಆಹ್ವಾನಿಸಿದರು. ಅವರಿಗೆ ಶ್ರೀನಗರದ ರಾಮಕೃಷ್ಣ ಆಶ್ರಮದ ಜತೆ ನಿಕಟ ಸಂಬಂಧವಿಟ್ಟು, ಅವರ ಶೇಖ್ ಮಂತ್ರಿಮಂಡಲದ ಸದಸ್ಯರಾಗಿದ್ದರು. ಶ್ರೀನಗರದ ಪ್ರತಿಷ್ಠಿತ ವ್ಯಕ್ತಿಗಳನ್ನು ಮನೆಗೆ ಕರೆದಿದ್ದರು. ಸಮಾಜದಲ್ಲಿ ಬುದ್ಧಿಜೀವಿಗಳ ಪಾತ್ರದ ಬಗ್ಗೆ ಚರ್ಚೆ ಮಾಡುತ್ತಿದ್ದಾಗ ಮಂತ್ರಿ ಟಿಕ್ಕೂ 'ಮಹರಾಜ್ ನನ್ನ ಬುದ್ಧಿಜೀವಿ ಎಂದು ಹೇಳಿಕೊಳ್ಳುವ ಸ್ನೇಹಿತ ಭಗವಾನ್ ಕೃಷ್ಣನ ಬಗ್ಗೆ ಕೀಳಾಗಿ ಒಂದು ಪುಸ್ತಕ ಬರೆದಿದ್ದಾನೆ. ಪತ್ರಿಕೆ ಮುಖಾಂತರ ಅವನಿಗೆ ಸೂಕ್ತ ಉತ್ತರ ಕೊಡಬೇಕೆಂದು' ಹೇಳಿದರು. ಅದಕ್ಕೆ ಸ್ವಾಮಿ 'ನೋಡಿ, ಅವನು ಸಾವಿರ ಪ್ರತಿಗಳನ್ನು ಪ್ರಕಟಿಸಬಹುದು. ಅವನ ಮೂರ್ಖ ನುಡಿಗೆ ನಾನು ಟೀಕೆ ಮಾಡಿದರೆ, ಅವನಿಗೆ ಅನುಚಿತ ಪ್ರಚಾರ ಸಿಕ್ಕಿ, ಬಹಳ ಜನ ಅವನ ಪುಸ್ತಕ ಖರೀದಿ ಮಾಡುತ್ತಾರೆ. ಅವನ ಉದ್ದೇಶಗಳು ಸಾರ್ಥಕವಾಗುತ್ತದೆ. ಆದ್ದರಿಂದ ಅದನ್ನು ಉಪೇಕ್ಷೆ ಮಾಡುವುದೇ ಒಳ್ಳೆಯದು' ಎಂದು ಉತ್ತರಿಸಿದರು.

ಒಮ್ಮೆ ನಾನು ಸ್ವಾಮಿಗಳನ್ನು ಶ್ರೀನಗರ ಆಶ್ರಮಕ್ಕೆ ಕರೆದುಕೊಂಡು ಹೋಗಿ, ಅದರ ಅಭಿವೃದ್ಧಿ ಯೋಜನೆಗಳ ಬಗ್ಗೆ ಚರ್ಚೆಮಾಡಿದೆ. ಇಡೀ ಪ್ರದೇಶವನ್ನು ನೋಡಿ 'ಚಮನ್, ಸಾಧಕರಿಗೆ ದೇವಸ್ಥಾನವಿದೆ. ಪಂಡಿತರಿಗೆ ವಾಚನಾಲಯವಿದೆ. ಆದರೆ ಈ ಜನರಿಗೆ ಏನದೆ?' ಎಂದು ಸ್ವಾಮಿ ಹೇಳಿ, ಆಶ್ರಮದ ಸುತ್ತ ವಾಸಿಸುವ ಮುಸ್ಲಿಂ ಸಮುದಾಯದ ಕಡೆಗೆ ಕೈತೋರಿಸಿದರು. 'ಅವರಿಗೆ ನಾವು ಏನು ಮಾಡಬಹುದು?' ಎಂದು ನಾನು ಕೇಳಿದೆ. ಕೂಡಲೇ ಅವರ ಉತ್ತರ 'ಒಂದು ವೈದ್ಯಕೀಯ ಕೇಂದ್ರ ಪ್ರಾರಂಭಿಸಿ. ಅವರಿಗೆ ಪ್ರಾಥಮಿಕ ವೈದ್ಯಕೀಯ ಸವಲತ್ತನ್ನು ಕೊಡಿ; ಜೀವ ಸೇವಾ ಶಿವ ಸೇವಾ.'

ನಾನು ಚಳಿಗಾಲದ ರಜೆಯಲ್ಲಿ ದೆಹಲಿಯಲ್ಲಿದ್ದೆ. ಸ್ವಾಮಿಗಳು ಹರ್ಯಾಣದಲ್ಲಿ ಪದವಿ ಪ್ರದಾನ ಭಾಷಣ ಮಾಡಲು ಹೈದರಾಬಾದಿನಿಂದ ಬಂದಿದ್ದರು. ನನ್ನನ್ನು ಅವರ ಜತೆ ಕರೆದುಕೊಂಡು ಹೋದರು. ಅಲ್ಲಿ ಪದವಿಪ್ರದಾನ ಕಾರ್ಯಕ್ರಮದ ಮೇಲ್ವಿಚಾರಕರು ಬಂದು ಸ್ವಾಮಿಗಳನ್ನು ಹತ್ತಿರದಲ್ಲೇ ಇದ್ದ ರೂಮಿಗೆ ವಿಶೇಷ ಗೌನು ಧರಿಸಲು ಕರೆದುಕೊಂಡು ಬನ್ನಿ ಎಂದು ನನಗೆ ಹೇಳಿದರು. ಇದನ್ನು ಕೇಳಿದ ಸ್ವಾಮಿ 'ನನ್ನ ಸಂನ್ಯಾಸಿ ಉಡುಪು ನಿಮ್ಮ ಗೌನಿಗಿಂತ ಶ್ರೇಷ್ಠ' ಎಂದು ಹೇಳಿ ಅದನ್ನು ಧರಿಸಲು ನಿರಾಕರಿಸಿದರು.

ಹಿಂದು ಸಂತ ಮತ್ತು ಸಂನ್ಯಾಸಿಗಳಿಂದ ಪ್ರಭಾವಿತರಾದ ಕಾಶ್ಮೀರದ ಒಬ್ಬ ಮುಸ್ಲಿಮ್ ಪ್ರಾಧ್ಯಾಪಕರು ದಕ್ಷಿಣ ಭಾರತದ ಶೈಕ್ಷಣಿಕ ಯಾತ್ರೆಯಿಂದ ವಾಪಸ್ಸು ಬಂದಿದ್ದರು. ಅವರು ರಮಣಾಶ್ರಮಕ್ಕೆ ಭೇಟಿ ನೀಡಿ ಅಲ್ಲಿನ ಪವಿತ್ರ ಅರುಣಾಚಲ ಬೆಟ್ಟದ ಪರಿಕ್ರಮ ಮಾಡಿ ಬಂದಿದ್ದರು. ಸ್ವಾಮಿ ರಂಗನಾಥಾನಂದರು ಕಾಶ್ಮೀರಕ್ಕೆ ಬಂದಾಗ ಅವರಿಂದ ಬಹಳ ಪ್ರಭಾವಿತರಾದರು. 'ಈ ಪ್ರಾಧ್ಯಾಪಕರ ಬಗ್ಗೆ ನಿಮ್ಮ ಅಭಿಪ್ರಾಯವೇನು?' ಎಂದು ಸ್ವಾಮಿಗಳ ಹತ್ತಿರ ವಿಚಾರಿಸಿದಾಗ, 'ಅವರ ಮುಸ್ಲಿಂ ದೇಹದಲ್ಲಿ ಹಿಂದುವಿನ ಆತ್ಮವಿದೆ' ಎಂದು ಉತ್ತರಿಸಿದರು.

ಕಾಶ್ಮಿರದ ಕೊನೆಯ ಭೇಟಿಯಲ್ಲಿ ರಂಗನಾಥಾನಂದರು 'ಶ್ರೀ ರಾಮಕೃಷ್ಣ ವಚನ ವೇದವು ಉರ್ದು ಮತ್ತು ಕಾಶ್ಮೀರಿಗೆ ಅನುವಾದವಾಗಿದೆಯೇ, ಚಮನ್?' ಎಂದು ಕೇಳಿದರು. 'ಮಹರಾಜ್ ಉರ್ದುವಿನ ಬಗ್ಗೆ

ನನಗೆ ಗೊತ್ತಿಲ್ಲ. ಆದರೆ ಕಾಶ್ಮೀರಿ ಭಾಷೆಗೆ ಅನುವಾದವಾಗಿಲ್ಲ' ಎಂದು ಹೇಳಿದೆ. 'ಅದನ್ನು ಮಾಡು' ಎಂದು ತಕ್ಷಣ ಅವರ ಆದೇಶ ಬಂತು.

ನಾನು ಕಾಶ್ಮೀರಿ ಅನುವಾದವನ್ನು ಅವರ ಮಹಾಸಮಾಧಿಯಾಗುವ ಮುಂಚೆ ಪ್ರಕಟಿಸಿದೆ. ಅದರ ಮೊದಲನೆ ಪ್ರತಿಯನ್ನು ಬೇಲೂರು ಮಠದ ರಾಮಕೃಷ್ಣ ದೇವಸ್ಥಾನದ ಮುಖ್ಯ ಪೂಜಾರಿಗಳಿಗೆ ಠಾಕೂರರ ಜನ್ಮದಿನದಂದು ಸಮರ್ಪಣೆ ಸಲುವಾಗಿ ಎರಡನೇ ಪ್ರತಿಯನ್ನು ಮಹಾಸಂಘದ ಅಧ್ಯಕ್ಷರಾದ ಸ್ವಾಮಿ ರಂಗನಾಥಾನಂದರಿಗೆ ಕಳುಹಿಸಿದೆ. ಅದನ್ನು ಸ್ವಾಮಿಗಳು ತಲೆಯಲ್ಲಿ ಧರಿಸಿ ಅನಂತರ ಗ್ರಂಥಾಲಯದಲ್ಲಿ ಇಡಲು ತಮ್ಮ ಪರಿಚಾರಕರಿಗೆ ಹೇಳಿದರು ಎಂದು ಆಮೇಲೆ ನನಗೆ ತಿಳಿಯಿತು. ಅನುವಾದ ಮಾಡಿದ್ದಕ್ಕೆ ಮೆಚ್ಚುಗೆಯ ಪತ್ರ ನನಗೆ ಬರೆದರು. ತಮ್ಮ ಭಕ್ತರಿಂದ ಸಂಗ್ರಹ ಮಾಡಿದ ಹಣವನ್ನು ಪ್ರಕಟಣೆ ಮಾಡಿದ ಶ್ರೀನಗರ ಆಶ್ರಮಕ್ಕೆ ಕಳುಹಿಸಿದರು ಎಂದು ಹೇಳುವ ಅಗತ್ಯವಿಲ್ಲ.

ಭಕ್ತಾದಿಗಳಲ್ಲಿ ಅವರ ಜನಪ್ರಿಯತೆಗೆ ಸಾಟಿಯಿಲ್ಲ. ಶ್ರೀನಗರದಲ್ಲಿ ಭಕ್ತರಿಂದ ಆಹ್ವಾನ ಬರುತ್ತಿತ್ತು. ಆದರೆ ಪ್ರತಿಯೊಬ್ಬರ ಮನೆಗೆ ಅವರನ್ನು ಕರೆದುಕೊಂಡು ಹೋಗುವುದು ಕಾರ್ಯತಃ ಅಸಾಧ್ಯವಾಗಿತ್ತು. ಅದಕ್ಕೆ ಸ್ವಾಮಿಜಿ ಒಂದು ಉಪಾಯ ಕಂಡುಹಿಡಿದರು. "ಉತ್ಕೃಷ್ಟವಾದ ಒಂದು ಕಾಶ್ಮೀರಿ ಭಕ್ಷ್ಯ ತಯಾರಿಮಾಡಿಕೊಂಡು ಇಲ್ಲಿಗೆ ತನ್ನಿ. ನಾವೆಲ್ಲರೂ ಸೇರಿ ಹಂಚಿಕೊಂಡು ತಿನ್ನೋಣ" ಎಂದು ಹೇಳಿದರು.

ನಾವು ಸುಮಾರು ನಲವತ್ತು ಭಕ್ತಾದಿಗಳು ಮನೆಗಳಿಂದ ತಯಾರು ಮಾಡಿದ ಭಕ್ಷ್ಯ ತಂದು ಪುಷ್ಕಳ ಭೋಜನ ಮಾಡಿ ಆನಂದಿಸಿದೆವು. ಸ್ವಾಮಿಗಳು ಮಾತ್ರ ತಮ್ಮ ನಿಯಮಿತ ಆಹಾರವಾದ ಹೆಚ್ಚಾಗಿ ಬೇಯಿಸದ ತರಕಾರಿಗಳನ್ನು ತೆಗೆದುಕೊಳ್ಳುತ್ತಿದ್ದರು. ಅದನ್ನು ನಿರ್ಗುಣ ಆಹಾರವೆಂದು ಕರೆಯುತ್ತಿದ್ದರು. ಸ್ವಾಮಿಗಳ ಭಕ್ತೆ ಹಾಗೂ ಕಾಶ್ಮೀರದ ರಾಜ್ಯಪಾಲರ ಹೆಂಡತಿ ಶ್ರೀಮತಿ ಮೇಖಲಾ ಝಾ ಕೂಡ ಇದ್ದರು. ನೂರಾರು ಭಕ್ಷ್ಯಗಳನ್ನು ಒಟ್ಟಿಗೆ ಬಡಿಸಿದ್ದನ್ನು ನೋಡಿ ಅವರಿಗೆ ಆಶ್ಚರ್ಯವಾಗಿತ್ತು. "ಎಂತಹ ಅದ್ಭುತ ಭೋಜನ ಮಾಡಿ ಆನಂದಪಟ್ಟೆವು, ಆದರೆ ಸ್ವಾಮಿಜಿ ನೀವು ಅದರಲ್ಲಿ ಏನನ್ನೂ ತೆಗೆದುಕೊಳ್ಳಲಿಲ್ಲ" ಎಂದು ಹೇಳಿದರು. "ಬಹುಮುಖಿ ಭೋಜನ ಸೇವನೆಯಿಂದ ನಾನು ಆನಂದಪಡುತ್ತೇನೆ. ಇದು ಜಹಗೀರುದಾರರ ಔತಣ" ಎಂದು ಉತ್ತರ ಕೊಟ್ಟರು. ಹೀಗಿತ್ತು ಅವರ ಹಾಸ್ಯ ಚತುರೋಕ್ತಿ ಮತ್ತು ವಿವೇಕ.

ಸ್ವಾಮಿಗಳ ಐವತ್ತು ವರ್ಷದ ಒಡನಾಟದ ನೆನಪಿನಿಂದ ಕೆಲವು ಪ್ರಮುಖ ಘಟನೆಗಳನ್ನು ಆಯ್ದು ತಿಳಿಸಿದ್ದೇನೆ.

* * * *

# ೫೬. ಒಬ್ಬ ಪ್ರಾಮಾಣಿಕ ಗುರು

**–ಲಾಲಿರಾಮು ರಾಮದಾಸ್***

ಸ್ವಾಮಿ ರಂಗನಾಥಾನಂದರು ಒಬ್ಬ ನಿಜವಾದ ಗುರು. ಕಾವಿಧಾರಿಗಳನ್ನು ಕಂಡರೆ ನನಗೆ ಸ್ವಲ್ಪ ಸಂಶಯ. ಆದರೆ ಈ ಸ್ವಾಮಿಗಳು ಬೇರೆ ವಿಧ. ದೆಹಲಿ ರಾಮಕೃಷ್ಣ ಮಿಷನ್‌ನಲ್ಲಿ ನಡೆಯುತ್ತಿದ್ದ ಸ್ವಾಮಿಗಳ ಪ್ರವಚನಕ್ಕೆ ನನ್ನ ಹೆಂಡತಿ ಲಲಿತ ತಪ್ಪದೆ ಹೋಗುತ್ತಿದ್ದಳು. ಅವಳ ಮುಖಾಂತರ ನಾನು ಸ್ವಾಮಿಗಳನ್ನು ಭೇಟಿಮಾಡಿದೆ.

೧೯೬೦ರಲ್ಲಿ ನಾನು ನೌಕಾ ಪಡೆಯ ಚಿಕ್ಕ ಅಧಿಕಾರಿ. ಆಗ ಪ್ರಥಮ ಭೇಟಿ. ನಾವಿಕ ವೃತ್ತಿಯಲ್ಲಿರುವ ತನಕ ಮತ್ತು ಅನಂತರವೂ, ನನ್ನ ಹಾಗೂ ಸ್ವಾಮಿಗಳ ಒಡನಾಟ ಮತ್ತು ಪರಸ್ಪರ ವಿಚಾರ ವಿನಿಮಯ ಒಂದು ಸುದೀರ್ಘ ಪ್ರಯಾಣ. ನಿಯಮಿತವಾಗಿ ಭೇಟಿ ಮಾಡುತ್ತಿದ್ದ ನನಗೆ ಯಾವಾಗಲೂ ಸ್ವಾಮಿಗಳಿಂದ ಸ್ವಾಗತ ಇತ್ತು. ನನಗೆ ಅವರು ಸ್ಫೂರ್ತಿಯ ದೊಡ್ಡ ಚಿಲುಮೆ ಮತ್ತು ಮಾದರಿ. ನಾನು ನಾವಿಕ ಪದವಿಯಲ್ಲಿ ಮತ್ತು ಜವಾಬುದಾರಿಯಲ್ಲಿ ಮೇಲೆ ಏರುತ್ತಿದ್ದ ಹಾಗೆ, ಅವರಿಗೆ ಯಾವಾಗಲೂ ತಿಳಿಸುವ ವ್ಯವಸ್ಥೆ ಮಾಡಿದ್ದೆ. ನಮ್ಮ ಕಲ್ಪನೆಗಿಂತ ಜಾಸ್ತಿ ಚುರುಕಾಗಿದ್ದರು. ನಿರ್ಣಾಯಕರು ತಿಳಿಸುವ ಮುಂಚೆಯೇ ಏನು ಆಗುತ್ತಾ ಇದೆ ಎಂದು ಸ್ವಾಮಿಗಳಿಗೆ ಗೊತ್ತಾಗುತ್ತಿತ್ತು.

೧೯೭೫ರಲ್ಲಿ ಪಶ್ಚಿಮ ಜರ್ಮನಿಯ ಬಾನ್ ರಾಜಧಾನಿಯಲ್ಲಿ ನಾನು ಭಾರತದ ದೂತಾವಾಸದ ನಾವಿಕ ಅಧಿಕಾರಿಯಾಗಿದ್ದೆ. ಒಮ್ಮೆ ಸ್ವಾಮಿಗಳನ್ನು ನಮ್ಮ ಮನೆಯಲ್ಲಿ ಉಳಿಸಿಕೊಂಡಿದ್ದು ನಮಗೆ ಅತ್ಯಂತ ಆನಂದದ ಸಂಗತಿ. ಆಗ ಅವರು ನಿಯತ ಪ್ರಯಾಣ ಮತ್ತು ಉಪನ್ಯಾಸ ಪ್ರವಾಸದಲ್ಲಿದ್ದರು. ಅಭ್ಯಾಗತರು, ಶ್ರೋತೃಗಳ ಮೇಲೆ ಸ್ವಾಮಿಗಳಿಗೆ ಇದ್ದ ಚುಂಬಕದಂತಹ ಆಕರ್ಷಣೆಯನ್ನು ಮೆಚ್ಚದೆ ವಿಧಿಯಿಲ್ಲ. ಮೆಲ್ಲಗೆ ಸಾವಧಾನವಾಗಿ ಯೋಚಿಸಿ ಆಳವಾಗಿ ವಿವೇಕಯುಕ್ತ ಮಾತನಾಡುವ ಅವರ ವಿಧಾನ ಬಹಳ ಅದ್ಭುತವಾದದ್ದು. ಅವರು ನಡೆದಾಡುವ ವಿಶ್ವಕೋಶ. ಪರಮಾಣು ಭೌತಶಾಸ್ತ್ರದ ಮೇಲೆ ಲೀಲಾಜಾಲವಾಗಿ ಮಾತನಾಡುವ ಹಾಗೆ ವೇದಾಂತದ ಮೇಲೆ ಮಾತನಾಡುತ್ತಿದ್ದರು. ನನ್ನ ಅಧಿಕಾರಿಗಳಿಗೆ ಮತ್ತು ಅವರ ಕುಟುಂಬದ ಸದಸ್ಯರಿಗೆ ಸ್ವಾಮಿಗಳ ವಿಪುಲ ಜ್ಞಾನದ ಬಗ್ಗೆ ತಪ್ಪದೆ ಪರಿಚಯ ಮಾಡಿಸುತ್ತಿದ್ದೆ. ಅವರು ಯಾವಾಗಲೂ ದಯಾವಂತರು ಮತ್ತು ಉಪಕಾರಶೀಲರು ಆಗಿರುತ್ತಿದ್ದರು.

ನಾನು ೧೯೮೦ರಲ್ಲಿ ಪ್ರಧಾನ ನೌಕಾಧಿಪತಿಯಾಗಿದ್ದಾಗ, ಪಶ್ಚಿಮ ನೌಕಾಪಡೆಯ ಸಮಸ್ತರನ್ನೂ ಉದ್ದೇಶಿಸಿ ಭಾಷಣ ಮಾಡಿದರು. ಬರ್ಟ್ರೆಂಡ್ ರಸಲ್ [ಜೂಲಿಯನ್ ಹಕ್ಸಲಿ] ಜತೆ ಸ್ವಾಮಿಗಳು ಮಾಡಿದ ಪತ್ರಗಳ ವಿನಿಮಯ ಈವತ್ತಿಗೂ ಅಧ್ಯಯನಕ್ಕೆ ಯೋಗ್ಯವಾಗಿವೆ. *Message of the Upanishads* ಮತ್ತು *Eternal Values for a Changing Society* ಮುಂತಾದ ಅವರ ಮಹಾನ್ ಕೃತಿಗಳು ನನ್ನ ಚಿಂತನೆಯನ್ನು ಪ್ರಭಾವಗೊಳಿಸಿವೆ.

---

* ನಿವೃತ್ತ ಪ್ರಧಾನ ನೌಕಾಧಿಪತಿ, ಪಶ್ಚಿಮ ನೌಕಾಪಡೆ.

ಸ್ವಾಮಿಗಳು ದಣಿಯದ ವಾಗ್ಮಿಗಳು, ಚಿಂತನಶೀಲರು, ಕರ್ತೃತ್ವಶಾಲಿಗಳು ಮತ್ತು ಮಾರ್ಗದರ್ಶಿಗಳು. ನಿಜವಾಗಿಯೂ ಅವರು ಅದ್ಭುತ ಬೌದ್ಧಿಕ ಮತ್ತು ಆಧ್ಯಾತ್ಮಿಕ ವ್ಯಕ್ತಿ. ಅವರು ನಮ್ಮ ಜತೆಯಲ್ಲಿ ಇರದಿರಬಹುದು ಆದರೆ ಅವರ ಶಾಂತ ಮತ್ತು ಪ್ರೀತಿಯ ವ್ಯಕ್ತಿತ್ವ ಸರ್ವತ್ರಗೋಚರ.

* * * *

# ೫೭. ಒಬ್ಬ ಮಹಾನ್ ಸಂತ ಮತ್ತು ಮಾನವತಾವಾದಿ

–ಎಂ.ಲಕ್ಷ್ಮೀಕುಮಾರಿ*

ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾಗಿದ್ದ ಪರಮ ಪೂಜ್ಯ ಸ್ವಾಮಿ ರಂಗನಾಥಾನಂದರ ಬಗ್ಗೆ ಯೋಚನೆ ಮಾಡಿದಾಗ ಸ್ವಾಮಿ ವಿವೇಕಾನಂದರ ಎರಡು ಸೂಕ್ತಿಗಳು ನಮ್ಮ ಮನಸ್ಸಿನಲ್ಲಿ ನಿಚ್ಚಳವಾಗಿ ಹೊಳೆಯುತ್ತವೆ:

೧) ಮನುಷ್ಯನಲ್ಲಿ ಸುಪ್ತವಾಗಿರುವ ಪೂರ್ಣತೆಯ ಅಭಿವ್ಯಕ್ತಿಯೇ ಶಿಕ್ಷಣ.

೨) ಮನುಷ್ಯನಲ್ಲಿ ಸುಪ್ತವಾಗಿರುವ ದೈವತ್ವದ ಅಭಿವ್ಯಕ್ತಿಯೇ ಧರ್ಮ.

ಮಾನವನಲ್ಲಿ ಸುಪ್ತವಾಗಿರುವ ಅಪರಿಮಿತ ಅಂತಃಸತ್ವವನ್ನು ಸತತ ಸ್ವಪ್ರಯತ್ನದಿಂದ ಪಡೆಯಬೇಕು ಎಂದು ಸೂಚಿಸುವ ವಿವೇಕಾನಂದರ ಪ್ರಗಲ್ಭ ಸೂಕ್ತಿಗಳು ಸ್ವಾಮಿ ರಂಗನಾಥಾನಂದರ ಜೀವನವನ್ನು ಸರಿಯಾಗಿ ವರ್ಣಿಸುತ್ತವೆ. ಶ್ರೀ ರಾಮಕೃಷ್ಣ ಪರಮಹಂಸ ಮತ್ತು ಅವರ ಮಹಾನ್ ಶಿಷ್ಯ ಸ್ವಾಮಿ ವಿವೇಕಾನಂದರ ಬಗ್ಗೆ ಕೇಳಿ, ಶ್ರೀಮಾತೆಯವರ ಪರಿಶುದ್ಧ ಜೀವನವನ್ನು ಕುರಿತು ತ್ರಿಶೂರಿನ ಹೊರವಲಯದಲ್ಲಿರುವ ತ್ರಿಕ್ಕೂರಿನ ಹಳ್ಳಿಯ ಹುಡುಗ ಶಂಕರನ್ ಅಧ್ಯಯನ ಮಾಡಿದ. ದಿವ್ಯ ಚೇತನಗಳು ಸಂಗೀತಕೃತಿಗಳನ್ನು ರಚಿಸಿ ಇಟ್ಟಿದ್ದರು. ಬಾಲಕ ಶಂಕರನ್ ತನ್ನನ್ನು ಶ್ರುತಿ ಮಾಡಿಕೊಂಡಾಗ ಆ ಸಂಗೀತ ಅವನಲ್ಲಿ ಅನುರಣಿತವಾಗಿ ಸ್ವಾಮಿ ರಂಗನಾಥಾನಂದ ರೂಪದಲ್ಲಿ ಹರಿದುಬಂತು. ಅವರು ಜ್ಞಾನನಿಧಿ, ಅಧ್ಯಾತ್ಮ ಪ್ರಜ್ಞೆ ಹಾಗೂ ಪ್ರಸ್ತುತ ಆಧುನಿಕ ಬೇಡಿಕೆಗಳಿಗೆ ಸರಿಹೊಂದುವ ಅಧ್ಯಾತ್ಮದ ಪ್ರತೀಕವಾಗಿದ್ದರು.

ತ್ರಿಶೂರಿನಲ್ಲಿರುವ 'ಲಕ್ಷ್ಮೀನಿಲಯಮ್' ಎಂಬ ನಮ್ಮ ಮನೆಯಲ್ಲಿ ಸ್ವಾಮಿಗಳ ಗೌರವಾರ್ಥ ರಾತ್ರೆ ಭಿಕ್ಷೆ ವ್ಯವಸ್ಥೆ ಮಾಡಿದಾಗ ಅವರನ್ನು ನೋಡಿದ ಮೊದಲ ನೆನಪು. ನಾನಾಗ ೮ ವರ್ಷ ಅಥವಾ ೯ ವರ್ಷದ ಬಾಲಿಕೆ. ಬಹಳ ಸಂನ್ಯಾಸಿಗಳು ಮತ್ತು ಗೃಹಸ್ಥರು ಬಂದಿದ್ದರು. ಇಂಗ್ಲೀಷ್ ಮತ್ತು ಮಲಯಾಳಂನಲ್ಲಿ ಮಾತುಕತೆ. ನಾನು ಅಲ್ಲಿ ಓಡಾಡುತ್ತಿದ್ದೆ. ನನಗೆ ಗೊತ್ತಿದ್ದ ಕೆಲವು ಇಂಗ್ಲಿಷ್ ಶಬ್ದಗಳನ್ನು ಕೇಳಿ ಆಕರ್ಷಿತಳಾಗಿದ್ದೆ. ಸ್ವಾಮಿಗಳಿಗೆ ನನ್ನ ಪರಿಚಯ ಮಾಡಿಕೊಡಲಾಯಿತು ಎಂದು ನನ್ನ ನೆನಪು.

ನನ್ನ ತಂದೆ ದಿವಂಗತ ಪಿ.ರಾಮನ್ ಮೆನನ್ ರಾಮಕೃಷ್ಣ ಸಂಘದ ಮುನ್ನಡೆಯಲ್ಲಿ ಬಹಳವಾಗಿ ತೊಡಗಿಸಿಕೊಂಡಿದ್ದರು. ಸ್ವಾಮಿಗಳು ತ್ರಿಶೂರಿಗೆ ಭೇಟಿಕೊಟ್ಟಾಗಲೆಲ್ಲಾ ಅವರ ಸತ್ಕಾರ ಮತ್ತು ಕಾರ್ಯಕ್ರಮಗಳನ್ನು ಏರ್ಪಡಿಸುವುದರಲ್ಲಿ ಯಾವಾಗಲೂ ಮುಂಚೂಣಿಯಲ್ಲಿದ್ದರು. ನನ್ನ ೧೪ನೇ ವಯಸ್ಸಿನಲ್ಲಿ ತ್ರಿಶೂರನ್ನು ಬಿಟ್ಟು ಕಾಲೇಜು ವಿದ್ಯಾಭ್ಯಾಸಕ್ಕೆ ಎರ್ನಾಕುಲಂಗೆ ಹೋದೆ. ಮತ್ತೆ ಅಲ್ಲಿಂದ ತಿರುವನಂತಪುರಂ ಮತ್ತು ೧೯೫೪ರ ಸುಮಾರಿನಲ್ಲಿ ಚೆನ್ನೈಗೆ ಹೋದೆ. ೧೯೫೪ರಿಂದ ೧೯೬೪ರ ತನಕ ಚೆನ್ನೈಯಲ್ಲಿ ಇದ್ದಾಗ ಸ್ವಾಮಿಗಳ ಜತೆ ನನ್ನ ನಿಜವಾದ ಪರಿಚಯಾತ್ಮಕ ತೆರವು ಪ್ರಾರಂಭವಾಯಿತು. ಅವರು ಚೆನ್ನೈ ಮಠದಲ್ಲಿ ಇದ್ದಾಗ, ಅವರ ಉಪನ್ಯಾಸಗಳಿಗೆ ಹೋಗುತ್ತಿದ್ದೆ ಮತ್ತು ಆಗಾಗ ಖುದ್ದಾಗಿ ಭೇಟಿಮಾಡುತ್ತಿದ್ದೆ. ತಮ್ಮ ಸ್ನೇಹಿತರ ಮಗಳೆಂದು ಅವರಿಗೆ ನನ್ನ ಮೇಲೆ ವಿಶೇಷ ಆಸಕ್ತಿ. ಅವರ ಉಪನ್ಯಾಸಗಳಿಂದ ವಿಪುಲ ಟಿಪ್ಪಣಿಗಳನ್ನು ಬರೆದುಕೊಳ್ಳುತ್ತಿದ್ದೆ. ಇವುಗಳಿಂದ

* ಮಾಜಿ ಅಧ್ಯಕ್ಷೆ, ವಿವೇಕಾನಂದ ಕೇಂದ್ರ, ಕನ್ಯಾಕುಮಾರಿ; ಹಾಲಿ ಅಧ್ಯಕ್ಷೆ, ವೇದಸಂಸ್ಥಾನ ವಿವೇಕಾನಂದ ಕೇಂದ್ರ, ಕೊಡಂಗಲ್ಲೂರ್, ಕೇರಳ.

ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳ ಮೇಲೆ ನನಗಿದ್ದ ಭಕ್ತಿ ದೃಢವಾಗಲು ಸಹಾಯವಾಯಿತು. ನನ್ನ ಮಟ್ಟಿಗೆ ಸ್ವಾಮಿ ರಂಗನಾಥಾನಂದರು, ಸ್ವಾಮಿ ವಿವೇಕಾನಂದರ ಜೀವಂತ ಪ್ರತೀಕ.

೧೯೬೮ರಲ್ಲಿ ನಾನು ಚೆನ್ನೈ ಬಿಟ್ಟು ನೌಕರಿಗೆ ಸೇರಲು ತಿರುಪತಿಗೆ ಹೋದೆ. ಎರಡು ವರ್ಷದ ನಂತರ 'ಪೋಸ್ಟ್‌ಡಾಕ್ಟರೇಟ್ ಫೆಲೋ' ಆಗಿ ಸೋವಿಯಟ್ ಒಕ್ಕೂಟಕ್ಕೆ ಹೋದೆ. ಭಾರತಕ್ಕೆ ವಾಪಸ್ಸು ಬಂದ ಮೇಲೆ, ದೆಹಲಿಯಲ್ಲಿರುವ ಇಂಡಿಯನ್ ಅಗ್ರಿಕಲ್ಚರ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಕೆಲಸಕ್ಕೆ ಸೇರಿದೆ. ಆಗ ಸ್ವಾಮಿಗಳ ಜತೆ ನನ್ನ ವೈಯಕ್ತಿಕ ಸಂಬಂಧ ವಿಕಸಿತವಾಯಿತು. ಅವರು ನನ್ನ ಮಿತ್ರ, ತತ್ವಜ್ಞಾನಿ ಮತ್ತು ಮಾರ್ಗದರ್ಶಕರಾದರು. ದೆಹಲಿಗೆ ಆಗಾಗ ಬರುತ್ತಿದ್ದರು. ಅವರನ್ನು ಭೇಟಿಮಾಡುವ ಮತ್ತು ಅವರ ಉಪನ್ಯಾಸಗಳನ್ನು ಕೇಳುವ ಅವಕಾಶಗಳನ್ನು ಎಂದೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ನನ್ನ ಮೇಲೆ ಅವರ ವಾತ್ಸಲ್ಯ ವ್ಯಾಪಕವಾಗಿ ಹರಡಿ ರಾಮಕೃಷ್ಣ ಮಠದವರೆಲ್ಲಾ ನನಗೆ ಪ್ರೀತಿ–ವಿಶ್ವಾಸ ತೋರಿಸಲು ಶುರು ಮಾಡಿದರು. ಸ್ವಾಮಿ ವಿವೇಕಾನಂದರ ಮೇಲೆ ನನಗಿದ್ದ ನಿಷ್ಠೆ ಸ್ವಾಮಿಗಳಿಗೆ ಗೊತ್ತಾಯಿತು ಮತ್ತು ನನಗೆ ಸರ್ವ ವಿಧದ ಉತ್ತೇಜನ ಕೊಟ್ಟರು.

೧೯೭೫ರಿಂದ ನಾನು ದೆಹಲಿಯ ವಿವೇಕಾನಂದ ಕೇಂದ್ರದ ಜತೆಗೆ ಸಂಪರ್ಕವಿಟ್ಟುಕೊಂಡೆ. ವಿವಿಧ ಕಾರ್ಯಕ್ರಮಗಳ ಬಗ್ಗೆ, ಕೇಂದ್ರದಿಂದ ಬಂದಿದ್ದ ನಾವು ಕೆಲವರು ಸ್ವಾಮಿಗಳ ಜತೆ ಚರ್ಚೆಮಾಡುತ್ತಿದ್ದೆವು. ಅವರಿಗೆ ಕೇಂದ್ರದ ಬಗ್ಗೆ ಬಹಳ ಗೌರವವಿತ್ತು. ಹಾಗಾಗಿ ಕೇಂದ್ರದ ಜತೆ ನನಗಿದ್ದ ಒಲವನ್ನು ತಿಳಿದು ಸಂತೋಷಪಟ್ಟರು. ಅವರು ಕೇಂದ್ರದ ಸ್ಥಾಪಕರಾದ ಶ್ರೀ ಏಕನಾಥ ರಾನಡೆಯವರ ನಿಕಟ ಸ್ನೇಹಿತರು ಮತ್ತು ಅದರ ಒಳ್ಳೆಯ ವಕ್ತಾರರು ಎಂಬುದು ಕೇಂದ್ರದ ಬಗ್ಗೆ ನನಗಿದ್ದ ಆಕರ್ಷಣೆ. ಇದು ನಮ್ಮಿಬ್ಬರ ಬಾಂಧವ್ಯವನ್ನು ಬಲಪಡಿಸಿತು.

ಒಮ್ಮೆ ನಾನು ಕೆಲಸ ಬಿಟ್ಟು ವಿವೇಕಾನಂದ ಕೇಂದ್ರ ಸೇರುವ ಇಚ್ಛೆಯನ್ನು ತಿಳಿಸಿದೆ. ಆಗ ಅವರು ಕೊಟ್ಟ ಉಪದೇಶ, ಉದಾಹರಣೆಯೋಗ್ಯವಾಗಿದೆ: "ಗಾಯಗಳಿಂದ ತುಂಬಿದ ಕೀವು ಮತ್ತು ರಕ್ತ ಸೋರುವ ಕುಷ್ಠರೋಗಿಯ ದೇಹದಂತೆ ನಮ್ಮ ಸಮಾಜವಿದೆ. ಮರು ಹುಟ್ಟುವ ಒಂದು ಆರೋಗ್ಯಕರವಾದ ಅಂಗಸತ್ವ ಇಲ್ಲ. ನೀನು ಆರೋಗ್ಯವಾದ ಅಂಗಸತ್ವವಾಗಿ ಇರು. ಇದ್ದ ಜಾಗದಲ್ಲಿ ನೀನು ಇರು. ಶ್ರದ್ಧಾ ಭಕ್ತಿ ನಿರಪೇಕ್ಷೆಯಿಂದ ಕೆಲಸಮಾಡು, ನಿಷ್ಕಾಮ ಸೇವಾ ಮನೋಭಾವವನ್ನು ಬೆಳೆಸಿಕೋ" ಎಂದು ಹೇಳಿದರು. ಹೀಗೆ ನಿಜ ಕರ್ತವ್ಯದ ಬಗ್ಗೆ ಸ್ವಾಮಿಗಳ ಉಪದೇಶ ನನ್ನ ಕಣ್ಣು ತೆರೆಸಿತು. ಸ್ವಾಮಿ ವಿವೇಕಾನಂದರ ಆದರ್ಶ ಕರ್ಮಯೋಗ ಮತ್ತು 'ಭಗವದ್ಗೀತೆ' ಶ್ರೀಕೃಷ್ಣನ ಉವಾಚಯಲ್ಲಿನ ವಾದ 'ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಾಃ' (೧೮–೪೬) ನನ್ನ ಮನಸ್ಸಿನಲ್ಲಿ ದೃಢವಾಗಿ ನೆಲೆಸಿತು.

ಸ್ವಾಮಿಗಳ ಉಪದೇಶ ನನಗೆ ಬಹಳ ಸಹಕಾರಿಯಾಯಿತು. ಅನಂತರ ಕರ್ಮ ಯೋಗಾಧಾರಿತ ನೈತಿಕತೆಯನ್ನು ಬೆಳೆಸಿಕೊಂಡೆ. ನಿಷ್ಕಾಮ ಕರ್ಮ ನನ್ನ ಆದರ್ಶವಾಯಿತು. ನಿರ್ಲಿಪ್ತತೆ ಭಾರತೀಯ ಕೃಷಿ ಸಂಶೋಧನೆ ಸಂಸ್ಥೆಯಲ್ಲಿನ ನನ್ನ ವೃತ್ತಿಜೀವನಕ್ಕೆ ಸಹಾಯವಾಯಿತು.

೧೯೮೧ರಲ್ಲಿ ಪರಿಸ್ಥಿತಿಗಳು ಬದಲಾದವು. ಏಕನಾಥಜಿಯವರಿಗೆ ಪಾರ್ಶ್ವವಾಯುವಾಗಿ, ಚೇತರಿಸಿಕೊಳ್ಳಲು ಬಹಳ ಸಮಯ ಬೇಕಾಯಿತು. ಅದೃಷ್ಟವಶಾತ್ ಚೇತರಿಸಿಕೊಳ್ಳುವಾಗ ಸ್ವಲ್ಪ ಸಮಯ ಅವರು ದೆಹಲಿಯಲ್ಲಿದ್ದರು. ಆಗ ಅವರ ಜತೆ ಬಹಳ ಕಾಲ ಇರುವ ಸುಯೋಗ ನನ್ನದಾಯಿತು. ಹೆಚ್ಚು ಸಮಯ ವ್ಯರ್ಥಮಾಡದೆ, ವಿವೇಕಾನಂದರಿಗೆ ಸಮರ್ಪಿತವಾಗಿರುವಂಥ ಸೇವಾ ಜೀವನದಲ್ಲಿ ತೊಡಗಿಸಿಕೊಳ್ಳಲು ಅವರು ನಯವಾಗಿ ಪ್ರೇರೇಪಿಸುತ್ತಿದ್ದರು. ೧೯೮೧ರಲ್ಲಿ ನಾನು ವಿವೇಕಾನಂದ ಕೇಂದ್ರವನ್ನು ಸೇರಲು ನಿಶ್ಚಯಿಸಿದಾಗ, ನನ್ನನ್ನು ಸಹಕಾರ್ಯದರ್ಶಿ ಮಾಡಿ ಅನಂತರ ಕಾರ್ಯಕಾರಿ ಅಧ್ಯಕ್ಷೆಯ ಪದವಿಗೆ ಏರಿಸಿದರು. ೧೯೮೨ನೆಯ ಇಸವಿ

ಆಗಸ್ಟ್ ೨೨ ರಂದು, ಹೃದಯಾಘಾತದಿಂದ ಏಕನಾಥಜಿ ಏಕಾಏಕಿ ನಿಧನರಾದರು. ಕೇಂದ್ರದ ಮಹಾಸಭೆ ಅಧ್ಯಕ್ಷತೆಯನ್ನು ನಾನು ವಹಿಸಿಕೊಳ್ಳುವಂತೆ ನನಗೆ ಮನವಿ ಮಾಡಿತು.

ನನ್ನ ಶಕ್ತಿಗೆ ಮೀರಿದ ಗುರುತರ ಜವಾಬುದಾರಿಯನ್ನು ಸ್ವೀಕರಿಸಲು ನನಗೆ ನಿಜವಾಗಿ ಮನಸ್ಸಿರಲಿಲ್ಲ. ಕೇಂದ್ರದಲ್ಲಿ ಹೆಚ್ಚಿನ ಸಹೋದ್ಯೋಗಿಗಳಿಗೆ ಒಬ್ಬ ವ್ಯಕ್ತಿ ಮಾತ್ರ ನನ್ನ ನಿಲುವನ್ನು ಬದಲಾಯಿಸಲು ಸಾಧ್ಯವೆಂದು ಗೊತ್ತಿತ್ತು. ಆ ವ್ಯಕ್ತಿಯೇ ಸ್ವಾಮಿ ರಂಗನಾಥಾನಂದರು. ನನ್ನ ಮನವೊಲಿಸಲು ಒಂದು ನಿಯೋಗ ಹೈದರಾಬಾದಿಗೆ ಹೋಗಿ ಸ್ವಾಮಿಗಳನ್ನು ವಿನಂತಿಸಿತು. ಅದರ ಮೇಲೆ ಸ್ವಾಮಿಗಳು ನನಗೆ ಪತ್ರ ಬರೆದು, ಹಿಂದೆ ನೀನು ಕೆಲಸ ಬಿಟ್ಟು, ಕೇಂದ್ರ ಸೇರಬೇಡವೆಂದು ನಾನು ಹೇಳಿದ್ದೆ. ಈಗ ಬದಲಾದ ಪರಿಸ್ಥಿತಿಯಲ್ಲಿ ಕೇಂದ್ರಕ್ಕೆ ನಿನ್ನ ಸೇವೆ ಬಹಳ ಅಗತ್ಯವಿರುವಾಗ, ನೀನು ಜವಾಬುದಾರಿಯನ್ನು ತೆಗೆದುಕೊಳ್ಳಲು ಹಿಂದುಮುಂದೆ ನೋಡಬಾರದು ಎಂದು ತಿಳಿಸಿದರು. ತಮ್ಮ ಮಾರ್ಗದರ್ಶನ ಮತ್ತು ಆಶೀರ್ವಾದ ಸದಾ ಇರುತ್ತದೆ ಎಂದು ನನಗೆ ಭರವಸೆ ಕೊಟ್ಟರು. ಅವರ ಭರವಸೆ ವಿವೇಕಾನಂದ ಕೇಂದ್ರದ ಅಖಿಲ ಭಾರತ ಅಧ್ಯಕ್ಷ ಪದವಿಯ ಜವಾಬುದಾರಿಯನ್ನು ನಾನು ಒಪ್ಪುವಂತೆ ಮಾಡಿತು. ಅವರ ಆಶೀರ್ವಾದಗಳನ್ನು ನಾನು ಸ್ವತಃ ಸ್ವಾಮಿ ವಿವೇಕಾನಂದರ ಆಶೀರ್ವಾದಗಳೆಂದು ಭಾವಿಸುತ್ತೇನೆ. ಕೇಂದ್ರದ ಅಧ್ಯಕ್ಷ ಪದವಿ ಅವಧಿಯಲ್ಲಿ ಹಲವಾರು ಸಲ ಅವರ ಆಶೀರ್ವಾದಗಳನ್ನು ಪಡೆಯುವ ಅವಕಾಶಗಳು ದೊರಕಿದುವು.

೧೯೮೧ರ ನಂತರ ನಾನು ವಿವೇಕಾನಂದ ಕೇಂದ್ರದ ಕಾರ್ಯಕರ್ತೆಯಾಗಿ ಸ್ವಾಮಿಗಳ ಜತೆ ವಿಚಾರ ವಿನಿಮಯ ಮಾಡಿದೆ. ವಿವೇಕಾನಂದ ಶಿಲಾ ಸ್ಮಾರಕ ಸ್ಥಾಪನೆ ಆದ ಮೇಲೆ, ಏಕನಾಥಜಿಯವರು ಸಂನ್ಯಾಸರಹಿತ ತರುಣ ತರುಣಿಯರ ಸಂಘ ಪ್ರಾರಂಭಿಸುವ ಯೋಚನೆಮಾಡುತ್ತಿದ್ದರು. ಆ ಸಮಯದಿಂದ ಸ್ವಾಮಿಗಳು ಕೇಂದ್ರ ವಿಚಾರದಲ್ಲಿ ಆಸಕ್ತರಾಗಿದ್ದರು. 'ನೀಡ್ ಆಫ್ ದಿ ಅವರ್' ಎಂಬ ಸ್ವಾಮಿಗಳ ಖ್ಯಾತ ಉಪನ್ಯಾಸದಲ್ಲಿ ಅವರ ನಿಶ್ಚಿತಾಭಿಪ್ರಾಯಗಳನ್ನು ದಾಖಲಿಸಿದ್ದಾರೆ. ಕೇಂದ್ರದ ಪ್ರಾರಂಭಿಕ ವರ್ಷಗಳಲ್ಲಿ ಅವರು, ಕನ್ಯಾಕುಮಾರಿಗೆ ಆಗಿಂದಾಗ್ಗೆ ಬಂದು ಮೊದಲಿನ ಕೆಲವು ಆಜೀವ ಕಾರ್ಯಕರ್ತರ ತಂಡಗಳಿಗೆ ಉಪನ್ಯಾಸ ನೀಡಿ, ಅವರ ಚಾರಿತ್ರ್ಯ ಮತ್ತು ಆದರ್ಶಗಳನ್ನು ರೂಪಿಸಲು ಸಹಾಯ ಮಾಡಿದ್ದರು. ಅವರ ಜೀವಿತದ ಕೊನೆಯ ತನಕ ವಿವೇಕಾನಂದ ಕೇಂದ್ರ ಮತ್ತು ಅದರ ಆದರ್ಶಗಳು ಸ್ವಾಮಿಗಳಿಗೆ ಬಹಳ ಪ್ರಿಯವಾಗಿದ್ದವು.

ಒಂದೆರಡು ಘಟನೆಗಳು ನನಗೆ ನೆನಪಾಗುತ್ತವೆ. ನಾನು ಅಧ್ಯಕ್ಷೆಯಾದ ಮೇಲೆ, ಸ್ವಾಮಿಗಳು ಮೂರು ದಿನ ಕನ್ಯಾಕುಮಾರಿ ಕೇಂದ್ರದಲ್ಲಿ ಉಳಿದು ಆಜೀವ ಕಾರ್ಯಕರ್ತರುಗಳನ್ನು ಉದ್ದೇಶಿಸಿ ಉಪನ್ಯಾಸ ನೀಡಿ, ಅವರ ಜತೆ ವಿಚಾರ ವಿನಿಮಯ ನಡೆಸಿದ್ದರು. ಆಗ ಅವರು ನನಗೆ ಕಿತ್ತಳೆ ಬಣ್ಣದ ಶಾಲು ಮತ್ತು ಕೊಡೆಯನ್ನು ಉಡುಗೊರೆಯಾಗಿ ಕೊಟ್ಟರು. ಎರಡು ನನಗೆ ಬಹಳ ಮಹತ್ವದ್ದು. ಯಾಕೆ ಎಂದು ಕೇಳಿದಾಗ, "ನೀನು ಬಹಳ ಸ್ವಾರ್ಥತ್ಯಾಗ ಮಾಡಿದ್ದೀಯೆ. ಬಾಹ್ಯ ವೇಷದಲ್ಲಿ ಇಲ್ಲದಿದ್ದರೂ ನೀನು ಸಂನ್ಯಾಸಿನಿ. ಇದನ್ನು ತಿಳಿದೇ ನಾನು ನಿನಗೆ ಶಾಲು ಉಡುಗೊರೆಯಾಗಿ ಕೊಟ್ಟೆ. ಸುಡುವ ಬಿಸಿಲಿನಲ್ಲಿ ನೀನು ಓಡಾಡುವುದನ್ನು ನೋಡುತ್ತಿದ್ದೆ. ಇನ್ನು ಮುಂದೆ ನಿನ್ನ ರಕ್ಷಣೆ ಸಲುವಾಗಿ ನೀನು ಕೊಡೆಯನ್ನು ಉಪಯೋಗಿಸಬೇಕು" ಎಂದು ತಿಳಿಸಿದರು. ಗುರುವಿನಿಂದ ಶಿಷ್ಯೆಯ ಅಂಗೀಕಾರ ಮತ್ತು ಪುತ್ರೀ ಸದೃಶ ಕಾಳಜಿ – ಈ ಎರಡೂ ನನ್ನ ಹೃದಯವನ್ನು ಬಹಳವಾಗಿ ತಟ್ಟಿದುವು. ಈ ಎರಡು ಪ್ರಬಲ ದಾರಗಳಿಂದ ಈ ಮಹಾನ್ ಸಂತ ಮತ್ತು ದಾರ್ಶನಿಕರ ಜತೆ ಮಧುರ ಸಂಬಂಧವನ್ನು ನೇಯ್ದೆ.

* * * *

# ೫೮. ಸ್ವಾಮಿ ರಂಗನಾಥಾನಂದ

**–ಕಪಿಲಾ ವಾತ್ಸ್ಯಾಯನ***

ವಿಕಸಿತ ವ್ಯಕ್ತಿಗಳ ಬಗ್ಗೆ ಜ್ಞಾಪಿಸಿಕೊಳ್ಳುವುದು ಒಂದು ಕಷ್ಟದ ಕೆಲಸ. ಅತಿಉತ್ಕೃಷ್ಟ ಮತ್ತು ಪ್ರಗಲ್ಭ ವ್ಯಕ್ತಿಯ ಜತೆ ಸಂಪರ್ಕದ ಸುಯೋಗವಿದ್ದವನಿಗೆ ತನ್ನ ಪರಿಮಿತಿಗಳ ಬಗ್ಗೆ ಸದಾ ಜಾಗೃತಿ ಇರುತ್ತದೆ. ಕರ್ಮ, ಜ್ಞಾನ, ಭಕ್ತಿಯ ಆಯಾಮಗಳನ್ನು ತಮ್ಮಲ್ಲಿ ಮೇಳೈಸಿಕೊಂಡಿದ್ದ ಓರ್ವ ವ್ಯಕ್ತಿ ಸ್ವಾಮಿ ರಂಗನಾಥಾನಂದರು.

ಜೀವಿತವಿದ್ದಾಗ ಅವರನ್ನು ಭೇಟಿಮಾಡುವುದು ಒಂದು ಸುಯೋಗವೇ ಆಗಿತ್ತು. ಭಾರತೀಯ ನಾಗರಿಕತೆ ಮತ್ತು ಸಂಸ್ಕೃತಿಯ ಸುದೀರ್ಘ ಚರಿತ್ರೆಯ ಬಗ್ಗೆ ಜ್ಞಾನವಿದ್ದ ಮತ್ತು ರಾಮಕೃಷ್ಣ, ವಿವೇಕಾನಂದ ಶಿಷ್ಯ ಪರಂಪರೆಯಿಂದ ಬಳುವಳಿ ಪಡೆದ ವ್ಯಕ್ತಿಯೆಂದು ಅವರು ಹೆಚ್ಚಾಗಿ ಪರಿಚಿತರಾಗಿದ್ದಾರೆ.

ಭಾರತದಲ್ಲಿ ಜ್ಞಾನ ಮತ್ತು ಪ್ರಜ್ಞೆಗಳ ಅನ್ವೇಷಣೆ ಬಳಸು ಪ್ರಯಾಣಮೂಲಕ ಕೆಲವರಿಗೆ ಬಂದಿದೆ. ಗ್ರೀಸ್, ಯೂರೋಪ್ ಮುಂತಾದ ದೇಶಗಳ ಸಂಪದ್ಭರಿತ ನಾಗರಿಕತೆ ಮತ್ತು ಸಂಸ್ಕೃತಿಯಲ್ಲಿ ನಿಮಗ್ನರಾದವರಿಗೆ ಹೆಚ್ಚಾಗಿ ಈ ಅನ್ವೇಷಣೆಯ ಪ್ರಯಾಣ ಒಂದು ಸಂಧಿಕಾಲದಂತೆ. ಬಹಳ ಜನ ಭಾರತೀಯರಿಗೆ ಮತ್ತು ಅನಿವಾಸಿ ಭಾರತೀಯರಿಗೆ ರಾಮಕೃಷ್ಣ ಮತ್ತು ವಿವೇಕಾನಂದರ ಪ್ರಪಂಚದ ಪ್ರವೇಶ ನೇರವಾಗಿ ಮಾರ್ಗದಿಂದ ತೆರೆದುಕೊಳ್ಳದೆ ಬದಲಾಗಿ ರೋಮೇ ರೋಲಾರ ಬರವಣಿಗೆ ಮೂಲಕ ಆಗುತ್ತದೆ. ಬೇಲೂರುಮಠ ಮತ್ತು ಪರಮಹಂಸರು ಕೋಲ್ಕತ್ತಾದಲ್ಲಿ ಓಡಾಡಿದ ಜಾಗಗಳ ಭೇಟಿ ಮುಂತಾದ ಬಾಲ್ಯದಿನಗಳ ನೆನಪುಗಳು ರೋಮೇ ರೋಲಾ ಬರೆದ ರಾಮಕೃಷ್ಣ ಮತ್ತು ವಿವೇಕಾನಂದರ ಜೀವನಚರಿತ್ರೆ ಸಂಪುಟಗಳ ಓದಿನ ಮೂಲಕ ಮರುಕಳಿಸಿತು. ಆ ಭೇಟಿಗಳು ಅರ್ಥಗರ್ಭಿತವಾಗಿದ್ದುವು. ಆದರೆ ಆ ಮಹಾನ್ ಚೇತನದ್ವಯರ ಅಸಾಮಾನ್ಯ ಜೀವನದ ಬಗ್ಗೆ ಸಾಕಷ್ಟು ಬೌದ್ಧಿಕ ಆಸಕ್ತಿ ಮೂಡಬೇಕೆಂದರೆ ರೋಮೇ ರೋಲಾರವರ ಬರೆವಣಿಗೆಗೇ ಶರಣು ಹೋಗಬೇಕು.

ಶ್ರೀ ರಾಮಕೃಷ್ಣ ವಚನವೇದ ಓದುವುದು ಬಿಟ್ಟರೆ ನನ್ನಲ್ಲಿ ವಿಶೇಷವೇನೂ ಇರಲಿಲ್ಲ. ರಾಮಕೃಷ್ಣ ಮಿಷನ್ ದೆಹಲಿ ಕೇಂದ್ರದಲ್ಲಿ ಅಧ್ಯಕ್ಷರಾಗಿದ್ದಾಗ ಸ್ವಾಮಿ ರಂಗನಾಥಾನಂದರ ಉಪನ್ಯಾಸಗಳನ್ನು ಕೇಳಿದ ಮೇಲೆ ನನಗೆ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಮತ್ತೆ ಓದುವ ಇಚ್ಛೆ ಉಂಟಾಯಿತು. ಸ್ವಾಮಿಗಳ 'ಗೀತೆ'ಯ ಮೇಲಿನ ಸಾಪ್ತಾಹಿಕ ಉಪನ್ಯಾಸಗಳು ಬಹಳ ವಿಶೇಷವಾಗಿರುತ್ತಿದ್ದುವು. ಶ್ಲೋಕಗಳ ಅರ್ಥ ಮತ್ತು ಸಂದೇಶಗಳು ನಮ್ಮ ಹೃದಯದ ಒಳಗೆ ಹೋಗುತ್ತಿದ್ದುವು. ಹಾಗಾಗಿ ಅವರ ಉಪನ್ಯಾಸಗಳನ್ನು ಕೇಳಲು ನಾವು ಕಿಕ್ಕಿರಿಯುತ್ತಿದ್ದೆವು. 'ಗೀತೆ'ಯ ೨,೩,೧೨ ಅಧ್ಯಾಯಗಳ ಶ್ಲೋಕಗಳನ್ನು ಬರೀ ಕಂಠಸ್ಥ ಉಚ್ಚಾರಣೆ ಮಾಡುತ್ತಿದ್ದ ಒಂದು ತಲೆಮಾರಿನವರು ನಾವು. ನಿಜ ಜೀವನಕ್ಕೆ ಅವುಗಳ ಅರ್ಥದ ಬಗ್ಗೆ ನಾವು ಹೆಚ್ಚು ಗಮನಕೊಟ್ಟಿರಲಿಲ್ಲ. ಸ್ವಾಮಿಗಳ ವಿವರಣೆ ಮತ್ತು ನಿರೂಪಣೆಗಳು ಮತ್ತು ಅವುಗಳ ಸಂದೇಶ – ಇವು ಇವತ್ತಿನ ಮತ್ತು ಈಗಿನ ಜೀವನಕ್ಕೆ ಪ್ರಸ್ತುತ ಎಂದು ಮೇಲಿಂದ ಮೇಲೆ ಒತ್ತಿ ಹೇಳುತ್ತಿದ್ದರು. ಅವರ ಉಪನ್ಯಾಸಗಳ ಅನುಭಾವ

---

* ಭಾರತೀಯ ನಾಟ್ಯ, ಕಲೆ ಮತ್ತು ಶಿಲ್ಪಗಳ ಖ್ಯಾತ ವಿದುಷಿ. ಸಂಸ್ಥಾಪಕ ಡೈರೆಕ್ಟರ್, ದೆಹಲಿಯ ಇಂದಿರಾಗಾಂಧಿ ನ್ಯಾಷನಲ್ ಸೆಂಟರ್ ಫಾರ್ ದಿ ಆರ್ಟ್. ಮಾಜಿ ಕಾರ್ಯದರ್ಶಿ, ಭಾರತ ಸರ್ಕಾರದ ಶಿಕ್ಷಣ ಸಚಿವಾಲಯ; ರಾಜ್ಯಸಭಾ ಸದಸ್ಯೆ. ಮತ್ತು ನವ ದೆಹಲಿಯ ಐಐಸಿ ಏಷ್ಯಾ ಪರಿಯೋಜನೆಯ ಅಧ್ಯಕ್ಷೆ.

ಸಾರ್ಥಕವಾಗಿರುತ್ತಿತ್ತು. ಸ್ವಾಮಿಗಳ ಉಪನ್ಯಾಸಗಳಿಂದ ಬಹಳ ಜನರ ಜೀವನ ಪರಿವರ್ತನೆಯಾಗದಿದ್ದರೂ ಅವರ ಮಾನವೀಯ ಮೌಲ್ಯಗಳು ಖಂಡಿತವಾಗಿ ಬದಲಾದುವು.

ನನ್ನ ಮಟ್ಟಿಗೆ ಹೇಳುವುದಾದರೆ, ವೇದಿಕೆಯ ಮೇಲೆ ನಾನು ಸ್ವಾಮಿಗಳ ಪಾದದ ಬಳಿ ಕುಳಿತು, ಅವರಿಂದ ಪ್ರಸಾದ ಸ್ವೀಕರಿಸಿ, ಎಲ್ಲಾ ಕ್ಲೇಶಗಳನ್ನು ತೊಡೆದುಹಾಕುವ ಎಲ್ಲರನ್ನೂ ಒಳಗೊಳ್ಳುವ ಅವರ ನಗುವಿಗೆ ಕಾಯುವುದು ನನ್ನ ವಾಡಿಕೆ. ಬೆಳಿಗ್ಗೆ 'ಈಶಾವಾಸ್ಯ' ಮತ್ತು 'ಕಠೋಪನಿಷತ್ತು'ಗಳ ವ್ಯಾಖ್ಯಾನ ಮಾಡುತ್ತಿದ್ದರು. ಅವರ ಪ್ರತಿಯೊಂದು ವ್ಯಾಖ್ಯಾನ ಮುಂದಿನ ನಿರೂಪಣೆಗೆ ಮತ್ತು ವಿಚಾರಣೆಗೆ ಪ್ರವೇಶದ್ವಾರ. ಸುಲಭವಾದ ನಿರೂಪಣೆ, ವಿನೋದ ಪ್ರವೃತ್ತಿ, ಎಲ್ಲರ ಬಗ್ಗೆ ಮಾಹಿತಿಯಿದ್ದು ಕಾಳಜಿವಹಿಸುವ ಮನೋಭಾವವುಳ್ಳ ಅವರು, ತತ್‌ಕ್ಷಣದ ಲೌಕಿಕ ತೊಂದರೆಗಳಿಗೆ ಮಾರ್ಗದರ್ಶಕರೂ ಆಗಿದ್ದರು. ಸ್ವಾಮಿಜಿ ಅಥವಾ ಮಹರಾಜ್ ಜತೆ ನಿಕಟವರ್ತಿಯಾಗಿರುವ ಹಲವಾರು ಅವಕಾಶಗಳು ನನ್ನ ಜೀವನದಲ್ಲಿ ದೊರಕಿದ್ದು ನನ್ನ ಸುಯೋಗ. ಇಂಡಿಯನ್ ನ್ಯಾಷನಲ್ ಕಮೀಷನ್‌ನ ಸದಸ್ಯಳಾಗಿದ್ದಾಗ ಸ್ವಾಮಿಗಳ ಪ್ರತಿಯೊಂದು ಶಬ್ದ ಇತರರ ಗಮನ ಸೆಳೆಯುತ್ತಿತ್ತು. ಅವರ ಅಭಿಪ್ರಾಯಗಳ ಪರಿಣಾಮವಾಗಿ 'ಯುನೆಸ್ಕೋ' ವಿಶ್ವಸಂಸ್ಥೆಗೆ ಭಾರತ ಕೆಲವು ಸಾರ್ಥಕ ಕಾರ್ಯಕ್ರಮಗಳ ಬಗ್ಗೆ ಸಲಹೆ ಕೊಡಲು ತೊಡಗಿತು. ಅವುಗಳ ಪೈಕಿ ಅಂತಾರಾಷ್ಟ್ರೀಯ ಸಾಮರಸ್ಯ ವರ್ಧನೆಯಿಂದ ಜಾಗತಿಕ ಸಂಸ್ಕೃತಿಯನ್ನು ಬೆಳೆಸುವುದೂ ಒಂದು. ಜಾಗತೀಕರಣ, ಅಂತಾರಾಷ್ಟ್ರೀಯ ಸಾಮರಸ್ಯ ಮುಂತಾದ ಶಬ್ದಗಳು ಬಳಕೆಗೆ ಬರುವ ಮುಂಚೆ ಸ್ವಾಮಿಗಳು ಇವುಗಳ ಪ್ರತಿಪಾದನೆ ಮಾಡಿದ್ದರು. ಯೂರೋಪ್, ಅಮೆರಿಕ, ಲ್ಯಾಟಿನ್ ಅಮೆರಿಕ ಮುಂತಾದ ಕಡೆಗಳಲ್ಲಿ ವ್ಯಾಪಕವಾಗಿ ದೇಶಾಟನೆ ಮಾಡಿದ್ದರು. ಈ ಪ್ರವಾಸಗಳನ್ನು ಸುಗಮವಾಗಿ ಮಾಡಲು ನನ್ನದು ಅಳಿಲುಸೇವೆ. ಇದರ ಬಹುಮಾನ ಏನೆಂದರೆ ಸ್ವಾಮಿಗಳು ವಾಪಸ್ಸು ಬಂದ ನಂತರ ತಮ್ಮ ಅನುಭವಗಳ ನಿರೂಪಣೆ ಮಾಡುವುದನ್ನು ಕೇಳುವುದು. ಪ್ರವಾಸಗಳಲ್ಲಿ ನಡೆದ ಘಟನೆ ಅಥವಾ ವೃತ್ತಾಂತಗಳನ್ನು ಲೀಲಾಜಾಲವಾಗಿ ವಿವರಿಸುವಾಗ, ಕೆಲವು ವಿಶೇಷ ಸಂದೇಶಗಳು ಇರುತ್ತಿದ್ದುವು. ವಿದ್ವತ್, ಜ್ಞಾನ ಮತ್ತು ಮಾನವೀಯ ಬಿಕ್ಕಟ್ಟಿನ ಬಗ್ಗೆ ಆಳವಾದ ಅರಿವು – ಇವನ್ನು ಒಟ್ಟಾಗಿ ಮಹಾರಾಜರು ಹೊಂದಿದ್ದರು. ಎಲ್ಲವನ್ನೂ ಒಳಗೊಂಡ ಸಾಮಾಜಿಕ, ರಾಜಕೀಯ ನೀತಿಯನ್ನು ಸಹಜವಾಗಿ ಪ್ರತಿಪಾದನೆ ಮಾಡಿದರು. ಅದನ್ನು 'ಧರ್ಮಸಮನ್ವಯ' ಎಂದು ಕರೆದರು. ಅವರ ಹೇಳಿಕೆ ಈ ರೀತಿ ಇದೆ:

> **"ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಭಾರತ ಯಶಸ್ವಿಯಾಗಿದೆ; ಆದರೆ ಸಾಮಾಜಿಕ ಕ್ಷೇತ್ರಗಳಲ್ಲಿ ಆಗಿಲ್ಲ. ನವಭಾರತಕ್ಕೆ ಇದು ಒಂದು ಸವಾಲು. ನಮ್ಮ ರಾಜಕೀಯ ನೇತಾರರು ಈ ಸವಾಲು ಎತ್ತಿಕೊಂಡರು. ಎಲ್ಲರಿಗೂ ಸಮಾನ ಹಕ್ಕುಗಳು ಇರುವ ಸಾಮಾಜಿಕ ವ್ಯವಸ್ಥೆಯ ದೂರದೃಷ್ಟಿಯನ್ನು ನಮ್ಮ ಸಂವಿಧಾನ ಅಂತರ್ಗತ ಮಾಡಿಕೊಂಡಿದೆ. ಭಾರತದ ಸಾಮಾಜಿಕ ಆರ್ಥಿಕ ನೀತಿಯ ಪ್ರಗತಿಗಾಗಿ ಸಮನ್ವಿತ ಜಾಗತಿಕ ದೃಷ್ಟಿ ಅಗತ್ಯವಿದೆ. ಸ್ವಾಮಿ ವಿವೇಕಾನಂದರು ಇದನ್ನೇ ಹೇಳಿದ್ದರು. ಸ್ವಾತಂತ್ರ್ಯ, ಘನತೆ ಮತ್ತು ಸಮಾನತೆಗಳನ್ನು ಎಲ್ಲಾ ಪುರುಷರು ಮತ್ತು ಸ್ತ್ರೀಯರು ಪಡೆದ ಸ್ವಸ್ಥ ರಾಜ್ಯಾಡಳಿತವನ್ನು ನಾವು ಒದಗಿಸಬೇಕು. ಯಾವಾಗ ಇವುಗಳಿಂದ ಜನರು ವಂಚಿತರಾದರೋ, ಆಗ, ಧರ್ಮವನ್ನು ಎತ್ತಿ ಹಿಡಿಯಲು ಮಹಾಪುರುಷರು ಆಗಮಿಸಿದರು. ಉಪನಿಷದ್ಕಾಲದ ನಂತರ ಸಮನ್ವಯ ದೃಷ್ಟಿ ಕೃಷ್ಣ ಮತ್ತು ಬುದ್ಧರ ರೂಪದಲ್ಲಿ ಬಂತು. ಕೃಷ್ಣ ನಿಜವಾಗಿ ಜಾಗತಿಕತೆ ಮತ್ತು ಧರ್ಮಸಮನ್ವಯದ ಪ್ರತೀಕವಾಗಿರುವ ಪ್ರಮುಖ ವ್ಯಕ್ತಿ. ಭಿನ್ನತೆಯು ಕೇಂದ್ರಾಪಗಾಮಿ ಶಕ್ತಿ ಮತ್ತು ಐಕ್ಯತೆಯು ಕೇಂದ್ರಾಭಿಗಮನ ಶಕ್ತಿ. ವಿವಿಧತೆಯಲ್ಲಿ ಏಕ್ಯತೆ ಎಂಬುದೂ ಶ್ರೀಕೃಷ್ಣ ಉವಾಚವೇ."**

ಕೆಲವು ವರ್ಷಗಳ ತರುವಾಯ ಸ್ವಾಮಿಗಳು ಕೋಲ್ಕತ್ತಾ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನ ಕಾರ್ಯದರ್ಶಿಯಾಗಿ ಕೆಲಸ ಮಾಡಿದಾಗ ಅವರನ್ನು ತಿಳಿಯುವಂಥ ಸಂದರ್ಭಗಳು ಬಂದುವು. ಆ ಸಂಸ್ಥೆ ರಾಮಕೃಷ್ಣ ಮಿಷನ್‌ನ ಒಂದು ಮೇಲೆ ವಿಸ್ತರಣೆಯಾಗಿದ್ದರೂ, ಅದನ್ನು ಅಂತಾರಾಷ್ಟ್ರೀಯ ಸಾಮರಸ್ಯದ ವ್ಯಾಪಕ ಕಾರ್ಯಕ್ರಮಗಳಲ್ಲಿ

ತೊಡಗಿಸಿ ಯಶಸ್ವಿಯಾಗಿ ನಡೆಸಿದರು. ಅತೀ ಪ್ರಭಾವೀ ಗ್ರಂಥಾಲಯ, ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ಮತ್ತು ಚರ್ಚಾಕೂಟಗಳನ್ನು ನಡೆಸಲು ಬೇಕಾದ ಸಾಂಸ್ಥಿಕ ಚೌಕಟ್ಟು, ಸುಮಾರು ೧೪ ವಿದೇಶಿ ಭಾಷೆಗಳನ್ನು ಕಲಿಸಲು ಸೌಕರ್ಯ ಮತ್ತು ಅತ್ಯಂತ ರಂಜನೀಯ ಮಕ್ಕಳ ಗ್ರಂಥಾಲಯ, ಇವುಗಳಿಗೆ ಭದ್ರ ಬುನಾದಿ ಹಾಕಿದರು. ಸ್ವಾಮಿಗಳು ಬಂದನಂತರ ಸ್ವಾಮಿ ಲೋಕೇಶ್ವರಾನಂದ ಮತ್ತು ಸ್ವಾಮಿ ಪ್ರಭಾನಂದರು ಅವುಗಳನ್ನು ಕಾರ್ಯಗತ ಮಾಡಿದರು. ಈ ಇಬ್ಬರೂ ಸಂನ್ಯಾಸಿಗಳು ಇನ್ಸ್‌ಟ್ಯೂಟ್‌ನಲ್ಲಿ ಮತ್ತು ಅಂತಾರಾಷ್ಟ್ರಿಯ ಮಟ್ಟದಲ್ಲಿ ಮಾಡಿದ ಕೆಲಸಗಳನ್ನು ತಿಳಿಯುವ, ಮುಖ್ಯವಾಗಿ ಸೋವಿಯತ್ ಒಕ್ಕೂಟದಲ್ಲಿ ಸ್ವಾಮಿ ಲೋಕೇಶ್ವರಾನಂದರು ಬೀರಿದ ಪ್ರಭಾವವನ್ನು ಅರಿಯುವ ಸುಯೋಗ ನನ್ನದು.

ಕೆಲವು ವರ್ಷಗಳು ಕಳೆದವು. ಸ್ವಾಮಿಜಿ ಹೈದರಾಬಾದ್ ರಾಮಕೃಷ್ಣ ಮಿಷನ್‌ನ ಅಧ್ಯಕ್ಷರಾದರು. ಅಲ್ಲಿ ಅಸಾಧಾರಣ ಕಾರ್ಯಕ್ರಮಗಳನ್ನು ನಡೆಸುತ್ತಿದ್ದ ಬಗ್ಗೆ ಕೇಳಿದ್ದೆ. ದೆಹಲಿಗೆ ಬಂದಾಗ ಅವರನ್ನು ಭೇಟಿಯಾಗುವ ಸಂದರ್ಭಗಳು ಇದ್ದವು. ನನ್ನ ಸೋದರಸಂಬಂಧಿ ಸ್ವಾಮಿಗಳಿಗೆ ಬಹಳ ಆತ್ಮೀಯನಾಗಿದ್ದನು. ಅವನ ಮೂಲಕ ಮಹಾರಾಜರು ಯಾವಾಗಲೂ ನನಗೆ ಸಂದೇಶಗಳನ್ನು ತಲುಪಿಸುತ್ತಿದ್ದರು. ಸ್ವಾಮಿಗಳು ನನ್ನನ್ನು ನೆನೆಯುತ್ತಾರೆಂದು ತಿಳಿದು ನನ್ನ ಅಂತಃಕರಣ ಕಲಕಿತು. ನಿಜ, ಮಹಾರಾಜರಿಗೆ ಅಸಾಧಾರಣವಾದ ನೆನಪಿನ ಶಕ್ತಿ ಇತ್ತು.

ಆಧ್ಯಾತ್ಮವೆಂದರೆ ಬರೀ ಏಕಾಂತವಲ್ಲ. ಬದಲಾಗಿ ಕೇಂದ್ರೀಕೃತ ಮತ್ತು ರಾಗದ್ವೇಷರಹಿತರಾಗಿ ಕೆಲಸ ಮಾಡುವುದು ಎಂದು ಸ್ವಾಮಿಗಳು ಸದಾ ಮನವರಿಕೆ ಮಾಡುತ್ತಿದ್ದರು. 'ಶಕ್ತಿಯುತ ಆಧ್ಯಾತ್ಮ' ಎಂಬ ಬಗ್ಗೆ ಅವರ ವಿವರಣೆ ಈ ರೀತಿ ಇದೆ:

> **ಮಿಲಿಯಗಟ್ಟಲೆ ಭಾರತೀಯರು ಕ್ರೂರಿಗಳ ನೆರೆಹೊರೆಯವರಂತೆ ವಾಸಮಾಡುತ್ತಿದ್ದಾರೆ. ಯುವಕರ ಹುರುಪು, ಜೀವನೋತ್ಸಾಹದಿಂದಲೇ ಸಾಮಾಜಿಕ ಬದಲಾವಣೆ ಸಾಧ್ಯ. ಆಧ್ಯಾತ್ಮಕ್ಕಾಗಿ ಅಲ್ಲಿ ಇಲ್ಲಿ ಹೋಗುವ ಅಗತ್ಯವಿಲ್ಲ.ಅದು ಇಲ್ಲೆ, ಈಗಲೇ ಇದೆ. ಅದು ನಿಜಜೀವನದಲ್ಲಿ ಅಭ್ಯಾಸ ಮಾಡುವ ಕ್ಷುಲ್ಲಕ ಮಾಯಾಜಾಲದ ರಹಸ್ಯವಲ್ಲ. ಜೆಲ್ಲಿಫಿಷ್‌ನಂತೆ ಬಹಳಕಾಲ ಬದುಕಿರುವುದಕ್ಕಿಂತ ಆದರ್ಶಕ್ಕಾಗಿ ಒಂದು ಕ್ಷಣ ಬದುಕುವುದು ಮೇಲು ಎಂದು ಸ್ವಾಮಿ ವಿವೇಕಾನಂದರು ಪ್ರಬೋಧನೆ ಮಾಡಿದ್ದರು. ಇದೇ 'ಮಹಾಭಾರತ'ದ 'ಉದ್ಯೋಗಪರ್ವ'ದಲ್ಲಿ ಹೇಳಿದ ವಿದುರನೀತಿ. ತಾತ್ಪರ್ಯವೆಂದರೆ, ಸುದೀರ್ಘ ಜೀವಿಸುವುದರ ಬದಲು ಒಂದು ಆದರ್ಶಕ್ಕಾಗಿ ಸ್ವಲ್ಪಕಾಲ ಬದುಕುವುದು ಒಳ್ಳೆಯದು. ಇದು ಸಿನಿಕತನ ಮತ್ತು ಖಿನ್ನತೆ ಎಂಬ ಮೋಡಗಳನ್ನು ಭಾರತದ ಆಕಾಶದಿಂದ ಓಡಿಸುತ್ತದೆ. ಪ್ರತಿಯೊಬ್ಬನೂ ರಾಷ್ಟ್ರಹಿತಕ್ಕೆ ಜವಾಬುದಾರ. 'ಕಾಯಿಲೆಗಳ ಮುದ್ದೆಯಾಗಿ ಮತ್ತು ಪ್ರಪಂಚ ನನ್ನನ್ನು ಸುಖಿಯನ್ನಾಗಿ ಮಾಡುವುದಿಲ್ಲ ಎಂದು ಗೊಣಗುತ್ತ ಇರುವುದಕ್ಕಿಂತ ನನ್ನ ಜೀವನ ಒಂದು ದೊಡ್ಡ ಉದ್ದೇಶಕ್ಕೆ ಉಪಯೋಗವಾಗಲಿ. ಪ್ರಕೃತಿಯ ಶಕ್ತಿಯಾಗಿ ಇರುವುದರಲ್ಲಿಯೆ ನನ್ನ ಜೀವನೋತ್ಸಾಹವಿದೆ. ಇದು ಸ್ವಯಂ ಪ್ರೇರಣೆಯ ನೀತಿ'ಯೆಂದು ಬರ್ನಾರ್ಡ್ ಶಾ ಹೇಳಿದ್ದಾರೆ.**

ಸಮಾಜದಲ್ಲಿ ಮಹಿಳೆಯರ ಸ್ಥಾನದ ಬಗ್ಗೆ, ಸ್ವಾಮಿಗಳು ಮಾಡಿದ ಪ್ರತಿಪಾದನೆ ಮತ್ತು ಅದನ್ನು ಒತ್ತಿ ಹೇಳಿದ್ದನ್ನು ತಿಳಿದು ನಾನು ಸಹಜವಾಗಿ ಆಕರ್ಷಿತಳಾದೆ. ಅವರು ಹೇಳಿದ್ದು:

> **"ಮಹಿಳೆಯರ ಮತ್ತು ಪುರುಷರ ಸಂಪೂರ್ಣ ಸಮಾನತೆ ಬಗ್ಗೆ ಪ್ರತಿಪಾದಿಸಿರುವ ಆಧುನಿಕ ಧುರೀಣರ ಪೈಕಿ ಸ್ವಾಮಿ ವಿವೇಕಾನಂದರು ಅತಿ ಪ್ರಮುಖರು. ಪುರುಷರು ಮಾತ್ರ ವಿದ್ಯಾಭ್ಯಾಸ ಮತ್ತು ಅವಕಾಶಗಳನ್ನು ಪಡೆಯುವ, ಮಹಿಳೆಯರನ್ನು ಕಡೆಗಾಣಿಸಿದ ಯಾವ ಸಮಾಜವೂ ಉದ್ಧಾರವಾಗುವುದಿಲ್ಲ ಎಂದು ಅವರು ಹೇಳಿದ್ದಾರೆ. ಮಹಿಳೆಯರನ್ನು ಹಲವಾರು ಶತಮಾನಗಳ ತನಕ ಸಮಾಜ ನಿರ್ಲಕ್ಷಿಸಿತು. ಅವರು ವಿದ್ಯಾಭ್ಯಾಸ ಮತ್ತು ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯ ಅವಕಾಶಗಳಿಂದ ವಂಚಿತರಾದರು. ಪರಿಣಾಮವಾಗಿ ಕುಂಠಿತ ಪ್ರಗತಿಯು ಭಾರತೀಯ ಸಮಾಜದಲ್ಲಿ ಢಾಳವಾಗಿ ಕಾಣುತ್ತದೆ. ಒಂದು ರೆಕ್ಕೆಯಿಂದ ಹಕ್ಕಿ ಹಾರಾಡಲು ಸಾಧ್ಯವಾಗುವುದಿಲ್ಲ, ಅದಕ್ಕೆ ಎರಡು ರೆಕ್ಕೆಗಳು ಬೇಕು, ಎಂದು**

**ಸ್ವಾಮೀಜಿ ಹೇಳಿದರು. ಭಾರತೀಯ ಸಮಾಜವನ್ನು ಶಕ್ತಿಯುತ ಮಾಡಲು ಪುರುಷರಷ್ಟೇ ಸ್ತ್ರೀಯರಿಗೂ ವಿದ್ಯಾಭ್ಯಾಸ ಅಗತ್ಯ."**

ಇನ್ನೂ ಹೆಚ್ಚಿಗೆ ಸೇರಿಸಬೇಕಾಗಿಲ್ಲ. ನನಗೆ ಅಮೂಲ್ಯ ವರಪ್ರಸಾದವಾದ ಎರಡು ಘಟನೆಗಳ ಬಗ್ಗೆ ಹೇಳಲು ಇಷ್ಟಪಡುತ್ತೇನೆ. ಹಲವಾರು ದಶಕಗಳ ವಿಪುಲ ಪ್ರೀತಿಯನ್ನು ಪಡೆದ ನನಗೆ ಒಂದು ಬೆಳಗ್ಗೆ ಅವರು ಫೋನು ಮಾಡಿ 'ಕಪಿಲಾ, ನೀನು ಸ್ವಲ್ಪ ಸೇವೆ ಮಾಡಬೇಕು' ಹೇಳಿದರು. ರಾಮಕೃಷ್ಣ ಸಂಘಕ್ಕೆ ಯಾವ ರೀತಿ ಸೇವೆ ನಾನು ಮಾಡಬಹುದು ಎಂಬ ಸಹಜವಾದ ಅಂಜಿಕೆ ಮತ್ತು ಅವಿಶ್ವಾಸದಿಂದ ಕೂಡಿದ ನನಗೆ ದಿಗ್ಭ್ರಮೆಯಾಯಿತು. ನಾನು ಸಾಂಪ್ರದಾಯಿಕ ಶಿಷ್ಯೆಯಾಗಿರಲಿಲ್ಲ. ಸ್ವಾಮಿಗಳು ತೀಕ್ಷ್ಣಮತಿ. "ಚಿಂತೆ ಮಾಡಬೇಡ, ನಾನು ಬೇಲೂರು ಮಠಕ್ಕೆ ಬಾ ಎಂದು ಹೇಳುತ್ತಿಲ್ಲ. ಒಂದು ಸಣ್ಣ ಕೆಲಸವಾಗಬೇಕಿದೆ. ನಿನಗೆ 'The Cultural Heritage of India' ಸಂಪುಟ ಏಳರ ಬಗ್ಗೆ ಗೊತ್ತು. ಅದಕ್ಕೆ ಬಂದ ಲೇಖನಗಳ ಪರಿಶೀಲನೆಯಾಗದೆ ಒಂದು ದಶಕದ ಮೇಲಾಗಿದೆ. ಈ ಸಂಪುಟದ ಸಂಪಾದನೆಯ ಜವಾಬುದಾರಿಯನ್ನು ಹೊತ್ತ ಮೇಧಾವಿಗಳಾದ ಎಸ್.ಕೆ.ಸರಸ್ವತಿ, ಕೆ.ಕೆ.ದಾಸಗುಪ್ತ ಮತ್ತು ಕೆ.ಕೆ. ಗಂಗೂಲಿಯವರು ತಮ್ಮ ಕೆಲಸ ಮುಗಿಸುವ ಮುಂಚೆ ಕಾಲವಾದರು. ಆದ್ದರಿಂದ ಈ ಸಂಪುಟವನ್ನು ನೀನು ಮುಗಿಸಿಕೊಡಬೇಕು. ನನ್ನ ಸಲಹೆ." ನಾನು ಕೆಲಸವನ್ನು ವಹಿಸಿಕೊಂಡೆ. ಮಾರ್ಚಿ ೨೦೦೭ರಲ್ಲಿ ಈ ಸಂಪುಟವನ್ನು ಭಾರತದ ಪ್ರಧಾನಿಗಳು ಬಿಡುಗಡೆ ಮಾಡಿದರು.

ಇನ್ನೊಂದು ಘಟನೆ: ಸ್ವಾಮಿಗಳ ಚಿಂತೆ ಪರ; ಮಾತ್ರವಲ್ಲ, ಅವರಿಗೆ ಇಲ್ಲಿನ ಮತ್ತು ಈಗಿನ ಪ್ರಾಪಂಚಿಕ ಮನುಷ್ಯ. ಭಾರತ ಬಗ್ಗೆ ಮತ್ತು ಅದರ ಭವಿಷ್ಯದ ಬಗ್ಗೆ ಅಪಾರ ಕಾಳಜಿ ಇತ್ತು. ಅಂತಿಮ ದಿನಗಳಲ್ಲಿ ಅವರ ಜತೆ ಭೇಟಿ ಮಾಡುವ ಸುಯೋಗ ದೊರಕಿತು. ಇಂಥ ಒಂದು ಭೇಟಿಯಲ್ಲಿ ಅವರು 'ಇನ್ಸ್ಟಿಟ್ಯೂಟ್ ಆಫ್ ಕಲ್ಚರ್'ನಲ್ಲಿ ಹಾಸಿಗೆಯಲ್ಲಿ ಮಲಗಿದ್ದಾಗ ಅವರ ರಕ್ತ ಕಣಗಳ ಲೆಕ್ಕ ತೆಗೆಯುತ್ತಿದ್ದರು. ಆಗ ನನ್ನನ್ನು ಕರೆದು ಹೇಳಿದರು, 'ಕಪಿಲಾ, ಒಂದು ಕೆಲಸ ನೀನೇ ಮಾಡಬೇಕು. ನನ್ನ ಹತ್ತಿರ *Enlightened Citizenship and Democracy* ಎಂಬ ಪುಸ್ತಕ ಇದೆ. ನಮ್ಮ ಸಮಾಜದ ನಾಗರಿಕತೆ ಮತ್ತು ನಮ್ಮ ಪ್ರಜಾಪ್ರಭುತ್ವದ ಸ್ವರೂಪವನ್ನು ಗ್ರೀಕ್ ಪ್ರಭುತ್ವದ ಮೂಲ ಉದ್ದೇಶಕ್ಕೆ ಹೋಲಿಸಿ, ಕೆಲವು ಮೂಲಭೂತ ಪ್ರಶ್ನೆಗಳನ್ನು ಎತ್ತಿದ್ದೇನೆ. ನನ್ನ ಪರವಾಗಿ ಈ ಪುಸ್ತಕವನ್ನು ನೀನು ಸ್ವತಃ ಪ್ರಧಾನಿಗೆ ಕೊಡಬೇಕೆಂಬುದು ನನ್ನ ಕಾಳಜಿ' ಎಂದು ನನ್ನ ಕೈಹಿಡಿದು ಹೇಳಿದರು. ನನ್ನ ರೂಮಿಗೆ ವಾಪಸ್ಸು ಬಂದ ಮೇಲೆ, ಮತ್ತೊಮ್ಮೆ ಕರೆದು 'ಮರೆಯಬೇಡ' ಹೇಳಿದರು. ಇದು ಅವರಿಂದ ಪಡೆದ ಉತ್ತಮ ಆಶೀರ್ವಾದ. *The Cultural Heritage of India*ದ ಏಳನೇ ಸಂಪುಟದ ಬಿಡುಗಡೆ ಸಂದರ್ಭದಲ್ಲಿ ಸ್ವಾಮಿಗಳು ವಹಿಸಿದ್ದ ಕೆಲಸವನ್ನು ಮಾಡಿದೆ.

* * * *

# ೫೯. ಭಾರತದ ಮಹಾಪ್ರಾಜ್ಞರಲ್ಲಿ ಓರ್ವರು

–ವಿ.ಎಲ್.ನಾರಾಯಣನ್*

ಸ್ವಾಮಿ ರಂಗನಾಥಾನಂದರು ಒಬ್ಬ ಶ್ರೇಷ್ಠ ತತ್ವಜ್ಞಾನಿ–ಸಂತ. ಸ್ವಾಮಿ ವಿವೇಕಾನಂದರ ಅಚ್ಚಿನಲ್ಲಿ ತಯಾರಾದವರು. ೨೦ನೇ ಶತಮಾನದ ಪ್ರಪಂಚಕ್ಕೆ ಅವರು ಭಾರತದ ಕೊಡುಗೆ.

ಜನಮಾನಸದ ಮೇಲೆ ಅವರು ಅಳಿಸಲಾರದ ಅಧ್ಯಾತ್ಮದ ಛಾಪನ್ನು ಮೂಡಿಸದ ಯಾವ ದೇಶವೂ ಈ ಪ್ರಪಂಚದಲ್ಲಿ ಇಲ್ಲ. ೧೯ನೇ ಶತಮಾನದಲ್ಲಿ ಸ್ವಾಮಿ ವಿವೇಕಾನಂದರು, ಎಲ್ಲಾ ರಾಷ್ಟ್ರಗಳಿಗೆ ಮತ್ತು ಪ್ರಪಂಚದ ಜನರಿಗೆ ಭಾರತದ ಆಧ್ಯಾತ್ಮ ರಾಯಭಾರಿಯಾಗಿದ್ದರೆ, ೨೦ನೇ ಶತಮಾನದಲ್ಲಿ ಸ್ವಾಮಿ ರಂಗನಾಥಾನಂದರು ಆಧ್ಯಾತ್ಮ ಶಕ್ತಿಗಳ ವರಿಷ್ಠ ದಂಡಾಧಿಕಾರಿಯಾಗಿದ್ದರು.

ಕೆಲವು ಕ್ಷಣ ಅಥವ ಬಹಳ ಕಾಲ, ಯಾರು ಸ್ವಾಮಿಗಳ ಜತೆ ಸಂಪರ್ಕಕ್ಕೆ ಬಂದಿದ್ದರೊ, ಅವರನ್ನು ಸ್ವಾಮಿಗಳ ಪ್ರಾಪಂಚಿಕ ಮತ್ತು ಆಧ್ಯಾತ್ಮಿಕ ಜ್ಞಾನದ ವಿಸ್ತಾರ ಆಶ್ಚರ್ಯಪಡಿಸದೆ ಇರುತ್ತಿರಲಿಲ್ಲ. ಭಗವಾನ್ ಕೃಷ್ಣ ತನ್ನ ಪ್ರಿಯ ಭಕ್ತನಲ್ಲಿರಬೇಕಾದ ಗುಣಗಳನ್ನು ವರ್ಣಿಸಿದ್ದಾನೆ. ಅಂತಹ ಎಲ್ಲ ಗುಣಗಳನ್ನು ಸ್ವಾಮಿಗಳು ತಮ್ಮಲ್ಲಿ ಮೇಳೈಸಿಕೊಂಡಿದ್ದರು.

ನಾಲ್ಕು ಸಂಪುಟಗಳ ಅವರ ಮಹಾನ್ ಕೃತಿ *ಎಟರ್ನಲ್ ವ್ಯಾಲ್ಯೂಸ್ ಫಾರ್ ಎ ಚೇಂಜಿಂಗ್ ಸೊಸೈಟಿ* (ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು) ಸಾರ್ವಕಾಲಿಕ ಮಹತ್ವದ ಗ್ರಂಥ. ಅದನ್ನು ಅರ್ನಾಲ್ಡ್ ಟಾಯ್ನಬಿಯ *ಎ ಸ್ಟಡಿ ಆಫ್ ಹಿಸ್ಟರಿಗೆ* ಮತ್ತು ವಿಲ್ ಡುರಾಂಟರ *ಸ್ಟೋರಿ ಆಫ್ ಸಿವಿಲಿಜೇಶನ್*ಗೆ ಹೋಲಿಸಬಹುದು.

ಮತಾಂಧತೆ ದ್ವೇಷ ಅಥವಾ ದುರಾಗ್ರಹ ಲವಲೇಶವೂ ಇಲ್ಲದ ಸಾರಭೂತ ಹಿಂದುವಾಗಿದ್ದರು ಸ್ವಾಮಿಗಳು. ಪ್ರಾಚೀನ ಭಾರತದ ವಿದ್ವತ್ತು ಮತ್ತು ಆಧ್ಯಾತ್ಮಿಕತೆಯ ಭವ್ಯ ಪರಂಪರೆಯ ಪ್ರತೀಕವಾಗಿದ್ದರು. ಭಾರತೀಯ ವಿದ್ಯಾಭವನ ಸಂಸಾರ ಓರ್ವ ಆಧ್ಯಾತ್ಮಿಕ ಸಲಹೆಗಾರ ಮತ್ತು ಮಾರ್ಗದರ್ಶಿಯನ್ನು ಕಳೆದುಕೊಂಡಿದೆ.

ಭಾರತದ ಮಹಾಪ್ರಾಜ್ಞರುಗಳಲ್ಲಿ ಒಬ್ಬರಾದ ಸ್ವಾಮಿಗಳಿಗೆ ಅಪಾರ ಸಂಖ್ಯೆಯ ಭಾರತೀಯರ ಜತೆ ಸೇರಿ ಭವನ್ಸ್ ಜರ್ನಲ್ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

* * * *

---

* ಸಂಪಾದಕರು, ಭವನ್ಸ್ ಜರ್ನಲ್, ೧೫ನೇ ಮೇ, ೨೦೦೫

## ೬೦. ಭಾರತೀಯ ವಿದ್ಯಾಭವನ ಮತ್ತು ಸ್ವಾಮಿ ರಂಗನಾಥಾನಂದ

**–ಮತ್ತೂರು ಕೃಷ್ಣಮೂರ್ತಿ***

ನಾನು ಸ್ವಾಮಿ ರಂಗನಾಥಾನಂದರ ದೊಡ್ಡ ಅಭಿಮಾನಿ. ಅವರ ಬಗ್ಗೆ ಬಹಳ ಕೇಳಿದ್ದೆ. ಆದರೆ ೧೯೭೨ ನಂತರ ಅವರ ಸಂಪರ್ಕವಾಯಿತು. ೧೯೭೨ರಲ್ಲಿ ಭಾರತೀಯ ವಿದ್ಯಾಭವನ ಲಂಡನ್‌ನಲ್ಲಿ ಒಂದು ಕೇಂದ್ರ ಪ್ರಾರಂಭ ಮಾಡಲು ನಿಶ್ಚಯಿಸಿತು. ಆಗ ಲಂಡನ್‌ನ ರಾಮಕೃಷ್ಣ ವೇದಾಂತ ಸೆಂಟರ್‌ನಲ್ಲಿ ಸ್ವಾಮಿ ಭವ್ಯಾನಂದರು ಅಧ್ಯಕ್ಷರಾಗಿದ್ದರು. ಭವನದ ಲಂಡನ್ ಕೇಂದ್ರ ಮತ್ತು ರಾಮಕೃಷ್ಣ ವೇದಾಂತ ಸೆಂಟರ್ ಪರಸ್ಪರವಾಗಿ ಬಹಳ ಕಾರ್ಯಗಳನ್ನು ಮಾಡುತ್ತಿದ್ದವು. ಸ್ವಾಮಿ ರಂಗನಾಥಾನಂದರು ರಾಮಕೃಷ್ಣ ಮಿಷನ್‌ನ ಕರಾಚಿ ಕೇಂದ್ರ ಅಧ್ಯಕ್ಷರಾಗಿದ್ದಾಗ ಅವರ ಕೆಳಗೆ ಸ್ವಾಮಿ ಭವ್ಯಾನಂದರು ಕೆಲಸ ಮಾಡಿದ್ದರು. ಸ್ವಾಮಿ ರಂಗನಾಥಾನಂದರು ಆಗಾಗ ಲಂಡನ್‌ಗೆ ಭೇಟಿ ಕೊಡುತ್ತಿದ್ದರು. ಆಗ ನನಗೆ ಉಪನ್ಯಾಸಗಳನ್ನು ಕೇಳುವ ಸುಯೋಗ ದೊರಕುತ್ತಿತ್ತು. ಅವರು ಬಹಳ ಪ್ರಯೋಗಶೀಲರಾಗಿದ್ದರು. ಬಹಳ ಜನರು ಅವರನ್ನು ಆಚಾರ್ಯರೆಂದು ಗೌರವಿಸುತ್ತಿದ್ದರು. ಅವರು ಸ್ವಾಮಿ ವಿವೇಕಾನಂದರ ಅವತಾರವೆಂದು ಬ್ರಿಟನ್ನಿನ ಅನೇಕ ಸ್ವಾಮಿಜಿ ಅಭಿಮಾನಿನಿಗಳು ನಂಬಿದ್ದರು.

ರಂಗನಾಥಾನಂದರು ಕ್ರಮಬದ್ಧವಾದ ವಿದ್ಯಾಭ್ಯಾಸವನ್ನು ಪಡೆಯದಿದ್ದರೂ ಸಾಗರೋಪಾದಿ ಜ್ಞಾನವನ್ನು ಸಂಪಾದಿಸಿದ್ದರು. ಇಪ್ಪತ್ತೈದಕ್ಕೂ ಹೆಚ್ಚಾದ ಕೃತಿಗಳನ್ನು ಬರೆದಿದ್ದಾರೆ. ಅವುಗಳ ಬೆಲೆಯನ್ನು ಚಿನ್ನದಲ್ಲಿ ಕಟ್ಟಬಹುದು. ದೊಡ್ಡ ವಾಗ್ಮಿ. ಯಾವ ಟಿಪ್ಪಣಿಯಿಲ್ಲದೆ ಪುರಾತನ ಶಾಸ್ತ್ರಗ್ರಂಥಗಳಿಂದ ಮತ್ತು ಪುರಾಣಗಳಿಂದ ದೀರ್ಘವಾದ ಶ್ಲೋಕಗಳನ್ನು ಉದ್ಧೃತ ಮಾಡುತ್ತಿದ್ದರು. 'ಏಕಸಂಧಿಗ್ರಾಹಿ'ಯೆಂದು ವಿದ್ವತ್ ಜನರು ಗೌರವಿಸುತ್ತಿದ್ದರು. (ಕೇವಲ ಒಂದು ಬಾರಿ ಪರಮತತ್ವ ವಿಚಾರಗಳನ್ನು ಕೇಳಿ ಅಥವಾ ಓದಿ ನಂತರ ಗ್ರಹಣ ಮಾಡಿಕೊಳ್ಳುವವನು – ಏಕಸಂಧಿ ಗ್ರಾಹಿ.)

ಸ್ವಾಮಿಗಳು ಉದಾತ್ತ ನೀತಿ ನಿಷ್ಠೆಯ ವ್ಯಕ್ತಿ ಮತ್ತು ಭಾರತೀಯ ಜ್ಞಾನ ಮತ್ತು ಆಧ್ಯಾತ್ಮಗಳ ಭವ್ಯ ಪರಂಪರೆಯ ಪ್ರತಿನಿಧಿ. 'ಇವತ್ತಿನ ಯುವ ಪೀಳಿಗೆಗೆ ಮಾದರಿಯ ವ್ಯಕ್ತಿಗಳು' ಎಂಬ ಮಾಲಿಕೆಯನ್ನು ಭವನ್ಸ್ ಜರ್ನಲ್‌ನಲ್ಲಿ ಪ್ರಾರಂಭ ಮಾಡಬೇಕೆಂಬ ಉದ್ದೇಶವಿತ್ತು. ಇದಕ್ಕೆ ಸ್ವಾಮಿ ರಂಗನಾಥಾನಂದರು ಸೂಕ್ತರೆಂದು ಯೋಚಿಸಿದೆ. ಅವಿರತ ಕೆಲಸ, ಪಟ್ಟು ಸಡಿಲಿಸದ ಅಧ್ಯಯನ, ಪುರಾತನ ಜ್ಞಾನ, ಆಧುನಿಕ ವಿಜ್ಞಾನವನ್ನು ಸಮನ್ವಯ ಮಾಡುವ ಅನಂತ ಧಾರಣಶಕ್ತಿ– ಇವು ಅವರ ವ್ಯಕ್ತಿತ್ವದ ಹಲವು ಆಯಾಮಗಳಾಗಿ ಇತರರಿಗೆ ಮೇಲ್ಪಂಕ್ತಿಯಾಗಿದ್ದುವು. ನನ್ನ ಸಲಹೆಯನ್ನು ಅವರು ಬೆಂಗಳೂರಿಗೆ ಬಂದಾಗ ಪ್ರಸ್ತಾಪ ಮಾಡಿದೆ. ಅದಕ್ಕೆ 'ನನ್ನ ಜೀವನವೇ ನನ್ನ ಕೆಲಸ. ನನ್ನ ಬರವಣಿಗೆಗಳನ್ನು ಬೇಕಾದ ಹಾಗೆ ಪ್ರಕಟಿಸಿ. ಆದರೆ ವ್ಯಕ್ತಿಗತವಾಗಿ ನನ್ನ ಮೇಲೆ ಬರೆಯಬೇಡಿ. ಸಂನ್ಯಾಸಿಗಳು ದರ್ಶನ, ಶ್ರವಣ ಮತ್ತು ಅನುಸರಿಸಲುಯೋಗ್ಯರು. ಅವರು ಬದುಕಿರುವಾಗ ಅವರ ಮೇಲೆ ಬರೆಯಬಾರದು. ನನ್ನ ನಿಧನವಾರ್ತೆ ಬರೆಯಲು ಇನ್ನೂ ಕಾಲಾವಕಾಶವಿದೆ' ಎಂದು ತಮ್ಮನ್ನು ಮನ್ನಿಸಬೇಕೆಂದು ವಿನಂತಿಮಾಡಿದರು.

* * * *

---

* ನಿರ್ದೇಶಕರು, ಭಾರತೀಯ ವಿದ್ಯಾಭವನ, ಬೆಂಗಳೂರು.

# ೬೧. ನನ್ನ ಪ್ರಾಮಾಣಿಕ ಮಿತ್ರ ಮತ್ತು ಗುರು

**–ಇ. ಪಿ. ಚೆಲಿಶೆವ್***

೧೯೫೬ರ ಶರತ್ಕಾಲದಲ್ಲಿ ದೆಹಲಿಯಲ್ಲಿ ಯುನೆಸ್ಕೋ ಮಹಾ ಸಮ್ಮೇಳನ ನಡೆದಾಗ, ಸ್ವಾಮಿ ರಂಗನಾಥಾನಂದರ ಜತೆ ಪ್ರಥಮ ಭೇಟಿಯಾಯಿತು. ಆಗ ನನ್ನ ವಯಸ್ಸು ೩೫. 'ಸೋವಿಯತ್ ಅಕಾಡೆಮಿ ಆಫ್ ಸೈನ್ಸ್' ಆಶ್ರಯದ 'ಇನ್ಸ್‌ಟ್ಯೂಟ್ ಆಫ್ ಓರಿಯಂಟಲ್ ಸ್ಟಡೀಸ್'ನ ಭಾಷಾಶಾಸ್ತ್ರ ವಿಭಾಗಾಧಿಕಾರಿಯಾಗಿ, ರಷ್ಯಾ ನಿಯೋಗದ ಅಧಿಕೃತ ಸದಸ್ಯನಾಗಿ ಸಮ್ಮೇಳನದ ಕಲಾಪಗಳಲ್ಲಿ ಭಾಗಿಯಾಗಿದ್ದೆ.

ಎರಡನೇ ಮಹಾಯುದ್ಧದ ಕೊನೆಯಲ್ಲಿ ಪ್ರಬಲವಾದ ಜಾಗತಿಕ ಬದಲಾವಣೆಗಳ ಮಧ್ಯದಲ್ಲಿ ಭಾರತ ಸಿಕ್ಕಿಕೊಂಡಿತ್ತು. ಉದ್ಭವಿಸುತ್ತಿರುವ ಸಮಸ್ಯೆಗಳ ಮತ್ತು ಹೊಸ ಪರಿಸ್ಥಿತಿಯ ವಾಸ್ತವಿಕತೆಯಲ್ಲಿ ಯುನೆಸ್ಕೋ ಕಾರ್ಯಚಟುವಟಿಕೆ ವಿಸ್ತಾರ ಮಾಡುವ ಸಲುವಾಗಿ **'ಈಸ್ಟ್–ವೆಸ್ಟ್ ಕಮಿಟಿ'** ಎಂಬ ಸಂಸ್ಥೆಯನ್ನು ರೂಪಿಸಲಾಯಿತು. ಅದರ ನಿರ್ವಾಹಕ ಕಾರ್ಯದರ್ಶಿಯಾಗಿ ಚುನಾಯಿತನಾದೆ. ಆದರೆ ಎಲ್ಲಿಂದ ನಾವು ಪ್ರಾರಂಭ ಮಾಡಬೇಕು? ಕಮಿಟಿಯ ಚಟುವಟಿಕೆ ಮತ್ತು ಅದಕ್ಕೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಏನು ವೇಳಾಪಟ್ಟಿ? ಇವುಗಳ ಬಗ್ಗೆ ವಿಚಾರಮಾಡಿ ಭಾರತೀಯ ನಿಯೋಗದ ಪ್ರಮುಖ ಸದಸ್ಯರಾಗಿದ್ದ ಪ್ರೊ. ಹುಮಾಯೂನ್ ಕಬೀರ್‌ರವರ ಸಲಹೆ ಪಡೆಯಲು ನಿರ್ಧರಿಸಿದೆ. ಅವರು ಕೆಲವು ಅಮೂಲ್ಯ ಸಲಹೆಗಳನ್ನು ಕೊಟ್ಟರು ಮತ್ತು ಸ್ವಾಮಿ ರಂಗನಾಥಾನಂದರನ್ನು ಭೇಟಿ ಮಾಡಲು ಹೇಳಿ, ಅದಕ್ಕೆ ಬೇಕಾದ ವ್ಯವಸ್ಥೆ ಮಾಡಿದರು. ಸ್ವಾಮಿಗಳು ಆಗ ರಾಮಕೃಷ್ಣ ಮಿಷನ್‌ನ ದೆಹಲಿ ಶಾಖೆಯು ಅಧ್ಯಕ್ಷರಾಗಿದ್ದರು. ಹೀಗೆ ಭಾರತ ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ಸಂಸ್ಕೃತಿ ಇಲಾಖೆಯ ಭಾವಿ ಮಂತ್ರಿ ಕಬೀರ್‌ರವರು ಸ್ವಾಮಿಗಳ ಪ್ರಥಮ ಭೇಟಿಯನ್ನು ಆಯೋಜಿಸಿದ್ದರು.

ಆಗಿನಿಂದ ಅರ್ಧ ಶತಮಾನ ಕಳೆದುಹೋಯಿತು. ಪ್ರಾಪಂಚಿಕ ಕೆಲಸಗಳನ್ನು ಮುಗಿಸಿ, ಸ್ವಾಮಿಗಳು ಕಾಲವಾದರು. ಆದರೆ ನನ್ನ ಒಳ ಮನಸ್ಸಿನಲ್ಲಿ ಅವರು ಜೀವಂತವಾಗಿದ್ದಾರೆ ಮತ್ತು ಸದಾ ಜೀವಂತವಾಗಿರುತ್ತಾರೆ. ಈ ಅದ್ಭುತ ವ್ಯಕ್ತಿ, ಉಜ್ವಲ ವಿಜ್ಞಾನಿ ಮತ್ತು ಅಸಾಧಾರಣ ತತ್ತ್ವಜ್ಞಾನಿಯ ಕೆಲವು ನೆನಪುಗಳನ್ನು ಸ್ಮರಣ ಸಂಚಿಕೆಯ ಓದುಗರ ಜತೆ ಹಂಚಿಕೊಳ್ಳಲು ನಾನು ಕೂಡಲೇ ಒಪ್ಪಿಕೊಂಡೆ. ನನ್ನ ಹಲವು ಸಹೋದ್ಯೋಗಿಗಳಿಗೆ ಮತ್ತು ಸ್ನೇಹಿತರಿಗೆ ಸ್ವಾಮಿಗಳ ಜತೆ ಮಾತನಾಡುವ, ಉಪನ್ಯಾಸಗಳನ್ನು ಕೇಳುವ ಮತ್ತು ಅವರ ಕೃತಿಗಳನ್ನು ಓದುವ ಸುಯೋಗ ದೊರಕಿತ್ತು. ಇದನ್ನು ಬರೆಯುವಾಗ ಅವರ ಬಗ್ಗೆ ನನ್ನ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದೇನೆ. ನಂಬಲು ಅಸಾಧ್ಯವಾದ ಆಳವಾದ ಚಿಂತನೆ ಮತ್ತು ಭಾರತೀಯ ಆಧ್ಯಾತ್ಮದ ಬಗ್ಗೆ ಬಹುಶ್ರುತರಾದ ಈ ವ್ಯಕ್ತಿಯ ಬಗ್ಗೆ ಅದ್ಭುತ ಆಶ್ಚರ್ಯ ಮತ್ತು ಮೆಚ್ಚುಗೆಯನ್ನೂ ಅವರಾರೂ ಅನುಭವಿಸಿರಲಿಲ್ಲ. ನನ್ನ ಜೀವನವಿಡೀ ನಡೆಸಿದ ಭಾರತದ ಅನ್ವೇಷಣದ ಪ್ರಾರಂಭದಲ್ಲಿ ಇಂತಹ ಅಸಾಧಾರಣ ವ್ಯಕ್ತಿಯ ಭೇಟಿಯ ಅಪರೂಪದ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ವಿಧಾತನಿಗೆ ನಿಜವಾಗಿ ಕೃತಜ್ಞನಾಗಿದ್ದೇನೆ. ಮಾನವ ಚರಿತ್ರೆಯಲ್ಲಿ ನಡೆದ ಕ್ರೂರ ಯುದ್ಧದಲ್ಲಿ ಪವಾಡಸದೃಶವಾಗಿ ಉಳಿದ ನಾನು ಒಬ್ಬ ತರುಣ ಸಂಶೋಧನ

---

* ಖ್ಯಾತ ರಷ್ಯನ್ ವಿದ್ವಾಂಸರು; ಜವಾಹರಲಾಲ್ ನೆಹರೂ ಪ್ರಶಸ್ತಿ [೧೯೬೭]. ಅಂತಾರಾಷ್ಟ್ರೀಯ ಸ್ವಾಮಿ ವಿವೇಕಾನಂದ ಪ್ರಶಸ್ತಿ[೧೯೯೦] ವಿಜೇತರು, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರು [೨೦೦೨]. ಗೌರವ ಸದಸ್ಯ, ಸಾಹಿತ್ಯ ಅಕಾಡೆಮಿ [೨೦೦೪])

ವಿದ್ಯಾರ್ಥಿಯಾಗಿದ್ದೆ. ಅತ್ಯುಚ್ಚ ಆಧ್ಯಾತ್ಮ, ಸೌಂದರ್ಯ, ಔದಾರ್ಯ ಮತ್ತು ನಿಸ್ವಾರ್ಥ ಪ್ರಪಂಚವನ್ನು ಮುಟ್ಟಲು ಮತ್ತು ಅನುಭವಿಸಲು ಅವರು ನನಗೆ ಸಹಾಯ ಮಾಡಿದರು. "ಭಾರತವನ್ನು ತಿಳಿಯಬೇಕಾದರೆ, ವಿವೇಕಾನಂದರನ್ನ ಓದಿ" ಎಂದು ರವೀಂದ್ರನಾಥ ಠಾಕೂರರ ಉದ್ಗಾರ. ಅದಕ್ಕೆ "ಸ್ವಾಮಿ ರಂಗನಾಥಾನಂದರಂತಹ ಅನುಯಾಯಿಗಳ ಮತ್ತು ಶಿಷ್ಯರ ಬರೆವಣಿಗೆಗಳನ್ನು ಓದಿ" ಎಂದು ಧೈರ್ಯವಾಗಿ ನಾನು ಸೇರಿಸುತ್ತೇನೆ.

ನಮ್ಮ ಸ್ನೇಹಮಾರ್ಗದಲ್ಲಿ ಸ್ವಾಮಿಗಳ ಆಕರ್ಷಕ ವ್ಯಕ್ತಿತ್ವದ ಹಲವು ವಿಶಿಷ್ಟ ಲಕ್ಷಣಗಳನ್ನು ಗಮನಿಸಲು ಮತ್ತು ತುಲನೆಮಾಡಬೇಕಾಗಿದೆ. ನಾನು ಅದೃಷ್ಟಶಾಲಿಯಾಗಿರಬೇಕು. ೧೯೫೦ರ ಶರತ್ಕಾಲದಲ್ಲಿ ನಡೆದ ನಮ್ಮ ಪ್ರಥಮ ಭೇಟಿಯ ಫೋಟೋವನ್ನು ಈಗಲೂ ಜೋಪಾನವಾಗಿ ಇಟ್ಟಿದ್ದೇನೆ. ಅದರಲ್ಲಿ ಸ್ವಾಮಿಗಳು ಪರಮ ದಯಪೂರ್ಣ, ಶಾಂತ ಮತ್ತು ಋಜು ಸ್ವಭಾವದವರಾಗಿ ತೋರುತ್ತಾರೆ. ನಾನು ಪಕ್ಕದಲ್ಲೇ ನಿಂತು ಸ್ವಲ್ಪ ವಿಚಲಿತನಾದಂತೆ, ಅಪರಿಚಿತ, ನಿಗೂಢ ಮತ್ತು ದಿಗ್ಭ್ರಮೆಗೊಳಿಸುವ ಆಧ್ಯಾತ್ಮ ಪ್ರಪಂಚದ ಪ್ರಥಮ ಸ್ಪರ್ಶದಿಂದ ಕಳೆದುಹೋದವನಂತೆ ಕಾಣುತ್ತೇನೆ. ರಾಮಕೃಷ್ಣ ಮಿಷನ್‌ನ ಪ್ರತಿಭಾನ್ವಿತ ಪ್ರತಿನಿಧಿಯನ್ನು ಭೇಟಿ ಮಾಡಿ ಮತ್ತು ಪರಿಚಯ ಮಾಡಿಕೊಂಡ ಸೋವಿಯತ್ ಪ್ರಾಜ್ಞರ ಪೈಕಿ ನಾನು ಪ್ರಪ್ರಥಮ ಸುಯೋಗಿ ಎಂದು ಹೇಳಲು ಇಷ್ಟಪಡುತ್ತೇನೆ.

ಹೆಚ್ಚಾಗಿ ತಾತ್ವಿಕ ಕಾರಣಕ್ಕಾಗಿ ವಿದೇಶಿ ಮತ ಧುರೀಣರ ಜತೆ ಸಂಪರ್ಕವನ್ನು ನಮ್ಮ ದೇಶದಲ್ಲಿ ಆಗ ಮೆಚ್ಚುತ್ತಿರಲಿಲ್ಲ. ಆದರೂ ನಾನು ಸ್ವಾಮಿಗಳಿಗೆ ಸೋವಿಯತ್ ದೇಶಕ್ಕೆ ಬರಲು ಆಹ್ವಾನ ಕಳಿಸುವ ವ್ಯವಸ್ಥೆ ಮಾಡಿದೆ. ಆ ಪ್ರಕಾರ ಅವರು ೧೯೬೧ ಆಗಸ್ಟ್‌ನಲ್ಲಿ ಮಾಸ್ಕೋಗೆ ಬಂದರು. ಎಲ್ಲಕ್ಕಿಂತ ಮೊದಲು ಅವರು ಯಾಸ್ನಾಯ ಪೋಲ್ಯಾನದಲ್ಲಿರುವ ಖ್ಯಾತ ಬರಹಗಾರ ಲಿಯೋ ಟಾಲ್‌ಸ್ಟಾಯ್ ವಸ್ತು ಸಂಗ್ರಹಾಲಯಕ್ಕೆ ಭೇಟಿಕೊಟ್ಟು, ಅವರಿಗೆ ಪ್ರೀತಿ ಮತ್ತು ಗೌರವ ಶ್ರದ್ಧಾಂಜಲಿಯನ್ನು ಸಲ್ಲಿಸಿದರು. ಯಾಕೆಂದರೆ ಇವರು ರಷ್ಯನ್ ಜನಸಮುದಾಯಕ್ಕೆ ಸ್ವಾಮಿ ವಿವೇಕಾನಂದರ ಪರಿಚಯ ಮಾಡಿಸಿ, ಅವರ ಸಂದೇಶಗಳ ಬಗ್ಗೆ ಜನರ ಗಮನ ಸೆಳೆದಿದ್ದರು. ೧೯೭೪-೭೫ರಲ್ಲಿ ಭಾರತೀಯ ವಿದ್ಯಾಭವನದ ವತಿಯಿಂದ ಪ್ರಕಟವಾದ ಎರಡು ಸಂಪುಟಗಳ 'ಎ ಪಿಲಿಗ್ರಿಮ್ ಲುಕ್ಸ್ ಅಟ್ ದಿ ವರ್ಲ್ಡ್' ಎಂಬ ಕೃತಿಯಲ್ಲಿ ಇದನ್ನು ನೆನಪಿಸಿದ್ದಾರೆ.

ಭಾರತೀಯ ನೈಜತೆಗಳ ವಿವಿಧ ಪ್ರಾಕಾರಗಳಲ್ಲಿ ಸಂಶೋಧನ ನಡೆಸುತ್ತಿರುವ ಸೋವಿಯತ್ ವಿದ್ವಾಂಸರ ಜತೆ ನಡೆದ ಮಾತುಕತೆಗಳು ಮತ್ತು ಉಪನ್ಯಾಸಗಳ ಬಗ್ಗೆ ವಿಶೇಷವಾದ ಗಮನವನ್ನು ತಮ್ಮ ಪುಸ್ತಕದಲ್ಲಿ ಕೊಟ್ಟಿದ್ದಾರೆ. ಮಹಾಭಾರತದ ಕೆಲವು ಭಾಗಗಳನ್ನು ರಷ್ಯನ್ ಭಾಷೆಗೆ ಅನುವಾದ ಮಾಡಿದ್ದ ಪ್ರೊ. ವಿ.ಐ.ಕಲ್ಯಾನೋವ್ ಜತೆ ಸ್ವಾಮಿಗಳು ಸುದೀರ್ಘ ಮಾತುಕತೆ ನಡೆಸಿದರು. ತುಳಸಿದಾಸರ ರಾಮಚರಿತ ಮಾನಸವನ್ನು ರಷ್ಯನ್‌ಗೆ ಮಾಡಿದ ದಿವಂಗತ ಪ್ರೊ. ಎ.ಪಿ.ಬರಾನ್ನಿಕೋಫ್‌ಗೆ ಶ್ರದ್ಧಾಂಜಲಿ ಸಲ್ಲಿಸಿ, ಅವರ ಹೆಂಡತಿ ಮತ್ತು ಮಗನನ್ನು ಭೇಟಿ ಮಾಡಿದರು. 'ಮಾಸ್ಕೋ ಇನ್ಸಿಟ್ಯೂಟ್ ಆಫ್ ಓರಿಯಂಟಲ್ ಸ್ಟಡೀಸ್'ನಲ್ಲಿ ವೇದಾಂತದ ವಿವಿಧ ಆಯಾಮಗಳು ಮತ್ತು ಸ್ವಾಮಿ ವಿವೇಕಾನಂದರ ಉಪದೇಶಗಳ ಬಗ್ಗೆ ಹಲವು ಉಪನ್ಯಾಸಗಳನ್ನು ನೀಡಿದರು. ಪ್ರೊ. ಎ.ಎಂ.ದ್ಯಾಕೋಫ್ ಜತೆ ನಡೆಸಿದ ಸಂಭಾಷಣೆಯನ್ನು ಪ್ರೊ .ಎ.ಡಿ.ಲಿಟ್‌ಮನ್ ಜತೆ ನಡೆಸಿದ ಉಪಯುಕ್ತ ಮತ್ತು ವಿಚಾರಪೂರಿತ ಚರ್ಚೆಗಳನ್ನು ಬಹಳ ಮೆಚ್ಚುಗೆಯಿಂದ ಸ್ವಾಮಿಗಳು ಜ್ಞಾಪಿಸಿಕೊಂಡಿದ್ದಾರೆ. ತಾವು ಬರೆದ ಕೃತಿ *Contemporary Indian Philosophy* ಪುಸ್ತಕದಲ್ಲಿ' 'ಸಿಂಥೆಟಿಕ್ ಸನಾತನ ಧರ್ಮ ಆಫ್ ಸ್ವಾಮಿ ರಂಗನಾಥಾನಂದ" ಎಂಬ ವಿಶೇಷ ಅಧ್ಯಯನವನ್ನು ಸಂಪಾದಿಸಿ ೧೯೮೫ರಲ್ಲಿ ಪ್ರೊ .ಲಿಟ್‌ಮನ್ ಪ್ರಕಟಿಸಿದರು.

ಸ್ವಾಮಿಗಳ ಮಾಸ್ಕೋ ಭೇಟಿ ನನಗೆ ಮಹತ್ವಪೂರ್ಣವಾಗಿತ್ತು. ಅವರ ಉಪನ್ಯಾಸಗಳಿಗೆ ಸಂಬಂಧಪಟ್ಟ ಚರ್ಚೆ ಮತ್ತು ಸಭೆಗಳಲ್ಲದೆ, ಕೆಲವು ಸಲ ನಮ್ಮ ಮನೆಗೆ ಆಹ್ವಾನಿಸುವ ಅದೃಷ್ಟ ಒದಗಿಬಂತು. ಸಮಕಾಲೀನ

ಹಿಂದೀ ಕಾವ್ಯದ ಮೇಲೆ ನಾನು ಮಹಾಪ್ರಬಂಧಕ್ಕಾಗಿ ವಿಷಯ ಸಂಗ್ರಹಣ ಮಾಡುತ್ತಿದ್ದೆ. ಆಗಿನ ಹಿಂದಿ ಬರಹಗಾರರ ಪೈಕಿ ಪ್ರಖ್ಯಾತರಾದ ಸೂರ್ಯಕಾಂತ ತ್ರಿಪಾಠಿ ನಿರಾಲಾ ಅವರ ಸಮಗ್ರ ಬರಹದ ಮೇಲೆ ಮಾಡಿದ ಸಂಶೋಧನೆ ನನ್ನನ್ನು ಸ್ವಾಮಿ ವಿವೇಕಾನಂದರ ಬಳಿ ಕೊಂಡೊಯಿತು. ನಿರಾಲಾರು ವಿವೇಕಾನಂದರ ಉಜ್ವಲ ಅಭಿಮಾನಿ. ತಮ್ಮ ಜೀವನ ಮತ್ತು ಸಾಹಿತ್ಯ ಪ್ರಚಾರದಲ್ಲಿ ಸ್ವಾಮಿಗಳನ್ನು ಅನುಸರಿಸುತ್ತಿದ್ದರು. ನಿರಾಲಾರ ಕಾವ್ಯದಲ್ಲಿ ವೇದಾಂತ ವಿಚಾರ ಹೇಗೆ ಹೊಮ್ಮಿದೆ ಎಂಬುದರ ಮೇಲೆ ನನ್ನ ಟಿಪ್ಪಣಿಗಳನ್ನು ಸ್ವಾಮಿಗಳಿಗೆ ವಿವರಿಸಿದೆ. 'ಅಲ್ಲಿ ಶ್ಯಾಮ ನರ್ತನಮಾಡಲಿ' ಎಂಬ ವಿವೇಕಾನಂದರ ಹಾಡಿನ ನನ್ನ ಅನುವಾದವನ್ನು ಅವರ ಹತ್ತಿರ ಚರ್ಚೆ ಮಾಡಿದೆ. ಅವರ ಸಲಹೆ ಮತ್ತು ಅಭಿಪ್ರಾಯಗಳು ನನ್ನ ಮುಂದಿನ ವೈಜ್ಞಾನಿಕ ಕೆಲಸಕ್ಕೆ ಬಹಳ ಉಪಯೋಗವಾಯಿತು. ನನ್ನ ತಾಯಿ, ಹೆಂಡತಿ ಮತ್ತು ನನ್ನ ಇಬ್ಬರು ಗಂಡು ಮಕ್ಕಳ ಜತೆ ಮಾತನಾಡಿ ಸಂತಸಪಟ್ಟರು. ನಮ್ಮ ಕುಟುಂಬದ ಸದಸ್ಯರು ಹಾಡಿದ ರಷ್ಯನ್ ಜನಪದ ಮೇಳಗೀತೆಗಳನ್ನು ಗಮನವಿಟ್ಟು ಕೇಳಿದರು. ವೇದಾಂತ ತತ್ತ್ವದ ಸಾರವನ್ನು ಕೆಲವೇ ಸಾಮಾನ್ಯ ಶಬ್ದಗಳಲ್ಲಿ ನಮ್ಮ ಕುಟುಂಬದವರಿಗೆ ವಿವರಿಸಿ ಹೇಳಿದರು.

ನಮ್ಮ ಸ್ನೇಹ ಬಾಂಧವ್ಯ ಮತ್ತು ಸೃಜನಾತ್ಮಕ ಪರಸ್ಪರ ಸಹಕಾರ ಗಾಢವಾಗಿ ಬೆಳೆಯುತ್ತಿತ್ತು. ೧೯೬೧ರ ಆಗಸ್ಟ್ ಕೊನೆಯಲ್ಲಿ ರವೀಂದ್ರನಾಥ ಠಾಕೂರರಿಗೆ ಸಮರ್ಪಿತ ಅಂತಾರಾಷ್ಟ್ರೀಯ ವಿಚಾರ ಗೋಷ್ಠಿ ದೆಹಲಿಯಲ್ಲಿ ನಡೆಯಿತು. ನನ್ನ ಜತೆ ಖ್ಯಾತ ರಷ್ಯನ್ ಬರಹಗಾರ ಸೆವೊಲೋದ್ ಇವಾನೋವ್‌ರವರನ್ನು ರಾಮಕೃಷ್ಣ ಮಿಷನ್‌ಗೆ ಕರೆದುಕೊಂಡು ಹೋಗಿ ಸ್ವಾಮಿಗಳ ಪರಿಚಯ ಮಾಡಿಸಿದೆ. ಅವರು ಆಗ ತಾನೆ ಮಾಸ್ಕೋದಿಂದ ವಾಪಸ್ಸು ಬಂದಿದ್ದರು. 'ಇಂತಹ ಪ್ರಜ್ಞಾವಂತ ಭಾರತೀಯನನ್ನು ನಾನು ೪೦ ವರ್ಷಗಳ ಹಿಂದೆ ಭೇಟಿಯಾಗದಿದ್ದು ಒಂದು ವಿಷಾದಕರ ಸಂಗತಿ' ಎಂದು ಇವನೋವ್ ಅವರು ನನ್ನ ಹತ್ತಿರ ಹೇಳಿದರು. ಆಗ ನಾನು ಸಾಹಿತ್ಯಿಕ ಚಟುವಟಿಕೆಗಳನ್ನು ಪ್ರಾರಂಭಿಸಿದ್ದೆ. ಮತ್ತು ಭಾರತದ ಬಗ್ಗೆ ಮೋಹಿತನಾಗಿದ್ದೆ. ಆದರೆ ಈ ದೇಶದ ಬಗ್ಗೆ ನನ್ನ ತಿಳುವಳಿಕೆ ಅಲ್ಪವಾಗಿತ್ತು. ನಿಜವಾದ ಭಾರತದ ಬಗ್ಗೆ ತಿಳಿಸಿಕೊಡುವವರು ನನ್ನ ಹತ್ತಿರ ಯಾರೂ ಇರಲಿಲ್ಲ.

ರವೀಂದ್ರನಾಥ ಠಾಕೂರರ ಜನ್ಮಶತಾಬ್ದಿ ಸಮಾರಂಭದಲ್ಲಿ, ಸ್ವಾಮಿಗಳು ತಯಾರಿಯಲ್ಲಿದ್ದ ವಿವೇಕಾನಂದ ಜನ್ಮ ಶತಾಬ್ದಿ ಸಮಾರಂಭದ ಸ್ಮರಣ ಸಂಚಿಕೆಗೆ ನಾನು ವಿವೇಕಾನಂದರ ಮೇಲೆ ಒಂದು ಲೇಖನ ಬರೆಯಬೇಕೆಂದು ಸಲಹೆ ಮಾಡಿದರು. "ನಾನು ತತ್ವಜ್ಞಾನಿಯಲ್ಲ ಮೇಲಾಗಿ ಆಧ್ಯಾತ್ಮ ವಿಚಾರದಲ್ಲಿ ಪರಿಣಿತನಲ್ಲ" ಎಂದು ನಾನು ಆಕ್ಷೇಪಿಸಿದೆ; ಅವರ ಸಲಹೆಗೆ ವಂದನೆ ತಿಳಿಸಿ "ಸ್ವಾಮಿಜಿ ಲಿಟ್‌ಮನ್, ಕೋಸ್ತ್ಯುಚೆಂಕೋ, ಅನಿಕೇವ್ ಮುಂತಾದ ಪರಿಣಿತರು ಇದ್ದಾರೆ" ಎಂದು ತಿಳಿಸಿದೆ. "ನಿಜ, ಆದರೆ ಒಮ್ಮೆ ವಿವೇಕಾನಂದ ಶಿಲೆಗೆ ನೀವು ಈಜಿ ಹೋಗುವ ದುಸ್ಸಾಹಸದ ಬಗ್ಗೆ ಹೇಳಿದ್ದ ನೆನಪು" ಎಂದು ಸ್ವಾಮಿಗಳ ಉತ್ತರ. ಅವರ ಉತ್ತರ ಮತ್ತು ಮಂದಹಾಸ ನನ್ನಲ್ಲಿದ್ದ ಅನುಮಾನಗಳನ್ನು ಓಡಿಸಿದವು.

ಕೂಡಲೇ ಲೇಖನದ ಬಗ್ಗೆ ನನಗೆ ಔಪಚಾರಿಕ ಸೂಚನೆ ಬಂತು. ಇದು ಸಾಧ್ಯವಾಗಿದ್ದು ಸ್ವಾಮಿ ರಂಗನಾಥಾನಂದರ ಮತ್ತು ಪ್ರೊ. ಹುಮಾಯೂನ್ ಕಬೀರ್‌ರವರ ಆಸ್ಥೆಯಿಂದ ಎಂದು ನನ್ನ ಭಾವನೆ. 'ಸ್ವಾಮಿ ವಿವೇಕಾನಂದ ಭಾರತೀಯ ಮಾನವತಾವಾದಿ, ಪ್ರಜಾಪ್ರಭುತ್ವವಾದಿ ಮತ್ತು ರಾಷ್ಟ್ರ ಭಕ್ತ' ಎಂಬ ನನ್ನ ಲೇಖನ ಸ್ಮರಣ ಸಂಚಿಕೆಯಲ್ಲಿ ಪ್ರಕಟವಾಗಿದ್ದು ನನಗೆ ಸಂದ ದೊಡ್ಡ ಗೌರವವೆಂದು ತಿಳಿಯುತ್ತೇನೆ. ಯಾಕೆಂದರೆ ಚಕ್ರವರ್ತಿ ರಾಜಗೋಪಾಲಾಚಾರಿ, ಆರ್.ಸಿ.ಮಜುಮ್‌ದಾರ್, ಸುನೀತಿ ಕುಮಾರ್ ಚಟರ್ಜಿ, ಡಾ.ಸರ್ವೇಪಲ್ಲಿ ರಾಧಾಕೃಷ್ಣನ್ ಮುಂತಾದ ಪ್ರಮುಖ ತೇಜಸ್ವಿಗಳ ಪುಂಜದಲ್ಲಿ ನಾನು ಸೇರಿದ್ದೆ. ಇದು ನನ್ನಂಥ ತರುಣ ಸಂಶೋಧನಾ ವಿದ್ಯಾರ್ಥಿಗೆ ಸಾಧ್ಯವಾದದ್ದು ಸ್ವಾಮಿಗಳ ಸಲಹೆಯಿಂದ. ಇದಕ್ಕಾಗಿ ನಾನು ಅವರಿಗೆ ಚಿರಋಣಿ.

೭೦ರ ಪ್ರಾರಂಭದಲ್ಲಿ ಸ್ವಾಮಿಗಳು ಕೋಲ್ಕತ್ತಾ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್‌ನ ಕಾರ್ಯದರ್ಶಿಯಾಗಿದ್ದರು. ಅಲ್ಲಿ ಹಲವು ಉಪನ್ಯಾಸಗಳನ್ನು ಕೊಡುವ ಸುಯೋಗ ದೊರೆತಿತ್ತು. ಮಹಡಿ ಮೇಲಿದ್ದ ಧ್ಯಾನದ ಕೋಣೆಯ ವಿಶೇಷ ವಾತಾವರಣದಲ್ಲಿ ಸ್ವಾಮಿಗಳ ಜತೆ ಇದ್ದದ್ದನ್ನು ನಾನು ಸದಾ ನೆನೆಯುತ್ತೇನೆ. ಅವರ ಜತೆಗೆ ಮಾತನಾಡುವಾಗ ವಿವೇಕಾನಂದರ ಮೇಲಿನ ರಷ್ಯನ್ ಸಂಶೋಧನ ಲೇಖನಗಳನ್ನು ಸಂಪಾದಿಸಿ ಇಂಗ್ಲಿಷ್‌ಗೆ ತರ್ಜುಮೆ ಮಾಡಿ ಅದನ್ನು ಇನ್ಸ್ಟ್ಯೂಟ್‌ವತಿಯಿಂದ ಪ್ರಕಟಿಸಬೇಕು ಎಂಬ ಸಲಹೆ ಬಂತು. ಸ್ವಾಮಿಗಳ ನಂತರ ಸ್ವಾಮಿ ಲೋಕೇಶ್ವರಾನಂದರ ಜತೆ ಸ್ನೇಹಪರ ಬಾಂಧವ್ಯ ಬೆಳೆದು ಪ್ರಕಟಣೆ ಸಾಧ್ಯವಾಯಿತು. ಪ್ರಖ್ಯಾತ ಸಂಸ್ಥೆಯಿಂದ ಪುಸ್ತಕ ಪ್ರಕಟವಾದದ್ದು ನಮ್ಮ ದೇಶದಲ್ಲಿ ನಡೆಯುತ್ತಿದ್ದ ರವೀಂದ್ರರನ್ನು ಕುರಿತ ಸಂಶೋಧನೆಗಳಿಗೆ ದೊರೆತ ಅಂತಾರಾಷ್ಟ್ರೀಯ ಮಾನ್ಯತೆಯೇ ಆಗಿತ್ತು.

ಹಿಂದೆ ನಡೆದ ಘಟನೆಗಳನ್ನು ಮತ್ತು ಮುಂದೆ ಆದ ಬೆಳವಣಿಗೆಗಳನ್ನು ಪರಿಶೀಲಿಸಿದಾಗ, ಒಂದು ವಿಚಾರ ಸಹಜವಾಗಿ ನನ್ನ ಮನಸ್ಸಿಗೆ ಹೊಳೆಯಿತು. ವಿವೇಕಾನಂದರ ಪರಂಪರೆಯ ಬಗ್ಗೆ ರಷ್ಯಾದಲ್ಲಿ ಸಂಶೋಧನೆ ಮಾಡಲು ಪ್ರಥಮವಾಗಿ ಸ್ವಾಮಿ ರಂಗನಾಥಾನಂದರು ಸ್ಫೂರ್ತಿ ಮತ್ತು ಉತ್ತೇಜನಕೊಟ್ಟರು. ಸ್ವಾಮಿ ವಿವೇಕಾನಂದರ ಬಗ್ಗೆ ಹಾಗೂ ಭಾರತೀಯ ಆಧ್ಯಾತ್ಮ ಸಂಸ್ಕೃತಿಗೆ ಅವರ ಮಹತ್ತರ ಕೊಡುಗೆ ಬಗ್ಗೆ ರಷ್ಯಾದಲ್ಲಿ ತಿಳುವಳಿಕೆ ಕೊಟ್ಟ ಭಾರತೀಯ ತತ್ತ್ವಜ್ಞಾನಿಗಳ ಮತ್ತು ಧುರೀಣರ ಪೈಕಿ ಸ್ವಾಮಿ ರಂಗನಾಥಾನಂದರು ಮೊದಲನೆಯವರು. ಹಾಗಾಗಿ ನಮ್ಮ ಎಲ್ಲಾ ಪ್ರಕಟಣೆಗಳ ಮತ್ತು ಪ್ರಯತ್ನಗಳ ನಿಜವಾದ ಶ್ರೇಯಸ್ಸು ಸ್ವಾಮಿಗಳಿಗೆ ಸೇರಬೇಕೆಂಬ ನನ್ನ ಅನಿಸಿಕೆ ಬರೀ ಉತ್ಪ್ರೇಕ್ಷೆಯಲ್ಲ. 'ಇತರ ಬೆಳವಣಿಗೆಗಳು' ಅಂದರೆ ನನ್ನ ಮನಸ್ಸಿನಲ್ಲಿರುವ ಎರಡು ಸಂಗತಿಗಳು– ಒಂದು ವಿವೇಕಾನಂದರ ಪ್ರಮುಖ ಕೃತಿಗಳನ್ನು ರಷ್ಯನ್ ಭಾಷೆಯಲ್ಲಿ 'ಪ್ರಾಕ್ಟಿಕಲ್ ವೇದಾಂತ' ಎಂಬ ಹೆಸರಿನಿಂದ ೧೯೯೩ರಲ್ಲಿ ಪ್ರಕಟಿಸಿದ್ದು; ಎರಡು, ೧೯೯೦ರಲ್ಲಿ ನಾನು 'ಸ್ವಾಮಿ ವಿವೇಕಾನಂದ ಇಂಟರ್ ನ್ಯಾಷನಲ್ ಅವಾರ್ಡ್'ನಿಂದ ಅಲಂಕೃತನಾದದ್ದು.

ಸ್ವಾಮಿ ರಂಗನಾಥಾನಂದರು ಹೈದರಾಬಾದ್‌ಗೆ ಹೋದ ಮೇಲೆ ನನ್ನ ಅವರ ಜೊತೆ ವೈಯಕ್ತಿಕ ಸಂಪರ್ಕ ಕಡಿಮೆಯಾಯಿತು. ಆಗಾಗ ಪತ್ರ ವ್ಯವಹಾರ ನಡೆಯುತ್ತಿತ್ತು. 'ಎಟರ್ನಲ್ ವ್ಯಾಲ್ಯೂಸ್ ಫಾರ್ ಎ ಚೇಂಜಿಂಗ್ ಸೊಸೈಟಿ'ಯ ಮೂರನೇ ಆವೃತ್ತಿಯು ಪ್ರಕಟವಾದ ಬಗ್ಗೆ ತಿಳಿಸಿದರು. ಸ್ವಲ್ಪ ಸಮಯದನಂತರ ಅದರ ಒಂದು ಪ್ರತಿಯನ್ನು ಅಂಚೆ ಮುಖಾಂತರ ಕಳುಹಿಸಿದರು. ಅದರಲ್ಲಿ "ಕಾಮ್ರೇಡ್ ಈ.ಪಿ.ಚೆಲಿಶೇವ್‌ಗೆ, ಪ್ರೀತಿ ಮತ್ತು ಶುಭಾಶಯಗಳ ಸಹಿತ, ಸ್ವಾಮಿ ರಂಗನಾಥಾನಂದ, ರಾಮಕೃಷ್ಣ ಮಠ, ಹೈದರಾಬಾದ್, ೨೬-೪-೧೯೭೭" ಎಂದು ಸ್ವಾರಸ್ಯವಾಗಿ ಬರೆದಿದ್ದರು.

ನನ್ನನ್ನು ಉದ್ದೇಶಿಸಿ ಬರೆದ 'ಕಾಮ್ರೇಡ್' ವಿಶಿಷ್ಟ ಶಬ್ದಕ್ಕೆ ಗಮನಕೊಟ್ಟೆ. ಸಮಾನ ಮನೋಭಾವವುಳ್ಳ, ಸಮಾನ ಆದರ್ಶ ಮತ್ತು ವಿಚಾರಗಳನ್ನು ಹಂಚಿಕೊಳ್ಳುವ ಭ್ರಾತೃತ್ವ ಭಾವನೆಯುಳ್ಳ ವ್ಯಕ್ತಿಯೆಂದು ಸ್ವಾಮಿಗಳ ಮನಸ್ಸಿಗೆ 'ಕಾಮ್ರೇಡ್' ಪದ ಉಪಯೋಗಿಸಿದಾಗ ಬಂದಿದ್ದು. ಪ್ರಚಲಿತ ರಾಜಕೀಯ ಅರ್ಥದಲ್ಲಿ ಆ ಪದವನ್ನು ಬಳಸಿರಲಿಲ್ಲ.

ಎಟರ್ನಲ್ ವ್ಯಾಲ್ಯೂಸ್ ಕೃತಿಯಲ್ಲಿ ಕೆಲವು ಅಧ್ಯಾಯಗಳು 'ಸ್ವಾಮಿ ವಿವೇಕಾನಂದ: ವಿಜ್ಞಾನ ಮತ್ತು ಆಧ್ಯಾತ್ಮಗಳ ಸಮನ್ವಯ'. 'ಸ್ವಾಮಿ ವಿವೇಕಾನಂದರಲ್ಲಿ ಪೂರ್ವ ಮತ್ತು ಪಶ್ಚಿಮಗಳ ಸಮಾಗಮ' ಮತ್ತು 'ಪಾಶ್ಚಾತ್ಯಕ್ಕೆ ಭಾರತದ ಪ್ರತಿನಿಧಿ/ರಾಯಭಾರಿ: ಸ್ವಾಮಿ ವಿವೇಕಾನಂದ' ಬಹಳ ಸ್ವಾರಸ್ಯಕರವಾಗಿದ್ದುವು. ಕೊನೆಯ ಅಧ್ಯಾಯದಲ್ಲಿ ಸ್ವಾಮಿ ರಂಗನಾಥಾನಂದರು ಪ್ರಖ್ಯಾತ ವಿವೇಕಾನಂದ ಶಿಲೆ (ಕನ್ಯಾಕುಮಾರಿ) ಮೇಲೆ ಬರೆದ ಲೇಖನ ನನಗೆ ಬಹಳ ಪ್ರಿಯವಾಗಿತ್ತು. ಹಿಂದೆ ತಿಳಿಸಿದ ಹಾಗೆ ವಿವೇಕಾನಂದ ಶಿಲೆ ನನ್ನ ಜೀವನದಲ್ಲಿ ಸಂಕೇತ

ರೂಪವಾಗಿದ್ದು, ಆಜೀವ ಪರ್ಯಂತ ಭಾರತದ ಜತೆ ಇರುವ ನನ್ನ ವೈಯಕ್ತಿಕ ಮತ್ತು ವೈಜ್ಞಾನಿಕ ಸಂಬಂಧಕ್ಕೆ ಮೆರುಗು ಕೊಟ್ಟಿದೆ.

ನಾನು ಒಮ್ಮೆ ಕೋಲ್ಕತ್ತಕ್ಕೆ ಹೋದಾಗ – ಇಸವಿ ನೆನಪಿಲ್ಲ – ಸ್ವಾಮಿ ರಂಗನಾಥಾನಂದರು ಹುಷಾರು ಇಲ್ಲದೆ ಆಸ್ಪತ್ರೆ ಸೇರಿದ್ದಾರೆ ಎಂದು ಸ್ವಾಮಿ ಲೋಕೇಶ್ವರಾನಂದರು ತಿಳಿಸಿದರು. ಸ್ವಾಮಿಗಳು ನಗುಮುಖದಿಂದ ನನ್ನನ್ನು ಸ್ವಾಗತಿಸಿದರು. ಅವರ ಆರೋಗ್ಯದ ಬಗ್ಗೆ ನಾನು ವಿಚಾರಿಸಿದಾಗ, ಅವರು ಕೈಯಾಡಿಸಿ 'ಅಹಿತಕರ ವಿಷಯಗಳ ಬಗ್ಗೆ ಮಾತನಾಡುವುದು ಬೇಡ. ನಾನು ಹೈದರಾಬಾದಿನಿಂದ ಕಳುಹಿಸಿದ ನನ್ನ ಪುಸ್ತಕ ತಲುಪಿತು ಎಂದು ತಿಳಿಸಿದ್ದೀರಿ. ಅದರಲ್ಲಿ ಯಾವ ಅಧ್ಯಾಯಗಳು ರಷ್ಯನ್ ಓದುಗರಿಗೆ ಇಷ್ಟವಾಯಿತು ಎಂದು ದಯವಿಟ್ಟು ಹೇಳಿ' ಎಂದು ಉತ್ತರಿಸಿದರು. ನಮ್ಮ ಮಾತುಕತೆಯಲ್ಲಿ ಎಷ್ಟು ಮಗ್ನರಾಗಿದ್ದೆವೆಂದರೆ, ಸಮಯದ ಪ್ರಜ್ಞೆ ಇರಲಿಲ್ಲ. ಓರ್ವ ಖಡಕ್ ನರ್ಸ್ ರೂಮಿನೊಳಗೆ ಬಂದು, ರೋಗಿಗೆ ವಿಶ್ರಾಂತಿಯ ಅಗತ್ಯವಿದೆ ಎಂದು ಹೇಳಿದಾಗ ಕೊನೆಯಲ್ಲಿ ನಮ್ಮ ಮಾತುಕತೆಗೆ ತಡೆಬಂತು. ನಾವು ಆಕೆಯ ಆದೇಶ ಪಾಲಿಸಿ, ಅವರನ್ನು ಬೀಳ್ಕೊಟ್ಟೆವು. ಸ್ವಾಮಿಗಳು ಹೇಗೆ ಕೈ ಎತ್ತಿ ನಮಗೆ ವಿದಾಯ ಹೇಳಿದರು ಎಂಬುದನ್ನು ಈಗಲೂ ನೆನಪಿಸಿಕೊಳ್ಳುತ್ತೇನೆ.

೧೯೮೯ರಲ್ಲಿ ನಾನು ಕೊನೆಯದಾಗಿ ಅವರನ್ನು ಭೇಟಿಮಾಡಿದ್ದೆ. ಆಗ ನಮ್ಮ ದೇಶದಲ್ಲಿ ವಿಷಮ ಪರಿಸ್ಥಿತಿ. ಆಗಿನ ಅಧ್ಯಕ್ಷ ಮಿಖಾಯೆಲ್ ಗೋರ್ಬಚೆವ್ ಪ್ರಾರಂಭಿಸಿದ ಪೆರಿಸ್ತ್ರೋಯ್ಕ ಅಥವಾ ಪುನರ್ನಿರ್ಮಾಣದಿಂದ ಬಹಳ ಜನರಿಗೆ ನಿರಾಶೆ ಉಂಟಾಗಿತ್ತು. ಪಾಶ್ಚಾತ್ಯ ದೇಶಗಳು, ಅದರಲ್ಲಿ ಪ್ರಥಮವಾಗಿ ಅಮೆರಿಕಾ ದೇಶ, ನಮ್ಮ ನಂಬಿಗಸ್ಥ ಸಹಯೋಗಿ ಎಂದು ನಮ್ಮ ರಾಜಕೀಯ ನೇತೃತ್ವ ನಿಶ್ಚಯಿಸಿದಾಗ, ಭಾರತದ ಜತೆಗೆ ಹಿಂದೆ ಇದ್ದ ಸಾರ್ಥಕ ಸಂಬಂಧವನ್ನು ಮತ್ತೆ ಸರಿಪಡಿಸುವ ದಾರಿಯನ್ನು ಹುಡುಕಬೇಕಾಯಿತು. ಸಾಂಸ್ಕೃತಿಕ ಮತ್ತು ವೈಜ್ಞಾನಿಕ ವಿನಿಮಯದ ಸಲುವಾಗಿ ಭಾರತಕ್ಕೆ ಬಂದ ಒಂದು ಪರಿಣತರ ಸಣ್ಣ ಗುಂಪಿನಲ್ಲಿ ನಾನು ಇದ್ದೆನೆಂದು ನೆನಪು. ರಾಮಕೃಷ್ಣ ಮಿಷನ್‌ಗೆ ನನಗೆ ಭೇಟಿಕೊಡುವ ಸಲುವಾಗಿ ದಯವಿಟ್ಟು ವ್ಯವಸ್ಥೆ ಮಾಡಿ ಎಂದು ರಷ್ಯನ್ ದೂತಾವಾಸದ ಒಬ್ಬ ಅಧಿಕಾರಿಗೆ ವಿನಂತಿಮಾಡಿದೆ. ಭೇಟಿಯ ವ್ಯವಸ್ಥೆಯಾಗಿದೆ, ಆಗಿನ ಮಿಷನ್ ಕಾರ್ಯದರ್ಶಿ ಸ್ವಾಮಿ ಗೋಕುಲಾನಂದರು ನಿಗದಿತ ವೇಳೆಯಲ್ಲಿ ನಿಮಗೆ ಕಾಯುತ್ತಾರೆ ಎಂದು ಬೇಗನೆ ನನಗೆ ತಿಳಿಸಿದರು. ನಾನು ಮಿಷನ್ ತಲುಪಿದಾಗ ಒಂದು ಸಂತೋಷಕರವಾದ ಆಶ್ಚರ್ಯ ಕಾದಿತ್ತು. ಸ್ವಾಮಿ ರಂಗನಾಥಾನಂದರು ನನ್ನನ್ನು ಮತ್ತು ನನ್ನ ಸಹೋದ್ಯೋಗಿಗಳನ್ನು ಎದುರುಗೊಳ್ಳಲು ನಿಂತಿದ್ದರು. ಹಲವು ವರ್ಷಗಳಿಂದ ನನಗೆ ಆತ್ಮೀಯರಾಗಿದ್ದ ಸ್ವಾಮಿಗಳ ಜತೆ ಇದ್ದ ಕೊನೆಯ ಭೇಟಿಯ ಕೆಲವು ಫೋಟೋಗಳನ್ನು ಛಾಯಾಗ್ರಾಹಕ ಸೆರೆಹಿಡಿದನು. ಅವುಗಳ ಪೈಕಿ ಒಂದು ಫೋಟೋದಲ್ಲಿ "ನೋಡು, ಈ ಜಾಗದಲ್ಲಿ ಸುಮಾರು ಮೂವತ್ತು ವರ್ಷಕ್ಕಿಂತ ಹಿಂದೆ ನಾನು ಚೆಲಿಶೇವ್‌ರನ್ನು ಭೇಟಿಯಾಗಿದ್ದು" ಎಂದು ನಗುತ್ತಾ ಸ್ವಾಮಿಗಳು ತಮ್ಮ ಜತೆಯವರಿಗೆ ಮಿಷನ್‌ನ ಕಾಂಪೌಂಡಿನಲ್ಲಿ ಒಂದು ಜಾಗವನ್ನು ಬೊಟ್ಟುಮಾಡಿ ತೋರಿಸುತ್ತಿರುವ ಒಂದು ಚಿತ್ರ ಮೂಡಿ ಬಂದಿತ್ತು. ಆ ದಿನ ಈ ರೀತಿಯ ಸಂಭಾಷಣೆ ನಡೆದಿತ್ತು. "ನೋಡಿ, ಚೆಲಿಶೇವ್ ಈಗಲೂ ಒಳ್ಳೆ ಆರೋಗ್ಯ ಕಾಪಾಡಿಕೊಂಡು ಬರುತ್ತಿದ್ದಾರೆ. ಬಹುಶಃ ಇನ್ನೊಮ್ಮೆ ವಿವೇಕಾನಂದ ಶಿಲೆಗೆ ಈಜಿ ಹೋಗಲು ಸಮರ್ಥನಾಗಿದ್ದಾರೆ" ಎಂದು ಸ್ವಾಮಿಜಿಗಳು ತಮ್ಮ ಜತೆಯವರಿಗೆ ಹೇಳಿದರು.

'ನೋಡಿ ಸ್ವಾಮಿಜಿ ನನ್ನನ್ನು "ಮಿಸ್ಟರ್" ಅಥವಾ "ಅಕಾಡೆಮಿಶಿಯನ್" ಎಂದು ಇನ್ನು ಮೇಲೆ ಕರೆಯಬೇಡಿ. ನೀವು ಹೋದ ಸಾರಿ ಬಳಸಿದ "ಕಾಮ್ರೇಡ್" ಶಬ್ದ ಇಷ್ಟ ಪಡುತ್ತೇನೆ. ನನ್ನ ಅನಿಸಿಕೆಯಿಂದ ಅಲ್ಲಿದ್ದವರಿಗೆ ನಗುಬಂತು. ಫೋಟೋದಲ್ಲಿ ಸೆರೆಹಿಡಿದ ಹಾಗೆ, ಆತ್ಮೀಯ ಹಾಸ್ಯ ಪ್ರವೃತ್ತಿಯ ಮತ್ತು ಸ್ನೇಹಮಯಿ ಸ್ವಾಮಿಗಳನ್ನು ನಾನು ಸದಾ ನೆನೆಯುತ್ತೇನೆ.

ನಮ್ಮ ಕೊನೆಯ ಭೇಟಿಯಲ್ಲಿ ಸ್ವಾಮಿಗಳ ಅತಿ ಪ್ರಮುಖ ಲೇಖನಗಳನ್ನು ರಷ್ಯನ್ ಭಾಷೆಗೆ ತರ್ಜುಮೆ ಮಾಡಿ ಮತ್ತು ರಷ್ಯದಲ್ಲಿ ಪ್ರಕಟಿಸುವ ಬಗ್ಗೆ ಚರ್ಚಿಸಿದ್ದು ನನಗೆ ಜ್ಞಾಪಕವಿದೆ. ಅಯ್ಯೋ! ಕೈಮೀರಿದ ಹಲವು ಕಾರಣಗಳಿಂದ ಸ್ವಾಮಿಗಳು ಜೀವಂತವಿದ್ದಾಗ ಆ ಪ್ರಕಟಣೆ ಸಾಧ್ಯವಾಗಲಿಲ್ಲ.

ಭಾರತವನ್ನು ಚೆನ್ನಾಗಿ ತಿಳಿಯಲು ಮತ್ತು ನನ್ನ ವೈಜ್ಞಾನಿಕ ಆಸಕ್ತಿಗಳು ವಿಸ್ತಾರವಾಗಲು ಸ್ವಾಮಿಗಳ ಶಿಕ್ಷಣ ಬಹಳಷ್ಟು ಸಹಕಾರಿಯಾಗಿದೆ. ತತ್ಪರಿಣಾಮವಾಗಿ ಭಾರತವನ್ನು ಪ್ರೀತಿಸುತ್ತೇನೆ. ನನ್ನ ಸ್ನೇಹಿತ ಮತ್ತು ಗುರು ಸ್ವಾಮಿ ರಂಗನಾಥಾನಂದರ ಹೆಸರನ್ನು ನಾನು ಸದಾ ತುಂಬು ಕೃತಜ್ಞತೆಯಿಂದ ನೆನೆಯುತ್ತೇನೆ.

* * * *

# ೭೨. ಸ್ವಾಮಿ ರಂಗನಾಥಾನಂದರ ಜತೆ ನನ್ನ ಭೇಟಿಗಳು

–ಇರಿನಾ ಪಿ. ಚೆಲಿಶೆವ್*

೧೯೭೭ರಲ್ಲಿ ಮಾಸ್ಕೋ ಇನ್ಸ್‌ಟ್ಯೂಟ್ ಆಫ್ ಓರಿಯಂಟಲ್ ಸ್ಟಡೀಸ್‌ನ ಮೊಗಸಾಲೆಯಲ್ಲಿ ವೇಗವಾಗಿ ನಡೆದು ಬರುತ್ತಿದ್ದ ಮಧ್ಯಮ ಎತ್ತರದ, ತೆಳ್ಳಗಿನ ದೇಹದ, ಕಾವಿ ಧರಿಸಿದ್ದ ಓರ್ವ ವ್ಯಕ್ತಿಯನ್ನು ನೋಡಿದೆ. ವಿದೇಶಿ ಧರ್ಮ ಧುರೀಣರನ್ನು ಆಗಿನ ಕಾಲದಲ್ಲಿ ಮಾಸ್ಕೋದಲ್ಲಿ ನೋಡುವುದು ಬಹಳ ಅಪರೂಪದ ದೃಶ್ಯ. ಇಂತಹ ಒಬ್ಬ ವ್ಯಕ್ತಿಯನ್ನು ಇನ್ಸ್‌ಟ್ಯೂಟ್‌ನಲ್ಲಿ ನೋಡುವುದು ನಿಜವಾಗಿಯೂ ಒಂದು ದೊಡ್ಡ ಆಶ್ಚರ್ಯದ ಸಂಗತಿಯಾಗಿತ್ತು. ಕಾರಣವಿಷ್ಟೆ, ಧಾರ್ಮಿಕ ನಂಬಿಕೆಗಳು ಮತ್ತು ಅಭಿಪ್ರಾಯಗಳು, ಆಗಿನ ಪ್ರಬಲ ಕಮ್ಯನಿಸ್ಟ್ ಭಾವನೆಗಳಿಗೆ ಸರಿಹೊಂದುತ್ತಿರಲಿಲ್ಲ. ಹಾಗಾಗಿ ಸ್ವಾಮಿ ರಂಗನಾಥಾನಂದರ ರಷ್ಯಾದ ಭೇಟಿ ಒಂದು ಮಹತ್ವದ ಘಟನೆ ಆಯಿತು. ಅವರು ಸುವಿಖ್ಯಾತ ತತ್ತ್ವಜ್ಞಾನಿ, ಧಾರ್ಮಿಕ ಧುರೀಣ, ಮಹಾ ಮೀಮಾಂಸಕ ಮತ್ತು ಉಜ್ವಲ ವಾಗ್ಮಿ ಎಂಬ ಕಾರಣದಿಂದ, ಸೋವಿಯತ್ ವಿಜ್ಞಾನಿಗಳ ಸಮೂಹಕ್ಕೆ ಜೀವಂತ ಮತ್ತು ಜ್ವಲಂತ ಅದ್ವೈತ ವೇದಾಂತ ತತ್ತ್ವದ ವಿಸ್ತಾರವಾದ ಪ್ರಪಂಚವನ್ನು ತಿಳಿಯುವ ಅಪೂರ್ವ ಅವಕಾಶ ದೊರಕಿತು.

ಆಗಿನ ಕಾಲದ ಸೋವಿಯತ್ ವಿಜ್ಞಾನಿಗಳ ಸಮುದಾಯದಲ್ಲಿ ಕೆಲವು ತಾತ್ವಿಕ ಭಾವನೆಗಳು ಮಡುಗಟ್ಟಿದ್ದವು. ಆದರೆ ಅದು, ಪ್ರತಿಭಾನ್ವಿತ ವಿದ್ಯಾರ್ಥಿಗಳು ಭಾರತೀಯ ತತ್ತ್ವಜ್ಞಾನ ಮತ್ತು ಧರ್ಮದ ಬಗ್ಗೆ ಶ್ರದ್ಧಾಪೂರ್ವಕ ಆಸಕ್ತಿ ಹೊಂದಲು ಮತ್ತು ವಾಸ್ತವಿಕವಾಗಿ ಸಂಶೋಧನ ಮಾಡಲು ಅಡ್ಡಿಬರಲಿಲ್ಲ. ಧರ್ಮ ಮತ್ತು ತತ್ತ್ವಜ್ಞಾನಗಳ ಪ್ರಕ್ರಿಯೆಗಳನ್ನು ಅಧ್ಯಯನ ಮಾಡಿ ಮತ್ತು ಯಥಾರ್ಥದ ದೃಷ್ಟಿಯಿಂದ ತುಲನೆ ಮಾಡಲು ನಮ್ಮ ವಿಜ್ಞಾನಿಗಳು ಕೆಲವು ಸಾರಿ ಬಹಳ ಕಷ್ಟಗಳನ್ನು ಎದುರಿಸಬೇಕಾಯಿತು. ಈ ದೃಷ್ಟಿಯಿಂದ ನೋಡಿದರೆ ಸ್ವಾಮಿ ರಂಗನಾಥಾನಂದರನ್ನು ಸೋವಿಯತ್ ಒಕ್ಕೂಟಕ್ಕೆ ಆಹ್ವಾನಿಸುವ ನಿರ್ಣಯ ನಿಸ್ಸಂದೇಹವಾಗಿ ಒಂದು ಧೀರೋದಾತ್ತ ಮತ್ತು ಪ್ರಗತಿಶೀಲ ಕ್ರಮವಾಗಿತ್ತು.

ಆಗ ನಾನು ಸ್ನಾತಕೋತ್ತರ ವಿದ್ಯಾರ್ಥಿಯಾಗಿ ಪ್ರೊ.ಅಲೆಕ್ಸಿ ಡಿ. ಲಿಟ್‌ಮನ್ ಅವರ ನೇತೃತ್ವದಲ್ಲಿ ಸಂಶೋಧನೆ ಮಾಡುತ್ತಿದ್ದೆ. ವೇದಾಂತ ಪ್ರಜ್ಞೆಯ ಪ್ರವೇಶ ಮತ್ತು ಅದರ ನೇರವಾದ ವಿವರಣೆಯನ್ನು ಸ್ವಾಮಿಗಳು ಕೊಟ್ಟದ್ದು ನನ್ನ ಜೀವನದಲ್ಲಿ ಮತ್ತು ವೈಜ್ಞಾನಿಕ ಚಟುವಟಿಕೆಯಲ್ಲಿ ಒಂದು ಮಹತ್ವದ ಸಂಗತಿಯೇ ಆಗಿತ್ತು.

ಸ್ವಾಮಿಗಳ ಉಪನ್ಯಾಸ ನಿಜವಾಗಿಯೂ; ಉಜ್ವಲವಾಗಿತ್ತು, ಮಂಕಾಗಿ ಶುಷ್ಕವಾಗಿರಲಿಲ್ಲ. ಸ್ಫುಟ ಯೋಚನೆಗಳ ಓಘ, ಶಕ್ತಿಯುತ ವೇದಾಂತ ನಿರೂಪಣೆ ಮತ್ತು ಸುದೀರ್ಘ ವ್ಯಕ್ತಿಗತ ಅನುಭವದಿಂದ ಸಮೃದ್ಧವಾಗಿತ್ತು. ಅದರ ಪರಿಣಾಮ, ನಲವತ್ತು ನಿಮಿಷಗಳ ಉಪನ್ಯಾಸ ಒಂದು ಕ್ಷಣದಂತೆ ಕಳೆದುಹೋಯಿತು. ಅನಂತರ ಒಂದು ಕಿರು ಚರ್ಚೆ ಮತ್ತು ಸಂವಾದ. ನನ್ನ ಹಿರಿಯ ಸಹೋದ್ಯೋಗಿಗಳು ರಂಗನಾಥಾನಂದ ಮಹಾರಾಜರಿಗೆ ಹಲವು ಪ್ರಶ್ನೆಗಳನ್ನು ಕೇಳಿದರು. ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶದ ಮೇಲೆ ನಾನು ಬರೆದ ಸಂಕ್ಷಿಪ್ತ ಲೇಖನ ನನ್ನ ಬಳಿ ಇತ್ತು. ಮಾಸ್ಕೋದಲ್ಲಿರುವಾಗ ಸ್ವಾಮಿಗಳು ಅದನ್ನು ಪರಿಶೀಲಿಸಿ ತಮ್ಮ ಅಭಿಪ್ರಾಯಗಳನ್ನು ಕೊಡಲು ನಾನು ವಿನಂತಿಮಾಡಿದೆ. ಅವರು ಆ ಲೇಖನವನ್ನು ನನ್ನಿಂದ ತೆಗೆದುಕೊಳ್ಳುವ ಕೃಪೆ ಮಾಡಿದರು.

---

* ರಷ್ಯಾದೇಶದ ಪಂಡಿತೆ ಮತ್ತು ಭಾರತಜ್ಞೆ.

ಬಹಳ ದಿನಗಳು ಕಳೆದರೂ ಸ್ವಾಮಿಗಳಿಂದ ಉತ್ತರವಿಲ್ಲ. ಬಹುಶಃ ಅವರು ಬಹಳ ಕಾರ್ಯನಿರತರಾಗಿದ್ದು ನನ್ನ ಲೇಖನವನ್ನು ಓದದೆ ಇರಬಹುದು ಎಂದು ಭಾವಿಸಿದೆ. ನನ್ನ ಲೇಖನವನ್ನು ಪರಿಶೀಲಿಸಿ 'ಬಹಳ ಕಿರಿಯ ಲೇಖಕಿ ಈ ಲೇಖನವನ್ನು ಬರೆದಿದ್ದಾಳೆ' ಎಂದು ಚುಟುಕಾಗಿ ಸ್ವಾಮಿಗಳು ಹೇಳುತ್ತಿದ್ದಾರೆಂದು ನನ್ನ ಸಹೋದ್ಯೋಗಿ ನನಗೆ ತಿಳಿಸಿದಳು. ನನಗೆ ಸ್ವಲ್ಪ ಗೊಂದಲವಾಯಿತು. ಆಗ ನನ್ನ ವಯಸ್ಸು ೨೪. ಮಾಸ್ಕೋ ಸ್ಟೇಟ್ ವಿಶ್ವವಿದ್ಯಾನಿಲಯದಿಂದ ತತ್ತ್ವಜ್ಞಾನದಲ್ಲಿ ಪದವಿ ಪಡೆದಿದ್ದೆ. ಹಾಗಾಗಿ ಭಾರತೀಯ ತತ್ತ್ವಶಾಸ್ತ್ರ ಮತ್ತು ಧರ್ಮಗಳಲ್ಲಿ ನಾನು ಒಳ್ಳೆಯ ಪರಿಣಿತಳೆಂದು ನಾನು ಭ್ರಮಿಸಿಕೊಂಡಿದ್ದೆ. ಸಹಜವಾಗಿ ಸ್ವಾಮಿಗಳ ಚುಟುಕಾದ ಅಭಿಪ್ರಾಯದಿಂದ ನನಗೆ ಸ್ವಲ್ಪ ನೋವಾಯಿತು. ನನ್ನ ಬಾಲಿಶತನವನ್ನು ಕುರಿತು ಹೇಗೆ ಯಥಾರ್ಥವಾಗಿ ಮತ್ತು ಸರಿಯಾಗಿ ಅಭಿಪ್ರಾಯಪಟ್ಟಿದ್ದಾರೆಂದು ಕಾಲಕ್ರಮೇಣ ನನಗೆ ವಿದಿತವಾಯಿತು.

ಆಧ್ಯಾತ್ಮದ ಪಕ್ವತೆ ಮತ್ತು ಸ್ವಾಮಿ ವಿವೇಕಾನಂದರ ತತ್ತ್ವವಿಚಾರಗಳನ್ನು ಗ್ರಹಣ ಮಾಡುವ ಶಕ್ತಿಯ ದೃಷ್ಟಿಕೋನದಿಂದ ಆಗ ನಾನು ನಿಜವಾಗಿಯೂ ಬಹಳ ಕಿರಿಯಳು. ಮುಂದೆ ನಾನು ಸ್ವಾಮಿಗಳ ಬರೆವಣಿಗೆಯನ್ನು ಅಧ್ಯಯನ ಮಾಡಿದೆ. ಅವು ಹೊರನೋಟಕ್ಕೆ ಸರಳವಾಗಿ ಸಂಕ್ಷಿಪ್ತವಾಗಿವೆ. ಆದರೆ ಹೆಚ್ಚು ಸಂಕೀರ್ಣ ಮತ್ತು ಬಹಳ ವಿಷಯಗಳನ್ನು ಅಂತರ್ಗತ ಮಾಡಿಕೊಂಡಿದ್ದವು. ಅವು ವಿಚಾರ ಪ್ರಚೋದನೆ ಮಾಡಿ ನನ್ನ ಜೀವನ ಅನುಭವಕ್ಕೆ ಸರಿಹೊಂದುತ್ತವೆಯೆ ಎಂದು ತಾಳೆನೋಡಲು ನನ್ನನ್ನು ಒತ್ತಾಯಿಸಿದವು. ಎಲ್ಲಕ್ಕಿಂತ ಹೆಚ್ಚಾಗಿ ಭಾರತದ ವಿಶಾಲವಾದ ಮತ್ತು ಸಂಪದ್ಭರಿತ ಆಧ್ಯಾತ್ಮ ಪರಂಪರೆ ಬಗ್ಗೆ ನನ್ನ ಜ್ಞಾನ ಮತ್ತು ಅಭಿಪ್ರಾಯಗಳ ಪರಿಧಿಯನ್ನು ವಿಸ್ತರಿಸಲು ಸಹಾಯವಾಯಿತು. ಒಟ್ಟಿನಲ್ಲಿ ಸ್ವಾಮಿಗಳ ಅಭಿಪ್ರಾಯಗಳು ಜೀವನ ಪರ್ಯಂತ ನನಗೆ ಅಮೂಲ್ಯವಾದವು.

ಸುಮಾರು ಹತ್ತು ವರ್ಷದ ನಂತರ ರಂಗನಾಥಾನಂದಜಿಯವರನ್ನು ಮತ್ತೆ ಭೇಟಿ ಮಾಡುವ ಅದೃಷ್ಟಶಾಲಿಯಾದೆ. ೧೯೮೦ರ ಕೊನೆಯಲ್ಲಿ ರಾಮಕೃಷ್ಣ–ವಿವೇಕಾನಂದ ಪರಂಪರೆಯ ವಿವಿಧ ಆಯಾಮಗಳ ಬಗ್ಗೆ ನನ್ನ ಸಂಶೋಧನೆ 'ಇನ್ಸ್ಟಟ್ಯೂಟ್ ಆಫ್ ಓರಿಯಂಟಲ್ ಸ್ಟಡೀಸ್'ನಲ್ಲಿ ಪ್ರಾರಂಭವಾಯಿತು. ಸ್ವಾಮಿ ಲೋಕೇಶ್ವರಾನಂದ ಮಹಾರಾಜರ ಆಹ್ವಾನದ ಮೇರೆಗೆ ನಾನು 'ರಾಮಕೃಷ್ಣ ಮಿಷನ್ ಇನ್ಸ್ಟಟ್ಯೂಟ್ ಆಫ್ ಕಲ್ಚರ್'ಗೆ ಹೆಚ್ಚಾಗಿ ಭೇಟಿ ಕೊಡುತ್ತಿದ್ದೆ. ಆ ಸಮಯದಲ್ಲಿ ಮಹಾರಾಜರು ನಿಸ್ಸಂದೇಹವಾಗಿ ಪ್ರತಿಷ್ಠಿತ ಸಂಸ್ಥೆಯ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು.

ನನ್ನ ಭಾರತದ ಭೇಟಿಯ ಸಂದರ್ಭದಲ್ಲಿ ಬೇಲೂರು ಮಠದಲ್ಲಿ ತಮ್ಮನ್ನು ನೋಡಲು ಸ್ವಾಮಿ ರಂಗನಾಥಾನಂದರಿಂದ ನನಗೆ ಆಹ್ವಾನದ ಸುಯೋಗ ಒದಗಿ ಬಂತು. ಡಿಸೆಂಬರ್ ಸಂಜೆ ಗಂಗಾನದಿ ತೀರದಲ್ಲಿ ಭೇಟಿಮಾಡಿದ್ದು ಈಗಲೂ ಚೆನ್ನಾಗಿ ನೆನಪಿದೆ. ಅವರ ನೋಟ ತೀರಾ ಭಿನ್ನವಾಗಿ ಮತ್ತು ಅಸಾಮಾನ್ಯವಾಗಿತ್ತು. ತಮ್ಮ ಆಧ್ಯಾತ್ಮ ಅನುಭವ ಮತ್ತು ವೇದಾಂತ ತತ್ತ್ವದಿಂದ ತಮಗೆ ದೊರೆತ ಅಂತರಂಗದ ಸ್ವತಂತ್ರ, ಅಸಾಧಾರಣ ಭಾವನೆಗಳ ಬಗ್ಗೆ ಬಹಳ ಸ್ಫೂರ್ತಿಯುಕ್ತವಾಗಿ ಮಾತನಾಡಿದರು. ಬಾಕಿ ವಿಚಾರಗಳ ಪೈಕಿ ವಿಶೇಷವಾಗಿ ಶ್ರೀ ಶಾರದಾ ದೇವಿಯವರ ಜೀವನವನ್ನು ಅಧ್ಯಯನ ಮಾಡಲು ನನಗೆ ಬುದ್ಧಿವಾದ ಹೇಳಿದರು. ನನ್ನ ಮುಂದಿನ ಸಂಶೋಧನಾ ಕಾರ್ಯಕ್ಕೆ ಅವರ ಬುದ್ಧಿವಾದವನ್ನು ನಿರ್ವಿವಾದ ಮಾರ್ಗದರ್ಶನವೆಂದು ವಿನೀತಳಾಗಿ ಸ್ವೀಕರಿಸಿದೆ. ಆ ದಿಸೆಯಲ್ಲಿ ನಾನು ಕಾರ್ಯಪ್ರವೃತ್ತಳಾದೆ. ೧೯೯೦ರಲ್ಲಿ ನಾನು ಮಾಡಿದ ಸಂಶೋಧನೆ ಒಂದು ಲೇಖನದ ರೂಪದಲ್ಲಿ ರಷ್ಯಾದ ಒಂದು ಪತ್ರಿಕೆಯಲ್ಲಿ ಪ್ರಕಟವಾಯಿತು. ರಷ್ಯಾದ ಅಧಿಕ ಪ್ರಸಾರವಿದ್ದ ಪತ್ರಿಕಾ ಮಾಧ್ಯಮದಲ್ಲಿ ಸ್ವಾಮಿ ವಿವೇಕಾನಂದರ ಬಗ್ಗೆ ಪ್ರಥಮವಾಗಿ ನನ್ನ ಲೇಖನ ಪ್ರಕಟವಾಯಿತು. ಸ್ವಾಮಿಗಳ ನಿರೀಕ್ಷೆಯನ್ನು ಸಾರ್ಥಕಗೊಳಿಸಿದೆ ಎಂಬ ಹೆಮ್ಮೆ ನನಗಿದೆ. ಆ ಲೇಖನದ ವಿಸ್ತೃತ ಆವೃತ್ತಿ ನಮ್ಮ ಅಕಾಡೆಮಿಯ ಸಂಪಾದನೆಗಳ ಒಂದರಲ್ಲಿ ಆನಂತರ ಪ್ರಕಟವಾಯಿತು.

ಬೇಲೂರು ಮಠದಲ್ಲಿ ಸ್ವಾಮಿಗಳ ಭೇಟಿ ನನ್ನ ಮನಸ್ಸಿನ ಮೇಲೆ ಅಳಿಸಲಾರದ ಪ್ರಭಾವ ಬೀರಿತ್ತು. ಆ ಸಂಜೆ ಹಲವಾರು ವಿಷಯಗಳನ್ನು ಚರ್ಚಿಸಿದೆವು. ಅವರನ್ನು ಬೀಳ್ಕೊಡುವಾಗ ಸ್ವಾಮಿಗಳು ಆಡಿದ ಒಂದು ಮಾತು ನನಗೆ ಆಶ್ಚರ್ಯವನ್ನು ಉಂಟುಮಾಡಿತು. ಅವರ ಮಾತು ನಾವು ಚರ್ಚೆಮಾಡಿದ ಸಾಮಾನ್ಯ ವಿಷಯಗಳಿಗೆ ಸಂಬಂಧವಿರಲಿಲ್ಲ. ಆದರೆ ನನಗೆ ಪ್ರಿಯರಾದವರ ಮತ್ತು ಆತ್ಮೀಯರಾದವರ ಜತೆ ಇದ್ದ ಸಂಬಂಧದ ಭಾವನೆ ಮತ್ತು ಸಾರಗಳ ಬಗ್ಗೆ ನಿರ್ದೇಶಿತವಾದದ್ದು. ಸ್ವಾಮಿಗಳ ಅತಿ ವೈಯಕ್ತಿಕ ಮತ್ತು ಆತ್ಮೀಯ ಮಾತುಗಳನ್ನು ಜೀವನಪರ್ಯಂತ ನಾನು ನೆನಪಿಸಿಕೊಂಡು ಆದರಿಸುತ್ತೇನೆ. ನಿಜವಾದ ದೈವೀಪುರುಷ ಮಾತ್ರ ಇಂತಹ ಮಾತುಗಳನ್ನು ಹೇಳಲು ಸಾಧ್ಯವೆಂದು ನನಗೆ ಸ್ಪಷ್ಟವಾಗಿ ಮನದಟ್ಟಾಯಿತು.

೧೯೬೦ರ ಕೊನೆಯ ಭಾಗದಲ್ಲಿ ರಾಮಕೃಷ್ಣ ಮಿಷನ್ ದೆಹಲಿ ಕೇಂದ್ರದ ಅಧ್ಯಕ್ಷರು ಸ್ವಾಮಿ ಗೋಕುಲಾನಂದರು ದೆಹಲಿಯಲ್ಲಿ ಆಯೋಜಿಸಿದ್ದ ಸಮ್ಮೇಳನದಲ್ಲಿ ನಾನು ಮತ್ತೆ ಸ್ವಾಮಿಗಳ ದರ್ಶನ ಮಾಡುವ ಅದೃಷ್ಟಶಾಲಿಯಾದೆ.

ಸ್ವಾಮಿಗಳು ಗೌರವಾನ್ವಿತ ಅತಿಥಿಯಾಗಿ ವೇದಿಕೆಯ ಮೇಲೆ ನನ್ನಿಂದ ಬಹಳ ದೂರದಲ್ಲಿ ಕುಳಿತಿದ್ದರು. ಅವರ ಆರೋಗ್ಯ ಚೆನ್ನಾಗಿರಲಿಲ್ಲವೆಂದು ನನಗೆ ಭಾಸವಾಗಿ ಅವರನ್ನು ಮುಖತಃ ಭೇಟಿಮಾಡಬಾರದೆಂದು ನಿಶ್ಚಯಿಸಿದೆ.

ಸ್ವಾಮಿಗಳ ಉಜ್ವಲ ಉಪನ್ಯಾಸಗಳನ್ನು ಕೇಳುವ ಮತ್ತು ಸದಾ ಮಾನವ ಜನಾಂಗದ ಪರಿಪೂರ್ಣತೆಯನ್ನು ಧ್ಯೇಯವಾಗಿರಿಸಿಕೊಂಡಿದ್ದ ಅವರ ಪ್ರಚಂಡ ಇಚ್ಛಾಶಕ್ತಿಯನ್ನು ಅನುಭವಕ್ಕೆ ತಂದುಕೊಳ್ಳುವ ಅವಕಾಶ ಸಿಕ್ಕಿದ್ದು ನನ್ನ ಸುಕೃತವೆಂದು ಭಾವಿಸುತ್ತೇನೆ.

* * * *

# ೬೩. ಸ್ವಾಮಿ ರಂಗನಾಥಾನಂದ: ಒಂದು ಅಚ್ಚಳಿಯದ ಸಾನ್ನಿಧ್ಯ

–ಎಂ. ಶಿವರಾಮಕೃಷ್ಣ*

ಆಂಧ್ರಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ ಭೀಮಾವರ ಪಟ್ಟಣದಲ್ಲಿ ನಾನು ಸ್ವಾಮಿ ರಂಗನಾಥಾನಂದರನ್ನು ಪ್ರಥಮ ಬಾರಿ ನೋಡಿದೆ. ಅದು ಬಹುಶಃ ೧೯೫೨ ಅಥವಾ ೧೯೫೩ನೆಯ ಇಸವಿ ಇರಬೇಕು. ಡಬ್ಲು.ಜಿ.ಬಿ. ಕಾಲೇಜಿನಲ್ಲಿ (ಈಗ ಅದರ ಹೆಸರು ಡಿ.ಎನ್.ಆರ್.ಕಾಲೇಜು) ಇಂಟರ್ ಮೀಡಿಯಟ್‌ನ ಮೊದಲನೇ ವರ್ಷದಲ್ಲಿ ಓದುತ್ತಿದ್ದೆ. ನನ್ನ ಕಲ್ಪನಾಶಕ್ತಿಯನ್ನು ಕೂಡಲೆ ಸ್ವಾಮಿಗಳು ಸೂರೆಗೊಂಡರು. ಶ್ರೋತೃಗಳನ್ನು ಉದ್ದೇಶಿಸಿ ಮಾತನಾಡಲು ನಿಂತಾಗಿನ ಅವರ ವ್ಯಕ್ತಿತ್ವದ ಸೊಬಗು ಮತ್ತು ಮೋಹಕತೆಯನ್ನು ಸರಿಯಾಗಿ ವಿವರಿಸಲು ಶಬ್ದಗಳು ಸಾಕಾಗುವುದಿಲ್ಲ. ಸ್ವಾಮಿಗಳ ರಾಜಗಾಂಭೀರ್ಯವನ್ನು ನಾನು ಕೆಲವರಲ್ಲಿ ಮಾತ್ರ ಕಂಡಿದ್ದೇನೆ. 'ವೇದಾಂತ ಸಿಂಹ ಘರ್ಜಿಸಲಿ' ಎಂದು ಸ್ವಾಮಿಜಿ ಉದ್ಗರಿಸಿದ್ದನ್ನು ಎಲ್ಲೋ ಓದಿದ್ದೆ. ಸ್ವಾಮಿ ರಂಗನಾಥಾನಂದರು ಆ ರೀತಿಯೇ ಕಾಣಿಸಿದರು. ಅವರು ಗರ್ಜಿಸಿದರು.

ನನ್ನ ಪ್ರತಿಕ್ರಿಯೆಯನ್ನು ತಿಳಿದುಕೊಳ್ಳುವ ವಯಸ್ಸು ಆಗ ನನಗೆ ಇರಲಿಲ್ಲ. ಶ್ರೀ ರಾಮಕೃಷ್ಣರ ನೇರ ಶಿಷ್ಯರ ಪೈಕಿ ಮಹಾಪುರುಷರೆಂದು ಪ್ರಸಿದ್ಧರಾಗಿದ್ದ ಸ್ವಾಮಿ ರಂಗನಾಥಾನಂದರ ಗುರುಗಳು ಸ್ವಾಮಿ ಶಿವಾನಂದರನ್ನು ವರ್ಣಿಸಲು ಅವರ ಶಿಷ್ಯರು ಬಳಸಿರುವ ಶಬ್ದವನ್ನು ಇವತ್ತು ಬಹುಶಃ ನಾನು ಉಪಯೋಗಿಸುತ್ತೇನೆ. ತನ್ನದೇ ಆದ ಮಾರ್ಗದಲ್ಲಿ ಶಿಷ್ಯನು 'ಮಹಾಪುರುಷ' ಮಟ್ಟಕ್ಕೆ ಏರಿದನು.

ಬರೀ ಅವರ ವಾಕ್ಸರಣಿಯ ಸೊಬಗಿನಿಂದ ಸಮ್ಮೋಹಿತನಾಗಿ ಸೆಳೆಯಲ್ಪಟ್ಟೆ. ಹಾಗಾಗಿ ಅವರು ಏನು ಹೇಳುತ್ತಿದ್ದಾರೆಂದು ನಾನು ಸರಿಯಾಗಿ ಕೇಳಲಿಲ್ಲ. ಅವರ ಉದಾತ್ತ ವ್ಯಕ್ತಿತ್ವದ ಸೊಬಗು ಮತ್ತು ಭವ್ಯತೆಯನ್ನು ನೋಡಿ ಆನಂದಪಟ್ಟೆ. ಅವರ ವಿಶಿಷ್ಟ ನೆಲೆ ಮತ್ತು ನಂಬಿಕೆಗೆ ಮೀರಿದ ಸಮಚಿತ್ತವು ನನಗೆ ಸ್ಮರಣಯೋಗ್ಯವೆಂದು ಆಗಲೇ ಹೊಳೆಯಿತು. ತಾರುಣ್ಯದಲ್ಲಿ ನಾನು ಅತಿ ಚಂಚಲ ಮತ್ತು ಕ್ಷೋಭೆಗೊಳ್ಳುವ ಸ್ವಭಾವದವನಾಗಿದ್ದು ಸ್ವಾಮಿಗಳಲ್ಲಿದ್ದ ಅವಿಚಲಿತ ದೃಢತೆಯನ್ನು ನೋಡಿ ದಂಗಾದೆ. ಸ್ಥಿರ ಎಂಬ ಸಂಸ್ಕೃತ ಶಬ್ದ ಸ್ವಾಮಿಗಳ ವ್ಯಕ್ತಿತ್ವವನ್ನು ಸಂಗ್ರಹವಾಗಿ ವಿವರಿಸಬಹುದೆಂದು ನಾನು ಭಾವಿಸುತ್ತೇನೆ.

ನನಗೆ ಆಂತರಿಕವಾಗಿ ಇಂಗ್ಲಿಷ್ ಭಾಷೆಯ ಬಗ್ಗೆ ಬಹಳ ಒಲವು. ಬಹುಶಃ ಇದು ಒಂದು ಕಾರಣವಿರಬಹುದು. ನನಗೆ ಸ್ವಾಮಿ ರಂಗನಾಥಾನಂದರು ಬಹಳ ಪ್ರಭಾವಿಯಾಗಿ ಕಾಣಿಸಿದರು. ರಾಮಕೃಷ್ಣ ವೇದಾಂತದ ಸಾರ್ವತ್ರಿಕ ತತ್ತ್ವಗಳ ಈ ಮಹಾನ್ ನಿರೂಪಕರ ಹಿನ್ನೆಲೆ ಬಗ್ಗೆ ನಾನು ಏನನ್ನೂ ತಿಳಿದಿರಲಿಲ್ಲ. ಅತ್ಯುತ್ತಮ ಉನ್ನತ ವಿದ್ಯಾ ಕೇಂದ್ರದಲ್ಲಿ ಅವರು ಅಧ್ಯಯನ ಮಾಡಿರಬೇಕೆಂದು ನಾನು ಯೋಚಿಸಿದೆ. ಶಿಕ್ಷಣ ಮತ್ತು ವಿದ್ಯಾಸಂಸ್ಥೆ ಸಮಾನಾಂತರವೆಂದು ತಿಳಿಯುವುದಕ್ಕಿಂತ ಬಾಲಿಶತನ ಬೇರೊಂದಿಲ್ಲ.

ಮೊದಲನೆ ನೋಟ ನನ್ನನ್ನು ಬಿಟ್ಟು ಹೋಗಲಿಲ್ಲ. ನಾನು ೧೯೭೦ರಲ್ಲಿ ಹೈದ್ರಾಬಾದಿಗೆ ಹೋಗುವ ತನಕ ಸ್ವಾಮಿಗಳ ಸಂಪರ್ಕವಿರಲಿಲ್ಲ. ಸಂಘದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಅವರ ಲೇಖನಗಳನ್ನು ಓದುತ್ತಿದ್ದೆ. ಅವರು ರಾಮಕೃಷ್ಣ ಮಿಷನ್ ಇನ್ಸ್ಟ್ಯೂಟ್ ಆಫ್ ಕಲ್ಚರ್‌ನ ಕಾರ್ಯದರ್ಶಿಯಾಗಿದ್ದಾಗ ಕೆಲವು ಅಮೂಲ್ಯ ಹೊತ್ತಗೆಗಳನ್ನು ಪ್ರಕಟಿಸಿದರು. ಅವನ್ನು ಓದಿದ್ದೆ. ಕೆಲವು ಬರೆವಣಿಗೆಗಳು ಅವರ ಬೃಹತ್ ಕೃತಿ

* ಇಂಗ್ಲಿಷ್ ಪ್ರಾಧ್ಯಾಪಕರು, ಉಸ್ಮಾನಿಯ ವಿಶ್ವವಿದ್ಯಾಲಯ, ಹೈದರಾಬಾದ್

'Eternal Values for a Changing Society'ನಲ್ಲಿ ಅಡಕವಾಗಿವೆ. ಅವರ ಮಾತುಗಳ ಸಂಪರ್ಕ ಕಳೆದುಹೋಗಿದ್ದರೂ ಅವರ ಬರೆಹಗಳು ನನಗೆ ಅವರ ಮಾತಿನಷ್ಟೇ ಮೋಹಕವಾಗಿದ್ದುವು. ಗಮನ ಸೆಳೆಯುವ ಅವರ ನಿರೂಪಣಾ ಶಕ್ತಿಯ ನೋಟ ನನಗೆ ಈಗ ವಿದಿತವಾಯಿತು. ಅಲ್ಲದೆ, ಅತಿವಿಸ್ತಾರವಾದ ಅಮೂರ್ತ ವಿಷಯಗಳ ಬಗ್ಗೆ ಸ್ಪಷ್ಟವಾಗಿ ಮಾತನಾಡುವ ಮತ್ತು ಬರೆಯುವವರ ಸಂಖ್ಯೆ ವಿರಳವೆಂದು ನನ್ನ ಭಾವನೆ.

ನಾನು ಹೈದರಾಬಾದಿನಲ್ಲಿ ಸ್ವಾಮಿಗಳನ್ನು ನೋಡಿದಾಗ ನನ್ನ ಪರಿಚಯ ಹೇಳಬೇಕಾಯಿತು. ಕೆಲವು ವರ್ಷಗಳು ಲಜ್ಜೆ ಮತ್ತು ಸ್ವಪ್ರತಿಷ್ಠೆಯ ಕಾರಣದಿಂದ ಹೈದರಾಬಾದಿನಲ್ಲಿ ಅವರ ಹತ್ತಿರ ಹೋಗಲು ಧೈರ್ಯವಾಗಲಿಲ್ಲ. ಆದರೆ ಪ್ರತಿ ಭಾನುವಾರ ಚೇತೋಹಾರಿ ಉಪನ್ಯಾಸದ ಆನಂದವನ್ನು ಅನುಭವಿಸುತ್ತಿದ್ದೆ. ಆ ಮಹಾನ್ ಜ್ಞಾನಿ ನನಗೆ ದುಸ್ಸಾಧ್ಯರೆಂದು ತೋರುತ್ತಿತ್ತು. ಅವರ ವಿಷಯವ್ಯಾಪ್ತಿ ನನ್ನನ್ನು ದಿಗ್ಭ್ರಮೆಗೊಳಿಸಿತ್ತು. ಒಂದು ತಾಸಿನ ತನಕ ಶ್ರೋತೃಗಳನ್ನು ತುಂಬ ಸಹಜವಾಗಿ ಆಹ್ಲಾದಪಡಿಸುತ್ತಿದ್ದರು. ಅದು ವಾಗ್ವೈಖರಿಯ ಪರಮೋಚ್ಚಕಾರ್ಯವೆಂದು ಕೆಲವೇ ಜನರು ಭಾವಿಸಿದ್ದರು.

ಹೈದರಾಬಾದ್ ಮಠದ ವತಿಯಿಂದ ನಡೆಸುತ್ತಿದ್ದ ಸ್ಕೂಲ್ ಆಫ್ ಲಾಂಗ್ವೇಜಸ್ ಜತೆಯ ನನ್ನ ಸಂಬಂಧದಿಂದ ಸ್ವಾಮಿಗಳು ನನಗೆ ಹತ್ತಿರವಾದರು. ಸಿಕಂದರಾಬಾದಿನ ಮಾರ್ಕೆಟ್ ರಸ್ತೆಯಲ್ಲಿ ಮಠ ಇದ್ದಾಗ ಅಲ್ಲಿಗೆ ತಲುಪಲು ಬಹಳ ದೂರ ಪ್ರಯಾಣಮಾಡಬೇಕಾಗಿತ್ತು. ಹಾಗಾಗಿ ಅಲ್ಲಿ ಉಳಿದು ಸ್ವಾಮಿಗಳ ಹತ್ತಿರ ಮಾತನಾಡುವಷ್ಟು ಸಮಯವಿರುತ್ತಿರಲಿಲ್ಲ. ಆದರೆ ಮಠವು ಈಗಿನ ದೋಮಲಗುಡದ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಂಡಾಗ ಅವರ ಪ್ರವಚನಗಳನ್ನು ನಿಯತವಾಗಿ ಕೇಳಲು ಅನುಕೂಲವಾಯಿತು.

ಸ್ವಾಮಿಗಳ ಹತ್ತಿರ ಸ್ವಲ್ಪ ಆತ್ಮೀಯತೆ ಉಂಟಾದ ಮೇಲೆ ಒಂದು ವಿಚಿತ್ರ ಆಸೆ ನನ್ನನ್ನು ಹಿಡಿಯಿತು. ಅವರು ಸರ್ವಗ್ರಾಹಿ ಓದುಗರು ಮಾತ್ರವಲ್ಲ, ಅವರ ಹತ್ತಿರ ವಿಜ್ಞಾನ ಮತ್ತು ಆಧ್ಯಾತ್ಮ ವಿಷಯಗಳಿಗೆ ಸಂಬಂಧಪಟ್ಟ ಬಹಳ ಒಳ್ಳೆಯ ಪುಸ್ತಕಗಳ ಗ್ರಂಥಾಲಯವಿದೆ ಎಂದು ಕೇಳಿದ್ದೆ. ನನಗೆ ಆ ಗ್ರಂಥಾಲಯವನ್ನು ನೋಡಬೇಕೆಂಬ ಆಸೆ. ಅಪಾರ ಜ್ಞಾನವನ್ನು ಈ ವಿದ್ವಾಂಸರು ಬಹಳ ಲಘುವಾಗಿ ಧರಿಸಿದ್ದರು. ಅವರು ಯಾವ ತರಹದ ಕೃತಿಗಳನ್ನು ಓದುತ್ತಿದ್ದರೆಂದು ನೋಡುವ ಪ್ರಬಲ ಮತ್ತು ಅದಮ್ಯ ಆಸೆ ನನ್ನಲ್ಲಿತ್ತು. ಕೊನೆಗೊಮ್ಮೆ ಗ್ರಂಥಾಲಯ ನೋಡಿದೆ. ಎರವಲು ಪಡೆದು ಓದಲು ಸಾಧ್ಯವಾಗದಿದ್ದ ನಾನು ನೋಡಬೇಕಾದ ಪುಸ್ತಕಗಳೆಲ್ಲಾ ಅಲ್ಲಿದ್ದವು ಎಂಬುದು ಒಂದು ಕಿರುನೋಟದಿಂದ ವಿದಿತವಾಯಿತು. ಏನು ಆ ಪುಸ್ತಕಗಳ ಹರವು! ಆಧ್ಯಾತ್ಮ, ವಿಜ್ಞಾನ, ಚರಿತ್ರೆ, ಕಲೆ, ಸಾಹಿತ್ಯ, ರಾಜಕೀಯ ವಿಚಾರ ಕೂಡ – ಅಂದರೆ ಪ್ರತಿಯೊಂದು ಕೃತಿ ಬಗ್ಗೆ ಅವರಿಗೆ ಸೃಜನಾತ್ಮಕವಾದ ಆಸಕ್ತಿ ಇತ್ತು. ವಿದ್ವಾಂಸರೂ, ಪ್ರಾಜ್ಞರೂ, ಸಾಹಿತಿಗಳೂ ಮುಂತಾದ ಎಲ್ಲ ಸ್ತರದ ಜನರು ಸ್ವಾಮಿಗಳ ಆಶೀರ್ವಾದವನ್ನು ಪಡೆಯಲು ತಮ್ಮ ಕೃತಿಗಳನ್ನು ಕಳುಹಿಸುತ್ತಿದ್ದರು. ಸಾಮಾನ್ಯ ಬರಹಗಾರರಿರಲಿ ಅಥವಾ ತೀರಾ ಅಪರಿಚಿತ ವ್ಯಕ್ತಿ ಇರಲಿ, ಎಲ್ಲರಿಗೂ ಅವರದು ವಿಶ್ವಾಸದ ನುಡಿ.

ಈ ಗುಣ ನನ್ನನ್ನು ಬಹಳ ಆಕರ್ಷಿಸಿತು. ರಾಮಕೃಷ್ಣ ವಿವೇಕಾನಂದ ವೇದಾಂತ ಭವ್ಯ ಪರಂಪರೆಯ ಪ್ರತೀಕವಾಗಿ ಸ್ವಾಮಿಗಳನ್ನು ನೋಡುತ್ತಿದ್ದೆ. ನನ್ನ ಮಟ್ಟಿಗೆ ಅವರು ಅತ್ಯುಚ್ಚ ಮಾನವತಾವಾದಿ. ಆಧ್ಯಾತ್ಮದ ಬಗ್ಗೆ ನಯವಾಗಿ ಮಾತನಾಡದೆ, ಮಾನವೀಯ ಮೌಲ್ಯಗಳು ಮತ್ತು ಉತ್ಕೃಷ್ಟತೆಯ ವಿವಿಧ ಆಯಾಮಗಳ ಬಗ್ಗೆ ಒತ್ತಿ ಹೇಳುತ್ತಿದ್ದರು. ವಿಜ್ಞಾನದ ನಿಷ್ಠುರ ನಿಯಮ ಪಾಲನೆ ಮತ್ತು ಅದರ ನಿಖರ ವಿಧಾನ ಮತ್ತು ಪ್ರಾಯೋಗಿಕ ಆಧ್ಯಾತ್ಮದ ಸಾರ ಇವೆರಡರ ಸಮನ್ವಯದ ಬಗ್ಗೆ ಬಹಳ ಒತ್ತುಕೊಡುವ ಒಟ್ಟು ವಿಧಾನವಾಗಿತ್ತು. ಅವರ ಒತ್ತುಗಡೆ ವಿಜ್ಞಾನದ ಕಡೆಗೆ ಜಾಸ್ತಿಯಿರಬಹುದೆಂದು ನಾನು ಕೆಲವು ಸಲ ಆಶ್ಚರ್ಯಪಡುತ್ತಿದ್ದೆ. ಅವರು ಅದನ್ನು ಬೇಕೆಂತಲೇ ಮಾಡುತ್ತಿದ್ದರು. ಬಹುಶಃ ಸಮುದಾಯವನ್ನು ಧರ್ಮಕ್ಕಿಂತ ಮತಾಂಧತೆ ಸೆಳೆಯುವಾಗ ಪ್ರಮುಖವಾಗಿ ನಮಗೆ ಅನುಭವಾತ್ಮಕ ವಿಚಾರಗಳು ಬೇಕು. ಏಕೆಂದರೆ ಅದು ಬರೀ ಸಾಕ್ಷಾತ್ಕಾರದ ಬಗ್ಗೆ ಉಪದೇಶಿಸದೆ

ವಾಸ್ತವಕ್ಕೆ ಮತ್ತು ನೀತಿಗೆ ಎಡೆನೀಡುತ್ತದೆ. ಅಲ್ಲದೆ ರಾಜಕೀಯ ಪ್ರಕ್ರಿಯೆಯಲ್ಲಿ ರಾಜಕೀಯಕ್ಕೆ ಇಳಿಯದೆ ಆಸಕ್ತಿವಹಿಸಲು ಸಾಧ್ಯವಾಗುತ್ತದೆ. ಈ ದೃಷ್ಟಿಯಲ್ಲಿ ವಿವೇಕಾನಂದರ ನಿಲುವಿನ ಅಸಾಧಾರಣದ ಪ್ರತಿನಿಧಿ ಈ ಸ್ವಾಮಿಗಳು ಎಂದು ನನಗೆ ಭಾಸವಾಯಿತು.

ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಸ್ವಾಮಿಗಳು ವಾಗ್ಮಿತೆಯ ಪರಕಾಷ್ಠೆಯಲ್ಲಿರುವಾಗ ನೋಡಿದ್ದೆ. ಬರೀ ಭಾಷಣ ಅಷ್ಟೇ ಅಲ್ಲ. ಒಟ್ಟಿನಲ್ಲಿ ಅದರ ಸಾಂದರ್ಭಿಕ ಹಿಡಿತ, ಪರಿಣಾಮ ಮತ್ತೂ ಪ್ರಮುಖವಾಗಿತ್ತು. ಹೈದರಾಬಾದ್ ಮಠಕ್ಕೆ ಆಗಿನ ಭಾರತ ಪ್ರಧಾನಿ ಭೇಟಿ ಮಾಡಿದ ಸಂದರ್ಭ ನನಗೆ ನೆನಪಿದೆ. ತೆರೆದ ಸಭಾಂಗಣ ಕಿಕ್ಕಿರಿದು ತುಂಬಿ, ಹೆಚ್ಚಿನ ಶ್ರೋತೃಗಳು ಬದಿಯಲ್ಲಿ ನಿಂತಿದ್ದರು. ಪ್ರಧಾನಿಯ ಘನತೆಗೆ ಸರಿ ಹೊಂದುವ ಹಾಗೆ ಸ್ವಾಮಿಗಳು ಇಂದಿರಾಗಾಂಧಿಯವರಿಗೆ ಸ್ವಾಗತ ಕೋರಿದರು. ಅತಿದೈನ್ಯ ಉತ್ಪ್ರೇಕ್ಷೆ, ಸಭಾರಂಜನೆ ಯಾವುದೂ ಇರಲಿಲ್ಲ. ಸ್ವಾಮಿಗಳ ಚಲನವಲನಗಳಲ್ಲಿ ಗಾಂಭೀರ್ಯ ಮತ್ತು ಸತ್ಯನಿಷ್ಠೆ ಅಭಿವ್ಯಕ್ತವಾಗಿತ್ತು. ಎತ್ತರ, ಭವ್ಯ, ಸತ್ವಯುತ ಮತ್ತು 'ಗೀತೆ'ಯಲ್ಲಿ ಹೇಳಿದ ಸ್ಥಿತಪ್ರಜ್ಞ ಲಕ್ಷಣಗಳು ನೆಲೆಗೊಂಡಿದ್ದ ಸ್ವಾಮಿಗಳು ಅವರು. ಒಂದೇ ವೇದಿಕೆಯ ಮೇಲೆ ರಾಜಕೀಯ ಮುಖಂಡ ಮತ್ತು ಆಧ್ಯಾತ್ಮ ಪ್ರಭಾವಿಗಳನ್ನು ನೋಡುವುದು ಒಂದು ಅಪೂರ್ವ ದೃಶ್ಯವೇ ಆಗಿತ್ತು.

ಸ್ವಾಮಿಗಳ ವ್ಯಾಪಕ ವಿದ್ವತ್ತಿನ ಮತ್ತು ಅವರ ಆಂತರಿಕ ದೈವೀಪ್ರಜ್ಞೆಗಳ ಅರಿವಿಲ್ಲದ ನನ್ನ ವಿದ್ಯಾರ್ಥಿ ಪ್ರತಿಕ್ರಿಯೆಗಳು ಸಹಜ, ಅಯತ್ನಪೂರ್ವಕ ಮತ್ತು ಅವುಗಳನ್ನು ಯೋಚಿಸಿ ಕಾರಣ ಹೇಳುವಂತಹವಾಗಿರಲಿಲ್ಲ. ಅದನ್ನು ನಾನು ದೊಡ್ಡದಾಗಿ ಒಳ ಅರಿವಿನ ಜ್ಞಾನ ಎಂದು ಕರೆಯುವುದಿಲ್ಲ; ಆದರೆ ಅದರ ಕೆಲವು ತುಣುಕುಗಳನ್ನು ನನ್ನ ಪ್ರತಿಕ್ರಿಯೆ ಒಳಗೊಂಡಿತ್ತು. ಉದಾಹರಣೆಗೆ ಈ ವೇದಾಂತ ಪಂಡಿತರ ಸಮಯಪ್ರಜ್ಞೆ ವಿದೇಶೀಯವಾಗಿತ್ತು. ಯಾವುದೇ ಭಾನುವಾರ ಸಂಜೆ ಸುಮಾರು ೫-೫೬ ಅಥವಾ ೫-೫೭ ಘಂಟೆಗೆ ಸ್ವಾಮಿಗಳು ಮಠದ ಆವಾಸ ಸ್ಥಾನದಿಂದ ಹೊರಗೆ ಬಂದು ಸಭಾಂಗಣಕ್ಕೆ ನೇರವಾಗಿ ನಡೆದು, ಉಪನ್ಯಾಸವನ್ನು ಸರಿಯಾಗಿ ೬ ಘಂಟೆಗೆ ಪ್ರಾರಂಭ ಮಾಡಿ ಮತ್ತು ನಿಖರವಾಗಿ ೭ ಘಂಟೆಗೆ ಮುಗಿಸುವುದನ್ನು ತಪ್ಪದೆ ನೋಡಬಹುದಾಗಿತ್ತು. ನಿಗದಿತ ಸಮಯವನ್ನು ಮೀರಿದ್ದನ್ನು ನಾನು ಎಂದೂ ನೋಡಿಲ್ಲ. 'ಭಾರತದಲ್ಲಿ ಪ್ರತಿಯೊಬ್ಬರ ಹತ್ತಿರ ಗಡಿಯಾರವಿದೆ; ಆದರೆ ಕೆಲವೇ ಜನರಿಗೆ ಸಮಯಪ್ರಜ್ಞೆ ಇದೆ' ಎಂದು ಸ್ವಾಮಿಗಳು ಆಗಾಗ್ಗೆ ಹೇಳುತ್ತಿದ್ದರು.

ಸ್ವಾಮಿಗಳ ಅಸಾಧಾರಣ ಹಾಸ್ಯಪ್ರಜ್ಞೆಯ ಬಗ್ಗೆ ನನ್ನ ಅನುಭವ ಇದು. ಅವರ ಚಾಟುನುಡಿ ಹರಿತವಾಗಿರುತ್ತಿತ್ತು. ಆದರೆ ಅದು ಇನ್ನೊಬ್ಬರಿಗೆ ನೋವಾಗುವ ಬದಲು ಗುಣಪಡಿಸುವ ಸಲುವಾಗಿ ಇರುತ್ತಿತ್ತು. ಒಮ್ಮೆ ಹರಿತ ಬಿಸಿ ಬಿಸಿ ಚರ್ಚೆ ನಮ್ಮಲ್ಲಿ ನಡೆದಾಗ, ಅದನ್ನು ಸ್ವಾಮಿಗಳ ಮುಂದೆ ನಿವೇದಿಸಿದಾಗ "ದೊಡ್ಡ ಸಂಸ್ಥೆಗಳಲ್ಲಿ ನಡೆಯುವುದಕ್ಕೆ ಹೋಲಿಸಿದರೆ, ನಿಮ್ಮ ಜಗಳ ತೀರ ಸಪ್ಪೆ" ಎಂದು ನಗುತ್ತಾ ಹೇಳಿದರು. ಅವರ ಈ ಒಂದು ಉದ್ಗಾರದಿಂದ ನಮ್ಮ ಜಗಳ ವ್ಯರ್ಥ ಮತ್ತು ಹಾಸ್ಯಾಸ್ಪದವೆಂದು ಗೊತ್ತಾಗಿ, ನಮ್ಮ ಕೋಪ ಶಾಂತವಾಗಿ, ನಾವೆಲ್ಲಾ ಗಟ್ಟಿಯಾಗಿ ನಕ್ಕುಬಿಟ್ಟೆವು.

ಸ್ವಾಮಿಗಳ ಬಗ್ಗೆ ಹೇಳುವುದಾದರೆ ಅವರ ಅದಮ್ಯ ಚೈತನ್ಯ ಮತ್ತು ನಂಬಲಾಗದ ಕಾರ್ಯೋತ್ಸಾಹಗಳ ಅಭಿವ್ಯಕ್ತಿಗಳೇ ಅವರ ಹಾಸ್ಯಪ್ರಜ್ಞೆ. ತಮ್ಮ ಚಿಕ್ಕ ಕೋಣೆಯಲ್ಲಿ (೧೨ ಅಡಿ x ೧೪ ಅಡಿ) ಕೂತು ನಿಷ್ಠೆಯಿಂದ ಕೆಲಸದಲ್ಲಿ ತೊಡಗುತ್ತಿದ್ದರು. ನಾನು ನೋಡಿದ ಒಂದು ದೃಷ್ಟಾಂತ. ದೀರ್ಘ ವಿಮಾನಯಾನ ಮಾಡಿ ಸ್ವಾಮಿಗಳು ಹೈದರಾಬಾದಿಗೆ ಬಂದು, ನೇರವಾಗಿ ಕೆಲಸದಲ್ಲಿ ತೊಡಗಿಕೊಂಡರು. ಟೇಬಲ್ ಮೇಲೆ ಇದ್ದ ಕರಡು ಪ್ರತಿಗಳನ್ನು ಅವರು ತಿದ್ದಬೇಕಾಗಿತ್ತು. ನಾನು ಅವರ ದರ್ಶನಕ್ಕೆ ಹೋದಾಗ ಅವರು ತಿದ್ದುವುದರಲ್ಲಿ ಮಗ್ನರಾಗಿ "ನೋಡು, ಇವತ್ತೇ ಇವೆಲ್ಲಾ ತಿದ್ದಿದ ನಂತರ ಪ್ರೆಸ್ಸಿಗೆ ಹೋಗಬೇಕಾಗಿದೆ. ಈಗಾಗಲೇ ಬಹಳ ದಿನಗಳಿಂದ ಉಳಿದಿವೆ"

ಎಂದು ಹೇಳಿದರು. ಇನ್ನು ಜಾಸ್ತಿ ಹೇಳದೆ, ತಮ್ಮ ಕೆಲಸದಲ್ಲಿ ಮಗ್ನರಾದರು. 'ಗೀತೆ'ಯ ಯೋಗದ ತಾತ್ಪರ್ಯವನ್ನು ಸಂಗ್ರಹವಾಗಿ 'ಕರ್ಮಕೌಶಲ'ವೆಂದು ಅವರು ಪ್ರವಚನದಲ್ಲಿ ಹೇಳಿದ್ದು ಸುಮ್ಮನೆಯಾಗಿರಲಿಲ್ಲ.

ಅವರ ಉಪನ್ಯಾಸಗಳ ಅಗಾಧ ರಾಶಿಯಲ್ಲಿ ಮಹಾಭಾರತದ 'ಶಾಂತಿ ಪರ್ವ'ದ ಮೇಲೆ ಮಾಡಿದ ಪ್ರವಚನ ಬಲು ಸೊಗಸಾದದ್ದು ಎಂದು ನಾನು ಎತ್ತಿ ಹೇಳುತ್ತೇನೆ. ಬಹುಶಃ ಪ್ರವಚನ ಮಾಡುವಾಗ ಅವರು ಒಳ್ಳೆಯ ಮನಸ್ಥಿತಿಯಲ್ಲಿ ದ್ದಿರಬೇಕು. ಶ್ರುತಿ ಮತ್ತು ಸ್ಮೃತಿಗಳಿಂದ ಆಯ್ದ ಪ್ರಿಯವಾದ ಎರಡು ವಿವರಣೆಯನ್ನು ಕೊಡಲು ಸಾಧ್ಯವಾಯಿತು. ಈ ವಿವರಣೆ ಪ್ರಸ್ತುತ ಸಂದರ್ಭಗಳ ವಾಸ್ತವದ ಬಗ್ಗೆ ನಿರಂತರ ಹೇಳಿಕೆಗಳಿಗೆ ಹೊಂದಿಕೊಳ್ಳುತ್ತಿತ್ತು.

ಅವರ ತೀಕ್ಷ್ಣ ಒಳನೋಟ ಮತ್ತು ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ಕುರುಕ್ಷೇತ್ರದ ತರ್ಕಕ್ಕೆ ಹೋಲಿಸಿ ಕೊಟ್ಟ ವಿವರಣೆ, ಆಳ, ವಿಸ್ತಾರ ಮತ್ತು ನವಿರು ಭೇದ ಕಣ್ತೆರೆಸುವಂತಿದ್ದುವು. ಈ ಆಧುನಿಕ ವ್ಯಾಸರು ತುಂಬು ನಾದದಿಂದ, ಪರ ಮತ್ತು ಅಪರ ವಿದ್ಯೆಗಳ ಜೋಡಣೆಯ ಧರ್ಮಸೂಕ್ಷ್ಮಗಳ ಕೊಡುವ ವಿವರಣೆ ಕೇಳುವುದು ಒಂದು ಆನಂದದಾಯಕ ಅನುಭವವಾಗಿರುತ್ತಿತ್ತು.

'ಮಹಾಭಾರತ'ದ ವೃದ್ಧ ಪಿತಾಮಹ ಭೀಷ್ಮರು ಶರಶಯ್ಯೆಯ ಮೇಲೆ ಮಲಗಿ ತಮ್ಮ ನಿರ್ಗಮನದ ವೇಳೆಗಾಗಿ ಕಾಯುವ ದೃಶ್ಯ ಸ್ವಾಮಿಗಳ ಭಾವನೆಗಳ ಪ್ರತಿಭಾ ವಿಸ್ತಾರವನ್ನು ಕಲಕಿರಬೇಕು. "ಸಾವು ಇರುವುದೇ ಜೀವನ ಸೌಂದರ್ಯವನ್ನು ವರ್ಧಿಸಲು", ನನ್ನ ಗುರು 'ಶ್ರೀರಾಮ' ಹೇಳುತ್ತಿದ್ದರು. ಇಂತಹ ಅನುಭವದ ಸದಾ ಅರಿವೇ ಬಹುಶಃ ಶಾಂತಿ. ಈ ಶಾಂತಿಯು ಗ್ರಹಣಾತೀತ.

ಇನ್ನೊಂದು ಘಟನೆ ನೆನಪಿಗೆ ಬರುತ್ತದೆ. ಓರ್ವ ಹಿರಿಯ ಸ್ವಾಮಿಗಳು ಮದ್ರಾಸಿನಲ್ಲಿ ಕಾಲವಾದರು ಎಂದು ಕೇಳಿದೆ. ಅವರು ದೊಡ್ಡ ವಿದ್ವಾಂಸರು. ಸಶಕ್ತ ತರ್ಜುಮೆದಾರರು ಮತ್ತು ಸಮೃದ್ಧ ಬರೆಹಗಾರರು ಆಗಿದ್ದರು. ರಾಮಕೃಷ್ಣ ಸಂಘಕ್ಕೆ ಅವರ ಸಾವಿನಿಂದ ಬಹಳ ನಷ್ಟವಾಗಿತ್ತು. ಸುದ್ದಿ ಸಿಕ್ಕಿದ ಸಂಜೆ ನಾನು ಮಹಾರಾಜರನ್ನು ನೋಡಲು ಹೋದೆ. ಬಾಗಿಲು ಸದ್ದು ಮಾಡಿ ಒಳಗೆಹೋದೆ. ಶಾಂತ, ಸಮಾಧಾನಪೂರ್ಣ ಮತ್ತು ಹೊಳೆಯುವ ಕಣ್ಣುಗಳು ಸ್ವಾಮಿಗಳ ಆಕೃತಿಯನ್ನು ಸದಾ ದೃಷ್ಟಿಸಿ ನೋಡಲು ನಾನು ಇಷ್ಟ ಪಡುತ್ತಿದ್ದೆ. ಟೇಬಲ್‌ನ ಹತ್ತಿರ ಕುಳಿತು ಬರೆಯುತ್ತಿದ್ದರು. ಆ ಹಿರಿಯ ಸ್ವಾಮಿಗಳು ಕಾಲವಾಗಿದ್ದು ವಿಷಾದಕರ ಸಂಗತಿ ಎಂದು ನಾನು ಹೇಳಿದೆ. ಸ್ವಾಮಿಗಳು ನನ್ನನ್ನು ನೋಡಿ "ದೇಹ ತನ್ನ ಉಪಯುಕ್ತತೆಯನ್ನು ಕಳೆದುಕೊಂಡಿದೆ ಮತ್ತು ತ್ಯಜಿಸಲ್ಪಟ್ಟಿದೆ. ಆದ್ದರಿಂದ ದುಃಖಪಡಲು ಏನಿದೆ!" ಎಂದು ಹೇಳಿದರು. ನೀರಸವಾದ ಅವರ ಪ್ರತಿಕ್ರಿಯೆಯಿಂದ ನಾನು ದಂಗಾದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ನನ್ನ ಮೂರ್ಖತನಕ್ಕೆ ನಾನೇ ಹಣೆ ಚಚ್ಚಿಕೊಂಡೆ. 'ಗೀತೆ'ಯ ಮಹಾನ್ ಪ್ರತಿಪಾದಕರಿಂದ ನಾನು ದುಃಖವನ್ನು ನಿರೀಕ್ಷೆ ಮಾಡಿದ್ದೆ! "ಆತ್ಮನಿಗೆ ಹುಟ್ಟೂ ಇಲ್ಲ ಸಾವೂ ಇಲ್ಲ" ಎಂದು ಅವರು 'ಗೀತೆ'ಯ ನಿರೂಪಣೆ ಮಾಡಿದ್ದರು. ನನ್ನ ಬಾಲಿಶತನ ಇನ್ನು ಇದಕ್ಕಿಂತ ಮುಂದೆ ಹೋಗಬಾರದು. ಅವರ ದೃಢವಾದ ಸ್ವರ ಮತ್ತು ತಾವು ಹೇಳುತ್ತಿರುವ ಮಾತಿನ ಸತ್ಯದ ಬಗೆಗಿನ ಖಚಿತತೆಯನ್ನು ಈಗಲೂ ನಾನು ನೆನೆಯುತ್ತೇನೆ.

ಗಂಭೀರ ವಿಷಯಗಳ ಬಗ್ಗೆ ಸ್ವಾಮಿಗಳ ನಿರೂಪಣೆ ಬಗ್ಗೆ ಬಹಳ ಜನರಿಗೆ ಗೊತ್ತಿದೆ. ಆದರೆ ಇತರ ವಿಷಯಗಳಲ್ಲಿ ಅವರಿಗಿದ್ದ ಪ್ರೀತಿ ಕೆಲವು ಜನರಿಗೆ ಮಾತ್ರ ಗೊತ್ತು. ಉದಾಹರಣೆಗೆ, ರ್‍ಯಾಮ್ ಪೋಲ್ಡರ್‌ಮನ್ ಎಂಬ ಡಚ್ ದೇಶದ ಭಕ್ತ ಪ್ರತಿ ಬೇಸಿಗೆಯಲ್ಲಿ ಸ್ವಾಮಿಗಳ ಭೇಟಿಗೆ ಬರುತ್ತಿದ್ದ. ಸ್ವಾಮಿಗಳ ವಿದೇಶಯಾತ್ರೆಯೊಂದರಲ್ಲಿ ಬಹುಶಃ ಅವನು ಭೇಟಿಯಾಗಿದ್ದಿರಬೇಕು. ಈ ಭಕ್ತ ನುರಿತ ಜಾದೂಗಾರನಾಗಿದ್ದ. ಅವನು ಹವ್ಯಾಸಿ ಕಲಾವಿದನಾದರೂ ಹೈದರಾಬಾದಿನ ಆಶ್ರಮದ ಭಕ್ತರನ್ನು ತನ್ನ ವಿಲಕ್ಷಣ ಕೈಚಳಕದಿಂದ ರಂಜಿಸುತ್ತಿದ್ದ. ಅವನು ಭೇಟಿಗೆ ಬಂದಾಗ ಸ್ವಾಮಿಗಳು ಆಶ್ರಮದಲ್ಲಿ ಪ್ರದರ್ಶನ ನೀಡಲು ಅವನನ್ನು ಆಹ್ವಾನಿಸುತ್ತಿದ್ದರು. ಮಹಾಜ್ಞಾನಿ,

ಪ್ರತಿಭಾನ್ವಿತ ವ್ಯಾಖ್ಯಾನಕಾರ ಮತ್ತು ನಮ್ಮ ಪುರಾತನ ಪರಂಪರೆಯ ಆದರ್ಶ ಪ್ರತಿಪಾದಕರಾದ ಸ್ವಾಮಿಗಳು, ತಮ್ಮ ಶಾಂತ ಮುಖದಲ್ಲಿ ಮಗುವಿನ ಹಾಗೆ ಕುತೂಹಲಭರಿತರಾಗಿ ರ್‍ಯಾಮ್ ಪೋಲ್ಡರ್‌ಮನ್ ಪ್ರದರ್ಶನ ಮಾಡುತ್ತಿದ್ದ ಜಾದೂ ಕೈಚಳಕವನ್ನು ನೋಡುತ್ತಿದ್ದುದು ಒಂದು ಅದ್ಭುತ ದೃಶ್ಯವಾಗಿರುತ್ತಿತ್ತು. ಕೆಲವೇ ನಿಮಿಷಗಳ ಮುಂಚೆ ಜೀವನದ ಶಾಶ್ವತ ಮೌಲ್ಯಗಳ ಬಗ್ಗೆ ಬಹಳ ಗಂಭೀರವಾಗಿ ಮಾತನಾಡುತ್ತಿದ್ದವರು ಈಗ ಜಾದೂಗಾರ ಮಾಡುವ ಅತಿ ಸಣ್ಣ ಚಲನೆಯನ್ನೂ ತಪ್ಪಿಸಿಕೊಳ್ಳುವ ಮನಸ್ಸಿಲ್ಲದೆ ವೇದಿಕೆಗೆ ತಮ್ಮ ಕಣ್ಣನ್ನು ಅಂಟಿಸಿರುತ್ತಿದ್ದರು. ಇದನ್ನು ರಾಮಕೃಷ್ಣರ ಒಳದೃಷ್ಟಿಯು ಅಭಿನೀತವಾಗುತ್ತಿದೆ ಎಂಬುದನ್ನು ಮತ್ತು ಜಾದೂ ಮಿಥ್ಯ, ಜಾದೂಗಾರ ಸತ್ಯ ಎಂಬ ಜಾದೂ ಮೇಲಿನ ಅವರ ಹೇಳಿಕೆಯ ಪರಮಸತ್ಯವನ್ನು ನಾವು ಮರೆಯಬಾರದೆಂಬುದನ್ನು ಸೂಚಿಸುವ ಪ್ರದರ್ಶನವೆಂದು ಹೇಳಬಹುದು. ತಮ್ಮ ಪರಮ ಗುರುವಿನ ಜತೆ ಇರುವ ಸಂಬಂಧವನ್ನು ಪ್ರೇಕ್ಷಕರು ಅರಿತುಕೊಳ್ಳಬೇಕು ಎಂಬ ಉದ್ದೇಶದಿಂದ ಬಹುಶಃ ಅವರು ವಿನೋದವಾಗಿರುತ್ತಿದ್ದರು.

ವಿಷಯಗಳ ವಿಸ್ತಾರ ಮತ್ತು ಪ್ರಾಮಾಣ್ಯ ಮತ್ತು ಅಧಿಕಾರಯುಕ್ತವಾಗಿ ಮಾತನಾಡುವುದನ್ನು ನೋಡಿ ಅವರು ಶಿಷ್ಯರು ಮತ್ತು ಅಭಿಮಾನಿಗಳು ಆಶ್ಚರ್ಯಪಡುತ್ತಿದ್ದರು. ಆಧುನಿಕ ಸಂಶೋಧನೆಗಳ ಮತ್ತು ಪುರಾತನ ಸತ್ಯಗಳ ನಡುವೆ ಇರುವ ಸಾಮೀಪ್ಯ ನಿರೂಪಣೆ ಮಾಡುತ್ತಿದ್ದರು. ಸ್ವಾಮಿಗಳ ಉಪನ್ಯಾಸಗಳನ್ನು ಉಪೇಕ್ಷೆಯಿಂದ ಸಹಿಸುತ್ತಿದ್ದ ಶುಷ್ಕ ಪಂಡಿತರು ಕೂಡ ಸ್ವಾಮಿಗಳ ಅಲೌಕಿಕ ಸಮನ್ವಯ ಪ್ರತಿಭೆಯಿಂದ ದಂಗಾಗಿದ್ದರು. ಡಾರ್ವಿನ್‌ನಿಂದ ಫ್ರಾಯ್ಡ್, ಎಡ್ಡಿಂಗ್‌ಟನ್, ಶ್ರೋಡಿಂಜರ್‌ನಿಂದ ಸ್ಟೀಫನ್ ಹಾಕಿಂಗ್, ಡೇವಿಡ್ ಬೋಮ್ ಮತ್ತು ಇತರರು, 'ದಿ ಸೆಲ್ಫಿಷ್ ಜೀನ್'ನ ಬರಹಗಾರರನ್ನೂ ಸೇರಿಸಿ ತಮ್ಮ ವಿಶ್ವಕೋಶದಂತಹ ಜ್ಞಾನದ ವಿಸ್ತಾರ ಹರವಿನಿಂದ ಅತೀ ಬುದ್ಧಿವಂತ ಶ್ರೋತೃಗಳನ್ನೂ ಬೆರಗುಗೊಳಿಸುತ್ತಿದ್ದರು. ಅವರು ಬರೀ ಸೊಗಸು.

ಸ್ಥಳೀಯ ವಿಶ್ವವಿದ್ಯಾಲಯದ ಉಪಾಧ್ಯಾಯರಿಗಾಗಿ ಒಂದು ಬಗೆಯ ಚಿಂತನ ಶಿಬಿರವನ್ನು ಆಯೋಜಿಸಿದ್ದಾಗ, ಸ್ವಾಮಿಗಳು ಬಹಳ ಸೊಗಸಾಗಿ ಮಾತನಾಡಿದರು. ಸಾಮಾನ್ಯವಾಗಿ ಚಡಪಡಿಸುವ ಉಪಾಧ್ಯಾಯರು ಕೂಡ, ನಂಬಲಾಗದ ರೀತಿಯಲ್ಲಿ ತದೇಕ ಧ್ಯಾನದಿಂದ ಆಲಿಸಿದರು. ಉಪನ್ಯಾಸದ ಒಂದು ನಿರ್ಣಾಯಕ ಹಂತದಲ್ಲಿ ಶಾಂತವಾಗಿ 'ಒಕ್ಯಾಮ್‌ನ ಕತ್ತಿ'[೧] ಎಂಬ ಶಬ್ದ ಉಚ್ಚರಿಸಿದರು. ಆಗ ಶ್ರೋತೃಗಳು ಆಶ್ಚರ್ಯಚಕಿತರಾಗಿ ಮೇಲುಸಿರುಬಿಟ್ಟರು. ಅದುಉ ಸೂಕ್ತ ಮತ್ತು ಸರಿಯಾಗಿ ಪ್ರತಿಕ್ರಿಯೆಯೇ ಆಗಿತ್ತು. ಸ್ವಾಮಿಗಳು ಆ ಹೊತ್ತಿನಲ್ಲಿ ಮತ್ತು ಅದೇ ಕ್ಷಣದಲ್ಲಿ ಯೋಚನೆಮಾಡಿ ಹೇಳಿದ್ದು ಅದು. ಅಭಿನಯ ಕೌಶಲ್ಯದಲ್ಲಿ ಅವರನ್ನು ಸರಿಗಟ್ಟುವುದು ಕಷ್ಟ ಎಂದು ನನ್ನ ಸ್ನೇಹಿತ ಒಪ್ಪಿಕೊಂಡರು. ನಾನು 'ತಥಾಸ್ತು' ಅಂದೆ.

ಸ್ವಾಮಿ ರಂಗನಾಥಾನಂದರ ಸರ್ವತೋಮುಖತ್ವದ ಇನ್ನೊಂದು ವಿಚಾರ ನನಗೆ ನೆನಪಾಗುತ್ತದೆ. ಪ್ರತಿವರ್ಷ ಅವರು ಪಾಶ್ಚಾತ್ಯ ರಾಷ್ಟ್ರಗಳಿಗೆ ಹೋಗುತ್ತಿದ್ದರು. ವಾಪಸ್ಸು ಬಂದನಂತರ ಮಠದಲ್ಲಿ ಮಾಡುವ ಅವರ ಪ್ರಥಮ ಸಾರ್ವಜನಿಕ ಉಪನ್ಯಾಸಕ್ಕೆ ನಾವು ಕಾಯುತ್ತಿದ್ದೆವು. ವಿದೇಶದಲ್ಲಿನ ಅವರ ಅನುಭವಕಥನವನ್ನು ಕೇಳಲು ನಾವು ಉತ್ಸುಕರಾಗಿರುತ್ತಿದ್ದೆವು. ಅವರಿಗೆ ಅಪೂರ್ವ ಕಥನಕೌಶಲವಿತ್ತು. ಅದು ಉಲ್ಲಾಸಮಯವಾಗಿ, ಆಕರ್ಷಕವಾಗಿ ಮತ್ತು ಆರಾಮದಾಯಕವಾಗಿ ಇರುತ್ತಿತ್ತು. ಆಕರ್ಷಕ ವಿಷಯಗಳ ಆಯ್ಕೆ ಮತ್ತು ಸಂಗ್ರಹವಾಗಿ ನಿಧಾನವಾಗಿ ಒಂದೊಂದನ್ನು ಹೇಳುವ ಅವರ ಕಥನ ವಿಧಾನ ಒಂದು ಮಾದರಿಯಾಗಿತ್ತು. "ಒಂದರಿಂದ ಆಗುವುದಿದ್ದರೆ, ಎರಡು ಶಬ್ದಗಳನ್ನು ಉಪಯೋಗಿಸಬೇಡ. ಒಂದನ್ನೂ ಉಪಯೋಗಿಸಬೇಡ ಅಗತ್ಯವಿಲ್ಲದಿದ್ದರೆ." ಎಂಬ ನಾಣ್ಣುಡಿ ಅವರ ಕಥನ ವಿಧಾನಕ್ಕೆ ಸರಿಹೊಂದುತ್ತದೆ.

---

೧. ಇದರ ಅರ್ಥ: "ಲಾಘವ ತರ್ಕ; ವಿಷಯವೊಂದನ್ನು ವಿವರಿಸುವಾಗ, ಸಾಧ್ಯವಾದಷ್ಟೂ ಕಡಮೆ ಊಹೆಗಳನ್ನು ಪರಿಗ್ರಹಿಸಬೇಕು ಎನ್ನುವ, ಇಂಗ್ಲಿಷ್ ತತ್ತ್ವಶಾಸ್ತ್ರಜ್ಞ ವಿಲಿಯಂ ಆಫ್ ಆಕಮ್ ಎಂಬಾತನನ್ನು ಕಲ್ಪಿಸಿದ್ದೆಂದು ಹೇಳಲಾದ ಸೂತ್ರ." (ನೋಡಿ: ಇಂಕನಿ, ಪು. ೩೫೮೬) –ಕನ್ನಡ ಆವೃತ್ತಿಯ ಸಂಪಾದಕರು ಒದಗಿಸಿರುವ ಟಿಪ್ಪಣಿ.

ಶ್ರೀರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಮೇಲೂ, ಸ್ವಾಮಿ ರಂಗನಾಥಾನಂದರು ಹೈದರಾಬಾದಿನಲ್ಲಿಯೇ ಉಳಿಯಲು ಇಷ್ಟಪಟ್ಟರು. ಬಹುಶಃ ಇದು ಹೈದರಾಬಾದಿಗಳ ಅದೃಷ್ಟ. ಅಥವಾ ಎಷ್ಟು ಮನಸ್ಸುಗಳೋ ಅಷ್ಟೇ ದಾರಿಗಳು ಎಂಬ ರಾಮಕೃಷ್ಣ ಸೂತ್ರಕ್ಕೆ ಹೈ–ಟೆಕ್ ಸಿಟಿಯ ಸಂಮಿಶ್ರ ಸಂಸ್ಕೃತಿ ಹಿತಕರವೆಂದು ಕಂಡಿರಬೇಕು. ಉಪಾಧ್ಯಕ್ಷರೆಂದ ಮೇಲೆ ಅವರು ಭಕ್ತರಿಗೆ ದೀಕ್ಷೆ ಕೊಡುವ ಅಧಿಕಾರವಿತ್ತು.

ಬಹುಶಃ ಹೊಸ ಜವಾಬುದಾರಿ ಅವರಲ್ಲಿ ಬದಲಾವಣೆ ತಂದಿತು. ಅದನ್ನು ಹೇಗೆ ಹೇಳಬೇಕೆಂದು ನನಗೆ ಗೊತ್ತಿಲ್ಲ. ಪ್ರಯತ್ನ ಮಾಡುತ್ತೇನೆ. ಗಾಢ ಮಗ್ನತೆಯ ಪ್ರತ್ಯಕ್ಷ ಮನೋಸ್ಥಿತಿಯ ಅಭಿವ್ಯಕ್ತಿ ಎಂದು ಸ್ಥೂಲವಾಗಿ ವರ್ಣನೆ ಮಾಡುತ್ತೇನೆ. ಪ್ರಜ್ಞೆಯ ಕೊನೆಯ ಹಂತದಲ್ಲಿ ಅನುಭವಿಸುವ ಸೂಕ್ಷ್ಮ ವಿಚಾರಗಳ ಬಗ್ಗೆ ಸ್ವಾಮಿ ರಂಗನಾಥಾನಂದರು ಸಾಮಾನ್ಯವಾಗಿ ಮೌನವಾಗಿರುತ್ತಿದ್ದರು ಎಂಬುದು ನನ್ನ ಯೋಚನೆ. ಪ್ರಖರ ಜ್ಞಾನ ಮತ್ತು ವೇದಾಂತ ಸತ್ಯತೆ ಮತ್ತು ತತ್ತ್ವಶಾಸ್ತ್ರದ ಸೂಕ್ಷ್ಮ ಗ್ರಹಿಕೆಯಲ್ಲಿ ವಿವೇಕಾನಂದರಿಗೆ ಸಮನಾದ ಜ್ಞಾನಿಯೆಂದು ಬಹಳ ಜನ ಸ್ವಾಮಿ ರಂಗನಾಥಾನಂದರನ್ನು ವರ್ಣಿಸುತ್ತಾರೆ. ಅವರ ಪ್ರಾಮಾಣ್ಯ ಮತ್ತು ಪ್ರಭಾವ ಕೆಲವರಿಗೆ ಮಾತ್ರ ಸಾಧ್ಯ.

ಹೈದರಾಬಾದ್ ಬಿಡುವ ಕೆಲವು ವರ್ಷಗಳ ಮುಂಚೆ ಪರಮಹಂಸರ ಮತ್ತು ಶ್ರೀಮಾತೆಯವರ ಜನ್ಮೋತ್ಸವ ದಿನಗಳಲ್ಲಿ ಭವ್ಯವಾದ ದೇವಸ್ಥಾನದಲ್ಲಿ ನಡೆಯುವ ಭಜನೆಗಳಲ್ಲಿ ಸ್ವಾಮಿಗಳು ಭಾಗಿಗಳಾಗುತ್ತಿದ್ದದು ಅಪರೂಪವೇನಲ್ಲ. ಅವರು ಭಜನೆಯ ಆನಂದವನ್ನು ಅನುಭವಿಸುತ್ತಾ ಚಿಕ್ಕ ತಾಳಗಳನ್ನು ಹಿಡಿದು, ಬೇರೆ ವಾದ್ಯಗಳ ಜತೆ ಸುಸಂಗತವಾಗಿ ಬಾರಿಸುತ್ತಿದ್ದರು. ಹಾಡಿನ ಮಾಧುರ್ಯ ಮತ್ತು ತಾಳಕ್ಕೆ ಅವರು ಚಿಕ್ಕ ತಾಳ ಬಾರಿಸುವುದನ್ನು ನೋಡುವುದು ಒಂದು ಅದ್ಭುತ ದೃಶ್ಯವಾಗಿರುತ್ತಿತ್ತು. ಭಕ್ತಿರಸದಲ್ಲಿ ಜ್ಞಾನ ಮುಳುಗಿದ ಆ ಕ್ಷಣಗಳ ಚಿತ್ರ ನೋಡಿ ಆನಂದಪಡುತ್ತಿದ್ದೆ.

ಇದರ ಮೂಲ ಕಲೆಗಳ ಬಗ್ಗೆ – ಅದರಲ್ಲಿಯೂ ವಿಶೇಷವಾಗಿ ಇಂಗ್ಲಿಷ್ ಕಾವ್ಯಗಳ ಬಗ್ಗೆ (ಸ್ವಾಮಿಗಳಿಗೆ ಇದ್ದ ಬಹಳ ಒಲವೇ? ಸ್ವಾಮಿಗಳ ಅಸಾಧಾರಣ ನೆನಪು ನನಗೆ ಆಶ್ಚರ್ಯವನ್ನುಂಟುಮಾಡಿದೆ. ಅದಕ್ಕಿಂತ ಜಾಸ್ತಿ ಆಶ್ಚರ್ಯವಾಗಿದ್ದು ಇಂಗ್ಲಿಷ್ ಕಾವ್ಯದ ಆಯ್ದ ಕೆಲವು ಸಾಲುಗಳ ಪಠಣ ನನ್ನ ಪ್ರಕಾರ ಗೋಲ್ಡ್ ಸ್ಮಿತ್, ವರ್ಡ್ಸ್‌ವರ್ತ್ ಮುಂತಾದ ಬರಹಗಾರರ ಬಗ್ಗೆ ಅವರಿಗೆ ವಿಶೇಷ ಪ್ರೀತಿ. ಒಮ್ಮೆ ಅವರು 'ದಿ ವಿಕಾರ್ ಆಫ್ ವೇಕ್‌ಫೀಲ್ಡ್' ಬಗ್ಗೆ ಮಾತನಾಡುವಾಗ ಆ ಲೇಖಕನ ನಾಶವಾಗದ ಮೋಹಕತೆಯ ಬಗೆಗಿನ ಹಳೆಯ ನೆನಪುಗಳ ಹಿನ್ನೆಲೆ ಕಂಡಿತು. ಏಕೀಕೃತ ಸಂವೇದನೆಯ ವಿಸ್ತಾರವಾದ ಬಯಲಿನಲ್ಲಿ ವೈವಿಧ್ಯಮಯ ಅಂಶಗಳನ್ನು ಒಗ್ಗೂಡಿಸಿದಂತಿತ್ತು, ಅವರ ಸಂವೇದನಾಶೀಲತೆ.

ಕೊನೆಯದಾಗಿ, ಸ್ವಾಮಿಗಳಿಗೆ ನನ್ನ ಮೇಲಿದ್ದ ಅತ್ಯಂತ ಪ್ರೀತಿ ನನ್ನ ಜೀವನದಲ್ಲಿ ಬಹಳ ಮೌಲಿಕವಾದ ಅನುಗ್ರಹವೆಂದು ನಾನು ಭಾವಿಸುತ್ತೇನೆ. ಯಾವಾಗಲಾದರೂ ಹೊಸ ಪುಸ್ತಕ ಬಂದರೆ ಅವರು ನನ್ನನ್ನು ಜ್ಞಾಪಿಸಿಕೊಳ್ಳುತ್ತಿದ್ದರು. ಹಂಚಿಕೊಳ್ಳುವುದು ಮಾತ್ರವಲ್ಲ ರಾಮಕೃಷ್ಣ ಪರಂಪರೆಯ ಶಕ್ತಿಯುತ ಸಂದೇಶವನ್ನು ಪಸರಿಸಲು ಭಕ್ತರಿಗೆ ಪ್ರೋತ್ಸಾಹ ಕೊಡಲು ಅವರಿಗಿದ್ದ ಕಾಳಜಿ. ವೇದಾಂತ ಕೇಸರಿಯ ಜನ್ಮ ಶತಾಬ್ದಿ ಸಂಚಿಕೆ(೧೯೩೬)ಯಲ್ಲಿ ರಾಮಕೃಷ್ಣರ ಅನುಭವಾತ್ಮಕ ದರ್ಶನಗಳು ಎಂಬ ಸೋದರಿ ದೇವಮಾತಾರವರ ಲೇಖನ ಪ್ರಕಟವಾಗಿತ್ತು. ಹೈದರಾಬಾದಿನ ಭಕ್ತಸಮೂಹ ಅದರ ಮರುಪ್ರಕಟಣೆ ಮಾಡಲು ಇಷ್ಟಪಟ್ಟಾಗ ಸ್ವಾಮಿಗಳು ಕೊಟ್ಟ ವಿಶೇಷ ಪ್ರೋತ್ಸಾಹವನ್ನು ನಾನು ಎಂದೂ ಮರೆಯಲಾರೆ. ಸ್ವಾಮಿಗಳ ಆಶೀರ್ವಚನದ ಮುನ್ನುಡಿ ಸಮೇತ 'ದಿ ಲಿವಿಂಗ್ ಪ್ರೆಸೆನ್ಸ್' ಎಂಬ ಚಿಕ್ಕ ಹೊತ್ತಿಗೆಯಾಗಿ ಪ್ರಕಟವಾಯಿತು.

ಸ್ವಾಮಿ ವಿವೇಕಾನಂದರ ಮೇಲೆ ನಾನು ಬರೆದ ಕೆಲವು ಲೇಖನಗಳನ್ನು ಒಟ್ಟು ಮಾಡಿದ ಪುಸ್ತಕವನ್ನು ಸ್ವಾಮಿ ರಂಗನಾಥಾನಂದರಿಗೆ ಸಮರ್ಪಣೆ ಮಾಡಬೇಕೆಂದು ನನ್ನ ಅತೀವ ಆಸೆಯಾಗಿತ್ತು. ಆದರೆ ನನ್ನ

ಮಟ್ಟಿಗೆ ಇದು ತೀರ ಗಡಸುತನವೇ ಆಗಿತ್ತು. ಯಾಕೆಂದರೆ, ನನ್ನ ಬರೆವಣಿಗೆಗೆ ಈ ಮಹಾನ್ ವ್ಯಕ್ತಿ ಸಮರ್ಪಣೆ ಮಾಡಲು ಯೋಗ್ಯವಾದ ವಲಯದಿಂದ ಹೊರಹೊರಗೇ ಉಳಿಯುತ್ತದೆಂದು ಭಾವಿಸಿದ್ದೆ. ನನಗೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಹಲವಾರು ಪಾಠಗಳನ್ನು ಕಲಿಸಿದ ಮಹಾನ್ ಸ್ವಾಮಿಗಳಿಗೆ ಬಹಳ ಕೃತಜ್ಞತೆಯನ್ನು ಸಲ್ಲಿಸುವ ಸಲುವಾಗಿ ಈ ಚಿಕ್ಕ ಸಮರ್ಪಣೆ ಮಾಡಬೇಕೆಂಬ ಧೈರ್ಯಮಾಡಿ ಸ್ವಾಮಿಗಳಿಗೆ ಪತ್ರ ಬರೆದು, ಸ್ಪೀಡ್ ಪೋಸ್ಟ್‌ನಲ್ಲಿ ಕಳುಹಿಸಿದೆ. ಆಗ ಸ್ವಾಮಿಗಳು ಬೆಂಗಳೂರು ಭೇಟಿಗೆ ಬಂದಿದ್ದರು. ಸಮರ್ಪಣೆಗೆ ವಿವೇಕಾನಂದರೇ ಸರಿಯಾದ ಆಯ್ಕೆ ಆಗಬಹುದಿತ್ತು ಎಂದು ನಮ್ರವಾಗಿ ತಿಳಿಸಿ ತಮ್ಮ ಒಪ್ಪಿಗೆಯನ್ನು ಮರು ಟಪಾಲಿನಲ್ಲಿ ಕಳುಹಿಸಿದರು. ಮೇಲಾಗಿ ಒಂದು ಆಧ್ಯಾತ್ಮ ಶಿಬಿರದಲ್ಲಿ ನನ್ನ ಪುಸ್ತಕವನ್ನು ಅನುಗ್ರಹಪೂರ್ವಕವಾಗಿ ಬಿಡುಗಡೆಮಾಡಿದರು. ಈ ಸುಯೋಗ ನನಗೆ ಸದಾ ಅಮೂಲ್ಯ ನೆನಪಾಗಿ ಉಳಿಯುತ್ತದೆ.

ಸಂಬಂಧಪಟ್ಟ ವ್ಯಕ್ತಿಗೆ ಅರಿವಿಲ್ಲದೆ ಅವನ ಆಂತರಿಕ ಶಕ್ತಿ ಸಮುಚ್ಚಯ ಅವನಲ್ಲಿ ಅಂತರ್ಗತವಾಗಿ ಅಭಿವ್ಯಕ್ತವಾಗುವ ಪ್ರಕ್ರಿಯೆ 'ದರ್ಶನ' ಎಂದು ತಿಳಿದರೆ, ಆಗ ಮಹಾರಾಜರ ದರ್ಶನ ನನ್ನ ಜೀವಿತದ ಪರಮ ಅನುಗ್ರಹವೆಂದು ಭಾವಿಸುತ್ತೇನೆ. ಕೊನೆಯದಾಗಿ, ಯಾವಾಗಲಾದರೂ ಸ್ವಾಮಿಗಳ ಮಾತುಗಳನ್ನು ಕೇಳಿದಾಗ, 'ಗೆರಾಲ್ಡ್ ಹರ್ಡ್' ಬಳಸಿದ ಚಕಿತಗೊಳಿಸುವ ವಾಕ್ಸರಣಿ (ತತ್‌ಕ್ಷಣದ ಪ್ರತಿಕ್ರಿಯೆ) ನೆನಪಾಗುತ್ತದೆ. ಹೆಚ್ಚಿಗೆ ಏನು! ಸ್ವಾಮಿ ನಿಶ್ಶ್ರೇಯಸಾನಂದರು ಒಮ್ಮೆ ಈ ರೀತಿ ಬಣ್ಣಿಸಿದರು: "ನಿಮ್ಮ ಸ್ವಾಮಿಗಳನ್ನು ಎಷ್ಟೇ ನಿರಾಶಾಜನಕವಾದ ಯಾವುದೇ ಜಾಗದಲ್ಲಿ ಇಡಿ. ಚೆಂಡಿನಂತೆ ಅವರು ಪುಟಿದೆದ್ದು ಬರುತ್ತಾರೆ. ಅವರ ಅದಮ್ಯ ಶಕ್ತಿ ಅದ್ಭುತವಾಗಿದೆ." ಅವರ ಶಕ್ತಿ ಸ್ವಲ್ಪ ಮಟ್ಟಿಗೆ ನಮ್ಮನ್ನು ಪ್ರೇರಿಸಿದೆ; ಅದರ ಶೇಷ ಇನ್ನೂ ಉಳಿದುಕೊಂಡಿದೆ.

* * * *

# ೬೪. ಮಹಾತ್ಮರ ನೆನಪುಗಳು

–ರತ್ನಪ್ರೊವಾ ಸೇಠ್*

ಸ್ವಾಮಿ ರಂಗನಾಥಾನಂದರು! ಈ ಹೆಸರೇ ನನ್ನಲ್ಲಿ ರೋಮಾಂಚನವನ್ನು ಉಂಟುಮಾಡುತ್ತದೆ; ಅದು ಕೆರಳಿಸುವ ಭಾವನೆಯನ್ನು ಶಬ್ದಗಳು ವ್ಯಕ್ತಪಡಿಸಲಾರವು. ಈ ಭಾವೋತ್ಕರ್ಷಕ್ಕೆ ಪಾತ್ರರಾದ ವ್ಯಕ್ತಿ ಈ ಪ್ರಪಂಚದವರಾಗಿರಲಿಲ್ಲ; ಅವರದು ಮಹೋನ್ನತ ಆಧ್ಯಾತ್ಮಿಕ ವ್ಯಕ್ತಿತ್ವ. ಅವರು ಘನ ಗಂಭೀರವಾಗಿ ಜನರೊಡನೆ ದಾಪುಗಾಲು ಹಾಕುತ್ತ ನಡೆಯುತ್ತಿದ್ದರೆ– ಅವರ ಮೇಲ್ವಸ್ತ್ರ ಗಾಳಿಗೆ ಹಾರಾಡುತ್ತಿರಲು– ಉಳಿದವರೆಲ್ಲ ಕುಬ್ಜರಾಗಿ ಕಾಣುತ್ತಿದ್ದರು. ಭಕ್ತರು ಮತ್ತು ಅವರ ಸೇವಕರು ಅವರನ್ನನುಸರಿಸಲು ಹೆಚ್ಚು ಕಡಮೆ ಓಡಬೇಕಾಗುತ್ತಿತ್ತು! ಅವರು ಬಹುಮುಖ ವ್ಯಕ್ತಿತ್ವದ ಪ್ರಭಾವಶಾಲಿ ವ್ಯಕ್ತಿಯಾಗಿದ್ದರು.

ಸುಮಾರು ಐವತ್ತು ವರ್ಷಗಳಿಂದಲೂ ನಾನು ಅವರನ್ನು ಬಲ್ಲೆ. ನಾನು ಅವರನ್ನು ಮೊದಲು ನೋಡಿದಾಗ ಅವರ ಯೌವನದ ಪರಮಾವಧಿಯಲ್ಲಿದ್ದರು. ಆಗ ಅವರು ತಮ್ಮ ಅತ್ಯುತ್ತಮ ಸ್ಥಿತಿಯಲ್ಲಿದ್ದರು– ಶಕ್ತಿ ಉತ್ಸಾಹಗಳಿಂದ ತುಂಬಿಕೊಂಡಿದ್ದರು. ಅವರ ಪ್ರಖರ ಬುದ್ಧಿಶಕ್ತಿ ಮತ್ತು ಆಧ್ಯಾತ್ಮಿಕ ಸಿದ್ಧಿ – ಇವುಗಳ ಪ್ರಭೆ ಅವರ ವ್ಯಕ್ತಿತ್ವದಿಂದ ಹೊರಹೊಮ್ಮುತ್ತಿತ್ತು. ನಮ್ಮ ಆಹ್ವಾನದ ಮೇರೆಗೆ ಅವರು ಅನೇಕ ಬಾರಿ ಇಂದೋರಿಗೆ ಬಂದಿದ್ದರು ಮತ್ತು ನಮ್ಮ ಮನೆಯಲ್ಲಿ ತಂಗುವುದರ ಮೂಲಕ ನಮಗೆ ಗೌರವವನ್ನು ತಂದುಕೊಟ್ಟಿದ್ದಾರೆ. ನಾವು ಭೋಪಾಲಕ್ಕೆ ವರ್ಗವಾಗಿ ಹೋದಾಗ, ಮಧ್ಯ ಪ್ರದೇಶದ ರಾಜ್ಯಪಾಲರಿಂದ ಆಹ್ವಾನಿತರಾದಾಗಲೂ ರಾಜಭವನದಲ್ಲಿ ತಂಗುವುದರ ಬದಲು ನಮ್ಮ ಮನೆಯಲ್ಲೇ ಇರುತ್ತಿದ್ದರು. ಆದ್ದರಿಂದ ನನಗೆ ಅವರ ಅನೇಕ ವರ್ಷಗಳ ನಿಕಟ ಸಂಪರ್ಕವಿದೆ ಹಾಗೂ ನಾನು ಅವರೊಡನೆ ಬೋಧಪ್ರದ ಮತ್ತು ಸಂತೋಷದಾಯಕ ಕ್ಷಣಗಳನ್ನು ಕಳೆದಿದ್ದೇನೆ ಎಂದು ನಮ್ರತೆಯಿಂದ ಹೇಳಬಹುದು.

ನನ್ನ ಮತ್ತು ಅವರ ಪ್ರಥಮ ಮತ್ತು ಕೊನೆಯ ಭೇಟಿ ಮಹಾತೀರ್ಥ ಬೇಲೂರು ಮಠದ ಪವಿತ್ರ ಸ್ಥಳದಲ್ಲಿ ಆದುದು ಒಂದು ಕೌತುಕದ ವಿಷಯ. ಈ ನಡುವಿನ ಅವಧಿಯ ೫೦ ವರ್ಷಗಳು ಅನೇಕ ಫಲಪ್ರದ ಭೇಟಿಗಳಿಂದಲೂ, ಅದ್ಭುತ ಸ್ಮೃತಿಗಳಿಂದಲೂ ಸಮೃದ್ಧವಾಗಿವೆ. ಕಳೆದ ಶತಮಾನದ ಐವತ್ತನೇ ದಶಕದ ಕೊನೆಯ ಭಾಗದಲ್ಲಿ ನಾನು ಬ್ರಹ್ಮಲೀನ ಸ್ವಾಮಿ ಆತ್ಮಾನಂದರೊಡನೆ ಬೇಲೂರು ಮಠಕ್ಕೆ ಭೇಟಿಯಿತ್ತೆ. ನಾವು ಮಠದ ಅಧ್ಯಕ್ಷರ ನಿವಾಸದ ಕಡೆ ಹೋಗುತ್ತಿರುವಾಗ ಒಬ್ಬ ವ್ಯಕ್ತಿಯು ಗೇಟಿನಿಂದ ಹೊರಗೆ ಬರುತ್ತಿರುವುದನ್ನು ನೋಡಿದೆವು– ಅವರ ಕಂಕುಳಲ್ಲಿ ಕೆಲವು ಪುಸ್ತಕ, ಹೆಗಲ ಮೇಲೆ ಇಸ್ತ್ರಿಯಿಲ್ಲದ ಉತ್ತರೀಯ. ಅವರು ಆ ಕಡೆ ಈ ಕಡೆ ತಿರುಗದೆ ನೇರವಾಗಿ ಹೋಗುತ್ತಿದ್ದರು. ತಕ್ಷಣ ಅವರು ನನ್ನ ಗಮನ ಸೆಳೆದರು. ನನ್ನ ಗ್ರಹಿಕೆಗೆ ಮೀರಿದ ಯಾವುದೊ ಒಂದು ಶಕ್ತಿ ಅವರಿಂದ ಹೊರಹೊಮ್ಮುತ್ತಿರುವುದಾಗಿ ನನಗನಿಸಿತು. ಆತ್ಮಾನಂದಜಿಯವರು ಅವರಿಗೆ ಪ್ರಣಾಮವನ್ನು ಸಲ್ಲಿಸಿ, ಅವರ ಪರಿಚಯಮಾಡಿಕೊಟ್ಟರು. ಅವರ ಹೆಸರನ್ನು ನಾನು ಮೊದಲೇ ಕೇಳಿದ್ದೆ. ಖ್ಯಾತ ವಾಗ್ಮಿಗಳೆಂದು ನನಗೆ ಅವರ ಬಗ್ಗೆ ಮೆಚ್ಚಿಗೆ ಇತ್ತು. ನಾನು ಕೂಡಲೇ ಅವರ ಪಾದ ಮುಟ್ಟಿ ನಮಸ್ಕರಿಸಿ ಇಂದೋರಿಗೆ ಭೇಟಿ ನೀಡಬೇಕೆಂದು ಕೇಳಿಕೊಂಡೆ.

ಅವರು ಒಮ್ಮೆ ನನ್ನ ಕಡೆ ದಿಟ್ಟಿಸಿ ನೋಡಿ, ನಾನು ನಿಜವಾಗಿಯೂ ಆಹ್ವಾನಿಸುತ್ತಿರುವೆನೇ ಎಂದು ವಿಚಾರಿಸಿದರು. ನಾನು ಹೌದೆಂದು ತಲೆ ಅಲ್ಲಾಡಿಸಿದೆ. ಆದರೆ, ನಾವು ಅಲ್ಲಿ (ಇಂದೋರಿನಲ್ಲಿ) ನಡೆಸುತ್ತಿದ್ದ

---

* ಭೋಪಾಲ್ ನಗರದ ಒಬ್ಬ ಭಕ್ತರು; ೨೦೦೮ರಲ್ಲಿ ಅವರು ತೀರಿಕೊಂಡರು.

ರಾಮಕೃಷ್ಣ ಕೇಂದ್ರವು ಚಿಕ್ಕದಾಗಿದ್ದುದರಿಂದ ಅಲ್ಲಿಗೆ ಅವರು ದಯಮಾಡಿಸಬಹುದೆಂದು ನಿರೀಕ್ಷಿಸಿರಲಿಲ್ಲ. ಏನಾಶ್ಚರ್ಯ! ಆ ಮಹಾವ್ಯಕ್ತಿಯು ಧೈರಿಯನ್ನು ತೆರೆದು ಶ್ರೀರಾಮಕೃಷ್ಣ, ಶ್ರೀಶಾರದಾ ದೇವಿ ಮತ್ತು ವಿವೇಕಾನಂದ ಇವರ ಮೇಲೆ ಮೂರು ಪ್ರವಚನ ನೀಡಲು ಮೂರು ದಿನಾಂಕಗಳನ್ನು ಗೊತ್ತುಮಾಡಿದರು. ನನಗೆ ಸ್ವಲ್ಪ ಆತಂಕ ಮತ್ತು ಸ್ವಾಮಿ ಆತ್ಮಾನಂದರಿಗೂ ಸ್ವಲ್ಪ ಚಿಂತೆಯಾಯಿತು. ಹೇಗೆ ನಾವು ಕಾರ್ಯಕ್ರಮವನ್ನು ಆಯೋಜಿಸುವುದು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಇಂಗ್ಲಿಷ್ ಅರ್ಥವಾಗುವ ಶ್ರೋತೃಗಳನ್ನು ಸೇರಿಸುವುದು ಹೇಗೆ? ಆದರೆ ಇಟ್ಟ ಹೆಜ್ಜೆಯನ್ನು ಹಿಂತೆಗೆಯುವವಂತಿರಲಿಲ್ಲ. ನಾನು ಇಂದೋರಿಗೆ ಹಿಂತಿರುಗಿ ಕೂಡಲೇ ಆಡಳಿತ ಮಂಡಳಿಯ ಸಭೆಯನ್ನು ಕರೆದೆ; ಮತ್ತು ಬೇರೆ ಭಕ್ತರಿಗೆಲ್ಲ ವಿಷಯ ತಿಳಿಸಿದೆ. ಆಹ್ವಾನಪತ್ರಿಕೆಯನ್ನು ಮುದ್ರಿಸಿದೆವು. ಒಂದು ತಿಂಗಳು ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯಗಳನ್ನು ಸುತ್ತಾಡಿ, ವಿದ್ಯಾರ್ಥಿಗಳು ಉಪಾಧ್ಯಾಯರುಗಳನ್ನು ಸಂಧಿಸಿ ಸ್ವಾಮಿ ರಂಗನಾಥಾನಂದರ ಉಪನ್ಯಾಸಕ್ಕೆ ಬರಬೇಕೆಂದು ಆಹ್ವಾನಿಸಿದೆವು. ಆ ಮಹಾ ದಿನ ಸನ್ನಿಹಿತವಾದಾಗ ನನಗೆ ತುಂಬ ಅಳುಕು ಉಂಟಾಯಿತು. ಆದರೆ, ನಮ್ಮ ಅದೃಷ್ಟಕ್ಕೆ ಟೌನ್ ಹಾಲಿನಲ್ಲಿ ಸ್ವಾಮಿಗಳ ಉಪನ್ಯಾಸ ಕೇಳಲು ೫೦೦ ಜನ ಸೇರಿದ್ದರು, ಮಂತ್ರಮುಗ್ಧರಾಗಿ ಅವರ ಮಾತನ್ನು ಕೇಳಿದರು. ಮಾನವ ಜೀವನದ ಉದ್ದೇಶ ಭಗವತ್ಸಾಕ್ಷಾತ್ಕಾರ, ಎಲ್ಲ ಧರ್ಮಗಳೂ ಒಂದೇ ಗುರಿಯೆಡೆಗೆ ಒಯ್ಯುವ ವಿವಿಧ ಮಾರ್ಗಗಳು ಎಂಬ ದಿವ್ಯತ್ರಯದ ವಿಶಿಷ್ಟ ಸಂದೇಶವನ್ನು ಸ್ವಾಮಿಗಳು ತಮ್ಮ ಉಜ್ವಲ ಮಾತುಗಳಲ್ಲಿ ಪ್ರತಿಪಾದಿಸಿದುದನ್ನು ಎಲ್ಲರೂ ಮೈಯೆಲ್ಲ ಕಿವಿಯಾಗಿ ಕೇಳಿದರು. ಅವರ ಅತ್ಯಾಶ್ಚರ್ಯಕರ ವಾಗ್ಮಿತ್ವದಿಂದಲೂ, ಅವರಿಂದ ಹೊರಹೊಮ್ಮುತ್ತಿದ್ದ ಚೈತನ್ಯಶಕ್ತಿಯಿಂದಲೂ, ಎಲ್ಲ ಶ್ರೋತೃಗಳಂತೆ, ನಾನೂ ಪೂರ್ಣ ಪರವಶಳಾಗಿ ಬಿಟ್ಟೆ. ಅವರ ಮುಖ ಬೆಳಕಿನಿಂದ ಬೆಳಗುವಂತಿತ್ತು. ಅವರು ಮಾತನಾಡುತ್ತಿರುವಾಗ ತಿಳಿಯಲಾಗದುದನ್ನು ಅವರು ತಿಳಿದಿರುವರೆಂದು ನನಗೆ ಅನಿಸಿತು. ಅವರ ಹಿರಿಮೆಯ ಸ್ವಾಭಾವಿಕವಾದ ವಿಶ್ವಾಸ ಅವರೊಡನೆ ನನ್ನನ್ನು ಬಂಧಿಸಿತು ಮತ್ತು ವರ್ಷಗಳು ಕಳೆದಂತೆ ಇದು ಬಲವಾಗುತ್ತ ಹೋಯಿತು. ಇದರೊಂದಿಗೆ ಅವರ ಮೇಲಿನ ನನ್ನ ಪ್ರೀತಿ ಮತ್ತು ಗೌರವ ಅಧಿಕವಾಗುತ್ತ ಹೋಯಿತು.

ನನ್ನ ಮನೆಯಲ್ಲಿ ಅವರು ತಮ್ಮ ಹಾಸಿಗೆಯ ಮೇಲೆ ಧ್ಯಾನಮಗ್ನರಾಗಿ ಕುಳಿತಿದ್ದುದನ್ನು ಅನೇಕ ಬಾರಿ ನೋಡಿದ್ದೇನೆ, ಗೃಹಕೃತ್ಯಗಳ ಸದ್ದು ಅವರ ಧ್ಯಾನಕ್ಕೆ ಸ್ವಲ್ಪವೂ ಅಡ್ಡಿಯಾಗುತ್ತಿರಲಿಲ್ಲ– ಅಷ್ಟು ಆಳವಾದ ಧ್ಯಾನದಲ್ಲಿ ಅವರು ಮುಳುಗಿರುತ್ತಿದ್ದರು. ಅನಂತರ ಕೊಠಡಿಯಿಂದ ಹೊರಬಂದಾಗ ನಮ್ಮ ಮನೆಯವರೇ ಎನ್ನುವಂತೆ ನಮ್ಮೊಡನೆ ನಗುನಗುತ್ತ ಹಾಸ್ಯಭರಿತವಾಗಿ ಮಾತನಾಡುತ್ತಿದ್ದರು. ಮಕ್ಕಳೊಡನೆ ವ್ಯವಹರಿಸುವಾಗ ಅವರು ಮಗುವಿನಂತೆಯೇ ಇರುತ್ತಿದ್ದರು. ಅವರು ನಮ್ಮೊಡನೆ ಇರುವಾಗ ಅವರ ಶ್ರೇಷ್ಠತೆಯನ್ನೇ ನಾವು ಮರೆತುಬಿಡುತ್ತಿದ್ದೆವು. ನಾವು ಅವರ ಸುತ್ತ ಕುಳಿತು ಅವರ ತಮ್ಮ ಬೃಹತ್ ಕಥಾಕೋಶದಿಂದ ಆರಿಸಿ ಹೇಳುವ ಹಾಸ್ಯಮಯ ಕಥೆಗಳನ್ನು ಕೇಳಿ ಆನಂದಿಸುತ್ತಿದ್ದೆವು. ಅವರ ಈ ಗುಣ ನನಗೆ ತುಂಬ ಮೆಚ್ಚಿಕೆಯಾಯಿತು, ಏಕೆಂದರೆ ವ್ಯಕ್ತಿಯು ಯಾವಾಗಲೂ ತನ್ನ ಶ್ರೇಷ್ಠತೆಯ ಅರಿವುಳ್ಳವನಾಗಿದ್ದರೆ ಜನರು ಗೌರವಮಿಶ್ರಿತ ಭಯದಿಂದ ಅವನಿಂದ ದೂರವಿರುತ್ತಾರೆ. ತಮ್ಮ ಉನ್ನತ ಸ್ಥಿತಿಯನ್ನು ಮರೆಯುವುದು ಮಾತ್ರವಲ್ಲದೆ, ಇತರರೂ ಆ ಕ್ಷಣದಲ್ಲಿ ಮರೆಯುವಂತೆ ಮಾಡುವ ಅಪೂರ್ವ ಸಾಮರ್ಥ್ಯ ಸ್ವಾಮಿ ರಂಗನಾಥಾನಂದರಿಗಿತ್ತು. ನಮ್ಮ ಮನೆಯಲ್ಲಿ ಯುವಕರು, ಹೆಚ್ಚಾಗಿ ವಿದ್ಯಾರ್ಥಿಗಳು, ಅವರ ಸುತ್ತ ನೆರೆಯುತ್ತಿದ್ದರು ಮತ್ತು ಎಲ್ಲ ಬಗೆಯ ಪ್ರಶ್ನೆಗಳನ್ನು– ಅವರ ವೈಯಕ್ತಿಕ ಜೀವನದ ಬಗ್ಗೆಯೂ – ಕೇಳುತ್ತಿದ್ದರು. ಆದರೆ ಸಂಜೆಯ ಕೊನೆಯ ಭಾಗದಲ್ಲಿ, ಅವರ ಉಪನ್ಯಾಸದ ನಂತರ, ಕೆಲವು ಗಂಭೀರ ವ್ಯಕ್ತಿಗಳು ಬಂದು ದಿವ್ಯತ್ರಯರ ಬಗ್ಗೆ, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಪ್ರಶ್ನೆ ಕೇಳುತ್ತಿದ್ದರು. ಆಗ ಅವರು ತಮ್ಮ ಉನ್ನತ ಸ್ಥಿತಿಯನ್ನು ಮೆರೆಯುತ್ತಿದ್ದರು. ಅವರು ಡ್ರಾಯಿಂಗ್ ರೂಮಿನಲ್ಲಿ ಅತ್ತಿಂದಿತ್ತ ಓಡಾಡುತ್ತ ಜನರು ಕೇಳುವ ವಿಭಿನ್ನ ಪ್ರಶ್ನೆಗಳಿಗೆ ನಿರರ್ಗಳವಾಗಿ ಉತ್ತರಿಸುತ್ತಿದ್ದರೆ,

ಸುತ್ತಲೂ ಸತ್ಯಾನ್ವೇಷಿಗಳು ಬೆರಗಾಗಿ ಕೇಳುತ್ತಿದ್ದರು – ಈ ದೃಶ್ಯ ಈಗಲೂ ನನ್ನ ಬಗೆಗಣ್ಣಿಗೆ ಹೊಳೆಯುತ್ತಿರುತ್ತದೆ. ಜನರು ಮಧ್ಯರಾತ್ರಿಯವರೆಗೂ, ಕೆಲವರು ಅನಂತರವೂ ಕುಳಿತಿರುತ್ತಿದ್ದರು. ಅವರು ತೆರಳುವುದಕ್ಕೆ ಮುಂಚೆ, ಆಗ ಜನವರಿಯ ಕೊರೆಯುವ ಚಳಿ ಇದ್ದುದರಿಂದ, ಸ್ವಾಮಿಗಳು ಅವರಿಗೆ ಬಿಸಿ ಕಾಫಿ ಕೊಡಲು ನನಗೆ ಹೇಳುತ್ತಿದ್ದರು.

ಅವರು ಭೇಟಿಯಿತ್ತಾಗಲೆಲ್ಲ ನಾವು ಅವರನ್ನು ಉಜ್ಜೈನ್, ಓಂಕಾರೇಶ್ವರ, ಸಾಂಚಿ ಮತ್ತು ಭೋಪಾಲ್‌ನ ಸುತ್ತಮುತ್ತಲಿನ ಪ್ರೇರಣೆಯ ಸ್ಥಳಗಳಿಗೆ ಕರೆದು ಕೊಂಡುಹೋಗುತ್ತಿದ್ದೆವು. ನಾವು ಆಹಾರವನ್ನು ಪ್ಯಾಕೆಟ್ಟಿನಲ್ಲಿ ತೆಗೆದುಕೊಂಡು ಹೋಗುತ್ತಿದ್ದೆವು. ಯಾವುದಾದರೂ ನೆರಳಿನ ಜಾಗದಲ್ಲಿ ಕುಳಿತು ಅದನ್ನು ಸೇವಿಸುತ್ತಿದ್ದೆವು. ಆಗ ಅವರಿಗೆ ಜೀರ್ಣಶಕ್ತಿ ಅಷ್ಟು ಸರಿಯಿಲ್ಲದಿದ್ದರೂ ಅವರು ಕಟ್ಟುನಿಟ್ಟಿನ ಪಥ್ಯವನ್ನೇನೂ ಅನುಸರಿಸುತ್ತಿರಲಿಲ್ಲ. ಆಹಾರದೊಡನೆ ಬೆರೆಸಲು ಒಂದು ಶೀಶೆ ಔಷಧಿಯನ್ನು ಯಾವಾಗಲೂ ತಮ್ಮೊಡನೆ ತೆಗೆದುಕೊಂಡು ಹೋಗುತ್ತಿದ್ದರು. ಅವರು ಮೊಸರೊಡೆಯನ್ನೂ ಸ್ವಲ್ಪ ಪ್ರಮಾಣದಲ್ಲಿ ಕಚೋರಿ (ಮಸಾಲೆ ಪೂರಿ)ಯನ್ನೂ ತುಂಬ ಇಷ್ಟಪಡುತ್ತಿದ್ದರು. ಇಂಥ ಪ್ರವಾಸದ ಸಮಯದಲ್ಲಿ ತುಂಬ ವಿನೋದವಿರುತ್ತಿತ್ತು. ಒಮ್ಮೆ ಅವರು ಒಂದು ಕಲ್ಲನ್ನು ಎಷ್ಟು ದೂರ ಎಸೆಯಬಲ್ಲೆ ಎಂದು ರಾಜೇಂದ್ರ ದ್ರಾವಿಡ್‌ನನ್ನು ಕೇಳಿದರು. ಸುಮಾರು ನೂರು ಗಜ ಎಂದು ರಾಜನ್ ಉತ್ತರಿಸಿದ. ಆಗ ಸ್ವಾಮೀಜಿಯವರು ಒಂದು ಕಲ್ಲನ್ನು ಕೈಯಲ್ಲಿ ತೆಗೆದುಕೊಂಡು ಜೋರಾಗಿ ಎಸೆದರು. ಅದು ತುಂಬ ವೇಗವಾಗಿ ಹಾರುತ್ತ ೫೦೦ ಗಜ ದೂರ ಹೋಗಿ ಬಿತ್ತು!

ಓಂಕಾರೇಶ್ವರದಲ್ಲಿ ನಮ್ಮನ್ನೆಲ್ಲ ರಕ್ಷಿಸಿದ ಒಂದು ಘಟನೆ ನೆನಪಿಗೆ ಬರುತ್ತದೆ. ದೇವಸ್ಥಾನದಲ್ಲಿ ದರ್ಶನ, ಪೂಜೆ ಎಲ್ಲ ಆದ ಮೇಲೆ ಸ್ವಾಮಿ ರಂಗನಾಥಾನಂದರು, ಸ್ವಾಮಿ ಆತ್ಮಾನಂದರು, ರಾಜನ್ ಮತ್ತು ನಾನು ದೋಣಿಯಲ್ಲಿ ನರ್ಮದಾ ನದಿಯನ್ನು ದಾಟುತ್ತಿದ್ದೆವು. ನಾವು ನದಿಯ ಮಧ್ಯಭಾಗಕ್ಕೆ ಬಂದಾಗ, ದೋಣಿ ನಡೆಸುವವನು, ಅಲ್ಲಿ ನೀರಿನ ಆಳ ೪೦೦ ಅಡಿಗಳಿಗಿಂತಲೂ ಅಧಿಕ ಮತ್ತು ಅದೇ ಪವಿತ್ರ ನದಿಯ ಅತ್ಯಂತ ಆಳ ಭಾಗ ಎಂದು ತಿಳಿಸಿದನು. ನಾವೆಲ್ಲರೂ ಕೆಳಗೆ ನೋಡಿದೆವು. ಅನಂತರ ಮೇಲೆ ತಲೆ ಎತ್ತಿದಾಗ ಸ್ವಾಮಿ ರಂಗನಾಥಾನಂದರು ಕಾಣಿಸುತ್ತಲೇ ಇಲ್ಲ! ನಮಗೆಲ್ಲ ದಿಗಿಲಾಯಿತು! ನಾವೆಲ್ಲ ಆತಂಕದಿಂದ ಸುತ್ತಲೂ ನೋಡುತ್ತಿರುವಾಗ ಸ್ವಲ್ಪ ದೂರದಲ್ಲಿ ಅವರ ತಲೆ ಮೇಲೆ ಕಾಣಿಸಿಕೊಂಡಿತು. ಸಂತೋಷದಿಂದ ನಮ್ಮ ಕಡೆ ಕೈಯಾಡಿಸುತ್ತಿದ್ದರು. ನಮಗೆಲ್ಲ ಏನಾಗಿಬಿಡುತ್ತದೋ ಎಂದು ಭಯ. ಆದರೆ ಕೆಲವೇ ನಿಮಿಷಗಳಲ್ಲಿ ಅವರು ಈಜಿಕೊಂಡು ಬಂದು ದೋಣಿಯನ್ನು ಹತ್ತಿದರು. ಅವರು ನುರಿತ ಈಜುಗಾರರು. ನದೀ ತೀರದ ಹಳ್ಳಿಯಲ್ಲಿ ಹುಟ್ಟಿದುದರಿಂದ ಪ್ರತಿ ನಿತ್ಯ ನದಿಯಲ್ಲಿ ಈಜಿ ಅಭ್ಯಾಸವಿತ್ತು. ಅವರು ಬ್ರಹ್ಮಚಾರಿಗಳಾಗಿರುವಾಗಲೂ ಬೇಲೂರು ಮಠದ ಸಮೀಪದ ಗಂಗಾನದಿಯಲ್ಲಿ ಈಜುತ್ತಿದ್ದರು.

ಇನ್ನೊಂದು ಘಟನೆ ನನ್ನ ಮನಸ್ಸಿಗೆ ಬರುತ್ತಿದೆ. ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದಾದ ಮಹಾಕಾಲೇಶ್ವರನ ದರ್ಶನಕ್ಕಾಗಿ ನಾವು ಉಜ್ಜೈನಿಗೆ ಹೋಗುತ್ತಿದ್ದಾಗ ಇದು ಸಂಭವಿಸಿತು. ದರ್ಶನವಾದ ನಂತರ ನಗರದ ಹೊರವಲಯದಲ್ಲಿರುವ ಕಾಲಿಯದಹ[೧] ಎಂಬ ಸ್ಥಳಕ್ಕೆ ಹೋಗಿದ್ದೆವು. ಅಲ್ಲಿ ಮಧ್ಯಾಹ್ನದ ಊಟಕ್ಕಾಗಿ ಒಂದು ಸ್ಥಳವನ್ನು ಅರಸುತ್ತಿದ್ದೆವು. ಒಂದು ದೊಡ್ಡ ಕಲ್ಲಿನ ಚಪ್ಪಡಿ ಕಾಣಿಸಿತು. ಅದು ಹೆಚ್ಚುಕಡಿಮೆ ಗುಂಡುಮೇಜಿನಂತೆಯೇ ಇತ್ತು. ಆದರೆ ಅದನ್ನು ತಲುಪುವ ಮಾರ್ಗ, ವಿಶೇಷವಾಗಿ ನನಗೆ, ಅಪಾಯಕಾರಿಯಾಗಿತ್ತು. ಒಂದು ಕಿರಿದಾದ ಸಂಕವನ್ನು ದಾಟಿ ಅಲ್ಲಿಗೆ ಹೋಗಬೇಕಾಗಿತ್ತು. ಕೆಳಗಡೆ ಆಳ ಪ್ರಪಾತವಿತ್ತು. ಸ್ವಾಮೀಜಿಯವರು

೧. 'ಕಾಲಿಂದಿಯ ಮಡುವು' ಎಂದು ಅರ್ಥ. ಶ್ರೀಕೃಷ್ಣನ ಬಾಲಲೀಲೆಗಳಲ್ಲಿ ಒಂದಕ್ಕೆ ಸಂಬಂಧಿಸಿದ್ದೆಂದು ಹೇಳಲಾದ ಜಾಗ. –ಕನ್ನಡ ಆವೃತ್ತಿಯ ಸಂಪಾದಕರ ಟಿಪ್ಪಣಿ.

ಮತ್ತು ರಾಜನ್ ಸುಲಭವಾಗಿ ದಾಟಿ ಕಲ್ಲು ಚಪ್ಪಡಿ ತಲುಪಿದರು. ನಾನು ಮಾತ್ರ ಭಯದಿಂದ ಹಾಗೆಯೇ ನಿಂತುಕೊಂಡಿದ್ದೆ. ಪ್ರಪಾತವನ್ನು ನೋಡಿ ಹಿಂಜರಿಯತೊಡಗಿದೆ. ಸ್ವಾಮೀಜಿಯವರು ಹಿಂತಿರುಗಿ ಬಂದು ನನ್ನ ಕೈಯನ್ನು ಭದ್ರವಾಗಿ ಹಿಡಿದು ಕರೆದುಕೊಂಡುಹೋದರು. ಕಣ್ಣನ್ನು ಅರ್ಧ ಮುಚ್ಚಿಕೊಂಡು ತಮ್ಮ ಪಾದವನ್ನೇ ನೋಡುತ್ತಿರಬೇಕೆಂದು ತಿಳಿಸಿದರು. ಅವರು ಹೇಳಿದಂತೆಯೇ ಮಾಡಿದೆ. ಸುರಕ್ಷಿತವಾಗಿ ಸಂಕವನ್ನು ದಾಟಿ ಸಂತೋಷದಿಂದ ಆಹಾರವನ್ನು ಸೇವಿಸಿ ಹಿಂದಿರುಗಿದೆವು.

ಅವರು ನನ್ನ ತಲೆಯ ಮೇಲೆ ಕೈಯಿರಿಸಿದಾಗಲೆಲ್ಲ ನನ್ನಲ್ಲಿ ಒಂದು ರೀತಿಯ ಭಾವೋತ್ಕರ್ಷ ಉಂಟಾಗುತ್ತಿತ್ತು, ನನ್ನ ಅಂತರಂಗ ಶಾಂತಿಯಿಂದ ತುಂಬುತ್ತಿತ್ತು, ಪ್ರಾಪಂಚಿಕ ಭಾರಗಳೆಲ್ಲ ಕಳೆದು ಎಲ್ಲ ಹಗುರವಾದಂತೆ ಅನಿಸುತ್ತಿತ್ತು. ಆಗ ಪರಮಾನಂದ ನನ್ನನ್ನು ಆವರಿಸುವಂತಿತ್ತು.

ನಾನು ರಂಗನಾಥಾನಂದರಿಂದ ಮಂತ್ರದೀಕ್ಷೆಯನ್ನು ಸ್ವೀಕರಿಸಿದವಳಲ್ಲ. ನನ್ನ ಗುರು ಸ್ವಾಮಿ ಯತೀಶ್ವರಾನಂದರು. ಇಲ್ಲಿ ಒಂದೆರಡು ವೈಯಕ್ತಿಕ ಘಟನೆಗಳನ್ನು ಪ್ರಸ್ತಾಪಿಸುತ್ತೇನೆ. ಕೆಲವು ಸ್ಥೂಲ ವಿಷಯಗಳ ಹೊರತಾಗಿ, ಹೆಚ್ಚಿನ ವಿವರಣೆಯನ್ನು ನೀಡುವುದಿಲ್ಲ. ನಾನು ಕನಸಿನಲ್ಲಿ ಮೂರು ಬಾರಿ ನನ್ನ ಪೂಜ್ಯ ಗುರುದೇವರನ್ನು ಕಂಡಿದ್ದೆನು. ಒಮ್ಮೆಯಂತೂ ಅತ್ಯಂತ ಸ್ಪಷ್ಟವಾಗಿ, ಅತ್ಯಂತ ಸತ್ಯವಾಗಿ ಅವರು ಕಾಣಿಸಿಕೊಂಡಿದ್ದರು. ಇದು ನನ್ನ ಇಡೀ ವ್ಯಕ್ತಿತ್ವವನ್ನು ಬದಲಾಯಿಸಿತು ಮತ್ತು ಈಗಲೂ ನನ್ನೊಂದಿಗಿದೆ. ನನ್ನ ಅತ್ಯಂತ ನಿಕಟ ಮತ್ತು ಪ್ರೀತಿಯ ಸಂನ್ಯಾಸಿಗಳ ಹೊರತಾಗಿ ಬೇರೆ ಯಾರಿಗೂ ಈ ಕನಸಿನ ವಿಷಯ ತಿಳಿಸಿರಲಿಲ್ಲ. ಹೈದರಾಬಾದಿನಲ್ಲಿರುವಾಗ ಬೆಳಿಗ್ಗೆ ೯ ಗಂಟೆಗೆ ಸರಿಯಾಗಿ ಬಾಗಿಲು ತಟ್ಟಲು ರಂಗನಾಥಾನಂದರು ನನಗೆ ಹೇಳಿದ್ದರು, ಮತ್ತು ತಾವು ಬೇರೆ ಕೆಲಸದಲ್ಲಿ ವ್ಯಸ್ತರಾಗಿರದಿದ್ದರೆ, ನನ್ನನ್ನು ಒಳಗೆ ಕರೆಯುವುದಾಗಿಯೂ ತಿಳಿಸಿದ್ದರು. ನಾನು ಒಳಗೆ ಹೋದ ಕೂಡಲೇ ಅವರು ಯಾವಾಗಲೂ ಹೇಳುತ್ತಿದ್ದರು, “ರತ್ನ, ಈಗ ತುಂಬ ಕೆಲಸವಿದೆ, ಕೇವಲ ೧೦ ನಿಮಿಷ ಮಾತ್ರ ನೀನು ಇರಬಹುದು” ಎಂದು. “ಆಗಲಿ ಮಹಾರಾಜ್, ನಾನು ಒಂಬತ್ತೇ ನಿಮಿಷದಲ್ಲಿ ಇಲ್ಲಿಂದ ಹೊರಡುತ್ತೇನೆ” ಎನ್ನುತ್ತಿದ್ದೆ. ಅನಂತರ ನಾನು ಕುಳಿತುಕೊಳ್ಳುತ್ತಿದ್ದೆ. ಈಗ ನಮ್ಮ ಮಾತು ಪ್ರಾರಂಭವಾಗುತ್ತಿತ್ತು. ಸಮಯ ಓಡುತ್ತಿತ್ತು. ಸ್ವಲ್ಪ ಹೊತ್ತಿನ ನಂತರ ಅವರು ಗಡಿಯಾರವನ್ನು ತೋರಿಸಿ ೩೫ ನಿಮಿಷವಾಯಿತೆಂದು ಸೂಚಿಸಿ, ಮತ್ತೆ ಆರತಿಗೆ ಮುಂಚೆ ಬರಬೇಕೆಂದು ತಿಳಿಸುತ್ತಿದ್ದರು. ಪ್ರತಿದಿನವೂ ಹೀಗೆಯೇ ನಡೆಯುತ್ತಿತ್ತು. ಇಂತಹ ಒಂದು ಸಂದರ್ಭದಲ್ಲಿ ನಾನು ಗುರುದೇವರಿಗೆ ಸಂಬಂಧಿಸಿದ ನನಗಾದ ಕನಸಿನ ಬಗ್ಗೆ ಅವರಿಗೆ ತಿಳಿಸಿದೆ. ಅವರು ಹಾಸಿಗೆಯ ಮೇಲೆ ಮಲಗಿದ್ದರು. ನಾನು ಕುರ್ಚಿಯ ಮೇಲೆ ಕುಳಿತಿದ್ದೆ. ಕಣ್ಣುಮುಚ್ಚಿಕೊಂಡು ನಾನು ಹೇಳಿದುದನ್ನು ಕೇಳಿದರು. ಕೆಲವು ತಿಂಗಳ ಹಿಂದಿನವರೆಗೂ ನನಗೆ ಒಂದಾದ ಮೇಲೊಂದರಂತೆ ಇಂತಹ ಕನಸುಗಳಾದವು. ಆದರೆ ನನಗೀಗ ಅವರು ಕಾಣಿಸಿಕೊಳ್ಳುತ್ತಲೇ ಇಲ್ಲ; ಅವರು ನನ್ನನ್ನು ಕೈಬಿಟ್ಟಿರುವರೇ– ಎಂದು ಚಿಂತಾಕ್ರಾಂತ ಧ್ವನಿಯಲ್ಲಿ ನಾನು ಕೇಳಿದೆ.

ಸ್ವಾಮೀಜಿಯವರು ನೀಡಿದ ಉತ್ತರ ನನ್ನ ಎಲ್ಲ ಚಿಂತೆ–ಶೋಕಗಳನ್ನು ಹೋಗಲಾಡಿಸಿದವು, ನನ್ನ ಹೃದಯ ತಿಳಿಯಾಯಿತು. ಅವರು ಹೇಳಿದರು: “ರತ್ನ, ನಿನಗೆ ಬೇಕಾಗಿರುವುದನ್ನೆಲ್ಲ ಅವರು ನೀಡಿರುವರು. ನಿನ್ನ ಜೀವನದ ಅತಿ ದೊಡ್ಡ ಭಯವಾದ ಸಾವಿನ ಭಯದಿಂದ ನಿನ್ನನ್ನು ಅವರು ಮುಕ್ತಗೊಳಿಸಿರುವರು. ಈಗ ಇಂದೋರ್ ಆಶ್ರಮಕ್ಕಾಗಿ ಕೆಲಸಮಾಡುವ ಪವಿತ್ರ, ಉದಾತ್ತ ಹೊಣೆಯನ್ನು ನಿನಗೆ ವಹಿಸಿರುವರು. ಅಧ್ಯಾತ್ಮಪಥದಲ್ಲಿ ಮುಂದುವರಿಯಲು ಮಾರ್ಗದರ್ಶಕ ಸಲಹೆಗಳನ್ನು ನೀಡಿರುವರು. ನೀನು ಅವರು ಹೇಳಿದಂತೆ ಮಾಡು. ಈಗ ಅವರು ತಮ್ಮ ಬೇರೆ ಶಿಷ್ಯರನ್ನು ನೋಡಿಕೊಳ್ಳುತ್ತಿರುವರು. ಆದರೆ ನಿನ್ನೊಂದಿಗೆ ಈಗಲೂ ಇರುವರು.” ಈ ಮಾತುಗಳು ನನ್ನ ದುಗುಡಗೊಂಡ ಮನಸ್ಸಿನ ಮೇಲೆ ಅತ್ಯಾಶ್ಚರ್ಯಕರ ಪರಿಣಾಮವನ್ನು ಉಂಟುಮಾಡಿದವು.

ಇನ್ನೊಂದು ಸಂದರ್ಭದಲ್ಲಿ ತಾವು ಮುಕ್ತಿಯನ್ನು ಬಯಸುವುದಿಲ್ಲವೆಂದು ಅವರು ನನಗೆ ಹೇಳಿದರು. ವಿವೇಕಾನಂದರ ಸಂದೇಶವನ್ನು ಎಲ್ಲೆಡೆ ಹರಡಲು ಅವರು ಮತ್ತೆ ಮತ್ತೆ ಬರುತ್ತಾರಂತೆ. ಅವರು ವಿವೇಕಾನಂದರಿಂದ ತುಂಬಿಹೋಗಿದ್ದರು. ಒಮ್ಮೆ ಇಂದೋರ್ ವಿಶ್ವವಿದ್ಯಾನಿಲಯದಲ್ಲಿ ಅವರ ಉಪನ್ಯಾಸವನ್ನು ಏರ್ಪಡಿಸಿದ್ದೆವು. ಅಲ್ಲಿ ಉಪನ್ಯಾಸಕರು, ಪ್ರಾಧ್ಯಾಪಕರು ಮತ್ತು ಹಿರಿಯ ವಿದ್ಯಾರ್ಥಿಗಳೆಲ್ಲರೂ ಅವರ ಉಪನ್ಯಾಸವನ್ನು ಕೇಳಿದರು. ಕಾರ್ಯಕ್ರಮದ ನಂತರ, ಅಮೆರಿಕ ಮತ್ತು ಭಾರತದ ಉತ್ಕೃಷ್ಟರನ್ನು ವಿವೇಕಾನಂದರು ಗೆದ್ದರು ಎಂದು ನಾವು ಕೇಳಿದ್ದೆವು. ಆದರೆ, ಇಲ್ಲಿ ಇನ್ನೊಬ್ಬರು ವಿವೇಕಾನಂದರು ಇರುವರು ಎಂದು ಅವರೆಲ್ಲರೂ ತಮ್ಮ ಮೆಚ್ಚಿಕೆಯನ್ನು ವ್ಯಕ್ತಪಡಿಸಿದರು. ಸ್ವಾಮಿ ರಂಗನಾಥಾನಂದರು ವಿವೇಕಾನಂದರಂತೆಯೇ ಶ್ರೋತೃಗಳನ್ನು ಮಂತ್ರಮುಗ್ಧರನ್ನಾಗಿಸುತ್ತಿದ್ದರು. ಇನ್ನೊಂದು ಸಂದರ್ಭದಲ್ಲಿ 'ಉಪನಿಷತ್ತಿನ ಸಂದೇಶ'ದ ಮೇಲೆ ಅವರ ಶಕ್ತಿಪೂರ್ಣವೂ ಪ್ರಚೋದಕವೂ ಆದ ವಾಗ್ಝರಿಯನ್ನು ಕೇಳಿ ಶೋತೃಗಳು ಮೌನವಾಗಿ ಹೊರಗೆಹೋಗುತ್ತಿದ್ದರು. ಸ್ವಲ್ಪ ಶಬ್ದದಿಂದಲೂ ಆ ಆಧ್ಯಾತ್ಮಿಕ ತಡೆಯನ್ನುಂಟುಮಾಡಲು ಯಾರಿಗೂ ಇಷ್ಟವಿರಲಿಲ್ಲ. ಸಭಾಂಗಣದ ವಾತಾವರಣ ದೇವಾಲಯದಂತೆ ಪವಿತ್ರವಾಗಿರುತ್ತಿತ್ತು.

ಸ್ವಾಮೀಜಿಯವರ ವ್ಯಕ್ತಿತ್ವದ ಒಂದು ವಿಶಿಷ್ಟ ಲಕ್ಷಣವೆಂದರೆ, ಅವರು ತಮ್ಮ ವಿವಿಧ ಮಹತ್ಸಾಧನೆಗಳ ಅರಿವೇ ಇಲ್ಲದಂತಿದ್ದರು. ಕೆಲವೊಮ್ಮೆ ಉಪನ್ಯಾಸ ಮುಗಿಸಿ ಹೊರಗೆ ಬಂದಾಗ 'ಉಪನ್ಯಾಸವನ್ನು ಕೇಳಿದೆಯಾ?' ಎಂದು ನನ್ನನ್ನು ವಿಚಾರಿಸುತ್ತಿದ್ದರು. ತಮ್ಮ ಉಪನ್ಯಾಸದ ಬಗ್ಗೆ ನನ್ನ ಅಭಿಪ್ರಾಯವನ್ನು ಕೇಳುವ ಪರಿ ಅದು. ನಾನು ಸರಿಯಾದ ಉತ್ತರ ಕೊಡುತ್ತಿದ್ದೆ. ಆದರೆ, ಆ ಪ್ರಶ್ನೆ ನನ್ನನ್ನು ಆಶ್ಚರ್ಯಗೊಳಿಸುತ್ತಿತ್ತು. ಸ್ವಾಮಿ ರಂಗನಾಥಾನಂದರಂಥ ಶ್ರೇಷ್ಠ ವ್ಯಕ್ತಿ, ತಮ್ಮ ಉಪನ್ಯಾಸದ ಬಗ್ಗೆ ನನ್ನನ್ನು ಕೇಳುವುದೇ! ಒಮ್ಮೆ ಅವರ ಶಿಷ್ಯೆಯಾದ ನನ್ನ ಸಹೋದರಿಯು, ಅವರು ಈ ರೀತಿ ಕೇಳಿದ ಸಂದರ್ಭದಲ್ಲಿ, ನಮ್ಮೊಂದಿಗಿದ್ದಳು. ಅವಳಿಗೆ ಅತ್ಯಾಶ್ಚರ್ಯ! ಅವರು ಅಷ್ಟು ಸರಳರೂ, ನಮ್ರರೂ ಆಗಿದ್ದರು. ಇದೊಂದು ನನ್ನ ಕಣ್ಣು ತೆರೆಯಿಸಿದ ದೊಡ್ಡ ಪಾಠ. ಇದು ನನ್ನ ಅಹಂಕಾರವನ್ನು ಹೋಗಲಾಡಿಸಲು ಸಹಾಯಮಾಡಿತು.

ಈ ಸಂದರ್ಭದಲ್ಲಿ ಒಂದು ವಿಷಯವನ್ನು ಪ್ರಸ್ತಾಪಿಸಲು ಬಯಸುತ್ತೇನೆ. ಯಾರನ್ನೂ ಅವರು ನಿಂದಿಸಿದುದನ್ನು ನಾನು ಕೇಳಿಲ್ಲ. ಯಾರ ಬಗ್ಗೆಯೂ ಕೆಟ್ಟ ಮಾತನ್ನು ಆಡಿದ್ದಾಗಲೀ, ತಮ್ಮ ಸೇವಕರ ಮೇಲೆಯೂ ಕೋಪಿಸಿಕೊಂಡಿದ್ದಾಗಲೀ ನಾನು ಕಾಣಲಿಲ್ಲ. ಅವರ ಬಾಯಿಂದ ಒಂದೇ ಒಂದು ಕಟುನುಡಿ ಹೊರಬೀಳಲಿಲ್ಲ. ಅವರು ಕಾಮಕ್ರೋಧಗಳಿಂದ ಸಂಪೂರ್ಣ ಮುಕ್ತರಾಗಿದ್ದರು. ಅವರ ತುಂಬ ಇದ್ದುದು ಮಾಧುರ್ಯ, ಆನಂದ ಮತ್ತು ಪ್ರೀತಿಗಳೇ. ಕೋಪಗೊಳ್ಳುವುದು ಎಷ್ಟು ಕೆಟ್ಟದ್ದು ಮತ್ತು ಅನುಪಯುಕ್ತ ಎಂಬುದನ್ನು ನಾನು ಅವರಿಂದ ಕಲಿತೆ.

ನನ್ನ ಜೀವನಕ್ಕೆ ಸಂಬಂಧಿಸಿದ ಒಂದು ಪ್ರಮುಖ ಘಟನೆಯನ್ನು ಇಲ್ಲಿ ನಾನು ಹೇಳಲು ಬಯಸುತ್ತೇನೆ. ೧೯೬೦ರ ದಶಕದ ಪೂರ್ವಭಾಗದಲ್ಲಿ ಡೆಲ್ಲಿಯಲ್ಲಿದ್ದ ನನ್ನ ತಾಯಿಯು ಬಿದ್ದು ಮೊಳಕಾಲು ಮುರಿದುಕೊಂಡಿದ್ದಳು, ಮತ್ತು ಕೋಮಾ ಸ್ಥಿತಿಯಲ್ಲಿದ್ದಳು. ನಾನು ಆಕೆಯೊಡನೆ ಒಂದು ತಿಂಗಳು ಇದ್ದೆ. ಅವಳು ಶ್ರೀರಾಮಚಂದ್ರನ ಭಕ್ತಳು. ಆದ್ದರಿಂದ ಪ್ರತಿದಿನ ನಾನು ಅವಳ ಹಾಸಿಗೆಯ ಪಕ್ಕದಲ್ಲಿ ಕುಳಿತು ಒಂದು ಗಂಟೆ ತುಲಸೀದಾಸರ 'ರಾಮಚರಿತಮಾನಸ'ವನ್ನು ಓದಿಹೇಳುತ್ತಿದ್ದೆ. ಆದರೆ ಇದರಿಂದ ಅವಳಿಗೆ ಏನಾದರೂ ಪ್ರಯೋಜನವಾಗುತ್ತಿದೆಯೇ, ಅವಳು ನಾನು ಓದುತ್ತಿರುವುದನ್ನು ಕೇಳುತ್ತಿರುವಳೇ ಎಂಬ ಸಂಶಯ ನನ್ನ ಮನಸ್ಸಿನಲ್ಲಿತ್ತು. ಆ ಸಂದರ್ಭದಲ್ಲಿ ಸ್ವಾಮಿ ರಂಗನಾಥಾನಂದರು ಡೆಲ್ಲಿಯಲ್ಲಿದ್ದರು. ನಾನು ಅವರೆಡೆಗೆ ಹೋಗಿ ನನ್ನ ತಾಯಿಯ ಪರಿಸ್ಥಿತಿಯ ಬಗ್ಗೆ ಅವರಿಗೆ ತಿಳಿಸಿದೆ. ಅವಳ ಸಂತ ಸ್ವಭಾವ, ಇಡೀ ಕುಟುಂಬಕ್ಕೆ ಅವಳು ಸಲ್ಲಿಸಿದ ಅಪಾರ, ನಿಃಸ್ವಾರ್ಥ ಸೇವೆ ಮತ್ತು ತನ್ನ ಇಷ್ಟದೇವತೆ ಹಾಗೂ ಗುರುವಿನ ಮೇಲೆ ಇರುವ ಆಳಭಕ್ತಿ – ಇವುಗಳ ಬಗ್ಗೆಯೂ ಅವರಿಗೆ

ತಿಳಿಸಿದೆ. ಅವಳ ಹಾಸಿಗೆಯ ಪಕ್ಕದಲ್ಲಿ ನಾನು ಮಾಡುತ್ತಿದ್ದ 'ರಾಮಾಯಣ' ಪಾರಾಯಣದ ಬಗ್ಗೆಯೂ ಅವರಿಗೆ ತಿಳಿಸಿ, ತಾಯಿಗೆ ಪ್ರಜ್ಞೆ ಇಲ್ಲದಿರುವುದರಿಂದ ಈ ಪಾರಾಯಣದಿಂದ ಅವಳಿಗೆ ಏನಾದರೂ ಪ್ರಯೋಜನ ವಾಗುವುದೇ, ಇಲ್ಲವೇ ಇದು ವ್ಯರ್ಥಶ್ರಮವೇ ಎಂದು ವಿಚಾರಿಸಿದೆ. ಅವರು ನನಗಾಗಿ ಉತ್ತರವನ್ನು ನೀಡಿದ್ದರೂ ಅದು ಜೀವನದಲ್ಲಿ ಇಂತಹ ಸನ್ನಿವೇಶವನ್ನು ಎದುರಿಸುತ್ತಿರುವ ಎಲ್ಲರಿಗೂ ಅನ್ವಯಿಸುತ್ತದೆ. ಅವರು ಹೇಳಿದರು: "ರತ್ನ, ನಿನ್ನ ತಾಯಿಯಂತಹ ಜೀವನ ನಡೆಸಿದವರು ಹೊರಗಿನಿಂದ ಪ್ರಜ್ಞೆ ಇಲ್ಲದಿರುವಂತೆ ಕಂಡರೂ ಒಳಗಡೆ ಪ್ರಜ್ಞಾಪೂರ್ಣರಾಗಿರುತ್ತಾರೆ ಮತ್ತು ತಮಗಾಗಿ ಮಾಡಿದ ಎಲ್ಲದರ ಅರಿವೂ ಅವರಿಗಿರುತ್ತದೆ. ಆದ್ದರಿಂದ ನೀನು ಏನನ್ನು ಮಾಡುತ್ತಿರುವೆಯೋ ಅದನ್ನು ಮುಂದುವರಿಸು. ಒಂದು ವೇಳೆ ನೀನು ಮಾಡುತ್ತಿರುವ ಪಾರಾಯಣದ ಅರಿವು ಅವರಿಗೆ ಇಲ್ಲದಿದ್ದರೂ ಪಾರಾಯಣಕ್ರಿಯೆ ವಾತಾವರಣವನ್ನು ಶುದ್ಧಗೊಳಿಸುತ್ತದೆ, ದಿವ್ಯವಾಗಿಸುತ್ತದೆ. ಇನ್ನೇನೂ ಆಗದಿದ್ದರೂ ನೀನು ತಾಯಿಗಾಗಿ ಮಾಡುತ್ತಿರುವ ಈ ಉತ್ತಮ ಸೇವೆಯಿಂದ ನಿನಗಂತೂ ತುಂಬ ಒಳ್ಳೆಯದಾಗುತ್ತದೆ." ಹೀಗೆ ನನ್ನ ಎಲ್ಲ ಗೊಂದಲಗಳೂ ನಿವಾರಣೆಯಾದವು.

ಅವರ ಸಂಪರ್ಕದಿಂದ ನಾನು ಕಲಿತ ಪಾಠಗಳು: ಇತರರ ವಿಷಯದಲ್ಲಿ ತಾಳ್ಮೆಯಿಂದಿರಬೇಕು; ಜೀವನದ ಒಳ್ಳೆಯ ಅಂಶದ ಕಡೆ ಗಮನವಿರಿಸಬೇಕು; ನಮಗಿರುವ ಸೌಭಾಗ್ಯಗಳನ್ನು ಎಣಿಸಬೇಕು ಮತ್ತು ನನಗೆ ನ್ಯಾಯವಾಗಿ ಸಲ್ಲಬೇಕಾದುದು ನನ್ನಲ್ಲಿಲ್ಲದಿರುವ ಬಗ್ಗೆ ಚಿಂತಿಸದಿರುವುದು. ನಮ್ಮ ಎಲ್ಲ ಆರ್ಥಿಕ ಆಸ್ತಿಯನ್ನು ಕಳೆದುಕೊಳ್ಳುವ ಸಮಯ ನನ್ನ ಪಾಲಿಗೆ ಬಂದೊದಗಿತು. ಇಷ್ಟೇ ಅಲ್ಲದೆ ನನ್ನ ಮಾವನವರು ಆಸ್ತಿಯನ್ನು ಪಾಲುಮಾಡಿಕೊಡುವಾಗ ನನ್ನ ಗಂಡನಿಗೆ ಅನ್ಯಾಯವಾಗಿ ಅತ್ಯಲ್ಪ ಭಾಗವನ್ನು ನೀಡಿದರು. ದುಗುಡದ ಮನಸ್ಸ್ಥಿತಿಯಲ್ಲಿ ನಾನು ಹೈದರಾಬಾದಿಗೆ ಹೋಗಿ ಇಡೀ ಕಥೆಯನ್ನು ಸ್ವಾಮೀಜಿಯವರಿಗೆ ಹೇಳಿದೆ. ನಮಗೆ ತುಂಬ ಅನ್ಯಾಯವಾಗಿರುವ ವಿಷಯವನ್ನು ಅವರು ಒಪ್ಪಿಕೊಂಡರು, ಆದರೆ ಇದರಿಂದ ಮುಂದೆ ಒಳ್ಳೆಯದೇ ಆಗುವುದರಿಂದ ಚಿಂತಿಸಬಾರದೆಂದು ಸಮಾಧಾನ ಹೇಳಿದರು: "ಶ್ರೀರಾಮಕೃಷ್ಣರು ತಮ್ಮ ಮಕ್ಕಳನ್ನು ನೋಡಿಕೊಳ್ಳುತ್ತಾರೆ. ಇದು ಅವರ ಲೀಲೆ. ಇದರಲ್ಲಿ ಏನೋ ಒಂದು ಗೂಢ ಅರ್ಥವಿದೆ. ಆದ್ದರಿಂದ ಇದನ್ನೆಲ್ಲ ಮರೆತು ನಿಶ್ಚಿಂತೆಯಿಂದಿರು." ಅನಂತರ ಅವರು ನನ್ನ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದರು. ತತ್‌ಕ್ಷಣ ನೋವು ದುಃಖ ಎಲ್ಲ ಮಾಯವಾದವು. ನಾನು ನಿಶ್ಚಿಂತಳಾದೆ, ಮೊದಲಿನಂತಾದೆ! ಅನಂತರ ಅತ್ಯಾಶ್ಚರ್ಯವೆಂದರೆ, ನನಗೆ ಪ್ರೀತಿ ಬೇಕು– ೨೦೦೦೦, ೩೦೦೦೦, ೫೦೦೦೦– ಎಷ್ಟು ಹಣ ಬೇಕು ಎಂದು ಕೇಳಿದರು. ನಾನು ಅವರು ಪಾದಪದ್ಮಗಳಿಗೆರಗಿ, ಅವರ ಪ್ರೀತಿ ಮತ್ತು ಆಶೀರ್ವಾದಗಳನ್ನಲ್ಲದೆ ಮತ್ತೇನನ್ನೂ ಅಪೇಕ್ಷಿಸುವುದಿಲ್ಲ ಎಂದು ಹೇಳಿದೆ. ಆಗಿನ ನನ್ನ ಪರಿಸ್ಥಿತಿಯಿಂದಾಗಿ ಮೊದಲಿನಂತೆ ಆಗಾಗ ಹೈದರಾಬಾದಿಗೆ ಬರಲಾಗದೇ ಇರಬಹುದು – ಮುಖ್ಯವಾಗಿ ಅತಿಥಿಗೃಹದ ಅಷ್ಟೊಂದು ಬಾಡಿಗೆಯನ್ನು ನನಗೆ ಕೊಡಲಾಗದೆ ಇರುವುದರಿಂದ – ಎಂಬುದೇ ನನ್ನ ಮುಖ್ಯ ಚಿಂತೆಯಾಗಿತ್ತು. ಇನ್ನು ಮುಂದೆ ನಾನು ಏನೂ ಕೊಡಬೇಕಾಗಿಲ್ಲ ಎಂದು ಅವರು ತಿಳಿಸಿದರು. ನಾನು ಅವರ ಅತಿಥಿಯಾಗಿರುತ್ತೇನೆ. ಅವರು ಕೂಡಲೇ ಇದಕ್ಕೆ ಸಂಬಂಧಪಟ್ಟಂತೆ ಲಿಖಿತ ಆದೇಶವನ್ನು ಕಾರ್ಯಾಲಯಕ್ಕೆ ಕಳಿಸಿದರು. ಈಗಲೂ ಅವರ ಆದೇಶವನ್ನು ಪಾಲಿಸಲಾಗುತ್ತಿದೆ. ಎಂಥ ಹೃದಯ ಅವರದು! ಅದು ಪ್ರೀತಿ, ಅನುಕಂಪಗಳಿಂದ ತುಂಬಿಹೋಗಿತ್ತು. ಅದು ಆಕಾಶದಷ್ಟು ವಿಶಾಲ, ಸಾಗರದಷ್ಟು ಆಳ!

ಉಡುಪಿನ ವಿಷಯದಲ್ಲಿ ಅವರ ಸರಳತೆ ತುಂಬ ವಿಶೇಷವಾದುದು. ತಾವು ಧರಿಸುವ ಹತ್ತಿಬಟ್ಟೆಗೆ ಇಸ್ತ್ರಿಯಾಗಿರಬೇಕೆಂದೇನೂ ಇರಲಿಲ್ಲ. ಅದು ಸುಕ್ಕಾಗಿದ್ದರೂ ಅದರ ಕಡೆ ಗಮನ ಕೊಡದೆ ಸುಮ್ಮನೆ ಧರಿಸಿಕೊಂಡು ಹೋಗಿಬಿಡುತ್ತಿದ್ದರು. ಅವರು ನಮ್ಮೊಡನೆ ಇರುವಾಗ ನಾನು ಅವರ ಬಟ್ಟೆಯನ್ನು ಶುಚಿಗೊಳಿಸಿ ಇಸ್ತ್ರಿ ಹಾಕುತ್ತಿದ್ದೆ. ಆದರೆ ಅವರ ಉತ್ತರೀಯ ಹಾಗೆಯೇ ಉಳಿಯುತ್ತಿತ್ತು. ಉಪನ್ಯಾಸಕ್ಕೆ ಹೋಗುವಾಗ ಅದನ್ನು

ಹಾಗೆಯೇ ಹೊದ್ದುಕೊಂಡು ಹೋಗುತ್ತಿದ್ದರು. ತಾವು ಹೇಗೆ ಕಾಣಿಸುತ್ತೇವೆಂಬುದರ ಬಗ್ಗೆ ಅವರಿಗೆ ಸ್ವಲ್ಪವೂ ಗಮನವಿರಲಿಲ್ಲ. ಒಮ್ಮೆ ಅವರು ಹೈದರಾಬಾದ್ ಮಠದ ಅಧ್ಯಕ್ಷರಾಗಿರುವಾಗ ಬೇಗಬೇಗನೆ ಅಂಗಿಯ ಗುಂಡಿ ಹಾಕಿಕೊಳ್ಳುತ್ತ ರೂಮಿನಿಂದ ಹೊರಬಂದು ಸಭಾಂಗಣದ ಕಡೆಗೆ ಹೋಗುತ್ತಿದ್ದರು. ನಾನು ಅವರ ಪಕ್ಕದಲ್ಲೇ ಹೋಗುತ್ತಿದ್ದೆ. ಅಂಗಿಯ ಗುಂಡಿಯನ್ನು ಸರಿಯಾಗಿ ಹಾಕಿಕೊಂಡಿರದಿದ್ದುದು ನನ್ನ ಗಮನಕ್ಕೆ ಬಂತು. ಸರಿಯಾಗಿ ಹಾಕಿಕೊಳ್ಳುವಂತೆ ನಾನು ಕೇಳಿಕೊಂಡೆ. ಅವರು ಕೊಟ್ಟ ಉತ್ತರ ವೇಷಭೂಷಣಗಳ ಕಡೆ ಅವರಿಗಿದ್ದ ಉದಾಸೀನತೆಗೆ ಒಂದು ಅಪೂರ್ವ ನಿದರ್ಶನವಾಗಿತ್ತು: "ರತ್ನ, ಅದರಿಂದೇನಂತೆ? ಜನರು ಬರುವುದು ನನ್ನ ಮಾತನ್ನು ಕೇಳುವುದಕ್ಕೆ, ನನ್ನನ್ನು ನೋಡುವುದಕ್ಕಲ್ಲ."

ಪತಿಯೇ ದೇವರು, ಅವನನ್ನು ಆ ದೃಷ್ಟಿಯಿಂದಲೇ ಪ್ರೀತಿಸಬೇಕು ಮತ್ತು ಅವನ ಸೇವೆ ಮಾಡಬೇಕು ಎಂಬ ಭಾವನೆಯನ್ನು ಚಿಕ್ಕಂದಿನಿಂದಲೇ ನಮ್ಮಂತಹ ಹೆಣ್ಣುಮಕ್ಕಳ ತಲೆಗೆ ತುಂಬಿಸಲಾಗಿರುತ್ತದೆ. ಮಹಿಳೆ ತನ್ನ ಉದ್ಧಾರಕ್ಕೆ ಇನ್ನೇನೂ ಮಾಡಬೇಕಾಗಿಲ್ಲ, ಪತಿಯೇ ಆಕೆಯ ಧರ್ಮ. ನಮ್ಮ ತಾಯಿಗೆ ನನ್ನ ತಂದೆಯ ಮೇಲಿದ್ದ ಅಪಾರ ಭಕ್ತಿಯನ್ನೂ, ಅವರು ಅತ್ಯಂತ ನಿಷ್ಠೆಯಿಂದ ಮಾಡುತ್ತಿದ್ದ ಪತಿಸೇವೆಯನ್ನೂ ನಾನು ಚಿಕ್ಕಂದಿನಿಂದಲೂ ನೋಡಿದ್ದೇನೆ. ನನಗೆ ನನ್ನ ಪತಿಯ ಮೇಲೆ ಅಷ್ಟೊಂದು ಭಕ್ತಿ ಇರಲಿಲ್ಲ, ಆದರೂ ಅವರ ವಿಷಯದಲ್ಲಿ ತುಂಬ ಪ್ರೀತಿ, ಗೌರವ ಇತ್ತು, ಮತ್ತು ಅವರಿಗೆ ಒಳ್ಳೆಯ ಪತ್ನಿಯಾಗಿದ್ದೆ. ಅವರಿಗೂ ನನ್ನ ಬಗ್ಗೆ ಯಾವ ಅಸಮಾಧಾನವೂ ಇರಲಿಲ್ಲ. ಆದರೂ ನನ್ನಲ್ಲಿ ಒಂದು ರೀತಿಯ ಅಸಂತುಷ್ಟ ಭಾವನೆ ಇತ್ತು. ಸ್ವಾಮಿ ರಂಗನಾಥಾನಂದರು ಉಪನ್ಯಾಸ ಕಾರ್ಯಕ್ರಮಕ್ಕಾಗಿ ಇಂದೋರಿಗೆ ಬಂದಿದ್ದಾಗ ನಾನು ನನ್ನ ಭಾವನೆಯನ್ನು ಅವರ ಮುಂದೆ ಹೇಳಿಕೊಂಡೆ. ನಾನು ನನ್ನ ತಾಯಿಯಂತೆ ನನ್ನ ಗಂಡನನ್ನು ದೇವರೆಂದು ಪರಿಗಣಿಸುವುದಿಲ್ಲ ಮತ್ತು ನನ್ನ ಎಲ್ಲ ಧರ್ಮವೂ ಅವರಾಗಿಲ್ಲ ಎಂದು ನಾನು ಸ್ವಾಮೀಜಿಯರಿಗೆ ಹೇಳಿದೆ. ನಾನು ನನ್ನ ಪತಿಗೆ ಸಂಬಂಧಿಸಿದ ಕರ್ತವ್ಯಗಳನ್ನೇನೂ ಕಡೆಗಣಿಸುತ್ತಿಲ್ಲ ಎಂಬುದನ್ನೂ ಅವರಿಗೆ ತಿಳಿಸಿದೆ. ನನಗೆ ನನ್ನದೇ ಇಷ್ಟದೇವತೆ ಇದೆ, ನನ್ನ ಗುರು ಇದ್ದಾರೆ, ನನಗೆ ರಾಮಕೃಷ್ಣ ಮಹಾಸಂಘ ಮತ್ತು ಅಲ್ಲಿಯ ಸಂನ್ಯಾಸಿಗಳು ಇದ್ದಾರೆ. ಇವೆಲ್ಲ ಸೇರಿ ನನ್ನ ಪಾಲಿನ ಧರ್ಮವಾಗಿದೆ. ನಮ್ಮ ತಾಯಂದಿರು ಮತ್ತು ಅಜ್ಜಿಯರು ಇವರಲ್ಲಿ ಕಂಡುಬರುವ ಒಳ್ಳೆಯತನ ಮತ್ತು ಶ್ರೇಷ್ಠತೆಯನ್ನು ಇಂದಿನ ಮಹಿಳೆಯರಲ್ಲಿ ಕಾಣಬಹುದೇ ಎಂದು ಅನಂತರ ಅವರನ್ನು ಕೇಳಿದೆ. ಅವರು ನಾನು ಹೇಳಿದುದನ್ನೆಲ್ಲ ತಾಳ್ಮೆಯಿಂದ ಕೇಳಿದರು. ಅನಂತರ ಆ ಮಹಿಳೆಯರು ತಮ್ಮ ಕೌಟುಂಬಿಕ ಕರ್ತವ್ಯಗಳನ್ನಲ್ಲದೆ ಬೇರೆ ಇನ್ನೇನಾದರೂ ಮಾಡಿದರೇ ಎಂದು ಮೆತ್ತಗೆ ಅವರು ಹೇಳಿದರು. "ನಿಮ್ಮಂತೆ ಅವರು ಶಿಕ್ಷಿತರಾಗಿದ್ದರೇ? ಕುಟುಂಬವನ್ನಾಗಲೀ, ಅತಿಥಿಗಳನ್ನಾಗಲೀ ಕಡೆಗಣಿಸದೆ ನಿಮ್ಮಂತೆ ಮನೆಯ ಹೊರಗೆ ಕೆಲಸ ಮಾಡುತ್ತಿದ್ದರೆ? ಜೀವನದ ಬಗ್ಗೆ ವಿಶಾಲ ದೃಷ್ಟಿಯುಳ್ಳವರಾಗಿ ದಿನನಿತ್ಯದ ಆಧ್ಯಾತ್ಮಿಕ ಸಾಧನೆಯನ್ನು ಮಾಡುತ್ತಿದ್ದರೆ? ಇಲ್ಲ! ನಮ್ಮ ಮಹಿಳೆಯರ ಬಗ್ಗೆ, ಇದನ್ನೆಲ್ಲ ಮಾಡುತ್ತಿರುವ ನಿನ್ನಂತಹ ಮಹಿಳೆಯರ ಬಗ್ಗೆ ನನಗೆ ತುಂಬ ಹೆಮ್ಮೆ" ಎಂದರು. ನನ್ನ ಅಂತರಂಗವನ್ನು ಚುಚ್ಚುತ್ತಿದ್ದ ಒಂದು ಚಿಂತೆ ದೂರವಾಯಿತು ಮತ್ತು ಅವರ ಮಾತು ನನ್ನ ಹೃದಯವನ್ನು ತಾಕಿತು. ಭಾರತೀಯ ಮಹಿಳೆಯರ ಬಗ್ಗೆ ಅವರಿಗಿದ್ದ ಗೌರವವನ್ನು ಕಂಡು ನಾನು ಹಿರಿಹಿರಿ ಹಿಗ್ಗಿದೆ; ಎಲ್ಲ ಹಗುರವಾದಂತೆನಿಸಿತು.

ಅವರ ಅದ್ಭುತ ನಮ್ರತೆಯನ್ನು ಪ್ರತಿಬಿಂಬಿಸುವ ಒಂದು ಘಟನೆ ಹೇಳುತ್ತೇನೆ. ಅವರು ಹೈದರಾಬಾದ್ ಮಠದ ಅಧ್ಯಕ್ಷರಾಗಿದ್ದಾಗ ಈ ಘಟನೆ ಸಂಭವಿಸಿತು. ಅದು ನನ್ನ ಭೇಟಿಯ ಕೊನೆಯ ದಿನ. ನಾನು ಅವರ ಕೊಠಡಿಯೊಳಗೆ ಅವರೊಡನೆ ಅರ್ಧ ಗಂಟೆ ಇದ್ದೆ. ನಾನು ಹೊರಗೆ ಬರುವಾಗ, ಮತ್ತೆ ನಾನು ಅವರನ್ನು ನೋಡಲಾಗದೆ ಇರುವುದರಿಂದ ಈಗಲೇ ತಮ್ಮಿಂದ ಬೀಳ್ಕೊಳ್ಳುವುದಾಗಿ ಹೇಳಿದೆ. ಸಂಜೆ ಆರತಿಗೆ ಮುಂಚೆ ನಾನು ನಿನ್ನನ್ನು ನೋಡುತ್ತೇನೆ ಎಂದು ಅವರು ಹೇಳಿದರು. ಆ ಸಮಯಕ್ಕೆ ನಾನು ಅವರ ನಿವಾಸಕ್ಕೆ ಮತ್ತೆ

ಹೋಗಬೇಕೆಂದು ನಾನು ತಿಳಿದುಕೊಂಡೆ. ಆದ್ದರಿಂದ ಆರತಿಗೆ ಸ್ವಲ್ಪ ಮುಂಚೆ ಅಲ್ಲಿಗೆ ಹೋದೆ. ಅವರು ಎಲ್ಲಿಗೋ ಹೊರಡುವುದಕ್ಕೆ ಚಪ್ಪಲಿ ಹಾಕಿಕೊಳ್ಳುತ್ತಿದ್ದರು. ನಾನು ಬೇಗನೆ ಅವರ ಬಳಿಗೆ ಹೋಗಿ, ನನ್ನನ್ನು ಬರಲು ಹೇಳಿ ತಾವೇ ಎಲ್ಲಿಗೋ ಹೊರಟಿರುವಿರಿ ಎಂದು ದೂರುವ ಧ್ವನಿಯಲ್ಲಿ ನಾನು ಹೇಳಿದೆ. ಅವರು ನೀಡಿದ ಉತ್ತರ, ನಾವು ಇತರರು ಹೇಳಿದುದನ್ನು ಎಷ್ಟು ಎಚ್ಚರಿಕೆಯಿಂದ ಕೇಳಬೇಕು ಮತ್ತು ಅದರಂತೆ ನಡೆದುಕೊಳ್ಳಬೇಕು ಎಂಬುದಕ್ಕೆ ನಮಗೆಲ್ಲ ಒಂದು ಪಾಠದಂತೆ ಇತ್ತು. ಅವರು ಹೇಳಿದರು: "ಇಲ್ಲ, ನೀನು ಇಲ್ಲಿಗೆ ಬರಬೇಕೆಂದು ನಾನು ಹೇಳಲಿಲ್ಲ. ನಾನು ನಿನ್ನನ್ನು ನೋಡುತ್ತೇನೆ ಎಂದು ಹೇಳಿದೆ. ಆದ್ದರಿಂದ ನಿನ್ನನ್ನು ನೋಡಲು ಅತಿಥಿಗೃಹಕ್ಕೆ ನಾನು ಬರುತ್ತಿದ್ದೆ." "ಮಹಾರಾಜ್, ನೀವು ತುಂಬ ದಯಾಳು" ಎಂದು ನಾನು ಹೇಳಿದೆ. "ಇಲ್ಲ, ನಾನು ದಯಾಳು ಅಲ್ಲ. ನಿನಗೆ ಶ್ರೀರಾಮಕೃಷ್ಣರು ಹೇಳಿದುದು ನೆನಪಿದೆಯೇ? 'ನನ್ನ ಭಕ್ತರ ಹೃದಯವೇ ನನ್ನ ಬೈಠಕ್ ಖಾನೆ. ಅಲ್ಲಿ ನಾನು ನೆಲೆಸಿರುತ್ತೇನೆ' ಎಂದಿದ್ದಾರೆ ಅವರು. ನೀನು ಶ್ರೀರಾಮಕೃಷ್ಣರ ಮತ್ತು ಅವರ ಸಂಘದ ಭಕ್ತಳಾಗಿ ೫೦ ವರ್ಷ ಸೇವೆ ಸಲ್ಲಿಸಿರುವೆ. ನಾನು ನನ್ನ ಗೌರವ ಸಲ್ಲಿಸಲು ನಿನ್ನೆಡೆಗೆ ಬರುತ್ತಿದ್ದೆ." ಇದು ರಂಗನಾಥಾನಂದರ ವ್ಯಕ್ತಿತ್ವ! ಇದು ಎಷ್ಟು ಅರ್ಥಪೂರ್ಣವಾಗಿದೆ ಮತ್ತು ನನ್ನ ಮೇಲೆ ಎಂಥ ಪರಿಣಾಮವನ್ನು ಉಂಟುಮಾಡಿದೆ ಎಂಬುದರ ಕಲ್ಪನೆ ನಿಮ್ಮ ಪಾಲಿನದು.

ಒಮ್ಮೆ ಸ್ವಾಮಿ ರಂಗನಾಥಾನಂದರು ನನಗೆ ಒಂದು ವಿಷಯವನ್ನು ಹೇಳಿದರು. ಅದು ಎಷ್ಟು ದಾರುಣವಾಗಿತ್ತೆಂದರೆ ಅದನ್ನು ಈಗ ಬರೆಯುವಾಗಲೂ ನನಗೆ ಭಾವ ಉಕ್ಕಿ ಬರುತ್ತದೆ. ಅವರು ಆಗ ಯೌವನದ ಹೊಸ್ತಿನಲ್ಲಿದ್ದರು, ರಾಮಕೃಷ್ಣ ಮಹಾಸಂಘವನ್ನು ಸೇರುವ ನಿರ್ಧಾರವನ್ನು ತೆಗೆದುಕೊಂಡಿದ್ದರು. ಪ್ರಾಪಂಚಿಕ ಬಂಧನಗಳನ್ನೆಲ್ಲ ಕತ್ತರಿಸಿ ಮನೆಬಿಟ್ಟು ಹೋಗುವುದಕ್ಕೆ ಒಂದು ನಿರ್ದಿಷ್ಟ ದಿನವನ್ನೂ ಗೊತ್ತು ಮಾಡಿಕೊಂಡಿದ್ದರು. ಅದರ ಹಿಂದಿನ ರಾತ್ರಿ ಊಟದ ಸಮಯದಲ್ಲಿ ಸ್ವಲ್ಪ ತುಪ್ಪ ಹಾಕಬೇಕೆಂದು ತಮ್ಮ ಅಕ್ಕನನ್ನು ಕೇಳಿದರು. ಆಕೆ ಅವರಿಗೆ ತಾಯಿಯಂತಿದ್ದರು. ಅವರದು ಕೆಳಮಧ್ಯಮವರ್ಗದ ಕುಟುಂಬ. ತುಪ್ಪ ಅಪರೂಪದ ವಸ್ತು, ಉತ್ಸವ ಮುಂತಾದ ತುಂಬ ವಿಶೇಷ ಸಂದರ್ಭಗಳಲ್ಲಿ ಮಾತ್ರ ಬಳಸಲಾಗುತ್ತಿತ್ತು. ಅಂದು ಯಾವುದೇ ವಿಶೇಷ ದಿನ ಅಲ್ಲದೇ ಇದ್ದುದರಿಂದ ಅವರ ಅಕ್ಕ ತುಪ್ಪ ಬಡಿಸಲು ನಿರಾಕರಿಸಿದರು. ಸ್ವಾಮೀಜಿಯವರು ಏನೂ ಹೇಳದೆ ಊಟ ಮುಗಿಸಿದರು. ಪಾಪ ಆಕೆಗೆ ಗೊತ್ತಿರಲಿಲ್ಲ, ಅದೊಂದು ವಿಶೇಷ ರಾತ್ರಿ, ಬೇರೆಲ್ಲ ಉತ್ಸವಗಳಿಗಿಂತಲೂ ವಿಶೇಷವಾದುದು, ತಮ್ಮ ಪ್ರೀತಿಯ ಸಹೋದರನ ಯಾವುದೇ ಆಸೆಯನ್ನು ಪೂರ್ತಿಗೊಳಿಸುವ ಕೊನೆಯ ಅವಕಾಶ ಎಂಬುದು. ಆ ಮುಹೂರ್ತ ಕಳೆದು ಹೋಯಿತು. ಬಾಲಕನು ಮರುದಿನ ಬೆಳಗ್ಗೆ ಹೊತ್ತಿಗೆ ಮುಂಚೆಯೇ, ಅಕ್ಕನು ಏಳುವುದಕ್ಕೆ ಮುಂಚೆಯೇ ಮನೆಯಿಂದ ಹೊರಟು ಬ್ರಹ್ಮಚಾರಿಯಾಗಿ ಆಶ್ರಮ ಸೇರಲು ಮೈಸೂರಿಗೆ ಹೊರಟ. ಆಕೆಯ ಜೀವನಪರ್ಯಂತ, ಈ ಘಟನೆಯ ಸ್ಮೃತಿ ಆಕೆಯನ್ನು ಕಾಡುತ್ತಿತ್ತೆಂದು ಅವರು ನನಗೆ ಹೇಳಿದರು.

ಈ ಬರೆಹವನ್ನು ಮುಗಿಸುವ ಮುನ್ನ ಇನ್ನೊಂದು ಘಟನೆಯನ್ನು ವಿವರಿಸದಿರಲು ಸಾಧ್ಯವೇ ಇಲ್ಲ, ಇದು ಸ್ವಾಮಿ ವಿವೇಕಾನಂದರು ವಿಶ್ವಧರ್ಮ ಸಮ್ಮೇಳನದಲ್ಲಿ ನೀಡಿದ ಪ್ರಸಿದ್ಧ ಉಪನ್ಯಾಸದ ನಂತರದ ದೃಶ್ಯಕ್ಕೆ ಸ್ವಲ್ಪಮಟ್ಟಿಗೆ ಸರಿಸಮನಾಗಿದೆ ಎಂದು ಹೇಳಬಹುದು. ಲಾಸ್ ಏಂಜಲೀಸ್ ರಾಮಕೃಷ್ಣ ಕೇಂದ್ರದವರು ಸ್ವಾಮಿ ರಂಗನಾಥಾನಂದರನ್ನು ಅಲ್ಲಿ ಉಪನ್ಯಾಸ ನೀಡಲು ಆಹ್ವಾನಿಸಿದ್ದರು. ಆ ಸಮಯದಲ್ಲಿ ನನ್ನ ಭಾವಮೈದುನನು ಇಲ್ಲಿನಾಯ್ ವಿಶ್ವವಿದ್ಯಾನಿಲಯದಲ್ಲಿ ಕಂಪ್ಯೂಟರ್ ವಿಜ್ಞಾನದ ಡಾಕ್ಟರೇಟ್ ಪದವಿಗಾಗಿ ಅಧ್ಯಯನ ನಡೆಸುತ್ತಿದ್ದನು. ಸ್ವಾಮೀಜಿಯವರ ಉಪನ್ಯಾಸವನ್ನು ಹೋಗಿ ಕೇಳಬೇಕೆಂದು ನಾನು ಅವನಿಗೆ ಬರೆದಿದ್ದೆ. ಅವನಿಗೆ ಅಷ್ಟೇನೂ ಇಷ್ಟವಿರಲಿಲ್ಲ. ಆದರೂ ನನ್ನ ಮೇಲಿನ ಗೌರವದಿಂದಾಗಿ, ನನ್ನ ಮಾತಿಗೆ ಒಪ್ಪಿ ಉಪನ್ಯಾಸ ಕೇಳಲು ಹೋಗಿದ್ದನು. ಸಭಾಂಗಣವು ಸಭಿಕರಿಂದ ಕಿಕ್ಕಿರಿದಿತ್ತು. ವೇದಿಕೆಯ ಮೇಲೆ ಆಹ್ವಾನಿತ ಗಣ್ಯ ವ್ಯಕ್ತಿಗಳು ಮತ್ತು ಇಬ್ಬರು

ಮೂವರು ಅಮೆರಿಕದ ಸಂನ್ಯಾಸಿಗಳು ಕುಳಿತಿದ್ದರು. ಅಮೇರಿಕನ್ನರ ಭಾಷಣ ಒಂದಾದ ಮೇಲೆ ಒಂದು ನಡೆಯಿತು. ಸ್ವಾಮೀಜಿಯವರ ಭಾಷಣ ಕೊನೆಯಲ್ಲಿತ್ತು. ಒಳ್ಳೆಯ ಉಡುಪನ್ನು ಧರಿಸಿದ್ದ ಎತ್ತರದ ಅಮೆರಿಕನ್ನರ ನಡುವೆ ಇಸ್ತ್ರಿಯಿಲ್ಲದ ಬಟ್ಟೆಯನ್ನು ಧರಿಸಿದ್ದ ಸ್ವಾಮೀಜಿಯವರು ಎದ್ದು ಕಾಣುತ್ತಿರಲಿಲ್ಲ. ಅವರು ಮಾತನಾಡುವ ಸರದಿ ಬಂದಾಗ ಸಭಿಕರಲ್ಲಿ ಅನೇಕರು ಎದ್ದುಹೊರಟುಹೋದರು. ನನ್ನ ಭಾವಮೈದುನನೂ (ಶರದ್ ಸೇಠ್) ಅವರಲ್ಲಿ ಒಬ್ಬನಾಗಿದ್ದ. ಇಂಗ್ಲಿಷ್ ಮಾತೃಭಾಷೆಯಾಗಿರುವವರು ಆಗಲೇ ಮಾತು ಮುಗಿಸಿರುವರು, ಭಾರತೀಯ ನೊಬ್ಬನು ಕೇಳಲು ಯೋಗ್ಯವಾದ ಇನ್ನೇನನ್ನು ಹೇಳಬಲ್ಲ ಎಂದು ನಾನು ಭಾವಿಸಿದೆ ಎಂಬುದಾಗಿ ಅವನು ನನಗೆ ಮುಂದೆ ಪತ್ರ ಬರೆದನು. ಅವರೆಲ್ಲರೂ ಸಭಾಂಗಣದಿಂದ ಹೊರಗೆ ಬಂದಮೇಲೆ ಧ್ವನಿವರ್ಧಕದ ಮೂಲಕ ಒಳಗಿನಿಂದ ಧ್ವನಿ ಕೇಳಿಸಿತು. ಅದು ಸ್ವಾಮೀಜಿಯವರ ಭಾಷಣದ ಧ್ವನಿ. ಆ ಧ್ವನಿಯಲ್ಲಿ ಸಂಗೀತದ ಛಾಯೆಯಿತ್ತು, ಶಕ್ತಿಶಾಲಿಯಾಗಿತ್ತು, ಘಂಟಾನಾದದಂತೆ ಅಲೆಅಲೆಯಾಗಿ ಹರಿದುಬರುತ್ತಿತ್ತು. ಅವರ ಇಂಗ್ಲಿಷ್ ತನ್ನದೇ ಆದ ಸೊಬಗಿನಿಂದ ಕೂಡಿತ್ತು. ಆಲಿಸುತ್ತಿದ್ದಂತೆ ಎಲ್ಲರೂ ಹಾಗೆಯೇ ನಿಂತುಬಿಟ್ಟರು. ಮತ್ತೆ ಎಲ್ಲರೂ ಸಭೆಯ ಒಳಗೆ ನುಗ್ಗತೊಡಗಿದರು. ಅವರಿಗೆ ಇಂಗ್ಲಿಷ್ ಭಾಷೆಯ ಮೇಲಿದ್ದ ಪ್ರಭುತ್ವವನ್ನೂ ವೇದಾಂತದಂತಹ ಗಹನವಾದ ವಿಷಯವನ್ನು ಅವರು ವಿವರಿಸುತ್ತಿದ್ದ ರೀತಿಯನ್ನೂ ಕಂಡು ಎಲ್ಲರೂ ಬೆರಗಾದರು. ರಸ್ತೆಯಲ್ಲಿ ಹೋಗುತ್ತಿದ್ದವರೂ ಒಳಗೆ ಪ್ರವೇಶಿಸಿದರು. ಎಲ್ಲರಿಗೂ ಕುಳಿತುಕೊಳ್ಳುವುದಕ್ಕೆ ಕುರ್ಚಿಗಳು ಇರಲಿಲ್ಲ. ಜನರು ಸಿಕ್ಕಿದ ಜಾಗದಲ್ಲೆಲ್ಲ ನಿಂತು, ಸ್ವಾಮೀಜಿಯವರ ಮಾತನ್ನು ಕೇಳಿದರು. ಶರದ್ ಕೂಡ ಹಿಂಭಾಗದಲ್ಲಿ ನಿಂತುಕೊಂಡಿದ್ದನು. ಅತ್ಯಾಸಕ್ತಿಯಿಂದ ಮಂತ್ರಮುಗ್ಧರಾಗಿ ಎಲ್ಲರೂ ಅವರ ಉಪನ್ಯಾಸವನ್ನು ಕೇಳಿದರು. ಕೊನೆಯಲ್ಲಿ ಎಲ್ಲರೂ ವೇದಿಕೆಯ ಕಡೆ ನುಗ್ಗಿದರು– ಸ್ವಾಮಿಗಳನ್ನು ಸ್ಪರ್ಶಿಸುವುದಕ್ಕೆ. ಅವರ ಕೈಕುಲುಕುವುದಕ್ಕೆ. ಶರದ್ ಎಷ್ಟೇ ಪ್ರಯತ್ನಿಸಿದರೂ ಆ ಜನಜಂಗುಳಿಯ ಮಧ್ಯೆ ತೂರಿಕೊಂಡು ಮುಂದೆ ಹೋಗಲಾಗಲಿಲ್ಲ. ಹತಾಶನಾಗಿ, ಕೊನೆಯ ಪ್ರಯತ್ನವಾಗಿ ನನ್ನ ಹೆಸರನ್ನು ಬಳಸುವುದೆಂದು ನಿರ್ಧರಿಸಿದ. ಅದನ್ನು ಒಂದು ಚೀಟಿಯಲ್ಲಿ ಬರೆದು ಅದನ್ನು ಮುಂದಿನವರಿಗೆ ಕೊಟ್ಟು ಹಾಗೆಯೇ ಮುಂದಕ್ಕೆ ಕಳಿಸಬೇಕೆಂದು ಕೇಳಿಕೊಂಡನು. ಅದು ಒಬ್ಬರ ಕೈಯಿಂದ ಮತ್ತೊಬ್ಬರಿಗೆ ಮುಂದುವರಿದು ಕೊನೆಗೆ ಸ್ವಾಮೀಜಿಯವರನ್ನು ತಲುಪಿತು. ಈ ಸಂದರ್ಭದಲ್ಲಿ ರತ್ನ ಇಲ್ಲಿಗೆ ಬರಲು ಹೇಗೆ ಸಾಧ್ಯ ಎಂದು ಅತ್ಯಾಶ್ಚರ್ಯವಾಯಿತು ಎಂದು ಅವರು ನನಗೆ ಮುಂದೆ ಹೇಳಿದರು. ಆ ಚೀಟಿಯನ್ನು ಎತ್ತಿ ಹಿಡಿದು ಈ ಚೀಟಿಯನ್ನು ಕಳಿಸಿದವರು ವೇದಿಕೆಯ ಮೇಲೆ ಬರಬೇಕೆಂದು ಮೈಕಿನ ಮೂಲಕ ಕರೆಕೊಟ್ಟರು. ಶರದ್ ಕೂಡಲೇ ಅಲ್ಲಿಗೆ ಹೋದನು. ನನ್ನ ಬದಲು ಒಬ್ಬ ಯುವಕನು ತಮ್ಮ ಮುಂದೆ ನಿಂತಿರುವುದನ್ನು ಕಂಡು ಅವರು ದಿಗ್ಭ್ರಾಂತರಾದರು. ಅವರ ಬಳಿ ಬರಲು ಬೇರೆ ಯಾವ ಉಪಾಯ ಕಾಣದೆ ನನ್ನ ಹೆಸರನ್ನು ಬಳಸಿದುದಕ್ಕಾಗಿ ಶರದ್ ಅವರ ಕ್ಷಮೆಯಾಚಿಸಿದನು. ಸ್ವಾಮೀಜಿಯವರು ಮನತುಂಬ ನಕ್ಕು ತಮ್ಮೊಡನೆ ಕಾಫಿ ಸ್ವೀಕರಿಸಬೇಕೆಂದು ಅವನಿಗೆ ಹೇಳಿದರು. ಮುಂದೆ ಅವರು ಅನೇಕ ಬಾರಿ ಸಂಧಿಸಿದರು. ಶರದ್ ತನ್ನ ವಿಶ್ವವಿದ್ಯಾನಿಲಯದಲ್ಲಿ ಅನೇಕ ಉಪನ್ಯಾಸಗಳನ್ನೂ ಏರ್ಪಡಿಸಿದನು. ಇವತ್ತಿಗೂ ಅವನಿಗೆ ಅವರ ಮೇಲೆ ಅಪಾರ ಗೌರವವಿದೆ. ಸುಶಿಕ್ಷಿತ ಪ್ರತಿಷ್ಠಿತ ಯುವಕರ ಮೇಲೆ ಅವರು ಬೀರಿದ ಪ್ರಭಾವ ಅಷ್ಟು ಆಳವಾದುದು.

ಮೇಲಿನ ಘಟನೆಯೊಂದಿಗೆ ಇದನ್ನು ಮುಗಿಸಬೇಕೆಂದಿದ್ದೆ. ಆದರೆ, ಇನ್ನೊಂದು ಘಟನೆಯನ್ನು ಹೇಳಲೇಬೇಕೆನಿಸುತ್ತದೆ. ಒಮ್ಮೆ ಅವರು ನಮ್ಮ ಮನೆಗೆ ಬಂದಿದ್ದಾಗ, ರುಚಿರುಚಿಯಾದ ಪದಾರ್ಥಗಳನ್ನು ತಯಾರಿಸಬೇಕೆಂದು ನಾನು ಇಷ್ಟಪಟ್ಟರೂ ಅವರಿಗಾಗಿ ಸಪ್ಪೆ ಆಹಾರವನ್ನು ತಯಾರಿಸಬೇಕಾಗಿದೆ ಎಂದು ನನ್ನ ದುಃಖವನ್ನು ವ್ಯಕ್ತಪಡಿಸಿದೆ. ಅವರು ಹೇಳಿದರು: "ರತ್ನ, ವ್ಯಥೆಪಡಬೇಡ, ನಾನು ಮುಂದಿನ ಜನ್ಮದಲ್ಲಿ ನಿನ್ನ ಮನೆಗೆ ಬಂದು ನೀನು ತಯಾರಿಸುವುದನ್ನೆಲ್ಲ ತಿನ್ನುತ್ತೇನೆ." "ಮಹಾರಾಜ್, ನನಗೆ ಹೇಗೆ ಅದು ಗೊತ್ತಾಗುವುದು?"

ಎಂದು ನಾನು ಕೇಳಿದೆ. ಅವರು ಹೇಳಿದರು: “ನಾನು ಯಾರೆಂದು ನಿನಗೆ ಗೊತ್ತಾಗದೇ ಇರಬಹುದು. ಆದರೆ ನಾನು ನಿನ್ನನ್ನು ಗುರುತಿಸುತ್ತೇನೆ. ನೀನು ರತ್ನ, ನಾನು ರಂಗನಾಥಾನಂದ; ನನ್ನ ಹಿಂದಿನ ಜನ್ಮದಲ್ಲಿ ನನಗೆ ಉಣಿಸಬೇಕೆಂದು ಆಸೆ ನಿನಗಿತ್ತು, ನೀನು ತಯಾರಿಸುದುದನ್ನು ಉಣ್ಣಲು ಈಗ ಬಂದಿದ್ದೇನೆ ಎಂದು ನಾನು ನಿನಗೆ ಹೇಳುತ್ತೇನೆ.” ಅವರು ಹೇಳಿದಂತೆಯೇ ಆಗುವುದೆಂಬುದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ. ಅವರು ಸತ್ಯನಿಷ್ಠರು, ಅವರು ಆಡಿದ ಮಾತು ಸತ್ಯವಾಗಲೇಬೇಕು. ಸಮಯ ಕೂಡಿಬಂದಾಗ ಆ ದಿನ ಬಂದೇ ತೀರುವುದೆಂಬ ಭರವಸೆಯಿಂದ ಕಾಯುತ್ತೇನೆ. ಕಾಯುವುದಕ್ಕೆ ಎಂಥ ಅದ್ಭುತ ವಿಷಯವಿದು!

ಶ್ರೇಷ್ಠ ಸ್ವಾಮಿಗಳ ಬಗ್ಗೆ ನನ್ನ ಕೆಲವು ನೆನಪುಗಳಿವು. ಇಂದು ಹಿಂತಿರುಗಿ ನೋಡುತ್ತ ನಾನು ಎಂಥ ಭಾಗ್ಯವಂತಳು ಎಂದು ಆಶ್ಚರ್ಯಪಡುತ್ತೇನೆ. ಅಂಥ ಮಹಿಮಾನ್ವಿತ ವ್ಯಕ್ತಿಯ ಪರಿಚಯವನ್ನು ಹೊಂದುವ ಅಪೂರ್ವ ಸುಯೋಗ ನನ್ನದಾಗಿತ್ತು. ಇದು ಒಂದು ಸಣ್ಣ ಗುಡ್ಡ ಗೌರಿಶಂಕರ ಪರ್ವತದ ಸಂಪರ್ಕವನ್ನು ಪಡೆಯುವಂತೆ. ಇಂಥ ಜೀವಿಗಳು ಪ್ರತಿದಿನ ಹುಟ್ಟುವುದಿಲ್ಲ. ಶತಮಾನದಲ್ಲಿ ಒಮ್ಮೊಮ್ಮೆ ಇಂಥ ಮಹಾತ್ಮರು ಹುಟ್ಟಿರಬಹುದು. ಈ ಶತಮಾನ ನಿಸ್ಸಂದೇಹವಾಗಿ ಸ್ವಾಮಿ ರಂಗನಾಥಾನಂದರಿಗೆ ಸೇರಿದುದು.

* * * *

# ೬೫. ಮಹಾಪುರುಷರೊಬ್ಬರ ನಿತ್ಯನೂತನ ಸ್ಮೃತಿ

–ಪಿ. ಪರಮೇಶ್ವರನ್*

ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿಯವರ ನೆನಪುಗಳನ್ನು ಬರೆಯುವುದೆಂದರೆ ಹಿಮಗಿರಿಯ ತೀರ್ಥಸ್ಥಳಗಳಿಗೆ ಯಾತ್ರೆ ಕೈಗೊಂಡಂತೆ. ಇಂಥ ಯಾತ್ರೆಯ ಅವಕಾಶ ಸಿಕ್ಕಿರುವುದು ನನ್ನ ಭಾಗ್ಯ.

ಸ್ವಾಮೀಜಿಯವರ ಬಗ್ಗೆ ಆಲೋಚಿಸುತ್ತಿರುವಾಗ ಯಾತ್ರೆ ಎಂಬ ಪದ ನನ್ನ ಮನಸ್ಸಿಗೆ ಹೊಳೆದುದಕ್ಕೆ ಒಂದು ವಿಶೇಷ ಕಾರಣವಿದೆ. ತಮ್ಮ ಪ್ರಪಂಚ ಪರಿಭ್ರಮಣದ ಸ್ಮೃತಿಗಳನ್ನು ಒಳಗೊಂಡಿರುವ ಎರಡು ಸಂಪುಟಗಳ ತಮ್ಮ ಗ್ರಂಥಕ್ಕೆ ಅವರು ಇಟ್ಟ ಹೆಸರು *A Pilgrim Looks at the World* (ಯಾತ್ರಿಕನ ಜಗನ್ನೋಟ) ಎಂದು. ಭಾರತದ ಯೋಗ್ಯ, ಆದರೆ ಅನಧಿಕೃತ ಸಾಂಸ್ಕೃತಿಕ ರಾಯಭಾರಿಯಾಗಿದ್ದ ಸ್ವಾಮೀಜಿಯವರು ತಮ್ಮನ್ನು ಪ್ರಪಂಚದ ಯಾತ್ರಿಕರೆಂದು ಪರಿಗಣಿಸುತ್ತಾರೆ. ಅವರು ಎಲ್ಲೇ ಉಳಿದುಕೊಂಡರೂ ಅಥವಾ ಮಾತನಾಡಿದರೂ ಆ ಸ್ಥಳ ಅವರ ಪಾಲಿಗೆ ಪವಿತ್ರವಾಗಿರುತ್ತಿತ್ತು. ಅವರಿಗೆ ಎಲ್ಲ ಕೆಲಸವೂ ಪೂಜೆಯಾಗಿರುತ್ತಿತ್ತು. ವೇದಾಂತದ ಅತ್ಯುನ್ನತ ತತ್ತ್ವದ ಎಂಥ ಅದ್ಭುತ ಅಭಿವ್ಯಕ್ತಿ ಇದು! ಸ್ವಾಮಿ ವಿವೇಕಾನಂದರ ನಂತರ ಬಹುಶಃ ಇವರೇ ಅತ್ಯುತ್ತಮ ವ್ಯಾಖ್ಯಾನಕಾರರಿರಬೇಕು!

ಅನೇಕ ಸಂದರ್ಭಗಳಲ್ಲಿ ಸ್ವಾಮಿ ರಂಗನಾಥಾನಂದರನ್ನು ಭೇಟಿಯಾಗುವ ಅಪೂರ್ವ ಅವಕಾಶ ನನ್ನದಾಗಿತ್ತು– ಎಣಿಸುವುದು ಕಷ್ಟ, ಮರೆಯುವುದು ಅಸಾಧ್ಯ. ಪ್ರತಿ ಬಾರಿ ನಾನು ಅವರ ಮಾತನ್ನು ಕೇಳಿದಾಗಲೂ ಅವರನ್ನು ಸಂಧಿಸಿದಾಗಲೂ, ಅವರೊಡನೆ ವಿಚಾರ ವಿನಿಮಯ ಮಾಡಿಕೊಂಡಾಗಲೂ ಅಥವಾ ಅವರಿಂದ ಮಾರ್ಗದರ್ಶನ ಪಡೆದಾಗಲೂ ನನಗಾದ ಅನುಭವವು ನನ್ನ ಮನಸ್ಸಿನಲ್ಲಿ, ಎಷ್ಟೇ ಕಾಲ ಸಂದಿದ್ದರೂ, ಅಚ್ಚಳಿಯದೆ ನಿಂತಿದೆ. ಅಂಥ ಅದ್ಭುತ ವ್ಯಕ್ತಿತ್ವ ಅವರದು. ಅವರು ಕೆಲವೇ ಕ್ಷಣಗಳಲ್ಲಿ ನಿಕಟ ಸಂಬಂಧವನ್ನು ಬೆಳೆಸಿಕೊಂಡುಬಿಡುತ್ತಿದ್ದರು.

ಸ್ವಾಮೀಜಿಯವರು ಶ್ರೇಷ್ಠ ವಾಗ್ಮಿಯಾಗಿಯೂ, ವೇದಾಂತತತ್ತ್ವದ ಮತ್ತು ಭಾರತೀಯ ಸಂಸ್ಕೃತಿಯ ಯಥಾರ್ಥ ವಕ್ತಾರರಾಗಿಯೂ ಎಲ್ಲರಿಂದ ಗುರುತಿಸಲ್ಪಟ್ಟಿದ್ದಾರೆ. ಜನರು, ವಿಶೇಷವಾಗಿ ಆಂಗ್ಲ ಶಿಕ್ಷಣವೇತ್ತ ಬುದ್ಧಿಜೀವಿಗಳು, ಅವರ ಮಾತನ್ನು ಕೇಳಲು ಮುತ್ತುತ್ತಿದ್ದರು. ಅವರು ಶ್ರೋತೃಗಳ ಮೇಲೆ ಅನಾಯಾಸವಾಗಿ ಗಾಢ ಪ್ರಭಾವವನ್ನು ಉಂಟುಮಾಡುತ್ತಿದ್ದರು. ಅವರು ಸಭಾಂಗಣವನ್ನು ಪ್ರವೇಶಿಸಿ ಗಂಭೀರವಾಗಿ ಎಲ್ಲರಿಗೂ ನಮಸ್ಕರಿಸಿ ತಮ್ಮ ಆಸನದ ಮೇಲೆ ಕುಳಿತುಕೊಳ್ಳುತ್ತಿದ್ದರು. ಅವರು ಎತ್ತರದ ವ್ಯಕ್ತಿ, ಬೆನ್ನು ನೇರ, ಮುಖದಲ್ಲಿ ಶೋಭಾಯಮಾನವಾದ ಸೌಜನ್ಯದ ಮುಗುಳ್ನಗೆ. ಅವರು ನೇರವಾಗಿ, ಸ್ವಲ್ಪವೂ ಬಗ್ಗದೆ ಕುಳಿತುಕೊಳ್ಳುವ ಭಂಗಿಯೇ ವೇದಾಂತವು ಯಾವುದಕ್ಕೂ ತಲೆಬಾಗಬೇಕಾಗಿಲ್ಲ ಎಂಬುದರ ದ್ಯೋತಕವಾಗಿರುತ್ತಿತ್ತು. ಅದರ ತತ್ತ್ವ ಅತ್ಯಂತ ಎತ್ತರ, ಅದು ಯಾವುದಕ್ಕೂ ಬಗ್ಗದಿರುವಷ್ಟು ಸಮರ್ಥವಾಗಿದೆ. ಅವರು ತಾವು ಬೋಧಿಸಿದ ತತ್ತ್ವದ ಮೂರ್ತರೂಪವಾಗಿದ್ದರು.

ಸ್ವಾಮೀಜಿಯವರು ಸಭಾಂಗಣಕ್ಕೆ ಬರುವುದಕ್ಕೆ ಮುಂಚೆಯೇ ಅದು ಶ್ರೋತೃಗಳಿಂದ ಕಿಕ್ಕಿರಿದಿರುತ್ತಿತ್ತು. ತುಂಬ ಧೈರ್ಯವಂತ ವ್ಯವಸ್ಥಾಪಕರು ಮಾತ್ರ ಡೆಲ್ಲಿಯ ೩೦೦೦ ಜನ ಕುಳಿತುಕೊಳ್ಳುವ FICCI ಅಂಥ ಸಭಾಂಗಣದಲ್ಲಿ ಉಪನ್ಯಾಸಗಳನ್ನು ಆಯೋಜಿಸುತ್ತಿದ್ದರು. ಏಕೆಂದರೆ, ಅರ್ಧದಷ್ಟು ಸಭಾಂಗಣವು ತುಂಬುವುದೂ

---

* ಅಧ್ಯಕ್ಷರು, ವಿವೇಕಾನಂದ ಕೇಂದ್ರ, ಕನ್ಯಾಕುಮಾರಿ

ಬಹಳ ಅಪರೂಪ. ಆದರೆ ಸ್ವಾಮಿ ರಂಗನಾಥಾನಂದರು ಡೆಲ್ಲಿಗೆ ಬಂದಾಗಲೆಲ್ಲ ಆ ವಿಶಾಲ ಸಭಾಂಗಣದಲ್ಲಿ ಒಂದಾದರೂ ಉಪನ್ಯಾಸವಿರುತ್ತಿತ್ತು. ನಾನು ಅನೇಕ ಬಾರಿ ನೋಡಿದ್ದೇನೆ. ಅವರು ಬರುವುದಕ್ಕೆ ಮುಂಚೆಯೇ ಡೆಲ್ಲಿಯ ಪ್ರತಿಷ್ಠಿತ ಸಭಿಕರಿಂದ ಸಭಾಂಗಣ ಕಿಕ್ಕಿರಿದಿರುತ್ತಿತ್ತು.

ಸ್ವಾಮೀಜಿಯವರ ಉಪನ್ಯಾಸ ಯಾವಾಗಲೂ ಅಸಾಧಾರಣವಾಗಿರುತ್ತಿತ್ತು. ಜನರು ಯಾವಾಗಲೂ ಅತ್ಯುತ್ತಮವನ್ನೇ ನಿರೀಕ್ಷಿಸುತ್ತಿದ್ದರು ಮತ್ತು ಅವರು ಎಂದೂ ಜನರಿಗೆ ನಿರಾಸೆಯನ್ನುಂಟುಮಾಡಲಿಲ್ಲ. ಕೃತಕ ಹಾವಭಾವಗಳಾಗಲಿ, ಕೆಳಮಟ್ಟದ  ಖಂಡನೆಗಳಾಗಲಿ, ಕೀಳು ಅಭಿರುಚಿಯ ಹಾಸ್ಯಗಳಾಗಲಿ ಇವಾವುವೂ ಇಲ್ಲದೆ ಶ್ರೋತೃಗಳನ್ನು ಹೇಗೆ ಅವರು ಮಂತ್ರಮುಗ್ಧಗೊಳಿಸುತ್ತಿದ್ದರೆಂಬುದೇ ಪರಮಾಶ್ಚರ್ಯ. ಅವರು ಯಾವಾಗಲೂ ಉನ್ನತ ಸ್ತರದಲ್ಲೇ ಇರುತ್ತಿದ್ದರು. ಅವರ ಭಾಷೆ ಸರಳ, ನೇರವಾಗಿ ಹೃದಯವನ್ನು ತಾಕುತ್ತಿತ್ತು. ಅದರಲ್ಲಿ ವಿಕೃತಿಯಿರುತ್ತಿರಲಿಲ್ಲ, ಮಾಧುರ್ಯವಿರುತ್ತಿತ್ತು. ಅವರು ವೇದಾಂತದ ಅತ್ಯುನ್ನತ ತತ್ತ್ವಗಳ ಬಗ್ಗೆ ಮಾತನಾಡಿದರೂ, ಸಾಮಾನ್ಯ ಶ್ರೋತೃಗಳ ಗ್ರಹಿಕೆಯನ್ನು ಮೀರುತ್ತಿರಲಿಲ್ಲ. ಉಪನಿಷತ್ತು ಮುಂತಾದ ಶಾಸ್ತ್ರಗಳ ಹೇಳಿಕೆಗಳು ನೇರ ಸರಳ ಅನುವಾದದೊಂದಿಗೆ ಲೀಲಾಜಾಲವಾಗಿ ಅವರ ಬಾಯಿಂದ ಹರಿದುಬರುತ್ತಿದ್ದವು. ನಮ್ಮನ್ನು ಚಕಿತಗೊಳಿಸುತ್ತಿದ್ದ ಒಂದು ವಿಷಯವೆಂದರೆ, ಪೌರಸ್ತ್ಯ ಮತ್ತು ಪಾಶ್ಚಾತ್ಯ ಲೇಖಕರ ದೀರ್ಘ ಹೇಳಿಕೆಗಳನ್ನು ಲೀಲಾಜಾಲವಾಗಿ ಉದ್ಧರಿಸುತ್ತಿದ್ದುದು. ಉಪನ್ಯಾಸದ ನಂತರ ಸ್ವಾಮಿಗಳು ವೇದಿಕೆಯಿಂದ ಕೆಳಗೆ ಬರುವಾಗ ಜನರು ಅವರ ಪಾದ ಸ್ಪರ್ಶಿಸಲು, ಅವರ ಕೆಲವು ಮಾತುಗಳನ್ನು ಕೇಳಲು ಅವರ ಸುತ್ತ ನೆರೆಯುತ್ತಿದ್ದುದು ಒಂದು ಸಾಮಾನ್ಯ ದೃಶ್ಯವಾಗಿರುತ್ತಿತ್ತು. ಶ್ರೋತೃಗಳಿಂದ ಅವರು ಎಂದೂ ತಮ್ಮನ್ನು ದೂರವಿರಿಸಿಕೊಳ್ಳಲಿಲ್ಲ. ಅಷ್ಟೇ ಅಲ್ಲ, ಸೌಜನ್ಯದಿಂದ ಮಾತನಾಡಿಸುತ್ತಿದ್ದರು, ಆರೋಗ್ಯ ಅಥವಾ ಇನ್ನಿತರ ವಿಷಯಗಳ ಬಗ್ಗೆ ವಿಚಾರಿಸುತ್ತಿದ್ದರು. ಎಲ್ಲರ ಬಗ್ಗೆ ಅವರಿಗಿದ್ದ ವೈಯಕ್ತಿಕ ಕಳಕಳಿಯನ್ನು ಇವು ಸೂಚಿಸುತ್ತವೆ. ಅವರು ವ್ಯಕ್ತಿಗಳ ಹೆಸರನ್ನು ಎಂದೂ ಮರೆಯುತ್ತಿರಲಿಲ್ಲ. ಅವರ ಕುಟುಂಬದ ಸದಸ್ಯರ ಬಗ್ಗೆಯೂ ಅವರು ತಿಳಿದುಕೊಂಡಿರುತ್ತಿದ್ದರು. ವೇದಾಂತವು ನಿರ್ವ್ಯೆಯಕ್ತಿಕವಾದುದಾದರೂ, ಅದರಲ್ಲಿ ಪ್ರೀತಿಪೂರ್ಣ ವೈಯಕ್ತಿಕ ಸಂಬಂಧಗಳಿಗೆ ಅವಕಾಶವಿದೆ ಎಂಬುದಕ್ಕೆ ಸ್ವಾಮೀಜಿಯವರ ನಿರ್ವ್ಯೆಯಕ್ತಿಕ ವ್ಯಕ್ತಿತ್ವದಿಂದ ಹೊರಸೂಸುತ್ತಿದ್ದ ವೈಯಕ್ತಿಕ ಪ್ರೀತಿಯೇ ಸಾಕ್ಷಿಯಾಗಿತ್ತು. ವೇದಾಂತವು ಬೌದ್ಧಿಕವಾಗಿರುವಷ್ಟೇ ಹಾರ್ದಿಕವೂ ಆಗಿದೆ.

ಬಿಡುವಿಲ್ಲದ ಕಾರ್ಯನಿರತರಾಗಿದ್ದರೂ ಸ್ವಾಮಿ ರಂಗನಾಥಾನಂದರು ಜನರನ್ನು ಬರಮಾಡಿಕೊಳ್ಳುತ್ತಿದ್ದರು. ತೀವ್ರ ಕಾಯಿಲೆಯಿಂದ ನರಳುತ್ತಿರುವಾಗಲೂ ಪ್ರಾಮಾಣಿಕ ಭಕ್ತರಿಗೆ ಭೇಟಿಯನ್ನು ನಿರಾಕರಿಸುತ್ತಿರಲಿಲ್ಲ. ನಾನು RSS ಪ್ರಚಾರಕನಾಗಿಯೂ, ದೀನದಯಾಲ್ ಸಂಶೋಧನ ಸಂಸ್ಥೆಯ ನಿರ್ದೇಶಕನಾಗಿಯೂ, ಭಾರತೀಯ ವಿಚಾರ ಕೇಂದ್ರದ ನಿರ್ದೇಶಕನಾಗಿಯೂ ಹಾಗೂ ವಿವೇಕಾನಂದ ಕೇಂದ್ರದ ಅಧ್ಯಕ್ಷನಾಗಿಯೂ ಅವರನ್ನು ಅನೇಕ ಬಾರಿ ಭೇಟಿಯಾಗಿದ್ದೇನೆ. ಈ ಸಂದರ್ಭದಲ್ಲಿ ಅವರನ್ನು ಭೇಟಿಯಾಗುತ್ತಿದ್ದುದು ಯಾವುದಾದರೂ ಸಮಾರಂಭಕ್ಕೆ ಅವರನ್ನು ಆಹ್ವಾನಿಸಲು. ಅವರು ಯಾವಾಗಲೂ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ನಾನು ದೀನದಯಾಲ್ ಸಂಶೋಧನ ಸಂಸ್ಥೆಯ ನಿರ್ದೇಶಕನಾಗಿ ದೆಹಲಿಯಲ್ಲಿರುವಾಗ ಪ್ರತಿಷ್ಠಿತ ಸಪ್ರೂಹೌಸ್‌ನಲ್ಲಿ ಸಭಿಕರನ್ನುದ್ದೇಶಿಸಿಮಾತನಾಡಲು ಅವರನ್ನು ಆಹ್ವಾನಿಸಿದೆ. ಅಂದು ಆಗಿನ ಪ್ರಧಾನ ಮಂತ್ರಿಗಳಾಗಿದ್ದ ಮೊರಾರ್ಜಿ ದೇಸಾಯಿ ಸಭೆಯ ಅಧ್ಯಕ್ಷರಾಗಿದ್ದರು. ಮೊರಾರ್ಜಿಯವರು ಗಹನ ತತ್ತ್ವದ ಬಗ್ಗೆ ಬಹಳ ಹೊತ್ತು ಮಾತನಾಡಿದರು. ಅನಂತರ ಸ್ವಾಮೀಜಿಯವರು, ಆಗ ದೇಶಕ್ಕೆ ಅಗತ್ಯವಾಗಿದ್ದ ಸಾಮಾಜಿಕ, ಆರ್ಥಿಕ ಬೆಳವಣಿಗೆಯ ಆವಶ್ಯಕತೆ ಮತ್ತು ಅದಕ್ಕೆ ತೆಗೆದುಕೊಳ್ಳಬೇಕಾದ ಕ್ರಮ, ಈ ವಿಷಯವಾಗಿ ಮಾತನಾಡಿದರು. ಸ್ವಾಭಾವಿಕವಾಗಿಯೇ ಅವರ ಉಪನ್ಯಾಸ ವೇದಾಂತದ ದೃಷ್ಟಿಕೋನವನ್ನು ಆಧರಿಸಿತ್ತು. ಆ ಉಪನ್ಯಾಸವು ಭಾರತದ ಪ್ರಧಾನಿಯವರ ಕಣ್ಣುತೆರೆಯಿಸುವಂತಹ ಉತ್ತಮ ಸಲಹೆಗಳಿಂದ ಕೂಡಿತ್ತು. ಸ್ವಾಮೀಜಿಯವರ

ವಿಷಯಸಂಪತ್ತೂ ದೇಶದ ಸಾಮಾಜಿಕ ಆರ್ಥಿಕ ಸಮಸ್ಯೆಗಳ ಬಗ್ಗೆ ಅವರಿಗಿದ್ದ ಅರಿವೂ ಅವರ ಉಪನ್ಯಾಸದಲ್ಲಿ ಸ್ಪಷ್ಟವಾಗಿ ಎದ್ದುಕಾಣುತ್ತಿತ್ತು.

ಅವರ ಆರೋಗ್ಯ ಕ್ಷೀಣಿಸುತ್ತಿರುವಾಗಲೂ ಅವರ ಪ್ರೀತಿಯ ಸಂಬಂಧ ಮತ್ತು ಕಾರ್ಯೋತ್ಸಾಹ ಕುಂಠಿತವಾಗಲಿಲ್ಲ; ಉತ್ತಮ ಆರೋಗ್ಯದ ದಿನಗಳಲ್ಲಿಯಂತೆಯೇ ಇದ್ದವು. ಸುದೀರ್ಘ ಕಾಯಿಲೆಯ ನಂತರ ಅವರು ಒಮ್ಮೆ ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನಲ್ಲಿ ಸುಧಾರಿಸಿಕೊಳ್ಳುತ್ತಿದ್ದರು. ನಾನು, ನನ್ನ ವಿವೇಕಾನಂದ ಕೇಂದ್ರದ ಕಾರ್ಯದರ್ಶಿ ಶ್ರೀ ಬಾಲಕೃಷ್ಣನ್‌ಜೀ, ಅವರನ್ನು ಭೇಟಿಯಾಗಲು ಹೋದೆವು. ಅವರು ಹಾಸಿಗೆಯ ಮೇಲೆ ಮಲಗಿಕೊಂಡಿದ್ದರು, ನಮ್ಮನ್ನು ಬರಮಾಡಿಕೊಂಡು ಕುಳಿತುಕೊಳ್ಳಲು ಹೇಳಿದರು. ಪರಸ್ಪರ ಯೋಗಕ್ಷೇಮ ವಿಚಾರದ ನಂತರ ನಾನು ಬಂದಿದ್ದಕ್ಕೆ ಕಾರಣವನ್ನು ತಿಳಿಸಿದೆ. ತಿರುವನಂತಪುರದಲ್ಲಿ ನಡೆಯಲಿರುವ ಬೃಹತ್ ಅಂತಾರಾಷ್ಟ್ರೀಯ ವಿಚಾರ ಸಂಕಿರಣ "Gita International" (ಅಂತಾರಾಷ್ಟ್ರೀಯ ಗೀತೆ)ಗಾಗಿ ಅವರಿಂದ ಒಂದು ಸಂದೇಶವನ್ನು ನಾನು ಬಯಸಿದ್ದೆ. ಅವರ ಅನಾರೋಗ್ಯದ ಸ್ಥಿತಿಯನ್ನು ನೋಡಿ ಮುಂದೆ ಸಮಯಕ್ಕೆ ಸರಿಯಾಗಿ ಸಂದೇಶವನ್ನು ಕಳಿಸಿದರೆ ಸಾಕೆಂಬುದು ನನ್ನ ಆಶಯವಾಗಿತ್ತು. ಆದರೆ ಆಶ್ಚರ್ಯ! ಕೂಡಲೇ ಅವರು ತಮ್ಮ ಸೇವಕರನ್ನು ಕರೆದು ಒಂದು ಸುಂದರ ಸಂದೇಶವನ್ನು ಬರೆದುಕೊಳ್ಳಲು ಹೇಳಿದರು. ಅನಂತರ ಅದನ್ನು ಟೈಪ್ ಮಾಡಿಸಿ, ತಾವೇ ಅದನ್ನು ತಿದ್ದಿ, ಅಂತಿಮ ಪ್ರತಿಯನ್ನು ಸಿದ್ಧಪಡಿಸಿ ನಮ್ಮ ಕೈಗಿತ್ತರು. ನಾವು ಆಶ್ಚರ್ಯದಿಂದ ಮೂಕರಾದೆವು. ಅಶ್ರುನಯನರಾಗಿ ಅವರ ಪಾದಗಳಿಗೆ ಪೊಡಮಟ್ಟು ಅವರಿಂದ ಬೀಳ್ಕೊಂಡೆವು.

ಸ್ವಾಮಿ ರಂಗನಾಥಾನಂದರು ಹುಟ್ಟಾ ನಾಯಕರು. ಎಲ್ಲ ಶ್ರೇಷ್ಠ ನಾಯಕರಂತೆ, ಅವರೂ ಪ್ರತಿಭೆಯ ಕಡೆಗೇ ಕಣ್ಣಿಟ್ಟಿರುತ್ತಿದ್ದರು. ಎಲ್ಲಿ ಅದು ಕಂಡರೂ ಅದನ್ನು ಪ್ರೋತ್ಸಾಹಿಸುತ್ತಿದ್ದರು. ಹೀಗೆ ತಮ್ಮ ಸಂಪರ್ಕಕ್ಕೆ ಬಂದವರಲ್ಲಿದ್ದ ಉತ್ತಮ ಗುಣಗಳನ್ನು ವ್ಯಕ್ತಗೊಳಿಸಲು ಮತ್ತು ಅವುಗಳನ್ನು ಬೆಳಸಿಕೊಳ್ಳಲು ಅವಕಾಶ ಮಾಡಿಕೊಟ್ಟರು. ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರ ವಿಷಯದಲ್ಲಿ ಅವರಿಗೆ ವಿಶೇಷ ಪ್ರೀತಿ, ಕಳಕಳಿ ಇತ್ತು. ನಿಃಸ್ವಾರ್ಥಿಗಳೂ ಸೇವಾಮನೋಭಾವವುಳ್ಳವರೂ ಆದ ಗೃಹಸ್ಥರಿಗೆ ಮಾತು ಕೃತಿಗಳ ಮೂಲಕ ಉತ್ತೇಜನ ನೀಡುತ್ತಿದ್ದರು. ತಮ್ಮದೇ ಆದ ರೀತಿಯಲ್ಲಿ ಅವರು ಉತ್ತಮ ಕಾರ್ಯಗಳಿಗಾಗಿ ಆರ್ಥಿಕ ನೆರವಿನ ವ್ಯವಸ್ಥೆಯನ್ನು ಮಾಡುತ್ತಿದ್ದರು.

ನಾನು ಕೆಲವು ಸಂದರ್ಭಗಳಲ್ಲಿ ಅವರ ಸಹಾಯವನ್ನು ಪಡೆಯುವ ಸದವಕಾಶ ದೊರಕಿತ್ತು. ಕಮ್ಯುನಿಸಮ್, ಸೋಷಿಯಾಲಿಸಮ್ ಮುಂತಾದ ತತ್ತ್ವಗಳ ವಿಮರ್ಶಾತ್ಮಕ ಮತ್ತು ತುಲನಾತ್ಮಕ ವಿಚಾರಗಳನ್ನೊಳಗೊಂಡ ಒಂದು ಕಿರುಹೊತ್ತಿಗೆಯನ್ನು ನಾನು ಸಿದ್ಧಪಡಿಸಿದ್ದೆ. ಈ ತತ್ತ್ವಗಳೆಲ್ಲವೂ ಕಾಲ–ದೇಶಗಳಿಗೆ ಹೇಗೆ ಸೀಮಿತವಾದವು ಎಂಬುದನ್ನು ತೋರಿಸಿ, ಹಿಂದೂಧರ್ಮ ಅಥವಾ ಸನಾತನ ಧರ್ಮ ಹೇಗೆ ಸಾರ್ವಕಾಲಿಕವಾದುದು ಎಂಬುದನ್ನು ಪ್ರತಿಪಾದಿಸಲು ಅದರಲ್ಲಿ ಪ್ರಯತ್ನಿಸಿದ್ದೆ.

ತ್ರಿಶೂರ್ ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ಶಕ್ರಾನಂದರು ಅದರಲ್ಲಿ ಆಸಕ್ತಿಯನ್ನು ತೋರಿಸಿ ಅದನ್ನು ಪ್ರಕಟಿಸಬೇಕೆಂದು ನಿರ್ಧರಿಸಿದರು. ನನ್ನ ಗಮನಕ್ಕೆ ತರದೆಯೇ ಅವರು ಅದನ್ನು ಸ್ವಾಮಿ ರಂಗನಾಥಾನಂದರಿಗೆ ಅವರ ಅಭಿಪ್ರಾಯಕ್ಕಾಗಿ ಕಳಿಸಿದರು. ಸ್ವಾಮೀಜಿಯವರು ಆಗ ಚೆನ್ನೈನಲ್ಲಿದ್ದರು. ವಿಮಾನದ ಮೂಲಕ ಕೊಚಿನ್‌ಗೆ ಬರುವವರಿದ್ದರು. ವಿಮಾನದಲ್ಲಿಯೇ ಆ ಪುಸ್ತಕವನ್ನು ಓದಿ, ಅಲ್ಲಲ್ಲಿ ಕೆಲವು ತಿದ್ದುಪಡಿ ಮಾಡಿದರು. ಇದು ಆ ಪುಸ್ತಕದ ಶೋಭೆಯನ್ನು ಹೆಚ್ಚಿಸಿತು. ಇಷ್ಟೇ ಅಲ್ಲದೆ, ಅದಕ್ಕೆ ಸಂಕ್ಷಿಪ್ತ ಮತ್ತು ಸುಂದರ ಮುನ್ನುಡಿಯನ್ನು ಬರೆದರು! ಇನ್ನೂ ಆಶ್ಚರ್ಯದ ಸಂಗತಿ ಏನೆಂದರೆ ಆ ಪುಸ್ತಕಕ್ಕೆ ಅತ್ಯಂತ ಯುಕ್ತವೂ ಸುಂದರವೂ ಆದ ಶಿರೋನಾಮೆಯನ್ನು ನೀಡಿದರು: *Beyond all isms to Hinduism* (ಎಲ್ಲ ತತ್ತ್ವಗಳನ್ನೂ ಮೀರಿದ

ಹಿಂದೂತತ್ತ್ವದತ್ತ). ಸ್ವಾಮೀಜಿಯವರ ಉದಾತ್ತ ಮತ್ತು ವಿಶಾಲ ಹೃದಯವನ್ನು ನೆನೆದರೆ ಈಗಲೂ ಅಚ್ಚರಿಯಾಗುತ್ತದೆ. ನನ್ನಂಥ ಸಾಮಾನ್ಯ ಕಾರ್ಯಕರ್ತನಿಗೂ ಅವರು ಎಷ್ಟೊಂದು ಗಮನಕೊಟ್ಟು ಪ್ರೋತ್ಸಾಹ ನೀಡುತ್ತಿದ್ದರು!

ಎಲ್ಲ ನಿಜವಾದ ವೇದಾಂತಿಗಳಂತೆ ಸ್ವಾಮಿ ರಂಗನಾಥಾನಂದರೂ ಒಬ್ಬ ವಿಶ್ವಮಾನವರು. ಆದರೆ ಇದು ಹಿಂದೂಧರ್ಮದ ಬಗ್ಗೆ ಅವರಿಗಿದ್ದ ವಿಶೇಷ ಪ್ರೀತಿ ಮತ್ತು ಕಳಕಳಿಗೆ ಅಡ್ಡಿಯಾಗಲಿಲ್ಲ. ಮತಾಂತರಗೊಳಿಸುವ ಧರ್ಮಗಳಿಂದ ಹಿಂದೂಧರ್ಮವು ಎದುರಿಸುತ್ತಿರುವ ಸವಾಲಿನ ಪೂರ್ಣ ಅರಿವಿತ್ತು ಅವರಿಗೆ. ಈ ವಿಷಯದಲ್ಲಿ ನನ್ನ ವೈಯಕ್ತಿಕ ಘಟನೆಯೊಂದನ್ನು ಹೇಳುತ್ತೇನೆ. ಸ್ವಾಮೀಜಿಯವರು ಕೊಚಿನ್‌ನ ರಾಮಕೃಷ್ಣ ಸೇವಾಶ್ರಮಕ್ಕೆ ಒಂದು ಮುಖ್ಯ ಕಾರ್ಯಕ್ರಮಕ್ಕಾಗಿ ಬಂದಿದ್ದರು. ವಾಡಿಕೆಯಂತೆ ನಾನು ಹೋಗಿ ಅವರಿಗೆ ಸಾಷ್ಟಾಂಗ ಪ್ರಣಾಮ ಮಾಡಿದೆ. ಕಾರ್ಯಕ್ರಮದ ನಂತರ ಬೀಳ್ಕೊಳ್ಳುವಾಗ ನನ್ನನ್ನು ತಮ್ಮ ಹತ್ತಿರ ಕರೆದು ತಾವು ತಂಗಿರುವ ಸ್ಥಳದಲ್ಲಿ ಬಂದು ತಮ್ಮನ್ನು ಸಂಧಿಸಬೇಕೆಂದು ಹೇಳಿದರು. ಮರುದಿನ ನಿರ್ದಿಷ್ಟ ಸಮಯದಲ್ಲಿ ಹೋದೆ. ಸ್ವಾಮೀಜಿಯವರು ಕೆಲವು ಭಕ್ತರೊಡನೆ ಮಾತನಾಡುತ್ತಿದ್ದರು. ನನ್ನನ್ನು ನೋಡಿದ ಕೂಡಲೇ ತಾವು ಮಲಗುವ ಕೋಣೆಗೆ ನನ್ನನ್ನು ಕರೆದುಕೊಂಡು ಹೋದರು. ಅಲ್ಲಿ ನಾವಿಬ್ಬರೇ ಇದ್ದೆವು. ಅವರು ಯಾವ ಪೀಠಿಕೆಯೂ ಇಲ್ಲದೆ ನೇರವಾಗಿ ಕೇರಳದಲ್ಲಿ ಆಗುತ್ತಿದ್ದ ತಡೆಯಿಲ್ಲದ ಮತಾಂತರದ ವಿಷಯವನ್ನು ಪ್ರಸ್ತಾಪಿಸಿದರು. ಸ್ವಧರ್ಮವನ್ನು ಬಿಟ್ಟು, ಹಿಂದೂಗಳು ಪರಧರ್ಮವನ್ನು ಸೇರುವುದನ್ನು ತಪ್ಪಿಸಬೇಕು ಎಂದು ತುಂಬ ಗಂಭೀರವಾಗಿ ಹೇಳಿದರು. ಹಿಂದೂಗಳಲ್ಲಿ ಸುಲಭವಾಗಿ ಮತಾಂತರಕ್ಕೆ ಒಳಗಾಗುವ ಬಡ ಮತ್ತು ಶೋಷಿತ ವರ್ಗದವರನ್ನು ಮೇಲೆತ್ತಲು ಸೇವಾಕಾರ್ಯಗಳನ್ನು ಕೈಗೊಳ್ಳಬೇಕೆಂದು ಅವರು ಸಲಹೆ ನೀಡಿದರು. ಪ್ರಚಾರ, ಆಡಂಬರಗಳಿಲ್ಲದೆ ಕಾರ್ಯಗಳು ನಡೆಯಬೇಕು. ಇಲ್ಲದಿದ್ದರೆ ಅನಾವಶ್ಯಕ ಪ್ರತಿಕ್ರಿಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ಸೂಚಿಸಿದರು. ಹಿಂದೂ ಸಮಾಜದ ಬಗ್ಗೆ ಅವರಿಗೆ ಎಷ್ಟೊಂದು ಕಳಕಳಿ ಇತ್ತು ಎಂಬುದು ನನಗೆ ಅರ್ಥವಾಯಿತು.

ಅವರದು ಯಾವಾಗಲೂ ಸಕಾರಾತ್ಮಕ ಧೋರಣೆ. ಒಮ್ಮೆ ಅವರನ್ನು ಭೇಟಿ ಮಾಡಿದವರೂ ಈ ಗುಣವನ್ನು ಅವರಲ್ಲಿ ಗುರುತಿಸುತ್ತಿದ್ದರು. ಅವರಲ್ಲಿ ನಾನು ತುಂಬ ಮೆಚ್ಚಿದ ಗುಣ ಇದು. ನಿಷೇಧಾತ್ಮಕತೆ ಅವರಲ್ಲಿ ಲವಲೇಶವೂ ಇರಲಿಲ್ಲ. ಸ್ವಾಮಿ ವಿವೇಕಾನಂದರ ಬಗ್ಗೆ ರವೀಂದ್ರನಾಥ ಟಾಗೂರರ ಹೇಳಿಕೆ ನೆನಪಾಗುತ್ತದೆ: "ಅವರಲ್ಲಿ ಎಲ್ಲವೂ ಸಕಾರಾತ್ಮಕ. ನಿಷೇಧಾತ್ಮಕವೆಂಬುದು ಇರಲೇ ಇಲ್ಲ." ಹಾಗೆಯೇ ರಂಗನಾಥಾನಂದರಲ್ಲಿ ಜನರನ್ನು ಆಕರ್ಷಿಸುತ್ತಿದ್ದ ಒಂದು ಸಕಾರಾತ್ಮಕ ಸೊಬಗು ಅವರನ್ನು ಆವರಿಸಿತ್ತು.

ನನ್ನ ಮತ್ತು ಅವರ ಕೊನೆಯ ಭೇಟಿ ಬೇಲೂರು ಮಠದಲ್ಲಿ. ಕುಳಿತುಕೊಳ್ಳುವುದಕ್ಕಾಗಲಿ, ಮಾತನಾಡುವುದಕ್ಕಾಗಲಿ ಅವರಿಗೆ ಶಕ್ತಿ ಇರಲಿಲ್ಲ. ಆದರೆ ಪ್ರತಿದಿನ ಅವರ ದರ್ಶನಕ್ಕಾಗಿ ಸ್ವಲ್ಪ ಸಮಯ ನಿಗದಿತವಾಗಿತ್ತು. ನಾವು ಆ ಅವಕಾಶವನ್ನು ಉಪಯೋಗಿಸಿಕೊಂಡೆವು. ಪ್ರಾರಂಭದಲ್ಲಿ ಸ್ವಾಮೀಜಿಯವರ ಸಹವರ್ತಿ – ನಮ್ಮನ್ನು ಒಳಗೆ ಬಿಡಲು ನಿರಾಕರಿಸಿದರು. ಆದರೆ ಕೊನೆಯಲ್ಲಿ ಕೇವಲ ಪ್ರಣಾಮ ಮಾಡಿಕೊಂಡು ಬರಬೇಕೆಂದು ಎಚ್ಚರಿಕೆ ನೀಡಿ ಒಳಗೆಬಿಟ್ಟರು. ನಾವು ಒಳಗೆ ಹೋದೆವು. ಸ್ವಾಮೀಜಿಯವರು ನಮ್ಮನ್ನು ಗುರುತಿಸಿ ಕುಳಿತುಕೊಳ್ಳಲು ಹೇಳಿ ಹದಿನೈದು ನಿಮಿಷಕ್ಕೂ ಜಾಸ್ತಿ ಮಾತನಾಡಿಸತೊಡಗಿದರು. ಸ್ವಾಭಾವಿಕವಾಗಿಯೇ ಸಹವರ್ತಿ – ಸ್ವಾಮಿಗಳು ಸಿಡಿಮಿಡಿಗುಟ್ಟುತ್ತಿದ್ದರು. ಭಕ್ತರ ಮೇಲೆ ಭಗವಂತನ ದಯೆ ಅಹೇತುಕವಾದುದು ಎಂಬುದಕ್ಕೆ ಇದೊಂದು ಪಾಠ.

* * * *

# ೬೬. ವಿವೇಕಾನಂದ ಕೇಂದ್ರದ ಶಕ್ತಿನಿಧಿ

–ನಿವೇದಿತಾ ರಘುನಾಥ ಭಿಡೇ*

ವಿವೇಕಾನಂದ ಕೇಂದ್ರವು ಪ್ರಾರಂಭವಾದಂದಿನಿಂದಲೂ ರಾಮಕೃಷ್ಣ ಮಿಷನ್ನಿನೊಂದಿಗೆ ಸಂಬಂಧವನ್ನು ಹೊಂದಿದೆ. ಮಿಷನ್ನಿನ ಸಂನ್ಯಾಸಿಗಳ ಪೈಕಿ ಪ್ರಾರಂಭದಿಂದಲೂ ವಿವೇಕಾನಂದ ಕೇಂದ್ರದೊಡನೆ ಸಂಬಂಧವನ್ನು ಹೊಂದಿದ್ದು ಅದರ ಬೆಳವಣಿಗೆಗೆ ತಮ್ಮ ಅಪಾರ ಪ್ರೀತಿಯ ನೀರೆರೆದವರೆಂದರೆ ಸ್ವಾಮಿ ರಂಗನಾಥಾನಂದಜಿ ಮಹಾರಾಜ್.

ಕೇಂದ್ರದ ಸಂಸ್ಥಾಪಕರಾದ ಶ್ರೀ ಏಕನಾಥ ಅವರು ಕೋಲ್ಕತ್ತಾದಲ್ಲಿ ಕೆಲಸ ಮಾಡುತ್ತಿರುವಾಗ ಬೇಲೂರು ಮಠಕ್ಕೆ ಆಗಾಗ ಭೇಟಿ ನೀಡುತ್ತಿದ್ದರು. ಹದಿನೈದು ದಿವಸಕ್ಕೊಮ್ಮೆ ಅವರು ಸ್ವಾಮಿ ಮಾಧವಾನಂದರನ್ನು ಭೇಟಿಯಾಗುತ್ತಿದ್ದರು. ಮಾಧವಾನಂದರಿಗೆ ಅವರ ಮೇಲೆ ತುಂಬ ಪ್ರೀತಿಯಿತ್ತು. ಮುಂದೆ ೧೯೬೩ರಲ್ಲಿ ವಿವೇಕಾನಂದ ಶತಮಾನೋತ್ಸವ ಸಮಿತಿಯವರು ಕನ್ಯಾಕುಮಾರಿಯಲ್ಲಿ ವಿವೇಕಾನಂದ ಶಿಲಾ ಸ್ಮಾರಕವನ್ನು ಸ್ಥಾಪಿಸುವ ಸಂಬಂಧವಾಗಿ ಶ್ರೀ ಗುರೂಜಿಯವರನ್ನು ಸಂಧಿಸಿದಾಗ  ಅವರು ಏಕನಾಥಜಿಯವರನ್ನು ನಿಯೋಜಿಸಿದರು. ಏಕನಾಥಜಿಯವರು ಚೆನ್ನೈಗೆ ಹೋಗುವುದಕ್ಕೆ ಮುಂಚೆಯೇ ಆಗ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಅಧ್ಯಕ್ಷರಾಗಿದ್ದ ಸ್ವಾಮಿ ಮಾಧವಾನಂದಜಿಯವರನ್ನು ಭೇಟಿಯಾಗಲು ಬೇಲೂರು ಮಠಕ್ಕೆ ಹೋದರು. ಅವರು ಹೇಳಿದರು:

"ನಿಮ್ಮಂತಹ ವ್ಯಕ್ತಿಯೊಬ್ಬರು ಈ ಕಾರ್ಯವನ್ನು ಕೈಗೆತ್ತಿಕೊಳ್ಳಲು ಸಿದ್ಧವಾಗಿರುವಾಗ, ಸಮಿತಿಯವರೆಲ್ಲ ನಿಮಗೆ ಬೆಂಬಲ ನೀಡಿದರೆ ಮತ್ತು ನಿಮ್ಮನ್ನೇ ಅವರು ಇಷ್ಟಪಟ್ಟರೆ ನೀವು ಖಂಡಿತವಾಗಿಯೂ ಈ ಕಾರ್ಯವನ್ನು ಕೈಗೆತ್ತಿಕೊಳ್ಳ ಬಹುದು. ರಾಮಕೃಷ್ಣ ಮಿಷನ್ ಅಧಿಕೃತವಾಗಿ ನಿಮ್ಮೊಂದಿಗೆ ಸಂಬಂಧವನ್ನು ಇಟ್ಟುಕೊಳ್ಳಲಾಗದಿದ್ದರೂ ಇಡೀ ರಾಮಕೃಷ್ಣ ಮಿಷನ್ ಯಾವಾಗಲೂ ನಿಮ್ಮೊಂದಿಗಿರುತ್ತದೆ ಎಂದು ಭರವಸೆ ನೀಡುತ್ತೇನೆ. ನೀವು ಕಾರ್ಯೋನ್ಮುಖರಾಗಿ, ಠಾಕೂರರು (ಶ್ರೀರಾಮಕೃಷ್ಣರು) ನಿಮ್ಮನ್ನು ಆಶೀರ್ವದಿಸುತ್ತಾರೆ, ಸ್ವಾಮಿ ವಿವೇಕಾನಂದರು ನಿಮ್ಮನ್ನು ಆಶೀರ್ವದಿಸುತ್ತಾರೆ, ಮತ್ತು ನನ್ನ ಆಶೀರ್ವಾದವಂತೂ ನಿಮ್ಮ ಮೇಲೆ ಇದ್ದೇ ಇದೆ."

ಸ್ವಾಮಿ ರಂಗನಾಥಾನಂದರು ಸ್ವಾಮಿ ಮಾಧವಾನಂದರ ಮಾತುಗಳನ್ನು ಯಥಾರ್ಥರೂಪದಲ್ಲಿ ಎತ್ತಿಹಿಡಿದರು. ಅವರು ಕೇಂದ್ರದ ವಿಷಯದಲ್ಲಿ ತುಂಬ ಆಸಕ್ತಿಯನ್ನು ಹೊಂದಿದ್ದು, ಅದಕ್ಕೆ ಒಂದು ರೂಪವನ್ನು ಕೊಡುವುದರಲ್ಲಿ ಅವರು ನೀಡಿದ ಕೊಡುಗೆ ಅಪಾರವಾದುದು. ವಿವೇಕಾನಂದ ಕೇಂದ್ರವು ಒಂದು ಸಂನ್ಯಾಸೇತರ ಸಂಸ್ಥೆಯಾಗಿ, ರಾಮಕೃಷ್ಣ ಮಿಷನ್ನಿನಿಂದ ಶಕ್ತಿ ಸ್ಫೂರ್ತಿಗಳನ್ನು ಪಡೆಯುತ್ತ, ಸ್ವಾಮಿ ವಿವೇಕಾನಂದರ ತತ್ತ್ವವನ್ನು ಆಧರಿಸಿ, ಮಿಷನ್ನಿನ ಒಂದು ಪೂರಕ ಸಂಘವಾಗಿ ಬೆಳೆಯಬೇಕು ಎಂಬುದು ರಂಗನಾಥಾನಂದಜೀಯವರ ಆಶಯವಾಗಿತ್ತು.

ವಿವೇಕಾನಂದ ಕೇಂದ್ರವು ಪ್ರತಿಯೊಂದು ಹಂತದಲ್ಲಿಯೂ ಸ್ವಾಮಿ ರಂಗನಾಥಾನಂದರ ಆಶೀರ್ವಾದವನ್ನೂ ಕ್ರಿಯಾತ್ಮಕ ಬೆಂಬಲವನ್ನೂ ಪಡೆದಿದೆ. ಆಗ ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರು ವಿವೇಕಾನಂದ ಶಿಲಾಸ್ಮಾರಕ ಉದ್ಘಾಟನ ಸಮಾರಂಭದಲ್ಲಿ ಭಾಗವಹಿಸುವಂತೆ ಮಾಡಿದವರು ರಂಗನಾಥಾನಂದಜಿ

* ಉಪಾಧ್ಯಕ್ಷರು, ವಿವೇಕಾನಂದ ಕೇಂದ್ರ, ಕನ್ಯಾಕುಮಾರಿ.

ಅವರೇ. ಇಂದಿರಾ ಗಾಂಧಿಯವರು ಭೇಟಿಯಿತ್ತಾಗ ಅವರೇ ಸ್ವತಃ ಉಪಸ್ಥಿತರಿದ್ದರು. ಸ್ಮಾರಕದ ಮುಂದಿನ ಬೆಳವಣಿಗೆಯಾದ ವಿವೇಕಾನಂದ ಕೇಂದ್ರವನ್ನು ಒಂದು ಆಧ್ಯಾತ್ಮಿಕ ಸೇವಾಕೇಂದ್ರವಾಗಿ ಪ್ರಾರಂಭಿಸುವುದರ ಪ್ರಾಮುಖ್ಯವನ್ನು ಅವರು ಇಂದಿರಾ ಗಾಂಧಿಯವರಿಗೆ ವಿವರಿಸಿ ಹೇಳಿದರು.

ವಿವೇಕಾನಂದ ಕೇಂದ್ರವು ಪ್ರಾರಂಭವಾದಾಗ ಸ್ವಾಮಿ ರಂಗನಾಥಾನಂದರು ಅದರ ಪ್ರಾಮುಖ್ಯದ ಬಗ್ಗೆ ಒಂದು ಸಮಾರಂಭದಲ್ಲಿ ಹೀಗೆ ಹೇಳಿದರು:

"ಆಧುನಿಕ ಭಾರತದಲ್ಲಿ ಮಾನವ ಸೇವೆಗೆ ವಿಶಾಲ ಕ್ಷೇತ್ರವಿದೆ ಮತ್ತು ನಿಷ್ಠಾವಂತ ನಾಗರಿಕರ ಮಾನವೀಯ ಸ್ಪರ್ಶವನ್ನು ಅದು ಅಪೇಕ್ಷಿಸುತ್ತದೆ. ವಿವೇಕಾನಂದರು ಮದ್ರಾಸ್, ಕೋಲ್ಕತಾ ಮತ್ತು ಲಾಹೋರ್‌ನಲ್ಲಿ ತಮ್ಮ ಉಪನ್ಯಾಸಗಳಲ್ಲಿ ಈ ವಿಷಯವನ್ನು ವಿವರಿಸಿದ್ದಾರೆ. ಮದ್ರಾಸ್‌ನಲ್ಲಿ ಮಾತನಾಡುವಾಗ ಅವರು ಹೇಳಿದರು: 'ಇದು ನನ್ನ ಯೋಜನೆ. ಇದು ಅತಿ ಬೃಹತ್ತಾಗಿ ಕಾಣಬಹುದು. ಆದರೆ ಇದರ ಆವಶ್ಯಕತೆ ತುಂಬ ಇದೆ. ನೀವು ಕೇಳಬಹುದು, ಹಣವೆಲ್ಲಿದೆ ಎಂದು. ಹಣದ ಆವಶ್ಯಕತೆ ಇಲ್ಲ... ನನಗೆ ಬೇಕಾದ ಹಣ ಮತ್ತು ಬೇರೆಲ್ಲವೂ ಬಂದೇ ಬರುವುವು. ಏಕೆಂದರೆ ಅವು ನನ್ನ ಸೇವಕರು, ನಾನು ಅವುಗಳ ಸೇವಕನಲ್ಲ... ಜನರೆಲ್ಲಿದ್ದಾರೆ? ಅದೇ ಪ್ರಶ್ನೆ. ಮದ್ರಾಸಿನ ಯುವಕರೇ, ನನ್ನ ಭರವಸೆ ನಿಮ್ಮ ಮೇಲಿದೆ. ನಿಮ್ಮ ದೇಶದ ಕರೆಗೆ ನೀವು ಓಗೊಡುತ್ತೀರಾ?

"ಕನ್ಯಾಕುಮಾರಿಯಲ್ಲಿ ವಿವೇಕಾನಂದ ಕೇಂದ್ರದ ಯೋಜನೆಯಡಿಯಲ್ಲಿ ಪ್ರಾರಂಭವಾದ ಸಂನ್ಯಾಸೇತರ, ಸ್ತ್ರೀಪುರುಷರಿಂದ ಒಡಗೂಡಿದ, ನಿಷ್ಠಾವಂತ ಕಾರ್ಯಕರ್ತರ ಸಮುದಾಯವು ಸ್ವಾಮಿ ವಿವೇಕಾನಂದರ ಮೇಲಿನ ಕರೆಗೆ ಸ್ಪಂದಿಸುತ್ತಿದೆ. ಯುವಕರನ್ನು ತೆಗೆದುಕೊಂಡು ಅವರಿಗೆ ತರಬೇತಿಯನ್ನು ನೀಡಿ ಮಾನವಸೇವೆಯ ವಿವಿಧ ಕ್ಷೇತ್ರದಲ್ಲಿ ಕೆಲಸ ಮಾಡಲು ಅವರನ್ನು ದೇಶ ವಿದೇಶಗಳಿಗೆ ಕಳಿಸುವುದೇ ಈ ಯೋಜನೆಯ ಗುರಿಯಾಗಿದೆ. ಈ ಕಾರ್ಯಕರ್ತರು ಮುಂದೆ ಮದುವೆಯಾಗಬಹುದು, ಆಗ ಪತಿ–ಪತ್ನಿಯರಿಬ್ಬರಿಗೂ ಇಲ್ಲಿ ಸೇವೆಗೆ ಅವಕಾಶವಿದೆ. ಇವರು ಗೃಹಸ್ಥರಾಗಿದ್ದು, ಇವರ ಆಸಕ್ತಿಯು ಕೇವಲ ತಮ್ಮ ಕೌಟುಂಬಿಕ ವಲಯಕ್ಕೆ ಮಾತ್ರ ಸೀಮಿತವಾಗಿರದೆ ಇಡೀ ಸಮಾಜವನ್ನು ಅದು ವ್ಯಾಪಿಸಿರುತ್ತದೆ. ಕಾರ್ಯಕರ್ತರ ಮತ್ತು ಅವರ ಕುಟುಂಬದ ಯೋಗಕ್ಷೇಮವನ್ನು ನನಗೆ ತಿಳಿದಿರುವಂತೆ, ಕೇಂದ್ರವು ನೋಡಿಕೊಳ್ಳುತ್ತದೆ. ಹಾಗೂ ಅವರ ಮಕ್ಕಳ ಶಿಕ್ಷಣದ ಜವಾಬ್ದಾರಿಯೂ ಕೇಂದ್ರದ ಮೇಲಿರುತ್ತದೆ. ಕಾರ್ಯಕರ್ತರು ವಿವಾಹಿತರಾಗಿರಲಿ, ಅವಿವಾಹಿತರಾಗರಲಿ ಅವರು ಜನಸೇವೆ (ಬಾಹ್ಯಸಾಧನೆ) ಮತ್ತು ಆಧ್ಯಾತ್ಮಿಕ ಜೀವನ (ಆಂತರಿಕ ಸಾಧನೆ) ಇವೆರಡನ್ನೂ ಒಂದುಗೂಡಿಸುತ್ತಾರೆ. ಹೀಗೆ ಜೀವನ ಮತ್ತು ಧರ್ಮದ ನಡುವಿನ, ಕೆಲಸ ಮತ್ತು ಪೂಜೆಯ ನಡುವಿನ ಅಂತರವನ್ನು ನಿವಾರಿಸಿ 'ಗೀತೆ'ಯ ಆದರ್ಶವಾದ ಜ್ಞಾನ–ಕರ್ಮ–ಭಕ್ತಿಯ ಸಮನ್ವಯಭಾವವನ್ನು ಅನುಸರಿಸುತ್ತಾರೆ.

"ಸ್ವಾಮಿ ವಿವೇಕಾನಂದರು ಪಶ್ಚಿಮದಲ್ಲಿರುವಾಗಲೇ ಇಂತಹ ಒಂದು ಆಂದೋಲನದ ರೂಪರೇಖೆ ಅವರ ಮನಸ್ಸಿನಲ್ಲಿತ್ತು. ಅಮೆರಿಕದಲ್ಲಿ ಅವರು ಬಿರುಗಾಳಿಯಂತೆ ಸುತ್ತಾಡುತ್ತ ಕಾರ್ಯನಿರತರಾಗಿದ್ದರೂ ನಮ್ಮ ದೇಶದ ಜನರ ಸಮಸ್ಯೆಗಳ ಬಗ್ಗೆ ಗಂಭೀರವಾಗಿ ಚಿಂತಿಸುತ್ತ ತಮ್ಮ ಹೆಚ್ಚಿನ ಸಮಯ ಮತ್ತು ಶಕ್ತಿಯನ್ನು ಅದಕ್ಕೆ ವಿನಿಯೋಗಿಸುತ್ತಿದ್ದರು. ಈ ಕುರಿತ ತಮ್ಮ ಭಾವನೆಗಳನ್ನು ಭಾರತದ ಸ್ನೇಹಿತರಿಗೆ, ಭಕ್ತರಿಗೆ ಮತ್ತು ದೇಶಭಕ್ತರಿಗೆ ಸ್ಫೂರ್ತಿದಾಯಕ ಪತ್ರಗಳ ಮೂಲಕ ತಿಳಿಸಿಕೊಡುತ್ತಿದ್ದರು.

"ಬುದ್ಧನ ಹೃದಯವಂತಿಕೆಯನ್ನೂ, ಶಂಕರಾಚಾರ್ಯರ ಬುದ್ಧಿಶಕ್ತಿಯನ್ನೂ ಹೊಂದಿದ್ದ, ನಮ್ಮ ದೇಶದ ಹಾಗೂ ಎಲ್ಲ ದೇಶಗಳ ಬಡವರು ಮತ್ತು ತುಳಿತಕ್ಕೊಳಗಾದವರಿಗಾಗಿ ಕಣ್ಣೀರು ಸುರಿಸಿದ ಆ ಶ್ರೇಷ್ಠ ಆಚಾರ್ಯರ ಉದ್ಘೋಷ ಕರೆಯು ಈಗ ಈ ಚಳುವಳಿಯ ಮುಂದಾಳುಗಳ ಹೃದಯಗಳನ್ನು ಮಿಡಿಯುತ್ತಿದೆ. ಈ ವಿವೇಕಾನಂದ ಕೇಂದ್ರದ ಯೋಜನೆಗಳ ಹಿಂದೆ ರಾಮಕೃಷ್ಣ ಮಹಾಸಂಘದ ಹಿರಿಯರ ಆಶೀರ್ವಾದವೂ ಶುಭಾಕಾಂಕ್ಷೆಯೂ ಬೆಂಗಾವಲಾಗಿ ಇವೆ. ಒಂಬತ್ತು ಅಥವಾ ಹತ್ತು ವರ್ಷಗಳ ಹಿಂದೆ ವಿವೇಕಾನಂದರ

ಶಿಲಾಸ್ಮಾರಕ ಸಮಿತಿಯು ಸ್ಥಾಪನೆಯಾದಾಗಿನಿಂದಲೂ ಈ ಸಂಸ್ಥೆಯ ಕಾರ್ಯದರ್ಶಿಗಳೂ ತೀವ್ರ ಕ್ರಿಯಾಪಟುಗಳೂ ಆದ ಏಕನಾಥ ರಾನಡೆಯವರೊಡನೆ ನಾನು ವೈಯಕ್ತಿಕ ಸಂಬಂಧವನ್ನು ಹೊಂದಿದ್ದೇನೆ."

ಶ್ರೀ ಏಕನಾಥ್ ಅವರು ಸ್ವಾಮಿ ರಂಗನಾಥಾನಂದರ ಇಡೀ ಉಪನ್ಯಾಸದ ಪ್ರತಿಯನ್ನು ಹೊಂದಿದ್ದರು. ಅದರಿಂದ ಈ ಮೇಲೆ ಉದ್ಧರಿಸಿದ ಭಾಗವನ್ನು ಜೀವನವ್ರತಿಗಳ ತರಬೇತಿಯ ಕೈಪಿಡಿಯ ಒಂದು ಭಾಗವಾಗಿ ಮುದ್ರಿಸಲಾಗಿದೆ.

ಸ್ವಾಮಿ ರಂಗನಾಥಾನಂದರು ತುಂಬ ಬಹಿರಂಗವಾಗಿ ಶ್ರೀ ಏಕನಾಥ ಅವರಿಗೆ ಬೆಂಬಲನೀಡುತ್ತಿದ್ದರು. ತುರ್ತು ಪರಿಸ್ಥಿತಿಯ ಅವಧಿಯಲ್ಲಿ ರಾಷ್ಟ್ರೀಯ ಸ್ವಯಂ ಸೇವಕರ ಸಂಘದ ಮುಖಂಡರು ಮತ್ತು ಕಾರ್ಯಕರ್ತರನ್ನು ಸೆರೆಹಿಡಿಯುತ್ತಿರುವಾಗ ಶ್ರೀ ಏಕನಾಥ್ ಅವರನ್ನೂ ಸೆರೆಹಿಡಿಯುವ ಸಾಧ್ಯತೆಗಳಿದ್ದವು. ಆಗ ತಾನೇ ಕೇಂದ್ರವು ಪ್ರಾರಂಭವಾಗಿತ್ತು. ಕೇಂದ್ರದ ಹಿತಾಸಕ್ತಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಶ್ರೀ ಏಕನಾಥ್ ಅವರು ಶ್ರೀಮತಿ ಇಂದಿರಾ ಗಾಂಧಿಯವರನ್ನು ಭೇಟಿಯಾಗಿ ತಾವು ಆರ್.ಎಸ್.ಎಸ್.ಗೆ ಸೇರಿದವರಾದರೂ, ಕೇಂದ್ರದ ಬೆಳವಣಿಗೆಗಾಗಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡಿರುವುದಾಗಿ ತಿಳಿಸಿದರು. ತಮ್ಮನ್ನು ಸೆರೆಹಿಡಿಯಲೇಬೇಕಾದರೂ, ಬದಲಿ ವ್ಯವಸ್ಥೆ ಮಾಡಲು ಸಾಕಷ್ಟು ಸಮಯವನ್ನು ಕೊಡಬೇಕೆಂದು ಇಂದಿರಾ ಗಾಂಧಿಯವರನ್ನು ಕೇಳಿಕೊಂಡರು. ಕನ್ಯಾಕುಮಾರಿಗೆ ಭೇಟಿಯಿತ್ತು. ಕೇಂದ್ರದ ಆವಶ್ಯಕತೆಯನ್ನು ಗುರುತಿಸಿದ್ದ ಇಂದಿರಾ ಗಾಂಧಿಯವರು ಮುನ್ಸೂಚನೆ ನೀಡಿಯೇ ಅವರನ್ನು ಸೆರೆಹಿಡಿಯುವುದಾಗಿ ಏಕನಾಥ್ ಅವರಿಗೆ ಭರವಸೆ ನೀಡಿದ್ದರು. ಈ ಭೇಟಿಯ ವ್ಯವಸ್ಥೆ ಮಾಡಿದವರು ಸ್ವಾಮಿ ರಂಗನಾಥಾನಂದರು. ಅವರಿಗೆ ಇಂದಿರಾ ಗಾಂಧಿಯವರೊಡನೆ ಅಷ್ಟೊಂದು ನಿಕಟತೆ ಇತ್ತು. ಶ್ರೀ ಏಕನಾಥ್ ಅವರನ್ನು ಸೆರೆಹಿಡಿಯಲಿಲ್ಲ.

ವಿವೇಕಾನಂದ ಕೇಂದ್ರವು ಇನ್ನೂ ಶೈಶವಾವಸ್ಥೆಯಲ್ಲಿರುವಾಗಲೇ ೧೯೮೨ರಲ್ಲಿ ಶ್ರೀ ಏಕನಾಥ್ ಅವರು ನಿಧನರಾದರು. ಆ ಸಂದರ್ಭದಲ್ಲಿ ಸ್ವಾಮಿ ರಂಗನಾಥಾನಂದರು ಕೇಂದ್ರದ ಮುಖಂಡರ ಹಿಂದೆ ಹೆಬ್ಬಂಡೆಯಂತೆ ಬೆಂಬಲವಾಗಿ ನಿಂತರು.

ನಾನು ವೈಯಕ್ತಿಕವಾಗಿ ರಾಮಕೃಷ್ಣ ಮಿಷನ್ನಿನ ಸಂನ್ಯಾಸಿಗಳ ಸಂಪರ್ಕವನ್ನು ಪಡೆದದ್ದು ೧೯೭೭ರಲ್ಲಿ, ನಾನು ಕೇಂದ್ರವನ್ನು ಸೇರಿದ ಮೇಲೆ. ತರಬೇತಿಗಾರರ ಪ್ರತಿತಂಡದವರನ್ನೂ ಆಶೀರ್ವದಿಸಲು ಶ್ರೀ ಏಕನಾಥ್ ಅವರು ರಾಮಕೃಷ್ಣ ಮಿಷನ್ನಿನ ಸಾಧುಗಳನ್ನು ಕರೆಸುತ್ತಿದ್ದರು. ಸ್ವಾಮಿ ರಂಗನಾಥಾನಂದರಾಗಲಿ, ಸ್ವಾಮಿ ಸ್ಮರಣಾನಂದರಾಗಲಿ, ಸ್ವಾಮಿ ಗೌತಮಾನಂದರಾಗಲಿ ಅಥವಾ ಸ್ವಾಮಿ ಬ್ರಹ್ಮೇಶಾನಂದರಾಗಲಿ, ಯಾರೇ ಆಗಲಿ ಅವರೆಲ್ಲರ ಪ್ರೋತ್ಸಾಹ ಮತ್ತು ಪ್ರೀತಿಗಳಿಗೆ ನಾನು ಪಾತ್ರಳಾಗಿದ್ದೇನೆ. ಹಾಗೆಯೇ ಕೇಂದ್ರದ ಕಾರ್ಯಕರ್ತರನೇಕರು ಕೂಡ.

೧೯೮೪ರಲ್ಲಿ ಕನ್ಯಾಕುಮಾರಿಯಲ್ಲಿ ವಿವೇಕಾನಂದ ಕೇಂದ್ರ ವಿದ್ಯಾಲಯದ ಶಿಲಾನ್ಯಾಸಕ್ಕಾಗಿ ಸ್ವಾಮಿ ರಂಗನಾಥಾನಂದರನ್ನು ಆಹ್ವಾನಿಸಿದಾಗ ಮೊಟ್ಟಮೊದಲು ನನಗೆ ಸ್ವಾಮಿ ರಂಗನಾಥಾನಂದರ ಸಂಪರ್ಕವುಂಟಾಯಿತು. ನಾನು ಆಗ ಶಾಲೆಯ ಪ್ರಾಂಶುಪಾಲಳಾಗಿದ್ದುದರಿಂದ ವೈಯಕ್ತಿಕವಾಗಿ ನನಗೆ ಅದೊಂದು ದೊಡ್ಡ ಸೌಭಾಗ್ಯ. ಅಲ್ಲಿಯವರೆಗೂ ಸ್ವಾಮೀಜಿಯವರು ಬಂದಾಗಲೆಲ್ಲ ಶ್ರೋತೃಗಳ ಮಧ್ಯೆ ಕುಳಿತು ಅವರ ಸ್ಫೂರ್ತಿದಾಯಕ ಉಪನ್ಯಾಸಗಳನ್ನು ಕೇಳುತ್ತಿದ್ದೆ, ಅಷ್ಟೆ. ವೈಯಕ್ತಿಕವಾಗಿ ಅವರೊಡನೆ ಮಾತುಕತೆಯಾಡುವ ಅವಕಾಶ ದೊರೆತಿರಲಿಲ್ಲ.

ಈ ಕಾರ್ಯಕ್ರಮದಲ್ಲಿ ವಂದನಾರ್ಪಣೆಯ ಜವಾಬ್ದಾರಿ ನನ್ನದಾಗಿತ್ತು. ಸ್ವಾಮೀಜಿಯವರ ಘನತೆ ಗಾಂಭೀರ್ಯ ಹಾಗೂ ಅವರ ಮುಖದಲ್ಲಿ ಹೊರ ಹೊಮ್ಮುತ್ತಿದ್ದ ಸರಳತೆ ಮತ್ತು ಪ್ರೇಮ ನನ್ನನ್ನು ಎಷ್ಟರಮಟ್ಟಿಗೆ ಮುಗ್ಧಳಾಗಿಸಿದವು ಎಂದರೆ ವಂದನೆಯ ಕೆಲವೇ ಕೆಲವು ಮಾತುಗಳನ್ನಾಡುವುದೆಂದರೆ ಕೃತಘ್ನತೆಯೇ ಆಗುವುದೆಂದು

ನನಗನಿಸಿತು. ನನಗಿದು ಅಸಾಧ್ಯವಾಗಿದ್ದುದರಿಂದ ನಾನು ಹಾಗೆ ಮಾಡಲಿಲ್ಲ. ನಾನು ಹೇಳಿದೆ: "ಸ್ವಾಮೀಜಿಯವರ ಅಪಾರ ಪ್ರೇಮದಿಂದ ನಾವು ಎಷ್ಟೊಂದು ಅಭಿಭೂತರಾಗಿದ್ದೇವೆಂದರೆ ಅದಕ್ಕಾಗಿ ನಾವು ಅವರಿಗೆ ಚಿರಋಣಿಗಳಾಗಿರಲು ಬಯಸುತ್ತೇವೆ. ಅಷ್ಟೇ ಅಲ್ಲದೆ, ಅವರು ನಮ್ಮೊಂದಿಗಿರುವ ಇನ್ನೂ ಅನೇಕ ಸಂದರ್ಭಗಳನ್ನು ನಾವು ನಿರೀಕ್ಷಿಸುತ್ತೇವೆ." ಕಾರ್ಯಕ್ರಮದ ನಂತರ ವಂದನಾರ್ಪಣೆಯ ಸಂದರ್ಭದಲ್ಲಿ 'ವಂದನೆ' ಶಬ್ದವನ್ನೇ ಉಪಯೋಗಿಸದಿದ್ದುದಕ್ಕಾಗಿ ಕೆಲವರು ನನ್ನನ್ನು ಪ್ರಶ್ನಿಸಿದರು. ಆದರೆ ಸ್ವಾಮೀಜಿಯವರು ಅನಂತರ ನನ್ನನ್ನು ಕರೆದು ನನ್ನ ಭಾವಪೂರ್ಣ ಮಾತುಗಳಿಗಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಅವರ ವ್ಯಕ್ತಿತ್ವದ ಈ ಅಂಶ ನನಗೆ ತುಂಬ ಆಕರ್ಷಕವಾಯಿತು. ವಿವೇಕಾನಂದ ಕೇಂದ್ರದ ಮಾಜಿ ಅಧ್ಯಕ್ಷರಾದ ಡಾ॥ ಲಕ್ಷ್ಮೀಕುಮಾರಿಯವರು 'ವಿವೇಕಾನಂದ ಕೇಂದ್ರ ವೈದಿಕ ದರ್ಶನ ಪ್ರತಿಷ್ಠಾನ'ದ ನಿರ್ದೇಶಕರಾಗಿ ನಿಯುಕ್ತರಾದಾಗ ಸ್ವಾಮೀಜಿಯವರಿಗೆ ಪತ್ರ ಬರೆದರು. ಅವರು ಕೂಡಲೇ ತಮ್ಮ ಆಶೀರ್ವಾದಪೂರ್ವಕ ಪತ್ರ ಬರೆದದ್ದು ಮಾತ್ರವಲ್ಲದೆ ಸಂಸ್ಥೆಗಾಗಿ ಹಣವನ್ನೂ ಕಳಿಸಿದರು. ಆಧ್ಯಾತ್ಮಿಕ ವ್ಯಕ್ತಿಯು 'ಸರ್ವಾಂತರ್ಗತ'ರಾಗಿರುತ್ತಾರೆ; ಸುತ್ತಲೂ ನಡೆಯುವ ಎಲ್ಲ ಸತ್ಕಾರ್ಯ ಗಳಿಗೂ ಸಹಾಯ ಮಾಡುತ್ತಾರೆ.

ಬೇಲೂರು ಮಠದಲ್ಲಿ ರಾಮಕೃಷ್ಣ ಮಿಷನ್ನಿನ ಶತಮಾನೋತ್ಸವ ಸಂದರ್ಭದಲ್ಲಿ ನನಗೆ ಇನ್ನೊಂದು ಅನುಭವವಾಯಿತು. ಅನೇಕ ಭಾಷಣಕಾರರಲ್ಲಿ ನಾನೂ ಒಬ್ಬಳಾಗಿದ್ದೆ. ಸ್ವಾಮಿ ರಂಗನಾಥಾನಂದರು ಆ ಸಭೆಯಲ್ಲಿ ಉಪಸ್ಥಿತರಿದ್ದರು. ಅವರು ನನ್ನ ಭಾಷಣಗಳನ್ನು ಕೇಳಿ, ಅನಂತರ ನನಗೆ ಮತ್ತು ಡಾ॥ ಲಕ್ಷ್ಮೀ ಕುಮಾರಿಯವರಿಗೆ ಅವರನ್ನು ಸಂಧಿಸಬೇಕೆಂದು ಸಂದೇಶ ಕಳಿಸಿದರು. ನಾನು ಅವರನ್ನು ಸಂಧಿಸಿದಾಗ ಮತ್ತೆ ನನ್ನ ಭಾಷಣವನ್ನು ಅವರು ಪ್ರಶಂಸಿಸಿದರು. ಕಲ್ಪಿಸಿಕೊಳ್ಳಿ! ಸ್ವಾಮೀಜಿಯವರು ತಾವೇ ಸ್ವತಃ ಪ್ರಸಿದ್ಧ ವಾಗ್ಮಿಗಳು, ಯಾವುದೇ ವಿಷಯದ ಮೇಲಾದರೂ ಸಮರ್ಥವಾಗಿ ಮಾತನಾಡಿ ಸ್ಫೂರ್ತಿಯನ್ನೂ, ಹೊಸ ಒಳನೋಟವನ್ನೂ ನೀಡಬಲ್ಲಂಥವರು. ಆದರೂ ಯುವಭಾಷಣಕಾರಳೊಬ್ಬಳನ್ನು ಕರೆದು ಹೃದಯತುಂಬಿ ಪ್ರಶಂಸಿಸುವಷ್ಟು ವಿಶಾಲ ಹೃದಯ ಅವರದಾಗಿತ್ತು.

ಕೇಂದ್ರದ ಕಾರ್ಯಕರ್ತರು ಬೇಲೂರಿನಲ್ಲಿ ಅವರನ್ನು ಸಂಧಿಸಲು ಹೋದಾಗಲೆಲ್ಲ ಭೇಟಿಯ ಸಮಯ ಸೀಮಿತವಾಗಿರುತ್ತಿತ್ತು, ಏಕೆಂದರೆ ಅವರಿಗೆ ತುಂಬ ವಯಸ್ಸಾಗಿತ್ತು ಹಾಗೂ ಅವರು ಸಂಘಾಧ್ಯಕ್ಷರಾಗಿದ್ದರು. ಆದರೂ ಅವರು ಅತ್ಯಂತ ಆದರದಿಂದ ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿದ್ದ ಕೇಂದ್ರದ ಕಾರ್ಯಗಳ ಬಗ್ಗೆ ವಿಚಾರಿಸುತ್ತಿದ್ದರು. ಸಮಯ ಮೀರಿದಾಗ ಅವರ ಕಾರ್ಯದರ್ಶಿಗಳು ಎಚ್ಚರಿಸಿದರೂ ಅವರು ಅದನ್ನು ಕಡೆಗಣಿಸುತ್ತಿದ್ದರು. ಆಗ ಅವರ ಕಾರ್ಯದರ್ಶಿ ಸ್ವಾಮಿಗಳು ನಾವು ಹೊರಟುಹೋಗಬೇಕೆಂದು ನಮಗೆ ಆಂಗಿಕ ಸೂಚನೆ ನೀಡುತ್ತಿದ್ದರು. ಆದರೆ, ನಾವು ಎದ್ದುಹೋಗಲು ಪ್ರಯತ್ನಿಸಿದಾಗ, ರಂಗನಾಥಾನಂದರು ಕುಳಿತುಕೊಳ್ಳಲು ಹೇಳಿ ಮಾತು ಮುಂದುವರಿಸುತ್ತಿದ್ದರು. ಅವರು ಕಳಕಳಿಯಿಂದ ವಿಚಾರಿಸುವುದು, ಕೆಲವು ಪುಸ್ತಕಗಳನ್ನು ಕೊಡುವುದು, ಅವರ ವಾತ್ಸಲ್ಯಮಯ ಮುಗುಳ್ನಗೆ ಕಾರ್ಯಕರ್ತರೆಲ್ಲರನ್ನೂ ಮುಗ್ಧರನ್ನಾಗಿಸುತ್ತಿದ್ದವು. ವಿವೇಕಾನಂದ ಕೇಂದ್ರದಿಂದ ಅವರು ಏನನ್ನು ನಿರೀಕ್ಷಿಸಿದ್ದರೋ ಅದು ಪೂರ್ತಿಯಾಗುತ್ತಿರುವುದರ ಬಗ್ಗೆ ತಮ್ಮ ಸಂತೋಷವನ್ನು ಮನತುಂಬಿ ವ್ಯಕ್ತಪಡಿಸುತ್ತಿದ್ದರು. ಸ್ವಾಮಿ ರಂಗನಾಥಾನಂದರ ಮಾತುಗಳು ನಮಗೆಲ್ಲರಿಗೂ ಮುಂದುವರಿಯಲು ಸ್ಫೂರ್ತಿಯನ್ನು ನೀಡಲಿ.

* * * *

# ೬೭. ಪ್ರೇಮಮೂರ್ತಿ

**–ಕೇದಾರನಾಥ್ ಲಾಭ್***

ಸ್ವಾಮಿ ರಂಗನಾಥಾನಂದರು ಅತ್ಯುದಾತ್ತ ವ್ಯಕ್ತಿ. 'ಕಾಮದೂರ ಪ್ರೇಮ ಸಾಗರ' ಎಂದು ಅವರ ಪವಿತ್ರ ಹೆಸರನ್ನು ಕಾಲಪ್ರಸ್ತರದ ಮೇಲ್ದುದಿಯಲ್ಲಿ ಕೆತ್ತಬಹುದು. ಅವರ ಶ್ರೇಷ್ಠ ಮಾನವತಾವಾದಿಯಾಗಿದ್ದರು. ಪ್ರಪಂಚದಾದ್ಯಂತ ವೇದಾಂತವನ್ನೂ ಶಾಸ್ತ್ರಗಳ ವಿಶ್ವಸಂದೇಶವನ್ನೂ ಅದ್ಭುತ ರೀತಿಯಲ್ಲಿ ಬೋಧಿಸಿದರು. ಅಪಾರ ವಿದ್ವತ್ತು. ವೈಜ್ಞಾನಿಕ ಮನೋಭಾವ ಮತ್ತು ಆಧ್ಯಾತ್ಮಿಕ ಸಿದ್ಧಿ ಇವುಗಳಿಂದ ಕೂಡಿದ ಹಿಮಾಲಯಸದೃಶ ವ್ಯಕ್ತಿತ್ವ ಅವರದು. ಆದರೆ ಇವೆಲ್ಲವನ್ನೂ ಮೀರುವಂತಹುದು ಅವರ ಪ್ರೇಮಪೂರ್ಣ ವ್ಯಕ್ತಿತ್ವ. ಅವರು ತಮ್ಮ ಮಾತೃಭೂಮಿಯನ್ನೂ ಅಲ್ಲಿಯ ಜನರನ್ನೂ ಪ್ರೀತಿಸಿದರು. ಬಡವರನ್ನು, ಅನಾಥರನ್ನು, ಅಜ್ಞರನ್ನು, ದುಃಖಿತರನ್ನು, ಸ್ತ್ರೀಪುರುಷರನ್ನು, ಮೇಲುಕೀಳ್ವರ್ಗದವರನ್ನೂ ಮತ್ತು ಇಡೀ ಮಾನವಕೋಟಿಯನ್ನು ಪ್ರೀತಿಸಿದರು. ಎಲ್ಲರನ್ನೂ ಆಕರ್ಷಿಸುವ ವ್ಯಕ್ತಿತ್ವ ಅವರದು. ಅವರ ಸಾಂತ್ವನದ ಸ್ಪರ್ಶವೇ ಯಾರನ್ನಾದರೂ ಮೇಲಕ್ಕೆತ್ತಬಲ್ಲದು. ಅವರಿಗೆ ಬಾಲ್ಯದಲ್ಲಿ ಕೊಡಲಾಗಿದ್ದ ಹೆಸರು 'ಶಂಕರನ್' ಎಂಬುದು ಸೂಕ್ತವಾಗಿಯೇ ಇದೆ. ಅವರ ತುಂಬು ಉತ್ಸಾಹದ ಜೀವನವು ನಿಷ್ಕಾಮ ಪ್ರೀತಿ, ನಿರಪೇಕ್ಷ ಸಹಾಯ ಮತ್ತು ಅಹೇತುಕ ಅನುಗ್ರಹ– ಇವುಗಳ ಸಾಮರಸ್ಯವಾಗಿತ್ತು.

ಸ್ವಾಮಿ ರಂಗನಾಥಾನಂದರೊಂದಿಗೆ ಸುದೀರ್ಘವೂ ನಿಕಟವೂ ಆದ ಸಂಬಂಧವನ್ನು ಹೊಂದಿರುವ ಭಾಗ್ಯ ನನ್ನದಾಗಿತ್ತು. ನಾನು ಪ್ರಥಮ ಬಾರಿಗೆ ಅವರನ್ನು ೧೯೮೫ರ ಡಿಸೆಂಬರ್ ಕೊನೆಯ ವಾರದಲ್ಲಿ ಬೇಲೂರು ಮಠದಲ್ಲಿ ಭೇಟಿಯಾದೆ. ಆ ವೇಳೆಗಾಗಲೇ ನಾನು ಛಾಪ್ರಾದಲ್ಲಿ ಶ್ರೀರಾಮಕೃಷ್ಣರ ಹೆಸರಿನಲ್ಲಿ ಆಶ್ರಮವನ್ನು ಪ್ರಾರಂಭಿಸಿರುವುದು ಮತ್ತು 'ವಿವೇಕಶಿಖಾ' ಎಂಬ ಪತ್ರಿಕೆಯನ್ನು ನಡೆಸುತ್ತಿರುವುದು ಅವರಿಗೆ ತಿಳಿದಿತ್ತು. ಆಗ ಅದು ರಾಮಕೃಷ್ಣ–ವಿವೇಕಾನಂದ ಸಾಹಿತ್ಯದ ಏಕೈಕ ಹಿಂದೀ ಪತ್ರಿಕೆಯಾಗಿತ್ತು. ಛಾಪ್ರಾವು ಲಾಟು ಮಹಾರಾಜರ (ಸ್ವಾಮಿ ಅದ್ಭುತಾನಂದರು) ಹುಟ್ಟೂರು. ಇವರು ಶ್ರೀರಾಮಕೃಷ್ಣರ ಶಿಷ್ಯರ ಪೈಕಿ ಬಿಹಾರ ರಾಜ್ಯಕ್ಕೆ ಸೇರಿದ ಏಕೈಕ ವ್ಯಕ್ತಿ. ಇವರು ಕುಗ್ರಾಮದವರೂ ಅನಕ್ಷರಸ್ಥರೂ ಆಗಿದ್ದರೂ, ಶ್ರೀರಾಮಕೃಷ್ಣರ ಸ್ಪರ್ಶದಿಂದ ಬ್ರಹ್ಮಜ್ಞಾನಿಗಳಾದರು. ಅವರನ್ನು ಶ್ರೀರಾಮಕೃಷ್ಣರ ಒಂದು ಪವಾಡವೇ ಎಂದು ಹೇಳಬಹುದು. ಸ್ವಾಮಿ ರಂಗನಾಥಾನಂದರಿಗೆ ಲಾಟು ಮಹಾರಾಜರ ಮೇಲೆ ತುಂಬ ಗೌರವವಿತ್ತು. ಯುವ ಸಮ್ಮೇಳನದಲ್ಲಿ ಭಾಗವಹಿಸಲು ನಾನು ಬೇಲೂರು ಮಠಕ್ಕೆ ಬಂದಿರುವೆನೆಂದು ತಿಳಿದು ಸ್ವಾಮಿ ರಂಗನಾಥಾನಂದರು ಹೇಳಿಕಳಿಸಿದರು. ಜಗದ್ವಿಖ್ಯಾತ ಮೇರುಸದೃಶ ಶ್ರೇಷ್ಠ ವ್ಯಕ್ತಿಗಳಾದ ಸ್ವಾಮಿಗಳು ನನ್ನಂಥ ಸಾಮಾನ್ಯ ವ್ಯಕ್ತಿಯೊಬ್ಬನನ್ನು ಸಂಧಿಸಬಯಸುತ್ತಾರೆ ಎಂಬುದನ್ನು ತಿಳಿದು ನನಗೆ ಅತ್ಯಾಶ್ಚರ್ಯವೂ ಭಯವೂ ಉಂಟಾಯಿತು.

ಅವರ ಪಾದಸ್ಪರ್ಶ ಮಾಡಿದ ಕೂಡಲೇ ಅವರು ನನ್ನನ್ನು ಮೇಲಕ್ಕೆತ್ತಿ, ತಮ್ಮ ಎಡಗೈಯನ್ನು ನನ್ನ ಬಲ ಹೆಗಲ ಮೇಲಿರಿಸಿ ಹೇಳಿದರು: "ನೀವು ಛಾಪ್ರಾದಲ್ಲಿ ಒಂದು ಆಶ್ರಮವನ್ನು ಸ್ಥಾಪಿಸಿದ್ದೀರಿ ಮತ್ತು ಹಿಂದೀ ಮಾಸಿಕವನ್ನು ನಡೆಸುತ್ತಿದ್ದೀರಿ. ಇದು ತುಂಬ ಸಂತೋಷದ ವಿಷಯ." ಅನಂತರ ಅವರು ಕೆಲವು ಅಮೂಲ್ಯ ಸಲಹೆಗಳನ್ನೂ ಮಾರ್ಗದರ್ಶನವನ್ನೂ ನೀಡಿದರು. ಆಶ್ರಮಕ್ಕಾಗಿ ಜಾಗವನ್ನು ಕೊಂಡುಕೊಳ್ಳುವುದು, ಕಟ್ಟಡಗಳನ್ನು

---

* ಸಂಸ್ಥಾಪಕರು, ರಾಮಕೃಷ್ಣ ಮಿಷನ್ ಆಶ್ರಮ, ಛಾಪ್ರಾ, ಬಿಹಾರ.

ಕಟ್ಟುವುದು ಮುಂತಾದವುಗಳಿಗೆ ಬೇಕಾಗುವ ದೊಡ್ಡ ಪ್ರಮಾಣದ ಹಣವನ್ನು ಸಂಗ್ರಹಿಸುವುದು ನನಗೆ ಕಷ್ಟವಾಗಿದೆ ಎಂದು ನಮ್ರವಾಗಿ ನಾನು ಅವರಿಗೆ ತಿಳಿಸಿದಾಗ ಅವರು ಕೂಡಲೇ ನನಗೆ ಸಮಾಧಾನ ಮಾಡಿದರು: "ಯಾವುದೇ ವಿಚಾರ ಅಸಾಧ್ಯ ಎಂದು ನೀವು ಯೋಚಿಸಲೇಬೇಡಿ. ಅನಂತ ಶಕ್ತಿ ನಿಮ್ಮೊಳಗಿದೆ, ಕೇವಲ ಅದನ್ನು ಹೊರಹೊಮ್ಮಿಸಬೇಕಾಗಿದೆ. ಆ ಶಕ್ತಿಯ ಮೂಲಕ ನೀವು ಏನು ಬಯಸುತ್ತೀರೋ ಅದನ್ನು ಸಾಧಿಸಬಹುದು. ಹಣ ಸಂಗ್ರಹಿಸುವ ಪ್ರಾಮಾಣಿಕ ಪ್ರಯತ್ನ ಮಾಡಿ, ಠಾಕೂರರಲ್ಲಿಯೂ (ಶ್ರೀರಾಮಕೃಷ್ಣ), ಸ್ವಾಮೀಜಿಯವರಲ್ಲಿಯೂ (ವಿವೇಕಾನಂದ) ಹಾಗೂ ನಿಮ್ಮಲ್ಲಿಯೂ ಪೂರ್ಣ ಶ್ರದ್ಧೆ ಇರಲಿ. ನಾನು ಕೋಟಿಗಟ್ಟಲೆ ಹಣದ ವ್ಯವಸ್ಥೆ ಮಾಡಬಲ್ಲೆ. ಆದರೆ ಯಾರಿಗೆ ಕೊಡಲಿ? ವ್ಯಕ್ತಿ ಎಲ್ಲಿದ್ದಾರೆ? ಬಹಳ ಕಾಲದ ನಂತರ ನಿಮ್ಮಂತಹ ವ್ಯಕ್ತಿಯೊಬ್ಬರು ಈಗ ಸಿಕ್ಕಿದ್ದಾರೆ. ಹಣದ ಬಗ್ಗೆ ಚಿಂತಿಸಬೇಡಿ. ಆವಶ್ಯಕ ಹಣದ ವ್ಯವಸ್ಥೆ ನಾನು ಮಾಡುತ್ತೇನೆ, ನೀವು ಕಾರ್ಯೋನ್ಮುಖರಾಗಿ."

ಅವರೊಡನೆ ಈ ಪ್ರಥಮ ಭೇಟಿಯ, ಪ್ರಥಮ ಸ್ಪರ್ಶದ ಮತ್ತು ಅವರ ಅಮೃತೋಪಮವಾದ ಸ್ಫೂರ್ತಿವಾಣಿಯ ಪ್ರಭಾವವನ್ನು ವ್ಯಕ್ತಪಡಿಸಲು ನಾನು ಅಸಮರ್ಥ. ಅವರ ಸ್ಪರ್ಶಮಾತ್ರವೇ ನನ್ನನ್ನು ಉನ್ನತಿಗೇರಿಸಿತು. ಹೊಸ ಶಕ್ತಿ, ಹೊಸ ಉತ್ಸಾಹ ನನ್ನಲ್ಲಿ ಸಂಚಾರವಾಯಿತು.

ಸ್ವಾಮೀಜಿಯವರು ಜಾಗ ಮತ್ತು ಕಟ್ಟಡಗಳಿಗಾಗಿ ಏಳು ಲಕ್ಷ ರೂಪಾಯಿಗಳನ್ನು ಕಳಿಸಿಕೊಟ್ಟರು, ಹೈದರಾಬಾದಿನ ಪ್ರಸಿದ್ಧ ವಾಸ್ತುಶಿಲ್ಪಿಗಳಾದ ಶ್ರೀ ಜಿ.ವಿ. ರೆಡ್ಡಿಗಳ ಮೂಲಕ ಆಶ್ರಮದ ನಕಾಶೆಯನ್ನು ಮಾಡಿಸಿಕೊಟ್ಟರು. 'ವಿವೇಕಶಿಖಾ' ಪತ್ರಿಕೆಗೆ ಅನೇಕ ಜಾಹೀರಾತುಗಳನ್ನು ಕೊಡಿಸಿದರು ಮತ್ತು ತಂದೆ, ಸ್ನೇಹಿತ, ಗುರುವಿನಂತೆ ಹೆಜ್ಜೆಹೆಜ್ಜೆಗೂ ನನಗೆ ಮಾರ್ಗದರ್ಶನ ನೀಡಿದರು. ಈ ಎಲ್ಲ ಪರಿಶ್ರಮದ ಹಿಂದೆ ಇದ್ದ ಕಾರಣವೇನು? ಉದಾತ್ತ ಧ್ಯೇಯದ ಕಡೆ ಅವರಿಗಿದ್ದ ಒಲವು.

ಸುಮಾರು ಎರಡು ಎಕರೆ ಜಾಗವನ್ನು ಕೊಂಡುಕೊಳ್ಳಲಾಯಿತು ಮತ್ತು ಆಶ್ರಮದ ಕಟ್ಟಡವು ಈಗ ಉದ್ಘಾಟನೆಗೆ ಸಿದ್ಧವಾಯಿತು. ಅದರ ಉದ್ಘಾಟನೆಯನ್ನು ತಾವೇ ಮಾಡಬೇಕೆಂದು ಸ್ವಾಮಿ ರಂಗನಾಥಾನಂದರನ್ನು ನಾನು ಪ್ರಾರ್ಥಿಸಿಕೊಂಡಾಗ ಅವರು ಅದಕ್ಕೆ ಒಪ್ಪಿಕೊಂಡರು. ಅಲ್ಲಿ ಎಲ್ಲ ವ್ಯವಸ್ಥೆಯನ್ನು ನೋಡಿಕೊಂಡು ಬರಲು ಅವರು ತಮ್ಮ ಒಬ್ಬ ಸಹವರ್ತಿಗಳನ್ನು ಕಳಿಸಿಕೊಟ್ಟರು. ಅವರು ತಂಗಬೇಕಾದ ಕೊಠಡಿಯು ಅಷ್ಟು ಸಮರ್ಪಕವಾಗಿಲ್ಲದಿದ್ದುದನ್ನು ನೋಡಿ, ಆ ಸಹವರ್ತಿಗಳು ಕೋಪಾವಿಷ್ಟರಾಗಿ, ತಾವು ಬರುವ ಕಾರ್ಯಕ್ರಮವನ್ನು ರದ್ದುಗೊಳಿಸಬೇಕೆಂದು ಸ್ವಾಮಿ ರಂಗನಾಥಾನಂದರನ್ನು ಫೋನಿನ ಮೂಲಕ ಪ್ರಾರ್ಥಿಸಿಕೊಂಡರು. ಆದರೆ ಎಲ್ಲ ವ್ಯವಸ್ಥೆಗಳಾಗಿವೆ. ಜನರು ಅವರ ಬರುವಿಕೆಯನ್ನೇ ಉತ್ಸಾಹದಿಂದ ನಿರೀಕ್ಷಿಸುತ್ತಿದ್ದಾರೆ. ನನಗೆ ತುಂಬ ಭಯವಾಗುತ್ತಿತ್ತು; ಬಹಳ ಆತಂಕದಲ್ಲಿದ್ದೆ. ಆದರೆ ಸ್ವಾಮೀಜಿಯವರು ಉದಾತ್ತ ವ್ಯಕ್ತಿಗಳಾಗಿದ್ದರು. ಅವರು ದೂರವಾಣಿಯ ಮೂಲಕ ಏನು ಸಮಸ್ಯೆ ಎಂದು ವಿಚಾರಿಸಿದರು. ನಾನು ಹೇಳಿದ ಮೇಲೆ ಅವರು ನುಡಿದರು: "ಸ್ವಲ್ಪ ತೊಂದರೆಗಳಿದ್ದರೆ ಏನಂತೆ? ಎಷ್ಟಾದರೂ ನಾವು ಸಾಧುಗಳು. ಸಣ್ಣಪುಟ್ಟ ಅನಾನುಕೂಲತೆಗಳಿಗಾಗಿ ತಲೆಕೆಡಿಸಿಕೊಳ್ಳಬಾರದು. ನಾನು ಬರುತ್ತೇನೆ. ಆತಂಕ ಬೇಕಿಲ್ಲ. ನಿಮ್ಮ ಸಿದ್ಧತೆಗಳನ್ನು ಮುಂದುವರಿಸಿ." ಇದು ಅವರ ಔದಾರ್ಯ ಮತ್ತು ಅನುಗ್ರಹವೇ ಆಗಿತ್ತು.

ತಮ್ಮ ಆರೋಗ್ಯ ಅಷ್ಟು ಸರಿಯಿಲ್ಲದಿದ್ದರೂ ಸ್ವಾಮೀಜಿಯವರು ಆಗಮಿಸಿದರು, ವ್ಯವಸ್ಥೆಗಳ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರು. ೧೯೭೨ರಏಪ್ರಿಲ್ ೧೧ ರಾಮನವಮಿಯ ದಿನದಂದು ಆಶ್ರಮದ ಉದ್ಘಾಟನೆಯನ್ನು ನೆರವೇರಿಸಿದರು. ರಾಮಕೃಷ್ಣ ಮಹಾಸಂಘದ ಬೇರೆ ಬೇರೆ ಕೇಂದ್ರಗಳಿಂದ ಅನೇಕ ಸಾಧುಗಳು ಆಗಮಿಸಿದ್ದರು. ಸ್ವಾಮೀಜಿಯವರು ಊಟದ ಸಮಯದಲ್ಲಿ ಪ್ರತಿ ಟೇಬಲ್ಲಿನ ಹತ್ತಿರವೂ ಹೋಗಿ ಎಲ್ಲ ಸರಿಯಿದೆಯೇ

ಎಂದು ವಿಚಾರಿಸುತ್ತಿದ್ದರು. ನಮ್ಮ ವ್ಯವಸ್ಥೆ, ನಿಷ್ಠೆ ಮತ್ತು ಸೇವೆಯನ್ನು ನೋಡಿ ಅವರು ತುಂಬ ಸಂತೋಷಪಟ್ಟರು.

ಸ್ವಾಮೀಜಿಯವರಲ್ಲಿ ಒಂದು ವಿಶೇಷ ಗುಣವಿತ್ತು. ಯಾರಾದರೂ ಒಂದು ಸಣ್ಣ ಸತ್ಕಾರ್ಯವನ್ನು ಮಾಡಿದರೂ ಅವರನ್ನು ಬಹಳವಾಗಿ ಪ್ರಶಂಸಿಸುತ್ತಿದ್ದರು. ನಾನು ಒಮ್ಮೆ ಅವರ ಶಿಷ್ಯರಾದ ಮಧುಕರಲಾಲ ಕರ್ಣರೊಂದಿಗೆ ಬೇಲೂರು ಮಠಕ್ಕೆ ಹೋಗಿದ್ದೆ. ನಾವು ಬಂದಿರುವುದು ಗೊತ್ತಾದ ಕೂಡಲೇ ತಮ್ಮನ್ನು ಭೇಟಿಯಾಗಬೇಕೆಂದು ಹೇಳಿಕಳಿಸಿದರು. ನಾವು ಅವರ ಕೊಠಡಿಗೆ ಹೋದೆವು. ಆಗ ಸಂಜೆ ಎಂಟು ಗಂಟೆ. ಅವರು ಮಂಚದ ಮೇಲೆ ಮಲಗಿಕೊಂಡು 'ವಿವೇಕಶಿಖಾ' ಓದುತ್ತಿದ್ದರು. ನನ್ನನ್ನು ಕಂಡಕೂಡಲೇ ಅವರು ಹೇಳಿದರು: "ಓಹ್, ನೀವು ಒಳ್ಳೆಯ ಕೆಲಸ ಮಾಡಿದಿರಿ. ನಾನು ಛಾಪ್ರಾದಲ್ಲಿ ಮಾಡಿದ ಭಾಷಣವನ್ನು ಬಹಳ ಸುಂದರವಾಗಿ ಬರವಣಿಗೆಗೆ ಇಳಿಸಿದ್ದೀರಿ. ನಾನು ಓದುತ್ತಿರುವಾಗ ನನ್ನ ಮಾತನ್ನೇ ನಾನು ಕೇಳುತ್ತಿದ್ದೇನೆ ಎಂದು ಅನ್ನಿಸುತ್ತಿದೆ. ಇದು ಎಲ್ಲ ಭಾರತೀಯ ಭಾಷೆಗಳಿಗೂ ಅನುವಾದಗೊಳ್ಳಲಿ." ಭಾಷಣವು ಹಿಂದಿಯಲ್ಲಿತ್ತು. ಅಲ್ಪ ಸಮಯದಲ್ಲಿಯೇ ವಿವಿಧ ಭಾಷೆಯಲ್ಲಿ ಪುಸ್ತಕರೂಪದಲ್ಲಿ ಅದು ಪ್ರಕಟವಾಯಿತು. ಹಿಂದಿಯಲ್ಲಿ ಪುಸ್ತಕದ ಹೆಸರು 'ಗೃಹಸ್ಥಧರ್ಮ.'

ಅದೇ ರಾತ್ರಿ ಶ್ರೀ ಕರ್ಣ ಅವರು ಗುರುದೇವರ ಪವಿತ್ರಪಾದವನ್ನು ಒತ್ತಬೇಕೆಂಬ ತಮ್ಮ ಆಶಯವನ್ನು ನನಗೆ ಪಿಸುಮಾತಿನಲ್ಲಿ ವ್ಯಕ್ತಪಡಿಸಿದರು. ನಾನು ಅದನ್ನು ಪೂಜ್ಯ ಸ್ವಾಮೀಜಿಯವರಿಗೆ ತಿಳಿಸಿದೆ. ಅವರು ತತ್‌ಕ್ಷಣ ಮೇಲೆದ್ದು ಕುಳಿತುಕೊಂಡು, "ಇಲ್ಲ, ಇಲ್ಲ, ನನಗೇನೂ ಸುಸ್ತಾಗಿಲ್ಲ. ನನಗೆ ಕಾಲೊತ್ತುವ ಆವಶ್ಯಕತೆಯಿಲ್ಲ. ಕಳೆದ ಐದು ಸಾವಿರ ವರ್ಷಗಳಿಂದ ಭಕ್ತರು ಮತ್ತು ಗೃಹಸ್ಥರು ತಮ್ಮ ಗುರುವಿನ ಸೇವೆಮಾಡಿರುವರು, ಅವರ ಕಾಲೊತ್ತಿರುವರು. ಆದರೆ ಈಗ ಗುರುವೇ ಶಿಷ್ಯರ ಸೇವೆ ಮಾಡುವ ಕಾಲ ಸನ್ನಿಹಿತವಾಗಿದೆ" ಎಂದು ಹೇಳಿದರು.

ನಾನು ಒತ್ತಾಯಪೂರ್ವಕವಾಗಿ ಹೇಳಿದೆ: "ಮಹಾರಾಜ್, ಅದೇನೇ ಇರಲಿ, ನಾವು ನಿಮ್ಮ ಪಾದಸೇವೆ ಮಾಡುತ್ತೇವೆ." ಕೂಡಲೇ ಸ್ವಾಮೀಜಿಯವರ ಹೃದಯ ಕರಗಿತು. ಅವರು ತಮ್ಮ ಕಾಲನ್ನು ಮುಂದಕ್ಕೆ ಚಾಚಿ, "ನಿಮ್ಮ ಇಚ್ಛೆಯಂತಾಗಲಿ" ಎಂದು ಹೇಳಿದರು. ನಾವು ಸ್ವಲ್ಪ ಹೊತ್ತು ಅವರ ಕಾಲನ್ನು ಒತ್ತಿದೆವು. ಅನಂತರ ಅವರು ಹೇಳಿದರು: "ಈಗ ನಿಮ್ಮ ಆಸೆ ಪೂರ್ತಿಯಾಯಿತಲ್ಲ. ಸರಿ, ಇಷ್ಟೇ ಸಾಕು." ಇದು ಅವರ ಸೌಜನ್ಯವನ್ನೂ, ಪ್ರೀತಿಯ ಸ್ವಭಾವವನ್ನೂ ಸೂಚಿಸುತ್ತದೆ. ಇದು ನಮಗೆ ತುಂಬ ಸಂತೃಪ್ತಿಯನ್ನು ನೀಡಿತು.

ಸ್ವಾಮೀಜಿಯವರು ಯಾವಾಗಲೂ ಮಾನವನ ಘನತೆಗೆ ಹೆಚ್ಚು ಒತ್ತನ್ನು ನೀಡುತ್ತಿದ್ದರು. ೧೯೬೪ರಲ್ಲಿ ಅವರನ್ನು ಭೇಟಿಯಾಗಲು ಹೈದರಾಬಾದಿಗೆ ಹೋಗಿದ್ದೆ. ನಿರ್ದಿಷ್ಟ ಸಮಯಕ್ಕೆ ನಾನು ಅವರ ಕೊಠಡಿಗೆ ಹೋಗಿ ಅವರ ಪಾದಕ್ಕೆರಗಿದೆ. ಅವರು ಮುಗುಳ್ನಕ್ಕು ಕುರ್ಚಿಯ ಮೇಲೆ ಕುಳಿತುಕೊಳ್ಳಲು ನನಗೆ ಹೇಳಿದರು. ನಾನು ಹಿಂಜರಿಯುತ್ತ ಹೇಳಿದೆ, "ಇಲ್ಲ ಮಹಾರಾಜ್, ನಾನು ನೆಲದ ಮೇಲೇ ಕುಳಿತುಕೊಳ್ಳುತ್ತೇನೆ" ಎಂದು. ಅವರು ಆಕ್ಷೇಪಿಸುತ್ತ ಹೇಳಿದರು, "ಹೌದು, ಅನೇಕರು ನನ್ನ ಮುಂದೆ ಕುರ್ಚಿಯ ಮೇಲೆ ಕುಳಿತುಕೊಳ್ಳಲು ಹಿಂಜರಿಯುತ್ತಾರೆ, ಪೂಜ್ಯ ಭಾವದಿಂದಾಗಿ. ಆದರೆ ಇದು ಪೂಜ್ಯಭಾವವಲ್ಲ. ಪೂಜ್ಯಭಾವವು ಹೃದಯಕ್ಕೆ ಸಂಬಂಧಿಸಿದುದು. ಅಷ್ಟೇ ಅಲ್ಲದೆ, ನನ್ನ ಮೇಲೆ ನಿಮಗೆ ಪೂಜ್ಯಭಾವವಿದ್ದರೆ ನಾನು ಹೇಳುವಂತೆ ಕೇಳಬೇಕು." ನಾನು ಕುರ್ಚಿಯ ಮೇಲೆ ಕುಳಿತುಕೊಳ್ಳಲೇಬೇಕಾಯಿತು. ಹೀಗೆ ಅವರು ಸಮಾನತೆಯ ಮತ್ತು ಮಾನವ ಘನತೆಯ ಆದರ್ಶವನ್ನು ಎತ್ತಿತೋರಿಸುತ್ತಿದ್ದರು.

ಸಂಭಾಷಣೆಯ ಅವಧಿಯಲ್ಲಿ ಪೂಜ್ಯ ಸ್ವಾಮೀಜಿಯವರು, ಶ್ರೀರಾಮಕೃಷ್ಣರು ತಮ್ಮ ಅಗಾಧ ಪ್ರೀತಿಯಿಂದ ಹೇಗೆ ಭಕ್ತರನ್ನು ಮುಗ್ಧಗೊಳಿಸುತ್ತಿದ್ದರು ಎಂಬುದರ ಬಗ್ಗೆ ಭಾವಪೂರ್ಣವಾಗಿ ಮಾತನಾಡಿದರು. ಛಾಪ್ರಾ ಆಶ್ರಮವನ್ನು ರಾಮಕೃಷ್ಣ ಮಿಷನ್ನಿಗೆ ಸೇರಿಸಿಕೊಳ್ಳಬೇಕೆಂದು ಪೂಜ್ಯ ಸ್ವಾಮೀಜಿಯವರನ್ನು ಕಳಕಳಿಯಿಂದ

ಕೇಳಿಕೊಂಡೆ. ಏಕೆಂದರೆ ನನಗೆ ವಯಸ್ಸಾಗುತ್ತಿತ್ತು; ಆರೋಗ್ಯವೂ ಕ್ಷೀಣಿಸುತ್ತಿತ್ತು. ಆಗ ಸ್ವಾಮೀಜಿಯವರು ಹೇಳಿದ ಮಾತು ನನ್ನ ಕಿವಿಯಲ್ಲಿ ಈಗಲೂ ಅನುರಣಿತವಾಗುತ್ತಿದೆ. ಅವರು ಹೇಳಿದರು: "ನಿಮ್ಮ ಆಶ್ರಮ ಈಗ ತಾನೆ ಪ್ರಾರಂಭವಾಗಿದೆ. ನಲವತ್ತು ಐವತ್ತು ವರ್ಷಗಳ ಹಿಂದೆ ಪ್ರಾರಂಭವಾದ ಖಾಸಗಿ ಆಶ್ರಮಗಳನ್ನೂ ಕೂಡ ಇದುವರೆಗೂ ರಾಮಕೃಷ್ಣ ಮಿಷನ್ನಿಗೆ ಸೇರಿಸಿಕೊಂಡಿಲ್ಲ. ಅಷ್ಟೇ ಅಲ್ಲದೆ, ನಿಮ್ಮ ಆರೋಗ್ಯವೇನೂ ಅಷ್ಟೊಂದು ಕೆಟ್ಟಿಲ್ಲ. ನೀವು ಇನ್ನೂ ಕಡಮೆ ಅಂದರೆ ಇಪ್ಪತ್ತು ವರ್ಷ ಬದುಕುತ್ತೀರಿ ಎಂದು ಅಂದುಕೊಂಡಿದ್ದೇನೆ. ನ್ಯಾಯಾಧೀಶನು ಮರಣದಂಡನೆ ವಿಧಿಸುವಾಗ ಏನು ಬರೆಯುತ್ತಾನೆ ಗೊತ್ತೇನು? 'ಸಾಯುವವರೆಗೂ ನೇ...ಣು...ಹಾ...ಕಿ' (ಅಕ್ಷರಗಳನ್ನು ಎಳೆದು ಹೇಳಿದರು) ಎಂದು ಬರೆಯುತ್ತಾನೆ. ಹಾಗೆಯೇ, ಶ್ರೀರಾಮಕೃಷ್ಣರೆಡೆಗೆ ಬರುವ ವ್ಯಕ್ತಿಗೂ ಆತ ಸಾಯುವವರೆಗೂ ಅವರು ನೇಣುಹಾಕುತ್ತಾರೆ. ನಿಮ್ಮ ಕೊನೆಯುಸಿರಿನವರೆಗೂ ನೀವು ಶ್ರೀರಾಮಕೃಷ್ಣರ ಕೆಲಸ ಮಾಡಬೇಕು." ಈ ಕೊನೆಯ ವಾಕ್ಯ ಎಷ್ಟೊಂದು ಮೊನಚಾಗಿಯೂ ಮೋಹಕವಾಗಿಯೂ ಇತ್ತೆಂದರೆ ಒಂದು ಕ್ಷಣ ನಾನು ನಾನಾಗಿರಲಿಲ್ಲ.

೧೯೯೭ರಲ್ಲಿ ಬೇಲೂರು ಮಠದಲ್ಲಿ ನಡೆದ ರಾಮಕೃಷ್ಣ ಮಿಷನ್ನಿನ ಶತಮಾನೋತ್ಸವದಲ್ಲಿ ನಾನು ಪ್ರತಿನಿಧಿಯಾಗಿ ಭಾಗವಹಿಸಿದ್ದೆ, ದುರದೃಷ್ಟವಶಾತ್ ಕೋಲ್ಕತಾ ರಸ್ತೆಯಲ್ಲಿ ಅಪಘಾತಕ್ಕೀಡಾಗಿ ನನ್ನ ಮೊಳಕಾಲು ಫ್ರಾಕ್ಚರ್ ಆಯಿತು. ಈ ವಿಷಯವನ್ನು ಕೇಳಿದಾಕ್ಷಣ ಸ್ವಾಮೀಜಿಯವರು ತಮ್ಮ ಸಹವರ್ತಿ ಸ್ವಾಮಿಗಳ ಮೂಲಕ ಹಣ್ಣು, ಹೂವು ಮತ್ತು ಸಿಹಿತಿಂಡಿಗಳನ್ನು ಕಳಿಸಿದರು ಹಾಗೂ ತಮ್ಮ ಸಾಂತ್ವನ ಮತ್ತು ಆಶೀರ್ವಾದ ನುಡಿಗಳನ್ನೂ ತಿಳಿಸಿದರು. ಅವರ ಸಂದೇಶವನ್ನು ಸಹವರ್ತಿ ಸ್ವಾಮಿಗಳು ಹೀಗೆ ತಿಳಿಸಿದರು: "ನಿಮ್ಮ ಅಪಘಾತವನ್ನು ಕೇಳಿ ಮಹಾರಾಜರು ತುಂಬ ಚಿಂತಿತರಾದರು. ಅವರಿಗೆ ಮಹಡಿ ಹತ್ತುವುದಕ್ಕೆ ಆಗದೇ ಇದ್ದುದರಿಂದ ಅವರು ಬರಲಿಲ್ಲ. ನಿಮಗೆ ಸೇವಾಪ್ರತಿಷ್ಠಾನದಲ್ಲಿ ಉಚಿತವಾಗಿ ಶುಶ್ರೂಷೆ ನೀಡಬೇಕೆಂದು ಅವರು ಮಿಷನ್ ಅಧಿಕಾರಿಗಳಿಗೆ ತಿಳಿಸಿರುವರು. ನಿಮಗೆ ಬೇಗ ವಾಸಿಯಾಗಲೆಂಬುದು ಅವರ ಬಯಕೆ. ಅವರು ತಮ್ಮ ಆಶೀರ್ವಾದವನ್ನು ಕಳಿಸಿರುವರು." ನನ್ನಂಥ ಸಾಮಾನ್ಯ ವ್ಯಕ್ತಿಯ ಮೇಲೂ ಅವರಿಗೆ ಎಷ್ಟೊಂದು ಮಮತೆ!

ಪೂಜ್ಯ ಸ್ವಾಮೀಜಿಯವರು ಒಮ್ಮೆ ಪಾಟ್ನಾಕ್ಕೆ ಬಂದಿದ್ದರು. ಬಹುಶಃ ೧೯೯೯ರಲ್ಲಿ. ನನ್ನ ಪತ್ನಿ ದಿವಂಗತ ಗಂಗಾದೇವಿಯೊಂದಿಗೆ ನಾನು ಅವರನ್ನು ಭೇಟಿಯಾಗಲು ಹೋಗಿದ್ದೆ. ನನ್ನ ಪತ್ನಿಯು ಅವರಿಗೆ ಪ್ರಣಾಮ ಮಾಡಿದಾಗ ಅವರು ತುಂಬ ಅಕ್ಕರೆಯಿಂದ ತಮ್ಮ ಎರಡೂ ಹಸ್ತಗಳನ್ನು ಅವಳ ತಲೆಯ ಮೇಲಿರಿಸಿ ಆಶೀರ್ವದಿಸಿದರು ಹಾಗೂ ಒಂದು ಶಾಲನ್ನು ಕಾಣಿಕೆಯಾಗಿ ಕೊಟ್ಟರು. ನಾನು ತಮಾಷೆಗೆ ಹೇಳಿದೆ: "ಮಹಾರಾಜ್, ನಾನು ಅಷ್ಟೊಂದು ಕೆಲಸ ಮಾಡುತ್ತೇನೆ. ಆದರೂ ನನಗೆ ನೀವು ಒಂದು ತುಂಡುಬಟ್ಟೆಯನ್ನೂ ಕೊಡಲಿಲ್ಲ. ನನ್ನ ಪತ್ನಿಗಾದರೋ ಒಂದು ಶಾಲನ್ನು ಅನುಗ್ರಹಿಸಿದ್ದೀರಿ!" ಅವರು ಕೂಡಲೇ ಉತ್ತರಿಸಿದರು: "ನಿಮಗೆ ಗೊತ್ತಿಲ್ಲ. ಆಕೆ ನಿಮ್ಮೊಂದಿಗಿಲ್ಲದೆ ಇದ್ದಿದ್ದರೆ, ನಿಮಗೆ ಆಶ್ರಮವನ್ನು ಕಟ್ಟುವುದಕ್ಕೇ ಆಗುತ್ತಿರಲಿಲ್ಲ, ಮಾಸಪತ್ರಿಕೆಯನ್ನೂ ಪ್ರಕಟಿಸಲಾಗುತ್ತಿರಲಿಲ್ಲ ಹಾಗೂ ದಿವ್ಯತ್ರಯರ ಇಷ್ಟೊಂದು ಕೆಲಸವನ್ನೂ ಮಾಡಲಾಗುತ್ತಿರಲಿಲ್ಲ. ಈ ಶಾಲವನ್ನು ಪಡೆಯಲು ಆಕೆಗೆ ಅರ್ಹತೆ ಇದೆ. ಇದೇನೂ ಪಕ್ಷಪಾತವಲ್ಲ." ಇದು ಅವರ ಒಳ ಅರಿವನ್ನೂ, ವಿಶಾಲಹೃದಯವನ್ನೂ ತೋರಿಸುತ್ತದೆ.

ಶ್ರೀಮಾತೆ ಶಾರದಾದೇವಿಯವರ ೧೫೦ನೇ ಜನ್ಮೋತ್ಸವದ ಸಂದರ್ಭದಲ್ಲಿ ಮಾತನಾಡಲು ಬೇಲೂರು ಮಠವು ನನ್ನನ್ನು ಆಹ್ವಾನಿಸಿತ್ತು. ಸ್ವಾಮೀಜಿಯವರು ಚಿಕ್ಕ ಆಶೀರ್ವಾದ ಭಾಷಣ ಮಾಡಿದರು. ಅದು ತುಂಬ ಪರಿಣಾಮಕಾರಿಯೂ, ವಿಚಾರಪ್ರಚೋದಕವೂ, ಜ್ಞಾನಪ್ರದವೂ ಆಗಿತ್ತು. ಬಹುಶಃ ಅದೇ ಅವರ ಕೊನೆಯ ಸಾರ್ವಜನಿಕ ಭಾಷಣ. ಅವರ ಆರೋಗ್ಯವು ಬೇಗನೆ ಕ್ಷೀಣಿಸುತ್ತಿತ್ತು. ನನ್ನ ಭಾಷಣವಿದ್ದ ಸಭೆಯಲ್ಲಿ ಅವರು ಉಪಸ್ಥಿತರಿರಲಿಲ್ಲ. ಆದರೆ ಅದನ್ನು ಅವರು ತಮ್ಮ ಕೊಠಡಿಯಿಂದಲೇ ಕೇಳಿದರು. ನಾನು ಅವರಿಗೆ ಪ್ರಣಾಮ

ಸಲ್ಲಿಸಲು ಅವರ ಕೊಠಡಿಗೆ ಹೋದಾಗ ನನ್ನ ಭಾಷಣವನ್ನು ಪ್ರಶಂಸಿಸಿ ಉತ್ತೇಜನ ನೀಡಿದರು. ಇದೇ ಅವರೊಡನೆ ನನ್ನ ಕೊನೆಯ ಭೇಟಿ. ತಮ್ಮ *The Role and Responsibility of Teachers* ಎಂಬ ಪುಸ್ತಕವನ್ನು ಹಿಂದಿಗೆ ಅನುವಾದಿಸಬೇಕೆಂದು ನನಗೆ ಹೇಳಿದರು. ನಾನು ಸಂತೋಷದಿಂದ ಒಪ್ಪಿಕೊಂಡೆ. ಆದರೆ ಅವರ ಜೀವಿತಕಾಲದಲ್ಲಿ ಆ ಪುಸ್ತಕದ ಪ್ರಕಟಣೆ ಸಾಧ್ಯವಾಗಲಿಲ್ಲ. ಅವರಿಂದ ಬೀಳ್ಕೊಳ್ಳಲು ಅನುಮತಿ ಕೇಳಿದಾಗ, ನನಗೆ ಒಂದು ಪಂಚೆ, ಶಾಲು ಹಾಗೂ ಒಂದು ಪೆನ್ ಕೊಡಬೇಕೆಂದು ಸೇವಕರಿಗೆ ಹೇಳಿದರು. ನಾನು ಹೊರಡುವಾಗ ಕೊಠಡಿಯಿಂದ ಹೊರಬರುವವರೆಗೂ ನನ್ನನ್ನೇ ದಿಟ್ಟಿಸಿ ನೋಡುತ್ತಿದ್ದರು. ಇದೇ ಅವರೊಡನೆ ನನ್ನ ಕೊನೆಯ ಭೇಟಿ. ಅವರು ತಮ್ಮ ಕೊನೆಯುಸಿರಿನವರೆಗೂ ಎಂಥವರೇ ಆದರೂ ಎಲ್ಲರನ್ನೂ ಪ್ರೀತಿಸಿದ ಮಹರ್ಷಿ. ನಿಜವಾಗಿಯೂ ಅವರು ಪ್ರೀತಿಯ ಪುಷ್ಪವೂ, ಫಲವೂ ಆಗಿದ್ದರು.

* * * *

# ೬೮. ಕೇಳುಗರನ್ನು ಮಂತ್ರಮುಗ್ಧರಾಗಿಸಿರುವ ಮಹಾ ವಾಗ್ಮಿ

–ಪ್ರಭುಶಂಕರ*

ನನಗೀಗ ಎಪ್ಪತ್ತಾರು ವರ್ಷ. ರಂಗನಾಥಾನಂದರ ಸಾವು ನನ್ನ ಬದುಕಿನಲ್ಲಿ ಒಂದು ಶೂನ್ಯವನ್ನು ಸೃಷ್ಟಿಸಿದೆ. ಇನ್ನೂ ಪೂರ್ಣವಾಗಿ ಒರೆಸಿಕೊಳ್ಳಲು ಸಾಧ್ಯವಾಗದಷ್ಟು ಕಂಬನಿಗಳು ಹಾಗೇ ಉಳಿದಿವೆ. ನಾನೊಬ್ಬ ಗೃಹಸ್ಥ. ಅವರೋ ಸನ್ಯಾಸಿಯಾಗಿದ್ದವರು. ಅವರೊಡನೆ ನನ್ನ ಸಂಪರ್ಕವಿದ್ದದ್ದು ಹೆಚ್ಚು ಕಡಿಮೆ ಐವತ್ತು ವರ್ಷಗಳಷ್ಟು ದೀರ್ಘ ಕಾಲ. ನನ್ನ ಹೃದಯಕ್ಕೆ ಅವರು ತೀರ ಹತ್ತಿರದವರಾಗಿದ್ದರು. ಹೀಗಾಗಿ ಅವರ ಸಾವು ನನ್ನನ್ನು ಅತ್ಯಂತ ದುಃಖಿಯನ್ನಾಗಿ ಮಾಡಿದೆ. ಅವರ ನೆನಪುಗಳು ಹರಿದು ಹಂಚಿಹೋಗಿವೆ. ಕೆಲವು ಅಸ್ಪಷ್ಟವಾಗಿವೆ; ಮತ್ತೆ ಕೆಲವು ಆಗಾಗ ಜ್ವಲಿಸುತ್ತಲೇ ಇವೆ. ಎಲ್ಲವನ್ನೂ ಘಟನೆಗಳು ನಡೆದ ಕಾಲಾನುಕ್ರಮದಲ್ಲಿ ನಾನು ನೆನಪು ಮಾಡಿಕೊಳ್ಳಲಾರೆ. ಅವನ್ನೆಲ್ಲ ಹಿಡಿದಿಡಲು ಬಲೆಯನ್ನು ಬೀಸಿದ್ದಾಗಿದೆ. ಅವುಗಳಲ್ಲಿ ಎಷ್ಟು ಆ ಬಲೆಯಲ್ಲಿ ಸಿಕ್ಕಿಕೊಳ್ಳುತ್ತವೆಯೋ ಹೇಳಲಾರೆ.

ಇರಲಿ. ಅವರ ಪ್ರಥಮ ದರ್ಶನ ನನಗೆ ದೊರೆತದ್ದು ಯಾವಾಗ? ಓ! ಹೌದು, ಅದು ನೆನಪಿಗೆ ಬರುತ್ತಿದೆ. ೧೯೫೨ನೇ ಇಸವಿ. ಅಂದಿನ ದಿನಗಳಲ್ಲಿ ಅವರು ತಮ್ಮ ಪೂರ್ವಾಶ್ರಮದ ಹೆಸರಾದ 'ಶಂಕರ್' ಎಂಬುದರಿಂದ ಪ್ರಖ್ಯಾತರಾಗಿದ್ದರು. ರಾಮಕೃಷ್ಣ ಮಿಷನ್ ಸಾಧುಗಳ ಹೆಸರಿನೊಂದಿಗೆ 'ಮಹರಾಜ್' ಎಂಬುದು ಇರುತ್ತಿತ್ತು. ಹೀಗಾಗಿ ಅವರು 'ಶಂಕರ್ ಮಹಾರಾಜ್' ಎಂಬ ಹೆಸರಿನಿಂದ ಪ್ರಖ್ಯಾತರಾಗಿದ್ದರು. ಅಂದಿನ ದಿನಗಳಲ್ಲಿ ಡಾ. ಎಚ್. ನರಸಿಂಹಯ್ಯನವರು ನ್ಯಾಷನಲ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಶ್ರೀ ಸ್ವಾಮಿ ರಂಗನಾಥಾನಂದರು ಪ್ರಿನ್ಸಿಪಾಲ್ ಹೆಚ್. ನರಸಿಂಹಯ್ಯನವರ ಆಹ್ವಾನದ ಮೇರೆಗೆ ನ್ಯಾಷನಲ್ ಕಾಲೇಜಿನಲ್ಲಿ ಉಪನ್ಯಾಸ ಮಾಡಲು ಬಂದಿದ್ದರು. ಅವರು ಉಪನ್ಯಾಸ ನೀಡಬೇಕಾಗಿದ್ದ ಸ್ಥಳ ರಾಮಕೃಷ್ಣಾಶ್ರಮಕ್ಕೆ ತುಂಬ ಹತ್ತಿರದಲ್ಲಿತ್ತು. ಹೀಗಾಗಿ ನಾನು ಮತ್ತು ಕೆಲವರು ಆಶ್ರಮವಾಸಿಗಳು ಶ್ರೀ ಸ್ವಾಮಿ ರಂಗನಾಥಾನಂದಜೀ ಅವರ ಜೊತೆ ಉಪನ್ಯಾಸದ ಸ್ಥಳಕ್ಕೆ ನಡೆದೇ ಹೋದೆವು. ಅಂದಿನ ದಿನಗಳಲ್ಲಿ ನಾನೂ ಆಶ್ರಮವಾಸಿಯೇ ಆಗಿದ್ದೆ. ನಾವು ಸಭಾಂಗಣವನ್ನು ತಲುಪಿದಾಗ ಅದು ವಿದ್ಯಾರ್ಥಿಗಳಿಂದಲೂ ಅಧ್ಯಾಪಕರಿಂದಲೂ ತುಂಬಿ ತುಳುಕುತ್ತಿತ್ತು. ವಿದ್ಯಾರ್ಥಿಗಳೂ, ಅಧ್ಯಾಪಕರೂ, ಕಾಲೇಜಿನ ಉದ್ಯೋಗಿಗಳೂ ಸಭೆಗೆ ಬರಲೇಬೇಕೆಂದು ನರಸಿಂಹಯ್ಯನವರು ಸುಗ್ರೀವಾಜ್ಞೆ ಹೊರಡಿಸಿದ್ದರೋ ಏನೋ ತಿಳಿಯದು. ಅಂತೂ ಸಭಾಂಗಣ ತುಂಬಿ ತುಳುಕುತ್ತಿತ್ತು.

ಡಾ. ನರಸಿಂಹಯ್ಯನವರು ಕೆಲವೇ ಮಾತುಗಳಲ್ಲಿ ಶ್ರೀ ರಂಗನಾಥಾನಂದರನ್ನು ಸಭೆಗೆ ಪರಿಚಯಿಸಿದರು. ಸಭೆ ಮಂತ್ರಮುಗ್ಧವಾಗಿತ್ತು. ನಾನು ಆಗಷ್ಟೇ ಎರಡೂ ಮೂರು ತಿಂಗಳ ಹಿಂದೆ ಮೈಸೂರಿನ ಮಹಾರಾಜಾ ಕಾಲೇಜಿನಿಂದ ಬೆಂಗಳೂರಿನ ಸರ್ಕಾರಿ ಕಾಲೇಜಿಗೆ ಅಧ್ಯಾಪಕನಾಗಿ ಬಂದಿದ್ದೆ. ಅಲ್ಲಿ, ಎಂದರೆ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಪ್ರೊ. ವಿ.ಎಲ್. ಡಿಸೋಜ಼ಾ, ಡಾ.ಟಿ.ಎ. ಪುರುಷೋತ್ತಮ್ ಮುಂತಾದ ಮಹಾ ವಾಗ್ಮಿಗಳ ಉಪನ್ಯಾಸಗಳನ್ನು ಕೇಳಿದ್ದೆ. ಜಗತ್ತಿನಾದ್ಯಂತ ತಮ್ಮ ಉಪನ್ಯಾಸ ಕೌಶಲದಿಂದ ಪ್ರಖ್ಯಾತಿ ಗಳಿಸಿದ್ದ ಮುದಲಿಯಾರ್ ಸಹೋದರರ – ಸರ್ ಎ.ರಾಮಸ್ವಾಮಿ ಮುದಲಿಯಾರ್ ಮತ್ತು ಸರ್ ಎ. ಲಕ್ಷ್ಮಣಸ್ವಾಮಿ

* ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರು. ಸ್ವಾಮಿ ರಂಗನಾಥಾನಂದರ *Message of the Upanishads* ಗ್ರಂಥದ ಕನ್ನಡ ಅನುವಾದಕರು

ಮುದಲಿಯಾರ್ ಅವರ – ಅಮೋಘವಾದ ಭಾಷಣಗಳನ್ನು ಎರಡು ಮೂರು ವಾರಗಳ ಹಿಂದೆ ಮೈಸೂರಿನಲ್ಲಿ ಕೇಳಿದ್ದೆ. ಆದರೆ ಸ್ವಾಮೀಜಿಯು ಮಾತನಾಡಲು ಶುರು ಮಾಡಿದ ಹತ್ತೇ ನಿಮಿಷಗಳಲ್ಲಿ "ಯಾರೀತ, ನಾನು ಕೇಳಿರುವ ಎಲ್ಲ ವಾಗ್ಮಿಗಳನ್ನೂ ಮೀರಿಸಿ ಮಾತನಾಡುತ್ತಿರುವ ಈ ಗಾರುಡಿಗ ಯಾರು?" ಎಂದು ಕೇಳಿಕೊಳ್ಳುತ್ತಿದ್ದೆ. ತಾವು ಪ್ರತಿಪಾದಿಸುತ್ತಿದ್ದ ವೇದಾಂತ ತತ್ವಗಳನ್ನು ಬೆಂಬಲಿಸುವ ಶಾಸ್ತ್ರ ವಾಕ್ಯಗಳನ್ನು ಪುಂಖಾನುಪುಂಖವಾಗಿ ಉದ್ಧರಿಸುತ್ತಿದ್ದಾರೆ! ದೋಷರಹಿತವಾದ ಇಂಗ್ಲಿಷಿನಲ್ಲಿ ಮಾಂತ್ರಿಕನಂತೆ ಮಾತನಾಡುತ್ತಿರುವ ಈತನಾರು? ತಮ್ಮ ಕೈಯಲ್ಲಾಗಲಿ, ಮೇಜಿನ ಮೇಲಾಗಲೀ ಒಂದೇ ಒಂದು ಚೂರು ಕಾಗದವೂ ಇಲ್ಲ! ವೇದ, ವೇದಾಂತಗಳ ವಾಕ್ಯಗಳು ಒಂದಾದಮೇಲೊಂದರಂತೆ ಹೊರಬರುತ್ತಿವೆ! ಈತನ ಅಸ್ಖಲಿತ ವಾಗ್ಮಿತೆ, ನಿರ್ದೋಷವಾದ ಇಂಗ್ಲಿಷ್ ವಾಕ್ಯಗಳು ಎಲ್ಲಿಂದ ಬರುತ್ತಿವೆ? ಹೇಗೆ ಬರುತ್ತಿವೆ? ಅನಂತರ ವಿಚಾರಿಸಿದಾಗ, ಇತರರೂ ತಿಳಿಸಿದಂತೆ, ಈತನಿಗೆ ಸರಸ್ವತಿಯ ಅನುಗ್ರಹವಾಗಿರುವುದರಲ್ಲಿ ಯಾವ ಸಂದೇಹವೂ ಇಲ್ಲ ಎನ್ನಿಸಿತು. ನಾನು ಮಾತುಗಳನ್ನು ಜೋಡಿಸಿಕೊಳ್ಳುತ್ತಿರುವಾಗ, ಚಪ್ಪಾಳೆಗಳ ಸುರಿಮಳೆ ಕೇಳಿಸಿತು. ಯಾರಿಗೂ ಅರಿವಾಗದಂತೆ ಒಂದು ಗಂಟೆ ಉರುಳಿಹೋಗಿತ್ತು!

ಮುಂದೆ, ಹತ್ತಿರ ಹತ್ತಿರ ಅರ್ಧ ಶತಮಾನದ ಅವಧಿಯಲ್ಲಿ ಸ್ವಾಮಿ ರಂಗನಾಥಾನಂದರ ಅನೇಕ ಉಪನ್ಯಾಸಗಳನ್ನು ಕೇಳುವ ಭಾಗ್ಯ ನನ್ನದಾಗಿತ್ತು. ನಾನು ಪ್ರಸಾರಾಂಗದ ನಿರ್ದೇಶಕನಾಗಿದ್ದಾಗ ಅವರನ್ನು ನಮ್ಮ ವಿಶ್ವವಿದ್ಯಾನಿಲಯಕ್ಕೆ ಆಹ್ವಾನಿಸುವ ಅವಕಾಶ ನನಗೆ ದೊರೆತಿತ್ತು. ಆಗೆಲ್ಲ ನಮಗೆ ದೊರೆತದ್ದು ಸ್ವಾಮೀಜಿಯ ಅಸ್ಖಲಿತ ವಾಣಿಯ ವಾಗೌತಣಗಳು. ನನಗೂ ಇತರ ಶ್ರೋತೃಗಳಿಗೂ ದೊರೆತದ್ದು ಬರಿಯ ಮಾತುಗಳಲ್ಲ. ವಾಗ್ರೂಪದ ಶುದ್ಧ ಶಾಸ್ತ್ರೀಯ ಸಂಗೀತ! ಆದರೆ ವಸ್ತು ಮಾತ್ರ ಅಧ್ಯಾತ್ಮ! ಸ್ವಾಮೀಜಿಗೆ ಜನತಾ ಜನಾರ್ದನರ ಬಗೆಗಿದ್ದುದ್ದು ಶುದ್ಧ ವಾತ್ಸಲ್ಯ. ಆ ವಾತ್ಸಲ್ಯವೇ ಶುದ್ಧ ವೇದಾಂತವನ್ನು ಮಧುರ ಗಾಯನವನ್ನಾಗಿ ಪರಿವರ್ತಿಸಿತ್ತು!

ನಾನು ಕೇಳಿದ್ದ ಮೊದಲ ಉಪನ್ಯಾಸಗಳಲ್ಲೇ ನಾನು ಗಮನಿಸಿದ ಒಂದು ಅಂಶವೆಂದರೆ, ಅವರು ಆಧುನಿಕ ವಿಜ್ಞಾನಕ್ಕೆ ನೀಡುತ್ತಿದ್ದ ಒತ್ತು. ವರ್ಷಗಳು ಉರುಳುತ್ತಿದ್ದಂತೆ ಅವುಗಳ ಸಂಖ್ಯೆ ಹೆಚ್ಚಾಗುತ್ತಾ ಹೋಯಿತು. ಅವರು ವಿಜ್ಞಾನ ಮತ್ತು ವೇದಾಂತಗಳಲ್ಲಿನ ಸಮಾನ ಅಂಶಗಳನ್ನು ಒತ್ತಿ ಹೇಳುತ್ತಿದ್ದರು. ತಾವು ಮಂಡಿಸುತ್ತಿದ್ದ ವೇದಾಂತದ ಭಾವನೆಗಳನ್ನು ಪುಷ್ಟೀಕರಿಸಲು ಅವರು ವಿಜ್ಞಾನವನ್ನು ಹೆಚ್ಚು ಹೆಚ್ಚಾಗಿ ಅವಲಂಬಿಸುತ್ತಿದ್ದರು. ಅವರು ವಿಜ್ಞಾನದಿಂದ ತೆಗೆದುಕೊಂಡು ಉದ್ಧರಿಸುತ್ತಿದ್ದ ಭಾಗಗಳು ಕೆಲವು ಸಲ ಅನೇಕ ಪ್ಯಾರಾಗಳಷ್ಟು ದೀರ್ಘವಾಗಿರುತ್ತಿದ್ದುವು. ಧಾರ್ಮಿಕ ವ್ಯಕ್ತಿಗಳು ಹೇಳುತ್ತಿದ್ದ ವಿಷಯಗಳನ್ನು ಪುಷ್ಟೀಕರಿಸಲು ಅವರು ಹಾಗೆ ವಿಜ್ಞಾನಿಗಳ ಹೇಳಿಕೆಗಳನ್ನು ಬಳಸುತ್ತಿದ್ದರು ಎಂದು ಭಾವಿಸಬಹುದು. ಕೆಲವೊಮ್ಮೆ ಅವರು ಹಾಗೆ ಮಾಡುತ್ತಿದ್ದುದು ನನಗೆ ಕಿರಿಕಿರಿಯನ್ನು ಉಂಟುಮಾಡುತ್ತಿತ್ತು. ಅವರನ್ನು ಒಮ್ಮೆ ನಾನು ಹೀಗೇಕೆ ಮಾಡುತ್ತೀರಿ ಎಂದು ಕೇಳಿದ್ದೂ ಉಂಟು.

ಈ ಮಧ್ಯೆ ನಾನು ಸ್ವಾಮೀಜಿಗೆ ಹೆಚ್ಚು ಹೆಚ್ಚು ಹತ್ತಿರದವನಾಗುತ್ತಾ ಹೋದೆ. ನನ್ನ ಅರ್ಹತೆಗೆ ಮೀರಿದಷ್ಟು ಔದಾರ್ಯವನ್ನು ಅವರು ನನ್ನ ವಿಷಯದಲ್ಲಿ ತೋರಿದರು. ಈ ಮಧ್ಯೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ನನಗೊಂದು ದೊಡ್ಡ ಜವಾಬ್ದಾರಿಯನ್ನು ವಹಿಸಿತು. ಅದು ಸ್ವಾಮಿ ರಂಗನಾಥಾನಂದರ *Message of the Upanishads* (ಉಪನಿಷತ್ತುಗಳ ಸಂದೇಶ) ಎಂಬ ಇಂಗ್ಲಿಷ್ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸುವುದು. ಆ ಕೆಲಸವನ್ನು ನಾನು ಸಂತೋಷದಿಂದ ಕೈಗೊಂಡೆ. ನನ್ನ ಅಭಿಪ್ರಾಯದಲ್ಲಿ ಉಪನಿಷತ್ತುಗಳ ಸಂದೇಶವನ್ನು ಆಧುನಿಕ ಚಿಂತಕರಿಗೆ ಸಮರ್ಥವಾಗಿ ಸಂವಹನ ಮಾಡುವ ಏಕೈಕ ಇಂಗ್ಲಿಷ್ ಪುಸ್ತಕ ಅದು. ಸ್ವಾಮಿ ರಂಗನಾಥಾನಂದರ ಅಪ್ಪಣೆಯನ್ನು ಬೇಡಿದಾಗ ಅವರು ಸಂತೋಷದಿಂದ ಒಪ್ಪಿಗೆ ನೀಡಿದರು. ನಾನು ಅನುವಾದ ಕಾರ್ಯವನ್ನು ಕೈಗೊಂಡದ್ದು ಅವರಿಗೆ ಸಂತೋಷವನ್ನು ನೀಡಿತ್ತು.

ಅದಾದನಂತರ, ನಾವು ಅಲ್ಲಿ ಇಲ್ಲಿ ಭೇಟಿಯಾದಾಗ ಅವರು "ಅನುವಾದ ಎಲ್ಲಿಗೆ ಬಂತು?" ಎಂದು ಕೇಳುತ್ತಿದ್ದರು. ನಾನು ಜನ್ಮತಃ ಸೋಮಾರಿ ಎಂಬುದು ಅನೇಕರಿಗೆ ಗೊತ್ತಿದ್ದ ವಿಷಯ. ಆದರೂ ನಾನು ಈ ಗ್ರಂಥದ ಅನುವಾದವನ್ನು ಎಷ್ಟು ಉತ್ಸುಕತೆಯಿಂದ ಮಾಡತೊಡಗಿದ್ದನೆಂದರೆ ಮಿತ್ರರಿಗೆಲ್ಲ ಆಶ್ಚರ್ಯವಾಗುತ್ತಿತ್ತು. ಸ್ವಾಮೀಜಿಗೆ ಮಾತ್ರ ನನ್ನ ಅನುವಾದದ ವೇಗ ಏನೇನೂ ಸಾಲದು ಎಂಬ ಭಾವನೆ ಬಂದಿತ್ತು. ನನ್ನ ಒಬ್ಬ ತಮ್ಮ ರಾಮಕೃಷ್ಣ ಆಶ್ರಮದ ಸನ್ಯಾಸಿಯಾಗಿದ್ದರು. ಅವರ ಹೆಸರು ಸ್ವಾಮಿ ರಾಘವೇಶಾನಂದ ಎಂದು. ಅವರನ್ನು ನೋಡಿದಾಗಲೆಲ್ಲ ಸ್ವಾಮಿ ರಂಗನಾಥಾನಂದರು ಅವರನ್ನು ಕೇಳುತ್ತಿದ್ದರಂತೆ: "ನಿಮ್ಮ ಅಣ್ಣ ನನ್ನ ಪುಸ್ತಕದ ಭಾಷಾಂತರವನ್ನು ಎಂದು ಮುಗಿಸುತ್ತಾರಂತೆ? ಅವರು ಅದನ್ನು ಮಾಡುತ್ತಿರುವ ವೇಗವನ್ನು ಗಮನಿಸಿದರೆ ಅವರು ಎಂದೂ ಅದನ್ನು ಮುಗಿಸುವಂತೆ ಕಾಣೆ!" ರಂಗನಾಥಾನಂದರು ನನ್ನ ಅನುವಾದದ ವೇಗವನ್ನು ಕುರಿತು ಹೇಳಿದ್ದನ್ನೆಲ್ಲ ನನ್ನ ತಮ್ಮ ಒಂದು ಅಕ್ಷರವೂ ಬಿಡದಂತೆ ನನಗೆ ಹೇಳುತ್ತಿದ್ದರು! ನಾನು ಮಾತ್ರ ಏನೂ ಹೇಳುತ್ತಿರಲಿಲ್ಲ. ನನ್ನ ಅನುವಾದದ ವೇಗವೂ ಹೆಚ್ಚಲಿಲ್ಲ!

ಒಮ್ಮೆ ಸ್ವಾಮಿ ರಂಗನಾಥಾನಂದರು ಮೈಸೂರಿಗೆ ಬಂದರು. ನಾನೂ ಅವರನ್ನು ಭೇಟಿ ಮಾಡಿದೆ. ಸಹಜವಾಗಿಯೇ ಅನುವಾದ ಎಲ್ಲಿಗೆ ಬಂತು ಎಂದು ಕೇಳಿದರು. ನಾನು ಸತ್ಯವನ್ನೇ ಹೇಳಿದೆ. ಅವರಿಗೆ ಸಮಾಧಾನವಾಗಲಿಲ್ಲ. ಹೇಳಿದರು: "ನೋಡು, ವಿದ್ವಾಂಸರೊಬ್ಬರು ಅದನ್ನು ಹಿಂದಿಗೆ ಅನುವಾದ ಮಾಡುತ್ತಿದ್ದಾರೆ. ಅದು ಇನ್ನೇನು ಮುಗಿಯುವ ಹಂತದಲ್ಲಿದೆ. ಕನ್ನಡ ಅನುವಾದ ಮಾತ್ರ ಹಿಂದೆ ಬಿದ್ದಿದೆ!" ನನಗೆ ಹೇಗೆ ಧೈರ್ಯ ಬಂತೋ ಕಾಣೆ; ಹೇಳಿದೆ: "ನೋಡುತ್ತಿರಿ ಸ್ವಾಮೀಜಿ, ಹಿಂದೀ ಅನುವಾದಕ್ಕಿಂತ ಮುಂಚೆಯೇ ಕನ್ನಡ ಅನುವಾದ ಬೆಳಕು ಕಾಣುತ್ತದೆ!" ಸ್ವಾಮೀಜಿ ನನ್ನ ಮಾತನ್ನು ನಂಬಿದರೋ ಬಿಟ್ಟರೋ ಕಾಣೆ; ಆದರೆ ಮೈಸೂರು ವಿಶ್ವವಿದ್ಯಾನಿಲಯ ನನ್ನ ಕನ್ನಡ ಅನುವಾದವನ್ನು ಪ್ರಕಟಿಸಿಯೇ ಬಿಟ್ಟಿತು. ಆಗ ಹಿಂದೀ ಅನುವಾದದ ಬಗ್ಗೆ ವಿಚಾರಿಸಿದೆ. ಅರ್ಧದಷ್ಟು ಅನುವಾದವೂ ಸಿದ್ಧವಾಗಿರಲಿಲ್ಲ!

ಆದರೂ ನನಗೆ ಒಂದು ಆಶ್ಚರ್ಯ ಕಾದಿತ್ತು! ನನ್ನ ಅನುವಾದದ ಪ್ರೂಫ್ ಪುಟಗಳನ್ನು ತಿರುವಿ ಹಾಕುತ್ತಾ ಹಾಕುತ್ತಾ ಶ್ರೀ ಸ್ವಾಮಿ ರಂಗನಾಥಾನಂದರು ಅನೇಕ ಉಪಯುಕ್ತ ಸಲಹೆಗಳನ್ನು ನೀಡುತ್ತಾ ಹೋದರು. ಅವರು ತಾರುಣ್ಯದಲ್ಲಿ, ಸನ್ಯಾಸ ಸ್ವೀಕರಿಸುವ ಮುನ್ನ ಮೈಸೂರು ಆಶ್ರಮದಲ್ಲಿ ಕೆಲವು ಕಾಲ ಇದ್ದರು. ಆಗ ಅವರಿಗೆ ಶ್ರೀ ಕುವೆಂಪು, ಶ್ರೀ ನಾ. ಕಸ್ತೂರಿ ಮುಂತಾದವರ ಆಪ್ತ ಸಹವಾಸ ದೊರೆತಿತ್ತು. ಜೊತೆಗೆ ಸಮಾಜದ ಎಲ್ಲ ವರ್ಗಗಳ ಜನರ ಜೊತೆಯಲ್ಲೂ ಅವರು ಮುಕ್ತವಾಗಿ ಬೆರೆಯುತ್ತಿದ್ದರು. ಹೀಗಾಗಿ ಅವರಿಗೆ ಕನ್ನಡ ಭಾಷೆ ಚಿರಪರಿಚಿತವಾಗಿತ್ತು. ಕನ್ನಡ ಪುಸ್ತಕಗಳಲ್ಲಿ ಕೆಲವನ್ನು ಅವರು ಓದಿಸಿ ಕೇಳಿದ್ದೂ ಉಂಟು. ನನ್ನ ಅನುವಾದವನ್ನು ಓದುತ್ತಾ ಅವರು ಕೆಲವು ಉಪಯುಕ್ತ ಸಲಹೆಗಳನ್ನು ಕೊಟ್ಟರು. ಅವುಗಳನ್ನು ನಾನು ಸ್ವೀಕರಿಸಿದೆ. ನನ್ನ ಅನುವಾದದ ಗುಣಮಟ್ಟವೂ ಹೆಚ್ಚಿತು. ಗ್ರಂಥ ಮುದ್ರಣವಾಗಿ ಹೊರಬಂದ ಮೇಲೆ ಸ್ವಾಮೀಜಿ ಅನೇಕ ಪುಟಗಳ ಮೇಲೆ ಕಣ್ಣಾಡಿಸಿದರು. ಅವರ ಮುಖದಲ್ಲಿ ತೃಪ್ತಿ–ಸಂತೋಷಗಳನ್ನು ಕಂಡು ನಾನೂ ಧನ್ಯತೆಯ ಭಾವವನ್ನು ಅನುಭವಿಸಿದೆ.

*The Cultural Heritage of India* ಎಂಬುದು ಐದು ಸಂಪುಟಗಳಲ್ಲಿ ಪ್ರಕಟವಾಗಿದೆ. ಶ್ರೀ ಕುವೆಂಪುರವರು ಅದನ್ನು ಅನುವಾದ ಮಾಡಿಸಿ ಪ್ರಕಟಿಸಬೇಕು ಎಂಬ ಸೂಚನೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗಕ್ಕೆ ನೀಡಿದರು. ನಾನು ಆ ಸಂಸ್ಥೆಯ ನಿರ್ದೇಶಕನಾಗಿದ್ದೆ. ನಾನು ಅದಕ್ಕೆ ಒಪ್ಪಿಗೆ ನೀಡಬೇಕೆಂದು ಆ ಸಂಪುಟಗಳ ಸ್ವಾಮ್ಯ ಹೊಂದಿದ್ದ ರಾಮಕೃಷ್ಣ ಮಿಷನ್ನಿನ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನ ಕಾರ್ಯದರ್ಶಿಯವರಿಗೆ ಕಾಗದ ಬರೆದೆ. ಆಶ್ಚರ್ಯದ ಸಂಗತಿ ಎಂದರೆ ಆಗ ಅದರ ಕಾರ್ಯದರ್ಶಿಯಾಗಿದ್ದವರು ಸಾಕ್ಷಾತ್ ಸ್ವಾಮಿ ರಂಗನಾಥಾನಂದರು! ಅವರು ಸಂತೋಷವಾಗಿ ಒಪ್ಪಿಗೆ

ನೀಡಿದರು, ಆದರೆ ಒಂದು ಷರತ್ತಿನೊಂದಿಗೆ! ಅದೇನೆಂದರೆ ಕನ್ನಡ ಆವೃತ್ತಿಯ ಸಂಪುಟಗಳು ಇಂಗ್ಲಿಷ್ ಆವೃತ್ತಿಯ ಸಂಪುಟಗಳಿಗಿಂತ ಹೆಚ್ಚು ಸುಂದರವಾಗಿ, ಆಕರ್ಷಕವಾಗಿ ಇರಬೇಕು ಎಂಬುದು. ನಾನು ಹಾಗೆ ಮಾಡಲು ಕೂಡಲೇ ಒಪ್ಪಿಕೊಂಡೆ. ಅದು ಹಾಗೇ ನಡೆಯಿತು ಎಂದು ಧೈರ್ಯವಾಗಿ ಹೇಳಬಲ್ಲೆ. ಕನ್ನಡ ಅನುವಾದ ಗ್ರಂಥದ ಶೀರ್ಷಿಕೆ "ಯುಗಯಾತ್ರೀ ಭಾರತೀಯ ಸಂಸ್ಕೃತಿ" ಎಂದು. ಈ ಹೆಸರನ್ನು ಕೊಟ್ಟವರು ರಾಷ್ಟ್ರಕವಿ ಕುವೆಂಪುರವರು. ಅವರು ಶ್ರೀ ರಾಮಕೃಷ್ಣರ ಪರಮ ಭಕ್ತರು; ಶ್ರೀ ರಾಮಕೃಷ್ಣರ ನೇರ ಶಿಷ್ಯರಾದ ಶ್ರೀ ಸ್ವಾಮಿ ಶಿವಾನಂದರಿಂದ ಮಂತ್ರ ದೀಕ್ಷೆ ಪಡೆದವರು. ಇನ್ನೊಂದು ಸಂಗತಿಯನ್ನು ಹೆಮ್ಮೆಯಿಂದ ಹೇಳಬಹುದು: *The Cultural Heritage of India* ಗ್ರಂಥದ ಅಷ್ಟೂ ಸಂಪುಟಗಳು ಅನುವಾದಗೊಂಡಿರುವುದು ಕನ್ನಡ ಭಾಷೆಯಲ್ಲಿ ಮಾತ್ರ.

೧೯೮೭ರ ರಾಷ್ಟ್ರೀಯ ಏಕತೆಯ ಪುರಸ್ಕಾರಕ್ಕೆ ಶ್ರೀ ಸ್ವಾಮಿ ರಂಗನಾಥಾನಂದರನ್ನು ಆಯ್ಕೆ ಮಾಡಲಾಯಿತು. ಅವರು ಅದನ್ನು ನಿರಾಕರಿಸಿದರು. ಆ ಸಂದರ್ಭದಲ್ಲಿ ಅವರು ಹೇಳಿದ್ದೇನೆಂದರೆ: "ರಾಮಕೃಷ್ಣ ಮಹಾ ಸಂಘಕ್ಕೆ ಈ ಪ್ರಶಸ್ತಿಯನ್ನು ನೀಡಿದ್ದರೆ ಚೆನ್ನಾಗಿರುತ್ತಿತ್ತು." ಅದಕ್ಕೆ ಅವರು ಕೊಟ್ಟ ಕಾರಣ, ರಾಮಕೃಷ್ಣ ಮಹಾಸಂಘದ ಸಾಧುಗಳು ಒಬ್ಬ ವ್ಯಕ್ತಿಯೋ ಎಂಬಂತೆ ಒಂದಾಗಿ ಸೇವಾ ಕಾರ್ಯದಲ್ಲಿ ತೊಡಗಿದ್ದಾರೆ. ಅವರ ವಾದದ ಸತ್ಯವನ್ನು ಅರಿತು ಆ ಪ್ರಶಸ್ತಿಯನ್ನು ರಾಮಕೃಷ್ಣ ಮಿಷನ್ನಿಗೆ ನೀಡಿತು. ರಾಮಕೃಷ್ಣ ಮಿಷನ್ ಪರವಾಗಿ ಶ್ರೀ ಸ್ವಾಮಿ ರಂಗನಾಥಾನಂದರು ಪ್ರಶಸ್ತಿಯನ್ನು ಸ್ವೀಕರಿಸಿದರು*

ಸ್ವಾಮೀಜಿ ಪ್ರಶಸ್ತಿಯನ್ನು ಸ್ವೀಕರಿಸಿ ಆದ ಕೆಲವೇ ದಿನಗಳಲ್ಲಿ ಮೈಸೂರಿಗೆ ಬಂದರು. ಅವರನ್ನು ನಾನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದೆ. ಮೈಸೂರು ಆಕಾಶವಾಣಿ ಅವರ ಸಂದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ನಾನೇ ಸಂದರ್ಶಕನಾಗಿ ಅವರೊಂದಿಗೆ ಮಾತುಕತೆ ನಡೆಸಬೇಕಾಗಿತ್ತು. ಅಲ್ಲಿಗೆ ಹೋಗುವ ಮುನ್ನ ರಾಷ್ಟ್ರಕವಿ ಕುವೆಂಪುರವರ ಮನೆಗೆ ಕರೆದುಕೊಂಡು ಹೋಗಿ ಎಂದು ಸ್ವಾಮೀಜಿ ಹೇಳಿದರು. ಅವರು ಮೈಸೂರಿನಲ್ಲಿ ಇದ್ದಾಗ ಕುವೆಂಪು ಅವರ ಮಿತ್ರರಾಗಿದ್ದರು. ಜೊತೆಯಾಗಿ ವಾಲೀಬಾಲ್ ಆಡುತ್ತಿದ್ದರು. ರಂಗನಾಥಾನಂದರಲ್ಲಿ ಕುವೆಂಪು ಅವರಿಗೆ ಗೌರವ, ಮೆಚ್ಚುಗೆಗಳು ಅಗಾಧವಾಗಿದ್ದುವು. ಅವರನ್ನು ಕುರಿತು ನನ್ನ ಗುರುಗಳಾದ ಕುವೆಂಪು ಅವರು ಒಮ್ಮೆ ಹೇಳಿದರು: "ಶ್ರೀ ರಾಮಕೃಷ್ಣರಿಗೆ ಪವಾಡಗಳಲ್ಲಿ ನಂಬಿಕೆ ಇರಲಿಲ್ಲ. ಆದರೆ ಸ್ವತಃ ಅವರೇ ಒಂದು ಪವಾಡ ಮಾಡಿದ್ದಾರೆ. ಅದೇನೆಂದರೆ ಕೇವಲ ಎಸ್‌ಎಸ್‌ಎಲ್‌ಸಿ ಪರೀಕ್ಷೆಯವರೆಗೆ ಓದಿದ್ದ ಹುಡುಗನೊಬ್ಬನನ್ನು ಮಹಾನ್ ವಿದ್ವಾಂಸನನ್ನಾಗಿಯೂ ಮಹಾನ್ ವಾಗ್ಮಿಯನ್ನಾಗಿಯೂ ಮಾಡಿದರು. ಅವರೇ ಸ್ವಾಮಿ ರಂಗನಾಥಾನಂದರು!"

ಇಬ್ಬರು ಮಹಾನ್ ವ್ಯಕ್ತಿಗಳು– ಕುವೆಂಪು ಮತ್ತು ರಂಗನಾಥಾನಂದ ಮಹಾರಾಜರು – ಒಂದು ಗಂಟೆಯ ಕಾಲ ಖುಷಿಯಾಗಿ ಸಂಭಾಷಣೆ ನಡೆಸಿದರು. ಮಧ್ಯೆ ಹಾಸ್ಯದ ಹೊನಲು ಹರಿಯುತ್ತಿತ್ತು. ನನಗಂತೂ ಹಾಸ್ಯಮಿಶ್ರಿತ ಜ್ಞಾನದ ಹೊನಲಿನಲ್ಲಿ ಮಿಂದ ಅನುಭವವಾಯ್ತು. ದುರಂತವೆಂದರೆ, ನನಗೆ ಆ ಸಂಭಾಷಣೆಯ ಎಲ್ಲ ವಿವರಗಳೂ ಮರೆತೇ ಹೋಗಿವೆ.

ಶ್ರೀ ಕುವೆಂಪು ಅವರ ಮನೆಯಿಂದ ಸ್ವಾಮೀಜಿಯನ್ನು ನಾನು ನೇರವಾಗಿ ಆಲ್ ಇಂಡಿಯಾ ರೇಡಿಯೋ ಸ್ಟೇಷನ್ನಿಗೆ ಕರೆದುಕೊಂಡು ಹೋದೆ. ಅವರ ಸಂದರ್ಶನ ನಲವತ್ತೈದು ನಿಮಿಷಗಳಿಗೂ ಹೆಚ್ಚು ಕಾಲ ನಡೆಯಿತು. ಇಡೀ ಸಂದರ್ಶನದ ಪ್ರಶ್ನೋತ್ತರಗಳ ವಿವರಗಳು ಈಗ ನನ್ನ ನೆನಪಿನಲ್ಲಿ ಉಳಿದಿಲ್ಲ. ಆದರೆ, ಎರಡು

---

* ವಾಸ್ತವವಾಗಿ ಇಂದಿರಾಗಾಂಧಿ ರಾಷ್ಟ್ರೀಯ ಏಕತಾ ಪ್ರಶಸ್ತಿಯನ್ನು ಸ್ವಾಮಿ ರಂಗನಾಥಾನಂದ ಜೀ ಅವರಿಗೆ ಕೊಡಲಾಯಿತು. ಆಶ್ರಮಕ್ಕೆ ಗಾಂಧೀ ಶಾಂತಿ ಪ್ರಶಸ್ತಿಯನ್ನು ನೀಡಲಾಯಿತು. ಸ್ವಾಮಿ ರಂಗನಾಥಾನಂದರು ೧೯೯೯ರಲ್ಲಿ ರಾಮಕೃಷ್ಣ ಮಿಷನ್ ಪರವಾಗಿ ಅದನ್ನು ಸ್ವೀಕರಿಸಿದರು.

ಅಂಶಗಳು ನೆನಪಾಗುತ್ತಿವೆ. ಅವರಿಗೆ ನಾನು ಪ್ರಶ್ನೆಗಳನ್ನು ಹಾಕುತ್ತಿದ್ದುದು ಕನ್ನಡದಲ್ಲಿ. ಅವರ ಉತ್ತರದ ಬಹುಭಾಗ ಕನ್ನಡದಲ್ಲೇ ಇರುತ್ತಿತ್ತು. ಅವರು ಮೈಸೂರನ್ನು ಬಿಟ್ಟು ನಾಲ್ಕು ದಶಕಗಳೇ ಉರುಳಿದ್ದುವು. ಆದರೂ ಸ್ವಚ್ಛವಾದ ಕನ್ನಡದಲ್ಲಿ ಸ್ವಾಮೀಜಿ ಮಾತನಾಡುತ್ತಿದ್ದಾರೆ! ಆಶ್ಚರ್ಯ, ಸಂತೋಷ ಎರಡೂ ಉಂಟಾದುವು. ಶಾಸ್ತ್ರಗಳಿಂದ ಯಾವುದಾದರೂ ಭಾಗವನ್ನು ನೆನಪಿನಿಂದಲೇ ಹೇಳುತ್ತಿದ್ದರೂ ಸಂಸ್ಕೃತ ಭಾಗವನ್ನು ವಿವರಿಸುವಾಗ ಕನ್ನಡವನ್ನೇ ಬಳಸುತ್ತಿದ್ದುದು ಆಶ್ಚರ್ಯಕರವಾಗಿತ್ತು!

ಪ್ರಭುಶಂಕರ: "ನಿಮ್ಮ ಉಪನ್ಯಾಸಗಳನ್ನು ನಾನು ನಲವತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಕೇಳುತ್ತಿದ್ದೇನೆ. ಅಲ್ಲದೆ ನಿಮ್ಮ ಎಲ್ಲ ಪುಸ್ತಕಗಳನ್ನು ಓದಿದ್ದೇನೆ. ನೀವು ನಿಮ್ಮ ಬರೆಹಗಳಲ್ಲೂ, ಉಪನ್ಯಾಸಗಳಲ್ಲೂ ವಿಜ್ಞಾನಿಗಳ ಅಭಿಪ್ರಾಯಗಳನ್ನೂ ಬೇಕಾದಷ್ಟು ಉದ್ಧರಿಸುತ್ತೀರಿ. ಏಕೆ?"

ಸ್ವಾಮೀಜಿ: "ನೋಡಿ, ಇದು ವಿಜ್ಞಾನ ಹಾಗೂ ತಂತ್ರಜ್ಞಾನಗಳ ಯುಗ. ಜನ ಅನೇಕ ವಿಷಯಗಳ ಬಗ್ಗೆ ವಿಜ್ಞಾನಿಗಳ ಅಭಿಪ್ರಾಯಗಳು ಏನು ಎಂಬುದನ್ನು ತಿಳಿಯಬಯಸುತ್ತಾರೆ. ಧಾರ್ಮಿಕ ಹಾಗೂ ತಾತ್ವಿಕ ಅಭಿಪ್ರಾಯಗಳ ಮೇಲೆ ವಿಜ್ಞಾನದ ಮುದ್ರೆ ಇದೆಯೇ ಎಂಬುದನ್ನು ಜನ ನೋಡಬಯಸುತ್ತಾರೆ. ಆಧುನಿಕ ವಿಜ್ಞಾನ, ಅದರಲ್ಲೂ ಭೌತವಿಜ್ಞಾನವು ಆತ್ಮ ಮತ್ತು ಭೌತಿಕ ವಸ್ತುಗಳ ಏಕತೆಯ ವಿಷಯದಲ್ಲಿ ತಾತ್ವಿಕ ಸಿದ್ಧಾಂತವು ಏನೆನ್ನುತ್ತದೆ ಎನ್ನುವ ವಿಷಯವನ್ನು ತಿಳಿಯುವುದರಲ್ಲಿ ತುಂಬ ಆಸಕ್ತಿ ವಹಿಸುತ್ತದೆ. ವಿಜ್ಞಾನದ ವಿಧಾನಗಳನ್ನು ಬಳಸಿಕೊಂಡು ಆತ್ಮ ಮತ್ತು ಭೌತವಸ್ತು ಒಂದೇ ಎಂದು ಸಾಧಿಸಿ ತೋರಿಸಿದರೆ, ಹೆಚ್ಚು ಜನ ತತ್ವಜ್ಞಾನವನ್ನು ಒಪ್ಪಿಕೊಳ್ಳುತ್ತಾರೆ ಎಂಬುದನ್ನು ನೀವೂ ಒಪ್ಪಿಕೊಳ್ಳುತ್ತೀರಿ ತಾನೆ?"

"ಇಲ್ಲ, ನಾನು ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ" ಎಂದೆ. ಸಾಪೇಕ್ಷ ಸಿದ್ಧಾಂತದ ವಿಷಯದಲ್ಲಿ ನಾವು ವಿಜ್ಞಾನಿಗಳು ಹೇಳುವುದನ್ನು ಒಪ್ಪಿಕೊಳ್ಳಬೇಕು. ಏಕೆಂದರೆ ಆ ಕ್ಷೇತ್ರದಲ್ಲಿ ವಿಜ್ಞಾನಿಗಳದ್ದೇ ಕೊನೆಯ ಮಾತು. ಆದರೆ ದೇವರ ಅಸ್ತಿತ್ವದ ವಿಷಯದಲ್ಲಿ ವಿಜ್ಞಾನದ್ದು ಕೊನೆಯ ಮಾತು ಎಂದು ಒಪ್ಪಿಕೊಳ್ಳುವುದು ಸಾಧ್ಯವಿಲ್ಲದ ಮಾತು. ಅಷ್ಟೇ ಅಲ್ಲ, ದೇವರ ಸರ್ವಶಕ್ತಿತ್ವ, ಸೃಷ್ಟಿ, ಸ್ಥಿತಿ, ಲಯಗಳು ಇವುಗಳ ವಿಷಯದಲ್ಲಿ ವಿಜ್ಞಾನಿಗಳ ಅಭಿಪ್ರಾಯವನ್ನು ನಾವು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ. ಅಂಥ ವಿಷಯಗಳಲ್ಲಿ ಧಾರ್ಮಿಕ ವ್ಯಕ್ತಿಗಳದ್ದೇ ಕೊನೆಯ ಮಾತು! ಶಾಸ್ತ್ರಕಾರರು ದೇವರ ಅಸ್ತಿತ್ವ ಅಥವಾ ನಾಸ್ತಿಕತೆಯ ವಿಷಯದಲ್ಲಿ ಹೆಚ್ಚು ಅಧಿಕಾರದಿಂದ ಮಾತನಾಡಬಲ್ಲರು. ದೇವರಿದ್ದಾನೆ ಅಥವಾ ಇಲ್ಲ ಎಂದು ಐನ್‌ಸ್ಟೈನ್ ಮಹಾಶಯನು ಹೇಳಿದರೆ, ಅದು ಶುದ್ಧಾಂಗವಾಗಿ ಅವರ ವೈಯಕ್ತಿಕ ನಂಬಿಕೆಯ ವಿಷಯವಾಗುತ್ತದೆ. ದೇವರಿಗೆ ಸಂಬಂಧಿಸಿದ ಐನ್‌ಸ್ಟೈನ್‌ನ ಹೇಳಿಕೆಗಳನ್ನು ನಮ್ಮಂಥವರು ಒಪ್ಪಬಹುದು ಅಥವಾ ಒಪ್ಪದೇ ಹೋಗಬಹುದು. ದೇವರಿಗೆ ಸಂಬಂಧಿಸಿದ ವಿಷಯಗಳಲ್ಲಿ ಧರ್ಮಗ್ರಂಥಗಳೇ ನಮಗೆ ಆಧಾರ. ದೇವರು ಇದ್ದಾನೆ ಅಥವಾ ಇಲ್ಲ ಎನ್ನುವ ವಿಷಯದಲ್ಲಿ ಶಾಸ್ತ್ರಕಾರರು ತಮಗೆ ಸಾಧ್ಯವಾದಷ್ಟು ದೂರ ಹೋಗಿದ್ದಾರೆ. ಐನ್‌ಸ್ಟೈನ್ ಒಂದು ವೇಳೆ 'ದೇವರಿದ್ದಾನೆ' ಎಂದು ಹೇಳಿದ್ದರೆ, ಅದು ಅವನ ನಂಬಿಕೆಯನ್ನು ಆಧರಿಸಿದ ಹೇಳಿಕೆ ಎಂದುಬಿಡಬಹುದು. ನನ್ನಂಥವರು ದೇವರ ಅಸ್ತಿತ್ವದ ವಿಷಯದಲ್ಲಿ ಐನ್‌ಸ್ಟೈನನ ಅಭಿಪ್ರಾಯವನ್ನು ಒಪ್ಪದೇ ಹೋಗಬಹುದು. ಹಾಗೆಯೇ ಬೇರೆ ಲೋಕಗಳು ಮುಂತಾದುವನ್ನು ಕುರಿತ, ಜನ್ಮಾಂತರಗಳನ್ನು ಕುರಿತ ಅಭಿಪ್ರಾಯಗಳನ್ನು ನಾವು ಒಪ್ಪದೇ ಹೋಗಬಹುದು.

"ಇನ್ನೊಂದು ಉದಾಹರಣೆಯನ್ನು ಕೊಡಬಹುದಾದರೆ, ಹೀಗೆ ಹೇಳಬಹುದು: ಯೋಗದ ವಿಷಯದಲ್ಲಿ ಪತಂಜಲಿಯು ಅಧಿಕಾರಯುತವಾಗಿ ಹೇಳಬಲ್ಲ. ಬೇರೆ ಯಾವನೇ ವಿಜ್ಞಾನಿಯು – ಅವನು ನೊಬೆಲ್ ಪ್ರಶಸ್ತಿಯನ್ನು ಪಡೆದವನೇ ಆದರೂ – ಯೋಗದ ವಿಷಯದಲ್ಲಿ ಅವನ ಅಭಿಪ್ರಾಯವನ್ನು ಸ್ವೀಕರಿಸಬೇಕಾಗಿಲ್ಲ."

"ಸ್ವಾಮಿ ವಿವೇಕಾನಂದರು ೧೮೯೬ರಲ್ಲಿ ಇಂಗ್ಲೆಂಡಿನಲ್ಲಿ ಮಾಡಿದ 'ವಿಚಾರ ಮತ್ತು ಧರ್ಮ' ಎಂಬ ಒಂದು ಉಪನ್ಯಾಸದಲ್ಲಿ ಹೇಳಿದ ಈ ಮಾತುಗಳನ್ನು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು."

"ಇತರ ವಿಜ್ಞಾನ ಶಾಖೆಗಳು ತಮ್ಮ ಸಹಾಯಕ್ಕೆ ಬಳಸಿಕೊಳ್ಳುವ ತರ್ಕವನ್ನೇ ಧರ್ಮವೂ ಬಳಸಿಕೊಳ್ಳಬೇಕೆ? ವಿಜ್ಞಾನವೂ ಇತರ ಜ್ಞಾನಶಾಖೆಗಳೂ ಬಳಸಿಕೊಳ್ಳುವ ಶೋಧನ ನಿಯಮಗಳನ್ನೇ ಧರ್ಮವೂ ಬಳಸಿಕೊಳ್ಳಬೇಕೆ? ನನ್ನ ಅಭಿಪ್ರಾಯದಲ್ಲಿ ಹೌದು; ಅವನ್ನೇ ಧರ್ಮವು ಬಳಸಿಕೊಳ್ಳಬೇಕು. ಇನ್ನೂ ಮುಂದುವರಿದು ಹೇಳಬೇಕೆಂದರೆ, ಧರ್ಮವು ಅವನ್ನು ಎಷ್ಟು ಬೇಗ ಹಾಗೆ ಬಳಸಿಕೊಳ್ಳುತ್ತದೆಯೋ ಅಷ್ಟೂ ಅದಕ್ಕೆ ಒಳ್ಳೆಯದೇ ಆಗುತ್ತದೆ. ಅಂಥ ಶೋಧನೆಗಳಿಂದ ಧರ್ಮವು ಹಾಳಾಗುವುದಾದರೆ, ಅಂಥ ಧರ್ಮವು ಅಸ್ತಿತ್ವದಲ್ಲಿರುವುದಕ್ಕೆ ಯೋಗ್ಯವಾದದ್ದಲ್ಲ ಎಂದು ತೀರ್ಮಾನವಾಗುತ್ತದೆ. ಅದು ನಾಶವಾಗುವುದೇ ಒಳ್ಳೆಯದು. ಅಂಥ ಧರ್ಮದಲ್ಲಿರುವ ಕಲ್ಮಶಗಳು ಕಳೆದು ಹೋಗಿ, ಅದರ ಸಾರವತ್ತಾದ ಭಾಗವು ಉಳಿದುಕೊಳ್ಳುತ್ತದೆ. ಹಾಗೆ ಉಳಿದುಕೊಂಡದ್ದು ಭೌತಶಾಸ್ತ್ರ ಅಥವಾ ರಸಾಯನ ಶಾಸ್ತ್ರದಷ್ಟು ಗಟ್ಟಿಯಾಗಿರುತ್ತದೆ. ಅಥವಾ ಅವುಗಳಿಗಿಂತ ಹೆಚ್ಚು ಗಟ್ಟಿಯಾಗಿರುತ್ತದೆ. ಏಕೆಂದರೆ, ಭೌತಶಾಸ್ತ್ರ ಅಥವಾ ರಸಾಯನ ಶಾಸ್ತ್ರಕ್ಕೆ ಅವುಗಳ ಶಾಸ್ತ್ರೀಯತೆಯನ್ನು ಸಾಧಿಸಿ ತೋರಿಸುವ ಅಂತಸ್ಸತ್ವ ಇಲ್ಲ."

ನನ್ನ ವಾದದಿಂದ ಸ್ವಾಮಿಗಳ ಮೇಲೆ ಏನು ಪರಿಣಾಮವಾಯಿತೋ ಹೇಳಲಾರೆ. ಏಕೆಂದರೆ ಅವರು ಧರ್ಮ ಮತ್ತು ವಿಜ್ಞಾನಗಳ ಸಾಮರಸ್ಯವನ್ನು ಕುರಿತು ಮಾತನಾಡುತ್ತಾ ಹೋದರು.

ನಾನು ಸ್ವಾಮಿ ರಂಗನಾಥಾನಂದರ ಆತ್ಮೀಯನಾಗಲು ಇತರ ಕಾರಣಗಳೂ ಇದ್ದುವು. ನನ್ನ ಶ್ರೀಮತಿ ಡಾ. ಶಾಂತಿ; ಆಕೆಯ ತಾಯಿ ಶ್ರೀಮತಿ ಕೌಸಲ್ಯಾದೇವಿಯವರು ಮತ್ತು ತಂದೆ ಶ್ರೀ ಡಿ. ಆರ್. ಚನ್ನೇಗೌಡರು; ಆಕೆಯ ತಂಗಿ ಶ್ರೀಮತಿ ಇಂದಿರಾ ಕೃಷ್ಣ ಅವರು; ಇತರ ಮೂವರು ತಮ್ಮಂದಿರು ಬೆಂಗಳೂರಿನ ಶ್ರೀ ರಾಮಕೃಷ್ಣ ಆಶ್ರಮದ ಪಕ್ಕದ ಮನೆಯಲ್ಲಿ ವಾಸವಾಗಿದ್ದರು. ಒಮ್ಮೆ ಹೀಗಾಯಿತು:

ಸ್ವಾಮಿ ರಂಗನಾಥಾನಂದರನ್ನು ನಾನು ಬೆಂಗಳೂರಿನಿಂದ ಮೈಸೂರಿಗೆ ನನ್ನ ಕಾರಿನಲ್ಲಿ ಕರೆದು ತರಬೇಕಾಯಿತು. ನಾನು ಮತ್ತು ಸ್ವಾಮೀಜಿ ಪ್ರಯಾಣ ಹೊರಟೆವು. ಸ್ವಲ್ಪ ದೂರ ಹೋದ ಮೇಲೆ ಸ್ವಾಮೀಜಿ, "ಶಾಂತಿ ಎಲ್ಲಿ?" ಎಂದು ಕೇಳಿದರು. ಸ್ವಾಮೀಜಿಗೆ ಶಾಂತಿಯೂ ಅವರ ತಂದೆ ತಾಯಿಗಳೂ, ತಂಗಿ ತಮ್ಮಂದಿರೂ ಆಪ್ತರಾಗಿದ್ದರು. "ಆಕೆ ಬಸ್ಸಿನಲ್ಲಿ ಬರುತ್ತಾಳೆ" ಎಂದೆ. ಸ್ವಾಮೀಜಿಗೆ ಬೇಸರವಾಯಿತು. ನಾನು ಸ್ವಾಮೀಜಿಯ ಕ್ಷಮೆ ಬೇಡಿದೆ.

ನನ್ನ ಹೆಂಡತಿಯ ತಂಗಿ ಶ್ರೀಮತಿ ಇಂದಿರಾ ಕೃಷ್ಣ ಅವರು ಬೆಂಗಳೂರಿನ ರಾಮಕೃಷ್ಣಾಶ್ರಮದ ಪಕ್ಕದಲ್ಲೇ ಒಂದು ಸಂಸ್ಥೆಯನ್ನು ತೆರೆದಿದ್ದರು. ಅದರ ಹೆಸರು 'ಶಾರದಾ ಕುಟೀರ'. ಹೆಣ್ಣು ಮಕ್ಕಳು ಉಳಿಯಲೆಂದು ತೆರೆದಿದ್ದ ಸಂಸ್ಥೆ ಅದು. ಆಗ ಬೆಂಗಳೂರಿನ ಶ್ರೀ ರಾಮಕೃಷ್ಣಾಶ್ರಮದ ಅಧ್ಯಕ್ಷರಾಗಿದ್ದ ಪೂಜ್ಯ ಸ್ವಾಮಿ ಶ್ರೀ ಯತೀಶ್ವರಾನಂದರ ಸೂಚನೆಯಂತೆ ಆ ಸಂಸ್ಥೆ ಅಸ್ತಿತ್ವಕ್ಕೆ ಬಂದಿತ್ತು. ಕೆಲವರು ವೃದ್ಧೆಯರೂ ಅದರಲ್ಲಿ ಆಶ್ರಯ ಪಡೆದಿದ್ದರು. ಅದರ ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ ಹಣದ ಕೊರತೆಯಾಯಿತು. ಆಗ ಶ್ರೀ ಸ್ವಾಮಿ ರಂಗನಾಥಾನಂದರು ಶ್ರೀ ರಾಮಕೃಷ್ಣಾಶ್ರಮದ ಹೈದರಾಬಾದ್ ಶಾಖೆಯ ಅಧ್ಯಕ್ಷರಾಗಿದ್ದರು. ಶ್ರೀಮತಿ ಇಂದಿರಾ ಕೃಷ್ಣ ಅವರು ಶ್ರೀ ಸ್ವಾಮಿ ರಂಗನಾಥಾನಂದರಿಂದ ಮಾರ್ಗದರ್ಶನ ಪಡೆಯಲು ಪ್ರಯತ್ನಿಸಿದರು. ಅವರು ಸೂಚನೆ ನೀಡಿದಂತೆ, ಮದರಾಸಿನಲ್ಲಿ ನೆಲೆಸಿದ್ದ ಪ್ರಸಿದ್ಧ ಗಾಯಕಿ ಶ್ರೀ ಎಂ.ಎಸ್. ಸುಬ್ಬಲಕ್ಷ್ಮಿಯವರಿಗೆ ಪತ್ರ ಬರೆದು ಸಹಾಯಾರ್ಥ ಸಂಗೀತ ಕಛೇರಿ ನೀಡುವಂತೆ ಕೋರಿದರು. ಶ್ರೀಮತಿ ಸುಬ್ಬುಲಕ್ಷ್ಮಿಯವರು ಕೂಡಲೇ ಒಪ್ಪಿದರು. ತಮಗೆ ಪ್ರೇರಣೆ ಶ್ರೀ ಸ್ವಾಮಿ ರಂಗನಾಥಾನಂದರೆಂದು ಹೇಳಿದರು. ಆದರೆ ಅವರದು ಒಂದು ಷರತ್ತು ಇತ್ತು. ಅದೆಂದರೆ, ತಾವು ಸಹಾಯಾರ್ಥ ಕಛೇರಿ ನೀಡುವ ಸಂದರ್ಭದಲ್ಲಿ ಪೂಜ್ಯ ಶ್ರೀ ಸ್ವಾಮಿ ರಂಗನಾಥಾನಂದಜೀಯವರೂ ಉಪಸ್ಥಿತರಿರಬೇಕೆಂಬುದು. ಶ್ರೀ ಸ್ವಾಮಿ ರಂಗನಾಥಾನಮದಜೀ ಅವರ ಕರುಣೆ ಅಪಾರವಾದದ್ದು. ಅವರು ಕೂಡಲೇ ಒಪ್ಪಿದರು.

ಈ ಸಂದರ್ಭದಲ್ಲಿ ಶ್ರೀಮತಿ ಸುಬ್ಬುಲಕ್ಷ್ಮಿಯವರ ಔದಾರ್ಯದ ಬಗ್ಗೆಯೂ ಎರಡು ಮಾತು ಹೇಳಬೇಕು. ಅವರು ಆ ವೇಳೆಗಾಗಲೇ, ತಮಿಳುನಾಡಿನಲ್ಲಿ ಮಾತ್ರವಲ್ಲದೆ ಭಾರತದಾದ್ಯಂತ ತಮ್ಮ ಮಧುರವಾದ ಗಾಯನ ಶಕ್ತಿಯಿಂದ ಪ್ರಖ್ಯಾತರಾಗಿದ್ದರು. ಅವರಿಂದ ಆರ್ಥಿಕ ನೆರವನ್ನು ಪಡೆಯದ ಸಾರ್ವಜನಿಕ ಸಂಸ್ಥೆಯೇ ಯಾವುದೂ ಇರಲಿಲ್ಲ ಎಂದು ಹೇಳಬಹುದು. ಆದರೆ ಕಾಲಕ್ರಮದಲ್ಲಿ ಅವರ ಪತಿ ಶ್ರೀ ಟಿ. ಸದಾಶಿವಂ ಅವರು ಆರ್ಥಿಕ ಸಂಕಷ್ಟದಲ್ಲಿದ್ದರು. ಶ್ರೀ ಸ್ವಾಮಿ ರಂಗನಾಥಾನಂದರಿಗೆ ಈ ವಿಷಯ ತಿಳಿಯಿತು. ತಮಗೆ ಬೇಕಾಗಿದ್ದ ಕೆಲವು ಭಕ್ತರಿಗೆ ವಿಷಯ ತಿಳಿಸಿ ಈ ಸದಾಶಿವಂ ಮತ್ತು ಶ್ರೀಮತಿ ಸುಬ್ಬುಲಕ್ಷ್ಮಿಯವರಿಗೆ ಆರ್ಥಿಕ ನೆರವು ನೀಡುವಂತೆ ಮಾಡಿದರು. ಸನ್ಯಾಸಿಯೊಬ್ಬರು ಶ್ರೀಮತಿ ಸುಬ್ಬುಲಕ್ಷ್ಮಿಯವರಿಗೆ ಸಹಾಯ ಮಾಡುವುದು ಸಮಂಜಸವೇ ಎಂದು ಕೆಲವರು ಮೆಲುದನಿಯಲ್ಲಿ ಕೇಳಿದರು. ಅವರ ಆಕ್ಷೇಪಣೆಯ ಮಾತುಗಳು ಸ್ವಾಮಿ ರಂಗನಾಥಾನಂದರ ಕಿವಿಗೂ ಬಿತ್ತು. ಆಗ ಅವರು ಹೇಳಿದರು: "ಆಕೆ (ಶ್ರೀಮತಿ ಸುಬ್ಬುಲಕ್ಷ್ಮಿಯವರು) ಕೇವಲ ವ್ಯಕ್ತಿಯಲ್ಲ, ಆಕೆ ಭಾರತೀಯ ಸಂಸ್ಕೃತಿಯ ಸಾಕ್ಷಾತ್ ಸ್ವರೂಪ." ಈ ಘಟನೆ ಇಬ್ಬರು ಮಹಾನ್ ವ್ಯಕ್ತಿಗಳ ಅಪರೂಪದ ವ್ಯಕ್ತಿತ್ವವನ್ನು ಪ್ರಕಾಶಿಸಿ ತೋರಿಸುತ್ತದೆ. ಮೊದಲನೆಯದು ತಾನೇ ಆರ್ಥಿಕವಾಗಿ ದುಃಸ್ಥಿತಿಯಲ್ಲಿದ್ದರೂ ಕಷ್ಟದಲ್ಲಿದ್ದವರಿಗಾಗಿ ತನ್ನ ಸಂಗೀತ ಸಂಪತ್ತನ್ನು ಧಾರೆಯೆರೆದು, ಕಷ್ಟದಲ್ಲಿದ್ದ ಅನೇಕ ಸಂಸ್ಥೆಗಳಿಗೆ ಜೀವದಾನ ಮಾಡಿದ ಮಹಾ ಮಹಿಳೆ ಶ್ರೀಮತಿ ಸುಬ್ಬುಲಕ್ಷ್ಮಿಯವರದ್ದು. ಎರಡನೆಯದು– ತಾನೇ ಬಡವಿಯಾಗಿದ್ದರೂ ಇತರ ಬಡಜನರಿಗೆ, ಬಡ ಸಂಸ್ಥೆಗಳ ನೆರವಿಗೆ ಧಾವಿಸುತ್ತಿದ್ದ ಶ್ರೀಮತಿ ಸುಬ್ಬುಲಕ್ಷ್ಮಿಯವರನ್ನು ಪ್ರೋತ್ಸಾಹಿಸುತ್ತಾ ಇದ್ದ ಮಹಾಸಾಧು ಶ್ರೀ ಸ್ವಾಮಿ ರಂಗನಾಥಾನಂದರದ್ದು.

ಅತ್ಯಂತ ಅಪರೂಪವಾದ ಸಾಧು ಸಮಾಗಮದ ಒಂದು ದೃಶ್ಯಕ್ಕೆ ಸಾಕ್ಷಿಯಾಗುವ ಭಾಗ್ಯ ಒಮ್ಮೆ ನನಗೆ ಲಭ್ಯವಾಗಿತ್ತು. ಒಬ್ಬರು ಈಗಾಗಲೇ ನಾನು ಸಾಕಷ್ಟು ವರ್ಣಿಸಿರುವ ಶ್ರೀ ಸ್ವಾಮಿ ರಂಗನಾಥಾನಂದರು. ಮತ್ತೊಬ್ಬರು ಪೂಜ್ಯರಾದ ಡಿ. ಶಿವಮೂರ್ತಿ ಶಿವಾಚಾರ್ಯರು. ಅವರು ಚಿತ್ರದುರ್ಗ ಜಿಲ್ಲೆಯ ಸಿರಿಗೆರೆಯ ತರಳಬಾಳು ಮಠದ ಪೀಠಾಧ್ಯಕ್ಷರು. ಅವರು ಶ್ರೀ ಸ್ವಾಮಿ ರಂಗನಾಥಾನಂದರನ್ನು ಭೇಟಿ ಮಾಡಿದ ಒಂದು ಸಂದರ್ಭ ನೆನಪಾಗುತ್ತಿದೆ. ಆ ಭೇಟಿಗೂ ನಾನು ನಿಮಿತ್ತವಾಗಿದ್ದೆ. ಪೂಜ್ಯ ಶಿವಮೂರ್ತಿ ಶಿವಾಚಾರ್ಯರು ಘನ ವಿದ್ವಾಂಸರು; ಯೂರೋಪಿನ ವಿಯನ್ನಾ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಿ ಪಿಎಚ್.ಡಿ. ಪದವಿ ಪಡೆದವರು. ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತೆಲುಗು ಪ್ರಾಧ್ಯಾಪಕರಾಗಿದ್ದ, ಸ್ವಯಂ ವಿದ್ವಾಂಸರೂ, ಕವಿಯೂ ಆಗಿದ್ದ ಶ್ರೀ ಬಾಡಾಲ ರಾಮಕವಿ ಎಂಬುವರಿಂದ, ನನ್ನ ಸೂಚನೆಯಂತೆ ಶಿವಶರಣರ ನೂರೊಂದು ವಚನಗಳನ್ನು ತೆಲುಗು ಭಾಷೆಗೆ ಅನುವಾದ ಮಾಡಿಸಿದ್ದರು. ಆ ಗ್ರಂಥದ ಪ್ರತಿಗಳು ಮಾರಾಟವಾಗದೆ ಉಳಿದಿದ್ದುವು. ಪೂಜ್ಯ ಸ್ವಾಮೀಜಿಯವರನ್ನು ಭೇಟಿ ಮಾಡಿದಾಗ ನಾನು ಕೇಳಿದೆ: "ಈ ತೆಲುಗು ಅನುವಾದದ ಕೃತಿಗಳನ್ನು ರಾಶಿ ಹಾಕಿಕೊಂಡು ಮಾಡುವುದು ತಾನೆ ಏನು? ನಾವು ಪೂಜ್ಯ ಶ್ರೀ ಸ್ವಾಮಿ ರಂಗನಾಥಾನಂದಜೀ ಅವರಿಂದ ಇವನ್ನು ಹೈದರಾಬಾದಿನಲ್ಲಿ ಬಿಡುಗಡೆ ಮಾಡಿಸೋಣ. ನಾನು ಅವರೊಂದಿಗೆ ಮಾತನಾಡಿ ಬಿಡುಗಡೆ ಕಾರ್ಯಕ್ರಮಕ್ಕೆ ಏರ್ಪಾಟು ಮಾಡುತ್ತೇನೆ. ತಾವು ಹೈದರಾಬಾದಿಗೆ ದಯಮಾಡಿಸಿ." ಅವರು ಒಪ್ಪಿದರು. ಬಿಡುಗಡೆ ಸಮಾರಂಭಕ್ಕೆ ಏರ್ಪಾಡಾಯಿತು.

ಶಿವರಾತ್ರಿಯಂದು ಸ್ವಾಮಿ ರಂಗನಾಥಾನಂದಜೀ ಅವರು ಹೈದರಾಬಾದಿನ ಆಶ್ರಮದಲ್ಲಿ ಒಂದು ಉಪನ್ಯಾಸ ನೀಡಿದರು. ವಿಷಯ: 'ಶ್ರೀ ಬಸವೇಶ್ವರರ ಆಧ್ಯಾತ್ಮಿಕ ಮತ್ತು ಸಾಮಾಜಿಕ ಸಾಧನೆ ಹಾಗೂ ಸಿದ್ಧಿ' ರಂಗನಾಥಾನಂದರು ಬಸವೇಶ್ವರರನ್ನು ಮತ್ತು ವೀರಶೈವ ಸಂತರನ್ನು ಕುರಿತು ಅಷ್ಟೊಂದು ವಿಷಯಗಳನ್ನು ಎಲ್ಲಿ ಮತ್ತು ಹೇಗೆ ಸಂಪಾದಿಸಿದ್ದರೋ ತಿಳಿಯದು. ಕೈಯಲ್ಲಿ ಒಂದು ಚೂರು ಕಾಗದವನ್ನು ಹಿಡಿಯದೆ ಒಂದು ಗಂಟೆಯ ಕಾಲ ಕೇಳುಗರನ್ನು ಅನುಭೂತಿಯ ಉನ್ನತ ಶಿಖರಗಳಿಗೆ ಒಯ್ಯಬಲ್ಲ ಮತ್ತೊಬ್ಬರು ಉಪನ್ಯಾಸಕರನ್ನು ನಾನಂತೂ

ಕಂಡಿಲ್ಲ. ವಚನಗಳನ್ನು, ವೀರಶೈವ ಸಂತರನ್ನು ಕುರಿತು ಒಂದು ಗಂಟೆ ಮಾತನಾಡಿ ಕೇಳುಗರನ್ನು ಅವರು ಮರು ದಿನದ ಉಪನ್ಯಾಸವನ್ನು ಕೇಳಲು ಕುತೂಹಲಿಗಳನ್ನಾಗಿ ಮಾಡಿದರು. ಮರು ದಿನ ತರಳಬಾಳು ಜಗದ್ಗುರುಗಳು ಬಂದರು. ಇಬ್ಬರು ಮಹಾನುಭಾವರೂ ಆಶ್ರಮದ ಪ್ರಾರ್ಥನಾಮಂದಿರದಲ್ಲಿ ಭೇಟಿಯಾದರು. ಸ್ವಾಮಿ ರಂಗನಾಥಾನಂದರು ತರಳಬಾಳು ಸ್ವಾಮೀಜಿಯವರನ್ನು ಸ್ವಾಗತಿಸಿ, ಹಾರ ಹಾಕಿ ಅನಂತರ ಶಾಲು ಹೊದಿಸಿದರು. ತರಳಬಾಳು ಸ್ವಾಮೀಜಿಯವರೂ ಹೂವಿನ ಹಾರವನ್ನು ತಂದಿದ್ದರು. ಅದನ್ನು ರಂಗನಾಥಾನಂದರಿಗೆ ಹಾಕಿ ಅವರ ಕಾಲು ಮುಟ್ಟಿ ನಮಸ್ಕರಿಸಿದರು. ಇಬ್ಬರು ಮಹಾತ್ಮರು ಒಬ್ಬರನ್ನೊಬ್ಬರು ಗೌರವಿಸಿದ ರೀತಿಯನ್ನು ನೋಡಿ ನನ್ನ ಕಣ್ಣುಗಳಲ್ಲಿ ನೀರು ತುಂಬಿತು.

೨೦೦೫ರ ಮಾರ್ಚ್ ತಿಂಗಳಲ್ಲಿ ನಾನು ನನ್ನ ಆತ್ಮೀಯ ಮಿತ್ರರಾದ ಶ್ರೀ ಸ್ವಾಮಿ ಸುರೇಶಾನಂದರ ಹಾಗು ಶ್ರೀ ಸ್ವಾಮಿ ಕಮಲಾನಂದರ ಜೊತೆ ಬೇಲೂರು ಮಠದಲ್ಲಿ ಪೂಜ್ಯ ರಂಗನಾಥಾನಂದ ಜೀ ಅವರ ದರ್ಶನ ಪಡೆದೆ. ಅವರ ಆರೋಗ್ಯ ಕುಂದುತ್ತಿತ್ತು. ಅವರು ಆ ವೇಳೆಗಾಗಲೇ ಜಗತ್ತನ್ನು ಹಲವು ಸಲ ಸುತ್ತಿ ಬಂದಿದ್ದರು. ಸಹಸ್ರಾರು ಜನರ ಆಧ್ಯಾತ್ಮಿಕ ಪ್ರಗತಿಗೆ ಕಾರಣರಾಗಿದ್ದರು. ಕುಗ್ಗಿದ ಆರೋಗ್ಯ ಸ್ಥಿತಿಯಲ್ಲೂ ಅವರು ತಕ್ಷಣ ನಮ್ಮನ್ನು ಗುರುತಿಸಿದರು. ನನ್ನ ನಾದಿನಿ ಇಂದಿರಾ ಕೃಷ್ಣ ಅವರ ಹೆಸರು ಅವರ ನೆನಪಿಗೆ ಬರಲಿಲ್ಲ. "ಚನ್ನೇಗೌಡರ ಮಗಳು ಹೇಗಿದ್ದಾರೆ?" ಎಂದು ಕೇಳಿದರು. "ಅವರು ಚೆನ್ನಾಗಿದ್ದಾರೆ" ಎಂದೆ. ಸ್ವಾಮೀಜಿಗೆ ಖುಷಿಯಾಯಿತು. ಸ್ವಾಮೀಜಿಗೆ ನನ್ನ ನಾದಿನಿ ಇಂದಿರಾ ಅವರ ತಂದೆ, ತಾಯಿ, ತಮ್ಮಂದಿರು, ಅಕ್ಕ ಎಲ್ಲರೂ ನೆನಪಾದರು. ಸ್ವಾಮೀಜಿ ತಾವು ಬರೆದಿದ್ದ 'ಬೃಹದಾರಣ್ಯಕ ಉಪನಿಷತ್ತಿ'ನ ಮೇಲಣ ಭಾಷ್ಯವನ್ನು ಓದುತ್ತಿದ್ದರು. ಆ ಪುಸ್ತಕವನ್ನು ತೋರಿಸುತ್ತಾ "ಇದು ವಿಜ್ಞಾನವನ್ನು ಮೀರಿದ್ದು" ಎಂದರು. ಅವರ ಬಾಯಿಂದ ಹೊರಬಿದ್ದು, ನಾನು ಕೇಳಿದ ಕೊನೆಯ ಮಾತುಗಳು ಅವು. ಅವರು ಹೇಳಿದ ಮಾತುಗಳನ್ನು ಕುರಿತು ನನ್ನ ಅಭಿಪ್ರಾಯವನ್ನು ಹೇಳಲು ಹೊರಟಿದ್ದೆ. ಆದರೆ ಅದರ ಆಪ್ತ ಸೇವಕರು ಸನ್ನೆ ಮಾಡಿ ನನ್ನ ಉದ್ದೇಶಿತ ವಾದಕ್ಕೆ ಪೂರ್ಣ ವಿರಾಮ ಹಾಕಿದರು. ಹೀಗಾಗಿ ನಾವು, ಇಚ್ಛೆಯಿಲ್ಲದಿದ್ದರೂ ಅಲ್ಲಿಂದ ಹೊರಕ್ಕೆ ಬಂದೆವು.

# ೬೯. ಅವರು ನನ್ನ ಬಾಳಿಗೆ ರಾಮಕೃಷ್ಣರನ್ನು ತಂದುಕೊಟ್ಟರು

–ಕಮಲಾ ಜಯ ರಾವ್*

ನಾನು ಪೂಜ್ಯ ಸ್ವಾಮಿ ರಂಗನಾಥಾನಂದರನ್ನು ನೆನೆಸಿಕೊಂಡಾಗಲೆಲ್ಲಾ ನನ್ನ ಕಣ್ಣಿನ ಮುಂದೆ ಬರುವುದು ಅವರ ಅದ್ಭುತವಾದ ಶಾಂತ ಮತ್ತು ಪ್ರೇಮ ಪೂರಿತವಾದ ಅವರ ಮುಖ, ಅವರ ಗಾಂಭೀರ್ಯಪೂರ್ಣ ನಿಲುವು, ಬಾಗದ ಬೆನ್ನು, ಹಾಗೆಯೇ ಬಾಗದ ಅವರ ಇಚ್ಛಾಶಕ್ತಿ. ಹೈದರಾಬಾದಿನ ರಾಮಕೃಷ್ಣ ಮಠದಲ್ಲಿ ಅವರು ಪ್ರತಿವಾರವೂ ನೀಡುತ್ತಿದ್ದ ಉಪನ್ಯಾಸಗಳನ್ನು ಹೆಚ್ಚು ಕಡಿಮೆ ಇಪ್ಪತ್ತೈದು ವರ್ಷಗಳ ಕಾಲ ಕೇಳುವ ಸೌಭಾಗ್ಯ ನನಗೆ ದೊರಕಿತ್ತು. ಅವರು ವಿಶೇಷವಾಗಿ ತಯಾರಿಸಿದ, ಬೆನ್ನಿಗೆ ಒರಗು ಇಲ್ಲದ ಒಂದು ಮರದ ಆಸನದ ಮೇಲೆ ಕುಳಿತುಕೊಳ್ಳುತ್ತಿದ್ದರು. ಅವರು ಉಪನ್ಯಾಸ ಮಾಡುತ್ತಿದ್ದ ಒಂದು ಗಂಟೆ ಸಮಯದಲ್ಲಿ, ಅಲ್ಪವಾಗಿ ಆಡಿಸುತ್ತಿದ್ದ ಕೈಯಿನ ಚಲನೆಯನ್ನು ಬಿಟ್ಟರೆ, ಸ್ವಲ್ಪವೂ ಅಲ್ಲಾಡದ ಹಾಗೆ ಅರೆಪದ್ಮಾಸನದಲ್ಲಿ, ಬೆನ್ನು ಬಗ್ಗದ ಹಾಗೆ ಕುಳಿತಿರುತ್ತಿದ್ದರು. ತಾವು ಮಾತನಾಡುತ್ತಿರುವಾಗ ಯಾರಾದರೂ ಒಳಬಂದರೆ, ವಿದ್ಯುತ್ ಕಡಿತವಾದರೆ, ಅದಾವುದರಿಂದಲೂ ಅವರು ವಿಚಲಿತರಾಗುತ್ತಿರಲಿಲ್ಲ. ಅವರನ್ನು ನೋಡಿದಾಗ ಅವರೇ ಮತ್ತೆ ಮತ್ತೆ ಹೇಳುತ್ತಿದ್ದ 'ನಮಃ ಶಿವಾಯ ಶಾಂತಾಯ' ಎಂಬ ಸ್ತೋತ್ರ ಜ್ಞಾಪಕಕ್ಕೆ ಬರುತ್ತಿತ್ತು. ವಿದ್ಯುತ್ ಸರಬರಾಜು ತಪ್ಪಿದಾಗ, ನಮಗೆಲ್ಲರಿಗೂ ಜೈ ಎಂದು ಹೇಳಿ ಎನ್ನುವುದರ ಮೂಲಕ ಯಾವುದೇ ಬಗೆಯ ವಿಷಾದದ ದನಿ ಹೊರಡದ ಹಾಗೆ ನೋಡಿಕೊಳ್ಳುತ್ತಿದ್ದರು. ನಮ್ಮ ಜೀವನದಲ್ಲಿ ತಾತ್ಕಾಲಿಕವಾಗಿ ಮುಸುಕುವ ದುಃಖದ ವಾತಾವರಣದಲ್ಲಿ ಗೋಳಾಡದೆ, ಉತ್ತಮ ಪರಿಸ್ಥಿತಿಗಾಗಿ ಪ್ರಾರ್ಥಿಸುವ ಪರಿಪಾಠವನ್ನು ನಾನು ಇದರಿಂದ ಕಲಿತೆ.

ನಾನು ನಲವತ್ತು ವರ್ಷಕ್ಕೂ ಹಿಂದೆ ಅವರನ್ನು ನೋಡಿದೆ ಹಾಗೂ ಅವರ ಮಾತುಗಳನ್ನು ಕೇಳಿದೆ. ಒಬ್ಬರು ತಾವು ಹೋಗುತ್ತಿರುವ ಉಪನ್ಯಾಸಕ್ಕೆ ನಾನೂ ಬರಬೇಕೆಂದೂ, ಉಪನ್ಯಾಸಕರು ಹೇಳುವ ವಿಷಯ ನನ್ನ ತಲೆಯ ಒಳಕ್ಕೆ ಇಳಿಯದಿದ್ದರೂ, ಅವರ ಭಾಷಣದ ವೈಖರಿಯನ್ನಾದರೂ ನಾನು ತಿಳಿಯಬಹುದೆಂದೂ ಹೇಳಿದರು. ಹಿಂದೆ ಹೈದರಾಬಾದಿನಲ್ಲಿದ್ದ ರೆಸಿಡೆಂಟರ ನಿವಾಸವಾಗಿದ್ದು, ಈಗ ಮಹಿಳಾ ಕಾಲೇಜಾಗಿರುವ ಕಟ್ಟಡದ ದರ್ಬಾರ್ ಹಾಲಿನಲ್ಲಿ ಉಪನ್ಯಾಸವು ಏರ್ಪಾಡಾಗಿದ್ದಿತು. ನಾವು ಹೋಗುವ ವೇಳೆಗಾಗಲೇ ಸಭಾಂಗಣ ಭರ್ತಿಯಾಗಿದ್ದು, ನಾನು ಹೇಗೋ ತೂರಿಕೊಂಡು ಬಾಗಿಲ ಬಳಿಯೇ ಇದ್ದ ಒಂದು ಮೂಲೆಯಲ್ಲಿ ನಿಂತ ಹಾಗೆ ನನಗೆ ನೆನಪು.

ಆ ಸ್ವಾಮೀಜಿಯವರ ಹೆಸರು ನನ್ನ ನೆನಪಿನಾಳದಲ್ಲಿದ್ದುದು ನನಗೆ ನನ್ನ ಅರಿವಿಗೆ ಬಂದಿತು. ೧೯೬೯ರಲ್ಲಿ ನಾನು ಸ್ಯಾನ್ ಫ್ರಾನ್ಸಿಸ್ಕೋನಲ್ಲಿದ್ದಾಗ ಅಲ್ಲಿನ ವೇದಾಂತ ಸಂಘದಲ್ಲಿ ಉಪನ್ಯಾಸವೊಂದನ್ನು ನೀಡುವರೆಂದು ಪತ್ರಿಕೆಯಲ್ಲಿ ಓದಿದ ನೆನಪು ಬಂದಿತು. ಅವರು ಅಲ್ಲಿ ಮಾಡಿದ ಭಾಷಣಕ್ಕೆ ಮತ್ತು ಸ್ಯಾನ್ ಫ್ರಾನ್ಸಿಸ್ಕೋದ ಇತರೆಡೆಗಳಲ್ಲಿ ಮಾಡಿದ ಉಪನ್ಯಾಸಗಳಿಗೆ ಹೋಗಿದ್ದೆ. ಭಾರತದ ಯಾವ ಭಾಗದಿಂದ ಬಂದಿದ್ದೀರಿ ಎಂದು ಅವರು ನನ್ನನ್ನು ಕೇಳಿದರು. ಮತ್ತೆ ಹೈದರಾಬಾದಿನಲ್ಲಿ ಮತ್ತೆ ಸಂಧಿಸುತ್ತೇವೆಂಬುದನ್ನು ನಾನಾಗಲೀ, ಅವರಾಗಲೀ ಎಣಿಸಿರಲಿಲ್ಲ.

---

* ವಿದ್ವಾಂಸರು ಹಾಗೂ ಹೈದರಾಬಾದಿನ ರಾಷ್ಟ್ರೀಯ ಪೌಷ್ಟಿಕತಾ ಸಂಸ್ಥೆಯ ಮಾಜಿ ಉಪನಿರ್ದೇಶಕರು.

ಖಾಸಗಿಯಾಗಿದ್ದ ಹೈದರಾಬಾದಿನ ಆಶ್ರಮ ೧೯೭೩ರಲ್ಲಿ ರಾಮಕೃಷ್ಣ ಮಠಕ್ಕೆ ಸೇರ್ಪಡೆಯಾಯಿತು. ಸ್ವಾಮಿ ರಂಗನಾಥಾನಂದರು ಅಲ್ಲಿಯ ಮೊದಲ ಅಧ್ಯಕ್ಷರಾಗಿದ್ದರು. ಅವರಿಗೆ ಸ್ವಾಮಿ ಅನನ್ಯಾನಂದ ಹಾಗೂ (ಮುಂದೆ ಸ್ವಾಮಿ ಪರಮಾರ್ಥಾನಂದರೆಂದು ಹೆಸರಾದ) ಬ್ರಹ್ಮಚಾರಿ ಪೂರ್ಣಚೈತನ್ಯ ಅವರು ಸಮರ್ಥವಾಗಿ ಬೆಂಬಲವನ್ನು ಕೊಟ್ಟರು. ಇವರಿಬ್ಬರೂ ನಂತರ ಹೈದರಾಬಾದಿನ ಮಠಕ್ಕೆ ಅಧ್ಯಕ್ಷರಾಗಿದ್ದರು.

ಮೊದಲು ಈ ಮಠವು ಸ್ವಾಮಿ ವಿವೇಕಾನಂದರು ಹೈದರಾಬಾದಿನಲ್ಲಿ ಸಾರ್ವಜನಿಕ ಉಪನ್ಯಾಸದ ಸ್ಥಳದಲ್ಲಿಯೇ ಇತ್ತು. ಅದು ಮಹಬೂಬ್ ಕಾಲೇಜಿನ ಹತ್ತಿರ ಮಾರ್ಕೆಟ್ ಬೀದಿಯಲ್ಲಿತ್ತು. ಸ್ವಾಮೀಜಿಯವರು ಪ್ರತಿ ವಾರ ನೀಡುತ್ತಿದ್ದ ಉಪನ್ಯಾಸಕ್ಕೆ ಜನರು ಸಭಾಂಗಣದಲ್ಲಿ ಸ್ಥಳ ಗಿಟ್ಟಿಸಿಕೊಳ್ಳಲು ಧಾವಿಸಿಬರುತ್ತಿದ್ದರು. ತಡವಾಗಿ ಬಂದವರ ಪಾಡು ಯಾರಿಗೂ ಬೇಡ. ಅಂತಹವರು ಹೊರಗಿನ ವೆರಾಂಡದಲ್ಲಿ ಕುಳಿತು, ಮಾರ್ಕೆಟ್ ಬೀದಿಯಲ್ಲಿನ ವಾಹನಗಳ ಆರ್ಭಟದ ಸದ್ದಿನೊಡನೆಯೇ ಸ್ವಾಮೀಜಿಯವರ ಉಪನ್ಯಾಸವನ್ನು ಆಲಿಸಬೇಕಿತ್ತು.

೧೯೭೮–೧೯೮೦ರ ನಡುವಿನ ಮಠವು ಈಗಿನ ವಿಶಾಲವಾದ ಸ್ಥಳಕ್ಕೆ ಬದಲಾಯಿತು. ಅಲ್ಲಿನ ತಾತ್ಕಾಲಿಕ ಮಂದಿರದಲ್ಲಿ ಶ್ರೀ ರಾಮಕೃಷ್ಣರ ಭಾವಚಿತ್ರವನ್ನು ಉದ್ಘಾಟಿಸಲು ಒಂದು ಸಾರ್ವಜನಿಕ ಸಮಾರಂಭವನ್ನು ಏರ್ಪಡಿಸಲಾಗಿತ್ತು ಮತ್ತು ತೆಲುಗಿನಲ್ಲಿದ್ದ 'ಕಥಾಮೃತ'ದ (ವಚನವೇದದ) ಒಂದು ಭಾಗವನ್ನು ಓದುವ ಕೆಲಸ ನನ್ನ ಪಾಲಿಗೆ ಬಂದಿತ್ತು. ಸ್ವಾಮೀಜಿಯವರು ಈ ಕೆಲಸಕ್ಕೆ ನನ್ನನ್ನೇ ಏಕೆ ಆಯ್ದು ಕೊಂಡರು ಎಂಬುದು ನನಗೆ ಗೊತ್ತಿಲ್ಲ. ಸಮಾರಂಭವೆಲ್ಲಾ ಮುಗಿದ ಮೇಲೆ ಅವರಿಗೆ ಪ್ರಣಾಮಗಳನ್ನು ಸಲ್ಲಿಸಲು ಹೋದಾಗ ಅವರು ತಮಗೆ ಪ್ರಿಯವಾದ ಹೇಳಿಕೆಯೊಂದನ್ನು ಉದ್ಧರಿಸಿದರು 'ಬೆಳಕನ್ನು ಕೊಡುವ ದೀಪವನ್ನು ಮುಚ್ಚಿಟ್ಟುಕೊಳ್ಳಬಾರದು, ಎಲ್ಲರಿಗೂ ಅದರ ಬೆಳಕು ಸಿಗುವಂತೆ ಅದನ್ನು ಹೊರಗೆ ಇಡಬೇಕು' ಎಂದರು. ನನಗೆ ಆ ಸಮಯದಲ್ಲಿ ಅವರು ಹೇಳಿದುದರ ಅರ್ಥ ಗೊತ್ತಾಗದೇ ಹೋದರೂ, ನಾನು ಓದಿದ ರೀತಿ ಅವರಿಗೆ ಮೆಚ್ಚಿಕೆಯಾಗಿದೆ ಎಂದೆನಿಸಿ, ಒಂದು ರೀತಿಯಲ್ಲಿ ಸಂತೋಷವಾಯಿತು.

ಹೈದರಾಬಾದಿನ ಶ್ರೀ ರಾಮಕೃಷ್ಣರ ಪರಿಪೂರ್ಣವಾದ ಮಂದಿರದ ಕೆಲಸವು ೧೯೮೧ರಲ್ಲಿ ಸಂಪೂರ್ಣವಾಯಿತು. ಅಲ್ಲಿರುವ ಶ್ರೀ ರಾಮಕೃಷ್ಣರ ವಿಗ್ರಹ ಅನನ್ಯವಾದುದು. ಇತರ ಕಡೆಗಳಲ್ಲಿರುವ ವಿಗ್ರಹಗಳು ಅಮೃತಶಿಲೆಯಲ್ಲಿ ಕಟೆದು ಮಾಡಿದವುಗಳಾಗಿದ್ದರೆ, ಹೈದರಾಬಾದಿನದು ಪಂಚಲೋಹದ ಮೂರ್ತಿ. ನನ್ನ ಮಟ್ಟಿಗೆ ಹೇಳುವುದಾದರೆ, ಅದರ ವೈಶಿಷ್ಟ್ಯಕ್ಕೆ ಸ್ವಾಮೀಜಿಯವರ ಅನನ್ಯತೆಯೇ ಕಾರಣ. ಆ ವಿಗ್ರಹವು ಬಹು ಭವ್ಯವಾಗಿದೆ. ಅದರ ಮುಂದೆ ಒಂದು ಪೂರ್ಣ ಪ್ರಮಾಣದ ಬೆಲ್ಜಿಯನ್ ಗಾಜನ್ನು ಇಟ್ಟು, ಮುಂದಿನ ಸಾರ್ವಜನಿಕ ರಸ್ತೆಯಲ್ಲಿ ಓಡಾಡುವವರು ಕೂಡ ಅದನ್ನು ನೋಡಲು ಸಾಧ್ಯವಾಗುವಂತೆ ಮಾಡಲಾಗಿದೆ. ಅದನ್ನು ನೋಡಿದ ಹಲವಾರು ಜನರು ಜೀವಂತ ಇರುವ ದೈವೀ ವ್ಯಕ್ತಿಯೆಂದೇ ಭಾವಿಸಿ ಮಠದೊಳಕ್ಕೆ ಬರುತ್ತಾರೆ. ಹಾಗೆ ಬಂದವರಲ್ಲಿದ್ದ ಚಿಕ್ಕ ಹುಡುಗನೊಬ್ಬ ಮುಂದೆ ಸಂನ್ಯಾಸಿಯಾಗಿ ರಾಮಕೃಷ್ಣ ಸಂಘಕ್ಕೆ ಸೇರಿಕೊಂಡ.

ಹೊಸದಾಗಿ ಕಟ್ಟಿದ ದೇವಸ್ಥಾನದ ಉದ್ಘಾಟನೆಯು ೧೯೮೧ರ ಫೆಬ್ರವರಿಯಲ್ಲಿ ನಡೆಯಿತು. ನಾನು ಆ ದಿನ ನನ್ನ ಮಾತೃಭಾಷೆಯಾದ ತೆಲುಗಿನಲ್ಲಿ ಮಾತನಾಡಬೇಕೆಂದು ನನಗೆ ಆದೇಶವಾಯಿತು. ಶ್ರೀ ರಾಮಕೃಷ್ಣರ ಕೃಪೆಯಿಂದ ಮತ್ತು ಸ್ವಾಮೀಜಿಯವರ ಆಶೀರ್ವಾದದಿಂದ ಅಂದು ನಾನು ಮಾತನಾಡಿದೆ. ಅಂದು ವೇದಿಕೆಯ ಮೇಲೆ ಭಾಷಣ ಮಾಡಲು ನಿಂತಿದ್ದ ನನ್ನ ಬಳಿಯೇ ನನ್ನ ಗುರುದೇವರಾದ ಮತ್ತು ಆಗ ಸಂಘದ ಅಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ವೀರೇಶ್ವರಾನಂದಜೀ ಮಹಾರಾಜ್ ಅವರೂ, ಮುಂದೆ ಅಧ್ಯಕ್ಷರಾದ ಸ್ವಾಮಿ ಭೂತೇಶಾನಂದ ಹಾಗೂ ಸ್ವಾಮಿ ರಂಗನಾಥಾನಂದರ ಕುಳಿತಿದ್ದ ಆ ಸಮಾರಂಭ ಎಂದೆಂದಿಗೂ ಮರೆಯಲಾರದುದಾಗಿತ್ತು.

ನನ್ನ ಭಾಷಣ ಮುಗಿದ ನಂತರ ಸ್ವಾಮಿ ರಂಗನಾಥಾನಂದಜಿಯವರು ನನ್ನನ್ನು ಸನ್ನೆಮಾಡಿ ಕರೆದು ಪ್ರತಿವಾರ ನಡೆಯುವ ತೆಲುಗಿನ ತರಗತಿಗಳನ್ನು ಇನ್ನುಮುಂದೆ ನಾನೇ ತೆಗೆದುಕೊಳ್ಳಬೇಕೆಂದು ಹೇಳಿದರು. ಇದರಿಂದ ಮೂಕವಿಸ್ಮಿತಳಾದ ನಾನು ಅದನ್ನು ಬೇಡ ಎಂದೂ ಹೇಳುವ ಸ್ಥಿತಿಯಲ್ಲಿರಲಿಲ್ಲ. ಅಲ್ಲದೆ, ನಾವಿಬ್ಬರೂ ಇನ್ನೂ ವೇದಿಕೆಯ ಮೇಲೇ ಇದ್ದೆವು. ಆ ದಿನಗಳಲ್ಲಿ ಹೈದರಾಬಾದಿನ ಮಠದಲ್ಲಿದ್ದ ಯಾವ ಸಂನ್ಯಾಸಿಗಳಿಗೂ ತೆಲುಗಿನಲ್ಲಿ ನಿರರ್ಗಳವಾಗಿ ಮಾತನಾಡಲು ಬರುತ್ತಿರಲಿಲ್ಲ. ಶ್ರೀ ರಾಮಕೃಷ್ಣ, ಸ್ವಾಮಿ ವಿವೇಕಾನಂದರ ಪುಸ್ತಕಗಳನ್ನು ಮತ್ತು ಭಾರತೀಯ ಧರ್ಮಗ್ರಂಥಗಳನ್ನು ಆಳವಾಗಿ ಅಭ್ಯಸಿಸಲು, ಇದರಿಂದಾಗಿ ಮಠದ ತ್ರಿಮೂರ್ತಿಗಳ ಸಂದೇಶವನ್ನು ಪ್ರಸಾರ ಮಾಡುವ ತನ್ಮೂಲಕ ಅವರಿಗೆ ಅಳಿಲು ಸೇವೆಯನ್ನು ಸಲ್ಲಿಸುವ ಅವಕಾಶವನ್ನು ಸ್ವಾಮಿ ರಂಗನಾಥಾನಂದಜೀಯವರು ಅಂದು ಈ ಕರ್ತವ್ಯಕ್ಕೆ ನನ್ನನ್ನು ನೇಮಿಸುವುದರ ಮೂಲಕ ನನಗೆ ಕಲ್ಪಿಸಿಕೊಟ್ಟರು.

ನನಗೆ ತಿಳಿದ ಮಟ್ಟಿಗೆ ತೆಲುಗಿನಲ್ಲಿ ಇದ್ದ 'ಕಥಾಮೃತ'ವನ್ನು ಓದಲು ನಾನು ಒಪ್ಪಿಕೊಂಡಿದ್ದೆ. ಸ್ವಾಮೀಜಿಯವರು 'ಕೇವಲ ಓದುವುದಷ್ಟೇ ಅಲ್ಲ, ನೀನು ಅದನ್ನು ವಿವರಿಸಿ ಹೇಳಲೂ ಪ್ರಯತ್ನಿಸು' ಎಂದು ಹೇಳಿದರು. ನಾನು ಸುಮಾರು ಮೂರು ವರ್ಷಗಳ ಕಾಲ ಹಾಗೆಯೇ ಮಾಡಿದೆ. ಇದಾದ ಹಲವು ವರ್ಷಗಳ ನಂತರ ಮಠದ ಸಂನ್ಯಾಸಿಯೊಬ್ಬರು ರಾಮಕೃಷ್ಣ ಮಠದಲ್ಲಿ 'ವೇದ'ದ ಮೇಲೆ ಒಬ್ಬ ಸಾಮಾನ್ಯ ಹೆಂಗಸು ಉಪನ್ಯಾಸ ಮಾಡುವುದು ದಾರ್ಷ್ಟ್ಯವಾಗುತ್ತದೆ ಎಂದು ನಿಷ್ಠುರವಾಗಿ ನುಡಿದರು. ನನಗೆ ಇದು ಅರಿವಿಗೇ ಬಂದಿರಲಿಲ್ಲ. ಹೆಣ್ಣು–ಗಂಡು ಎಂಬ ಭೇದವನ್ನು ಗಮನಿಸದೆ ಇದ್ದುದು ಸ್ವಾಮಿ ರಂಗನಾಥಾನಂದರ ದೊಡ್ಡತನವಾಗಿತ್ತು. ಶ್ರೀ ರಾಮಕೃಷ್ಣರ ಮತ್ತು ಅವರ ಅವತಾರದ ಮಹತ್ವವನ್ನು, ಈ ವಿಷಯದಲ್ಲಿ ಅಷ್ಟೇನೂ ಗೊತ್ತಿರದಿದ್ದ ಅಂದಿನ ಹೈದರಾಬಾದಿನ ಜನಗಳಲ್ಲಿ ಪ್ರಸಾರ ಮಾಡುವುದಷ್ಟೇ ಅವರ ಗುರಿಯಾಗಿತ್ತು.

ಆಂಧ್ರ ಜನರ ಮಾತೃಭಾಷೆಯಾದ ತೆಲುಗಿನಲ್ಲಿ ಮಾತನಾಡಲು ತಮಗೆ ಬರುತ್ತಿರಲಿಲ್ಲವೆಂಬ ಕೊರಗು ಸ್ವಾಮೀಜಿಯವರಲ್ಲಿತ್ತು. ತೆಲುಗನ್ನು ಕಲಿಯಲು ಅವರು ನಿಜವಾದ ಪ್ರಯತ್ನವನ್ನು ಮಾಡಿದರೂ, ತಮ್ಮ ಅವಿರತವಾದ ಕಾರ್ಯಕ್ರಮಗಳ ಮಧ್ಯೆ ಅದನ್ನು ಮುಂದುವರಿಸಲು ಅವರಿಗೆ ಸಾಧ್ಯವಾಗಲಿಲ್ಲ. ಶ್ರೋತೃಗಳಲ್ಲಿ ಯಾರೂ ಸಂದೇಶವನ್ನು ಪಡೆಯದೆ ಹಿಂದಿರುಗಬಾರದೆಂಬುದು ಅವರ ಆಸೆಯಾಗಿತ್ತು. ಚಿಕ್ಕ ನಗರಗಳ ಮತ್ತು ಹಳ್ಳಿಗಳ ಜನರಿಗೆ ಇಂಗ್ಲಿಷಿನ ಗಂಧವೇ ಇರಲಿಲ್ಲ. ಇದಕ್ಕಾಗಿ ಅವರು ತಮ್ಮ ಭಾಷಣಗಳನ್ನು ತೆಲುಗಿಗೆ ಭಾಷಾಂತರಿಸಬೇಕೆಂದು ಬಯಸುತ್ತಿದ್ದರು. ಇದಕ್ಕಾಗಿ ನಾನು ತಮ್ಮ ಸಂಗಡ ಹಲವಾರು ಸ್ಥಳಗಳಿಗೆ ಬರುವಂತೆ ಕೇಳಿಕೊಂಡರು. ನಾನು ಇದಕ್ಕೆ ಮೊದಲು ಹಿಂದೆಮುಂದೆ ನೋಡಿದರೂ, ಅಷ್ಟಕ್ಕೇ ಅವರು ಬಿಡುವಂತಹವರಾಗಿರಲಿಲ್ಲ. ತಾವು ಒಂದು ವಾಕ್ಯವನ್ನು ಮಾತ್ರ ಹೇಳುವುದಾಗಿಯೂ ನಾನು ಅದನ್ನು ಭಾಷಾಂತರಿಸಬೇಕೆಂದೂ, ಹೀಗೆ ಒಂದೊಂದು ವಾಕ್ಯವನ್ನೇ ಜನರಿಗೆ ತಿಳಿಯುವಂತೆ ಮಾಡಬೇಕೆಂದೂ ತಿಳಿಸಿದರು. ನಾನು ಅವರ ಮಾತುಗಳನ್ನು ಭಾಷಾಂತರಿಸಲು ಒದ್ದಾಡುತ್ತಿದ್ದಾಗ, ಅವರು ತಮ್ಮ ವಾಗ್ಸ್ಫುರಿಯನ್ನು ಹೇಗೆ ಕಾಯ್ದುಕೊಂಡು ನಿರರ್ಗಳವಾಗಿ ಮಾತನಾಡುತ್ತಿದ್ದರು ಎಂಬುದು ಆಶ್ಚರ್ಯಕರವಾಗಿತ್ತು. ಮೊದಲು ಒಂದು ವಾಕ್ಯವಿದ್ದದ್ದು ಸ್ವಲ್ಪ ಸಮಯದ ನಂತರ ಎರಡು, ಬಳಿಕ ಮೂರು ವಾಕ್ಯಗಳಿಗೆ ವಿಸ್ತಾರವಾಯಿತು. ನಿಜವಾದ ಪರೀಕ್ಷೆ ನನಗೆ ಎದುರಾದದ್ದು, ಉದ್ದುದ್ದವಾಗಿ ಹರಿಯುವ ಸ್ವಾಮಿ ವಿವೇಕಾನಂದರ ಬರವಣಿಗೆಗಳನ್ನು ಸ್ವಾಮೀಜಿಯವರು ಉದ್ಧರಿಸುತ್ತಿದ್ದಾಗ. ತೆಲುಗಿನಲ್ಲಿ ಸಂಸ್ಕೃತದ ಪದಗಳ ಬಳಕೆ ಧಾರಾಳವಾಗಿರುವುದರಿಂದ ಸ್ವಾಮೀಜಿಯವರು ನನ್ನ ಭಾಷಾಂತರವನ್ನು ಹೆಚ್ಚು ಕಡಿಮೆ ಅರ್ಥಮಾಡಿಕೊಂಡು, ನಾನು ತಡವರಿಸಿದಾಗ ಅಲ್ಲಿಗೆ ಅಗತ್ಯವಾದ ಸಂಸ್ಕೃತದ ಪದಗಳನ್ನು ಒದಗಿಸುತ್ತಿದ್ದರು. ಒಮ್ಮೆ ಒಂದು ವಿಚಿತ್ರ ನಡೆಯಿತು. ಅವರು ಸ್ವಾಮಿ ವಿವೇಕಾನಂದರ ಹೇಳಿಕೆಯೊಂದನ್ನು ಉಲ್ಲೇಖಿಸುತ್ತಾ ಪೂರ್ಣಭಾಗವನ್ನು ಹೇಳದೇ ಮಧ್ಯದಲ್ಲಿಯೇ

ನಿಲ್ಲಿಸಿದರು. ಅಷ್ಟರಿಂದಲೇ ಅದರ ಸಾರವನ್ನು ತೆಲುಗಿನಲ್ಲಿ ತರುವುದು ಸಾಧ್ಯವಿಲ್ಲ ಎಂದು ನನಗೆ ತೋರಿತು. ಆದ್ದರಿಂದ ನಾನು ಪೂರ್ಣ ಭಾಗವನ್ನೆ ಭಾಷಾಂತರಿಸಿ ಹೇಳಿದೆ. ನಾನು ಮಾಡಿದುದನ್ನು ಸ್ವಾಮೀಜಿಯವರಿಗೆ ತಿಳಿಸಿದೆ. ಅದಕ್ಕೆ ಅವರು ನನ್ನನ್ನೇ ನೋಡುತ್ತಾ 'ಓಹ್! ನಾನು ಹೇಳುವ ಮೊದಲೇ ನೀನು ಭಾಷಾಂತರಿಸಿದೆ!' ಎಂದು ಹೇಳಿದರು. ಮಠಕ್ಕೇ ಹಿಂದಿರುಗಿದ ಮೇಲೆ ಅಲ್ಲಿ ಅವರು ಇದನ್ನೆಲ್ಲಾ ಇತರರಿಗೂ ಹೇಳಿದರು. ಹೊಸದಾಗಿ ಬಂದವರಿಗೆ ನನ್ನನ್ನು ಪರಿಚಯಿಸುತ್ತಾ, ಸೌಜನ್ಯಯುತರಾದ ಇನ್ನೊಬ್ಬ ಸಂನ್ಯಾಸಿಗಳು 'ಇವರು ಸ್ವಾಮೀಜಿಯವರ ಭಾಷಣಗಳನ್ನು ಭಾಷಾಂತರಿಸುತ್ತಾರೆ. ಸ್ವಾಮೀಜಿಯವರು ಹೇಳುವ ಮೊದಲೇ ಅದನ್ನು ಶ್ರೋತೃಗಳಿಗೆ ತೆಲುಗಿನಲ್ಲಿ ಮುಟ್ಟಿಸಿರುತ್ತಾರೆ' ಎಂದು ಹೇಳುತ್ತಿದ್ದರು.

ಪ್ರವಾಸದ ಸಮಯಗಳಲ್ಲಿ, ಸಂಘಟಕರು ಕೆಲವು ವೇಳೆ ಇಡೀ ಮಧ್ಯಾಹ್ನ ಅವರನ್ನು ಹಳ್ಳಿಯಿಂದ ಹಳ್ಳಿಗೆ ಸುತ್ತಿಸಿ, ಸಂಜೆಯಲ್ಲಿ ಅವರ ಸಾರ್ವಜನಿಕ ಸಭೆಗಳಲ್ಲಿ ಭಾಷಣಗಳನ್ನು ಏರ್ಪಡಿಸುತ್ತಿದ್ದರು. ಇಷ್ಟರ ಮಧ್ಯೆ ಭೇಟಿಯಾಗಲು ಬರುವ ಸಂದರ್ಶಕರು ಇದ್ದೇ ಇರುತ್ತಿದ್ದರು. ಹೀಗಾಗಿ, ಸ್ವಾಮೀಜಿಯವರಿಗೆ ವಿಶ್ರಾಂತಿಯೇ ಇರುತ್ತಿರಲಿಲ್ಲ. ಆದರೂ ಆಯಾಸದ ಲಕ್ಷಣ ಅವರಲ್ಲಿ ಕಾಣುತ್ತಿರಲಿಲ್ಲ. ಅಷ್ಟೇ ಅಲ್ಲದೆ, ಅವರು ಒಂದು ಹನಿ ನೀರನ್ನೂ ಕುಡಿಯುತ್ತಿರಲಿಲ್ಲ. ಸಂಘಟಕರು ತಮ್ಮ ಸಮಯಪಾಲನೆಯಲ್ಲಿ ತಪ್ಪಿದರೂ, ಅವರು ಮಾಡಿರುವ ವ್ಯವಸ್ಥೆಯಲ್ಲಿ ಕುಂದುಕೊರತೆಗಳಿದ್ದರೂ, ಸ್ವಾಮೀಜಿಯವರು ತಾಳ್ಮೆಯನ್ನು ಕಳೆದುಕೊಳ್ಳುತ್ತಿರಲಿಲ್ಲ. ಎಷ್ಟೇ ಅನನುಕೂಲಗಳಿದ್ದರೂ ಅವು ಸ್ವಾಮೀಜಿಯವರ ನಡೆಗೆ ತೊಡಕನ್ನು ಒಡ್ಡುತ್ತಿರಲಿಲ್ಲ.

ಒಮ್ಮೆ ಅವರು ಕಿರಿಯ ಸಂನ್ಯಾಸಿ ಹಾಗೂ ಕೆಲವು ಭಕ್ತರೊಡನೆ ಚಟುವಟಿಕೆಯೇ ಇಲ್ಲದ ಒಂದು ಸಣ್ಣ ಹಳ್ಳಿಗೆ ಹೋಗಿದ್ದರು. ಆಗ ಸಂಜೆಯಾಗಿತ್ತು. ಸಂಪರ್ಕದ ಅಭಾವದಿಂದಾಗಿ ಸಂಘಟಕರು ಇವರನ್ನು ಎದುರುಗೊಳ್ಳಲು ಬರಲಾಗಿರಲಿಲ್ಲ. ಆಗ ತಾವೆಲ್ಲರೂ ಆಯಾಸಗೊಂಡಿದ್ದೆವೆಂದೂ, ಹಸಿವಿನಿಂದ ಬಳಲುತ್ತಿದ್ದೆವೆಂದೂ ಕಿರಿಯ ಸಂನ್ಯಾಸಿ ಕೆಲವು ದಿನಗಳ ನಂತರ ಹೇಳಿದ್ದರು. ಇವರು ಅಲ್ಲಿಗೆ ಹೋದಾಗ ಒಂದೆರಡು ಬೀದಿನಾಯಿಗಳನ್ನು ಬಿಟ್ಟರೆ ಮತ್ತೊಂದು ಜೀವದ ಸುಳಿವು ಹತ್ತಿರದಲ್ಲೆಲ್ಲೂ ಇರಲಿಲ್ಲ. ಪಕ್ಕದಲ್ಲಿಯೇ ಗಿಜಿಗುಟ್ಟುತ್ತಿದ್ದ ಸೊಳ್ಳೆಗಳಿಂದ ತುಂಬಿದ್ದ ನಿಂತ ನೀರಿನ ಕೊಳವೊಂದಿತ್ತು. ಎಲ್ಲರಿಗೂ ಸಹಜವಾಗಿ ಕಿರಿಕಿರಿಯಾಗಿ ಚಡಪಡಿಸುತ್ತಿದ್ದರು. ಆದರೆ ಸ್ವಾಮೀಜಿಯವರು ಮಾತ್ರ ಕಲ್ಲಿನ ಬಂಡೆಯಂತೆ ಶಾಂತವಾಗಿದ್ದರು. ಆಕಾಶದ ಕಡೆ ನೋಡುತ್ತಾ 'ಆಕಾಶ ಎಷ್ಟು ನಿರ್ಮಲವಾಗಿದೆ. ಉಜ್ವಲವಾಗಿ ಬೆಳಗುತ್ತಿರುವ ಆ ನಕ್ಷತ್ರಗಳು ಮತ್ತು ಹೊಳೆಯುತ್ತಿರುವ ಚಂದ್ರನನ್ನು ನೋಡಿ. ನಗರದಲ್ಲಿ ಇಂತಹ ದೃಶ್ಯ ನಮಗೆ ಕಾಣಲು ಸಿಗುತ್ತದೆಯೇ?' ಎಂದರು. ಅವರಿಂದ ಒಂದು ನಿಂದಾನುಡಿಯಾಗಲೀ, ವ್ಯಂಗ್ಯದ ಮಾತಾಗಲೀ ಬರಲಿಲ್ಲ, ಬದಲಿಗೆ ಅವರು ಆ ಆನಂದವನ್ನು ನಿಜವಾಗಿ ಅನುಭವಿಸುತ್ತಿದ್ದರು. ಅವರೊಬ್ಬ ಸ್ಥಿತಪ್ರಜ್ಞರಾಗಿದ್ದರು. ಅಂದು ರಾತ್ರಿ ಅವರ ಜೊತೆಯಲ್ಲಿದ್ದವರೆಲ್ಲಾ ಒಂದು ಪಾಠವನ್ನು ಅವರಿಂದ ಕಲಿತರು.

ಅವರು ತಮ್ಮ ಕರ್ತವ್ಯದ ಬಗ್ಗೆ, ಪವಿತ್ರ ತ್ರಿಮೂರ್ತಿಗಳ ಸಂದೇಶವನ್ನು ಪ್ರಸಾರ ಮಾಡುವ ವಿಷಯದಲ್ಲಿ, ಜಾಗೃತರಾಗಿದ್ದರು. ವೈಯಕ್ತಿಕ ತೊಂದರೆಗಳು ಅವರನ್ನು ಧೃತಿಗೆಡಿಸುತ್ತಿರಲಿಲ್ಲ. ಸಮಾರಂಭವಾಗಲೀ, ಅದನ್ನು ಏರ್ಪಡಿಸಿದ ಸ್ಥಳವಾಗಲೀ, ಎಷ್ಟೇ ಚಿಕ್ಕದಿರಲಿ, ಅವರು ತಮ್ಮ ಉಪನ್ಯಾಸಕ್ಕಾಗಿ ಬಂದ ಕೋರಿಕೆಗಳನ್ನು ಅವರು ಎಂದೂ ನಿರಾಕರಿಸುತ್ತಿರಲಿಲ್ಲ. ಇದರಿಂದ ತಮ್ಮ ಪ್ರಚಾರಕ್ಕೋಸ್ಕರ ಸ್ವಾಮೀಜಿಯವರು ಹೀಗೆ ಮಾಡುತ್ತಿದ್ದರೆಂದು ಕೆಲವರು ತಪ್ಪು ತಿಳಿಯುತ್ತಿದ್ದರು. ಹೈದರಾಬಾದಿನಲ್ಲಿದ್ದ ಕೊನೆಯ ದಿನಗಳಲ್ಲಿ, ತಮ್ಮ ಅವಿರತ ಓಡಾಟದಿಂದ ಸ್ವಾಮೀಜಿಯವರು ಅಸ್ವಸ್ಥರಾಗುತ್ತಿದ್ದರು. ಅದರಲ್ಲೂ ಹೈದರಾಬಾದಿನಿಂದ ಹೊರಗೆ ಹೋಗಿಬಂದರೆ, ಅವರು ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದರು. ಅವರು ಹೊರಗೆ ಹೋಗುತ್ತಾರೆಂದರೆ ಎಲ್ಲರಿಗೂ ಹೆದರಿಕೆಯಾಗುತ್ತಿತ್ತು. ಒಂದು ದಿನ ಅವರ ಸಹಾಯಕರೊಬ್ಬರು ಅವರಿಗೆ ಸಂಘಕ್ಕೆ ಅವರು

ಈಗಾಗಲೇ ಸಾಕಷ್ಟು ಸೇವೆ ಸಲ್ಲಿಸಿದ್ದಾರೆಂದೂ, ಇನ್ನು ಅವರ ಉಪನ್ಯಾಸಗಳನ್ನು ಆದಷ್ಟು ಮಿತಿಗೊಳಿಸುವುದು ಒಳಿತು ಎಂದೂ ಹೇಳಿದರು. ಒಂದು ಕ್ಷಣವೂ ಯೋಚಿಸದೆ ಸ್ವಾಮೀಜಿ ಉತ್ತರ ಕೊಟ್ಟರು 'ಈ ದೇಹ ಶ್ರೀ ರಾಮಕೃಷ್ಣರ ಪ್ರಸಾದ, ಇದನ್ನು ತಮ್ಮ ಇಚ್ಛೆಯಂತೆ ಅವರು ಉಪಯೋಗಿಸಿಕೊಳ್ಳಬಹುದು.'

ಅವರು ತಮ್ಮ ಮಲಗುವ ಕೋಣೆಯನ್ನೇ ತಮ್ಮ ಕಾರ್ಯಾಲಯವನ್ನಾಗಿ ಮಾಡಿಕೊಂಡಿದ್ದರು. ಕಾರ್ಯಾಲಯಕ್ಕಾಗಿ ಮತ್ತೊಂದು ಕೊಠಡಿಯನ್ನು ಉಪಯೋಗಿಸುವುದು ಅನಗತ್ಯ ಎಂಬ ಭಾವನೆ ಅವರಲ್ಲಿದ್ದಿತು. ಅವರು ಕಟ್ಟುನಿಟ್ಟಿನವರಾಗಿದ್ದರು, ಅವರ ಅಗತ್ಯಗಳು ಕನಿಷ್ಠವಾಗಿದ್ದವು. ಅವರ ಕೊಠಡಿಯ ಬಾಗಿಲುಗಳು ಯಾವಾಗಲೂ ತೆರೆದಿರುತ್ತಿದ್ದವು. ವಯಸ್ಸು, ಲಿಂಗ, ಸಾಮಾಜಿಕ ಸ್ಥಾನಗಳ ಭೇದವಿಲ್ಲದೆ ಯಾರು ಬೇಕಾದರೂ ಒಳಕ್ಕೆ ಹೋಗಬಹುದಿತ್ತು. ಇದು, ಶ್ರೀ ಅನ್ನಪೂರ್ಣಾಸ್ತೋತ್ರದ 'ಮೋಕ್ಷದ್ವಾರಕವಾಟಪಾಟನಕರೀ' (ಮುಕ್ತಿ ಸಾಮ್ರಾಜ್ಯದ ಬಾಗಿಲನ್ನು ತೆರೆದಿರುವವಳು) ಎಂಬ ಸಾಲನ್ನು ಜ್ಞಾಪಕಕ್ಕೆ ತರುತ್ತಿತ್ತು. ಹಾಗೆ ಒಳ ಹೋದವರು ದೊಡ್ಡ ಮೇಜಿನ ಮೇಲೆ ತಮಗೆ ಬಂದ ಅಸಂಖ್ಯಾತ ಪತ್ರಗಳಿಗೆ ಉತ್ತರವನ್ನು ತಾವೇ ಬೆರಳಚ್ಚು ಮಾಡುತ್ತಲೋ ಇಲ್ಲವೇ ಆ ಪತ್ರಗಳನ್ನು ಓದುತ್ತಲೋ ಇರುವ ಸ್ವಾಮೀಜಿಯವರನ್ನು ನೋಡಬಹುದಿತ್ತು. ಒಳಗೆ ಬಂದ ಭಕ್ತರು ಸಾಹಿತ್ಯದ ಒಲವುಳ್ಳವರಾಗಿದ್ದರೆ ಅವರ ಬಳಿ ಪುಸ್ತಕಗಳ ಬಗ್ಗೆ ಮಾತನಾಡುತ್ತಿದ್ದರು. ಅವರು ಯಾವಾಗಲೂ ತಮ್ಮ ಬಳಿಗೆ ಬಂದ ಜನಗಳನ್ನು ಹಾರ್ದಿಕವಾಗಿ ಸ್ವಾಗತಿಸುತ್ತಿದ್ದರು, ಅವರ ಸಂತೋಷವನ್ನು ತಾವೂ ಹಂಚಿಕೊಳ್ಳುತ್ತಿದ್ದರು, ಅವರ ಕೊನೆಯಿಲ್ಲದ ಪ್ರಾಪಂಚಿಕ ಕಷ್ಟಗಳನ್ನು ಶಾಂತವಾಗಿ ಕೇಳುತ್ತಿದ್ದರು, ಅವರ ಆಧ್ಯಾತ್ಮಿಕ ಸಮಸ್ಯೆಗಳನ್ನು ಬಿಡಿಸುತ್ತಿದ್ದರು. ಕೆಲವರು ಅವರನ್ನು ಕಂಡು ಪ್ರಣಾಮಗಳನ್ನು ಸಲ್ಲಿಸುವುದಕ್ಕಾಗಿ ಬರುತ್ತಿದ್ದರು. ಎಲ್ಲರ ಬಗ್ಗೆಯೂ ಅವರು ದಯಾಪೂರ್ಣವಾಗಿರುತ್ತಿದ್ದರು; ಕಾಳಜಿಯನ್ನು ತೋರುತ್ತಿದ್ದರು. ಬಂದವರ ಕುಟುಂಬದ ಇತರ ಸದಸ್ಯರನ್ನು, ಅವರ ಸ್ನೇಹಿತರನ್ನು ಕುರಿತು ವಿಚಾರಿಸುತ್ತಿದ್ದರು.

ಅವರ ಜ್ಞಾಪಕಶಕ್ತಿ ಅಸಾಧಾರಣವಾಗಿತ್ತು. ಅದನ್ನು ಅವರು ತಮ್ಮ ಕೊನೆಯ ಗಳಿಗೆಯವರೆಗೂ ಉಳಿಸಿಕೊಂಡಿದ್ದರು. ಒಮ್ಮೆ ಸಾರ್ವಜನಿಕ ಸಭೆಯೊಂದರಲ್ಲಿ ತಮ್ಮ ಬಳಿಗೆ ಬಂದ ಮಹಿಳೆಯೊಬ್ಬರನ್ನು ನನಗೆ ಪರಿಚಯ ಮಾಡಿಸುತ್ತಾ ಆ ಮಹಿಳೆ ಕಾಲೇಜೊಂದರಲ್ಲಿ ಶಿಕ್ಷಕಿಯಾಗಿದ್ದಾರೆಂದು ಹೇಳಿದರು. ಸ್ವಲ್ಪ ಸಮಯದ ನಂತರ ನನ್ನನ್ನು ಮತ್ತೆ ಭೇಟಿ ಮಾಡಿದ ಆಕೆ ತಾವು ಸ್ವಾಮೀಜಿಯವರನ್ನು ಭೇಟಿ ಮಾಡಿದ್ದು ಮೂವತ್ತು ವರ್ಷಗಳ ಹಿಂದೆ ಎಂದು ಹೇಳಿ, ತಮ್ಮ ಹೆಸರು ಮತ್ತು ಉದ್ಯೋಗವನ್ನು ಅವರು ಇನ್ನೂ ಜ್ಞಾಪಕದಲ್ಲಿಟ್ಟುಕೊಂಡಿರುವುದಕ್ಕಾಗಿ ಆಶ್ಚರ್ಯ ವ್ಯಕ್ತಪಡಿಸಿದರು.

ಬಹಳ ಸರಳವಾಗಿದ್ದ ಸ್ವಾಮೀಜಿಯವರು ಸುಖಸಾಧನಗಳನ್ನು ಸ್ವಲ್ಪವೂ ಬಯಸುತ್ತಿರಲಿಲ್ಲ. ಅವರಿಗೆ ಕಾಣಿಕೆಯಾಗಿ ಬರುತ್ತಿದ್ದ ವಸ್ತುಗಳನ್ನು ಇತರರಿಗೆ ಧಾರಾಳವಾಗಿ ಹಂಚಿಬಿಡುತ್ತಿದ್ದರು. ಬರುತ್ತಿದ್ದ ಹಣವನ್ನು ಅದರ ಅಗತ್ಯವಿರುವ ಮಠಗಳಿಗೆ ಕೊಟ್ಟುಬಿಡುತ್ತಿದ್ದರು. ಹೀಗೆ ಧಾರಾಳವಾಗಿ ಕೊಡುತ್ತಿದ್ದುದಕ್ಕಿಂತ ದೊಡ್ಡ ಗುಣವೆಂದರೆ, ಹಿರಿಯ ಸಂನ್ಯಾಸಿಯೊಬ್ಬರು ಹೇಳಿದಂತೆ ಅಗಾಧವಾದ ಜ್ಞಾಪಕಶಕ್ತಿಯುಳ್ಳ ಸ್ವಾಮೀಜಿ, ತಾವು ಯಾರಿಗೆ ಹಣವನ್ನು ಕಳುಹಿಸಿದ್ದರು ಎಂಬುದನ್ನು ಎಂದೂ ಜ್ಞಾಪಿಸಿಕೊಳ್ಳುತ್ತಿರಲಿಲ್ಲ ಎಂಬುದು. ದೇಶ ವಿದೇಶಗಳಿಂದ ವಿವಿಧ ರೀತಿಯ ಕೊಡುಗೆಗಳನ್ನು ಮಠದ ಸಂನ್ಯಾಸಿ ಬಂಧುಗಳಿಗೆ, ಹೊರಗಿನಿಂದ ಬರುವ ಭಕ್ತರಿಗೆ ಸಂತೋಷದಿಂದ ವಿತರಿಸುತ್ತಿದ್ದರು. ಹಾಗೆ ನೀಡಿದವುಗಳು ಸದ್ವಿನಿಯೋಗವಾಗುತ್ತವೆ ಎಂಬುದನ್ನು ಅವರು ಖಾತ್ರಿಪಡಿಸಿಕೊಳ್ಳುತ್ತಿದ್ದರು. ಸಂನ್ಯಾಸಿಯಾದವನು ಹಣವನ್ನಾಗಲೀ, ಇತರ ವಸ್ತುಗಳನ್ನಾಗಲೀ ಕೂಡಿಹಾಕಿಕೊಳ್ಳಬಾರದು ಎಂಬ ಶ್ರೀ ರಾಮಕೃಷ್ಣರ ನೀತಿಯನ್ನು ಅವರು ಪಾಲಿಸುತ್ತಿದ್ದರು. ನಾನು ಅವರಿಂದ ಸ್ವೀಕರಿಸಿದ ಅನೇಕ ವಸ್ತುಗಳಲ್ಲಿ, ಒಮ್ಮೆ ಅವನು ಚೆನ್ನೈ ಮಠದಿಂದ ತಂದಿದ್ದ ಬದನೆಕಾಯಿಗಳೂ ಇದ್ದವು.

ನಾನು ಅದನ್ನು ಉಪಯೋಗಿಸುತ್ತೇನೆ ಎಂಬುದನ್ನು ಖಾತ್ರಿ ಮಾಡಿಕೊಂಡ ನಂತರವೇ ಅವರು ನನಗೆ ಅವುಗಳನ್ನು ಕೊಟ್ಟಿದ್ದರು.

ವೈದ್ಯರು ಅವರಿಗೆ ಸಪ್ಪೆ ಆಹಾರದ ಪಥ್ಯವನ್ನು ವಿಧಿಸಿದ್ದರು. ಸ್ವಾಮೀಜಿಯವರು ಅದನ್ನು ಚಾಚೂ ತಪ್ಪದೆ ಅನುಸರಿಸುತ್ತಿದ್ದರು. ಅವರ ಪಥ್ಯದ ಆಹಾರವೆಂದರೆ ಸ್ವಲ್ಪ ಅನ್ನ, ಪ್ರತಿದಿನವೂ ಒಂದೇ ಬಗೆಯ ಬೇಯಿಸಿದ, ಆದರೆ ಮಸಾಲೆ, ಒಗ್ಗರಣೆ ಹಾಕದ, ಆದರೆ ಸ್ವಲ್ಪ ಉಪ್ಪು ಹಾಕಿದ ತರಕಾರಿ, ಮೊಸರು, ಸಾಕಷ್ಟು ಕಡಲೆಕಾಳು, ಸುಟ್ಟ ಹಪ್ಪಳ ಮತ್ತು ಸಾಕಷ್ಟು ಸಕ್ಕರೆ. ಸಕ್ಕರೆ ಮಿದುಳಿಗೆ ಚಯಾಪಚಯಕ್ಕೆ ನೆರವಾಗುತ್ತದೆಯೆಂದು ಓದಿದ್ದ ಅವರು ಅದನ್ನು ಮಾತ್ರ ಧಾರಾಳವಾಗಿ ಉಪಯೋಗಿಸುತ್ತಿದ್ದರು. ಹತ್ತಿರವಿದ್ದವರಿಗೆ ಒಂದು ಅಥವಾ ಎರಡು ಚಮಚ ಅದೇ ಪಥ್ಯದ ಆಹಾರವನ್ನು ಕೊಡುತ್ತಿದ್ದರು. ಹಾಗೆ ಪಡೆದವರು ಅದನ್ನು ಪ್ರಸಾದವೆಂದು ಸ್ವೀಕರಿಸುತ್ತಿದ್ದರು.

ನನಗೆ ಒಮ್ಮೆ ಪ್ರಸಾದವನ್ನು ಸೇವಿಸುವ ಇಂತಹ ಒಂದು ಮರೆಯಲಾಗದ ಅವಕಾಶ ಒದಗಿದ್ದಿತು. ಅಂದು ಸಂಜೆ ಸಾಯಂಕಾಲದ 'ಆರಾತ್ರಿಕ'ದ ನಂತರ ಅವರಿಗೆ ನನ್ನ ಪ್ರಣಾಮಗಳನ್ನು ಸಲ್ಲಿಸಲು ಅವರಲ್ಲಿಗೆ ಹೋದೆ. ನಾನು ಮನೆಯನ್ನು ಯಾವಾಗ ಬಿಟ್ಟೆ, ಬಿಡುವ ಮೊದಲು ಏನನ್ನು ಸೇವಿಸಿದ್ದೆ ಎಂದು ಸೂಕ್ಷ್ಮವಾಗಿ ವಿಚಾರಿಸಿದರು. ನಂತರ ಮೇಜಿನ ಮೇಲಿದ್ದ ಫ್ಲಾಸ್ಕಿನಲ್ಲಿದ್ದುದನ್ನು ಒಂದು ಬಟ್ಟಲಿಗೆ ಬಗ್ಗಿಸುವಂತೆ ಸೂಚಿಸಿದರು. ಈ ಚಿಕ್ಕ ಸೇವೆಯನ್ನು ಮಾಡಲು ನನಗೆ ಸಂತೋಷವಾಗಿತ್ತು. ಅವರು ಹೇಳಿದ ಹಾಗೆ ಮಾಡಿದೆ. ಆದರೆ ಅವರು ಅದನ್ನು ನಾನೇ ಕುಡಿಯುವಂತೆ ಹೇಳಿದಾಗ ನನಗೆ ಆಶ್ಚರ್ಯವಾಯಿತು. ನಾನು ಒಲ್ಲೆನೆಂದರೂ ಅವರು ಕೇಳಲಿಲ್ಲ. ಅದಾದರೂ ಎಂತಹ ದ್ರವ, ಫ್ಲಾಸ್ಕಿನ ತುಂಬ ಇದ್ದ ಕುದಿಯುವ ನೀರಿಗೆ ಒಂದು ಚಮಚ ಹಾಲು, ಅರ್ಧ ಚಮಚ ಬೋರ್ನ್‌ವಿಟಾ ಮತ್ತು ಸಕ್ಕರೆ ಧಾರಾಳವಾಗಿ ಹಾಕಿ ಮಾಡಿದ್ದ ಕಷಾಯ. ಫ್ಲಾಸ್ಕಿನಲ್ಲಿದ್ದ ಎಲ್ಲ ಕಷಾಯವನ್ನೂ ನಾನೇ ಕುಡಿಯುವಂತೆ ಮಾಡಿದರು. ನಂತರ ತನ್ನ ತಪ್ಪನ್ನೇ ಒಪ್ಪಿಕೊಳ್ಳುವ ಶಾಲೆಯ ತುಂಟ ಮಗುವಿನ ಹಾಗೆ ಸ್ವಾಮೀಜಿ– 'ಆರಾತ್ರಿಕ'ಕ್ಕೆ ಹೋಗುವ ಮುಂಚೆ ಬ್ರಹ್ಮಚಾರಿ ಫ್ಲಾಸ್ಕನ್ನು ತಂದು ಅಲ್ಲಿಡುತ್ತಾರೆ ಮತ್ತು ರಾತ್ರಿಯ ಭೋಜನದ ಗಂಟೆ ಬಾರಿಸಿದಾಗ ಮತ್ತೆ ಬಂದು ಅದನ್ನು ತೆಗೆದುಕೊಂಡು ಹೋಗುತ್ತಾರೆ. ಇಂದು ನನಗೆ ಹಸಿವಿಲ್ಲದೆ ಅದನ್ನು ಕುಡಿಯಲು ಆಗಲಿಲ್ಲ. ಆದರೆ ಅದನ್ನು ತೆಗೆದುಕೊಂಡು ಹೋಗಲು ಬರುವ ಬ್ರಹ್ಮಚಾರಿ ಅದು ಖಾಲಿಯಾಗದೆ ಇರುವುದನ್ನು ನೋಡಿದರೆ ನನ್ನನ್ನು ಆಕ್ಷೇಪಿಸುತ್ತಾನೆ' ಎಂದು ಹೇಳಿದರು.

ಅವರು ಶಾಲಾ ವಿದ್ಯಾಭ್ಯಾಸ ಸಾಂಗವಾಗಿ ಸಾಗಲಿಲ್ಲ. ಆದರೂ ಆಧುನಿಕ ಭೌತಶಾಸ್ತ್ರ, ನರವಿಜ್ಞಾನ, ತಳಿಶಾಸ್ತ್ರ ಮೊದಲಾದ ವಿಷಯಗಳನ್ನು ಅವರು ಗ್ರಹಿಸುತ್ತಿದ್ದ ರೀತಿ ಅದ್ಭುತವಾಗಿತ್ತು. ಈ ವಿಷಯಗಳನ್ನು ವೇದಾಂತದೊಡನೆ ಸಮ್ಮೇಳನಗೊಳಿಸುತ್ತಿದ್ದುದರಿಂದಲೇ ಅವರು ಉಪನ್ಯಾಸಗಳು ಅಷ್ಟು ಆಕರ್ಷಕ ಹಾಗೂ ವಿಷಯಪೂರಿತವಾಗಿರುತ್ತಿದ್ದವು. ಆದರೆ, ಅವರ ಇನ್ನೊಂದು ಮುಖವೆಂದರೆ ಅವರ ಮುಗ್ಧತೆ ಹಾಗೂ ನಿಷ್ಕಪಟತೆ. ಒಮ್ಮೆ ಮಹಿಳೆಯೊಬ್ಬರು ತಾವು ರೇಡಿಯೋದಲ್ಲಿ ಭಾಷಣ ಮಾಡುತ್ತಿರುವುದಾಗಿಯೂ, ಅದನ್ನು ಸ್ವಾಮಿ ರಂಗನಾಥಾನಂದರು ಆಲಿಸುವಂತೆ ಕೇಳಿಕೊಳ್ಳಬೇಕೆಂದೂ ನನಗೆ ಹೇಳಿದನು. ನಾನು ಅದನ್ನು ಸ್ವಾಮೀಜಿಗೆ ತಿಳಿಸಿದಾಗ ಅವರು, 'ದಯವಿಟ್ಟು ಒಂದು ರೇಡಿಯೋವನ್ನು ತಂದು ಆ ಸ್ಟೇಷನ್‌ಗೆ ಟ್ಯೂನ್ ಮಾಡಿಕೊಡಲು ಸ್ವಾಮಿಗೆ (ಅವರ ಸಹಾಯಕನಿಗೆ) ತಿಳಿಸು. ನನಗೆ ಹಾಗೆ ಮಾಡಲು ಗೊತ್ತಿಲ್ಲ. ಅವನಾದರೆ ಇಂತಹ ವಿಷಯದಲ್ಲಿ ಬುದ್ಧಿವಂತ' ಎಂದರು.

ಅವರು ಮಂದಿರದ ಒಳಗೆ ಸಂಪೂರ್ಣ ನಿಶ್ಶಬ್ದತೆಯನ್ನು ಬಯಸುತ್ತಿದ್ದರು. 'ಯಾವ ದೇವಸ್ಥಾನದೊಳಕ್ಕೆ ಹೋದರೂ ನಿಶ್ಶಬ್ದವಾಗಿರಬೇಕು. ನೀವು ಪ್ರಾರ್ಥನೆಯನ್ನು ಮಾಡಲು ಅಲ್ಲಿಗೆ ಹೋಗುತ್ತೀರಿ. ಅದಕ್ಕೆ ದೇವರ

ಮಾರ್ನುಡಿಯನ್ನು ನೀವು ಕೇಳಬಯಸುವುದಿಲ್ಲವೇ? ದೇವರ ಮಾತನ್ನು ನೀವು ಹೇಗೆ ಆಲಿಸುತ್ತೀರಿ? ಇತರ ಧರ್ಮಗಳನ್ನು ನೋಡಿ. ಚರ್ಚ್, ಮಸೀದಿಗಳಲ್ಲಿ ಅವರು ಸಂಪೂರ್ಣ ನಿಶ್ಶಬ್ದತೆ ಯಿಂದ ಇರುತ್ತಾರೆ' ಎಂದು ಹೇಳುತ್ತಿದ್ದರು. ಅವರು ಜನರನ್ನು ಲಾರಿಗೆ ಹೋಲಿಸುತ್ತಾ 'ಹಳೆಯ ಲಾರಿಗಳು ಹೆಚ್ಚು ಸದ್ದು ಮಾಡುತ್ತವೆ. ಆದರೆ, ಚಲಿಸುವುದು ಮಾತ್ರ ಆಮೆಯ ವೇಗದಲ್ಲಿ. ಆದರೆ ಸುಸ್ಥಿತಿಯಲ್ಲಿರುವ ದಕ್ಷ ಲಾರಿಗಳು ಹೆಚ್ಚು ಸದ್ದು ಮಾಡದೆ ವೇಗವಾಗಿ ಚಲಿಸುತ್ತವೆ. ಹೆಚ್ಚು ಮಾತನಾಡುವವರು ಮೊದಲ ಜಾತಿಯ ಲಾರಿಗಳ ಹಾಗೆ, ಅವರಿಗೆ ಕಾರ್ಯದಕ್ಷತೆ ಇರುವುದಿಲ್ಲ' ಎನ್ನುತ್ತಿದ್ದರು.

ಅವರು ಯಾವ ಕೆಲಸವನ್ನೂ ಚಿಕ್ಕದು ಅಥವಾ ಕ್ಷುದ್ರವೆಂಬಂತೆ ನೋಡುತ್ತಿರಲಿಲ್ಲ. ಅವರು ತೋಟದಲ್ಲಿ ಓಡಾಡುತ್ತಿದ್ದಾಗ ಅಲ್ಲಲ್ಲಿ ಬಿದ್ದ ಎಲೆಗಳನ್ನು, ಹೂವುಗಳನ್ನು ಆಯ್ದು ಗಿಡಗಳ ಬುಡದ ಬಳಿ ಹಾಕುತ್ತಿದ್ದುದನ್ನು ನೋಡಬಹುದಿತ್ತು. ಅದು ಗಿಡಕ್ಕೆ ಒಳ್ಳೆಯ ಕಾಂಪೋಸ್ಟ್ ಗೊಬ್ಬರವಾಗುತ್ತದೆ. ಅದನ್ನು ಇಲ್ಲೆಲ್ಲಾ ಹರಡಿಕೊಂಡು ಗಲೀಜಾಗಿ ಕಾಣುವಂತೆ ಏಕೆ ಬಿಡಬೇಕು ಎಂದು ಕೇಳುತ್ತಿದ್ದರು. ಮಂದಿರದ ಪ್ರವೇಶದ್ವಾರದ ಎರಡೂ ಬದಿ ಜಲನೈದಿಲೆಯ ಎರಡು ಕೊಳಗಳನ್ನೂ, ಮಂದಿರದ ದ್ವಾರದ ಬಳಿ ಸಂನ್ಯಾಸಿಗಳ ನಿವಾಸದ ಪಕ್ಕದಲ್ಲಿಯೇ ಒಂದು ತಾವರೆಯ ಕೊಳವನ್ನೂ ಕಟ್ಟಿಸಿದ್ದರು. ಅವರು ತಮ್ಮ ಎಂಬತ್ತರ ಹರೆಯದಲ್ಲಿಯೂ ತಾವರೆಕೊಳದ ಸಿಮೆಂಟ್ ಕಟ್ಟೆಯನ್ನು ಹತ್ತಿ, ಅದರ ಮೇಲೆ ಕುಳಿತು, ತಾವರೆಯ ಹಣ್ಣು ಎಲೆಗಳನ್ನು ಕೀಳುತ್ತಿದ್ದ ದೃಶ್ಯವನ್ನು ನೋಡಿದಾಗಲೆಲ್ಲಾ ಎದೆಯಲ್ಲಿ ಒಂದು ರೀತಿಯ ಹೆದರಿಕೆಯಾಗುತ್ತಿತ್ತು.

ಮಠದಿಂದ ಹೊರಗೆ ಹೋಗುವಾಗಲಾಗಲೀ, ವೇದಿಕೆಗೆ ಹೋಗುವಾಗಲಾಗಲೀ, ಅಥವಾ ಮಂದಿರದೊಳಕ್ಕೆ ಹೋಗುವಾಗಲಾಗಲೀ ಅವರು ತಮ್ಮ ಶಾಲನ್ನು ಬಿಚ್ಚಿ ತಮ್ಮ ಕತ್ತು, ಹೆಗಲು ಮುಚ್ಚುವಂತೆ ಹೊದೆದುಕೊಳ್ಳುತ್ತಿದ್ದರು. ಅದನ್ನು ಪಟ್ಟಿಯಂತೆ ಮಡಿಸಿ, ಹೆಗಲಿನ ಮೇಲೆ ಹಾಕಿಕೊಳ್ಳುವುದನ್ನಾಗಲೀ ಅಥವಾ ರಾಜೀವ್ ಗಾಂಧಿಯಂತೆ ಕತ್ತಿನ ಸುತ್ತ ಸುತ್ತಿಕೊಳ್ಳುವುದನ್ನಾಗಲೀ ಅವರು ಎಂದೂ ಮಾಡುತ್ತಿರಲಿಲ್ಲ. ಸಂನ್ಯಾಸಿಗಳು ತಮ್ಮ ಉಡುಪಿನ ಬಗ್ಗೆ ಎಚ್ಚರದಿಂದಿರಬೇಕು. ಅವರು ಹೈದರಾಬಾದಿನ ಮಠದ ಅಧ್ಯಕ್ಷರಾಗಿರುವವರೆಗೂ ಮಠದ ಎಲ್ಲ ಸದಸ್ಯರೂ ಮಂದಿರಕ್ಕೆ ಹೋಗುವಾಗ ಇದನ್ನೇ ಅನುಸರಿಸಬೇಕಾಗಿತ್ತು.

ಎಲ್ಲರೂ ಜೀವನದಲ್ಲಿ ಸಕಾರಾತ್ಮಕ ದೃಷ್ಟಿಯನ್ನು ಹೊಂದಿರಬೇಕೆಂದೂ ಅವರು ಉಪದೇಶಿಸುತ್ತಿದ್ದರು. ಯಾವ ಪ್ರಶ್ನೆಗಾಗಲೀ ನಕಾರಾತ್ಮಕವಾಗಿಯೇ ಉತ್ತರ ಕೊಡುವ ಪರಿಪಾಠ, ಯಾವ ಭಾಷೆಯವರೇ ಆಗಲೀ, ನಮ್ಮ ಭಾರತೀಯರಿಗೆ ಬೆಳೆದುಬಂದಿದೆ. ಅವರು ಇದನ್ನು ಸಂಪೂರ್ಣವಾಗಿ ವಿರೋಧಿಸುತ್ತಿದ್ದರು. "ಇದು ಭಾರತೀಯರ ಸ್ವಭಾವವೇ ಆಗಿದೆ. ಮಾತನ್ನು 'ಆಗುವುದಿಲ್ಲ ಸ್ವಾಮೀಜಿ' ಎಂದೇಕೆ ಪ್ರಾರಂಭಿಸುತ್ತೀರಿ? ಸಕಾರಾತ್ಮಕ ಧೋರಣೆಯನ್ನು ಹೊಂದಿರಿ. ಆಶಾವಾದಿಗಳಾಗಿರಿ ಎಂದೇ ಉಪನಿಷತ್ತುಗಳು ಹೇಳುತ್ತವೆ. ನನಗೆ ಸಾಧ್ಯವಿಲ್ಲ ಎನ್ನುವುದರ ಬದಲು, ಯಾವಾಗಲೂ ನನ್ನಿಂದ ಸಾಧ್ಯ, ನಾನು ಮಾಡುತ್ತೇನೆ ಎಂದು ಹೇಳುತ್ತಿರಿ" ಎನ್ನುತ್ತಿದ್ದರು. ಅವರು ಎರಡನೇ ಮಹಾಯುದ್ಧದ ಸಂದರ್ಭದಲ್ಲಿ, ತಮ್ಮ ಆರೋಗ್ಯ ತೀರ ಹದಗೆಟ್ಟಿದ್ದಾಗಲೂ ಭಾರತ ಬರ್ಮಾ ಕಾಡುಗಳಲ್ಲಿ ನಡೆದುಕೊಂಡು ಬಂದವರು, ಕರಾಚಿಯಲ್ಲಿದ್ದ ತಮ್ಮ ಮಠವನ್ನು ವಿಧ್ವಂಸಮಾಡಿದುದನ್ನು ಕಂಡವರು, ಇದೆಲ್ಲಕ್ಕಿಂತ ದುಃಖದ ಸಂಗತಿ ದೇಶವಿಭಜನೆಯ ಕಾಲದಲ್ಲಿನ ದುಃಖ ಮತ್ತು ದುರವಸ್ಥೆಗಳನ್ನು ನೋಡಿದವರು. ಆದರೂ ಇವುಗಳನ್ನು ಜೀವನದಲ್ಲಿ ನಡೆಯುವ ಅನಿವಾರ್ಯಗಳು ಸಂಗತಿಗಳು ಎಂಬಂತೆ ನೋಡಿ, ತಮ್ಮ ಅಧ್ಯಾತ್ಮಿಕ ಶಕ್ತಿಯಿಂದ ಬಲಗೊಂಡಿದ್ದ ಸಕಾರಾತ್ಮಕ ದೃಷ್ಟಿಕೋನವನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದರು.

'ಆಧ್ಯಾತ್ಮಿಕ ಜೀವನದತ್ತ ತಿರುಗಿದರೆ ಜೋಲುಮುಖ ಹೊತ್ತೇ ತಿರುಗ ಬೇಕು ಎಂದುಕೊಳ್ಳುತ್ತೀರಿ. ಶ್ರೀ ರಾಮಕೃಷ್ಣರನ್ನು ನೋಡಿ, ತಮ್ಮ ಭಕ್ತರಲ್ಲಿ ಅವರು ಎಂತಹ ಆನಂದ ಮತ್ತು ಉತ್ಸಾಹವನ್ನು ಅವರು ಹರಡುತ್ತಿದ್ದರು! ಸ್ವಾಮಿ ವಿವೇಕಾನಂದರನ್ನು ನೋಡಿ– ಎಂತಹ ಉತ್ಸಾಹ, ಎಂತಹ ಧೈರ್ಯ!' ಎನ್ನುತ್ತಿದ್ದರು.

ಸ್ವಾಮಿ ರಂಗನಾಥಾನಂದರಿಗೆ ಟಾಗೂರರ ನುಡಿ 'ಏಕಾಂಗಿಯಾಗಿ ನಡೆ, ಏಕಾಂಗಿಯಾಗಿ ನಡೆ' ಅತಿ ಪ್ರಿಯವಾಗಿತ್ತು. ಇದನ್ನೇ ಉಪನಿಷತ್ತುಗಳು 'ಚರೈವೇತಿ, ಚರೈವೇತಿ' ಎಂದು ಹೇಳುವುದು, ಶ್ರೀರಾಮಕೃಷ್ಣರು ಹೇಳುತ್ತಿದ್ದುದು: 'ಮುಂದೆ ನಡೆ, ಮುನ್ನುಗ್ಗು'. ನಿಜವಾದ ಆಧ್ಯಾತ್ಮಿಕ ವ್ಯಕ್ತಿ ಯಾವಾಗಲೂ ಉತ್ಸಾಹಶೀಲನಾಗಿರಬೇಕು.

ಭಾರತದ ಭವಿಷ್ಯದ ಬಗ್ಗೆ ಸ್ವಾಮಿ ರಂಗನಾಥಾನಂದಜೀಯವರಿಗೆ ಭರವಸೆಯಿತ್ತು. ಸ್ವಾಮಿ ವಿವೇಕಾನಂದರ ವಾಣಿ ಸುಳ್ಳಾಗಲು ಸಾಧ್ಯವೇ ಇಲ್ಲ. ಈಗ ಭಾರತದಲ್ಲಿ ಇರುವ ರಾಜಕೀಯ ಮತ್ತು ಸಾಮಾಜಿಕ ಕ್ಷೋಭೆ (ಅವರಿಗೆ ಪ್ರಿಯವಾಗಿದ್ದ ಸ್ವಾಮಿ ವಿವೇಕಾನಂದ ಹೇಳಿಕೆಯಂತೆ) 'ಮಲಗಿರುವ ಪ್ರಚಂಡ ದೈತ್ಯ' ಏಳುತ್ತಿರುವುದರ ಸೂಚನೆ. ಆದಷ್ಟು ಬೇಗ ಸಾತ್ವಿಕ ವಾತಾವರಣ ನೆಲೆಗೊಳ್ಳುವುದೆಂಬ ಆಶ್ವಾಸನೆಯನ್ನು ಅವರು ಕೊಡುತ್ತಿದ್ದರು. ಆದರೂ ಸಮಾಜದಲ್ಲಿನ ಮೌಲ್ಯಗಳ ಪತನ ಅವರ ಕಣ್ಣನ್ನು ವಂಚಿಸುತ್ತಿರಲಿಲ್ಲ. ಅವುಗಳಲ್ಲಿ ಅವರು ಚಿಂತೆಗೀಡಾಗಿದ್ದುದು ವ್ಯಕ್ತವಾಗುತ್ತಿತ್ತು.

ಒಮ್ಮೆ ಅವರಿಗೆ ಸೂಜಿಮದ್ದು ಕೊಡಬೇಕಾಗಿತ್ತು. ಅದಕ್ಕೆ ಉಪಯೋಗಿಸುತ್ತಿದ್ದ ಸೂಜಿ ಒಂದು ಬಾರಿ ಉಪಯೋಗಿಸಿ ಎಸೆಯುವಂತಹುದು. ಅದು ಅವರಿಗೆ ಗೊತ್ತಿತ್ತು. ಅದನ್ನು ಒಮ್ಮೆ ಉಪಯೋಗಿಸಿದ ನಂತರ ಏನು ಮಾಡುವೆ ಎಂದು ನನ್ನನ್ನು ಕೇಳಿದರು. ನಾನು 'ಆಚೆಗೆ ಎಸೆಯುತ್ತೇನೆ' ಎಂದೆ. 'ಒಂದೇ ಒಂದು ಬಾರಿ ಉಪಯೋಗಿಸಿ?' 'ಹೌದು'. ತಕ್ಷಣ ಅವರು 'ಇವೆಲ್ಲಾ ಅಮೆರಿಕಾದ ರೀತಿ. ಇದನ್ನು ಆಚೆಗೆ ಎಸೆ, ಅದನ್ನು ಆಚೆಗೆ ಎಸೆ. ನಿನ್ನ ಹೆಂಡತಿಯನ್ನೂ ಎಸೆದುಬಿಡು,  ನಿನ್ನ ಗಂಡನನ್ನೂ ಎಸೆದುಬಿಡು, ಇದೆಲ್ಲಾ ಅಮೇರಿಕಾದ ಧೋರಣೆ' ಎಂದರು.

ಜನಗಳು ಹೇಗೆ ತಮ್ಮ ಶರೀರವನ್ನು ಅಂದಗೊಳಿಸಿಕೊಳ್ಳುತ್ತಾರೆ ಎಂಬುದನ್ನೂ, ಅದರ ನಿಸ್ಸಾರತೆಯನ್ನೂ ಅವರು ಅರಿತಿದ್ದರು. ವಿವಿಧ ರೀತಿಯ ಪ್ರಸಾಧನಗಳ ಬಳಕೆ ಅವರಿಗೆ ತಮಾಷೆಯೆನಿಸುತ್ತಿತ್ತೋ ಅಥವಾ ಅದರಿಂದ ಅವರು ನೊಂದುಕೊಂಡಿದ್ದರೋ ಏನೋ, ಅದರ ವಿಷಯವಾಗಿ ಹೇಳುತ್ತಿದ್ದರು 'ನಿಮ್ಮ ಮುಖಕ್ಕೆ ಹತ್ತು–ಹನ್ನೆರಡು ಬಣ್ಣಗಳನ್ನು ಬಳಿದುಕೊಳ್ಳಿ.' ಅವರು ಈ ಮಾತನ್ನು ಹೇಳಲು ಕಾರಣ ಪಾಶ್ಚಾತ್ಯ ಸಮಾಜವೋ ಅಥವಾ ನಮ್ಮ ಮಹಾನಗರಗಳ ಮಹಿಳೆಯರೋ ಎಂಬುದು ನನಗೆ ಗೊತ್ತಾಗುತ್ತಿರಲಿಲ್ಲ.

ಯಾವಾಗಲೂ ಅವರು, ಚಾರಿತ್ರ್ಯವನ್ನು ಉತ್ತಮಗೊಳಿಸುವಿಕೆಯ ಬಗ್ಗೆ ಸ್ವಾಮಿ ವಿವೇಕಾನಂದರು ಮಹತ್ವ ಕೊಡುತ್ತಿದ್ದ ವಿಚಾರವನ್ನು ಹೇಳುತ್ತಿದ್ದರು. ಚಾರಿತ್ರ್ಯವು ಒಂದು ರವೆಯಷ್ಟು ಉತ್ತಮಗೊಂಡರೂ ಸಮಾಜವನ್ನು ಅದು ಬದಲಿಸಬಲ್ಲದು ಎನ್ನುತ್ತಿದ್ದರು. 'ಕ್ಯಾರೆಕ್ಟರ್ ಎಫಿಷಿಯೆನ್ಸಿ' (ಸಚ್ಚಾರಿತ್ರ್ಯ) ಮತ್ತು 'ಹ್ಯೂಮನ್ ಎಕ್ಸೆಲೆನ್ಸಿ' (ಉತ್ಕೃಷ್ಟ ಮಾನವತೆ) ಎಂಬುದು ಅವರ ಮಂತ್ರವಾಗಿತ್ತು. ಈ ಪದಗುಚ್ಛವನ್ನು ಅವರೇ ಟಂಕಿಸಿದರೇನೋ ಎಂದು ನಾನು ಆಲೋಚಿಸುತ್ತಿದ್ದೆ.

ಶ್ರೀ ಮಾತೆಯವರ ೧೫೦ನೇ ಜನ್ಮದಿನೋತ್ಸವದ ಸಮಾರೋಪ ಸಮಾರಂಭದಲ್ಲಿ ಅವರು ನೀಡಿದ ಆಶೀರ್ವಚನದಲ್ಲಿ ಶ್ರೀಮಾತೆಯವರು ತಮ್ಮ ಜೀವನದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಹೇಗೆ ಅಳವಡಿಸಿಕೊಂಡಿದ್ದರು ಎಂಬುದನ್ನು ಹೇಳಿದರು. ಅದು ನನ್ನಂತಹವರು ಶ್ರೀಮಾತೆಯವರ ಜೀವನವನ್ನು ಹೊಸ ದೃಷ್ಟಿಕೋನದಿಂದ ನೋಡುವಂತೆ ಮಾಡಿತು. ಶ್ರೀ ರಾಮಕೃಷ್ಣ ಮತ್ತು ಶ್ರೀಮಾತೆಯವರ ಜೀವನಮೌಲ್ಯಗಳು ಇಂದಿನ ಆಧುನಿಕ ಸಮಾಜಕ್ಕೂ ಹೇಗೆ ಪ್ರಸ್ತುತವಾಗುತ್ತವೆ ಎಂಬುದನ್ನು ತೋರಿಸುವಲ್ಲಿ ಅವರು ಸಿದ್ಧಹಸ್ತರಾಗಿದ್ದರು.

'ಮದರ್–ಇನ್–ಲಾ' (ಅತ್ತೆ), 'ಡಾಟರ್–ಇನ್–ಲಾ' (ಸೊಸೆ) ಆಗಬೇಡಿ; ಬದಲಿಗೆ 'ಮದರ್–ಇನ್–ಲವ್' (ಪ್ರೀತಿಯ ತಾಯಿ), 'ಡಾಟರ್–ಇನ್–ಲವ್' (ಪ್ರೀತಿಯ ಮಗಳು) ಆಗಿ ಎನ್ನುತ್ತಿದ್ದರು. ಮನುಷ್ಯರ ಜೀವನದಲ್ಲಿ ನಾವು ಕಳೆದು ಕೊಳ್ಳುತ್ತಿರುವ ಆದರೆ ಅತ್ಯಗತ್ಯವಾದ ಮಾನವೀಯ ಸಂಬಂಧದ ತಳಹದಿ ಇದು ಎನ್ನುವುದನ್ನು ಅವರು ಅದ್ಭುತವಾಗಿ ನಿರೂಪಿಸುತ್ತಿದ್ದರು. ತಮ್ಮ ಬಳಿಗೆ ಬಂದವರೆಲ್ಲರ ಪಾಲಿಗೆ ಅವರು

ಪ್ರೇಮಮೂರ್ತಿಯೇ ಆಗಿಹತ್ತಿದ್ದರು. ಅವರು ನೀಡುತ್ತಿದ್ದ ಎಚ್ಚರಿಕೆಯ ನುಡಿ: 'ಬಿಲಿಯರ್ಡ್ಸ್ ಚೆಂಡುಗಳ ಹಾಗೆ ಪರಸ್ಪರ ತಾಕಲಾಟವನ್ನು ಹಚ್ಚಿಕೊಳ್ಳಬೇಡಿ' ಅವರ ಪ್ರಿಯವಾಗಿತ್ತು. ಇದು ಅವರಿಗೆ ಆಟಗಳನ್ನು ಇಷ್ಟಪಡುತ್ತಿದ್ದರು. ತಮ್ಮ ವಿಚಾರಗಳನ್ನು ಮಂಡಿಸುವಾಗ ಅವರು ಬಿಲಿಯರ್ಡ್ಸ್, ಫುಟ್‌ಬಾಲ್ ಮತ್ತು ಈಜು– ಈ ಆಟಗಳಿಂದ ಹೋಲಿಕೆಯನ್ನು ಕೊಡುತ್ತಿದ್ದರು. ಆದರೆ ಕ್ರಿಕೆಟ್ ಆಟವನ್ನು ಸೋಮಾರಿಗಳ ಆಟವೆನ್ನುತ್ತಿದ್ದರು. ಅವರಿಗೆ ಅದರ ಬಗ್ಗೆ ಒಲವಿರಲಿಲ್ಲ.

ಅವರ 'ಹೆಂಗಸಿಗೆ ಹೆಂಗಸೇ ಶತ್ರು' ಎಂಬ ಅಭಿಪ್ರಾಯವನ್ನು ನಾನು ಒಪ್ಪುತ್ತಿರಲಿಲ್ಲ. ಅವರು ತಮ್ಮ ವಿಶಾಲವಾದ ಜೀವನಾನುಭವದಿಂದ ಈ ಅಭಿಪ್ರಾಯವನ್ನು ಪಡೆದಿರಬಹುದಾದರೂ, ಅದರಲ್ಲಿ ಮಹಿಳೆಯರ ವಿಷಯದಲ್ಲಿ ಸಂನ್ಯಾಸಿಗಳಿರಬಹುದಾದ ಪೂರ್ವಗ್ರಹವೂ ಕಾರಣವೆಂಬುದು ನನ್ನ ಅಭಿಪ್ರಾಯ. ಆದರೂ ಈ ವಿಷಯದಲ್ಲಿ ಅವರನ್ನು ಪ್ರಶ್ನಿಸುವ ಧೈರ್ಯ ನನಗೆ ಇರುತ್ತಿರಲಿಲ್ಲ. ನಾನು ಕೇಳಿದರೆ ಅದಕ್ಕೆ ಅವರು ಏನು ಉತ್ತರ ಕೊಡುತ್ತಿದ್ದರೆಂಬುದು ನನಗೆ ಗೊತ್ತಿತ್ತು. 'ಹೌದು, ಹೌದು' ಎಂದಷ್ಟೇ ಹೇಳಿ ಮೌನವಾಗುತ್ತಿದ್ದರು. ಅಲ್ಪ ವಿಷಯಗಳ ಬಗ್ಗೆ ಚರ್ಚೆ ಮಾಡುವುದು ಅವರ ಸ್ವಭಾವದಲ್ಲಿರಲಿಲ್ಲ ಮತ್ತು ಇತರರು ತಮ್ಮದೇ ಅಭಿಪ್ರಾಯಗಳನ್ನು ಇಟ್ಟುಕೊಂಡಿರಲಿ ಎಂದುಕೊಳ್ಳುತ್ತಿದ್ದರು.

ಆಮೂಲಾಗ್ರವಾದ ಮಹಿಳಾವಾದವನ್ನು ಅವರು ಒಪ್ಪುತ್ತಿರಲಿಲ್ಲ. ಇದರಿಂದ ವಿವಾಹಗಳು ಮುರಿದುಬೀಳುತ್ತವೆ, ಜೀವನಗಳು ಮೂರಾಬಟ್ಟೆಯಾಗುತ್ತವೆ ಎಂಬುದು ಅವರ ಅಭಿಪ್ರಾಯವಾಗಿರಬಹುದು ಮತ್ತು ಅದು ನಿಜವೂ ಇರಬಹುದು. ಆದರೂ ಅವರು ತರುಣಿಯರ ವಿದ್ಯಾಭ್ಯಾಸಕ್ಕೆ, ಸ್ವತಂತ್ರ ಜೀವನವನ್ನು ನಡೆಸುವುದಕ್ಕೆ ಸಾಕಷ್ಟು ಪ್ರೋತ್ಸಾಹ ನೀಡುತ್ತಿದ್ದರು. ಅವಿವಾಹಿತರಾಗಿಯೇ ಉಳಿಯುವ ನಿರ್ಧಾರವನ್ನು ತೆಗೆದುಕೊಂಡ ತರುಣಿಯರನ್ನು ಅವರು ಮನಃಪೂರ್ವಕವಾಗಿ ಹರಸುತ್ತಿದ್ದರು. ಅವರ ಆಶೀರ್ವಾದವನ್ನು ಪಡೆದು ಅನೇಕ ತರುಣಿಯರು ಶ್ರೀ ಶಾರದಾ ಮಠವನ್ನು ಸೇರಿದ್ದರು.

ಇಂತಹ ಉನ್ನತ ವ್ಯಕ್ತಿಯನ್ನು ಭೇಟಿಮಾಡಿದುದು ನನ್ನ ಸೌಭಾಗ್ಯವಾಗಿತ್ತು. ಭೇಟಿಯಾದ ಮೊದಲ ವರ್ಷಗಳಲ್ಲಿ ನಾನು ಅವರಲ್ಲಿನ ಸಂತ–ವ್ಯಕ್ತಿತ್ವವನ್ನೂ ಗುರುತಿಸಿರಲಿಲ್ಲ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಅವರ ಸಾನ್ನಿಧ್ಯದಿಂದ ನಾನು ನನ್ನ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ಎಷ್ಟು ಬೆಳೆಸಿಕೊಂಡೆನೋ ನನಗೆ ತಿಳಿಯದು. ಆದರೆ, ನನ್ನ ಜೀವನದ ಒಳಕ್ಕೆ ಶ್ರೀ ರಾಮಕೃಷ್ಣರನ್ನು ತಂದವರು ಅವರೇ. ನಾನು ಸ್ವಾಮಿ ರಂಗನಾಥಾನಂದರನ್ನು ಭೇಟಿಯಾಗುವ ಮೊದಲೇ ಶ್ರೀ ವಿವೇಕಾನಂದರನ್ನು ಸ್ವಲ್ಪ ಓದಿದ್ದೆ. ಆದರೆ, ಆಗ ಶ್ರೀ ರಾಮಕೃಷ್ಣರು ನನ್ನ ಮನವನ್ನು ತಟ್ಟಿರಲಿಲ್ಲ. ನನ್ನ ಆ ಚಿಕ್ಕ ವಯಸ್ಸಿನಲ್ಲಿ, ಸ್ವಾಮಿ ವಿವೇಕಾನಂದರ ಉಜ್ಜ್ವಲವಾದ ಭಾಷಣಗಳು ಮತ್ತು ಲೇಖನಗಳು ನನ್ನನ್ನು ಹುರಿದುಂಬಿಸುತ್ತಿದ್ದವು. ತಾವು ಯಾವ ವಿಷಯದ ಮೇಲೆ ಮಾತನಾಡಿದರೂ ಶ್ರೀ ರಂಗನಾಥಾನಂದರು ಶ್ರೀ ರಾಮಕೃಷ್ಣ ಹಾಗೂ ಸ್ವಾಮಿ ವಿವೇಕಾನಂದರನ್ನು ಶ್ರೋತೃಗಳಿಗೆ ಪರಿಚಯಿಸುತ್ತಿದ್ದರು. ಸೂಕ್ತ ಉದಾಹರಣೆಗಳನ್ನು ಕೊಟ್ಟು, ಇದನ್ನೇ ಶ್ರೀ ರಾಮಕೃಷ್ಣರ 'ವಚನವೇದ'ದಲ್ಲಿ ಹೇಳಿರುವುದು ಎಂದೋ ಈ ಪ್ರಸಂಗವು 'ವಚನವೇದ'ದಲ್ಲಿ ಬರುತ್ತದೆ ಎಂದೋ ಸೇರಿಸುತ್ತಿದ್ದರು. ಇದರಿಂದಾಗಿ ಶ್ರೀ ರಾಮಕೃಷ್ಣರ 'ವಚನವೇದ'ದ ಬಗ್ಗೆ ನನ್ನ ಕುತೂಹಲ ಕೆರಳಿ ಅದರ ಒಂದು ಪ್ರತಿಯನ್ನು ಕೊಂಡುಕೊಂಡೆ. ಅದನ್ನು ಒಂದು ಬಾರಿ ತಿರುವಿಹಾಕಿದರೆ ಆಧ್ಯಾತ್ಮಿಕ ಜೀವನದ ಪ್ರಗತಿಯತ್ತ ಇಡುವ ಒಂದು ದೃಢ ಹೆಜ್ಜೆಯಾಗುತ್ತದೆ ಎಂಬುದು ನನಗೆ ಮನವರಿಕೆಯಾಗಿದೆ. ಇದಕ್ಕಾಗಿ ಮತ್ತು ಇತರ ಹಲವು ರೀತಿಯ ಅನುಗ್ರಹಗಳಿಗಗಿ ನಾನು ಸ್ವಾಮಿ ರಂಗನಾಥಾನಂದರಿಗೆ ಕೃತಜ್ಞಳಾಗಿದ್ದೇನೆ.

* * * *

# ೭೦. ಸ್ವಾಮಿ ರಂಗನಾಥಾನಂದರ ನೆನಪು ನಮ್ಮಲ್ಲಿ ಅಮರವಾಗಿದೆ

**–ಸುಮಿತಾ ರಾಯ್***

ತಮ್ಮ ಸಹವಾಸಕ್ಕೆ ಬಂದ ಇತರರ ಮನಸ್ಸಿನ ಮೇಲೆ ಅಚ್ಚೊತ್ತಿದ ಹಾಗೆ ಚಿರಕಾಲ ಉಳಿಯುವವರು ಮಾನವ ಇತಿಹಾಸದಲ್ಲಿ ಅಪರೂಪ. ಅಂತಹ ಅಪರೂಪದ ವ್ಯಕ್ತಿ ನಮ್ಮ ಪರಮಪೂಜ್ಯ, ಪ್ರೀತಿಯ ಸ್ವಾಮಿ ರಂಗನಾಥಾನಂದ ಅವರು. ಅವರ ಪ್ರಭಾವದ ವಲಯ ವಿಶ್ವವ್ಯಾಪಿಯಾಗಿದ್ದರೂ, ದಶಕಗಳ ಕಾಲ ಅವರ ಸಮೀಪದಲ್ಲಿರುವ ಸುಯೋಗ ದೊರಕಿದ್ದ ನಮ್ಮಂತಹವರಿಗೆ ಅವರ ನೆನಪು ನಮ್ಮ ಭಾವಗಳಲ್ಲೂ ಹಾಗೂ ನಾವು ಮಾಡುವ ಎಲ್ಲ ಕೆಲಸಗಳಲ್ಲೂ ಅಳಿಸಲಾಗದ ಹಾಗೆ ನೆಲೆಗೊಂಡಿದೆ. ನಾನು ಆ ಅಸಾಧಾರಣ ವ್ಯಕ್ತಿಯನ್ನು ಮುಖತಃ ನೋಡಿದ್ದೆಲ್ಲಿ? ನಿಜವಾಗಿಯೂ ನಾನು ಹೇಳಲಾರೆ. ಹೈದರಾಬಾದಿನ ಸಂತ ಆನ್ ಶಾಲೆಯಲ್ಲಿ ನಾನು ಓದುತ್ತಿದ್ದಾಗ ಅಲ್ಲಿಯೇ ಹತ್ತಿರದಲ್ಲಿದ್ದ ರಾಮಕೃಷ್ಣ ಮಠಕ್ಕೆ, ಅಲ್ಲಿ ಪೂಜೆ ನಡೆಯುವ ವೇಳೆಯಲ್ಲಿ, ವಿಶೇಷ ಸಂದರ್ಭಗಳಲ್ಲಿ ಅಲ್ಲಿನ ಸ್ವಾಮೀಜಿಯವರಿಗೆ ಪ್ರಣಾಮಗಳನ್ನು ಸಲ್ಲಿಸಲು ಹೋಗುತ್ತಿದ್ದುದು ನೆನಪಿದೆ.

ಆದರೆ, ನಮ್ಮ ಅದೃಷ್ಟದಿಂದ ಮಠವು ನಮ್ಮ ಮನೆಯ ಹತ್ತಿರಕ್ಕೆ, ಈಗ ಮಠವಿರುವ ಸ್ಥಳಕ್ಕೆ ಸ್ಥಳಾಂತರಗೊಂಡಿತು. ಅದು ನಮ್ಮ ಮನೆಯಿಂದ ಕೇವಲ ಐದು ನಿಮಿಷದ ನಡಗೆಯಲ್ಲಿ ತಲುಪಬಹುದಾದಷ್ಟು ದೂರವಿತ್ತು. ಅಂದು ನಡೆದ ಭವ್ಯ ಸಮಾರಂಭವು ಇನ್ನೂ ನನ್ನ ನೆನಪಿನಲ್ಲಿದೆ. ಅದಕ್ಕೂ ಮೊದಲು ನಾವು ಮಠದ ಮುಂದೆ ಹಾದುಹೋಗುವಾಗ ಪರಮಹಂಸರ ಮೂರ್ತಿ ಮೈವೆತ್ತುತ್ತಿದ್ದುದನ್ನು ನೋಡುತ್ತಿದ್ದೆವು. ಕಂಚಿನಲ್ಲಿ ಮಾಡಿದ ಕಪ್ಪನೆಯ ಆ ಮೂರ್ತಿ ಸ್ವಾಮಿ ರಂಗನಾಥಾನಂದ ಅವರ ಸರ್ಜನಶಿಲತೆಯ ಹಾಗೂ ಸಕಾರಾತ್ಮಕ ದೃಷ್ಟಿಯ ಮನಸ್ಸನ್ನು ತೋರಿಸುತ್ತದೆ. ಬೇರೆಲ್ಲಾ ಕಡೆ ಪರಮಹಂಸರ ಮೂರ್ತಿ ಅಮೃತಶಿಲೆಯದಾಗಿದ್ದರೆ ಇಲ್ಲಿ ಮಾತ್ರ ಅವರಿಗೆ ಕಪ್ಪು ಮೂರ್ತಿಯೇಕೆ ಎಂದು ಹಲವರು ಪ್ರಶ್ನಿಸಿದ್ದರು. ಸಂಪ್ರದಾಯ ನಿಷ್ಠೆಯು ಸಾಮಾನ್ಯವಾಗಿ ಜಡ್ಡುಗಟ್ಟುತ್ತದೆ ಎಂಬುದರ ಸತ್ಯವನ್ನು ಅರಿಯ ಬಯಸುವವರು ಹೊಳೆಯುತ್ತಿರುವ ಈ ಕಂಚಿನ ಪ್ರತಿಮೆಯನ್ನು ನೋಡಬೇಕು. ಇದು ಹೊಸ ವಿಷಯಗಳಿಗೆ ಹೊಂದಿಕೊಳ್ಳುವಲ್ಲಿ ಸ್ವಾಮಿ ರಂಗನಾಥಾನಂದ ಅವರ ನಮ್ಯತೆಗೆ ಮತ್ತು ನಾವೀನ್ಯವನ್ನು ಬಯಸುವ ಅವರ ಪ್ರವೃತ್ತಿಗಳಿಗೆ ಸಾಕ್ಷಿಯಾಗಿದೆ. ಅವರು ಸಂಪ್ರದಾಯವನ್ನು ಪಾಲಿಸಲೇಬೇಕೆಂದು ನಿಯಮಗಳಿಗೆ ಅಂಟಿಕೊಳ್ಳುತ್ತಿರಲಿಲ್ಲ. ಅವರು ನಿಯಮಗಳನ್ನು ಮೀರಿದ ವ್ಯಾವಹಾರಿಕವಾದ, ಕಾರ್ಯಸಾಧುವಾದ ದೃಷ್ಟಿಯನ್ನು ಹೊಂದಿದ್ದರು.

ಅವರ ಪ್ರಭಾವದಿಂದಲೇ ಮಠದ ಉದ್ಘಾಟನಾ ಸಮಾರಂಭಕ್ಕೆ ಅತ್ಯಂತ ಕ್ರಿಯಾಶೀಲರಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರನ್ನು ಕರೆತರಲು ಸಾಧ್ಯವಾಗಿತ್ತು. ಅದಾದರೂ ಎಂತಹ ಭವ್ಯ ಉತ್ಸವ! ಅತ್ಯಧಿಕ ಸಂಖ್ಯೆಯ ಜನ ಸೇರಿದ್ದರೂ, ರಾಮಕೃಷ್ಣ ಸಂಘದ ಹುಟ್ಟುಗುಣವೇ ಆದ ಅಚ್ಚುಕಟ್ಟುತನ ಆ ಸಮಾರಂಭದಲ್ಲಿ ಎದ್ದು ಕಾಣುತ್ತಿತ್ತು. ಮಠವು ಹಳೆಯ ಸ್ಥಳದಿಂದ ಇಲ್ಲಿಗೆ ಸಂಪೂರ್ಣವಾಗಿ ಸ್ಥಳಾಂತರಗೊಂಡ ನಂತರ ಅದರೊಡನೆ ನನ್ನ ಸಂಬಂಧ ಆಳವಾಯಿತು. ನಾನು ನನ್ನ ಎಂ.ಎ.ಯನ್ನು ಮುಗಿಸಿ, ವಿವೇಕಾನಂದ ವಾಣಿ ಸಂಸ್ಥೆಯಲ್ಲಿ ಶಿಕ್ಷಕಿಯಾಗಿ ಸೇರಿದೆ. ಆ ಸಂಸ್ಥೆಗೆ ಆ ಹೆಸರನ್ನು ಕೊಟ್ಟವರು ಸ್ವಾಮಿ ರಂಗನಾಥಾನಂದ ಅವರು. ನಂತರ ೨೦೦೦ರಲ್ಲಿ ಅವರ ಅಮೃತಹಸ್ತದಿಂದಲೇ ವಿವೇಕಾನಂದ ಮಾನವ ಉತ್ಕೃಷ್ಟತಾ ಸಂಸ್ಥೆಯ ಉದ್ಘಾಟನೆಯಾಯಿತು.

---

* ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರು.

ಮಠಕ್ಕೆ ಹತ್ತಿರವಾದ ಮೇಲೆ, ಸ್ವಾಮಿ ರಂಗನಾಥಾನಂದರ ವಿಶೇಷ ವಾತ್ಸಲ್ಯಪೂರ್ಣ ಪ್ರೀತಿಯು ನನ್ನನ್ನು ಆವರಿಸಿಕೊಂಡಿತು. ಯಾರೂ ಆ ಪ್ರೀತಿಯಿಂದ ವಂಚಿತರಾಗಲಿಲ್ಲ. ಅವರ ನೆರಳಿನಲ್ಲಿ ಬೆಳೆಯುತ್ತಿದ್ದ ತರುಣರಿಗೆಲ್ಲಾ ಅವರ ವಾಗ್ಮಿತೆ ಸ್ಫೂರ್ತಿಯನ್ನು ತುಂಬುತ್ತಿತ್ತು. ಅವರ ಉಪನ್ಯಾಸಗಳಿದ್ದ ವೇಳೆಯಲ್ಲಿ ೧೨೦೦ ಆಸನದ ಸಾಮರ್ಥ್ಯವುಳ್ಳ ಸಭಾಂಗಣವು ಜನಗಳಿಂದ ತುಂಬಿತುಳುಕುತ್ತಿತ್ತು. ಅವರು ಹೊರಸಂಚಾರದಲ್ಲಿದ್ದ ಸಮಯದಲ್ಲಿ ಅವರ ಉಪನ್ಯಾಸಗಳು, ಅದರಲ್ಲೂ ಅವರ 'ಗೀತೆ'ಯ ಮೇಲಿನ ಉಪನ್ಯಾಸಗಳಿಲ್ಲದೆ ಅಲ್ಲಿ ಒಂದು ಬಗೆಯ ಶೂನ್ಯತೆ ಕವಿಯುತ್ತಿತ್ತು.

ಒಂದು ದಿನ ಅವರ ಉಪನ್ಯಾಸ ಪ್ರಾರಂಭವಾಗುವುದಕ್ಕೆ ಮೊದಲು ನಾನು ಅವರ ಕೊಠಡಿಗೆ ಹೋಗಿದ್ದೆ. ಅಲ್ಲಿಂದ ಸಭಾಂಗಣಕ್ಕೆ ಹೋಗುವಾಗ ದಾರಿಯಲ್ಲಿ ಪ್ರತಿ ವಾರವೂ ನೀಡುವ ಇಂತಹ ಅದ್ಭುತವಾದ ಉಪನ್ಯಾಸಗಳಿಗೆ ಅವರು ಹೇಗೆ ತಯಾರಿ ನಡೆಸುತ್ತಾರೆ, ಹಾಗೆ ಉತ್ತಮವಾಗಿ ಪ್ರವಚನ ಮಾಡುವುದು ಹೇಗೆ ಮತ್ತು ಅದರ ಹಿಂದೆ ಇರುವ ರಹಸ್ಯವೇನು ಎಂದು ಕೇಳಿದೆ. ಅವರು ತಮ್ಮ ವ್ಯಂಗ್ಯ ಮತ್ತು ಹಾಸ್ಯಭರಿತ ರೀತಿಯಲ್ಲಿ ಹೇಳಿದರು 'ಹೊರಡುವ ಮುನ್ನ (ಮಂದಿರದ ಕಡೆ ಕೈತೋರಿಸುತ್ತಾ) ನಾನು ಆ ವೃದ್ಧರಿಗೆ ಹೇಳುತ್ತೇನೆ. ನಾನೀಗ ಮಾತನಾಡಲು ಹೋಗುತ್ತಿದ್ದೇನೆ. ದಯವಿಟ್ಟು ಅದಕ್ಕೆ ಮಾಡಬೇಕಾದದ್ದನ್ನು ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಮುಂದಿನದನ್ನೆಲ್ಲಾ ಅವರೇ ಮಾಡುತ್ತಾರೆ.' ಭಾರತದ ಶಾಂತಿಯ ರಾಯಭಾರಿಯೆಂದೇ ಪರಿಗಣಿತರಾಗಿದ್ದ ವ್ಯಕ್ತಿಯಲ್ಲಿ ಎಂತಹ ನಂಬಿಕೆ, ವಿನಯ ಮನೆಮಾಡಿತ್ತು! ಅದು ಅವರ ಹೃದಯಕ್ಕೆ ಅತಿ ಹತ್ತಿರವಾಗಿದ್ದ ವಾಗ್ಮಿತೆಯಿಂದ ಸಾಧ್ಯವಾಗಿತ್ತು. ಇಂದು ನಾನು ಶ್ರೋತೃಗಳ ಮುಂದೆ ಮಾತನಾಡಲು ನಿಂತಾಗ, ಅವರ ಅಮೃತವಾಣಿ, ಅನನ್ಯ ಧ್ವನಿ ಮತ್ತು ಲಯಪೂರ್ಣವಾದ ಧ್ವನಿಯ ಏರಿಳಿತ ನನ್ನ ಕಣ್ಣಮುಂದೆ ಬರುತ್ತವೆ.

ನಾನು ಇದನ್ನು ಬರೆಯತೊಡಗಿದಾಗ ಅವರ ನೂರೆಂಟು ನೆನಪುಗಳು ಒಂದರ ಹಿಂದೊಂದರಂತೆ ಬರುತ್ತವೆ. ಆದರೆ ಅವೆಲ್ಲವನ್ನೂ ಕಾಗದದ ಮೇಲೆ ಬರೆಯುವುದು ಸಾಧ್ಯವೇ? ರಾಮಕೃಷ್ಣ–ವಿವೇಕಾನಂದ ಸೇವಾ ಸಮಿತಿಯು ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ವಾರ್ಷಿಕ ಸ್ಪರ್ಧೆಗಳನ್ನು ಏರ್ಪಡಿಸುತ್ತಿತ್ತು. ಸ್ವಾಮಿ ರಂಗನಾಥಾನಂದರು ಅತ್ಯಂತ ಆಳವಾಗಿ ಪ್ರೀತಿಸುತ್ತಿದ್ದ ಸ್ವಾಮಿ ಜಿತಾತ್ಮಾನಂದರು ಈ ವ್ಯವಸ್ಥೆಯ ಹಿಂದೆ ಇರುತ್ತಿದ್ದರು. ಅವರಿಬ್ಬರ ನಡುವಿನ ಆಪ್ತತೆ ನಿಜಕ್ಕೂ ಅಸದೃಶವಾಗಿತ್ತು. ಜಂಟಿ ಕಾರ್ಯದರ್ಶಿಯಾಗಿದ್ದ ನಾನು ಸಮಾರಂಭದ ಮಧ್ಯೆ ಇರುತ್ತಿದ್ದೆ ಮತ್ತು ಸ್ವಾಮೀಜಿಯವರು ಸಮಾರಂಭವೆಲ್ಲಾ ಮುಗಿದ ಮೇಲೆ ಅದರ ವರದಿಯನ್ನು ಕೇಳುತ್ತಾರೆ ಎಂಬುದು ಜ್ಞಾಪಕ್ಕೆ ಬರುತ್ತಿತ್ತು. ನನ್ನನ್ನು ಕರೆದು 'ಸ್ಪರ್ಧೆಗಳು ಹೇಗೆ ನಡೆಯಿತು ಎಂಬುದನ್ನು ನೀನು ತಿಳಿಸು' ಎಂದು ಹೇಳುತ್ತಿದ್ದರು. ಅವರು ಸಮಾರಂಭದ ಬಗ್ಗೆ ಇತರರಿಂದ ಕೇಳಿ ತಿಳಿದುಕೊಂಡಿದ್ದರೂ, ನನ್ನಿಂದ ಕೇಳಬಯಸುತ್ತಿದ್ದುದು ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತಿತ್ತು. ಒಮ್ಮೆ ಮುಂಬೈನ ವೋರ್ಲಿಯಲ್ಲಿರುವ ಆಶ್ರಮದ ವಿವೇಕಾನಂದ ಯೂತ್ ಫೆಡರೇಷನ್ನಿನವರು ತರುಣರ ಒಂದು ಕ್ಯಾಂಪನ್ನು ಏರ್ಪಡಿಸಿ ಅದಕ್ಕೆ ಹೈದರಾಬಾದ್ ಕೇಂದ್ರದಿಂದ ಪ್ರತಿನಿಧಿಯೊಬ್ಬರನ್ನು ಕಳಿಸುವಂತೆ ವಿನಂತಿಸಿಕೊಂಡಿದ್ದರು. ಸ್ವಾಮೀಜಿಯವರು ನನ್ನನ್ನು ಕರೆದು ಅಲ್ಲಿಗೆ ಪ್ರತಿನಿಧಿಯಾಗಿ ಹೋಗುವಂತೆ ಹೇಳಿದರು. ನಾನು ಈ ಗೌರವಕ್ಕೆ ಅರ್ಹಳೇ ಎಂದು ಕೇಳಿದರೂ ಬಿಡದೆ ನಾನೇ ಅಲ್ಲಿಗೆ ಹೋಗಬೇಕೆಂದು ಒತ್ತಾಯಮಾಡಿ ಕಳುಹಿಸಿದರು. ಆ ಅವಕಾಶ ಶಿಕ್ಷಣಾತ್ಮಕವಾಗಿದ್ದ ಹಾಗೆಯೇ ಸಂತೋಷದಾಯಕವೂ ಆಗಿತ್ತು.

ನಾನು ಆಗ ಸಂಶೋಧನಾಕಾರ್ಯದಲ್ಲಿ ನಿರತಳಾಗಿದ್ದೆನಾದ್ದರಿಂದ, ಸ್ವಾಮೀಜಿಯವರು ಆಗಾಗ್ಗೆ ಆ ಕೆಲಸ ಹೇಗೆ ನಡೆಯುತ್ತಿದೆ, ನಾನು ಅನುಸರಿಸುವ ಕಾರ್ಯವಿಧಾನವೇನು, ನನ್ನ ತರ್ಕಸರಣಿ ಹೇಗಿದೆ ಮುಂತಾಗಿ ಅದರ ಬಗ್ಗೆ ವಿಚಾರಿಸುತ್ತಿದ್ದರು. ಇದರಿಂದಾಗಿ ನನ್ನ ಆಲೋಚನಾ ಸರಣಿ ಹರಿತವಾಗಲು

ಅನುಕೂಲವಾಯಿತು. ನನ್ನನ್ನು ತೀವ್ರವಾಗಿ ಆಲೋಚನೆಗೆ ಹಚ್ಚುವುದು ಅವರ ಗುರಿಯಾಗಿತ್ತು. ನನ್ನ ಎಂ.ಫಿಲ್. ಮುಗಿದಿದ್ದು, ನನ್ನ ಸಂಪ್ರಬಂಧವನ್ನು ಬೆರಳಚ್ಚು ಮಾಡಿಸಿ, ಅವರಿಗೆ ತೋರಿಸಿ ಅವರ ಆಶೀರ್ವಾದವನ್ನು ಪಡೆಯಲು ತೆಗೆದುಕೊಂಡು ಹೋದೆ. ಬೇರೆಯವರಾಗಿದ್ದರೆ ಅದನ್ನು ತಿರುವಿಹಾಕಿ ಒಂದೆರಡು ಪ್ರೋತ್ಸಾಹಕರ ನುಡಿಗಳನ್ನಾಡಿ ಕಳುಹಿಸುತ್ತಿದ್ದರು. ಆದರೆ ಸ್ವಾಮಿ ರಂಗನಾಥಾನಂದರು ಅಂತಹವರಲ್ಲ. ನನ್ನನ್ನು ಸ್ವಲ್ಪ ಕಾಯಲು ಹೇಳಿ, ಆ ಸಂಪ್ರಬಂಧವನ್ನು ಮೊದಲಿನಿಂದ ಕಡೆಯವರೆಗೂ ಕೂಲಂಕಷವಾಗಿ, ಜಾಗರೂಕತೆಯಿಂದ ಓದಿ, ಕೆಲವು ತಪ್ಪುಗಳನ್ನು ತೋರಿಸಿ ಅದನ್ನು ತಿದ್ದಲು ಹೇಳಿದರು. ಹಲವು ವರ್ಷಗಳ ನಂತರ ನನ್ನ ಪಿಎಚ್.ಡಿ ಸಂಪ್ರಬಂಧವನ್ನು ಅವರಿಗೆ ತೋರಿಸಿದಾಗಲೂ ಅವರು ಹಾಗೆಯೇ ಮಾಡಿದರು. ಅವರು ನನಗೆ ಗುಣಮಟ್ಟಗಳನ್ನು ಕಾಯ್ದುಕೊಳ್ಳುವ ಬಗೆಗಿನ ನಿಯಮಗಳನ್ನು, ಕರಡು ತಿದ್ದುವಲ್ಲಿ ಅನುಸರಿಸಬೇಕಾದ ಮೂಲ ವಿಧಾನಗಳನ್ನು ಹೇಳಿಕೊಟ್ಟರು. ಅವರ ಸಲಹೆಗಳು ಇಂದು ನಾನು ಮಾಡುತ್ತಿರುವ ಕೆಲಸಗಳಲ್ಲಿ ಬಹು ಸಹಾಯಕವಾಗಿವೆ. ಅವರು ತಾವು ಅನಾರೋಗ್ಯದಿಂದ ಪೀಡಿತರಾಗಿ ಹಾಸಿಗೆಯಲ್ಲಿರುವಾಗಲೂ, ತಮ್ಮ ಪುಸ್ತಕಗಳ ಕರಡನ್ನು ಎಚ್ಚರಿಕೆಯಿಂದ ನೋಡುತ್ತಿದ್ದ ರೀತಿ, ಪರಿಪೂರ್ಣತೆಯನ್ನು ಸಾಧಿಸುವಲ್ಲಿ ಅವರು ಸಾಗುವ ಬಗೆ, ಪ್ರತಿಯೊಂದನ್ನೂ ಕೂಲಂಕಷವಾಗಿ ಗಮನಿಸುತ್ತಿದ್ದ ವಿಧಾನ – ಇವುಗಳು ನಮ್ಮೆಲ್ಲರಿಗೂ ಪಾಠವಾಗಿದ್ದುವು. ಅವರು ತಮ್ಮ ಆದರ್ಶಪ್ರಾಯವಾದ ವಾಗ್ಮಿತೆಯ ಹಾಗೂ ಲೇಖಕ–ಜೀವನದ ಕೊನೆಯವರೆಗೂ ಈ ಕೆಲಸಗಳನ್ನು ಬೇರೆಯವರಿಗೆ ವಹಿಸುತ್ತಿರಲಿಲ್ಲ.

ಸ್ವಾಮೀಜಿಯವರ ಕೊಠಡಿಯಲ್ಲಿದ್ದ ಗ್ರಂಥಗಳು ನಮಗೆ ಆಶ್ಚರ್ಯಕರ ಆಕರಗಳಾಗಿದ್ದವು. ನಾನು ಯಾವ ಪುಸ್ತಕವನ್ನು ಕೇಳಿದರೂ ಅದನ್ನು ಅವರು ನನಗೆ ಕೊಡುತ್ತಿದ್ದರು. ನಾನು ಕೇಳದಿದ್ದರೂ ಕೆಲವು ಪುಸ್ತಕಗಳನ್ನು, ಅದರಲ್ಲೂ ನಾನು ಕೇಳಿರದೇ ಇದ್ದ ಪುಸ್ತಕಗಳನ್ನು, ಓದುವಂತೆ ಸೂಚಿಸುತ್ತಿದ್ದರು. ನಾನು ೬ನೇ ತರಗತಿಯಿಂದ ೧೦ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆಂದು ನೀತಿ ಶಾಸ್ತ್ರದ ಹಲವು ಪುಸ್ತಕಗಳನ್ನು ಬರೆದಿದ್ದೆ. ಮಾಮೂಲಿನಂತೆ ಅವುಗಳನ್ನು ಸ್ವಾಮೀಜಿಗಳಿಗೆ ತೋರಿಸಿ ಅವರ ಆಶೀರ್ವಾದವನ್ನು ಪಡೆಯಲು ತೆಗೆದುಕೊಂಡು ಹೋದೆ. ಅವರು ಆ ಪುಸ್ತಕಗಳನ್ನು ಗಮನವಿಟ್ಟು ಓದಿ ಸೂಕ್ಷ್ಮವಾದ ಒಳನೋಟದಿಂದ ಕೂಡಿದ ಕೆಲವು ಅಭಿಪ್ರಾಯವನ್ನು ಹೇಳಿದರು. ಈಗ ನೀತಿಶಾಸ್ತ್ರ (moral) ಎಂಬ ಪದದ ಉಪಯೋಗ ತಪ್ಪಿದೆ, ಅದರ ಬದಲಿಗೆ ಮಾನವೀಯ ಶಾಸ್ತ್ರಗಳು (humanistic science) ಎಂದು ಅದನ್ನು ಕರೆಯುತ್ತಾರೆ ಎಂದರು. ನಾವು ಈಗ 'ಸಾಫ್ಟ್ ಸ್ಕಿಲ್' ಎಂದು ಕಲಿಸುತ್ತಿರುವುದನ್ನು, ಅವರ ಬಳಿ ಇರುತ್ತಿದ್ದ ಒಂದೆರಡು ಗಂಟೆಗಳ ಪ್ರಶಾಂತ ವಾತಾವರಣದಲ್ಲಿ ನಾವೇ ಕಲಿಯುತ್ತಿದ್ದೆವು.

ಒಮ್ಮೆ ನನ್ನ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಲು ಅವರನ್ನು ಕೇಳಿಕೊಂಡೆ. ಆಗ ನನ್ನನ್ನು ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಮಹಿಳಾ ಕಾಲೇಜಿಗೆ ವರ್ಗಾಯಿಸಿದ್ದರು. ಆರೋಗ್ಯ ಸರಿಯಿಲ್ಲದಿದ್ದುದರಿಂದ ಅವರು ನನಗೆ ಬೇಸರವಾಗದಂತೆ ನಯವಾಗಿ ಅದನ್ನು ನಿರಾಕರಿಸಿದ್ದರು. ತಮ್ಮ ಅನನ್ಯ ಶೈಲಿಯಲ್ಲಿ ಹಿಂದಿನ ಘಟನೆಯೊಂದನ್ನು ಹೇಳಿದರು: 'ಹಲವು ವರ್ಷಗಳ ಹಿಂದೆ ಒಮ್ಮೆ ನಾನು ಮಹಿಳಾ ಕಾಲೇಜಿಗೆ ಭಾಷಣ ಮಾಡಲು ಹೋಗಿದ್ದೆ. ದರ್ಬಾರ್ ಹಾಲಿನಲ್ಲಿ ಭಾಷಣ ಮಾಡುವ ನನ್ನ ಹಾಗೂ ಶ್ರೋತೃಗಳ ನಡುವೆ ಒಂದು ಪರದೆಯನ್ನು ಹಾಕಿದ್ದರು (ಈ ಪದ್ಧತಿ ಈಗಲೂ ಇದೆ). ನನಗೆ ಆಘಾತವಾಯಿತು. ನಾನು ಯಾರಿಗಾಗಿ ಮಾತನಾಡುತ್ತಿದ್ದೇನೆಯೋ ಅವರನ್ನು ನೋಡದೆ ನಾನು ಹೇಗೆ ಮಾತನಾಡಲಿ! ಹೀಗೆ ಪರದೆಯನ್ನು ಹಾಕಿದ್ದರೆ ಭಾಷಣ ಮಾಡುವುದಿಲ್ಲ ಎಂದು ನಾನು ಸಂಘಟಕರಿಗೆ ಹೇಳಿದೆ. ಬಹಳ ಹೊತ್ತಿನ ಮಾತುಕತೆಯ ನಂತರ ಕಡೆಗೆ ಅವರು ಪರದೆಯನ್ನು ತೆಗೆಯಲು ಒಪ್ಪಿದರು. ಅದನ್ನು ತೆಗೆದ ಮೇಲೆ ನಾನು ಉಪನ್ಯಾಸ ಮಾಡಿದೆ.' ಅವರು ತಮ್ಮ ಬದಲಿಗೆ ಸ್ವಾಮಿ ಪರಮಾರ್ಥಾನಂದ ಅವರ ಹೆಸರನ್ನು ಸೂಚಿಸಿದರು. ಅಲ್ಲಿಗೆ ಬಂದು ಭಾಷಣ

ಮಾಡಿದ ಸ್ವಾಮಿ ಪರಮಾರ್ಥಾನಂದ ಅವರು ೧೦೦೦ಕ್ಕೂ ಹೆಚ್ಚು ಸಂಖ್ಯೆಯಲ್ಲಿದ್ದ ವಿದ್ಯಾರ್ಥಿಗಳ ಮನಸ್ಸನ್ನು ಅಂದು ಗೆದ್ದರು.

ಸ್ವಾಮೀಜಿಯವರ ಬಾಲ್ಯದ ಬಗ್ಗೆ, ಅವರು ಮರಗಳನ್ನು ಹತ್ತುತ್ತಿದ್ದ, ಈಜುತ್ತಿದ್ದ ಬಗ್ಗೆ, ತಮ್ಮ ತಾಯಿಯೊಡನೆ ಅವರಿಗಿದ್ದ ಆತ್ಮೀಯ ಸಂಬಂಧದ ಬಗ್ಗೆ ನಾನು ಹಲವಾರು ಕಥೆಗಳನ್ನು ಬೇರೆಯವರ ಸಂಗಡ ಇದ್ದಾಗ ಹಾಗೂ ನಾನೊಬ್ಬಳೇ ಇದ್ದಾಗ ಅವರಿಂದ ಕೇಳಿದ್ದೆ.

ಅವರು ತಮ್ಮ ಅವಿರತವಾದ ಪ್ರವಚನಗಳಿಂದ ಬಳಲಿ, ಕಂಖಲ್ ಆಶ್ರಮಕ್ಕೆ ಹೋಗಿ ವಿಶ್ರಾಂತಿ ಪಡೆಯುತ್ತಿದ್ದರು ಮತ್ತು ಅಲ್ಲಿ ಮೌನವ್ರತವನ್ನು ಪಾಲಿಸುತ್ತಿದ್ದರು. ಬೇಸಗೆಯೊಂದರಲ್ಲಿ ಅವರು ಅಲ್ಲಿದ್ದಾಗ ನಮ್ಮಲ್ಲಿ ಕೆಲವರು ಹರಿದ್ವಾರಕ್ಕೆ ಹೋಗುವ ಮಾರ್ಗದಲ್ಲಿ ಅವರಲ್ಲಿಗೆ ಬರುವುದಾಗಿ ಅವರಿಗೆ ತಿಳಿಸಿ ಪತ್ರವೊಂದನ್ನು ಬರೆದಿದ್ದೆವು. ಅಲ್ಲಿನವರಿಗೆಲ್ಲರಿಗೂ 'ಹೈದರಾಬಾದಿನಿಂದ ಅತಿಥಿಗಳು ಬರುತ್ತಿದ್ದಾರೆ' ಎಂದು ಅವರು ಎಚ್ಚರಿಸಿದ್ದರೆಂದು ನಾವು ಅಲ್ಲಿಗೆ ಹೋದ ಮೇಲೆ ತಿಳಿಯಿತು. ಅಲ್ಲಿನ ಎಲ್ಲ ವ್ಯವಸ್ಥೆಗಳೂ ಪರಿಪೂರ್ಣವಾಗಿದ್ದವು. ನಾವು ಅಲ್ಲಿಗೆ ಹೋದಾಗ ತಮ್ಮ ಬಿಳಿಯ ಗಡ್ಡ ಹಾಗೂ ಪ್ರಶಾಂತ ಮುಖಮುದ್ರೆಯಿಂದ ನಮಗೆಲ್ಲಾ ಅಕ್ಕರೆಯನ್ನುಂಟುಮಾಡುವ ಹಾಗೆ ಇದ್ದರು. ಅವರು ನಮ್ಮೊಡನೆ ಗಂಟೆಗಟ್ಟಲೆ ಮಾತನಾಡಿದರು. ಅದು ಹೈದರಾಬಾದಿನಲ್ಲಿ ಸಾಧ್ಯವಾಗುತ್ತಿರಲಿಲ್ಲ. ಇವರು ಎಂತಹ ಅತಿಥಿಗಳು, ಸ್ವಾಮೀಜಿಗಳು ತಮ್ಮ ಮೌನವ್ರತವನ್ನು ಮುರಿದು ಇಡೀ ದಿನ ಮಾತನಾಡುತ್ತಿದ್ದಾರಲ್ಲಾ ಎಂದು ಅಲ್ಲಿಯ ಆಶ್ರಮವಾಸಿಗಳು ಆಶ್ಚರ್ಯಪಡುತ್ತಿದ್ದರೆಂದು ನಮಗೆ ಅನಂತರ ತಿಳಿಯಿತು. ನಮ್ಮಂತಹ ಅತಿ ಸಾಮಾನ್ಯರನ್ನು ಸ್ವಾಮೀಜಿಗಳ ಪ್ರೀತಿ ಅತ್ಯಂತ ಗಣ್ಯವ್ಯಕ್ತಿಗಳನ್ನಾಗಿ ಮಾಡಿತ್ತು.

ಒಮ್ಮೆ ನಾನು ಅಂಜುತ್ತಲೇ ನನಗೆ ಒಂದು ಯೋಗ್ಯತಾಪತ್ರವನ್ನು ನೀಡಬಹುದೇ ಎಂದು ಅವರನ್ನು ಕೇಳಿದೆ. ತಕ್ಷಣ, ಒಂದು ಪೆನ್ನು ಮತ್ತು ಪತ್ರವನ್ನು ತೆಗೆದುಕೊಂಡು ಬರೆದುಕೊಟ್ಟರು. ಅಂತಹ ಅಮೂಲ್ಯವಾದ ಪತ್ರವನ್ನು ಬೇರೆಯವರಿಗೆ ಹೇಗೆ ಕೊಡಲಿ? ಅದು ಇನ್ನೂ ನನ್ನ ಬಳಿಯೇ ಇದೆ.

ಒಂದು ದಿನ ನಾನು ನನ್ನ ಒಂದು ಸಮಸ್ಯೆಯೊಂದಿಗೆ ಅವರ ಬಳಿ ಓಡಿಹೋದೆ. ನನ್ನ ತಂಗಿಗೆ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾದಲ್ಲಿ ಕೆಲಸವು ದೊರಕಿದ್ದು, ಅವಳನ್ನು ದುರ್ಗಾಪುರದ ಕಛೇರಿಗೆ ನೇಮಿಸಿದ್ದರು. ಅವಳು ಇನ್ನೂ ಚಿಕ್ಕವಳು. ಆ ಸಂಸ್ಥೆಯ ಅಧ್ಯಕ್ಷರು ಸ್ವಾಮೀಜಿಗಳ ಭಕ್ತರೆಂದೂ, ಸ್ವಾಮೀಜಿಗಳು ಒಂದು ಮಾತನ್ನು ಹೇಳಿದರೆ ಅವರು ನನ್ನ ತಂಗಿಗೆ ವರ್ಗ ಮಾಡಿಸಿಕೊಡಬಹುದೆಂದೂ ನನಗೆ ಯಾರೋ ಹೇಳಿದ್ದರು. ಆದರೆ ಸ್ವಾಮೀಜಿ ಅವರು ನನಗೆ ನಾವು ಪರಿಸ್ಥಿತಿಯನ್ನು ಸ್ವೀಕರಿಸುವ, ಅದಕ್ಕೆ ಹೊಂದಿಕೊಂಡು ಹೋಗುವ ಪಾಠವನ್ನು ಕಲಿಸಿದರು. ಅವರು ನನ್ನ ತಂಗಿಗೆ ಒಂಟಿಯೆಂದೆನಿಸಿದರೆ ಅವಳು ತಮ್ಮ ಅಸನ್ಸೋಲಿನ ಆಶ್ರಮಕ್ಕೆ ಹೋಗಬೇಕೆಂದೂ, ಅಲ್ಲದೆ ವರ್ಗಾವಣೆಗಾಗಿ ಅನುಚಿತವಾಗಿ ಕೇಳಿಕೊಳ್ಳುವುದು ಸರಿಯಲ್ಲ ಎಂದೂ ಹೇಳಿದರು. ಅವರು ಹೇಳಿದ ರೀತಿಯಿಂದ ಯಾವ ಬಗೆಯ ಕಹಿ ಭಾವನೆಯೂ ನನ್ನಲ್ಲಿ ಉಳಿಯಲಿಲ್ಲ. ಅವರ ಎದುರಿನಲ್ಲಿ ಪ್ರತಿಯೊಂದು ಅನುಭವದಿಂದಲೂ ಪಾಠಗಳನ್ನು ಕಲಿತು ನಮ್ಮನ್ನು ನಾವು ಶ್ರೀಮಂತಗೊಳಿಸಿಕೊಂಡೆವು.

ಸ್ವಾಮಿ ರಂಗನಾಥಾನಂದರು ಸಂಘದ ಉಪಾಧ್ಯಕ್ಷರಾದಾಗ, ಅವರು ಹೈದರಾಬಾದನ್ನು ಬಿಟ್ಟು ಹೋಗುತ್ತಾರೆಂಬ ಅರಿವಿಲ್ಲದೆ, ನಾವು ಸಂತೋಷಪಟ್ಟೆವು. ಮೊದಮೊದಲ ದಿನಗಳಲ್ಲಿ ದೀಕ್ಷೆಯನ್ನು ಕೊಡುವಂತೆ ವಿನಂತಿಸಿಕೊಂಡು ಹಲವಾರು ಪತ್ರಗಳು ಬರುತ್ತಿದ್ದವು. ಅವುಗಳಲ್ಲಿ ಬಹಳಷ್ಟು ಬಂಗಾಳಿಯಲ್ಲಿರುತ್ತಿದ್ದವು. ಅವರು ವಿವೇಕಾನಂದ ಸಂಸ್ಥೆಯಲ್ಲಿ ಸಂಜೆಯ ತರಗತಿಗಳನ್ನು ಮುಗಿಸಿಕೊಂಡು ಬರಬೇಕೆಂದು ನನಗೆ ಹೇಳಿ ಕಳುಹಿಸಿ, ಆ ಪತ್ರಗಳನ್ನು ಓದುವಂತೆ ಹೇಳುತ್ತಿದ್ದರು. ಅವರು ತಾವು ದೀಕ್ಷೆಯನ್ನು ಕೊಡಬಯಸುವುದಿಲ್ಲವೆಂದೂ, ತಾವು ಅಂತಹ ಜವಾಬ್ದಾರಿಯ ಕೆಲಸಕ್ಕೆ ಇನ್ನೂ ಅರ್ಹರಲ್ಲವೆಂದೂ ಹೇಳುತ್ತಿದ್ದರು. ಅವರು ನಿರಾಕರಿಸಿದಾಗಲೂ

ಅವರ ಮಾತು, ಭಾಷೆ ಎಷ್ಟು ನಯವಾಗಿರುತ್ತಿತ್ತು! ಅವರು ವ್ಯಕ್ತಪಡಿಸುತ್ತಿದ್ದ ರೀತಿ ಎಷ್ಟು ಶಿಷ್ಟವಾಗಿರುತ್ತಿತ್ತು! ಅವರ ಮನಸ್ಸು ಕೋಮಲವಾಗಿದ್ದರೂ, ದೃಢವಾಗಿರುತ್ತಿತ್ತು.

ಕಡೆಗೂ ಅನಿವಾರ್ಯವಾದದ್ದು ನಡೆಯಿತು, ನಮ್ಮ ಪ್ರೀತಿಯ ಸ್ವಾಮೀಜಿಯವರು ಹೈದರಾಬಾದನ್ನು ಬಿಟ್ಟು ಬೇಲೂರು ಮಠಕ್ಕೆ ಹೊರಟರು. ಒಂದು ರೀತಿಯಲ್ಲಿ ಅದು ಸಂತೋಷಜನಕವಾಗಿದ್ದರೂ, ಅವರಿಗೆ ವಿದಾಯ ಹೇಳುವುದು ಅಗಾಧವಾದ ದುಃಖಕ್ಕೆ ಎಡೆಗೊಟ್ಟಿತ್ತು. ಅವರು ನಂತರ ಹೈದರಾಬಾದಿಗೆ ಭೇಟಿ ಯಿತ್ತಾಗಲೆಲ್ಲಾ ಅವರನ್ನು ಮತ್ತೆ ಕಳಿಸಿಕೊಡುವ ಕ್ಷಣಗಳು ಹೃದಯಸ್ಪರ್ಶಿಯಾಗಿರುದ್ದುವು. ಅವರು ಹೈದರಾಬಾದಿನಿಂದ ತೆರಳಿದ ನಂತರ ವರ್ಷಕ್ಕೊಮ್ಮೆ ಅವರನ್ನು ನೋಡುವ ಸಲುವಾಗಿಯೇ ಮತ್ತು ಅವರೊಡನೆ ಸ್ವಲ್ಪಕಾಲ ಕಳೆಯಲೆಂದೇ ಬೇಲೂರಿಗೆ ಹೋಗುತ್ತಿದ್ದೆವು.

ನಾನು ೧೯೯೯ರಲ್ಲಿ ಆಲ್ಡಸ್ ಹಕ್ಸ್ಲಿಯವರ ಬಗ್ಗೆ ಯು.ಜಿ.ಸಿ. ಸೆಮಿನಾ ರೊಂದನ್ನು ಸಮಾಯೋಜಿಸುತ್ತಿದ್ದೆ. ಸ್ವಾಮೀಜಿಯವರು ಹಲವು ದಶಕಗಳ ಹಿಂದೆ ಇಂಗ್ಲೆಂಡಿಗೆ ಹೋಗಿದ್ದಾಗ ಹಕ್ಸ್ಲಿಯವರ ಮನೆಯಲ್ಲಿದ್ದರೆಂದು ಕೇಳಿದ್ದೆ. ಇದರಿಂದ, ನಾವು ಸೆಮಿನಾರಿನ ಸಂದರ್ಭದಲ್ಲಿ ಹೊರತರುತ್ತಿರುವ ಸಂಪುಟಕ್ಕೆ ಸ್ವಾಮೀಜಿಯವರು ಒಂದು ಲೇಖನವನ್ನು ಬರೆದುಕೊಡಬಹುದೇ ಎಂದು ಅವರಿಗೆ ಪತ್ರವನ್ನು ಬರೆದು ಕೇಳಿಕೊಂಡಿದ್ದೆ. ತಮಗೆ ಬರೆಯಬಹುದಾದ ವಿಷಯವಾವುದೂ ಹೊಳೆಯುತ್ತಿಲ್ಲವೆಂದು ತಿಳಿಸಿ, ಸಮಾರಂಭಕ್ಕೆ ಶುಭಕೋರಿ ಮರುಟಪಾಲಿಗೇ ಪತ್ರ ಬರೆದಿದ್ದರು. ಅವರ ಜ್ಞಾಪಕಶಕ್ತಿ ಎಷ್ಟಿತ್ತೆಂದರೆ ನಾನು ೨೦೦೪ರಲ್ಲಿ ಅವರನ್ನು ನೋಡಲು ಹೋಗಿದ್ದಾಗ ಅವರಿಗೆ ನಾವು ಹೊರತಂದಿದ್ದ 'ಆಲ್ಡಸ್ ಹಕ್ಸ್ಲಿ ಮತ್ತು ಭಾರತೀಯ ಚಿಂತನೆ' ಎಂಬ ಸಂಪುಟವನ್ನು ಕೊಟ್ಟ ತಕ್ಷಣವೇ ಅವರು ನಾನು ಅವರ ಆಶೀರ್ವಾದವನ್ನು ಬೇಡಿ ಪತ್ರವನ್ನು ಬರೆದಿದ್ದುದನ್ನು ಜ್ಞಾಪಿಸಿಕೊಂಡರು. ತಾವು ಪುಸ್ತಕವನ್ನು ಓದಿ ಅಭಿಪ್ರಾಯವನ್ನು ತಿಳಿಸುವುದಾಗಿ ಹೇಳಿದರು. ಅದೇ ವರ್ಷ ನಾನು ನನ್ನ ದಾಯಾದಿವರ್ಗದವರೊಬ್ಬರ ಮದುವೆಗೆಂದು ಕೋಲ್ಕತ್ತಾಗೆ ಹೋಗಿದ್ದಾಗ, ಪ್ರಯಾಸದಿಂದ ಒಂದು ದಿನ ಬಿಡುವು ಮಾಡಿಕೊಂಡು ಬೇಲೂರು ಮಠಕ್ಕೆ ಹೋಗಿ ಅವರಿಗೆ ಪ್ರಣಾಮವನ್ನು ಸಲ್ಲಿಸಿದೆ. ಹೋಗುವಾಗ 'ಮತ್ತೆ ನೀನು ಯಾವಾಗ ಬರುತ್ತೀಯೆ? ಹೈದರಾಬಾದಿಗೆ ಹೋಗುವ ಮೊದಲು ಒಂದು ಬಾರಿ ಬರಲೇಬೇಕು' ಎಂದು ಹೇಳಿದರು. ಅದನ್ನು ನಾನು ಹೇಗೆ ನಿರಾಕರಿಸಿಯೇನು? ಹೈದರಾಬಾದಿಗೆ ಮರಳುವ ಮೊದಲು ಮತ್ತೊಮ್ಮೆ ಬೇಲೂರಿಗೆ ಧಾವಿಸಿದೆ.

೨೦೦೦ರ ಸೆಪ್ಟೆಂಬರ್‌ನಲ್ಲಿ ಅವರು ಹೈದರಾಬಾದಿಗೆ ಬಂದಿದ್ದಾಗ ನನ್ನನ್ನು ಕೇಳಿದ ಮೊದಲ ಪ್ರಶ್ನೆ 'ನಿಮ್ಮ ತಂದೆಯವರು ಹೇಗಿದ್ದಾರೆ?' ನಾವು ೧೯೯೮ರಲ್ಲಿ ನಮ್ಮ ತಾಯಿಯನ್ನು ಕಳೆದುಕೊಂಡಿದ್ದುದು, ಅಗತ್ಯವಾದಾಗಲೆಲ್ಲಾ ಅವರ ಕಾಳಜಿಯನ್ನು ನಾವು ಅವಲಂಬಿಸಿರುತ್ತಿದ್ದುದು ಅವರಿಗೆ ಗೊತ್ತಿತ್ತು. ೨೦೦೦ದಲ್ಲಿ ನಾವು ನಮ್ಮ ತಂದೆಯವರೂ ನಮ್ಮನ್ನು ಅಗಲಿದರೆಂದು ಅವರಿಗೆ ತಿಳಿಸಿದೆವು. ಮಹಾರಾಜ್ ಅವರು ತಮ್ಮ ಎರಡೂ ಕೈಗಳನ್ನು ನನ್ನ ತಲೆಯಮೇಲೆ ಇರಿಸಿದರು. ಅವರು ಸಾಕಷ್ಟು ಹೊತ್ತು ತಮ್ಮ ಕೈಗಳನ್ನು ಹಾಗೆಯೇ ಇರಿಸಿದ್ದರು. ಅವರ ಕೈಗಳಿಂದ ಒಂದು ಬಗೆಯ ಶಕ್ತಿ , ದುಃಖವನ್ನು ತಡೆದುಕೊಳ್ಳುವ ಬಲ ನನಗೆ ಹರಿದುಬಂದಂತಿದ್ದ ಆ ರೋಮಾಂಚನದ ಅನುಭವವನ್ನು ನಾನು ಇನ್ನೂ ಹಸಿರಾಗಿಟ್ಟುಕೊಂಡಿದ್ದೇನೆ. ನಾನು ತಲೆಯೆತ್ತಿ ನೋಡಿದಾಗ ಸಣ್ಣಗೆ ಮಿನುಗುತ್ತಿದ್ದ ಅವರ ಕಣ್ಣಂಚಿನಲ್ಲಿ ನೀರಾಡುತ್ತಿದ್ದುದನ್ನು ಕಂಡೆ.

ನಾವು ಕೊನೆಯ ಬಾರಿ ಅವರನ್ನು ನೋಡಿದ್ದು ಅವರು ನಿಧನರಾಗುವುದಕ್ಕೆ ಸ್ವಲ್ಪ ಮುಂಚೆ, ಜನವರಿಯಲ್ಲಿ ಬೇಲೂರು ಮಠಕ್ಕೆ ಹೋಗಿದ್ದಾಗ. ಅವರು ಆಗ ಆಸ್ಪತ್ರೆಯಲ್ಲಿದ್ದರು. ನಾವು ಬೇಲೂರಿಗೆ ತಲುಪಿದ ಕೂಡಲೇ, ಅಲ್ಲಿನ ಶ್ರಬೋಣಿ ಮಜುಮ್‌ದಾರ್ ಎಂಬ ಭಕ್ತರೊಡನೆ ಆಸ್ಪತ್ರೆಗೆ ಹೋದೆವು. ನಮ್ಮ ಗುರುಗಳಾದ ಪ್ರೊ. ಎಂ. ಶಿವರಾಮಕೃಷ್ಣರು ಶ್ರೀಮಾತೆಯವರ ಮೇಲೆ ಪುಸ್ತಕವೊಂದನ್ನು ಬರೆದಿದ್ದರು. ಅದರ ಪ್ರತಿಯೊಂದನ್ನು

ಸ್ವಾಮೀಜಿಯವರಿಗೆ ನೀಡುವಂತೆ ತಿಳಿಸಿದ್ದರು. ನಾವು ಆಸ್ಪತ್ರೆಗೆ ಹೋದಾಗ ಸಂದರ್ಶಕರನ್ನು ಒಳಗೆ ಬಿಡುತ್ತಿರಲಿಲ್ಲ. ಸುದರ್ಶನ್ ಮಹಾರಾಜ್ ಅವರು ನಮ್ಮನ್ನು ಒಳಕ್ಕೆ ಕರೆದೊಯ್ಯುವ ಪ್ರಯತ್ನವನ್ನು ಮಾಡುತ್ತಿದ್ದರಿಂದ ನಾವು ಅಲ್ಲೇ ಕುಳಿತು ಕಾಯುತ್ತಿದ್ದೆವು. ನಾವೆಲ್ಲರೂ ಒಟ್ಟಿಗೇ ಹೋಗುವಂತೆ ಇರಲಿಲ್ಲ. ನನ್ನೊಬ್ಬಳನ್ನೇ ಅವರು ಕರೆದರು. ನಾನು ಸ್ವಾಮೀಜಿಯವರಿಗೆ ನನ್ನ ಪ್ರಣಾಮಗಳನ್ನು ಸಲ್ಲಿಸಿ ತಕ್ಷಣವೇ ವಾಪಸ್ಸಾಗುತ್ತೇನೆ ಎಂದುಕೊಂಡು ಆ ಪುಸ್ತಕವನ್ನು ನನ್ನೊಂದಿಗೆ ತೆಗೆದುಕೊಂಡು ಒಳಗೆಹೋದೆ. ಅಸ್ವಸ್ಥರಾಗಿದ್ದರೂ ಅವರ ಆತ್ಮ ಅದಮ್ಯ ಉತ್ಸಾಹದಿಂದ ಪುಟಿಯುತ್ತಿತ್ತು. ಅವರು ನಾನು ಕೊಟ್ಟ ಪುಸ್ತಕವನ್ನು ಮಾಮೂಲಿನ ಶ್ರದ್ಧೆಯಿಂದ ಓದಿದರು. ನಂತರ ತಮ್ಮ ಕುಗ್ಗಿದ ದನಿಯಲ್ಲಿಯೇ ಶ್ರೀಮಾತೆಯವರ ವಾರ್ಷಿಕ ಉತ್ಸವಗಳು ಎಷ್ಟು ವಿಜೃಂಭಣೆಯಿಂದ ನಡೆದುವು ಎಂಬುದನ್ನು ಹೇಳಿದರು. ಅವರನ್ನು ನೋಡಿಕೊಳ್ಳುತ್ತಿದ್ದ ವೈದ್ಯರು ಮಾತನಾಡಬಾರದೆಂದು ಕಟ್ಟುಮಾಡಿದ್ದರೂ, ಅವರು ಮೌನವಾಗಿರುತ್ತಿರಲಿಲ್ಲ. ಸ್ವಾಮೀಜಿಯವರ ಕಡೆಯ ವರ್ಷಗಳಲ್ಲಿ ಅವರ ಮಾತು ಅಸ್ಪಷ್ಟವಾಗುತ್ತಿದೆಯೆಂದೂ, ಅರ್ಥವಾಗುವುದು ಕಷ್ಟವೆಂದೂ ಜನರು ಹೇಳುತ್ತಿದ್ದರು. ಆದರೆ ಕಡೆಯ ಈ ಭೇಟಿಯವರೆಗೂ ಅಂತಹ ತೊಂದರೆಯೇನೂ ನನಗೆ ಕಂಡುಬರಲಿಲ್ಲ. ಉತ್ಸವಕ್ಕೆಂದು ಎಷ್ಟೊಂದು ಜನ ಸೇರಿದ್ದರು, ಯಾರೆಲ್ಲಾ ಮಾತನಾಡಿದರು, ತಾವು ಹೇಳಿದುದು ಏನು, ಶ್ರೀಮಾತೆಯವರ ಈ ೧೫೦ ವರ್ಷಗಳು ಆಧ್ಯಾತ್ಮಿಕ ಪ್ರಪಂಚದಲ್ಲಿ ಎಷ್ಟು ಪ್ರಮುಖವಾದವು ಎಂಬುದನ್ನು ಚಿಕ್ಕ ಮಗುವಿನಂತೆ ಅವರು ಉತ್ಸಾಹದಿಂದ ಹೇಳುತ್ತಿದ್ದರು. ಅಷ್ಟು ಹೊತ್ತೂ ಪ್ರೊಫೆಸರ್ ಅವರ ಪುಸ್ತಕವನ್ನು ಬಿಗಿಯಾಗಿ ತಮ್ಮ ಎದೆಗೆ ಅವಚಿಕೊಂಡಿದ್ದರು. ಅಲ್ಲಿದ್ದ ಸಿಬ್ಬಂದಿ, ಸಾಕಷ್ಟು ವೇಳೆಯಾಯಿತೆಂದೂ, ನಾನು ಹೊರಗೆ ಹೋಗಬೇಕೆಂದೂ ವಿನಂತಿಸಿಕೊಂಡರು. ನಾನು ಸ್ವಾಮೀಜಿಯವರ ಹತ್ತಿರ ಇದ್ದ ಒಂದು ಗಂಟೆಯಷ್ಟು ಹೊತ್ತೂ ಅವರು ಮಾತನಾಡುತ್ತಿದ್ದರು. ಎಂತಹ ಧೈರ್ಯ! ಹೇಗೆ ತಮ್ಮ ಶರೀರದ ಅಸೌಖ್ಯವನ್ನೂ ಗಮನಿಸದೆ ಇದ್ದರು ಅವರು! ಶ್ರೀಮಾತೆಯವರ ಬಗ್ಗೆ ಅವರಲ್ಲಿದ್ದ ಅಸಿಮ ಪ್ರೇಮವಾದರೂ ಎಂತಹುದು!

ಅವರ ನಿಧನದ ಸುದ್ದಿ ತಿಳಿದಾಗ ದುಃಖದ ಜೊತೆಯೇ ಅವರ ಸ್ಫೂರ್ತಿದಾಯಕ ನುಡಿಗಳೂ ತೇಲಿಬಂದವು. ಹೈದರಾಬಾದಿನ ಆಧ್ಯಾತ್ಮಿಕ ಶಿಬಿರದಲ್ಲಿ ಒಮ್ಮೆ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಹೇಳಿದ್ದರು– 'ಸಾವಿಗೆ ಹೆದರಬೇಕಾಗಿಯೂ ಇಲ್ಲ, ವಿಷಾದಪಡಬೇಕಾಗಿಯೂ ಇಲ್ಲ. ಎಲ್ಲ ಬದಲಾವಣೆಯಂತೆ ಅದೂ ಒಂದು ಬದಲಾವಣೆ, ಅನಿವಾರ್ಯವಾದರೂ ಸ್ವಾಗತಿಸಬೇಕಾದ ಬದಲಾವಣೆ.' ಅವರಂತಹ ವ್ಯಕ್ತಿ ನಮ್ಮನ್ನು ಅಗಲಿಹೋಗಿದ್ದಾರೆ ಎಂದು ಹೇಗೆ ಹೇಳಬಹುದು. ಅವರ ಮುದ್ರಿತ ಧ್ವನಿಯಲ್ಲಿ ಜೀವಂತವಾಗಿದ್ದಾರೆ. ಆ ಪುಣ್ಯಮೂರ್ತಿಯು ತಮ್ಮ ಭಾವಚಿತ್ರಗಳಲ್ಲಿ, ರಾಶಿರಾಶಿಯಾಗಿ ಬರೆದ ತಮ್ಮ ಪುಸ್ತಕಗಳಲ್ಲಿನ ಉದ್ದೀಪಕವಾದ ಮಾತುಗಳಲ್ಲಿ, ನಮ್ಮನ್ನೆಲ್ಲಾ ತೋಯಿಸಿದ ತಮ್ಮ ಪ್ರೇಮಪೂರಿತ ಅಂತಃಕರಣಗಳಲ್ಲಿ ಅವರು ಎಂದೆಂದಿಗೂ ಜೀವಂತವಾಗಿರುತ್ತಾರೆ.

* * * *

# ೭೧. ವಿಶ್ವವ್ಯಾಪಿ ಸ್ವಾಮಿ ರಂಗನಾಥಾನಂದರು

–ಯೋ ವಾನ್ ಓರ್ಷೋವೆನ್*

ನಾನು ಯೋಗ ಮತ್ತು ಧ್ಯಾನದ ತರಗತಿಯಲ್ಲಿದ್ದಾಗ ಸ್ವಾಮಿ ರಂಗನಾಥಾನಂದರು ನೆದರ್‌ಲ್ಯಾಂಡ್ಸ್‌ಗೆ ಒಂದು ವಾರದ ಭೇಟಿಗಾಗಿ ಬರುತ್ತಾರೆ ಎಂದು ಪತ್ರವೊಂದು ಬಂದಾಗ ಅವರೊಡನೆ ನನ್ನ ಸಂಪರ್ಕ ಪ್ರಾರಂಭವಾಯಿತು. ಆಗ ನಮಗೆ 'ಸ್ವಾಮಿ' ಎಂದರೆ ಏನೆಂಬುದೂ ತಿಳಿಯದು. ಆದರೂ ನಾನು ಮತ್ತು ನನ್ನ ಪತ್ನಿ ಸ್ವಾಮೀಜಿಯವರ ಪ್ರವಚನಕ್ಕೆ ಹೋಗಲು ನಿರ್ಧರಿಸಿದೆವು. ತಿಂಗಳುಗಳಾದ ಮೇಲೆ ಅವರ ಆಗಮನದ ದಿನವೂ ಬಂದಿತು. ಅವರು ಮಾತನಾಡುತ್ತಿದ್ದ ಇಂಗ್ಲಿಷ್‌ನ ವೇಗ ಹೆಚ್ಚಿದ್ದುದರಿಂದ ಹಾಗೂ ನನ್ನ ಇಂಗ್ಲಿಷ್ ಜ್ಞಾನವೂ ಅಷ್ಟು ಉತ್ತಮವಾಗಿರಲಿಲ್ಲವಾದ್ದರಿಂದ ಅವರು ಹೇಳಿದುದು ನನಗೆ ಅಷ್ಟಾಗಿ ಅರ್ಥವಾಗಲಿಲ್ಲ. ಆದರೂ ಆ ವ್ಯಕ್ತಿ ಬಹುವಾಗಿ ನನ್ನ ಗಮನವನ್ನು ಸೆಳೆದರು.

ನಾನು ಮರು ವರ್ಷ – ಅಂದರೆ ೧೯೭೧ರಲ್ಲಿ – ಅವರು ಹಾರ್ಲೆಮ್‌ನ ಯೋಗ ಪ್ರತಿಷ್ಠಾನದಲ್ಲಿ ಉಪನ್ಯಾಸ ಕೊಡಲು ನೆದರ್‌ಲ್ಯಾಂಡ್‌ಗೆ ಬಂದಿದ್ದಾಗ ಮತ್ತೆ ಅವರನ್ನು ನೋಡಿದೆ. ಅವರೊಡನೆ ಸ್ವಲ್ಪ ಹೊತ್ತು ಮಾತನಾಡಿದ ನಂತರ ನಾನು ನನ್ನ ಪತ್ನಿಗೆ ಅವರನ್ನು ನಮ್ಮ ಮನೆಗೆ ಆಹ್ವಾನಿಸೋಣ ಎಂದು ಹೇಳಿದೆ. ಆಕೆಯೂ ಒಪ್ಪಿದಳು. ನಾನು ಸ್ವಾಮೀಜಿಯವರ ಬಳಿ ಇದನ್ನು ಹೇಳಿದಾಗ ಅವರು 'ಆಗಬಹುದು, ಅದಕ್ಕೆ ತೊಂದರೆಯೇನೂ ಇಲ್ಲ' ಎಂದರು. 'ಯಾವಾಗ ಬರುತ್ತೀರಿ?' ಎಂದೆ. 'ಈಗಲೇ' ಎಂದರು. ಇದು ಅವರ ಮತ್ತು ನನ್ನ ನಡುವಿನ ಮೊದಲ ಸಂಭಾಷಣೆ.

ಪ್ರತಿ ವರ್ಷವೂ ಸ್ವಾಮೀಜಿಯವರು ಪ್ರಪಂಚದ ಪ್ರವಾಸವನ್ನು ಮಾಡುತ್ತಿದ್ದರು. ನಮ್ಮ ಯೋಗ ಪ್ರತಿಷ್ಠಾನ ಅವರ ಭಾರತ–ಹಾಲೆಂಡ್–ಭಾರತದ ಪ್ರಯಾಣವನ್ನು ಪ್ರಾಯೋಜಿಸುತ್ತಿತ್ತು. ನಮ್ಮ ಪ್ರತಿಷ್ಠಾನದ ಆಧ್ಯಕ್ಷರಾದ ಡಾ॥ ರಾಮ ಪೋಲ್ಡರ್‌ಮನ್ ಅವರು ದೆಹಲಿಯಲ್ಲಿ ತಾವು ಕೇಳಿದ ಸ್ವಾಮೀಜಿಯವರ ಉಪನ್ಯಾಸದಿಂದ ಪ್ರಭಾವಿತರಾಗಿ ಅವರ ಬಳಿ ಹೋಗಿ 'ತಾವು ಹಾಲೆಂಡ್‌ಗೆ ಯಾವಾಗ ಬರುತ್ತೀರಿ?' ಎಂದು ಕೇಳಿದ್ದರು. ಅದಕ್ಕೆ ಸ್ವಾಮೀಜಿಯವರ ಉತ್ತರ: 'ನೀವು ಆಹ್ವಾನಿಸಿದಾಗ.'

ಬಳಿಕ ಯೂರೋಪ್‌ಗೆ ಬಂದಾಗಲೆಲ್ಲಾ ಅವರು ನಮ್ಮಲ್ಲಿಗೆ ಬರುತ್ತಿದ್ದರು. ಅವರು ಬರುತ್ತಿದ್ದಾರೆ ಎಂದು ಒಂದು ಫೋನ್ ಕರೆ ಅಥವಾ ಫ್ಯಾಕ್ಸ್ ಬಂದರೆ ಸಾಕು, ಅವರನ್ನು ಕರೆತರಲು ನಾನು ವಿಮಾನನಿಲ್ದಾಣಕ್ಕೆ ಹೋಗುತ್ತಿದ್ದೆ. ಅವರು ನಮ್ಮ ಕುಟುಂಬಕ್ಕೆ ಪಿತೃಸ್ಥಾನದಲ್ಲಿದ್ದರು. ಆ ಅವಧಿಯಲ್ಲಿ ನನಗೆ ಮೂರು ಮಕ್ಕಳಾದರು. ಅವರಿಗೆ ಸ್ವಾಮೀಜಿಯವರು 'ರಾಖಲ್', 'ನರೇನ್' ಮತ್ತು 'ತಾರಕ್' ಎಂಬ ಹೆಸರುಗಳನ್ನಿಟ್ಟರು. ಸ್ವಾಮೀಜಿಯವರಿಗೆ ಮಕ್ಕಳೆಂದರೆ ಬಹು ಇಷ್ಟ. ಮಕ್ಕಳೂ ಅವರ ಸುತ್ತ ಆಡುತ್ತಿದ್ದವು. ನನ್ನ ದೋಣಿಯಲ್ಲಿ ಅವರು ಮಕ್ಕಳನ್ನು ನದಿಯಲ್ಲಿ ಸುತ್ತಾಡಿಸುತ್ತಿದ್ದರು. ಮಕ್ಕಳು ಅವರನ್ನು 'ಸ್ವಾಮೀಜಿ' ಎಂದು ಸಂಬೋಧಿಸುತ್ತಿದ್ದವು. ಅವರ ಕೈಬೆರಳುಗಳು ಶಕ್ತಿಯುತವಾಗಿದ್ದವು. ಅವರು ಕಲ್ಲುಗಳನ್ನು ಎತ್ತರಕ್ಕೆ, ಬಹಳ ಎತ್ತರಕ್ಕೆ ಎಸೆಯಬಲ್ಲವರಾಗಿದ್ದರು. ಎಲ್ಲರೂ ನೋಡುತ್ತಿದ್ದರು, ಆದರೆ ಆ ಕಲ್ಲುಗಳು ಯಾರಿಗೂ ಕಾಣಿಸುತ್ತಿರಲಿಲ್ಲ. ಅದಕ್ಕೆಂದೇ ನಾವು ದಪ್ಪ ದಪ್ಪ ಕಲ್ಲುಗಳನ್ನು

---

* ವೃತ್ತಿಯಲ್ಲಿ ವಿಜ್ಞಾನಿಯಾಗಿರುವ ಇವರು ೧೯೭೧–೮೬ರವರೆಗೆ ಸ್ವಾಮಿ ರಂಗನಾಥಾನಂದರ ಆತಿಥೇಯರಾಗಿದ್ದರು.

ಆರಿಸಿ ಕೊಡುತ್ತಿದ್ದೆವು. ಅವರು ಮಕ್ಕಳೊಡನೆ ಆಡುತ್ತಿರುವ ಹಲವು ಛಾಯಾಚಿತ್ರಗಳು ನಮ್ಮಲ್ಲಿವೆ. ಅವರು ಗಂಭೀರವಾಗಿರದೆ ಯಾವಾಗಲೂ ಅವರೊಡನೆ ಆಡಿ ನಕ್ಕು ನಲಿಯುತ್ತಿದ್ದರು.

ಅವರು ನಮ್ಮಲ್ಲಿದ್ದಾಗ ನಮ್ಮ ಅಡುಗೆಮನೆಗೆ ಬಂದು ಕೂರುತ್ತಿದ್ದರು. ಅಲ್ಲಿಂದ ನಮ್ಮ ಮನೆಯ ಹಿಂದಿನ ಅಂಗಳ ಚೆನ್ನಾಗಿ ಕಾಣುತ್ತಿತ್ತು. ಮಕ್ಕಳು ಕೋಣೆಯ ಬಾಗಿಲನ್ನು ಹಾಕಿಕೊಂಡು ಜೈಲಿನಲ್ಲಿದ್ದಂತೆ ಕೂರುವುದನ್ನು ಅವರು ಸಹಿಸುತ್ತಿರಲಿಲ್ಲ. ಮಕ್ಕಳು ಹೊರಗೆ ಆಡುತ್ತಿದ್ದರೆ ಸ್ವಾಮೀಜಿಯವರು ಹೊರಗೆ ಹೋಗಿ ಅವರೊಡನೆ ತಾವೂ ಕೂರುತ್ತಿದ್ದರು. ನಾನು ಒಮ್ಮೆ ಕೋಲ್ಕತ್ತಾದಲ್ಲಿದ್ದಾಗ ಅವರು ಅಲ್ಲಿನ ಸ್ಟೇಡಿಯಂನಲ್ಲಿ ಉಪನ್ಯಾಸ ಮಾಡಿದರು. ಅಲ್ಲಿ ಪುಸ್ತಕದ ಅಂಗಡಿಯೊಂದಿತ್ತು. ಅಲ್ಲಿನ ಒಂದು ಪುಸ್ತಕದ ಮೇಲೆ ಸ್ವಾಮೀಜಿಯವರ ತೊಡೆಯ ಮೇಲೆ ನನ್ನ ಮಗ ತಾರಕ್ ಕುಳಿತಿದ್ದ ಚಿತ್ರವಿತ್ತು. ನಾನು ನಕ್ಕಿದ್ದೇ ನಕ್ಕಿದ್ದು.

ಸ್ವಾಮೀಜಿಯವರು ಹಾಲೆಂಡಿಗೆ ಪ್ರತಿ ಬಾರಿ ಬಂದಾಗಲೂ ಹಲವಾರು ಮಂದಿ ಬಂದು ಅವರೊಡನೆ ಮಾತನಾಡುತ್ತಿದ್ದರು. ಅಲ್ಲಿದ್ದವರಲ್ಲಿ ಯಾರು ಆಕ್ರಮಣ ಶೀಲರು, ಯಾರು ಅಲ್ಲದವರು ಎಂಬುದು ಸ್ವಾಮೀಜಿಯವರಿಗೆ ಗೊತ್ತಾಗುತ್ತಿತ್ತು. ಅವರು ಹಾಸ್ಯಪ್ರಿಯರೂ ಹೌದು, ಆಕ್ರಮಣಶೀಲರ ಹತ್ತಿರ ಹೆಚ್ಚು ತಮಾಷೆಯ ಮಾತುಗಳನ್ನಾಡುತ್ತಾ ಅವರನ್ನು ನಗಿಸಿ ಅವರ ಆಕ್ರಮಣಶೀಲತೆಯನ್ನು ತಗ್ಗಿಸುತ್ತಿದ್ದರು. ಅವರು ಇತರರ ಬಾಹ್ಯ ಕ್ರಿಯೆಗಳನ್ನಷ್ಟೇ ಅಲ್ಲ, ಅವರ ಅಂತರಂಗವನ್ನು ಹೊಕ್ಕು ಅಲ್ಲಿ ನಡೆಯುತ್ತಿದ್ದ ಕ್ರಿಯೆಗಳನ್ನೂ ಸಮಗ್ರವಾಗಿ ಗಮನಿಸುತ್ತಿದ್ದರು.

ಅವರು ಎಲ್ಲರನ್ನೂ ಗೌರವದಿಂದ ನೋಡುತ್ತಿದ್ದರು. ಪಾತಕಿಗಳನ್ನೂ ಮನುಷ್ಯರು ಎಂಬಂತೆ ನೋಡುತ್ತಿದ್ದ ಅವರು, ಅಂತಹವರ ಬಳಿಯೂ ನಮ್ಮ ಹೊಕ್ಕುಬಳಕೆ ಸಾಧ್ಯ ಎಂದು ಹೇಳುತ್ತಿದ್ದರು. ಅವರಿಗೆ ಎಲ್ಲರೂ ಸಲ್ಲುವವರೇ, ಕೇವಲ ಮನುಷ್ಯರಷ್ಟೇ ಅಲ್ಲ, ಪ್ರಾಣಿ, ಸಸ್ಯಗಳೂ ಕೂಡ. ನನ್ನ ಕಾರ್ಯಕ್ಷೇತ್ರದ ವಿಷಯವಾದ ಪ್ರಾಣಿಶಾಸ್ತ್ರದಲ್ಲಿ, ನಾನು ಚಿಂಪಾಂಜಿಗಳ ವರ್ತನೆಯ ಮೇಲೆ ಮಾಡುತ್ತಿದ್ದ ಪ್ರಯೋಗಗಳ ವಿಷಯದಲ್ಲಿ ಅಪಾರ ಆಸಕ್ತಿಯನ್ನು ವ್ಯಕ್ತಪಡಿಸುತ್ತಿದ್ದರು. ದೀಕ್ಷೆಯನ್ನು ಪಡೆಯಲು ನನ್ನನ್ನು ಮತ್ತು ನನ್ನ ಪತ್ನಿ ಹರ್ಮಾಳನ್ನು ಪ್ಯಾರಿಸ್‌ನಲ್ಲಿದ್ದ ಸ್ವಾಮಿ ಋತಜಾನಂದ ಅವರ ಬಳಿಗೆ ಕಳುಹಿಸಿದ್ದರು.

ಸ್ವಾಮಿ ರಂಗನಾಥಾನಂದರು ಭಾರತಕ್ಕೆ ಮಾತ್ರ ಮುಖ್ಯರಾಗಿರಲಿಲ್ಲ. ಅವರು ಇಡೀ ಪ್ರಪಂಚಕ್ಕೇ ಮುಖ್ಯರಾದವರಾಗಿದ್ದರು. ಅವರದು ವಿಶ್ವವ್ಯಾಪಿ ವ್ಯಕ್ತಿತ್ವ, ಅವರೊಬ್ಬ ವಿಶ್ವಮಾನವ. ಅವರು ಬಹಳ ಸರಳ ವ್ಯಕ್ತಿಯಾಗಿದ್ದರು. ನೀವು ಸರಳವಾಗಿದ್ದಷ್ಟೂ ನಿಮ್ಮನ್ನು ಅರ್ಥಮಾಡಿಕೊಳ್ಳುವುದು ಜನಗಳಿಗೆ ಸುಲಭವಾಗುತ್ತದೆ. ಅವರ ಶತಾಂಶ ಒಂದರಷ್ಟನ್ನು ಅರಿತರೂ ಅದು ನಮ್ಮ ಪಾಲಿಗೆ ಲಾಭವೇ. ಅವರ ಪ್ರವಚನಗಳು ಹಾಗೂ ಪುಸ್ತಕಗಳು ಉತ್ತಮವಾದವು ಮತ್ತು ಸಹಕಾರಿಗಳಾದವು.*

* * * *

---

* ಓರ್ಷೊವೆನ್ ಅವರೊಡನೆ ಅವರ ಅಸೆಂಡೆಲ್ಫ್ಟ್‌ನ ಅವರ ನಿವಾಸದಲ್ಲಿ ಕುಮಾರಿ ಮೋನಾಲಿ ಹಾಗೂ ಎಸ್. ಚೌಧರಿಯವರು ೨೦೦೬ರ ಸೆಪ್ಟೆಂಬರ್ ೪ರಂದು ನಡೆಸಿದ ಸಂದರ್ಶನವನ್ನು ಈ ಲೇಖನವು ಆಧರಿಸಿದೆ.

# ೭೨. ಹೃದಯದಾಳದಿಂದ ಮೂಡಿಬಂದ ನೆನಪುಗಳು

–ಮಾರಿಯಾ ಟ್ರಾಂಪ್ ಮತ್ತು ಹರ್ಮಾ ವ್ಯಾನ್ ಜೋನ್*

೨೦೦೭ರ ಮಾರ್ಚ್‌ನ ಒಂದು ಸಂಜೆ ನಾವಿಬ್ಬರೂ ಅಂದರೆ ಮಾರಿಯಾ ಮತ್ತು ಹರ್ಮಾ, ಒಂದೆರಡು ಗಂಟೆಗಳ ಕಾಲ ಮಾತನಾಡುತ್ತಾ, ಮಹಾರಾಜ್ ಅವರೊಡನೆ ಕಳೆದ ಅವಿಸ್ಮರಣೀಯ ಕಾಲಾವಧಿಯನ್ನು ನೆನಪಿಸಿಕೊಂಡು, ಈ ನೆನಪುಗಳನ್ನು ಬರೆದೆವು.

ಮಾರಿಯಾ ೩೫ಕ್ಕೂ ಹೆಚ್ಚು ವರ್ಷಗಳ ಕಾಲ ಯೋಗ–ವೇದಾಂತ ಪ್ರತಿಷ್ಠಾನದ ಕಾರ್ಯದರ್ಶಿಯಾಗಿದ್ದರು. ಅವರು ಸ್ವಾಮೀಜಿಯವರ ಆಗಮನ, ಅವರ ವಾಸ, ಮುಂತಾದ ಎಲ್ಲ ವಿಷಯಗಳನ್ನು ಕೂಲಂಕಷವಾಗಿ ಆಲೋಚಿಸಿ ಆಯೋಜಿಸುತ್ತಿದ್ದರು. ಹರ್ಮಾ ಅವರ ಜೊತೆಗೂಡಿ ಸ್ವಾಮೀಜಿಯವರ ಆಹಾರ ಹಾಗೂ ಆರೋಗ್ಯಗಳ ಬಗ್ಗೆಯೂ ಕಾಳಜಿವಹಿಸುತ್ತಿದ್ದರು. ಹರ್ಮಾ ಅವರು ಸ್ವಾಮೀಜಿಯವರು ಹಾಲೆಂಡಿಗೆ ಬಂದಾಗಲೆಲ್ಲಾ ಅವರ ಯೋಗಕ್ಷೇಮದ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಿದ್ದರು. ಬಹುತೇಕ ವೇಳೆ, ಸ್ವಾಮೀಜಿಯವರು ಅಸೆಂಡೆಲ್ಫ್ಟ್‌ನಲ್ಲಿದ್ದ ವಾನ್ ಓರ್ಷೋಟ್‌ವೆನ್ ಹಾಗೂ ಹರ್ಮಾ ಅವರ ಮನೆಯಲ್ಲಿಯೇ ಇಳಿದುಕೊಳ್ಳುತ್ತಿದ್ದರು. ಇದು ಸ್ವಾಮೀಜಿಯವರ 'ಡಚ್ ಮನೆ'ಯಾಗಿತ್ತು.

ನೆದರ್‌ಲ್ಯಾಂಡ್ಸ್‌ನಲ್ಲಿ ಯೋಗವನ್ನು ಪರಿಚಯಿಸಿದ, ವೃತ್ತಿಯಿಂದ ವೈದ್ಯರಾಗಿರುವ ಡಾ॥ ರಾಮ ಪೋಲ್ಡರ್‌ಮನ್ ಮತ್ತು ವಿಜ್ಞಾನಿ ಹಾಗೂ ದೇವತಾಶಾಸ್ತ್ರಜ್ಞೆಯಾಗಿರುವ ಶ್ರೀಮತಿ ಡ್ರಕ್ಯೂಸ್. ಅವರ ಆಮಂತ್ರಣದ ಮೇರೆಗೆ ಮೊದಲ ಬಾರಿಗೆ ೧೯೬೧ರಲ್ಲಿ ಸ್ವಾಮೀಜಿಯವರನ್ನು ಹಾಲೆಂಡಿಗೆ ಭೇಟಿ ಕೊಟ್ಟಿದ್ದರು. ಅವರು ಯೋಗ ಪ್ರತಿಷ್ಠಾನಕ್ಕೆ ಸೇರಿದವರಾಗಿದ್ದು, ಯೋಗದ ನಿಜವಾದ ಹಿನ್ನೆಲೆಯನ್ನರಿಯಲು ಹಾಗೂ ಮತ್ತು ಅದನ್ನು ಆಳವಾಗಿ ಅರ್ಥಮಾಡಿಕೊಳ್ಳಲು ಅವರು ಕಾತರರಾಗಿದ್ದರು. ಆ ಹಂಬಲ ಅವರಲ್ಲಿ ಜಾಸ್ತಿಯಾಗಿ ಡಾ॥ ಪೋಲ್ಡರ್‌ಮನ್ ಅವರು ಸ್ವಾಮೀಜಿ ಯವರನ್ನು ೧೯೭೧ರ ಮೊದಲ ವೇದಾಂತ ಶಿಬಿರಕ್ಕೆ ಆಹ್ವಾನಿಸಿದರು. ಅಲ್ಲಿಂದಾಚೆಗೆ ಸ್ವಾಮೀಜಿಯವರು ಪ್ರತಿವರ್ಷವೂ ಬಂದು ಡಚ್ ಭಕ್ತರೊಂದಿಗೆ ಕೆಲವು ದಿನಗಳನ್ನು ಇಲ್ಲಿಯೇ ಕಳೆದು ಸ್ಫೂರ್ತಿಯನ್ನು ತುಂಬುತ್ತಿದ್ದರು.

ಡಾ॥ ರಾಮ ಪೋಲ್ಡರ್‌ಮನ್ ಅವರು ಮಾರಿಯಾ ಟ್ರಾಂಪ್ ಅವರೊಂದಿಗೆ ಸೇರಿ ಮೊದಲ ವೇದಾಂತ ಶಿಬಿರವನ್ನು ಏರ್ಪಡಿಸಿದಾಗ, 'ಉಚ್ಚರಿಸಲು ಅಸಾಧ್ಯವಾದ ಹೆಸರಿನ ಭಾರತದ ಈ ಹಿರಿಯ ಸಂನ್ಯಾಸಿಯನ್ನು' ಭೇಟಿಯಾಗಲು ಕುತೂಹಲ ಹಾಗು ಕಾತರಗಳಿಂದ ಕಾಯುತ್ತಿದ್ದೆವು. ರಂಗನಾಥಾ–ನಂದ ಎಂಬುದನ್ನು ಉಚ್ಚರಿಸಲು ನಾವು ನಮ್ಮ ನಾಲಗೆಯನ್ನು ಎಷ್ಟು ತಿರುಚಿಕೊಳ್ಳುತ್ತಿದ್ದೆವೋ! ನಮಗಷ್ಟೇ ಅಲ್ಲ, ಪ್ರತಿಯೊಬ್ಬರಲ್ಲೂ ಒಂದು ಬಗೆಯ ಅಂಜಿಕೆಯಿತ್ತು. ಸ್ವಾಮೀಜಿಯವರೊಂದಿಗೆ ನಾವು ಕಳೆಯಲಿರುವ ಎರಡು ವಾರಗಳು ಹೇಗಿರಬಹುದು ಎಂದು ಯೋಚಿಸುತ್ತಿದ್ದೆವು.

ಮೂರು ವಾರಗಳ ನಂತರ, ನಾವೆಲ್ಲಾ ಪರಮಾನಂದದಲ್ಲಿದ್ದುದರ ಮತ್ತು ಹೊರಗಿನ ಸಾಂಸಾರಿಕ ಜಗತ್ತು ಹೇಗಿರುತ್ತದೆ ಎಂಬುದನ್ನೂ ಮರೆತುಬಿಟ್ಟಿದ್ದರ ಬಗ್ಗೆ ಮಾತನಾಡಿಕೊಳ್ಳುತ್ತಿದ್ದೆವು. ಸ್ವಾಮೀಜಿಯವರು ವೇದ, ಉಪನಿಷತ್ತುಗಳು ಮತ್ತು ಇತರ ವಿಷಯಗಳ ಮೇಲೆ ನೀಡುತ್ತಿದ್ದ ಪ್ರವಚನಗಳಲ್ಲಿನ ಅವರ ಮಾತಿನ

* ಮಾರಿಯಾ ಟ್ರಾಂಪ್ ಅವರು ನೆದರ್‌ಲ್ಯಾಂಡ್ಸ್‌ನ ಯೋಗ ಪ್ರತಿಷ್ಠಾನದ ಕಾರ್ಯದರ್ಶಿ ಹಾಗೂ ಹಾಲೆಂಡ್‌ನಲ್ಲಿ ಸ್ವಾಮಿ ರಂಗನಾಥಾನಂದರ ಕಾರ್ಯಕ್ರಮಗಳ ಸಂಯೋಜಕರು.

ವೈಖರಿಗೆ ನಾವು ಮನಸೋತಿದ್ದೆವು. ಅವರ ಬಾಯಿಂದ ಸಹಜವೆಂಬಂತೆ ನಮ್ಮ ಆತ್ಮವನ್ನು ಉದ್ಧಾರ ಮಾಡಬಲ್ಲಂತಹ ಮಾತಿನ ಪ್ರವಾಹವೇ ಹರಿಯುತ್ತಿತ್ತು. ನಾವು ಆ ಮಾತಿನ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದ್ದೆವು. ಅದಾದ ನಂತರ ನಮ್ಮ ಮಾಮೂಲಿನ ಪ್ರಾಪಂಚಿಕ ಬದುಕಿಗೆ ಹಿಂದಿರುಗುವುದು ನಮಗೆಲ್ಲಾ ನೋವಿನ ಸಂಗತಿಯಾಗಿತ್ತು. ಆದರೆ, ಪ್ರತಿಯೊಬ್ಬರನ್ನೂ ವಾಸ್ತವ ಪ್ರಪಂಚದಲ್ಲಿ ಅವರವರ ಬದುಕಿನಲ್ಲಿಯೇ ನಿಲ್ಲಿಸುವುದು ಸ್ವಾಮೀಜಿಯವರ ವೈಶಿಷ್ಟ್ಯವಾಗಿತ್ತು. ತಾನು ಅವರ ಸರಳತೆಗೆ ಮಾರುಹೋಗಿದ್ದೆ ಎಂಬುದನ್ನು ಮಾರಿಯಾ ನೆನಪಿಸಿಕೊಳ್ಳುತ್ತಾರೆ. ಅವರು ಸಮಾವೇಶಕ್ಕೆ ಎರಡು ತಿಂಗಳ ಮೊದಲೇ ಪೂರ್ಣ ವಿವರಗಳನ್ನು ಸ್ವಾಮೀಜಿಯವರಿಗೆ ಕಳುಹಿಸುತ್ತಿದ್ದರು. ಅದಕ್ಕೆ ಸ್ವಾಮೀಜಿ 'ಮಾರಿಯಾ, ನೀವು ಎಲ್ಲಿ ಮಾಡಿದರೂ ಒಳ್ಳೆಯದೇ, ನಾನು ಕಾರ್ಯಕ್ರಮದ ವಿವರಗಳನ್ನು ಓದುವ ಅಗತ್ಯವಿಲ್ಲ' ಎಂದು ಉತ್ತರಿಸುತ್ತಿದ್ದರು.

ತಾವು ಅವರನ್ನು ಮೊದಲು ಭೇಟಿಯಾದ ಕ್ಷಣದಿಂದ ಸ್ವಾಮೀಜಿಯವರು 'ಸ್ವತಂತ್ರರಾಗಿ, ಸ್ವತಂತ್ರರಾಗಿ' ಎಂಬ ಮಂತ್ರವನ್ನು ಪುನರುಚ್ಚರಿಸುತ್ತಿದ್ದರು ಎಂದು ಹರ್ಮಾ ಜ್ಞಾಪಿಸಿಕೊಳ್ಳುತ್ತಾರೆ. ಈ ಸ್ವಾತಂತ್ರ್ಯವು ಅವರಿಂದ ವಿಕಿರಣದ ಮಾದರಿಯಲ್ಲಿ ಪ್ರಸಾರಗೊಳ್ಳುತ್ತಿತ್ತು. ಅವರು ನಡೆಯುತ್ತಿದ್ದ ರೀತಿಯಲ್ಲಿ, ಮಾಡುತ್ತಿದ್ದ ಕೆಲಸಗಳಲ್ಲಿ, ಅವರ ಭಂಗಿಗಳಲ್ಲಿ, ಪ್ರಸನ್ನವಾದ ಅವರ ಮುಖದಲ್ಲಿ – ಎಲ್ಲದರಲ್ಲಿಯೂ ಈ ಸ್ವಾತಂತ್ರ್ಯದ ಚೈತನ್ಯ ಚಿಮ್ಮುತ್ತಿತ್ತು.

ತಮ್ಮ ಆತಿಥೇಯರಾಗಿದ್ದ ನಾವಿಬ್ಬರು ಅವರ ಉಪನ್ಯಾಸಗಳಲ್ಲಿ ಹಾಜರಿರುವಂತೆ ಸ್ವಾಮೀಜಿಯವರು ನೋಡಿಕೊಳ್ಳುತ್ತಿದ್ದರು. ಸಭಾಂಗಣದ ಸುತ್ತೆಲ್ಲಾ ನೋಡುತ್ತಿದ್ದ ಅವರು, ನಮ್ಮಿಬ್ಬರಲ್ಲಿ ಒಬ್ಬರು ಇಲ್ಲದಿದ್ದರೂ ತಮ್ಮ ಉಪನ್ಯಾಸವನ್ನು ಪ್ರಾರಂಭಿಸುತ್ತಿರಲಿಲ್ಲ.

ಸ್ವಾಮೀಜಿಯವರು ತೆಗೆದುಕೊಳ್ಳಬೇಕಿದ್ದ ಆಹಾರವನ್ನು ತಯಾರುಮಾಡುವುದನ್ನು ಹಾಗೂ ಅವರ ಆರೋಗ್ಯ ಮತ್ತು ಯೋಗಕ್ಷೇಮವನ್ನು ನಾವು ನೋಡಿಕೊಳ್ಳುತ್ತಿದ್ದೆವು. ಅವರು ತಾವು ಆಹಾರವನ್ನು ಸೇವಿಸುವ ಮೊದಲು ಅದರಲ್ಲಿ ಸ್ವಲ್ಪಭಾಗವನ್ನು 'ಈ ಪ್ರಸಾದ ನಿಮಗೆ' ಎಂದು ನಮಗೆ ಕೊಡುತ್ತಿದ್ದರು. ಅವರು ಒಂದೇ ಬಗೆಯ ಆಹಾರವನ್ನು ವರ್ಷಗಟ್ಟಲೆ ಸೇವಿಸುತ್ತಿದ್ದುದನ್ನು ನೋಡಿ ನಮಗೆ ಸೋಜಿಗವಾಗುತ್ತಿತ್ತು. ಅವರು ತಮ್ಮ ಆಹಾರದ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕಿತ್ತು. 'ನನ್ನ ಮನಸ್ಸು ಪ್ರಜಾಸತ್ತಾತ್ಮಕವಾಗಿದ್ದರೂ, ನನ್ನ ಹೊಟ್ಟೆಗೆ ಮಾತ್ರ ಅದರದೇ ಆದ ನಿರಂಕುಶ ದಾರಿ' ಎಂದು ಅವರು ಹೇಳುತ್ತಿದ್ದರು. ಸವಿಯಾದುದನ್ನು ನೀಡಿದಾಗ 'ಅದರಲ್ಲಿ ನಾನು ರವೆಯಷ್ಟನ್ನು ಮಾತ್ರ ತೆಗೆದುಕೊಳ್ಳುತ್ತೇನೆ. ಮುಂದಿನ ಜನ್ಮದಲ್ಲಿ ದೊಡ್ಡ ಹೊಟ್ಟೆಯೊಂದಿಗೆ ಹುಟ್ಟುತ್ತೇನೆ' ಎಂದು ಹೇಳುತ್ತಿದ್ದರು.

ಯೋ ಮತ್ತು ಹರ್ಮಾ ಅವರ ಅಸೆಂಡೆಲ್ಫ್ಟ್‌ನ ಮನೆಯಲ್ಲಿ ಅವರು ಸ್ವಂತ ಮನೆಯಲ್ಲಿದ್ದಂತೆಯೇ ನಿಸ್ಸಂಕೋಚವಾಗಿ ಇರುತ್ತಿದ್ದರು. ಅಲ್ಲಿ ಅವರು ಆರಾಮವಾಗಿ ಮಕ್ಕಳೊಡನೆ ಆಟವಾಡುತ್ತಿದ್ದರು. ಅವರು ಮಕ್ಕಳೊಡನೆ ಯಾವ ಸಂಕೋಚವೂ ಇಲ್ಲದೆ ಆಡುತ್ತಿದ್ದುರಿಂದ ಮಕ್ಕಳು ಅವರ ಹಾಸಿಗೆಯ ಮೇಳೆ, ಅವರ ಹೊಟ್ಟೆಯ ಮೇಲೆ, ಅವರ ತಲೆಯಮೇಲೂ ಕುಳಿತುಕೊಳ್ಳುತ್ತಿದ್ದರು. ವಿಶ್ರಾಂತಿ ತೆಗೆದುಕೊಳ್ಳುವಾಗ ನೀಳವಾಗಿ ಮಲಗುವುದು ಅವರಿಗೆ ಇಷ್ಟವಾದುದು. ಹಾಗೆ ಮಲಗಿ 'ಹೆರಾಲ್ಡ್ ಟ್ರಿಬ್ಯೂನ್'ನ್ನು ಓದುತ್ತಿದ್ದರು. ಯಾರಾದರೂ ಅವರಿಗಾಗಿ ಆ ಪತ್ರಿಕೆಯನ್ನು ತರಬೇಕಿತ್ತು.

'ಜ಼ಾನ್‌ಸ್ಟಾಡ್ ' ಎಂದು ಕರೆಯಲಾಗುತ್ತಿದ್ದ ಮನೆಯ ಸುತ್ತಲಿನ ಜಾಗದಲ್ಲಿ ಹಲವಾರು ಕಾಲುವೆಗಳಿದ್ದವು. ಅವರು ಮಕ್ಕಳೊಡನೆ ಸಂತೋಷದಿಂದ ದೋಣಿಯಲ್ಲಿ ಅಲ್ಲೆಲ್ಲಾ ಸುತ್ತಾಡುತ್ತಿದ್ದರು. ಕಾವಿಯ ಉಡುಗೆಯಲ್ಲಿರುತ್ತಿದ್ದ ಅವರನ್ನು ನೋಡುವುದು ಮನಸ್ಸಿಗೆ ಆನಂದವನ್ನು ಕೊಡುತ್ತಿತ್ತು. ಒಂದು ಕೋಲನ್ನು ಹಿಡಿದು ದೋಣಿಯ ಮುಂಭಾಗದಲ್ಲಿ ನೇರವಾಗಿ ನಿಂತು ಅವರು ಕಾಲುವೆಯಲ್ಲಿ ದೋಣಿಯನ್ನು ಚಾಲನೆ ಮಾಡುತ್ತಿದ್ದರು. ಆಗ

ಅವರೊಡನೆ ಇರುತ್ತಿದ್ದ ಯೋ ಮತ್ತು ಹರ್ಮಾ ಅವರ ಮಕ್ಕಳು ನರೇನ್, ರಾಖಿಲ್, ಮತ್ತು ತಾರಕ್ ಅವರು ಆ ಆನಂದವನ್ನು ಚೆನ್ನಾಗಿ ಸವಿಯುತ್ತಿದ್ದರು. ತಮ್ಮ ಮನೆಯಲ್ಲಿ ಸ್ವಾಮೀಜಿಯವರು ಇದ್ದಾಗಲೆಲ್ಲ, ಅವರು ಹೋಗಬೇಕಾದ ಎಡೆಗಳಿಗೆಲ್ಲಾ ಯೋ ಅವರೇ ಕರೆದುಕೊಂಡು ಹೋಗುತ್ತಿದ್ದರು.

ಸ್ವಾಮೀಜಿಯವರು ನೆದರ್‌ಲ್ಯಾಂಡ್ಸ್‌ನ ಚರಿತ್ರೆಯನ್ನು ಅಧ್ಯಯನ ಮಾಡಿದ್ದರು ಮತ್ತು ಅದರಲ್ಲಿ ಅವರಿಗೆ ಅಪಾರ ಆಸಕ್ತಿಯಿತ್ತು. ಅವರು ತಮ್ಮ ಹಿಂದಿನ ಯಾವುದೋ ಜನ್ಮದಲ್ಲಿ ತಾವು ಡಚ್ ಆಗಿದ್ದಿರಬಹುದು ಎನ್ನುತ್ತಿದ್ದರು. ನೆದರ್‌ಲ್ಯಾಂಡ್ಸ್‌ನಲ್ಲಿ (ಮತ್ತು ವಿಶೇಷವಾಗಿ ಆಸ್ಟ್ರೇಲಿಯಾದಲ್ಲಿ) ಇದ್ದಾಗ ತಾವು ಪವಿತ್ರ ಭೂಮಿಯಲ್ಲಿಯೇ ಇರುವುದಾಗಿ ಅವರು ಭಾವಿಸುತ್ತಿದ್ದರು.

**ಮಾರಿಯಾ:** ನನಗೆ ಸ್ವಾಮೀಜಿಯವರಿಂದ ದೀಕ್ಷೆಯನ್ನು ಪಡೆಯುವ ಅದಮ್ಯ ಬಯಕೆಯಿತ್ತು. ನಾನು ಅವರ ಬಳಿ ನನ್ನ ಆಸೆಯನ್ನು ನಿವೇದಿಸಿದಾಗ ಅವರೆಂದರು: 'ನಾನು ನಿಮಗೆ ಹದಿನೆಂಟು ವರ್ಷಗಳ ಹಿಂದೆಯೇ ದೀಕ್ಷೆಯನ್ನು ಕೊಟ್ಟಿದ್ದೇನೆ. ಈಗ ಮತ್ತೇಕೆ?' ಅದು ನಿಜವೂ ಹೌದು. ಅವರು ನಮಗೆ ಆಧ್ಯಾತ್ಮಿಕ ಶಿಕ್ಷಣವನ್ನು ಯಾವಾಗಲೂ ಕೊಡುತ್ತಿದ್ದರು. ತಮ್ಮ ಎಲ್ಲ ಕಾರ್ಯಕ್ರಮಗಳಲ್ಲೂ ನಾವು ಹಾಜರಿರಲೇಬೇಕೆಂದು ಅವರು ಬಯಸುತ್ತಿದ್ದರು. ಸಂದರ್ಶಕರು ಇದ್ದಾಗಲೆಲ್ಲಾ ಅವರು ನನಗೆ ಹೇಳುತ್ತಿದ್ದರು. 'ನಿಮ್ಮ ಅಡುಗೆ ಮನೆಯನ್ನು ಮುಚ್ಚಿ. ನೀವು ಮೇರಿಯಾಗಬೇಕು, ಮಾರ್ಥಾ ಅಲ್ಲ' ಎನ್ನುತ್ತಿದ್ದರು.

ನಾನು ಏನನ್ನು ಮಾಡಬೇಕು, ಏನನ್ನು ಮಾಡಬಾರದು ಎಂಬುದನ್ನು ಅವರು ನಮಗೆ ನೇರವಾಗಿ ಹೇಳುತ್ತಿರಲಿಲ್ಲ. ಅವರ ನಡತೆಯ ರೀತಿಯಲ್ಲಿಯೇ 'ನಿನ್ನ ಗುರು ನೀನೇ ಆಗಬೇಕು, ನಿನ್ನ ಮನಸ್ಸಿನ ವೈದ್ಯ ನೀನೇ ಆಗಬೇಕು, ನಿನ್ನನ್ನು ನೀನೇ ಉದ್ಧರಿಸಿಕೊಳ್ಳಬೇಕು' ಎಂಬುದನ್ನು ನಮಗೆ ತೋರಿಸುವುದು ಅವರ ಇಚ್ಛೆಯಿದ್ದಿರಬಹುದು.

ವೇದಾಂತದ ಶಿಬಿರಗಳಲ್ಲಿನ ಅವರಿಂದಾಗುತ್ತಿದ್ದ ಸಮಸ್ಯೆಯೆಂದರೆ ಸಮಯದ ಪರಿವೆಯೇ ಅವರಿಗೆ ಇರುತ್ತಿರಲಿಲ್ಲ. ಇದರಿಂದಾಗಿ ಆಯೋಜಿಸಿದ್ದ ಕಾರ್ಯಕ್ರಮಗಳೆಲ್ಲಾ ಕಲಸಿಕೊಳ್ಳುತ್ತಿದ್ದವು. ರಾಮ ಪೋಲ್ಡರ್‌ಮನ್ ಅವರು ಉತ್ತಮ ಐಂದ್ರಜಾಲಿಕರು. ಅವರ ಇಂದ್ರಜಾಲವನ್ನು ಸ್ವಾಮೀಜಿ ಮೆಚ್ಚಿಕೊಳ್ಳುತ್ತಿದ್ದರು. ಉಪನ್ಯಾಸದ ಅವಧಿ ಎರಡು ಗಂಟೆ ದಾಟಿದ ತಕ್ಷಣ ಇಂದ್ರಜಾಲದಿಂದ ಸೃಷ್ಟಿಸಿದ, 'ನಿಲ್ಲಿಸಿ' ಎಂದು ದಪ್ಪನಾಗಿ ಬರೆದಿದ್ದ ಒಂದು ಕಾರ್ಡ್ ಸ್ವಾಮೀಜಿಯವರ ಎದುರಿಗೆ ಪ್ರತ್ಯಕ್ಷವಾಗುತ್ತಿತ್ತು. ಇದರಿಂದ ಸ್ವಾಮೀಜಿಯವರ ಭಾಷಣ ಅನಿವಾರ್ಯವಾಗಿ ಮುಕ್ತಾಯಗೊಳ್ಳುತ್ತಿತ್ತು.

ಅವರು ತಮ್ಮ ಭಾಷಣಗಳನ್ನು ಕೇಳುತ್ತಾ ಹೆಣಿಗೆಯನ್ನು ಮುಂದುವರೆಸುವುದನ್ನು ಮಾತ್ರ ಸಹಿಸುತ್ತಿರಲಿಲ್ಲ. ಹಾಗೆ ಮಾಡಬಾರದೆಂದು ಅಲ್ಲಿನ ಮಹಿಳೆಯರಿಗೆ ಅವರು ಒತ್ತಾಯಮಾಡುತ್ತಿದ್ದರು.

ಶಿಬಿರದ ಕಡೆಯ ದಿನದ ಸಂಜೆ ಅಲ್ಲಿ ವಿವಿಧ ಬಗೆಯ ಕಾರ್ಯಕ್ರಮಗಳಿರುತ್ತಿದ್ದರು. ಅವುಗಳನ್ನು ಸ್ವಾಮೀಜಿಯವರು ಆನಂದಿಸುತ್ತಿದ್ದರು. ಅದರಲ್ಲಿ ಕವನಗಳ ಓದು, ರೀಟಾ ಮತ್ತು ಫ್ರೀಡಾ ಅವರ ಹಾಡುಗಾರಿಕೆ, ಹರ್ಮಾ ಅವರ ಕೊಳಲುವಾದನ ಇರುತ್ತಿತ್ತು. ಆ ವಾತಾವರಣ ಒಂದು ಬಗೆಯ ತಮಾಷೆ ಮತ್ತು ಆನಂದದಿಂದ ಕೂಡಿರುತ್ತಿತ್ತು.

ಸ್ವಾಮೀಜಿಯವರು ಯಾವಾಗಲೂ ಮುಂದೆ ನೋಡುತ್ತಿದ್ದರು, ಬೀಳ್ಕೊಡುವಾಗಲೂ ಅವರು ಹಿಂದಕ್ಕೆ ತಿರುಗಿ ನೋಡುತ್ತಿರಲಿಲ್ಲ. ಷಿಫೋಲ್ ವಿಮಾನನಿಲ್ದಾಣದಲ್ಲಿ ಹೊರಡುವಾಗಲೂ ಅವರು ಹಿಂದಕ್ಕೆ ತಿರುಗಿ ನಮ್ಮತ್ತ ಕೈಬೀಸುತ್ತಿರಲಿಲ್ಲ. ಕತ್ತನ್ನು ತಿರುಗಿಸಿಯೂ ನೋಡುತ್ತಿರಲಿಲ್ಲ. ತಮಗೆ ಯಾವುದೂ ಅಂಟುತ್ತಿರಲಿಲ್ಲ ಎನ್ನುವಷ್ಟು ಅವರು ನಿರ್ಲಿಪ್ತರಾಗಿರುತ್ತಿದ್ದರು. ಅವರನ್ನು ಬಹುವಾಗಿ ಹಚ್ಚಿಕೊಂಡು ಪ್ರೀತಿಸುತ್ತಿದ್ದ ನಮಗೆ ಕೆಲವು ವೇಳೆ ಬೇಸರವಾಗುತ್ತಿತ್ತು.

ತಾವು ಇದ್ದಲ್ಲೆಲ್ಲಾ ಅಲ್ಲಿನವರಂತೆಯೇ ಇರುತ್ತಿದ್ದ ಅವರೊಬ್ಬ ವಿಶ್ವಪ್ರಜೆಯೆಂಬುದು ನಮಗೆ ಗೊತ್ತಿತ್ತು. ಆದರೂ ಅವರು ತಾವು ಡಚ್ ಜನಗಳೊಡನೆ ಡಚ್‌ರಂತೆಯೇ ಇರುತ್ತಿದ್ದುದು ನಮಗೆ ಹೆಮ್ಮೆಯ ವಿಷಯವಾಗಿತ್ತು. ಅವರು ನಮ್ಮಲ್ಲೊಬ್ಬರಾಗಿದ್ದರು ಎಂದೇ ನಾವು ಭಾವಿಸಿದ್ದೆವು. ಅವರು ನಮ್ಮ ಹೃದಯದ ಕದವನ್ನು ತಟ್ಟಿದ್ದರು ಮತ್ತು ಅದರ ಪ್ರಭಾವ ಎಂದೆಂದಿಗೂ ಇರುತ್ತದೆ.

ಮಾರಿಯಾ ಮತ್ತು ಹರ್ಮಾ, ಇಬ್ಬರೂ ಸ್ವಾಮೀಜಿಯವರನ್ನು ಭಾರತದಲ್ಲಿ ಅನೇಕ ಬಾರಿ– ಮೊದಲು ಹೈದರಾಬಾದಿನಲ್ಲಿ, ನಂತರ ಬೇಲೂರು ಮಠದಲ್ಲಿ– ಭೇಟಿಯಾಗಿದ್ದರು. ಅವರು ನಮಗೆ ಉತ್ತಮ ಆತಿಥೇಯರಾಗಿದ್ದರು. ಅವರು ನಮ್ಮನ್ನು ರಾಜಕುಮಾರಿಯರೋ ಎನ್ನುವಂತೆ ನೋಡಿಕೊಳ್ಳುತ್ತಿದ್ದರು. ಒಂದು ದಿನ ಅವರು ನಮಗೆ 'ನೀವೀಗ ಗಂಗೆಯಲ್ಲಿ ಒಂದು ಮುಳುಗು ಹಾಕಿ' ಎಂದು ಹೇಳಿದರು. ನಾವು ಅವರು ಹೇಳಿದ ಹಾಗೆ ಹರಿದ್ವಾರದಲ್ಲಿ ಗುರುಪೂರ್ಣಿಮೆಯಂದು ಗಂಗಾಸ್ನಾನವನ್ನು ಮಾಡಿದೆವು.

ಅವರು ಆಗಾಗ್ಗೆ ಹೇಳುತ್ತಿದ್ದ ಕೆಲವು ಮಾತುಗಳು: 'ನಿಮ್ಮಲ್ಲಿರುವ ಪ್ರೀತಿಯನ್ನು ತೋಡಿ ಇತರರಿಗೂ ಕೊಡಿ.'; 'ಇಲ್ಲಿಗೆ ಬರುವಾಗಲೂ ಒಂಟಿ, ಹೋಗುವಾಗಲೂ ಒಂಟಿ, ಆದರೆ ಇಲ್ಲಿರುವಾಗ ಪ್ರೀತಿಯೊಂದು ಮಾತ್ರ ಇರಲಿ.; 'ಪ್ರಯಾಣಮಾಡುವವರು ಹೆಚ್ಚಿಗೆ ಯಾವುದನ್ನೂ ತೆಗೆದುಕೊಳ್ಳಬಾರದು.' 'ಅಪರಿಚಿತ ಶತ್ರುವಿಗಿಂತ ಪರಿಚಿತ ಶತ್ರುವೇ ಉತ್ತಮ'; 'ಏಕಾಂತ ಅದ್ಭುತ, ಒಬ್ಬಂಟಿತನವಲ್ಲ.'

* * * *

## ೭೩. ನನ್ನಲ್ಲಿ ಅಧ್ಯಾತ್ಮದ ಅರಿವನ್ನು ಜಾಗೃತಗೊಳಿಸಿದವರು

**–ಆಂಟೊಯ್ನೆಟ್ ಡಬ್ಲ್ಯೂ. ಎಮ್. ಥೋಯೆನ್ (ಚಂದ್ರಾವಳಿ)***

ಸ್ವಾಮಿ ರಂಗನಾಥಾನಂದರನ್ನು ೧೯೮೪ರ ಬೇಸಿಗೆಯಲ್ಲಿ ಮೊದಲ ಬಾರಿಗೆ ಭೇಟಿಯಾದೆ. ಅದಕ್ಕೂ ಮೊದಲೇ ನಾನು ಮಹಾರಾಜ್ ಅವರ ಬಗ್ಗೆ ಹಾಗೂ ಅವರ ವಿಸ್ಮಯಕಾರಿಯಾದ ಆಧ್ಯಾತ್ಮಿಕ ಜ್ಞಾನದ ಬಗ್ಗೆ ಕೇಳಿದ್ದೆ. ಅವರು ಬೆಲ್ಜಿಯಂನ ಆಂತ್ವರ್ಪ್‌ನಲ್ಲಿ ಉಪನ್ಯಾಸ ಮಾಡುವ ದಿನ ಬಂದಿತು. ಅಂದು ನನಗೆ ಅಲ್ಲಿಗೆ ಹೋಗಲು ಸಾಧ್ಯವೂ ಆಯಿತು.

ಇದಕ್ಕೆ ಕೆಲವು ವರ್ಷಗಳ ಮೊದಲು, ನಾನು ನನ್ನ ಪತಿಯಿಂದ ವಿಚ್ಛೇದನವನ್ನು ಪಡೆದ ಮೇಲೆ, ಒಂದು ಆಶ್ಚರ್ಯಕರವಾದ ಒಂದು ಕನಸಿನಿಂದಾಗಿ, ಯೋಗಾಭ್ಯಾಸದ ಹಾದಿಯನ್ನು ಹಿಡಿದಿದ್ದೆ. ನನಗೆ ಸಿಕ್ಕಿದ ಮೊದಲ ಪುಸ್ತಕ ಸ್ವಾಮಿ ವಿವೇಕಾನಂದರ 'ರಾಜಯೋಗ'. ಕಳೆದ ಐವತ್ತು ವರ್ಷಗಳಿಂದ ಯೋಗಾಭ್ಯಾಸ ಮಾಡುತ್ತಿದ್ದ ನನ್ನ ಹಳೆಯ ಸ್ನೇಹಿತರೊಬ್ಬರು ಅದನ್ನು ನನಗೆ ಕೊಟ್ಟಿದ್ದರು. ಅದರಲ್ಲಿನ ವಿಷಯ ನನಗೆ ಎಷ್ಟು ಪ್ರಿಯವಾಯಿತೆಂದರೆ, ನನಗೆ ಬೇರೆ ಯಾವ ಸಾಮಾನ್ಯ ಪುಸ್ತಕವನ್ನೂ ಓದಲು ಆಗುತ್ತಿರಲಿಲ್ಲ. ಹಾಗಿರುವಾಗ ಸ್ವಾಮಿ ರಂಗನಾಥಾನಂದ ಮಹಾರಾಜ್ ಅವರ ದರ್ಶನದ ಭಾಗ್ಯ ನನಗೆ ಬಂದಿತು.

ಅವರು ಉಪನ್ಯಾಸ ನೀಡಲು ಗೊತ್ತು ಮಾಡಿದ್ದ ಸ್ಥಳ ಒಂದು ವಿಶಾಲವಾದ ಮನೆ. ಆದರೂ ಅದು ಅಲ್ಲಿಗೆ ಬಂದಿದ್ದ ಜನಗಳಿಗೆ ಸಾಕಾಗಲಿಲ್ಲ. ನನಗೆ ಸ್ವಾಮೀಜಿಯವರನ್ನು ಚೆನ್ನಾಗಿ ನೋಡಲು ಸಾಧ್ಯವಾಗುವಂತಹ ಒಂದು ಜಾಗ ಸಿಕ್ಕಿತು. ಒಳಗೆ ಬಂದ ಅವರನ್ನು ಅಲ್ಲಿನವರು ಸ್ವಾಗತಿಸಿದರು. ಅವರಿಗಾಗಿ ಹಾಕಿದ್ದ ದೊಡ್ಡ ಕುರ್ಚಿಯಲ್ಲಿ ಅವರು ಆಸೀನರಾದರು. ಅವರ ತಲೆಯ ಮೇಲಿನ ಚಿಮಣಿಗೆ ಫ್ರಾಂಕ್ ಡ್ವೋರಕ್ ಅವರು ಬರೆದ ಶ್ರೀ ರಾಮಕೃಷ್ಣರ ಪ್ರಖ್ಯಾತ ವರ್ಣಚಿತ್ರದ ಪ್ರತಿಕೃತಿಯನ್ನು ತೂಗು ಹಾಕಲಾಗಿತ್ತು. ಅಲ್ಲಿನ ಹೃದಯ ತಟ್ಟುವ ಒಂದು ಸಂಗತಿಯೆಂದರೆ ಎಲ್ಲರೂ ಸ್ವಾಮೀಜಿಯವರಿಗೆ ಒಂದೊಂದು ಹೂವನ್ನು ಕೊಟ್ಟರು. ಅವರ ಸುತ್ತ ವಿವಿಧ ಬಗೆಯ ಹೂವುಗಳ ರಾಶಿಯೇ ಆಯಿತು. ಅಂದು ಅಲ್ಲಿದ್ದ ವಾತಾವರಣ ಆಧ್ಯಾತ್ಮಿಕತೆಯಿಂದ ತುಂಬಿ ಅನನ್ಯವಾಗಿತ್ತು. ನಾನು ಅದನ್ನೆಲ್ಲಾ ಆಸ್ವಾದಿಸುತ್ತಿದ್ದೆ.

ಒಂದು ಪ್ರಾರ್ಥನೆಯೊಂದಿಗೆ ಸ್ವಾಮಿ ರಂಗನಾಥಾನಂದರು ತಮ್ಮ ಉಪನ್ಯಾಸವನ್ನು ಪ್ರಾರಂಭಿಸಿದರು. ಅವರು ಆತ್ಮ, ಶ್ರೀಕೃಷ್ಣ ಹಾಗೂ ಅರ್ಜುನರ ವಿಷಯಗಳ ಮೇಲೆ ಮಾತನಾಡಿದರು. ಅವರ ಉಜ್ವಲವಾದ ಮಾತುಗಳು ನಮ್ಮ ಮನದ ಆಳಕ್ಕೆ ಇಳಿಯುವಂತೆ ಇದ್ದವು. ಸತ್ಯ, ಭಗವಂತ ಹಾಗೂ ಸ್ವತಃ ನನ್ನ ಬೇರುಗಳು– ಇವುಗಳನ್ನು ಹುಡುಕುತ್ತಿದ್ದ ನನ್ನ ಹುಡುಕಾಟವು ಒಂದು ನಿರ್ಣಾಯಕ ಘಟ್ಟಕ್ಕೆ ಬಂದಂತೆ ಅನಿಸಿತು. 'ಸತ್ಯವೆಂದರೆ ಇದೇ' ಎಂಬ ಭಾವನೆ ನನಗೆ ತುಂಬಿಬಂದಿತು. ಅವರು ನೀಡಿದ ಅಂದಿನ ಭಾಷಣವನ್ನು ಕೇಳಿದ ತಕ್ಷಣವೇ ನನ್ನ ಶೇಷಜೀವನದ ಧ್ಯೇಯೋದ್ದೇಶ ಮನವರಿಕೆಯಾಯಿತು. ಅವರ ಮಾತುಗಳಿಗೆ ನನ್ನ ಹೃದಯ ಸ್ಪಂದಿಸುತ್ತಿತ್ತು ಮತ್ತು ತನಗೆ ಅಗತ್ಯವಾದ ಪೋಷಣೆಯನ್ನು ಪಡೆಯಿತು. ಇದಕ್ಕಾಗಿ ನಾನು ಈಗಲೂ ಸ್ವಾಮೀಜಿಯವರಿಗೆ ಕೃತಜ್ಞಳಾಗಿದ್ದೇನೆ.

---

* ನೆದರ್‌ಲ್ಯಾಂಡ್ಸ್‌ನ ಒಬ್ಬ ಭಕ್ತೆ

ನನಗೆ ಶಿಲ್ಪಕಲೆ ಗೊತ್ತಿದ್ದಿದ್ದರೆ, ನಾನು ರಂಗನಾಥಾನಂದ ಅವರ ಮೂರ್ತಿಯನ್ನು ಕಟೆದಿಡುತ್ತಿದ್ದೆ. ನನ್ನ ಹೃದಯದಲ್ಲಿ ಅದು ನೆಲೆಗೊಂಡಿದೆ. ಇದಕ್ಕಾಗಿಯೇ ಕಲಾಕಾರನಾದ ನನ್ನ ಮಗ ಸೀಗ್‌ಫ್ರೈಡ್‌ನಿಗೆ ಸ್ವಾಮೀಜಿಯವರ ರೇಖಾಚಿತ್ರವನ್ನು ಅಥವಾ ವರ್ಣಚಿತ್ರವನ್ನು ಬರೆದು ಬೇಲೂರು ಮಠಕ್ಕೆ ಕಳುಹಿಸು ಎಂದು ಸಲಹೆ ಮಾಡಿದೆ. ಸ್ವಾಮಿ ರಂಗನಾಥಾನಂದ ಅವರಿಂದ ಆಶೀರ್ವದಿಸಲ್ಪಟ್ಟಿದ್ದ ಅವನು ಆ ಕೆಲಸವನ್ನು ಸಂತೋಷದಿಂದ ಒಪ್ಪಿಕೊಂಡರು.

'ಯೋಗ ಎಂದರೆ ಶಾಂತಿವಾದವಲ್ಲ' ಎಂಬ ಸ್ವಾಮೀಜಿಯವರ ಹೇಳಿಕೆಯನ್ನು ನಾನು ಹಲವು ಬಾರಿ ಜ್ಞಾಪಿಸಿಕೊಂಡು ಅದನ್ನು ಅರಿವಿಗೆ ತಂದು ಕೊಳ್ಳುತ್ತಿರುತ್ತೇನೆ. ಅರ್ಜುನನ ಕರ್ತವ್ಯ ಬೇರೆಯದಾಗಿತ್ತು.

ನನಗೆ ಒಮ್ಮೆ ಸ್ವಾಮೀಜಿಯವರಿಂದ ಒಂದು ಪತ್ರ ಬಂದಿತು. ಇತರ ವಿಷಯಗಳ ಮಧ್ಯೆ ತಾವು ಒಂದು ಮಂದಿರವನ್ನು ಉದ್ಘಾಟಿಸಿ ಶ್ರೀ ರಾಮಕೃಷ್ಣರ ಪಾದಗಳಿಗೆ ಸಮರ್ಪಿಸಿದ ವಿಷಯವನ್ನೂ ಬರೆದಿದ್ದರು. ನನಗೆ ಅದನ್ನು ಓದಿ ಆನಂದವಾಯಿತು. ಆದರೆ, ಸ್ವಲ್ಪ ಕಾಲಾಂತರದಲ್ಲಿ ಎಚ್ಚರಿಕೆಯಿಂದ ಇಟ್ಟುಕೊಂಡಿದ್ದ ಆ ಪತ್ರ ಹೇಗೋ ಕಳೆದುಹೋಯಿತು. ಇದರಿಂದ ನನಗೆ ಬಹು ದುಃಖವಾಯಿತು. ಎರಡು ವಾರಗಳ ನಂತರ ಒಂದು ದಿನ, ನಮ್ಮ ಮನೆಯ ಆಸುಪಾಸಿನಲ್ಲಿದ್ದರೂ ನನಗೆ ಪರಿಚಯವಿಲ್ಲದ ಮಹಿಳೆಯೊಬ್ಬರು ದಾರಿಯಲ್ಲಿ ಹೋಗುತ್ತಿದ್ದ ನನ್ನನ್ನು ನಿಲ್ಲಿಸಿ ತಮಗೆ ಸಿಕ್ಕಿದ ಭಾರತದಿಂದ ರವಾನಿಸಲಾದ ಒಂದು ಪತ್ರ ಯಾರಿಗೆ ಸೇರಿದ್ದಾಗಿರಬಹುದು ಎಂದು ಯೋಚಿಸುತ್ತಿದ್ದೇನೆಂದೂ, ಅದನ್ನು ನಿಮಗೆ ಕೊಡಲು ನಿರ್ಧರಿಸಿದ್ದೇನೆಂದೂ ನನಗೆ ತಿಳಿಸಿದರು. ಅವರು ಆ ಪತ್ರವನ್ನು ತಂದುಕೊಟ್ಟಿದ್ದಕ್ಕಾಗಿ ಅವರ ಬಗ್ಗೆ ನನಗೆ ಒಳ್ಳೆಯ ಭಾವನೆ ಮೂಡಿಬಂದಿತು. ಆದರೆ, ಈ ಹದಿನೆಂಟು ತಿಂಗಳುಗಳು ನನ್ನಲ್ಲಿದ್ದು ನನಗೆ ಆನಂದವನ್ನು ಕೊಟ್ಟಿದ್ದ ಆ ಪತ್ರವನ್ನು ನಾನು ಮತ್ತೆ ಹುಡುಕಬೇಕಾಗಿದೆ.

ನಾನು ಅವರಿಗೆ ಕಳುಹಿಸಿದ್ದ ಶುಭಾಶಯ ಪತ್ರಕ್ಕೆ ಉತ್ತರ ಬರೆದ ಸ್ವಾಮೀಜಿ ಅವರು ನನ್ನ ಆಧ್ಯಾತ್ಮಿಕ ಪ್ರಗತಿ ಹೇಗಿದೆ ಎಂದು ಕೇಳಿದ್ದರು. ಸ್ವಾಮೀಜಿಯವರನ್ನು ಮೊದಲು ಭೇಟಿ ಮಾಡಿದ್ದ ಮನೆಯಲ್ಲಿ ಎರಡನೇ ಬಾರಿ ಭೇಟಿಯಾಗುವುದಕ್ಕೆ ಸ್ವಲ್ಪ ಮುಂಚೆ ಅಲ್ಲಿನ ಗೋಡೆಯ ಮೇಲಿದ್ದ ಕನ್ನಡಿಯೊಂದನ್ನು ತೆಗೆದು, ಸ್ವಾಮಿ ವಿವೇಕಾನಂದ ಅವರ ಒಂದು ಭಾವಚಿತ್ರವನ್ನು ತೂಗುಹಾಕಿದೆ. ಮಾರನೆಯ ದಿನವೇ ನಾನು ಧ್ಯಾನ ಮಾಡುತ್ತಿದ್ದಾಗ ಕನ್ನಡಿಯ ಪ್ರತಿಬಿಂಬದ ಹಾಗಿದ್ದ ಸ್ವಾಮಿ ವಿವೇಕಾನಂದರ ಮೂರ್ತಿಯನ್ನು ಕಂಡೆ. ಮುಂದಿನ ಉಪನ್ಯಾಸದಲ್ಲಿ ಸ್ವಾಮಿ ರಂಗನಾಥಾನಂದರು ವೇದಾಂತದ ಬಗ್ಗೆ ಮನಮೋಹಕವಾಗಿ, ಚೈತನ್ಯದಾಯಕವಾಗಿ ಮಾತನಾಡಿದರು. ನಂತರದ ಹದಿನಾಲ್ಕು ದಿನಗಳಲ್ಲಿ ನನ್ನ ಜೀವನದಲ್ಲಿ ಹಲವು ಏರುಪೇರುಗಳು ಉಂಟಾದಾಗ, ಸ್ವಾಮೀಜಿಯವರ ಪವಿತ್ರವಾದ ನುಡಿಗಳು ಮತ್ತೆ ಆಧ್ಯಾತ್ಮಿಕ ಪ್ರಪಂಚದ ಹಲವು ಗೆಳೆಯರ ಸಾಂತ್ವದ ನುಡಿಗಳು ನನಗೆ ಅತ್ಯಂತ ಸಹಾಯಕವಾಗಿದ್ದವು ಮತ್ತು ಆಧ್ಯಾತ್ಮಿಕತೆಯ ಸೆಲೆಗಳಾದ ಭಗವಂತ, ಶ್ರೀ ರಾಮಕೃಷ್ಣ, ಶ್ರೀಮಾತೆ ಮತ್ತು ಸ್ವಾಮಿ ವಿವೇಕಾನಂದ – ಇವರುಗಳ ಇನ್ನಷ್ಟು ಹತ್ತಿರಕ್ಕೆ ನನ್ನನ್ನು ಕೊಂಡೊಯ್ದಿತು. ಇದಕ್ಕೆ ಕಾರಣ ಸ್ವಾಮಿ ರಂಗನಾಥಾನಂದ ಮಹಾರಾಜ್ ಅವರು ಮತ್ತು ನಾನು ಅವರನ್ನು ಮೊದಲ ಬಾರಿ ನೋಡಿದಾಗ ಹಾಕಿದ್ದ ಗಟ್ಟಿಯಾದ ತಳಪಾಯ.

ಸ್ವಾಮೀಜಿಯವರು ತಮ್ಮ ಪ್ರೀತಿಗೆ ಪಾತ್ರರಾಗಿದ್ದ ಭಕ್ತರೊಬ್ಬರ ಮನೆಯಲ್ಲಿ ನೀಡಿದ ಉಪನ್ಯಾಸಕ್ಕೆ ಮತ್ತೊಮ್ಮೆ, ನನ್ನ ಮಗನೊಂದಿಗೆ ನಾನು ಹಾಜರಾಗಿದ್ದೆ. ಉಪನ್ಯಾಸದ ನಂತರ ಸ್ವಾಮೀಜಿಯವರು ಒಂದು ಕೋಣೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಆತಿಥೇಯರು ವಿಶೇಷವಾಗಿ ನನ್ನನ್ನು ಮತ್ತು ನನ್ನ ಮಗನನ್ನು ಸ್ವಾಮೀಜಿಯವರ ಬಳಿ ಆಪ್ತವಾಗಿ ಮಾತನಾಡಲು ಕರೆದುಕೊಂಡುಹೋದರು. ಸ್ವಾಮೀಜಿಯವರು ನಮ್ಮನ್ನು ಕರುಣೆಯಿಂದ ಮತ್ತು ಪ್ರೀತಿಯಿಂದ ಕರೆದು ತಮ್ಮ ಹತ್ತಿರವೇ ಕುಳಿತುಕೊಳ್ಳುವಂತೆ ಹೇಳಿದ ರೀತಿಯನ್ನು

ನಾನು ಮರೆಯಲು ಸಾಧ್ಯವೇ ಇಲ್ಲ. ಅವರ ಸರಳತೆ ಹಾಗೂ ಅಕ್ಕರೆಯನ್ನು ಪದಗಳಿಂದ ವರ್ಣಿಸಲು ಆಗುವುದಿಲ್ಲ. ಅದು ಹೃದಯಕ್ಕೆ ಮಾತ್ರ ಅರ್ಥವಾಗುವ ಭಾಷೆ. ಪ್ರೀತಿಯ ತಂದೆಯ ತೊಡೆಯ ಮೇಲೆ ಕುಳಿತಿದ್ದ ಮಕ್ಕಳಂತೆ ಆಗಿದ್ದೆವು ನಾವು.

ಅವರನ್ನು ನಾನು ಕೊನೆಯ ಬಾರಿ ನೋಡಿದ್ದು, ಈಗ ನಮ್ಮ ವೇದಾಂತ ಕೇಂದ್ರವಿರುವ, ಹಾಲೆಂಡಿನ ಒಂದು ಸುಂದರ ಪ್ರದೇಶದಲ್ಲಿ, ಆಧ್ಯಾತ್ಮಿಕ ಶಿಬಿರದಲ್ಲಿದ್ದಾಗ. ಅವರ ಚೇತೋಹಾರಿಯಾದ ಉಪನ್ಯಾಸಗಳಿಂದಾಗಿ ಶಿಬಿರಕ್ಕೆ ಹೆಚ್ಚು ಜನರು ಬಂದಿದ್ದರು. ಶಿಬಿರದ ಕೊನೆಯಲ್ಲಿ, ಶಿಬಿರದ ಬಗ್ಗೆ ತಮ್ಮ ಅನುಭವವೇನು ಎಂಬುದರ ಬಗ್ಗೆ ಮಾತನಾಡಲು ಕೆಲವರನ್ನು ಕೇಳಿಕೊಳ್ಳುವುದು ಸಾಮಾನ್ಯವಾಗಿ ನಡೆದುಬಂದಿರುವ ಪದ್ಧತಿ. ಈ ಬಾರಿ ಅದು ನನ್ನ ಸರದಿಯಾಗಿತ್ತು. ನನಗೆ ಶೀತ, ನೆಗಡಿಯಾಗಿ ನನ್ನ ಧ್ವನಿ ಗೊಗ್ಗರಾಗಿತ್ತು. ಆದರೂ ನಾನು ಸಂತೋಷದಿಂದ ನನ್ನ ಅಭಿಪ್ರಾಯವನ್ನು ಹಂಚಿಕೊಳ್ಳಬಯಸಿದೆ.

'ಸ್ವಾಮೀಜಿ, ನನ್ನ ಧ್ವನಿ ಕುಗ್ಗಿಹೋಗಿದೆ' ಎಂದೆ. ಸುತ್ತಲಿದ್ದವರು ನಕ್ಕರು. ನನ್ನ ಬಳಿಯಿದ್ದ ಧ್ವನಿವರ್ಧಕದ ಧ್ವನಿಯನ್ನು ಹೆಚ್ಚಿಸಲಾಯಿತು, ಹೇಳಿದೆ: 'ಸ್ವಾಮೀಜಿ ಇಲ್ಲಿ ನನ್ನ ಕಿವಿಯ ಮೇಲೆ ಬಿದ್ದ ಮಾತುಗಳಲ್ಲಿ ಏನನ್ನೂ ಮನೆಯವರೆಗೆ ತೆಗೆದುಕೊಂಡು ಹೋಗದಿರಬಹುದು. ಆದರೆ ನಿಮ್ಮನ್ನು ನನ್ನ ಹೃದಯ ಮತ್ತು ಮನಸ್ಸಿನಲ್ಲಿ ತುಂಬಿಕೊಂಡು ಹೋಗುತ್ತೇನೆ. ನೀವು ಎಂದೆಂದಿಗೂ ನನ್ನ ಮನದಲ್ಲಿ ಇರುತ್ತೀರಿ. ಇದು ನನಗೆ ಎಲ್ಲದಕ್ಕಿಂತಲೂ ಬಹು ಮುಖ್ಯವಾದದ್ದು' ಎಂದೆ. ಅಲ್ಲಿದ್ದ ಇತರ ಶ್ರೋತೃಗಳೂ ಇದನ್ನು ಒಪ್ಪಿದರು. ಪ್ರವ್ರಾಜಿಕರು ಹೇಳಿದ ಹಾಗೆ 'ನಮಗೆ ನಿಜವಾಗಿ ಬೇಕಾಗಿರುವುದು ಪಾವಿತ್ರ್ಯ!'

ನನ್ನಲ್ಲಿ ಆಧ್ಯಾತ್ಮದ ಅರಿವನ್ನು ಉದ್ದೀಪಿಸಿದುದಕ್ಕಾಗಿ ಸ್ವಾಮಿ ರಂಗನಾಥಾನಂದರಿಗೆ ನನ್ನ ಹೃದಯದ ಆಳದಿಂದ ಈ ಮೂಲಕ ನಾನು ಕೃತಜ್ಞತೆಯನ್ನು ತಿಳಿಸುತ್ತೇನೆ. 'ಸ್ವಾಮೀಜಿ, ನಾನು ಎಂದೆಂದಿಗೂ ನಿಮಗೆ ಆಭಾರಿಯಾಗಿದ್ದೇನೆ!'

* * * *

# ೭೪. ಸಾಕ್ಷಾತ್ಕಾರವನ್ನು ಪಡೆದ ಮಹಾನುಭಾವ

–ಸಿಗ್‌ಫ್ರೈಡ್ ವ್ಯಾನ್ ಹೇಕ್*

ಸ್ವಾಮಿ ರಂಗನಾಥಾನಂದ ಅವರು ಸ್ವಶಕ್ತಿಯಿಂದ ಮೇಲೆ ಬಂದವರಾಗಿದ್ದರು. ಅವರು ಸಾಕ್ಷಾತ್ಕಾರವನ್ನು ಪಡೆದವರೇ ಆಗಿದ್ದಿರಬೇಕು. 'ಎಲ್ಲ ಮಹತ್ಸಾಧನೆಗಳು ಮಹತ್ತಾದ ಪ್ರಯತ್ನಗಳಿಂದ, ದೊಡ್ಡ ದೊಡ್ಡ ಅಡಚಣೆಗಳ ನಡುವೆಯೂ, ಸಾಧಿಸಲ್ಪಡುತ್ತವೆ' ಎಂದು ವಿವೇಕಾನಂದರು ಹೇಳುತ್ತಿದ್ದರು. ಸ್ವಾಮಿ ರಂಗನಾಥಾ ನಂದರ ಜೀವನದ ಕಥೆಯೂ ಅದೇ ಆಗಿದ್ದಿತು.

ಸ್ವಶಕ್ತಿಯಿಂದ ಬೆಳೆದವರ – ಅಂದರೆ ಸಾಮಾನ್ಯವಾಗಿ ಬಾಲ್ಯದಲ್ಲಿ ಅನಾಥನಾಗಿದ್ದು, ದಾರಿಯಲ್ಲಿ ವೃತ್ತಪತ್ರಿಕೆಗಳನ್ನು ಮಾರುತ್ತಾ ಅಥವಾ ಅಂತಹುದೇ ಬೇರೆ ಯಾವುದಾದರೂ ಕೆಲಸವನ್ನು ಮಾಡುತ್ತಾ, ನಂತರ ದೊಡ್ಡ ಉದ್ಯಮವೊಂದರ ಸಾಮ್ರಾಟನಾದಂತಹವರ – ಕಥೆಗಳನ್ನು ನಾವು ಕೇಳುತ್ತಿರುತ್ತೇವೆ. ಅಂತಹವರ ಮನಸ್ಸಿನಲ್ಲಿ ಒಂದು ಬಗೆಯ 'ನಾನು ಸಾಧಿಸಿದೆ' ಎಂಬ ಆತ್ಮಪ್ರತ್ಯಯ ಇರುತ್ತದೆ. ಸ್ವಾಮೀಜಿ ಯವರಿಗೂ ತಮ್ಮ ಸಾಧನೆಗಳ ಬಗ್ಗೆ ಅರಿವಿದೆ. ಕಠಿಣ ಶ್ರಮ ಮತ್ತು ಆಟಗಳು ಅವರ ಶರೀರವನ್ನು ರೂಪುಗೊಳಿಸಿದ್ದರೆ, ಅಧ್ಯಯನ ಮತ್ತು ಶ್ರೀ ರಾಮಕೃಷ್ಣರಲ್ಲಿಟ್ಟಿದ್ದ ಶ್ರದ್ಧೆ ಅವರ ಜೀವನವನ್ನು ರೂಪುಗೊಳಿಸಿದ್ದವು. ಅವರು ತಮ್ಮ ಸಾಧನೆಗಳನ್ನು ಇತರರೊಡನೆ ಹಂಚಿಕೊಳ್ಳುತ್ತಿದ್ದುದು ತಮ್ಮ ಬಗೆಗಿನ ಹೆಮ್ಮೆಯಿಂದಲ್ಲ; ಆದರೆ ಇತರರಲ್ಲೂ, ಸಾಧಿಸುವ ಹಂಬಲ ಮತ್ತು ಕೆಚ್ಚು ಇದ್ದರೆ, ಅಂತಹ ಗುರಿಗಳನ್ನು ಸಾಧಿಸಲು ಸ್ಫೂರ್ತಿಯನ್ನು ನೀಡುವ ಸದಾಶಯದಿಂದ.

ಅವರ ಮತ್ತು ನನ್ನ ಭೇಟಿಯಾಗಿದ್ದು ಇಪ್ಪತ್ತು ವರ್ಷಗಳ ಹಿಂದೆ. ಶ್ರೀ ರಾಮಕೃಷ್ಣರ ಸಂದೇಶಗಳನ್ನು ಸಾರಲು ನೆದರ್‌ಲ್ಯಾಂಡ್ಸ್‌ಗೆ ಆಗಾಗ್ಗೆ ಬರುತ್ತಿದ್ದರು. ಅಷ್ಟು ಹೊತ್ತಿಗಾಗಲೇ ಅವರು ಅನುವಾದಿಸಿ ತಮ್ಮ ಭಾಷ್ಯದೊಂದಿಗೆ ಪ್ರಕಟಿಸಿದ್ದ 'ಕಠ', 'ಕೇನ' ಮತ್ತು 'ಈಶ' ಉಪನಿಷತ್ತುಗಳನ್ನು ಡಚ್ ಭಾಷೆಯಲ್ಲಿ 'ದ ಡ್ರೈಹೊಕ್' ಅವರು ಹೊರತಂದಿದ್ದರು. ಸ್ವಾಮಿ ರಂಗನಾಥಾನಂದರನ್ನು ಭೇಟಿಮಾಡಿದ ನಂತರವೇ ನಾನು ರಾಮಕೃಷ್ಣ ಸಂಘದ ಸಂಪರ್ಕಕ್ಕೆ ಬಂದದ್ದು. ಇದಾದ ಕೆಲ ಕಾಲದ ನಂತರ, ಸ್ವಾಮಿ ಋತಜಾನಂದರು ಅಧ್ಯಕ್ಷರಾಗಿದ್ದ ಫ್ರಾನ್ಸಿನ ಆಶ್ರಮದಲ್ಲಿ ಮೂರು ವರ್ಷಗಳಿರುವ ಸುಯೋಗ ನನ್ನದಾಗಿತ್ತು.

ಸತ್ಸಂಗದಲ್ಲಿ ಒಂದು ಸಂಜೆ ನಾನು ಅವರನ್ನು ನೋಡಿದೆ. ಆಗ ನನ್ನ ತಾಯಿಯೂ ನನ್ನ ಜೊತೆಗಿದ್ದರು. ಅದು ನಡೆದ ಸ್ಥಳಕ್ಕೆ ಸೈಕಲ್ಲಿನಲ್ಲಿ ಹೋಗಲು ಮತ್ತು ಅಲ್ಲಿಂದ ಮರಳಲು ಮೂರು–ಮೂರು ಗಂಟೆಗಳು ಬೇಕಾಗುತ್ತಿತ್ತು. ಅಲ್ಲಿನ ಆತಿಥೇಯರು ಸ್ವಾಮೀಜಿಯವರಿಗೆ ಸ್ವಲ್ಪ ಆಹಾರವನ್ನು ಕೊಟ್ಟರು. ಆದರೆ ಸ್ವಾಮೀಜಿಯವರು ನನಗೆ ಮತ್ತು ನನ್ನ ತಾಯಿಯವರಿಗೂ ಆಹಾರವನ್ನು ಕೊಡುವಂತೆ ವಿನಂತಿಸಿದರು. ಈ ಅನುಪಮವಾದ ಸಂಗತಿಯೇ ಅವರ ಬಗೆಗಿನ ನನ್ನ ಮೊದಲ ನೆನಪು.

ನಾನು ಸ್ವಾಮೀಜಿಯವರನ್ನು ಯೋ ವಾನ್ ಓರ್ಷೊವೆನ್ ಅವರ ಮನೆಯಲ್ಲಿ ಮೊದಲ ಬಾರಿಗೆ ಆಪ್ತವಾಗಿ ಭೇಟಿಯಾದೆ. ಅಲ್ಲಿ ಅವರು ನಾವು ಚಿಕ್ಕವರಾಗಿದ್ದಾಗ ಆಡುತ್ತಿದ್ದ ಆಟಗಳನ್ನು ತಿಳಿಸಿ, ಆಟಗಳು ಹೇಗೆ ಶರೀರವನ್ನು ದೃಢಮಾಡುತ್ತವೆ, ಅದು ಮುಂದೆ ಯೋಗಸಾಧನೆಗೆ ಹೇಗೆ ನೆರವಾಗುತ್ತದೆ ಎಂಬುದನ್ನೂ

* ಚಿತ್ರ ಹಾಗೂ ನೆದರ್‌ಲ್ಯಾಂಡ್ಸ್‌ನ ಒಬ್ಬ ಭಕ್ತರು

ಹೇಳಿದರು. ಅವರು ಶ್ರೀ ರಾಮಕೃಷ್ಣರ ಮೂರ್ತಿಯನ್ನು ಮನದ ಮುಂದೆ ತಂದುಕೊಳ್ಳುವಂತೆ ನನಗೆ ತಿಳಿಸಿದರು. ಆದರೆ ನನಗೆ ಆಗ ಶ್ರೀ ರಾಮಕೃಷ್ಣರು ಯಾರು, ಹೇಗೆ ಕಾಣುತ್ತಿದ್ದರು ಎಂಬುದರ ಕಲ್ಪನೆಯೂ ಇರಲಿಲ್ಲ. ಆದರೂ ಅವರ ಸಲಹೆಯನ್ನು ಪಾಲಿಸಿದೆ ಮತ್ತು ನನ್ನ ಈ ಪ್ರಯತ್ನ ನನಗೆ ಈಪ್ಸಿತ ಫಲವನ್ನು ತಂದುಕೊಟ್ಟಿತು. ಈ ಭೇಟಿಯಿಂದಾಗಿ ಒಂದು ರೀತಿಯ ದೀಕ್ಷೆ ಹಾಗೂ ಆಶೀರ್ವಾದ ದೊರಕಿದಂತಾಯಿತು.

ಸ್ವಾಮಿ ರಂಗನಾಥಾನಂದರು ಅಂದು ಸಂಜೆ ನೀಡಿದ ತಮ್ಮ ಉಪನ್ಯಾಸದಲ್ಲಿ ಈ ಪ್ರಪಂಚವನ್ನು ಒಂದು ಔತಣಕೂಟಕ್ಕೆ ಹೋಲಿಸಿದರು. ಅಲ್ಲಿರುವ ವಿವಿಧ ಬಗೆಯ ಆಹಾರಗಳಲ್ಲಿ ನಿಮಗೆ ಬೇಕಾದುದನ್ನು ನೀವು ತೆಗೆದುಕೊಳ್ಳಬಹುದು. ಅವುಗಳಲ್ಲಿ ಕೆಲವು ನಿಮಗೆ ಉತ್ತಮವಾದವುಗಳು, ಕೆಲವು 'ಕಡಿಮೆ ಉತ್ತಮ ವಾದವುಗಳು' ಅಥವಾ ನೀವು ತೆಗೆದುಕೊಳ್ಳಲೇಬಾರದಂತಹವುಗಳು. ಅವರು ದೈವತ್ವವು ಹೇಗೆ ಭೂಮಿಯಲ್ಲಿ ಅವತರಿಸುತ್ತದೆ ಎಂದೂ, ಶ್ರೀ ರಾಮಕೃಷ್ಣರು ಅಂತಹವರು ಒಬ್ಬರು ಎಂದೂ ಹೇಳಿದರು.

ಸ್ವಾಮಿ ರಂಗನಾಥಾನಂದರು ಒಬ್ಬ ದೊಡ್ಡ ವಿದ್ವಾಂಸರಾಗಿದ್ದರೂ, ತಮ್ಮ ವಿಷಯಗಳನ್ನು ಸ್ಥಾಪನೆ ಮಾಡಲು ಅವರು ಶುಷ್ಕವಾದ ತಾತ್ವಿಕ ಉಪನ್ಯಾಸಗಳನ್ನು ನೀಡುತ್ತಿರಲಿಲ್ಲ. 'ದೈನಂದಿನ ಜೀವನದಲ್ಲಿ ವೇದಾಂತ' ಎಂಬುದು ಅವರಿಗೆ ಬಹು ಪ್ರಿಯವಾದ ವಿಷಯವಾಗಿರುತ್ತಿತ್ತು. ಇಷ್ಟಾದರೂ ಅವರು ಬೇರೆಯವರನ್ನು ಅರ್ಥ ಮಾಡಿಕೊಳ್ಳುತ್ತಿದ್ದುದರಿಂದ ಹಾಗೂ ಇತರರ ಒಲವುಗಳನ್ನು ಅರಿತು ಅವರ ಆಯ್ಕೆಗಳನ್ನು ಗೌರವಿಸುತ್ತಿದ್ದುದರಿಂದ ಅವರು ಎಲ್ಲರಿಗೂ ಅಚ್ಚುಮೆಚ್ಚಿನ ಸ್ವಾಮೀಜಿ ಯಾಗಿದ್ದರು.

ಸ್ವಾಮಿ ರಂಗನಾಥಾನಂದರು ರಾಮಕೃಷ್ಣ ಸಂಘ ಹಾಗೂ ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾಗಿದ್ದಾಗ ನಾನು ಅವರನ್ನು ಬೇಲೂರು ಮಠದಲ್ಲಿ ಭೇಟಿಯಾಗಿದ್ದೆ. ನನಗೆ ಆಶೀರ್ವಾದವನ್ನಿತ್ತ ಅವರು ಅಲ್ಲಿಯೇ ಇದ್ದ ಆಂಡ್ರ್ಯೂ ಎಂಬ ಅಮೆರಿಕನ್ ಬ್ರಹ್ಮಚಾರಿಯನ್ನು ಕಾಮಾರ್‌ಪುಕುರ ಮತ್ತು ಜಯರಾಮಬಾಟಿಯನ್ನು ನೋಡಿಕೊಂಡು ಬರಲು ಕಳುಹಿಸಿದರು. ಈ ಸ್ಥಳಗಳಲ್ಲಿ ನಾವು ಮೂರು ಅಥವಾ ನಾಲ್ಕು ದಿನಗಳು ತಂಗಿದ್ದೆವು. ನನಗೆ ಅದೊಂದು ಯಾತ್ರೆಯಾಗಿತ್ತು ಮತ್ತು ಆ ನೆನಪುಗಳು ನನ್ನಲ್ಲಿ ಇಂದೂ ಹಸಿರಾಗಿವೆ.

ನನ್ನನ್ನು ನೀವು ಸ್ವಾಮಿ ರಂಗನಾಥಾನಂದರ ಹಿರಿಮೆಯ ಬಗ್ಗೆ ಕೇಳಿದರೆ, ಆಧ್ಯಾತ್ಮಿಕ ಪ್ರಪಂಚದಲ್ಲಿ ದೊಡ್ಡ ಚಕ್ರವರ್ತಿಯಾಗಿದ್ದರೂ, ಜನರನ್ನು ಏಕತೆ ಹಾಗೂ ವಿಶಾಲ ಚಿಂತನೆಗಳತ್ತ ಕೊಂಡೊಯ್ದ ವಿಧಾನದಲ್ಲಿ ಅವರ ಹಿರಿಮೆಯಿತ್ತು ಎಂದು ಹೇಳುತ್ತೇನೆ. ಸ್ವಾಮಿ ರಂಗನಾಥಾನಂದರನ್ನು ನಮ್ಮಲ್ಲಿಗೆ ಕಳುಹಿಸಿದಕ್ಕಾಗಿ ಶ್ರೀ ರಾಮಕೃಷ್ಣರಿಗೆ ನಮ್ಮ ಧನ್ಯವಾದಗಳು. ಜೈ ಶ್ರೀ ರಾಮಕೃಷ್ಣ!

* * * *

## ೭೫. ಶ್ರೀ ರಂಗನಾಥಾನಂದರ ಭೇಟಿ – ಒಂದು ಆಹ್ಲಾದಕರ ಅನುಭವ

–ಸೂರ್ಯ ಗ್ರೀನ್*

**ಹಿನ್ನೆಲೆ**

ಕಳೆದ ಶತಮಾನದ ಎಪ್ಪತ್ತರ ದಶಕದ ಮಧ್ಯದಲ್ಲಿ ಶ್ರೀ ರಂಗನಾಥಾನಂದರೊಡನೆ ಆದ ಆಕಸ್ಮಿಕ ಭೇಟಿಯಿಂದಾಗಿ ಆಧ್ಯಾತ್ಮಿಕ ಕ್ಷೇತ್ರದ ಸ್ಫೂರ್ತಿದಾಯಕ ವ್ಯಕ್ತಿತ್ವದ ಶ್ರೀ ರಾಮಕೃಷ್ಣ, ಶ್ರೀಮಾತೆ ಶಾರದಾ ದೇವಿ ಹಾಗೂ ಸ್ವಾಮಿ ವಿವೇಕಾನಂದರ ಪರಿಚಯ ನನಗೆ ಆಯಿತು. ಆಧ್ಯಾತ್ಮ ಕ್ಷೇತ್ರದಲ್ಲಿ ನಾನು ಆಗತಾನೆ ಅಂಬೆಗಾಲಿಡುತ್ತಿದ್ದೆ. ಹಾಗಿದ್ದರೂ ನಾನು ಭಾರತದ ರಾಮಕೃಷ್ಣ ಸಂಘದ ಆಧ್ಯಾತ್ಮಿಕ ನಾಯಕರೊಬ್ಬರೆಂದು ಹೇಳಲ್ಪಟ್ಟ ಸಂನ್ಯಾಸಿಯೊಬ್ಬರು ಆಮ್‌ಸ್ಟರ್‌ಡ್ಯಾಂನಲ್ಲಿ ಬಂದು ನೀಡುವ ಉಪನ್ಯಾಸವನ್ನು ಕೇಳಲು ಹೋಗಬೇಕೆಂಬ ಜ್ಞಾನ ನನ್ನಲ್ಲಿ ಮೂಡಿತ್ತು.

ಸ್ವಾಮಿ ರಂಗನಾಥಾನಂದರು ತಮ್ಮ ಸರಳ ಹಾಗೂ ಸ್ಫುಟವಾದ ಮಾತುಗಳಿಂದ ವೇದಾಂತ ತತ್ತ್ವವನ್ನು ವಿವರಿಸಿದ ರೀತಿಯಿಂದ ನಾನು ಮೋಹಿತನಾಗಿದ್ದೆ. ಅವರಿಗೆ ವಿಷಯದಲ್ಲಿದ್ದ ನಿಷ್ಕೃಷ್ಟತೆ ಮತ್ತು ಅಧಿಕಾರ ನನ್ನ ಮನಸ್ಸನ್ನು ಆಕರ್ಷಿಸಿತು. ಅವರ ವಾಗ್ಮಿತೆಯೂ ನನಗೆ ಬಹಳ ಇಷ್ಟವಾಯಿತು. ಯಾವುದನ್ನೂ ಬರೆದುಕೊಂಡು ಬರದೆ, ಕೇವಲ ತಮ್ಮ ಜ್ಞಾಪಕಶಕ್ತಿಯಿಂದಲೇ ಪೂರ್ವ–ಪಶ್ಚಿಮಗಳೆರಡರಲ್ಲೂ ಪ್ರಸಿದ್ಧರಾಗಿದ್ದ ಮಹಾನ್ ಚಿಂತಕರ, ದಾರ್ಶನಿಕರ ಹಾಗೂ ಕವಿಗಳ ಕೃತಿಯಿಂದ ಧಾರಾಳವಾಗಿ ಉದ್ಧರಿಸುತ್ತಾ ತಮ್ಮ ಹೇಳಿಕೆಗಳನ್ನು ಸಮರ್ಥಿಸುತ್ತಿದ್ದರು. ಎಂತಹ ವಿದ್ವತ್ತು! ಎಂತಹ ಜ್ಞಾಪಕಶಕ್ತಿ! ಸ್ವಾಮೀಜಿಯವರ ಸ್ಫಟಿಕಶುದ್ಧ ಮನಸ್ಸು, ಮತ್ತು ಅಭಿವ್ಯಕ್ತಿಯಲ್ಲಿದ್ದ ಶ್ರೀಮಂತಿಕೆ ನನ್ನ ಮೇಲೆ ಬಲವಾದ ಪ್ರಭಾವವನ್ನು ಬೀರಿತ್ತು.

ಉಪನ್ಯಾಸದ ನಂತರ ಸ್ವಾಮೀಜಿಯವರನ್ನು ಅವರ ಸ್ಫೂರ್ತಿದಾಯಕವಾಗಿದ್ದ ಭಾಷಣಕ್ಕಾಗಿ ಅಭಿನಂದಿಸಬೇಕೆಂಬ ಆಂತರಿಕ ಪ್ರೇರಣೆ ನನಗೆ ಆಯಿತು. ನನ್ನ ಅಭಿನಂದನೆ ನಂತರದ ಸ್ನೇಹಯುತವಾದ ಸಂಭಾಷಣೆಗೆ ಕಾರಣವಾಯಿತು. ಅದಾದ ಮೇಲೆ ನಾನು ಮತ್ತೊಮ್ಮೆ ಅವರನ್ನು ನೋಡಬಹುದೇ ಎಂಬ ಪ್ರಶ್ನೆ ನನ್ನಿಂದ ತನ್ನಿಂದ ತಾನೇ ಬಂದಿತು. ತಕ್ಷಣ ಅವರು ಮಾರನೆಯ ದಿನ ಡಚ್‌ನ ಗ್ರಾಮಾಂತರ ಪ್ರದೇಶವೊಂದರಲ್ಲಿದ್ದ ಅಧ್ಯಯನ ಕೇಂದ್ರದಲ್ಲಿ ಸಂಧಿಸೋಣ ಎಂದರು. ಮಾರನೆಯ ದಿನ ನಾವು ಸಂಧಿಸಿ ಹಲವು ಗಂಟೆಗಳ ಕಾಲ ಮಾತನಾಡುತ್ತಿದ್ದ ಆ ಕೊಠಡಿ ಬಹು ಸರಳವಾಗಿತ್ತು. ನನಗೆ ಶ್ರೀ ರಾಮಕೃಷ್ಣ ಪರಂಪರೆಯ ಮತ್ತು ಅವರ ಆಧ್ಯಾತ್ಮಿಕ ಸಂದೇಶಗಳ ಮೂಲಪಾಠಗಳ ಪರಿಚಯವಾದ ಅಂದಿನ ಭವ್ಯ ಸಾಯಂಕಾಲ ನನಗೆ ಅವಿಸ್ಮರಣೀಯವಾಗಿದೆ.

ವಿಶೇಷವೆಂದರೆ, ಸ್ವಾಮಿ ರಂಗನಾಥಾನಂದರ ಸಂಪರ್ಕದಿಂದಾಗಿ, ಕೇವಲ ಬುದ್ಧಿಯಿಂದ ಹರಿಯದೆ, ಆಧ್ಯಾತ್ಮಿಕ ಅನುಭವಗಳಿಂದ, ಆಧ್ಯಾತ್ಮಿಕ ಪ್ರಜ್ಞೆಯಿಂದ ಓತಪ್ರೋತವಾಗಿ ಹರಿದುಬರುತ್ತಿರುವ ಆ ದೈವಿಕ ಔದಾರ್ಯವನ್ನು ನಾನು ಅನುಭವಿಸಿದೆ. ಶ್ರೀ ರಾಮಕೃಷ್ಣರ ಹಿರಿಮೆಯನ್ನು ನನಗೆ ವಿವರಿಸಿದ ರೀತಿಯಿಂದ ಸ್ವಾಮೀಜಿಯವರೂ ಒಬ್ಬ ಶ್ರದ್ಧಾವಂತ ಗುರು ಎಂಬ ಹಿರಿಮೆಯಿದ್ದವರು ಮತ್ತು ತಮ್ಮ ಶಿಷ್ಯರು ಕೂಡ

---

* ಅಮೆರಿಕನ್–ಸಂಜಾತ ಲೇಖಕರು ಮತ್ತು ನೆದರ್‌ಲ್ಯಾಂಡ್ಸ್‌ನ ಸನ್ ಕಾನ್‌ಸೆಸ್ ಫೌಂಡೇಷನ್ನಿನ ಕಾರ್ಯದರ್ಶಿ ಮತ್ತು 'ದಿ ಕಾಲ್ ಆಫ್ ದಿ ಸನ್' ಎಂಬ ಪುಸ್ತಕದ ಲೇಖಕರು.

ನಿಷ್ಠೆಯಿಂದ ಇದನ್ನೆಲ್ಲಾ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕು ಎಂಬುದು ನನಗೆ ಮನವರಿಕೆಯಾಯಿತು. ಅವರ ಉಪದೇಶಗಳು, ಅವರ ಆಂತರ್ಯದ ಪ್ರಶಾಂತತೆಯನ್ನು ತೋರಿಸುವಂತೆ, ಸೈರಣೆ ಹಾಗೂ ಕರುಣೆಯಿಂದ ಕೂಡಿದ್ದವು.

ತರುವಾಯದ ಸಮಯದಲ್ಲಿ, ನಾನು ಶ್ರೀ ರಂಗನಾಥಾನಂದರು ಪ್ರತಿವರ್ಷ ನೆದರ್‌ಲ್ಯಾಂಡ್ಸ್‌ನಲ್ಲಿ ಭಾಗವಹಿಸುತ್ತಿದ್ದ ಉಪದೇಶ–ಸಪ್ತಾಹಗಳಿಗೆ ಕೆಲವು ಸಲ ಹಾಜರಾಗುತ್ತಿದ್ದೆ. ಅಂತಹ ಸಂದರ್ಭಗಳಲ್ಲಿ ಅವರನ್ನು ಖಾಸಗಿಯಾಗಿ ಸಂಧಿಸಿ ಅವರೊಡನೆ ಆಧ್ಯಾತ್ಮಿಕ ವಿಷಯಗಳನ್ನು ಕುರಿತು ಮಾತನಾಡುವ ಅವಕಾಶಗಳು ನನಗೆ ಸಿಗುತ್ತಿದ್ದುದು ನನ್ನ ಅದೃಷ್ಟ. ಮೂಲತಃ ಅವರನ್ನು ಭೇಟಿಯಾಗುತ್ತಿದ್ದುದು ಒಬ್ಬ ಆಧ್ಯಾತ್ಮದ ಆಕಾಂಕ್ಷಿಯಾಗಿಯಾದರೂ, ಇದೇ ವಿಷಯಕ್ಕೆ ಸಂಬಂಧಿಸಿದಂತೆ ಪತ್ರಿಕಾ ವರದಿಗಾರನಾಗಿಯೂ ನಾನು ಅವರನ್ನು ಸಂಧಿಸುತ್ತಿದ್ದೆ. ಅವರ ಸಂದರ್ಶನದ ಲಾಭ, ಅವರ ಸಂದೇಶ ನನಗಷ್ಟೇ ಅಲ್ಲದೆ ನಾನು ಹೊರತರುತ್ತಿದ್ದ ಅಂತಾರಾಷ್ಟ್ರೀಯ 'ನ್ಯೂ ಏಜ್' ಎಂಬ ಪತ್ರಿಕೆಯ ಓದುಗರಿಗೂ ಸಿಗುವಂತಾಗಿತ್ತು.

ಸ್ವಾಮೀಜಿಯವರ ಸಂಭಾಷಣೆಯು ನನಗೆ ಒದಗಿಸುತ್ತಿದ್ದ ಆಧ್ಯಾತ್ಮಿಕ ಜ್ಞಾನ, ಪೋಷಣೆ ಹಾಗೂ ನೆರವುಗಳನ್ನು ನಾನು ನನ್ನ ಬರಹದ ಮೂಲಕ ನನ್ನ ಓದುಗರೊಂದಿಗೆ ಹಂಚಿಕೊಳ್ಳುತ್ತಿದ್ದೆ. ನನ್ನ ಪ್ರಶ್ನೆಗಳಿಗೆ ಸ್ವಾಮೀಜಿಯವರು ಬೋಧಪ್ರದವಾದ ಉತ್ತರಗಳನ್ನು ನಿರರ್ಗಳವಾದ ಭಾಷೆಯಲ್ಲಿ ನೀಡುತ್ತಿದ್ದರು. ಇಂಗ್ಲಿಷ್ ಭಾಷೆಯ ಮೇಲಿನ ಅವರ ಪ್ರಭುತ್ವ ನನಗೆ ಬಹು ಮೆಚ್ಚಿಕೆಯಾಗಿತ್ತು. ತಮ್ಮ ಆಧ್ಯಾತ್ಮಿಕ ಅನುಭವಗಳನ್ನು ಮತ್ತು ವಿಚಾರಗಳನ್ನು ಬೇರೆಯವರಿಗೆ ಸುಲಭವಾಗಿ ಅರ್ಥವಾಗುವ ಶೈಲಿಯಲ್ಲಿ ಹೇಳಬಲ್ಲ ಅಪರೂಪದ ಸಾಮರ್ಥ್ಯವನ್ನು ಅವರು ಗಳಿಸಿಕೊಂಡಿದ್ದರು.

ಸ್ವಾಮಿ ರಂಗನಾಥಾನಂದರ ತಾಯಿನಾಡಿಗೆ ಹೋಗಿ ಅವರೊಂದಿಗೆ ಸ್ವಲ್ಪ ಕಾಲ ಕಳೆಯುವ ಅವಕಾಶ ಎಂಬತ್ತರ ದಶಕದಲ್ಲಿ ಒದಗಿತು. ಪತ್ರಕರ್ತರ ಹೆಗಲು–ಚೀಲವನ್ನು ಹಾಕಿಕೊಂಡು ಭಾರತದಲ್ಲಿ ಯಾತ್ರಿಯಾಗಿ ಕೆಲವು ಕಾಲ ಇರುವ ಸೌಭಾಗ್ಯ ನನ್ನದಾಗಿತ್ತು. ಪರಮಪೂಜ್ಯ ಸ್ವಾಮಿ ರಂಗನಾಥಾನಂದರನ್ನು ನಾನು ಮುಂಬಯಿ, ದೆಹಲಿ ಮತ್ತು ಹೈದರಾಬಾದಿನಲ್ಲಿ ಭೇಟಿಯಾಗಿದ್ದೆ ಮತ್ತು ಹೈದರಾಬಾದಿನಲ್ಲಿನ ರಾಮಕೃಷ್ಣ ಮಠದ ಅತಿಥಿಗೃಹದಲ್ಲಿ ಕೆಲವು ದಿನ ಉಳಿದುಕೊಳ್ಳುವ ಸುಯೋಗವೂ ೧೯೮೬ರಲ್ಲಿ ನನಗೆ ಸಿಕ್ಕಿತ್ತು. ಹೈದರಾಬಾದಿನ ಭೇಟಿಯ ನಂತರ ೧೮ ವರ್ಷಗಳಷ್ಟು ಸುದೀರ್ಘ ಅವಧಿಯಲಿ ನಾನು ಅವರನ್ನು ನೋಡುವುದು ಸಾಧ್ಯವಾಗಲಿಲ್ಲ.

ಎರಡು ದಶಕಗಳ ಕಾಲ ನಾನು ಭಾರತಕ್ಕೆ ಭೇಟಿ ಕೊಡಲಿಲ್ಲ. ಅದೇ ಅವಧಿಯಲ್ಲಿ ಸ್ವಾಮೀಜಿಯವರು ನೆದರ್‌ಲ್ಯಾಂಡ್ಸ್‌ಗೆ ಬರುವುದನ್ನು ನಿಲ್ಲಿಸಿದ್ದರು. ನಮ್ಮ ಸಂಪರ್ಕ ನಾನು ಆಗೊಮ್ಮೆ ಈಗೊಮ್ಮೆ ಬರೆಯುತ್ತಿದ್ದ ಪತ್ರಗಳ ಹಾಗೂ ಅವರು ಅವಕ್ಕೆ ನೀಡುತ್ತಿದ್ದ ಉತ್ತರಗಳನ್ನು ತರುತ್ತಿದ್ದ ಪತ್ರಗಳ ಮೂಲಕ ಮುಂದುವರಿದಿತ್ತು. ಮೊದಮೊದಲು ನಾನು ಭೇಟಿ ಮಾಡಿದ್ದ ಆಧ್ಯಾತ್ಮಿಕ ಮುಖಂಡರನ್ನು ಕುರಿತು ಪುಸ್ತಕವನ್ನು ೯೦ರ ದಶಕದಲ್ಲಿ ಬರೆದಿದ್ದೆ. ಸಹಜವಾಗಿಯೇ ಅದರಲ್ಲಿ 'ಸ್ವಾಮಿ ರಂಗನಾಥಾನಂದ ಮತ್ತು ಶ್ರೀ ರಾಮಕೃಷ್ಣರ ಪರಂಪರೆ' ಎಂಬ ಪ್ರಬಂಧವೂ ಸೇರಿತ್ತು. ೨೦೦೩ರ ಕ್ರಿಸ್‌ಮಸ್ ನಂತರ ಸ್ವಾಮಿ ರಂಗನಾಥಾನಂದ ಅವರಿಗೆ ನಾನು ನನ್ನ ಪುಸ್ತಕವೊಂದಕ್ಕೆ ಸಂಬಂಧಿಸಿದಂತೆ ೨೦೦೪ರಲ್ಲಿ ಮೊದಲ ಎರಡು ತಿಂಗಳಮಟ್ಟಿಗೆ ಭಾರತಕ್ಕೆ ಬರುತ್ತಿದ್ದೇನೆಂದು ತಿಳಿಸಿ ಪತ್ರ ಬರೆದಿದ್ದೆ. ಹಾಗೆ ಬಂದಾಗ ಬೇಲೂರು ಮಠದಲ್ಲಿ ಅವರ ದರ್ಶನವನ್ನು ಪಡೆಯುವುದೂ ನನ್ನ ಉದ್ದೇಶವಾಗಿತ್ತು. ತಮ್ಮ ೯೭ನೆಯ ವಯಸ್ಸಿನಲ್ಲಿಯೂ ರಾಮಕೃಷ್ಣ ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸು ತ್ತಿರುವ ಪೂಜ್ಯ ಮಹಾರಾಜ್ ಅವರನ್ನು ಭೇಟಿ ಮಾಡುವುದು ನನ್ನ ಆದ್ಯತೆಯಾಗಿತ್ತು. ತಕ್ಷಣ ಬಂದ ಉತ್ತರದಲ್ಲಿ ನಾನು ಬೇಲೂರು ಮಠಕ್ಕೆ ಬರುತ್ತೇನೆಂದು ತಿಳಿಸಿದ್ದ ಜನವರಿಯ ಕೊನೆಯ ದಿನಗಳಲ್ಲಿ ಅವರು ದಕ್ಷಿಣ ಭಾರತದ ಪ್ರವಾಸದಲ್ಲಿ ಇರುತ್ತಾರೆಂದು ತಿಳಿಸಲಾಗಿತ್ತು. ನಾನು ಮತ್ತೆ ಪತ್ರ ಬರೆದು 'ನಾನು ಅವರನ್ನು

ಬೆಂಗಳೂರಿನಲ್ಲಿ ಕಾಣಬಹುದೇ?' ಎಂದು ಕೇಳಿದೆ. 'ಆಗಬಹುದು' ಎಂಬ ಸ್ವಾಮೀಜಿಯವರ ಉತ್ತರ ಹೊಸ ವರ್ಷದ ಶುಭಾಶಯಗಳೊಂದಿಗೆ ನನಗೆ ತಲುಪಿತು. ನಾನು ನನಗೆ ಸಿಕ್ಕಿದ ಅವಕಾಶವನ್ನು ಅವರ ಕೃಪೆಯೆಂದೇ ಭಾವಿಸಿದೆ.

**ಪುನಸ್ಸಮಾಗಮ**

ನಾನು ಜನವರಿಯ ಕೊನೆಯ ಶುಕ್ರವಾರದಂದು ಸೂರ್ಯೋದಯದ ವೇಳೆಯಲ್ಲಿ ಬೆಂಗಳೂರಿನ ಆಶ್ರಮದೊಳಕ್ಕೆ ಕಾಲಿಟ್ಟೆ. ಅಲ್ಲಿ ನಾನು ಭೇಟಿ ಮಾಡಿದ ಸ್ವಾಮಿ ಶಾಂತಿಮಯಾನಂದ ಅವರು ಅಧ್ಯಕ್ಷ ಮಹಾರಾಜ್ ಅವರು ಅಸ್ವಸ್ಥರಾಗಿದ್ದಾರೆಂದೂ, ಅದರಿಂದಾಗಿಯೇ ಅವರು ಬೆಳಗಾಂ ಪ್ರವಾಸವನ್ನು ರದ್ದುಪಡಿಸಲಾಗಿದೆಯೆಂದೂ ಮತ್ತು ದರ್ಶನದ ವೇಳೆಯನ್ನು ಕಡಿಮೆಗೊಳಿಸಲಾಗಿದೆಯೆಂದೂ ತಿಳಿಸಿದರು. ದಕ್ಷಿಣ ಭಾರತದ ಎಲ್ಲೆಡೆಯಿಂದ ಭಕ್ತರು ಮತ್ತು ಸಂನ್ಯಾಸಿಗಳು ಅಧ್ಯಕ್ಷ ಮಹಾರಾಜ್ ಅವರನ್ನು ನೋಡಲು ಬರುತ್ತಿದ್ದರು. ನನಗೆ ಅಂದಿನ ದಿನವೇ ಬೆಳಗ್ಗೆ ೧೦.೩೦ಕ್ಕೆ ದರ್ಶನದ ಅವಕಾಶ ಸಿಕ್ಕಿತು. ನಾನು ಬಂದ ಸಮಯದಲ್ಲೇ ಬಹಳಷ್ಟು ಸಂಖ್ಯೆಯ ದರ್ಶನಾರ್ಥಿಗಳು ಅಲ್ಲಿ ನೆರೆದಿದ್ದರು. ಆಗಾಗ್ಗೆ ಮಹಾರಾಜ್ ಅವರ ಕೋಣೆಯ ಬಾಗಿಲು ತೆರೆಯುತ್ತಿತ್ತು ಮತ್ತು ಹಾಕಲ್ಪಡುತ್ತಿತ್ತು. ವಿವಿಧ ವಯೋಮಾನದ ಸಂನ್ಯಾಸಿಗಳು ಮತ್ತು ಸಾರ್ವಜನಿಕರು ಒಳಗೆ ಹೋಗುತ್ತಿದ್ದರು ಮತ್ತು ಹೊರಗೆ ಬರುತ್ತಿದ್ದರು. ಕಡೆಗೆ ಸಹಾಯಕರೊಬ್ಬರು ನನ್ನತ್ತ ಸನ್ನೆ ಮಾಡಿ ಒಳಕ್ಕೆ ಹೋಗಲು ಸೂಚಿಸಿದರು.

ಸ್ವಾಮಿ ರಂಗನಾಥಾನಂದರು ಹಾಸಿಗೆಯ ಮೇಲೆ ಮಲಗಿದ್ದರು. ನನಗೆ ಆಶ್ಚರ್ಯವಾಯಿತು. ಹಾಗೂ ಒಂದು ಬಗೆಯಲ್ಲಿ ಆಶ್ಚರ್ಯವಾಗಲಿಲ್ಲ. ಹಿಂದೆ ಅವರು ಹೀಗೆ ಮಲಗಿರುವುದನ್ನು ನಾನು ನೋಡಿದ್ದೆ. ಒಮ್ಮೆ ಅವರು ನನಗೆ ವಿಷ್ಣುವಿನ ಒಂದು ರೂಪವಾದ 'ರಂಗನಾಥ'ನ ಬಗ್ಗೆ ತಿಳಿಸಿ ತಾವು ತಮ್ಮ ಹೆಸರಿನ ಆ ದೇವರನ್ನೇ ಮಲಗಿಕೊಂಡಿರುವುದರಲ್ಲಿ ಅನುಸರಿಸುತ್ತಿರುವುದಾಗಿ ತಮಾಷೆ ಮಾಡುತ್ತಾ ಹೇಳಿದ್ದರು. ಆದರೆ ಈಗ ಅವರು ಹಾಸಿಗೆಯಲ್ಲಿ ಅಂಗಾತ ಮಲಗಿದ್ದರು. ಅವರ ದುರ್ಬಲ ಸ್ಥಿತಿ ನನ್ನನ್ನು ತಲ್ಲಣಗೊಳಿಸಿತು. ಅವರಿಗೆ ೨೦೦೧ರಲ್ಲಿ ಲಘು ಪಾರ್ಶ್ವವಾಯುವಾಗಿದ್ದುದು ನನಗೆ ಗೊತ್ತಿತ್ತು.

'ಇವರು ಹಾಲೆಂಡಿನಿಂದ ಬಂದಿರುವ ಸೂರ್ಯ' ಎಂದು ಸಹಾಯಕರು ಮಹಾರಾಜ್ ಅವರಿಗೆ ತಿಳಿಸಿದರು. ನಾನು ಅವರ ಬಳಿ ಅನುಭವಿಸುತ್ತಿದ್ದ ಅಕ್ಕರೆ ಮತ್ತು ಚೈತನ್ಯಗಳು ಮರುಕಳಿಸಿತೆಂಬಂತೆ ಅವರು ಒಮ್ಮೆಲೇ "ಸೂರ್ಯ, ಹೇಗಿದ್ದೀರಿ, ಲೇಖನಗಳನ್ನು ಬರೆಯುತ್ತಿದ್ದೀರಿ ತಾನೇ? ನನ್ನ 'ಗೀತಾ' ಎಂಬ ಪುಸ್ತಕವನ್ನು ಓದಿದಿರಾ? ಹಾಲೆಂಡ್‌ನಲ್ಲಿ ಎಲ್ಲರೂ ಹೇಗಿದ್ದಾರೆ?" ಎಂದು ಕೇಳಿದರು.

ಅವರ ಧ್ವನಿ ದುರ್ಬಲವಾಗಿತ್ತು. ಆದರೆ ಮಾತುಗಳನ್ನು ಅವರು ಬಿಡಿಬಿಡಿಯಾಗಿ ಉಚ್ಚರಿಸುತ್ತಿದ್ದರು. ಕೆಲವೊಮ್ಮೆ ಅವರು ಹೇಳುತ್ತಿರುವುದನ್ನು ತಿಳಿದುಕೊಳ್ಳುವುದು ಕಷ್ಟವಾಗುತ್ತಿತ್ತು. ಅವರ ಕುಂದುತ್ತಿರುವ ಆರೋಗ್ಯವನ್ನು ನೋಡಿ, ನನಗೆ ತಡೆಯಲಾರದಷ್ಟು ದುಃಖವಾಯಿತು. ಕೃತಜ್ಞತೆ ನನ್ನ ಬಾಯಿನಿಂದಷ್ಟೇ ಅಲ್ಲದೆ, ನನ್ನ ಹೃದಯದಿಂದ ಹರಿದುಬರುತ್ತಿತ್ತು. ಅವರು ನನಗೆ ಹಲವಾರು ವರ್ಷಗಳ ಕಾಲ ನೀಡಿದ್ದ ಆಧ್ಯಾತ್ಮಿಕ ಮಾರ್ಗದರ್ಶನಕ್ಕಾಗಿ ನಾನು ಅವರಿಗೆ ಕೃತಜ್ಞತೆಯನ್ನು ಸಲ್ಲಿಸಿದೆ. ನಾನು ಅವರನ್ನು ಬಹುವಾಗಿ ಪ್ರೀತಿಸುತ್ತಿರುವುದಾಗಿ ಮತ್ತು ಮುಂದೆಯೂ ಪ್ರೀತಿಸುತ್ತಿರುವುದಾಗಿ ಮತ್ತು ನಾನು ಅವರ ದಿವ್ಯವಾದ ಆಶೀರ್ವಾದವನ್ನು ಬಯಸುವುದಾಗಿ ಹೇಳಿದೆ. ಅದನ್ನು ಕೇಳಿದ ಅವರು ಅಲ್ಲಿಯೇ ಇದ್ದ ಸಹಾಯಕ ಸ್ವಾಮಿಗಳಿಗೆ ಸನ್ನೆ ಮಾಡಿ ತಮ್ಮನ್ನು ಕೂರಿಸಲು ಸೂಚಿಸಿದರು. ಅವರು ಮಹಾರಾಜ್ ಅವರನ್ನು ಬಹು ಎಚ್ಚರಿಕೆಯಿಂದ ಹಾಸಿಗೆಯಿಂದ ಎಬ್ಬಿಸಿ ಪಕ್ಕದಲ್ಲಿಯೇ ಇದ್ದ ಕುರ್ಚಿಯ ಮೇಲೆ ಕೂರಿಸಿದರು. ತಮ್ಮ ಕಾಲನ್ನು ಚಾಚಿಕೊಳ್ಳಲು ಅವರ ಮುಂದೆ ಒಂದು

ಉದ್ದವಾದ ಬೆಂಚನ್ನು ಇಟ್ಟರು. ವಾತಾವರಣದಲ್ಲಿ ಆಗ ಸ್ವಲ್ಪ ಉಷ್ಣತೆ ಜಾಸ್ತಿಯಿತ್ತಾದರೂ ಅವರು ಕಾಲುಚೀಲ ಮತ್ತು ಉಣ್ಣೆಯ ಕೈಚೀಲಗಳನ್ನು ತೊಟ್ಟಿದ್ದರು.

ನಾನು ಒಳಬಂದಾಗ ನನಗೆ ಕಾಣಿಸುತ್ತಿದ್ದ ಹಾಸಿಗೆಯ ಮೇಲೆ ಇದ್ದಾಗಿನ ಅವರ ನಿಶ್ಶಕ್ತಿ ಅವರು ನೆಟ್ಟಗೆ ಕುಳಿತಕೂಡಲೇ ನಾಟಕೀಯವಾಗಿಯೋ ಎಂಬಂತೆ ಬದಲಾಗಿ ಅವರಲ್ಲಿ ಚೈತನ್ಯ ಮೂಡಿತು. ನಾನು ಬೆಂಗಳೂರಿನಲ್ಲಿ ಎಷ್ಟು ದಿನ ಇರುತ್ತೇನೆಂದು ಕೇಳಿದ ಮಹಾರಾಜ್ ಅವರು ಮತ್ತೊಮ್ಮೆ ಬರುವಂತೆ ನನಗೆ ಹೇಳಿದರು. ನಾನು ಅವರಿಗೆ ಒಂದು ಕಾಣಿಕೆಯನ್ನಿತ್ತೆ. ಅವರು ತಮ್ಮ ಪಕ್ಕದ ಬುಟ್ಟಿಯ ತುಂಬ ಇದ್ದ ಮಿಠಾಯಿಗಳಲ್ಲಿ ಸ್ವಲ್ಪ ಮಿಠಾಯಿಗಳನ್ನು ಪ್ರಸಾದವಾಗಿ ನನಗೆ ಕೊಟ್ಟರು. ಅಷ್ಟರಲ್ಲಿ ಕೆಲವು ಹದಿಹರೆಯದ ಹುಡುಗರು ಅವರಿಗೆ ಪ್ರಣಾಮಗಳನ್ನು ಅರ್ಪಿಸಲು ಒಳಬಂದಾಗ ನಾನು ನನ್ನ ಸಂದರ್ಶನದ ಅವಧಿ ಮುಗಿಯಿತು ಎಂದುಕೊಂಡೆ. ಆದರೆ ಮಹಾರಾಜ್ ಅವರು ನನ್ನನ್ನು ಕುಳಿತುಕೊಂಡೇ ಇರಲು ಸೂಚಿಸಿದರು. ಬಂದ ಪ್ರತಿಯೊಬ್ಬ ಹುಡುಗನನ್ನೂ ನಗುತ್ತಾ ಸ್ವಾಗತಿಸಿ ಪ್ರಸಾದವನ್ನು ಕೊಟ್ಟರು.

ನಾನು ಫೋಟೋ ತೆಗೆದುಕೊಳ್ಳಬಹುದೇ ಎಂದುದಕ್ಕೆ ಮಹಾರಾಜ್ ಅವರು ಸಮ್ಮತಿಸಿದರು. ಆ ಹುಡುಗರು ಮಹಾರಾಜ್ ಅವರ ಸುತ್ತ ನಿಂತಿರುವ ಚಿತ್ರವನ್ನು ತೆಗೆದುಕೊಂಡೆ. ನಂತರ ಬಂದ ಭಕ್ತರ ಚಿತ್ರಗಳನ್ನೂ ತೆಗೆದುಕೊಂಡೆ. ಮಹಾರಾಜರ ಸಂಗಡ ನಾನು ನಿಂತುಕೊಂಡು ಚಿತ್ರವನ್ನು ತೆಗೆಸಿಕೊಳ್ಳಬಹುದೇ ಎಂದು ಕೇಳಿದಾಗ ಮಹಾರಾಜ್ ಅವರು ಅಲ್ಲಿಯೇ ಇದ್ದ ಮುಖ್ಯ ಸಹಾಯಕರಿಗೆ ಸನ್ನೆ ಮಾಡಿದರು. ಸ್ವಾಮಿ ಅಸೀಮಾತ್ಮಾನಂದ ಅವರಿಗೆ ಇಂತಹ ಕೋರಿಕೆಗಳು ಸಾಮಾನ್ಯವಾಗಿದ್ದಿರಬಹುದು. ಅವರು ಕ್ಯಾಮರಾವನ್ನು ಉಪಯೋಗಿಸುವ ಬಗ್ಗೆ ನನ್ನ ಸಹಾಯವನ್ನು ಅಪೇಕ್ಷಿಸದೇ ಚಿತ್ರಗಳನ್ನು ತೆಗೆದರು.

ನನ್ನ ಮುಂದಿನ ಭೇಟಿಯ ಸಮಯದಲ್ಲಿ ನಾನು ಧ್ವನಿಮುದ್ರಕವನ್ನು ತರಬಹುದೆಂದು ಸ್ವಾಮಿ ಅಸ್ಮಿತಾನಂದರು ಒಪ್ಪಿದ್ದು ನನ್ನ ಅದೃಷ್ಟ. ಆದರೆ ಮಹಾರಾಜ್ ಅವರ ಆರೋಗ್ಯ ಒಂದೇ ತರಹ ಇರಲಿಲ್ಲ ಮತ್ತು ಅವರು ಬಹು ಬೇಗ ಬಳಲಿಬಿಡುತ್ತಿದ್ದರು. ನಾನು ಬೆಂಗಳೂರಿನಲ್ಲಿ ಇದ್ದ ಮುಂದಿನ ಮೂರು ದಿನಗಳೂ ಪ್ರತಿದಿನ ಐದು ನಿಮಿಷಗಳ ದರ್ಶನದ ಅವಕಾಶ ನನಗೆ ದೊರೆಯಿತು. ಮೊದಲ ದಿನದ ದರ್ಶನ ಸಂಜೆ ಆರು ಗಂಟೆಗೆ ಎಂದು ನಿಗದಿಯಾಗಿತ್ತು. ಅಂದಿನ ಮಧ್ಯಾಹ್ನ ಸ್ವಾಮಿ ಶಾಂತಿಮಯಾನಂದ ಅವರು ಮಹಾರಾಜ್ ಅವರ ಆರೋಗ್ಯ ಹದಗೆಡುತ್ತಿದ್ದು ಮುಂದಿನ ಕಾರ್ಯಕ್ರಮಗಳು ನಡೆಯುವುದು ಅನಿಶ್ಚಿತ ಎಂದರು. ಸಂಜೆಯ ವೇಳೆಗೆ ನಿಗದಿಪಡಿಸಿದ್ದ ದರ್ಶನ ಕಾರ್ಯಕ್ರಮಗಳನ್ನು ರದ್ದುಪಡಿಸಿರುವುದಾಗಿ ತಿಳಿಸಿದರು. ಆರತಿಯ ನಂತರ ಅಲ್ಲಿ ಸೇರಿದ್ದ ನೂರಾರು ಭಕ್ತರು ಎಲ್ಲರೂ ಎರಡು ಸಾಲುಗಳಲ್ಲಿ ನಿಂತುಕೊಳ್ಳುತ್ತಿದ್ದರು. ನಾನು ನಿಂತಿದ್ದ ಮಹಿಳೆಯರು ಸಾಲು ನಿಧಾನವಾಗಿ ಸುತ್ತಿಕೊಂಡು, ನಾನು ಅಂದು ಬೆಳಗ್ಗೆ ಸ್ವಾಮಿ ರಂಗನಾಥಾನಂದರನ್ನು ನೋಡಿದ್ದ ಕಟ್ಟಡದತ್ತ ಸಾಗುತ್ತಿತ್ತು. ಕಟ್ಟಕಡೆಗೆ ನಾನು ಇದ್ದ ಸಾಲಿನ ಭಾಗ ಕಟ್ಟಡದ ಒಳಕ್ಕೆ ಹೋಯಿತು. ಆ ಸಾಲೆಯ ಮಧ್ಯದಲ್ಲಿ ಸ್ವಾಮಿ ರಂಗನಾಥಾನಂದಜೀಯವರು ಕುರ್ಚಿಯ ಮೇಲೆ ಕುಳಿತಿದ್ದರು. ಒಬ್ಬರ ಹಿಂದೆ ಒಬ್ಬರು ಹೋಗಿ ನಾವು ಅವರಿಗೆ ಪ್ರಣಾಮ ಮತ್ತು ಸಾಷ್ಟಾಂಗ ನಮಸ್ಕಾರಗಳನ್ನು ಸಲ್ಲಿಸಿದೆವು. ಮೆಲುದನಿಯಲ್ಲಿ ಬಿಟ್ಟರೆ ಯಾರೂ ಮಾತನಾಡುತ್ತಿರಲಿಲ್ಲ. ಕೆಲವು ಸಲ ಅವರು ಕೈಚೀಲ ತೊಟ್ಟಿದ್ದ ತಮ್ಮ ಕೈಯನ್ನು ಎತ್ತಿ ಹರಸುತ್ತಿದ್ದರು. ಅಲ್ಲಿದ್ದ ವಾತಾವರಣ ನನ್ನಲ್ಲಿ ಪ್ರಶಾಂತತೆಯ ಭಾವವನ್ನು ತುಂಬಿತು. ಗೌರವ ತುಂಬಿದ ಪ್ರೀತಿಯ ವಾತಾವರಣ ಅಲ್ಲಿತ್ತು ಆಧ್ಯಾತ್ಮಿಕ ಗುರುಗಳು ಎಂದೂ ವಿಶ್ರಾಂತರಾಗುವುದಿಲ್ಲ; ಅದಕ್ಕೆ ನನ್ನ ಕಣ್ಣ ಮುಂದೆಯೇ ನಿದರ್ಶನವಿತ್ತು. ತಮ್ಮ ೯೫ನೇ ವಯಸ್ಸಿನಲ್ಲಿಯೂ, ಸ್ವಾಮಿ ರಂಗನಾಥಾನಂದರು, ಶಾರೀರಿಕ ಅಸೌಖ್ಯದ ನಡುವೆಯೂ ತಮ್ಮ ಆಧ್ಯಾತ್ಮಿಕ ಕೆಲಸಗಳನ್ನು ಮುಂದುವರಿಸಿದ್ದರು. ನಾನು ಅವರ ದರ್ಶನವನ್ನು ಮತ್ತೆ ಪಡೆಯುತ್ತೇನೆ ಎಂದು ನನಗೆ ವಿಶ್ವಾಸವಿತ್ತು.

**ಸಂದರ್ಶನ**

ಮರುದಿನ ನಾನು ಮಠದ ಸಂನ್ಯಾಸಿಗಳ ನಿವಾಸಕ್ಕೆ ಬಂದು ನನ್ನ ಧ್ವನಿಮುದ್ರಕವನ್ನು ಸಿದ್ಧಗೊಳಿಸಿ ಶಾಂತವಾಗಿ ಕಾಯುತ್ತಿದ್ದೆ. ಸ್ವಾಮಿಗಳೂ ಅಸ್ಮಿತಾನಂದ ಅವರು ಅಧ್ಯಕ್ಷ ಮಹಾರಾಜ್ ಅವರ ಕೋಣೆಯ ಒಳಗೆ ಹೋಗುವಂತೆ ಸೂಚಿಸಿದರು. ಸಂದರ್ಶನಕ್ಕಾಗಿ ನನಗೆ ಅವಕಾಶ ಸಿಕ್ಕಿದುದಕ್ಕಾಗಿ ಹರ್ಷವಾಯಿತು. ಆದರೆ ನನಗೆ ಕೇವಲ ಐದು ನಿಷಗಳನ್ನು ಕೊಟ್ಟಿದ್ದರು. ಅವರಿಗೆ ಪ್ರಣಾಮಗಳನ್ನು ಸಲ್ಲಿಸಿ, ಅವರ ಹತ್ತಿರದಲ್ಲಿಯೇ ಧ್ವನಿಮುದ್ರಕವನ್ನಿರಿಸಿ ಅದರ ಸ್ವಿಚ್ಚನ್ನು ಒತ್ತಿ ಮಾತನಾಡಲು ತೊಡಗಿದೆ.

'ಸ್ವಾಮೀಜಿ, ನೀವು ಸುದೀರ್ಘವಾದ, ಶ್ರೀಮಂತವಾದ ಹಾಗೂ ಸೇವೆಗಾಗಿಯೇ ಅರ್ಪಿತವಾಗಿದ್ದ ಬಾಳನ್ನು ಬಾಳಿದ್ದೀರಿ. ಜೀವನ, ಸಾವು ಇವುಗಳ ಬಗ್ಗೆ ನೀವು ಇತರರೊಡನೆ ಹಂಚಿಕೊಳ್ಳಬಹುದಾದ ನಿಮ್ಮ ಸ್ವಂತ ಅಭಿಪ್ರಾಯವೇನು?' ನಾನು ಕೇಳಿದೆ.

'ಉಪನಿಷತ್ತುಗಳ ಸಂದೇಶ ಎಂಬ ಪುಸ್ತಕವನ್ನು ನೋಡಿದ್ದೀರಿ'– ಅವರು ತಮ್ಮ ಬಿಡಿಬಿಡಿಯಾದ ಮಾತುಗಳಲ್ಲಿ ಹೇಳಿದರು.

'ನೋಡಿದ್ದೇನೆ, ಬಹಳ ವರ್ಷಗಳ ಹಿಂದೆ ನಾನು ನಿಮ್ಮನ್ನು ಪ್ರಥಮ ಬಾರಿಗೆ ಭೇಟಿಯಾದಾಗ ನೀವೇ ಅದರ ಒಂದು ಪ್ರತಿಯನ್ನು ನನಗೆ ಅನುಗ್ರಹಿಸಿದ್ದಿರಿ' ಎಂದೆ. ಮತ್ತೆ ಹಂಚಿಕೊಳ್ಳಬಹುದಾದ ವೈಯಕ್ತಿಕ ಸಂದೇಶವೇನು ಎಂದು ಕೇಳಿದೆ.

'ಅದು ರಾಮಕೃಷ್ಣರ ಸಂದೇಶವೇ, ಪ್ರೀತಿಸು, ಸೇವೆ ಮಾಡು ಮತ್ತು ಮಾನವರಲ್ಲಿರುವ ಭಗವಂತನ ಸೇವೆಯನ್ನು ಮಾಡು ಎಂಬುದು. ಮುಖ್ಯವಾದ ಧ್ಯೇಯ ಎಲ್ಲರಲ್ಲಿರುವ ಭಗವಂತನನ್ನು ಸೇವಿಸುವುದು. ಪ್ರತಿಯೊಬ್ಬ ಮಾನವರೂ ದೈವತ್ವದ ಸಾಕಾರರೂಪವೇ. ಉಪನಿಷತ್ತುಗಳು ಮತ್ತು ಶ್ರೀ ರಾಮಕೃಷ್ಣರು ಹೇಳುವುದು ಇದನ್ನೇ. ಸೇವೆಯೇ ಒಂದು ಮಹಾನ್ ಮಾರ್ಗ. ಜನಗಳಿಗೆ ಸಹಾಯ ಮಾಡಿ, ಅವರ ಸೇವೆಯನ್ನು ಮಾಡಿ. ಯಾರನ್ನೂ ಶೋಷಿಸಬೇಡಿ, ದ್ವೇಷಿಸಬೇಡಿ. ಈ ಸಂದೇಶವನ್ನು ಎಲ್ಲರೊಡನೆ ಹಂಚಿಕೊಳ್ಳುವುದಕ್ಕೆ ಬಯಸುತ್ತೇನೆ' ಎಂದರು.

'ಪ್ರಪಂಚದಲ್ಲಿ ಬಹಳಷ್ಟು ಜನರು ಯಾವ ಸೇವೆಯನ್ನೂ ಮಾಡುವುದಿಲ್ಲ, ಅವರಿಗೆ ಆಧ್ಯಾತ್ಮಿಕ ತಳಹದಿಯೇ ಇರುವುದಿಲ್ಲ' ಎಂದು ಕೇಳಿ ಸೇವೆಯಲ್ಲಿರಬೇಕಾದ ಪ್ರಧಾನ ಅಂಶ ಯಾವುದು ಎಂದು ಒತ್ತಿ ಕೇಳಿದೆ.

'ಅವರು ಈ ವಿಚಾರವನ್ನು ಅರ್ಥಮಾಡಿಕೊಂಡೇ ಇಲ್ಲ' ಎಂದರು  ಸ್ವಾಮೀಜಿ.

'ಅವರಿಗೆ ಅರ್ಥವಾಗುವಂತೆ ಮಾಡುವುದು ಹೇಗೆ? ಇದರಲ್ಲಿ ನಂಬಿಕೆ ಇಲ್ಲದ, ಕೇವಲ ಭೌತಿಕತೆಯಲ್ಲಿಯೇ ಮುಳುಗಿ, ದೈವತ್ವದ ಕಲ್ಪನೆಯೇ ಇಲ್ಲದವರಿಗೆ ಈ ಸಂದೇಶವನ್ನು ಮುಟ್ಟಿಸುವುದು ಹೇಗೆ?' ಎಂದು ಕೇಳಿದೆ.

'ಅವರು ಚಿಕ್ಕ ಚಿಕ್ಕ ಪುಸ್ತಕಗಳನ್ನು ಓದಬೇಕು. ಎಲ್ಲರೂ ಚಿಕ್ಕ ಚಿಕ್ಕ ಪುಸ್ತಕಗಳನ್ನು ಓದಬೇಕು. ಕೈಗಾರಿಕೆಗಳು, ರಾಜಕೀಯ ಮುಂತಾದವನ್ನು ಕುರಿತು ಅನೇಕ ಪುಸ್ತಕಗಳನ್ನು ಓದುತ್ತಾರೆ. ಹಾಗೆಯೇ ಆತ್ಮೋದ್ಧಾರದ, ಆಧ್ಯಾತ್ಮಿಕ ಪುಸ್ತಕಗಳನ್ನೂ ಓದಬೇಕು' ಎಂದರು.

'ಚಿಕ್ಕ ಚಿಕ್ಕ ಪುಸ್ತಕಗಳು' ಎಂದರೆ ಸ್ವಾಮಿ ವಿವೇಕಾನಂದರ ಕಾಲದಿಂದಲೂ ರಾಮಕೃಷ್ಣಾಶ್ರಮದ ಸಂನ್ಯಾಸಿಗಳು ಬರೆದಿರುವ ಚಿಕ್ಕ ಚಿಕ್ಕ ಪುಸ್ತಕಗಳು ಎಂಬುದು ಸ್ವಾಮೀಜಿಯವರ ಅಭಿಪ್ರಾಯವಿರಬೇಕೆಂದು ನನಗೆ ಅನಿಸಿತು. ಗಾತ್ರದಲ್ಲಿ ಚಿಕ್ಕವಾದರೂ, ಆಧ್ಯಾತ್ಮಿಕ ಅಂತರ್ದೃಷ್ಟಿಯಿಂದ ಅವು ಮಹತ್ವದ ಪುಸ್ತಕಗಳು. ಅವು ವಿಷಯದ ಹೃದಯಭಾಗಕ್ಕೇ ಹೋಗಿ, ಅವುಗಳ ಸಾರವನ್ನು ತಂದುಕೊಡುತ್ತವೆ. ಸ್ವಾಮಿ ರಂಗನಾಥಾನಂದರೇ ಅಂತಹ

ಹಲವು ಪುಸ್ತಕಗಳನ್ನು (‘ವಿಜ್ಞಾನ ಮತ್ತು ಆಧ್ಯಾತ್ಮಿಕತೆ’, ‘ವೇದಾಂತ ಮತ್ತು ಮಾನವಜನಾಂಗದ ಭವಿಷ್ಯ’, ‘ಆದರ್ಶ ಗೃಹಸ್ಥನಾಗುವುದು ಹೇಗೆ’, ಮುಂತಾದ ಹಲವಾರು ಪುಸ್ತಕಗಳನ್ನು) ಬರೆದಿದ್ದಾರೆ.

ನಮ್ಮ ಸಂಭಾಷಣೆಯ ದಿಕ್ಕನ್ನು ಅನುಸರಿಸಿ ನಾನು ಕೇಳಿದೆ ‘ಸ್ವಾಮೀಜಿ, ಆಧ್ಯಾತ್ಮಿಕವಾಗಿ ಅರಳುತ್ತಿರುವ ಮಾನವ ಸಮಾಜ ಇಪ್ಪತ್ತೊಂದನೆಯ ಶತಮಾನದಲ್ಲಿ ರೂಪುಗೊಳ್ಳಲಿದೆ ಎಂದು ವರ್ಷಗಳ ಹಿಂದೆ ನೀವು ನನಗೆ ಹೇಳಿದ್ದಿರಿ. ಅದರ ಬಗ್ಗೆ ನಿಮ್ಮ ಈಗಿನ ಅಭಿಪ್ರಾಯವೇನು?’

‘ಈ ದಿಕ್ಕಿನಲ್ಲಿ ಸ್ವಲ್ಪ ಬೆಳವಣಿಗೆಯಾಗಿದೆ. ಜನಗಳಿಂದ ಬರುತ್ತಿರುವ ಪ್ರತಿಕ್ರಿಯೆಗಳನ್ನು ನೋಡಿದಾಗ ಇದು ಸಾಧ್ಯವೆಂದೆನಿಸುತ್ತದೆ. ಉನ್ನತ ಮೌಲ್ಯಗಳ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಬಗ್ಗೆ ಪಶ್ಚಿಮದಲ್ಲಿ ಅದ್ಭುತವಾದ ಪ್ರತಿಕ್ರಿಯೆ ಕಂಡು ಬರುತ್ತಿದೆ. ಆದರೆ ಈ ವಿಷಯದಲ್ಲಿ ಆಸಕ್ತಿ ಹೊಂದಿರುವ ಬಹಳಷ್ಟು ಜನರು ವಂಚನೆಗೆ ಒಳಗಾಗುತ್ತಿದ್ದಾರೆ. ಕಾರಣ, ಅವರಿಗೆ ನಿಜವಾದ ಆಧ್ಯಾತ್ಮಿಕತೆ ಎಂದರೆ ಏನು ಎಂಬುದು ತಿಳಿದಿಲ್ಲ’ ಎಂದರು.

‘ನಿಜವಾದ ಆಧ್ಯಾತ್ಮಿಕತೆ ಎಂದರೇನು?’ ನಾನು ಕೇಳಿದೆ.

‘ವೇದಾಂತ ಎಲ್ಲ ಜೀವಿಗಳಲ್ಲೂ ಇರುವ ಪರಮ ಸತ್ಯವು ಒಂದೇ ಎಂದು ಹೇಳುತ್ತದೆ. ಇದನ್ನು ಅರಿಯುವುದೇ, ಅದನ್ನು ಜೀವನದಲ್ಲಿ ಅನುಸರಿಸುವುದೇ ನಿಜವಾದ ಆಧ್ಯಾತ್ಮಿಕತೆ. ಅಂದರೆ ನಮ್ಮಲ್ಲಿರುವ ದಿವ್ಯತೆಯನ್ನು ಅರಿತು ಅದರ ಬೆಳಕಿನಲ್ಲಿ ಬೇರೆಯವರೊಡನೆ ವರ್ತಿಸುವುದು’ ಎಂದರು.

‘ನಿಜವಾದ ಅರಿವಿಲ್ಲದ ಇಂತವರು ಹೇಗೆ ಮೋಸ ಹೋಗುತ್ತಾರೆ?’

‘ಅಗ್ಗದ ಮತಧರ್ಮದ ಹಿಂದೆ ಹೋಗುವವರು, ಮೋಸಮಾಡುವವರ ಹತ್ತಿರಕ್ಕೆ ಹೋಗಿ ಮೋಸಹೋಗುತ್ತಾರೆ.’

‘ಹೀಗೆ ಮೋಸಮಾಡುವುದನ್ನು ತಡೆಯುವುದು ಹೇಗೆ? ಭ್ರಾಮಕ ಅಧ್ಯಾತ್ಮ, ಅರ್ಹತೆಯಿಲ್ಲದ ಗುರುಗಳು, ಅರ್ಹತೆಯಿಲ್ಲದ ಆಕಾಂಕ್ಷಿಗಳು– ಈ ವಿಷಯಗಳು ಇಂದು ಬಹಳ ಮುಖ್ಯವಾಗಿವೆ. ಅನಧಿಕೃತವಾದವುಗಳು ಹಲವಾರು ಇವೆ.’

‘ಇದು ಒಳ್ಳೆಯದಲ್ಲವೇ ಅಲ್ಲ. ಗಡ್ಡಧಾರೀ ಗುರುಗಳಿಂದ ಬಹಳ ಜನ ಆಕರ್ಷಿತರಾಗುತ್ತಾರೆ. ಅಲ್ಲದೆ ಅವರಲ್ಲಿಗೆ ಹೋಗುವ ಶಿಷ್ಯರಿಗೂ ಈ ವಿಷಯದಲ್ಲಿ ಗಂಭೀರವಾದ ಆಸಕ್ತಿಯಿರುವುದಿಲ್ಲ. ಇದು ವಿಶ್ವದ ಎಲ್ಲೆಡೆ ನಡೆಯುತ್ತಿದೆ. ಗುರುವು ಅಸಾಧಾರಣ ವ್ಯಕ್ತಿಯಾಗಿರಬೇಕು, ಶಿಷ್ಯ ಅರ್ಹನಾಗಿರಬೇಕು ಎಂದು ‘ಕಠೋಪನಿಷತ್ತು’ ಹೇಳುತ್ತದೆ’ (ಸ್ವಲ್ಪ ಹೊತ್ತು ನಿಲ್ಲಿಸಿ ಮತ್ತೆ ಹೇಳಿದರು) ‘ಭೌತಿಕತೆಯತ್ತ ಬಹಳಷ್ಟು ಒತ್ತು ಬೀಳುತ್ತಿದೆ. ಆದರೆ, ಸ್ವಾಮಿ ವಿವೇಕಾನಂದರು ಅಮೆರಿಕಾದಲ್ಲಿ ಮತ್ತು ಇಂಗ್ಲೆಂಡ್‌ನಲ್ಲಿ ಪ್ರಮುಖವಾಗಿ ಹೇಳಿದ ಮಾನವ ಜೀವಿಯ ಆಂತರ್ಯದ ಆಳದ ಮೇಲೆ ಗಮನ ಹರಿಸುತ್ತಿಲ್ಲ. ಸ್ವಾಮಿ ವಿವೇಕಾನಂದರ ಸಮಗ್ರ ಕೃತಿಗಳಲ್ಲಿ ಸರಳವಾದ ಆಧ್ಯಾತ್ಮಿಕ ಸೂತ್ರಗಳಿವೆ. ಅನೇಕ ಜನ ಇದರ ಬಗ್ಗೆ ತಿಳಿದುಕೊಳ್ಳಲು ಕಾತರರಾಗಿದ್ದಾರೆ. ವಿಜ್ಞಾನಿಗಳು ಕೂಡ ಕಾತರರಾಗಿದ್ದಾರೆ.’

ಹಿಂದಿನ ದಿನ ಮಹಾರಾಜ್ ಅವರು ತಮ್ಮ ಕುರ್ಚಿಯಲ್ಲಿ ಕುಳಿತಿದ್ದ ದೃಶ್ಯ ಮತ್ತು ಭಕ್ತರು ಸಾಲುಗಟ್ಟಿ ದರ್ಶನಕ್ಕೆ ಬರುತ್ತಿದ್ದ ದೃಶ್ಯ ನನ್ನ ಮನಸ್ಸಿಗೆ ಬಂದಿತು. ನಾನು ಕೇಳಿದೆ ‘ಸ್ವಾಮೀಜಿ, ನಿಮಗೆ ಈಗ ೯೫.’

ಅವರು ತಿದ್ದಿದರು– ‘ಈಗ ೯೬ ನಡೆಯುತ್ತಿದೆ, ಹೌದು ೯೬ ನಡೆಯುತ್ತಿದೆ, ನಾನು ತುಂಬು ಹಾಗೂ ಚೈತನ್ಯಪೂರ್ಣವಾಗಿ ಬದುಕುತ್ತಿದ್ದೇನೆ. ಪಶ್ಚಿಮದಲ್ಲಿ, ೬೦–೬೫ ಆದರೆ ಆತನ ಅಥವಾ ಆಕೆಯ ವೃತ್ತಿಜೀವನ ಮುಗಿಯುತ್ತದೆ. ಇಲ್ಲೂ ಕೂಡ ಬಹು ಜನರು ಹಾಗೆಯೇ ಯೋಚಿಸುತ್ತಾರೆ. ಭಾರತದಲ್ಲಿ ೮೦ ವರ್ಷಗಳನ್ನು ಪೂರೈಸುವುದು ಉತ್ತಮವೆಂದು ಭಾವಿಸುತ್ತಾರೆ. ೮೦ ವರ್ಷಗಳನ್ನು ಪೂರೈಸಿದವರು ಒಂದು ಸಾವಿರ ಬಾರಿ ಪೂರ್ಣಚಂದ್ರನನ್ನು ಕಂಡಿರುತ್ತಾರೆ. ಅದನ್ನು ಬಹಳವಾಗಿ ಕೊಂಡಾಡುತ್ತಾರೆ’ ಎಂದರು.

'ಹಾಗಾದರೆ ೯೫ ಕಳೆದು ೧೦೦ರಲ್ಲಿ ಇರುವುದರ ಬಗ್ಗೆ ಏನು ಹೇಳುತ್ತಾರೆ?' ಎಂದೆ.

'ಗೊತ್ತಿಲ್ಲ. ಆದರೆ ನಾನು ದೈಹಿಕವಾಗಿ ಮತ್ತು ಮಾನಸಿಕವಾಗಿ ಇನ್ನೂ ತರುಣನೆಂದೇ ನನಗೆ ಎನಿಸುತ್ತಿದೆ.' ಆದರೆ ಅವರು ತಮ್ಮತನ್ನವನ್ನು ಭೌತಿಕ ಶರೀರದೊಂದಿಗೆ ಗುರುತಿಸಿಕೊಳ್ಳುವುದಿಲ್ಲ ಎಂಬುದನ್ನು ಅವರಿಗೆ ಹೇಳಿದೆ. ಮುಂದುವರಿಸಿ ಹೇಳಿದೆ: 'ನೀವು ಮಾತನಾಡುತ್ತಿರುವಾಗ ವಿಚಾರಗಳ ಸ್ಪಷ್ಟತೆ ಕಾಣುತ್ತದೆ. ನಿಮ್ಮ ಈ ಯಶಸ್ಸಿನ ರಹಸ್ಯವೇನು?'

ತಡೆಬಡೆಯಿಲ್ಲದೇ ಬಂದಿತು ಉತ್ತರ: 'ಯುವಕನಾಗಿದ್ದಾಗ ಬಹಳ ಶಕ್ತಿಯಿದ್ದಿತು. ಅದು ಬಹಳ ಮುಖ್ಯ. ಮತ್ತೆ, ನನ್ನಲ್ಲಿ ಸಕಾರಾತ್ಮಕ, ನಿರಾಕರಣಾತ್ಮಕ ಎಂಬ ಭಾವ ಭಾವನೆಗಳು ಇಲ್ಲ.'

'ಅಂದರೆ, ಮನಸ್ಸಿನ ಸಮತೋಲನ ಸ್ಥಿತಿ, ನಿರ್ಲಿಪ್ತತೆ' ಎಂದೆ.

'ಹೌದು. ಅದು ಮಾನವ ಜನಾಂಗಕ್ಕೆ ಒಳ್ಳೆಯದು. ನಾನು ಚಿಕ್ಕವನಿದ್ದಾಗ ಸ್ವಾಮಿ ವಿವೇಕಾನಂದರ ಕೃತಿಗಳನ್ನು ಓದಿದೆ. ಅದು ನನಗೆ ಅದ್ಭುತವಾದ ಶಿಕ್ಷಣವನ್ನು ನೀಡಿತು. 'ಭಕ್ತಿಯೋಗ', 'ಕೊಲಂಬೋಯಿಂದ ಅಲ್ಮೋರದವರೆಗೆ'ನ ಭಾಷಣಗಳು– ಎಷ್ಟು ಸುಂದರವಾದವುಗಳು, ಸ್ಫೂರ್ತಿಯನ್ನು ನೀಡುವಂಥವುಗಳು. ನಾನು ಈಗಲೂ ಅದನ್ನು ಓದಿ ಆನಂದಿಸುತ್ತೇನೆ.'

'ನಿಮ್ಮಲ್ಲಿ ಭಕ್ತಿ ಬೆಳೆದದ್ದು ಹೇಗೆ?'

'ಈ ಎಲ್ಲಾ ವಿಚಾರಗಳೂ ವಿವೇಕಾನಂದರ ಸಾಹಿತ್ಯದಿಂದ ಬಂದವು. ಆಸಕ್ತಿದಾಯಕವಾದ, ಶಕ್ತಿಯುತವಾದ ಸುಂದರವಾದ ಇಂಗ್ಲಿಷ್. ಸುಂದರವಾದ ವಿಚಾರಗಳು.'

'ನೀವು ಈಗಲೂ ಓದುತ್ತೀರಾ?'

'ಇಲ್ಲ, ಆದರೆ ಬೇಕಾದಾಗಲೆಲ್ಲಾ ಅದನ್ನು ಆಶ್ರಯಿಸುತ್ತೇನೆ.'

'ನೀವೀಗ ಏನನ್ನಾದರೂ ಬರೆಯುತ್ತಿರುವಿರಾ?'

'ಯಾವುದೂ ಇಲ್ಲ. 'ಗೀತೆ' ಸಿದ್ಧವಾಗಿದೆ. ಅದಾದ ಮೇಲೆ 'ಶ್ರೀಮದ್ಭಾಗವತ'ದ ಸಾರಭೂತ ಅಭಿಪ್ರಾಯ ಎಂಬ ಚಿಕ್ಕ ಪುಸ್ತಕವು ಬರಬೇಕು. ಭಾರತದಲ್ಲಿ 'ಭಾಗವತ'ವು ಬಹು ಮುಖ್ಯವಾದ ಆಧ್ಯಾತ್ಮಿಕ ಪುಸ್ತಕ.'

'ಇದುವರೆಗೂ ಬರೆದಿಲ್ಲದ ಆದರೆ, ಈಗಲೂ ಬರೆಯಲು ಬಯಸಿರುವುದು ಏನಾದರೂ ಇದೆಯೇ?'

'ಕೆಲವು ವೇಳೆ ಒಂದು ಲೇಖನವನ್ನೋ ಒಂದು ಸಂದೇಶವನ್ನೋ ಬರೆಯುತ್ತೇನೆ. ಅದಷ್ಟೇ ಈಗ. ಆದರೆ ನಿಯತವಾಗಿ ಯಾವುದನ್ನೂ ಬರೆಯುತ್ತಿಲ್ಲ. ಬರೆಯುವುದಕ್ಕೆ ಬೇಕಾದ ಸಾಮಗ್ರಿ ಮಾತ್ರ ಬೇಕಾದಷ್ಟಿದೆ.'

ಅವರ ಕಡೆಯ ಮಾತು ನನ್ನಲ್ಲಿನ ಲೇಖಕನನ್ನು ಎಚ್ಚರಗೊಳಿಸಿತು. ಕೇಳಿದೆ: 'ಸ್ವಾಮೀಜಿ, ಇದು ಸಾಮಗ್ರಿಗಳ ಬಗ್ಗೆ, ನೀವು ಬರೆಯುವಾಗ ಬೇಕಾದ ಆಕರಗಳನ್ನು ನೋಡುತ್ತೀರೋ ಅಥವಾ ನಿಮ್ಮೊಳಗಿನಿಂದ ಅವೇ ಹೊರಬರುತ್ತವೆಯೋ?'

'ಮೂರು ವರ್ಷದ ಹಿಂದೆ ಆದ ಪಾರ್ಶ್ವವಾಯುವಿನಿಂದಾಗಿ– ಅದು ಲಘು ಪಾರ್ಶ್ವವಾಯು– ನನ್ನ ದೇಹದ ತೋಲನ ತಪ್ಪಿದೆ. ಎಷ್ಟೋ ವಿಷಯಗಳನ್ನು ಮರೆತುಬಿಟ್ಟಿದ್ದೇನೆ. ಸಮತೋಲನವಿಲ್ಲ. ದೃಷ್ಟಿ ದುರ್ಬಲವಾಗಿದೆ. ಹಾಗೆಯೇ ಎಡಗಾಲು ಮತ್ತು ಎಡಗೈ ಕೂಡ' ಎಂದರು.

'ನಿಮಗೆ ಈಗ ಹೇಗಿದೆ? ನಿಮ್ಮ ಶರೀರ ಸಹಜವಾಗಿ ಸ್ಪಂದಿಸುತ್ತಿಲ್ಲದಿರುವಾಗ ನಿಮಗೆ ಹೇಗೆನ್ನಿಸುತ್ತದೆ?'

'ಸಂತೋಷವಾಗಿದೆ' ಬಂದಿತು ಅನಿರೀಕ್ಷಿತ ಉತ್ತರ.

'ಸಂತೋಷ?'

'ಹೌದು, ಮುಂದೆ ಹೋಗುವುದಕ್ಕೆ ಸಂತೋಷವೇ.'

ತಮ್ಮ ಸಾವು ಹತ್ತಿರವಾಗುತ್ತಿದೆ ಎಂಬ ದೃಷ್ಟಿಯಿಂದ ನುಡಿಯುವ, ಪ್ರಾಪಂಚಿಕದಲ್ಲೇ ಇದ್ದು ವೃದ್ಧರಾದವರ ಮಾತಿನಂತೆ ಇರಲಿಲ್ಲ ಸ್ವಾಮಿ ರಂಗನಾಥಾನಂದರದು. ಅವರು ನನ್ನ ಮಾತಿನ ಸರಣಿಯಿಂದ ವಿಚಲಿತರಾಗಿರಲಿಲ್ಲ.

'ಭಯವೇನಿಲ್ಲ... ಮತ್ತೆ ಬರುತ್ತೇನೆ' ಎಂದು ಹಿಂದಿನ ವಾಕ್ಯಕ್ಕೆ ಸೇರಿಸಿದರು.

'ಹಾಗೆ ಹೋಗುವುದಕ್ಕೆ ಹೇಗೆ ಸಿದ್ಧ ಮಾಡಿಕೊಂಡಿದ್ದೀರಿ?'

'ನನ್ನ ಮನಸ್ಸು ಆಗಲೇ ಅಲ್ಲಿದೆ, ಭಯವಿಲ್ಲ. ದೈವಿಕವಾದ ಅನುಭವ! ನಾನು ಪುನರ್ಜನ್ಮವನ್ನು ನಂಬುತ್ತೇನೆ. ನೀನು ಸತನಂತರ ನಿನ್ನ ಕರ್ಮದ ಪ್ರಕಾರ ಮತ್ತೆ ಹುಟ್ಟುತ್ತೀಯೆ ಎಂದು 'ಗೀತೆ' ಹೇಳುತ್ತದೆ. ಹಾಗೇ ಅನೇಕ ಜನ್ಮಗಳು ಸಾಗುತ್ತವೆ. ಹಾಗೆ ಹೋಗುತ್ತಾ ಪರಮಾತ್ಮನ ಸಾಕ್ಷಾತ್ಕಾರವಾಗಬಹುದು. ಅದಾದ ಮೇಲೆ ಪುನರ್ಜನ್ಮವಿಲ್ಲ. ನಿನಗೆ ಆತ್ಮದ ಸಾಕ್ಷಾತ್ಕಾರವಾಗಿರುತ್ತದೆ.'

ಮಾನವನನ್ನು ಸಂಕಷ್ಟಕ್ಕೀಡುಮಾಡುವ ಅನೇಕ ಸಮಸ್ಯೆಗಳಿಂದ ಸ್ವಾಮೀಜಿಯವರು ವ್ಯಥಿತರಾಗಿರಲಿಲ್ಲ. ಪುನರ್ಜನ್ಮದ ಬಗ್ಗೆ ಬಡಬಡ ಎಂದು ಧಾರಾಳವಾಗಿ ಭಾಷಣ ಮಾಡಬಹುದು. ಆದರೆ ಸ್ವಾಮೀಜಿಯವರ ಮಾತುಗಳು ಅವರ ಆಳವಾದ ಆತ್ಮದರ್ಶನದಿಂದ ಬಂದುದಾಗಿತ್ತು. ಅವರ ಮಾತುಗಳು, ದೇಹ ಅಂತ್ಯವಾದ ಮಾತ್ರಕ್ಕೆ ಆತ್ಮಕ್ಕೆ ಸಾಯುವುದಿಲ್ಲ ಎಂಬ ತತ್ತ್ವವನ್ನು ಅರಿತಂತಹವರ ಶಕ್ತಿಯಿಂದ ಹೊರಬಂದ ಸ್ಫೂರ್ತಿದಾಯಕವಾದ ಮಾತುಗಳು. ಸಾವಿನ ಸನಿಹತೆ ಅವರನ್ನು ವಿಚಲಿತರನ್ನಾಗಿಸಿರಲಿಲ್ಲ. ಅವರ ದೇಹ ದುರ್ಬಲವಾಗಿದ್ದಿರಬಹುದು; ಆದರೆ ಮುಂಬರುವ ಅಂತ್ಯವನ್ನು ಎದುರಿಸಿ ಮತ್ತೆ ಹೊಸ ಆರಂಭವನ್ನು ಕಾಣುವ ಅವರ ಆತ್ಮಬಲ ದೃಢವಾಗಿತ್ತು. ಸಾವಿಗೆ ಹೆದರದೆ, ಆತ್ಮದ ಅಮರತ್ವದಲ್ಲಿ ಪೂರ್ಣ ನಂಬಿಕೆಯನ್ನಿಟ್ಟ ಹಿರಿಯ ಆಧ್ಯಾತ್ಮಿಕ ಗುರುವಿನೊಡನೆ ಸಂಭಾಷಿಸುವುದು ಚೇತೋಹಾರಿಯಾಗಿರುತ್ತದೆ.

'ನೀವು ನಿಮ್ಮ ಮುಂದಿನ ಜನ್ಮವನ್ನು ನಿರೀಕ್ಷಿಸುತ್ತಿದ್ದೀರಾ?' ನಾನು ಕೇಳಿದೆ.

'ಇಲ್ಲಿಯವರೆಗಿನ ಜನ್ಮಗಳಲ್ಲಿ ಕೊರತೆಯೇನಾದರೂ ಇದ್ದರೆ ನಾನು ಪುನರ್ಜನ್ಮವನ್ನು ಪಡೆಯುತ್ತೇನೆ.'

'ಏನಾದರೂ ಕೊರತೆಯಿದೆ ಎಂದು ನಿಮಗೆ ಅನಿಸುತ್ತಿದೆಯೇ?'

'ಹೌದು, ಪರಿಪೂರ್ಣತೆಯಿಲ್ಲ.'

'ಆ ಕೊರತೆ ಯಾವುದು?'

'ಆಧ್ಯಾತ್ಮಿಕ ಸಾಕ್ಷಾತ್ಕಾರ, ಅತ್ಯುನ್ನತವಾದ ಆತ್ಮ ಸಾಕ್ಷಾತ್ಕಾರ.'

ಈ ಉತ್ತರವನ್ನು ನಾನು ನಿರೀಕ್ಷಿಸಿರಲಿಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕು. ಮತ್ತೆ ನಾನು ಅವರ ಪ್ರಾಮಾಣಿಕತೆಯನ್ನು ಮೆಚ್ಚಿಕೊಂಡೆ. ಅಥವಾ ಅದು ಹಾಗೆ ಹೇಳುತ್ತಿರುವುದು ಅವರ ವಿನಮ್ರತೆಯೋ? ದೈನ್ಯತೆಯೋ?

'ನಿಮಗೆ ಈ ಜನ್ಮದಲ್ಲಿಯೇ ಇನ್ನೂ ಹೆಚ್ಚಿನ ಆಧ್ಯಾತ್ಮಿಕ ಸಾಕ್ಷಾತ್ಕಾರವನ್ನು ಸಾಧಿಸಲು ಸಾಧ್ಯವೇ?' ನಾನು ಕೇಳಿದೆ.

'ನನ್ನ ಶರೀರ ಈಗ ಅಷ್ಟು ಸಬಲವಾಗಿಲ್ಲ. ನಾನು ಈಗ ಪರಿಸ್ಥಿತಿಗೆ ಶರಣಾಗಲೇಬೇಕು.'

'ಶರಣಾಗುವುದೆಂದರೆ, ನೀವು ಇಲ್ಲಿಂದ ತೆರಳಲು ಸಿದ್ಧರಾಗಿದ್ದೀರಿ ಎಂದಲ್ಲವೇ?'

'ನಾನು ಸಿದ್ಧ. ನಾನು ಸಾವಿಗೆ ಹೆದರುವುದಿಲ್ಲ. ಸಾವಿಗೆ ಹೆದರಬೇಡ ಎಂದು 'ಗೀತೆ' ಉಪದೇಶಿಸುತ್ತದೆ.'

ಈ ಮಾತಿನೊಂದಿಗೆ ನಮ್ಮ ಸಂಭಾಷಣೆ ಮುಗಿಯಿತು. ನಮಗೆ ಕೊಟ್ಟಿದ್ದ ಐದು ನಿಮಿಷಗಳ ಅವಧಿಯ ಎರಡರಷ್ಟು ವೇಳೆಯನ್ನು ಅಧ್ಯಕ್ಷ ಮಹಾರಾಜ್ ಅವರು ಮತ್ತು ನಾನು ತೆಗೆದುಕೊಂಡಿದ್ದೆವು. ಸ್ವಾಮಿ ಅಸೀಮಾತ್ಮಾನಂದ

ಅವರು ಸಂದರ್ಶನವನ್ನು ಮುಗಿಸುವಂತೆ ಸನ್ನೆ ಮಾಡಿದರು. 'ಸ್ವಾಮೀಜಿ, ಇದನ್ನು ಮುಂದಿನ ಬಾರಿ ಮುಂದುವರಿಸೋಣ, ನಿಮ್ಮನ್ನು ಮತ್ತಷ್ಟು ಬಳಲಿಸಲು ಇಷ್ಟಪಡುವುದಿಲ್ಲ. ಇವತ್ತು ನಿಮ್ಮ ಶರೀರಕ್ಕೆ ಮಾಡಲು ಸಾಕಷ್ಟು ಕೆಲಸವಿದೆ' ಎಂದೆ.

ನನ್ನ ಕಡೆಯ ಮಾತಿಗೆ ಸ್ವಾಮಿ ರಂಗನಾಥಾನಂದರು ಮನಃಪೂರ್ವಕವಾಗಿ ನಕ್ಕರು. 'ಥ್ಯಾಂಕ್ಯೂ. ನನ್ನ ಪ್ರೇಮವನ್ನು ಹಾಲೆಂಡಿನಲ್ಲಿ ಎಲ್ಲರಿಗೂ ತಿಳಿಸಿ' ಎಂದರು.

'ಥ್ಯಾಂಕ್ಯೂ, ನಿಮಗೆ ತಮ್ಮ ಪ್ರಣಾಮಗಳನ್ನು ತಿಳಿಸಲು ಸ್ವಾಮಿ ಸರ್ವಾತ್ಮಾನಂದಜೀ ಮಹಾರಾಜ್ ಅವರು ನನಗೆ ಹೇಳಿದ್ದಾರೆ' ಎಂದೆ.

'ಒಳ್ಳೆಯದು, ಅವರು ನನಗೆ ಬಹಳ ಪ್ರಿಯವಾದವರು, ಉಲ್ಲಾಸದ ಪ್ರಕೃತಿಯವರು' ಎಂದರು.

ನಂತರ ಅಲ್ಲಿಯೇ ಇದ್ದ ಸ್ವಾಮಿಗಳಲ್ಲಿ ಒಬ್ಬರು ನನ್ನ ಬಳಿ ಬಂದು 'ಉತ್ತಮವಾದ ಸಂದರ್ಶನ. ಈ ಮೊದಲು ತಿಳಿಯದೇ ಇದ್ದ ಎಷ್ಟೋ ಸಂಗತಿಗಳು ನನಗೆ ತಿಳಿಯಿತು' ಎಂದರು.

ಮುಂದಿನ ನಮ್ಮ ಸಂದರ್ಶನದ ಪ್ರಾರಂಭದಲ್ಲಿಯೇ ಅವರು ಹೇಳಿದರು, 'ಹೇಳಬೇಕಾದುದನ್ನೆಲ್ಲಾ ಹೇಳಿಯಾಗಿದೆ.' ಆದರೂ ಮತ್ತೆ ಕೆಲವು ಪ್ರಶ್ನೆಗಳನ್ನು ಕೇಳುವುದಕ್ಕೆ ಅನುಮತಿ ಕೊಟ್ಟರು. ನಮ್ಮ ಸಂಭಾಷಣೆ ಬಹಳ ಸಂಕ್ಷಿಪ್ತವಾಗಿತ್ತು. ನನ್ನನ್ನು ಆಶೀರ್ವದಿಸಿ, ಹಾಲೆಂಡಿನ ಇತರರಿಗೆ ತಮ್ಮ ಸದಾಶಯವನ್ನು ತಿಳಿಸಿದರು.

**ಸಂದರ್ಶನದನಂತರ**

ಸಂದರ್ಶನದ ನಂತರ ಸ್ವಾಮಿ ರಂಗನಾಥಾನಂದರ ಬಗೆಗೆ ಮತ್ತಷ್ಟು ಹೆಚ್ಚಿದ ಗೌರವಭಾವವನ್ನು ಹೊತ್ತು ಹೊರಬಂದೆ. ನಾನು ಯಾವಾಗಲೂ ಅವರಲ್ಲಿ ಮೆಚ್ಚಿಕೊಳ್ಳುತ್ತಿದ್ದ ವೈಚಾರಿಕ ಹಾಗೂ ಮಾತಿನ ಸ್ಪಷ್ಟತೆಯನ್ನು ಅವರು ಇನ್ನೂ ಉಳಿಸಿಕೊಂಡಿರುವುದಷ್ಟೇ ಅಲ್ಲ, ಅವರ ಆಂತರ್ಯದ ಪ್ರಶಾಂತತೆ ಮತ್ತು ಪ್ರೋಜ್ವಲತೆ ಮಾತ್ರವಲ್ಲ, ನಿಜವಾದ ಆಧ್ಯಾತ್ಮಿಕ ಅನುಭವಗಳನ್ನು ಪಡೆದಂತಹವರು ತಮ್ಮ ಅಂತಿಮ ವರ್ಷಗಳಲ್ಲಿ ಅನುಕರಣೀಯವಾದ ರೀತಿಯಲ್ಲಿ ಹೇಗೆ ವರ್ತಿಸುತ್ತಾರೆ ಎಂಬುದನ್ನೂ ನಾನು ಅವರಲ್ಲಿ ನೋಡಿದೆ. ಶಾರೀರಿಕ ಇತಿಮಿತಿಗಳ ಬಗ್ಗೆ ಅವರಿಗೆ ಪರಿವೆಯೇ ಇರುವುದಿಲ್ಲ. ಅವರು ಮುಂದಕ್ಕೆ ಹೋಗುತ್ತಲೇ ಇರುತ್ತಾರೆ. ಇತರರಿಗೆ ಕೊಡುತ್ತಲೇ ಇರುತ್ತಾರೆ. ಅವರು ದೇಹದ ಇತಿಮಿತಿಗಳನ್ನು ದಾಟಿದವರು. ತಮ್ಮ ವೃದ್ಧಾಪ್ಯದ ದೆಸೆಯಿಂದ ಆಗುತ್ತಿದ್ದ ಶಾರೀರಿಕ ನೋವು, ಸಂಕಟಗಳನ್ನು, ತಾವು ಅಶರೀರಿಯೋ ಎಂಬಂತೆ, ಮೆಟ್ಟಿನಿಂತ ತಮ್ಮ ಗುರು ಮಹಾಪುರುಷ ಸ್ವಾಮಿ ಶಿವಾನಂದರನ್ನೇ ಸ್ವಾಮಿ ರಂಗನಾಥಾನಂದಜೀಯವರೂ ಅನುಸರಿಸಿದರು. ತಮ್ಮ ವೃದ್ಧಾಪ್ಯದ ಹಾಗೂ ಶಾರೀರಿಕ ವಿಕಲತೆಯ ನಡುವೆಯೂ ಅವರು ಆಧ್ಯಾತ್ಮಿಕ ಸೇವೆಗಾಗಿ ದಿನದ ಹೆಚ್ಚು ಭಾಗವನ್ನು ವ್ಯಯಿಸುತ್ತಿದ್ದರು.

ನಾನು ಹಾಲೆಂಡಿಗೆ ಹಿಂತಿರುಗಿದ ಮೇಲೆ ಸ್ವಾಮಿ ರಂಗನಾಥಾನಂದರ (ಮತ್ತು ಮಹಾಪುರುಷ ಸ್ವಾಮಿ ಶಿವಾನಂದರ) ಅಂತಶ್ಶಕ್ತಿಯನ್ನು ಇನ್ನೂ ವಿಶಾಲವಾದ ಹಿನ್ನೆಲೆಯಲ್ಲಿ ಅರಿತುಕೊಂಡೆ. ಶ್ರೀ ರಾಮಕೃಷ್ಣರ ಶಕ್ತಿ ಸಂಘದ ಅಧ್ಯಕ್ಷರ ಮೂಲಕ ಅಭಿವ್ಯಕ್ತಿಗೊಳ್ಳುತ್ತದೆ ಎಂಬ ಸ್ವಾಮಿ ವಿವೇಕಾನಂದರ ಮಾತನ್ನು ಸ್ವಾಮಿ ಸರ್ವಾತ್ಮಾನಂದಜೀ ಅವರು ನನ್ನ ಗಮನಕ್ಕೆ ತಂದರು.

ಮಹಾರಾಜ್ ಅವರೊಂದಿಗಿನ ನನ್ನ ಕೊನೆಯ ಸಂಭಾಷಣೆ ಸಮರ್ಪಕವಾಗಿ ಮುದ್ರಿತವಾಗಿರಲಿಲ್ಲ ಎಂಬುದನ್ನೂ ಹಾಲೆಂಡಿಗೆ ಬಂದಮೇಲೆ ಗೊತ್ತಾಯಿತು. ಮತ್ತೆ ಮತ್ತೆ ಅದನ್ನು ಕೇಳಿದರೂ ಅದರಲ್ಲಿನ ಮಾತುಗಳು ಸ್ಪಷ್ಟವಾಗಿರಲಿಲ್ಲ. ಸಮರ್ಪಕವಾಗಿ ಬಂದಿದ್ದ ಸಂದರ್ಶನವನ್ನು ಕೇಳಿದರೆ, ಅದು ನಾನು ಮಾಡಿದ

ಆಧ್ಯಾತ್ಮಿಕ ಮುಖಂಡರುಗಳ ಸಂದರ್ಶನದಲ್ಲೆಲ್ಲಾ ಅತಿ ಚಿಕ್ಕದಾಗಿತ್ತು. ಆದರೂ ಈ ಸಂದರ್ಶನದಲ್ಲಿ ಸ್ವಾಮಿ ರಂಗನಾಥಾನಂದರು ಆಡಿದ್ದ ಮಾತುಗಳು ಅವರು ಸಂದರ್ಶನದ ಸಮಯದಲ್ಲಿ ಹೇಳಿದ್ದ 'ಚಿಕ್ಕ ಚಿಕ್ಕ ಪುಸ್ತಕಗಳಲ್ಲಿನ' ಮಾತುಗಳೊಡನೆ ಸಾಮ್ಯವನ್ನು ಹೊಂದಿದ್ದವು. ನಮ್ಮ ಕೊನೆಯ ಭೇಟಿಯಲ್ಲಿ ಅವರು ಹೇಳಿದ ಹಾಗೆ, 'ಹೇಳಬೇಕಾದುದನ್ನೆಲ್ಲಾ ಹೇಳಿಯಾಗಿದೆ.'

* * * *

# ೭೬. ನನ್ನ ಆಧ್ಯಾತ್ಮಿಕ ಮಾತೆ

–ರಿಯಾ ಕೆಲ್ಡರ್‌ಮನ್ – ಡಿ ವಾರ್ಡ್*

ಸ್ವಾಮಿ ರಂಗನಾಥಾನಂದರನ್ನು ನಾನು ಮೊದಲು ನೋಡಿದ್ದು ಅಮ್‌ಸ್ಟರ್‌ಡ್ಯಾಂನ ಟ್ರಾಪಿಕಲ್ ಮ್ಯೂಸಿಯಂನಲ್ಲಿ. ನಾನು ಅಲ್ಲಿಗೆ ಹೋಗಲು ಟಿಕೆಟ್ಟನ್ನು ಕೊಂಡು, ಪಾನೀಯವನ್ನು ಸೇವಿಸಲು ಹೋಗಿದ್ದೆ. ನಾನು ಅಲ್ಲಿ ಅವರನ್ನು ನೋಡಿದಾಗ ಅವರೊಡನೆ ಉದ್ದ ಕೂದಲಿನ, ಬಿಳಿ ಭಾರತೀಯ ಉಡುಗೆಯ ವ್ಯಕ್ತಿಯೊಬ್ಬರು ಇದ್ದರು. ನನ್ನ ಮಾಮೂಲಿನ ಪಲ್ಲವಿ 'ಸ್ವರ್ಗದ ಸಾಮ್ರಾಜ್ಯವೇನೂ ಇಳಿದು ಬರುವುದಿಲ್ಲ' ಎಂಬುದು. ನಾನು ಅವರ, ಅವರ ಹೊರ ರೂಪವನ್ನು ನೋಡಿ ಹಿಂತಿರುಗುವುದರಲ್ಲಿದ್ದೆ. ಆದರೆ, ಟಿಕೆಟ್ಟಿಗೆ ಹಣವನ್ನು ಕೊಟ್ಟಿದ್ದರಿಂದ, ಅಲ್ಲದೆ ಡಚ್‌ಳವಳಾಗಿದ್ದರಿಂದ, ಉಪನ್ಯಾಸ ಕೇಳಲು ಒಳಗೆ ಹೋದೆ. ಆದರೆ ಅವರ ಭಾರತೀಯ ಇಂಗ್ಲಿಷನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಮಾಡದೆ, ಇವರು ನನಗೆ ಏಕೆ ಗೊತ್ತು ಮತ್ತು ಈ ಮೊದಲು ಎಲ್ಲಿ ನೋಡಿದ್ದೆ ಎಂದು ಯೋಚಿಸುತ್ತಿದ್ದೆ.

ಮುಂದಿನ ವರ್ಷ ವಾರ ಪೂರ್ತಿ ನಡೆದ ಶಿಬಿರದಲ್ಲಿ ನಾನು ಹತ್ತಿರ ಹೋಗಲು ಹೆದರಿ ದೂರದಲ್ಲಿಯೇ ಕುಳಿತಿದ್ದೆ. ಆದರೆ ಅವರು ತಮ್ಮಲ್ಲಿ ತಾಯಿಯ ಶಕ್ತಿಯಿದೆ ಎಂಬ ಮಾತಿನಿಂದ ನಾನು ಅವರನ್ನು ನೆಚ್ಚಬಹುದು ಎಂಬ ಸಂದೇಶವನ್ನು ನನಗೆ ಕೊಡುತ್ತಿದ್ದಂತೆ ಭಾಸವಾಯಿತು. ಅವರ ಮಾತಿನ ಗಹನತೆಯನ್ನು ತಿಳಿಯದೆ ನಾನು, ನನಗೆ ನನ್ನ ತಾಯಿಯ ಹೆಸರೇ ಇದೆ ಎಂದು ಇವರಿಗೆ ಹೇಗೆ ತಿಳಿಯಿತು ಎಂದು ಯೋಚಿಸುತ್ತಿದ್ದೆ. ಮಗುವು ತನ್ನ ತಾಯಿಯನ್ನು, ನಾನು ನನ್ನ ತಾಯಿಯನ್ನು ಕರೆಯುತ್ತಿದ್ದಂತೆಯೇ, 'ಮಾಮಿ' ಎಂದು ಕರೆಯುತ್ತದೆ ಎಂದು ಹೇಳಿದರು. ಅಲ್ಲದೆ, ಅವರು ಅಜ್ಜಿಯೊಬ್ಬಳು ತನ್ನ ಮೊಮ್ಮಗುವಿನೊಂದಿಗೆ ಕಣ್ಣಾಮುಚ್ಚಾಲೆಯಾಡುತ್ತಾ, ಮಗುವು ಆಡಿ ಬಳಲಿದಾಗ ಅದು ತನ್ನನ್ನು ಕಂಡುಹಿಡಿಯುವಂತೆ ತನ್ನ ಮರೆಯನ್ನು ತೆಗೆದ ಕಥೆಯ ಬಗ್ಗೆಯೂ ಹೇಳಿದರು.

ಮುಂದಿನ ವರ್ಷದ ಶಿಬಿರದಲ್ಲಿ ಮತ್ತೆ ಅದೇ ಕಥೆಯನ್ನು ಹೇಳಿದರು. ಆದರೆ ಅದಕ್ಕೆ ಅಜ್ಜಿ ಮತ್ತು ಮೊಮ್ಮಗು ಇಬ್ಬರೂ ಒಬ್ಬರನ್ನೊಬ್ಬರು ನೋಡಿ ಸಂತೋಷಗೊಂಡಿದ್ದರೆಂಬುದನ್ನು ಸೇರಿಸಿದರು. ಅದರ ಮುಂದಿನ ವರ್ಷ ಇನ್ನೊಂದು ಸಾಲನ್ನು ಸೇರಿಸಿದರು: ಅಜ್ಜಿಯನ್ನು ಹುಡುಕಿದ್ದರಿಂದ ಮಗುವಿಗೆ ಹಿಗ್ಗು ಉಂಟಾಗುತ್ತಿತ್ತು. ಆದರೆ ಅಜ್ಜಿಗೆ ತನ್ನನ್ನು ಹುಡುಕಲು ತಾನೇ ಮಗುವಿಗೆ ಸಹಾಯ ಮಾಡಿದ್ದುದು ಎಂಬುದು ಗೊತ್ತಿತ್ತು. ನನಗೆ ಪುನರ್ಶಿಕ್ಷಣ ಕೊಟ್ಟು ನನ್ನ ಆಂತರ್ಯವನ್ನು ಬಲಪಡಿಸಿದ ಸ್ವಾಮೀಜಿ ನನ್ನ ಪಾಲಿಗೆ ನನ್ನ ಅಧ್ಯಾತ್ಮದ ತಾಯಿಯಾದರು.ಬಹುಶಃ ಇದೇ ಕಾರಣವಾಗಿ, 'ಭಗವಂತನನ್ನು ತಾಯಿಯಂತೆ ಕಾಣುವ ಭಾರತೀಯ ದೃಷ್ಟಿ' ಎಂಬ ನಾನು ಪುಸ್ತಿಕೆಯನ್ನು ಅವರ ಡಚ್ ಭಾಷೆಗೆ ಭಾಷಾಂತರಿಸಿದೆನೆಂದು ಕಾಣುತ್ತದೆ.

ನನ್ನ ಪತ್ರವೊಂದಕ್ಕೆ ೧೯೭೬ರ ಜನವರಿಯಲ್ಲಿ ಬರೆದ ಉತ್ತರದಲ್ಲಿ ಅವರು ಹೀಗೆ ಬರೆದಿದ್ದರು:

> 'ವೇದಾಂತವು ಉಲ್ಲಾಸದಿಂದ ಕೂಡಿದ, ಉತ್ಸಾಹಭರಿತವಾದ, ಆಸಕ್ತಿಯನ್ನು ಕೆರಳಿಸುವ ದರ್ಶನವನ್ನು ಬೋಧಿಸುತ್ತದೆ. ಅದರಲ್ಲಿನ ಭಗವಂತನೆಂದರೆ ಎಲ್ಲರಲ್ಲಿರುವ ಆತ್ಮವೇ. ಹಾರದಲ್ಲಿರುವ ಹೂವುಗಳನ್ನೆಲ್ಲ ಒಂದುಗೂಡಿಸುವ ದಾರದಂತೆ, ಅವನು ಗಂಡು–ಹೆಣ್ಣು ಎಂಬ ಭೇದವಿಲ್ಲದೆ ಎಲ್ಲರನ್ನೂ ಆಧ್ಯಾತ್ಮಿಕವಾಗಿ ಒಂದುಗೂಡಿಸುವ ಶಕ್ತಿ, ನಾವು ಇದನ್ನು ಅರಿತಷ್ಟೂ, ಅದರ ತಿಳಿವಿನಲ್ಲಿ ಬದುಕಿದಷ್ಟೂ, ನಮ್ಮ ಆಂತರಿಕ ಶ್ರೀಮಂತಿಕೆಯನ್ನು ಹೆಚ್ಚಿಸಿಕೊಳ್ಳುತ್ತೇವೆ ಮತ್ತು ನಮ್ಮಲ್ಲಿರುವ

---

* ಡಚ್‌ನ ಒಬ್ಬ ಭಕ್ತೆ

ಅಕ್ಕರೆಯನ್ನು ತೋಡಿ ಪರಸ್ಪರ ಹಂಚಿಕೊಳ್ಳುತ್ತೇವೆ. ಗಂಡ ಹೆಂಡತಿಯರು ಈ ಸತ್ಯದಲ್ಲಿನ ಒಂದು ಸಣ್ಣ ಭಾಗವನ್ನು ಅರಗಿಸಿಕೊಂಡು ಸಂಸಾರಮಾಡಿದರೆ, ಆ ಮನೆ ಸಂತೋಷದ ಹಾಗೂ ಸಾರ್ಥಕತೆಯ ಸ್ವರ್ಗವಾಗುತ್ತದೆ. ಎಲ್ಲ ಜೀವಿಗಳಲ್ಲಿರುವ ಭಗವಂತನನ್ನು ಆತ್ಮ ಅಥವಾ ಬ್ರಹ್ಮನೆನ್ನುತ್ತಾರೆ. ಸ್ವಾಮಿ ವಿವೇಕಾನಂದರ ಹಾಗೂ ವೇದಾಂತ ದರ್ಶನದ ಪ್ರಕಾರ ಧರ್ಮ ಎಂದರೆ ಮಾನವನಲ್ಲಿರುವ ದೈವತ್ವದ ಸಾಕ್ಷಾತ್ಕಾರ. ಮನುಷ್ಯನೆಂದರೆ ಭೌತಿಕ ಜೀವಿಯಲ್ಲ. ಪ್ರತಿಯೊಂದು ಮಗುವಿನಲ್ಲಿಯೂ ಅನಂತವಾದ ಮೌಲ್ಯಗಳು ಕೇಂದ್ರೀಕೃತವಾಗಿರುತ್ತವೆ. ಆ ಮೌಲ್ಯಗಳನ್ನು ಉದ್ದೀಪನಗೊಳಿಸುವುದರಿಂದ ಮಾನವನಿಗೆ ಪ್ರೇಮದ ಸಾಮರ್ಥ್ಯ ಮತ್ತು ಅದರಿಂದಾಗುವ ಲಾಭವನ್ನು ಅನುಭವಿಸುವ ಶಕ್ತಿ ಬರುತ್ತದೆ ಮತ್ತು ಇತರರ ಸೇವೆಯನ್ನು ಮಾಡಲು ಅಗತ್ಯವಾದ ಶಕ್ತಿ ದೊರಕುತ್ತದೆ ಅಲ್ಲದೆ, ಈ ಜನ್ಮದಲ್ಲಿಯೇ– ಸತ್ತ ನಂತರದ ಸ್ವರ್ಗದಲ್ಲಲ್ಲ– ನಿಜವಾದ ಆನಂದದ ಅನುಭವವಾಗುತ್ತದೆ.

ನಿಮ್ಮಲ್ಲಿ ಕೇಂದ್ರೀಕೃತವಾಗಿರುವ ದೈವಿಕತೆಯೇ ಮಾನವರಲ್ಲಿರುವ ಆಕರ್ಷಣೆಯ ವಿಷಯ. ಅದನ್ನು ಅರಿಯದಿರುವುದೇ ಪಾಶ್ಚಾತ್ಯ ಸಮಾಜದಲ್ಲಿರುವ ವ್ಯಾಧಿಗಳಿಗೆ ಕಾರಣ. ನಮ್ಮಲ್ಲಿ ಪ್ರತಿಯೊಬ್ಬರಿಗೂ ಜೀವವಿದೆ. ಭಗವಂತನು ಎಲ್ಲ ಜೀವರ ಜೀವ, ಮತ್ತು ಎಲ್ಲ ಜೀವಗಳಲ್ಲಿರುವ ಒಂದೇ ಜೀವ. ಅವನಿಗೆ ಕೃತಜ್ಞತೆಯನ್ನು ಅರ್ಪಿಸು. ಅವನನ್ನು ಪರಕೀಯನೆಂಬಂತೆ ನೋಡದೆ ನಿನ್ನ ಹತ್ತಿರದವನೇ, ನಿನ್ನ ಸ್ನೇಹಿತ, ಮಾರ್ಗದರ್ಶಿ, ಒಡೆಯ ಮತ್ತು ಎಲ್ಲವೂ ಎಂದು ಪರಿಗಣಿಸಿ ಅವನಿಂದ ಪೋಷಣೆಯನ್ನು ಪಡೆ.

ನಾನು ೧೯೭೬ರ ಸೆಪ್ಟೆಂಬರ್‌ನಲ್ಲಿ ಬಾರ್ನ್ ಮತ್ತು ಊಸ್ಟರ್‌ಬೀಕ್‌ಗೆ ಬಂದಾಗ ಭೇಟಿಯಾಗೋಣ. ಅಲ್ಲಿಗೆ ನಿನ್ನ ಪತಿಯನ್ನೂ ಕರೆದುಕೊಂಡು ಬಾ. ಒಮ್ಮೆ ಪ್ರಯತ್ನಿಸಿ ನೋಡು, ಸಫಲವಾಗದಿದ್ದರೆ ಬಿಟ್ಟುಬಿಡು. ನಾನು ನಿಮ್ಮಿಬ್ಬರಿಗೂ ಭರವಸೆಯನ್ನು ಕೊಡುತ್ತೇನೆ– ನೀವು ಪ್ರಾಪಂಚಿಕತೆಯಲ್ಲಿಯೇ ಅಂಟಿಕೊಂಡಿರ ದಿದ್ದರೆ, ನಿಜವಾದ ಸತ್ಯದ ಅನ್ವೇಷಿಗಳೇ ಆಗಿದ್ದರೆ, ನೀವು ಹಿಂತಿರುಗಿ ಹೋಗುವಾಗ ಶ್ರೀಮಂತರಾಗಿ ಹೋಗುತ್ತೀರಿ. ಅಷ್ಟೇ ಅಲ್ಲ, ಪ್ರತಿ ವರ್ಷವೂ ಅಲ್ಲಿಗೆ ಮರಳುವುದಕ್ಕೆ ಕಾಯುತ್ತಿರುತ್ತೀರಿ.'

ಹದಿನೈದು ವರ್ಷಗಳ ನಂತರ ನಾನು ಅವರನ್ನು ಹೈದರಾಬಾದಿನಲ್ಲಿ ಭೇಟಿಯಾದಾಗ ಅವರು 'ನಿನ್ನ ಹೆಸರನ್ನು ರಿಯಾ ದೇವಿ ಎಂದು ಬದಲಾಯಿಸಿಕೊ' ಎಂದು ಹೇಳಿ 'ದೇವಿ' ಎಂದರೆ ಎಲ್ಲರಲ್ಲೂ ಇರುವ ಮಾತೃಸ್ವರೂಪಿಯಾದ ಪರಮಾತ್ಮ ಎಂದು ವಿವರಿಸಿದ್ದರು. ನಾನು ಹುಟ್ಟಿದ ಇಂಡೋನೇಷಿಯಾದಲ್ಲಿಯೂ ಆ ಪದದ ರೂಪ ದೇವೀ ಎಂದೇ ಆಗಿದೆ. ಆದರೆ ನಾನು ಸ್ವಾಮೀಜಿಯವರಿಗೆ ಹೇಳಲಿಲ್ಲ. ನಾವು ಖಾಸಗಿಯಾಗಿ ಮಾತನಾಡಿದ್ದೇ ಇಲ್ಲ. ಅವರಿಂದ ಕಲಿತದ್ದೆಲ್ಲಾ ಅವರ ಉಪನ್ಯಾಸಗಳಲ್ಲಿ ನಾನು ಅರ್ಥಮಾಡಿಕೊಂಡಷ್ಟರಿಂದ.

ಅವರ ಮೊದಲ ಪತ್ರ ಬಂದ ಮೇಲೆ ವಾರಪೂರ್ತಿ ನೆದರ್‌ಲ್ಯಾಂಡ್ಸ್‌ನಲ್ಲಿ ನಡೆಯುತ್ತಿದ್ದ ಶಿಬಿರಗಳಿಗೆ ಹೋಗುತ್ತಿದ್ದೆ. ಆದರೆ, ನನಗೆ ಅವರ ಭಾರತೀಯ ಇಂಗ್ಲಿಷನ್ನು ಅರ್ಥಮಾಡಿಕೊಳ್ಳಲು ಆಗುತ್ತಿರಲಿಲ್ಲ. ಹತ್ತಿರಕ್ಕೆ ಹೋಗಲು ಹೆದರಿ ಹಿಂದಿನ ಸಾಲಿನಲ್ಲಿ ಕೂರುತ್ತಿದ್ದೆ. ಅವರು ಹೇಳುತ್ತಿದ್ದ 'ಪರ್ವತವು ಮೊಹಮ್ಮದನ ಬಳಿಗೆ ಬರದಿದ್ದರೆ, ಮೊಹಮ್ಮದನೇ ಪರ್ವತದ ಬಳಿಗೆ ಹೋಗಬೇಕು' ಎಂಬ ಹೇಳಿಕೆಯು ನನ್ನ ನೆನಪಿನಲ್ಲಿದೆ.

ಸ್ವಾಮಿ ರಂಗನಾಥಾನಂದ ಅವರು ರೋಮನ್ ಕ್ಯಾಥೊಲಿಕ್ ಗುರುವಾಗಿದ್ದರೆ, ನಾನು ರೋಮನ್ ಕ್ಯಾಥೊಲಿಕ್ ಭಕ್ತಳಾಗಿರುತ್ತಿದ್ದೆ.

* * * *

# ೭೭. ಅಸಾಧಾರಣ ಪ್ರತಿಭಾಶಾಲಿ

–ರಘು ರಾಮನ್*

ದೈವವು ತಾನು ಅವತಾರವೆತ್ತುವಾಗಲೆಲ್ಲ ಒಂಟಿಯಾಗಿ ಅವತರಿಸುವುದಿಲ್ಲ. ತನ್ನ ನಂತರ ಕೆಲಸವನ್ನು ಮುಂದುವರಿಸಲು ಮೊದಲ, ಎರಡನೆಯ ಮತ್ತು ಮೂರನೆಯ ತಲೆಮಾರಿನ ಜನರನ್ನು ನೇಮಿಸಿ ಬಿಡುತ್ತದೆ. ಸ್ವಾಮಿ ವಿವೇಕಾನಂದರು ಭವಿಷ್ಯ ನುಡಿದಂತೆ, ಶ್ರೀ ರಾಮಕೃಷ್ಣರ ಕೃತಿಗಳು ೧೫೦೦ ವರ್ಷಗಳ ಕಾಲ ಉಳಿಯುತ್ತವೆ. ಹೀಗಾಗಿ, ಮೊದಲ ತಲೆಮಾರಿನ ಶಿಷ್ಯರೊಂದಿಗೆ ಮಾತ್ರ ಶ್ರೀ ರಾಮಕೃಷ್ಣರು ಬರಲಿಲ್ಲ. ಈ ಅವತಾರದ ಕ್ರಿಯಾಸರಣಿಯನ್ನು ಮುಂದುವರಿಸಲು ಬಂದ ಮುಂದಿನ ತಲೆಮಾರಿನವರಲ್ಲಿ ಸ್ವಾಮಿ ರಂಗನಾಥಾನಂದರೂ ಸೇರಿದ್ದರು ಎಂದು ನಾನು ಎಣಿಸುತ್ತೇನೆ. ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ವೇದಾಂತ ದರ್ಶನದ ಸಂದೇಶವನ್ನು ಪ್ರಸಾರ ಮಾಡಲು ಕಾರಣರಾದವರಲ್ಲಿ, ಶ್ರೀ ರಂಗನಾಥಾನಂದರಷ್ಟು ಪ್ರಬಲರಾದವರು ಯಾರೂ ಇಲ್ಲ ಎಂಬುದು ನನ್ನ ಅನಿಸಿಕೆ.

ನಾನು ಈ ವ್ಯಕ್ತಿಯನ್ನು ನೋಡಿದಾಗ ನಾಲ್ಕು ಪ್ರಮುಖ ವಿಷಯಗಳು ನನಗೆ ತೋರುತ್ತವೆ:– ಅವರೊಬ್ಬ ಅಸಾಧಾರಣ ಪ್ರತಿಭಾಶಾಲಿ; ನಿಷ್ಕಳಂಕ ಸಂನ್ಯಾಸಿ ಇದ್ದವರು ಅದ್ಭುತವಾದ ಹಾಸ್ಯಪ್ರಜ್ಞೆಯುಳ್ಳವರು ಮತ್ತು ಇತರರ ಬಗ್ಗೆ ಅವರಿಗಿದ್ದ ಅನುಕಂಪ ಮತ್ತು ಕಾಳಜಿ. ಇಂದು ವೇದಾಂತದ ಬಗ್ಗೆ ಹಲವರ ಉಪನ್ಯಾಸಗಳನ್ನು ಕೇಳಿದಾಗ ನಮಗೆ ಅವರು ಶಾಸ್ತ್ರಗಳ ಉಪದೇಶವನ್ನೇ ಹೇಳುತ್ತಿರುವುದೂ, ಅದು ನಮ್ಮ ದೈನಂದಿನ ಜೀವನದಿಂದ ದೂರವಾಗಿ ನಿಂತಿರುವುದೂ ಕಂಡುಬರುತ್ತದೆ. ಸಾಮಾನ್ಯವಾಗಿ ಅವರು ಶಾಸ್ತ್ರಗಳ ಸಂದೇಶಗಳನ್ನು ನಮ್ಮ ದಿನನಿತ್ಯದ ಬದುಕಿಗೆ ತಳುಕು ಹಾಕುವುದಿಲ್ಲ. ಈ ಕೆಲಸವನ್ನು ಮಾಡಿದ ಪ್ರತಿಭಾಶಾಲಿ ಸ್ವಾಮಿ ರಂಗನಾಥಾನಂದರು. ವೇದಾಂತದ ಸಂದೇಶವು ನಮ್ಮ ನಿಜಜೀವನಕ್ಕೆ ಅನ್ವಯವಾಗುವಂತಹುದು ಎಂಬುದನ್ನು ಅವರು ವಿವರಿಸಿದರು. ಅವರ ಉಪನ್ಯಾಸವನ್ನು ಕೇಳಿದಾಗಲೆಲ್ಲಾ ನಮಗೆ ಒಂದಲ್ಲ ಒಂದು ರೀತಿಯ ಲಾಭವಾಗುತ್ತಿತ್ತು. ೬೦ರ ದಶಕದಲ್ಲಿ ನನಗೆ ಇತರರೊಡನೆ ಕೂಡಿ ಅವರ ಪುಸ್ತಕವೊಂದಕ್ಕೆ ವಿಷಯಸೂಚಿಯನ್ನು ತಯಾರಿಸುವ ಸುಯೋಗ ದೊರೆತಿದ್ದಾಗ, ಅವರ 'ಬದಲಾಗುತ್ತಿರುವ ಸಮಾಜಕ್ಕೆ ಸನಾತನ ಮೌಲ್ಯಗಳು' ಮತ್ತು 'ಉಪನಿಷತ್ತುಗಳ ಸಂದೇಶ' ಎಂಬ ಎರಡು ಪುಸ್ತಕಗಳನ್ನು ಓದಿದೆ. ಕಂಪ್ಯೂಟರ್ ಸಹಾಯವಿಲ್ಲದೇ ಇದ್ದ ಅಂದಿನ ದಿನಗಳಲ್ಲಿ ವಿಷಯ ಸೂಚಿಯನ್ನು ತಯಾರಿಸಲು ಪುಸ್ತಕಗಳನ್ನು ಮೊದಲಿನಿಂದ ಕಡೆಯವರೆಗೂ ಓದಲೇಬೇಕಿತ್ತು.

ಎಪ್ಪತ್ತರ ದಶಕದಲ್ಲಿ ಆಸ್ಟ್ರೇಲಿಯಾದಲ್ಲಿ ಸ್ವಾಮಿ ರಂಗನಾಥಾನಂದರು 'ಗೀತೆ'ಯ ಮೇಲೆ ಮಾಡಿದ ಉಪನ್ಯಾಸಗಳನ್ನು ಕೇಳಿದ್ದೆ. ಅವರ ಕೃತಿಗಳು ಮೂರು ಸಂಪುಟಗಳಲ್ಲಿ ಅವರ ಜೀವನದ ಕೊನೆಯ ವರ್ಷಗಳಲ್ಲಿ ಪ್ರಕಟವಾಗಿವೆ. ಮೊದಲನೆಯ ಅಧ್ಯಾಯದಲ್ಲಿ, ಅರ್ಜುನನು ಮುಂಬರುವ ಯುದ್ಧದಲ್ಲಿ ಆಗುವ ಅಪಾರ ಪ್ರಾಣಹಾನಿಯ ಬಗ್ಗೆ ಅತೀವ ದುಃಖದಿಂದ ಹೇಗೆ ಪೀಡಿತನಾಗಿದ್ದಾನೆ ಎಂಬುದನ್ನು ನಾವು ಓದುತ್ತೇವೆ. ಅವನ ದುಃಖವು ಆಧ್ಯಾತ್ಮಿಕವಾದದ್ದಲ್ಲ. ಸ್ವಾಮೀಜಿಯವರು ಅರ್ಜುನನ ಇಕ್ಕಟ್ಟಿನ ಪರಿಸ್ಥಿತಿಯ ವಿಯೆಟ್ನಾಮ್ ಯುದ್ಧದ ಹೋಲಿಕೆಯೊಂದಿಗೆ ವಿವರಿಸಿದರು. ಈ ಯುದ್ಧದ ಕೊನೆಯಲ್ಲಿ ಅಧ್ಯಕ್ಷ ನಿಕ್ಸನ್ ಅವರು ವಿಯೆಟ್ನಾಮ್‌ನಿಂದ ಅಮೆರಿಕಾದ ಸೈನ್ಯವನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಿದುದು ಉತ್ತರ ವಿಯೆಟ್ನಾಮ್‌ನವರ ಪ್ರತಿರೋಧಕ್ಕೆ

* ಆಸ್ಟ್ರೇಲಿಯಾದಲ್ಲಿನ ಭಕ್ತರು

ಅನುಕಂಪವನ್ನು ತೋರಿಸಲೆಂದಲ್ಲ. ಅದರ ನಿಜವಾದ ಕಾರಣ, ನೂರಾರು ಅಮೇರಿಕನ್ನರು ಪ್ರಾಣಕಳೆದುಕೊಳ್ಳುತ್ತಿದ್ದಾರೆ ಎಂಬುದು ! 'ಮಾಧವ, ಸ್ವಜನರನ್ನು ಕೊಂದು ನಾನು ಹೇಗೆ ಸಂತೋಷವಾಗಿರಲಿ?' ಎಂದು ಅರ್ಜುನನು ಪ್ರಶ್ನಿಸಿದ. ೩೦೦೦ ವರ್ಷಗಳ ಹಿಂದೆ ನಡೆದ ಈ ಸಂಗತಿಯನ್ನು ನಮ್ಮ ಕಾಲದ ಘಟನೆಯೊಂದಿಗೆ ತಳುಕು ಹಾಕುವ ಸ್ವಾಮೀಜಿಯವರ ರೀತಿಯನ್ನು ನೋಡಿ.

'ಗೀತೆ'ಯ ಐದನೆಯ ಅಧ್ಯಾಯಕ್ಕೆ ಬರೆದ ಪ್ರವೇಶಿಕೆಯಲ್ಲಿ ಸ್ವಾಮೀಜಿ ಹೇಳುತ್ತಾರೆ: 'ಇದು ಕೃತಿಯ ಮೇರುಭಾಗ, ಈ ಅಧ್ಯಾಯವು ಸಮಾನತೆ ಮತ್ತು ಸ್ವಾತಂತ್ರ್ಯದ ಬಗ್ಗೆ ಇದೆ. ಇಪ್ಪತ್ತನೆಯ ಶತಮಾನದಲ್ಲಿ ಎರಡು ದೊಡ್ಡ ರಾಜಕೀಯ ಪ್ರಯೋಗಗಳು ನಡೆದವು. ಕಮ್ಯೂನಿಸಂನಲ್ಲಿ ಸಮಾನತೆ ಇದೆ; ಆದರೆ ಸ್ವಾತಂತ್ರ್ಯವಿಲ್ಲ. ಆದರೆ ಬಂಡವಾಳಶಾಹಿ ಪ್ರಜಾಸತ್ತೆಯಲ್ಲಿ ಸ್ವಾತಂತ್ರ್ಯವಿದೆ; ಆದರೆ ಸಮಾನತೆಯಿಲ್ಲ. ಇದರಿಂದ ಸಾಮಾಜಿಕ–ರಾಜಕೀಯ ಕ್ಷೇತ್ರಗಳಲ್ಲಿ ಸಮಾನತೆ ಮತ್ತು ಸ್ವಾತಂತ್ರ್ಯಗಳೆರಡನ್ನೂ ಸಾಧಿಸಲು ಸಾಧ್ಯವಿಲ್ಲ. ಆದರೆ, ಇದು ಆಧ್ಯಾತ್ಮಿಕ ಸ್ತರದಲ್ಲಿ ಸಾಧ್ಯ: 'ನೀನು ಆತ್ಮ, ಆದ್ದರಿಂದ ನೀನು ಸ್ವತಂತ್ರ, ಮತ್ತು ನಾವೆಲ್ಲರೂ ಎರಡಿಲ್ಲದ ಬ್ರಹ್ಮದ ಅಭಿವ್ಯಕ್ತಿಯಾಗಿರುವುದರಿಂದ ನಾವೆಲ್ಲರೂ ಸಮಾನರು.'

ಅವರ ವಿವರಣೆಯಲ್ಲಿ ಅವರ ವೈಯಕ್ತಿಕ ಛಾಪು ಇರುತ್ತಿತ್ತು. ಮೂವತ್ತು ವರ್ಷಗಳಾದರೂ ಅದು ನನ್ನ ನೆನಪಿನಿಂದ ಮರೆಯಾಗಿಲ್ಲ. ನನ್ನ ಇನ್ನೊಂದು ಅನುಭವವೆಂದರೆ, ಅವರು 'ಮಾಂಡೂಕ್ಯೋಪನಿಷತ್ತಿ'ನ ಮೇಲೆ ಮಾತನಾಡುತ್ತಿದ್ದಾಗ, 'ಗೌಡಪದ ಕಾರಿಕೆ'ಯನ್ನು ಭೌತಶಾಸ್ತ್ರದ ಕ್ವಾಂಟಂ ಸಿದ್ಧಾಂತದೊಡನೆ ಹೋಲಿಸಿದ್ದುದು. ಆಸ್ಟ್ರೇಲಿಯಾದ ವಿಷನ್ ವ್ಯಾಲಿಯಲ್ಲಿ ನಡೆದ ಶಿಬಿರದಲ್ಲಿ ಒಂದು ದಿನ ರಾತ್ರಿಯ ಭೋಜನದ ನಂತರ ಸಭೆಯು ತಮಾಷೆಯ ಲಹರಿಯಲ್ಲಿ ಆರಂಭವಾಯಿತು. ಸ್ವಾಮೀಜಿಯವರು ಆವೇಶಪೂರಿತರಾಗಿ ಭಾಷಣಮಾಡಲು ಪ್ರಾರಂಭಿಸಿದ ತಕ್ಷಣ ಆ ಲಹರಿ ಬದಲಾಯಿತು. ನನಗೆ ಅವರು ಕಾಣಿಸಲಿಲ್ಲ. ಅವರ ಸುತ್ತ ಒಂದು ಬಗೆಯ ಕಿತ್ತಳೆ ಬಣ್ಣದ ಮಬ್ಬು ಬೆಳಕು ಆವರಿಸಿತ್ತು. ಅಲ್ಲಿನ ಇಡೀ ವಾತಾವರಣವೇ ಪರಿವರ್ತಿತವಾಗಿತ್ತು. ಅಲ್ಲಿನ ಬಹಳಷ್ಟು ಜನರಿಗೆ ಅವರು ಹೇಳುತ್ತಿದ್ದುದು ಅರ್ಥವಾಗುತ್ತಿರಲಿಲ್ಲ. ಆದರೆ ಪ್ರತಿಯೊಬ್ಬರೂ ಆ ಆಧ್ಯಾತ್ಮಿಕ ಪರಿಸರವನ್ನು ಅನುಭವಿಸುತ್ತಿದ್ದರು. ನಾನು ಕೇಳಿದ ಅವರ ಉಪನ್ಯಾಸಗಳಿಗೆಲ್ಲಾ ಅದು ಕಲಶ ಪ್ರಾಯವಾಗಿತ್ತು. ಅಷ್ಟು ಸ್ಫೂರ್ತಿದಾಯಕವಾಗಿತ್ತು. ಅವರು ಮಬ್ಬು ಬೆಳಕಿನಂತೆ, ನಾವೆಲ್ಲ ಆ ಶಕ್ತಿ ವಿಸರಣದಲ್ಲಿ ತೇಲುತ್ತಿರುವಂತೆ, ನಮ್ಮ ಸುತ್ತಮುತ್ತಿನದೆಲ್ಲಾ ನೆರಳಿನಂತೆ ನಮಗೆ ಅನಿಸುತ್ತಿತ್ತು. ಉಪನ್ಯಾಸದ ನಂತರ ಅಲ್ಲಿನ ವಾತಾವರಣದಲ್ಲಿ ನೀರವತೆ ತುಂಬಿತ್ತು. ಅದನ್ನು ಕದಡುತ್ತಿದ್ದುದು ಚಹಾ ಹಾಗೂ ಕೇಕ್‌ನ್ನು ತೆಗೆದುಕೊಳ್ಳುವಾಗ ನಡೆಯುತ್ತಿದ್ದ ಲೌಕಿಕ ಮಾತುಗಳು. ಸ್ವಾಮೀಜಿಯವರು ಯಾವ ಆಹಾರವನ್ನೂ ತೆಗೆದುಕೊಳ್ಳಲಿಲ್ಲ. ಅವರು ಹೇಳುತ್ತಿದ್ದರು 'ಹೃದಯ ತುಂಬಿದಾಗ, ಹೊಟ್ಟೆಯೂ ತುಂಬಿದಂತೆ.'

ಅವರು ಕೇವಲ ಉಪನಿಷತ್ತಿನ ನಿರೂಪಕರಾಗಿರಲಿಲ್ಲ; 'ಭಾಗವತ'ದ ಮಹಾನ್ ಪ್ರತಿಪಾದಕರೂ ಆಗಿದ್ದರು. ಅವರು ಭಾಗವತದ ಬಗ್ಗೆ ಮಾಡಿದ ಉಪನ್ಯಾಸಗಳನ್ನು ಕೇಳಿದ ಯಾರಿಗಾದರೂ ನಾನು ಹೇಳುತ್ತಿರುವ ಮಾತು ಚೆನ್ನಾಗಿ ಅರ್ಥವಾಗುತ್ತದೆ.

ಅವರು ತಮ್ಮ ಅಂತರಂಗದಲ್ಲೂ ಪರಿಶುದ್ಧ ಸಂನ್ಯಾಸಿಯಾಗಿದ್ದರು, ಸರಳತೆ ಎಂಬುದು ಅದರ ಅಂಗವಾಗಿದ್ದಿತು. ಇನ್ನೊಂದು ಪ್ರಸಂಗ ಜ್ಞಾಪಕಕ್ಕೆ ಬರುತ್ತದೆ. ಅವರು ಒಮ್ಮೆ ಹೇಳಿದರು. ಒಂದು ದಿನ ಪ್ರಧಾನ ಮಂತ್ರಿಯವರಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರ ಕಾರ್ಯಾಲಯದಿಂದ ದೂರವಾಣಿಯ ಮೂಲಕ ಸರಕಾರವು ಅವರಿಗೆ 'ಪದ್ಮಭೂಷಣ' ಪ್ರಶಸ್ತಿಯನ್ನು ಕೊಡಬಯಸಿದೆ ಎಂದು ತಿಳಿಸಲಾಯಿತು. ಅದಕ್ಕೆ ಸ್ವಾಮೀಜಿಯವರು 'ನನಗೆ ಈಗಾಗಲೇ ಪ್ರಶಸ್ತಿ ಬಂದಿದೆ. ಅದರಿಂದ ನನಗೆ ತೃಪ್ತಿ ಸಿಕ್ಕಿದೆ. ನನಗೆ ಮತ್ತೊಂದು ಪ್ರಶಸ್ತಿ ಬೇಡ' ಎಂದು ನಿರಾಕರಿಸಿದರು. ಈಗಾಗಲೇ ಬಂದಿರುವ ಪ್ರಶಸ್ತಿ ಯಾವುದು ಎಂದು ಕೇಳಿದಾಗ

ಅವರು ಹೇಳಿದರು: 'ಸ್ವಾಮಿ!' ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಅವರಷ್ಟು ಹೆಸರು, ಪ್ರಸಿದ್ಧಿಯನ್ನು ಗಳಿಸಿದವರು ಯಾರೂ ನನಗೆ ತಿಳಿದಿಲ್ಲ. ಆದರೆ ಅವುಗಳೆಲ್ಲವನ್ನೂ ಅವರು ಜೀರ್ಣಿಸಿಕೊಂಡಿದ್ದರು.

ಅವರ ಪ್ರೀತಿ, ಸಂನ್ಯಾಸಿಗೆ ಸಹಜವಾದ ರೀತಿಯಲ್ಲಿ, ವ್ಯಕ್ತಿಗಳಿಗೆ ಸೀಮಿತವಾಗದೆ ವಿಶಾಲವಾದುದಾಗಿತ್ತು. ಹಾಗೆಯೇ ಎಲ್ಲರೊಡನೆ ಅವರಿಗಿದ್ದ ಸಂಬಂಧವೂ ವ್ಯಕ್ತಿ ಯನ್ನವಲಂಬಿಸದೆ ಅವರೊಳಗಿನ ಆತ್ಮದೊಡನೆ ಇರುತ್ತಿತ್ತು. ಆದರೆ ಅದರಲ್ಲಿ ಉದಾಸೀನತೆ ಇರಲಿಲ್ಲ. ಅವರ ಪ್ರೀತಿಗೆ ಪಾತ್ರರಾದ ಪ್ರತಿಯೊಬ್ಬರೂ ತಾವು ಸ್ವಾಮೀಜಿಯವರಿಗೆ ವಿಶೇಷವಾಗಿ ಬೇಕಾದವರು ಎಂದು ಭಾವಿಸುತ್ತಿದ್ದರು. ವೇದಾಂತದ ಮಹಾನ್ ಸಂದೇಶಗಳನ್ನು ತಿರುಚುವ, ಹೀಗಳೆಯುವವರ ಬಗ್ಗೆ ಅವರು ನಿರ್ಲಕ್ಷ್ಯ ತಾಳುತ್ತಿದ್ದರು. ಆದರೆ ಒಮ್ಮೆ ಅಂತಹವರು ತಮ್ಮ ತಪ್ಪುಗಳನ್ನು ಅರಿತು ತಿದ್ದಿಕೊಂಡರೆ ಅವರನ್ನು ನಿರ್ಭಾವದಿಂದ ಕ್ಷಮಿಸುತ್ತಿದ್ದರು.

ಸ್ವಾಮಿ ರಂಗನಾಥಾನಂದರಿಗೆ ಸ್ವಾಮಿ ಅಖಂಡಾನಂದ ಅವರ ವಿಶೇಷವಾದ ಆಶೀರ್ವಾದ ಲಭಿಸಿತ್ತೆಂದೂ, ಅದರಿಂದಾಗಿಯೇ ಸ್ವಾಮೀಜಿಯವರ ವಾಗ್ಮಿತೆ ಅದ್ಭುತವಾಗಿತ್ತೆಂದೂ ಹಬ್ಬಿದ್ದ ಕಥೆಯನ್ನು ಹಲವರು ಕೇಳಿದ್ದರು. ಸ್ವಾಮಿ ವಿವೇಕಾನಂದರ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಸದಾಶಿವಾನಂದ (ಭಕ್ತರಾಜ್ ಮಹಾರಾಜ್) ಅವರು ೧೯೫೦ರ ಸುಮಾರಿನಲ್ಲಿ ಹೇಳುತ್ತಿದ್ದ ಒಂದು ಕಥೆಯನ್ನು ನಂಬಲರ್ಹವಾದ ಮೂಲಗಳಿಂದ ನಾನು ಕೇಳಿದ್ದೆ. ಅವರು (ಸ್ವಾಮಿ ಸದಾಶಿವಾನಂದ ಅವರು) ಹೇಳುತ್ತಿದ್ದರು: 'ಸ್ವಾಮಿ ರಂಗನಾಥಾನಂದರು ಅಷ್ಟೊಂದು ಜನರನ್ನು ತಮ್ಮ ಉಪನ್ಯಾಸಗಳಿಂದ ಹೇಗೆ ಆಕರ್ಷಿಸುತ್ತಾರೆ ಎಂದು ನಿಮಗೆ ಗೊತ್ತೇ? ಅವರು ಉಪನ್ಯಾಸವನ್ನು ನೀಡುತ್ತಾರೆಂದು ಭಾವಿಸಿದ್ದೀರಾ? ಇಲ್ಲ, ಇಲ್ಲ, ಅದು ಶ್ರೀ ರಾಮಕೃಷ್ಣರು ಅವರ ಮೂಲಕ ಮಾತನಾಡುತ್ತಾರೆ. ಅದರಿಂದಾಗಿಯೇ ಅಷ್ಟೊಂದು ಜನರು ಅವರ ಉಪನ್ಯಾಸಗಳಿಗೆ ಮುಗಿಬೀಳುತ್ತಾರೆ.' ಉಪನ್ಯಾಸವನ್ನು ಆರಂಭಿಸುವುದಕ್ಕೆ ಮುಂಚೆ ಸ್ವಾಮಿ ರಂಗನಾಥಾನಂದರು ಇತರರೊಡನೆ ಮಾತನಾಡುತ್ತಾ, ತಮಾಷೆ ಮಾಡುತ್ತಾ ಇರುತ್ತಾರೆ. ಆದರೆ ಅವರು ತಮ್ಮ ಆಸನದಲ್ಲಿ ಕುಳಿತ ತಕ್ಷಣ ಒಂದೆರಡು ಗಳಿಗೆ ಕಣ್ಣುಗಳನ್ನು ಮುಚ್ಚಿ, ತಾವು ನಮ್ಮ ಕಣ್ಣಿಗೆ ಕಾಣದ, ಅತೀತವಾದ ದೈವದೊಡನೆ ಮಾತನಾಡುತ್ತಿರುವಂತೆ ತೋರುತ್ತಾರೆ, ನಂತರ ಮಾತಿನ ಓಘ ಅಡೆತಡೆಯಿಲ್ಲದೆ ಹರಿಯುತ್ತದೆ.

ಅವರು ವೇದಾಂತದ ಉಪದೇಶವನ್ನು ಹಾಸ್ಯರಸದ ಮೂಲಕ ನೀಡುತ್ತಿದ್ದರು. ಕೆಲವು ಘಟನೆಗಳು ನೆನಪಿಗೆ ಬರುತ್ತವೆ. ಸ್ವಾಮೀಜಿಯವರು ಆಸ್ಟ್ರೇಲಿಯಾದಲ್ಲಿ ರೇಡಿಯೋಗೆ ನೀಡಿದ ಸಂದರ್ಶನಗಳಲ್ಲಿ ಅವರು ಆಧ್ಯಾತ್ಮಿಕ ದೃಷ್ಟಿಯಿಂದ ಮಾತ್ರವಲ್ಲ, ದೈನಂದಿನ ಜೀವದಲ್ಲೂ ಜನರು ಆತ್ಮಸಂಯಮವನ್ನು ಒಂದು ಜೀವನದ ಶಿಸ್ತನ್ನಾಗಿ ಪಾಲಿಸುವುದು ಅಗತ್ಯ ಎಂಬ ಮಾತನ್ನು ಒತ್ತಿ ಹೇಳುತ್ತಿದ್ದರು. ಸಂದರ್ಶಕರು ಅವರನ್ನು ಕುರಿತು 'ಸ್ವಾಮೀಜಿ, ನಾವು ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತೇವೆ, ನೀವು ಆತ್ಮಸಂಯಮ ಎನ್ನುತ್ತೀರಿ. ಇವೆರಡೂ ಪರಸ್ಪರ ವಿರುದ್ಧವಾದವುಗಳಲ್ಲವೇ?' ಎಂದು ಕೇಳಿದರು. ಅದಕ್ಕೆ ಸ್ವಾಮೀಜಿಯವರು ನಗುತ್ತಾ ಹೇಳಿದರು: 'ನಾನೂ ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ನಂಬಿಕೆಯಿರಿಸಿರುವವನೇ. ರವಿಶಂಕರ್ ಅವರ ಸಿತಾರ ವಾದನವನ್ನು ಕೇಳಿ, ಅವರ ರಾಗಗಳ ಅಭಿವ್ಯಕ್ತಿ ಎಷ್ಟು ಸ್ವತಂತ್ರ್ಯವಾಗಿ ಹರಿಯುತ್ತಿರುತ್ತದೆ. ಆದರೆ, ಅದರ ಹಿಂದೆ ಇರುವ ಹಲವಾರು ವರ್ಷಗಳ ಅವರ ಆತ್ಮಸಂಯಮ ಎಂತಹುದು ಎಂಬುದನ್ನು ಬಲ್ಲಿರಾ? ನಿಮಗೆ ಇದು ಅರ್ಥವಾಗದಿದ್ದರೆ ನಾನೇ ನಿಮಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ನಿಮ್ಮ ಮಕ್ಕಳಿಗೆ ಅವರ ಜಲಬಾಧೆಯನ್ನು ನಿವಾರಿಸಿಕೊಳ್ಳಲು ಅಗತ್ಯವಾದ ಶಿಸ್ತನ್ನು ಏಕೆ ಕಲಿಸುತ್ತೀರಿ? ಅದರ ಬದಲು, ತಮ್ಮ ಮನಬಂದಕಡೆ ಮೂತ್ರ ವಿಸರ್ಜನೆ ಮಾಡಲು ಅವರನ್ನು ಬಿಡುವುದಿಲ್ಲವೇಕೆ?' ಸಂದರ್ಶಕರು ನಿರುತ್ತರರಾದರು.

ವೇದಾಂತ ಶಿಬಿರಕ್ಕೆ ಬರುತ್ತಿದ್ದ ಮಹಿಳೆಯೊಬ್ಬರು ವೇದಾಂತದ ವಿಷಯದಲ್ಲಿ ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ಲೇಖಕರ ಪುಸ್ತಕಗಳನ್ನು ಬಹಳ ಶ್ರದ್ಧೆಯಿಂದ ಓದಿ ಅವುಗಳೆಲ್ಲದರ ವಿಚಾರಧಾರೆಯಿಂದಾಗಿ

ದಿಕ್ಕುಗಾಣದವರಾಗಿದ್ದರು. ಒಂದು ದಿನ ಸ್ವಾಮೀಜಿ ಅವರಿಗೆ ಹೇಳಿ:'ನಿಮ್ಮದು ವೇದಾಂತದ ಮಾರ್ಗವಲ್ಲ, ಅದು ದಿಗ್ಭ್ರಾಂತಿಯ ಮಾರ್ಗ.' ಇದರಿಂದ ಮತ್ತಷ್ಟು ತಬ್ಬಿಬ್ಬುಗೊಂಡ ಆಕೆ 'ಹಾಗಾದರೆ ಯಾವುದನ್ನು ಓದಬೇಕು ಸ್ವಾಮೀಜಿ?' ಎಂದು ಕೇಳಿದರು. ಅದಕ್ಕೆ ಅವರು 'ಎಲ್ಲಾ ಪುಸ್ತಕಗಳನ್ನು ಅತ್ತ ಎಸೆಯಿರಿ. ಸ್ವಲ್ಪ ದಿನಗಳವರೆಗೆ ಏನನ್ನೂ ಓದಬೇಡಿ' ಎಂದರು. ಆದರೂ ಆ ಮಹಿಳೆಯನ್ನು ಅನುಕಂಪದಿಂದ ನೋಡಿ ಆಧ್ಯಾತ್ಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಹಾಗೆ ಕೆಲವು ಸೂಚನೆಗಳನ್ನು ಅವರಿಗೆ ಖಾಸಗಿಯಾಗಿ ನೀಡಿದರು.

ಸ್ವಾಮೀಜಿಯವರು ವೇದಾಂತದ ವಿಚಾರಗಳನ್ನು ತಿಳಿಯಹೇಳುವಾಗ ಇಂಗ್ಲಿಷ್‌ನಲ್ಲಿರುವ ಪ್ರಾಥಮಿಕ ತರಗತಿಯ ಪದ್ಯಗಳನ್ನು ಉಪಯೋಗಿಸಿಕೊಳ್ಳು ತ್ತಿದ್ದರು. ಒಮ್ಮೆ ಅವರು ಗೀತೆಯ ಎರಡನೆಯ ಅಧ್ಯಾಯದಲ್ಲಿರುವ 'ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ' ಎಂಬ ಶ್ಲೋಕದ ಅರ್ಥವನ್ನು ಹೇಳುತ್ತಾ 'ವಸ್ತುಗಳು ಹೋದರೂ, ಹೇಗೆ ಅವು ತಮ್ಮ ವಾಸನೆಯನ್ನು ಹಿಂದೆ ಬಿಟ್ಟುಹೋಗುತ್ತವೆ' ಎಂದು ವಿವರಿಸಬೇಕಿತ್ತು. ಅದಕ್ಕೆ ಅವರು ಲೂಯಿಸ್ ಕರೋಲ್ ಅವರ 'ಅಲೈಸ್ ಇನ್ ದಿ ವಂಡರ್‌ಲ್ಯಾಂಡ್'ನಲ್ಲಿನ ಚೆಷೈರ್ ಕ್ಯಾಟ್‌ನ 'ಬೆಕ್ಕು ಮಾಯವಾಗುತ್ತದೆ, ಅದರ ಮಂದಹಾಸವನ್ನು ಹಿಂದೆ ಬಿಟ್ಟು' ಎಂಬ ಮಾತನ್ನು ತಮಾಷೆಯಾಗಿ ಈ ವಿಷಯಕ್ಕೆ ಜೋಡಿಸಿ ವಿವರಿಸಿದರು.

ಇನ್ನೊಂದು ಸ್ವಾರಸ್ಯಕರ ಪ್ರಸಂಗ. ರಸಾಯನ ಶಾಸ್ತ್ರದಲ್ಲಿ ೪೦ಕ್ಕೂ ಹೆಚ್ಚು ಪುಸ್ತಕಗಳನ್ನೂ, ೭೦೦ಕ್ಕೂ ಹೆಚ್ಚು ಲೇಖನಗಳನ್ನೂ ಪ್ರಕಟಿಸಿದ್ದ, ರಾಯಲ್ ಸೊಸೈಟಿಯ ಫೆಲೋ ಆಗಿದ್ದ, ಪ್ರಸಿದ್ಧ ಪ್ರೊ. ಶೇಷಾದ್ರಿ ಅವರ ೮೦ನೆಯ ಜನ್ಮದಿನದ ಸಮಾರಂಭದಲ್ಲಿ ಅಧ್ಯಕ್ಷತೆಯನ್ನು ವಹಿಸಲು ಸ್ವಾಮಿ ರಂಗನಾಥಾನಂದರನ್ನು ಆಹ್ವಾನಿಸಿದ್ದರು. ರಸಾಯನ ಶಾಸ್ತ್ರದಲ್ಲಿನ ಪ್ರೊಫೆಸರ್ ಅವರ ಆಸಕ್ತಿಯನ್ನು ಕುರಿತು ಸ್ವಾಮೀಜಿ 'ಛಾಂದೋಗ್ಯ ಉಪನಿಷತ್ತಿ'ನಿಂದ ಒಂದು ಹೋಲಿಕೆಯನ್ನು ಕೊಡುತ್ತಾ ಹೇಳಿದರು: "ಭರದ್ವಾಜ ಋಷಿಯು ಒಂದು ನೂರು ವರ್ಷಗಳ ಕಾಲ ಜ್ಞಾನಾರ್ಜನೆಯಲ್ಲಿ ತೊಡಗಿದ್ದನು. ಈ ಕಾರ್ಯದಲ್ಲಿ ಬಳಲಿದ ಅವನು ಇಂದ್ರನ ಬಳಿಗೆ ಹೋದನು. ಇಂದ್ರನು ಅವನನ್ನು ಕುರಿತು 'ನಾನು ನಿನಗೆ ಇನ್ನೂ ನೂರು ವರ್ಷಗಳನ್ನು ಕೊಟ್ಟರೆ ನೀನು ಸಾಧಿಸುವೆಯಾ' ಎಂದು ಕೇಳಿದನು. ಅದಕ್ಕೆ ಋಷಿಯು 'ನೀನು ಕೊಟ್ಟರೆ, ನಾನು ಮತ್ತೆ ನನ್ನ ಜ್ಞಾನಾರ್ಜನೆಯ ಕೆಲಸವನ್ನು ಮುಂದುವರಿಸುತ್ತೇನೆ' ಎಂದನು. ಹಾಗೆಯೇ ಇಂದ್ರನು ಈಗ ಪ್ರೊಫೆಸರ್ ಅವರ ಮುಂದೆ ಬಂದು ಅವರಿಗೆ 'ನಾನು ಇನ್ನೂ ೮೦ ವರ್ಷಗಳನ್ನು ನಿಮಗೆ ಕೊಟ್ಟರೆ ಏನು ಮಾಡುತ್ತೀರಿ?' ಎಂದು ಕೇಳಿದರೆ ಪ್ರೊಫೆಸರ್ ಅವರು 'ಮತ್ತೆ ರಸಾಯನ ಶಾಸ್ತ್ರ' ಎಂದೇ ಹೇಳುತ್ತಾರೆ."

ಅವರು ಹೀಗೆ ತಮಾಷೆಯಾಗಿ ಮಾತನಾಡುತ್ತಿದ್ದರೂ, ಅವರ ವ್ಯಕ್ತಿತ್ವದಲ್ಲಿದ್ದ ಆಧ್ಯಾತ್ಮಿಕ ಶಕ್ತಿಯನ್ನು ಎಲ್ಲರೂ ಗಮನಿಸಿದ್ದರು. ಅವರ ಮಾತುಗಳನ್ನು ಕೇಳುತ್ತಾ ಇರುವಾಗ ಅವರೊಡನೆ ಒಂದು ಬಗೆಯ ವಿಶೇಷವಾದ ಸಂಪರ್ಕ ಏರ್ಪಡುತ್ತದೆ ಎಂದು ಬಹಳಷ್ಟು ಜನರು ನನಗೆ ಹೇಳಿದ್ದರು. ಅಂತಹವರು ಸ್ವಲ್ಪ ಕಾಲಾನಂತರದಲ್ಲಿಯೇ ಸ್ವಾಮೀಜಿಯವರಿಂದ ದೀಕ್ಷೆಯನ್ನು ಪಡೆಯಲು ಕಾಯ್ದು ನಿಂತಿರುತ್ತಿದ್ದರು. ಅವರು ರಾಮಕೃಷ್ಣ ಸಂಘದ ಉಪಾಧ್ಯಕ್ಷ, ಅನಂತರ ಅಧ್ಯಕ್ಷ ಆದ ಮೇಲೆ ಶ್ರೀ ರಾಮಕೃಷ್ಣರ ಶಕ್ತಿಯನ್ನು ಸಾವಿರಾರು ಜನರತ್ತ ಕೊಂಡೊಯ್ಯುವ ಮಾಧ್ಯಮವಾದರು.

* * * *

# ೭೮. ಅಧ್ಯಾತ್ಮಕ್ಷೇತ್ರದ ದೈತ್ಯ

–ಅಮೃತಲಿಂಗಂ ಚಿನ್ನತಂಬಿ*

ನಾನು ಸ್ವಾಮಿ ರಂಗನಾಥಾನಂದರನ್ನು ನೋಡುವ ಮೊದಲೇ ಅವರ ಬಗ್ಗೆ ಶ್ರೀ ರಾಮಕೃಷ್ಣರ ಭಕ್ತರಾಗಿದ್ದ ನನ್ನ ತಂದೆ ತಾಯಿಯರಿಂದ ಕೇಳಿದ್ದೆ. ನನ್ನ ಚಿಕ್ಕ ವಯಸ್ಸಿನಲ್ಲಿಯೇ ಶ್ರೀ ರಾಮಕೃಷ್ಣ ಮಹಾರಾಜ್, ಶ್ರೀಮಾತೆ ಮತ್ತು ಸ್ವಾಮಿ ವಿವೇಕಾನಂದರ ಬಗ್ಗೆ ತಿಳಿದುಕೊಳ್ಳುವ ಯೋಗ ನನಗೆ ಲಭಿಸಿತ್ತು. ೧೯೬೦ನೇ ದಶಕದ ಕೊನೆಯ ಭಾಗದಲ್ಲಿ ನಾನು ನನ್ನ ಪತ್ನಿ ಸಾವಿತ್ರಿ ಮತ್ತು ಎರಡು ಚಿಕ್ಕ ಮಕ್ಕಳೊಂದಿಗೆ ಮಲೇಷಿಯಾದಿಂದ ಆಸ್ಟ್ರೇಲಿಯಾದ ಪರ್ತ್‌ಗೆ ಬಂದು ನೆಲೆಸಿದ್ದೆ. ಪರ್ತ್‌ನಲ್ಲಿ ನೆಲೆಸಿದ್ದ ಕೆಲವೇ ಭಾರತೀಯ ಕುಟುಂಬಗಳಲ್ಲಿ ನಮ್ಮದೂ ಒಂದು. ಆಗ ನನಗೆ ಆಧ್ಯಾತ್ಮಿಕತೆಯ ಆಸರೆ ಬೇಕಿದ್ದು, ವೇದಾಂತದ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದೆ. ಹಿಂದೂ ಧರ್ಮದ ವಿಚಾರಗಳನ್ನು ಮತ್ತು ಸಂಸ್ಕೃತಿಯನ್ನು ಅರಿಯುವ ಬಯಕೆ ನನ್ನಲ್ಲಿ ಮತ್ತು ನನ್ನ ಪತ್ನಿಯಲ್ಲಿ ಇದ್ದು, ಹಾಗೆ ಅರಿತು ಅದನ್ನು ನಮ್ಮ ಮಕ್ಕಳಲ್ಲಿಯೂ ನೆಲೆಗೊಳಿಸುವುದು ನಮ್ಮ ಆಶಯವಾಗಿತ್ತು. ನನಗೆ ಸ್ವಾಮಿ ರಂಗನಾಥಾನಂದಜಿ ಅವರ ವೈಯಕ್ತಿಕ ಪರಿಚಯವಿಲ್ಲದಿದ್ದರೂ, ನನ್ನ ಅಂತರ್ವಾಣಿ ಅವರಿಗೆ ಪತ್ರವನ್ನು ಬರೆದು ನನ್ನನ್ನು ಪರಿಚಯಿಸಿಕೊಳ್ಳಬೇಕೆಂದು ಪ್ರಚೋದಿಸುತ್ತಿತ್ತು. ಸಿಡ್ನಿಯಲ್ಲಿದ್ದ ವಿಲ್ಮಾ ಸ್ಪೆನ್ಸರ್ ಎಂಬ ಭಕ್ತರೊಬ್ಬರು ಮತ್ತು ನಾನು ಸ್ವಾಮೀಜಿಯವರನ್ನು ಆಸ್ಟ್ರೇಲಿಯಾಕ್ಕೆ ಭೇಟಿ ಕೊಡುವಂತೆ ವಿನಂತಿಸಿಕೊಂಡೆವು. ಅವರು ನಮ್ಮ ಆಹ್ವಾನವನ್ನು ಕೃಪೆಯಿಂದ ಒಪ್ಪಿ ೧೯೭೧ರ ಜೂನ್ ೧೫ರಂದು ಪರ್ತ್‌ಗೆ ಬಂದಿಳಿದರು. ಅವರು ನಮ್ಮ ಮನೆಯಲ್ಲಿ ಸುಮಾರು ನಾಲ್ಕು ವಾರಗಳ ಕಾಲ ತಂಗಿದ್ದರು.

ನನ್ನ ಪತ್ನಿಗೆ ಶ್ರೀ ರಾಮಕೃಷ್ಣರ ಬಗೆಗಾಗಲೀ ಅಥವಾ ಅವರ ಉಪದೇಶಗಳ ಬಗೆಗಾಗಲೀ ಅಷ್ಟು ತಿಳಿವಳಿಕೆಯಿರಲಿಲ್ಲ. ಅದರಲ್ಲೂ ಸ್ವಾಮಿ ರಂಗನಾಥಾನಂದರಂತಹ ಕ್ರಿಯಾಶೀಲ ವ್ಯಕ್ತಿಗಳನ್ನು ನೋಡಿಕೊಳ್ಳುವ ವಿಷಯದಲ್ಲಿ ಯಾವ ಅನುಭವವೂ ಇರಲಿಲ್ಲ. ಮಲೇಷಿಯಾದಲ್ಲಿದ್ದಂತಹ ಕುಟುಂಬ ಸದಸ್ಯರ ಜಾಲವಿರದಿದ್ದ ನಾಡಿನಲ್ಲಿ ಅವಳು ತನ್ನ ಎರಡು ಚಿಕ್ಕಮಕ್ಕಳ ಹಾಗೂ ಸದಾ ದುಡಿಯುತ್ತಿರುವ ತನ್ನ ಪತಿಯ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾಗಿತ್ತು. ಅಂತಹ ಪರಿಸ್ಥಿತಿಯಲ್ಲಿ, ಸ್ವಾಮಿಗಳನ್ನು ನೋಡಲು ಎಲ್ಲಾ ವೇಳೆಯಲ್ಲಿಯೂ ಬರುತ್ತಿದ್ದ ಅಸಂಖ್ಯ ಭಕ್ತರು ಮತ್ತು ಇತರರಿಗೆ ನಮ್ಮ ಮನೆಯ ವ್ಯವಸ್ಥೆ ಸಾಲುತ್ತಿರಲಿಲ್ಲ. ಅದರ ಜೊತೆಗೆ, ಸ್ವಾಮೀಜಿಯವರ ಭವ್ಯ ಉಪಸ್ಥಿತಿ ಮತ್ತು ಅವರ ಸೂಕ್ಷ್ಮ ಆಹಾರ ಪದ್ಧತಿಗೆ ಹೊಂದಿಕೊಳ್ಳುವ ಸಮಸ್ಯೆಯೂ ಇತ್ತು. ಆದರೆ ಸ್ವಲ್ಪ ದಿನದಲ್ಲಿಯೇ ಸ್ವಾಮೀಜಿಯವರ ಪೂಜ್ಯ ವ್ಯಕ್ತಿತ್ವ ಹಾಗೂ ಮನಕಲಕುವ ಅವರ ಉಪನ್ಯಾಸಗಳು ಅವಳ ಮೇಲೆ ಸೂಕ್ಷ್ಮ, ಆದರೆ ಅಗಾಧವಾದ ಪ್ರಭಾವವನ್ನು ಬೀರಿದವು.

ಪರ್ತ್‌ನಲ್ಲಿ ಈಗ ಇರುವಷ್ಟು ಭಾರತೀಯ ಕುಟುಂಬಗಳು ೧೯೭೦ರ ಆಸುಪಾಸಿನಲ್ಲಿ ಇರಲಿಲ್ಲ. ಮೊದಲ ವರ್ಷಗಳಲ್ಲಿ ಶ್ರಮಪಡುತ್ತಿದ್ದ ವಿದ್ಯಾರ್ಥಿಯಾಗಿದ್ದ ನಾನು ನಂತರದ ವರ್ಷಗಳಲ್ಲಿ ಮನೆಯಲ್ಲಿ ಮಾಡಿದ ಭೋಜನಕ್ಕಾಗಿ ಅಲ್ಲಿನ ಭಾರತೀಯ ವಿದ್ಯಾರ್ಥಿಗಳನ್ನು ಆಗಾಗ್ಗೆ ಆಹ್ವಾನಿಸುತ್ತಿದ್ದೆ. ಅವರೂ ಬಂದು ಸ್ವಾಮೀಜಿಯವರ ಉಪನ್ಯಾಸಗಳನ್ನು ಕೇಳಲಿ ಎಂದು ಇಂತಹ ಹಲವು ವಿದ್ಯಾರ್ಥಿಗಳಿಗೆ ಸ್ವಾಮೀಜಿಯವರು ಬರುತ್ತಿರುವ ವಿಷಯವನ್ನು ತಿಳಿಸಿದೆ. ಅಂತಹವರಲ್ಲಿ ಮುಖ್ಯವಾಗಿ ನನಗೆ ನೆನಪಿಗೆ ಬರುವುದು ಪದ್ಮನಾಭನ್ ಅವರ ಹೆಸರು. ಅವರು ಧಾರ್ಮಿಕ ವಿಷಯಗಳಲ್ಲಿ ವಿಶೇಷವಾದ ಆಸಕ್ತಿಯನ್ನು ಹೊಂದಿದ್ದು ಶ್ರೀ ರಾಮಕೃಷ್ಣರ ಭಕ್ತರಾಗಿದ್ದರು.

---

* ಆಸ್ಟ್ರೇಲಿಯಾದಲ್ಲಿನ ಭಕ್ತರು

ಸ್ವಾಮಿ ರಂಗನಾಥಾನಂದಜೀ ಅವರ ಭೇಟಿಯ ಕಾಲದಲ್ಲಿ ನಾವು ಪ್ರತಿ ದಿನವೂ ಸತ್ಸಂಗವನ್ನು ನಡೆಸಿ, ಸ್ವಾಮೀಜಿಯವರಿಂದ ಉಪನಿಷತ್ತುಗಳು, ಭಗವದ್ಗೀತೆ ಮತ್ತು ಶ್ರೀ ರಾಮಕೃಷ್ಣರ ಉಪದೇಶಗಳು – ಇವುಗಳ ಮೇಲೆ ಪ್ರವಚನಗಳನ್ನು ಏರ್ಪಡಿಸುತ್ತಿದ್ದೆವು. ಅಲ್ಲಿಗೆ ಬರುತ್ತಿದ್ದವರಲ್ಲಿ ಹೆಚ್ಚು ಜನ, ಪೌರ್ವಾತ್ಯ ದರ್ಶನ ಹಾಗೂ ಸಂಸ್ಕೃತಿಯಲ್ಲಿ ಆಸಕ್ತಿಯುಳ್ಳ ಆಸ್ಟ್ರೇಲಿಯಾದವರೇ ಇರುತ್ತಿದ್ದರು. ಶ್ರೀಮಾತೆಯವರ ಜೀವನ ಮತ್ತು ಅವರಿಗೆ ಶ್ರೀ ರಾಮಕೃಷ್ಣರಲ್ಲಿದ್ದ ಭಕ್ತಿಯನ್ನು ಸ್ವಾಮಿ ರಂಗನಾಥಾನಂದಜೀಯವರು ವರ್ಣಿಸುವಾಗ ಶ್ರೀ ಮಾತೆಯವರಲ್ಲಿ ಅವರು ಇರಿಸಿಕೊಂಡಿರುತ್ತಿದ್ದ ಅಕ್ಕರೆಯ ಹಾಗೂ ಪೂಜ್ಯ ಭಾವಗಳು ಇಂದೂ ನನ್ನ ನೆನಪಿನಲ್ಲಿ ಇವೆ. ಸ್ವಾಮೀಜಿಯವರು ಆಸ್ಟ್ರೇಲಿಯಾದಲ್ಲಿದ್ದಾಗಿನ ತಮ್ಮ ನೆನಪುಗಳನ್ನು ತಮ್ಮ 'ಎ ಪಿಲ್ಗ್ರಿಮ್ ಲುಕ್ಸ್ ಅಟ್ ದಿ ವರ್ಲ್ಡ್' ಎಂಬ ಪುಸ್ತಕದ ಎರಡನೆಯ ಸಂಪುಟದಲ್ಲಿ ದಾಖಲಿಸಿದ್ದಾರೆ.

ಆಧ್ಯಾತ್ಮಿಕ ಕ್ಷೇತ್ರದ ದೈತ್ಯರಾದ ಸ್ವಾಮಿ ರಂಗನಾಥಾನಂದಜೀ ಅವರಿಗೆ ಆತಿಥೇಯರಾಗುವ ನಮ್ಮ ಸೌಭಾಗ್ಯವು ಎಂತಹುದು ಎಂಬುದು ನನಗೆ ಆಗ ಅರಿವಾಗಿರಲಿಲ್ಲ. ಒಂದೆರಡು ಪ್ರಸಂಗಗಳು ಅವರು ಎಂತಹ ದೂರದೃಷ್ಟಿಯುಳ್ಳವರು ಎಂಬುದನ್ನು ತೋರಿಸುತ್ತವೆ. ೧೯೭೧ರಲ್ಲಿ ಆಸ್ಟ್ರೇಲಿಯಾದ ಮಾಧ್ಯಮಗಳಲ್ಲಿ ದಕ್ಷಿಣ ಆಫ್ರಿಕಾದಲ್ಲಿನ ಜನಾಂಗಭೇದ ನೀತಿ ಹಾಗೂ ಅಲ್ಲಿನ ಸರ್ಕಾರದ ಭೇದಭಾವದ ಆಡಳಿತದ ಬಗ್ಗೆ ಸಾಕಷ್ಟು ವಿಷಯಗಳು ಬರುತ್ತಿದ್ದವು. ನಾನು ಸ್ವಾಮೀಜಿಯವರನ್ನು ಇಂತಹ ಜನಾಂಗಭೇದ ನೀತಿಯ ನಿವಾರಣೆ ಸಾಧ್ಯವೇ ಎಂದು ಕೇಳಿದೆ. ಅದಕ್ಕೆ ಅವರ ನಿರುದ್ವಿಗ್ನ ಉತ್ತರ: 'ಈ ಶತಮಾನದ ಅಂತ್ಯದೊಳಗೆ ಇದರ ನಿವಾರಣೆಯಾಗುತ್ತದೆ.' ಅವರು ಹಾಗೆ ಹೇಳಿದ ಇಪ್ಪತ್ತು ವರ್ಷಗಳ ಒಳಗೇ ಅವರ ನುಡಿ ಸತ್ಯವಾಗಿತ್ತು.

ಬೇರೊಂದು ಸಂದರ್ಭದಲ್ಲಿ ನಾನು ಅವರನ್ನು ಪ್ರಾಸಂಗಿಕವಾಗಿ 'ಆಸ್ಟ್ರೇಲಿಯಾದಲ್ಲಿಯೇ ಶಾಶ್ವತವಾಗಿ ನೆಲೆಸುವಂತಹ ಸ್ವಾಮಿಯೊಬ್ಬರನ್ನು ನೇಮಕ ಮಾಡುವುದು ಯಾವಾಗ?' ಎಂದು ಕೇಳಿದೆ. ಒಂದು ಕ್ಷಣವೂ ಯೋಚಿಸದೆ ಅವರು ಅದಕ್ಕೆ ಸುಮಾರು ಮೂವತ್ತು ವರ್ಷಗಳಾಗಬಹುದು ಎಂದರು. ಸ್ವಾಮಿ ರಂಗನಾಥಾನಂದಜೀ ಅವರ ಭವಿಷ್ಯವಾಣಿ ನಿಜವಾಗುವುದಕ್ಕೆ, ಸ್ವಾಮಿ ಶ್ರೀಧರಾನಂದ ಮಹಾರಾಜ್ ಅವರು ಬಂದು ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ವೇದಾಂತ ಕೇಂದ್ರವನ್ನು ಸ್ಥಾಪಿಸುವುದಕ್ಕೆ, ಅಷ್ಟೇ ಕಾಲ ಬೇಕಾಯಿತು. ನಂತರ ಸ್ವಾಮಿ ರಂಗನಾಥಾನಂದಜೀಯವರು ತಪ್ಪದೆ ಆಸ್ಟ್ರೇಲಿಯಾಕ್ಕೆ ಭೇಟಿ ಕೊಡುತ್ತಿದ್ದರು, ಮತ್ತು ಹಾಗೆ ಬಂದಾಗ, ಪರ್ತ್‌ನಲ್ಲಿ ವಾರ ಅಥವಾ ಹತ್ತು ದಿನ ಇರುತ್ತಿದ್ದರು. ಪರ್ತ್‌ಗೆ ಬಂದಾಗಲೆಲ್ಲಾ ಅವರು ನಮ್ಮ ಮನೆಯಲ್ಲಿಯೇ ಇಳಿದುಕೊಳ್ಳುತ್ತಿದ್ದರು. ಅಂತಹ ಪೂಜ್ಯರು ನಮ್ಮ ಅತಿಥಿಯಾಗಿರುತ್ತಿದ್ದುದು ನನ್ನ ಮತ್ತು ನನ್ನ ಹೆಂಡತಿಯ ಸೌಭಾಗ್ಯವಾಗಿರುತ್ತಿತ್ತು.

ಇತ್ತೀಚೆಗೆ ೧೯೯೦ರ ಡಿಸೆಂಬರ್‌ನಲ್ಲಿ ಸ್ವಾಮಿ ರಂಗನಾಥಾನಂದಜೀಯವರು ನಮಗೆ ಬರೆದಿದ್ದ ಪತ್ರವೊಂದು ಕಣ್ಣಿಗೆ ಬಿತ್ತು. ಆಗ ಅವರು ಹೈದರಾಬಾದಿನ ಕೇಂದ್ರದಲ್ಲಿದ್ದರು. ಆ ಪತ್ರದಲ್ಲಿ ಅವರು ತಾವು ನಮ್ಮ ಮನೆಯಲ್ಲಿದ್ದುದನ್ನೂ ಮತ್ತು ನನ್ನ ಪತ್ನಿ ಸಾವಿತ್ರಿಯ ಆದರಪೂರ್ವಕ ಆತಿಥ್ಯವನ್ನೂ ಅಕ್ಕರೆಯಿಂದ ಸ್ಮರಿಸಿಕೊಂಡಿದ್ದರು. ಅವರು ನನ್ನ ಪತ್ನಿಗೆ ದೃಢವಾದ ಮತ್ತು ಚಾಂಚಲ್ಯರಹಿತವಾದ ಮನಸ್ಸಿರುವುದೆಂದೂ ಮತ್ತು ಅವಳು 'ಶ್ರೀ ರಾಮಕೃಷ್ಣ ಮತ್ತು ಶ್ರೀಮಾತೆ'ಯವರಿಗೆ ಸೇರಿದವಳೆಂದೂ ಬರೆದಿದ್ದರು.

ನಾನು ಈ ನೆನಪುಗಳನ್ನು ಬರೆಯುತ್ತಿರುವಾಗ, ಪರ್ತ್‌ನಲ್ಲಿ ಶಾಶ್ವತವಾಗಿ ನೆಲಸಲು ಬರುತ್ತಿರುವ ಸ್ವಾಮಿ ದಾಮೋದರಾನಂದಜೀ ಅವರ ಸ್ವಾಗತದ ಕಾರ್ಯಕ್ರಮಗಳು ಅಂತಿಮರೂಪವಾಗಿ ಪಡೆಯುತ್ತಿವೆ. ಶ್ರೀ ರಂಗನಾಥಾನಂದಜೀ ಅವರು ಭವಿಷ್ಯವಾಣಿಯನ್ನು ನುಡಿದ ೩೦ ವರ್ಷಗಳಿಗೂ ಹೆಚ್ಚು ಕಾಲದ ನಂತರ ನಮ್ಮ ನಗರದಲ್ಲಿಯೇ ಸ್ವಾಮೀಜಿಯವರೊಬ್ಬರು ನೆಲಸುವ ಈ ಸಂದರ್ಭವನ್ನು ನಾವು ಸ್ವಾಗತಿಸುತ್ತೇವೆ.

* * * *

# ೭೯. ಎರಡನೆಯ ವಿವೇಕಾನಂದ

–ಸುಮಿತ್ರ ನೋಮ*

ಪೂಜ್ಯ ಮಹಾರಾಜ್ ಅವರನ್ನು ನಾನು ೧೯೫೮ರ ಬೇಸಿಗೆಯಲ್ಲಿ ಭೇಟಿ ಮಾಡಿದೆ. ಅವರು ಬರುವ ವಿಚಾರವು ನನಗೆ ಹೇಗೆ ಗೊತ್ತಾಯಿತು ಎಂಬುದು ನನಗೆ ನೆನಪಿಲ್ಲ. ಅವರನ್ನು ಬರಮಾಡಿಕೊಳ್ಳಲು ನಾನು ವಿಮಾನನಿಲ್ದಾಣಕ್ಕೆ ಹೋಗಿದ್ದೆ. ನನ್ನ ಸೌಭಾಗ್ಯದಿಂದ ನಾನು ಸಂಧಿಸಿದ ರಾಮಕೃಷ್ಣ ಸಂಘದ ಸಂನ್ಯಾಸಿಗಳಲ್ಲಿ ಅವರು ಎರಡನೆಯವರಾಗಿದ್ದರು.

ಭಾರತ ಸರಕಾರವು ಆಯೋಜಿಸಿದ್ದ ಕಾರ್ಯಕ್ರಮದ ಮೇರೆಗೆ ಉಪನ್ಯಾಸಗಳನ್ನು ನೀಡಲು ಸ್ವಾಮಿ ರಂಗನಾಥಾನಂದಜೀ ಅವರು ಮೂರು ತಿಂಗಳ ವ್ಯಾಪಕ ಪ್ರವಾಸಕ್ಕೆಂದು ಜಪಾನಿಗೆ ಬಂದಿದ್ದರು. ಅವರ ಪ್ರವಾಸವು ಅಭೂತಪೂರ್ವವಾಗಿ ಯಶಸ್ವಿಯಾಯಿತು. ಅವರ ಟೋಕಿಯೋ ಪ್ರವಾಸದ ಅಥವಾ ಉಪನ್ಯಾಸದ ಸಮಯದಲ್ಲಿ ಮತ್ತು (ನನ್ನ ಕುಟುಂಬವಿದ್ದ) ಕಮಕುರದ ವೀಕ್ಷಣೆಗೆ ಹೋಗಿದ್ದಾಗ ನಾನು ಅವರ ಸಂಗಡ ಇರುತ್ತಿದ್ದೆ. ಅವರು ನಮ್ಮ ಮನೆಗೆ ಬಂದು ನಮ್ಮೊಡನೆ ಕೆಲವು ಕಾಲ ಕಳೆದು ನಮ್ಮನ್ನು ಧನ್ಯರನ್ನಾಗಿಸಿದರು.

ಅವರ ಪ್ರವಾಸದ ಕೊನೆಯ ದಿನಗಳಲ್ಲಿ ನಾನು ಅವರಿಗೆ ಜಪಾನಿನಲ್ಲಿ ರಾಮಕೃಷ್ಣ ಕೇಂದ್ರವೊಂದನ್ನು ಸ್ಥಾಪಿಸುವ ಸಲಹೆಯನ್ನು ಮುಂದಿಟ್ಟೆ. ಸ್ವಾಮಿ ರಂಗನಾಥಾನಂದಜೀ ಅವರು ಆ ವಿಚಾರವನ್ನು ಮೆಚ್ಚಿಕೊಂಡರು ಮತ್ತು ಒಂದು ಸಭೆಯನ್ನು ಕರೆದರು. ಮಹಾರಾಜ್ ಅವರ ಪ್ರಯತ್ನದ ಫಲವಾಗಿ ನಾಲ್ಕು ಅಥವಾ ಐದು ಜನ ಜಪಾನೀ ಪ್ರೊಫೆಸರ್‌ಗಳು ಮತ್ತು ವಿದ್ವಾಂಸರು ಹಾಗೂ ಇಬ್ಬರು–ಮೂವರು ಭಾರತೀಯರು ಆ ಸಭೆಗೆ ಹಾಜರಾಗಿದ್ದರು. ಆ ಸಭೆಯಲ್ಲಿಯೇ 'ಟೋಕಿಯೋದ ರಾಮಕೃಷ್ಣ ವೇದಾಂತ ಸೊಸೈಟಿ' ಎಂಬ ಸಂಸ್ಥೆಯು ಸ್ಥಾಪನೆಯಾಯಿತು ಮತ್ತು ತಕ್ಷಣದಿಂದಲೇ ಕಾರ್ಯವನ್ನೂ ಆರಂಭಿಸಿತು.

ಭಾರತಕ್ಕೆ ಹಿಂತಿರುಗಿದ ನಂತರ, ಜಪಾನಿನ ಸೊಸೈಟಿಯ ಸಂಸ್ಥಾಪಕ ಕಾರ್ಯದರ್ಶಿಯಾಗಿ ನಾನು ದೆಹಲಿಯ ರಾಮಕೃಷ್ಣ ಮಿಷನ್ನಿನ ಮುಖ್ಯಸ್ಥರಾಗಿದ್ದ ಪೂಜ್ಯ ಮಹಾರಾಜ್ ಅವರೊಡನೆ ಹಲವು ವರ್ಷ ಪತ್ರವ್ಯವಹಾರವನ್ನು ನಡೆಸುತ್ತಿದ್ದೆ. ಪ್ರಾರಂಭದ ಆ ಕಷ್ಟಕರ ವರ್ಷಗಳಲ್ಲಿ ಅವರ ಬೆಂಬಲ, ಪ್ರೋತ್ಸಾಹ ನನಗೆ ಶಕ್ತಿಯ ಪ್ರಬಲ ಸೆಲೆಯಾಗಿತ್ತು. ಮಹಾರಾಜ್ ಅವರು ಆಗ ತಾನೆ ರೆಕ್ಕೆಪುಕ್ಕ ಬಲಿಯುತ್ತಿದ್ದ ಜಪಾನಿನ ಸೊಸೈಟಿಯ ಬಗ್ಗೆ ಉದಾರ ದೃಷ್ಟಿಯನ್ನು ತಳೆದಿದ್ದರು. ಅರಸದೇ ಬಂದ ಭಾಗ್ಯವಾಗಿ ನಮ್ಮ ಸಂಸ್ಥೆಗೆ ಭಾರತ ಸರಕಾರವು ತನ್ನ ೧೯೫೮–೫೯ರ ಆರ್ಥಿಕ ಆಯ–ವ್ಯಯದಲ್ಲಿ ಒಪ್ಪಿಗೆಯಾದ ಅನುದಾನವನ್ನು ನೀಡಲು ಆರಂಭಿಸಿತು. ಈ ಅನುದಾನವು ಇಂದಿನವರೆಗೂ ತಪ್ಪದೇ ದೊರಕುತ್ತಿದೆ. ಇದು ಸ್ವಾಮಿ ರಂಗನಾಥಾನಂದರ ಕೃಪೆ ಹಾಗೂ ಶ್ರಮದಿಂದಲೇ ಸಾಧ್ಯವಾಯಿತು. ಚೆಲ್ಲಾರಾಂ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಶ್ರೀ ಲೋಕುಮಲ್ ಕೆ.ಚೆಲ್ಲಾರಾಂ ಅವರು ೧೯೭೦ರಲ್ಲಿ ನೀಡಿದ ಉದಾರ ಕೊಡುಗೆಯಲ್ಲಿಯೂ (ಸಂಸ್ಥೆಗೆ ಬಂದ ಮೊದಲ ಕೊಡುಗೆ ಅದಾಗಿತ್ತು) ಸ್ವಾಮಿ ರಂಗನಾಥಾನಂದರ ಪಾತ್ರ ಇತ್ತು. ಈ ಕೊಡುಗೆಯ ಹಣದಿಂದ ಕಮಕುರದ ಕಮಿಗಾವೊಕ–ಡಾಂಚಿಯಲ್ಲಿ ಒಂದು ನಿವೇಶನವನ್ನು ಕೊಂಡುಕೊಂಡೆವು. ಅದು ನಿಪ್ಪಾನ್ ವೇದಾಂತ ಕಯೋಕಿಯ ಪ್ರಧಾನ ಕಛೇರಿಯಿಂದ ಎಂಟು ನಿಮಿಷದ ನಡಿಗೆಯ ದೂರದಲ್ಲಿದೆ. ಅಲ್ಲಿ ಸುಮಾರಾದ ಒಂದು ಕಟ್ಟಡವನ್ನು ಕಟ್ಟಿದೆವು. ಅದಕ್ಕೇ

* ಜಪಾನಿನ ವೇದಾಂತ ಸೊಸೈಟಿಯ (ಈಗಿನ ಹೆಸರು– ನಿಪ್ಪಾನ್ ವೇದಾಂತ ಕಯೋಕಿ) ಸಂಸ್ಥಾಪಕ ಕಾರ್ಯದರ್ಶಿ.

ಮುಂದೆ 'ಮದರ್ ಹೌಸ್' ಎಂಬ ಹೆಸರಾಯಿತು. ಪೂಜ್ಯ ಸ್ವಾಮಿ ಭೂತೇಶಾನಂದರೂ ಸೇರಿದಂತೆ ರಾಮಕೃಷ್ಣ ಸಂಘಕ್ಕೆ ಸೇರಿದ ಅನೇಕ ಸಂನ್ಯಾಸಿಗಳೂ ಈ 'ಮದರ್ ಹೌಸ್'ನಲ್ಲಿ ತಂಗಿದ್ದಾರೆ.

ಈ ಸಂದರ್ಭದಲ್ಲಿ ನಮ್ಮ ಸಂಘವನ್ನು ೧೯೫೯ರ ಮೇ ೨ರಂದು ಅಸಂಖ್ಯಾತ ಜನರ ಮುಂದೆ ಉದ್ಘಾಟಿಸಿದ ನ್ಯೂಯಾರ್ಕ್‌ನ ರಾಮಕೃಷ್ಣ–ವಿವೇಕಾನಂದ ಕೇಂದ್ರ ಮುಖ್ಯಸ್ಥ ದಿವಂಗತ ಸ್ವಾಮಿ ನಿಖಿಲಾನಂದರು ಕೃಪೆಯಿಟ್ಟು ನಮಗೆ ನೀಡಿದ ಸಹಾಯವನ್ನು ಕೃತಜ್ಞತಾಪೂರ್ವಕವಾಗಿ ದಾಖಲಿಸುವುದು ಅಗತ್ಯ. ಅವರು ೧೯೭೩ರಲ್ಲಿ ನಿಧನರಾಗುವವರೆಗೆ ನಮಗೆ ಮಾರ್ಗದರ್ಶನ ಹಾಗೂ ನೈತಿಕ ಸ್ಥೈರ್ಯವನ್ನು ಸತತವಾಗಿ ನೀಡುತ್ತಿದ್ದರು.

ಈ ಸಂಸ್ಥೆಗೆ ಅದರ ಶೈಶವದಲ್ಲಿ ಸ್ವಾಮಿ ರಂಗನಾಥಾನಂದ ಮತ್ತು ಸ್ವಾಮಿ ನಿಖಿಲಾನಂದರು ಆಧಾರ ಸ್ತಂಭಗಳಾಗಿದ್ದರು ಮತ್ತು ಅವರ ಮೂಲಕ ನಮಗೆ ಬಂದ ಶ್ರೀರಾಮಕೃಷ್ಣರ ಅನುಗ್ರಹವೂ ಪೋಷಕವಾಗಿತ್ತು ಎಂದ ನಾನು ಘಂಟಾಘೋಷವಾಗಿ ಹೇಳಬಲ್ಲೆ.

ಪೂಜ್ಯ ಸ್ವಾಮಿ ರಂಗನಾಥಾನಂದರು ನಂತರ ಜಪಾನಿಗೆ ಎರಡು ಬಾರಿ, ೧೯೬೩ರಲ್ಲಿ ಒಮ್ಮೆ ಮತ್ತು ೧೯೮೬ರಲ್ಲಿ ಮತ್ತೊಮ್ಮೆ, ಭೇಟಿ ಇತ್ತಿದ್ದರು. ಅವರು ತಮ್ಮ ಭಾಷಣಗಳಲ್ಲಿ ಸ್ವಾಮಿ ವಿವೇಕಾನಂದರ ಸಮಗ್ರ ಕೃತಿಗಳಿಂದ ಧಾರಾಳವಾಗಿ ಉದ್ಧರಿಸುತ್ತಾ, ವಿವೇಕಾನಂದರ ಉಪದೇಶಗಳಿಗೆ ಪ್ರಾಧಾನ್ಯವನ್ನು ಕೊಟ್ಟು ಅದನ್ನು ಜನಪ್ರಿಯಗೊಳಿಸಿದರು. ರೊಮೇ ರೋಲಾ ಅವರ 'ವಿವೇಕಾನಂದರ ಜೀವನ ಮತ್ತು ವಿಶ್ವವೇದ' ಎಂಬ ಅಭಿಜಾತ ಕೃತಿಯಿಂದ ಸ್ವಾಮಿ ರಂಗನಾಥಾನಂದರು ಆಕರ್ಷಿತರಾಗಿದ್ದರು. ತಮ್ಮ ಭಾಷಣಗಳಲ್ಲಿ ಹಾಗೂ ಪುಸ್ತಕಗಳಲ್ಲಿ ಅದರ ಭಾಗಗಳನ್ನು ಉದ್ಧರಿಸುತ್ತಿದ್ದರು. ನನ್ನ ಪ್ರಕಾರ, ಸೋದರಿ ನಿವೇದಿತಾ, ರೊಮೇ ರೋಲಾ ಮತ್ತು ಸೋದರಿ ಗಾರ್ಗಿ ಅವರುಗಳಂತೆಯೇ ಅವರು ಕೂಡ ಸ್ವಾಮಿ ವಿವೇಕಾನಂದರ ಬಹು ದೊಡ್ಡ ವ್ಯಾಖ್ಯಾನಕಾರರಾಗಿದ್ದರು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಅವರು 'ಎರಡನೆಯ ವಿವೇಕಾನಂದ'ರಾಗಿದ್ದರು.

ಅವರು ದೊಡ್ಡ ಮೇಧಾವಿಯಾಗಿದ್ದರೂ, ತಮ್ಮ ಜ್ಞಾನ, ಭಾಷಣ ಮತ್ತು ಲೇಖನಗಳಿಂದ ಜನರಲ್ಲಿ ಭಯಭರಿತ ಗೌರವವನ್ನು ಸಂಪಾದಿಸಿದ್ದರೂ, ತಮ್ಮ ಜೀವಿತಾಂತ್ಯದವರೆಗೂ ಸರಳರಾಗಿ, ವಿನಮ್ರರಾಗಿ ಹಾಗೂ ಕರುಣೆ–ಅನುಕಂಪ ಭರಿತರಾಗಿ ಇದ್ದ, ಇತರರ, ಅದರಲ್ಲೂ ಬಡವ ಮತ್ತು ದಲಿತರ ಉದ್ಧಾರದಲ್ಲಿ ಅತ್ಯಾಸಕ್ತಿಯಿದ್ದ ಸಂನ್ಯಾಸಿಯಾಗಿದ್ದರು. ಅವರ ನಿಧನದಿಂದಾಗಿ ನಿಪ್ಪಾನ್ ವೇದಾಂತ ಕಯೋಕಿ, ರಾಮಕೃಷ್ಣ ಮಠ, ರಾಮಕೃಷ್ಣ ಸಂಘ ಮತ್ತು ರಾಮಕೃಷ್ಣ ಮಿಷನ್‌ಗಳು ತಮ್ಮಲ್ಲಿನ ಮಹೋನ್ನತ ಸಂನ್ಯಾಸಿಯೊಬ್ಬರನ್ನು ಕಳೆದುಕೊಂಡಿವೆ.

ಶ್ರೀ ರಾಮಕೃಷ್ಣರ ಲೋಕದಲ್ಲಿ ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂಬುದು ನನ್ನ ಪ್ರಾರ್ಥನೆ.

* * * *

# ೮೦. ಅವರ ಮಲೇಷಿಯಾ ಭೇಟಿಗಳು– ಕೆಲವು ಚಿಂತನೆಗಳು

–ತೋ ಪುಆನ್ (ಶ್ರೀಮತಿ) ಉಮಾಸುಂದರಿ ಸಂಬಂಧನ್*

ಹೊಸ ದೆಹಲಿಯಲ್ಲಿ ೧೯೫೯ರ ಏಪ್ರಿಲ್‌ನಲ್ಲಿ ನಡೆದ ವಿಶ್ವ ಆರೋಗ್ಯ ಸಂಸ್ಥೆಯ ಏಷಿಯಾ ಪ್ರಾದೇಶಿಕ ಸಮಾವೇಶದಲ್ಲಿ ನನ್ನ ಪತಿ ಶ್ರೀ ವಿ.ಟಿ.ಸಂಬಂಧನ್ ಅವರು, ಆಗ ಮಲಯಾ ಎಂದು ಕರೆಯಲ್ಪಡುತ್ತಿದ್ದ ನಮ್ಮ ದೇಶವನ್ನು ಪ್ರತಿನಿಧಿಸಿದ್ದರು. ೧೯೫೭ರ ಆಗಸ್ಟ್‌ನಲ್ಲಿ ಸ್ವತಂತ್ರವಾದ ನಮ್ಮ ದೇಶದ ಮೊದಲ ಮಂತ್ರಿಮಂಡಲದಲ್ಲಿ ಅವರು ಆರೋಗ್ಯ ಸಚಿವರಾಗಿದ್ದರು. ಆ ಸಮಾವೇಶವು ಪಂ. ಜವಾಹರ್‌ಲಾಲ್ ನೆಹರೂ ಅವರಿಂದ ಅಧಿಕೃತವಾಗಿ ಉದ್ಘಾಟಿಸಲ್ಪಟ್ಟಿತು. ಸಮಾವೇಶದ ನಂತರ ನನ್ನ ಪತಿ ಭಾರತದ ಆಗಿನ ಉಪರಾಷ್ಟ್ರಪತಿಗಳಾಗಿದ್ದ ಡಾ॥ ಎಸ್. ರಾಧಾಕೃಷ್ಣನ್ ಅವರನ್ನು ಭೇಟಿಮಾಡಿದರು. ನಮ್ಮ ದೇಶದಲ್ಲಿ ಸ್ವಾಮಿ ವಿವೇಕಾನಂದರ ಸಂದೇಶವನ್ನು ಸಾರಲು ಅಲ್ಲಿ ರಾಮಕೃಷ್ಣ ಮಿಷನ್ನಿನ ಒಂದು ಶಾಖೆಯನ್ನು ಸ್ಥಾಪಿಸುವುದು ಶ್ರೀ ಸಂಬಂಧನ್ ಅವರ ಕನಸಾಗಿತ್ತು. ಈ ಉದ್ದೇಶದಲ್ಲಿ ಡಾ॥ ರಾಧಾಕೃಷ್ಣನ್ ಅವರ ಸಹಾಯವನ್ನು ಅವರು ಕೋರಿದರು. ಆಗ ಡಾ॥ ರಾಧಾಕೃಷ್ಣನ್ ಅವರು ನವದೆಹಲಿಯಲ್ಲಿದ್ದ ರಾಮಕೃಷ್ಣ ಮಿಷನ್ನಿನ ಸ್ವಾಮಿ ರಂಗನಾಥಾನಂದರೊಡನೆ ಒಂದು ಭೇಟಿಯನ್ನು ವ್ಯವಸ್ಥೆಗೊಳಿಸಿದರು. ಸಂಭಾಷಣೆಯ ವೇಳೆಯಲ್ಲಿ, ಸ್ವಾಮೀಜಿಯವರು ಸಿಂಗಪುರದಲ್ಲಿನ ಶ್ರೀ ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾದ ಸ್ವಾಮಿ ಸಿದ್ಧಾತ್ಮಾನಂದ ಅವರು ಏರ್ಪಡಿಸಿರುವ ಆಗ್ನೇಯ ಏಷಿಯಾ ದೇಶಗಳ ಉಪನ್ಯಾಸ ಪ್ರವಾಸವನ್ನು ಏರ್ಪಡಿಸಿರುವುದಾಗಿಯೂ, ತಾವು ೧೯೬೦ರ ಆಗಸ್ಟ್‌ನಲ್ಲಿ ಅಲ್ಲಿಗೆ ಬರುವುದಾಗಿಯೂ ತಿಳಿಸಿದರು. ಈ ಪ್ರವಾಸದ ಮೊದಲ ಉಪನ್ಯಾಸವನ್ನು ಮಲಯಾ ಏರ್ಪಡಿಸುವುದೆಂದು ತೀರ್ಮಾನಿಸಲಾಯಿತು.

೧೯೫೯ರಲ್ಲಿ ಕೌಲಾಲಂಪೂರಿನಲ್ಲಿ ರಾಮಕೃಷ್ಣ ಸೊಸೈಟಿಯು ನೋಂದಾಯಿತವಾಯಿತು. ನನ್ನ ತಂದೆ ದಿ. ಶ್ರೀ. ಒ.ಎಂ. ಸುಬ್ರಮಣಿಯಂ ಅವರು ಗೌರವ ಮಹಾ ಕಾರ್ಯದರ್ಶಿಯಾಗಿದ್ದ ಆ ಸಂಸ್ಥೆಯಲ್ಲಿ ಆಗ ಮಲಯಾದಲ್ಲಿದ್ದ ಇತರ ಹಿಂದೂ ಸಂಸ್ಥೆಗಳಾದ ವಿವೇಕಾನಂದ ಆಶ್ರಮ, ಶಿವಾನಂದ ಆಶ್ರಮ ಮತ್ತು ಶುದ್ಧ ಸಮಾಜ– ಇವುಗಳನ್ನು ಸದಸ್ಯರನ್ನಾಗಿ ಮಾಡಲಾಯಿತು.

ಸ್ವಾಮಿ ರಂಗನಾಥಾನಂದರ ಮೊದಲ ಮಲಯಾ ಪ್ರವಾಸದಲ್ಲಿ ಅವರೊಂದಿಗೆ ಸ್ವಾಮಿ ಸಿದ್ಧಾತ್ಮಾನಂದ ಅವರೂ ಇದ್ದರು. ಅವರು, ಕೌಲಾಲಂಪೂರಿನ ಗೈಲ್ ಮಾರ್ಡ್‌ನ ನಮ್ಮ ನಿವಾಸದಲ್ಲಿಯೇ ಇಳಿದುಕೊಂಡಿದ್ದರು. ಅವರ ಪ್ರವಾಸಗಳ ಸಮಯದಲ್ಲಿ ಅವರು ನಮ್ಮಲ್ಲಿ ತಂಗುತ್ತಿದ್ದುದು ನಮ್ಮ ಪುಣ್ಯವಿಶೇಷವಾಗಿತ್ತು. ಕೌಲಾಲಂಪುರದ ಪುರಭವನದಲ್ಲಿ ಎರಡು ಹಾಗೂ ಮಲಯಾ ವಿಶ್ವವಿದ್ಯಾನಿಲಯದಲ್ಲಿನ ಕಲಾವಿಭಾಗದ ಸಭಾಂಗಣದಲ್ಲಿ ಒಂದು– ಹೀಗೆ ಮೂರು ಪ್ರವಚನಗಳು ಏರ್ಪಟ್ಟಿದ್ದವು. ಸಮಾಜದ ವಿವಿಧ ವರ್ಗದ ಜನರಿಂದ ಕಲಾವಿಭಾಗದ ಸಭಾಂಗಣವು ಕಿಕ್ಕಿರಿದಿತ್ತು. ಪ್ರಶ್ನೋತ್ತರದ ವೇಳೆಯಲ್ಲಿ ಶ್ರೋತೃಗಳಲ್ಲಿ ಒಬ್ಬರು ಆತ್ಮಸಾಕ್ಷಾತ್ಕಾರದ ಬಗ್ಗೆ ಪ್ರಶ್ನೆಯೊಂದನ್ನು ಕೇಳುತ್ತಾ ವರ್ಡ್ಸ್‌ವರ್ತ್‌ನ ಪದ್ಯದ ಒಂದು ಭಾಗವನ್ನು ಉದ್ಧರಿಸಿದುದು ನನಗೆ ನೆನಪಿದೆ. ಸ್ವಾಮೀಜಿಯವರು ತಮ್ಮ ಉತ್ತರದಲ್ಲಿ ಅದರ ಉಳಿದ ಭಾಗವನ್ನು ಉಲ್ಲೇಖಿಸಿದರು.

ಅವರ ಉಪನ್ಯಾಸವಾದ ನಂತರ ಸ್ವಾಮೀಜಿಯವರನ್ನು ಅವಸರದಿಂದ ಮನೆಗೆ ರಾತ್ರಿಯ ಊಟಕ್ಕೆ ಕರೆದುಕೊಂಡುಹೋದೆವು. ಕಾರಣ ಅವರು ತಮ್ಮ ನೈರುತ್ಯ ಏಷಿಯಾ ಪ್ರವಾಸದ ಅಂಗವಾಗಿ ಸಿಂಗಪುರಕ್ಕೆ

* ಮಲೇಷಿಯಾದಲ್ಲಿನ ಭಕ್ತೆ

ಹೋಗಲು ರಾತ್ರಿಯ ರೈಲನ್ನು ಹಿಡಿಯಬೇಕಾಗಿತ್ತು. ಅವರ ರಾತ್ರಿಯ ಭೋಜನಕ್ಕೆ ಒಂದು ನಿರ್ದಿಷ್ಟ ಪ್ರಮಾಣದ ದುಗ್ಧಾಮ್ಲವನ್ನು, ಕುದಿಸಿ ಆರಿಸಿದ ಹಾಲಿನಲ್ಲಿ ಬೆರೆಸಿ ಸಿದ್ಧಮಾಡಿದ್ದೆವು. ಇದರೊಂದಿಗೆ, ಮೃದುವಾಗಿ ಮಾಡಿದ ಕುಸುಬಲಕ್ಕಿಯ ಅನ್ನ ಹಾಗೂ ಬೇಯಿಸಿದ ತರಕಾರಿಗಳಷ್ಟೇ ಅವರ ಆಹಾರ. ಇದನ್ನು ಮಾಡುವ ಭಾಗ್ಯ ನನ್ನದಾಗಿತ್ತು.

೧೯೬೦ರ ಆಗಸ್ಟ್ ಹದಿನೈದರಂದು ಕೌಲಾಲಂಪುರದ ಶ್ರೀ ಶಾರದಾ ಸಂಘವನ್ನು ಸ್ವಾಮಿ ರಂಗನಾಥಾನಂದ ಅವರು ನಮ್ಮ ಮನೆಯ ದಿವಾನಖಾನೆಯಲ್ಲಿಯೇ ಉದ್ಘಾಟಿಸಿದರು. ಆ ಸಂದರ್ಭದಲ್ಲಿ ಅವರು ನೆರೆದಿದ್ದ ಸುಮಾರು ೫೦ ಮಹಿಳೆಯರನ್ನೂ ಮತ್ತು ಹೊಸದಾಗಿ ಸ್ಥಾಪಿಸಿದ್ದ ರಾಮಕೃಷ್ಣ ಸಂಘದ ಭಕ್ತರನ್ನೂ ಉದ್ದೇಶಿಸಿ ಮಾತನಾಡಿದರು. ಅವರು ನಮ್ಮ ಜೀವನವನ್ನೇ ಪರಿವರ್ತಿಸಿದರು. ಅವರು ನಮ್ಮಲ್ಲಿದ್ದುದು ಭಗವಂತನೇ ನಮ್ಮ ಸಂಗಡ ಇದ್ದ ಹಾಗೆ ಇತ್ತು. ಅವರನ್ನು ಬೀಳ್ಕೊಡುವ ಸಮಯ ಹತ್ತಿರವಾಗುತ್ತಿದ್ದಂತೆ ನನ್ನ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು.

ಅವರು ಸ್ವಾಮಿ ವಿವೇಕಾನಂದರ ಜನ್ಮ ಶತಾಬ್ದಿಯ (೧೯೬೩-೬೪) ಉದ್ಘಾಟನೆಗೆಂದು ೧೯೬೩ರಲ್ಲಿ ಎರಡನೆಯ ಬಾರಿಗೆ ನಮ್ಮ ದೇಶಕ್ಕೆ ಬಂದಿದ್ದರು. ಆಗ ಅವರು ಮಲಯಾದ ವಿವಿಧ ಭಾಗಗಳಲ್ಲಿ ಸ್ವಾಮಿ ವಿವೇಕಾನಂದರ ಬಗ್ಗೆ ಉಪನ್ಯಾಸಗಳನ್ನು ನೀಡಿದರು. ಶತಾಬ್ದಿಯ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಲು ಮತ್ತೆ ಅವರು ೧೯೬೪ರಲ್ಲಿ ಬಂದರು. ನನಗೆ ಮತ್ತು ಮಲಯಾದ ಒಂದು ಚಿಕ್ಕ ನಿಯೋಗದ ಸದಸ್ಯರಿಗೆ ಸಾಂಸ್ಕೃತಿಕ ಸಂಸ್ಥೆಯಲ್ಲಿ ಅವರೊಡನೆ ಇರುವ ಸುಯೋಗ ದೊರೆತಿತ್ತು. ಅಲ್ಲಿನ ಗ್ರಂಥಾಲಯವನ್ನು ನಮಗೆ ತೋರಿಸಿ ಆವರಣವನ್ನೆಲ್ಲಾ ತೋರಿಸಿದರು.

ಇದಕ್ಕೆ ಮೊದಲು, ೧೯೬೨ರ ಅಕ್ಟೋಬರ್‌ನಲ್ಲಿ ನಮ್ಮ ಪ್ರಧಾನಮಂತ್ರಿ ವೈ.ಟಿ.ಎಮ್. ಟುಂಕು ಅಬ್ದುಲ್ ರಹ್ಮಾನ್ ಪುತ್ರ ಅಲ್ ಹಜ್ ಅವರೊಂದಿಗೆ ಅಧಿಕೃತ ಪ್ರವಾಸಕ್ಕೆಂದು ಭಾರತಕ್ಕೆ ಹೋಗಿದ್ದಾಗ, ಪ್ರವಾಸದ ಕಡೆಯಲ್ಲಿ ನನ್ನ ಪತಿ ಮತ್ತು ನಾನು ಬೇಲೂರು ಮಠಕ್ಕೆ ಭೇಟಿಕೊಟ್ಟೆವು. ಆಗಲೂ, ಸ್ವಾಮೀಜಿಯವರು ಅಲ್ಲಿನ ಸಾಂಸ್ಕೃತಿಕ ಸಂಸ್ಥೆಯನ್ನು ಮತ್ತು ಬೇಲೂರು ಮಠದಲ್ಲಿರುವ ಮಂದಿರಗಳನ್ನು ನಮಗೆ ತೋರಿಸಲು ವ್ಯವಸ್ಥೆ ಮಾಡಿದ್ದರು. ಆಗಿನ ಸಂಘದ ವಿಶ್ವಸ್ಥ ಮಂಡಳಿಯ ಶ್ರೀಮತ್ ಸ್ವಾಮಿ ವೀರೇಶ್ವರಾನಂದ ಮಹಾರಾಜ್ ಮತ್ತು ಇತರ ಸದಸ್ಯರೊಂದಿಗೆ ನಮ್ಮನ್ನು ಭೇಟಿ ಮಾಡಿಸಿದರು.

ಸ್ವಾಮಿ ರಂಗನಾಥಾನಂದರು ಮತ್ತೆ ೧೯೭೦ರಲ್ಲಿ ಕೌಲಾಲಂಪುರಕ್ಕೆ ಬಂದು ಅಲ್ಲಿನ ದೂರಸಂಪರ್ಕ ತರಬೇತಿ ಕೇಂದ್ರದಲ್ಲಿ ಎರಡು ಉಪನ್ಯಾಸಗಳನ್ನು ನೀಡಿದರು. ಬಾತು ಕೇವ್ಸ್‌ನಲ್ಲಿ ಶ್ರೀ ಶಾರದಾ ಸಂಘದವರು ನಡೆಸುತ್ತಿದ್ದ ಬಾಲಿಕಾ ಗೃಹದ ಆವರಣದಲ್ಲಿ ಅಂತರ್ ಯೋಗದ ತರಗತಿಗಳನ್ನು ಅವರು ನಡೆಸಿಕೊಟ್ಟರು.

ಸ್ವಾಮೀಜಿಯವರ ೧೯೮೦ರ ಹಾಗೂ ಅದೇ ದಶಕದ ಕೊನೆಯಲ್ಲಿನ ಮಲೇಷಿಯಾ ಪ್ರವಾಸವನ್ನು ಶ್ರೀ ರಾಮಕೃಷ್ಣ ಶಾರದಾ ಸಂಘವು ವ್ಯವಸ್ಥೆಗೊಳಿಸಿತ್ತು. ಸ್ವಾಮೀಜಿಯವರು ನಮ್ಮ ಮನೆಯಲ್ಲಿ ಇಳಿದುಕೊಂಡು ನಮ್ಮ ಮನೆಯನ್ನು ಪಾವನಗೊಳಿಸಿದ್ದೇ ಅಲ್ಲದೆ, ಅಲ್ಲಿಯೇ ಸ್ಫೂರ್ತಿದಾಯಕವಾದ ಅಂತರ್ ಯೋಗದ ತರಗತಿಯನ್ನೂ ನಡೆಸಿಕೊಟ್ಟರು. ನಮ್ಮ ಮನೆಯ ಪಡಸಾಲೆ ಸುಮಾರು ೧೦೦ ಜನರಿಂದ ತುಂಬಿತ್ತು. ಸಂಗೀತಗಾರರಾಗಿದ್ದ ಬೆಲ್ಜಿಯನ್‌ನ ತಮ್ಮ ಶಿಷ್ಯರೊಬ್ಬರು ಸ್ವರಸಂಯೋಜನೆ ಮಾಡಿದ್ದ 'ಹರಿಃ ಓಂ ರಾಮಕೃಷ್ಣ' ಸ್ತೋತ್ರವನ್ನು ನಮಗೆ ಹಾಡಲು ಅಲ್ಲಿ ಕಲಿಸಿದರು. ಈ 'ಹರಿಃ ಓಂ ರಾಮಕೃಷ್ಣ'ದ ಉಗಮದ ಕಥೆಯೂ ಸ್ವಾರಸ್ಯಕರವಾಗಿದೆ. ಇದನ್ನು ಮೊದಲು ಸ್ವಾಮೀಜಿಗೆ ಕೊಟ್ಟವರು ಗೋಪಾಲ್ ಮಹಾರಾಜ್ (ಸ್ವಾಮಿ ಸಿದ್ಧೇಶ್ವರಾನಂದ) ಅವರು. ಅವರೇ ಸ್ವಾಮಿ ರಂಗನಾಥಾನಂದ ಅವರನ್ನು ಅವರ ೧೭ನೇ ವಯಸ್ಸಿನಲ್ಲಿಯೇ ಮೈಸೂರಿಗೆ ಕರೆತಂದವರು. ಗೋಪಾಲ್ ಮಹಾರಾಜ್ ಅವರು, ತಮ್ಮನ್ನು ಫ್ರಾನ್ಸ್‌ಗೆ ವರ್ಗಾಯಿಸಿದಾಗ,

ತಮಗೆ ಫ್ರೆಂಚ್ ಭಾಷೆಯು ಗೊತ್ತಿಲ್ಲವೆಂಬ ಕಾರಣಕ್ಕಾಗಿ ಬಹಳ ಚಿಂತಾಕ್ರಾಂತರಾಗಿದ್ದರು. ಅವರು ಶ್ರೀ ರಾಮಕೃಷ್ಣರ ಮುಂದೆ ಸಾಷ್ಟಾಂಗನಮಸ್ಕಾರ ಮಾಡುತ್ತಾ 'ದೇಶ, ಭಾಷೆ ಗೊತ್ತಿಲ್ಲದ ನಾನು ಈ ನಾಡಿನಲ್ಲಿ ಹೇಗೆ ನಿಭಾಯಿಸಲಿ' ಎಂದು ಮೊರೆಯಿಟ್ಟರು. ಆಗ ಅವರಿಗೆ ಒಂದು ಮಧುರ ಧ್ವನಿ ಕೇಳಿಸಿತು. ಆ ಧ್ವನಿ 'ಹರಿಃ ಓಮ್ ರಾಮಕೃಷ್ಣ' ಎಂಬ ಮಂತ್ರವನ್ನು ಅವರಿಗೆ ಉಪದೇಶಿಸಿ 'ಇದನ್ನು ತೆಗೆದುಕೊ, ಇದನ್ನು ಫ್ರೆಂಚ್ ಜನಗಳಿಗೆ ಕೊಡು' ಎಂದಿತು. ಸ್ವಾಮಿ ರಂಗನಾಥಾನಂದರಿಂದ ಉಪದೇಶಿಸಲ್ಪಟ್ಟ ನಂತರ ಇದನ್ನು ನಾವು ಪ್ರತಿ ಸತ್ಸಂಗದ ಕೊನೆಯಲ್ಲಿ ಹಾಡುತ್ತೇವೆ.

ದೂರವಾಣಿಯ ಮೂಲಕ ಸಂಭಾಷಿಸುವುದು, ಹೈದರಾಬಾದಿನ ಮಠಕ್ಕೆ ಹಲವು ಬಾರಿ ಭೇಟಿ ನೀಡುವುದು– ಇವುಗಳ ಜೊತೆಗೆ ೨೦೦೦ದ ಫೆಬ್ರವರಿಯಲ್ಲಿ ಚೆನ್ನೈನ ವಿಶ್ವ ಮಂದಿರದ ಉದ್ಘಾಟನಾ ಸಮಾರಂಭದ ಸಮಯದಲ್ಲಿ ಅವರ ದರ್ಶನವನ್ನು ನಾವು ಪಡೆದೆವು. ಮಹಾರಾಜ್ ಅವರು ಶ್ರಿ ರಾಮಕೃಷ್ಣ ಶಾರದಾ ಸಂಘದ ವಿಶ್ವಸ್ಥ ಮಂಡಳಿಯ ಸದಸ್ಯಳಾಗಿದ್ದ ನನ್ನ ತಂಗಿ ತ್ರಿಪುರಸುಂದರಿಗೆ, ನನ್ನ ಮಗಳು ದೇವಕುಂಜರಿಗೆ ಹಾಗೂ ನನಗೆ ಆಶೀರ್ವಾದವನ್ನು ಮಾಡಿದರು. ಆಗಿನ ಮಹಾಕಾರ್ಯದರ್ಶಿಯಾಗಿದ್ದ ಸ್ವಾಮಿ ಸ್ಮರಣಾನಂದ ಅವರಿಗೆ ನಮ್ಮ ಸಂಘವನ್ನು ಮಿಷನ್ನಿನ ಅಂಗಸಂಸ್ಥೆಯನ್ನಾಗಿ ಮಾಡಬೇಕೆಂದು ನಿವೇದಿಸಿಕೊಂಡೆವು. ಅಂದು ಸಂಜೆಯ ಒಳಗಾಗಿಯೇ ಸ್ವಾಮಿ ರಂಗನಾಥಾನಂದರು ನಮ್ಮ ಸಂಸ್ಥೆಯನ್ನು ಅಂಗಸಂಸ್ಥೆಯನ್ನಾಗಿಸಿ ನಮ್ಮನ್ನು ಪುನೀತರನ್ನಾಗಿ ಮಾಡಿದರು. ಮರುದಿನ ಅವರು ನಮ್ಮ ಉಳಿದ ಸದಸ್ಯರಿಗೆ ಮಂತ್ರದೀಕ್ಷೆಯನ್ನು ಕೊಟ್ಟು, ಮಧ್ಯಾಹ್ನದ ಆಹಾರವನ್ನು ಬಡಿಸಿ, ಅವರೊಂದಿಗೆ ತಮಿಳಿನಲ್ಲಿಯೇ ಮಾತನಾಡಿದರು.

ನಾನು ಅವರಿಗೆ ಹಲವಾರು ಪತ್ರಗಳನ್ನು ಬರೆದಿದ್ದೆ. ಅವರು ಅವೆಲ್ಲಕ್ಕೂ ಉತ್ತರಿಸುತ್ತಿದ್ದರು. ನಿಜಕ್ಕೂ ಅವರು ನಮಗೆ ಸ್ಫೂರ್ತಿಯ ನೆಲೆಯಾಗಿದ್ದರು. ಅವರು ನನಗೆ ಮತ್ತು ನಮ್ಮ ಸಂಸ್ಥೆಗೆ ಅದರ ಆರಂಭದಿಂದಲೂ ಮಾರ್ಗದರ್ಶನ ನೀಡಿದ್ದರು. ಅವರ ಮಹಾಸಮಾಧಿಯ ನಂತರವೂ ನಾನು ಪುಣ್ಯಮಯವಾದ ಅವರ ಸಾನ್ನಿಧ್ಯವನ್ನು ಅನುಭವಿಸುತ್ತಿದ್ದೇನೆ. ಸ್ವಾಮೀಜಿಯವರ ಪ್ರೀತಿ ಮತ್ತು ನಮ್ಮ ಮೇಲೆ ಆದ ಅವರ ಪ್ರಭಾವವನ್ನು ಮಾತಿನ ಮೂಲಕ ವಿವರಿಸಲು ಸಾಧ್ಯವಾಗುವುದಿಲ್ಲ. ಕೊನೆಯಲ್ಲಿ, ಅವರು ನಮ್ಮ ಕುಬ್ಜ ಜೀವಗಳಿಗೆ ಅರ್ಥವನ್ನು ತುಂಬಿದರು ಎಂದು ಹೇಳಬಯಸುತ್ತೇನೆ.

* * * *

# ೮೧. ಅವಕಾಶವಂಚಿತರ ಸೇವೆಯನ್ನು ಮಾಡಲು ನಮ್ಮನ್ನು ಪ್ರೋತ್ಸಾಹಿಸಿದವರು ಅವರು

–ಸುಮನ್ ರಾಜಾಧ್ಯಕ್ಷ*

ನನ್ನ ತಂದೆ ಪ್ರೊ. ಎಸ್.ಬಿ. ಜುನ್ನಾರ್ಕರ್ ಅವರು ತಮ್ಮ ವಿದ್ಯಾರ್ಥಿ ದೆಸೆಯಲ್ಲಿಯೇ ಶ್ರೀ ರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ಭಕ್ತರಾಗಿದ್ದರು. ಅವರು ತಮ್ಮ ವೃತ್ತಿಜೀವನವನ್ನು ಕರಾಚಿಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾರಂಭಿಸಿದ್ದರು. ನನ್ನಲ್ಲಿರುವ ಅವರ ಮೊದಮೊದಲ ನೆನಪೆಂದರೆ, ಅವರು ಮತ್ತು ಅವರ ಕೆಲವು ಮಿತ್ರರು ನಮ್ಮ ಮನೆಯಲ್ಲಿ ಸೇರಿ 'ವಚನವೇದ' ಹಾಗೂ ಮಿಷನ್ನಿನ ಇತರ ಪುಸ್ತಕಗಳನ್ನು ಓದುತ್ತಿದ್ದುದು. ರಂಗೂನಿನಿಂದ ವಾಪಸ್ಸಾದ ಮೇಲೆ, ೧೯೪೨ರ ಕೊನೆಯ ಭಾಗದಲ್ಲಿ ಶ್ರೀ ಸ್ವಾಮಿ ರಂಗನಾಥನಂದರು ಕರಾಚಿಯ ಆಶ್ರಮದ ಜವಾಬ್ದಾರಿಯನ್ನು ಹೊತ್ತುಕೊಂಡರು. ಅವರು ಮತ್ತು ನನ್ನ ತಂದೆ ಇಬ್ಬರೂ ಮಹಾಪುರುಷ್ ಮಹಾರಾಜ್ (ಸ್ವಾಮಿ ಶಿವಾನಂದ) ಅವರ ಶಿಷ್ಯರಾಗಿದ್ದುದರಿಂದ ಸಹಜವಾಗಿಯೇ ಅವರಿಬ್ಬರೂ ಆಪ್ತರಾದರು.

ಸ್ವಲ್ಪ ಕಾಲದಲ್ಲಿಯೇ ಸ್ವಾಮೀಜಿಯವರು ಕರಾಚಿಯಲ್ಲಿ ತಮ್ಮ ಸುತ್ತ ಸ್ವಾಮಿ ಸರ್ವಗತಾನಂದ ವರೂ ಸೇರಿದಂತೆ, ಉತ್ಸಾಹಶಾಲಿಗಳಾದ ಮತ್ತು ಚುರುಕಾದ ತರುಣ ಬ್ರಹ್ಮಚಾರಿಗಳ ಒಂದು ತಂಡವನ್ನು ಕಟ್ಟಿದರು ಮತ್ತು ಅಲ್ಲಿನ ವಾತಾವರಣವನ್ನೇ ಪರಿವರ್ತಿಸಿದರು. ಅವರು ಪ್ರತಿ ಭಾನುವಾರದ ಸಂಜೆಗಳಲ್ಲಿ ಗೀತೆಯ ಮೇಲಿನ ತಮ್ಮ ತರಗತಿಗಳನ್ನು ಆರಂಭಿಸಿದರು. ಅದು ಎಷ್ಟು ಬೇಗ ಜನಪ್ರಿಯವಾಯಿತೆಂದರೆ, ಅಲ್ಲಿಗೆ ಬರುವವರಿಗೆ ಸ್ಥಳದ ವ್ಯವಸ್ಥೆಯನ್ನು ಮಾಡಲು, ಹೊರಗಡೆ ನೆಲಕ್ಕೆ ಸಿಮೆಂಟ್ ಹಾಕಿ ಸಿದ್ಧಮಾಡ ಬೇಕಾಯಿತು.

ನನ್ನ ಮಟ್ಟಿಗೆ ಹೇಳುವುದಾದರೆ, ನನ್ನ ಹದಿನೆಂಟನೆಯ ಹರಯದಲ್ಲಿ ಆ ತರಗತಿಗಳು ನನ್ನ ಜೀವನವನ್ನೇ ಬದಲಾಯಿಸಿದವು. ಅಲ್ಲಿಯವರೆಗೆ ನಮಗೆ ಹಿಂದೂ ಧರ್ಮವೆಂದರೆ ನನ್ನ ಅಜ್ಜಿ ಮತ್ತು ತಾಯಿ ಮಾಡುತ್ತಿದ್ದ ಪೂಜೆಗಳು, ಏಕಾದಶಿಯ ಉಪವಾಸ, ನಂತರದ ಪುಷ್ಕಳವಾದ ಭೋಜನ, ಅಲ್ಲದೆ ಪ್ರತಿ ವರ್ಷವೂ ಬರುವ ಗಣೇಶಪೂಜೆ, ದೀಪಾವಳಿ ಮೊದಲಾದ ಹಬ್ಬಗಳು. ನಮ್ಮ ಜೀವನವನ್ನೇ ಚಿಂತನೆಗೆ ಹಚ್ಚುತ್ತಿದ್ದ ಅವರ ಉಪನ್ಯಾಸಗಳಿಗೆ ಬರುತ್ತಿದ್ದವರಲ್ಲಿ ಪಾರಸಿಗಳು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರೂ ಇರುತ್ತಿದ್ದರು. ಅವರ ಮುಖಂಡತ್ವದಲ್ಲಿ ಆಶ್ರಮವು ಜೀವ ತುಂಬಿಕೊಂಡಿತ್ತು. ಪ್ರತಿ ಸಂಜೆಯೂ, ತಮ್ಮ ಲುಂಗಿಯನ್ನು ಮೇಲಕ್ಕೆ ಕಟ್ಟಿ ವಾಲಿಬಾಲ್ ಆಡುತ್ತಿದ್ದ ಅಲ್ಲಿನ ಬ್ರಹ್ಮಚಾರಿಗಳೊಡನೆ ಸೇರಿ ಅವರೂ ಆಡುತ್ತಿದ್ದರು. ಜನರು ಗಟ್ಟಿಯಾದ ಮಾಂಸಖಂಡಗಳು ಮತ್ತು ಉಕ್ಕಿನ ನರಗಳನ್ನು ಹೊಂದಿ ಶಕ್ತಿಯುತವಾಗಿ ಬೆಳೆಯುವಂತೆ ಮಾಡುವ ಸ್ವಾಮಿ ವಿವೇಕಾನಂದ ಸಂದೇಶವನ್ನು ಅವರು ಅಕ್ಷರಶಃ ಪಾಲಿಸುತ್ತಿದ್ದರು.

ಪಾಕಿಸ್ತಾನದ ಉಗಮವಾಗಿ, ಆಶ್ರಮವು ಲೂಟಿಯಾಗಿ ಆಶ್ರಮವನ್ನು ಮುಚ್ಚಬೇಕಾದಾಗ ಅವರು ಗೀತೆಯ ಹನ್ನೊಂದನೆಯ ಅಧ್ಯಾಯದ ಬಗ್ಗೆ ಉಪನ್ಯಾಸ ಮಾಡುತ್ತಿದ್ದರು. ರಂಗೂನಿನಲ್ಲಿ ತಮ್ಮ ಆಶ್ರಮವನ್ನು ಮುಚ್ಚಬೇಕಾಗಿ ಬಂದಾಗಲೂ ತಾವು ಹನ್ನೊಂದನೆಯ ಅಧ್ಯಾಯದ ಬಗ್ಗೆ ಉಪನ್ಯಾಸ ಮಾಡುತ್ತಿದ್ದುದಾಗಿ ಅವರು ನಮಗೆ ಹೇಳಿದರು. ನಂತರ ಅವರು ದೆಹಲಿಗೆ ಬಂದರು. ಅಲ್ಲಿ ಕೂಡ ಭಾನುವಾರದ ಅವರ

---

* ಮುಂಬಯಿಯಲ್ಲಿನ ಭಕ್ತೆ

ಉಪನ್ಯಾಸಗಳಿಗಾಗಿ ಹೊರ ಆವರಣದ ನೆಲಕ್ಕೆ ಸಿಮೆಂಟ್ ಹಾಕಿಸಿ ಸಿದ್ಧಗೊಳಿಸಬೇಕಾಯಿತು. ದೆಹಲಿಯಲ್ಲಿ ಅವರು ತಮ್ಮ ಅತಿಪ್ರಿಯವಾದ ಗೀತೆಯ ಮೇಲಿನ ತಮ್ಮ ಉಪನ್ಯಾಸಗಳನ್ನು ಪೂರ್ಣಗೊಳಿಸಿದರು.

ದೆಹಲಿ ಮತ್ತು ಮುಂಬಯಿಯಲ್ಲಿ ರಾಮಕೃಷ್ಣ ಶಾರದಾ ಸಮಿತಿಗಳನ್ನು ಕಟ್ಟಿ, ನಿಯತವಾಗಿ ಧಾರ್ಮಿಕ ವಿಷಯಗಳ ಬಗ್ಗೆ ಸಭೆಗಳನ್ನು ನಡೆಸುವಂತೆಯೂ, ಅವಕಾಶವಂಚಿತರಿಗಾಗಿ ಸಾಮಾಜಿಕ ಹಾಗೂ ವೈದ್ಯಕೀಯ ಸೇವೆಗಳನ್ನು ಒದಗಿಸುವಂತೆಯೂ ನಮ್ಮಂತಹ ಮಹಿಳೆಯರನ್ನು ಅವರು ಪ್ರೋತ್ಸಾಹಿಸಿದರು. ಆಗ ಕೆಲವೇ ಸದಸ್ಯರನ್ನೊಳಗೊಂಡು ಆಗಾಗ್ಗೆ ಸಭೆ ಸೇರುತ್ತಿದ್ದ ನಮ್ಮ ಸಮಿತಿಯು ಮುಂಬಯಿಯ ಕೊಳೆಗೇರಿಯೊಂದರಲ್ಲಿ ೪೦ ವರ್ಷಗಳ ಕಾಲ ಸೇವೆ ಸಲ್ಲಿಸಿತು. ಕಾಲ ಕಳೆದಂತೆ ನಮ್ಮಲ್ಲಿನ ಸ್ವಯಂಸೇವಕರಲ್ಲಿ ಹಲವರು ಬಿಟ್ಟುಹೋದರೂ ರಾಮಕೃಷ್ಣ ಮಠದ ಸ್ವಾಮಿ ವಾಗೀಶಾನಂದರ ಬೆಂಬಲವನ್ನು ಭಾಗ್ಯವಶದಿಂದ ಪಡೆದ ನಮ್ಮ ಸಮಿತಿಯು ಈಗಲೂ ಕಾರ್ಯನಿರತವಾಗಿದೆ. ಸ್ವಾಮಿ ರಂಗನಾಥಾನಂದರು ಒಮ್ಮೆ ನಮ್ಮ ನಿಧಿಸಂಗ್ರಹಣಾ ಸಭೆಯಲ್ಲಿ ಮಾತನಾಡುವ ಕೃಪೆ ತೋರಿದರಷ್ಟೇ ಅಲ್ಲದೆ, ಆಗಾಗ್ಗೆ ನಮ್ಮ ಪ್ರಗತಿಯ ಬಗ್ಗೆ ವಿಚಾರಿಸುತ್ತಿದ್ದರು.

ನನ್ನ ಪತಿ ವಸಂತ್ ರಾಜಾಧ್ಯಕ್ಷ ಅವರು ಮಹಾರಾಜ್ ಅವರ ಪರಮ ಭಕ್ತರು. ೨೦೦೩ರಲ್ಲಿ ಅವರು ತಾವು ಪರಮಹಂಸರ ಜೀವನದ ಬಗ್ಗೆ ಮಕ್ಕಳಿಗಾಗಿ ಬರೆದ ಚಿಕ್ಕ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದುಕೊಡುವಂತೆ ಮಹಾರಾಜ್ ಅವರಲ್ಲಿ ವಿನಂತಿಸಿಕೊಂಡರು. ಅದಕ್ಕೆ ಅವರು ಕೃಪೆಯಿಂದ ಒಪ್ಪಿದರು. ಆ ಪುಸ್ತಕವು ಜನಪ್ರಿಯವಾಯಿತು. ಮಹಾರಾಜ್ ಅವರು ಬರೆದ ಅದರ ಮುನ್ನುಡಿಯು ನಿಜವಾಗಿ ಅವರು ನಮಗೆ ಮಾಡಿದ ಆಶೀರ್ವಾದ. ಸದಾ ನನ್ನ ಮೇಲಿರುವ ಅವರ ಆಶೀರ್ವಾದಕ್ಕಾಗಿ ನಾನು ಅವರಿಗೆ ವಿನಮ್ರಳಾಗಿ ವಂದಿಸುತ್ತೇನೆ.

* * * *

# ೮೨. ಮಹಾಪುರುಷ ಸ್ವಾಮಿ ರಂಗನಾಥಾನಂದರು

–ಎಸ್.ಜಯರಾಮನ್*

ಇಪ್ಪತ್ತನೆಯ ಶತಮಾನದ ಅತ್ಯಂತ ಶ್ರೇಷ್ಠ ವ್ಯಕ್ತಿಗಳಲ್ಲಿ ಒಬ್ಬರಾದ ಸ್ವಾಮಿ ರಂಗನಾಥಾನಂದರ ಬಗೆಗೆ ನಮ್ಮ ಸ್ಮರಣೆಗಳನ್ನು ದಾಖಲಿಸುವ ಅವಕಾಶವನ್ನು ನೀಡಿರುವುದು ಎಂತಹ ಸೌಭಾಗ್ಯ ಮತ್ತು ಸಂತೋಷದ ಸಂಗತಿಯಾಗಿದೆ ! ಅಖಿಲ ಭಾರತ ಆಕಾಶವಾಣಿಯಲ್ಲಿ ಕೆಲವರು ಅವರ ಪ್ರವಚನಗಳನ್ನು ಅಥವಾ ಧ್ವನಿಮುದ್ರಿಕೆಗಳಲ್ಲಿ ದಾಖಲಾದ ಭಾಷಣಗಳನ್ನು ಕೇಳಿರಬಹುದು. ಅನೇಕರು ಅವರು ರಚಿಸಿದ ಗ್ರಂಥಗಳನ್ನು ಓದಿರಬಹುದು. ಆದರೆ, ಕೇವಲ ಅವರ ಪ್ರವಚನಗಳಲ್ಲಿ ಉಪಸ್ಥಿತನಿರುವುದಷ್ಟೇ ಅಲ್ಲ, ಆದರೆ ಅವರನ್ನು ಖಾಸಗಿಯಾಗಿ ಭೇಟಿ ಮಾಡುವಂತಹ ಅವಕಾಶ ಪಡೆದಂತಹ ಭಾಗ್ಯಶಾಲಿ ವ್ಯಕ್ತಿಗಳಲ್ಲಿ ನಾನೂ ಒಬ್ಬನಾಗಿದ್ದೇನೆ. ೧೯೭೬ರಲ್ಲಿ ಜಮ್ಮುವಿನಲ್ಲಿಯೂ, ನಂತರ ೧೯೭೮ರಲ್ಲಿ ಜಯಪುರದಲ್ಲಿಯೂ ಸ್ವಾಮಿ ರಂಗನಾಥಾನಂದರು ನನ್ನನ್ನು ಭೇಟಿಯಾಗಿದ್ದರು. ನಂತರದ ವರ್ಷಗಳಲ್ಲಿ, ಹೊಸ ದಿಲ್ಲಿ, ಹೈದರಾಬಾದ್ ಮತ್ತು ಬೆಂಗಳೂರಿನ ಆಶ್ರಮದ ಆವರಣದಲ್ಲಿ, ಕೆಲವು ಬಾರಿ ಮುಖತಃ ಭೇಟಿಗಳಾಗಿದ್ದವು.

ಮುಂಬೈನಲ್ಲಿ ೧೯೬೦ರಲ್ಲಿ ಅವರು ನೀಡಿದ ಪ್ರವಚನಗಳು ನನ್ನ ನೆನಪಿನಲ್ಲಿ ಯಾವಾಗಲೂ ಹಸಿರಾಗಿ ಉಳಿಯುತ್ತವೆ. ಯಾವುದೇ ಭಯ ಅಥವಾ ಪಕ್ಷಪಾತವಿಲ್ಲದೆ ನನ್ನ ಜವಾಬ್ದಾರಿಗಳನ್ನು ಅತ್ಯಂತ ಉತ್ತಮ ರೀತಿಯಲ್ಲಿ ನಿರ್ವಹಿಸಲು ನೆರವಾಗಬೇಕೆಂಬ ನನ್ನ ನಿರ್ಧಾರವನ್ನು ಆ ಪ್ರವಚನಗಳು ದೃಢಗೊಳಿಸಿದವು. ೧೯೬೦ಕ್ಕೂ ಮೊದಲು ಮತ್ತು ನಂತರ ಡಾ॥ ರಾಧಾಕೃಷ್ಣನ್ ಅವರನ್ನೂ ಒಳಗೊಂಡಂತೆ, ಅನೇಕ ಶ್ರೇಷ್ಠ ಪ್ರವಚನಕಾರರನ್ನು ಆಲಿಸುವ ಸದವಕಾಶಗಳು ನನಗಿದ್ದವು; ಆದರೆ ಸ್ವಾಮಿ ರಂಗನಾಥಾನಂದರ ಪ್ರವಚನಗಳು, ಕೇವಲ ಸ್ಪಷ್ಟವಾದ ಶೈಲಿ ಅಥವಾ ವಾಗ್ವೈಖರಿಯಿಂದ ಮಾತ್ರವಲ್ಲ, ಆದರೆ ಉನ್ನತವಾದ ಆದರ್ಶಗಳು ಮತ್ತು ಅವುಗಳ ಪ್ರತಿಪಾದನೆಯಲ್ಲಿರುವ ಶ್ರದ್ಧೆ ಮತ್ತು ತೀವ್ರ ಆಸಕ್ತಿಗಳಿಂದಾಗಿ, ನಮ್ಮ ಚೈತನ್ಯಗಳನ್ನು ಪ್ರಚೋದಿಸುವಂತಹ ನಮ್ಮ ಅಂತರ್ ಪ್ರಜ್ಞೆಯನ್ನು ಜಾಗೃತಗೊಳಿಸುವಂತಹ ಅನನ್ಯವಾದ ಗುಣಮಟ್ಟವನ್ನು ಪಡೆದಿದ್ದವು.

೧೯೭೬ರಲ್ಲಿ ನನಗೂ, ನನ್ನ ಧರ್ಮಪತ್ನಿಗೂ ಅವರು ಪ್ರೀತಿ ಮತ್ತು ಆಶೀರ್ವಾದಗಳೊಂದಿಗೆ ಕೊಟ್ಟಿದ್ದ 'Eternal Values for a Changeing Society' ಮತ್ತು 'ಮೆಸೇಜ್ ಆಫ್ ದಿ ಉಪನಿಷದ್ಸ್ ['ಬದಲಾಗುತ್ತಿರುವ ಸಮಾಜಕ್ಕೆ ಶಾಶ್ವತ ಮೌಲ್ಯಗಳು' ಮತ್ತು 'ಉಪನಿಷತ್ತುಗಳ ಸಂದೇಶ'] ಎರಡು ಗ್ರಂಥಗಳು ನನ್ನ ಬಳಿ ಇವೆ. ಆ ಅದ್ಭುತ ಗ್ರಂಥಗಳ ಅಧ್ಯಯನವನ್ನು ಮತ್ತು ಪ್ರವಚನಗಳ ಧ್ವನಿಮುದ್ರಿತ ಸುರುಳಿಗಳನ್ನು ಆಲಿಸುವುದನ್ನೂ ನಾನು ಮುಂದುವರಿಸುತ್ತೇನೆ. ಇವುಗಳ ಒಡೆತನವು, ಹೆಚ್ಚುತ್ತಿರುವ ನನ್ನ ಈ ವಯಸ್ಸಿನಲ್ಲಿ, ಅವರ ಆದರ್ಶಗಳನ್ನು ಪಾಲಿಸಿಕೊಂಡು ಬರಲು ಮತ್ತು ನನ್ನ ಚೈತನ್ಯ ಉತ್ಸಾಹಗಳನ್ನು ಜೀವಂತವಾಗಿರಿಸಿಕೊಳ್ಳಲು ಸಹಾಯ ಮಾಡುತ್ತವೆ.

೧೯೫೦ರಲ್ಲಿ, ಉನ್ನತ ಹುದ್ದೆಯಲ್ಲಿರುವ ಕೆಲವರು, ರಾಮಕೃಷ್ಣ ಮಿಷನ್‌ನ ಡೆಲ್ಲಿ ಕೇಂದ್ರದಲ್ಲಿನ ಸ್ವಾಮಿ ರಂಗನಾಥಾನಂದರ ಭಾನುವಾರದ ಪ್ರವಚನಗಳನ್ನು ಮತ್ತೆ ಮತ್ತೆ ಸ್ಮರಿಸುವುದನ್ನು ನಾನು ಕೇಳಿದ್ದೆ. ಕೇವಲ ೧೯೬೦ರ ಕಡೆಯ ಭಾಗದಲ್ಲಿ, ಮುಂಬೈನಲ್ಲಿ ನಾನು ಪ್ರಥಮ ಬಾರಿಗೆ ಅವರ ಪ್ರವಚನವನ್ನು ಕೇಳುವ

* ಬೆಂಗಳೂರಿನ ಒಬ್ಬ ಭಕ್ತರು.

ಅವಕಾಶ ಪಡೆದೆ. ನಾನು ಭಾರತೀಯ ವಿದ್ಯಾಭವನವನ್ನು ತಲುಪುವ ಸಮಯಕ್ಕೆ ಅದರ ಪ್ರವಚನವು ಆರಂಭವಾಗುವುದರಲ್ಲಿತ್ತು. ಸಭಾಭವನ ತುಂಬಿಹೋಗಿದ್ದುದರಿಂದ, ತಡವಾಗಿ ಬಂದ ಇತರ ಅನೇಕರಂತೆ ನಾನು ಮೊಗಸಾಲೆಯಲ್ಲಿಯೇ ನಿಂತುಕೊಳ್ಳಬೇಕಾಯಿತು. ಅವರು ನೆಟ್ಟಗೆ ನೇರವಾಗಿ ನಿಂತಿದ್ದರು ಮತ್ತು ತಮ್ಮ ನೆನಪಿಗೆ ನೆರವು ನೀಡಲು ಯಾವುದೇ ಒಂದು ಟಿಪ್ಪಣಿಯ ಸಹಾಯವೂ ಇಲ್ಲದೇ, ಯಾವುದೇ ಪೂರ್ವಸಿದ್ಧತೆಯಿಲ್ಲದೇ ಪ್ರವಚನ ಮಾಡಿದರು. ತಡೆರಹಿತವಾದ ಈ ಪ್ರವಚನ ಒಂದು ಗಂಟೆಯ ತನಕ ಮುಂದುವರಿಯಿತು. ಆದರೆ, ಒಂದೇ ಒಂದು ನಿಮಿಷ ಕೂಡ ಅಪ್ರಸ್ತುತ, ಅಸಂಬದ್ಧವೆನಿಸುವಂತಹ ಟೀಕೆಗಳಿಂದ ದುರುಪಯೋಗವಾಗಲಿಲ್ಲ. ತಮ್ಮ ಪ್ರವಚನದ ಅವಧಿಯಲ್ಲಿ ಅವರು ಒಂದಂಗುಲ ಕೂಡ ಅತ್ತಿತ್ತ ಕದಲಲಿಲ್ಲ. ಮತ್ತು ಬೇರೆ ಯಾರೊಬ್ಬರೂ, ಪ್ರೇಕ್ಷಕರಲ್ಲಿ ಇದ್ದವರು ಕೂಡ ಅತ್ತ ಇತ್ತ ಕದಲಲಿಲ್ಲ ಅವರ ಮಾತುಗಳು ಮತ್ತು ದೃಷ್ಟಿ ಯಕ್ಷಿಣಿಯ – ಮಾಂತ್ರಿಕ ಪ್ರಭಾವ ಹೊಂದಿದ್ದವು. ಅವರ ಸುತ್ತಲೂ ಶಾಂತಿಯು ಪಸರಿಸಿತ್ತು. ಅವರ ಆಲೋಚನೆಗಳು ಅವರ ಮನಸ್ಸಿನಿಂದ ನೇರವಾಗಿ ಪ್ರೇಕ್ಷಕರಿಗೆ ವರ್ಗವಾಗುತ್ತಿದ್ದವೇನೋ ಎನ್ನುವಂತೆ ಕಂಡುಬರುತ್ತಿತ್ತು. ಕೇಳದ ಆ ನಿಶ್ಶಬ್ದ ಮತ್ತು ಆ ಪ್ರಶಾಂತ ಮತ್ತು ಅನುಕೂಲಕರ ವಾತಾವರಣದಲ್ಲಿ ಅವರ ಆಲೋಚನೆಗಳ ಸಾಮರಸ್ಯಪೂರಿತ ಹರಿವಿನಿಂದ ಮತ್ತು ಮಧುರವಾದ ಧ್ವನಿಯಿಂದ ಪ್ರೇಕ್ಷಕರು ಮಂತ್ರಮುಗ್ಧರಾಗಿದ್ದರು. ಅವರು ಸಾಕಷ್ಟು ತ್ವರಿತಗತಿಯಲ್ಲಿ ಮಾತನಾಡುತ್ತಿದ್ದರು; ಆದರೆ ಪದಗಳನ್ನು ಸ್ವಲ್ಪವೂ ವ್ಯತ್ಯಯ ಮಾಡುತ್ತಿರಲಿಲ್ಲ. ವಿಷಯವನ್ನು ಮರುದಿನ ಮುಂದುವರಿಸುವುದಾಗಿ ಅವರು ತಮ್ಮ ಕೆಳ ಧ್ವನಿಯಲ್ಲಿ ಹೇಳಿದ ಮುಕ್ತಾಯದ ಮಾತುಗಳನ್ನು ಕೇಳಿದಾಗ, ಪ್ರವಚನ ಮುಗಿಯಿತೆಂಬ ವಾಸ್ತವಕ್ಕೆ ದಿಢೀರನೆ ಎಚ್ಚರಾಗುತ್ತಿದ್ದೆವು. ಸಭೆಯು ಮುಕ್ತಾಯಗೊಂಡಾಗ, ಸಭಾಸದರ ನಡುವೆ ಏನಾದರೂ ಸಣ್ಣಪುಟ್ಟ ಮಾತುಗಳಿರಲಿ, ಯಾವುದೇ ಆಲೋಚನೆಗಳ ವಿನಿಮಯಗಳೂ ನಡೆಯುತ್ತಿರಲಿಲ್ಲ. ಸ್ಫೂರ್ತಿಗೊಳಿಸುವಂತಹ ಆಲೋಚನೆಗಳು ತಮ್ಮ ಮನಸ್ಸಿನಲ್ಲಿ ಆಳವಾಗಿ ಇಳಿಯಲು ಬಿಟ್ಟು, ಮರು ದಿನದ ಪ್ರವಚನಕ್ಕೆ ಕಾತರರಾಗಿ ಕಾಯುತ್ತಾ ಜನರು ನಿಶ್ಶಬ್ದವಾಗಿ ಚೆದರುತ್ತಿದ್ದರು.

ಈ ಅನುಭವವನ್ನು ನಾನು ಮತ್ತೆ ಮತ್ತೆ ಪಡೆಯುತ್ತಿದ್ದೆ. ಕಚೇರಿಯಲ್ಲಿಯ ನನ್ನ ಕಾರ್ಯಭಾರಗಳಿಂದಾಗಿ, ಸಭಾಭವನವನ್ನು ಮುಂದಾಗಿಯೇ ತಲುಪಿ, ಸಭಾ ಭವನದಲ್ಲಿ ಆಸನವನ್ನು ಪಡೆಯುವುದು ನನಗೆ ಸಾಧ್ಯವಾಗುತ್ತಿರಲಿಲ್ಲ; ಹಾಗಾಗಿ ನಾನು ಸ್ವಾಮಿ ರಂಗನಾಥಾನಂದರ ಪ್ರವಚನಗಳನ್ನು ಆಲಿಸಲು ಯಾವಾಗಲೂ, ಮೊಗಸಾಲೆಯಲ್ಲಿಯೇ ನಿಂತಿರಬೇಕಾಗುತ್ತಿತ್ತು. ಆದರೂ ಒಂದೇ ಒಂದು ಕ್ಷಣವೂ ದಣಿವೆನಿಸುತ್ತಿರಲಿಲ್ಲ. ಅವರ ಪ್ರವಚನದಲ್ಲಿ ಅನೇಕ ಉಲ್ಲೇಖಗಳು ಅಳವಡಿಸಿರಲ್ಪಟ್ಟಿರುತ್ತಿದ್ದವು. ಆದರೂ ಸಂದರ್ಭಕ್ಕೆ ಹೊರತಾದುದು ಒಂದೂ ಇರುತ್ತಿರಲಿಲ್ಲ ಮತ್ತು ವಿಚಾರಗಳ ಹರವಿಗೆ ಅಡ್ಡಿಪಡಿಸದಂತೆ ಆಯ್ಕೆ ಮಾಡಲ್ಪಟ್ಟಂತಹ ಉದ್ಧೃತ ಭಾಗಗಳಾಗಿರುತ್ತಿದ್ದವು. ಅವರು ಸರಳವಾದ ಭಾಷೆಯನ್ನು ಉಪಯೋಗಿಸುತ್ತಿದ್ದರು ಮತ್ತು ವಿಚಾರಗಳನ್ನು ಸ್ಪಷ್ಟವಾಗಿ ಪ್ರತಿಪಾದಿಸುತ್ತಿದ್ದರು. ಅವರು ಪ್ರವಚನಗಳು ಸಮರ್ಪಕವಾಗಿ ಸಿದ್ಧಗೊಳಿಸಲ್ಪಟ್ಟು ಯಾವಾಗಲೂ ಅರ್ಥಪೂರ್ಣವಾಗಿದ್ದು ಮುಖ್ಯ ವಿಷಯದ ಬಗೆಗೆ ಕೇಂದ್ರಿತವಾಗಿರುತ್ತಿದ್ದವು. ಪ್ರವಚನಗಳ ವಸ್ತು ವೈವಿಧ್ಯಮಯ ವಾಗಿದ್ದು, ಕೇವಲ ಆಧ್ಯಾತ್ಮಿಕ ಪ್ರಗತಿಯನ್ನು ಮಾತ್ರವಲ್ಲ, ಎಲ್ಲ ರಂಗಗಳಲ್ಲಿಯೂ ಮಾನವನ ಅಭಿವೃದ್ಧಿಯ ಬಗೆಗೆ ಕಾಳಜಿಯನ್ನು ಒಳಗೊಂಡಿರುತ್ತಿತ್ತು. ನಮ್ಮ ದೇಶದಲ್ಲಿ ಶೀಘ್ರವೇ ಅಮೂಲ್ಯವಾದ ಸಾಂಪ್ರದಾಯಿಕ ಮೌಲ್ಯಗಳು ಮರುಸ್ಥಾಪನೆಗೊಳ್ಳುವುವೆಂದೂ, ಮತ್ತು ಇಡಿಯ ಮಾನವಕುಲವೇ ಈ ಕರೆಗೆ ಓಗೊಡುವುದು ಎಂದೂ ಅವರು ಮಹಾಭರವಸೆ, ವಿಶ್ವಾಸವನ್ನು, ಹೊಸ ಉಸಿರನ್ನು ತುಂಬಿದರು.

ಜಮ್ಮು ಮತ್ತು ಕಾಶ್ಮೀರಕ್ಕೆ ಅಕೌಂಟೆಂಟ್ ಜನರಲ್ ಆಗಿ ನನ್ನನ್ನು ನೇಮಿಸಿದ್ದು ನನ್ನ ಅನುಭವವನ್ನು ಶ್ರೀಮಂತಗೊಳಿಸುವಂತಹುದಾಯಿತೆಂದು ಸಾಬೀತಾಯಿತು. ಅದು ಕೇವಲ ಸುಂದರ ಪ್ರಾಕೃತಿಕ ದೃಶ್ಯಾವಳಿಗಳಿಂದಲ್ಲ. ಆದರೆ, ಅಲ್ಲಿನ ಜನರೊಡನೆ ಆದ ಉಲ್ಲಾಸಮಯವಾದ, ಹರ್ಷಭರಿತವಾದ ಪರಸ್ಪರ ಪ್ರತಿಕ್ರಿಯೆಗಳಿಂದಾಗಿ.

ಇವುಗಳಲ್ಲೆಲ್ಲಾ ಅತ್ಯಂತ ಅಮೂಲ್ಯವಾದದ್ದೆಂದರೆ, ಧರ್ಮರಥ್ ವಿಶ್ವಸ್ಥ ಮಂಡಲಿಯಿಂದ ಏರ್ಪಡಿಸಲ್ಪಟ್ಟಿದ್ದ ಸಾರ್ವಜನಿಕ ಪ್ರವಚನಗಳಿಂದಾಗಿ. ೧೯೭೬ರಲ್ಲಿ ಸ್ವಾಮೀಜಿಯವರು ಜಮ್ಮುವಿಗೆ ಭೇಟಿ ನೀಡಿದಾಗ ಅವರೊಡನೆ ನಾನು ನಿಕಟ ಸಂಪರ್ಕ ಸ್ಥಾಪಿಸಿಕೊಳ್ಳಲು ಸಾಧ್ಯವಾದದ್ದು. ಶೇಕ್ ಅಬ್ದುಲ್ಲಾ ಮತ್ತು ಬೇಗಮ್ ಅಬ್ದುಲ್ಲಾ ಅವರು ಸಭೆಯಲ್ಲಿ ಉಪಸ್ಥಿತರಾಗಿದ್ದ ಗಣ್ಯರಲ್ಲಿ ಪ್ರಮುಖರಾಗಿದ್ದರು. ನನಗೆ ಕೇವಲ ಒಂದು ಸಭೆಯಲ್ಲಿ ಮಾತ್ರ ಹಾಜರಿರಲು ಸಾಧ್ಯವಾಯಿತು. ಆದರೆ ಶೇಕ್ ಸಾಹೇಬರು ಪ್ರತಿಯೊಂದರಲ್ಲಿಯೂ ಉಪಸ್ಥಿತರಿರುತ್ತಿದ್ದರು. ಹಿಂದೆ ಶೇಕ್ ಅವರು ಸ್ವಾಮೀಜಿಯವರನ್ನು ಹಲವಾರು ಬಾರಿ ಭೇಟಿಯಾಗಿದ್ದರೆಂದು ನನಗೆ ನಂತರ ತಿಳಿಯಿತು.

ಗವರ್ನರ್ ಶ್ರೀ ಎಲ್.ಕೆ. ಝಾ ಅವರ ಅತಿಥಿಗಳಾಗಿ ಸ್ವಾಮೀಜಿಯವರು ರಾಜಭವನದಲ್ಲಿ ಉಳಿದುಕೊಂಡಿದ್ದರು. ನಾನು ಅವರನ್ನು ಭೇಟಿಯಾಗಿ ನನ್ನ ಮನೆಗೆ ಬರುವಂತೆ ಆಹ್ವಾನಿಸಿದೆ. ಸ್ವಾಮೀಜಿಯವರ ಮಹಾಭಕ್ತೆಯಾಗಿದ್ದ ಶ್ರೀಮತಿ ಝಾ ಸ್ವಾಮೀಜಿಯವರನ್ನು ನನ್ನ ಮನೆಗೆ ಕರೆದುಕೊಂಡು ಬಂದರು. ಸ್ವಾಮೀಜಿಯವರನ್ನು ಮನೆಬಾಗಿಲಲ್ಲಿ ವಿಶೇಷವಾದ ಮರ್ಯಾದೆ ಗೌರವಗಳೊಡನೆ ಸ್ವಾಗತಿಸುವ ಮಾಮೂಲಿ ಸಂಪ್ರದಾಯದಂತೆ, ವಿಧ್ಯುಕ್ತವಾದ ಅಂತಹುದೇನು ಕೂಡ ನಿರೀಕ್ಷಿಸಲ್ಪಟ್ಟಿರಲೂ ಇಲ್ಲ, ಅಂತಹ ಸ್ವಾಗತವನ್ನು ಏರ್ಪಡಿಸಿಯೂ ಇರಲಿಲ್ಲ. ನಾಲ್ಕು ವರ್ಷದ ನನ್ನ ಮಗ, ಮುಂಬಾಗಿಲಿನಲ್ಲಿ ನಿಂತು ವಾಹಗಳನ್ನು ನಿರ್ದೇಶಿಸುತ್ತಿದ್ದ ಅಷ್ಟೆ. ಮೇಜರ್ ಗವರ್ನರ್ ಜನರಲ್ ನಾಟು ಮತ್ತು ಆಗಿನ ಕಾನೂನು ಮತ್ತು ಅರ್ಥ ಸಚಿವರಾದ ಶ್ರೀ ಡಿ.ಡಿ. ಠಾಕೂರ್ ಅವರೊಡನೆ ಸ್ವಾಮೀಜಿಯ ಪ್ರಶಂಸಕರಾದ ಉಳಿದ ಕೆಲವರೂ ಆಗಮಿಸಿದರು. ವಿಧಾನ ಸಭೆಯ ಸಮಾವೇಶವು ಗವರ್ನರ್‌ರಿಂದ ಉದ್ಘಾಟಿಸಲ್ಪಡಬೇಕಾಗಿದೆಯೆಂದೂ, ತಡವಾಗುವುದೆಂದೂ ಶ್ರೀಮತಿ ಝಾ ಅವರು ಮತ್ತೆ ಮತ್ತೆ ಮಂತ್ರಿಗಳಿಗೆ ನೆನಪು ಮಾಡಬೇಕಾಯಿತು. ಮನಸ್ಸಿಲ್ಲದ ಮನಸ್ಸಿನಿಂದ ಠಾಕೂರ್ ಹೊರಟರು ಮತ್ತು ಹೊರಡುವ ಮುನ್ನ ತಾವು ರಂಗನಾಥಾನಂದಜೀಯವರ ದಾಸಾನುದಾಸರಾಗಿಬಿಟ್ಟಿದ್ದಾರೆಂಬ ಅರ್ಥಬರುವಂತಹ ಮಾತುಗಳನ್ನು ಸ್ವಾಮೀಜಿಯವರೊಡನೆ ಹೇಳಿದರು. ಕಾಶ್ಮೀರ ಕಣಿವೆಯನ್ನು ಒಬ್ಬ ಮೊಗಲ್ ಚಕ್ರವರ್ತಿಯು ಭೂಮಿಯ ಮೇಲಿನ ಸ್ವರ್ಗ ಎಂದು ವರ್ಣಿಸಿದ್ದ. ಅಂತಹ ಸುಂದರ ಪ್ರದೇಶದಲ್ಲಿ ಸ್ವಾಮೀಜಿಯವರೊಡನೆ ನಮ್ಮ ಪರಸ್ಪರ ಪ್ರತಿಕ್ರಿಯೆಗಳಿಂದಾಗಿ, ಸ್ವಾಮೀಜಿಯು ತಮ್ಮ ಉಜ್ವಲವಾದ ಪ್ರತಿಪಾದನೆಯ ಮೂಲಕ ವಾಸ್ತವವಾಗಿ ನಮಗೂ ಸ್ವರ್ಗದ ಬಾಗಿಲನ್ನು ತೆರೆಯಲು ಪ್ರಯತ್ನಿಸಿದ್ದರು ಮತ್ತು ಆ ಪದದ ಆಳವಾದ ಅರ್ಥದಲ್ಲಿ ಈ ಪೃಥ್ವಿಯೇ ಸ್ವರ್ಗವಾಗಬಹುದು ಎನ್ನುವುದನ್ನು ನಮಗೆ ಮನದಟ್ಟು ಮಾಡಿಸಲು ಪ್ರಯತ್ನಿಸಿದ್ದರು ಎಂದು ನಮ್ಮಲ್ಲಿ ಕೆಲವರು ಭಾವಿಸಿದೆವು.

ರಾಜಾಸ್ಥಾನದಲ್ಲಿ ನನ್ನ ಕೆಲಸದ ಅವಧಿಯಲ್ಲಿ, ೧೯೭೮ನೆಯ ವರ್ಷದಲ್ಲಿ ಸ್ವಾಮೀಜಿಯವರ ನಿಕಟ ಸಂಪರ್ಕದ ಮತ್ತೊಂದು ಅವಕಾಶವು ನನಗೆ ದೊರಕಿತು. ಕೆಲವು ಪ್ರಸಿದ್ಧ ವೈದ್ಯರನ್ನು ಒಳಗೊಂಡಂತೆ, ಶ್ರೀರಾಮಕೃಷ್ಣ ಪರಮಹಂಸರ ಕೆಲವು ಭಕ್ತರು ಸ್ವಾಮಿ ರಂಗನಾಥಾನಂದಜೀಯವರನ್ನು ಜಯಪುರಕ್ಕೆ ಆಹ್ವಾನಿಸಿದ್ದರು ಮತ್ತು ಸೂಚಿಸಲ್ಪಟ್ಟ ಆ ಪ್ರವಚನಕ್ಕೆ ಯಾರಾದರೊಬ್ಬ ಪ್ರಮುಖ ಗಣ್ಯವ್ಯಕ್ತಿಗಳ ಅಧ್ಯಕ್ಷತೆಯನ್ನು ಏರ್ಪಡಿಸುವಂತೆ ನನ್ನನ್ನು ಕೇಳಿಕೊಂಡರು. ಆಗ ರಾಜಾಸ್ಥಾನದ ಗವರ್ನರ್ ಆಗಿದ್ದು, ದಿಲ್ಲಿಯಲ್ಲಿ ಉಳಿದುಕೊಂಡಿದ್ದ ಶ್ರೀ ರಘುಕುಲ ತಿಲಕ್‌ರೊಡನೆ ಸಂಪರ್ಕ ಸಾಧಿಸಲು ನನಗೆ ಸಾಧ್ಯವಾಯಿತು. ದೂರವಾಣಿಯ ಮೂಲಕ ನಾನು ಅವರೊಡನೆ ಮಾತನಾಡಿದಾಗ ಸ್ವಾಮಿ ರಂಗನಾಥಾನಂದಜೀ ಅವರ ಹೆಸರು ಕೇಳಿದ ಕೂಡಲೇ ಅವರು ತತ್‌ಕ್ಷಣವೇ ತಮ್ಮ ಸಮ್ಮತಿಯನ್ನು ನೀಡಿದರು. ಎಂದಿನಂತೆಯೇ ಆ ಪ್ರವಚನವು ಜ್ಞಾನಪ್ರದವಾಗಿತ್ತು. ಬಡತನದ ಪರಿಹಾರಕ್ಕಾಗಿ, ಬಡವರಲ್ಲಿ ಬಡವರ ಮೇಲೆ – ಅಂತ್ಯೋದಯ – ಕೇಂದ್ರೀಕೃತವಾದಂತಹ ವಿಶೇಷ ಯೋಜನೆಗಳನ್ನು ರಾಜಾಸ್ಥಾನ ಸರ್ಕಾರವು ಕಾರ್ಯರೂಪಕ್ಕೆ ತರುತ್ತಿರುವುದನ್ನು ನಾನು ನನ್ನ ಪ್ರಾಸ್ತಾವಿಕ

ಭಾಷಣದಲ್ಲಿ ತಿಳಿಸಿದ್ದೆ. ಸರ್ಕಾರದಿಂದಲೂ, ಅರಿವು ಜಾಗೃತವಾಗಿರುವ ಕೆಲವು ನಾಗರಿಕರಿಂದಲೂ ರಾಜ್ಯದಲ್ಲಿ ನಡೆಯುತ್ತಿದ್ದ ಉತ್ತಮ ಕಾರ್ಯಗಳ ಬಗೆಗೆ ಸ್ವಾಮೀಜಿಗೆ ಅರಿವಿದ್ದಿತು ಮತ್ತು ಅವರು ಅದನ್ನು ಪ್ರಶಂಸಿಸಿದರು. ರಾಜ್ಯದ ಜನತೆಯ – ವಿಶೇಷವಾಗಿ ಕಠಿಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರ ಸಮರ್ಪಣ ಭಾವವನ್ನೂ, ಧೈರ್ಯವನ್ನೂ ಅವರು ಪ್ರಶಂಸಿಸಿದರು – ಮತ್ತು ಆ ಹಿನ್ನೆಲೆಯಲ್ಲಿ ಅವರು ಮನುಕುಲದ ಬಗೆಗೆ ಸೇವೆ ಮತ್ತು ಸಮರ್ಪಣ ಭಾವದ ವೇದಾಂತದ ಆದರ್ಶವನ್ನು ವಿವರಿಸಿದರು.

ಮರುದಿನ ವಿಮಾನನಿಲ್ದಾಣಕ್ಕೆ ಹೋಗುವಾಗ ನನ್ನ ಮನೆಯಲ್ಲಿ ಸಣ್ಣದೊಂದು ಸಮೂಹಕ್ಕೆ ಪ್ರವಚನ ನೀಡಿದರು. ಸ್ವಾಮೀಜಿಯವರ ಸ್ವಾಗತಕ್ಕಾಗಿ ಯಾವುದೇ ವಿಶೇಷ ಸಿದ್ಧತೆಗಳನ್ನೂ ಮಾಡದೇ ಇರುವುದನ್ನು ನೋಡಿದ ಒಂದಿಬ್ಬರು ನನ್ನ ಸಹೋದ್ಯೋಗಿಗಳು ಇಂತಹ 'ಸಾಧಾರಣ ವ್ಯಕ್ತಿ'ಯಿಂದ ಹೆಚ್ಚಿಗೆ ಏನನ್ನೂ ನಿರೀಕ್ಷಿಸಿದ್ದಂತೆ ತೋರಲಿಲ್ಲ. ಆದರೂ, ಅರ್ಧ ಘಂಟೆಯ ತನಕ ತಮ್ಮ ಪ್ರವಚನ ನೀಡಿದಾಗ, ಎಂದಿನಂತೆಯೇ ಉತ್ಸಾಹ ಜಾಗೃತವಾಯಿತು. ಪ್ರವಚನವು ಮುಖ್ಯವಾಗಿ ಭಕ್ತಿಯ ಚೈತನ್ಯ ಅಥವಾ ಭಕ್ತಿಯ ಅರ್ಥ(ಸಾರ)ದ ಮೇಲೆ ಕೇಂದ್ರಿತವಾಗಿತ್ತು. ಭಕ್ತನಾಗಿರುವ ಹಾಗೂ ಮೂರ್ಖನಾಗದಿರುವ ಬಗೆಗೆ ಶ್ರೀ ರಾಮಕೃಷ್ಣರ ಮಾತುಗಳನ್ನು ಅವರು ಉಲ್ಲೇಖಿಸಿದರು.

ವೇದಾಂತದಲ್ಲಿ ಪ್ರತಿಪಾದಿಸಲ್ಪಟ್ಟಿರುವಂತೆ ಭಕ್ತಿಯ ನಿಜವಾದ ಅರ್ಥ ಮತ್ತು ಸತ್ಯಗಳನ್ನು ಅವರು ವಿವರಿಸಿದರು. ಭಾರತೀಯ ಸಂಸ್ಕೃತಿಯ ಐತಿಹಾಸಿಕ ವಿಕಾಸ, ಮಾನವ ಕುಲದ ಆಧ್ಯಾತ್ಮಿಕ ಅಭಿವೃದ್ಧಿಗೆ ಅನೇಕ ಮಹಾಮಹಿಮರ, ಮಹಾತ್ಮರ ಕೊಡುಗೆ ಮತ್ತು ಯೆಹೂದಿಗಳು, ಕ್ರೈಸ್ತರು, ಪಾರಸಿಗಳು ಮತ್ತು ಮುಸಲ್ಮಾನರು ಮುಂತಾದ ಎಲ್ಲ ಧರ್ಮಗಳ ಜನರನ್ನೂ ಭಾರತಕ್ಕೆ ಸ್ವಾಗತಿಸುವಂತಹ ಸಹನೆ ಮತ್ತು ಸಮನ್ವಯಗಳ ಸಾಮರ್ಥ್ಯ ಇವುಗಳ ಬಗೆಗೆ ಅವರು ಮಾತನಾಡಿದರು. ಬಾಹ್ಯದಲ್ಲಿ ನಡೆಯುವ ಕ್ರಿಯೆಗಳು ಮತ್ತು ಅಂತರಂಗದಲ್ಲಿ ನಡೆಯುವ ಧ್ಯಾನ – ಮನನಗಳು – ಹೀಗೆ ಈ ಎರಡೂ ಕ್ಷೇತ್ರಗಳಲ್ಲಿ ನಡೆಯುವ ಕಾರ್ಯಗಳಿಂದಾಗಿ ಜೀವನವೇ ಆಧ್ಯಾತ್ಮಿಕ ಬೆಳವಣಿಗೆಯ ಪ್ರಯೋಗಶಾಲೆ ಎಂಬ ಸ್ವಾಮಿ ವಿವೇಕಾನಂದರ ಮಾತುಗಳನ್ನು ಭಾಷಣದ ಮುಕ್ತಾಯದಲ್ಲಿ ಅವರು ನೆನಪು ಮಾಡಿಕೊಂಡರು. ದೇವಸ್ಥಾನಗಳಿಗೆ ಭೇಟಿ ನೀಡುವುದಕ್ಕಿಂತಲೂ ಹೆಚ್ಚಾಗಿ, ಪೂಜೆ ಮತ್ತು ಧಾರ್ಮಿಕ ಆಚರಣೆಗಳನ್ನು ಜ್ವಲಂತ ಆಧ್ಯಾತ್ಮಿಕತೆಯ ಸಾಧನೆಗಳೆಂದು ನೋಡುವಂತಹ ಪರಿಶುದ್ಧ ಮತ್ತು ಸುಶಿಕ್ಷಿತ ಮನಸ್ಸು ಹೆಚ್ಚು ಮುಖ್ಯ ಎಂದು ಅವರು ಹೇಳಿದರು. ಆಡಳಿತಗಾರರೇ ಹೆಚ್ಚಾಗಿದ್ದ ಆ ಸಂಖ್ಯೆಯಲ್ಲಿ ಅವರು, ಕರ್ಮಯೋಗದ ಪರಿಕಲ್ಪನೆಯ ಪ್ರಾಯೋಗಿಕ ಅಂಶಗಳ ಬಗೆಗೆ ಹೆಚ್ಚು ಮಾತನಾಡಿದರು. ದೃಢ ಚಾರಿತ್ರ್ಯ, ಋಜು ವರ್ತನೆ (ಧಾರ್ಮಿಕ ನಡವಳಿಕೆ) ಮತ್ತು ನಡೆನುಡಿ, ದೇವರ ಸೇವೆ ಎನ್ನುವ ಭಾವನೆಯಿಂದ ಕರ್ತವ್ಯಗಳ ನಿರ್ವಹಣೆ, ಮತ್ತು ಸಹ–ನಾಗರಿಕರೊಡನೆ, ಸಹೋದ್ಯೋಗಿಗಳೊಡನೆ ಮತ್ತು ತಮ್ಮ ಉನ್ನತ ಹುದ್ದೆಯ, ಶ್ರೇಷ್ಠತೆಯ ಪ್ರಜ್ಞೆಯಿರದೇ ತಮ್ಮ ಕೈ ಕೆಳಗಿನವ ರೊಂದಿಗೆ ನ್ಯಾಯಯುಕ್ತವಾಗಿ ವ್ಯವಹರಿಸುವುದರ ಬಗೆಗೆ ಸ್ವಾಮೀಜಿ ಒತ್ತು ನೀಡಿದರು. ನಮ್ಮ ದೇಶದಲ್ಲಿರುವ ಜಾಡ್ಯಗಳ ಬಗೆಗೆ ಅವರು ಮುಕ್ತವಾಗಿ ಮಾತನಾಡಿದರು. ಹಾಗೆಯೇ ಅವುಗಳ ಪರಿಹಾರದ ಬಗೆಗೂ ವಿಚಾರ ಮಾಡಿದರು. ಉನ್ನತ ಸ್ಥಾನಗಳಲ್ಲಿರುವ ಸರ್ಕಾರಿ ಅಧಿಕಾರಿಗಳು, ತಮ್ಮ ಕಾರ್ಯಾಚರಣೆಯ ಮೂಲಕ ಮತ್ತು ತಮ್ಮ ಮೇಲುಸ್ತುವಾರಿಯಲ್ಲಿ ತಮ್ಮ ಕೈಕೆಳಗೆ ಇರುವವರ ಪ್ರಯತ್ನಗಳನ್ನು ನಿರ್ದೇಶಿಸುವುದರ ಮೂಲಕ ದೇಶದ ಅಭಿವೃದ್ಧಿಗೆ ಕೊಡುಗೆ ನೀಡಲು, ಉತ್ತಮವಾದ ಅವಕಾಶ ಹೊಂದಿರುವಂತಹ ಅದೃಷ್ಟ ಪಡೆದಿದ್ದಾರೆಂಬುದು, ಸರ್ಕಾರಿ ನೌಕರರಿಗೆ ಅವರ ವಿಶೇಷ ಸಂದೇಶವಾಗಿತ್ತು. ಎಳೆತಗಳು ಒತ್ತಡಗಳಿಂದಾಗಿ ಸರ್ಕಾರಿ ನೌಕರರು ಎದುರಿಸಬೇಕಾಗುವ ಸಂಕಷ್ಟ–ಸಮಸ್ಯೆಗಳ ಬಗೆಗೆ ಕೇಳಿದ ಒಂದು ಪ್ರಶ್ನೆಗೆ ಸ್ವಾಮೀಜಿಯವರು, ಪುನಃ ಸೇವೆಯ ನಿಜವಾದ ಅರ್ಥವನ್ನು, ಭಾವನೆಯನ್ನು ವಿವರಿಸಿದರು ಮತ್ತು ಅಂತಹ ಅಧಿಕಾರಿಗಳು–ನೌಕರರು ಸ್ವಲ್ಪ ಆತ್ಮವಿಮರ್ಶೆ

ಮಾಡಿಕೊಂಡದ್ದಾದರೆ, ಯಾವುದೇ ಸವಾಲನ್ನಾಗಲೀ ಧೈರ್ಯದಿಂದ ಎದುರಿಸಬಹುದೆಂಬ ಭರವಸೆ ನೀಡಿದರು. ಅವರ ಈ ನುಡಿಗಳು ನನಗೆ, 'ಭಗವದ್ ಗೀತೆ'ಯ ಕಡೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಹೇಳಿದ ಪವಿತ್ರವಾದ ನುಡಿಗಳನ್ನು ನೆನಪಿಸಿತು. ತಾನು ಹೇಳಿದುದೆಲ್ಲವನ್ನೂ ಸಾವಧಾನವಾಗಿ ಪರಿಶೀಲಿಸುವಂತೆಯೂ ಮತ್ತು ನಂತರ ಸಮರ್ಪಕವಾದ ಕರ್ಮ ಯಾವುದೆಂದು ತನಗೆ ತಾನೇ ನಿಶ್ಚಯಿಸುವಂತೆಯೂ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದ್ದಾನೆ.

ನಂತರದ ವರ್ಷಗಳಲ್ಲಿಯೂ ಸ್ವಾಮೀಜಿಯವರೊಡನೆ ಪರಸ್ಪರ ಮುಖಾಮುಖಿಯಾಗುವ ಹಂತದಲ್ಲಿಯೇ ಭೇಟಿಯಾಗುವುದು ನನಗೆ ಸಾಧ್ಯ ವಾಯಿತು. ನಾನು ಯಾವಾಗ ಅವರೊಡನೆ ಭೇಟಿ ಮಾಡಲು ಅವಕಾಶ ಕೇಳಿದರೂ ಅವರು ನನಗೆ ದರ್ಶನ ನೀಡಲು ಸಮ್ಮತಿಸುತ್ತಿದ್ದರು. ಯಾವುದೇ ನಿರ್ದಿಷ್ಟ ವಿಷಯದ ಬಗೆಗೆ ಅವರೊಡನೆ ಚರ್ಚಿಸುವ ಅಭಿಲಾಷೆಯೇನೂ ನನಗಿರಲಿಲ್ಲ. ಸುಮ್ಮನೆ ಅವರೊಡನೆ ಇರುವುದರಲ್ಲಿಯೇ ನನಗೆ ತೃಪ್ತಿ ಸಿಗುತ್ತಿತ್ತು ಮತ್ತು ಯಾವುದರ ಬಗೆಗೂ ಚರ್ಚಿಸುತ್ತಿರಲಿಲ್ಲ. ಅವರು ತಾವೇ, ನನ್ನ ಕುಟುಂಬ ಮತ್ತು ನನ್ನ ಕಾರ್ಯಚಟುವಟಿಕೆಗಳ ಬಗೆಗೆ ವೈಯಕ್ತಿಕವಾಗಿ ವಿಚಾರಿಸಿ ತಿಳಿದುಕೊಳ್ಳುತ್ತಿದ್ದರು. ಅವರ ಉನ್ನತ ಆದರ್ಶಗಳಿಗೆ ಸಂಪೂರ್ಣ ಬದ್ಧನಾಗಿದ್ದು, ನನ್ನ ಚೈತನ್ಯವನ್ನೂ, ಭಾವನೆಗಳನ್ನೂ ಉನ್ನತವಾಗಿಟ್ಟುಕೊಳ್ಳಬೇಕೆಂಬುದು ಅವರನ್ನು ಭೇಟಿ ಮಾಡುವುದರ ಉದ್ದೇಶವಾಗಿತ್ತು. ಅವರ ದೇಹಾರೋಗ್ಯ ಉತ್ತಮವಾಗಿಲ್ಲದಿದ್ದಾಗಲೂ ಮತ್ತು ಅವರಿಗೆ ಸಂಪೂರ್ಣವಾಗಿ ಹಾಸಿಗೆಯ ವಿಶ್ರಾಂತಿಯ ಸಲಹೆ ನೀಡಿದ್ದಾಗ ಕೂಡ ಅವರು ತಮ್ಮನ್ನೂ ಭೇಟಿ ಮಾಡಲು ನನಗೆ ಅವಕಾಶ ನೀಡಿದ್ದರು. ತಾವು ಅಷ್ಟೊಂದು ಕಾರ್ಯಬಾಹುಳ್ಯದ ವೇಳಾಪಟ್ಟಿಯನ್ನು ಹೊಂದಿದ್ದಾಗ್ಯೂ, ನನ್ನಂತಹ ಸಾಮಾನ್ಯ ಮನುಷ್ಯನಿಗೆ ಸ್ವಲ್ಪ ಸಮಯವನ್ನು ಮೀಸಲಿಡುತ್ತಿದ್ದುದು ಸ್ವಾಮೀಜಿಯವರ ವೈಶಿಷ್ಟ್ಯವಾಗಿತ್ತು.

ಕ್ಷೀಣಿಸುತ್ತಿದ್ದ ತಮ್ಮ ದೇಹಾರೋಗ್ಯದ ಬಗೆಗೆ ಅವರು ಸ್ವಲ್ಪವೂ ಚಿಂತಿಸಿದಂತೆ ಕಂಡುಬರುತ್ತಿರಲಿಲ್ಲ. ದುಃಖಕರವಾದ ಅವರ ಸಾವಿಗೆ ಕೆಲವು ವರ್ಷಗಳ ಮುಂಚೆ ಅವರು ಬೆಂಗಳೂರಿನಲ್ಲಿ ವಾಸ್ತವ್ಯ ಹೂಡಿದ್ದರು. ಅವರ ಆರೋಗ್ಯದ ಅಂತಹ ಸ್ಥಿತಿಯಲ್ಲಿಯೂ, ವೈದ್ಯರು ಸಂಪೂರ್ಣ ವಿಶ್ರಾಂತಿಯ ಸಲಹೆ ನೀಡಿದ್ದಾರೆಂದು, ಅವರ ಕಾರ್ಯದರ್ಶಿಯು ಮಧ್ಯೆ ಬಂದು ಹೇಳುವ ತನಕವೂ, ಅವರು ಮಾತನಾಡುತ್ತಲೇ ಇದ್ದರು. ಸ್ವಾಮೀಜಿಯವರ ದರ್ಶನವು ನನಗೆ ಅತ್ಯಂತ ಆಕರ್ಷಕವೂ, ನನ್ನ ಮನಸ್ಸನ್ನು ಸೆಳೆಯುವಂತಹುದೂ ಆಗಿತ್ತೆಂಬುದು ಈ ಮುಂದಿನ ಅನುಭವದಿಂದ ಸಿದ್ಧವಾಗುತ್ತದೆ.

೨೦೦೧ರಲ್ಲಿ ಸ್ವಾಮೀಜಿಯವರು ಬೆಂಗಳೂರಿಗೆ ಭೇಟಿನೀಡಿದ್ದ ಅವಧಿಯಲ್ಲಿ, ಒಂದು ದಿನ ತಡ ಸಂಜೆಯಲ್ಲಿ, ಅವರ ಸಾರ್ವಜನಿಕ ದರ್ಶನದಲ್ಲಿ ಭಾಗವಹಿಸಲು ನಾನು ಆಶ್ರಮಕ್ಕೆ ಹೊರಟೆ. ನನ್ನ ಮನೆಯು ಆಶ್ರಮದಿಂದ ಸಾಕಷ್ಟು ದೂರದಲ್ಲಿದೆ. ಅಲ್ಲದೇ, ಸಾಮಾನ್ಯವಾಗಿ ನಾನು ಜನಭರಿತ ಪ್ರದೇಶಗಳಲ್ಲಿ, ಅದೂ ಸಂಜೆ ವೇಳೆಯಲ್ಲಿ ಕಾರು ಚಲಿಸುವುದನ್ನು ಆದಷ್ಟೂ ತಪ್ಪಿಸುತ್ತೇನೆ. ಹಾಗಾಗಿ ನಾನು ಒಂದು ಬಸ್ಸನ್ನು ಹತ್ತಿದೆ. ಆಶ್ರಮಕ್ಕೆ ಹತ್ತಿರದ ಬಸ್ ನಿಲ್ದಾಣದಲ್ಲಿ ನಾನು ಇಳಿದೆ ಮತ್ತು ರಸ್ತೆಯನ್ನು ದಾಟುತ್ತಿದ್ದಾಗ ಒಬ್ಬ ಸ್ಕೂಟರ್ ಸವಾರನು ಇದ್ದಕ್ಕಿದ್ದಂತೆಯೇ ಹಿಂದಿನಿಂದ ಬಂದು ನನಗೆ ಗುದ್ದಿ, ನನ್ನನ್ನು ಕೆಳಕ್ಕೆ ಕೆಡವಿದ ಮತ್ತು ಬಹಳ ವೇಗವಾಗಿ ಸ್ಕೂಟರ್ ಚಾಲಿಸಿಕೊಂಡು ಹೊರಟುಹೋದ. ಕೆಂಪು ದೀಪಗಳು ಹತ್ತಿಕೊಂಡು ವಾಹನಸಂಚಾರವು ಸಂಪೂರ್ಣವಾಗಿ ಸ್ಥಗಿತಗೊಂಡಿದ್ದಾಗ ನಾನು ರಸ್ತೆ ದಾಟಿದ್ದುದರಿಂದ ನನ್ನದೇನೂ ತಪ್ಪಿರಲಿಲ್ಲ. ನಾನು ಹಾಗೆಯೇ ರಸ್ತೆಯ ಮೇಲೆ ಬಿದ್ದಿದ್ದಾಗ ಸ್ವಲ್ಪ ಸಮಯದ ನಂತರ ಮತ್ತೊಬ್ಬ ಸ್ಕೂಟರ್ ಸವಾರ ಬಂದ ಮತ್ತು ನನ್ನನ್ನು ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಹೋಗುವುದಾಗಿ ತಿಳಿಸಿದ. ನಾನು ಸ್ವಾಮೀಜಿಯವರನ್ನು ಭೇಟಿ ಮಾಡುವ ಆತುರದಲ್ಲಿದ್ದೇನೆಂದೂ, ಆ ಸ್ಕೂಟರ್ ಸವಾರರು ನನ್ನನ್ನು ಆಶ್ರಮಕ್ಕೆ ತಲುಪಿಸುವುದಾದರೆ, ನನಗೆ ಬಹಳ ಸಹಾಯವಾಗುವುದೆಂದೂ ಹೇಳಿದೆ. ಆಶ್ರಮದ ಆವರಣವನ್ನು ಪ್ರವೇಶಿಸಿ ನಾನು ಶುದ್ಧ ಜಲದಿಂದ

ಗಾಯಗಳನ್ನು ತೊಳೆದುಕೊಂಡು, ದರ್ಶನಕ್ಕಾಗಿ ದೀರ್ಘ ಸಾಲಿನಲ್ಲಿ ನಿಂತುಕೊಂಡೆ. ಅವರ ದೈಹಿಕ ಆರೋಗ್ಯ ಉತ್ತಮವಾಗಿರಲಿಲ್ಲ, ಹಾಗಿದ್ದರೂ ಅವರು ಸಂಕ್ಷಿಪ್ತವಾಗಿ ಪ್ರವಚನ ನೀಡಿದರು ಮತ್ತು ಜಮ್ಮುವಿನಲ್ಲಿ ಶ್ರೀ ರಾಮಕೃಷ್ಣ ಮಿಷನ್‌ನ ಆರಂಭದ ಬಗೆಗೆ ವಿಶೇಷ ಉಲ್ಲೇಖ ಮಾಡಿದರು. ದರ್ಶನದಿಂದ ಸಂತುಷ್ಟನಾದ ನಾನು, ಬಿದ್ದ ನೋವನ್ನು ಮರೆಯಲು ಸಾಧ್ಯವಾಯಿತು ಮತ್ತು ಕೆಲವು ಬಸ್‌ಗಳನ್ನು ಹಿಡಿದು ತಡ ರಾತ್ರಿಯಲ್ಲಿ ಮನೆಗೆ ಹಿಂತಿರುಗಿದೆ. ನಂತರ, ವೈದ್ಯರೊಡನೆ ಸಮಾಲೋಚಿಸಿದಾಗ ಅವರು X-ray ತೆಗೆದು ಪರೀಕ್ಷಿಸಿ, ಮೂಳೆಗಳು ಯಾವುದೂ ಮುರಿದಿಲ್ಲವೆಂದು ಆಶ್ವಾಸನೆ ನೀಡಿದರು. ಔಷಧಿಗಳಿಂದಾಗಿ ನಾನು ಬೇಗ ಚೇತರಿಸಿಕೊಂಡೆ. ನಾನು ಪವಾಡಗಳನ್ನು ಆಗಲೀ, ಪವಾಡ–ಚಿಕಿತ್ಸೆಗಳನ್ನು ಆಗಲೀ ನಂಬುವುದಿಲ್ಲ. ಈ ಘಟನೆಯನ್ನು ನಿರೂಪಿಸುವುದರಲ್ಲಿ ನನ್ನ ಉದ್ದೇಶ, ಭಕ್ತರು ಸ್ವಾಮೀಜಿಯವರ ದರ್ಶನಕ್ಕೆ ನೀಡಿರುವ ಪ್ರಾಮುಖ್ಯವನ್ನು ವಿಶದಪಡಿಸುವುದಕ್ಕೆ ಮಾತ್ರ.

ಶಂಕರಾಚಾರ್ಯರ ವಿವೇಕ ಚೂಡಾಮಣಿಯಲ್ಲಿನ ಒಂದು ಪ್ರಸಿದ್ಧವಾದ ಶ್ಲೋಕದಲ್ಲಿ, ಮೂರು ವಸ್ತುಗಳು ಬಹಳ ಅಪರೂಪದವು ಎಂದೂ ಮತ್ತು ಅವು ದೈವ ಕೃಪೆಯಿಂದ ಮಾತ್ರವೇ ದೊರೆಯುವಂತಹವು ಎಂದೂ ಹೇಳಲಾಗಿದೆ. ಅವೆಂದರೆ, ಮಾನವಜನ್ಮ, ಮೋಕ್ಷದ ಇಚ್ಛೆ ಮತ್ತು ಪರಿಪೂರ್ಣ ಋಷಿ ಅಥವಾ ಮಹಾಜ್ಞಾನಿಯ ಮಾರ್ಗದರ್ಶನ. ಶಂಕರ ಎಂಬ ಪವಿತ್ರ ನಾಮವೇ ತಮ್ಮ ಹುಟ್ಟು ಹೆಸರಾಗಿದ್ದ ಸ್ವಾಮಿ ರಂಗನಾಥಾನಂದರು, ತೀರಾ ಚಿಕ್ಕ ವಯಸ್ಸಿನಲ್ಲಿಯೇ ಶ್ರೀ ರಾಮಕೃಷ್ಣ ಪರಮಹಂಸರ ಮತ್ತು ವಿವೇಕಾನಂದರ ಭಕ್ತರಾಗಿದ್ದು, ಆ ಮಿಷನ್ನನ್ನು ಸೇರಿದ್ದರು ಮತ್ತು ಮಹಾಪುರುಷ ಸ್ವಾಮಿ ಶಿವಾನಂದರಿಂದ ದೀಕ್ಷೆ ಪಡೆಯುವ ಸೌಭಾಗ್ಯ ಅವರದಾಗಿತ್ತು.

ತಮ್ಮಲ್ಲಿಯೇ ಅವರು ಶಾಶ್ವತ ಸತ್ಯವನ್ನು ಕಂಡುಕೊಂಡ ನಂತರ ಅವರು ಮಹಾಪುರುಷರಾಗಿದ್ದು ಅತ್ಯಂತ ಸಹಜವೂ ಸ್ವಾಭಾವಿಕವೂ ಆಗಿದ್ದಿತು. ಯಾವಾಗಲೂ ಆಹ್ಲಾದವನ್ನುಂಟುಮಾಡುವಂತಹ, ಸಂತೋಷಚಿತ್ತರಾಗಿದ್ದಂತಹ ಸ್ವಾಮೀಜಿಯವರು, ಬಾಹ್ಯದಲ್ಲಿ ಒಂದಿಷ್ಟೂ ಗರ್ವವಿಲ್ಲದ, ಅತ್ಯಂತ ಸರಳ ವ್ಯಕ್ತಿಯಾಗಿದ್ದರು. ಅವರನ್ನು ಮಹೋನ್ನತ ತತ್ತ್ವಜ್ಞಾನಿಯೆಂದೂ, ಮೇಧಾವಿ ಹಾಗೂ ಅದ್ಭುತ ಪ್ರವಚನಕಾರರೆಂದೂ ಪರಿಗಣಿಸಬಹುದು. ಆದರೆ ಜಗತ್ತಿನಾದ್ಯಂತ ಅವರ ಭಕ್ತರು ತಮಗೆ ದೊರೆತ ಆಧ್ಯಾತ್ಮಿಕ ಮಾರ್ಗದರ್ಶನಕ್ಕಾಗಿ ಮತ್ತು ಅವರ ಮನುಕುಲದ ಪ್ರೀತಿಗಾಗಿ ಅವರನ್ನು ನೆನಪಿಸಿಕೊಳ್ಳುತ್ತಾರೆ. ತಪಶ್ಚರ್ಯೆಗೆಂದು ಅಲ್ಲಿ ಇಲ್ಲಿ, ಎಲ್ಲಿಯೂ ಹೋಗುವ ಬಗೆಗೆ ತಾವೆಂದೂ ಚಿಂತಿಸಲಿಲ್ಲವೆಂದು ಸ್ವಾಮೀಜಿಯವರು ಹೇಳುತ್ತಿದ್ದುದಾಗಿ ತಿಳಿದುಬರುತ್ತದೆ. ಆದರೆ, ಅವರು ಎಂದೂ ಆಶ್ರಮದ ಪರಿಮಿತಿಯಲ್ಲಿ ಉಳಿದಿರದೇ, ಮಾನವರಲ್ಲಿ ಪ್ರೀತಿಯ ಭಾವನೆಯನ್ನು ಜಾಗ್ರತಗೊಳಿಸಲು ಮತ್ತು ಅವರು ತಮ್ಮೊಳಗೇ ಇರುವ ನಿಜವಾದ ದೈವೀ ಸಾಮರ್ಥ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವಂತೆ ಮಾಡಲು, ದೇಶದ ಮೂಲೆಮೂಲೆಗೂ, ಮತ್ತು ಪ್ರಪಂಚದ ಮೂಲೆ ಮೂಲೆಗೂ ಸಂಚರಿಸಿದರು. ಮಹಾದಾರ್ಶನಿಕ ಕ್ರಾಂತದರ್ಶಿ ಸ್ವಾಮಿ ವಿವೇಕಾನಂದರಿಂದ, ಅದ್ಭುತವಾದ ರೀತಿಯಲ್ಲಿ ಆರಂಭವಾದ ಈ ಕಾರ್ಯವು, ಸ್ವಾಮಿ ರಂಗನಾಥಾನಂದರಿಂದ ಅವಿರತವಾಗಿ, ದಣಿವಿರದೆ, ಸಮರ್ಪಣಾಭಾವದಲ್ಲಿ ಮುಂದುವರಿಯಿತು. ಸ್ವಾಮೀಜಿಯವರು 'ಭಾಗವತ'ದ ಸೌಂದರ್ಯವನ್ನು ವಿವರಿಸುತ್ತಿದ್ದ ಭಾಷೆಯಲ್ಲಿ, ನಾನು ಅವರ ಪ್ರವಚನಗಳ ಬಗೆಗೆ ವರ್ಣಿಸಿದರೆ ತಪ್ಪಾಗಲಾರದು. "ಅಪರಿಮಿತ ಪ್ರಾಮಾಣಿಕತೆಯಿಂದ, ಅಸ್ಪಷ್ಟತೆಯಿಲ್ಲದ ಸೂಕ್ಷ್ಮತೆಯಿಂದ, ಉಜ್ವಲವಾಗಿರುವಂತಹ ವಿಚಾರಗಳಿಂದ ಫಲವತ್ತಾಗಿರುವ ಮತ್ತು ತನ್ನ ಸಾಮರ್ಥ್ಯದಿಂದ ಇತರರನ್ನು ಸ್ಫೂರ್ತಿಗೊಳಿಸುವಂತೆ ಜೀವಂತಿಕೆಯಿಂದ ಕೂಡಿರುವಂಥವು..."

ರಂಗನಾಥಾನಂದಜೀಯವರು ವಿಪುಲವಾಗಿ ಅಧ್ಯಯನ ಮಾಡಿದ್ದರು ಮತ್ತು ಅದ್ಭುತವಾದ ಜ್ಞಾಪಕಶಕ್ತಿಯನ್ನು ಹೊಂದಿದ್ದರು. ಗಂಭೀರ ವಿಷಯಗಳಿಗೆ ಗಂಭೀರವಾಗಿಯೂ ಮತ್ತು ಲಘುವಾದ ವಿಷಯಗಳಿಗೆ

ಸೌಜನ್ಯಪೂರ್ಣವಾಗಿಯೂ, ಸುಲಲಿತವಾಗಿಯೂ ಪ್ರತಿಕ್ರಿಯಿಸುತ್ತಿದ್ದರು. ಪ್ರಶ್ನೆಗಳು ಅವಿವೇಕದವು ಅಥವಾ ಕ್ಷುದ್ರವಾಗಿದ್ದಾಗ ಕೂಡ ಅವರು ತಮ್ಮ ಮಾನಸಿಕ ಸಮತೋಲನ ಕಳೆದುಕೊಂಡು ಸಿಟ್ಟಾಗಿದ್ದನ್ನು ನಾನು ಎಂದೂ ನೋಡಿಲ್ಲ. ಜಮ್ಮುವಿನಲ್ಲಿ ನಡೆದ ಒಂದು ಸುದ್ದಿಗೋಷ್ಠಿಯಲ್ಲಿ ಇಂತಹದೊಂದು ಪ್ರಶ್ನೆಗೆ, ಅವರು ತಮ್ಮ ತಲೆ ಕೆರೆದುಕೊಂಡು ನಗುತ್ತಾ ಪ್ರತಿಕ್ರಿಯಿಸಿದ್ದು ನನಗೆ ನೆನಪಿದೆ. ಎಲ್ಲಕ್ಕಿಂತಲೂ ಮಿಗಿಲಾಗಿ, ಅವರು ಜನರಲ್ಲಿ ಯಾವ ಮಟ್ಟದ ಆತ್ಮವಿಶ್ವಾಸವನ್ನು ತುಂಬಿದರು ಮತ್ತು ಅದೆಷ್ಟು ವಿನಮ್ರರೂ, ನಿರಾಡಂಬರಿಗಳೂ ಆಗಿದ್ದರು ಎಂದರೆ, ತಾವು ಮನೋನಿಶ್ಚಯ ಮಾಡಿ, ಗುರಿ ತಲುಪುವುದರತ್ತ ಕಾರ್ಯ ಪ್ರವೃತ್ತರಾದರೆ, ತಾವು ಕೂಡ ಸ್ವಾಮೀಜಿಯವರಂತೆ ಆಗಿಬಿಡಬಹುದೆಂಬ ಭಾವನೆಯನ್ನು ಜನರಲ್ಲಿ ಅವರು ಉಂಟುಮಾಡುತ್ತಿದ್ದರು.

* * * *

# ೮೩. ಅವರನ್ನು ನಾನು ಹೇಗೆ ಮರೆಯಲಿ?

–ಇ.ವಿ.ಎನ್. ಚಾರಿ*

೧೯೫೬ರ ಯು.ಪಿ.ಎಸ್.ಸಿ. ಪರೀಕ್ಷೆಯಲ್ಲಿ ಯಶಸ್ವಿಯಾಗಿ ತೇರ್ಗಡೆಯಾದ ಪರಿಣಾಮವಾಗಿ ನಾನು ೧೯೫೭ ಜೂನ್‌ನಲ್ಲಿ ಯು.ಪಿ.ಎಸ್.ಸಿ. ಕಚೇರಿಯಲ್ಲಿಯೇ ಶೀಘ್ರಲಿಪಿಕಾರನಾಗಿ ನೇಮಿಸಲ್ಪಟ್ಟೆ. ದಿಲ್ಲಿಗೆ ಬರುವ ಮುನ್ನ ನಾನು ಅಲ್ಲಲ್ಲಿ ಸ್ವಾಮಿ ವಿವೇಕಾನಂದರ ಉಕ್ತಿಗಳಿದ್ದ ಕೆಲವು ಪುಸ್ತಕಗಳನ್ನು ಕಂಡು, ಅವುಗಳನ್ನು ಓದಿದೆ ಮತ್ತು ಆ ಪುಸ್ತಿಕಗಳೆಲ್ಲವನ್ನೂ ನಾನು ಮದ್ರಾಸಿನ (ಈಗ ಚೆನ್ನೈ) ರಾಮಕೃಷ್ಣ ಮಠದಿಂದ ಖರೀದಿಸಿದೆ. ನಿಜವಾಗಿಯೂ, ಕೆಲವು ಪುಸ್ತಿಕೆಗಳನ್ನು ಓದಿದ ನಂತರ, ಸ್ವಾಮೀಜಿಯವರ ಸ್ಫೂರ್ತಿ ನೀಡುವಂಥ ಎಲ್ಲ ಕೃತಿಗಳನ್ನೂ ಓದುವ ಅಭಿರುಚಿಯನ್ನು ಬೆಳೆಸಿಕೊಂಡೆ.

ಆದ್ದರಿಂದ, ದೆಹಲಿಗೆ ಬಂದ ನಂತರ, ದೆಹಲಿಯಲ್ಲಿ ರಾಮಕೃಷ್ಣ ಮಿಷನ್ ಕೇಂದ್ರ ಇರುವ ಸ್ಥಳದ ಬಗೆಗೆ ಕಾತರದಿಂದ ಪ್ರಶ್ನಿಸುತ್ತಿದ್ದೆ. ನನಗೆ ಆಶ್ಚರ್ಯವೆನಿಸುವಂತೆ ರಾಮಕೃಷ್ಣ ಮಠವು, ನಾನು ಉಳಿದುಕೊಂಡಿದ್ದ ಹೋಟೆಲ್ ಇದ್ದ ಕರೋಲ್‌ಬಾಗ್‌ಗೆ ಬಹಳ ಸಮೀಪದಲ್ಲಿತ್ತು. ಆದ್ದರಿಂದ ಒಂದು ದಿನ ನಾನು ಪ್ರಯತ್ನಿಸಿ, ಪಾಂಚ್‌ಕ್ವಿಯಾನ್ ರಸ್ತೆಯಲ್ಲಿರುವ ರಾಮಕೃಷ್ಣ ಮಠಕ್ಕೆ ಹೋದೆ ಮತ್ತು ಆ ಮಂದಿರದಲ್ಲಿನ ಧ್ಯಾನಕ್ಕೆ ಸಹಾಯಕವಾಗುತ್ತಿದ್ದಂತಹ ಪ್ರಶಾಂತತೆಯಿಂದ ಬಹಳ ಆಕರ್ಷಿತನಾದೆ. ಆ ನಂತರ ನಾನು ಅಲ್ಲಿಗೆ ಕ್ರಮವಾಗಿ ಸಾಯಂಕಾಲದ ವೇಳೆಯಲ್ಲಿ ಹೋಗತೊಡಗಿದೆ, ಮಠದವರೊಡನೆ ಯಾವುದೇ ಸಂಪರ್ಕ ಬೆಳೆಸಿಕೊಳ್ಳುವುದರ ಬಗೆಗೆ ಯಾವುದೇ ರೀತಿಯಲ್ಲಿಯೂ ಚಿಂತಿಸದೆ.

ಆ ಸಮಯದಲ್ಲಿ ನನ್ನ ಮಹಾಭಾಗ್ಯವೆಂಬಂತೆ, ಸ್ವಾಮಿ ರಂಗನಾಥಾನಂದಜೀಯವರು ಆಶ್ರಮದ ಕಾರ್ಯದರ್ಶಿಗಳಾಗಿದ್ದರು. ಅವರ ಉಪನ್ಯಾಸಗಳಿಂದ ಬಹಳ ಸ್ಫೂರ್ತಿಗೊಂಡಿದ್ದ ನಾನು, ಭಾನುವಾರಗಳಂದು ಅವರು "ಭಗವದ್ಗೀತೆಯ ಬಗೆಗೆ" ನೀಡುತ್ತಿದ್ದ ಭಾನುವಾರದ ಪ್ರವಚನಗಳಿಗೆ ನಾನು ಅಲ್ಲಿ ಹಾಜರಿರುತ್ತಿದ್ದೆ. ಆದರೂ ನನಗೆ ಅವರೊಡನೆ ಸಂಪರ್ಕವಿರಲಿಲ್ಲ. ಆದರೆ, ೧೯೫೭ರ ಜುಲೈ ೧, ಭಾನುವಾರದಂದು ಪ್ರಾತಃಕಾಲ ಆಶ್ರಮಕ್ಕೆ ಹೋದೆ ಮತ್ತು ಧ್ಯಾನದ ನಂತರ ದೇವಸ್ಥಾನದಿಂದ ಕೆಳಗಿಳಿದು ಬಂದೆ. ಆ ಸಮಯದಲ್ಲಿ ಇನ್ನೂ ಈಗಿರುವ ದೇವಸ್ಥಾನವನ್ನು ನಿರ್ಮಿಸಲಾಗುತ್ತಿತ್ತು ಮತ್ತು ದೇವಸ್ಥಾನವು ಕಚೇರಿಯ ಕಟ್ಟಡದ ಮೇಲ್ಭಾಗದಲ್ಲಿತ್ತು. ಆಗ ಸ್ವಾಮಿ ರಂಗನಾಥಾನಂದರು, ನನ್ನತ್ತ ಕೈಮಾಡಿ ಕರೆದರು. ನಾನು ಹೋಗಿ ನಮಸ್ಕರಿಸಿದಾಗ, ಸ್ವಾಮೀಜಿಯು ನಾನು ಏನು ಕೆಲಸ ಮಾಡುತ್ತಿದ್ದೇನೆ, ಯಾವಾಗ ದೆಹಲಿಗೆ ಬಂದೆ, ಮುಂತಾದ ಎಲ್ಲ ವಿವರಗಳನ್ನೂ ವಿಚಾರಿಸಿದರು. ನಾನು ತಾತ್ಕಾಲಿಕವಾಗಿ ಯು.ಪಿ.ಎಸ್.ಸಿ. ಸದಸ್ಯರೊಬ್ಬರ ಬಳಿ ಅವರ ಖಾಸಗಿ ಕಾರ್ಯದರ್ಶಿಯಾಗಿ ಕೆಲಸ ಮಾಡಲು ನೇಮಿಸಲ್ಪಟ್ಟಿರುವುದಾಗಿ ಹೇಳಿದೆ. ಪೂಜ್ಯ ಮಹಾರಾಜ್‌ರು ತಮ್ಮ ಕೆಲವು ಮಾತುಗಳಿಂದ ನನಗೆ ಸ್ಫೂರ್ತಿ ನೀಡಿದುದಲ್ಲದೇ, ತಮ್ಮ ಆಪ್ತ ಕಾರ್ಯದರ್ಶಿಯಾಗಿ ಕೆಲಸ ಮಾಡುವಂತೆ ನನಗೆ ಸೂಚಿಸಿದರು. ಅವರ ಸೂಚನೆಯನ್ನು ಅನಿರೀಕ್ಷಿತ ಸಂತೋಷದಿಂದ ನಾನು ಆ ಕೂಡಲೇ ಒಪ್ಪಿಕೊಂಡೆ ಮತ್ತು ಮರುದಿನದಿಂದಲೇ ನಾನು ಕ್ರಮವಾಗಿ ಸಾಯಂಕಾಲದ ಹೊತ್ತು ನನ್ನ ಆಫೀಸಿನಿಂದ ಆಶ್ರಮಕ್ಕೆ ಹೋಗುತ್ತಿದ್ದೆ ಮತ್ತು ಅನೇಕ ಭಕ್ತರನ್ನು ಉದ್ದೇಶಿಸಿ ಅವರು ಬರೆಯುತ್ತಿದ್ದ ಅನೇಕ ಸ್ಫೂರ್ತಿದಾಯಕ ಪತ್ರಗಳ ಶೀಘ್ರಲಿಪಿಯ

* ದೆಹಲಿಯ ಒಬ್ಬ ಭಕ್ತರು

ಉಕ್ತಲೇಖನವನ್ನು ತೆಗೆದುಕೊಂಡು ಅವನ್ನು ಸಾಧಾರಣ ಲಿಪಿಯಲ್ಲಿ ಟೈಪು ಮಾಡಿ, ಅವರ ಸಹಿ ಹಾಗೂ ಅವುಗಳನ್ನು ಅಂಚೆಯ ಮೂಲಕ ರವಾನೆಗಾಗಿ ಅವರ ಮುಂದೆ ಇಡುತ್ತಿದ್ದೆ. ಅಂತಹ ಸ್ಫೂರ್ತಿದಾಯಕ ಪತ್ರಗಳ ಉಕ್ತಲೇಖನವನ್ನು ತೆಗೆದುಕೊಳ್ಳುವ ಮತ್ತು ಟೈಪ್‌ರೈಟರಿನಲ್ಲಿ ಅವುಗಳನ್ನು ಸಾಧಾರಣಲಿಪಿಯಲ್ಲಿ ಟೈಪು ಮಾಡುವ ಅವಧಿಯಲ್ಲಿ ನಾನು ಅನುಭವಿಸುತ್ತಿದ್ದ ಮಹಾಸಂತೋಷವನ್ನು ವರ್ಣಿಸಲು ಸಾಧ್ಯವಿಲ್ಲ. ಸ್ವತಃ ನಾನೇ ಸ್ಫೂರ್ತಿಗೊಳ್ಳುತ್ತಿದ್ದೆನೆಂದರೆ ಇನ್ನು ಯಾವ ವ್ಯಕ್ತಿಗಳನ್ನು ಸಂಬೋಧಿಸಿ ಬರೆದಿದ್ದರೋ ಆ ವ್ಯಕ್ತಿಗಳ ಬಗೆಗೆ ಏನು ತಾನೇ ಹೇಳಲು ಸಾಧ್ಯ!

ಕ್ರಮೇಣ, ಪೂಜ್ಯ ಮಹಾರಾಜ್ ನನ್ನನ್ನು ಆಧ್ಯಾತ್ಮಿಕತೆಯತ್ತ ಪ್ರೇರಿಸತೊಡಗಿದರು. ವಿಶೇಷವಾಗಿ, ಪ್ರಸ್ತುತ ಈ ದೇವಸ್ಥಾನದ ಪ್ರತಿಷ್ಠಾಪನೆಯ ನಂತರ. ಆಗ ರಾಮಕೃಷ್ಣ ಮಠದ ಉಪಾಧ್ಯಕ್ಷರೂ, ೧೯೫೯ರಲ್ಲಿ ರಾಮಕೃಷ್ಣ ಮಿಷನ್‌ನ ಉಪಾಧ್ಯಕ್ಷರೂ ಆಗಿದ್ದ ಶ್ರೀಮತ್ ಸ್ವಾಮಿ ವಿಶುದ್ಧಾನಂದಜೀ ಮಹಾರಾಜ್‌ರಿಂದ, ನನಗೆ ಆಧ್ಯಾತ್ಮಿಕ ದೀಕ್ಷೆ ಕೊಡಿಸುವ ಏರ್ಪಾಟನ್ನೂ ಸ್ವಾಮೀಜಿ ಮಾಡಿದರು. ನನ್ನ ಆಧ್ಯಾತ್ಮಿಕ ಜೀವನಕ್ಕೆ ನಿಮಿತ್ತವಾದಂತಹ ಈ ಮಹಾನ್ ಸ್ವಾಮೀಜಿಯನ್ನು ನಾನು ಹೇಗೆ ಮರೆಯಬಲ್ಲೆ? ಅದು ಅಸಾಧ್ಯ.

೧೯೬೧ನೆಯ ಇಸವಿಯಲ್ಲಿರಬಹುದು, ರಂಗನಾಥಾನಂದಜೀಯವರನ್ನು ಗೋಲ್‌ಪಾರ್ಕ್‌ನ ಸಾಂಸ್ಕೃತಿಕ ಸಂಸ್ಥೆಯ ಮುಖ್ಯಸ್ಥರಾಗಿ ಕೋಲ್ಕತ್ತಾಗೆ ವರ್ಗ ಮಾಡಲಾಯಿತು. ನಾನು ರಾಜೀನಾಮೆ ನೀಡಿ ಅವರೊಡನೆ ಕೋಲ್ಕತ್ತಾಗೆ ಹೋಗಬೇಕೆಂದು ಸ್ವಾಮೀಜಿಯವರು ಇಚ್ಛಿಸಿದರು. ಆದರೆ ದುರದೃಷ್ಟವೆಂಬಂತೆ, ಕೆಳ ಮಧ್ಯಮವರ್ಗದ ಕುಟುಂಬದಲ್ಲಿ ನಾನೇ ಹಿರಿಯನಾಗಿದ್ದೆ ಮತ್ತು ಆ ದೊಡ್ಡ ಕುಟುಂಬವನ್ನು ನಾನೇ ಕಾಕಿನಾಡದಲ್ಲಿ (ಆಂಧ್ರಪ್ರದೇಶ) ನಿರ್ವಹಿಸಬೇಕಾಗಿತ್ತು. ಹಾಗಾಗಿ ನಾನು ವಿನಮ್ರವಾಗಿ ಪೂಜ್ಯ ಮಹಾರಾಜರ ಸಲಹೆಯಿಂದ ನುಣುಚಿಕೊಳ್ಳಲು ಯತ್ನಿಸಿದೆ ಮತ್ತು ಆ ಸಮಯದಲ್ಲಿನ ನನ್ನ ಪರಿಸ್ಥಿತಿಯನ್ನು ಅವರಿಗೆ ವಿವರಿಸಿದೆ.

ಈ ಮಧ್ಯೆ, ನಾನು ಐ.ಸಿ.ಎಸ್.ಸಿ.ಯಲ್ಲಿ (International Commission for Supervision and Control) ಕಾಂಬೋಡಿಯಾದಲ್ಲಿ ಒಂದು ಕ್ಲುಪ್ತ ಅವಧಿಯ, ಕಾರ್ಯನಿರ್ವಾಹಕನಾಗಿ [ಸುಮಾರು ಎರಡು ವರ್ಷಗಳಷ್ಟು ಕಾಲ] ಇರಬೇಕಾಯಿತು. ಭಾರತವನ್ನು ಬಿಟ್ಟುಹೊರಡುವ ಮುನ್ನ ಪೂಜ್ಯ ಮಹಾರಾಜರ ಆಶೀರ್ವಾದವನ್ನು ಪಡೆಯುವುದಕ್ಕಾಗಿ ಅವರನ್ನು ಕಾಣಲೆಂದು ಸಾಂಸ್ಕೃತಿಕ ಸಂಸ್ಥೆಗೆ ಕೋಲ್ಕತ್ತಾಗೆ ನಾನು ಹೋದೆ ಮತ್ತು ಮೂರು ದಿನಗಳವರೆಗೂ ಅಲ್ಲಿಯೇ ಇದ್ದೆ. ನನ್ನ ಜೊತೆಯಲ್ಲಿ ನನ್ನ ಸೋದರ ರಾಜಗೋಪಾಲ್ ಕೂಡ ಇದ್ದ. ಪೂಜ್ಯ ಮಹಾರಾಜರು ನಮ್ಮನ್ನು ತಾಯಿಯು ತನ್ನ ಮಕ್ಕಳನ್ನು ನೋಡಿಕೊಳ್ಳುವಂತೆ ವಿಶೇಷವಾದ ಪ್ರೀತಿ ವಾತ್ಸಲ್ಯಗಳಿಂದ ನೋಡಿಕೊಂಡರು. ಅವರ ನೆರವಿನಿಂದ, ನಾವು ಬೇಲೂರು ಮಠದ ದೇವಸ್ಥಾನದಲ್ಲಿ ಸಂರಕ್ಷಿಸಿ ಇಟ್ಟಿದ್ದ ಭಗವಾನ್ ಶ್ರೀ ರಾಮಕೃಷ್ಣರು ಉಪಯೋಗಿಸುತ್ತಿದ್ದ ವಸ್ತುಗಳ ದರ್ಶನ ಮಾಡುವ ಮತ್ತು ಅವನ್ನು ಮುಟ್ಟುವಂತಹ ಅವಕಾಶಪಡೆದ ಅದೃಷ್ಟವಂತರಾಗಿದ್ದೆವು.

ಪೂಜ್ಯ ಮಹಾರಾಜರೊಡನೆ ಮೂರು ದಿನಗಳು ಇದ್ದು ನಂತರ ನಾನು ಫೆನಾಮ್ ಪೆನ್ಹ್‌ಗೆ ಪ್ರಯಾಣ ಬೆಳೆಸಿದೆ ಮತ್ತು ವಿಯೆಟ್‌ನಾಮ್–ಕಾಂಬೋಡಿಯಾ ಯುದ್ಧದಲ್ಲಿ ವರದಿಗಾರನಾಗಿ ಎಲ್ಲ ರೀತಿಯ ಕಷ್ಟನಷ್ಟಗಳನ್ನೂ ಎದುರಿಸುತ್ತಾ, ಎರಡು ವರ್ಷದ ಅವಧಿಯನ್ನು ಮುಗಿಸಿ ದೆಹಲಿಗೆ ಹಿಂತಿರುಗಿ ನನ್ನ ಕರ್ತವ್ಯಗಳಿಗೆ ಹಾಜರಾದೆ. ಆಗಿನಿಂದಲೂ ಪೂಜ್ಯ ಮಹಾರಾಜರು ದೆಹಲಿಗೆ ಬಂದಾಗಲೆಲ್ಲಾ ನನ್ನ ಬಗೆಗೆ ವಿಚಾರಿಸುತ್ತಿದ್ದರು ಮತ್ತು ನಾನು ಅವರೊಡನೆ ಭೇಟಿಯಾದಾಗಲೆಲ್ಲಾ "ಹೈದರಾಬಾದಿನಲ್ಲಿ ನಿನ್ನಂತಹ ಕೆಲಸಗಾರರು ನನಗೆ ಬೇಕಾಗಿದೆ" ಎಂದು ಹೇಳುತ್ತಿದ್ದರು.

ಪೂಜ್ಯ ಮಹಾರಾಜರ ಜ್ಞಾಪಕಶಕ್ತಿಯು ಅದ್ಭುತವಾಗಿತ್ತು. ಸಾಧಾರಣವಾಗಿ ಸರಿಯಾಗಿ ಉಚ್ಚರಿಸಲು ಕಷ್ಟವೆನಿಸುವ ಹಲವು ವ್ಯಕ್ತಿಗಳ ಅತ್ಯಂತ ಕ್ಲಿಷ್ಟವಾದ ಹೆಸರುಗಳನ್ನು ಸಹ ಅವರು ನೆನಪಿಟ್ಟುಕೊಂಡಿರುತ್ತಿದ್ದರು

ಮತ್ತು ಅವುಗಳನ್ನು ಸರಿಯಾದ ರೀತಿಯಲ್ಲಿ ಉಚ್ಚರಿಸುತ್ತಿದ್ದರು. ಅವರು ಪುಸ್ತಕವನ್ನು ಬರೆಯುತ್ತಿದ್ದಾಗಲೆಲ್ಲಾ ನನ್ನನ್ನು ನೆನಪು ಮಾಡಿಕೊಳ್ಳುತ್ತಿದ್ದರು ಮತ್ತು ನನ್ನ ಸೇವೆಯ ಆವಶ್ಯಕತೆ ತಮಗೆ ಬಹಳವಾಗಿ ಇದೆಯೆಂದು ತಿಳಿಸುತ್ತಿದ್ದರು, ವಿಶೇಷವಾಗಿ ಯಾವುದಾದರೂ ಪ್ರಕಟಣಾ ಕಾರ್ಯವನ್ನು ಕೈಗೊಂಡಾಗ. ನನ್ನ ಜೀವನಪೂರ್ತಿ ಅವರ ಕಾರ್ಪಣ್ಯರಹಿತ ಪ್ರೀತಿ ವಾತ್ಸಲ್ಯವನ್ನು ನಾನು ಅನುಭವಿಸಿದೆ. ಒಂದೇ ಒಂದು ದುಃಖದ ಸಂಗತಿ ಯೆಂದರೆ, ದೆಹಲಿಗೆ ಅವರು ಕಡೆಯ ಬಾರಿ ಭೇಟಿ ನೀಡಿದಾಗ, ತಮ್ಮ ಮಹಾಸಮಾಧಿಗೂ ಮುಂಚೆ– ಅವರು ತಮ್ಮ ವಾಕ್ ಶಕ್ತಿಯನ್ನು ಕಳೆದುಕೊಂಡಿದ್ದರು. ಆದರೆ ಭಕ್ತರನ್ನು ಗುರುತಿಸುತ್ತಿದ್ದರು ಮತ್ತು ನೆನಪು ಮಾಡಿಕೊಳ್ಳು ತ್ತಿದ್ದರು. ಉದಾಹರಣೆಗೆ, ಅವರ ಭೇಟಿಯ ಮೊದಲ ದಿನ ಅವರು ನನ್ನನ್ನು ಗುರುತಿಸಲಿಲ್ಲ. ಆದರೆ ಮರುದಿನ ಸಂಪೂರ್ಣವಾಗಿ ನೆನಪು ಮಾಡಿಕೊಂಡರು ಮತ್ತು ನನ್ನ ಆರೋಗ್ಯ ಮತ್ತಿತರ ವಿಷಯಗಳ ಬಗೆಗೆ ವಿಚಾರಿಸಿದರು. ಇದು ಅವರು ನನ್ನ ಬಗೆಗೆ ತೋರಿಸಿದ್ದ ಹೆಚ್ಚಿನ ವೈಯಕ್ತಿಕ ಪ್ರೀತಿ ಮತ್ತು ವಾತ್ಸಲ್ಯ. ಇವನ್ನು ನಾನು ಎಂದೂ ಮರೆಯಲಾರೆ.

ಒಂದು ಕಾಲದಲ್ಲಿ ಸ್ವಾಮೀಜಿಯವರು ಉಪನ್ಯಾಸಗಳನ್ನು ನೀಡಲು ಹೋಗುವಾಗ ತಮ್ಮ ಜೊತೆ ನನ್ನನ್ನೂ ಕಾರಿನಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಅಂತಹ ಒಂದು ಸಂದರ್ಭದಲ್ಲಿ ಅವರು ವೈ.ಎಂ.ಸಿ.ಎ.ಯ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಅವರ ಉಪನ್ಯಾಸದ ನಂತರ ಪ್ರಶ್ನೋತ್ತರದ ಕಾರ್ಯಕಲಾಪದ ಅವಧಿಯಲ್ಲಿ ಒಬ್ಬ ಭಕ್ತ ಪ್ರಶ್ನಿಸಿದ: "ಸ್ವಾಮೀಜಿ, ಭಾನುವಾರಗಳಂದು ನಾನು ನಿಮ್ಮ ಉಪನ್ಯಾಸಗಳನ್ನು ಬಹಳ ಗಮನವಿಟ್ಟು ಕೇಳುತ್ತೇನೆ. ಆದರೆ, ಸ್ವಲ್ಪ ಕಾಲಾನಂತರವೇ ನೀವು ಹೇಳಿದುದನ್ನೆಲ್ಲಾ ಮರೆತುಬಿಡುತ್ತೇನೆ, ಮತ್ತೆ ನಾನು ಮೊದಲ ಮನೋಭಾವದವನೇ ಆಗುತ್ತೇನೆ. ಇದಕ್ಕೆ ತಾವು ಏನಾದರೂ ಪರಿಹಾರ ಸೂಚಿಸಬಲ್ಲಿರಾ?" ತತ್‌ಕ್ಷಣವೇ ಉತ್ತರ ಬಂದಿತ್ತು: "ಆದ್ದರಿಂದಲೇ ನಾನು ಪ್ರತಿ ಭಾನುವಾರವೂ ಉಪನ್ಯಾಸ ನೀಡುತ್ತೇನೆ." (ಎಲ್ಲರೂ ನಕ್ಕರು).

* * * *

## ೮೪. ಅವರ ಉಪಸ್ಥಿತಿಯನ್ನು ನಾನು ಯಾವಾಗಲೂ ಅನುಭವಿಸುತ್ತೇನೆ

–ಕೃಷ್ಣ ಮುರಾರಿ*

೧೯೫೨ರಲ್ಲಿ ನಾನು ಧನಬಾದ್‌ನಲ್ಲಿರುವ "ಇಂಡಿಯನ್ ಸ್ಕೂಲ್ ಆಫ್ ಮೈನ್ಸ್" ಅನ್ನು ಸೇರಿಕೊಂಡಾಗ, ದೆಹಲಿಯಿಂದ ಬಂದಿದ್ದ, ನನ್ನ ತರಗತಿಯ ಸಂಗಾತಿಯೊಬ್ಬನಿಂದ ನಾನು ಪರಮ ಪೂಜ್ಯ ಸ್ವಾಮಿ ರಂಗನಾಥಾನಂದಜೀಯವರ ಬಗೆಗೆ ತಿಳಿದುಕೊಂಡೆ. ಅವನು ದೆಹಲಿಯ ರಾಮಕೃಷ್ಣ ಮಿಷನ್‌ನಲ್ಲಿ ಅವರ ಪ್ರವಚನಗಳನ್ನು ಕೇಳಿದ್ದ. ಸ್ವಾಮಿ ವಿವೇಕಾನಂದರ ಅಮೆರಿಕಾ ಭೇಟಿಯ ಬಗೆಗೆ ನನ್ನ ತಾತ ಹೇಳಿದ್ದರು ಮತ್ತು ನನ್ನ ಬಾಲ್ಯದಿಂದಲೇ ನಾನು ಸ್ವಾಮೀಜಿಯ ಬಗೆಗೆ ಹೆಚ್ಚು ತಿಳಿಯಲು ಬಯಸಿದ್ದೆ. ಹಾಗಾಗಿ, ಧನಬಾದ್‌ನಿಂದ ದೆಹಲಿಯ ಮೂಲಕ ಊರಿಗೆ – ನನ್ನ ಮನೆಗೆ – ಹೋಗುವುದೆಂದು ನಾನು ನಿರ್ಧರಿಸಿದೆ. ನನ್ನ ಸ್ವಂತ ಊರು ಡೆಹ್ರಾಡೂನ್ ಆಗಿತ್ತು. ರಾಮಕೃಷ್ಣ ಮಿಷನ್‌ಗೆ ದಾರಿ ತೋರಿಸಿದ, ನನ್ನ ತರಗತಿಯ ಸಂಗಾತಿಯೊಂದಿಗೆ ನಾನು ದೆಹಲಿಗೆ ಪ್ರಯಾಣ ಬೆಳೆಸಿದೆ. ನಮ್ಮ ರೈಲು ದೆಹಲಿಯ ರೈಲು ನಿಲ್ದಾಣವನ್ನು ರಾತ್ರಿ ಎಂಟು ಗಂಟೆಗೆ ತಲುಪಿತು. ನನ್ನ ಸಾಮಾನು ಸರಂಜಾಮುಗಳನ್ನೆಲ್ಲಾ ನಿಲ್ದಾಣದಲ್ಲಿನ ಸಾಮಾನುಗಳನ್ನಿಡುವ ಕೋಣೆಯಲ್ಲಿಟ್ಟು, ನಾನು ರಾಮಕೃಷ್ಣ ಮಿಷನ್‌ಗೆ ಧಾವಿಸಿದೆ.

ಸ್ವಾಮಿ ರಂಗನಾಥಾನಂದರು ರಾಮಕೃಷ್ಣ ಮಿಷನ್‌ನ ಕಚೇರಿಯಲ್ಲಿ ಕೆಲವು ಭಕ್ತರೊಡನೆ ಮಾತನಾಡುತ್ತಿರುವುದನ್ನು ನಾನು ನೋಡಿದೆ. "ನೀನು ಎಲ್ಲಿಂದ ಬಂದೆಯಪ್ಪಾ?" ಎಂದು ಅವರು ನನ್ನನ್ನು ಕೇಳಿದರು. ನಾನು ಸಂಕ್ಷಿಪ್ತವಾಗಿ ಎಲ್ಲವನ್ನೂ ಹೇಳಿದೆ, ಅವರು ಸಂತೋಷಪಟ್ಟರು. ಅವರು ನನ್ನನ್ನು ಮಂದಿರಕ್ಕೆ ಕರೆದುಕೊಂಡುಹೋದರು ಮತ್ತು "ಈಗ ನಾನು ಠಾಕೂರರಿಗೆ ನಮಸ್ಕರಿಸುತ್ತೇನೆ, ನಂತರ ನೀನೂ ಕೂಡ ನಮಸ್ಕರಿಸು..." ಠಾಕುರರಿಗೆ ಪ್ರಣಾಮ ಮಾಡಿದ ನಂತರ ನಾನು ಅವರಿಗೂ ಪ್ರಣಾಮ ಮಾಡಿದಾಗ 'ಇಲ್ಲಿ ಅಲ್ಲ' ಎಂದು ಹೇಳಿದರು; ಆದರೆ ಒಪ್ಪಿಕೊಂಡರು.

ಭೋಜನಶಾಲೆಗೆ ಹೋಗುತ್ತಾ ದಾರಿಯಲ್ಲಿ ಅವರು ಕೇಳಿದರು, "ಹಾಗಾದರೆ, ಒಂದು ದಿನ ನೀನು ಗಣಿಗಾರಿಕೆಯ ಇಂಜಿನಿಯರಾಗುತ್ತೀಯಾ. ನಿನ್ನ ಸಾಮಾನುಗಳೆಲ್ಲಾ ಎಲ್ಲಿ?" ಎಂದೂ ಅವರು ಕೇಳಿದರು. ಅವನ್ನೆಲ್ಲಾ ರೈಲುನಿಲ್ದಾಣದಲ್ಲಿ ಬಿಟ್ಟುಬಂದಿರುವುದಾಗಿ ನಾನು ಹೇಳಿದೆ. "ನಾವು ನಿನ್ನನ್ನು ಇಲ್ಲಿಯೇ ಉಳಿಸಿಕೊಳ್ಳಬಹುದಾಗಿತ್ತು. ಆದರೆ ನೀನು ಮನೆಗೆ ಹೋಗಬೇಕಾಗಿದೆ. ಆದ್ದರಿಂದ ರಾತ್ರಿಯ ರೈಲನ್ನು ಹಿಡಿದು ಹೋಗು, ಮತ್ತೆ ಇಲ್ಲಿಗೆ ಬಾ, ಅಲ್ಲಿಯೂ ನಮ್ಮದೊಂದು ಆಶ್ರಮವಿದೆ. ಆದರೆ ನನ್ನೊಡನೆ ಸಂಪರ್ಕ ಹೊಂದಿರು" ಎಂದು ಹೇಳಿದರು. ನಾನು ಕೇಳಿದೆ: "ನನ್ನ ಜನ್ಮದ ಉದ್ದೇಶವೇನು ಮಹಾರಾಜ್, ನನ್ನ ತಂದೆ–ತಾಯಿಗಳ ಹಾಗೂ ದೇಶದ ಸೇವೆಯನ್ನು ಮಾಡಬೇಕೆನ್ನುವ ನನ್ನ ಅಭಿಲಾಷೆಯನ್ನು ಪೂರೈಸಿಕೊಳ್ಳಬಲ್ಲೆನೇ?" ಅವರು ತಮ್ಮ ಹಸ್ತವನ್ನು ನನ್ನ ತಲೆಯ ಮೇಲಿಟ್ಟು ಮುಗುಳ್ನಕ್ಕರು. ನನ್ನ ಕಣ್ಣುಗಳಲ್ಲಿ ಕಣ್ಣೀರು ತುಂಬಿಕೊಂಡಿತು, ನನ್ನ ಶರೀರದಲ್ಲಿ ಒಂದು ವಿಚಿತ್ರ ಭಾವನೆ ಹರಿದಂತಾಯಿತು. ಆದರೆ, ಅವರು ಏನನ್ನೂ ಹೇಳಲಿಲ್ಲ. ಠಾಕೂರರ ಮತ್ತು ಸ್ವಾಮಿ ರಂಗನಾಥಾನಂದರ ಪ್ರತಿಮೆಗಳು ನನ್ನ ಹೃದಯದ ಮೇಲೆ ಕೆತ್ತಲ್ಪಟ್ಟವೇನೋ ಎನ್ನುವಂತೆ ತೋರಿತು.

---

* ದೆಹಲಿಯ ಒಬ್ಬ ಭಕ್ತರು.

ನಾನು ಸ್ನಾತಕ ಪದವಿ ಪಡೆದು, ೧೯೫೭ರಲ್ಲಿ ಕಲ್ಲಿದ್ದಲ ಗಣಿಯ, ಭೂಗರ್ಭದ ವಿವರವಾದ ಪರಿಶೀಲನೆಯನ್ನು ಸಂಪೂರ್ಣಗೊಳಿಸುವಂತೆ ನನ್ನನ್ನು ಕೇಳುವ ವೇಳೆಗೆ ವರ್ಷಗಳೇ ಉರುಳಿಹೋಗಿದ್ದವು. ನಾನು ಅಸಾನ್‌ಸಾಲಿನಲ್ಲಿ ಉಳಿದುಕೊಂಡಿದ್ದೆ. ರಾಮಕೃಷ್ಣ ಮಿಷನ್‌ನ ಪಕ್ಕದಲ್ಲಿಯೇ ಇತ್ತು ನಾನು ಉಳಿದುಕೊಂಡಿದ್ದ ಪ್ರದೇಶ. ಸ್ವಾಮೀಜಿಯವರ ವಿಳಾಸವನ್ನು ತೀಳಿದುಕೊಂಡು ಅವರಿಗೆ ನಾನು ಒಂದು ಅಂಚೆ ಕಾರ್ಡನ್ನು ಕಳಿಸಿದೆ. ಸ್ವಾಮೀಜಿಯವರು ವಿದೇಶ ಪ್ರವಾಸದಲ್ಲಿದ್ದಾರೆಂದು ಉತ್ತರ ಬಂದಿತು.

ಗಣಿಗಾರಿಕೆಯ ವೃತ್ತಿಯಲ್ಲಿ, ವ್ಯವಸ್ಥಾಪನ ಸಾಮರ್ಥ್ಯದ ಪ್ರಮಾಣ ಪತ್ರವನ್ನು ಪಡೆದುಕೊಳ್ಳಲು ನಾವು ಅಖಿಲ ಭಾರತ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕಾಗಿದ್ದಿತು. ಆದ್ದರಿಂದ ವ್ಯರ್ಥವಾದ ಚಟುವಟಿಕೆಗಳಲ್ಲಿ ಕಾಲ ಕಳೆಯಬಾರ ದೆಂಬುದರ ಬಗೆಗೆ ನಾವು ಬಹಳ ಜಾಗರೂಕರಾಗಿದ್ದೆವು. ಕಡೆಯ ಪರೀಕ್ಷೆಯಲ್ಲಿ ೧೯೫೯ರಲ್ಲಿ ತೇರ್ಗಡೆಯಾಗಿ, ನಾನು ದೆಹಲಿಗೆ ಬಂದೆ. ರಾಮಕೃಷ್ಣ ಮಿಷನ್‌ನ ಪುಸ್ತಕದ ಅಂಗಡಿಯಲ್ಲಿ ನಾನು ರಂಗನಾಥಾನಂದಜೀಯವರನ್ನು ಭೇಟಿಯಾದೆ. ಅವರು ತತ್‌ಕ್ಷಣವೇ ನನ್ನನ್ನು ಗುರುತಿಸಿದರು ಮತ್ತು ನಾನು ವ್ಯಸ್ತನಾಗಿದ್ದ ಅನೇಕ ಕೆಲಸಗಳ ಬಗೆಗೆ ನನ್ನನ್ನು ಕೇಳಿದರು ಹಾಗೂ ಭೂಗರ್ಭದಲ್ಲಿನ ಗಣಿಗಾರಿಕೆಯ ಅಪಾಯಗಳ ಬಗೆಗೆ ವಿವರಗಳನ್ನು ಸಂಗ್ರಹಿಸಿದರು. ನಂತರ, ಸ್ವಾಮಿ ಅಭಯಾನಂದರ *'Life beyond Death'* ಪುಸ್ತಕವನ್ನು ಓದುವಂತೆ ನನಗೆ ಹೇಳಿದರು.

ದೇಶಾದ್ಯಂತ ಗಣಿಗಳಲ್ಲಿ ಕೆಲಸ ಮಾಡುವುದರಲ್ಲಿ ನಿರತನಾಗಿದ್ದೆ, ಅಂತಿಮವಾಗಿ ೧೯೬೫ರಲ್ಲಿ ದೆಹಲಿಯಲ್ಲಿ ಒಂದು ಉದ್ಯೋಗವನ್ನು ಪಡೆದೆ. ಸ್ವಾಮೀಜಿ ಪ್ರವಚನಗಳಿಗಾಗಿ ದೆಹಲಿಗೆ ಬರುತ್ತಿದ್ದರು ಮತ್ತು ನಾನು ತಪ್ಪದೆ ಉಪಸ್ಥಿತನಿರುತ್ತಿದ್ದೆ. ೧೯೬೭ರ ಮೇ ತಿಂಗಳಿನಲ್ಲಿ ನನ್ನನ್ನು ಯೂರೋಪಿಗೆ ಕಳಿಸಿದರು. ಅಲ್ಲಿ ಕೆಲವು ಘಟನಾವಳಿಗಳ ಮೂಲಕ, ಒಬ್ಬ ಅತ್ಯಂತ ಗಣ್ಯ ಮಹಿಳೆಗೆ, ಪ್ರತಿ ದಿನ ಪ್ರಾತಃಕಾಲದಲ್ಲಿ, ನಾನು ಹಿಂದೂ ದರ್ಶನಶಾಸ್ತ್ರದ ಮೇಲೆ ಅರುವತ್ತು ದಿನಗಳು ಉಪನ್ಯಾಸ ನೀಡಬೇಕಾಯಿತು. ನಮ್ಮ ತತ್ತ್ವಶಾಸ್ತ್ರವನ್ನು ಅರಿತುಕೊಳ್ಳುವಲ್ಲಿ ನನಗೆ ನೆರವಾಗುವಂತೆ, ಭಾರತದ ಅಲ್ಲಿನ ರಾಯಭಾರಿಗಳು, *Complete Works of Swami Vivekananda.* ಇದರ ಎಂಟು ಸಂಪುಟಗಳನ್ನು ನನಗೆ ನೀಡಿದರು. ಅಲ್ಲಿಂದ ಹಿಂದಿರುಗಿದ ನಂತರ ನಾನು ಸ್ವಾಮೀಜಿಯವರನ್ನು ಅವರ ಪ್ರವಚನದ ಪ್ರವಾಸಗಳಲ್ಲಿ ಭೇಟಿಮಾಡಿದೆ ಮತ್ತು ನನ್ನ ಅನುಭವಗಳನ್ನೆಲ್ಲಾ ಹೇಳಿದೆ. ನಾನು ನಮಸ್ಕಾರ ಮಾಡುತ್ತಿದ್ದಾಗ ಅವರು ಕೇಳಿದರು, "ಪೂರ್ವ ಯೂರೋಪಿನಲ್ಲಿ ದೇವರ ಪರಿಕಲ್ಪನೆ ಏನು?" ನಾನು ಹೇಳಿದೆ, "ಅವರು ಎಲ್ಲ ಆರಾಧನೆ ಪೂಜೆಗಳನ್ನೂ ಪೂಜಾಸ್ಥಳಗಳನ್ನೂ ನಿಷೇಧಿಸಿದ್ದಾರೆ, ಆದರೆ *ಗೀತೆ*ಯನ್ನು ಮಾತ್ರ ನಿಷೇಧಿಸಿಲ್ಲ. ಅವರು *ಗೀತೆ*ಯನ್ನು ಜೀವನ ವಿಜ್ಞಾನದ ಬಗೆಗಿರುವ ಗ್ರಂಥ ಎಂದು ಗೌರವಿಸುತ್ತಾರೆ." ಅವರು ನಕ್ಕರು ಮತ್ತು ಹೇಳಿದರು: "ಜೀವನದ ಉದ್ದೇಶವೇನು ಎಂಬ ನಿನ್ನ ಪ್ರಶ್ನೆಗೆ ಠಾಕೂರರು ಈಗ ಉತ್ತರಿಸುತ್ತಿಲ್ಲವೇ? ನೀನು ಇಲ್ಲಿ ಏತಕ್ಕೆ ಬಂದಿರುವೆ ಎಂಬುದನ್ನು ನಿಧಾನವಾಗಿ ಅರಿತುಕೊಳ್ಳುತ್ತೀಯೆ, ನನ್ನ ಮಗುವೆ."

ನನಗೆ ಹೈದರಾಬಾದಿಗೆ ವರ್ಗವಾದಾಗ, ಸ್ವಾಮೀಜಿಯವರೊಡನೆ ನನ್ನ ಆಪ್ತತೆ ಆರಂಭಗೊಂಡಿತು. ಆ ವೇಳೆಗಾಗಲೇ, ನನ್ನ ಪತ್ನಿ, ಇಬ್ಬರು ಹೆಣ್ಣು ಮಕ್ಕಳು ಮತ್ತು ನಾನು ದೀಕ್ಷೆ ಪಡೆದಾಗಿತ್ತು ಮತ್ತು ಮೂರನೆಯ ಮಗಳು ಎಂಟು ವರ್ಷದವಳಾಗಿದ್ದಳು. ಸ್ವಾಮೀಜಿಯವರು ಅಧ್ಯಕ್ಷರಾಗಿದ್ದ ರಾಮಕೃಷ್ಣ ಮಿಷನ್‌ಗೆ ನಾವೆಲ್ಲರೂ ತಪ್ಪದೇ ಭೇಟಿ ನೀಡುತ್ತಿದ್ದೆವು. ನಾವು ಅನೇಕ ಬಾರಿ ಅವರನ್ನು ಭೇಟಿಯಾಗುತ್ತಿದ್ದೆವು ಮತ್ತು ಅವರೊಡನೆ ನಮ್ಮ ಎಲ್ಲ ಸಮಸ್ಯೆಗಳನ್ನು – ಸಣ್ಣ ಪುಟ್ಟ ಸಮಸ್ಯೆಗಳನ್ನೂ ಸಹ – ಚರ್ಚಿಸುತ್ತಿದ್ದೆವು. ಒಮ್ಮೆ ನನ್ನ ಪತ್ನಿಯು ಊರಿನಲ್ಲಿಲ್ಲದಿದ್ದಾಗ, ಸ್ವಾಮೀಜಿಯವರು ನನ್ನ ಮಗಳಿಗೆ ದೋಸೆ ಮಾಡುವುದನ್ನು ಕಲಿಸಿಕೊಟ್ಟರು.

ಒಂದು ಬಾರಿ ನಾನು ಅವರಿಗಾಗಿ ಹಳೆಯ ಹಿಂದಿ ಚಿತ್ರಗೀತೆಯನ್ನು ಹಾಡಿದೆ. ಅವರು ಆ ಗೀತೆಯಲ್ಲಿ ಅಂತರ್ಗತವಾಗಿರುವ ಆಧ್ಯಾತ್ಮಿಕ ಅರ್ಥವನ್ನು ವಿವರಿಸಿದರು. ಪ್ರತಿಯೊಂದು ಕ್ಷಣವನ್ನೂ ನಿತ್ಯ ಉತ್ಸವವನ್ನಾಗಿ

ಪರಿವರ್ತಿಸುವಂತಹ ಪರಿಣಾಮ ಭಕ್ತಿಯಲ್ಲಿರುತ್ತದೆ ಎಂದು ಅವರು ನನಗೆ ವಿವರಿಸಿದರು. ಈ ಹಂತವನ್ನು ತಲುಪಲು ದೀರ್ಘವಾದ ಆಧ್ಯಾತ್ಮಿಕ ಸಾಧನೆಯ ಆವಶ್ಯಕತೆಯಿರುತ್ತದೆ.

'ಹೋಳಿ' ಹಬ್ಬದ ದಿವಸ ಬೆಂಕಿಯನ್ನು ಹಚ್ಚುವುದರ ಬಗೆಗೆ ವಿವರಿಸುತ್ತಾ ಅವರು ಹೀಗೆ ಹೇಳಿದರು: "ಹಿರಣ್ಯಕಶಿಪು ಸ್ವತಃ ತಾನೇ ಕಾಮದೇವನಂತಿದ್ದ. ಅವನ ತಂಗಿ–ಸೋದರಿ–ಯು ವಾಸನಾ ಆಗಿದ್ದಳು, ಕಾಮನ ಬೆಂಕಿಯಲ್ಲಿ ಅವಳು ಉರಿದಾಗ, ಬೇರೆ ಎಲ್ಲವೂ ಸುಟ್ಟುಹೋಗಿ, ಸ್ವಲ್ಪವೂ ಅಪಾಯವಾಗದೇ, ಸುಡದೇ ಅವಳು ಬೆಂಕಿಯಿಂದ ಆಚೆ ಬರುವಳೆಂಬ ವರದಿಂದ ಆಶೀರ್ವದಿಸಲ್ಪಟ್ಟಿದ್ದಳು. ಆದರೆ ಪ್ರಹ್ಲಾದನು (ಭಕ್ತಿರೂಪಿಯಾದ ಪ್ರಹ್ಲಾದನು) ವಾಸನಾರೂಪಿಯ ತೊಡೆಯ ಮೇಲೆ ಕುಳಿತಾಗ, ಕಾಮದ ವಾಸನೆಯು ಜ್ಞಾನದ ಅಗ್ನಿಯಾಗುತ್ತದೆ ಮತ್ತು ವಾಸನೆಯ ಎಲ್ಲ ಸ್ವರೂಪವನ್ನೂ ಸುಟ್ಟುಬಿಡುತ್ತದೆ ಮತ್ತು ದೈವೀ ಪ್ರೇಮದ ಎಲ್ಲ ಅಂಶಗಳ, ಬಣ್ಣಬಣ್ಣದ ಬೂದಿಯನ್ನು ಮಾತ್ರ ಬಿಟ್ಟಿರುತ್ತದೆ. ಮರುದಿನ ನಾವಿದನ್ನು ನೋಡಿದ ಸಂತಸವನ್ನು ಅನುಭವಿಸುತ್ತೇವೆ."

ಎಲ್ಲ ಪ್ರೇಮಗೀತೆಗಳ ಆಧ್ಯಾತ್ಮಿಕ ಆಳಕ್ಕೆ ಇಳಿಯುವಂತೆ ಅವರು ನನ್ನನ್ನು ಪ್ರೋತ್ಸಾಹಿಸಿದರು. ಅವರು ಹೇಳಿದರು: "ಪ್ರಾಪಂಚಿಕ ಪ್ರೇಮದ (ಲೌಕಿಕ ಪ್ರೇಮದ) ಎಲ್ಲ ಅಭಿವ್ಯಕ್ತಿಗಳೂ, ಅದು ಪ್ರೇಮ ವ್ಯವಹಾರವೋ ಎಂಬಂತೆ ಕೇವಲ ಅನುಗ್ರಹ, ಮೆಚ್ಚಿಕೆ, ಕೃಪೆಗಳನ್ನು ಪಡೆಯುವುವೇ ಆಗಿವೆ. ಆದರೆ ನಿಜವಾದ ಪ್ರೇಮಿ ದೇವರೊಬ್ಬನು ಮಾತ್ರ. ಅವನು ತನ್ನನ್ನು ದ್ವೇಷಿಸುವವರನ್ನೂ ಕೂಡ ಪ್ರೇಮಿಸುತ್ತಾನೆ. ಮನುಷ್ಯರು ಹಾಗೆ ಮಾಡಬಲ್ಲರೇ? ಪವಿತ್ರ ಮಾತೆ (ಶಾರದಾದೇವಿ) ಯಾವುದೇ ಭೇದಭಾವವಿಲ್ಲದೇ ಯಾವಾಗಲೂ ಪ್ರತಿಯೊಬ್ಬರನ್ನೂ ಪ್ರೀತಿಸುತ್ತಿದ್ದರು. 'ಮಾಯರ್ ಕಥಾ'ವನ್ನು ಓದು. ನಾನು ಕೇಳಿದೆ, "ಮಹಾರಾಜ್ ಆ ಗ್ರಂಥದ ಹಿಂದೀ ಅಥವಾ ಇಂಗ್ಲಿಷಿನ ಅನುವಾದವಿದೆಯೇ?" "ಅದನ್ನು ಓದುವುದಕ್ಕಾದರೂ ನೀನು ಬಂಗಾಳಿ ಭಾಷೆಯನ್ನು ಕಲಿಯುವುದು ಉತ್ತಮ, ಆಗ ನೀನು 'ಕಥಾಮೃತ'ವನ್ನೂ ಮತ್ತು ಶ್ರೀ ಶ್ರೀ ಠಾಕೂರ್ ಅವರು ಇಷ್ಟಪಟ್ಟು ಪ್ರೀತಿಯಿಂದ ಹಾಡುತ್ತಿದ್ದ ಗೀತೆಗಳನ್ನೂ ನೀನು ಓದಿ, ಆನಂದವನ್ನು ಅನುಭವಿಸು" ಎಂದು ಉತ್ತರಿಸಿದರು.

ಹೈದರಾಬಾದಿನಿಂದ ನಾನು ಪದೇಪದೇ ಶಾರದಾಮಠಕ್ಕೆ ಹೋಗುತ್ತಿದ್ದೆ ಹಾಗೂ ಅಲ್ಲಿ ಪೂಜ್ಯ ಮೋಕ್ಷಪ್ರಾಣಾ ಮಾತಾಜಿಯವರನ್ನು ಭೇಟಿಮಾಡುತ್ತಿದ್ದೆ. ಪವಾಡ ಸದೃಶ ರೀತಿಯಲ್ಲಿ ಅವರು ನನಗೆ ಬಂಗಾಳೀ ಭಾಷೆಯನ್ನು ಕಲಿಸಿದರು. ನಾನು "ಮಾಯರ್ ಕಥಾ" ಮತ್ತು "ಕಥಾಮೃತ" ಎರಡನ್ನೂ ಓದಲು ಆರಂಭಿಸಿದೆ. ೧೯೮೩ರಲ್ಲಿ ನಾನು ಮತ್ತೆ ದೆಹಲಿಗೆ ಹೋದೆ, ಮಹಾರಾಜ್‌ರಿಗೆ ಆಗಾಗ್ಗೆ ಪತ್ರ ಬರೆಯುತ್ತಿದ್ದೆ. ೧೯೯೪ರಲ್ಲಿ ನಾನು ನಿವೃತ್ತನಾದಾಗ ಅವರು ನನ್ನನ್ನು ಹೈದರಾಬಾದಿಗೆ ಕರೆಸಿಕೊಂಡರು ಮತ್ತು *Eternal Values for a Changing Society* (ನಾಲ್ಕು ಸಂಪುಟಗಳು) ಕೃತಿಯನ್ನು ಹಿಂದಿಗೆ ಅನುವಾದಿಸಲು ಒಬ್ಬ ಇಂಜಿನಿಯರ್/ವಿಜ್ಞಾನಿಯು ತಮಗೆ ಬೇಕಾಗಿದೆಯೆಂದು ತಿಳಿಸಿದರು. ವಿಜ್ಞಾನದ ತಾಂತ್ರಿಕ ಅಂಶಗಳು, ಅಣುಭೌತಶಾಸ್ತ್ರದಲ್ಲಿನ ಆಧುನಿಕ ತಾಂತ್ರಿಕ ಸಂಶೋಧನೆ, ವಿಕಾಸವಾದ – ಇವುಗಳಿಗೆಲ್ಲಾ ಸರಿಯಾಗಿ ನ್ಯಾಯ ಒದಗಿಸಬೇಕೆಂಬುದು ಸ್ವಾಮೀಜಿಯವರ ಇಚ್ಛೆಯಾಗಿತ್ತು. ಭಾರತದಲ್ಲಿ ಇನ್ನೂ ಬಹುಸಂಖ್ಯಾತ ಜನರು ಹಿಂದಿ ಭಾಷೆಯನ್ನು ಚೆನ್ನಾಗಿ ತಿಳಿದಿರುವವರಾಗಿರುವುದರಿಂದ, ಇವರಲ್ಲಿನ ಸತ್ಯಶೋಧಕರಿಗೆ, ಅನುವಾದಗಳ ಮೂಲಕ, ಈ ಗ್ರಂಥವನ್ನೊದಗಿಸಬೇಕೆಂಬ ಅವರ ಆಶಯವನ್ನು ನನಗೆ ಹೇಳಿದರು. ಅನಂತರ ಮೊದಲನೆಯ ಸಂಪುಟವನ್ನು ನನ್ನ ಕೈಗೆ ಕೊಟ್ಟು, ಅವರ ಎದುರಿನಲ್ಲಿಯೇ, ಮೊದಲ ಪುಟವನ್ನು ಅನುವಾದಿಸುವಂತೆ ನನಗೆ ಹೇಳಿದರು. ಅರ್ಧ ಗಂಟೆಯ ನಂತರ ಅವರು ಅದನ್ನು ಓದಿದರು, ಮುಂದುವರಿಯುವಂತೆ ಸೂಚಿಸಿ ನನ್ನನ್ನು ಹರಸಿದರು. ಈ ಅನುವಾದಗಳ ಅವಧಿಯಲ್ಲಿ ನಾನು ಪತ್ರಮುಖೇನ ಅನೇಕ ಸ್ಪಷ್ಟೀಕರಣಗಳನ್ನು, ಕೇಳಿದೆ. ಅದನ್ನೆಲ್ಲಾ ಅವರು ಸ್ವಲ್ಪವೂ ತಡಮಾಡದೇ ಒದಗಿಸಿದರು.

ನನ್ನ ವ್ಯವಸ್ಥಾಪಕ ಕಾರ್ಯನಿರ್ವಾಹಕತ್ವದ ಅವಧಿಯಲ್ಲಿ, ಎಲ್ಲರೊಡನೆಯೂ ಗರಿಷ್ಠಮಿತಿಯ ವಿನಮ್ರತೆ ಮತ್ತು ದೃಢತೆಯಿಂದ ವರ್ತಿಸುವಂತೆ ಸ್ವಾಮೀಜಿಯವರು ನನಗೆ ಸಲಹೆ ಮಾಡಿದ್ದರು. ಈ ದೇಶವು 'ಚಮಚಾ'ಗಳ ಕಾಟದಿಂದ ಎಲ್ಲ ಮಟ್ಟಗಳಲ್ಲಿಯೂ ನರಳುತ್ತಿದೆ ಹಾಗೂ ಈ 'ಚಮಚಾ'ಗಳೇ. ಉನ್ನತ ಹುದ್ದೆಗಳಿಗೆ ಬಡತಿ ಪಡೆಯುತ್ತಾರೆ; ಹಾಗಾಗಿ ತಮ್ಮ ಸುತ್ತಲೂ 'ಚಮಚಾಗಳೇ' ಸುತ್ತುವರಿದಿರುವುದನ್ನು ಅವರು ಇಚ್ಛಿಸುತ್ತಾರೆ. ಹೀಗಾಗಿ ಸಮರ್ಥ ವ್ಯಕ್ತಿಗಳು ಮೂಲೆಗುಂಪಾಗುತ್ತಾರೆ. ಅನೇಕ ಯುವಪುರುಷರು ಮತ್ತು ಮಹಿಳೆಯರು ಇಂತಹ ಅನರ್ಹ, ಅಸಮರ್ಥರ ಅಪ್ಪಣೆಗಳನ್ನು ಪಾಲಿಸಬೇಕಾಗುವುದಿಲ್ಲವೆಂಬ ಭರವಸೆಯಿಂದ, ಭಾರತವನ್ನು ಬಿಟ್ಟು ಓಡಿಹೋಗಲು ಬಯಸುವವರನ್ನು ತಾವು ನೋಡಿರುವುದಾಗಿ ಸ್ವಾಮೀಜಿ ಹೇಳಿದರು. ನನ್ನ ಕೆಳಗಿನ ಅಧಿಕಾರಿಯಿಂದ ನಾನೇನಾದರೂ ಅವಮಾನಕ್ಕೊಳಗಾದರೆ, ಆ ವ್ಯಕ್ತಿ ಅರ್ಹನೂ ಸಮರ್ಥನೂ ಆಗಿದ್ದಲ್ಲಿ, ನಾನು ನನ್ನ ಮನಸ್ಸಿನ ತಾಳ್ಮೆ ಕಳೆದುಕೊಂಡು ಕೋಪಗೊಳ್ಳಬಾರದೆಂದೂ, ಅದುತಾಕೂರ್‌ರಿಂದ ಬಂದಂತಹ ಗದರಿಕೆಯೆಂದು ತಿಳಿಯಬೇಕೆಂದೂ ಹೇಳಿದರು. ಅಂತಹ ವ್ಯಕ್ತಿಯು, ಕಡೆಗೆ ದೊಡ್ಡ ಆಸ್ತಿಯಾಗುವನೆಂದು ತಿಳಿಸಿದರು. ಅವರ ಉಪದೇಶವನ್ನು ನಾನು ಜೀವನಪೂರ್ತಿ ಅನುಸರಿಸಿದ್ದೇನೆ ಮತ್ತು ನನ್ನ ಕಾರ್ಯಗಳಿಗೆ ಎಂದೂ ನಾನು ಪಶ್ಚಾತ್ತಾಪ ಪಡಬೇಕಾಗಿ ಬಂದಿಲ್ಲ.

ಉನ್ನತ ಮಟ್ಟದ ಹುದ್ದೆಗಳಲ್ಲಿರುವವರಿಗೆ ಅವರ ಎಚ್ಚರಿಕೆಯು ಹೀಗಿತ್ತು: "ನೀವು ಅಧಿಕಾರವನ್ನು ಮಾತ್ರ ನಿಯೋಜಿಸಬಹುದು; ಆದರೆ ಎಂದಿಗೂ ಜವಾಬ್ದಾರಿಯನ್ನಲ್ಲ. ದುರದೃಷ್ಟವಶಾತ್ ನಮ್ಮ ಆಡಳಿತದಲ್ಲಿರುವವರು ಜವಾಬ್ದಾರಿಯನ್ನು ಮಾತ್ರ ನಿಯೋಜಿಸಬಹುದೆಂದು ಆಲೋಚಿಸುತ್ತಾರೆ. ಇದೇ ಎಲ್ಲ ದುರಾಡಳಿತ ಮತ್ತು ಭ್ರಷ್ಟಾಚಾರದ ಮೂಲ! ನೀವು ಇದರ ವಿರುದ್ಧ ನಿಮ್ಮನ್ನು ರಕ್ಷಿಸಿಕೊಳ್ಳಬೇಕು."

ಸ್ವಾಮೀಜಿಯವರು ರಾಮಕೃಷ್ಣಪಂಥದ ಅಧ್ಯಕ್ಷರಾದರು. ನಾನು ಅವರನ್ನು, ಒಮ್ಮೆ ನನ್ನ ಹಿರಿಯ ಪುತ್ರಿಯೊಡನೆ ಮತ್ತು ಒಮ್ಮೆ ಹಿರಿಯ ಮತ್ತು ಕಿರಿಯ ಪುತ್ರಿಯರೊಡನೆ ಬೇಲೂರು ಮಠದಲ್ಲಿ ಭೇಟಿಯಾದೆ. ತಮ್ಮ ಆರೋಗ್ಯ ಕ್ಷೀಣಿಸುತ್ತಿದ್ದ ಸ್ಥಿತಿಯಲ್ಲಿಯೂ ಅವರು ಮಕ್ಕಳನ್ನು ಗುರುತಿಸಿದರು, ಆಶೀರ್ವದಿಸಿದರು ಮತ್ತು ತಮ್ಮ ಗುರುಗಳಿಗೂ ಮತ್ತು ಪವಿತ್ರ ಮಾತೆ ಶಾರದಾದೇವಿಗೂ ನಿಷ್ಠರಾಗಿರುವಂತೆ ಉಪದೇಶಮಾಡಿದರು.

ಸ್ವಾಮೀಜಿಯವರ ಸಲಹೆಯ ಮೇರೆಗೆ, ನಾನು ಪರಿವ್ರಾಜಿಕೆ ಪ್ರಬುದ್ಧ ಪ್ರಾಣಾಜೀಯವರು ಸಂಶೋಧಿಸಿ ರಚಿಸಿದ *Life of Josephine Macleod* ಗ್ರಂಥವನ್ನು (ಜೋಸೆಫೈನ್ ಮ್ಯಾಕ್‌ಲಿಯೋಡ್ ಅವರ ಜೀವನಚರಿತ್ರೆ), ಹಿಂದಿ ಭಾಷೆಗೆ ಅನುವಾದಿಸಿದೆ. ನಾನು ಅಗತ್ಯವಾಗಿ ಏನು ಮಾಡಬೇಕೆಂಬುದನ್ನು ಜೋ ತಾನೇ ಆದೇಶಿಸುತ್ತಾಳೆ ಎಂದು ಸ್ವಾಮೀಜಿಯವರು ನನಗೆ ಹೇಳಿದರು. ಅದು ಅವರು ಹೇಳಿದಂತೆಯೇ ಆಯಿತು.

ದೈಹಿಕವಾಗಿ ಸ್ವಾಮೀಜಿಯವರು ನನ್ನಿಂದ ದೂರವಿದ್ದಾಗಲೂ, ಅವರು ನನ್ನ ಹತ್ತಿರವೇ ಇದ್ದು ಸಲಹೆ, ಉಪದೇಶಗಳನ್ನು ನೀಡುತ್ತಿರುವಂತೆ ನಾನು ಭಾವಿಸಿದ – ಅನುಭವಿಸಿದ – ಅನೇಕ ಸಂದರ್ಭಗಳಿದ್ದವು. ತಮ್ಮ ಭಾವಚಿತ್ರವನ್ನು ನನಗೆ ಕಳಿಸಿಕೊಡಬೇಕೆಂದು ನಾನು ಮಹಾರಾಜ್ ಅವರಲ್ಲಿ ಪ್ರಾರ್ಥಿಸಿದ್ದೆ. ಅವರು ತಮ್ಮ ಹಸ್ತಾಕ್ಷರವನ್ನು ಹಾಕಿದ ಭಾವಚಿತ್ರವನ್ನು ಕಳಿಸಿಕೊಟ್ಟರು. ಅದೇ ದಿನ ರಾತ್ರಿ ಅವರು ಕಾಣಿಸಿಕೊಂಡರು ಮತ್ತು ನಾನು ಪ್ರಸ್ತುತ ಓದುತ್ತಲಿದ್ದ 'ಕಥಾಮೃತ'ದ ಯಾವುದೇ ಸಂಪುಟದಲ್ಲಿಯಾದರೂ ಅದನ್ನು ಇಡುವಂತೆ ನನಗೆ ಸೂಚಿಸಿದರು. ಅವರ ದೈಹಿಕ ಉಪಸ್ಥಿತಿಯನ್ನು ನಾನು ಸತತವಾಗಿ ಅನುಭವಿಸುತ್ತೇನೆ.

* * * *

# ೮೫. ನನ್ನ ಮಿತ್ರ, ತತ್ತ್ವಜ್ಞಾನಿ ಮತ್ತು ಮಾರ್ಗದರ್ಶಕ

–ಡಾ॥ ಶುನಿಲಾ ಮಲಿಕ್*

ಮೊದಲು, ವರ್ತಮಾನ ಯುಗದ ಪ್ರತಿಭೆಯಾಗಿದ್ದ ಈ ಮಹಾಋಷಿ, ಶ್ರೀಮತ್ ಸ್ವಾಮಿ ರಂಗನಾಥಾನಂದರಿಗೆ ನನ್ನ ವಿನಯಪೂರ್ವಕ ಗೌರವಗಳನ್ನು, ನಮಸ್ಕಾರಗಳನ್ನೂ ಸಮರ್ಪಿಸುತ್ತೇನೆ.

ನನ್ನ ಪತಿ ದಿವಂಗತ ಶ್ರೀ ಸಿ.ಎಮ್.ಮಲಿಕ್ ಮತ್ತು ನಾನು, ರಾಮಕೃಷ್ಣ ಮಿಷನ್ ಮತ್ತು ರಾಮಕೃಷ್ಣ ಮಠದ ಹತ್ತನೆಯ ಅಧ್ಯಕ್ಷರಾಗಿದ್ದ, ಸ್ವಾಮಿ ವೀರೇಶ್ವರಾನಂದಜೀಯವರಿಂದ ದೀಕ್ಷೆ ಪಡೆದಿದ್ದ ಅವರ ಶಿಷ್ಯರು. ಶ್ರೀ ಮಲಿಕ್ ಅವರು ಆಗ ಸಿಕಂದರಾಬಾದಿನಲ್ಲಿ, ದಕ್ಷಿಣ ಕೇಂದ್ರ ರೇಲ್ವೆಯ ಜನರಲ್ ಮ್ಯಾನೇಜರ್ ಆಗಿ ನಿಯೋಜಿಸಲ್ಪಟ್ಟಿದ್ದರು (ಆಂಧ್ರ ಪ್ರದೇಶ). ೧೯೮೩ರ ಜುಲೈನಲ್ಲಿ, ನಾವು ಅಲ್ಲಿ ಸ್ವಾಮಿ ರಂಗನಾಥಾನಂದರ ಉಪನ್ಯಾಸದಲ್ಲಿ ಹಾಜರಿದ್ದೆವು. ಉಪನ್ಯಾಸವು *ಭಗವದ್‌ಗೀತೆ*ಯ ಬಗೆಗೆ ಇತ್ತು. ಸ್ವಾಮೀಜಿಯವರ ದರ್ಶನವು ಅದೆಷ್ಟು ಮೋಡಿಗೊಳಿಸುವಂತಿತ್ತೆಂದರೆ, ನಾನು ಅನೈಚ್ಛಿಕವಾಗಿ, ಅವರತ್ತ ಆಧ್ಯಾತ್ಮಿಕವಾಗಿ ಸೆಳೆಯಲ್ಪಟ್ಟೆ. ಅವರಲ್ಲಿ ಯಾವುದೋ ಮಹಾಶಕ್ತಿ, ಯಾವುದೋ ಮಹಾ ಆಕರ್ಷಣೆ ಇರುವುದೆಂದೂ, ಅದನ್ನು ಮಾತಿನಲ್ಲಿ ವರ್ಣಿಸಲು ಸಾಧ್ಯವಿಲ್ಲವೆಂದೂ, ಆದರೆ ಅದು ಕೇವಲ ಅನುಭವವೇದ್ಯವೆಂದೂ ನಾನು ತತ್‌ಕ್ಷಣವೇ ಭಾವಿಸಿದೆ.

ಸ್ವಾಮಿ ರಂಗನಾಥಾನಂದರು ಅಧ್ಯಕ್ಷರಾಗಿದ್ದು, ಅವರ ಮುಂದಾಳತ್ವದಲ್ಲಿ ಹೈದರಾಬಾದಿನ ರಾಮಕೃಷ್ಣ ಮಠವು ಸೌಂದರ್ಯ, ಪ್ರಶಾಂತತೆ ಮತ್ತು ಆಧ್ಯಾತ್ಮಿಕತೆಗಳಲ್ಲಿ ಸಮೃದ್ಧಿಯಾಗುತ್ತಿರುವಂತೆ ತೋರಿತು. ಇದು ನನ್ನನ್ನು ಗಾಢವಾಗಿ ಆಕರ್ಷಿಸಿತು. ನನ್ನ ಪತಿ ಮತ್ತು ನಾನು ಮಠದ ಕ್ರಮಬದ್ಧ ಸಂದರ್ಶಕರಾದೆವು ಮತ್ತು ಸ್ವಾಮೀಜಿಯವರಿಗೆ ನಿಕಟವರ್ತಿಗಳಾದೆವು. ಆಶ್ರಮಕ್ಕೆ ಭೇಟಿಕೊಟ್ಟ ಪ್ರತಿ ಬಾರಿಯೂ ನಾವು ಅವರ ದರ್ಶನ, ಅವರ ಪ್ರೀತಿ, ವಾತ್ಸಲ್ಯ ಮತ್ತು ಅತ್ಯಂತ ಹೆಚ್ಚಿನ ಅತಿಥಿ ಸತ್ಕಾರಗಳನ್ನು ಪಡೆಯುತ್ತಿದ್ದೆವು.

ನಾನು ದುಃಖಕರವೂ ಮತ್ತು ಮನೋವೇಧಕವೂ ಆದ ಘಟನೆಯನ್ನು ಹೇಳಲು ಇಚ್ಛಿಸುತ್ತೇನೆ. ಅದು ಹೈದರಾಬಾದಿನ ಹಿರಿಯ ರಾಜಕಾರಣಿಯೂ, ಮಠದ ಆಪ್ತಭಕ್ತರೂ ಆದ ಶ್ಯಾಮಲಾತಾಯಿಯ ಒಬ್ಬನೇ ಮಗನ ಸಾವಿನ ಪ್ರಸಂಗ. ಅವರನ್ನು ಸಾಂತ್ವನಗೊಳಿಸುವ ಜವಾಬ್ದಾರಿಯನ್ನು ಪೂಜ್ಯ ಮಹಾರಾಜರು ತಾವೇ ವಹಿಸಿಕೊಂಡರು ಹಾಗೂ ಶ್ರಾದ್ಧದ ಆಚರಣೆಯ ಸಂದರ್ಭದಲ್ಲಿ ನಮ್ಮನ್ನೂ ಶ್ಯಾಮಲಾ ತಾಯಿಯ ಮನೆಗೆ ಕರೆದುಕೊಂಡು ಹೋದರು. ನಾವು ಹೈದರಾಬಾದಿನಲ್ಲಿದ್ದಾಗ ಮತ್ತೊಂದು ಪ್ರಸಂಗ ನಡೆಯಿತು. ವಿದೇಶೀ ಭಕ್ತೆಯೊಬ್ಬರು ಆಶ್ರಮದ ಅತಿಥಿಗೃಹದಲ್ಲಿ ವಾಸಿಸುತ್ತಿದ್ದರು. ಇದ್ದಕ್ಕಿದ್ದಂತೆಯೇ ಒಂದು ದಿನ ಅವರು ಯಾವುದೋ ಕಾಯಿಲೆಯಾಗಿ ಮರಣಹೊಂದಿದರು. ಈ ಪ್ರಸಂಗವನ್ನು ನಿರ್ವಹಿಸುವುದು ನಿಜವಾಗಿಯೂ ಮಠಕ್ಕೆ ಕಷ್ಟಕರ ಪರಿಸ್ಥಿತಿಯಾಗಿತ್ತು. ಆದರೂ ಪೂಜ್ಯ ಮಹಾರಾಜ್‌ರ ಮಾರ್ಗದರ್ಶನದಲ್ಲಿ, ಹೈದರಾಬಾದಿನಲ್ಲಿಯೇ, ಆಕೆಯ ಇಚ್ಛೆಯಂತೆ, ಹಿಂದೂ ಧಾರ್ಮಿಕ ವಿಧಿವಿಧಾನಗಳೊಡನೆ ಆಕೆಯ ಶರೀರವನ್ನು ದಹನಮಾಡಲಾಯಿತು. ಮರಣ ಹೊಂದಿದ ಮಹಿಳೆಯ ಕಡೆಯ ಕರ್ಮ ವಿಧಿಗಳ ಕೆಲವು ಚಿತ್ರಗಳನ್ನು ತೆಗೆಯುವ ಕೆಲಸವನ್ನು ಪೂಜ್ಯ ಸ್ವಾಮೀಜಿಯವರು ನನಗೆ ಒಪ್ಪಿಸಿದರು. ಮಠದ ಸನ್ಯಾಸಿಗಳು ರುದ್ರಭೂಮಿಗೆ ಹೋಗುವುದು ಸ್ವಲ್ಪ ಅಸಾಧಾರಣವಾಗಿತ್ತು. ಪೂಜ್ಯ ಮಹಾರಾಜರ ಧರ್ಮಶೀಲ ಸೂಚನೆಗಳ ಅನುಸಾರ, ಮರಣಹೊಂದಿದ್ದ

---

* ಡೆಲ್ಲಿಯ ಒಬ್ಬ ಭಕ್ತರು

ದೇಹಕ್ಕೆ ಅಗ್ನಿಸ್ಪರ್ಶವಾದಾಗ ಇಲ್ಲಿಂದ ಬಿಟ್ಟುಹೋದ ಆತ್ಮಕ್ಕೆ ಗೌರವ ಸಲ್ಲಿಸುವ ಸಂಕೇತವಾಗಿ ಅನೇಕ ಶ್ಲೋಕಗಳ ಪಠಣ ನಡೆಯಿತು. ಅದೆಂಥ ಅದೃಷ್ಟವಂತ ಆತ್ಮವಾಗಿತ್ತು ಅದು!

ಒಂದು ಬಾರಿ ನಾವು ಸ್ವಾಮಿ ಭೂತೇಶಾನಂದರ (ಆಗ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಉಪಾಧ್ಯಕ್ಷರಾಗಿದ್ದವರು) ಮತ್ತು ಸ್ವಾಮಿ ರಂಗನಾಥಾನಂದರನ್ನು ಒಳಗೊಂಡಂತೆ, ಇತರ ಅನೇಕ ಸನ್ಯಾಸಿಗಳನ್ನೂ ನಮ್ಮ ಮನೆಗೆ ಭೋಜನಕ್ಕೆ ಬರುವಂತೆ ಸ್ನೇಹದಿಂದ ಸ್ವಾಗತ ನೀಡಿದೆವು. ಅವರೆಲ್ಲರೂ ನಮ್ಮ ಮನೆಯಲ್ಲಿ ಭೋಜನಮಾಡಿದರು. ಸ್ವಾಮಿ ರಂಗನಾಥಾನಂದರು ಕೇವಲ ಸ್ವಲ್ಪ ಮನೆಯಲ್ಲಿ ತಯಾರಿಸಿದ ಗಿಣ್ಣು, ಆಲೂಗೆಡ್ಡೆ, ಒಂದು ಬಾಳೆಹಣ್ಣು ಮತ್ತು ಕೇವಲ ಒಂದು ತೊಟ್ಟು ಹಾಲು, ಸಕ್ಕರೆ ಹಾಕಿದ ಟೀ – ಇಷ್ಟು ಸರಳ ಆಹಾರವನ್ನು ಮಾತ್ರ ತೆಗೆದುಕೊಂಡರು. ಅವರು ಈ ಸರಳ ಆಹಾರದ ಅಭ್ಯಾಸವನ್ನು ಕಂಡು ನಮಗೆ ನಿಜಕ್ಕೂ ಅಚ್ಚರಿಯಾಯಿತು.

ತಮ್ಮ ಗೌರವಾರ್ಥ ಏರ್ಪಡಿಸಿದ್ದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪೂಜ್ಯ ಮಹಾರಾಜ್‌ರು, ಅನೇಕ ಬಾರಿ ಹೈದರಾಬಾದಿನಿಂದ ಹೊರಗೆಹೋಗುತ್ತಿದ್ದರು. ಆದರೆ, ಅಂತಹ ಉದ್ದೇಶಗಳಿಗೆ, ಮಠದ ಹಣವನ್ನು ಪೋಲು ಮಾಡಬಾರದೆಂದು ಅವರು ರೈಲಿನಲ್ಲಿ ಸಾಧಾರಣ ಎರಡನೆಯ ದರ್ಜೆಯ ಸ್ಲೀಪರ್ ಬೋಗಿಗಳಲ್ಲಿಯೇ ಪ್ರಯಾಣಮಾಡುತ್ತಿದ್ದರು.

೧೯೮೪ರ ಅಕ್ಟೋಬರ್–ನವೆಂಬರ್‌ನಲ್ಲಿ ಮತ್ತೊಂದು ಮನಕರಗುವ ಪ್ರಸಂಗ ನಡೆಯಿತು. ದಕ್ಷಿಣ ಮಧ್ಯ ರೈಲ್ವೆಯ ಸಿಬ್ಬಂದಿ ಮತ್ತು ಅವರ ಕುಟುಂಬ ವರ್ಗದ ಹಿತಾಸಕ್ತಿಗಳನ್ನು ನೋಡಿಕೊಳ್ಳುತ್ತಿದ್ದ 'ರೈಲ್ವೆ ವಿಮೆನ್ಸ್ ಆರ್ಗನೈಜೇಷನ್'ಗೆ ಶ್ರೀಮತಿ ಎಂ.ಎಸ್.ಸುಬ್ಬುಲಕ್ಷ್ಮಿಯವರಿಂದ ಒಂದು ಸಂಗೀತ ಕಚೇರಿಯನ್ನು ಏರ್ಪಾಡುಮಾಡಿಕೊಡುವಂತೆ ಪ್ರಾರ್ಥಿಸಲು ನಾವು ಪೂಜ್ಯ ಮಹಾರಾಜ್‌ರನ್ನು ಕೇಳಿದೆವು. ಪೂಜ್ಯ ಮಹಾರಾಜ್‌ರು ನನಗೆ ಹೇಳಿದರು: "ಶುನಿಲಾ, ನಿನ್ನೆಯೇ ನೀನು ಏಕೆ ನನಗೆ ಹೇಳಲಿಲ್ಲ? ಸುಬ್ಬಲಕ್ಷ್ಮಿ ನಿನ್ನೆ ಇಲ್ಲಿಯೇ ಇದ್ದರು." ನಂತರ ನನಗೆ ಆಶ್ಚರ್ಯ ವಾಗುವಂತೆ, ಅವರು ತಮ್ಮ ಹಾಸಿಗೆಯಿಂದ ನೆಗೆದುಬಂದರು. ಮದ್ರಾಸಿಗೆ ದೂರವಾಣಿಯ ಮೂಲಕ ಕರೆಮಾಡಿದರು ಹಾಗೂ ಶ್ರೀಮತಿ ಸುಬ್ಬಲಕ್ಷ್ಮಿಯವರ ಪತಿ ಶ್ರೀ ಸದಾಶಿವನ್ ಅವರೊಡನೆ ಮಾತನಾಡಿ ಕಾರ್ಯಕ್ರಮವನ್ನು ಗೊತ್ತುಮಾಡಿದರು. ಸ್ವಾಮೀಜಿಯವರು ಕಾರ್ಯಕ್ರಮದ ದಿನಾಂಕವನ್ನೂ ಗೊತ್ತುಪಡಿಸಿದರು ಮತ್ತು ಕಾರ್ಯಕ್ರಮದಿಂದ ಬಂದ ಹಣವು ಧರ್ಮಾರ್ಥ ವಿನಿಯೋಗವಾಗುವುದರಿಂದ, ಕನಿಷ್ಠ ಮೊತ್ತದ ಹಣವನ್ನು ಸಂಭಾವನೆಯನ್ನಾಗಿ ತೆಗೆದುಕೊಳ್ಳಬೇಕೆಂದೂ ಪ್ರಾರ್ಥಿಸಿದರು. ಅವರ ಆಶೀರ್ವಾದದಿಂದಾಗಿ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಯಿತು. ಪೂಜ್ಯ ಮಹಾರಾಜ್‌ರನ್ನು ಮುಖ್ಯ ಅತಿಥಿಯಾಗಿ ಹಾಗೂ ಮಠದ ಇತರ ಎಲ್ಲ ಸನ್ಯಾಸಿಗಳನ್ನೂ ಕಾರ್ಯಕ್ರಮಕ್ಕೆ ಆಹ್ವಾನಿಸಿದೆವು. ರೈಲ್ವೆಯ ಬಯಲು ರಂಗಮಂದಿರದಲ್ಲಿ, ಮೂರೂವರೆ ಗಂಟೆಗಳ ತನಕ ಕಾರ್ಯಕ್ರಮ ನಡೆಯಿತು, ಮತ್ತು ಒಂಬತ್ತು ಲಕ್ಷಕ್ಕೂ ಹೆಚ್ಚು ಹಣ ಸಂಗ್ರಹಿಸಲು ನಮಗೆ ಸಾಧ್ಯವಾಯಿತು. ಕಚೇರಿ ಮುಗಿದ ಕೂಡಲೇ, ಮದ್ರಾಸಿಗೆ ಹಿಂದಿರುವಾಗ, ತಾವು ಎಷ್ಟೋ ಕಚೇರಿಗಳನ್ನು ಮಾಡಿರುವುದಾಗಿಯೂ, ಆದರೆ ಈ ಕಚೇರಿಯು ಸೂಜಿ ಬಿದ್ದರೂ ಕೇಳದಂಥ ನಿಶ್ಶಬ್ದದಿಂದ ಹಾಗೂ ಆಧ್ಯಾತ್ಮಿಕತೆಯಿಂದ ಪರಿಪೂರ್ಣಗೊಂಡ ವಾತಾವರಣದಿಂದಾಗಿ ಈ ಕಚೇರಿಯು ವಿಶಿಷ್ಟವೂ, ಅಸಾಧಾರಣವೂ ಆಗಿತ್ತೆಂದು ಶ್ರೀಮತಿ ಸುಬ್ಬುಲಕ್ಷ್ಮಿಯವರು ತಿಳಿಸಿದರು. ಇವೆಲ್ಲವೂ ಸ್ವಾಮೀಜಿಯವರ ಅನುಗ್ರಹ ಹಾಗೂ ಮಠದ ಅನೇಕ ಸನ್ಯಾಸಿಗಳ ಉಪಸ್ಥಿತಿಯಿಂದಾಗಿ ಸಾಧ್ಯವಾಯಿತೆಂದು ನಾನು ನಂಬುತ್ತೇನೆ.

ಆ ಸಮಯದಲ್ಲಿ ಮಠದ ಆವರಣದಲ್ಲಿ ಯಾವುದೇ ತೋಟವಿರಲಿಲ್ಲ. ಸ್ವಾಮೀಜಿಯವರು ಅನುಮತಿಸುವುದಾದರೆ, ಮಠದಲ್ಲಿ ಒಂದು ತೋಟವನ್ನು ಅಭಿವೃದ್ಧಿಪಡಿಸಲು ಜಿ.ಎಂ. ಅವರ ಬಂಗಲೆಯಿಂದ

ಒಬ್ಬ ಮಾಲಿಯನ್ನು ಕಳಿಸಿಕೊಡುವುದಾಗಿ ನಾನು ಒಂದು ದಿನ ಹೇಳಿದೆ; ಅವರು ತಕ್ಷಣ ಸಮ್ಮತಿಸಿದರು. ಆಗಿನಿಂದಲೂ, ಅನೇಕ ಪೂಜೆಗಳು ಮತ್ತು ಉತ್ಸವಗಳಲ್ಲಿ, ಮಠದ ಆವರಣದ ಅಲಂಕರಣದ ಎಲ್ಲ ಕೆಲಸಗಳೂ ಜಿ.ಎಂ. ಅವರ ಬಂಗಲೆಯ ಮಾಲಿಗಳಿಂದಲೇ ನಡೆಯುತ್ತಿತ್ತು ಮತ್ತು ಸ್ವಾಮೀಜಿಯವರು ಯಾವಾಗಲೂ ಇದನ್ನು ಪ್ರಶಂಸಿಸುತ್ತಿದ್ದರು.

ಒಂದು ಬಾರಿ ಮಹಾರಾಜ್‌ರನ್ನು ಸ್ವಾಗತಿಸಲು ನಾವು ಹೈದರಾಬಾದಿನ ವಿಮಾನನಿಲ್ದಾಣಕ್ಕೆ ಹೋದೆವು. ಆಗಮಿಸಿದ ನಂತರ ಅವರು, ಪೂಜ್ಯ ಗುರುದೇವ ಸ್ವಾಮಿ ವಿರೇಶ್ವರಾನಂದರು ಮರಣ ಹೊಂದಿದ ಸಂಗತಿಯನ್ನು ತಿಳಿಸಿದರು. ಆದರೆ ಅವರು ತಮ್ಮ ಮಾನಸಿಕ ಸಮತೋಲನವನ್ನು ಕಾಯ್ದುಕೊಂಡರು. ತಾವು ಪ್ರಕ್ಷುಬ್ಧಗೊಂಡಿದ್ದರೆಂಬುದನ್ನು ತೋರಗೊಡಲಿಲ್ಲ. ನೇರವಾಗಿ ಮಠಕ್ಕೆ ಹೋಗಿ, ಎಂದಿನಂತೆಯೇ ತುಂಬಿದ್ದ ಸಭಾಭವನದಲ್ಲಿ, ಕಾತರರಾಗಿ ಕಾಯುತ್ತಿದ್ದ ಭಕ್ತರಿಗೆ ಗೀತೆಯ ತರಗತಿಯನ್ನು ತೆಗೆದುಕೊಂಡರು.

ಮಹಾರಾಜ್ ಅವರು ಬಹಳ ಅನಾರೋಗ್ಯದಿಂದಾಗಿ ಒಂದು ನರ್ಸಿಂಗ್ ಹೋಮ್‌ನಲ್ಲಿ ಐ.ಸಿ.ಯು.ನಲ್ಲಿ ದಾಖಲಾಗಿದ್ದಾರೆ ಎಂದು ಒಂದು ದಿನ ನಮಗೆ ತಿಳಿಯಿತು. ನಾನು, ಡಾಕ್ಟರ್ ಆಗಿದ್ದುದರಿಂದ, ಒಳಗೆ ಹೋಗಲು ಅನುಮತಿಸಲಾಯಿತು. ಮಧುಮೇಹದ ಚಿಕಿತ್ಸೆಗಾಗಿ ಅವರಿಗೆ ಡ್ರಿಪ್ಸ್ ಹಾಕಲಾಗಿತ್ತು. ಅದೇ ದಿನ ಸಾಯಂಕಾಲ, ಯಾರೋ ಬರೆದಿದ್ದ ಪುಸ್ತಕವನ್ನು ಸ್ವಾಮೀಜಿಯವರು ಬಿಡುಗಡೆಮಾಡಬೇಕಾಗಿತ್ತು. ಆಸ್ಪತ್ರೆಯಿಂದ ಹೊರಗೆ ಹೋಗಬಾರದೆಂದೂ, ಪುಸ್ತಕ ಬಿಡುಗಡೆಯ ಆ ದಿನದ ಕಾರ್ಯಕ್ರಮವನ್ನು ರದ್ದುಗೊಳಿಸಬೇಕೆಂದೂ ನಾನು ಮಹಾರಾಜ್‌ರನ್ನು ಪ್ರಾರ್ಥಿಸಿದೆ. ಆದರೆ, ನನಗೆ ಆಶ್ಚರ್ಯವಾಗುವಂತೆ, ತಮಗೆ ಸರಿಯಾಗಿ ಕುಳಿತುಕೊಳ್ಳಲು ಆಗದಿದ್ದರೂ, ವೈದ್ಯರಿಂದ ಅನುಮತಿ ಪಡೆದುಕೊಂಡು, ಕಾರ್ಯಕ್ರಮವಿದ್ದ ಸ್ಥಳಕ್ಕೆ ಹೋಗಿ, ಪುಸ್ತಕವನ್ನು ಬಿಡುಗಡೆಮಾಡಿದರು ಹಾಗೂ ಮತ್ತೆ ನರ್ಸಿಂಗ್ ಹೋಮ್‌ಗೆ ಹಿಂದಿರುಗಿದರು. ಇದು ಗುರಿಸಾಧನೆಯ ಬಗೆಗೆ ಅವರಿಗಿರುವ ದೃಢಸಂಕಲ್ಪವನ್ನೂ, ತಮ್ಮ ಬದ್ಧತೆಯನ್ನು ಉಳಿಸಿಕೊಳ್ಳುವುದನ್ನು ತೋರಿಸಿತು. ಅಲ್ಲದೆ, ಸ್ವಾಮೀಜಿಯವರು ಶರೀರ ಪ್ರಜ್ಞೆಯನ್ನು ಹೊಂದಿರಲಿಲ್ಲವೆನ್ನುವುದನ್ನೂ ತೋರಿಸಿತು.

ನನ್ನ ಪತಿಯ ನಿವೃತ್ತಿಯ ನಂತರ ನಾವು ದೆಹಲಿಯಲ್ಲಿ ನೆಲೆಸಿದೆವು ಮತ್ತು ಪೂಜ್ಯ ಮಹಾರಾಜ್‌ರು ದೆಹಲಿಗೆ ಭೇಟಿ ನೀಡಿದಾಗಲೆಲ್ಲಾ, ತಪ್ಪದೇ ನಮ್ಮ ಮನೆ 'ರಾಮಕೃಷ್ಣ ಕುಟೀರ'ಕ್ಕೂ ಭೇಟಿನೀಡುತ್ತಿದ್ದರು. ಒಮ್ಮೆ ಹೀಗಾಯಿತು. ಸ್ವಾಮೀಜಿಯವರು ನಾಗಪುರದಿಂದ ಬಂದಿದ್ದರು ಹಾಗೂ ಜಯಪುರಕ್ಕೆ ಹೋಗುವವರಿದ್ದರು. ಅವರು ದೆಹಲಿಯಲ್ಲಿ ವಿಮಾನವನ್ನು ಬದಲಾಯಿಸಬೇಕಾಗಿತ್ತು. ಆಗ ದೂರದ ಆಶ್ರಮಕ್ಕೆ ವಿಶ್ರಾಂತಿಗಾಗಿ ಹೋಗುವ ಬದಲು ನಮ್ಮ ಮನೆಯಲ್ಲಿಯೇ ಸ್ವಲ್ಪ ಕಾಲ ಕಳೆದು ವಿಶ್ರಾಂತಿ ಪಡೆಯುವುದು ಉತ್ತಮವೆಂದು ಸ್ವಾಮೀಜಿಯವರು ನನ್ನ ಪತಿಯೊಡನೆ ಹೇಳಿದರು. ಆಗ, ತೀರ ಅಲ್ಪಸಮಯದಲ್ಲಿ ತಾವು ಆಹ್ವಾನಿಸುವ ಕೆಲವು ಭಕ್ತರಿಗೆ ಪ್ರವಚನ ನೀಡಲು ಪೂಜ್ಯ ಮಹಾರಾಜ್‌ರಿಗೆ ಸಾಧ್ಯವಾಗಬಹುದೇ ಎಂದು ನನ್ನ ಪತಿ ವಿನಂತಿ ಮಾಡಿಕೊಂಡರು. ಪೂಜ್ಯ ಮಹಾರಾಜ್‌ರು ಕೂಡಲೇ ಒಪ್ಪಿಕೊಂಡರು. ಭಕ್ತರೆಲ್ಲರೂ ಸೇರಿದಾಗ, ಶ್ರೀ ರಾಮಕೃಷ್ಣರ ಬೋಧನೆಗಳಂತೆ, ವೃದ್ಧಾಪ್ಯದಲ್ಲಿ ಜೀವನವನ್ನು ಹೇಗೆ ಕಳೆಯಬೇಕೆಂಬುದರ ಬಗೆಗೆ 'ರಾಮಕೃಷ್ಣ ಕುಟೀರ'ದ ಮಂದಿರದಲ್ಲಿ ಸುಮಾರು ಒಂದು ಘಂಟೆಯ ತನಕ ಉಪನ್ಯಾಸ ನೀಡಿದರು. ಪರಿಣಾಮವಾಗಿ, ಚೆನ್ನೈನ ರಾಮಕೃಷ್ಣ ಮಠದಿಂದ, *Way to Attain Bliss in Old Age* ಎಂಬ ಹೆಸರಿನಲ್ಲಿ ಸಣ್ಣ ಪುಸ್ತಕವೊಂದು ಪ್ರಕಟಣೆಗೊಂಡಿತು. ಶಿಕಾಗೋದಲ್ಲಿ ನಡೆದ ವಿಶ್ವಧರ್ಮಗಳ ಸಮ್ಮೇಳನದಲ್ಲಿ, ಸ್ವಾಮಿ ವಿವೇಕಾನಂದರು ಭಾಗವಹಿಸಿದ ಶತಮಾನೋತ್ಸವದ ಅವಧಿಯಲ್ಲಿ, ಅನಾರೋಗ್ಯದಿಂದ ಬಳಲುತ್ತಿದ್ದು, ಕೋಲ್ಕತ್ತಾದ ಗೋಲ್‌ಪಾರ್ಕ್‌ನಲ್ಲಿನ, ರಾಮಕೃಷ್ಣ ಮಿಷನ್‌ನ ಸಾಂಸ್ಕೃತಿಕ ಸಂಸ್ಥೆಯಲ್ಲಿ ಉಳಿದುಕೊಂಡಿದ್ದ ಸ್ವಾಮೀಜಿಯವರನ್ನು ಭೇಟಿ ಮಾಡಲೆಂದು ನಾವು ಹೋದೆವು. ನನ್ನ ಪತಿಯು ಸಾಧು ನಿವಾಸದಲ್ಲಿದ್ದ ಸ್ವಾಮೀಜಿಯ ಕೋಣೆಗೆ ಹೋದರು, ನಾನು ಕೆಳಗೇ

ಕುಳಿತಿದ್ದೆ. ಮಹಾರಾಜ್‌ರು ನನ್ನ ಪತಿಯನ್ನು ಕೇಳಿದರು: "ಶುನೀಲಾ ಎಲ್ಲಿ?" ನನ್ನ ಪತಿ ಹೇಳಿದರು: "ಅವಳು ಮಹಿಳೆಯಾದ್ದರಿಂದ, ಸಾಧು ನಿವಾಸದ ಒಳಗೆ ಬರುವಂತಿಲ್ಲ." ಸ್ವಾಮೀಜಿಯವರು ತಕ್ಷಣವೇ ಲಿಫ್ಟ್‌ನಲ್ಲಿ ಕೆಳಗಿಳಿಯುವ ಬದಲು ಮೆಟ್ಟಿಲುಗಳನ್ನು ಉಪಯೋಗಿಸಿ ಕೆಳಗೆ ಧಾವಿಸಿಬಂದರು. ಅವರ ಪ್ರೀತಿ, ವಾತ್ಸಲ್ಯ ಮತ್ತು ದಯಾಪರತೆಯಿಂದ ನಾನು ಸಂಪೂರ್ಣವಾಗಿ ಸೋತುಹೋದೆ. ಏಕೆಂದರೆ, ಆ ದಿನ ನಾನು ಅವರ ದರ್ಶನ ಪಡೆಯಲಾರೆ ಎಂದೇ ಆಲೋಚಿಸಿದ್ದೆ. ಅವರೇ ಕೆಳಗಿಳಿದು ಬಂದರು ಮತ್ತು ನನ್ನನ್ನು ಹರಸಿದರು. ನಿಜವಾಗಿಯೂ "ಪರ್ವತವು ಮೊಹಮ್ಮದನ ಬಳಿಗೆ ಹೋಗಲಾಗದಿದ್ದರೆ, ಮೊಹಮ್ಮದನೇ ಪರ್ವತದ ಬಳಿ ಹೋಗಬೇಕು" ಎಂಬ ಗಾದೆ ಮಾತುಗಳು ಅಕ್ಷರಶಃ ಸತ್ಯ!

ಒಮ್ಮೆ ನನ್ನ ಪತಿ ಮತ್ತು ನಾನು ನಮ್ಮ ಸ್ನೇಹಿತ ರಘುವಿನ ಜೊತೆಯಲ್ಲಿ ಸ್ವಾಮೀಜಿಯವರ ದರ್ಶನ ಪಡೆಯಲು ಕಂಖಾಲ್‌ಗೆ ಹೋದೆವು. ಪೂಜ್ಯ ಮಹಾರಾಜ್‌ರು ಮೌನವ್ರತ ತೊಟ್ಟಿರುವುದಾಗಿ ರಘು ಹೇಳಿದ್ದರು. ಆದರೆ ಅದೃಷ್ಟವಶಾತ್, ಆ ದಿನ ಅವರು ತಮ್ಮ ವ್ರತವನ್ನು ಮುರಿದರು ಮತ್ತು ನಾವು ಅವರೊಡನೆ ಕೆಲವು ವಿಚಾರಗಳನ್ನು ವಿನಿಮಯಮಾಡಿಕೊಳ್ಳಲು ಸಾಧ್ಯವಾಯಿತು. ಸನ್ಯಾಸಿಗಳ ಮತ್ತು ಭಕ್ತರ ಗುಂಪಿನೊಡನೆ ಬದರಿ ಮತ್ತು ಕೇದಾರಗಳಿಗೆ ಭೇಟಿ ನೀಡುವಂತೆ ಅವರು ನಮಗೆ ಹೇಳಿದರು.

ಲಕ್ನೋ ಆಶ್ರಮದ ದೇವಸ್ಥಾನದ ಆರಂಭೋತ್ಸವದಲ್ಲಿ ಪೂಜ್ಯ ಮಹಾರಾಜ್‌ರ ದರ್ಶನಕ್ಕಾಗಿ ದೊಡ್ಡ ಗುಂಪು ಕಾಯುತ್ತಿತ್ತು. ನನ್ನ ಸರದಿ ಬಂದಾಗ, ಒಳಗೆ ಹೋದೆ ಮತ್ತು ಅವರಿಗೆ ನಮಸ್ಕರಿಸಿದೆ. ಒಂದೆರಡು ಕುಶಲೋಪರಿ ಮಾತುಕತೆಗಳ ವಿನಿಮಯದ ನಂತರ, ನಾನು ಮಹಾರಾಜ್‌ರ ಛಾಯಾಚಿತ್ರ ತೆಗೆದುಕೊಳ್ಳಲು ಇಚ್ಛಿಸಿದೆ. ಆದರೆ ಅಲ್ಲಿ ಉಪಸ್ಥಿತರಿದ್ದ ಸನ್ಯಾಸಿಗಳು ನನಗೆ ಅನುಮತಿ ನೀಡಲಿಲ್ಲ. ಈ ವಿಷಯ ಮಹಾರಾಜ್‌ರಿಗೆ ತಿಳಿದ ತಕ್ಷಣವೇ ಅವರು ಹೇಳಿದರು, "ಶುನೀಲಾ ಚಿತ್ರ ತೆಗೆದುಕೊಳ್ಳಲಿ, ಬಿಡಿ" ಹಾಗೆಯೇ ಡೆಹ್ರಾಡೂನ್‌ನಲ್ಲಿ ಮಂದಿರದ ಪ್ರಾರಂಭೋತ್ಸವದಲ್ಲಿಯೂ ಸ್ವಾಮೀಜಿಯವರ ದರ್ಶನ ಪಡೆದೆವು ಮತ್ತು ಮಾಮೂಲಿನಂತೆ ಅವರ ಆಶೀರ್ವಾದವನ್ನೂ ಪಡೆದೆವು ಹಾಗೂ ಅವರ ಅನುಮತಿ ಪಡೆದು ಅವರ ಕೆಲವು ಚಿತ್ರಗಳನ್ನೂ ಸೆರೆಹಿಡಿದೆವು.

ಆನಂತರದ ದುರ್ಗಾ ಪೂಜೆಯ ಅವಧಿಯಲ್ಲಿ ಸ್ವಾಮಿ ರಂಗನಾಥಾನಂದರು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಅಧ್ಯಕ್ಷ ಪದವಿಯನ್ನು ವಹಿಸಿಕೊಂಡ ಮೇಲೆ ನನ್ನ ಪತಿ ಮತ್ತು ನಾನು ಅವರನ್ನು ಭೇಟಿಮಾಡಲು ಬೇಲೂರು ಮಠಕ್ಕೆ ಹೋದೆವು. ನಾನು ಅತ್ಯಂತ ಉತ್ಸಾಹದಿಂದ "ಮಹಾರಾಜ್, ನಾನು ತ್ರಿಶೂರ್ ಹತ್ತಿರವಿರುವ ತ್ರಿಕ್ಕುರಿ ಗ್ರಾಮದಲ್ಲಿನ ನಿಮ್ಮ ಮನೆಗೆ ಹೋಗಿದ್ದೆ ಮತ್ತು ಆ ಮನೆಯ ಕೆಲವು ಚಿತ್ರಗಳನ್ನು ತೆಗೆದಿದ್ದೇನೆ. ನೀವು ಅದನ್ನು ನೋಡಲು ಇಚ್ಛಿಸುತ್ತೀರಾ?" ಎಂದು ಕೇಳಿದೆ. ಆಗ ಅವರು ಹೇಳಿದರು: "ಈಗ ನಾನು ಈ ಎಲ್ಲ ಸಾಧಾರಣ ಲೌಕಿಕ ವಿಷಯಗಳಿಂದ ಮೇಲೆ ಏರಿದ್ದೇನೆ" ಮತ್ತು ಅವರು ಆ ಚಿತ್ರಗಳತ್ತ ತಿರುಗಿಯೂ ನೋಡಲಿಲ್ಲ!

ನಾನು ರೈಲ್ವೆಯಲ್ಲಿನ ವೈದ್ಯಕೀಯ ಸೇವೆಯಿಂದ ನಿವೃತ್ತಳಾದಾಗ, ಒಮ್ಮೆ ನನ್ನ ಪತಿಯು, ನಾನು ಏನಾದರೂ ಕೆಲಸವನ್ನು ಆರಂಭಿಸುವ ಬಗ್ಗೆ ಸಲಹೆ ನೀಡುವಂತೆ ಪೂಜ್ಯ ಮಹಾರಾಜ್‌ರನ್ನು ಕೇಳಿದರು. ಮಹಾರಾಜ್‌ರು ಅವರಿಗೆ ಹೇಳಿದರು: "ಆಕೆಗೆ ಉಪದೇಶಿಸುವಂತಹದೇನೂ ಇಲ್ಲ, ಆಕೆಗೆ ಯಾವುದು ಇಷ್ಟವಾಗುತ್ತದೆಯೋ ಅದನ್ನೇ ಮಾಡಲಿ." ಪೂಜ್ಯ ಮಹಾರಾಜ್‌ರು ವ್ಯಕ್ತಿಯ ಮಾನಸಿಕ ಕಾರ್ಯಗತಿ, ಪ್ರಕ್ರಿಯೆಯಲ್ಲಿ ಗಾಢವಾದ ಗ್ರಹಿಕೆ ಹೊಂದಿದ್ದರು ಎನಿಸುತ್ತದೆ.

ರಾಮಕೃಷ್ಣ ಮಿಷನ್‌ನ ಪ್ಲಾಟಿನಂ ಜೂಬಿಲಿ ಆಚರಣೆಯ ಸಂದರ್ಭದಲ್ಲಿ ಪೂಜ್ಯ ಮಹಾರಾಜ್‌ರು ಡೆಲ್ಲಿಗೆ ಬಂದರು. ಆ ಸಂದರ್ಭದಲ್ಲಿ ನನ್ನ ಪತಿಯು ಅನಾರೋಗ್ಯದಿಂದಾಗಿ ಆಸ್ಪತ್ರೆಯಲ್ಲಿದ್ದರು. ಪ್ರತಿ ದಿನವೂ ಸ್ವಾಮೀಜಿ ನನ್ನ ಪತಿಯ ಆರೋಗ್ಯದ ಬಗೆಗೆ ವಿಚಾರಿಸುತ್ತಿದ್ದರು ಹಾಗೂ ಆಶೀರ್ವಾದ, ಪ್ರಸಾದಗಳನ್ನು ಕಳಿಸುತ್ತಿದ್ದರು. ಆ ಸಮಯದಲ್ಲಿ ನಾನು ಸ್ವಾಮಿ ರಂಗನಾಥಾನಂದರ ಅತ್ಯಂತ ವಾತ್ಸಲ್ಯಮಯ ಹಾಗೂ ಪ್ರೀತಿಪಾತ್ರವಾದ ಹೃದಯದ ದರ್ಶನ ಪಡೆದೆ. ಅವರೊಬ್ಬ ಮಹಾನ್ ಸಂತರು ಮತ್ತು ಪ್ರತಿಭಾವಂತರು ಎಂದಷ್ಟು ಮಾತ್ರ ನಾನು ಹೇಳಬಲ್ಲೆ. ಅವರ ಪ್ರೀತಿ, ದಯೆಗಳ ಮಹತ್ವವನ್ನು ಅರ್ಥ ಮಾಡಿಕೊಳ್ಳುವುದು ಸಾಮಾನ್ಯ ಮನುಷ್ಯರಾದ ನಮ್ಮಂಥವರಿಗೆ ಬಹಳ ಕಠಿಣ. ಅವರು ಯಾವಾಗಲೂ ನನ್ನ ಸ್ನೇಹಿತರು, ತತ್ತ್ವಜ್ಞಾನಿಗಳು ಮತ್ತು ಮಾರ್ಗದರ್ಶಕರಾಗಿದ್ದಾರೆ.

* *   * *

# ೮೬. ಅವರು ನಮ್ಮ ಜೀವನಗಳನ್ನು ರೂಪಿಸಿದರು

–ಎಸ್.ಲಕ್ಷ್ಮೀದೇವಿ*

೧೯೬೦ರಲ್ಲಿ ನಾನು ಶಾಲೆಯಲ್ಲಿದ್ದಾಗ, ಸ್ವಾಮಿ ರಂಗನಾಥಾನಂದರು, ದೆಹಲಿಯ ರಾಮಕೃಷ್ಣ ಆಶ್ರಮದ ಕಾರ್ಯದರ್ಶಿಗಳಾಗಿದ್ದರು. ನನ್ನ ತಂದೆಯವರು ರಾಮಕೃಷ್ಣ ಮಿಷನ್‌ನ ಭಕ್ತರಾಗಿದ್ದುದರಿಂದ ನಾನು ಮಿಷನ್ನಿನೊಡನೆ ಸಂಬಂಧ ಹೊಂದಿದ್ದೆ. ನಮ್ಮ ತಂದೆಯು ಸಾಯಂಕಾಲಗಳಲ್ಲಿ ನಮ್ಮನ್ನು ಮಿಷನ್‌ಗೆ ಕರೆದುಕೊಂಡು ಹೋಗುತ್ತಿದ್ದರು ಮತ್ತು ಅಲ್ಲಿನ ಎಲ್ಲ ಸಾಧುಗಳಿಗೂ ನಮಸ್ಕಾರ ಮಾಡಿಸುತ್ತಿದ್ದರು. ನನ್ನ ತಂದೆಯವರು ಉಪಸ್ಥಿತರಿರುತ್ತಿದ್ದ ವಾರದ ಸಭೆಗಳಲ್ಲಿ ಒಂದರಲ್ಲಿ, ಸ್ವಾಮೀಜಿಯವರು, ತಾವು ಆಶ್ರಮದಲ್ಲಿ ಮಕ್ಕಳಿಗಾಗಿ ಭಾನುವಾರದ ಶಾಲೆಯನ್ನು ಆರಂಭಿಸುವುದಾಗಿ ಪ್ರಕಟಿಸಿದರು. ಆ ಶಾಲೆಯನ್ನು ಶಾರದಾ ಮಹಿಳಾ ಸಮಿತಿ ನಡೆಸಲಿತ್ತು.

ನಮ್ಮ ತಂದೆಯು ಈ ವಿಷಯದ ಬಗೆಗೆ ಬಹಳ ಉತ್ಸುಕರಾದರು. ಭಾನುವಾರದ ಶಾಲೆಗೆ ಅವರು ನನ್ನನ್ನೂ ನನ್ನ ಸೋದರನನ್ನೂ, ನಂತರ ನನ್ನ ತಂಗಿಯನ್ನೂ ದಾಖಲುಮಾಡಿದರು. ಪ್ರತಿ ಭಾನುವಾರವೂ ಬೆಳಿಗ್ಗೆ ಒಂಬತ್ತು ಗಂಟೆಯಿಂದ ಹತ್ತುವರೆಯವರೆಗೂ ಆಶ್ರಮದ ಬೇಸ್‌ಮೆಂಟ್‌ನಲ್ಲಿ ತರಗತಿಗಳು ನಡೆಯುತ್ತಿದ್ದವು. ಸುಮಾರು ೫೦ರಿಂದ ೬೦ ಬಾಲಕ–ಬಾಲಕಿಯರು ಈ ಆಧ್ಯಾತ್ಮಿಕ ತರಗತಿಗಳಿಗೆ ಹಾಜರಾಗಿರುತ್ತಿದ್ದರು. ನಾವು ಎಲ್ಲರೂ ಸೇರಿದ ತತ್‌ಕ್ಷಣವೇ ಶ್ರೀಮತಿ ಮೇಖಲಾ ಝಾ ೧೦ರಿಂದ ೧೫ ನಿಮಿಷಗಳವರೆಗೆ ಧ್ಯಾನ ಮಾಡುತ್ತಾ ಕುಳಿತಿರುವಂತೆ ನಮಗೆ ಹೇಳುತ್ತಿದ್ದರು. ಶಾಲೆಗೆ ಹೋಗುವ ಮಕ್ಕಳಿಗೆ, ಅತ್ಯಗತ್ಯವಾದ ಏಕಾಗ್ರತೆಯನ್ನು ಅಭಿವೃದ್ಧಿಪಡಿಸಿಕೊಳ್ಳಲು, ಈ ಅಭ್ಯಾಸವು ನೆರವಾಗುವುದೆಂದು ಅವರು ಹೇಳುತ್ತಿದ್ದರು. ಜೊತೆಗೆ, ನಮ್ಮ ತಾಯಿಯ ನಿತ್ಯದ ಕೆಲಸ ಕಾರ್ಯಗಳಲ್ಲಿ ನೆರವಾಗುವ ಅಭ್ಯಾಸವನ್ನು ಸಹ ಅವರು ನಮ್ಮ ಆ ಮನಸ್ಸಿಗೆ ಮುಟ್ಟುವಂತೆ ಹೇಳಿ ಮೈಗೂಡಿಸಿದರು. ನಾವು ನಮ್ಮ ತಂದೆ–ತಾಯಿಗೆ ಸಹಾಯ ಮಾಡಬೇಕು ಹಾಗೂ ಯಾರಿಗೆ ಆವಶ್ಯಕತೆಯಿದೆಯೋ ಅವರಿಗೆ ನೆರವು ನೀಡಬೇಕು ಎಂಬುದು ನಮ್ಮ ಮನಸ್ಸುಗಳ ಮೇಲೆ ಅತ್ಯಂತ ಹೆಚ್ಚಿನ ಪ್ರಭಾವಬೀರಿತು. ಪ್ರತಿ ಭಾನುವಾರವೂ ನಾವು ಸ್ವಾಮೀಜಿಯವರಿಗೆ ನಮಸ್ಕರಿಸಿ ಅವರ ಆಶೀರ್ವಾದಗಳನ್ನು ಪಡೆಯುತ್ತಿದ್ದೆವು. ಸ್ವಾಮಿ ರಂಗನಾಥಾನಂದರಿಗೆ ನಮ್ಮ ಪೈಕಿ ಪ್ರತಿಯೊಬ್ಬರ ಹೆಸರೂ ಗೊತ್ತಿದ್ದಿತು.

ಬಾಲ್ಯದಲ್ಲಿ ನಮ್ಮ ತಂದೆಯು ನನ್ನನ್ನು ಸ್ವಾಮೀಜಿಯವರ ಉಪನ್ಯಾಸಕ್ಕೆಂದು ರಾಮಕೃಷ್ಣ ಮಿಷನ್ನಿಗೆ ಕರೆದುಕೊಂಡು ಹೋಗುತ್ತಿದ್ದಾಗ, ಅವರ ಉಪನ್ಯಾಸವನ್ನು ಕೇಳುವುದು ನನಗೆ ಒಂದು ಸತ್ಕಾರವಾಗಿತ್ತು, ಸಭಾಂಗಣವು ಪೂರ್ತಿಯಾಗಿ ತುಂಬಿರುತ್ತಿತ್ತು. ನಾವು ಉತ್ತಮ ಸಂವಾಹಕರೂ, ಉತ್ತಮ ಶಿಕ್ಷಕರೂ ಆಗಲು ಅವರು ಉಪನ್ಯಾಸಗಳು ನಿಜವಾಗಿಯೂ ನಮಗೆ ಸಹಾಯಮಾಡಿವೆ.

ಸ್ವಲ್ಪ ಸಮಯದ ನಂತರ ಸ್ವಾಮಿ ರಂಗನಾಥಾನಂದರು ಕೋಲ್ಕತ್ತಾದ ರಾಮಕೃಷ್ಣ ಮಿಷನ್‌ನ ಸಾಂಸ್ಕೃತಿಕ ಸಂಸ್ಥೆಗೆ ತಮ್ಮ ವಾಸ್ತವ್ಯವನ್ನು ಬದಲಾಯಿಸಿದರು. ನಾವು ಅವರನ್ನು ಭೇಟಿಯಾಗಲು ಹೋದಾಗ ನಡೆದ ಒಂದು ಪ್ರಸಂಗ ನನಗೆ ನೆನಪಾಗುತ್ತದೆ. ನಾವು ಅಲ್ಲಿಗೆ ಹೋಗಿದ್ದು ತಿಳಿಯುತ್ತಲೇ ನಮ್ಮನ್ನು ಒಳಕ್ಕೆ ಕರೆದರು, ಪ್ರಸಾದವನ್ನು ಕೊಟ್ಟರು ಮತ್ತು ಅಲ್ಲಿದ್ದ ಬ್ರಹ್ಮಚಾರಿಗಳಲ್ಲಿ ಒಬ್ಬರನ್ನು ಕರೆದು ನಮಗೆ ಮಿಷನ್‌ಅನ್ನು ತೋರಿಸುವಂತೆ ಹೇಳಿದರು.

---

* ಪ್ರಾಂಶುಪಾಲರು, ಹುತಾತ್ಮ ರಾಜಗುರು ಕಾಲೇಜ್ ಆಫ್ ಅಪ್ಲೈಡ್ ಸೈನ್ಸಸ್ ಫಾರ್ ವಿಮೆನ್, ಹೊಸ ದೆಹಲಿ.

ಈ ಎಲ್ಲ ಘಟನೆಗಳು, ವಿಶೇಷವಾಗಿ ಭಾನುವಾರದ ತರಗತಿಗಳು ಮತ್ತು ಸ್ವಾಮಿ ರಂಗನಾಥಾನಂದರೊಡನೆ ಪ್ರತಿ ಭಾನುವಾರದ ನಮ್ಮ ಭೇಟಿಗಳು, ನಿಜವಾಗಿಯೂ ನಮ್ಮ ಜೀವನವನ್ನು ರೂಪಿಸಿವೆ. ಇವತ್ತು ನಾನು ಏನಾಗಿದ್ದೇನೆಯೋ ಅದಕ್ಕೆ 'ಚಾರ್‌ಧಾಮ್' ಯಾತ್ರೆಯ ನಂತರ ನಮಗೆ ದೀಕ್ಷೆ ನೀಡಿದಂತಹ ಸ್ವಾಮಿ ರಂಗನಾಥಾನಂದರಿಗೆ ಋಣಿಯಾಗಿದ್ದೇನೆ. ನಿಜವಾಗಿಯೂ, ಅವರು ನಮಗೆ ಮಂತ್ರದೀಕ್ಷೆಯನ್ನು ನೀಡಿದ ದೃಶ್ಯವು ಮನಮುಟ್ಟುವಂತಹದಾಗಿತ್ತು. ನಮ್ಮನ್ನು ಭಾನುವಾರದ ಶಾಲೆಯ ಆಧ್ಯಾತ್ಮಿಕ ಸಾಧನೆಯ ದೀಕ್ಷೆಗೆ ತೊಡಗಿಸಿದವರೇ ಅಂತಿಮವಾಗಿ ನಮ್ಮ ಮೇಲೆ ಅನುಗ್ರಹದ ಮಳೆ ಕರೆದರೆಂಬುದರಿಂದ ನಾವು ಧನ್ಯರಾದೆವೆಂದು ಭಾವಿಸುತ್ತೇವೆ. ಜೀವನದ ಪ್ರತಿ ಹೆಜ್ಜೆಯಲ್ಲಿಯೂ ನಾನು ಅವರ ಉಪಸ್ಥಿತಿಯನ್ನು ಅನುಭವಿಸುತ್ತೇನೆ. ಅವರೇ ನಮ್ಮ ಮಾರ್ಗದರ್ಶಕ ಶಕ್ತಿ ಮತ್ತು ಜೀವನದ ಗುರಿ, ಧ್ಯೇಯಗಳನ್ನು ಸಾಕ್ಷಾತ್ಕರಿಸಿಕೊಳ್ಳುವಲ್ಲಿ ಅವರ ಆಶೀರ್ವಾದವು ಬಹು ದೀರ್ಘ ಕಾಲ ನಮ್ಮೊಡನೆ ಇದ್ದು ನೆರವಾಗುವುದೆಂದು ಖಚಿತವಾಗಿ ನಂಬುತ್ತೇನೆ.

* * * *

# ೮೭. ನನ್ನ ಜೀವನದ ಇಂಧನ

–ತಾರಾದೇವಿ ಎಸ್. ಅಶೋಕ್*

ನನ್ನ ತಂದೆ ಶ್ರೀ ಸಾಂಬಶಿವನ್ ಅವರು ಸ್ವಾಮಿ ಕೈಲಾಸಾನಂದರವರ ಕಾಲದಿಂದಲೂ ರಾಮಕೃಷ್ಣ ಮಿಷನ್‌ನೊಡನೆ ಸಂಪರ್ಕ ಹೊಂದಿದ್ದರು ಮತ್ತು ಇಂದಿಗೂ ನಾನು ವಾಸ್ತವವಾಗಿ ರಾಮಕೃಷ್ಣ ಮಿಷನ್‌ನ ಆಶ್ರಯದಲ್ಲಿಯೇ ಬೆಳೆಯುತ್ತಿದ್ದೇನೆ. ಇದಕ್ಕೆ ತಳಹದಿಯು ನಾನು ಇನ್ನೂ ಗರ್ಭಾವಸ್ಥೆಯಲ್ಲಿದ್ದಾಗಲೇ ಹಾಕಲ್ಪಟ್ಟಿತು. ಹಾಗಾಗಿ ನನ್ನ ಅಸ್ತಿತ್ವದ ಪ್ರತಿಯೊಂದು ಅಂಶವೂ ವೇದಾಂತದ ತತ್ತ್ವಶಾಸ್ತ್ರದಲ್ಲಿ – ದರ್ಶನದಲ್ಲಿ – ನೆನೆದು ಮುಳುಗಿಹೋಗಿದೆ. ನಾನು ಬೆಳೆಯುತ್ತಿದ್ದಾಗ, ನನ್ನ ಬೇರೆ ಎಲ್ಲ ಚಿಕ್ಕಪ್ಪ ದೊಡ್ಡಪ್ಪಂದಿರಂತೆ ರಾಮಕೃಷ್ಣ ಮಿಷನ್ನಿನ ವಿರಕ್ತ ಸನ್ಯಾಸಿಗಳು ನನ್ನ ಅತ್ಯಂತ ಸಮೀಪದ ಬಂಧುಗಳಾಗಿದ್ದರು, ಶ್ರೀ ರಾಮಕೃಷ್ಣರೇ ನನ್ನ ಬಾಬಾ (ತಾತ) ಆಗಿದ್ದರು. ರಾಮಕೃಷ್ಣ ಮಿಷನ್ ನನ್ನ ಮನೆಯೆಂದು ಭಾವಿಸುತ್ತೇನೆ, ಶ್ರೀ ರಾಮಕೃಷ್ಣರು ಇಡಿಯ ಜಗತ್ತೇ ತಮ್ಮ ಮಾವನಮನೆ ಎಂದಂತೆ, ನಾನೂ ಕೂಡ ರಾಮಕೃಷ್ಣ ಮಿಷನ್ ಅನ್ನು ಜಗತ್ತಿನಾದ್ಯಂತ ನನ್ನ ಮನೆಯಾಗಿ ಪಡೆದಿದ್ದೇನೆ.

ಸ್ವಾಮಿ ರಂಗನಾಥಾನಂದರನ್ನು ನಾನು ಯಾವಾಗ ಭೇಟಿ ಮಾಡಿದೆ? ನನಗೆ ತಿಳಿದಿಲ್ಲ. ಆದರೆ, ನನ್ನ ಮಿದುಳು ಜನರನ್ನು ಗುರುತಿಸಲು ಆರಂಭಿಸಿದಾಗಿನಿಂದಲೂ, ರಾಮಕೃಷ್ಣ ಮಿಷನ್‌ನಲ್ಲಿ ಅವರೇ ಮೊದಲಿನವರಾಗಿದ್ದರು. ಅವರು ನನ್ನನ್ನು 'ಮಾತ್ವಮ್ ಹಿ ತಾರಾ' ಎಂದು ಕರೆದರು. ನನ್ನ ಹೆಸರು ಕೂಡ ಪ್ರಾಸಂಗಿಕವಾಗಿ ತಾರಾ ಎಂದೇ ಆಗಿದೆ. ನಾನು ಮೂರು ವರ್ಷ ವಯಸ್ಸಿನವಳಾಗಿದ್ದಾಗಿನಿಂದಲೂ, ಭಾನುವಾರದ ತರಗತಿಯ ವಾರ್ಷಿಕ ಕಾರ್ಯಕ್ರಮದಲ್ಲಿ, ರಂಗದ ಮೇಲೆ ಪವಿತ್ರ ಮಾತೆಯ ಪಾತ್ರ ವಹಿಸಿದ್ದೆ.

ಮಕ್ಕಳಿಗೆ ಭಾನುವಾರದ ಶಾಲೆಯನ್ನು ಆರಂಭಿಸುವುದಕ್ಕೆ ಸ್ವಾಮಿ ರಂಗನಾಥಾನಂದರು ಕಾರಣೀಭೂತರಾಗಿದ್ದರು. ಅವರ ಭಕ್ತರ ದೀರ್ಘಪಟ್ಟಿಯಲ್ಲಿ, ಬೌದ್ಧಿಕವಾಗಿ ಬಹಳ ಪ್ರಖರವಾಗಿ, ಸಂಪನ್ಮೂಲಗಳಲ್ಲಿ ಅತ್ಯಂತ ಸಮರ್ಥರಾಗಿ ಮತ್ತು ವೇದಾಂತ ದರ್ಶನಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ ಭಾಗವಹಿಸಲು ಚೈತನ್ಯ ತುಂಬಿದ್ದಂತಹ ಮಹಿಳೆಯರಿದ್ದರು. ಇಲ್ಲಿ ನಾನು ಮೊದಲ ಬಾರಿಗೆ 'ಪ್ರಾಯೋಗಿಕ ವೇದಾಂತ' ಎನ್ನುವ ಪದವನ್ನು ಕಲಿತೆ.

ನನ್ನ ಸೋದರ ಮತ್ತು ಸೋದರಿ, ಭಾನುವಾರದ ತರಗತಿಗಳ ಫಲಾನುಭವಿಗಳಾಗಿದ್ದರು. ನಾನು ಕೇವಲ ಮೂರು ವರ್ಷದವಳಾಗಿದ್ದುದರಿಂದ ತರಗತಿಯಲ್ಲಿ ಸೇರಲು ಅರ್ಹಳಾಗಿರಲಿಲ್ಲ. ಆದಾಗ್ಯೂ ಆ ತರಗತಿಗೆ ಹೋಗಲು ನನಗೆ ಇದ್ದ ತೀವ್ರ ಆಸಕ್ತಿಯನ್ನು ಕಂಡ ನನ್ನ ತಾಯಿಯು ಈ ಮಗುವೂ ತರಗತಿಯಲ್ಲಿ ಹಾಜರಾಗಬಹುದೇ ಎಂದು ಸ್ವಾಮೀಜಿಯನ್ನು ಕೇಳಿದರು. ಸ್ವಾಮೀಜಿಯವರು ಕೇವಲ ಒಂದೇ ಒಂದು ವಾಕ್ಯವನ್ನು ಹೇಳಿದರು "ತರಗತಿಯಲ್ಲಿ ಅವಳು ನಿಶ್ಶಬ್ದವಾಗಿ (ಮೌನವಾಗಿ) ಕುಳಿತಿರುವುದಾದರೆ ಅವಳು ತರಗತಿಗೆ ಹಾಜರಾಗಲು ಅನುಮತಿಸುತ್ತೇವೆ. ಆದರೆ ಬೇರೆ ಯಾರಿಗೂ ತೊಂದರೆ ಕೊಡಬಾರದು."

ಆದ್ದರಿಂದ ನನ್ನ ಸೋದರ ಸೋದರಿಯರ ಜೊತೆಯಲ್ಲಿ, ನಮ್ಮ ತಾಯಿಯು ನನ್ನನ್ನೂ ತರಗತಿಗೆ ಕಳಿಸಿದರು. ತರಗತಿಯಲ್ಲಿ ಮಾತನಾಡುವುದಾಗಲೀ, ಅತ್ತಿತ್ತ ಓಡಾಡುವುದಾಗಲೀ ಮಾಡಕೂಡದೆಂದು ಕಟ್ಟುನಿಟ್ಟಾಗಿ

---

* ಯು.ಎಸ್.ಎ.ಯ ಮೆಸಾಚುಸೆಟ್ಸ್‌ನ ಒಬ್ಬ ಭಕ್ತರು.

ಸೂಚಿಸಿದ್ದರು. ನಾನು ಅದನ್ನು ಅಕ್ಷರಶಃ ಪಾಲಿಸಿದೆ. ಅದು ನನ್ನ ಅತ್ಯಂತ ಹೆಚ್ಚು ಅದೃಷ್ಟದ ದಿನವೆಂದು ನಾನು ಊಹಿಸುತ್ತೇನೆ. ಮತ್ತೆಂದೂ ನಾನು ಹಿಂದಿರುಗಿನೋಡಲಿಲ್ಲ.

ಭಾನುವಾರ ಪ್ರಾತಃಕಾಲಗಳಲ್ಲಿ, ನಮ್ಮ ತಾಯಿಯು ನಮಗೆ ಎಣ್ಣೆಯ ಸ್ನಾನ ಮಾಡಿಸಿ ರಾಮಕೃಷ್ಣ ಮಿಷನ್‌ಗೆ ಕಳಿಸಿಕೊಡುತ್ತಿದ್ದರು. ನಾವು ಕುದುರೆಗಾಡಿ ಅಥವಾ ಹದಿನೈದನೆಯ ನಂಬರಿನ ಬಸ್ಸಿನಲ್ಲಿ ಹೋಗುತ್ತಿದ್ದೆವು. ಅನೇಕ ಬಾರಿ ನಾನು ಎರಡು ಮೈಲುಗಳಷ್ಟು ದೂರ ನಡೆಯಬೇಕಾಗಿತ್ತು.

ತರಗತಿಯಲ್ಲಿ ನಾನು ಮೊದಲ ಸಾಲಿನಲ್ಲಿ ಕುಳಿತುಕೊಳ್ಳುತ್ತಿದ್ದೆ. ನಾವು ಮಾಡುತ್ತಿದ್ದ ಮೊದಲ ಕೆಲಸವೆಂದರೆ ದೀಪದ ಸ್ವಿಚ್ ಆರಿಸುತ್ತಿದ್ದುದು. ಶ್ರೀಮತಿ ಮೇಖಲಾ ಝಾ, ನಮಗೆ ಧ್ಯಾನ ಮಾಡುವುದನ್ನು ಕಲಿಸುತ್ತಿದ್ದರು. "ನೀವು ಪ್ರೀತಿಸುವ ದೇವರ ಹೆಸರನ್ನು ನೀವು ಹೇಳಿಕೊಳ್ಳಿ" ಎಂದು ಅವರು ಹೇಳುತ್ತಿದ್ದರು. ನಾವು ಇಷ್ಟು ಚಿಕ್ಕವರಿರುವಾಗಿನಿಂದಲೇ ಧ್ಯಾನ ಮಾಡಲು ಆರಂಭಿಸುತ್ತಿರುವುದರಿಂದ ಈ ಜಗತ್ತಿನಲ್ಲಿ ನಾವು ವಿಶಿಷ್ಟವಾದ ಮಕ್ಕಳಾಗುತ್ತೇವೆಂದೂ ಅವರು ಹೇಳಿದರು. ಹಾಗೂ ಭಾನುವಾರದ ಬೆಳಿಗ್ಗೆ ನಾವು ಶಾಲೆಗೆ ಬರುವುದು, ಸಮಯವನ್ನು ವ್ಯರ್ಥಮಾಡುವುದಕ್ಕಲ್ಲ, ಆದರೆ ಅದು ಸಮಯದ ಲಾಭ ಹಾಗೂ ಸದ್ಬಳಕೆ; ಏಕೆಂದರೆ ಅದು ನಮ್ಮ ಏಕಾಗ್ರತೆಯ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಹಾಗಾಗಿ ಬೇರೆಯವರು ಹೆಚ್ಚು ಸಮಯ ತೆಗೆದುಕೊಂಡು ಮಾಡುವುದನ್ನು ನಾವು ಅವರಿಗಿಂತಲೂ ವೇಗವಾಗಿ ಮಾಡಬಹುದೆಂದೂ ಅವರು ಹೇಳುತ್ತಿದ್ದರು. ನಮ್ಮ ಮನಸ್ಸುಗಳು ಈಗ ಪರಿಶುದ್ಧವಾಗಿರುವುದರಿಂದ (ದೊಡ್ಡವರ ಮನಸ್ಸುಗಳು ಪ್ರಾಪಂಚಿಕತೆಯಿಂದ ಮಲಿನಗೊಂಡಿದ್ದವು) ನಾವು ಈಗಿನಿಂದಲೂ, ಎಂದಿಗೂ ಶುದ್ಧ ಪ್ರಜ್ಞೆಯೊಂದಿಗೆ ಇರಬಹುದೆಂದೂ ಅವರು ಹೇಳಿದರು. ಈ ಎಲ್ಲ ಹೇಳಿಕೆಗಳೂ ನನ್ನ ಮಿದುಳಿನ ಕೋಶಗಳಲ್ಲಿ ಹುದುಗಿಕೊಂಡಿವೆ ಮತ್ತು ನಾನು ಅವುಗಳನ್ನು ಇಂದಿಗೂ ಅಷ್ಟೇ ಹೊಸತು ಮತ್ತು ತಾಜಾ ಎಂಬಂತೆ ಭಾವಿಸುತ್ತೇನೆ. ಇಂದು ಕೂಡ, ನಾನು ಮೂರು ವರ್ಷ ವಯಸ್ಸಿನ ಹುಡುಗಿಯಾಗಿದ್ದಾಗ ಅವರು ಹೇಳಿದ್ದಂತೆಯೇ ನಾನು ಅರಿವಿನ ಆನಂದವನ್ನು ಅನುಭವಿಸುತ್ತೇನೆ. ಭಾನುವಾರದ ತರಗತಿಗಳಲ್ಲಿ ನಾನು ನನ್ನ ಶಾಲೆಯ ಕಡೆಯ ವರ್ಷದವರೆಗೂ ಹಾಜರಿರುತ್ತಿದ್ದೆ. ನಂತರ, ಬೋಧನೆ ಮಾಡುವವರು ಕಡಿಮೆಯಾದಾಗ ನಾನೇ ಶಿಕ್ಷಕಿಯಾಗಿ ಅಲ್ಲಿಗೆ ಹಿಂದಿರುಗಿದೆ.

ನಾನು ಇಲ್ಲಿ ಮುಖ್ಯವಾಗಿ ಹೇಳುವುದೇನೆಂದರೆ, ಸ್ವಾಮಿ ರಂಗನಾಥಾನಂದರು, ಸುತ್ತಮುತ್ತಲಿನ ಮಕ್ಕಳನ್ನು ಆಧ್ಯಾತ್ಮಿಕತೆಯತ್ತ ತರುವ ಒಂದು ಕಾಣ್ಕೆಯನ್ನು ಹೊಂದಿದ್ದರು ಎಂದು. ಅವರ ಕನಸು ನನಸಾದುದಕ್ಕೆ, ಕಾರ್ಯರೂಪಕ್ಕೆ ಬಂದುದಕ್ಕೆ, ನಾನೇ ಒಬ್ಬಳು ಪ್ರಮಾಣವಾಗಿದ್ದೇನೆ. ಭಾನುವಾರದ ಶಾಲೆಯಿಂದ ಹೇಳುವುದಕ್ಕೆ ಸಾಧ್ಯವಾಗದಷ್ಟು ಮಟ್ಟದಲ್ಲಿ ಉಪಯೋಗಪಡೆದಿದ್ದೇನೆ. ನನ್ನ ಇಡಿಯ ವ್ಯಕ್ತಿತ್ವವೇ ಅಲ್ಲಿ ರೂಪುಗೊಂಡಿತು. ಇವತ್ತು ಈ ಜಗತ್ತಿನಲ್ಲಿ, ಒಂದು ಚುಕ್ಕಿಯಷ್ಟೂ ಭಯವಿರದೆ, ಒಂದೂ ಸಂಶಯ ಮನಸ್ಸಿನಲ್ಲಿರದೆ ಮತ್ತು ಐವತ್ತು ವರ್ಷಗಳ ದೀರ್ಘ, ಸುಂದರ ಜೀವನವನ್ನು ಆಗಿನಿಂದಲೂ ಕಳೆದಿದ್ದೇನೆ.

ಇಂದು ನಾನು ಪ್ರತಿ ಸೆಮೆಸ್ಟರ್‌ನಲ್ಲಿಯೂ ಅನೇಕ ವಿದ್ಯಾರ್ಥಿಗಳಿಗೆ ಕಲಿಸುತ್ತಾ ಯು.ಎಸ್.ನಲ್ಲಿ ನೆಲೆನಿಂತಿದ್ದೇನೆ. ನಾನು ಸಂವಹಿಸುವ ಬೇರೆ ಬೇರೆ ಶಿಸ್ತುಗಳಲ್ಲಿ, ಬೇರೆ ಬೇರೆ ವಿಭಾಗಗಳಲ್ಲಿ, ಸ್ತರಗಳಲ್ಲಿ ವಿದ್ಯಾರ್ಥಿಗಳು ಮೆಸಾಚುಸೆಟ್ಸ್ ವಿಶ್ವ ವಿದ್ಯಾಲಯದಲ್ಲಿ ಕಠಿಣ ಪರಿಕಲ್ಪನೆಗಳನ್ನು ಕಲಿಯುವಾಗ, ಆನಂದವನ್ನು ಅನುಭವಿಸುತ್ತಾರೆ. ಹಾರ್ವರ್ಡ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್‌ನಲ್ಲಿ ನಾನು ಅದ್ಭುತವಾದ ಸಂಶೋಧನೆ ಮಾಡಿದೆ. ನಾನು ನನ್ನ ಜೀವನದ ಭೂಪಟದಲ್ಲಿ, ನನ್ನ ದಾರಿಯಲ್ಲಿ ಎಲ್ಲಿದ್ದೆ ಎನ್ನುವುದನ್ನು ಸ್ವಾಮೀಜಿ ಯಾವಾಗಲೂ ಅರಿತಿದ್ದರು.

ಪಿಎಚ್.ಡಿ ಮಾಡುತ್ತಿದ್ದಾಗ ಯುವವಿದ್ಯಾರ್ಥಿಯಾಗಿ ನಾನು ಒಮ್ಮೆ ಸ್ವಾಮೀಜಿಯವರನ್ನು ಕೇಳಿದ್ದೆ: "ವಿಜ್ಞಾನ ಮತ್ತು ಧರ್ಮ ಎರಡನ್ನೂ ನಾನು ಒಟ್ಟಿಗೇ ಹೇಗೆ ಬೆಂಬತ್ತಿಹೋಗಲಿ?" ಅವರು ಹೇಳಿದರು: "ಎರಡೂ ಕೂಡ ಸತ್ಯಕ್ಕಾಗಿ ಶೋಧನೆಯೇ, ಘರ್ಷಣೆ ಎಲ್ಲಿದೆ?" ಇಂದು, ನನ್ನಲ್ಲಿ ಯಾವ ಘರ್ಷಣೆಯೂ

ಇಲ್ಲ; ನಾನು ಗಟ್ಟಿಯಾಗಿ ಹೇಳುತ್ತೇನೆ: 'ನಾನು ಧಾರ್ಮಿಕವಾಗಿ ವಿಜ್ಞಾನವನ್ನು ಸಾಧಿಸುತ್ತೇನೆ ಮತ್ತು ಧರ್ಮವನ್ನು ವೈಜ್ಞಾನಿಕವಾಗಿ ಸಾಧಿಸುತ್ತೇನೆ.'

ಇಂದು, ನನ್ನ ಜೀವನದ ಬಾಗಿಲುಗಳನ್ನು ತೆಗೆದು ನನ್ನನ್ನು ನಿರ್ಭಯ ವಾಗಿರುವಂತೆ, ಸಾಹಸಿಯಾಗುವಂತೆ, ಎಲ್ಲಕ್ಕಿಂತಲೂ ಹೆಚ್ಚಾಗಿ ನನ್ನ ಜೀವನದ ಎಲ್ಲ ಕ್ಷಣಗಳಲ್ಲಿಯೂ, ನೀತಿನಿಯಮದಲ್ಲಿ ಹಾಗೂ ನೈತಿಕವಾಗಿ ಸರಿದಾರಿಯಲ್ಲಿರುವಂತೆ ಮಾಡಿದ ಸ್ವಾಮಿ ರಂಗನಾಥಾನಂದರಿಗೆ ನಾನು ಎಲ್ಲಕ್ಕೂ ಋಣಿಯಾಗಿದ್ದೇನೆ. ಇಂದಿಗೂ ನನ್ನ ಜೀವನವನ್ನು ಮುನ್ನಡೆಸುವ ಇಂಧನ ಅದೇ ಆಗಿದೆ. ನಾನು ಎಂದೂ ಸ್ವಾಮೀಜಿಗೆ ವಂದನೆಗಳನ್ನು ಹೇಳಲಾರೆ ಮತ್ತು ಅವರೊಡನೆ ಉಂಟಾದ ನನ್ನ ಅನುಭವಗಳನ್ನು ಬರೆಯಲಾರೆ. ಏಕೆಂದರೆ ನನಗೆ ಹೇಳಲು ಬಹಳಷ್ಟು ಇದೆ. ಆದರೂ ಉರುಳುತ್ತಿರುವ ನನ್ನ ಕಣ್ಣೀರು ಕೇವಲ ನನ್ನ ಈ ಚಿಕ್ಕ ಜೀವನದಲ್ಲಿ, ಅವರು ಹುದುಗಿಸಿಟ್ಟ ನನ್ನ ಆನಂದದ ಪ್ರಜ್ಞೆಯನ್ನು ಮಾತ್ರ ಅಭಿವ್ಯಕ್ತಿಸುತ್ತದೆ.

* * * *

# ೮೮. ಅವರು ನನಗೆ ಮಾರ್ಗದರ್ಶನ ಮಾಡುತ್ತಲೇ ಇರುತ್ತಾರೆ

–ಎಸ್. ಉಮಾದೇವಿ*

೧೯೫೦ರಲ್ಲಿ ದೆಹಲಿಯ ರಾಮಕೃಷ್ಣ ಮಿಷನ್ ಕೇವಲ ಚಿಕ್ಕದಾದ ಎರಡು ಅಂತಸ್ತಿನ ಕಟ್ಟಡವಾಗಿತ್ತು. ದೇವಾಲಯವು ಮಹಡಿಯ ಮೇಲಿತ್ತು ಮತ್ತು ಕಚೇರಿಯ ಕೋಣೆ ಮತ್ತು ಇತರ ಎರಡು ಕೋಣೆಗಳು ಅಲ್ಲಿ ಸ್ವಾಮಿಗಳಿಗಾಗಿ ಇದ್ದುವು. ಭೋಜನಶಾಲೆ ಮತ್ತು ಅಡುಗೆಕೋಣೆಯ ಸಂಕೀರ್ಣವೂ ಅಲ್ಲಿತ್ತು. ಸ್ವಾಮಿ ರಂಗನಾಥಾನಂದರು ಕರಾಚಿಗೆ ಬಂದಾಗ ಕಟ್ಟಡ ಎನ್ನುವ ಹೆಸರಿನಲ್ಲಿ ಅಲ್ಲಿದ್ದುದು ಇಷ್ಟೇ. ೧೯೫೦ನೇ ಇಸವಿಯಲ್ಲಿ ನಾನು ಆಗಿನ್ನೂ ಶಾಲೆಗೆ ಹೋಗುವುದನ್ನು ಆರಂಭಿಸಿದ್ದೆ. ಆದರೂ ಆ ದಿನಗಳ ದೆಹಲಿಯ ಆಶ್ರಮ ಇನ್ನೂ ನನ್ನ ನೆನಪಿನಲ್ಲಿದೆ. ದೇವಸ್ಥಾನವನ್ನು ಮತ್ತು ಧ್ಯಾನಮಂದಿರವನ್ನು ನಿರ್ಮಾಣಮಾಡುವ ಸಲುವಾಗಿ ಸ್ವಾಮೀಜಿಯವರು ಕೆಲಸ ಮಾಡತೊಡಗಿದರು. ಸ್ವಾಮೀಜಿ ಎಲ್ಲಿ ಹೋದರೂ ಲಕ್ಷ್ಮೀ ಮತ್ತು ಸರಸ್ವತೀದೇವಿಯರು ಅವರ ಜೊತೆಯಲ್ಲಿ ಯಾವಾಗಲೂ ಇರುತ್ತಿದ್ದರೆಂದು ನಮಗೆ ತಿಳಿದಿತ್ತು. ಆದ್ದರಿಂದ ಅವರು ಸಂಕಲ್ಪ ಮಾಡಿದಕೂಡಲೇ ಅವರ ಇಷ್ಟಾರ್ಥವು ಫಲಪ್ರದವಾಗುತ್ತಿತ್ತು. ಹಣವು ಸುರಿದುಬಂತು ಮತ್ತು ಶೀಘ್ರವೇ ಸುಂದರವಾದ ದೇವಾಲಯ ಹಾಗೂ ಧ್ಯಾನಮಂದಿರಗಳು ನಿರ್ಮಾಣವಾಗುತ್ತಿರುವುದನ್ನು ನಾವು ಕಂಡೆವು. ಕ್ರಮೇಣ, ಸಮಯ ಕಳೆದಂತೆ ಸಭಾಂಗಣ, ಗ್ರಂಥಾಲಯಗಳು ರೂಪುಗೊಂಡವು. ಇಡಿಯ ಪ್ರದೇಶವು ಬೇರೆಯೇ ನೋಟ ಪಡೆಯಿತು. ಒಂದು ಬಾರಿ ಕಟ್ಟಡ ನಿರ್ಮಾಣಕ್ಕೆ ಹಣ ಸಂಗ್ರಹಿಸಲು ಜಾತ್ರಾದ–ನಾಟಕ–ವ್ಯವಸ್ಥೆಯನ್ನು ಮಾಡಲಾಗಿತ್ತು.

ಹಾಗಾಗಿ, ನಾನು ಐದು ವರ್ಷದವಳಾಗಿದ್ದಾಗಿನಿಂದಲೂ, ಸ್ವಾಮೀಜಿಯು ಆಶ್ರಮಕ್ಕೆ ಹೇಗೆ ಜೀವ ತುಂಬಿದರೆಂಬುದನ್ನು ನಾನು ನೆನಪಿಟ್ಟುಕೊಂಡಿದ್ದೇನೆ. ಯುವಕರಿಗೆ, ವೃದ್ಧರಿಗೆ, ಪುರುಷರಿಗೆ, ಸ್ತ್ರೀಯರಿಗೆ, ಬಡವರಿಗೆ ಎಲ್ಲರಿಗೂ ಅವರಲ್ಲಿ ಸಮಯವಿತ್ತು. ಅದೂ, ಆಶ್ರಮದ ಮುಖ್ಯಸ್ಥರಾಗಿದ್ದು ಇಂತಹ ಭಾರೀ ಕರ್ತವ್ಯಗಳ ಮತ್ತು ಹೊಣೆಗಳ ನಡುವೆ ಕೂಡ ಪಂಡಿತ ನೆಹರೂ ನಂತರ ಶ್ರೀಮತಿ ಇಂದಿರಾ ಗಾಂಧಿಯವರಂತಹ ಗಣ್ಯಾತಿಗಣ್ಯರು ಕೂಡಾ ಸ್ವಾಮೀಜಿಯವರ ಭೇಟಿಗೆ ಬರುತ್ತಿದ್ದುದನ್ನು ನಾನು ನೋಡಿದ್ದೇನೆ. ನನ್ನ ಕಾಲೇಜಿನ ದಿನಗಳಲ್ಲಿ ಒಂದು ಬಾರಿ ಪಂಡಿತ ನೆಹರೂ ಅವರು ಹೊಸ ಸಭಾಂಗಣವನ್ನು ಉದ್ಘಾಟಿಸಲು ಬಂದಿದ್ದರು. ಅವರು ಅದ್ಭುತವಾದ ಭಾಷಣ ಮಾಡಿದ್ದರು. ಆಗಿನ ದಿನಗಳಲ್ಲಿ ಭಾಷಣವನ್ನು 'Spooltape' (ಸುರಳಿ ಟೇಪಿನ) ಮೇಲೆ ಧ್ವನಿ ಮುದ್ರಿಸಲಾಗಿತ್ತು. ನಂತರ, ಅದನ್ನು ಕೇಳಿ ಸಾಧಾರಣ ಲಿಪಿಯಲ್ಲಿ ಬರೆಯುವಂತೆ, ಸ್ವಾಮೀಜಿಯವರು ನನಗೆ ತಿಳಿಸಿದರು. ಸ್ವಾಮೀಜಿಯವರು ನನಗೆ ವಹಿಸಿದ ಜವಾಬ್ದಾರಿಯನ್ನು ಕಂಡು ನನಗೆ ಅತೀವ ಹರ್ಷವಾಯಿತು ಮತ್ತು ಅತ್ಯಂತ ಹೆಚ್ಚಿನ ಸವಲತ್ತು ಸೌಭಾಗ್ಯಗಳನ್ನು ಪಡೆದವಳೆಂದು ಭಾವಿಸಿದೆ. ಸ್ವಾಮೀಜಿಯವರು ನಮ್ಮಲ್ಲಿ ಪ್ರತಿಯೊಬ್ಬರನ್ನು ಅವರ ಹೆಸರುಗಳ ಸಮೇತ ತಿಳಿದಿದ್ದರು. ಸ್ವಾಮೀಜಿಯವರು ಮಲೆಯಾಳಂ ಮಾತನಾಡುತ್ತಿದ್ದುದರಿಂದ (ಅದು ನಮ್ಮ ಮಾತೃಭಾಷೆಯಾಗಿತ್ತು) ಮತ್ತು ಅವರು ನಮ್ಮ ತಾಯಿಯ ಊರಾದ ತ್ರಿಶೂರ್‌ಗೆ ಸೇರಿದವರಾದುದರಿಂದ ನಮ್ಮ ತಂದೆ, ತಾಯಿ ಮತ್ತು ನಾವು ಸ್ವಾಮೀಜಿಗೆ ಅತ್ಯಂತ ಸಮೀಪದವರಂತೆ ಭಾವಿಸುತ್ತಿದ್ದೆವು.

---

* ಮಾಜಿ ಪ್ರೊಫೆಸರ್ ಮತ್ತು ಮುಖ್ಯಸ್ಥೆ, ಡಿಪಾರ್ಟ್‌ಮೆಂಟ್ ಆಫ್ ಎಕನಾಮಿಕ್ಸ್, ಯೂನಿವರ್ಸಿಟಿ ಆಫ್ ಕೇರಳ.

ಮಕ್ಕಳಿಗೆ ಭಾನುವಾರದ ಶಾಲೆಯನ್ನು ನಡೆಸುವಂತೆ, ಕೆಲವು ಮಹಿಳೆಯರಿಗೆ ಸ್ವಾಮೀಜಿಯವರು ಸಲಹೆ ನೀಡಿದಾಗ, ನಾನು ಹನ್ನೆರಡು ವರ್ಷಗಳನ್ನು ಪೂರೈಸಿದ್ದೆ. ಹಾಗಾಗಿ ನಾನು ಆ ತರಗತಿಗಳಲ್ಲಿ ಹಾಜರಾಗಲು ಅರ್ಹಳಾಗಿರಲಿಲ್ಲ. ಏಕೆಂದರೆ ಆ ತರಗತಿಗಳು ಹನ್ನೆರಡು ವರ್ಷಗಳಿಗಿಂತಲೂ ಕಡಮೆ ವಯಸ್ಸಿನ ಮಕ್ಕಳಿಗಾಗಿ ನಡೆಸಲ್ಪಡುತ್ತಿದ್ದವು. ಆದರೂ, ಪ್ರತಿವರ್ಷವೂ ವಾರ್ಷಿಕ ಕಾರ್ಯಕ್ರಮಗಳನ್ನು ಆಯೋಜಿಸಿದಾಗ, ಯಾವುದಾದರೂ ಒಂದು ಪೌರಾಣಿಕ ಕಥೆಯನ್ನು ಆಧರಿಸಿದ 'ಬ್ಯಾಲೆ'ಯನ್ನು (ನೃತ್ಯರೂಪಕ) ಆಯೋಜನೆ ಮಾಡುವ ಕರ್ತವ್ಯವನ್ನು ನನಗೆ ವಹಿಸಿಕೊಡಲಾಗಿತ್ತು. ಒಂದು ಬಾರಿ 'ಪಾರ್ವತೀ ಪರಿಣಯ', ಮತ್ತೊಮ್ಮೆ 'ಭಜಗೋವಿಂದಂ' ಮತ್ತು ಇನ್ನೂ ಒಂದು ಬಾರಿ ಸ್ವಾಮಿ ವಿವೇಕಾನಂದರಿಗೆ ಪ್ರಿಯವಾಗಿದ್ದ 'ಗೋಪಾಲ'ನ ಕಥೆ– ಇವುಗಳನ್ನು ನಾನು ಆಯೋಜಿಸಿದ್ದೆ. ಆಶ್ರಮದಲ್ಲಿದ್ದ ಭಾನುವಾರದ ಪ್ರವಚನದ ಜೊತೆಗೆ, ಆಗ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದ ಟಿ.ಆರ್. ಶೇಷಾದ್ರಿಯವರು ವಾಸವಾಗಿದ್ದು, ದೆಹಲಿ ವಿಶ್ವ ವಿದ್ಯಾಲಯದ ಆವರಣದಲ್ಲಿದ್ದ ಅವರ ಬಂಗಲೆಯಲ್ಲಿ ಸ್ವಾಮೀಜಿಯವರು ಸತ್ಸಂಗವನ್ನು ನಡೆಸುತ್ತಿದ್ದರು. ಕಾಲೇಜಿನ ಅನೇಕ ಪ್ರೊಫೆಸರ್‌ಗಳು ಮತ್ತು ಪ್ರಿನ್ಸಿಪಾಲರು, ರಾಮಕೃಷ್ಣ ಮಿಷನ್ನಿನ ಭಕ್ತರಾಗಿದ್ದರು ಹಾಗೂ ಸ್ವಾಮೀಜಿಯವರ ಬಗೆಗೆ ಅತ್ಯಂತ ಹೆಚ್ಚಿನ ಗೌರವ ಹೊಂದಿದ್ದರು. ಈ ರೀತಿಯಲ್ಲಿ ಸ್ವಾಮೀಜಿಯವರು ಅವರಿಗೆ ಮುಂದಾಳತ್ವವನ್ನು ಒದಗಿಸಿದರು. ದೆಹಲಿಯ ಇಂದ್ರಪ್ರಸ್ಥ ಕಾಲೇಜಿನಲ್ಲಿ ನಾನು ವಿದ್ಯಾರ್ಥಿನಿಯಾಗಿದ್ದಾಗ, ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗಾಗಿ ಅನೇಕ ಬಾರಿ ಸ್ವಾಮೀಜಿಯವರನ್ನು ಉಪನ್ಯಾಸಕ್ಕಾಗಿ ಆಹ್ವಾನಿಸಲಾಗುತ್ತಿತ್ತು. ಆಶ್ರಮದಿಂದ ಕಾಲೇಜಿನವರೆಗೂ ಟ್ಯಾಕ್ಸಿಯಲ್ಲಿ ಅವರ ಜೊತೆಯಲ್ಲಿ ಬರುವ ಸೌಭಾಗ್ಯ ನನ್ನದಾಗಿತ್ತು. ಹೀಗೆ ಅವರೊಡನೆ ಆಶ್ರಮದಿಂದ ಬರುತ್ತಿದ್ದುದು ಮತ್ತು ಮತ್ತೆ ಆಶ್ರಮಕ್ಕೆ ಅವರೊಡನೆ ಹೋಗುತ್ತಿದ್ದುದು ನನ್ನ ಜೀವನದಲ್ಲಿನ ಅವಿಸ್ಮರಣೀಯ ಘಟನೆಯಾಗಿದೆ. ಪ್ರತಿದಿನವೂ, ಕಡೆಯ ಪಕ್ಷ, *ಭಗವತ್‌ಗೀತೆಯ* ಎರಡು ಶ್ಲೋಕಗಳನ್ನಾದರೂ ಕಂಠಪಾಠ ಮಾಡುವಂತೆ ಅವರು ನನಗೆ ಹೇಳಿದರು. ನಾನು ತ್ರಿವೇಂಡ್ರಮ್‌ನ ಶಾರದಾ ಮಿಷನ್‌ನಲ್ಲಿ ಎರಡು ವರ್ಷಗಳವರೆಗೆ ಉಳಿದುಕೊಂಡಿದ್ದಾಗ ಈ ಅಭಿಲಾಷೆಯು ಪೂರ್ಣಗೊಂಡಿತು. ಸ್ವಾಮೀಜಿಯವರು ಉಪನ್ಯಾಸ ಆರಂಭಿಸುವ ಮುನ್ನ ಒಂದು ಭಜನೆಯನ್ನು ಹಾಡುವಂತೆ ನಮಗೆ ಹೇಳುತ್ತಿದ್ದರು. ಆ ಪ್ರಶಾಂತವಾದ ಗಳಿಗೆಗಳು ಕೂಡ ನನ್ನ ಹೃದಯದಲ್ಲಿ ಜತನದಿಂದ ಪೋಷಿಸಲ್ಪಟ್ಟಿದೆ.

ನಾನು ದೆಹಲಿಯ ಕಾಲೇಜೊಂದರಲ್ಲಿ ಬೋಧಿಸಲು ಆರಂಭಿಸಿದ ನಂತರ ಒಮ್ಮೆ ನನ್ನ ಸೋದರ ಮತ್ತು ನನ್ನ ಅತ್ಯಂತ ಕಿರಿಯ ತಂಗಿ ಇಬ್ಬರೂ ಸ್ವಾಮೀಜಿಯವರ ದರ್ಶನ ಮಾಡಲು ಹೋದರು. ಮರುದಿನ ಪ್ರಾತಃಕಾಲ ಸ್ವಾಮೀಜಿಯವರು, ಕಂಖಾಲ್ ಆಶ್ರಮಕ್ಕೆ ಹೊರಡುವವರಿದ್ದರು. ತಮ್ಮ ಜೊತೆ ಬರುವಂತೆ ಸ್ವಾಮೀಜಿ ನಮಗೂ ಹೇಳಿದರು. ನಮ್ಮ ಕಾಲುಗಳು ನೆಲದ ಮೇಲಿರಲಿಲ್ಲ ಆಗ. ಕಂಖಾಲ್ ಅನ್ನು ತಲುಪಿದ ನಂತರ ನಮ್ಮ ಕಾರ್ಯಕ್ರಮವನ್ನು ರೂಪಿಸಿಕೊಳ್ಳುವುದರಲ್ಲಿ ಸ್ವಾಮೀಜಿ ನನಗೆ ನೆರವಾದರು. ಡೆಹ್ರಾಡೂನ್ ಮತ್ತು ಮಸ್ಸೌರಿಗೆ ಹೋಗುವಂತೆಯೂ, ಈ ಮಧ್ಯೆ, ಕಿಷನ್‌ಪುರ್ ಆಶ್ರಮದಲ್ಲಿ ಉಳಿದುಕೊಳ್ಳುವಂತೆಯೂ ನಮಗೆ ಅವರು ತಿಳಿಸಿದರು. ನಮ್ಮ ಬಗೆಗೆ ಎಷ್ಟೊಂದು ಪ್ರೀತಿಯ ಮಳೆ ಸುರಿಸಿದ್ದರು ಅವರು!

ನಾನು ಅರ್ಥಶಾಸ್ತ್ರದಲ್ಲಿ ಸಂಶೋಧನೆ ಮಾಡಲು ಆರಂಭಿಸಿದೆ ಮತ್ತು ವೃತ್ತಿಗೆ ಸಂಬಂಧಿಸಿದ ಸಮ್ಮೇಳನದಲ್ಲಿ ಮಂಡಿಸಲು ಆಡಮ್ ಸ್ಮಿತ್‌ನ ಬಗೆಗೆ ಪ್ರಬಂಧವನ್ನು ರಚಿಸಿದ್ದೆ. ಆ ಲೇಖನವನ್ನು ಸ್ವಾಮೀಜಿಯವರಿಗೆ ತೋರಿಸಿದಾಗ, ಅವರು ಅದನ್ನು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಿದರು ಹಾಗೂ ಪರಿಷ್ಕರಿಸಿದರು. ಪ್ರಕಟಣೆಯ ಬಗೆಗೆ ನನಗೆ ಸಲಹೆಗಳನ್ನು ನೀಡಿದ್ದಲ್ಲದೆ, ಅವರು ಪ್ರೂಫ್‌ಗಳನ್ನು ಪರಿಷ್ಕರಿಸುವುದನ್ನೂ ತಿಳಿಸಿದರು ಮತ್ತು ಸಂಶೋಧನೆ ಹಾಗೂ ಪುಸ್ತಕ ಪ್ರಕಟಣೆಗಳ ಬಗೆಗೆ ನನ್ನನ್ನು ತಯಾರು ಮಾಡಿದರು. ಅನಂತರ, ನಾನು ವಿದ್ವಾಂಸರ ಮಟ್ಟದಲ್ಲಿ ಅವುಗಳಲ್ಲಿ ತೊಡಗಿಕೊಳ್ಳಲು ಇದು ನೆರವಾಯಿತು.

ನಂತರ, ೧೯೭೮ರಲ್ಲಿ, ಕೇರಳ ವಿಶ್ವವಿದ್ಯಾಲಯದಲ್ಲಿ, ಅರ್ಥಶಾಸ್ತ್ರದ ರೀಡರ್ ಹುದ್ದೆಯನ್ನು ಪಡೆದಾಗ, ನಾನು ತ್ರಿವೇಂಡ್ರಮ್‌ಗೆ ಹೊರಡಬೇಕಾಯಿತು. ಆಗ ಶಾರದಾ ಮಠದ ಮುಖ್ಯಸ್ಥರಾಗಿದ್ದ ಪೂಜ್ಯ ಅಜಯಪ್ರಾಣಾ ಮಾತಾಜಿಯವರು, ದಯೆಯಿಟ್ಟು, ನಾನು ಆಶ್ರಮದ ಹಾಸ್ಟೆಲ್‌ನಲ್ಲಿ ಇರಲು ಅನುಮತಿಸಿದರು. ಸ್ವಾಮೀಜಿಯವರ ಆಶೀರ್ವಾದವನ್ನು ಬೇಡಿ ನಾನು ಅವರಿಗೆ ಒಂದು ಪತ್ರ ಬರೆದೆ ಮತ್ತು ಕೂಡಲೇ, ತಮ್ಮ ಸ್ವಹಸ್ತದಿಂದಲೇ ಬರೆದಿದ್ದ ಅಂಚೆಕಾರ್ಡಿನಲ್ಲಿ ಅವರ ಉತ್ತರ ತಲುಪಿತು. ತ್ರಿವೇಂಡ್ರಮ್‌ನ ಶಾರದಾ ಮಿಷನ್‌ನಲ್ಲಿ ಅತ್ಯುತ್ತಮರೂ, ಗಣ್ಯರೂ, ವಿದ್ವಾಂಸರೂ ಆಗಿರುವವರನ್ನು ಭೇಟಿಮಾಡುವ ಅವಕಾಶ ನಿನಗೆ ಇರುತ್ತದೆಂದು ಸ್ವಾಮೀಜಿಯವರು ಬರೆದಿದ್ದರು. ಇದಕ್ಕಿಂತಲೂ ಹೆಚ್ಚು ಸತ್ಯವಾದದ್ದು ಬೇರೆ ಇಲ್ಲ; ಈ ಮಾತುಗಳಿಗಾಗಿ ನಾನು ಯಾವಾಗಲೂ ಸ್ವಾಮೀಜಿಯವರಿಗೆ ಕೃತಜ್ಞಳಾಗಿದ್ದೇನೆ.

ಅಂತಿಮವಾಗಿ ೨೦೦೨ನೇ ವರ್ಷದ ಹಿಮಾಲಯದಲ್ಲಿನ ನಮ್ಮ 'ಚಾರ್ ಧಾಮ್' ತೀರ್ಥಯಾತ್ರೆಯ ನಂತರ ನಾನು ಮತ್ತು ನನ್ನ ಸಹೋದರಿ, ಸ್ವಾಮೀಜಿಯವರಿಂದ 'ಮಂತ್ರದೀಕ್ಷೆ' ಪಡೆದ ಅವಿಸ್ಮರಣೀಯ ಘಟನೆಯ ಬಗೆಗೆ ಎರಡು ಮಾತು. ಆಗ ಸ್ವಾಮೀಜಿಯವರು ಪಾರ್ಶ್ವವಾಯುವಿಗೆ ತುತ್ತಾಗಿದ್ದರು, ಮಾತು ಸ್ವಲ್ಪ ತೊದಲುತ್ತಿತ್ತು, ಆದರೆ ಒಳಗಿನ ಚೈತನ್ಯ ಅದೇ ಆಗಿತ್ತು. ಅವರು ಕುಳಿತುಕೊಂಡು, ತಮ್ಮ ಆಶೀರ್ವಚನವನ್ನು ನೀಡಿದ ಕೂಡಲೇ ನಾನು ಮತ್ತು ನನ್ನ ಸೋದರಿ ಕಣ್ಣು ತುಂಬ ನೀರು ತುಂಬಿಕೊಂಡು ಕುಳಿತೆವು. ನಾವು 'ದೀಕ್ಷೆ'ಗೆ ಸಿದ್ಧರಾಗುವ ತನಕವೂ ಅವರು ಕಾದು ಕುಳಿತರು. ಅವರಾಗಲೇ ತಮ್ಮ ತೊಂಬತ್ತು ವರ್ಷಗಳಿಗಿಂತಲೂ ಹೆಚ್ಚು ವಯಸ್ಸಾಗಿದ್ದವರು, ನಾನು ಐವತ್ತು ವರ್ಷಗಳನ್ನು ದಾಟಿದ್ದೆ.

ಅವರು ತಮ್ಮ ದೇಹವನ್ನು ವಿಸರ್ಜಿಸಿದ್ದಾರೆ. ಆದರೆ ನನಗೆ ಮಾರ್ಗದರ್ಶನ ನೀಡುತ್ತಿದ್ದಾರೆ ಮತ್ತು ಅವರು ಹೀಗೆ ಮಾರ್ಗದರ್ಶನ ಮಾಡುವುದನ್ನು ಮುಂದುವರಿಸುತ್ತಾರೆ ಎಂಬುದೂ ನನಗೆ ತಿಳಿದಿದೆ.

* * * *

# ೮೯. ಮಹಾನ್ ಆತ್ಮ ಮತ್ತು ಗುರುವಿನ ಸ್ಮರಣೆಯಲ್ಲಿ

–ಜಯಾ ಎಡಿತ್ ಕೌಲ್‌ಸನ್*

ನನ್ನ ಆಧ್ಯಾತ್ಮಿಕ ಪ್ರಯಾಣದಲ್ಲಿ ಸ್ವಾಮಿ ರಂಗನಾಥಾನಂದರು ಉಂಟುಮಾಡಿರುವ ಮತ್ತು ಈಗಲೂ ಉಂಟುಮಾಡುತ್ತಿರುವ ಯಶಸ್ಸಿನ ಹಾಗೂ ಅವರ ಆಶೀರ್ವಾದದ ಬಗೆಗೆ ನಾನು ನನ್ನ ಹೃದಯದಲ್ಲಿ ಗಾಢವಾದ ಹರ್ಷದಿಂದ ಆಲೋಚಿಸುತ್ತೇನೆ. ನನ್ನ ಮೇಲೆ ಅವರ ಬೋಧನೆಗಳು ಅವರ ಜೀವನ ಮತ್ತು ಬರೆಹಗಳು ಉಂಟುಮಾಡಿದ ಅದ್ಭುತವಾದ ಮತ್ತು ಮಹತ್ವಪೂರ್ಣ ಪ್ರಭಾವದ ಬಗೆಗೆ ಬರೆಯಲು ಸಾಕಷ್ಟು ಪದಗಳೇ ಇಲ್ಲ. ಮುವತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ನಾನು ಅವರ ಭಕ್ತಳಾಗಿದ್ದೇನೆ. ವಾಷಿಂಗ್‌ಟನ್ ಡಿ.ಸಿ.ಯ ಹೊರಗಡೆ ಇರುವ ವರ್ಜಿನಿಯಾದ ಫಾಲ್ಸ್ ಚರ್ಚಿನಲ್ಲಿ, ೧೯೬೮ರ ಡಿಸೆಂಬರ್ ೬ರಂದು, ಅವರ ಪ್ರವಚನಗಳಲ್ಲಿ ಒಂದರಲ್ಲಿ ಉಪಸ್ಥಿತಳಿದ್ದಾಗ ನಾನು ನನ್ನ ಪ್ರೀತಿಯ ಗುರುಗಳ ಮಾತುಗಳನ್ನು ಕೇಳಿದೆ. ಸ್ವಾಮೀಜಿಯು ಮನಸ್ಸನ್ನು ಸೆರೆ ಹಿಡಿಯುವಂತಹ ಭಾಷಣಕಾರರಾಗಿದ್ದು, ಅಲ್ಲಿ ಉಪಸ್ಥಿತರಿದ್ದ ಎಲ್ಲರ ಆತ್ಮಗಳನ್ನು ಮುಟ್ಟುತ್ತಿರುವಂತೆ ತೋರುತ್ತಿತ್ತು. ಅಚ್ಚರಿಗೊಳಿಸುವಂತಹ ಈ ದೇವರ ಸೇವಕರ, ವಿಶ್ವವ್ಯಾಪಿ ಆಧ್ಯಾತ್ಮಿಕ ಸತ್ಯಗಳನ್ನು ಬೋಧಿಸುವ ಮೂಲಕ ಜಾಗತಿಕ ಸಮಸ್ಯೆಗಳ ಬಗೆಗೆ ತಿಳಿಸಿ ಹೇಳುತ್ತಿದ್ದರು, ಅವರ ಮಹಾಸಮಾಧಿಯ ದೀರ್ಘ ಕಾಲದ ನಂತರವೂ ಅವರು ನಮ್ಮ ಈ ಜಗತ್ತಿನ ಸಾಧಕರನ್ನು ಪ್ರಭಾವಿಸುತ್ತಿರುತ್ತಾರೆ.

ಸ್ವಾಮೀಜಿಯವರನ್ನು ಭೇಟಿ ಮಾಡಿದ ಆರು ತಿಂಗಳುಗಳ ಒಳಗೆ, ವಜರ್ಜಿನಿಯಾದ ಫೇರ್‌ಫಾಕ್ಸ್‌ನ ನಮ್ಮ ಮನೆಯ ಲಾನ್ ಮೇಲೆ ಒಟ್ಟುಗೂಡಿದ್ದ ಮಹಿಳೆಯರಿಗೆ, ಸ್ವಾಮೀಜಿಯವರು 'ಯೋಗ ಮತ್ತು ದಿನನಿತ್ಯದ ಜೀವನ' ಎಂಬ ಪ್ರವಚನವನ್ನು ಪ್ರಸ್ತುತಪಡಿಸಿದರು (೧೯೬೯ರ ಜೂನ್ ೩). ಮುಂದಿನ ತಿಂಗಳು 'ರಾಮಕೃಷ್ಣ ಪಂಥದ ಆದರ್ಶಗಳು' ಎಂಬ ವಿಷಯದ ಮೇಲೆ ನನ್ನ ಗುರುಗಳ ಪ್ರವಚನವನ್ನು ಕೇಳಲು–ನಾನು ಷಿಕಾಗೋಗೆ ವಿಮಾನಯಾನ ಮಾಡಿದೆ. ಷಿಕಾಗೋದ ವಿವೇಕಾನಂದ ವೇದಾಂತ ಸೊಸೈಟಿಗೆ, ಮಠ ಮತ್ತು ವಿಶ್ರಾಂತಿ ಕೇಂದ್ರಗಳಿಗಾಗಿ ಗೊತ್ತಾಗಿದ್ದ ಎಂಟು ಎಕರೆಗಳನ್ನು ಸಮರ್ಪಿಸಬೇಕಾಗಿದ್ದ ಕಾರ್ಯಕ್ರಮದಲ್ಲಿ ಗುರುಗಳು ಉಪನ್ಯಾಸ ನೀಡುವವರಿದ್ದರು (೧೯೬೯ರ ಜುಲೈ ೨೬). ೧೯೭೧ರಲ್ಲಿ ಮತ್ತೊಂದು ಬಾರಿ, ಸ್ವಾಮಿ ರಂಗನಾಥಾನಂದರು, ವಾಷಿಂಗ್‌ಟನ್, ಡಿ.ಸಿ.ಗೆ ಭೇಟಿ ನೀಡಿದರು ಮತ್ತು ನಮ್ಮ ಮನೆಯಲ್ಲಿ ಸೇರಿದ್ದ ಭಕ್ತರನ್ನು ಕುರಿತು ಉಪನ್ಯಾಸ ನೀಡಿದರು. ಅವರ ಮೊದಲ ಪ್ರವಚನವು 'ಯೋಗ ಮತ್ತು ವೇದಾಂತ'ದ ಬಗೆಗಾಗಿತ್ತು ಮತ್ತು ಆಗಸ್ಟ್ ೨೩ರಂದು ೭೦ಕ್ಕೂ ಹೆಚ್ಚು ಅನುಯಾಯಿಗಳಿಗೆ ಪ್ರಸ್ತುತಪಡಿಸಲ್ಪಟ್ಟಿತು. ಆಗಸ್ಟ್ ೨೬ರಂದು ಅವರು 'ಮಾನವನ ದೈವಿಕತೆ' ಎಂಬ ವಿಷಯದ ಬಗೆಗೆ ನಮ್ಮ ಮನೆಯಲ್ಲಿ ಮತ್ತೊಂದು ಉಪನ್ಯಾಸ ನೀಡಿದರು. ಆ ಸಮಯದಲ್ಲಿ ಭಾರತದ ರಾಯಭಾರಿಯಾಗಿದ್ದವರ ಪತ್ನಿ ಶ್ರೀಮತಿ ಮೇಖಲಾ ಝಾ ಭಾಗವಹಿಸಿದ್ದ ಐವತ್ತು ಜನರಲ್ಲಿ ಒಬ್ಬರಾಗಿದ್ದರು. ನಮ್ಮ ಪ್ರೀತಿಯ ಸ್ವಾಮೀಜಿಯವರಿಂದಾಗಿ ಮೇಖಲಾ ಮತ್ತು ನಾನು ಸ್ನೇಹಿತೆಯರಾದೆವು ಮತ್ತು ವರ್ಜಿನಿಯಾದ ಫ್ರಂಟ್ ರಾಯಲ್‌ನಲ್ಲಿರುವ ನಮ್ಮ ಆಶ್ರಮಕ್ಕೆ ಭೇಟಿ ನೀಡಲು ಅವರಿಗೆ ಸಂದರ್ಭವೂ ಒದಗಿ ಬಂದಿತು.

---

* ಟೆಕ್ಸಾಸ್, ಯು.ಎಸ್.ಎ.ಯ ಒಬ್ಬ ವೇದಾಂತದ ವಿದ್ಯಾರ್ಥಿ.

ಆ ಸಮಯದಲ್ಲಿ ನಾನು, ವೇದಾಂತ, ಯೋಗವನ್ನು ಕಲಿಸುವುದು ಮತ್ತು ಆಶ್ರಮದಲ್ಲಿ ವಾರದ ಕೊನೆಯಲ್ಲಿ ಸಂಕಿರಣಗಳನ್ನು ನಡೆಸುವುದು ಇವುಗಳಲ್ಲಿ ಗಾಢವಾಗಿ ತೊಡಗಿಕೊಂಡಿದ್ದೆ. ಈ ಎಲ್ಲ ಸಮಯದಲ್ಲಿಯೂ ನನ್ನ ಆಧ್ಯಾತ್ಮಿಕ ಬೆಳವಣಿಗೆಯನ್ನು ಮತ್ತು ವಿದ್ಯಾರ್ಥಿಗಳ ಆಧ್ಯಾತ್ಮಿಕ, ಮಾನಸಿಕ ಬೆಳವಣಿಗೆಯನ್ನು ಪ್ರೋತ್ಸಾಹಿಸುವಂತಹ ಅಸಂಖ್ಯಾತ ಪುಸ್ತಕಗಳನ್ನು ಸ್ವಾಮೀಜಿಯವರು ನನಗೆ ಪರಿಚಯಿಸುತ್ತಿದ್ದರು. ಸ್ವತಃ ತಾವೇ ಶಿಕ್ಷಕರಾಗಿದ್ದುದರಿಂದ, ನಾವು ಪತ್ರ ವ್ಯವಹಾರವನ್ನು ನಡೆಸಿದ ೩೦ ವರ್ಷಗಳ ಅವಧಿಯಲ್ಲಿ ಈ ಅಭ್ಯಾಸ ಮುಂದುವರಿಯಿತು. ನಾನು ಓದಲೆಂದು ಅವರು ಅನುಗ್ರಹಿಸಿ ಕಳಿಸಿದ್ದ ಕಡೆಯ ಪುಸ್ತಕವು, ಅವರ ಮಹಾಸಮಾಧಿಯ ಒಂದು ದಿನದ ನಂತರ ೨೦೦೫ರ ಏಪ್ರಿಲ್ ೨೬ರಂದು ನನಗೆ ತಲುಪಿತು.

ಸೇವೆ ಜೀವನದ ಮತ್ತು ಅದರ ಉದಾಹರಣೆಯ ಗಮನಾರ್ಹ ಅಭಿವ್ಯಕ್ತಿಯಾಗಿದ್ದರು ಸ್ವಾಮಿ ರಂಗನಾಥಾನಂದರು. ಸಮಸ್ತ ಕ್ರೈಸ್ತ ಪ್ರಪಂಚಕ್ಕೆ ಸೇರಿದ ಮೌಲ್ಯಗಳ ಬಗೆಗೆ ಅವರಿಗಿದ್ದ ಪಾಂಡಿತ್ಯಪೂರ್ಣ ತಿಳಿವಳಿಕೆಯು, ಕೇವಲ ನನ್ನ ಆತ್ಮದ ಮೇಲೆ ಅಲ್ಲದೇ ಸಮಸ್ತ ಪ್ರಪಂಚದ ಮೇಲೆಯೂ ತನ್ನ ಛಾಪನ್ನು ಮೂಡಿಸಿದೆ. ಅಂತರಾಷ್ಟ್ರೀಯ ಖ್ಯಾತಿಯ ಈ ಆಧ್ಯಾತ್ಮಿಕ ಮಾರ್ಗದರ್ಶಕರನ್ನು ಹೆಚ್ಚು ಹೆಚ್ಚು ಇತರರಿಗೂ ಪರಿಚಯಿಸಲು ನನಗೆ ಸಾಧ್ಯವಾಗಬೇಕೆಂಬುದೇ ನನ್ನ ಪ್ರಾರ್ಥನೆ. ನಾವು ಅರಸಬಯಸಿದ ಸತ್ಯವನ್ನು ದೃಷ್ಟಾಂತಗೊಳಿಸಿದ ಅವರು ದೇವರ ಅಸ್ತಿತ್ವದ – ಇರುವಿಕೆಯ – ಪ್ರೀತಿಯ ಅಭಿವ್ಯಕ್ತಿಯಾಗಿ ನೆನಪಿನಲ್ಲಿ ಉಳಿಯಲಿ.

ಲೇಖನವನ್ನು ಮುಕ್ತಾಯಗೊಳಿಸುವ ಮುನ್ನ, ನನ್ನ ಹೃದಯದಲ್ಲಿ ಯಾವಾಗಲೂ ಪ್ರತಿಧ್ವನಿಸುವ ಘಟನೆಯೊಂದನ್ನು ಹಂಚಿಕೊಳ್ಳಬಯಸುತ್ತೇನೆ. ೧೯೭೦ರ ಮಾರ್ಚ್ ೩ನೆಯ ದಿನಾಂಕ, ಸ್ವಾಮೀಜಿಯು ನನಗೆ 'ಜಯಾ' ಎಂಬ ಹೆಸರನ್ನು ಇಟ್ಟರು. ೧೯೭೬ರಲ್ಲಿ ವರ್ಜಿನಿಯಾದಲ್ಲಿ ನಾನು ನನ್ನ ಹೆಸರನ್ನು ಕಾನೂನುಬದ್ಧವಾಗಿ ಜಯಾ ಎಡಿತ್ ಕೌಲ್‌ಸನ್ ಎಂದು ಬದಲಾಯಿಸಿಕೊಂಡೆ ಮತ್ತು ಇದನ್ನು ಸೂಚಿಸಿ, ನ್ಯೂಯಾರ್ಕ್ ಸ್ಟೇಟ್, ಹೊಸ ಜನನ ಪ್ರಮಾಣ ಪತ್ರವನ್ನು ನೀಡಿದಾಗ ಸ್ವಾಮೀಜಿಯವರು ಪ್ರಾಮಾಣಿಕವಾಗಿ ಸಂತೋಷಗೊಂಡರೆಂದು ತಿಳಿಸಲು ನಾನು ಹರ್ಷಿಸುತ್ತೇನೆ. ಅತ್ಯಂತ ಧನ್ಯರಾದ ಗುರುಗಳೇ, 'ವಿಜಯ'ವು ನಿಮ್ಮದು.

* * * *

# ೯೦. ಒಂದು ಮಹಾಸೌಭಾಗ್ಯ

–ರಾಜ್‌ಕುಮಾರ್ ವೀರ್*

ಆಗ, ದೆಹಲಿಯ ರಾಮಕೃಷ್ಣ ಮಿಷನ್‌ನ ಕಾರ್ಯದರ್ಶಿಗಳಾಗಿದ್ದ ಸ್ವಾಮಿ ರಂಗನಾಥಾನಂದರನ್ನು ಮೊದಲ ಬಾರಿ ನಾವು ಭೇಟಿ ಮಾಡಿದ್ದು, ನಮ್ಮ ಸ್ನೇಹಿತರಾದ ರೇಲ್ವೆ ಕಾಲೊನಿಯಲ್ಲಿದ್ದ ಗೌರಿ ಶಂಕರ್ ಅವರ ಮನೆಯಲ್ಲಿ ನಡೆದ ಪ್ರವಚನದಲ್ಲಿ. ರಾಮಕೃಷ್ಣ ಮಿಷನ್‌ನಲ್ಲಿ ಬೇರೆಬೇರೆ ಕಾಲೋನಿಗಳಲ್ಲಿ ಸ್ವಾಮೀಜಿಯವರು ತಮ್ಮ 'ಗೀತಾ' ಪ್ರವಚನದ ಸರಣಿಯನ್ನು ಮುಂದುವರಿಸಿದ್ದರು. ಅವುಗಳಿಗೆ ನಾವೆಲ್ಲರೂ ತಪ್ಪದೆ ಕ್ರಮವಾಗಿ ಹಾಜರಿರುತ್ತಿದ್ದೆವು.

೧೯೬೦ರ ಫೆಬ್ರವರಿಯಲ್ಲಿ ನಾನು ಜ್ಯೂರಿಚ್‌ಗೆ (ಸ್ವಿಟ್‌ಜರ್‌ಲ್ಯಾಂಡ್) ಕಳುಹಿಸಲ್ಪಟ್ಟೆ. ಸ್ವಾಮೀಜಿಯವರು ತಮ್ಮ ಯೂರೋಪಿನ ಪ್ರವಾಸದಲ್ಲಿ ಜ್ಯೂರಿಚ್‌ನಲ್ಲಿ ಕೂಡ ಉಪನ್ಯಾಸ ನೀಡಬೇಕಾಗಿತ್ತು. ಅವರು ಹೋಟೆಲ್‌ಗಳಲ್ಲಿ ಇರುವುದಕ್ಕಿಂತಲೂ, ಭಾರತೀಯ ಕುಟುಂಬಗಳಲ್ಲಿ ಉಳಿದುಕೊಳ್ಳುವುದನ್ನು ಹೆಚ್ಚು ಇಷ್ಟಪಡುತ್ತಿದ್ದುದರಿಂದ, ಅವರಿಗೆ ಅತಿಥಿಸತ್ಕಾರ ಮಾಡುವುದು ನಿಜವಾಗಿಯೂ ಮಹಾ ಸೌಭಾಗ್ಯವಾಗಿದ್ದಿತು. ರಾಮಕೃಷ್ಣ ಮಠ ಮತ್ತು ಮಿಷನ್ ಹಾಗೂ ಅದರ ಧ್ಯೇಯ–ಉದ್ದೇಶಗಳನ್ನು ನಮಗೆ ಆಗ ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. 'ಗಾಸ್ಪೆಲ್' ಮತ್ತು ಮೂರು ಜೀವನ ಚರಿತ್ರೆಗಳನ್ನು, ಜೊತೆಗೆ ನಾವು ಓದಬೇಕಾದ ಪುಸ್ತಕಗಳ ಪಟ್ಟಿಯನ್ನು ಅವರು ನಮಗೆ ನೀಡಿದರು. ಅನಂತರ ಅವರು ಇಂಗ್ಲೆಂಡಿಗೆ ಹೋದರು, ಲಂಡನ್ ಕೇಂದ್ರದಲ್ಲಿ ಕೂಡ ಅವರ ಉಪನ್ಯಾಸದಲ್ಲಿ ಹಾಜರಿರಲು ನನಗೆ ಸಾಧ್ಯವಾಯಿತು.

'ಯೂರೋಪಿನ ಪ್ರವಾಸದ ಪ್ರವಚನಗಳು' ಎಂಬ ತಮ್ಮ ಪುಸ್ತಕದಲ್ಲಿ ಸ್ವಾಮೀಜಿಯವರು ಜ್ಯೂರಿಜ್‌ನ ತಮ್ಮ ಭೇಟಿಯನ್ನು ಮತ್ತು ತಾವು ಭೇಟಿಮಾಡಿದ, ಬರ್ನ್‌ಗೆ ಆಗಿನ ರಾಯಭಾರಿಗಳಾಗಿದ್ದ ಶ್ರೀ ಎಂ.ಕೆ. ವೆಲ್ಲೋಡಿ ಮತ್ತು ಮೇಡಮ್ ಸಾಟನ್, ಮಿಸ್. ಕ್ರಿಸ್ತಾಬ್ಯೂಟ್ಲರ್ ಮುಂತಾದ ರಾಮಕೃಷ್ಣರ ಭಕ್ತರುಗಳು ಮತ್ತಿತರರನ್ನು ಉಲ್ಲೇಖಿಸಿದ್ದಾರೆ. ವಿದೇಶೀ ವಿದ್ಯಾರ್ಥಿಗಳ ಸಂಘವು ಒಂದು ಪ್ರವನಚದ ಸಭೆಯನ್ನು ಏರ್ಪಡಿಸಿತು. ಸ್ವಿಟ್‌ಜರ್ಲ್ಯಾಂಡ್‌ನಲ್ಲಿನ ಅವರ ಮೂರು ದಿನಗಳೂ ಚಟುವಟಿಕೆ, ಕಾರ್ಯಬಾಹುಳ್ಯ ಮತ್ತು ಚಿಂತನೆಗಳಿಂದ ತುಂಬಿಹೋಗಿದ್ದವು.

ನಾವು ಭಾರತಕ್ಕೆ ಹಿಂದಿರುಗಿದ ನಂತರ, ಆಗ ಕೋಲ್ಕತ್ತಾದ ಸಾಂಸ್ಕೃತಿಕ ಸಂಸ್ಥೆಯ ಕಾರ್ಯದರ್ಶಿಗಳಾಗಿದ್ದ ಸ್ವಾಮಿ ರಂಗನಾಥಾನಂದರೊಂದಿಗೆ ಸಂಪರ್ಕ ಹೊಂದಿದೆವು. ನಾವು ಖರಗ್‌ಪುರದಲ್ಲಿ ವಾಸಿಸುತ್ತಿದ್ದೆವಾದರೂ, ಕೋಲ್ಕತ್ತಾಕ್ಕೆ ಹೋದಾಗಲೆಲ್ಲಾ, ಆಧ್ಯಾತ್ಮಿಕ ಮಾರ್ಗದರ್ಶನಕ್ಕಾಗಿ ಸ್ವಾಮೀಜಿಯವರನ್ನು ಭೇಟಿಮಾಡುತ್ತಿದ್ದೆವು. ಶೀಘ್ರವೇ ನಾವು ದಿಕ್ಷೆ ಪಡೆಯಲು ಸಿದ್ಧರಾಗಿದ್ದೆವು, ಸ್ವಾಮೀಜಿಯವರ ಸಲಹೆಯ ಮೇರೆಗೆ ಸ್ವಾಮಿ ನಿರ್ವಾಣಾನಂದರಿಂದ ದೀಕ್ಷೆ ಪಡೆಯುವ ಸೌಭಾಗ್ಯವನ್ನು ಪಡೆದೆವು.

ನಂತರ ಸ್ವಾಮೀಜಿಯವರು ಹೈದರಾಬಾದಿನ ಕೇಂದ್ರವನ್ನು ವಹಿಸಿಕೊಂಡರು ಮತ್ತು ಕ್ರಮೇಣ, ಹಳೆಯ ಸ್ವರೂಪದ ಚಿಕ್ಕ ಮಿಷನ್ ಕೇಂದ್ರವನ್ನು, ದೊಮಲಗುಡದಲ್ಲಿನ ಆಧುನಿಕ ಸಂಕೀರ್ಣವನ್ನಾಗಿ ಪರಿವರ್ತಿಸಿದರು.

---

* ಡೆಲ್ಲಿಯ ಒಬ್ಬ ಭಕ್ತರು.

೧೯೮೫ರಲ್ಲಿ, 'ಚಿತ್ತರಂಜನ್ ಲೊಕೊ ವರ್ಕ್ಸ್'ನ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಕುರಿತು ಉಪನ್ಯಾಸ ನೀಡುವಂತೆ ನಾನು ಸ್ವಾಮೀಜಿಯವರನ್ನು ಒಪ್ಪಿಸಿದೆ. ಆಗ ಲೊಕೊಮೊಟಿವ್ ಒಂದಕ್ಕೆ ಸ್ವಾಮೀಜಿ 'ಶ್ರೀ ಶ್ರೀ ರಾಮಕೃಷ್ಣ' ಎಂಬ ಹೆಸರಿಟ್ಟರು.

ಸ್ವಾಮೀಜಿಯವರು ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದಾಗ, ದೆಹಲಿಯಲ್ಲಿ ಸ್ವಾಮೀಜಿಯೊಡನೆ ಆದ ಭೇಟಿಯೇ ನಮ್ಮ ಕಡೆಯ ಭೇಟಿಯಾಗಿತ್ತು. ಅವರು ಬಹಳ ಸಂವಹನ ಶೀಲರಾಗಿದ್ದು, ಜ್ಯೂರಿಚ್‌ನಲ್ಲಿ ತಾವು ಕಳೆದ ಸಮಯವನ್ನು ಸ್ಮರಿಸಿಕೊಂಡರು ಮತ್ತು ಇದು ನಮ್ಮ ಹೃದಯಗಳನ್ನು ತಟ್ಟಿತು. ಸಂದರ್ಶಕರ ದೀರ್ಘ ಸಾಲು ಇದ್ದರೂ ಅವರು ವೈಯಕ್ತಿಕ ಮಟ್ಟದಲ್ಲಿ ನಮ್ಮೊಡನೆ ಸ್ವಲ್ಪ ಸಮಯವಿರಲು ಕಾಲ ಹೊಂದಿಸಿಕೊಂಡರು. ಇದನ್ನು ನಿಜವಾಗಿಯೂ ಅದ್ಭುತವಾದ ಸ್ಮರಣೆಯೆಂದು ನಾವು ಅಮೂಲ್ಯವಾಗಿ ಕಾಪಾಡಿಕೊಳ್ಳುತ್ತೇವೆ.

* * * *

# ೯೧. ಪ್ರೀತಿಯ ಕ್ಷೇತ್ರ

–ಸುಜಾತಾ ಲೀಮನ್*

೧೯೭೭ನೇ ವರ್ಷದ, 'ಯೋಗ ಅಂಡ್ ವೇದಾಂತ ಫೌಂಡೇಷನ್ ಆಫ್ ನೆದರ್‌ಲ್ಯಾಂಡ್ಸ್'ನ ಜರ್ನಲ್‌ನಲ್ಲಿ ಸ್ವಾಮಿ ರಂಗನಾಥಾನಂದರೊಡನೆ, ಆರು ದಿನಗಳು ಆಶ್ರಯ ಪಡೆದಿರುವಂತಹ ಅವಕಾಶದ ಒಂದು ಪ್ರಕಟಣೆಯನ್ನು ನಾನು ನೋಡಿದೆ. ಕುತೂಹಲದಿಂದ ನಾನು ಅಲ್ಲಿಗೆ ಹೋದೆ, ಇದು ನನ್ನ ಇಡಿಯ ಜೀವನವನ್ನೇ ಪರಿವರ್ತಿಸಿಬಿಡುತ್ತದೆ ಎನ್ನುವುದು ನನಗೆ ತಿಳಿದಿರಲಿಲ್ಲ.

ಈ ಚಿಂತನ ಶಿಬಿರವು ಆರು ದಿನಗಳ ಕಾಲ ನಡೆದದ್ದು ನನಗೆ ಬಹಳ ಉತ್ತಮವಾಯಿತು. ಮೊದಲ ಎರಡು ದಿನಗಳು, ಅಲ್ಲಿನ ಜನಗಳು, ಆ ಸ್ಥಳ, ಕಾರ್ಯಕ್ರಮ, ಅಲ್ಲಿ ಪ್ರತಿಪಾದಿಸಲ್ಪಟ್ಟ ವಿಚಾರಗಳು ಎಲ್ಲದರಿಂದಲೂ ನಾನು ಆಕರ್ಷಿತಳಾದೆ. ನಂತರ ಸ್ವಾಮೀಜಿಯು ನಮಗೆ ಸಂವಹಿಸುತ್ತಿದ್ದ ಅದ್ಭುತ ಸತ್ಯಗಳನ್ನು ನಿಜವಾಗಿಯೂ ಆಲಿಸಲು ಆರಂಭಿಸಿದೆ. ನಾನು ಮಂತ್ರಮುಗ್ಧಳಾಗಿದ್ದೆ! ಹೌದು, ಅದೇ ಸರಿ! ಹೌದು ವಸ್ತುಸ್ಥಿತಿಯು ಹೀಗೆಯೇ ಇರುವುದು! ಸ್ವಾಮೀಜಿಯವರು ಸರಿಯಾಗಿ ಹೇಳುತ್ತಿದ್ದಾರೆ! ನಾನು ಕೇವಲ ಬೌದ್ಧಿಕವಾಗಿ ಮಾತ್ರ ರೋಮಾಂಚಿತಳಾಗಿರಲಿಲ್ಲ, ಅವರು ಹೇಳಿದ ಮಾತುಗಳು ಉಂಟುಮಾಡಿದ ಭಾವನೆ ಕೂಡ ಅತ್ಯಂತ ಮಹತ್ವದ್ದೂ ಮತ್ತು ಗಮನಾರ್ಹವಾದದ್ದೂ ಆಗಿತ್ತು. ನನ್ನ ಹೃದಯದಲ್ಲಿ ತೀವ್ರವಾದ ಬೆಂಕಿ ಉರಿಯುತ್ತಿದೆಯೇನೋ ಎನಿಸುತ್ತಿತ್ತು, ಮತ್ತು ದಿನ ಕಳೆದಂತೆ ಮತ್ತೂ ಹೆಚ್ಚು ತೀವ್ರಗೊಳ್ಳತೊಡಗಿತ್ತು.

ಒಂದು ದಿನ, ತರಗತಿಗಳ ನಡುವಿನ ಬಿಡುವಿನ ಸಮಯದಲ್ಲಿ, ನಾನು ಆಗಿನ್ನೂ ಶಿಬಿರದಲ್ಲಿ ಪಡೆದಿದ್ದ *ದಿ ಗಾಸ್ಪೆಲ್ ಆಫ್ ಶ್ರೀರಾಮಕೃಷ್ಣ* ಪುಸ್ತಕದ ಪ್ರತಿಗೆ ಹಸ್ತಾಕ್ಷರ ಹಾಕಿಕೊಡುವಂತೆ ಸ್ವಾಮೀಜಿಯವರನ್ನು ಪ್ರಾರ್ಥಿಸಿದೆ. ಅವರು ನನ್ನ ಕಡೆಗೆ ನೋಡಿ ಹೇಳಿದರು "ನಿನ್ನ ಪತಿಯು ಮುಂದಿನ ವರ್ಷ ಬರುತ್ತಾರೆ." ಮತ್ತೊಂದು ಸಮಯದಲ್ಲಿ ಅವರು ಹೇಳಿದರು "ನಿನ್ನ ಮಕ್ಕಳನ್ನು ಕರೆದುಕೊಂಡು ಬಾ."

ಶಿಬಿರವು ಮುಗಿದಾಗ, ನಾವು ಒಂದು ಪ್ರೇಮದ ವಲಯದಲ್ಲಿ ಇದ್ದೇವೆಂಬ ಅನುಭವ ನನಗಾಯಿತು. ಪ್ರೇಮವು ಸ್ಪೃಶ್ಯ, ಹಿಡಿತಕ್ಕೆ ಸಿಗುವಂತಹದು. ಅದು ಪ್ರತಿಯೊಬ್ಬರನ್ನೂ ಸುತ್ತುವರಿಯುತ್ತಿತ್ತು. ಪ್ರತಿಯೊಂದೂ ಬಹಳ ಅದ್ಭುತವಾಗಿರುತ್ತಿತ್ತು! ಆದರೆ ಮುಂದೆ ಹೋಗುವುದು ಹೇಗೆ? ಮುಂದಿನ ವರ್ಷದ ತನಕ ಕಾಯುವುದೇ? ನಾನು ಮನೆಯನ್ನು ತಲುಪಿದಾಗ, ಈ ಶಿಬಿರದ ಬಗೆಗೆ ಮತ್ತು ಮಹಾಬೋಧನೆಗಳ ಬಗೆಗೆ ನನ್ನ ಪತಿಯೊಡನೆ ಹೇಳಿದೆ.

ಮಾರನೆಯ ವರ್ಷ ನಾವು ಹೋದೆವು ಮತ್ತು ಆ ಸಮಯದಿಂದ ಒಂದು ಸಾರಿಯೂ ಸ್ವಾಮೀಜಿಯ ಚಿಂತನ ಶಿಬಿರವನ್ನು ತಪ್ಪಿಸಿಕೊಳ್ಳಲಿಲ್ಲ. ಮೊದಲನೆಯ ಶಿಬಿರದಲ್ಲಿ ಭಕ್ತಿಯ ಮೇಲೆ ಹೆಚ್ಚು ಒತ್ತು ಇತ್ತೆಂದು ನನಗೆ ಅನ್ನಿಸಿತು; ಎರಡನೆಯ ಶಿಬಿರದಲ್ಲಿ ಅವರು ಸಂಪೂರ್ಣವಾಗಿ ವೈಜ್ಞಾನಿಕ ವಿಧಾನವನ್ನು ಅನುಸರಿಸಿದ್ದರು. ಆ ಸಮಯದಲ್ಲಿ ನಮ್ಮ ವೈಯಕ್ತಿಕ ಪ್ರವೃತ್ತಿಗಳಿಗೆ ಅನುಗುಣವಾಗಿರುವಂತೆ ಇತ್ತು ಅದು. ಮುಂದಿನ ವರ್ಷ, ನಾನು ನನ್ನ ಮೂರನೆಯ ಚಿಂತನ ಶಿಬಿರಕ್ಕೆ ಹೋದಾಗ ೧೦ ಮತ್ತು ೧೧ ವರ್ಷಗಳ ನನ್ನ ಇಬ್ಬರು ಮಕ್ಕಳನ್ನೂ ಕರೆದುಕೊಂಡು ಹೋದೆ. ಮಕ್ಕಳಿಗೆ ಹೆಚ್ಚು ಇಂಗ್ಲಿಷ್ ತಿಳಿದಿರಲಿಲ್ಲ. ಹೇಗೋ ಅವರು

---

* ನೆದರ್‌ಲ್ಯಾಂಡ್‌ನ ಒಬ್ಬ ಭಕ್ತೆ

ಸ್ವಾಮೀಜಿಯವರೊಡನೆ ಸಂವಹಿಸಿದರು. ಮಕ್ಕಳು ಹೆಚ್ಚು ಸಮಯವನ್ನು ಸ್ವಾಮೀಜಿಯವರ ಕೋಣೆಯಲ್ಲಿ ಕಳೆಯುತ್ತಿದ್ದರು. ಅವರು ಚಿಕ್ಕ ಷೂಗಳು ಸ್ವಾಮೀಜಿಯವರ ಕೋಣೆಯ ಹೊರಗೆ ಇರುವುದನ್ನು ನೋಡುವ ತನಕ, ಅವರು ಎಲ್ಲಿದ್ದಾರೆಂಬುದು ನಮಗೆ ತಿಳಿದಿರಲಿಲ್ಲ. ಸ್ವಾಮೀಜಿಯವರು ಮಕ್ಕಳಿಗೆ, ಬಹುಶಃ ಕ್ಯಾಂಡಿ ಇರಬಹುದು, ತಿನ್ನಲ್ಲಿಕ್ಕೆ ಏನೋ ಕೊಟ್ಟಿದ್ದರು. ನೀವು ಏಕೆ ತಿನ್ನುವುದಿಲ್ಲವೆಂದು ಅವು ಪ್ರಶ್ನಿಸಿದಾಗ ಅವರು ಉತ್ತರಿಸಿದ್ದರು "ನೀವು ತಿಂದರೆ ನಾನೂ ಕೂಡಾ ತಿಂದಿರುತ್ತೇನೆ."

ಚಿಂತನ ಶಿಬಿರವು ಮುಗಿದಾಗ ನನ್ನ ಹಿರಿಯ ಮಗ ಅಳುತ್ತಿದ್ದ. "ಏಕೆ ಅಳುತ್ತಿದ್ದೀಯಾ?" ಎಂದು ನಾನು ಕೇಳಿದೆ. ಅವನು ಉತ್ತರಿಸಿದ "ಅವರು ಎಷ್ಟು ಒಳ್ಳೆಯವರು." ಈಗಾಗಲೇ ಅವನು ಸ್ವಾಮೀಜಿಯವರನ್ನು ಕಳೆದುಕೊಂಡಂತೆ ಭಾವಿಸಿದ್ದ. ಅನೇಕ ವರ್ಷಗಳ ನಂತರ ಅವನು ಬೇಲೂರು ಮಠಕ್ಕೆ ಭೇಟಿ ಕೊಟ್ಟಾಗ, ಅಲ್ಲಿ ಆಗ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್‌ನ ಅಧ್ಯಕ್ಷರಾಗಿದ್ದ ಸ್ವಾಮಿ ರಂಗನಾಥಾನಂದರಿಂದ ದೀಕ್ಷೆ ಪಡೆದುಕೊಂಡ.

ಯೂರೋಪಿನ ಕೆಲವು ಕೇಂದ್ರಗಳನ್ನೂ, ವೇದಾಂತ ಸಮೂಹಗಳನ್ನೂ ಅಸ್ತಿತ್ವಕ್ಕೆ ತಂದ ಸ್ಫೂರ್ತಿ ಸ್ವಾಮಿ ರಂಗನಾಥಾನಂದರು. ಒಂದು ಬಾರಿ ಅವರು ಹಾಲೆಂಡಿಗೆ ಬರುವ ಸಮಾಚಾರವನ್ನು ಪ್ರಕಟಗೊಳಿಸಿರಲಿಲ್ಲವಾಗಿ, ತೀರಾ ಕೆಲವೇ ಜನಕ್ಕೆ ಸ್ವಾಮೀಜಿಯವರು ಶಿಬಿರ ನಡೆಸುವುದು ತಿಳಿದಿತ್ತು. ಅಲ್ಲಿದ್ದವರು, ಸ್ವಾಮೀಜಿಯವರು ಕೇವಲ ಬೆರಳೆಣಿಕೆಯಷ್ಟು ಮಂದಿಗಾಗಿ ಅಲ್ಲಿಗೆ ಬರುವುದು ಸರಿಯಲ್ಲವೆಂದು ಭಾವಿಸಿದರು. ಪರಿಣಾಮವಾಗಿ ಸ್ವಾಮೀಜಿಯವರ ಮುಂದಿನ ಭೇಟಿಗೆ ಸಿದ್ಧತೆ ನಡೆಸಲು, ಅವರು ತಮ್ಮನ್ನು ತಾವೇ ಕಾರ್ಯಪ್ರವೃತ್ತರಾಗುವ ಸಂಘಟಕರ ಗುಂಪುಗಳಾಗಿ ರೂಪಿಸಿಕೊಂಡರು. ಮುಂದಿನ ವರ್ಷ, ಸಹಜವಾಗಿಯೇ, ನೂರು ಜನಕ್ಕಿಂತಲೂ ಹೆಚ್ಚು ಸಂಖ್ಯೆಯ ಜನರು ಶಿಬಿರದಲ್ಲಿ ಹಾಜರಿದ್ದರು ಮತ್ತು ಬೇರೆ ನಗರಗಳಲ್ಲಿಯೂ ಕೆಲವು ತರಗತಿಗಳು ಏರ್ಪಾಡಾದುವು. ಸ್ವಾಮಿ ರಂಗನಾಥಾನಂದರು ಈ ಫಲಿತಾಂಶದಿಂದ ಬಹಳ ಸಂತೋಷಪಟ್ಟರು ಮತ್ತು ಒಂದು ಸಂಘವನ್ನು ಸ್ಥಾಪಿಸುವಂತೆ ನಮಗೆ ಹೇಳಿದರು. ಈ ರೀತಿಯಲ್ಲಿ 'ರಾಮಕೃಷ್ಣ ವೇದಾಂತ ವೆರಿನಿಜಿಂಗ್ (ಸೊಸೈಟಿ) ಆಫ್ ದಿ ನೆದರ್‌ಲ್ಯಾಂಡ್ಸ್' ಜನ್ಮ ತಾಳಿತು.

ನಾವು ಮುಂದೆ ಹೇಗೆ ಕಾರ್ಯಪ್ರವೃತ್ತರಾಗಬೇಕೆಂಬುದರ ಬಗೆಗೆ ಸ್ವಾಮೀಜಿ ನಮಗೆ ನಿರ್ದೇಶನ ನೀಡಿದರು: ೧) *ಗಾಸ್ಪೆಲ್ ಆಫ್ ಶ್ರೀ ರಾಮಕೃಷ್ಣ*ವನ್ನು ಡಚ್ ಭಾಷೆಗೆ ಅನುವಾದ ಮಾಡಿ. ೨) ಭವಿಷ್ಯದಲ್ಲಿನ ಕೇಂದ್ರಕ್ಕಾಗಿ ಒಂದು ಮನೆಯನ್ನು ಖರೀದಿಸಿ. ೩) ಮುಖ್ಯ ಕೇಂದ್ರಕ್ಕೆ ಒಂದು ಪತ್ರ ಬರೆದು ಒಬ್ಬ ಸ್ಥಾನಿಕ ಸ್ವಾಮಿಗಾಗಿ ಮನವಿ ಮಾಡಿ. ಏಕೆಂದರೆ, ಯಾರಾದರೂ ಒಬ್ಬರನ್ನು ನಿಯೋಜಿಸಲು ಹತ್ತು ವರ್ಷಗಳು ಬೇಕಾಗಬಹುದಿತ್ತು.

ವೇದಾಂತದ ಬೋಧನೆಗಳನ್ನು ನಾವು ಅರ್ಥಮಾಡಿಕೊಳ್ಳಲು ಸಹಾಯವಾಗುವಂತೆ ಸ್ವಾಮಿ ರಂಗನಾಥಾನಂದರು ಬಹು ಸ್ಪಷ್ಟ ವಿಧಾನದಿಂದ ತಿಳಿಸುತ್ತಿದ್ದರು. ಅಲ್ಲದೇ, ಬಿಡುವಿನ ಸಮಯದಲ್ಲಿಯೂ ಅವರು ಬೇರೆ ಯಾವ ವಿಷಯದ ಬಗೆಗೂ ಮಾತನಾಡುತ್ತಿರಲಿಲ್ಲ. ಹೀಗೆ ಪ್ರಪಂಚದಾದ್ಯಂತದ ಅವರ ಈ ಪ್ರವಾಸಗಳ ಮೂಲಕ, ಅನೇಕ ಜನರಲ್ಲಿ ಅವರು ಆಧ್ಯಾತ್ಮಿಕ ಜೀವನದ ಬಗೆಗಿನ ಬಹಳ ಗಾಢವಾದ ಆಸಕ್ತಿಯನ್ನು ಜಾಗೃತಗೊಳಿಸಿದರು.

ನನ್ನ ಪತ್ರಕ್ಕೆ ಉತ್ತರಿಸುತ್ತಾ ಒಂದು ಬಾರಿ ಅವರು ಬರೆದರು: "ಆಮ್‌ಸ್ಟರ್ ಡಾಮ್‌ನ ಮನೆಯಲ್ಲಿ ವಾಸಿಸುತ್ತಲೇ ನೀನು ಆಧ್ಯಾತ್ಮಿಕವಾಗಿರಬಹುದು. *ಗೀತೆ*ಯನ್ನೂ, ಶ್ರೀ ರಾಮಕೃಷ್ಣರ ಬೋಧನೆಗಳನ್ನೂ ನೀನು ಓದಿದಾಗ, ಪ್ರತಿಯೊಂದು ಕೆಲಸವೂ ದೇವರ ಕೆಲಸ ಎಂಬುದನ್ನೂ, ಕೆಲಸವೇ ಪೂಜೆ ಎಂಬುದನ್ನೂ ನೀನು ತಿಳಿಯುತ್ತೀಯ. ನೀನು ಯಾವಾಗಲೂ ಆಧ್ಯಾತ್ಮಿಕವಾಗಿಯೇ ಇದ್ದೀಯೆ. ನೀನು ಎಲ್ಲಿಯೇ ಇದ್ದರೂ ಹಾಗೆಯೇ ಮುಂದುವರಿಯುವೆ."

ಸ್ವಾಮೀಜಿಯವರ ಸಂಪರ್ಕಕ್ಕೆ ಬಂದುದಕ್ಕೆ ನಾನು ಧನ್ಯೆ ಎಂದು ಭಾವಿಸುತ್ತೇನೆ. ಜೀವನದಲ್ಲಿ ಹೊಸ ಮಾರ್ಗವನ್ನು ಆರಂಭಿಸುವುದನ್ನು ಸಾಧ್ಯಮಾಡಿದಂತಹ ಸಂಪರ್ಕ ಅದು, ನಮ್ಮನ್ನು ಸುತ್ತುವರಿದಿರುವಂತಹ ವಾಸ್ತವತೆಯ, ಸತ್ಯದ, ವ್ಯಾಪಕವಾದ, ಗಾಢವಾದ ತಿಳಿವಳಿಕೆಯಿಂದಾಗಿ ಜೀವನವನ್ನು ಅರ್ಥಪೂರ್ಣವಾಗಿ ಮಾಡಿದಂತಹ ಸಂಪರ್ಕ ಅದು.

ಪ್ರೀತಿಯ ಸ್ವಾಮೀಜಿ, ನನ್ನ ಹೃದಯದ ಆಳದಿಂದ ನಿಮಗೆ ವಂದನೆಗಳು.

* * * *

# ೯೨. ಪೂಜ್ಯ ಸ್ವಾಮೀಜಿಯವರ ಬಗೆಗಿನ ಮೊದಲ ನೆನಪುಗಳು

**–ನಿರ್ಮಲಾ ಬಿಡಾನಿ***

೧೯೪೯ರಲ್ಲಿ ನಾನು ಶಿಕ್ಷಕಿಯಾಗಿ ಹೊಸ ದೆಹಲಿಯ ಸೇಂಟ್ ಥಾಮಸ್ ಹೈಯರ್ ಸೆಕೆಂಡರಿ ಶಾಲೆಯನ್ನು ಸೇರಿದೆ. ಕೆಲವು ತಿಂಗಳುಗಳ ನಂತರ ನನ್ನ ಸಹೋದ್ಯೋಗಿಯೊಬ್ಬರು ರಾಮಕೃಷ್ಣ ಮಿಷನ್‌ನ ಸ್ವಾಮಿಯೊಬ್ಬರ ಬಗೆಗೆ ನನ್ನೊಡನೆ ಮಾತನಾಡಿದರು. ಅವರು ಹೇಳಿದರು "ಅವರ ಪ್ರವಚನಗಳು ಉತ್ಕೃಷ್ಟವಾಗಿರುತ್ತವೆ. ನೀವು ಹೋಗಲೇಬೇಕು ಮತ್ತು ಅವರ ಪ್ರವಚನವನ್ನು ಕೇಳಬೇಕು." ಕೆಲವು ದಿನಗಳ ನಂತರ, "ಸ್ವಾಮೀಜಿಯ ಪ್ರವಚನ ಕೇಳಲು ಮಿಷನ್‌ಗೆ ಹೋಗಿದ್ದಿರಾ?" ಎಂದು ಅವರು ಕೇಳಿದರು. ರಾಮಕೃಷ್ಣ ಮಿಷನ್ ನನಗೆ ಹೆಚ್ಚು ಪರಿಚಿತವಲ್ಲವೆಂದು ನಾನು ಹೇಳಿದೆ. ಅಲ್ಲದೆ, ಸಾಧಾರಣವಾಗಿ ಸ್ವಾಮೀಜಿಗಳ ಬಗೆಗೆ ನಾನು ಸ್ವಲ್ಪ ಸಂದೇಹಿಯಾಗಿದ್ದೆ. ಮೊದಮೊದಲು ನನ್ನ ವಿರೋಧವಿದ್ದಾಗ್ಯೂ, ಕಡೆಗೂ ಒಂದೇ ಒಂದು ಬಾರಿಯಾದರೂ ಅಲ್ಲಿಗೆ ಹೋಗುವಂತೆ ಅವರು ನನ್ನ ಮನವೊಲಿಸಿದರು ಮತ್ತು ಈ ದಿನ ನಾನು ಅದಕ್ಕಾಗಿ ಅವರಿಗೆ ಕೃತಜ್ಞಳಾಗಿದ್ದೇನೆ. ನಾನು ಶಾಲೆಯಿಂದ ಮನೆಗೆ ಬರುವ ದಾರಿಯಲ್ಲಿ ಮಿಷನ್ ಇದ್ದಿತು. ನನ್ನ ಬೈಸಿಕಲ್‌ನ ಮೇಲೆ ಮನೆಗೆ ಹೋಗುತ್ತಿದ್ದುದರಿಂದ (ಆ ಕಾಲದಲ್ಲಿ ಸಾರಿಗೆಯ ಮೊದಲ ಸಾಧನವಾಗಿತ್ತು ಅದು), ನಾನು ಮಿಷನ್‌ನ ಕಟ್ಟಡವನ್ನು ಗುರುತಿಸಿದೆ. ನನ್ನೊಳಗೆ ನಾನು ಹೇಳಿಕೊಂಡೆ; ಇದೇನೂ ಹೆಚ್ಚು ದೂರವಿಲ್ಲ; ಈ ದಿನಗಳಲ್ಲಿ ಒಂದು ದಿನ ನಾನು ಅಲ್ಲಿಗೆ ಹೋಗಬೇಕು ಎಂದುಕೊಂಡೆ. ಮುಂದಿನ ಭಾನುವಾರ ಹೋಗುವುದೆಂದು ನಿರ್ಧರಿಸಿದೆ.

ಆಶ್ರಮದ ಪ್ರದೇಶಕ್ಕೆ ಬಂದಾಗ ನಾನು ಎದೆಗುಂದಿ ನಿಂತೆ. ಮಿಷನ್ (ಆಶ್ರಮ) ಒಂದು ವಿಶಾಲವಾದ ತೆರೆದ ಪ್ರದೇಶವನ್ನು ಹೊಂದಿತ್ತು ಮತ್ತು ಅದು ಜನಗಳಿಂದ ತುಂಬಿತ್ತು. ಎಲ್ಲರೂ ನೆಲದ ಮೇಲೆ ಮೌನವಾಗಿ ಕುಳಿತಿದ್ದರು ಮತ್ತು ಸ್ವಾಮಿಗಳು ಪ್ರವಚನವನ್ನು ಆರಂಭಿಸಲಿ ಎಂದು ಕಾಯುತ್ತಿದ್ದರು. ಬೇಸರದ ವಿಷಯವೆಂದರೆ, ಕರಾರುವಾಕ್ಕಾಗಿ ಯಾವ ಸಂಗತಿಯ ಬಗೆಗೆ ಅವರು ಮಾತನಾಡಿದರು ಎನ್ನುವುದೂ ನನಗೆ ನೆನಪಿಲ್ಲ. ನನಗೆ ನೆನಪಿರುವುದೆಲ್ಲ ಎಂದರೆ, ಅವರು ತಮ್ಮ ಉಪನ್ಯಾಸ ನೀಡುವುದನ್ನು ಆರಂಭಿಸಿದರು, ನನ್ನ ಕಣ್ಣುಗಳು ಅವರ ಮೇಲೆ ನೆಟ್ಟುಬಿಟ್ಟವು. ನಾನು ನನ್ನ ತಲೆಯನ್ನು ಒಂದಿಷ್ಟು ಅಲ್ಲಾಡಿಸಲು ಕೂಡ ಧೈರ್ಯಮಾಡಲಿಲ್ಲ. ಯಾವುದಾದರೂ ಮುಖ್ಯ ಪದ ತಪ್ಪಿಹೋಗುವುದೆಂದು ನಾನು ಹೆದರಿದ್ದೆ. ಅವರ ಮಾತುಗಳನ್ನು ಆಲಿಸುತ್ತಾ ಆ ಅಮೃತವನ್ನು ಕಣ್ಣುಗಳಿಂದ ಕಿವಿಗಳಿಂದ ಕುಡಿಯುತ್ತಾ ನಾನು ಅಲ್ಲಿ ಕುಳಿತಿದ್ದೆ. ಆಶ್ಚರ್ಯಕರವೆಂಬಂತೆ, ನನ್ನ ಮರ್ಕಟ ಮನಸ್ಸು ಕೂಡ ಬಹಳ ಗಮನದಿಂದ ಆಲಿಸುತ್ತಿತ್ತು. ಪ್ರವಚನದ ನಂತರ ಅವರ ಹೆಸರು ಸ್ವಾಮಿ ರಂಗನಾಥಾನಂದ ಎಂದು ತಿಳಿಯಿತು. ಅವರ ಪ್ರವಚನವನ್ನು ಕೇಳಿದುದು, ನನ್ನ ಅಂತರಂಗದ ಆಳದಲ್ಲಿನ ಒಂದು ಎಳೆಯನ್ನು ತಟ್ಟಿತ್ತು ಮತ್ತು ಆಗಿನಿಂದಲೂ ಅವರ ಪ್ರವಚನಗಳನ್ನು ಕೇಳಲು ಲಭ್ಯವಿದ್ದ ಎಲ್ಲ ಅವಕಾಶಗಳನ್ನೂ ಬಳಸಿಕೊಂಡೆ.

ಸ್ವಾಮೀಜಿಯವರು ಅದ್ಭುತ ವಾಗ್ವೈಖರಿಯನ್ನು ಪಡೆದಿದ್ದುದಂತೂ ಸರಿಯೇ. ಆದರೆ ಕೇಳುಗನನ್ನು ಮನಸ್ಸಿನ ತೀರಾ ಮೊದಲ ಸ್ತರದಿಂದ ಜ್ಞಾನ ಮತ್ತು ಪ್ರಜ್ಞೆಯ ಉನ್ನತ ಸ್ತರಕ್ಕೆ ಕರೆದೊಯ್ಯುವ ಅವರ

---

* ನ್ಯೂಯಾರ್ಕ್, ಯು.ಎಸ್.ಎ.ಯ ಒಬ್ಬ ಭಕ್ತೆ.

ಸಾಮರ್ಥ್ಯ ನನ್ನನ್ನು ಬಹಳ ಆಶ್ಚರ್ಯಪಡಿಸಿತ್ತು. ಅವರ ಜ್ಞಾನವು ಕೇವಲ ಭಾರತೀಯ ಧರ್ಮಶಾಸ್ತ್ರಗಳಿಗೆ ಮಾತ್ರ ಪರಿಮಿತವಾಗಿರುತ್ತಿರಲಿಲ್ಲ. ಆದರೆ, ವಿಶ್ವಧರ್ಮದ ಎಲ್ಲ ಧರ್ಮಶಾಸ್ತ್ರಗಳನ್ನೂ ಒಳಗೊಂಡಿರುತ್ತಿತ್ತು. ಅವರು ಆ ಎಲ್ಲ ಧರ್ಮಶಾಸ್ತ್ರ ಗ್ರಂಥಗಳಿಂದಲೂ ಉದ್ಧರಿಸುತ್ತಿದ್ದರು. ಸಂಸ್ಕೃತ ಶ್ಲೋಕಗಳ ಬಗೆಗೆ ವ್ಯಾಖ್ಯಾನ ಮಾಡುವಾಗ ಅವರು, ವಿಶ್ವದ ಧರ್ಮಗಳು, ಕವಿಗಳು, ಪಶ್ಚಿಮ ಮತ್ತು ಪೂರ್ವ ದೇಶಗಳ ದಾರ್ಶನಿಕರು, ಜೊತೆಗೆ ಸಮಕಾಲೀನ ವೈಜ್ಞಾನಿಕ ಸಂಶೋಧನೆಗಳು, ವಿಶೇಷವಾಗಿ ಭೌತಶಾಸ್ತ್ರ ಮತ್ತು ಜೀವಶಾಸ್ತ್ರದ ಸಂಶೋಧನೆಗಳು, ಎಲ್ಲದರಿಂದಲೂ ಉದಾಹರಣೆಗಳನ್ನು ತೆಗೆದುಕೊಂಡು ನಮ್ಮನ್ನು ಈ ಜಗತ್ತಿನ ಸುತ್ತಲೂ ಕರೆದೊಯ್ಯುತ್ತಿದ್ದರು. ವಿಜ್ಞಾನದ ಈ ಎರಡೂ ಶಾಖೆಗಳಲ್ಲಿನ ಹೊಸ ಸಂಶೋಧನೆಗಳು, ಭಾರತದ ವೇದಾಂತ, ದರ್ಶನಶಾಸ್ತ್ರದೊಡನೆ ಹೇಗೆ ಒಮ್ಮುಖವಾಗುತ್ತಿದ್ದವು, ಹೊಂದಿಕೆಯಾಗುತ್ತಿದ್ದವು ಎಂಬುದನ್ನು ಅವರು ಯಾವಾಗಲೂ ಪ್ರಮುಖವಾಗಿ ಒತ್ತುಕೊಟ್ಟು ತಿಳಿಸುತ್ತಿದ್ದರು. ಆ ಉದಾಹರಣೆಗಳು ಅವರು ತೆಗೆದುಕೊಂಡಿದ್ದ ಶ್ಲೋಕಕ್ಕೆ ಪ್ರಸ್ತುತವಾಗಿರುತ್ತಿದ್ದುದಲ್ಲದೇ, ಜಗತ್ತಿನಾದ್ಯಂತ ಹುಡುಕಿ ತಂದು ಪೋಣಿಸಿದ ಜ್ಞಾನ ಮೌಕ್ತಿಕದ ಅದ್ಭುತವಾದ ಹಾರದಂತಿರುತ್ತಿತ್ತು. ಇಂತಹ ವಿವಿಧ ಉದ್ಧೃತ ಭಾಗಗಳನ್ನೂ, ಉಲ್ಲೇಖಗಳನ್ನೂ ನಮ್ಮ ಮುಂದೆ ಪ್ರಸ್ತುತಪಡಿಸುವಾಗ, ಶ್ಲೋಕದ ಮೂಲ ಅರ್ಥವು ಎಂದೂ ಕಳೆದುಹೋಗುತ್ತಿರಲಿಲ್ಲವೆಂಬುದು ಮಹತ್ವಪೂರ್ಣವೂ, ಗಮನಾರ್ಹವೂ ಆಗಿರುತ್ತಿದ್ದಿತು. ಇದರಿಂದಾಗಿ ಶ್ಲೋಕದ ಅರ್ಥವು ಸ್ಫಟಿಕದಷ್ಟು ಸ್ಪಷ್ಟವಾಗುತ್ತಿತ್ತು. ಪ್ರತಿಯೊಂದು ಉದಾಹರಣೆಯೂ, ಅಧ್ಯಯನಕ್ಕೆ ತೆಗೆದುಕೊಂಡ ಶ್ಲೋಕವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವಲ್ಲಿ ನೆರವಾಗುತ್ತಿತ್ತು. ಮುಕ್ತಾಯ ಸಮಯದಲ್ಲಿ, ಹಾರಕ್ಕೆ ಗಂಟು ಹಾಕುವಂತೆ, ಕೊನೆಯದನ್ನು ಮೊದಲಿಗೆ ಸೇರಿಸಿ ಕಟ್ಟುತ್ತಿದ್ದರು.

ಅವರ ಪ್ರವಚನಗಳು ಕೇವಲ ಬೌದ್ಧಿಕವಾಗಿರುತ್ತಿರಲಿಲ್ಲ. ಅವು, ಹೃದಯಾಂತರಾಳದಲ್ಲಿ ಮತ್ತು ಪ್ರತಿಯೊಬ್ಬರಲ್ಲಿಯೂ, ಪ್ರತಿಯೊಂದು ಕಡೆಯಲ್ಲಿಯೂ ದೈವತ್ವದ ಉಪಸ್ಥಿತಿ ಇದೆಯೆಂಬ ಗಾಢ ನಂಬಿಕೆ, ಶ್ರದ್ಧೆಗಳಿಂದ, ಇಡೀ ಸೃಷ್ಟಿಯ ಐಕ್ಯ ಮತ್ತು ವಿವಿಧತೆಯಲ್ಲಿ ಏಕತೆಯ ಅರಿವು – ಇವುಗಳಿಂದ ಆ ಪ್ರವಚನಗಳು ಹೊರಬರುತ್ತಿದ್ದವು. ಇದು ಅದ್ವೈತ ಅಥವಾ Non-dualismನ ಮುಖ್ಯ ಸಾರವನ್ನು ಪ್ರತಿಪಾದಿಸುತ್ತದೆ, ಪ್ರತಿನಿಧಿಸುತ್ತದೆ. ಯಾವುದೇ ವ್ಯಕ್ತಿಯ ಧರ್ಮ, ಸಾಮಾಜಿಕ ಅಂತಸ್ತು, ಬಣ್ಣ, ಮತ, ಪಂಥ, ಲಿಂಗ ಅಥವಾ ರಾಷ್ಟ್ರೀಯತೆ ಮುಂತಾದ ಯಾವುದನ್ನೂ ಪರಿಗಣಿಸದೆ ಎಲ್ಲರನ್ನೂ ಗೌರವ ಮತ್ತು ಪ್ರೀತಿಯಿಂದ ಕಾಣುವುದು ಅದರ ಸ್ವಭಾವವಾಗಿತ್ತು. ಮಾನವರ ಪರಸ್ಪರ ಬಾಂಧವ್ಯಗಳು ತಮ್ಮ ಆಧ್ಯಾತ್ಮಿಕ ಬೆಳವಣಿಗೆಯ ಮಟ್ಟ ಅಥವಾ ಸ್ಥಿತಿಯನ್ನು ಪ್ರತಿಬಿಂಬಿಸುತ್ತವೆ ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಅವರು ಕೇಳುತ್ತಾರೆ: “ನೀವು ಆಧ್ಯಾತ್ಮಿಕವಾಗಿ ಬೆಳೆಯುತ್ತಿದ್ದೀರಾ?”; ಮತ್ತು “ಪ್ರತಿಯೊಬ್ಬ ವ್ಯಕ್ತಿಯೂ ತನ್ನನ್ನು ತಾನು ಪ್ರಶ್ನಿಸಿಕೊಳ್ಳಬೇಕೆಂದು ಹೇಳುತ್ತಾರೆ” ನೀವು ಇತರರನ್ನು ಪ್ರೀತಿಸಬಲ್ಲಿರಾ? ಬೇರೆಯವರೊಡನೆ ಏಕತೆಯನ್ನು ಅನುಭವಿಸಬಲ್ಲಿರಾ? ನಿಮ್ಮೊಳಗೆ ನೀವು ಶಾಂತಿಯಿಂದಿರುವಿರಾ? ನಿಮ್ಮ ಸುತ್ತಲೂ ಇರುವವರಿಗೆ ಶಾಂತಿಯನ್ನು ಹರಡಬಲ್ಲಿರಾ? ಇದನ್ನೇ ಆಧ್ಯಾತ್ಮಿಕ ಬೆಳವಣಿಗೆ ಎನ್ನುವುದು. ಇದು ಆಂತರಿಕವಾಗಿ ಧ್ಯಾನದಿಂದಲೂ ಮತ್ತು ಬಾಹ್ಯದಲ್ಲಿ ಸೇವಾಮನೋಭಾವದಿಂದ ಮಾಡುವ ಕೆಲಸದಿಂದಲೂ ಉದ್ದೀಪಿಸಲ್ಪಡುತ್ತದೆ.

ಅವರ ಜ್ಞಾಪಕಶಕ್ತಿಯು ಯಾವಾಗಲೂ ನನ್ನನ್ನು ಮೂಕವಿಸ್ಮಿತಳನ್ನಾಗಿ ಮಾಡುತ್ತಿತ್ತು. ಉಪನಿಷತ್ತುಗಳು ‘ಗೀತಾ’, ‘ಭಾಗವತ’ ಮತ್ತು ಇತರ ಧರ್ಮಶಾಸ್ತ್ರ ಗ್ರಂಥಗಳಿಂದ ಶ್ಲೋಕಗಳು ಅವರಿಂದ ಸುಮ್ಮನೆ ಹರಿದುಬರುತ್ತಿದ್ದವು. ಅನೇಕ ವರ್ಷಗಳ ನಂತರ, ಅನೇಕ ಬಾರಿ ನಾನು ಅವರನ್ನು ಕೇಳಿದೆ “ಮಹಾರಾಜ್, ಪ್ರತಿಯೊಂದನ್ನೂ ನೀವು ಹೇಗೆ ನೆನಪಿಟ್ಟುಕೊಳ್ಳುತ್ತೀರಿ?” ಯಾವಾಗಲೂ ತಮ್ಮ ವಿನಮ್ರತೆಯಿಂದ ಅವರು ಉತ್ತರಿಸುತ್ತಿದ್ದರು: “ಅದು ದೇವರು ಕೊಟ್ಟ ವರ.” ನಾನು ಮತ್ತೂ ಒಂದು ಹೆಜ್ಜೆ ಮುಂದುವರಿದು ಕೇಳಿದೆ: “ಮಹಾರಾಜ್, ದೇವರ

ವರವನ್ನು ಕೂಡ ಗುರುತಿಸಬೇಕಾಗುತ್ತದೆ ಮತ್ತು ಅಭಿವೃದ್ಧಿಪಡಿಸಿಕೊಳ್ಳಬೇಕಾಗುತ್ತದೆ.” ಅವರ ಪ್ರತಿಕ್ರಿಯೆಯು ಆಗಲೂ ಅದೇ ಆಗಿತ್ತು “ಅದು ದೇವರು ಕೊಟ್ಟ ವರ.”

ಸ್ವಾಮೀಜಿಯವರ ಪ್ರವಚನಗಳನ್ನು ಸುಮಾರು ಎರಡು, ಎರಡೂವರೆ ವರ್ಷಗಳ ತನಕ, ಆಗಾಗ್ಗೆ ಕೇಳುತ್ತಿದ್ದು, ನಾನು ಸ್ವಾಮೀಜಿಯವರ ಎರಡು ವೈಶಿಷ್ಟ್ಯಗಳನ್ನು ಗಮನಿಸಿದೆ. ಮೊದಲನೆಯದಾಗಿ, ಅವರ ಪ್ರವಚನ ಕರಾರುವಾಕ್ಕಾಗಿ ಒಂದು ಘಂಟೆಯ ಅವಧಿಯಷ್ಟು ಮಾತ್ರ ಇರುತ್ತಿತ್ತು. ಸರಿಯಾಗಿ ಆ ಸಮಯಕ್ಕೆ ಅವರು ತಮ್ಮ ಪ್ರವಚನವನ್ನು ಮುಕ್ತಾಯ ಮಾಡುತ್ತಿದ್ದರು. ವಿದೇಶದಲ್ಲಾಗಲೀ, ತಾಯ್ನಾಡಿನಲ್ಲಾಗಲೀ, ಜನರ ಮನೆಗಳಲ್ಲಿ, ಚಿಕ್ಕ ಗುಂಪುಗಳಿಗೆ ಪ್ರವಚನ ನೀಡುವಾಗ ಅವರು ಸ್ವಲ್ಪ ಕಾಲ ಪ್ರವಚನ ಮಾಡಿ ನಂತರ, ಚರ್ಚೆಗೆ ಮುಕ್ತ ಅವಕಾಶ ನೀಡುತ್ತಿದ್ದರು. ಯಾವುದೇ ಪ್ರಶ್ನೆಯೂ ಅಪ್ರಸ್ತುತವಾಗಲೀ, ಮೂರ್ಖತನದ್ದಾಗಲೀ ಆಗಿರುತ್ತಿರಲಿಲ್ಲ. ಟೊರೊಂಟೊ ಮತ್ತು ಷಿಕಾಗೊಗಳಲ್ಲಿ, ನನ್ನ ಸ್ನೇಹಿತರ ಚಿಕ್ಕ ಸಮೂಹಕ್ಕೆ ಸ್ವಾಮೀಜಿಯವರು ನನ್ನ ಮನೆಯಲ್ಲಿ ಪ್ರವಚನ ನೀಡಲು ಅವಕಾಶ ಮಾಡಿಕೊಂಡಿದ್ದಕ್ಕೆ ನನ್ನನ್ನು ನಾನು ಸಾಕಷ್ಟು ಅದೃಷ್ಟಶಾಲಿ ಎಂದು ಭಾವಿಸಿದ್ದೆ.

ಎರಡನೆಯದಾಗಿ, ತಮ್ಮ ಪ್ರವಚನಗಳಲ್ಲಿ ಅವರು ಎಂದೂ ‘ನಾನು’ ಎಂಬ ಪದವನ್ನು ಉಪಯೋಗಿಸದೇ ಇರುವುದನ್ನು ಗಮನಿಸಿದೆ. ಒಂದು ಬಾರಿ ನನ್ನ ಸಹೋದ್ಯೋಗಿಯೊಡನೆ ‘ಅಂತರಶ್ರದ್ಧಾ ಸಂಕಿರಣ’ದಲ್ಲಿ ನಾನು ಉಪಸ್ಥಿತಳಿದ್ದೆ. ಸ್ವಾಮಿ ರಂಗನಾಥಾನಂದರು ಬೇರೆ ಭಾಷಣಕಾರರಿಗೆ ಹೋಲಿಸಿದಾಗ ಎಷ್ಟು ಅಪರೂಪವಾಗಿ ‘ನಾನು’ ಎಂಬ ಪದವನ್ನು ತಮ್ಮ ಪ್ರವಚನದಲ್ಲಿ ಉಪಯೋಗಿಸುತ್ತಾರೆ ಎಂಬುದನ್ನು ಗಮನಿಸುವಂತೆ ನನ್ನ ಸಹೋದ್ಯೋಗಿಗೆ ಸೂಚಿಸಿದೆ. ಪ್ರವಚನ ಮುಗಿದ ನಂತರ, ಸ್ವಾಮೀಜಿಯವರು ‘ನಾನು’ ಶಬ್ದವನ್ನು ಅತ್ಯಂತ ಜಿಪುಣತನದಿಂದ ಉಪಯೋಗಿಸಿದುದರ ಬಗೆಗೆ ತಾವು ಆಶ್ಚರ್ಯಚಕಿತರಾಗಿದ್ದುದಾಗಿ ಆ ಸಹೋದ್ಯೋಗಿ ತಿಳಿಸಿದರು.

ಅನೇಕ ಬಾರಿ ಅವರ ಪ್ರೀತಿಯು ಅತ್ಯಂತ ಸೂಕ್ಷ್ಮವಾಗಿರುತ್ತಿದ್ದು , ನನ್ನಂತಹ ಕಚ್ಚಾಮನಸು ಅದನ್ನು ಪ್ರೀತಿ ಎಂದು ಗುರುತಿಸುವಲ್ಲಿ ವಿಫಲಗೊಳ್ಳುತ್ತಿತ್ತು. ಆದರೂ ಅವರ ನಿರ್ದಿಷ್ಟ ಕಾರ್ಯದಲ್ಲಿ ಮಹತ್ವವಾದದ್ದು ಇದೆಯೆಂದು ಭಾವಿಸುತ್ತಿತ್ತು. ಮೇಲಿನ ಈ ಹೇಳಿಕೆಯನ್ನು ಸ್ಪಷ್ಟೀಕರಿಸುವುದಕ್ಕಾಗಿ ನನ್ನ ಅನುಭವವನ್ನು ವಿವರಿಸುತ್ತೇನೆ. ದೆಹಲಿಯಲ್ಲಿ ನಾನು ಆಗಾಗ್ಗೆ ಅವರ ಪ್ರವಚನಗಳಲ್ಲಿ ಹಾಜರಿರುತ್ತಿದ್ದೆನಾದರೂ, ಅವರನ್ನು ಖಾಸಗಿಯಾಗಿ ಭೇಟಿ ಮಾಡುವ ಆಲೋಚನೆಯನ್ನು ಯಾವಾಗಲೂ ಮಾಡಿರಲಿಲ್ಲ. ಅಂತಹ ಸಾಮರ್ಥ್ಯವಿರುವ ವ್ಯಕ್ತಿಯೊಡನೆ ಮುಖಾಮುಖಿಯಾಗಿ ಭೇಟಿಮಾಡಲು ನಾನು ಕೌಶಲ್ಯ, ನಿಪುಣತೆಯಿರದವಳು ಎಂದು ನಾನು ಭಾವಿಸಿದ್ದಿರಬಹುದು. ಮತ್ತೊಂದು ಕಾರಣವೆಂದರೆ, ಪ್ರವಚನದ ನಂತರ ಅವರು ಯಾವಾಗಲೂ ರಾಯಭಾರಿಗಳು, ವಿಶ್ವವಿದ್ಯಾಲಯದ ಪ್ರೊಫೆಸರ್‌ಗಳು, ತತ್ತ್ವಶಾಸ್ತ್ರಜ್ಞರು, ವಿಜ್ಞಾನಿಗಳು ಮತ್ತು ಬಹುಶಃ ಭಕ್ತರು ಮುಂತಾಗಿ, ಅವರು ಪ್ರವಚನಗಳಿಗೆ ತಪ್ಪದೇ ಹಾಜರಿರುತ್ತಿದ್ದವರೆಂದು ಹೆಸರುವಾಸಿಯಾಗಿದ್ದವರಿಂದ ಸುತ್ತುವರೆಯಲ್ಪಟ್ಟಿರುತ್ತಿದ್ದರು. ಹಾಗಾಗಿ ಅವರನ್ನು ತಲುಪಬೇಕೆಂದರೆ, ಅದು ದೀರ್ಘಕಾಲದ ಕಾಯುವಿಕೆಯಾಗಿತ್ತು. ನಾನಾದರೋ ಹೊಸಬಳು, ನಾಚಿಕೆ ಮತ್ತು ಸಂಕೋಚದ ಸ್ವಭಾವದವಳಾಗಿದ್ದೆ. ಅಲ್ಲದೇ, ನನ್ನ ಪರಿಮಿತ ತಿಳಿವಳಿಕೆಯಿಂದಾಗಿ, ಅವರನ್ನು ಏನು ಕೇಳಬೇಕು, ಅವರಿಗೆ ಏನು ಹೇಳಬೇಕು ಎಂಬುದೂ ನನಗೆ ತಿಳಿದಿರಲಿಲ್ಲ. ಆದ್ದರಿಂದ, ಅವರನ್ನಾಗಲೀ, ಅವರ ಕಾರ್ಯದರ್ಶಿಯನ್ನಾಗಲೀ, ಸ್ವಾಮೀಜಿಯವರ ಭೇಟಿಗಾಗಿ ನಾನು ಎಂದೂ ಹೋಗಿ ಕೇಳಲಿಲ್ಲ. ಅವರ ಪ್ರವಚನಗಳನ್ನು ಕೇಳುವುದರಲ್ಲಿಯೇ ನಾನು ಸಂತುಷ್ಟಳೂ, ತೃಪ್ತಳೂ ಆಗಿದ್ದೆ. ನಾನು ಕೇಳಿದ್ದಾಗಲೀ, ಓದಿದ್ದಾಗಲೀ ಎಷ್ಟರಮಟ್ಟಿಗೆ ನನ್ನ ಒಳಗೆ ಉಳಿದು ನನ್ನ ಭಾಗವಾಯಿತೆಂಬುದು ನನಗೆ ತಿಳಿದಿಲ್ಲ. ಆದರೆ, ಖಂಡಿತವಾಗಿಯೂ ಅದು ಮನಸ್ಸನನು ಉದಾತ್ತೀಕರಿಸುವ ಪರಿಣಾಮ ಮಾಡಿರಬೇಕು. ೧೯೫೩ರ ನಂತರ,

ನಾನು ಚಂಡೀಘಡಕ್ಕೆ ಹೋಗಿ, ಉಪನ್ಯಾಸಕಿಯಾಗಿ ಸರ್ಕಾರಿ ಕಾಲೇಜನ್ನು ಸೇರಿದ ಮೇಲೆ ಸ್ವಾಮೀಜಿಯವರನ್ನು ಭೇಟಿಯಾಗುವ ಅವಕಾಶಪಡೆದೆ.

ಕಾಲೇಜಿನಲ್ಲಿ ಒಂದು ಅಂತರವಿಭಾಗೀಯ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಹಿಂದೂಧರ್ಮದ ಬಗೆಗೆ ಪ್ರವಚನ ನೀಡಲು ಸ್ವಾಮಿ ರಂಗನಾಥಾನಂದಜೀಯವರನ್ನು ಆಹ್ವಾನಿಸಲಾಗಿತ್ತು. ಇದೇ ಉದ್ದೇಶಕ್ಕಾಗಿ ಅವರು ದೆಹಲಿಯಿಂದ ಬಂದಿದ್ದರು. ಸಂಕಿರಣ ಮುಗಿದನಂತರ, ನಾನು ಸ್ವಾಮೀಜಿಯವರನ್ನು ಸಮೀಪಿಸಿದೆ ಮತ್ತು ಮೊದಲ ಬಾರಿಗೆ ಅವರನ್ನು ಮುಖಾಮುಖಿಯಾಗಿ ಭೇಟಿಯಾದೆ. ಅವರನ್ನು ಭೇಟಿ ಮಾಡುವುದರ ಬಗೆಗೆ ನನ್ನಲ್ಲಿ ಇದ್ದ ಅಸಮಂಜಸತೆಯನ್ನು ಗೆದ್ದಿದ್ದುದು ನನ್ನ ಪಾಲಿಗೆ ಒಂದು ಸಾಧನೆಯಾಗಿತ್ತು. ಮೊದಲು ಎರಡೂ ಕೈಗಳನ್ನು ಜೋಡಿಸಿ ಅವರಿಗೆ ನಮಸ್ಕರಿಸಿದುದು ಮತ್ತು ನಂತರ ಅವರ ಪ್ರವಚನದ ಬಗೆಗೆ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದು ನನಗೆ ನೆನಪಿದೆ. ನಂತರ, ಲೋಕಾಭಿರಾಮವಾಗಿ, ಅವರಿಗೆ ಸಮಯವಿದ್ದರೆ, ಸಾಯಂಕಾಲ ನನ್ನ ಮನೆಗೆ ಬರುವಂತೆ ಆಹ್ವಾನಿಸಿದೆ. ಅವರು ಬರುವುದಿಲ್ಲವೆಂಬುವುದರ ಬಗೆಗೆ ಬಹುಮಟ್ಟಿಗೆ ನನಗೆ ಖಚಿತವಿತ್ತು. ನನ್ನಂತಹ ಹೊಸಬಳೂ, ಅನನುಭವಿಯೂ ಆದಂತಹ ವ್ಯಕ್ತಿಯನ್ನು ಭೇಟಿಮಾಡಲು ಅವರಿಗೆ ಸಮಯವಾಗಲೀ, ಮನಸ್ಸಾಗಲೀ ಎಲ್ಲಿರುತ್ತದೆ ಎಂದುಕೊಂಡಿದ್ದೆ. ಅವರ ಸಾಚಾ ಆಧ್ಯಾತ್ಮಿಕ ಸ್ವಭಾವದ ಬಗೆಗೆ ನನಗಿದ್ದ ಅಜ್ಞಾನವನ್ನು ಇದು ಪ್ರತಿಬಿಂಬಿಸುತ್ತದೆ. ಸಾಯಂಕಾಲ ನಾನು ಮನೆಯಿಂದ ಆಚೆಗೆ ಹೆಜ್ಜೆಯಿಡುತ್ತಿದ್ದಾಗ ಸ್ವಾಮೀಜಿ ನಮ್ಮ ಮನೆಯ ಕಡೆ ಬರುತ್ತಿರುವುದನ್ನು ನೋಡಿದಾಗ, ನನಗೆ ಆಘಾತವಾಯಿತೋ, ಆಶ್ಚರ್ಯವಾಯಿತೋ, ಹರ್ಷವಾಯಿತೋ ನನಗೆ ತಿಳಿಯಲಿಲ್ಲ. ಈ ಎಲ್ಲ ಭಾವನೆಗಳನ್ನೂ ನಾನು ಒಟ್ಟಿಗೇ ಅನುಭವಿಸಿದೆ. ಸರಳವಾದ ನನ್ನ ಪಡಸಾಲೆಯಲ್ಲಿ ಕುಳಿತುಕೊಂಡೆವು ಮತ್ತು ನಾವು ನನ್ನ ದಿನನಿತ್ಯದ ಕಾರ್ಯಕ್ರಮಗಳು, ನನ್ನ ಚಟುವಟಿಕೆಗಳು, ಕಾಲೇಜಿನ ಕೆಲಸದಿಂದ ಹೊರತಾದ ಜವಾಬ್ದಾರಿಗಳು ಮುಂತಾದ ಸಾಮಾನ್ಯ ವಿಷಯಗಳ ಬಗೆಗೆ ಮಾತನಾಡಿದೆವು. ಆ ದಿನಗಳಲ್ಲಿ ನಾನು *ಆಟೋಬಯಾಗ್ರಫಿ ಆಫ್ ಎ ಪರಮಹಂಸಯೋಗಿ* ಎಂಬ ಗ್ರಂಥವನ್ನು ಓದುತ್ತಿದ್ದೆ. ನಾವು ಅದರ ಬಗೆಗೆ ಮಾತನಾಡಿದೆವು. ಆ ಪುಸ್ತಕವು ಪಾಶ್ಚಾತ್ಯ ಮನಸ್ಸಿಗಾಗಿ ಬರೆದಿರುವಂಥದು ಎಂದು ಅವರು ಹೇಳಿದರು. ಅವರು ಏಕೆ ಆ ರೀತಿಯ ಹೇಳಿಕೆ ಕೊಟ್ಟರೆಂದು ನಾನು ಕೇಳಲಿಲ್ಲ. ಪಶ್ಚಿಮದಲ್ಲಿ ಬಹಳ ಜನರಿಗೆ ಪವಾಡದ ಶಕ್ತಿಗಳು ಆಕರ್ಷಕವೂ, ಆಸಕ್ತಿ ಹುಟ್ಟಿಸುವಂತಹುದೂ ಆಗಿರುತ್ತದೆಂಬ ಕಾರಣದಿಂದ ಸ್ವಾಮೀಜಿ ಹಾಗೆ ಹೇಳಿರಬಹುದೆಂದು ನಾನು ಊಹಿಸುತ್ತೇನೆ. ಆದರೆ ಅವರಿಗೆ ಅದು ಚಾರಿತ್ರ್ಯ ನಿರ್ಮಾಣದ, ಆಧ್ಯಾತ್ಮಿಕ ಬೆಳವಣಿಗೆಯ ಕಡೆಗೆ ಮೊದಲ ಹೆಜ್ಜೆಯಾಗಿತ್ತು.

ಸ್ವಲ್ಪಸಮಯದ ತನಕ ಇದ್ದು ಅವರು ಹೊರಟರು. ನಾನು ನಮ್ಮ ಸಂಭಾಷಣೆಯಲ್ಲಿ ಬಹಳವಾಗಿ ನಿರತಳಾಗಿದ್ದೆ ಮತ್ತು ಒಂದು ರೀತಿಯ ಆಶ್ಚರ್ಯಮಿಶ್ರಿತ ಭಯ ನನ್ನನ್ನು ಆವರಿಸಿತ್ತು. ಹಾಗಾಗಿ, ಭಾರತೀಯ ಪದ್ಧತಿಯಂತೆ ಅವರಿಗೆ ನಮಸ್ಕಾರ ಮಾಡುವುದು ಕೂಡ ನನಗೆ ಹೊಳೆಯಲಿಲ್ಲ, ಅಥವಾ ಏನಾದರೂ ಸ್ವಲ್ಪ ಉಪಾಹಾರವನ್ನಾಗಲೀ, ಟೀ ಆಗಲೀ, ಏನನ್ನೂ ನೀಡಲಿಲ್ಲ. ಅವರು ಇಂತಹ ಪದ್ಧತಿ ಹಾಗೂ ವಿಧಿಗಳಿಂದ ಬಹಳ ಮೇಲಿದ್ದರು. ಅವರು ಇವುಗಳನ್ನು ಎಂದೂ ವೈಯಕ್ತಿಕ ಮಟ್ಟದಲ್ಲಿ ಪರಿಗಣಿಸುತ್ತಿರಲಿಲ್ಲ ಹಾಗೂ ಜನರೊಡನೆ ಮತ್ತು ಭಕ್ತರೊಡನೆ ವ್ಯವಹರಿಸುವಾಗ ಇದಕ್ಕೆಲ್ಲಾ ಯಾವ ಪ್ರಾಮುಖ್ಯವನ್ನೂ ಕೊಡುತ್ತಿರಲಿಲ್ಲ. ಅವರು ಎಲ್ಲರನ್ನೂ ಒಂದೇ ರೀತಿಯಲ್ಲಿ ಮುಕ್ತ ಹೃದಯ ಮತ್ತು ಪ್ರೇಮದಿಂದ ಸ್ವಾಗತಿಸುತ್ತಿದ್ದರು.

ಅವರು ಹೊರಟುಹೋದ ನಂತರ ನನಗೆ ನಾನೇ ಹೇಳಿಕೊಂಡೆ. 'ಓಹ್ ಎಂತಹ ಮಹಾನ್ ವ್ಯಕ್ತಿ ಅವರು!' ತಮ್ಮ ಅವಿರತ ಕಾರ್ಯಕ್ರಮಗಳ ನಡುವೆಯೂ ನನ್ನ ಈ ಬಡಕುಟೀರಕ್ಕೆ ಬರಲು ಸಮಯ ಹೊಂದಿಸಿಕೊಂಡು, ನನ್ನ ಮನೆಯನ್ನೂ ನನ್ನನ್ನೂ ತಮ್ಮ ಉಪಸ್ಥಿತಿಯಿಂದ, ತಮ್ಮ ಬೆಳಕಿನಿಂದ ಹರಸಿ ಧನ್ಯರನ್ನಾಗಿ ಮಾಡಿದರು. ಅವರ ವಿನಮ್ರತೆಯನ್ನು ನಾನು ಗಾಢವಾಗಿ ಭಾವಿಸಿದೆ; ಅಗಾಧವಾದ ಉನ್ನತ

ಆಧ್ಯಾತ್ಮಿಕ ಸ್ತರವನ್ನು ಸಾಧಿಸಿದ್ದಾಗ್ಯೂ ಬೌದ್ಧಿಕ ಸಾಧನೆಗಳು, ಅಂತರರಾಷ್ಟ್ರೀಯ ಜನಪ್ರಿಯತೆ ಇವುಗಳನ್ನು ಗಳಿಸಿದ್ದಾಗ್ಯೂ, ಅವರಲ್ಲಿದ್ದ ಸಂಪೂರ್ಣ ಅಹಂಕಾರರಾಹಿತ್ಯವನ್ನು ನಾನು ಅರಿತೆ. ಸಾವಿರಾರು ಜನರು ಕಲಿಯುವುದಕ್ಕಾಗಿ ಅವರ ಪಾದದಡಿಯಲ್ಲಿ ಕೂರುತ್ತಿದ್ದರು ಮತ್ತು ಇಲ್ಲಿ ಅವರು ನನ್ನ ಮನೆಗೆ ನಡೆದುಬಂದಿದ್ದರು. ಅಲ್ಲದೇ, ಅವರು ಅಸಾಧಾರಣವಾದ ಆತ್ಮವಿಶ್ವಾಸವನ್ನು ಪ್ರಸರಿಸುತ್ತಿದ್ದರು. ಆದಾಗ್ಯೂ, ನಾನು ನಿರ್ದಿಷ್ಟವಾಗಿ, ಪ್ರೀತಿಯೊಂದಿಗೆ ಈ ಅನುಭವದ ಸಂಬಂಧ ಕಲ್ಪಿಸಲಿಲ್ಲ. ಮೂರು–ನಾಲ್ಕು ವರ್ಷಗಳ ನಂತರ ಆ ಅರಿವು ಮನದಲ್ಲಿ ಮೂಡಿತು.

ರಾಮಕೃಷ್ಣ ಮಠದ ಮತ್ತು ರಾಮಕೃಷ್ಣ ಮಿಷನ್‌ನ ಸ್ವಾಮೀಜಿಯವರ ಕಡೆಯ ಎರಡು ವರ್ಷಗಳ ಅಧ್ಯಕ್ಷತೆಯ ಅವಧಿಯಲ್ಲಿ, ಯಾವಾಗ ನಾನು ಅವರಿಗೆ ಪ್ರಣಾಮ ಸಲ್ಲಿಸಲು ಹೋದಾಗಲೂ, ಭಕ್ತರು ಅವರಿಗೆ ಪ್ರಣಾಮ ಸಲ್ಲಿಸಲು ಬಂದಾಗಲೂ ಅವರು ಪ್ರತಿಯೊಬ್ಬರ ತಲೆಯ ಮೇಲೆ ತಮ್ಮ ಕೈಯನ್ನು ಇಡುವ ಮೂಲಕ ಹರಸುತ್ತಿದ್ದುದನ್ನು ಗಮನಿಸಿದೆ. ಪ್ರೇಮದ ಗಂಗೆಯು ಅವರಿಂದ ಹರಿಯುತ್ತಿದೆಯೇನೋ ಮತ್ತು ಅದರಲ್ಲಿ ಸ್ನಾನಮಾಡಲು ಮತ್ತು ತಮ್ಮನ್ನು ಪವಿತ್ರಗೊಳಿಸಿಕೊಳ್ಳಲು ಎಲ್ಲರಿಗೂ ಸ್ವಾಗತವಿದೆಯೇನೋ ಎನ್ನುವಂತಿತ್ತು. ಇದ್ದಕ್ಕಿದ್ದಂತೆಯೇ ನನ್ನ ಮನಸ್ಸಿಗೆ ಹೀಗೆ ಹೊಳೆಯಿತು: ವಾಸ್ತವವಾಗಿ ಸ್ವಾಮೀಜಿಯಾಗಿ ಅವರ ಜೀವನದ ಪ್ರತಿಯೊಂದು ಕಾರ್ಯದ ಹಿಂದೆಯೂ ಕಾರ್ಯಪ್ರವೃತ್ತವಾಗಿರುವ ಶಕ್ತಿಯು ಪ್ರೇಮ, ಅದು ರಾಮಕೃಷ್ಣರ ಬಗೆಗೆ ಅವರ ಪ್ರೇಮ, ಪವಿತ್ರ ಮಾತೆಯ ಬಗೆಗೆ ಅವರ ಪ್ರೇಮ, ತಮ್ಮ ಗುರುವಿನ ಬಗೆಗೆ, ಸ್ವಾಮಿ ವಿವೇಕಾನಂದರ ಬಗೆಗೆ ಅವರ ಪ್ರೇಮ, ವೇದಾಂತದ ಬಗೆಗೆ ಅವರ ಪ್ರೇಮ, ತಮ್ಮ ಗುರುವಿನ ಬಗೆಗೆ, ಗುರುಭ್ರಾತೃಗಳ ಬಗೆಗೆ ಅವರ ಪ್ರೇಮ ಮತ್ತು ಮಾನವತೆಯ ಬಗೆಗೆ ಅವರ ಪ್ರೇಮ ಮತ್ತು ಶಾಂತಿ– ಇವು ಅವರನ್ನು, ಒಂದು ಸಾರಿಯಲ್ಲ, ೧೯೫೬ರಿಂದ ೧೯೮೬ರವರೆಗೆ ಅನೇಕ ಬಾರಿ ವೇದಾಂತದ ಸಂದೇಶವನ್ನು ಸಾರುತ್ತಾ ಪ್ರಪಚ ಪರ್ಯಟನೆ ಮಾಡಲು ಪ್ರಚೋದಿಸಿದ್ದವು. ನಾನು ಅವರನ್ನು ಮೊದಲ ಬಾರಿಗೆ ಚಂಡೀಗಢ್‌ದಲ್ಲಿ ಭೇಟಿ ಮಾಡಿದಾಗ, ನನ್ನ ಮನೆಗೆ ಬಂದಂತಹ ಕ್ರಿಯೆಯು ಕೂಡ ಆ ಪ್ರೇಮದಿಂದಲೇ ಆಗಿತ್ತು, ಯುವ ತಲೆಮಾರಿನ ಬಗೆಗೆ ಅವರಿಗಿದ್ದ ಗಾಢ ಕಾಳಜಿಯಿಂದಾಗಿತ್ತು.

ವಿಜ್ಞಾನ ಅಥವಾ ವೈಚಾರಿಕತೆಯ ಯುಗದಲ್ಲಿ ಅವರು ತಮ್ಮ ಗುರು ಸ್ವಾಮಿ ವಿವೇಕಾನಂದರ ಹೆಜ್ಜೆಗುರುತುಗಳಲ್ಲಿ ನಡೆದರು *ದಿ ಕಂಪ್ಲೀಟ್ ವರ್ಕ್ಸ್ ಆಫ್ ಸ್ವಾಮಿ ವಿವೇಕಾನಂದ* ಗ್ರಂಥಗಳನ್ನು ಓದಬೇಕಾದದ್ದು ಎಷ್ಟು ಮುಖ್ಯವಾದದ್ದು ಎಂದು ನನ್ನನ್ನು ಪ್ರಭಾವಿಸುವುದಕ್ಕಾಗಿ ಅವರು, ತಾವು ಆ ಗ್ರಂಥಗಳ ಅನೇಕ ಭಾಗಗಳನ್ನು ಇಪ್ಪತ್ತು ಬಾರಿ ಓದಿರುವುದಾಗಿ ಹೇಳಿದರು. ಸ್ವಾಮಿ ವಿವೇಕಾನಂದರು ಸ್ವಾಮೀಜಿಯ ನರನಾಡಿಗಳಲ್ಲಿದ್ದರು, ಅವರು ಸ್ವಾಮೀಜಿಯ ರಕ್ತದಲ್ಲಿದ್ದರು. ಹೈದರಾಬಾದಿನಲ್ಲಿದ್ದಾಗ ಹೀಗೆ ಹೇಳುತ್ತಿದ್ದೆವು: 'ಸ್ವಾಮಿ ರಂಗನಾಥಾನಂದರ ಚರ್ಮವನ್ನು ಸ್ವಲ್ಪ ಕೆರೆಯಿರಿ, ಸ್ವಾಮಿ ವಿವೇಕಾನಂದರು ಹೊರಕ್ಕೆ ಬರುತ್ತಿರುವುದನ್ನು ನೀವು ಕಾಣುವಿರಿ.'

ಸೃಷ್ಟಿಯ ಹಾಗೂ ಜೀವನದ ಶಕ್ತಿ ಮತ್ತು ಸತ್ಯವಾದ ಪ್ರೇಮವು ಸ್ವಾಮೀಜಿ ಯವರಲ್ಲಿ ಸತತವಾಗಿ ಉಪಸ್ಥಿತವಾಗಿರುತ್ತಿತ್ತು; ಅದರೆ ನಮಗೆ, ಸಾಮಾನ್ಯ ಮನುಷ್ಯರಿಗೆ, ಅದು ಅವರ ಬುದ್ಧಿ, ವೈಚಾರಿಕತೆ ಮತ್ತು ಮಾತಿನಿಂದಾಗಿ ಮರೆಯಾಗಿರುತ್ತಿತ್ತು. ಅನೇಕರು, ಬಹಳ ಹೆಚ್ಚು ಜನರು, ಅವರನ್ನು ಬುದ್ಧಿಜೀವಿ ಎಂಬ ದೃಷ್ಟಿಕೋನದಿಂದ ಕಾಣುತ್ತಿದ್ದರು. ಆದರೆ, ಅವರು ಏನು ಮಾಡಿದರೋ ಅದನ್ನು ಪ್ರಚೋದಿಸಿದಂತಹ ಪ್ರೇಮದ ಉಪಸ್ಥಿತಿಯ ಬಗೆಗೆ ತೀರಾ ಅಪರೂಪವಾಗಿ ಮಹತ್ವ ನೀಡುತ್ತಿದ್ದರು. ಅವರು ಭಾರತದ ಸಾಂಸ್ಕೃತಿಕ ರಾಯಭಾರಿ ಮತ್ತು ಸಾರ್ವಜನಿಕ ಉಪನ್ಯಾಸಕಾರರಾಗಿದ್ದಾಗಿನ ದಿನಗಳಲ್ಲಿ ಅವರ ಈ ಪ್ರೇಮವು ಸೂಕ್ಷ್ಮ ಸ್ವರೂಪದಲ್ಲಿ ಇದ್ದುದನ್ನು ನಾನು ಗ್ರಹಿಸಿದ್ದೇನೆ. ಆದರೆ ಅವರ ಅಧ್ಯಕ್ಷತೆಯ ಅವಧಿಯಲ್ಲಿ ಅದು ಜ್ವಲಂತವಾಗಿ,

ಜೀವಂತವಾದ ತುಂಬು ಪ್ರವಾಹದ ಪ್ರತ್ಯಕ್ಷ ಗಂಗೆಯಂತೆ ಕಂಡುಬಂದಿತು. ಅಲ್ಲಿ ಯಾವ ಸೂಕ್ಷ್ಮತೆಗಳೂ ಇರಲಿಲ್ಲ; ಅವರಿಂದ ಹರಿದುಬರುತ್ತಿದ್ದ ಅಗಾಧವಾದ ನದಿಯಾಗಿತ್ತು ಅದು. ಅದರಲ್ಲಿ ಮುಳುಗಿ ಪವಿತ್ರಗೊಳ್ಳುವುದು ನಮ್ಮ ಕೆಲಸವಾಗಿತ್ತು.

೧೯೬೦ರಲ್ಲಿ, ನಾನು ಚಂಡೀಗಢದ ಸರ್ಕಾರಿ ಕಾಲೇಜಿನಿಂದ, ಪಿಎಚ್.ಡಿ ಮಾಡುವ ಸಲುವಾಗಿ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾಕ್ಕೆ ಹೋಗಲು, ಐದು ವರ್ಷಗಳ ಕಾಲ ರಜಾ ತೆಗೆದುಕೊಂಡೆ. ನಾನು ಡಿಸರ್ಟೇಷನ್ ಬರೆಯುತ್ತಿದ್ದ ಸಮಯದಲ್ಲಿ, ನನ್ನ ಸಲಹೆಗಾರರು ಯಾವುದೋ ಸಂಶೋಧನೆಯ ಕಾರ್ಯ ಯೋಜನೆಗೆಂದು, ಫಿಲಿಫೈನ್ಸ್‌ಗೆ ಹೊರಟುಹೋದರು. ನನ್ನ ಐದು ವರ್ಷಗಳು ಮುಗಿದುಹೋಗುವುದರಲ್ಲಿತ್ತು. ಹಾಗಾಗಿ ನಾನು ಒಂದು ದ್ವಂದ್ವದಲ್ಲಿ ಸಿಕ್ಕಿಕೊಂಡಿದ್ದೆ. ಪಿಎಚ್.ಡಿ.ಯನ್ನು ಪೂರ್ಣಗೊಳಿಸದೇ ಸ್ಟೇಟ್ಸ್‌ನಿಂದ ಹಿಂದಿರುಗಿಬಂದರೆ, ಅದನ್ನು ಸಂಪೂರ್ಣಗೊಳಿಸಲು ನಾನು ಮತ್ತೆ ಎಂದೂ ಸ್ಟೇಟ್ಸ್‌ಗೆ ಬರಲು ಸಾಧ್ಯವಾಗುವುದಿಲ್ಲ. ಮತ್ತು ನಾನೇನಾದರೂ ಅಲ್ಲಿಯೇ ಉಳಿದುಕೊಂಡರೆ, ಚಂಡೀಘಡದ ಕಾಲೇಜಿನಲ್ಲಿನ ನನ್ನ ಕೆಲಸವನ್ನು ನಾನು ಖಂಡಿತ ಕಳೆದುಕೊಳ್ಳುತ್ತಿದ್ದೆ. ಏನು ಮಾಡಬೇಕೆಂದು ನನಗೆ ತಿಳಿಯಲಿಲ್ಲ. ನನ್ನ ಈ ದ್ವಂದ್ವವನ್ನು ವಿವರಿಸಿ ಸ್ವಾಮೀಜಿಯವರಿಗೆ ಪತ್ರ ಬರೆದು, ಅವರ ಸಲಹೆಗಾಗಿ ಪ್ರಾರ್ಥಿಸಿದೆ. ಅವರು ಒಡನೆಯೇ ಉತ್ತರಿಸಿದರು. ಆದರೆ ಅದು ಸಂಕ್ಷಿಪ್ತವಾಗಿತ್ತು. ಅವರು ಒಂದೇ ಒಂದು ವಾಕ್ಯವನ್ನು ಬರೆದಿದ್ದರು "ನನ್ನ ಪ್ರೀತಿಯ ನಿರ್ಮಲಾ, ನಿನ್ನಲ್ಲಿ ನೀನು ಶ್ರದ್ಧೆಯಿಡು, ಪ್ರೀತಿ ಮತ್ತು ಆಶೀರ್ವಾದಗಳೊಂದಿಗೆ ವಾತ್ಸಲ್ಯಪೂರ್ವಕ, ಸ್ವಾಮಿ ರಂಗನಾಥಾನಂದ."

ಅವರ ಒಂದು ಸಾಲಿನ ಪತ್ರವನ್ನು ನಾನು ಮತ್ತೆ ಮತ್ತೆ ಓದಿದೆ ಮತ್ತು ಶ್ರದ್ಧೆಯೆಂದರೆ ಏನು ಎಂದು, ನನ್ನ ಈ ಸಂಕಟದ ಸಮಯದಲ್ಲಿ ನಾನು ಅದನ್ನು ನನಗೇ ಹೇಗೆ ಅನ್ವಯಿಸಿಕೊಳ್ಳಬಲ್ಲೆ ಎಂದು ಚಿಂತಿಸಿದೆ. ನಾನು ಅತ್ಯಂತ ಹೆಚ್ಚಿನ ಗೊಂದಲಕ್ಕೊಳಗಾದೆ. ಪದಗಳನ್ನು, ಅವುಗಳ ಹಿಂದೆ ಇರುವ ಪರಿಕಲ್ಪನೆಗಳನ್ನು ನಿಜವಾಗಿ ಅರ್ಥಮಾಡಿಕೊಳ್ಳದೆಯೇ ಅಥವಾ ಅದನ್ನು ಅಂತರ್ಗತಗೊಳಿಸಿಕೊಳ್ಳದೆಯೇ, ನಾವು ಹೇಗೆ ಉಪಯೋಗಿಸುತ್ತೇವೆ ಎಂಬುದು ಪ್ರಥಮ ಬಾರಿಗೆ ನನ್ನ ಮನಸ್ಸಿಗೆ ಹೊಳೆಯಿತು. ಶ್ರದ್ಧೆ ಎಂಬ ಶಬ್ದದ ಬಗೆಗೆ ಆಗ ನಾನು ತಿಳಿದುಕೊಂಡಿದ್ದು ಎಷ್ಟು ಅಲ್ಪ ಪ್ರಮಾಣದ್ದು ಎಂದು ಅರಿವಾಯಿತು. ಆದರೆ ಈಗ ಆ ಒಂದು ವಾಕ್ಯ ಅದರೊಡನೆ ಇದ್ದ ಆಶೀರ್ವಾದ ನನ್ನನ್ನು ಸರಿಯಾದ ಮಾರ್ಗದಲ್ಲಿ ಸ್ಥಾಪಿಸಿತು ಮತ್ತು ನನ್ನ ಪಿಎಚ್.ಡಿಯನ್ನು ಸಂಪೂರ್ಣಗೊಳಿಸಲು ಧೈರ್ಯ, ಶಕ್ತಿ ಮತ್ತು ದೃಢ ಸಂಕಲ್ಪಗಳನ್ನು ನೀಡಿದವು. ವ್ಯಕ್ತಿಗಳನ್ನು ಅವರ ಆಧ್ಯಾತ್ಮಿಕ, ಮಾನಸಿಕ, ಭಾವನಾತ್ಮಕ ಮತ್ತು ಲೌಕಿಕ ಮುಂತಾದ ವೈಯಕ್ತಿಕ ವಿಕಾಸದೆಡೆಗೆ ಜಾಗೃತಗೊಳಿಸುವ ಅವರ ಸೂಕ್ಷ್ಮ, ಆದರೆ ಪ್ರಾಮಾಣಿಕ ರೀತಿಗೆ ಇದು ಒಂದು ಉದಾಹರಣೆ. ಇದಾದ ಒಂದು ತಿಂಗಳ ನಂತರ ನಾನು ಸ್ವಾಮಿ ಮುಖ್ಯಾನಂದಜೀಯವರಿಂದ ಒಂದು ಪತ್ರ ಪಡೆದೆ. ಅದರಲ್ಲಿ ನನ್ನ ರಜಾ ಅವಧಿಯು ಮತ್ತೊಂದು ವರ್ಷದ ತನಕ ವಿಸ್ತರಣೆಗೊಂಡಿರುವುದನ್ನು ಅವರು ನನಗೆ ತಿಳಿಸಿದ್ದರು. ಇದು ನನ್ನನ್ನು ಆಶ್ಚರ್ಯಗೊಳಿಸಿತು. ಏಕೆಂದರೆ ನಾನು ಮುಖ್ಯಾನಂದಜೀಯವರನ್ನಾಗಲೀ, ಬೇರೆ ಯಾರನ್ನಾಗಲೀ ನನ್ನ ರಜಾ ವಿಸ್ತರಣೆಯ ಬಗೆಗೆ ಕೇಳಿಕೊಂಡಿರಲಿಲ್ಲ. ನನಗೆ ಸ್ವಾಮಿ ಮುಖ್ಯಾನಂದಜೀಯವರ ಪರಿಚಯವೇ ಇರಲಿಲ್ಲ. ಅವರು ಆಗ ಚಂಡೀಗಢ ಆಶ್ರಮದ ಮುಖ್ಯಸ್ಥರಾಗಿದ್ದರೆಂದು ಅವರ ಪತ್ರದಿಂದ ನನಗೆ ತಿಳಿಯಿತು. ಸ್ವಾಮಿ ರಂಗನಾಥಾನಂದಜೀಯವರು, ನನ್ನ ಪತ್ರ ತಲುಪಿದ ನಂತರ, ಸ್ವಾಮಿ ಮುಖ್ಯಾನಂದರಿಗೆ ಪತ್ರ ಬರೆದು ನನ್ನ ರಜದ ಅವಧಿಯನ್ನು ವಿಸ್ತರಿಸಲು ಪ್ರಯತ್ನಿಸುವಂತೆ ತಿಳಿಸಿದ್ದರು. ಆಗ ಸ್ವಾಮಿ ಮುಖ್ಯಾನಂದಜೀಯವರು ಪಂಜಾಬಿನ ವಿದ್ಯಾಮಂತ್ರಿಗಳಿಗೆ ಕರೆಮಾಡಿ, ಅವರಿಗೆ ನನ್ನ ಪರಿಸ್ಥಿತಿಯನ್ನು ವಿವರಿಸಿದ್ದರು ಮತ್ತು ನನ್ನ ರಜದ ಅವಧಿಯ ವಿಸ್ತರಣೆಗಾಗಿ ನನ್ನ ಪರವಾಗಿ ಅವರನ್ನು ಪ್ರಾರ್ಥಿಸಿದ್ದರು.

ಸ್ವಾಮಿ ಮುಖ್ಯಾನಂದಜೀಯವರು ನನಗೆ ಪತ್ರ ಬರೆಯದೇ ಇದ್ದಿದ್ದರೆ, ನನ್ನ ರಜದ ಅವಧಿಯ ವಿಸ್ತರಣೆಗೆ ಸ್ವಾಮಿ ರಂಗನಾಥಾನಂದಜೀಯವರು ಕಾರಣೀಭೂತರೆಂದು ನನಗೆ ಎಂದೂ ತಿಳಿಯುತ್ತಿರಲಿಲ್ಲ. ಏಕೆಂದರೆ, ಅವರು ಎಂದೂ ನನಗೆ ಬರೆದ ಪತ್ರದಲ್ಲಿ ಈ ಸಂಗತಿಯನ್ನು ಉಲ್ಲೇಖಿಸಿರಲಿಲ್ಲ ಅಥವಾ ಭವಿಷ್ಯದಲ್ಲಿ ಕೂಡ, ನಮ್ಮ ಮಾತುಕತೆಗಳಲ್ಲಾಗಲೀ, ನಮ್ಮ ಭೇಟಿಗಳಲ್ಲಾಗಲೀ, ಎಂದೂ ಅದರ ಬಗೆಗೆ ಮಾತನಾಡಿರಲಿಲ್ಲ. ಈ ರೀತಿಯಲ್ಲಿ ಅವರು ಅಸಂಖ್ಯ ಜನರಿಗೆ ಸಹಾಯಮಾಡಿದ್ದರೆಂದು, ಅವರ ಕಾರ್ಯದರ್ಶಿಗಳ ಮೂಲಕ ನನಗೆ ತಿಳಿದುಬಂದಿದೆ. ಸಹಾಯ ಮಾಡುವುದು ಅವರಿಗೆ ಸಹಜ ಸ್ವಭಾವವಾಗಿತ್ತು. ಸಹಾಯದ ಆವಶ್ಯಕತೆಯಿತ್ತು ಮತ್ತು ತಾವು ಸಹಾಯ ಮಾಡಲು ಸಾಧ್ಯ ಎಂದು ಅವರು ಭಾಸುತ್ತಿದ್ದುದರಿಂದ ಅವರು ಸಹಾಯಮಾಡುತ್ತಿದ್ದರು. ವ್ಯಕ್ತಿಯು ಸಹಾಯಕ್ಕಾಗಿ ತಮ್ಮನ್ನು ಪ್ರಾರ್ಥಿಸಲಿ ಎಂದು ಅವರು ಎಂದೂ ಕಾಯುತ್ತಿರಲಿಲ್ಲ ಮತ್ತು ಸಹಾಯ ಮಾಡಿದುದಕ್ಕಾಗಿ ಅವರನ್ನು ವಂದಿಸಬೇಕು ಎಂದು ಕೂಡ ನಿರೀಕ್ಷಿಸುತ್ತಿರಲಿಲ್ಲ. ತಮ್ಮ ಅನುಕಂಪದಿಂದಾಗಿ ಅವರು ಎಲ್ಲಿ ಎಲ್ಲಿ ಸಾಧ್ಯವೋ ಅಲ್ಲೆಲ್ಲಾ ತಲುಪಿ ನೆರವು ನೀಡಿದರು. ಆ ನೆರವನ್ನು ಪಡೆದವರು ಯಾರೆಂದು ತಿಳಿಯದೇ ಮತ್ತು ನೆನಪಿಸಿಕೊಳ್ಳದೇ ಸಹಾಯಹಸ್ತ ನೀಡುತ್ತಿದ್ದರು. ಅದು ನನ್ನ ವಿಷಯದಲ್ಲಿಯೂ ನಿಜವಾಯಿತು. ೧೯೯೪ರಲ್ಲಿ ಅವರ ದರ್ಶನಕ್ಕಾಗಿ ನಾನು ಹೈದರಾಬಾದಿಗೆ ಹೋದೆ. ಅವರ ಮಾರ್ಗದರ್ಶನ ಮತ್ತು ಸಹಾಯಕ್ಕಾಗಿ ನನ್ನ ಕೃತಜ್ಞತೆಗಳನ್ನು ಅಭಿವ್ಯಕ್ತಿಸಿದೆ. ಅದು ಬಹಳ ಹಿಂದಿನ ಮಾತಾಗಿತ್ತು ನಿಜ. ಆದರೆ ಅವರು ಅದು ತಮಗೆ ನೆನಪಿರುವ ಯಾವುದೇ ಸೂಚನೆಯನ್ನೂ ನೀಡಲಿಲ್ಲ. ಅದೆಂತಹ ಅನುಕಂಪಭರಿತ, ಸಹಾಯ ನೀಡುವ ವ್ಯಕ್ತಿತ್ವವಾಗಿತ್ತು ಅವರದು! ಸಂಪೂರ್ಣವಾಗಿ, ಸಾತ್ವಿಕರಾಗಿದ್ದರು ಅವರು!!

ವಸ್ತುಸ್ತಿತಿಯು ಅದೆಷ್ಟೇ ವಿಷಮವಾಗಿರುವಂತೆ ತೋರಿದರೂ, ಯಾವಾಗಲೂ ಅವರು ಪ್ರಕಾಶಮಾನವಾದ ಭವಿಷ್ಯದ ಬಗೆಗೆ ಭರವಸೆ ಹೊಂದಿರುತ್ತಿದ್ದರು. ಇದು ವಿಶೇಷವಾಗಿ ಭಾರತದ ಭವಿಷ್ಯದ ಬಗೆಗೆ ಕೂಡ ಸತ್ಯವಾಗಿತ್ತು. ನಾವು ಇಂತಹ ಉನ್ನತವಾದ ತತ್ತ್ವಜ್ಞಾನವನ್ನು ಪಡೆದಿದ್ದೇವೆ; ಆದರೆ, ನಮ್ಮ ದೈನಂದಿನ ಜೀವನದಲ್ಲಿ ಅದನ್ನು ಆಚರಣೆಗೆ ತರುವುದರಲ್ಲಿ ತೀರಾ ನಿಕೃಷ್ಟವಾಗಿದ್ದೇವೆ. ಸರ್ಕಾರದಲ್ಲಿ ಎಲ್ಲ ಮಟ್ಟದಲ್ಲಿಯೂ ಇರುವ ಭ್ರಷ್ಟಾಚಾರ, ಮಹಿಳೆಯರ ಮೇಲಿನ ದಬ್ಬಾಳಿಕೆ, ರಾಜಕಾರಣದಲ್ಲಿ ಕೂಡ ಜಾತೀಯತೆಯ ಆಚರಣೆ ಇವುಗಳ ಬಗೆಗೆ ನಾನು ಅವರೊಡನೆ ಹೇಳಿದ್ದು ನನಗೆ ನೆನಪಾಗುತ್ತದೆ. ಇದಕ್ಕೆ ಉತ್ತಮವಾಗಿ ಅವರು ಹೇಳಿದ್ದರು "ವಸ್ತುಸ್ಥಿತಿಯು ಉತ್ತಮಗೊಳ್ಳುತ್ತದೆ; ನಿಧಾನವಾಗಿ ಮತ್ತು ನಿಧಾನವಾಗಿ, ಸತ್ವಗುಣವು– ಶಾಂತಿ, ಪ್ರಶಾಂತತೆ ಮತ್ತು ಏಕತೆಯ ಗುಣಗಳು– ನಮ್ಮ ಆಲೋಚನೆಯ ರೀತಿಯಲ್ಲಿ ನಂತರ ನಮ್ಮ ಕ್ರಿಯೆಗಳಲ್ಲಿ ಹೊರಹೊಮ್ಮುತ್ತದೆ. ಎಂದೂ ಭರವಸೆಯನ್ನು ಕಳೆದುಕೊಳ್ಳಬೇಡ. ಅದಕ್ಕಾಗಿ ನಾವು ಕೆಲಸ ಮಾಡುತ್ತಲೇ ಇರಬೇಕು."

ಒಂದು ಬಾರಿ ಮಹಾರಾಜ್‌ರಿಗೆ ನಾನು ಹೀಗೆ ಹೇಳಿದ್ದು ಈಗಲೂ ನನಗೆ ನೆನಪಿದೆ "ಈಗ ನಡೆಯುತ್ತಿರುವುದನ್ನೆಲ್ಲಾ ನೋಡುತ್ತಿದ್ದರೆ ನೀವು ಹೇಗೆ ತಾನೇ ಅಷ್ಟೊಂದು ಭರವಸೆಯಿಂದಿರಲು ಸಾಧ್ಯ?" ಅವರು ಪುನರುಚ್ಚರಿಸಿದರು "ಎಂದೂ ಭರವಸೆಯನ್ನು ಕಳೆದುಕೊಳ್ಳಬೇಡ. ನಡೆಯುತ್ತಿರುವ ಒಳ್ಳೆಯ ಕೆಲಸಗಳತ್ತ ನೋಡು." ಅವರು ಆ ವಿಷಯದ ಬಗೆಗೆ ವಿಸ್ತಾರವಾಗಿ ಮಾತನಾಡಿದರು. ಹೆಣ್ಣುಮಕ್ಕಳು ತಮ್ಮ ಸಂಕೋಲೆಗಳಿಂದ ಹೊರಗೆ ಬರುತ್ತಿರುವುದನ್ನು, ಬಡವರು ಕೂಡ ಶಾಲೆಗೆ ಹೋಗುತ್ತಿರುವುದನ್ನು ತಿಳಿಸಿದರು. ಕ್ರಮೇಣ ಸಾಮಾಜಿಕ ಹಾಗೂ ಆರ್ಥಿಕ ಪರಿಸರಗಳು ಬದಲಾವಣೆಗೆ ಪಕ್ಕಾಗುತ್ತಿದ್ದವು. ನಾವು ನಮ್ಮ ವ್ಯಕ್ತಿತ್ವಗಳನ್ನು ನಿರ್ಮಾಣ ಮಾಡಿಕೊಳ್ಳಬೇಕು ಮತ್ತು ನಮ್ಮ ಮನಸ್ಸುಗಳನ್ನು ಸ್ವಲ್ಪಸ್ವಲ್ಪವಾಗಿ ವಿಸ್ತಾರಗೊಳಿಸಿಕೊಳ್ಳಬೇಕು. ಅವರು ಹೇಳುತ್ತಿದ್ದರು "ಯಾವಾಗಲೂ ಭರವಸೆ ಹೊಂದಿರು."

* * * *

# ೯೩. ಸರಳ ಜೀವನ, ಉನ್ನತ ಚಿಂತನ

–ಮೀನಾಕ್ಷಿ ಶಿವರಾಮಕೃಷ್ಣನ್*

ಕೊಲ್ಕತ್ತಾದಲ್ಲಿ, ಕೊಲ್ಕತ್ತಾ ರಾಮಕೃಷ್ಣ ಸಾಂಸ್ಕೃತಿಕ ಸಂಸ್ಥೆಯ ಸುಂದರವಾದ ಸಭಾಂಗಣದಲ್ಲಿ ಸ್ವಾಮಿ ರಂಗನಾಥಾನಂದರು ನೀಡಿದ ಪ್ರವಚನಗಳನ್ನು ಪರವಶರಾಗಿ ಏಕಾಗ್ರತೆಯಿಂದ ಆಲಿಸುತ್ತಿದ್ದ ದಿನಗಳನ್ನು, ಮನಸ್ಸು ತನ್ನ ನೆನಪಿನ ಓಣಿಗೆ ಹಿಂದಿರುಗಿ ಸ್ಮರಿಸುತ್ತದೆ. ಮುಂದಿನ ವರ್ಷಗಳಲ್ಲಿ, ಅವರೊಡನೆ ನಾವು ವೈಯಕ್ತಿಕವಾಗಿ ಮಾತನಾಡುವಂತಹ ಅನೇಕ ಸಂದರ್ಭಗಳು ಲಭಿಸಿದ್ದವು ಮತ್ತು ಅವರ ಆಶೀರ್ವಾದ ಪಡೆದಿದ್ದಕ್ಕಾಗಿ ನಮ್ಮ ಅದೃಷ್ಟದ ತಾರೆಗಳಿಗೆ ವಂದಿಸಿದ್ದೆವು. ಹಾಗಿದ್ದರೂ, ಕೆಲವು ಬಹಳ ವಿಶಿಷ್ಟವಾದ ಸಂಗತಿಗಳನ್ನು ದಾಖಲಿಸಲು ಇಚ್ಛಿಸುತ್ತೇನೆ.

ನನಗೆ ಯಾವುದೇ ರೀತಿಯ ಸಮಸ್ಯೆ ಉಂಟಾದರೂ, ಅವಕಾಶವಿದ್ದರೆ, ಅದನ್ನು ಸ್ವಾಮೀಜಿಯವರಿಗೆ ಹೇಳಿಕೊಳ್ಳುವುದು ನನಗೆ ಅಭ್ಯಾಸವಾಗಿಬಿಟ್ಟಿತ್ತು. ನನ್ನ ಪತಿಯನ್ನು ಅವರು ಪ್ರೀತಿಯಿಂದ 'ಶಿವ' ಎಂದು ಕರೆಯುತ್ತಿದ್ದರು. ನನ್ನ ಪತಿ ನಿಯಮಿತವಾಗಿ ಪ್ರಚನಗಳಿಗೆ ಹಾಜರಿರುತ್ತಿರಲಿಲ್ಲ. ಹಾಗಿದ್ದರೂ ಸ್ವಾಮೀಜಿಯವರು ಅವರ ಬಗೆಗೆ ವಿಚಾರಿಸುವುದನ್ನು ಎಂದೂ ಮರೆಯುತ್ತಿರಲಿಲ್ಲ. ಒಮ್ಮೆ ಅವರು ನನ್ನನ್ನು ಕೇಳಿದರು: "ಹೇಗಿದ್ದಾರೆ ಶಿವ?", "ಸುಮ್ಮತ್ತಾನ್ ಇರಕ್ಕಾರ್" ಎಂದು ನಾನು ಉತ್ತರಿಸಿದಾಗ, ನನ್ನ ಧ್ವನಿಯಲ್ಲಿ ಅಸಮ್ಮತಿಯ ಧಾಟಿಯಿತ್ತೆಂದು ತೋರುತ್ತದೆ. ತಮಿಳಿನಲ್ಲಿ 'ಏನೂ ಮಾಡುತ್ತಿಲ್ಲ' ಎಂದು ಆ ಮಾತುಗಳ ಅರ್ಥ. ನಂತರ ಹತ್ತು ನಿಮಿಷಗಳ ತನಕ, ಮನಸ್ಸಿಗೆ ನಾಟುವಂತೆ ಬುದ್ಧಿವಾದದ ಸುತ್ತಿಗೆಯೇಟಿನಂತಹ ಮಾತುಗಳನ್ನು ಹೇಳಿ 'ಏನನ್ನೂ ಮಾಡದೆ ಇರುವುದು' ಎಷ್ಟು ಕಷ್ಟವೆಂದೂ, ಮತ್ತು ಯಾವುದೇ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳದೆಯೂ, ಶಾಂತಿ ಮತ್ತು ನೆಮ್ಮದಿಯಿಂದಿರುವುದು ಕೇವಲ ಮಾನಸಿಕವಾಗಿ ವಿಕಸನ ಹೊಂದಿದವರಿಗೆ ಮಾತ್ರ ಸಾಧ್ಯವೆಂದೂ ಸ್ವಾಮೀಜಿ ತಿಳಿಸಿದರು. ಅಂತರಂಗ ಮತ್ತು ಬಹಿರಂಗಗಳಲ್ಲಿ ಶಾಂತವಾಗಿರುವುದರ ಮಹತ್ವವನ್ನೂ, ಬೆಲೆಯನ್ನೂ ಶ್ಲಾಘಿಸಲು ಅರಿತುಕೊಂಡ ಮೊದಲ ಸಂದರ್ಭ ಅದಾಗಿತ್ತು.

ನನ್ನ ತಾಯಿಯೊಡನೆ ಮಾತನಾಡುವುದು ಸ್ವಾಮೀಜಿಗೆ ಬಹಳ ಇಷ್ಟವಾಗಿದ್ದುದರಿಂದ ಅವರು ಚೆನ್ನೈಗೆ ಬಂದಾಗಲೆಲ್ಲಾ ನಮ್ಮ ಮನೆಗೆ ಭೇಟಿ ನೀಡುತ್ತಿದ್ದರು. ಆ ವೇಳೆಗಾಗಲೇ ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧರಾಗಿದ್ದರು. ಹಾಗಾಗಿ ಭಾನುವಾರದ ನನ್ನ ತರಗತಿಯ ಚಿಕ್ಕಮಕ್ಕಳ ಗಾಯನ, ನರ್ತನಗಳನ್ನು ನೋಡುವಂತೆ ಆಹ್ವಾನಿಸಲು ನಾನು ಸ್ವಲ್ಪ ಹಿಂದೆಮುಂದೆ ನೋಡಿದೆ. ಹಾಗಿದ್ದರೂ, ಆ ಮಕ್ಕಳನ್ನು ಉದ್ದೇಶಿಸಿ ಮಾತನಾಡುವುದು ಅವರಿಗೆ ಲಘುವಾದ ಅಥವಾ ಅಪ್ರಮುಖ ಘಟನೆಯಾಗಿರಲಿಲ್ಲ. ಆ ಪುಟ್ಟಮಕ್ಕಳಿಗೆ ಅವರು ಹೇಳಿದ ಕಥೆಯ ಸರಳತೆ ಮತ್ತು ವಿನಮ್ರತೆಗಳು ಪ್ರಶಂಸಾರ್ಹವಾಗಿದ್ದವು. ಇದನ್ನೇ ಏನು ಅವರು ಪದೇ ಪದೇ "ಸರಳ ಜೀವನ, ಉನ್ನತ ಚಿಂತನ" ಎಂದು ಹೇಳುತ್ತಿದ್ದುದು? ಮಕ್ಕಳಲ್ಲಿ ಅವರು ದಿವ್ಯತೆಯನ್ನು ಕಂಡಿದ್ದರೇನು?

ವಾರ್ಷಿಕ ಶಿಬಿರಗಳ ಅವಧಿಯಲ್ಲಿ ಸ್ವಾಮೀಜಿಯವರು ತ್ರಿಶೂರಿಗೆ ತಪ್ಪದೆ ಭೇಟಿ ನೀಡುವ ಕಾಲವೊಂದಿತ್ತು. ಅನೇಕ ಬಾರಿ ಆ ಶಿಬಿರಗಳಲ್ಲಿ ನಾನು ಕೂಡ ಒಬ್ಬಳು ಭಾಗವಹಿಸುವವಳಾಗಿದ್ದೆ. ಒಂದು ವರ್ಷ ತ್ರಿಕ್ಕೂರಿನ ನಿವಾಸಿಗಳು (ಸ್ವಾಮೀಜಿಯವರ ಜನ್ಮಸ್ಥಳ) ಅವರನ್ನು ವೈಭವಪೂರ್ಣ ಸ್ವಾಗತದಿಂದ ಗೌರವಿಸಿದರು.

---

* ಬೆಂಗಳೂರಿನ ಒಬ್ಬ ಭಕ್ತೆ

ಸ್ವಾಮೀಜಿಯವರು, ನನ್ನನ್ನೂ ಬರಲು ಇಷ್ಟವಿದೆಯೇ ಎಂದು ಕೇಳಿದರು. 'ಹೌದು, ನಾನು ಇಷ್ಟಪಡುತ್ತೇನೆ' ಎಂದು ಹೇಳಿದೆ. ಆಗ ನನಗೋಸ್ಕರ ಕಾರುಗಳಲ್ಲಿ ಕೆಲವು ಮರುವ್ಯವಸ್ಥೆಗಳನ್ನು ಮಾಡಬೇಕಾಯಿತು. ವಿಧ್ಯುಕ್ತ ಶಿಷ್ಟಾಚಾರಗಳು ಮುಗಿದ ನಂತರ ಸ್ವಾಮೀಜಿಯವರು ನಮ್ಮನ್ನು ತಮ್ಮ ಪೂರ್ವಜರು ವಾಸಿಸುತ್ತಿದ್ದ ಮನೆಗೆ ಕರೆದುಕೊಂಡು ಹೋದರು ಮತ್ತು ಅವರು ಅಧ್ಯಯನ ಮಾಡುತ್ತಿದ್ದ ಸ್ಥಳ, ಸ್ನೇಹಿತರೊಡನೆ ಗೋಲಿ ಆಡುತ್ತಿದ್ದ ಜಾಗ, ತಮ್ಮ ತಾಯಿಯವರೊಡನೆ ಕುಳಿತು ಮಾತನಾಡುತ್ತಿದ್ದ ಸ್ಥಳ, ತಾವು ಈಜಲು ನದಿಯೊಳಕ್ಕೆ ಯಾವ ಬಂಡೆಯಿಂದ ನೆಗೆಯುತ್ತಿದ್ದರೆಂಬುದು, ಮುಂತಾಗಿ ಎಲ್ಲವನ್ನೂ ನಮಗೆ ತೋರಿಸಿದರು. ಅದು ಬಹಳ ಆಸಕ್ತಿಪೂರ್ಣವೂ, ಕುತೂಹಲಭರಿತವೂ ಆಗಿತ್ತು. ಅಲ್ಲಿ ಸ್ವಾಮೀಜಿಯವರು ಬಾಲಕನಾಗಿದ್ದಾಗ ಹಾಗೆ ಜೀವಿಸುತ್ತಿದ್ದರೆಂದು ನಾವು ಕಲ್ಪಿಸಿಕೊಳ್ಳಬಹುದಾಗಿತ್ತು. ಆದರೆ ಅವರು ಕೊನೆಯಲ್ಲಿ ನೀಡಿದ ಹೇಳಿಕೆ ಮನಸ್ಸನ್ನು ಮುಟ್ಟುವಂತಿತ್ತು. ಅವರು ಹೇಳಿದರು: "ಇದು ನಾನು ಹುಟ್ಟಿದ ಮನೆಯೆಂಬ ಕಾರಣಕ್ಕೆ ನಾನು ಇಲ್ಲಿಗೆ ಬರುತ್ತಿಲ್ಲ. ಈ ಕುಟುಂಬವು ರಾಮಕೃಷ್ಣರನ್ನು ಪೂಜಿಸುತ್ತದೆ." ನಂತರ ಅವರು ನಮ್ಮನ್ನು ಪೂಜಾ ಕೋಣೆಗೆ ಕರೆದುಕೊಂಡು ಹೋದರು. ಅಲ್ಲಿ ಪ್ರತಿನಿತ್ಯವೂ ಶ್ರೀರಾಮಕೃಷ್ಣ, ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರನ್ನು ಪೂಜಿಸುತ್ತಿದ್ದರು. ಇವು ಕೇವಲ ಕೆಲವು ಪ್ರಸಂಗಗಳಾಗಿದ್ದವು. ಆದರೆ ಅವರು ಹೇಳಿದ ಕೆಲವು ನಿರ್ದಿಷ್ಟ ಸಂಗತಿಗಳು ನಮ್ಮ ಹೃದಯವನ್ನು ಭೇದಿಸಿ, ಜೀವನದ ಬಗೆಗೆ ನಮ್ಮ ದೃಷ್ಟಿಕೋನವನ್ನು ಬದಲಾಯಿಸಿದವು.

ಇದು ಬೆಂಗಳೂರಿನಲ್ಲಿ ನಾವು ಏರ್ಪಡಿಸಿದ್ದ, ದಿವಾನಖಾನೆಯ ಪ್ರವಚನದಲ್ಲಿ ನಡೆದ ಘಟನೆಯಾಗಿದೆ. ಸ್ವಾಮೀಜಿಯವರಿಗೆ ಅಲ್ಪಾಹಾರ ಪಾನೀಯಗಳನ್ನು ನೀಡಿದ ನಂತರ, ನಾನು ಎಲ್ಲ ಕೆಲಸಕಾರ್ಯಗಳನ್ನೂ ಬಿಟ್ಟುಬಿಡುವುದಾಗಿಯೂ ಮತ್ತು ನನ್ನ ಸಮಯವನ್ನು ಜಪ, ಧ್ಯಾನಗಳಿಗೆ ಮೀಸಲಿಡುವುದಾಗಿಯೂ ಹೇಳಿದೆ. ಅವರು ನನ್ನನ್ನು ಆಶೀರ್ವದಿಸುತ್ತಾರೆ ಎಂದು ನಾನು ಆಲೋಚಿಸಿದೆ. ಆದರೆ ಅವರು ಹೇಳಿದರು "ಬಾ, ಇಲ್ಲಿ ಕುಳಿತುಕೊ." ನಾನು ಕುಳಿತುಕೊಂಡೆ. "ನಿನಗೆ ಅಡುಗೆ ಮಾಡಲು ಬರುವುದೇ?" ಎಂದು ಅವರು ಕೇಳಿದಾಗ ಇದ್ದಕ್ಕಿದ್ದಂತೆ ಆಕಾಶದಿಂದ ಸಿಡಿಲು ಬಡಿದಷ್ಟು ಆಶ್ಚರ್ಯವಾಯಿತು. ಆಹಾರದಲ್ಲಿ ಏನೋ ದೋಷವಿದ್ದಿತೆಂದು ನಾನು ಆಲೋಚಿಸಿದೆ ಮತ್ತು ಸಂದೇಹಿಸುತ್ತಾ ಹೇಳಿದೆ "ಹೌದು ಮಹಾರಾಜ್, ಬರುತ್ತೆ." "ನಿನಗೆ ಹೊಲಿಗೆ ಬರುತ್ತದೆಯೇ?" "ಹೌದು ಬರುತ್ತದೆ, ಮಹಾರಾಜ್" ಅಂತಹುದೇ ಪ್ರಶ್ನೆಗಳು ಹಿಂಬಾಲಿಸಿದವು. "ನಿನಗೆ ಕಾರು ಚಾಲಿಸಲು ಬರುತ್ತದೆಯೇ?" "ನಿನಗೆ ಬರೆಯಲು ಬರುತ್ತದೆಯೇ?" 'ನೀನು ಹಾಡಬಲ್ಲೆಯಾ?" "ನೀನು ಹೆಣಿಗೆ ಮಾಡಬಲ್ಲೆಯಾ?" ಹೀಗೆ ಮುಂದುವರಿಯಿತು. ಎಲ್ಲವನ್ನೂ ನಾನು ಸಕಾರಾತ್ಮಕವಾಗಿ ದೃಢವಾಗಿ ಉತ್ತರಿಸಿದ್ದರೂ ಹೀಗೇಕೆ ಪ್ರಶ್ನೆಗಳ ಅಣೆಕಟ್ಟನ್ನೇ ನನ್ನ ಮುಂದಿರಿಸುತ್ತಿದ್ದಾರೆಂದು ನಾನು ಗೊಂದಲಕ್ಕೊಳಗಾದೆ. ಇವೆಲ್ಲವನ್ನೂ ನಾನು ಮಾಡಬಲ್ಲೆನೆಂಬುದು ಅವರಿಗೆ ಮೊದಲೇ ತಿಳಿದಿತ್ತು. ನಂತರ, ಇವೆಲ್ಲವನ್ನೂ ನಾನು ಯಾರಿಂದ ಕಲಿತೆನೆಂದು ಅವರು ಕೇಳಿದರು. ಹಲವಾರು ಸ್ನೇಹಿತರ ಹೆಸರುಗಳನ್ನು ನಾನು ಹೇಳಬೇಕಾಯಿತು. ಅನಂತರ ಅವರು ಹೇಳಿದರು "ನೀನು ಸಮಾಜದಿಂದ ಇಷ್ಟೊಂದನ್ನು ಪಡೆದಿದ್ದೀಯೆ. ನೀನು ಅಷ್ಟೊಂದನ್ನು ಪಡೆದಿರುವ ಸಮಾಜಕ್ಕೆ ಪ್ರತಿಯಾಗಿ ನೀನು ಏನನ್ನು ಹಿಂದಿರುಗಿಸಿ ಕೊಡುತ್ತಿದ್ದೀಯೆ?" ಇವತ್ತಿಗೂ ಮನೆಯಿಂದ ಹೊರಗಿನ ಕೆಲಸಗಳನ್ನು ಬಿಟ್ಟುಬಿಡುವ ಬಗ್ಗೆ ನಾನು ಆಲೋಚಿಸಿದಾಗ ಸ್ವಾಮೀಜಿಯ ಧ್ವನಿಯು ನನ್ನನ್ನು ಅಲ್ಲಾಡಿಸುತ್ತದೆ, ಜಾಗೃತಗೊಳಿಸುತ್ತದೆ. ತಮ್ಮ ಮಾತುಗಳಲ್ಲಿ ಅವರು ಎಂದೂ ಉದ್ರೇಕಗೊಳ್ಳುತ್ತಿರಲಿಲ್ಲ. ಆದರೂ ಅವರ ಮಾತುಗಳು ಜನರು ಎದ್ದು ಕಾರ್ಯಪ್ರವೃತ್ತರನ್ನಾಗಿ ಮಾಡುವಷ್ಟು ಸಮರ್ಥವಾಗಿರುತ್ತಿದ್ದವು.

ಒಂದು ಬಾರಿ, ಪ್ರಶ್ನೋತ್ತರ ಸಮಯದಲ್ಲಿ ಒಂದು ಸಭೆಯಲ್ಲಿ ನಾನು ಕೇಳಿದೆ: "ಸ್ವಾಮೀಜಿ, ಕೋಪವನ್ನು ನಾವು ನಿಯಂತ್ರಿಸಬೇಕೆಂದು ನೀವು ಹೇಳುತ್ತಲೇ ಇರುತ್ತೀರಿ. ಆದರೆ ಕೋಪಗೊಂಡಾದ ಮೇಲೆ ಮಾತ್ರವೇ ನಮಗೆ ನಮ್ಮ ಕೋಪದ ಅರಿವಾಗುತ್ತದೆ. ಏನು ಮಾಡುವುದು?"

ಅವರು ಹೇಳಿದರು: "ಇದು ಬಹಳ ವ್ಯಾವಹಾರಿಕವಾದ ಪ್ರಶ್ನೆ. ಅಂದರೆ ನಿನಗೆ ನಿನ್ನ ಕೋಪದ ಬಗೆಗೆ ಅರಿವಿದೆ ಎಂದಂತಾಯಿತು. ನೀನು ಕೋಪಗೊಂಡ ಪ್ರತಿ ಬಾರಿಯೂ ನಿನಗೆ ನೀನೇ ಹೇಳಿಕೊ, ಕೋಪ ಮಾಡಿಕೊಳ್ಳಲು ನಿನಗೆ ಯಾವುದೇ ಹಕ್ಕೂ ಇಲ್ಲ ಎಂದು. ಅಂತಹ ಆಲೋಚನೆಗಳು ಸಾಕಷ್ಟು ಶಕ್ತವಾಗಿದ್ದರೆ, ಕ್ರಮೇಣ, ಕೋಪವು ನಿಯಂತ್ರಣಕ್ಕೆ ಬರುತ್ತದೆ." ಬಹಳ ವ್ಯಾವಹಾರಿಕವಾದ ನೇರ ಉತ್ತರ. ನಿಜವಾಗಿಯೂ ಸ್ವಾಮೀಜಿಯವರ ಈ ಸಲಹೆಯಿಂದ ಅನೇಕ ವ್ಯಕ್ತಿಗಳು ಪ್ರಯೋಜನ ಪಡೆದಿದ್ದಾರೆ.

ಯಾವಾಗಲೂ ನಾವು ಸ್ವಾಮೀಜಿಯಿಂದ ಸಕ್ಕರೆ ಜೇನುತುಪ್ಪಗಳನ್ನು ಮಾತ್ರವೇ ಪಡೆಯುತ್ತಿರಲಿಲ್ಲ. ಉದಾಹರಣೆಗೆ, ಶ್ರೀ ರಾಮಕೃಷ್ಣ ವಿದ್ಯಾಲಯದಲ್ಲಿ ಪವಿತ್ರ ಮಾತೆಯ ಬಗೆಗೆ ನಾನು ಒಂದು ಉಪನ್ಯಾಸವನ್ನು ಕೊಡುವವಳಿದ್ದೆ. ಸ್ವಾಮೀಜಿಯವರು ಊರಿನಲ್ಲಿಯೇ ಇದ್ದರು. ಅವರು ನನ್ನನ್ನು ಕರೆದು ಹೇಳಿದರು: "ನೀನು ಮಿಂಟ್ ಶಾಲೆಗೆ ಹೋಗುತ್ತಿದ್ದೀಯೆ ಎಂದು ನನಗೆ ತಿಳಿದಿದೆ. ನಾನೂ ಅಲ್ಲಿಗೆ ಹೋಗಬೇಕಾಗಿದೆ. ದಯವಿಟ್ಟು ಬಂದು ನನ್ನನ್ನು ಕರೆದುಕೊಂಡು ಹೋಗು." ನಾನು ಹೇಳಿದೆ: "ಇಲ್ಲ ಸ್ವಾಮೀಜಿ, ನಿಮ್ಮನ್ನು ನಾನು ಮತ್ತೊಂದು ದಿನ ಕರೆದುಕೊಂಡು ಹೋಗುತ್ತೇನೆ. ಇವತ್ತು ಬೇಡ. "ಏಕೆ?" ಎಂದು ಅವರು ಕೇಳಿದರು. ನಾನು ಹೇಳಿದೆ: "ನಾನು ಇವತ್ತು ಒಂದು ಉಪನ್ಯಾಸ ನೀಡಬೇಕಾಗಿದೆ ಮತ್ತು ನಾನು ಈಗಾಗಲೇ, ಆತಂಕಗೊಂಡಿದ್ದೇನೆ. ನೀವು ಕೂಡ ಅಲ್ಲಿರುತ್ತೀರಾದರೆ, ಅದು ಮತ್ತಷ್ಟು ಹೆಚ್ಚುತ್ತದೆ!" ಆದರೆ ಅವರು ಕೇಳಲಿಲ್ಲ. ನಾನು ಅವರನ್ನು ಕರೆದುಕೊಂಡೇ ಹೋಗಬೇಕಾಯಿತು. ನಾನು ಕಾರು ಚಾಲಿಸುವಾಗ ದಾರಿಯಲ್ಲಿ ಅವರು ಹೇಳಿದರು: "ಹುಂ.... ಇಷ್ಟೊಂದು ಅಹಂ, ಎಲ್ಲರೂ ನಿನ್ನ ಬಗೆಗೆ ಒಳ್ಳೆಯದನ್ನೇ ಹೇಳಬೇಕು, ನೀನು ಬಹಳ ಉತ್ತಮಳು ಎಂದು ಹೇಳಬೇಕು ಎಂದು ನೀನು ಬಯಸುತ್ತೀಯೆ. ನಿನ್ನ ಅಹಂಕಾರವನ್ನು ತೆಗೆದುಕೊಂಡುಬಿಡುವಂತೆ ಆ ಮಾತೆಯನ್ನು ನೀನೇಕೆ ಕೇಳಿಕೊಳ್ಳುವುದಿಲ್ಲ?" ನನಗೆ ಛೀಮಾರಿ ಹಾಕಿಯಾಗಿತ್ತು. ಆದರೆ ಬಹಳ ಕುಶಲವಾದ ರೀತಿಯಲ್ಲಿ. ನಾನು ಉಪನ್ಯಾಸ ನೀಡಿದಾಗ ನನ್ನ ಹಿಂದೆಯೇ ಅವರು ಕುಳಿತಿದ್ದರು. ಬೇರೆ ಯಾರೂ ಅವರಿಗಿಂತ ಹೆಚ್ಚು ಪಿತೃಸಮಾನವಾಗಿರಲಾರರು.

ಈ ಮಾತುಗಳನ್ನು ಬರೆಯುತ್ತಿರುವುದರಿಂದ, ಯಾರನ್ನು ಪ್ರೀತಿಯಿಂದ 'ಶಂಕರ್ ಮಹಾರಾಜ್' ಎಂದು ಸಂಬೋಧಿಸುತ್ತಿದ್ದೆವೋ ಆ ವ್ಯಕ್ತಿಯ ನೆನಪಿನಲ್ಲಿ ಆನಂದಿಸಲು ಕೆಲವು ಅಮೂಲ್ಯ ಕ್ಷಣಗಳು ದೊರೆತಂತಾಗಿದೆ. ಅಧ್ಯಕ್ಷ ಮಹಾರಾಜ್ ಆದ ಪರಿವರ್ತನೆಯನ್ನು ನಾವು ಅವರಲ್ಲಿ ನೋಡಿದೆವು. ಆದಾಗ್ಯೂ, ಅವರು ಅಧ್ಯಕ್ಷರಾಗುವುದರ ಬಗೆಗೆ ಹೆಚ್ಚು ಸಂತೋಷಪಡದೇ ಇದ್ದ ವ್ಯಕ್ತಿ ನಾನಾಗಿದ್ದೆ. ಏಕೆಂದರೆ ಪ್ರೀತಿಪಾತ್ರವಾಗಿದ್ದ ಆ ಸಾಮೀಪ್ಯ ಕಳೆದುಹೋಗುತ್ತಿತ್ತು. ನಾನು ಇದನ್ನು ಅವರಿಗೆ ಹೇಳಿದಾಗ ಅವರು ನಕ್ಕುಬಿಟ್ಟರು. ಅಂತಹ ಮಹಾನ್ ಆಧ್ಯಾತ್ಮಿಕ ವ್ಯಕ್ತಿತ್ವವು ನಮ್ಮ ಸುತ್ತಮುತ್ತ ಇದ್ದಾಗ ಮತ್ತು ನಾವು ಉನ್ನತ ಬೌದ್ಧಿಕ ಸಾಮರ್ಥ್ಯದ ಪ್ರವಚನಗಳನ್ನು ಕೇಳಬಲ್ಲವರಾಗಿದ್ದೆವು. ಇಂತಹ ವ್ಯಕ್ತಿಯ ಕಾಲದಲ್ಲಿ ಜೀವಿಸಿರಲು ನಾವು ಅದೃಷ್ಟ ಮಾಡಿದ್ದೆವು ಎಂಬುವಷ್ಟು ಸರಳವಲ್ಲ ಇದು. ಆದರೆ, ಅವರು ನಮ್ಮನ್ನು ಅರಿತಿದ್ದರು, ನಾವು ಎಲ್ಲಿ ಅವರನ್ನು ಭೇಟಿ ಮಾಡಿದರೂ, ನಮ್ಮನ್ನು ನಮ್ಮ ಹೆಸರು ಹಿಡಿದು ಕರೆಯುತ್ತಿದ್ದರು, ಸ್ವಾಗತಿಸುತ್ತಿದ್ದರು ಎಂದುಕೊಳ್ಳುವಾಗ ನಾವು ಧನ್ಯರಾದೆವು ಎಂದು ಭಾವಿಸುತ್ತೇವೆ. ಎಂತಹ ಮರು ಆಶ್ವಾಸನೆ ನೀಡುವ ನೆನಪು!

* * * *

# ೯೪. ಅದ್ಭುತವಾದ ಸ್ವಾಮೀಜಿ

–ಫಾಂಟೇನ್ ಎಪ್‌ಲರ್ (ಶಾಂತಿ)*

೧೯೭೦ರಲ್ಲಿ ನಾನು ಮೆಸಾಚುಸೆಟ್ಸ್ ಯು.ಎಸ್.ಎ.ಯ 'ವೇದಾಂತ ಸೊಸೈಟಿ ಆಫ್ ಬಾಸ್ಟನ್'ಗೆ ಹೋಗಲು ಪ್ರಾರಂಭಿಸಿದೆ. ಆ ವಸಂತ ಕಾಲದಲ್ಲಿ, ಒಬ್ಬ ಭಕ್ತರು, ಮೆಸಾಚುಸೆಟ್‌ನ ಶಾರದಾ ಆಶ್ರಮಕ್ಕೆ ಆ ಬೇಸಿಗೆಯಲ್ಲಿ ಒಬ್ಬ ಅದ್ಭುತವಾದ ಸ್ವಾಮೀಜಿ ಬರುತ್ತಾರೆಂದು ಹೇಳಿದರು. ಶ್ರೀಕೃಷ್ಣ ಜನ್ಮಾಷ್ಟಮಿಯ ಸಂದರ್ಭದಂದು, ಸ್ವಾಮಿ ರಂಗನಾಥಾನಂದರ ದರ್ಶನ ಪಡೆಯಲು, ಆ ಭಕ್ತೆ ನನ್ನನ್ನು ಪೋರ್ಟ್‌ಲ್ಯಾಂಡ್, ಮೇಯ್‌ನೆಯಿಂದ ಮಾರ್ಷ್‌ಫೀಲ್ಡ್‌ಗೆ ವಾಹನ ಚಾಲಿಸಿಕೊಂಡು ಬರಲು ಪ್ರೇರೇಪಿಸಿದರು.

ಸುಮಾರು ಹನ್ನೆರಡು ಜನರಿದ್ದೆವು ನಾವು. ಹೊರಗಡೆ, ಉಪನ್ಯಾಸಕಾರರ ಕುರ್ಚಿಗೆ ಎದುರಾಗಿ ಅರ್ಧವೃತ್ತಾಕಾರದಲ್ಲಿ ಜೋಡಿಸಿದ್ದ ತುಕ್ಕು ಹಿಡಿದಿದ್ದ ಮಡಿಸಬಹುದಾದ ಕಬ್ಬಿಣದ ಕುರ್ಚಿಗಳ ಮೇಲೆ ಕುಳಿತುಕೊಂಡೆವು. ಸ್ವಾಮಿ ರಂಗನಾಥಾನಂದರು ನಮಗಾಗಿ ಸ್ವಲ್ಪ ಸಮಯ ಶ್ರೀಕೃಷ್ಣನನ್ನು ಕುರಿತು ಅದ್ಭುತವಾಗಿ ಮಾತನಾಡಿದರು. ನನ್ನ ನೆನಪಿನಲ್ಲಿ ಅತ್ಯಂತ ಸ್ಪಷ್ಟವಾಗಿ ಉಳಿದಿರುವುದೆಂದರೆ, ಸ್ವಾಮೀಜಿಯವರು ತಮ್ಮ ಸುತ್ತಲೂ ನಿಂತಿದ್ದ ನಮ್ಮ ಗುಂಪಿನೊಡನೆ, ಲೋಕಾಭಿರಾಮವಾಗಿ ಮಾತನಾಡುತ್ತಾ, ತಾವು ಬಾಲಕನಾಗಿದ್ದಾಗ ಮಾರ್ಕ್‌ಟ್ವೇನ್‌ನ ಕಥೆಗಳನ್ನು ಓದಲು ಇಷ್ಟಪಟ್ಟಿದ್ದರೆಂಬುದನ್ನು ಹೇಳಿದರು: "ಹಾಸ್ಯಪ್ರಜ್ಞೆ ಬಹಳ ಉನ್ನತವಾದ ಆಧ್ಯಾತ್ಮಿಕ ಸ್ಥಿತಿ."

ಆನಂತರ ಅವರು ಬೋಸ್ಟನ್ ಕೇಂದ್ರಕ್ಕೆ ಭೇಟಿ ನೀಡಿದಾಗಲೆಲ್ಲಾ ಅವರ ದರ್ಶನ ಪಡೆಯುವ ಅವಕಾಶವನ್ನು ನಾನು ಎಂದೂ ಕಳೆದುಕೊಳ್ಳಲಿಲ್ಲ. ಆ ದಿನಗಳಲ್ಲಿ ಅವರು ಬಹಳ ಪ್ರವಾಸಮಾಡುತ್ತಿದ್ದರು, ೧೯೭೦ರಲ್ಲಿ ಬಹಳ ಸಾರಿ ಬೋಸ್ಟನ್‌ಗೆ ಬಂದರು. ಅವರು ಭಾನುವಾರಗಳಲ್ಲಿ ಬೋಸ್ಟನ್ ಕೇಂದ್ರದಲ್ಲಿ ಉಪನ್ಯಾಸ ನೀಡಿದಾಗ ಮಡಿಸುವ ಕುರ್ಚಿಗಳನ್ನು ಮತ್ತಷ್ಟು ತಂದು ಹಾಲ್‌ನಲ್ಲಿ ಹಾಕಬೇಕಾಗುತ್ತಿತ್ತು. ಏಕೆಂದರೆ, ಸ್ವಾಮೀಜಿಯವರು ಆಕರ್ಷಿಸುತ್ತಿದ್ದ ಜನರ ಗುಂಪಿನ ಪ್ರವಾಹಕ್ಕೆ ಆ ಮಂದಿರದಲ್ಲಿ ಸ್ಥಳಾವಕಾಶ ಮಾಡಿಕೊಡಲು ಸಾಧ್ಯವಾಗುತ್ತಿರಲಿಲ್ಲ.

ಆ ದಿನಗಳಲ್ಲಿ ನಾನು ಆಗಾಗ್ಗೆ ಅವರಿಗೆ ಪತ್ರ ಬರೆಯುತ್ತಿದ್ದೆ. ಅವರು ಎಂದೂ ನನ್ನ ಪತ್ರಗಳಿಗೆ ಉತ್ತರಿಸಲಿಲ್ಲ (ಅವುಗಳಲ್ಲಿ ಪ್ರಶ್ನೆಗಳೂ ಇರಲಿಲ್ಲ); ಆದರೆ ಅವರು ನನಗೆ ಎರಡು ಕೊಡುಗೆಗಳನ್ನು ಕಳಿಸಿದರು ಅವು ಖಾಸಗಿ ವ್ಯಕ್ತಿಗಳ ಮೂಲಕ ನನ್ನನ್ನು ತಲುಪಿದವು. ಒಂದು ಅವರ ಹಸ್ತಾಕ್ಷರವಿದ್ದ ಅವರ ಭಾವಚಿತ್ರ ಮತ್ತು ಒಂದು ಸಣ್ಣ 'ಕೊಂಬಿರುವ ಮೊಲದ' ಪ್ಲಾಸ್ಟಿಕ್ ಆಕೃತಿ (ಜಿಂಕೆಯ ಕೊಂಬಿರುವ ಮೊಲ!!).

* * * *

---

* ಯು.ಎಸ್.ಎ.ಯ ಬಾಸ್ಟನ್‌ನ ಒಬ್ಬ ಭಕ್ತೆ.

# ೯೫. ಪ್ರಬುದ್ಧಮಯಿ ಗುರು

**–ವೊನೆ ಮ್ಯಾಲಿಕೆ***

೧೯೭೪ರ ಜೂನ್‌ನಲ್ಲಿ ನಾನು ಸ್ವಾಮಿ ರಂಗನಾಥಾನಂದರನ್ನು ಭೆಟ್ಟಿಯಾದೆ. ಅವರು *ಭಗವದ್ಗೀತೆ* ಮತ್ತು *ಮಾಂಡೂಕ್ಯ ಉಪನಿಷತ್ತನ್ನು* ಕುರಿತ ಪ್ರವಚನ ಶ್ರೇಣಿಯನ್ನು ನೀಡಲು ಸಿಡ್ನಿಗೆ (ಆಸ್ಟ್ರೇಲಿಯಾ) ಆಗಮಿಸಿದ್ದರು. ಸಿಡ್ನಿಯ ನಡುವಿನ ರೆಡ್‌ಫೆರ್ನ್ ಉಪನಗರದ ಹಾದಿಬದಿಯ ಖಾನಾವಳಿಯ ಕೊಂಚವೂ ತಕ್ಕುದಲ್ಲದ ಜಾಗದಲ್ಲಿ ನಡೆದ ಆ ಉಪನ್ಯಾಸಗಳನ್ನೆಲ್ಲ ನಾನು ಆಲಿಸಿದೆ. ಅವರ ಮೊದಲ ಪ್ರವಚನವನ್ನು ಕೇಳಿದೊಡನೆಯೇ, ಆಧ್ಯಾತ್ಮಿಕ ಆಪ್ತೋಪದೇಶಕನ ನನ್ನ ಹುಡುಕಾಟ ಕೊನೆಗೊಂಡಿತೆಂದು ನನಗೆ ಅನಿಸಿತು. ಇಲ್ಲೊಬ್ಬ ಅಧ್ಯಾತ್ಮಿಕ ಮೇರು, ಅಪರೂಪದ ಮಾನವಜೀವಿ ಇದ್ದರು. ಅವರು ಬೋಧನೆ ಹಾಗೂ ಸಾನ್ನಿಧ್ಯದ ಪ್ರಭಾವ ಅಮೂಲ್ಯ ನಿಧಿಯಾಗಿತ್ತು. ನನಗೆ ಅಪರೂಪದ ಮಾನವ ಪುನರ್ಜನ್ಮದ ಕೃಪೆ ದೊರಕಿತ್ತು. ಅಲ್ಲಿ ಪ್ರಬುದ್ಧ ಗುರುವಿನಿಂದ ಆರ್ಷೇಯ ಜ್ಞಾನದ ಬಗ್ಗೆ ವ್ಯಾಸಂಗ ಮಾಡಬಹುದಾಗಿತ್ತು.

ಸುದೀರ್ಘ, ಗಹನ, ಲವಲವಿಕೆಯ ಆಧ್ಯಾತ್ಮಿಕ ಶಿಬಿರಗಳನ್ನು ನಡೆಸಲಿಕ್ಕಾಗಿ ಅವರು ಹನ್ನೆರಡು ವರ್ಷಗಳ ಕಾಲ ಪ್ರತಿವರ್ಷವೂ ತಪ್ಪದೆ ಆಗಮಿಸುತ್ತಿದ್ದರು. ಅವರು ತಮ್ಮ ಪ್ರಾಮಾಣಿಕ ಉದ್ದೇಶ ಮತ್ತು ಬೋಧನೆಯಲ್ಲಿ ಒಮ್ಮೆಯೂ ತಡವರಿಸಲಿಲ್ಲ. ಓರ್ವ ಸನ್ಯಾಸಿಯಾಗಿ ಆತ ಮಾನವೋತ್ತವಂತೆಯ ಸತ್ಸಂಪ್ರದಾಯವನ್ನು ಎತ್ತಿ ಹಿಡಿದರು. ಶರಣಾಗತ ಶಿಷ್ಯೆಯರಲ್ಲೊಬ್ಬಳಾಗಿ, ಆ ಎಲ್ಲ ಶಿಬಿರಗಳಲ್ಲಿ ಉಪಸ್ಥಿತಳಾಗುವ ಸದವಕಾಶ ನನ್ನದಾಗಿತ್ತು. ಅಲ್ಲಿ ಅವರ ಪ್ರಚೋದನಾತ್ಮಕ ಮತ್ತು ವಿದ್ವತ್ಪೂರ್ಣ ಪ್ರವಚನಗಳು ವೇದಾಂತದ ಸಂದೇಶವನ್ನು ಪುನರಾವರ್ತಿಸಿದವು. ಎಂಥ ಸ್ಪಷ್ಟತೆಯೆಂದರೆ ಅವು ನನ್ನಾತ್ಮವನ್ನು ಅತ್ಯಂತ ಆಳದಲ್ಲಿ ತಟ್ಟಿದವು. ನಾನು ನಿಧಾನವಾಗಿ ಆಧ್ಯಾತ್ಮಿಕ ಅಜ್ಞಾನದ ಗಾಢ ನಿದ್ದೆಯಿಂದ ಎಚ್ಚೆತ್ತೆನು. ಪಾಶ್ಚಾತ್ಯ ಮನಸ್ಸನ್ನು ತಲುಪಿ, ಬುದ್ಧ್ಯತೀತ ಸ್ತರದಲ್ಲಿ ವೇದಾಂತ ಜ್ಞಾನವನ್ನು ದಾಟಿಸಲು ಅವರು ಸಮರ್ಥರಾಗಿದ್ದರು. ಹರಿತವಾದ ಬುದ್ಧಿಚಾತುರ್ಯದೊಂದಿಗೆ ಅವರ ಗಾಢವಾದ ಜ್ಞಾನದ ನುಡಿಗಳು ಮತ್ತು ವಿನೋದ ಪ್ರಜ್ಞೆಗಳಿಂದಾಗಿ ಸುಲಭವಾಗಿ ಅವರ ಬಳಿ ಸಾರುವುದು ಸಾಧ್ಯವಾಗಿತ್ತು. ಅಷ್ಟೊಂದು ವರ್ಷ ಅವರ ಸಲುಗೆ ಪಡೆದವರಿಗೆಲ್ಲ ಆತ ಗುರು ಮಾತ್ರವಲ್ಲದೆ ಪ್ರೀತಿಪಾತ್ರನಾದ ಉದಾತ್ತ ಮಿತ್ರನೂ ಆಗಿದ್ದರು. ನಾವು ಅವರನ್ನು ಆಪ್ತವಾಗಿ ಮೆಚ್ಚಿದೆವು. ಕೆಲವರಂತೂ ಆತ ಸ್ವಾಮಿ ವಿವೇಕಾನಂದರ ಅವತಾರವೆಂದೇ ಭಾವಿಸಿದ್ದರು.

೯ನೇ ಜೂನ್ ೧೯೭೪ರಂದು ಸಿಡ್ನಿಯಲ್ಲಿ ರಾಮಕೃಷ್ಣ ವೇದಾಂತ ಸೊಸೈಟಿಯ ಸ್ಥಾಪನೆಯಾಯಿತು. ಸ್ವಾಮಿ ರಂಗನಾಥಾನಂದರು ಇದರ ಮೊದಲ ಅಧ್ಯಕ್ಷರು. ಸಿಡ್ನಿ ಶಾಖೆಯು ಮೂಲತಃ ಹದಿನೈದು ಸದಸ್ಯರನ್ನೊಳಗೊಂಡಿತ್ತು. ಹೆಚ್ಚಿನವರು ಪಾಶ್ಚಾತ್ಯರು. ಅವರಲ್ಲಿ ನಾನು ಸಂಸ್ಥಾಪಕ ಸದಸ್ಯೆ. ವಿಲ್ಮಾ ಸ್ಪೆನ್ಸರ್ ಈ

---

* 'ಕಾಸ್ಮಾಸ್' ಸಾಹಿತ್ಯ ಸಂಚಿಕೆಯ ಸಂಪಾದಕಿ ಮತ್ತು ಪ್ರಕಾಶಕಿ. ಆಸ್ಟ್ರೇಲಿಯಾದ ಸಿಡ್ನಿಯ ಬ್ಲೂ ಮೌಂಟೇನ್ಸ್‌ನ ಗಣೇಶ ಆಶ್ರಮದೊಂದಿಗೆ ಸಂಬಂಧಹೊಂದಿದ್ದಾರೆ. ಸ್ವಾಮಿ ರಂಗನಾಥಾನಂದರಿಗೆ ಆಸ್ಟ್ರೇಲಿಯಾ ಪ್ರವಾಸದ ವ್ಯವಸ್ಥೆ ಮಾಡಿದ್ದವರು. ಮೂರು ಕೃತಿಗಳ, ಮೂರಂಕ ನಾಟಕದ ಲೇಖಕಿ. ಎರಡು ಸಂಕಲನಗಳಲ್ಲಿ ಅವರ ರಚನೆಗಳು ಕಾಣಿಸಿಕೊಂಡಿವೆ. ಯೋಗ, ವೇದಾಂತ ಮತ್ತು ತತ್ಸಂಬಂಧೀ ವಿಷಯಗಳನ್ನು ಕುರಿತು ಬಹುಸಂಖ್ಯೆಯ ಲೇಖನಗಳನ್ನೂ ಬರೆದಿದ್ದಾರೆ. ಜನಸಮೂಹ ಪ್ರವಚನಕಾರ್ತಿಯೂ ಆಗಿದ್ದಾರೆ.

ಶಾಖೆಯನ್ನು ಆಯೋಜಿಸಿದಲ್ಲಿ ಹಾಗೂ ೧೯೭೭ರಿಂದ ಕ್ರಿಶ್ಚಿಯನ್ ಶಿಬಿರ ಕೇಂದ್ರಗಳಲ್ಲಿ ನಡೆದ ಮೊದಲ ವಾರ್ಷಿಕ ಆಧ್ಯಾತ್ಮಿಕ ಸಪ್ತಾಹದ ವಸತಿ ಶಿಬಿರವನ್ನು ಸಂಘಟಿಸಿದಲ್ಲಿ ಕಾರಣಕರ್ತೆಯಾಗಿದ್ದರು.

೨೫ನೇ ಡಿಸೆಂಬರ್ ೧೯೬೮ರಂದು ನನಗೆ ಆಧ್ಯಾತ್ಮಿಕ ರಹಸ್ಯಾನುಭವ ಆಗಿತ್ತು. ಏಕೆ ನನಗೆ ಆ ಅನುಭವವಾಯಿತೆಂದು ತಿಳಿಯಲಿಲ್ಲ; ಕಾರಣವನ್ನು ವಿಶ್ಲೇಷಿಸಲಾಗಲಿಲ್ಲ. ಏಕೆಂದರೆ ಆ ಕಾಲಕ್ಕೆ ನನಗೆ ಆಧ್ಯಾತ್ಮಿಕ ಒಲವು ಇರಲಿಲ್ಲ. ಹಲವು ಪಾಶ್ಚಾತ್ಯರು ಇಂತದೇ ಅದ್ಭುತ ಚಮತ್ಕಾರವನ್ನು ಅನುಭವಿಸಿದ್ದರು. ಅದರಿಂದಾಗಿ ಭಾರತೀಯ ಸಂಸ್ಕೃತಿ ಮತ್ತು ಪಾಶ್ಚಾತ್ಯ ಪ್ರತಿಸಂಸ್ಕೃತಿಗಳ ನಡುವೆ ಜಾಗತಿಕ ಪ್ರಮಾಣದಲ್ಲಿ ವಿಚಾರಗಳ ವಿನಿಮಯಕ್ಕೆ ಚಾಲನೆ ಸಿಕ್ಕಂತಾಯಿತು. ಪರಿಣಾಮವಾಗಿ, ಅಷ್ಟಾಗಿ ಸಾಂಸ್ಥೀಕರಣಗೊಳ್ಳದ, ಸಂಘಟಿತವಲ್ಲದ, ಕಟ್ಟುಪಾಡುಗಳಿಲ್ಲದ, ಆದರೆ, ನೈಜ ಆಧ್ಯಾತ್ಮಿಕ ಅನುಭವಕ್ಕೆ ಒತ್ತುಕೊಟ್ಟ ಧರ್ಮವೊಂದಕ್ಕೆ ಪಶ್ಚಿಮವು ಮುಖಾಮುಖಿಯಾಗುವುದರಲ್ಲಿತ್ತು. ಮಾರ್ಗದರ್ಶನಕ್ಕಾಗಿ ನಾನು ರಾಮಕೃಷ್ಣಾಶ್ರಮದ ಮೊರೆಹೋಗಬೇಕೆಂದು ಸ್ನೇಹಿತರೊಬ್ಬರು ಸಲಹೆಯಿತ್ತರು. ನಾನು ಆಗ ಲಂಡನ್‌ನಲ್ಲಿ ವಾಸವಾಗಿದ್ದೆನು. ಅದರಿಂದಾಗಿ ರಾಮಕೃಷ್ಣ ಮತ್ತು ವಿವೇಕಾನಂದ ಬೋಧನೆಗಳು ನನಗೆ ಸುಲಭವಾಗಿ ಕೈಗೆಟುಕುವಂತಿದ್ದವು. ನಾನು ಮಹಾವರಿಷ್ಠ ಸ್ವಾಮಿ ವಿವೇಕಾನಂದರ ಸಂಪೂರ್ಣ ಕೃತಿಶ್ರೇಣಿಯನ್ನೂ, ಶ್ರೀ ರಾಮಕೃಷ್ಣರ ವಚನವೇದವನ್ನೂ ಕೊಂಡುಕೊಂಡು ಆರು ತಿಂಗಳ ಕಾಲ ವ್ಯಾಸಂಗದಲ್ಲಿ ಮಗ್ನನಾದೆನು. ಇಲ್ಲಿ ನನಗೆ ವೈಚಾರಿಕವಾದ ಮತ್ತು ಅರ್ಥಪೂರ್ಣವಾದ ಧಾರ್ಮಿಕ ಜ್ಞಾನ ಗೋಚರಿಸಿತು. ೧೯೬೯ರಲ್ಲಿ ನಾನು ಆಸ್ಟ್ರೇಲಿಯಾಗೆ ಮರಳಿದೆನು.

ನಾವು ಒಂದು ಮಾಸಿಕ ಲೇಖನ ಸಂಚಿಕೆಯನ್ನು ಪ್ರಕಟಿಸಬೇಕೆಂದು ೧೯೭೩ರ ಜನವರಿಯಲ್ಲಿ ನಾನು ಮಿತ್ರರೊಬ್ಬರಿಗೆ ಸಲಹೆಯಿತ್ತೆನು. ಅದು ಆಧ್ಯಾತ್ಮಿಕ ಪ್ರಜ್ಞೆ ಮತ್ತು ತತ್ಸಂಬಂಧೀ ವಿಷಯಗಳ ಲೇಖನಗಳನ್ನು ಒಳಗೊಂಡಿರಬೇಕು. ಅದು ವಿವಿಧ ಧರ್ಮಗಳ, ಪುರಾತನ ಜ್ಞಾನ ಮತ್ತು ಸಾರ್ವಕಾಲಿಕ ತತ್ತ್ವಜ್ಞಾನಗಳ ದೃಷ್ಟಿಕೋನದಿಂದ ವಿಭಿನ್ನ ದೃಷ್ಟಿಗಳನ್ನು ಮುಂದಿರಿಸುವುದಕ್ಕೆ ವೇದಿಕೆಯನ್ನು ಒದಗಿಸಬಲ್ಲುದಾಗಿತ್ತು; ಆಸ್ಟ್ರೇಲಿಯಾದಲ್ಲಿ ಇದು ಆಧ್ಯಾತ್ಮಿಕ ಕ್ರಾಂತಿಯನ್ನು ತರಬಲ್ಲುದು ಎಂದು ನಾನು ಭಾವಿಸಿದ್ದೆನು. ಏಕೆಂದರೆ ಆ ಕಾಲಕ್ಕೆ ಧಾರ್ಮಿಕ ಚಿಂತನೆಗಳಲ್ಲಿ ಮೂಲಭೂತವಾದೀ ಕ್ರಿಶ್ಚಿಯನ್ ದೃಷ್ಟಿಕೋನ ಮಾತ್ರವೇ ಮೇಲುಗೈ ಸಾಧಿಸಿತ್ತು. ಅದೃಷ್ಟವಶಾತ್, ಮುಂದಿನ ದಶಕಗಳಲ್ಲಿ ಈ ಪಕ್ಷಪಾತ ಕ್ಷೀಣಿಸಿತು. ಮುದ್ರಣ ಮಾಧ್ಯಮದಲ್ಲಿ 'ಕಾಸ್ಮಾಸ್' (ಸುವಿಚಾರ ಸರಣಿಯ) ಪ್ರವೇಶವೇ ಪ್ರಮುಖ ಕಾರಣವೆಂದು ನಾನು ನಂಬಿದ್ದೇನೆ. ಪುರಾತನಕಾಲದ ಮಹಾನ್ ಯುಗ ನಿರ್ಮಾತೃಗಳ ಅತ್ಯುನ್ನತ ಆಧ್ಯಾತ್ಮಿಕ ಬೋಧನೆಗಳನ್ನು ಪಾಮರರಿಗೆ ತಲುಪಿಸಲು ಮುದ್ರಣ ಮಾಧ್ಯಮಕ್ಕಿಂತ ಮಿಗಿಲಾದ ದಾರಿ ಇಲ್ಲವೆಂದೇ ನನ್ನ ನಂಬಿಕೆ. ಸ್ನೇಹಿತರನ್ನೂ ಪರಿಚಿತರನ್ನೂ ಸಂಪರ್ಕಿಸಿದ್ದಾಯಿತು. ಪ್ರತಿ ತಿಂಗಳೂ ಲೇಖನವನ್ನು ನೀಡುವಂತೆ ಅವರನ್ನು ಕೇಳಿಕೊಂಡಿದ್ದಾಯಿತು. ಸಂಚಿಕೆ ತಳಬಿಟ್ಟು ಮೇಲೇರಲು ಸಾಧ್ಯವಾದದ್ದು ಅವರೆಲ್ಲರ ಸಹಕಾರದಿಂದಲೇ. ಈ ಲೇಖನ ಸಂಚಿಕೆಗೆ 'ಕಾಸ್ಮಾಸ್' ಎಂದು ಹೆಸರಿಡಲಾಯಿತು. ಸ್ವಾಮಿ ರಂಗನಾಥಾನಂದರೂ ಅಂತೆಯೇ ರಾಮಕೃಷ್ಣ ಮಠದ ಇತರ ಸನ್ಯಾಸಿಗಳೂ ಲೇಖನ ನೀಡಿದರು. ಆಸ್ಟ್ರೇಲಿಯಾದಲ್ಲಿ ಹಿಂದೆಂದೂ ಇಂಥ ಪ್ರಯತ್ನ ನಡೆದೇ ಇರಲಿಲ್ಲ. ಇದು ಭಯ ಅಥವಾ ಪಕ್ಷಪಾತವಿಲ್ಲದೆ ಧಾರ್ಮಿಕ ವಿಷಯಗಳ ವಿಶಾಲ ವ್ಯಾಪ್ತಿಯನ್ನು ಮುಂದಿಡಲು ಸ್ವತಂತ್ರವೂ ಮುಕ್ತವೂ ಆದುದಾಗಿತ್ತು. ವರ್ಷಗಳು ಉರುಳಿದಂತೆ, ಆಕಾಶವಾಣಿ ಮತ್ತು ದೂರದರ್ಶನ ನಿಲಯಗಳು ಯೋಗದರ್ಶನದಲ್ಲಿ ಆಸಕ್ತಿ ವಹಿಸತೊಡಗಿದವು. ಸ್ವಾಮಿ ರಂಗನಾಥಾನಂದರು ಪ್ರತಿವರ್ಷವೂ ಆಸ್ಟ್ರೇಲಿಯಾಕ್ಕೆ ಆಗಮಿಸಿದಾಗ ಅವರನ್ನು ಸಂದರ್ಶಿಸಲು ಮುಖ್ಯ ವಾಹಿನಿಯ ಪತ್ರಕರ್ತರು ಉತ್ಸುಕರಾದರು. ಹತ್ತು ವರ್ಷಗಳ ಕಾಲ ನಾನು ಸಂಚಿಕೆಯನ್ನು ಸಂಪಾದಿಸಿ ಪ್ರಕಟಿಸಿದೆನು.

ನಾನು ಪ್ರತಿ ವರ್ಷವೂ ಸ್ವಾಮಿಯವರ ವಸತಿಶಿಬಿರದಲ್ಲಿ ಹಾಜರಿರುತ್ತಿದ್ದೆ; ಅವರ ಧ್ವನಿಮುದ್ರಿಕೆಗಳನ್ನು ಕೇಳಿದೆ; ಕೃತಿಗಳನ್ನು ಓದಿದ್ದೆ. ಅದು ಅಂಥ ಹೊಣೆ ಹೊರಲು ನನಗೆ ಆಧ್ಯಾತ್ಮಿಕ ಬಲವನ್ನು ನೀಡಿತ್ತು. ಆ ವರ್ಷಗಳಲ್ಲಿ (೧೯೭೦–೮೦ರ ದಶಕದಲ್ಲಿ) ಅವರೊಂದಿಗೆ ನನಗೆ ವೈಯಕ್ತಿಕ ಸಂಪರ್ಕ ಇಲ್ಲದೇ ಇದ್ದ ಪಕ್ಷದಲ್ಲಿ ಅಂಥ ಸಾಹಸವು ಯಶಸ್ವಿಯಾಗುತ್ತಿರಲಿಲ್ಲ. ಪ್ರತಿ ಬಾರಿ ಆಗಮಿಸಿದಾಗಲೂ ಅವರು ನೀಡಿದ ವಿವೇಕ–ಜ್ಞಾನಗಳು ನನಗೆ ಪ್ರೇರಣೆಯನ್ನೊದಗಿಸಿದವು. ನಾನು ಅವರ ಪದತಲದಲ್ಲಿ ಕುಳಿತೆ. ಅವರ ಅಸ್ಖಲಿತ ವಾಗ್ವೈಖರಿ, ಇದ್ದಕ್ಕಿದ್ದಂತೆ, ಚಿಮ್ಮುವ ಉತ್ತಮ ಹಾಸ್ಯ, ನೈಜ ವಿನಯ ನನಗೆ ಬೆಳಕು ನೀಡಿದವು.

೧೯೮೦ರ ಸಮ್ಮೇಳನದಲ್ಲಿ ಭಾಗವಹಿಸಲೆಂದು ನಾವು ಸ್ವಾಮೀಜಿಯೊಡನೆ ಹೈದರಾಬಾದ್‌ನಿಂದ ಬೇಲೂರು ಮಠಕ್ಕೆ ಪ್ರಯಾಣ ಮಾಡಿದೆವು. ಅಲ್ಲಿ ಡಿಸೆಂಬರ್ ೨೫ರಂದು ನನ್ನ ಪತಿ ಪೀಟರ್‌ಗೂ ನನಗೂ ದೀಕ್ಷಾ ಸ್ವೀಕಾರವನ್ನು ಏರ್ಪಡಿಸಿದ್ದರು. ಅದರ ಹಿಂದಿನ ವರ್ಷಗಳಲ್ಲಿ ನಾನು ಅವರನ್ನು ಹೈದರಾಬಾದ್‌ನಲ್ಲೂ ತಿರುವಣ್ಣಾಮಲೈನಲ್ಲೂ ಭೆಟ್ಟಿಯಾಗಿದ್ದೆನು. ಅಲ್ಲಿ ೧೯೭೯ರ ಡಿಸೆಂಬರ್ ೨೯ರಿಂದ ಒಂದು ವಾರ ಶತಮಾನೋತ್ಸವ ಸಮಾರಂಭ ನಡೆದಿತ್ತು. ಆಗ ಸ್ವಾಮಿ ರಂಗನಾಥಾನಂದರು ಅತಿಥಿ ಭಾಷಣಕಾರರಲ್ಲೊಬ್ಬರಾಗಿದ್ದರು. ಅಲ್ಲಿ ನೆರೆದಿದ್ದ ೧೦೦೦೦ಕ್ಕೂ ಮಿಕ್ಕ ಜನ ಸಮುದಾಯದ ಪ್ರತಿಯೊಬ್ಬರನ್ನು ಒಂದು ಗಂಟೆ ಕಾಲ ಮಂತ್ರಮುಗ್ಧರನ್ನಾಗಿಸಿದ್ದರು.

ಆ ದಿನ ಅಲ್ಲಿ ಉಪಸ್ಥಿತರಿದ್ದ ಪ್ರತಿಯೊಬ್ಬರ ಮೇಲೆ ಮರೆಯಲಾಗದ ಗಾಢ ಪರಿಣಾಮವನ್ನು ಉಳಿಸಿಹೋದರು. ಅಲ್ಲದೆ ರಮಣ ಮಹರ್ಷಿಗಳ ವೇದಾಂತ ಸಾರವನ್ನೂ, ಅದ್ವೈತ ವೇದಾಂತದ ಬೋಧನೆಯನ್ನೂ ಸಜೀವವಾಗಿ ಮೂಡಿಸುವಲ್ಲಿ ಯಶಸ್ವಿಯಾದರು. ನಮ್ಮೆಲ್ಲರೊಳಗಿರುವ, ಸರ್ವವನ್ನೂ ವ್ಯಾಪಿಸಿರುವ ಅದೃಶ್ಯವಾದ ಬ್ರಹ್ಮ ಚೈತನ್ಯ ಶಕ್ತಿಯು ಇಂದ್ರಿಯಗೋಚರವಲ್ಲ ಎನ್ನುವ ಅದ್ವೈತ ಸಿದ್ಧಾಂತದಲ್ಲಿ ನನಗೆ ವಿಶೇಷವಾದ ಆಸಕ್ತಿ. ಸ್ವಾಮೀಜಿ ಅದನ್ನು ಎಷ್ಟೊಂದು ಸ್ಪಷ್ಟವಾಗಿ ವಿವರಿಸಿದರು! ಅವರ ಪ್ರವಚನ ಕೇಳಿ ನನಗೆ ಎಂದೂ ದಣಿವಾಗಲಿಲ್ಲ. ವಿಲ್ಮಾ ಸ್ಪೆನ್ಸರ್ ಅವರ ನಂತರ ನನ್ನ ಪತಿ ಪೀಟರ್, ಸಿಡ್ನಿಯ ರಾಮಕೃಷ್ಣ ವೇದಾಂತ ಸೊಸೈಟಿಯ ಮೂರನೆಯ ಅಧ್ಯಕ್ಷರಾದರು. ಆತ ಸಿಡ್ನಿಯ ಪಶ್ಚಿಮದ ಬ್ಲೂ ಮೌಂಟೇನ್ಸ್‌ನಲ್ಲಿ ಭವನವೊಂದನ್ನು ಕಟ್ಟಿಸಿದರು. ನಾವು ಅದಕ್ಕೆ 'ಗಣೇಶ ಆಶ್ರಮ' ಎಂದು ಹೆಸರಿಟ್ಟೆವು. ಅದೇ ಬ್ಲೂ ಮೌಂಟೇನ್ಸ್‌ನಲ್ಲಿ ಮೊದಲ ಆಶ್ರಮ. ಅದು ೧೯೭೭ರಲ್ಲಿ ಧಾರ್ಮಿಕ ವಿಧಿಯಿಂದ ಪವಿತ್ರೀಕೃತವಾಗಿ ಗಣೇಶ ದೇವಸ್ಥಾನವಾಯಿತು. ಆಗ ಸ್ವಾಮಿ ರಂಗನಾಥಾನಂದರು ಆಗಮಿಸಿ ಅನುಗ್ರಹಿಸಿದರು.

ಮತೀಯ ಪಕ್ಷಪಾತದಿಂದಾಗಿ ಕ್ರಿಶ್ಚಿಯನ್ ಶಿಬಿರ ಕೇಂದ್ರಗಳನ್ನು ರಾಮಕೃಷ್ಣ ವೇದಾಂತ ಸೊಸೈಟಿಗೆ ಬಾಡಿಗೆಗೆ ಕೊಡದೆ ಸ್ಪಷ್ಟವಾಗಿ ನಿರಾಕರಿಸಲಾಯಿತು. ಆಗ ಗಣೇಶ ಆಶ್ರಮವನ್ನೇ ವಾರ್ಷಿಕ ಶಿಬಿರಕ್ಕೆ ಬಳಸಿಕೊಳ್ಳಲಾಯಿತು. ಏಳರಿಂದ ಹತ್ತು ದಿನಗಳ ಈ ಶಿಬಿರದಲ್ಲಿ (ವಾರಾಂತ್ಯದಲ್ಲಿ) ಐವತ್ತರಿಂದ ಅರುವತ್ತು ಜನರಿದ್ದರು. ಮಲಗಲು ಹತ್ತಿರದ ಹೋಟೆಲ್‌ನಲ್ಲಿ ವ್ಯವಸ್ಥೆ ಮಾಡಲಾಯಿತು. ಸ್ವಾಮೀಜಿಯೂ ಸೇರಿದಂತೆ ಹನ್ನೆರಡು ಹದಿಮೂರು ಮಂದಿ ವಾರಗಳ ಕಾಲ ಮನೆಯಲ್ಲೇ ಉಳಿದುಕೊಂಡರು. ಆದರೆ ಎಲ್ಲರೂ ಆಶ್ರಮದಲ್ಲೇ ಊಟಮಾಡಿ ಹಗಲು ಮತ್ತು ಸಂಜೆಯ ಪ್ರವಚನಗಳಿಗೆ ಹಾಜರಾಗುತ್ತಿದ್ದರು. ಮುಂದಿನ ವಾರಗಳಲ್ಲಿ ಭಕ್ತರ ಮನೆಯಲ್ಲೇ ಸಭೆಗಳು ನಡೆದವು. ಒಮ್ಮೆ ವಸತಿ ಶಿಬಿರ ಸಪ್ತಾಹದಲ್ಲಿ ಸ್ವಾಮೀಜಿ ಭಾರತೀಯ ಉಪಾಹಾರವನ್ನು ಬೇಯಿಸಿ ಬಡಿಸುವುದಾಗಿ ಒತ್ತಾಯಮಾಡಿದರು. ನಾವೆಲ್ಲ ಅದನ್ನು ಅಪರೂಪದ ಭಾಗ್ಯ ಮತ್ತು ಗೌರವವೆಂದು ಆದರಿಸಿದೆವು.

ಆ ಹನ್ನೆರಡು ವರ್ಷಗಳಲ್ಲಿ ಅವರು ನಮಗೆ *ಭಗವದ್ಗೀತೆ*, *ವಿವೇಕ ಚೂಡಾಮಣಿ*, *ದಶೋಪನಿಷತ್ತು*, *ಶ್ರೀರಾಮಕೃಷ್ಣ ವಚನವೇದ*, *ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ* ಹಾಗೂ ತತ್ಸಂಬಂಧೀ ಗ್ರಂಥಗಳನ್ನು

ಪಾಠಮಾಡಿದರು. ವೇದಾಂತ ವ್ಯಾಸಂಗದಷ್ಟು ಫಲಪ್ರದವಾದದ್ದು ಬೇರಿಲ್ಲ ಎನ್ನುವುದನ್ನು ಕಂಡುಕೊಂಡ ನಾನು ಈ ಮಹಾನ್ ತತ್ತ್ವಶಾಸ್ತ್ರವನ್ನು ಇತರರೊಂದಿಗೆ ಹಂಚಿಕೊಳ್ಳಲು ಬಯಸಿದೆನು. ವಾರಾಂತ್ಯದ ಶಿಬಿರಗಳು ೧೯೭೭ರಲ್ಲಿ ಆರಂಭಗೊಂಡವು. ಕಾಸ್ಮಾಸ್‌ನ ಸಂಪಾದನೆ ಮತ್ತು ಪ್ರಕಟಣೆಯೊಂದಿಗೇ ನಾನು ವೇದಾಂತ ದರ್ಶನ, ಯೋಗ, ಧ್ಯಾನಗಳ ವ್ಯಾಸಂಗಗೋಷ್ಠಿಯನ್ನು ಮುನ್ನಡೆಸಿದೆನು. ಈ ಶಿಬಿರಗಳು ಆರು ವರ್ಷಗಳ ಕಾಲ ನಡೆದವು.

**ಸ್ವಾಮೀಜಿಯೊಂದಿಗೆ ಚರ್ಚೆ**

ಆ ವರ್ಷಗಳಲ್ಲಿ ನಾನು ಅನೇಕ ಬಾರಿ ಸ್ವಾಮಿ ರಂಗನಾಥಾನಂದರೊಂದಿಗೆ ಚರ್ಚಿಸಿದ್ದೆನು; ವೇದಾಂತದ ಬಗ್ಗೆ ಪ್ರಶ್ನಿಸಿದ್ದೆನು. ಅವರ ಅರಿವನ್ನು ನಾನು ಓದುಗರೊಂದಿಗೆ ಹಂಚಿಕೊಳ್ಳಲು ಬಯಸುವೆನು. ಒಂದು ದಿನ ನಾನು ಅವರನ್ನು ಕೇಳಿದೆ "ಸ್ವಾಮೀಜಿ, ವೇದಾಂತವು ಬೆಳೆದು ಬಂದದ್ದು ಹೇಗೆ?"

ಇದಕ್ಕೆ ಉತ್ತರವಾಗಿ ಅವರು ಹೇಳಿದರು "ವ್ಯಷ್ಟಿ ಸ್ವಭಾವ ಮತ್ತು ಸಮಷ್ಟಿ ಸ್ವಭಾವಗಳ ನೈಜ ವೈಜ್ಞಾನಿಕ ಶೋಧದ ತೀವ್ರ ಹಂಬಲದ ಪರಿಣಾಮವಾಗಿ ಇದು ಬೆಳೆಯಿತು." ಇದನ್ನು ವಿಸ್ತರಿಸುತ್ತ ಅವರು ಹೀಗೆ ಹೇಳಿದರು:

"ಈ ಅನ್ವೇಷಣೆಯಲ್ಲಿ ಭಾಗಿಗಳಾದ ಜನರು ಅತ್ಯಂತ ಸ್ವೋಪಜ್ಞರು. ಅವರು ಮಹಾನ್ ಧೀಮಂತರು. ಅವರಿಗೆ ತಮ್ಮದೆಂಬ ಸಮಸ್ಯೆ ಇರಲಿಲ್ಲ. ಅವರು ಸತ್ಯದ ಶೋಧಕ್ಕಾಗಿ ತಮ್ಮನ್ನೇ ಅರ್ಪಿಸಿಕೊಂಡವರು. ಅವರ ಅನ್ವೇಷಣೆಯ ಹಾದಿಯಲ್ಲಿ ಹಲವು ಮತಮೂಢ ಧಾರ್ಮಿಕ ವಿಚಾರಗಳನ್ನೂ ಅನೇಕ ಕುರುಡುನಂಬಿಕೆಗಳನ್ನೂ ಎಡತಾಕಿದರು. ಅವುಗಳನ್ನು ಆಳಕ್ಕಿಳಿದು ಪರೀಕ್ಷಿಸುತ್ತ ಕೇಳಿಕೊಂಡ ಒಂದೇ ಒಂದು ಪ್ರಶ್ನೆ, 'ಇದು ಸತ್ಯವೆ?' ಈ ಪ್ರಶ್ನೆಯ ಮೂಲಕ ಪ್ರತಿಯೊಂದು ನಂಬಿಕೆಯನ್ನೂ ಪ್ರತಿಯೊಂದು ಮತಾಭಿಮಾನವನ್ನೂ ಪರೀಕ್ಷಿಸಲಾಯಿತು. ಅದರ ಪರಿಣಾಮವೇ ಈ ಅಪೂರ್ವ ತತ್ತ್ವದರ್ಶನ ಪದ್ಧತಿ. ಅಲ್ಲಿ ಸತ್ಯವೇ ಗುರಿ."

ನಮ್ಮೊಂದಿಗಿನ ಹಲವು ಮಾತುಕತೆಗಳಲ್ಲಿ ಅವರು ವಿಜ್ಞಾನ ಮತ್ತು ಧರ್ಮದ ನಡುವಿನ ಸಂಬಂಧವನ್ನು ಸತತವಾಗಿ ಎತ್ತಿಹೇಳಿದರು.

"ಧರ್ಮದಲ್ಲಿ ವಿಜ್ಞಾನ ಎಲ್ಲಿ ಬರುತ್ತದೆ?" ನಾನು ಕೇಳಿದೆನು. ಅವರು ಹೇಳಿದರು "ವಿಜ್ಞಾನಿಗಳು ನಿಜವನ್ನು ಪರೀಕ್ಷಿಸುತ್ತ 'ಇದರ ಸಾರ್ಥಕತೆ ಏನು' ಎಂದು ಪ್ರಶ್ನಿಸುತ್ತ ಭೌತಿಕ ಜಗತ್ತಿನಲ್ಲಿರುವ ಸತ್ಯವನ್ನು ಶೋಧಿಸುವರು. ಭೌತವಿಜ್ಞಾನದ ಸತ್ಯಗಳನ್ನು ಶೋಧಿಸುವುದು, ಆ ಬಳಿಕ ಆ ಶೋಧಗಳನ್ನು ಮುಂದಿನ ಪ್ರಮಾಣೀಕರಣಕ್ಕೆ ಒಡ್ಡುವುದು, ಹೀಗಲ್ಲವೆ, ಎಲ್ಲ ಆಧುನಿಕ ಭೌತವಿಜ್ಞಾನವೂ ಘನತೆಯ ಉನ್ನತ ಸ್ಥಿತಿ ತಲುಪಿರುವುದು. ವೇದಾಂತದ ಸತ್ಯವನ್ನು ಶೋಧಿಸುವಲ್ಲೂ ಪ್ರಾಚೀನ ಭಾರತದ ಮಹರ್ಷಿಗಳು ಅನುಸರಿಸಿದ ಪ್ರಕ್ರಿಯೆಯೂ ನಿಖರವಾಗಿ ಇದೇ ಆಗಿದೆ. ಈ ಬದುಕಿನಿಂದಲೇ ಸವುಗಳನ್ನು ಎತ್ತಿಕೊಂಡಿದ್ದರು. ಪ್ರತಿ ಸತ್ಯವೂ ಪ್ರಮಾಣೀಕರಣಕ್ಕೆ ಪಕ್ಕಾಗಲೇಬೇಕು ಎನ್ನುವ ವಿಜ್ಞಾನದ ಘನಸೂತ್ರವನ್ನು ಅವರೂ ಅಂಗೀಕರಿಸಿದ್ದರು. ಹಾಗಾಗಿ ಅವರು ಪರೀಕ್ಷಿಸಲೆಂದು ಇದನ್ನು ಜನರ ಮುಂದಿಟ್ಟಿದ್ದರು. ಪ್ರತಿಯೊಬ್ಬರ ಆತ್ಮವು ನಿಜಕ್ಕೂ ಶುದ್ಧ, ಪರಿಪೂರ್ಣ, ಅವಿನಾಶಿ ಎಂದು ವೇದಾಂತವು ಹೇಳುತ್ತದಲ್ಲವೆ! ನಿಮ್ಮಷ್ಟಕ್ಕೆ ನೀವು ಇದನ್ನು ಪ್ರಮಾಣೀಕರಿಸಿ ನೋಡಬಹುದಲ್ಲವೆ! ಪ್ರತಿಯೊಂದೂ ದೃಢೀಕರಣ ಮತ್ತು ಪ್ರಮಾಣೀಕರಣಕ್ಕೆ ಒಳಗಾಗಬೇಕಾದದ್ದೇ."

ನನ್ನ ಮುಂದಿನ ಪ್ರಶ್ನೆ. "ವೇದಾಂತಕ್ಕೆ ಸಂಬಂಧಿಸಿದಂತೆ ಮತೀಯತೆ ಅಥವಾ ವಿಶೇಷಾಧಿಕಾರ ಏನಾದರೂ ಇದೆಯೆ?" ಸಂಕುಚಿತ ಮತೀಯವಾದವನ್ನು ತೋರುವ ಯಾವುದೇ ತತ್ತ್ವಸಿದ್ಧಾಂತ ಪದ್ಧತಿಯು ತಿರಸ್ಕಾರಾರ್ಹವಾದ್ದರಿಂದ ಈ ಪ್ರಶ್ನೆ ನನಗೆ ನಿರ್ದಿಷ್ಟವಾಗಿ ಸಂಗತವಾಗಿತ್ತು.

ಸ್ವಾಮಿ ರಂಗನಾಥಾನಂದರ ವಿದ್ವತ್ಪೂರ್ಣ ಉತ್ತರ ಇದು: "ನೀನು ನಂಬಿಕೆ ಅಥವಾ ಮತಾಭಿಮಾನವೊಂದಕ್ಕೆ ರುಜು ಹಾಕಬೇಕೆಂದು ಹೇಳುವ ಉಲ್ಲೇಖ ವೇದಾಂತದಲ್ಲಿ ಇಲ್ಲ. ಸ್ವಮತಾಭಿಮಾನದ, ಸಂಕುಚಿತ ಮತೀಯವಾದದ, ವಿಶೇಷವಾಗಿ ಅಂಧವಿಶ್ವಾಸದ ವಿಚಾರಹೀನಮತಿಗಳಾದ ಜನರನ್ನು ಕಂಡರೆ ವೇದಾಂತಕ್ಕೆ ಭಯ. ವಿಮರ್ಶಾತ್ಮಕ ಮನವುಳ್ಳ ಜನ ತನ್ನ ಬಳಿಗೆ ಬಂದರೆ ವೇದಾಂತಕ್ಕೆ ತುಂಬ ಸಂತಸ. ಅದನ್ನು ನಿರ್ವಹಿಸುವ ಮನಸ್ಸಿನ ರೀತಿಯನ್ನು ಅದು ಅವಲಂಬಿಸಿದೆ. ನಿನಗೆ ಸ್ವಮತಾಭಿಮಾನೀ ಮನವಿದ್ದರೆ ನೀನು ವೇದಾಂತವನ್ನು ಮತಾಭಿಮಾನಿಯನ್ನಾಗಿ ಮಾಡಬಹುದು. ಆದರೆ ಪುರುಷರು ಮತ್ತು ಮಹಿಳೆಯರು ಅನ್ವೇಷಿಸಬೇಕಾದುದು, ಅರಸಬೇಕಾದುದು ಇದರ ನೈಜ ಉದ್ದೇಶ. ನ್ಯೂಟನ್ ಗುರುತ್ವಾಕರ್ಷಣೆಯನ್ನು ಶೋಧಿಸಿದಂತೆ ಚಿರಂತನವಾದ ಸತ್ಯವನ್ನು ಶೋಧಿಸಲು ಹಾಗೆ ಮಾಡಬೇಕಾಗುತ್ತದೆ. ಆತ ಗುರುತ್ವಾಕರ್ಷಣೆಯನ್ನು ಸೃಜಿಸಲಿಲ್ಲ. ಅದು ಅಲ್ಲಿ ಇತ್ತು. ಆದರೆ, ಆತನ ಬುದ್ಧಿ ನಿಸರ್ಗದಲ್ಲಿರುವ ಈ ಚಿರಂತನ ಸತ್ಯವನ್ನು ಶೋಧಿಸಿತು. ಅಂತೆಯೇ, ವೇದಾಂತದ ಘನಸತ್ಯವು ನಿಸರ್ಗದಲ್ಲಿದೆ; ಮಾನವಜೀವಿಗಳಲ್ಲಿದೆ. ನಿಮ್ಮದೇ ಶೋಧವು ಮಾತ್ರ ನಿಮಗೆ ಸಹಾಯ ಮಾಡಬಲ್ಲುದು. ಅದು ಹಸಿವು ಬಾಯಾರಿಕೆಗಳಿದ್ದಂತೆ. ಬೇರೆಯವರು ತಿಂದರೆ ನನ್ನ ಹಸಿವು ತಣಿಯಲಾರದು. ನಾನೇ ತಿನ್ನಬೇಕು. ಪ್ರತಿಯೊಬ್ಬ ವ್ಯಕ್ತಿಯೂ ಆಂಶಿಕವಾಗಿಯಾದರೂ ತಮಗಾಗಿ ಶೋಧ ಕೈಗೊಂಡಿದ್ದೇ ಆದರೆ, ವೇದಾಂತವು ಸಜೀವವೂ ಅತಿ ಮಹತ್ವದ್ದೂ ಆಗುವುದು."

ಆ ಬಳಿಕ ನಾನು ಕೇಳಿದೆ: "ಇದರ ಬೋಧನೆಯಲ್ಲಿ ಗುಪ್ತವಿದ್ಯೆ ಅತವಾ ರಹಸ್ಯ ಎನ್ನುವುದೇನು? ಇದೇನು ಆಯ್ದ ಕೆಲವರಿಗಾಗಿಯೇ ಇರುವಂಥದೇ?" ಅಳುಕದೆ ಅವರು ಮಾರ್ನುಡಿದರು: "ವೇದಾಂತವು ರಹಸ್ಯವಾದ ಸಂಗತಿಗಳನ್ನು ಸ್ಪಷ್ಟವಾಗಿಸುವುದು, ತೋರಿಕೆಗೆ ಅಷ್ಟು ಸ್ಪಷ್ಟವಲ್ಲದ ಸಂಗತಿಗಳನ್ನು ರಹಸ್ಯಾತ್ಮಕವಾಗಿಸುವುದು. ಇದು ಎಲ್ಲ ರಹಸ್ಯಗಳಿಂದ ಬಲು ಮುಕ್ತವಾಗಿದೆ. ಬೋಧನೆಯಲ್ಲಿ ಸತ್ಯ ಇರುವುದೇ ಆದರೆ, ಆ ಸತ್ಯದ ಸಮರ್ಪಕ ಉದ್ಘೋಷದ ವಿಷಯದಲ್ಲಿ ರಹಸ್ಯ ಕೆಲಸಕ್ಕೆ ಬಾರದು ಎನ್ನುವ ಅಂಶಕ್ಕೆ ನಾನು ಒತ್ತುಕೊಡಬಯಸುತ್ತೇನೆ. ಮುಕ್ತತೆಯೇ ಸತ್ಯದ ಸಾರ. ಸತ್ಯ ಎಲ್ಲಿ ಇಲ್ಲವೋ ಅಲ್ಲಿ ರಹಸ್ಯವಿರುತ್ತದೆ. ಎಲ್ಲಿ ಸತ್ಯ ಇದೆಯೋ ಅಲ್ಲಿ ರಹಸ್ಯ ಇಲ್ಲ. ಸಂಗತಿಯೊಂದು ಪವಿತ್ರವಾಗಿರಬಹುದು, ಆದರೆ ರಹಸ್ಯವಾದದ್ದಾಗಿರಲಾರದು. ಸಂಗತಿಯೊಂದು ಘನವಾದದ್ದಾಗಿರಬಹುದು, ಆದರೆ ಗೌಪ್ಯವಾದದ್ದಾಗಿರಲಾರದು."

"ಜ್ಞಾನೋದಯವೆಂದರೇನರ್ಥ?" ನಾನು ಕೇಳಿದ್ದಕ್ಕೆ ಅವರು ಪ್ರತಿಕ್ರಿಯಿಸಿದರು: "ಜ್ಞಾನೋದಯವೆಂದರೆ ಪ್ರತಿಯೊಬ್ಬ ವ್ಯಕ್ತಿಯಲ್ಲಿರುವ ದೈವಿಕ ಅಂಶವನ್ನು ಹೊರತರುವುದು. ಅದಕ್ಕಾಗಿಯೇ ನಾವು ಆ ಮಹಾ ಅನುಭವಕ್ಕಾಗಿ ಮನವನ್ನು ಅಣಿಗೊಳಿಸಬೇಕು. ಅಂತಿಮ ಪ್ರತಿಭಾನ ಅಥವಾ ಜ್ಞಾನೋದಯ ಹೊಂದಲು ಮನವನ್ನು ಅಣಿಗೊಳಿಸುವುದೇ ಎಲ್ಲ ಆಧ್ಯಾತ್ಮಿಕ ಸಾಧನೆಗಳ ಮತ್ತು ನೈತಿಕ ಅನುಷ್ಠಾನಗಳ ಉದ್ದೇಶ. ಕೇವಲ ಅನಿರೀಕ್ಷಿತವಾದ ಸಲಹೆಯಿಂದಲೋ, ಅನಿರೀಕ್ಷಿತವಾದ ಮಾತಿನಿಂದಲೋ ಅಂತಿಮ ಕಿಡಿ ಸಿಡಿಯುವುದು ಸಾಧ್ಯ. ಆದರೆ, ಈ ಸಂಗತಿಯನ್ನು ಶೋಧಿಸಿನೋಡಿದಾಗ, ಆ ವ್ಯಕ್ತಿ ಹಿಂದೆಯೇ ಸಿದ್ಧತೆಗೊಳಿಸಿಕೊಂಡ ಸಾಧ್ಯತೆ ಗೋಚರಿಸುವುದು. ಹೋರಾಟ ಮತ್ತು ಪ್ರಯತ್ನವಿಲ್ಲದೆ, ಮನುಷ್ಯನಲ್ಲಿ ಈ ಪರಿಣಾಮ ಉಂಟಾಗಲು ನಿಸರ್ಗ ವಿಕಾಸದ ಸಾವಿರ ಸಾವಿರ ವರ್ಷಗಳ ದೀರ್ಘ ಕಾಲ ಕಾಯದೆ, ಜ್ಞಾನೋದಯ ಸಂಭವಿಸದು. ವ್ಯಕ್ತಿಯ ಅಂತರಂಗದಲ್ಲಿ ಆಧ್ಯಾತ್ಮಿಕ ಮೌಲ್ಯವನ್ನು ಬೇರೂರಿಸುವುದು ಮಾತ್ರವಲ್ಲ, ಅದು ತೋರಲು ವ್ಯಕ್ತಿಯನ್ನು ಸಾವಯವವಾಗಿ, ದೈಹಿಕವಾಗಿ, ಮಾನಸಿಕವಾಗಿ ಸಮರ್ಥನನ್ನಾಗಿ ಮಾಡಲಿಕ್ಕೆ ಕೂಡ ನಿಸರ್ಗಕ್ಕೆ ತನ್ನದೇ ಆದ

ಯೋಜನೆಯಿದೆ. ಇದಕ್ಕೆ ಕೋಟಿಗಟ್ಟಲೆ ವರ್ಷಗಳು ಹಿಡಿಯಬಹುದು. ಮಾನವನೆಂದು ಕರೆಯಲಾದ ಜೀವಜಾಲದಲ್ಲಿ ತನ್ನ ಶಕ್ತಿಸಾಮರ್ಥ್ಯದೊಂದಿಗೆ ಆವಿರ್ಭವಿಸಲು ಜೀವಾತ್ಮವು ಕೋಟಿಗಟ್ಟಲೆ ವರ್ಷವನ್ನು ತೆಗೆದುಕೊಂಡಿದೆಯಷ್ಟೆ. ಆದರೆ, ಬುದ್ಧಿಯ ವಿಕಾಸ ನಮ್ಮ ಕೈಯಲ್ಲಿದೆ. ನಾವು ಹಾಗೆ ಮಾಡಿದಾಗ ನಾವು ಜಿಜ್ಞಾಸು– ಉನ್ನತ ಮೌಲ್ಯಗಳ ಪ್ರಜ್ಞಾವಂತ ಸೋದ್ದಿಷ್ಟ ಜಿಜ್ಞಾಸು – ಆಗುವೆವು. ಈ ಜಿಜ್ಞಾಸೆಯೇ ಸತ್ಯದ ಸಾಕ್ಷಾತ್ಕಾರಕ್ಕಾಗಿ ಮನವನ್ನು ಮೆಲ್ಲಗೆ ಅಣಿಗೊಳಿಸುವುದು."

"ಆಧುನಿಕ ನಾಗರಿಕತೆಯಲ್ಲಿ ಇರುವ ಉನ್ಮಾದ, ಅಸಂತೋಷ, ಅತೃಪ್ತಿಗಳಿಗೆ ಏನು ಕಾರಣ ಎಂದು ತಾವು ಭಾವಿಸುವಿರಿ?" ನಾನು ಕೇಳಿದೆ. ಮಹಾರಾಜರು ಮಾರ್ನುಡಿದರು. "ಮನುಕುಲಕ್ಕೆ ಅತ್ಯಂತ ಮೂಲಭೂತ ಅಗತ್ಯವಾದ ಆಧ್ಯಾತ್ಮಿಕದ ಅತೃಪ್ತಿಯೇ ಪ್ರಮುಖ ಕಾರಣ. ಕೇವಲ ತಿನ್ನುವುದು, ಕುಡಿಯುವುದು ಹಾಗೂ ಬೇರೆ ಬಗೆಯ ಒತ್ತಾಸೆಗಳಿಂದ ನಾವು ತೃಪ್ತರಾಗಲಾರೆವು. ನಮಗೆಲ್ಲ ಒಂದು ಉನ್ನತ ಮಜಲು ಇದೆ; ಅದನ್ನು ಒದಗಿಸಲಾಗಿಲ್ಲ ಅಷ್ಟೆ. ಹಾಗೆ ನೋಡಿದರೆ, ನಮ್ಮ ಪೋಷಣೆ ದೋಷಪೂರ್ಣವಾಗಿದೆ. ಅದರ ಪರಿಣಾಮವಾಗಿ ಮಾನವ ವ್ಯವಸ್ಥೆಯ ಮೇಲೆ ಗಂಭೀರ ಪ್ರತಿಘಾತವುಂಟಾಗಿದೆ. ಅದುವೇ ಸಮಕಾಲೀನ ಜಗದಲ್ಲಿ ನಾವು ಕಾಣುವ ಸಾಮಾಜಿಕ ಸನ್ನಿವೇಶ ಮತ್ತು ಮಾನವ ಮನದ ವಿಕಾಸಕ್ಕೆ ಕಾರಣ."

"ಅಲ್ಲಿಗೆ, ಪರಿಹಾರವೇನು?" ನಾನು ಕೇಳಿದೆನು. ಅವರು ಉತ್ತರಿಸಿದರು: "ಒಂದೇ ಒಂದು ಪರಿಹಾರವೆಂದರೆ, ನಮ್ಮ ಉನ್ನತ ಅಭಿವೃದ್ಧಿಗಾಗಿ ಅವಯವಗಳನ್ನು ಮೀರಿದ, ಇಂದ್ರಿಯಗಳನ್ನು ಅತಿಕ್ರಮಿಸಿದ, ದೈಹಿಕವನ್ನು ದಾಟಿದ ಕಾಲುವೆಯನ್ನು ಕೊರೆಯಬೇಕು. ತನ್ಮೂಲಕ ಮಾನವನ ಮಾನಸಿಕ ಶಕ್ತಿಯ ಒಂದು ಅಂಶ ಊರ್ಧ್ವಮುಖಿಯಾಗಿ ಚಲಿಸತೊಡಗುವುದು. ಆಗ ನೀವು ಕೆಳಸ್ತರದಲ್ಲಿ ಯಾವುದೇ ಅಡಚಣೆ ಇಲ್ಲದಿರುವುದನ್ನು ಕಾಣುವಿರಿ. ಆಧುನಿಕ ನಾಗರಿಕತೆಯಲ್ಲಿ ಈ ಎಲ್ಲ ವಿಕಾರಗಳಲ್ಲಿ ಅಡಚಣೆ ವ್ಯಕ್ತವಾಗುವುದು. ಆಧುನಿಕ ಮಾನವನಲ್ಲಿ ಇದು ನಿಜಕ್ಕೂ ಆಧ್ಯಾತ್ಮಿಕ ಸಮಸ್ಯೆ. ಅವರು ಅಂತರಂಗದಲ್ಲಿ ಬಡವರು; ಬಹಿರಂಗದಲ್ಲಿ ಸಿರಿವಂತರು."

ಅವರು ಉಚ್ಚರಿಸಿದ ಪ್ರತಿಯೊಂದು ಪದವೂ ನನ್ನ ಸತ್ಯದ ಪರಿಕಲ್ಪನೆಗೆ ಅರಿವನ್ನೊದಗಿಸಿತು. ತಮ್ಮ ಜ್ಞಾನವನ್ನು ಮತ್ತು ನಮ್ಮ ಶಿಷ್ಯ–ಗುರು ಬಾಂಧವ್ಯದ ಹಲವು ವರ್ಷಗಳ ಕಾಲದಲ್ಲಿ ಅವರು ಅಷ್ಟು ಮುಕ್ತವಾಗಿ ನೀಡಿದ ಮಾರ್ಗದರ್ಶನವನ್ನು ನಾನು ಅವರಿಗೆ ಚಿರಋಣಿಯಾಗಿದ್ದೆನು. ವೇದಾಂತ ದರ್ಶನದ ಆಧ್ಯಾತ್ಮಿಕ ಪರಿಪೋಷಣೆ ಯನ್ನು ನಾನು ಆಳವಾದ ಅಭಿಲಾಷೆಯೊಂದಿಗೆ ಕಾತರದಿಂದ ಅರಗಿಸಿಕೊಂಡೆನು. ಅದು ಈ ದಿನದವರೆಗೂ ನನ್ನ ಚಿಂತನೆಯನ್ನು ಉದ್ದೀಪಿಸಿಕೊಂಡು ಬಂದಿದೆ. ಈ ಬಗೆಯ ಜ್ಞಾನವು ಅನಂತ. ಅಂತೆಯೇ ನಮ್ಮ ಮನಸ್ಸೂ ಜ್ಞಾನವನ್ನುದ್ದೇಶಿಸಿದ ಸಾಮರ್ಥ್ಯದಲ್ಲೂ ಅಂತ್ಯವನ್ನು ಕಾಣದು. ಪ್ರಶ್ನೆಗಳು ಮತ್ತು ವಿಮರ್ಶೆ ವಿಷಯವನ್ನು ಸಂಪನ್ನಗೊಳಿಸುವುದಕ್ಕೆ ಅತ್ಯವಶ್ಯತೆವೆಂದು ಅವರು ನಂಬಿದ್ದರು.

ಅವರು ಹೇಳಿದರು: "ವೇದಾಂತವು ಪ್ರಶ್ನೆ ಕೇಳಲು ಒತ್ತಾಯಪಡಿಸುವುದು. ಏಕೆಂದರೆ ವೇದಾಂತವು ಸತ್ಯವನ್ನು ಕುರಿತದ್ದಾಗಿದೆ. ಧರ್ಮದಲ್ಲಿ ದೇವರನ್ನು ಕಾಣುವುದೆಂದರೆ ಬುಡಕಟ್ಟಿನ ದೇವರನ್ನಲ್ಲ; ವಿಶ್ವಾತೀತ ದೇವರನ್ನೂ ಅಲ್ಲ. ಆದರೆ ಅದು ನಮ್ಮ ಜನ್ಮಸಿದ್ಧ ಹಕ್ಕಾದ ನಮ್ಮದೇ ಆತ್ಮವನ್ನು. 'ಆತ್ಮ' ಎನ್ನುವ ಪದವು ಸ್ಥೂಲ ಜಡ ದೇಹದಿಂದ ಆರಂಭಿಸಿ ಮಾನವನ ಕಟ್ಟಕಡೆಯ ಅಂತರಂಗದ ತಿರುಳಿನೊಳಗಿರುವ ಅನಂತ ಆತ್ಮಚೈತನ್ಯದ ವರೆಗಿನ ಯಾವುದೇ ನೆಲೆಯನ್ನೂ ಹೇಳಬಹುದಾಗಿದೆ. ನಾವು ಇನ್ನಷ್ಟು ಮತ್ತಷ್ಟು ಆಳವನ್ನು ಬಗೆದಂತೆಲ್ಲ ಸೂಕ್ಷ್ಮತರ ಆತ್ಮಗಳನ್ನು ಹಾದುಹೋಗುತ್ತೇವೆ. ಅವೆಲ್ಲವೂ ಆತ್ಮತ್ವದ ಪ್ರತಿಭಾಸಕಗಳೇ ವಿನಾ ನೈಜ ಆತ್ಮವಲ್ಲ. ಇವೆಲ್ಲವನ್ನೂ ಹಿಂದಕ್ಕಟ್ಟಿ ನೈಜ ಆತ್ಮದೆಡೆ ಮುನ್ನಡೆಯಲು ಅರಿವು ಮತ್ತು ದಿಟ್ಟತನವನ್ನು ಹೊಂದಿದವನಿಗೆ ಆಧ್ಯಾತ್ಮಿಕ ಅಭಿವೃದ್ಧಿ ಸುನಿಶ್ಚಿತವಾಗುವುದು. ಅನಂತವಾದ ಆತ್ಮವು ಪ್ರತಿಯೊಬ್ಬನಲ್ಲೂ ಅಡಗಿದೆ. ಅದನ್ನು

ಶೋಧಿಸಿಕೊಳ್ಳಬೇಕಿದೆ. ಅದನ್ನು ಸಾಕ್ಷಾತ್ಕರಿಸಿಕೊಳ್ಳುವ ಸಾಮರ್ಥ್ಯ ನಮಗಿದೆ. ಇದು ನಿಸರ್ಗದೊಳಗೂ ಇದೆ; ಮಾನವನೊಳಗೂ ಇದೆ."

"ಗೃಹಸ್ಥನಿಗಿಂತಲೂ ಸನ್ಯಾಸಿಗೆ ಯೋಗದ ಕಠಿಣ ನಿಯಮಗಳನ್ನು ಅನುಷ್ಠಾನ ಮಾಡುವುದು ಹೆಚ್ಚು ಸುಲಭ ಎಂದು ನಾನು ಭಾವಿಸುವೆನು. ಏಕೆಂದರೆ ಸನ್ಯಾಸಿಯ ಬದುಕಿನಲ್ಲಿ ಚಿತ್ತಚಾಂಚಲ್ಯದ ಸಂಗತಿಗಳು ಕಡಿಮೆ. ಆತ ಶೀಘ್ರತರವಾಗಿ ಅನಂತ ಆತ್ಮವನ್ನು ಸಾಕ್ಷಾತ್ಕರಿಸಿಕೊಳ್ಳಬಹುದಾಗಿದೆ." ಹೀಗೆಂದು ನಾನು ೧೯೭೭ರ ಮಾರ್ಚ್‌ನಲ್ಲಿ ಅವರಿಗೆ ಕಳುಹಿದ ಪತ್ರವೊಂದರಲ್ಲಿ ಬರೆದಿದ್ದೆನು.

ನನ್ನ ಪತ್ರಕ್ಕೆ ಕಳುಹಿದ ಉತ್ತರದಲ್ಲಿ ಸ್ವಾಮೀಜಿ ಹೀಗೆಂದು ಬರೆದರು: "ತಾನು ಹಿಂದೆ ಸಂಪಾದಿಸಿದ ಒಲವುಗಳಿಂದಾಗಿ ಯೋಗದ ಆಧ್ಯಾತ್ಮಿಕ ಬದುಕಿನಲ್ಲಿ ತನ್ನೊಳಗಿನಿಂದಲೇ ಅಧಿಕವಾಗಿ ಚಿತ್ತಚಾಂಚಲ್ಯವುಂಟಾಗುವುದೇ ವಿನಾ ಹೊರ ಜಗತ್ತಿನಿಂದಲ್ಲ. ಇದು ಸನ್ಯಾಸಿಗೂ ಗೃಹಸ್ಥನಿಗೂ ಸಮಾನ ಸಮಸ್ಯೆ. ಆಧ್ಯಾತ್ಮಿಕ ಜೀವನದಲ್ಲಿ ಇದು ಪ್ರಮುಖ ಸಮಸ್ಯೆಯೂ ಆಗಿದೆ. ಅಲ್ಲದೆ, ಆಧ್ಯಾತ್ಮಿಕ ಜೀವನವೆಂದರೆ ವಿಶೇಷ ಹಠ ಮತ್ತು ಇತರರ ಯೋಗಾನುಷ್ಠಾನವೆಂದಷ್ಟೇ ಭಾವಿಸಬಾರದು. ಇವುಗಳಿಗೆ ಪಥ್ಯವೇ ಮುಂತಾದ ವಿಶೇಷ ನಿಯಮಗಳು ಅಗತ್ಯವಾಗುತ್ತವೆ. ಆದರೆ ಆಧ್ಯಾತ್ಮಿಕ ಜೀವನದಲ್ಲಿ ಭಕ್ತಿಮಾರ್ಗವನ್ನು ಸಮೂಹದಲ್ಲಿ ಇಲ್ಲವೇ ಏಕಾಂತದಲ್ಲಿ ಎಲ್ಲಿಯಾದರೂ ನಿಷ್ಠೆಯಿಂದ ಅನುಸರಿಸಬಹುದು. ಆ ಮಾರ್ಗದಲ್ಲಿ ಅನ್ವೇಷಿಸಲಾದ ಭಗವಂತನು ಮಾನವನ ಹೃದಯದಲ್ಲಿರುವಂತೆಯೇ ನಿಸರ್ಗದಲ್ಲೂ ಹೊರ ಜಗತ್ತಿನಲ್ಲೂ ಇರುವನು. ಆದ್ದರಿಂದ ಭಕ್ತನು ಈ ಜಗದಲ್ಲಿ ನೆಲೆಗೊಂಡು ಕಾರ್ಯಮಗ್ನನಾಗಿರುವಾಗಲೇ ಭಗವಂತನಲ್ಲೂ ನೆಲೆಸಿರುವನು. ಭಕ್ತಿಯ ಮನೋಧರ್ಮ ಮತ್ತು ವಿಧಾನ ವಿಶಿಷ್ಟವಾದ ಹಠ ಮತ್ತು ರಾಜಯೋಗ ಮಾರ್ಗಗಳಿಗಿಂತಲೂ ಅಧಿಕವಾಗಿ ಬಾಹ್ಯ ಚಿತ್ತಚಾಂಚಲ್ಯವನ್ನು ಮೀರಿ ನಿಲ್ಲಬಲ್ಲುದು. ಆದರೂ ಭಕ್ತಿ ಮಾರ್ಗವು, ವ್ಯಕ್ತಿಯೊಬ್ಬ ಆಗಲೇ ಅನುಭವಿಸಿದ ಆಧ್ಯಾತ್ಮಿಕ ಜೀವನವನ್ನು ತೀವ್ರಗೊಳಿಸುವುದಕ್ಕಾಗಿ ಪ್ರಾಸಂಗಿಕ ಅನುಸಂಧಾನವನ್ನು ವಿಧಿಸುವುದು. ಭಕ್ತಿಯ ವಿಷಯದಲ್ಲಿ ಅನುಸಂಧಾನವು ಸಾಂಸಾರಿಕತೆಯಿಂದ ಆಧ್ಯಾತ್ಮಿಕತೆಗೆ ಕೊಂಡೊಯ್ಯುವುದಿಲ್ಲ; ಬದಲಾಗಿ ಆಧ್ಯಾತ್ಮಿಕ ಅನುಭವವನ್ನು ಮತ್ತಷ್ಟು ತೀವ್ರಗೊಳಿಸುವುದು, ಅಷ್ಟೆ. ಧರ್ಮ ಎನ್ನುವುದು ಯಾವುದೋ ಊರುಗೋಲಲ್ಲ, ಬದುಕಿಗೆ ಹೊರತಾದದ್ದಲ್ಲ, ಬದುಕೇ ಧರ್ಮ ಎನ್ನುವ ವೇದಾಂತದ ಸತ್ಯವನ್ನು ಅರಿತಾಗ ಸನ್ಯಾಸದ ಮತ್ತು ಸಾಮಾನ್ಯ ಬದುಕಿನ ನಡುವಣ ಭೇದವು ದೂರವಾಗುವುದು."

ನಾನು ೨೦೦೩ರ ಜನವರಿಯಲ್ಲಿ ಮತ್ತೆ ಬೇಲೂರು ಮಠಕ್ಕೆ ಭೇಟಿ ಕೊಟ್ಟೆನು. ನಿತ್ಯವೂ ಸ್ವಾಮೀಜಿಯವರನ್ನು ಸಂದರ್ಶಿಸುತ್ತ ಒಂಬತ್ತು ದಿನಗಳ ಕಾಲ ಅತಿಥಿ ಗೃಹದಲ್ಲಿ ಉಳಿದುಕೊಂಡೆನು. ಆಗ ಅವರಿಗೆ ತೊಂಬತ್ನಾಲ್ಕು ವರ್ಷ ವಯಸ್ಸು. ಅವರ ದೇಹ ಸಾಕಷ್ಟು ಕೃಶವಾಗಿತ್ತು. ಆದರೆ, ಅವರ ಕಣ್ಣುಗಳು ಎಂದಿನಂತೆ ಹೊಳೆಯುತ್ತಿದ್ದವು. ಅಂತರಂಗದ ಆಧ್ಯಾತ್ಮಿಕ ಶಾಂತಿ ಅವರಿಂದ ಹೊರಸೂಸುತ್ತಿತ್ತು. ಅವರ ಸಾನ್ನಿಧ್ಯದಲ್ಲಿ ಕುಳಿತು, ನಾನು ೧೯೬೮ರ ಕ್ರಿಸ್‌ಮಸ್ ದಿನದಂದು ನನಗಾದ ಆಧ್ಯಾತ್ಮಿಕ ಅನುಭವವನ್ನು ನೆನಪಿಸಿಕೊಂಡೆನು. ಧ್ಯಾನದ ಹೊತ್ತು, ಎಚ್ಚರಕ್ಕೆ ಮರಳುತ್ತಿರುವಂತೆ ಅನಿಸಿದ ಸಮಯದಲ್ಲಿ ನಾನು ಮೋಡಗಳ ನಡುವಿನ ಉನ್ನತ ಗಿರಿಶಿಖರದಲ್ಲಿದ್ದೆನು. ಆ ಉನ್ನತ ಶಿಖರದ ಮೇಲೆ, ದೂರದಲ್ಲಿ ನಾನು ಒಬ್ಬ ಮನುಷ್ಯನನ್ನು ಕಂಡೆ. ಹತ್ತಿರಕ್ಕೆ ಹೋಗುತ್ತಿದ್ದಂತೆ, ಅಚ್ಚ ಬಿಳುಪಿನ ಉದ್ದದ ಅಲೆ ಅಲೆ ನಿಲುವಂಗಿ ತೊಟ್ಟು ಬಿಳೀ ಅಮೃತಶಿಲೆಯ ಸಿಂಹಾಸನದಲ್ಲಿ ಆತ ವಿರಾಜಮಾನನಾದುದು ಕಾಣಿಸಿತು. ಜ್ಞಾನ ಮತ್ತು ಕರುಣೆಯ ಸಾನ್ನಿಧ್ಯದಲ್ಲಿ, ಸಾಧಾರಣ ಅಧ್ಯಾಪಕನಲ್ಲದೆ ಗುರುವಿನ ಪದತಲದಲ್ಲಿ ನಾನು ಮಂಡಿಯೂರಿ ಕುಳಿತೆನು. ಅಸಾಧಾರಣ ವ್ಯಕ್ತಿಯಿಂದ ನನಗೆ ಬೋಧೆ ಲಭಿಸಿತು. ಒಳನೋಟದ ಸ್ಫುರಣೆಯೊಂದಿಗೆ ನನಗೆ ಜ್ಞಾನ ಮತ್ತು ಉಪದೇಶ ದೊರಕಿತು. ಅದು ಆ ಕಾಲಕ್ಕೆ ನನಗೆ ಒಗಟಾಗಿತ್ತು. ಅದರೂ ಪವಿತ್ರ ಮತ್ತು ಘನವಾದದ್ದೇನನ್ನೋ ನಾನು ಪಡೆಯುತ್ತಿರುವೆನೆಂದೂ ನನಗೆ

ಅರಿವಾಯಿತು. ಆ ಗಳಿಗೆಯಿಂದ ಮುಂದೆ ಉನ್ನತ ಯೋಗ ಮತ್ತು ವೇದಾಂತ ದರ್ಶನವು ನನಗೆ ಅರ್ಥವಾಗತೊಡಗಿತು. ಅದು ಆ ಅನುಭವಕ್ಕೆ ಮುಂಚೆ ನನಗೆ ಅಷ್ಟಾಗಿ ಅರ್ಥವಾಗುತ್ತಿರಲಿಲ್ಲ. ಇವತ್ತಿನವರೆಗೂ ನನ್ನ ನಂಬಿಕೆ ಏನೆಂದರೆ, ಅಂದು ೧೯೬೮ರಲ್ಲಿ, ನನ್ನ ಅತೀಂದ್ರಿಯ ಅನುಭವದ ಕಾಲಕ್ಕೆ ನಾನು ಸಂಧಿಸಿದ, ಹಿಮಾಲಯದ ಹಿಮಶಿಖರಿಗಳ ನಡುವೆ ಶ್ವೇತಾಮೃತ ಶಿಲೆಯ ಸಿಂಹಾಸನದಲ್ಲಿ ಕುಳಿತ ವ್ಯಕ್ತಿ ಗುರುವಿನ ಪ್ರತೀಕ. ಅವರೇ ಸ್ವಾಮಿ ರಂಗನಾಥಾನಂದರು ಎನ್ನುವುದು ನನಗರಿವಾಯಿತು.

ಸ್ವಾಮಿ ರಂಗನಾಥಾನಂದರ ಪುಣ್ಯಸ್ಮೃತಿ ಮತ್ತು ಅವರ ಬೋಧನೆ ಅನರ್ಘ್ಯ ರತ್ನದಂತೆ ಪ್ರಜ್ವಲಿಸುತ್ತಿವೆ; ನನ್ನ ಬದುಕನ್ನು ಶಬ್ದಾತೀತವಾಗಿ ಸಂಪನ್ನಗೊಳಿಸಿವೆ. ಸಾವಿರ ಸಾವಿರ ಜನರಿಗೆ ಮಾಡಿದಂತೆ ಅವರು ನನ್ನೊಳಗೂ ಆಧ್ಯಾತ್ಮಿಕತೆಯನ್ನು ಜಾಗ್ರತಗೊಳಿಸಿ, ಉದ್ದೀಪಿಸಿ, ಪೋಷಿಸಿದರು. ಸ್ವಾಮೀಜಿ, ನಿಮಗೆ ಧನ್ಯವಾದಗಳು.

* * * *

# ೯೬. ಜ್ಞಾನ ಪ್ರದೀಪ

–ವೀಣಾರಾವ್*

ಸ್ವಾಮಿ ವಿವೇಕಾನಂದರ ಸಾಧನೆ– ಉನ್ನತ ಜೀವನಕ್ಕೆ ಸಿದ್ಧತೆ ಕೃತಿಯನ್ನು ಓದಿದ ಬಳಿಕ ನಾನು ದೊಮಲಗುಡದ ರಾಮಕೃಷ್ಣ ಮಠದ ವಿಳಾಸವನ್ನು ಹುಡುಕಿ ಪಡೆದೆನು. ಕೆಲವು ಪುಸ್ತಕಗಳನ್ನು ಕೊಂಡುಕೊಳ್ಳಲೆಂದು ಅಲ್ಲಿಗೆ ಹೋದೆನು. ನಾನು ಅಂದೇ ಸ್ವಾಮಿ ರಂಗನಾಥಾನಂದರನ್ನು ಕಂಡೆನು. ಸನ್ಯಾಸಿಗಳ ವಸತಿಗೃಹದಿಂದ ಅವರು ಹೊರಬರುತ್ತಿದ್ದರು. ನಾನು ತುಂಬ ದೂರದಿಂದ ಅವರನ್ನು ನೋಡುತ್ತಿದ್ದೆ– ಅವರು ನೇರವಾಗಿ ನಡೆಯುತ್ತಿದ್ದರು. ಅದೆಷ್ಟು ನೇರವಾಗಿ, ಗಂಭೀರವಾಗಿ ಎಂದರೆ ಕಣ್ಣುಗಳು ಎವೆಯಿಕ್ಕದೆ ಅವರನ್ನು ಸೆರೆಹಿಡಿದವು. ಜ್ಞಾನಜ್ಯೋತಿ(ಸರಸ್ವತಿ)ಯೇ ನಡೆದುಬರುತ್ತಿದೆಯೋ, ಜ್ಞಾನಪ್ರದೀಪವು ಹೊರಗೆದ್ದು ಬರುತ್ತಿದೆಯೋ ಎಂದು ನನಗನ್ನಿಸಿತು. ನಾನು ಹಾಗೇ ಯೋಚಿಸುತ್ತಿದ್ದೆ. "ನಾನು ಅವರನ್ನು ಭೆಟ್ಟಿಯಾಗಬೇಕು. ಆದರೆ ಹೇಗೆ ಅವರ ಬಳಿಗೆ ಹೋಗುವುದು? ಅವರನ್ನು ಹೇಗೆ ಸಂಪರ್ಕಿಸುವುದು?" ಅದೇ ನನಗೊದಗಿದ ಮೊದಲ ದರ್ಶನ.

ಆ ಬಳಿಕ ಸ್ವಾಮೀಜಿಯವರ ಉಪನ್ಯಾಸವನ್ನು ಕೇಳಿದ್ದಾದ ಮೇಲೆ ನಾನು ತುಂಬ ಪ್ರಭಾವಿತಳಾದೆ. ಎಷ್ಟೆಂದರೆ "ನಾನು ಹುಡುಕುತ್ತಿದ್ದ ಆದರ್ಶ ವ್ಯಕ್ತಿ ಕೊನೆಗೂ ನನಗೆ ಸಿಕ್ಕಿಬಿಟ್ಟರು" ಎನ್ನುವುದು ನನಗೆ ಸ್ಪಷ್ಟವಾಗಿ ಅರಿವಾಯಿತು. ನಾನು ಎಲ್ಲ ಉಪನ್ಯಾಸಗಳಿಗೂ ಹಾಜರಾದೆ; ಎಂದೂ ಒಮ್ಮೆಯೂ ತಪ್ಪಿಸಲಿಲ್ಲ. ಅವರು ಅಷ್ಟೊಂದು ಜ್ಞಾನಸಂಪನ್ನರಾಗಿದ್ದುದರಿಂದ ಅವರನ್ನು ಭೆಟ್ಟಿಯಾಗುವುದಕ್ಕಂತೂ ಸದಾ ನನಗೆ ಭಯವಿದ್ದೇ ಇತ್ತು. ನನಗೆ ನಾನೇ ಪ್ರಶ್ನಿಸಿಕೊಳ್ಳುತ್ತಿದ್ದೆ. "ನಾನು ಅವರೊಂದಿಗೆ ಮಾತನಾಡಬಲ್ಲೆನೆ?"

ಹೀಗಿದ್ದೂ, ಜ್ಞಾನವು ಭಯರಹಿತನನ್ನಾಗಿ ಮಾಡುವುದು ಎಂದು ಒಂದು ದಿನ ಸ್ವಾಮಿ ಪರಮಾರ್ಥಾನಂದರು ಹೇಳಿದರು. ಹಾಗಾಗಿ ಅವರು ನನ್ನನ್ನು ರಂಗನಾಥಾನಂದಜೀಯವರಿದ್ದಲ್ಲಿಗೆ ಕರೆದೊಯ್ದು ಹೇಳಿದರು: "ಈಕೆಗೆ ತಮ್ಮನ್ನು ಕಂಡರೆ ಭಯ." ಇದು ಪರಿಚಯ. ಅದಾದ ಬಳಿಕ ಜೋಸೆಫೈನ್ ಮೆಕ್ಲಿಯೋಡ್ ಅವರ ಕೃತಿಗಳನ್ನು ಓದುವಂತೆ ಸ್ವಾಮೀಜಿ ನನಗೆ ಹೇಳಿದರು.

ತದನಂತರ, ಒಂದು ದಿನ ನನ್ನಲ್ಲಿರುವ ಹೆಚ್ಚಿನ ಹೊಸ ಟೋಸ್ಟರ್ ನನಗೆ ಅಗತ್ಯವೆ ಎಂದು ಯೋಚಿಸುತ್ತಿದ್ದೆ. ನನ್ನಲ್ಲಿ ಬ್ರೆಡ್ ಟೋಸ್ಟರ್ ಇದೆಯಾ ಎಂದು ಸ್ವಾಮೀಜಿ ಕೇಳಿದಾಗ ನನಗೆ ಆಶ್ಚರ್ಯವಾಯಿತು. ಮತ್ತೆ ಒಂದು ದಿನ ಅವರು ನನ್ನನ್ನು ಕೇಳಿದರು: "ನಿನ್ನಲ್ಲಿ ಕಿವಿಕಡ್ಡಿ ಇದೆಯಾ?" ಅಂದು ನಾನು ಯೋಚಿಸಿದೆ: "ಠಾಕೂರರು 'ಎಮ್' ಅವರೊಂದಿಗೆ ಅಷ್ಟು ನಿರ್ಭಿಡೆಯಾಗಿದ್ದಾರೆ. ಆದ್ದರಿಂದಲೇ ಅವರು ಅಂಗವಸ್ತ್ರದಂಥ ಸಣ್ಣ ವಸ್ತುಗಳನ್ನೂ ತಂದುಕೊಡೆಂದು 'ಎಮ್'ನ ಕೇಳುತ್ತಿದ್ದರು. ಸ್ವಾಮಿಯವರು ಅದೇ ಕಾರಣಕ್ಕಾಗಿಯೇ ಈ ವೈಯಕ್ತಿಕ ವಸ್ತುಗಳನ್ನು ಕೇಳುತ್ತಿದ್ದರೇ?" ಎಂದು ನಾನು ಆಶ್ಚರ್ಯಪಟ್ಟೆ.

ಒಮ್ಮೆ ಅವರಿಗೆ ಕೇರಳದಿಂದ ಯಾರೋ ಪತ್ರ ಬರೆದಿದ್ದರು (ತುಸು ಹಣವನ್ನು ಕೇಳಿದ್ದಿರಬೇಕು). ಅವರು ನನ್ನನ್ನು ಕೇಳಿದರು: "ನಿನ್ನ ಕೈಚೀಲದಲ್ಲಿ ಹಣ ಎಷ್ಟಿದೆ?" ನಾನು ಮಾರ್ನುಡಿದೆ: "ಸ್ವಾಮೀಜಿ, ನಾನು ನಾಳೆ ಹೇಳುತ್ತೇನೆ." ಆಗ ಸ್ವಾಮಿಯವರು ಕೇಳಿದರು "ಯಾಕೆ ಈಗಲೇ ಹೇಳಲಾಗದು?" ನಾನೆಷ್ಟು ಭಾಗ್ಯವಂತೆ. ನನ್ನಲ್ಲಿ ಅವರು ಏನನ್ನಾದರೂ ಕೇಳಬಹುದಾದಷ್ಟು ಆಪ್ತ ಭಕ್ತೆಯಾಗಿ ನನ್ನನ್ನು ಅವರು ಪರಿಗಣಿಸಿದ್ದಾರೆ ಎಂದು ನನಗನಿಸಿತು.

---

* ಹೈದರಾಬಾದ್‌ನ ಒಬ್ಬ ಭಕ್ತೆ.

ಒಮ್ಮೆ ತರುಣ ಸ್ವಾಮೀಜಿಯೊಬ್ಬರು ಯುವವಿಧವೆಯೊಂದಿಗೆ ಅನುಚಿತವಾಗಿ ನಡೆದುಕೊಂಡರು. ಈ ಘಟನೆ ಸ್ವಾಮಿ ರಂಗನಾಥಾನಂದರಿಗೆ ತಿಳಿದಾಗ ಅವರ ಮುಖ ಬಿಳಿಚಿಕೊಂಡಿತು; ಅವರ ಮುಚ್ಚಿನ ಕಣ್ಣುಗಳಿಂದ ಕಣ್ಣೀರು ಧಾರೆಯಾಗಿ ಹರಿಯುತ್ತಲೇ ಇತ್ತು! ಒಂದು ದಿನ ಹೆಂಗಸೊಬ್ಬಳು ಬಂದು, ತನ್ನ ಗಂಡ ತುಂಬ ಒರಟಾಗಿ ನಡೆದುಕೊಳ್ಳುವನೆಂದು ದೂರಿತ್ತಳು. ಮಹಾರಾಜರು ಆಕೆಯ ಗಂಡನನ್ನು ಕರೆದುಕೊಂಡು ಬರಲು ಹೇಳಿದರು. ಅವರು ಬಂದಾಗ ಅವರೊಂದಿಗೆ ಸ್ವಾಮೀಜಿ ನಲವತ್ತು ನಿಮಿಷಗಳನ್ನು ಕಳೆದು ಹೇಳಿದರು: "ಬೀಜಕ್ಕೆ ಗಂಡು ಹೆಣ್ಣು ಎರಡು ಭಾಗಗಳ ಅಗತ್ಯ ಇದೆ. ಎರಡೂ ಆರೋಗ್ಯಪೂರ್ಣವಾಗಿದ್ದಾಗ, ಅದರಿಂದ ಆರೋಗ್ಯಪೂರ್ಣವಾದ ಸುಂದರ ವೃಕ್ಷ ಸಂಭವಿಸುವುದು. ಸಮಾಜಕ್ಕೆ ಸೇವೆ ಸಲ್ಲಿಸಬಲ್ಲ ಸನ್ಯಾಸಿಯೊಬ್ಬ ಅಂಥ ಕುಟುಂಬದಲ್ಲಿ ಹುಟ್ಟಿ ಬರಬಹುದು." ಮತ್ತೊಂದು ಸಂದರ್ಭದಲ್ಲಿ ಗೃಹಿಣಿಯೊಬ್ಬಳಿಗೆ ಅವರು ಹೇಳಿದರು: "ನೀನು ಸಮಸ್ಯೆಗಳೊಂದಿಗೆ ಬದುಕಲಾರೆಯಾದರೆ ಅವುಗಳನ್ನು ತೊರೆದುಬಿಡು. ನಿನಗೆ ಅವುಗಳನ್ನು ಬಿಡಲೂ ಆಗದಿದ್ದರೆ, ಅವುಗಳೊಂದಿಗೇ ಬದುಕು. ದೂರಬೇಡ ಅಷ್ಟೆ."

'ದಿ ಹಿಂದೂ' ಪತ್ರಿಕೆಯಲ್ಲಿ ೧೯೮೪ರ ಆಗಸ್ಟ್ ೨೫ರಂದು ವರದಿಯೊಂದು ಪ್ರಕಟವಾಗಿತ್ತು. ಅದರ ಪ್ರಕಾರ ಸಭೆಯೊಂದರಲ್ಲಿ ಒಂದು ರೂಪಾಯಿ ನೋಟುಗಳ ಹಾರ ಹಾಕಿ ಎನ್.ಟಿ.ರಾಮರಾವ್ ಅವರನ್ನು ಗೌರವಿಸಲಾಗಿತ್ತು. ಪ್ರತಿಯೊಂದು ನೋಟಿನಲ್ಲೂ ಸ್ವಾಮಿ ವಿವೇಕಾನಂದರ ಬೋಧನೆಯನ್ನು ಬರೆಯಲಾಗಿತ್ತು. ಈ ಬೋಧನೆಗಳನ್ನು ತುಂಬ ಸಂಕ್ಷಿಪ್ತವಾಗಿ ಬರೆದುದು ವೀಣಾ ರಾವ್. "ಆಕೆಗೆ ಎನ್.ಟಿ.ರಾಮರಾವ್ ಬಗ್ಗೆ ಹುಚ್ಚೇ?" ಜನ ಕೇಳಿದರು: ಆದರೆ ಸ್ವಾಮಿಯವರು ಆಕೆಯ ಕಾರ್ಯವನ್ನು ಈ ಕೆಳಕಂಡ ಬಗೆಯಲ್ಲಿ ಅರ್ಥೈಸಿದರು. ಅವರು ಹೇಳಿದರು "ಸರಿಯಾದ ವ್ಯಕ್ತಿ ಸರಿಯಾದ ರೀತಿಯಲ್ಲಿ ತಿಳಿಯುವನು. ಸರಿಯಾದ ಜನ ಸರಿಯಾಗಿಯೇ ಕೆಲಸ ಮಾಡುವರು. ಈಕೆ ಕ್ರಿಯೋತ್ಸಾಹಿ. ಈಕೆ ನನ್ನ ೫೩ ಗೀತಾ ಧ್ವನಿಸುರುಳಿಗಳನ್ನು ತೆಲುಗಿಗೆ ಅನುವಾದಿಸಿದ್ದಾಳೆ. ಹೇಗೆ ತಾನೇ ಸಾಮಾನ್ಯ ಗೃಹಿಣಿ ಇಂಥ ದೊಡ್ಡ ಕೆಲಸ ಮಾಡಲು ಸಾಧ್ಯ! ಈ ಬಗೆಯ ಮಹಾಕಾರ್ಯಕ್ಕೆ ಹುಚ್ಚು ಅಗತ್ಯವೇ ಆಗುತ್ತದೆ."

ಒಮ್ಮೆ ಸ್ವಾಮಿಯವರು ನನಗೆ ಹೇಳಿದರು: "ನಾನು ಗೋಲಿ ಆಡಲು ಬಯಸುವೆನು. ನಾನು ಇದನ್ನು ಎಸೆಯಲು ಇಚ್ಛಿಸುವೆನು (ಮಧ್ಯದ ಬೆರಳನ್ನು ಮಡಿಚಿ ಗೋಲಿಗೆ ತಗುಲಿಸಿ ತೋರಿಸುತ್ತ) ಇದು ಎಷ್ಟು ದೂರ ಹೋಗುವುದೆಂದು ನಿನಗೆ ಗೊತ್ತಾ? ಇದು ಭಾಷಾ ಶಾಲೆಯ ಕಟ್ಟಡದಲ್ಲಿರುವ ನನ್ನ ಕೋಣೆಯವರೆಗೆ ಹೋಗುವುದು. ಇದು ಹೆಚ್ಚು ಕಮ್ಮಿ ೮೦ರಿಂದ ೧೦೦ ಮೀಟರುಗಳಷ್ಟು ಅಂತರದಲ್ಲಿದೆ." ಹೀಗೆ ಮಾಡಲು ಅವರಲ್ಲಿ ವಿಶೇಷ ತಂತ್ರವೂ, ಬಹಳಷ್ಟು ಶಕ್ತಿಯೂ ಇತ್ತು.

ಒಮ್ಮೆ ಅವರ ಕಾರು ಕೆಟ್ಟುನಿಂತಿತು. ಆಗ ಅವರು ತುಂಬ ದೂರದಲ್ಲಿದ್ದ ಉಪನ್ಯಾಸದ ಸ್ಥಳವನ್ನು ನಡೆದೇ ಹೋಗಿ ತಲುಪಿದರು. ಅವರು ಒಮ್ಮೆ ಹೇಳಿದರು: "ನನಗೆ ಒಂದು ನಯವಾದ, ಮತ್ತೊಂದು ಒರಟಾದ ಎರಡು ದಾರಿಗಳು ಎದುರಾದರೆ, ನಾನು ಎರಡನೆಯದಕ್ಕೆ ಪ್ರಾಶಸ್ತ್ಯ ನೀಡುವೆನು."

ನನಗೆ ಅವರ ಕೊನೆಯ ಸಲಹೆ ಇದಾಗಿತ್ತು. "ಗೀತೆಯನ್ನು ಬೋಧಿಸುತ್ತ ಮುಂದೆ ಮುಂದೆ ಸಾಗು!"

* * * *

# ೯೭. ಬರ್ಲಿನ್ ಉಪನ್ಯಾಸಗಳು ಮತ್ತು ಅವುಗಳ ಸಮಕಾಲೀನ ಪ್ರಸ್ತುತತೆ

–ಹಿಲ್ಟ್ರುಡ್ ರುಸ್ತೌ*

ಸ್ವಾಮಿ ರಂಗನಾಥಾನಂದರನ್ನು ಮೊದಲ ಬಾರಿಗೆ ಭೆಟ್ಟಿಯಾಗಿ ಹಲವು ವರ್ಷಗಳೇ ಕಳೆದವು. ಆಗಷ್ಟೇ ನನ್ನ ಶೈಕ್ಷಣಿಕ ವೃತ್ತಿಜೀವನದ ಆರಂಭದ ಕಾಲ. ಸಂಸ್ಕೃತತಜ್ಞ ವಾಲ್ಟರ್ ರೂಬೆನ್ ನನ್ನ ಗುರು. ಸ್ವಾಮಿ ವಿವೇಕಾನಂದರ ಮತ್ತು ಬಾಲಗಂಗಾಧರತಿಲಕರ ತತ್ತ್ವಜ್ಞಾನದ ದೃಷ್ಟಿಕೋನದ ಬಗ್ಗೆ ಪಿಎಚ್.ಡಿ. ಮಹಾ ಪ್ರಬಂಧವನ್ನು ಬರೆಯಲು ನನಗೆ ಹೇಳಿದ್ದರು. ಅದ್ವೈತ ವೇದಾಂತವನ್ನು ಕುರಿತ ಇಬ್ಬರ ಅರಿವನ್ನು ತೌಲನಿಕವಾಗಿ ನೋಡುವುದು ಅದರ ಉದ್ದೇಶ. ಆಗಷ್ಟೇ ಸ್ವಾಮಿ ವಿವೇಕಾನಂದರ ಜನ್ಮ ಶತಮಾನದಾಚರಣೆ ಸಮೀಪಿಸಿತ್ತು. ಈ ಭಾರತೀಯ "ದೇಶಭಕ್ತ ಮತ್ತು ಪ್ರವಾದಿ"ಯ ಗೌರವಾರ್ಥ ವಿಚಾರ ಸಮ್ಮೇಳನವೊಂದು ಏರ್ಪಾಡಾಗಿತ್ತು. ಅವರ ಸೋದರ ಭೂಪೇಂದ್ರನಾಥರು ವಿವೇಕಾನಂದರನ್ನು ತಮ್ಮ ಆಸಕ್ತಿದಾಯಕ ಪುಸ್ತಕವೊಂದರಲ್ಲಿ ಹೀಗೆಂದು ಕರೆದಿದ್ದರು. ನಾನು ಅದನ್ನು ಆಗಲೇ ಓದಿದ್ದೆನು. ನಾನು ಬರ್ಲಿನ್(ಪೂರ್ವ)ನ ಹಂಬೋಲ್ಟ್ ವಿಶ್ವವಿದ್ಯಾಲಯದಲ್ಲಿ ಕಿರಿಯ ಸಂಶೋಧನ ಸಹಾಯಕನಾಗಿ ಕೆಲಸ ಮಾಡುತ್ತಿದ್ದೆ. ಅಲ್ಲಿಯ ಗ್ರಂಥಾಲಯದಲ್ಲಿ ಸಿಗುವುದಕ್ಕಿಂತ ಹೆಚ್ಚಿನ ಮಾಹಿತಿಯನ್ನು ಪಡೆಯಲಿಕ್ಕಾಗಿ ನಾನು ಬೇಲೂರಿನ ರಾಮಕೃಷ್ಣ ಮಠಕ್ಕೆ ಪತ್ರ ಬರೆದೆನು. ಅದೇ ಕಲ್ಕತ್ತೆಯಲ್ಲಿ ರಾಮಕೃಷ್ಣ ಮಠವು ಆಯೋಜಿಸಿದ್ದ ಜನ್ಮಶತಮಾನೋತ್ಸವದಲ್ಲಿ ಭಾಗವಹಿಸಲು ನನಗೆ ಆಮಂತ್ರಣ ದೊರಕಿದ್ದಕ್ಕೆ ಕಾರಣ. ಈ ಆಹ್ವಾನವನ್ನು ಮನ್ನಿಸುವುದು ಸುಲಭವಂತೂ ಆಗಿರಲಿಲ್ಲ. ಏಕೆಂದರೆ ನನ್ನ ವಿಶ್ವವಿದ್ಯಾಲಯವು ವಿಮಾನದ ಟಿಕೆಟ್‌ಗಾಗಿ ನೇರ ಹಣವನ್ನು ಪಾವತಿಸಬೇಕಿತ್ತು. ಅದು ಆಗಿನ ಪೂರ್ವಜರ್ಮನಿಗೆ (ಜಿ.ಡಿ.ಆರ್) ನಿಲುಕದ್ದಾಗಿತ್ತು.

ನನ್ನ ಸಹೋದ್ಯೋಗಿಯೊಬ್ಬರು ಕಲ್ಕತ್ತೆಯಲ್ಲಿ ಸ್ವಲ್ಪ ಕಾಲ ಜಿ.ಡಿ.ಆರ್.ನ ವ್ಯಾಪಾರ ಪ್ರತಿನಿಧಿಯಾಗಿ ಕೆಲಸ ಮಾಡಿದ್ದರು. ಅವರು ಟಿಕೆಟ್ ಪಡೆಯಲು ಶಕ್ತಿಮೀರಿ ಪ್ರಯತ್ನಿಸುವಂತೆ ನನ್ನನ್ನು ಹುರಿದುಂಬಿಸಿದರು. ಕಲ್ಕತ್ತೆಯ ರಾಮಕೃಷ್ಣ ಧರ್ಮಪ್ರಚಾರಕ ಸಾಂಸ್ಕೃತಿಕ ಸಂಸ್ಥೆಯ ಕಾರ್ಯದರ್ಶಿಯವರು ವಾರಕ್ಕೊಮ್ಮೆ ಆಸಕ್ತಿಕರ ಉಪನ್ಯಾಸವನ್ನು ಮಾಡುವರು; ಅದಕ್ಕೆ ನಗರದ ಬೌದ್ಧಿಕ ಕೆನೆಪದರದ ಜನ ತಪ್ಪದೆ ಹಾಜರಾಗುವರು; ಹಾಗಾಗಿ ನಾನು ಆ ಉಪನ್ಯಾಸವನ್ನು ತಪ್ಪಿಸಿಕೊಳ್ಳಬಾರದು ಎಂದು ಅವರು ನನಗೆ ಹೇಳಿದರು.

ಅಂತೂ ಟಿಕೆಟ್ ದೊರೆತು ನನಗೆ ತುಂಬ ಸಂತಸವಾಯಿತು. ಏಕೆಂದರೆ ರಾಮಕೃಷ್ಣ ಮಠವು ಆಯೋಜಿಸಿದ ಅಖಿಲ ಭರತ ವಿದ್ಯಾರ್ಥಿಮೇಳದಲ್ಲೂ, ಅಖಿಲ ಭಾರತ ಮಹಿಳಾ ಮೇಳದಲ್ಲೂ, ಅಂತಿಮವಾಗಿ ಜಾಗತಿಕ ಧರ್ಮ ಸಂಸತ್‌ನಲ್ಲೂ ಭಾಗವಹಿಸುವಂತಾಯಿತು. ಆ ಸಾಂಸ್ಕೃತಿಕ ಸಂಸ್ಥೆಯ ಅಂದಿನ ಕಾರ್ಯದರ್ಶಿ ಸ್ವಾಮಿ ರಂಗನಾಥಾನಂದರು ನನ್ನ ಆತಿಥೇಯರು. ಅವರು ಅಂತಾರಾಷ್ಟ್ರೀಯ ಅತಿಥಿಗೃಹದಲ್ಲಿ ನಾನು ಇಚ್ಛಿಸಿದಷ್ಟು ಕಾಲವೂ ಉಚಿತವಾಗಿ ಉಳಿದುಕೊಳ್ಳುವ ಸದವಕಾಶವನ್ನು ಕಲ್ಪಿಸಿಕೊಟ್ಟರು. ಆ ದಿನಗಳಲ್ಲಿ ಅವರು ಪೂರ್ವ ನಿಶ್ಚಿತ ಕಾರ್ಯಗಳಲ್ಲಿ ಸದಾ ತೊಡಗಿದ್ದರೂ, ನನ್ನೊಂದಿಗೆ ಚರ್ಚಿಸಲು, ನನ್ನ ಪ್ರಶ್ನೆಗಳಿಗೆ ಉತ್ತರಿಸಲು, ಆ ಸಂಸ್ಥೆಯ ಅದ್ಭುತ ಗ್ರಂಥಾಲಯದಲ್ಲಿ ನಾನು ಓದಬಹುದಾಗಿದ್ದ ಪುಸ್ತಕಗಳನ್ನು ಸೂಚಿಸಲು ತುಸು ಕಾಲ ಬಿಡುವು ಮಾಡಿಕೊಳ್ಳುತ್ತಿದ್ದರು. ಇದೆಲ್ಲ ಮುಂದೆ ನಾನು ಮಹಾಪ್ರಬಂಧವನ್ನು ಬರೆಯಲು ತೊಡಗಿದಾಗ

---

* ದಕ್ಷಿಣ ಏಷ್ಯಾದ ವೇದಾಂತ ಮತ್ತು ಧರ್ಮದ ಇತಿಹಾಸದ ಮಾಜಿ ಪ್ರಾಧ್ಯಾಪಕ, ಬರ್ಲಿನ್, ಜರ್ಮನಿ.

ನನ್ನನ್ನು ದೃಢಗೊಳಿಸುವಲ್ಲಿ ಸಹಾಯಕ್ಕೆ ಬಂದವು. "ಸ್ವಾಮಿ ವಿವೇಕಾನಂದರ ವಿಜ್ಞಾನ ಮತ್ತು ಧರ್ಮ ಸಮೀಕರಣ" ಎನ್ನುವ ವಿಷಯವನ್ನು ಕುರಿತಂತೆ ಧರ್ಮ ಸಂಸತ್‌ಗೆ ಅವರು ನೀಡಿದ ಯೋಗದಾನ ನನ್ನ ಮೇಲೆ ಗಾಢವಾದ ಪರಿಣಾಮ ಬೀರಿತು. ಅಲ್ಲದೆ, ಭಗವದ್ಗೀತೆಯನ್ನು ಕುರಿತು ಅವರು ವಾರಕ್ಕೊಮ್ಮೆ ನೀಡುತ್ತಿದ್ದ ಉಪನ್ಯಾಸಗಳನ್ನು ಕೇಳುವ ಸದವಕಾಶವನ್ನು ನಾನು ಬಳಸಿಕೊಂಡೆನು.

ಆ ದಿನಗಳಿಂದಲೂ ನಾನು ಸದಾ ಸ್ವಾಮಿ ರಂಗನಾಥಾನಂದರ ಸಂಪರ್ಕದಲ್ಲಿದ್ದೆನು. ನನ್ನ ಮಹಾಪ್ರಬಂಧಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳು ಎದುರಾದಾಗ ಅವರಿಗೆ ಪತ್ರ ಬರೆದೆನು. ನಾನು ಭಾರತದಲ್ಲಿ ಇದ್ದಾಗಲೆಲ್ಲ ಅವರನ್ನು ಭೇಟಿಯಾಗಲು ಪ್ರಯತ್ನಿಸಿದೆನು. ಧಾರ್ಮಿಕ ಪರಿಭಾಷೆಯಲ್ಲಿ ನಾನು ಅವರ ಭಕ್ತರ ಗುಂಪಿಗೆ ಸೇರದಿದ್ದರೂ, ಅವರನ್ನು ತುಂಬ ಗೌರವಿಸಿದ್ದೆನು ಮತ್ತು ಮೆಚ್ಚಿಕೊಂಡಿದ್ದೆನು. ಅವರ ಪುಸ್ತಕಗಳನ್ನು ಓದುವುದು, ಅವರ ಉಪನ್ಯಾಸಗಳನ್ನು ಕೇಳುವುದು, ಅವರೊಂದಿಗೆ ಚರ್ಚಿಸುವುದು ನನಗೆ ತುಂಬ ಬೌದ್ಧಿಕ ಗತಿಶಕ್ತಿಯನ್ನು ಒದಗಿಸಿಕೊಟ್ಟವು.  ಇದು ಯಾವಾಗಲೂ ವಿಚಾರಪ್ರಚೋದಕವಾಗಿರುತ್ತಿತ್ತು. ಅವರೊಂದಿಗೆ ನಾನು ನಡೆಸಿದ ವೈಯಕ್ತಿಕ ಚರ್ಚೆಗಳು ಸದಾ ನನ್ನ ನೆನಪಿನಲ್ಲುಳಿಯುವಂಥವು. ಅದ್ವೈತ ವೇದಾಂತವನ್ನು ಕುರಿತ ನನ್ನ ಅರಿವು ರಾಮಕೃಷ್ಣ ಮಠದಿಂದ ಹಾಗೂ ಧರ್ಮಪ್ರಚಾರಕ ಸಂಸ್ಥೆಯ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಿಂದ ಮತ್ತು ಸ್ವಾಮಿ ರಂಗನಾಥಾನಂದರಿಂದ ಗಾಢವಾಗಿ ಪ್ರಭಾವಿತವಾಗಿದೆ. ಹೇಗೋ, ಅವರು ನನ್ನ ಪಾಲಿಗೆ ಅದ್ವೈತ ಮತ್ತು ರಾಮಕೃಷ್ಣ–ವಿವೇಕಾನಂದ ಪಂಥದ ಸಾಕಾರ ಸ್ವರೂಪವೇ ಆಗಿದ್ದರು.

ಮುಂದೆ ಎಂದು ನಾನು ಸ್ವಾಮೀಜಿಯನ್ನು ಭೇಟಿಯಾದೆನೋ ನನಗೆ ನೆನಪಿಲ್ಲ. ಕೆಲವು ವರ್ಷಗಳ ಕಾಲ ಭಾರತಕ್ಕೆ ಭೇಟಿ ಕೊಡುವ ಅವಕಾಶ ನನಗೆ ಒದಗಿಬರಲಿಲ್ಲ. ೧೯೭೦ರ ದಶಕದ ಕೊನೆಯಲ್ಲಷ್ಟೇ ಕೇರಳಕ್ಕೆ ಪಯಣಿಸುವ ದಾರಿಯಲ್ಲಿ ರಾಮಕೃಷ್ಣ ಮಠವನ್ನು ಸಂದರ್ಶಿಸಲು ಹೈದರಾಬಾದ್‌ನಲ್ಲಿ ಕೆಲಕಾಲ ತಂಗಿದ್ದೆನು. ಸ್ವಾಮಿ ರಂಗನಾಥಾನಂದರು ಆ ಸಂಸ್ಥೆಯ ಸ್ಥಾಪಕ ಕಾರ್ಯದರ್ಶಿಯಾಗಿದ್ದರು. ಈ ಕೇಂದ್ರದ ಸ್ವಾಮಿಗಳು ಮಾಡಿದ ಸಾಮಾಜಿಕ, ಬೌದ್ಧಿಕ ಕಾರ್ಯಗಳಿಂದ ನಾನು ತುಂಬ ಪ್ರಭಾವಿತನಾದೆ. ಅವರ ದೈನಂದಿನ ಕಾರ್ಯಚಟುವಟಿಕೆಗಳೂ ನನ್ನಲ್ಲಿ ಸದ್ಭಾವವನ್ನು ಮೂಡಿಸಿದವು. ಅನುಭವಿ ಸನ್ಯಾಸಿಗಳಾಗಿರಲಿ ಅಥವಾ ತರುಣ ಬ್ರಹ್ಮಚಾರಿಗಳೇ ಆಗಿರಲಿ, ಎಲ್ಲರೂ ಸಾಮರಸ್ಯ–ಸಹಕಾರ ಭಾವನೆಯಿಂದ ಒಟ್ಟಿಗೆ ವಾಸಿಸುತ್ತಿಸಿದ್ದರು. ಊಟದ ಸಮಯದಲ್ಲಿ ನಗು ಮತ್ತು ತಮಾಷೆ ತುಂಬಿರುತ್ತಿತ್ತು. ಸ್ವಾಮಿ ರಂಗನಾಥಾನಂದರು ಅದನ್ನು ಇತರರೊಂದಿಗೆ ಹಂಚಿಕೊಳ್ಳುತ್ತಿದ್ದರು.

ಆ ಕಾಲಕ್ಕೆ ನಾನು ಕೈಗೆತ್ತಿಕೊಂಡಿದ್ದ ಸಂಶೋಧನ ಕಾರ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಲು ನಾನು ಈ ಸದವಕಾಶವನ್ನು ಬಳಸಿಕೊಂಡೆನು. ಸ್ವಾಮೀಜಿ ಆಗ ಬರ್ಲಿನ್‌ನ (ಪಶ್ಚಿಮ) ವೇದಾಂತ ಸೊಸೈಟಿಗೆ ಬರುವವರಿದ್ದರು. ಆ ಸಂದರ್ಭದಲ್ಲಿ ಹಂಬೋಲ್ಟ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ನೀಡುವಂತೆ ಅವರನ್ನು ಆಮಂತ್ರಿಸುವ ಸಾಧ್ಯತೆಯ ಬಗ್ಗೆಯೂ ನಾವು ಚರ್ಚಿಸಿದೆವು.

ನನಗೆ ನೆನಪಿರುವಂತೆ ೧೯೭೯ನೇ ಇಸವಿಯಲ್ಲಿ ನಮ್ಮ ಈ ಯೋಜನೆ ಕಾರ್ಯಗತವಾಯಿತು. ಸ್ವಾಮಿಯವರು ಬರ್ಲಿನ್‌ನ ವೇದಾಂತ ಸೊಸೈಟಿಯ ಅತಿಥಿಗಳಾಗಿ ಆಗಮಿಸಿದರು. ಒಂದು ದಿನ, ಸೊಸೈಟಿಯ ಅಧ್ಯಕ್ಷರಾದ ಇಲ್ಸೆ ಬುಷ್ ಅವರು ನನಗೆ ದೂರವಾಣಿ ಕರೆ ಮಾಡಿದರು. ನಾನು ನಗರದ ಪಶ್ಚಿಮ ಭಾಗದಲ್ಲಿ, ಅಂದರೆ "ಕಬ್ಬಿಣದ ಪರದೆಯ" ಇನ್ನೊಂದು ಭಾಗದಲ್ಲಿ ವಾಸಿಸುತ್ತಿದ್ದರಿಂದ ನನಗೆ ವೈಯಕ್ತಿಕವಾಗಿ ಆಕೆಯ ಪರಿಚಯವಿರಲಿಲ್ಲ. ಸ್ವಾಮಿಯವರು ಬರ್ಲಿನ್ (ಪೂರ್ವ)ದಲ್ಲಿ ಬಂದಿಳಿಯಲು ನಿಶ್ಚಿತ ಸಮಯವನ್ನು ಗೊತ್ತುಪಡಿಸಿದ್ದೆವು. ಮಾರನೆಯ ದಿನ ಆಕೆ ಸ್ವಾಮಿಯವರ ಜೊತೆಗೆ ಗಡಿಯವರೆಗೂ ಬಂದರು. ಅದು ಬರ್ಲಿನ್ ಗೋಡೆ ಎಂದೇ ಎಲ್ಲರಿಗೂ ಪರಿಚಿತವಾದದ್ದು. ಸ್ವಾಮಿಯವರು ಗಡಿಯನ್ನು ದಾಟಿದರು. ವಿದೇಶದವರಾಗಿ ಅದು ಅವರಿಗೆ ಸುಲಭವಾಗಿತ್ತು.

ಆದರೆ, ಪಶ್ಚಿಮ ಬರ್ಲಿನ್‌ನ ನಾಗರಿಕರಾಗಿ ಇಲ್ಲೆ ಬಷ್ ಅವರಿಗೆ ವಿಶೇಷ ಅನುಮತಿ ಅತ್ಯಗತ್ಯವಾಗಿತ್ತು. ಅದನ್ನು ಪಡೆಯುವುದು ಅಷ್ಟು ಸುಲಭವಾಗಿರಲಿಲ್ಲ. ಜಿ.ಡಿ.ಆರ್ ಪ್ರಾಂತದ ಗಡಿಯ ಈಚೆ ಬದಿಯಲ್ಲಿ ನಾನು ಸ್ವಾಮೀಜಿಯನ್ನು ಬರಮಾಡಿಕೊಂಡೆನು. ಕಿತ್ತಳೆ ಬಣ್ಣದ ನಿಲುವಂಗಿ ತೊಟ್ಟ ಅವರು ನಮ್ಮ ಸಣ್ಣ ಪೂರ್ವ ಜರ್ಮನಿಯ ಕಾರನ್ನು (ಟ್ರ್ಯಾಬಂಟ್) ಹತ್ತಿದಾಗ ತುಸು ಭಾವೋದ್ರೇಕಕ್ಕೆ ಕಾರಣವಾದದ್ದೂ ನಿಜವೇ.

ನನ್ನ ಪ್ರಸ್ತಾವಕ್ಕೆ ಅನುಗುಣವಾಗಿ, ವಿಶ್ವವಿದ್ಯಾಲಯದ ಪ್ರಧಾನ ಭವನದಲ್ಲಿ ನಡೆದ ಅವರ ಉಪನ್ಯಾಸದ ವಿಷಯ "ಧರ್ಮ ಮತ್ತು ಶಾಂತಿ." ಈ ವಿಷಯವು ಅಂದಿನ ದಿನಗಳಲ್ಲಿ ತುಂಬ ಚರ್ಚೆಗೊಳಗಾಗಿತ್ತು. ವಾಲ್ಟರ್ ರೂಬೆನ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಈ ಜೋಡಿಯನ್ನು ನಾನೆಂದಿಗೂ ಮರೆಯಲಾರೆ. ಇಬ್ಬರದೂ ತುಂಬ ಭಿನ್ನ ವ್ಯಕ್ತಿತ್ವ. ಆದರೂ ನನ್ನ ಶೈಕ್ಷಣಿಕ ಮತ್ತು ವೈಯಕ್ತಿಕ ಬದುಕಿನುದ್ದಕ್ಕೂ ಅವರಿಬ್ಬರ ಪ್ರಭಾವವೂ ನನ್ನ ಮೇಲಾಯಿತು.

೧೯೮೦ರ ಜುಲೈ ೩ನೆಯ ದಿನಾಂಕ. ಸ್ವಾಮಿಯವರು ಮತ್ತೆ ಬರ್ಲಿನ್‌ಗೆ ಆಗಮಿಸಿದರು. ಮತ್ತೊಮ್ಮೆ ನಮ್ಮ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ನೀಡಿದರು. ದಕ್ಷಿಣ ಏಷ್ಯಾ ಅಧ್ಯಯನ ವಿಭಾಗದ ವಿದ್ಯಾರ್ಥಿಗಳೂ ಅಧ್ಯಾಪಕರೂ ಅಂತೆಯೇ ವೇದಾಂತ ವಿಭಾಗದ ಅಧ್ಯಾಪಕರೂ ಉಪಸ್ಥಿತರಿದ್ದರು. ಅವರು "ಹಿಂದೂ ಧರ್ಮ ಮತ್ತು ಇಂದಿನ ಮಾನವ ಸಮಸ್ಯೆಗಳು" ಎನ್ನುವ ವಿಷಯವನ್ನು ಕುರಿತು ಮಾತನಾಡಿದರು. ಭಾರತೀಯ ತತ್ತ್ವಶಾಸ್ತ್ರ ಸಂಪ್ರದಾಯ ಮತ್ತು ಪಾಶ್ಚಾತ್ಯ ತತ್ತ್ವಶಾಸ್ತ್ರಗಳ ಆಳವಾದ ಜ್ಞಾನದಿಂದ ಶ್ರೋತೃಗಳನ್ನು ಮೋಡಿ ಮಾಡಿದರು. ಅದರೊಂದಿಗೇ ಆಧುನಿಕ ವಿಜ್ಞಾನದ ಹಲವು ಮಜಲುಗಳ ಬಗ್ಗೆ ಯಮಗೆ ಇರುವ ಅರಿವನ್ನೂ ಸಾದರಪಡಿಸಿದರು. ವೇದಾಂತ ದರ್ಶನದ ಮಾಯಾ, ಧರ್ಮ, ಆತ್ಮ-ಬ್ರಹ್ಮರ ನಡುವಿನ ಸಂಬಂಧದಂಥ ಕ್ಲಿಷ್ಟಕರ ಪ್ರಶ್ನೆಗಳನ್ನು ವಿವರಿಸುವ ಅವರ ಬೋಧನ ಸಾಮರ್ಥ್ಯವನ್ನು ನಾನು ವಿಶೇಷವಾಗಿ ಆಸ್ವಾದಿಸಿದೆನು. ವಿದ್ಯಾರ್ಥಿಗಳಂತೂ ಸ್ವಾಮೀಜಿಗೆ ಪ್ರಮುಖ ಉಪನಿಷತ್ತುಗಳೆಲ್ಲ ಹೃದ್ಗತವಾಗಿರುವುದನ್ನು ಕಂಡು ತುಂಬ ವಿಸ್ಮಯಪಟ್ಟರು. ಎಂದಿನಂತೆ ಅವರು ಯಾವುದೇ ಟಿಪ್ಪಣಿ ಅಥವಾ ಹಸ್ತಲೇಖನವಿಲ್ಲದೆ ಮಾತನಾಡಿದರು. ಅವರು ಉಪನ್ಯಾಸ ಮುಗಿಸಿದಾಗ ಶ್ರೋತೃಗಳಿಗೆ ಆಶ್ಚರ್ಯ! ಉಪನ್ಯಾಸ ಆರಂಭಗೊಂಡು ಆಗಲೇ ೪೫ ನಿಮಿಷಗಳು ಕಳೆದುಹೋಗಿದ್ದವು!

ಸ್ವಾಮಿ ರಂಗನಾಥಾನಂದರ ಹೆಚ್ಚಿನ ಉಪನ್ಯಾಸಗಳು ಮುದ್ರಣಗೊಂಡಿವೆ. ದೊಡ್ಡ ಸಂಖ್ಯೆಯ ಪ್ರಕಟಣೆ ಅವರದಾಗಿದೆ. ಇದು ವರ್ತಮಾನ ಪ್ರಪಂಚದ ಜಾಗತೀಕರಣವನ್ನು ಕುರಿತಂತೆ ಅವರ ದೃಷ್ಟಿಕೋನದ ಪ್ರಸ್ತುತತೆಯನ್ನು ಚರ್ಚಿಸಿ ವಿಶ್ಲೇಷಿಸಲು ಪಿಎಚ್.ಡಿ. ಸಂಶೋಧನ ಪ್ರಬಂಧಕ್ಕೆ ವಿಷಯವಾದೀತು. ನನಗೆ ತಿಳಿದಂತೆ, ಅವರ ಹಂಬೋಲ್ಟ್ ವಿಶ್ವವಿದ್ಯಾಲಯದ ಉಪನ್ಯಾಸಗಳು ಈವರೆಗೂ ಪ್ರಕಟಗೊಳ್ಳದಿರುವುದರಿಂದ ಈ ಉಪನ್ಯಾಸಗಳ ಮೇಲೆ ನನ್ನ ಗಮನವನ್ನು ಕೇಂದ್ರೀಕರಿಸುವೆನು. ನಮ್ಮ ಕಾಲದಲ್ಲಿ ಈ ಉಪನ್ಯಾಸಗಳ ವಿಶೇಷ ಮಹತ್ವ ಎಲ್ಲಿ ಗೋಚರಿಸುವುದೆಂದು ತೋರಿಸಲು ನಾನು ಪ್ರಯತ್ನಿಸುವೆನು.

"ಹಿಂದೂಧರ್ಮ ಮತ್ತು ಇಂದಿನ ಮಾನವ ಸಮಸ್ಯೆಗಳು" ಎನ್ನುವ ಅವರ ಉಪನ್ಯಾಸದಲ್ಲಿ ಸ್ವಾಮೀಜಿ ಮಾನವೀಯತೆಯ ವಿಷಯವನ್ನು ವಿಸ್ತಾರವಾಗಿ ಪ್ರತಿಪಾದಿಸಿದರು. ಅವರು ಮೊದಲಿಗೆ ಮಾನವೀಯತೆಗೆ ಸಂಬಂಧಿಸಿದ ಬಹುಮುಖ್ಯ ಸಂಗತಿಗಳಲ್ಲಿ ಒಂದನ್ನು ಕುರಿತಂತೆ ನಮ್ಮ ಗಮನ ಸೆಳೆದರು. ಅದೂ ಇಂದು ಅತ್ಯಂತ ಪ್ರಸ್ತುತವಾದದ್ದು. ನೈಜ ಮಾನವೀಯತೆಯು ರಾಷ್ಟ್ರೀಯ, ಪ್ರಾಂತೀಯ, ಸೈದ್ಧಾಂತಿಕ ಗಡಿಗಳಿಂದ ನಿರ್ಬಂಧಿತವಾಗಲಾರದೆಂದು ಅವರು ಒತ್ತಿ ಹೇಳಿದರು. ಜಗತ್ತಿನ ಒಂದು ಭಾಗದಲ್ಲಿ ಏನೆಲ್ಲ ಸಂಭವಿಸುವುದೋ ಅದರ ಪರಿಣಾಮ ಜಗತ್ತಿನ ಉಳಿದ ಭಾಗಗಳ ಮೇಲೂ ಆಗುವುದು. ಇದರ ಅರ್ಥವೇನೆಂದರೆ, ನಾವು ಮಾನವೀಯತೆಯನ್ನು ನಿರ್ವಹಿಸಲು ಬಯಸುವುದಾದರೆ ವಿಶ್ವಮಾನವ-ಮಾನವ ಎಂದಷ್ಟೇ

ವ್ಯವಹರಿಸಬೇಕಾಗುತ್ತದೆ. ಆ ಬಳಿಕ ಸ್ವಾಮೀಜಿ ವಿಶೇಷವಾಗಿ ಉಲ್ಲೇಖಿಸಿದ್ದೆಂದರೆ, ಯಾವುದೇ ಮತಸ್ಥಾಪಕನ ಪರಿಕಲ್ಪನೆ ಮತ್ತು ಉಪದೇಶಗಳಿಗೆ ಹಿಂದೂ ಧರ್ಮವು ಸೀಮಿತಗೊಂಡಿಲ್ಲ; ಇದು ಪರಿಮಿತವಾದ ನಂಬಿಕೆ ಅಲ್ಲ. ಒಬ್ಬ ಪ್ರವಾದಿಯ ಉಪದೇಶಗಳಿಗೇ ಜೋತುಬಿದ್ದ ಮತಧರ್ಮವು ಜಾಗತಿಕಗೊಳ್ಳುವುದು ಬಹಳ ವಿರಳವೆಂದು ಅವರು ಹೇಳಿದರು. ಈ ಕಾರಣಕ್ಕಾಗಿ, ಅವರು ಬಣ್ಣಿಸಿದಂತೆ ವಿಶ್ವಾತ್ಮಕತೆ ಎನ್ನುವುದು ಹಿಂದೂಧರ್ಮದ ಮೂಲ ತಳಹದಿ.

ತದನಂತರ ಅವರು ಅತ್ಯಂತ ಮಹತ್ವದ ಪ್ರಶ್ನೆ ಕೇಳಿದರು: 'ಮಾನವನೆಂದರೇನು?' ಗತಕಾಲದಲ್ಲಿ ಈ ಪ್ರಶ್ನೆಗಳನ್ನು ಹೆಚ್ಚು ಕಮ್ಮಿ ನಿರ್ಲಕ್ಷಿಸಲಾಯಿತೆಂದು ಅವರು ವಿಷಾದಿಸಿದರು. ಕಳೆದ ಶತಮಾನಗಳಲ್ಲಿ ವಿವಿಧ ಮೂಲವಿಜ್ಞಾನಗಳ ಕ್ಷೇತ್ರದಲ್ಲಿ ಬಲು ದೊಡ್ಡ ಬೆಳವಣಿಗೆಯಾಯಿತು. ಆದರೆ, ಅಲ್ಲಿ ಮಾನವ ಜೀವಿಯ ಸತ್ವಕ್ಕೆ ಹೆಚ್ಚಿನ ಗಮನ ಸಲ್ಲಲೇ ಇಲ್ಲ. ಮಾನವನ ನೈಜ ಸ್ವರೂಪದ ಚರ್ಚೆಯು ಪುರಾತನ ಕಾಲದ ಉಪನಿಷತ್ತುಗಳ ಅತ್ಯಂತ ನಿರ್ಣಾಯಕ ಅಂಶಗಳಲ್ಲಿ ಒಂದಾಗಿತ್ತು ಎನ್ನುವುದನ್ನು ಅವರು ತೋರಿಸಿಕೊಟ್ಟರು. ಪರಮ ಚೈತನ್ಯವಾದ ಬ್ರಹ್ಮವು ಎಲ್ಲವನ್ನೂ ಎಲ್ಲರನ್ನೂ ವ್ಯಾಪಿಸಿದೆ ಎಂದು ಅಲ್ಲಿ ಹೇಳಲಾಗಿದೆ. ಈ ಅಂಶವನ್ನು ವಿವರಿಸಿ ತೋರಲು ಸ್ವಾಮಿಯವರು ಛಾಂದೋಗ್ಯ ಉಪನಿಷತ್ತಿನ (VI, ೧–೧೮) ಸುಪ್ರಸಿದ್ಧ ಗದ್ಯಭಾಗವನ್ನು ವಿಸ್ತಾರವಾಗಿ ಉಲ್ಲೇಖಿಸಿದರು. "ತತ್ ತ್ವಂ ಅಸಿ" ಎನ್ನುವ ಉದ್ದಾಲಕನ ಪ್ರಸಿದ್ಧ ಬೋಧನೆ ಅದರ ಶಿಖರವಾಕ್ಯ. 'ತತ್ ತ್ವಮ್ ಅಸಿ'ಯು ಜಗದ ಏಕತೆಯ ವೇದಾಂತ ಪರಿಕಲ್ಪನೆಯನ್ನು ಗರ್ಭೀಕರಿಸಿಕೊಂಡಿದೆ ಎನ್ನುವುದನ್ನು ಅವರು ತೋರಿಸಿಕೊಟ್ಟರು. "ಅದು ಈ ಸೂಕ್ಷ್ಮ ಸತ್ವ ಅಂದರೆ; ಅದೇ ಆತ್ಮವಾಗಿ ಎಲ್ಲದರಲ್ಲೂ ಇರುವುದು... ನೀನು ಅದೇ ಆಗಿರುವೆ..." ಮಾನವನು 'ಸತ್', ಇರುವುದು ಸತ್ಯ, ಮತ್ತು ಸೂಕ್ಷ್ಮ ಸತ್ವಗಳನ್ನು ಒಳಗೊಂಡಿರುವ ಈ ವಿಶ್ವದ ಅವಿಭಾಜ್ಯ ಅಂಗ ವೇದಾಂತದ ಪರಿಕಲ್ಪನೆಯ ಪ್ರಕಾರ, ಜಗದ ಏಕತೆಯು ವೈವಿಧ್ಯದೊಂದಿಗೆ ಅವಿಭಾಜ್ಯವಾಗಿ ಸಮ್ಮಿಲಿತವಾಗಿದೆ. ಅದನ್ನೇ ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಇದು ವೈವಿಧ್ಯದಲ್ಲಿ ಏಕತೆ, ಏಕರೂಪತೆಯಲ್ಲ. ರಂಗನಾಥಾನಂದರ ಪ್ರಕಾರ ಈ ಪರಿಕಲ್ಪನೆಯಿಂದ ವಿಭಿನ್ನ ಮಾನವ ಜೀವಿಗಳ ಬಹುತ್ವದ ಹಿಂದೆ ವಿಶ್ವಮಾನವನಿದ್ದಾನೆ. ಮಾನವನೆಂದರೆ ಮಾನವಕುಲ ಎನ್ನುವುದು ಹೊರಹೊಮ್ಮುವುದು. ಏಕತೆ ಮತ್ತು ವೈವಿಧ್ಯದಲ್ಲಿ ಪರಸ್ಪರ ಅನ್ಯೋನ್ಯಾಶ್ರಯ ಸಂಬಂಧವಿದೆ. ಏಕತೆಗೆ ಅಸ್ತಿತ್ವ ಇರುವುದೇ ವೈವಿಧ್ಯದ ಮೂಲಕ, ಇದು ತನ್ನಷ್ಟಕ್ಕೆ ಅಸ್ತಿತ್ವದಲ್ಲಿರಲಾರದು. ವೈವಿಧ್ಯ ಇಲ್ಲದೆಡೆ ಏಕತೆ ಎಂದರೆ ಅದು ಬರಿ ಶೂನ್ಯ, ಇನ್ನೇನಲ್ಲ. ಮತ್ತೊಂದೆಡೆ, ಇಂದ್ರಿಯಗೋಚರ ವಸ್ತುಗಳ ವೈವಿಧ್ಯವನ್ನು, ಅದರ ಸಾಮಾನ್ಯ ಸ್ವರೂಪವನ್ನು ಪರಿಗಣನೆಗೆ ತಾರದೆ ಅರ್ಥೈಸಿಕೊಳ್ಳಲಾಗದು. ವಿಶ್ವಸಂಯೋಗದ ಆಚೆ ಮತ್ತು ಮುಕ್ತತೆಯಲ್ಲಿ ವೈವಿಧ್ಯ ಎನ್ನುವುದು ಇಲ್ಲ.

ಮಾನವನು ದೈವಿಕ ಘನದ ಒಂದು ಭಾಗ ಎನ್ನುವ ವೇದಾಂತದ ತಿಳಿವಳಿಕೆಯು, ಪ್ರತಿಯೊಬ್ಬನ ಸಮಾನತೆ ಮತ್ತು ದೈವಿಕತೆಯ ಪರಿಕಲ್ಪನೆಯನ್ನು ಧ್ವನಿಸುವುದು. ಇದನ್ನು ಗಂಭೀರವಾಗಿ ಸ್ವೀಕರಿಸಿದ್ದೇ ಆದರೆ, ಇದು ಶಾಂತಿಯುತ ಸಮಾಜದ ನೈಜ ತಳಹದಿಯಾಗಬಲ್ಲುದು. ಮಾನವನ ತಿಳಿವಳಿಕೆ ಮತ್ತು ದೇವರ ಪರಿಕಲ್ಪನೆ ಜೊತೆಯಾಗೇ ಸಾಗುತ್ತವೆ ಎನ್ನುವುದನ್ನೂ ಸ್ವಾಮಿಯವರು ವಿವರಿಸಿದರು. ದೇವರು ಒಳಗೂ ಹೊರಗೂ ಇದ್ದಾನೆ. ಅದೇ ಕಾಲಕ್ಕೆ ದೈವಿಕತೆ ಪ್ರತಿಯೊಬ್ಬನಲ್ಲೂ ಅಂತರ್ಯಾಮಿಯಾಗಿದೆ. ಇದು ಎಲ್ಲವನ್ನೂ ಉನ್ನತೀಕರಿಸುವುದು. ಪ್ರತಿಯೊಬ್ಬನೂ (ಕೊನೇ ಪಕ್ಷ ಬಹುಸಂಖ್ಯಾತ ಜನ) ಎಲ್ಲವೂ ದೈವಿಕವಾದದ್ದು ಎನ್ನುವ ವಿಶ್ವದೃಷ್ಟಿಯನ್ನು ಮನವರಿಕೆ ಮಾಡಿಕೊಂಡಿದ್ದೇ ಆದರೆ, ಜಗತ್ತು ದ್ವೇಷ, ಹಿಂಸೆ, ಯುದ್ಧಗಳಿಂದ ಮುಕ್ತವಾದೀತು ಎಂದು ಅವರು ಅಭಿಪ್ರಾಯಪಟ್ಟರು. ಪ್ರಪಂಚದ ಏಕತೆಗೆ ಒತ್ತುಕೊಡುವುದು ಕೂಡ ಪರಿಸರೀಯ ಸಮಸ್ಯೆಗಳ ದೃಷ್ಟಿಯಿಂದ ಬಹಳ ಮಹತ್ವದ್ದಾಗಿದೆ. ಸರಿಸುಮಾರು ೨೦ ವರ್ಷಗಳ ಹಿಂದೆ ಸ್ವಾಮೀಜಿಯವರು ಉಪನ್ಯಾಸ ನೀಡಿದ ಕಾಲಕ್ಕಿಂತ ಮಿಗಿಲಾಗಿ ಇಂದು ನಾವು ಈ ಬಗ್ಗೆ ಹೆಚ್ಚು ಜಾಗೃತರಾಗಿದ್ದೇವೆ.

ಮುಂದೆ ೧೯೮೩ರಲ್ಲಿ ಸ್ವಾಮಿಯವರು ಆಗಮಿಸಿದಾಗ ಅವರ ಉಪನ್ಯಾಸದ ವಿಷಯ "ರಾಜಕಾರಣದಲ್ಲಿ ಧರ್ಮದ ಪಾತ್ರ." ಸಂಘಟಿತ ಸಂಸ್ಥೆಗಳಾಗಿ ಮತ ಧರ್ಮಗಳು ಗತಕಾಲದಲ್ಲಿ ಅಂಥ ಸಹಾಯಕವೇನಾಗಿರಲಿಲ್ಲ; ಅವು ಮಾನವತೆಯನ್ನು ಒಡೆದಿದ್ದವು ಎನ್ನುವುದನ್ನು ಇಲ್ಲಿ ಸ್ವಾಮಿಯವರು ಒತ್ತಿಹೇಳಿದರು. ಸಾಂಸ್ಥೀಕರಣಗೊಂಡ ಧರ್ಮಗಳು ಆಗಾಗ ಅಡ್ಡಿ–ಆತಂಕಗಳನ್ನೂ ಸೃಷ್ಟಿಸಿದ್ದವು. ಏಕೆಂದರೆ ಅವು ಸಂಕುಚಿತಗೊಂಡಿದ್ದುವು; ಅಲ್ಲದೆ, ಅವು ದ್ವೇಷ, ಹಿಂಸೆ, ಯುದ್ಧಗಳಿಗೆ ತವರಾಗಿದ್ದುದೂ ಇದೆ. "ಆದರೂ ಅವು ಇತರ ವಲಯಗಳಲ್ಲಿ ಕೊಂಚ ಒಳಿತನ್ನೂ ಮಾಡಿವೆ" ಎಂದೂ ಅವರು ಸೇರಿಸಿದರು. ಆದ್ದರಿಂದ ವಿಭಿನ್ನ ಅರ್ಥದಲ್ಲಿ ಧರ್ಮದ ಬಗ್ಗೆ ಮಾತನಾಡುವುದಕ್ಕೆ ಪ್ರಾಶಸ್ತ್ಯ ನೀಡುವುದಾಗಿ ಅವರು ಹೇಳಿದರು. ಈವರೆಗಿನ ರಾಜಕೀಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ರಾಜಕೀಯ ಮತ್ತು ಸಾಮಾಜಿಕ ಜೀವನವನ್ನು ನಿಯಂತ್ರಿಸಲು ಅಧಿಕಾರವನ್ನು ಬಳಸುವ ಕೆಲವೇ ವ್ಯಕ್ತಿಗಳ ಗುಂಪನ್ನು ಇದು ಅವಲಂಬಿಸಿದೆ. ಅಧಿಕಾರವನ್ನು ಕೈಗೆತ್ತಿಕೊಳ್ಳುವ, ಜನರಿಗೆ ಒಳಿತನ್ನು ಮಾಡಲು ಸಮರ್ಥರಾದ ವ್ಯಕ್ತಿಗಳನ್ನು ನಿರ್ಮಿಸುವುದೇ ಈ ಸನ್ನಿವೇಶದಲ್ಲಿ ಧರ್ಮದ ಪ್ರಸ್ತುತತೆ ಆಗಬೇಕಾಗಿದೆ. ಅಧಿಕಾರವನ್ನು ಒಳಿತಿಗಾಗಿಯೂ ಕೆಡುಕಿಗಾಗಿಯೂ ಬಳಸಬಹುದಾಗಿದೆ. ಹಣ ಮಾಡಲೆಂದೋ, ಸೌಕರ್ಯಗಳನ್ನು ಪಡೆಯಲೆಂದೋ ಅಧಿಕಾರ ಚಲಾಯಿಸಬಹುದು. ನಾನು ಜನರನ್ನು ಶೋಷಿಸಲು ಅಧಿಕಾರ ಬಳಸಬಹುದು ಅಥವಾ ನಾನು ಮಾನವತೆಯ ಕಲ್ಯಾಣಕ್ಕಾಗಿ ಇದನ್ನು ಬಳಸಬಹುದು. ಕೈಯಲ್ಲಿ ಅಧಿಕಾರ ಹೊಂದಿರುವ ವ್ಯಕ್ತಿಯು ತನ್ನೊಳಗೇ ಒಳಿತನ್ನು ತಳೆದಿದ್ದರೆ, ಆತ ಒಳಿತಿಗಾಗಿಯೇ ಅದನ್ನು ಬಳಸಲು ಶಕ್ತನಾಗುವನು. ಇಲ್ಲಿ ಸ್ವಾಮೀಜಿಯವರು, ರಾಜಕೀಯ ಅಧಿಕಾರ ಇರುವವರ ನೈತಿಕ ಬೆಳವಣಿಗೆ ಮತ್ತು ಧರ್ಮದ ನಡುವೆ ನಿಕಟ ಸಂಬಂಧವನ್ನು ಕಂಡಿದ್ದಾರೆ.

ರಂಗನಾಥಾನಂದರ ಪ್ರಕಾರ ಧರ್ಮದ ಹೊಣೆ ತಮ್ಮ ಅಂತರಂಗದಲ್ಲಿ ಮೌಲ್ಯಪದ್ಧತಿ ಹೆಚ್ಚುವಂತೆ ಜನರನ್ನು ಸಮರ್ಥರನ್ನಾಗಿಸುವುದು. ತನ್ಮೂಲಕ ಅವರು ಅಧಿಕಾರವನ್ನು ಜನತೆಯ ಕಲ್ಯಾಣಕ್ಕಾಗಿ ಬಳಸುವರು. ಅಂದರೆ ಮಾನವನ ದೈಹಿಕ ಹಾಗೂ ಬೌದ್ಧಿಕ ಬೆಳವಣಿಗೆಯ ಜೊತೆಗೆ ಇದು ಅತ್ಯಗತ್ಯವಾದ ಆಧ್ಯಾತ್ಮಿಕ ಬೆಳವಣಿಗೆ ಆಗಿದೆ.

ಆ ಬಳಿಕ ಸ್ವಾಮೀಜಿಯವರು ಆಧ್ಯಾತ್ಮಿಕ ಬೆಳವಣಿಗೆಯನ್ನು ಕುರಿತ ತಮ್ಮ ಅರಿವನ್ನು ವ್ಯಾಖ್ಯಾನಿಸಿದರು. ಇದು ಸಮಾಜದೊಂದಿಗೆ ಏಕೋಭಾವವನ್ನು ಅನುಭವಿಸುವ ಸಾಮರ್ಥ್ಯ. ತನ್ಮೂಲಕ ವ್ಯಕ್ತಿಯು ಸಮೂಹದ ಸುಸ್ಥಿತಿಗೆ ಶಕ್ತಿಯನ್ನು ಉಪಯೋಗಿಸಲು ಅರ್ಹನಾಗುವನು. ಉನ್ನತ ಬೌದ್ಧಿಕ ಬೆಳವಣಿಗೆಯೊಂದೇ ಸಾಕಾಗದು. ನಮ್ಮ ಮಾನವೀಯ ಅಭಿವೃದ್ಧಿಯ ಸದ್ಯದ ಸ್ತರದಲ್ಲಿ ಮನೋ ಸಾಮಾಜಿಕ ವಿಕಾಸವು ಅತಿಮಹತ್ವದ ಅಗತ್ಯ ಆಗಿದೆ. ಅದು ಯಾವುದೆಂದರೆ ಇತರ ಮನುಷ್ಯರೊಂದಿಗೆ ಏಕೋಭಾವವನ್ನು ಕಾಣುವ ಅಗತ್ಯ. ಇದು ನಿಜಕ್ಕೂ ಮಾನವ ಅಭಿವೃದ್ಧಿಯ ಹೊಸ ಆಯಾಮವನ್ನು ತೆರೆಯುತ್ತದೆ. ಈ ಹೊಸ ಆಧ್ಯಾತ್ಮಿಕ ಆಯಾಮವು ಸದ್ವರ್ತನೆಯ ಜಾಗೃತಿ ಮತ್ತು ನೈತಿಕ ಶಿಸ್ತಿನ ನೂತನ ಗುಣಧರ್ಮಕ್ಕೆ ದಾರಿ ತೋರುವುದು. ಹೆಚ್ಚು ಹೆಚ್ಚು ಜನ ಈ ಮಟ್ಟವನ್ನು ತಲುಪಿದರೆ ರಾಜಕಾರಣವು ಹೆಚ್ಚು ಆರೋಗ್ಯಪೂರ್ಣವಾಗುವುದು. ತಮ್ಮ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಇದು ಮನುಷ್ಯಜೀವಿಗಳಿಗೆ ಉತ್ತಮ ಸದವಕಾಶವನ್ನು ಸೃಷ್ಟಿಸಿಕೊಡುವುದು, ಹಿಂಸೆ ತಗ್ಗುವುದು ಎನ್ನುವುದನ್ನೂ ಅವರು ಸೇರಿಸಿದರು.

ಇಂದಿಗೆ ಅತ್ಯಂತ ಪ್ರಸಕ್ತವಾದ ಎರಡು ಪ್ರಮುಖ ಅಂಶಗಳನ್ನು ಸ್ವಾಮಿಯವರು ತಮ್ಮ ಉಪನ್ಯಾಸದಲ್ಲಿ ಒತ್ತಿಹೇಳಿದರೆಂದು ನಾನು ಭಾವಿಸುವೆನು. ಹೆಚ್ಚು ನೈತಿಕವಾಗಿ ವರ್ತಿಸಬೇಕು ಮತ್ತು ಹೊಸ ಮೌಲ್ಯ ಪದ್ಧತಿಗೆ ಒಗ್ಗಿಕೊಳ್ಳಬೇಕು ಎಂದು ರಾಜಕಾರಣಿಗಳು ತಮ್ಮ ತಮ್ಮ ದೇಶದ ನಾಗರಿಕರಿಗೆ ಮತ್ತೆ ಮತ್ತೆ ಹೇಳುತ್ತಿರುತ್ತಾರೆ. ಆದರೆ ಮೊದಲು ತಾವು ಈ ಮೌಲ್ಯಗಳನ್ನು ರೂಢಿಸಿಕೊಂಡು ಸ್ವಯಂ ಬದಲಾಗಬೇಕು ಎನ್ನುವ ಸರಳ

ಸತ್ಯವನ್ನು ಗಮನಿಸದೆ ಹೋಗುತ್ತಾರೆ. ಭ್ರಷ್ಟಾಚಾರ, ಸ್ವಜನಪಕ್ಷಪಾತ, ಸ್ವಾರ್ಥ– ಇವು ರಾಜಕೀಯದಲ್ಲಿರುವವರ ಸಾಮಾನ್ಯ ಗುಣಲಕ್ಷಣಗಳಾಗಿರುವವರೆಗೂ, ರಾಜಕೀಯ ಶಕ್ತಿಯು ಜನರ ಶೋಷಣೆಗಾಗಿ ಬಳಕೆಯಾಗುವುದಕ್ಕೇ ಬದ್ಧವಾಗಿರುತ್ತದೆಯೇ ವಿನಾ ಮಾನವತೆಯ ಒಳಿತಿಗಾಗಿ ಅಲ್ಲ. ಎರಡನೆಯದಾಗಿ, ಸ್ವಾಮೀಜಿಯವರು ಮತ್ತು ಇತರ ವೇದಾಂತ ತತ್ತ್ವಜ್ಞರು ಅರ್ಥೈಸಿಕೊಂಡಂತೆ ನೈಜ ಧರ್ಮವು ಆಧ್ಯಾತ್ಮಿಕ ಅಭಿವೃದ್ಧಿಯನ್ನು ಆಧರಿಸಿರಬೇಕು. ಅದೆಂದರೆ, ಸಮಾಜದೊಂದಿಗೆ ತಾನೂ ಒಂದೆಂದು ಭಾವಿಸುವ ಸಾಮರ್ಥ್ಯ. ತನ್ಮೂಲಕ ಆತ ಅಥವಾ ಆಕೆ ತಮ್ಮ ಶಕ್ತಿಯನ್ನು ಜನಸೇವೆಗೆ ಬಳಸಲು ಸಮರ್ಥರಾಗುವರು. ಯಾವುದೇ ನೈಜ ಧರ್ಮವು ಉತ್ತೇಜಿಸಿದ ನೈತಿಕ ಜಾಗೃತಿಯು, ಇತರ ಮಾನವ ಜೀವಿಗಳೊಂದಿಗೆ ತಾನೂ ಒಂದೆಂಬ ಈ ಭಾವನೆಯನ್ನು ಒಳಗೊಳ್ಳಲೇಬೇಕು. ಕೆಲವೊಮ್ಮೆ ಆಧ್ಯಾತ್ಮಿಕತೆಯನ್ನು ಅತ್ಯಂತ ವೈಯಕ್ತಿಕ ವಿಷಯವೆಂದು ಅರ್ಥೈಸಲಾಗಿದೆ. ಆದರೆ ಸ್ವಾಮೀಜಿಯವರು ಉದ್ದೇಶಿಸಿದ್ದು ಅದಲ್ಲ ಎಂದು ನಾನು ಭಾವಿಸಿರುವೆನು. ಗಂಡಸು ಮತ್ತು ಹೆಂಗಸರಲ್ಲಿ ಐಕಮತ್ಯ ಹಾಗೂ ಸೋದರಭಾವ ಎನ್ನುವುದೇನಿದೆಯೋ ಅದರೊಂದಿಗೆ ಆಧ್ಯಾತ್ಮಿಕತೆಯು ನಿಕಟ ಸಂಬಂಧ ಹೊಂದಿದೆ. ರಾಜಕೀಯದಲ್ಲಿ ನಮಗೆ ಬೇಕಾದದ್ದು ಆ ಮನೋಧರ್ಮ – ಅರ್ಪಣೆಯ ಮನೋಧರ್ಮ. ಮಾನವೀಯತೆಯ ಪ್ರಜ್ಞೆ, ಸೇವಾ ಮನೋಭಾವ – ಇವೆಲ್ಲವೂ ಆರೋಗ್ಯಪೂರ್ಣ ರಾಜಕೀಯಕ್ಕೆ ಅತ್ಯಗತ್ಯ ಎನ್ನುವುದನ್ನು ಸ್ವಾಮೀಜಿಯವರು ಮಂಡಿಸಿದರು. ಮಾನವನ ಮನಸ್ಸಿನ ಉನ್ನತ ಅಭಿವೃದ್ಧಿ ಅಗತ್ಯ ಅಷ್ಟೇ ಅಲ್ಲ, ಅದು ಸಾಧ್ಯ ಕೂಡ ಎಂದು ಅವರು ತಮ್ಮ ದೃಢವಾದ ಆಶಾವಾದವನ್ನು ಉಪನ್ಯಾಸದಲ್ಲಿ ಸಾದರಪಡಿಸಿದರು. ಒಮ್ಮೆ ನಾಗರಿಕತೆಯ ಬಿಕ್ಕಟ್ಟಿನ ಬಗ್ಗೆ ರವೀಂದ್ರನಾಥ ಠಾಕೂರರು ಹೇಳಿದ್ದು ನನಗೆ ಇಲ್ಲಿ ನೆನಪಾಗುತ್ತಿದೆ. ಯೂರೋಪ್ ದೇಶವನ್ನು ಅನುಲಕ್ಷಿಸಿ ಅವರು ಹೇಳಿದರು: "ನಾನು ಸುತ್ತಮುತ್ತ ನೋಡಿದಾಗ ನಿಷ್ಫಲತೆಯ ವಿಶಾಲರಾಶಿ ಚೆದುರಿದಂತೆ ಪ್ರತಿಷ್ಠೆಯ ನಾಗರಿಕತೆ ಹುಡಿಹುಡಿಗೊಂಡು ನಾಶವಾಗುತ್ತಿರುವುದು ಕಾಣುತ್ತಿದೆ." ಆದರೆ ಅವರ ಸಮಾಪ್ತಿವಾಕ್ಯ, "ಹೀಗಿದ್ದೂ ಮನುಷ್ಯನಲ್ಲಿ ವಿಶ್ವಾಸ ಕಳೆದುಕೊಳ್ಳುವ ಘೋರ ಪಾಪವನ್ನು ನಾನು ಕಟ್ಟಿಕೊಳ್ಳುವುದಿಲ್ಲ."

ಈ ಆಧ್ಯಾತ್ಮಿಕ ವೃದ್ಧಿ ಸಾಧ್ಯ ಎನ್ನುವುದು ಏಕೆ ದೃಢವಾಗಿ ಮನವರಿಕೆಯಾಗಿದೆ ಎನ್ನುವುದನ್ನು ಸ್ವಾಮಿ ರಂಗನಾಥಾನಂದರು ವಿವರಿಸಿದರು. ಭಾರತೀಯ ತತ್ತ್ವಶಾಸ್ತ್ರ ಸಂಪ್ರದಾಯದ ಪ್ರಕಾರ ಪ್ರತಿಯೊಬ್ಬ ಮಾನವನಲ್ಲೂ ದೈವಿಕತೆಯ ಕಿಡಿಯ ಆಧ್ಯಾತ್ಮಿಕ ಹೃದ್ಗರ್ಭವೊಂದಿದೆ. "ಪ್ರತಿಯೊಂದು ಜೀವಾತ್ಮವೂ ಅಂತಸ್ಥವಾಗಿ ದೈವಿಕವೇ" ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಈ ಅಧ್ಯಾತ್ಮ ಪರಿಕಲ್ಪನೆಯ ಪ್ರಕಾರ, ಪ್ರತಿಯೊಬ್ಬನಲ್ಲೂ ಇರುವ ಈ ದೈವಿಕ ಗುಣವು ಅಭಿವ್ಯಕ್ತವಾಗುವುದಕ್ಕೆ ಸಹಾಯಮಾಡುವುದೇ ನೈಜ ಧರ್ಮದ ಗುರಿ. ತನ್ನೊಳಗಿನ ದೈವಿಕತೆ ಅಭಿವ್ಯಕ್ತಗೊಳ್ಳುತ್ತಿದ್ದಂತೆ ದುಷ್ಟ ಮನುಜನೂ ಕರುಣಾರ್ದ್ರಹೃದಯನಾಗುವನು. ಇದರಿಂದ ತಿಳಿಯುವುದೇನೆಂದರೆ ಯಾರೂ ನಿಜವಾಗಿ ದುಷ್ಟರಲ್ಲ. ಯಾರೂ ನಿಜವಾಗಿ ಪಾಪಿಗಳಲ್ಲ. ಸಮಾಜದ ಚೌಕಟ್ಟಿನೊಳಗೆ ವ್ಯಕ್ತಿಯೊಬ್ಬ ದುಷ್ಟನೋ, ಪಾಪಿಯೋ ಆಗುವನು. ಆದ್ದರಿಂದ ಈ ವೇದಾಂತದ ನಂಬಿಕೆಯನ್ನು ಆಧರಿಸಿ ರವೀಂದ್ರನಾಥರೂ ಸ್ವಾಮಿ ವಿವೇಕಾನಂದರೂ ಸ್ವಾಮಿ ರಂಗನಾಥಾನಂದರೂ ಇತರ ಹಲವರೂ ದೃಢವಾದ ನಿಶ್ಚಿತಾಭಿಪ್ರಾಯವನ್ನು ಪ್ರಕಟಿಸಿದ್ದಾರೆ. ಅದೆಂದರೆ, ಮಾನವ ಬದಲಾಗಬಲ್ಲ; ಮಾನವ ಮನದ ಸುಧಾರಣೆ ಸಾಧ್ಯ. ಇದೇ ತೀರ್ಮಾನಕ್ಕೆ ಬಂದ ಕೆಲವು ಆಧುನಿಕ ಚಿಂತಕರನ್ನು ಸ್ವಾಮಿ ರಂಗನಾಥಾನಂದರು ತಮ್ಮ ಉಪನ್ಯಾಸದಲ್ಲಿ ಉಲ್ಲೇಖಿಸಿದರು. ಅತಿ ಪ್ರಮುಖ ತತ್ತ್ವಶಾಸ್ತ್ರಜ್ಞರಲ್ಲಿ ಒಬ್ಬರಾದ ಶ್ರೀ ಅರವಿಂದರನ್ನು ಅವರು ಹೆಸರಿಸಿದರು. ಮಾನವ ಪ್ರಜ್ಞೆಯನ್ನು ಮತ್ತಷ್ಟು ಮತ್ತಷ್ಟು ಉನ್ನತ ಸ್ತರಕ್ಕೆ ಏರಿಸಬೇಕೆಂದು ಅರವಿಂದರು ನಂಬಿದ್ದರು. ಆಗ ಮಾತ್ರವೇ ಪ್ರೇಮ, ಅರ್ಪಣೆ, ಸಹಾನುಭೂತಿ, ಸೇವಾ ಮನೋಧರ್ಮಗಳು ಮಾನವ ಮನವನ್ನು ಆಳಬಲ್ಲವು. ಹಾಗಾಗಿ ಸ್ವಾಮಿಯವರು ಈ ಉಪನ್ಯಾಸದಲ್ಲಿ ಒತ್ತುಕೊಟ್ಟು ಹೇಳಿದ್ದೇನೆಂದರೆ, ಆಧ್ಯಾತ್ಮಿಕ ಅಭಿವೃದ್ಧಿ ಮತ್ತು ನೈತಿಕ ಜಾಗೃತಿ ಎನ್ನುವ ಅರ್ಥದಲ್ಲಿ ಧರ್ಮವು ರಾಷ್ಟ್ರರಾಜಕಾರಣದಲ್ಲಿ

ಮಾತ್ರವಲ್ಲದೆ ಅಂತಾರಾಷ್ಟ್ರೀಯ ರಾಜಕೀಯದಲ್ಲೂ ಆರೋಗ್ಯಕರ ನೀತಿಯನ್ನು ನಿರೂಪಿಸುವಲ್ಲಿ ತುಂಬ ಸಹಾಯಕವಾಗುವುದು.

ಪುರುಷರೂ ಸ್ತ್ರೀಯರೂ ಬಾಹ್ಯದಲ್ಲಿ ಶಾಂತಿಯನ್ನು ಬಿಂಬಿಸುವುದಕ್ಕೆ ಮುನ್ನ ತಮ್ಮ ಅಂತರಂಗದಲ್ಲಿ ಶಾಂತಿಯನ್ನು ನೆಲೆಗೊಳಿಸುವುದು ಅಗತ್ಯ ಎಂದು ಹೇಳುತ್ತ ಅವರು ಮತ್ತೊಂದು ಪ್ರಮುಖ ಅಂಶವನ್ನು ಬೊಟ್ಟುಮಾಡಿ ತೋರಿದರು. ಯುನೆಸ್ಕೊ ಪ್ರಸ್ತಾವನೆಯ ಈ ಸಾಲನ್ನು ಅವರು ಉಲ್ಲೇಖಿಸಿದರು: "ಮನುಜರ ಮನಗಳಲ್ಲಿ ಯುದ್ಧಗಳು ತೊಡಗಿದ್ದರಿಂದ ಶಾಂತಿ ರಕ್ಷಣೆಯನ್ನು ಕೈಗೊಳ್ಳಬೇಕಾದದ್ದು ಮನುಜರ ಮನಗಳಲ್ಲೇ."

ಸ್ವಾಮೀಜಿಯವರ ಈ ಅಭಿಪ್ರಾಯವನ್ನು ನಮ್ಮ ಇಂದಿನ ಕಾಲದಲ್ಲಿ ತುಂಬ ಗಂಭೀರವಾಗಿ ಸ್ವೀಕರಿಸಬೇಕಿದೆ. ಶಾಂತಿ ಶಿಕ್ಷಣ, ಸಹನೆಯ ಕಲ್ಪನೆಯ ಬಲವರ್ಧನೆ, ಪ್ರೇಮ, ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವ ಪ್ರಯತ್ನ – ಇವುಗಳನ್ನೆಲ್ಲ ಸ್ಪಷ್ಟವಾಗಿ ಹಿಂದಕ್ಕೆ ನೂಕಲಾಗಿದೆ. ಇವೆಲ್ಲವುಗಳನ್ನು ಸುದ್ದಿ ಮಾಧ್ಯಮಗಳು ಯುದ್ಧ, ವಿಪತ್ತು, ಅಪಘಾತ ಮುಂತಾದ ವರದಿಗಳ ಮೂಲಕ ಮಸುಕುಗೊಳಿಸಿವೆಯೆನಿಸುತ್ತದೆ. ಜಗತ್ತಿನೆಲ್ಲೆಡೆಯ ಚಲನಚಿತ್ರಗಳು ಹಿಂಸಾತ್ಮಕ ದೃಶ್ಯಗಳಿಂದ ತುಂಬಿಹೋಗಿವೆ. ನೀಚರು ಪರಸ್ಪರ ಹೊಡೆದಾಡುತ್ತಾರೆ. ವೈರಿನಾಶಕ್ಕಾಗಿ ಈ ಪ್ರಪಂಚದಿಂದಲೋ ಅಥವಾ ಬೇರೆ ತಾರಾಲೋಕದ ವಿದೇಶಿಯಿಂದಲೋ ತಂದ ಘೋರ ಅತ್ಯಾಧುನಿಕ ತಾಂತ್ರಿಕ ಆಯುಧಗಳನ್ನು ಬಳಸಲಾಗುತ್ತಿದೆ. ಈ ಬಗೆಯ ವಸ್ತುಗಳನ್ನು ಸಣ್ಣ ಮಕ್ಕಳಿಗೂ ತೆರೆದಿಡಲಾಗಿದೆ. ಉಗ್ರಗಾಮಿತೆಯ ಬೆದರಿಕೆಯಿಂದಾಗಿ ಮನುಷ್ಯರ ಮನದಲ್ಲಿ ಭಯವೂ, ಒಮ್ಮೊಮ್ಮೆ ದ್ವೇಷವೂ ಮನೆಮಾಡಿವೆ. ಸೇನಾಬಲ ಮತ್ತು ಹಿಂಸೆ ಮಾತ್ರವೇ ಎಲ್ಲವನ್ನೂ ಸುಸ್ಥಿತಿಯಲ್ಲಿ ಇಡಬಲ್ಲದೆಂದು ಹೇಳಲಾಗುತ್ತಿದೆ. ಧಾರ್ಮಿಕ ವೈಷಮ್ಯಗಳನ್ನು ದೂರಮಾಡುವ ಪ್ರೇಮ ಹಾಗೂ ಪರಸ್ಪರ ಬೆಂಬಲದ ಹಲವು ನಿದರ್ಶನಗಳಿವೆಯಾದರೂ ಸಮೂಹಮಾಧ್ಯಮವು ಇದನ್ನು ಸುದ್ದಿ ಮಾಡುವುದು ಬಲು ವಿರಳ.

ಹೀಗೆ ರಂಗನಾಥಾನಂದರ ಅಂತಿಮ ಸಿದ್ಧಾಂತವೇನೆಂದರೆ, ಆಧ್ಯಾತ್ಮಿಕವಾಗಿ ಬೆಳೆದ ವ್ಯಕ್ತಿಯು ಎಲ್ಲರ ಒಳಿತನ್ನು ಸಾಧಿಸುವ ರೀತಿಯಲ್ಲಿ ಅಧಿಕಾರವನ್ನು ಬಳಸುವನೇ ವಿನಾ ಕೇವಲ ತನ್ನ ಒಳಿತಿಗಾಗಿ ಅಲ್ಲ. ಈ ಸಂಬಂಧವಾಗಿ ಅವರು ಗೀತೆಯ ನಾಲ್ಕನೆಯ ಅಧ್ಯಾಯವನ್ನು ಉಲ್ಲೇಖಿಸಿದ್ದರು. ಅಲ್ಲಿ 'ರಾಜರ್ಷಿ' ಎನ್ನುವ ಪರಿಭಾಷೆಯನ್ನು ಬಳಸಲಾಗಿದೆ. ರಾಜರ್ಷಿ ಎಂದರೆ ವಿವೇಕಿ ದೊರೆ, ಋಷಿಯಾಗಿರುವ ರಾಜ ಎಂದರ್ಥ. ನಮ್ಮ ಈ ದಿನಗಳಲ್ಲಿ ಸಹಾನುಭೂತಿ, ಸೇವೆ, ಅರ್ಪಣಾ ಮನೋಭಾವಗಳ ಸದ್ಗುಣಗಳನ್ನು ಪಡೆದ ವಿವೇಕಶೀಲ ರಾಜಕಾರಣಿ, ಚುಟುಕಾಗಿ ಹೇಳುವುದಾದರೆ, ಸಕಲರ ಒಳಿತಿಗಾಗಿ ರಾಜಕೀಯ ಅಧಿಕಾರವನ್ನು ಬಳಸುವ ವ್ಯಕ್ತಿ. ಇಂದು ಸಹಾನುಭೂತಿ ಮತ್ತು ಪ್ರೇಮ ಕಣ್ಮರೆಯಾಗಿವೆ ಎಂದು ಸ್ವಾಮೀಜಿಯವರು ಹೇಳಿದರು. ಕರ್ತವ್ಯಲೋಪ ಮತ್ತು ಅಪರಾಧಗಳ ಹೆಚ್ಚಳವು ಪ್ರೇಮ ಹಾಗೂ ಸಹಾನುಭೂತಿಗಳ ಧಾರಣಶಕ್ತಿಯ ಕೊರತೆಯ ಫಲಗಳಾಗಿವೆ. ಅವುಗಳಿಗೆ ಬದಲಾಗಿ ಸ್ವಕೇಂದ್ರತೆ ನಮ್ಮನ್ನಾಳುತ್ತಿದೆ. ಪ್ರಾಪಂಚಿಕ ಮೌಲ್ಯಗಳಿಗೆ ಮಾತ್ರವೇ ಲೆಕ್ಕ: "ನಾನು ಬೇರೆಯವರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ, ನನಗೆ ಬೇಕಾದ್ದು ನನ್ನ ಸೌಕರ್ಯ ಅಷ್ಟೆ. ಸದಾ ಈ ನಾನು, ನಾನು, ನಾನು: ಜಗತ್ತು ನನಗಾಗಿ ಇದೆ. ಎಲ್ಲವನ್ನೂ ಹಣದ ಮೂಲಕವೇ ಅಳೆಯಬೇಕು." ಸ್ವಾಮೀಜಿಯವರ ಬುದ್ಧಿವಾದವು ತುಂಬ ಸ್ಪಷ್ಟ ಹಾಗೂ ಅರ್ಥವಾಗುವಂತಿದೆ: ಈ ಬಗೆಯ ಚಿಂತನೆಯು ಆವರಿಸುತ್ತ ಹೋದಂತೆ ಅಪರಾಧವೂ ತಡೆಯಿಲ್ಲದೆ ಸಮಾಜವನ್ನು ಆವರಿಸುವುದು. ಇದು ಅವರು ಸುಮಾರು ೨೫ ವರ್ಷಗಳ ಹಿಂದೆ ಯುಗಧರ್ಮವನ್ನು ಬಣ್ಣಿಸಿದ ಬಗೆ. ಆದರೆ ಈ ಪ್ರವೃತ್ತಿ ಅಲ್ಲಿಂದ ಈಚೆಗೆ ಹೆಚ್ಚುತ್ತಲೇ ಬಂದಿದೆ.

ಸ್ವಾಮಿಯವರು ಇಷ್ಟಾಗಿಯೂ ನಾಸ್ತಿಕರನ್ನು ಹೊರತುಪಡಿಸಿಲ್ಲ. ಹಲವೊಮ್ಮೆ ಮತಧರ್ಮದ ಜನ ನೈತಿಕ ವರ್ತನೆಯ ಅಳಿವಿನಿಂದಾಗಿ ಅವರನ್ನು ಅಲ್ಲಗಳೆಯುವರು. ಮತಧರ್ಮ ಇಲ್ಲದವರಿಗಾಗಿ ವೇದಾಂತದಲ್ಲೊಂದು ವಿಶೇಷ ಸಂದೇಶವಿದೆ ಎಂದು ಹೇಳಿ ಅವರು ಈ ಮಾತುಗಳನ್ನು ಸೇರಿಸುತ್ತಾರೆ: "ಆತ ಒಬ್ಬ ಮನುಷ್ಯ.

ಮನುಷ್ಯನಲ್ಲಿ ದೇಹವನ್ನು ಮೀರಿದ, ಇಂದ್ರಿಯ ವ್ಯವಸ್ಥೆಯ ಆಚೆಗಿನ ಆತನದೇ ಅಂತರಂಗದಲ್ಲಿ ಘನವಾದ ಆಯಾಮವೊಂದಿದೆ ಎನ್ನುವುದನ್ನು ನೆನಪಿಡಿ. ಯಾವುದೇ ನಿರ್ದಿಷ್ಟ ಮತಧರ್ಮ ಅಥವಾ ಜಾತಿಯ ಅಡೆತಡೆಯನ್ನು ನೀಗಿಕೊಳ್ಳಿ. ನೀವು ಆಧ್ಯಾತ್ಮಿಕವಾಗಿ ಬೆಳೆಯುವಿರಿ" – ಈ ಸತ್ಯವು ಪ್ರತಿಯೊಬ್ಬ ಮನುಷ್ಯನಿಗೂ ಸುಶಿಕ್ಷಿತವಾಗಬೇಕು ಎಂದು ಸ್ವಾಮೀಜಿಯವರು ಒತ್ತಿಹೇಳಿದರು. ವೇದಾಂತವು ಆಸ್ತಿಕ ನಾಸ್ತಿಕ ಅಜ್ಞೇಯ ವಾದಿಗಳ ನಡುವೆ ಯಾವುದೇ ಭೇದ ಮಾಡುವುದಿಲ್ಲ. ಪ್ರತಿಯೊಬ್ಬನೂ/ಳೂ ತನ್ನ ಅಂತರಂಗದಲ್ಲಿ ವಿಶ್ವಮಾನವನ ಆಯಾಮವನ್ನು ಹೊಂದಿರುವನು/ಳು. ಈ ಆಯಾಮವನ್ನು ಪ್ರಕಟಪಡಿಸಲು ಪ್ರಯತ್ನಿಸಿರಿ. ಹಲವೆಡೆ ನಾಸ್ತಿಕನು ಎಷ್ಟೋ "ಧಾರ್ಮಿಕ" ಜನರಿಗಿಂತ ಮಿಗಿಲಾದ ನೈತಿಕ ಜಾಗೃತಿಯನ್ನು ತನ್ನೊಳಗೆ ಇಟ್ಟುಕೊಂಡಿರುತ್ತಾನೆ ಎಂದು ಸ್ವಾಮೀಜಿ ತಮ್ಮ ದೃಢವಾದ ತೀರ್ಮಾನವನ್ನು ಪ್ರಕಟಿಸಿದ್ದರು.

ಇದು ಸ್ವಾಮಿ ರಂಗನಾಥಾನಂದರು ರಾಜಕಾರಣದಲ್ಲಿ ಧರ್ಮದ ಪಾತ್ರವನ್ನು ಕಂಡರಿಸಿದ ಬಗೆ.

ಆಧ್ಯಾತ್ಮಿಕ ವೃದ್ಧಿಯನ್ನು ಪ್ರಕಟಿಸುವ ಬಗೆ ಯಾವುದು, ಅಹಂಕಾರವನ್ನು ನಿಯಂತ್ರಿಸುವುದು ಹೇಗೆ ಸಾಧ್ಯವಾದೀತು, ರಾಜಕಾರಣಿಗಳ ವರ್ತನೆಯನ್ನು ಬದಲಿಸುವುದು ಹೇಗೆ – ಇವೇ ಮುಂತಾದ ಹಲವು ಪ್ರಶ್ನೆಗಳನ್ನು ಚರ್ಚೆಯ ಕಾಲದಲ್ಲಿ ವಿದ್ಯಾರ್ಥಿಗಳು ಕೇಳಿದರೆಂದು ನನಗೆ ನೆನಪಾಗುತ್ತಿದೆ. ಈ ಪ್ರಶ್ನೆಗಳಿಗೆ ಉತ್ತರ ಹೇಳುತ್ತ ಭಗವದ್ಗೀತೆಯ ಬೋಧನೆ ಮತ್ತು ಯೋಗದ ಸಂದೇಶದ ಕಡೆ ಸ್ವಾಮಿಯವರು ಬೊಟ್ಟುಮಾಡಿದರು. ಇತರರ ಮೇಲೆ ಏನು ಪರಿಣಾಮವಾಗುವುದೆಂಬ ಗ್ರಹಿಕೆಯಿಂದ ಯಾರ ಕ್ರಿಯೆಗಳು ನಿಶ್ಚಿತವಾಗುವವೋ ಅಂಥ ಜನರ ನಿದರ್ಶನಗಳನ್ನು ಅವರು ನೀಡಿದರು. ಮಾನವಜೀವಿಯು ಅನಂತ ಚೈತನ್ಯದ ಕೇಂದ್ರ ಎನ್ನುವ ವೇದಾಂತದ ಬೋಧನೆಯನ್ನು ಅವರು ಮತ್ತೆ ಮತ್ತೆ ಒತ್ತಿ ಹೇಳಿದರು. ಹೀಗಾಗಿ ಆಧ್ಯಾತ್ಮಿಕ ವೃದ್ಧಿ ನಿಜಕ್ಕೂ ಸಾಧ್ಯ.

ಈ ಉಪನ್ಯಾಸಗಳ ನಂತರದ ವರ್ಷಗಳಲ್ಲಿ ನಾನು ೧೯೯೩ರ ಸೆಪ್ಟೆಂಬರ್‌ನಲ್ಲಿ ಕಲ್ಕತ್ತೆಯಲ್ಲಿ ಷಿಕಾಗೋ ವಿಶ್ವಧರ್ಮ ಸಮ್ಮೇಳನದ ಶತಮಾನೋತ್ಸವ ಸಮಾರಂಭದಲ್ಲಿ ಸ್ವಾಮಿ ರಂಗನಾಥಾನಂದರನ್ನು ಭೇಟ್ಟಿಯಾದೆನು. ೧೯೯೪ರ ಮಾರ್ಚ್‌ನಲ್ಲಿ ಹೈದರಾಬಾದ್‌ನಲ್ಲಿ ಮತ್ತೊಮ್ಮೆ ಅವರನ್ನು ಭೇಟ್ಟಿಯಾದೆನು. ಇತ್ತೀಚಿನ ವೈಜ್ಞಾನಿಕ ಶೋಧ ಮತ್ತು ರಾಜಕೀಯ ಪ್ರಶ್ನೆಗಳಲ್ಲಿ ಅವರಿಗಿರುವ ಆಸಕ್ತಿಯಿಂದಾಗಿ ನನಗೆ ಆಶ್ಚರ್ಯವಾಯಿತು. ಹೊಸದಾಗಿ ಒಗ್ಗೂಡಿದ ಜರ್ಮನಿ ಮತ್ತು ವಿಶೇಷವಾಗಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಆದ ಬದಲಾವಣೆಯನ್ನು ಕುರಿತು ವಿಸ್ತೃತ ಮಾಹಿತಿಯನ್ನು ಪಡೆಯಲು ಅವರು ತುಂಬ ಆಸಕ್ತರಾಗಿದ್ದರು.

೧೯೯೬ರಲ್ಲಿ ಸ್ವಾಮಿಯವರು ದಿಲ್ಲಿಯಲ್ಲಿ ನನ್ನನ್ನು ನೋಡಲಿಕ್ಕೆಂದು ಡಿಎಎಡಿ (ಜರ್ಮನಿಯ ಶೈಕ್ಷಣಿಕ ವಿನಿಮಯ ಸೇವೆಯ) ಮುಖ್ಯಸ್ಥರ ನಿವಾಸಕ್ಕೆ ಬಂದರು. ಆಗ ನನ್ನ ಪಾದದ ಕೀಲು ಮುರಿದಿದ್ದರಿಂದ ಅಲ್ಲಿ ವಾಸವಾಗಿದ್ದೆನು. ಅದರಿಂದಾಗಿ ನಾನು ರಾಮಕೃಷ್ಣ ಮಿಷನ್‌ನಲ್ಲಿ ನಡೆಯುತ್ತಿದ್ದ ಅವರ ಉಪನ್ಯಾಸಗಳಿಗೆ ಹೋಗಲು ಅಡ್ಡಿಯಾಗಿತ್ತು. ಮತ್ತೊಮ್ಮೆ ನಾನು ಅವರ ಸಹಾನುಭೂತಿ ಮತ್ತು ಆದರಗಳಿಂದ ಮೈಮರೆತೆ. ಅವರ ಬಿಡುವಿಲ್ಲದ ಕಾರ್ಯಗಳಿಂದಾಗಿ ಅವರ ಜೊತೆಗಾರರಿಗೆ ಕೊಂಚ ಸಮಸ್ಯೆಯಾದರೂ, ನಾನು ಆಗ ಕೆಲಸ ಮಾಡುತ್ತಿದ್ದ ವಿಷಯದ ಸಮಸ್ಯೆಯನ್ನು ಕುರಿತು ನನ್ನೊಂದಿಗೆ ದೀರ್ಘ ಚರ್ಚೆಗೆ ಕಾಲಾವಕಾಶ ಮಾಡಿಕೊಂಡರು. ಧರ್ಮ ಎನ್ನುವುದು ಕಲಿಸಿಕೊಡಲಾಗದ ವೈಯಕ್ತಿಕ ವಿಷಯ ಎನ್ನುವ ವಿವೇಕಾನಂದರ ದೃಷ್ಟಿಯನ್ನು ವ್ಯಾಪಕವಾಗಿ ಅವರು ನನಗೆ ವಿವರಿಸಿದರು.

೨೦೦೦ರ ಮಾರ್ಚ್‌ನಲ್ಲಿ ಜರ್ಮನಿಯ ವೇದಾಂತ ಸಂಘದ ಇಬ್ಬರು ಮಿತ್ರರೊಂದಿಗೆ ನಾನು ಅವರಿಗೆ ನನ್ನ ಗೌರವ ಸಲ್ಲಿಸಿದೆನು. ಅತಿ ವಿಶಿಷ್ಟತೆಯ ತತ್ತ್ವಜ್ಞಾನಿಯೂ, ನಮ್ಮ ಕಾಲದ ಸಮಸ್ಯೆಗಳನ್ನು ಚೆನ್ನಾಗಿ ಬಲ್ಲ ದೊಡ್ಡ ಮನಸ್ಸಿನ ಮಾನವೀಯ ಬುದ್ಧಿಮತ್ತೆಯುಳ್ಳವರೂ, ಸಾಮಾಜಿಕ ಬದುಕು ಮತ್ತು ವಿಜ್ಞಾನಗಳಲ್ಲಿ ಆಗುವ

ಹೊಸ ಬದಲಾವಣೆಗಳ ಬಗ್ಗೆ ಸದಾ ಅರಿವನ್ನು ಪಡೆಯುತ್ತಿದ್ದವರೂ ಆದ ಅಸಾಧಾರಣ ವ್ಯಕ್ತಿತ್ವದ ಕೊನೆಯ ಭೇಟಿ ಇದು ಎಂದು ನನಗೆ ತಿಳಿಯಲೇ ಇಲ್ಲ.

ಜಾಗತಿಕ ಸಮಾಜ ಮತ್ತು ಅದರ ಮೌಲ್ಯಗಳ ಬಗ್ಗೆ ಸ್ವಾಮಿಯವರ ಅಭಿಪ್ರಾಯವನ್ನು ನಾನು ಈ ಕೆಳಕಂಡಂತೆ ಸಂಗ್ರಹಿಸಬಹುದಾಗಿದೆ: ಮೊದಲಿಗೆ, ಅವರು ಆಶಾವಾದಿ. ಮನುಷ್ಯನಲ್ಲಿ, ಅಲ್ಲದೆ ಪ್ರತಿಯೊಬ್ಬರಿಗೂ ಸಮಾನ ಹಕ್ಕು ದೊರೆಯುವ ಸಮಾಜದಲ್ಲಿ ಒಟ್ಟಿಗೆ ಶಾಂತಿಯಿಂದ ಬದುಕುವ ಆತನ ಸಾಮರ್ಥ್ಯದಲ್ಲಿ ವಿಶ್ವಾಸವುಳ್ಳವರು. ಎರಡನೆಯದಾಗಿ, ಮಾನವಕುಲ ಒಂದೇ ಎನ್ನುವ ಜಾಗೃತಿ ಕ್ರಮೇಣ ಹೆಚ್ಚುತ್ತ ಮನುಷ್ಯನು ಆಧ್ಯಾತ್ಮಿಕವಾಗಿ ಬೆಳೆಯುವನು ಎಂದು ಅವರು ನಂಬಿದ್ದರು. ಮೂರನೆಯದಾಗಿ, ಜಾಗತಿಕ ಸಮಾಜದಲ್ಲಿ ರಾಜಕಾರಣವು ಸರ್ವರಿಗೂ ಒಳಿತನ್ನು ಉಂಟುಮಾಡುವ ಒತ್ತಾಸೆಯಿಂದ ಪ್ರೇರಿತವಾಗಬೇಕು. ಅದು ಆಯ್ದ ಮೇಲ್ದರ್ಜೆಯ ವ್ಯಕ್ತಿ ಅಥವಾ ರಾಷ್ಟ್ರಕ್ಕೆ ಮಾತ್ರವೇ ಸೀಮಿತವಾಗಬಾರದು. ನಮ್ಮ ಈ ಕಾಲದಲ್ಲಿ ನಾನಾ ಕ್ಷೇತ್ರದಲ್ಲಿ ಆಗಬೇಕಾದ ನೈಜ ಅಭಿವೃದ್ಧಿಯ ದೃಷ್ಟಿಯಿಂದ ಜಾಗತೀಕರಣವು ಅನಿವಾರ್ಯವೆಂದು ಅನಿಸುವುದು. ಆದರೆ, ಇದು ಜಗತ್ತಿನ ಎಲ್ಲೆಡೆಯ ಸ್ತ್ರೀ ಪುರುಷರನ್ನು ಅವಲಂಬಿಸಿದೆ. ಅದಕ್ಕೆ ಎಲ್ಲ ರಾಷ್ಟ್ರಗಳ ಅಂತೆಯೇ ವ್ಯಕ್ತಿಗಳ ಒಳಿತಿಗಾಗಿ ಏಕತೆ ಮತ್ತು ಸಮಾನ ಹಕ್ಕುಗಳ ತಳಹದಿಯ ಮೇಲೆ ನೈಜ ವಿಶ್ವದೃಷ್ಟಿಯನ್ನು ನೀಡಬೇಕಿದೆ. ಇವು ನಾನು ಮಾಡಿಕೊಂಡ ಅವರ ಉಪನ್ಯಾಸಗಳ ಹಳೆಯ ಟಿಪ್ಪಣಿಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದರಿಂದ ಪಡೆದ ತೀರ್ಮಾನಗಳು. ಅವು ಎಂದಿಗೂ ತಮ್ಮ ಪ್ರಸ್ತುತತೆಯನ್ನು ಕಳೆದುಕೊಳ್ಳಲಾರವು.

* * * *

# ೯೮. ಅವರು ಈ ಜಗದ ವಿಶೇಷ ಸೃಷ್ಟಿ

–ದಿಗಂಬರ ಪಾತ್ರ*

೧೯೭೫ ಮತ್ತು ೧೯೭೭ರಲ್ಲಿ ನನಗೆ ಸ್ವಾಮಿ ರಂಗನಾಥಾನಂದಜೀ ಮಹಾರಾಜರ ಪರಿಚಯವಾಯಿತು. ಆಗ ಅವರು ರಾಮಕೃಷ್ಣ ಮಿಷನ್ ಆಶ್ರಮದ ಆಹ್ವಾನದ ಮೇರೆಗೆ ಪುರಿಗೆ ಬಂದಿದ್ದರು. ಮಹಾರಾಜರು ಮಾತನಾಡಲಿರುವ ಸಾರ್ವಜನಿಕ ಸಭೆಯನ್ನು ಏರ್ಪಾಡು ಮಾಡುವ ಸದವಕಾಶವು ನನಗೆ ಮಿಷನ್ ಆಶ್ರಮದ ಮೂಲಕ ಸಿಕ್ಕಿತ್ತು. ಮೊದಲ ಸಭೆ ೨೬ನೇ ಫೆಬ್ರವರಿ ೧೯೭೫ರಂದು ಭುವನೇಶ್ವರದ ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆಯಿತು. ಉತ್ತೇಜಕ ಭಯಭಕ್ತಿ ಬೆರೆತ ಮಹದಾನಂದ ನನಗಾದದ್ದು ನನಗೆ ನೆನಪಾಗುತ್ತಿದೆ. ಏಕೆಂದರೆ, ಘನತೆವೆತ್ತ ದೊಡ್ಡ ಶ್ರೋತೃಸಮೂಹಕ್ಕೆ ನಾನು ಮಹಾರಾಜರನ್ನು ಪರಿಚಯಿಸ ಬೇಕಿತ್ತು. ಇದು ಮೈನವಿರೇಳುವ ಅತ್ಯಾನಂದದ ಅನುಭವ ಆಗಿತ್ತು.

ಅಲ್ಲಿಂದ ಮುಂದೆ, ಮಹಾರಾಜರ ವಾಗ್ವೈಖರಿಯ ಜಾಣ್ಮೆ ಇಂಥ ಹಲವು ಸಭೆಗಳನ್ನು ಆಯೋಜಿಸಲು ನನಗೆ ಪ್ರೇರಕವಾಯಿತು. ಒರಿಸ್ಸಾ ವಿವೇಕಾನಂದ ಯುವ ಮಹಾಮಂಡಲದ ಉದಾರಾಶ್ರಯದಲ್ಲಿ ಜನತೆಯ ಒಳಿತು ಮತ್ತು ಆನಂದಕ್ಕಾಗಿ ಈ ಉಪನ್ಯಾಸಗಳು ನಡೆದವು. ಅವರ ಆಶುಭಾಷಣ ಸದಾ ಆಸಕ್ತಿಕರ, ಪ್ರಚೋದನಾತ್ಮಕ; ಅವರ ಶೈಲಿ ನವನವೀನ. ವಿಷಯ ಯಾವುದೇ ಇರಲಿ, ಅದಕ್ಕೆ ಅವರ ನೂತನ ವಿಧ್ಯಾತ್ಮಕ ಸ್ಪರ್ಶ, ತಪ್ಪಿಲ್ಲದ ಇಂಗ್ಲಿಷ್, ಭಾಷಣದುದ್ದಕ್ಕೂ ಸರಳ ಪದಗಳ ಬಳಕೆ ಅದ್ವಿತೀಯವಾಗಿದ್ದವು. ಇವೆಲ್ಲದರ ಜೊತೆ ಅವರ ಒಂದೇ ಬಗೆಯ ದೃಢವಾದ ಭಾವಪೂರ್ಣ ದನಿ ಎಲ್ಲ ಕೇಳುಗರು ಪರವಶವಾಗಿ ಗಮನಿಸುವಂತೆ ಮಾಡಿತ್ತು. ಸಾಮಾನ್ಯವಾಗಿ ಮಹಾರಾಜರು ಸಭೆಗಳಲ್ಲಿ ಒಂದು ಗಂಟೆ ಮಾತನಾಡಿ ಸರಿಯಾದ ಸಮಯಕ್ಕೆ ಮುಕ್ತಾಯ ಮಾಡುತ್ತಿದ್ದರು. ಹಿಂದೀ ಮತ್ತು ಬಂಗಾಳಿಯಲ್ಲಿ ಕೂಡ ಅವರ ಮಾತಿನ ಮಟ್ಟ ಚೆನ್ನಾಗಿತ್ತು; ಎಲ್ಲರನ್ನೂ ಸೆರೆಹಿಡಿದಿತ್ತು.

ಒರಿಸ್ಸಾದ ಅವರ ಉಪನ್ಯಾಸ ಯಾತ್ರೆಯ ಕಾಲದಲ್ಲಿ ನನಗೆ ಅವರ ವೈಯಕ್ತಿಕ ಸಂಪರ್ಕ ದೊರೆಯಿತು. ಅವರ ಜೊತೆಗೂಡಿ ಬೇರೆ ಬೇರೆ ಸ್ಥಳಗಳಿಗೆ ಹೋಗಿದ್ದು ನನಗೆ ತೀರ್ಥಯಾತ್ರೆಯಾಯಿತು. ಬಹು ದೊಡ್ಡ ಸಂಖ್ಯೆಯ ಜನತೆ ಪರವಶರಾಗಿ ಅವರ ಮಾತುಗಳನ್ನು ಕೇಳುತ್ತಿದ್ದುದನ್ನು ಕಂಡಾಗ ನನಗೆ ಅಪರಿಮಿತವಾದ ಆನಂದಾನುಭವವಾಗುತ್ತಿತ್ತು.

ಅವರು ಈ ಜಗದ ವಿಶೇಷ ಸೃಷ್ಟಿಯೆಂದು ನನಗನಿಸುವುದು. ಅವರ ಬದುಕು ಮತ್ತು ಕಾರ್ಯಗಳು ಅಸಾಧಾರಣವಾದವು. ಹಲವು ಅಂಶಗಳಲ್ಲಿ ಅವರು ದೊಡ್ಡವರಾದರೂ ಅವರನ್ನು ಸುಲಭವಾಗಿ ಮಾತನಾಡಿಸಬಹುದಿತ್ತು; ಅವರಿಗೆ ಎಲ್ಲರಲ್ಲೂ ಪ್ರೀತಿಯಿತ್ತು. ಅವರ ಊಟೋಪಚಾರ ಮತ್ತು ವಸತಿಯ ಏರ್ಪಾಡಿನಲ್ಲಿ ಕೊರತೆಯುಂಟಾದಾಗ ಕೂಡ ಅವರು ಸಿಟ್ಟಾದದ್ದನ್ನಾಗಲೀ, ಅಸಮಾಧಾನಪಟ್ಟಿದ್ದನ್ನಾಗಲೀ ನಾನು ಎಂದೂ ಕಂಡಿಲ್ಲ. ಅವರಿಗೆ 'ಪ್ರಣಾಮಿ'ಯಾಗಿ ದೊರೆತುದನ್ನೆಲ್ಲ ಅವರು ಸಂಸ್ಥೆಯೊಂದರ ಪ್ರಾರಂಭಕ್ಕೆಂದು ಕೊಟ್ಟುಬಿಡುತ್ತಿದ್ದರು. ಒಮ್ಮೆ ನಾವು ಬೇಲೂರಿನ ಆರೋಗ್ಯ ಭವನದಲ್ಲಿ ಮಹಾರಾಜರನ್ನು ಭೇಟ್ಟಿಮಾಡಿದ್ದೆವು. ೯ನೇ ಜುಲೈ ೧೯೯೦ರ ಬೆಳಗ್ಗೆ ಅವರಿಗೆ ಸಂದಾಯವಾದ ಅಷ್ಟೂ ಪ್ರಣಾಮಿ

* ಕಾರ್ಯದರ್ಶಿ, ಅಖಿಲ ಭಾರತ ವಿವೇಕಾನಂದ ಯುವ ಮಹಾಮಂಡಲ, ಭುವನೇಶ್ವರ.

ಹಣವನ್ನು (ಸುಮಾರು ೧೦೦೦೦ ರೂ.ಗಳು) ನಾನು ಸ್ವೀಕರಿಸಬೇಕೆಂದು ಅವರು ಬಯಸಿದರು. ರಾಮಕೃಷ್ಣ ವಿವೇಕಾನಂದ ಪ್ರತಿಷ್ಠಾನದ ಕಟ್ಟಡ ನಿರ್ಮಾಣ ಕಾರ್ಯಕ್ಕೆ ಅವರ ಕೊಡುಗೆಯಾಗಿತ್ತು ಅದು. ಭುವನೇಶ್ವರದಲ್ಲಿ ಅದರ ಅಡಿಗಲ್ಲನ್ನು ಅವರೇ ೨೩ನೇ ಫೆಬ್ರುವರಿ ೧೯೮೪ರಲ್ಲಿ ಇಟ್ಟಿದ್ದರು. ರೂರೆಲಾದಲ್ಲಿ ಜಿಲ್ಲಾ ಆಡಳಿತ ಮತ್ತು ಪೋಲಿಸ್ ಅಧಿಕಾರಿಗಳು ಎರಡು ದಿನಗಳ ಕಾಲ ಮಹಾರಾಜರಿಗೆ ಬಿಗಿ ಭದ್ರತೆಯನ್ನು ಒದಗಿಸಿದ್ದರು. ರೂರೆಲಾ ಬಿಟ್ಟು ವಿಮಾನದಲ್ಲಿ ಭುವನೇಶ್ವರಕ್ಕೆ ಹೊರಟಾಗ, ಅವರಿಗೆ ರಕ್ಷಣೆಯನ್ನೊದಗಿಸಿದ್ದ ಎಲ್ಲ ಪೋಲೀಸ್ ಅಧಿಕಾರಿಗಳು ಒಂದೆಡೆ ಸೇರಬೇಕೆಂದು ಮಹಾರಾಜರು ಬಯಸಿದರು. ಅಪರೂಪದ ಸದ್ಭಾವ ದ್ಯೋತಕವಾಗಿ ಹಾಗೆ ಮಾಡಲಾಯಿತು. ಅವರುಗಳನ್ನೆಲ್ಲ ಉದ್ದೇಶಿಸಿ ಮಾಡಿದ ಕಿರುಭಾಷಣದಲ್ಲಿ ಉತ್ತಮವಾಗಿ ಕೆಲಸ ಮಾಡಿದಿರೆಂದು ಅವರೆಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ಅಂಥ ಘನತೆವೆತ್ತ ವ್ಯಕ್ತಿ ಯಾವುದೇ ದೇಶ ಅಥವಾ ಪ್ರದೇಶಕ್ಕೆ ತನ್ನನ್ನು ಸೀಮಿತಗೊಳಿಸಿಕೊಳ್ಳಲಾರ. ಮಹಾರಾಜರು ಜಾಗತಿಕ ವ್ಯಕ್ತಿ. ಅವರ ವಿದ್ಯಾಭ್ಯಾಸ ಶಾಲಾಮಟ್ಟವನ್ನು ಮೀರದಿದ್ದರೂ, ಅವರು ನಿಸ್ಸಂದೇಹವಾಗಿ ಜಾಗತಿಕ ವ್ಯಕ್ತಿ. "ಜೀವಾತ್ಮಕ್ಕೆ ಯಾವುದೂ ಅಸಾಧ್ಯವೆಂದು ಎಂದೂ ಯೋಚಿಸಬೇಡ"– ಈ ಸುಪರಿಚಿತ ಆಣತಿಗೆ ಮಹಾರಾಜರು ಉಜ್ವಲ ನಿದರ್ಶನ.

ನಿಜಕ್ಕೂ ಅವರ ಮಾತುಗಳನ್ನು ಕೇಳುತ್ತ ನನ್ನ ಸಾರ್ವಜನಿಕ ಭಾಷಣ ಸಾಕಷ್ಟು ಸುಧಾರಿಸಿತು; ನನ್ನ ಆತ್ಮವಿಶ್ವಾಸ ಹೆಚ್ಚಿತು.

ಮಹಾರಾಜರ ಹಾಸ್ಯಪ್ರಜ್ಞೆ ದೊಡ್ಡದು. ಒಮ್ಮೆ ಅವರು ಉಮೋರ್‌ಕೋಟೆಯ ಸರಕಾರಿ ಅತಿಥಿಗೃಹದಲ್ಲಿ ತಂಗಿದ್ದರು. ಅಲ್ಲಿ ನಲ್ಲಿ ನೀರಿನ ಸೌಲಭ್ಯ ಇರಲಿಲ್ಲ. ಆದ್ದರಿಂದ ಬಚ್ಚಲು ಮನೆಗೆ ಬಕೆಟ್‌ನಲ್ಲಿ ನೀರು ಒದಗಿಸಲಾಗಿತ್ತು. ಸೇವಕನು ಬಕೆಟ್‌ನಲ್ಲಿ ನೀರಿಟ್ಟಿದ್ದನು. ಅದರ ತಳದಲ್ಲಿ ಸಣ್ಣ ತೂತಾದದ್ದು ಹೇಗೋ ಗೊತ್ತಾಗಲೇ ಇಲ್ಲ. ನೀರು ಒಸರಿಹೋಯಿತು. ಮಹಾರಾಜರು ಇದನ್ನು ಗಮನಿಸಿದರು. ನನ್ನನ್ನು ಕರೆದು ತಮಾಷೆಯಾಗಿ ಹೇಳಿದರು. "ಪಾತ್ರ, ನನಗೆಂದು 'ಪವಿತ್ರ' ಬಕೆಟ್‌ನ್ನು ಇಟ್ಟಿದ್ದೀಯಲ್ಲಪ್ಪ." ತದನಂತರ ಹಲವರು ಈ ಗಂಭೀರ ಹಾಸ್ಯವನ್ನು ಆಸ್ವಾದಿಸಿದರು. ಇನ್ನೊಂದು ಘಟನೆ ವಿಕ್ರಮಪುರ (ತಾಲ್ಚೇರ್) ಅತಿಥಿ ಗೃಹದಲ್ಲಿ ನಡೆಯಿತು. ಅತಿಥಿಗೃಹದಿಂದ ೪೦೦ ಮೀಟರ್ ದೂರದ ಜಾಗದಲ್ಲಿ ನಡೆದಿದ್ದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಲು ಮಹಾರಾಜರು ತಮ್ಮ ಕೊಠಡಿಯಿಂದ ತೆರಳಿದರು. ಜೊತೆಗಾರನಿಗೆ ಆ ಸಭೆಗೆ ಹೋಗದೆ ಇರಲಾಗಲಿಲ್ಲ. ಹಾಗಾಗಿ ಕೊಠಡಿಗೆ ಬೀಗ ಹಾಕಿ ಆತನೂ ತೆರಳಿದ. ಆದರೆ, ಮಹಾರಾಜರು ಮರಳಿ ಬರುವುದಕ್ಕೆ ಮುನ್ನವೇ ಕೊಠಡಿಯನ್ನು ತೆರೆಯಲು ಆತನಿಗೆ ಸಾಧ್ಯವಾಗಲೇ ಇಲ್ಲ. ಮಹಾರಾಜರು ಮರಳಿ ಬಂದಾಗ ಕೊಠಡಿಗೆ ಬೀಗಹಾಕಿದ್ದು ಕಾಣಿಸಿತು. ಹಾಗಾಗಿ ಅವರು ನನ್ನನ್ನು ಕೇಳಿದರು. "ಆ 'ಅದೃಷ್ಟವಂತ' ಎಲ್ಲಿದ್ದಾನೆ?"

ಅವರ ಸಾನ್ನಿಧ್ಯದಲ್ಲಿ ನಾನು ಸದಾ ಸ್ಪರ್ಶವೇದ್ಯ ಆಧ್ಯಾತ್ಮಿಕ ವಾತಾವರಣವನ್ನು ಅನುಭವಿಸಿದ್ದೇನೆ. ಅವರ ದೇಹ ಚೈತನ್ಯ ಮತ್ತು ವಿಶ್ವಾಸವನ್ನು ಸೂಸಿದಂತೆನಿಸಿತ್ತು. ೧೯೮೩ರಿಂದ ೮೬ರವರೆಗೆ ನಿರಂತರ ನಾಲ್ಕು ವರ್ಷಗಳ ಅವರ ಉಪನ್ಯಾಸ ಯಾತ್ರೆಯ ೨೨ ತುರುಸಿನ ದಿನಗಳಲ್ಲಿ ಮಹಾರಾಜರು ೮೧ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಭಾಷಣ ಮಾಡಿದರು; ೧೧ ಹೊಸ ಸಂಸ್ಥೆಗಳಿಗೆ ಉತ್ತಮ, ಪವಿತ್ರ ಪ್ರಾರಂಭವನ್ನು ಒದಗಿಸಿಕೊಟ್ಟರು. ಆ ವರ್ಷಗಳಿಗೆ ಮುಂಚೆ ಮತ್ತು ನಂತರ ಐದು ಅಧಿಕ ಸಭೆಗಳನ್ನುದ್ದೇಶಿಸಿಯೂ ಅವರು ಮಾತನಾಡಿದರು. ಅವರಂತಿರದ ಒಬ್ಬ ವ್ಯಕ್ತಿಗೆ ಮಹಾರಾಜರ ದೊಡ್ಡತನವನ್ನೂ ಪಾವಿತ್ರ್ಯವನ್ನೂ ಅಳೆಯುವುದು ಸುಲಭವಲ್ಲ. ಮಹಾರಾಜರು ಇತಿಹಾಸದ ಅಡಿಯಾಳಲ್ಲ,

ಬದಲಾಗಿ ತಾವೇ ಇತಿಹಾಸವನ್ನು ಸೃಷ್ಟಿಸಿದರು; ಒಳಿತಿಗಾಗಿ ಜೀವ ಸವೆಸಿದರು. ಪವಿತ್ರ ತ್ರಿಮೂರ್ತಿಗಳನ್ನು (ಶ್ರೀ ರಾಮಕೃಷ್ಣ, ಶ್ರೀ ಶಾರದಾದೇವಿ, ಸ್ವಾಮಿ ವಿವೇಕಾನಂದ) ನಾನು ಕಂಡಿಲ್ಲ. ಅವರ ಮಾತುಗಳನ್ನೂ ಕೇಳಿಲ್ಲ. ಆದರೆ ಸ್ವಾಮಿ ರಂಗನಾಥಾನಂದಜೀ ಮಹಾರಾಜರನ್ನು ಕಂಡ, ಅವರ ಮಾತುಗಳನ್ನು ಕೇಳಿದ, ಅವರೊಡನೆ ಬೆಚ್ಚಗೆ ಸಂಭಾಷಣೆಗೈದ, ಆಪ್ತವಾಗಿ ಒಡನಾಡಿದ ಮಹಾನ್ ಸಂತೃಪ್ತಿ ನನಗಿದೆ. ಅವರ ನೆನಪು ಸದಾ ನನ್ನ ಜೊತೆ ಉಳಿಯುವುದು.

* * * *

# ೯೯. ನನ್ನ ದೌರ್ಬಲ್ಯವನ್ನು ಮೀರಿನಿಲ್ಲಲು ನನಗವರು ನೆರವಾದರು

**–ಜಿ. ಅಖಿಲಾಂಡಮ್***

ಸಿಂಗಪುರದಲ್ಲಿ 'ಆನಂದ ವಿಕಟನ್' ಪತ್ರಿಕೆಯ ಸಂಚಿಕೆಯೊಂದರಲ್ಲಿ ಸ್ವಾಮಿ ರಂಗನಾಥಾನಂದರ ಬಗ್ಗೆ ಲೇಖನವನ್ನು ಕಂಡಾಗ ಮೊದಲ ಬಾರಿಗೆ ಅವರ ಬಗ್ಗೆ ತಿಳಿಯುವ ದೈವಕೃಪೆ ನನಗೊದಗಿತು. ಆ ಲೇಖನದಲ್ಲಿದ್ದ ಅವರ ದೈವಿಕ ನೋಟದ ಭಾವಚಿತ್ರ ಮತ್ತು ನೀತ್ಯುಪದೇಶ ಆ ಚಿತ್ರವನ್ನೂ ಲೇಖನವನ್ನೂ ಕತ್ತರಿಸಿ ಇಟ್ಟುಕೊಳ್ಳುವುದಕ್ಕೆ ನನ್ನನ್ನು ಪ್ರಚೋದಿಸಿದವು. ಈ ಸುದೀರ್ಘ ಕಾಲಾವಧಿಯಲ್ಲಿ ಆ ಚಿತ್ರವನ್ನೂ ಲೇಖನವನ್ನೂ ಎಲ್ಲೋ ಕೈತಪ್ಪಿ ಇಟ್ಟುಬಿಟ್ಟಿದ್ದೇನೆ. ಆದರೂ ೧೯೬೫ರಲ್ಲಿ ಅವರು ಸಿಂಗಪುರಕ್ಕೆ ಬಂದಾಗ ಮಹಾರಾಜರನ್ನು ಭೇಟಿಯಾದ ಅದ್ಭುತ ಅವಕಾಶ ನನ್ನ ನೆನಪಿನಲ್ಲಿ ಇನ್ನೂ ಹಸಿರಾಗಿದೆ.

ರಾಮಕೃಷ್ಣ ಮಿಷನ್‌ನಲ್ಲಿ ಸಂಜೆ ಹೊತ್ತು ನಡೆದ ಉಪನ್ಯಾಸಕ್ಕೆ ನಾನು ಹೋಗಿದ್ದೆನು. ಅಲ್ಲಿ ತುಂಬ ವಿಐಪಿಗಳು ನೆರೆದದ್ದರಿಂದಾಗಿ ನಾನು ಅವರ ಬಳಿಗೆ ಹೋಗಲಾಗಲಿಲ್ಲ. ಆದರೂ ಅವರ ಭಾಷಣ ನನ್ನ ಮೇಲೆ ತೀವ್ರ ಪರಿಣಾಮವನ್ನುಂಟುಮಾಡಿತ್ತು. ಹಾಗಾಗಿ ನಾನು ಕೌಲಾಲಂಪುರಕ್ಕೆ ಹೋಗಲು ನಿರ್ಧರಿಸಿದೆನು. ಆ ರಾತ್ರಿ ಉಪನ್ಯಾಸ ನೀಡಲು ಮಹಾರಾಜರು ಅಲ್ಲಿಗೆ ಹೋಗಲಿದ್ದರು. ಅವರ ಮಾತುಗಳನ್ನು ಕೇಳಲು ಮತ್ತು ಅವರನ್ನು ವೈಯಕ್ತಿಕವಾಗಿ ಭೇಟಿಯಾಗಲಿಕ್ಕೆ ಕೂಡ ಈ ಸದವಕಾಶವನ್ನು ಬಳಸಿಕೊಂಡೆನು. ಮಹಾರಾಜರು ಸಂಬಂಧಮ್ ಅವರ ಮನೆಯಲ್ಲಿ ಇಳಿದುಕೊಳ್ಳುವರೆಂದು ನನಗೆ ತಿಳಿಯಿತು. ನಾನೂ ಅಲ್ಲೇ ಇಳಿದುಕೊಂಡೆನು. ನಾನು ಪ್ರಣಾಮ ಮಾಡಿದಾಗ ಮಹಾರಾಜರು ಬೆಳಗಿನ ೯ ಗಂಟೆಗೆ ತಮ್ಮ ಕೋಣೆಗೆ ಬರುವಂತೆ ನನಗೆ ಹೇಳಿದರು. ನನಗೆ ಆಶ್ಚರ್ಯವಾಯಿತು. ಅವರು ನನ್ನನ್ನು ವೈಯಕ್ತಿಕವಾಗಿ ನೋಡಬಯಸಿದ್ದರಿಂದಾಗಿ ನನ್ನ ಮನಸ್ಸಿಗೆ ತುಂಬ ಅಳುಕಾಯಿತು.

ನಾನು ಆ ಕೋಣೆಯಲ್ಲಿ ಮಹಾರಾಜರನ್ನು ಕಂಡಾಗ, ನಾನು ಇದೇ ಮೊದಲ ಬಾರಿಗೆ ಅವರನ್ನು ನೋಡುತ್ತಿದ್ದೇನೆಂದು ಒತ್ತಿಹೇಳಿದ್ದರೂ, ಈ ಹಿಂದೆಯೇ ಪರಿಚಿತನೋ ಎನ್ನುವಂತೆ ನನ್ನೊಂದಿಗೆ ಮಾತನಾಡಿದರು. ನಾನು ಪತ್ರಿಕಾಸಂಚಿಕೆಯಲ್ಲಿ ಓದಿದ್ದ ಲೇಖನದ ಬಗ್ಗೆ ಅವರಿಗೆ ಹೇಳಿದೆನು. ಕತ್ತರಿಸಿ ಇಟ್ಟುಕೊಳ್ಳಲು ಅದೇ ಲೇಖನವನ್ನು ಏಕೆ ಆಯ್ದುಕೊಂಡಿರಿ ಎಂದು ಅವರು ನನ್ನನ್ನು ಕೇಳಿದರು. ಅವರು ಮುಂದುವರಿದು, ನಮ್ಮ ಪೂರ್ವ ಕರ್ಮಗಳಿಂದಾಗಿ ನಾವು ಪರಸ್ಪರ ಪರಿಚಿತರಾಗಿರಬೇಕೆಂದು ವಿವರಿಸಿದರು. ನನ್ನ ವೈಯಕ್ತಿಕ ಜೀವನದ ಬಗ್ಗೆ ಮತ್ತು ನಾನೇಕೆ ಒಂಟಿ ಜೀವನವನ್ನು ಆಯ್ದುಕೊಂಡೆನೆಂಬ ಬಗ್ಗೆ ಮಹಾರಾಜರು ನನ್ನನ್ನು ಕೇಳಿದರು. ಅಲ್ಲದೆ ನನ್ನ ಓದಿನ ಆಸಕ್ತಿಯ ಕುರಿತಾಗಿಯೂ ಅವರು ತಿಳಿಯಬಯಸಿದರು. ನನಗೆ ಸಾಧು–ಸಂತರ ಬಗೆಗಿನ ಪುಸ್ತಕಗಳಲ್ಲಿ ಆಸಕ್ತಿ ಎಂದು ಮಾರ್ನುಡಿದೆನು. ಆಗ, ಎಲ್ಲದನ್ನೂ, ಪ್ರಾಪಂಚಿಕ ವಿಷಯಗಳ ಪುಸ್ತಕಗಳನ್ನೂ ಓದಬೇಕೆಂದೂ, ಅದರಿಂದ ತಪ್ಪು–ಸರಿಗಳನ್ನು ವಿವೇಚಿಸಲು ಸಾಧ್ಯವಾಗುತ್ತದೆ ಎಂದೂ ಮಹಾರಾಜರು ನನಗೆ ಹೇಳಿದರು. ನಾನು ಅವರ ಸಲಹೆಯನ್ನು ಸ್ವೀಕರಿಸಿದೆ. ಆಶೀರ್ವಾದ ಪಡೆದೆ, ಅವರ ಕೃಪೆಗೆ ಕೃತಜ್ಞತೆ ಸಲ್ಲಿಸಿದೆ.

೧೯೬೭ ಅಥವಾ ೧೯೬೮ರಲ್ಲಿ ಕೌಲಾಲಂಪುರದ ಸಂಬಂಧಮ್ ಅವರ ಮನೆಯಲ್ಲಿ ಮಹಾರಾಜರು ಉಪನಿಷತ್ ತರಗತಿಗಳನ್ನು ನಡೆಸಿದರು. ಆ ತರಗತಿಗಳಿಗೆ ಹಾಜರಾಗುವಂತೆ ಅವರು ನನಗೆ ಹೇಳಿದರು. ಆಗ

* ಸಿಂಗಪುರದ ಒಬ್ಬ ಭಕ್ತ.

ನಾನು ಅಲ್ಲಿಂದ ೭.೫ ಮೈಲು ದೂರದಲ್ಲಿರುವ ರಾಮಕೃಷ್ಣ–ಶಾರದಾ ಬಾಲಕಿಯರ ನಿಲಯದಲ್ಲಿ ನೆಲೆಸಿದ್ದೆನು. ಹಾಗಾಗಿ ಇದು ಶಕ್ಯವಾಗದೆಂದು ನಾನು ಅವರಿಗೆ ವಿವರಿಸಿದೆನು. ಆತಂಕಪಡುವುದು ಬೇಡವೆಂದು ಅವರು ನನಗೆ ಹೇಳಿ, ಸಾರಿಗೆ ಸೌಕರ್ಯವನ್ನು ಒದಗಿಸಿಕೊಟ್ಟರು. ತರಗತಿಯ ಹೊತ್ತಿಗೆ ಸರಿಯಾಗಿ ಹಾಜರಾಗದೆ ತಡವಾದರೂ, ನಾನು ಬಂದ ಬಳಿಕವೇ ಮಹಾರಾಜರು ಪಾಠವನ್ನು ಆರಂಭಿಸುತ್ತಿದ್ದರು. ಹಲವು ಗಣ್ಯವ್ಯಕ್ತಿಗಳೂ, ಇತರ ಭಕ್ತರೂ ಆ ತರಗತಿಗಳಿಗೆ ಬರುತ್ತಿದ್ದರು. ಹಾಗಾಗಿ ಅವರೆಲ್ಲರನ್ನು ಕಾಯಿಸು ವಂತಾದ್ದಕ್ಕೆ ನನ್ನಲ್ಲಿ ಅಪರಾಧಭಾವ ಮೂಡಿತು. ನಾನು ಇದನ್ನು ಮಹಾರಾಜರಲ್ಲಿ ತೋಡಿಕೊಂಡೆನು. ಆ ಬಳಿಕ ನನಗೆ ತಿಳಿದುಬಂದಿದ್ದೇನೆಂದರೆ, ಅವರು ಶ್ರೀಮತಿ ಉಮಾ ಸಂಬಂಧಮ್ ಅವರ ಮೂಲಕ ವೈಯಕ್ತಿಕವಾಗಿ ವ್ಯವಸ್ಥೆ ಮಾಡಿದ್ದರು. ಅಲ್ಲದೆ, ಚಾಲಕನು ಮುಂಚಿತವಾಗಿ ಬರುವುದನ್ನು ಖಾತ್ರಿಪಡಿಸಿಕೊಂಡಿದ್ದರು. ನನ್ನಂಥ ಸಾಮಾನ್ಯ ವ್ಯಕ್ತಿ ತಮ್ಮ ತರಗತಿಗಳಿಗೆ ಬರಬೇಕೆನ್ನುವ ದೃಢನಿರ್ಧಾರಕ್ಕಾಗಿ ಅವರು ಕ್ರಮಿಸಿದ ದಾರಿ ನನ್ನ ಹೃದಯವನ್ನು ಗಾಢವಾಗಿ ತಟ್ಟಿತು.

ಗಣ್ಯರೊಂದಿಗೆ ಕಲೆತು ಮಾತನಾಡಬೇಕಾಗಿ ಬಂದಾಗಲೆಲ್ಲ ನಾನು ಮುಜುಗರಪಡುತ್ತಿದ್ದೆನು. ಇದು ನನ್ನ ದೌರ್ಬಲ್ಯ ಎಂದೇ ಹೇಳಬಹುದು. ಆದರೂ ಈ ನನ್ನ ದೌರ್ಬಲ್ಯವನ್ನು ಮಹಾರಾಜರ ದಿವ್ಯಾನುಗ್ರಹದಿಂದ ದಾಟಿದೆನು.

೧೯೭೮ರಲ್ಲಿ ಮಹಾರಾಜರು ಸಿಂಗಪುರದ ರಾಮಕೃಷ್ಣ ಮಿಷನ್‌ಗೆ ಭೇಟ್ಟಿಯಿತ್ತರು. ಉಪನ್ಯಾಸದ ಬಳಿಕ ಎಂದಿನಂತೆ ಗಣ್ಯರು ಮಹಾರಾಜರನ್ನು ಸುತ್ತುಗಟ್ಟಿದ್ದರು. ಹಾಗಾಗಿ ನಾನು ಮಹಾರಾಜರನ್ನು ಮಾತನಾಡಿಸಲು ಅಳುಕಿದೆನು. ಅವರಿಗೆ ಪ್ರಣಾಮ ಮಾಡಲು ನಾನು ತುಂಬ ಕಾತರನಾಗಿದ್ದರೂ, ಹಾಗೆ ಮಾಡದೆ ಮರಳಿದೆನು. ಆದರೆ ಮಾರನೆಯ ದಿನ ಮಹಾರಾಜರನ್ನು ಮಾತನಾಡಿಸಿ ಆಶೀರ್ವಾದ ಪಡೆಯಲು ಹೋಗಿದ್ದಾಗ, ಹಿಂದಿನ ದಿನ ಮಾತನಾಡಿಸದಿದ್ದುದನ್ನು ಅವರು ಜ್ಞಾಪಿಸಿಕೊಂಡರು. ಯಾಕೆಂದೂ ನನ್ನನ್ನು ಕೇಳಿದರು. ನನ್ನ ಕೀಳರಿಮೆ ಗಣ್ಯರೊಂದಿಗೆ ಸಂಭಾಷಿಸುವುದಕ್ಕೆ ಅಡ್ಡಿಪಡಿಸುತ್ತದೆ ಎಂದು ಅವರಿಗೆ ತಿಳಿಸಿದೆನು. ನನ್ನ ತಪ್ಪೊಪ್ಪಿಗೆಯನ್ನು ಕೇಳಿಸಿಕೊಂಡು, ಮಹಾರಾಜರು ನನಗೆ ಹೇಳಿದರು: "ರಾಮಕೃಷ್ಣ ಮಿಶನ್‌ಗೆ ಯಾರೇ ಬಂದರೂ ಅಲ್ಲಿ ಅವರೆಲ್ಲರನ್ನೂ ಸಮಾನವಾಗೇ ಕಾಣಲಾಗುತ್ತದೆ; ಅವರು ಗುರು ಮಹಾರಾಜ ಶ್ರೀ ರಾಮಕೃಷ್ಣರ ಭಕ್ತರು ಅಷ್ಟೆ. ಅಲ್ಲಿ ಯಾರ ನಡುವೆಯೂ ಅಸಮಾನತೆ ಇರಲಿಲ್ಲ." ನನ್ನ ಹಳೆಯ ದೌರ್ಬಲ್ಯವಾದ ಸಂಕೋಚವನ್ನು ದೂರ ಮಾಡಿಕೊಂಡು ಎಲ್ಲರೊಂದಿಗೆ ವ್ಯವಹರಿಸಲು ತೊಡಗಬೇಕೆಂದು ಅವರು ನನಗೆ ತಿಳಿಹೇಳಿದರು.

ಮಹಾರಾಜರಿಂದ ಉಪದೇಶವನ್ನು ಪಡೆದ ಬಳಿಕ, ನನ್ನ ದೌರ್ಬಲ್ಯವನ್ನು ಹೆಚ್ಚು ಕಮ್ಮಿ ಅಪ್ರಜ್ಞಾಪೂರ್ವಕವಾಗಿಯೇ ದಾಟಲು ಶಕ್ತನಾದೆ. ಒಂದು ತಿಂಗಳೊಳಗೆ ಗಣ್ಯರ ಬಳಿಗೆ ಹೋಗಿ ಯಾವ ಕಷ್ಟವೂ ಇಲ್ಲದೆ ಸಂಭಾಷಿಸಲು ಸಾಧ್ಯವಾದದ್ದು ನನಗೇ ಅರಿವಿಗೆ ಬಂತು. ಈ ಪರಿವರ್ತನೆ ಮಹಾರಾಜರ ದಿವ್ಯಾನುಗ್ರಹದಿಂದಲೇ ಆದದ್ದೆಂದು ನಾನು ದೃಢವಾಗಿ ನಂಬಿದ್ದೇನೆ. ಇಂದು ನಾನು ಏನಾಗಿದ್ದೇನೋ ಅದಕ್ಕೆ ಅವರ ಅನುಗ್ರಹ ಮತ್ತು ಉಪದೇಶಗಳೇ ಕಾರಣ.

೧೯೯೮ರಲ್ಲಿ ನಾನು ಮದುರೈ ದೇವಾಲಯದ ಆರಂಭೋತ್ಸವಕ್ಕೆ ಹೋಗಿದ್ದೆನು. ಈ ಭೇಟಿಯು ಕಿರಿದಾಗಿದ್ದರೂ, ಅರ್ಥಪೂರ್ಣ ರೀತಿಯಲ್ಲಿ ಮಹಾರಾಜರ ಸೇವೆ ಮಾಡುವ ಸದವಕಾಶವನ್ನು ಒದಗಿಸಿತು. ದೇವಾಲಯದ ಉದ್ಘಾಟನ ಸಮಾರಂಭಕ್ಕೆ ಮುಂಚೆ ಅವರು ಭಕ್ತರಿಗೆ ಮಂತ್ರದೀಕ್ಷೆಯನ್ನು ನೀಡಿದರು. ಅವರಲ್ಲೊಬ್ಬ ದಂಪತಿಗಳು ತಮ್ಮ ನವಜಾತ ಶಿಶುವಿಗೆ ಮಹಾರಾಜರು ಆಶೀರ್ವದಿಸಬೇಕೆಂದು ಬಯಸಿದ್ದರು. ಮಹಾರಾಜರು ಸಂಜೆಯ ಆರತಿಯಾದ ಬಳಿಕ ಮಗುವನ್ನು ಕರೆತರುವಂತೆ ಅವರಿಗೆ ಸೂಚಿಸಿದರು. ಆದರೆ ರಾತ್ರಿ ೯ ಘಂಟೆಯಾದ ಮೇಲೇ ಅವರಿಗೆ ಬಂದು ತಲುಪುವುದು ಸಾಧ್ಯವಾಯಿತು. ಅವರು ತಡವಾಗಿ ಬಂದಿದ್ದರೂ,

ಮಹಾರಾಜರು ಕೊಂಚವೂ ಅಸಮಾಧಾನ ತೋರದೆ ಹೃತ್ಪೂರ್ವಕವಾಗಿ ಮಗುವನ್ನು ಹರಸಿದರು. ಮಹಾರಾಜರ ಈ ನಡತೆಯಿಂದ ನನಗೆ ತೋರಿದ್ದೆಂದರೆ, ಅವರಿಗೆ ಎಷ್ಟೊಂದು ತಾಳ್ಮೆ, ಅನುಕಂಪ! ಅಲ್ಲದೆ ಅವರ ಮಾತಿಗೆ ತಕ್ಕ ನಡೆವಳಿಕೆ!

ನೂತನ ದೇವಾಲಯವನ್ನು ಉದ್ಘಾಟಿಸಲಿಕ್ಕೆಂದು ಡೆಹ್ರಾಡೂನ್‌ಗೆ ತೆರಳುವ ಮುನ್ನ ಅವರು ತಮ್ಮ ಜೊತೆಗೂಡಿ ಬರುವಂತೆ ನನ್ನನ್ನು ಒತ್ತಾಯಿಸಿದರು. ಆದರೆ ಇದು ನನಗೆ ಸಾಧ್ಯವಲ್ಲವೆಂದು ನಾನು ಅವರಿಗೆ ಹೇಳಿದೆನು. ಆದಾಗ್ಯೂ ವಿಮಾನ ನಿಲ್ದಾಣಕ್ಕೆ ಹೊರಟು ನಿಂತಾಗ ಮಹಾರಾಜರು ನನಗೆ ಹೇಳಿದರು: "ನಾನು ಅಲ್ಲಿ ನಿನ್ನನ್ನು ಕಾಣುವೆನು." ಆದರೂ ಬಲು ದೂರದ ಊರಾದ್ದರಿಂದ ನನಗೆ ಹೋಗುವ ಉದ್ದೇಶ ಇರಲಿಲ್ಲ. ಎರಡು ದಿನಗಳ ಬಳಿಕ ಸ್ವಾಮಿ ಸರ್ವರೂಪಾನಂದ ಮಹಾರಾಜರು ಡೆಹ್ರಾಡೂನ್‌ನಿಂದ ನನಗೆ ದೂರವಾಣಿ ಕರೆಮಾಡಿದರು. ದೇವಾಲಯದ ಪ್ರತಿಷ್ಠಾಪನ ಮಹೋತ್ಸವದಲ್ಲಿ ನನ್ನ ಭೆಟ್ಟಿಯನ್ನು ಮಹಾರಾಜರು ಎದುರು ನೋಡುತ್ತಿರುವುದಾಗಿ ನನಗೆ ತಿಳಿಸಿದರು. ದಿಲ್ಲಿಯಲ್ಲಿ ನನ್ನನ್ನೂ ನನ್ನ ಗೆಳೆಯನನ್ನೂ ಭೆಟ್ಟಿಯಾಗುವಂತೆ ಯಾರೋ ಒಬ್ಬರಿಗೆ ಹೇಳಿ ಮಹಾರಾಜರು ವ್ಯವಸ್ಥೆ ಮಾಡಿದ್ದಾಗಿದೆ; ಅಲ್ಲದೆ, ಭಕ್ತರೊಬ್ಬರು ಡೆಹ್ರಾಡೂನ್‌ಗೆ ಹೋಗುವ ರೈಲಿಗೆ ನಮ್ಮನ್ನು ಹತ್ತಿಸುವರು ಎನ್ನುವುದನ್ನೂ ಅವರು ನನಗೆ ತಿಳಿಸಿದರು.

ಡೆಹ್ರಾಡೂನ್‌ನಲ್ಲಿ ಆ ದಿವ್ಯ ಉತ್ಸವವನ್ನು ನೋಡಿದ ಬಳಿಕ, ಮಾರನೆಯ ದಿನವೇ ನಾನು ಅತಿಸಾರದಿಂದ ಬಳಲಿದೆನು. ಆದರೆ, ಔಷಧೋಪಚಾರದ ಏರ್ಪಾಡು ಮಾಡುವಂತೆ ಸ್ವಾಮಿ ಜಗದೀಶಾನಂದರಿಗೆ ಹೇಳುವ ಮೂಲಕ ಮಹಾರಾಜರು ನನ್ನ ಬಗ್ಗೆ ವಿಶೇಷ ಗಮನ ಹಾಗೂ ಕಾಳಜಿಯನ್ನು ತೋರಿದರು. ನಾನು ಅವರಿಗೆ ತೊಂದರೆಕೊಟ್ಟಿದ್ದು ಇದೇ ಮೊದಲಲ್ಲ. ೧೯೮೪ರಲ್ಲಿ ಹೈದರಾಬಾದ್‌ನಲ್ಲಿ ಅವರನ್ನು ಸಂದರ್ಶಿಸಿದಾಗಲೂ ಇಂಥದೇ ಸಮಸ್ಯೆ ನನಗೆ ಎದುರಾಗಿತ್ತು. ಆಗಲೂ ಮಹಾರಾಜರು ನನ್ನ ಆರೋಗ್ಯದ ಬಗ್ಗೆ ಕಾಳಜಿ ವಹಿಸಿದ್ದರು; ನನ್ನ ಬಗ್ಗೆ ಇದೇ ರೀತಿ ಗಮನ ನೀಡಿದ್ದರು. ಭಕ್ತರೊಬ್ಬರ ಜೊತೆ ಅತಿಥಿಗೃಹದಲ್ಲಿ ನನ್ನನ್ನು ಇಟ್ಟಿದ್ದರು. ನನಗೆ ತಕ್ಕುದಾದ ಊಣಿಸನ್ನು ಅಣಿಗೊಳಿಸುವಂತೆ ಅತಿಥಿಗೃಹದ ಅಡುಗೆಯವನಿಗೆ ಸಲಹೆ ಮಾಡಿದ್ದರು.

ನಾನು ದಿಲ್ಲಿಯ ಆಶ್ರಮದಲ್ಲಿದ್ದಾಗ ಮಧ್ಯಾಹ್ನದ ಊಟಕ್ಕೆ ಪೂಜ್ಯ ಮಹಾರಾಜರು ತಮ್ಮ ಪಾಲಿನ ಊಟವನ್ನು ನನಗೆ ಕಳಿಸಿಕೊಡುತ್ತಿದ್ದರು. ಅದಕ್ಕೆ ಕಾರಣವೇನೆಂದರೆ, ಯಾವಾಗಲೂ ಅವರದು ಮಸಾಲೆ ಇಲ್ಲದ ಸರಳ ಪದಾರ್ಥಗಳಿಂದಾದ ಊಟ; ಹಾಗಾಗಿ ಅದು ನನ್ನ ಆರೋಗ್ಯಕ್ಕೆ ತಕ್ಕುದಾಗಿತ್ತು. ದಿಲ್ಲಿಯಿಂದ ಹೊರಡುವುದಕ್ಕೆ ಮೊದಲು ನಾನು ಮಹಾರಾಜರಿಗೆ ಪ್ರಣಾಮ ಮಾಡಿದೆನು; ನಾನು ಅಲ್ಲಿ ಉಳಿದುಕೊಂಡಿದ್ದಾಗ ಮಹಾರಾಜರು ತೋರಿದ ಕಾಳಜಿಗಾಗಿ ಅವರಿಗೆ ನಾನು ಕೃತಜ್ಞತೆಯನ್ನು ಸಲ್ಲಿಸಿದೆನು.

ಕೊನೆಯ ಬಾರಿಗೆ ನಾನು ಮಹಾರಾಜರನ್ನು ೨೦೦೨ರಲ್ಲಿ ಬೇಲೂರು ಮಠದಲ್ಲಿ ಭೆಟ್ಟಿಯಾಗಿದ್ದೆನು. ನಾನು ಭೆಟ್ಟಿಯಿತ್ತಾಗ ಅವರ ಆರೋಗ್ಯ ಚೆನ್ನಾಗಿರಲಿಲ್ಲ. ಅವರ ಆಶೀರ್ವಾದ ಬಯಸಿ ನಾನು ಪ್ರತಿದಿನವೂ ಅವರನ್ನು ಕಾಣಲು ಪ್ರಯತ್ನಿಸಿದೆನು. ನಾನು ಬೇಲೂರು ಮಠವನ್ನು ಬಿಡುವುದಕ್ಕೆ ಮುನ್ನ ಬಿದ್ದುಬಿಟ್ಟೆ. ನನ್ನ ಎಡಗೈ ಮಣಿಕಟ್ಟು ಮುರಿಯಿತು, ಹಣೆಗೂ ಗಾಯವಾಯಿತು. ನಾನು ಬಿದ್ದ ದಿನ ಮಹಾರಾಜರನ್ನು ಕಾಣಲಿಕ್ಕಾಗಲಿಲ್ಲ. ನನ್ನ ಅನುಪಸ್ಥಿತಿಯನ್ನು ಗಮನಿಸಿದ ಮಹಾರಾಜರು ಅದಕ್ಕೆ ಕಾರಣವನ್ನು ತಿಳಿಯಬಯಸಿದರು. ಮಾರನೆಯ ದಿನ, ನನ್ನ ಕೈಗೆ ಪಳಾಸ್ತ್ರಿ ಪಟ್ಟು ಹಾಕಿದ್ದನ್ನು ಕಂಡು, ಗುರು ಮಹಾರಾಜರಿಗೂ ಇಂಥದೇ ಅಪಘಾತ ವಾಗಿತ್ತೆಂದು ಮಹಾರಾಜರು ನನಗೆ ಹೇಳಿದರು. ಬಿದ್ದ ಬಳಿಕ ಯಾರು ನನ್ನನ್ನು ನೋಡಿಕೊಳ್ಳುತ್ತಿದ್ದಾರೆಂದೂ ಅವರು ಕೇಳಿದರು. ನನ್ನೊಂದಿಗೆ ಬಂದ ಭಕ್ತರು ನನ್ನನ್ನು ನೋಡಿಕೊಳ್ಳುತ್ತಿದ್ದಾರೆಂದು ಅವರಿಗೆ ನಾನು ಹೇಳಿದೆನು. ಮದ್ರಾಸಿಗೆ ಹೊರಡುವುದಕ್ಕೆ ಮುಂಚೆ ನಾನು ಪ್ರಣಾಮ ಮಾಡಿ ಅವರ

ಆಶೀರ್ವಾದ ಪಡೆದನು. ಭಾರವಾದ ಹೃದಯದಿಂದ ಬೇಲೂರು ಮಠದಿಂದ ಹೊರಹೊರಟೆನು; ಸ್ವಾಮಿ ರಂಗನಾಥಾನಂದರನ್ನು ಮತ್ತೊಮ್ಮೆ ಕಾಣುವ ಅವಕಾಶ ಸಿಕ್ಕೀತೆ ಎನ್ನುವ ಕುತೂಹಲವಿತ್ತು.

೨೫ ಏಪ್ರಿಲ್ ೨೦೦೫ರಂದು ಪೂಜ್ಯ ಅಧ್ಯಕ್ಷ ಮಹಾರಾಜರು ಮಹಾ ಸಮಾಧಿಯನ್ನು ಹೊಂದಿದರೆಂದು ವಿಷಾದದ ವಾರ್ತೆ ಸಿಕ್ಕಿತು. ಇದು ಮಹಾ ಶೂನ್ಯವನ್ನು ಸೃಷ್ಟಿಸಿತೆಂದು ನಾನು ಭಾವಿಸಿದೆ. ಯಾವುದೇ ಅಸಮಾನತೆಯಿಲ್ಲದೆ ಅವರು ಭಕ್ತರ ಮೇಲೆ ಪ್ರೀತಿ–ಕರುಣೆಗಳ ಮಳೆಗರೆದದ್ದು, ಮಾಲಿಗಳೂ, ಶುಚಿ ಮಾಡುವ ಆಯಾಗಳೂ, ಸಿಂಗಾಪುರದಲ್ಲಿದ್ದಾಗ ಬಾಲಕರ ವಸತಿಗೃಹದ ಮಕ್ಕಳೂ ಸೇರಿದಂತೆ ಎಲ್ಲರ ಬಗ್ಗೆ ಅವರು ವಹಿಸಿದ್ದ ಕಾಳಜಿ ಎಂದಿಗೂ ಮರೆಯ ಲಾಗದ ಸಂಗತಿ. ಅವರ ದಿವ್ಯಾತ್ಮವು ನನ್ನ ಆಧ್ಯಾತ್ಮಿಕ ಬದುಕಿಗೆ ದಾರಿ ತೋರುವುದೆಂದು ನಾನು ನಂಬಿದ್ದೇನೆ ಮತ್ತು ಪ್ರಾರ್ಥಿಸುತ್ತೇನೆ.

* * * *

## ೧೦೦. ತಂದೆಯೂ ನೀನೆ, ತಾಯಿಯೂ ನೀನೆ

–ಗ್ಯಾಬ್ರಿಯೆಲ್ ಅರ್ಪಿತಾ ಸ್ಪೀಯರ್*

ಒಂದು ಕಾಲದಲ್ಲಿ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಎಂಟು ವರ್ಷದ ಹುಡುಗಿಯಿದ್ದಳು. ಅವಳ ಹೆಸರು ಗ್ಯಾಬ್ರಿಯೆಲ್. ಇತರ ಮಕ್ಕಳಂತೆ ಅವಳೂ ಆಟವನ್ನೂ ಮೋಜನ್ನೂ ಇಷ್ಟಪಡುತ್ತಿದ್ದಳು. ಅವಳ ಆಪ್ತ ಗೆಳತಿ ಪ್ರತಿಯೊಬ್ಬರಿಗೂ ವಿಶೇಷ ಹೆಸರಿಟ್ಟು ಕರೆಯುತ್ತಿದ್ದುದು ಅವಳಿಗೆ ಒಳ್ಳೆಯ ತಮಾಷೆ ಎನಿಸಿತ್ತು. ಹಾಗಾಗಿ ಗ್ಯಾಬ್ರಿಯೆಲ್ ತನ್ನನ್ನೇ ಕಾಳಿ ಎಂದು ಹೆಸರಿಸಿಕೊಂಡಳು. ಈ ತಮಾಷೆಯ ಹೆಸರು ಈ ಉಪಗ್ರಹದಲ್ಲಿ ಯಾರಿಗೂ ಗೊತ್ತಿಲ್ಲದ್ದು ಎನ್ನುವುದು ಅವಳ ಭಾವನೆ. ಆದರೂ ಅವಳ ತಾರುಣ್ಯದಲ್ಲಿ ಶ್ರೀ ರಾಮಕೃಷ್ಣ ವಚನವೇದವನ್ನು ಓದುತ್ತಿದ್ದಾಗ ಕಾಳಿ ಎನ್ನುವ ಹೆಸರು ಅತ್ಯಾಶ್ಚರ್ಯದೊಂದಿಗೆ ಎದುರಾಯಿತು. ಅದು ಭಾರತದಲ್ಲಿ ಸುಪರಿಚಿತ ಹೆಸರು. ಆಕೆ ತುಂಬು ಆಸಕ್ತಿಯಿಂದ ಪೌರ್ವಾತ್ಯ ತತ್ತ್ವಜ್ಞಾನ ಮತ್ತು ಧರ್ಮ ಅಂತೆಯೇ ಭಾರತೀಯ ಸಾಧು–ಸಂತರ ಬಗೆಗಿನ ಪುಸ್ತಕಗಳನ್ನು ಓದಿದಾಗ, ಭಾರತವನ್ನು ಸಂದರ್ಶಿಸುವ ಆಸೆ ಕ್ರಮೇಣ ಬಲವಾಗಿ ಬೆಳೆಯುತ್ತ ಹೋಯಿತು. ಇಪ್ಪತ್ತೆರಡನೆಯ ವಯಸ್ಸಿನಿಂದಲೇ ಗ್ಯಾಬ್ರಿಯೆಲ್ ಹಠಯೋಗದ ತರಗತಿಗಳಿಗೆ ಹೋಗುತ್ತಿದ್ದಳು. ಆಗಲೇ ಮೊದಲ ಬಾರಿಗೆ ಆಕೆ ಶ್ರೀ ರಾಮಕೃಷ್ಣ, ಪವಿತ್ರ ಮಾತೆ ಶ್ರೀ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಹೆಸರುಗಳನ್ನು ಕೇಳಿ ತಿಳಿದಳು. ೧೯೫೫ರಲ್ಲಿ ಆಕೆ ದಕ್ಷಿಣ ಅಮೆರಿಕೆಯಲ್ಲಿ ಉದ್ಯೋಗವೊಂದನ್ನು ಒಪ್ಪಿಕೊಂಡಳು. ಆಗ ಆಕೆಯ ಯೋಗಶಿಕ್ಷಕರನ್ನು ಅಲ್ಲಿಯ ಯೋಗ ಶಾಲೆಯ ವಿಳಾಸವನ್ನು ಕೊಡುವಂತೆ ಕೇಳಿಕೊಂಡಳು. ನ್ಯೂಯಾರ್ಕ್‌ನ ವೇದಾಂತ ಕೇಂದ್ರದ ಆಗಿನ ಅಧ್ಯಕ್ಷರಾಗಿದ್ದ ಸ್ವಾಮಿ ನಿಖಿಲಾನಂದರ ವಿಳಾಸವನ್ನು ಕೊಡುವ ಬದಲು ಅವರನ್ನೇ ಸಂಪರ್ಕಿಸಿದರು. ಅವರು ದಕ್ಷಿಣ ಕ್ಯಾಲಿಫೋರ್ನಿಯಾದ ವೇದಾಂತ ಕೇಂದ್ರದ ಹಾಗೂ ಸಾಂತಾ ಬಾರ್ಬರಾದ ಶ್ರೀ ಶಾರದಾ ಮಠಗಳ ವಿಳಾಸವನ್ನು ಕಳಿಸಿಕೊಟ್ಟರು. ಈ ಸ್ಥಳಗಳನ್ನು ಆಕೆ ೧೯೫೭ರಲ್ಲಿ ಸಂದರ್ಶಿಸಿದಳು. ೧೯೫೯ರ ಆಸುಪಾಸು ಭಾರತ, ನೇಪಾಳ, ಶ್ರೀಲಂಕಾ ದೇಶಗಳಿಗೆ ಮಾಡಿದ ಬಿರುಗಾಳಿ ಪ್ರವಾಸದ ನಡುವೆ ಆಕೆ ಮೊದಲ ಬಾರಿಗೆ ಬೇಲೂರು ಮಠ ಮತ್ತು ದಕ್ಷಿಣೇಶ್ವರಗಳನ್ನು ಒಬ್ಬಂಟಿಯಾಗೇ ಸಂದರ್ಶಿಸಿದ್ದಳು.

ಮುಂದೆ ೧೯೬೧ರಲ್ಲಿ ಗ್ಯಾಬ್ರಿಯೆಲ್‌ಗೆ ಕ್ರಿಸ್ತಾಳ ಭೇಟಿಯಾಯಿತು. ಈ ಜರ್ಮನ್ ತರುಣಿ ಎರಡು ವರ್ಷಗಳ ಕಾಲ ಮದ್ರಾಸ್‌ನ ರಾಮಕೃಷ್ಣ ಮಿಷನ್‌ನ ದತ್ತಿ ಆಸ್ಪತ್ರೆಯಲ್ಲೂ, ತರುವಾಯ ತಾತ್ಕಾಲಿಕವಾಗಿ ಸ್ವಿಟ್ಜರ್ಲ್ಯಾಂಡ್‌ನ ಜ್ಯೂರಿಚ್‌ನ ಆಸ್ಪತ್ರೆಯಲ್ಲೂ ದಾದಿಯಾಗಿ ಕೆಲಸ ಮಾಡಿದ್ದಳು. ಗ್ಯಾಬ್ರಿಯೆಲ್ ಆಧ್ಯಾತ್ಮಿಕ ಭಾರತದ ಬಗ್ಗೆ ಮತ್ತಷ್ಟು ತಿಳಿಯಲು ತುಂಬ ಕಾತರಳಾದ್ದರಿಂದ, ಆಕೆ ಮತ್ತೆ ಭಾರತಕ್ಕೆ ಭೇಟಿಯಿತ್ತ ಪಕ್ಷದಲ್ಲಿ ಅನುಕೂಲವಾಗಲೆಂದು ಕ್ರಿಸ್ತಾ ಆಕೆಗೆ ಕೆಲವು ಭಾರತೀಯರ ವಿಳಾಸಗಳನ್ನು ಒದಗಿಸಿದಳು. ಅದರಲ್ಲಿ ಸ್ವಾಮಿ ರಂಗನಾಥಾನಂದರದೂ ಸೇರಿತ್ತು. ಕೆಲವು ವಾರಗಳ ಬಳಿಕ ಅವಕಾಶ ಒದಗಿಬಂದಾಗ ಗ್ಯಾಬ್ರಿಯೆಲ್ ಅವರಿಗೆ ಪತ್ರ ಬರೆದಳು. ಈ ಮಧ್ಯೆ ಆಕೆ ಇಜಿಪ್ಟ್‌ಗೆ ಮತ್ತು ಕೈರೋದಿಂದ ದಿಲ್ಲಿಗೆ ವಿಮಾನದಲ್ಲಿ ಸ್ಥಾನ ಕಾಯ್ದಿರಿಸಿದ್ದಳು. ಹೊರಡುವ ದಿನ ಬಂದೇಬಿಟ್ಟಿತು; ಆದರೆ, ಸ್ವಾಮಿಯವರಿಂದ ಉತ್ತರ ಬರಲಿಲ್ಲ. ವಿಮಾನನಿಲ್ದಾಣ ತಲುಪುವುದಕ್ಕಾಗಿ ರೈಲು ಹತ್ತುವುದಕ್ಕೆ ಒಂದೇ ನಿಮಿಷ ಮುಂಚೆ ರೈಲುನಿಲ್ದಾಣಕ್ಕೆ ಮಾಲಿ ಓಡುತ್ತ ಬಂದನು. ಅವನ ಕೈಯಲ್ಲಿ

---

* ಸ್ವಿಟ್ಜರ್ಲ್ಯಾಂಡ್‌ನ ಇಂಟರ್‌ಲೇಕನ್‌ನ ಭಕ್ತೆ.

ವಿಮಾನದಂಚೆಯ ಪತ್ರ ಇತ್ತು. ವಿಳಾಸ ಗ್ಯಾಬ್ರಿಯಲ್‌ದಾಗಿತ್ತು. ಆ ಪತ್ರ ಯಾರದು? ಮತ್ತ್ಯಾರದೂ ಅಲ್ಲ, ಸ್ವಾಮಿ ರಂಗನಾಥಾನಂದರದು! ಅವರು ಬರೆದಿದ್ದರು– 'ಮಧ್ಯರಾತ್ರಿಯ ಹೊತ್ತಿಗೆ ದಿಲ್ಲಿ ವಿಮಾನ ನಿಲ್ದಾಣಕ್ಕೆ ಶ್ರೀಮತಿ ಕಮಲಾ ಸ್ವಾರ್ಥಿ ಎನ್ನುವ ಭಕ್ತೆಯೊಬ್ಬರು ಬಂದು ಆಕೆಯನ್ನು ಕರೆದೊಯ್ಯುವರು.' ಗ್ಯಾಬ್ರಿಯೆಲ್ ಸಂತಸದಿಂದ ಹೊರಟಳು.

ಮೊದಲ ದಿನವೇ ಗ್ಯಾಬ್ರಿಯೆಲ್‌ಳನ್ನು ಕಮಲಾ, ದಿಲ್ಲಿಯ ರಾಮಕೃಷ್ಣ ಮಿಷನ್‌ಗೆ ಕರೆದೊಯ್ದಳು. ಅಲ್ಲಿ ಸ್ವಾಮಿ ರಂಗನಾಥಾನಂದರು ಆಕೆಯನ್ನು ಪ್ರೀತಿಯಿಂದ ಗೋಪಿ ಎಂದು ಹೆಸರಿಸಿ ಕರೆದು ಸ್ವಾಗತಿಸಿದರು. ವಾಸ್ತವಿಕವಾಗಿ ಆ ಕ್ಷಣದಲ್ಲೇ ಅವರು ಆಕೆಯಲ್ಲಿ ಭಗವಾನ್ ಕೃಷ್ಣನ ಪ್ರೇಮಿ ಮತ್ತು ಭಕ್ತೆಯನ್ನು ಕಂಡಿದ್ದರು. ಅದು ಅಂದಿಗೂ ಇಂದಿಗೂ ಸರಿಯಾಗೇ ಇದೆ. ಆದರೆ ಮಹಾರಾಜರು ಪ್ರಪ್ರಥಮ ಭೆಟ್ಟಿಯಲ್ಲೇ ಇದೆಲ್ಲವನ್ನು ಅವಳಲ್ಲಿ ಹೇಗೆ ತಾನೇ ಕಂಡುಕೊಂಡರು! ಅವಳ ಕಡುಕಂದು ಬಣ್ಣದ ಕೂದಲನ್ನು ಕಪ್ಪಾಗಿಸಿಕೊಂಡರೆ ಅವಳನ್ನು ಭಾರತೀಯ ಮಹಿಳೆ ಎಂದೇ ಪರಿಗಣಿಸುವಹಾಗಿದೆ ಎಂದೂ ಹೇಳಿದರು. ಗ್ಯಾಬ್ರಿಯೆಲ್ ಮತ್ತೆ ಸ್ವಾಮಿ ರಂಗನಾಥಾನಂದರನ್ನು ಭೆಟ್ಟಿಯಾದದ್ದು ಮುಂದಿನ ಭಾನುವಾರವೇ. ಅಂದು ಅವರು ಊಹಿಸಲೂ ಆಗದ ರೀತಿಯಲ್ಲಿ ಉಪನ್ಯಾಸ ನೀಡಿದರು. ಆಕೆ ಮಂತ್ರಮುಗ್ಧಳಾದಳು. ಬಲಿಷ್ಠ, ತೇಜಸ್ವಿ, ವಾಕ್ಚತುರ ಮತ್ತು ಊರ್ಜಸ್ವಿಯಾದ ಚೈತನ್ಯ ಹಾಗೂ ಉದಾತ್ತ ಆಧ್ಯಾತ್ಮಿಕತೆ ದೈವದತ್ತವಾಗಿ ಒದಗಿಬಂದಿರುವ ಈ ಸನ್ಯಾಸಿ ರಾಮಕೃಷ್ಣ ಮಠ ಮತ್ತು ಧರ್ಮಪ್ರಚಾರಕ ಸಂಸ್ಥೆಯ ದಾರಿದೀಪವಾಗುವರು ಎಂದು ಭಾವಿಸಿದಳು.

ಭಾರತದಲ್ಲಿದ್ದಾಗ ಗ್ಯಾಬ್ರಿಯೆಲ್‌ಗೆ ತನ್ನ ಮನೆಯಲ್ಲೆ ಇದ್ದೇನೆ ಎಂದೆನ್ನಿಸಿತ್ತು. ಅಷ್ಟೇ ಅಲ್ಲ, ಸ್ವಾಮಿ ರಂಗನಾಥಾನಂದರೊಂದಿಗೂ, ಮೊಟ್ಟ ಮೊದಲಿಗೆ ಅವರನ್ನು ಭೆಟ್ಟಿಯಾದಾಗಿನಿಂದಲೂ, ತನ್ನ ಮನೆಯಲ್ಲೇ ಇದ್ದೇನೆ ಎಂದೇ ಅನ್ನಿಸಿತ್ತು. ಆಕೆ ಮುಂದೊಂದು ದಿನ ಹೈದರಾಬಾದ್ ಮಠದಲ್ಲಿ ಇದೇ ಸನ್ಯಾಸಿಯಿಂದ ಔಪಚಾರಿಕ ದೀಕ್ಷೆ ಪಡೆಯುವಳೆಂದು ಪೂರ್ವನಿರ್ಧಾರಿತವಾದುದನ್ನು ಆ ಹೊತ್ತಿಗೆ ಯಾರು ತಾನೆ ಬಲ್ಲರು! ನಿಜವೇ, ಅದು ಸಂಭವಿಸುವುದಕ್ಕೂ ಮುಂಚೆ ಶ್ರೀಮತ್ ಸ್ವಾಮಿ ವೀರೇಶ್ವರಾನಂದ ಮತ್ತು ಸ್ವಾಮಿ ಭೂತೇಶಾನಂದ ಈ ಇಬ್ಬರು ಪೂಜ್ಯರಿಂದಲೂ ಆಕೆ ಅಮೂಲ್ಯ ಆಶೀರ್ವಾದಗಳನ್ನು ಪಡೆದಿದ್ದಳು! ನವದೆಹಲಿಯ ಕಮಲಾಳ ಮನೆಯಲ್ಲಿ ಕೆಲವು ದಿನಗಳು ಉಳಿದ ಬಳಿಕ, ಸ್ವಾಮಿ ರಂಗನಾಥಾನಂದರು ಗ್ಯಾಬ್ರಿಯೆಲ್‌ಳನ್ನು ಎರಡು ತಿಂಗಳ ತೀರ್ಥಯಾತ್ರೆಗೆಂದು ಬೃಂದಾವನ, ಹರಿದ್ವಾರ (ಕನಖಲ), ಅಲ್ಮೋರಾ, ವಾರಣಾಸಿ, ಬೇಲೂರು ಮಠ, ಜಯರಾಮಬಾಟಿ, ಕಮಪುಕೂರುಗಳಿಗೆ ಕಳುಹಿಸಿಕೊಟ್ಟರು. ಸ್ವಾಮಿ ರಂಗನಾಥಾನಂದರು ಅತ್ಯುತ್ತಮ ಸಂಘಟಕರು. ಪ್ರತಿಯೊಂದು ಆಶ್ರಮದಲ್ಲೂ ಗ್ಯಾಬ್ರಿಯೆಲ್‌ಳನ್ನು ತುಂಬ ಚೆನ್ನಾಗಿ ನೋಡಿಕೊಳ್ಳಲಾಯಿತು.

೧೯೬೪ರಲ್ಲಿ ಸ್ವಾಮಿ ರಂಗನಾಥಾನಂದರು ಗ್ಯಾಬ್ರಿಯೆಲ್‌ಗೆ ಕಲ್ಕತ್ತೆಯಲ್ಲಿರುವ ರಾಮಕೃಷ್ಣ ಮಿಷನ್ ಸಾಂಸ್ಕೃತಿಕ ಸಂಸ್ಥೆಯನ್ನು ತೋರಿಸಿದರು. ಅಲ್ಲಿಂದ ಮುಂದೆ ಆಕೆ ಭಾರತದ ತುಂಬ ಚೆದುರಿದ್ದ ಅನೇಕ ಧರ್ಮಪ್ರಚಾರಕ ಸಂಸ್ಥೆಗಳನ್ನೂ ಶಾರದಾ ಮಠ ಕೇಂದ್ರಗಳನ್ನೂ ಸಂದರ್ಶಿಸಿದಳು. ೧೯೫೪ರಿಂದ ೨೦೦೪ರವರೆಗೆ ೨೮ ಬಾರಿ ಭಾರತಕ್ಕೆ ಬಂದಿದ್ದಳು. ಹರಿದ್ವಾರ, ಅಲಹಾಬಾದ್, ನಾಸಿಕ್, ಉಜ್ಜಯಿನಿಗಳ ನಾಲ್ಕೂ ಕುಂಭಮೇಳಗಳಿಗೂ ಹೋಗಿದ್ದಳು. ಎಲ್ಲ ಕಡೆಯೂ ಸ್ವಾಮಿಗಳೂ, ಭಕ್ತರೂ ಆಕೆಯನ್ನು ತುಂಬ ಲಕ್ಷ್ಯವಹಿಸಿ ಪ್ರೀತಿಯಿಂದ ನೋಡಿಕೊಂಡರು. ಸ್ವಾಮಿ ರಂಗನಾಥಾನಂದರ ಚಾಚಿದ ತೋಳುಗಳು ಆಕೆಯನ್ನು ಎಲ್ಲ ಕಡೆಯಲ್ಲೂ ರಕ್ಷಿಸಿ ದಾರಿತೋರಿದವೋ ಎಂಬಂತಿತ್ತು.

೧೯೬೧ರಲ್ಲಿ ಬೃಂದಾವನದಲ್ಲಿ ಶ್ರೀ ಶ್ರೀ ಠಾಕೂರರ ಕೆಲವು ಭಕ್ತೆಯರೊಂದಿಗೆ ಗ್ಯಾಬ್ರಿಯೆಲ್‌ಗೆ ಶ್ರೀ ಆನಂದಮಯೀ ಮಾ ಅವರನ್ನು ಭೆಟ್ಟಿಯಾಗುವ ಅವಕಾಶ ಲಭಿಸಿತು. ಅವರೇ ಮುಂದೆ ಆಕೆಗೆ 'ಅರ್ಪಿತಾ' ಎನ್ನುವ ಹೆಸರಿಟ್ಟರು. ಇದು ಸಂಸ್ಕೃತದ ಹೆಸರು. ನಿವೇದಿಸಲಾದ, ಒಪ್ಪಿಸಲಾದ, ಪವಿತ್ರಿತವಾದ, ದತ್ತವಾದ,

ತ್ಯಾಗಮಾಡಲಾದ ವ್ಯಕ್ತಿ ಎಂದು ಇದರರ್ಥ. ಸ್ವಾಮಿ ರಂಗನಾಥಾನಂದರು ಆನಂದಮಯೀ ಮಾ ಅವರನ್ನು ಗೌರವಿಸಿದರು; ಮೆಚ್ಚಿದರು. ಆದರೂ ಅವರು ಗ್ಯಾಬ್ರಿಯೆಲ್‌ಳನ್ನು ಯಾವಾಗಲೂ ಅವಳ ಕ್ರಿಶ್ಚಿಯನ್ ಹೆಸರಿನಿಂದಲೇ ಕರೆಯುತ್ತಿದ್ದರು. ಉಚ್ಚರಿಸುತ್ತಿದ್ದುದು ಮಾತ್ರ 'ಗಾಬ್ರಿಎಲ್ಲಾ' (ಈ ಲೇಖನದ ಇನ್ನುಳಿದ ಭಾಗದಲ್ಲಿ ಇದೇ ರೀತಿ ಕಾಗುಣಿತ ಬಳಸಲಾಗುವುದು.) ದೀಕ್ಷೆಯ ಕಾಲಕ್ಕೆ ತನಗೆ ಯಾವ ಆಧ್ಯಾತ್ಮಿಕ ನಾಮಧೇಯವನ್ನು ನೀಡುವಿರೆಂದು ಗಾಬ್ರಿಎಲ್ಲಾ ಗುರುದೇವ ಮಹಾ ರಾಜರನ್ನು ಕೇಳಿದಳು. ಆಗಲೇ ಅರ್ಪಿತಾ ಎನ್ನುವ ಒಳ್ಳೆಯ ಹೆಸರಿರುವುದರಿಂದ ಇನ್ನೇನೂ ಅಗತ್ಯವಲ್ಲವೆಂದು ಅವರು ಉತ್ತರವಿತ್ತರು. ಅವಳು ಕೇಳಿದ್ದರಿಂದಾಗಿ ಮಾತ್ರ ಆಕೆಗೆ ದೀಕ್ಷೆ ಕೊಡಲಾಗುತ್ತಿದೆ ಎಂದೂ ರಂಗನಾಥಾನಂದಜಿ ಹೇಳಿದರು.

೧೯೮೪ರಲ್ಲಿ ಭಾರತೀಯ ಕೇಂದ್ರಗಳಲ್ಲಿ ಆಕೆ ಮೂರು ವಾರಗಳ ಕಾಲ ನೆಲಸಿದ್ದಾಗ, ಬೇಲೂರು ಮಠದಲ್ಲಿ ಗಾಬ್ರಿಎಲ್ಲಾ ಅಲ್ಪಾವಧಿಯ, ಆದರೆ ಅತ್ಯಂತ ಸುಂದರವಾದ ಧನ್ಯತೆಯ ಕಾಲವನ್ನು ಅನುಭವಿಸಿದಳು. ಅಧ್ಯಕ್ಷರಾದ ಸ್ವಾಮಿ ವೀರೇಶ್ವರಾನಂದರು ಒಂದೂವರೆ ದಿನಗಳಲ್ಲಿ ಆಕೆಗೆ ಮೂರು ಬಾರಿ ಭೆಟ್ಟಿಕೊಟ್ಟರು. ಅವರ ಶರೀರವು ಆಗ ದುರ್ಬಲವಾಗಿದ್ದರೂ ಚೈತನ್ಯ ಮಾತ್ರ ನವೀನವೂ ವಿಸ್ತೃತ ಜಾಗ್ರತಿಯುಳ್ಳದ್ದೂ ಆಗಿತ್ತು. ಈ ಹೊತ್ತಿಗೆ, ಒಂದು ದಿನ ಮಾಯಾವತಿಗೆ ಹೋಗಬೇಕೆನ್ನುವ ತನ್ನಿಚ್ಛೆಯನ್ನು ಗಾಬ್ರಿಎಲ್ಲಾ ಸ್ವಾಮಿ ರಂಗನಾಥಾನಂದರಲ್ಲಿ ಹೇಳಿಕೊಂಡಳು. ಮಾಯಾವತಿಯ ಆಶ್ರಮದ ಸ್ವಾಮಿಯವರು ಆಕೆಗೆ ಆಗಲೇ ಪತ್ರ ಬರೆದು ಜೊತೆಗಾರನೊಂದಿಗೇ ಬರಬೇಕೆಂದು ಒತ್ತಿಹೇಳಿದ್ದರು. ಇದನ್ನು ತಿಳಿದು ಸ್ವಾಮಿ ರಂಗನಾಥಾನಂದರು ಒಂದು ದಿನ ತಾವೇ ಆಕೆಯನ್ನು ಮಾಯಾವತಿಗೆ ಕರೆದೊಯ್ಯುವುದಾಗಿ ಆ ಕ್ಷಣದಲ್ಲೇ ಗಾಬ್ರಿಎಲ್ಲಾಗೆ ಹೇಳಿದರು. ದೌರ್ಭಾಗ್ಯದಿಂದ ಆ ಪ್ರವಾಸ ಎಂದೂ ಜರುಗಲೇ ಇಲ್ಲ. ಏಕೆಂದರೆ ಅವರು ರಾಮಕೃಷ್ಣ ಪಂಥದ ಉಪಾಧ್ಯಕ್ಷರಾಗಿ ಚುನಾಯಿತರಾದರು; ಅವರ ಹೊಣೆ ತುಂಬ ಭಾರವಾಗಿಬಿಟ್ಟಿತು. ಇನ್ನು ಮುಂದೆ ಯಾವುದೇ ಹಿಮಾಲಯ ಪ್ರವಾಸ ಕೈಗೊಳ್ಳಲು ತಮ್ಮ ಆರೋಗ್ಯ ಅನುವುಮಾಡುವುದಿಲ್ಲ ಎಂದು ಮುಂದೊಂದು ದಿನ ಅವರು ಆಕೆಗೆ ಹೇಳಿದರು. ಬೆಳಗಿನ ಉಪಾಹಾರ ಕಾಲದ ಸಂಭಾಷಣೆಯಲ್ಲಿ ಸ್ವಾಮಿಯವರು ತಮ್ಮ ಹಿಂದಿನ ಯೂರೋಪ್ ಮತ್ತು ಅಮೆರಿಕಾ ಪ್ರವಾಸಗಳ ಬಗ್ಗೆ ಹೇಳಿದರು. ಶೀಘ್ರವೇ ಮತ್ತೊಮ್ಮೆ ಜಾಗತಿಕ ಪ್ರವಾಸ ಕೈಗೊಳ್ಳುವುದಾಗಿಯೂ ಪ್ರಸ್ತಾಪಿಸಿದರು. ಆಗ ಸ್ವಿಟ್ಜರ್ಲ್ಯಾಂಡ್‌ಗೂ ಬರುವುದು ಸಾಧ್ಯವೇ ಎಂದು ಗಾಬ್ರಿಎಲ್ಲಾ ಕೇಳಿದಳು. ಅವರು ನೇರವಾಗಿ ಮಾರ್ನುಡಿದರು: "ಹೌದು, ಅಲ್ಲದೆ ನಿನ್ನ ಮನೆಗೂ ಭೆಟ್ಟಿ ಕೊಡುವೆನು." ಏನಾಶ್ಚರ್ಯ! ಎಂಥ ಸೌಭಾಗ್ಯ ಸಂಗತಿಯ ನಿರೀಕ್ಷೆ!

೧೯೮೫ರಲ್ಲಿ ಸ್ವಾಮಿ ರಂಗನಾಥಾನಂದರು ಅಚ್ಚುಕಟ್ಟಾಗಿ ಯೋಜಿಸಿದ ವಿಸ್ತೃತ ವಿದೇಶ ಪ್ರವಾಸವನ್ನು ಕೈಗೊಂಡರು. ಅದು ಸ್ವಿಟ್ಜರ್ಲ್ಯಾಂಡ್ ಸೇರಿದಂತೆ ಯೂರೋಪ್‌ನ ಹಲವು ದೇಶಗಳನ್ನು ಒಳಗೊಂಡಿದ್ದಾಗಿತ್ತು. ಗಾಬ್ರಿಎಲ್ಲಾಳ ಆನಂದಕ್ಕೆ ಪಾರವೇ ಇರಲಿಲ್ಲ ಎಂದು ಬೇರೆ ಹೇಳಬೇಕಿಲ್ಲವಲ್ಲ. ಸ್ವಾಮಿಗಳ ಹಾಗೂ ಅತಿಥಿಗಳ ಊಟೋಪಚಾರವನ್ನು ಆಕೆ ವಹಿಸಿಕೊಂಡಳು. ಆಕೆ ಸಭೆಗಳನ್ನು ಆಯೋಜಿಸಿದಳು. "ಶ್ರೀ ರಾಮಕೃಷ್ಣ ಪರಮಹಂಸ" ಕುರಿತ ಸ್ವಾಮಿಗಳ ಉಪನ್ಯಾಸಕ್ಕೆ ಆಗಮಿಸುವಂತೆ ಹತ್ತಿರದ, ದೂರದ ಸ್ನೇಹಿತರನ್ನೆಲ್ಲ ಆಹ್ವಾನಿಸಿದಳು. ಅಲ್ಪಾವಧಿಯ ಸಂದರ್ಶನಗಳಿಗೂ ಅಲ್ಲಿ ಸಮಯ ಲಭಿಸಿತ್ತು. ಗಾಬ್ರಿಎಲ್ಲಾ ಮತ್ತು ಅವಳ ಗೆಳತಿ ಸಂಜಾ ಸ್ವಾಮಿಗಳ ಜೊತೆ ಮಾತನಾಡಿದ್ದು ಸಹಜವೇ. ಎಲ್ಲ ಒಟ್ಟಿಗೆ ಕಲೆತು ಒಂದು ಕುಟುಂಬ ಎಂಬ ಭಾವನೆ, ಎಷ್ಟೆಂದರೆ ಗಾಬ್ರಿಎಲ್ಲಾ ಅವರಿಗೆ ಹೇಳಿದಳು, "ಸ್ವಾಮೀಜಿ, ನಿಮಗೆ ಸದಾ ನನ್ನಲ್ಲಿ ಕರುಣೆ ಮತ್ತು ಪ್ರೀತಿ, ತಂದೆಯಂತೆ." ಆಗ ಸ್ವಾಮೀಜಿ ಮಾತು ಜೋಡಿಸಿದರು: "ನಾನು ನಿನಗೆ ತಂದೆ ಅಷ್ಟೇ ಅಲ್ಲ; ತಾಯಿ ಕೂಡ." ಅದೆಂಥ ಅನುಗ್ರಹ! ಗಾಬ್ರಿಎಲ್ಲಾಗೆ ಒಂದು ವರ್ಷ ಮೂರು ತಿಂಗಳಾದಾಗಲೇ ತಾಯಿಯೂ ಬಾಲ್ಯದಲ್ಲೇ ತಂದೆಯೂ ತೀರಿಕೊಂಡಿದ್ದರು ಎನ್ನುವುದನ್ನು ಇಲ್ಲಿ ಉಲ್ಲೇಖಿಸುವುದು ಅರ್ಥಪೂರ್ಣ. ಆ ಬಳಿಕ ಮುಂದಿನ

ವರ್ಷಗಳಲ್ಲಿ ಗಾಬ್ರಿಎಲ್ಲಾ ಹೈದರಾಬಾದ್‌ನ ರಾಮಕೃಷ್ಣ ಮಠದಲ್ಲಿ ಸ್ವಾಮಿಗಳನ್ನು ಭೇಟಿಯಾದಳು. ಅಲ್ಲೇ ಆಕೆಗೆ ದೀಕ್ಷೆಯೂ ದೊರೆಯಿತು.

ಒಂದು ಸಂದರ್ಭದಲ್ಲಿ ಗಾಬ್ರಿಎಲ್ಲಾ ಸ್ವಿಟ್ಜರ್ಲ್ಯಾಂಡ್‌ನಿಂದ ಸ್ವಾಮಿಗಳಿಗೆ ಬಂಗಾರದ ಟಾರ್ಚ್ ತಂದುಕೊಟ್ಟಳು. ಸ್ವಾಮೀಜಿಯಾದರೋ ಯಾವ ಅಳುಕೂ ಇಲ್ಲದೆ ಅದನ್ನು ಅವಳ ಕೈಗೇ ಮರಳಿಕೊಟ್ಟರು. ಇದು ಸಾಕಲ್ಲವೇ ಎನ್ನುತ್ತ ಎಲ್ಲಿಂದಲೋ ತಮ್ಮ ಹಳೆಯ ಟಾರ್ಚ್ ತೆಗೆದು ಕೈಗೆತ್ತಿಕೊಂಡರು. ಅವರ ಸಂಕೋಚ ಮತ್ತು ಮಿತವ್ಯಯ ಪ್ರಜ್ಞೆ ಗಮನಾರ್ಹವಾದುದು. ಒಮ್ಮೆ ಅವರು ಗಾಬ್ರಿಎಲ್ಲಾಳನ್ನು ಲಘುವಾಗಿ ಆಕ್ಷೇಪಿಸಿದರು. ಏಕೆಂದರೆ ಆಕೆ ತಿಳಿನೀಲಿ ಬಣ್ಣದ, ಹಣ ಸಂದಾಯವಾದ ವಿಮಾನದಂಚೆಯ ಪತ್ರದಲ್ಲಿ ಅವರಿಗೆ ಸಂದೇಶವನ್ನು ಬರೆದಿದ್ದಳು. ಅವಳ ಬಳಿ ಆ ಹೊತ್ತಿಗೆ ಖಾಲಿ ಕಾಗದ ಇರಲಿಲ್ಲ. ಮುಂದೊಂದು ದಿನ ತಕ್ಕ ಗಾಂಭೀರ್ಯದಿಂದಲೇ ಹೇಳಿದರು: "ಅಂದರೆ, ನೀನು ತುಂಬ ಸಿರಿವಂತೆ, ಸಾಧಾರಣ ಹಾಳೆಯ ಬದಲು ತುಂಬ ದುಬಾರಿ ಕಾಗದ ಬಳಸಬಹುದು!" ಇದು ಕೇವಲ ತಮಾಷೆಯೂ ಆಗಿರಬಹುದು. ಅವರಿಗೆ ಉತ್ತಮ ಹಾಸ್ಯಪ್ರಜ್ಞೆ ಇತ್ತು. ಹಲವು ವರ್ಷಗಳ ಬಳಿಕ ಗಾಬ್ರಿಎಲ್ಲಾ ಸ್ವಿಟ್ಜರ್ಲ್ಯಾಂಡ್‌ನಿಂದ ದೂರ ಆಗಸಪಯಣ ಮಾಡಿ ದರ್ಶನಕ್ಕೆಂದು ಬಂದಾಗ ಸ್ವಾಮಿಗಳು ತುಟಿಬಿಚ್ಚಿ ಮಾತನಾಡದೆ ತೋಳುಗಳನ್ನು ಮುಂದಕ್ಕೆ ಚಾಚಿ ಬಳಸಿಕೊಂಡರು. ಕಳೆದ ಬಾರಿ ಬಂದು ಹೋದ ನಂತರ ಅವಳು ತುಂಬ ದಪ್ಪ ಆಗಿದ್ದಾಳೆ ಎನ್ನುವುದನ್ನು ಸೂಚಿಸುವ ಅರ್ಥಪೂರ್ಣ ಆಂಗಿಕ ಸೂಚನೆ ಅದಾಗಿತ್ತು.

ಸಂದರ್ಶನದ ಹೊತ್ತಿಗೆ ಸ್ವಾಮಿಯವರೊಂದಿಗೆ ಸರ್ವಸಾಮಾನ್ಯ ಹಾಗೂ ಆಧ್ಯಾತ್ಮಿಕ ವಿಷಯ ಈ ಎರಡನ್ನೂ ಚರ್ಚಿಸಲಾಯಿತು. ಆದರೆ ಇವೆಲ್ಲ ತುಂಬ ಉನ್ನತ ಹಾಗೂ ಸತ್ಯಶೋಧಕ ಸ್ವಭಾವದವರಿಗಷ್ಟೆ ಎನ್ನುವುದು ಗಾಬ್ರಿಎಲ್ಲಾಳ ಭಾವನೆ. ಪ್ರತಿಯೊಬ್ಬರೂ ಅವರೊಂದಿಗೆ ಸಲುಗೆಯಿಂದಿರುತ್ತಿದ್ದರು. ಅವರು ಯಾರೊಂದಿಗೆ ಮಾತನಾಡುವರೋ ಅವರ ಪೂರ್ವಾಪರಗಳನ್ನೆಲ್ಲ ತಿಳಿದಿರುವರೋ ಎಂದೇ ಅನಿಸುತ್ತಿತ್ತು. ಪ್ರಶ್ನೆಗಳಿಗೆ ಅವರು ಸ್ಪಷ್ಟವಾಗಿ, ನೇರವಾಗಿ, ಚುಟುಕಾಗಿ ಉತ್ತರಿಸುತ್ತಿದ್ದರು. ಸ್ವಾಮಿಯವರು ಗಾಬ್ರಿಎಲ್ಲಾಗೆ ತನಗೆ ಸಂಬಂಧಿಸಿದ ನಿರ್ಧಾರಗಳನ್ನು ತಾನೇ ಮಾಡಲು ಬಿಡುತ್ತಿದ್ದರು. ಅದಕ್ಕೆ ಅಪವಾದವಾದ ಒಂದೇ ಒಂದು ಸಂಗತಿಯನ್ನು ಮುಂದೆ ಪ್ರಸ್ತಾಪಿಸಲಾಗುವುದು. ಸ್ವಾಮಿಯವರು ಗಾಬ್ರಿಎಲ್ಲಾಳ ಜೊತೆ ಯಾವಾಗಲೂ ಕರುಣಾಪೂರ್ಣವಾಗಿ ಗೆಳೆತನದ ಭಾವದಲ್ಲಿ ಮಾತನಾಡುತ್ತಿದ್ದರು. ಎರಡು ಸಂದರ್ಭಗಳಲ್ಲಿ ಮಾತ್ರ ಆಕೆ ಅವರ ನಡವಳಿಕೆಯನ್ನು ಅಲ್ಲೇ ಆ ಕ್ಷಣದಲ್ಲೇ ಅರಿತುಕೊಳ್ಳದಾದಳು. ಅವಳಿಗೆ ದೀಕ್ಷೆ ಕೊಡುವವರೆಗೆ, ಅವರೊಂದಿಗೆ ಸಂಭಾಷಿಸಲು ವಿಪುಲ ಸಮಯವನ್ನು ಕೊಡಲಾಗುತ್ತಿತ್ತು. ಹೀಗಿದ್ದೂ, ದೀಕ್ಷೆಯ ಮುಂಚಿನ ದಿನ ಸ್ವಾಮಿಯವರು ಜಗುಲಿಯಲ್ಲಿ ಎದುರುಬಂದಾಗ ಪ್ರಶ್ನೆಯೊಂದನ್ನು ಆಕೆ ಕೇಳಿದೊಡನೆ ಆತುರವಾಗಿ ಹೇಳಿದರು: "ಈಗಲ್ಲ, ದೀಕ್ಷೆಯ ಬಳಿಕ ಒಟ್ಟಿಗೆ ಕುಳಿತು ಮಾತನಾಡಲು ಬಹಳಷ್ಟು ಸಮಯವಿರುತ್ತದೆ." ದೀಕ್ಷೆಯಾದ ಬಳಿಕ, ಮಾರನೆಯ ದಿನ ಸ್ವಾಮಿಯವರು ಗಾಬ್ರಿಎಲ್ಲಾಳನ್ನು ನೋಡಿ ಏನೋ ಒಂದು ಬಗೆಯ ತೀವ್ರ ದನಿಯಲ್ಲಿ ಹೇಳಿದರು, "ಇಂದಿನಿಂದ ಮುಂದೆ ಮತ್ತಷ್ಟು ಮಾತು ಇಲ್ಲ, ಇನ್ನಷ್ಟು ಪತ್ರಗಳಿಲ್ಲ, ವರ್ಷಕ್ಕೊಮ್ಮೆ ಒಂದೇ ಒಂದು ಚಿಕ್ಕ ಅಂಚೆಕಾಗದ!" ಅಯ್ಯೋ ಇಲ್ಲ, ಇದು ಸಾಧ್ಯ ಇಲ್ಲ ಎಂದು ಗಾಬ್ರಿಎಲ್ಲಾ ಯೋಚಿಸಿದಳು. ಆದರೆ ಆಕೆಗೆ ತಕ್ಷಣ ಅರಿವಾದದ್ದೇನೆಂದರೆ, ಗುರು–ಶಿಷ್ಯ ಸಂಬಂಧದಲ್ಲಿ ಪ್ರಾಯೇಣ ಪರಸ್ಪರ ಹೆಚ್ಚು ಮಾತಿನ ಅಗತ್ಯ ಇರಲಾರದು. ಏಕೆಂದರೆ ಗುರುವಿಗೆ ಶಿಷ್ಯನ ಜೀವನದ ಬಗ್ಗೆ ಎಚ್ಚರವಿರುತ್ತದೆ. ಅಲ್ಲದೆ ಗುರುವು ಪ್ರತಿದಿನ ಅನೇಕ ಭಕ್ತರ ಬಗ್ಗೆ ಕಾಳಜಿ ವಹಿಸಬೇಕಾಗುತ್ತದೆ ಎನ್ನುವ ಸಂಗತಿಯನ್ನೂ ಪರಿಗಣಿಸಬೇಕಾಗುವುದು. ಹೀಗೆ ಕಾರಣಗಳನ್ನು ಕಂಡುಕೊಂಡಾಗ ಗಾಬ್ರಿಎಲ್ಲಾಳ ಮನಸ್ಸು ತಿಳಿಯಾಯಿತು.

ಫ್ರಾನ್ಸ್‌ನ ಶ್ರೀ ರಾಮಕೃಷ್ಣ ವೇದಾಂತ ಕೇಂದ್ರವನ್ನು ಗಾಬ್ರಿಎಲ್ಲಾ ಇಷ್ಟಪಟ್ಟಳು. ಹಾಗಾಗಿ ತುಂಬ ಉತ್ಸಾಹದಿಂದ, ಶಾಲಾಶಿಕ್ಷಕಿಯಾಗಿ ಆಕೆ ಕೂಡಿಟ್ಟು ಹಣ ಕೊಟ್ಟು ಕೇಂದ್ರದ ಹತ್ತಿರವಿದ್ದ ಸಣ್ಣ ಗೃಹಸಮುಚ್ಚಯದ ಮನೆಯೊಂದನ್ನು ಕೊಂಡುಕೊಂಡಳು. ಅಲ್ಲಿ ನೆಲಸಿ ಕೆಲವೇ ವಾರಗಳು ಕಳೆದ ಬಳಿಕ, ಗಾಬ್ರಿಎಲ್ಲಾಳನ್ನು ಮತ್ತೆ ಭಾರತ ಸೆಳೆಯಿತು; ಮತ್ತೆ ಸ್ವಾಮಿ ರಂಗನಾಥಾನಂದರನ್ನು ಭೇಟಿಯಾದಳು. ಆ ಸಮಯಕ್ಕೆ ಗಾಬ್ರಿಎಲ್ಲಾಗೆ ಅವರು ಇನ್ನೂ ದೀಕ್ಷೆ ಕೊಟ್ಟಿರಲಿಲ್ಲ. ಫ್ರಾನ್ಸ್‌ನಲ್ಲಿ ಆಸ್ತಿ ಗಳಿಸಿದ್ದನ್ನು ಆಕೆ ತುಂಬು ಸಂತಸದಿಂದ ಅವರಿಗೆ ತಿಳಿಸಿದಳು. ತನ್ನ ಮಗಳ ಒಳಿತನ್ನು ಮಾತ್ರ ಬಯಸುವ ತಂದೆಯಂತೆ ಗಾಬ್ರಿಎಲ್ಲಾಳನ್ನು ನೋಡುತ್ತ, ಭಾರವಾದ ಆದರೆ, ಅನುಕಂಪದ ದನಿಯಲ್ಲಿ, ಅತ್ಯಾಶ್ಚರ್ಯಕರವಾದ ಹಾಗೂ ಗಾಬರಿಗೊಳಿಸುವಂಥ ಮಾತನ್ನು ಹೇಳಿದರು: “ಮರಳಿ ಹೋಗಿ ಹೊಸ ಮನೆಯನ್ನು ಮಾರಿಬಿಡು.” ಎಂಥ ಆಘಾತ! ಅವಳ ಪ್ರತಿಕ್ರಿಯೆಯನ್ನು ಕಂಡು ಸ್ವಾಮಿಯವರು ತಣ್ಣಗೆ ಮುಂದುವರಿಸಿದರು. “ಪ್ರತಿಕ್ರಿಯಿಸಲು ನಿನಗೆ ನಾನು ಮೂರು ದಿನಗಳನ್ನು ಕೊಡುವೆನು. ಆಬಳಿಕ ನೀನು ನನಗೆ ನಿನ್ನ ನಿರ್ಧಾರವನ್ನು ತಿಳಿಸು.” ಗಾಬ್ರಿಎಲ್ಲಾಗೆ ಹೇಗನ್ನಿಸಿರಬಹುದೆಂದು ಯಾರಾದರೂ ಚೆನ್ನಾಗಿ ಊಹಿಸಬಹುದಾಗಿದೆ!

ಗಾಬ್ರಿಎಲ್ಲಾಗೆ ನೀಡಿದ ಸಮಯ ಕಳೆಯಿತು. ಭಾರವಾದ ಮನಸ್ಸಿನಿಂದ ಆಕೆ ಸ್ವಾಮಿಯವರ ಬಳಿಗೆ ಬಂದಳು. ಅವರಿಗಾದರೋ ಆಗಲೇ ಆಕೆಯ ಮನಸ್ಸಿನಲ್ಲಿ ಏನಾಗುತ್ತಿದೆ ಎನ್ನುವುದರ ಅರಿವು ಇತ್ತು. ಅವರು ಕೇಳಿದರು: “ಈಗ, ನಿನ್ನ ನಿರ್ಧಾರವೇನು?” ಗಂಟಲು ತುಂಬಿ ಬಂದು ಗಾಬ್ರಿಎಲ್ಲಾ ತಪ್ಪೊಪ್ಪಿಗೆ ಮಾಡಿಕೊಂಡಳು: “ಕ್ಷಮಿಸಿ, ಸ್ವಾಮೀಜಿ. ಈ ಹೊತ್ತಿನಲ್ಲಿ ಮನೆಯನ್ನು ಇಟ್ಟುಕೊಳ್ಳಲೋ ಅಥವಾ ಮಾರಿಬಿಡಲೋ, ನಾನು ಇನ್ನೂ ಯಾವ ತೀರ್ಮಾನಕ್ಕೂ ಬಂದಿಲ್ಲ. ಇದನ್ನು ಕೊಂಡುಕೊಳ್ಳಲು ಎಷ್ಟೊಂದು ಹಣ ವ್ಯಯಮಾಡಿದ್ದೇನೆ. ಅಲ್ಲದೆ, ಪೀಠೋಪಕರಣಗಳನ್ನು ಸಾಗಿಸಲಿಕ್ಕಾಗಿ ಅಷ್ಟೊಂದು ಹಣ ಸಂದಾಯ ಮಾಡಿದ್ದಾಗಿದೆ. ಇನ್ನೂ ಮುಖ್ಯವಾದದ್ದೆಂದರೆ, ಕೇವಲ ಕೆಲವೇ ವಾರಗಳ ಕಾಲ ಅಲ್ಲಿ ವಾಸದ ಸುಖ ಅನುಭವಿಸಿದ್ದೇನೆ.” ಆಗ ಮಹಾರಾಜರು ಆಕೆಯನ್ನು ಸಾಂತ್ವನಗೊಳಿಸಿದರು. “ಒಳ್ಳೆಯದು ಗಾಬ್ರಿಎಲ್ಲಾ, ಏನೂ ಮಾಡಬೇಡ ಅಷ್ಟೆ. ತೇಲಿಬಿಡು. ಹೀಗೆ ತೋಳುಗಳನ್ನು ಚಾಚಿ ಸಾಗರದ ಅಲೆಗಳ ಮೇಲೆ ತೇಲಿದ ಹಾಗೆ ನೀನು ತೇಲಿಬಿಡು (ತೋಳುಗಳನ್ನು ಚಾಚಿ ತೋರಿಸುತ್ತ). ಅಲುಗಾಡಲೂ ಬೇಡ ನೀನು! ನನ್ನ ತೋಳುಗಳನ್ನು ಅಲುಗಾಡಿಸಬೇಡ!”

ಆ ಬಳಿಕ ಸಂತಸ ಮತ್ತು ನಿರ್ಲಿಪ್ತ ರೀತಿಯಲ್ಲಿ ವರ್ಷಗಳೇ ಕಳೆದವು. ಉದ್ದಕ್ಕೂ ಗಾಬ್ರಿಎಲ್ಲಾ ಸ್ವಯಂ ತೇಲಿಬಿಟ್ಟಳು, ಅಷ್ಟೆ. ಆಕೆ ಪುನಃ ಪುನಃ ವೇಗದ ರೈಲು ಏರಿ ಪ್ಯಾರಿಸ್‌ಗೆ ಪಯಣಿಸಿದಳು. ಪ್ರತಿಬಾರಿಯೂ ಗ್ರೆಟ್ಜ್‌ನಲ್ಲಿರುವ ತನ್ನ ಮನೆಯನ್ನು ಮತ್ತಷ್ಟು ಸುಂದರ ಮತ್ತು ಸೌಕರ್ಯಭರಿತವನ್ನಾಗಿಸಿದಳು. ಹೀಗಿದ್ದೂ ದಿನವೂ ತನ್ನ ಆಧ್ಯಾತ್ಮಿಕ ಉದ್ಧಾರಕ್ಕಾಗಿ ವೇದಾಂತ ಕೇಂದ್ರಕ್ಕೆ ಬರುತ್ತಿದ್ದಳು. ಭಾನುವಾರ ಅಲ್ಲಿಯ ಬೇರೆ ಬೇರೆ ಉಪನ್ಯಾಸಗಳಿಗೆ ಹಾಜರಾಗುತ್ತಿದ್ದಳು. ಬದುಕು ಸುಗಮವಾಗಿ ಸಾಗಿತು.

ಆಮೇಲೆ ೧೯೯೮ರಲ್ಲಿ ಗಾಬ್ರಿಎಲ್ಲಾ ಮತ್ತೆ ಭಾರತಕ್ಕೆ ಬಂದಾಗ, ಮುಂಬಯಿಯಲ್ಲಿ ಗಾಬ್ರಿಎಲ್ಲಾಳ ಆತಿಥೇಯರಾದ ಶ್ರೀ ಅರುಣ್ ವಿಮಾನನಿಲ್ದಾಣದಲ್ಲಿ ಆಕೆಯನ್ನು ಬರಮಾಡಿಕೊಂಡರು. ತಕ್ಷಣ ಖಾರ್‌ನಲ್ಲಿರುವ ಶ್ರೀ ರಾಮಕೃಷ್ಣ ಮಿಷನ್‌ಗೆ ಕರೆತಂದರು. ಏಕೆಂದರೆ ಅಲ್ಲಿ ಸ್ವಾಮಿ ರಂಗನಾಥಾನಂದರು ಆಕೆಯ ನಿರೀಕ್ಷೆಯಲ್ಲಿದ್ದರು. ಅಲ್ಲದೆ, ಶ್ರೀ ಗುರುದೇವರು ಬೇರೆ ಸ್ಥಳಕ್ಕೆ ಹೊರಡುವುದಕ್ಕೆ ಆತುರರಾಗಿದ್ದರು. ಫ್ರಾನ್ಸ್‌ನಲ್ಲಿರುವ ಮನೆಯನ್ನು ತಡಮಾಡದೆ ಮಾರಿಬಿಡು ಎಂದು ಗಾಬ್ರಿಎಲ್ಲಾಗೆ ಹೇಳುವಷ್ಟೇ ಸಮಯವನ್ನು ಅವರು ಕೊಡಬಹುದಿತ್ತು. ಈ ಹೊತ್ತು ಗ್ರಾಬ್ರಿಎಲ್ಲಾಗೆ ಆತಂಕವೇನಾಗಲಿಲ್ಲ. ಆಕೆಯ ಅಚ್ಚುಮೆಚ್ಚಿನ ಭಾರತದಲ್ಲಿ ಆಹ್ಲಾದದಿಂದ ಉಳಿದು ಹೋದ ಬಳಿಕ ಅವಳು ಗುರುವಿನ ಆದೇಶವನ್ನು ಕಾರ್ಯರೂಪಕ್ಕೆ ತಂದಳು. ದುರ್ದೈವವಶಾತ್ ಆಕೆಗೆ ತುಂಬ ಹಣ ನಷ್ಟವಾಯಿತು. ಏಕೆಂದರೆ ಅಷ್ಟರಲ್ಲಿ ಮನೆ ಮಾರಾಟ ವ್ಯವಹಾರದಲ್ಲಿ ಬೆಲೆ ತುಂಬ ಇಳಿಕೆಯಾಗಿತ್ತು.

ಈ ಹಿಂದೆಯೇ ಗುರುದೇವರ ಆದೇಶವನ್ನು ಪಾಲಿಸಿದ್ದರೆ, ಆಕೆ ಈ ನಷ್ಟದ ಬಗ್ಗೆ ಪರಿತಪಿಸುವ ಸಾಧ್ಯತೆಯೇ ಇರಲಿಲ್ಲ. ಹಾಗಿದೆ ಬದುಕು!

೧೯೯೭ರ ಪೂರ್ವಭಾಗದಲ್ಲಿ ಹೈದರಾಬಾದ್‌ನ ಮಿಷನ್‌ನ ಅತಿಥಿಗೃಹದಲ್ಲಿ ಗಾಬ್ರಿಎಲ್ಲಾಳ ಬಲಗೈ ಮುರಿಯಿತು. ಈ ಮುರಿತ ಗಂಭೀರವಾದದ್ದರಿಂದಾಗಿ, ಪೂಜ್ಯ ಗುರುದೇವರು ಆಕೆಯ ಕೈ ಗುಣವಾಗುವವರೆಗೂ ಆಕೆ ಆಶ್ರಮದಲ್ಲೇ ಉಳಿಯಬೇಕೆಂದು ಬಯಸಿದರು. ಅವರು ಹೇಳಿದರು: "ಶ್ರೀ ಕಾಳಿಕಾ ಮಾತೆಯೂ ಕೈಮುರಿದುಕೊಂಡಿದ್ದಳು. ಆ ಕಾರಣಕ್ಕಾಗಿ ಆಕೆಯನ್ನು ಪಕ್ಕಕ್ಕೆ ತಳ್ಳಲಿಲ್ಲವಲ್ಲ." ಕೆಲವು ದಿನಗಳ ಬಳಿಕ ಈ ಅಪಘಾತ ತುಸು ಸೂಕ್ಷ್ಮ ಮತ್ತು ತುರ್ತಿನದು ಎನ್ನುವುದು ಗೊತ್ತಾದಾಗ, ಸ್ವಿಟ್ಜರ್ಲ್ಯಾಂಡ್‌ನಲ್ಲಿ ಚಿಕಿತ್ಸೆ ಪಡೆಯುವುದಕ್ಕಾಗಿ ಮನೆಗೆ ತೆರಳಲು ಆಕೆಯನ್ನು ಬೀಳ್ಕೊಟ್ಟರು.

ಕ್ಯಾಲಿಫೋರ್ನಿಯಾದಲ್ಲಿ ವಾಸವಾಗಿದ್ದ ಪ್ರಭು ಗಾಬ್ರಿಎಲ್ಲಾಳ ಗೆಳೆಯರಲ್ಲೊಬ್ಬನಾಗಿದ್ದ. ಆಕೆ ದೀಕ್ಷೆ ಪಡೆದುದು ಆತನಿಗೆ ತಿಳಿಯಿತು. ಆಗ ಆತನೂ ಸ್ವಾಮಿ ರಂಗನಾಥಾನಂದ ರಿಂದ ದೀಕ್ಷೆ ಪಡೆಯಲು ಬಯಸಿದನು. ಆದರೆ ಪ್ರಭು ಹಾಲಿವುಡ್ ಕೇಂದ್ರದ ಸ್ವಾಮಿ ಸ್ವಾಹಾನಂದರಿಂದ ದೀಕ್ಷೆ ಪಡೆಯಬೇಕೆಂದು ಸ್ವಾಮಿಯವರು ಒಳಗಣ್ಣಿಂದ ಕಂಡುಕೊಂಡರು. ಏಕೆಂದರೆ ಆತನ ಸ್ವಭಾವ ಅಂಥದ್ದಾಗಿತ್ತು. ಆದಷ್ಟೂ ಮತ್ತೆ ಮತ್ತೆ ಗುರುವನ್ನು ಕಾಣುತ್ತ ಸೇವೆಮಾಡುತ್ತ ಆತ ಹತ್ತಿರದ ಸಂಪರ್ಕ ಇಟ್ಟುಕೊಳ್ಳಬೇಕಾಗಿತ್ತು. ಸ್ವಾಮಿ ರಂಗನಾಥಾನಂದರು ಮೊದಲೆ ಹೇಳಿದಂತೆಯೇ ಆಯಿತು. ಇಂದು ಪ್ರಭು ಕೃತಜ್ಞನಾಗಿದ್ದಾನೆ.

ಪ್ಯಾಟ್ರಿಕ್ ಸ್ವಿಟ್ಜರ್ಲ್ಯಾಂಡಿನ ತರುಣ. ಸತ್ಯದ ಪ್ರಾಮಾಣಿಕ ಜಿಜ್ಞಾಸು. ಆತನಿಗೆ ಶ್ರೀ ರಾಮಕೃಷ್ಣರಲ್ಲಿ ಮಹಾನ್ ಪ್ರೇಮ ಇದ್ದರೂ, ತಾನು ಆಧ್ಯಾತ್ಮಿಕತೆಯ ಯಾವ ನೆಲೆಯಲ್ಲಿದ್ದೇನೆ ಎನ್ನುವುದು ಸ್ಪಷ್ಟವಾಗಿ ತಿಳಿದಿರಲಿಲ್ಲ. ಆತ ಬೇಲೂರು ಮಠಕ್ಕೆ ಬಂದಾಗ, ಸ್ವಾಮಿ ರಂಗನಾಥಾನಂದರು ಆತನನ್ನೂ ಗಾಬ್ರಿಎಲ್ಲಾಳನ್ನೂ ಹರ್ಷ ಮತ್ತು ಪ್ರೀತಿಯಿಂದ ಬರಮಾಡಿಕೊಂಡರು. ಅವರಿಬ್ಬರೂ ಗೌರವದಿಂದ ಬಾಗಿ ನಮಿಸಿದರು. ಅಧ್ಯಕ್ಷರಾದ ಮಹಾರಾಜರು ಪ್ರೀತಿ ಮತ್ತು ಕಾಳಜಿಯಿಂದ ಪ್ಯಾಟ್ರಿಕ್‌ನನ್ನು ಕಣ್ಣೆತ್ತಿ ನೋಡಿದರು, ಶ್ರೀ ರಾಮಕೃಷ್ಣರು ಯಾವ ಉದ್ದೇಶಕ್ಕಾಗಿ ಪ್ಯಾಟ್ರಿಕ್‌ನನ್ನು ತಮ್ಮ ಬಳಿಗೆ ಕಳುಹಿಸಿದ್ದಾರೆ ಎನ್ನುವುದನ್ನು ಚೆನ್ನಾಗಿ ಊಹಿಸಿದರು. ಅವರ ಪ್ರಯಾಣದ ಬಗ್ಗೆ ತುಸುವೇ ಮಾತನಾಡಿದ್ದಾದ ಮೇಲೆ ಅವರು ನೇರವಾಗಿ ವಿಷಯಕ್ಕೆ ಬಂದು ಪ್ಯಾಟ್ರಿಕ್‌ಗೆ ಹೇಳಿದರು: "ಇಂಥ ದಿನ ಬೆಳಿಗ್ಗೆ ಸ್ನಾನ ಮಾಡಿ, ಒಗೆದ ಬಟ್ಟೆಯುಟ್ಟು, ನಿರಾಳ ಹಾಗೂ ಶಾಂತಭಾವದಿಂದ ನನ್ನ ಕೊಠಡಿಗೆ ಬಾ– ಒಬ್ಬನೇ ಬಾ!" ಗುರುಪೂರ್ಣಿಮೆಯ ದಿನ ಅಧ್ಯಕ್ಷ ಮಹಾರಾಜರನ್ನು ಭೇಟಿಯಾಗಿ ಪ್ಯಾಟ್ರಿಕ್ ಅತಿಥಿಗೃಹಕ್ಕೆ ಮರಳಿ ಬಂದಾಗ ಗಾಬ್ರಿಎಲ್ಲಾ ತನ್ನ ಕೊಠಡಿಯಲ್ಲಿ ಮೊಣಕಾಲೂರಿ ನಮಿಸಿದಳು. ಅಧ್ಯಕ್ಷ ಮಹಾರಾಜರ ಮಧ್ಯಸ್ಥಿಕೆಯಲ್ಲಿ ಪ್ಯಾಟ್ರಿಕ್‌ಗೆ ದೀಕ್ಷೆ ದೊರೆತದ್ದಕ್ಕಾಗಿ ಶ್ರೀ ರಾಮಕೃಷ್ಣರಿಗೆ ಕೃತಜ್ಞತೆ ಸಲ್ಲಿಸಿದಳು. ಪ್ಯಾಟ್ರಿಕ್‌ಗೆ ಗುರುದೇವರೊಂದಿಗೆ ಇದೇ ಮೊದಲನೆಯ ಮತ್ತು ಕೊನೆಯ ಭೇಟಿ.

೨೦೦೪ರಲ್ಲಿ ಉಜ್ಜಯಿನಿಯ ಕುಂಭಮೇಳದಲ್ಲಿ ಪಾಲ್ಗೊಂಡ ಬಳಿಕ, ವರ್ಷಗಳಿಂದ ಮನದಲ್ಲಿದ್ದ ಪ್ರಶ್ನೆಗೆ ಪರಿಹಾರ ಪಡೆಯಲು ಗುರುದೇವರನ್ನು ಕಾಣುವುದಕ್ಕೆ ಇದೇ ತಕ್ಕ ಸಮಯ ಎಂದು ಗಾಬ್ರಿಎಲ್ಲಾ ಭಾವಿಸಿದಳು. ಆದ್ದರಿಂದ ಆಕೆ ಸ್ವಾಮಿ ರಂಗನಾಥಾನಂದರನ್ನು ಭೇಟಿ ಮಾಡಿದಳು. ಅವರು ತಮ್ಮ ಜಾಣ್ಮೆಯ ಮತ್ತು ಬೆಳಕಿನ ನುಡಿಗಳೊಂದಿಗೆ ಸಂತೈಸಿದ್ದಷ್ಟೇ ಅಲ್ಲದೆ, ಮಹಾ ಪ್ರೀತಿ ಮತ್ತು ಮಾಧುರ್ಯದ ಮಳೆಗರೆದರು. ಅವರ ಮುಖ ನಾವೀನ್ಯದಿಂದ ಹಾಗೂ ಉಲ್ಲಾಸದಿಂದ ಕಂಗೊಳಿಸಿತು. ಅದರಿಂದಾಗಿ ಅವರ ಆರೋಗ್ಯ ಸುಧಾರಿಸಿದೆ ಎನ್ನುವ ಅಭಿಪ್ರಾಯ ಮೂಡಿತು. ಗಾಬ್ರಿಎಲ್ಲಾ ಸಾಷ್ಟಾಂಗ ಪ್ರಣಾಮ ಮಾಡಿದಳು. ಪರಿಪೂರ್ಣ ಭಕ್ತಿಯಿಂದ ಅವರ ಪಾದಕಮಲಗಳನ್ನು ಚುಂಬಿಸಿದಳು. ಕೈಜೋಡಿಸಿ ಹಿಂತಿರುಗಿ ನಡೆದುಬರುತ್ತಿರುವಾಗ, ಆಕೆ ಗುರುದೇವರ ಮುಖಭಾವ ಹೇಗೆ ಬದಲಾಗಿದೆ ಎನ್ನುವುದನ್ನು ಗಮನಿಸಿದಳು. ಆಕೆಗೆ ಆಶ್ಚರ್ಯವಾಯಿತು. ಏಕೆಂದರೆ ಈ

ಹಿಂದೆ ಎಂದೂ ಅವರು ಅಷ್ಟು ವಿಷಣ್ಣರಾದುದನ್ನು ಕಂಡೇ ಇರಲಿಲ್ಲ. ಗಾಬ್ರಿಎಲ್ಲಾಗೆ ಆಕೆಯ ಅಚ್ಚುಮೆಚ್ಚಿನ ಗುರುದೇವರೊಂದಿಗೆ ಇದೇ ಕೊನೆಯ ಭೇಟಿ ಎನ್ನುವುದನ್ನು ಅವರು ಅರಿತಿದ್ದುದೇ ಇದಕ್ಕೆ ಕಾರಣವೆ? ೨೦೦೫ರ ಏಪ್ರಿಲ್‌ನಲ್ಲಿ ಸ್ವಾಮಿ ರಂಗನಾಥಾನಂದರು ತೀರಿಕೊಂಡ ಸುದ್ದಿ ಗಾಬ್ರಿಎಲ್ಲಾಗೆ ಸಿಕ್ಕಿತು.

ಈಗ ೭೭ರ ವಯಸ್ಸಿನ ಗಾಬ್ರಿಎಲ್ಲಾಗೆ ಮನ ಮಿಡಿಯಿತು; ಕಣ್ಣೀರ ಪ್ರವಾಹ ಹರಿಯುತ್ತಲೇ ಇತ್ತು. ಕಣ್ಣೀರು ತರ್ಕದಿಂದ ನಿಲ್ಲದು; ಪ್ರತಿಯೊಂದು ಹನಿಯೂ ಶ್ರೀಗುರುದೇವರು ತನ್ನ ಭಕ್ತರಿಗೂ ಶಿಷ್ಯರಿಗೂ ಸಲ್ಲಿಸಿದ್ದ ಎಲ್ಲಕ್ಕಾಗಿ ಪ್ರತ್ಯರ್ಪಿಸಿದ ಅತ್ಯಂತ ಕೃತಜ್ಞತೆ ಮತ್ತು ಶಾಶ್ವತ ಪ್ರೀತಿಯ ಮಣಿಮಾಲೆಯ ಮುತ್ತುಗಳು. ತನ್ನನ್ನು ಅವಲಂಬಿಸಿದ್ದ ಆ ಮಕ್ಕಳಿಗೆ ತೋರಿದ ಕಾಳಜಿ, ಅನುಕಂಪ, ಕರುಣೆ, ತ್ಯಾಗ, ದಿವ್ಯಪ್ರೇಮಗಳನ್ನೆಲ್ಲ ಎಂದು ಯಾರು ತಾನೆ ಅಳೆಯಬಲ್ಲರು?

* * * *

# ೧೦೧. ನನ್ನ ಬದುಕಿಗೆ ಅವರು ನೀಡಿದ ವಿಭಿನ್ನ ತಿರುವು

–ಗೀತಾ ದಾಸ್*

ಪೂಜ್ಯ ಸ್ವಾಮಿ ರಂಗನಾಥಾನಂದರು ವಿದೇಶದ ಜರ್ಮನಿಯ ನನ್ನ ಬದುಕಿನಲ್ಲಿ ತುಂಬ ಮಹತ್ವಪೂರ್ಣವಾದ ಹಾಗೂ ವ್ಯಾಪಕವಾದ ಪಾತ್ರವನ್ನು ವಹಿಸಿದ್ದರು. ಅವರ ಸಂಪರ್ಕ ಒದಗಿಬಂದಾಗ ನನ್ನ ಬದುಕಿಗೆ ಸಂಪೂರ್ಣ ವಿಭಿನ್ನ ತಿರುವನ್ನು ನೀಡಿದ್ದರು. ನಾನು ಜರ್ಮನಿಯಲ್ಲಿ ಈಗಲೂ (೩೯ ಸುದೀರ್ಘ ವರ್ಷಗಳ ಕಾಲ) ನೆಲಸಿರುವ ವಾಸ್ತವಕ್ಕೆ ಬಹುಮುಖ್ಯ ಕಾರಣ ಅವರ ಪ್ರಭಾವ ಮತ್ತು ಆಶೀರ್ವಾದ!

ಪೂಜ್ಯ ಮಹಾರಾಜರೊಂದಿಗೆ ನನ್ನ ಮೊದಲ ಭೆಟ್ಟಿ ೧೯೮೨ರಲ್ಲಿ ಅತ್ಯಂತ ಸ್ವವಿಶಿಷ್ಟವಾಗಿತ್ತು. ಮಹಾರಾಜರನ್ನು ನಾನು ಭೆಟ್ಟಿಯಾದ ಹಿನ್ನೆಲೆಯನ್ನು ನಿಮಗೆ ತಿಳಿಸಲಿಕ್ಕಾಗಿ ಮೊದಲಿಗೇ ಕೊಂಚ ವಿಷಯಾಂತರ ಮಾಡಬೇಕಿದೆ. ನನ್ನ ದಿವಂಗತ ಪತಿ ಮನೋಜ್ ದಾಸ್ ೧೯೮೧ರ ಮಾರ್ಚ್‌ನಲ್ಲಿ ಇದ್ದಕ್ಕಿದ್ದಂತೆ, ನನ್ನನ್ನೂ ಇಬ್ಬರು ಸಣ್ಣ ಹೆಣ್ಣುಮಕ್ಕಳು ರೀನಾ (೯) ಮೋನಿಕಾ (೨)ರನ್ನೂ ತೊರೆದು ಜರ್ಮನಿಯಲ್ಲೇ ತೀರಿಕೊಂಡುಬಿಟ್ಟರು. ನನ್ನ ಪರಿಸ್ಥಿತಿಯನ್ನೂ ಮಾನಸಿಕ ಸ್ಥಿತಿಯನ್ನೂ ನೀವು ಚೆನ್ನಾಗಿ ಊಹಿಸಬಲ್ಲಿರಿ. ನಾನು ಸಂಪೂರ್ಣವಾಗಿ ಆಘಾತಕ್ಕೆ ಸಿಲುಕಿದೆ; ಅಧೀರಳಾದೆ. ನಾನು ಶ್ರೀ ರಾಮಕೃಷ್ಣರ ಅಪ್ಪಟ ಭಕ್ತೆ. ಅವರು ನನಗೇ ಏಕೆ ಹೀಗೆ ಮಾಡಿದರು ಎಂದು ತುಮುಲಪಟ್ಟೆ. ಮುಂಬಯಿಯ ಖಾರ್‌ನ ರಾಮಕೃಷ್ಣ ಮಿಷನ್‌ನ ಜೊತೆ ನನಗೆ ಬಾಲ್ಯದಿಂದಲೂ ಸಾಹಚರ್ಯವಿತ್ತು. ನಾನು ೧೯೬೫ರಲ್ಲಿ ಪೂಜ್ಯ ಮಾಧವಾನಂದರಿಂದ ದೀಕ್ಷೆ ಪಡೆದಿದ್ದೆನು. ೧೯೬೮ರಲ್ಲಿ ನನ್ನ ಮದುವೆಯಾಯಿತು. ನನ್ನ ಪತಿಯೂ ಶ್ರೀ ರಾಮಕೃಷ್ಣರ ನಿಷ್ಠಾವಂತ ಭಕ್ತರೇ. ಅವರು ನರೇಂದ್ರಪುರದ ರಾಮಕೃಷ್ಣ ಮಿಷನ್ ಶಾಲೆಯಲ್ಲಿ ವ್ಯಾಸಂಗ ಮಾಡಿದವರು.

೧೯೮೧ರ ಜೂನ್/ಜುಲೈನಲ್ಲಿ ರೀನಾಳ ಶಾಲೆಗೆ ಬೇಸಗೆ ರಜಾ ಶುರುವಾದಾಗ, ನಾನು ನನ್ನ ಪತಿಯ ಅಂತಿಮ ಸಂಸ್ಕಾರಕ್ಕಾಗಿ ಕೋಲ್ಕತ್ತೆಗೂ, ಭಂಡಾರ ಒಪ್ಪಿಸಲು ಬೇಲೂರು ಮಠಕ್ಕೂ ಹೋದೆನು. ಅಂದಿನಿಂದಲೇ ಮೊದಲ್ಗೊಂಡು ಠಾಕೂರ್ ಮತ್ತು ಮಾತೆ ಸದಾ ನನ್ನ ಬೆಂಬಲಕ್ಕಿರುವೆವು ಎನ್ನುವುದನ್ನು ಪ್ರಕಟಗೊಳಿಸಿದ್ದರು. ಆದರೇನು, ಆ ಕಾಲಕ್ಕೆ ನನಗೆ ಅದು ಅರಿವಾಗಲೇ ಇಲ್ಲ! ಸ್ವಾಮಿ ವೀರೇಶಾನಂದರು (ಮುಂಬಯಿಯ ಆಶ್ರಮದಲ್ಲಿ ನನ್ನ ಬಾಲ್ಯದಿಂದಲೂ ನನ್ನನ್ನು ತಿಳಿದವರು) ಅಧ್ಯಕ್ಷ ಮಹಾರಾಜ್ ಪೂಜ್ಯ ಸ್ವಾಮಿ ವೀರೇಶ್ವರಾನಂದರಲ್ಲಿಗೆ ನನ್ನನ್ನು ಕರೆದೊಯ್ದರು. ನಾವು ಮೂವರೂ ಅವರ ಆಶೀರ್ವಾದ ಪಡೆದೆವು. ಅವರು ೩೦ ನಿಮಿಷಗಳ ಕಾಲ ನಮ್ಮನ್ನು ತಮ್ಮ ಜೊತೆ ಇರಿಸಿಕೊಂಡರು. ಆ ಬಳಿಕ ಜರ್ಮನಿಯ ಓಬರ್‌ಹೌಸೆನ್‌ನಲ್ಲಿ ವಾಸವಾಗಿದ್ದ ಬಿಶನ್‌ಬಸು ಅವರನ್ನು ಸಂಪರ್ಕಿಸುವಂತೆ ನನಗೆ ಹೇಳಿದರು. ನಾನು ಹಿಂತಿರುಗಿ ಹೋದ ಮೇಲೆ, ನನ್ನ ಕೋರಿಕೆಯ ಮೇರೆಗೆ, ಅವರು ಮತ್ತು ಅವರ ಮಿತ್ರ ವಿಲ್‌ಫ್ರೈಟ್ ಮಾರ್ಕ್ವಾರ್ಡ್ಟ್ ಕೂಡಲೇ ನನ್ನನ್ನು ಸಂಪರ್ಕಿಸಿ ನನ್ನ ಮನೆಗೆ ಬಂದರು. ಹಾಗೆ ಮೊದಲಿಗೆ ವೇದಾಂತ ಭಕ್ತರು ನನಗೆ ಸಹಾಯ ಮಾಡಿದರು, ಸಂಪರ್ಕಕ್ಕೆ ಸಿಕ್ಕಿದರು. ಅಲ್ಲಿಂದ ಮುಂದೆ ಜರ್ಮನಿಯ ವೇದಾಂತ ಸಂಘಟನೆಯಲ್ಲಿ ನನ್ನ ಪಾಲ್ಗೊಳ್ಳುವಿಕೆ ಮೊದಲ್ಗೊಂಡಿತು! ಬಿಶನ್ ಬಸು ಅವರ ಮೂಲಕ ಗ್ರೆಟ್ಸ್‌ನಲ್ಲಿರುವ ವೇದಾಂತ ಕೇಂದ್ರದ ಮತ್ತು ಸ್ವಾಮಿ ಋತಜಾನಂದರ ಪರಿಚಯ ನನಗಾಯಿತು.

---

* ಜರ್ಮನಿಯಲ್ಲಿ (೧೯೮೨–೮೭) ಸ್ವಾಮಿ ರಂಗನಾಥಾನಂದರ ಆತಿಥೇಯರು.

೧೯೮೨ರಲ್ಲಿ ನನ್ನ ಆಸುಪಾಸಿಗೆ ಸ್ವಾಮಿ ರಂಗನಾಥಾನಂದರು ಆಗಮಿಸುವರೆಂದು ಮತ್ತೆ ಇದೇ ಬಿಶನ್ ಬಸು ನನಗೆ ತಿಳಿಸಿದರು. ಈ ಹಿಂದೆ ನಾನೆಂದೂ ಮಹಾರಾಜರನ್ನು ಭೆಟ್ಟಿಯಾಗಿರಲೂ ಇಲ್ಲ; ಅವರ ಬಗ್ಗೆ ನನಗೆ ಏನೂ ಗೊತ್ತಿರಲೂ ಇಲ್ಲ. ಆದರೂ ನನಗೆ ತುಂಬ ಸಂತಸವಾಯಿತು. ಹೋಗಿ ಅವರನ್ನು ಕಾಣುವುದಕ್ಕಾಗಿ ನಾನು ಸಿಹಿಯನ್ನು ಇತರ ಅರ್ಪಣಾ ಸಲಕರಣೆಗಳನ್ನು ಅಣಿಗೊಳಿಸಿದೆನು. ಆದರೆ ಅದೇ ದಿನ ಇದ್ದಕ್ಕಿದ್ದಂತೆ ಮೋನಿಶಾಗೆ ಸೀತಾಳೆ (ಸಿಡುಬು) ಕಾಣಿಸಿಕೊಂಡಿತು. ಹಾಗಾಗಿ ನಾನು ಹೋಗುವುದು ರದ್ದಾಯಿತು. ಆದರೆ ನಾನು ಅದೆಲ್ಲವನ್ನೂ ಬಿಶನ್ ಬಸು ಮೂಲಕ ಕಳುಹಿಸಿಕೊಟ್ಟೆ. ಜೊತೆಗೆ ಸ್ವಾಮಿ ರಂಗನಾಥಾನಂದರ ಚರಣ ಧೂಲಿಯನ್ನು ಸ್ವೀಕರಿಸಲು ಸಾಧ್ಯವಾಗದಿದ್ದುದರ ಬಗ್ಗೆ ನನಗಾದ ಗಾಢ ದುಃಖವನ್ನು ವ್ಯಕ್ತಪಡಿಸಿ ಪತ್ರವನ್ನೂ ಕಳಿಸಿದ್ದೆ.

ಆಗ ಮಹಾರಾಜರೊಂದಿಗೆ ಆಶ್ಚರ್ಯಭರಿತವಾದ ಸಮಾಗಮ ಆರಂಭಗೊಂಡಿತು. ಅವರು ಓಬರ್‌ಹೌಸೆನ್‌ನಿಂದ ಎಸ್ಸೆನ್‌ಗೆ ಉಪನ್ಯಾಸ ನೀಡಲು ಹೋಗಬೇಕಾಗಿತ್ತು. ಈ ನಡುವೆ ಅತ್ಯಲ್ಪ ಸಮಯ ಉಳಿದಿದ್ದರೂ, ನನ್ನನ್ನು ಕಾಣಲಿಕ್ಕೆ ಅವರನ್ನು ಕರೆದೊಯ್ಯಲು ಅವರು ಸುಜಿತ್ ಬಸುಗೆ ಅಕ್ಷರಶಃ ಒತ್ತಾಯಿಸಿದರು. ಅದೇ ಠಾಕೂರರು ಸ್ವಾಮಿ ರಂಗನಾಥಾನಂದರ ರೂಪದಲ್ಲಿ ನನ್ನ ಮನೆಯನ್ನು ಹೊಕ್ಕಿದರು. ಅವರು ನನ್ನ ಯಾತನೆಯನ್ನು ಆಲಿಸಿದರು. ತುಂಬ ಘನತೆವೆತ್ತ, ಪ್ರೇಮಪೂರ್ಣ, ಸಮಾಧಾನಕಾರಕ ವ್ಯಕ್ತಿ. ನಾನು ಅಳುತ್ತ, ಭಾರತಕ್ಕೆ ಮರಳಿ ಹೋಗುವೆನೆಂದು ಹೇಳಿದಾಗ, ಅವರು ಪ್ರೀತಿಪೂರ್ವಕವಾಗಿ ಆದರೆ, ತಕ್ಕ ಒತ್ತು ನೀಡಿ ಹೇಳಿದರು: "ಯಾಕೆ ನೀನು ಭಾರತಕ್ಕೆ ಹಿಂತಿರುಗಿ ಹೋಗಬಯಸುವೆ? ಅಲ್ಲಿ ನೀನು ಅನಾಮಿಕಳಾಗುವೆ. ನೀನು ಇಲ್ಲೇ ಉಳಿದು ವೇದಾಂತದ ಕೆಲಸ ಮಾಡು." ಇಂದು ಅವರ ವಾಣಿ ನನಗೊಂದು ವರವಾಯಿತೆಂದು ಅರ್ಥವಾಗಿದೆ. ಜರ್ಮನಿಯಲ್ಲಿ ನಡೆಯುತ್ತಿದ್ದ ವೇದಾಂತ ಕಾರ್ಯದ ಸ್ಪರ್ಶ ಕೂಡ ನನಗಿರಲಿಲ್ಲ. ಹಾಗಿರುವಾಗ ಅವರು ನನಗೆ ಹೇಳುತ್ತಿರುವುದೇನು!

ಈಗ ನಾನು ಅತ್ಯಂತ ಮಾನವೀಯ ಹಾಗೂ ಸುಪ್ರಸನ್ನ ಸಂಗತಿಯನ್ನು ನಿಮಗೆ ಹೇಳಲೇಬೇಕು. ಸ್ವಾಮಿಯವರು ಮೋನಿಶಾಗೆ ತಲೆ ಸವರಿ ಮುದ್ದಿಸಿದಾಗ, ಅಲ್ಲಿದ್ದ ಸುಜಿತ್ ಬಸು ಹಾಗೂ ಇತರ ಮಹನೀಯರು ಜೋರಾಗಿ ಹೇಳಿದರು, "ಸ್ವಾಮೀಜಿ, ಸೀತಾಳೆ (ಸಿಡುಬು) ಸಾಂಸರ್ಗಿಕ ರೋಗ" ನನಗೆ ತುಂಬ ಅಸಹಾಯಕ ಹಾಗೂ ಅಪರಾಧೀ ಭಾವನೆ ಮೂಡಿತು. ನಾನು ಅವರಿಗೆ ಹೇಳಿದೆ: "ಬಾಲ್ಯದಲ್ಲಿ ಆಗಲೇ ಸೀತಾಳೆ (ಸಿಡುಬು) ಕಾಯಿಲೆ ಬಂದಿದ್ದರೆ, ಅಂಥ ವಯಸ್ಕರಿಗೆ ಸಾಮಾನ್ಯವಾಗಿ ನಂಜು ತಗುಲಲಾರದು." ಹೀಗೆ ಹೇಳಿ, ಕೈಯನ್ನು ಚೆನ್ನಾಗಿ ತೊಳೆದುಕೊಳ್ಳಲೆಂದು ಅವರಿಗೆ ಸಬಕಾರ ಕೊಟ್ಟೆನು. ಸರಿಯೆ, ಅವರಿಗೆ ನಂಜು ಸಂಸರ್ಗಗೊಳ್ಳಲಿಲ್ಲ. ನಮ್ಮೊಂದಿಗಿದ್ದು, ಅವರ ಅಮೂಲ್ಯವಾದ ಸಮಯದಲ್ಲಿ ೩೦ ನಿಮಿಷಗಳನ್ನು ನಾವು ಕಿತ್ತುಕೊಂಡ ಬಳಿಕ, ಮತ್ತೆ ಮುಂದಿನ ವರ್ಷ ಬರುವುದಾಗಿ ಹೊರಟು ಹೋದರು.

ಈ ನಡುವೆ ನನಗೆ ತಿಳಿದು ಬಂದಿದ್ದೆನೆಂದರೆ ೧೯೭೦ರಿಂದ ಬ್ಯಾಡ್ ನೌಹೇಮ್, ವೇಯೀಸ್ ಬ್ಯಾಡೆನ್‌ಗಳಲ್ಲೂ, ಪ್ರಾಯಃ ಅದಕ್ಕೂ ಮುಂಚೆ ಸಿಸಿಲಿ ಕುಬೇಸ್ಕರ ಮನೆಯಲ್ಲೂ ಪೂಜ್ಯ ಸ್ವಾಮಿ ಋತಜಾನಂದರ ಅಧ್ಯಕ್ಷತೆಯಲ್ಲಿ ಪ್ರತಿ ವರ್ಷ ಅಭ್ಯಾಸಗೋಷ್ಠಿಗಳನ್ನು ನಡೆಸಲಾಗುತ್ತಿತ್ತು.

ಇಲ್ಲಿ ನಾನು ಉಲ್ಲೇಖಿಸಲೇಬೇಕಾದದ್ದೆಂದರೆ, ಕರ್ಟ್ ಫ್ರೆಡ್ರಿಕ್ಸ್ ಅವರ ಮುಂದಾಳುತನದಲ್ಲಿ ಜರ್ಮನಿಯಲ್ಲಿ ವೇಯಿಸ್‌ಬ್ಯಾಡೆನ್‌ನ ವೇದಾಂತ ಕೇಂದ್ರವು ಎಲ್ಲ ವೇದಾಂತ ಚಟುವಟಿಕೆಗಳಿಗೆ ಪ್ರಧಾನ ಭೂಮಿಕೆಯಾಗಿತ್ತು. ಕರ್ಟ್ ಫ್ರೆಡಿಕ್ಸ್ ಅವರು ಶ್ರೀ ರಾಮಕೃಷ್ಣರ ಅದ್ಭುತ ಭಕ್ತ. ಬೇಲೂರು ಮಠದೊಂದಿಗೆ ಅತ್ಯಂತ ನಿಕಟ ಸಂಪರ್ಕವಿರುವ ಅತಿ ಮುಖ್ಯ ಅಗ್ರಗಣ್ಯರಲ್ಲಿ ಅವರೂ ಒಬ್ಬರು. ಅಲ್ಲದೆ ಸಿಸಿಲಿ ಕುಬೇಸ್ಕ್ ಹಾಗೂ ಹಲವು ಇತರರಂತೆ ಆತ ಕಠಿಣ ಪರಿಶ್ರಮಿ, ಭಕ್ತಿ ಹಾಗೂ ಅರ್ಪಣಾ ಮನೋಭಾವದ ವೇದಾಂತಿ.

ಜರ್ಮನಿಯಲ್ಲಿ ರಾಮಕೃಷ್ಣರ ವೇದಾಂತ ಭಕ್ತರ ಮತ್ತು ಅನುಯಾಯಿಗಳ ಮತ್ತೊಂದು ಸಮೂಹವೆಂದರೆ ಪಶ್ಚಿಮ ಜರ್ಮನಿಯ ನಗರವಾದ ಡಸ್ಸೆಲ್ ಡಾರ್ಫ್‌ನಲ್ಲಿರುವ ವೇದಾಂತ ವೃಂದ. ವಿಲ್‌ಫ್ರೈಡ್ ಮ್ಯಾರ್‌ಕ್ವಾರ್ಡ್ಟ್, ದಿವಂಗತ ಸುಜೀತ್ ಬಸು, ದಿವಂಗತ ಸಮೀರ್‌ಸೇನ್ ಗುಪ್ತ, ಶಶಾಂಕ ಚಟ್ಟೋಪಾಧ್ಯಾಯ, ಅಮಲ್ ಮಿತ್ರ, ಬೀ\ಶನ್ ಬಸು ಹಾಗೂ ಇತರ ಕೆಲವರು ಅದನ್ನು ಮುನ್ನಡೆಸಿದವರು.

ಬರ್ಲಿನ್‌ನಲ್ಲಿ ಮತ್ತೊಂದು ಸಮೂಹವನ್ನು ಮುನ್ನಡೆಸಿ ಸಂಘಟಿಸಿದವರು ಇಲ್ಸೆ ಬಸ್ಕ್. ಆಕೆ ತುಂಬ ಕ್ರಿಯಾಶೀಲ, ಅರ್ಪಣಾ ಮನೋಭಾವದ ಹೆಂಗಸು; ಬೇಲೂರು ಮಠದಲ್ಲಿ ತುಂಬ ಪರಿಚಿತರು; ಹಾಲೆಂಡ್‌ನ ಪ್ರೊ॥ ಜೋ ವ್ಯಾನ್ ಓರ್ಶೋೕವೆನ್‌ರ ವೇದಾಂತ ವೃಂದದ ಜೊತೆ ತುಂಬ ನಿಕಟವಾಗಿ ಕೆಲಸ ಮಾಡಿದವರು; ೧೯೭೦ರಿಂದ ಬರ್ಲಿನ್‌ನಲ್ಲಿ ವೇದಾಂತ ಸಂದೇಶವನ್ನು ಪ್ರಸಾರ ಮಾಡುವಲ್ಲಿ ಕ್ರಿಯಾಶೀಲರಾಗಿ ತೊಡಗಿಕೊಂಡವರು. ಸ್ವಾಮಿ ರಂಗನಾಥಾನಂದ ಮಹಾರಾಜರ ವಿದೇಶ ಪ್ರವಾಸದ ಕಾಲಕ್ಕೆ ಆಕೆ ಅವರನ್ನು ಉಪನ್ಯಾಸ ನೀಡಲು ಬರ್ಲಿನ್‌ಗೆ ಆಮಂತ್ರಿಸುತ್ತಿದ್ದಳು. ಅದು ಜರ್ಮನಿಯಲ್ಲಿ ಅವರ ಭದ್ರಮುಷ್ಟಿಯಾಗಿತ್ತು. ಸ್ವಾಮಿ ರಂಗನಾಥಾನಂದರಿಗೆ ವಿಶ್ರಾಂತಿ ಅಗತ್ಯವಾಗಿದ್ದುದರಿಂದ, ೧೦-೧೪ ದಿನಗಳ ಕಾಲ ನನ್ನ ಮನೆಯಲ್ಲಿ ಅವರಿಗೆ ಆತಿಥ್ಯ ನೀಡಲು ನಾನು ಸಿದ್ಧಳಿದ್ದೇನೆಯೇ ಎಂದು ಒಮ್ಮೆಗೇ ಆಕೆ ೧೯೮೨ರಲ್ಲಿ ಕೇಳಿದಳು. ನನಗೆ ತುಂಬ ಆಶ್ಚರ್ಯವಾಯಿತು. ಏಕೆಂದರೆ, ನಾನು ಈ ಕ್ಷೇತ್ರಕ್ಕೆ ಹೊಸಬಳು. ನಾನು ತಕ್ಷಣ ಒಪ್ಪಿದೆ. ಆದರೆ ನಾನು ಸೂಚಿಸಿದ್ದೇನೆಂದರೆ, ನನ್ನ ಮಗಳು ಮೋನಿಶಾ ತುಂಬ ತುಂಟಿ. ಹಾಗಾಗಿ ಸ್ವಾಮಿಯವರ ಅಭ್ಯಂತರವಿಲ್ಲದಿದ್ದರೆ, ಈ ಸದವಕಾಶವನ್ನು ನನ್ನ ಸೌಭಾಗ್ಯವೆಂದೇ ಪರಿಗಣಿಸುವೆನು. ಆ ಬಳಿಕ ಮಹಾರಾಜರು ೧೯೮೩ರ ಬೇಸಗೆಯಲ್ಲಿ ಆಗಮಿಸಿದರು.

ಮಹಾರಾಜರ ಜಠರಾಗ್ನಿ ತುಂಬ ಮಂದ. ವಿದೇಶ ಪ್ರವಾಸದ ಕಾಲಕ್ಕೆ ಆರೋಗ್ಯವನ್ನು ಕಾಪಿಟ್ಟುಕೊಳ್ಳುವುದಕ್ಕಾಗಿ ಅವರು ಊಟೋಪಚಾರವನ್ನು ತುಂಬ ನಿಯಮಿತವಾಗಿಟ್ಟುಕೊಳ್ಳಬೇಕಾಗಿತ್ತು. ಹಾಗಾಗಿ ನನಗೆ ಮೊದಲ ಪರೀಕ್ಷೆ ನೀಡಲಾಯಿತು. ಹೇಗೆ ಅವರ ಗಂಜಿಯನ್ನು ತಯಾರಿಸುವೆನೆಂದು ಮಾಡಿ ತೋರಿಸುವಂತೆ ಅವರು ನನಗೆ ಹೇಳಿದರು. ಅವರು ಆಗಮಿಸುವುದಕ್ಕೆ ಮುಂಚೆಯೇ ಲಿಖಿತ ವಿವರವನ್ನು ಆಗಲೇ ನಾನು ಪಡೆದಿದ್ದೆನು. ಅವರ ಅಗತ್ಯಗಳಿಗೆ ನಾನು ಬದ್ಧಳಾಗಿದ್ದೇನೆ ಎನ್ನುವುದನ್ನು ಕಂಡುಕೊಂಡಾಗ ಅವರು ತುಂಬ ಸಂತಸಪಟ್ಟರು. ನಮ್ಮ ಮನೆಯಲ್ಲಿ ನೆಲಸಿದ ಕಾಲಕ್ಕೆ ಅವರನ್ನು ನೋಡಿಕೊಳ್ಳಲು ನಾನು ಅರ್ಹಳಾದೆನು ಹಾಗೂ ಈ ಪರೀಕ್ಷೆಯಲ್ಲಿ ಉತ್ತೀರ್ಣಳಾದೆನು ಎಂದು ನನಗೂ ತುಂಬ ಖುಷಿ, ನಿರಾಳ ಆದವು. ಅವರ ಸೌಕರ್ಯವನ್ನು ನೋಡಿಕೊಳ್ಳುವಲ್ಲಿ ರೀನಾ ನನಗೆ ಸಹಾಯಕಳಾದಳು. ಅಂಥ ಆಪ್ತಸಾನ್ನಿಧ್ಯದಲ್ಲಿ ಅಂಥ ಮಹಾತ್ಮರಿಗೆ ಸೇವೆ ಮಾಡಲು ಸಾಧ್ಯವಾದದ್ದು ನಮ್ಮಿಬ್ಬರಿಗೂ ಅದೆಂಥ ಅನುಗ್ರಹ! ಮೋನಿಶಾಗೂ ಅವಳದೇ ಸಂಗತಿಗಳಿದ್ದವು– ಅವರೊಂದಿಗೆ ಆಟವಾಡುವುದು, ಜರ್ಮನ್‌ನಲ್ಲಿ ಪ್ರಶ್ನೆ ಕೇಳುವುದು (ಅದನ್ನು ನಾನು ಭಾಷಾಂತರಿಸಬೇಕಿತ್ತು), ಎಲ್ಲ ಸಮಯದಲ್ಲೂ ತೊಡೆಯ ಮೇಲೆ ಕುಳಿತು ಅವರಿಗೆ ತೊಂದರೆ ಕೊಡುವುದು, ಬೆನ್ನು ಅಥವಾ ಹೆಗಲ ಮೇಲೆ ಹತ್ತುವುದು. ಅವಳಿಗೆ ಇದು ತಮಾಷೆಯಾಗಿ ಕಾಣುತ್ತಿತ್ತು. ಆದರೆ ನಾನು ಸಪ್ಪೆಯಾಗಿಬಿಡುತ್ತಿದ್ದೆನು. ಆದರೆ ಅವಳ ತುಂಟ ಚೇಷ್ಟೆಗಳಲ್ಲಿ ಅವಳೊಂದಿಗೆ ಸೇರಿಕೊಂಡು ಮಹಾರಾಜರು ಅಕ್ಷರಶಃ ಅವಳನ್ನು ಹುರಿದುಂಬಿಸಿದರು. ಏನು ಲೀಲೆ! ರೀನಾ ಮತ್ತು ಮೋನಿಶಾರಿಗೆ ಅವರ ಸಾನ್ನಿಧ್ಯ ಎನ್ನುವುದು ತಮ್ಮನ್ನು ಕಾಣಲು ಬಂದ ಅಜ್ಜನಂತಿತ್ತು. ಇವರಿಗೆ ಅವರು 'ಅಚ್ಚುಮೆಚ್ಚಿನ ಸ್ವಾಮಿ' ಆಗಿದ್ದರು. ಅವರು ರೀನಾಳೊಂದಿಗೆ ತುಂಬ ಮಾತನಾಡುತ್ತ ಗಟ್ಟಿಮುಟ್ಟಾದ ದಿಟ್ಟೆಯಾಗುವಂತೆ, ಚೆನ್ನಾಗಿ ಓದಿ ಸುಸಭ್ಯ ಹುಡುಗಿಯಾಗಿ ಮುಂದಿನ ಬದುಕಿನಲ್ಲಿ ಯಶಸ್ಸು ಪಡೆಯುವಂತೆ ಉತ್ತಮ ಉಪದೇಶ ಕೊಡುತ್ತಿದ್ದರು.

ಇಬ್ಬರಿಗೂ ಅವರ ಅನುಗ್ರಹ ಸಹಾಯವೊದಗಿಸಿತು; ಭವಿಷ್ಯದ ಬದುಕಿನಲ್ಲಿ ಅದು ಹಾಗೇ ಮುಂದುವರಿಯುವುದು ಎಂದು ನಾನು ದೃಢವಾಗಿ ನಂಬಿದ್ದೇನೆ.

ಮಹಾರಾಜರು ಕೆಲವು ದಿನಗಳಿಂದ ನಮ್ಮ ಮನೆಯಲ್ಲಿ ವಾಸವಾಗಿದ್ದಾರೆ ಎನ್ನುವುದನ್ನು ಕೇಳಿತಿಳಿದ ವೇದಾಂತಾಸಕ್ತ ಜನ ಅವರ ಬಳಿ ಏಕಾಂತ ಶ್ರೋತೃವಾಗಲು ಬರತೊಡಗಿದರು. ನಮ್ಮ ಮನೆಯಲ್ಲಿ ಅದೊಂದು ಔತಣದಂತಿತ್ತು. ನಾನು ಅತಿಥಿಗಳಿಗಾಗಿ ಅಡುಗೆ ಮಾಡಿ ಬಡಿಸುವುದರಲ್ಲಿ ಬಿಡುವಿಲ್ಲದೆ ತೊಡಗಿಕೊಂಡೆನು. ಇಲ್ಲಿ ನಾನು ನಿಮಗೆ ಮತ್ತೆ ಇನ್ನೊಂದು ಕತೆ ಹೇಳಲೇಬೇಕು. ಒಂದು ದಿನ ಬಂಗಾಳಿ ಅತಿಥಿಗಳು ತಮಗೆ ಬಡಿಸಿದ ಭಕ್ಷ್ಯಗಳನ್ನು ಸವಿಯುತ್ತಿದ್ದರು. ಆಗ ಇದ್ದಕ್ಕಿದ್ದಂತೆ ಸುಜಿತ್ ಬಸು ಹೇಳಿದರು, "ಓಹ್, 'ಸಂದೇಶ್' ತುಂಬ ರುಚಿ ಕಟ್ಟಾಗಿದೆ." ಕರಾರುವಾಕ್ಕಾಗಿ ಮಹಾರಾಜರು ಆ ಮೇಜಿಗೆ ಕುಳಿತ ಎಲ್ಲರಿಗೂ ಮಿಕ್ಕ 'ಸಂದೇಶ್'ಗಳನ್ನು ಹಾಕಿದರು. 'ಸಂದೇಶ್ ಎಂಬ ಸಿಹಿತಿನಿಸು ಒಂದೇ ಅವರು ತಿಂದು ಜೀರ್ಣಿಸಿಕೊಳ್ಳಬಹುದಾದದ್ದು. ನಾನು ಅದನ್ನು ಅವರಿಗಾಗಿಯೇ ವಿಶೇಷವಾಗಿ ತಯಾರಿಸಿದ್ದೆನೇ ವಿನಾ ಇತರ ಅತಿಥಿಗಳಿಗಾಗಿ ಅಲ್ಲ. (ಅವರಿಗೆ ಬೇಕಾದಷ್ಟು ಇತರ ಭಕ್ಷ್ಯ-ಭೋಜ್ಯಗಳಿದ್ದುವು!) ಮಾರನೆಯ ದಿನ ಬೆಳಗಿನ ಉಪಾಹಾರಕ್ಕೆ ಅವರು ಏನನ್ನು ತೆಗೆದುಕೊಳ್ಳುವರು ಎಂದು ನಾನು, ಅವರೆಲ್ಲ ಹೊರಟುಹೋದ ಮೇಲೆ ಮಹಾರಾಜರನ್ನು ಕೇಳಿದೆನು. ಅವರು ಹೇಳಿದರು 'ಸಂದೇಶ್' ಅಲ್ಲಿ ಒಂದೂ ಮಿಕ್ಕಿಲ್ಲ ಎಂದು ನಾನು ಆಗ ಅವರಿಗೆ ಹೇಳಿದೆನು. ಅವರು ಹೇಳಿದರು: "ಪರವಾಗಿಲ್ಲ, ನೀನು ಈಗ ತಾಜಾ ಆಗಿ ಮಾಡಬಹುದಲ್ಲ." ನಾನು ಮೂಕಳಾದೆ ಅಷ್ಟೆ! ಆಗಲೇ ಮಧ್ಯ ರಾತ್ರಿ ಆಗಿತ್ತು! ಅವರು ಎದ್ದು ತಮ್ಮ ಮದ್ದಿನ ಮಾಂತ್ರಿಕ ಪೆಟ್ಟಿಗೆಯಿಂದ ನಳಿಕೆ ಗುಳಿಗೆಯೊಂದನ್ನು ತೆಗೆದು ನನಗೆ ನೀಡಿ ಹೇಳಿದರು. "ಇದನ್ನು ತಗೋ, ನಿನಗೆ 'ಸಂದೇಶ್' ತಯಾರಿಸಲು ಚೈತನ್ಯ ಬರುತ್ತದೆ." ನಿಜಕ್ಕೂ ನಾನು ತೆಗೆದುಕೊಂಡೆ. ಅವುಗಳನ್ನು ಮಾಡಿ ಮುಗಿಸಿದಾಗ ಬೆಳಗಿನ ಜಾವ ೨ ಗಂಟೆ; ಆ ನಂತರ ಮಲಗಿಕೊಂಡೆ.

ಆ ಹೊತ್ತಿಗೆ ಜರ್ಮನಿಯಲ್ಲಿ ವೇದಾಂತ ಕೇಂದ್ರ ಇರಲಿಲ್ಲ. (ಇದು ನನ್ನ ಮಹಾ ಸೌಭಾಗ್ಯ. ಆದ್ದರಿಂದಲೇ ಅವರು ನಮ್ಮ ಮನೆಯಲ್ಲಿ ಇಳಿದುಕೊಂಡರು! ಇದೇ ಕಾರಣಕ್ಕಾಗಿ ಸ್ವಾಮಿ ಭವ್ಯಾನಂದ, ಸ್ವಾಮಿ ಅಮರಾನಂದ, ಪ್ರವ್ರಾಜಿಕೆ ವಿವೇಕಪ್ರಾಣಾರಿಗೆಲ್ಲ ನಮ್ಮ ಪ್ರದೇಶದಲ್ಲಿದ್ದಾಗ ಆತಿಥ್ಯ ನೀಡುವ ವಿರಳ ವಿಶೇಷಾಧಿಕಾರ ನನ್ನದಾಗಿತ್ತು.) ಇಂಗ್ಲೆಂಡ್, ಫ್ರಾನ್ಸ್, ಸ್ವಿಟ್ಜರ್ಲ್ಯಾಂಡ್ ಎಲ್ಲೆಡೆ ಒಂದೊಂದು ಕೇಂದ್ರವಿತ್ತು. ಮಹಾರಾಜರು ತಮ್ಮ ಕ್ರಿಯಾಶೀಲ, ಆಕರ್ಷಕ ವ್ಯಕ್ತಿತ್ವದಿಂದಾಗಿ, ವೇದಾಂತದ ಉದ್ದೇಶಕ್ಕಾಗಿ ಪರಿಶ್ರಮ ಪಡಲು ಹಾಗೂ ರಾಮಕೃಷ್ಣ ಪರಂಪರೆಯ ಸನ್ಯಾಸಿಯೊಬ್ಬರ ಮುಂದಾಳುತನದಲ್ಲಿ, ಬೇಲೂರು ಮಠದ ಸಂಯೋಜನೆಯಡಿ ಜರ್ಮನಿಯಲ್ಲಿ ಕೇಂದ್ರವೊಂದನ್ನು ಸಂಘಟಿಸಲು ನಮ್ಮಲ್ಲಿ ಉತ್ಸಾಹವನ್ನು ತುಂಬಿದರು. ಈ ಯೋಚನೆಗೆ ನಾನು ಎಷ್ಟರಮಟ್ಟಿಗೆ ಸ್ಪಂದಿಸಿದೆನೆಂದರೆ, ದಿನನಿತ್ಯದ ಕಛೇರಿ ಕೆಲಸ, ಮನೆವಾರ್ತೆ, ಮಕ್ಕಳು ಎಲ್ಲ ಇದ್ದೂ ವೇದಾಂತ ಚಳವಳಿಗೆ ಧುಮುಕಲು ಅಗತ್ಯವಾದ ಚೈತನ್ಯ, ಬಲ, ಉತ್ತೇಜನ ಎಲ್ಲವನ್ನೂ ಅದು ನೀಡಿತು. ಅದು ನನ್ನ ಬದುಕಿನ ಪ್ರಮುಖ ಉದ್ದೇಶವಾಯಿತು, ಆಗಿದೆ ಕೂಡ. ನಾನು ಯಾವಾಗಲೂ ಹೇಳುವುದುಂಟು; ನಂಬುವುದುಂಟು: "ಶ್ರೀ ರಾಮಕೃಷ್ಣ ಮತ್ತು ಅವರ ಉದ್ದೇಶಕ್ಕಾಗಿ ಸೇವೆ ಮೊದಲು, ಆಮೇಲೆ ಮಿಕ್ಕಿದ್ದೇನಿದ್ದರೂ!" ಮಹಾರಾಜರ ಮಾತುಗಳು ನನ್ನ ಕಿವಿಗಳಲ್ಲಿ ಅನುರಣಿಸುತ್ತಲೇ ಇವೆ: "ಸ್ವಾಮೀಜಿಯವರ ಕೆಲಸ ಮಾಡಲಿಕ್ಕಾಗಿ ನಾನು ಮತ್ತೆ ಮತ್ತೆ ಬರಲು ಬಯಸುತ್ತೇನೆ."

ಆ ಬಳಿಕ ಮಹಾರಾಜರು ೧೯೮೪, ೧೯೮೫, ೧೯೮೬ನೇ ಸಾಲಿನಲ್ಲಿ ಬಂದರು. ಪ್ರತಿಬಾರಿಯೂ ನಮ್ಮ ಮನೆಯಲ್ಲಿ ೭-೧೦ ದಿನಗಳ ಕಾಲ ತಂಗಿರುತ್ತಿದ್ದರು. ಅವರನ್ನು ಇಲ್ಲಿ ಇರಿಸಿಕೊಳ್ಳುವುದು, ಅವರ ಪಾದದ ಬಳಿ ಕುಳಿತು ಅದ್ಭುತವಾದ ಭಾಷಣಗಳನ್ನು ಆಲಿಸುವುದು, ಓಹ್! ಅದೆಷ್ಟು ಪ್ರಚೋದಕ ಮತ್ತು

ಅದ್ಭುತ! ಈ ಹೊತ್ತಿಗೆ ನಾನು ಡಸ್ಸೆಲ್‌ಡಾರ್ಫ್‌ನ ವೇದಾಂತ ಸ್ನೇಹಿತರ ಜೊತೆ ವಿಭಿನ್ನ ಸ್ಥಳಗಳಲ್ಲಿ ಉಪನ್ಯಾಸಗಳನ್ನು ಸಂಘಟಿಸುವ ಹಾಗೂ ಆಯೋಜಿಸುವ ಕಾರ್ಯಗಳಲ್ಲಿ ಚುರುಕಾಗಿ ಪಾಲ್ಗೊಳ್ಳತೊಡಗಿದ್ದೆನು. ಮಹಾರಾಜರು ಅತ್ಯುತ್ತಮ ಮಾತುಗಾರರು; ಅತ್ಯಂತ ಕ್ರಿಯಾತ್ಮಕ ವ್ಯಕ್ತಿತ್ವದವರು; ಒಂದು ಘಂಟೆಗೂ ಹೆಚ್ಚು ಕಾಲ ಶ್ರೋತೃಗಳನ್ನು ಮಾತಿನ ಮೋಡಿಗೆ ಸಿಲುಕಿಸುತ್ತಿದ್ದರು. ಅವರು ಎಂದೂ ಟಿಪ್ಪಣಿಯನ್ನಾಗಲೀ, ಕಾಗದದ ಚೂರನ್ನಾಗಲೀ ಇಟ್ಟುಕೊಂಡವರಲ್ಲ; ಎಲ್ಲವೂ ಆ ಸಂದರ್ಭದಲ್ಲಿ ಒಡಮೂಡಿದುದೇ; ನಿಜಕ್ಕೂ ವಿಲಕ್ಷಣ! ಅವರು ಚತುರವಾಗ್ಮಿ, ನಿದರ್ಶನಗಳನ್ನೂ ಕಥಾನಕಗಳನ್ನೂ ಅಳವಡಿಸಿ ತಮ್ಮ ಉಪನ್ಯಾಸಗಳನ್ನು ಜೀವಂತವಾಗಿಸುತ್ತಿದ್ದರು. ಪ್ರಶ್ನೋತ್ತರ ಅವಧಿಯಂತೂ ಯಾವಾಗಲೂ ತುಂಬ ಆಸಕ್ತಿಕರವಾಗಿ ಮತ್ತು ಪ್ರಬೋಧಕವಾಗಿ ಇರುತ್ತಿತ್ತು.

ಸ್ವಾಮಿ ರಂಗನಾಥಾನಂದರ ಪ್ರತಿ ವಾರ್ಷಿಕ ಆಗಮನ ಮತ್ತು ವೇದಾಂತ ಸಂದೇಶದ ಪ್ರಸಾರಕ್ಕೆ ನಮಗೆ ನೀಡಿದ ಪ್ರೋತ್ಸಾಹಗಳ ಫಲವಾಗಿ ನಮ್ಮ ಪ್ರಾಂತದಲ್ಲಿ ಪ್ರತಿವರ್ಷವೂ ಮೂರು–ನಾಲ್ಕು ವಿಚಾರ ಸಂಕಿರಣಗಳನ್ನು ಆಯೋಜಿಸಲಾಗುತ್ತಿತ್ತು– ಮೊದಲನೆಯದಾಗಿ ಸ್ವಾಮಿ ರಂಗನಾಥಾನಂದರೊಂದಿಗೆ, ಎರಡನೆಯದು ಸ್ವಾಮಿ ಋತಜಾನಂದರೊಂದಿಗೆ, ಮೂರನೆಯದು ಇಂಗ್ಲೆಂಡ್‌ನ ಸ್ವಾಮಿ ಭವ್ಯಾನಂದರೊಂದಿಗೆ, ನಾಲ್ಕನೆಯದು ಜಿನಿವಾದ ಸ್ವಾಮಿ ಅಮರಾನಂದರೊಂದಿಗೆ.

ಕೆಲವು ವೇಳೆ ನಾನು ಬಯಸದೆ, ಪ್ರಜ್ಞಾಪೂರ್ವಕ ಅರಿವಿಲ್ಲದೆ ನಾನು ಉಪನ್ಯಾಸಗಳನ್ನು ಆಯೋಜಿಸುವ ಹೊಣೆಯನ್ನು ವಹಿಸಬೇಕಾಯಿತು. ಆದರೂ ಇತರ ವೇದಾಂತ ಮಿತ್ರರ ಮತ್ತು ಭಕ್ತರ ಸಹಾಯವಿದ್ದೇ ಇರುತ್ತಿತ್ತು. ಜರ್ಮನಿಯಲ್ಲಿ ಹಲವು ವರ್ಷಗಳ ವೇದಾಂತ ಚಳವಳಿಯಲ್ಲಿ ಮೊದಲ ಬಾರಿಗೆ ಸಹಜವಾಗಿಯೇ ತುಮುಲ ಮತ್ತು ಬರ್ಲಿನ್, ವೇಯಿಸ್‌ಬ್ಯಾಡೆನ್, ಫ್ರಾಂಕ್‌ಫರ್ಟ್, ಡ್ಯೂಯಿಸ್‌ಬರ್ಗ್, ಡಸ್ಸೆಲ್‌ಡಾರ್ಫ್‌ನ ಭಕ್ತರ ಬೆರೆಯುವಿಕೆ ಇತ್ತು. ಇದು ಸ್ವಾಮಿ ರಂಗನಾಥಾನಂದರ ಮತ್ತು ಇತರ ಸ್ವಾಮಿಗಳ ಪ್ರಭಾವ. ಅವರೆಲ್ಲರೂ ಜರ್ಮನಿಯಲ್ಲಿ ಕೇಂದ್ರವೊಂದನ್ನು ಸ್ಥಾಪಿಸುವ ವಿಚಾರಕ್ಕೆ ಈಗ ಬೆಂಬಲ ನೀಡಿದರು. ಇಲ್ಲಿ ನಾನು ಹೇಳಲೇಬೇಕಾದ್ದೆಂದರೆ, ಬೇಲೂರು ಮಠದ ಸ್ವಾಮಿಯೊಬ್ಬರ ನೇತೃತ್ವದಲ್ಲಿ ಜರ್ಮನ್ ಕೇಂದ್ರದ ನಮ್ಮ ಸರ್ವಸಮ್ಮತ ಉದ್ದೇಶದ ಬಗ್ಗೆ ಇಲ್ಸೆ ಬಸ್ಕ್ ಮತ್ತು ಕರ್ಟ್ ಫ್ರೆಡ್‌ರಿಕ್ಸ್ ತುಂಬ ಸಾಮರಸ್ಯದಿಂದ ಕೆಲಸ ಮಾಡಿದರು. ಎಷ್ಟರ ಮಟ್ಟಿಗೆ ಎಂದರೆ, ಕರ್ಟ್ ಫೆಡ್‌ರಿಕ್ಸ್ ಮುಂದೆ ಬೇಲೂರು ಮಠಕ್ಕೆ ಹಲವು ಪತ್ರಗಳನ್ನು ಬರೆದು ಜರ್ಮನಿಗೆ ಸ್ವಾಮಿಯೊಬ್ಬರನ್ನು ಕಳುಹಿಸುವಂತೆ ವಿನಂತಿಸಿಕೊಂಡರು.

ಈ ಮಧ್ಯೆ ಹೊಸದಾಗಿ ಹಲವು ವೇದಾಂತ ಪ್ರಶಂಸಕರು ಹಾಗೂ ಭಕ್ತರು ನಮ್ಮೊಡನೆ ಸೇರಿಕೊಂಡು ನಾವು ಬೆಳೆಯುವುದಕ್ಕೆ ಸಹಕರಿಸಿದರು. ಈ ಸಂದರ್ಭದಲ್ಲಿ ದೇವೇಂದ್ರ ಜೋಶಿ ಮತ್ತು ದ್ವಿಜೇಂದ್ರ ಎನ್. ಗುಪ್ತ ಅವರ ಹೆಸರನ್ನು ಉಲ್ಲೇಖಿಸಲೇಬೇಕು. ಉಪನ್ಯಾಸಗಳನ್ನು ಆಯೋಜಿಸಲು ಸಭಾಭವನವನ್ನು ಹೊಂಚಿಕೊಳ್ಳಲು ಅವರ ಸಂಪರ್ಕ ನಮಗೆ ಸಹಾಯಕವಾಯಿತು. ಎರಡನೆಯವರು ಡಿಂಗ್ದೆನ್‌ನ ಅಕಾಡೆಮಿ ಕ್ಲಾವ್ಸೆನ್‌ಹೋಫ್‌ನಲ್ಲಿ ಉಪನ್ಯಾಸ ಮಂದಿರವನ್ನು ಪಡೆಯುವುದಕ್ಕೆ ಸಹಾಯ ಮಾಡುವಲ್ಲಿ ಉಪಕರಣವಾದರು. ೧೯೮೬ರಲ್ಲಿ ಅಲ್ಲಿ ಏನಾಯಿತೋ ಅದು ಹಿಂದೆಂದೂ ಆಗಿರಲಿಲ್ಲ. ಸುಮಾರು ೧೦೦ ಭಕ್ತರು ಜೂನ್ ೨೦ರಿಂದ ೨೨ರವರೆಗೆ ಒಂದೇ ಛಾವಣಿಯ ಅಡಿ ಸ್ವಾಮಿ ರಂಗನಾಥಾನಂದರ ಸಹವಾಸದಲ್ಲಿ ಮತ್ತು ಭಾಷಣವನ್ನು ಆಸ್ವಾದಿಸುತ್ತ ಒಟ್ಟಿಗೇ ನೆಲಸುವುದು ಸಾಧ್ಯವಾಗಿತ್ತು.

೧೯೮೭ರಲ್ಲಿ ಮಹಾರಾಜರು ಇದ್ದಕ್ಕಿದ್ದಂತೆ ಗಂಭೀರ ಸ್ವರೂಪದ ಕಾಯಿಲೆಗೆ ತುತ್ತಾದರು. ಅವರ ವಿದೇಶದ ಎಲ್ಲ ಕಾರ್ಯಕ್ರಮಗಳನ್ನೂ ರದ್ದುಪಡಿಸಬೇಕಾಯಿತು. ನಾವು ಎದೆಗುಂದಿ ತುಂಬ ದುಃಖಿತರಾದೆವು.

ಏಕೆಂದರೆ, ಕ್ಲಾವ್ಸೆನ್‌ಹೋಫ್‌ನಲ್ಲಿ ಅದ್ಭುತ ಉಪವಿಚಾರಗೋಷ್ಠಿಯ ಎಲ್ಲ ಸಿದ್ಧತೆಯೂ ನಡೆದಿತ್ತು; ಅದಕ್ಕಾಗಿ ಮತ್ತೆ ಮಹಾರಾಜರ ಸಂದರ್ಶನವನ್ನು ನಾವು ಎದುರುನೋಡುತ್ತಿದ್ದೆವು. ಆದರೆ ಸ್ವಾಮಿ ರಂಗನಾಥಾನಂದರು ಸ್ವಾರ್ಥರಹಿತರಾಗಿ ಸ್ವಾಮೀಜಿಯವರ ಕಾರ್ಯಕ್ಕಾಗಿ ಮಾತ್ರವೇ ಬದುಕಿದ್ದವರು! ವಿಚಾರಸಂಕಿರಣವನ್ನು ನಡೆಸಬೇಕೆಂದು ಸ್ವಾಮಿ ಋತಜಾನಂದರಿಗೆ ಹೇಳಿ ಅವರು ವ್ಯವಸ್ಥೆ ಮಾಡಿದರು. ಅವರು ಹಾಗೇ ಮಾಡಿದರು. ಸ್ವಾಮಿ ಋತಜಾನಂದರೊಂದಿಗೆ ಅಭ್ಯಾಸಗೋಷ್ಠಿ ವೈಭವೋಪೇತವಾಗಿತ್ತು. ೧೯೮೮ ಮತ್ತು ೧೯೮೯ ರಲ್ಲೂ ತಮ್ಮ ಸಾನ್ನಿಧ್ಯ ಮತ್ತು ಭಾಷಣಗಳಿಂದ ಅವರು ನಮ್ಮನ್ನು ಅನುಗ್ರಹಿಸಿದರು.

ಸ್ವಾಮಿ ರಂಗನಾಥಾನಂದರು ಚೆಂಡು ಉರುಳುತ್ತಿರುವಂತಿರಲು ವ್ಯವಸ್ಥೆ ಮಾಡಿದ್ದರು. ಇಲ್ಸೆ ಬಸ್ಕ್ ಶಾರದಾಮಠದ ಪರಿವ್ರಾಜಿಕೆ ವಿವೇಕಪ್ರಾಣಾರನ್ನು ಆಮಂತ್ರಿಸಿದರು. ಆಕೆ ೧೯೮೯ ಮತ್ತು ೧೯೯೦ರಲ್ಲಿ ಡೋರ್ಟ್‌ಮಂಡ್ ಹಾಗೂ ಕ್ಲಾವ್ಸೆನ್‌ಹೋಫ್‌ಗಳಲ್ಲಿ ಪ್ರೇರಣಾದಾಯಕ ಉಪನ್ಯಾಸಗಳನ್ನು ನೀಡಿದರು. ಇಂಥ ಎಲ್ಲ ಕಾರ್ಯಗಳಲ್ಲಿ ಸಹಜವಾಗಿಯೇ ವಿರೋಧಿಗಳಿದ್ದರು, ಬೆಂಬಲಿಗರೂ ಇದ್ದರು. ಈ ಬೆಂಬಲಿಗರಲ್ಲಿ ನಾನು ಎರಡು ಹೆಸರುಗಳನ್ನು ಉಲ್ಲೇಖಿಸಲೇಬೇಕು. ಅವರು ಅಭಕ್ಕೂ-ಶುಭಕ್ಕೂ ನನ್ನೊಂದಿಗೆ ನಿಂತವರು-ಡಾ॥ ಎಂ. ಹಾರ್ಟ್‌ಮನ್ ಮತ್ತು ಎಲಿಯೋನೋರ್ ಕ್ಲೆಯಿನ್. ಡಾ॥ ಎಂ. ಹಾರ್ಟ್‌ಮನ್ ವಕೀಲರು. ಈ ವ್ಯಕ್ತಿಯೇ ಜರ್ಮನಿಯ ವೇದಾಂತ ಅಸೋಸಿಯೇಶನ್‌ನ ಮೊದಲ ಕರಡು ಕಾಯಿದೆಯನ್ನು ರೂಪಿಸಿದವರು; ೧೯೮೯ರಲ್ಲಿ ಡಾರ್ಮ್‌ಸ್ಟಾಡ್‌ನಲ್ಲಿ ಅಧಿಕೃತವಾಗಿ ನೋಂದಣಿ ಮಾಡಿಸಿದವರು; ತೆರಿಗೆ ವಿನಾಯಿತಿ ಕಲಂನ್ನೂ ಒದಗಿಸಿಕೊಟ್ಟವರು.

೧೯೯೨ರ ಹೊತ್ತಿಗೆ ವೇದಾಂತ ಚಟುವಟಿಕೆಗಳು ಉತ್ತುಂಗ ಸ್ಥಿತಿಯಲ್ಲಿದ್ದವು. ಸ್ವಾಮಿಯವರು ಬಂದು ನೆಲಸಬಹುದಾದ ಮನೆಯನ್ನು ಹೊಂದಿಸಲಿಕ್ಕಾಗಿ ಡಾ॥ ಹಾರ್ಟ್‌ಮನ್ ಮತ್ತು ನಾನು ಹಣ ಹೊಂಚಲು ಪ್ರಯತ್ನಿಸಿದ್ದೆವು. ಎಲಿಯೋನೋರ್ ಕ್ಲೆಯಿನ್ ತಕ್ಕಷ್ಟು ಬೆಂಬಲಿಸಲು ಆಶಿಸಿದ್ದರು. ಆದರೆ ಬೇರೊಂದು ವಶೀಲಿಬಾಜಿ ನಡೆಯುತ್ತಿದೆ ಹಾಗೂ ಡಾ॥ ಹಾರ್ಟ್‌ಮನ್ ಅವರು ಅಸೋಸಿಯೇಶನ್‌ನ ಅಧ್ಯಕ್ಷರಾಗಿ ಮುಂದುವರಿಯುವುದನ್ನು ಅವರು ಒಪ್ಪಿಕೊಳ್ಳಲು ಸಿದ್ಧರಿಲ್ಲ ಎನ್ನುವುದರ ಅರಿವು ನಮಗಾಯಿತು. ಆಗ ಉಪಾಧ್ಯಕ್ಷೆಯಾಗಿದ್ದ ನಾನು, ನನ್ನ ಜೊತೆ ಎಲಿನಿಯೋರ್ ಕ್ಲೆಯಿನ್ ಕೂಡ ಅಸೋಸಿಯೇಶನ್ನನ್ನು ತೊರೆದುಬಿಟ್ಟೆವು.

ನನಗೆ ಅದುವೇ ಸ್ವಾಮಿ ರಂಗನಾಥಾನಂದ ಮತ್ತು ಜರ್ಮನಿಯಲ್ಲಿನ ವೇದಾಂತ ಚಳವಳಿಯ ೧೦ ವರ್ಷಗಳ ಸುದೀರ್ಘ ಅದ್ಭುತ ಪಯಣದ ಕೊನೆಯಾಗಿತ್ತು. ಆ ಸಮಯಕ್ಕೆ ನನಗೆ ನೋವು ಮತ್ತು ದುಃಖವಾಗಿತ್ತು. ಆದರೆ ನನಗೆ ಸಮಾಧಾನ ತಂದದ್ದೆಂದರೆ, ಮುಂದೆಯೂ ಮಹಾರಾಜರಿಂದ ಬರುತ್ತಿದ್ದ ಪತ್ರಗಳು. ಅದರಲ್ಲಿ ನಾನು ಮಾಡಿದ ಪ್ರಾಮಾಣಿಕ ಪ್ರಯತ್ನ ತಮಗೆ ತಿಳಿದಿದೆ ಎನ್ನುವುದನ್ನು ಮತ್ತೆ ಮತ್ತೆ ಹೇಳಿದ್ದರು. ಇಂದು, ನಾನು ಇದನ್ನು ಶ್ರೀ ಶ್ರೀ ರಾಮಕೃಷ್ಣರ ಆಶೀರ್ವಾದ ಮತ್ತು ಅನುಗ್ರಹವೆಂದು ಪರಿಗಣಿಸುವೆನು. ಅವರೇ ನನಗೆ ಇಂಥ ಮಹಾತ್ಮರ ಮಾರ್ಗದರ್ಶನದಲ್ಲಿ ಅವರ ಸೇವೆಗೈಯುವ ಸದವಕಾಶವನ್ನು ಕರುಣಿಸಿದ್ದಾರೆ. ಸ್ವಾಮಿ ರಂಗನಾಥಾನಂದರು ನನ್ನ ಭವಿತವ್ಯದ ಆಧ್ಯಾತ್ಮಿಕ ಜೀವನವನ್ನು ರೂಪಿಸಿದ್ದಾರೆ.

ಸ್ವಾಮಿ ರಂಗನಾಥಾನಂದರಿಗೆ ಮತ್ತೆ ಎಂದೂ ಜರ್ಮನಿಗೆ ಬರಲಿಕ್ಕಾಗಲೇ ಇಲ್ಲ. ಆದರೂ ಬೇಲೂರು ಮಠಕ್ಕೆ ಅಥವಾ ಹೈದರಾಬಾದ್‌ಗೆ ಅವರನ್ನು ಭೆಟ್ಟಿಮಾಡುವುದಕ್ಕೆ ಯಾರೇ ಹೋದರೂ ಅವರನ್ನು ಹರಸಿ ಕೇಳುತ್ತಿದ್ದ ಮೊದಲ ಪ್ರಶ್ನೆಯೆಂದರೆ, ಜರ್ಮನಿಯಲ್ಲಿ ವೇದಾಂತ ಕಾರ್ಯದ ಪ್ರಗತಿ ಹೇಗಿದೆ ಎನ್ನುವುದೇ. ಪತ್ರಗಳ ಮೂಲಕ ನಾನು ಅವರೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಂಡಿದ್ದೆನು. ಪ್ರತಿ ಎರಡು ಅಥವಾ ಮೂರು ವರ್ಷಗಳಿಗೊಮ್ಮೆ ನಾನು ಭಾರತದಲ್ಲಿದ್ದಾಗ ಬೇಲೂರು ಮಠ ಅಥವಾ ಹೈದರಾಬಾದ್‌ಗೆ ಅವರನ್ನು

ಕಾಣಲೆಂದೇ ಹೋಗುತ್ತಿದ್ದೆನು. ಕೆಲವೊಮ್ಮೆ ಅವರೇ ನಾನಿರುವ ಮುಂಬಯಿಯಲ್ಲಿ ಇರುತ್ತಿದ್ದರು. ಪ್ರತಿ ಬಾರಿಯೂ ನಾನು ಅವರನ್ನು ಕೇಳುತ್ತಿದ್ದೆ: ಯಾವಾಗ ಜರ್ಮನಿಗೆ ಒಬ್ಬ ಸ್ವಾಮಿ ದೊರೆಯುವರು? ನಾನು ಅವರನ್ನು ಕೊನೆಯ ಬಾರಿಗೆ ಭೇಟ್ಟಿಯಾದದ್ದು ಮುಂಬಯಿಯಲ್ಲಿ, ೨೦೦೨ರಲ್ಲಿ.

ಸ್ವಾಮಿ ರಂಗನಾಥಾನಂದರು ೧೯೯೮ರಲ್ಲಿ ಬೇಲೂರು ಮಠದ ಅಧ್ಯಕ್ಷರಾದಾಗ ನಾನು ಇಂಗ್ಲೆಂಡ್‌ನ ಬೋರ್ನ್ ಎಂಡ್ ಆಶ್ರಮದಲ್ಲಿದ್ದೆನು. ಈ ಸುದ್ದಿ ಕೇಳಿ ಅದೆಷ್ಟು ಪುಳಕಿತಳಾದೆ! ಜರ್ಮನಿಗೆ ಸ್ವಾಮಿಯೊಬ್ಬರು ಲಭಿಸುವರು ಎಂದು ನನ್ನ ಅಂತರಂಗದಾಳದ ಭಾವ ಹೇಳಿತು. ನಾನು ಇದನ್ನು ಜೋರಾಗಿ ಹೇಳಿದಾಗ ಯಾರೋ ಒಬ್ಬರು ಹೇಳಿದರು: "ಅವರಿಗೆ ಎಷ್ಟು ಕಾಯಿಲೆಯಿದೆಯೆಂದರೆ, ಅವರು ಬಹಳ ಕಾಲ ಬದುಕಿರಲಾರರು." ಆದರೆ ಮಹಾರಾಜರಿಗೆ ಈಗ ಸಾಧ್ಯತೆ ಮತ್ತು ಸ್ಥಾನ ಇರುವುದರಿಂದ ಖಂಡಿತವಾಗಿಯೂ ಜರ್ಮನಿಗೆ ಸ್ವಾಮಿಯೊಬ್ಬರನ್ನು ಕಳುಹಿಸುವರು ಎನ್ನುವುದು ನನ್ನ ದೃಢವಾದ ತೀರ್ಮಾನವಾಗಿತ್ತು. ಹೇಗೆ ನಾವು ಸುದೀರ್ಘ ಕಾಲದಿಂದ ಸ್ವಾಮಿಯೊಬ್ಬರಿಗಾಗಿ ಹತಾಶೆಯಿಂದ ಕಾಯುತ್ತಿದ್ದೆವು ಎನ್ನುವುದು ಅವರಿಗೆ ಹಲವು ವರ್ಷಗಳ ನಮ್ಮೊಂದಿಗಿನ ಆಪ್ತ ಒಡನಾಟದಿಂದ ತಿಳಿದಿತ್ತು.

ನನ್ನ ತೀರ್ಮಾನ ಮತ್ತು ಪೂಜ್ಯ ಸ್ವಾಮಿ ರಂಗನಾಥಾನಂದರಲ್ಲಿ ನನಗಿದ್ದ ವಿಶ್ವಾಸ ನಿಜವಾಯಿತು. ೨೦೦೪ರ ನವೆಂಬರ್‌ನ ಕೊನೆಯಲ್ಲಿ ಅವರು ಸ್ವಾಮಿ ಬಾಣೇಶಾನಂದರನ್ನು ಬಿಂಡ್‌ವೀಡೆಯ ವೇದಾಂತ ಕೇಂದ್ರಕ್ಕೆ ಪ್ರಧಾನರನ್ನಾಗಿ ಕಳುಹಿಸಿದರು. ಪ್ರೀತಿಯ ರಂಗನಾಥಾನಂದ ಮಹಾರಾಜ್, ಸಾಸಿರ ಪ್ರಣಾಮಗಳು! ೨೦೦೫ರ ಏಪ್ರಿಲ್ ೨೬ರಂದು ಮುಂಬಯಿಗೆ ಹೊರಟ ನನ್ನ ವಿಮಾನ ಪಯಣದ ಮೇಲೆ, ನಮ್ಮ "ಅಚ್ಚುಮೆಚ್ಚಿನ ಸ್ವಾಮಿ" ಏಪ್ರಿಲ್ ೨೫ರಂದೇ ಸಮಾಧಿಸ್ಥರಾದರೆಂಬ ಸುದ್ದಿಯ ಕರಿನೆರಳು ಬಿತ್ತು. ನನ್ನ ಈ ಭೇಟ್ಟಿಯ ಕಾಲಕ್ಕೆ ಅವರ ದರ್ಶನ ಪಡೆಯಲು ಉದ್ದೇಶಿಸಿದ್ದೆನು. ಏಕೆಂದರೆ, ಅವರಿಗೆ ತುಂಬ ಅನಾರೋಗ್ಯ ಎನ್ನುವುದನ್ನು ಕೇಳಿ ತಿಳಿದಿದ್ದೆ. ಆದರೆ ಅದು ನೆರವೇರಲೇ ಇಲ್ಲ!!

ನಾನು ಈ ಕೆಳಗೆ ನಿರೂಪಿಸುವ ಘಟನೆಯಿಂದ ನನಗೆ ಒಂದಂತೂ ಮನವರಿಕೆಯಾಗಿದೆ. ಅದೆಂದರೆ, ರಂಗನಾಥಾನಂದ ಮಹಾರಾಜರು ಮತ್ತು ಪವಿತ್ರ ಶ್ರೀ ಮಾತೆ ಮತ್ತೊಮ್ಮೆ ನನ್ನನ್ನು ಕಾಪಿಡಲು ಹಾಗೂ ನನ್ನ ಮನದಾಳದ ಬಯಕೆಯನ್ನು ಈಡೇರಿಸಲು ಬಂದಿದ್ದಾರೆ. ಇದೊಂದು ಎಂದಿನ ಸಂಪ್ರದಾಯ. ಅದೇನೆಂದರೆ ಖಾರ್‌ನ ರಾಮಕೃಷ್ಣ ಮಿಶನ್‌ಗೆ ಅಧ್ಯಕ್ಷರಾದ ಸ್ವಾಮಿ ವಾಗೀಶಾನಂದರು ನನ್ನನ್ನು ಮುಂಬಯಿಯಿಂದ ಹೊರಡುವ ದಿನ ಯಾವಾಗಲೂ ಭೋಜನ ಪ್ರಸಾದಕ್ಕೆ ಆಹ್ವಾನಿಸುತ್ತಾರೆ. ಸೆಪ್ಟೆಂಬರ್ ೧೪ರಂದು ಪ್ರಸಾದ ಸ್ವೀಕರಿಸಿದ ಬಳಿಕ ಒಮ್ಮೆಗೇ ಕುಬೇರ ಮಹಾರಾಜರು (ಆಶ್ರಮದ ಈಗಿನ ಭಂಡಾರಿ ಮಹಾರಾಜರು) ತುಸು ಕಾಯುವಂತೆ ನನಗೆ ಹೇಳಿದರು. ಅವರಿಗೆ ಅಷ್ಟಾಗಿ ನನ್ನ ಪರಿಚಯವಿರಲಿಲ್ಲ; ನನಗೂ ಅವರು ಗೊತ್ತಿರಲಿಲ್ಲ. ನಾನು ನನ್ನ ಸೋದರಸುತೆ ಶಿಬಾನಿ ಮತ್ತು ಆಧ್ಯಾತ್ಮಿಕ ಸೋದರಿ ರಾಜಿ ಅವರೊಂದಿಗೆ ಕಾಯುತ್ತಿದ್ದೆನು. ಎಲ್ಲರೂ ಹೊರಟುಹೋದ ಬಳಿಕ, ಮಹಾರಾಜರು ಬಂದು, ನಾನು ಜರ್ಮನ್ ಕೇಂದ್ರಕ್ಕೆ ಹೋಗುವೆನೇ ಎಂದು ಕೇಳಿದರು. ಅವರ ಪ್ರಶ್ನೆಗೆ ನಾನು ಗಲಿಬಿಲಿಗೊಂಡೆನು. ನಾನು ಹೇಳಿದೆ, "ಇಲ್ಲ, ನಾನು ಹೋಗುವುದಿಲ್ಲ. ಏಕೆಂದರೆ ಜರ್ಮನಿಯ ವೇದಾಂತ ಅಸೋಸಿಯೇಷನ್‌ನೊಂದಿಗೆ ಕಳೆದ ೧೪ ವರ್ಷಗಳಿಂದ ನನಗೆ ಸಂಪರ್ಕವೇ ಉಳಿದಿಲ್ಲ." ಅಲ್ಲಿಯವರೆಗೆ ನಾನು ಸ್ವಾಮಿ ಬಾಣೇಶಾನಂದರನ್ನು ಭೇಟ್ಟಿಯಾಗಿರಲಿಲ್ಲ. ಆಕೂಡಲೇ ಅವರು ಹೇಳಿದರು: "ನೀವು ಠಾಕೂರ್ ಮತ್ತು ಮಾತೆಯ ಭಕ್ತೆ, ನೀವು ಒಬ್ಬ ತಾಯಿ, ನಿಮ್ಮ ಮಗ ಹೊರಗೆ ಅನ್ಯ ರಾಷ್ಟ್ರದಲ್ಲಿ ಅನೇಕ ಕಷ್ಟಗಳನ್ನೆದುರಿಸುತ್ತಿದ್ದಾರೆ. ಅಲ್ಲಿಗೆ ಹೋಗಿ ತುಸು ಅಡುಗೆ ಮಾಡಿ ಅವರಿಗೆ ಉಣಬಡಿಸುವುದು ನಿಮ್ಮ ಕರ್ತವ್ಯ ಅಲ್ಲವೇ?" ಅಲ್ಲಿಯವರೆಗಿನ ನನ್ನ ವಾದಗಳೆಲ್ಲ ಆಗ ಕ್ಷುಲ್ಲಕವಾದಂತೆ ಮತ್ತು ಸಡಿಲಗೊಂಡಂತೆ ಅನಿಸಿತು. ಸ್ವಾಮಿ ಬಾಣೇಶಾನಂದರನ್ನು ಸಂಪರ್ಕಿಸುವುದಾಗಿ ನಾನು ಭರವಸೆ ಕೊಟ್ಟೆನು. ಸೆಪ್ಟೆಂಬರ್ ಕೊನೆಯಲ್ಲಿ

ಜರ್ಮನಿಗೆ ಮರಳಿದ ಬಳಿಕ ನಾನು ಹಾಗೆ ಮಾಡಿದೆನು. ಈಗ ನಾನು ಸಾಧ್ಯವಾದಷ್ಟೂ ಮತ್ತೆ ಮತ್ತೆ ಬಿಂಡ್‌ವೀಡ್‌ಗೆ ಹೋಗುತ್ತೇನೆ. ಸಾಧ್ಯವಾದಲ್ಲೆಲ್ಲ ಸಣ್ಣ ಪುಟ್ಟ ಸಹಾಯ ಒದಗಿಸುತ್ತೇನೆ. ಅಲ್ಲಿ ಇದ್ದು ತುಂಬ ಸಂತಸವನನ್ನನುಭವಿಸುತ್ತೇನೆ. ಸ್ವಾಮೀಜಿ ಆಶ್ರಮದಲ್ಲಿ ಅದ್ಭುತವಾದ ನಿರ್ಮಲ ಆಧ್ಯಾತ್ಮಿಕ ವಾತಾವರಣವನ್ನು ಸೃಜಿಸಿದ್ದಾರೆ. ನನ್ನ ಮೇಲೆ ಮಳೆಗರೆದ ಸ್ವಾಮಿ ರಂಗನಾಥನಂದರ ಆಶೀರ್ವಾದ ನಿಜ ಆಗಿದೆ. ನನಗೆ ವಹಿಸಿದ ಕೆಲಸ ಮಾಡುತ್ತ ನಾನು ಇನ್ನೂ ಇಲ್ಲಿದ್ದೇನೆ. ಠಾಕೂರ್ ಮತ್ತು ಮಾತೆಯ ಮಡಿಲಲ್ಲಿ ನಾನು ಮನೆಗೆ ಬಂದಿದ್ದೇನೆ.

* * * *

# ೧೦೨. ವಿಜ್ಞಾನ–ತಂತ್ರಜ್ಞಾನಗಳ ನಡುವಣ ಸೇತುಬಂಧ

–ಎಂ.ಎಸ್.ವಲಿಯಾತನ್*

ನಾನು ಸ್ವಾಮಿ ರಂಗನಾಥಾನಂದರ ಶಿಷ್ಯನೆಂದು ಅಥವಾ ಅವರನ್ನು ಹತ್ತಿರದಿಂದ ಬಲ್ಲೆನೆಂದೂ ಹೇಳಿಕೊಳ್ಳಲಾರೆ. ಆದರೆ ಭಗವಾನ್ ಶ್ರೀ ರಾಮಕೃಷ್ಣರ ದಾಸನಾಗಿ ನಾನು ಅವರನ್ನು ತುಂಬ ಗೌರವಿಸುತ್ತೇನೆ; ಮೆಚ್ಚುತ್ತೇನೆ.

೧೯೫೫ರಷ್ಟು ಹಿಂದಿನ ದಿನಗಳಲ್ಲಿ ಸ್ವಾಮಿ ರಂಗನಾಥಾನಂದ ಅವರನ್ನು ಕಾಣುವ ಮತ್ತು ಅವರ ಮಾತುಗಳನ್ನಾಲಿಸುವ ಉತ್ತಮ ಸೌಭಾಗ್ಯ ನನ್ನದಾಗಿತ್ತು. ನಾನು ತಿರುವನಂತಪುರದಲ್ಲಿ ವೈದ್ಯಕೀಯ ವಿದ್ಯಾರ್ಥಿಯಾಗಿದ್ದೆ. ನಿರ್ಬಂಧಕ ಔಷಧ ಪ್ರಾಧ್ಯಾಪಕ ಡಾ॥ ಕೃಷ್ಣನ್ ತಂಪಿ ಅವರು ಸ್ವಾಮಿ ರಂಗನಾಥಾನಂದರು ನಮ್ಮ ಕಾಲೇಜಿಗೆ ಆಗಮಿಸಿ ಮಧ್ಯಾಹ್ನದ ಮೇಲೆ ಅಧ್ಯಾಪಕರನ್ನೂ, ವಿದ್ಯಾರ್ಥಿಗಳನ್ನೂ ಉದ್ದೇಶಿಸಿ ಮಾತನಾಡುವರು ಎಂದು ಒಂದು ದಿನ ನಮಗೆ ಹೇಳಿದರು. ಅಪರೂಪವಾಗಿ ಧಾರ್ಮಿಕ ನೇತಾರರು ಕಾಲೇಜಿನಲ್ಲಿ ಮಾತನಾಡುತ್ತಿದ್ದುದರಿಂದ. ಲೋಕೋತ್ತರ ವ್ಯಕ್ತಿತ್ವದ ಸ್ವಾಮೀಜಿ ನಮಗೆ ವಿಶೇಷ ಸಂದೇಶವನ್ನು ನೀಡುವರು ಎನ್ನುವುದು ನಮಗೆ ಗೊತ್ತಿತ್ತು. ಆ ಅಪರಾಹ್ನ ಅವರು ಮಾತನಾಡಿದಾಗ, ತಮ್ಮ ಸರಾಗವಾದ ಮಾತಿನ ಪ್ರವಾಹದಿಂದ ಮತ್ತು ವಿಶ್ವದೃಷ್ಟಿಯ ಘನವಾದ ಜ್ಞಾನದಿಂದ ಪ್ರತಿಯೊಬ್ಬರನ್ನೂ ಮಂತ್ರಮುಗ್ಧರನ್ನಾಗಿಸಿದರು. ಅವರು ಹೇಳೀದ್ದೆಲ್ಲ ನನಗೆ ನೆನಪಿಲ್ಲ, ಆದರೆ ಸ್ವಾಮಿ ವಿವೇಕಾನಂದರು ಕೊಟ್ಟ ಕರೆ "ಮಾನವ–ನಿರ್ಮಾಣದ ಶಿಕ್ಷಣ"ದ ಉಲ್ಲೇಖ ಮತ್ತು ಸ್ವಾಮಿ ವಿವೇಕಾನಂದರ 'ಸಂಪೂರ್ಣ ಕೃತಿ ಶ್ರೇಣಿ'ಯನ್ನು ನಾವು ಓದಬೇಕೆಂಬ ಪ್ರಬೋಧನೆ ನನ್ನ ನೆನಪಲ್ಲಿ ಆಳವಾಗಿ ಅಚ್ಚೊತ್ತಿದ್ದವು. "ನಿಮಗೆ ಸ್ಫೂರ್ತಿ ನೀಡದ ಒಂದೇ ಒಂದು ಪುಟವೂ ಅವುಗಳಲ್ಲಿಲ್ಲ" ಎಂದು ಅವರು ನಮಗೆ ಭರವಸೆಯಿತ್ತರು.

ವರ್ಷಗಳೇ ಕಳೆದ ಮೇಲೆ ೧೯೬೨ ಅಥವಾ ೧೯೬೩ರಲ್ಲಿ ಖಾರ್‌ನ ರಾಮಕೃಷ್ಣ ಮಿಷನ್‌ನಲ್ಲಿ ಶ್ರೀ ರಾಮಕೃಷ್ಣರ ಜನ್ಮದಿನೋತ್ಸವದಲ್ಲಿ ರಂಗನಾಥಾನಂದ ಅವರ ಭಾಷಣವನ್ನು ಕೇಳಿದೆನು. ಇಬ್ಬರು ಹುಡುಗಿಯರು ತುಂಬಾ ಇಂಪಾಗಿ ಬಂಗಾಳಿಯಲ್ಲಿದ್ದ ಪ್ರಾರ್ಥನೆಯನ್ನು ಹಾಡಿ ಸಭೆಗೆ ಮಂಗಳಮಯ ಭಾವವನ್ನು ಉಂಟುಮಾಡಿದರು. ಸ್ವಾಮಿಯವರು ಈ ಹಾಡುಗಳತ್ತ ಬೊಟ್ಟು ಮಾಡಿ ತಮ್ಮ ಭಾಷಣವನ್ನು ಆರಂಭಿಸಿದರು. ಈ ಹಾಡುಗಳು ಶ್ರೀ ರಾಮಕೃಷ್ಣ ಮತ್ತು ವಿವೇಕಾನಂದರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುವ ಕಾಜಿ ನಜ್ರುಲ್ ಇಸ್ಲಾಂ ಅವರ ರಚನೆಗಳೇ ಆಗಿದ್ದುವು. ಆ ಭಾಷಣ ಅವಿಸ್ಮರಣೀಯವಾಗಿತ್ತು. ಶ್ರೀ ರಾಮಕೃಷ್ಣರ ಸರ್ವಧರ್ಮ ಸಮನ್ವಯ ದೃಷ್ಟಿಯನ್ನು ಕುರಿತದ್ದಾಗಿತ್ತು: ಇಂಗ್ಲಿಷರು, ಮುಸಲ್ಮಾನರು, ಹಿಂದೂಗಳು ವಾಟರ್, ಪಾನೀ, ಜಲ್ ಎಂದು ಬೇರೆ ಬೇರೆಯಾಗಿ ಕರೆದರೂ ಅವು ಉದ್ದೇಶಿಸಿದ ವಸ್ತು ಒಂದೇ; ಆ ಮಹಾಗುರು ವಿವಿಧ ಧರ್ಮಗಳನ್ನು ಅನ್ವೇಷಿಸಿ ಅವುಗಳ ಆಂತರ್ಯದಲ್ಲಿರುವ ಏಕತೆಯನ್ನು ತಾಳೆ ನೋಡಿದರು; ಭಾರತೀಯರು ಈ ಬೋಧನೆಯನ್ನು ಆಚರಣೆಗೆ ತರುವುದು ಅತ್ಯಾವಶ್ಯಕ. ಈ ಎಲ್ಲ ಸಂಗತಿಗಳನ್ನು ಕುರಿತು ಸ್ವಾಮಿಯವರು ತುಂಬ ಗಾಢವಾಗಿ ಮಾತನಾಡಿದರು. ಶ್ರೋತೃಗಳು ಪರಿಪೂರ್ಣ ಮೌನದಿಂದ ಆಲಿಸಿದರು.

---

* ರಾಷ್ಟ್ರೀಯ ಸಂಶೋಧನ ಪ್ರಾಧ್ಯಾಪಕರು, ಮಣಿಪಾಲ ವಿಶ್ವವಿದ್ಯಾಲಯ, ಕರ್ನಾಟಕ.

ಈ ಮುಂದಿನ ವರ್ಷಗಳಲ್ಲಿ ರಾಮಕೃಷ್ಣ ಮಿಷನ್‌ನ ಸಾಂಸ್ಕೃತಿಕ ಸಂಸ್ಥೆಯಿಂದ ವಾರ್ತಾ ಸಂಚಿಕೆ ನನಗೆ ಬರುತ್ತಿತ್ತು. ಅವುಗಳಲ್ಲಿ ಸ್ವಾಮಿ ರಂಗನಾಥಾನಂದರು ಉಪನಿಷತ್ತುಗಳನ್ನು ಕುರಿತು ನೀಡಿದ ಉಪನ್ಯಾಸ ಮತ್ತು ಲೇಖನಗಳಿರುತ್ತಿದ್ದವು. ಅವುಗಳ ಸಂಕಲನ ಇತ್ತೀಚೆಗೆ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿದೆ. ಅವರ ವಿಶ್ಲೇಷಣೆಯು ಯಾವಾಗಲೂ ಸ್ಪಷ್ಟವೂ, ಮೂಲ ಗ್ರಂಥಕ್ಕೆ ಸಂಪೂರ್ಣ ನಿಷ್ಠವೂ ಆಗಿರುತ್ತಿತ್ತು. ಕಠೋಪನಿಷತ್ತಿನ ಹೆಚ್ಚಿನ ವಿಶ್ಲೇಷಣೆಗಳು ನನಗೆ ಇಷ್ಟವಾದವು. ಈ ಕಾಲಕ್ಕೆ ಅವರನ್ನು ಭೆಟ್ಟಿಯಾಗುವ ಸಂದರ್ಭವೊಂದು ನನಗೆ ಒದಗಿತ್ತು. ಆಗ ಅವರು ನನ್ನ ಹಿನ್ನೆಲೆ ಹಾಗೂ ರಾಮಕೃಷ್ಣ–ವಿವೇಕಾನಂದ ಚಳವಳಿಯೊಂದಿಗಿನ ಒಡನಾಟದ ಬಗ್ಗೆ ವಿಚಾರಿಸಿದರು. ನನ್ನ ಶಾಲಾದಿನಗಳಿಂದಲೂ ಭಕ್ತನಾಗಿದ್ದೇನೆ ಮತ್ತು ಕಾಲಟಿಯ ಸ್ವಾಮಿ ಆಗಮಾನಂದರಿಂದ ಪ್ರಭಾವಿತನಾಗಿದ್ದೇನೆ ಎನ್ನುವುದನ್ನು ಕೇಳಿ ಅವರು ಸಂತಸಪಟ್ಟಂತೆನಿಸಿತು. ನರಶಾಸ್ತ್ರಜ್ಞರ ಸಭೆಯಲ್ಲಿ ಆಧ್ಯಾತ್ಮಿಕತೆ ಮತ್ತು ಮಿದುಳು ವಿಜ್ಞಾನದ ಬಗ್ಗೆ ಮಾತನಾಡಿದುದಾಗಿ ನನಗೆ ಹೇಳಿದರು ಹಾಗೂ ಆ ಉಪನ್ಯಾಸದ ಪ್ರತಿ ಒಂದನ್ನು ನೀಡಿದರು. ಆ ಉಪನ್ಯಾಸವು ಧರ್ಮ ಮತ್ತು ತತ್ತ್ವಜ್ಞಾನದಲ್ಲಷ್ಟೇ ಅಲ್ಲದೆ, ವಿಜ್ಞಾನ ಹಾಗೂ ಆಧ್ಯಾತ್ಮಿಕತೆಯ ನಡುವಣ ಅಂತಃಸಂಬಂಧೀ ಜ್ಞಾನಕ್ಷೇತ್ರದಲ್ಲೂ ಅವರಿಗಿದ್ದ ಘನವಾದ ಪಾಂಡಿತ್ಯವನ್ನು ಎತ್ತಿ ತೋರಿತ್ತು. ಗ್ರೇ ವಾಲ್ಟರ್, ಜ್ಯೂಲಿಯನ್ ಹಕ್ಸ್ಲಿ ಹಾಗೂ ಇತರ ಹಲವರ ಗ್ರಂಥಗಳಿಂದ ವಿಪುಲವಾಗಿ ಉದ್ಧರಣ ನೀಡಿ ನರಶಾಸ್ತ್ರಕ್ಕೆ ಸಂಪೂರ್ಣವಾಗಿ ಗದ್ಯಕಾವ್ಯದ ಗಂಧವನ್ನು ನೀಡಿದ್ದರು. ನಿಜಕ್ಕೂ ವಿಜ್ಞಾನ ಮತ್ತು ತತ್ತ್ವಜ್ಞಾನಗಳು ಅವರನ್ನು ಅದೆಷ್ಟು ಆಳವಾಗಿ ಆಸಕ್ತರನ್ನಾಗಿಸಿದ್ದುವೆಂದರೆ, ಈ ವಿಷಯದ ಮೇಲೆ ಅವರು ಜ್ಯೂಲಿಯನ್ ಹಕ್ಸ್ಲಿಯ ಜೊತೆ ಚರ್ಚೆ ನಡೆಸಿದ್ದರು. ಆದರೆ, ಅದು ಅಪೂರ್ಣ ಟಿಪ್ಪಣಿಯಾಗುವಷ್ಟಕ್ಕೇ ಪರ್ಯವಸಾನಗೊಂಡಿತು.

ಮುಂದಿನ ಬಾರಿ ವಾಷಿಂಗ್ಟನ್ ಡಿಸಿಯಲ್ಲಿ ನನಗೆ ಸ್ವಾಮಿಯವರ ಭೆಟ್ಟಿಯಾಯಿತು. ಆಗ ನಾನು ಜಾರ್ಜ್‌ಟೌನ್ ವಿಶ್ವವಿದ್ಯಾಲಯದ ಆಸ್ಪತ್ರೆಯಲ್ಲಿ ಹೃದಯ ಶಸ್ತ್ರಚಿಕಿತ್ಸೆಯಲ್ಲಿ ನಿವಾಸಿ ವ್ಯಾಸಂಗ ಮಾಡುತ್ತಿದ್ದೆನು. ಸ್ವಾಮಿಯವರು ಕ್ಯಾಥೊಲಿಕ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳು, ಶಿಕ್ಷಕ ಸಿಬ್ಬಂದಿ ಹಾಗೂ ಪಾದ್ರಿಗಳನ್ನೊಳಗೊಂಡ ಶ್ರೋತೃ ಸಮೂಹವನ್ನುದ್ದೇಶಿಸಿ ಭಾಷಣ ಮಾಡಿದರು. ಸಭಾಭವನ ತುಂಬಿತ್ತು. ಸ್ವಾಮಿಯವರ ನಿರೂಪಣೆಯಲ್ಲಿ ಪ್ರಭುತ್ವವಿತ್ತು; ಪಾಶ್ಚಾತ್ಯ ಶ್ರೋತೃಗಳಿಗೆ ತಕ್ಕುದಾಗಿತ್ತು. ಎಲ್ಲರಲ್ಲಿರುವ ದೈವಿಕತೆಯ ಬಗ್ಗೆ ಒತ್ತು ನೀಡಿ, ಆ ದೈವಿಕತೆಯನ್ನು ಅನಾವರಣಗೊಳಿಸುವುದೇ ಮನುಷ್ಯ ಪ್ರಯತ್ನದ ಗುರಿ ಎಂದು ಹೇಳಿದರು. ಅವರು ಪ್ರಶ್ನೆಗಳನ್ನು ಅಪೇಕ್ಷಿಸಿದರು. ಅವುಗಳ ಎಲ್ಲೆ ಸ್ನೇಹದಿಂದ ಹಗೆಯವರೆಗೆ ಚಾಚಿತ್ತು. ಆದರೆ, ಅವರು ಗಲಿಬಿಲಿಗೊಳ್ಳಲಿಲ್ಲ.

ದಶಕಗಳೇ ಕಳೆದವು. ೧೯೮೦ರ ದಶಕದಲ್ಲಿ ತಿರುವನಂತಪುರದ ವಿ. ಜೆ. ಪುರಭವನದಲ್ಲಿ ನಡೆದ ಸಭೆಯೊಂದರಲ್ಲಿ ಎಲ್ಲ ಮತಧರ್ಮಗಳಲ್ಲೂ ಅಂತರ್ಗತವಾಗಿರುವ ಆಧ್ಯಾತ್ಮಿಕತೆಯ ತಿರುಳನ್ನೂ, ದುರ್ಬಲರಿಗೆ ಸಾಧ್ಯವಾಗದ ಅದರ ಸಾಕ್ಷಾತ್ಕಾರದ ಪ್ರಾಯೋಗಿಕ ಮಾರ್ಗವನ್ನೂ ಕುರಿತು ಸ್ವಾಮಿಯವರು ಮಾತನಾಡಿದರು. ನಾನು ಕೂಡ ಭಾಷಣಕಾರನಾಗಿ ಆ ವೇದಿಕೆಯಲ್ಲಿ ಭಾಗವಹಿಸಿದ್ದೆನು. ತಿರುವನಂತಪುರದಲ್ಲಿ ನನ್ನ ಬದುಕು ಮತ್ತು ಕೆಲಸ ಹಾಗೂ ರಾಮಕೃಷ್ಣರ ಭಕ್ತರೊಂದಿಗೆ ನನ್ನ ಆಜೀವ ಒಡನಾಟದ ಬಗ್ಗೆ ವಿಚಾರಿಸಿಕೊಳ್ಳಲು ಅವರು ಮರೆಯಲಿಲ್ಲ.

೨೦೦೨ರಲ್ಲಿ ರಾಮಕೃಷ್ಣ ಮಿಷನ್ ಸಾಂಸ್ಕೃತಿಕ ಸಂಸ್ಥೆಯಲ್ಲಿ ನಡೆದ ಪ್ರಜ್ಞಾ ಸ್ವರೂಪವನ್ನು ಕುರಿತ ಅಂತಾರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಸ್ವಾಮಿಯವರನ್ನು ಕೊನೆಯ ಬಾರಿಗೆ ಕಂಡಿದ್ದೆ. ಸಹಜವಾಗಿಯೇ ಅವರ ದೇಹಸ್ಥಿತಿ ಚೆನ್ನಾಗಿರಲಿಲ್ಲ. ಆದರೆ, ಅವರು ಪ್ರಜ್ಞಾಸ್ವರೂಪವನ್ನು ಕುರಿತ ವೇದಾಂತದ ದೃಷ್ಟಿಯ ಬಗ್ಗೆ ಚೈತನ್ಯಭರಿತವಾಗಿ ಮಾತನಾಡಿದರು. ಮುಂದೆ ಬೇಲೂರು ಮಠದಲ್ಲಿ ಅವರ ಶ್ರೋತೃವಾಗುವ ಭಾಗ್ಯ ನನ್ನದಾಗಿತ್ತು. ಆಗ ಅವರು ಮಣಿಪಾಲದ ನನ್ನ ಚಟುವಟಿಕೆಗಳ ಬಗ್ಗೆ ಹಾಗೂ ಮಣಿಪಾಲದಲ್ಲಿ

ಅವರಿಗೆ ಪರಿಚಿತರಾಗಿದ್ದ ಅನೇಕ ರಾಮಕೃಷ್ಣ ಭಕ್ತರ ಬಗ್ಗೆ ವಿಚಾರಿಸಿದರು. ಜಗತ್ತಿನ ಎಲ್ಲೆಡೆ ಅವರಿಗೆ ಭಕ್ತರೂ, ಮೆಚ್ಚುಗೆ ವ್ಯಕ್ತಪಡಿಸುವವರೂ ಇದ್ದರು. ಅವರೆಲ್ಲರೂ ಮಾರ್ಗದರ್ಶನಕ್ಕಾಗಿ ಮತ್ತು ಪ್ರೇರಣೆಗಾಗಿ ಇವರನ್ನು ಸಂದರ್ಶಿಸುತ್ತಿದ್ದರು.

ಕಳೆದ ಮೂರು ದಶಕಗಳ ಕಾಲ ಸ್ವಾಮಿಯವರು ಬರೆದ ಹಲವು ಗ್ರಂಥಗಳನ್ನೂ, ಲೇಖನಗಳನ್ನೂ ಓದಿದ್ದೇನೆ. ಅಲ್ಲದೆ, ಅವರ ಬರೆಹಗಳಿಂದ ದೊಡ್ಡ ಪ್ರಮಾಣದ ಲಾಭಪಡೆದಿದ್ದೇನೆ. ಆದರೆ, ಅವರು ಆಡಿದ ಮಾತಿನ ಹಾಗೂ ಅವರೊಡನೆ ವೈಯಕ್ತಿಕ ಭೇಟಿಯ ಪರಿಣಾಮ ಎಣೆಯಿಲ್ಲದಷ್ಟು ಮಹತ್ತರವಾದುದಾಗಿತ್ತು. ಸ್ವಾಮಿ ವಿವೇಕಾನಂದರ ಹೇಳಿಕೆಗಳನ್ನು ಕುರಿತಂತೆ ರೋಮೇ ರೋಲಾ ಅವರ ಉದ್ಗಾರ ಪ್ರಸಿದ್ಧವಾದುದು: "ಆ ಮಹಾನಾಯಕನ ತುಟಿಗಳಿಂದ ಹೊರಹೊರಟ ಉಜ್ವಲ ಶಬ್ದಗಳು ಎಂಥ ತಲ್ಲಣ ಹಾಗೂ ಎಂಥ ಮೈಮರೆವನ್ನು ಉಂಟುಮಾಡಿರಬೇಕು." ಇದೇ ಮಾತನ್ನು ಸ್ವಾಮಿ ರಂಗನಾಥಾನಂದರ ವಿವೇಕ ಮತ್ತು ಆಧ್ಯಾತ್ಮಿಕತೆಯ ನಿರರ್ಗಳ ವಾಕ್ಸರಣಿಯ ಬಗ್ಗೆಯೂ ಹೇಳಬಹುದಾಗಿದೆ. ನೇರವಾಗಿ ಅವರ ಮಾತುಗಳನ್ನು ಆಲಿಸಿದ್ದು ಹಾಗೂ ಅವರನ್ನು ಅರಿತಿದ್ದು ನನಗೆ ದೊರೆತ ಅನುಗ್ರಹವೆಂದು ಭಾವಿಸಿದ್ದೇನೆ.

* * * *

# ೧೦೩. ರೂಪಾಂತರಿಸುವ ದರ್ಶನ

**–ಲಲಿತ ಸುಕುಮಾರನ್***

ಏಪ್ರಿಲ್–ಮೇ ತಿಂಗಳ ಬೇಸಿಗೆಯಲ್ಲಿ ಕೊಡೈಕೆನಾಲ್ ಬೆಟ್ಟಗಳಿಗೆ ಹೋಗುವುದು ಯಾವಾಗಲೂ ಕಾತರದಿಂದ ಎದುರು ನೋಡುವ ಸಂಗತಿ. ೧೯೬೬ನೇ ವರ್ಷದಲ್ಲಿ ಅದು ವಿಶೇಷ ಔಚಿತ್ಯಪೂರ್ಣವೂ, ನಮ್ಮ ಬದುಕಿನ ಗತಿಯನ್ನು ಬದಲಿಸಿದಂಥದೂ ಆಯಿತು. ಆಗ ದೈವಾನುಗ್ರಹದಿಂದಾಗಿ ಲಾಯ್ಡ್ ರಸ್ತೆಯ ಶ್ರೀಮತಿ ಸರಸ್ವತಿ ಗೌರಿಶಂಕರ್ ಅವರ ಮನೆಯಲ್ಲಿ ನಾವು ಸ್ವಾಮಿ ರಂಗನಾಥಾನಂದರನ್ನು ಭೇಟ್ಟಿಯಾದೆವು.

ನನ್ನ ನಿರೂಪಣೆಯ ಸಾಹಸಕಾರ್ಯಕ್ಕೆ ಮುಂಚಿತವಾಗಿ ಕೊಡೈ ಬಗ್ಗೆ ಒಂದು ಮಾತು. ಅದು ಪಶ್ಚಿಮ ಘಟ್ಟಗಳ ಪಳನಿ ಪರ್ವತಶ್ರೇಣಿಯಲ್ಲಿ ನಿರಿಗೆ ನಿರಿಗೆಯಾದ ಸ್ನಿಗ್ಧ ಕಿರುಬೆಟ್ಟಗಳ ತಾಣ. ಅದನ್ನು ಭಾರತದಲ್ಲಿ ನೆಲೆಯೂರಿದ ಕ್ರೈಸ್ತ ಪಾದ್ರಿಗಳು ಅಭಿವೃದ್ಧಿಗೊಳಿಸಿದರು. ಹಾಗೆ ನೋಡಿದರೆ, ಮದ್ರಾಸ್ ಪ್ರಾಂತ್ಯದಲ್ಲಿ ಬ್ರಿಟಿಷರ ಬೇಸಗೆ ರಾಜಧಾನಿಯಾಗಿದ್ದ ಊಟಿಗಿಂತ ತುಂಬ ವಿಲಕ್ಷಣವಾದದ್ದು. ಕೊಡೈಕೆನಾಲ್ (ಇದರ ಮೂಲ ಪೂರ್ಣ ಹೆಸರು)ನಲ್ಲಿ ಬ್ರಿಟಿಷರು ಕಟ್ಟಿಸಿದ ಸುಂದರ ಉತ್ತುಂಗ ಭವನಗಳಿಲ್ಲ; ಆದರೆ, ಕಲ್ಲುಕಟ್ಟಡದ, ಹೆಂಚಿನ ಮಾಡುಗಳ, ಪಾಚಿ ಕಟ್ಟಿದ ಐವಿ ಹಸಿರು ಲತೆಯ ಹಂದರ ಆವರಿಸಿದ ಗೋಡೆಗಳ, ಇನಿದಾದ ಹೂಗಳು ತುಂಬಿದ ಕೈದೋಟದೊಂದಿಗೆ ಬಳ್ಳಿ ಗುಲಾಬಿಯ ಚೌಕಟ್ಟಿನ ಬಾಗಿಲುಗಳ ಪುಟ್ಟ ಮನೆಗಳಿದ್ದವು. ಇಂಥ ಒಂದು ಪುಟ್ಟ ಮನೆಯಲ್ಲಿ ಗೌರಿಶಂಕರರ ಕುಟುಂಬ ನೆಲೆಸಿತ್ತು. ಅಲ್ಲಿಯೇ ನಮಗೆ ಈ ಸ್ವಾಮಿ ರಂಗನಾಥಾನಂದರ 'ದರ್ಶನ' ಆದದ್ದು. ಅದಕ್ಕೆ ನಮ್ಮ ಬದುಕನ್ನು ರೂಪಾಂತರಿಸಿ ಅನುಗ್ರಹಿಸಿದ ಶಕ್ತಿ ಮತ್ತು ಅರ್ಹತೆ ಇತ್ತು.

ಬೇಸಗೆಯ ಆಗಂತುಕರು ದೋಣಿತೇಲಿಗಾಗಿ ಕಲೆಯುವ, ಸ್ನಿಗ್ಧ ಮರಕತ ಸರೋವರದ ದಡದಲ್ಲಿದ್ದ ಬೋಟ್‌ಕ್ಲಬ್‌ಗೆ (ತೇಲುಮೋಜಿನ ಕೂಟ ತಾಣಕ್ಕೆ) ನಾವು ಹೋಗಿದ್ದೆವು. ಅಲ್ಲಿ, ಸ್ವಾಮಿಯವರು ಕೊಡೈಗೆ ಆಗಮಿಸಿ ಗೌರಿಶಂಕರರ ಗೌರವಾನ್ವಿತ ಅತಿಥಿಯಾಗಿ ಉಳಿದುಕೊಂಡಿರುವರೆಂದು ತಿಳಿಯಿತು. ಅಲ್ಲಿ ಅವರು ದಿನವೂ ಉಪನ್ಯಾಸ ನೀಡುತ್ತಿದ್ದಾರೆ ಎನ್ನುವುದನ್ನು ಅಲ್ಲಿಯೇ ಕೇಳಿ ತಿಳಿದೆವು! ಶ್ರೀಮತಿ ಸಾವಿತ್ರಿ ನಾಗೇಶ್ವರನ್ ಗೌರಿಶಂಕರರ ತಾಯಿ; ಗಣಪತಿ ಶಾಸ್ತ್ರಿಯವರ ಮಗಳು. ಶಾಸ್ತ್ರಿಗಳು ಪಡುಕೋಟ್ಟೈ ರಾಜ್ಯದ ಸುಪ್ರಸಿದ್ಧ ನ್ಯಾಯಮೂರ್ತಿಯಾಗಿದ್ದವರು; ನನ್ನ ಯಜಮಾನರ ಕುಟುಂಬದ ಉತ್ತಮ ಸ್ನೇಹಿತರು. ನಾನು ಹಿಂದೆ ಹಲವು ಬಾರಿ ಈ ವಿನಯಶೀಲ ಮಹಿಳೆಯನ್ನು ಭೇಟ್ಟಿಯಾಗಿದ್ದೆನು. ಶ್ರೀ ರಾಮಕೃಷ್ಣರ ಭಾವಚಿತ್ರವಿರುವ, ಅವರ ಅತಿ ಸಾದಾ ದೇವರ ಮನೆಯನ್ನು ಕಂಡಿದ್ದೆನು. ನಮಗೆ ಶ್ರೀ ರಾಮಕೃಷ್ಣರಲ್ಲಿ ಆಸಕ್ತಿ ಇದ್ದುದು ಅವರಿಗೆ ಗೊತ್ತಿತ್ತು. ನಾವು ಕೊಡೈನಲ್ಲಿ ಇದ್ದುದರಿಂದಲೂ, ಅದು ಕೊಡೈನಲ್ಲಿ ಒಂದು ಸಣ್ಣ ಗೆಳೆಯರ ಬಳಗವಾದುದ ರಿಂದಲೂ ಆ ಉಪನ್ಯಾಸಗಳಿಗೆ ನಮ್ಮನ್ನು ಕರೆದರು. ನನ್ನ ಗಂಡ, ಮಗಳು, ಮಗ, ಎಪ್ಪತ್ತರ ಇಳಿವಯಸ್ಸಿನ ತಂದೆ ಇವರನ್ನೆಲ್ಲ ಒಳಗೊಂಡ ನನ್ನ ಇಡೀ ಕುಟುಂಬವೇ ಆ ಉಪನ್ಯಾಸಗಳಿಗಾಗಿ ಕಾತರದಿಂದ ಎದುರುನೋಡುತ್ತಿತ್ತು. ಹಾಗಾಗಿ ಸುಮಾರು ಎರಡು ವಾರಗಳ ಕಾಲದ ಉಪನ್ಯಾಸಗಳಿಗೆ ತಪ್ಪದೆ ಹಾಜರಾದೆವು.

ಸಾರ್ವಜನಿಕವಾಗಿಯೋ, ಮಠದ ಆವರಣದಲ್ಲೋ ಔಪಚಾರಿಕವಾಗಿ ಸುಮ್ಮನೆ ಅವರ ಉಪನ್ಯಾಸವನ್ನು ಆಲಿಸಿದ್ದಲ್ಲ ಇದು; ಸ್ವಾಮಿಯವರನ್ನು ಅಷ್ಟು ಅನೌಪಚಾರಿಕವಾಗಿ ಗೆಳೆಯರ ಮನೆಯಲ್ಲಿ ಭೇಟ್ಟಿಯಾದದ್ದು

---

* ಚೆನ್ನೈನ ಭಕ್ತೆ

ಸಂಪೂರ್ಣ ಭಿನ್ನವಾಗಿತ್ತು. ಜ್ಞಾನಿಯಾದ ಅಸಾಧಾರಣ ವ್ಯಕ್ತಿಯಾಗಿ ಹಾಗೂ ಸರಳ ಇಂಗ್ಲೀಷಿನಲ್ಲಿ, ಸುಂದರ ಸುಪರಿಷ್ಕೃತ ವಿಚಾರಗಳ ಹೊದಿಕೆಯಲ್ಲಿ ವಿವಿಧ ವಿಷಯಕ ವ್ಯಾಪಕ ಜ್ಞಾನವನ್ನು ಸಮೀಕರಿಸಬಲ್ಲ ಮಹಾ ವಾಗ್ಮಿಯಾಗಿ ಮಾತ್ರವೇ ಅವರನ್ನು ನಾವು ಕಂಡಿದ್ದಲ್ಲ; ಒಬ್ಬ ವ್ಯಕ್ತಿಯಾಗಿ ಅವರನ್ನು ಅರಿಯುವ ಸುವರ್ಣಾವಕಾಶ ಒದಗಿತ್ತು. ಅವರು ಹೃತ್ಪೂರ್ವಕವಾಗಿ, ದೊಡ್ಡ ಮನಸ್ಸಿನ, ಕಾಳಜಿ ತೋರುವ ಮಾನವಜೀವಿ. ಎಂಥ ಘನತೆ, ಎಂಥ ಉದಾತ್ತ ವರ್ತನೆ, ಎಂಥ ಸ್ವಾತಂತ್ರ್ಯ–ಧೈರ್ಯಗಳ ಸದ್ಭಾವ ಮೈದಳೆದಿವೆ! ಅವರಿಗೆ ಅರವತ್ತು ವಯಸ್ಸಾಗಿದ್ದೀತು. ಆದರೆ ಚೈತನ್ಯ ಮತ್ತು ಜಾಗಟೆಗಳ ಸಾಕಾರ ಅವರು. ಅವರ ವ್ಯಕ್ತಿತ್ವವನ್ನು ಬಣ್ಣಿಸುವ ನನ್ನ ಬಡ ಬಾಲಿಶ ಪ್ರಯತ್ನ ಅಥವಾ ಮುಪ್ಪಡರಿದ ಪ್ರಯತ್ನ – ಎಂದು ಹೇಳಬೇಕೇನೋ – ಅಂತೂ ಯಾವುದೇ ನ್ಯಾಯವನ್ನು ಒದಗಿಸಲಾರದು. ಇರಬಹುದು, ಆಗ ನನಗೆ ಏನು ಅನ್ನಿಸಿತ್ತೋ ಹಾಗೂ ಸುಮಾರು ಐವತ್ತು ವರ್ಷಗಳ ಬಳಿಕವೂ ಇಂದು ಅವರ ಸ್ಮರಣಕಾರಕ ಶಬ್ದಗಳಾಗಿ ಏನಿವೆಯೋ ಅದನ್ನು ರವೀಂದ್ರನಾಥ ಠಾಕೂರರ ಮಾತುಗಳಲ್ಲಿ ಹೇಳಿದರೇ ಉತ್ತಮ:

**ನನ್ನ ತಂದೆಯೇ ಸ್ವಾತಂತ್ರ್ಯದ ಸ್ವರ್ಗಕ್ಕಾಗಿ ನನ್ನ ಹಾಡು ಎದ್ದೇಳಲಿ.**
**ಅಲ್ಲಿ ಮನಕೆ ಭಯವು ಇರದು, ತಲೆಯು ಎತ್ತಿ ನಿಲುವುದು,**
**ಅಲ್ಲಿ ಅರಿವು ಮುಕ್ತವು;**
**ಅಲ್ಲಿ ಜಗವು ಮನೆಯ ಮೋಟುಗೋಡೆಯಿಂದ ಒಡೆದು ಚೂರು ಚೂರಾಗದು;**
**ಅಲ್ಲಿ ಸತ್ಯದಾಳದಿಂದ ಮಾತು ಹೊಮ್ಮಿ ಬರುವುದು;**
**ಅಲ್ಲಿ ದಣಿವಿರದ ದುಡಿಮೆ ತನ್ನ ಪರಿಪೂರ್ಣತೆಗಾಗಿ ತೋಳ ಚಾಚಿರುವುದು;**
**ಅಲ್ಲಿ ನಿರ್ಮಲ ವಿವೇಕ ಪ್ರವಾಹ ಜಡ ವಾಡಿಕೆಯ ಮಂಕು ಮರಳಲ್ಲಿ ಹಾದಿ ತಪ್ಪದು;**
**ಅಲ್ಲಿ ಮನವು ನಿನ್ನಿಂದಲೆ ನಿರಂತರ ವಿಸ್ತರ ಚಿಂತನೆ ಕ್ರಿಯೆಗಳಲ್ಲಿ ಮುನ್ನಡೆಯ ಪಡೆವುದು.**

–ಅದೇ ಆ ಮನುಷ್ಯ ಮತ್ತು ಆತನ ಮನಸ್ಸು. ಮಾನವ ಜೀವಿಯಾಗಿ ಅವರನ್ನು ನೆನೆದು ಯಾವಾಗಲೂ ನಾನು ಧೈರ್ಯ ಮತ್ತು ಆನಂದ ಹೊಂದಿದ್ದೇನೆ. ಅವರು ಅತ್ಯಂತ ವಿರಳ ಮಾನವಜೀವಿ. ನಿಜವೇ. ಆದರೆ ಉದಾತ್ತವಾಗಿ ಸಂಪರ್ಕಿಸಬಹುದಾದ, ಅದೇ ಕಾಲಕ್ಕೆ ಎಲ್ಲರ ಮೆಚ್ಚುಗೆ ಗೌರವಗಳಿಗೆ ಪಾತ್ರವಾಗಿದ್ದ ವ್ಯಕ್ತಿ. ನನಗೆ ನೆನಪಿರುವಂತೆ, ಶ್ರೀಮತಿ ಗೌರಿಶಂಕರರ ಮನೆಯ ಉಪನ್ಯಾಸವು ಆದಿ ಶಂಕರರ ವಿವೇಕ ಚೂಡಾಮಣಿಯನ್ನು ಕುರಿತದ್ದಾಗಿತ್ತು. ಸಂಸ್ಕೃತ ಶ್ಲೋಕಗಳನ್ನು ಸುಲಲಿತವಾಗಿ ಉದ್ಧರಿಸಿ ಎಷ್ಟು ಚೆನ್ನಾಗಿ ವಿವರಿಸಿದರೆಂದರೆ, ಅರ್ಥೈಸಿಕೊಳ್ಳಲು ಅದು ತುಂಬ ಸರಳ ಮತ್ತು ಸುಲಭವೆಂದೇ ತೋರಿತು. ಪ್ರತಿಯೊಂದು ಘಟ್ಟದಲ್ಲೂ ಭಗವದ್ಗೀತೆ ಪ್ರವೇಶಿಸುತ್ತಿತ್ತು. ಶ್ರೀ ರಾಮಕೃಷ್ಣರ ಬದುಕೂ, ಸ್ವಾಮಿ ವಿವೇಕಾನಂದರ ಬಲ ಮತ್ತು ಧೈರ್ಯಗಳ ಸಂದೇಶಗಳೂ ಹಲವು ಪ್ರಮುಖ ವಿಚಾರಗಳಿಗೆ ನಿದರ್ಶನಗಳಾಗಿ ಒದಗಿಬಂದವು. ಆದಿ ಶಂಕರರ ಸಂಸ್ಕೃತ ಭಾಷಾ ಬಳಕೆಯ ಪ್ರಭುತ್ವ ಮತ್ತು ಅವರ ಆಳವಾದ ಆಧ್ಯಾತ್ಮಿಕ ಒಳನೋಟಗಳೂ ನಮ್ಮ ಅರಿವಿಗೆ ದಕ್ಕಿದವು. ಉಪನಿಷತ್ತನ್ನೂ, ಅವುಗಳ ಆಧ್ಯಾತ್ಮಿಕ ಒಳನೋಟಗಳನ್ನೂ ಸಂಕ್ಷೇಪವಾಗಿ ಸ್ಪರ್ಶಿಸಿದ್ದರಿಂದಾಗಿ ಅಪರಿಮಿತ ಭವ್ಯತೆ ಮತ್ತು ಸೌಂದರ್ಯಗಳ ದರ್ಶನ ಮನಶ್ಚಕ್ಷುವಿನಲ್ಲಿ ಒಡಮೂಡಿತು. ಕಡಿದಾದ ಬಂಡೆಗಳ ಶಿಖರವನ್ನು ಮಿದುವಾಗಿ ಸವರುವ ಗುಲಾಬಿ ಮತ್ತು ಚಿನ್ನದ ಮೊದಲ ಛಾಯೆ ಮೂಡುವ ಮುಂಜಾವದ ಮಂಜುಮುಸುಕಿದ ಹಿಮಾಲಯದ ಶಿಖರಗಳಂತೆ ಪಡಿಮೂಡಿತು. ಬಾನಂಚಿನಾಚೆ ಬಲು ದೂರದಲ್ಲಿ, ಮೇಘ ಮಾಲೆಯಾಚೆ ದೂರದಂತರದಲ್ಲಿ, ಏನನ್ನೂ ಕಾಣುವ ನಿರೀಕ್ಷೆಯೇ ಇಲ್ಲದ ಆ ಎಡೆಯಲ್ಲಿ ಈ ಶಿಖರಗಳು ಗೋಪುರಗಟ್ಟಿದವು. ಇದು ನಿಮ್ಮ ಉಸಿರ ಹಿಡಿದಿರುವುದು, ನಿಮ್ಮ ಮನಕ್ಕೆ ಭಯಭಕ್ತಿಯ ತರುವುದು, ನಿಮ್ಮ ಹೃದಯವನ್ನು

ನಿಶ್ಚಲಗೊಳಿಸುವುದು– ಕ್ಷಣಮಾತ್ರದ ಬೌದ್ಧಿಕ ಜಾಗರ ಇದ್ದಾಗಲೂ ಇದು ಸತ್ಯ. ಸ್ವಾಮಿ ರಂಗನಾಥಾನಂದರ ಬೆಳಗುವ ಮಾತುಗಳಿಂದ ನನ್ನಲ್ಲಿ ಉದಯಿಸುತ್ತಿದ್ದ ಬೆಳಕಿಗೆ ಕೊನೆಯೇ ಇಲ್ಲದಿದ್ದಾಗ್ಯೂ ನಾನು ಮುಂದೆ ಸಾಗದಾದೆನು. ಸರಿಯಾಗಿ ಹೇಳಬೇಕೆಂದರೆ, ನನ್ನ ಇಬ್ಬರು ಮಕ್ಕಳೂ ಸೇರಿದಂತೆ ನಾವೆಲ್ಲರೂ ಮಂತ್ರ ಮುಗ್ಧರಾದೆವು. ಅವರಿಬ್ಬರೂ ಮುಂದಿನ ಸಾಲಿನಲ್ಲಿ, ಸ್ವಾಮಿಯವರ ಸಾಕ್ಷಾತ್ ಪದತಲದಲ್ಲಿ ಕುಳಿತು ಅವರನ್ನು ತನ್ಮಯತೆಯಿಂದ ಆಲಿಸಿದರು. ನಾವು ಸುಮಾರು ಹತ್ತು–ಹದಿನೈದು ದಿನಗಳ ಕಾಲ ಜ್ಞಾನಕಾರಂಜಿಗೆ ಮರಳುತ್ತಲೇ ಇದ್ದೆವು. ಕರಾರುವಾಕ್ಕಾಗಿ ದಿನಗಳೆಷ್ಟೆಂದು ನನಗೆ ನೆನಪಿಲ್ಲ.

ಕೊಡೈಗೆ ಹಲವು ಸುಪ್ರಸಿದ್ಧ ಆಗಂತುಕರಿದ್ದರು. ಅವರೆಲ್ಲರಿಗೆ ಇವರ ಆಕರ್ಷಣೆ. ಗಣ್ಯರಿಂದಲೂ ಶ್ರೀಸಾಮಾನ್ಯರಿಂದಲೂ ಶ್ರೀಮತಿ ಗೌರೀಶಂಕರರ ಮನೆ ತುಂಬಿತುಳುಕಿತ್ತು. ಗ್ವಾಲಿಯರ್‌ನ ರಾಜಮಾತೆ ತನ್ನ ಮಕ್ಕಳೊಂದಿಗೆ ಹಲವು ಬಾರಿ ಆಗಮಿಸಿದ್ದು ಮಾತ್ರ ನನ್ನ ನೆನಪಿನಲ್ಲಿದೆ.

ಕೊನೆಗೆ ಇದು ಮುಕ್ತಾಯಕ್ಕೆ ತಲುಪಿತು. ಆದರೆ ಅತ್ಯಂತ ಸಮಾಧಾನಕರ ಸಂಗತಿಯೆಂದರೆ, ಸ್ವಾಮಿ ರಂಗನಾಥಾನಂದರು ಮದ್ರಾಸಿಗೆ ಮರಳಿ ಪಯಣ ಮಾಡುವಾಗ ಅವರ ಸೌಕರ್ಯ, ಪ್ರಯಾಣ ಮತ್ತು ಅವರನ್ನು ಸುರಕ್ಷಿತವಾಗಿ ಮಠಕ್ಕೆ ಮುಟ್ಟಿಸುವ ಹೊಣೆ ವಹಿಸಿಕೊಳ್ಳುವಂತೆ ನಮ್ಮನ್ನು ಕೇಳಿಕೊಂಡಿದ್ದು ನಮಗೆ ಸಂದ ಗೌರವವಾಗಿತ್ತು. ಹಾಗೆ ಅವರೊಂದಿಗೆ ಪ್ರಯಾಣ ಮಾಡುವ ವಿಶಿಷ್ಟ ಅನುಗ್ರಹದ ಸದವಕಾಶ ನಮಗೆ ಲಭಿಸಿತ್ತು. ಅವರನ್ನು ಟ್ಯಾಕ್ಸಿಯಲ್ಲಿ ಕರೆದುಕೊಂಡು, ೫೦ ಮೈಲು ದೂರದಲ್ಲಿದ್ದ ಕೊಡೈ ರಸ್ತೆಯ ರೈಲುನಿಲ್ದಾಣಕ್ಕೆ ಘಟ್ಟ ಇಳಿದು ಹೋದೆವು. ಅವರೊಂದಿಗೆ ಅದೇ ಬೋಗಿಯಲ್ಲಿ ಪ್ರಯಾಣ ಮಾಡುವ ಭಾಗ್ಯ ನಮ್ಮದಾಯಿತು. ಅವರ ಸಮಯದ ಹೆಚ್ಚು ಪಾಲನ್ನು ನಾವೇ ಪಡೆದೆವು. ಅವರನ್ನು ಸ್ವಲ್ಪಸಮಯದ ಮಟ್ಟಿಗೆ ನಮ್ಮ ಮನೆಗೆ ಕರೆದೊಯ್ಯಲು ಮತ್ತು ಸಾಂಪ್ರದಾಯಿಕ ಪೂರ್ಣಕುಂಭದೊಂದಿಗೆ ಸ್ವಾಗತಿಸಲು ಸಾಧ್ಯವಾದದ್ದು ನಮ್ಮ ಮಹಾಸೌಭಾಗ್ಯ. ನಮ್ಮ ಅತ್ತೆ ಆಗ ಬದುಕಿದ್ದರು; ಅವರನ್ನು ಕಂಡು ತುಂಬ ಸಂತಸಪಟ್ಟರು. ನಮ್ಮ ಪೂಜಾಕೋಣೆಗೆ ಅವರು ಬಂದರು. ಆಗಿನ ಅಧ್ಯಕ್ಷ ಮಹಾರಾಜರಾಗಿದ್ದ ಸ್ವಾಮಿ ವೀರೇಶ್ವರಾನಂದರಿಂದ ನಾವು ದೀಕ್ಷೆ ಪಡೆಯಬೇಕೆಂದೂ, ಅದಕ್ಕೆ ತಾವು ಏರ್ಪಾಡು ಮಾಡುವುದಾಗಿಯೂ ನಮಗೆ ಹೇಳಿದರು. ನಾನು ಶಾರದಾ ಮಠಕ್ಕೆ ತಪ್ಪದೆ ಹೋಗಬೇಕೆಂದು ಅವರು ನನಗೆ ಹೇಳಿದರು. ಅದನ್ನು ಸ್ವಲ್ಪ ಸಮಯದ ಹಿಂದಷ್ಟೆ ಆರಂಭಿಸಲಾಗಿತ್ತು. ತಮ್ಮ ಮಾತಿನಂತೆ, ಅವರು ಸ್ಥಳೀಯ ಶಾರದಾ ಮಠದ ಮುಖ್ಯಸ್ಥೆಯಾಗಿದ್ದ ಪ್ರವ್ರಾಜಿಕೆ ನಿರ್ಭಯಪ್ರಾಣಾ ಅವರೊಂದಿಗೆ ಮಾತನಾಡಿದ್ದರು. ನಾನು ಸನಿಹದಲ್ಲೇ ಅಲ್ಲಿಗೆ ಹೋದಾಗ ಆಕೆ ನನ್ನನ್ನು ಆಪ್ತವಾಗಿ ಬರಮಾಡಿಕೊಂಡರು.

ಈ ರೀತಿಯಲ್ಲಿ ಸ್ವಾಮಿ ರಂಗನಾಥಾನಂದರೂ, ರಾಮಕೃಷ್ಣ ಮಠವೂ, ಶಾರದಾ ಮಠವೂ ನಮ್ಮ ಬದುಕನ್ನು ಪ್ರವೇಶಿಸುವಂತಾಯಿತು. ಆದರೂ ಶ್ರೀ ರಾಮಕೃಷ್ಣರು ನಮ್ಮ ಐವತ್ತರ ಇಳಿವಯಸ್ಸಿನಲ್ಲಿ ನಮ್ಮ ಭಾವಕೋಶವನ್ನು ಸೆರೆ ಹಿಡಿದಿದ್ದರು. ಆಗ ಅಂದರೆ ಅದೇ ವರ್ಷ ನವೆಂಬರ್‌ನಲ್ಲಿ (೧೯೬೬) ಸ್ವಾಮಿ ವೀರೇಶ್ವರಾನಂದರು ಮದ್ರಾಸಿಗೆ ಆಗಮಿಸಿದ್ದರು. ನಾವು ದೀಕ್ಷೆ ಪಡೆದೆವು. ನಾವು ತಪ್ಪದೆ ನಿಯಮಿತವಾಗಿ ಮಠದ ಸಂಪರ್ಕವಿಟ್ಟುಕೊಂಡಿದ್ದೆವು. ವಿಶೇಷವಾಗಿ ಮದ್ರಾಸಿನಲ್ಲಿ ಸ್ವಾಮಿ ರಂಗನಾಥಾನಂದರ ಉಪನ್ಯಾಸಗಳಿಗೆ ಹೋಗುತ್ತಿದ್ದೆವು. ಅವರು ಕೆಲವೇ ದಿನಗಳ ಮಟ್ಟಿಗೆ ಅಲ್ಲಿದ್ದಾಗಲೂ, ಭಕ್ತರ ಮನೆಗಳಲ್ಲಿ ಅನೌಪಚಾರಿಕ ಸಭೆ ನಡೆದಾಗಲೂ ಅವರ ದರ್ಶನ ಪಡೆಯುವ ಸದವಕಾಶ ನಮ್ಮದಾಗಿತ್ತು.

ಸ್ವಾಮಿ ವಿವೇಕಾನಂದ ಶತಮಾನೋತ್ಸವ ಭವನದ ಉದ್ಘಾಟನೆಗಾಗಿ ಅವರು ಮದ್ರಾಸ್‌ನಲ್ಲಿದ್ದಾಗ ದಿನವೂ ಸಂಜೆ ಉಪನ್ಯಾಸ ಮಾಡುತ್ತಿದ್ದರು. ಅವುಗಳಲ್ಲಿ ಭಾಗವತದ್ದು ಮಹತ್ವದ ಭಾಗವಾಗಿತ್ತು. ಜ್ಞಾನ ಘೃತದಲ್ಲಿ ಕರಿದು, ಭಕ್ತಿಯ ಸಕ್ಕರೆ ಪಾಕದಲ್ಲಿ ಅದ್ದಿ ತೆಗೆದಂತೆ ಆ ಪವಿತ್ರ ಸಾಹಿತ್ಯವನ್ನು ಸ್ವಾಮಿ ರಂಗನಾಥಾನಂದರು

ಬಣ್ಣಿಸಿದರು. ಅವರು ತೆರೆದುತೋರಿದ ಆಯಾಮ ಅದೆಂಥದು! ಪ್ರಹ್ಲಾದನ ಸ್ತುತಿ, ತನ್ನ ತಾಯಿಗೆ ಕಪಿಲನ ಉಪದೇಶಗಳು ಅವುಗಳ ಭಕ್ತಿ ಸಾಮಗ್ರಿಯಿಂದಲೂ ಅದ್ವೈತದ ಭಗವತ್ಪರಿಕಲ್ಪನೆಗಳಿಂದಲೂ ಅವು ತೇಜೋಮಯವಾಗಿರುತ್ತಿದ್ದವು.

ಈಗ ನಾನು ಕೆಲವು ಪ್ರಮುಖ ಪರಿಕ್ರಮಗಳನ್ನು ಸ್ಪರ್ಶಿಸಲೇಬೇಕು. ಅದೇನೆಂದರೆ, ಸ್ವಾಮಿ ರಂಗನಾಥಾನಂದರ ಆಪ್ತ ಒಡನಾಟ ಮತ್ತು ಅವರ ಅದ್ಭುತ ಜ್ಞಾನ ನನ್ನ ಆಲೋಚನೆ ಮತ್ತು ಬದುಕಿನ ಮೇಲೆ ಉಂಟುಮಾಡಿದ ಪ್ರಭಾವ ಮತ್ತು ಅವನ್ನು ರೂಪಾಂತರಗೊಳಿಸಿದ ಬಗೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅವರನ್ನು ನೋಡಿ, ಕೇಳಿ, ಅವರಿಗೆ ಸಂಬಂಧಿಸಿದವಳಾಗಿ ನನ್ನ ಪ್ರತಿಕ್ರಿಯೆ ಏನು?

ಇದಕ್ಕೆ ಪ್ರತಿಯಾಗಿ, ನನ್ನ ಬಾಲ್ಯ ಮತ್ತು ಹದಿಹರಯದಲ್ಲಿ ನಾನು ತೆರೆದುಕೊಂಡ ಸನ್ನಿವೇಶವಿದೆ. ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಚಳವಳಿಯು ಕೊನೆಯ ವರ್ಷಗಳನ್ನು ಕಾಣುವ ಕಾಲದಲ್ಲಿ ನಾನು ಬೆಳೆಯುತ್ತಿದ್ದೆನು. ಆಗ ದೇಶ ಕಟ್ಟುವ ವಿಚಾರಗಳೂ ದೇಶಭಕ್ತಿಯ ತೀವ್ರತೆಯೂ ತಾರಕಕ್ಕೇರಿದ್ದವು. ನನ್ನಲ್ಲಿ ಸಾಮಾಜಿಕ ಪ್ರಜ್ಞೆಯೂ ಮೊಳೆತಿತ್ತು. ನಮ್ಮ ರಾಷ್ಟ್ರ ಧುರೀಣರು ತ್ಯಾಗ, ಬಲ, ಸೇವೆ, ಶೌರ್ಯ, ಜಾತಿ–ಹಿಂಸೆಗಳ ನಿರ್ಮೂಲನೆಗಾಗಿ ಕರೆಕೊಟ್ಟಿದ್ದರು. ಆ ಮಹಾನ್ ವ್ಯಕ್ತಿಗಳು ಈ ಮೌಲ್ಯಗಳಲ್ಲಿ ಬದುಕಿಯೂ ಇದ್ದರು. ಒಡೆಯಲೆಳಸುತ್ತಿದ್ದ ಸಂಕುಚಿತ ಧರ್ಮ ತರುಣರ ಪ್ರೀತಿಗೆ ಪಾತ್ರವಾಗಿರಲಿಲ್ಲ. ನಮ್ಮ ಅಜ್ಜ–ಅಜ್ಜಿಯರು ಧಾರ್ಮಿಕ ಸಮರ್ಪಣೆಯ ಬದುಕನ್ನು ಬದುಕಿದ್ದರೂ, ಅದನ್ನು ನಮಗೆ ತೆರೆದುತೋರಿದ್ದರೂ, ನಾವು ಹೇಗೆ ತಾನೆ ಅವರ ಸಾಂಪ್ರದಾಯಿಕ ಬದುಕಿನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು? ಏಕೆಂದರೆ ಅದು ನಿಷ್ಠುರ ಭಕ್ತಿಯದು; ವೈಯಕ್ತಿಕ ಮೋಕ್ಷದ ಗುರಿಯುಳ್ಳ ದೈವಭಕ್ತಿಯದು. ಅದಕ್ಕೆ ಎದುರಾದದ್ದು ದೀನ–ದಲಿತರ ನಡುವೆ ಕ್ರಿಯಾತ್ಮಕ ಸೇವೆ, ಜಾತಿ–ಮತಗಳ ಸಂಕುಚಿತ ಪ್ರಜ್ಞೆಯ ತ್ಯಾಗ, ವೈಯಕ್ತಿಕ ಆಕಾಂಕ್ಷೆಯನ್ನು ತೊರೆದು ಸೌಕರ್ಯವಂಚಿತರಿಗಾಗಿ ಬದುಕುವುದು ಮತ್ತು ಕೆಲಸ ಮಾಡುವುದೇ ಮುಂತಾದ ಮೌಲ್ಯಗಳು. ಇವು ಹೊಂದಾಣಿಕೆಗೆ ಅರ್ಹವಲ್ಲದ್ದೇ?

ಈಗ, ಸ್ವಾಮಿ ರಂಗನಾಥಾನಂದರ ಮಾತುಗಳನ್ನು ಕೇಳಿದಾಗ, ಈ ಮೌಲ್ಯಗಳು ಮತ್ತು ನಿರ್ದಿಷ್ಟ ದೈವದ ಭಕ್ತಿ ಹಾಗೂ ಮೋಕ್ಷೋದ್ದೇಶಗಳ ನಡುವಿನ ಸಂಬಂಧಕ್ಕೆ ಒಂದು ಹದ ದಕ್ಕಿತು. ಇದಕ್ಕೆ ಉತ್ತರವು ಶ್ರೀ ರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ಬದುಕಿನಲ್ಲೇ ಅಡಕಗೊಂಡಿತ್ತು. ಸ್ವಾಮೀಜಿಯವರ ಅಸಾಧಾರಣ ಪ್ರತಿಭೆ ಶ್ರೀ ರಾಮಕೃಷ್ಣರ ಸ್ವಭಾವದ ಸಮಗ್ರತೆಯನ್ನು ಕಂಡರಿಸಬಲ್ಲದ್ದಾಗಿತ್ತು. ಶ್ರೀ ರಾಮಕೃಷ್ಣರ ಮಾನವತಾ ಮಜಲಿಗೆ ಒತ್ತುಕೊಟ್ಟಿದ್ದು ಅವರೇ. ವೈರಾಗ್ಯ ಮತ್ತು ಮಾನವತಾ ಸೇವೆ ಸಂಘರ್ಷಾತ್ಮಕ ವಿಚಾರಗಳಲ್ಲ ಎನ್ನುವುದನ್ನು ತೋರಲು ಇದನ್ನು ಬಳಸಿದರು. ಅವರು ಧರ್ಮದ ವಿಶ್ವದೃಷ್ಟಿಯನ್ನು ನಮಗೆ ಒದಗಿಸಿಕೊಟ್ಟರು ಅಥವಾ ಆ ಕುರಿತು ನಮ್ಮಲ್ಲಿ ಜಾಗೃತಿ ಮೂಡಿಸಿದರು.

ಸ್ವಾಮಿ ರಂಗಾನಾಥಾನಂದರ ಉಪನ್ಯಾಸಗಳೇ ಈ ಒಳನೋಟಗಳನ್ನು ನನ್ನಲ್ಲಿ ಮೂಡಿಸಿದವು. ಮಾನವೀಯತೆಯಲ್ಲಿ ಜ್ಞಾನ ಮತ್ತು ಆಧ್ಯಾತ್ಮಿಕತೆಗಳು ಉನ್ನತ ಸ್ಥಿತಿಗೇರುತ್ತವೆಯೆಂಬ ಪರಿಕಲ್ಪನೆ ನನ್ನಲ್ಲಿ ಜಾಗೃತವಾಯಿತು. ಇದು ಹೀಗಾದಾಗ, ಜ್ಞಾನ ಸಾಧನೆ ಮತ್ತು ಆಧ್ಯಾತ್ಮಿಕ ಪರಿಪೂರ್ಣತೆ – ಎಂದರೆ ಜನತೆಯಲ್ಲಿ ಜನಾರ್ದನನನ್ನು ಕಾಣುತ್ತದೆ ಹಾಗೂ ಜನಸೇವೆಯೇ ಜನಾರ್ದನನ ಸೇವೆ ಆಗುತ್ತದೆ. ಶೂನ್ಯದಲ್ಲಿ ಆಚರಿಸಲಾಗುವ ವಿರಕ್ತಿ, ತಪಸ್ಸು ಮತ್ತು ಆತ್ಮಾರ್ಪಣೆಗಳ ಮೌಲ್ಯಗಳನ್ನು ಒಪ್ಪಿಕೊಳ್ಳಲು ಈವರೆಗೆ ನನಗೆ ಸಾಧ್ಯವಾಗಿರಲಿಲ್ಲ. ವಿರುದ್ಧ ಯೋಚನಾ ಲಹರಿಗಳ ನಡುವೆ ನಾನೊಂದು ಸಾಮರಸ್ಯಪೂರ್ಣ ದರ್ಶನಕ್ಕಾಗಿ ತಡಕಾಡುತ್ತಿದ್ದೆನು. ಈ ಸಂಗತಿಗಳ ವ್ಯವಸ್ಥೆಗೆ ತಕ್ಕ ತಾಣಗಳನ್ನು ನನಗೆ ಸ್ವಾಮಿ ರಂಗನಾಥಾನಂದರು ತೋರಿಸಿಕೊಟ್ಟರು. ಸ್ವಾಮಿ ವಿವೇಕಾನಂದರ ಬದುಕಿನಲ್ಲಿ ಮಾನವತಾಸೇವೆಯು ಧರ್ಮದೊಂದಿಗೆ ಕೈಜೋಡಿಸಿತ್ತು

ಎನ್ನುವುದನ್ನು ಕಾಣಲು ಅವರೇ ಮತ್ತೆ ನನಗೆ ದಾರಿ ತೋರಿದರು. ಅವರು ಮಾನವೀಯತೆಯೇ ಸ್ವಾಮೀಜಿಯ ಮನೋಹರ ಅಂಶವಾಗಿತ್ತು.

ಈ ಮೇಲೆ ಹೇಳಿದ್ದಷ್ಟೇ ಅಲ್ಲದೆ, ನನ್ನ ಮನಸ್ಸನ್ನು ಸಚೇತನಗೊಳಿಸಿದ ಹಾಗೂ ನನ್ನ ಕ್ಷಿತಿಜವನ್ನು ಅನಂತವಾಗಿ ವಿಸ್ತರಿಸಿದ ಇನ್ನೂ ಕೆಲವು ಸಂಗತಿಗಳಿವೆ. ಸ್ವಾಮಿ ರಂಗನಾಥಾನಂದರು ಉಪನಿಷತ್ತಿನ 'ಧೀರ'ನ (ಕಠೋಪನಿಷತ್ತಿನ 'ಧೀರ')– 'ಒಂದು ಬಗೆಯ ಧೀಮಂತ ಮಾನವ'ನ ಪರಿಕಲ್ಪನೆಯನ್ನು ಪರಿಚಯಿಸಿದರು. ಆತನಲ್ಲಿ ಅಸಾಧಾರಣವಾದದ್ದೇನಿದೆ ಎಂದು ಅವರು ಕೇಳುತ್ತಾರೆ. ಅವರೇ ಉತ್ತರಿಸುತ್ತಾರೆ, "ತನ್ನ ಇಂದ್ರಿಯ ಮತ್ತು ಮನಸ್ಸುಗಳ ಚೈತನ್ಯವನ್ನು ಆತ ಒಳಮುಖವಾಗಿಸುವನು (ಅವೃತ್ತಚಕ್ಷುಃ). ಅವನ ಧ್ಯೇಯೋದ್ದೇಶವೇನಿತ್ತು? ಅಲ್ಲಿ ಆತ ಏನನ್ನು ಅರಸುತ್ತಿದ್ದ? ಅಮರತ್ವ (ಅಮೃತತ್ತ್ವಮ್). ಅಲ್ಲಿ ಆತ ಏನನ್ನು ಕಂಡುಕೊಂಡ? ಜೀವಿಯ ಅಂತರಾತ್ಮವನ್ನು (ಪ್ರತ್ಯಗಾತ್ಮಾನಮ್ ಐಕ್ಷತ್)."

ಈ ಧೀರನು ಪರಿಪೂರ್ಣವಾಗಿ ಜಾಗೃತನೂ, ವೈಯಕ್ತಿಕವಾಗಿ ಚೈತನ್ಯಪೂರ್ಣ ಆಗಿರಲೇಬೇಕು. ಜಾತಿ–ಮತದ ತಾರತಮ್ಯವಿಲ್ಲದ ಅತ್ಯಂತ ಶೂರ, ಪವಿತ್ರ ಮತ್ತು ಅತ್ಯುತ್ತಮ ಮನುಷ್ಯರ ಪರವಾಗಿ ನಿಲ್ಲಲು ಅಥವಾ ಪ್ರತಿನಿಧಿಸಲು ಆತ ಬಲುಬೇಗ ಬರಬೇಕು. ಸ್ವಾಮಿ ರಂಗನಾಥಾನಂದರು ಹೇಳುತ್ತಾರೆ: "ಆತ ಯಾವುದೇ ಧೀಮಂತ ವ್ಯಕ್ತಿಯಾಗಿರಬಹುದು. ಆತ ಕೇವಲ ಪಾಂಡಿತ್ಯ ಮತ್ತು ಸಾಮಾಜಿಕ ಶಿಷ್ಟತೆಗಳನ್ನು ದಾಟಿ, ದಣಿವಿಲ್ಲದ ಅಂತರಂಗ ಸಂಸ್ಕಾರದ ಮೂಲಕ ಆತ್ಮ ಸಾಕ್ಷಾತ್ಕಾರಕ್ಕೆ ಸಾಗಲೆಳಸುವನು. ಅಲ್ಲಿ ಮಾತ್ರವೇ ಎಲ್ಲ ಶೋಕ ಮತ್ತು ಅಲ್ಪತೆಗಳ ಅಂತ್ಯ ಅಡಗಿದೆ ಎನ್ನುವುದು ಆತನಿಗೆ ಮನವರಿಕೆಯಾಗಿರುತ್ತದೆ."

ಸ್ವಾಮಿ ರಂಗನಾಥಾನಂದರು ಸತ್ಯದ ಆಧುನಿಕ ಶೋಧಕರನ್ನೂ ನೆಲೆಗೊಳಿಸಲು ಈ ಪರಿಭಾಷೆಯನ್ನು ವಿಸ್ತರಿಸಿದರು. ಅವರೆಲ್ಲರೂ ಆಧ್ಯಾತ್ಮಿಕತೆಗೆ ಬಂದವರು; ಆಧುನಿಕ ವೈಜ್ಞಾನಿಕ ನಾಗರಿಕತೆಯ ಎಲ್ಲ ಜ್ಞಾನ ಹಾಗೂ ಶಕ್ತಿಗಳ ಬಗ್ಗೆ ಅತೃಪ್ತರಾಗಿರುವಂಥವರು; ವಿಶ್ವ ಮತ್ತು ಮಾನವನ ನೈಜ ಪ್ರಾರಬ್ಧದ ಅರ್ಥವನ್ನು ಶ್ರದ್ಧೆಯಿಂದ ಶೋಧಿಸುವಂಥವರು. ಅವರು ಬರ್ಟೆಂಡ್ ರಸೆಲ್ ಹಾಗೂ ಅದಕ್ಕೂ ಎಷ್ಟೋ ಹಿಂದೆ ಪ್ರಾಚೀನ ಗ್ರೀಕ್ ದೇಶದಲ್ಲಿದ್ದ ಸಾಕ್ರೆಟೀಸ್‌ರನ್ನು ಉಲ್ಲೇಖಿಸಿ ಈ ವಿಚಾರವನ್ನು ಪುಷ್ಟಿಗೊಳಿಸುತ್ತಿದ್ದರು. ಆ ಇಬ್ಬರೂ ಹೊರಗಣದೆಂಬ ಪರಿಮಿತ ದೃಷ್ಟಿಯಿಂದ ಉಂಟಾದ ಕೇವಲ ಜ್ಞಾನ ಮತ್ತು ಮಾಹಿತಿಗಳಿಂದ ಅತೃಪ್ತರಾಗಿದ್ದು, ಆಧ್ಯಾತ್ಮಿಕ ಜ್ಞಾನಕ್ಕಾಗಿ ಶೋಧ ಕೈಗೊಳ್ಳಬೇಕೆಂದು ಹೇಳಿದ್ದರು. ಸ್ವಾಮಿ ರಂಗನಾಥಾನಂದರ ಪ್ರೇರಣೆಯು ತತ್ತ್ವಜ್ಞಾನ ಹಾಗೂ ಧರ್ಮಗಳ ಕ್ಷೇತ್ರಗಳ ಮಾತ್ರವೇ ಅಲ್ಲದೆ ವಿಜ್ಞಾನ ವಲಯದಲ್ಲೂ ಹುದುಗಿತ್ತು. ಭೌತವಿಜ್ಞಾನ, ಖಗೋಲ ವಿಜ್ಞಾನ ಮತ್ತು ಜೀವವಿಜ್ಞಾನಗಳನ್ನು ಅವರು ವಿಸ್ತಾರವಾಗಿ ವ್ಯಾಸಂಗಮಾಡಿದ್ದರು. ಈ ವಿಜ್ಞಾನಗಳ ಸಹಾಯದಿಂದ ಅವರು ತಮ್ಮ ಮಾನವ ವಿಕಾಸ ಮತ್ತು ಆಧ್ಯಾತ್ಮಿಕ ವಿಚಾರಗಳನ್ನು ಪುಷ್ಟಿಗೊಳಿಸಿದ್ದರು. ಅವರುಗಳಲ್ಲೇ ತುಂಬ ದೊಡ್ಡವರು ಕೂಡ ಬಾಹ್ಯ ಜಗದ ತಮ್ಮ ಶೋಧದ ಕೊನೆಯಲ್ಲಿ, ಆ ಎಲ್ಲ ಜ್ಞಾನವನ್ನು ಶಸ್ತ್ರವಾಗಿಟ್ಟುಕೊಂಡೂ, ಕೊನೆಯಲ್ಲಿ ಮಾನವನದೇ ಆದ ಗೂಢತೆಯನ್ನು ಸಂಧಿಸಬೇಕಾಗಿಬಂದಿದ್ದು ಹೇಗೆ ಎನ್ನುವುದನ್ನು ಕೇಳಿದರು. ಏಕೈಕ ವಾಸ್ತವದ ಮೇಲಣ ಅವರ ಪ್ರಶ್ನೆಗಳಿಗೆ ಉತ್ತರವು ಆಳದ ನೆಲೆಯಿಂದ ಬರಬೇಕು. ಅದು ಆಂತರಂಗಿಕ ಎನ್ನುವ ಇನ್ನೊಂದು ದೃಷ್ಟಿಕೋನವನ್ನು ಒಳ ಗೊಂಡಿರುವುದು. "ಅಂತರಂಗ ಮತ್ತು ಬಹಿರಂಗ ಜ್ಞಾನವು ನಮಗೆ ಸಮಗ್ರ ವಿಶ್ವ ದೃಷ್ಟಿಯನ್ನು ನೀಡುವುದು. ಅದು ಮಾತ್ರ ವಿವೇಕಜ್ಞಾನ"– ಎಂದು ಸ್ವಾಮಿ ರಂಗನಾಥಾನಂದರು ಹೇಳಿದರು. ಮನಸ್ಸಿನ ಬೆರಗುಗೊಳಿಸುವ ಆಯಾಮವನ್ನು ನೋಡಿ. ಅದೆಂದರೆ, ವಿಶ್ವದ ಎಲ್ಲ ಸಂಗತಿಗಳೂ ಮನಸ್ಸಿನೊಳಕ್ಕೆ ತೂರಿಕೊಳ್ಳುವುದು; ಅದು ಅವುಗಳಿಗೆಲ್ಲ ಜಾಗ ನೀಡಿ ಪರಿಕಿಸುವುದು. ಇದರ ಆಯಾಮ ಅನಂತವಾಗಿರಬೇಕು ಎಂದು ಅವರು ಹೇಳುವರು. (ಬ್ಲೈಸೆ ಪಾಸ್ಕಲ್‌ನಿಂದ ಸ್ವೀಕರಿಸಿದ) ಪ್ರಿನ್ಸ್ ಲೂಯಿಸ್ ಡೆ ಬ್ರಾಗ್ಲೆ ಅವರ ಉಲ್ಲೇಖದಿಂದ ಈ ವಿಚಾರವು ಮನೋಜ್ಞವಾಗಿ ವ್ಯಕ್ತವಾಗುವುದು.

ಅದೆಂದರೆ, "ಅಂತರಾಳದಲ್ಲಿ ವಿಶ್ವವು ನನ್ನನ್ನು ಮುಳುಗಿಸಿಕೊಂಡುಬಿಡುವುದು ಮತ್ತು ಆಲೋಚನೆಯಲ್ಲಿ ಸೂಜಿ ಮೊನೆಯ ಗಾತ್ರಕ್ಕೆ ನನ್ನನ್ನು ಕುಗ್ಗಿಸಿಬಿಡುವುದು; ನಾನು ವಿಶ್ವವನ್ನು ಅರಿಯುವೆನು." ಇದು ಆಶ್ಚರ್ಯವನ್ನು ಉಂಟುಮಾಡುವಂತ ಸಂಗತಿ!

ಈ ಸತ್ಯ ಸಂಕಲ್ಪ ಮತ್ತು ಅದು ಯಾವುದನ್ನೆಲ್ಲ ಕುರಿತು ಎಲ್ಲಿಗೆಲ್ಲ ಕರೆದೊಯ್ದರೂ, ಅದರ ಬೆನ್ನತ್ತಿ ಹೋಗುವವನು ಆಧುನಿಕ 'ಧೀರ'. ಇದೊಂದು ಉನ್ನತ ಆಲೋಚನೆ. ಇದರ ಬೆನ್ನು ಹತ್ತಿದ ಭಾರೀ ಸಂಖ್ಯೆಯ ವಿಜ್ಞಾನಿಗಳ ಮಹಾ ಅನ್ವೇಷಣೆ ನನ್ನನ್ನು ಆಶ್ಚರ್ಯಚಕಿತಳನ್ನಾಗಿಸಿತು. ಎಲ್ಲ ವಿಜ್ಞಾನಗಳೂ ವಿಶ್ವದ ಏಕತೆಯ ಶೋಧವೇ ಎಂದು ಸ್ವಾಮಿ ರಂಗನಾಥಾನಂದರು ಭಾವಿಸಿದ್ದರು. ನಿಜವಾಗಿ ಮುಕ್ತವಾದದ್ದು ಏನಾದರೂ ಮನುಷ್ಯನೊಳಗಿದೆಯೆ? ಅನ್ವೇಷಕನಿಗೆ ಇದು ಮೂಲಭೂತವಾದದ್ದು. ಸ್ವಾಮಿ ರಂಗನಾಥಾನಂದರ ಮಾತುಗಳಲ್ಲೇ ಹೇಳುವುದಾದರೆ, "ಉಪನಿಷತ್ತುಗಳ ಋಷಿಗಳು, ಕೃಷ್ಣ, ಬುದ್ಧ, ಶಂಕರ, ಗತಕಾಲದ ಆಧ್ಯಾತ್ಮಿಕ ತಾರೆಗಳು; ಶ್ರೀ ರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರು ಈ ನಮ್ಮದೇ ಕಾಲದಲ್ಲಿ ಇದೇ ಮಾನವ ಕ್ಷೇತ್ರದಲ್ಲಿ ಪರಿಶೋಧಕರು, ಪ್ರಯೋಗಶಾಲಿಗಳು ಹಾಗೂ ಕರುಣಾಳು ಗುರುಗಳು. ಅವರು ಸ್ವಾತಂತ್ರ್ಯದ ಗುರುಗಳು – ಅಂದರೆ ಅಂತರಂಗ, ಬಹಿರಂಗ, ಪ್ರಕೃತಿಯ ಎಲ್ಲ ಬಂಧಗಳಿಂದ ಬಿಡುಗಡೆಗೊಳಿಸುವ ಶಿಕ್ಷಕರು. ಆಧ್ಯಾತ್ಮಿಕ ಸಾಕ್ಷಾತ್ಕಾರದ ಮೂಲಕ ತನ್ನೊಳಗನ್ನು ತುಂಬಿಕೊಳ್ಳುವುದು ಹೇಗೆಂದು ಅವರು ಕಲಿಸುವರು. ಅವರ ಕಾಣ್ಕೆಯ ಪ್ರಕಾರ ಸ್ವಾತಂತ್ರ್ಯ ಎನ್ನುವುದು ವಿಶ್ವದ ಪ್ರಕ್ರಿಯೆಯ ಹಾಗೂ ವಿಕಾಸಾತ್ಮಕ ನಾಟಕದ ಕಾವಲುಪದ; ಅದು ಮೊದಲು ರೂಪಾಂತರಿಸುತ್ತ, ಮುಂದೆ ಭಾವಾತೀತಗೊಳಿಸುತ್ತ, ಜಡದ ಸ್ಪರ್ಶಕದಿಂದ ಬಿಡುಗಡೆಗೊಳಿಸುವ ನಿರಂತರ ಹೋರಾಟದ ಮನೋಧರ್ಮ."

ರಂಗನಾಥಾನಂದಜೀ ಮದ್ರಾಸ್‌ಗೆ ಬಂದಾಗಲೆಲ್ಲ ಅವರನ್ನು ಭೆಟ್ಟಿಯಾಗುತ್ತಿದ್ದೆವು; ದಿಲ್ಲಿಯಲ್ಲಿ ಕೂಡ. ನಮ್ಮ ಯಜಮಾನರು ಸ್ವಲ್ಪ ಕಾಲ ಅಲ್ಲಿ ತಂಗಿದ್ದರು. ಆದರೂ ತೊಂಬತ್ತರ ದಶಕದಲ್ಲಿ ಅವರನ್ನು ಭೆಟ್ಟಿಯಾಗುವಾಗ ದೀರ್ಘ ಕಾಲದ ಅಂತರವಿತ್ತು. ಏಕೆಂದರೆ ಹೆಚ್ಚುವರಿ ಅವಧಿಗೆ ನಾವು ಮದ್ರಾಸ್‌ನಿಂದ ಹೊರಗೆ ಹೋಗಿದ್ದೆವು. ಹೀಗಾಗಿ ಚೆನ್ನೈನಲ್ಲಿ (ಆಗಿನ ಮದ್ರಾಸ್) ಹೊಸದಾಗಿ ಕಟ್ಟಿದ ಶ್ರೀರಾಮಕೃಷ್ಣರ ಜಾಗತಿಕ ದೇವಾಲಯದ ಅತ್ಯಂತ ಪ್ರಮುಖವಾದ ಪ್ರಾರಂಭೋತ್ಸವ ಕೂಡ ನಮಗೆ ತಪ್ಪಿಹೋಯಿತು. ಈ ಸಂಬಂಧವಾಗಿ ಅಲ್ಲಿಗೆ ರಂಗನಾಥಾನಂದಜೀ ಆಗಮಿಸಿ ಸ್ವಲ್ಪ ಕಾಲ ಅಲ್ಲಿದ್ದರು. ಅದರ ನಂತರ ಅಲ್ಲಿ ಯಾವುದೇ ಸಾರ್ವಜನಿಕ ಉಪನ್ಯಾಸ ನಡೆದದ್ದು ನನಗೆ ನೆನಪಿಲ್ಲ. ಆದರೆ ಅವರು ಅಧ್ಯಕ್ಷರಾಗಿ ಭಕ್ತರಿಗೆ ದೀಕ್ಷೆ ಕೊಡಲು ಬಂದಾಗ ನಾವು ಅವರನ್ನು ಕಾಣಲು ಹೋಗುತ್ತಿದ್ದೆವು. ಅವರ ಆರೋಗ್ಯ ಅಷ್ಟು ಚೆನ್ನಾಗಿ ಇರದಿದ್ದರೂ, ನಮ್ಮಂಥ ಬಹುಮಂದಿಯನ್ನು ಕಾಣುವುದು ಆಯಾಸಕರವಾಗಿದ್ದರೂ, ಅವರು ಎಂದೂ ಅಷ್ಟೊಂದು ಕಾಳಜಿ ಮತ್ತು ಆಪ್ತಸಂಬಂಧದೊಂದಿಗೆ ನಮ್ಮನ್ನು ಕಂಡು ಮಾತನಾಡುವುದನ್ನು ನಿರಾಕರಿಸಲಿಲ್ಲ.

ಸ್ವಾಮಿ ರಂಗನಾಥಾನಂದರು ನನ್ನೊಳಗೆ ಜಾಗೃತಗೊಳಿಸಿದ ಅರಿವು ಹಾಗೂ ಅನುಭವಗಳಲ್ಲಿ ಸ್ಪಂದನಾತ್ಮಕವಾಗಿ ಬದುಕಿದ್ದಾರೆ. ಅವರ ದೇದೀಪ್ಯಮಾನ ಮುಖ ಮತ್ತು ಬಾಹ್ಯಾಕಾರ, ಉತ್ತೇಜಕ ಧ್ವನಿ ಹಾಗೂ ಧೈರ್ಯ ಇವು ಅರಿವಿನ ಅತ್ಯುನ್ನತಿಗೆ ಮತ್ತು ನಮ್ಮ ಮಿತಿಯನ್ನು ದಾಟಲಿಕ್ಕೆ ನಮಗೆ ಕೈಗಂಬವಾದವು. ಇದು ನಾನು ಸದಾ ಅವರನ್ನು ನೆನಪಿಸಿಕೊಳ್ಳುವ ಬಗೆ. ಇದು ಸ್ಮರಣೆಯಾಗಿ ಮಾತ್ರವಲ್ಲ, ಜೀವಂತ ಪ್ರಭಾವವಾಗಿ ನನ್ನನ್ನು ಎರಕಹೊಯ್ದು ರೂಪಿಸಿದೆ. ನಮ್ಮ ದೈವದಯಾರ್ದ್ರವಾದ ಈ ಜಗದಲ್ಲಿ, ಇವರ ಇದೇ ದರ್ಶನ ಮತ್ತು ಧ್ವನಿ ನನ್ನನ್ನು ಮುನ್ನಡೆಸುತ್ತಿದೆಯೆಂದು ತೋರುತ್ತದೆ.

* * * *

# ೧೦೪. ಬೋನು

–ಜಿ.ಎಸ್.ಶ್ಯಾಮ್*

ವರ್ಷ ೧೯೭೬, ನನ್ನ ಮನಸ್ಸು ಕುದಿವ ಕೊಪ್ಪರಿಗೆಯಾಗಿತ್ತು. ಏಕಕಾಲದಲ್ಲಿ ಸತತವಾಗಿ ಕಾಡಿದ ನೂರೆಂಟು ಸಮಸ್ಯೆಗಳಿಂದ ನನ್ನ ಮನಸ್ಸು ಜರ್ಝರಿತವಾಗಿತ್ತು. ಕೋರ್ಟು ಕಚೇರಿ, ತೆರಿಗೆ ಬಾಬ್ತು, ಹಣಕಾಸು, ಸಮಾಜ, ಸಾಂಸಾರಿಕ– ಹೀಗೆ ನೂರೆಂಟು ಸಮಸ್ಯೆಗಳ ಸರಮಾಲೆ. ನನ್ನನ್ನು ಮುಳುಗಿಸಿಬಿಡುವ ಭೀತಿಯುಂಟುಮಾಡಿದ ಈ ಕಷ್ಟಸಾಗರದಲ್ಲಿ ಹೇಗೋ ತಲೆ ಎತ್ತಿಕೊಂಡು ಈಸಿ, ಸಂಭಾಳಿಸುತ್ತಿರುವಾಗಲೇ ನನ್ನ ಮನಸ್ಸು ಕುದಿವ ಕೊಪ್ಪರಿಗೆಯಾಗಿಬಿಟ್ಟಿತು. ಅಸಹನೀಯ! ಸಹಿಸಲಸದಳ!! ನನಗೆ ಯಾರದಾದರೂ ಮಾರ್ಗದರ್ಶನ, ಉಪದೇಶ ಅತ್ಯಾವಶ್ಯಕವಾಗಿತ್ತು. ಕಷ್ಟ ಬಂದಾಗಲೆಲ್ಲ ನಾನು ಮೊರೆ ಹೋಗುತ್ತಿದ್ದುದ್ದು ಸ್ವಾಮಿ ರಂಗನಾಥಾನಂದರಲ್ಲಿ. ಆಗ ಅವರು ಹೈದರಾಬಾದಿನಲ್ಲಿದ್ದರು. ರಾಮಕೃಷ್ಣಾಶ್ರಮದಲ್ಲಿ ಅವರನ್ನು ಭೇಟಿಮಾಡಲು ನಾನು ಅಲ್ಲಿಗೆ ಹೋದೆ. ಸ್ವಾಮೀಜಿಯವರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಅವರು ಎಂದಿನಂತೆ ಕೃಪಾಕಟಾಕ್ಷದಿಂದ ನನ್ನನ್ನು ಬರಮಾಡಿಕೊಂಡರು. ನಾನು ಶಿರಸಾಷ್ಟಾಂಗ ನಮಸ್ಕರಿಸಿದಾಗ ನನ್ನ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದರು. ಆನಂತರ ಸಂಜೆ, ತಮ್ಮ ಕೊಠಡಿಯಲ್ಲಿ ದರ್ಶನವಿತ್ತರು. ಸುಮಾರು ನಲವತ್ತೈದು ನಿಮಿಷಗಳ ಕಾಲ ನನ್ನ ಮಾತುಗಳನ್ನು ಕಿವಿಗೊಟ್ಟು ಆಲಿಸಿದರು.

ನಾನು ಯಾವಾಗಲೂ ಸ್ವಾಮೀಜಿಯವರನ್ನು "ಶಂಕರ ಮಹರಾಜ್" ಎಂದೇ ಸಂಬೋಧಿಸುತ್ತಿದ್ದೆ. ಪೂಜ್ಯ ಶಂಕರ ಮಹಾರಾಜ್ ತಮ್ಮ ಕೊಠಡಿಯಲ್ಲಿ ಕುರ್ಚಿಯೊಂದರ ಮೇಲೆ ಆಸೀನರಾಗಿದ್ದರು. ಕುಳಿತುಕೊಳ್ಳುವಂತೆ ಅವರು ನನಗೆ ಸಂಜ್ಞೆ ಮಾಡಿದರು. ಅವರ ಎದುರಿಗಿದ್ದ ಕುರ್ಚಿಯಲ್ಲಿ ನಾನು ಕುಳಿತುಕೊಂಡೆ. ನಾನು ಅವರನ್ನು ನೋಡಿದೆ. ಅವರ ಮುಖ, ಅವರ ಉಜ್ವಲವಾದ ಕಣ್ಣುಗಳನ್ನು ದಿಟ್ಟಿಸಿನೋಡಿದೆ. ದಯೆ, ಕರುಣೆ, ಸಹಾನುಭೂತಿಗಳನ್ನು ಅವರಲ್ಲಿ ನಾನು ಕಂಡೆ. ಎಲ್ಲಕ್ಕಿಂತ ಮಿಗಿಲಾಗಿ ಅವರಿಂದ ಹೊರಹೊಮ್ಮುತ್ತಿದ್ದ ಕರುಣೆ–ಕನಿಕರಗಳು ಮಧುರ ಮಂದಹಾಸದೊಂದಿಗೆ ನನ್ನನ್ನು ಆವರಿಸತೊಡಗಿದವು. ಅದರಿಂದ ನನ್ನ ಮನಸ್ಸು ಸಾಂತ್ವನಗೊಂಡಿತು, ನಿರಾಳವೆನಿಸಿತು. ಸ್ವಾಮೀಜಿ ಮೌನದಲ್ಲೇ ತಲೆದೂಗಿ, ನಾನಿನ್ನು ಮಾತಾಡಬಹುದೆಂದು ಇಂಗಿತವಿತ್ತರು. ಮರುಕ್ಷಣವೇ ನಾನು ಭಾವಾವೇಶದಿಂದ ಭೋರ್ಗರೆವ ಹುಚ್ಚುಹೊಳೆಯಾಗಿದ್ದೆ. ನನ್ನೆಲ್ಲ ಯಾತನೆಗಳೂ ಅಶ್ರುಧಾರೆಯಾಗಿ ಅನಿಯಂತ್ರಿತವಾಗಿ ನುಗ್ಗಿಬಂದವು. ಅವರ ಮಾರ್ಗದರ್ಶನ, ಸಮಾಧಾನ–ಸಾಂತ್ವನ–ಸಹಾಯಾಕಾಂಕ್ಷಿಯಾಗಿ ತುಯ್ದಾಡಿದವು. ಆ ಐದೇಳು ನಿಮಿಷಗಳು ಅವರೆದುರು ನನ್ನೆದೆಯನ್ನು ಬರಿದುಮಾಡಿಕೊಂಡ ನಂತರ ಭಯಂಕರವಾದ ಮನೋವೇದನೆಗಳಿಂದ ಪಾರಾದಂತೆ ಹಾಯೆನಿಸಿತು. ಅಷ್ಟು ದೀರ್ಘ ಕಾಲದಿಂದ ನನ್ನನ್ನು ಬಳಲಿಸಿದ್ದ ಒಂದು ಟನ್ ಭಾರದಿಂದ ತಕ್ಷಣ ಬಿಡುಗಡೆ ಹೊಂದಿದಂತೆ ನನಗೆ ಅನ್ನಿಸಿತು. ಮನಸ್ಸು ಹಗುರವಾಯಿತು.

ಪೂಜ್ಯ ಶಂಕರ ಮಹರಾಜ್ ಉತ್ತಮ ವಾಗ್ಮಿಯೆಂದು ಸಾರ್ವತ್ರಿಕ ಕೀರ್ತಿಗೆ ಭಾಜನರಾದವರು. ಅವರು ಸಹೃದಯಿ ಶ್ರೋತೃವೂ ಹೌದು ಎಂಬುದು ಕೆಲವರಿಗೇ ಗೊತ್ತು. ಅವರು ತಾವು ಮಾತನಾಡುವಷ್ಟೇ ಮಗ್ನತೆಯಿಂದ, ಪ್ರಾಮಾಣಿಕತೆಯಿಂದ ಜನರ ಮಾತುಗಳಿಗೂ ಕಿವಿಗೊಡುತ್ತಿದ್ದರು. ನಾನು ಹೇಳಬೇಕಾದ್ದೆಲ್ಲ ಹೇಳಿ ಮುಗಿಸಿದ

---

* ಮುಂಬಯಿಯಲ್ಲಿರುವ ಒಬ್ಬ ಭಕ್ತ.

ನಂತರ ಕೆಲವು ಸೆಕೆಂಡ್‌ಗಳ ಕಾಲ ಮೌನದಿಂದಿದ್ದರು. ಆಮೇಲೆ ಈ ಬಂಗಾಳಿ ಭಕ್ತಿಗೀತೆಯ ಸಾಲುಗಳೊಂದಿಗೆ ಮಾತು ಶುರುಮಾಡಿದರು:

**ಗುರು ಕೃಷ್ಣ ವೈಷ್ಣವ ತಿನೇರ್ ದಯಾ ಹೋಲೊ;**
**ಏಕೇರ್ ದಯಾ ಬಿನೇ ಜೀವ ಚರೇಖರೇ ಗೇಲೋ–**

ಮಹರಾಜ್ ಹೇಳಿದರು: "ಠಾಕೂರ್ (ಶ್ರೀ ರಾಮಕೃಷ್ಣ) ಈ ಗೀತೆಯನ್ನು ಹಾಡುತ್ತಿದ್ದರು. ನಾನು ಉಲ್ಲೇಖಿಸಿದ ಸಾಲುಗಳ ಅರ್ಥ ಹೀಗಿದೆ: 'ನಿನಗೆ ಗುರುಗಳ, ದೇವರ, ದೈವಭಕ್ತರ ಆಶೀರ್ವಾದವಿದೆ. ಆದರೆ ಆ 'ಅವನೊಬ್ಬನ' ಆಶೀರ್ವಾದವಿಲ್ಲದಿದ್ದರೆ, ನನ್ನ ಬದುಕು ನಾಯಿಪಾಡಾಗುತ್ತಿತ್ತು!' ಈ ಸಂದರ್ಭದಲ್ಲಿ ಆ 'ಅವನು' ನಿನ್ನದೇ ಆದ ಮನಸ್ಸು. ನಿನ್ನ ಮನಸ್ಸಿನಲ್ಲಿ ಅಂತರ್ಗತವಾಗಿರುವುದನ್ನು ನಿಭಾಯಿಸುವುದು ಹೇಗೆ ಎನ್ನುವುದು ನಿನಗೆ ಗೊತ್ತಾದಲ್ಲಿ ಮತ್ತೆ ಮನಶ್ಶಾಂತಿ ಲಭಿಸುವುದು ಹಾಗೂ ನೀನು ಸುಖಿಯಾಗುವೆ."

ನನಗೀಗ ಹೆಚ್ಚು ಮುಖಭಂಗವಾದಂತೆನಿಸಿತು. ಭಾವೋದ್ವೇಗದಿಂದ ಗದ್ಗರಿತನಾಗಿ ನಾನು ಅವರಲ್ಲಿ ತೋಡಿಕೊಂಡೆ: "ಹೌದು ಮಹರಾಜ್, ಇದೆಲ್ಲ ನನ್ನದೇ ಆದ ತಪ್ಪುಗಳು; ನಾನು ಸೃಷ್ಟಿಸಿದ ಸಮಸ್ಯೆಗಳನ್ನು ನೇರವಾಗಿ ನಾನೇ ಎದುರಿಸಬೇಕು; ಪರಿಣಾಮಗಳನ್ನು ಎದುರಿಸಲೂ ನಾನು ಸಿದ್ಧನಾಗಿರಬೇಕು. ಎಲ್ಲರೂ ಇದನ್ನೇ ಹೇಳುವುದು. ಆದರೆ ಠಾಕೂರರು ಹೇಳುವುದೂ ಇಷ್ಟೆ ಏನು? ನನ್ನ ಮನಸ್ಸಿನ ದಯೆಗೆ ಬದಲು ಠಾಕೂರರ ದಯೆ ನನ್ನ ಮೇಲೆ ಬೀಳಬಾರದೆ? ದಯವಿಟ್ಟು ನನಗಾಗಿ ಪ್ರಾರ್ಥಿಸಿ, ನನಗೆ ಸಹಾಯಮಾಡಿ."

ಪೂಜ್ಯ ಶಂಕರ ಮಹಾರಾಜರು ನನ್ನ ನೆತ್ತಿಯನ್ನು ಮೃದುವಾಗಿ ತಟ್ಟಿ, ಮೆದುವಾಗಿ, ಸೌಮ್ಯದಿಂದ ವಾತ್ಸಲ್ಯಪೂರಿತ ದನಿಯಲ್ಲಿ ನುಡಿದರು: "ತಾಳ್ಮೆ, ತಾಳ್ಮೆಯಿಂದಿರು ಮಗು; ಇನ್ನೊಂದು ಕ್ಷಣ ತೆಗೆದುಕೊ. ನಾನಿನ್ನೂ ನಿನಗೆ ಈ ಗೀತೆಯ ಸಂದೇಶವನ್ನು ತಿಳಿಸಿಲ್ಲ. ಆದ್ದರಿಂದ ಮನಸ್ಸಿಟ್ಟು, ತಾಳ್ಮೆಯಿಂದ ನನ್ನ ಮಾತುಗಳನ್ನು ಕೇಳಿಸಿಕೊ."

ನಾನು ತುಟಿ ಎರಡು ಮಾಡಲಿಲ್ಲ. ಮೌನ ಭೇದಿಸಿ ಮಹಾರಾಜ್ ಮಾತು ಮುಂದುವರಿಸಿದರು:

"ನಿನ್ನದೇ ಆದ ಮನಸ್ಸನ್ನು ಕಡೆಗಣಿಸಬೇಡ. ನಿನ್ನ ಮನಸ್ಸು ಒಂದು ಅಮೂಲ್ಯ ಆಸ್ತಿ. ನೀನು ಈ ಆಸ್ತಿಯನ್ನು ಸರ್ವಶ್ರೇಷ್ಠ ಪ್ರಯೋಜನಗಳಿಗಾಗಿ ಬಳಸಬೇಕು. ನಿನ್ನದೇ ಆದ ಮನಸ್ಸಿನ ದಯೆ ಬಹಳ ಮುಖ್ಯವಾದದ್ದು. ನಿನ್ನ ಮನಸ್ಸಿನ ದಯೆಯನ್ನು ನೀನು ಗಳಿಸಿದ್ದಾದಲ್ಲಿ ಶ್ರೀ ರಾಮಕೃಷ್ಣರ ದಯೆ ನಿನಗೆ ಪ್ರಾಪ್ತವಾಗುವುದು. ಇದರಲ್ಲಿ ಸಂಶಯಬೇಡ. ಭೌತದ್ರವ್ಯಕ್ಕೆ ಅದರದೇ ಆದ ವಿಶಿಷ್ಟ ಗುಣಲಕ್ಷಣಗಳಿರುವಂತೆ ಮನಸ್ಸಿಗೂ ಅದರದೇ ಆದ ವಿಶಿಷ್ಟ ಗುಣಗಳಿವೆ."

ಅವರು ಮುಂದುವರಿಸಿದರು:

"ಮನಸ್ಸು ಮತ್ತು ಭೌತದ್ರವ್ಯಗಳು ವಿಭಿನ್ನ ಗುಣವಿಶೇಷಗಳನ್ನು ಹೊಂದಿವೆ ಎಂದು ಭಾವಿಸಲಾಗಿದೆ. ಇಂಥ ಅಸಾಂಗತ್ಯಗಳಲ್ಲಿ ಒಂದನ್ನು ತೆಗೆದುಕೊಳ್ಳೋಣ. ಅದು: 'ಉಪಯೋಗ'. ಒಂದು ಯಂತ್ರ ಅಥವಾ ಅಸ್ತ್ರ ಬಳಸುತ್ತಾ ಹೋದಂತೆ ಸವಕಲಾಗುತ್ತದೆ. ಪದೇ ಪದೇ ಬಳಸುವಿಕೆಯಿಂದ ಯಂತ್ರ ನಿಕೃಷ್ಟವಾಗುತ್ತದೆ, ಸವಕಳಿಯಾಗುತ್ತದೆ. ಆದರೆ, ಮಾನವನ ಶರೀರದ ಸಂದರ್ಭದಲ್ಲಿ ಇದು ಬೇರೆ, ವಿಭಿನ್ನ. ಮಾನವನ ಶರೀರ, ಭೌತದ್ರವ್ಯ ಮನಸ್ಸು ಎರಡೂ ಕೂಡಿದ್ದಾಗಿದೆ. ಮನಸ್ಸಿನೊಂದಿಗಿನ ತನ್ನ ಸಂಬಂಧದಿಂದಾಗಿ ಶರೀರ ಪ್ರಬಲವಾಗುತ್ತದೆ ಹಾಗೂ ಪುನರಾವರ್ತನೀಯ ಬಳಕೆಯಿಂದಾಗಿ ದೊಡ್ಡದಾಗುತ್ತದೆ. ವ್ಯಾಯಾಮದಿಂದ ನೀವು ಸ್ನಾಯುಗಳ ಬಲವನ್ನಷ್ಟೇ ವೃದ್ಧಿಸಿಕೊಳ್ಳುವುದಿಲ್ಲ, ಅದರ ಆಯುಷ್ಯವನ್ನೂ ಹೆಚ್ಚಿಸಿಕೊಳ್ಳುವಿರಿ. ಶರೀರಕ್ಕೆ ಯಾವುದು ಒಳಿತೋ ಅದು ಮನಸ್ಸಿಗೂ ಒಳಿತೇ. ಅಭ್ಯಾಸದ ಮೂಲಕ ನೀವು ನಿಮ್ಮ ಜ್ಞಾಪಕಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದು.

ಪದೇ ಪದೇ ಶ್ಲೋಕವೊಂದನ್ನು ಹೇಳಿಕೊಳ್ಳುವ ಮೂಲಕ ನೀವು ಅದನ್ನು ನಿಮ್ಮ ಸ್ಮರಣ ಸಂಪುಟದೊಳಗೆ ಅಂತರ್ಗತ ಮಾಡಿಕೊಳ್ಳುತ್ತಿದ್ದೀರಿ. ಅಷ್ಟೇ ಅಲ್ಲ, ಅದರೊಟ್ಟಿಗೆ, ಅತಿ ಕಡಿಮೆ ಪ್ರಯತ್ನದಿಂದ ಅತ್ಯಲ್ಪ ಕಾಲದಲ್ಲಿ ಮುಂದಿನ ಶ್ಲೋಕವನ್ನು ಕಂಠಪಾಠ ಮಾಡುವ ನಿಮ್ಮ ಸಾಮರ್ಥ್ಯವನ್ನೂ ಹೆಚ್ಚಿಸಿಕೊಳ್ಳುತ್ತಿದ್ದೀರಿ. ಯೋಚನೆ, ಚಿಂತನೆ, ನೆನಪು, ನಂಬಿಕೆ, ಧೈರ್ಯ, ತೀರ್ಮಾನ, ವಸ್ತುಸ್ಥಿತಿಯ ಪರಿಗಣನೆ ಇತ್ಯಾದಿ ಇತ್ಯಾದಿಯಾಗಿ ಮನಸ್ಸಿಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲೂ ಹೀಗೇ ಆಗುತ್ತದೆ. ಈ ಮನೋಗುಣಶೀಲಗಳನ್ನು ಹೆಚ್ಚು ಹೆಚ್ಚಾಗಿ ಬಳಸಿದಂತೆ ಅವುಗಳ ಸಾಮರ್ಥ್ಯ ಬಲಗೊಳ್ಳುತ್ತದೆ. ಮನಸ್ಸು ಮತ್ತು ಭೌತದ್ರವ್ಯಗಳನ್ನು ಮೌಲ್ಯಮಾಪನದ ಒರೆಗೆ ಹಚ್ಚಿದಾಗ ಕಂಡುಬರುವ ಅಸಾಂಗತ್ಯಗಳಲ್ಲಿ ಇದೂ ಒಂದು.''

**ಸ್ವಾಮೀಜಿ ಉವಾಚ**

''ಮನಸ್ಸು ಎಂದರೇನು? ಪಾಶ್ಚಾತ್ಯ ತತ್ತ್ವಶಾಸ್ತ್ರದ ಪ್ರಕಾರ ಅದೊಂದು ಅಸ್ತಿತ್ವ, ಅದೊಂದು ಇರುವಿಕೆ. ಇದರ ಅರ್ಥ, ಅದು ಭೌತದ್ರವ್ಯಕ್ಕಿಂತ ಪ್ರತ್ಯೇಕವಾದ ಅಸ್ತಿತ್ವ ಎಂದು. ಶರೀರ ಮತ್ತು ಮನಸ್ಸುಗಳ ಐಕ್ಯಮತ್ಯದ ಫಲವಾದ, ಚಿಂತನೆ–ಜ್ಞಾನ–ಕಲ್ಪನೆ, ಊಹೆ, ರಾಗ–ಭಾವನೆಗಳಂಥ ಸಂಗತಿಗಳನ್ನು ಅವರು ಮಾನ್ಯ ಮಾಡುತ್ತಾರೆ. ಆದರೆ, ನಮ್ಮ ವೇದಾಂತದ ದೃಷ್ಟಿ, ಮಾರ್ಗಗಳೇ ಬೇರೆ. ಇಲ್ಲಿ ಮನಸ್ಸು ಒಂದು ಇರುವಿಕೆಯಲ್ಲ, ಅದೊಂದು ಜ್ಞಾನೇಂದ್ರಿಯ; ಅದೊಂದು ಪ್ರಜ್ಞೆ, ''ಇಂದ್ರಿಯಾಣಾಂ ಮನಶ್ಚಸ್ಮಿ'' ಎಂದು ಭಗವಂತ 'ಭಗವದ್ಗೀತೆ'ಯಲ್ಲಿ ಹೇಳುವಂತೆ ಠಾಕೂರರ ಗೀತೆಯಲ್ಲಿನ ಜೀವ ಎನ್ನುವ ಪ್ರಯೋಗ ದೇಹದ ಕವಚದೊಳಗಣ ಆತ್ಮವನ್ನು ಕುರಿತ ಮಾತಾಗಿದೆ. ಈ ಜೀವ, ಬಾಹ್ಯ ಮತ್ತು ಅಂತರಂಗದ ಪ್ರಪಂಚಗಳೊಂದಿಗೆ ಸತತವಾಗಿ ಸ್ಪಂದಿಸುವ ಮೂಲಕ ತನ್ನಷ್ಟಕ್ಕೇ ಆರೋಗ್ಯಪೂರ್ಣವಾಗಿರುತ್ತದೆ. ಪಂಚೇಂದ್ರಿಯಗಳು ಜೀವಕ್ಕೆ ಬಾಹ್ಯ ಪ್ರಪಂಚದ ವರ್ತಮಾನಗಳನ್ನು ಮುಟ್ಟಿಸುತ್ತವೆ. ಇತರ ಐದು ಇಂದ್ರಿಯಗಳು, ಜೀವದ ಪರವಾಗಿ ಬಾಹ್ಯ ಪ್ರಪಂಚದೊಂದಿಗೆ ಸ್ಪಂದಿಸುತ್ತವೆ, ಅಥವಾ ಪ್ರತಿಕ್ರಿಯಿಸುತ್ತವೆ. ಒಳಕ್ಕೆ ಪ್ರವೇಶಿಸುವ ಮತ್ತು ಹೊರಕ್ಕೆ ನಿರ್ಗಮಿಸುವ ಈ ದಶೇಂದ್ರಿಯಗಳನ್ನು ಕರಣ ಎಂದು ಕರೆಯಲಾಗುತ್ತದೆ. ಅವುಗಳು ಸಂಖ್ಯಾನುಸಾರ ನಾಲ್ಕು. ಅಂದರೆ ನಮಗೆ ನಾಲ್ಕು ಮನಸ್ಸುಗಳಿವೆ ಎಂದು ಇದರರ್ಥವಲ್ಲ. ಅಂದರೆ ಒಂದೇ ಮನಸ್ಸಿನ ನಾಲ್ಕು ವಿವಿಧ ಬಗೆಯ ಕರ್ತವ್ಯಗಳು ನಮಗಿವೆ ಎಂದು ಇದರ ಅರ್ಥ. 'ಮೈಂಡ್' ಎನ್ನುವುದು ಇಂಗ್ಲಿಷ್ ಪದ ಎಂಬುದನ್ನು ನೆನಪಿಡಿ. ಇದನ್ನು ಸಂಸ್ಕೃತದ ''ಮನಸ್'' ಪದದೊಂದಿಗೆ ಸಡಿಲವಾಗಿ ಸಮೀಕರಿಸಲಾಗಿದೆ. ಇದು ಸಂಪೂರ್ಣವಾಗಿ ಸರಿಯಲ್ಲ.

**ಗುರುವಿನ ದಯೆ**

ಗುರು ನಿಮಗೆ ಧ್ಯಾನ ಮಾಡಲು ಸೂಕ್ತ ವಸ್ತು–ವಿಷಯವನ್ನು ಗೊತ್ತುಪಡಿಸುವುದಷ್ಟೇ ಅಲ್ಲದೆ, ದೀಕ್ಷೆ ಅಥವಾ ಮಂತ್ರದೀಕ್ಷೆಯ ಮೂಲಕ ಗುರಿಸಾಧನೆಯತ್ತ ಚಲಿಸಲು ನಿಮಗೆ ಮಾರ್ಗದರ್ಶನ ಮಾಡುತ್ತಾನೆ. ಈ ಇಡೀ ಪ್ರಕ್ರಿಯೆ ಮನಸ್ಸಿನ ಅಂಶವಾದ ಬುದ್ಧಿಗೆ ಸೇರಿದ್ದು. ನೀನು ಸ್ವಾಮಿ ವಿರಾಜನಂದರಿಂದ ದೀಕ್ಷೆ ಪಡೆದ ಅವರ ಶಿಷ್ಯನೆಂಬುದು ನನಗೆ ಗೊತ್ತಿದೆ. ಅವರು ವಿಧಿಸಿರುವ ಆಧ್ಯಾತ್ಮಿಕ ಪರಿಪಾಠ ಗಳನ್ನು ನೀನು ಪಾಲಿಸಿರುವೆ; ಇಂದಿಗೂ ಪಾಲಿಸಿಕೊಂಡು ಬರುತ್ತಿದ್ದೀಯೆ. ಸಂಕ್ಷಿಪ್ತವಾಗಿ ಹೇಳುವುದಾದರೆ ನಿನ್ನ ಮೇಲೆ ನಿನ್ನ ಗುರುವಿನ ದಯೆ ಇದೆ.

### ಕೃಷ್ಣನ ದಯೆ

"ಕೃಷ್ಣ ಇಲ್ಲಿ ನಿಮ್ಮ ಇಷ್ಟ ದೇವತೆಯ ಪ್ರತಿರೂಪವಾಗಿದ್ದಾನೆ. ಗುರುವಿನ ಸಮ್ಮತಿಯೊಂದಿಗೆ, ಅನುಮತಿಯೊಂದಿಗೆ ಧ್ಯಾನಕ್ಕಾಗಿ ಯಾವ ವಸ್ತು–ವಿಷಯವನ್ನು ಆಯ್ಕೆ ಮಾಡಿಕೊಂಡಿರುವಿರೋ ಅದರ ಪ್ರತಿನಿಧಿಯಾಗಿ ಇಲ್ಲಿದ್ದಾನೆ. ನೀನು ಶ್ರೀ ರಾಮಕೃಷ್ಣರ ಪರಮ ಪ್ರಾಮಾಣಿಕ ಭಕ್ತ ಎಂಬುದು ನನಗೆ ಗೊತ್ತು. ಠಾಕೂರರ ಆಶೀರ್ವಾದ ನಿನ್ನ ಮೇಲಿದೆ ಎಂಬುದೂ ನನಗೆ ಖಚಿತವಾಗಿದೆ. ನಿನ್ನಲ್ಲಿ ದಯೆ ತೋರುವಂತೆ ನಾನು ಶ್ರೀ ರಾಮಕೃಷ್ಣರಲ್ಲಿ ಪ್ರಾರ್ಥಿಸುತ್ತೇನೆ. ಇದರಿಂದ, ನಿನ್ನ ಮನದ ಅಂಶವಾದ ಚಿತ್ತ ಸುರಕ್ಷಿತ.

### ವೈಷ್ಣವನ ದಯೆ

ವೈಷ್ಣವ ಎಂದರೆ ಸಜ್ಜನರ ಸಹವಾಸ. ಅದೇ ಸತ್ಸಂಗ. ನಿನಗೆ, ರಾಮಕೃಷ್ಣ ಸಂಘದ ಸಾಧುಸಂತರ ಆಶೀರ್ವಾದವಿದೆ, ಕೃಪಾಕಟಾಕ್ಷವಿದೆ. ಗೃಹಸ್ಥಭಕ್ತರು ಮತ್ತು ಸಾಧುಸಂತರೊಂದಿಗೆ ನನ್ನ ನಿಕಟ ಸಂಬಂಧ–ಸಂಪರ್ಕಗಳು ಇದ್ದೇ ಇವೆ. ಅವರನ್ನು ಭೇಟಿಮಾಡುವ ಪರಿಪಾಠವೂ ನಿನಗುಂಟು, ಅವರೂ ನಿನ್ನನ್ನು ಭೇಟಿಮಾಡುತ್ತಾರೆ. ಹೀಗೆ, ನಿನಗೆ ನಿನ್ನ ಸುತ್ತಮುತ್ತಲ ಸಜ್ಜನರ ದಯೆ ಲಭಿಸಿದೆ. ಇದು ಮನಸ್ಸಿನೊಳಗಿನ 'ಮಾನಸ'ದ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತದೆ.

### ವ್ಯಕ್ತಿ ದಯೆ

ನಿನ್ನ ವಿಷಯದಲ್ಲಿ ಗ್ರಹಿಕೆಗೆ ಬಾರದೇಹೋಗಿರುವ ಸಂಗತಿಯೆಂದರೆ, ಮನಸ್ಸಿನ ನಾಲ್ಕನೆಯ ಹಾಗೂ ಕೊನೆಯ ಅಂಶವಾದ ಅಹಂಕಾರ. ಪ್ರತಿಯೊಬ್ಬರಲ್ಲೂ ಅಹಂಕಾರದ್ದೇ ಆಧಿಪತ್ಯ. ಈ ಮೊದಲು ಹೇಳಲಾದ ಮನಸ್ಸಿನ ಮೂರು ಅಂತರ್ಗತ ಅಂಶಗಳಾದ, ಬುದ್ಧಿ, ಚಿತ್ತ ಮತ್ತು ಮನಸ್ಸು ಚಂಚಲ, ಪ್ರಚೋದಕಗಳು; ಆದರೆ, ಅಹಂ, ಉಳಿದ ಮೂರು ಅಂಶಗಳ ಪ್ರೇರಕ ಶಕ್ತಿ. ಆದ್ದರಿಂದಲೇ ಇದನ್ನು ಕಾರಕ ಅಥವಾ ಅಹಂಕಾರ ಎಂದು ಕರೆಯಲಾಗಿದೆ. ಶಂಕರಾಚಾರ್ಯರು ಅಹಮ್ಮನ್ನು ಕಾಳಸರ್ಪ ಎಂದು ವರ್ಣಿಸುತ್ತಾರೆ. ಹುಲ್ಲು ಬೆಳಸಿನ ಮಧ್ಯೆ ಎಲ್ಲೋ ಅಡಗಿದೆ ಸರ್ಪ; ಪತ್ತೆ ಹಚ್ಚುವುದು ಕಷ್ಟ; ಸ್ವಾಧೀನಪಡಿಸಿಕೊಳ್ಳುವುದು ಅಸಾಧ್ಯ. ಇಂಥ, ಮನಸ್ಸಿನ ಚಂಚಲತೆಯಲ್ಲಿ ದಯೆ ಹೇಗೆ ಸಾಧ್ಯವಾದೀತು? ಅದು ಯೋಗ್ಯವೆ? ಅದನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಿಸಿದರೆ, ನೀವೇ ಬಲೆಗೆ ಬೀಳುವಿರಿ."

### ಬಲೆ

ಪೂಜ್ಯ ರಂಗನಾಥಾನಂದಜೀ ಉವಾಚ ಮುಂದುವರಿಯಿತು:

"ಅಹಂನೊಂದಿಗೆ ವ್ಯವಹರಿಸುವಾಗ ಎರಡು ಅದಮ್ಯ ಸಮಸ್ಯೆಗಳು ಎದುರಾಗುತ್ತವೆ. ಸದೃಢ ಶರೀರ, ಸದೃಢ ಮನಸ್ಸು ಬೆಳವಣಿಗೆಗೆ ಅತ್ಯುತ್ತಮವಾದವು. ಅದು ದೈಹಿಕವಿರಲಿ, ಬೌದ್ಧಿಕವಿರಲಿ ಅತವಾ ಆಧ್ಯಾತ್ಮಿಕವಿರಲಿ. ಬುದ್ಧಿ, ಚಿತ್ತ ಮತ್ತು ಮನಸ್‌ಗಳನ್ನು ಕಾರ್ಯಪ್ರವೃತ್ತರನ್ನಾಗಿಸುವ ಮೂಲಕ ಮನೋಬಲವನ್ನು ಸಾಧಿಸುವುದು ಸಾಧ್ಯ ಎಂದು ಈಗಾಗಲೇ ಹೇಳಲಾಗಿದೆ. ಆದರೆ ಅಹಂಕಾರವನ್ನು ಬಲಗೊಳಿಸುವುದೆಂದರೆ ವಿರುದ್ಧ ಪರಿಣಾಮವುಂಟುಮಾಡುವುದೇ ಆಗಿದೆ. ಅಹಂಕಾರವನ್ನು ಮೆಟ್ಟಬೇಕು. ಅಹಂಕಾರ ಮೇಲುಗೈ ಸಾಧಿಸಲು ನಾವು ಬಿಡಬಾರದು.. ಏಕೆಂದರೆ, ಅಹಂಕಾರವನ್ನು ತಲೆಯಮೇಲೆ ಕೂಡಿಸಿಕೊಂಡಲ್ಲಿ, ನಮ್ಮ ಶೀಲದ ಪತನ ಅನಿವಾರ್ಯ. ಆಗ ನಮ್ಮ ಸುತ್ತ ಶತ್ರುಗಳ ಕೋಟೆಯನ್ನು ಕಟ್ಟಿಕೊಳ್ಳುತ್ತೇವೆ. ನಾವು ಜನರ ಅಸೂಯೆಗಳಿಗೆ ಬಲಿಪಶುಗಳಾಗುತ್ತೇವೆ. ಮನಸ್ಸಿನ ಮೊದಲ ಮೂರು ಅಂಶಗಳಿಗೆ ಯಾವುದು ಒಳಿತೋ ಅದು ಅಹಂ

ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತದೆ. ಆದ್ದರಿಂದ ನಾವು, ನಮ್ಮ ಅಹಂಕಾರವನ್ನು ಚಲಾಯಿಸಬಾರದು. ಅದನ್ನು ದೀರ್ಘಕಾಲ ಬಳಸದೇ ನಿರ್ನಾಮಗೊಳಿಸಬಹುದು.

"ಎರಡನೆಯ ಸಮಸ್ಯೆ ಹೆಚ್ಚು ಕ್ಲಿಷ್ಟವೂ ಸೂಕ್ಷ್ಮವೂ ಆದದ್ದು. ಅಹಂಕಾರಕ್ಕೆ ಪ್ರತಿಯಾದದ್ದು ವಿನಯ, ದೀನತೆಗಳು. ವಿನಯವನ್ನು ಪಾಲಿಸುವುದರಿಂದ ನಾವು ಅಹಮ್ಮನ್ನು ದುರ್ಬಲಗೊಳಿಸುತ್ತೇವೆ. ಅಹಂಕಾರ ಇರಲಿ ಅಥವಾ ವಿನಯ ಇರಲಿ – ಇದಾವುದನ್ನು ಪಾಲಿಸಬೇಕಾದರೂ ಮಾನಸಿಕ ಪ್ರಯತ್ನಗಳ ಅಗತ್ಯವಿದೆ. ಈ ಪ್ರಯತ್ನಕ್ಕೆ ಯಾರು ಹೊಣೆ? ಮತ್ತೆ ಅದೇ ಅಹಂ! ಅಹಮ್ಮನ್ನು ಅಳಿಸಿಬಿಡುವ ಪ್ರಯತ್ನ ಮಾಡುವಾಗಲೇ ನಾವು ನಮ್ಮ ಅಜಾಗರೂಕತೆ, ಅಸಡ್ಡೆಗಳಿಂದಾಗಿ ಅಹಮ್ಮನ್ನು ಪ್ರಬಲಗೊಳಿಸುತ್ತಿರುತ್ತೇವೆ. ಋಜುಸ್ವಭಾವದ ಕೆಲವರು ಮಹತ್ವಾಕಾಂಕ್ಷಿಗಳ ವಿಷಯದಲ್ಲಿ ಇದು ಕಂಡುಬಂದಿದೆ. ವಿನಯವನ್ನು ಪಾಲಿಸುತ್ತಲೇ ಅದರೊಳಗೆ ತಮ್ಮ ವಿನಯದ ಬಗ್ಗೆಯೇ ಹೆಮ್ಮೆ–ಅಹಂಭಾವಗಳು ಬೆಳೆಯುತ್ತವೆ. ಸದುದ್ದೇಶ ಹೊಂದಿರುವ ಮಹತ್ವಾಕಾಂಕ್ಷಿಗಳ ಪ್ರಸಂಗಗಳಲ್ಲೂ ಅಹಂ ಹಿಂಬಾಗಿಲಿನಿಂದ ಪ್ರವೇಶಿಸುತ್ತದೆ.

"ಮೇಲೆ ಹೇಳಿದ ಎರಡು ಲಕ್ಷಣಗಳೂ ಜೀವಕ್ಕೆ ಒಂದು ಬೋನಾಗಿ, ಬಲೆಯಾಗಿ ಕೆಲಸ ಮಾಡುತ್ತವೆ. ಪೋಷಿಸಲಿ ಅಥವಾ ಅಳಿಸಿಹಾಕಲಿ ಏನೂ ಮಾಡಿದರೂ ಅಹಂ ತಲೆ ಎತ್ತುತ್ತದೆ. ಆದ್ದರಿಂದಲೇ ಅದನ್ನು ಒಂದು ಬೋನು ಅಥವಾ ಬಲೆ ಎಂದು ಕರೆಯುವುದು. ನಮ್ಮ ಮನಸ್ಸಿನ ಅಹಂ ಭಾಗ ಎರಡೂ ನಿಟ್ಟಿನಿಂದ ನಮ್ಮನ್ನು ಗುಲಾಮರನ್ನಾಗಿಸುತ್ತದೆ. "ಜೀವ ಚರೇ ಖರೇ ಗೇಲೋ" ಎಂಬುದರ ಅರ್ಥ ಇದೇ.

**ಅಹಂನ ಮುಷ್ಟಿಯಿಂದ ಮುಕ್ತಿ**

"ಅಪಜಯದ ಸ್ಥಾನವನ್ನು ಜಯದ ಸ್ಥಾನವನ್ನಾಗಿ ತಿರುಗು–ಮುರುಗು ಮಾಡುವುದು ಸಾಧ್ಯವೆ? ಹೌದು, ಸಾಧ್ಯ. ಠಾಕೂರ್ ರಾಮಕೃಷ್ಣರು, ನಾವು ದಯೆ ಅಥವಾ ಕೃಪೆ ಎಂದು ಕರೆಯುವ ತಮ್ಮ ಅನಂತ ಅನುಗ್ರಹದಲ್ಲಿ ನಮಗೊಂದು ಉಪಾಯವನ್ನು ತೋರಿಸಿಕೊಟ್ಟಿದ್ದಾರೆ, ಅದನ್ನು ಅನುಸರಿಸಿದಲ್ಲಿ ನಾವು ಅಹಮ್ಮನ್ನು ಬಂಧಿಸಬಹುದು ಹಾಗೂ ದೀರ್ಘಕಾಲ ಅನುಸರಿಸುವುದರ ಮೂಲಕ ಅಹಮ್ಮನ್ನು ಸಂಪೂರ್ಣವಾಗಿ ನಾಶಗೊಳಿಸಬಹುದು. ನಮ್ಮ ಅಹಮ್ಮನ್ನು ನಿಗ್ರಹಿಸುವ ಆ ಉಪಾಯದಲ್ಲಿ ಅಂಥ ಪವಾಡ ಏನಿದೆ? ಶ್ರೀರಾಮಕೃಷ್ಣರ ಉಪಾಯ ಏನೆಂದರೆ ಅಹಮ್ಮನ್ನು ಉಳಿದಿರಲು ಬಿಟ್ಟುಬಿಡುವುದು. ಅಹಂ ಇರಲಿ ಬಿಡಿ. ಆದರೆ ಅದರ ಹಲ್ಲುಗಳನ್ನು ಕಿತ್ತುಬಿಡಿ. ಅಹಂನ, ಕಚ್ಚುವ–ಕುಟುಕುವ ಸಾಮರ್ಥ್ಯವನ್ನು ಅಳಿಸಿಬಿಡಿ. ಶ್ರೀ ರಾಮಕೃಷ್ಣರ ಸೂಕ್ತಿಯೊಂದಿದೆ. ಅದನ್ನು ಆಚರಿಸಿದಾಗ, ಅಹಂನ್ನು ಶರಣಾಗತವನ್ನಾಗಿಸುವುದು ಅಸಾಧ್ಯ ಕೆಲಸವಾಗಿ ತೋರುವುದನ್ನು ಸಾಧಿಸುವುದು ಸಾಧ್ಯವಾಗುತ್ತದೆ. ಏನದು ಆ ಸೂಕ್ತಿ? "ಅಯೋಗ್ಯ ಅಹಮ್ಮನ್ನು ಭಗವಂತನ ಅಡಿಯಾಳಾಗಿರಲು ಬಿಡಿ." ಕಟ್ಟಿದ ಮತ್ತು ಗಂಟು ಹಾಕಿದ ಹಗ್ಗವನ್ನು ಸುಟ್ಟುಹಾಕಿದರೆ ಅದು ತನ್ನ ಬಂಧನ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ. ಹಗ್ಗದಂತೆ, ಗಂಟಿನಂತೆ ಕಾಣುವುದು ತೋರಿಕೆ ಮಾತ್ರ; ಏಕೆಂದರೆ ಅದನ್ನು ಸುಟ್ಟು ಭಸ್ಮ ಮಾಡಲಾಗಿದೆ. ಈ ಸೂಕ್ತಿ ಶ್ರೀ ರಾಮಕೃಷ್ಣರ ಮಹಾಮಂತ್ರ. ಸೇವಕನಾದವನು ತನಗಾಗಿ ಕೆಲಸ ಮಾಡುವುದಿಲ್ಲ. ತನ್ನ ಒಡೆಯನಿಗಾಗಿ ಅವನು ಶ್ರಮಿಸುತ್ತಾನೆ. ತನ್ನ ಕೆಲಸ ಕಾರ್ಯಗಳ ಫಲ–ಪರಿಣಾಮಗಳಿಗೆ ಅವನು ಹೊಣೆಗಾರನಲ್ಲ. ಒಡೆಯ ಅದಕ್ಕೆಲ್ಲ ಹೊಣೆಗಾರ. ಸೇವಕ ಮುಕ್ತ, ಹೊತ್ತು ಸಾಗಿಸಬೇಕಾದ ಹೊರೆ ಅವನ ಪಾಲಿಗಿಲ್ಲ. ಲಾಭ ಅಥವಾ ನಷ್ಟಗಳಿಂದ, ಜಯಾಪಜಯಗಳಿಂದ ಅವನು ಬಾಧಿತನಲ್ಲ. ಅದರ ಇತಿಬಾಧೆ, ಪ್ರಭಾವಗಳೆಲ್ಲ ಒಡೆಯನದು.

ಎಂಥ ದಿವ್ಯವಾದ ಕಲ್ಪನೆ! ಎಂಥ ದಿವ್ಯವಾದ ಪರಿಹಾರ! ಇದನ್ನು ಆಚರಿಸಿ ನೋಡಿ, ಆಗ ಎಲ್ಲವನ್ನೂ ಭಿನ್ನ ದೃಷ್ಟಿಯಿಂದ ನೋಡಲು ಸಾಧ್ಯ. ಅದು ದೇವರ ಕಾರ್ಯ. ಉಪೇಕ್ಷೆಯಿಂದಾಗಲೀ ಕಾಟಾಚಾರದಿಂದಾಗಲೀ

ಮಾಡಲಾಗದು. ನಿಮ್ಮ ಹೃದಯ–ಆತ್ಮಗಳನ್ನು ಕಾಯಕದಲ್ಲಿ ತೊಡಗಿಸಿ, ನಿಮ್ಮ ಸೃಜನಶೀಲತೆ ಮತ್ತು ನವೀನ ಕಲ್ಪನೆಗಳ ಪ್ರತಿಭಾಗುಣಗಳನ್ನು ಅಭಿವ್ಯಕ್ತಗೊಳಿಸಬೇಕು. ಇಲ್ಲಿಯವರೆಗೆ ನೀವು ಹೊಣೆಗಾರರೂ ಅಲ್ಲ, ಪೀಡಿತರೂ ಅಲ್ಲ. ಈಗ ನಿಮ್ಮಲ್ಲಿ, ನೀವು ಪೀಡಿತರು ಎನ್ನುವ ಭಾವನೆ ತಲೆದೋರುತ್ತಿದೆ. ಆದ್ದರಿಂದಲೇ ಈ ಒತ್ತಡಗಳು, ಈ ಯಾತನೆಗಳು ಎನ್ನಿಸಲಾರಂಭಿಸಿದೆ. ಮಹಾಮಂತ್ರ ಅನುಸರಿಸಲಾರಂಭಿಸಿದ ಕ್ಷಣದಿಂದಲೇ ನೀವು ಪೀಡಿತರಲ್ಲ. ಒತ್ತಡ, ಶ್ರಮ, ಯಾತನೆಗಳಿಲ್ಲ. ಒತ್ತಡ ಶ್ರಮಗಳಿಗೊಳಗಾದವನು ಭಗವಂತ. ಅವನೇ ಪೀಡಿತನು, ಅವನೇ ಯಾತನಾಮಯಿ. ಅವನೇ ತನ್ನ ಸಮಸ್ಯೆ ಗಳನ್ನು ಪರಿಹರಿಸಿಕೊಳ್ಳಲಿ. ಅವನು, ಆ ಭಗವಂತ. ಶ್ರೀ ರಾಮಕೃಷ್ಣರು ನನ್ನನ್ನು ಪಾರು ಮಾಡಲಿ. ಇದು ಶ್ರೀ ರಾಮಕೃಷ್ಣರ ದಯಾಸ್ಥಾನ; ಜೀವ ನಾಯಿಪಾಡಾಗುವುದನ್ನು ತಪ್ಪಿಸುವ ಸ್ಥಿತಿ."

ಪೂಜ್ಯ ಶಂಕರ ಮಹಾರಾಜರು, ಇಷ್ಟು ಸವಿಸ್ತಾರವಾಗಿ, ಸುದೀರ್ಘವಾಗಿ ನಿರೂಪಿಸಿದ ನಂತರ ಮಾತು ನಿಲ್ಲಿಸಿದರು. ಅವರು ಕೇವಲ ಪದಗಳನ್ನಷ್ಟೆ ನುಡಿದಿರಲಿಲ್ಲ, ಅವರ ಜೀವವೇ ಬಾಯ್ತೆರೆದು ಮಾತಾಡಿತ್ತು, ಅವರ ಇಡೀ ವ್ಯಕ್ತಿತ್ವ ಮಾತನಾಡಿತ್ತು. ಅವರ ವಿವರಣೆ, ನಿರೂಪಣೆ, ವಾಗ್ವೈಖರಿ ಮತ್ತು ಪ್ರಾಮಾಣಿಕತೆಗಳಿಂದ ನಾನು ಸ್ತಂಭೀಭೂತನಾಗಿದ್ದೆ. ಅವರ ಮಾತುಗಳು ನನ್ನ ಮೇಲೆ ಗಾಢವಾದ ಪರಿಣಾಮಬೀರಿದ್ದವು. ಅವು ನಿರ್ಣಾಯಕವಾಗಿದ್ದವು, ಆಗ್ರಹಪೂರ್ವಕವಾಗಿದ್ದವು. ಸಂತೃಪ್ತನಾದ ನಾನು ಶ್ರೀರಾಮಕೃಷ್ಣರು ಹಾಡಿದ ಗೀತೆಯ ಪೂರ್ಣ ಪಠ್ಯಕ್ಕಾಗಿ ಪ್ರಾರ್ಥಿಸಿದೆ. ಮೇಜಿನ ಮೇಲೆ ಬರೆಯುವ ಕಾಗದ ಇರಲಿಲ್ಲ. ಬಳಸದ ಲಕೋಟೆ ಯೊಂದಿತ್ತು. ಅದನ್ನೆತ್ತಿಕೊಂಡು ಸ್ವಾಮೀಜಿಯವರು ಅದರ ಮೇಲೆ ಆ ಗೀತೆಯ ಅಮರ ವಾಕ್ಯಗಳನ್ನು ಬರೆದರು. ನಾನು ಆ ಲಕೋಟೆಯನ್ನು ಮಹಾಪ್ರಸಾದವೆಂಬಂತೆ ಪೂಜ್ಯ ಭಾವದಿಂದ ಸ್ವೀಕರಿಸಿದೆ. ಅಲ್ಲಿಂದ ನಿರ್ಗಮಿಸುವ ಮುನ್ನ ಅವರಿಗೆ ಪ್ರಣಾಮ ಮಾಡಿದೆ. ಅವರು ನನ್ನ ಶಿರದ ಮೇಲೆ ಕೈಗಳನ್ನಿರಿಸಿ ಆಶೀರ್ವದಿಸಿದರು. ನಾನು ಬಾಗಿಲ ಹತ್ತಿರ ಹೋದಂತೆ, ತಾಯಿ ತನ್ನ ಮಗುವನ್ನು ಅಕ್ಕರೆಯ–ಸಕ್ಕರೆಯ ದನಿಯಲ್ಲಿ ಕರೆಯುವಂತೆ 'ಶ್ಯಾಮ್' ಎಂದು ಕರೆದರು. ನಾನು ಹಿಂದಿರುಗಿ ನೋಡಿದೆ. ಅವರ ಮುಗುಳ್ನಗೆಯನ್ನು ಕಂಡೆ, ಅವರು ಭಗವದ್ಗೀತೆಯ (೫.೮) ಒಂದು ಶ್ಲೋಕದ ಅರ್ಧಭಾಗವನ್ನು ಉಚ್ಚರಿಸುತ್ತಿದ್ದುದನ್ನು ಕೇಳಿಸಿಕೊಂಡೆ: ***ನೈವ ಕಿಞ್ಚಿತ್ ಕರೋಮೀತಿ ಯುಕ್ತೋ ಮನ್ಯೇಽ ತತ್ತ್ವವಿತ್ಽ*** "ಸತ್ಯವನ್ನು ಬಲ್ಲವನು ಆತ್ಮಕೇಂದ್ರಿತನಾದವನು ಚಿಂತನೆ ಮಾಡಬೇಕು. ನಾನು ಏನನ್ನೂ ಮಾಡುವುದಿಲ್ಲ."

**ಉಪಸಂಹಾರ**

ನನಗೀಗ ಸುಮಾರು ಎಂಬತ್ತೊಂದರ ಪ್ರಾಯ... ಈ ಮಹಾಪುರುಷನ ಸ್ಮೃತಿಕಥನವನ್ನು ಸುದೀರ್ಘವಾಗಿ ಬರೆಯಲಾಗದಷ್ಟು ವೃದ್ಧ ನಾನು ಎನ್ನಿಸುತ್ತಿದೆ. ನಾನು ಹೇಳಬಹುದಾದ್ದೆಲ್ಲ ಇಷ್ಟೇ: ಮೊಟ್ಟಮೊದಲು ಅವರನ್ನು ಭೇಟಿಯಾದಾಗ ನಾನೊಬ್ಬ ಹಳ್ಳಿ ಮುಗ್ಧ, ಒರಟ, ಅಶಿಕ್ಷಿತ, ನಡಾವಳಿ ತಿಳಿಯದ ಹದಿಹರಯದವನಾಗಿದ್ದೆ. ಅವರು ಮಹಾನ್ ದಯೆ–ಕಾರುಣ್ಯಗಳಿಂದ, ಪ್ರೀತಿ ವಾತ್ಸಲ್ಯಗಳಿಂದ, ಅಕ್ಕರೆಯ ಪಾಲನೆ–ಪೋಷಣೆಗಳಿಂದ ನನ್ನನ್ನು ಲೌಕಿಕ ಗಟಾರದ ದರಿದ್ರಾವಸ್ಥೆಯಿಂದ ಮೇಲಕ್ಕೆತ್ತಿದರು. ಠಾಕೂರ್ ಮತ್ತು ಶ್ರೀ ರಾಮಾ ಅವರ ಪವಿತ್ರ ಗಂಗೋದಕದಿಂದ ನನ್ನನ್ನು ಶುಚಿರ್ಭೂತನನ್ನಾಗಿಸಿದರು; ನನ್ನನ್ನೊಬ್ಬ ಮನುಷ್ಯನನ್ನಾಗಿ ರೂಪಿಸಿದರು. ಜೀವನದಲ್ಲಿ ನಾನು ಅನುಭವಿಸಿದ ಸಕಲ ಮಾಧುರ್ಯಗಳಿಗೂ ನಾನು ಅವರಿಗೆ ಋಣಿಯಾಗಿದ್ದೇನೆ. ಅವರ ಪಾಲಿಗೆ, ತಾವು ವಿಶ್ವದಾದ್ಯಂತ ಉದ್ಧರಿಸಿದ ಸಹಸ್ರಾರು ಜನರಲ್ಲಿ ನಾನೂ ಒಬ್ಬ. ಆದರೆ ನನ್ನ ಪಾಲಿಗೆ ಅವರೊಬ್ಬರೇ, ನನ್ನ ಜೀವನದ ಸರ್ವಸ್ವವನ್ನೂ ಅವರೊಬ್ಬರಿಗೆ ಮಾತ್ರ ಸಮರ್ಪಿಸಬಲ್ಲೆ... ನನ್ನ ಜೀವನದ ಸಕಲಕ್ಕೆಲ್ಲಕ್ಕೂ ನಾನು ಅವರಿಗೆ ಋಣಿಯಾಗಿರುವೆ.

ಸ್ವಾಮಿ ರಂಗನಾಥಾನಂದರೊಡನೆ ನನ್ನ ಪ್ರಥಮ ಭೇಟಿ, ಮಾತುಕತೆ ಬಗ್ಗೆ ಬರೆಯುವಂತೆ ನೀವು ನನ್ನ ಕೇಳಿದ್ದೀರಿ. ನನ್ನ ಮೊದಲ ಭೇಟಿ ಇತ್ಯಾದಿಗಳೆಲ್ಲ ನನಗೆ ನೆನಪಿದೆ. ನಾನು ಅದೆಲ್ಲವನ್ನೂ ಬರೆಯಹೋದರೆ, ಮಹಾತ್ಮಾ ಸ್ವಾಮೀಜಿ ಯವರ ಬದಲು ನನ್ನ ಬಗ್ಗೆಯೇ ಬರೆದಂತಾಗುವುದು. ನನ್ನ ಬಗ್ಗೆಯೇ ಬರೆದು ಕೊಳ್ಳುವುದು ನನಗಿಷ್ಟವಿಲ್ಲ. ಆದರೆ, ಓದುಗರ ಪ್ರಯೋಜನಕ್ಕಾಗಿ ಕೆಲವೊಂದು ಅಂಶಗಳನ್ನು ಸೇರಿಸಲಿಚ್ಛಿಸುತ್ತೇನೆ.

ಮೊದಲನೆಯದಾಗಿ, ಅವರ ಇಡೀ ವ್ಯಕ್ತಿತ್ವ ಆಕರ್ಷಣೀಯವಾಗಿತ್ತು. ಎರಡನೆಯದಾಗಿ, ಅವರೊಡನೆ ನನ್ನ ಮಾತುಕತೆ, ಸಂವಾದಗಳು ಅಸಂಖ್ಯಾತವಾದವು. ಮೂರನೆಯದಾಗಿ, ಅವರಿಂದ ನಾನು ದೀಕ್ಷೆ ಪಡೆದವನಲ್ಲ, ಅವರು ನನ್ನ ಆಚಾರ್ಯರು. ನಾಲ್ಕನೆಯದಾಗಿ, ಅವರಿಂದ ನಾನು ಉಪದೇಶಗಳನ್ನು ಪಡೆದಿದ್ದೇನೆ. ಆದರೆ, ಅವೆಲ್ಲ ತೀರಾ ಖಾಸಗಿಯಾದವು. ಆರನೆಯದಾಗಿ, ಬದುಕು ಅವರ ಪಾಲಿಗೆ ಒಂದು ನಿಯೋಗವಾಗಿತ್ತು, ಒಂದು ಆರಾಧನೆಯಾಗಿತ್ತು. ಅವರ ಪ್ರತಿಯೊಂದು ಗುಣವೂ 'ವೈಶಿಷ್ಟ್ಯ'. ಏಕೆಂದರೆ ಅದು ಮಹಾನ್ ತ್ರಿಮೂರ್ತಿಗಳಿಗೆ (ಠಾಕೂರ್, ಮಾ ಮತ್ತು ಸ್ವಾಮೀಜಿ) ಸಮರ್ಪಿತವಾಗಿತ್ತು. ಏಳನೆಯದಾಗಿ, 'ವಿಶ್ವಮಾನವ' ಎನ್ನುವುದೂ ತುಂಬಾ ಸಾಧಾರಣವಾದ ಬಣ್ಣನೆಯಾದೀತೇನೋ– ಇದು ಸ್ವಾಮಿ ರಂಗನಾಥಾನಂದರ ಸಾಧನೆಗಳಿಗೆ ಸಂಬಂಧಿಸಿದ್ದು. ಅವರೊಬ್ಬ ಮಾನವ ಶ್ರೇಷ್ಠ. ಅವರದು ಮನುಷ್ಯವ್ಯಕ್ತಿತ್ವ. ಅವರು ಅನೇಕ ದೇಶಗಳಿಗೆ ಭೇಟಿ ಕೊಡದೇ ಇದ್ದಿದ್ದರೆ, ಅವರು ಅನೇಕ ಪುಸ್ತಕಗಳನ್ನು ರಚಿಸದೇ ಇದ್ದಾಗ್ಯೂ, ಅವರು ಭಾಷಣಚತುರರಲ್ಲದೇ ಇದ್ದಾಗ್ಯೂ, ಅವರು ಏನೊಂದು ಸಾಧನೆಯನ್ನು ಮಾಡದೆ ಇದ್ದಾಗ್ಯೂ, ಇವತ್ತು ಇರುವಂತೆ ಅವರೊಬ್ಬ ಮನುಕುಲದ ಮಾರ್ಗದರ್ಶಿ; ದಾರಿ ತೋರುವ ಮಹಾಶಕ್ತಿ.

ವೈಯಕ್ತಿಕವಾಗಿ ಅವರು ನನಗೆ ಬೋಧಿಸಿದ್ದನ್ನು ಕೆಳಗಿನ ಮಾತುಗಳಲ್ಲಿ ಸಂಕ್ಷೇಪವಾಗಿ ಹೇಳಬಹುದು:

೧. ಎಲ್ಲ ಮನುಷ್ಯರೂ (ಅದಕ್ಕಿಂತ ಮಿಗಿಲಾಗಿ ಎಲ್ಲ ಜೀವಿಗಳೂ) ಪವಿತ್ರರು. ಮನುಕುಲದ ಒಳಿತಿನಲ್ಲಿ ನಂಬಿಕೆಯುಳ್ಳವರು. ಇದರಲ್ಲಿ ನಾನೂ ಸೇರಿದ್ದೇನೆ.

೨. ದೇವರ–ದೈವತ್ವದ ಸಾಕ್ಷಾತ್ಕಾರ ಸಾಧಿಸಲಾಗದ ದಂತಕಥೆ ಏನಲ್ಲ. ಸಾಧನೆಯ ಮೂಲಕ ಪ್ರತಿಯೊಬ್ಬರಿಗೂ ಇದು ಸಾಧ್ಯ.

೩. ಯಾರೊಬ್ಬರೂ ಮತ್ತೊಬ್ಬರನ್ನು ಉದ್ಧಾರ ಮಾಡಬಹುದು ಅಥವಾ ನಾಶ ಮಾಡಬಹುದು. ಪ್ರತಿಯೊಬ್ಬರೂ ತಮಗೆ ತಾವೇ ಹೊಣೆಗಾರರು.

೪. ನೀವು ನೀವಾಗಿರಿ. ಆಡಂಬರ, ಡಂಭಾಚಾರಗಳನ್ನು ದೂರವಿಡಿ.

೫. ಆಧ್ಯಾತ್ಮಿಕ ಜೀವನದ ಆಂತರಿಕ ಲಕ್ಷಣವೆಂದರೆ ಧ್ಯಾನ. ಭಗವಂತನ/ದೇವರ ಮಕ್ಕಳ ಸೇವೆ ಬಾಹ್ಯ ಲಕ್ಷಣ.

* * * *

# ೧೦೫. ಅಯಾಚಿತ ಕೃಪೆ

**–ಭೋಗೀಲಾಲ್ ಪಟೇಲ್***

೧೯೬೧ರ ಏಪ್ರಿಲ್ ತಿಂಗಳ ಆಸುಪಾಸಿನಲ್ಲಿ. ಒಂದು ದಿನ, ಲಂಡನ್ನಿನ ಮುಷ್‌ವೆಲ್ ಹಿಲ್‌ನಲ್ಲಿರುವ ರಾಮಕೃಷ್ಣ ವೇದಾಂತ ಕೇಂದ್ರದ ಮುಖ್ಯಸ್ಥರಾದ ಸ್ವಾಮಿ ಘನಾನಂದರಿಂದ ನನಗೆ ಕರೆ ಬಂದಿತು.

"ಭೋಗಿಲಾಲ್, ಕೇರಳದ ಸ್ವಾಮೀಜಿಯೊಬ್ಬರು ಬರುತ್ತಿದ್ದಾರೆ ಉಪನ್ಯಾಸ ಕೊಡಲು. ನೀನು ಭಾರತೀಯ ಖಾದ್ಯ ಪದಾರ್ಥಗಳನ್ನು ಮಾಡಬೇಕು" ಎಂದು ಘನಾನಂದರು ಹೇಳಿದರು.

ಭಾರತೀಯ ಸ್ವಾಮಿಗಳಿಗೆ ಭಾರತೀಯ ಊಟ–ತಿಂಡಿಗಳನ್ನು ಮಾಡಿ ಬಡಿಸುವುದು ಹಾಗೂ ಅವರನ್ನು ಯೂರೋಪಿನ ವಿವಿಧ ಸ್ಥಳಗಳಿಗೆ ಕರೆದೊಯ್ಯುವುದು– ಇವೆರಡು ಕೆಲಸಗಳು, ಬಹಳ ಹಿಂದಿನಿಂದ ನನಗೆ ಠಾಕೂರರ ಅನುಗ್ರಹದಿಂದ ಪ್ರಾಪ್ತವಾಗಿದ್ದುವು. ಸ್ವಾಮಿ ರಂಗನಾಥಾನಂದರಿಂಗೂ ಈ ಅಲ್ಪಸೇವೆ ಸಲ್ಲಿಸುವ ಭಾಗ್ಯವೂ ನನ್ನದಾಗಿತ್ತು.

ಅವರ ಆಗಮನದ ದಿನ, ಅವರನ್ನು ಬರಮಾಡಿಕೊಳ್ಳಲು ನಾವೆಲ್ಲ ಲಂಡನ್ ವಿಮಾನ ನಿಲ್ದಾಣಕ್ಕೆ ಹೋಗಿದ್ದೆವು. ರಂಗನಾಥಾನಂದಜೀ ವಿಮಾನ ಇಳಿದರು. ನಾವೆಲ್ಲ ಅವರಿಗೆ ನಮಸ್ಕರಿಸಿದೆವು. ಅವರು ಹಸನ್ಮುಖಿಯಾದ, ಎಲ್ಲರ ಬಗ್ಗೆಯೂ ಸ್ನೇಹಭಾವ ಹೊಂದಿದ್ದ ಸಂನ್ಯಾಸಿಯಾಗಿ ನನಗೆ ಕಂಡರು. ಮರುದಿನ ಬೆಳಿಗ್ಗೆ ನಾನು ಅವರನ್ನು ವಾಯುವಿಹಾರಕ್ಕಾಗಿ ಅಲೆಕ್ಸಾಂಡರ್ ಅರಮನೆಯ ಹತ್ತಿರದ ಮೈದಾನಕ್ಕೆ ಕರೆದುಕೊಂಡು ಹೋದೆ. ಆಗ ಅಲ್ಲಿ ಮೋಜಿನ ಮೇಳವೊಂದು ನಡೆದಿತ್ತು. ಸ್ವಾಮೀಜಿ ಮೇಳಕ್ಕೆ ಭೇಟಿಕೊಟ್ಟರು. ಮೇಳದಲ್ಲಿ, ಥಟ್ಟನೆ, ಎಳೆಯ ಮಗುವಿನಂತೆ ಗುಂಡು ಹಾರಿಸುವ ಕೌಶಲದ ಆಟಕ್ಕೆ ಸೇರಿಕೊಂಡು ಆಡತೊಡಗಿದರು. ಆ ಪಂದ್ಯಾಟದಲ್ಲಿ ಗುರಿ ಸಾಧಿಸಿದವರಿಗೆ ಹಲವಾರು ಬಹುಮಾನಗಳಿದ್ದವು. ಹಲವಾರು ಸಲ ಗುಂಡು ಹಾರಿಸಿದ ನಂತರ ಅವರು ಆಟದಿಂದ ಹೊರಬಂದರು. ಸ್ವಾಮೀಜಿಯವರು ಅಲ್ಲಿನ ಮೋಜು, ವಿನೋದಗಳಿಂದ ಬಹಳ ಖುಷಿಪಟ್ಟರು.

ಆನಂತರ ಮುಂದಿನ ಸಲ ರಂಗನಾಥಾನಂದ ಸ್ವಾಮೀಜಿಯವರು ಲಂಡನ್ನಿಗೆ ಭೇಟಿಯಿತ್ತಾಗ, ಹಾಲೆಂಡ್ ಪಾರ್ಕ್‌ನಲ್ಲಿರುವ ನಮ್ಮ ವಿವೇಕಾನಂದ ಶತಮಾನೋತ್ಸವ ಭವನಕ್ಕೆ ಬಂದಿದ್ದರು. ಆಗ ನಾನು ಲಂಡನ್ನಿನಿಂದ ಎಪ್ಪತ್ತೈದು ಮೈಲಿ ದೂರದಲ್ಲಿರುವ ಪೋರ್ಟ್ಸ್ ಮೌತ್‌ನಲ್ಲಿದ್ದೆ. ಆಗ, ಸ್ವಾಮಿ ರಂಗನಾಥಾನಂದಜಿಯವರು ನನ್ನನ್ನು ಕಾಣಲಿಚ್ಛಿಸಿದ್ದಾರೆಂದು ಅಲ್ಲಿನ ಮುಖ್ಯಸ್ಥರಿಂದ ನನಗೆ ಸಮಾಚಾರ ಬಂತು.

ತಕ್ಷಣವೇ ನಾನು ಕೇಂದ್ರದಲ್ಲಿ ಅವರನ್ನು ಭೇಟಿ ಮಾಡಿದೆ. ಕೈಯಲ್ಲಿ ಗ್ರಂಥವೊಂದನ್ನು ಹಿಡಿದಿದ್ದ ಸ್ವಾಮಿ ರಂಗನಾಥಾನಂದಜಿಯವರು ನನ್ನನ್ನು ಹತ್ತಿರ ಕರೆದು ಹೇಳಿದರು:

"ನೋಡು ಭೋಗಿಲಾಲ್, ನೀನೂ ಸುಪ್ರಸಿದ್ಧನಾಗಿರುವೆ. ಈ ಪುಸ್ತಕದಲ್ಲಿ ನಿನ್ನ ಹೆಸರು ಇದೆ. ಆದ್ದರಿಂದ ನಾನೀಗ ನಿನ್ನ ಜೊತೆ ಫೋಟೋ ತೆಗೆಸಿಕೊಳ್ಳಬೇಕು."

ಅವರ ಮಾತು ಕೇಳಿ ನಾನು ಕೊಂಚ ತಬ್ಬಿಬ್ಬಾದೆ.

---

* ಜರ್ಮನಿಯ ಬೈಂಡ್‌ವೀಡ್‌ನಲ್ಲಿನ ವೇದಾಂತ ಸಂಸ್ಥೆಯೊಂದಿಗೆ ಸಂಬಂಧವಿರಿಸಿಕೊಂಡಿರುವ ಭಕ್ತ ಮಹಾಶಯ.

ಆ ಗ್ರಂಥ ಬೇರಾವುದೂ ಅಲ್ಲ. ಅದು ಅವರ ಪ್ರಸಿದ್ಧ ಕೃತಿ: ಎ ಪಿಲ್ಗ್ರಿಮ್ ಲುಕ್ಸ್ ಅಟ್ ದಿ ವರ್ಲ್ಡ್ (ಸಂಪುಟ ೧). ಸ್ವಾಮೀಜಿ, ವಾತ್ಸಲ್ಯಪೂರಿತವಾಗಿ, ಮೆದುವಾಗಿ ಗ್ರಂಥದ ೨೮೨ನೇ ಪುಟವನ್ನು ತೆಗೆದರು. ನನ್ನ ಹೆಸರು ಅಚ್ಚಾಗಿರುವುದು ಕಂಡು ನನಗೆ ಮಹದಾಶ್ಚರ್ಯವಾಯಿತು. ನಾನು ಮಂತ್ರಮುಗ್ಧನಾದೆ. ಇಷ್ಟೆಲ್ಲ ವರ್ಷಗಳು ಕಳೆದ ನಂತರವೂ ನನ್ನಂಥ ಯಃಕಶ್ಚಿತ್ ವ್ಯಕ್ತಿ ಅವರ ನೆನಪಿನಲ್ಲಿ ಅನುರಣನೀಯವಾಗಿ ಉಳಿಯುವುದು ಹೇಗೆ ಸಾಧ್ಯ! ಒಂದು ಕ್ಷಣ ನನಗೆ ಶಬ್ದಾತೀತವಾದ ಪ್ರೀತಿ–ವಾತ್ಸಲ್ಯದ ಸ್ಪರ್ಶ ಅನುಭವಿಸಿದಂತಾಯಿತು. ಪ್ರಣಾಮಗಳನ್ನಲ್ಲದೆ ಬೇರೇನು ತಾನೆ ಅವರಿಗೆ ನಾನು ಅರ್ಪಿಸಬಲ್ಲೆ.

ಆ ದಿನ ಅವರು ನನ್ನ ಕುಟುಂಬದ ಬಗ್ಗೆ ವಿಚಾರಿಸಿದರು. ನಾನು ನನ್ನ ಮನೆಮಂದಿಯನ್ನು ಸ್ವಾಮೀಜಿಯವರಿಗೆ ಪರಿಚಯಿಸಿದೆ. ನಾವೆಲ್ಲ ಗ್ರೂಪ್ ಫೋಟೊ ತೆಗೆಸಿಕೊಂಡೆವು. ಸ್ವಾಮಿ ರಂಗನಾಥಾನಂದರ ಅಥವಾ ಸ್ವಾಮಿ ಭವ್ಯಾನಂದರ ಕ್ಯಾಮೆರಾದಲ್ಲಿ ಫೋಟೊ ತೆಗೆಯಲಾಗಿತ್ತು. ಅದೊಂದು, ನಮ್ಮ ಜೀವಮಾನದ ಅಯಾಚಿತ ಕೃಪೆ.

* * * *

# ೧೦೬. ಒಬ್ಬ ಅಸಾಮಾನ್ಯ ಸನ್ಯಾಸಿ

–ಸರಸ್ವತೀ ಗೌರಿಶಂಕರ್*

೧೯೬೫ರ ಮಾರ್ಚ್ ತಿಂಗಳ ಕೊನೆ ದಿನಗಳು. ಮೇ ತಿಂಗಳಿನಲ್ಲಿ ತರಗತಿಗಳು ಇರುವುದಿಲ್ಲ. "ಶ್ರೀ ಗೌರಿಶಂಕರ್ ಅವರ ಕುಟುಂಬ ಸಮೇತ ಕೊಡೈಕನಾಲ್‌ನಲ್ಲಿ ತಾವು ಬಿಡುವಿನ ದಿನಗಳನ್ನು ಕಳೆಯಲಿರುವುದರಿಂದ ತರಗತಿಗಳಿರುವುದಿಲ್ಲ" ಎಂದು ಸ್ವಾಮಿ ರಂಗನಾಥಾನಂದ ಜಿ ಪ್ರಕಟಿಸಿದ್ದರು.

ಮುಂದಿನ ದಿನಗಳೆಲ್ಲ ಅವಸರದ ಚಟುವಟಿಕೆಗಳಲ್ಲೇ ಸಾಗಿದವು. ಸ್ವಾಮೀಜಿಯವರ ಕಾರ್ಯಕ್ರಮಗಳಿಗೆ ಹೊಂದುವಂತೆ ಗೌರಿಶಂಕರ್ ರಜೆ ಮಂಜೂರು ಮಾಡಿಸಿಕೊಳ್ಳಬೇಕಿತ್ತು; ಸ್ವಾಮೀಜಿಯವರ ರೈಲುಪ್ರಯಾಣಕ್ಕಾಗಿ ಆಸನಗಳ ಕಾಯ್ದಿರಿಸುವಿಕೆಗೆ, ರೈಲು ಬದಲಿಸಬೇಕಾದ ನಿಲ್ದಾಣಗಳಲ್ಲಿ ರೈಲ್ವೆ ಸಿಬ್ಬಂದಿ ಅವರನ್ನು ಭೇಟಿ ಮಾಡುವಿಕೆಗೆ ಹಾಗೂ ಕೊನೆಯ ರೈಲು ನಿಲ್ದಾಣವಾದ ಕೊಡೈಕೆನಾಲ್ ರಸ್ತೆಯಿಂದ ಐವತ್ತು ಮೈಲಿ ದೂರದ ಪರ್ವತ ಪ್ರದೇಶಕ್ಕೆ ಸಾರಿಗೆ ವ್ಯವಸ್ಥೆ– ಹೀಗೆ ಅನೇಕ ಸಿದ್ಧತೆಗಳನ್ನು ಮಾಡಬೇಕಿತ್ತು.

ನಾನು ಮತ್ತು ನನ್ನ ಅಮ್ಮ (ಸಾವಿತ್ರಿ ಅಮ್ಮ) ಕೊಡೈಕೆನಾಲ್‌ಗೆ ಧಾವಿಸಿದೆವು. ರೈಲು ಮತ್ತು ಬಸ್ಸುಗಳ ಎರಡು ದಿನಗಳ ಪ್ರಯಾಣ. ಮುಂಚೆ ಹೋಗಿ ಮನೆ ಬಾಗಿಲು ತೆಗೆದು ಗುಡಿಸಿ, ಸಾರಿಸಿ, ರಂಗವಲ್ಲಿ ಹಾಕಿ, ಸುಣ್ಣಬಣ್ಣ ಮಾಡಿ, ರೂಮುಗಳನ್ನು ಸ್ವಚ್ಛಗೊಳಿಸಲು ಮುಂಚಿತವಾಗಿಯೇ ನಾವು ಕೊಡೈಕೆನಾಲ್‌ಗೆ ಪಯಣಿಸಿದೆವು. ಪೂರ್ವಾಭಿಮುಖವಾದ, ಉತ್ತರ ದಿಕ್ಕಿನ ಕೋಣೆ ಸ್ವಾಮೀಜಿಯವರ ಶಯ್ಯಾಗಾರ. ಹೊಸ ಹಾಸಿಗೆ, ಹೊದಿಕೆ, ದಿಂಬುಗಳನ್ನು, ಸ್ವಾಮೀಜಿಯವರ ಸಲುವಾಗಿ ಮಧುರೆಯಿಂದ ತರಿಸಬೇಕಾಗಿತ್ತು. ಕಬ್ಬಿಣದ ಒಲೆ ಉರಿಸಲು ಸೌದೆ ಒಡೆಸಿ, ಸಂಗ್ರಹಿಸಿಡಬೇಕಾಗಿತ್ತು. ಸ್ನಾನದ ನೀರು ಕಾಯಿಸಲು ತಾಮ್ರದ ಹಂಡೆಯನ್ನು ಸಿದ್ಧಗೊಳಿಸ ಬೇಕಾಗಿತ್ತು. ವಿದ್ಯುಚ್ಛಕ್ತಿಯ ಕಣ್ಣುಮುಚ್ಚಾಲೆ ಎದುರಿಸಲು ಸೀಮೆಎಣ್ಣೆ ದೀಪಗಳನ್ನು ಸಿದ್ಧವಾಗಿರಿಸಬೇಕಾಗಿತ್ತು. ಪಟ್ಟಣ ಎಷ್ಟು ಪುರಾತನವಾದದ್ದು ಎನ್ನುವುದು ಸ್ವಾಮೀಜಿಯವರಿಗೆ ತಿಳಿದಿದೆಯೇ ಎಂದು ನಾವು ಸೋಜಿಗಪಟ್ಟಿದ್ದೆವು. ಟ್ಯಾಕ್ಸಿ ಮನೆ ಬಾಗಿಲವರೆಗೆ ಬಂತು. ಅವರು ಆಯಾಸಗೊಂಡವರಂತೆ ಕಾಣುತ್ತಿದ್ದರು. ಪ್ರಶಾಂತವಾದ, ತಂಪಾದ ವಾತಾವರಣ ಸವಿಯಲು ತಮ್ಮ ಪಾಡಿಗೆ ತಮ್ಮನ್ನು ಬಿಟ್ಟುಬಿಡುವಂತೆ ಅವರು ಹೇಳಿದರು. ಊಟದ ವೇಳೆ ಮಾತ್ರ ನಾವು ಅವರ ಬಾಗಿಲು ಬಡಿಯುತ್ತಿದ್ದೆವು. ಊಟದ ತಟ್ಟೆಯನ್ನು ಅವರ ಕೈಗೆ ಒಪ್ಪಿಸುತ್ತಿದ್ದೆವು. ಊಟದ ನಂತರ ತಟ್ಟೆಯನ್ನು ಅವರು ಹೊರಗಿಟ್ಟಿರುತ್ತಿದ್ದರು.

ಮೂರು ದಿನಗಳ ಕಾಲ ಕುಟುಂಬವರ್ಗದವರು ಅವರ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸಿದರು. ಆಗ ಅಲ್ಲಿ ಹಾಜರಿದ್ದ ನಮ್ಮ ಮನೆಯವರೆಂದರೆ, ನನ್ನ ತಾಯಿ ಸಾವಿತ್ರಿ ಅಮ್ಮ, ನನ್ನ ಪತಿ ಗೌರಿಶಂಕರ್ (ರೈಲ್ವೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಅಧಿಕಾರಿ), ನಾನು ಮತ್ತು ಸಾವಿತ್ರಿ ಅಮ್ಮನ ಮೊಮ್ಮಗ ವಿಜಯ್ (ಖರಗಪುರ ಐ.ಐ.ಟಿ. ವಿದ್ಯಾರ್ಥಿ– ರಜೆಗೆ ಬಂದಿದ್ದವನು). ನಾವೆಲ್ಲ ಮೊದಲು ಸ್ವಾಮೀಜಿಯವರನ್ನು ಭೇಟಿ ಮಾಡಿದ್ದು ೧೯೫೨ರಲ್ಲಿ, ದೆಹಲಿಯಲ್ಲಿ. ಅಂದಿನಿಂದ ಅವರ ನಿಕಟವರ್ತಿಗಳಾಗಿದ್ದೇವೆ.

ಶ್ರೀಮತಿ ಮತ್ತು ಶ್ರೀ ಎಂಜಿ. ವರ್ಮಾ ಮತ್ತು ಅವರ ಮೂವರು ಪುತ್ರಿಯರು ಹಾಗೂ ಶ್ರೀಮತಿ ಶ್ಯಾಮ್ ಮೆಹ್ತಾ ಮತ್ತು ಅವರ ಮಗಳು– ಇವರೆಲ್ಲ ನಮ್ಮ ಕುಟುಂಬದ ಅತಿಥಿಗಳು. ಇವರೆಲ್ಲ ಸ್ವಾಮೀಜಿಯವರಿಂದ

---

* ಚೆನ್ನೈನ ಉಪಾಸಕಿ.

ಅನುಮತಿ ಪಡೆದುಕೊಂಡು ಕೊಡೈಕೆನಾಲ್‌ನಲ್ಲಿ ನಮ್ಮೊಡಗೂಡಿದ್ದರು. ಒಂದು ದೊಡ್ಡ ಗುಂಪೇ. ಆದರೆ ಮನೆಯನ್ನು ಸಾಧ್ಯವಾದಷ್ಟೂ ಪ್ರಶಾಂತವಾಗಿಡಲು ಪ್ರಯತ್ನಿಸಿದ್ದೆವು. ಅಥವಾ ಪರ್ವತಾವಳಿಯ ಪ್ರಶಾಂತತೆಯನ್ನು ಕಲಕುವಂಥ ಧ್ವನಿವರ್ಧಕಗಳು ಆ ಕಾಲದಲ್ಲಿ ಇರಲಿಲ್ಲ.

ನಾಲ್ಕನೆಯ ದಿನ ಸ್ವಾಮೀಜಿಯವರು ಏಕಾಂತದಿಂದ ಹೊರಬಂದರು. ಅವರು ಮೌನಿಯಾಗಿ ನಮ್ಮ ಮನೆಯ ಮುಂದಿನ ಕೈತೋಟದಲ್ಲಿ ಕುಳಿತಿರುವುದನ್ನು ನಾವು ಕಂಡೆವು. ಮುಂದಿನ ಮೂರು ವಾರಗಳ ಕಾಲ ಅವರೊಡನೆ ಒಡನಾಟದ ಸಂತಸದ ಸವಿಗಾಗಿ ಆನಂದತುಂದಿಲರಾದ ನಮ್ಮ ಗುಂಪು ಅವರನ್ನು ಸುತ್ತುವರಿಯಿತು. ಅವರು ನಮ್ಮೊಂದಿಗೇ ಊಟಮಾಡುತ್ತಿದ್ದರು. ಹಾಳತದ ತಟ್ಟೆಯ ಊಟ ಅವರದು. ಒಂದು ಕಪ್ ಅನ್ನ, ಒಂದು ಹಪ್ಪಳ ಮತ್ತು ಸ್ವಲ್ಪ ಬೇಯಿಸಿದ ತರಕಾರಿ– ಇಷ್ಟೇ ಅವರ ಊಟ. ದಿನಕ್ಕೆ ನಾಲ್ಕು ಬಾರಿ ನಾಲ್ಕು ಔನ್ಸ್ ನೀರಿಗೆ ಬೆರೆಸಿದ ಲ್ಯಾಕ್ಟೋಜೆನ್ (ಮುಂದಾಲೋಚನೆಯಿಂದ ಅವರು ಒಂದು ಒಂದು ಟಿನ್ ತಂದಿದ್ದರು) ಸೇವಿಸುತ್ತಿದ್ದರು. ಲ್ಯಾಕ್ಟೋಜೆನ್‌ನೊಂದಿಗೆ ಮೂರು ತೊಟ್ಟು ಲ್ಯಾಕ್ಟಿಕ್ ಆಮ್ಲವನ್ನು ಸಮವಾಗಿ ಕಲಕಿ ಮಿಶ್ರ ಮಾಡಿರಲಾಗುತ್ತಿತ್ತು. ಕಲಕುವಾಗ ನೊರೆಗಟ್ಟಬಾರದು– ಆ ರೀತಿ ಮಿಶ್ರಮಾಡಲಾಗುತ್ತಿತ್ತು. ಸಾವಿತ್ರಿ ಅಮ್ಮ, ನಿರ್ಮಲ ವರ್ಮಾ ಅವರ ಜೊತೆ ಅಡುಗೆ ಮನೆಯ ಉಸ್ತುವಾರಿ ವಹಿಸಿಕೊಂಡಿದ್ದರು. ಸಾವಿತ್ರಿ ಅಮ್ಮ, ಲ್ಯಾಕ್ಟೋಜೆನ್ ತಯಾರಿಸುವ ವಿಶೇಷ ಕೆಲಸವನ್ನು ಶ್ಯಾಮನಿಗೆ ವಹಿಸಿದ್ದರು. ಇದು ಮಕ್ಕಳ ಹಾಲಿನ ಬಾಟಲಿ ಸಿದ್ಧಪಡಿಸುವುದಕ್ಕಿಂತ ಕಷ್ಟದ ಕೆಲಸವೆಂದು ಶ್ಯಾಮ ಗೊಣಗಾಡುತ್ತಿದ್ದ. ಆದರೆ, ಒಮ್ಮೆಯೂ ಸ್ವಾಮೀಜಿಯವರಿಗೆ ಅಹಿತವಾಗದಂತೆ ಅವನು ಈ ಕೆಲಸ ಮಾಡುತ್ತಿದ್ದ.

ಊಟವಾದನಂತರ ಅವರು ನಮ್ಮೊಡನೆ ಕುಳಿತು ಮಾತನಾಡುತ್ತಿದ್ದರು. ತಮ್ಮ ಜೀವನದ ಹಾಸ್ಯಪ್ರಸಂಗಗಳನ್ನು ಹೇಳಿ ನಮ್ಮನ್ನು ನಗಿಸುತ್ತಿದ್ದರು. ಒಮ್ಮೆ ಮೈಸೂರು ಆಶ್ರಮದಲ್ಲಿ ಅಡುಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾಗ, ಪಕ್ಕದ ಕೊಠಡಿಯಲ್ಲಿ ಬ್ರಹ್ಮಚಾರಿಗಳಿಗೆ ವೇದಪಾಠ ಮಾಡುತ್ತಿದ್ದ ಪ್ರೊ॥ ಸುಬ್ರಹ್ಮಣ್ಯ ಅಯ್ಯರ್ ಅವರ ಅನುರಣನ ಧ್ವನಿಯಿಂದ, ವಾಗ್ವೈಖರಿಯಿಂದ ತಾವು ಆಕರ್ಷಿತರಾದುದನ್ನು ಹೇಳಿದರು. ಅವರಿಗೆ ಕಲಿಯುವ ಹಂಬಲವಿತ್ತು. ಆದರೆ ಅಡುಗೆ ಸಹಾಯಕರಾಗಿದ್ದ ಅವರು ತರಗತಿಗೆ ಹೋಗುವಂತಿರಲಿಲ್ಲ. ಅವರು ಪ್ರತಿದಿನ ಬೆಳಿಗ್ಗೆ, ಪಕ್ಕದ ಕೊಠಡಿಯ ಬಾಗಿಲಿಗೆ ಹೊಂದಿಕೊಂಡಂತೆ ಈಳಿಗೆಮಣೆಯನ್ನಿಟ್ಟುಕೊಂಡು ತರಕಾರಿ ಹೆಚ್ಚುತ್ತಲೇ ವೇದ ಪಾಠಗಳನ್ನು ಕೇಳಿಸಿಕೊಳ್ಳುತ್ತಿದ್ದರಂತೆ. ಅವತ್ತಿನಿಂದ ಅವರು ಈ ಸಂಸ್ಕೃತ ಮೇಷ್ಟರಿಗೆ ಆಭಾರಿಯಾಗಿದ್ದು, ಪ್ರೊಫೆಸರ್ ಅವರ ಮೊಮ್ಮಕ್ಕಳನ್ನು ಅಕ್ಕರೆಯಿಂದ ಆಟವಾಡಿಸುತ್ತಿದ್ದರಂತೆ. ಕೆಲವೊಮ್ಮೆ ಅವರು ಗಂಭೀರವಾದ ಘಟನೆಗಳನ್ನು ಹೇಳಿದ್ದೂ ಉಂಟು. ಎರಡನೇ ಮಹಾಯುದ್ಧ ಕಾಲದ್ದು ಅಂಥ ಒಂದು ಘಟನೆ. ಎರಡನೇ ಮಹಾಯುದ್ಧ ಕಾಲದಲ್ಲಿ ಸ್ವಾಮೀಜಿಯವರು ರಂಗೂನಿನಿಂದ ಕೊಲ್ಕತ್ತಾಗೆ ಶ್ರಮದ ಪ್ರಯಾಣ ಕೈಗೊಳ್ಳಬೇಕಾಯಿತು. ಈ ಪ್ರಯಾಣದ ಘಟನೆಯೊಂದಿಗೆ ಅವರು ದೇಶ – ವಿಭಜನೆಯ ಕಾಲದಲ್ಲಿ ತಾವು ಕಂಡ ನಿರಾಶ್ರಿತರ ಶಿಬಿರಗಳ ಬದುಕನ್ನೂ ವಿವರಿಸಿದ್ದರು. "ನಾವು ಕಣ್ಣೀರನ್ನು ಒರೆಸಿಕೊಳ್ಳಲಿಲ್ಲ. ಏಕೆಂದರೆ, ಕಣ್ಣೀರು ದುಃಖ–ಸಂಕಟ–ನೋವುಗಳನ್ನು ತೊಳೆದು ಹಾಕುತ್ತದೆ" ಎಂದಿದ್ದರು.

ನಾಲ್ವರು ಮಕ್ಕಳೊಂದಿಗೆ ಅವರು ಕುಂಟೆಬಿಲ್ಲೆ ಆಡುತ್ತಿದ್ದರು. ಒಗೆದ ಪಂಚೆಯನ್ನು ಮಡಿಚಿ, ತಟ್ಟಿಕುಟ್ಟಿ ಒಣಗಿ ಹಾಕುವುದನ್ನು ಅವರಿಗೆ ತೋರಿಸಿಕೊಡುತ್ತಿದ್ದರು. ಈ ರೀತಿ ಒಣಗಿ ಹಾಕುವುದರಿಂದ ಮರುದಿನ ಇಸ್ತ್ರಿ ಇಲ್ಲದೆಯೇ ಅದನ್ನು ಹೊಸ ಹೊಸದರಂತೆ ಉಡಬಹುದೆಂದು ಹೇಳುತ್ತಿದ್ದರು. ಮಂತ್ರೋಚ್ಚಾರಣೆ ಮಾಡುತ್ತಲೇ, ಶ್ಲೋಕಗಳನ್ನು ಹೇಳುತ್ತಲೇ ಇದೆಲ್ಲವನ್ನೂ ಹುಡುಗರಿಗೆ ತಿಳಿಸುತ್ತಿದ್ದರು. ಬೆಳಿಗ್ಗೆ ೧೧ ಗಂಟೆಗೆ ಬಸ್‌ಸ್ಟ್ಯಾಂಡಿನಿಂದ ವೃತ್ತಪತ್ರಿಕೆ ಬಂದಕೂಡಲೇ ಕೆಲವು ನಿಮಿಷಗಳ ಕಾಲ ಅದನ್ನು ವಾಚಿಸುತ್ತಿದ್ದರು. ಆನಂತರ ತಮಿಳು ಪಾಠ ಹೇಳಿಸಿಕೊಳ್ಳಲು ಅಮ್ಮನೆದುರು ಕುಳಿತುಕೊಳ್ಳುತ್ತಿದ್ದರು. ಊಟದ ವೇಳೆಯಾಗುವ ವರೆಗೆ ಸುಮಾರು ಅರ್ಧಗಂಟೆ

ಕಾಲ ಈ ಪಾಠ ನಡೆಯುತ್ತಿತ್ತು. ಇದು ತಮಿಳು ಕಲಿಯುವುದಷ್ಟೇ ಆಗಿರಲಿಲ್ಲ ಸ್ವಾಮೀಜಿಯವರಿಗೆ. ಅಮ್ಮನನ್ನು ಅಡುಗೆ ಮನೆಯ ಉಸ್ತುವಾರಿ ಕೆಲಸದಿಂದ ಪಾರುಮಾಡುವ ಉಪಾಯವಾಗಿತ್ತು. ಇವತ್ತಿನ ದಿವಸ ನಾವು ಇದನ್ನು "ಹಿರಿಯರೊಂದಿಗೆ ಪುಣ್ಯಶ್ರವಣ" ಎಂದು ಕರೆಯುತ್ತೇವೆ. ಗುರು–ಶಿಷ್ಯರಿಬ್ಬರೂ ಪಾಠದಿಂದ ಪರಮ ಸಂತೋಷ ಪಡೆಯುತ್ತಿದ್ದರು.

ಅವರು ಇನ್ನೇನು ಮಾಡಿದರು? ಬೆಳದಿಂಗಳ ಒಂದು ರಾತ್ರಿ. ಅವರು ಖಗೋಳ ಭೌತವಿಜ್ಞಾನದ ವೀಕ್ಷಣಾಲಯದ ವೈಜ್ಞಾನಿಕ ಅಧಿಕಾರಿಯಾದ ಹಸನ್ಮುಖಿ ಡಾ॥ ಅರವಿಂದ ಭಟ್ನಾಗರ್ ಅವರ ಜೊತೆ ಟೆಲಿಸ್ಕೋಪ್ ಮೂಲಕ ನಕ್ಷತ್ರ ವೀಕ್ಷಣೆಗೆ ಹೊರಟರು. ಮತ್ತೊಮ್ಮೆ ಸೆಕ್ರೆಡ್ ಹಾರ್ಟ್ ಕಾಲೇಜಿನಲ್ಲಿ ಉಪನ್ಯಾಸ ಕೊಟ್ಟ ನಂತರ ಎರಡು ಗಂಟೆ ಕಾಲ ಅಲ್ಲಿನ ಅನನುಭವಿಗಳೊಂದಿಗೆ ಮಾತುಕತೆ ನಡೆಸಿದರು.

ಮತ್ತೊಂದು ದಿನ ಸ್ವಾಮೀಜಿ, ಕೊಡೈಕೆನಾಲ್‌ನಲ್ಲಿದ್ದ ರಾಜಕೀಯ ಕೈದಿಯೊಬ್ಬನನ್ನು ಭೇಟಿ ಮಾಡಿ ಒಂದು ರೀತಿ ಚರಿತ್ರಾರ್ಹ ಘಟನೆಯೊಂದಕ್ಕೆ ಕಾರಣವಾದರು. ತಮಿಳುನಾಡು ಮುಖ್ಯ ಕಾರ್ಯದರ್ಶಿಯವರ ಮೂಲಕ ಬಂದ ದಿಲ್ಲಿ ದೊರೆಗಳ ಮನವಿಯ ಮೇರೆಗೆ ಸ್ವಾಮೀಜಿಯವರನ್ನು ಬೆಳಿಗ್ಗೆ ಹತ್ತು ಗಂಟೆ ಸುಮಾರಿಗೆ ಮಧುರೈನ ಕಲೆಕ್ಟರ್ ಸಾಹೇಬರು ಜೀಪಿನಲ್ಲಿ ಕರೆದೊಯ್ದರು. ಸ್ವಾಮೀಜಿ ತಮ್ಮೊಂದಿಗೆ ಪುಟ್ಟ ಫ್ಲಾಸ್ಕ್‌ನಲ್ಲಿ ಲ್ಯಾಕ್ಟೋಜಿನ್ ಒಯ್ದಿದ್ದರು. ಊಟಕ್ಕೆ ಸ್ವಾಮೀಜಿ ವಾಪಸಾಗುವರೆಂದು ನಮ್ಮ ನಿರೀಕ್ಷೆಯಾಗಿತ್ತು. ಆದರೆ ಮಧ್ಯಾಹ್ನ ಚಹಾ ವೇಳೆ ಮುಗಿದರೂ ಸ್ವಾಮೀಜಿ ಹಿಂದಿರುಗಿ ಬಂದಿರಲಿಲ್ಲ. ನಾವು ಕಲೆಕ್ಟರ್ ಸಾಹೇಬನನ್ನು ಸಂಪರ್ಕಿಸಲು ತೀವ್ರ ಪ್ರಯತ್ನಗಳನ್ನು ನಡೆಸುತ್ತಿದ್ದಾಗ ಸ್ವಾಮೀಜಿ ಬೆಟ್ಟ ಹತ್ತಿಕೊಂಡು ಬಂದರು. "ಕೈದಿ ಬಂಗ್ಲೆ" ತಲುಪುತ್ತಿದ್ದಂತೆ ಸ್ವಾಮೀಜಿ ಕಲೆಕ್ಟರನ್ನು ಹಿಂದಕ್ಕೆ ಕಳುಹಿಸಿದ್ದರು. ಸ್ವಾಮೀಜಿ ಊಟಕ್ಕೇನು ಮಾಡಿದರು?

"ಓಹ್! ಬೇಗಂ ಅಲ್ಲೆ ಊಟ ಮಾಡುವಂತೆ ಮಮತೆಯಿಂದ ಹೇಳಿದರು. ನನ್ನ ಬಳಿ ಫ್ಲಾಸ್ಕ್ ಇತ್ತಲ್ಲ. ನಾನು ವಿನಯಪೂರ್ವಕವಾಗಿ ಅವರ ಮನವಿಯನ್ನು ತಿರಸ್ಕರಿಸಿದೆ. ಆದರೆ ಒಂದು ಲೋಟ ಹಾಲನ್ನು ಸ್ವೀಕರಿಸಿ ವಿದಾಯ ಹೇಳುವ ಮುನ್ನ ಅದರಲ್ಲಿ ಒಂದು ಗುಟಕನ್ನು ಕುಡಿದೆ. ಅವರೊಡನೆ ಮಾತುಕತೆ ಆಸಕ್ತಿದಾಯಕವಾಗಿತ್ತು. ಬೋಧಪ್ರದವೂ ಆಗಿತ್ತು. ತುಂಬಾ ಚೆನ್ನಾಗಿತ್ತು."

ಈ ಮಾತುಕತೆಯಿಂದ ಏನಾದರೂ ಸಂಭವಿಸಿತೇ ಎನ್ನುವುದು ತಿಳಿಯಲಿಲ್ಲ. ಏನೂ ಆಗಲಿಲ್ಲ ಎಂದೇ ನನ್ನ ಭಾವನೆ. ಆದರೆ ಇದಾದ ಒಂದು ವರ್ಷದ ನಂತರ ಷೇಕರನ್ನು ಬಿಡುಗಡೆ ಮಾಡಲಾಯಿತು.

ಸ್ವಾಮೀಜಿ, ಎಂ.ಜಿ. ವರ್ಮಾ ಅವರ ಮಕ್ಕಳೊಂದಿಗೆ ದೋಣಿ ವಿಹಾರ ನಡೆಸಿದರು. ಆದರೆ, ಸ್ವಾಮೀಜಿಯವರು ರಸ್ತೆಯಲ್ಲಿ ಬಿದ್ದಿದ್ದ ಒಂದು ಸಣ್ಣ ಉರುಟು ಕಲ್ಲನ್ನೆತ್ತಿಕೊಂಡು ಸರೋವರದ ತೀರದಾಚೆಗೆ ಎಸೆದದ್ದು ನನಗೆ ನೆನಪಿದೆ. ಸ್ವಾಮೀಜಿ ಈ ದಡದಿಂದ ಚಿಮ್ಮಿದ ಕಲ್ಲು ಸರೋವರದ ಆಚೆಯ ದಡಕ್ಕೆ ಹೋಗಿಬಿದ್ದಿತ್ತು! ಮಕ್ಕಳು ದೋಣಿಯಿಂದ ಇಳಿದ ನಂತರ, ಹರಿಗೋಲೊಂದು ಸ್ವಾಮೀಜಿಯವರ ಕಣ್ಣಿಗೆ ಬಿತ್ತು. ಕೇರಳದಿಂದ ಬಂದಿದ್ದ ಬೋಟ್‌ಕ್ಲಬ್ ಸದಸ್ಯರೊಬ್ಬರು ಖಾಸಗಿ ಬಳಕೆಗಾಗಿ ಇರಿಸಿಕೊಂಡಿದ್ದ ಹರಿಗೋಲು ಅದು. ಸ್ವಾಮೀಜಿ ಬಾಲಿಶ ಸಂಭ್ರಮದಿಂದ ಹರಿಗೋಲಿನೊಳಕ್ಕೆ ನೆಗೆದು ಹುಟ್ಟುಹಾಕುತ್ತಾ ಅದನ್ನು ನಡೆಸಲಾರಂಭಿಸಿದರು. ಹರಿಗೋಲನ್ನು ಚಲಿಸುತ್ತಾ ಸ್ವಾಮೀಜಿ ಪಕ್ಕಾ ಮೀನುಗಾರನ ಭಂಗಿಯಲ್ಲಿ ನಿಂತಿದ್ದರು. ಬೋಟ್ ಕ್ಲಬ್ ಸಿಬ್ಬಂದಿಯೆಲ್ಲಾ ಸ್ವಾಮೀಜಿಯವರ ಈ ಯಾನವನ್ನು ಮೆಚ್ಚುಗೆಯಿಂದ ವೀಕ್ಷಿಸಿದರು. ಹರಿಗೋಲಿನಿಂದ ಹೊರಬಂದ ನಂತರ ಬೋಟ್ ಕ್ಲಬ್ ಸಿಬ್ಬಂದಿಗೆ ವಂದಿಸಿದರು. ನಂತರ ಗೌರಿಶಂಕರ್ ಅವರತ್ತ ತಿರುಗಿ "ನಾನು ಮುಳುಗಿ ಹೋಗುತ್ತೇನೆ ಎಂದು ನಿಮಗೆ ಭಯವಾಗಿತ್ತೆ?" ಎಂದು ಕೇಳಿದರು. ಗೌರಿಶಂಕರ್ ಉತ್ತರಿಸಿದರು: "ಹೌದು. ಬೇಲೂರು ಮಠದ ಧರ್ಮದರ್ಶಿಗಳಿಗೆ ಈ ಸುದ್ದಿಯನ್ನು ಹೇಗೆ ಮುಟ್ಟಿಸುವುದು ಎಂದು ನಾನು ದಂಗುಬಡಿದುಹೋಗಿದ್ದೆ." ಸ್ವಾಮೀಜಿ ಗಹಗಹಿಸಿ ನಕ್ಕರು.

ಆಖೈರಾಗಿ ಈ ದೋಣಿವಿಹಾರವೇ ಸ್ವಾಮೀಜಿಯವರ ಸ್ವಯಂವಿಹಿತ ಏಕಾಂತಕ್ಕೆ ಭಂಗ ತಂದದ್ದು. ಬೋಟ್ ಕ್ಲಬ್‌ನ ಗುಮಾಸ್ತೆ ಅಳ್ವರೇಜ಼್‌ನಿಂದ ಸರೋವರದಲ್ಲಿ ಸ್ವಾಮೀಜಿಯವರು ನಡೆಸುತ್ತಿದ್ದ ಸಾಹಸಗಳು ಜನರಿಗೆ ಗೊತ್ತಾಗಿ ದರ್ಶನಾಕಾಂಕ್ಷಿಗಳ ಸಂಖ್ಯೆ ಹೆಚ್ಚಿತು. ಸಣ್ಣಪುಟ್ಟವಾದ್ದರಿಂದ ಸಮಾಚಾರ ಬಲುಬೇಗ ಹರಡಿತು. ಈ ಅಸಾಮಾನ್ಯ ಸಂನ್ಯಾಸಿಯ ದರ್ಶನಾಕಾಂಕ್ಷಿಗಳಾಗಿ ಜನ ತಂಡೋಪತಂಡವಾಗಿ ಬೆಟ್ಟ ಹತ್ತಿ ಬರಲಾರಂಭಿಸಿದರು. ಕೊನೆಗೆ ಸಂಜೆ ೪ರಿಂದ ೬ರವರೆಗೆ ಸಂದರ್ಶನ ವೇಳೆಯನ್ನು ನಿರ್ಬಂಧಿಸುವಂತೆ ಸ್ವಾಮೀಜಿಯವರೇ ಸಲಹೆ ಮಾಡಿದರು. ಹಾಗೂ ಹದಿನೆಂಟು ದಿನಗಳ ಕಾಲ ಭಗವದ್ಗೀತೆಯನ್ನು ಬೋಧಿಸಿದರು.

ಪ್ರತಿದಿನ ಸಂಜೆ ಸ್ವಾಮೀಜಿಯವರ ದರ್ಶನಕ್ಕಾಗಿ ಗಣ್ಯಾತಿಗಣ್ಯರೆಲ್ಲ ಬರುತ್ತಿದ್ದುದು ನನಗಿನ್ನೂ ನೆನಪಿದೆ. ಗ್ವಾಲಿಯರ್‌ನ ರಾಜಮಾತೆ ಮತ್ತು ಶ್ರೀಮತಿ ವಿಜಯಲಕ್ಷ್ಮೀ ಪಂಡಿತ್ ಅವರಲ್ಲಿ ಪ್ರಮುಖರು. ಕೈಗಾರಿಕೋದ್ಯಮಿ ಎ.ಕೆ.ಡಿ. ರಂಗಸ್ವಾಮಿ ರಾಜಾ ಧ್ವನಿಮುದ್ರಣ ಯಂತ್ರವನ್ನು ತಂದಿದ್ದರು. ಅಂತೆಯೇ ಡಾ॥ ವಿ.ಎನ್. ಶರ್ಮರೂ. ಶರ್ಮಾ ಅವರು ಶಿಕ್ಷಣತಜ್ಞರೂ, ಅಲ್ವಿನಾ ವೊನ್ ಕೆಲ್ಲರ್ ಅವರ ಅಳಿಯಂದಿರೂ ಹಾಗೂ ಮಿಸ್ ಮೆಕ್ಲಾಯ್ಡ್ ಅವರ ಮಿತ್ರರೂ ಆಗಿದ್ದ ಹೈಡಲ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಭಾರತೀಯ ತತ್ತ್ವಶಾಸ್ತ್ರದ ಪ್ರೊಫೆಸರಾಗಿದ್ದರು. ಅಂದು ಉಪನ್ಯಾಸ ಸಂಜೆ ೪ ಗಂಟೆಗೆ ಪ್ರಾರಂಭವಾಯಿತು. ೫ ಗಂಟೆಗೆ ಚರ್ಚೆಗೆ ಅವಕಾಶ ನೀಡಲಾಯಿತು. ಸ್ವಾಮೀಜಿ ಸಂಜೆ ೬ ಗಂಟೆಗೆ ತೆರಳಿದರು. ಉಪನ್ಯಾಸ ಕೇಳಲು ಬಂದಿದ್ದವರು ಬಹಳ ಹೊತ್ತು ಅಲ್ಲೇ ನಿಂತು ವಿಚಾರ ವಿನಿಮಯ, ವಿಳಾಸ ವಿನಿಮಯ ಮಾಡಿಕೊಂಡರು, ಸ್ನೇಹ–ಪರಿಚಯ ಮಾಡಿಕೊಂಡರು. ಉದಾಹರಣೆಗೆ ಹೇಳುವುದಾದರೆ, ಸಾವಿತ್ರಿ ಅಮ್ಮ ಅವರು ಸ್ವಾಮಿ ಪವಿತ್ರಾನಂದರ ಶಿಷ್ಯರಾದ ಕರೋಲ್ ಲಾರ್ಡ್ ಅವರ ವಿಶ್ವಾಸ ಗಳಿಸಿದರು. ಕರೋಲ್ ಲಾರ್ಡ್ ಸ್ವಲ್ಪ ದಿನಗಳ ಹಿಂದೆಯಷ್ಟೇ ಅಮೆರಿಕದಿಂದ ಕೊಡೈಕೆನಾಲ್‌ಗೆ ಆಗಮಿಸಿದ್ದರು. ಏತನ್ಮಧ್ಯೆ, ಗೋಪಿವರ್ಮಾ ಸದ್ದಿಲ್ಲದೇ ಹಜಾರವನ್ನು ಸ್ವಚ್ಛಗೊಳಿಸಿ ತಿದ್ದಿಟ್ಟಿದ್ದರು. ರಾತ್ರಿಯ ಊಟದ ವ್ಯವಸ್ಥೆಗಾಗಿ ಅಮ್ಮ ಮತ್ತು ನಿರ್ಮಲಾ ಅಡುಗೆಮನೆಗೆ ಧಾವಿಸಿದರು.

ರಜೆಯ ದಿನಗಳು ಮುಗಿಯುತ್ತ ಬಂದವು. ಸ್ವಾಮೀಜಿಯವರನ್ನು ಮದ್ರಾಸಿಗೆ ರೈಲಿನಲ್ಲಿ ಕರೆದುಕೊಂಡು ಹೋಗುವುದಕ್ಕಾಗಿ ಲಲಿತಾ ಮತ್ತು ಸುಕುಮಾರನ್ ಪ್ರಾರ್ಥಿಸಿದರು. ಸ್ವಾಮೀಜಿಯವರನ್ನು ಕರೆದೊಯ್ಯುವ ಭಾಗ್ಯ ತಮ್ಮದಾಗಬೇಕೆಂಬುದು ಅವರ ಮನವಿಯಾಗಿತ್ತು. ತ್ವರಿತವಾಗಿ ಹೊರಡುವ ಸಿದ್ಧತೆ, ವಿದಾಯ ಕಾರ್ಯಗಳು ನಡೆದವು. ಇದು ಸ್ವಾಮೀಜಿಯವರ ಎಂದಿನ ರೀತಿ–ನೀತಿಯೇ ಆಗಿತ್ತು.

ಸ್ವಾಮೀಜಿಯವರು ಕೆಲವು ದಿನಗಳ ಹಿಂದೆ ಹರಡಿಕೊಳ್ಳುತ್ತಿದ್ದ ಧೂಳಿನಲ್ಲಿ ಕಾರು ಮರೆಯಾಗುವುದನ್ನು ನಾವು ನೋಡುತ್ತ ನಿಂತಿದ್ದೆವು. ಆಗ, ವಿಧಿವಶರಾಗುವ ಮುಂಚೆ, ಆತ್ಮದ ಬಗ್ಗೆ ಅವರು ಹೇಳಿದ್ದ ಮಾತುಗಳನ್ನು ನಾನು ಜ್ಞಾಪಿಸಿಕೊಂಡೆ:

"ನಾನು ನಿಮ್ಮ ಮಧ್ಯೆಯೇ ಇದ್ದೇನೆ; ನಿಮ್ಮ ಸಕಲ ಚಟುವಟಿಕೆಗಳಲ್ಲೂ ನಾನಿದ್ದೇನೆ; ಆದರೆ ಗಮನಿಸಿ! ಈ ಕೊಠಡಿಯಿಂದ ಕಾಲ್ತೆಗೆದ ಕ್ಷಣದಿಂದ ನಾನು ಏಕಾಂಗಿ ಮತ್ತು ಮುಕ್ತ."

ಹೀಗೆ ಅವರು ನನ್ನ ಸ್ಮೃತಿಯಲ್ಲಿ ಉಳಿದಿದ್ದಾರೆ, ರಾಮಕೃಷ್ಣ ಪಂಥದ ಈ ಅಸಾಮಾನ್ಯ ಸನ್ಯಾಸಿ ಸದಾಕಾಲ "ಏಕಾಂಗಿಯಾಗಿ ಮತ್ತು ಮುಕ್ತರಾಗಿ" ಉಳಿದಿದ್ದಾರೆ.

* * * *

# ೧೦೭. ವಿರಕ್ತ ಚೆಲುವ

–ಲಲಿತಾ ರಾಮದಾಸ್*

ಸ್ವಾಮಿ ರಂಗನಾಥಾನಂದರು ಮಹಾಸಮಾಧಿಸ್ಥರಾದ ಸುದ್ದಿ ಕೇಳಿದಾಗ ವೈಯಕ್ತಿಕ ನಷ್ಟದ ಗಾಢ ಸಂವೇದನೆ ನನ್ನನ್ನು ಘಾಸಿಗೊಳಿಸಿತು. ದೆಹಲಿ ಕಾಲೇಜಿನಲ್ಲಿ ಓದುತ್ತಿದ್ದಾಗ ಮೊದಲ ಬಾರಿಗೆ ನಾನು ಅವರನ್ನು ಕಂಡದ್ದು. ಅವತ್ತಿನ ಪ್ರಥಮ ದರ್ಶನದಲ್ಲಿ, ನಮ್ಮದು ಆ ಮುಹೂರ್ತ ಮಾತ್ರದಲ್ಲೇ ಉಂಟಾದ ಸಂಬಂಧ. ಕಳೆದ ಅರ್ಧ ಶತಮಾನದಲ್ಲಿ ನಾವು ಸದಾಕಾಲವೂ ನಿಕಟ ಸಂಪರ್ಕಹೊಂದಿರಲಿಲ್ಲ. ಆದಾಗ್ಯೂ ಉದ್ದಕ್ಕೂ ನನ್ನ ಖಾಸಗಿ ಜೀವನಯಾನದಲ್ಲಿ ನೆಮ್ಮದಿಯುಂಟುಮಾಡುವ ಅವರ ಪ್ರಭಾವ ಇದ್ದೇ ಇತ್ತು.

ಈ ಕಾಲಘಟ್ಟದಲ್ಲಿ ನಿಂತು, ನಮ್ಮ ನಡುವಣ ಸಂಬಂಧ ರೂಪುಗೊಂಡ ರೀತಿ, ಅದು ಸಹಿಷ್ಣುವಾದದ್ದು ಹಾಗೂ ಕಾಲದ ಅಗ್ನಿದಿವ್ಯವನ್ನೆದುರಿಸಿ ಗಟ್ಟಿಯಾದದ್ದು – ಇವುಗಳನ್ನೆಲ್ಲ ಸ್ಮರಿಸುವುದೆಂದರೆ ಅದು ಒಂದು ವಿಚಾರಪ್ರಚೋದಕ ಪ್ರಕ್ರಿಯೆಯೇ ಸರಿ. ಹಲವಾರು ಪ್ರಶ್ನೆಗಳಿಗೆಡೆಮಾಡಿಕೊಟ್ಟು, ಒಳನೋಟ–ಅರಿವುಗಳನ್ನು ಮೂಡಿಸಿದ ಹಾಗೂ ರೂಢಿಗತ ದೃಷ್ಟಿ–ಧೋರಣೆಗಳಿಗೆ ಸವಾಲಾದ ಸಂಬಂಧವದು. ರಾಷ್ಟ್ರೀಯ ಹಾಗೂ ವಿಶ್ವ ನೆಲೆಯಲ್ಲಿ ಧಾರ್ಮಿಕ–ಆಧ್ಯಾತ್ಮಿಕ ಗಣ್ಯವ್ಯಕ್ತಿಯಾಗಿ ತಮ್ಮ ಹೆಜ್ಜೆಗುರುತುಗಳನ್ನು ಸ್ಪಷ್ಟವಾಗಿ ಮೂಡಿಸಿರುವ ಸ್ವಾಮಿ ರಂಗನಾಥಾನಂದರಂಥ ಶ್ರೇಷ್ಠ ವ್ಯಕ್ತಿಯೊಬ್ಬರ ಜೊತೆ ಒಡನಾಟದ ಅನುಭಗಳನ್ನು, ನೆನಪುಗಳನ್ನು ಕುರಿತು ಮಾತನಾಡುವುದೆಂದರೆ ಅದೊಂದು ಬಗೆಯ ವಿಶಿಷ್ಟ ಪ್ರಕ್ರಿಯೆಯೇ. ಆದ್ದರಿಂದ ಈ ಸ್ಮೃತಿಕಥನದಲ್ಲಿ ನಾನು ಸ್ವಾಮೀಜಿಯವರ ಜೊತೆಗಿನ ನನ್ನ ಸ್ನೇಹಬಾಂಧವ್ಯದ ವಿಶಿಷ್ಟ ಅಂಶಗಳತ್ತ ಮಾತ್ರ ನನ್ನ ದೃಷ್ಟಿಯನ್ನು ಕೇಂದ್ರೀಕರಿಸಲಿಚ್ಛಿಸುತ್ತೇನೆ.

### ದೆಹಲಿಯ ಪ್ರಾರಂಭದ ದಿನಗಳು

೧೯೫೦ರ ದಶಕದ ಕೊನೆಯಭಾಗ. ನನ್ನ ತಂದೆ ದಿವಂಗತ ಅಡ್ಮಿರಲ್ ರಾಮದಾಸ್ ಕತಾರಿಯವರು ಭಾರತೀಯ ನೌಕಾ ಪಡೆಯ ಪ್ರಧಾನ ದಂಡನಾಯಕರಾಗಿ ಅದೇ ತಾನೇ ಅಧಿಕಾರ ವಹಿಸಿಕೊಂಡಿದ್ದರು. ಆಗ ನಾವು ದೆಹಲಿ ಸಾಮ್ರಾಜ್ಯದ ಹೃದಯಭಾಗವಾದ ಲ್ಯೂಟಿನ್ ಕಿಂಗ್ ಜಾರ್ಜ್ ಮಾರ್ಗದ ೧೨ನೇ ನಂಬರ್‌ನಲ್ಲಿ ಮಹಲ್‌ನಲ್ಲಿ ವಾಸವಾಗಿದ್ದೆವು. ಬ್ರಿಟಿಷ್ ಅಡ್ಮಿರಲ್ ದೇಶಬಿಟ್ಟು ಹೋದ ನಂತರ ಆ ನಿವಾಸದಲ್ಲಿ ಮೊದಲು ವಾಸ್ತವ್ಯ ಮಾಡಿದ ಅಧಿಕಾರಿ ನನ್ನ ತಂದೆಯವರು. ನಾನು ಮತ್ತು ನನ್ನ ಇಬ್ಬರು ಗೆಳತಿಯರು ದೆಹಲಿ ವಿಶ್ವವಿದ್ಯಾನಿಲಯದ ಮಿರಾಂಡ ಹೌಸ್‌ನ ವಿದ್ಯಾರ್ಥಿನಿಯರಾಗಿದ್ದೆವು. ನಂತರ ಅವರಿಬ್ಬರೂ ನನ್ನ ಆತ್ಮೀಯ ಬಾಳಗೆಳತಿಯ ರಾದರು. ಒಬ್ಬಳು, ಅಂಜಲೀ ಇಳಾದೇವ್, ಇಂದು ಅಂಜಲೀ ಮೆನನ್ ಎಂದು ಪ್ರಖ್ಯಾತಳಾಗಿರುವ ಭಾರತದ ಶ್ರೇಷ್ಠ ವರ್ಣಚಿತ್ರ ಕಲಾವಿದೆ. ಇನ್ನೊಬ್ಬಳು ಪ್ರಮಿಳಾ ಲಾಲ್; ನಂತರದ ದಿನಗಳಲ್ಲಿ ಪ್ರಮೀಳಾ ಲೂಯಿಸ್. ಈಕೆ ಬದ್ಧ ಸಾಮಾಜಿಕ ಕಾರ್ಯಕರ್ತೆ ಮತ್ತು ರಾಜಕೀಯ ಕ್ರಿಯಾಶೀಲೆ. ನಾವು ಮೂವರು ಕೂಡಿ ಮಾಡದೇ ಇದ್ದ ಸಾಹಸಗಳು ಅತಿ ಕಡಿಮೆಯೇ ಎನ್ನಬೇಕು.

---

* ದೆಹಲಿಯ ಭಕ್ತೆ. ಪೂರ್ವ ವಲಯ ನೌಕಾಪಡೆಯ ಪ್ರಧಾನ ದಂಡನಾಯಕರಾಗಿದ್ದ ಲ್ಯಾಲಿರಾಮೂ ರಾಮದಾಸ್ ಅವರ ಪತ್ನಿ.

ಅಂಜಲಿಯ ತಂದೆ ದಿವಂಗತ ಅಮರ್ ದೇವ್, ಪ್ರತಿ ಭಾನುವಾರ ರಾಮಕೃಷ್ಣ ಮಿಷನ್‌ನಲ್ಲಿ ಭಗವದ್ಗೀತೆಯ ಬಗ್ಗೆ ಉಪನ್ಯಾಸಗಳನ್ನು ನೀಡುತ್ತಿರುವ ದಿವ್ಯ–ಸುಂದರ–ದೇದೀಪ್ಯಮಾನ ಸ್ವಾಮೀಜಿಯೊಬ್ಬನ ಬಗ್ಗೆ ಹೇಳಿದಾಗ ನಾವು ಮೂವರು ಅವರ ಪರೀಕ್ಷಾರ್ಥ ಅವಗಾಹನೆಗೆ ನಿರ್ಧರಿಸಿದೆವು. ಅವರು ಮೊದಲ ದಿನವೇ ನಮ್ಮನ್ನು ಮಂತ್ರಮುಗ್ಧರನ್ನಾಗಿಸಿದರು. ಸಂಜೆ ೬.೩೦ಕ್ಕೆ ಸರಿಯಾಗಿ ವೇದಿಕೆಗೆ ಆಗಮಿಸಿದ ಆ ಕ್ಷಣದಿಂದ ನಾವು ಅವರ ಮೋಡಿಗೊಳಗಾದೆವು. ಅವರು ಸರಳ ಶಾಂತಿ ಮಂತ್ರದಿಂದ ಉಪನ್ಯಾಸ ಪ್ರಾರಂಭಿಸಿದರು:

**ಓಂ ಸಹನಾವವತು, ಸಹನೌ ಭುನಕ್ತು**
**ಸಹವೀರ್ಯಂ ಕರವಾವಹೈ**
**ತೇಜಸ್ವಿನಾವಧೀತಮಸ್ತು ಮಾ ವಿದ್ವಿಶಾವಹೈ**
**ಓಂ ಶಾಂತಿಃ ಶಾಂತಿಃ ಶಾಂತಿಃ**

ವರ್ಷಗಳು ಉರುಳಿದಂತೆ, ಹಿಂದಿನ ವರ್ಷಗಳಂತೆ ಈಗಲೂ ನನ್ನನ್ನು ಬೆರಗುಗೊಳಿಸಿರುವುದೆಂದರೆ: ಅವರು ಇಷ್ಟೊಂದು ಬೌದ್ಧಿಕ ವಿಷಯವನ್ನು ಅರುವತ್ತು ನಿಮಿಷಗಳಲ್ಲಿ ಅಡಕಗೊಳಿಸಿದ್ದು ಹೇಗೆ? ನಿರಾತಂಕವಾಗಿ, ತಾರ್ಕಿಕವಾಗಿ, ಕರಾರುವಾಕ್ಕಾದ ಸಮಯಕ್ಕೆ ಮುಕ್ತಾಯಗೊಳಿಸಿದ್ದು ಹೇಗೆ? ಅವರಿಗೆ ಇದು ಹೇಗೆ ಸಾಧ್ಯವಾಯಿತು?

ಈ ಮನುಷ್ಯನ ವಿಸ್ಮಯಕಾರಿ ಸಾಮರ್ಥ್ಯ ನಮ್ಮನ್ನು ಮಂತ್ರಮುಗ್ಧರನ್ನಾಗಿಸಿದ ಮತ್ತೊಂದು ಬೆರಗಿನ ಅಂಶ. ಧರ್ಮಗ್ರಂಥವೊಂದರ ಮೇಲಿನ ಉಪನ್ಯಾಸವನ್ನು ವಿಜ್ಞಾನ ಪ್ರಪಂಚ, ಗಣಿತಶಾಸ್ತ್ರ, ಜೀವಶಾಸ್ತ್ರ, ಭೌತಶಾಸ್ತ್ರ, ಇತಿಹಾಸ, ತರ್ಕಶಾಸ್ತ್ರ, ತತ್ತ್ವಶಾಸ್ತ್ರಗಳ ಜೊತೆ ತಳುಕುಹಾಕುತ್ತಿದ್ದ ರೀತಿ ನಮ್ಮನ್ನು ಬೆರಗುಗೊಳಿಸಿತ್ತು. ಭಗವದ್ಗೀತೆಯೊಂದಿಗೆ ಇವೆಲ್ಲದರ ಸಂಯೋಗ ಸಾಧಿಸಿ ಒಂದು ಅದ್ಭುತ ಜಾದೂ ಮಾಡುತ್ತಿದ್ದರು. ಇದು ನಮ್ಮ ಕಲ್ಪನಾಸಾಮ್ರಾಜ್ಯಕ್ಕೆ ಲಗ್ಗೆ ಹಾಕಿತು. ಅವರು ನಂಬಲಶಕ್ಯವಾದ ಜ್ಞಾನದ ಚಿಲುಮೆಯಾಗಿದ್ದರು. ನಿಜಕ್ಕೂ ಪ್ರಚಂಡ ಮೇಧಾವಿ. ಅವರು ಮಿತ್ರ, ಮಾರ್ಗದರ್ಶಿಯಾದರು. ನಾವು ಯಾವಾಗಲೂ ಮೊದಲ ಸಾಲಿನ ಮಧ್ಯದ ಮೂರು ಆಸನಗಳಲ್ಲಿ ಕುಳಿತುಕೊಳ್ಳುತ್ತಿದ್ದೆವು. ಅವರು ನಮ್ಮತ್ತ ನೋಟ ಹರಿಸುತ್ತಲೇ ಉಪನ್ಯಾಸ ಶುರುಮಾಡುತ್ತಿದ್ದರು. ಮಂದ ದನಿ, ಕಂಡೂ ಕಾಣದಂಥ ನಸುನಗೆ, ವಿರಕ್ತ ಚೆಲುವು ಸೂಸುವ ಮೊಗದಿಂದ ಉಪನ್ಯಾಸ ಪ್ರಾರಂಭಿಸುತ್ತಿದ್ದರು. ಅವರು ನಮ್ಮನ್ನು ತ್ರಿವಳಿ ಗೆಳತಿಯರನ್ನು "ಲಾಲಿ", "ಪಾಲಿ" ಮತ್ತು "ಜಾಲಿ" ಎಂದು ಕರೆಯುತ್ತಿದ್ದರು. ನಮ್ಮ ಕಾಲೇಜು ಶಿಕ್ಷಣ ಮುಗಿಯುವವರೆಗೆ ಈ ತ್ರಿವಳಿ ಗೆಳೆತನ ಮುಂದುವರಿಯಿತು. ನಂತರ ನಾವು ಬೇರೆ ಬೇರೆ ದಾರಿಗಳನ್ನು ಕಂಡುಕೊಂಡೆವು.

ಸ್ವಾಮೀಜಿ ಆಗಿಂದಾಗ್ಗೆ ನೌಕಾಭವನಕ್ಕೆ ಬಂದು ನಮ್ಮ ಮನೆಮಂದಿಗೆ, ಮಿತ್ರರಿಗೆ ಹಾಗೂ ಸಹೋದ್ಯೋಗಿಗಳಿಗೆ ಪ್ರವಚನಗಳನ್ನು ಕೊಡುತ್ತಿದ್ದರು. ಇಂಥ ಒಂದು ಸಮಯದಲ್ಲೇ ಅವರು ರಾಮುವನ್ನು ಭೇಟಿಯಾದದ್ದು. ರಾಮು ಆಗ ನೌಕಾಪಡೆಯಲ್ಲಿ ನನ್ನ ತಂದೆಗೆ ಫ್ಲೈಟ್ ಲೆಫ್ಟಿನೆಂಟ್ ಆಗಿದ್ದರು. ಕೊನೆಗೆ ನಾನು ರಾಮು ಮದುವೆಯಾದೆವು. ನಮ್ಮ ವಿವಾಹದ ವಿಷಯವನ್ನು ಮೊದಲು ಅರಿತವರಲ್ಲಿ ಸ್ವಾಮೀಜಿಯೂ ಒಬ್ಬರಾಗಿದ್ದರು. ಅವರು ನಮ್ಮ ವಿವಾಹಕ್ಕೆ ಸಮ್ಮತಿಸಿ, ನಮ್ಮನ್ನು ಆಶೀರ್ವದಿಸಿದರು. ನಮ್ಮ ಸ್ನೇಹ ಗೀತಾ ಪ್ರವಚನದನಂತರವೂ ಚಿರವಾಗಿ ಉಳಿಯಿತು. ಇದಕ್ಕೆ ಒಂದು ಕಾರಣವೆಂದರೆ ನಾನು ಮತ್ತು ರಾಮು ಸ್ವಾಮೀಜಿಯವರ ಜೊತೆ ಸತತವಾಗಿ ಸಂಪರ್ಕವನ್ನು ಹೊಂದಿರುತ್ತಿದ್ದದ್ದು. ಅವರು ಎಲ್ಲೇ ಇರಲಿ ನಾವು ಸಂಪರ್ಕ ಹೊಂದಿರುತ್ತಿದ್ದೆವು. ಒಂದು ರೀತಿ ನಾವು ಅವರೊಡನೆ ಸಹ–ಸಂಚಾರಿಗಳಾಗಿದ್ದೆವು; ಸಹ–ಪಯಣಿಗರಾಗಿದ್ದೆವು. ಅವರು ಬಿಡುವುಮಾಡಿಕೊಂಡು ದೆಹಲಿ, ಕೊಚ್ಚಿನ್, ಬಾನ್, ಹೈದರಾಬಾದ್ ಮತ್ತು ವೈಜಾಗ್‌ಗಳಲ್ಲಿ ನಾವಿದ್ದಾಗ

ನಮ್ಮಲ್ಲಿಗೆ ಬಂದಿದ್ದರು. ನಮಗೆ ಮಕ್ಕಳಾದಂತೆ, ಅವರನ್ನು ಆಶೀರ್ವದಿಸಿದರು. ಹಾಗೆಯೇ ಮೊಮ್ಮಕ್ಕಳಾದಾಗಲೂ ಅವರನ್ನೂ ಆಶೀರ್ವದಿಸಿದರು.

**ನಂಬಿಕೆ–ಧರ್ಮ–ಪ್ರಶ್ನೆ ಪೂರ್ವಾಗ್ರಹಗಳು**

ಕಾಲ ಕಳೆದಂತೆ, ನನ್ನ ಜೀವನಾನುಭವದ ಮತ್ತು ಕೆಲಸ–ಕಾರ್ಯಗಳಿಂದಾಗಿ, ಧರ್ಮದಲ್ಲಿ ನನ್ನ ಶ್ರದ್ಧೆ ನಂಬಿಕೆಗಳನ್ನು ನಾನೇ ಪ್ರಶ್ನಿಸಿಕೊಳ್ಳುವಂತಾಯಿತು. ಧರ್ಮ ಮತ್ತು ಅಧ್ಯಾತ್ಮಗಳ ನಡುವಣ ವ್ಯತ್ಯಾಸವೇನು ಎಂಬ ಪ್ರಶ್ನೆ ಎದ್ದಿತು. ಭೇಟಿಯಾದ ಸಂದರ್ಭಗಳಲ್ಲೆಲ್ಲ ನಾನು ಸ್ವಾಮೀಜಿಯವರೊಂದಿಗೆ ಈ ಪ್ರಶ್ನೆಗಳ ಬಗ್ಗೆ ಚರ್ಚಿಸುತ್ತಿದ್ದೆ. ಸ್ವಾಮೀಜಿಯವರು ನಮ್ಮೊಡನೆ ಬಿಡಾರ ಮಾಡಿದಾಗ ಇಂಥ ಚರ್ಚೆಗೆ ಸಮಯಾವ ಕಾಶಗಳು ಒದಗಿಬಂದವು. ನನ್ನ ಪಾಲಿಗೆ ಈ ಚರ್ಚೆಗಳು ನಮ್ಮ ವಿಶೇಷ ಬಾಂಧವ್ಯದ ಹೆಗ್ಗುರುತುಗಳು.

ವರ್ಷಗಳು ಕಳೆದಂತೆ ನನಗೆ ಧರ್ಮ ಅಥವಾ ಧಾರ್ಮಿಕ ಗಣ್ಯರನ್ನು ಅಂಧಳಾಗಿ ಅನುಕರಿಸುವುದು ಕಷ್ಟವಾಗಿ ತೋರಿತು. ಯಾವುದೇ ರೀತಿಯ ಅಂಧಶ್ರದ್ಧೆಯನ್ನು ಒಪ್ಪಿಕೊಳ್ಳುವುದು ಹೆಚ್ಚು ಹೆಚ್ಚು ಕಷ್ಟವಾಯಿತು. ಹಿಂದೂ ಧರ್ಮ ಮಾತ್ರವಲ್ಲ, ಎಲ್ಲ ರೀತಿಯ ಧರ್ಮ, ಧಾರ್ಮಿಕ ಪಂಥಗಳ ಹತೋಟಿ, ಪ್ರಾಬಲ್ಯದ ವರ್ತನೆಗಳು, ಶಕ್ತಿ ಪ್ರದರ್ಶನಗಳು ಅಸಹನೀಯವಾಗಿ ಕಂಡವು. ಪ್ರಶ್ನಾತೀತ ಪೂಜ್ಯಭಾವನೆ–ಗೌರವಾರ್ಪಣೆಗಳು, ನಮ್ಮ ಧಾರ್ಮಿಕ ನಾಯಕರಿಗೆ ನಾವು ತೋರುವ ಪ್ರಶ್ನಾತೀತವಾದ ಪೂಜ್ಯತೆ–ಗೌರವಾರ್ಪಣೆಗಳು; ಏನನ್ನೂ ಪ್ರಶ್ನಿಸಲು ಅವಕಾಶವಿಲ್ಲ ದಿರುವುದು; ಚರ್ಚೆ ಸಂವಾದಗಳಿಗೆ ಅಸಮರ್ಥರಾಗಿರುವುದು; ವಿಧ್ಯುಕ್ತ ನೀತಿ–ನಿಯಮ–ನಡಾವಳಿಗಳ ಬಗ್ಗೆ ಚರ್ಚೆಗೆ, ಸವಾಲು–ಜವಾಬುಗಳಿಗೆ ಅನುಮತಿ, ಅವಕಾಶಗಳನ್ನು ನೀಡದೇ ಇರುವುದು; ಧಾರ್ಮಿಕ ಗ್ರಂಥಗಳ ವ್ಯಾಖ್ಯಾನಕ್ಕೆ ಅರ್ಥ ವಿವರಣೆಗಳಿಗೆ ಒಪ್ಪದೇ ಇರುವುದು; ಇವೆಲ್ಲವೂ ನನಗೆ ಇಷ್ಟವಾಗಲಿಲ್ಲ; ಇವೆಲ್ಲ ನನಗೆ ಅಸಹ್ಯಕರವಾಗಿ ಕಂಡವು. ಬೇರೆ ಬೇರೆ ನಂಬಿಕೆಗಳ, ವಿಶೇಷವಾಗಿ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರ ಬಗ್ಗೆ ವ್ಯಾಪಕವಾಗಿರುವ ನಕಾರಾತ್ಮಕ ದೃಷ್ಟಿ–ಭಾವನೆಗಳು, ಹಿಂದೂ ಧರ್ಮೀಯರ ಇಂಥ ಧೋರಣೆಗಳು ನನಗೆ ಅಸಹನೀಯವಾದವು. ನಾವು ಗೌರವಿಸುವ, ಪ್ರೀತಿಸುವ ಹಿಂದೂ ಧರ್ಮದ ಆಧಾರಪ್ರಾಯವಾದ ಸಹಿಷ್ಣುತೆಗೆ ವಿರುದ್ಧವಾದ ಈ ನಕಾರಾತ್ಮಕ ಭಾವನೆಗಳು ನನಗೆ ಅಸಹ್ಯಕರವಾಗಿ ಕಂಡವು.

**ಭಿನ್ನಮತಕ್ಕೆ ತೆರೆದ ಮನ**

ಸ್ವಾಮೀಜಿವರು ಮತ್ತು ನನ್ನ ನಡುವೆ ಭಿನ್ನಾಭಿಪ್ರಾಯ ಉಂಟಾದ ಸಂದರ್ಭಗಳು ಅನೇಕ. ನಮ್ಮ ನಡುವೆ ಅಭಿಪ್ರಾಯಭೇದವಿತ್ತು. ಅವರ ವಿಚಾರಗಳನ್ನು, ಅಭಿಪ್ರಾಯಗಳನ್ನು ಒಪ್ಪದಿದ್ದಾಗ ನಾನು ಅದನ್ನು ಅವರಿಗೆ ಪ್ರಖರವಾಗಿಯೇ ತಿಳಿಸುತ್ತಿದ್ದೆ. ಅವರು ಯಾವತ್ತೂ ಸಹನೆಯಿಂದ ನನ್ನ ಅಭಿಪ್ರಾಯಗಳನ್ನು ಲಾಲಿಸು ತ್ತಿದ್ದರು. ಆದಾಗ್ಯೂ, ತಮ್ಮ ವೈಚಾರಿಕ ನೆಲೆಯಿಂದ ತಮ್ಮ ಅಭಿಪ್ರಾಯಗಳನ್ನು ವಿವರಿಸುತ್ತಿದ್ದರು. ನಾನು ಅವರಲ್ಲಿ ಕಂಡ ಅತ್ಯಂತ ಪ್ರೀತಿಪೂರ್ವಕವಾದ, ಗೌರವಪೂರ್ವಕವಾದ ಗುಣವೆಂದರೆ, ಪ್ರಾಮಾಣಿಕ ಚರ್ಚೆ–ಸಂವಾದಗಳಿಗೆ ಮುಕ್ತವಾದ ಅವರ ಮನಸ್ಸು. ಹಾಗೂ ನಮ್ಮ ನಡುವೆ ಭಿನ್ನಾಭಿಪ್ರಾಯಗಳಿದ್ದಾಗ್ಯೂ ಪ್ರೀತಿ–ವಾತ್ಸಲ್ಯಗಳ, ಪೂಜ್ಯತೆಯ ಸಂಬಂಧಗಳಿಗೆ ಅದು ಅಡ್ಡಿಯಾಗಬಾರದೆಂಬ ಅವರ ನಂಬಿಕೆ.

ರಾಮು ಮತ್ತು ನಾನು ಅವರನ್ನು ಕೊನೆಯ ಸಲ ಭೇಟಿಯಾದದ್ದು ಬೇಲೂರು ರಾಮಕೃಷ್ಣ ಮಠದಲ್ಲಿ. ಬಹುಶಃ, ಅವರು ನಮ್ಮಿಂದ ಅಗಲುವುದಕ್ಕೆ ಒಂದು ವರ್ಷ ಮುಂಚಿತವಾಗಿ. ಅವರು ಆಗ ಹಸನ್ಮುಖಿಗಳಾಗಿದ್ದರು. ನಮ್ಮೊಡನೆ ಮಾತನಾಡಿದರು. ಕುಟುಂಬದ ಕ್ಷೇಮ–ಸಮಾಚಾರ ಕೇಳಿದರು. "ಪಾಲಿ"–"ಜಾಲಿ" ಬಗ್ಗೆಯೂ ವಿಚಾರಿಸಿದರು. ಅವರು ಹಿಂದಿನ ಘಟನೆಗಳನ್ನು ನೆನಪಿಸಿಕೊಂಡರು. ಜ್ಞಾಪಕಗಳ ಸರಮಾಲೆ. ಆದರೆ ಹೆಚ್ಚು

ಮಾತನಾಡಲು ಅವರಿಗೆ ಕಾಲಾನುಮತಿ ಇರಲಿಲ್ಲ. ಅವರು ಬಳಲಿದ್ದರು. ಹೆಚ್ಚು ಮಾತನಾಡಲು ವೈದ್ಯರು ಅವರನ್ನು ಬಿಡುತ್ತಿರಲಿಲ್ಲ. ಅವರ ಉಜ್ವಲ ಅಂಗಸೌಷ್ಠವ, ಚೈತನ್ಯ ಕೃಶವಾಗುತ್ತಿತ್ತು.

ಸ್ವಾಮೀಜಿ! ಅವರ ಬಗ್ಗೆ ಈ ಕೆಲವು ಮಾತುಗಳನ್ನು ದಾಖಲಿಸುವುದು ನನ್ನ ಸುಯೋಗ.

ನೀವು ಪ್ರೀತಿ–ಗೌರವಗಳಿಂದ ನಮ್ಮನ್ನು ಪುನೀತಗೊಳಿಸಿದ ನಿಮ್ಮ ಭೇಟಿಗಳು, ನಿಮ್ಮ ಅಂತ್ಯವಿರದ ಅನಂತ ಕಥಾಕಾಲಕ್ಷೇಪಗಳು, ಚಾಲಕುಡಿ ನದಿಯಲ್ಲಿ ನೀವು ಈಸಿದ್ದು, ರಂಗೂನ್–ಕರಾಚಿಗಳಲ್ಲಿನ ನಮ್ಮ ಮನೆಗೆ ಬಂದದ್ದು, ನಾವು ಪ್ರಾರಂಭಿಸಿದ ಭಾರತ–ಪಾಕಿಸ್ತಾನ ಶಾಂತಿ ಮಾತುಕತೆಗೆ ಪ್ರೋತ್ಸಾಹ ಎರೆದದ್ದು, ನಾವು ವಾಸ ಮಾಡುತ್ತಿದ್ದ ಹಳ್ಳಿಗಳಲ್ಲಿ ಕೈಗೊಂಡ ನಮ್ಮ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಉತ್ತೇಜನದ ಬೆನ್ನೆಲುಬಾಗಿ ನಿಂತದ್ದು– ಹೀಗೆ ನಮ್ಮ ಮೇಲೆ ನೀವು ಅಪಾರ ಕೃಪೆ ತೋರಿದ್ದೀರಿ.

ವಸಾಹತು ಶೃಂಖಲೆಗಳಿಂದ ಮುಕ್ತವಾಗಬೇಕೆಂಬ ನಿಮ್ಮ ಆಗ್ರಹಪೂರ್ವಕ ಭಾವನೆಗಳ ಮಾರ್ಗದರ್ಶನದಲ್ಲಿ ನಾವು ಮುಂದುವರಿಯುತ್ತೇವೆ. ವಸಾಹತುಪೀಡಿತ ಮನಸ್ಸು ಭಾರತ ಎದುರಿಸುತ್ತಿರುವ ಮಹಾನ್ ಸವಾಲೆಂದು ನೀವು ಭಾವಿಸಿದ್ದಿರಿ. ನಮ್ಮ ಚಿಂತನಕ್ರಮದಲ್ಲಿನ ಗುಲಾಮಿ ಮನೋಭಾವ, ಸಂಕುಚಿತ ಮನಸ್ಸು ಮತ್ತು ಸ್ವಾರ್ಥ – ಇವೇ ವಸಾಹತುಶಾಹಿ ಮನೋಭಾವವನ್ನು ಕಿತ್ತೊಗೆಯಬೇಕೆಂದೂ, ಭಾರತದ ಅತಿ ದೊಡ್ಡ ಸವಾಲುಗಳೆಂದೂ, ಸಮಸ್ಯೆ ಎಂದು ನೀವು ನಮಗೆ ಹೇಳುತ್ತಿದ್ದಿರಿ. ಇದನ್ನು ಬದಲಾಯಿಸಲು ನಾವು ಸರ್ವರೀತಿಯಲ್ಲೂ ಪ್ರಯತ್ನಿಸುತ್ತೇವೆ. ನೀವು ಸದಾಕಾಲ ನಮ್ಮೊಡನೆ ಇರುತ್ತೀರಿ, ಮಣಿಯದ ಕರ್ತವ್ಯ ಪ್ರಜ್ಞೆ, ಧ್ಯೇಯೋದ್ದೇಶ, ಮುಗುಳ್ನಗೆ ಹಾಗೂ ಸಖ್ಯ ಮನೋಭಾವಗಳಿಂದ ನೀವು ಸದಾಕಾಲ ನಮ್ಮೊಡನೆ ಇರುತ್ತೀರಿ ಎಂಬುದು ನಮಗೆ ಗೊತ್ತು.

* * * *

# ೧೦೮. ಪ್ರೀತಿಯ ಅಕ್ಷಯಪಾತ್ರೆ

–ಲೀಲಾ ರಾಮ್‌ಜೀ*

ವರ್ಷ ೧೯೫೦. ನನ್ನ ತಾಯಿ ಕಮಲಾಸಾರಥಿ, ನನ್ನ ಸೋದರಿ ಪ್ರೇಮಾ ಸ್ವಾಮಿ ರಂಗನಾಥಾನಂದರನ್ನು ದೆಹಲಿಯಲ್ಲಿ ದರ್ಶನ ಮಾಡಿದ್ದು. ಆಗ ನನ್ನ ವಯಸ್ಸು ಹದಿನೇಳು, ನನ್ನ ತಂಗಿಯದು ಹದಿನೈದು. ಯೋಗಾಯೋಗ ವೆಂಬಂತೆ, ನಾವೆಲ್ಲ ಬೇಸಿಗೆಯ ರಜೆ ಕಳೆಯಲು ಬೆಂಗಳೂರಿಗೆ ಹೋಗಿದ್ದೆವು. ಅಲ್ಲಿ ನನ್ನ ತಾಯಿ ಮಮಿತಾರನ್ನು ಭೇಟಿಯಾದರು. ಇದೊಂದು ಆಕಸ್ಮಿಕ ಭೇಟಿ. ಮಮಿತಾ, ಸ್ವಾಮೀಜಿಯವರ ಸ್ಪೈನ್ ದೇಶದ ಭಕ್ತೆ. ಆಕೆ, ಶ್ರೀರಾಮಕೃಷ್ಣರ ವೇದ ವಾಕ್ಯಗಳನ್ನು ಸ್ಪಾನಿಶ್ ಭಾಷೆಗೆ ಅನುವಾದ ಮಾಡುತ್ತಿದ್ದರು. ಸ್ವಾಮಿ ರಂಗನಾಥಾನಂದರನ್ನು ದೆಹಲಿ ಕೇಂದ್ರದಲ್ಲಿ ಭೇಟಿ ಮಾಡಿದ್ದುಂಟೇ ಎಂದು ಅಕೆ ನನ್ನ ತಾಯಿಯನ್ನು ಕೇಳಿದರು. ನನ್ನ ತಾಯಿ ಇಲ್ಲ ಎಂದರು. ನೀವು ಸ್ವಾಮೀಜಿಯವರನ್ನು ಭೇಟಿ ಮಾಡಿ ಎಂದು ಆಕೆ ಒತ್ತಾಯಪೂರ್ವಕವಾಗಿ ನನ್ನ ತಾಯಿಗೆ ಹೇಳಿದರು. ದೆಹಲಿಗೆ ವಾಪಸಾದನಂತರ ನನ್ನ ತಾಯಿ ಸ್ವಾಮಿ ರಂಗನಾಥಾನಂದರನ್ನು ಭೇಟಿ ಮಾಡಿದರು. ಮಮಿತಾ ಬಗ್ಗೆಯೂ ಹೇಳಿದರು.

"ಮಮಿತಾ ನಮ್ಮ ಆಪ್ತ ಬಳಗಕ್ಕೆ ಸೇರಿದವರು. ಆಕೆ ನಿಮ್ಮನ್ನು ಇಲ್ಲಿಗೆ ಕಳುಹಿಸಿ ಒಳಿತನ್ನೇ ಮಾಡಿದಳು" ಎಂದು ಸ್ವಾಮೀಜಿ ಹೇಳಿದರು. ತಾನು ಸ್ವಾಮೀಜಿಯವರನ್ನು ಇಷ್ಟಪಟ್ಟಿದ್ದೆನೆಂದೂ, ರಾಮಕೃಷ್ಣ ಮಿಷನ್ನಿನಲ್ಲಿ ಭಾನುವಾರ ಸಂಜೆ ಅವರ *ಗೀತಾ*ಪ್ರವಚನ ಸಭೆಗಳಿಗೆ ಹೋಗಲಾರಂಭಿಸಿದ್ದೆನೆಂದೂ ನನ್ನ ತಾಯಿ ದಿನಚರಿಯಲ್ಲಿ ಬರೆದಿದ್ದಾರೆ. ಅವರ ಪ್ರವಚನ ಎಷ್ಟು ಜನಪ್ರಿಯವಾಗಿತ್ತೆಂದರೆ, ಮಿಷನ್ನಿನ ಸಭಾಂಗಣ ಯಾವತ್ತೂ ತುಂಬಿ ತುಳುಕಿರುತ್ತಿತ್ತು. ಅವರು ಪ್ರತಿ ಭಾನುವಾರ ಬೆಳಿಗ್ಗೆ ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಉಪನಿಷತ್ತುಗಳ ಬಗ್ಗೆ ಉಪನ್ಯಾಸ ನೀಡುತ್ತಿದ್ದರು. ನನ್ನ ತಾಯಿ ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತಿದ್ದರು.

ಸ್ವಾಮಿ ರಂಗನಾಥಾನಂದರು ಎಲ್ಲ ಬಗೆಯ ಸಾಮಾಜಿಕ ಸೇವಾಕಾರ್ಯಗಳ ಪ್ರವರ್ತಕರಾಗಿದ್ದರು, ಬೆಂಬಲಿಗರಾಗಿದ್ದರು. ಸಾಮಾಜಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಶಾರದಾ ಮಹಿಳಾ ಸಮಿತಿಯ ಅಸಂಖ್ಯಾತ ಭಕ್ತೆಯರು ಮತ್ತು ಅಭಿಮಾನಿಗಳಿಗೆ ಸ್ಫೂರ್ತಿದಾತರಾಗಿದ್ದರು, ಪ್ರೇರಕ ಶಕ್ತಿಯಾಗಿದ್ದರು. ನನ್ನ ತಾಯಿ ಈ ಮಹಿಳಾ ಸಮಿತಿಯ ಕಾರ್ಯದರ್ಶಿಯಾಗಿದ್ದರು. ಸಮಿತಿಯು ಆಧ್ಯಾತ್ಮಿಕ ಕಲ್ಯಾಣಕ್ಕೆ ಹಾಗೂ ಸಮಾಜಕಲ್ಯಾಣ ಕಾರ್ಯಗಳಿಗೆ ಮುಡಿಪಾಗಿರಬೇಕೆಂದು ಅವರು ಶಾರದಾ ಮಹಿಳಾ ಸಮಿತಿಗೆ ಹೇಳಿದ್ದರು. ಹೀಗಾಗಿ, ಸಮಿತಿಯು ಶಾಹ್‌ದರಾದಲ್ಲಿ, ಕುಷ್ಠರೋಗಿಗಳ ಕಾಲನಿಯಲ್ಲಿ ಕ್ಷೇಮಾಭ್ಯುದಯ ಕಾರ್ಯಚಟುವಟಿಕೆಗಳನ್ನು ಕೈಗೊಂಡಿತು. ಲೇಡಿ ಹಾರ್ಡಿಂಜ್ ಆಸ್ಪತ್ರೆಯಲ್ಲಿ ಕ್ಷೇಮಾಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿತು. ಬಾಲಮಂದಿರ ಅವರ ಸಕ್ರಿಯ ಮಾರ್ಗದರ್ಶನದಲ್ಲಿ ಪ್ರತಿ ಭಾನುವಾರ ಬೆಳಿಗ್ಗೆ ಮಿಷನ್ನಿನಲ್ಲಿ ಮಕ್ಕಳಿಗಾಗಿ ತರಗತಿಗಳನ್ನು ಪ್ರಾರಂಭಿಸಿತು. ಸ್ವಾಮೀಜಿ ಬಾಲಮಂದಿರದ ಮಕ್ಕಳನ್ನು ನಾಟಕಪ್ರದರ್ಶನಕ್ಕೆ ಹುರಿದುಂಬಿಸಿದರು. ವರ್ಷಕ್ಕೊಮ್ಮೆ ಬಾಲಮಂದಿರದ ಮಕ್ಕಳಿಂದ ಶ್ರೀ ರಾಮಕೃಷ್ಣ, ಶ್ರೀ ಶಾರದಾದೇವಿ, ಮತ್ತು ಸ್ವಾಮಿ ವಿವೇಕಾನಂದರ ಜೀವನವನ್ನು ಆಧರಿಸಿದ ನಾಟಕಗಳನ್ನು ಆಡಿಸಿದರು. ಸ್ವಾಮೀಜಿಯವರಿಂದ ಪ್ರೋತ್ಸಾಹಿತರಾದ ಮಕ್ಕಳು ರಾಮಕೃಷ್ಣ–ಶಾರದಾದೇವಿ–ವಿವೇಕಾನಂದರ ಬದುಕಿನ ಘಟನೆಗಳನ್ನು ದೃಶ್ಯ ರೂಪದಲ್ಲಿ

---

* ಚೆನ್ನೈನಲ್ಲಿರುವ ಭಕ್ತೆ.

ಮಿಷನ್ನಿನ ರಂಗವೇದಿಕೆಯಲ್ಲಿ ಅಭಿನಯಿಸುತ್ತಿದ್ದರು. ಹೊಸ ಮಂದಿರವನ್ನು ನಿರ್ಮಿಸತೊಡಗಿದ್ದಾಗ, ಮಕ್ಕಳಿಗಾಗಿ ಬಾಲಮಂದಿರವನ್ನು ಆರಂಭಿಸುವಂತೆ ಅವರು ಶಾರದಾ ಸಮಿತಿಯನ್ನು ಕೋರಿದರು. ಮಹಿಳೆಯರು ಹೊರಗಡೆ ನಿರ್ಮಾಣ ಮೊದಲಾದ ಕೆಲಸ ಕಾರ್ಯಗಳಲ್ಲಿ ತೊಡಗಿದ್ದಾಗ, ಅವರ ಮಕ್ಕಳನ್ನು ಬೇರೆಯವರು ನೋಡಿಕೊಳ್ಳಬೇಕು, ಮಕ್ಕಳನ್ನು ಒಂಟಿಯಾಗಿ ಬಿಡಬಾರದು, ಉಪೇಕ್ಷಿಸಬಾರದು ಎಂದು ಸ್ವಾಮೀಜಿ ಹೇಳುತ್ತಿದ್ದರು. ಇದು ಅವರ ತೀವ್ರ ಕಾಳಜಿಯಾಗಿತ್ತು.

ಮಿಷನ್ನಿನಲ್ಲಿ ಮಹಿಳೆಯರ ವಾಸ್ತವ್ಯಕ್ಕೆ ಅಗತ್ಯವಾದಷ್ಟು ಸ್ಥಳಾವಕಾಶವಿರಲಿಲ್ಲ. ಆದ್ದರಿಂದ ಸ್ವಾಮೀಜಿಯವರು ವಿದೇಶೀ ಮಹಿಳಾ ಶಿಷ್ಯರು–ಉಪ್ಯಾಸಕರನ್ನು ದೆಹಲಿಯಲ್ಲಿನ ನಮ್ಮ ಮನೆಗೆ ಕಳುಹಿಸುತ್ತಿದ್ದರು. ಅವರು ಆಗಿಂದಾಗ್ಗೆ ನಮ್ಮ ಮನೆಗೆ ಬರುತ್ತಿದ್ದರು. ಬಂದಾಗಲೆಲ್ಲ ಅವರು, "ಕಮಲಾ, ಅತಿಥಿಗಳನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದಾಳೋ ಇಲ್ಲವೋ" ಎಂಬುದನ್ನು ಪ್ರತ್ಯಕ್ಷವಾಗಿ ನೋಡಲು ಬಂದೆ ಎಂದು ತಮಾಷೆ ಮಾಡುತ್ತಿದ್ದರು. ಇಂಥ ಸಣ್ಣಪುಟ್ಟ ಕೆಲಸಗಳು ಎಲ್ಲರ ಬಗೆಗಿನ ಅವರ ಕಾಳಜಿ, ಪ್ರೀತಿ–ವಾತ್ಸಲ್ಯಗಳನ್ನು ತೋರಿಸುತ್ತಿದ್ದವು.

ಒಮ್ಮೆ ನನ್ನ ತಾಯಿಗೆ ವಿಪರೀತ ಜ್ವರ ಬಂತು. ಒಂದು ವಾರ ಕಾಲದ ಔಷಧೋಪಚಾರದನಂತರವೂ ಜ್ವರ ಇಳಿಯಲಿಲ್ಲ. ಆಗ ನನ್ನ ತಾಯಿಗೆ ಒಂದು ಕನಸು ಬಿತ್ತು. ಕನಸಿನಲ್ಲಿ ಪೂಜ್ಯ ಮಾತೆ ಶಾರದಾ ದೇವಿ ಬಂದಿದ್ದರಂತೆ. "ಮಲೇರಿಯಾ ಚಿಕಿತ್ಸೆಗೆ ಔಷಧಿ ಕೊಡುವಂತೆ ವೈದ್ಯರಿಗೆ ತಿಳಿಸು. ನಿನಗೆ ಗುಣವಾಗುತ್ತದೆ" ಎಂದು ನುಡಿದ ಶಾರದಾಮಾತೆ ನಂತರ ಅಕ್ಕಿಗಂಜಿಯನ್ನು ನನ್ನ ತಾಯಿಗೆ ಕೊಟ್ಟರಂತೆ. ಮರುದಿನ ಬೆಳಿಗ್ಗೆ ಸ್ವಾಮೀಜಿಯವರು ಪಾಯಸ ಪ್ರಸಾದದೊಂದಿಗೆ ಅಮ್ಮನನ್ನು ಕಾಣಲು ನಮ್ಮ ಮನೆಗೆ ಬಂದರು. ಅಮ್ಮನಿಗೆ ತುಂಬ ಸಂತೋಷವಾಯಿತು. ನಂತರ ಅವಳಿಗೆ ಮಲೇರಿಯಾ ಔಷಧಿ ಕೊಡಲಾಯಿತು. ಜ್ವರ ಹಿಮ್ಮೆಟ್ಟಿತು.

ಹೃದಯದ ತೊಂದರೆಯಿಂದಾಗಿ ನನ್ನ ತಂದೆಯವರನ್ನು ವೆಲ್ಲೂರಿನ ಆಸ್ಪತ್ರೆಗೆ ಸೇರಿಸಿದಾಗ ಸ್ವಾಮೀಜಿ ಕಲ್ಕತ್ತೆಯಿಂದ ಮದ್ರಾಸಿಗೆ ಬಂದಿದ್ದರು. (ಆಗ ಅವರು ಇನ್ಸ್ಟಿಟ್ಯೂಟ್ ಆಫ್ ಕಲ್ಚರ್‌ನಲ್ಲಿದ್ದಿರಬೇಕು ಎಂದು ನನ್ನ ಅನಿಸಿಕೆ.) ನನ್ನ ತಂದೆಯನ್ನು ನೋಡಲು ಮದ್ರಾಸಿನಿಂದ ವೆಲ್ಲೂರಿಗೆ ಬಂದಿದ್ದರು. ಅವರು ವೆಲ್ಲೂರಿನಿಂದ ಮದ್ರಾಸಿಗೆ ವಾಪಸಾದಾಗ ರಾತ್ರಿ ಹನ್ನೊಂದು ಗಂಟೆ. ಮಠದ ಗೇಟ್‌ಗಳು ಮುಚ್ಚಿದ್ದವು. ಸ್ವಾಮೀಜಿ ಗೇಟ್ ಮೇಲೆ ಹತ್ತಿ ಮಠದೊಳಕ್ಕೆ ಹೋಗಬೇಕಾಯಿತು. ಇದನ್ನು ನಂತರ ಅವರು ನಮಗೆ ತಿಳಿಸಿದರು.

ಮಕ್ಕಳು, ವಯಸ್ಕರು ಯಾರೇ ಇರಲಿ, ಇವರೆಲ್ಲರೊಡನೆ ಮಾತನಾಡುವಾಗ ಸ್ವಾಮೀಜಿಯವರ ಹಾಸ್ಯಪ್ರವೃತ್ತಿ ಮಿಂಚುತ್ತಿತ್ತು, ಎದ್ದುಕಾಣುತ್ತಿತ್ತು. ಎಲ್ಲರ ಮನಸ್ಸನ್ನೂ ಅವರು ಸೂರೆಗೊಳ್ಳುತ್ತಿದ್ದರು. ಎಲ್ಲರನ್ನೂ ಹಾಸ್ಯದ ನುಡಿಗಳಿಂದ ಮಂತ್ರಮುಗ್ಧರನ್ನಾಗಿಸುತ್ತಿದ್ದರು. ಅವರ ಜ್ಞಾಪಕಶಕ್ತಿ ಅದ್ಭುತವಾಗಿತ್ತು. ಅವರ ಜೀವನದ ಕೊನೆಯ ಘಟ್ಟದಲ್ಲೂ ಅದು ಕುಂದಿರಲಿಲ್ಲ. ನಾನು ಅವರನ್ನು ಭೇಟಿಯಾದಾಗ, ತಾಯಿಯ ಮರಣದ ನಂತರ ಅವಳ ಮನೆ ಏನಾಯಿತೆಂದು ವಿಚಾರಿಸಿದರು. ಮನೆಯನ್ನು ನಾವೇ ನಿರ್ವಹಿಸುತ್ತಿದ್ದೇವೆ, ತಾಯಿಯ ಹಳೆಯ ಅಡುಗೆಯವಳು ಮನೆಯನ್ನು ನೋಡಿಕೊಳ್ಳುತ್ತಿದ್ದಾಳೆ ಎಂದು ನಾನು ತಿಳಿಸಿದೆ. "ಹಾಗಾದರೆ ಮಾಮಿ ಇನ್ನೂ ಬದುಕಿದ್ದಾಳೆ ಎಂದಂತಾಯಿತು. ನನ್ನನ್ನು ಬಂದು ಕಾಣುವಂತೆ ಆಕೆಗೆ ತಿಳಿಸು" ಎಂದರು ಸ್ವಾಮೀಜಿ. ಈ ಒಂದು ಗುಣದಿಂದಾಗಿಯೇ ಅವರು ಎಲ್ಲರನ್ನೂ ಪ್ರೀತಿಪಾತ್ರರನ್ನಾಗಿಸಿದ್ದರು, ಎಲ್ಲರನ್ನೂ ಅಕ್ಕರೆಗೊಳಿಸಿದ್ದರು. ಸ್ವಾಮಿ ರಂಗನಾಥಾನಂದರ ಪ್ರೀತಿ ವಾತ್ಸಲ್ಯ, ನಿಕಟ ಸಂಬಂಧ ಸಂಪರ್ಕಗಳು ನಿಜಕ್ಕೂ ನಮ್ಮ ಅದೃಷ್ಟವೇ, ನಮ್ಮ ಪುಣ್ಯವೇ. ನಾವು ಭಾಗ್ಯಶಾಲಿಗಳು.

* * * *

# ೧೯. ಸ್ವಾಮಿ ರಂಗನಾಥಾನಂದ – ನನ್ನ ನೆನವರಿಕೆಗಳು

–ಪಿ. ಬಾಪಿ ರಾಜು*

ಪೂಜ್ಯ ಸ್ವಾಮಿ ರಂಗನಾಥಾನಂದರು ೧೯೪೮ರಲ್ಲಿ ಕರಾಚಿಯನ್ನು ಬಿಟ್ಟ ನಂತರ ದಕ್ಷಿಣ ಭಾರತದಲ್ಲಿ ಪ್ರವಾಸ ಕೈಗೊಂಡರು. ಆಗ ಅವರು, ಅಂದರೆ ೧೯೪೯ರ ಡಿಸೆಂಬರ್‌ನಲ್ಲಿ ವಿಶಾಖಪಟ್ಟಣದ ರಾಮಕೃಷ್ಣ ಮಿಶನ್ ಆಶ್ರಮದಲ್ಲಿ ಅತಿಥಿಯಾಗಿ ಬಿಡಾರಮಾಡಿದ್ದರು. ಈಗ ಬೋಸ್ಟನ್‌ನಲ್ಲಿರುವ ಸ್ವಾಮಿ ಸರ್ವಗತಾನಂದ ಮಹಾರಾಜರು ಮಿಶನ್ನಿನ ಕಾರ್ಯದರ್ಶಿಯಾಗಿದ್ದರು. ಆಂಧ್ರಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ ಭೀಮಾವರಂಗೆ ಅವರನ್ನು ಆಮಂತ್ರಿಸಿದಾಗ ನಾನು ಬಿ.ಕಾಂ ವಿದ್ಯಾರ್ಥಿಯಾಗಿದ್ದೆ. ಆ ವೇಳೆಗಾಗಲೇ ನಾನು ವಿವೇಕಾನಂದ ಸಾಹಿತ್ಯವನ್ನು ಓದಿಕೊಂಡಿದ್ದೆ. ಈ ನನ್ನ ಓದನ್ನು ವಿದ್ಯಾರ್ಥಿನಿಲಯದ ಸಹವಾಸಿಗಳೊಂದಿಗೆ ಹಂಚಿಕೊಂಡಿದ್ದೆ. ಸ್ವಾಮಿ ರಂಗನಾಥಾನಂದರು ಭೀಮಾವರಂಗೆ ಬಂದಿರುವುದು ಹಾಗೂ ಅವರು ಸಾರ್ವಜನಿಕ ಸಭೆಯೊಂದನ್ನುದ್ದೇಶಿಸಿ ಮಾತನಾಡಲಿರುವುದು ನನಗೆ ಗೊತ್ತಾಯಿತು. ನಾನು ಸಾರ್ವಜನಿಕ ಸಭೆಗೆ ಹೋದೆ. ಸ್ವಾಮೀಜಿಯವರ ಭಾಷಣ ಕೇಳಿ ರೋಮಾಂಚನಗೊಂಡೆ ಹಾಗೂ ಸ್ಫೂರ್ತಿಪಡೆದೆ. ಅವರ ಪ್ರಭಾವಪೂರ್ಣ ಭಾಷಣ ನನ್ನ ಮೇಲೆ ದೃಢವಾದ ಪರಿಣಾಮ ಬೀರಿತ್ತು. ನನ್ನ ಮನಸ್ಸಿನಲ್ಲಿ ಅವರ ವ್ಯಕ್ತಿತ್ವದ ಛಾಪು ಅಚ್ಚಳಿಯದಂತೆ ಮೂಡಿತ್ತು. ಸಭೆಯ ನಂತರ ನಾನು ಅವರ ಜೊತೆ ಸ್ವಾಮಿ ವಿವೇಕಾನಂದರಿಗೆ ಸಂಬಂಧಿಸಿದಂತೆ ಕೆಲವು ಆಸಕ್ತಿದಾಯಕ ವಿಷಯಗಳನ್ನು ಚರ್ಚಿಸಿದೆ. ಅವರು ತಾಳ್ಮೆಯಿಂದ ನನ್ನೊಡನೆ ಮಾತನಾಡಿದರು. ಇದು ನನ್ನ ಮೇಲೆ ಗಾಢವಾದ ಪ್ರಭಾವ ಬೀರಿತು. ನನ್ನ ಜೀವನದುದ್ದಕ್ಕೂ ಆ ಪ್ರಭಾವಕ್ಕೆ ವಶನಾಗಿಯೇ ನಾನು ನಡೆದುಕೊಳ್ಳುತ್ತಿದ್ದೇನೆ.

೧೯೫೦ರಲ್ಲಿ ಭೀಮಾವರಂನಲ್ಲಿ ವಿದ್ಯಾಭ್ಯಾಸ ಮುಗಿಸಿದ ನಂತರ ನಾನು ಎಂ.ಕಾಂ ಮತ್ತು ಎಲ್.ಎಲ್.ಬಿ ಓದಲು ಲಖನೌ ವಿಶ್ವವಿದ್ಯಾನಿಲಯ ಸೇರಿದೆ. ಆಗ ನಾನು ಅಹಮದಾಬಾದ್‌ನ ರಾಮಕೃಷ್ಣ ಮಿಷನ್ ಆಶ್ರಮಕ್ಕೆ ಹೋಗಿ ಬರುತ್ತಿದ್ದೆ. ೧೯೫೧ರಲ್ಲಿ ಸ್ವಾಮಿ ರಂಗನಾಥಾನಂದರು ಲಖನೌ ಆಶ್ರಮಕ್ಕೆ ಬಂದಿದ್ದರು. ನಾನು ಇಲ್ಲಿನ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿರುವುದನ್ನು ತಿಳಿದು, ನನ್ನನ್ನು ಆಶ್ರಮಕ್ಕೆ ಕರೆದೊಯ್ಯಲು ಬ್ರಹ್ಮಚಾರಿಯೊಬ್ಬನನ್ನು ಕಳುಹಿಸಿದ್ದರು. ದುರದೃಷ್ಟವಶಾತ್ ಆಗ ನಾನು ಸ್ವಾಮೀಜಿಯವರನ್ನು ಭೇಟಿಮಾಡುವ ಅವಕಾಶ ಕಳೆದುಕೊಂಡೆ. ಆದಾಗ್ಯೂ ಅವರು ನನ್ನ ಬಗ್ಗೆ ವಿಚಾರಿಸಿದ್ದು ಕೇಳಿ ಅವರ ಬಗ್ಗೆ ನನ್ನ ಪೂಜ್ಯಭಾವನೆ ಇನ್ನಷ್ಟು ಗಾಢವಾಯಿತು.

ಅನಂತರ ನಾನು ಅವರನ್ನು ರಾಜಮಹೇಂದ್ರಿಯಲ್ಲಿ ಕಂಡೆ. ರಾಜಮಹೇಂದ್ರಿಯಲ್ಲಿ ಗುರುಕುಲಂ ಉದ್ಘಾಟಿಸಲು ಅದರ ಸಂಸ್ಥಾಪಕರು ಸ್ವಾಮೀಜಿ ಯವರನ್ನು ಕರೆಸಿದರು. ಆಗ, ಆ ಪ್ರದೇಶದಲ್ಲಿ ಸ್ವಾಮೀಜಿಯವರ ಪ್ರವಚನ–ಪ್ರವಾಸವನ್ನೂ ಏರ್ಪಾಡುಮಾಡಲಾಗಿತ್ತು. ಪೂರ್ವ ಗೋದಾವರಿ ಜಿಲ್ಲೆಯ ಅಮಲಾಪುರಂನಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಭಾಗವಹಿಸಿದ ನಂತರ, ಅಲ್ಲಿ ಭಕ್ತರು ಸಮಾವೇಶಗೊಳ್ಳುವ ಕೇಂದ್ರ ಒಂದಿರುವುದು ಅವರಿಗೆ ಗೊತ್ತಾಯಿತು. ಸ್ವಾಮೀಜಿಯವರು ಆ ಕೇಂದ್ರಕ್ಕೆ ಭೇಟಿ ನೀಡಿ ಭಕ್ತರೊಡನೆ ಕಲೆಯುವ ಅಪೇಕ್ಷೆ ವ್ಯಕ್ತಪಡಿಸಿದರು. ಸ್ವಾಮೀಜಿಯವರು ಕೇಂದ್ರಕ್ಕೆ ಹೋದಾಗ ಅಲ್ಲಿ ಭಕ್ತರು ಯಾರೂ ಇರಲಿಲ್ಲ. ಪುಟ್ಟ

---

* ಕಾರ್ಯದರ್ಶಿ, ರಾಮಕೃಷ್ಣ ಸಮಿತಿ, ವಿಜಯವಾಡ (ಆಂಧ್ರಪ್ರದೇಶ).

ಬಾಲೆಯೊಬ್ಬರು ಸ್ವಾಮೀಜಿಯವರನ್ನು ಸ್ವಾಗತಿಸಿ, ಭಕ್ತರ ಸಣ್ಣ ಗುಂಪೊಂದು ಶ್ರೀ ರಾಮಕೃಷ್ಣರನ್ನು ಆರಾಧಿಸುತ್ತಿದ್ದ ಮನೆಯ ಒಂದು ಭಾಗಕ್ಕೆ ಕರೆದೊಯ್ದಳು. ಇದೊಂದು ಸಣ್ಣ ಘಟನೆ. ಆದರೂ ಶ್ರೀ ಗುರುಮಹಾರಾಜರ ಸಂದೇಶವನ್ನು ಹರಡುವುದರಲ್ಲಿ ಅವರು ಎಂಥ ತೀವ್ರ ಆಸಕ್ತಿ ತಾಳಿದ್ದರು ಎಂಬುದನ್ನು ಎತ್ತಿ ತೋರಿಸುತ್ತದೆ.

ಈ ಪ್ರವಾಸದ ನಂತರ ಸ್ವಾಮೀಜಿ ರೈಲಿನಲ್ಲಿ ಮದ್ರಾಸಿಗೆ ಹೋಗುವುದಿತ್ತು. ಅವರಿಗೆ ಊಟದ ವ್ಯವಸ್ಥೆ ಮಾಡಲು ನಾನು ವಿಜಯವಾಡ ರೈಲ್ವೆ ಸ್ಟೇಶನ್ನಿನಲ್ಲಿ ಅವರನ್ನು ಭೇಟಿಯಾಗಿದ್ದೆ. ರೈಲಿನಲ್ಲಿ ಪಯಣಿಸುವಾಗ ನಾನು ಅವರನ್ನು, ಸಾಧು–ಸಂನ್ಯಾಸಿಗಳು ಏಕೆ ಹಳ್ಳಿಗಳನ್ನು ನಿರ್ಲಕ್ಷಿಸುತ್ತಿದ್ದಾರೆ ಎಂದು ಪ್ರಶ್ನಿಸಿದೆ. ಭಾಷೆ ಒಂದು ದೊಡ್ಡ ತೊಡಕೆಂದು ಅವರು ಉತ್ತರಿಸಿದರು. ಭಾಷಾಂತರದ ಮೂಲಕ ಈ ತೊಡಕನ್ನು ನಿವಾರಿಸಿಕೊಳ್ಳಬಹುದು. ಆದರೆ, ಹಳ್ಳಿಗರಿಗೆ ಸ್ವಾಮಿಗಳ ಪವಿತ್ರ ದರ್ಶನವೇ ಮುಖ್ಯವೆನಿಸುತ್ತದೆ ಎಂದು ನಾನು ಹೇಳಿದೆ. ಅವರ ಮುಂದಿನ ವಾಸ್ತವ್ಯದ ಸ್ಥಳದವರೆಗೆ ನಾನು ಅವರೊಂದಿಗಿದ್ದೆ. ಅಲ್ಲಿಂದ ನಾನು ವಿದಾಯ ಹೇಳಿದೆ.

೧೯೭೪ರಲ್ಲಿ ಬೇಗಂಪೇಟೆಯ ಶ್ರೀ ರಾಮಕೃಷ್ಣ ಮಠವನ್ನು ಬೇಲೂರು ಮಠದ ಅಂಗಸಂಸ್ಥೆಯಾಗಿ ಸೇರಿಸಿಕೊಳ್ಳಲಾಯಿತು. ಸಿಕಂದರಾಬಾದಿನಲ್ಲಿ ನಡೆದ ಮಠದ ಉದ್ಘಾಟನಾ ಸಮಾರಂಭಕ್ಕೆ ಅವರು ಕೃಪೆಯಿಟ್ಟು ಪತ್ನಿಸಮೇತ ನನ್ನನ್ನು ಕರೆಸಿಕೊಂಡಿದ್ದರು. ಭಾಗ್ಯಶಾಲಿ ದಂಪತಿಗಳಾದ ನಾವು ಹೈದರಾಬಾದಿಗೂ ಭೇಟಿ ಕೊಟ್ಟೆವು. ಸ್ವಾಮೀಜಿಯವರು ಹೊಸ ಮಠದ ಕೊಠಡಿಯೊಂದರಲ್ಲಿ ನಮ್ಮ ಬಿಡಾರಕ್ಕೆ ವ್ಯವಸ್ಥೆ ಮಾಡಿದ್ದರು.

ಸ್ವಾಮೀಜಿ ಮತ್ತೆ ಸಿಕಂದರಾಬಾದ್ ಮಠದ ಗ್ರಂಥಾಲಯದ ಉದ್ಘಾಟನೆ ಸಮಾರಂಭಕ್ಕೆ ನನ್ನನ್ನು ಆಹ್ವಾನಿಸಿದರು. ಮುಖ್ಯಮಂತ್ರಿ ಶ್ರೀ ವೆಂಗಳರಾಯರಿಗೆ ನನ್ನನ್ನು ಪರಿಚಯಿಸಿ, ವಿಜಯವಾಡ ಕೇಂದ್ರದ ಚಟುವಟಿಕೆಗಳನ್ನು ಅವರಿಗೆ ವಿವರಿಸಿದರು. ಮುಖ್ಯಮಂತ್ರಿಯವರ ಅಪೇಕ್ಷೆಯಂತೆ, ನಾನು ನಂತರ ಅವರನ್ನು ಅವರ ಕಛೇರಿಯಲ್ಲಿ ಭೇಟಿ ಮಾಡಿ ನಮ್ಮ ಕೇಂದ್ರದ ಚಟುವಟಿಕೆಗಳನ್ನು ವಿವರಿಸಿ ಹೇಳಿದೆ ಮತ್ತು ಕೇಂದ್ರಕ್ಕೆ ಅವರನ್ನು ಆಹ್ವಾನಿಸಿದೆ. ತಮ್ಮ ಬಿಡುವಿಲ್ಲದ ಕಾರ್ಯಚಟುವಟಿಕೆಗಳಲ್ಲೂ ಸ್ವಾಮಿ ರಂಗನಾಥಾನಂದರು ವಿಜಯವಾಡ ಕೇಂದ್ರದ ಬೆಳವಣಿಗೆ ಮತ್ತು ಅಭಿವೃದ್ಧಿಯ ಬಗ್ಗೆ ತಮ್ಮ ಕಾಳಜಿಯನ್ನು ವ್ಯಕ್ತಪಡಿಸಲು ಮರೆಯಲಿಲ್ಲ.

ವಿವೇಕಾನಂದ ಕೇಂದ್ರದ ಆಹ್ವಾನದ ಮೇರೆ, ಒಂದು ವಾರ ಕಾಲದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಪೂಜ್ಯ ಸ್ವಾಮೀಜಿಯವರು ಕನ್ಯಾಕುಮಾರಿಗೆ ಭೇಟಿ ನೀಡಿದರು. ಅವರ ಜೊತೆ ಸೇರಿಕೊಳ್ಳಲು ನಾನು ವಿಜಯವಾಡದಿಂದ ಹೊರಟೆ. ನಂತರ ಕೊಚ್ಚಿನ್‌ವರೆಗೆ ಅವರ ಜೊತೆಯಲ್ಲಿದ್ದೆ. ತಿರುವನಂತಪುರ, ತ್ರಿಶೂರು, ಕಾಲಟಿಗಳ ಪ್ರವಾಸದಲ್ಲಿ ಅವರ ಜೊತೆ ಇದ್ದೆ. ಈ ಭೇಟಿಕಾಲದಲ್ಲಿ, ಸ್ವಾಮಿ ರಂಗನಾಥಾನಂದರ ಹುಟ್ಟೂರಾದ ತ್ರಿಕ್ಕೂರಿಗೂ ಅವರೊಡನೆ ಹೋಗುವ, ಅವರ ಕುಟುಂಬದವರನ್ನು ಭೇಟಿಮಾಡುವ, ಅವರು ಓದಿದ ಶಾಲೆ, ಆಲೂರಿನ ದೇವಾಲಯಗಳನ್ನು ನೋಡುವ ಸೌಭಾಗ್ಯ ನನ್ನದಾಯಿತು. ಈ ಪ್ರವಾಸ ನನ್ನನ್ನು ಸ್ವಾಮೀಜಿಯವರಿಗೆ ನಿಕಟವಾಗಿಸಿತು. ಕಾಲಟಿಯಲ್ಲಿ ಅವರು ಆಶ್ರಮದ ಇತರ ಸನ್ಯಾಸಿಗಳ ಜೊತೆ ನದಿಗೆ ಹೋಗಿ ಸ್ನಾನಮಾಡಿದರು. ಅವರು ಈಜು ಮತ್ತು ಈಜಿನ ಚಮತ್ಕಾರಗಳಲ್ಲಿ ಚಿಕ್ಕ ಮಕ್ಕಳಂತೆ ಸಂಭ್ರಮಿಸಿದರು. ನದಿಯಲ್ಲಿ ನಾನೂ ಸ್ನಾನ ಮಾಡಿದೆ. ಸ್ವಾಮೀಜಿಯವರನ್ನು ಈಜುಗಾರರನ್ನಾಗಿ ಕಂಡು ಖುಷಿಪಟ್ಟೆ.

ಕೇರಳ ಪ್ರವಾಸದ ನಂತರ ಸ್ವಾಮೀಜಿ, ಶ್ರೀ ರಮಣ ಮಹರ್ಷಿಗಳು ಪವಿತ್ರ ಜೀವನ ನಡೆಸಿದ ಪುಣ್ಯ ಕ್ಷೇತ್ರವಾದ ಶ್ರೀ ರಮಣ ಆಶ್ರಮಕ್ಕೆ ಹೋದರು. ನಾನೂ ಸ್ವಾಮೀಜಿಯವರ ಜೊತೆಯಲ್ಲಿದ್ದು ಅಲ್ಲಿನ ಸ್ವರ್ಗಸುಖವನ್ನು ಅನುಭವಿಸಿದೆ. ತಿರುವಣ್ಣಾಮಲೈನಿಂದ ವಾಪಸಾಗುವಾಗ ಒಂದು ಸಣ್ಣ ಘಟನೆ ಸಂಭವಿಸಿತು. ಅದು

ಮಹತ್ವದ್ದಾಗಿಬಿಟ್ಟಿತು. ಕಾರಿನ ಆ ಪಯಣ ನನಗೆ ಮರೆಯಲಾಗದ ಅನುಭವವಾಯಿತು. ಅವರು ನನಗೆ ಕಿತ್ತಳೆಹಣ್ಣೊಂದನ್ನು ಕೊಟ್ಟರು. ಕಿತ್ತಳೆಹಣ್ಣನ್ನು ತಿಂದು ಮುಗಿಸಿದ ನಂತರ ನಾನು ಸಿಪ್ಪೆಯನ್ನು ಹೆದ್ದಾರಿಯಲ್ಲಿ ಬಿಸಾಡಲು ಯತ್ನಿಸಿದೆ. ಹಿಂದಿನ ಸೀಟಿನಲ್ಲಿ ಕುಳಿತಿದ್ದ ಸ್ವಾಮೀಜಿ, ಹಾಗೆ ಮಾಡದಂತೆ ಥಟ್ಟನೆ ನನ್ನನ್ನು ತಡೆದರು. "ಹೊರಕ್ಕೆ ಬಿಸಾಡಬೇಡ." ವ್ಯರ್ಥ, ನಿರುಪಯುಕ್ತ ವಸ್ತುಗಳನ್ನು ಸಾರ್ವಜನಿಕರು ಬಳಸುವ ರಸ್ತೆಯ ಮೇಲೆ ಬಿಸಾಡಬಾರದೆಂಬುದು ಸ್ವಾಮೀಜಿಯವರ ಇಂಗಿತವಾಗಿತ್ತು. ಇದು ನಾನು ಅವತ್ತು ಕಲಿತ ಪಾಠ. ಇಂದಿಗೂ ಮರೆತಿಲ್ಲ. ಅದನ್ನು ಪಾಲಿಸಿಕೊಂಡು ಬರುತ್ತಿದ್ದೇನೆ.

ಒಮ್ಮೆ ಸ್ವಾಮೀಜಿಯವರು ಹಲವಾರು ಸಮಾರಂಭಗಳಲ್ಲಿ ಭಾಗವಹಿಸಲೋಸುಗ ವಿಜಯವಾಡಕ್ಕೆ ಬಂದರು. ಕಾರ್ಯಕ್ರಮಗಳು ಮುಗಿದ ನಂತರ, ನಾವು ಅವರನ್ನು ಬೀಳ್ಕೊಡಲು ವಿಜಯವಾಡ ರೈಲ್ವೆ ಸ್ಟೇಷನ್ನಿಗೆ ಹೋದೆವು. ರೈಲು ಆಗ ತಾನೆ ನಿಲ್ದಾಣಕ್ಕೆ ಬಂದಿತ್ತು. ತನ್ನ ಬೆನ್ನ ಮೇಲೆ ಭಾರೀ ಲಗ್ಗೇಜಿನ ಹೊರೆ ಹೊತ್ತಿದ್ದ ಯುವಕನೊಬ್ಬ ದೂರದಲ್ಲಿ ನಿಂತಿದ್ದ ರೈಲನ್ನು ಹತ್ತಿಕೊಳ್ಳಲು ಧಾವಿಸುತ್ತಿದ್ದ. ಇದನ್ನು ಕಂಡ ಸ್ವಾಮೀಜಿ ಯುವಕನ ಒಂದು ಬ್ಯಾಗನ್ನು ಇಸಿದುಕೊಂಡು ಕಂಪಾರ್ಟ್‌ಮೆಂಟಿನವರೆಗೆ ಅವನ ಜೊತೆ ಹೋಗಿ ರೈಲು ಹತ್ತಿಸಿದರು.

"ಸ್ವಾಮೀಜಿ, ನಿಮಗೆ ಆ ಯುವಕ ಪರಿಚಿತನೆ?"– ನಾನು ಕೇಳಿದೆ.

"ಇಲ್ಲ. ಅವನು ಭಾರಿ ಹೊರೆ ಹೊತ್ತಿರುವುದನ್ನು ನಾನು ಗಮನಿಸಿದೆ. ಅವನಿಗೊಂದಿಷ್ಟು ನೆರವಾದೆ, ಅಷ್ಟೆ"– ಎಂದರು ಸ್ವಾಮೀಜಿ.

ಅಪರಿಚಿತನೊಬ್ಬನಿಗೆ ಸ್ವಾಮೀಜಿ ತೋರಿದ ಸಹಾನುಭೂತಿ ಕಂಡು ನಾನು ವಿಸ್ಮಯಗೊಂಡಿದ್ದೆ. ನಂತರ ಅವರು, ತಾವು ಎರಡನೆ ದರ್ಜೆ ಬೋಗಿಗಳಲ್ಲಿ ಪ್ರಯಾಣ ಮಾಡುತ್ತಿದ್ದುದನ್ನು ಹೇಳಿದರು. ಆ ಕಾಲದಲ್ಲಿ ರೈಲು ಡಬ್ಬಿಗಳನ್ನು ಶುಚಿಯಾಗಿರಿಸುತ್ತಿರಲಿಲ್ಲ. ಆದ್ದರಿಂದ ಅವರು ಪ್ರಯಾಣ ಮಾಡುವಾಗಲೆಲ್ಲ ತಮ್ಮೊಡನೆ ಬ್ರಷ್ ಒಂದನ್ನು ಒಯ್ಯುತ್ತಿದ್ದರು. ಬ್ರಷ್‌ನಿಂದ ರೈಲು ಡಬ್ಬಿಯನ್ನು ಸ್ವಚ್ಛಗೊಳಿಸಿ, ನಂತರ ಆಸೀನರಾಗುತ್ತಿದ್ದರು. ಅವರ ನೈರ್ಮಲ್ಯ ಪ್ರಜ್ಞೆ, ವಿನಯ ಮತ್ತು ನಮ್ರತೆಗಳು ನನ್ನನ್ನು ಗಾಢವಾಗಿ ತಾಕಿದವು.

೧೯೭೭ರಲ್ಲಿ ಚಂಡಮಾರುತ ದಿವಿ ಸೀಮಾ ಪ್ರದೇಶವನ್ನು ಸಂಪೂರ್ಣ ಹಾಳುಗೆಡಹಿದಾಗ ರಾಮಕೃಷ್ಣ ಮಿಷನ್ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸುವ ಕಾರ್ಯವನ್ನು ಕೈಗೆತ್ತಿಕೊಂಡಿತು. ಸ್ವಾಮೀಜಿಯವರು ಧ್ವಂಸವಾದ ಪ್ರದೇಶಕ್ಕೆ ಭೇಟಿಕೊಟ್ಟು ಹಳ್ಳಿಗಳ ಪುನರ್‌ನಿರ್ಮಾಣ ಕಾರ್ಯಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. ಗ್ರಾಮಶ್ರೀ ನಾಮಾಂಕಿತ ಯೋಜನೆಯಡಿ ಗ್ರಾಮೀಣ ಅಭಿವೃದ್ಧಿ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವಂತೆ ಸಾಮಾನ್ಯ ಭಕ್ತರನ್ನು ಹುರಿದುಂಬಿಸಿದರು. ಈ ಯೋಜನೆಗೆ ಮುಂಬಯಿ, ಹೈದರಾಬಾದ್, ವಿಜಯವಾಡ, ಹಾಗೂ ಕೃಷ್ಣಾ ಜಿಲ್ಲೆಯ ಮಚಲಿಪಟ್ಟಣದ ಭಕ್ತರುಗಳಿಂದ ಬೆಂಬಲ–ನೆರವು ಹರಿದುಬಂದಿತ್ತು. ಸ್ವಾಮೀಜಿಯವರ ಸಲಹೆ–ಸ್ಫೂರ್ತಿಗಳಿಗನುಗುಣವಾಗಿ ಈ ಬೆಂಬಲ ದೊರೆತಿತ್ತು. ಆದರೆ ಯೋಜನೆಯ ಸದಸ್ಯರು ಸ್ಥಳದಿಂದ ದೂರವಾದ ಪ್ರಯುಕ್ತ ಇದು ಸಂಪೂರ್ಣ ಕಾರ್ಯಗತವಾಗಲಿಲ್ಲ. ಆನಂತರ ಸ್ವಾಮೀಜಿಯವರು, ಶ್ರೀ ರಾಮಕೃಷ್ಣ ಸಮಿತಿ ಗ್ರಾಮಶ್ರೀ ಚಟುವಟಿಕೆಗಳ ಅನ್ವಯ ಈ ಕಾರ್ಯವನ್ನು ಮುಂದುವರಿಸುವಂತೆ ನನಗೆ ಸೂಚಿಸಿದರು.

೧೯೭೭ರಲ್ಲಿ ಸಮಿತಿಯು ವಿಜಯವಾಡಾದ ಅಜಿತ್‌ಸಿಂಗ್ ನಗರದ ಕೊಳಚೆ ಪ್ರದೇಶದಲ್ಲಿ ಬಡಮಕ್ಕಳಿಗೆ ಉಚಿತ ಶಿಕ್ಷಣ ನೀಡಲು ಶಾಲೆಯೊಂದನ್ನು ಪ್ರಾರಂಭಿಸಿತು. ಆದರೆ, ಶಾಲೆಗೆ ಅಗತ್ಯವಾದ ಕಟ್ಟಡ ಒದಗಿಸಲು ಸಮಿತಿಯಲ್ಲಿ ಸಂಪನ್ಮೂಲ ಇರಲಿಲ್ಲ. ತಡಿಕೆ ಶೆಡ್ಡುಗಳಲ್ಲಿ ಹೇಗೋ ಶಾಲೆಯನ್ನು ಶುರು ಮಾಡಲಾಯಿತು. ಪೂಜ್ಯ ಸ್ವಾಮೀಜಿಯವರು ಪೌರಾಡಳಿತ ಸಚಿವರೊಂದಿಗೆ ಶಾಲೆಯ ಉದ್ಘಾಟನೆಗೆ ಬಂದರು.

ಶಾಲೆಯ ಕಟ್ಟಡ ನಿರ್ಮಾಣಕ್ಕಾಗಿ ರಾಮಕೃಷ್ಣ ಮಿಷನ್ನಿನ ಮೂಲಕ ಐವತ್ತು ಸಾವಿರ ರೂಪಾಯಿ ದೇಣಿಗೆ ನೀಡಿದರು.

೧೯೮೦ರಲ್ಲಿ ಸ್ವಾಮೀಜಿ ಕೃಷ್ಣಾ ಜಿಲ್ಲೆಯ ಹಳ್ಳಿಗಳಲ್ಲಿ ವ್ಯಾಪಕ ಪ್ರವಾಸ ಕೈಗೊಂಡರು. ತಮಗೆ ದೊರೆತ ಉತ್ಸಾಹಭರಿತ ಸ್ವಾಗತ, ಸಭೆಗಳ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಈ ಪ್ರವಾಸ ಕಾರ್ಯಕ್ರಮ, ಸ್ವಾಮಿ ವಿವೇಕಾನಂದರು ವ್ಯಾಖ್ಯಾನಿಸಿರುವಂತೆ ಶ್ರೀರಾಮಕೃಷ್ಣರ ಸಂದೇಶವನ್ನು ಪಸರಿಸಲು ಹಳ್ಳಿಯಿಂದ ಹಳ್ಳಿಗೆ ಹೋಗುವ ಅವರ ಕಾರ್ಯಾಚರಣೆಯ ಹೆಗ್ಗುರುತಾಗಿತ್ತು. ಅಲ್ಲದೆ ಅದು, ೧೯೬೭ರಲ್ಲಿ ನಾನು ಮಾಡಿದ ವಿನಮ್ರ ಮನವಿಗೆ ಸ್ಪಂದನವಾಗಿತ್ತು ಎಂದು ನನ್ನ ನಂಬಿಕೆ. ಹೈದರಾಬಾದ್‌ನಲ್ಲಿ ಅವರಿದ್ದ ಅವಧಿಯಲ್ಲಿ ಅವರ ಸ್ಫೂರ್ತಿ–ಪ್ರೇರಣೆಗಳಿಂದಾಗಿ ಆಂಧ್ರ ಪ್ರದೇಶದಲ್ಲಿ ರಾಮಕೃಷ್ಣ ಮಿಷನ್ನಿನ ಚಳವಳಿ ಹೆಚ್ಚು ಹೆಚ್ಚಾಗಿ ವ್ಯಾಪಿಸಿತು. ಅನೇಕ ಕೇಂದ್ರಗಳು ತಲೆ ಎತ್ತಿದವು. ಈ ಕೇಂದ್ರಗಳ ನಿರ್ವಹಣೆಯನ್ನು ಸಾಮಾನ್ಯ ಭಕ್ತರೇ ನೋಡಿಕೊಳ್ಳುತ್ತಿದ್ದರು. ಪೂಜ್ಯ ಸ್ವಾಮೀಜಿಯವರು ಸಣ್ಣ ಪಟ್ಟಣಗಳು ಹಾಗೂ ಹಳ್ಳಿಗಳಿಂದ ಬರುತ್ತಿದ್ದ ಆಮಂತ್ರಣವನ್ನು ಮೀನಮೇಷ ಎಣಿಸದೆ ಒಪ್ಪಿಕೊಳ್ಳುತ್ತಿದ್ದರು. ಇದರಿಂದಾಗಿ ಈ ಪ್ರದೇಶದಲ್ಲಿ ರಾಮಕೃಷ್ಣ–ವಿವೇಕಾನಂದ ಆಂದೋಳನ ಬಲಗೊಂಡಿತು.

ಪ್ರೀತಿ–ವಾತ್ಸಲ್ಯ ಮತ್ತು ದಿವ್ಯಾನಂದಗಳ ಸಾಕಾರವಾಗಿದ್ದ ಸ್ವಾಮೀಜಿಯವರು, ಸ್ಥಾನಮಾನ–ವಯಸ್ಸು–ಶಿಕ್ಷಣ ಏನೇ ಇರಲಿ, ಎಲ್ಲರ ಮೇಲೂ ಅನುಗ್ರಹದ ಮಳೆಗರೆದರು. ವಿಜಯವಾಡ ಸಮಿತಿಗೆ ಸಹಾಯ ಮಾಡುವುದರಲ್ಲಿ ಸ್ವಾಮೀಜಿಯವರ ಉದಾರ ಹೃದಯ ಎಂದಿಗೂ ಕುಗ್ಗಲಿಲ್ಲ. ಒಮ್ಮೆ ಮದ್ರಾಸಿಗೆ ಭೇಟಿ ಕೊಟ್ಟಿದ್ದಾಗ ಪ್ರಖ್ಯಾತ ಸಂಗೀತ ವಿದುಷಿ ಶ್ರೀಮತಿ ಸುಬ್ಬುಲಕ್ಷ್ಮಿಯವರ ಮನೆಗೆ ಹೋಗಿ ರಾಮಕೃಷ್ಣ ಸಮಿತಿಯ ಸಹಾಯಾರ್ಥ ಸಂಗೀತ ಕಛೇರಿಯೊಂದನ್ನು ನಡೆಸಿಕೊಡುವಂತೆ ಕೇಳಿಕೊಂಡರು. ಶ್ರೀಮತಿ ಸುಬ್ಬುಲಕ್ಷ್ಮಿಯವರು ಒಪ್ಪಿಕೊಂಡರು. ಆದರೆ ಈ ಅವಕಾಶವನ್ನು ಉಪಯೋಗಿಸಿಕೊಳ್ಳುವಷ್ಟು ಸಾಮರ್ಥ್ಯ ಸಮಿತಿಗಿರಲಿಲ್ಲವಾದ್ದರಿಂದ ಇದು ನಡೆಯಲಿಲ್ಲ.

ಮತ್ತೊಮ್ಮೆ ಹೈದರಾಬಾದಿನಲ್ಲಿ ನಡೆದ ಸಮಾರಂಭವೊಂದರಲ್ಲಿ, ಪ್ರಖ್ಯಾತ ಗಾಯಕ ಜೇಸುದಾಸ್ ಅವರಿಗೆ, ಸಮಿತಿಯ ರಜತಮಹೋತ್ಸವದ ಅಂಗವಾಗಿ ವಿಜಯವಾಡದಲ್ಲಿ ಒಂದು ಕಛೇರಿ ನಡೆಸಿಕೊಡುವಂತೆ ಕೇಳಿಕೊಂಡರು. ಜೇಸುದಾಸ್ ಒಪ್ಪಿಕೊಂಡರು. ಕಛೇರಿ ಯಶಸ್ವಿಯಾಗಿ ನಡೆಯಿತು. ಈ ಪ್ರಸಂಗಗಳು ಸಮಿತಿಯ ಕೆಲಸಕಾರ್ಯಗಳನ್ನು ಬಲಗೊಳಿಸುವುದರಲ್ಲಿ, ಅದರ ಆಯಾಮಗಳನ್ನು ವಿಸ್ತರಿಸುವುದರಲ್ಲಿ ಸಮಿತಿಗೆ ನೆರವಾಗಲು ಸ್ವಾಮೀಜಿ ಎಷ್ಟೊಂದು ಆಸಕ್ತರಾಗಿದ್ದರು ಎಂಬುದನ್ನು ತೋರಿಸುತ್ತವೆ.

ಸ್ವಾಮೀಜಿಯವರು ಪಾಲ್ಗೊಂಡಿದ್ದ ಸಮಿತಿಯ ಅತ್ಯಂತ ಸ್ಮರಣೀಯ ಕಾರ್ಯಕ್ರಮವೆಂದರೆ, ೧೯೭೫ರಲ್ಲಿ ವಿಜಯವಾಡಾದಲ್ಲಿ ಮೂರು ದಿನಗಳ ಕಾಲ ನಡೆದ ಪೂಜನೀಯ ತ್ರಿಮೂರ್ತಿಗಳ ಜಯಂತಿ ಉತ್ಸವ. ೧೯೮೨ರಲ್ಲಿ ಕಲಾಕ್ಷೇತ್ರದಲ್ಲಿ ನಡೆದ ಸಮಿತಿಯ ರಜತಮಹೋತ್ಸವ ಹಾಗೂ ೧೯೮೪ರಲ್ಲಿ ನಡೆದ ವಿವೇಕಾನಂದ ವಿಜ್ಞಾನ ಕೇಂದ್ರದ ಉದ್ಘಾಟನಾ ಸಮಾರಂಭ ಇನ್ನೆರಡು ಸ್ಮರಣೀಯ ಕಾರ್ಯಕ್ರಮಗಳು.

ಹೈದರಾಬಾದಿನ ಶ್ರೀರಾಮಕೃಷ್ಣ ಸಮಿತಿ ಹಾಗೂ ವಿಜಯವಾಡಾದ ಶ್ರೀ ರಾಮಕೃಷ್ಣ ಸಮಿತಿಗಳ ಜಂಟಿ ಆಶ್ರಯದಲ್ಲಿ ೧೯೯೭ರಲ್ಲಿ ವಿಜಯವಾಡದಲ್ಲಿ ಸ್ವಾಮಿ ವಿವೇಕಾನಂದರ ಪ್ರತಿಮೆಯ ಅನಾವರಣ ಸಮಾರಂಭ ನಡೆಯಿತು. ಇದು ಸ್ವಾಮಿ ರಂಗನಾಥಾನಂದರು ಭಾಗವಹಿಸಿದ ಕೊನೆಯ ಸಾರ್ವಜನಿಕ ಸಮಾರಂಭ.

೧೯೭೨ರಲ್ಲಿ ಸ್ವಾಮೀಜಿಯವರು ಮೊದಲ ಬಾರಿಗೆ ವಿಜಯವಾಡಕ್ಕೆ ಬಂದದ್ದು. ಅಂದಿನಿಂದ ೧೯೯೭ರವರೆಗೆ ಅವರು ವಾರ್ಷಿಕ ಭೇಟಿ ನೀಡುತ್ತಿದ್ದರು. ಇಂಥ ಭೇಟಿಯಿಂದಾಗಿ ವಿಜಯವಾಡ ಸಮಿತಿಯ ಸಾರ್ವಜನಿಕ ಸಂಪರ್ಕ ಹೆಚ್ಚಿತು. ಅದರ ಬಲ ವರ್ಧಿಸಿತು. ಆಖೈರಾಗಿ ಅದನ್ನು ರಾಮಕೃಷ್ಣ ಮಿಷನ್ನಿನ

ಅಂಗಸಂಸ್ಥೆಯಾಗಿಸುವುದರಲ್ಲಿ ಸ್ವಾಮೀಜಿಯವರ ಸಹಾಯ ಫಲಿಸಿತು. ಬೇಲೂರು ಮಠಕ್ಕೆ ಭೇಟಿ ಕೊಟ್ಟು ತಮ್ಮ ದರ್ಶನ ಪಡೆದವರ ಮೂಲಕ ಸ್ವಾಮೀಜಿಯವರು ತಮ್ಮ ಆಶೀರ್ವಾದ, ಪ್ರೀತಿ–ವಾತ್ಸಲ್ಯಗಳನ್ನು ಕರುಣಿಸುತ್ತಿದ್ದರು. ಮಹಾಸಮಾಧಿಗೆ ಕೆಲವೇ ದಿನ ಮೊದಲು, ತಮ್ಮಿಂದ ಸಂನ್ಯಾಸ ದೀಕ್ಷೆ ಪಡೆದ ಸ್ವಾಮಿಯೊಬ್ಬರ ಮುಖೇನ ತಮ್ಮ ಪ್ರೀತಿಯ ಸಂದೇಶವನ್ನು ಕಳುಹಿಸಿದ್ದರು.

ಸ್ವಾಮೀಜಿಯವರು ಸಜೀವ ಸಾನ್ನಿಧ್ಯವನ್ನು ನಾನು ನಿರಂತರವಾಗಿ ಅನುಭವಿಸುತ್ತಿದ್ದೇನೆ ಎಂಬುದೇ ನನ್ನ ವಿನಯಪೂರ್ವಕ ನಿವೇದನೆ. ನಮ್ಮೆಲ್ಲರನ್ನೂ ಅವರು ಪ್ರೀತಿಪೂರ್ವಕವಾಗಿ ಅನುಗ್ರಹಿಸಲಿ, ಇದೇ ನನ್ನ ಸವಿನಯ ಪ್ರಾರ್ಥನೆ.

* * * *

# ೧೧೧. ಸರ್ವಸ್ವವೂ ಸಗುಣಾತ್ಮಕ

–ಭಾರತೀ ಸೇನ್*

ನಾವು ಪೂಜ್ಯ ಭಾವನೆಯಿಂದ ನೋಡುವ ವ್ಯಕ್ತಿಯೊಬ್ಬರ ಬಗ್ಗೆ ಬರೆಯುವುದೆಂದರೆ, ನಿಜವಾಗಿ ಅದೊಂದು ವರವೇ ಸರಿ. ಆ ವ್ಯಕ್ತಿ, ದಿವಂಗತ ಪೂಜ್ಯ ರಂಗನಾಥಾನಂದ ಮಹಾರಾಜರೇ ಆದಾಗ ಅದೊಂದು ವಿನೀತ ಅನುಭವವೇ. ಏಕೆಂದರೆ, ಅವರು ತಾವೇ ಮಾದರಿಯಾಗಿ ನಮಗೆ ಮಾರ್ಗದರ್ಶನ ಮಾಡಿಸಿದ್ದು, ನಮ್ಮ ಅಂತರಾಳವನ್ನು ತಟ್ಟಿ ಮುಟ್ಟಿ, ಅವರ ಕರ್ಮಯೋಗ ಜೀವನದ ನೆನಪುಗಳನ್ನು ಮತ್ತೆ ನಮ್ಮೆದುರು ತೆರೆದಿಡುತ್ತದೆ. ದಯೆ, ಅನುಕಂಪ, ಸಹಾನುಭೂತಿಗಳನ್ನೊಳಗೊಂಡ ಅವರ ಒಲುಮೆ, ಅವರು ಸೂಸಿದ ಸಂತೋಷ ಮತ್ತೆ ನಮ್ಮ ಅನುಭವಕ್ಕೆ ಬರುತ್ತದೆ. ಈ ಸ್ಮೃತಿಕಥನ ಅವರದೇ ಆದ ಪರಂಪರೆಯ ಕಥನ. ಅವರೊಡನೆ ನೇರ ಸಂಪರ್ಕ ಹೊಂದಿದ್ದವರು ಮಾತ್ರವಲ್ಲ, ಯಾರೆಲ್ಲ ಅವರ ಬಗ್ಗೆ ಓದಿಕೊಂಡಿದ್ದಾರೋ, ಯಾರೆಲ್ಲ ಅವರ ಜೀವನದ ಬಗ್ಗೆ ತಿಳಿದುಕೊಂಡಿದ್ದಾರೋ ಅವರೆಲ್ಲರಿಗೂ ಸೇರಿದ ಸ್ಮೃತಿಕಥನ. ಯಾರು ಸಾವಿರಾರು ಜನರಿಗೆ ಸ್ಫೂರ್ತಿದಾಯಕರಾಗಿದ್ದರೋ, ಸಾವಿರಾರು ಜನರಿಗೆ ಸ್ವಾರ್ಥರಹಿತ ಸೇವೆಗೆ, ಸಾವಿರಾರು ಜನರ ಧ್ಯಾನಪರತೆ, ದೈವಧ್ಯಾನಮಗ್ನತೆಗಳಿಗೆ ಪ್ರೇರಕ ಶಕ್ತಿಯಾಗಿದ್ದರೋ ಅಂಥ ಮಹಾನುಭಾವನ ಪರಂಪರೆಯ ಸ್ಮೃತಿ ಕಥನವಿದು.

ನನಗೆ ನೆನಪಾಗುತಿತದೆ. ಅವರು ತಮಗೆ ಪ್ರಿಯವಾದ ಬಂಗಾಳಿ ಭಕ್ತಿ ಗೀತೆಯೊಂದನ್ನು ಪದೇ ಪದೇ ತುಂಬ ಮೆಚ್ಚುಗೆಯಿಂದ ಉಲ್ಲೇಖಿಸುತ್ತಿದ್ದರು:

**ದೂಬ್ ದೂಬ್ ದೂಬ್**
**ರೂಪ–ಸಾಗರೇ ಅಮರ್‌ಮಾನ್**

ಪುರುಸೊತ್ತಿಲ್ಲದ ದಿನದ ದುಡಿಮೆಯಲ್ಲಿ ಮಗ್ನನಾಗಿದ್ದಾಗ ಅಥವಾ ಪ್ರಶಾಂತ ಮನಸ್ಸಿನಿಂದ ಧ್ಯಾನಪರನಾಗಿದ್ದಾಗ ನನಗೆ ಈ ಮಾತುಗಳು ಸತ್ಯವೆನಿಸುತ್ತದೆ. ನನ್ನ ನೆನಪಿರುವಷ್ಟರಮಟ್ಟಿಗೆ ಹೇಳುವುದಾದರೆ, ಅವರ ಸರಳ ನಡೆ–ನುಡಿಗಳು ಸುಲಭವಾಗಿ ಪ್ರಭಾವಕ್ಕೊಳಗಾಗಬಹುದಾದ ನನ್ನ ಯುವ ಮನಸ್ಸಿನ ಮೇಲೆ ಪ್ರಚಂಡ ಪರಿಣಾಮ–ಪ್ರಭಾವಗಳನ್ನು ಬೀರಿದ್ದವು. ಅವರು ಯಾವತ್ತೂ ಮತತತ್ತ್ವ, ಸೂತ್ರ–ಸಿದ್ಧಾಂತಗಳ ಕಟ್ಟುಪಾಡುಗಳನ್ನು ಹಾಕಲಿಲ್ಲ. ನಮ್ಮದೇ ಆದ ಖಚಿತ ನ್ಯಾಯಪ್ರಜ್ಞೆ ಬೆಳೆಸಿಕೊಳ್ಳುವುದು ಮತ್ತು ನಮ್ಮದೇ ಆದ ತೀರ್ಮಾನಗಳನ್ನು, ನಿರ್ಣಯಗಳನ್ನು ಕೈಗೊಳ್ಳಬೇಕಾದ್ದು ಅತಿ ಮುಖ್ಯ ಎಂದು ಅವರು ಹೇಳುತ್ತಿದ್ದರು. ಮುಂದಿನ ಕೆಲವು ಪ್ಯಾರಾಗಳಲ್ಲಿ ನನ್ನ ಸ್ಮರಣೀಯ ನೆನಪುಗಳನ್ನು ದಾಖಲಿಸುತ್ತೇನೆ. ಅವೆಲ್ಲ ಮಹತ್ವಪೂರ್ಣವಾದ ಘಟನೆಗಳೇನಲ್ಲ. ಅವೆಲ್ಲ ಸಾಮಾನ್ಯ ಘಟನೆಗಳೇ. ಆದರೆ ವಿಶೇಷ ಅರ್ಥವುಳ್ಳ ನನ್ನ ಬದುಕನ್ನು ಹಾಗೂ ನನ್ನ ಚಿಂತನ ಕ್ರಮವನ್ನು ರೂಪಿಸಿದ ಸಾಮಾನ್ಯ ಘಟನೆಗಳು.

ಚಿಕ್ಕವಳಾಗಿದ್ದಾಗಿನಿಂದಲೂ ನನಗೆ ಶುಶ್ರೂಷಕ (ನರ್ಸಿಂಗ್) ವೃತ್ತಿಯಲ್ಲಿ ಆಸಕ್ತಿ. ನರ್ಸಿಂಗ್ ಓದಬೇಕೆಂಬುದು ನನ್ನ ಆಸೆಯಾಗಿತ್ತು. ಅದು ನೆರವೇರಿದ್ದು ದೆಹಲಿ ವಿಶ್ವವಿದ್ಯಾನಿಲಯದ ಕಾಲೇಜ್ ಆಫ್ ನರ್ಸಿಂಗ್‌ನಲ್ಲಿ (ಈಗ

---

* ಅಮೆರಿಕದ ಆರ್ಲಿಂಗ್ಟನ್‌ನಲ್ಲಿರುವ ಭಕ್ತೆ.

ರಾಜಕುಮಾರಿ ಅಮೃತ ಕೌರ್ ಕಾಲೇಜ್ ಆಫ್ ನರ್ಸಿಂಗ್). ಸ್ವಾಮಿ ರಂಗನಾಥಾನಂದಜೀ ನನ್ನ ಈ ಆಸೆಗೆ ನೀರೆರೆದು ಪೋಷಿಸಿದರು. ಅವರು ಯಾವತ್ತೂ ನನ್ನೀ ಯೋಜನೆಯನ್ನು ಅನುಮೋದಿಸುತ್ತಿದ್ದರು. ನಿರ್ಣಯ ಕೈಗೊಳ್ಳಬೇಕಾದ ಸಮಯ ಹಠಾತ್ತನೆ ಒದಗಿಬಂದಾಗ, ಇದರ ಬಗ್ಗೆ ನನಗೆ ಅನುಮಾನಗಳು ಶುರುವಾದವು. ಇದು ಎಷ್ಟು ಕಷ್ಟದ ಶಿಕ್ಷಣ ಹಾಗೂ ಸಂಬಂಧಿತ ಕೆಲಸಗಳು ಎಷ್ಟು ತ್ರಾಸದಾಯಕವಾದವು ಎಂಬುದು ಅರಿವಿಗೆ ಬಂದು, ಈ ವೃತ್ತಿಯ ಬಗ್ಗೆ, ನನ್ನಿಂದ ಅದು ಸಾಧ್ಯವಾದೀತೇ ಎಂಬ ಸಂದೇಹಗಳು ನನ್ನನ್ನು ಕಾಡಲಾರಂಭಿಸಿದವು. ಹೀಗಾಗಿ, ನಾನು ಇಂಗ್ಲಿಷ್ ಆನರ್ಸ್ ಪದವಿ ಶಿಕ್ಷಣಕ್ಕೆ ಅರ್ಜಿಹಾಕಲು ನಿರ್ಧರಿಸಿದೆ. ನನ್ನಲ್ಲಿ ಆದ ಈ ಬದಲಾವಣೆಯನ್ನು ಕೇಳಿ ತಿಳಿದ ಸ್ವಾಮಿ ರಂಗನಾಥಾನಂದರು ನರ್ಸಿಂಗ್ ಶಿಕ್ಷಣವನ್ನೇ ಆರಿಸಿಕೊಳ್ಳುವಂತೆ ನನ್ನ ಮನ ಒಲಿಸಲು ಪ್ರಯತ್ನಿಸಿದರು. ನಂತರ, ಮುಂದಿನ ತಿಂಗಳುಗಳಲ್ಲಿ ಪ್ರತಿ ಸಲ ಭೇಟಿಯಾದಾಗಲೂ ಅವರು ಕೇಳುತ್ತಿದ್ದರು: "ಇನ್ನೂ ನಿರ್ಧಾರಕ್ಕೆ ಬಂದಿಲ್ಲವೆ? ಇಂಗ್ಲಿಷ್ ಅದ್ಭುತ, ಆದರೆ ನರ್ಸಿಂಗ್ ಉದಾತ್ತವಾದ, ಉತ್ಕೃಷ್ಟ ವೃತ್ತಿ. ಶುಶ್ರೂಷೆಯೆಂದರೆ ಜನರ ಸೇವೆ. ನೀನು ಅದನ್ನು ಮಾಡಬೇಕು. ಅದರಲ್ಲಿ ಭಯಪಡುವಂಥಾದ್ದೇನಿದೆ?" ಮರುಕ್ಷಣವೇ, ಮತ್ತೆ ಹೇಳುತ್ತಿದ್ದರು: "ಆ ವೃತ್ತಿ ಕೈಗೊಳ್ಳುವ ಧೈರ್ಯ ನಿನ್ನಲ್ಲಿದೆ. ಸೇವೆ ಮಾಡಲು ಅದೊಂದು ಪ್ರಶಂಸನೀಯ ಮಾರ್ಗ. ಠಾಕೂರ್ ಹೇಳುತ್ತಾರೆ: "ಶಿವಜ್ಞಾನೇ ಜೀವ ಸೇವಾ (ಮಾನವನಲ್ಲಿರುವ ದೇವನ ಆರಾಧನೆಗೈಯ್ಯುವುದು)." ಜನಸೇವೆಯೇ ಜನಾರ್ದನನ ಸೇವೆ!

ನನ್ನ ಸಂದೇಹಗಳು ಮತ್ತು ಭೀತಿಗಳು ಮಾಯವಾದವು. ನಾನು ಮನಸ್ಸು ಮಾಡಿದೆ. ನಾಲ್ಕು ವರ್ಷಗಳ ನಂತರ ನರ್ಸಿಂಗ್ ಪದವೀಧರೆಯಾದೆ. ಶುಶ್ರೂಷೆ ವೃತ್ತಿಯಲ್ಲಿ ಪದವಿ ಪಡೆದು, ಕೊಲ್ಕತ್ತಾದ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನಲ್ಲಿ ಸ್ವಾಮೀಜಿಯವರನ್ನು ಭೇಟಿಯಾದೆ. ಅವರು ಹಸನ್ಮುಖದಿಂದ ಬೀಗಿ ನನ್ನನ್ನು ಆಶೀರ್ವದಿಸಿದರು. ಕೆಲವು ವರ್ಷಗಳ ನಂತರ ನಾನು ಮದುವೆಯಾದೆ. ಅಮೆರಿಕದಲ್ಲಿ ನನ್ನ ಚಿಕ್ಕಮಕ್ಕಳ ಆರೈಕೆಯಲ್ಲಿ, ಪಾಲನೆ–ಪೋಷಣೆಯಲ್ಲಿ ನಿರತಳಾಗಿದ್ದೆ. ಕೆಲಸ ಬಿಟ್ಟಿದ್ದೆ. ಅಮೆರಿಕದಲ್ಲಾಗಲೀ, ಭಾರತದಲ್ಲಾಗಲೀ ಪ್ರತಿಸಲ ಭೇಟಿಯಾದಾಗಲೂ "ನನ್ನ ವೃತ್ತಿಯ ಪಾಲನೆ"ಯ ಬಗ್ಗೆ ವಿಚಾರಿಸುತ್ತಿದ್ದರು. ನಾನೀಗ ಗೃಹಿಣಿ, ಮನೆವಾರ್ತೆಯಲ್ಲಿ ನಿರತಳು ಎಂದು ಹೇಳಿದಾಗ "ಅದು ಒಳ್ಳೆಯದೇ, ಅವರಿಗೀಗ ನಿನ್ನ ಅಗತ್ಯವಿದೆ. ಅವರು ಬೆಳೆದು ದೊಡ್ಡವರಾದ ನಂತರ ನೀನು ಶುಶ್ರೂಷೆಯ ವೃತ್ತಿಗೆ ಮರಳಬಹುದು. ಆಗ ನೀನು ಹೆಚ್ಚು ಹೆಚ್ಚು ಜನರಿಗೆ ಸೇವೆ ಸಲ್ಲಿಸಬಹುದು" ಎಂದು ಅವರು ಪ್ರತಿಕ್ರಿಯಿಸಿದರು. ಅವರಿಗೆ ಯಾವ ಕೆಲಸವೂ ಕ್ಷುಲ್ಲಕವೆನಿಸಿರಲಿಲ್ಲ. ಅವರ ಪ್ರತಿ ಮಾತಿನಲ್ಲೂ ಮೆಚ್ಚುಗೆ, ಪ್ರಶಂಸೆ, ಪ್ರೋತ್ಸಾಹಗಳಿರುತ್ತಿದ್ದವು.

೧೯೮೨ರಲ್ಲಿ. ಕೊನೆಗೆ ನಾನು ನರ್ಸಿಂಗ್ ವೃತ್ತಿಗೆ ಮರಳಿದೆ. ೧೯೮೪ರಲ್ಲಿ ಲಾಸ್ ಏಂಜಲಿಸ್‌ಗೆ ಸ್ವಾಮೀಜಿ ಬಂದಿದ್ದಾಗ ಅವರಿಗೆ ಇದನ್ನು ಅರುಹಿದೆ. ಅವರಿಗೆ ತುಂಬ ಸಂತೋಷವಾಯಿತು. ನನ್ನ ತಲೆಯ ಮೇಲೆ ಕೈ ಇರಿಸಿ 'ಪ್ರಶಂಸನೀಯ' ಎಂದು ಉದ್ಗರಿಸಿದರು. ಇದಾದನಂತರ ಪ್ರತಿಸಲ ಭೇಟಿಯಾದಾಗಲೂ ನನ್ನ ಕೆಲಸದ ಪ್ರಸ್ತಾಪ ಬರುತ್ತಿತ್ತು. ಪ್ರತಿ ಸಲವೂ ನಾನು ಶುಶ್ರೂಷಕಿಯ ಕೆಲಸ ಮುಂದುವರಿಸುವುದಾಗಿ ಹೇಳುತ್ತಿದ್ದೆ. ಅವರಿಗೆ ಸಂತೋಷ ಉಂಟಾಗುತ್ತಿತ್ತು. ಅವರಿಗೆ 'ಪ್ರಶಂಸನೀಯ'ವಾಗಿ ಕಾಣದ್ದು ಏನಾದರೂ ಉಂಟೆ? ಅವರಲ್ಲಿ ಸಕಲವೂ ಸಗುಣವೇ. ಅವರ ಬಗ್ಗೆ ಸಕಲ ಸರ್ವಸ್ವವೂ ಸಗುಣಾತ್ಮಕವೆ.

ಅವರಿಗೆ ಆಧ್ಯಾತ್ಮಿಕತೆ ಮತ್ತು ಸೇವೆ ಎರಡೂ ಬೇರೆಬೇರೆಯಾಗಿರಲಿಲ್ಲ. ಎರಡೂ ಒಂದೇ, ಎರಡಕ್ಕೂ ಒಂದೇ ಅರ್ಥವೆಂದು ಭಾವಿಸಿದ್ದರು. ನಾನು ದೆಹಲಿಯಲ್ಲಿ ಬೆಳೆಯುತ್ತಿದ್ದಾಗಿನ ದಿನಗಳು. ದರಿದ್ರ ನಾರಾಯಣನ ಸೇವೆಯ (ಬಡವರಿಗೆ ಅನ್ನದಾನ) ದಿನಗಳು. ಹೊಸ ದೇವಾಲಯದ ನಿರ್ಮಾಣಕ್ಕೂ ಮೊದಲಿನಿಂದಲೂ ದೆಹಲಿಯ ಮಿಷನ್ನಿನ ಪಾಕಶಾಲೆಯಲ್ಲಿ ದರಿದ್ರ ನಾರಾಯಣನ ಸೇವೆಗಾಗಿ ಸದಾ ಒಲೆ ಉರಿಯುತ್ತಲೇ ಇರುತ್ತಿತ್ತು. ಮರುದಿನ ಮಂದೆ ಮಂದೆಯಾಗಿ ಬರುತ್ತಿದ್ದ ಬಡಜನರಿಗೆ ಉಣಬಡಿಸಲು ಭಕ್ತರು ಹಿಂದಿನ

ದಿನದಿಂದಲೇ ಪಾಕ ಶಾಲೆಯಲ್ಲಿ ಅಡುಗೆ ಕೆಲಸ ನಡೆಸುತ್ತಿದ್ದರು. ನಾನು ನನ್ನ ತಾಯಿ ಜೊತೆಹೋಗಿ ನನ್ನ ಕೈಲಾದಷ್ಟು ಕೆಲಸ ಮಾಡಿಕೊಡುತ್ತಿದ್ದೆ. ಸ್ವಾಮಿ ರಂಗನಾಥಾನಂದರು ಅಲ್ಲೇ ಸುಳಿದಾಡುತ್ತಿದ್ದರು. ಅಡುಗೆ ಕೆಲಸದಲ್ಲಿ ನೆರವಾಗುತ್ತಿದ್ದರು. ಅದು ಎಲ್ಲರಿಗೂ ತೆರೆದ ಅನ್ನಸತ್ರ. ಅಡುಗೆ ಪಾತ್ರೆ ಯಾವತ್ತೂ ಬರಿದಾಗದಂತೆ ಸ್ವಾಮೀಜಿ ನೋಡಿಕೊಳ್ಳುತ್ತಿದ್ದರು. ವಾತಾವರಣದಲ್ಲಿ ಹಿಗ್ಗು ತುಂಬಿರುತ್ತಿತ್ತು. ಪ್ರತಿಯೊಬ್ಬರೂ ದಣಿವರಿಯದೇ ದುಡಿಯುತ್ತಿದ್ದರು.

೧೯೭೧ರಲ್ಲಿ ಒಂದು ವರ್ಷ ಕಾಲ ನಾನು ಅಮೆರಿಕದ ಟೆಕ್ಸಾಸ್‌ನ ಆರ್ಲಿಂಗ್ಟನ್ನಿನಲ್ಲಿದ್ದೆ. ಆ ವರ್ಷ ಸ್ವಾಮಿ ರಂಗನಾಥಾನಂದರು ಟೆಕ್ಸಾಸ್‌ಗೆ ಬಂದಿದ್ದರು. ನಾನು ಮತ್ತು ನನ್ನ ಗಂಡ ಜಯಂತೊ ನಮ್ಮ ಮನೆಯಲ್ಲಿ, ದಿವಾನ ಖಾನೆಯ ಮಾತುಕತೆ ಕಾರ್ಯಕ್ರಮ ಮತ್ತು ಭೋಜನ ಕೂಟವೊಂದನ್ನು ಏರ್ಪಡಿಸಿದೆವು. ನನಗೆ ಸಂತೋಷ–ಸಂಭ್ರಮ–ಆತಂಕ, ಎಲ್ಲವೂ. ಏಕೆಂದರೆ ಸ್ವಾಮೀಜಿಯವರನ್ನು ಆತಿಥ್ಯಕ್ಕೆ ಆಮಂತ್ರಿಸಿದ ಅನುಭವ ನನಗಿರಲಿಲ್ಲ. ಮಾತುಕತೆಯ ನಂತರ ಅವರು ನಿರಾಳವಾಗಿ ಸೋಫಾದ ಮೇಲೆ ಚಕ್ಕಂಬಕ್ಕಳ ಹಾಕಿ ಕುಳಿತುಕೊಂಡರು. ಚಕ್ಕಂಬಕ್ಕಳ ಹಾಕಿ ಕುಳಿತುಕೊಳ್ಳುವುದು ಅವರ ಹಳೆಯ ಅಭ್ಯಾಸ. ಇಷ್ಟಪೂರ್ತಿ ಊಟ ಮಾಡಿದರು. ಊಟದ ಸವಿಯನ್ನು ಚಪ್ಪರಿಸುತ್ತಾ ಎಲ್ಲವೂ ತಮ್ಮ ತಾಯಿ ಮಾಡಿದ ಅಡುಗೆಯಂತೇ ಇದ್ದವು ಎಂದು ಎಲ್ಲರೆದುರೂ ಮೆಚ್ಚಿಕೊಂಡರು. ಪಾಯಸ ಬಡಿಸಲು ಆರಂಭಿಸಿದಾಗ ಶೃಂಗಸದೃಶವಾದ ಪ್ರಶಂಸೆ ವ್ಯಕ್ತವಾಯಿತು. "ಪಂಡಿತ್‌ಜೀಯವರು ಮಾಡುವ ಪಾಯಸದಂತೇ ಇದೆ" ಎಂದು ಸ್ವಾಮೀಜಿ ನುಡಿದರು. (ಪಂಡಿತ್‌ಜೀ, ದೆಹಲಿ ರಾಮಕೃಷ್ಣ ಮಿಷನ್ನಿನ ಅಡುಗೆಯವರು.) ನಾನು ಸ್ವಾಮೀಜಿಯವರ ಪ್ರಶಂಸೆಯನ್ನು ಆಶೀರ್ವಾದವೆಂದು ತಲೆಯಲ್ಲಿ ಧರಿಸಿದೆ.

ಕೆಲವು ವರ್ಷಗಳ ನಂತರ, ೧೯೭೬ರಲ್ಲಿ ಅವರು ಟೆಕ್ಸಾಸ್‌ಗೆ ಮತ್ತೆ ಬಂದಿದ್ದರು. ಒಂದೆರಡು ದಿನ ಆರ್ಲಿಂಗ್ಟನ್ನಿನ ನಮ್ಮ ಮನೆಯಲ್ಲಿ ನಮ್ಮೊಡನೆ ಬಿಡಾರ ಮಾಡಿದ್ದರು. ಅದು ಕಾಳಿ ಪೂಜಾ ದಿನಗಳು. ಆ ದಿನಗಳಲ್ಲಿ ಕಾಳಿ ಮಾತೆ ಅವರ ಪ್ರವಚನದ ವಿಷಯವಾಗಿತ್ತು. ಕಾಳಿ ಶಕ್ತಿದೇವತೆ ಎಂಬುದನ್ನು ವಿವರಿಸಿ ಹೇಳುತ್ತಾ ಆ ಶಕ್ತಿ ಸಹಜವಾದದ್ದು, ಅದು ಕಾಯಲೂ ಬಲ್ಲದು, ನಾಶಮಾಡಲೂ ಬಲ್ಲದು ಎಂದು ವ್ಯಾಖ್ಯಾನ ಮಾಡಿದರು. ಹೀಗೆ ಹೇಳುತ್ತಾ ಕೇರಳದಲ್ಲಿ ಸರ್ವಮಾನ್ಯವಾಗಿದ್ದ ಪ್ರಾರ್ಥನೆಯೊಂದನ್ನು ನಿರೂಪಿಸಿದರು. ಸಂಜೆಯ ಹೊತ್ತು ಮರದ ಕೆಳಗೆ ಸರ್ಪಗಳಿಗಾಗಿ ಹಾಲಿನ ಬೋಗುಣಿಯನ್ನಿರಿಸಿ ಹಾಡುವ ಪ್ರಾರ್ಥನೆ ಅದು. "ಓ ಸರ್ಪರಾಜ, ನಿನ್ನ ಬಾಲವನ್ನು ಅನುಗ್ರಹಿಸು, ತಲೆಯನ್ನಲ್ಲ"– ಇದು ಪ್ರಾರ್ಥನೆ. ಇವತ್ತಿಗೂ ಏನಾದರೂ ಎಡವಟ್ಟಾದಾಗ ನಾನು ಕಾಳಿ ಮಾತೆಯನ್ನು ಪ್ರಾರ್ಥಿಸುತ್ತೇನೆ: "ತಾಯಿ ನಿನ್ನ ಸೌಖ್ಯದೃಷ್ಟಿ ನಮ್ಮ ಮೇಲಿರಲಿ, ರೌದ್ರದೃಷ್ಟಿಯನ್ನು ಬೀರಬೇಡ."

ಸ್ವಾಮೀಜಿ ಪ್ರತಿ ಸಂಜೆ ಕೆನೆ ಗಿಣ್ಣು ತೆಗೆದುಕೊಳ್ಳುತ್ತಿದ್ದರು. ನನಗಿನ್ನೂ ಈ ತಿನಿಸು ತಯಾರಿಸುವ ಕಲೆ ಕರಗತವಾಗಿರಲಿಲ್ಲ. ಸ್ವಾಮೀಜಿ ಆ ಕಲೆಯನ್ನು ನನಗೆ ಹೇಳಿಕೊಟ್ಟರು.

ನನ್ನ ಗಂಡ ಜಯಂತೊ ತುಂಬ ಪುಸ್ತಕಗಳನ್ನು ಸಂಗ್ರಹಿಸಿಟ್ಟಿದ್ದರು. ಬೇರೆಯವರ ಆರೋಗ್ಯದ ಬಗ್ಗೆ ಸದಾ ಕಾಳಜಿ ವಹಿಸುತ್ತಿದ್ದ ಸ್ವಾಮೀಜಿಯವರು, ಮಧ್ಯಾಹ್ನದ ಊಟವಾದ ನಂತರ ನನಗೆ ವಿಶ್ರಾಂತಿ ತೆಗೆದುಕೊಳ್ಳಲು ಹೇಳಿ ತಾವು ಪುಸ್ತಕಗಳ ವಾಚನದಲ್ಲಿ ನಿರತರಾಗುತ್ತಿದ್ದರು. ಅವರ ಮಗ್ನತೆ, ಜ್ಞಾಪಕಶಕ್ತಿ ವಿಸ್ಮಯಕಾರಿಯಾದದ್ದು. ಆ ಸಾಮರ್ಥ್ಯ ಅವರಿಗಿತ್ತು.

ಈ ಭೇಟಿಯ ಕಾಲದಲ್ಲೇ ಅವರು ಎಲ್ಲ ಮಕ್ಕಳೊಡನೆ ಬೆರೆತು ಆಟವಾಡಿದ್ದು. ಅವರು ನನ್ನ ಮಗಳಿಗೆ ಒಂಟಿಕಾಲಿನ ಮೇಲೆ ನಿಲ್ಲುವುದನ್ನು ಕಲಿಸಿದರು. ಅವಳು ಇದನ್ನು ಕಂಡು ಆಶ್ಚರ್ಯಚಕಿತಳಾದಳು. ಈ ಮಗಳು, ಇವಳೇ ಸುಮನಾ. ಬೆಳೆದು ದೊಡ್ಡವಳಾದ ನಂತರ ೧೯೯೦ರ ಬೇಸಿಗೆಯಲ್ಲಿ ಕೋಸಿಪುರ್

ಗಾರ್ಡನ್ ಹೌಸ್‌ನಲ್ಲಿ ಸ್ವಾಮೀಜಿಯವರಿಂದ ದೀಕ್ಷೆ ಪಡೆದುಕೊಂಡಳು. ಅಕಸ್ಮಾತ್ತಾಗಿ ರಂಗನಾಥಾನಂದಜಿಯವರು, ನನ್ನ ಮತ್ತು ಸ್ವಾಮಿ ಯತೀಶ್ವರಾನಂದ ಮಹಾರಾಜರ ಭೇಟಿಗೆ ಕಾರಣಕರ್ತರಾಗಿದ್ದರು. ೧೯೬೧ರಲ್ಲಿ ಸ್ವಾಮಿ ಯತೀಶ್ವರಾನಂದರು ನನಗೆ ದೀಕ್ಷೆ ನೀಡಿದರು. ಮಕ್ಕಳ ಜೊತೆ, ತರುಣರ ಜೊತೆ ಸ್ವಾಮಿ ರಂಗನಾಥಾನಂದರ ಮಾತುಕತೆ ಗುರು–ಶಿಷ್ಯರ ರೀತಿಯದಾಗಿರುತ್ತಿರಲಿಲ್ಲ. ಅದೊಂದು ಬಗೆಯ ಸಹಜ ಪ್ರೀತಿ–ವಾತ್ಸಲ್ಯದ, ತಮ್ಮಿಷ್ಟಾನುಸಾರದ ಮಾತುಕತೆಯಾಗಿರುತ್ತಿತ್ತು. ಮಕ್ಕಳನ್ನು ಪ್ರೀತಿಸುತ್ತಲೇ, ಹೇಗೆ ಅವರನ್ನು ಗೌರವಿಸಬೇಕೆಂಬುದನ್ನು ಮಕ್ಕಳ ಮನಶ್ಶಾಸ್ತ್ರ ನಮಗೆ ತಿಳಿಯ ಹೇಳುತ್ತದೆ. ಸ್ವಾಮೀಜಿಯವರು ಅದನ್ನು ಬದುಕಿನಲ್ಲಿ ಅನುಸರಿಸಿ ನಮಗೆ ತೋರಿಸಿಕೊಟ್ಟರು.

ನಮ್ಮ ಮಕ್ಕಳು ಅಮೆರಿಕದಲ್ಲಿ ಬೆಳೆಯುತ್ತಿದ್ದಾಗ 'ಸೆಸೇ ಸ್ಟ್ರೀಮ್' ಎಂಬ ದೂರದರ್ಶನ ಕಾರ್ಯಕ್ರಮವನ್ನು ನೋಡುತ್ತಿದ್ದರು. ಪ್ರತಿಯೊಬ್ಬ ವ್ಯಕ್ತಿಯೂ, ಪ್ರತಿಯೊಂದು ಕೆಲಸವೂ ಹೇಗೆ ಸಮಾಜದ ಮಾತೃಕೆಯನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತವೆ ಎಂಬುದನ್ನು ಈ ಕಾರ್ಯಕ್ರಮದಲ್ಲಿ ಬಿಂಬಿಸಲಾಗುತ್ತಿತ್ತು. ಎಲ್ಲ ಪ್ರಾಣಿಗಳನ್ನೂ ಗೌರವದಿಂದ ಕಾಣಬೇಕೆಂಬುದನ್ನೂ ಈ ಕಾರ್ಯಕ್ರಮದಲ್ಲಿ ಬೋಧಿಸಲಾಗುತ್ತಿತ್ತು. ಮಕ್ಕಳೊಂದಿಗೆ ನಾನು ಈ ಕಾರ್ಯಕ್ರಮವನ್ನು ನೋಡಿದಾಗ, ನಾನು ಸ್ವಾಮಿ ರಂಗನಾಥಾನಂದರಿಂದ ಕಲಿತದ್ದು ಇದನ್ನೇ; ಅವರ ಪ್ರತಿಯೊಂದು ನಡೆ–ನುಡಿಯಿಂದಲೂ ನಾನು ಕಲಿತದ್ದು ಇದನ್ನೇ ಎನಿಸಿತು. ನನಗೆ ನೆನಪಿದೆ. ಅವರು ನಮ್ಮ ಮನೆಗೆ ಪ್ರವಚನ ನೀಡಲು ಆಗಮಿಸಿದಾಗ ಅಥವಾ ದೆಹಲಿಯ ಶಾರದಾ ಮಹಿಳಾ ಸಮಿತಿಯಲ್ಲಿ ಪ್ರವಚನ ನೀಡುತ್ತಿದ್ದಾಗ ನನ್ನ ಅಮ್ಮ ಅತಿಥಿ ಸತ್ಕಾರದಲ್ಲಿ ನಿರತಳಾಗಿರುತ್ತಿದ್ದಳು. ಅಮ್ಮ ಊಟಕ್ಕೆ ಕುಳಿತುಕೊಳ್ಳುವವರೆಗೆ ಸ್ವಾಮೀಜಿ ಊಟಮಾಡುತ್ತಿರಲಿಲ್ಲ.

ಅನಂತರದ ವರ್ಷಗಳಲ್ಲಿ, ನನ್ನ ತಾಯಿಗೆ ಲಕ್ವ ಹೊಡೆದ ನಂತರ ನಾನು ನನ್ನ ತಂದೆ–ತಾಯಿಗಳ ಜೊತೆ ಕಾಲಕಳೆಯಲು ದೆಹಲಿಗೆ ಹೋಗಿಬರುತ್ತಿದ್ದೆ. ತಂದೆ ವಯೋವೃದ್ಧರಾಗಿದ್ದರು. ನಾನು ಆಗಿಂದಾಗ್ಗೆ ಕೊಲ್ಕತ್ತಾಗೆ ಭೇಟಿಕೊಡುತ್ತಿದ್ದೆ. ಅಲ್ಲಿಗೆ ಹೋದಾಗಲೆಲ್ಲ ಬೇಲೂರು ಮಠಕ್ಕೆ ಹೋಗಿ ಸ್ವಾಮಿ ರಂಗನಾಥಾನಂದರಿಗೆ ಪ್ರಣಾಮಗಳನ್ನು ಅರ್ಪಿಸುತ್ತಿದ್ದೆ. ಅವರು ನನ್ನ ತಲೆಯ ಮೇಲೆ ಕೈ ಇರಿಸಿ "ಅಪ್ಪ ಅಮ್ಮಂದಿರ ಹತ್ತಿರ ಹೋಗು, ಅವರ ಜೊತೆ ಇರು" ಎಂದು ಹೇಳುತ್ತಿದ್ದರು. ೧೯೯೦ರಲ್ಲಿ ನನ್ನ ಏಕೈಕ ಸೋದರ ಭಾಸ್ಕರ್ ಕ್ಯಾನ್ಸರ್‌ಪೀಡಿತನಾಗಿ ಮರಣ ಶಯ್ಯೆಯಲ್ಲಿದ್ದಾಗ ಸ್ವಾಮೀಜಿ ನನ್ನ ಮಾತಾಪಿತೃಗಳಿಗೆ ಕಾಗದ ಬರೆದಿದ್ದರು: "ಭಾಸ್ಕರನಿಗೆ ಹೇಳಿ, ನಾವಿಬ್ಬರೂ ಬಲಶಾಲಿಗಳಾಗಿದ್ದೆವು. ದೆಹಲಿಯ ಮಿಷನ್ ಗ್ರೌಂಡ್ಸ್‌ನಲ್ಲಿ ಫುಟ್‌ಬಾಲ್ ಆಡುತ್ತಿದೆವು. ಈಗ ಆ ದೈಹಿಕ ಶಕ್ತಿ ಇಲ್ಲ. ಮಾತೆಯೊಬ್ಬಳೇ ಆಶ್ರಯದಾತೆ. ಎಡಬಿಡದೆ ಪೂಜ್ಯ ಮಾತೆಯನ್ನು ಸ್ಮರಿಸುವಂತೆ ಭಾಸ್ಕರನಿಗೆ ತಿಳಿಸಿ." ಸ್ವಾಮೀಜಿಯವರ ಈ ಮಾತುಗಳು ನಮಗೆ ಕೇವಲ ಸಾಂತ್ವನದ ನುಡಿಗಳಷ್ಟೇ ಆಗಿರಲಿಲ್ಲ, ನಮ್ಮ ಶಕ್ತಿಮೂಲವಾಗಿದ್ದವು.

ಅವರು ವಿನೋದಪ್ರಿಯರು: ಅವರ ಹಾಸ್ಯಪ್ರಜ್ಞೆ ಸದಾ ಚುರುಕಾಗಿರುತ್ತಿತ್ತು. ಅವರು ಸಣ್ಣ ಪುಟ್ಟ ಸಂಗತಿಗಳಿಗೂ ಗಮನಕೊಡುತ್ತಿದ್ದುದು ವಿಸ್ಮಯಕಾರಿಯಾಗಿತ್ತು. ೧೯೮೪ ಮತ್ತು ೧೯೮೫ರಲ್ಲಿ ಅವರು ಲಾಸ್ ಏಂಜಲಿಸ್‌ಗೆ ಭೇಟಿ ಕೊಟ್ಟಿದ್ದರು. ಆಗ ನಾವು ಅಲ್ಲಿ ವಾಸಿಸುತ್ತಿದ್ದೆವು. ಮತ್ತೊಬ್ಬಳು ಭಕ್ತೆ, ನನ್ನ ಬಾಲ್ಯದ ಗೆಳತಿ ಉಮಾ ಆಹುಜಾ ಅಲ್ಲೇ ಇದ್ದಳು. ಸ್ವಾಮಿ ಸ್ವಾಹಾನಂದ ಮಹಾರಾಜರ ಅನುಮತಿ ಪಡೆದು ನಾನು ಮತ್ತು ಉಮಾ, ಸ್ವಾಮಿ ರಂಗನಾಥಾನಂದರ ದಿವಾನಖಾನೆ ಪ್ರವಚನ ಮತ್ತು ಭೋಜನಕೂಟದ ಕಾರ್ಯಕ್ರಮವೊಂದನ್ನು ರೂಪಿಸಿದೆವು. ನಮ್ಮಲ್ಲಿ ಒಬ್ಬರ ಮನೆಯಲ್ಲಿ ಪ್ರವಚನ ಕಾರ್ಯಕ್ರಮ, ಇನ್ನೊಬ್ಬರ ಮನೆಯಲ್ಲಿ ಭೋಜನ ಕೂಟ ಎಂದು ವ್ಯವಸ್ಥೆ ಮಾಡಿಕೊಂಡಿದ್ದೆವು. ಕಾರುಭರ್ತಿ ಅತಿಥಿಗಳು ಎರಡು ಮನೆಗಳ ನಡುವೆ ಓಡಾಟ ನಡೆಸಿದ್ದರು. ಇದನ್ನು ಕಂಡು ಸ್ವಾಮಿ ರಂಗನಾಥಾನಂದರ ಅಂಬೋಣ ಹೀಗಿತ್ತು: "ಉಮಾ

ಮತ್ತು ಭಾರತಿ ನನ್ನನ್ನು ವಿಭಜಿಸುವ ಮಾರ್ಗ ಕಂಡುಕೊಂಡಿದ್ದಾರೆ." ನಮ್ಮ ಸೂರಿನಡಿ ಇಂಥ ಮಹಾನುಭಾವ ಸ್ವಾಮಿಗಳ ಸಾನ್ನಿಧ್ಯ ನಮಗೆ ಭಾಗ್ಯವಾಗಿತ್ತು.

ಲಾಸ್ ಏಂಜಲಿಸ್‌ಗೆ, ಹಿಂದಿನ ಅನೇಕ ಸಂದರ್ಭಗಳಲ್ಲಂತೆ ಈಚಿನ ಭೇಟಿಗಳಲ್ಲೂ, ಮಕ್ಕಳ ಬಗ್ಗೆ ಸ್ವಾಮೀಜಿಯವರಿಗಿರುವ ಸಹಜ ಪ್ರೀತಿ ಕಂಡು ನಾನು ಅವಾಕ್ಕಾಗಿದ್ದೆ. ದಿವಾನಖಾನೆ ಪ್ರವಚನ ಕಾಲದಲ್ಲೂ ಮಕ್ಕಳು ಇರುತ್ತಿದ್ದರು. ಆದರೆ, ಅಷ್ಟೇನೂ ಹೆಚ್ಚಿನ ಸಂಖ್ಯೆಯಲ್ಲಲ್ಲ. ಸ್ವಾಮಿ ರಂಗನಾಥಾನಂದ ಮಹಾರಾಜರು ಮಕ್ಕಳಿಗೆ ಮುಂದಿನ ಸಾಲಿನಲ್ಲಿ ಕುಳಿತುಕೊಳ್ಳುವಂತೆ ಹೇಳುತ್ತಿದ್ದರು. ನಂತರ ರಾಮಕೃಷ್ಣರ ನೀತಿ ಕಥೆಯೊಂದನ್ನು ತಮ್ಮ ಅದ್ವಿತೀಯ ಶೈಲಿಯಲ್ಲಿ ಹೇಳುತ್ತಿದ್ದರು. ಆನಂತರ, ಪ್ರವಚನ ಸಂವಾದಗಳು ಅಡೆತಡೆ ಇಲ್ಲದೆ ಸಾಗುತ್ತಿದ್ದವು. ಮಕ್ಕಳು ಯಾವಾಗಲೂ ಬಾಯಿ ಮುಚ್ಚಿಕೊಂಡು ಕುಳಿತಿರುವ ಸ್ವಭಾವದವರಲ್ಲ ಎಂಬುದನ್ನು ಹೇಳಬೇಕಾಗಿಲ್ಲ. ಮಕ್ಕಳು ಚಡಪಡಿಸಿದಾಗ ಅತಿಥಿಗಳು ಮುಖ ಸಿಂಡರಿಸಿಕೊಂಡು ಕ್ರೂರ ನೋಟ ಬೀರುತ್ತಿದ್ದರು. ಮುಜುಗರಕ್ಕೊಳಗಾದ ತಂದೆತಾಯಿಗಳೂ ಮಕ್ಕಳನ್ನು ಗದರಿಸುತ್ತಿದ್ದರು. ಅಂಥ ಸಂದರ್ಭಗಳಲ್ಲಿ ಸ್ವಾಮೀಜಿಯವರು ಬೆಳೆದ ಹುಡುಗರನ್ನು ಕರೆದು ತಮ್ಮ ಹತ್ತಿರ ಕೂಡಿಸಿಕೊಳ್ಳುತ್ತಿದ್ದರು. ಇದರಿಂದ ಚಕಿತರಾದ ಉಳಿದ ಮಕ್ಕಳು ಗಲಾಟೆ ನಿಲ್ಲಿಸುತ್ತಿದ್ದರು. ಸ್ವಾಮೀಜಿಯವರು ಮುಜುಗರಪಟ್ಟ ತಂದೆ ತಾಯಿಯರಿಗೆ ಹೇಳುತ್ತಿದ್ದರು: "ನಾವು ನಮ್ಮ ಮನಸ್ಸಿಗೆ ಶಾಂತಿಯುಂಟುಮಾಡುವ ಮಾತುಗಳನ್ನು ಆಲಿಸುತ್ತಿದ್ದಾಗ, ಅಂತಹ ಮನಸ್ಸು ಮಗುವಿನ ಅಳುವಿನಿಂದ ವಿಚಲಿತಗೊಳ್ಳುವುದಿಲ್ಲ. ಮಗು ಮನೆಯ ಒಂದು ಮಾಮೂಲಿ ಅಂಗ. ಅದರಿಂದ ನಾವು ವಿಚಲಿತರಾಗಬಾರದು." ಇಂಥ ಸಂದರ್ಭಗಳಲ್ಲಿ ವಿಚಲಿತರಾಗುವ, ಕೋಪಗೊಳ್ಳುವ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ.

ಅಮೆರಿಕ, ಬೇಲೂರು ಮಠ, ದೆಹಲಿ, ಹೈದರಾಬಾದ್ ಹೀಗೆ ಹಲವಾರು ಸ್ಥಳಗಳಲ್ಲಿ ಅನೇಕ ವರ್ಷಗಳಿಂದ ಸ್ವಾಮೀಜಿಯವರ ಸಾನ್ನಿಧ್ಯವನ್ನು ಅನುಭವಿಸಿರುವ ನಾನು ಅಮೂಲ್ಯವಾದ ಅನುಭವಗಳ ನಿಧಿಯನ್ನೇ ಸಂಪಾದಿಸಿದ್ದೇನೆ. ಈ ಅನುಭವಗಳಿಂದ ನಾನು ಬದುಕುವುದನ್ನು ಕಲಿತಿದ್ದೇನೆ. ಅವರ ಉಪದೇಶಗಳಂತೆ ಬದುಕಿ ಬಾಳುವುದರಲ್ಲಿ ನಾನು ಯಶಸ್ವಿಯಾಗಿದ್ದೇನೆಯೇ? ಯಾವಾಗಲೂ ಯಶಸ್ವಿಯಾಗಿಲ್ಲ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಆದರೆ ಮನುಷ್ಯನ ಮಿದುಳು ಒಂದು ಅದ್ಭುತವಾದ ಅಂಗ– ಹೀಗೆಂದು ಸ್ವಾಮೀಜಿ ಯಾವಾಗಲೂ ಹೇಳುತ್ತಿದ್ದರು. ಅವರು ಉಪದೇಶಿಸಿದ್ದನ್ನೆಲ್ಲ ಪ್ರತಿಯೊಂದನ್ನೂ ಜ್ಞಾಪಕದಲ್ಲಿಟ್ಟುಕೊಂಡಿದ್ದೇನೆ ಎಂದು ನಾನು ಹೇಳಲಿಚ್ಛಿಸುವುದಿಲ್ಲ. ಆದರೆ ಅಗತ್ಯ ಬಿದ್ದಾಗ ನೆನಪು ಮಾಡಿಕೊಂಡು ಅವುಗಳ ನೆರವು ಪಡೆದುಕೊಳ್ಳಬಹುದು ಎಂಬುದು ನನ್ನ ನಂಬಿಕೆ. ಬದುಕಿನಲ್ಲಿ ಸಣ್ಣಸಣ್ಣ ವಿಷಯಗಳೂ ಮುಖ್ಯವಾಗಿದ್ದು, ಅವು ಪ್ರಸ್ತುತವಾಗುತ್ತವೆ. ಅವು ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುತ್ತವೆ ಎಂದು ಸ್ವಾಮೀಜಿ ಹೇಳುತ್ತಿದ್ದರು ಹಾಗೂ ತಮ್ಮ ಕೆಲಸ ಕಾರ್ಯಗಳಿಂದ ಅದನ್ನು ತೋರಿಸಿಕೊಡುತ್ತಿದ್ದರು. ಒಂದು ಉಪನ್ಯಾಸದಲ್ಲಿ ಅವರು ಹೀಗೆ ನುಡಿದಿದ್ದರು: "ಮಹಾನ್ ವ್ಯಕ್ತಿಗಳಲ್ಲಿ ಎರಡು ಬಗೆಯವರಿದ್ದಾರೆ. ಅವರಲ್ಲಿ ಒಬ್ಬರೆದುರು ನೀವು ಕುಬ್ಜರು ಎಂಬ ಭಾವನೆಯುಂಟಾಗಿ ನೀವು ವಿನೀತರಾಗುತ್ತೀರಿ. ಇದು ಒಂದು ಬಗೆ. ಇನ್ನೊಂದು ಬಗೆಯ ಮಹಾನುಭಾವನೆದುರು ನಿಂತಾಗ ನಿಮಗೆ ಉದ್ಧಾರವಾದೆ ಎಂಬ ಉದಾತ್ತ ಭಾವನೆ ಮೂಡುತ್ತದೆ."

ಸ್ವಾಮಿ ರಂಗನಾಥಾನಂದ ಮಹಾರಾಜರು ಎರಡನೆಯ ವರ್ಗಕ್ಕೆ ಸೇರಿದವರು. ಜನರನ್ನು ಉದ್ಧಾರ ಮಾಡುವ ಶಕ್ತಿ ಅವರಲ್ಲಿತ್ತು. ಋಜುತ್ವ ಮತ್ತು ಓಜಸ್ಸುಗಳಿಂದ ಕೂಡಿ ನಾನು ಘನನಾದೆ ಎಂಬ ಭಾವನೆಯನ್ನು ಜನರಲ್ಲಿ ಮೂಡಿಸುವ ಶಕ್ತಿ ಸಾಮರ್ಥ್ಯಗಳು ಸ್ವಾಮಿ ರಂಗನಾಥಾನಂದರಲ್ಲಿ ಇದ್ದವು. ನಿಂತಲ್ಲೇ ನಿಲ್ಲುವುದಕ್ಕಿಂತ, ಹಲವಾರು ಬಾರಿ ಮುಗ್ಗರಿಸಿದರೂ ಆಧ್ಯಾತ್ಮಿಕ ಜೀವನದಲ್ಲಿ ಮುನ್ನುಗ್ಗುವುದು, ಹೆಣಗಾಡುವುದು ಉತ್ತಮ ಎಂದು ಅವರು ಅನೇಕ ಸಲ ಹೇಳುತ್ತಿದ್ದರು. ಅವರು ಎರಡು ಎಲೆಗಳಿದ್ದ ಗಿಡವೊಂದರ ಉದಾಹರಣೆ

ಕೊಡುತ್ತಿದ್ದರು. ನೀರು, ಗೊಬ್ಬರಗಳನ್ನು ಹಾಕಿದ ನಂತರವೂ ಗಿಡದಲ್ಲಿ ಎರಡೇ ಎಲೆಗಳು ಇರುತ್ತಿದ್ದವಂತೆ. ಗಿಡದಲ್ಲಿ ಏನೋ ದೋಷವಿದ್ದಿರಬೇಕು ಎಂದು ಅವರು ಹೇಳುತ್ತಿದ್ದರು. ಒಂದು ಸಲ ನಾನು, ಕೊಂಚ ಲಘುವಾಗಿಯೇ ಆಧ್ಯಾತ್ಮಿಕ ಪ್ರಗತಿಯಲ್ಲಿ ನನ್ನ ಸ್ಥಾನ ಏನಿರಬಹುದು ಎಂದು ಕೇಳಿದೆ. ಅವರು ತಕ್ಷಣ ನಸುನಗುತ್ತಾ ಹೇಳಿದರು: "ಅದನ್ನು ನೀನು ಸಾಧಿಸಿದ್ದರೆ, ಅದರ ಅಗತ್ಯ ನಿನಗೆ ಮನವರಿಕೆಯಾಗಿದ್ದಲ್ಲಿ, ಪರಿಸ್ಥಿತಿಯನ್ನು ತಿದ್ದಿ ಸುಧಾರಿಸಲು ಏನನ್ನಾದರೂ ಮಾಡುವ ಆವಶ್ಯಕತೆ ಇದೆ ಎಂಬ ಪರಿಹರವೂ ನಿನಗೆ ತಿಳಿದಿರಬೇಕು, ನಿನ್ನ ಅರಿವಿಗೆ ಬಂದಿರಬೇಕು." ಅಂದರೆ, ನನ್ನ ಸ್ಥಾನ ಕಂಡುಕೊಳ್ಳುವುದು ನನ್ನ ಕೈಯ್ಯಲ್ಲೇ ಇದೆ. ಅದಕ್ಕೆ ನಾನು ಏನನ್ನಾದರೂ ಮಾಡಬೇಕು ಎನ್ನುವುದು ಅವರ ಮಾತಿನ ತಾತ್ಪರ್ಯವಾಗಿತ್ತು.

ದೆಹಲಿಯ ದಿನಗಳಲ್ಲಿ ನಡೆದ ಒಂದು ಘಟನೆ. ಒಂದು ಶನಿವಾರ ಬೆಳಿಗ್ಗೆ ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಪ್ರವಚನದ ನಂತರ ಸ್ವಾಮೀಜಿ ಕೆಲವರು ತರುಣ ವಿದ್ಯಾರ್ಥಿಗಳೊಂದಿಗೆ ಅನೌಪಚಾರಿಕವಾಗಿ ಮಾತನಾಡುತ್ತಿದ್ದರು. ಸಾಮಾಜಿಕ ಸಮಸ್ಯೆಗಳನ್ನು, ಅಸಮಾನತೆಯನ್ನು ಸೃಷ್ಟಿಸುತ್ತಿರುವ ಧರ್ಮದ ಬಗ್ಗೆ ಕೆಲವರು ಪ್ರಶ್ನೆಗಳನ್ನೆತ್ತಿದರು. ಅವರು ನೀಡಿದ ಉತ್ತರ ನನ್ನ ಆಧ್ಯಾತ್ಮಿಕ ಗ್ರಂಥದಲ್ಲಿ ಒಂದು ಆಧಾರಸೂತ್ರವಾಗಿ ಉಳಿದುಕೊಂಡಿದೆ. ಅವರು ಹೇಳಿದ್ದು: "ನೆನಪಿಡಿ, ನೀತಿ ನಿಯಮಗಳಿಲ್ಲದೆ, ನೀತಿಸೂತ್ರಗಳಿಲ್ಲದೆ ಧರ್ಮ ಉಳಿಯಲಾರದು. ಆದರೆ, ಧರ್ಮವಿಲ್ಲದೆಯೂ ನೀತಿನಿಯಮಗಳು ಉಳಿಯಬಲ್ಲವು, ಉಳಿದಿರುತ್ತವೆ."

ನಮ್ಮ ನಡುವೆ ಇದ್ದ ಎಂಥ ದಿವ್ಯ ವ್ಯಕ್ತಿ! ನಮ್ಮೊಡನಿದ್ದು, ನಮ್ಮೊಡನೆ ನಡೆದಾಡಿಕೊಂಡಿದ್ದ ಮಹಾನುಭಾವರು ಸ್ವಾಮಿ ರಂಗನಾಥಾನಂದರು. ಅವರನ್ನು ನೋಡಿ, ಮಾತಾಡಿಸಿ ಅವರ ಅನುಗ್ರಹಕ್ಕೊಳಗಾದವರು ಒಬ್ಬಿಬ್ಬರಲ್ಲ, ಅಸಂಖ್ಯಾತ ಮಂದಿ. ಅವರು ಭಾರತವನ್ನು ಪ್ರೀತಿಸಿದರು. ಅವರು ಭಾರತೀಯರೆಂದು ನಮಗೆ ಹೆಮ್ಮೆ. ಆದಾಗ್ಯೂ ಅವರೊಂದು ವಿಶ್ವಚೇತನ. ವಿಶ್ವದ ಯಾವುದೇ ಭಾಗವೂ ಅವರಿಗೆ ತೌರುಮನೆಯೇ ಆಗಿರುತ್ತಿತ್ತು. ವಿಶ್ವದ ಮಹಾನ್ ನಾಯಕರುಗಳೊಂದಿಗೆ, ಹಲವಾರು ಜನರೊಂದಿಗೆ, ಬದುಕಿನ ವಿವಿಧ ಕ್ಷೇತ್ರಗಳ, ವಿವಿಧ ನಂಬಿಕೆಗಳ ಜನರೊಂದಿಗೆ, ವಿನಯವಂತರಲ್ಲಿ ವಿನಯವಂತರಾದವರೊಂದಿಗೆ ಅವರ ಒಡನಾಟವಿತ್ತು. ಅವರ ದೃಷ್ಟಿಯಲ್ಲಿ ಯಾವ ಕೆಲಸ ಕಾರ್ಯವೂ ಕ್ಷುಲ್ಲಕವಾಗಿರಲಿಲ್ಲ. ದಯೆ, ಕಾರುಣ್ಯಗಳಿಲ್ಲದ ಹದಗೊಂಡ ಕರ್ಮಯೋಗವನ್ನು ಆಚರಿಸಬೇಕೆನ್ನುವುದು ಅವರ ಉಪದೇಶವಾಗಿತ್ತು. ಅವರು ಹಾಗೆಯೇ ಬದುಕಿದರು. ಶ್ರೀ ರಾಮಕೃಷ್ಣರ ಮಹಾನ್ ಭಕ್ತನ ವ್ಯಕ್ತಿತ್ವವನ್ನು ಸಮಗ್ರವಾಗಿ ನಿರೂಪಿಸುವುದು ನನ್ನಿಂದ ಸಾಧ್ಯವಾಗಿದೆಯೋ ಇಲ್ಲವೋ ತಿಳಿಯದು. ಮಾತುಗಳು ಏನೇನೂ ಸಾಲದು. ವೈಭವೀಕರಣವನ್ನು ಅವರು ಇಷ್ಟಪಡುತ್ತಿರಲಿಲ್ಲ. ಆದ್ದರಿಂದ ನಾನು ಇದನ್ನು ಶ್ರೀರಾಮಕೃಷ್ಣ ಮತ್ತು ಪೂಜ್ಯಮಾತೆಯ ಪದತಲದಲ್ಲಿ ಸಮರ್ಪಿಸುತ್ತಿದ್ದೇನೆ.

* * * *

# ೧೧೧. ಅವರ ವೈಯಕ್ತಿಕ ಚಿಂತನೆಗಳು ಮತ್ತು ಭಾವನೆಗಳು

–ಇ. ಸುರೇಶ್‌ಕುಮಾರ್*

ಮಹಾರಾಜರ ದೇಹಾವಸಾನಕ್ಕೆ ಹತ್ತು ದಿನ ಮೊದಲು, ಅಂದರೆ ೨೦೦೫ರ ಏಪ್ರಿಲ್ ೪ರಂದು ನಾನು ಕೋಲ್ಕತ್ತೆಗೆ ಭೇಟಿಕೊಟ್ಟಿದ್ದೆ. ನಾನು, ನನ್ನ ಹೆಂಡತಿ, ಇಬ್ಬರು ಮಕ್ಕಳು– ನಾವೆಲ್ಲ ಬೇಲೂರಿನಲ್ಲೇ ತಂಗಿದ್ದೆವು. ಕಾಮರ್‌ಪುಕುರ್, ಜಯರಾಂಬಾಟಿ, ದಕ್ಷಿಣೇಶ್ವರ, ಬೇಲೂರು ವಸ್ತು ಸಂಗ್ರಹಾಲಯ– ಈ ಸ್ಥಳಗಳಿಗೆ ಹೋಗಿ ಬರುವಂತೆ ಮಹಾರಾಜ್ ನಮಗೆ ತಿಳಿಸಿದ್ದರು. ನಮ್ಮ ಈ ಪ್ರವಾಸಕ್ಕೆ ವಾಹನ ಸೌಕರ್ಯ ವ್ಯವಸ್ಥೆ ಮಾಡುವಂತೆ ಸುದರ್ಶನ ಮಹಾರಾಜರಿಗೆ ಹೇಳಿದ್ದರು.

ಇದಾದನಂತರ, ಸುಮಾರು ಎರಡು ಗಂಟೆ ಕಾಲ ನಾವು ಮಹಾರಾಜರೊಂದಿಗಿದ್ದೆವು. ಈ ಭೇಟಿ ಕಾಲದಲ್ಲಿ ಬೇರೆ ಯಾರಿಗೂ ಪ್ರವೇಶಾವಕಾಶವಿರಲಿಲ್ಲ. ಏಕೆಂದರೆ, ನಾನು ಅವರ ಸೋದರಸಂಬಂಧಿ ಹಾಗೂ ದೂರದ ಕೇರಳದಿಂದ ಬಂದವನು. ಅವರು ಮಲೆಯಾಳಂ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಾತನಾಡಿದರು. ನನ್ನ ಹೆಂಡತಿ, ಮಕ್ಕಳನ್ನು ಆಶೀರ್ವದಿಸಿದರು.

ಹದಿನಾಲ್ಕು ವರ್ಷದ ನನ್ನ ಮಗನನ್ನು ಅವರು ಕೇಳಿದ್ದರು: "ನಿನಗೆ ಈಜು ಬರುವುದೆ?" ನಂತರ ನನ್ನತ್ತ ತಿರುಗಿ, "ಇಲ್ಲವಾದಲ್ಲಿ ಮೊದಲು ಅವನಿಗೆ ಈಜು ಕಲಿಸು" ಎಂದರು. ನಂತರ ನನ್ನ ಮಗನಿಗೆ ಹೇಳಿದರು: "ದೇವಸ್ಥಾನಕ್ಕೆ ಹೋಗ್ತಾ ಇರು. ಚೆನ್ನಾಗಿ ಓದು. ಸಂಸ್ಕೃತವನ್ನು ಹೆಚ್ಚಾಗಿ ಅಭ್ಯಾಸ ಮಾಡು. ಸಂಸ್ಕೃತ ಎಲ್ಲ ಭಾಷೆಗಳ ತಾಯಿ." ಇದಲ್ಲದೆ ಅವರು ನನ್ನ ಮಗನಿಗೆ ಉಪದೇಶಿಸಿದರು: "ದೀಕ್ಷಾಬದ್ಧನಾಗು. ಧ್ಯಾನ ಮಾಡು. *ಗೀತೆ*ಯನ್ನು ಬಾಯಿಪಾಠ ಮಾಡು."

ಕೇರಳದ ಶಾಲೆಗಳಲ್ಲಿ *ಗೀತೆ*ಯನ್ನು ಕಲಿಸಲಾಗುತ್ತಿದೆ ಎನ್ನುವುದನ್ನು ತಿಳಿದು ಅವರು ಬಹಳ ಸಂತೋಷಪಟ್ಟರು. '*ಗೀತೆ*'ಯ ಬೋಧನೆಗೆ ಒಂದು ಪೀರಿಯಡ್ ಮೀಸಲಿತ್ತು. ಮಕ್ಕಳು '*ಗೀತೆ*' ಕಲಿಯುತ್ತಿರುವ ವಿಷಯ ಅವರಿಗೆ ಬಹಳ ಖುಷಿಯುಂಟುಮಾಡಿತ್ತು. ಅದೇ ಮಹಾರಾಜರ ಜೊತೆ ಕೊನೆಯ ಮಾತುಕತೆ. ತಂಗಮ್ ಮಹಾರಾಜರ ಸೋದರ ಸೊಸೆ. ಅವಳ ತಾಯಿ ಕೋಚು ಕುಟ್ಟಿ ಅಮ್ಮ ಮಹಾರಾಜರ ಅಕ್ಕ. ಥಂಕಮ್ ಮಹಾರಾಜರಿಗೆ ತುಂಬ ಆಪ್ತಳಾಗಿದ್ದಳು. ಮಹಾರಾಜರು ತಪ್ಪದೇ ಅವಳಿಗೆ ಕಾಗದ ಬರೆಯುತ್ತಿದ್ದರು. ಮನೆಯ ಆಳು–ಕಾಳು, ತೋಟದ ಮಾಲಿ ಸೇರಿದಂತೆ ಎಲ್ಲರ ಯೋಗಕ್ಷೇಮ ವಿಚಾರಿಸುತ್ತಿದ್ದರು.

ತ್ರಿಶೂರಿನಿಂದ ಯಾರಾದರೂ ಕೋಲ್ಕತ್ತೆಗೆ ಭೇಟಿ ಕೊಟ್ಟಾಗಲೆಲ್ಲ ಅವರು ಕೇಳುತ್ತಿದ್ದ ಮೊದಲ ಪ್ರಶ್ನೆ: "ಮನಾಲಿ ನದಿಯಲ್ಲಿ ನೀರು ಎಷ್ಟಿದೆ?" ನದಿಯಲ್ಲಿ ಸಮೃದ್ಧವಾಗಿ ನೀರಿದೆಯೇ ಎಂದು ಯಾವಾಗಲೂ ಕೇಳುತ್ತಿದ್ದರು.

ಮಹಾರಾಜರ ಹೆಸರಿನಲ್ಲಿ ತ್ರಿಶೂರಿನಲ್ಲಿ ವೇದಶಾಲೆಯೊಂದನ್ನು ಪ್ರಾರಂಭಿಸುವ ಇರಾದೆ ನಮಗಿತ್ತು. ಆ ಸಲುವಾಗಿ, ೨೦೦೩ರ ಜೂನ್ ೨೬ರಂದು ನಾನು ತ್ರಿಶೂರ್ ಪೋಸ್ಟ್‌ಮಾಸ್ಟರ್ ಶ್ರೀ ಉನ್ನಿಕೃಷ್ಣನ್ ಅವರ ಜೊತೆಗೂಡಿ ಮಹಾರಾಜರನ್ನು ಭೇಟಿಯಾದೆ. "ನನ್ನ ಕಾಲಾನಂತರ ನೀನು ಆ ಬಗ್ಗೆ ಯೋಚಿಸಬಹುದು. ನೀನು ಈ ವಿಚಾರದಲ್ಲಿ ಮುಂದುವರಿಯಬಹುದು. ಆದರೆ ಶಾಲೆಯಲ್ಲಿ ಜಾತಿ ಮತ ವರ್ಣಗಳ ಭೇದಭಾವ

---

* ಸ್ವಾಮಿ ರಂಗನಾಥಾನಂದರ ತಮ್ಮ ಗೋವಿಂದನ್ ಕುಟ್ಟಿಯವರ ಪುತ್ರ.

ಇಲ್ಲದಂತೆ ಎಲ್ಲರಿಗೂ ಅವಕಾಶವಿರಬೇಕು. ಹಾಗೆ ಮಾಡಿದಲ್ಲಿ ನನ್ನ ಆಶೀರ್ವಾದವಿರುತ್ತದೆ." ಸ್ವಾಮಿ ರಂಗನಾಥಾನಂದ ಆಧ್ಯಾತ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಕೇಂದ್ರದ ಅಧ್ಯಕ್ಷರಾದ ಡಾ॥ ಟಿ.ಐ.ರಾಧಾಕೃಷ್ಣನ್ ಅವರ ಮಾರ್ಗದರ್ಶನದಲ್ಲಿ ಈಗ ಶಾಲೆ ಚೆನ್ನಾಗಿ ನಡೆಯುತ್ತಿದೆ.

ಒಮ್ಮೆ ಮಹಾರಾಜ್ ನನಗೆ ಹೀಗೆ ಹೇಳಿದರು: "ನೀನು ವಿಮಾ ಇಲಾಖೆಯಲ್ಲಿ ಕೆಲಸ ಮಾಡ್ತಿದಿಯೆ. ನೀನು ವಿಮಾ ವ್ಯಕ್ತಿ. ನಿನ್ನ ಕೆಲಸದಲ್ಲಿ ತಜ್ಞನೇ ಇರಬೇಕು" ಈ ಮಾತುಗಳನ್ನಾಡಿದವರೇ, *ಗೀತೆಯ* "ಯೋಗಃ ಕರ್ಮಸು ಕೌಶಲಂ" ಸಾಲನ್ನು ಉಲ್ಲೇಖಿಸಿದರು. ಅದು ಅವರು ನನಗಿತ್ತ ಸಂದೇಶ. ಅವರು ಆಗಾಗ ಹೇಳುತ್ತಿದ್ದರು: "ಮಾನವಸೇವೆ ಮಾಡು. ನರಸೇವೆಯೇ ನಾರಾಯಣನ ಸೇವೆ. ಆದ್ದರಿಂದ ಜನಸೇವೆ ಮಾಡು." ಕೋಲ್ಕತ್ತೆಗೆ ನಾನು ಕೊನೆಯ ಸಲ ಭೇಟಿಯಾದಾಗ ಅವರಿತ್ತ ಸಂದೇಶವಿದು.

ವರ್ಷ: ೧೯೪೮. ಮಹಾರಾಜ್ ಅವರ ತಂದೆ ಕಾಯಿಲೆ ಬಿದ್ದಿದ್ದರು. ಈ ಸುದ್ದಿಯನ್ನು ಸ್ವಾಮೀಜಿಗೆ ಯಾರೂ ತಿಳಿಸಿರಲಿಲ್ಲ. ಅವರು ದಿಢೀರನೆ ಬಂದರು. ಅವರ ತಂದೆ ಆಗ ಮರಣಶಯ್ಯೆಯಲ್ಲಿದ್ದರು. ಮಹಾರಾಜ್ ಕರಾಚಿಯಲ್ಲೋ ಬೇರೆಲ್ಲೋ ಇದ್ದರು. ತಕ್ಷಣ ಅವರಿಗೆ ಏನೋ ಹೊಳೆದಿರಬೇಕು. ವಿಮಾನದಲ್ಲಿ ಕೊಚ್ಚಿಗೆ ಬಂದರು. ಕೊನೆಯುಸಿರಿನವರೆಗೆ ತಂದೆಯ ಜೊತೆ ಇದ್ದರು. ಅದೊಂದು ನಮಗೆಲ್ಲ ಅಚ್ಚರಿಯ ಸಂಗತಿಯೇ ಸರಿ. ತಂದೆಗೆ ಕಾಯಿಲೆ ಎಂದು ಯಾರೂ ಅವರಿಗೆ ಸಮಾಚಾರ ಅರುಹಿರಲಿಲ್ಲ. ತಂದೆಗೆ ಗಂಗಾಜಲ ಕುಡಿಸಿದರು. ಪ್ರಸಾದ ತಿನ್ನಿಸಿದರು. ನಮಸ್ಕಾರ ಮಾಡಿದರು. ಇದೆಲ್ಲ ಆದ ನಂತರ ಒಂದೆರಡು ಗಂಟೆ ಕಾಲ ಇದ್ದು ತೆರಳಿದರು.

೧೯೬೭ರಲ್ಲಿ ಅವರ ತಾಯಿ ಸ್ವರ್ಗಸ್ಥರಾದರು. ಆಕೆಯ ಹೆಸರು ಲಕ್ಷ್ಮೀ ಕುಟ್ಟಿ ಅಮ್ಮ. ತುಂಬ ಸಂಪ್ರದಾಯಸ್ಥೆ, ಧರ್ಮಿಷ್ಠೆ ಮತ್ತು ದಾನಶೀಲೆ. ಆಕೆ ಪಳಿಯಾತ್ ಕೃಷ್ಣನ್ ವಳಿಯಾಚನ್ ಅವರ ಏಕೈಕ ಪುತ್ರಿಯಾಗಿದ್ದರು. ಆಕೆ ತ್ರಿಶೂರಿನ ಶಾರದಾ ಮಠಕ್ಕೆ ಭೇಟಿ ಕೊಡುತ್ತಿದ್ದರು.

* * * *

## ೧೧೨. ಡಲ್ಲಾಸ್‌ನಲ್ಲಿ ರಂಗನಾಥಾನಂದಜೀ

–ಭೂಷಣ್ ಡಿ. ಬಜಾಜ್*

ನನ್ನ ತಂದೆ ಕೆಲಸದಿಂದ ನಿವೃತ್ತಿ ಹೊಂದಿದ್ದು ೧೯೪೦ರಲ್ಲಿ. ನಂತರ ಹೆಚ್ಚು ಕಾಲ ನನ್ನ ಜೊತೆಯಲ್ಲೇ ಇದ್ದರು. ನಾನು, ನನ್ನ ತಾಯಿಯನ್ನು ಕಳೆದುಕೊಂಡಾಗ ನಾನಿನ್ನೂ ಎರಡು ತಿಂಗಳ ಹಸುಗೂಸು. ನನ್ನ ತಂದೆ, ಸಾಧು–ಸನ್ಯಾಸಿಗಳ ಕಥೆಗಳನ್ನು ನನಗೆ ಹೇಳುತ್ತಿದ್ದರು. ನಾನು ಧ್ರುವ, ಪ್ರಹ್ಲಾದರ ಸಮರ್ಪಣ ಮನೋಭಾವದಿಂದ ಪ್ರಭಾವಿತನಾಗಿದ್ದೆ.

೧೯೪೯ರಲ್ಲಿ ನಾನು ಬನಾರಸ್‌ಗೆ ಹೋಗುತ್ತಿದ್ದೆ, ನನ್ನ ಅಕ್ಕನೊಡನೆ ಬೇಸಿಗೆಯ ರಜೆಯನ್ನು ಕಳೆಯಲು. ಕಾನ್ಪುರ ನಿಲ್ದಾಣದನಂತರ ವೃದ್ಧರೊಬ್ಬರು ನಮ್ಮ ಕಂಪಾರ್ಟ್‌ಮೆಂಟಿಗೆ ಬಂದು ನನ್ನ ಬದಿ ಆಸೀನರಾದರು. ಅವರೊಡನೆ ಮಾತನಾಡುತ್ತಾ ಇದ್ದಾಗ, ಆತ ನನ್ನನ್ನು ಕೇಳಿದರು: ಸ್ವಾಮಿ ವಿವೇಕಾನಂದರ *Sure Ways of Success in Life and Good Realisation.* ಗ್ರಂಥವನ್ನು ಓದಿದ್ದೀಯ ಎಂದು ಕೇಳಿದರು. ಇದಕ್ಕೆ ಮುನ್ನ ನಾನು ಸ್ವಾಮೀಜಿಯವರ ಹೆಸರನ್ನೇ ಕೇಳಿರಲಿಲ್ಲ. ದೆಹಲಿಗೆ ವಾಪಸಾದ ನಂತರ ನಾನು ಸುಪ್ರಸಿದ್ಧ ಪುಸ್ತಕ ಮಳಿಗೆ ಯೊಂದಕ್ಕೆ ಹೋಗಿ ಸ್ವಾಮಿ ವಿವೇಕಾನಂದರ 'ಸಮಗ್ರ ಕೃತಿಗಳು' ಮೂರು ಸಂಪುಟಗಳನ್ನು ಖರೀದಿಸಿದೆ. ರೈಲು ಪ್ರಯಾಣದ ಮಹನೀಯ ಸಹಪಯಣಿಗ ಹೇಳಿದ್ದ ಪುಸ್ತಕ ನನಗೆ ಸಿಗಲಿಲ್ಲ. ಆದ್ದರಿಂದ ಲಭ್ಯವಿದ್ದುದನ್ನು ನಾನು ಖರೀದಿಸಿದ್ದೆ.

ದೈವೀ ಮಾರ್ಗಗಳು ನಿಗೂಢ. ಬಹುಶಃ ಒಂದು ತಿಂಗಳು ಕಳೆದಿರಬಹುದು. ತತ್ವಶಾಸ್ತ್ರದ ಎಂ.ಎ. ವಿದ್ಯಾರ್ಥಿಯೊಬ್ಬ ನಾನು ಪತಂಜಲಿಯ ಯೋಗಸೂತ್ರ ಕುರಿತ ಪುಸ್ತಕಕ್ಕಾಗಿ ವಿಚಾರಿಸುತ್ತಿದ್ದುದನ್ನು ಗಮನಿಸಿದ. ನಾನು ರಾಮಕೃಷ್ಣ ಮಿಷನ್ನಿಗೆ ಹೋಗುವುದು ಉಚಿತ ಎಂದು ಆತ ಸಲಹೆ ಮಾಡಿದ. ೧೯೪೯ರ ನವೆಂಬರ್ ೨೦ರಂದು ನನ್ನ ಸುದೈವವೇ ನನ್ನನ್ನು ರಾಮಕೃಷ್ಣ ಮಿಷನ್ನಿಗೆ ಕರೆದೊಯ್ದಿತು ಎನ್ನಬಹುದು. ನಾನು ನೇರವಾಗಿ ಪೂಜಾಸ್ಥಳಕ್ಕೆ ಹೋಗಿ ಸ್ವಲ್ಪ ಸಮಯ ಧ್ಯಾನ ಮಾಡಿದೆ; ಸ್ವಾಮಿ ರಂಗನಾಥಾನಂದರ ಭಾನುವಾರ ಪ್ರವಚನಕ್ಕಾಗಿ ಪೂಜಾಸ್ಥಳ ಮುಚ್ಚುವವರೆಗೆ ಧ್ಯಾನ ಮಾಡಿದೆ. ಒಂದು ಗಂಟೆ ಕಾಲದ ಪ್ರವಚನದ ನಂತರ ನಾನು ಕೆಲವು ನಿಮಿಷಗಳ ಕಾಲ ಸ್ವಾಮೀಜಿಯವರನ್ನು ಭೇಟಿಮಾಡಿದೆ. ನನ್ನ ಪ್ರಶ್ನೆಗಳಿಗೆ ಉತ್ತರಿಸುತ್ತಾ ಅವರು, ಸ್ನೇಹಿತರು ನನ್ನ ಮಾತು–ಅಭಿಪ್ರಾಯಗಳನ್ನು ಒಪ್ಪುತ್ತಾರೆಯೇ ಇಲ್ಲವೇ ಎಂದು ತಲೆಕೆಡಿಸಿಕೊಳ್ಳದೆ ನನ್ನ ಆಧ್ಯಾತ್ಮಿಕ ಆಚರಣೆಯನ್ನು ಮುಂದುವರಿಸುವಂತೆ, ಸಾಧ್ಯವಾದಾಗಲೆಲ್ಲ ಮಿಷನ್ನಿಗೆ ಭೇಟಿ ಕೊಡುವಂತೆ ತಿಳಿಸಿದರು. ನಾನು ಕೊನೆಯ ಪಕ್ಷ ವಾರಕ್ಕೆ ಎರಡು ಬಾರಿಯಾದರೂ ಹೋಗುತ್ತಿದ್ದೆ. ಕಿರಿಯ ಸ್ವಾಮೀಜಿಯವರು ಹೇಳಿದ ಕೆಲಸವನ್ನು ಮಾಡಲು ಮುಂದಾಗುತ್ತಿದ್ದೆ.

೧೯೫೧ರಲ್ಲಿ ಕಾಲೇಜು ಶಿಕ್ಷಣ ಮುಗಿದು ನಾನು ಪದವೀಧರನಾದೆ. ಆನಂತರ ಆಗಿಂದಾಗ್ಗೆ ಮಿಷನ್ನಿಗೆ ಹೋಗಲಾರಂಭಿಸಿದೆ. ೧೯೫೧ರ ನವೆಂಬರಿನಲ್ಲಿ ನನಗೊಂದು ಉದ್ಯೋಗ ಸಿಕ್ಕ ನಂತರ ಸ್ನಾತಕೋತ್ತರ ಶಿಕ್ಷಣಕ್ಕಾಗಿ ಸಂಜೆ ಕಾಲೇಜನ್ನು ಸೇರಿಕೊಂಡೆ. ಇದರಿಂದಾಗಿ ನಾನು ಮಿಷನ್ನಿಗೆ ಹೋಗುವುದು ಕಮ್ಮಿಯಾಯಿತು. ಆದರೆ, ೧೯೫೩ರಲ್ಲಿ ದೆಹಲಿ ಮಠಕ್ಕೆ ಭೇಟಿ ನೀಡಿದ ರಾಮಕೃಷ್ಣ ಮಿಷನ್ನಿನ ಆಗಿನ ಅಧ್ಯಕ್ಷರಾದ ಸ್ವಾಮಿ

* ಅಮೆರಿಕಾದ ಟೆಕ್ಸಾಸ್ ನಿವಾಸಿ ಭಕ್ತರು.

ಶಂಕರಾನಂದರನ್ನು ಭೇಟಿ ಮಾಡಿದೆ. ೧೯೬೩ರಲ್ಲಿ ಉನ್ನತ ವ್ಯಾಸಂಗಕ್ಕಾಗಿ ಅಮೆರಿಕಕ್ಕೆ ಬಂದೆ. ದೆಹಲಿಯಿಂದ ನಿರ್ಗಮಿಸುವ ಮುನ್ನ ಬೇಲೂರು ಮಠಕ್ಕೆ ಹೋಗಿದ್ದೆ. ಭರತ್ ಮಹಾರಾಜ್‌ರನ್ನು ಭೇಟಿ ಮಾಡಿದೆ. ಆಗ ಸ್ವಾಮಿ ರಂಗನಾಥಾನಂದರು ಅಲ್ಲಿರಲಿಲ್ಲ.

೧೯೬೭ರ ಮೇನಲ್ಲಿ ನನ್ನ ಶಿಕ್ಷಣ ಮುಗಿದು , ಕಾಲೇಜೊಂದರಲ್ಲಿ ಅಧ್ಯಾಪನ ಆರಂಭಿಸಿದೆ. ೧೯೬೯ರ ಜನವರಿಯಲ್ಲಿ ಸಹೋದ್ಯೋಗಿಯೊಬ್ಬರ (ಮಿಸೆಸ್ ಲ್ಯೂಸಿಲೆ ಕರಿ) ಮುಖೇನ ಸ್ವಾಮಿ ರಂಗನಾಥಾನಂದರ ಭಕ್ತರೊಬ್ಬರಿಂದ (ಶ್ರೀ ಜಗದೀಶ್ ಪ್ರಭಾಕರ) ಒಂದು ಸಂದೇಶ ಬಂತು. ಸ್ವಾಮಿ ರಂಗನಾಥಾನಂದರನ್ನು ಪ್ರವಚನ ಪ್ರವಾಸಕ್ಕಾಗಿ ಟೆಕ್ಸಾಸ್‌ಗೆ ಕರೆಸಿಕೊಳ್ಳುವುದರಲ್ಲಿ ನನಗೆ ಆಸಕ್ತಿ ಉಂಟೆ ಎಂದು ತಿಳಿಯುವುದು ಸಂದೇಶದ ಸಾರಾಂಶ. ನಾನು ಹೃತ್ಪೂರ್ವಕ ಒಪ್ಪಿಕೊಂಡೆ. ಪ್ರವಚನದ ಸ್ಥಳಗಳನ್ನು ಗೊತ್ತುಪಡಿಸಲು ನಾವು ಶ್ರದ್ಧೆಯಿಂದ ಕೆಲಸಮಾಡಿದೆವು. ಪೌರಾತ್ಯ ಧರ್ಮ ಮತ್ತು ವೇದಾಂತ ತತ್ತ್ವಶಾಸ್ತ್ರದಲ್ಲಿ ಆಸಕ್ತಿಯುಳ್ಳ ಸುಮಾರು ಸಾವಿರ ಮಂದಿಗೆ ಆಮಂತ್ರಣ ಪತ್ರ ಕಳುಹಿಸಿಕೊಟ್ಟೆವು.

ನನ್ನ ಹೆಂಡತಿ, ಸುದೇಶ್, ೧೯೫೫ರಲ್ಲಿ, ಸಿಮ್ಲಾದ ಟೀಚರ್ಸ್ ಕಾಲೇಜಿನಲ್ಲಿ ಓದುತ್ತಿದ್ದಾಗ ಸ್ವಾಮಿ ರಂಗನಾಥಾನಂದರನ್ನು ಭೇಟಿಮಾಡಿದ್ದಳು. ಸಂದರ್ಭ: ಕಾಲೇಜಿನಲ್ಲಿ ಪ್ರವಚನ ನಡೆದ ಒಂದು ದಿವಸ. ಕಾಲೇಜಿನ ಪ್ರಾಂಶುಪಾಲರು ಆ ದಿನ ಸುದೇಶ್‌ಗೆ ಊಟದ ವ್ಯವಸ್ಥೆ ಮಾಡುವ ಕೆಲಸವನ್ನು ವಹಿಸಿದ್ದರು.

ಟೆಕ್ಸಾಸ್‌ನಲ್ಲಿ ಒಂದು ವಾರ ಕಾಲದ ಪ್ರವಚನ ಪ್ರವಾಸಕ್ಕಾಗಿ ಸ್ವಾಮಿ ರಂಗನಾಥಾನಂದರು ೧೯೬೯ರ ಮಾರ್ಚ್ ೮ರಂದು ಡಲ್ಲಾಸ್‌ಗೆ ಆಗಮಿಸಿದರು. ಅವರು ಊಟತಿಂಡಿಯಲ್ಲಿ ಕಟುನಿಟ್ಟಾದ ನಿಯಮಗಳನ್ನು ಪಾಲಿಸುತ್ತಿದ್ದರು. ಏಕೆಂದರೆ ಅವರ ಹೊಟ್ಟೆ ಬಹಳ ಸೂಕ್ಷ್ಮವಾಗಿತ್ತು. ಈ ಬಗ್ಗೆ ನಮಗೆ ಮುಂಚಿತವಾಗಿಯೇ ಶಿಕಾಗೋದ ವಿವೇಕಾನಂದ ವೇದಾಂತ ಸಂಘದಿಂದ ತಿಳಿವಳಿಕೆ ಬಂದಿತ್ತು. ಅವರ ಸಲಹೆಯಂತೆಯೇ ಅವರು ಬಯಸಿದ ಊಟ ತಿಂಡಿಗಳನ್ನು ಬಡಿಸಲಾಯಿತು. ಭಕ್ತರೂ ತಮ್ಮ ಜೊತೆಯಲ್ಲೇ ಊಟ–ತಿಂಡಿ ಮಾಡುವಂತೆ ಅವರು ಆಗ್ರಹಪಡಿಸಿದರು. ಸ್ವಾಮೀಜಿಯವರಿಗೆ ಓದು ಬಲು ಪ್ರಿಯ. ಜೊತೆಯಲ್ಲಿ ತಂದಿದ್ದ ಗ್ರಂಥಗಳನ್ನು ಓದುವುದರಲ್ಲಿ ಮಗ್ನರಾಗಿರುತ್ತಿದ್ದರು. ನಮ್ಮ ಮಕ್ಕಳ ಜೊತೆಯಲ್ಲೂ ಸ್ವಲ್ಪ ಕಾಲ ಕಳೆಯುತ್ತಿದ್ದರು.

ಮಾರ್ಚ್ ೧೨ರಂದು ಸ್ವಾಮೀಜಿ ಟೆಕ್ಸಾಸ್‌ನ ಹೂಸ್ಟನ್ನಿಗೆ ತೆರಳಿದರು. ಅಲ್ಲಿ ದಿನವಿಡೀ ಪ್ರವಚನ ಕಾರ್ಯಕ್ರಮವಿತ್ತರು. ಮಾರ್ಚ್ ೧೫ರಂದು ಶಿಕಾಗೋಗೆ ತೆರಳಿದರು. ಇದರೊಂದಿಗೆ ಟೆಕ್ಸಾಸ್‌ನ ಮೊದಲ ಪ್ರವಚನ ಪ್ರವಾಸ ಮುಕ್ತಾಯಗೊಂಡಿತು. ಡಲ್ಲಾಸ್‌ನಲ್ಲಿದ್ದಾಗ ಅವರು ಕೆಲವು ಭಕ್ತರ ಕೋರಿಕೆಯಂತೆ ಅವರ ಮನೆಗಳಿಗೆ ಹೋಗಿದ್ದರು. ಈ ಭಕ್ತರು ಅವರ ಬಗ್ಗೆ ಕೇಳಿ ತಿಳಿದಿದ್ದರು. ಈಗ ಅವರ ದರ್ಶನವೂ ಆಯಿತು. ಸ್ವಾಮೀಜಿ ನಡೆ–ನುಡಿಯಲ್ಲಿ ಸರಳ, ಸಾಧಾರಣ. ಹೆಚ್ಚುಕಟ್ಟುಕಟ್ಟಳೆ ಮಾಡುತ್ತಿರಲಿಲ್ಲ. ಅವರ ದಿವ್ಯಪ್ರೇಮ ಅನೇಕ ಹೃದಯಗಳನ್ನು ಗೆದ್ದಿತ್ತು. ಮಕ್ಕಳೂ ಸಹ ಸರಾಗವಾಗಿ ಅವರೊಂದಿಗೆ ಬೆರೆಯುತ್ತಿದ್ದರು. ಸ್ವಾಮೀಜಿ ಅಲ್ಲಿಂದ ಮೆಕ್ಸಿಕೋ ಮತ್ತು ಲ್ಯಾಟಿನ್ ಅಮೆರಿಕಾಕ್ಕೆ ಹೋಗುವುದಿತ್ತು. ಅದಕ್ಕೆ ಮೊದಲು ಜುಲೈ ೩೦ರಂದು ಹೂಸ್ಟನ್ನಿಗೆ ಭೇಟಿ ನೀಡಿ ದಿನ ಪೂರ್ತಿ ಅಲ್ಲಿನ ಭಕ್ತರಿಗೆ ದರ್ಶನ ನೀಡಿ ಹರಸಿದರು.

ಸ್ವಾಮಿ ರಂಗನಾಥಾನಂದರು ಸೆಪ್ಟೆಂಬರ್ ೨೩ರಂದು ಡಲ್ಲಾಸ್‌ಗೆ ಎರಡನೆಯ ಸಲ ಬಂದಿದ್ದರು. ಈ ಸಲ ಅವರು ಶ್ರೀ ಜಗದೀಶ್ ಮತ್ತು ಶ್ರೀಮತಿ ರಾಜ್ ಪ್ರಭಾಕರ್ ಅವರಲ್ಲಿ ಬಿಡಾರ ಮಾಡಿದ್ದರು. ಆರ್ಲಿಂಗ್ಟನ್, ಡಲ್ಲಾಸ್, ಫೋರ್ಟ್‌ವರ್ತ್ ಗಳಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ಪ್ರವಚನ ಕಾರ್ಯಕ್ರಮಗಳು ಏರ್ಪಾಟಾಗಿದ್ದವು. ಸ್ವಾಮಿಗಳ ಪ್ರವಚನ ಏರ್ಪಡಿಸುವಂತೆ ಚರ್ಚುಗಳು ಮತ್ತು ಯೋಗ ಕೇಂದ್ರಗಳಿಂದಲೂ ವ್ಯವಸ್ಥಾಪಕರಿಗೆ ಮನವಿಗಳು ಬಂದವು. ಈ ಭೇಟಿಯಲ್ಲಿ ಸ್ವಾಮೀಜಿಯವರು ನಾನು ಮತ್ತು ಮಿಸೆಸ್ ಲ್ಯೂಸಿಲ್ಲೆ ಕರ್ರಿ ಬೋಧಿಸುತ್ತಿದ್ದ ಬಿಶಪ್ ಕಾಲೇಜಿನಲ್ಲೂ ಪ್ರವಚನ ನೀಡಿದರು. ಅದೊಂದು ಧಾರ್ಮಿಕ ಸಂಸ್ಥೆ ಆದರೂ

ಒಳ್ಳೆಯ ಪ್ರತಿಕ್ರಿಯೆ ಕಂಡುಬಂತು. ಈ ಸಮಾರಂಭದಲ್ಲಿ *The Christ he Adore* ಗ್ರಂಥದ ಎಪ್ಪತ್ತು ಪ್ರತಿಗಳನ್ನು ಉಚಿತವಾಗಿ ಹಂಚಲಾಯಿತು. ಆನಂತರ ೧೯೬೯ರ ಸೆಪ್ಟೆಂಬರ್ ೨೬ರಂದು ಸ್ವಾಮೀಜಿ ಸಿಯಾಟಲ್‌ಗೆ ಪ್ರಯಾಣ ಮಾಡಿದರು.

ಮೊದಲ ಸಲ ಭೇಟಿ ಕೊಟ್ಟಾಗ, ಡಲ್ಲಾಸ್‌ನಲ್ಲಿ ವೇದಾಂತ ಬಣಗಳನ್ನು –ತಂಡಗಳನ್ನು – ಪ್ರಾರಂಭಿಸುವಂತೆ ಸಲಹೆಮಾಡಿದ್ದರು. ನಾವು ಅದನ್ನು ಮಾಡಿದ್ದೆವು. ತಿಂಗಳಿಗೊಮ್ಮೆ ನಾವು ಭಕ್ತರೊಬ್ಬರ ಮನೆಯಲ್ಲಿ ಸಮಾವೇಶಗೊಂಡು ಭಕ್ತಿ ಕಲಾಪಗಳನ್ನು ನಡೆಸುತ್ತಿದ್ದೆವು. ಸ್ವಾಮೀಜಿಯವರ ಭೇಟಿಯಿಂದ ತಮ್ಮ ಜೀವನ ದೃಷ್ಟಿ ಬದಲಾವಣೆ ಹೇಗೆ ಸಾಧ್ಯವಾದೀತು? ಅವರ ಭೇಟಿ ಇದಕ್ಕೆ ಎಷ್ಟರಮಟ್ಟಿಗೆ ಸಹಾಯಕವಾದೀತು? ಭಕ್ತರು ಸ್ವಾಮೀಜಿಯವರಿಗೇ ಈ ಪ್ರಶ್ನೆ ಕೇಳಿದ್ದರು. ವೇದಾಂತವು ಮನುಕುಲಕ್ಕೆ ವಿಶ್ವ ಸಂದೇಶವಾಗಿದ್ದು, ತಾವು ಅದರ ಬೀಜಗಳನ್ನು ಬಿತ್ತುತ್ತಿರುವುದಾಗಿಯೂ, ಕ್ರಮೇಣ ಅವು ಮೊಳೆತು ಫಲದಾಯಿಯಾಗುವವೆಂದೂ ಸ್ವಾಮೀಜಿ ತಿಳಿಸಿದ್ದರು. ಸ್ವಾಮೀಜಿಯವರು ಆಗ ನುಡಿದ ಭವಿಷ್ಯ ನಿಜವಾಗಿರುವುದನ್ನು ಈಚಿನ ದಿನಗಳಲ್ಲಿ ನಾವು ಕಂಡೆವು. ಹಾಲಿವುಡ್‌ನ ಸ್ವಾಮಿ ಸ್ವಾಹಾನಂದರು ೨೦೦೭ರ ಮಾರ್ಚ್ ೩ರಂದು ಡಲ್ಲಾಸ್‌ನಲ್ಲಿ ಸ್ವಾಮಿ ರಾಮಕೃಷ್ಣ ವೇದಾಂತ ಕೇಂದ್ರವನ್ನು ಉದ್ಘಾಟಿಸಿದರು. ಹೀಗೆ ೧೯೬೯ರಲ್ಲಿ ಸ್ವಾಮಿ ರಂಗನಾಥಾನಂದರು ಬಿತ್ತಿದ ಬೀಜ ಈಗ ಬೆಳೆದು ಮರವಾಗಿ ಫಲಕೊಟ್ಟಿತ್ತು.

ಸ್ವಾಮೀಜಿಯವರು ೧೯೭೧ರ ಡಿಸೆಂಬರ್ ೩೦ರಂದು ಮತ್ತೊಮ್ಮೆ ಡಲ್ಲಾಸ್‌ಗೆ ಭೇಟಿಯಿತ್ತರು. ಈ ಸಲ ಅವರು ನಮ್ಮ ಮನೆಯಲ್ಲಿ ಬಿಡಾರ ಮಾಡಿದ್ದರು. ಅವರು ಹೂಸ್ಟನ್ನಿಗೂ ಭೇಟಿಕೊಟ್ಟಿದ್ದರು. ಅವರ ಭೇಟಿಯಿಂದಾಗಿ ವೇದಾಂತ ತತ್ತ್ವದಲ್ಲಿ ಆಸಕ್ತಿ ಹೆಚ್ಚಿತು. ಪುನಶ್ಚೈತನ್ಯವುಂಟಾಯಿತು. ಆಧ್ಯಾತ್ಮಿಕ ಸಭೆಗಳಲ್ಲಿ ಹೆಚ್ಚು ಹೆಚ್ಚು ಭಕ್ತರು ಪಾಲ್ಗೊಳ್ಳಲಾರಂಭಿಸಿದರು. ಸ್ವಾಮೀಜಿಯವರು ಸದಾ ಭಕ್ತರ ಕ್ಷೇಮಾಭ್ಯುದಯದ ಬಗ್ಗೆ ಕಾಳಜಿ ಹೊಂದಿರುತ್ತಿದ್ದರು ಎಂಬುದನ್ನು ನಾನಿಲ್ಲಿ ಹೇಳಲೇಬೇಕು. ಭಕ್ತರ ಮೇಲೆ ಅಮೋಘ ಪ್ರೀತಿ ವಾತ್ಸಲ್ಯಗಳನ್ನು ಹರಿಸುತ್ತಿದ್ದ ಅವರು ಪ್ರಾಮಾಣಿಕವಾಗಿ, ತಪ್ಪದೇ ಆಧ್ಯಾತ್ಮಿಕ ಆಚರಣೆಗಳಲ್ಲಿ ತೊಡಗುವಂತೆ ಹುರಿದುಂಬಿಸುತ್ತಿದ್ದರು. ಸ್ವಾಮಿ ವಿವೇಕಾನಂದರ ಕೃತಿಗಳನ್ನು ಓದುವಂತೆ, ಶ್ರೀ ರಾಮಕೃಷ್ಣರು ಮತ್ತು ಪೂಜ್ಯ ಮಾತೆಯವರಲ್ಲಿ ನಂಬಿಕೆಯಿಡುವಂತೆ ಅವರು ನಮಗೆ ಬೋಧಿಸುತ್ತಿದ್ದರು. ಕೆಲವು ಭಕ್ತರು ತಮಗೆ ದೀಕ್ಷೆ ನೀಡುವಂತೆ ಅವರಿಗೆ ಮನವಿ ಮಾಡಿಕೊಂಡರು. ಅಂಥವರಿಗೆ ಅಮೆರಿಕದಲ್ಲಿರುವ ಸ್ವಾಮಿಗಳನ್ನು ಭೇಟಿ ಮಾಡುವಂತೆ ಅಥವಾ ಬೇಲೂರು ಮಠಕ್ಕೆ ಬಂದು ಪೂಜ್ಯ ಅಧ್ಯಕ್ಷ ಮಹಾರಾಜ್‌ರಿಂದ ದೀಕ್ಷೆ ಪಡೆಯುವಂತೆ ಸಲಹೆ ಮಾಡಿದರು.

೧೯೭೦ರ ಡಿಸೆಂಬರಿನಲ್ಲಿ ನಾನು ಭಾರತಕ್ಕೆ ಹೋಗಿದ್ದಾಗ ಸ್ವಾಮಿ ರಂಗನಾಥಾನಂದರನ್ನು ದೆಹಲಿ ಆಶ್ರಮದಲ್ಲಿ ಭೇಟಿ ಮಾಡಿದ್ದೆ. ಡಲ್ಲಾಸ್‌ನ ಪ್ರತಿಯೊಬ್ಬ ಭಕ್ತರನ್ನೂ ಹೆಸರಿಸಿ ಅವರ ಯೋಗಕ್ಷೇಮ ವಿಚಾರಿಸಿದರು. ಸ್ವಾಮಿ ವಂದನಾನಂದರೊಂದಿಗೆ, ರಂಗನಾಥಾನಂದರು, ಗಂಟಲು ಕ್ಯಾನ್ಸರ್ ಬೇನೆಯಿಂದ ಬಳಲುತ್ತಿದ್ದ ನನ್ನ ಅಣ್ಣನ ಹೆಂಡತಿಯನ್ನು ಕಾಣಲು ಬಂದಿದ್ದರು. ಇಬ್ಬರು ಸ್ವಾಮಿಗಳೂ ಆಕೆಗೆ ಆಧ್ಯಾತ್ಮವನ್ನು ತಿಳಿಸಿ ಸಾಂತ್ವನ ಹೇಳಿದರು ಹಾಗೂ ಆಶೀರ್ವದಿಸಿದರು.

೧೯೮೦ರಲ್ಲಿ ಸ್ವಾಮೀಜಿ ಮತ್ತೆ ಡಲ್ಲಾಸ್‌ಗೆ ಬಂದಿದ್ದರು. ನಮ್ಮಲ್ಲೇ ಬಿಡಾರ ಮಾಡಿದ್ದರು. ಆಗ, ಯೋಗ ಕೇಂದ್ರಗಳಲ್ಲಿ ಮತ್ತು ಭಕ್ತರ ಮನೆಗಳಲ್ಲಿ ಪ್ರವಚನಗಳನ್ನು ಏರ್ಪಡಿಸಲಾಗಿತ್ತು.

೧೯೮೨ರಲ್ಲಿ ಏಪ್ರಿಲ್‌ನಲ್ಲಿ ದೆಹಲಿ ಆಶ್ರಮದಲ್ಲಿ ಸ್ವಾಮಿ ರಂಗನಾಥಾನಂದರನ್ನು ಭೇಟಿಮಾಡಿದ್ದೆ. ಆಗ ನನ್ನ ಹದಿನೆಂಟು ವರ್ಷದ ಮಗನ ದುರಂತ ಮರಣದಿಂದ ಶೋಕಗ್ರಸ್ತನಾಗಿದ್ದೆ. ನನ್ನ ಮಗ ೧೯೮೧ರ

ಜೂನ್‌ನಲ್ಲಿ ದುರಂತ ಸಾವಿಗಿಡಾಗಿದ್ದ. ಆಗ ಸ್ವಾಮೀಜಿ ಮಗನ ಸಾವಿನ ಬಗ್ಗೆ ಅನುಕಂಪಪೂರ್ಣವಾದ ಪತ್ರ ಬರೆದಿದ್ದರು. ಈಗ ಮುಖತಃ ಸಾಂತ್ವನ ಹೇಳಿದರು.

೧೯೮೨ರ ಮೇ ೨೯ರಂದು ಸ್ವಾಮೀಜಿ ಆರ್ಲಿಂಗ್ಟನ್‌ಗೆ ಭೇಟಿ ಕೊಟ್ಟಿದ್ದರು. ಆ ಭೇಟಿಯ ವಿವರಗಳು ನನಗೆ ನೆನಪಿಲ್ಲ. ಮತ್ತೆ ೧೯೮೬ರ ಮೇ ೧೫ರಂದು ನಮ್ಮಲ್ಲಿಗೆ ಭೇಟಿ ನೀಡಿ, ನಮ್ಮೆಲ್ಲರನ್ನೂ ಆಶೀರ್ವದಿಸಿದರು. ಅದೇ ಅವರ ಅಮೆರಿಕದ ಕೊನೆಯ ಭೇಟಿಯಾಗಿತ್ತು. ಅನಾರೋಗ್ಯದ ಕಾರಣ ಅಮೆರಿಕ ಪ್ರವಾಸ ಮಾಡದಂತೆ ವೈದ್ಯರು ಸಲಹೆಮಾಡಿದ್ದರು.

ಏತನ್ಮಧ್ಯೆ ೧೯೮೬ರ ಬೇಸಿಗೆಯಲ್ಲಿ ಭಾರತಕ್ಕೆ ಹೋಗುವ ಕಾರ್ಯಕ್ರಮ ಹಾಕಿಕೊಂಡಿದ್ದೆವು. ಆಗ ಹೈದರಾಬಾದಿಗೆ ಬರುವಂತೆ ಸ್ವಾಮೀಜಿ ನಮಗೆ ಅಪ್ಪಣೆ ಕೊಡಿಸಿದ್ದರು. ಸುದೇಶ್, ನಾನು ಮತ್ತು ಮಗಳು ಸಂಗೀತಾ, ಆಗಸ್ಟ್ ೧೪ರಂದು ಆಶ್ರಮವನ್ನು ತಲುಪಿದೆವು. ಆ ಆಧ್ಯಾತ್ಮಿಕ ವಾತಾವರಣದಲ್ಲಿ ಎರಡು ದಿನ ಇದ್ದೆವು. ಹೈದರಾಬಾದಿನ ಸ್ಥಾನಿಕ ಸ್ವಾಮಿಗಳು ಹಾಗೂ ಸಂದರ್ಶಕ ಸ್ವಾಮಿಗಳು ತೋರಿದ ದಿವ್ಯ ಪ್ರೀತಿ–ಕರುಣೆ–ಆಶೀರ್ವಾದಗಳಿಂದ ನಾವು ಭಾವಪರವಶರಾದೆವು. ಅದೊಂದು ಮರೆಯಲಾಗದ ಆಧ್ಯಾತ್ಮಿಕ ಔನ್ನತ್ಯದ ಅನುಭವ. ಒಬ್ಬ ವ್ಯಕ್ತಿ ತನ್ನ ಇಚ್ಛೆಗನುಸಾರವಾಗಿ ಬೇಕಾದ ಆಧ್ಯಾತ್ಮಿಕ ಪಥವನ್ನು ಆರಿಸಿಕೊಳ್ಳಬಹುದು. ಆದರೆ, ಮತ್ತೊಬ್ಬರು ಆರಿಸಿಕೊಂಡ ಪಥವನ್ನಾಗಲೀ, ಅದನ್ನು ಆಚರಿಸುವವರನ್ನಾಗಲೀ ಟೀಕಿಸಬಾರದು ಎಂದು ಸ್ವಾಮಿ ರಂಗನಾಥಾನಂದರು ಯಾವಾಗಲೂ ಹೇಳುತ್ತಿದ್ದರು. ಇದು ಅವರ ಬಹು ಮುಖ್ಯವಾದ ಬೋಧೆಯಾಗಿತ್ತು.

೧೯೮೯ರಲ್ಲಿ ನಾವು ಬೇಲೂರು ಮಠಕ್ಕೆ ಭೇಟಿಕೊಟ್ಟಿದ್ದೆವು. ಆದರೆ ಸ್ವಾಮಿ ರಂಗನಾಥಾನಂದರನ್ನು ಭೇಟಿಯಾಗಲು ಸಾಧ್ಯವಾಗಲಿಲ್ಲ. ಆಗ ಅವರು ಹೈದರಾಬಾದಿಗೆ ತೆರಳಿದ್ದರು. ೧೯೯೮ರಲ್ಲಿ ನಾನೊಬ್ಬನೇ ಬೇಲೂರು ಮಠಕ್ಕೆ ಹೋದೆ. ಆಗ ಸ್ವಾಮಿ ರಂಗನಾಥಾನಂದರು ಡಲ್ಲಾಸ್‌ನ ಎಲ್ಲ ಭಕ್ತರ ಬಗ್ಗೆಯೂ ವಿಚಾರಿಸಿದ್ದರು. ೧೯೯೯ರ ಮೇ ೧೯ರಂದು ನಾನು ಮತ್ತು ಸುದೇಶ್ ಮತ್ತೆ ಬೇಲೂರು ಮಠಕ್ಕೆ ಹೋಗಿದ್ದೆವು. ಪೂಜ್ಯ ರಂಗನಾಥಾನಂದರ ಸಾನ್ನಿಧ್ಯದಲ್ಲಿ ಸುಮಾರು ಮೂವತ್ತು ನಿಮಿಷ ಕಾಲ ಕಳೆದೆವು. ಐವತ್ತು ವರ್ಷಗಳ ಕಾಲ ತಮ್ಮ ಅಪಾತ್ರ ಭಕ್ತರ ಮೇಲೆ ಸ್ವಾಮೀಜಿಯವರು ಅಪಾರ ಪ್ರೀತಿ–ಕರುಣೆ–ಆಶೀರ್ವಾದಗಳ ಧಾರೆ ಎರೆದರು.

೨೦೦೧ರ ಜನವರಿ ೧೦ರಂದು ಅವರನ್ನು ಭೇಟಿಮಾಡಿದ್ದೆ. ಅವರೊಡನೆ ಸುಮಾರು ಹದಿನೈದು ನಿಮಿಷಗಳಿದ್ದೆ. ಎರಡು ಪುಸ್ತಕಗಳಿಗೆ ಹಸ್ತಾಕ್ಷರ ಹಾಕಿಕೊಟ್ಟರು. ಆಗ ಬೇರೆ ಭಕ್ತರೂ ಇದ್ದರು. ಡಾ॥ ರೀಟಾ ಎಸ್ ಮೆಲ್ಲಂ, ಆಕೆಯ ಪುತ್ರಿ ಮತ್ತು ತಾಯಿ ಮೊದಲಾದವರಿದ್ದರು. ಸ್ವಾಮೀಜಿಯವರ ಹಾಗೂ ಭಕ್ತರೊಡನೆ ಸ್ವಾಮೀಜಿ ಇರುವ ಕೆಲವು ಫೋಟೋಗಳನ್ನು ತೆಗೆಯಲು ನನಗೆ ಅನುಮತಿ ನೀಡಿದ್ದರು.

೨೦೦೫ರ ಫೆಬ್ರವರಿಯಲ್ಲಿ ನಾವು ಎರಡು ದಿನಗಳ ಕಾಲ ಕೋಲ್ಕತ್ತಾದಲ್ಲಿದ್ದೆವು. ಆಗ ಸ್ವಾಮಿ ರಂಗನಾಥಾನಂದರು ಆಸ್ಪತ್ರೆಯಲ್ಲಿದ್ದುದರಿಂದ ಅವರ ದರ್ಶನಭಾಗ್ಯ ನಮಗೆ ಸಿಗಲಿಲ್ಲ. ಅಮೆರಿಕ ತಲುಪಿದ ನಂತರ ಏಪ್ರಿಲ್ ೨೫ರಂದು ಅವರು ದೇಹ ತ್ಯಾಗ ಮಾಡಿದ ಸುದ್ದಿ ನಮಗೆ ತಿಳಿಯಿತು.

* * * *

# ೧೧೩. ಹೊಸ ಪ್ರಪಂಚದ ಪ್ರವಾದಿ

**–ಸುಲೋಚನಾ ನಾಯರ್***

ಕಾಲ ಸದಾ ಜಾಗೃತ ಎನ್ನುತ್ತಾರೆ ಋಷಿಗಳು. ನಿಜ. ದಿವಾರಾತ್ರಿಗಳೊಂದಿಗೆ ಚಲಿಸುವ ಕಾಲ ನನ್ನ ಸ್ಮೃತಿಯನ್ನು ಮಂಕಾಗಿಸಿಲ್ಲ, ಮಬ್ಬುಗೊಳಿಸಿಲ್ಲ. ಈಗ, ಇಷ್ಟು ಸುದೀರ್ಘ ಕಾಲಾವಧಿಯ ನಂತರವೂ, ಕೇರಳದ ತಿರುವನಂತಪುರದ ರಾಮಕೃಷ್ಣಾ ಶಾರದಾ ಮಂದಿರದ ಪ್ರಾರ್ಥನಾ ಸಭಾಂಗಣ ನನ್ನ ಮುಂಚೆ ನಿಚ್ಚಳವಾಗಿದೆ. ಭಕ್ತರಿಂದ ಸಂಪೂರ್ಣ ಭರ್ತಿಯಾದ ಸಭಾಗೃಹ ಸ್ವಾಮಿ ರಂಗನಾಥಾನಂದರಿಗಾಗಿ ಕಾಯುತ್ತಿತ್ತು. ಸ್ವಾಮೀಜಿಯವರ ಅಮೃತಹಸ್ತಗಳಿಂದಲೇ ಈ ಸಭಾಂಗಣದ ಶಂಕುಸ್ಥಾಪನೆಯಾಗಿತ್ತು. ಅವರು ಧ್ಯಾನಸ್ಥಮನಸ್ಕರಾಗಿ ಬಂದು, ದೀಪ ಬೆಳಗಿ ಆಸೀನರಾದರು. ಅವರ ಮೊಗ ಪ್ರಶಾಂತವಾಗಿತ್ತು. ಅವರ ಉಜ್ವಲ ಮಾತುಗಳಿಗಾಗಿ ಭಕ್ತರು ಕುತೂಹಲದಿಂದ ಕಾಯುತ್ತಿದ್ದರು. ಸ್ವಾಮೀಜಿಯವರು ದಿವ್ಯಶಕ್ತಿಯ ಅಮೋಘ ಭಾಷಣಕಾರರಾಗಿದ್ದರು.

ಸ್ವಾಮೀಜಿ ಮೆಲುವಾತಿನಲ್ಲಿ ಭಾಷಣ ಆರಂಭಿಸಿದರು. ಕ್ರಮೇಣ ಮೆದುದನಿ ಏರುತ್ತಾ ಏರುತ್ತಾ ದಿವ್ಯಶಕ್ತಿ ಸಾಮರ್ಥ್ಯಗಳ ಘೋಷವಾಯಿತು. ಸ್ತ್ರೀ–ಪುರುಷರ ದಿವ್ಯ ಶಕ್ತಿಸಾಮರ್ಥ್ಯಗಳ ದನಿಯಾಗಿ ಮೊಳಗಿತು. ಪ್ರತಿಯೊಂದು ಮಾತೂ ತ್ಯಾಗ ವಿರಕ್ತಿಗಳ ಬೆಳಕಿನ ಕುಡಿಗಳಾಗಿ ಕಂಡುಬಂದವು. ಅವರ ಧ್ವನಿ ಪ್ರಾರ್ಥನಾ ಸಭಾಂಗಣವನ್ನು ಆವರಿಸಿದಂತೆ, ಗರ್ಭಗುಡಿಯಲ್ಲಿ ನಂದಾದೀಪ ನಿಶ್ಚಲವಾಗಿ ಉರಿಯುತ್ತಿತ್ತು. ನಿಜಕ್ಕೂ ಅದೊಂದು ಅಪೂರ್ವ ಸನ್ನಿವೇಶ, ಪುಣ್ಯವಿಶೇಷ!

ಅವರ ಪ್ರವಚನ ಮುಂದುವರಿದಿತ್ತು: "ಬದುಕೊಂದು ನಿರಂತರ ಹೋರಾಟ. ಆದರೆ, ಪೂಜ್ಯ ಮಾತೆ ಶಾರದಾದೇವಿಯವರನ್ನೇ ನೋಡಿ. ಆ ಮಾತೆ ನಮಗೆ ದಾರಿದೀಪ, ಪಾವನ ಬೆಳಕು, ನೆರಳಲಿಲ್ಲದ ಬೆಳಕು."

ಸ್ವಾಮೀಜಿ ಮನುವನ್ನು ಉಲ್ಲೇಖಿಸಿದರು. ತಾಯಿಗಿಂತ ಮಿಗಿಲಾದ ಗುರು ಇನ್ನೊಬ್ಬರಿಲ್ಲ. ಅವಳು ನೂರಾರು ಗುರುಗಳಿಗೆ ಸಮ ಎಂದು ಮನು ಹೇಳಿದ್ದಾನೆ. ಸಮಾಜದಲ್ಲಿ ಮಾನವನನ್ನು ರೂಪಿಸುವುದರಲ್ಲಿ ತಾಯಿಯ ಮಹತ್ವ ಸಾವಿರಾರು ತಂದೆಯರಿಗೆ ಸಮನಾದದ್ದು. ಗರ್ಭಧಾರಣೆಯಿಂದ ಹಿಡಿದು, ಶಿಶುವಿಗೆ ತಾಯಿ ಸರ್ವಶ್ರೇಷ್ಠ ಆದರ್ಶ. ಅವಳು ಪ್ರಕೃತಿಸಹಜವಾಗಿಯೇ ಸೌಮ್ಯಳು. ಸೌಮ್ಯ, ಕಾಠಿಣ್ಯ ವನ್ನು ತೊಲಗಿಸುತ್ತದೆ. ಸೌಮ್ಯದಿಂದ ಸಾಧಿಸಲಾಗದ್ದು ಏನೂ ಇಲ್ಲ. ಏಕೆಂದರೆ, ಅದು ಅಷ್ಟೊಂದು ಪ್ರಖರ.

ಸ್ವಾಮೀಜಿ ಪೂಜ್ಯ ಮಾತೆಯ ಅನುಕರಣೀಯ ಜೀವನದ ದಿವ್ಯ ಸಂದೇಶವನ್ನು ವಿವರಿಸುತ್ತಿದ್ದರು. ವಿಶ್ವದಾದ್ಯಂತ ಸ್ತ್ರೀತ್ವವನ್ನು ಉದ್ದೀಪನಗೊಳಿಸುವ ಮಾತೆಯ ಅನುಕರಣೀಯ ಜೀವನದ ಉಜ್ವಲ ದೃಷ್ಟಾಂತಗಳನ್ನು ವಿವರಿಸುತ್ತಿದ್ದರು. ಪ್ರವಚನ ಸುಮಾರು ನಲವತ್ತೈದು ನಿಮಿಷಗಳ ಕಾಲ ನಡೆಯಿತು. ಅದೊಂದು ಬಗೆಯ ಬೆಳಕಿನ ಧಾರೆ, ಜ್ಞಾನದ ಬೆಳಕಿನಲ್ಲಿ ನಮ್ಮನ್ನು ಅದ್ದಿ ಅನುಗ್ರಹಿಸಿದ ಧಾರೆ. ಇಂಥ ಮಹಾನ್ ಗುರುಗಳಿಂದ ಮಾತ್ರ ಭಗವದ್ಗೀತೆಯ ವ್ಯಾಖ್ಯಾನ ಸಾಧ್ಯ ಎಂದು ನಮಗನ್ನಿಸಿತು. ಮಹಾಮಹೋಪಾಧ್ಯಾಯರಿಂದ ಮಾತ್ರ ಸಾಧ್ಯವಾಗುವಂಥ ಪ್ರವಚನ, ವ್ಯಾಖ್ಯಾನ ಎಂದು ನಮಗೆಲ್ಲ ಅನ್ನಿಸಿತು. ಅವರು ಅದ್ವೈತದ ಶಾಶ್ವತ ಮೌಲ್ಯಗಳನ್ನು ಒತ್ತಿ ಹೇಳಿದರು. ಎಲ್ಲ ಜ್ಞಾನಗಳ ತಾಯಿಯಾದ ಅದ್ವೈತ ಪರಿಕಲ್ಪನೆಯನ್ನು ಮಹತ್ವಪೂರ್ಣವಾಗಿ ವಿವರಿಸಿದರು. ಅವರ ಪ್ರವಚನದಲ್ಲಿ ತ್ಯಾಗದ ಶಕ್ತಿ ಮತ್ತು ಸಂನ್ಯಾಸಿಗಳ ಬುದ್ಧಿಮತ್ತೆ ಪ್ರಜ್ವಲಿಸುತ್ತಿತ್ತು. ಹೃದಯದ ವಿವೇಕವನ್ನು

---

* ಭಾಷಾ ಪ್ರಾಧ್ಯಾಪಕಿ, ತಿರುವನಂತಪುರಂ, ಕೇರಳ.

ತಿಳಿಸುವ ಬೆಳಕಾಗಿತ್ತು. ಅವರ ಪ್ರವಚನ ಮುಗಿದಾಗ ನಮಗೆ ಉತ್ಕರ್ಷದ, ಮಹೋನ್ನತಿಯ ಅನುಭವವಾಯಿತು. ಅದೊಂದು ಮಂತ್ರಘೋಷವಿದ್ದಂತೆ. ಅವರು ಕಾಲವಾದ ನಂತರವೂ ಅವರ ಪ್ರವಚನ ಮಂತ್ರಘೋಷದಂತೆ ನನ್ನಲ್ಲಿ ಅನುರಣಿಸುತ್ತಿದೆ.

ನಾನು ಸ್ವಾಮಿ ರಂಗನಾಥಾನಂದರನ್ನು ಎರಡನೆಯ ಸಲ ಭೇಟಿಯಾದದ್ದು ತ್ರಿಶೂರಿನ ಶ್ರೀ ರಾಮಕೃಷ್ಣ ಮಠದಲ್ಲಿ. ಶಾರದಾ ಮಿಷನ್ನಿನ ಭಕ್ತೆಯರಾದ ನಾವು ಅವರನ್ನು ಭೇಟಿ ಮಾಡಲು, ಅವರ ಪ್ರವಚನವನ್ನು ಆಲಿಸಲು ಅಲ್ಲಿಗೆ ಹೋಗಿದ್ದೆವು. ಸ್ವಾಮೀಜಿಯವರನ್ನು ಭೇಟಿಮಾಡಲು, ತಮ್ಮ ಗುರುಗಳಿಂದ ಮಂತ್ರದೀಕ್ಷೆ ಪಡೆಯಲು ಅನೇಕ ಮಂದಿ ಕಾದಿದ್ದರು. ಆದರೆ, ಅವರ ಆರೋಗ್ಯ ಸರಿ ಇರಲಿಲ್ಲ. ಅವರು ದೂರದಲ್ಲೇ ಕುಳಿತು ಮಂತ್ರಾಕ್ಷತೆ ನೀಡಿದರು. ಅವರೊಳಗಿನ ಮಹಾ ವಾಗ್ಮಿ ಮೌನಿಯಾಗಿದ್ದ. ನಮಗೆ ಸ್ವಲ್ಪ ನಿರಾಶೆಯಾಯಿತು. ಏಕೆಂದರೆ ಸ್ವಾಮೀಜಿ ಭಾರತದ ಮಹಾನ್ ಲೇಖಕರಷ್ಟೇ ಆಗಿರಲಿಲ್ಲ. ಮಹಾನ್ ವಾಗ್ಮಿಗಳೂ ಆಗಿದ್ದರು. ನಿಜ, ನಾವೆಲ್ಲ ಸಾಮಾನ್ಯ ಮನುಷ್ಯರು ಎಂದೇ, ನಮಗೆ ಅತೃಪ್ತಿಯುಂಟಾಗಿತ್ತು. ಆದರೆ, ಸ್ವಾಮೀಜಿ ಭಗವದ್ಗೀತೆ ಕುರಿತ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ: "ದುಃಖ ವಿಷಾದಗಳು ಧರ್ಮವಲ್ಲ, ಋಜುಗುಣಗಳಲ್ಲ. ಅದೊಂದು ತಾತ್ಕಾಲಿಕ ವಿಕಲ್ಪ. ಸ್ವಲ್ಪ ಮೋಡ ಆವರಿಸಿದೆ. ಸೂರ್ಯ ಕರಾಳನಾಗಿದ್ದಾನೆ. ಆದರೆ ಸೂರ್ಯ ಅಲ್ಲೇ ಇದ್ದಾನೆ. ಮೋಡ ಚದುರಿದ ನಂತರ ಸೂರ್ಯ ಪ್ರಕಾಶಮಾನವಾಗುತ್ತಾನೆ."

ಅವರೊಬ್ಬ ಸಂನ್ಯಾಸಿಯಾಗಿದ್ದರು, ಪ್ರಾರಂಭದಿಂದಲೂ ಲೌಕಿಕ ಸಂಬಂಧ, ಭೋಗ–ಭಾಗ್ಯಗಳನ್ನು ತ್ಯಜಿಸಿದ್ದವರು. ಅವರ ಭಾಗವತ ಪುರಾಣದ ಉದ್ಧವನಿದ್ದಂತೆ. ಬದರೀನಾಥಕ್ಕೆ ತೆರಳುವ ಮುನ್ನ, ಮಹಾನ್ ವಿಮೋಚಕನಾದ ಶ್ರೀ ಕೃಷ್ಣನನ್ನು ತನಗೆ ಸನ್ಯಾಸಧರ್ಮವನ್ನು, ಅಂದರೆ ತ್ಯಾಗವನ್ನು ಅನುಗ್ರಹಿಸುವಂತೆ ಪ್ರಾರ್ಥಿಸಿದ ಉದ್ಧವನಂತಿದ್ದರು, ರಂಗನಾಥಾನಂದರು. ಶ್ರೀಕೃಷ್ಣ ಪರಮಾತ್ಮ ಉದ್ಧವನ ಕೋರಿಕೆಯನ್ನು ಈಡೇರಿಸಿದ. ಕೂಡಲೇ ಬದರಿಗೆ ಹೊರಟುಹೋದ ಉದ್ಧವ ಮತ್ತೆ ಹಿಂದಿರುಗಿರಲಿಲ್ಲ. ಇಡೀ ಜೀವಮಾನವನ್ನು ಜನರ ಕಲ್ಯಾಣಕ್ಕಾಗಿ ಮುಡುಪಿಟ್ಟ. ಶತಮಾನಗಳ ಮುಂಚೆ ಶ್ರೀ ಶಂಕರರು (ಕೇರಳದ ಸುಪುತ್ರ) ಕಾಲಟಿಯನ್ನು ತ್ಯಜಿಸಿದ್ದರು, ಅದ್ವೈತದ ಪ್ರಚಾರಕ್ಕಾಗಿ. ಭಾರತೀಯ ಜ್ಞಾನ–ವಿವೇಕಗಳಿಗೆ ರತ್ನಪ್ರಾಯರಾದವರು ಅವರು. ಸ್ವಾಮಿ ರಂಗನಾಥಾನಂದರೂ ಕೇರಳದ ಇಂಥ ಮತ್ತೊಬ್ಬ ಸುಪುತ್ರರು. ಅವರೂ ಅಷ್ಟೇ: ಶ್ರೀ ರಾಮಕೃಷ್ಣ ಆಂದೋಲನ ಸೇರಿಕೊಳ್ಳಲು ಗೃಹತ್ಯಾಗ ಮಾಡಿದರು.

ಸ್ವಾಮಿ ರಂಗನಾಥಾನಂದರು ಹೊಸ ಪ್ರಪಂಚದ ಪ್ರವಾದಿಗಳಾಗಿದ್ದರು. ಸ್ವಾಮಿ ವಿವೇಕಾನಂದರಂತೆ ಅವರೂ ನಮ್ಮ ದೇಶದ ಉದ್ದಗಲ ಪರ್ಯಟನಮಾಡಿದರು. ನಮ್ಮ ಭೂ–ಸಾಗರಗಳ ಸೀಮೋಲ್ಲಂಘನ ಮಾಡಿ ವಿದೇಶಗಳಲ್ಲೂ ಪರ್ಯಟನವನ್ನು ಕೈಗೊಂಡರು. ಅವರದೊಂದು ಆಧ್ಯಾತ್ಮಿಕ ವಿಜಯಯಾತ್ರೆ; ದೇವಾಭಿಮುಖವಾದ ಭಾವೋದ್ದೀಪ್ತಿ ಹಾಗೂ ಮಾನವಾಭಿಮುಖವಾದ ಪ್ರೀತಿ. ಭಾಗವತದ ರಂತಿದೇವನಂತೆ ಸ್ವಾಮೀಜಿಯವರು ತಮ್ಮನ್ನು ಕೇಳಿಕೊಂಡಿದ್ದರು: "ಈ ಪ್ರಪಂಚದಲ್ಲಿ ಎಲ್ಲ ಜೀವಿಗಳ ಹೃದಯ ಪ್ರವೇಶಿಸಿ ಅವರ ದುಃಖದುಮ್ಮಾನಗಳನ್ನು ನನ್ನದಾಗಿಸಿಕೊಳ್ಳುವ ದಾರಿ ಯಾವುದಾದರೂ ಉಂಟೆ?"

ಅವರು ಪ್ರಾಚೀನ ಕಾಲದ ಋಷಿಗಳಂತೆ ಮಾತನಾಡುತ್ತಿದ್ದ ಒಬ್ಬ ಗುರುವರ್ಯ. ಶ್ರುತಿ ಹೇಳುತ್ತದೆ:

"ಗುರುವಾದವನು ಪರಿಪೂರ್ಣ ವೇದಜ್ಞಾನಿಯಾಗಿರಬೇಕು ಹಾಗೂ ಪಾಪಮುಕ್ತನಾಗಿರಬೇಕು. ಪ್ರಣಾಯಾಕಾಂಕ್ಷೆ ಇತ್ಯಾದಿ ಕಾಮನೆಗಳಲ್ಲಿ ಸಿಲುಕಿರಬಾರದು. ಮನುಕುಲದ ಸೇವೆಗಾಗಿ ಎಲ್ಲ ಕಾಮನೆಗಳನ್ನೂ ತ್ಯಾಗ ಮಾಡಿದವನಾಗಿರಬೇಕು."

ಸ್ವಾಮಿ ರಂಗನಾಥಾನಂದಜೀ ಹೀಗೇ ಇದ್ದರು. ದೇವಾಭಿಮುಖಿಯಾಗಿದ್ದರು. ಆದರೆ, ತನ್ನನ್ನೇ ದಹಿಸಿಕೊಳ್ಳುವ ಉರಿಯುವ ಜ್ವಾಲೆಯಂತೆ ಪ್ರಶಾಂತವಾಗಿದ್ದರು. ಅವರು ಅಗಾಧವಾದ ಜ್ಞಾನ, ಪ್ರಕಾಂಡ ಪಾಂಡಿತ್ಯ ಮತ್ತು

ಸಹಜ ವಿನಯ–ನಮ್ರತೆಗಳ ಸಂಗಮವಾಗಿದ್ದರು; ಮೇಧಾಶಕ್ತಿಯ ಸಿರಿಸಂಪದವಾಗಿದ್ದರು. ಅವರ ಗ್ರಂಥಗಳು, ಆಧ್ಯಾತ್ಮಿಕ ಸತ್ಯಗಳ ಸಮ್ಮೋಹಕತೆಗಳನ್ನು ಹೊರಸೂಸುವ ಮುತ್ತು–ರತ್ನಗಳು.

ಶ್ರೀ ವಿಜಯಮೋಹನ್ ಅವರು ಮಲೆಯಾಳಂನಲ್ಲಿ ರಚಿಸಿರುವ ಸ್ವಾಮಿ ರಂಗನಾಥಾನಂದರ ಜೀವನಚರಿತ್ರೆಯನ್ನು ಓದುತ್ತಿದ್ದಾಗ ನಾನು ಕಂಡುಹಿಡಿದದ್ದು ಪೀಠಿಕಾರೂಪದ ಅಪ್ರತಿಭ ಶಕ್ತಿಯ ವಿಸ್ಮಯಕಾರಿ ಧನವನ್ನು. ಈ ಜೀವನಚರಿತ್ರೆ ರಚಿಸಿದ ವಿಷಯ ತಿಳಿದ ನಂತರ ಸ್ವಾಮೀಜಿಯವರು, ತಾವು ಈ ಲೋಕ ತ್ಯಜಿಸುವವರೆಗೆ ಅದನ್ನು ಪ್ರಕಟಿಸಬಾರದೆಂದು ಲೇಖಕರಿಗೆ ತಿಳಿಸಿದ್ದರು. ಪ್ರಕಟಣೆಗೆ ಅನುಮತಿ ಸಿಗದ ಕಾರಣ ಲೇಖಕ ಉಭಯ ಸಂಕಟಕ್ಕೊಳಗಾಗಿದ್ದ. ಈಗ ಜೀವನ ಚರಿತ್ರೆ ಪ್ರಕಟವಾಗಿದೆ. ಆದರೆ ಈ ಗ್ರಂಥವನ್ನು ನಾವು ಹಗುರ ಮನೋಭಾವದಿಂದ ಓದಬಾರದು. ಏಕೆಂದರೆ ಇದೊಂದು ಕಷ್ಟಸಂಕಟಗಳ ನೈಜಕಥನ. ತಾವು ಸಾವಿನ ದವಡೆಯಿಂದ ಪವಾಡಸದೃಶವಾಗಿ ಪಾರಾದದ್ದು, ಬೇರೆಯವರ ಕ್ಷೇಮಾಭ್ಯುದಯಕ್ಕಾಗಿ ತಾವು ಅಪಾಯಗಳನ್ನೆದುರಿಸಿ ಕಷ್ಟಪಟ್ಟಿದ್ದು ಇವೆಲ್ಲವನ್ನೂ ಅವರು ಹೇಳಿಕೊಂಡಿದ್ದಾರೆ.

ಸ್ವಾಮಿ ರಂಗನಾಥಾನಂದರು ನಿಜಕ್ಕೂ ಅಪರೂಪದ ಸತ್ವಶಾಲಿ ಸಂತಶ್ರೇಷ್ಠರು. ಅವರಿಗೆ "ಮಾನವನ ಭರವಸೆ ಮಾನವನೇ" ಎಂಬುದು ತಿಳಿದಿತ್ತು. ಅವರು ಹೇಳಿದ್ದರು:

"ನೀವು ನನ್ನ ಬಗ್ಗೆ ತೀರ್ಮಾನಕ್ಕೆ ಬರಬಹುದು. ನನ್ನ ಲೇಖನಗಳನ್ನು ಪ್ರಕಟಿಸಬಹುದು. ಆದರೆ ಒಬ್ಬ ವ್ಯಕ್ತಿಯಾಗಿ ನನ್ನ ಮೌಲ್ಯಮಾಪನ ಮಾಡಲಾಗದು; ನನಗೆ ಬೆಲೆ ಕಟ್ಟಲಾಗದು. ಸಂನ್ಯಾಸಿಗಳನ್ನು ಕಂಡಿರಬಹುದು, ಕೇಳಿರಬಹುದು, ಅವರ ಅನುಯಾಯಿಗಳಾಗಿರಬಹುದು. ಆದರೆ ಅವರ ಜೀವಿತಾವಧಿಯಲ್ಲಿ ಅವರ ಬಗ್ಗೆ ಬರೆಯಬೇಡಿ."

ಕೆಲವು ವರ್ಷಗಳ ಹಿಂದೆ 'ಪ್ರಬುದ್ಧ ಭಾರತ'ದಲ್ಲಿ ಸ್ವಾಮಿ ವಿವೇಕಾನಂದರ ಬಗ್ಗೆ ಸ್ವಾಮಿ ಜಿತಾತ್ಮಾನಂದರು ಬರೆದ ಪದ್ಯವೊಂದು ಪ್ರಕಟವಾಗಿತ್ತು. ಆ ಪದ್ಯ ಈಗಲೂ ನನ್ನ ಹಳೆಯ ನೋಟ್‌ಬುಕ್ಕಿನಲ್ಲಿದೆ. ಸ್ವಾಮಿ ರಂಗನಾಥಾನಂದರನ್ನು ಸ್ಮರಿಸುತ್ತಾ ಆ ಸುಂದರ ಕವಿತೆಯ ಕೆಲವು ಸಾಲುಗಳನ್ನು ಉಲ್ಲೇಖಿಸುತ್ತೇನೆ:

**ಅವರಿಗೆ ನಿಮ್ಮ ಅಶ್ರುತರ್ಪಣವೆ?**
**ಮತ್ತೆ ಹುಟ್ಟಿ ಬಾ ಎನ್ನುವಿರಾ?**
**ನೆನಪಿರಲಿ!**
**ಅವರೊಂದು ಹೊಳೆವ ಮುತ್ತು–**
**ಮೃತ್ತಿಕೆಗೆ ವಿನಿಮಯಿಸಿಕೊಳ್ಳಲಾಗದ ಮುತ್ತು**
**ಅವರೊಂದು ಹಿಮಶಿಖರ**
**ನೋವಿನ ಆರ್ತ ದನಿ ಕೇಳಿದ ಕೂಡಲೇ ಕರಗುವ**
**ಹಿಮಶಿಖರ.**

* * * *

# ೧೧೪. ಅಪರಿಮಿತ ಅನುಗ್ರಹ

–ಇಳಾ ಬಸು*

ಅತ್ಯಲ್ಪ ಅವಧಿಯೊಳಗೇ ಸ್ವಾಮಿ ರಂಗನಾಥಾನಂದ ಮಹಾರಾಜರ ಅಪರಿಮಿತ ಅನುಗ್ರಹಕ್ಕೆ ಪಾತ್ರರಾದವರು ನಾವು. ಕಳೆದ ಮುವತ್ತು ವರ್ಷಗಳಿಂದ ನಾನು ಪಶ್ಚಿಮ ಪ್ರಪಂಚದ ವಾಸಿಯಾಗಿದ್ದು, ಅನೇಕ ಕೇಂದ್ರಗಳಿಗೆ ಭೇಟಿ ಕೊಟ್ಟಿದ್ದೇನೆ. ಪಶ್ಚಿಮ ದೇಶಗಳ ಕೇಂದ್ರಗಳಲ್ಲಿರುವ ಸ್ವಾಮೀಜಿಗಳನ್ನು ಭೇಟಿ ಮಾಡಿದ್ದೇನೆ. ಶ್ರೀಮತ್ ಸ್ವಾಮಿ ರಂಗನಾಥಾನಂದರನ್ನು ಭೇಟಿ ಮಾಡುವುದಕ್ಕೆ ಮೊದಲು ಭಾರತ ದೇಶದ ಸ್ವಾಮೀಜಿಗಳು ಯಾರನ್ನೂ ನಾನು ಭೇಟಿಯಾಗಿರಲಿಲ್ಲ. ಅಂಥ ಅದೃಷ್ಟ ನನಗೆ ಕೂಡಿ ಬಂದಿರಲಿಲ್ಲ. ಅವರ ದರ್ಶನಭಾಗ್ಯ ಒದಗಿಬಂದುದಕ್ಕೆ ಹಿನ್ನೆಲೆಯಾಗಿ ಒಂದು ಸಣ್ಣ ಕಥೆಯೂ ಇದೆ.

೧೯೬೫ರಲ್ಲಿ ನಾನು ಸ್ವಾಮಿ ದಯಾತ್ಮಾನಂದರೊಂದಿಗೆ ಬೋಸ್ಟನ್‌ನಲ್ಲಿರುವ ರಾಮಕೃಷ್ಣ ವೇದಾಂತ ಸೊಸೈಟಿಗೆ ಭೇಟಿ ಕೊಟ್ಟಿದ್ದೆ. ಅಲ್ಲಿ ಸ್ವಾಮಿ ಸರ್ವಜ್ಞಾನಂದರ ದರ್ಶನಪಡೆದೆ. ಸ್ವಾಮಿ ಸರ್ವಜ್ಞಾನಂದರು ನನ್ನ ಮಗಳು ಉಮಾಳ ಸಂಗೀತದ ಅಭಿಮಾನಿಯಾಗಿದ್ದು ಅವಳಿಗೆ ಪ್ರೋತ್ಸಾಹದ ಚಿಲುಮೆಯಾಗಿದ್ದರು. ಆಗ ಉಮಾ ಇನ್ನೂ ಒಂಬತ್ತು ವರ್ಷದ ಬಾಲಕಿ. ಸ್ವಾಮಿ ಸರ್ವಜ್ಞಾನಂದರಲ್ಲಿ ಹೊಂದಿದ್ದ ಭಕ್ತಿ ಪ್ರೀತ್ಯಾಭಿಮಾನಗಳಿಂದಾಗಿ ನಾವು ಐದಾರು ಸಲ ಬೋಸ್ಟನ್ ಕೇಂದ್ರಕ್ಕೆ ಭೇಟಿಕೊಟ್ಟಿದ್ದೆವು. ಒಮ್ಮೆ ಇಂಥ ಭೇಟಿ ಕಾಲದಲ್ಲಿ, "ಸ್ವಾಮಿ ರಂಗನಾಥಾನಂದ ಮಹಾರಾಜ್‌ರನ್ನು ನೀವು ಭೇಟಿಯಾಗಿದ್ದೀರ?" ಎಂದು ಸ್ವಾಮಿ ಸರ್ವಜ್ಞಾನಂದರು ಕೇಳಿದರು. ಇಲ್ಲ ಎನ್ನುವುದು ನಮ್ಮ ಉತ್ತರವಾಗಿತ್ತು.

"ನೀವು ಅವರ ದರ್ಶನ ಪಡೆಯಬೇಕು. ಉಮಾ ನೀನು ಅವರೆದುರು ಹಾಡಬೇಕು. ಹಾಡಬೇಕೆಂದು ನಾನು ತಿಳಿಸಿರುವುದಾಗಿ ಅವರಿಗೆ ಹೇಳು"– ಎಂದರು ಸ್ವಾಮಿ ಸರ್ವಜ್ಞಾನಂದರು.

ಕರಾಚಿಯಲ್ಲಿ ನನ್ನ ಗುರುಗಳು, ಸ್ವಾಮಿ ಭವ್ಯಾನಂದರು, ಸ್ವಾಮಿ ಸರ್ವಜ್ಞಾನಂದರು ಹಾಗೂ ಸ್ವಾಮಿ ರಂಗನಾಥಾನಂದರು– ಇವರುಗಳ ಸಮಾಗಮವಾಗಿತ್ತು. ಕರಾಚಿ ಕೇಂದ್ರದಲ್ಲಿ ಈ ಮೂವರ ಅಪೂರ್ವ ಸಂಗಮ. ಅವರೆಲ್ಲ ಸನ್ಮಿತ್ರರಾಗಿದ್ದರು.

೧೯೬೭ರಲ್ಲಿ ನಾವು ಬೇಲೂರಿಗೆ ಹೋಗಿದ್ದೆವು. ಆಗ ಸ್ವಾಮಿ ರಂಗನಾಥಾನಂದರು ಅಲ್ಲಿ ಬಿಡಾರ ಮಾಡಿರುವ ವಿಷಯವನ್ನು ಸ್ವಾಮಿ ಪ್ರಮೇಯಾನಂದರು ನಮಗೆ ಅರುಹಿದರು ಹಾಗೂ ಅವರನ್ನು ಭೇಟಿ ಮಾಡುವ ಆಸಕ್ತಿ ಉಂಟೆ ಎಂದು ಕೇಳಿದರು. ೧೯೬೦ರಿಂದ ನಾನು ಸ್ವಾಮಿ ರಂಗನಾಥಾನಂದರ ಪ್ರವಚನದ ಧ್ವನಿಸುರುಳಿಯನ್ನು ಆಲಿಸಿದ್ದೆ. ಅವರ ಪ್ರವಚನ ಕೇಳಿದಾಗಲೆಲ್ಲ ನನ್ನ ಶರೀರದಾದ್ಯಂತ ವಿದ್ಯುತ್ ಸಂಚಾರವಾದ ಅನುಭವವಾಗುತ್ತಿತ್ತು ನನಗೆ. ಆಗ ನಾನು, ಇವರ ಉಪನ್ಯಾಸ–ಪ್ರವಚನಗಳೇ ಇಷ್ಟೊಂದು ಪ್ರಭಾವಶಾಲಿಯಾಗಿರುವಾಗ, ಇನ್ನು ಸ್ವಾಮಿ ವಿವೇಕಾನಂದರ ಉಪನ್ಯಾಸಗಳು ಎಷ್ಟು ಉದ್ದೀಪನಕಾರಿಯಾಗಿದ್ದೀತು ಎಂದು ನಾನು ಮೂಕವಿಸ್ಮಿತಳಾಗಿದ್ದೆ!

"ತಾಯಿ ಸರಸ್ವತಿ ನಿನ್ನ ನಾಲಗೆಯಲ್ಲಿ ನೆಲಸಲಿದ್ದಾಳೆ" ಎಂದು ಸ್ವಾಮಿ ಅಖಂಡಾನಂದರು, ಒಮ್ಮೆ ಸ್ವಾಮಿ ರಂಗನಾಥಾನಂದರನ್ನು ಆಶೀರ್ವದಿಸಿದ್ದರಂತೆ. ತಾಯಿ ಲಕ್ಷ್ಮೀ ಅವರಲ್ಲಿ, "ಕರಾಗ್ರೇ ವಸತೇ ಲಕ್ಷ್ಮೀ"ಯಾಗಿದ್ದಾಳೆಂದು

---

* ಲಂಡನ್ ನಿವಾಸಿಯಾದ ಭಕ್ತೆ.

ಸ್ವಾಮಿ ಸರ್ವಜ್ಞಾನಂದರು ಇನ್ನೊಮ್ಮೆ ನನಗೆ ತಿಳಿಸಿದ್ದರು. ಉಪನ್ಯಾಸಗಳನ್ನು, ಪ್ರವಚನಗಳನ್ನು ನೀಡಿ ಅವರು ಸಾವಿರಾರು ರೂಪಾಯಿ ನಿಧಿ ಸಂಗ್ರಹಿಸುತ್ತಿದ್ದರು. ನಾನು ಮಹಡಿಯ ಮೇಲಿದ್ದ ರಂಗನಾಥಾನಂದರ ಕೊಠಡಿಗೆ ಹೋದಾಗ ಇದೆಲ್ಲವನ್ನೂ ಅವರಿಗೆ ತಿಳಿಸಿದೆ. ಅದು ನಮ್ಮ ಮೊದಲ ದರ್ಶನವಾಗಿತ್ತು. ಅವರು ನಮ್ಮನ್ನು ತುಂಬ ವಾತ್ಸಲ್ಯದಿಂದ ಕಂಡರು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

೧೯೯೯ರ ಈಸ್ಟರ್‌ನಲ್ಲಿ ಉಮಾಳ ಕ್ಯಾಸೆಟ್ ಒಂದನ್ನು ಸ್ವಾಮಿ ರಂಗನಾಥಾನಂದರಿಗೆ ಕಳುಹಿಸಿಕೊಟ್ಟು ಅವರ ಆಶೀರ್ವಾದ ಕೋರಿದ್ದೆ. ಅವರು ಒಂದು ಮನೋಜ್ಞವಾದ ಪತ್ರ ಬರೆದರು. ಆ ಪತ್ರವನ್ನು ಲ್ಯಾಮಿನೇಟ್ ಮಾಡಿಸಿ, ಕಟ್ಟುಹಾಕಿಸಿ ಜೋಪಾನಮಾಡಿದ್ದೇನೆ.

ಉಮಾ ಮತ್ತು ನಾನು ೧೯೯೯ರ ಆಗಸ್ಟ್‌ನಲ್ಲಿ ಬೇಲೂರು ಮಠಕ್ಕೆ ಹೋಗಿದ್ದೆವು. ಅಧ್ಯಕ್ಷ ಮಹಾರಾಜ್ ಅವರ ಭೇಟಿಗಾಗಿ ಹೋದೆವು. "ಸ್ವಾಮಿ ಸರ್ವಜ್ಞಾನಂದರು ಉಮಾಳನ್ನು ಕಳುಹಿಸಿರುವುದಾಗಿಯೂ, ಹಾಗೆಯೇ ನಿಮ್ಮೆದುರು ಹಾಡುವಂತೆ ಅವಳಿಗೆ ಸೂಚಿಸಿದ್ದಾರೆಂದು" ಸ್ವಾಮಿ ರಂಗನಥಾನಂದರಿಗೆ ಸುದರ್ಶನ ಮಹಾರಾಜ್ ತಿಳಿಸಿದರು. ನಾವು ಸ್ವಾಮಿ ಸರ್ವಜ್ಞಾನಂದರ ನಿಕಟವರ್ತಿಗಳೆಂದೂ ತಿಳಿದು ರಂಗನಾಥಾನಂದರು ಸಂತೋಷ ವ್ಯಕ್ತಪಡಿಸಿದರು. ಸ್ವಾಮಿ ಸರ್ವಜ್ಞಾನಂದರ ಯೋಗಕ್ಷೇಮ ವಿಚಾರಿಸಿದರು. ನಂತರ ಹಾಡುವಂತೆ ಉಮಾಗೆ ಹೇಳಿದರು. ಉಮಾ "ಅಪನೀ ಕೋರಿಲೇ ಅಪನಾರ್ ಪೂಜಾ" ಹಾಡಿದಳು. ಸ್ವಾಮಿ ರಂಗನಾಥಾನಂದರು ಹಾಡು ಕೇಳಿ ತುಂಬ ಸಂತೋಷಪಟ್ಟರು ಹಾಗೂ ಪರಿಚಾರಕ ಸ್ವಾಮಿಯನ್ನು ಕರೆದು ಬಂಗಾರದ ಉಂಗುರವನ್ನು ತರುವಂತೆ ಅಪ್ಪಣೆ ಮಾಡಿದರು. ಸೇವಕ್ ಮುರುಳಿ ಮಹಾರಾಜರ ಪುಟ್ಟ ಪೆಟ್ಟಿಗೆಯೊಳಗಿದ್ದ ಉಂಗುರವನ್ನು ತಂದು ರಂಗನಾಥಾನಂದರ ಕೈಗಿತ್ತರು. ಅಧ್ಯಕ್ಷ ಮಹಾರಾಜ್ ಅದನ್ನು ಉಮಾಳಿಗಿತ್ತು ಬೆರಳಲ್ಲಿ ಧರಿಸುವಂತೆ ಸೂಚಿಸಿದರು. ಅಂದು ದೀಕ್ಷಾದಿನವಾಗಿತ್ತು. ಶಿಷ್ಯರೊಬ್ಬರು ಮಹಾರಾಜ್‌ಗೆ ಉಂಗುರದ ಕಾಣಿಕೆ ಅರ್ಪಿಸಿದ್ದರು. ಉಂಗುರದ ಮೇಲೆ 'ಜೈ ಗುರುದೇವ್' ಎಂದು ಕೆತ್ತಲಾಗಿತ್ತು. ನಮಗೆ ಅಪಾರ ಸಂತೋಷವಾಗಿತ್ತು. ಆ ಹಿಗ್ಗು–ಸಂತೋಷಗಳನ್ನು ವ್ಯಕ್ತಪಡಿಸಲು ಬಾಯಿಂದ ಮಾತೇ ಹೊರಡಲಿಲ್ಲ. ಪದಗಳೇ ಇಲ್ಲದಂತಾಗಿತ್ತು.

ಸ್ವಲ್ಪ ಸಮಯದಲ್ಲೇ ನಾವು ಢಾಕಾ ಕೇಂದ್ರಕ್ಕೆ ಹೋದೆವು. ಉಮಾಗೆ ವಾಂತಿ, ಹೊಟ್ಟೆನೋವು ಶುರುವಾಯಿತು. ಹೀಗಾಗಿ ಅಲ್ಲಿ ಅವಳಿಂದ ಹಾಡಲಾಗಲಿಲ್ಲ. ಬೇಲೂರು ಮಠಕ್ಕೆ ವಾಪಾಸಾದಾಗ ಉಮಾಳ ಅನಾರೋಗ್ಯವನ್ನೂ, ಅವಳಿಂದ ಢಾಕಾದಲ್ಲಿ ಹಾಡಲಾಗಲಿಲ್ಲ ಎಂಬುದನ್ನೂ ನಾನು ಅಧ್ಯಕ್ಷ ಮಹಾರಾಜ್‌ಗೆ ನಿವೇದಿಸಿದೆ. ಇದರಿಂದ ಉಮಾಳ ಮನಸ್ಸಿಗೆ ತುಂಬ ಬೇಜಾರಾಗಿದೆಯೆಂಬುದನ್ನೂ ಹೇಳಿದೆ. "ಚಿಂತಿಸದಿರು, ಬೇಸರಬೇಡ" ಎಂದು ಮಹಾರಾಜ್ ಉಮಾಗೆ ಸಮಾಧಾನ ಹೇಳಿದರು. ಅವತ್ತು ಉಮಾ "ದೇವೀ ಪ್ರಸನ್ನವದನೇ" ಹಾಡಿದಳು. ಸ್ವಾಮೀಜಿ ಹಾಡನ್ನು ಕೇಳಿ ಆನಂದಪಟ್ಟರು.

೨೦೦೦ದ ಡಿಸೆಂಬರ್‌ನಲ್ಲಿ ನಾವು ಮತ್ತೆ ಬೇಲೂರು ಮಠಕ್ಕೆ ಭೇಟಿ ಕೊಟ್ಟಿದ್ದೆವು. ನಾವು ಬೇಲೂರಿನಲ್ಲೊಂದು ಫ್ಲ್ಯಾಟ್ ಖರೀದಿಸಿದ್ದೆವು. ಅಧ್ಯಕ್ಷ ಮಹಾರಾಜ್‌ರನ್ನು ಭೇಟಿ ಮಾಡಿದಾಗ ಉಮಾ "ಬಲರೇ ಜಬ ಬಲ" ಹಾಡಿದಳು. ಶಾರದಾ ಮಠದ ಕೆಲವು ಸಂನ್ಯಾಸಿನಿಯರೂ ಆಗ ಅಲ್ಲಿದ್ದರು. ಬೇಲೂರಿನಲ್ಲಿ ಫ್ಲಾಟ್ ಖರೀದಿಸಿರುವ ವಿಷಯವನ್ನು ಸ್ವಾಮೀಜಿಯವರಿಗೆ ತಿಳಿಸಿದೆ. "ಭಕ್ತರೆಲ್ಲರೂ ಮನೆಗಳನ್ನು ಖರೀದಿಸಿ ಬೇಲೂರು ಮಠದ ಆಸುಪಾಸಿನಲ್ಲೇ ವಾಸಮಾಡುವರೆಂದು ಸ್ವಾಮಿ ವಿವೇಕಾನಂದರು ಭವಿಷ್ಯ ನುಡಿದಿದ್ದರು. ಅದು ಇಂದು ನಿಜವಾಗಿದೆ" ಎಂದರು ಸ್ವಾಮೀಜಿ.

ಒಂದು ಸಂಜೆ ನಾನು ರಜನೀಗಂಧ ಹೂವಿನ ಮಾಲೆಯನ್ನೂ, ಕೆಂಪು ಗುಲಾಬಿ ಹೂವುಗಳನ್ನೂ ಕಾಳೀ ದೇವಾಲಯದಿಂದ ತಂದು ಸ್ವಾಮೀಜಿಯವರ ಪವಿತ್ರ ಪಾದಯುಗ್ಮಗಳಲ್ಲಿ ಅರ್ಪಿಸಿದೆ. ಅವರು ಹೂಮಾಲೆಯನ್ನು

ಉಮಾಳ ಕೊರಳಿಗೆ ಹಾಕಿ, ಒಂದು ಫೋಟೊ ತೆಗೆಯುವಂತೆ ಸೇವಕ ಮುರಳಿ ಮಹಾರಾಜ್‌ಗೆ ತಿಳಿಸಿದರು. ಅವರ ಕೃಪೆಯಿಂದ ನಾವು ಆನಂದತುಂದಿಲರಾದೆವು. ಸ್ವಾಮೀಜಿಯವರು, ಕಥಾಮೃತದ ಸ್ಮರಣೀಯ ಆವೃತ್ತಿಯನ್ನಿತ್ತು ಉಮಾಳನ್ನು ಹರಸಿದರು. "ಉಮಾಗೆ, ಪ್ರೀತ್ಯಾಶೀರ್ವಾದ ಪೂರ್ವಕ" ಎಂದು ಸುದರ್ಶನ್ ಮಹಾರಾಜ್ ಬರೆದು ಪುಸ್ತಕವನ್ನು ತಂದಿದ್ದರು. ಸ್ವಾಮೀಜಿಯವರು "ಶ್ರೀ ಉಮಾ" ಎಂದು ಬರೆದು ಸಹಿ ಮಾಡಿಕೊಟ್ಟರು.

ಅಮೆರಿಕದ ರೀಟಾ ಮೆಲೋಮ್ ಸ್ವಾಮಿ ರಂಗನಾಥಾನಂದರ ನಿಕಟವರ್ತಿ ಭಕ್ತೆ. ನಾವಿದ್ದ ಅಂತಸ್ತಿನಲ್ಲೇ ಆಕೆಯೂ ಒಂದು ಫ್ಲಾಟ್ ಖರೀದಿಸಿದ್ದರು. ರೀಟಾಳ ಫ್ಲಾಟಿಗೆ ಬರುವುದಾಗಿ ಮಹಾರಾಜ್ ಹೇಳಿದ್ದರು. ನಾವು ಡಿಸೆಂಬರ್ ೩೦ರಂದು ವಾಪಸಾಗಲಿದ್ದೆವು. ರೀಟಾ ಫೆಬ್ರುವರಿವರೆಗೆ ಇರುವ ಉದ್ದೇಶ ಹೊಂದಿದ್ದಳು. ಮಹಾರಾಜ್ ಅವರನ್ನು ನನ್ನ ಫ್ಲಾಟಿಗೆ ಕರೆದೊಯ್ಯಲು ನಾನಿರುವುದಿಲ್ಲವಲ್ಲ ಎಂದು ನನಗೆ ಬೇಸರವಾಯಿತು. ನಾನು ಸ್ವಾಮಿ ಪ್ರಮೇಯಾನಂದರನ್ನು ಕಂಡು, ಅಧ್ಯಕ್ಷ ಮಹಾರಾಜ್ ರೀಟಾಳ ಫ್ಲಾಟಿಗೆ ಭೇಟಿಕೊಟ್ಟಾಗ ಅವರನ್ನು ನನ್ನ ಫ್ಲಾಟಿಗೂ ಕರೆದುಕೊಂಡುಬರುವಂತೆ ವಿನಂತಿಸಿದೆ. ನಿಜಕ್ಕೂ, ದೇವರ ದಯೆಯಿಂದ, ಮಹಾರಾಜ್ ರೀಟಾಳ ಫ್ಲಾಟಿಗೆ ಭೇಟಿಕೊಟ್ಟಾಗ ನಮ್ಮ ಫ್ಲಾಟಿಗೂ ಬಂದಿದ್ದರು. "ಅವರನ್ನು ಪ್ರತಿಯೊಂದು ಕೊಠಡಿಗೂ ಕರೆದೊಯ್ದು ತೋರಿಸಿದೆ. ಅವರು ತುಂಬ ಸಂತಸಪಟ್ಟರು" ಎಂದು ಸ್ವಾಮಿ ಪ್ರಮೇಯಾನಂದರು ನಂತರ ನನಗೆ ತಿಳಿಸಿದರು. ಆಗ ನರೇನ್ ಮಹಾರಾಜ್ ನುಡಿದರು: "ಭಕ್ತೆಯೊಬ್ಬಳು ಮನೆಯಲ್ಲಿಲ್ಲದ ವೇಳೆಯಲ್ಲಿ ಅಧ್ಯಕ್ಷ ಮಹರಾಜ್ ಅವರ ಮನೆಗೆ ಭೇಟಿಕೊಟ್ಟಿರುವುದು ಇದೇ ಮೊದಲು." ಆಗ ಅವರ ಆರೋಗ್ಯ ಚೆನ್ನಾಗಿರಲಿಲ್ಲ. ಲಿಫ್ಟ್ ಇನ್ನೂ ಸಿದ್ಧವಾಗಿರಲಿಲ್ಲ. ಅವರು ಮೆಟ್ಟಿಲುಗಳನ್ನು ಹತ್ತಿಕೊಂಡೇ ನನ್ನ ಫ್ಲಾಟಿಗೆ ಬಂದಿದ್ದರು. ಇದು ಭಕ್ತರ ಬಗ್ಗೆ ಸ್ವಾಮಿ ರಂಗನಾಥಾನಂದರ ಪ್ರೀತಿವಾತ್ಸಲ್ಯಗಳ 'ಅಹೇತುಕ ಕೃಪೆ'.

* * * *

# ೧೧೫. ನನ್ನ ಅನುಕರಣೀಯ ಆದರ್ಶ

**–ಎಂ.ಕೆ.ಸತ್ಯನಾರಾಯಣ ರಾಜು***

೨೦ ಅಕ್ಟೋಬರ್ ೧೯೯೫.

ಅಂದು ನನ್ನ ಪಾಲಿನ ಮಹಾಸುದಿನ. ಅವತ್ತು ವಿಶಾಖಪಟ್ಟಣದ ವಿಮಾನ ನಿಲ್ದಾಣದಿಂದ ಸ್ವಾಮಿ ರಂಗನಾಥಾನಂದರನ್ನು ರಾಮಕೃಷ್ಣಾಶ್ರಮಕ್ಕೆ ಕರೆತರುವ ಕಾರನ್ನು ಡ್ರೈವ್ ಮಾಡುವ ಸೌಭಾಗ್ಯ ನನ್ನದಾಗಿತ್ತು.

೧೯ರಂದು ಸಂಜೆಯೇ ಭಕ್ತರೆಲ್ಲ ಸಭೆ ಸೇರಿ ಸ್ವಾಮಿ ರಂಗನಾಥಾನಂದರ ಸ್ವಾಗತ ಸಮಾರಂಭದ ಕಾರ್ಯಕ್ರಮವನ್ನು ರೂಪಿಸಿದ್ದರು. ಸ್ವಾಮೀಜಿಯವರನ್ನು ನನ್ನ ಹೊಸ ಕಾರಿನಲ್ಲಿ ವಿಮಾನ ನಿಲ್ದಾಣದಿಂದ ಕರೆತರಲು ನನಗೆ ಅವಕಾಶ ಮಾಡಿಕೊಡುವಂತೆ ಸಭೆಯಲ್ಲಿ ವಿನಂತಿ ಮಾಡಿದೆ. ಆದರೆ, ನನಗಿಂತ ಹಿರಿಯರಾದ ಭಕ್ತರೊಬ್ಬರು ಇದೇ ಆಶಯ ಹೊಂದಿದ್ದರು. ಆದರೆ ಮರುದಿನ ಬೆಳಿಗ್ಗೆ ವಿಮಾನ ನಿಲ್ದಾಣಕ್ಕೆ ಹೋಗಬೇಕಾಗಿದ್ದ ಹಿರಿಯ ಭಕ್ತರು ಫೋನ್ ಮಾಡಿ, ತಮಗೇನೋ ತೊಂದರೆಯುಂಟಾಗಿರುವುದರಿಂದ ಸ್ವಾಮೀಜಿಯವರನ್ನು ನಾನೇ ಕರೆತರಬೇಕೆಂದು ಹೇಳಿದರು. ಆಶ್ರಮದ ಕಾರ್ಯದರ್ಶಿಗಳಾದ ಸ್ವಾಮಿ ತತ್ತ್ವಬೋಧಾನಂದರೊಂದಿಗೆ, ಪೂಜ್ಯ ಸ್ವಾಮಿ ರಂಗನಾಥಾನಂದರನ್ನು ಬರಮಾಡಿಕೊಳ್ಳಲು ನಾನು ವಿಮಾನ ನಿಲ್ದಾಣಕ್ಕೆ ತೆರಳಿದೆ. ಹೀಗೆ ನನ್ನ ಮೊದಲ ಆಸೆ ಈಡೇರಿತು.

ಕಾರು ಓಡಿಸುತ್ತಿದ್ದಾಗ ಸ್ವಾಮಿ ರಂಗನಾಥಾನಂದರೊಂದಿಗೆ ಒಂದಿಷ್ಟು ಸಂಭಾಷಣೆ ನಡೆಸಿದೆ. ನನಗೆ ನೆನಪಿದೆ. ನನ್ನಂಥ ಮಾಂಸಾಹಾರಿಗಳು ದೀಕ್ಷೆ ಸ್ವೀಕರಿಸಲು ಅರ್ಹರೇ ಅಥವಾ ಇಲ್ಲವೇ ಎಂದು ಪ್ರಶ್ನಿಸಿದೆ.

ನನ್ನ ಪ್ರಶ್ನೆಗೆ ಉತ್ತರವಾಗಿ ಸ್ವಾಮಿ ರಂಗನಾಥಾನಂದರು ಹೀಗೆ ನುಡಿದರು:

"ಆಧ್ಯಾತ್ಮಿಕ ಪ್ರಗತಿಯ ಪಥದಲ್ಲಿ ಆಹಾರ ಅಭ್ಯಾಸಗಳು ಅಡ್ಡಿಯಾಗುವುದಿಲ್ಲ. ಕೆಲವರು ಸಸ್ಯಾಹಾರಿಗಳಿದ್ದಾರೆ; ಮನದಾಳದಲಿ ಅವರು ಕ್ರೂರಿಗಳು. ಹಾಗೆಯೇ ಮಾಂಸಾಹಾರಿಗಳಲ್ಲಿ ಮೃದು ಸ್ವಭಾವದವರೂ, ದಯಾಳುಗಳೂ ಇದ್ದಾರೆ. ನೀವು ಪ್ರಕೃತಿಯಿಂದ ನೇರವಾಗಿ ಸಸ್ಯಾಹಾರ ಸೇವಿಸಿ. ನೀವು ತಿನ್ನುವ ಪ್ರಾಣಿಪಕ್ಷಿಗಳು ಪ್ರಕೃತಿಯಿಂದ ಆಹಾರ ಸೇವಿಸುತ್ತವೆ. ಅಂದರೆ ನೀವು ಊಟಮಾಡುತ್ತಿರುವುದು ದ್ವಿತೀಯ ಮೂಲದ ಆಹಾರ. ಪ್ರಾಣಿಗಳ ಮುಖೇನ ಪ್ರಕೃತಿಯ ಆಹಾರ ಮೆಲ್ಲುವ ಬದಲು ನೇರವಾಗಿ ಪ್ರಕೃತಿಯಿಂದಲೇ ಪಡೆದು ಊಟಮಾಡಬಹುದಲ್ಲ. ಆಗ ಅದು ತಾಜಾ ಆಹಾರವಾಗಿರುತ್ತದೆ. ದ್ವಿತೀಯ ಮೂಲದ ಆಹಾರಕ್ಕಿಂತ ಅದು ಉತ್ತಮ ಅಲ್ಲವೆ? ಆದರೆ ಆಗ್ರಹಪೂರ್ವಕವಾಗಿ ಮಾಂಸಾಹಾರ ತ್ಯಜಿಸಬೇಡಿ. ಮಾಂಸಾಹಾರ ನಿಮಗೆ ಪ್ರಿಯವಾದಲ್ಲಿ ಅದನ್ನೇ ಊಟ ಮಾಡಿ."

"ರಾಮಕೃಷ್ಣ ಮತ್ತು ವಿವೇಕಾನಂದರ ಪುಸ್ತಕಗಳನ್ನು ನೀವು ಓದಿರುವಿರಾ?" ಎಂದು ಸ್ವಾಮೀಜಿ ನನ್ನನ್ನು ಕೇಳಿದರು. ನಾನು ಹೌದೆಂದು ಉತ್ತರಿಸಿದೆ. ನಮ್ಮ ಹಳ್ಳಿಯಲ್ಲಿ ೧೯೭೭ರಲ್ಲೇ ನಾವು ರಾಮಕೃಷ್ಣ ಸಾಂಸ್ಕೃತಿಕ ಸಂಘವನ್ನು ಸ್ಥಾಪಿಸಿದ್ದೆವು. ಅವರ ಬೋಧನೆಗಳಿಂದ ನಾನು ಆಕರ್ಷಿತನಾಗಿದ್ದೇನೆ ಎಂದೂ ತಿಳಿಸಿದೆ. ನಾನು ಮಾತು ಕೇಳಿದ ನಂತರ ಪೂಜ್ಯ ಸ್ವಾಮೀಜಿ ಹೇಳಿದರು:

---

* ಆಂಧ್ರ ಪ್ರದೇಶದ ವಿಶಾಖಪಟ್ಟಣದ ಭಕ್ತರು.

"ನೀನು ದೀಕ್ಷೆ ಪಡೆದುಕೊಳ್ಳಲು ಯೋಗ್ಯನಿದ್ದೀಯೆ. ನಾಳೆ ದೀಕ್ಷೆ ಸ್ವೀಕರಿಸು" ಅದರಂತೆಯೇ ಅವರು ನನಗೆ ದೀಕ್ಷೆ ಕೊಟ್ಟರು.

ನಮ್ಮದೊಂದು ಕೋಳಿಸಾಕಣೆ ಕೇಂದ್ರ ಹಾಗೂ ಸೀಗಡಿ ಸಾಕಣೆ ಕೇಂದ್ರವಿತ್ತು. ಒಂದು ದಿನ ನನ್ನ ತಾಯಿ ನನಗೆ ಹೇಳಿದರು:

"ನೀನು ಆಧ್ಯಾತ್ಮಿಕ ಮಾರ್ಗ ಹಿಡಿದಿದ್ದೀಯೆ. ಆದರೆ ನೀನು ಪಾಲಿಸಿ ಪೋಷಿಸುತ್ತಿರುವ ಸೀಗಡಿಗಳನ್ನೆಲ್ಲ ಕೊಲ್ಲುತ್ತಿದ್ದೀಯೆ. ಇದು ಹಿಂಸೆ. ನೀನು ಹಿಂಸಾಚಾರ ನಡೆಸುತ್ತಿದ್ದೀಯೆ."

ಪೂಜ್ಯ ಸ್ವಾಮೀಜಿಯವರ ಸಲಹೆ ಪಡೆಯುವುದಾಗಿ ನಾನು ನನ್ನ ಅಮ್ಮನಿಗೆ ತಿಳಿಸಿದೆ.

ರಾಮಕೃಷ್ಣ ಮಿಷನ್ನಿನ ವಸ್ತುಸಂಗ್ರಹಾಲಯ ಮತ್ತು ಗ್ರಂಥ ಭಂಡಾರದ ಉದ್ಘಾಟನೆಗಾಗಿ ಸ್ವಾಮಿ ರಂಗನಾಥಾನಂದರು ವಿಶಾಖಪಟ್ಟಣಕ್ಕೆ ಆಗಮಿಸಿದಾಗ ನನಗೆ ಅವರೊಡನೆ ಈ ವಿಷಯ ಮಾತನಾಡುವ ಅವಕಾಶ ಒದಗಿ ಬಂತು. ಸೀಗಡಿಗಳನ್ನು ಸಾಕಿ ಬೆಳಸಿ, ಅವುಗಳ ಆಯುಷ್ಯಾವಧಿ ಮುಗಿಯುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ಅನ್ಯರಾಷ್ಟ್ರಗಳಿಗೆ ರಫ್ತು ಮಾಡುತ್ತಿರುವ ನಮ್ಮ ಉದ್ಯಮದ ವಿಚಾರವನ್ನು ಅವರಿಗೆ ಅರುಹಿದೆ.

ನಾನು ಮಾತು ಮುಗಿಸಿದನಂತರ ಸ್ವಾಮಿ ರಂಗನಾಥಾನಂದರು ಹೀಗೆ ನುಡಿದರು:

"ನಮ್ಮದು ಬಡ ದೇಶ. ಯಾರು ವಿದೇಶಿ ವಿನಿಮಯ ಸಂಪಾದಿಸುತ್ತಿರುವರೋ ಅವರು ದೇಶಕ್ಕೆ ಸೇವೆಯನ್ನೇ ಮಾಡುತ್ತಿದ್ದಾರೆ." ಇಷ್ಟು ಹೇಳಿದ ನಂತರ, ಒಂದು ಉದಾಹರಣೆಯನ್ನೆತ್ತಿಕೊಂಡು ಅವರು ಮಾತು ಮುಂದುವರಿಸಿದರು:

"ಸಿಮ್ಲಾದಲ್ಲಿ ಸೇಬು ಬೆಳೆಯಲಾಗುತ್ತಿದೆ. ಆದರೆ, ಇಪ್ಪತ್ತು ದಿನ ಮುಂಚಿತವಾಗಿ ಸೇಬನ್ನು ಗಿಡದಿಂದ ಕಿತ್ತು ಬೇರೆಡೆಗಳಿಗೆ ಸಾಗಿಸಿದಲ್ಲಿ ಮಾತ್ರ ಅದು ಉಪಯುಕ್ತ ಆಹಾರವಾಗುತ್ತದೆ. ಕೀಳುವಾಗ ಗಿಡಗಳಿಗೆ ಸ್ವಲ್ಪ ನೋವಾಗುತ್ತದೆ ಎನ್ನುವುದು ನಿಜ. ಆದರೆ ಕೀಳದೇ ಬಿಟ್ಟರೆ ಸೇಬು ಸಂಪೂರ್ಣ ಕಳಿತು ನೆಲಕ್ಕೆ ಉದುರಿ ಬೀಳುತ್ತದೆ. ಆಗ ಅದು ಆಹಾರವಾಗಿ ನಿರುಪಯುಕ್ತ. ಹೀಗಾದಲ್ಲಿ ಗಿಡವಾಗಲಿ, ಹಣ್ಣಾಗಲೀ ತಮ್ಮ ಜನ್ಮವನ್ನು ಪಾವನಗೊಳಿಸಿದಂತಾಗುವುದಿಲ್ಲ. ಹಾಗೆಯೇ ಸೀಗಡಿಯೂ ತನ್ನಷ್ಟಕ್ಕೇ ಸಾಯುತ್ತದೆ. ಅದರ ದೇಹವನ್ನು ಆಹಾರವಾಗಿ ಇತರರು ಬಳಸಿದಾಗ ಅದರ ಜೀವನದ ಗುರಿ ಈಡೇರಿದಂತಾಗುತ್ತದೆ. ಅದರ ಬದುಕು ಸಾರ್ಥಕವಾದಂತಾಗುತ್ತದೆ. ಪ್ರಪಂಚದಲ್ಲಿ ಎಲ್ಲವೂ ಇನ್ನೊಬ್ಬರಿಗೆ ಒಂದಲ್ಲ ಒಂದು ರೀತಿ ಆಹಾರವೇ. ಅಹಿಂಸೆ ಎಂದರೆ, ನಿಮ್ಮ ಆಲೋಚನೆ–ಚಿಂತನೆ, ಮಾತು, ಕೃತಿಗಳಲ್ಲಿ ಬೇರೆಯವರನ್ನು ನೋಯಿಸಬಾರದು ಎಂದು ಅರ್ಥ."

ಹೀಗೆ ಇಡಿಯಾಗಿ ವಿಷಯವನ್ನು ವಿವರಿಸಿದ ನಂತರ ಸ್ವಾಮೀಜಿಯವರು ಸೀಗಡಿ ಸಾಕಣೆ ಮುಂದುವರಿಸುವಂತೆ ನನಗೆ ಉಪದೇಶಿಸಿದರು.

ಹೀಗೆ, ಲೌಕಿಕ ವಿಷಯಗಳಿರಲೀ ಆಧ್ಯಾತ್ಮಿಕವಿರಲಿ ಎಲ್ಲದರಲ್ಲೂ ಸ್ವಾಮಿ ರಂಗನಾಥಾನಂದರು ನನಗೆ ಮಾದರಿ, ನನ್ನ ಆದರ್ಶ.

* * * *

# ೧೧೬. ಮಾನವ ಧರ್ಮದ ಜೀವಂತ ಪ್ರತೀಕ

–ಸುಬ್ರತ ಮೈತ್ರ*

ಪರಮ ಪೂಜ್ಯ ಸ್ವಾಮಿ ರಂಗನಾಥಾನಂದರನ್ನು ನೆನಪಿಸಿಕೊಳ್ಳಲು ಪ್ರಯತ್ನಿಸಿದಾಗಲೆಲ್ಲ ಅವರ ಅಪರಿಮಿತ ಕೃಪೆ, ಆಶೀರ್ವಾದಗಳು ನಮ್ಮನ್ನು ಭಾವಪರವಶರನ್ನಾಗಿಸುತ್ತವೆ. ನನ್ನಂಥ ಒಬ್ಬ ವಿನಮ್ರ ವೈದ್ಯನಿಗೆ ಹೇಗೆ ಅವರ ಪಾದಕಮಲಗಳಲ್ಲಿ ಆಶ್ರಯ ಸಿಕ್ಕಿತು ಎಂದು ಯೋಚಿಸಿದಾಗಲೆಲ್ಲ ನಾನು ಧನ್ಯನಾದೆ, ಪುನೀತನಾದೆ ಎಂಬ ಭಾವನೆ ನನ್ನಲ್ಲಿ ಮೂಡುತ್ತದೆ. ಅಂಥ ಮಹಾನುಭಾವರ ಬಗ್ಗೆ ಬರೆಯುವುದು ನನ್ನಂಥ ಸಾಮಾನ್ಯನಿಂದ ಅಸಾಧ್ಯವೆನ್ನಿಸಿದರೂ, ಕಳೆದ ಏಳು ವರ್ಷಗಳ ಅವರ ಜೀವಿತಾವಧಿಯಲ್ಲಿ ನಾನು ಅವರನ್ನು ಕಂಡಂತೆ ಬರೆಯುವ ಪ್ರಯತ್ನ ಮಾಡಿದ್ದೇನೆ; ನನ್ನ ಶಕ್ತಿಮೀರಿ ಪ್ರಯತ್ನಿಸಿದ್ದೇನೆ.

೧೯೯೮ರ ಮಧ್ಯಭಾಗದಲ್ಲಿ ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ ಸ್ವಾಮೀಜಿಯವರನ್ನು ವುಡ್‌ಲ್ಯಾಂಡ್ಸ್ ನರ್ಸಿಂಗ್ ಹೋಮಿನ ತೀವ್ರ ನಿಗಾ ಘಟಕಕ್ಕೆ ಸೇರಿಸಲಾಯಿತು. ಮೂತ್ರಪಿಂಡ ಕಾಯಿಲೆಯೂ ಸೇರಿಕೊಂಡು ಅವರ ಆರೋಗ್ಯ ಸ್ಥಿತಿ ಉಲ್ಬಣಿಸಿತು. ಅದೇ ಸಮಯದಲ್ಲಿ ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಮಿಷನ್ನಿನ ಹನ್ನೆರಡನೇ ಅಧ್ಯಕ್ಷರಾದ ಸ್ವಾಮಿ ಭೂತೇಶಾನಂದರೂ ತೀವ್ರವಾಗಿ ಅನಾರೋಗ್ಯಗೊಂಡಿದ್ದು ಅವರನ್ನು ಬೇರೊಂದು ಆಸ್ಪತ್ರೆಗೆ ಸೇರಿಸಲಾಗಿತ್ತು. ಮಠದೊಂದಿಗೆ ಸಂಬಂಧ ಹೊಂದಿದ್ದ ಎಲ್ಲ ಹಿರಿಯ ವೈದ್ಯರುಗಳೂ ಅವರ ಬಗ್ಗೆ ನಿಗಾ ವಹಿಸಿದ್ದರು. ಹೀಗಾಗಿ ಸ್ವಾಮಿ ರಂಗನಾಥಾನಂದರನ್ನು ನೋಡಿಕೊಳ್ಳುವ ಸಕಲ ಹೊಣೆಯೂ ನನ್ನ ಮೇಲೆ ಬಿತ್ತು. ಸಹಜವಾಗಿಯೇ ನನಗೆ ಯೋಚನೆಗಿಟ್ಟಿಕೊಂಡಿತು. ಅನಾರೋಗ್ಯದಿಂದ ಬಳಲುತ್ತಿದ್ದಾಗ್ಯೂ ಗುರುದೇವರಿಗೆ ನನ್ನ ಭಾವನೆಗಳು ಅರ್ಥವಾಗುತ್ತಿದ್ದವು. "ಯೋಚಿಸದಿರು. ನಾನು ಗುಣಮುಖನಾಗುವೆ" ಎಂದು ಅವರು ಹೇಳಿದರು. ಇದು ಅವರ ಮನೋಭಾವ. ತಮ್ಮ ದೈಹಿಕ ಸ್ಥಿತಿ ಬಗ್ಗೆ ಚಿಂತೆ ಬೇಡ ಎಂದು ಹೇಳಿ ಅವರು ನಮ್ಮ ವೈದ್ಯಕೀಯ ತಂಡದಲ್ಲಿ ಧೈರ್ಯ ತುಂಬಿದರು. ನಮ್ಮನ್ನೆಲ್ಲ ಹುರಿದುಂಬಿಸಿದರು.

ಏತನ್ಮಧ್ಯೆ ಸ್ವಾಮಿ ಭೂತೇಶಾನಂದರು ಸ್ವರ್ಗಸ್ಥರಾದರು. ಅವರಿಂದ ತೆರವಾದ ಪೀಠಕ್ಕೆ ಸ್ವಾಮಿ ರಂಗನಾಥಾನಂದರು ಬಂದರು. ಈ ಸುದ್ದಿ ತಿಳಿದಾಗ ಸ್ವಾಮಿ ರಂಗನಥಾನಂದರು ಹೀಗೆ ಉದ್ಗರಿಸಿದರು: "ಅಡುಗೆಯವನೊಬ್ಬ ಮಠದ ಹಾಗೂ ಮಿಷನ್ನಿನ ಅಧ್ಯಕ್ಷ ಪದವಿಗೇರಿದ್ದಾನೆ. ಎಲ್ಲ ಶ್ರೀ ರಾಮಕೃಷ್ಣರ ಕೃಪೆ." ಪ್ರಕಾಂಡ ಪಂಡಿತರೂ, ವಿಶ್ವವಿಖ್ಯಾತ ವಾಗ್ಮಿಗಳೂ ಆದ ಸಂನ್ಯಾಸಿಯ ಈ ವಿನಯಪೂರ್ಣ ಉದ್ಗಾರ ಕೇಳಿ ನಾವೆಲ್ಲ ಪರಮಾಶ್ಚರ್ಯದಿಂದ ಚಕಿತರಾದೆವು. ಆಸ್ಪತ್ರೆಯಲ್ಲಿ ಕೆಲವು ದಿನಗಳ ಚಿಕಿತ್ಸೆಯಿಂದ ಗುರುದೇವರು ಪವಾಡಸದೃಶವಾಗಿ ಚೇತರಿಸಿಕೊಂಡರು. ಚಿಕಿತ್ಸೆ ಕಾಲದಲ್ಲಿ ಅವರೊಡನೆ ನಮಗೆ ಲಭಿಸಿದ ಒಡನಾಟ ಒಂದು ಅಮೂಲ್ಯ ನಿಧಿಯಿದ್ದಂತೆ. ಅದು ನಮ್ಮ ಆಯುಷ್ಯಪೂರ್ತಿ ನಮ್ಮ ನೆನಪಿನ ಸಂಪುಟದಲ್ಲಿ ಉಳಿಯುವ ಅಮೂಲ್ಯ ನಿಧಿ. ಅನಾರೋಗ್ಯದ ಯಾತನೆ ಹೆಚ್ಚಾದಾಗಲೂ ಅವರು ತಮ್ಮ ಕಷ್ಟ–ನೋವುಗಳನ್ನು ಹೇಳಿಕೊಳ್ಳಲಿಲ್ಲ. ಆ ಬಗ್ಗೆ ಮಾತನಾಡಲಿಲ್ಲ. ಪ್ರತಿಯಾಗಿ ಅವರು ತಮ್ಮ ಆರೈಕೆ ನೋಡಿಕೊಳ್ಳುತ್ತಿದ್ದ ವೈದ್ಯರು, ಕಾಯಚಿಕಿತ್ಸಕರು

---

* ಕೊಲ್ಕತ್ತಾ ವುಡ್‌ಲ್ಯಾಂಡ್ಸ್ ನರ್ಸಿಂಗ್ ಹೋಮ್‌ಗೆ ಸೇರಿದವರಾದ ಸ್ವಾಮಿ ರಂಗನಾಥಾನಂದರ ಖಾಸಾ ವೈದ್ಯರು (೧೯೯೮–೨೦೦೦)

(physiotherapist), ಪಥ್ಯಶಾಸ್ತ್ರಜ್ಞರು (dietician), ಮೊದಲ್ಗೊಂಡಂತೆ ನಮ್ಮೆಲ್ಲರ ಸಂಘಟಿತ ಪ್ರಯತ್ನವನ್ನು, ಕೆಲಸ ಕಾರ್ಯಗಳನ್ನು ಪ್ರಶಂಸಿಸುತ್ತಿದ್ದರು. ಎಲ್ಲ ಹಂತಗಳಲ್ಲಿ ದುಡಿಯುವ ಕೆಲಸಗಾರರಿಗೆ ಮಹತ್ವ, ಮರ್ಯಾದೆ ನೀಡಬೇಕೆಂಬುದು ಅವರ ಧೋರಣೆಯಾಗಿತ್ತು.

ಆಸ್ಪತ್ರೆಯಿಂದ ಮಠಕ್ಕೆ ಕಳುಹಿಸುವ ಮುನ್ನ ಸ್ವಾಮೀಜಿಯವರು ಕೆಲವು ದಿನ ಆಸ್ಪತ್ರೆಯ ಕೈಸಾಲೆಯಲ್ಲಿ ಓಡಾಡುವುದು ಅವರ ಆರೋಗ್ಯದ ದೃಷ್ಟಿಯಿಂದ ಅಗತ್ಯವೆನಿಸಿತ್ತು. ಆಗ, ತೊಂಬತ್ತರ ಆ ವೃದ್ಧಾಪ್ಯದಲ್ಲೂ ಅವರ ಬಿರುಸಿನ ನಡಿಗೆ ಕಂಡು, ಅದರಲ್ಲೂ ತೀವ್ರ ಅನಾರೋಗ್ಯದಿಂದ ಗುಣಮುಖರಾದ ಕೂಡಲೇ ಚುರುಕಿನಿಂದ ನಡೆಯುವುದನ್ನು ಕಂಡು ನಾವು ಆಶ್ಚರ್ಯಚಕಿತರಾದೆವು. ನಡೆಯುವಾಗ, ಕಾಯಚಿಕಿತ್ಸಕರ ಕೈಹಿಡಿದುಕೊಂಡು ಅವರ ನೆರವಿನಿಂದ ನಡೆಯುವುದು ಸ್ವಾಮೀಜಿಯವರಿಗೆ ಇಷ್ಟವಾಗುತ್ತಿರಲಿಲ್ಲ. ಅವರಿಗೆ ಆತ್ಮವಿಶ್ವಾಸವಿತ್ತು. ಆತ್ಮವಿಶ್ವಾಸದಿಂದ ಸ್ವಾವಲಂಬಿಗಳಾಗಿರುವಂತೆ ಅವರು ಪ್ರತಿಯೊಬ್ಬರಿಗೂ ಉಪದೇಶಿಸುತ್ತಿದ್ದರು. ಅವರು ಉಪನ್ಯಾಸ–ಬರಹಗಳಲ್ಲೂ ಇದನ್ನೇ ಹೇಳುತ್ತಿದ್ದರು. ಈ ಬೋಧೆಯೇ ತುಂಬಿರುತ್ತಿತ್ತು. ಕೈಸಾಲೆಯಲ್ಲಿ ಓಡಾಡುತ್ತಿದ್ದಾಗ ಉಳಿದ ರೋಗಿಗಳ ದೇಹಸ್ಥಿತಿ ವಿಚಾರಿಸುತ್ತಿದ್ದರು. ಅವರಿಗೆ ಆಶೀರ್ವಾದ ಮಾಡುತ್ತಿದ್ದರು, ಶೀಘ್ರ ಗುಣಮುಖರಾಗಿ ಎಂದು ಹಾರೈಸುತ್ತಿದ್ದರು.

ಸ್ವಾಮಿ ರಂಗನಾಥಾನಂದರ ಜ್ಞಾನ ಮತ್ತು ಪಾಂಡಿತ್ಯ, ವಿದ್ವತ್ತುಗಳು ಅದ್ಭುತವಾದವು. ಅಸಾಧಾರಣವಾದವು. ವಿಶೇಷವಾಗಿ ನರರೋಗಶಾಸ್ತ್ರ ಮತ್ತು ಮನೋರೋಗಶಾಸ್ತ್ರ ಮತ್ತು ಚಿಕಿತ್ಸೆಗಳ ಬಗ್ಗೆ ಅವರ ಅರಿವು ಅಪ್ರತಿಭಗೊಳಿಸುವ ರೀತಿಯದು. ಇಂಥ ವಿಷಯಗಳನ್ನು ಕುರಿತ ಕೆಲವು ಗ್ರಂಥಗಳನ್ನು ಅವರು ನನಗೆ ಉಡುಗೊರೆಯಾಗಿ ಕೊಟ್ಟಿದ್ದರು.

ಗುರುದೇವರು ಮಠಕ್ಕೆ ಮರಳಿದರು. ನಂತರ ಅವರ ಇಚ್ಛೆಯಂತೆ ಅವರ ಆರೋಗ್ಯದ ಮೇಲ್ವಿಚಾರಣೆಯ ವೈದ್ಯರ ತಂಡದಲ್ಲಿ ನನ್ನನ್ನೂ ಸೇರಿಸಿಕೊಳ್ಳಲಾಯಿತು. ಹೀಗಾಗಿ, ನಾನು ಪದೇಪದೆ, ಬೆಳಗಿನ ಹೊತ್ತೇ ಉಳಿದ ವೈದ್ಯರುಗಳ ಜೊತೆ ಬೇಲೂರಿಗೆ ಹೋಗಬೇಕಾಗುತ್ತಿತ್ತು. ಇದರಿಂದ ಅವರನ್ನು ಹತ್ತಿರದಿಂದ ನೋಡುವ, ಅವರ ಅದ್ಭುತ ಉಪದೇಶ–ಸಂದೇಶಗಳನ್ನು ಕೇಳಿಸಿಕೊಳ್ಳುವ ಭಾಗ್ಯ ನನ್ನದಾಯಿತು. ನಮ್ಮ ಸಮಾಜದ ದೀನದಲಿತರ ಕಷ್ಟಸಂಕಟಗಳನ್ನು ಕಂಡು ಅವರ ಮನಸ್ಸು ಕರಗುತ್ತಿತ್ತು. ದೀನದಲಿತರ ಬಗೆಗಿನ ಅವರ ಅನುಕಂಪವನ್ನು ನಾನು ಹತ್ತಿರದಿಂದ ಕಾಣುವಂತಾಯಿತು. ಬಡವರ, ತುಳಿತಕ್ಕೊಳಗಾದವರ, ದೀನದಲಿತರ ಸೇವೆಮಾಡುವಂತೆ ಇವರಿಗೆಲ್ಲ ಆಸರೆಯಾಗಿ ನಿಲ್ಲುವಂತೆ ಸ್ವಾಮೀಜಿ ನಮ್ಮಗೆ ಸ್ಫೂರ್ತಿ–ಪ್ರೇರಣೆಗಳನ್ನು ನೀಡುತ್ತಿದ್ದರು. ದೀನದಲಿತರ ಸೇವೆಗೆ ಪ್ರೇರಕಶಕ್ತಿಯಾಗಿದ್ದರು.

ಬೆಳಗ್ಗೆ ನಾನು ಮಠಕ್ಕೆ ಹೋದಾಗಲೆಲ್ಲ ಮಹಾರಾಜ್ ಅವರು, ಕ್ರೀಡೆಯಿಂದ ಹಿಡಿದು ವಿಶ್ವ ರಾಜಕಾರಣದವರೆಗೆ ಎಲ್ಲ ವಿಷಯಗಳಲ್ಲೂ ಅತಿಯಾದ ಆಸಕ್ತಿ, ಉತ್ಸಾಹಗಳನ್ನು ವ್ಯಕ್ತಪಡಿಸುತ್ತಿದ್ದುದನ್ನು ಕಂಡಿದ್ದೇನೆ. ಅಲ್ಲದೆ, ಇವುಗಳ ಬಗ್ಗೆ ವಿಮರ್ಶೆ, ವ್ಯಾಖ್ಯಾನಗಳನ್ನೂ ಮಾಡುತ್ತಿದ್ದರು. ಆದರೆ, ಅವರು ತಮ್ಮ ದೇಹಸ್ಥಿತಿಯ ಬಗ್ಗೆ ಅಷ್ಟಾಗಿ ಗಮನ ಕೊಡುತ್ತಿರಲಿಲ್ಲ. ಬೇರೆಯವರ ಸಮಸ್ಯೆಗಳ ಬಗ್ಗೆಯೇ ಅವರು ಹೆಚ್ಚು ಯೋಚಿಸುತ್ತಿದ್ದರು. ವೃದ್ಧಾಪ್ಯ ಹಾಗೂ ದೇಹದ ಅನಾರೋಗ್ಯಗಳಿಂದ ಅವರು ಮಾನಸಿಕವಾಗಿ ಜರ್ಝರಿತರಾಗಿರಲಿಲ್ಲ. ಅವರನ್ನು ಮಣಿಸುವುದು ಇವುಗಳಿಗೆ ಸಾಧ್ಯವಿರಲಿಲ್ಲ. ಅಶಕ್ತರಾಗಿದ್ದಾಗಲೂ ಅವರು ಮಠದ ಹಾಗೂ ಮಿಷನ್ನಿನ ಕಾರ್ಯಭಾರದ ಮೇಲೆ ಕೋಲ್ಕತ್ತೆಯಾಚೆಗೆ ಪ್ರಯಾಣಮಾಡುತ್ತಿದ್ದರು. ಹೀಗೆ ಒಮ್ಮೆ ಪ್ರಯಾಣಮಾಡುತ್ತಿದ್ದಾಗ ಮಿದುಳಿನಲ್ಲಿ ಲಕ್ವ ಹೊಡೆಯಿತು. ಬೆಂಗಳೂರಿನ ಆಸ್ಪತ್ರೆಗೆ ಸೇರಿಸಲಾಯಿತು. ಪವಾಡಸದೃಶ ರೀತಿಯಲ್ಲಿ ಅವರಿಗೆ ಬಲುಬೇಗ ವಾಕ್‌ಶಕ್ತಿ ಓಡಾಡುವ ಶಕ್ತಿ, ಬಂತು. ಆಗ ಸ್ವಾಮೀಜಿಯವರ

ಶಿಷ್ಯರು ಹಾಗೂ ದೈಹಿಕ ಔಷಧಗಳ ತಜ್ಞೆ ರೀಟಾ ಮೆಲಾಂ ಅವರುಗಳಿಂದ ನಮ್ಮ ವೈದ್ಯರುಗಳ ತಂಡಕ್ಕೆ ಅಪಾರ ಸಹಾಯ–ಸಹಕಾರಗಳು ಒದಗಿಬಂದವು.

ಮಠದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಸ್ವಾಮಿ ರಂಗನಾಥಾನಂದರನ್ನು ಅನೇಕ ಸಲ ಆಸ್ಪತ್ರೆಗೆ ಸೇರಿಸಬೇಕಾಯಿತು. ಇಂಥ ಸಂದರ್ಭಗಳಲ್ಲಿ ನಮಗೆ ಅವರ ಗಂಭೀರ ಚಿಂತನೆಗಳನ್ನು ಬಿಂಬಿಸುವ, ಚೈತನ್ಯದಾಯಕ ಮಾತುಗಳನ್ನು ಕೇಳುವ ಅವಕಾಶ ಒದಗಿಬರುತ್ತಿತ್ತು. ಅವರ ಚಿಂತನಪರತೆ, ಭಾರತೀಯ ಪ್ರಾಚೀನ ಸಂಸ್ಕೃತಿ ಬಗ್ಗೆ ಪ್ರಶಂಸೆ–ಅಭಿಮಾನಗಳು ಶ್ರೀ ರಾಮಕೃಷ್ಣರ ಬೋಧನೆಗಳ ಪ್ರಸಾರದ ಹೃತ್ಪೂರ್ವಕ ಹಂಬಲಗಳನ್ನು ನಾವು ಕಂಡೆವು. ಶ್ರೀ ರಾಮಕೃಷ್ಣರ, ಪೂಜ್ಯ ಮಾತೆಯ ಬೋಧನೆ–ಸಂದೇಶಗಳನ್ನು ಇಡೀ ವಿಶ್ವಕ್ಕೆ ಮುಟ್ಟಿಸಬೇಕೆಂದು ಅವರ ಹೃದಯ ಹಾತೊರೆಯುತ್ತಿತ್ತು. ಅವರು ಆಸ್ಪತ್ರೆಯಲ್ಲಿದ್ದಾಗ, ಇದನ್ನೆಲ್ಲ ಹತ್ತಿರದಿಂದ ಕಂಡು ಅರಿತುಕೊಳ್ಳುವ ಪುಣ್ಯ ನಮ್ಮದಾಗಿತ್ತು. ಇನ್ನು ಕೆಲವೇ ದಶಕಗಳಲ್ಲಿ ಭಾರತ ವಿಶ್ವ ಮಟ್ಟದಲ್ಲಿ ಉನ್ನತ ಸ್ಥಾನಕ್ಕೇರುವುದೆಂದು ಸ್ವಾಮಿ ರಂಗನಾಥಾನಂದರು ಆಗಾಗ ಹೇಳುತ್ತಿದ್ದರು.

ಸ್ವಾಮಿ ರಂಗನಾಥಾನಂದಜೀ, ಮಾನವ ಧರ್ಮದ, ಮಾನವ ಕಲ್ಯಾಣದ, ಕ್ರಿಯಾಶೀಲ ತಾರುಣ್ಯದ ಹಾಗೂ ಜಾತ್ಯತೀತತೆಯ ಜೀವಂತ ಪ್ರತೀಕವಾಗಿದ್ದರು. ಅಷ್ಟೆಲ್ಲ ದೈಹಿಕ ಅನಾನುಕೂಲತೆಗಳಿದ್ದಾಗ್ಯೂ ಅವರು ಯಾವತ್ತೂ ಅವುಗಳ ಬಗ್ಗೆ ದೂರಿದವರಲ್ಲ. ಅವುಗಳನ್ನು ಇನ್ನೊಬ್ಬರ ಎದುರು ಹೇಳಿಕೊಂಡವರಲ್ಲ. "ನಾನು ಸೌಖ್ಯವಾಗಿದ್ದೇನೆ, ನಾನು ಚೆನ್ನಾಗಿದ್ದೇನೆ" ಎಂದು ಹೇಳುತ್ತಿದ್ದರೇ ಹೊರತು ಕಷ್ಟಗಳನ್ನು ತೋಡಿಕೊಳ್ಳುತ್ತಿರಲಿಲ್ಲ. ಆದರೆ ಬೇರೆಯವರ ಆರೋಗ್ಯವನ್ನು, ಬೇರೆಯವರ ಕಷ್ಟಸುಖಗಳನ್ನು, ಅನುಕೂಲತೆಗಳನ್ನು ಖುದ್ದು ಮುತುವರ್ಜಿಯಿಂದ ವಿಚಾರಿಸುತ್ತಿದ್ದರು. ಭಾರತೀಯ ಯುವಕರನ್ನು ಆಕರ್ಷಿಸಿ, ಸೆಳೆದುಕೊಳ್ಳಲು ನಮಗಿಂದು ವಿಚಾರಮೂರ್ತಿಗಳ–ವಿವೇಕಯುಕ್ತರ ಅಗತ್ಯವಿದೆ ಎಂದು ಮತ್ತೆ ಮತ್ತೆ ಹೇಳುತ್ತಿದ್ದರು. ಅಂಧ–ಆಚರಣೆ–ಅಂಧ ಶ್ರದ್ಧೆಗಳ ಪಾಶದಿಂದ ಮುಕ್ತರಾಗದೇ ಪ್ರಾಚೀನ ಭಾರತದ ಆರ್ಷೇಯ ವಿಚಾರ–ಸಿದ್ಧಾಂತಗಳತ್ತ ಭಾರತದ ಯುವಕರನ್ನು ಸೆಳೆಯಲಾಗದು ಎಂಬುದು ಅವರ ಖಚಿತ ಅಭಿಪ್ರಾಯವಾಗಿತ್ತು.

ನಮ್ಮ ತೀವ್ರ ನಿಗಾ ಘಟಕದ ಅನೇಕ ಮಂದಿ ಮಹಾರಾಜ್ ಅವರಿಂದ ದೀಕ್ಷೆ ಪಡೆದರು. ಅವರಲ್ಲಿ ನಾನೂ ಒಬ್ಬ. ಏಳು ವರ್ಷಗಳ ಕಾಲ ಅವರ ಅಗಾಧ ಪಾಂಡಿತ್ಯದಿಂದ, ವಿವೇಕ ಬುದ್ಧಿಮತ್ತೆಗಳಿಂದ, ಸಹನೆ–ಸಹಿಷ್ಣುತೆಗಳಿಂದ, ವಾಗ್ವೈಖರಿಯಿಂದ, ಎಲ್ಲಕ್ಕಿಂತ ಮಿಗಿಲಾಗಿ ಸ್ವಾಮಿ ವಿವೇಕಾನಂದರ ಚಿಂತನೆಗಳ ಬಗೆಗಿನ ಅವರ ಶ್ರದ್ಧೆ–ನಂಬಿಕೆಗಳಿಂದ ನಾನು ಪ್ರಭಾವಿತನಾಗಿದ್ದೇನೆ, ಮಾರುಹೋಗಿದ್ದೇನೆ. ಸ್ವಾಮೀಜಿಯವರ ಪೂರ್ವಿಕರ ಮನೆಯ ಗೃಹಪ್ರವೇಶದ ದಿನ ಅವರು ತುಂಬಾ ಹರ್ಷೋಲ್ಲಾಸದಿಂದ ಇದ್ದುದನ್ನು ನಾನು ಪ್ರತ್ಯಕ್ಷ ಕಂಡೆ. ಶುರುವಿಗೆ ವೈದ್ಯರು ಈ ಸಮಾರಂಭದಲ್ಲಿ ಭಾಗವಹಿಸಲು ಸ್ವಾಮೀಜಿಯವರಿಗೆ ಅನುಮತಿ ನೀಡಲಿಲ್ಲ. ಆದರೆ, ಸ್ವಾಮೀಜಿಯವರ ತವಕ–ತಲ್ಲಣಗಳನ್ನು ಕಂಡು ಒಪ್ಪಿಗೆ ನೀಡಬೇಕಾಯಿತು.

ಕೊನೆಕೊನೆಯಲ್ಲಿ ಸ್ವಾಮಿ ರಂಗನಾಥಾನಂದರಿಗೆ ಐ.ಟಿ.ಪಿ ಎಂದು ಕರೆಯಲಾಗುವ ಮಾರಕಬೇನೆ ಅಂಟಿಕೊಂಡಿತು. ಈ ರೋಗದಲ್ಲಿ ರಕ್ತಸ್ರಾವದ ಸಾಧ್ಯತೆಗಳು ಹೆಚ್ಚಾಗಿದ್ದವು. ದೇಹದ ವಿವಿಧ ಅಂಗಾಂಗಗಳಲ್ಲಿ ರಕ್ತಸ್ರಾವ ಆಗಬಹುದಿತ್ತು. ಅವರಿಗೆ ಇಂಜೆಕ್ಷನ್‌ಗಳನ್ನು ಕೊಡಲಾಯಿತು. ಅನೇಕ ರೀತಿಯ ತಪಾಸಣೆಗಳನ್ನು ಮಾಡಲಾಯಿತು. ಅವರು ಹಲವಾರು ಸಲ ಆಸ್ಪತ್ರೆಗೆ ದಾಖಲಾಗಬೇಕಾಯಿತು. ಕೊನೆಯ ಸಲ ಅವರು ಆಸ್ಪತ್ರೆಗೆ ದಾಖಲಾದದ್ದು ಉಸಿರಾಟದಲ್ಲಿ ತೊಂದರೆಯುಂಟಾದಾಗ. ಆದರೆ ಇದಾವುದರಿಂದಲೂ ಅವರು ಮುಜುಗರಪಟ್ಟಂತೆ ಕಾಣಲಿಲ್ಲ. ತಮ್ಮ ನೋವು–ಯಾತನೆಗಳ ಬಗ್ಗೆ ಯಾರೊಂದಿಗೂ ಹೇಳಿಕೊಳ್ಳಲಿಲ್ಲ. ಈ ಸಂದರ್ಭದಲ್ಲಿ ಅಸಂಖ್ಯಾತ ಶಿಷ್ಯರು, ಭಕ್ತರು ಹಾಗೂ ವಿಶ್ವಾದ್ಯಂತ ಇರುವ ಗಣ್ಯಾತಿಗಣ್ಯರು ಸ್ವಾಮೀಜಿಯವರ ಆಶೀರ್ವಾದ ಬಯಸಿ ಬಂದರು; ದರ್ಶನಾಕಾಂಕ್ಷಿಗಳಾಗಿ ಬಂದರು. ಅವರು ಯಾರಿಗೂ ದರ್ಶನ

ನಿರಾಕರಿಸಲಿಲ್ಲ. ಸ್ವಾಮಿ ರಂಗನಾಥಾನಂದರಿಗೆ ಹೃದಯಸ್ತಂಭನವಾದಾಗ, ಕೊನೆಯ ಗಳಿಗೆಯವರೆಗೆ ಸುದರ್ಶನ ಮಹಾರಾಜ್, ರವಿರಾಜ್ ಮಹಾರಾಜ್ ಮತ್ತಿತರರು ಅವರ ಶಯ್ಯೆಯ ಸಮೀಪದಲ್ಲೇ ಇದ್ದರು. ವಿಚಿತ್ರ, ಅಸಾಧಾರಣವೆಂದರೆ, ವೈದ್ಯರು, ದಾದಿಯರೂ ಸೇರಿದಂತೆ ಅವರ ಇಡೀ ಶಿಷ್ಯವರ್ಗ ಅಲ್ಲಿದ್ದರು; ಕರ್ತವ್ಯ ತತ್ಪರರಾಗಿ ಅಲ್ಲಿದ್ದರು. ಆದರೆ, ಪ್ರಜ್ಞೆ ಇರುವವರೆಗೆ ಅವರು ನನಗೆ ನೋವು–ಯಾತನೆಗಳೇನೂ ಆಗುತ್ತಿಲ್ಲ ಎಂದೇ ಹೇಳುತ್ತಿದ್ದರು.

ನಾವು ಬೆರಗಾಗಿ ನಿಂತು, ರಾಮಕೃಷ್ಣರ ಲೋಕಕ್ಕೆ ಈ ಮಹಾಪುರುಷನ ಯಾನವನ್ನು ವೀಕ್ಷಿಸಿದೆವು.

* * * *

# ೧೧೭. ಅತ್ಯುತ್ತಮ ಮಿತ್ರರೊಬ್ಬರ ಬಗೆಗಿನ ಯಾದೃಚ್ಛಿಕ ಚಿಂತನೆಗಳು

**–ಗೀತಾ ಮೆಹ್ತಾ***

ತಮ್ಮ ಅಗಾಧವಾದ ಜ್ಞಾನ ಮತ್ತು ಪಾಂಡಿತ್ಯಪೂರ್ಣ ಬರೆಹಗಳಿಂದ ಅತ್ಯಂತ ಪ್ರಸಿದ್ಧ ವ್ಯಕ್ತಿತ್ವವುಳ್ಳ ರಂಗನಾಥಾನಂದಜೀಯವರ ಬಗೆಗೆ ಬರೆಯಲು ಆವಶ್ಯಕವಾದ ಅರ್ಹತೆಯನ್ನು ನಾನು ಪಡೆಯದಿರುವುದರಿಂದ, ಅವರನ್ನು ಕೇವಲ ನಮ್ಮ ಕುಟುಂಬದ (ಷಿಲಾಂಗಿನ ಮೆಹ್ತಾ ಕುಟುಂಬದ) ಅತ್ಯುತ್ತಮ ಮಿತ್ರರೆಂದು ಪರಿಗಣಿಸಿ ಮಾತ್ರ ಬರೆಯುತ್ತೇನೆ.

ಅವರು, ೧೯೫೦ರಲ್ಲಿ, ವೇದಾಂತದ ಬಗೆಗೆ ಡೆಲ್ಲಿಯಲ್ಲಿ ನಿಯಮಿತವಾಗಿ ಪ್ರವಚನವನ್ನು ನೀಡುತ್ತಿದ್ದಾಗ, ರಂಗನಾಥಾನಂದಜೀಯವರನ್ನು, ನನ್ನ ತಾಯಿ ಮನೋರಮಾ ಭೇಟಿಮಾಡಿದ್ದರು. ನನ್ನ ತಾಯಿ ಮಾತ್ರವಲ್ಲದೇ, ಆ ಪ್ರವಚನಗಳಿಗೆ ರಾಷ್ಟ್ರದ ಎಲ್ಲ ಜನಾಂಗಕ್ಕೆ ಸೇರಿದ ವ್ಯಕ್ತಿಗಳೂ ಉಪಸ್ಥಿತಿರಿರುತ್ತಿದ್ದರು. ರಂಗನಾಥಾನಂದಜೀಯವರ ತೇಜಸ್ವೀ ಸಾನ್ನಿಧ್ಯವು, ದೈವೀಕೃಪೆಯನ್ನು ಪ್ರತಿಬಿಂಬಿಸುತ್ತಿತ್ತೆಂದು ನನ್ನ ತಾಯಿಯು, ನಂತರ ನಮ್ಮೊಡನೆ ಹೇಳಿದರು. ಅಂದಿನ ಭೇಟಿಯ ನಂತರ ರಂಗನಾಥಾನಂದಜೀಯವರು ನನ್ನ ತಾಯಿಯನ್ನು ಮನೋರಮಾ ಎಂದೂ, ನನ್ನ ತಂದೆಯನ್ನು ಮೆಹ್ತಾ ಎಂದೇ ಕರೆಯುತ್ತಿದ್ದರು, ಹಾಗೂ, ನಾವು ಎಲ್ಲಿಯೇ ಇದ್ದರೂ, ಯಾವಾಗ ಬಂದರೂ ನಮ್ಮಲ್ಲಿಯೇ ಉಳಿದುಕೊಳ್ಳುತ್ತಿದ್ದರು. ನನ್ನ ತಂದೆಯವರು ಸಂಸ್ಕೃತದಲ್ಲಿ ಪರಿಣಿತರಾಗಿದ್ದುದರಿಂದ ರಂಗನಾಥಾನಂದಜೀಯವರು ನನ್ನ ತಂದೆಯೊಡನೆ ಸಂವಾದ ನಡೆಸಲು ಇಚ್ಛಿಸುತ್ತಿದ್ದರು. ನನ್ನ ತಂದೆಯವರಾದರೋ ಯಾವುದೇ ವಿಷಯದ ಬಗೆಗಾಲೀ, ಅತ್ಯಂತ ಸಹಜವಾಗಿ, ಓತಪ್ರೋತವಾಗಿ ಉದ್ಧರಿಸಬಲ್ಲವರಾಗಿದ್ದರು. ಇದು ಸ್ವಾಮೀಜಿಗೆ ಬಹಳ ಪ್ರಿಯವಾಗಿತ್ತು.

ಸ್ವಾಮೀಜಿಯವರು ಷಿಲ್ಲಾಂಗಿನಲ್ಲಿ ಕೆಲವು ಪ್ರವಚನಗಳನ್ನು ನೀಡಬೇಕಾಗಿದ್ದಾಗ, ನಾನು ಅವರನ್ನು ಪ್ರಥಮ ಬಾರಿ, ಬಹುಶಃ ೧೯೬೩ರ ಮೇ ತಿಂಗಳಿನಲ್ಲಿ ಭೇಟಿ ಮಾಡಿದೆ. ಆಗ ನನ್ನ ಮಗುವಿಗ ಕೇವಲ ಒಂದು ತಿಂಗಳು ಮಾತ್ರ ಆಗಿದ್ದುದ್ದರಿಂದ ನಾನು ಅವರ ಪ್ರವಚನಗಳಲ್ಲಿ ಉಪಸ್ಥಿತಳಿರಲು ಸಾಧ್ಯವಾಗಲಿಲ್ಲ. ಆದರೆ ನನ್ನನ್ನು ನೋಡುವ ಸಲುವಾಗಿ ಅವರೇ ನಮ್ಮ ಮನೆಗೆ ಬಂದರು. ಹಾಗಾಗಿ, ನಮ್ಮ ನಡುವೆ ಒಂದು ರೀತಿಯಲ್ಲಿ ಸಮಾನ ಹೃದಯ–ಮನಸ್ಸುಗಳ ಬಾಂಧವ್ಯ ಮೂಡಿತ್ತು. ಮತ್ತು ಒಂದೇ ಜಾಗದಲ್ಲಿದ್ದಾಗ ನಾವು ಪರಸ್ಪರ ಭೇಟಿಯಾಗುತ್ತಿದ್ದೆವು.

೧೯೬೩ರಲ್ಲಿ ನಮ್ಮ ತಂದೆತಾಯಿ ಕಟ್ಟಿದ್ದ ಮನೆಗೆ ಪ್ರಥಮವಾಗಿ ಸ್ವಾಮೀಜಿಯವರೇ ಆಗಮಿಸಿ, ಆಶೀರ್ವಾದ ಮಾಡಿದ್ದರು. ವಾಸ್ತವಾಗಿ ಅವರು ಸಾರಾಭಾಯಿಯವರ ಅತಿಥಿಗಳಾಗಬೇಕಾಗಿತ್ತು. ಆದರೆ ನನ್ನ ತಂದೆ ತಾಯಿ ಅಹಮದಾಬಾದಿನಲ್ಲಿ ಇದ್ದಿದ್ದರಿಂದ ಅವರು ಇಲ್ಲಿಗೇ ಬಂದರು. ನನ್ನ ತಂದೆ–ತಾಯಿ ಹೊಸ ಮನೆಯನ್ನು ಕಟ್ಟಿರುವುದು ಅವರಿಗೆ ತಿಳಿದಿತ್ತು. ಆದ್ದರಿಂದ ತಾವು ಅಲ್ಲಿಯೇ, ಅವರೊಡನೆ ಇರುವುದಾಗಿ ಪಟ್ಟುಹಿಡಿದರು. "ಮನೋರಮಾ (ನನ್ನ ತಾಯಿ) ಈ ಮನೆಗೆ ನಾನು ಹೆಸರಿಡುತ್ತೇನೆ" ಎಂದರು ಅವರು. 'ಸಾಲಿಟೇರ್'* (Solitaire) ಎನ್ನುವ ಆ ಹೆಸರು ಅವರೇ ಆಯ್ಕೆಮಾಡಿದ್ದು. ಈ ಮನೆಯು ನದಿಯ ದಡದಲ್ಲಿದೆ. ನಾವು ಇಲ್ಲಿ ನಲವತ್ತೈದು ವರ್ಷಗಳಿಂದ ವಾಸಿಸುತ್ತಾ ಆನಂದದಿಂದಿದ್ದೇವೆ.

---

* ಗುಜರಾತಿನ ಭಕ್ತೆ

೧೯೬೭ರಲ್ಲಿ ಮುಂಬೈನ ಭಾರತೀಯ ವಿದ್ಯಾಭವನದಲ್ಲಿ, ಸಮನ್ವಯದ ಬಗೆಗೆ ಸ್ವಾಮೀಜಿಯ ಒಂದು ಪ್ರವಚನವಿತ್ತು, ನಾನು ಜನರ ನಡುವೆ ಕುಳಿತಿದ್ದೆ. ನನ್ನನ್ನು ಗಮನಿಸಿದ ಅವರು ಹೇಳಿದರು, "ಗುಜರಾತಿನಲ್ಲಿ ಜನಿಸಿ, ಅಸ್ಸಾಮಿನಲ್ಲಿ ಶಿಕ್ಷಣ ಪಡೆದು, ಇಂಗ್ಲೆಂಡಿನಲ್ಲಿ ಅಧ್ಯಯನ ಮಾಡಿ, ಅಲ್ಲಿ ಕಾರ್ಯನಿರ್ವಹಿಸಿ, ನಿಜವಾಗಿಯೂ ಸಮನ್ವಯವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವವರೊಬ್ಬರು ಪ್ರೇಕ್ಷಕರ ನಡುವೆ ಕುಳಿತಿದ್ದಾರೆ. ಭಾರತದ ಎಲ್ಲ ಭಾಗಗಳೂ ಅವರ ಮನೆಯಾಗಿವೆ. ಬಹುಶಃ ವಿದೇಶಗಳಲ್ಲಿಯೂ ಕೂಡ." ನನ್ನನ್ನು ನೋಡಬೇಕೆಂದು ಅವರು ಬರಹೇಳಿದುದರಿಂದ, ನಾನು ಆ ಗಂಭೀರ ಜನಸಮೂಹದಿಂದ ಹೊರಕ್ಕೆ ನುಸುಳಿ ಬರಬೇಕಾಯಿತು.

ಮುಂಬಯಿಯ ನನ್ನ ಸೋದರಸಂಬಂಧಿಯೊಬ್ಬರ ಮನೆಯಲ್ಲಿನ, ಗಣ್ಯರ ಸಭೆಯಲ್ಲಿ ಕೂಡ ಹೀಗೇ ಆಯಿತು. ಕೊಠಡಿಯ ತುಂಬ, ಬದಲಾಗುತ್ತಿರುವ ಸಾಮಾಜಿಕ ಸಂಪ್ರದಾಯವನ್ನು ಅನುಸರಿಸುತ್ತಿದ್ದವರು ತುಂಬಿಕೊಂಡಿದ್ದರು. ನನ್ನ ಸೋದರಸಂಬಂಧಿ ನಳಿನ್, ನಾನು ಆ ಸಭೆಯಲ್ಲಿ ಹಾಜರಿರಬೇಕೆಂದು ಒತ್ತಾಯಿಸಿದ್ದ. ಆ ಸಭೆಯಲ್ಲಿ ಸ್ವಾಮೀಜಿಯವರು ನನ್ನತ್ತ ದೃಷ್ಟಿ ಹಾಯಿಸುತ್ತಾ ಹೀಗೆ ಹೇಳಿದಾಗ, ನಾನು ಆ ಸಮೂಹದಲ್ಲಿ ಹೊರಗಿನವಳು, ಮಧ್ಯದಲ್ಲಿಯೇ ಬಿಟ್ಟುಬಿಟ್ಟವಳು ಎನ್ನಿಸಿತು ನನಗೆ, : "ಮಧ್ಯದಲ್ಲಿಯೇ ಬಿಟ್ಟುಬಿಟ್ಟವರು ಎಲ್ಲ ಕಡೆಯೂ ಇದ್ದಾರೆ. ಬುದ್ಧ ಕೂಡ ಮಧ್ಯದಲ್ಲಿಯೇ ತೊರೆದುಹೋದವನು. ಇವಳಾದರೋ ಕೇವಲ ಯಾವುದೇ ಸಿದ್ಧಾಂತಕ್ಕೆ ಬದ್ಧಳಾಗಿರದಂತಹ ವ್ಯಕ್ತಿಸ್ವಾತಂತ್ರ್ಯವಾದಿ... ಆದರೆ ನಿಜವಾದ ಸಂಗತಿಯೆಂದರೆ, ಎಲ್ಲಿ ಯಾವಾಗ ಬಿಟ್ಟುಬಿಡಬೇಕು ಎಂಬುದನ್ನು ವ್ಯಕ್ತಿಯು ಅರಿತಿರಬೇಕು." ಸ್ವಾಮೀಜಿಯವರ ಈ ಹೇಳಿಕೆಯೂ ನನ್ನ ನೆನಪಿನಲ್ಲಿ ಇನ್ನು ಹಸಿರಾಗಿ ನೆಲೆನಿಂತಿದೆ. ಬಿಡುವುದನ್ನು ಕಲಿತಿರುವ, ಯಾವುದೇ ಸಿದ್ಧಾಂತಕ್ಕೂ ಬದ್ಧಳಾಗಿರದ ವ್ಯಕ್ತಿ ನಾನಾಗಿರುವುದರಿಂದ ನಾನು ಸಮಾಧಾನಪಟ್ಟುಕೊಳ್ಳಬಹುದು.

ಸ್ವಾಮೀಜಿಯವರು, ೧೯೭೬ರಲ್ಲಿ, ಮೌಂಟ್ ಅಬುವಿನ ರಾಷ್ಟ್ರೀಯ ಆರಕ್ಷಕ ಅಕಾಡೆಮಿಯ ಸೈನಿಕ ಶಿಕ್ಷಣಾರ್ಥಿಗಳಿಗೆ ಪ್ರವಚನ ನೀಡುತ್ತಿದ್ದರು. ನಾನು ಕೂಡ ಆಗ ಅಲ್ಲಿಯೇ ಇದ್ದೆ. ಆದರೆ ಸ್ವಾಮೀಜಿಯವರಿಗೆ ಇದು ತಿಳಿದಿರಲಿಲ್ಲ, ಡಾ. ಗೀತಾ ಮೆಹ್ತಾ ಎಂಬ ವ್ಯಕ್ತಿ ಊರಿನ ಹೊರವಲಯದಲ್ಲಿ ವಾಸಿಸುತ್ತಿದ್ದಾರೆಂದು, ಅಲ್ಲಿನ ವೈದ್ಯರೊಬ್ಬರಿಂದ ಸ್ವಾಮೀಜಿಗೆ ತಿಳಿದುಬಂದಾಗ, ಅವರು ದೂರವಾಣಿಯ ಮೂಲಕ ನನಗೆ ಕರೆ ಮಾಡಿ, ತಮ್ಮನ್ನು ನನ್ನ ಮನೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದರು. ನಾನು ಕರೆದುಕೊಂಡು ಬಂದೆ. ಅಂದು ಇಡಿಯ ಮಧ್ಯಾಹ್ನ ನನ್ನ ಮಕ್ಕಳೊಡನೆ ಮಾತನಾಡುತ್ತಾ ನಮ್ಮೊಡನೆ ಉಳಿದುಕೊಂಡರು. ಅಲ್ಲದೇ, ಸ್ವಲ್ಪ ಹಿರಿಯರಾಗಿದ್ದ ಹುಡುಗರನ್ನು ಭೇಟಿ ಮಾಡಲು ಅವರು ಇಷ್ಟಪಟ್ಟರು. ಹಾಗಾಗಿ ಅಲ್ಲಿಯೇ ಹತ್ತಿರವಿದ್ದ ಸೇಂಟ್ ಮೇರೀಸ್ ಹೈಸ್ಕೂಲಿನ ಅನೇಕ ವಿದ್ಯಾರ್ಥಿಗಳು ಬಂದರು. ತಮ್ಮ ಕರ್ತವ್ಯಗಳ ಬಗೆಗೆ ಆ ಹುಡುಗರು ತಿಳಿದುಕೊಂಡಿರಬೇಕೆಂದು ಸ್ವಾಮೀಜಿಯವರು ಅವರಿಗೆ ಉಪದೇಶಿಸಿದರು.

* * * *

* 'ಸಾಲಿಟೇರ್' ಎಂದರೆ ಒಂಟಿರತ್ನಾಭರಣ ಮೊದಲಾದ ಹಲವು ಅರ್ಥಗಳಿವೆ.

# ೧೧೮. ಸ್ವಾಮಿ ರಂಗನಾಥಾನಂದ

**–ಎನ್ ಕೃಷ್ಣಸ್ವಾಮಿ***

ಸ್ವಾಮಿ ರಂಗನಾಥಾನಂದಜೀ ಮಹಾರಾಜ್ ಅವರ ಬಗೆಗೆ ನನ್ನ ನೆನಪುಗಳನ್ನು ದಾಖಲಿಸುವಂತೆ ನನ್ನನ್ನು ಕೇಳಲಾಗಿದೆ. ನಾವು, ಸ್ವಾಮೀಜಿ ಎಂದರೆ ಅದು ಸಾಧಾರಣವಾಗಿ ಸ್ವಾಮಿ ವಿವೇಕಾನಂದರನ್ನು ಕುರಿತು ಎಂದೇ ಅರ್ಥವಾಗುವುದಾದರೂ, ನಾನು ಈ ಲೇಖನದಲ್ಲಿ ರಂಗನಾಥನಂದಜೀಯವರನ್ನು 'ಸ್ವಾಮೀಜಿ' ಎಂದೇ ಸಂಬೋಧಿಸುತ್ತೇನೆ ಎಂದು ನನ್ನ ಬರವಣಿಗೆಯನ್ನು ಪ್ರಾರಂಭಿಸುವ ಮುನ್ನ ಸೂಚಿಸಬಯಸುತ್ತೇನೆ.

ನನ್ನ ಜೀವನದ ಆರಂಭದ ದಿನಗಳಲ್ಲಿಯೇ ರಾಮಕೃಷ್ಣ ಆಶ್ರಮದ ಕಾರ್ಯಪರಂಪರೆಯ ಸಂಪರ್ಕ ಹೊಂದಿದ್ದ ಬಹಳ ಉನ್ನತ ವ್ಯಕ್ತಿಗಳೊಡನೆ ಭೇಟಿಯಾಗುವ ಮಹಾಸೌಭಾಗ್ಯ ದೊರಕಿತ್ತು. ಅಂತಹ ಮಹನೀಯರಲ್ಲಿ, ನನ್ನ ಮನಸ್ಸಿನ ಮೇಲೆ ಬಹಳ ಗಾಢ ಪರಿಣಾಮ ಬೀರಿದವರಲ್ಲಿ ಸ್ವಾಮೀಜಿಯವರು ಒಬ್ಬರಾಗಿದ್ದರು. ನನ್ನನ್ನು ಬಹಳವಾಗಿ ಪ್ರಭಾವಿಸಿ, ಮನಸ್ಸಿನ ಮೇಲೆ ಅಚ್ಚೊತ್ತಿದ್ದೆಂದರೆ, ಅವರ ಅತೀವ ಸರಳತೆ, ನಿಗರ್ವ, ನಿರಹಂಕಾರ, ಅವರ ಅನುಕಂಪೆ ಮತ್ತು ಔದಾರ್ಯ – ಅದೂ ವಿಶೇಷವಾಗಿ ಯುವಕರ ಬಗೆಗೆ – ಹಾಗೂ, ಸ್ವಾಮೀಜಿಯವರ ಹೆಗ್ಗುರುತಾದ ವೈರಾಗ್ಯ ಅಥವಾ ನಿರ್ಲಿಪ್ತಿ.

ನಾನು ಸ್ವಾಮೀಜಿಯವರನ್ನು ಪ್ರಥಮ ಬಾರಿ ಭೇಟಿಯಾದದ್ದು ಸುಮರು ೧೯೪೯, ಬೆಂಗಳೂರಿನಲ್ಲಿ. ಆಗಿನ ಬೆಂಗಳೂರು, ಚಟುವಟಿಕೆಯಿಂದ ಕೂಡಿದ್ದ ಕೈಗಾರಿಕ ನಗರವಾಗಿದ್ದರೂ, ಪ್ರಶಾಂತ ವಾತಾವರಣದ ನಗರವಾಗಿದ್ದಿತು. ನನ್ನ ಸ್ನೇಹಿತರಾದ ಕೇಶವಮೂರ್ತಿ ಮತ್ತು ನಾನು, ಈ ಮಹಾ ವಾಗ್ಮಿಯನ್ನು ಭೇಟಿಮಾಡಲು ಬಸವನಗುಡಿ ರಸ್ತೆಯಲ್ಲಿರುವ ರಾಮಕೃಷ್ಣ ಆಶ್ರಮಕ್ಕೆ ಹೋದೆವು. ಸ್ವಾಮೀಜಿ ನಮ್ಮನ್ನು ಪ್ರೀತಿಯಿಂದ ಸ್ವಾಗತಿಸಿದರು. 'ನೀವು ಏನು ಮಾಡುತಿದ್ದೀರಿ?' ಎಂದು ಅವರು ಪ್ರಶ್ನಿಸಿದರು. ಸೆಂಟ್ರಲ್ ಕಾಲೇಜಿನಲ್ಲಿ ಪದವಿಪೂರ್ವ ತರಗತಿಯಲ್ಲಿ ಅಧ್ಯಯನ ಮಾಡುತ್ತಿರುವ ವಿಜ್ಞಾನದ ವಿದ್ಯಾರ್ಥಿಗಳು ನಾವು ಎಂದು ಉತ್ತರಿಸಿದೆವು. ವಿದ್ಯಾರ್ಥಿಗಳ ಸಭೆಯೊಂದನ್ನು ಆಯೋಜಿಸಲು ನಿಮಗೆ ಸಾಧ್ಯವೇ ಎಂದು ಸ್ವಾಮೀಜಿ ಕೇಳಿದಾಗ ನಾವು ಆಶ್ಚರ್ಯಚಕಿತರಾದೆವು. ತಾವು ಬೆಂಗಳೂರಿನ ವಿದ್ಯಾರ್ಥಿಗಳನ್ನು ಭೇಟಿಯಾಗಲು ಇಚ್ಛಿಸುವುದಾಗಿ ಅವರು ಹೇಳಿದರು. ಆದರೆ ನಾವು ಈ ಪ್ರಸ್ತಾಪಕ್ಕೆ ತಕ್ಷಣ ಸಿದ್ಧರಾಗಿರಲಿಲ್ಲ. ನಮ್ಮಿಬ್ಬರಲ್ಲಿ ಒಬ್ಬರಿಗೂ ಈ ರೀತಿಯ ಸಭೆಗಳನ್ನು ಸಂಯೋಜಿಸುವ ಅನುಭವವಿರಲಿಲ್ಲ. ಆದರೂ, "ಆಗಲಿ, ನಾವು ಮಾಡುವೆವು" ಎಂದು ಹೇಳಿದೆವು.

ತೀರಾ ಅತ್ಯಲ್ಪ ಪ್ರಮಾಣದ, ನಮ್ಮದೇ ಸಂಪನ್ಮೂಲಗಳನ್ನು ಒಟ್ಟುಗೂಡಿಸಿ, ಬೆಂಗಳೂರಿನ ಹೃದಯಭಾಗವಾಗಿದ್ದ, ಕಾಟನ್ ಪೇಟೆಯಲ್ಲಿನ ಕಾಂಗ್ರೆಸ್ ಕಚೇರಿಯಲ್ಲಿ ಸಭೆ ನಡೆಸಲು ತೀರ್ಮಾನಿಸಿದೆವು. ಸ್ವಾಮೀಜಿ ಒಬ್ಬರು ತಮ್ಮ ಪಕ್ಷದ ಕಚೇರಿಯಲ್ಲಿ ಭಾಷಣಮಾಡಲು ಅನುಮತಿಸುವುದರ ಔಚಿತ್ಯದ ಬಗೆಗೆ ಅನುಮಾನಿಸಿದರೂ, ಕಾಂಗ್ರೆಸ್ ನಾಯಕರು ನಮ್ಮ ಪ್ರಸ್ತಾಪ, ಸೂಚನೆಗಳಿಗೆ ಒಪ್ಪಿದರು. ಕೇವಲ ಒಂದು ಸಾವಿರ ಕರಪತ್ರಗಳನ್ನು ಮಾತ್ರ ಮುದ್ರಿಸಿ, ಅವುಗಳನ್ನು ಕಾಲೇಜಿನಲ್ಲಿ ಹಂಚುವಷ್ಟು ಮಾತ್ರವೇ ನಾವು ಪ್ರಚಾರ ನೀಡಬಹುದಾಗಿತ್ತಾದರೂ, ಅಂತಿಮವಾಗಿ, ಬಹುದೊಡ್ಡ ವಿದ್ಯಾರ್ಥಿ ಸಮಾವೇಶವೇ ನಡೆಯಿತು. ಸ್ವಾಮೀಜಿಯವರಂತೂ ಎಂದಿನಂತೆಯೇ ಸ್ಫೂರ್ತಿದಾಯಕವಾಗಿದ್ದು, ನವಭಾರತದ ನಿರ್ಮಾಣದ ಬಗೆಗೆ

---

* ಬೆಂಗಳೂರಿನ ಭಕ್ತರು

ನಮಗೆ ಅತ್ಯಂತ ಸ್ಫೂರ್ತಿದಾಯಕ ಸಂದೇಶ ನೀಡಿದರು. ವಿವೇಕಾನಂದರ ಆದರ್ಶವನ್ನು ನಮ್ಮೆದೆರು ವಿವರಿಸಿದ ಅವರು ಈ ಸಮಾವೇಶದ ವರದಿಯನ್ನು ಕರಾಚಿಯ ವಿದ್ಯಾರ್ಥಿಗಳ ಸಭೆಗೆ ಕಳುಹಿಸುವಂತೆ ಹೇಳಿದರು. ನಾವು ಹಾಗೆಯೇ ಮಾಡಿದೆವು. ಮತ್ತು ಪ್ರತಿಯೊಬ್ಬರೂ ಹರ್ಷಗೊಂಡರು.

## ಶಂಕರ ಅಥವಾ ರಂಗನಾಥಾನಂದ

ಸ್ವಾಮೀಜಿಯವರು ರಾಮಕೃಷ್ಣ ಧಾರ್ಮಿಕ ಪಂಥಕ್ಕೆ ಸೇರಿಕೊಂಡಾಗ ಸ್ವಾಮಿ ಸಿದ್ಧೇಶಾನಂದಜೀಯವರು ಮೈಸೂರಿನ ಆಶ್ರಮದ ಅಧ್ಯಕ್ಷರಾಗಿದ್ದರು. ಸ್ವಾಮೀಜಿಯವರು, ಆಶ್ರಮದಲ್ಲಿ ನಿರ್ವಾಹಕರು, ಅಡುಗೆಯವರು, ತೋಟದ ಮಾಲಿ, ಕಸಗುಡಿಸುವವರು. ಹಾಗೂ ಪೂಜಾರಿ ಎಲ್ಲವೂ ಆಗಿದ್ದರು. ಕೇರಳದಿಂದ ಬಂದಿದ್ದ ಕಸ್ತೂರಿ ಎಂಬುವವರು ಅವರಿಗೆ ಸಹಾಯಕರಾಗಿ ಅವರೊಡನೆ ಇದ್ದರು. ಕಸ್ತೂರಿಯವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಇತಿಹಾಸ ಬೋಧಿಸುತ್ತಿದ್ದದಲ್ಲದೆ, ಮೈಸೂರಿನ ಆಶ್ರಮಕ್ಕೆ ಹತ್ತಿರದವರಾಗಿದ್ದರು.

ಬೇಲೂರು ಮಠದ ಸ್ವಾಮಿ ಶಿವಾನಂದರಿಂದ ೧೯೩೩ರಲ್ಲಿ ಶಂಕರರು ಸಂನ್ಯಾಸ ದೀಕ್ಷೆ ಪಡೆದರು. ಸ್ವಾಮೀಜಿರವರು ಮೈಸೂರಿಗೆ ಹಿಂದಿರುಗಿದಾಗ, ಹಾಸ್ಯಗಾರರಾಗಿದ್ದ ಕಸ್ತೂರಿಯವರು ಅವರ ಬಳಿಗೆ ಹೋಗಿ ಪ್ರಣಾಮಗಳನ್ನು ಸಲ್ಲಿಸಿ ಕೇಳಿದರು: "ಸ್ವಾಮೀಜೀ, ಈ ದಿನಗಳಲ್ಲಿ ನಾವು ನಿಮ್ಮನ್ನು ಶಂಕರಮಹಾರಾಜ್ ಎಂದು ಕರೆಯುತ್ತಿದ್ದೇವೆ. ಈಗ ನಿಮಗೆ ಹೊಸ ಹೆಸರೊಂದು ಬಂದಿದೆ, ನಿಮ್ಮನ್ನು ನಾವು ಈಗ ಯಾವ ಹೆಸರಿನಿಂದ ಕರೆಯಬೇಕು?" ನಂತರ ಕಸ್ತೂರಿ ತಮ್ಮಷ್ಟಕ್ಕೆ ತಾವೇ ಹೀಗೆ ಹೇಳಿದರು. "ನಾವು ಹೀಗೆ ಮಾಡೋಣ. ನೀವು ಓಡಾಡುತ್ತಿರುವಾಗ ನಿಮ್ಮನ್ನು ಶಂಕರ ಮಹಾರಾಜ್ ಎಂದು ಕರೆಯುತ್ತೇವೆ. ಮತ್ತು ನೀವು ಮಲಗಿದ್ದಾಗ ರಂಗನಾಥನಂದ ಎಂದು ಕರೆಯುತ್ತೇವೆ."

ಕಸ್ತೂರಿಯವರ ಹಾಸ್ಯ ಪ್ರಜ್ಞೆಯನ್ನು ಕಂಡು ಹರ್ಷಿಸುತ್ತಿದ್ದ ಸ್ವಾಮೀಜಿಯವರು ಈ ಕಥೆಯನ್ನು ಹೇಳುತ್ತಿದ್ದರು. ಈ ಹಾಸ್ಯವನ್ನು ಅರ್ಥಮಾಡಿಕೊಳ್ಳಲು ನೀವು ರಂಗನಾಥ ಸ್ವಾಮಿಯ ಕಥೆಯನ್ನು ತಿಳಿದುಕೊಳ್ಳಬೇಕು. ಶ್ರೀರಂಗನಾಥ ಸ್ವಾಮಿಯು ಶ್ರೀ ವಿಷ್ಣುವಿನ ಸ್ವರೂಪವಾಗಿದ್ದು, ಆ ದೇವನನ್ನು ಯಾವಾಗಲೂ, ಶಯನಿಸಿರುವ ಭಂಗಿಯಲ್ಲಿಯೂ ಮತ್ತು ಲಕ್ಷ್ಮೀದೇವಿಯು ಅವನ ಪಾದಕಮಲಗಳ ಬಳಿ ಕುಳಿತಿರುವಂತೆಯೂ ಚಿತ್ರಿಸಲಾಗುತ್ತದೆ.

## ಕೈಲಾಸಂ ಮತ್ತು ಶ್ರೀರಾಮಕೃಷ್ಣ

೧೯೩೦–೧೯೪೦ರ ಅವಧಿಯಲ್ಲಿ ಟಿ.ಪಿ. ಕೈಲಾಸಂ, ಪ್ರಸಿದ್ಧ ನಾಟಕಕಾರರಾಗಿದ್ದು ಹಾಸ್ಯಲೇಖಕರಾಗಿಯೂ ಹೆಸರುವಾಸಿಯಾಗಿದ್ದರು. ಸ್ವಾಮೀಜಿಯವರು ಮೈಸೂರಿನ ಆಶ್ರಮದಲ್ಲಿ ವಾಸ್ತವ್ಯ ಮಾಡಿದಾಗಲೆಲ್ಲಾ ಕೈಲಾಸಂ ಅವರು ಆಶ್ರಮಕ್ಕೆ ಪದೇ ಪದೇ ಭೇಟಿನೀಡುತ್ತಿದ್ದರು. ಕೈಲಾಸಂ ಅವರ ಬಗೆಗೆ ಈ ಸಂಗತಿಯನ್ನು ನಮಗೆ ಸ್ವಾಮೀಜೀಯೇ ಹೇಳಿದರು. ಕೈಲಾಸಂ ಧೂಮಪಾನ ವ್ಯಸನಿಯಾಗಿದ್ದರು. ಆದರೆ ಅವರು ಎಂದೂ ಆಶ್ರಮದ ಒಳಗೆ ಧೂಮಪಾನ ಮಾಡುತ್ತಿರಲಿಲ್ಲ, ಧೂಮಪಾನ ಮಾಡುವ, ಹೊಗೆ ಎಳೆಯುವ ಒತ್ತಡ ಉಂಟಾದಾಗಲೆಲ್ಲಾ, ಅವರು ಹೊರಗಡೆ ಹೋಗಿ ಒಂದು ದಂ ಎಳೆದು ಮತ್ತೆ ಆಶ್ರಮಕ್ಕೆ ಹಿಂದಿರುಗುತ್ತಿದ್ದರು. ಆಶ್ರಮದೊಳಗೆ ನೀವೇಕೆ ಧೂಮಪಾನ ಮಾಡಬಾರದೆಂದು ಸ್ವಾಮಿಜಿ ಕೈಲಾಸಂರನ್ನು ಕೇಳಿದರು. ಇದಕ್ಕೆ ಉತ್ತರವಾಗಿ ಕೈಲಾಸಂ ದೀರ್ಘವಿವರಣೆ ನೀಡಿದರು. ಶ್ರೀರಾಮಕೃಷ್ಣರ ಭಾವಚಿತ್ರದೆಡೆಗೆ ಕೈಮಾಡಿ ತೋರಿಸುತ್ತಾ ಅವರು ಹೇಳಿದರು; "ಅವರು ದೇವರು. ಅವರ ಎದುರಿನಲ್ಲಿ ನಾನು ಧೂಮಪಾನ ಮಾಡಲಾರೆ. ಒಮ್ಮೆ ನನ್ನನ್ನು ಅವರು ಅತ್ಯಂತ ಕಷ್ಟಕರ ಸಂದರ್ಭದಲ್ಲಿ ರಕ್ಷಿಸಿದ್ದರು."

ವಾಸ್ತವಾಗಿ ನಡೆದಿದ್ದೇನೆಂದರೆ, ಕೈಲಾಸಂ, ಒಮ್ಮೆ ನಾಟಕದಲ್ಲಿ ವಿಧವೆಯ ಪಾತ್ರ ವಹಿಸಿದ್ದರು. ಆದರೆ ನಾಟಕದ ನಾಯಕ ಪಾತ್ರಧಾರಿ ಇನ್ನೂ ಬಂದಿರಲಿಲ್ಲ. ನಾಟಕ ಕಾರ್ಯಕ್ರಮ ಅವನು ಬರದೆ ಆರಂಭವಾಗುವಂತಿರಲಿಲ್ಲ. ಕಾತರಗೊಂಡಿದ್ದ ಭಾರೀ ಸಂಖ್ಯೆಯ ಪ್ರೇಕ್ಷಕರನ್ನು ಶಾಂತರಾಗಿಸುವುದು ಕೈಲಾಸಂರ ಪಾಲಿಗೆ ಬಂದಿತ್ತು. ಆದ್ದರಿಂದ, ಕೈಲಾಸಂ ರಂಗದ ಮೇಲೆ ಬಂದು, ಅಂದು ನಾಟಕದ ವಸ್ತುವಿಗೆ ಪ್ರಸ್ತುತವಾಗುವಂತಿದ್ದ, ಶ್ರೀರಾಮಕೃಷ್ಣರ ನೀತಿಕಥೆಯೊಂದನ್ನು ನಿರೂಪಿಸಿದರು. ಶ್ರೀರಾಮನ ಬಾಣದಿಂದ ಆಕಸ್ಮಿಕ ಗಾಯದಿಂದ ಪ್ರಾಣಬಿಟ್ಟ ಕಪ್ಪೆಯ ಕಥೆಯಾಗಿತ್ತು ಅದು. ಕಥೆ ಹೇಳುವುದರಲ್ಲಿ ಅಸಾಮಾನ್ಯ ಕಲೆಗಾರರಾಗಿದ್ದ ಕೈಲಾಸಂ, ತಮ್ಮ ನಿರೂಪಣೆಯಿಂದ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿ ಮಾಡಿದ್ದರು. ಅವರು ಕಥೆಯ ಮುಕ್ತಾಯಕ್ಕೆ ಬರುವ ಸಮಯಕ್ಕೆ ನಾಯಕ ಪಾತ್ರಧಾರಿ ಬಂದನು ಮತ್ತು ಕೈಲಾಸಂ ಸಮಧಾನದ ನಿಟ್ಟುಸಿರುಬಿಟ್ಟರು. ಮತ್ತು ನಾಟಕದ ಕಾರ್ಯಕ್ರಮ ಮುಂದುವರಿಯಿತು. ತಮ್ಮ ಈ ಅನುಭವವನ್ನು ಸಂಕ್ಷೇಪವಾಗಿ ಪುನಾರಾವರ್ತಿಸುತ್ತಾ, ಕೈಲಾಸಂ ಹೇಳಿದರು: "ಶ್ರೀ ರಾಮಕೃಷ್ಣರಿರದಿದ್ದರೆ, ಆ ದಿನ ನಾನು ಏನು ಮಾಡುತ್ತಿದ್ದೆನೋ ನನಗೆ ತಿಳಿದಿಲ್ಲ. ನಾನು ಎಂದೆಂದಿಗೂ ಅವರಿಗೆ ಕೃತಜ್ಞನಾಗಿದ್ದೇನೆ. ಈಗ ಹೇಳಿ, ಅವರ ಎದುರಿಗೆ ನಾನು ಹೇಗೆ ತಾನೇ ಅಗೌರವ ತೋರಿಸಿ ಭಕ್ತಿಭಾವರಹಿತನಾಗಿ ಇರಬಲ್ಲೆ?"

**ಬೆಂಗಳೂರು ಆಶ್ರಮದ ಬಿಕ್ಕಟ್ಟು**

ಸುಮಾರು ಹತ್ತು ವರ್ಷಗಳ ಹಿಂದೆ ಬೆಂಗಳೂರಿನ ಶ್ರೀ ರಾಮಕೃಷ್ಣ ಆಶ್ರಮವು ಬಹಳ ಸಂದಿಗ್ಧ ಪರಿಸ್ಥಿತಿಯನ್ನೆದುರಿಸಿದಾಗ, ಆಶ್ರಮದ ಬಗೆಗೆ ಕಾಳಜಿ ಹೊಂದಿದ್ದ ಹಲವು ಮಿತ್ರರು, ಈ ಕ್ಲಿಷ್ಟ ಸಮಸ್ಯೆಗಳ ಪರಿಹಾರಕ್ಕೆ, ಆಗ ಹೈದರಾಬಾದಿನಲ್ಲಿದ್ದ ಸ್ವಾಮಿ ರಂಗನಾಥಾನಂದರ ಸಹಾಯ ಪಡೆಯಬೇಕೆಂದು ಆಲೋಚಿಸಿದರು. ಅವರ ಸಹಾಯ ಪಡೆಯುವುದಕ್ಕಾಗಿ ನಾವು ಎರಡುಬಾರಿ ಹೈದರಾಬಾದಿಗೆ ಹೋದೆವು. ಸ್ವಾಮೀಜಿಯವರು ಅತ್ಯಂತ ಸಹಾನುಭೂತಿಪರರೂ, ಸಹಾಯಹಸ್ತ ನೀಡುವವರೂ ಆಗಿದ್ದರು. ಅವರು ನಮ್ಮನ್ನು ಅವರ ಖಾಸಗಿ ಕೋಣೆಯಲ್ಲಿಯೇ ಭೇಟಿಮಾಡಿ ನಮ್ಮೊಡನೆ ಅವರ ಅಭಿಪ್ರಾಯವನ್ನು ತಿಳಿಸಿದರು. ೧೯೪೨ರಲ್ಲಿ ಸ್ವಾಮಿ ನಿರ್ಮಲಾನಂದರು. ಬೆಂಗಳೂರು ಆಶ್ರಮದ ಅಧ್ಯಕ್ಷರಾಗಿದ್ದಾಗ ಉಂಟಾಗಿದ್ದ ಮತ್ತೊಂದು ಬಿಕ್ಕಟ್ಟಿನ ಪರಿಸ್ಥಿತಿಯ ಬಗೆಗೆ ರಂಗನಾಥಾನಂದಜೀಯವರು ತಮ್ಮದೇ ಅನುಭವವನ್ನು ನಮಗೆ ತಿಳಿಸಿದರು. ಸ್ವಾಮಿ ನಿರ್ಮಾಲಾನಂದರು ಆಶ್ರಮದ ಹೊಣೆಯನ್ನು ವಹಿಸಿಕೊಳ್ಳುವಂತೆ ಸ್ವಾಮಿ ರಂಗನಾಥಾನಂದರನ್ನು ಕೇಳಿಕೊಂಡರು ಮತ್ತು ಸ್ವಾಮಿ ನಿರ್ಮಲಾನಂದರ ಕೇರಳದ ಒಟ್ಟಪಳಮ್‌ನ ಆಶ್ರಮವೊಂದರಲ್ಲಿ ನೆಲೆಗೊಂಡರು.

ಆಶ್ರಮದ ದೃಷ್ಟಿಯಿಂದ ಅದು ಅತ್ಯಂತ ಕ್ಲಿಷ್ಟಕರ ಅವಧಿಯಾಗಿತ್ತು. ಹಾಗಾಗಿ, ಆಶ್ರಮದಲ್ಲಿ ವಿಶ್ವಾಸ ಕಳೆದುಕೊಂಡು ದೂರವಾಗಿದ್ದ ಭಕ್ತರ ಮನಸ್ಸುಗಳನ್ನು ಗೆದ್ದು, ಅವರನ್ನು ಮತ್ತೆ ವಿಶ್ವಾಸಕ್ಕೆ ತೆಗೆದುಕೊಳ್ಳುವುದು, ಮೊಟ್ಟಮೊದಲ ಆವಶ್ಯಕ ಹಾಗೂ ಕಠಿನ ಕಾರ್ಯವೆಂದು ಸ್ವಾಮೀಜಿ ಭಾವಿಸಿದರು. ಅಂತಹ ಭಕ್ತರ ಮನೆಗಳಿಗೆ ಸ್ವಾಮೀಜಿ ಸ್ವತಃ ಭೇಟಿ ನೀಡಿ ಹಿಂದಿನ ದುರದೃಷ್ಟಕರ ಕಹಿ ಅನುಭವಗಳನ್ನು ಮರೆತು, ಆ ಭಕ್ತರು ಮತ್ತೆ ಆಶ್ರಮವನ್ನು ತಮ್ಮದೇ ಎಂಬ ಕಾಳಜಿಯಿಂದ ಮುಂದುವರಿಸಿಕೊಂಡು ಹೋಗಬೇಕೆಂದು ಅವರನ್ನು ಕೇಳಿಕೊಂಡರು. ಕೇವಲ ಕೆಲವೇ ದಿನಗಳ ಹಿಂದೆ ಸ್ವಾಮಿ ರಂಗನಾಥಾನಂದಜೀಯವರನ್ನು ವಿರೋಧಿಸಿದ್ದ ಭಕ್ತರು, ಇದನ್ನು ನಿರೀಕ್ಷಿಸಿರಲಿಲ್ಲ. ಆದರೆ ಹಿಂದಿನದನ್ನೆಲ್ಲಾ ಮರೆತುಬಿಡುವಂತೆ ಸ್ವಾಮೀಜಿ ಅವರಿಗೆ ತಿಳಿಸಿದರು. ಶ್ರೀ ರಾಮಕೃಷ್ಣ ಜಯಂತಿಯ ಸಂದರ್ಭದಲ್ಲಿ ಎಂದಿನಂತೆಯೇ ಆ ಭಕ್ತರು ತಮ್ಮ ಕುಟುಂಬದ ಸದಸ್ಯರೊಡನೆ ಬಂದು ಪ್ರಸಾದ ಸ್ವೀಕರಿಸಬೇಕೆಂದು, ಸ್ವಾಮೀಜಿ ಅವರಿಗೆ ಕರೆನೀಡಿದರು. ಭಕ್ತರು ಕಣ್ಣೀರು ತುಂಬಿಕೊಂಡು ಈ ಆಹ್ವಾನವನ್ನು ಅಂಗೀಕರಿಸಿದರು. ಮತ್ತೆ ಆಶ್ರಮದಲ್ಲಿ ಶಾಂತಿ, ಸಾಮರಸ್ಯಗಳು ನೆಲೆಗೊಂಡವು. ಬೆಂಗಳೂರಿನ

ಭಕ್ತ ಸಮೂಹಕ್ಕೆ, ಹಿಂದಿನ ಈ ಎಲ್ಲ ಸಂಗತಿಗಳನ್ನೂ ಪುನಃ ವಿವರಿಸುತ್ತಾ, ಹಿಂದಿನ ಕಹಿಯನ್ನು ಮರೆತು ಆಶ್ರಮದ ಕಾರ್ಯಗಳಲ್ಲಿ ಹಿಂದಿನಂತೆಯೇ ಸಹಕಾರವನ್ನು ಮುಂದುವರಿಸುವಂತೆ ಸ್ವಾಮೀಜೀ ತಮ್ಮ ಸಂದೇಶದಲ್ಲಿ ಕೇಳಿಕೊಂಡರು. ಹಾಗೂ ತಮ್ಮ ಈ ಸಂದೇಶಕ್ಕೆ ವಿಸ್ತೃತ ಪ್ರಚಾರ ನೀಡುವ ಸಲುವಾಗಿ ಸತ್ಸಂಗದ ಸಭೆಯನ್ನು ಆಯೋಜಿಸಲು ಹಾಗೂ ಎಲ್ಲರಿಗೂ ಒಟ್ಟಾಗಿ, ರುಚಿಕರವಾದ ಭೋಜನವ್ಯವಸ್ಥೆಯನ್ನು ಮಾಡುವಂತೆಯೂ ನಮಗೆ ತಿಳಿಸಿದರು. ನಾವು ಅವರ ಸಂದೇಶವನ್ನು ಧ್ವನಿಮುದ್ರಿಸಿಕೊಂಡು ಬಂದೆವು. ಬೆಂಗಳೂರಿನ ಎಲ್ಲ ಭಕ್ತರನ್ನೂ ಕರೆದು ಸಭೆ ಸೇರಿಸಿದೆವು. ಭಕ್ತಿಗೀತೆಗಳ ಗಾಯನದ ನಂತರ ಧ್ವನಿಮುದ್ರಿತ ಸಂದೇಶದ ಟೇಪುಗಳನ್ನು ಹಾಕಲಾಯಿತು. ನಮ್ಮ ವಿವೇಕಾನಂದ ಶಾಲೆಯಲ್ಲಿ ನಡೆದ ಸಭೆಯಲ್ಲಿ ನೂರಾರು ಭಕ್ತರು ಉಪಸ್ಥಿತರಿದ್ದರು.ಅದರ ಪರಿಣಾಮವಾಗಿ, ಬೆಂಗಳೂರಿನ ಆಶ್ರಮದ ಪರಿಸ್ಥಿತಿ ಸಮಾಧಾನಕರವೂ, ಹೆಚ್ಚು ಪ್ರಶಾಂತಪೂರ್ಣವೂ ಆಯಿತು. ಹೀಗೆ ಸ್ವಾಮೀಜಿಯವರು ಅನೇಕ ಬಿಕ್ಕಟ್ಟಿನ ಸಮಸ್ಯೆಗಳನ್ನು ಸುಗಮವಾಗಿ ಪರಿಹರಿಸಿದರು.

**ಗೀತೆಗಳು**

ಶಾಲೆಯ ಹುಡುಗನಾಗಿದ್ದಾಗಿನಿಂದಲೇ ನಾನು ಭಕ್ತಿಗೀತೆಗಳನ್ನು ಕಲಿಯತೊಡಗಿದ್ದೆ. ಸುಮಾರು, ೧೯೪೦ರಲ್ಲಿ ಇರಬೇಕು. ಸ್ವಾಮಿ ವಿವೇಕಾನಂದರ ಬಗೆಗಿನ "ಮೂರ್ತ ಮಹೇಶ್ವರ" ಎಂಬ ಹಾಡು ನನಗೆ ಅತ್ಯಂತ ಪ್ರಿಯವಾದುದಾಗಿತ್ತು. ಸ್ವಾಮೀಜಿಯವರು, ಕರಾಚಿಯಿಂದ ಬೆಂಗಳೂರಿಗೆ ಬಂದಾಗ, ನಾನು ಅವರಿಗಾಗಿ ಆ ಗೀತೆಯನ್ನು ಹಾಡಿದ್ದೆ. ಒಂದು ದಿನ ದಿಲ್ಲಿಯ ಸತ್ಸಂಗದ ಸಭೆಯಲ್ಲಿ ಸ್ವಾಮೀಜೀ ನನ್ನನ್ನು ಗಮನಿಸಿದರು. ಹಾಗೂ ತಮ್ಮ ಭಾಷಣದ ನಂತರ ಕಿಟ್ಟಿಯು (ನನ್ನ ಅಡ್ಡ ಹೆಸರು) ಒಂದು ಗೀತೆಯನ್ನು ಹಾಡುವನು ಎಂದು ಪ್ರಕಟಿಸಿಯೂಬಿಟ್ಟರು. ಅಂದು ನಾನು ಹಾಡಿದ್ದು, ಯುವಕ ನರೇಂದ್ರನು ಶ್ರೀರಾಮಕೃಷ್ಣರಿಗಾಗಿ ಹಾಡಿದ್ದ, "ತುಝ್‌ಸೇ ಹಮ್‌ನೇ ದಿಲ್ ಕೋ ಲಗಾಯಾ" ಎಂಬ ಗೀತೆಯಾಗಿತ್ತು. ಆ ಹಾಡಿನ ಸಾಹಿತ್ಯವನ್ನು ಭಾವೋನ್ಮತ್ತನಾಗಿ ನೆನಪು ಮಾಡಿಕೊಂಡು ಹಾಡಿದ್ದೆ.

ಸ್ವಾಮೀಜಿಯವರು ವಿಶೇಷವಾಗಿ ಇಷ್ಟಪಡುತ್ತಿದ್ದ ಮತ್ತೊಂದು ಗೀತೆ, "ಮಾ ಆಚೇನ್ ಅರ್‌ಮೀ ಆಜೀ" ಎಂಬ ಬಂಗಾಳಿ ಗೀತೆ. ಅದನ್ನು ಸ್ವಾಮೀಜೀ ಹೈದರಾಬಾದಿನ ತಮ್ಮ ಪ್ರವಚನ ಒಂದರಲ್ಲಿ ಸಾದ್ಯಂತವಾಗಿ ವಿವರಿಸಿ ಅರ್ಥ ಹೇಳಿದ್ದರು. ಆ ಗೀತೆಯನ್ನು ನಾನು ಹಾಡಲಿಚ್ಛಿಸಿದೆ. ಆದ್ದರಿಂದ, ಅವರ ಭಾಷಣದ ನಂತರ ಹಾಡಿದೆ. ಹೈದರಾಬಾದಿನ ಮಠದ ಅಧ್ಯಕ್ಷರಾಗಿದ್ದಾಗ ಸ್ವಾಮೀಜಿ, ಪ್ರತಿ ಭಾನುವಾರವೂ ಭಾರೀ ಸಭೆಗಳಲ್ಲಿ ಜನಪ್ರಿಯ ಪ್ರವಚನಗಳನ್ನು ನೀಡುತ್ತಿದ್ದರು.

ಪ್ರಸಿದ್ಧ ಗಾಯಕಿ ಎಂ. ಎಸ್. ಸುಬ್ಬುಲಕ್ಷ್ಮಿಯವರಿಗೆ, ಸ್ವಾಮೀಜಿ ಬಹಳ ಸಮೀಪದವರಾಗಿದ್ದರು. ಸುಬ್ಬುಲಕ್ಷ್ಮಿಯವರು ತಮ್ಮ ಗಾಯನದ ಹಲವು ಮುದ್ರಿಕೆಗಳನ್ನು (ರಿಕಾರ್ಡ್‌ಗಳನ್ನು) ರಾಮಕೃಷ್ಣ ಮಿಷನ್‌ಗೆ ಸಮರ್ಪಿಸಿದ್ದು, ಅವುಗಳಿಂದ ಬಂದ ವರಮಾನವೆಲ್ಲಾ ರಾಮಕೃಷ್ಣ ಮಿಷನ್‌ಗೆ ಸೇರುತ್ತಿತ್ತು. ನಂತರದ ವರ್ಷಗಳಲ್ಲಿ, ಸುಬ್ಬುಲಕ್ಷ್ಮಿಯವರು ಆರ್ಥಿಕವಾಗಿ ತೊಂದರೆಯಲ್ಲಿದ್ದಾಗ, ಸ್ವಾಮೀಜಿ ಅವರಿಗೆ ಆರ್ಥಿಕ ನೆರವು ನೀಡಿದರು. ಮಠದ ಹಲವಾರು ಕೇಂದ್ರಗಳು ಸ್ವಾಮೀಜಿಯವರಿಂದ ಆರ್ಥಿಕ ನೆರವು ಪಡೆದಿದ್ದವು. ಅವರು ಶಾರದಾ ಮಠಕ್ಕೂ ನೆರವು ನಿಡಿದರು. ಹಣದ ಬಗೆಗೆ ಎಂದೂ ಅವರು ಆಶಿಸಲೂ ಇಲ್ಲ, ಚಿಂತಿಸಲೂ ಇಲ್ಲ. ಮತ್ತೆ ಗೀತೆಗಳ ವಿಷಯಕ್ಕೆ ಬರೋಣ. ಒಮ್ಮೆ ಒಂದು ವಾರದ ಅವಧಿಯ ವಾರ್ಷಿಕ ಕ್ರಿಸ್‌ಮಸ್ ಭೇಟಿಗಾಗಿ ತ್ರಿಶೂರಿಗೆ ಬಂದಿದ್ದಾಗ, ತಾವು ಭೇಟಿ ಮಾಡಿದ ಶಾಲೆಯೊಂದರಲ್ಲಿ ಮಕ್ಕಳು ಹಾಡಿದ ಆಂಗ್ಲ ಭಾಷೆಯ ಗೀತೆಯೊಂದನ್ನು ಸ್ವಾಮೀಜಿ ಕೇಳಿದರು. ಆ ಗೀತೆ ಅವರಿಗೆ ಇಷ್ಟವಾಯಿತು. ಆದ್ದರಿಂದ ಅದನ್ನು ಧ್ವನಿ

ಮುದ್ರಿಸಿಕೊಂಡು ಆ ಟೇಪನ್ನು ತಮ್ಮೊಡನೆ ಸಿಡ್ನಿಗೆ ತೆಗೆದುಕೊಂಡು ಹೋದರು. ಅಲ್ಲಿ ತಮ್ಮ ವೇದಾಂತ ಪ್ರವಚನದ ನಂತರ, ಆ ಮುದ್ರಿಕೆಯ ಟೇಪನ್ನು ಹಾಕಿದರು. ಆ ಸೋಗಸಾದ ಗೀತೆ ಹೀಗಿತ್ತು:

“ನಿಮ್ಮ ಮೊಗದ ಮೇಲೆ ಮುಗುಳ್ನಗೆಯಿದೆ ಸ್ವಾಮೀಜಿ.
ನಿಮ್ಮ ಮೊಗದ ಮೇಲೆ ಇರುವಾಗ ಮುಗುಳ್ನಗೆ
ಸಂತುಷ್ಟಸ್ಥಳವಾಗಿರುವುದು ಈ ಜಗತ್ತು,
ನೀವು ಮತ್ತಷ್ಟು ಹೆಚ್ಚು ಕಾಲ ಮುಗುಳ್ನಗಬಾರದೇ ಸ್ವಾಮೀಜಿ?
ನೀವು ಮಬ್ಬು ಮುಸುಕಿದಂತಹ ಹುಬ್ಬುಗಂಟಿಕ್ಕಿದರೆ ಸ್ವಾಮೀಜಿ?
ನೀವು ಮಬ್ಬು ಮುಸುಕಿದ ಹುಬ್ಬು ಗಂಟಿಕ್ಕಿದಾಗ
ಕೆಳಕ್ಕುರುಳಿ ಬೀಳುವುದು ಈ ಜಗತ್ತು,
ಮತ್ತಷ್ಟು ಹೆಚ್ಚುಕಾಲ ನೀವು ಮುಗುಳ್ನಗ ಬಾರದೇ ಸ್ವಾಮೀಜಿ?
ನಿಮ್ಮ ಹೃದಯ ತುಂಬಿರುವುದು ಪ್ರೀತಿಯಿಂದ ಸ್ವಾಮೀಜಿ?
ನಿಮ್ಮ ಹೃದಯ ತುಂಬಿರುವಾಗ ಪ್ರೀತಿಯಿಂದ
ಅದು ಸ್ವರ್ಗದಿಂದಿಳಿದ ಆಶೀರ್ವಾದ, ಮತ್ತಷ್ಟು ಹೆಚ್ಚು ಕಾಲ
ನೀವು ಮುಗುಳ್ನಗಬಾರದೆ ಸ್ವಾಮೀಜಿ, ಸ್ವಾಮೀಜಿ, ಸ್ವಾಮೀಜಿ?

**ಸಾಹಸಪ್ರಿಯತೆ**

ಸ್ವಾಮೀಜಿಯವರು ತಾವು ಸಾಹಸಪ್ರಿಯರಾಗಿದ್ದಲ್ಲದೇ, ಯುವಕರಲ್ಲಿ ಸಾಹಸ ಪ್ರವೃತ್ತಿಯ ಮನೋಭಾವವನ್ನು ಪ್ರೋತ್ಸಾಹಿಸುತ್ತಿದ್ದರು. ಯುವ ಸನ್ಯಾಸಿಯಾಗಿದ್ದಾಗ ಅವರು ಒಂದು ಸೈಕಲ್ಲನ್ನು ಏರಿ, ಜೊತೆಗೆ ಮತ್ತೊಬ್ಬ ಸೈಕಲ್ ಸವಾರನೊಡನೆ, ತೀರಾ ಪ್ರಾಣಾಪಾಯದ ವೇಗದಲ್ಲಿ ಮಸ್ಸೂರಿ –ಡೆಹ್ರಾಡೂನ್ ರಸ್ತೆಯಲ್ಲಿ ಧಡಧಡನೆ, ರಭಸದಿಂದ ಪಯಣಿಸಿದ್ದರು. ತಾವು ಕಾರಿನಲ್ಲಿ ಪಯಣಿಸುವಾಗ ಚಾಲಕರನ್ನು ವೇಗವಾಗಿ ಹೋಗುವಂತೆ ಪ್ರೋತ್ಸಾಹಿಸುತ್ತಿದ್ದರು.ಸ್ವಾಮೀಜಿ ಒಮ್ಮೆ ಯಾವುದೋ ಕೆಲಸಕ್ಕಾಗಿ ಒಬ್ಬರೇ ಟಿ.ನರಸಿಪುರಕ್ಕೆ ಹೋಗಿದ್ದರು. ಸ್ವಾಮೀಜಿಯವರು ಉಳಿದುಕೊಂಡಿದ್ದ ಗ್ರಾಮಾಂತರ ಪ್ರದೇಶವು ಮೈಸೂರಿನಿಂದ ಸುಮಾರು ಮುವತ್ತು ಕಿಲೋಮೀಟರ್‌ಗಳಷ್ಟು ದೂರದಲ್ಲಿತ್ತು. ಆಗಲೇ ಮಧ್ಯಾಹ್ನವಾಗಿತ್ತು. ಸ್ವಾಮೀಜಿಯು ಹಸಿದಿದ್ದರು. ಒಬ್ಬ ದಯಾಳು ರೈತನು ಸ್ವಾಮೀಜಿಯ ಪರಿಸ್ಥಿತಿಯನ್ನು ಕಂಡು ಮರುಗಿ, ಸಾಧುಗಳಿಗೆ ಸಲ್ಲತಕ್ಕ ಭಕ್ತಿಯೊಡನೆ, ಅವರನ್ನು ತನ್ನ ಮನೆಗೆ ಕರೆದುಕೊಂಡು ಹೋದನು. ಆ ರೈತನೇನೋ ಪ್ರೀತಿಗೌರವಗಳಿಂದ ಸ್ವಾಮೀಜಿಗೆ ತಾನೆ ಕೈಯಾರ ಊಟ ಮಾಡಿಸಿದ. ಆದರೆ ಒಂದೇ ಒಂದು ತೊಡಕಾದದ್ದೆಂದರೆ, ಆಹಾರದಲ್ಲಿ ಬೆಳ್ಳುಳ್ಳಿಯನ್ನು ಧಾರಾಳವಾಗಿ ಬಳಸಿದ್ದರು. ಅದರ ಪರಿಣಾಮವಾಗಿ, ಹಿಂದಿರುಗಿ ಬರುತ್ತಾ ಸ್ವಾಮೀಜಿ ತಾವು ತಿಂದಿದ್ದ ಆಹಾರವನ್ನೆಲ್ಲಾ ವಾಂತಿಮಾಡಿಕೊಂಡರು. ಇಂತಹ ಅನುಭವಗಳನ್ನು ಮತ್ತೆ ಮತ್ತೆ ಹೇಳಿಕೊಳ್ಳುವುದರಲ್ಲಿ ಅವರಿಗೆ ಸಂತೋಷವಾಗುತ್ತಿತ್ತು.

**ವೃಕ್ಷ ಪ್ರೇಮ**

ಸ್ವಾಮೀಜಿಯವರು ಹೈದರಾಬಾದಿನಲ್ಲಿ ಸುಂದರವಾದ ಮಠವನ್ನು ಕಟ್ಟಿದಾಗ ೧೨೦೦ ಆಸನಗಳ ವ್ಯವಸ್ಥೆಯುಳ್ಳ ಸಭಾಗೃಹವೊಂದನ್ನು ನಿರ್ಮಿಸಿದರು. ತಾವು ಪ್ರವಚನ ನೀಡುವಾಗ ಸೇರುತ್ತಿದ್ದ ಭಕ್ತರ ಸಂಖ್ಯೆಗೆ ಅದು ತೀರಾ ಚಿಕ್ಕದು ಎನಿಸಿದ್ದರಿಂದ ಸ್ವಾಮೀಜಿ ಮಠದ ಹೊರಾಂಗಣದಲ್ಲಿ ವಿಶಾಲವಾದ ಹುಲ್ಲುಹಾಸನ್ನು

ಬೆಳೆಸಿದ್ದರು. ಆ ಹುಲ್ಲಿಹಾಸಿನ ಸುತ್ತಲೂ ಮರಗಳನ್ನು ಬೆಳೆಸಿದ್ದರು. ಅಲ್ಲದೆ ಮಠದ ಅಡುಗೆಕೋಣೆಯ ಹಿಂಭಾಗದಲ್ಲಿ 'ವೇಣುವನ' ಎಂಬ ಬಿದಿರುಮಳೆಯ ತೋಪನ್ನು ಬೆಳೆಸಿದ್ದರು. ಬುದ್ಧನು ತನ್ನದೇ 'ವೇಣುವನ' ಹೊಂದಿದ್ದನ್ನು ಅದು ಸ್ವಾಮೀಜಿಗೆ ನೆನಪಿಸುತ್ತಿತ್ತು. ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸ್ವಾಮಿ ಸುರೇಶಾನಂದರು ಒಂದು ಸಣ್ಣ ಕಾಡನ್ನೇ ಬೆಳೆಸಿದ್ದರು. ಸ್ವಾಮೀಜಿ ಅದನ್ನು ಬಹಳವಾಗಿ ಇಷ್ಟಪಟ್ಟಿದ್ದರಲ್ಲದೇ, ಆ ಕಾಡಿನಲ್ಲಿ ಜಿಂಕೆಗಳನ್ನು ಸಾಕುವಂತೆ ಸ್ವಾಮಿ ಸುರೇಶಾನಂದರಿಗೆ ತಿಳಿಸುವಂತೆ, ನನಗೆ ಹೇಳಿದರು. ಆದರೆ, ಆ ಪ್ರದೇಶದ ಬೀಡಾಡಿ ನಾಯಿಗಳು, ಜಿಂಕೆಗಳನ್ನು ಬೇಟೆಯಾಡಿಬಿಡುವುವು ಎಂದು ಸ್ವಾಮಿ ಸುರೇಶಾನಂದರು ಹೆದರಿದರು.

ಅಮೆರಿಕದ ಮಿಶಿಗನ್ನಿನ ಗ್ಯಾಂಜಿಸ್ (ವಿರಕ್ತ–ವಿಹಾರದಲ್ಲಿ ಮಾನಸ್ಟರಿಯಲ್ಲಿ) ರಾಮಕೃಷ್ಣ ಪಂಥದ ಭಕ್ತ ಸಮೂಹದ ಭಾರೀ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಅವರ ಆರೋಗ್ಯ ಅಷ್ಟಾಗಿ ಸಮರ್ಪಕವಾಗಿರದಿದ್ದರು ಕೂಡ, ಸ್ವಾಮಿ ರಂಗನಾಥಾನಂದರು ಅಲ್ಲಿ ಮುಖ್ಯ ಆಕರ್ಷಣೆಯೂ ಕೇಂದ್ರಬಿಂದುವೂ ಆಗಿದ್ದರು. ನನ್ನ ಸಹೋದರ, ಸುಬ್ಬರಾವ್ ಮತ್ತು ನಾನು ಅಲ್ಲಿ ಹೋಗಿ ಆ ಸಭೆಗಳಲ್ಲಿ ಪ್ರಾರ್ಥನಾಗೀತೆಯನ್ನು ಹಾಡಿದೆವು. ನಂತರ ಸ್ವಾಮೀಜಿಯವರು ವಿಶ್ರಮಿಸಿಕೊಳ್ಳುತ್ತಿದ್ದ ಅವರ ಕುಟೀರಕ್ಕೆ ಹೋದೆವು. ನಮ್ಮನ್ನು ಭೇಟಿಮಾಡಲು ಇಷ್ಟಪಟ್ಟ ಸ್ವಾಮೀಜಿ, ತಮ್ಮ ಹಾಸಿಗೆಯ ಮೇಲೆ ಮಲಗಿಕೊಂಡೇ ನಮ್ಮೊಡನೆ ಮಾತನಾಡಿದರು. ಎಂದಿನಂತಯೇ ಅವರು, ಸುಬ್ಬರಾವ್ ಅವರು ನಡೆಸುತ್ತಿದ್ದ ಯುವಕರ ಶಿಬಿರಗಳು ಮತ್ತು ಬೆಂಗಳೂರಿನ ಸ್ನೇಹಿತರ ಬಗೆಗೆ ವಿಚಾರಿಸಿದರು. ನಾವು ಮಾತನಾಡುತ್ತಿದ್ದಾಗ, ಅಮೆರಿಕದಲ್ಲಿನ ವನರಾಜಿಯನ್ನು ನಾನು ಪ್ರೀತಿಸುವೆನೆಂದೂ, ಅಮೆರಿಕನ್ ಒಬ್ಬನು ನನಗೆ ಹೇಳಿದಂತೆ, ಈ ವನಸಂಪತ್ತು ಅಮೆರಿಕಾದ ಮೂಲನಿವಾಸಿ ಇಂಡಿಯನ್‌ರಿಂದ ಬಂದಂತಹ ಪರಂಪರೆಯದೆಂದೂ ಹೇಳಿದೆ ಆಗ ಸ್ವಾಮೀಜಿ ವ್ಯಾಕುಲಗೊಂಡು ತಮ್ಮ ಹಾಸಿಗೆಯ ಮೇಲೆ ಎದ್ದುಕುಳಿತು ಹೇಳಿದರು: "ಅದೊಂದು ಸುಳ್ಳು. ಯೂರೋಪಿನ ವಿಜೇತರು ಅಮೆರಿಕದ ಮೂಲ ನಿವಾಸಿಗಳೊಡನೆ ಅವರ ಸಂಸ್ಕೃತಿ, ವಾಸಸ್ಥಳಗಳೊಡನೆ ವರ್ತಿಸಿದ ರೀತಿ ಮಾನವೀಯ ಇತಿಹಾಸದಲ್ಲಿಯೇ ಅತ್ಯಂತ ಲಜ್ಜಾಸ್ಪದವಾದ ಅಧ್ಯಾಯ. ಅವರು ಮೂಲ ನಿವಾಸಿಗಳನ್ನು ನಿಷ್ಕರುಣೆಯಿಂದ ಪ್ರಾಣಿಗಳಂತೆ ಬೇಟೆಯಾಡಿದರು. ಅವರು ಇಂಡಿಯಾದಲ್ಲಿದ್ದ ಭವ್ಯ ಕಾಡುಗಳನ್ನು ವಿನಾಶಮಾಡಿದರು. ಅಸಹಾಯಕ ಜನಸಮುದಾಯದ ವಿರುದ್ಧ ಜನಾಂಗೀಯ ಹತ್ಯೆಯನ್ನು ನಡೆಸಿದರು. ಈ ವಿಷಯದ ಬಗೆಗೆ ನಾನು ನನ್ನ '*A Pilgrim Looks at the World*' ಎಂಬ ಪುಸ್ತಕದಲ್ಲಿ ಬರೆದಿದ್ದೇನೆ." ಈ ಜಗತ್ತಿನ ಎಲ್ಲ ಕಡೆಯೂ ಇರುವ, ದಮನಕ್ಕೊಳಗಾದ ಶೋಷಿತರ ಬಗೆಗೆ ಸ್ವಾಮೀಜಿಯವರಿಗೆ ಅಪಾರ ಪ್ರೇಮ ಮತ್ತು ಅನುಕಂಪಗಳಿದ್ದವು.

**ವಿವೇಕ ಪ್ರಭ**

ನಾನು ಹೈದರಾಬಾದಿಗೆ ಹೋದಾಗಲೆಲ್ಲಾ, ರಾಮಕೃಷ್ಣ ಮಿಷನ್‌ನ ವತಿಯಿಂದ, ವಿದ್ವತ್ಪೂರ್ಣ ವಿಷಯಗಳನ್ನೊಳಗೊಂಡ ಕನ್ನಡ ನಿಯತಕಾಲಿಕವೊಂದನ್ನು ಆರಂಭಿಸುವಂತೆ, ಬೆಂಗಳೂರು ಮತ್ತು ಮೈಸೂರಿನ ಸ್ನೇಹಿತರಿಗೆ ತಿಳಿಸಬೇಕೆಂದು ಸ್ವಾಮೀಜಿ ಹೇಳುತ್ತಿದ್ದರು. ಇಂತಹ ನಿಯತಕಾಲಿಕಕ್ಕೆ ದೇಣಿಗೆ ನೀಡಿ, ನೆರವು ನೀಡುವಂತಹ ಅನೇಕ ಲೇಖಕರು ಅಲ್ಲಿ ಇದ್ಯಾಗ್ಯೂ, ರಾಮಕೃಷ್ಣ – ವಿವೇಕಾನಂದರಿಗೆಂದೇ ಮೀಸಲಿಟ್ಟ ಒಂದು ಕನ್ನಡ ನಿಯತಕಾಲಿಕ ಇಲ್ಲದಿರುವುದು ಲಜ್ಜಾಸ್ಪದವೆಂದು ಅವರು ಹೇಳಿದರು. ೨೦೦೦ರ ಜನವರಿಯಿಂದ 'ವಿವೇಕ ಪ್ರಭ' ಎಂಬ ನಿಯತಕಾಲಿಕವು ಮೈಸೂರಿನಲ್ಲಿ ಪ್ರಾರಂಭವಾದ ತಕ್ಷಣ ಸ್ವಾಮೀಜಿ ಹರ್ಷಗೊಂಡರು. ಬೆಳಗಾಂನಲ್ಲಿ ಇದರ ಮತ್ತೊಂದು ಕೇಂದ್ರ ಆರಂಭವಾದಾಗ ಸ್ವಾಮೀಜಿ, ಮತ್ತಷ್ಟು ಆನಂದಗೊಂಡರು.

**ಯುವಜನತೆಗೆ ಆಕರ್ಷಣೆ**

ಸ್ವಾಮೀಜಿಯವರು, ಮೈಸೂರಿನಿಂದ ಬೆಂಗಳೂರಿಗೆ ಕಾರ್ಯನಿರ್ವಹಿಸಲು ವರ್ಗವಾಗಿ ಬಂದಾಗ ಅವರು ಯುವಕರನ್ನು ಆಶ್ರಮಕ್ಕೆ ಆಕರ್ಷಿಸಿದರು. ಪ್ರತಿವಾರದ ನೈತಿಕ ಶಿಕ್ಷಣದ ತರಗತಿಗಳನ್ನು ನಡೆಸಲು ಅವರು ಆಶ್ರಮದ ಹತ್ತಿರವಿರುವ ನ್ಯಾಷನಲ್ ಹೈಸ್ಕೂಲ್‌ಗೆ ಹೋಗುತ್ತಿದ್ದರು. ಅಲ್ಲಿ ವಿದ್ಯಾರ್ಥಿಗಳಿಗೆ ಅವರು *ಭಗವದ್ ಗೀತೆ* ಮತ್ತು ರಾಮನಾಮವನ್ನು ಬೋಧಿಸುತ್ತಿದ್ದರು. ಆಟವಾಡಲು ಹಾಗೂ ಪ್ರಾರ್ಥನೆಯಲ್ಲಿ ಭಾಗವಹಿಸಲು ಹುಡುಗರೂ ಆಶ್ರಮಕ್ಕೆ ಬರುತ್ತಿದ್ದರು. ಹುಡುಗರಿಗಾಗಿ ಅಲ್ಲಿ ಒಂದು ಬ್ಯಾಸ್ಕೆಟ್‌ಬಾಲ್ ಕೋರ್ಟ್ ಮತ್ತು ಕುಸ್ತಿಯ ಅಖಾಡಾ ಕೂಡ ಇದ್ದವು. ಸ್ವಾಮೀಜಿ ಕೂಡ ಅವರೊಡನೆ ಆಡುತ್ತಿದ್ದರು.

*ಗೀತೆ, ವಿವೇಕಚೂಡಾಮಣಿ, ಭಾಗವತ* ಮತ್ತು ಇತರ ಶಾಸ್ತ್ರಗ್ರಂಥಗಳನ್ನು ಅವರು ಹೇಗೆ ಕಂಠಸ್ಥ ಮಾಡಿಕೊಂಡರೆಂದು ಒಮ್ಮೆ ಕೇಳಿದಾಗ, ಆಟದ ನಡುವೆ ಸಿಗುವ ವಿರಾಮಕಾಲದಲ್ಲಿ ಪದ್ಯಗಳನ್ನು ತಮ್ಮಲ್ಲಿ ತಾವೇ ಪುನರಾವರ್ತಿಸಿಕೊಳ್ಳುತ್ತಿದ್ದರೆಂದು ಹೇಳಿದರು. ಸ್ವಾಮೀಜಿಯವರು ಕರಾಚಿಯ ರಾಮಕೃಷ್ಣಾಶ್ರಮದ ಹೊಣೆಯನ್ನು ನಿರ್ವಹಿಸುತ್ತಿದ್ದಾಗ, ಅಲ್ಲಿದ್ದ ಅನೇಕ ಬ್ರಹ್ಮಚಾರಿಗಳು – ಸುಮಾರು ಹನ್ನೆರಡು ಜನ ಹುಡುಗರು– ಬೆಂಗಳೂರಿನಲ್ಲಿ, ಸ್ವಾಮೀಜಿಯವರೊಡನೆ ಆಡಿದವರಾಗಿದ್ದರು. ಸ್ವಾಮಿ ಅನನ್ಯಾನಂದ ಮತ್ತು ಸ್ವಾಮಿ ಮುಖ್ಯಾನಂದ, ಮತ್ತು ಸ್ವಾಮಿ ಸರ್ವಗತಾನಂದ ಇವರು ಕರಾಚಿಯಲ್ಲಿ ಸ್ವಾಮೀಜಿಯ ಜೊತೆಯಲ್ಲಿದ್ದರು.

**ಸ್ವಾಮೀಜಿಯವರ ಸ್ಫೂರ್ತಿದಾಯಕ ಭಾಷಣ**

ಸ್ವಾಮೀಜಿರವರು ಭಾಷಣ ಮಾಡುವಾಗ ಅಚಲರಾಗಿರುತ್ತಿದ್ದು, ಒಂದು ವಿಗ್ರಹದಂತೆ ಕಾಣಿಸುತ್ತಿದ್ದರು. ಆದರೆ ಕೆಲವು ವಿಷಯಗಳ ಬಗೆಗೆ ಒತ್ತು ಕೊಡುವಾಗ ಒಂದೊಂದು ಸಾರಿ, ತಮ್ಮ ಕೈಯನ್ನು ಚಲಿಸಿ, ಬೆರಳನ್ನು ಎತ್ತುತ್ತಿದ್ದರು. ತಮ್ಮ ಪ್ರವಚನದಲ್ಲಿ ಅವರು ಎಂದೂ ಟಿಪ್ಪಣಿಯನ್ನು ಉಪಯೋಗಿಸುತ್ತಿರಲಿಲ್ಲ ಹಾಗೂ ಯಾವುದೇ ಪದಕ್ಕಾಗಲೀ, ಪದಗುಚ್ಛಕ್ಕಾಗಲಿ ಎಂದೂ ತಡಕಾಡುತ್ತಿರಲಿಲ್ಲ.

ವೇದಿಕೆಯಿಂದ ಪ್ರವಚನ ನೀಡಲು ಆರಂಭಿಸಿದಾಗ, ಅವರು ಬೇರೆಯೇ ವ್ಯಕ್ತಿಯಾಗುತ್ತಿದ್ದರು. ಆಗ ಅವರು ಕೇವಲ ಮನುಷ್ಯರಾಗಿರುತ್ತಿರಲಿಲ್ಲ. ಒಂದು ದೈವಿಕ ವ್ಯಕ್ತಿತ್ವವುಳ್ಳವರಾಗುತ್ತಿದ್ದರು. ಸ್ವಾಮೀಜಿಯವರಿಗೂ ಹಾಗೆಯೇ ಅನಿಸುತ್ತಿತ್ತೇ, ಎಂದು ನಾನು ಕೇಳಿದೆ. ಆಗ ಅವರು ಹೇಳಿದರು. "ಹೌದು, ಪ್ರೇಕ್ಷಕರೆದುರಿಗೆ ಮಾತನಾಡಲು ಆರಂಭಿಸಿದಾಗ, ನಾನು ಕೂಡ, ಈ ವ್ಯತ್ಯಾಸವನ್ನು ಅನುಭವಿಸುತ್ತೇನೆ. ನನ್ನ ಮೂಲಕ ಯಾವುದೋ ಒಂದು ಚೈತನ್ಯ ಮಾತನಾಡುತ್ತಿದೆಯೆನಿಸುತ್ತದೆ !

**ಅಂತರ್ವಾಣಿ**

ಅವರು ಮಠ ಮತ್ತು ರಾಮಕೃಷ್ಣ ಮಿಷನ್‌ಗಳ ಅಧ್ಯಕ್ಷರಾದನಂತರ, ಒಮ್ಮೆ ಸ್ವಾಮೀಜಿಯವರನ್ನು "ಸಾವಿರಾರು ಭಕ್ತರಿಗೆ ಆಧ್ಯಾತ್ಮಿಕ ಮಾರ್ಗದರ್ಶನ ಮಾಡುತ್ತಿದ್ದರೂ, 'ಮಂತ್ರದೀಕ್ಷೆಯನ್ನೇಕೆ ಕೊಡುವುದಿಲ್ಲ?' ಎಂದು ಕೇಳಿದೆ. "ನನ್ನ ಒಳಗಿನಿಂದ ನಾನು ಇನ್ನೂ ಕರೆಯನ್ನು ಪಡೆದಿಲ್ಲ" ಎಂದು ಅವರು ಹೇಳಿದರು. ಅದಾಗ್ಯೂ, ಕಡೆಗೆ ಅವರು ಒಳಗಿನ ಕರೆಯನ್ನು ಪಡೆದರು ಮತ್ತು ಅವರ ಅನೇಕ ಆರಾಧಕರು ಸ್ವಾಮಿಜಿಯವರನ್ನು ತಮ್ಮ ದೀಕ್ಷಾಗುರುಗಳೆಂದು ಗೌರವಿಸಿ, ಅವರಿಂದ ಆಶೀರ್ವಾದ ಪಡೆಯುವ ಸೌಭಾಗ್ಯವನ್ನು ಪಡೆದರು.

* * * *

# ೧೧೯. ಸ್ವಾಮಿ ರಂಗನಾಥಾನಂದರು : ಪ್ರಕಾಶದ ಒಂದು ಪುಂಜ

**–ಪೂನಮ್ ಕೊಹ್ಲೀ**

ತಮ್ಮ ನಂತರವೂ ಅಗಾಧವಾದ ಬೆಳಕಿನ ಪಥವನ್ನೂ, ಗ್ರಂಥಗಳಿಂದ ತುಂಬಿದ ಮೇಜುಗಳ ಜ್ಞಾನ ಸಂಪತ್ತನ್ನೂ, ಅರುವತ್ತು ವರುಷಗಳ ಅವಧಿಯಲ್ಲಿನ ಭಾರಿ ಸಂಖ್ಯೆಯ ಶ್ರವ್ಯ– ದೃಶ್ಯ ಧ್ವನಿಮುದ್ರಿಕೆಗಳನ್ನೂ, ಅಸಂಖ್ಯ ಜನರ ಹೃದಯಗಳನ್ನು ಮುಟ್ಟಿದ ಪ್ರೀತಿ ಮತ್ತು ಧನಾತ್ಮಕ ಊರ್ಜೆಯ ದೀರ್ಘ ಪಥವನ್ನೂ ಬಿಟ್ಟು ಹೋಗಿರುವ ಸ್ವಾಮಿ ರಂಗನಾಥಾನಂದರಂತಹ ಹೆಚ್ಚು ಜನರು ಈ ಭೂಮಿಯಲ್ಲಿ ಜನ್ಮ ತಳೆದಿಲ್ಲ. ಅವರ ಪ್ರಕಾಂಡ ಪಾಂಡಿತ್ಯ, ಕಠಿಣ ವಿಷಯವನ್ನು ಸುಲಭವಾಗಿ ಮನವರಿಕೆ ಮಾಡಿಕೊಡುವಂತಹ ತರ್ಕ, ಪ್ರಚಂಡ ಜ್ಞಾನಪಶಕ್ತಿ – ಇವು ಅವರ ಪ್ರವಚನಗಳನ್ನು ಕೇಳಿದ ಅಥವಾ ಅವರ ಪುಸ್ತಕಗಳನ್ನು ಓದಿದ ಮಹಾನ್ ಮನಸ್ಸುಗಳನ್ನು ಪ್ರಭಾವಿಸಿದವು.

೧೯೭೦ರಲ್ಲಿ ಜಲಂಧರ್‌ನ 'ಕನ್ಯಾಮಹಾನ್ ವಿದ್ಯಾಲಯ'ದ ಘಟಿಕೋತ್ಸವ ಸಮಾರಂಭದ ದಿನ, ಹೂ ಮತ್ತು ಮಾವಿನ ಎಲೆಗಳಿಂದ ಅಲಂಕೃತಗೊಂಡಿದ್ದ ವೇದಿಕೆಯ ಮೇಲೆ ನಾನು ಸ್ವಾಮಿ ರಂಘನಾಥಾನಂದರನ್ನು ಪ್ರಥಮ ಬಾರಿಗೆ ನೋಡಿದೆ. ಅದೊಂದು ಅದ್ಭುತವಾದ ಘಟಕೋತ್ಸವ. ಆಗ ನನ್ನಲ್ಲಿ, ನಾನು ಅವರ ಮಾನಸಪುತ್ರಿ ಎಂಬ ಭಾವನೆ ಉದಯವಾಯಿತು. ಅನಂತರ ನಾನು ಚಂಡೀಗಢದಲ್ಲಿ ರಾಮಕೃಷ್ಣ ಆಶ್ರಮದ ಹತ್ತಿರದಲ್ಲಿಯೇ ಇರಬೇಕಾಯಿತು. ೧೯೭೫ರ ನವೆಂಬರ್ ೨೯ರಂದು ಸ್ವಾಮಿ ರಂಗನಾಥಾನಂದರು ಅಲ್ಲಿಗೆ ಬಂದಿದ್ದರು. ಆಶ್ರಮದಲ್ಲಿ ಅಷ್ಟೊಂದು ಸಂಖ್ಯೆಯ ಜನರನ್ನು ನಾನು ನೋಡಿದ್ದು ಅದೇ ಮೊದಲು. ಅವರೆಲ್ಲರೂ ಸ್ವಾಮಿ ರಂಗನಾಥಾನಂದರ ಪ್ರವಚನ ಕೇಳಲು ಬಂದಿದ್ದರು. ಪ್ರವಚನ ಮಂದಿರವು ಜನರಿಂದ ತುಂಬಿ ಹೋಗಿದ್ದರಿಂದ, ಜನರಿಗೆ, ಆಶ್ರಮದ ಮೊಗಸಾಲೆಗಳಲ್ಲಿ ಸ್ಥಳಾವಕಾಶ ಮಾಡಿಕೊಡಲಾಯಿತು. ಸ್ವಾಮೀಜಿ, ಉಪನಿಷತ್ತುಗಳ ಬಗೆಗೆ ಪ್ರವಚನ ನೀಡಿದರು. ಪ್ರವಚನವನ್ನು ಕೇಳಿದ ಜನರು, ಅಲ್ಲಿಯೇ ತಾತ್ಕಾಲಿಕವಾಗಿ ಏರ್ಪಾಟು ಮಾಡಿದ್ದ ಪುಸ್ತಕದ ಮಳಿಗೆಯಿಂದ ಎಂಟೂ ಉಪನಿಷತ್ತುಗಳ ಪ್ರತಿಗಳನ್ನು ಕೊಂಡುಕೊಳ್ಳುವಷ್ಟು ಪರಿಣಾಮಕಾರಿಯಾಗಿತ್ತು. ಅವರ ಪ್ರವಚನ. ನಾನು ಕೂಡ ಒಂದು ಪ್ರತಿಯನ್ನು ಕೊಂಡುಕೊಂಡು ಅವರ ಬಳಿಗೆ ಹೋದೆ. ಅವರು ಅಲ್ಲಿಯೇ ಮೊಗಸಾಲೆಯ ಒಂದು ಮೂಲೆಯಲ್ಲಿ ಗಂಭೀರವಾಗಿ ನಿಂತಿದ್ದರು, ಮತ್ತು ಬಹಳ ಪ್ರೀತಿಯಿಂದ ನನ್ನ ಹೆಸರನ್ನು ಕೇಳಿ, ಆ ಪುಸ್ತಕದ ಮೇಲೆ ತಮ್ಮ ಆಶೀರ್ವಾದಗಳನ್ನು ಬರೆದುಕೊಟ್ಟರು.

ದೇಶದ ಯಾವುದೇ ಭಾಗದಲ್ಲಿದ್ದರೂ, ಸ್ವಾಮೀಜಿಯವರ ಪ್ರವಚನ ಇರುವುದೆಂದು ಯಾರಿಂದಲಾದರೂ ಕೇಳಿದರಾಗಲೀ, ಪತ್ರಿಕೆಯಲ್ಲಿ ನೋಡಿದರಾಗಲೀ, ಎಂದೂ ನಾವು ಪ್ರವಚನವನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ. ಈ ಎಲ್ಲ ವರ್ಷಗಳಲ್ಲಿಯೂ ರಾಮಕೃಷ್ಣ ಆಶ್ರಮದ ಯಾವುದೇ ಚಟುವಟಿಕೆಗಳ ಬಗೆಗೆ ನನಗೆ ಏನೂ ತಿಳಿದಿರಲಿಲ್ಲವೆಂದು ಇಲ್ಲಿ ಹೇಳಬಯಸುತ್ತೇನೆ. ಸ್ವಾಮಿ ರಂಗನಾಥಾನಂದರೆಂಬ ಮಹಾಸಂತರು, ಮಹತ್ತಾದ ಧನಾತ್ಮಕ ಊರ್ಜೆಯನ್ನು, ಪ್ರಗಾಢವಾದ ಜ್ಞಾನವನ್ನು ಹೊಹೊಮ್ಮಿಸುತ್ತಿದ್ದರು ಎಂಬುದನ್ನು ಮಾತ್ರ ನಾನು ಅರಿತಿದ್ದೆ.

---

* ಬೆಂಗಳೂರಿನ ಭಕ್ತೆ

**ಆಧ್ಯಾತ್ಮಿಕ ಜೀವನದಲ್ಲಿ ಯಾವ ನಿಗೂಢತೆಯೂ ಇಲ್ಲ**

೧೯೭೭ರ ಮಧ್ಯಭಾಗದಲ್ಲಿ, ರಂಗನಾಥಾನಂದ ಮಹಾರಾಜ್ ಅವರು ಬೆಂಗಳೂರಿಗೆ ಬಂದರು. ಅವರೊಡನೆ ಖಾಸಗಿಯಾಗಿ ಭೇಟಿಯಾಗಲು ಅನುಮತಿ ಸಿಕ್ಕಿದಂತಹ ಅದೃಷ್ಟಶಾಲಿಯಾಗಿದ್ದೆ. ನಾನು. ಆಗ ಸ್ವಾಮೀಜಿಯವರು ಹೈದರಾಬಾದಿನ ಆಶ್ರಮದಲ್ಲಿ ನೆಲೆಸಿದ್ದರು ಮತ್ತು ದೀಕ್ಷೆ ಕೊಡುವ ಸಲುವಾಗಿ ಬೆಂಗಳೂರಿಗೆ ಬಂದಿದ್ದರು. ಅವರು ಹಾಸಿಗೆಯ ಮೇಲೆ ಕುಳಿತಿದ್ದರು. ಇತ್ತೀಚಿನ ವರ್ಷಗಳಿಗಿಂತಲೂ ತುಸು ಹೆಚ್ಚು ಆರೋಗ್ಯಪೂರ್ಣವಾಗಿದ್ದು, ಸ್ವಲ್ಪ ಅಂತರ್ಮುಖಿಯಾಗಿದ್ದರು. ಅಲ್ಲಿಯೇ ನೆಲದಮೇಲೆ ನನ್ನ ಮೊಣಕಾಲುಗಳನ್ನೂರಿ ಕುಳಿತಾಗ ನನ್ನ ಕಡೆಗೆ ನೋಡದೆಯೇ ಅವರು ನನಗೆ ಹೇಳಿದರು 'ನೀನು ನನಗೆ ಗೊತ್ತಿರುವೆ'. ನಂತರ ವ್ಯಕ್ತಿ ತನ್ನ ಅಹಂಕಾರವನ್ನು ನಿಯಂತ್ರಿಸುವುದು ಹೇಗೆ ಎಂದು ನಾನು ಅವರನ್ನು ಪ್ರಶ್ನಿಸಿದೆ. ಶ್ರೀರಾಮಕೃಷ್ಣರ, 'ಕಂಚಾ ಅಮೀ ಮತ್ತು ಪಕಾ ಅಮೀ' ಕಥೆಯ ಉದಾಹರಣೆ ನೀಡುತ್ತಾ ಅವರು ಹೇಳಿದರು: "ವೈಯಕ್ತಿಕ ಸ್ವಾರ್ಥದ ಅಹಂ ವಿಸ್ತಾರಗೊಳ್ಳಲಿ, ಮತ್ತು ಪರಿಪಕ್ವಗೊಳ್ಳಲಿ ಹಾಗೂ ಬೇರೆಯವರಿಗಾಗಿ ಕಾರ್ಯಪ್ರವೃತ್ತವಾಗಲಿ." ಆಮೇಲೆ "ನಾನು ಮುಂದಿನ ಬಾರಿ ಬಂದಾಗ ನೀನು ದೀಕ್ಷೆಯನ್ನು ತೆಗೆದುಕೊ" ಎಂದು ಅವರು ಹೇಳಿದರು.

೧೯೭೭ರ ಡಿಸೆಂಬರ್ ೩೧ರಂದು, ಸ್ವಾಮೀಜಿಯವರು ಮತ್ತೆ ಬೆಂಗಳೂರಿಗೆ ಭೇಟಿ ನೀಡಿದ್ದ ಅವಧಿಯಲ್ಲಿ ನಾನು ದೀಕ್ಷೆ ಪಡೆದೆ. ಯಾವುದೇ ಸಂಪ್ರದಾಯ, ನಿಯಮಗಳ ಅರಿವಿರದೆಯೇ ದೀಕ್ಷೆ ಪಡೆಯಲು ಹೊರಟಿದ್ದ ಅತ್ಯಂತ ಮುಗ್ಧ ಶಿಷ್ಯೆ ನಾನಾಗಿದ್ದಿರಬೇಕೆಂದು ನಾನು ಇಲ್ಲಿ ಒಪ್ಪಿಕೊಳ್ಳುತ್ತೇನೆ. ಸ್ವಾಮೀಜಿಗೆ ಪ್ರಣಾಮ ಸಲ್ಲಿಸಲು ನಾನು ಬಗ್ಗಿದಾಗ ಅವರು ತಮ್ಮ ಕೈಯನ್ನು ನನ್ನ ತಲೆಯ ಮೇಲೆ ಇಟ್ಟು ಒತ್ತಿದರು. ನಂತರ ಅವರು ನನಗೆ ಕೆಂಪು ಗುಲಾಬಿಗಳ ಬಲು ದೊಡ್ಡ ಗುಚ್ಛವೊಂದನ್ನು ನೀಡಿದರು. ನಂತರ ನಾನು ಅದನ್ನು ಒಣಗಿಸಿಟ್ಟೆ ಹಾಗೂ ಈಗಲೂ ಅದರ ಕೆಲವು ಪಕಳೆಗಳು ನನ್ನ ಬಳಿ ಇವೆ.

ಏನೂ ತಿಳಿಯದ ಅತ್ಯಂತ ಮುಗ್ಧ ಶಿಷ್ಯೆಯಾಗಿದ್ದುದರಿಂಗಾಗಿ, ನಾನು ಜಪವನ್ನು ಪ್ರಾರಂಭಿಸುತ್ತಲೇ, ಆತಂಕಗೊಳ್ಳತೊಡಗುತ್ತಿದೆ. ದೀಕ್ಷೆ ತೆಗೆದುಕೊಂಡ ಕೂಡಲೇ, ನಾನು ನನ್ನ ಅಹಂನಿಂದ ಮತ್ತು ಬಯಕೆಗಳಿಂದ ಮುಕ್ತಳಾಗಿಬಿಡುತ್ತೇನೆ, ಧ್ಯಾನಮಾಡಲು ಕುಳಿತ ತಕ್ಷಣವೇ ಪರಿಪೂರ್ಣವಾದ ಏಕಾಗ್ರತೆ ಪಡೆಯಲು ಸಾಧ್ಯವಾಗುತ್ತದೆಂದು ನಾನು ಬಹುಶಃ ಆಲೋಚಿಸಿದ್ದೆನೆನಿಸುತ್ತದೆ. ಆದರೆ, ನನ್ನನ್ನು ನಿರಾಸೆಗೊಳಿಸಲೆಂಬಂತೆ, ಹಾಗೆ ಆಗುತ್ತಿರಲಿಲ್ಲ. ನನ್ನ ಪರಿಸ್ಥಿತಿಯನ್ನು ವೀಕ್ಷಿಸಿದ, ಬೆಂಗಳೂರಿನ ಶ್ರೀ ಶಾರದಾ ಮಠದ ಅಧ್ಯಕ್ಷರಾದ ಪೂಜ್ಯೆ ಶುಭ್ರಪರ್ಣಾ ಮಾತಾಜಿಯವರು, ನನ್ನ ಗುರುಗಳೊಡನೆ ಸಂಪರ್ಕಿಸಿ ಅವರ ಭೇಟಿಗಾಗಿ ಸಮಯನಿಗದಿಪಡಿಸಿಕೊಳ್ಳುವಂತೆ ಸೂಚಿಸಿದ್ದರು. ನಾನು ಮಹಾರಾಜ್ ಅವರಿಗೆ ಪತ್ರ ಬರೆದೆ. ಆಗ ಮಹಾರಾಜ್ ಅವರು ಹೈದರಾಬಾದಿನಲ್ಲಿ ಇರಲಿಲ್ಲ. ಹೈದರಾಬಾದಿಗೆ ಹಿಂತಿರುಗಿದ ನಂತರ ಅವರು ನನ್ನ ಸಂದೇಹದ ಪ್ರಶ್ನೆಗೆ ಉತ್ತರಿಸಿ ಪತ್ರ ಬರೆದರು. ತಮ್ಮ ಆಧ್ಯಾತ್ಮಿಕ ಪಯಣದ ಪಥದಲ್ಲಿ ಮೊದಲ, ಕಂಪಿಸುವ ಹೆಜ್ಜೆಗಳನ್ನಿಡುತ್ತಿರುವವರೆಗೆ, ನಾನು ಈ ಕೆಳಗೆ, ನಾನು ನಕಲು ಮಾಡಿ ಪ್ರಸ್ತುತ ಪಡಿಸುತ್ತಿರುವ ಮಹಾರಾಜ್ ಅವರ ಈ ಪತ್ರ ನೆರವಾಗುತ್ತದೆಂದು ನಂಬಿದ್ದೇನೆ.

**ನನ್ನ ಪ್ರೀತಿಯ ಪೂನಮ್,**

೨೮-೫-೧೯೭೮

ದಕ್ಷಿಣ ಮತ್ತು ಉತ್ತರ ಭಾರತದ ಎರಡೂವರೆ ತಿಂಗಳ ಪ್ರವಾಸದಿಂದ ಹಿಂದಿರುಗಿ ಬಂದ ನಂತರ, ನಾನು, ಮೇ ಇಪ್ಪತ್ತೊಂದರ ನಿನ್ನ ಪತ್ರವನ್ನು ಓದಿದೆ. ಡಿಸೆಂಬರ್ ಮುವತ್ತೊಂದರಂದು, ಬೆಂಗಳೂರಿನಲ್ಲಿ ದೀಕ್ಷೆ ಪಡೆದವರಲ್ಲಿ ನೀನೂ ಒಬ್ಬಳೆಂದು ಅರಿತು ನನಗೆ ಹರ್ಷವಿದೆ.

ರಾಮಕೃಷ್ಣರಿಗೆ ಶರಣಾಗುವ ಹಾದಿಯಲ್ಲಿ, ನಿನ್ನ ಆಸೆ ಬಯಕೆಗಳು ಅಡ್ಡನಿಲ್ಲುತ್ತವೆ ಎಂದು ನೀನು ಚಿಂತಿಸಬೇಕಾಗಿಲ್ಲ. ಆಧ್ಯಾತ್ಮಿಕ ಜೀವನದಲ್ಲಿ ಶರಣಾಗತಿ ಎನ್ನುವುದು ಅಂತಿಮ ಹೆಜ್ಜೆಯೇ ಹೊರತು ಪ್ರಥಮದ್ದಲ್ಲ. ಮಠದ ಪುಸ್ತಕ ಮಳಿಗೆಯಲ್ಲಿ *Divine Grace* (ದೈವಕರುಣೆ) ಎಂಬ ನನ್ನ ಚಿಕ್ಕ ಪುಸ್ತಕವನ್ನು, ದಯವಿಟ್ಟು ಕೂಡಲೇ ಖರೀದಿಸಿ, ಅದನ್ನು ಸಾವಧಾನವಾಗಿ ಓದು. ನಿನ್ನ ಆಧ್ಯಾತ್ಮಿಕ ಸಮಸ್ಯೆಯ ಪರಿಹಾರಕ್ಕೆ ನೀನು ಉತ್ತರವನ್ನು ಪಡೆಯುವೆ. ಸರ್ವದೇವದೇವೀ ಸ್ವರೂಪರಾಗಿರುವ ಶ್ರೀರಾಮಕೃಷ್ಣರ ಭಕ್ತೆ ನೀನು ಎಂಬುದನ್ನು ಚೆನ್ನಾಗಿ ಮನದಟ್ಟು ಮಾಡಿಕೊ.

ನಿನ್ನಲ್ಲಿ ಆಧ್ಯಾತ್ಮಿಕ ಪ್ರವೃತ್ತಿಯಿದೆ : ಅದು ಮುಖ್ಯವಾದ ಸಂಗತಿ. ಕಚೇರಿ, ಕಾರ್ಖಾನೆ ಅಥವಾ ಮನೆಯಲ್ಲಿನ ನಿನ್ನ ದಿನಚರಿ, ನಿನ್ನ ಮಾನವೀಯ ಸಂಬಂಧಗಳು, ನಿನ್ನ ಜಪ, ಧ್ಯಾನ, ಇವೆಲ್ಲವನ್ನೂ ಆಧ್ಯಾತ್ಮಿಕ ಜೀವನ ಒಳಗೊಂಡಿರುತ್ತದೆ. *ಗೀತೆ* ಮತ್ತು ಶ್ರೀರಾಮಕೃಷ್ಣರ ಅಭಿಪ್ರಾಯದಂತೆ. ಇದು ಆಧ್ಯಾತ್ಮಿಕತೆಯ ಸಂಪೂರ್ಣ ವ್ಯಾಪ್ತಿ. ನಿನ್ನ ಕುಟುಂಬದೊಡನೆ ಹೈದರಾಬಾದಿಗೆ ಬಂದು ನಮ್ಮ ಅತಿಥಿಗೃಹದಲ್ಲಿ ತಂಗಲು ನಿನಗೆ ಯಾವಾಗಲೂ ಸ್ವಾಗತ

ಪ್ರೀತಿ ಮತ್ತು ಆಶೀರ್ವಾದಗಳೊಡನೆ

ನಿನ್ನ ಪ್ರೀತಿಯ
**ರಂಗನಾಥಾನಂದ**

ಸ್ವಾಮೀಜಿಯವರು, ಶೀಘ್ರವಾಗಿಯೇ ಕೋಲ್ಕತ್ತಾದ ರಾಮಕೃಷ್ಣ ಮಠ ಮತ್ತು ಮಿಷನ್ ಗೆ ಅಧ್ಯಕ್ಷರಾಗಿ ಹೋಗಿದ್ದರಿಂದ ನಾನು ಹೈದರಾಬಾದಿಗೆ ಹೋಗಲಾಗಲಿಲ್ಲ

## ಆಧ್ಯಾತ್ಮಿಕ ಜೀವನದ ನಿಗೂಢತೆಯನ್ನು ಕಳಚುವಿಕೆ

ಸ್ವಾಮಿ ರಂಗನಾಥಾನಂದರನ್ನು ನಾನು ಹೈದರಾಬಾದಿನಲ್ಲಿ ಭೇಟಿ ಮಾಡಲಾಗದಿದ್ದರೂ, ಶೀಘ್ರದಲ್ಲಿಯೇ ಅವರನ್ನು ಕೋಲ್ಕತ್ತಾದಲ್ಲಿ ಭೇಟಿಮಾಡುವ ಅವಕಾಶ ನನಗೆ ದೊರೆಯಿತು. ನಾನು ವಿದ್ಯಾರ್ಥಿಗಳಿಗಾಗಿ ತಯಾರಿಸಿದ್ದ ಕೆಲವು ಪುಸ್ತಕಗಳನ್ನು ಅವರಿಗೆ ಕಳುಹಿಸಿದ್ದೆ, ಹಾಗೂ ಬೇಲೂರಿನಲ್ಲಿ ನಾನು ಉಳಿದುಕೊಳ್ಳಲು ಸಾಧ್ಯವೇ ಎಂಬುದರ ಬಗ್ಗೆಯೂ ಅವರನ್ನು ಕೇಳಿದ್ದೆ. ಆ ಸಮಯಕ್ಕೆ, ತಮ್ಮ ಕಾಯಿಲೆಯಿಂದ ಪವಾಡಸದೃಶವಾಗಿ ಗುಣಮುಖರಾಗಿದ್ದು, ರಾಮಕೃಷ್ಣ ಮಿಷನ್‌ನ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದ ಸ್ವಾಮಿ ರಂಗನಾಥಾನಂದರನ್ನು ಭೇಟಿ ಮಾಡಲು ನಾನು ಸರಿಯಾಗಿ ಮಧ್ಯಾಹ್ನ ಐದು ಗಂಟೆಗೆ ಮಠವನ್ನು ತಲುಪಿದೆ. ಅವರು ಒಂದು ಕಾಲುಮಣೆಯ ಮೇಲೆ ಕಾಲುಗಳನ್ನಿಟ್ಟುಕೊಂಡು ಕುಳಿತಿದ್ದರು. ಮತ್ತು ನಾನು ಬೆಂಗಳೂರಿನಿಂದ ಕಳುಹಿಸಿದ್ದ ನನ್ನ ಪುಸ್ತಕಗಳನ್ನು ತಮ್ಮ ಪಕ್ಕದಲ್ಲಿ ಇಟ್ಟುಕೊಂಡಿದ್ದರು. ಅವರಿಗೆ ಪ್ರಣಾಮ ಮಾಡಲೆಂದು ಅವರ ಪಾದಗಳಿಗೆ ಬಗ್ಗಿದ ನನ್ನನ್ನು ಆಶೀರ್ವದಿಸಿದರು. ಮತ್ತು ನನ್ನನ್ನು ಸ್ವಾಮಿ ಜಿತಾತ್ಮಾನಂದರಿಗೆ ಪರಿಚಯಿಸಿದರು. ನನ್ನ ಕುಟುಂಬದ ಬಗೆಗೆ ಕುಶಲ ವಿಚಾರಿಸಿದರು. ನಂತರ, ಎಲ್ಲರಿಗೂ ಸಂಬಂಧಿಸಿದಂತಹ, ಒಂದು ಭಾಷಣದಲ್ಲಿ, ನಾವು ಯಾವಾಗಲೂ, ಎಲ್ಲದರಲ್ಲಿಯೂ ಧನಾತ್ಮಕ ಅಂಶವನ್ನೇ ನೋಡಬೇಕೆಂಬ ಸ್ಪಷ್ಟವಾದ ಸಂದೇಶ ವ್ಯಕ್ತವಾಯಿತು. ಯಾವುದೇ ಸನ್ನಿವೇಶದಲ್ಲಿಯೂ ಧನ್ಯಾತ್ಮಕ ಗುಣಗಳನ್ನು ಮಾತ್ರವೇ ಕಂಡುಕೊಂಡು, ಋಣಾತ್ಮಕ ಅಂಶಗಳನ್ನು ತ್ಯಜಿಸಿಬಿಡುವಷ್ಟು ಪರಿಶುದ್ಧವೂ, ದಿವ್ಯಮಾನುಷವೂ ಆಗಿದ್ದಂತಹ ಗ್ರಹಿಕೆಯಾಗಿದ್ದಿತು. ಅವರದು. ಅವರ ಬೋಧನೆಯೆಂದರೆ "ಸಕಾರಾತ್ಮಕ ವಿಷಯಗಳನ್ನೇ ಎಲ್ಲದರಲ್ಲಿ ಕಾಣಿರಿ; ನಕಾರಾತ್ಮಕ ವಿಷಯಗಳನ್ನು

ಕಾಣಬೇಡಿ" ಎಂಬುದು. ಹೇಗೆ ಧ್ಯಾನಮಾಡಬೇಕೆಂದು ಕೇಳಿದಾಗ, ನಾನಿನ್ನೂ ದೀಕ್ಷೆ ಪಡೆದಿಲ್ಲವೆಂದು ಯೋಚಿಸಿ, ಅವರು, ವ್ಯಕ್ತಿಯು ತನಗೆ ಇಷ್ಟವಾದ ಯಾವುದೇ ವ್ಯಕ್ತಿಯ ಬಗೆಗೆ ಯೋಚಿಸಿ, ಆ ವ್ಯಕ್ತಿಯ ಮೇಲೆ ಮನಸ್ಸನ್ನು ಕೇಂದ್ರೀಕರಿಸಬೇಕೆಂದು ಹೇಳಿದರು. ನಂತರ, ನಾನು ಈಗಾಗಲೇ ದೀಕ್ಷೆಪಡೆದಿರುವವಳೆಂದು ತಿಳಿದಾಗ ಅವರು ಹೇಳಿದರು: "ಮಂತ್ರದ ಮೇಲೆ ಮನಸ್ಸನ್ನು ಕೇಂದ್ರೀಕರಿಸು. ಶ್ರೀ ರಾಮಕೃಷ್ಣರು 'ಸರ್ವದೇವದೇವಿ ಸ್ವರೂಪ'ರು. ಯಾರೂ ರಾಮನಾಗಿದ್ದನೋ ಅವನೇ ಕೃಷ್ಣ ಮತ್ತು ಅವನೇ ರಾಮಕೃಷ್ಣನಾದ. ಮಂತ್ರದ ಮೇಲೆ ಮನಸ್ಸನ್ನು ಏಕಾಗ್ರಗೊಳಿಸು, ನನ್ನ ಮೇಲೆ ಏಕಾಗ್ರಗೊಳಿಸು."

"ಆಧ್ಯಾತ್ಮಿಕ ಜೀವನದ ಬಗೆಗೆ ಯಾವುದೇ ರಹಸ್ಯವಾಗಲೀ, ನಿಗೂಢತೆಯಾಗಲೀ ಇಲ್ಲ– ಉತ್ತಮವಾದ ಜೀವನವನ್ನು ನಡೆಸು, ನೀನು ಈಗಾಗಲೇ ನಡೆಸುತ್ತಿರುವ ಆಧ್ಯಾತ್ಮಿಕ ಜೀವನವನ್ನು ನಡೆಸು. ಪ್ರಾತಃಕಾಲ ಮತ್ತು ಸಂಧ್ಯಾಕಾಲಗಳಲ್ಲಿ ಜಪವನ್ನು ಮಾಡು. ನಿನ್ನ ಕರ್ತವ್ಯಗಳನ್ನು ಮಾಡು ಮತ್ತು ಉತ್ತಮ ಜೀವನವನ್ನು ನಡೆಸು. ಶ್ರೀರಾಮಕೃಷ್ಣವೇದವನ್ನು ಓದು, ಸ್ವಾಮಿ ವಿವೇಕಾನಂದರನ್ನು ಓದು." ಅವರು ಮತ್ತೆ ಹೇಳಿದರು: "ಜಪಮಾಡು, ಉತ್ತಮ ಜೀವನ ನಡೆಸು, ಆಗ, ಮಾರ್ಗವು ತನಗೆ ತಾನೇ ಕಂಡುಬರುವುದು."

ಸುಮಾರು ಹದಿನೈದು ಇಪ್ಪತ್ತು ನಿಮಿಷಗಳ ವರೆಗೂ ಅವರ ಸಾನ್ನಿಧ್ಯದಲ್ಲಿರಲು ಅವಕಾಶ ಪಡೆದ ನಾನು ಬಹಳ ಭಾಗ್ಯವಂತಳಾಗಿದ್ದೆ. ಇವರು ಇಲ್ಲಿ ಇರುತ್ತಾರೆ ಎಂದು ನನ್ನ ಬಗ್ಗೆ ಯಾರೋ ಕೇಳಿದಾಗ ಸ್ವಾಮೀಜಿ, ತಮ್ಮ ಎಡಭಾಗಕ್ಕೆ ಕೈ ತೋರಿಸಿ ಇಲ್ಲಿ ಇರುತ್ತಾರೆ ಎಂದರು. ಸ್ವಾಮೀಜಿಗೆ ನಮಸ್ಕರಿಸಿ ನಾನು ಎದ್ದು ನಿಂತಾಗ ಸ್ವಾಮೀಜಿ ಒಂದು ಪೊಟ್ಟಣವನ್ನು ನನ್ನ ಕೈಗೆ ಕೊಡುತ್ತಾ ಹೇಳಿದರು: 'ಅವರು – ಅಂದರೆ ಆಶ್ರಮದವರು – ಇದನ್ನೇ ಕೊಡುವುದು' ಎಂದು ಹೇಳಿ, ಎರಡು ಸಿಹಿಭಕ್ಷ್ಯವನ್ನು ತೆಗೆದುಕೊಂಡು 'ಇದು ನಾನು ಕೊಡುವುದು' ಎಂದರು. ಅವರು ಎರಡು ಸಿಹಿಭಕ್ಷ್ಯಗಳನ್ನು ನನಗೆ ಕೊಟ್ಟರು. ನಂತರ ನಾನು ನನ್ನ ಹಿರಿಯ ಮಗನ ಬಗೆಗೆ, ಅವನ ಭಕ್ತಿಯ ಬಗೆಗೆ ಹಾಗೂ ಮಹಾರಾಜ್ ಅವರು ಹೇಳುವುದನ್ನೆಲ್ಲಾ ಟಿಪ್ಪಣಿ ಮಾಡಿಕೊಳ್ಳುವಂತೆ ಅವನು ಹೇಳಿದ್ದುದನ್ನೂ ಸ್ವಾಮೀಜಿಗೆ ತಿಳಿಸಿದೆ. ನನ್ನ ಮಗನಿಗೆ ವಯಸ್ಸೆಷ್ಟು ಎಂದು ನನ್ನನ್ನು ಕೇಳಿದರು. ಅವನು ಹನ್ನೆರಡನೆಯ ತರಗತಿಯಲ್ಲಿ ಓದುತ್ತಿದ್ದಾನೆಂದು ನಾನು ಹೇಳಿದೆ. '"ಅಂದರೆ ಅವನಿಗೀಗ ಹದಿನೆಂಟು ವರುಷ ವಯಸ್ಸು.' ಎಂದರು ಸ್ವಾಮೀಜಿ ನಂತರ, ಮತ್ತೆ ಎರಡು ಸಿಹಿತಿಂಡಿಯ ತೆಗೆದುಕೊಂಡು 'ಇದನ್ನು ಅವನಿಗೆ ಕೊಡು, ವಿಶೇಷವಾಗಿ ನಾನು ಕೊಟ್ಟಿದ್ದೆಂದು ಹೇಳು' ಎಂದು ಹೇಳಿದರು.

ನಾನು ಅತಿಥಿಗೃಹಕ್ಕೆ ಹಿಂದಿರುಗಿದೆ. ಸುಮಾರು ಹತ್ತು ಗಂಟೆಯ ವೇಳೆಗೆ, ದೂರವಾಣಿಯ ಕರೆಯನ್ನು ಗಮನಿಸಲು ನನ್ನನ್ನು ಕರೆದರು. ಅದು ರಾಜು ಮಹಾರಾಜರ ಕರೆಯಾಗಿತ್ತು. ಅವರು ಹೇಳಿದರು: "ಅಧ್ಯಕ್ಷ ಮಹಾರಾಜರು, ಬೇರೆ ಯಾವುದೇ ಆಧ್ಯಾತ್ಮಿಕ ಪ್ರವಚನಗಳಿರುವುದಿಲ್ಲವೆಂದು ಹೇಳಿದ್ದಾರೆ. ಹಾಗಾಗಿ, ನೀವು ಇಲ್ಲಿಂದ ಯಾವ ಸಮಯಕ್ಕೆ ಹೊರಡುತ್ತೀರಿ ಎಂದು ಕೇಳುತ್ತಿದ್ದಾರೆ." ನಾನು ಪ್ರಾತಃಕಾಲದಲ್ಲಿಯೇ ಹೊರಡುವುದಾಗಿ ಅವರಿಗೆ ಹೇಳಿದೆ. ನಂತರ, "ಮಧ್ಯಾಹ್ನದ ಭೋಜನದವರೆಗೂ ಇರಲು ಸಾಧ್ಯಾಗುವುದಿಲ್ಲವೇ" ಎಂದು ಅವರು ಕೇಳಿದರು. ಆದರೆ ಬೆಳಗಿನ ಹನ್ನೊಂದು ಗಂಟೆಗೆ ನನಗೆ ಒಂದು ಮೀಟಿಂಗ್ ಇರುವುದಾಗಿ ಹೇಳಿದೆ. ಅವರು ಸ್ವಲ್ಪ ಸಮಯ ಕಾಯುವಂತೆ ನನಗೆ ಹೇಳಿ, ನಂತರ "ಮಹಾರಾಜರು ಬೆಳಗ್ಗೆ ಏಳೂ ಮುವತ್ತಕ್ಕೆ ನಿನ್ನನ್ನು ತಮ್ಮ ಕೋಣೆಯಲ್ಲಿ ನೋಡುತ್ತಾರೆ" ಎಂದು ತಿಳಿಸಿದರು.

ಬೆಳಗ್ಗೆ ಏಳೂ ಮೂವತ್ತಕ್ಕೆ ನಾನು ಮಹಾರಾಜರ ದರ್ಶನಕ್ಕೆಂದು ಹೋದೆ. ಆ ಕೋಣೆಯು, ದಿವ್ಯತೆ ಹಾಗೂ ಪ್ರಶಾಂತತೆಯ ನೋಟವನ್ನು ತಳೆದಿತ್ತು. ಈಗಾಗಲೇ ಅದು ದೀಕ್ಷಾವಿಧಿಗೆ ಸಜ್ಜುಗೊಳಿಸ್ಪಲ್ಪಟ್ಟಿತ್ತು. ತಾವು ಸರಿಯಾಗಿ ಮಾತನಾಡಲು ಅನುಕೂಲವಾಗುವುದೆಂದು, ಮಹಾರಾಜರು ನನ್ನನ್ನು ಒಂದು ಕುರ್ಚಿಯ ಮೇಲೆ ಕುಳಿತುಕೊಳ್ಳುವಂತೆ ಹೇಳಿದರು. ನಂತರ ಅವರು ಮಾತನಾಡಿದರು: "ಆಧ್ಯಾತ್ಮಿಕ ಜೀವನದಲ್ಲಿ

ಮಾಂತ್ರಿಕವಾದದ್ದು ಏನೂ ಇಲ್ಲ. ನೀನು ಕೇವಲ ಪ್ರಾಪಂಚಿಕ – ಲೌಕಿಕ– ವ್ಯಕ್ತಿಯಲ್ಲ. ನೀನು ಆಧ್ಯಾತ್ಮಿಕ ವ್ಯಕ್ತಿ. ಠಾಕೂರರ ಹೆಸರನ್ನು ನೀನು ಸ್ವೀಕರಿಸುತಿದ್ದಂತೆಯೇ, ಆ ಕ್ಷಣದಲ್ಲಿಯೇ ನೀನು ಆಧ್ಯಾತ್ಮಿಕ ಅಥವಾ ಪಾರಮಾರ್ಥಿಕ ವ್ಯಕ್ತಿಯಾಗುತ್ತೀಯೆ." ಅವರು ಶಕ್ತಿ ಮತ್ತು ಆತ್ಮವಿಶ್ವಾಸಗಳ ಬಗೆಗೆ ಮಾತನಾಡಿದರು. ಉತ್ತಮ ಜೀವನವನ್ನು ನಡೆಸುವಂತೆಯೂ, ಸಣ್ಣ ಸಣ್ಣ ವಿಷಯಗಳ ಬಗೆಗೆ ಚಿಂತಿಸದಿರುವಂತೆಯೂ ಹಾಗೂ ಜಪ–ಧ್ಯಾನಗಳನ್ನು ಮಾಡುವಂತೆಯೂ ನನಗೆ ಬೋಧಿಸಿದರು. ನನ್ನ ಈ ಪಾರಮಾರ್ಥಿಕ ಪಥದಲ್ಲಿ ನನ್ನ ಕುಟುಂಬದವರ ನೆರವು, ಒತ್ತಾಸೆಗಳು ಇರುವುದೇ ಎಂಬುದನ್ನು ಅವರು ಕೇಳಿದರು. ಸ್ವಾಮಿ ವಿವೇಕಾನಂದರ ಪತ್ರಗಳು ಮತ್ತು ಕೊಲಂಬೋದಿಂದ ಆಲ್‌ಮೋರಾದವರೆಗೆ (ಭಾಷಣಗಳು), ಇವುಗಳನ್ನು ಸಂಪೂರ್ಣವಾಗಿ, ಸೂಕ್ಷ್ಮವಾಗಿ ಓದುವಂತೆ ನನಗೆ ತಿಳಿಸಿದರು. ನನಗಾಗಿಯೇ, ತಾವು ಸ್ವಲ್ಪ ಮುಂಚಿತವಾಗಿಯೇ ಸಿದ್ಧರಾದರೆಂದೂ ನನಗೆ ಹೇಳಿದರು. ಸ್ವಾಮೀಜಿಯವರಿಂದ ಅಂತಹ ದಯಾಪೂರ್ಣ ಗಮನವನ್ನೂ ಶಕ್ತಿ ಸಂದೇಶವನ್ನೂ ಪಡೆದ ನಾನು ಅದೆಷ್ಟು ಅದೃಷ್ಟವಂತಳಾಗಿದ್ದೆ. ಸ್ವತಃ ನನಗೆ ತಿಳಿಯದಿರುವಂತಹದನ್ನು, ಅವರು ನಿಜವಾದ ಗುರುವಿನಂತೆ, ನನಗೇ ಅನುಗ್ರಹಿಸುತ್ತಿದ್ದರು. ನನಗೆ ಶಕ್ತಿಯ ಸಂದೇಶದ ಆವಶ್ಯಕತೆಯಿತ್ತು. ಸಾವಿರಾರು ಶಿಷ್ಯರು ಅವರ ಬಳಿಗೆ ಹೋಗುತ್ತಿದ್ದರು. ಅವರು ಶಿಷ್ಯರ ನೋವುಗಳು, ಭಯಗಳು, ಅವರ ಸಣ್ಣ ಮತ್ತು ದೊಡ್ಡ ಸಮಸ್ಯೆಗಳನ್ನು ಹಂಚಿಕೊಳ್ಳುತ್ತಿದ್ದರು ಮತ್ತು ಪ್ರತಿಯೊಬ್ಬರ ಅಗತ್ಯಕ್ಕೆ ತಕ್ಕಂತೆ ಸಾಂತ್ವನ ನೀಡುತ್ತಿದ್ದರು.

**ರಾಮಕೃಷ್ಣ ಆಶ್ರಮ, ಬೆಂಗಳೂರು– ೩೦.೦೩.೧೯೯೯**

ರಂಗನಾಥಾನಂದಸ್ವಾಮಿ ಮಹಾರಾಜ್‌ರು ಬೆಂಗಳೂರಿಗೆ ಬಂದರು. ನಮ್ಮ ಪಾಲಿಗೆ ಅದು ಒಂದು ಉತ್ಸವವಾಯಿತು. ಅವರು ಇಲ್ಲಿದ್ದ ಅವಧಿಯಲ್ಲಿ ನಾನು ಅವರೊಡನೆ ಮೂರು–ನಾಲ್ಕು ಸಾರಿ ಭೇಟಿಮಾಡಿದೆ. ಒಂದು ದಿನ ಅವರನ್ನು ಭೇಟಿಯಾಗಲು ಸಮಯ ನಿಗದಿಪಡಿಸಿಕೊಳ್ಳಲೆಂದು ನನ್ನ ಮಗನೊಡನೆ ಹೋದೆ. ಆದರೆ ಅವರನ್ನೇ ಅಲ್ಲಿ ಭೇಟಿಮಾಡುವ ಅದೃಷ್ಟ ದೊರೆಯಿತು. ನಮ್ಮನ್ನು ಅವರ ಬಳಿಯೇ ಇದ್ದ ಕುರ್ಚಿಗಳಲ್ಲಿ ಕುಳಿತುಕೊಳ್ಳುವಂತೆ ಹೇಳಿದರು: "ನಮ್ಮನ್ನು ವ್ಯಾಕುಲಗೊಳಿಸುವ ಬಯಕೆಗಳಿಂದ ಬಿಡುಗಡೆಹೊಂದುವುದು. ಹೇಗೆ?" ಎಂದು ಅವರನ್ನು ಕೇಳಿದಾಗ ಅವರು ಹೇಳಿದರು: "ನಿಮ್ಮ ಆತ್ಮಶಕ್ತಿಯನ್ನು ಹೆಚ್ಚಿಸಿಕೊಳ್ಳಿ" ಇದಕ್ಕಾಗಿ ಉತ್ತಮವಾದ ಪುಸ್ತಕಗಳನ್ನು ಓದುವಂತೆ ಮಹಾರಾಜ್ ಅವರು ಸಲಹೆ ನೀಡಿದರು. ಅಲ್ಲದೆ, ಗ್ರಂಥಗಳ ಅಧ್ಯಯನ ಆಧ್ಯಾತ್ಮಿಕ ಶಕ್ತಿಯನ್ನು ಹೆಚ್ಚಿಸುವುದೆಂದೂ ಅವರು ಹೇಳಿದರು. ನಾನು ಕೇಳಿದೆ: 'ವ್ಯಕ್ತಿಯು ಶಾಂತಿಯನ್ನು ಪಡೆಯುವುದು ಹೇಗೆ?" ಸ್ವಾಮೀಜಿ ಹೇಳಿದರು: "ನೀನೇಕೆ ಶಾಂತಿ ಪಡೆಯದೆ ಇರಬೇಕು? ನಿನಗೆ ಉತ್ತಮವಾದ ಉದ್ಯೋಗವಿದೆ, ಒಳ್ಳೆಯ ಕೆಲಸವನ್ನು ಮಾಡುತ್ತಿರುವೆ. ಮುಂದಿನ ಊಟಕ್ಕೆ ಏನೆಂದು ಚಿಂತಿಸಬೇಕಾದವರು, ಶಾಂತಚಿತ್ತರಾಗಿರಲು ಸಾಧ್ಯವಾಗಲಾರದು. *ಶ್ರೀ ರಾಮಕೃಷ್ಣ ವೇದದ* ಕ್ರಮವಾದ ಸತತ ಓದುವಿಕೆಯಿಂದ ನಿನ್ನ ಆಧ್ಯಾತ್ಮಿಕ ಶಕ್ತಿಯನ್ನು ವೃದ್ಧಿಸಿಕೊ" ಧ್ಯಾನದ ಬಗೆಗೆ ಅವರು: ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡು, ತಮ್ಮ ಹೃದಯ ಕಡೆಗೆ ತೋರಿಸುತ್ತಾ ಹೇಳಿದರು: "ಇಷ್ಟವಾದದರ ಬಗೆಗೆ ಮನಸ್ಸನ್ನು ಏಕಾಗ್ರಗೊಳಿಸು, ರಾಮಕೃಷ್ಣರು ಅತ್ಯಂತ ಸಮೀಪದವರಾದ್ದರಿಂದ ರಾಮಕೃಷ್ಣರ ಮೇಲೆ ಕೇಂದ್ರೀಕರಿಸು. ರಾಮ ಮತ್ತು ಕೃಷ್ಣ ಬಹಳ ವರ್ಷಗಳ ಹಿಂದೆಯೇ ಬಂದವರು, ಆದರೆ ರಾಮಕೃಷ್ಣರು ಅತ್ಯಂತ ಹತ್ತಿರದವರು. ದೈವ ದರ್ಶನದ ಬಗೆಗೆ ಮಹಾರಾಜ್ ಅವರು ಹೇಳಿದರು: "ದೇವರು ಎಲ್ಲರಲ್ಲಿಯೂ, ಎಲ್ಲದರಲ್ಲಿಯೂ ಇದ್ದಾನೆ. ದೇವರು ನನ್ನಲ್ಲಿ ಇದ್ದಾನೆ. ನಿನ್ನಲ್ಲಿ ಮತ್ತು ಎಲ್ಲದರಲ್ಲಿಯೂ ಇದ್ದಾನೆ. ಅವನು ಪ್ರಕಾಶಿಸುತ್ತಿರುವ ಬೆಳಕಿನಲ್ಲಿ ಇದ್ದಾನೆ, ಅವನು ಮಣಿಗಳ ಹಾರದಲ್ಲಿ ಹಾದುಹೋಗಿರುವ ಸೂತ್ರದಂತೆ ಇದ್ದಾನೆ." ಈ ಸಂದರ್ಭದಲ್ಲಿ

'ಭವನ್ಸ್ ಜರ್ನಲ್' ನಲ್ಲಿ ಪ್ರಕಟವಾಗಿರುವ ತಮ್ಮ ಲೇಖನವನ್ನು ಓದುವಂತೆ ನನಗೆ ಹೇಳಿದರು (What Life has Taugh me).

**ಬೆಂಗಳೂರು ೦೧-೦೪-೧೯೯೯**

ದರ್ಶನ ನೀಡಿದ ನಂತರ ಆಯಾಸಗೊಂಡು ಮಹಾರಾಜ್ ಅವರು ಮಲಗಿದ್ದರು. ನಾನು ಅವರ ಬಳಿ ನೆಲದ ಮೇಲೆ ಕುಳಿತುಕೊಂಡೆ. ಅವರು ಸಂತೋಷಚಿತ್ತರಾಗಿ ಹೇಳಿದರು: "ನನ್ನ ಕಾರ್ಯಕ್ರಮದ ಪಟ್ಟಿ ಅಲ್ಲಿದೆ, ನಾಲ್ಕನೆಯ ತಾರೀಖಿನ ಕಾರ್ಯಕ್ರಮವನ್ನು ಸ್ವೀಕರಿಸು..." ಮೊದಲು ನನಗೆ ಅನೂ ಅರ್ಥವಾಗಲಿಲ್ಲ, ತಮ್ಮದೇ ಆದ ಸರಳ ರೀತಿಯಲ್ಲಿ, ಅಂದಿನ ಆಶೀರ್ವಾದದ ಕಾರ್ಯಕ್ರಮಕ್ಕೆ ನಮ್ಮನ್ನು ಆಹ್ವಾನಿಸುತ್ತಿದ್ದಾರೆಂದು ನನಗೆ ನಂತರ ಅರ್ಥವಾಯಿತು. ತಮ್ಮ ಒಂದು ಕಾರ್ಯಕ್ರಮವನ್ನು ಏರ್ಪಡಿಸಿದ್ದಾರೆ ಎಂದು ಅವರು ಹೇಳಿದರು. ಸ್ವಾಮೀಜಿ ಬಹಳ ಹರ್ಷಚಿತ್ತರಾಗಿದ್ದರು. ಅವರು ಹೇಳುವ ಸರಳತೆ ನಿಜವಾಗಿಯೂ ಆಶ್ಚರ್ಯಕರವಾಗಿದ್ದಿತು. ಹಿಂದಿನ ಸಂಭಾಷಣೆಯನ್ನು ನೆನಪು ಮಾಡಿಕೊಳ್ಳುತ್ತಾ ಸ್ವಾಮೀಜಿ ಮತ್ತೆ ಹೇಳಿದರು: "ನೀನೇಕೆ ಶಾಂತಿಯಿಂದಿರಬಾರದು? ನೀನು ಬಹಳ ಉತ್ತಮವಾದ ಕಾರ್ಯ ಮಾಡುತ್ತೀದ್ದೀಯೆ. ನೀನು ಐವತ್ತು ವಯಸ್ಸಿನ ತನಕ, ಏನಾನ್ನಾದರೂ ಸಾಧಿಸುವ ಸಲುವಾಗಿ ಕೆಲಸ ಮಾಡು – ನಂತರ ಅಂತರ್ಮುಖಿಯಾಗು. ರಾಮಕೃಷ್ಣ ವಚನವೇದವನ್ನು (ಗಾಸ್ಪೆಲ್ ) ಓದು, ಅದು ನಿನಗೆ ನೆರವಾಗುವುದು." ಅವರಿಂದ ಬೀಳ್ಕೊಳ್ಳುವಾಗ ನನ್ನ ಹೃದಯ ಭಾರವಾಯಿತು. ನನ್ನ ಕಣ್ಣುಗಳು ಕಣ್ಣೀರಿನಿಂದ ತುಂಬಿದ್ದವು. ಅವರು ನನಗೆ ಪ್ರಸಾದವನ್ನು ನೀಡಿ, ನಾನೇಕೆ ಅಷ್ಟು ದುರ್ಬಲಳಾಗಿರಬೇಕೆಂದು ಕೇಳಿದರು ಹಾಗೂ ನಾನು ಆಶ್ರಮದಲ್ಲಿ ಪ್ರಸಾದ ಪಡೆಯುವುದರ ಬಗೆಗೆ ಖಚಿತಪಡಿಸಿಕೊಳ್ಳುವಂತೆ ಸುದರ್ಶನ್ ಮಹಾರಾಜ್ ಅವರಿಗೆ ಹೇಳಿದರು. ಅದೇ ದಿನವೇ ಮಹಾರಾಜ್ ರಂಗನಾಥಾನಂದ ಅವರು ಸ್ವಾಮಿ ರಾಘವೇಶಾನಂದರಿಗೆ ನನ್ನನ್ನು ಪರಿಚಯಿಸಿದರು. ಸ್ವಾಮಿ ರಾಘವೇಶಾನಂದರು ಹಲವಾರು ರೀತಿಯಲ್ಲಿ ನನಗೆ ಮಾರ್ಗದರ್ಶನ ನೀಡಿ ನೆರವು ನೀಡುತ್ತಿದ್ದಾರೆ.

**ಬೆಂಗಳೂರು ೦೨-೦೪-೧೯೯೯**

ಮಹಾರಾಜ್ ಅವರನ್ನು ಭೇಟಿಮಾಡಲು, ನನ್ನ ಕುಟುಂಬದ ಜೊತೆಯಲ್ಲಿ ನಾನು ಮತ್ತೆ ಹೋದೆ. ಮಹಾರಾಜ್ ವಿಶೇಷವಾಗಿ ರಾಮಕೃಷ್ಣ ವಚನ ವೇದವನ್ನು (ಗಾಸ್ಪೆಲ್) ಓದುವಂತೆ ನನಗೆ ಹೇಳಿದ್ದರು. ಹಾಗಾಗಿ ನಾನು ಸಂಕ್ಷಿಪ್ತಗೊಳಿಸದಿರುವಂತಹ ಪ್ರತಿಯನ್ನು ಖರೀದಿಸಿದೆ ಮತ್ತು ಅದನ್ನು ಮಹಾರಾಜರ ಬಳಿಗೆ ತೆಗೆದುಕೊಂಡು ಹೋದೆ. ಕಳೆದ ಸಭೆಯ ಬಳಿಕ ಮಹಾರಾಜ್ ಅವರು ಆಯಾಸಗೊಂಡು ಮಲಗಿದ್ದರು. ಆದರೆ ಈ ದಿನ ಅವರು ಹರ್ಷಚಿತ್ತರಾಗಿ, ಕಾಂತಿಯುತರಾಗಿ ಕುಳಿತಿದ್ದರು. ನನ್ನ ಕುಟುಂಬವನ್ನು ಅವರಿಗೆ ಪರಿಚಯಿಸಿ, ನಮಸ್ಕರಿಸಿದ ನಂತರ, ನಾನು ತಂದಿದ್ದ ಪುಸ್ತಕವನ್ನು ಅವರಿಗೆ ತೋರಿಸಿದೆ. ಪುಸ್ತಕವನ್ನು ನನ್ನ ಕೈಗಳಿಂದ ತೆಗೆದುಕೊಂಡು ಅವರು ಬಹಳ ಮೃದುವಾಗಿ ಹಾಗೂ ಪ್ರೀತಿಯಿಂದ ಅದರ ಪುಟಗಳನ್ನು ತೆಗೆದರು. ಪುಸ್ತಕದ ಪುಟ ತೆರೆಯುವುದರಲ್ಲಿಯೂ ಅವರಲ್ಲಿ ಪುಸ್ತಕದ ಬಗೆಗೆ ಗೌರವವಿತ್ತು. ಅವರು ಆ ಗ್ರಂಥವನ್ನು ಅನೇಕ ಬಾರಿ ಓದಿರಬಹುದು, ಆದರೂ ಅವರು ಪ್ರತಿಯೊಂದು ಪುಟವನ್ನೂ ಅಷ್ಟೊಂದು ಎಚ್ಚರಿಕೆಯಿಂದ ತೆರೆಯುತ್ತಿದ್ದರು! ಅವರು ತಮ್ಮ ಲೇಖನಿಯನ್ನು ತೆಗೆದುಕೊಂಡು ಪುಸ್ತಕದ ಮೇಲೆ ಆಶೀರ್ವಚನ ಬರೆದುಕೊಡಲು ಆರಂಭಿಸುತ್ತಾ ಕೇಳಿದರು: "ನಿನ್ನ ಹೆಸರು ಶಾರದಾ: ಅಲ್ಲವೆ?" "ಇಲ್ಲ ಪೂನಮ್" , ನಾನು ಹೇಳಿದೆ. 'ಕೊಹ್ಲಿ' ಎನ್ನುವುದನ್ನು ತಾವೇ ಹೆಸರಿಸಿ ಆಶೀರ್ವಚನ ಬರೆದುಕೊಟ್ಟರು. ಅವರು ಮತ್ತೆ ಪುಸ್ತಕವನ್ನು ತೆರೆದರು. ಮೈಲಾಪುರ, ಮದ್ರಾಸ್, ಪ್ರಕಟನೆಯ ವರ್ಷ, ಇವುಗಳನ್ನು ಓದಿದರು. ನಂತರ ಹೇಳಿದರು:

"ಇದನ್ನು ನಿಖಿಲ್ ತಾನು ಅಮೆರಿಕಾದಲ್ಲಿದ್ದಾಗ ಅನುವಾದ ಮಾಡಿದನು. ಆಧ್ಯಾತ್ಮಿಕವಾಗಿ ನಿನ್ನನ್ನು ಅಲುಗಾಡಿಸಿಬಿಡಬಲ್ಲಂತಹ ಪುಸ್ತಕ ಇದು. ಮೊದಲ ಬಾರಿ ನಾನು ಈ ಪುಸ್ತಕವನ್ನು ಓದಿದಾಗ, ನನಗೆ ಅದನ್ನು ಬಿಡಲೇ ಸಾಧ್ಯವಾಗಲಿಲ್ಲ, ಒಂದೇ ಬಾರಿಗೆ ನೂರುಪುಟಗಳ ತನಕ ಓದಿದೆ." ನಾವು, ಆಶೀರ್ವಾದದ ಕಾರ್ಯಕ್ರಮಕ್ಕೆ ಬರುವಂತೆ ಮತ್ತೆ ಹೇಳಿದರು. ಮಹಾರಾಜ್ ಅವರು ಪ್ರೇಮ ಮತ್ತು ಹರ್ಷಗಳ ಚೈತನ್ಯಗಳಿಂದ ತುಂಬಿಕೊಂಡಿದ್ದು ಅವನ್ನು ಎಲ್ಲ ಕಡೆಗೂ ಹರಡುತ್ತಾರೆ.

**ಬೆಂಗಳೂರು, ೦೪–೦೪–೧೯೯೯**

ಆಶ್ರಮವು ಸಂಪೂರ್ಣವಾಗಿ ತುಂಬಿತ್ತು. ತೀವ್ರವಾದ ಕಾಯಿಲೆಯಿಂದ ಗುಣವಾಗಿ ಬಂದಿದ್ದರೂ, ಮಹಾರಾಜ್ ಅವರು ಅಲ್ಲಿ ಸೇರಿದ್ದ ಭಾರೀ ಜನಸಮೂಹಕ್ಕೆ ಪ್ರವಚನ ಮಾಡಬೇಕಾಗಿದ್ದಿತು. ದೇವಾಲಯದ ಮುಂದೆ ಅಪ್ರಯತ್ನವಾಗಿ ತಲೆಬಾಗಿ ಸಭಾಮಂದಿರದ ಕಡೆಗೆ ನಡೆದರು. ವೈದ್ಯರ ಸಲಹೆಯಂತೆ ಅವರು ಬಹಳ ಕಡಿಮೆ ಮಾತನಾಡಬೇಕಾಗಿದ್ದಿತು. ಆದರೆ  ಅವರು ಪ್ರವಚನ ಮಾಡುತ್ತಿದ್ದಾಗ ಅದರ ಬಗೆಗೆ ಸ್ವಲ್ಪವೂ ಚಿಂತಿಸಲಿಲ್ಲ. ಪ್ರತಿಯೊಬ್ಬರೂ ಸಂತೋಷ ಚಿತ್ತರಾದರು.

ಅವರು ನಮಗೆ ನೀಡಿದ ಉಪದೇಶದ ಸಾರವನ್ನು ಈ ಮುಂದಿನ ಪತ್ರವು ಸಂಗ್ರಹವಾಗಿ ತಿಳಿಸುತ್ತದೆ:

ನನ್ನ ಪ್ರೀತಿಯ ಪೂನಮ್,

*ನಮಸ್ಕಾರಗಳನ್ನು ಮತ್ತು ಛಾಯಾಚಿತ್ರಗಳನ್ನು ಒಳಗೊಂಡ ನಿನ್ನ ಕಾಗದವು ಈ ದಿನ ತಲುಪಿದೆ. ನಿನ್ನ ಆಧ್ಯಾತ್ಮಿಕ ಜೀವನದಲ್ಲಿ ನೀನು ಪ್ರಗತಿ ಹೊಂದುತ್ತಿರುವುದನ್ನು ಹಾಗೂ ಜೀವನದ ಏರಿಳಿತಗಳಲ್ಲಿ ಸಮಚಿತ್ತ ಹೊಂದಲು ಸಮರ್ಥಳಾಗಿರುವುದನ್ನು ತಿಳಿದು ನನಗೆ ಹರ್ಷವಾಗಿದೆ. ಮೂರು ಶಕ್ತಿ ಮೂಲಗಳಲ್ಲಿ ಆತ್ಮಬಲವು ಪ್ರತಿಯೊಬ್ಬ ಮಾನವನಿಗೂ ಅತ್ಯಂತ ಮುಖ್ಯವಾದದ್ದು. ಉಳಿದ ಎರಡು ಬಾಹುಬಲ ಮತ್ತು ಬುದ್ಧಿಬಲ. ಆರ್ಥಿಕ ಹಾಗೂ ಇತರ ಆಮಿಷಗಳನ್ನು ಎದುರಿಸುವಾಗ, ನಿಗ್ರಹಿಸುವಾಗ ಆತ್ಮಬಲವು ಕಾರ್ಯನಿರ್ವಹಿಸುವುದನ್ನು ನೀವು ಕಾಣುವಿರಿ. ಯಾವುದೇ ಬುದ್ಧಿಬಲವೂ  ಅದನ್ನು ತಡೆಯಲಾರದು. ಕೇವಲ ಆತ್ಮಬಲ ಮಾತ್ರ ತಡೆಯಬಲ್ಲದು. ಭ್ರಷ್ಟರಾಗಿರುವ ಜನರು ಬೇಕಾದಷ್ಟು ಬುದ್ಧಿಬಲ ಪಡೆದಿರುತ್ತಾರೆ. ಆದರೆ ಆತ್ಮಬಲ ಪಡೆದಿರುವುದಿಲ್ಲ. ನೀವು ಹೆಚ್ಚು ಹೆಚ್ಚು ಶಾಂತಿ ಮತ್ತು ಸಂತೋಷ ಹೊಂದಿ ಜನರನ್ನು ಪ್ರೀತಿಯಿಂದ ಸೇವಿಸುವ ಸಮರ್ಥರಾದಾಗ ನೀವು ಆಧ್ಯಾತ್ಮಿಕತೆಯತ್ತ, ಪ್ರಗತಿಹೊಂದುತ್ತಿದ್ದೀರಿ. ಇದೇ 'ಆಧ್ಯಾತ್ಮಿಕ ವಿಕಾಸ' ಹಾಗೂ ಇದು ಎಲ್ಲರ ಸವಲತ್ತು. ಕೂಡ. ಆದರೆ ಜನರು ಆತ್ಮಬಲವನ್ನು ಜೀವನದಲ್ಲಿ, ಕಾರ್ಯಕ್ಷಮತೆಯಲ್ಲಿ, ನಡತೆಯಲ್ಲಿ, ಸುಸ್ಪಷ್ಟವಾಗಿ ವ್ಯಕ್ತಪಡಿಸಲು ಕಲಿಯಬೇಕಷ್ಟೆ. ಸ್ವಾಮಿ ವಿವೇಕಾನಂದರು ಧರ್ಮದ ಅರ್ಥವನ್ನು ವ್ಯಾಖ್ಯಾನಿಸುವುದು. ಹೀಗೆಯೇ: 'ಮನುಷ್ಯನಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ದೈವತ್ವದ ಅಭಿವ್ಯಕ್ತಿಯೇ ಧರ್ಮ.*

*ಅನೇಕ ಭಕ್ತರು ಉಪಯೋಗಕರವೆಂದು ಕಂಡುಕೊಂಡಿರುವ ಈ ಕೆಳಗೆ ಕಾಣಿಸಿರುವ ಪುಸ್ತಕಗಳನ್ನು ನೀನು ಓದಬಹುದು: (೧) ರಾಮಕೃಷ್ಣರ ನೇರ ಶಿಷ್ಯರಿಂದ ಆಧ್ಯಾತ್ಮಿಕ ಪ್ರವಚನಗಳು (Spiritual talks by the Direct Disciples of Sri Ramakrishna), (೨) ಮಹಾಪುರುಷ ಶಿವಾನಂದ ಮಹಾರಾಜ್ ಅವರ ದೇವರನ್ನು ಹುಡುಕುವವರಿಗಾಗಿ (For Seekers of God, by Mahapurush, Shivananda Maharaj) ಮತ್ತು (೩) ನನ್ನ ಕಿರು ಹೊತ್ತಿಗೆ (How to be*

*an Ideal Householder)* ಮತ್ತು *'ದೈವಿ ಅನುಗ್ರಹ' (Divine Grace)* ಎಂಬ ನನ್ನ ಪುಸ್ತಿಕೆಯನ್ನು ಓದುವಂತೆ ನಿನ್ನ ಮಗನಿಗೆ ತಿಳಿಸು.

*ನನ್ನ ಪ್ರೀತಿ ಮತ್ತು ಆಶೀರ್ವಾದಗಳನ್ನು ಸ್ವೀಕರಿಸು ಮತ್ತು ಇದನ್ನು ನಿನ್ನ ಮಗನಿಗೂ ತಿಳಿಸು.*

ನಿನ್ನ ಪ್ರೀತಿಯ

**ರಂಗನಾಥಾನಂದ**

**ವಿನೋದದ ಕ್ಷಣಗಳು**

ಬೆಳಗಾಂ ಆಶ್ರಮದ ಉದ್ಘಾಟನೆಗೆ ಹೋಗುವುದಕ್ಕಾಗಿ ೨೦೦೪ರಜನವರಿ ೧೯ರಂದು ಮಹಾರಾಜ್ ಅವರು ಬೆಂಗಳೂರಿಗೆ ಬಂದರು. ಆದರೆ, ಅವರ ಅರೋಗ್ಯ ಅಲ್ಲಿಗೆ ಹೋಗಲಾರದಂತೆ ಅವರನ್ನು ತಡೆಯಿತು. ನಾವು ಅವರನ್ನು ಭೇಟಿಮಾಡಲು ಹೋದೆವು. ಗಂಭೀರವಾದ ಕಾಯಿಲೆಯಿಂದ ಮತ್ತೊಮ್ಮೆ ಆಗಿನ್ನೂ ಚೇತರಿಸಿಕೊಂಡಿದ್ದರೂ, ಅವರು ಬಹಳ ಹರ್ಷಚಿತ್ತಾಗಿದ್ದರು. ಖಂಡಿತವಾಗಿಯೂ, ಅವರ ಶರೀರವು ಬೇರೆಯವರಿಗೆ ಅರಿವನ್ನು ಉಂಟುಮಾಡುವ ಒಂದು ಸಾಧನವಾಗಿದ್ದಿತು. ನನ್ನನ್ನು ನೋಡಿದ ಕೂಡಲೇ ನನ್ನ ವ್ಯವಹಾರವು ಹೇಗೆ ನಡೆಯುತ್ತಿದೆ ಎಂದು ಪ್ರಶ್ನಿಸಿದರು. ಸ್ವಲ್ಪಸಮಯದ ಹಿಂದೆ ನಾನು ಸ್ವಂತ ಪ್ರಕಾಶನ ಸಂಸ್ಥೆಯನ್ನು ಆರಂಭಿಸಿದ್ದೆ ಹಾಗೂ ಅದನ್ನು ಮಹಾರಾಜ್‌ರಿಗೆ ತಿಳಿಸಿದ್ದೆ. ಅವರು ಶುಭಾಶಯಗಳನ್ನು ಮತ್ತು ಹೃತ್ಪೂರ್ವಕವಾಗಿ ಪ್ರೋತ್ಸಾಹಿಸಿದ್ದ ಪತ್ರವನ್ನೂ ಕಳಿಸಿದ್ದರು. ಆದರೂ, ಎಷ್ಟೋ ತಿಂಗಳುಗಳ ನಂತರವೂ ಅವರು ಇದನ್ನು ಇನ್ನೂ ನೆನಪಿಟ್ಟುಕೊಂಡಿದ್ದರು.

ನಾನು ಅವರ ಪಕ್ಕದಲ್ಲಿ ಕುಳಿತುಕೊಂಡೆ. ಪ್ರೈಮರಿ ಮಕ್ಕಳಿಗಾಗಿ ಸಿದ್ಧಪಡಿಸಿದ್ದ 'ಕಲಿಕೆಯು ಒಂದು ವಿನೋದ' ಎಂಬ ಪುಸ್ತಕಗಳ ಒಂದು ಕಟ್ಟನ್ನು ಅವರಿಗೆ ಕೊಟ್ಟೆ. ಅವರು ಮೂರು ಪುಸ್ತಕಗಳನ್ನು ನೋಡಿದರು. ಮತ್ತು ಮೊದಲನೆಯ ಪುಸ್ತಕವನ್ನು ತೆರೆದು ಕೇಳಿದರು, 'ನೀನು ಇದನ್ನು ಹೇಗೆ ಆರಂಭಿಸಿದ್ದೀಯ? ನಾನು ಸಿಕ್ಕಾಪಟ್ಟೆ ಗೀಚಿದಂತಹ ಪುಟಗಳನ್ನು ತೋರಿಸಿ, ಈ ಪುಸ್ತಕಗಳು ೩–೪, ೪–೫ ಮತ್ತು ೫–೬ ವರ್ಷಗಳ ಮಕ್ಕಳಿಗಾಗಿ' ಎಂದು ಹೇಳಿದೆ. ಆಗ ಮಹಾರಾಜ್‌ರು ತಾವು ಮೂರು ವರ್ಷವಯಸ್ಸಿನವರಾಗಿದ್ದಾಗ, ತಮ್ಮ ಮೇಷ್ಟರು ಹೇಳಿದ್ದ ಪ್ರಾಸಬದ್ಧ ಶಿಶುಗೀತೆಯೊಂದು ಈಗಲೂ ತಮಗೆ ನೆನಪಿದೆಯೆಂದು ಆ ಗೀತೆಯನ್ನು ಕಂಠಪಾಠದಂತೆ ಹೇಳಿದರು. ಶಿಶುಗೀತೆಯು 'humble, bumble' ಪದಗಳೊಂದಿಗೆ ಮುಕ್ತಾಯವಾಗಿ, ನೀರು ತರುವುದಕ್ಕೆ ಸಂಬಂಧಿಸಿತ್ತು. ಅಲ್ಲದೇ, ತಾವೂ ಮೂರು ವರ್ಷದವರಾಗಿದ್ದಾಗ ಶಾಲೆಗೆ ಹೋಗುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿ 'ನನ್ನ ಮೊಣಕಾಲಿನಲ್ಲಿ ಜ್ವರ ಬಂದಿದೆ' ಎಂದು ಹೇಳಿ ತಮ್ಮ ತಾಯಿಯ ಹಿಂದೆ ಬಚ್ಚಿಟ್ಟುಕೊಳ್ಳುತ್ತಿದ್ದುದ್ದನ್ನೂ, ಮೇಷ್ಟ್ರು ಅಲ್ಲಿಂದ ಅವರನ್ನು ಎಳೆದುಕೊಂಡು ಹೋಗುತ್ತಿದ್ದುದ್ದನ್ನೂ, ಅವರು ನಗುತ್ತಾ ಹೇಳಿದರು. ನಂತರ ಅವರು ಪುಸ್ತಕವನ್ನು ಒಂದು ಪುಟದ ನಂತರ ಒಂದರಂತೆ ತಿರುಗಿಸಿ ನೋಡಿದರು. ಅದರಲ್ಲಿನ ಚಿತ್ರಗಳನ್ನು ಕಂಡು ಹರ್ಷಿತರಾದರು. ದೈಹಿಕ ಮತ್ತು ಸಾಮಾಜಿಕ ಅಭಿವೃದ್ಧಿ, ಬೆಳವಣಿಗೆಗಳ ಬಗೆಗಿದ್ದ ಪುಟಗಳನ್ನು ಅವರಿಗೆ ತೋರಿಸಿದೆ. ಸ್ವತಃ ತಾವೇ ಶೀರ್ಷಿಕೆಗಳನ್ನು ಓದಿದರು: ' 'E' for Elephant' ಎನ್ನುವುದನ್ನು ನೋಡಿ, 'Enlightenment' ಎಂದು ಅವರು ಹೇಳಿದರು. 'E' ಎನ್ನುವುದು ಅವರಿಗೆ 'Enlightenment' (ಅರಿವು, ಜ್ಞಾನ) ಆಗಿತ್ತು, ಆದರೆ ಆನೆಯಲ್ಲ. ಈ ಪುಸ್ತಕಗಳ ಕಾರ್ಯದ ಬಗೆಗೆ ಅವರು ಹರ್ಷಚಿತ್ತರೂ ಉಲ್ಲಸಿತರೂ ಆಗಿದ್ದರು. ನಂತರ ನನ್ನ ಮಗ ಅಭಿನವ್ ಮಾನಸಿಕ ಶಕ್ತಿಯನ್ನು ಹೇಗೆ ಅಭಿವೃದ್ಧಿಪಡಿಸಿಕೊಳ್ಳಬಹುದು ಎಂದು ಅವರನ್ನು ಕೇಳಿದ. *ಗೀತೆಯನ್ನು* ಮತ್ತು *ಕೊಲಂಬೋದಿಂದ ಆಲ್ಮೋರಾಗೆ:* (ಪ್ರವಚನಗಳು) – ಇವರೆಡನ್ನೂ ಓದುವಂತೆ ಮಹಾರಾಜ್ ಅವರು ಅವನಿಗೆ ತಿಳಿಸಿದರು. "*ಗೀತೆಯು*

ಅಪಾರ ಶಕ್ತಿ ನೀಡುತ್ತದೆ. ನೀವೆಲ್ಲಾ ಯುವಕರು. ನೀವು ನಿಮ್ಮ ದೇಶಕ್ಕಾಗಿ ಕೆಲಸ ಮಾಡಬೇಕು. ಎಲ್ಲ ಶಕ್ತಿಯೂ, ಬಲವೂ ಒಳಗಡೆ ಇರುತ್ತದೆ. ನಾನು ದುರ್ಬಲನೆಂದು ಎಂದೂ ಹೇಳಬೇಡ, ನಾನು ಬಲಶಾಲಿ, ಬಲವು ನನ್ನ ಒಳಗೇ ಇದೆ ಎಂದುಕೊ". ಸ್ವಾಮೀಜಿಯ ಲಾಹೋರಿನ ತಮ್ಮ ಪ್ರವಚನವು ಬಲ ಮತ್ತು ಆತ್ಮನಿಗ್ರಹಗಳ ಮತ್ತು ಆತ್ಮ ಸಂಯಮಗಳ ಬಗೆಗೇ ಇದೆ ಎಂದು ಅವರು ಹೇಳಿದರು.

ಈ ಬಾರಿ ಅವರು ಬೆಂಗಳೂರಿನಲ್ಲಿದಾಗ ಸಾಧ್ಯವಾದಷ್ಟು ಬಾರಿ ಮಹಾರಾಜ್‌ರೊಡನೆ ಭೇಟಿಮಾಡಬೇಕು. ಎಂದು ಮನಸ್ಸಿನಲ್ಲಿ ನಿಶ್ಚಯಿಸಿದೆ ಮತ್ತು ಹಾಗೆಯೇ ಮಾಡಿದೆ ಕೂಡ. ಇದು ಬೆಂಗಳೂರಿನಲ್ಲಿ ಮಹಾರಾಜ್ ಅವರು ಉಳಿದುಕೊಳ್ಳುವ ಕಡೆಯ ದಿನವಾಗಿತ್ತು. ಅವರು ಕೋಲ್ಕತ್ತಾಗೆ ಹಿಂದಿರುಗುತ್ತಿದ್ದರು. ಅವರನ್ನು ನೋಡಲು ನಾವೆಲ್ಲರೂ ಬಸವನಗುಡಿಯ ಆಶ್ರಮಕ್ಕೆ ಹೋದೆವು. ನಾನು ಆಗತಾನೇ ಮುದ್ರಿತವಾಗಿ ಬಂದಿದ್ದ ನನ್ನ *Learning to be Great* ಎನ್ನುವ ಮೌಲಿಕ ಶಿಕ್ಷಣ ಸರಣಿಯ (೧–೨) ಪುಸ್ತಕಗಳನ್ನು ನನ್ನೊಡನೆ ತೆಗೆದುಕೊಂಡು ಹೋಗಿದ್ದೆ. ನಾನು ಮಹಾರಾಜ್‌ರ ಹತ್ತಿರಕ್ಕೆ ಹೋದೆ. ಅವರು ಒಂದು ಕುರ್ಚಿಯ ಮೇಲೆ ಕುಳಿತಿದ್ದರು. ಅವರು ಪುಸ್ತಕಗಳನ್ನು ನೋಡಿದರು ಮತ್ತು ಅವನ್ನು ಇಷ್ಟಪಟ್ಟರು. ಅವರು ನನ್ನ ಜಪಮಾಲೆಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಅದನ್ನು ಪವಿತ್ರಗೊಳಿಸಿದರು. ಅಲ್ಲಿಂದ ನಾವು ಏರ್–ಪೋರ್ಟಿಗೆ (ವಿಮಾನ ನಿಲ್ದಾಣಕ್ಕೆ) ಹೋದೆವು. ನಾನು ಅವರಿಗೆ ನಮಸ್ಕರಿಸುತ್ತಿದ್ದಾಗ ಅವರು ಹೇಳಿದರು: 'ಓ ನೀನು ಇಲ್ಲಿಗೂ ಬಂದಿದ್ದೀಯೆ!' ಮಹಾರಾಜ್‌ರನ್ನು ಗಾಲಿ ಕುರ್ಚಿಯಿಂದ ವಿಮಾನದ ಬಳಿ ಕರೆದೊಯ್ಯಲಾಯಿತು. ನನ್ನ ಮಗ ನನ್ನನ್ನು ಬೇಗನೇ ಕಾಫೀ ಷಾಪಿಗೆ ಕರೆದುಕೊಂಡು ಹೋದ. ಅಲ್ಲಿಂದ ವಿಮಾನವನ್ನು ನಾವು ನೋಡಬಹುದೆಂದು ಅವನಿಗೆ ತಿಳಿದಿತ್ತು. ಮಹಾರಾಜ್‌ರನ್ನು ವಿಮಾನಕ್ಕೆ ಹತ್ತಿಸಲಾಯಿತು. ಬಾಗಿಲ ಬಳಿ ಅವರ ಕುರ್ಚಿಯನ್ನು ಇಡಲಾಯಿತು. ಕಾವಿವರ್ಣದ ನಿಲುವಂಗಿಯ ಕಡೆಯ ದರ್ಶನವನ್ನು ನಾನು ಪಡೆದೆ.... ಜೀವನದಲ್ಲಿ ಕಡೆಯ ದರ್ಶನ...

ಅವರ ಪ್ರೀತಿ, ಮಾರ್ಗದರ್ಶನ ಈಗಲೂ ನಮ್ಮೊಡನೆಯೇ ಇವೆ. ಮಹಾರಾಜ್ ಅವರು ಕೇವಲ ನಮ್ಮ ಪ್ರಶ್ನೆಗಳಿಗೆ ಉತ್ತರಿಸಿದ್ದು ಮಾತ್ರವಲ್ಲ ಕೆಲವು ಪುಸ್ತಕಗಳನ್ನು ಓದುವಂತೆಯೂ ಸಲಹೆ ನೀಡಿದರು. ಏಕೆಂದರೆ, ತಾವು ಮಾನವನ ರೂಪದಲ್ಲಿ ನಮ್ಮೊಡನೆ ಇರದಿದ್ದಾಗಲೂ, ಈ ಪುಸ್ತಕಗಳು ಎಲ್ಲ ಉತ್ತರಗಳನ್ನು ಕಂಡುಕೊಳ್ಳುವಲ್ಲಿ ನೆರವು ನೀಡುತ್ತವೆ ಎಂಬುದು ಅವರಿಗೆ ತಿಳಿದಿತ್ತು. ಕಾವಿಯ ನಿಲುವಂಗಿ ಮರೆಯಾಯಿತು. ಆದರೆ ಅದರ ಬೆಳಕು, ಅವರ ಪುಸ್ತಕಗಳು, ನೆನಪುಗಳು, ಮಾರ್ಗದರ್ಶನ ಮತ್ತು ಆಲೋಚನೆಗಳಿಂದಾಗಿ, ಇನ್ನೂ ನನ್ನ ಜೊತೆಯಲ್ಲಿಯೇ ಇವೆ.

* * * *

# ೧೨೦. ಒಂದು ಪ್ರಕಟಣೆಯ ಪ್ರಸಂಗ

–ಎಲ್‌ವಾ ಲಿನ್ನಿಯಾ ನೆಲ್ಸಿನ್*

ಭಾರತದಲ್ಲಿ ಪ್ರಕಟಣೆಗೊಂಡಿದ್ದ ವಿಜ್ಞಾನ ಮತ್ತು ಧರ್ಮ *(Science and Religion)* ಎಂಬ ಸ್ವಾಮಿ ರಂಗನಾಥಾನಂದರ ಪುಸ್ತಕವನ್ನು ನಾನು ಓದಲು ಪ್ರಾರಂಭಿಸಿದ್ದೆನೆಂದು, ಅವರಿಗೆ ನಾನು ೧೯೭೯ರ ಮೇ ಆರರಂದು ಪತ್ರವನ್ನು ಬರೆದೆ. ಈ ಪುಸ್ತಕವು ಡಬಲ್‌ಡೇಯವರಿಗೆ, ತಮ್ಮ 'ಡಬಲ್‌ಡೇ ಆಂಕರ್ ಸೀರೀಸ್'ನಲ್ಲಿ ಪ್ರಕಟಿಸಲು ಆಸಕ್ತಿ ಮೂಡಿಸಲು ಸಾಧ್ಯವಾಗಬಹುದು; ಇಲ್ಲಿಯ ಜನರಿಗೆ ಈ ಪುಸ್ತಕವು ಖಂಡಿತವಾಗಿಯೂ ಆಸಕ್ತಿದಾಯಕವಾಗುವುದು ಎನಿಸಿತು.

೧೯೭೯ರ ಜುಲೈ ೨೯ರಿಂದ ೧೯೭೯ ಆಗಸ್ಟ್ ೨ರ ಅವಧಿಯಲ್ಲಿ ಸ್ವಾಮಿ ರಂಗನಾಥಾನಂದರು ಬೋಸ್ಟನ್ನಿಗೆ ಬಂದಿದ್ದರು ಮತ್ತು ಆಶ್ರಮದಲ್ಲಿ ಸ್ವಾಮಿ ಆದೀಶ್ವರಾನಂದರ ಜೊತೆ ಮಾರ್ಷ್‌ಫೀಲ್ಡಿನಲ್ಲಿ ಒಂದು ವಿಚಾರಸಂಕಿರಣದಲ್ಲಿ ಭಾಗವಹಿಸಿದ್ದರು. ಅನಂತರ, ಕೂಡಲೇ ಈ ಪ್ರಕಟಣೆಯ ಸಾಧ್ಯತೆಯ ಬಗೆಗೆ ನನ್ನ ಜೊತೆ ಮಾತನಾಡಬಯಸಿದರು. ಯಾವ ಬದಲಾವಣೆಯ ಆವಶ್ಯಕತೆಯಿದೆ ಎನ್ನುವುದರ ಬಗೆಗೆ ನಾವು ಚರ್ಚಿಸಿದೆವು. ಸ್ವಾಮಿ ರಂಗನಾಥಾನಂದರು ಪುಸ್ತಕದ ಸಿದ್ಧತೆಯಲ್ಲಿ ಮುಂದುವರಿಯುವಂತೆ ಒತ್ತಾಯಿಸಿದರು. ಪರಿಷ್ಕರಿಸಿದ, ಅವರ ಹಸ್ತಪ್ರತಿಗಳನ್ನು ನಾನು ಕಳಿಸುವುದೆಂದೂ ತೀರ್ಮಾನವಾಯಿತು. ೧೯೮೦ರ ಮೊದಲ ಭಾಗದಲ್ಲಿ ಅವರು *ಮಾನವಶಕ್ತಿಯ ಸಂಪನ್ಮೂಲಗಳ ವಿಜ್ಞಾನ (The Science of Human Energy Resources)* ಎಂಬ ತಮ್ಮ ಪ್ರವಚನದ ಪ್ರತಿಯೊಂದನ್ನು ನನಗೆ ಕಳುಸಿಕೊಟ್ಟರು. ಹಾಗೂ ಇದನ್ನು ಆ ಗ್ರಂಥದಲ್ಲಿ ಸೇರಿಸಬೇಕು ಎಂದು ಹೇಳಿದರು. ಪರಿಷ್ಕೃತ ಹಸ್ತಪ್ರತಿಯು ಜಾಗತಿಕ ದೃಷ್ಟಿಕೋನವನ್ನು ಹೊಂದಿರುತ್ತದೆ ಎಂಬುದು ಎಲ್ಲರ ಅಭಿಪ್ರಾಯವಾಗಿತ್ತು.

ಸ್ವಾಮಿ ರಂಗನಾಥಾನಂದರು ೧೯೮೦ರ ಬೇಸಿಗೆಯಲ್ಲಿ ಹಿಂದಿರುಗುತ್ತಾರೆ. ಹಾಗಾಗಿ. ಅವರು, ಸ್ವಾಮಿ ಸರ್ವಗತಾನಂದ ಮತ್ತು ನಾನು, ಮಾರ್ಷ್‌ಫೀಲ್ಡ್ ನಲ್ಲಿ ಮೂರುದಿವಸಗಳು ಮೇಜಿನ ಮುಂದೆ ಕುಳಿತು ಸಂಪೂರ್ಣ ಹಸ್ತಪ್ರತಿಯನ್ನು ಪರೀಕ್ಷಿಸಿ, ಸ್ವಾಮಿ ರಂಗನಾಥಾನಂದರು ಆವಶ್ಯಕವೆಂದೆನಿಸಿದ್ದ ಬದಲಾವಣೆಗಳೆನ್ನೆಲ್ಲಾ ಕಾರ್ಯಗತಗೊಳಿಸಿದೆವು. ನಾವು ಕಳೆದ ಸಮಯ ಸಾಂದ್ರ ಹಾಗೂ ಕೇಂದ್ರೀಕೃತವಾಗಿತ್ತಾದರೂ ಹರ್ಷಪೂರಿತವಾಗಿತ್ತು.

ಸಮಯ ಸರಿದಂತೆ, ಕೆಲಸ ಮುಂದುವರಿಯಿತು ಮತ್ತು ಸ್ವಾಮಿ ರಂಗನಾಥಾನಂದರ ಅನುಮತಿಗಾಗಿ ಭಾರತಕ್ಕೆ ರವಾನಿಸಲಾಯಿತು. ೧೯೮೨ ಅಥವಾ ೧೯೮೩ರ ನಡುವೆ, ನಾವು ಹಸ್ತಪ್ರತಿಯನ್ನು ಡಬಲ್‌ಡೇಗೆ ಕಳಿಸಿದೆವು. ಅದನ್ನು ಹಲವು ತಿಂಗಳುಗಳವರೆಗೆ ತಮ್ಮೊಡನೆ ಇರಿಸಿಕೊಂಡರೂ, ಅಂತಿಮವಾಗಿ ಅದನ್ನು ಪ್ರಕಟಿಸುವಲ್ಲಿ ಅವರು ಆಸಕ್ತಿ ತಾಳಲಿಲ್ಲ. ಹಾಗಾಗಿ ಬೇರೊಬ್ಬ ಪ್ರಕಾಶಕರನ್ನು ಹುಡುಕುವುದು ಅಗತ್ಯವಾಯಿತು. ಶಾಂಬಲಾ ಅವರನ್ನು ಪರಿಗಣಿಸಿದವಾದರೂ, ಅದು ಸಾಧ್ಯವಾಗುವಂತಹ ಆಯ್ಕೆಯಾಗಿರಲಿಲ್ಲ. ಈ ಮಧ್ಯೆ ಒಂದಿಷ್ಟು ಸಂಶೋಧನೆಯ ನಂತರ ಡಾ. ಸ್ಟೇಫನ್‌ಸಿ ಮತ್ತು ಜೇನೆಟ್ ವಾಕರ್, 'ಸ್ಟೇಟ್ ಯುನಿವರ್ಸಿಟಿ ಆಫ್

---

* ಬೋಸ್ಟನ್ನಿನ ಭಕ್ತ

ನ್ಯೂಯಾರ್ಕ್' (SUNY) ಅನ್ನು ಸೂಚಿಸಿದರು. ಆದ್ದರಿಂದ ನಾವು ಆ ದಿಕ್ಕಿನಲ್ಲಿ ಪ್ರಯತ್ನಿಸಲು ನಿರ್ಧರಿಸಿದೆವು. ಜೇನೆಟ್ ಅವರು ಬೇರೆ ಪ್ರಕಾಶಕರ ಸಾಧ್ಯತೆಗಳನ್ನೂ ಪರಿಗಣಿಸಿದ್ದರು.

ಸ್ವಾಮಿ ರಂಗನಾಥಾನಂದರು ಬಹಳ ಸಹಕರಿಸಿದರು. ಕೃತಿಯ ಮೊದಲ ಆವೃತ್ತಿಯಲ್ಲಿ ಮಹತ್ವದ ಬದಲಾವಣೆಗಳಿಗೆ ಅವರು ತಮ್ಮ ಒಪ್ಪಿಗೆ ನೀಡಿದರು. ಕೆಲವು ಸಂಸ್ಕೃತದಲ್ಲಿನ ಅಭಿವ್ಯಕ್ತಿಗಳನ್ನು ಬಿಡಲಾಯಿತು. *ಮಾನವ ಶಕ್ತಿ ಮೂಲಗಳ ವಿಜ್ಞಾನ (The Science of Human Energy Resources)*ವನ್ನು ಕೈಬಿಡುವಂತೆ ಸೂಚಿಸಲಾಯಿತು. ಅದಕ್ಕೆ ಬದಲಾಗಿ ಅವರು, ಪ್ರಜ್ಞೆ ಅಥವಾ ಅರಿವಿನ ಬಗೆಗಿನ ತಮ್ಮ ಎರಡು ಪ್ರಬಂಧಗಳನ್ನು ಸೇರಿಸಿದರು. ಇವು ಹೆಚ್ಚು ಪ್ರಸ್ತುತ ವಿಷಯಗಳಾಗಿದ್ದುವು.

೧೯೮೫ ರಲ್ಲಿ ನಾವು ಹಸ್ತಪ್ರತಿಯನ್ನು SUNYಗೆ ಕಳಿಸಿದೆವು. SUNYಯಲ್ಲಿನ ಸಂಪಾದಕರಾದ ಮಿ. ಈಸ್ಟ್‌ಮನ್‌ರು ಹೀಗೆ ಬರೆದರು: "....ನಮ್ಮ ಅಭಿಪ್ರಾಯದಲ್ಲಿ, ಸಂಪಾದನೆಯ ನಂತರ, ಇದು ಶಾಶ್ವತ ಮೌಲ್ಯವಿರುವ ಗ್ರಂಥವಾಗುವ ಸಾಮರ್ಥ್ಯ ಪಡೆದಿದೆ."

ಗ್ರಂಥವನ್ನು ವೈಜ್ಞಾನಿಕವಾಗಿ ಅದ್ಯತನಗೊಳಿಸಬೇಕಾಗಿತ್ತು. ಅದನ್ನು ಸ್ವಾಮಿ ರಂಗನಾಥಾನಂದರು ಮಾಡಿದರು. ೧೯೮೯ರಲ್ಲಿ ಗ್ರಂಥವನ್ನು ಮತ್ತೆ SUNYಗೆ ಒಪ್ಪಿಸಲಾಯಿತು ಮತ್ತು ಸೆಪ್ಟಂಬರ್‌ನಲ್ಲಿ ಅದು ಸ್ವೀಕೃತವಾಯಿತು. ೧೯೭೭ರಲ್ಲಿ ಪ್ರಾರಂಭವಾದ ಪಯಣ ೧೯೮೯ರಲ್ಲಿ ಮುಕ್ತಾಯವಾಯಿತು. ಎರಡು ವರ್ಷಗಳ ನಂತರ ೧೯೯೧ರಲ್ಲಿ *Human Being in Depth* ಎಂಬ ಶೀರ್ಷಿಕೆಯಲ್ಲಿ ಅದು ಪ್ರಕಟಗೊಂಡಿತು.

ಮೂವತ್ತೈದು ವರ್ಷಗಳ ಅವಧಿಯಲ್ಲಿ, ರಾಮಕೃಷ್ಣ ಮಿಷನ್ನಿನ ಸ್ವಾಮಿಯೊಬ್ಬರಿಂದ ರಚಿಸಲ್ಪಟ್ಟ ಗ್ರಂಥವೊಂದು ಇಲ್ಲಿ ಪ್ರಕಟಣೆಗೊಂಡಿರುವುದು ಇದೇ ಪ್ರಪ್ರಥಮ ಎಂದು ನನಗೆ ಹೇಳಿದ್ದು ಡಾ. ಜೇನೆಟ್ ವಾಕರ್ ಎಂದು ನನ್ನ ನಂಬಿಕೆ.

ತಮ್ಮ ಗ್ರಂಥದಲ್ಲಿ ಬದಲಾವಣೆಗಳಿಗೆ ಸ್ವಾಮಿ ರಂಗನಾಥಾನಂದರು ವಿಶಾಲ ಹೃದಯದಿಂದ ಸಮ್ಮತಿಸಿದರು. ಜೊತೆಗೆ ಅವರ ಸ್ನೇಹ ಮತ್ತು ಪ್ರೀತಿಯನ್ನು ಎಲ್ಲರೂ ಯಾವಾಗಲೂ ಪಡೆದರು. ಅನೇಕ ವಿಧಗಳಲ್ಲಿ ಅವರು ನನ್ನ ಬಗೆಗೆ ಉದಾರಿಗಳಾಗಿದ್ದರು. ಒಮ್ಮೆ ಸರಸ್ವತಿಯ ಸಣ್ಣ ವಿಗ್ರಹವನ್ನು ನನಗೆ ಕೊಡುಗೆಯಾಗಿ ನೀಡಿದ್ದರು. ಮತ್ತು ತಮ್ಮ ಪುಸ್ತಕದ ಬಗೆಗೆ ಮಾತನಾಡುವಾಗಲೆಲ್ಲಾ 'ನಮ್ಮ ಪುಸ್ತಕ' ಎಂದೇ ಹೇಳುತ್ತಿದ್ದರು. ಇದು ನಿಜವಾಗಿಯೂ ಅಸಾಮಾನ್ಯ ಸಂಗತಿ.

* * * *

# ೧೨೧. ಆತ್ಮಸಂಯಮದ ಅತ್ಯದ್ಭುತ ಆಧ್ಯಾತ್ಮಿಕ ಶಕ್ತಿ

–ಸ್ಟೀಫನ್ ಎಫ್. ವಾಕರ್*

ಸ್ವಾಮಿ ರಂಗನಾಥಾನಂದರು ಮತ್ತು ನನ್ನ ಗುರುಗಳಾದ ಬೋಸ್ಟನ್‌ನ ರಾಮಕೃಷ್ಣ ವೇದಾಂತ ಸೊಸೈಟಿಯ, ಸರ್ವಗತಾನಂದರು ಅತ್ಯಂತ ಶ್ರೇಷ್ಠ ಸ್ನೇಹಿತರಾಗಿದ್ದರು. ೧೯೬೦ರ ಕಡೆಯ ಭಾಗ ಹಾಗೂ ೧೯೭೦ರಲ್ಲಿ, ಸ್ವಾಮಿ ರಂಗನಾಥಾನಂದರೊಡನೆ ಭೇಟಿಯಾಗಲು ನನಗೆ ಸಾಧ್ಯವಾದುದಕ್ಕಾಗಿ ನಾನು ಇವರಿಬ್ಬರ ಸ್ನೇಹಕ್ಕೆ ಕೃತಜ್ಞನಾಗಿದ್ದೇನೆ. ೧೬೨೦ರಲ್ಲಿ, ಉತ್ತರ ಅಮೆರಿಕಾದಲ್ಲಿ ಪ್ರಥಮವಾಗಿ ಶಾಶ್ವತವಾದ ಆಂಗ್ಲ ವಸಾಹತು ಸ್ಥಾಪಿಸಲ್ಪಟ್ಟ, ಪ್ಲಿಮೌತ್‌ನ ಸಮುದ್ರತೀರದಿಂದ, ಕೆಲವು ಮೈಲಿಗಳ ದೂರದ ಮಾರ್ಷ್‌ಫೀಲ್ಡ್‌ನಲ್ಲಿನ ವೇದಾಂತ ಸೊಸೈಟಿಯ, ಬೇಸಿಗೆ ವಿಶ್ರಾಮಧಾಮದ ಶಾರದಾ ಆಶ್ರಮವು, ಆಧ್ಯಾತ್ಮಿಕ ವಾತಾವರಣವನ್ನೂ ಮತ್ತು ನಗರದ ಬಿಸಿಲು ಸೆಖೆಗಳಿಂದ, ಬಿಡುಗಡೆಯ ಸ್ವಾಗತವನ್ನು ನೀಡುತ್ತಿತ್ತು. ಭಕ್ತರಿಗೆ ಮತ್ತು ಸಂದರ್ಶಕರಿಗಾಗಿ ನಿರ್ಮಿಸಿದ್ದ ಅತ್ಯಂತ ಸರಳವಾದ ಬೇಸಿಗೆ ಕುಟೀರಗಳು ಒದಗಿಸಿದ್ದ ಕೋಣೆಗಳಲ್ಲೊಂದರಲ್ಲಿ, ಸ್ವಾಮಿ ರಂಗನಾಥಾನಂದರು ಇಲ್ಲಿಗೆ ಬಂದಾಗ ತಮ್ಮ ಸೋದರ ಸನ್ಯಾಸಿಗಳೊಡನೆ, ತೆರೆಗಳಿಂದಾವೃತವಾಗಿದ್ದ ಮುಖಮಂಟಪದಲ್ಲಿ ಸಂವಾದಿಸುತ್ತಿದ್ದರು.

೧೯೬೯, ಜುಲೈ ೨೧ರಂದು ಚಂದ್ರನ ಮೇಲ್ಮೈನ ಮೇಲೆ, ಪ್ರಥಮವಾಗಿ ಮಾನವರು ಓಡಾಡುವುದನ್ನು, ಈ ಇಬ್ಬರು ಸ್ವಾಮಿಗಳೂ, ಚಿಕ್ಕದೊಂದು ಕಪ್ಪು–ಬಿಳುಪು ದೂರದರ್ಶನದ ತೆರೆಯ ಮೇಲೆ ವೀಕ್ಷಿಸುತ್ತಿದ್ದಾಗ, ಬೋಸ್ಟನ್ ಮತ್ತು ಪ್ರಾವಿಡೆನ್ಸ್ ಕೇಂದ್ರದ ಇತರ ಭಕ್ತರೊಡನೆ ನಾನು ಕೂಡಾ ಅಲ್ಲಿದ್ದೆ. ಆದರೆ, ನನ್ನ ಪರಿಗಣನೆಯಲ್ಲಿ ಚಂದ್ರನ ಮೇಲಿನ ನಡಿಗೆಯು ತೀರಾ ಕ್ಷುಲ್ಲಕ ಘಟನೆಯಾಗಿತ್ತು. ಮೆಸಾಚಸೆಟ್ಸ್‌ನ ಆ ಕಾಡುಗಳಲ್ಲಿ ಉಪನಿಷತ್ ಕಾಲದ, ಅರಣ್ಯಗಳಲ್ಲಿನ ಆಶ್ರಮದ ವಾತಾವರಣವನ್ನು ಮರುಸೃಷ್ಟಿಸಿದಂತಹ ಅದ್ಭುತವಾದ ಆಧ್ಯಾತ್ಮಿಕ ಚರ್ಚೆಗಳು ಮತ್ತು ಸಂವಾದಗಳು ನನ್ನ ಮನಸ್ಸನ್ನು ಪರವಶಗೊಳಿಸಿದವು ಮತ್ತು ಆ ನೆನಪು ಎಂದೆಂದಿಗೂ ನನ್ನೊಡನೆ ಇರುತ್ತದೆ.

ಮಾರ್ಷ್‌ಫೀಲ್ಡ್‌ನ ಸಮೀಪದಲ್ಲಿ ಆದರೆ ಬೋಸ್ಟನ್‌ನ ಪಶ್ಚಿಮದಿಂದ ಮತ್ತು ತೀರದಿಂದ ದೂರದಲ್ಲಿ, ಹೆನ್ರಿ ಡೇವಿಡ್ ಥೋರೋನ, ಉದ್ದೇಶಪೂರ್ಣ ಜೀವನದ ಪ್ರಯೋಗ ತಾಣ ಎಂದು ಪ್ರಸಿದ್ಧವಾದ ವಾಲ್ಡನ್ ಕೊಳವಿತ್ತು. ಇದು ಅಮೆರಿಕಾದಲ್ಲಿ ವಾನಪ್ರಸ್ಥ ಆಶ್ರಮದ ಧ್ಯಾನಪೂರ್ಣ ಪ್ರಶಾಂತತೆಯನ್ನು (ಥೋರೋ ಹೇಳಿದ್ದಂತೆ ವನಗಳಲ್ಲಿ ವಾಸ ಮಾಡುವುದು) ಮರುಸೃಷ್ಟಿಸುವ ಥೋರೋನ ಅಭಿಲಾಷೆ–ಮಹತ್ವಾಕಾಂಕ್ಷೆಯ ಫಲವಾಗಿದ್ದು, ಅಂದಿನಿಂದಲೂ ವಾಲ್ಡನ್ ಕೊಳವು, ಅವನ ಅಭಿಮಾನಿಗಳ ಯಾತ್ರಾಸ್ಥಳವಾಗಿತ್ತು. ಆದರೆ, ಈಗ ಇಲ್ಲಿ ಮಾರ್ಷ್‌ಫೀಲ್ಡಿನಲ್ಲಿ, ಥೋರೋ ಭೇಟಿ ಮಾಡಲು ಇಷ್ಟಪಡಬಹುದಾಗಿದ್ದ ಇಬ್ಬರು ಆಧ್ಯಾತ್ಮಿಕ ದೈತ್ಯರಿರುವಂತಹ ವರ್ತಮಾನ ಕಾಲದ ಆಶ್ರಮದೊಂದು ರೂಪುಗೊಂಡಿತ್ತು.

೧೯೬೦ ಮತ್ತು ೧೯೭೦ರಲ್ಲಿ ಬೋಸ್ಟನ್ ಮತ್ತು ಕೇಂಬ್ರಿಡ್ಜ್‌ಗೆ ಸಮೀಪವಿರುವ ಹಾರ್ವರ್ಡ್ ವಿಶ್ವವಿದ್ಯಾಲಯಕ್ಕೆ ಭೇಟಿಯಿತ್ತ ಅನೇಕ ಸಂದರ್ಭಗಳಲ್ಲಿ, ಸ್ವಾಮಿ ರಂಗನಾಥಾನಂದರು, ವಿವೇಕಾನಂದರ ಮಾರ್ಗವನ್ನನುಸರಿಸುವ

---

* ತೌಲನಿಕ ಸಾಹಿತ್ಯ ಪ್ರಾಧ್ಯಾಪಕರು, ರುಟ್‌ಗೆರ್ಸ್ ವಿಶ್ವವಿದ್ಯಾಲಯ, ಅಮೆರಿಕಾ ಸಂಯುಕ್ತ ಸಂಸ್ಥಾನ.

ಬಗೆ ಬಹಳ ಜಾಗೃತರಾಗಿದ್ದರೆಂದು ನಾನು ನಂಬುತ್ತೇನೆ. ೧೮೯೬ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದ ಬೌದ್ಧಿಕ ಸಮುದಾಯಕ್ಕೆ ವಿವೇಕಾನಂದರು ವೇದಾಂತದ ಬಗೆಗೆ ಉಪನ್ಯಾಸ ನೀಡಿದ್ದ ಕೊಠಡಿಯಲ್ಲಿಯೇ ಸ್ವಾಮಿ ರಂಗನಾಥಾನಂದರು ಉಪನ್ಯಾಸ ನೀಡಿದ್ದನ್ನು ಒಂದೇ ಒಂದು ಸಾರಿ ನಾನು ಕೇಳಿದ್ದೇನೆ. ಇತಿಹಾಸದ ಆ ಅದ್ಭುತ ಕ್ಷಣದ ಭಾವೋದ್ವಿಗ್ನತೆಯನ್ನು ಸ್ವಲ್ಪಮಟ್ಟಿಗಾದರೂ ಸ್ವಾಮಿಗಳು ಖಂಡಿತ ಮರುಸೃಷ್ಟಿಸಿದರು. ಆದರೆ, ಮತ್ತೊಂದು ಸಂದರ್ಭವು ಬಹುತೇಕ ವೈಯಕ್ತಿಕ ನೆನಪಿಗೆ ಸಂಬಂಧಿಸಿದೆ. ೧೯೬೧ರ ಚಳಿಗಾಲ, ಮಳೆಗಾಲದ ನಡುವೆ, ನ್ಯೂಜೆರ್ಸಿಯ ರುಟ್‌ಗರ್ಸ್ ವಿಶ್ವವಿದ್ಯಾಲಯದಲ್ಲಿ ನಮ್ಮ ಅಧಿಕಾರಗಳನ್ನು (ಹುದ್ದೆಗಳನ್ನು) ವಹಿಸಿಕೊಳ್ಳಲು, ಸ್ನಾತಕ ವಿದ್ಯಾರ್ಥಿಗಳಾಗಿ ಅಧ್ಯಯನ ಮಾಡಿದ್ದ ಹಾರ್ವರ್ಡ್‌ನಿಂದ ನಾನು ನನ್ನ ನನ್ನ ಪತ್ನಿ ಆಗ ತಾನೇ ಹೊರಟು ಬಂದಿದ್ದೆವು. ನನ್ನ ಗುರುಗಳಿಂದ ಮತ್ತು ಆರು ವರ್ಷಗಳಿಂದ ನನ್ನನ್ನು ರೂಪಿಸಿದ್ದ ನನ್ನ ಆಧ್ಯಾತ್ಮಿಕ ನೆಲೆಯಾಗಿದ್ದ ಕೇಂದ್ರದಿಂದ ಸುಮಾರು ಇನ್ನೂರು ಮೈಲಿಗಳಷ್ಟು ದೂರ ಬೇರ್ಪಟ್ಟು ನನ್ನ ಶಿಕ್ಷಕ ವೃತ್ತಿಯನ್ನು ಸ್ವಲ್ಪ ಆತಂಕದಿಂದಲೇ ಎದುರಿಸಿದ್ದು, ನಾನು ಸಂಪೂರ್ಣವಾಗಿ ಧೃತಿಗೆಟ್ಟು, ದಿಕ್ಕೆಟ್ಟವನಂತಾಗಿದ್ದೆ. ಮಹಾಭಾಗ್ಯವೆಂಬಂತೆ, ಅದೃಷ್ಟವಶಾತ್, ಅದೇ ಸಮಯದಲ್ಲಿ ಸ್ವಾಮಿ ರಂಗನಾಥಾನಂದರು, ಟೆಂಪಲ್ ಆಫ್ ವಿಸ್‌ಡಮ್‌ನ ಅತಿಥಿಗಳಾಗಿ ಸಮೀಪದ ಪ್ರಿನ್ಸ್‌ಟನ್‌ಗೆ ಭೇಟಿ ನೀಡಿದರು. ನ್ಯೂ ಬ್ರನ್ಸ್‌ವಿಕ್ ಮತ್ತು ಪ್ರಿನ್ಸ್‌ಟನ್ ನಡುವೆ ಇರುವ ೧ನೆಯ ಮಾರ್ಗದ ಹಾದಿಬದಿಯ ಹೋಟೆಲ್‌ನ ಕೊಠಡಿಯಲ್ಲಿ ಅವರು ನಮ್ಮಿಬ್ಬರೊಡನೆಯೂ ಮಾತನಾಡಿದರು. ಅವರು ಹೇಳಿದ ಮಾತುಗಳು, ಅದಕ್ಕಿಂತಲೂ ಹೆಚ್ಚಾಗಿ ಅವರ ಸಾನ್ನಿಧ್ಯವು, ಹೊಸ ಜೀವನವನ್ನು ಮತ್ತು ಹೊಸ ಅಧ್ಯಾತ್ಮಿಕ ಸಂಘರ್ಷವನ್ನು ಎದುರಿಸಲು ನನಗೆ ಧೈರ್ಯ ಹಾಗೂ ಚೈತನ್ಯಗಳನ್ನು ನೀಡಿತು. ನಂತರದ ವರ್ಷಗಳಲ್ಲಿ ನಾನು ಆ ಮೋಟೆಲ್ ಮುಂದೆ ನನ್ನ ವಾಹನವನ್ನು ಚಾಲಿಸಿಕೊಂಡು ಹೋಗುವಾಗಲೆಲ್ಲ, ಆ ದಿನಗಳ ಮತ್ತು ಆ ಕ್ಷಣಗಳ ಬಗೆಗೆ ಆಲೋಚಿಸುತ್ತಿದ್ದೆ.

ಸ್ವಾಮಿ ರಂಗನಾಥಾನಂದರು ವಿಶ್ವಾದ್ಯಂತ ನೀಡುತ್ತಿದ್ದ ಪ್ರವಚನಗಳು ಅನೇಕ ವಿಭಿನ್ನ ದೇಶ ಮತ್ತು ಸಂಸ್ಕೃತಿಗಳ ಅನೇಕ ಸಾವಿರ ಜನರಿಗೆ ಆಧ್ಯಾತ್ಮಿಕ ಸ್ಫೂರ್ತಿ ನೀಡಿದ್ದುವು ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ನೆದರ್‌ಲ್ಯಾಂಡ್ಸ್‌ನ ಒಂದು ಸಂದರ್ಭ ನನ್ನ ನೆನಪನಲ್ಲಿ ಉಳಿದಿದೆ. ನಾರ್ಥ್‌ಸೀ(North Sea)ಯ ಬಿರುಗಾಳಿಯ ಪ್ರವಾಹಗಳಿಂದ, ತಗ್ಗುಪ್ರದೇಶದಲ್ಲಿರುವ ಹಾಲೆಂಡನ್ನು ಸಂರಕ್ಷಿಸಲು ವಿನ್ಯಾಸ ಗೊಳಿಸಲಾಗಿರುವ ಭಾರೀ ತಾಂತ್ರಿಕ ಪವಾಡವಾದ ಜ್ಯೂಡರ್‌ಜೀ ಅಣೆಕಟ್ಟನ್ನು (Zuiderzee Barrier Dam) ವೀಕ್ಷಿಸಲೆಂದು ನಮ್ಮಲ್ಲಿ ಕೆಲವರನ್ನು ಕರೆದುಕೊಂಡು ಹೋಗಲು ಸ್ವಾಮಿರಂಗನಾಥಾನಂದರು ಅತ್ಯಂತ ಆಸಕ್ತರಾಗಿದ್ದುದರ ಕಾರಣಗಳು ಮೊದಲು ನನ್ನಿಂದ ತಪ್ಪಿಸಿಕೊಂಡಿದ್ದವು. ಆ ದೃಶ್ಯ ಬಹಳ ಪ್ರಭಾವಶಾಲಿಯಾಗಿತ್ತು. ಆದರೆ ರಂಗನಾಥಾನಂದರೇಕೆ ಅದನ್ನು ನಮಗೆ ತೋರಿಸಲು ಅಷ್ಟೊಂದು ದೃಢನಿರ್ಧಾರ ಮಾಡಿದರು? ನಿಜವಾಗಿಯೂ, ಸ್ವಾಮೀಜಿಯವರು ಆಧುನಿಕ ವಿಜ್ಞಾನದಲ್ಲಿ ಬಹಳ ಆಸಕ್ತರಾಗಿದ್ದರು ಹಾಗೂ ಧರ್ಮ ಮತ್ತು ಆಧ್ಯಾತ್ಮಿಕತೆಯಲ್ಲಿ ಆಧುನಿಕ ಕಾಲದಲ್ಲಿ ವೈಜ್ಞಾನಿಕ ಮನೋಭಾವದ ಪ್ರವೇಶದ ಅಗತ್ಯದ ಬಗೆಗೆ ಅನೇಕ ಬಾರಿ ಬರೆದಿರುವುದಲ್ಲದೇ ನಿರರ್ಗಳವಾಗಿ ಮಾತನಾಡಿದ್ದರು. ಆದರೆ ಇದರ ಅಂತರಾರ್ಥ ನನಗೆ ತಿಳಿದಿದ್ದು ಬಹಳ ದಿನಗಳ ನಂತರ. ೧೯೯೪ರ ಡಿಸೆಂಬರ್‌ನಲ್ಲಿ ಸ್ವಾಮಿ ರಂಗನಾಥಾನಂದರ ಜನ್ಮದಿನದ ಸಂದರ್ಭದಲ್ಲಿ ಹೈದರಾಬಾದಿನಲ್ಲಿ ನಾವು ಅವರೊಡನೆ ಭೇಟಿಯಾದಾಗ, ಅವರು ನನ್ನ ಪತ್ನಿ ಹಾಗೂ ನನಗೆ ಒಂದು ಸುಂದರವಾದ ಮರದ ಕೆತ್ತನೆಯ ಚಿತ್ರವನ್ನು (inlay work) ಅನುಗ್ರಹಿಸಿದರು. (ನಾವು ಅದನ್ನು ಪೂಜಾ ಕೋಣೆಯಲ್ಲಿ ಇಟ್ಟಿದ್ದೇವೆ.) ಕುರುಕ್ಷೇತ್ರದಲ್ಲಿ ಪರಸ್ಪರ ಹೋರಾಡಲು, ಅಭಿಮುಖರಾಗಿ ನಿಂತಿರುವ ಎರಡು ಸೈನ್ಯಗಳ ನಡುವೆ, ಶ್ರೀಕೃಷ್ಣನು ಅರ್ಜುನನ ರಥದ ಕುದುರೆಗಳನ್ನು ಅತ್ಯಂತ ಸಮರ್ಥವಾಗಿ ನಿಗ್ರಹಿಸುತ್ತಿರುವ ಚಿತ್ರವಾಗಿತ್ತು ಅದು. ಆ ಚಿತ್ರದಿಂದ ನನಗೆ

ಉತ್ತರ ದೊರೆಯಿತು. ಅಂದರೆ, ಎರಡೂ ಸಂದರ್ಭಗಳಲ್ಲಿ ಈ ಪ್ರತಿಮೆಯೂ ಸಾಂಕೇತಿಕವಾಗಿ ಯೋಗದಲ್ಲಿ ಬೋಧಿಸುವಂತಹ ಮನೋನಿಗ್ರಹವನ್ನು ಪ್ರತಿನಿಧಿಸುತ್ತದೆ. (ನಾರ್ಸಿಸ್ ಮತ್ತು ರಥದ ಕುದುರೆಗಳು) ಸ್ವಾಮಿ ರಂಗನಾಥಾನಂದರು ತಮ್ಮ ಜೀವನದಲ್ಲಿಯೇ ದೃಷ್ಟಾಂತೀಕರಿಸಿದಂತಹ, ಅತ್ಯದ್ಭುತವಾದ ಆಧ್ಯಾತ್ಮಿಕ ಶಕ್ತಿಯ ಮನೋನಿಗ್ರಹ ಇದು.

* * * *

# ೧೨೨. ಅವರ ದೃಷ್ಟಿಯಲ್ಲಿ ಪ್ರತಿಯೊಬ್ಬನೂ ದೈವಿಕವಾಗಿದ್ದನು

**–ಮಾಲಿನೀ ಮೆನನ್***

೧೯೫೫–೬೨ರ ಅವಧಿಯಲ್ಲಿ ದಿಲ್ಲಿಯ ರಾಮಕೃಷ್ಣ ಮಿಷನ್‌ನಲ್ಲಿ ನಾನು ಭಾನುವಾರಗಳಂದು ಸ್ವಾಮಿ ರಂಗನಾಥಾನಂದರ *ಗೀತೆಯ* ತರಗತಿಗಳಲ್ಲಿ ಉಪಸ್ಥಿತಳಿರುತ್ತಿದ್ದೆ. ಈ ಆಧುನಿಕ ಯುಗಕ್ಕೆ ಅಗತ್ಯವಾದಂತಹ *ಗೀತೆಯ* ಅತ್ಯಂತ ಆಧುನಿಕ ವ್ಯಾಖ್ಯಾನವಾಗಿತ್ತು ಅದು. ಇದರಿಂದ ನಾನು ಹೆಚ್ಚು ಪ್ರೇರಣೆ ಪಡೆದೆ ಮತ್ತು ಇದು ನನ್ನ ಜೀವನವನ್ನು ಉತ್ತಮಗೊಳಿಸಿತು, ಸಮೃದ್ಧಗೊಳಿಸಿತು.

ಒಂದು ದಿನ ನಾನು ಹಲವು ಪ್ರಶ್ನೆಗಳನ್ನು ಕೇಳುವುದಿತ್ತು. ನಾನು ಮಹಾರಾಜ್ ಅವರ ಬಳಿಗೆ ಹೋದೆ. ಆ ಅವಧಿಯಲ್ಲಿ ಅವರು ದಿಲ್ಲಿ ಕೇಂದ್ರದ ಮುಖ್ಯಸ್ಥರಾಗಿದ್ದರು. ಹಾಗೂ ಅತ್ಯಂತ ಹೆಚ್ಚು ಕಾರ್ಯನಿರತರಾಗಿದ್ದರು, ಆದರೂ ಸ್ವಲ್ಪವೂ ಅವಸರವಿಲ್ಲವೇನೋ ಎನ್ನುವಂತೆ ನನ್ನ ಎಲ್ಲ ಪ್ರಶ್ನೆಗಳಿಗೆ ತಾಳ್ಮೆಯಿಂದ ಉತ್ತರಿಸಿದರು.

೧೯೬೦ರ ಮೊದಲ ಭಾಗದಲ್ಲಿ ಹೊಸ ದಿಲ್ಲಿಯ ರಾಮಕೃಷ್ಣ ಮಿಷನ್‌ನಲ್ಲಿ ಸ್ವಾಮಿ ರಂಗನಾಥಾನಂದರ *ಗೀತೆಯ* ತರಗತಿಗಳು ಅತ್ಯಂತ ಜನಪ್ರಿಯವಾಗಿದ್ದು, ಆಶ್ರಮದ ಅತ್ಯಂತ ವಿಶಾಲವಾಗಿದ್ದ ಸಭಾಂಗಣವು ತುಂಬಿ ಹರಿಯುವಂತಿದ್ದು, ಅನೇಕ ಜನರು ಹೊರಾಂಗಣದ ಹುಲ್ಲುಹಾಸಿನ ಮೇಲೆ ಕುಳಿತುಕೊಳ್ಳಬೇಕಾಗಿದ್ದು, ಅಲ್ಲಿ ಧ್ವನಿವರ್ಧಕಗಳನ್ನು ಅಳವಡಿಸಿದ್ದರು. ಐ.ಎ.ಸ್, ಐ.ಪಿ.ಎಸ್. ಅಧಿಕಾರಿಗಳು ಮಂತ್ರಿಗಳು, ಶ್ರೀಮಂತರು ಮುಂತಾಗಿ ಎಲ್ಲ ವರ್ಗಗಳ ಜನರೂ ಪ್ರವಚನಗಳಿಗೆ ಹಾಜರಿರುತ್ತಿದ್ದರು. ಆದರೆ ಸ್ವಾಮೀಜಿಯವರ ನಡೆ ನುಡಿ, ಪ್ರತಿಯೊಬ್ಬರ ಬಗೆಗೂ ಸಂಪೂರ್ಣವಾಗಿ ಒಂದೇ ರೀತಿಯಲ್ಲಿರುತ್ತಿತ್ತು. ಅವರು ಸ್ನೇಹಶೀಲರೂ, ಸಂಘಜೀವಿಯೂ ಆಗಿದ್ದು, ಜನರನ್ನು ಬಹಳ ಇಷ್ಟಪಡುತ್ತಿದ್ದು, ತಮ್ಮದೇ ರೀತಿಯಲ್ಲಿ ಮಹಾನ್ ವ್ಯಕ್ತಿಯಾಗಿದ್ದರು. ಅವರ ಧ್ವನಿಯೂ ಬಹಳ ಮಧುರವಾಗಿತ್ತು. ಅವರು ಸಾಮಾನ್ಯವಾಗಿ ತಮ್ಮ ಪ್ರವಚನವನ್ನು ಆರಂಭಿಸುತ್ತಿದ್ದ 'ಸ್ನೇಹಿತರೇ' ಎನ್ನುವ ಪದವನ್ನು ಕೇಳಿದ ಕೂಡಲೇ, ಕೇಳುಗನ ಮನಸ್ಸು ಶಾಂತವಾಗಿ, ಏಕಾಗ್ರತೆಯನ್ನು ಪಡೆಯುತ್ತಿತ್ತು. ಅವರು ನಾಟಕೀಯವಾಗಿ ಭಾಷಣಮಾಡುವವರಾಗಿರಲಿಲ್ಲ ಮತ್ತು ಅಭಿನಯಿಸಿ ತೋರಿಸುತ್ತಿರಲೂ ಇಲ್ಲ. ಆದರೆ ಪದ್ಮಾಸನಹಾಕಿ ಸಂಪೂರ್ಣ ಸಮಾಧಾನಚಿತ್ತರಾಗಿ, ನೇರವಾಗಿ ಕೂಡುತ್ತಿದ್ದರು. ತಮಗೆ ವಿಶೇಷವಾಗಿ ಮುಖ್ಯ ಎನಿಸಿದ್ದ ವಿಷಯಗಳನ್ನು ಒತ್ತಿ ಹೇಳಲು ಅವರು ತಮ್ಮ ಕೈಗಳನ್ನು ಚಲಿಸುತ್ತಿದ್ದರು.

೧೯೭೧ರಲಿ *ಗೀತೆಯ* ತರಗತಿಗಳನ್ನು ತೆಗೆದುಕೊಳ್ಳುವುದಕ್ಕಾಗಿ ಸ್ವಾಮಿ ರಂಗನಾಥಾನಂದರು ನಮ್ಮ ಮನೆಗೆ ಬಂದರು. ಆ ಸಮಯದಲ್ಲಿ ನನ್ನ ಪತಿಯು ವಿದೇಶಾಂಗ ವ್ಯವಹಾರ ಖಾತೆಯ (ಮಂತ್ರಿ ಮಂಡಲದಲ್ಲಿ) ಹೆಚ್ಚುವರಿ ಕಾರ್ಯದರ್ಶಿಯಾಗಿದ್ದರು. ಸ್ವಾಮಿ ರಂಗನಾಥಾನಂದರು ಯಾವುದೇ ಟಿಪ್ಪಣಿಗಳ ನೆರವಿಲ್ಲದೇ ಸುಮಾರು ತೊಂಬತ್ತು ನಿಮಿಷಗಳ ತನಕ ಪ್ರವಚನ ನೀಡಿದರು. ಉಪನಿಷತ್ತುಗಳು, *ಗೀತೆ*, *ಭಾಗವತ* ಮತ್ತು ಶ್ರುತಿ ಆಗಮಗಳು ಮತ್ತು ಬೇರೆ ಬೇರೆ ಧರ್ಮದ ಪವಿತ್ರ ಗ್ರಂಥಗಳಿಂದ ಅವರು ಸರಾಗವಾಗಿ ಉದ್ಧರಿಸುತ್ತಿದ್ದುದನ್ನು ಕಂಡು ನನಗೆ ಅತ್ಯಾಶ್ಚರ್ಯವಾಗಿತ್ತು. ಪ್ರವಚನದ ನಂತರ ಯಾವುದೇ ರೀತಿಯ ಆಯಾಸವನ್ನು ತೋರದೇ ಅವರು ಲವಲವಿಕೆಯಿಂದಿರುತ್ತಿದ್ದರು. ಅನೇಕ ವಿಷಯಗಳನ್ನು ಚರ್ಚಿಸಲು, ಎಲ್ಲರೂ ಅವರೊಡನೆ ಮಾತನಾಡಲು ಬರುತ್ತಿದ್ದರು. ಪ್ರತಿಯೊಬ್ಬರೊಂದಿಗೂ ಸಂಪೂರ್ಣ ಸಮಾನತೆಯಿಂದ ಪ್ರತಿಕ್ರಿಯಿಸುತ್ತಿದ್ದರು.

---

* ಕೇರಳದ ಓಟ್ಟಪಳಮ್‌ನ ಭಕ್ತೆ.

೧೯೭೦ರಲ್ಲಿ ವೃಂದಾವನದ ರಾಮಕೃಷ್ಣ ಆಶ್ರಮದ ಸುಂದರವಾದ ಹೊಸ ದೇವಸ್ಥಾನವನ್ನು ಸಾರ್ವಜನಿಕ ಉಪಯೋಗಕ್ಕೆ ಸಮರ್ಪಿಸುವ ಸಮಾರಂಭವಿತ್ತು. ಆ ಕಾರ್ಯಕ್ರಮದಲ್ಲಿ ನೂರಾರು ಸನ್ಯಾಸಿಗಳೂ ಮತ್ತು ಭಕ್ತರೂ ಉಪಸ್ಥಿತರಿದ್ದರು. ಸಂನ್ಯಾಸಿಗಳು ಮತ್ತು ಬ್ರಹ್ಮಚಾರಿಗಳಿಂದ ಹೊಸ ದೇವಾಸ್ಥಾನದ ಪ್ರದಕ್ಷಿಣೆ ನಡೆಯುತ್ತಿದ್ದ ಸಮಯದಲ್ಲಿ ಸ್ವಾಮಿ ರಂಗನಾಥಾನಂದರು ತಮ್ಮ ಕೈಗಳನ್ನು ಮೇಲಕ್ಕೆ ಎತ್ತಿ ಯುವ ಸನ್ಯಾಸಿಗಳೊಡನೆ ನರ್ತಿಸುತ್ತಿದ್ದುದು ಕಂಡುಬಂದಿತ್ತು ಮತ್ತು ಅವರು ಭಕ್ತರನ್ನು ಕೂಡ ಗಾಯನದಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುತ್ತಿದ್ದರು. ಭಕ್ತಾದಿಗಳು ಪ್ರಸಾದ ಸ್ವೀಕರಿಸುತ್ತಿದ್ದಾಗ ಸ್ವಾಮೀಜಿಯು ಭಕ್ತರೊಂದಿಗೆ ಪ್ರೀತಿಯಿಂದ ಮಾತನಾಡುತ್ತಾ ಅತ್ತಿಂದಿತ್ತ ಓಡಾಡುತ್ತಿದ್ದರು.

ಸ್ವಾಮೀಜಿಯವರು ಪ್ರತಿಯೊಬ್ಬರ ಬಗೆಗೂ ಎಚ್ಚರವಹಿಸುತ್ತಿದ್ದರು. ಒಮ್ಮೆ ಒಬ್ಬ ಜವಾನನು ಅವರಿಗೆ ಒಂದು ಪತ್ರವನ್ನು ತಂದು ಕೊಟ್ಟು, ಉತ್ತರಕ್ಕಾಗಿ ಕಾಯುತ್ತಿದ್ದ. ಮಹಾರಾಜ್‌ರು ಇದನ್ನು ಥಟ್ಟನೆ ಗಮನಿಸಿದರು ಹಾಗೂ ತಮ್ಮ ಮುಂದೆ ಇದ್ದ ಕುರ್ಚಿಯಲ್ಲಿ ಕುಳಿತುಕೊಳ್ಳುವಂತೆ ಅವನಿಗೆ ಹೇಳಿದರು. ಆ ವ್ಯಕ್ತಿಯ ಮನಸ್ಸು ತುಂಬಿ ಬಂದಿತ್ತು! ಅವನು ಹೇಳಿದ: 'ಎದುರಿನಲ್ಲಿ ನನಗೆ ಕುಳಿತುಕೊಳ್ಳುವಂತೆ ಹೇಳಿದ ಮೊದಲನೆಯ ವ್ಯಕ್ತಿ ನೀವು.' ಅವರ ದೃಷ್ಟಿಯಲ್ಲಿ 'ಎಲ್ಲರೂ ಪವಿತ್ರರೂ ದೈವೀಭವಿಯುಳ್ಳವರೂ ಆಗಿದ್ದರು.'

ಒಮ್ಮೆ ತಿರುವನಂತಪುರದ ಕೆಲವು ಕ್ರೈಸ್ತ ಸನ್ಯಾಸಿನಿಯರು ಮತ್ತು ಬ್ರಹ್ಮಚಾರಿಣಿಯರೊಂದಿಗೆ ನಾನು ಬೇಲೂರಿಗೆ ಹೋದೆ. ಅವರು ಪ್ರತಿಯೊಬ್ಬರನ್ನೂ ನೆನಪಿನಲ್ಲಿಟ್ಟುಕೊಳ್ಳಬಲ್ಲವರಾಗಿದ್ದರು. ಅವರು ನನ್ನನ್ನು ಕರೆದು ಆಶೀರ್ವದಿಸಿದರು. ಅವರು ಬಹಳ ವಿನೋದಶೀಲರಾಗಿದ್ದರು.

ಅವರು ಒಬ್ಬ ಬ್ರಹ್ಮಚಾರಿಣಿಗೆ ಹೇಳಿದರು: "ನನಗೆ ಮಾಡಲು ಸಾಧ್ಯವಿಲ್ಲ, ನನ್ನಿಂದ ಸಾಧ್ಯವಿಲ್ಲ ಎಂದು ಎಂದಿಗೂ ಹೇಳಬೇಡ. ನನ್ನನ್ನೇ ನೋಡು. ಮೈಸೂರಿನ ಆಶ್ರಮದಲ್ಲಿ ನಾನು ಅಡುಗೆಯವನಾಗಿದ್ದೆ." ನನ್ನನ್ನು ಆಶೀರ್ವದಿಸುವಾಗ ಅವರು ಹೇಳಿದ ಮಾತುಗಳು ನನಗೆ ಅತ್ಯಂತ ಸ್ಪಷ್ಟವಾಗಿ ನೆನಪಿವೆ. ನನ್ನ ತಲೆಯ ಮೇಲೆ ತಮ್ಮ ಕೈಯನ್ನು ಇಡುತ್ತಾ ಅವರು ಹೇಳಿದರು: "ಯಾವಾಗಲೂ ಹರ್ಷಚಿತ್ತಳಾಗಿರು, ಮತ್ತು ಜೀವನದ ಬಗೆಗೆ ಸಕಾರಾತ್ಮಕ ಮನೋಭಾವವನ್ನು ಬೆಳೆಸಿಕೊ."

ಈ ಎಲ್ಲ ಘಟನೆಗಳೂ ನನ್ನ ಜೀವನವನ್ನು ಪುಷ್ಟಿಗೊಳಿಸಿ ಸಮೃದ್ಧಗೊಳಿಸಿವೆ. ಅವರನ್ನು ನೋಡಿದಾಗಲೆಲ್ಲಾ ನಾವು ಸಂತೋಷಚಿತ್ತರಾಗುತ್ತಿದ್ದೆವು. ಅವರ ಬಗೆಗೆ ನಾನು ಯಾವಾಗ ಯೋಚಿಸಿದರೂ ನಾನು ಸಂತುಷ್ಟಳಾಗುತ್ತೇನೆ. ಅಂತಹ ಮಹಾನ್ ಆತ್ಮದ ಪರಿಚಯ ಹೊಂದಿ ಅವರನ್ನು ತಿಳಿದಕೊಂಡಿದ್ದು ನಿಜವಾಗಿಯೂ ನನ್ನ ಪಾಲಿಗೆ ಮಹಾಸೌಭಾಗ್ಯ!

* * * *

# ೧೨೩. ಶ್ರೀ ರಾಮಕೃಷ್ಣರ ಒಂದು ಪವಾಡ

–ರಾಕೇಶ್ ಪುರಿ*

ಬಹುಶಃ ೧೯೮೫ರಲ್ಲಿ, ರಾಷ್ಟ್ರೀಯ ಭಾವೈಕ್ಯತೆಕ್ಕಾಗಿ ಇಂದಿರಾ ಗಾಂಧಿ ಪ್ರಶಸ್ತಿಯನ್ನು ಸ್ವಾಮಿ ರಂಗನಾಥಾನಂದರಿಗೆ ನೀಡಿರುವುದರ ಬಗೆಗೆ, ೧೯೮೯ರ ಮೊದಲ ಭಾಗದಲ್ಲಿ ಪ್ರಕಟಣೆ (ಪ್ರಸಾರ) ಮಾಡಿದಾಗ ಬಹುಶಃ ನಾನು ಸ್ವಾಮೀಜಿಯವರ ಬಗೆಗೆ ಕೇಳಿದೆನೆನಿಸುತ್ತೆ. ೧೯೮೫ರಲ್ಲಿ ಚಂಡೀಗಢದ ಕೇಂದ್ರಕ್ಕೆ ಹೋಗಲು ಆರಂಭಿಸಿದ್ದ ನಾನು, ರಾಮಕೃಷ್ಣ ಮಿಷನ್‌ಗೆ ಸಾಕಷ್ಟು ಹೊಸಬನಾಗಿದ್ದುದರಿಂದ, ಒಬ್ಬ ಸನ್ಯಾಸಿಯು ಇಂತಹ ಪ್ರಶಸ್ತಿಯನ್ನು ಏಕೆ ಸ್ವೀಕರಿಸಬೇಕು ಎಂದು ಆಶ್ಚರ್ಯಗೊಂಡಿದ್ದೆ. ೧೯೮೯ರ ಅಕ್ಟೋಬರ್ ೩೧ರಂದು ಹೊಸ ದಿಲ್ಲಿಯ ವಿಜ್ಞಾನ್ ಭವನದಲ್ಲಿ ನಡೆದ ಪ್ರಶಸ್ತಿ ಸಮಾರಂಭದ, ಕೆಲವು ತುಣುಕುಗಳನ್ನು ದೂರದರ್ಶನದಲ್ಲಿ ನೋಡುವ ಅವಕಾಶ ನನಗೆ ಸಿಕ್ಕಿತ್ತು. ಕಾರ್ಯಕ್ರಮದಲ್ಲಿ ಸ್ವಾಮೀಜಿಯವರು ಆಂಗ್ಲ ಭಾಷೆಯಲ್ಲಿ ಆಶ್ಚರ್ಯಕರವೆನ್ನುವಷ್ಟು ಉತ್ತಮವಾಗಿ ಮಾತನಾಡಿದ್ದನ್ನು ನಾನು ಕೇಳಿದೆ. ಅನಂತರ, ಅವರ ಪ್ರಶಸ್ತಿಸ್ವೀಕಾರ ಭಾಷಣವನ್ನು ಓದುವ ಅವಕಾಶವು ನನಗೆ ಸಿಕ್ಕಿತು. ಹಾಗಾಗಿ, ಸ್ವಾಮೀಜಿಯವರು ರಾಷ್ಟ್ರೀಯ ಏಕತೆಯ ಬಗೆಗೆ ಅತ್ಯಂತ ಆಸಕ್ತರಾಗಿದ್ದುದರಿಂದ ಈ ಪ್ರಶಸ್ತಿಯನ್ನು ಅವರು ಒಪ್ಪಿಕೊಂಡರೆಂದು ನಾನು ಅರಿತುಕೊಂಡೆ. ಅನೇಕ ಬಾರಿ ಅವರು ಅತ್ಯುನ್ನತ ನಾಗರಿಕ ಪ್ರಶಸ್ತಿಗಳನ್ನು ನಿರಾಕರಿಸಿದ್ದರೆಂಬುದು ನನಗೆ ನಂತರ ತಿಳಿಯಿತು! ಅವರ ವ್ಯಕ್ತಿತ್ವ, ಆಲೋಚನೆಗಳು ಮತ್ತು ದೂರದರ್ಶನದ ಮೂಲಕ ಮಾಡಿದ ಪ್ರತಿಪಾದನೆಗಳು, ನಿರೂಪಣೆಗಳು ನನ್ನನ್ನು ಬಹಳ ಪ್ರಭಾವಿಸಿದವು.

೧೯೮೭ರಲ್ಲಿ ದಿಲ್ಲಿಯಲ್ಲಿ ಅವರು ಅಲ್ಲಿ ಇದ್ದಾಗ ನಾನು ಮಹಾರಾಜ್‌ರನ್ನು ಭೇಟಿಮಾಡಲು ಸಾಧ್ಯವಾಯಿತು. ಅವರು ಕುರ್ಚಿಯ ಮೇಲೆ ಕುಳಿತಿದ್ದಾಗ ನಾನು ಅವರಿಗೆ ನಮಸ್ಕರಿಸಿದೆ. ಸ್ವಾಮೀಜಿಯವರು ಪ್ರಾಜ್ಞರೂ, ಉದಾರಿಗಳೂ, ವಿನಯಶೀಲರೂ, ವಿಶಾಲ ಹೃದಯಿಗಳೂ ಆಗಿರುವುದನ್ನು ಅರಿಯಲು ಸಾಧ್ಯವಾಗಿ, ಈ ಖಾಸಗಿ ಭೇಟಿಯು ನನ್ನ ಮನಸ್ಸಿನ ಮೇಲೆ ಮಹತ್ತರ ಪರಿಣಾಮವನ್ನುಂಟುಮಾಡಿತು. ಅನಂತರ ೧೯೮೮ರಲ್ಲಿ FICCI ಸಭಾಂಗಣದಲ್ಲಿ ನಡೆಯುತ್ತಿದ್ದ, ಅವರ *ಗೀತೆಯ* ಬಗೆಗಿನ ಪ್ರವಚನದಲ್ಲಿ ಉಪಸ್ಥಿತನಿರಲು ನಾನು ಚಂಡೀಗಢದಿಂದ ದಿಲ್ಲಿಗೆ ಹೋದೆ. ಸಭಾಭವನವು ಪ್ರೇಕ್ಷಕರಿಂದ ತುಂಬಿ ಕಿಕ್ಕಿರಿದಿತ್ತು; ಕೆಲವರು ಮೆಟ್ಟಿಲುಗಳ ಮೇಲೆ ಸಹ ಕುಳಿತಿದ್ದರು. ಆ ಸಭಾಂಗಣದ ಮೂಲೆಮೂಲೆಗೂ, ಎಲ್ಲ ದಿಕ್ಕುಗಳಿಗೂ ಅವರು ಚೈತನ್ಯ, ಊರ್ಜೆ, ಪಾವಿತ್ರ್ಯ ಮತ್ತು ಸಕಾರತ್ಮತೆಗಳನ್ನು ಪ್ರಸರಿಸುತ್ತಿದ್ದರು. ಅವರ ಪ್ರವಚನದ ನಂತರ ಅವರೊಡನೆ ಒಂದೆರಡು ಮಾತುಗಳನ್ನು ವಿನಿಮಯ ಮಾಡಿಕೊಳ್ಳುವ ಸಲುವಾಗಿ ಅನೇಕ ಗಣ್ಯ ಅತಿಥಿಗಳು ಕಾಯುತ್ತಿದ್ದರು. ಪೂಜ್ಯ ಮಹಾರಾಜ್ ಅವರೊಡನೆ, ನಾನು ವೈಯಕ್ತಿಕ ಸಂಪರ್ಕ ಹೊಂದಿ ಅವರ ಆರಾಧಕನಾದದ್ದು ಹೀಗೆ.

೧೯೮೯ರಲ್ಲಿ ಮಹಾರಾಜ್‌ರು ರಾಮಕೃಷ್ಣ ಮಿಷನ್‌ನ (ಆರ್ಡರ್‌ನ ) ಉಪಾಧ್ಯಕ್ಷರಾದರು. ೧೯೯೦ರಲ್ಲಿ ನಾನು ಅವರನ್ನು ನೋಡಲು ದಿಲ್ಲಿಗೆ ಹೋದೆ. ನನ್ನ ಜಪಸರವನ್ನು ಪವಿತ್ರಗೊಳಿಸುವಂತೆ ನಾನು ಅವರನ್ನು ಪ್ರಾರ್ಥಿಸಿದೆ. ಮಹಾರಾಜ್‌ರು ಕೈಗಳಿಂದಲೇ ಜಪಮಾಡುವಂತೆ ತಿಳಿಸಿ ಹೇಳಿದರು. "ಬಾಹ್ಯಬಂಧನಗಳನ್ನು

* ಮುಂಬೈಯ ಭಕ್ತರು

ಹೆಚ್ಚಿಸಿಕೊಳ್ಳುವ ಅಗತ್ಯವಿಲ್ಲ.” ಅವರ ಮಾತುಗಳನ್ನು ನಾನು ಅಪ್ಪಣೆಯಂತೆ ಪಾಲಿಸಿದೆ. ಜಪಸರ ಅಗತ್ಯವೆಂದು ನನಗೆ ಅನ್ನಿಸಿಯೇ ಇಲ್ಲ.

೧೯೯೨ರಲ್ಲಿ ಮುಂಬೈಗೆ ನನ್ನ ವಾಸ್ತವ್ಯವನ್ನು ಬದಲಾಯಿಸಿದೆ. ೧೯೯೩ರಲ್ಲಿ ಮಹಾರಾಜರು ಮುಂಬೈಗೆ ಭೇಟಿನೀಡಿದರು. ನನ್ನ ಪತ್ನಿ ರಾಖಿಯು ಪೂಜ್ಯ ಮಹಾರಾಜ್‌ರಿಂದ ದೀಕ್ಷೆ ಪಡೆದಳು. ೧೯೯೯ರ ಆಗಸ್ಟ್‌ನಲ್ಲಿ ಮಹಾರಾಜ್‌ರು ಮತ್ತೆ ಮುಂಬೈಗೆ ಬಂದಿದ್ದರು. ೨೦೦೨ರ ಏಪ್ರಿಲ್‌ನಲ್ಲಿ ನಮ್ಮ ಪುಣೆಯ ದೇವಸ್ಥಾನದ ಉದ್ಘಾಟನೆಯನಂತರ ಮಹಾರಾಜ್‌ರು ಮುಂಬೈಗೆ ಬಂದಾಗ, ನನ್ನ ಮಗ ಧ್ರುವ, ಬೇರೆ ಬೇರೆ ಭಕ್ತರ ಮೂರು ಮಕ್ಕಳೊಡನೆ– ಎಲ್ಲರೂ ಸುಮಾರು ಆರು ವರ್ಷದವರು – ಸ್ವಾಮೀಜಿಯಿಂದ ಕಿರು–ದೀಕ್ಷೆಯನ್ನು ಪಡೆದನು. ಧ್ರುವನು ಎಂಟು ವರ್ಷದವನಾದಾಗ, ಕ್ರಮವಾದ ದೀಕ್ಷೆ ಪಡೆಯುವುದಕ್ಕಾಗಿ ಅವನನ್ನು ಬೇಲೂರು ಮಠಕ್ಕೆ ಕರೆದುಕೊಂಡು ಬರುವಂತೆ ನಮಗೆ ತಿಳಿಸಿದರು. ನಾವು ಆ ಅಪ್ಪಣೆಯನ್ನು ಪೂರೈಸಿದೆವು. ಧ್ರುವ, ೨೦೦೪ರ ಆಗಸ್ಟ್ ತಿಂಗಳಿನಲ್ಲಿ ಕ್ರಮವಾಗಿ ದೀಕ್ಷೆ ಪಡೆದನು.

೧೯೯೮ರಲ್ಲಿ ಮಹಾರಾಜ್‌ರು ಸಂಘಗುರುಗಳಾದ ನಂತರ, ಅವರ ದರ್ಶನಕ್ಕಾಗಿ ನಾನು ಚೆನ್ನೈಗೆ ಹೋದೆ. ಮಹಾರಾಜ್ ಅವರು ತಮ್ಮ ಇತ್ತೀಚಿನ *ಭಗವದ್ಗೀತೆಯ ಸಾರ್ವತ್ರಿಕ ಸಂದೇಶ (The Universal Message of the Bhagavad Gita)* ಎಂಬ ಗ್ರಂಥವನ್ನು ಓದುವಂತೆ ನನಗೆ ಹೇಳಿದರು. ೨೦೦೦ದ ಸೆಪ್ಟಂಬರ್ ಮುವತ್ತರಂದು ನಮ್ಮ ಚೆನ್ನೈ ಮಠದಲ್ಲಿ ತಮ್ಮ ಸಹಿಯಿದ್ದ, ಮೊದಲನೆಯ ಸಂಪುಟದ ಪ್ರತಿಯನ್ನು ನನಗೆ ಕೊಟ್ಟರು ಹಾಗೂ ಅದನ್ನು ಕ್ರಮಬದ್ಧವಾಗಿ ಓದುವಂತೆಯೂ ಹೇಳಿದರು. ಈ ಗ್ರಂಥದ ಕೆಲವೇ ಪುಟಗಳನ್ನು ಓದಿದರು ಕೂಡ, ವ್ಯಕ್ತಿಯು ಅಸಾಧಾರಣ ಶಕ್ತಿ, ಸ್ಫೂರ್ತಿ ಮತ್ತು ಶಕ್ತಿಯನ್ನು ಪಡೆಯುತ್ತಾನೆ ಹಾಗೂ ತನ್ನ ನಿಜಸ್ವರೂಪ, ಸ್ವಭಾವಗಳ ಹೊಳಹನ್ನು ಕಾಣುತ್ತಾನೆ.

೨೦೦೧ರ ಫೆಬ್ರವರಿ ೧೦ರಂದು ಮುಂಬೈನ ರಾಜಭವನದಲ್ಲಿ ನಡೆದ ಕಾರ್ಯಕ್ರದಲ್ಲಿ ಸ್ವಾಮಿ ರಂಗನಾಥಾನಂದರ *Universal Message of the Bhagavad Gita*ದ ಎರಡನೆಯ ಸಂಪುಟವು ಬಿಡುಗಡೆಗೊಳಿಸಲ್ಪಟ್ಟಿತು. ಮಹಾರಾಷ್ಟ್ರದ ಗವರ್ನರ್ ಆಗಿದ್ದ ಡಾ. ಪಿ.ಸಿ ಅಲೆಕ್ಸಾಂಡರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು ಮತ್ತು ಪ್ರಸಿದ್ಧ ವಿದ್ವಾಂಸರಾದ ಡಾ. ರಫೀಕ್ ಜ಼ಕಾರಿಯಾ, ಗ್ರಂಥವನ್ನು ಪರಿಚಯಿಸಿದರು. ಸಭಾಂಗಣವು ಕಿಕ್ಕಿರಿದು ತುಂಬಿತ್ತು, ಸಭಾಂಗಣದ ಹೊರಗೆ ಕೂಡ ಕುಳಿತುಕೊಳ್ಳಲು ವಿಶೇಷ ವ್ಯವಸ್ಥೆಯ ಏರ್ಪಾಟಾಗಿತ್ತು. ಹಾಗೂ ಒಳಗೆ ನಡೆಯುತ್ತಿರುವ ಕಾರ್ಯಕ್ರಮಗಳನ್ನು ವೀಕ್ಷಿಸುವ ಸಲುವಾಗಿ ಸಾರ್ವಜನಿಕರಿಗಾಗಿ ದೂರದರ್ಶನದ ಪರದೆಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಮಹಾರಾಜ್ ಅವರು ಕೆಲವು ನಿಮಿಷಗಳು ಮಾತ್ರ ಮಾತನಾಡಿ, ಡಾ. ಅಲೆಕ್ಸಾಂಡರ್ ಅವರನ್ನು ಗೀತೆಯ ಬಗೆಗೆ ಮಾತನಾಡುವಂತೆ ಹೇಳಿದರು. ತಾವು ಮಾತನಾಡುತ್ತಿದ್ದಾಗ ಡಾ. ಅಲೆಕ್ಸಾಂಡರ್ ಅವರು ಹೇಳಿದರು: “ಬೇಲೂರು ಮಠದ ಸ್ವಾಮಿ ರಂಗನಾಥಾನಂದಜೀಯವರು, ನಮ್ಮ ಕಾಲದಲ್ಲಿ ಜೀವಿಸುತ್ತಿರುವ ಅತ್ಯಂತ ಮಹತ್ವದ ಋಷಿಗಳು.” ಡಾ. ಅಲೆಕ್ಸಾಂಡರ್ ಅವರು ಕಾರ್ಯಕ್ರಮದ ನಂತರ ಮಹಾರಾಜ್‌ರೊಡನೆ ಹೇಳಿದರು: “ಸಾರ್ವಜನಿಕ ಕಾರ್ಯಕ್ರಮದಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಜನರು ಉಪಸ್ಥಿತರಿರುವ ದಾಖಲೆಯನ್ನು ಇಂದು ರಾಜಭವನವು ಸ್ಥಾಪಿಸಿದೆ.” ಮಹಾರಾಜ್‌ರು ಮುಗುಳ್ನಗುತ್ತಿದ್ದರು ಮತ್ತು ಅಲ್ಲಿ  ಹಾಜರಿದ್ದವರನ್ನೆಲ್ಲಾ ಆಶೀರ್ವದಿಸುತ್ತಿದ್ದರು.

ಮಹಾರಾಜ್ ಅವರು ರಾಮಕೃಷ್ಣ ಮಿಷನ್‌ನ ಅಧ್ಯಕರಾಗಿದ್ದಾಗ, ೨೦೦೨, ೨೦೦೩ ಮತ್ತು ೨೦೦೪ರಲ್ಲಿ ಬೇಲೂರು ಮಠದ ಗುರು ಪೂರ್ಣಿಮಾ ಸಮಾರಂಭದಲ್ಲಿಯೂ, ಮಹಾರಾಜ್ ಅವರು ಜನ್ಮದಿನಾಚರಣೆಯಲ್ಲಿಯೂ ಉಪಸ್ಥಿತನಾಗುವಂತಹ ಸವಲತ್ತು ನನಗೆ ಒದಗಿಬಂದಿತ್ತು. ಸಾವಿರಾರು ಭಕ್ತರನ್ನು ಸನ್ಯಾಸಿಗಳನ್ನು ಗೃಹಸ್ಥರನ್ನು ಸಮಾನಭಾವದಿಂದ ಆಶೀರ್ವದಿಸುತ್ತಿದ್ದ ಸ್ವಾಮಿ ರಂಗನಾಥಾನಂದರ, ವಿವಿಧ ಮುಖಭಂಗಿಗಳ ನೂರಾರು

ಭಾವಚಿತ್ರಗಳನ್ನು ನಾನು ತೆಗೆದಿದ್ದೆ. ಮಹಾರಾಜ್ ಅವರು ಪ್ರತಿಯೊಬ್ಬರಿಗೂ ಸ್ವತಃ ತಮ್ಮ ಕೈಗಳಿಂದಲೇ ಆಶೀರ್ವಾದದ ರೂಪದಲ್ಲಿ ಏನನ್ನಾದರೂ ನೀಡಲೂ ಇಚ್ಛಿಸುತ್ತಿದ್ದರು – ಚಾಕೋಲೇಟ್‌ಗಳು ಅಥವಾ ಸಿಹಿತಿಂಡಿಯ ಪೊಟ್ಟಣಗಳಾಗಬಹುದು.

ಕ್ಯಾಂಡಿಗಳನ್ನು, ಸಣ್ಣ ಮಕ್ಕಳಿಗಾಗಿ ಮೇಲಕ್ಕೆ ಗಾಳಿಯಲ್ಲಿ ಎಸೆಯುತ್ತಿದ್ದರು ಮಹಾರಾಜ್; ಹಾಗೂ ಮಕ್ಕಳು ಯಾರಾದರೂ ಅವನ್ನು ಹಿಡಿದರೆ ಅತ್ಯಂತ ಸಂತುಷ್ಟರಾಗುತ್ತಿದ್ದರು. ಮಕ್ಕಳೆಂದರೆ ಅವರಿಗೆ ವಿಶೇಷ ವಾತ್ಸಲ್ಯವಿತ್ತು, ಅವರನ್ನು ತಮ್ಮ ಬಳಿಗೆ ಕರೆದು ಅವರ ತಲೆಯ ಮೇಲೆ ತಮ್ಮ ಕೈಯಿಟ್ಟು ಆಶೀರ್ವದಿಸುತ್ತಿದ್ದರು. ಮಹಾರಾಜ್‌ರ ಜನ್ಮದಿನದಂದು ಅವರ ಆರಾಧಕರು ಮತ್ತ ಭಕ್ತರು ನೂರಾರು ಕೇಕ್‌ಗಳನ್ನು ತಂದಿರುತ್ತಿದ್ದರು. ಹಾಗೂ ಬೇಲೂರು ಮಠದ ಪ್ರತಿಯೊಂದು ಮೂಲೆಯಲ್ಲಿಯೂ, ಸಂತಸ ಮತ್ತು ಆನಂದಗಳು ತುಂಬಿರುತ್ತಿದ್ದವು. ಮಹಾರಾಜ್‌ರ ಸರಳಜೀವನ, ವಿನಯ ಮತ್ತು ಮುಗ್ಧ ಹರ್ಷ ಇವು ಜೀವನದ ಅತ್ಯುನ್ನತ ಮಟ್ಟದಿಂದ ಸಾಮಾನ್ಯಮಟ್ಟದ ತನಕ ಸಾವಿರಾರು ಪ್ರಶಂಸಕರನ್ನು, ಭಕ್ತರನ್ನು ಆಕರ್ಷಿಸುತ್ತಿದ್ದವು.

ನನ್ನ ಸಮಸ್ಯೆಗಳನ್ನೆಲ್ಲಾ ಮಹಾರಾಜ್‌ರು ಸ್ವತಃ ಅರಿತಿರುವರೆಂದೂ, ಅವರೇ ಸಮರ್ಪಕವಾದ ಪರಿಹಾರ ದೊರಕಿಸಿಕೊಡುವರೆಂದೂ ಭಾವಿಸಿಕೊಂಡು ನಾನು ಎಂದೂ ಕೂಡ ಮಹಾರಾಜ್ ಅವರೊಡನೆ ನನ್ನ ಸಮಸ್ಯೆಗಳ ಬಗೆಗೆ ವೈಯಕ್ತಿಕವಾಗಿ ತಿಳಿಸಲಿಲ್ಲ. ನನ್ನ ಭಾವನೆ ನಿಜವಾಯಿತು ಕೂಡ. ನನ್ನ ವೃತ್ತಿ ಜೀವನದ ತೊಂದರೆಗಳನ್ನು ಎದುರಿಸಲು ಅತ್ಯದ್ಭುತವಾದ ಶಕ್ತಿ ಬಂದಿರುವುದನ್ನು ನಾನು ಕಂಡುಕೊಂಡೆ. ಇದು ನನ್ನ ಜೀವನದಲ್ಲಿ ಸಂತೃಪ್ತಿ ಕಂಡುಕೊಳ್ಳುವ ಪರಿಹಾರದ ಮಾರ್ಗಕ್ಕೂ ಎಡೆಮಾಡಿತು. ಮಹಾರಾಜ್ ಅವರ ದರ್ಶನವನ್ನು ನಾವು ಯಾವಾಗ ಪಡೆದರೂ, ಅತ್ಯದ್ಭುತವಾದ ಪ್ರೀತಿ, ಶಕ್ತಿ ಮತ್ತು ಆನಂದಗಳು ಅವರಿಂದ ಹರಿದು ಬರುತ್ತಿರುವುದನ್ನು ನಾವು ಕಾಣುತ್ತಿದ್ದೆವು.

ವಿವಾಹವಾಗಿ ಒಂಬತ್ತು ವರ್ಷಗಳಾಗಿದ್ದರೂ, ಸಂತಾನಭಾಗ್ಯವಿರದಿದ್ದ ದಂಪತಿಗೆ ಮಹಾರಾಜ್‌ರು ನೀಡಿದ ವಿಶೇಷ ಅನುಗ್ರಹದ ಬಗೆಗೆ, ನಾನು ಇಲ್ಲಿ ಹೇಳಬಯಸುತ್ತೇನೆ. ಸಹಜವಾಗಿಯೇ ಮಕ್ಕಳಿಲ್ಲದ ಆ ದಂಪತಿಯ ಜೀವನ ಕಷ್ಟಕರವಾಗಿತ್ತು. ೨೦೦೨ರಲ್ಲಿ ಪೂಜ್ಯ ಮಹಾರಾಜ್‌ರು ದಿಲ್ಲಿಗೆ ಹೋಗಿದ್ದಾಗ, ನಮ್ಮ ಆಶ್ರಮದಲ್ಲಿ ಮಹಾರಾಜ್‌ರ ದರ್ಶನ ಮಾಡುವಂತೆ ನಾನು ಆ ದಂಪತಿಗೆ ತಿಳಿಸಿದೆ. ಮಹಾರಾಜ್‌ರು ಆ ದಂಪತಿಗೆ ಒಂದು ಮಗುವಾಗುವಂತೆ ವಿಶೇಷ ಅನುಗ್ರಹ ನೀಡಿದರು ಮತ್ತು ೨೦೦೩ರ ಫೆಬ್ರವರಿಯಲ್ಲಿ ಅವರಿಗೆ ಒಬ್ಬ ಮಗನು ಜನಿಸಿದ. ಮಹಾರಾಜ್ ರು ಆ ಹುಡುಗನಿಗೆ 'ಗೌತಮ್' ಎಂದು ಹೆಸರಿಟ್ಟರು. ಈಗ ಆ ದಂಪತಿ ಮತ್ತು ಮಗು ಸಂತೋಷವಾಗಿ ಜೀವಿಸುತ್ತಿದ್ದು. ನಿತ್ಯವೂ ಪವಿತ್ರ ತ್ರಿಮೂರ್ತಿಗಳ ಮತ್ತು ಮಹಾರಾಜ್‌ರ ಭಾವಚಿತ್ರಗಳೆದೆರು ಪ್ರಣಾಮ ಸಲ್ಲಿಸುತ್ತಾರೆ.

೨೦೦೨ರ ಅವಧಿಯಲ್ಲಿ ನಮ್ಮ ಪಂಥದ ಬೋಸ್ಟನ್ ಕೇಂದ್ರದ ಭೇಟಿಯಲ್ಲಿ ಮಹಾರಾಜ್‌ರ ಅತ್ಯಂತ ಆತ್ಮೀಯ ಸ್ನೇಹಿತರಾಗಿದ್ದ ಸ್ವಾಮಿ ಸರ್ವಗತಾನಂದರನ್ನು ಭೇಟಿ ಮಾಡುವ ಅವಕಾಶ ಒದಗಿತ್ತು. ಸಂಭಾಷಣೆಯ ನಡುವೆ ಸ್ವಾಮಿ ಸರ್ವಗತಾನಂದರು, ತಾವು ಮಹಾರಾಜ್ ಅವರಿಗೆ ಒಂದು ದಿನ ದೂರವಾಣಿಯ ಮೂಲಕ ಕರೆ ಮಾಡಿದ್ದನ್ನೂ, ಎಲ್ಲ ಮಹಾನ್ ಸಂತರೂ *ಭಗವದ್‌ಗೀತೆ*ಯ ಬಗೆಗೆ ವ್ಯಾಖ್ಯಾನವನ್ನು ಬರೆದಿದ್ದರೂ *ಗೀತೆ*ಯ ಬಗೆಗೆ ಸಾವಿರಾರು ಪ್ರವಚನಗಳನ್ನು ನೀಡಿರುವ ಮಹಾರಾಜ್ ಅವರು ಏಕೆ ಇದುವರೆಗೂ ಗೀತಾ ಭಾಷ್ಯವನ್ನು ಬರೆದಿಲ್ಲವೆಂದು ಕೇಳಿದುದನ್ನು ತಿಳಿಸಿದರು. ನಂತರ ಮಹಾರಾಜ್ ಅವರು ಗೀತೆಯ ಬಗೆಗೆ ಬರೆಯಲು ಒಪ್ಪಿದರು, ಅದರ ಫಲಿತಾಂಶವೆ *ಭಗವದ್ ಗೀತೆ*ಯ ವ್ಯಾಖ್ಯಾನದ ಮೂರು ಸಂಪುಟಗಳು.

೨೦೦೪ರಲ್ಲಿ ನಾನು ಬೇಲೂರು ಮಠದಲ್ಲಿದ್ದಾಗ ಹಿಂದೀ ಚಲನಚಿತ್ರ ರಂಗದ ಪ್ರಸಿದ್ಧ ನಟರಾದ ಮಿ. ಆಸ್ರಾಣಿ, ಪೂಜ್ಯ ಮಹಾರಾಜ್‌ರ ದರ್ಶನಕ್ಕಾಗಿ ಬಂದರು. ಆಗ ದರ್ಶನದ ಸಮಯ ಮುಗಿದಿತ್ತು. ಆದರೆ

ಅವರು ಮುಂಬೈನಿಂದ ಬಂದಿದ್ದುದನ್ನು ತಿಳಿದು ಸುದರ್ಶನ ಮಹಾರಾಜ್, ಸ್ವಾಮಿ ರಂಗನಾಥಾನಂದರೊಂದಿಗೆ ಸಮಾಲೋಚಿಸಿದರು. ಸ್ವಾಮೀಜಿ, ಆಸ್ರಾಣಿಯವರನ್ನು ಭೇಟಿಮಾಡಲು ಒಪ್ಪಿದರು. ಸ್ವಾಮೀಜಿಯವರ ದರ್ಶನದ ನಂತರ ಆಸ್ರಾಣಿಜೀ ಹೊರಗೆ ಬಂದಾಗ ಅವರ ಕಣ್ಣುಗಳಲ್ಲಿ ಕಣ್ಣೀರು ತುಂಬಿತ್ತು. ಏನಾಯಿತೆಂದು ನಾನು ಕೇಳಿದಾಗ ಅವರು ಉತ್ತರಿಸಿದರು. "ನಾನು ಮಹಾರಾಜ್ ಅವರಲ್ಲಿ ಸ್ವಾಮಿ ಶಿವಾನಂದರನ್ನು ಕಂಡೆ." ಮಹಾರಾಜ್ ಅವರು ಶ್ರೀ ರಾಮಕೃಷ್ಣರ ಒಂದು ಭಾಗ ಎಂದು ನಾವು ಯಾವಾಗಲೂ ನಂಬಿದ್ದರಿಂದ ನನಗೆ ಇದರಿಂದ ಆಶ್ಚರ್ಯವಾಗಲಿಲ್ಲ.

ನಮ್ಮ ಮುಂಬೈ ಕೇಂದ್ರದ ಅನೇಕ ಸನ್ಯಾಸಿಗಳು ಮತ್ತು ಭಕ್ತರು ೨೦೦೨ರಲ್ಲಿ ಪುಣೆಯ ಶ್ರೀ ರಾಮಕೃಷ್ಣ ದೇವಾಸ್ಥಾನದ ಉದ್ಘಟನಾ ಕಾರ್ಯಕ್ರಮದಲ್ಲಿ ಉಪಸ್ಥಿತರಿರಲು ಅಲ್ಲಿಗೆ ಹೋಗಿದ್ದರು. ಬೆಳಗ್ಗೆ ಆರೂ ಮುವತ್ತರ ವೇಳೆಗೆ ನಾನು ಮಹಾರಾಜ್ ಅವರ ಕೋಣೆಯ ಬಳಿಗೆ ಹೋದೆ. ಅಲ್ಲಿ ಅವರು ತಮ್ಮ ಸಹಾಯಕರ ನೆರವಿನಿಂದ ನಡಿಗೆಯಲ್ಲಿ ತೊಡಗಿರುವುದನ್ನು ಕಂಡೆ. ಆಗ ಒಂದು ಆಲೋಚನೆ ನನ್ನ ಮನಸ್ಸಿನಲ್ಲಿ ಸುಳಿಯಿತು. ತಮ್ಮ ವಾಗ್ಮಿತೆ, ಬರೆಹಗಳು ಮತ್ತು ಕಾರ್ಯಗಳಿಂದ ಇಡೀ ಪ್ರಪಂಚವನ್ನೇ ಜಯಸಿರುವ ಮಹಾರಾಜ್ ಅವರೇ ತಮ್ಮ ವ್ಯಾಯಮಪಾಲನೆಯ ನಿಯಮವನ್ನು ನಡೆಸಿಕೊಂಡು ಬರುತ್ತಿರುದ್ದಾರೆಂದರೆ, ಇಷ್ಟೊಂದು ಯೌವನವಿರುವ ನಾನೇಕೆ ಅದನ್ನು ಪಾಲಿಸಬಾರದು? ಅದು ದೇಹ ದಾರ್ಢ್ಯತೆಗೆ ಸ್ಫೂರ್ತಿ ನೀಡಿದ ಕ್ಷಣವಾಗಿತ್ತು. ನಾನು ಕ್ರಮಬದ್ದವಾಗಿ ವ್ಯಾಯಮ ಶಾಲೆಗೆ ಹೋಗತೊಡಗಿದೆ. ಹಾಗೂ ಪವಿತ್ರ ತ್ರಿಮೂರ್ತಿಗಳು, ಗಂಭೀರ್ ಮಹಾರಾಜ್ ಮತ್ತು ಮಹಾರಾಜ್ ಅವರ ಹೆಸರಿನಲ್ಲಿ ಎರಡು ಬಾರಿ ಇಪ್ಪತ್ತೊಂದು ಕಿಲೋಮೀಟರ್ ಮ್ಯಾರಥಾನ್ ಸ್ಪರ್ಧೆಯಲ್ಲಿ ಓಡುವ ಹಂತ ತಲುಪಿದೆ. ನಂತರ, ಮಹಾರಾಜ್ ಅವರು ಆರೋಗ್ಯದ ಬಗೆಗೆ ಹೇಳಿದ್ದ ಈ ಮಾತುಗಳು ನನಗೆ ತಿಳಿದವು: "ನೀವು ಎಷ್ಟೇ ಕಾರ್ಯಪ್ರವೃತ್ತರಾಗಿದ್ದರೂ ಸರಿ, ಸಂಜೆಗಳನ್ನು ಮಾತ್ರ ಆಟದ ಮೈದಾನದಲ್ಲಿ ಕಳೆಯಿರಿ." ನನ್ನ ಈ ಹವ್ಯಾಸವನ್ನು ನಾನು ನನ್ನ ಜೀವಮಾನವಿಡೀ ಮುಂದುವರಿಸಲು ಇಚ್ಛಿಸುತ್ತೇನೆ.

ಮಹಾರಾಜ್ ಅವರಿಂದ ನಾನು ಕಲಿತ ಮತ್ತೊಂದು ಅಂಶ ಕೆಲಸದ ಬಗೆಗೆ ನಮಗೆ ಇರಬೇಕಾದ ಪರಿಕಲ್ಪನೆ. ಅವರ ಬರೆಹಗಳಲ್ಲಿ ಮಹಾರಾಜ್‌ರು ಕಠಿಣ ಪರಿಶ್ರಮ, ದಕ್ಷ ಕೆಲಸ ಮತ್ತು ಸಹಕಾರೀ ಕೆಲಸಗಳ ಬಗೆಗೆ ಉಲ್ಲೇಖಿಸುತ್ತಾರೆ. 'ಯೋಗ ಎಂದರೆ ಕೆಲಸದಲ್ಲಿನ (ಕರ್ಮದಲ್ಲಿನ) ದಕ್ಷತೆ' ಎಂದು ಅವರು ಹೇಳುತ್ತಾರೆ. 'ತಪಸ್ಸೆ (ಕಠಿಣ ಪರಿಶ್ರಮ) ಇರದೇ ಯಾವುದೇ ಯಶಸ್ಸು ಸಾಧ್ಯವಿಲ' ಎಂದೂ ಅವರು ಹೇಳುತ್ತಾರೆ. ಅಲ್ಲದೇ ಹೀಗೆ ಹೇಳಿ ನಮ್ಮನ್ನು ಪ್ರೋತ್ಸಾಹಿಸುತ್ತಾರೆ: "ನಿನ್ನನ್ನು ನಿನ್ನಿಂದಲೇ ಉದ್ಧರಿಸಿಕೊ. ಯಾರಾದರೂ ಮಾರ್ಗದರ್ಶನ ಮಾಡಬಹುದು, ಆದರೆ ಅಂತಿಮವಾಗಿ ಅದನ್ನು ನೀನೇ ಮಾಡಬೇಕಾಗುತ್ತದೆ ಮತ್ತು ನೀನು ಅತ್ಯುತ್ತಮವಾದದ್ದನ್ನು ಮಾಡಿ ಮುಗಿಸಿದ ನಂತರ ಆ ಕೆಲಸವನ್ನು ದೇವರಿಗೆ ಸಮರ್ಪಿಸುವುದೇ ಕಟ್ಟಕಡೆಯ ಪಾಠ. ಅದು ಕೆಲಸದ ಎಲ್ಲ ಬಂಧನದ ಒತ್ತಡವನ್ನು ದೂರಸರಿಸುವುದು. ಶಾಂತಿ, ತೃಪ್ತಿ ಮತ್ತು ಶ್ರೇಷ್ಠತೆಗೆ ಇದೇ ನಿಜವಾದ ದಾರಿ."

ರಾಮಕೃಷ್ಣ ಮಿಷನ್‌ಗೆ ಸೇರಿದ ನಂತರ ಮಹಾರಾಜ್‌ರು ಎಂಟು ದಶಕಗಳ ಸೇವಾಧರ್ಮದ ಕ್ರಿಯಾಶೀಲ ಜೀವನವನ್ನು ನಡೆಸಿದರು. ಶ್ರೀ ರಾಮಕೃಷ್ಣರ ಅನೇಕ ನೇರ ಶಿಷ್ಯರನ್ನು ಭೇಟಿಮಾಡುವ ಅವಕಾಶವನ್ನು ಅವರು ಪಡೆದಿದ್ದರು. ಮಹಾರಾಜ್‌ರು ಅದ್ಭುತ ಪ್ರವಚನಕಾರರು, ಮಹಾನ್ ಲೇಖಕರು, ಮಹಾಸಾಧುಗಳು, ಎಲ್ಲಕ್ಕಿಂತ ಮಿಗಿಲಾಗಿ ಬಡವರ ಬಂಧುವಾಗಿದ್ದರು. ಮಹಾರಾಜರು ಬಹುಶ್ರೇಷ್ಠ ವಾಗ್ಮಿಗಳಾಗಿದ್ದರೂ, ತಮ್ಮ ಖಾಸಗೀ ಜೀವನದಲ್ಲಿ ಬಹಳ ಕಡಮೆ ಮಾತನಾಡುತ್ತಿದ್ದರು. "ನೀವೆಷ್ಟು ಶಾಂತರಾಗಿ, ಮೌನವಾಗಿ ಇರುತ್ತೀರೋ, ನಿಮ್ಮ ನರಗಳು ಅಷ್ಟೂ ಕಡಿಮೆ ಪ್ರಕುಕ್ಷಬ್ಧಗೊಳ್ಳುತ್ತವೆ. ನೀವು ಹೆಚ್ಚು ಪ್ರೀತಿಸುತ್ತೀರಿ ಮತ್ತು ನಿಮ್ಮ ಕಾರ್ಯಕ್ಷಮತೆ

ಉತ್ತಮಗೊಳ್ಳುತ್ತದೆ" ಎಂಬ ಹೇಳಿಕೆ ಬಹುಶಃ ಅವರ ಜೀವನದಲ್ಲಿ ಪ್ರತಿಫಲಿಸುತ್ತಿತ್ತು ಎನಿಸುತ್ತದೆ.

ಮೌನದ ಬಗೆಗೆ ಮಹಾರಾಜ್ ಅವರ ಹೇಳಿಕೆ ಕೂಡ ಬಹಳ ಸ್ಫೂರ್ತಿದಾಯಕವಾಗಿದೆ: "ನಮ್ಮ ದೇವಾಸ್ಥಾನಗಳಲ್ಲಿ ನಾವು ಮೌನವಾಗಿ ಧ್ಯಾನಿಸುವುದನ್ನು ಕಲಿಯಬೇಕು. ಮತ್ತು ನಮ್ಮ ಕಾರ್ಖಾನೆಗಳು ಮತ್ತು ಕಚೇರಿಗಳಲ್ಲಿ ಮೌನವಾಗಿ ಕೆಲಸ ಮಾಡುವುದನ್ನು ಕಲಿಯಬೇಕು. ಈ ರೀತಿಯಲ್ಲಿ ಉಳಿಸಿದ ಶಕ್ತಿಯು ನಮಗೆ ಹೆಚ್ಚು ಹೆಚ್ಚು ಆಲೋಚಿಸುವ, ಮರುಕ ತೋರುವ ಹಾಗೂ ಹೆಚ್ಚು ದಕ್ಷತೆಯಿಂದ ಸೇವೆಮಾಡುವ ಸಾಮರ್ಥ್ಯವನ್ನು ನೀಡುತ್ತದೆ." ನಮ್ಮ ದೇಶದ ಅಭಿವೃದ್ಧಿಗೂ, ಅದರ ಅಸಂಖ್ಯಾತ ಸಮಸ್ಯೆಗಳನ್ನು ಪರಿಹರಿಸುವುದಕ್ಕೂ ಇದು ಅತ್ಯಂತ ಗಹನವಾದ ಸಂದೇಶವಾಗಿದೆ.

ಧೈರ್ಯ, ಶಕ್ತಿ ಮತ್ತು ನಿರ್ಭೀತಿಯನ್ನು ಸ್ಫುರಿಸುವ ಮಹಾರಾಜ್‌ರ ಸಂದೇಶದ ಮಾತುಗಳು ಇಂದಿಗೂ ನಮ್ಮ ಮನಸ್ಸುಗಳಲ್ಲಿ ಪ್ರತಿಧ್ವನಿಸುತ್ತ ನಮ್ಮನ್ನು ನಿರಂತರವಾಗಿ ಸ್ಫೂರ್ತಿಗೊಳಿಸುತ್ತಿರುತ್ತವೆ. ನಮಗೆ ಶಕ್ತಿ ನೀಡಿ, ಪ್ರಚೋದಿಸಲು, ಕಾರ್ಯತತ್ಪರಗೊಳಿಸಲು ಮತ್ತು ನಮ್ಮ ಅಸ್ತಿತ್ವವನ್ನು ಚೈತನ್ಯಪೂರ್ಣಗೊಳಿಸಲು, ಅವರ ಬರೆಹದ ಒಂದೇ ಒಂದು ಸಾಲು ಸಾಕು.

ಜೀವನದಲ್ಲಿ ಹೊಸ ಅರಿವಿನ ಮಾರ್ಗದ ಆದರ್ಶಪುರುಷರಾಗಿ ಸೇವಾಕಾರ್ಯನಿರತರಾದವರು ಪೂಜ್ಯ ಸ್ವಾಮಿ ರಂಗನಾಥಾನಂದರು. ಸನ್ಯಾಸತ್ವವು ಕೇವಲ ಒಂದು ಪರಿಮಿತಿಯೊಳಗೆ ಸೇರಿಸುವುದಿಲ್ಲ. ಆದರೆ ಅದು ಮುಕ್ತಿಗೊಳಿಸುವ ಪ್ರಭಾವ ಎಂಬುದನ್ನು ಅವರ ಜೀವನ ದೃಷ್ಟಾಂತಗೊಳಿಸಿತು. ಆಧ್ಯಾತ್ಮಿಕ ಅರಿವನ್ನು, ಜೀವನದಲ್ಲಿ ಯಶಸ್ಸನ್ನು ಹೇಗೆ ಸಾಮರಸ್ಯಗೊಳಿಸಬೇಕೆಂಬುದನ್ನೂ ಅವರ ಜೀವನ ತೋರಿಸಿತು. ಹಾಗೂ ತನ್ನನ್ನು ತಾನು ಮಾನವಸಮುದಾಯದ ಸೇವೆಗೆ ಅರ್ಪಣ ಮಾಡಿಕೊಳ್ಳುವುದರಿಂದ ವ್ಯಕ್ತಿಯು ಹೇಗೆ ಅತ್ಯುನ್ನತವಾದ ಸಿದ್ಧಿಯನ್ನು ಪಡೆಯಬಹುದೆಂಬುದಕ್ಕೂ ಅವರ ಜೀವನ ಉದಾಹರಣೆಯಾಯಿತು. ನೂರು ವರ್ಷಗಳಿಗೂ ಮೊದಲು, ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದ್ದ, ಪ್ರಾಯೋಗಿಕ ವೇದಾಂತದ ತತ್ತ್ವಗಳ, ಸಮಂಜಸತೆಗೆ ಮಹಾರಾಜ್‌ರ ಜೀವನವು ಜೀವಂತ ಪ್ರಾತ್ಯಕ್ಷಿಕೆಯನ್ನು ಒದಗಿಸಿತು.

* * * *

# ೧೨೪. ಮೂರ್ತೀಭವಿಸಿದ ಮಾತೃರೂಪ

–ಸುದೀನ್ ಚೌಧುರಿ*

ಅದು ೧೯೬೩ನೇ ಇಸವಿಯಾಗಿತ್ತು. ಸ್ವಾಮಿ ವಿವೇಕಾನಂದರ ಜನ್ಮ ಶತಮಾನೋತ್ಸವ ಆಚರಣೆಯ ವರ್ಷವಾಗಿತ್ತು. ನಾನು ಆಗ ಒಂಬತ್ತನೆಯ ತರಗತಿಯ ಕೇವಲ ಹದಿಮೂರು ವರ್ಷದ ಹುಡುಗನಾಗಿದ್ದೆ. ಸರ್‌ಗಾಚಿ ಶಾಲೆಯ ವಿದ್ಯಾರ್ಥಿಭವನದ ಹಾಸ್ಟಲ್ ನಿವಾಸಿಯಾಗಿದ್ದುದರಿಂದ ನಾನು ಆಶ್ರಮಕ್ಕೆ ಪದೇ ಪದೇ ಭೇಟಿಕೊಡುತ್ತಿದ್ದೆ ಹಾಗೂ ಪೂಜ್ಯ ಸ್ವಾಮಿ ಪ್ರೇಮೇಶಾನಂದರು, ಪೂಜ್ಯ ಸ್ವಾಮಿ ಸುಖದಾನಂದರು ಮತ್ತು ಈಗ ನನಗೆ ಹೆಸರು ಮರೆತು ಹೋಗಿರುವ ಇನ್ನೂ ಕೆಲವು ಸ್ವಾಮಿಗಳೊಡನೆ ಚೆನ್ನಾಗಿ ಪರಿಚಿತನಾಗಿದ್ದೆ. ಒಂದು ದಿನ ಆಶ್ರಮದ ನನ್ನ ಭೇಟಿಯ ಸಮಯದಲ್ಲಿ, ಕಾವಿಬಟ್ಟೆ ಧರಿಸಿದ ಎತ್ತರಕ್ಕಿದ್ದ ಸನ್ಯಾಸಿಯೊಬ್ಬರು ದೇವಸ್ಥಾನದ ಮುಂದೆ, ಅನುದ್ರಿಕ್ತರಾಗಿ, ಸ್ಥಿರಮನಸ್ಸಿನಿಂದ ನಡೆಯುತ್ತಿರುವುದನ್ನು ನೋಡಿದೆ. ನೇರವಾದ ಅವರ ವರ್ಚಸ್ವೀ ನಿಲುವು ನನ್ನನ್ನು ಆಶ್ಚರ್ಯಚಕಿತನನ್ನಾಗಿಸಿತು. ಅಷ್ಟೊಂದು ನಿಷ್ಠುರ ಹಾಗೂ ಅಷ್ಟೇ ವಿನಯಶೀಲತೆ ಮತ್ತು ಲಾಲಿತ್ಯ! ಅವರು ಸ್ವಾಮಿ ರಂಗನಾಥಾನಂದರೆಂದು ನಂತರ ನನಗೆ ತಿಳಿಯಿತು. ಅವರನ್ನು ದೂರದಿಂದ ನಾನು ನೋಡಿದ್ದು ಅದೇ ಮೊದಲ ಬಾರಿ.

ಸ್ವಲ್ಪ ಸಮಯದ ನಂತರ, ಪೂಜ್ಯ ಸುಖದಾನಂದಜೀಯವರು, ಶ್ರೀಮತ್ ಸ್ವಾಮಿ ಮಧ್ವಾನಂದ ಮಹಾರಾಜ್‌ರ ಬಳಿ ದೀಕ್ಷೆ ಪಡೆಯುವುದಕ್ಕಾಗಿ, ನನ್ನನ್ನು ಬೇಲೂರು ಮಠಕ್ಕೆ ಕಳಿಸಿದರು. ಆಗ ರಾಮಕೃಷ್ಣ ಮಿಷನ್‌ನ ಅಧ್ಯಕ್ಷರಾಗಿದ್ದ ಪೂಜ್ಯ ಮಧ್ವಾನಂದ ಮಹಾರಾಜ್ ಅವರು ನನಗೆ ದೀಕ್ಷೆ ನೀಡಿ ಆಶೀರ್ವದಿಸಿದರು. ಆಗ ನಾನು ಇನ್ನೂ ಕೇವಲ ಹದಿನಾಲ್ಕು ವರ್ಷದವನಾಗಿದ್ದು, ಗುರುಕರುಣೆಯ ಆಳವಾದ ಮಹತ್ವವನ್ನು ಅರಿಯಲು ತೀರಾ ಅಪಕ್ವಮನಸ್ಸಿನವನಾಗಿದ್ದೆ. ಆದರೆ, ಗುರುವಿನ ದಿವ್ಯಕರುಣೆಯೇ ಕ್ರಮವಾಗಿ ನನ್ನನ್ನು ಪೂಜ್ಯ ರಂಗನಾಥಾನಂದರ ಬಳಿಗೆ ಕರೆತಂದಿತೆನ್ನುವುದನ್ನು ನಾನು ನನ್ನ ವಯಸ್ಸಿನ ಮಾಗುವಿಕೆಯೊಂದಿಗೆ ಅರಿತು ಅನುಭವಿಸಿದ್ದೇನೆ.

ಬದಲಾಗುತ್ತಿರುವ ಜೀವನದ ಬಳಸುಹಾದಿಗಳಲ್ಲಿ ಸುತ್ತಿ ಅಂತಿಮವಾಗಿ ನಾನು ಹೈದರಾಬಾದಿನಲ್ಲಿ ನೆಲೆನಿಂತೆ. ಅದು ಸುಮಾರು ೧೯೮೫ರಲ್ಲಿ. ಆಗ ಪೂಜ್ಯ ಮಹಾರಾಜರು ಹೈದರಾಬಾದಿನ ಮಠದ ಅಧ್ಯಕ್ಷರಾಗಿದ್ದರು, ವಾರದಲ್ಲಿ ಎರಡು ಮೂರು ಬಾರಿಯಾದರೂ ನಾನು ಅವರನ್ನು ನೋಡಲು ನೋಡಲು ಹೋಗುತ್ತಿದ್ದೆ ಹಾಗೂ ನೇರವಾಗಿ ಅವರ ಕೋಣೆಗೆ ಹೋಗುತ್ತಿದ್ದೆ. ಬಾಗಿಲು ತಟ್ಟಿ, ಮುಂದಾಗಿ ಅನುಮತಿ ತೆಗೆದುಕೊಳ್ಳದೆಯೇ ಅವರನ್ನು ಭೇಟಿ ಮಾಡುವಂತಹ ಸಂಬಂಧ ನನಗೆ ಮಹಾರಾಜ್‌ರೊಡನೆ ಉಂಟಾಯಿತು. ಅವರ ಕೋಣೆಯ ಬಾಗಿಲು ಯಾವಾಗಲೂ ತೆರೆದಿರುತ್ತಿತ್ತು. ನಾನು ಬೇರೆ ಯಾರೂ ಅಷ್ಟೊಂದು ಸುಲಭಗಮ್ಯರಾಗಿದ್ದುದ್ದನ್ನು ಕಾಣಲಿಲಲ್ಲ. ಅವರ ಕೋಣೆಯಿಂದ ಎಂದೂ ನಾನು ಬರಿಗೈಲಿ ಹಿಂದಿರುಗಿದ ನೆನಪೇ ಇಲ್ಲ. ಏನಾದರೂ ತಿನ್ನುವಂತಹ ಸಿಹಿ ಅಥವಾ ತಿಂಡಿಗಳನ್ನು ನನ್ನ ಕೈಗೆ ತುರುಕಿಯೇ ಕಳಿಸುತ್ತಿದ್ದರು! ಎಂಥ ಪ್ರೀತಿ ! ತಾಯಿಯಂಥ ಪ್ರೇಮ ಅವರದು! ಸನ್ಯಾಸಿಗಳು ಸಾಧಾರಣವಾಗಿ ವಾತ್ಸಲ್ಯಮಯಿಗಳು. ಆದರೂ ಯಾರೊಡನೆಯೂ ಯಾವ ರೀತಿಯ ತುಲನೆಯನ್ನು ಮಾಡದೇ, ಅವರ ಪ್ರೀತಿಯು ವಿಶಿಷ್ಟವಾದದ್ದೆಂದು ನಾನು ಹೇಳಲೇಬೇಕು. ಅವರು ನಮ್ಮ ಪಾಲಿಗೆ ಅಯಸ್ಕಾಂತದಂತೆ ಇದ್ದರು. ಪ್ರತಿಯೊಬ್ಬರೂ, ಮಹಾರಾಜ್ ಅವರು ತಮ್ಮನ್ನೇ ಅತ್ಯಂತ ಹೆಚ್ಚಾಗಿ ಪ್ರೀತಿಸುತ್ತಿದ್ದಾರೆಂದೇ ಭಾವಿಸುತ್ತಿದ್ದರು. ಪ್ರತಿಯೊಬ್ಬರ ಕ್ಷೇಮ ಮತ್ತು ಹಿತದ ಬಗ್ಗೆ, ವಿಶೇಷವಾಗಿ

* ಹೈದರಾಬಾದಿನ ಭಕ್ತ.

ಬಡವರ ಬಗೆಗೆ, ಅವರ ಕಾಳಜಿ ಅದೆಷ್ಟು ಗಾಢವಾಗಿತ್ತು! ನಾನು ಒಂದು ಘಟನೆಯನ್ನು ನಿರೂಪಿಸುತ್ತೇನೆ. ಒಂದು ದಿನ ಅವರ ಕೋಣೆಗೆ ಹೋದಾಗ ಅವರು ಒಂದು ಪತ್ರವನ್ನು ಹಿಡಿದುಕೊಂಡಿದ್ದನ್ನು ನೋಡಿದೆ. ಕಣ್ಣುಗಳ ತುಂಬ ನೀರು ತುಂಬಿಕೊಂಡಿದ್ದ ಮಹಾರಾಜ್ ಅವರು  ವಿಪರೀತ ದುಃಖಿತರಾಗಿ ಕಂಡುಬರುತ್ತಿದ್ದರು. ನಾನು ಪ್ರಶ್ನಿಸಿದಾಗ ತಿಳಿದುಬಂದ ಸಂಗತಿ ಇದು. ಕೇರಳದ ದೂರದ ಮೂಲೆಯಿಂದ, ದುಃಖತಪ್ತ  ತಂದೆಯೊಬ್ಬ, ತನ್ನ ಮಗನ ಪರಿಸ್ಥಿತಿ ಅತ್ಯಂತ ವಿಷಮವಾಗಿರುವುದರಿಂದ ಸ್ವಲ್ಪ ಸಹಾಯಕ್ಕಾಗಿ ಮನವಿ ಮಾಡಿದ್ದ. ತಕ್ಷಣವೇ ಮಹಾರಾಜ್ ಅವರು, ತಮಗೆ ಪರಿಚಯವೇ ಇರದ ಆ ರೈತನಿಗೆ ಹತ್ತು ಸಾವಿರ ರೂಪಾಯಿಗಳನ್ನು ಕಳಿಸಿಕೊಡುವಂತೆ ನನಗೆ ಹೇಳಿದರು. ಯಾವುದೇ ಮಿತಿಗಳನ್ನೂ ಅರಿಯದಂತಹ ಪ್ರೀತಿ ಆ ದಿವ್ಯಪುರುಷನದು. ಮಹಾರಾಜ್‌ರ ಇಂತಹ ಪ್ರೀತಿಯ ಸಾಗರದಲ್ಲಿ, ಪರಿಪೂರ್ಣವಾದ ಜಾಗರೂಕತೆಯ ಪ್ರಜ್ಞೆ ಇರುವುದನ್ನು ನಾನು ಅನೇಕ ಬಾರಿ ಕಂಡಿದ್ದೇನೆ. ವಿಶೇಷವಾಗಿ, ಅವರ ಎಲ್ಲ ಕಾರ್ಯಗಳು ಅವರ ಕಣಕಣವೂ, ಸಂಪೂರ್ಣ ಮಾನವತೆಗಾಗಿ ಮತ್ತು ಅದರ ಒಳಿತಿಗಾಗಿಯೇ ಎನ್ನುವಂತೆ ಇದ್ದು, ಅವರ ಪ್ರವಚನಗಳು ಎಂದೂ ಯಾವುದೇ ವಿಶಿಷ್ಟವಾದ ಪಂಥ, ಸಮುದಾಯ, ಜಾತಿ ಯಾರನ್ನೂ ಗುರಿಯಾಗಿಸಿಕೊಂಡಿರುತ್ತಿರಲಿಲ್ಲ. ಯಾವಾಗಲೂ ಎಲ್ಲ ವಸ್ತುಗಳಲ್ಲಿಯೂ ಸಕಾರಾತ್ಮಕ ಅಂಶವನ್ನೇ ಅವರು ನೋಡುತ್ತಿದ್ದರು.

ನನ್ನ ಪರಿಮಿತ ಜ್ಞಾನ ಮತ್ತು ತಿಳಿವಳಿಕೆಯಲ್ಲಿ ಕೂಡ, ಮಹಾರಾಜ್ ಅವರಲ್ಲಿ ನಿರಂತರವಾಗಿ ದೈವೀಶಕ್ತಿಯೊಂದು ಕಾರ್ಯಪ್ರವೃತ್ತವಾಗಿರುತ್ತದೆನ್ನುವುದು ನನ್ನ ಭಾವನೆಯಾಗಿತ್ತು. ಅವರು ತಮ್ಮ ಅನುಭಾವೀ ಮನಸ್ಥಿತಿಯಲ್ಲಿ, ನಮಗೆ ತಿಳಿಯದಂತಹ ಅಪರಿಚಿತ ಪ್ರದೇಶಕ್ಕೆ ಅವರ ಮನಸ್ಸು ಹಾರಿಹೋಗಿದ್ದಂತಹ ಸ್ಥಿತಿಯಲ್ಲಿ ಅವರನ್ನು ನೋಡುವ ಅವಕಾಶ ನನಗಿತ್ತು. ಒಮ್ಮೆ ಮಹಾರಾಜ್‌ರು ಅಂತಹ ಮನಸ್ಥಿತಿಯಲ್ಲಿ ಇರುವಾಗ ನಾನು ಅವರ ಅನುಗ್ರಹಕ್ಕಾಗಿ ಬೇಡಿದೆ. ಆಗ ತಕ್ಷಣವೇ ಉತ್ತರ ಬಂದಿತು: "ಸರಿ. ನಾನು ನಿನ್ನನ್ನು ಅನುಗ್ರಹಿಸುತ್ತೇನೆ. ನೀನು ಅದನ್ನು ತೆಗೆದುಕೊಳ್ಳಬಲ್ಲೆಯಾ? ಅದು ಸಂಪೂರ್ಣವಾಗಿದೆ."

ನಮ್ಮ ಕಟ್ಟಡದ ತಳಪಾಯವನ್ನು ಆರಂಭಿಸುವ ಮುನ್ನ ಮಹಾರಾಜ್  ಅವರ ಅನುಮತಿಯಂತೆ, ನಾವು ಪೂಜೆಯನ್ನು ಮಾಡಿದೆವು. ಹಾಗೂ ಪೂಜಾಸ್ಥಳದಲ್ಲಿ *ಗೀತೆಯ* ಬದಲು ಕಥಾಮೃತವನ್ನು ಇರಿಸಿದ್ದೆವು. ನಂತರ ವಾರ್ಷಿಕ ಸತ್ಸಂಗವೊಂದರಲ್ಲಿ ನಾನು ಇದನ್ನು ಪೂಜ್ಯ ಮಹಾರಾಜ್‌ರಿಗೆ ಹೇಳಿದಾಗ, ತತ್ ಕ್ಷಣವೇ ಅವರು ಹೇಳಿದರು: "ಹೌದು, ಶ್ರೀ ರಾಮಕೃಷ್ಣರು, ಈ ಮನೆಯ ಪ್ರತಿಯೊಂದು ಗೋಡೆಯಲ್ಲಿಯೂ ಇದ್ದಾರೆ." ಗೋಡೆಗಳು ಬೇರೆ ಬೇರೆಯಾಗಿ ಕಂಡರೂ, ಅವೆಲ್ಲವೂ ಇದೇ ಮನೆಗೆ ಸೇರಿರುತ್ತವೆ ಎಂಬುದನ್ನು ಪ್ರಾಯಶಃ ಈ ಮಾತುಗಳ ಮೂಲಕ ನನಗೆ ಅರ್ಥಮಾಡಿಸಬೇಕೆಂದು ಮಹಾರಾಜ್‌ರು ಇಚ್ಛಿಸಿದರು ಎನಿಸುತ್ತದೆ. ಅಂದರೆ ಕಥಾಮೃತ ಮತ್ತು *ಗೀತೆಯ* ನಡುವೆ ಯಾವ ವ್ಯತ್ಯಾಸವೂ ಇಲ್ಲ. ಎಲ್ಲವೂ ರಾಮಕೃಷ್ಣರದೇ ಮಾತುಗಳು. ಶ್ರೀ ರಾಮಕೃಷ್ಣರು ಎಲ್ಲ ವಸ್ತುಗಳಲ್ಲಿಯೂ  ಇದ್ದಾರೆ.

ಬಿಡುವಿಲ್ಲದ ವ್ಯವಹಾರದ ಕಾರ್ಯಕ್ರಮಗಳ ನಡುವೆ, ನನ್ನ ಧ್ಯಾನದಲ್ಲಿ ಅಸ್ಥಿರತೆ ಉಂಟಾಗತೊಡಗಿತು. ಒಂದು ದಿನ ಮಹಾರಾಜ್‌ರಿಗೆ ಹೇಳಿದೆ: "ಮಹಾರಾಜ್, ವ್ಯವಹಾರದ ಚಿಂತೆಗಳು ಧ್ಯಾನ ಮಾಡುವಾಗ ನನ್ನ ಮನಸ್ಸನ್ನು ಕಲಕುತ್ತಿರುವುದರಿಂದ ನನಗೆ ಧ್ಯಾನ ಮಾಡಲು ಸಾಧ್ಯವಾಗುತ್ತಿಲ್ಲ: "ಆಗ ಅವರು ಹೇಳಿದರು" ಸರಿ, ಹಾಗಿದ್ದಲ್ಲಿ ಜಪಮಾಡು. ಠಾಕೂರರ ಬಗೆಗೆ ಆಲೋಚಿಸು ಮತ್ತು ಕ್ರಮಬದ್ಧವಾಗಿ ಬೆಳಗ್ಗೆ ಮತ್ತು ಸಾಯಂಕಾಲ ಪೂಜೆ ಮಾಡು. ಯಾರೇ ಆಗಲೀ, ಎಷ್ಟೇ ಕಾರ್ಯನಿರತರಾಗಿದ್ದರೂ ಎಷ್ಟೇ ತಡವಾದರೂ ದಿನದ ಅಂತ್ಯದಲ್ಲಿ ಜಪಮಾಡಬೇಕು. ನೀವು ನಿಮ್ಮ ಜಪಸರವನ್ನು ಉಪವಾಸವಿಡಲಾರಿರಿ."

'ಪೂಜೆ' ಯ ಹಿಂದಿನ ದಿನ ನನಗೆ ಸ್ಪಷ್ಟವಾಗಿ ನೆನಪಿರುವಂತೆ – ನಾಳೆ ನಾನು ಏನು ಮಾಡಲಿ? ಎಂದು ಮಹಾರಾಜ್‌ರನ್ನು ಕೇಳಿದ್ದೆ. ತತ್‌ಕ್ಷಣವೇ ಅವರು ಉತ್ತರಿಸಿದ್ದರು: "ಸುಮ್ಮನೆ, ಬೆಕ್ಕಿನಮರಿಯಂತೆ 'ಮಿಯಾಂವ್'

ಎಂದು ಕೂಗು. ಉಳಿದಿದ್ದನ್ನು, ಅನಂತಳೂ, ಶಾಶ್ವತಳೂ ಆದ ಆ ತಾಯಿಯೇ ಮಾಡುತ್ತಾಳೆ.'' ಪೂಜ್ಯ ಮಹಾರಾಜ್ ಮತ್ತು ನನ್ನ ನಡುವಿನ ಪರಸ್ಪರ ಬಾಂಧವ್ಯ ಕ್ರಮೇಣ, ನಾನು ಒಂದು ಮಗು, ಅವರು ನನ್ನನ್ನು ರಕ್ಷಿಸುವ ತಂದೆ ಎಂಬ ಭಾವನೆಯ ಹಂತವನ್ನು ತಲುಪಿತ್ತು. ಅನೇಕ ನಿದರ್ಶನಗಳಿದ್ದರೂ ಈ ಒಂದು ಮಾತ್ರ ನನ್ನ ನೆನಪಿನಲ್ಲಿ ಕೆತ್ತಿದಂತೆ ಉಳಿದಿದೆ. ಛತ್ತೀಸ್‌ಗಢದಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಒಂದು ಕಾಲದಲ್ಲಿ ನಾನು ನಿರ್ಧಾರ ಮಾಡಿಬಿಟ್ಟಿದ್ದೆ ಹಾಗೂ ಮಹಾರಾಜ್‌ರ ಒಪ್ಪಿಗೆ ಮತ್ತು ಆಶೀರ್ವಾದ ಪಡೆಯಲು ಹರ್ಷದಿಂದ ಅವರ ಬಳಿಗೆ ಹೋದೆ. ಮಹಾರಾಜ್‌ರು ತತ್‌ಕ್ಷಣ ಹರಿತವಾಗಿ ವಿರೋಧಿಸಿದರು: "ಬೇಡ. ಇದು ನಿನ್ನ ಆಧ್ಯಾತ್ಮಿಕ ಜೀವನಕ್ಕೆ ಅಡಚಣೆಯನ್ನುಂಟು ಮಾಡುತ್ತದೆ.'' ಆದ್ದರಿಂದ, ಸಹಜವಾಗಿಯೇ ನಾನು ಯೋಜನೆಯನ್ನು ಮುಂದುವರಿಸಲಿಲ್ಲ. ಆಶ್ಚರ್ಯಕರವೆನ್ನುವಂತೆ, ಆರು ತಿಂಗಳುಗಳ ಒಳಗಾಗಿಯೇ ಆ ನಿರ್ದಿಷ್ಟ ಉದ್ಯಮವು ಸಾಕಷ್ಟು ಕುಸಿತಕಂಡಿತ್ತು ಎನ್ನುವುದನ್ನು ನಾನು ತಿಳಿದುಕೊಂಡೆ. ನಾನೇನಾದರೂ ಆ ಕಾರ್ಖಾನೆಯನ್ನು ಸ್ಥಾಪಿಸಿದ್ದಿದ್ದರೆ, ಖಂಡಿತವಾಗಿಯೂ ನನ್ನ ಪಾಲಿಗೆ ಅದೊಂದು ವಿಪತ್ತೇ ಆಗಿರುತ್ತಿತ್ತು. ಈ ರೀತಿಯಲ್ಲಿ ಮಹಾರಾಜ್‌ರು ನನ್ನನ್ನು ರಕ್ಷಿಸಿದ್ದರು. ನನಗೆ ಮುಂದೆ ಉಂಟಾಗಬಹುದಾದ ಅಪಾಯದ ಮುಂಗಾಣ್ಕೆ ಅವರಿಗಿದ್ದಿತೇ? ಈಗಲೂ ಭಯ ಮತ್ತು ಆಶ್ಚರ್ಯಗಳುಂಟಾಗುತ್ತವೆ ನನಗೆ!

೧೯೮೬–೮೭ರ ಅವಧಿಯಲ್ಲಿ, ಪೂಜ್ಯ ಮಹಾರಾಜ್ ಅವರಿಂದ ನನ್ನ ಮನೆಯಲ್ಲಿ ವಾರ್ಷಿಕ ಸತ್ಸಂಗವು ಪ್ರಾರಂಭಗೊಂಡಿತು. ಮಹಾರಾಜ್‌ರು ಹೈದರಾಬಾದಿನಲ್ಲಿ ಇರುವವರೆಗೂ ಈ ಸಂದರ್ಭದಲ್ಲಿ ಅವರ ಘನತೆವೆತ್ತ ಉಪಸ್ಥಿತಿಯಿರುತ್ತಿದ್ದುದು ನಮ್ಮ ಸೌಭಾಗ್ಯವಾಗಿತ್ತು. ಮಹಾರಾಜ್‌ರು ಮಠ ಮತ್ತು ಮಿಷನ್‌ನ ಅಧ್ಯಕ್ಷರಾದ ನಂತರ ಈ ಸತ್ಸಂಗಕ್ಕೆ ಅವರು ಉಪಸ್ಥಿತರಾಗಲು ಸಾಧ್ಯವಿರದಿದ್ದರೂ, ಪ್ರತಿವರ್ಷವೂ ತಮ್ಮ ಆಶೀರ್ವಚನವನ್ನು ತಪ್ಪದೆ ಕಳಿಸುತ್ತಿದ್ದರು. ಅಲ್ಲದೇ, ಸತ್ಸಂಗಕ್ಕೆ ಯಾರು ಬಂದಿದ್ದರೆಂದೂ, ಅವರ ಹೆಸರುಗಳನ್ನು, ಹೊಸಬರು ಯರಾದರು ಬಂದಿದ್ದರೇ ಎಂಬುದನ್ನು ಅವರು ತಿಳಿದುಕೊಳ್ಳಲು ಇಚ್ಛಿಸುತ್ತಿದ್ದರು. ಮನೆಯಲ್ಲಿರುವ ಸೇವಕರೂ ಸತ್ಸಂಗದಲ್ಲಿ ಭಾಗವಹಿಸಬೇಕೆಂದು ಮಹಾರಾಜ್‌ರು ಒತ್ತಾಯಿಸುತ್ತಿದ್ದರು, ಈ ಭಾಗವಹಿಸುವಿಕೆಯಿಂದ ಅವರು ಕೂಡ ಆಧ್ಯಾತ್ಮಿಕ ಉದ್ಧಾರ ಪಡೆದು, ಅದೇ ಕುಟುಂಬದ ಸದಸ್ಯರೆಂದು ಪರಿಗಣಿಸಲ್ಪಡಬಹುದು ಎಂಬುದು ಅವರ ಅಭಿಮತವಾಗಿತ್ತು. ಮಹಾರಾಜ್‌ಜೀ ನನ್ನ ಪತ್ನಿಗೆ ಯಾವಾಗಲೂ ಸಲಹೆ ನೀಡುತ್ತಿದ್ದರು: "ಗೃಹಿಣಿಯಾಗುವುದಕ್ಕಿಂತ ಗೃಹವನ್ನು ಸೃಷ್ಟಿಮಾಡುವವಳಾಗಬೇಕು''. ಅವರು ಹೇಳುತ್ತಿದ್ದರು "ಅಳಿಯ ಅಥವಾ ಸೊಸೆ ಎಂದು ಹೇಳಬೇಡಿ ಪ್ರೀತಿಯ ಮಗ ಅಥವಾ ಪ್ರೀತಿಯ ಮಗ ಎಂದು ಹೇಳಿ.''

ನಿಜವಾದ ಶಿಕ್ಷಣ ಮತ್ತು ತಂದೆ–ತಾಯಿಯ ಸಮರ್ಪಕ ಮಾರ್ಗದರ್ಶನ ಮಾತ್ರವೇ ಮಕ್ಕಳಲ್ಲಿ ಅಭಿವೃದ್ಧಿ ತರಬಲ್ಲದು ಎಂದು ಮಹಾರಾಜ್‌ರು ದೃಢವಾಗಿ ನಂಬಿದ್ದರು. ನಾಯಿಗಳು, ಹಂಸಗಳು, ಹಕ್ಕಿಗಳು ಮುಂತಾದ ಎಲ್ಲ ಪ್ರಾಣಿಗಳೊಡನೆಯೂ ಸಮಾನ ಸ್ನೇಹದಿಂದಿದ್ದು ಅವರು ಅವುಗಳನ್ನು ಪ್ರೀತಿಸುತ್ತಿದ್ದರು. ಅವರ ಪ್ರೀತಿಯ ಸಾನ್ನಿಧ್ಯ ಮತ್ತು ಅವರ ಧ್ವನಿಯು ಮಾಂತ್ರಿಕ ಶಕ್ತಿಯಿದೆಯೆಂಬಂತೆ ಅವುಗಳನ್ನು ಮೌನವಾಗಿಸುತ್ತಿದ್ದವು. ಬಹುಶಃ ಆ ಪ್ರಾಣಿಗಳು ಸಹ ಅವರ ಪ್ರೀತಿಯನ್ನು ಅರಿಯುತ್ತಿದ್ದವೆನಿಸುತ್ತದೆ. ನಮ್ಮ ರಂಗನಾಥಾನಂದಜೀಯವರು ಹೀಗಿದ್ದರು. ನಾನು ಈ ದಿನ ಏನಾಗಿದ್ದೇನೆಯೋ ಅದು, ನನ್ನ ಜೀವಮಾನವಿಡೀ ಮಾರ್ಗದರ್ಶನ ಮಾಡಿರುವ ಮಹಾರಾಜ್‌ಜೀಯವರ ಕರುಣೆಯ ಆಶೀರ್ವಾದಗಳ ಫಲ. ನಾನು ನಿಜವಾಗಿಯೂ ಧನ್ಯನಾಗಿದ್ದೇನೆ.*

* * * *

---

* ಮೂಲ ಬಂಗಾಳೀ ಲೇಖನ ಎಸ್. ಮುಜುಂದಾರರಿಂದ ಇಂಗ್ಲೀಷಿಗೆ ಅನುವಾದಗೊಂಡಿದೆ.

# ೧೨೫. ಶ್ರೇಷ್ಠ ಸನ್ಯಾಸಿ

–ಶಾಂತಿ ದೇವರಾಜ್ ಗುರುಮೂರ್ತಿ*

ರಾಮಕೃಷ್ಣ ಪಂಥದ ಸನ್ಯಾಸಿಗಳೊಡನೆ, ಬಹಳ ಮುಂಚಿನಿಂದಲೇ ನನ್ನ ಸಹಚರ್ಯೆಗೆ, ವ್ಯಕ್ತಿತ್ವದಲ್ಲಿ ತಂದೆಯಂತೆಯೂ, ಹೃದಯದಲ್ಲಿ ತಾಯಿಯಂತೆಯೂ ಇದ್ದ ಒಬ್ಬ ಸ್ವಾಮೀಜಿಯವರ ಮಾರ್ಗದರ್ಶನಕ್ಕೆ ನಾನು ಋಣಿಯಾಗಿದ್ದೇನೆ. ದಿವಂಗತ ಸ್ವಾಮಿ ಸಿದ್ಧಾತ್ಮಾನಂದರು, ನಾನು ಪಾಲಿಸಬೇಕೆಂದಿದ್ದ ಆದರ್ಶಗಳ ದೃಢ ಬೆಂಗಲಿಗರಾಗಿದ್ದರು.ಮತ್ತು ನನಗೆ ಆವಶ್ಯಕವಾಗಿದ್ದ ಮಾರ್ಗದರ್ಶನವನ್ನು ನೀಡಿದರು. ಅತ್ಯಂತ ಹೃದಯ ವೈಶಾಲ್ಯ, ಧಾರ್ಮಿಕತೆಗಳುಳ್ಳ ಸನ್ಯಾಸಿಗಳಾಗಿದ್ದ ಅವರು ನನ್ನನ್ನು ಬೌದ್ಧಿಕವಾಗಿ ಪೋಷಿಸಿದರು ಮತ್ತು ಪೂರ್ವಾಸ್ತಿತ್ವದಲ್ಲಿದ್ದ ಆಧ್ಯಾತ್ಮಿಕ ಪರಿಕಲ್ಪನೆಗಳನ್ನು ಮೂರ್ತರೂಪದ ವಾಸ್ತವತೆಯ ಆಧಾರದ ಸತ್ಯಗಳ ಮೂಲಕ ಸ್ಪಷ್ಟಗೊಳಿಸಿದರು. ಪೂಜ್ಯ ಸ್ವಾಮಿ ರಂಗನಾಥಾನಂದರವರ ರೂಪದಲ್ಲಿ ನಾನು ಶ್ರೇಷ್ಠರಾದ ಮತ್ತು ಗಮನಾರ್ಹರಾದ ಸನ್ಯಾಸಿಯೊಬ್ಬರನ್ನು ಭೇಟಿ ಮಾಡಬಹುದೆಂದು, ಸ್ವಾಮಿ ಸಿದ್ಧಾತ್ಮಾನಂದರು ಭಾವಿಸಿದರು.

ನಾನು ಹುಟ್ಟಿದ್ದು, ಬೆಳೆದದ್ದು ಸಿಂಗಪುರದಲ್ಲಿ. ಸ್ವಾಮಿ ರಂಗನಾಥಾನಂದ ರೊಡನೆ ನನ್ನ ಸಹಚರ್ಯೆಯು ನಾನು ಸುಮಾರು ಇಪ್ಪತ್ತು ವರ್ಷದವಳಾಗಿದ್ದಾಗ, ಸಿಂಗಪೂರದಲ್ಲಿಯೇ ಪ್ರಾರಂಭವಾಯಿತು. ಅವರನ್ನು ಭೇಟಿಯಾದ ಸಮಯದಿಂದಲೂ, ಅವರು ನನ್ನ ಯುವಮನಸ್ಸಿನ ಮೇಲೆ ಆಳವಾದ ಪ್ರಭಾವವನ್ನು ಬೀರಿದ್ದಾರೆ. 'ಅವಿನಾಶಲಿಂಗಮ್ ಗೃಹವಿಜ್ಞಾನ ಮಹಿಳಾ ವಿಶ್ವವಿದ್ಯಾಲಯ'ದಲ್ಲಿ ನಾನು ಅಧ್ಯಯನಮಾಡಬೇಕು ಎನ್ನುವ, ಸ್ವಾಮೀಜಿಯ ಸಲಹೆ ನನ್ನ ಜೀವನದಲ್ಲಿ ಒಂದು ಅತ್ಯಂತ ಮುಖ್ಯ ಘಟನೆ ಎಂದು ಸಾಧಿತವಾಯಿತು. ವಿಶ್ವವಿದ್ಯಾಲಯದ ಆ ಮೂರು ವರ್ಷಗಳು ಅತ್ಯಂತ ಅಮೂಲ್ಯವಾಗಿದ್ದವು. ದಕ್ಷಿಣಭಾರತದಲ್ಲಿ ಸ್ವಾಮೀಜಿಯವರು ವಾಸಿಸುತ್ತಿದ್ದ ಎಲ್ಲ ಸ್ಥಳಗಳನ್ನೂ ನಾನು ನೋಡಿಬಂದೆ ಹಾಗೂ ಅವರ ಎಲ್ಲ ಪ್ರವಚನಗಳಲ್ಲಿಯೂ ಉಪಸ್ಥಿತಳಿದ್ದುದರಿಂದ ಸ್ವಾಮೀಜಿವರೊಡನೆ ನನ್ನ ಸಂಪರ್ಕ–ಬಾಂಧ್ಯವ್ಯಗಳು ಅತ್ಯಂತ ಗಾಢವಾದವು, ಸ್ವಾಮೀಜಿಯವರ ಕೇಂದ್ರಗಳಲ್ಲಿ ನಾನು ಅವರನ್ನು ಭೇಟಿಮಾಡಿದಾಗ, ಅವರನ್ನು ನಾನು ಹತ್ತಿರದಿಂದ ವೀಕ್ಷಿಸುವ ಮತ್ತು ಸ್ವಾಮೀಜಿಯವರನ್ನು ಒಬ್ಬ ವ್ಯಕ್ತಿಯಂತೆ ಕಂಡು ಪ್ರಶಂಸಿಸುವ ಅವಕಾಶ ನನಗೆ ದೊರೆಯಿತು.

ನನ್ನ ಜೀವನದಲ್ಲಿ ಸ್ವಾಮಿ ರಂಗನಾಥಾನಂದಜಿಯವರು ಬೀರಿದ ಪ್ರಭಾವವನ್ನು ನೆನಪು ಮಾಡಿಕೊಂಡಾಗ, ಹೀಗೆ ಹೇಳಬಹುದು: ವೇದಾಂತದ ಸತ್ಯಗಳನ್ನು ಸಮಕಾಲೀನ ಸಂದರ್ಭದಲ್ಲಿ, ವಿಶ್ವಶ್ರೋತೃಗಳ ಮುಂದೆ ಪ್ರತಿಪಾದಿಸಿದ್ದು, ಸ್ವಾಮೀಜಿಯವರು ವಿಶ್ವಕ್ಕೆ ನೀಡಿದ ಘನವಾದ ಆಸ್ತಿ. ಮನುಷ್ಯಪ್ರಯತ್ನದ ಅನೇಕ ಮೂಲಗಳಿಂದ ಜ್ಞಾನವನ್ನು ಕ್ರೋಢೀಕರಿಸಿಕೊಂಡಿದ್ದ ಅವರ ಪ್ರವಚನಗಳು, ನಮ್ಮನ್ನು ಆಲೋಚಿಸಲು, ವಿಶ್ಲೇಷಿಸಲು, ವಿಶ್ವಾತ್ಮದೊಡನೆ ಅದರ ಸಂಬಂಧವನ್ನು ಕಾಣಲು ಪ್ರಚೋದಿಸುತ್ತಿದ್ದವು. ಸ್ವಾಮೀಜಿಯವರ ಪ್ರವಚನಗಳನ್ನು ಕೇಳಿದ ಯಾರೇ ಆದರೂ, ಅವರ ಜ್ಞಾನದ ವೈಶಾಲ್ಯ ಮತ್ತು ಅವರ ಗಂಭೀರತೆ, ಪ್ರಶಾಂತತೆಗಳಿಂದ ಮಂತ್ರಮುಗ್ಧರಾಗುತ್ತಿದ್ದರು.

ವೇದಾಂತದ ಪರಿವ್ರಾಜಕ ರಾಯಭಾರಿಯಾಗಿ, ಯಾವಾಗಲೂ ಪ್ರಯಾಣದಲ್ಲಿ ನಿರತರಾಗಿರುತ್ತಿದ್ದ ಸ್ವಾಮೀಜಿಯವರು, ಅಧ್ಯಯನ ಮಾಡಲು, ಪ್ರವಚನ ನೀಡಲು, ಸಂಸ್ಥೆಗಳನ್ನು ನಡೆಸಲು, ಸಂಸ್ಥೆಗಾಗಿ

---

* ಯು.ಎಸ್.ಎ.ಯ ಸ್ಯಾನ್ ಡಿಯಾದಲ್ಲಿನ ಭಕ್ತೆ.

ಹಣಸಂಗ್ರಹಿಸಲು, ಹಾಗೂ ಬೇರೆಯವರಿಗಾಗಿ ಸಮಯ ಮೀಸಲಿಡಲು ಕಾಲವನ್ನು ಹೇಗೆ ಹೊಂದಿಸುತ್ತಿದ್ದರು ಎಂದು ಆಶ್ಚರ್ಯವಾಗುತ್ತದೆ. ನನ್ನ ಇಡೀ ಜೀವನದಲ್ಲಿ ನನ್ನ ಕಷ್ಟದ ಸಮಯದಲ್ಲಿ, ರಂಗನಾಥಾನಂದರು ನನಗೆ ಆವಶ್ಯಕವಾಗಿದ್ದ ಶಕ್ತಿಯನ್ನು ನೀಡಿದ್ದರು. ಸಂಪೂರ್ಣವಾಗಿ ಸನ್ಯಾಸಿಗಳಾಗಿದ್ದರೂ ಸ್ವಾಮೀಜಿಯವರು ಬೇರೆಯವರ ನೋವನ್ನು ಅರಿತುಕೊಳ್ಳುತ್ತಿದ್ದು, ಅನುಕಂಪ ತೋರಿಸುವವರಾಗಿದ್ದರು.

ನಾನು ಶಕ್ತ ಸಮರ್ಥ ವ್ಯಕ್ತಿಯಾಗಿ ವಿಕಾಸ ಹೊಂದಬೇಕೆಂದು ಸ್ವಾಮಿ ರಂಗನಾಥಾನಂದರು ಇಷ್ಟಪಟ್ಟಿದ್ದರು. ವಾಸ್ತವವಾಗಿ, ರಾಮಕೃಷ್ಣ ಪಂಥದ ಸನ್ಯಾಸಿಗಳ ಒಡನಾಟ ವ್ಯಕ್ತಿಯನ್ನು ಸಶಕ್ತನನ್ನಾಗಿ ಮಾಡಬೇಕೇ ವಿನಾಃ ದುರ್ಬಲನನ್ನಾಗಿಸಬಾರದು. ಸ್ವಾಮಿ ರಂಗನಾಥಾನಂದರ ಸಲಹೆಯಂತೆ ನಾನು, ಪರಮಪೂಜ್ಯ ಸ್ವಾಮಿ ವೀರೇಶ್ವರಾನಂದಜೀ ಮಹಾರಾಜ್‌ರಿಂದ ಮಂತ್ರದೀಕ್ಷೆ ಪಡೆದೆ. ನನ್ನ ಜೀವನ ಪರ್ಯಂತ ನಾನು ಸ್ವಾಮೀಜಿಯವರೊಡನೆ ಸಂಪರ್ಕದಲ್ಲಿದ್ದೆ, ಅವರು ತಮ್ಮ ಕೈಯಿಂದ ಸ್ವತಃ ಏನಾದರೂ ಬರೆದು ಕಳಿಸುವಷ್ಟು ದಯಾಳುವಾಗಿದ್ದರು. ಈಗಲೂ ಆ ಪತ್ರಗಳನ್ನು ನಾನು ರಕ್ಷಿಸಿಟ್ಟಿದ್ದೇನೆ. ನನ್ನ ಪತಿ ರಾಮಗುರುಮೂರ್ತಿ ಮತ್ತು ನಾನು ಭಾರತದಿಂದ ಅಮೆರಿಕಕ್ಕೆ ಹೊರಟಾಗ, ಇಪ್ಪತ್ತು ವರ್ಷಗಳ ತನಕ ಸ್ವಾಮೀಜಿಯವರನ್ನು ನಾವು ನೋಡಲಾಗುವುದಿಲ್ಲ ಎಂಬುದನ್ನು ಊಹಿಸಿಯೂ ಇರಲಿಲ್ಲ. ಅವರು ರಾಮಕೃಷ್ಣ ಮಿಷನ್‌ನ ಅಧ್ಯಕ್ಷರಾದಾಗ, ಬಂದು ವೈಯಕ್ತಿಕವಾಗಿ ಅವರನ್ನು ಭೇಟಿಮಾಡಿ, ಆಶೀರ್ವಾದ ಪಡೆಯಬೇಕೆಂಬುದು ನನ್ನ ಆಸೆಯಾಗಿತ್ತು. ಆದರೆ, ಆ ವೇಳೆಗಾಗಲೇ ಸ್ವಾಮೀಜಿಯವರ ಆರೋಗ್ಯ ತೀರ ಕ್ಷೀಣಿಸಿದ್ದುದ್ದರಿಂದ ಅದು ಸಾಧ್ಯವಾಗುತ್ತಿರಲಿಲ್ಲ, ಹಾಗೂ ಅವರನ್ನು ನೋಡುವ ಸೌಭಾಗ್ಯ ನಮಗಿರುವುದೋ ಇಲ್ಲವೋ ಎಂಬ ಭಯವೂ ನಮಗಿತ್ತು. ಆದ್ದರಿಂದ ಅವರ ಬಗೆಗೆ ನನ್ನ ಪ್ರೀತಿ, ಆರಾಧನೆ ಪ್ರಶಂಸೆಗಳನ್ನು ಅಭಿವ್ಯಕ್ತಿಸುವ ಒಂದು ಕವನವನ್ನು ಬರೆದು ಅವರಿಗೆ ಕಳಿಸಿದೆ. ಖಂಡಿತವಾಗಿಯೂ, ಸ್ವಾಮೀಜಿಯವರು, ಆ ಕವನವನ್ನು ಓದಿದ್ದನ್ನು ಕೇಳಿಸಿಕೊಂಡಿದ್ದರು ಮತ್ತು ಕವನವು ಉತ್ತಮವಾಗಿದೆ ಎಂದು ತಮಗೆ ಎನಿಸಿತು ಎಂದೂ ಪತ್ರ ಬರೆದರು.

ಸ್ವಲ್ಪಮಟ್ಟಿಗೆ, ನನಗೆ ಸ್ವಾಮಿ ವಿವೇಕಾನಂದರನ್ನು ನೆನಪಿಗೆ ತರುವಂತೆ, ಸ್ವಾಮೀಜಿಯವರು ಸ್ಫೂರ್ತಿಯುತ ಜೀವನ ನಡೆಸಿದರು. ಅವರು ರಾಮಕೃಷ್ಣ ಮಿಷನ್‌ನ ಅಧ್ಯಕ್ಷರಾಗಿದ್ದಾಗ, ಅವರನ್ನು ಭೇಟಿ ಮಾಡಲು ಸಾಧ್ಯವಾಗಲಿಲ್ಲವೆನ್ನುವುದು ನನ್ನ ಮಟ್ಟಿಗೆ ಗಾಢವಾದ ವಿಷಾದವಾಗಿ ಉಳಿದಿದೆ. ಹಾಗಿದ್ದರೂ, ಅವರಿಂದ ಕಲಿತ ವೇದಾಂತದ ಒಳದೃಷ್ಟಿಗಾಗಿ ನಾನು ಅವರಿಗೆ ಯಾವಾಗಲೂ ಕೃತಜ್ಞಳಾಗಿರುತ್ತೇನೆ. ದೈವೀಸತ್ಯವಾದ ಜ್ಞಾನದಲ್ಲಿ ನಿಜವಾದ ಧರ್ಮವು ಹೇಗೆ ಜೀವಿಸಬೇಕು ಎಂಬುದನ್ನು ಅವರು ನಮಗೆ ಬೋಧಿಸಿದರು.

* * * *

## ೧೨೬. ಮಹಾರಾಜ್ ಅವರು ನನ್ನ ಸಂಪೂರ್ಣ ಜೀವನವನ್ನು ಪರಿವರ್ತಿಸಿದರು

**–ಶೀಲಾ ಸಬರ್‌ವಾಲ್***

ನನ್ನ ತಾಯಿ ಸಿಖ್ ಧರ್ಮಕ್ಕೆ ಸೇರಿದವರೂ, ತಂದೆ ಕಟ್ಟಾ ಆರ್ಯ ಸಮಾಜದವರೂ ಆಗಿದ್ದರು. ನನ್ನ ಹನ್ನೊಂದನೆಯ ವಯಸ್ಸಿನಿಂದಲೇ ವರ್ಣಚಿತ್ರ ರಚಿಸಲು ಆರಂಭಿಸಿದ್ದೆ. ಆಗ ಅದೊಂದು ತೀವ್ರವಾದ ಬಯಕೆ ಅಥವಾ ಭಾವೋದ್ವೇಗವಾಗಿರಲಿಲ್ಲ, ಬರಿಯ ಆಟವಾಗಿತ್ತು. ಬಹುಶಃ, ಈ ಜಗತ್ತಿನಿಂದ ಪ್ರಶಂಸೆ ಮತ್ತು ಚಪ್ಪಾಳೆ ಗಿಟ್ಟಿಸಲು ನಾನು ಕ್ಯಾನ್ವಾಸಿನ ಮೇಲೆ ಚಿತ್ರ ಬಿಡಿಸುತ್ತಿದ್ದೆ. ನನ್ನ ಶಿಕ್ಷಕರು ಅನೇಕ ಬಾರಿ ಹೇಳುತ್ತಿದ್ದರು: "ಒಂದು ಬಾರಿ ನೀನು ಹವ್ಯಾಸಿತನದ ಗೆರೆಯನ್ನು ದಾಟಿದ ನಂತರ, ನೀನು ಎಂದಿಗೂ ಚಿತ್ರಕಲೆಯನ್ನು ಬಿಡುವುದಿಲ್ಲ, ಅದು ನಿನ್ನ ಸಹಜ ಪ್ರವೃತ್ತಿಯೇ ಆಗಿಬಿಡುತ್ತದೆ." ಹಲವಾರು ದಶಕಗಳಿಂದ ಅದು ಹಾಗೆಯೇ ಆಗಿದೆ.

ವಿಧಿ ಹಾಗೂ ವಿವಾಹ ನನ್ನನ್ನು ಲಾಹೋರಿನಿಂದ ಗ್ರಾಮೀಣ ಬಂಗಾಳದ ಹೃದಯಭಾಗ ಹಾಗೂ ಸಂತಾಲ್ ಆದಿವಾಸಿಗಳ ಬಳಿಗೆ ಕರೆತಂದಿದೆ. ಈ ಬದಲಾವಣೆಯು ಶ್ರೀ ರಾಮಕೃಷ್ಣರ ಲೀಲೆಯೆಂದು ನಾನು ನಂಬಿದ್ದೇನೆ. ನಾನು ಅಲ್ಲಿಯೇ ಇರಬೇಕೆಂದು ಅವರು ನಿರ್ಧರಿಸಿದ್ದರು. ಜೀವನವು ತೀವ್ರವಾದ ಒಂದು ತಿರುವನ್ನು ತೆಗೆದುಕೊಂಡಿತ್ತು. ನಾನು ಪರಿಶುದ್ಧರೂ, ಸತ್ಯಸಂಧರೂ ಆದ ಗ್ರಾಮೀಣ ಜನರ ನಡುವೆ ವಾಸಿಸುತ್ತಿದ್ದೆ. ಅವರನ್ನು ನಾನು ಅಧ್ಯಯನ ಮಾಡಿದೆ. ಅವರೊಡನೆಯೇ ಕುಳಿತೆ ಮತ್ತು ಅವರ ಹಬ್ಬಗಳಲ್ಲಿ ಭಾಗವಹಿಸಿದೆ. ಅಲ್ಲಿನ ಭತ್ತದ ಗದ್ದೆಗಳು, ಮಣ್ಣಿನ ಮನೆಗಳು ಮತ್ತು ಅವರ ಜೀವನದ ಸರಳ ರೀತಿಗಳು ನನ್ನನ್ನು ಆಕರ್ಷಿಸಿದವು ಮತ್ತು ಚಿತ್ರಿಸಲು ನನಗೆ ಸ್ಫೂರ್ತಿ ನೀಡಿದವು. ಏಕಾಂತದಲ್ಲಿ ಕ್ಯಾನ್ವಾಸಿನ ಮುಂದೆ ಕುಳಿತಾಗಲೆಲ್ಲಾ ಅವು ಪ್ರತಿ ಬಾರಿಯೂ, ನನ್ನ ಚಿತ್ರ ಕಲೆಯ ವಸ್ತುಗಳಾದವು.

ನಂತರ ೧೯೫೦ರ ಕಡೆಯ ಭಾಗದಲ್ಲಿ ಒಂದು ದಿನ, ಶ್ರೀ ರಾಮಕೃಷ್ಣರು ನನ್ನ ಬದುಕಿನಲ್ಲಿ ಮತ್ತೊಂದು ತಿರುವನ್ನು ತಂದು, ಬದುಕಿನ ಹಾದಿಯನ್ನು ಶ್ವಾಶ್ವತವಾಗಿ ಬದಲಾಯಿಸಿದರು. ಕೋಲ್ಕತ್ತಾದ 'ಗಾರ್ಡನ್ ರೀಚ್'ನಲ್ಲಿ ನಡೆಯುತ್ತಿದ್ದ ನಿರ್ದಿಷ್ಟ ಸನ್ಯಾಸಿಯೊಬ್ಬರ ಪ್ರವಚನಕ್ಕೆ, ನನ್ನ ಸ್ನೇಹಿತರೊಬ್ಬರು ನನ್ನನ್ನು ಕರೆದುಕೊಂಡು ಹೋದರು. ನನ್ನ ಹೃದಯದ ಆಳವನ್ನು ತಟ್ಟುವಷ್ಟು ಸುಂದರವಾಗಿಯೂ, ಆಕರ್ಷಕವಾಗಿಯೂ ಇದ್ದಿತು, ಆ ಪ್ರವಚನ. ಬೇಲೂರು ಮಠದಲ್ಲಿ ಆಕಸ್ಮಿಕವಾಗಿ ಆ ಸಂನ್ಯಾಸಿಗಳನ್ನು ಮತ್ತೆ ಭೇಟಿ ಮಾಡುವ ತನಕವೂ ಅನೇಕ ತಿಂಗಳುಗಳವರೆಗೆ, ನಾನು ಆ ಮಾತುಗಳ ಬಗೆಗೇ ಚಿಂತಿಸುವಂತೆ ಪ್ರಚೋದಿಸಿದ್ದವು ಆ ಮಾತುಗಳು. ಬೇಲೂರು ಮಠಕ್ಕೆ ಇದು ನನ್ನ ಪ್ರಥಮ ಭೇಟಿಯಾಗಿದ್ದಿತು.

ಆರ್ಯ ಸಮಾಜದ ಹಿನ್ನೆಲೆಯುಳ್ಳ ಯುವತಿಯಾಗಿದ್ದ ನನಗೂ ಹಾಗೂ ಶ್ರೀರಾಮಕೃಷ್ಣರ ಸುಪ್ರಸಿದ್ಧ ಪುತ್ರನಿಗೂ ನಡುವೆ ಸಂಭವಿಸಿದ ಘಟನೆ ಉಲ್ಲೇಖನಾರ್ಹವಾಗಿದೆ. ನನ್ನ ಗುಂಪಿನಲ್ಲಿದ್ದ ಪ್ರತಿಯೊಬ್ಬರೂ, ಅವರ ಪಾದಗಳನ್ನು ಮುಟ್ಟಿ ಅಭಿವಂದಿಸಲು ಮುಂದೆ ಹೋದರು. ಆದರೆ ನಾನು ಮಾತ್ರ ಒಂದು ಮೂಲೆಯಲ್ಲಿ, ಕೈಗಳನ್ನು ಜೋಡಿಸಿಕೊಂಡು ನಿಂತೇ ಇದ್ದೆ. ಆಗ ನಾನು ಸೊಕ್ಕಿನವಳೂ, ದುರಹಂಕಾರಿಯೂ ಮೂರ್ಖಳೂ ಆದ ಯುವತಿಯಾಗಿದ್ದೆ. ಇದಕ್ಕೆಲ್ಲಾ ಶಿಖರವಿಟ್ಟಂತೆ ಉದಯೋನ್ಮುಖ ವರ್ಣಚಿತ್ರ ಕಲಾವಿದೆ ಬೇರೆ ಈ ಆತ್ಮದ

* ದಿಲ್ಲಿಯ ಭಕ್ತೆ ಮತ್ತು ಚಿತ್ರಕಲಾವಿದೆ.

ಮಹತ್ತನ್ನು ಅರಿಯಲಾರದವಳಾಗಿದ್ದರಿಂದ, ನಾನು ತಲೆಬಾಗಿ ನಮಸ್ಕರಿಸಲು ನಿರಾಕರಿಸಿದೆ. ಭವಿಷ್ಯದಲ್ಲಿ ರಾಮಕೃಷ್ಣ ಮಿಷನ್‌ನ ಹದಿಮೂರನೆಯ ಅಧ್ಯಕ್ಷರಾಗುವ ಸ್ವಾಮಿ ರಂಗನಾಥಾನಂದ ಪಾವಿತ್ರ್ಯ ಮತ್ತು ಪ್ರಾಢತೆಗಳನ್ನು ಅಳೆಯಲು, ನಿರ್ಧರಿಸಲು ನನಗೆ ಯಾವ ಸಾಮರ್ಥ್ಯವೂ ಇರಲಿಲ್ಲವೆಂದು ನಾನು ಹೇಳಬೇಕಾಗಿದೆ.

ಮಹಾರಾಜ್‌ರು ಆಗ ಶ್ರೀ ಶಾರದಾ ದೇವಿಯ ದೇವಸ್ಥಾನದ ವರಾಂಡದ ಕಂಬಗಳಲ್ಲಿ ಒಂದಕ್ಕೆ ಒರಗಿಕೊಂಡು ಕುಳಿತಿದ್ದರು. ಅವರು ನನ್ನ ಬಗೆಗೆ, ನನ್ನ ಸ್ನೇಹಿತರನ್ನು ವಿಚಾರಿಸಿದರು. ನಾನು ವರ್ಣಚಿತ್ರ ಕಲಾವಿದೆಯೆಂದು, ಕೋಲ್ಕತ್ತಾದಲ್ಲಿ, ಯಶಸ್ವಿಯಾದ ಏಕವ್ಯಕ್ತಿ ಚಿತ್ರ ಪ್ರದರ್ಶನವನ್ನು ನಡೆಸಿರುವಳೆಂದೂ, ಆ ಸ್ನೇಹಿತರಲ್ಲಿ ಒಬ್ಬರು ಉತ್ತರಿಸಿದರು. ಮಹಾರಾಜ್ ಅವರು ನನ್ನ ಚಿತ್ರಗಳ ಮಾರಾಟದಿಂದ ಬಂದ ಹಣದಿಂದ ಏನು ಮಾಡುತ್ತೇನೆಂದೂ ಕೇಳಿದರು. ಸೀರೆಗಳು ಮತ್ತು ಒಡವೆಗಳನ್ನು ಕೊಂಡುಕೊಳ್ಳುವೆನೆಂದು ನಾನು ಹೇಳಿದೆ. ಆಗ ಅವರು ಕೇಳಿದರು. "ಜಮೀನುದಾರರಾಗಿರುವ ನಿನ್ನ ಮಾವ, ರೈಲ್ವೆ ಇಲಾಖೆಯಲ್ಲಿ ಉನ್ನತ ಅಧಿಕಾರಿಯಾಗಿರುವ ನಿನ್ನ ಪತಿ, ಇವೆಲ್ಲವನ್ನೂ ನಿನಗೆ ತಂದುಕೊಡುವುದಿಲ್ಲವೇ? ಶ್ರೀ ರಾಮಕೃಷ್ಣರು ನಿನಗೆ ಇಂತಹ ಪ್ರತಿಭೆಯನ್ನು ನೀಡಿ ಆಶೀರ್ವದಿಸಿದ್ದಾರೆ, ಅದನ್ನು ಇತರರ ಒಳಿತಿಗಾಗಿ ಉಪಯೋಗಿಸು. ಬೇರೆಯವರಿಗಾಗಿ ಕೆಲಸಮಾಡು, ಬೇರೆಯವರಿಗೋಸ್ಕರ ಚಿತ್ರಗಳನ್ನು ಬರೆ! ಜೀವನದಲ್ಲಿ ನಿನ್ನನ್ನು ಸುಖವಾಗಿಡಲು ಸಾಕಾಗುವಷ್ಟು ನಿನ್ನ ಬಳಿ ಇದೆ."

ಮರುದಿನ ನಾನು ಚಿತ್ರ ಬಿಡಿಸುತ್ತಿದ್ದಾಗ ಮಹಾರಾಜ್ ಅವರ ಮಾತುಗಳು ನನ್ನ ಕಿವಿಗಳಲ್ಲಿ ರಿಂಗಣಿಸುತ್ತಿದ್ದವು. ಕೋಲ್ಕತ್ತಾದ ಲಲಿತ ಕಲಾ ಅಕಾಡೆಮಿಯಲ್ಲಿ ಸ್ವರ್ಣ ಪದಕ ಗಳಿಸುತ್ತಿದ್ದವಳು ನಾನು. ನಾನು ಒಬ್ಬಳು ವ್ಯಾಪಾರೀ ಕಲಾವಿದೆಯಾಗ ಬಹುದಿತ್ತು! ಆದರೆ ನಾನು ಹಾಗಾಗಬಾರದೆಂದು ಮಹಾರಾಜ್‌ರು ನಿರ್ಣಾಯಕವಾಗಿ ಒತ್ತಿಹೇಳಿದ್ದರು.! ಮನಸ್ಸಿಗೆ ನೋವಾಗಿದ್ದರೂ ಸಣ್ಣದಾಗಿ ಚುಚ್ಚುತ್ತಿದ್ದ ಅಪರಾಧ ಪ್ರಜ್ಞೆಯಿಂದ ಬಿಡುಗಡೆ ಹೊಂದಬಲ್ಲವಳಾದೆ. ಆದರೂ ಚಿತ್ರ ಬಿಡಿಸುವಾಗ ಬಹಳ ಸಮಯದ ತನಕ, ನಾನು ಮಹಾರಾಜ್‌ರ ಮಾತುಗಳ ಬಗೆಗೆ, ಮತ್ತು ಬಡವರಿಗೂ ಅರ್ಹರಾದವರಿಗೂ ನನ್ನ ಕಲೆಯ ಮೂಲಕ ನೆರವು ನೀಡಬಹುದಾದ ದಾರಿಗಳನ್ನು ಕಂಡುಕೊಳ್ಳುವ ಬಗೆಗೆ ಅಲೋಚಿಸುತ್ತಿದ್ದೆ.

ನಂತರ ಶೀಘ್ರವೇ ನನ್ನ ಸ್ನೇಹಿತರು ನನ್ನನ್ನು ಮಹಾರಾಜರ ಮತ್ತೊಂದು ಪ್ರವಚನಕ್ಕೆ ಆಹ್ವಾನಿಸಿದರು. ಆ ಮನೆಯಲ್ಲಿ ಕೇವಲ ಇಪ್ಪತ್ತೈದು ಜನರು ಮಾತ್ರ ಇದ್ದರು. ನಾನು ಒಳಗೆ ಪ್ರವೇಶಮಾಡುತ್ತಿದ್ದಂತೆಯೇ ಮಹಾರಾಜ್‌ರನ್ನು ನೋಡಿದೆ. ತಮ್ಮ ಕೈಸನ್ನೆಯ ಮೂಲಕ ನನ್ನನ್ನು ಕರೆಯುವ ಮುನ್ನ ಒಂದು ಕ್ಷಣ ಅವರು ಸುಮ್ಮನಿದ್ದರು. ನಾನು ಮುಖಹೇಡಿಯಂತೆ, ಈ ಬಾರಿ ಅವರ ಹತ್ತಿರಕ್ಕೆ ಹೋದೆ ಮತ್ತು ಈ ಬಾರಿ ಅವರ ಕಾಲುಗಳಿಗೆ ನಮಸ್ಕರಿಸಿದೆ. ಕೈನಲ್ಲಿ ಕುಂಚಹಿಡಿದಿರುವವರಂತೆ ಅಭಿನಯಿಸಿ, ಅವರು ನನ್ನನ್ನು ಕೇಳಿದರು. "ನೀನು ಚಿತ್ರ ರಚಿಸುತ್ತಿರುವೆಯಾ? ನೀನು ದಾನಮಾಡುತ್ತಿರುವೆಯಾ?" ನಾನು ಉತ್ತರಿಸಿದೆ: "ಹಣವನ್ನು ನೀಡಲು ನಾನು ಸಮರ್ಪಕವಾದ ಸ್ಥಳ ಹಾಗೂ ದಾರಿಯನ್ನು ಕಂಡು ಹಿಡಿಯಲು ಪ್ರಯತ್ನಿಸುತ್ತಿದೇನೆ." ತತ್‌ಕ್ಷಣವೇ ಸ್ವಾಮೀಜಿಯವರಿಂದ ಉತ್ತರ ಬಂದಿತು: "ರಾಮಕೃಷ್ಣ ಮಿಷನ್‌ನ ನರೇಂದ್ರಪುರ ಅಂಧರ ಶಾಲೆಯ ದೂರವಾಣಿಯ ನಂಬರನ್ನು ನಾನು ನಿನಗೆ ಕರೆ ಮಾಡಿ ತಿಳಿಸುತ್ತೇನೆ. ನೀನು ಅಲ್ಲಿಗೆ ಹೋಗು!" ಆದರೆ ನಾನು ಇನ್ನೂ ಸಿದ್ಧಳಾಗಿರಲಿಲ್ಲ. ಹಾಗಾಗಿ ನಾನು ಕಾಲಹರಣಮಾಡುತ್ತಾ, ಅಲ್ಲಿಗೆ ಹೋಗುವುದನ್ನು ಮುಂದೂಡುತ್ತಿದ್ದೆ.

ಮಹಾರಾಜರು ಪ್ರತಿ ತಿಂಗಳೂ 'ಗಾರ್ಡನ್ ರೀಚ್'ನಲ್ಲಿ ಪ್ರವಚನ ನೀಡುತ್ತಿದ್ದರು. ನಾನು ಆ ಸಭೆಗಳಿಗೆ ನಿಯತವಾಗಿ ಹೋಗಲು ಆರಂಭಿಸಿದೆ. ನಾನು ಪ್ರತಿ ಬಾರಿ ಅವರನ್ನು ನೋಡಿದಾಗಲೂ ಅವರು ಮುಗುಳ್ನಗೆಯಿಂದ ನನ್ನನ್ನು ಕೇಳುತ್ತಿದ್ದರು: "ನೀನು ನಿನ್ನ ಚಿತ್ರಗಳನ್ನು ಮಾರುತ್ತಿರುವೆಯಾ?" ಪ್ರತಿ ಬಾರಿಯೂ, ಏನಾದರೂ

ಮಾಡಬೇಕೆಂದು ನನಗೆ ಅನಿಸುತ್ತಿತ್ತು. ನರೇಂದ್ರಪುರದ ಅಂಧರ ಶಾಲೆಗೆ ನಾನು ಭೇಟಿ ಕೊಡತೊಡಗಿದೆ. ಮತ್ತು ಚಿತ್ರಗಳನ್ನು ಮಾರಿ ಬಂದ ಹಣವನ್ನು ಆ ಶಾಲೆಗೆ ಕೊಡತೊಡಗಿದೆ. ಹೀಗೆ ನನ್ನ ಕಲಾ ಪ್ರಪಂಚದಲ್ಲಿ ಹೊಸ ಜೀವನದ ಪ್ರಾರಂಭವಾಯಿತು.

ಮಹಾರಾಜರು ನನ್ನ ಇಡಿಯ ಜೀವನವನ್ನು ಬದಲಾಯಿಸಿಬಿಟ್ಟರು. ನಾನು ಅವರಿಗೆ ಅತ್ಯಂತ ಸಮೀಪದವಳಾದೆ. ನನ್ನ ಪಾಲಿಗೆ ಅವರು ತಂದೆಗಿಂತಲೂ ಹೆಚ್ಚಾಗಿದ್ದರು. ನಂತರ, ನನ್ನ ಪತಿಗೆ ಕೊಲ್ಕತ್ತಾದ ಬ್ಯಾಲಿಗಂಜ್‌ಗೆ ವರ್ಗವಾಯಿತು. ಆಗ ಮಹಾರಾಜರು ಕಾರ್ಯದರ್ಶಿಗಳಾಗಿದ್ದ 'ರಾಮಕೃಷ್ಣ ಮಿಷನ್‌ನ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್'ಗೆ ಮಹಾರಾಜರನ್ನು ನೋಡಲು ಮತ್ತು ಆತ್ಮಕ್ಕೆ ಬೆಳಕು ನೀಡುವಂತಹ ಅವರ ಅದ್ಭುತ ಪ್ರವಚನಗಳನ್ನು ಕೇಳಲು ನಾನು ಹೋಗುತ್ತಿದ್ದೆ.

ನನ್ನ ವರ್ಣಚಿತ್ರ ಕಲೆ ಬೇರೆಯೇ ರೀತಿಯ ಗಾಢವಾದ ಭಾವತೀವ್ರತೆಯನ್ನು ಹೊಂದಿದೆ – ವ್ಯಾಪಾರೀ ಮನೋಧರ್ಮವಲ್ಲ – ಆದರೆ ಎಂದಿಗಿಂತಲೂ ಅಧಿಕವಾಗಿ ಆಧ್ಯಾತ್ಮಿಕತೆಯನ್ನು ಒಳಗೊಂಡಿದೆ. ನನ್ನ ಚಿತ್ರಶಾಲೆಯ ಏಕಾಂತತೆಯನ್ನು ನಾನು ಪ್ರೀತಿಸುತ್ತೇನೆ. ನನ್ನ ಕುಂಚದ ಎಳೆಗಳು ಇನ್ನೆಂದಿಗೂ ಸ್ವಾರ್ಥಸಾಧನೆಗಾಗಿಯಲ್ಲ, ಆದರೆ ಅದು ಇತರರಿಗಾಗಿ – ಈಗ ನಾನಿರುವಂತಹ ಸಾಧಾರಣವಾದ ಗೃಹಿಣಿಯ ಮಜಲಿನಿಂದ, ಪುಟ್ಟ ಅಸಾಧಾರಣ ಗೃಹಣಿಯ ಮಟ್ಟಕ್ಕೆ ವಿಕಸನಗೊಳ್ಳುವುದರಲ್ಲಿ ಇದು ನನ್ನ ಜೀವನದ ಪ್ರಗತಿಯ ಪ್ರಥಮ ಸೋಪಾನ. ಇತರರಿಗೆ, ವಿನಯದಿಂದ ಒಳಿತು ಮಾಡಬೇಕು ಎನ್ನುವುದನ್ನು, ನಾನು ಅರಿಯುವುವಂತೆ ಮಾಡಿದರು ಮಹಾರಾಜ್ ಅವರು. ಆದ್ದರಿಂದ, ನಾನು ಹೆಚ್ಚು ಹೆಚ್ಚು ಸಾಧುಗಳ ಸಾಂಗತ್ಯವನ್ನು ಬಯಸಿದೆ. ಮತ್ತು ಅಂತಿಮವಾಗಿ ೧೯೭೮ರಲ್ಲಿ ರಾಮಕೃಷ್ಣ ಮಿಷನ್‌ನ ಹತ್ತನೆಯ ಅಧ್ಯಕ್ಷರಾದ ಪೂಜ್ಯ ವೀರೇಶ್ವರಾನಂದ ಮಹಾರಾಜ್‌ರಿಂದ ದೀಕ್ಷೆಯನ್ನು ಪಡೆದೆ.

೧೯೭೨ರಲ್ಲಿ ಮಹಾರಾಜರು ದುರ್ಗಾಪುರಕ್ಕೆ ಬಂದು ಎರಡು ರಾತ್ರಿ ನಮ್ಮ ಮನೆಯಲ್ಲಿ, ನಮ್ಮೊಡನೆಯೇ ಉಳಿದುಕೊಂಡರು. ಅಖಿಲ ಭಾರತ ರೋಟರಿ ಸಮ್ಮೇಳನಕ್ಕೆ ಹೋಗಬೇಕಾಗಿದ್ದರಿಂದ ಒಂದು ದಿನ ಮಹಾರಾಜ್ ಅವರನ್ನು ಮತ್ತು ಅವರ ಒಬ್ಬರು ಸನ್ಯಾಸಿ ಸಹಾಯಕರನ್ನು ದುರ್ಗಾಪುರದಿಂದ ಐದು ಮೈಲಿ ದೂರವಿದ್ದ ಪ್ರದೇಶಕ್ಕೆ ನಾನು ಕಾರಿನಲ್ಲಿ ಕರೆದುಕೊಂಡು ಹೋಗಬೇಕಾಯಿತು. ನಾನು ಚಾಲಕನ ಸ್ಥಾನದಲ್ಲಿದ್ದು, ಮಹಾರಾಜರು ಹಿಂದಿನ ಸೀಟಿನಲ್ಲಿ ಕುಳಿತಿದ್ದರು. ಅವರ ಸಹಾಯಕರೂ ಹಿಂದಿನ ಸೀಟಿನಲ್ಲಿಯೇ ಅವರ ಪಕ್ಕ ಕುಳಿತುಕೊಳ್ಳಲಿದ್ದಾಗ ಮಹಾರಾಜರು ಆ ಸಹಾಯಕರನ್ನು ಆಕ್ಷೇಪಿಸಿದರು: "ಹೋಗಿ ಮುಂದಿನ ಸೀಟಿನಲ್ಲಿ ಕುಳಿತುಕೊಳ್ಳಿ. ಶೀಲಾಳನ್ನು ಚಾಲಕಳನ್ನಾಗಿ ಮಾಡಬೇಡಿ!" ಬೇರೆಯವರೊಡನೆ ವರ್ತಿಸುವಾಗ ಮಹಾರಾಜ್‌ರು ಅಷ್ಟೊಂದು ಆಲೋಚನಾಪರರೂ, ಸೂಕ್ಷ್ಮ ಸಂವೇದನಾಶೀಲರೂ ಆಗಿರುತ್ತಿದ್ದರು.

ನನ್ನ ಇಬ್ಬರು ಮಕ್ಕಳೊಡನೆ ಮಹಾರಾಜರು ಗೋಲಿ ಆಡಿದ್ದನ್ನು ಕಂಡಾಗ ಮಕ್ಕಳೊಡನೆ ಬಾಂಧವ್ಯ ಕಲ್ಪಿಸಿಕೊಳ್ಳುವಲ್ಲಿ ಅವರ ಗಮನಾರ್ಹ ಸಾಮರ್ಥ್ಯದ ಅರಿವಾಯಿತು! ಅಂತಹ ಮಹಾನ್ ಆತ್ಮರಾಗಿದ್ದ ಅವರು ಮಕ್ಕಳ ಜೊತೆ ಮಗುವಿನಂತಿರಬಹುದೆಂಬುದನ್ನು ನನಗೆ ಕಲ್ಪಿಸಿಕೊಳ್ಳಲೂ ಸಾಧ್ಯವಾಗಲಿಲ್ಲ. ಹುಡುಗರಂತೂ ರೋಮಾಂಚನಗೊಂಡಿದ್ದರು.

ಮಹಾರಾಜ್ ಅವರು ಕಾರ್ಯಶೀಲರೂ, ವ್ಯವಹಾರಕುಶಲರೂ ಆಗಿದ್ದು ಜನರನ್ನು ಯಾವಾಗಲೂ ಸಮಾಧಾನದಿಂದಿರಿಸುತ್ತಿದ್ದರು. ಒಮ್ಮೆ ನಾವು ಹೊಸದಾಗಿ ಒಗೆದು ಇಸ್ತ್ರಿಮಾಡಿದ್ದ ಸೊಳ್ಳೆಪರದೆಯನ್ನು ಇಟ್ಟಿದ್ದೆವು. ಆದರೆ ಅದು ನನಗೆ ವಿಪರೀತ ಗಾಬರಿಯಾಗುವಷ್ಟು, ಸಂಕುಚಿತಗೊಂಡು ಬಿಟ್ಟಿತ್ತು. ಸ್ವಾಮೀಜಿ ಹೇಳಿದರು: "ಏನೂ ಚಿಂತೆ ಮಾಡಬೇಡ. ಎಲ್ಲವೂ ತನ್ನಷ್ಟಕ್ಕೆ ಸರಿಹೊಂದಿಕೊಳ್ಳುತ್ತದೆ" ಮತ್ತು ಅವರು ದಾರಗಳನ್ನು ಕೆಳಕ್ಕೆ ಮಾಡಿದರು. ಪರದೆಯು ಪರಿಪೂರ್ಣವಾಗಿ ಹೊಂದಿಕೊಂಡಿತು!

‘ಸುಪ್ರಭಾತಮ್’ಅನ್ನು ಬೆಳಗ್ಗೆ ಗಟ್ಟಿಯಾಗಿ ಹಾಕುವಂತೆ ಮಹಾರಾಜ್‌ರು ನನಗೆ ಸಲಹೆ ನೀಡಿದರು. ಅಲ್ಲದೇ, ಕೇವಲ ‘ಶ್ರೀ ರಾಮಕೃಷ್ಣ ವೇದ’ ವನ್ನು ಓದುವುದು ಮತ್ತು ‘ರಾಮನಾಮ ಸಂಕೀರ್ತನ’ ವನ್ನು ತಪ್ಪದೇ ನಿಯತವಾಗಿ ಓದುವುದಕ್ಕಾಗಿ ದುರ್ಗಾಪುರದಲ್ಲಿ ‘ಮಹಿಳಾ ಸಮಿತಿ’ ಯೊಂದನ್ನು ಆರಂಭಿಸುವಂತೆ ನನಗೆ ಹೇಳಿದರು. ನಾನು ವಾರದ ಯಾವ ದಿನದಲ್ಲಿ ಎಂದು ಕೇಳಿದೆ. ‘ಬುಧವಾರ, ಆ ದಿನ ಶ್ರೀ ರಾಮಕೃಷ್ಣರ ಜನ್ಮದಿನ’ ಎಂದು ಅವರು ಹೇಳಿದರು. ಹಾಗಾಗಿ ನಾವೆಲ್ಲಾ ಬುಧವಾರ ಸಾಯಂಕಾಲ ನಾಲ್ಕು ಗಂಟೆಗೆ ಸೇರುತ್ತಿದ್ದೆವು. ‘ಶ್ರೀ ರಾಮಕೃಷ್ಣ ವಚನವೇದ’ವನ್ನು ಓದಿದ ಹಾಗೂ ‘ರಾಮನಾಮ ಸಂಕೀರ್ತನ’ವನ್ನು ಹಾಡಿದ ನಂತರ ಸ್ವಲ್ಪ ‘ಪ್ರಸಾದ’ವನ್ನು ಪಡೆಯುತ್ತಿದ್ದೆವು. ನಂತರ ಶ್ರೀ ಶಾರದಾಮಠದ ಈಗಿನ ಅಧ್ಯಕ್ಷರಾದ ಪೂಜ್ಯ ಶ್ರದ್ಧಾಪ್ರಾಣ ಮಾತಾಜಿಯವರು ನಮ್ಮೊಡನೆ ಇರುತ್ತಿದ್ದರು. ಮಾತಾಜಿಯವರು ದುರ್ಗಾಪುರದಲ್ಲಿ ಇರುತ್ತಿದ್ದಾಗೆಲ್ಲಾ ನಾವು ವಾರಕ್ಕೆ ಒಂದು ಬಾರಿಯ ಬದಲು ಎರಡು ಬಾರಿ ಭೇಟಿಯಾಗುತ್ತಿದ್ದೆವು. ಅದೇ ಮಹಿಳಾ ಸಮಿತಿ ಇನ್ನೂ ನಡೆಯುತ್ತಿದೆ.

ಒಂದು ದಿನ ಮಹಾರಾಜ್‌ರು ದೂರವಾಣಿಯ ಮೂಲಕ ಕರೆ ಮಾಡಿ, ಅವರನ್ನು ಕಾಣುವಂತೆ ನನಗೆ ತಿಳಿಸಿದರು. ಸಿಡ್ನಿಯಿಂದ ಭಾರತಕ್ಕೆ ಬರುತ್ತಿದ್ದ ವಿಲ್ಮಾ ಸ್ಪೆನ್ಸರ್ ಮತ್ತು ಆಕೆಯ ಮಗ ಹತ್ತುವರ್ಷದ ರಿಕಿ ಇವರಿಗಾಗಿ ಆಹಾರ, ಪ್ರೇಕ್ಷಣೀಯ ಸ್ಥಳಗಳ ದರ್ಶನ – ಇವುಗಳ ಬಗೆಗೆ ನಾನು ಏನು ಮಾಡಬೇಕೆಂದು ವಿಸ್ತಾರವಾಗಿ ವಿವರಿಸಿದರು. ಅವರು ಅಷ್ಟಕ್ಕೇ ಸುಮ್ಮನಾಗಲಿಲ್ಲ. ನನಗೆ ಮತ್ತೆ ಕರೆ ಮಾಡಿ, ಶ್ರೀಮತಿ ವಿಲ್ಮಾ ಸ್ಪೆನ್ಸರ್ ಮತ್ತು ಅವರ ಮಗನ ಕೋಲ್ಕತ್ತಾದಲ್ಲಿನ  ವಾಸವನ್ನು ಸಂತೋಷಕರವೂ, ಅನುಕೂಲಕರವೂ ಆಗುವಂತೆ ನಾನು ಏನು ಮಾಡುತ್ತಿದ್ದೇ ನೆಂಬುದನ್ನು ವಿವರವಾಗಿ ಕೇಳುತ್ತಿದ್ದರು. ಮಹಾರಾಜರು ಸಿಡ್ನಿಗೆ ಹೋಗಿದ್ದಾಗ ವಿಲ್ಮಾರನ್ನು ಭೇಟಿಯಾಗಿದ್ದರು ಮತ್ತು ಸಿಡ್ನಿಯಲ್ಲಿ ವೇದಾಂತ ಸಂಘವನ್ನು ಪ್ರಾರಂಭಿಸುವಂತೆಯೂ ಅವರಿಗೆ ಹೇಳಿದ್ದರು. ಇದು ಎನ್.ಎಸ್.ಡಬ್ಲ್ಯು.ನ  ಸಿಡ್ನಿ ಕೇಂದ್ರದ ಶ್ರೀ ಶಾರದಾ ಮಠ ರಾಮಕೃಷ್ಣ ಶಾರದಾ ವೇದಾಂತ ಸಂಘದ ಪ್ರಾರಂಭವಾಗಿತ್ತು.

ಮಹಾರಾಜ್‌ರು ನನ್ನ ಮಗ ದೀಪಕ್‌ನನ್ನು ಕೋಲ್ಕತ್ತಾಗೆ ಕರೆದುಕೊಂಡು ಹೋಗಿ, ಅಲ್ಲಿ ಮಠದ ಬ್ರಹ್ಮಚಾರಿಗಳ ಜೀವನವನ್ನು ಅನುಭವಿಸಿ ತಿಳಿಯುವಂತೆ ಮಾಡಿದರು. ಅದು ನಿಜವಾಗಿಯೂ ಮರೆಯಲಾಗದ ಅನುಭವವಾಗಿತ್ತು. ಸ್ವಾಮೀಜಿಯವರ ಪ್ರವಚನಗಳನ್ನು ಕೇಳುವ ಹಾಗೂ ಅವರನ್ನು ಕೋಲ್ಕತ್ತಾದಲ್ಲಿ ಭೇಟಿಯಾಗುವ ಸೌಭಾಗ್ಯ ನನ್ನ ಸೋದರಿಯರಿಗೂ ದೊರೆತಿತ್ತು. ಅಂತಹ ಮಹಾನ್ ಆತ್ಮದ ಸಾನ್ನಿಧ್ಯ ಪಡೆದಿದ್ದಕ್ಕಾಗಿ ನನ್ನ ಇಡೀ ಕುಟುಂಬ ಧನ್ಯತೆಯನ್ನನುಭವಿಸುತ್ತದೆ. ನಾನು ಮಹಾರಾಜರಿಗಾಗಿ ಸಾಕಷ್ಟು ಏನನ್ನೂ ಮಾಡಲಿಲ್ಲ, ನಾನು ತೀರಾ ಅನನುಭವಿಯಾಗಿದ್ದೆ ಎನಿಸುತ್ತದೆ ನನಗೀಗ. ನಾನು ಮಾಡದೇ ಬಿಟ್ಟ ಲೋಪಗಳಿಗಾಗಿ ಕರುಣೆಯಿಂದ ನನ್ನನ್ನು ಕ್ಷಮಿಸುವಂತೆ ಶ್ರೀ ರಾಮಕೃಷ್ಣರಲ್ಲಿ ನಾನು ಪ್ರಾರ್ಥಿಸುತ್ತೇನೆ. ಅಂತಹ ಪರಿಪೂರ್ಣ ಸಿದ್ಧಾತ್ಮರಿಗೆ ಸ್ವಲ್ಪವಾದರೂ ಸೇವೆ ಮಾಡುವ ಅವಕಾಶ ನೀಡಿದ್ದಕ್ಕಾಗಿ, ಶ್ರೀ ರಾಮಕೃಷ್ಣರು ಮತ್ತು ಶ್ರೀ ಶಾರದಾಮಾತೆಗೆ ನಾನು ಕೃತಜ್ಞಳಾಗಿದ್ದೇನೆ.

* * * *

# ೧೨೭. ಸ್ಫೂರ್ತಿಯ ಸೆಲೆ

**–ಎಸ್. ರಾಮಮೋಹನ್***

ನಮ್ಮ ಕಾಲದ ಅನೇಕ ಯುವಕರಿಗೆ ಸ್ವಾಮಿ ರಂಗನಾಥಾನಂದರು ಸ್ಫೂರ್ತಿದಾಯಕ ಶಕ್ತಿಯಾಗಿದ್ದಾರೆ. 'ಮಾನವನನ್ನು ನಿರ್ಮಿಸುವ ಧರ್ಮ'ದ ಸಮರ್ಥ ವಿವರಣೆಯಿಂದ 'ಆಧುನಿಕ ನುಡಿಗಟ್ಟು'ಗಳಲ್ಲಿ ಆಧುನಿಕ ಭೌತಶಾಸ್ತ್ರ ಮತ್ತು ತತ್ತ್ವ ಶಾಸ್ತ್ರಗಳ ಅನೇಕ ಗ್ರಂಥಗಳ ಹಲವಾರು ಪ್ರಸ್ತುತ ಹಾಗೂ ಸ್ಪಷ್ಟ ಉಲ್ಲೇಖಗಳನ್ನು ಪ್ರಸ್ತಾಪಿಸುತ್ತಿದ್ದಂತಹ ಅವರ ಪ್ರವಚನಗಳು ಉಜ್ವಲವಾಗಿರುತ್ತಿದ್ದವು. ಅವರ ಪ್ರವಚನಗಳು ಯುವಕರ ಮನಸ್ಸಿನಲ್ಲಿ ಚೈತನ್ಯದ ಜ್ವಾಲೆಯನ್ನು ಹೊತ್ತಿಸುತ್ತಿದ್ದವು ಮತ್ತು ತಮ್ಮ ಸಂಸ್ಕೃತಿಯ ಬಗೆಗೆ ಹೆಮ್ಮೆಯ ಭಾವನೆಯನ್ನು ಹೊಮ್ಮಿಸುತ್ತಿದ್ದವು ಮತ್ತು ರಾಷ್ಟ್ರಕ್ಕಾಗಿ ರಾಷ್ಟ್ರದ ಜನರಿಗಾಗಿ ತಮ್ಮದೆಲ್ಲವನ್ನೂ ತ್ಯಾಗ ಮಾಡುವ ಇಚ್ಛೆಯನ್ನೂ ಅವರ ಮನಸ್ಸಿನಲ್ಲಿ ತುಂಬುತ್ತಿದ್ದುವು. ಇಂದಿಗೂ ಅವರ ಗ್ರಂಥಗಳು, ಧ್ವನಿಮುದ್ರಿತ ಪ್ರವಚನಗಳು ಅಸಂಖ್ಯಾತ ಜನರನ್ನು ಸ್ಫೂರ್ತಿಗೊಳಿಸುತ್ತಲೇ ಇವೆ, ಆಡಳಿತದ ಪರಿಕಲ್ಪನೆಯ ಬಗೆಗಿನ ಅವರ ಪರಿಕಲ್ಪನೆಗಳು ನನ್ನಂತಹ ಅಧಿಕಾರಿಗಳಿಗೆ ಅತ್ಯಂತ ಹೆಚ್ಚಿನ ಮಾರ್ಗದರ್ಶನ ಮಾಡುವ ಆಧಾರ ಮತ್ತು ಆಕರಗಳಾಗಿವೆ.

ನಾನು ಯುವಕನಾಗಿದ್ದಾಗಿನಿಂದಲೂ ಅನೇಕ ಸ್ಥಳಗಳಲ್ಲಿ ಸ್ವಾಮಿ ರಂಗನಾಥಾನಂದರ ಪ್ರವಚನಗಳಲ್ಲಿ ಉಪಸ್ಥಿತನಿರುತ್ತಿದ್ದೆ. ವಾಸ್ತವವಾಗಿ ನಾನು ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಅವರ ಆಶೀರ್ವಾದ ಪಡೆಯುವ ಅವಕಾಶಕ್ಕಾಗಿ ನಿರೀಕ್ಷಿಸುತ್ತಿದ್ದೆ. ೧೯೭೩ರ ಸಿವಿಲ್ ಸರ್ವಿಸ್ ಎಕ್ಸಾಮಿನೇಷನ್ ಮೂಲಕ ಭಾರತ ಸರ್ಕಾರದ ಒಂದನೇ ಶ್ರೇಣಿಯ ಅಧಿಕಾರಿಯಾಗಿ ಆಯ್ಕೆಯಾದಾಗ, ಈ ಅವಕಾಶವು ಅನಿರೀಕ್ಷಿತವಾಗಿ ನನಗೆ ಒದಗಿತು. ತರಬೇತಿಯಮೊದಲ ಹಂತವು ಎಲ್ಲ ಅಧಿಕಾರಿಗಳೂ ಪಡೆಯಲೇಬೇಕಾಗಿದ್ದ ಫೌಂಡೇಷನ್ ಕೋರ್ಸನ್ನು (ಮೂಲಶಿಕ್ಷಣ ಪಾಠಗಳನ್ನು) ಮುಸ್ಸೌರಿಯಲ್ಲಿನ 'ಲಾಲ್‌ಬಹಾದೂರ್‌ಶಾಸ್ತ್ರಿ ನ್ಯಾಷನಲ್ ಅಕಾಡೆಮಿ ಫಾರ್ ಅಡ್ಮಿನಿಸ್ಟ್ರೇಷನ್'ನಲ್ಲಿ ನಡೆಯುವಂತೆ ಏರ್ಪಾಟುಮಾಡಲಾಗಿತ್ತು. ಈ ಫೌಂಡೇಷನ್ ಕೋರ್ಸಿನಲ್ಲಿ 'ಭಾರತೀಯ ತತ್ತ್ವಶಾಸ್ತ್ರ ಮತ್ತು ಸಂಸ್ಕೃತಿ'ಯ ಬಗೆಗೆ ಶೈಕ್ಷಣಿಕ ಘಟಕ ಒಂದನ್ನು ಅಳವಡಿಸಲಾಗಿರುತ್ತದೆ.

ಸಾಮಾನ್ಯವಾಗಿ ಸುಪ್ರಸಿದ್ಧ ತತ್ತ್ವಶಾಸ್ತ್ರಜ್ಞರು ಅಥವಾ ವಿದ್ವಾಂಸರು ಈ ವಿಷಯಗಳನ್ನು ಕುರಿತು ಪರೀಕ್ಷಣಾವಧಿಯಲ್ಲಿನ ಅಭ್ಯರ್ಥಿಗಳಿಗೆ ಉಪನ್ಯಾಸ ನೀಡುತ್ತಾರೆ. ಅಭ್ಯರ್ಥಿಗಳಲ್ಲಿಯೇ ಒಬ್ಬರು ಸಭೆಯ ಅಧ್ಯಕ್ಷತೆಯನ್ನು ವಹಿಸುತ್ತಾರೆ. ನಮ್ಮ ಈ ಆರಂಭಿಕ ಶಿಕ್ಷಣದ ಅವಧಿಯಲ್ಲಿ ಸ್ವಾಮಿ ರಂಗನಾಥಾನಂದರನ್ನು ಪ್ರವಚನಗಳನ್ನು ನೀಡಲು ಆಹ್ವಾನಿಸಿದ್ದು ನನ್ನ ಸೌಭಾಗ್ಯ ಎನ್ನಬೇಕು. ಇದರಿಂದಾಗಿ ಆ ಅವಧಿಯಲ್ಲಿ ನನಗೆ ಸ್ವಾಮೀಜಿಯೊಡನೆ ನಿಕಟವಾಗಿ ವರ್ತಿಸುವ, ಪ್ರತಿಕ್ರಿಯಿಸುವ ಅವಕಾಶ ದೊರೆಯಿತು. ಸ್ವಾಮೀಜಿಯವರ ಜೊತೆಯಲ್ಲಿ ನಡೆದ ಈ ಮೂರು ದಿನಗಳ ಪರಸ್ಪರ ಪ್ರತಿಕ್ರಿಯೆಯು, ನನಗೆ ಅತ್ಯುತ್ತಮ ಉತ್ತೇಜನ, ಪ್ರೇರಣಾಶಕ್ತಿಗಳನ್ನು ನೀಡಿ, ನನ್ನ ವ್ಯಕ್ತಿತ್ವವನ್ನೂ ಮನೋಧರ್ಮವನ್ನೂ ರೂಪಿಸಿತು. ಆಡಳಿತಾಧಿಕಾರಿಯಾಗಿ ನಾನು ಪಡೆದಿರುವ ಯಶಸ್ಸು, ಸ್ವಾಮಿ ರಂಗನಾಥಾನಂದರಂತಹ ಮಹಾನ್ ಚೇತನಗಳೊಂದಿಗೆ ನಾನು ಪ್ರತಿಕ್ರಿಯಿಸಿ ಪಡೆದ ಪ್ರಯೋಜನಕ್ಕೆ ಹೆಚ್ಚಾಗಿ ಸಲ್ಲುತ್ತದೆ.

---

* ಚೆನ್ನೈನ ಭಕ್ತ ಮತ್ತು ಅಧಿಕಾರಿ.

ಅನೇಕ ವರ್ಷಗಳ ನಂತರ ೧೯೯೦ರ ಅವಧಿಯಲ್ಲಿ F.A. ಮತ್ತು C.A.O. ಆಗಿ ನನಗೆ ಸೌತ್ ಸೆಂಟ್ರಲ್ ರೇಲ್ವೇಸ್, ಸಿಕಂದರಾಬಾದ್‌ಗೆ ವರ್ಗವಾಯಿತು. ನಾನು ಚಿಕ್ಕ ವಯಸ್ಸಿನಲ್ಲಿಯೇ ಸ್ವಾಮಿ ವೀರೇಶ್ವರಾನಂದರಿಂದ ದೀಕ್ಷೆ ಪಡೆಯುವಂತಹ ಮಹಾಸೌಭಾಗ್ಯ ಪಡೆದಿದ್ದೆ. ಹಾಗಾಗಿ ಶ್ರೀ ರಾಮಕೃಷ್ಣ ಮಠದೊಡನೆ ನನಗೆ ನಿಕಟ ಸಂಪರ್ಕವಿದ್ದಿತು. ಇದರ ಜೊತೆಗೆ 'ಶ್ರೀ ರಮಣಕೇಂದ್ರ'ದ ಚಟುವಟಿಕೆಗಳೊಡನೆಯೂ ನಾನು ಸಂಪರ್ಕ ಹೊಂದುವಂತಹ ಅವಕಾಶಗಳೂ ನನಗೆ ಇದ್ದವು. ಹೈದರಾಬಾದಿನ 'ಶ್ರೀ ರಮಣಕೇಂದ್ರ'ದಲ್ಲಿ ಪ್ರಸಿದ್ಧ ತತ್ತ್ವಶಾಸ್ತ್ರಜ್ಞರೂ, ಪ್ರೊಫೆಸರ್‌ರೂ ಆದ ಡಾ. ಕೆ.ಸುಬ್ರಮಣಿಯನ್, ಅವರು ಅಧ್ಯಕ್ಷರಾಗಿದ್ದರು. ಆಗ ಭಾರತದ ಮುಖ್ಯ ಚುನಾವಣಾ ಆಯುಕ್ತರೂ, *ಗೀತೆಯ* ಬಗೆಗಿನ ಪ್ರಸಿದ್ಧ ವಿದ್ವಾಂಸರೂ ಆಗಿದ್ದ ಶ್ರೀ. ಟಿ.ಎನ್ ಶೇಷನ್ ಅವರನ್ನು ಹೈದರಾಬಾದಿನ 'ರಾಮಕೃಷ್ಣ ಮಠ'ದ ನೇತೃತ್ವದಲ್ಲಿ *ಗೀತೆಯ* ಬಗೆಗೆ ಪ್ರವಚನ ನೀಡಲು ಆಹ್ವಾನಿಸುವುದು ಯೋಗ್ಯವೆಂದು ಡಾ. ಕೆ. ಸುಬ್ರಮಣಿಯನ್ ಆಲೋಚಿಸಿದರು.ಆಗ ಹೈದರಾಬಾದಿನ ಶ್ರೀ ರಾಮಕೃಷ್ಣಮಠದ ಅಧ್ಯಕ್ಷರಾಗಿದ್ದ ಸ್ವಾಮಿ ರಂಗನಾಥಾನಂದರ ಬಳಿಗೆ ನಾವಿಬ್ಬರೂ ಜೊತೆಯಲ್ಲಿಯೇ ಹೋದೆವು. ಆ ದಿನಗಳಲ್ಲಿ ಅವರು ಆರೋಗ್ಯವಾಗಿರದಿದ್ದರೂ, ತತ್‌ಕ್ಷಣವೇ ನಮ್ಮನ್ನು ಹರ್ಷದಿಂದ ಸ್ವಾಗತಿಸಿದರು. ಶ್ರೀ ಟಿ.ಎನ್. ಶೇಷನ್‌ರಿಂದ ಪ್ರವಚನ ಏರ್ಪಡಿಸುವುದು ಬಹಳ ಒಳ್ಳೆಯ ವಿಚಾರವೆಂದು ಅವರು ಕೂಡ ಒಪ್ಪಿದರು. ಆದರೆ, ಕಾನೂನಿನ ಕೆಲವು ತುರ್ತು ಕಲಾಪಗಳಿಂದಾಗಿ ಶ್ರೀ ಶೇಷನ್ ಅವರು ತಮ್ಮ ಕಾರ್ಯಕ್ರಮವನ್ನು ರದ್ದುಪಡಿಸಬೇಕಾಯಿತು.

ಆ ಸಮಯದಲ್ಲಿ ಡಾ. ಕೆ. ಸುಬ್ರಮಣಿಯನ್ ಅವರು ನನ್ನನ್ನು ಸ್ವಾಮಿ ರಂಗನಾಥಾನಂದರಿಗೆ ಪರಿಚಯಿಸಿದರು. ನನಗೆ ಅತ್ಯಾಶ್ಚರ್ಯವಾಗುವಂತೆ, ಸ್ವಾಮೀಜಿ ತಕ್ಷಣ ಹೇಳಿದರು: "ಹೌದು, ನನಗೆ ಈ ಯುವಕನ ನೆನಪಿದೆ. ೧೯೭೪ರ ಮುಸ್ಸೌರಿಯ ನನ್ನ ಪ್ರವಚನಗಳ ಅವಧಿಯಲ್ಲಿ ಈತ ಉಪಸ್ಥಿತನಿದ್ದ, ಮತ್ತು ಪರೀಕ್ಷಣಾವಧಿಯಲ್ಲಿನ ಅಭ್ಯರ್ಥಿಗಳ ಪ್ರತಿನಿಧಿಯಾಗಿ ನನ್ನ ಜೊತೆ ಪ್ರತಿಕ್ರಿಯಿಸುತ್ತಿದ್ದ." ಇಪ್ಪತ್ತೈದು ವರ್ಷಗಳ ಹಿಂದೆ ನಡೆದಿದ್ದ ಘಟನೆಯನ್ನು, ಸ್ಪಷ್ಟವಾಗಿ ಸ್ವಲ್ಪವೂ ತಪ್ಪದೇ ನೆನಪಿಟ್ಟುಕೊಂಡಿರುವ ಅವರ ನೆನಪಿನ ಶಕ್ತಿಯ ಬಗೆಗೆ ನಾನು ನಿಜವಾಗಿಯೂ ಅಚ್ಚರಿಗೊಂಡೆ ಮತ್ತು ನನ್ನಂತಹ ತೀರಾ ಅಮುಖ್ಯನಾದ ಯುವಕನನ್ನು ಅವರು ನೆನಪಿನಲ್ಲಿಟ್ಟುಕೊಂಡಿರುವುದನ್ನು ಅರಿತು ನಾನು ರೋಮಾಂಚಿತನಾದೆ.

ನಂತರ ಸ್ವಾಮಿ ರಂಗನಾಥಾನಂದರು, ಶ್ರೀ ರಮಣ ಮಹರ್ಷಿಗಳೊಡನೆ ನಡೆದ ತಮ್ಮ ಭೇಟಿಯನ್ನು ವಿವರಿಸಿದರು. ಆ ಸಮಯದಲ್ಲಿ ಸ್ವಾಮಿ ರಂಗನಾಥಾನಂದರು ತೀವ್ರ ನಿರ್ಲಿಪ್ತ ಮನೋಭಾವದ ಯುವಕರಾಗಿದ್ದರೆನಿಸುತ್ತದೆ. ಸುಮಾರು ಆರು ಜನ ಯುವಸಾಧಕರನ್ನು ರಾಮಕೃಷ್ಣ ಮಠಕ್ಕೆ ಸೇರುವಂತೆ ಶ್ರೀ ರಮಣ ಮಹರ್ಷಿಗಳು ನಿರ್ದೇಶಿಸಿದರೆಂದೂ, ನಂತರ ಅವರೆಲ್ಲರೂ ಪ್ರಸಿದ್ಧ ಸನ್ಯಾಸಿಗಳಾದರೆಂದೂ ಸ್ವಾಮಿ ರಂಗನಾಥಾನಂದರು ಹೇಳಿದರು.

* * * *

# ೧೨೮. ಕೆಲವು ನೆನಪುಗಳು

**–ಸುಭಾಷ್ ಟಂಡನ್***

೧೯೪೪ರಲ್ಲಿ, ನನ್ನ ಹದಿನಾಲ್ಕರ ಹದಿಹರಯದಲ್ಲಿಯೇ, ಕರಾಚಿಯಲ್ಲಿ ಪ್ರಥಮ ಬಾರಿಗೆ ಸ್ವಾಮಿ ರಂಗನಾಥಾನಂದರನ್ನು ಭೇಟಿ ಮಾಡುವ ಅಪೂರ್ವ ಸೌಭಾಗ್ಯ ನನ್ನದಾಗಿತ್ತು. ನನ್ನ ತಂದೆತಾಯಿ ೧೯೨೧ರಲ್ಲಿ ಕರಾಚಿಗೆ ಸ್ಥಳ ಬದಲಾಯಿಸಿದ್ದರು. ಮತ್ತು ನನ್ನ ತಂದೆ ಶ್ರೀ ಜಗನ್ನಾಥ ಟಂಡನ್‌ರು ಅಲ್ಲಿ ಒಂದು ರಬ್ಬರ್ ಫ್ಯಾಕ್ಟರಿಯನ್ನು ಆರಂಭಿಸಿ ತಮ್ಮ ಉದ್ಯಮವನ್ನೂ ಸ್ಥಾಪಿಸಿದ್ದರು. ನನ್ನ ತಂದೆ ಮತ್ತು ತಾಯಿ ಮಾಯಾದೇವಿ ಟಂಡನ್‌ರು ಆರ್ಯ ಸಮಾಜದಂತಹ ಅನೇಕ ಸಾಮಾಜಿಕ ಸಂಸ್ಥೆಗಳೊಡನೆ ಸಂಪರ್ಕಹೊಂದಿದ್ದರು. ೧೯೪೪ರಲ್ಲಿ, ಗಾಂಧೀ ಗಾರ್ಡನ್ ನ ಹತ್ತಿರ ಇರುವ ರಾಮಕೃಷ್ಣ ಮಿಷನ್ ನಲ್ಲಿ, ಪ್ರತಿ ಭಾನುವಾರವೂ ಬಹಳ ಪಾಂಡಿತ್ಯವುಳ್ಳ ಸ್ವಾಮೀಜಿ ಒಬ್ಬರು *ಭಗವದ್ ಗೀತೆಯ* ಬಗೆಗೆ ಪ್ರವಚನಗಳನ್ನು ನೀಡುತ್ತಾರೆಂದು, ನನ್ನ ತಂದೆತಾಯಿಗೆ ತಿಳಿದುಬಂದಿತು. ಅವರು ಅಲ್ಲಿಗೆ ಹೋದರು ಮತ್ತು ಸ್ವಾಮೀಜಿಯವರ ಪ್ರವಚನದಿಂದ ಆನಂದಪರವಶವಾದರು, ಆನಂತರ ನನ್ನ ತಂದೆತಾಯಿ, ನನ್ನ ಸಹೋದರ ಮತ್ತು ನಾನು *ಗೀತೆಯ* ತರಗತಿಗಳಿಗೆ ಕ್ರಮವಾಗಿ ಹೋಗತೊಡಗಿದೆವು. ವಿವಾಹಿತಳಾದ ನನ್ನ ಸಹೋದರಿ ಮತ್ತು ನನ್ನ ಹಿರಿಯ ಸಹೋದರ ಇಬ್ಬರೂ ಆಗ ಬಿಹಾರದಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಇದ್ದರೂ ಕರಾಚಿಗೆ ಬಂದಾಗಲೆಲ್ಲ, ಅವರು ರಾಮಕೃಷ್ಣ ಮಿಷನ್‌ಗೆ ಭೇಟಿನೀಡುತ್ತಿದ್ದರು.

ರಂಗೂನಿನ ನಂತರ ರಂಗನಾಥಾನಂದಜಿಯವರನ್ನು ಕರಾಚಿಗೆ ನಿಯೋಜಿಸಲಾಯಿತು. ನಾವು ಅವರನ್ನು ಪ್ರಥಮ ಬಾರಿಗೆ ಭೇಟಿಮಾಡಿದಾಗ ಅವರು ಮುವತ್ತಾರು ವರ್ಷಗಳ ಮಧ್ಯವಯಸ್ಕರಾಗಿದ್ದರು. *ಗೀತೆಯ* ಬಗೆಗೆ ಅವರ ಪ್ರವಚನಗಳು ಉಜ್ವಲವಾಗಿದ್ದವು ಮತ್ತು ಪ್ರತಿಯೊಂದು ಪ್ರವಚನದಲ್ಲಿಯೂ ಸರಾಸರಿ ಒಂದು ಶ್ಲೋಕದ ಬಗ್ಗೆ ವಿಸ್ತಾರವಾಗಿ ವ್ಯಾಖ್ಯಾನ ಮಾಡುತ್ತಿದ್ದರು. ಸ್ವಾಮೀಜಿಯವರ ಪ್ರವಚನವಲ್ಲದೇ ಅಲ್ಲಿದ್ದ ಮತ್ತೊಬ್ಬ ಬಂಗಾಳದ ಸ್ವಾಮಿಗಳು, ಪ್ರವಚನ ಆರಂಭವಾಗುವ ಮುನ್ನ ಭಕ್ತಿಗೀತೆಗಳನ್ನು ಅತ್ಯಂತ ಮಧುರವಾದ ಧ್ವನಿಯಲ್ಲಿ ಹಾಡುತ್ತಿದ್ದರು. ಆ ಸ್ವಾಮಿಗಳು ಬಹಳ ಶಾಂತ ಸ್ವಭಾವದವರಾಗಿದ್ದರು. ನಾನು ಕರಾಚಿಯಲ್ಲಿರುವಾಗಲೇ ಅವರು ನಿಧನರಾದರು. ಅಲ್ಲಿ ಕೆಲವು ಬ್ರಹ್ಮಚಾರಿಗಳೂ ಇದ್ದರು. ಅವರುಗಳಲ್ಲಿ ನಮ್ಮೊಡನೆ ಬಹಳ ಸ್ನೇಹದಿಂದದ್ದ, ಪರಮೇಶ್ವರ ಮಹಾರಾಜ್, ಅರ್ಜುನ ಮಹಾರಾಜ್ ಮತ್ತು ಲಕ್ಷ್ಮಣ ಮಹಾರಾಜ್– ಈ ಮೂರು ಜನರು ನನ್ನ ನೆನಪಿನಲ್ಲಿದ್ದಾರೆ. ಸಂಜೆ ವೇಳೆ ಅವರು ವಾಲಿಬಾಲ್ ಆಡುತ್ತಿದ್ದರು. ರಾಮಕೃಷ್ಣ ಮಿಷನ್‌ನ ದೇವಸ್ಥಾನದಲ್ಲಿ ಏಕಾದಶಿಯಂದು, ಬಂಗಾಳದ ಸ್ವಾಮಿಗಳು ಹಾಡುತ್ತಿದ್ದ ಭಾವಪೂರ್ಣ ಭಜನೆಗಳೊಂದಿಗೆ ಆಚರಿಸುತ್ತಿದ್ದ ಪೂಜೆಗಳಿಗೂ ಕೆಲವೊಮ್ಮೆ ಹೋಗುತ್ತಿದ್ದೆವು.

ಸ್ವಾಮಿ ರಂಗನಾಥಾನಂದರು, ಬೇರೆ ಬೇರೆ ಧಾರ್ಮಿಕ ಮತ್ತು ಲೋಕಹಿತೈಷಿ ಸಂಸ್ಥೆಗಳೊಂದಿಗೂ ವ್ಯವಹರಿಸುತ್ತಿದ್ದರು. ರಾಮಕೃಷ್ಣ ಮಿಷನ್ನಿನ ಧರ್ಮಾರ್ಥ ಆಸ್ಪತ್ರೆಗೆ ಹಣ ಸಂಗ್ರಹಿಸುವಂತೆ ಉಳಿದ ಇತರ ಭಕ್ತರೊಡನೆ, ನನ್ನ ತಂದೆತಾಯಿಗಳನ್ನು ಮನ ಒಲಿಸಿದರು ಸ್ವಾಮೀಜಿ. ಸ್ವಾಮೀಜಿಯವರ ಭೇಟಿಗೆ ನಿಯತವಾಗಿ ಬರುತ್ತಿದ್ದ ಪ್ರಮುಖರಲ್ಲಿ ನನಗೆ ನೆನಪಿರುವವರು: ಎನ್.ಇ.ಡಿ ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ

---

* ದಿಲ್ಲಿಯ ಭಕ್ತರು.

ಶ್ರೀ ಜುನಾರ್ಕರ್ ಮತ್ತು ಅವರ ಕುಟುಂಬದ ಸದಸ್ಯರು, ಹಾಗೂ ಬಿಸಿನೆಸ್ ಎಕ್ಸಿಕ್ಯೂಟಿವ್ ಆಗಿದ್ದ ಶ್ರೀ ನವೀನ್ ಖಾಂಡ್‌ವಾಲಾ ಮತ್ತು ಅವರ ಪತ್ನಿ ಶ್ರೀಮತಿ ಸರಯೂ ಬಹೆನ್, ಇವರು ಶ್ರೀಮತಿ ಲೀಲಾವತಿ ಮುನ್ಷಿಯವರಿಗೆ ಸಂಬಂಧಿಯಾಗಿದ್ದರು – ಇವರುಗಳು ರಾಮಕೃಷ್ಣ ಮಿಷನ್‌ನ ಚಟುವಟಿಕೆಗಳಲ್ಲಿ ಬಹಳ ಆಪ್ತವಾಗಿ ತೊಡಗಿಸಿಕೊಂಡಿದ್ದರು.

ಕರಾಚಿಯ ರಾಮಕೃಷ್ಣ ಮಿಷನ್‌ನಲ್ಲಿ ಭಗವದ್ಗೀತೆಯ ಬಗೆಗೆ ಪ್ರವಚನ ನೀಡಿದ ಡಾ. ಸರ್ವೇಪಲ್ಲಿ ರಾಧಾಕೃಷ್ಣನ್ ಅವರು, ಮಿಷನ್ ಅನ್ನು ಶೋಭಾಯಮಾನವಾಗಿಸಿದ ಶ್ರೇಷ್ಠ ಸಂದರ್ಶಕರಲ್ಲಿ ಒಬ್ಬರು. ಬರ್ನ್ಸ್ ಗಾರ್ಡನ್‌ನ ಹತ್ತಿರ ಮಹಾತ್ಮ ಗಾಂಧೀಜಿಯವರ ಪ್ರತಿಮೆಯನ್ನು ಅನಾವರಣ ಮಾಡಲು ಡಾ. ರಾಧಾಕೃಷ್ಣನ್, ೧೯೪೫ರಲ್ಲಿ ಕರಾಚಿಗೆ ಬಂದಿದ್ದರು. ರಾಮಕೃಷ್ಣ ಮಿಷನ್‌ನಲ್ಲಿ ಭಜನೆಗಳನ್ನು ಹಾಡಿದ, ಪ್ರಸಿದ್ಧ ಗಾಯಕರಾದ ಪಂಡಿತ ಓಂಕಾರನಾಥ ಠಾಕೂರರು ಮತ್ತೊಬ್ಬ ಶ್ರೇಷ್ಠ ಸಂದರ್ಶಕರು. ರಾಮಕೃಷ್ಣ ಮಿಷನ್‌ನಲ್ಲಿ ನಡೆದ, ಮೇಲೆ ತಿಳಿಸಿದ ಎರಡೂ ಕಾರ್ಯಕ್ರಮಗಳಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಜನರು ಉಪಸ್ಥಿತರಿದ್ದರು ಹಾಗೂ ಕಾರ್ಯಕ್ರಮ ಮುಗಿಯುವವರೆಗೂ ಅನೇಕರು ನಿಂತುಕೊಂಡೇ ಇದ್ದರು.

೧೯೪೭ರಲ್ಲಿ, ದುರದೃಷ್ಟಕರವೆಂಬಂತೆ ರಾಜಕೀಯ ಪರಿಸ್ಥಿತಿಯು ಬದಲಾಯಿತು. ಭಾರತದ ವಿಭಜನೆಯಾದಾಗ ಕರಾಚಿಯು ಪಾಕಿಸ್ತಾನದ ರಾಜಧಾನಿಯಾಯಿತು. ಆದಾಗ್ಯೂ ಸ್ವಾಮಿ ರಂಗನಾಥಾನಂದರ ಮುಂದಾಳತ್ವದಲ್ಲಿ ರಾಮಕೃಷ್ಣ ಮಿಷನ್‌ನ ಚಟುವಟಿಕೆಗಳು ಮುಂದುವರಿದವು. ಆದರೆ ೧೯೪೮ರಲ್ಲಿ ಪುಂಡಾಟಿಕೆಯ, ಕೋಮುವಾದಿ ಘಟಕಗಳಿಂದ ಮಿಷನ್ ಆಕ್ರಮಣಕ್ಕೆ ಒಳಗಾಯಿತು. ಇದೊಂದು ಅಪರೂಪದ ಘಟನೆಯಾದರೂ ವಾತಾವರಣದ ಸಾಮರಸ್ಯದ ಮೇಲೆ ಪರಿಣಾಮಬೀರಿತು, ಹಾಗೂ ಅಂತಿಮವಾಗಿ ರಾಮಕೃಷ್ಣ ಮಿಷನ್ ಕರಾಚಿಯಲ್ಲಿ ತನ್ನ ಚಟುವಟಿಕೆಗಳನ್ನು, ಕಾರ್ಯಕ್ರಮಗಳನ್ನು ಮುಕ್ತಾಯಗೊಳಿಸಿತು. ನಂತರ ರಂಗನಾಥಾನಂದಜೀಯವರು ಭಾರತಕ್ಕೆ ಹಿಂದಿರುಗಿದರು ಹಾಗೂ ತರುವಾಯ ದಿಲ್ಲಿಯ ರಾಮಕೃಷ್ಣ ಮಿಷನ್ನಿನ ಮುಖ್ಯಸ್ಥರಾದರು.

೧೯೪೭ರ ಅಕ್ಟೋಬರ್‌ನಲ್ಲಿ ನಾನು ದಿಲ್ಲಿಯ ಸೇಂಟ್ ಸ್ಟೀಫನ್ಸ್ ಕಾಲೇಜಿಗೆ ದಾಖಲಾದೆ. ೧೯೫೦ರಲ್ಲಿ ಕಾಲೇಜಿನ ಬೆಳಗಿನ ಅಸೆಂಬ್ಲಿಯಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಲು ಸ್ವಾಮಿ ರಂಗನಾಥಾನಂದರನ್ನು ಆಹ್ವಾನಿಸಲು ಅನುಮತಿಸುವಂತೆ ಕಾಲೇಜಿನ ಮತ್ತೊಬ್ಬ ವಿದ್ಯಾರ್ಥಿ ಮತ್ತು ನಾನು, ಪ್ರಾಂಶುಪಾಲ ಶ್ರೀ ಡಿ. ರಾಜಾರಾಮ್ ಅವರನ್ನು ಪ್ರಾರ್ಥಿಸಿದೆವು. ಚಾರಿತ್ರ್ಯ ನಿರ್ಮಾಣ ಮತ್ತು ಕರ್ತವ್ಯಗಳಿಗೆ ನಮ್ಮನ್ನು ಮೀಸಲಾಗಿಡುವುದರ ಬಗೆಗಿನ ಅವರ ಭಾಷಣವನ್ನು ಕಾಲೇಜಿನ ಸಿಬ್ಬಂದಿಯವರೂ ವಿದ್ಯಾರ್ಥಿಗಳೂ ಬಹಳ ಆಸಕ್ತಿಯಿಂದ ಆಲಿಸಿದರು.

೧೯೫೬ರಲ್ಲಿ ಹೊಸದಿಲ್ಲಿಯ ಪೋಲಿಸ್ ಸೂಪರಂಟೆಂಡೆಂಟ್ ಆಗಿ ನಾನು ಹುದ್ದೆಯನ್ನು ವಹಿಸಿಕೊಂಡಾಗ ಸ್ವಾಮೀಜಿಯವರೊಡನೆ ನನ್ನ ಸಂಪರ್ಕವು ಮತ್ತೆ ಮುಂದುವರಿಯಿತು. ನಾನು ರಾಮಕೃಷ್ಣ ಮಿಷನ್‌ಗೆ ಸಾಕಷ್ಟು ಬಾರಿ ಭೇಟಿ ನೀಡುತ್ತಿದ್ದುದಲ್ಲದೇ, ಭಾನುವಾರದ ಗೀತೆಯ ತರಗತಿಗಳಿಗೆ, ತಪ್ಪದೇ ಸಾಕಷ್ಟು ಕ್ರಮವಾಗಿ ಹಾಜರಿರುತ್ತಿದ್ದೆ. ನನ್ನ ಜೊತೆ ನನ್ನ ಪತ್ನಿಯೂ ರಾಮಕೃಷ್ಣ ಮಿಷನ್‌ಗೆ ಭೇಟಿ ನೀಡುತ್ತಿದ್ದಳು. ಪಾರ್ಲಿಮೆಂಟ್ ಸ್ಟ್ರೀಟ್ ನಲ್ಲಿದ್ದ ನಮ್ಮ ಮನೆಯನ್ನು ನಂತರ, ದಿಲ್ಲಿಯಲ್ಲಿ ಕಿಂಗ್ಸ್ ಕ್ಯಾಂಪ್‌ನಲ್ಲಿನ ದಿಲ್ಲಿ ಆರ್ಮ್‌ಡ್ ಪೋಲಿಸ್ ಲೈನ್‌ನ ಮನೆಯನ್ನು ಸ್ವಾಮೀಜಿ ತಮ್ಮ ಉಪಸ್ಥಿತಿಯಿಂದ ಆಶೀರ್ವದಿಸಿ ಅನುಗ್ರಹಿಸಿದರು.

೧೯೪೯ರಲ್ಲಿ ಕರಾಚಿಯಿಂದ ಮುಂಬೈಗೆ ಸ್ಥಳಾಂತರಿಸಿದ ನನ್ನ ತಂದೆ ತಾಯಿ ಸ್ವಾಮೀಜಿಯನ್ನು ನಿಯತವಾಗಿ ಭೇಟಿಮಾಡುವುದನ್ನು ಮುಂದುವರಿಸಿದರು. ಜಲಂಧರ್‌ನಲ್ಲಿನ ನಮ್ಮ ವಂಶದವರ ಮನೆಗೂ ಭೇಟಿ ನೀಡಿ, ಅಲ್ಲಿ ನನ್ನ ತಂದೆತಾಯಿಯ ಸ್ನೇಹಿತರಿಗೂ ಮತ್ತು ಸತ್ಸಂಗಿಗಳಿಗೂ ಸ್ನೇಹ, ಕರುಣೆಗಳಿಂದ

ಪ್ರವಚನ ನೀಡಿದರು ಸ್ವಾಮೀಜಿ. ಮುಂಬೈಯಲ್ಲಿ ನನ್ನ ತಾಯಿಯು ಮರಣ ಹೊಂದಿದ ನಂತರ – ೧೯೮೩ರ ಫೆಬ್ರವರಿ – ಸ್ವಾಮೀಜಿ ನನ್ನ ತಂದೆ ತಾಯಿಯ ಬಗೆಗೆ ಹೃದಯಸ್ಪರ್ಶಿ ಪ್ರಶಂಸೆ ಮಾಡಿದರು. ನಂತರ ೧೯೯೮ರಲ್ಲಿ ತಮ್ಮ ಮರಣದ ತನಕವೂ ನನ್ನ ತಂದೆಯವರು ಸ್ವಾಮೀಜಿಯವರೊಡನೆ ಸಂಪರ್ಕದಲ್ಲಿರುವುದನ್ನು ಮುಂದುವರಿಸಿದರು.

ಎರಡು ವರ್ಷಗಳ ಹಿಂದೆ ನಾನು ಸ್ವಾಮೀಜಿಗೆ ಪತ್ರ ಬರೆದಿದ್ದೆ, ಹಾಗೂ ಅವರಿಂದ ಸೌಜನ್ಯಶೀಲ ಉತ್ತರವನ್ನು ಪಡೆದಿದ್ದೆ. ಈ ಕೆಳಗೆ ತಿಳಿಸುವ ಸಂಗತಿಯ ಬಗೆಗೆ ನನಗೆ ಪ್ರತ್ಯಕ್ಷವಾಗಿ ತಿಳಿದಿಲ್ಲ. ಆದರೆ ರಂಗೂನಿನಲ್ಲಿ ನಡೆದ ಸಂದರ್ಭದ ಬಗೆಗೆ ನನ್ನ ತಂದೆಯವರು ಹೇಳುತ್ತಿದ್ದುದು ನನಗೆ ನೆನಪಿದೆ. ೧೯೪೨ಕ್ಕೂ ಮೊದಲು ಸ್ವಾಮೀಜಿಯವರು ರಂಗೂನಿನ ರಾಮಕೃಷ್ಣ ಮಿಷನ್ನಿನ ಹೊಣೆ ಹೊತ್ತಿದ್ದರು. ಕ್ರಿಸ್‌ಮಸ್ ದಿನದಂದು ರಂಗೂನಿನಲ್ಲಿ ಜೀಸಸ್ ಕ್ರೈಸ್ತನ ಜೀವನ ಮತ್ತು ಅವನ ತತ್ತ್ವ, ಸಿದ್ಧಾಂತಗಳ ಬಗೆಗೆ ಸ್ವಾಮೀಜಿಯವರು ವ್ಯಾಖ್ಯಾನಮಾಡಿದರು ಎಂದು ನನ್ನ ತಂದೆಯವರಿಗೆ ತಿಳಿದು ಬಂದಿತು. ಅಂದಿನ ಪ್ರವಚನದಲ್ಲಿ ಉಪಸ್ಥಿತರಿದ್ದ ರಂಗೂನಿನ ಬಿಷಪ್‌ರಿಂದ ಸ್ವಾಮೀಜಿಯವರ ವಿವರಣೆ ಬಹಳ ಪ್ರಶಂಸಿಸಲ್ಪಟ್ಟಿತ್ತಂತೆ.

* * * *

# ೧೨೯. ನನ್ನ ಜೀವನದಲ್ಲಿನ ಅತ್ಯಂತ ದೊಡ್ಡ ಪ್ರಭಾವ

–ಮಹಾಲಿಂಗಮ್ ಚಿನ್ನತಂಬಿ*

೧೯೭೩ರಲ್ಲಿ ನನಗೆ ಸ್ವಾಮೀಜಿ ರಂಗನಾಥಾನಂದಜಿಯವರ ಪರಿಚಯವಾಯಿತು. ಆಸ್ಟ್ರೇಲಿಯಾದ ಪೆರ್ತ್‌ನ ರೋಸ್‌ಮೊಯ್ನೆಯಲ್ಲಿನ ನಮ್ಮ ಮನೆಗೆ ಸ್ವಾಮೀಜಿಯವರು ಬಂದಿದ್ದರು ಅವರನ್ನು ನೋಡಿದ ಮೊದಲ ದಿನದಿಂದಲೇ ನಾನು ಅವರಿಂದ ಗಾಢವಾಗಿ ಪ್ರಭಾವಿತನಾದೆ. ಆ ಹಂತದಲ್ಲಿ ನನ್ನ ಪತ್ನಿ ಯೋಗಾ ಮತ್ತು ನನಗೆ ಮೂರು ಜನ ಹೆಣ್ಣುಮಕ್ಕಳಿದ್ದರು. ಪೆರ್ತ್‌ನ ಸುತ್ತಮುತ್ತಲೂ ಅವರಿಗೆ ತೋರಿಸುತ್ತಾ ಹನ್ನೆರಡು, ಹದಿನಾಲ್ಕು ದಿನಗಳನ್ನು ನಾವು ಕಳೆದುದಲ್ಲದೇ, ವೇದಾಂತವನ್ನು ಪ್ರಚಾರಮಾಡುವಂತಹ ಅವಕಾಶಗಳನ್ನೂ ತೋರಿಸಿದೆವು. ಸ್ವಾಮೀಜಿಯವರು ನಮ್ಮ ಮೇಲೆ ಅಚ್ಚಳಿಯದ ಪ್ರಭಾವ ಮೂಡಿಸಿದರು ಹಾಗೂ ಈ ಭೇಟಿಯು ಬಹಳ 'ಅಸದೃಶ ಬಾಂಧವ್ಯ'ಕ್ಕೆ ಒಂದು ಮಹಾ ಆರಂಭವಾಗಿತ್ತು. ಆಗಿನಿಂದ ೧೯೮೪ರ ತನಕ ಸ್ವಾಮಿ ರಂಗನಾಥಾನಂದರು ಪ್ರತಿ ವರ್ಷವೂ ಪೆರ್ತ್‌ಗೆ ಬರುತ್ತಿದ್ದರು.

ಪೆರ್ತ್‌ನಲ್ಲಿ ಸಂಪೂರ್ಣವಾಗಿ ಸ್ವಾಮೀಜಿಯವರ ಚಟುವಟಿಕೆಗಳನ್ನು ಪ್ರಚಾರಮಾಡುವ ಸಲುವಾಗಿ ನಾನು ಪ್ರತಿ ವರ್ಷವೂ ಎರಡು ವಾರ ರಜ ತೆಗೆದುಕೊಳ್ಳುತ್ತಿದ್ದೆ, ಹಾಗೂ ಹಲವಾರು ಸತ್ಸಂಗಗಳಿಗೆ, ಹೆಚ್ಚು ಹೆಚ್ಚು ಜನರನ್ನು ಆಹ್ವಾನಿಸಬೇಕೆಂದು ಪರಿಶ್ರಮದಿಂದ ಕೆಲಸಮಾಡಿದೆ. ಈ ಕಾರ್ಯ ನಿಜಕ್ಕೂ ಕಠಿಣವಾಗಿತ್ತೆಂದು ನಾನು ಹೇಳಬೇಕಾಗಿದೆ. ಪ್ರತಿಯೊಂದು ಸಭೆಗೂ ನಾವು  ಕನಿಷ್ಠ ನಲವತ್ತರಿಂದ ಐವತ್ತು ಜನರನ್ನಾದರೂ ನಿರೀಕ್ಷಿಸುತ್ತಿದ್ದೆವು. ಆದರೆ ಹೆಚ್ಚು ಸಂದರ್ಭಗಳಲ್ಲಿ ಹತ್ತರಿಂದ ಹನ್ನೆರಡು ಸಂಖ್ಯೆಯ ಪರಿಮಿತ ಗುಂಪು ಮಾತ್ರ ಇರುತ್ತಿತ್ತು.

ಈ ಸಭೆಗಳು ನಡೆಯುತ್ತಿದ್ದ ಅವಧಿಯಲ್ಲಿ, ನಾನು ಮತ್ತು ಯೋಗಾ ದೀಕ್ಷೆ ಪಡೆಯಬೇಕೆಂದಿರುವುದನ್ನು ಸ್ವಾಮೀಜಿಗೆ ತಿಳಿಸಿದೆ. ಅದು ಒಳ್ಳೆಯ ಆಲೋಚನೆಯೆಂದೂ, ನಾವು ಬೇಲೂರು ಮಠದ ಅಧ್ಯಕ್ಷರಿಂದ ದೀಕ್ಷೆ ಪಡೆಯಬೇಕೆಂದೂ ಸ್ವಾಮೀಜಿ ನಮಗೆ ಹೇಳಿದರು.

೧೯೭೬ರಲ್ಲಿ ನಾನು ಉದ್ಯಮದಲ್ಲಿ ನಿರತನಾಗಿದ್ದು, ಆ ಉದ್ಯಮಕ್ಕೆ  ಬದ್ಧನಾಗಿರಬೇಕಾಗಿದ್ದುದರಿಂದ, ೧೯೭೯ ಮತ್ತು ೧೯೮೪ರ ಅವಧಿಯಲ್ಲಿ ಸ್ವಾಮೀಜಿಯವರು ಬಂದಾಗ ನಾನು ಬಹಳ ಕಡಿಮೆ ಸಮಯವನ್ನು ಅವರ ಜೊತೆ ಕಳೆಯಬೇಕಾಯಿತು. ಸಾಧ್ಯವಾದಷ್ಟು ಸಮಯವನ್ನು ಅವರ ಜೊತೆಯಿರಲು ನಾನುನೀಡುತ್ತಿದ್ದೆನಾದರೂ, ೧೯೭೩ರಿಂದ ೧೯೭೭ರ ಅವಧಿಯಲ್ಲಿನಷ್ಟು ಸಮಯವನ್ನು ಅವರೊಡನೆ ಕಳೆಯಲಾಗಲಿಲ್ಲ. ಆದಾಗ್ಯೂ, ಸ್ವಾಮೀಜಿಯು ನನ್ನ ಮನಸ್ಸಿನ ಮೇಲೆ ಅತ್ಯಂತ ಶಕ್ತಿಶಾಲೀ ಪ್ರಭಾವವನ್ನು ಮೂಡಿಸಿರುವರಲ್ಲದೇ, ವೇದಾಂತದ ಶಕ್ತಿ ಮತ್ತು ಶ್ರೀ ರಾಮಕೃಷ್ಣರ ಉಪದೇಶಗಳ ಸಾಮರ್ಥ್ಯದ ಬಗೆಗೆ, ಯಾವುದೇ ಶಂಕೆ, ಅನುಮಾನಗಳಿಲ್ಲದಂತೆ ನನಗೆ ಮನದಟ್ಟು ಮಾಡಿದ್ದಾರೆ. ಅವರು ಸ್ವಾಮೀ ವಿವೇಕಾನಂದರ ಬರೆಹಗಳ ಮಹತ್ವವನ್ನು ಅರಿಯುವಂತೆ ಮಾಡಿದರು. ಆಗಿನಿಂದಲೂ ನಾನು ಸ್ವಾಮಿ ವಿವೇಕಾನಂದರ ಗ್ರಂಥಗಳನ್ನು ಓದಲು ಆರಂಭಿಸಿದೆ.

---

* ಆಸ್ಟ್ರೇಲಿಯಾದ ಪೆರ್ತ್‌ನಲ್ಲಿನ ಭಕ್ತರು.

ಸ್ವಾಮೀಜಿಯವರ ಪ್ರಭಾವದಿಂದ ನಾವು ೧೯೭೬ರಲ್ಲಿ ದೀಕ್ಷೆ ಪಡೆದೆವು. ೧೯೮೫ರಲ್ಲಿ ನಾವು ಬಿಸ್ಬೇನ್‌ಗೆ ಸ್ಥಳಾಂತರಿಸಿದಾಗ, ಸ್ವಾಮೀಜಿಯು ನಮ್ಮ ಸಾಧಾರಣವಾದ ಬಾಡಿಗೆಯ ಮನೆಗೂ ಭೇಟಿಕೊಟ್ಟಿದ್ದರು. ಉದ್ಯಮದಲ್ಲಿ ನಾವು ಹಣವನ್ನೆಲ್ಲಾ ಕಳೆದುಕೊಂಡಿದ್ದರಿಂದ ನಾವು ಜೀವನವನ್ನು ಪೂರ್ತಿಯಾಗಿ ಮತ್ತೆ ಪ್ರಾರಂಭಿಸಬೇಕಾಯಿತು. ಈ ಬದಲಾದ ಪರಿಸ್ಥಿತಿಯ ಬಗೆಗೆ ಸ್ವಾಮೀಜಿ ಬಹಳ ನೊಂದುಕೊಂಡರು ಮತ್ತು ಆಧ್ಯಾತ್ಮಿಕವಾಗಿ ನಮ್ಮನ್ನು ಬೆಂಬಲಿಸುತ್ತಲೇ ಇದ್ದರು. ಸ್ವಾಮೀಜಿಯವರೊಡನೆ ಇದ್ದ ನಮ್ಮ ಬಾಂಧವ್ಯ ನಮ್ಮ ಜೀವನವನ್ನು ಬಹಳ ಪ್ರಭಾವಿಸಿತು. ಯೋಗಾಳ ಮತ್ತು ನನ್ನ ಜೀವನದಲ್ಲಿ ಬಹುಶಃ ಇದು ಅತ್ಯಂತ ದೊಡ್ಡ ಪ್ರಭಾವ.

* * * *

# ೧೩೦. ಸ್ವಾಮಿ ರಂಗನಾಥಾನಂದಜೀ: ಪಿತೃತ್ವದ ಮೂರ್ತ ಪ್ರತಿಮೆ.

–ತ್ರಿವೇಣಿ ಪೋಪಟ್*

ಬಾಲ್ಯದ ಸ್ಮೃತಿಗಳು ನನ್ನ ಮನಸ್ಸಿನಲ್ಲಿ ಇನ್ನೂ ಹಸಿರಾಗಿವೆ. ನನ್ನ ತಾಯಿ ಹೇಳುತ್ತಿದ್ದ ಕಥೆಗಳಿಂದಲೂ, ನಾನು ಓದಿದ ಕೆಲವು ಪುಸ್ತಕಗಳಿಂದಲೂ ಸ್ವಾಮಿ ವಿವೇಕಾನಂದರ ಬಗೆಗೆ ನಾನು ಸ್ವಲ್ಪ ತಿಳಿದುಕೊಂಡಿದ್ದೆ.

ನಾವು ಕರಾಚಿಯಲ್ಲಿದ್ದಾಗ ಶಾಲೆಯಲ್ಲಿ ನಡೆದ ಒಂದು ಘಟನೆ ನನಗೆ ಇನ್ನೂ ನೆನಪಿದೆ. 'ಗುರುಪೂರ್ಣಿಮೆ'ಯ ಶುಭಸಂದರ್ಭದಲ್ಲಿ, ಪೂಜಾವಿಧಿಗಳಲ್ಲಿ ಸಹಾಯಮಾಡಲು ನಾನು ಮನೆಯಲ್ಲೇ ಇರಬೇಕಾಗಿತ್ತು. ನಿಜವಾಗಿಯೂ ಆ ದಿನ ನಾನು ನನ್ನ ತರಗತಿಗಳಿಂದ ವಂಚಿತಳಾದೆ. ಮರುದಿನ ಶಾಲೆಗೆ ಹೋದಾಗ, ಹಿಂದಿನ ದಿವಸ ಒಬ್ಬರು ಅದ್ಭುತ ಸನ್ಯಾಸಿಗಳು ನಮ್ಮ ಶಾಲೆಗೆ ಭೇಟಿಕೊಟ್ಟಿದ್ದರೆಂದು ನನ್ನ ಸ್ನೇಹಿತರು ಹೇಳಿದರು. ನಮ್ಮ ಪ್ರಾಂಶುಪಾಲರ ಮಗಳು ನನ್ನ ತರಗತಿಯವಳು. ರಾಮಕೃಷ್ಣ ಮಿಷನ್‌ನಿಂದ ಬಂದಿದ್ದ ಆ ಸನ್ಯಾಸಿಗಳು ತನ್ನ ತಂದೆಗೆ ಚೆನ್ನಾಗಿ ಪರಿಚಿತರೆಂದು ಆ ಗೆಳತಿ ನನಗೆ ಹೇಳಿದಳು. ಅವರನ್ನು ನೋಡುವ ಅವಕಾಶವನ್ನು ಕಳೆದುಕೊಂಡಿದ್ದಕ್ಕೆ ನನಗೆ ವಿಪರೀತ ದುಃಖವಾಯಿತು. ಸ್ವಾಮೀಜಿಯವರನ್ನು ಭೇಟಿಮಾಡಲು ನನಗೆ ಇರುವ ಕಾತರವನ್ನು ತಿಳಿದ ನಮ್ಮ ಪ್ರಾಂಶುಪಾಲರು, ಸ್ವಾಮೀಜಿಯವರು ಆಶ್ರಮದಲ್ಲಿ ನಡೆಸುವ ತರಗತಿಗಳಲ್ಲಿ ಯಾರು ಬೇಕಾದರೂ ಹಾಜರಿರಬಹುದೆಂದು ಹೇಳಿ ನನ್ನನ್ನು ಸಾಂತ್ವನಗೊಳಿಸಿದರು. ಉಚಿತ ಸಂದರ್ಭದಲ್ಲಿ ನನ್ನನ್ನು ಸ್ವಾಮೀಜಿಯ ಬಳಿಗೆ ಕರೆದುಕೊಂಡುಹೋಗುವುದಾಗಿಯೂ ಅವರು ನನಗೆ ಆಶ್ವಾಸನೆ ನೀಡಿದರು.

ಶೀಘ್ರದಲ್ಲಿಯೇ, ಅನಿರೀಕ್ಷಿತವಾಗಿ ಆ ಅವಕಾಶವೂ ಬಂದು ಒದಗಿತು. ಒಂದು ದಿನ ನಮ್ಮ ಪ್ರಾಂಶುಪಾಲರು ಸ್ವಾಮಿ ರಂಗನಾಥಾನಂದರನ್ನು ಭೇಟಿಮಾಡಲು ಹಾಗೂ ಅವರ ಅನೌಪಚಾರಿಕ ಪ್ರವಚನವನ್ನು ಕೇಳಲು, ಶಾಲೆಯ ಎಲ್ಲ ಶಿಕ್ಷಕರನ್ನೂ ತಮ್ಮ ಮನೆಗೆ ಆಹ್ವಾನಿಸಿದರು. ನನ್ನನ್ನು ಕೂಡ ಆಹ್ವಾನಿಸಿದ್ದು ನಮ್ಮ ಪ್ರಾಂಶುಪಾಲರ ಔದಾರ್ಯ ಮತ್ತು ಒಳ್ಳೆಯ ಸ್ವಭಾವ. ನಾನು ಮಹಾರಾಜರನ್ನು ಮೊದಲ ಬಾರಿಗೆ ಭೇಟಿಯಾದದ್ದು ಅಲ್ಲಿ. ನನಗೆ ಮಾತುಕೊಟ್ಟಿದ್ದಂತೆ ನಮ್ಮ ಪ್ರಾಂಶುಪಾಲರು ನನ್ನನ್ನು ಸ್ವಾಮೀಜಿಯವರಿಗೆ ಪರಿಚಯಿಸಿದರು. ಲಘು ಉಪಾಹಾರದ ನಂತರ, ಅಲ್ಲಿ ಸೇರಿದ್ದ ಅನೌಪಚಾರಿಕ ಸಮೂಹಕ್ಕೆ ಪ್ರವಚನ ನೀಡುವಂತೆ ಸ್ವಾಮೀಜಿಯವರನ್ನು ಪ್ರಾರ್ಥಿಸಲಾಯಿತು. ಮಹಾರಾಜರು ತಮ್ಮ ಭಾಷಣವನ್ನು ಆದೆಷ್ಟು, ವಿನೋದವಾಗಿ ಚಮತ್ಕಾರವಾಗಿ ಪ್ರಾರಂಭಿಸಿದರೆನ್ನುವುದು ನನಗಿನ್ನೂ ಸ್ಪಷ್ಟವಾಗಿ ನೆನಪಿದೆ. ತಮ್ಮ ಹೊಟ್ಟೆಯನ್ನು ತೋರಿಸುತ್ತಾ ಅವರು ಹೇಳಿದರು. 'ಏನೋ ಒಂದಷ್ಟು ಇಲ್ಲಿಗೆ ಹೋಗಿದೆ' ಮತ್ತು ತಮ್ಮ ತಲೆಯ ಕಡೆಗೆ ತೋರಿಸುತ್ತಾ ಅವರು ಹೇಳಿದರು: 'ಈಗ ಏನೋ ಒಂದಿಷ್ಟು ಅಲ್ಲಿಗೆ ಹೋಗುತ್ತದೆ!' ಆನಂತರ ಅವರು ತಮ್ಮ ಆಧ್ಯಾತ್ಮಿಕ ಪ್ರವಚನವನ್ನು ಪ್ರಾರಂಭಿಸಿದರು. ಬೇರೆ ಏನೂ ನನ್ನ ನೆನಪಿನಲ್ಲಿ ಉಳಿದಿಲ್ಲವಾದರೂ, ಪ್ರವಚನ ನೀಡಿದನಂತರ, ಮಹಾರಾಜರು ಆಶ್ರಮಕ್ಕೆ ಹಿಂದಿರುಗುತ್ತಿದಾಗ, ನನ್ನನ್ನು ಟ್ರಾಂ ನಿಲ್ದಾಣದಲ್ಲಿ ಇಳಿಸಿದ್ದು ನನಗೆ ನೆನಪಿದೆ. ಮನೆಗೆ ಬಂದ ನಂತರ ನನ್ನ ಈ ಅದ್ಭುತ ಅನುಭವವನ್ನು ನನ್ನ ತಾಯಿಗೆ ಹೇಳಿದೆ. ಮಹಾರಾಜ್‌ರ ಪ್ರಭಾವ ಎಷ್ಟು ಆಗಿತ್ತೆಂದರೆ ಅವರನ್ನು ಮತ್ತೆ ನೋಡಬೇಕೆಂಬ ಭಾವನೆ ನನ್ನಲ್ಲಿ ಆರಂಭವಾಯಿತು. ಎಂದಾದರೂ ಒಂದು ದಿನ ಮಹಾರಾಜ್‌ರನ್ನು ಭೇಟಿ ಮಾಡಲು ನಾವೆಲ್ಲರೂ ಆಶ್ರಮಕ್ಕೆ ಹೋಗಬೇಕೆಂದು ನಾನು ನನ್ನ ತಾಯಿಗೆ ಹೇಳಿದೆ. ಮೊದಲಿಗೆ, ನನ್ನ

---

* ಯು.ಎಸ್.ಎ.ಯ ರೋಡ್ಸ್ ಐಲೆಂಡ್‌ನ ಪ್ರಾವಿಡೆನ್ಸ್‌ನಲ್ಲಿನ ಭಕ್ತೆ.

ತಂದೆತಾಯಿ ಹಿಂಜರಿದರು. ಕಾರಣ ಆಂಗ್ಲಭಾಷೆಯಲ್ಲಿ ಮಾತನಾಡುವ ಅಭ್ಯಾಸ ಅವರಿಗಿರಲಿಲ್ಲ. ಮತ್ತು ನಮ್ಮ ಮನೆ ಆಶ್ರಮದಿಂದ ಬಹಳ ದೂರದಲ್ಲಿತ್ತು. ಹೇಗೋ ನನ್ನ ಪ್ರಾರ್ಥನೆಯ ಮೇರೆಗೆ, ಒಂದುದಿನ ಮಹಾರಾಜರ ಭಗವದ್ ಗೀತಾ ತರಗತಿಗೆ ಹಾಜರಾಗಲೆಂದು ನನ್ನ ತಂದೆ ನನ್ನನ್ನು ಆಶ್ರಮಕ್ಕೆ ಕರೆದುಕೊಂಡುಹೋದರು. ಮಹಾರಾಜರ ಹತ್ತಿರವೇ ಕುಳಿತುಕೊಳ್ಳುವಂತಹ ಅದೃಷ್ಟ ಅಂದು ನಮ್ಮದಾಗಿತ್ತು. ಸ್ವಾಮೀಜಿಯವರು ಏನು ಹೇಳಿದರೆಂಬುದು ಸರಿಯಾಗಿ ಅರ್ಥವಾಗದಿದ್ದರೂ ಕೇವಲ ಮಹಾರಾಜರನ್ನು ಸುಮ್ಮನೆ ವೀಕ್ಷಿಸುವುದರಿಂದಲೇ ತಮಗೆ ಸಂತೋಷವಾಗಿತ್ತೆಂದು, ನನ್ನ ತಂದೆ ನಂತರ ಹೇಳಿದರು. ತಂದೆಯವರಂತೂ ಸಂತೋಷದಿಂದ ಭಾವಪರವಶರಾಗಿದ್ದರು. ಕ್ರಮೇಣ ನಾನು ಸ್ವಾಮೀಜಿಯವರ ಎಲ್ಲ ಪ್ರವಚನಗಳಿಗೂ ಹಾಜರಾಗುತ್ತಿದ್ದೆ. ಒಂದಲ್ಲ ಒಂದು ರೀತಿಯಲ್ಲಿ ಅವರ ಎಲ್ಲ ಪ್ರವಚನಗಳು ನನ್ನಲ್ಲಿ ಸ್ಫೂರ್ತಿ ತೊಂಬಿದವು. ಗುಜರಾತಿ ಭಾಷೆಯನ್ನು ಮಾತನಾಡುವ ನನ್ನ ತಂದೆ ತಾಯಿ ಕೂಡ ಸ್ವಾಮೀಜಿಯವರೊಡನೆ ದೃಢವಾದ ಬಾಂಧವ್ಯ ಬೆಳೆಸಿಕೊಂಡರು. ನನಗೆ ಅವಕಾಶ ದೊರೆತಾಗಲೆಲ್ಲಾ ಮಹಾರಾಜ್‌ರನ್ನು ನೋಡಿ ಸ್ವಲ್ಪ ಸಮಯ ಅಲ್ಲಿ ಕಳೆಯುವುದಕ್ಕೋಸ್ಕರ ಆಶ್ರಮಕ್ಕೆ ಹೋಗುತ್ತಿದ್ದೆ.

ಈಗ ನಿಮ್ಮನ್ನು ರಂಜಿಸುವ ಘಟನೆಯನ್ನು ಹೇಳತ್ತೇನೆ. ವಿಶೇಷ ಸಂದರ್ಭಗಳಲ್ಲಿ, ಪೂಜೆಗಳ ಜೊತೆಗೆ ಪ್ರತಿ ದಿನವೂ ಆಶ್ರಮದಲ್ಲಿ ಸಾಯಂಕಾಲ ಭಜನೆ ಮತ್ತು ಆರತಿಗಳನ್ನು ನಡೆಸಲಾಗುತ್ತಿತ್ತು. ಆರತಿ ಸಮಾರಂಭದಲ್ಲಿ ಹಾಜರಿರಲು ನನಗೆ ಬಹಳ ಆಸಕ್ತಿಯಿತ್ತು. ಆದರೆ ನಮ್ಮ ಮನೆಯು ಟ್ರಾಂ ನಿಲ್ದಾಣದಿಂದ ಬಹಳ ದೂರವಿತ್ತು. ಅಲ್ಲದೇ, ಸಾಯಂಕಾಲ ತಡವಾಗಿ, ಒಂಟಿ ಹೆಣ್ಣುಮಕ್ಕಳು ಓಡಾಡುವುದು ಕ್ಷೇಮವೂ ಆಗಿರಲಿಲ್ಲ. ಅದೂ ಅಲ್ಲದೇ, ಆಶ್ರಮದ ಅಧಿಕಾರಿಗಳು, ಒಬ್ಬ ಹುಡುಗಿಸೂರ್ಯ ಮುಳುಗಿದ ಮೇಲೆ ಅಲ್ಲಿ (ಆಶ್ರಮದಲ್ಲಿ) ಹಾಜರಿರಲು ಅನುಮತಿಸುತ್ತಿರಲಿಲ್ಲವೆಂದೂ ನಾನು ತಿಳಿದುಕೊಂಡೆ. ಈ ಎರಡೂ ನಿರ್ಬಂಧಗಳಿಂದ ಪಾರಾಗುವುದು ಹೇಗೆಂದು ಆಲೋಚಿಸಲು ಆರಂಭಿಸಿದೆ. ಕಡೆಗೆ ಒಂದು ಉಪಾಯವನ್ನು ಯೋಚಿಸಿದೆ! ನಾನು ಹುಡುಗನ ರೀತಿ ಉಡುಪು ಧರಿಸಿದರೆ, ಸಾಯಂಕಾಲದ ಪ್ರಾರ್ಥನೆಗೆ ಹಾಜರಾಗಲು ಮತ್ತು ಒಬ್ಬಳೇ ಮನೆಗೆ ಹಿಂತಿರುಗಲು ಯಾವ ಸಮಸ್ಯೆಯೂ ಇರುವುದಿಲ್ಲವೆಂದೂ ಆಲೋಚಿಸಿದೆ. ಆದ್ದರಿಂದ ನಾನು ಹುಡುಗನಂತೆ ವೇಷಮರೆಸಿಕೊಂಡು ಆಶ್ರಮಕ್ಕೆ ಹೋಗತೊಡಗಿದೆ. ಇತರ ಪುರುಷ ಭಕ್ತರ ಜೊತೆಗೆ, ನಾನು ಕೂಡ ಮೊದಲ ಸಾಲಿನಲ್ಲಿಯೇ ಕುಳಿತುಕೊಳ್ಳುತ್ತಲಿದ್ದೆ. ಸ್ವಾಮಿ ಮುಖ್ಯಾನಂದರು ಆ ಸಮಯದಲ್ಲಿ ಬ್ರಹ್ಮಚಾರಿಗಳಾಗಿದ್ದು ಅವರು ಲಕ್ಷ್ಮಣ ಮಹಾರಾಜ್ ಎಂಬ ಹೆಸರಿನಿಂದ ಪರಿಚಿತರಾಗಿದ್ದರು. ಆರತಿಯ ನಂತರ ಲಕ್ಷ್ಮಣ ಮಹಾರಾಜ್‌ರು ಆರತಿಯಲ್ಲಿನ ದೀಪವನ್ನು ಎಲ್ಲರ ಎದುರಿಗೂ ತರುತ್ತಿದ್ದರು. ದೀಪದ ಜ್ಯೋತಿಯ ಮೇಲೆ ಎಲ್ಲರೂ ಎರಡೂ ಕೈಚಾಚಿ ನಂತರ ಆ ಕೈಗಳಿಂದ ತಮ್ಮ ಶರೀರವನ್ನು ಮುಟ್ಟಿಕೊಳ್ಳುತ್ತಿದ್ದರು, ಆರತಿಯ ಅನುಗ್ರಹ ಪಡೆಯಲೆಂದು. ನಾನು ಹುಡುಗನ ಉಡುಪನ್ನು ಧರಿಸಿದ್ದರೂ, ಮಂಗಳಾರತಿಯ ಅನುಗ್ರಹ ಪಡೆಯುವಲ್ಲಿ ಹುಡುಗಿಯ ರೀತಿ ನೀತಿಗಳನ್ನು ಬದಲಾಯಿಸಿಕೊಂಡಿರಲಿಲ್ಲವೆನಿಸುತ್ತದೆ. ಒಂದು ದಿನ ಬ್ರಹ್ಮಚಾರಿ ಮಹಾರಾಜರು ನಾನು ಮಂಗಳಾರತಿ ತೆಗೆದುಕೊಳ್ಳುವುದನ್ನು ಉದ್ದೇಶಪೂರ್ವಕವಾಗಿ ದಿಟ್ಟಿಸುತ್ತಿರುವುದನ್ನು ನಾನು ನೋಡಿದೆ. ನನ್ನ ವರ್ತನೆಯನ್ನು ನೋಡಿದ ಅವರಿಗೆ, ಇಲ್ಲಿ ಏನೋ ದೋಷ, ಅಥವಾ ಅನುಚಿತವಾದದ್ದಿದೆ ಎನ್ನಿಸಿತು. ಸ್ವಲ್ಪ ಸಮಯದ ನಂತರ ಸ್ವಾಮಿ ರಂಗನಾಥಾನಂದರನ್ನು ನಾನು ಕಾಣಬೇಕಾಗಿದೆಯಂತೆ ಎಂದು ತಿಳಿಸಿದರು. ನಾನು ಅವರ ಬಳಿಗೆ ಹೋದಾಗ, ಮಹಾರಾಜರು ಕೇಳಿದರು. "ನೀನೇಕೆ ಹುಡುಗನ ವೇಷದಲ್ಲಿ ಬರುತ್ತೀಯ? ಇದು ಸರಿಯಲ್ಲ. ಒಳ್ಳೆಯ ಕಾರಣಕ್ಕಾಗಿ ಕೂಡ ಸುಳ್ಳು ಅಥವಾ ನಟನೆಯ ವೇಷ ಹಾಕುವುದಕ್ಕೆ ಮೊರೆಹೋಗುವುದು ಯಾವಾಗಲೂ ತಪ್ಪು." ಹೀಗೆ ನನ್ನ ಗುಟ್ಟು ರಟ್ಟಾದ ಬಳಿಕ ನನ್ನ ಮನಸ್ಸನ್ನು ತೆರೆದು ನನ್ನ ಭಯ, ಆತಂಕ, ಭಾವನೆಗಳನ್ನು ಮಹಾರಾಜಗೆ ಹೇಳಿಕೊಂಡೆ. ಜೊತೆಗೆ ಈ ಮಾರುವೇಷವು ನಾನು ಸುರಕ್ಷಿತವಾಗಿ ಸಂಜೆ ಮನೆಗೆ ಹೋಗಲು

ನೆರವಾಗುತ್ತದೆಂದೂ ಹೇಳಿದೆ. ನನ್ನ ಹೇಳಿಕೆಯನ್ನು ತಾಳ್ಮೆಯಿಂದ ಕೇಳಿದ ಮಹಾರಾಜರು ಹೇಳಿದರು. "ಸರಿ, ಬಿಡು, ನಿನಗೆ ಯಾವಾಗ ಇಲ್ಲಿಗೆ ಬರಬೇಕು ಎನ್ನಿಸುತ್ತದೆಯೋ ಆಗ ನನಗೆ ತಿಳಿಸು. ನಾನು ಅಗತ್ಯವಾದ ಏರ್ಪಾಟುಗಳನ್ನು ಮಾಡುತ್ತೇನೆ." ಮಹಾರಾಜಜ್‌ರು ಅಷ್ಟೊಂದು ಕಾಳಜಿಯುಳ್ಳವರೂ, ಪ್ರೀತಿಸುವವರೂ ಆಗಿದ್ದರು.

ಕರಾಚಿಯಲ್ಲಿ ಸ್ವಾಮಿ ರಂಗನಾಥಾನಂದರು ಬಹಳ ಜನಪ್ರಿಯರಾದರು. ಹಿಂದೂ, ಮುಸ್ಲಿಮ್ ಮತ್ತು ಪಾರ್ಸಿ ಎಲ್ಲ ಸಮುದಾಯಗಳ ಜನರೂ ಅವರ ಸಲಹೆ ಕೇಳಲು ಬರುತ್ತಿದ್ದರು. ಎಲ್ಲರ ಸಮಸ್ಯೆಗಳಿಗೂ ಅನುಮಾನಗಳಿಗೂ ಮಹಾರಾಜರು ಪರಿಹಾರ ನೀಡುತ್ತಿದ್ದರು. ಸ್ವಾಮೀಜಿಯವರು ಸಮಸ್ತರಿಗೂ ಅನಭಿಷಿಕ್ತ ರಾಜರಾಗಿದ್ದರು. ಆ ಅವಧಿಯಲ್ಲಿ ಬ್ರಿಟಿಷ್ ಸರ್ಕಾರವು ರಕ್ಷಣಾ ಪಡೆಗಳಿಗಾಗಿ ಅಗಾಧ ಆಹಾರ ಸಂಗ್ರಹಣೆ ಮಾಡುತ್ತಿತ್ತು. ಅದರ ಪರಿಣಾಮವಾಗಿ ಸಾಮಾನ್ಯ ಜನರು ಆಹಾರದ ಅಭಾವದಿಂದ ಒದ್ದಾಡುತ್ತಿದ್ದರು. ಆದರೆ, ಮಹಾರಾಜ್‌ರು ಜನರಿಗೆ ಅನಿರ್ಬಂಧಿತವಾಗಿ ಆಹಾರ ಒದಗಿಸುವ  ವ್ಯವಸ್ಥೆ ಮಾಡಿದರು. ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಮಹಾರಾಜರು ತಮ್ಮದೇ ಆದ ಮಾರ್ಗವನ್ನು ಕಂಡುಕೊಂಡಿದ್ದರು. ತಮ್ಮ ಪ್ರವಚನದ ನಂತರ ಅವರು ಶ್ರೋತೃಗಳಿಗೆ, ಜನರ ಕ್ಷೇಮಾಭ್ಯುದಯಕ್ಕಾಗಿ ತಾವು ಆಲೋಚಿಸಿರುವ ಯೋಜನೆಗಳನ್ನೂ ಕಾರ್ಯಕ್ರಮಗಳನ್ನೂ ತಿಳಿಸುತ್ತಿದ್ದರು. ಅವರು ವಿಷಯವನ್ನು ಪ್ರವೇಶಿಸುವ ರೀತಿಯು ಜನರನ್ನು ಸಹಾಯ ಮಾಡುವಂತೆ ಸ್ಫೂರ್ತಿಗೊಳಿಸುತ್ತಿತ್ತು. ಹಾಗಾಗಿ,  ಒಂದು ವಾರದ ಅವಧಿಯಲ್ಲಿಯೇ ಅವರ ಯೋಜನೆಗಳು ಕಾರ್ಯರೂಪಕ್ಕೆ ಬರುತ್ತಿದ್ದವು. ಜನರನ್ನು ವಿದ್ಯುದೀಕರಣಗೊಳಿಸುವ ಅವರ ವ್ಯಕ್ತಿತ್ವ ಹೀಗಿತ್ತು!

ಪ್ರಾಣ್ ಜೊತೆ ನನ್ನ ವಿಹಾಹವಾದ ನಂತರ, ನಾವು ಬೋಸ್ಟನ್ ಸಮೀಪದ ಒಂದು ನಗರ ಪ್ರಾವಿಡೆನ್ಸ್‌ನಲ್ಲಿ ನೆಲೆಸಿದೆವು. ಆಗಿನಿಂದಲೂ ಅಲ್ಲಿಯ ಆಶ್ರಮದೊಡನೆ ನಾನು ಕ್ರಮವಾಗಿ ಸಂಪರ್ಕವಿಟ್ಟುಕೊಂಡಿದ್ದೇನೆ. ಸ್ವಾಮಿ ರಂಗನಾಥಾನಂದರು ತಮ್ಮ ಪ್ರವಚನಗಳಿಗಾಗಿ ವಿಶ್ವಪರ್ಯಟನ ಮಾಡುತ್ತಿದ್ದಾಗ, ಯುನೈಟೆಡ್ ಸ್ಟೇಟ್ಸ್‌ನ ಅನೇಕ ಸ್ಥಳಗಳಿಗೆ ಅವರು ಭೇಟಿನೀಡಿದರು. ಅಂತಹ ಒಂದು ಸಂದರ್ಭದಲ್ಲಿ, ವಾರ್ಷಿಕ ವೇದಾಂತ ಯೋಜನೆಯಲ್ಲಿ ಭಾಗವಹಿಸಲು ಸ್ವಾಮೀಜಿ ಬೋಸ್ಟನ್‌ಗೆ ಬಂದರು. ಅದೃಷ್ಟವಶಾತ್ ಆಗ ನಮಗೆ ಸ್ವಾಮೀಜಿಯವರನ್ನು ಭೇಟಿ ಮಾಡಲು ಸಾಧ್ಯವಾಯಿತು. ಸಾಮಾನ್ಯವಾಗಿ ಪ್ರತಿ ವರ್ಷವೂ ಅವರು ಬೋಸ್ಟನ್‌ಗೆ ಭೇಟಿ ನೀಡುತ್ತಿದ್ದರು. ಅಂತಹ\ ಒಂದು ಸಂದರ್ಭದಲ್ಲಿ ಬೋಸ್ಟನ್ ಕೇಂದ್ರದ ಕಾರ್ಯದರ್ಶಿಗಳಾಗಿದ್ದ ಸ್ವಾಮಿ ಸರ್ವಗತಾನಂದರು ಊರಿನಲ್ಲಿಲ್ಲದ ಕಾರಣ, ಕೇಂದ್ರವನ್ನು ಸ್ವಲ್ಪ ಕಾಲದವರೆಗೆ ಮುಚ್ಚಲಾಗಿತ್ತು. ಆದ್ದರಿಂದ, ಮಹಾರಾಜ್ ರಂಗನಾಥಾನಂದರು ಉಳಿದುಕೊಳ್ಳಲು ಆವಶ್ಯಕವಾದ ಸಿದ್ಧತೆಗಳನ್ನು ನಮ್ಮ ಮನೆಯಲ್ಲಿಯೇ ಮಾಡಲಾಯಿತು. ಮಹಾರಾಜರು ಷಿಕಾಗೋದಿಂದ ಸ್ವಾಮಿ ಭಾಷ್ಯಾನಂದರ ಜೊತೆಯಲ್ಲಿ ಬಂದರು. ಸ್ವಾಮಿ ಭಾಷ್ಯಾನಂದರೂ ಸಹ ನಮ್ಮ ಜೊತೆಯಲ್ಲಿಯೇ ಇರಲು ಇಚ್ಛಿಸಿದರು. ಆ ಸಮಯದಲ್ಲಿ ಒಂದು ಗಮನಾರ್ಹವಾದ ಸಂಗತಿ ನಡೆಯಿತು.

ಮಹಾರಾಜರ ಆಗಮನದ ಮುನ್ನ ನನ್ನ ಪತಿ ಪ್ರಾಣ್, ತೀವ್ರ ಹೃದಯಾಘಾತಕ್ಕೊಳಗಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟರು. ಅವರ ಆರೋಗ್ಯ ಅದೆಷ್ಟು ಹದಗೆಟ್ಟಿತ್ತೆಂದರೆ ಸ್ವಾಮಿ ಸರ್ವಗತಾನಂದರು, ಅವರನ್ನು ನೋಡಲೆಂದು ಆಸ್ಪತ್ರೆಗೆ ಭೇಟಿ ನೀಡಿದಾಗ 'ಪ್ರಾಣ್' ಸ್ವಾಮೀಜಿಯವರನ್ನು ಅಭಿವಂದಿಸಲು ಸಹ ಸಾಧ್ಯವಾಗಲಿಲ್ಲ. ಅವರ ಆರೋಗ್ಯ ತೀವ್ರವಾದ ನಿರ್ಣಾಯಕ ಘಟ್ಟವನ್ನು  ತಲುಪಿತ್ತು. ತಮ್ಮ ಆರೋಗ್ಯದ ಅಂತಹ ವಿಷಮ ಸ್ಥಿತಿಯಲ್ಲಿ ಪ್ರಾಣ್, ಬಾಹ್ಯಜ್ಞಾನ ತಪ್ಪಿದಂತಹ ಸಮಾಧಿಸ್ಥಿತಿಯನ್ನು ತಲುಪಿದ್ದರು. ತಾವು ಒಂದು ಆಳವಾದ ಕಪ್ಪನೆಯ ಕತ್ತಲಿನ ಭಾವಿಯೊಳಗೆ ಮುಳುಗಿಹೋಗುತ್ತಿರುವಂತೆ ಪ್ರಾಣ್‌ಗೆ ಅನ್ನಿಸಿತ್ತು ಮತ್ತು ತಮ್ಮ ಇಡಿಯ ಶರೀರ ಗಾಯಗೊಳ್ಳುತ್ತಿರುವಂತೆಯೂ ಅವರಿಗೆ ಅನ್ನಿಸಿತ್ತು. ಆ ಕ್ಷಣದಲ್ಲಿ ನಂಬಲು ಅಸಾಧ್ಯವಾದಂತಹುದೊಂದು 'ಘಟನೆ' ನಡೆಯಿತು. ಯಾವುದೋ ಒಂದು ಹಸ್ತ ಹೊರಬಂದು ತಮ್ಮನ್ನು ಹಿಡಿದುಕೊಳ್ಳುತ್ತಿರುವುದಾಗಿಯೂ

ಆ ಹಸ್ತವು ತಮ್ಮನ್ನು ಆ ಕಪ್ಪು ಪ್ರಪಾತದಂತಹ ಮಾರಕವಾದ ಬಾವಿಯಿಂದ ಆಚೆಗೆ ಎಳೆದುದಾಗಿಯೂ, ಪ್ರಾಣ್ ಭಾವಿಸಿದರು. ಬಾವಿಯಿಂದ ಹೊರಗಡೆ ಬಂದ ನಂತರ ಪ್ರಾಣ್ ಈ ರಕ್ಷಕನ ಮುಖವನ್ನು ಕೇವಲ ಒಂದು ಬಾರಿ ಮಾತ್ರ ನೋಡಲು ಸಾಧ್ಯವಾಯಿತು. ಬೇರೆ ಏನನ್ನೂ ಅವರಿಗೆ ನೆನಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಆದರೆ ಈ ಘಟನೆ ನಡೆದ ತತ್ ಕ್ಷಣದಿಂದ ಅವರು ಗುಣಮುಖರಾಗತೊಡಗಿದರು. ಅವರು ಚೇತರಿಸಿಕೊಂಡು ಗುಣಮುಖರಾದನಂತರ ಮನೆಗೆ ಹಿಂದಿರುಗಿದ ಮೇಲೆ ಸಹ, ಹಾಸಿಗೆಯ ಮೇಲೆ ಇದ್ದು ವಿಶ್ರಾಂತಿ ತೆಗೆದುಕೊಳ್ಳಬೇಕಾಗಿತ್ತು.

ಪ್ರಾಣ್ ಮನೆಗೆ ಹಿಂದಿರುಗಿದಾಗ, ಸ್ವಾಮಿ ರಂಗನಾಥಾನಂದರು ನಮ್ಮ ಮನೆಯಲ್ಲಿ ಇರಲು ಬಂದಿದ್ದರು. ಮಹಾರಾಜ್ ಅವರು ಪ್ರಾಣ್‌ರನ್ನು ನೋಡಲೆಂದು ಅವರ ಕೋಣೆಗೆ ಹೋಗಿ ಅವರ ತಲೆಯನ್ನು ಮುಟ್ಟಿ ಆಶೀರ್ವದಿಸಿದರು. ಮಹಾರಾಜ್‌ರನ್ನು ನೋಡಿ ಪ್ರಾಣ್ ಆಶ್ಚರ್ಯದಿಂದ ಸ್ತಂಭೀಭೂತರಾದರು. ತಾವು ಆಸ್ಪತ್ರೆಯಲ್ಲಿ ನೋಡಿದ್ದುದು ಇದೇ ಮುಖವನ್ನು ಎಂದೂ ತಮ್ಮನ್ನು ಆ ಪ್ರಪಾತದಂತಹ ಬಾವಿಯಿಂದ ಮೇಲಕ್ಕೆ ಎಳೆದದ್ದು ಮತ್ತು ರಕ್ಷಿಸಿದ್ದು, ಸ್ವರ್ಗದ ದೈವದಂತಹ ತಂದೆಯ ಇವೇ ಕೈಗಳು ಎಂದೂ ಪ್ರಾಣ್, ನಂತರ ನನ್ನೊಡನೆ ಹೇಳಿದರು. ತಮ್ಮ ಈ ಅನುಭವವನ್ನು ಹೇಳುವಾಗ ಅವರು ಈಗಲೂ ರೋಮಾಂಚಿತಗೊಂಡಿದ್ದನ್ನು ನಾನು ನೋಡಿದೆ. ಪ್ರಾಣ್ ಅವರ್ಣನೀಯ ಅನುಭವವನ್ನು ಪಡೆದಾಗ ಸ್ವಾಮಿ ರಂಗನಾಥಾನಂದರು ಷಿಕಾಗೋನಲ್ಲಿ ಇದ್ದರೆಂದು ನಮಗೆ ತಿಳಿದುಬಂದಿತು.

ಹೀಗೆ ಮಹಾರಾಜ್‌ರ ಬಗೆಗೆ ಅನೇಕ ದಂತಕಥೆಗಳಿವೆ. ಒಮ್ಮೆ ಸ್ವಾಮಿ ಭಾಷ್ಯಾನಂದರು, ತಾವು ಮೂರು ಜನರಿಗೂ–ರಂಗನಾಥಾನಂದಜೀ, ಸರ್ವಗತಾನಂದಜೀ ಮತ್ತು ತಾವೂ ಪಂಡಿತ ರವಿಶಂಕರ್ ಅವರ ಸಿತಾರ್ ವಾದನದ ಕಚೇರಿಗೆ ಹೋಗಲು ಎಲ್ಲ ಸಿದ್ಧತೆಗಳನ್ನೂ ಮಾಡಿದ್ದರು. ಸ್ವಾಮಿ ರಂಗನಾಥಾನಂದರು, ದೂರವಾಣಿಯ ಮೂಲಕ ನಮಗೂ ಟಿಕೆಟ್ ತೆಗೆದಿಡುವಂತೆ ಸ್ವಾಮಿ ಭಾಷ್ಯಾನಂದರಿಗೆ ತಿಳಿಸಿದ್ದುದರಿಂದ ಆ ಗುಂಪಿನಲ್ಲಿ ಸೇರಲು ನಾವು ಅದೃಷ್ಟ ಮಾಡಿದ್ದೆವು ಎನಿಸಿತ್ತು ನಮಗೆ. ಪೂಜ್ಯರಾದ ಈ ಸನ್ಯಾಸಿಗಳ ಜೊತೆಯಲ್ಲಿ ಕಚೇರಿಯಲ್ಲಿ ಉಪಸ್ಥಿತರಿರಲು ನಮಗೆ ಹರ್ಷವಾಗಿತ್ತು. ಮಹಾರಾಜ್‌ರು ಅದೆಷ್ಟೊಂದು ವಿಶಾಲವಾಗಿ, ಆಳವಾಗಿ ಯೋಚಿಸುತ್ತಿದ್ದರು ಮತ್ತು ಭಕ್ತರ ಬಗೆಗೆ ಗಮನ ಹರಿಸುತ್ತಿದ್ದರು!

ಸಂಗೀತ ಕಚೇರಿಯು ಮುಗಿದ ನಂತರ ಆ ಮೂರು ಜನರನ್ನು ನಮ್ಮ ಮನೆಗೇ ಬರುವಂತೆ ಆಹ್ವಾನಿಸಿದ್ದೆ. ನನ್ನ ಇಬ್ಬರು ವಿದ್ಯಾರ್ಥಿಗಳಿಗೆ, ನಮ್ಮ ಮನೆಗೆ ಬಂದು ಸ್ವಲ್ಪ ಸಹಾಯಮಾಡುವಂತೆ ಹಾಗೂ ಈ ಸನ್ಯಾಸಿಗಳ ದಿವ್ಯಸಾನ್ನಿಧ್ಯವನ್ನು ಅನುಭವಿಸುವಂತೆಯೂ ತಿಳಿಸಿದ್ದೆ. ಸಾಯಂಕಾಲ, ಮಳೆ ಸುರಿಯಲು ಆರಂಭವಾಯಿತು. ನನ್ನ ವಿದ್ಯಾರ್ಥಿಗಳು ತಮ್ಮ ಮನೆಗಳಿಗೆ ಹೊರಡುವುದರಲ್ಲಿದ್ದರು. ಮಹಾರಾಜರು ಅವರಿಗೆ ಹೇಳಿದರು: 'ನಡೆಯಿರಿ, ನಾವು ಈ ಮಳೆಯಲ್ಲಿ ನಡೆಯೋಣ!' ಮತ್ತು ಅವರೊಡನೆ ತಾವು ಕೂಡ ಆ ಮಳೆಯಲ್ಲಿ ಹೊರಗೆ ಹೋಗಿ ಅವರನ್ನು ಬೀಳ್ಕೊಟ್ಟರು. ಮಳೆಯನ್ನು ಆನಂದದಿಂದ ಅನುಭವಿಸುತ್ತಾ ಖುಷಿಯಿಂದ ನೆಂದರು. ಮನೆಯ ಒಳಗೆ ಪ್ರವೇಶಿಸುತ್ತಾ ಅವರು ಹೇಳಿದರು, 'ಇದು ಮಳೆಯಲ್ಲ, ಪುಷ್ಪವೃಷ್ಟಿ!' ಅವರದ್ದು ಪರಿಶುದ್ಧ ಆನಂದವಾಗಿತ್ತು. ಬಹಳ ಪುಸಲಾಯಿಸಿದೆ. ತಮ್ಮ ಒದ್ದೆ ಬಟ್ಟೆಗಳನ್ನು ಬದಲಾಯಿಸಿ ಅದನ್ನು ಶುಚಿ ಮಾಡಲು ಕೊಡುವಂತೆ ಅವರನ್ನು ಒಪ್ಪಿಸಬೇಕಾಯಿತು.

ರಂಗನಾಥಾನಂದಜೀ ಮಕ್ಕಳನ್ನು ಬಹಳ ಪ್ರೀತಿಸುತ್ತಿದ್ದರು. ಆಗ ನನ್ನ ಮಗಳು ಪ್ರೇಮ ನಾಲ್ಕು ವರ್ಷದವಳಾಗಿದ್ದಳು. ಮಹಾರಾಜ್‌ರು ಅವಳನ್ನು ತಮ್ಮ ತೊಡೆಯ ಮೇಲೆ ಕೂಡಿಸಿಕೊಂಡು, ಕೆಲವು ಮಲೆಯಾಳಿ ಹಾಡುಗಳನ್ನು ಮೆಲುದನಿಯಲ್ಲಿ ಹಾಡುತ್ತಿದ್ದರು. ಕೆಲವು ಬಾರಿ ಪ್ರೀತಿಯಿಂದ ಅವಳ ಬೆನ್ನು ತಟ್ಟುತ್ತಿದ್ದರು. ಅದೂ ಅಲ್ಲದೇ, ಅವರ ಹತ್ತಿರ ನಾವು ಕೂಡ ಕುಳಿತುಕೊಳ್ಳಲು ಅನುಮತಿಸುತ್ತಿದ್ದರು.

ನನ್ನ ಮಗ ಪ್ರದೀಪ, ಕೇವಲ ಏಳು ವರ್ಷದವನಾಗಿದ್ದಾಗ, ಮಹಾರಾಜರು ರಾಮಾಯಣದ ಎರಡು ಪದ್ಯಗಳನ್ನು, ಶ್ರೀ ಶ್ರೀ ಠಾಕುರ್, ಪವಿತ್ರ ಮಾತೆ, ಮತ್ತು ಸ್ವಾಮೀಜಿಯವರ ಬಗೆಗಿನ ಭಕ್ತಿಗೀತೆಗಳನ್ನೂ ಅವನಿಗೆ ಕಂಠಪಾಠ ಮಾಡಿಸಿದ್ದರು. ಮಕ್ಕಳು ಮನೆಯಲ್ಲಿ ಇದ್ದಾಗಲೆಲ್ಲಾ, ಸ್ವಾಮೀಜಿಯ ಸುತ್ತಮುತ್ತಲೇ ಇರುತ್ತಿದ್ದವು. ಮಹಾರಾಜ್ ಮಕ್ಕಳ ಮನಸ್ಸಿನ ಸ್ತರಕ್ಕೆ ಇಳಿಯಬಲ್ಲವರಾಗಿದ್ದರು. ಅವರು ಕೂಡ ಆ ಮಕ್ಕಳಲ್ಲಿ ಒಬ್ಬರೇನೋ ಅನ್ನಿಸುವಂತಿರುತ್ತಿತ್ತು! ನಾನು ಅಡುಗೆ ಕೋಣೆಯಲ್ಲಿ ಕಾರ್ಯನಿರತಳಾಗಿದ್ದಾಗ ಮಹಾರಾಜರು ಮಕ್ಕಳನ್ನು ಹೊರಾಂಗಣಕ್ಕೆ ಕರೆದುಕೊಂಡು ಹೋಗಿ, ಅವರೊಡನೆ ತಾವೂ ಆಟವಾಡುತ್ತಿದ್ದರು. ಪ್ರೇಮಾಳಂತೂ ಅವರ ಕೈ ಹಿಡಿದುಕೊಂಡು  ನರ್ತಿಸುತ್ತಿದ್ದಳು. ಅವರೂ ನಿಜವಾಗಿಯೂ ಮಗುವಿನಂತಹ ಮುಗ್ಧರು. ಅವರು ಮನೆಯಲ್ಲಿನ ಅತ್ಯಂತ ಹಿರಿಯರೆಂದು ಯಾರು ತಾನೇ ಹೇಳಲು ಸಾಧ್ಯವಿತ್ತು?

ಒಂದು ದಿನ, ತಾವೇ ಅಡುಗೆ ಮಾಡುವುದಾಗಿ ಮಹಾರಾಜರು, ಪಟ್ಟುಹಿಡಿದರು. ಅವರನ್ನು ಬೇಡವೆಂದು ತಡೆಯಲು ನಾವು ಬಹಳ ಪ್ರಯತ್ನಪಟ್ಟೆವು. ಆದರೆ, ಅದು ವ್ಯರ್ಥವಾಯಿತು. ನಮ್ಮ ಮಾತಿಗೆ ಸ್ವಲ್ಪವೂ ಗಮನಕೊಡದೆ, ಮಹಾರಾಜ್‌ರು ಭಕ್ಷ್ಯವನ್ನು ಸಿದ್ಧಪಡಿಸಿದರು. ಅದು ನಿಜವಾಗಿಯೂ ರುಚಿಕರವಾಗಿತ್ತು. ನಮ್ಮ ಪ್ರಶಂಸೆಗೆ ಪ್ರತಿಕ್ರಿಯೆಯಾಗಿ, ಅವರು ಕೃತ್ರಿಮ ಗಾಂಭೀರ್ಯದಿಂದ ಹೇಳಿದರು, "ಈ ರೀತಿಯ ವಿಶೇಷವಾದ ಮಲೆಯಾಳೀ ಅಡುಗೆಯನ್ನು ಎಲ್ಲರೂ ಮಾಡುವುದು ಸಾಧ್ಯವಿಲ್ಲ!"

ನಾನು ಮಕ್ಕಳಿಗಾಗಿ ಬೇರೆಯೇ ಅಡುಗೆ ಮಾಡುತ್ತಿದ್ದೆ. ಜೊತೆಗೆ ಮಹಾರಾಜರಿಗಾಗಿಯೂ ಅಡುಗೆಯನ್ನು ಸಿದ್ಧಪಡಿಸುತ್ತಿದ್ದೆ. ಒಂದು ದಿನ ಮಹಾರಾಜ್ ರು ಹೇಳಿದರು. "ತ್ರಿವೇಣಿ, ನನಗಾಗಿ ನೀನು ಏಕೆ ಬೇರೆ ಅಡುಗೆ ಮಾಡುತ್ತೀಯೆ? ಮಕ್ಕಳಿಗಾಗಿ ನೀನು ಸಿದ್ಧಪಡಿಸಿದ ಆಹಾರವನ್ನೇ ನಾನು ಊಟ ಮಾಡುತ್ತೇನೆ." ಆನಂತರ ಅವರು ಮಕ್ಕಳಿಗೆ ಸಿದ್ಧಪಡಿಸಿದ್ದ ಆಹಾರವನ್ನೇ ಊಟಮಾಡುತ್ತಿದ್ದರು.

ನನಗೆ ದೊಡ್ಡದೊಂದು ಪಾಠ ಕಲಿಸಿದ ಘಟನೆಯನ್ನು ಈಗ ಹೇಳುತ್ತೇನೆ. ಒಂದು ದಿನ ಸಭ್ಯ ಗೃಹಸ್ಥರೊಬ್ಬರು ಮಹಾರಾಜ್‌ರನ್ನು ಆಹ್ವಾನಿಸಿದರು. ಅವರ ಮನೆಗೆ ಹೋಗುವ ಮುನ್ನ, ತಾವು ಹಿಂದಿರುಗುವುದು ತಡವಾಗಬಹುದೆಂದೂ, ತಮಗಾಗಿ ನಾವು ಕಾಯಬಾರದೆಂದೂ ಮಹಾರಾಜ್‌ರು ನಮಗೆ ಹೇಳಿದರು. ನಾವು ಮಲಗಿ ನಿದ್ರಿಸಬಹುದೆಂದೂ ಹೇಳಿದರು. ಯಾವುದೇ ರೀತಿಯಲ್ಲಿಯೂ ನಮಗೆ ತೊಂದರೆಯಾಗಬಾರದು ಎನ್ನುವಷ್ಟು ಪ್ರೀತಿ ಮತ್ತು ಕಾಳಜಿಗಳಿದ್ದವು ಅವರಿಗೆ, ನಮ್ಮ ಬಗೆಗೆ. ಆದ್ದರಿಂದ ಮಲಗಲು ನಾವು ಮಹಡಿಗೆ ಹೋದೆವು. ಮಹಾರಾಜ್‌ರು ರಾತ್ರಿ ತಡವಾಗಿ ಬಂದಾಗ ಅವರೊಡನೆ, ಅವರ ಆತಿಥೇಯರೂ ಇದ್ದರು. ನಮಗೆ ಎಚ್ಚರವಾಗಿಬಿಡಬಹುದೆಂದು ಆಲೋಚಿಸಿದ ಮಹಾರಾಜ್‌ರು ಮುಂಬಾಗಿಲಿನ ಮೂಲಕ ಮನೆಯೊಳಕ್ಕೆ ಪ್ರವೇಶಿಸಲಿಲ್ಲ. ಅವರು, ನೆಲಮಾಳಿಗೆಯಲ್ಲಿನ ಹಿಂಬಾಗಿಲಿನ ಮೂಲಕ ಮನೆಯೊಳಕ್ಕೆ ಬಂದರು. ಉಪಯೋಗಿಸುತ್ತಿದ್ದ ಆಟಿಕೆಗಳು ಮತ್ತು ಕಸಕಡ್ಡಿ, ಬೇಡದ ವಸ್ತುಗಳಿಂದ ನೆಲಮಾಳಿಗೆ ತುಂಬಿಕೊಂಡಿತ್ತು. ಎಂದಾದರೂ, ಯಾವುದಾದರೂ ವಸ್ತು ಬೇಕಾಗಬಹುದೆಂಬ ಯೋಚನೆಯಿಂದ ನಾವು ಅವನ್ನೆಲ್ಲಾ ಅಲ್ಲಿ ಒಟ್ಟಿದ್ದೆವು. ಬರುವಾಗ ಎಲ್ಲ ವಸ್ತುಗಳನ್ನೂ ಎಷ್ಟು ಒಡ್ಡುಒಡ್ಡಾಗಿ ತುರುಕಿದ್ದೆವು ನಾವು ಎಂಬುದನ್ನು ಮಹಾರಾಜರು ಗಮನಿಸಿದರು. ಅಲ್ಲದೇ ಮಹಾರಾಜ್‌ರು ಮನೆಗೆ ಹಿಂದಿರುಗುವಾಗ ತಮ್ಮ ಆತಿಥೇಯರ ಮುಂದೆ, ನನ್ನನ್ನು ಪ್ರಶಂಸಿಸಿ, ಮನೆಯನ್ನು ಬಹಳ ಒಪ್ಪಓರಣಗಳಿಂದ ಇಟ್ಟುಕೊಂಡಿದ್ದಾರೆ ಎಂದೂ ಹೇಳಿದ್ದರಂತೆ. ಅಂತಹುದರಲ್ಲಿ ಇಂತಹ ನಿಜವಾದ ಅವ್ಯವಸ್ಥೆಯನ್ನು ಕಂಡ ಮಹಾರಾಜ್‌ರಿಗೆ ಆಘಾತವೂ ಮುಜುಗರವೂ ಆಗಿದ್ದು ಸಹಜವೇ ಆಗಿದೆ!

ಮರುದಿನ ಮಹಾರಾಜ್‌ರು ನನಗೆ ಬಹಳ ದೃಢವಾಗಿ ಛೀಮಾರಿ  ಹಾಕಿದರು: "ಆ ನೆಲಮಾಳಿಗೆಯಲ್ಲಿರುವ ವಸ್ತುಗಳನ್ನು ನೀವೇಕೆ ಉಪಯೋಗಿಸುವುದಿಲ್ಲ? ನಿನಗೆ ಆ ವಸ್ತುಗಳ ಆವಶ್ಯಕತೆಯಿಲ್ಲದಿದ್ದಲ್ಲಿ, ಅವುಗಳನ್ನು

ಅಚ್ಚುಕಟ್ಟಾಗಿ ಜೋಡಿಸಿ ಏಕೆ ಇಡಬಾರದು? ದಯವಿಟ್ಟು ಈಗಲೇ ಹೋಗಿ ಅದನ್ನೆಲ್ಲಾ ಚೊಕ್ಕಟಗೊಳಿಸಿ, ಓರಣವಾಗಿರಿಸು." ಸ್ವಲ್ಪ ಸಮಯದ ಬಳಿಕ ನೆಲಮಾಳಿಗೆಯನ್ನು ನಾನು ಚೊಕ್ಕಟಗೊಳಿಸಿರುವೆನೋ ಇಲ್ಲವೋ ಎಂದು ನೋಡಲು ಮಹಾರಾಜ್ ತಾವೇ ಕೆಳಗಿಳಿದು ಬಂದರು. ಈ ಘಟನೆಯು ನನಗೆ ದೊಡ್ಡ ಪಾಠವನ್ನು ಕಲಿಸಿತು. ಏನನ್ನಾದರೂ ಯಾರಾದರೂ ಕಲಿಯುವಂತೆ ಮಾಡುವ ಅವರ ರೀತಿ ನನ್ನನ್ನು ಪ್ರಭಾವಿಸಿತು. ಅವರ ಸಲಹೆಗಳು ನನ್ನ ಕಣ್ಣುಗಳನ್ನು ತೆರೆಸುವಂತಹವಾಗಿದ್ದವು.

ಮಹಾರಾಜ್ ಅವರ ದೂಷಣೆ, ಖಂಡನೆಗಳು ಎಂದೂ ಒರಟಾಗಿ ರುತ್ತಿರಲಿಲ್ಲ. ಅದರಲ್ಲಿ ಯಾವಾಗಲೂ ಸಕಾರಾತ್ಮಕ ಪ್ರಭಾವವೇ ಇರುತ್ತಿತ್ತು. ಏಕೆಂದರೆ ಅವರು ಯಾವಾಗಲೂ ಮೃದುಭಾಷಿಯಾಗಿದ್ದರು, ಹಾಗಿದ್ದರೂ ತಮ್ಮ ಅಭಿಪ್ರಾಯಗಳನ್ನು ಬಹಳ ದೃಢವಾಗಿ ಅಭಿವ್ಯಕ್ತಿಸುತ್ತಿದ್ದರು. ಅವರ ಪ್ರಶಂಸೆಯು ನಮ್ಮನ್ನು ಅಗಾಧವಾಗಿ ಸ್ಫೂರ್ತಿಗೊಳಿಸುತ್ತಿತ್ತು. ಮಗುವು ತನ್ನ ತಂದೆಯಿಂದ ಅಥವಾ ತನ್ನ ಹಿರಿಯರಿಂದ ಕಲಿಯುವಂತೆ, ನಾನೂ ಸಹ ಮಹಾರಾಜರಿಂದ ಅನೇಕ ಸಂಗತಿಗಳನ್ನು ಕಲಿತೆ. ಅವರು ಯಾವಾಗಲೂ ನನಗೆ ಮಾಡಬೇಕಾಗಿರುವುರು, ಮಾಡದೇಬಿಡಬೇಕಾಗಿರುವುದರ ಬಗೆಗೆ ಹೇಳುತ್ತಿದ್ದರು. ಅವರನ್ನು ಅರಿತು ಅವರ ದಾರಿಯಲ್ಲಿ ಸಾಗಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸಿದೆವು. ಅವರ ನಡೆನುಡಿಗಳು ಯಾವಾಗಲೂ ಆದರ್ಶಪ್ರಾಯವೂ, ಅನುಕರಣೀಯವೂ ಆಗಿದ್ದವು.

ಅವರು ನನ್ನನ್ನು ಅದೆಷ್ಟು ಮಧುರವಾಗಿ, ವಾತ್ಸಲ್ಯಪೂರ್ಣವಾಗಿ 'ತ್ರೀವೇಣಿ' ಎಂದು ಕರೆಯುತ್ತಿದ್ದರೆಂಬುದು ನನಗೆ ಇನ್ನೂ ನೆನಪಿದೆ. ಆ ಧ್ವನಿಯೇ ನನ್ನ ಪಾಲಿಗೆ ತಂದೆಯ ವಾತ್ಸಲ್ಯವನ್ನು ಅಭಿವ್ಯಕ್ತಿಸುತ್ತಿತ್ತು. ಅವರ ಮಾತಿನ ರೀತಿ, ಅವರ ಅಂಗಭಂಗಿ, ಅವರ ವ್ಯಕ್ತಿತ್ವದ ಹಲವಾರು ಮುಖಗಳು ನಮ್ಮನ್ನು ಮಂತ್ರಮುಗ್ಧರನ್ನಾಗಿಸಿದ್ದವು. ಅವರ ನುಡಿಗಳು ಸ್ಫೂರ್ತಿಯನ್ನೂ, ದೋಷರಹಿತ ಮಾರ್ಗದರ್ಶನವನ್ನೂ ನೀಡಿದ್ದವು. ನನಗೆ ಮಹಾರಾಜರು ಪ್ರೇಮಪೂರ್ಣ ಪಿತೃವಿನ ಮೂರ್ತರೂಪವಾಗಿದ್ದರು. ಹಾಗೂ ನನ್ನ ಜೀವನದ ಮಾರ್ಗದರ್ಶಕ ಶಕ್ತಿಯಾಗಿದ್ದರು. ಅವರ ಪವಿತ್ರ ನೆನಪನ್ನು ನನ್ನ ಹೃದಯಾಂತರಾಳದಲ್ಲಿ, ಗೌರವ, ಪೂಜ್ಯ ಭಾವಗಳಿಂದ ಜತನವಾಗಿಟ್ಟು ಕೊಳ್ಳುತ್ತೇನೆ.*

* * * *

---

* ಮೋನಿಕಾ ಸೇನ್ ಗುಪ್ತ ಆರ್.ಎಂ.ಐ.ಸಿ. ಇವರಿಂದ ಸೃಜನಾನುವಾದಿಸಲ್ಪಟ್ಟಿದ್ದು (Transcreated)

# ೧೩೧. ಆಂಧ್ರ ಪ್ರದೇಶದಲ್ಲಿ ಜಾಗೃತಿ

–ನಾಗೇಶ್ವರ ರಾವ್*

ನಾನು ೧೯೭೩ರಿಂದಲೂ, ಸುಮಾರು ಮುವ್ವತ್ತೆರಡು ವರ್ಷಗಳ ಕಾಲ ಸೇವೆ ಮಾಡುವಂತಹ ಸೌಭಾಗ್ಯ ಹೊಂದಿದ್ದ, ಅತ್ಯಂತ ಪೂಜನೀಯರಾದ ಶ್ರೀಮತ್ ಸ್ವಾಮಿ ರಂಗನಾಥಾನಂದಜೀ ಮಹಾರಾಜ್‌ರ ಬಗೆಗೆ ಆಲೋಚಿಸಿದಾಗ, ನನ್ನ ಮನಸ್ಸು ಆನಂದಾತಿಶಯದಿಂದ ತುಂಬಿಕೊಳ್ಳುತ್ತದೆ. ಹೈದರಾಬಾದಿನಿಂದ ನೂರು ಮೈಲಿ ದೂರದಲ್ಲಿರುವ ವಾರಂಗಲ್‌ನಲ್ಲಿ ನಾನು ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದೆ. ೧೯೭೩ರ ಕಡೆಯ ಭಾಗದಲ್ಲಿ, ವಾರದ ಕೊನೆಯಲ್ಲಿ ನನ್ನ ಕುಟುಂಬವನ್ನು ಭೇಟಿಮಾಡಲೆಂದು ನಾನು ಹೈದರಾಬಾದಿಗೆ ಬಂದೆ. ಮಾಲಕಪೇಟೆಯ ಸ್ವಾಮಿ ವಿವೇಕಾನಂದರ ಸೆಂಟಿನರಿ ಹೈಸ್ಕೂಲಿನ ಆಡಳಿತ ಸಮಿತಿಯಲ್ಲಿ ಗೌರವ ಕಾರ್ಯಕರ್ತರೂ, ಸದಸ್ಯರೂ ಆಗಿ ಸೇವೆ ಸಲ್ಲಿಸುತ್ತಿದ್ದ ನನ್ನ ತಂದೆಯವರಾದ ದಿವಂಗತ ಶ್ರೀ. ಕೆ. ಶೋಭನಾಚಲಮ್ ಅವರು, ಸಿಕಂದರಾಬಾದಿನಲ್ಲಿ ಪ್ರವಚನ ನೀಡಿ ದೊಡ್ಡ ಗುಂಪನ್ನು ಆಕರ್ಷಿಸುತ್ತಿದ್ದ, ರಾಮಕೃಷ್ಣ ಪಂಥದ ಪ್ರಸಿದ್ಧ ಸನ್ಯಾಸಿಗಳ ಬಗೆಗೆ ಕೇಳಿದ್ದರು. ಭಾನುವಾರದಂದು ಸ್ವಾಮೀಜಿಯ ಪ್ರವಚನ ಕೇಳಲು ತಂದೆಯವರ ಜೊತೆ ನಾನೂ ಹೋದೆ. ಸ್ವಾಮೀಜಿಯು ಗೀತೆಯ ಬಗೆಗೆ ಪ್ರವಚನ ನೀಡುತ್ತಿದ್ದರು. ಆ ಪವಿತ್ರ ಗ್ರಂಥದ ಸಂದೇಶದ ಬಗೆಗೆ ಸ್ವಾಮೀಜಿ ಯವರು ನೀಡಿದ ಪ್ರವಚನದ ನಿರರ್ಗಳತೆ ಮತ್ತು ಉತ್ಸಾಹ ಹಾಗೂ ಭಾವತೀವ್ರತೆಗಳು ನನ್ನನ್ನು ಆಶ್ಚರ್ಯಗೊಳಿಸಿದವು. ವಾರಂಗಲ್‌ನ ಲಯನ್ಸ್ ಕ್ಲಬ್‌ನ ಕಾರ್ಯದರ್ಶಿಯಾಗಿದ್ದ ನಾನು ಸ್ವಾಮೀಜಿಯವರು ವಾರಂಗಲ್‌ಗೆ ಬರುವಂತೆಯೂ, ಮತ್ತು ನಮ್ಮ ಸಂಘದ ಸದಸ್ಯರನ್ನು ಉದ್ದೇಶಿಸಿ ಮಾತನಾಡಬೇಕೆಂದೂ ಆಹ್ವಾನಿಸಿದೆ. ತಾವು ಸದ್ಯದಲ್ಲಿ, ಸಿಕಂದರಾಬಾದಿನ ಮಾರ್ಕೆಟ್ ಸ್ಟ್ರೀಟ್‌ನಲ್ಲಿರುವ ಕಟ್ಟಡ ನಿರ್ಮಾಣ ಯೋಜನೆಯಲ್ಲಿ ಕಾರ್ಯತತ್ಪರರಾಗಿರುವುದಾಗಿಯೂ, ಅದರ ನಂತರ ಎರಡು ತಿಂಗಳು ತಮ್ಮ ವಾಡಿಕೆಯ ಕಾರ್ಯಕ್ರಮವಾದ ವಿಶ್ವಪರ್ಯಟನಕ್ಕೆ ಹೋಗಬೇಕಾಗಿರುವುದಾಗಿಯೂ, ಸ್ವಾಮೀಜೀ ಹೇಳಿದರು. ತಾವು ಪ್ರವಾಸ ಮುಗಿಸಿಕೊಂಡು ಬಂದನಂತರ ಪ್ರಯತ್ನಿಸುವಂತೆ ನನಗೆ ಹೇಳಿದರು.

೧೯೭೪ರ ಫೆಬ್ರವರಿಯಲ್ಲಿ, ಸ್ವಾಮಿ ರಂಗನಾಥಾನಂದರು ತಮ್ಮ ವಾರ್ಷಿಕ ವಿಶ್ವ ಪರ್ಯಾಟನದಿಂದ ಹಿಂದಿರುಗಿದ ಬಳಿಕ, ವಾರಂಗಲ್‌ಗೆ ಭೇಟಿ ನೀಡುವ ಬಗೆಗಿನ ನನ್ನ ಪ್ರಾರ್ಥನೆಯನ್ನು ಮತ್ತೆ ನಾನು ಅವರ ಮುಂದಿಟ್ಟೆ. ಸ್ವಾಮೀಜಿ ಒಪ್ಪಿದರು. ೧೯೭೪ರ ಮಾರ್ಚ್, ಮುವತ್ತೊಂದರಂದು ಲಯನ್ಸ್ ಕ್ಲಬ್‌ನಲ್ಲಿ ಅವರು ಪ್ರವಚನ ನೀಡಬೇಕಾಗಿದ್ದಿತು. ಸಾರ್ವಜನಿಕರಿಗಾಗಿ ಒಂದು ಮತ್ತು ಲಯನ್ಸ್ ಕ್ಲಬ್‌ನ ಸದಸ್ಯರಿಗಾಗಿ ಒಂದು– ಹೀಗೆ, ನಾವು ಎರಡು ಸಭೆಗಳನ್ನು ಏರ್ಪಾಟುಮಾಡಿದೆವು. ಸಭಿಕರು ಸುಮಾರು ನೂರು ಜನ ಮತ್ತು ಅವರ ಕುಟುಂಬ ವರ್ಗದವರು ಇರುತ್ತಾರೆ ಎಂದು ನಾನು ಸ್ವಾಮೀಜಿಯವರಿಗೆ ಮೊದಲು ತಿಳಿಸಿದ್ದೆನಾದರೂ, ಸಾರ್ವತ್ರಿಕ ಸಭೆಯು ಆರಂಭವಾದ ಅರ್ಧಗಂಟೆಯ ಒಳಗೆ, ಎರಡು ಸಾವಿರದ ಐದುನೂರು ಜನರಷ್ಟು ಗುಂಪು ಕೂಡಿತ್ತು. ಸ್ವಾಮೀಜಿಯವರು, ವಿಸ್ಮಯಗೊಳಿಸಿ ಮೋಡಿ ಮಾಡುವಂತಹ ಪ್ರವಚನ ನೀಡಿದರು. ಸಂದರ್ಭೋಚಿತವಾಗಿದ್ದುದಲ್ಲದೇ ಆ ಪ್ರವಚನ ವಿಶೇಷವಾಗಿ, ಸಭಿಕರಲ್ಲಿದ್ದ ಯುವಕರನ್ನು ಅತ್ಯಂತ

---

* ಹೈದರಾಬಾದಿನ ಭಕ್ತರು.

ಹೆಚ್ಚಾಗಿ ಪ್ರಭಾವಿಸಿತು. ಆ ಯುವಕರೆಲ್ಲಾ ಹೆಚ್ಚಾಗಿ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಾಗಿದ್ದರು.

ಸ್ವಾಮೀಜಿಯವರು ತಮ್ಮ ಕಾರಿನಲ್ಲಿ ಹೊರಡಲು ಸಿದ್ಧರಾದಾಗ, ಅನೇಕ ಸಂಶಯಗಳು ಮತ್ತು ಪ್ರಶ್ನೆಗಳಿಂದ ಆ ವಿದ್ಯಾರ್ಥಿಗಳು ಸ್ವಾಮೀಜಿಯವರನ್ನು ಸುತ್ತುವರಿದರು. ಸಾರ್ವತ್ರಿಕ ಸಭೆಯ ನಂತರ ಸ್ವಾಮೀಜಿಯವರು ಲಯನ್ಸ್ ಕ್ಲಬ್ಬಿನ ನೂರು ಸದಸ್ಯರನ್ನು ಅವರ ಕುಟುಂಬ ವರ್ಗದವರನ್ನು ಉದ್ದೇಶಿಸಿ, ಬೇರೆ ಸ್ಥಳದಲ್ಲಿ ಸಾಯಂಕಾಲ ಭೋಜನದ ನಡುವೆ ಮಾತನಾಡಿದರು.

೧೯೭೪ರ ಆಗಸ್ಟ್ ತಿಂಗಳಿನಲ್ಲಿ ನನಗೆ ಹೈದರಾಬಾದಿಗೆ ವರ್ಗವಾಯಿತು.

ಅಲ್ಲಿ, ಸ್ವಾಮೀಜಿಯವರ ಪ್ರತಿವಾರದ ಪ್ರವಚನಗಳಿಗೆ ನಾನು ತಪ್ಪದೇ ಹೋಗುತ್ತಿದ್ದೆ. ಮತ್ತು ಶೀಘ್ರದಲ್ಲಿಯೇ ಅವರನ್ನು ಪದೇ ಪದೇ ಭೇಟಿಮಾಡುವ ಸೌಭಾಗ್ಯ ಮಾನ್ಯತೆಗಳೂ ನನಗೆ ದೊರೆತವು. ಗೀತೆಯನ್ನು ವಿವರಿಸುವುದರಲ್ಲಿನ ಅವರ ಸರಳತೆ ಮತ್ತು ನಿರರ್ಗಳತೆಗಳು ನನ್ನನ್ನು ಅವರತ್ತ ಆಕರ್ಷಿಸಿದ್ದವು. ನಾನು ಅವರನ್ನು ಮತ್ತೊಬ್ಬ ವಿವೇಕಾನಂದರು ಎಂದೇ ಪರಿಗಣಿಸಿದೆ. ಸ್ವಾಮಿ ವಿವೇಕಾನಂದರೇ ತಮ್ಮ ಜೀವನದ ಉದ್ದೇಶ, ಧ್ಯೇಯಗಳನ್ನು ಪರಿಪೂರ್ಣಗೊಳಿಸಲು, ಸ್ವಾಮಿ ರಂಗನಾಥಾನಂದರಾಗಿ ಪುನರವತಾರ ತಾಳಿದ್ದರೆಂದೇ ನನ್ನ ದೃಢನಂಬಿಕೆ. ಸ್ವಾಮಿ ರಂಗನಾಥನಂದರ ಚೈತನ್ಯ ಸಾಮರ್ಥ್ಯಗಳು– ಭಾರತ ಹಾಗೂ ವಿಶ್ವಾದ್ಯಂತ– ಸ್ವಾಮಿ ವಿವೇಕಾನಂದರಲ್ಲಿ ಮೂರ್ತೀಭವಿಸಿದ್ದ ಶಕ್ತಿಸಾಮರ್ಥ್ಯಗಳಿಗೆ ಸ್ವಲ್ಪವೂ  ಕಡಿಮೆಯಿರಲಿಲ್ಲ.

ರಾಮಕೃಷ್ಣ ಮಠವು ಹೈದರಾಬಾದಿನಲ್ಲಿ ೧೯೭೩ರಲ್ಲಿ ಅಧಿಕೃತವಾಗಿ ಪ್ರತಿಷ್ಠಾಪಿಸಲ್ಪಡುವುದಕ್ಕೆ ಮೊದಲು, ರಾಮಕೃಷ್ಣ ಅಥವಾ ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ನಾಲ್ಕು ಸ್ವತಂತ್ರ ಸೇವಾ ಸಮಿತಿಗಳು ಇದ್ದವು. ಹೈದರಾಬಾದಿನ ಪ್ರಥಮ ರಾಮಕೃಷ್ಣ ಮಠವು ಅಧಿಕೃತವಾಗಿ ಬೇಗಮ್‌ಪೇಟೆಯಲ್ಲಿ ಆರಂಭವಾಯಿತು. ಆದರೆ ಆ ಸ್ಥಳವು ನಗರದಿಂದ ಸ್ವಲ್ಪ ದೂರವಿದ್ದುದರಿಂದ, ಹೊಸ ಮಠವನ್ನು ಸ್ವಾಮಿ ವಿವೇಕಾನಂದ ಸಮಿತಿಯ ಗ್ರಂಥಾಲಯದ ಹತ್ತಿರ ಸಿಕಂದರಾಬಾವಾದ್‌ನ ಮಾರ್ಕೆಟ್ ಸ್ಟ್ರೀಟ್‌ನಲ್ಲಿ ನಿರ್ಮಿಸಲು ಸ್ವಾಮಿ ರಂಗನಾಥಾನಂದರು ನಿರ್ಧರಿಸಿದರು.

ಆರಂಭದಲ್ಲಿ ಕಟ್ಟಡವನ್ನು ಪೂರ್ಣಗೊಳಿಸಲು ಆರ್ಥಿಕ ಕೊರತೆಯುಂಟಾಗಿತ್ತು. ಆದರೆ ಸ್ವಾಮೀಜಿಯವರ ಚೈತನ್ಯ ಮತ್ತು ಅವರ ವರ್ಚಸ್ಸು ನೂರಾರು ಭಕ್ತರನ್ನು ಆಕರ್ಷಿಸಿ ಹಣ ಹರಿದು ಬರಲಾರಂಬಿಸಿತು. ಪರಿಣಾಮವಾಗಿ, ಐದು ಲಕ್ಷ ಬೆಲೆಯ ಮೂರು ಅಂತಸ್ತಿನ ಕಟ್ಟಡವು ಒಂದು ವರ್ಷದ ಒಳಗಾಗಿ ಪೂರ್ಣಗೊಂಡಿತು. ನಿಜಕ್ಕೂ ಇದೊಂದು ಪವಾಡ. ಈ ಕೇಂದ್ರವು ೧೯೭೪ರ ಅಕ್ಟೋಬರ್‌ನಲ್ಲಿ ಅಧಿಕೃತವಾಗಿ ಉದ್ಘಾಟನೆಗೊಂಡಿತು ಮತ್ತು ಕಾರ್ಯಕ್ರಮದಲ್ಲಿ ಶ್ರೀ ಜಗಜೀವನರಾಂ (ಆಗಿನ ರಕ್ಷಣಾ ಸಚಿವರು) ಮತ್ತು ಶ್ರೀ ಸುಬ್ರಮಣಿಯಮ್ ಉಪಸ್ಥಿತರಿದ್ದರು.

ಬೇಗಮ್‌ಪೇಟ್ ಮಠದ ಕಾರ್ಯದರ್ಶಿಗಳಾಗಿದ್ದ ಶ್ರೀ ಕೃಷ್ಣಮೂರ್ತಿಯವರ ದಿಢೀರ್ ಮರಣದ ಬಗೆಗೆ ಸ್ವಾಮಿ ರಂಗನಾಥಾನಂದರು ತಮ್ಮ ಪತ್ರದಲ್ಲಿ ನೀಡಿದ ಸೂಚನೆ ನನ್ನನ್ನು ಆಶ್ಚರ್ಯಗೊಳಿಸಿತು. ಕೃಷ್ಣಮೂರ್ತಿಯವರ ಸ್ಥಾನದಲ್ಲಿ ನಾನು ಕಾರ್ಯದರ್ಶಿಯಾಗಿ ಮುಂದುವರಿಯುವಂತೆ ತಿಳಿಸಿದ್ದರು. ನಾನು ಭಾವಪರವಶನಾದೆ. ಮತು ಸ್ವಾಮೀಜಿಯವರ ಈ ಮನವಿಯಿಂದ ವಿನೀತನಾದೆ. ಈ ಹುದ್ದೆಗೆ ನಾನು ಅನನುಭವಿ ಎಂದೂ ಪರಿಗಣಿಸಿದೆ. ಆದರೂ ೧೯೭೫ರ ಏಪ್ರಿಲ್ ತಿಂಗಳಿನಲ್ಲಿ ಈ ಹುದ್ದೆಯನ್ನು ಒಪ್ಪಿಕೊಂಡೆ. ಹೊಸ ಮಠವನ್ನು ಸಿಕಂದರಾಬಾದಿನಲ್ಲಿ ಕಟ್ಟಿದ್ದರೂ ಕೂಡ ಹೈದರಾಬಾದಿನಲ್ಲಿ ಇರುವವರೆಗೆ, ಅದು ಸಾಕಷ್ಟು ದೂರವಿದ್ದುದರಿಂದ ಸುಲಭವಾಗಿ ಬರಲು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೇ, ಸಿಕಂದರಾಬಾದಿನ ಮಠದಲ್ಲಿ ಸ್ಥಳಾವಕಾಶ ಬಹಳ ಕಡಿಮೆಯಿತ್ತು. ಆದ್ದರಿಂದ. ಸ್ವಾಮಿ ರಂಗನಾಥಾನಂದರ ಪ್ರವಚನಗಳ ಅವಧಿಯಲ್ಲಿ

ಸೇರುತ್ತಿದ್ದ ಭಾರೀ ಜನ ಸಮೂಹಕ್ಕೆ ಅಲ್ಲಿ ಸ್ಥಳಾವಕಾಶವಾಗುತ್ತಿರಲಿಲ್ಲ. ಆದ್ದರಿಂದ ಮಠವನ್ನು ಅವಳಿ ನಗರಗಳ ಮಧ್ಯೆ ದೊಡ್ಡ ಸ್ಥಳವೊಂದಕ್ಕೆ ವರ್ಗಾವಣೆ ಮಾಡುವ ವಿಚಾರ ಬಹಳ ವ್ಯಾವಹಾರಿಕವೂ, ಸಾಧುವಾದದ್ದೂ ಎಂದು ತೋರಿತು. ಹೈದರಾಬಾದ್ ಮತ್ತು ಸಿಕಂದರಾಬಾದ್‌ನ ನಡುವೆ ಇರುವ ದೊಮಲಗುಡದಲ್ಲಿ ನಾಲ್ಕು ಎಕರೆ ಇರುವಂತಹ ಜಾಗವೊಂದು ನನ್ನ ಗಮನಕ್ಕೆ ಬಂತು. ಅದರ ಬೆಲೆ ಎರಡು ಲಕ್ಷ ರೂ.ಗಳು. ಈ ಸ್ಥಳವು ಮಠವನ್ನು ಸ್ಥಾಪಿಸಲು ಸಮರ್ಪಕವಾಗಿದೆಯೆನ್ನಿಸಿತು ನನಗೆ. ಆದ್ದರಿಂದ, ಆ ನಾಲ್ಕು ಎಕರೆಯ ಜಾಗವನ್ನು ಪಡೆಯುವಂತೆ ಸ್ವಾಮೀಜಿಯವರಿಗೆ ಸೂಚಿಸಿದೆ, ಹಣದ ಏರ್ಪಾಡು ಕಷ್ಟವಾಗುವುದಿಲ್ಲವೆಂದೂ ತಿಳಿದಿತ್ತು. ಈ ಸಲಹೆಯನ್ನು ಸ್ವಾಮೀಜಿಯವರು, ಆಂಧ್ರ ಪ್ರದೇಶದ ಟೌನ್ ಪ್ಲಾನಿಂಗ್ ಡೈರೆಕ್ಟರ್ ಹಾಗೂ ಸ್ವಾಮೀಜಿಯವರ ನಿಕಟ ಭಕ್ತರಾದ ಶ್ರೀ.ಜಿ. ವೆಂಕಟರಮಣ ರೆಡ್ಡಿಯವರೊಡನೆ ಪ್ರಸ್ತಾಪಿಸಿದರು. ಆ ಸುತ್ತಲಿನ ಪ್ರದೇಶವನ್ನು ಅಳತೆಮಾಡಿ ಸಮೀಕ್ಷಿಸಿದಾಗ, ಅಲ್ಲಿ ಐದೂವರೆ ಎಕರೆಯಷ್ಟು ಸರ್ಕಾರಿ ಭೂಮಿಯಿರುವುದು ಶ್ರೀ ರೆಡ್ಡಿಯವರಿಗೆ ತಿಳಿದಿಬಂದಿತು. ಆಗ ಅವರು, ಆ ಜಾಗವನ್ನು ರಾಮಕೃಷ್ಣ ಮಠಕ್ಕೆ ಒಪ್ಪಿಸುವ ಪ್ರಸ್ತಾವನೆಯೊಡನೆ, ರಾಜ್ಯಸರ್ಕಾರದ ಬಳಿ ಹೋಗುವ ಸಲಹೆಯನ್ನು ನೀಡಿದರು. ಇದಕ್ಕೆ ಅನುಸಾರವಾಗಿ, ಸ್ವಾಮೀಜಿಯವರ ಚತುರ ಹಾಗೂ ಸಮರ್ಥ ಮಾರ್ಗದರ್ಶನ ಮತ್ತು ದೂರದೃಷ್ಟಿ, ಮುಂಗಾಣ್ಕೆಗಳೊಡನೆ, ನಾವು ಈ ಪ್ರಸ್ತಾಪವನ್ನು ವಿವಿಧ ಸರ್ಕಾರಿ ಅಧಿಕಾರಿಗಳ ಬಳಿಗೆ ತೆಗೆದುಕೊಂಡುಹೋದೆವು ಮತ್ತು ಆಗ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ಜೆ.ವೆಂಗಲ್‌ರಾವ್ ಅವರಿಂದ ತತ್‌ಕ್ಷಣವೇ ಅನುಮತಿಯು ದೊರಕಿತು.

ಕೆಲವು ತಿಂಗಳುಗಳ ನಂತರ ನಾನು ಸಿಕಂದರಾಬಾದಿನ ಮಠದಲ್ಲಿ ಸ್ವಾಮೀಜಿಯವರನ್ನು ಭೇಟಿಮಾಡಿದಾಗ, ಆ ಭೂಸ್ವಾಧೀನ ಸ್ಥಿತಿಗತಿಯ ಪ್ರಕ್ರಿಯೆಯ ಬಗೆಗೆ ತಿಳಿದುಕೊಳ್ಳುವಂತೆ ಅವರು ನನಗೆ ಹೇಳಿದರು. ವಿದ್ಯಾ ಇಲಾಖೆಯ ಕಾರ್ಯದರ್ಶಿಗಳಾಗಿದ್ದ ಶ್ರೀ ಎಮ್.ವಿ.ರಾಜಗೋಪಾಲ್, ಐಎಎಸ್, ಅವರನ್ನು ಭೇಟಿಮಾಡಿದೆ. ಅವರ ಸಿಬ್ಬಂದಿಯವರು, ಆ ಭೂಮಿಯನ್ನು ಬೇಲೂರು ಮಠಕ್ಕೆ ಲೀಸ್ ಮಾಡಿದ್ದ ಸರ್ಕಾರಿ ಆಜ್ಞೆಯ ಪ್ರತಿಯನ್ನು ನನ್ನ ಕೈಗೆ ಕೊಟ್ಟರು. ತತ್‌ಕ್ಷಣವೇ ನಾನು ಆ ಆಜ್ಞೆಯ ಪ್ರತಿಯನ್ನು ಸ್ವಾಮೀಜಿಯವರ ಬಳಿಗೆ ತೆಗೆದು ಕೊಂಡುಬಂದೆ. ಅವರು ಆ ದಾಖಲೆಪತ್ರವನ್ನು ದೇವಸ್ಥಾನಕ್ಕೆ ತೆಗೆದುಕೊಂಡು ಹೋಗಿ ಗುರು ಮಹಾರಾಜರ ಎದುರಿಗೆ ಇಟ್ಟು ಸುಮಾರು ಹದಿನೈದು ನಿಮಿಷಗಳ ತನಕ ಧ್ಯಾನ ಮಾಡುತ್ತ ಕುಳಿತರು. ನಾನು ಆಶ್ಚರ್ಯದಿಂದ ಅವರನ್ನು ಗಮನಿಸುತ್ತಿದ್ದೆ, ಈ ಭೂಮಿಯ ಮಂಜೂರಾತಿಯ ಪ್ರಕ್ರಿಯೆಯು, ಶ್ರೀ ಸ್ವಾಮಿ ರಂಗನಾಥಾನಂದರ ತೀವ್ರ ತಪಸ್ಯೆಯ ಫಲವಾಗಿಯೇ ಇಷ್ಟು ಶೀಘ್ರಗತಿಯಲ್ಲಿ ಪೂರ್ಣವಾಯಿತೆಂಬ ನಂಬಿಕೆ ನನ್ನಲ್ಲಿ ದೃಢವಾಯಿತು. ದೇವಸ್ಥಾನದ ಗರ್ಭಗುಡಿಯಿಂದ ಹೊರಕ್ಕೆ ಬಂದ ತಕ್ಷಣವೇ ಅಂದು ಗುರುಪೂರ್ಣಿಮೆ ಎಂದು ಅವರು ಹೇಳಿದರು. ಸಾಯಂಕಾಲದ ಪ್ರವಚನದಲ್ಲಿ ನಾನು ಉಪಸ್ಥಿತನಿದ್ದೆ. ಸ್ವಾಮೀಜಿಯವರು ಹೊಸ ಜಾಗದ ಸ್ವಾಧೀನದ ಸುದ್ದಿಯನ್ನು ಸಭಿಕರಿಗೆ ತಿಳಿಸಿದರು. ಮಠ ಮತ್ತು ರಾಮಕೃಷ್ಣ ಮಿಷನ್‌ನ ಇಂತಹ ಎಲ್ಲ ಪ್ರಮುಖ ಘಟನೆಗಳನ್ನೂ ತಮ್ಮ ಪ್ರವಚನದ ಕೊನೆಯಲ್ಲಿ ಪ್ರಕಟಪಡಿಸುವುದು ಅವರ ವಾಡಿಕೆಯಾಗಿತ್ತು.

ಮಠದ ನಿರ್ಮಾಣಕಾರ್ಯ ನಡೆಯುತ್ತಿದ್ದ ಅವಧಿಯಲ್ಲಿ ಸ್ವಾಮಿ ರಂಗನಾಥಾನಂದರು, ಸಮೀಪವರ್ತಿಗಳಾದಂತಹ ಭಕ್ತರ ಒಂದು ತಂಡವನ್ನು ಕಟ್ಟಿ ಬೆಳೆಸಿದರು. ಇಂತಹ ನಿಕಟವರ್ತಿ ಭಕ್ತರಿಗಾಗಿ, ಅವರ ಗೃಹಗಳಲ್ಲಿ ಸರದಿಯಂತೆ, ಸಾಯಂಕಾಲಗಳಲ್ಲಿ ಎಲ್ಲರನ್ನೂ ಒಟ್ಟುಗೂಡಿಸಿ, *ವಿವೇಕ ಚೂಡಾಮಣಿ*ಯ ಬಗೆಗೆ ವಿಶೇಷ ತರಗತಿಯನ್ನು ಆರಂಭಿಸಿದರು. ನನ್ನ ಸಾಮಾನ್ಯವಾದ ಮನೆಯಲ್ಲಿಯೂ ಅಂತಹದೊಂದು ತರಗತಿಯನ್ನು ಆಯೋಜಿಸುವಂತಹ ಸೌಭಾಗ್ಯ ನನ್ನದಾಗಿತ್ತು. ಸ್ವಾಮೀಜಿಯು ನಮ್ಮ ಮನೆಯಲ್ಲಿ, ಆಶ್ರಮದಲ್ಲಿರುವಂತಹ ಪರಿಸರವನ್ನು ಅನುಭವಿಸಿದರು ಹಾಗೂ ಅಲ್ಲಿ ಸಮಯ ಕಳೆಯಲು ಹರ್ಷಪಟ್ಟಿದ್ದರು.

ಸ್ವಾಮಿ ರಂಗನಾಥಾನಂದರ ಆಗಮನವು, ಆಂಧ್ರ ಪ್ರದೇಶದಲ್ಲಿ, ಸ್ವಾಮಿ ವಿವೇಕಾನಂದರ ಸ್ಫೂರ್ತಿದಾಯಕ ಸಂದೇಶದ, ಅಕ್ಷರಶಃ ಜಾಗೃತಿಯನ್ನು ಉಂಟುಮಾಡಿತು. ಹೈದರಾಬಾದಿನ ಕೇಂದ್ರವು, ಕೇಂದ್ರ ಸಂಸ್ಥೆಗೆ ಸೇರಿಕೊಳ್ಳುವುದಕ್ಕೆ ಮುಂಚೆ, ಆಂಧ್ರ ಪ್ರದೇಶದಲ್ಲಿ, ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಕೇವಲ ಎರಡು ಕೇಂದ್ರಗಳು ಮಾತ್ರ ಇದ್ದವು. ವಿಶಾಖಪಟ್ಟಣಮ್ ಮತ್ತು ರಾಜಮಂಡ್ರಿಯಲ್ಲಿನ ಎರಡೂ ಕೇಂದ್ರಗಳು ಅಷ್ಟೊಂದು ಕ್ರಿಯಾಶೀಲವಾಗಿರಲಿಲ್ಲ. ಆದರೆ, ಸ್ವಾಮಿ ರಂಗನಾಥಾನಂದರ ಆಗಮನದ ನಂತರ ಈ ಎರಡು ಕೇಂದ್ರಗಳೂ ಹಲವಾರು ಸಮಾಜ ಕಲ್ಯಾಣ ಕಾರ್ಯಗಳಲ್ಲಿ ತೊಡಗಿಕೊಂಡು ಬಹಳ ಕ್ರಿಯಾಶೀಲವಾಗಿವೆ. ಅಲ್ಲದೇ ಎರಡು ಕೇಂದ್ರಗಳಲ್ಲಿಯೂ ಶ್ರೀ ರಾಮಕೃಷ್ಣ ದೇವಸ್ಥಾನಗಳು ನಿರ್ಮಾಣಗೊಂಡಿವೆ. ಆಂಧ್ರ ಪ್ರದೇಶದಲ್ಲೆಲ್ಲಾ, ಇನ್ನೂ ಅನೇಕ ಖಾಸಗೀ ಕೇಂದ್ರಗಳು ತಲೆಯೆತ್ತಿವೆ. ಇತ್ತೀಚೆಗೆ, ವಿಜಯವಾಡ ಮತ್ತು ಕಡಪಾಗಳಲ್ಲಿಯೂ ಇನ್ನೂ ಎರಡು ಕೇಂದ್ರಗಳು ಅಧಿಕೃತವಾಗಿ ರಾಮಕೃಷ್ಣ ಮಿಷನ್‌ಗೆ (Order) ಸೇರಿಸಲ್ಪಟ್ಟಿವೆ ಮತ್ತು ಆ ಕೇಂದ್ರಗಳು ಮಹತ್ವದ ಜನೋಪಯೋಗೀ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿವೆ.

ಆಂಧ್ರ ಪ್ರದೇಶದ ದಿವಿಸೀಮಾ ಮತ್ತು ಗುಂಟೂರು ಜಿಲ್ಲೆಯಲ್ಲಿ ೧೯೭೭ರಲ್ಲಿ ಭೀಕರ ಚಂಡಮಾರುತ ಎದ್ದಾಗ, ಶ್ರೀ ರಾಮಕೃಷ್ಣ ಮಿಷನ್‌ನ ವತಿಯಿಂದ ಭಾರೀ ಪ್ರಮಾಣದ ಪರಿಹಾರ ಕಾರ್ಯ ಮತ್ತು ಪುನರ್ವಸತೀಕರಣಗಳನ್ನು ಕೈಗೊಳ್ಳಲಾಯಿತು. (ಒಂದು ಸಾವಿರಕ್ಕೂ ಹೆಚ್ಚು ಸಂಖ್ಯೆಯ ಮನೆಗಳನ್ನು ನಿರ್ಮಿಸಲಾಯಿತು.) ಹಾಗೆಯೇ ಆಂಧ್ರ ಪ್ರದೇಶದ, ಶ್ರೀಕಾಕುಳಮ್ ಜಿಲ್ಲೆಯಲ್ಲಿನ, ಪ್ರವಾಹದಿಂದ ವಿಧ್ವಂಸಗೊಂಡಿದ್ದ, ರಾಮಕೃಷ್ಣಪುರಮ್ ಎಂಬ ಗ್ರಾಮವನ್ನು ಪುನರ್ನಿರ್ಮಿಸಲಾಯಿತು. ದಿವಿಸೀಮಾದಲ್ಲಿ 'ಗ್ರಾಮಶ್ರೀ' ಎಂಬ ಯೋಜನೆಯೊಂದನ್ನು ಪ್ರಾರಂಭಗೊಳಿಸಲಾಯಿತು ಹಾಗೂ ಶ್ರೀ ಕಾಕುಳಮ್ ಜಿಲ್ಲೆಯಲ್ಲಿ ಸಮಾಜೋ – ಆರ್ಥಿಕ ಯೋಜನೆಗಳನ್ನು ಪ್ರಾರಂಭಿಸುವ ಮೂಲಕ, ಪ್ರಕೃತಿವಿಕೋಪ ಮತ್ತಿತರ ಪೀಡೆಗೆ ತುತ್ತಾದವರ ಶಾಶ್ವತ ಮರುವಸತಿ, ಪುನಃಶ್ಚೇತನಗಳಿಗಾಗಿ, ಆ ಯೋಜನೆಯನ್ನು ಮುಂದುವರಿಸಲಾಯಿತು. ಈ ಎಲ್ಲ ಯೋಜನೆಗಳೂ, ಕಾರ್ಯಕ್ರಮಗಳೂ, ಸೇವಾಕಾರ್ಯಗಳೂ, ಆಂಧ್ರ ಪ್ರದೇಶದ ಪ್ರತಿಯೊಬ್ಬರಿಗೂ ಸ್ವಾಮಿ ರಂಗನಾಥಾನಂದರನ್ನು ಪ್ರೀತಿಪಾತ್ರರನ್ನಾಗಿ ಮಾಡಿದವು ಮತ್ತು ಅವರು ರಾಜ್ಯಾದ್ಯಂತ ಅತ್ಯಂತ ಹೆಚ್ಚು ಗೌರವಾನ್ವಿತರಾದರು.

ನನ್ನ ಖಾಸಗಿ ಜೀವನದಲ್ಲಿ ಕೂಡ, ನನ್ನ ಕುಟುಂಬಕ್ಕೆ ಸಂಬಂಧಿಸಿದಂತೆ, ಸ್ವಾಮೀಜಿಯವರ ಕೃಪೆ ಮತ್ತು ಆಶೀರ್ವಾದಗಳಿಗೆ ಯಾವ ಎಲ್ಲೆಯೂ ಇರಲಿಲ್ಲ. ರಾಮಕೃಷ್ಣ ಆರ್ಡರ್‌ನ ಉಪಾಧ್ಯಕ್ಷ ಪದವಿಯನ್ನು ಅವರು ಅಲಂಕರಿಸಿದ ನಂತರ ಹೈದರಾಬಾದಿನಲ್ಲಿ ಅವರು ತಮ್ಮ ವಾಸ್ತವ್ಯವನ್ನು ಮುಂದುವರಿಸಿದರು ಹಾಗೂ ಅನೇಕ ಭಕ್ತರಿಗೆ ದೀಕ್ಷೆ ನೀಡಿದರು. ನನಗೆ ತೀರಾ ಹತ್ತಿರದ ಹಾಗೂ ದೂರದ ಕುಟುಂಬಗಳ ಅನೇಕ ಸದಸ್ಯರು ಅವರ ಆಶೀರ್ವಾದ ಪಡೆದರು. ನನ್ನ ಮೂರು ಜನ ಪುತ್ರರು ಮದುವೆಯಾದಾಗ, ಆಶೀರ್ವಾದ ಪಡೆಯಲು ಮೊದಲು ಭೇಟಿಮಾಡಿದ್ದು ಸ್ವಾಮೀಜಿಯವರನ್ನು. ೧೯೭೮ರಲ್ಲಿ ನನಗೆ ಮೊಮ್ಮಗ ಜನಿಸಿದಾಗ, ಅವನಿಗೆ ರಾಮಕೃಷ್ಣ ಎಂದು ಹೆಸರಿಟ್ಟು ಅವನನ್ನು ಸ್ವಾಮೀಜಿ ಆಶೀರ್ವದಿಸಿದರು.

ಸ್ವಾಮೀಜಿಯವರು ಅನೇಕ ಬಾರಿ ನನ್ನ ವೃತ್ತಿಯ ಸಾಮರ್ಥ್ಯಕ್ಕೆ ಹಾಗೂ ನನ್ನ ಪ್ರಭಾವದ ವ್ಯಾಪ್ತಿಗೆ ಮೀರಿದ ಜವಾಬ್ದಾರಿಗಳನ್ನು ನನಗೆ ಒಪ್ಪಿಸುತ್ತಿದ್ದರು. ಆದರೆ, ಗುರು ಮಹಾರಾಜ್‌ರ ಕೃಪೆಯಿಂದ ಹೇಗೋ ಅವೆಲ್ಲವೂ ಪೂರ್ಣಗೊಳ್ಳುತ್ತಿದ್ದವು. ಸ್ವಾಮೀಜಿಯವರು ಪ್ರೀತಿಯಿಂದ ನನ್ನನ್ನು 'ಹನುಮಾನ್' ಎಂದು ಕರೆಯುತ್ತಿದ್ದರು. ಇದು ನಿಜವಾಗಿಯೂ ಗೌರವವೂ ನನ್ನ ಸೌಭಾಗ್ಯವೂ ಆಗಿತ್ತು.

ಈ ವಿಶ್ವವೆಲ್ಲವೂ ತಮ್ಮದೇ ಎಂಬ ದೃಷ್ಟಿಕೋನ ಹೊಂದಿದ್ದರಿಂದ, ಸ್ವಾಮೀಜಿಯವರು ಅನೇಕ ಬಾರಿ ಅಪರಿಚಿತರಿಂದಲೂ ಆಹ್ವಾನವನ್ನು ಅಂಗೀಕರಿಸುತ್ತಿದ್ದರು. ಅಂತಹದೊಂದು ಸಂದರ್ಭವೆಂದರೆ, ಒಮ್ಮೆ ಅನಂತಪುರದ, ಪೊಲೀಸ್ ತರಬೇತಿ ವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ಆರ್.ಸಿ. ವೆಂಕಟೇಶ್ವರುಲು ಐ.ಪಿ.ಎಸ್. ಅವರು ಸಬ್ ಇನ್ಸ್‌ಪೆಕ್ಟರ್‌ರ ಹುದ್ದೆಯ ತರಬೇತಿಗೆ ಆಯ್ಕೆಯಾಗಿದ್ದ ಶಿಕ್ಷಣಾರ್ಥಿಗಳನ್ನು ಉದ್ದೇಶಿಸಿ ಭಾಷಣಮಾಡಬೇಕೆಂದು ಸ್ವಾಮಿ ರಂಗನಾಥಾನಂದರನ್ನು ಆಹ್ವಾನಿಸಿದರು. ಅವರು ತಕ್ಷಣವೇ – ಕೇವಲ ದೂರವಾಣಿಯ ಕರೆಯ ಮೇಲೆ – ಒಪ್ಪಿಕೊಂಡರು ಮತ್ತು ಶ್ರೀ ವೆಂಕಟೇಶ್ವರುಲು ಅವರ ಕುಟುಂಬದೊಂದಿಗೆ ಅನಂತಪುರದಲ್ಲಿ ಒಂದು ದಿನ ಇದ್ದರು. ನಂತರ ಶ್ರೀ ವೆಂಕಟೇಶ್ವರುಲು ಸ್ವಾಮೀಜಿಯವರ, ಅತ್ಯಂತ ದೃಢ ಪ್ರಶಂಸಕರಲ್ಲಿ ಒಬ್ಬರಾಗಿದ್ದರು.

ಅನಂತರ, ರಾಮಕೃಷ್ಣ ಆರ್ಡರ್‌ನ ತಮ್ಮ ಅಧ್ಯಕ್ಷತೆಯ ಅವಧಿಯಲ್ಲಿ ಆರೋಗ್ಯ ಸರಿಯಿರದೆ, ಸ್ವಾಮೀಜಿಯವರು ಬೇಲೂರು ಮಠದಲ್ಲಿ ಇದ್ದಾಗ, ಶ್ರೀ ವೆಂಕಟೇಶ್ವರುಲು, ತಮ್ಮ *The Spirituality of Ancient Bharat* (ಸನಾತನ ಭಾರತದ ಆಧ್ಯಾತ್ಮಿಕತೆ) ಎಂಬ ಗ್ರಂಥದ ಬಗೆಗೆ ಸ್ವಾಮೀಜಿಯವರ ಅಭಿಪ್ರಾಯವನ್ನು ತಿಳಿಯಲು ಇಚ್ಛಿಸಿದರು. ಆಸ್ಪತ್ರೆಯಿಂದ ಬಿಡುಗಡೆ ಪಡೆದು ಬಂದ ಮಹಾರಾಜ್‌ರನ್ನು ಕೇವಲ ನೋಡಿ ಬರಲೆಂದು ನಾನು ಬೇಲೂರು ಮಠಕ್ಕೆ ನೀಡುತ್ತಿದ್ದ ಭೇಟಿಗಳಲ್ಲೊಂದರಲ್ಲಿ, ನಾನು ವೆಂಕಟೇಶ್ವರುಲು ಅವರ ಗ್ರಂಥವನ್ನು ಸುದರ್ಶನ್ ಮಹಾರಾಜ್‌ಗೆ ಕೊಟ್ಟು, ಸ್ವಾಮೀಜಿಯವರು ವಿರಾಮದಲ್ಲಿದ್ದಾಗ ಆ ಪುಸ್ತಕವನ್ನು ಅವರಿಗೆ ತೋರಿಸುವಂತೆ ಪ್ರಾರ್ಥಿಸಿದ್ದೆ. ಸ್ವಾಮೀಜಿಯವರು ಪುಸ್ತಕವನ್ನು ನೋಡಿದ ಕೂಡಲೇ ತಮ್ಮ ಟೀಕೆ, ವ್ಯಾಖ್ಯೆಗಳೊಂದಿಗೆ ಶ್ರೀ ವೆಂಕಟೇಶ್ವರುಲು ಅವರಿಗೆ ಪತ್ರ ಬರೆದರು. ಭಕ್ತರ ಮನವಿಗಳಿಗೆ, ಪ್ರಾರ್ಥನೆಗಳಿಗೆ ಪ್ರತಿಸ್ಪಂದಿಸುವುದರಲ್ಲಿ ಸ್ವಾಮೀಜಿಯವರಿಗಿರುವ ಕಾಳಜಿ, ಕಾರ್ಯತತ್ಪರತೆಗಳಿಗೆ ಇದು ನಿದರ್ಶನ.

ಸಮಾಜಕ್ಕೆ ನನ್ನ ಸೇವೆಯನ್ನು ಮುಂದುವರಿಸುವ ಪ್ರಯತ್ನವಾಗಿ ನಾನು ನಂತರ, ಶ್ರೀಕಾಕುಳಮ್‌ನ ರಾಮಕೃಷ್ಣಪುರಂ ಗ್ರಾಮದಲ್ಲಿ ಸುಮಾರು ನೂರು ಕುಟುಂಬಗಳ ಪುನರ್ವಸತೀಕರಣದ ಅಂಗವಾಗಿ 'ವಂಶಧಾರಾ ಗ್ರಾಮಶ್ರೀ ಟ್ರಸ್ಟ್' ಅನ್ನು ಸ್ಥಾಪಿಸಿದೆ. ಶ್ರೀರಾಮಮಂದಿರದ ನವೀಕರಣಕ್ಕಾಗಿ, ಸ್ವಾಮೀಜಿ ಮುವತ್ತು ಸಾವಿರ ರೂಪಾಯಿಗಳನ್ನು ದಾನವಾಗಿ ನೀಡಿದರು. ಸ್ವಾಮೀಜಿಯವರನ್ನು ನಾನು ಶ್ರೀಕಾಕುಳಮ್ ಮತ್ತು ಪೂರ್ವ ಗೋದಾವರಿ ಜಿಲ್ಲೆಗಳಲ್ಲಿ ಪ್ರವಾಸಕ್ಕೆಂದು ಕರೆದುಕೊಂಡುಹೋದೆ. ಅಲ್ಲಿ ಸ್ವಾಮೀಜಿ ಸರಣಿ ಪ್ರವಚನಗಳನ್ನು ನೀಡಿದರು. ಇಂದಿಗೂ, ನನಗೆ ಬೇಸರ ಮತ್ತು ಪಶ್ಚಾತ್ತಾಪದ ಸಂಗತಿಯೆಂದರೆ, ಸ್ವಾಮೀಜಿಯನ್ನು ನಾನು ಎರಡನೆಯ ದರ್ಜೆಯ ರೈಲು ಬಂಡಿಗಳಲ್ಲಿ ಮತ್ತು ಅನುಕೂಲಕರವಾಗಿಲ್ಲದಿದ್ದ ವಾಹನಗಳಲ್ಲಿ ಪ್ರಯಾಣಮಾಡಿಸಿದೆ, ಅವರ ಸೌಕರ್ಯ, ಅಂತಸ್ತು ಘನತೆಗಳಿಗೆ ಸಾಕಷ್ಟು ಗಮನವನ್ನೇ ಕೊಡಲಿಲ್ಲವೆಂಬುದು. ಆದರೂ ಅವರು ಸ್ವಲ್ಪವೂ ಅಸಮಾಧಾನಪಡದೆ ನನ್ನನ್ನು ಉಪಕರಿಸಿ, ಅನುಗ್ರಹಿಸಿದರು.

ಕನ್ಯಾಕುಮಾರಿ ವಿವೇಕಾನಂದ ಕೇಂದ್ರದ, ಸ್ಥಳೀಯ ಶಾಖಾ ಕೇಂದ್ರಕ್ಕೆ ನಾನು ಛೇರ್‌ಮನ್ ಆಗಿಯೂ, ಮತ್ತು ಶ್ರೀ ಆರ್.ಸಿ.ವೆಂಕಟೇಶ್ವರುಲು ಐ.ಪಿ.ಎಸ್ (Retd.) ಕಾರ್ಯದರ್ಶಿಯಾಗಿಯೂ ನೇಮಕಗೊಂಡೆವು. ನಾವಿಬ್ಬರೂ ಸ್ವಾಮೀಜಿಯವರ ಆಶೀರ್ವಾದ ಪಡೆಯಲು ಹೋದಾಗ ಆ ಕೇಂದ್ರವು ಬಾಡಿಗೆಯ ಕಟ್ಟಡದಲ್ಲಿ ಕಾರ್ಯನಡೆಸುತ್ತಿದ್ದುದು ಅವರಿಗೆ ತಿಳಿದಿದ್ದುದರಿಂದ, ಅದಕ್ಕಾಗಿ ಒಂದು ಶಾಶ್ವತವಾದ ಸ್ಥಳವನ್ನು ಪಡೆಯುವಂತೆ ನನಗೆ ನಿರ್ದೇಶಿಸಿದರು. ಅದೃಷ್ಟವಶಾತ್, ಅತಿ ಶೀಘ್ರವಾಗಿಯೇ ಸ್ವಾಮೀಜಿಯವರು ಆಲೋಚಿಸಿದ್ದಂತೆ ಶಾಶ್ವತವಾದ ಒಂದು ಸ್ಥಳವನ್ನು ಪಡೆದೆವು. ೨೦೦೦ರ ಜನವರಿಯಲ್ಲಿ ನಾನು ಬೇಲೂರು ಮಠಕ್ಕೆ ಭೇಟಿ ಕೊಟ್ಟ ಅವಧಿಯಲ್ಲಿ ಈ ಸಂಗತಿಯನ್ನು ನಾನು ಪ್ರಕಟಿಸಿದೆ. ಸ್ವಾಮೀಜಿಯವರು ಅತ್ಯಂತ ಹರ್ಷಪಟ್ಟರು.

ಹೈದರಾಬಾದಿನ ಹೊರ ವಲಯದಲ್ಲಿ, ಸ್ವಾಮೀಜಿಯವರು ‘ರಾಮಕೃಷ್ಣ ವಾನಪ್ರಸ್ಥ ಆಶ್ರಮ’ವನ್ನು ಸ್ಥಾಪಿಸಿದರು ಮತ್ತು ನನ್ನನ್ನು ಸ್ಥಾಪಕ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವಂತೆ ಮನ ಒಲಿಸಿದರು. ಅವರೇ ಅದಕ್ಕೆ ಅಸ್ತಿಭಾರವನ್ನು ಹಾಕಿದರು. ಈಗ ಅದು ಸುಮಾರು ನಲವತ್ತು ‘ವಾನಪ್ರಸ್ಥಿ’ಗಳಿಗೆ (ತಮ್ಮ ನಿವೃತ್ತಿಯ ನಂತರ ಆಧ್ಯಾತ್ಮಿಕ ಜೀವನ ನಡೆಸಲು ಬಯಸುವ ವೃದ್ಧರಿಗೆ) ಆಶ್ರಯ ನೀಡಿದ್ದು ಸಂಪೂರ್ಣವಾಗಿ ರೂಪುಗೊಂಡಿರುವ ಆಶ್ರಮವಾಗಿದೆ.

೨೦೦೫ರ ಏಪ್ರಿಲ್ ೨೫ರಂದು ಸ್ವಾಮೀಜಿಯವರ ಮಹಾಸಮಾಧಿಯ ಸುದ್ದಿಯನ್ನು ಕೇಳಿದಾಗ, ಮರು ದಿನ ಬೆಳಿಗ್ಗೆಯೇ ನಾನು ಬೇಲೂರು ಮಠಕ್ಕೆ ಧಾವಿಸಿದೆ ಮತ್ತು ಅಂತ್ಯಯಾತ್ರೆ, ದಹನ ಕಾರ್ಯ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅದೇ ದಿನ ಸಾಯಂಕಾಲ ಮನೆಗೆ ಹಿಂದಿರುಗಿದೆ. ನನ್ನ ಖಾಸಗಿ ಸಂಬಂಧ ಅವರೊಡನೆ ಈ ರೀತಿಯದಾಗಿತ್ತು.

* * * *

# ೧೩೨. ಮಾನವನ ಶ್ರೇಷ್ಠತೆಯ ಸಮರ್ಥ ಹೋರಾಟಗಾರ

–ಡಾ|| ಪಿ.ಎಸ್. ಕೃಷ್ಣಮೂರ್ತಿ*

ಸ್ವಾಮಿ ರಂಗನಾಥಾನಂದರೊಡನೆ ನಮ್ಮ ಪರಿಚಯವು, ರಾಜಮಂಡ್ರಿಯಲ್ಲಿ ಮತ್ತು ನಂತರ ಹಳೆಯ ಮದ್ರಾಸು ರಾಜ್ಯದಲ್ಲಿ ರಾಮಕೃಷ್ಣ ಸೇವಾ ಸಮಿತಿಯನ್ನು ಸ್ಥಾಪಿಸಿದ ಕಾಲದಿಂದಲೂ ಮುಂದುವರೆದುಕೊಂಡು ಬಂದಿದೆ. ಬಹಳ ಪ್ರಸಿದ್ಧ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಕೇಂದ್ರವಾದ, ಆ ಪಟ್ಟಣದ ವಸ್ತುಸಂಗ್ರಹಾಲಯದ ಹತ್ತಿರವಿರುವ ಪೆರೇಡ್ ಗ್ರೌಂಡ್ಸ್‌ನಲ್ಲಿ ಸ್ವಾಮಿ ರಂಗನಾಥಾನಂದರಿಂದ ಕೆಲವು ಸಾರ್ವತ್ರಿಕ ಪ್ರವಚನಗಳನ್ನು ಏರ್ಪಡಿಸಲಾಗಿತ್ತು. ಆಗ ಕೂಡ (ಅವರು ಕರಾಚಿಯಿಂದ ಹಿಂದಿರುಗಿದ ಬಳಿಕ), ಅವರ ಅದ್ಭುತ ಜ್ಞಾಪಕ ಶಕ್ತಿ, ಕಠಿಣವಾದ, ಕ್ಲಿಷ್ಟವಾದ, ವೇದಾಂತದ ವಿಚಾರಗಳ ಸ್ಪಷ್ಟವಾದ ಪ್ರತಿಪಾದನೆ ಹಾಗೂ ಅವರ ವಾಕ್ಪಟುತ್ವದ ಕೌಶಲ್ಯಗಳ ಬಗೆಗೆ ನಾವೆಲ್ಲರೂ ಆಶ್ಚರ್ಯಚಕಿತರಾಗಿದ್ದೆವು.

ರಾಮಕೃಷ್ಣ ಮಿಷನ್‌ನ ಕೇಂದ್ರವನ್ನು, ರಾಜಮಂಡ್ರಿ, ಮದ್ರಾಸ್ ರಾಜ್ಯಗಳಲ್ಲಿ ಸ್ಥಾಪಿಸಿದ ನಂತರ ಮತ್ತು ಆ ಬಳಿಕ ಹೈದರಾಬಾದಿನಲ್ಲಿ, ಇಂದಿರಾ ಪಾರ್ಕಿನ ಹತ್ತಿರ ಈಗ ಇರುವ ಸ್ಥಳದಲ್ಲಿ ಮಠವು ಅಸ್ತಿತ್ವಕ್ಕೆ ಬಂದ ನಂತರವೂ ನಮ್ಮ ಪರಿಚಯ ಮುಂದುವರಿಯಿತು. ಮಠಕ್ಕೆ ಮಂಜೂರು ಮಾಡಲಾಗಿದ್ದ ಸ್ಥಳವನ್ನು ತೆರವು ಗೊಳಿಸವಲ್ಲಿ, ತೊಂದರೆಯಾಗುತ್ತಿದ್ದ ಸಂಗತಿಯನ್ನು ಪರಿಹರಿಸುವಲ್ಲಿ ಅತ್ಯವಶ್ಯವಾಗಿದ್ದ ಸಹಾಯವನ್ನು ಮಾಡುವ ಸೌಭಾಗ್ಯ ನನ್ನದಾಗಿತ್ತು.

ಪೂಜ್ಯ ಮಹಾರಾಜ್‌ರು ಹೈದರಾಬಾದಿನ ಕೇಂದ್ರದಲ್ಲಿ ವಾಸ್ತವ್ಯ ಮಾಡಿದಾಗ, ಅವರೊಡನೆ ನಾನು ಅತ್ಯಂತ ನಿಕಟ ಹಾಗೂ ವಾತ್ಸಲ್ಯಪೂರ್ಣವಾದ ಸಂಬಂಧ ಹೊಂದಿದ್ದೆ. ಸ್ವಾಮಿ ರಂಗನಾಥಾನಂದರು ರಾಮಕೃಷ್ಣ ವಿವೇಕಾನಂದರ ವೇದಾಂತವನ್ನು ಜಾಗತಿಕ ಮಟ್ಟದಲ್ಲಿ ಗಮನಾರ್ಹವಾಗಿ ಪ್ರತಿಪಾದಿಸುವವರು ಮಾತ್ರವಾಗಿರದೇ ಈ ಮಹಾಪರಂಪರೆಯು ಅಳವಡಿಸಿಕೊಂಡಿದ್ದ ಮೌಲ್ಯಗಳನ್ನು ಅನುಸರಿಸುವಂತಹ, ನಿಪುಣ ಆಡಳಿತಗಾರರೂ ಆಗಿದ್ದರು. ಈ ಮಹಾಸ್ವಾಮೀಜಿಯವರ ಉಜ್ವಲ ವ್ಯಕ್ತಿತ್ವದ, ಹೆಚ್ಚು ಕಡಿಮೆ ಛಾಯಾಚಿತ್ರದಂತಹ ನೆನಪು ನನ್ನ ಮನಸ್ಸಿನಲ್ಲಿ ನೆಲೆ ನಿಂತಿದೆ.

ಸ್ವಾಮೀಜಿಯವರು ಎಷ್ಟು ಪ್ರಯೋಗಶೀಲರಾಗಿದ್ದರು ಮತ್ತು ಜೀವನದಲ್ಲಿ ಅತ್ಯಂತ ಸಣ್ಣ ಸಣ್ಣ ವಿಷಯಗಳ ಬಗೆಗೂ ಅದೆಷ್ಟು ಆಳವಾದ ಕಾಳಜಿ ವಹಿಸುತ್ತಿದ್ದರು ಎನ್ನುವುದರ ಬಗೆಗೆ ಒಂದು ಘಟನೆ ನೆನಪಾಗುತ್ತದೆ. ಒಮ್ಮೆ ಅವರು ಕೇರಳದಲ್ಲಿನ ತ್ರಿಶೂರಿನಲ್ಲಿ ತಮ್ಮ ಜನ್ಮಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋದರು. ಸಹಜವಾಗಿಯೇ ರೈಲಿನಲ್ಲಿ ಪ್ರಥಮ ದರ್ಜೆಯ ಬೋಗಿಯಲ್ಲಿ ಅವರಿಗೆ ಕೆಳಗಿನ ಬರ್ತ್ ಅನ್ನು, ನನಗೆ ಅದೇ ಸಾಲಿನಲ್ಲಿ ಮೇಲಿನ ಬರ್ತನ್ನು ಗೊತ್ತುಪಡಿಸಲಾಗಿತ್ತು. ಸ್ವಾಮೀಜಿಯವರು ಕೆಳಗಿನ ಬರ್ತ್‌ನಲ್ಲಿರುವಾಗ ಮೇಲಿನ ಬರ್ತ್‌ನ್ನು ನಾನು ಪಡೆಯುವುದು, ಸಂವೇದನೆಯಿರದ ಹಾಗೂ ಅಗೌರವದ ಸಂಗತಿಯೆನಿಸಿತ್ತು. ನನಗೆ ಆದರೆ ಸ್ವಾಮೀಜಿ ನನ್ನ ಈ ಆಕ್ಷೇಪಣೆಯನ್ನು ಮತ್ತು ಹೊಯ್ದಾಟವನ್ನು ಅತ್ತ ತಳ್ಳಿ ಮೇಲಿನ ಬರ್ತ್‌ನ್ನು ಉಪಯೋಗಿಸಿಕೊಳ್ಳುವಂತೆ ಅಕ್ಷರಶಃ ನನಗೆ ಆಜ್ಞೆಯನ್ನೇ ಮಾಡಿದರು. ಪ್ರತಿಯೊಬ್ಬರೂ ಸಮಾನರು ಎನ್ನುವ ವೇದಾಂತದ ಸತ್ಯವನ್ನು

* ಹೈದರಾಬಾದಿನಲ್ಲಿ ಹೋಮಿಯೋಪತಿ ವೈದ್ಯರು; ಪಿ.ಜಿ.ಎಚ್. (ಯು.ಎಸ್.ಎ., ಗ್ಲಾಸ್ಗೊ, ಲಂಡನ್, ಜರ್ಮನಿ, ಪ್ಯಾರಿಸ್, ಸ್ವಿಟ್ಸರ್ಲೆಂಡ್.)

ಹೃತ್ಪೂರ್ವಕವಾಗಿ ಆಚರಿಸುತ್ತಿದ್ದ ಅವರು ಹೃದಯದಲ್ಲಿ ದೃಢವಾದ ಪ್ರಜಾಪ್ರಭುತ್ವವಾದಿಗಳಾಗಿದ್ದರು. ಮಠದ ಮುಖ್ಯ ಕಾರ್ಯಕ್ರಮಗಳ ಬಗೆಗೆ ಕಾಳಜಿಯಿರುವಂತೆಯೇ ಅವರಿಗೆ ಮಠದ ತೋಟದ ಮಾಲಿಗಳ ಬಗೆಗೆ, ಮತ್ತು ಮಠದ ಬೇರೆ ಬೇರೆ ಪ್ರದೇಶಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದವರ ಮತ್ತು ಅಡುಗೆ ಕೋಣೆಯಲ್ಲಿ ಕೆಲಸ ಮಾಡುತ್ತಿರುವವರ ಬಗೆಗೂ ಇಂಥದೇ ಕಾಳಜಿ ಅವರಲ್ಲಿ ಕಂಡು ಬರುತ್ತಿತ್ತು. ಆದರೂ ಅಗತ್ಯಬಿದ್ದಾಗ ಅವರು ಮಾನವೀಯರೂ, ಕರುಣಾಮಯಿಯೂ, ಕಟ್ಟಾ ಶಿಸ್ತು ಪರಿಪಾಲಕರೂ ಆಗಿದ್ದರು.

ಸ್ವಾಮೀಜಿಯವರು ಉತ್ಕೃಷ್ಟವಾದ ಸೌಂದರ್ಯಾಭಿರುಚಿಯನ್ನು ಹೊಂದಿದ್ದರು. ಅವರು ಎಲ್ಲಿಯೇ ಇದ್ದರೂ, ಅಲ್ಲೆಲ್ಲ, ಹೂವಿನ ತೋಟಗಳನ್ನು, ಹಣ್ಣು ಬಿಡುವ ಮರಗಳನ್ನು ಬೆಳೆಸಲು ಬಹಳ ಇಷ್ಟಪಡುತ್ತಿದ್ದರು. ಮಠದ ಕ್ಯಾಂಪಸ್‌ನಲ್ಲಿರುವ ಪ್ರಾಕೃತಿಕ ದೃಶ್ಯ ವಾಸ್ತುಶಿಲ್ಪದ ಲೇಔಟ್ ಮತ್ತು ಲಭ್ಯವಿರುವ ಜಾಗವನ್ನು ಅತ್ಯುತ್ತಮ ಮತ್ತು ಅತ್ಯಂತ ಹಿತಕರವಾಗಿ ಉಪಯೋಗಿಸಿಕೊಂಡಿರುವುದು, ಪ್ರಕೃತಿ ಮತ್ತು ಸೌಂದರ್ಯದ ಬಗೆಗಿನ ಸಂವೇದನಾಶೀಲತೆಗೆ ಕಾಣಿಕೆಗಳಾಗಿವೆ. ಅವರು ಎಲ್ಲಿಯೇ ಇದ್ದರೂ, ಇವುಗಳನ್ನೆಲ್ಲಾ ಅತ್ಯಂತ ನಿಖರವಾಗಿ ಯೋಜಿಸುತ್ತಿದ್ದು, ಇವು ಸ್ವಾಮೀಜಿಯವರ ಪ್ರೀತಿಯ ಹವ್ಯಾಸಗಳು ಎಂದು ಅರಿಯಬಹುದಾಗಿತ್ತು.

ಈಜುವುದು, ಅವರ ನೆಚ್ಚಿನ ಹವ್ಯಾಸವೆನಿಸುತ್ತದೆ ನನಗೆ. ಒಂದು ಸಾರಿ, ಮಹಾರಾಜ್ ಮತ್ತು ಇತರ ಸ್ವಾಮಿಗಳ ಜೊತೆ, ತನ್ನ ಆಳಕ್ಕೆ ಕೂಡ ಪ್ರಸಿದ್ಧವಾಗಿರುವ ಯು.ಎಸ್.ನ ಅತ್ಯಂತ ವಿಶಾಲವಾದ ಸರೋವರಗಳಲ್ಲಿ ಒಂದಾದ ತಾ ಹೋ ಸರೋವರದ ಮೇಲೆ ದೋಣಿಯ ಪಯಣದಲ್ಲಿ ಭಾಗಿಯಾಗಿದ್ದೆ. ಮಹಾರಾಜ್‌ರು ಆಳವಾದ ನೀರಿನಲ್ಲಿ ಕೆಳಕ್ಕೆ ಮುಳುಗುವ ಸಂತೋಷ ರೋಮಾಂಚನಗಳಿಗಾಗಿ, ಥಟ್ಟನೆ ದೋಣಿಯೊಳಗಿನಿಂದ, ಸರೋವರದೊಳಕ್ಕೆ ಧುಮುಕಿಬಿಟ್ಟರು. ಪೂರ್ತಿ ಹತ್ತು ನಿಮಿಷಗಳವರೆಗೂ ಅವರು ಮೇಲೆ ಬರಲಿಲ್ಲವಾಗಿ, ನಾವೆಲ್ಲರೂ ಬಹಳವಾಗಿ ಹೆದರಿದೆವು. ಕಡೆಗೆ ಅವರು ನೀರಿನಿಂದ ಮೇಲಕ್ಕೆ ಬಂದಾಗ, ತಮಗೆ ಈಜುವುದು ಮತ್ತು ಆಳನೀರಿನಲ್ಲಿ ಮುಳುಗುವುದು ಬಹಳ ಪ್ರಿಯವಾದುದು ಎಂದು ಹೇಳಿದರು. ಅಪಾರ ವಿಸ್ತಾರದ, ಸ್ವಚ್ಛ ನೀರಿನ ಹರಹಿರುವ, ಅಂತಹದೊಂದು ಸರೋವರವನ್ನು ಕಂಡಾಗ ಈಜಬೇಕು ಎಂಬ ಆಮಿಷವನ್ನು ತಮಗೆ ನಿಯಂತ್ರಿಸಲಾಗಲಿಲ್ಲವೆಂದು ಅವರು ಹೇಳಿದರು.

ಪ್ರಾಸಂಗಿಕವಾಗಿ, ಸ್ವಾಮೀಜಿಯವರು ವಿದೇಶದಲ್ಲಿ ವಾಸ್ತವ್ಯ ಮಾಡಿದಾಗಲೆಲ್ಲಾ ಅವರ ವೈದ್ಯಕೀಯ ಅಗತ್ಯಗಳಿಗೆ ಯಾವ ರೀತಿಯ ನಿಗಾ ತೆಗೆದುಕೊಳ್ಳಬೇಕೆನ್ನುವ ಹಾಗು ಅದಕ್ಕೆ ಬೇಕಾದ ಏರ್ಪಾಟುಗಳನ್ನು ಮಾಡುವ ಸವಲತ್ತು ನನ್ನದಾಗಿತ್ತು. ಒಬ್ಬ ಅನುಭವೀ ಹೋಮಿಯೋಪತಿ ವೈದ್ಯನಾಗಿ, ನನಗೆ ಸಾಧ್ಯವಾದಷ್ಟು, ನನ್ನ ಅಲ್ಪ ಸೇವೆಯನ್ನು ಸಲ್ಲಿಸುವ ಸಲುವಾಗಿ, ನಾನು ಕೂಡ ಅವರ ಜೊತೆಗೆ ಹೋಗುತ್ತಿದ್ದೆ. ತಮಗೇ ವಿಶಿಷ್ಟವಾದ ಹಾಸ್ಯ ಪ್ರಜ್ಞೆಯಿಂದ, ತಮ್ಮ ನಾಜೂಕು ಹಾಗೂ ಸೂಕ್ಷ್ಮವಾದ ಜೀರ್ಣಶಕ್ತಿಯ ಬಗೆಗೆ ಹೀಗೆ ಹೇಳುತ್ತಿದ್ದರು. "ನನ್ನ ಶರೀರದ ಮಧ್ಯ ಪ್ರದೇಶವು ನನ್ನೊಡನೆ ಸಹಕರಿಸಲು ನಿರಾಕರಿಸುತ್ತಿದೆ."

ತೀವ್ರವಾದ ಆರೋಗ್ಯದ ಸಮಸ್ಯೆಯಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದ ಸ್ವಾಮಿ ಭೂತೇಶಾನಂದರೊಡನೆ, ಒಂದು ಸಂಗತಿಯು ತಳುಕು ಹಾಕಿಕೊಂಡಿದೆ. ಸ್ವಾಮಿ ರಂಗನಾಥಾನಂದರೂ ಅದೇ ಆಸ್ಪತ್ರೆಗೆ ಸೇರಬೇಕಾಯಿತು. ಅಕ್ಕಪಕ್ಕದ ಹಾಸಿಗೆಗಳಲ್ಲಿ ಅವರಿಬ್ಬರೂ ಇದ್ದರು. ಹೋಮಿಯೋಪತಿಯ ದೃಷ್ಟಿಕೋನದಿಂದ ವೈದ್ಯಕೀಯ ಸಲಹೆ ನೀಡಲು ನಾನು ಕೂಡ ಅಲ್ಲಿಗೆ ಹೋಗಬೇಕಾಯಿತು. ಒಂದು ಸಂದರ್ಭದಲ್ಲಿ, ಲಘು ಹಾಸ್ಯಮನೋಭಾವದಲ್ಲಿ ಸ್ವಾಮಿ ಭೂತೇಶಾನಂದರು, ಸ್ವಾಮಿ ರಂಗನಾಥಾನಂದರಿಗೆ ಹೇಳಿದರು. "ಶಂಕರ! ಸಿದ್ಧನಾಗು, ನಾನು ಹೊರಡುತ್ತಿರುವೆ..." ಮತ್ತೆ ಮತ್ತೆ ಮರುಕಳಿಸುವಂತಹ ಕಾಯಿಲೆಗಳಿಗಾಗಿ, ರಂಗನಾಥಾನಂದರ ಚಿಕಿತ್ಸೆ ಮಾಡುವುದು ನನ್ನ ಸೌಭಾಗ್ಯವಾಗಿತ್ತು. ಜೊತೆಗೆ ಪಾಶ್ಚಾತ್ಯ ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅನೇಕ ಪ್ರಸಿದ್ಧ ಸನ್ಯಾಸಿಗಳಾದ, ಜೋಹಾನ್ಸ್‌ಬರ್ಗ್‌ನಲ್ಲಿ ಕೇಂದ್ರವನ್ನು ನಿರ್ಮಿಸಿದ ಸ್ವಾಮಿ ನಿಃಶ್ರೇಯಸಾನಂದ,

ಲಂಡನ್ ಕೇಂದ್ರದ ಸ್ವಾಮಿ ಘನಾನಂದ, ಫ್ರಾನ್ಸಿನಲ್ಲಿ ರಾಮಕೃಷ್ಣವೇದಾಂತದ ಆದ್ಯ ಪ್ರವರ್ತಕರಾದ ಸ್ವಾಮಿ ಸಿದ್ಧೇಶ್ವರಾನಂದ, ಇವರೆಲ್ಲರ ಸಂಗದ ಸ್ವಾಮಿ ರಂಗನಾಥಾನಂದರನ್ನು ನೋಡುವ ಸೌಭಾಗ್ಯ ಸಹ ನನ್ನದಾಗಿತ್ತು.

ಸ್ವಾಮಿ ರಂಗನಾಥಾನಂದರು ದೊಡ್ಡ ನಿರ್ಮಾತೃವೂ ಆಗಿದ್ದರು. 'ಜೀವಾತ್ಮರ ಸೇವೆಯೇ ಶಿವ ಅಥವಾ ಪರಮಾತ್ಮನ ಸೇವೆ' ಎಂಬ ತತ್ತ್ವವನ್ನು ಸಮರ್ಥಿಸಿ, ಬೆಂಬಲಿಸಿ, ಪ್ರಾಮಾಣಿಕ ಸೇವೆ ಮಾಡಿದರು. ಈ ವಿಷಯಕ್ಕೆ ಸಂಬಂಧಿಸಿದಂತೆ, ಲಕ್ಷ್ಮಿ ಮತ್ತು ಸರಸ್ವತೀ ದೇವಿಯರಿಬ್ಬರೂ ಸ್ವಾಮೀಜಿಯವರ ಮೇಲೆ ಧಾರಾಳವಾಗಿ ಅನುಗ್ರಹದ ಮಳೆ ಸುರಿಸಿದ್ದರು. ಪರಿಹಾರಕಾರ್ಯ, ಶಿಕ್ಷಣ, ಆರೋಗ್ಯ ಸೇವಾಕಾರ್ಯ ಪ್ರತಿಯೊಂದೂ ಅವರ ಗಮನವನ್ನು ಸೆಳೆದಿದ್ದವು ಮತ್ತು ಅವರಿಂದ ಸಹಾಯಹಸ್ತ ಪಡೆದ ಸಂಸ್ಥೆಗಳು ಹಾಗೂ ವ್ಯಕ್ತಿಗಳು, ಹೆಸರಿಸಲು ಆಗದಷ್ಟು ಅಸಂಖ್ಯವಾಗಿವೆ.

ಅತ್ಯುನ್ನತ ಶ್ರೇಣಿಯ ಆಧ್ಯಾತ್ಮಿಕತೆಯಿಂದ ಪ್ರಜ್ವಲಿತಗೊಂಡ ಮತ್ತು ಜ್ಞಾನವನ್ನು ಪಡೆದ, ಸ್ವಾಮಿ ರಂಗನಾಥಾನಂದರು, ನಿಜವಾಗಿಯೂ, ಸಂಪೂರ್ಣ ಮಾನವ ವಿಕಾಸದ ಅನುಕರಣೀಯ ಆದರ್ಶಮಾದರಿ.

# ಕೃತಜ್ಞತೆಗಳು

ಡಾ॥ ಶ್ಯಾಮಲಿ ಚೌಧರಿ (ಅವರು ಹೈದರಾಬಾದಿನಲ್ಲಿದ್ದಾಗ)ಯವರಿಗೆ ನೀಡಿದ ಸಹಾಯಕ್ಕಾಗಿ, ಶ್ರೀ ಸೂರ್ಯನಾರಾಯಣ ರೆಡ್ಡಿ, ಶ್ರೀಮತಿ ವಸುಂಧರಾ, ಶ್ರೀ ಸುದಿನ್ ಮತ್ತು ರೇವಾ ಚೌಧರಿ, ಶ್ರೀಮತಿ, ಜ್ಯೋತಿ ಕಾತಿಕಿನೇನಿ ಮತ್ತು ರಾಮಕೃಷ್ಣ ಮಠ ಹೈದರಾಬಾದ್ ಕಚೇರಿಯ ಶರ್ಮಾಜಿ, ಇವರನ್ನೆಲ್ಲಾ ಕೃತಜ್ಞತಾ ಪೂರ್ವಕ ನಾವು ಸ್ಮರಿಸುತ್ತೇವೆ.

ದಿವಂಗತ ಸ್ವಾಮಿ ಗೋಕುಲಾನಂದರಿಗೆ ಅವರ ಆಶೀರ್ವಾದ ಪ್ರೋತ್ಸಾಹಗಳಿಗಾಗಿ ಮತ್ತು ಡಾ॥ ಶ್ಯಾಮಲಿ ಚೌಧರಿಯವರು ಸರ್ಕಾರೀ ಅಧಿಕಾರಿಗಳನ್ನು ಭೇಟಿಮಾಡಲು ನೆರವು ನೀಡಿದ್ದಕ್ಕಾಗಿ, ನಾವು ಋಣಿಯಾಗಿದ್ದೇವೆ. ಹಾಗೆಯೇ ಶ್ರೀಮತಿ ಕೃಷ್ಣ ಗಾದಿ, ಡಾ॥ ಸುನೀತಾ ಮಲ್ಲಿಕ್, ರಾಮಕೃಷ್ಣ ಮಿಷನ್ನಿನ (ದೆಹಲಿಯ) ಶ್ರಿ ಅಲೋಕ್ ಚಟರ್ಜಿ ಮತ್ತು ಮಧು ಬಾಬು ಅವರಿಗೂ ಅವರ ಸಹಕಾರಕ್ಕಾಗಿ ವಂದನೆಗಳನ್ನು ಸಲ್ಲಿಸುತ್ತೇವೆ.

ಬೆಂಗಳೂರಿನ, ಹಲಸೂರು ಮಠದ ಭಕ್ತರನ್ನು ಭೇಟಿಮಾಡಲು ಡಾ. ಶ್ಯಾಮಿಲಿ ಚೌಧರಿಯವರಿಗೆ ಅಗತ್ಯವಾದ ಏರ್ಪಾಟುಗಳನ್ನು ಮಾಡಿಕೊಟ್ಟ ಶ್ರೀ ಲಾಲ್. ಟಿ ಸಾಧ್ವನಿಯವರಿಗೂ, ಮೈಸೂರಿನಲ್ಲಿ ಅವರಿಗೆ ಮಾರ್ಗದರ್ಶನ ನೀಡಿದ ಡಾ. ನಾಗೇಂದ್ರರವರಿಗೂ ನಾವು ಅತ್ಯಂತ ಹೆಚ್ಚಿನ ವಂದನೆಗಳನ್ನು ಸಲ್ಲಿಸುತ್ತೇವೆ.

ಶ್ರೀ ರಣಜಿತ್ ಕಾಂಜೀಲಾಲ್, ಕೇರಳದ ಶಾರದಾ ಮಠದ ವಿವಿಧ ಕೇಂದ್ರಗಳ ಸನ್ಯಾಸಿನಿಯರು, ಕೊಡಂಗಲ್ಲೋರಿನ ವೇದಿಕೆ ಫೌಂಡೇಷನ್ನಿನ ಕಲ್ಲಿಕೋಟೆಯ ಓಟ್ಟಪಳಮ್ ಭಕ್ತರು, ತ್ರಿಶೂರಿನ ಜನರು, ಶ್ರೀ ಸುರೇಶ್ ಕುಮಾರ್ (ಸ್ವಾಮೀಜಿಯವರ ಸೋದರಳಿಯ) ರೇಮಾ ನಾರಾಯಣ ಕುಟ್ಟಿ (ಸ್ವಾಮೀಜಿಯವರ ಸೋದರಸೊಸೆ), ತ್ರಿಕ್ಕೂರಿನ ಜನರು – ಈ ಎಲ್ಲರಿಗೂ ಈ ಎಲ್ಲರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಪ್ರೊಫೆಸರ್ ಜೋ ವಾನ್ ಆರ್ಷೋವೆನ್, ಸೂರ್ಯಾ ಗ್ರೀನ್, ದವೆ, ಹರ್ಮಾ ಜೋ, ಮಾರಿಯಾ ಟ್ರೋಂಪ್, ಸುಜಾತಾ ಲೀಮನ್, ಚಂದ್ರಾವಳಿ ಮತ್ತು ಹಾಲೆಂಡಿನ ಸೀಜ್ ಫ್ರೆಡ್ಸ್ ರೀತಾ ದಾಸ್ ಮತ್ತು ಜರ್ಮನಿಯ ಭೋಗೀಲಾಲ್ ಪಟೇಲ್, ಗ್ರೆಟ್ಸ್ ಕೇಂದ್ರದ ಶಾರದಾ ಮತ್ತು ನರೇನ್, ಇಂದ್ರನೀಲ್ ಮತ್ತ ಸುತಾಪಾ ಬಂದೋಪಾಧ್ಯಾಯ ಮತ್ತು ಫ್ರಾನ್ಸಿನ ಮಾಡ್ ಲ್ಯಾಲ್ಲೆಮೆಂಟ್ (ಮೀರಾ); ಯು.ಕೆ.ಯ ಡಾ. ಇಳಾ ಮತ್ತು ಸುನೀತಿ ಬಸು – ಇವರೆಲ್ಲರಿಗೂ ನಾವು ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇವೆ. ಜರ್ಮನಿಯ ಹೌಸ್‌ಕ್ಯುಲಮ್‌ರಿಗೆ ರುಪ್ಪಿಚೆಟರೋಥ್‌ಗಳಲ್ಲಿ ಡಾ. ಚೌಧರಿಯವರಿಗೆ, ಇಲ್ಸ್ ಬುಷ್(ಜರ್ಮನಿಯಲ್ಲಿ ಸ್ವಾಮಿ ರಂಗನಾಥನಂದರ ಆತಿಥೇಯರು)ರನ್ನು ಭೇಟಿ ಮಾಡಿಸಲು ಬಹಳ ದೂರದ ದಾರಿಯ ಪ್ರಯಾಣದಲ್ಲಿ ಕಾರು ಚಾಲಿಸಿದ ಶ್ರೀ ಭೋಗಿಲ್ ಅವರ ಪರಿಶ್ರಮ ಉಲ್ಲೇಖನಾರ್ಹವಾಗಿದೆ.

ಡಾ. ರೀಟಾ ಮೆಲೊಮ್, ಶ್ರೀ ಪ್ರೀತ್ ಬಸು, ಶಕುಂತಲಾ ಶರ್ಮಾ, ಪ್ರಾವಿಡೆನ್ಸ್‌ನ ಪ್ರಾಣ್ ಮತ್ತು ತ್ರಿವೇಣಿ, ಮತ್ತು ಯು.ಎಸ್.ಎ ಯ ವಿವಿಧ ವೇದಾಂತ ಕೇಂದ್ರಗಳ ಭಕ್ತರಿಗೆ ನಾವುವಂದನೆಗಳನ್ನು ಅರ್ಪಿಸುತ್ತೇವೆ. ಅವರ ಆದರಾತಿಥ್ಯಗಳನ್ನು ನಾವು ವಂದನೆಗಳೊಂದಿಗೆ ಸ್ಮರಿಸುತ್ತೇವೆ.

ತಮ್ಮ ಸಹಾಯ ಮತ್ತು ಆಶೀರ್ವಾದಗಳಿಂದ ನಮ್ಮನ್ನು ಹುರಿದುಂಬಿಸಿ ಉತ್ತೇಜಿಸಿದ ರಾಮಕೃಷ್ಣ ಮೂವ್‌ಮೆಂಟ್‌ನ ಸನ್ಯಾಸಿಗಳಿಗೆ, ಸನ್ಯಾಸಿನಿಯರಿಗೆ ನಮ್ಮ ಅತ್ಯಂತ ಆಳವಾದ ಕೃತಜ್ಞತೆಗಳನ್ನು ಅಭಿವ್ಯಕ್ತಿಸಲು ನಮಗೆ ಸಮರ್ಪಕವಾದ ಪದಗಳೇ ಸಿಗುವುದಿಲ್ಲ. ಅವರಲ್ಲಿ ಕೆಲವರನ್ನು ಮಾತ್ರ ಹೆಸರಿಸುತ್ತೇವೆ. ಹೈದರಾಬಾದಿನ ಸ್ವಾಮಿ ಶಿತಿಕಂಠಾನಂದ ಮತ್ತು ಸ್ವಾಮಿ ನಚಿಕೇತಾನಂದ; ದಿಲ್ಲಿಯ ಬ್ರಹ್ಮಚಾರಿ ಮುಕ್ತಚೈತನ್ಯ, ಭೂಪಾಲಿನ ರಾಮಕೃಷ್ಣ ಮಿಷನ್ನಿನ ಸ್ವಾಮಿ ಭವರೂಪಾನಂದ, ಹಾಲೆಂಡಿನ ಸ್ವಾಮಿ ಸರ್ವಾತ್ಮಾನಂದ, ಜರ್ಮನಿಯ ಸ್ವಾಮಿ ಬನೇಶಾನಂದ, ಫ್ರಾನ್ಸಿನ ಸ್ವಾಮಿ ವೀತಮೋಹಾನಂದ ಯು.ಕೆ.ಯ ಸ್ವಾಮಿ ದಯಾತ್ಮಾನಂದ, ಯು.ಎಸ್.ಎ.ಯ

ಸ್ವಾಮಿ ಸರ್ವಗತಾನಂದ, ಸ್ವಾಮಿ ತ್ಯಾಗಾನಂದ, ಸ್ವಾಮಿ ತಥಾಗತಾನಂದ್, ಮತ್ತು ದಿವಂಗತ ಮತ್ತು ಕಲ್ಲಿಕೋಟೆಯ ಸ್ವಾಮಿ ಆದೀಶ್ವರಾನಂದ, ಸ್ವಾಮಿ ತದಾನಂದ ಮತ್ತು ಸ್ವಾಮಿ  ಪ್ರಬುದ್ಧಾನಂದ; ಕೇರಳದ ತ್ರಿಶೂರ್, ಕೊಚಿನ್ ನ ಪೂಜ್ಯ ಸನ್ಯಾಸಿನಿಯರು, ತ್ರಿರುವನಂತಪುರದ ಪ್ರವ್ರಾಜಿಕೆ ಶ್ರೀಕಂಠಪ್ರಾಣಾ ಮತ್ತು ಕೋಲ್ಕತ್ತಾದ ಶ್ರೀ ಶಾರದಾ ರಾಮಕೃಷ್ಣ ಮಿಷನ್ನಿನ ಪ್ರವ್ರಾಜಿಕೆ ನಿರ್ಭೀತ ಪ್ರಾಣಾ ಅವರುಗಳು.

ಡಾ. ಎಸ್. ಚೌಧರಿಯವರ ಪ್ರಯಾಣದ ಖರ್ಚನ್ನು ವಹಿಸಿಕೊಂಡ ಡಾ॥ ಎನ್. ಚೌಧರಿಯವರಿಗೆ ನಾವು ಕೃತಜ್ಞರಾಗಿದ್ದೇವೆ.

ಸ್ವಾಮಿ ಸತ್ಯಲೋಕಾನಂದರ ಸಮರ್ಥ ಮಾರ್ಗದರ್ಶನದಲ್ಲಿ ಸಂಸ್ಥೆಯ ಸಂಕೇತವನ್ನು ವಿನ್ಯಾಸಗೊಳಿಸಿದ ಶ್ರೀಮಾನ್ ಸಂಜೋಯ್ ದತ್ತ ಅವರಿಗೆ ಈ ಸಂದರ್ಭದಲ್ಲಿ ನಾವು ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಸಿಂಗಪುರದ ಶ್ರೀ ಆಶೀಶ್ ದಾಂಟು ಅವರಿಗೆ ಈ ಸಂಕೇತವನ್ನು ಕಂಪ್ಯೂಟರ್ ವಿನ್ಯಾಸಗೊಳಿಸಿದುದಕ್ಕಾಗಿ ಮತ್ತು ಸಂಕೇತದಲ್ಲಿ, 'ವಜ್ರ'ದ ವಿಚಾರವನ್ನು ಬೆಂಬಲಿಸಿದುದಕ್ಕಾಗಿ ಡಾ. ರಾಯ್ ಚೌಧರಿಯವರಿಗೆ ಆಭಾರಿಯಾಗಿದ್ದೇವೆ.

ಹಾಗೇಯೇ, ಶ್ರೀ ಶ್ಯಾಮಲ ದತ್ತಾ, ಶ್ರೀಮತಿ ನಮಿತಾ ದತ್ತ, ಶ್ರೀ ಶ್ರೀರೂಪ ಮಿತ್ರ, ಶ್ರೀ ಸಾರ್ಥಕ ಘೋಷ್, ಶ್ರೀಮತಿ ಮೌಮಿತಾ ಘೋಷ್, ಶ್ರೀಮತಿ  ಪೌಲಮೀ ಗುಪ್ತ ಮತ್ತು ಮೀತಾ ಮಜೂಮ್‌ದಾರರಿಗೆ, ಮುದ್ರಿತ ಕ್ಯಾಸೆಟ್‌ಗಳಿಂದ ಭಾಷಣವನ್ನು ಲಿಪ್ಯಂತರ ಮಾಡಿ ಕೊಟ್ಟಿರುವುದಕ್ಕೂ ಮತ್ತು ಪಠ್ಯಗಳನ್ನು ಬೆರಳಚ್ಚು ಮಾಡಿಕೊಟ್ಟಿರುವುದಕ್ಕೂ ನಾವು ಕೃತಜ್ಞರಾಗಿದ್ದೇವೆ. ಕೆಲವು ಲೇಖನಗಳನ್ನು ನಮಗೆ ಅನುವಾದ ಮಾಡಿಕೊಟ್ಟಿರುವುದಕ್ಕಾಗಿ ಮೊನಾಲಿ ಚೌಧರಿ, ಸೋಮಾ ಕಾಂಜೀಲಾಲ್, ಶ್ರಬೋನಿ ಮಜೂಮ್‌ದಾರ್ ಮತ್ತು ಸೋಮಾದಾಸ್ ಅವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ. ರಾಮಕೃಷ್ಣ ಮಿಷನ್‌ನ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್‌ನ ಸಂಶೋಧನ ಇಲಾಖೆಯ ಶ್ರೀಮತಿ ಮೋನಿಕಾ ಸೇನ್‌ಗುಪ್ತಾ ಅವರಿಗೆ, ಪ್ರಾಮಾಣಿಕವಾಗಿ ತೊಡಗಿಸಿಕೊಂಡಿದ್ದಕ್ಕಾಗಿ ಬೆಂಗಾಲಿ ಮತ್ತು ಹಿಂದಿ ಆವೃತ್ತಿಗಳಿಂದ ಕೆಲವು ಸ್ಮೃತಿಚಿತ್ರಗಳನ್ನು ಮರುಸೃಷ್ಟಿಸಿ ಕೊಟ್ಟಿರುವುದಕ್ಕಾಗಿ ಅವರು ನಾವು ಅವರಿಗೆ ಹೆಚ್ಚು ಋಣಿಯಾಗಿದ್ದೇವೆ. ಹೈದರಬಾದಿನ ಪ್ರೊಫೆಸರ್ ಶಿವರಾಮಕೃಷ್ಣ ಮತ್ತು ಶ್ರೀಮತಿ ಸುಮಿತಾ ರಾಯ್ ಅವರಿಗೆ ಈ ಗ್ರಂಥದ ಸಂಪಾದನ ಕಾರ್ಯದಲ್ಲಿ ಸಹಾಯ ಮಾಡಿರುವುದಕ್ಕಾಗಿ ನಾವು ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸುತ್ತೇವೆ.

ಕಡೆಯದಾಗಿ, ಡಾ. ಗೌರ್‌ದಾಸ್ ಮತ್ತು ಶ್ರೀ ಎಸ್.ಪಿ. ಮುಖರ್ಜಿ ಮತ್ತು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ, ಈ ಧಾರ್ಮಿಕ, ಶ್ರದ್ಧಾಭಕ್ತಿಯ ಕಾರ್ಯವನ್ನು ನೆರವೇರಿಸಲು ನೆರವಾದ ಇತರ ಅನೇಕರಿಗೆ ನಮ್ಮ ಧನ್ಯವಾದಗಳು.

ಸ್ವಾಮಿ ರಂಗನಾಥಾನಂದ ಜನ್ಮ
ಶತಮಾನೋತ್ಸವ ಆಚರಣೆಯ ಸಮಿತಿ

# ಶ್ರೀಮತ್ ಸ್ವಾಮಿ ರಂಗನಾಥಾನಂದ ಪ್ರಣತಿಃ

**ಓಂ ಶಶಾಂಕಾಯುತಸಂಕಾಶಂ, ದೀರ್ಘಬಾಹುಸುಶೋಭಿತಮ್।**
**ಕಾಷಾಯಭೂಷಿತಂ ದೇವಂ ಕೃಪಾರ್ದ್ರಲೋಚನದ್ವಯಮ್॥ ॥೧॥**

**ನರಾಕಾರ ಪರಬ್ರಹ್ಮ ರಾಮಕೃಷ್ಣಮಧುವ್ರತಮ್।**
**ರಂಗನಾಥ ಗುರುಂ ಭೂಯೋ ನಮಾಮ್ಯಾತ್ಮವಿಮುಕ್ತಯೇ॥ ॥೨॥**

ಓಂ. ಅಸಂಖ ಚಂದ್ರರನ್ನು ಒಗ್ಗೂಡಿಸಿದಂತೆ ಪರಮೋಜ್ವಲವಾಗಿದ್ದು ದೀರ್ಘಬಾಹುಗಳಿಂದ ಸುಶೋಭಿತರಾಗಿ, ಕಾಷಾಯವಸ್ತ್ರ ಭೂಷಿತರಾಗಿ, ಕೃಪಾಪೂರಿತ ಕಣ್ಣುಗಳುಳ್ಳ, ನನ್ನ ಆಧ್ಯಾತ್ಮಿಕ ಗುರುಗಳಾದ ಸ್ವಾಮಿ ರಂಗನಾಥಾನಂದರಿಗೆ ನನ್ನ ಆತ್ಮವಿಮುಕ್ತಿಗಾಗಿ ಪುನಃ ಪುನಃ ನಮಸ್ಕರಿಸುತ್ತೇನೆ. ಸಂಪೂರ್ಣವಾಗಿ ವಿಕಸಿತಗೊಂಡ, ರಾಮಕೃಷ್ಣರೆಂಬ ಪದ್ಮದಲ್ಲಿ ಅಮೃತಪಾನ ಮಾಡುವ ದುಂಬಿಯಂತಿರುವ ಅವರು ನರನ ರೂಪದಲ್ಲಿರುವ ಪರಬ್ರಹ್ಮರೂ ಮತ್ತು ನನ್ನ ದೈವವೂ ಆಗಿದ್ದಾರೆ.

**–ಭಾಸ್ಕರಾನಂದ ಮುಖೋಪಾಧ್ಯಾಯ**

* * * *

# ಅನುಬಂಧ

## ೧೩೩. ಮರೆಯಲಾಗದ ಕ್ಷಣಗಳು

–ಸ್ವಾಮಿ ಸತ್ಯಪ್ರಭಾನಂದ*

ರಾಮಕೃಷ್ಣ ಸಂಘದ ಉಪಾಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ರಂಗನಾಥಾನಂದ ಮಹಾರಾಜ್ ಅವರೊಟ್ಟಿಗೆ ಇರುವಂತಹ ಅಮೂಲ್ಯವಾದ ಅವಕಾಶವು ೧೯೯೬ರಲ್ಲಿ ನನಗೆ ಲಭಿಸಿತು. ತರಬೇತಿಯು ಪೂರ್ಣಗೊಂಡು ನನ್ನ ಮುಂದಿನ ನೇಮಕಾತಿಗಾಗಿ ಕಾಯುತ್ತಿದ್ದೆ. ಮೇ ೧೯ರಂದು, ಮಹಾಕಾರ್ಯದರ್ಶಿ, ಪೂಜ್ಯ ಸ್ವಾಮಿ ಆತ್ಮಸ್ಥಾನಂದ ಮಹಾರಾಜ್ ಅವರು ಪೂಜ್ಯ ರಂಗನಾಥಾನಂದ ಮಹಾರಾಜ್ ಅವರ ಸೇವೆಗಾಗಿ ಹೈದರಾಬಾದಿಗೆ ನಾನು ಹೋಗಬೇಕೆಂದು ತಿಳಿಸಿದರು. ಅಂದು ಮಧ್ಯಾಹ್ನ ಪರಮಪೂಜ್ಯ ಸ್ವಾಮಿ ಭೂತೇಶಾನಂದ ಮಹಾರಾಜ್ ಅವರ ಆಶೀರ್ವಾದವನ್ನು ಪಡೆಯಲು ಅವರಲ್ಲಿಗೆ ಹೋದೆ. ಆಗ ಅವರು ಸಂಘದ ಅಧ್ಯಕ್ಷರಾಗಿದ್ದರು. ನನಗರಿವಿಲ್ಲದಂತೆಯೇ ನನ್ನ ಪರೀಕ್ಷೆಗೆ ಒಳಪಡಿಸಿ ನಂತರ ತಮ್ಮ ಮಧುರವಾದ ಬೆಂಗಾಲಿಯಲ್ಲಿ ಅವರು "ರಂಗನಾಥಾನಂದ ಅವರು ಬಹಳ ಒಳ್ಳೆಯ ಸಾಧುಗಳು. ಅವರ ಸೇವೆಯನ್ನು ಮನಃಪೂರ್ವಕವಾಗಿ ಮಾಡು" ಎಂದು ಹೇಳಿದರು. ಅದಕ್ಕೆ ನಾನು "ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ, ಮಹಾರಾಜ್" ಎಂದು ಹೇಳಿ ಅವರಿಗೆ ನಮಸ್ಕರಿಸಿ ಅಲ್ಲಿಂದ ಹೊರಬಂದೆ. ಮೇ ೨೦ರ ಪ್ರಾತಃಕಾಲ ರೈಲಿನಲ್ಲಿ ಹೊರಟು ೨೧ರ ರಾತ್ರಿ ಹೈದರಾಬಾದನ್ನು ತಲುಪಿದೆ.

೨೨ರ ಪ್ರಾತಃಕಾಲ, ಮಾನ್ಯ ಸುದರ್ಶನ್ ಮಹಾರಾಜ್ (ರಂಗನಾಥಾನಂದ ಮಹಾರಾಜ್ ಅವರ ಹಿರಿಯ ಸಹಾಯಕರಾಗಿದ್ದ ಸ್ವಾಮಿ ಅಸೀಮಾತ್ಮಾನಂದರು) ಪೂಜ್ಯ ಮಹಾರಾಜರನ್ನು ಕಾಣುವಂತೆ ನನಗೆ ತಿಳಿಸಿದರು. ಅದರಂತೆ, ನಾನು ಸ್ವಲ್ಪ ಭಯ ಹಾಗೂ ಆಳವಾದ ಪೂಜ್ಯಭಾವದಿಂದ ಮಹಾರಾಜ್ ಅವರಲ್ಲಿಗೆ ಹೋಗಿ ಅವರಿಗೆ ಸಾಷ್ಟಾಂಗನಮಸ್ಕಾರ ಮಾಡಿದೆ. ಪೂಜ್ಯ ಮಹಾರಾಜ್ ಅವರು ಹೃತ್ಪೂರ್ವಕವಾಗಿ ಸ್ವಾಗತಿಸಿ, ನನ್ನ ಬಗ್ಗೆ ವಿಚಾರಿಸಿದರು. ಅವರ ಪ್ರಶ್ನೆಗಳಿಗೆಲ್ಲಾ ನಾನು ಸೂಕ್ತವಾಗಿ ಉತ್ತರಿಸಿದೆ. ಇದ್ದಕ್ಕಿದ್ದ ಹಾಗೆ "ಮನೆಯಲ್ಲಿ ನಿನ್ನ ತಂದೆ ತಾಯಿಗಳನ್ನು ನೋಡಿಕೊಳ್ಳಲು ಯಾರಾದರೂ ಇದ್ದಾರೆಯೇ?" ಎಂದರು. "ನನ್ನ ಮೂರು ಜನ ಅಣ್ಣಂದಿರು ಇದ್ದಾರೆ, ಮಹಾರಾಜ್" ಎಂದೆ. ಮುಗುಳುನಗುತ್ತಾ ಮಹಾರಾಜ್ ಅವರು "ಹಾಗಾದರೆ ಯೋಚನೆಯಿಲ್ಲ" ಎಂದರು. ಮಹಾರಾಜ್ ಅವರು ಈ ಪ್ರಶ್ನೆಯನ್ನು ಕೇಳುವ ಅಗತ್ಯವಿರಲಿಲ್ಲ ಎಂದು ನನಗೆ ಅನಿಸಿದರೂ, ಎಲ್ಲರ ಬಗೆಗಿನ ಕಾಳಜಿಯು ಅವರಿಗೆ ಸಹಜವಾದದ್ದೆಂದು ದಿನಕಳೆದಂತೆ ನನ್ನ ಅನುಭವಕ್ಕೆ ಬಂದಿತು. ಅವರು ಮತ್ತೊಂದು ಪ್ರಶ್ನೆಯನ್ನು ಕೇಳಿದರು "ಎಲ್ಲಿಯವರೆಗೆ ಓದಿದ್ದೀಯೆ?" "ಹನ್ನೆರಡನೆಯ ತರಗತಿಯವರೆಗೆ" ಎಂದೆ. ಔಪಚಾರಿಕ ಓದಿನ ಬಗ್ಗೆ ಹೆಚ್ಚಿನ ಯೋಚನೆ ಮಾಡಬೇಡವೆಂದು ಹೇಳುವ ರೀತಿಯಲ್ಲಿ ಅವರು "ಅದೇನೂ ಅಂತಹ ಮುಖ್ಯವಾದ ವಿಷಯವಲ್ಲ. ನಾನೂ ಹೆಚ್ಚಿಗೆ ಓದಿಲ್ಲ" ಎಂದರು. ಮೊದಲ ಭೇಟಿಯಲ್ಲಿಯೇ ನನ್ನಲ್ಲಿದ್ದ ಭಯವು ಸಂಪೂರ್ಣವಾಗಿ ನಿವಾರಣೆಯಾಗಿ, ಅವರ ಬಗ್ಗೆ ಪೂಜ್ಯಭಾವ ಹಾಗೂ ಪ್ರೀತಿ ಹೆಚ್ಚಾದವು.

---

* ಕೊಯಮತ್ತೂರಿನ ರಾಮಕೃಷ್ಣ ವಿದ್ಯಾಲಯದಲ್ಲಿನ ಸಂನ್ಯಾಸಿ.

ಮತ್ತೆ ಅವರು "ನಾನು ಹತ್ತು ದಿನಗಳ ನಂತರ ಬೆಂಗಳೂರು ಮತ್ತು ಮೈಸೂರಿಗೆ ಹೋಗುತ್ತಿದ್ದೇನೆ. ನೀನೂ ನನ್ನ ಸಂಗಡ ಬರುತ್ತೀಯಾ ಅಥವಾ ವಿಶ್ರಾಂತಿ ತೆಗೆದುಕೊಳ್ಳಬಯಸುವೆಯಾ?" ಎಂದು ಕೇಳಿದರು. ನನಗೆ ಆಶ್ಚರ್ಯವಾಯಿತು. ಹಿಂದಿನ ರಾತ್ರಿ ನಾನು ಹೈದರಾಬಾದನ್ನು ತಲುಪಿದುದು ಬಹಳ ಹೊತ್ತಾಗಿದ್ದುದರಿಂದ, ಮಹಾರಾಜ್ ಅವರು ಪ್ರಯಾಣ ಮಾಡಲು, ಅದೂ ಹತ್ತು ದಿನಗಳ ನಂತರ, ನಾನು ದೈಹಿಕವಾಗಿ ಸಮರ್ಥನಾಗಿದ್ದೇನೆಯೇ ಎಂದು ತಿಳಿದುಕೊಳ್ಳಲು ಬಯಸಿದ್ದರು. ನನಗೆ ನಗು ಬಂದರೂ, ಅವರ ಕಾಳಜಿ ಮತ್ತು ಮಗುವಿನಂತಹ ಸ್ವಭಾವಗಳಿಗೆ ನಾನು ಮಾರುಹೋದೆ. "ಮಹಾರಾಜ್, ನಾನು ಇಲ್ಲಿಗೆ ಬಂದಿರುವ ಉದ್ದೇಶವೂ ಇದೇ. ನಾನು ಈಗಲೇ ಕೆಲಸಕ್ಕೆ ಸಿದ್ಧನಾಗಿದ್ದೇನೆ' ಎಂದೆ. "ಹಾಗಿದ್ದರೆ ಒಳ್ಳೆಯದು. ನಿನಗೂ ಒಂದು ಟಿಕೆಟ್ ತರಿಸಲು ಸುದರ್ಶನ್‌ಗೆ ಹೇಳು. ಈಗ ಹೋಗಿ ವಿಶ್ರಾಂತಿಯನ್ನು ತೆಗೆದುಕೊ. ನಾಳೆಯಿಂದ ಪತ್ರಗಳನ್ನು ನೋಡೋಣ" ಎಂದು ಹೇಳಿದ ಅವರ ಧ್ವನಿಯಲ್ಲಿ ಅಡಗಿದ್ದ ಉತ್ಸಾಹವನ್ನು ಗುರುತಿಸಬಹುದಾಗಿತ್ತು. ಅವರು ಹೇಳಿದ ರೀತಿಯಲ್ಲಿಯೇ ನನಗೆ ಟಿಕೆಟ್ ಬಂದಿತು. ಮಹಾರಾಜ್ ಹೇಳಿದಂತೆ ಭಕ್ತರ ಮತ್ತು ಇತರರ ಪತ್ರಗಳಿಗೆ ಉತ್ತರ ಬರೆಯುವ ಕೆಲಸದಲ್ಲಿ ನಾನು ತೊಡಗಿಕೊಂಡೆ. ಇದರ ಜೊತೆಗೆ, ಸುದರ್ಶನ್ ಮಹಾರಾಜ್ ಅವರಿಂದ, ರಂಗನಾಥಾನಂದ ಮಹಾರಾಜ್ ಅವರಿಗಾಗಿ ಅಡಿಗೆಯನ್ನು ಮಾಡುವುದನ್ನು ಕಲಿಯಲು ಆರಂಭಿಸಿದೆ.

ನನಗೆ ಸಿಕ್ಕಿದ ಟಿಕೆಟ್ಟಿನ ಪ್ರಕಾರ, ಮಹಾರಾಜ್ ಅವರು ಹೊರಡುವ ಹಿಂದಿನ ದಿನ ನಾನು ಹೊರಡಬೇಕಿತ್ತು. ರೈಲ್ವೆಸ್ಟೇಷನ್ನಿಗೆ ಹೋಗುವುದಕ್ಕೆ ಮುಂಚೆ ಮಹಾರಾಜ್ ಅವರ ಬಳಿಗೆ ಹೋಗಿ "ಬೆಂಗಳೂರಿಗೆ ಹೊರಡುತ್ತಿದ್ದೇನೆ" ಎಂದು ಹೇಳಿದೆ. "ಒಳ್ಳೆಯದು, ನಿನ್ನ ಟಿಕೆಟ್ ಬಂದಿತೇ?" ಎಂದು ಕೇಳಿದರು. "ಬಂದಿತು" ಎಂದೆ. "ನಿನ್ನ ಬಳಿ ಹಣವಿದೆಯೇ?" "ಇದೆ ಮಹಾರಾಜ್." "ಸರಿ, ಹಣವನ್ನು ಇಟ್ಟುಕೊಂಡಿರು, ಆದರೆ ಅನಗತ್ಯ ವೆಚ್ಚಮಾಡಬೇಡ. ಅದು ಸಾರ್ವಜನಿಕರ ಹಣ, ಅದಕ್ಕೆ ನಾವು ಜವಾಬ್ದಾರರು. ಹೋಗಿ ಬಾ" ಎಂದರು. ಇದು ನಾನು ಅವರಿಂದ ಕಲಿತ ಮೊದಲ ಪಾಠ. ಅವರ ಸರಳ ಹಾಗೂ ಪ್ರಾಮಾಣಿಕ ದೃಷ್ಟಿಯ ಅರಿವು ನನಗಾಯಿತು. ಅವರ ವೈಯಕ್ತಿಕ ಬಳಕೆಗಾಗಿಯೂ ಹಣದ, ವಸ್ತುಗಳ ಸುರಿಮಳೆಯೇ ಆಗುತ್ತಿತ್ತು. ಅದರೆ ಅವೆಲ್ಲವನ್ನೂ, ತಮಗೆ ಅತ್ಯಂತ ಪ್ರಿಯವಾಗಿದ್ದ, ಪೂಜ್ಯವಾಗಿದ್ದ ಸಂಘಕ್ಕೆ ಕೊಟ್ಟುಬಿಡುತ್ತಿದ್ದರು. ಎಂತಹ ಪ್ರಾಮಾಣಿಕತೆ! ಹಿಮಾಲಯದಂತಹ ವ್ಯಕ್ತಿಯ ಮುಂದೆ ನಿಂತ ಅನುಭವ ನನ್ನದಾಗಿತ್ತು.

ಯಾವುದನ್ನೇ ಆಗಲಿ, ಪೋಲು ಮಾಡುವುದನ್ನು ಅವರು ತೀವ್ರವಾಗಿ ವಿರೋಧಿಸುತ್ತಿದ್ದರು. ಅವರನ್ನು ಭೇಟಿ ಮಾಡಲು ಬರುತ್ತಿದ್ದವರು, ಸಾಮಾನ್ಯವಾಗಿ, ಮಹಾರಾಜ್ ಅವರ ಕೋಣೆಯ ಮುಂದೆ ಇದ್ದ ಸಂದರ್ಶಕರ ಕೋಣೆಯಲ್ಲಿ ಕುಳಿತುಕೊಂಡಿರಬೇಕಿತ್ತು. ಬಂದವರು, ಹಾಗೆ ಅಲ್ಲಿ ಕುಳಿತುಕೊಂಡಿರುವಾಗ ಅಲ್ಲಿದ್ದ ಫ್ಯಾನ್ ಮತ್ತು ದೀಪಗಳ ಸ್ವಿಚ್ಚನ್ನು ಹಾಕುತ್ತಿದ್ದರು. ಕೆಲವರು ತಾವು ಹೋಗುವಾಗ ಸ್ವಿಚ್ಚುಗಳನ್ನು ಆರಿಸುತ್ತಿದ್ದರೆ, ಕೆಲವರು ಮರೆತು ಹಾಗೆಯೇ ಹೋಗುತ್ತಿದ್ದರು. ಮಹಾರಾಜ್ ಅವರೇ ಬಂದು ಸಂದರ್ಶಕರ ಕೋಣೆಯಲ್ಲಿನ ದೀಪಗಳು ಮತ್ತು ಫ್ಯಾನ್‌ಗಳ ಸ್ವಿಚ್ಚುಗಳನ್ನು ಆರಿಸಲಾಗಿದೆಯೇ ಎಂದು ತಾವೇ ಪರೀಕ್ಷಿಸುತ್ತಿದ್ದುದನ್ನು ನಾನೇ ಹಲವಾರು ಬಾರಿ ನೋಡಿದ್ದೇನೆ. ಔಷಧಿಗಳನ್ನು ಉಪಯೋಗಿಸಿದ ನಂತರ ಅವುಗಳ ಶೀಷೆ/ಡಬ್ಬಿಗಳನ್ನು ಹೊರಕ್ಕೆ ಬಿಸಾಡುವಂತಿರಲಿಲ್ಲ. ಕೆಲವು ಬಾರಿ, ಅವುಗಳನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂದು ಅವರು ಸೂಚಿಸುತ್ತಿದ್ದರು. ಹಾಗೆ ನಾವು ಅವುಗಳನ್ನು ಉಪಯೋಗಿಸಿದರೆ, ಅವರಿಗೆ ಸಂತೋಷವಾಗುತ್ತಿತ್ತು. ಒಂದು ಬದಿಯಲ್ಲಿ ಬರೆದಿದ್ದ ಭಕ್ತರ ಪತ್ರಗಳನ್ನು, ಸಭೆಯ ನಡಾವಳಿಯನ್ನು ನನಗೆ ನೀಡಿ, 'ನೀನು ಇವುಗಳ ಇನ್ನೊಂದು ಬದಿಯಲ್ಲಿ ನಿನ್ನ ನೋಟ್ಸ್‌ಗಳನ್ನು ಬರೆದುಕೋ' ಎನ್ನುತ್ತಿದ್ದರು. ಒಮ್ಮೆ, ಹೈದರಾಬಾದಿನಲ್ಲಿ, ಭಕ್ತೆಯೊಬ್ಬರು ಮಹಾರಾಜ್ ಅವರ ಹುಟ್ಟುಹಬ್ಬದಂದು ಸುಂದರವಾದ ಕೇಕೊಂದನ್ನು ತಂದುಕೊಟ್ಟರು.

ಮಹಾರಾಜ್ ಅವರು ಆಕೆಯನ್ನು ಇದರ ಬೆಲೆ ಎಷ್ಟು ಎಂದು ಕೇಳಿದರು. ಆಕೆ ಅದರ ಬೆಲೆಯನ್ನು ಕೇಳಿದರು. ಅದನ್ನು ಕೇಳುತ್ತಲೇ ಮಹಾರಾಜ್ ಅವರು ಉದ್ಗರಿಸಿದರು, "ಅಷ್ಟೊಂದು! ತಿನ್ನುವ ಇಂತಹ ಪದಾರ್ಥಗಳ ಮೇಲೇಕೆ ಹಣವನ್ನು ದುರ್ವ್ಯಯ ಮಾಡುತ್ತೀರಿ? ಬದಲಿಗೆ ಅದೇ ಹಣವನ್ನು ನನಗೆ ಕೊಡಿ, ನಾನು ಅದನ್ನು ಒಳ್ಳೆಯ ಉದ್ದೇಶಗಳಿಗೆ ಬಳಸಿಕೊಳ್ಳುತ್ತೇನೆ." ಅವರ ಮಾತಿನ ಅರ್ಥ ಸ್ಪಷ್ಟವಾಗಿದ್ದಿತು.

ಅವರು ಹೈದರಾಬಾದಿನಲ್ಲಿದ್ದಾಗ ೧೯೯೬ರಲ್ಲಿ ಒಮ್ಮೆ ನಾನು ಕೆಲವು ಫೈಲುಗಳನ್ನು ಕೊಳ್ಳಬೇಕೆಂದು ಅವರ ಬಳಿಗೆ ಹೋದೆ. "ಎಷ್ಟು ಫೈಲುಗಳನ್ನು ಕೊಳ್ಳ ಬೇಕೆಂದಿದ್ದೀಯೆ?" ಎಂದು ಕೇಳಿದರು. "ನಾಲ್ಕು ಅಥವಾ ಐದು ಫೈಲುಗಳನ್ನು ಕೊಂಡರೆ ಮೂರು, ನಾಲ್ಕು ವರ್ಷ ಬರುತ್ತದೆ" ಎಂದೆ. ತಕ್ಷಣ ಮಧ್ಯೆ ಪ್ರವೇಶಿಸಿ ಹೇಳಿದರು "ನಾನು ಇನ್ನೂ ಒಂದು ವರ್ಷ ಬದುಕಿರಬಹುದು, ನೀನು ಮೂರು, ನಾಲ್ಕು ವರ್ಷಗಳ ಬಗ್ಗೆ ಮಾತನಾಡುತ್ತಿರುವೆ" ಎಂದರು. ಸ್ವಲ್ಪ ಹೊತ್ತಿನ ಮೌನದನಂತರ ಮತ್ತೆ ಹೇಳಿದರು "ಸರಿ, ತೆಗೆದುಕೊಂಡು ಬಾ." ಅವರ ಮಾತಿನ ಅಂತರಾರ್ಥವು ನನಗೆ ಅರ್ಥವಾಯಿತು. ನಾನು ಏನೂ ಹೇಳದೆ, ಫೈಲುಗಳನ್ನು ಖರೀದಿಸಿ ತಂದೆ. ಅವರು ಅಧ್ಯಕ್ಷರಾದ ಮೇಲೆ, ಬೇಲೂರು ಮಠದಲ್ಲಿಯೇ ಇರತೊಡಗಿದರು. ಒಂದು ದಿನ, ಬಹುಶಃ ೨೦೦೨ರಲ್ಲಿರಬೇಕು, ನನ್ನೊಡನೆ ಯಾವುದೋ ವಿಷಯದ ಬಗ್ಗೆ ಮಾತನಾಡುತ್ತಿದ್ದಾಗ "ನಾನು ಇನ್ನೊಂದು ವರ್ಷ ಬದುಕಿರಬಹುದೆಂದು ನನಗೆ ತೋರುತ್ತದೆ" ಎಂದರು. ನಗುತ್ತಾ ನಾನು "ಮಹಾರಾಜ್, ೧೯೯೬ರಲ್ಲಿಯೂ ನೀವು ನನಗೆ ಇದೇ ಮಾತನ್ನು ಹೇಳಿದ್ದಿರಿ. ಈಗ, ಅದು ಕಳೆದು ಆರು ವರ್ಷಗಳಾಗಿವೆ. ನಿಮ್ಮ ಆರೋಗ್ಯದಲ್ಲಿ ಅಂತಹ ಸಮಸ್ಯೆಯೇನೂ ಇಲ್ಲ" ಎಂದೆ. "ಹೌದೆ? ನಾನು ನಿನ್ನೊಂದಿಗೆ ಹಾಗೆ ಹೇಳಿದ್ದೆನೆ? ಇರಬಹುದು, ನನಗೆ ನೆನಪಿಲ್ಲ" ಎಂದು ಮಗುವಿನಂತೆ ಸರಳವಾಗಿ ನಕ್ಕರು. ನಾನು ಈ ಪ್ರಸಂಗವನ್ನು ಇತರ ಸಾಧುಗಳಿಗೆ ಹೇಳಿದಾಗ ಅವರೆಲ್ಲರೂ ನಕ್ಕು ಸಂತೋಷಪಟ್ಟರು.

ಅವರು ಶಾಖಾ ಕೇಂದ್ರಗಳಿಗೆ ಭೇಟಿಯಿತ್ತಾಗಲೂ, ಅಲ್ಲಿನ ವೆಚ್ಚಗಳ ಬಗ್ಗೆ ಬಹಳ ಗಮನಕೊಡುತ್ತಿದ್ದರು. ಯಾವುದಾದರೂ ಕೇಂದ್ರ ಚಿಕ್ಕದಾಗಿದ್ದು, ಅದರ ಆರ್ಥಿಕ ಪರಿಸ್ತಿತಿ ತೃಪ್ತಿಕರವಾಗಿಲ್ಲದಿದ್ದರೆ, ಅವರು ತಮಗೆ ಅಲ್ಲಿನ ಭಕ್ತರು ನೀಡುತ್ತಿದ್ದ ಎಲ್ಲ ಹಣವನ್ನೂ ಆ ಕೇಂದ್ರಕ್ಕೇ ಕೊಟ್ಟುಬಿಡುತ್ತಿದ್ದರು. ಇದು ಆಗೊಮ್ಮೆ, ಈಗೊಮ್ಮೆ ನಡೆಯುತ್ತಿದ್ದ ಪ್ರಸಂಗವಲ್ಲ. ಇಂತಹ ಹಲವಾರು ಪ್ರಸಂಗಗಳನ್ನು ನಾನೇ ನೋಡಿದ್ದೇನೆ. ೧೯೯೭ರಲ್ಲಿ ನಮ್ಮ ಕೊಲಂಬೋ ಕೇಂದ್ರದವರು ಅಲ್ಲಿಗೆ ಮಹಾರಾಜ್ ಅವರ ಭೇಟಿಯ ಪ್ರಸ್ತಾಪವನ್ನು ಮುಂದಿಟ್ಟಾಗ, ತಮ್ಮೊಡನೆ ಕೇವಲ ಒಬ್ಬ ಸಹಾಯಕ ಮಾತ್ರ ಇರತಕ್ಕದ್ದು ಎಂದು ಮಹಾರಾಜ್ ಅವರು ಪಟ್ಟುಹಿಡಿದಿದ್ದರು. ಕೊಲಂಬೋ ಕೇಂದ್ರದವರು ತಮಗಾಗಿ ಅನಗತ್ಯವಾಗಿ ಹೆಚ್ಚು ವೆಚ್ಚಮಾಡಬಾರದೆಂಬುದು ಅವರ ವಾದ. ಆಗ ಮಹಾಕಾರ್ಯದರ್ಶಿಯಾಗಿದ್ದ ಪೂಜ್ಯ ಆತ್ಮಸ್ಥಾನಂದ ಮಹಾರಾಜ್ ಅವರ ಮಧ್ಯಪ್ರವೇಶದಿಂದಾಗಿ ಕಡೆಗೆ ತಮ್ಮೊಡನೆ ಇಬ್ಬರು ಸಹಾಯಕರನ್ನು ಕರೆದುಕೊಂಡು ಹೋಗಲು ಮಹಾರಾಜ್ ಅವರು ಒಪ್ಪಿದರು.

ಅವರು ಯಾವುದಕ್ಕೂ ಹಂಬಲಿಸುತ್ತಿರಲಿಲ್ಲ. ಅವರನ್ನು ಚೆನ್ನಾಗಿ ಬಲ್ಲ ಎಲ್ಲರಿಗೂ ಇದು ಗೊತ್ತಿತ್ತು. ತಮಗೆ ಬಂದುದೆಲ್ಲವನ್ನು ಇತರ ಸಾಧುಗಳಿಗೆ, ಕೇಂದ್ರಗಳಿಗೆ ಕೊಟ್ಟುಬಿಡುತ್ತಿದ್ದರು. ಹಾಗೆ ತಮಗೆ ಬಂದುದು ತಮಗೆ ಮಾತ್ರ ಸೇರಿದುದು ಎಂದು ಅವರು ಯಾವಾಗಲೂ ಯೋಚಿಸುತ್ತಿರಲಿಲ್ಲ. ಒಮ್ಮೆ ಅಮೇರಿಕಾ ದಿಂದ ಬಂದಿದ್ದ ಭಕ್ತೆಯೊಬ್ಬರು ಎರಡು ಅಥವಾ ಮೂರು ಚೀಲಗಳನ್ನು ತಂದು ಮಹಾರಾಜ್ ಅವರ ಉಪಯೋಗಕ್ಕೆಂದು ಕೊಟ್ಟರು. ಅವು ಒಳ್ಳೆಯ ಗುಣಮಟ್ಟದ ವಾಗಿದ್ದು, ಆಕರ್ಷಕವೂ ಆಗಿದ್ದವು. ಆದ್ದರಿಂದ ಇವು ಮಹಾರಾಜ್ ಅವರು ವಿಮಾನ ಪ್ರಯಾಣ ಮಾಡುವಾಗ ಬಳಸಬಹುದು ಎಂದು ಅವನ್ನು ನಾವು ಪಕ್ಕಕ್ಕೆ ತೆಗೆದಿರಿಸಿದ್ದೆವು. ಆ ಮಹಿಳೆ ಹೊರಟುಹೋದ ಸ್ವಲ್ಪ ಸಮಯದ ನಂತರ ಮಹಾರಾಜ್ ಅವರು ಆ ಚೀಲಗಳು ಎಲ್ಲಿ ಎಂದು ಕೇಳಿದರು. ಅವುಗಳನ್ನು ಅವರ ಮುಂದಕ್ಕೆ ತರಲಾಯಿತು. "ಅವುಗಳನ್ನು ಅಲ್ಲಿಡಿ" ಎಂದು ತಮ್ಮ ಕೋಣೆಯ

ಮೂಲೆಯ ಕಡೆ ಬೆರಳು ತೋರಿಸಿದರು. ಮುಂದೆ ಏನಾಗುತ್ತದೆ ಎಂಬುದು ನನಗೆ ಗೊತ್ತಿತ್ತು. "ಮಹಾರಾಜ್, ಅವು ನಿಮಗೆ ಉಪಯೋಗಕ್ಕೆ ಬರುತ್ತದೆ. ಅವುಗಳನ್ನು ನೀವೇ ಇಟ್ಟುಕೊಳ್ಳಿ" ಎಂದು ಬಲವಂತ ಮಾಡಿದೆವು. "ಅವುಗಳನ್ನು ಅಲ್ಲಿಡಿ, ಅವು ಯಾರಿಗೆ ಸೇರಿದವು ಎಂಬುದನ್ನು ನೋಡೋಣ' ಎಂದು ಸೌಮ್ಯವಾಗಿ ನುಡಿದರು. ನಾವು ಮರುಮಾತಿಲ್ಲದೇ, ಆ ಚೀಲಗಳ ಬಗ್ಗೆ ಯೋಚಿಸುತ್ತಾ ಹೊರನಡೆದೆವು. ಅಂದು ಸಂಜೆ, ಸೂಕ್ತ ಸಮಯವನ್ನು ನೋಡಿ, ನಾನು ಈ ಚೀಲಗಳನ್ನು ಮಹಾರಾಜ್ ಅವರೇ ಇಟ್ಟುಕೊಳ್ಳಬೇಕೆಂದೂ ಅವರು ಉಪಯೋಗಿಸುತ್ತಿರುವ ಚೀಲವು ಬಹಳ ಹಳೆಯದೆಂದೂ ಹೇಳಿದೆ. ಅದಕ್ಕೆ, ಮಹಾರಾಜ್ ಅವರು, ತಮ್ಮ ಚೀಲದತ್ತ ಕೈ ತೋರಿಸುತ್ತಾ, ನಿಧಾನವಾಗಿ, ಆದರೆ ನಿರ್ಧಾರಪೂರ್ವಕವಾಗಿ "ಅದು ನನ್ನೊಡನೆ ಎಷ್ಟೊಂದು ವರ್ಷಗಳಿಂದ ಪ್ರಯಾಣಮಾಡುತ್ತಿದೆ. ಅದನ್ನು ನಾನು ಹೇಗೆ ನಿರ್ಲಕ್ಷಿಸಲಿ? ಅದು ಇನ್ನೂ ಸುಸ್ಥಿತಿಯಲ್ಲಿಯೇ ಇದೆ, ಇನ್ನೂ ಹಲವಾರು ವರ್ಷ ಅದನ್ನು ಉಪಯೋಗಿಸಬಹುದು. ಅದೇನು ಅನ್ನ, ನೀರನ್ನು ಕೇಳುವುದಿಲ್ಲ. ಅದೇ ಇರಲಿ ಬಿಡು" ಎಂದರು ಅದಾದ ಒಂದೆರಡು ದಿನಗಳಲ್ಲಿ ಆ ಚೀಲಗಳನ್ನು ಯಾರಿಗೋ ಕೊಟ್ಟರು ಎಂಬುದನ್ನು ಹೇಳುವ ಅಗತ್ಯವಿಲ್ಲ.

ಅವರು ನನಗೆ ಅನೇಕ ಸಣ್ಣ ಸಣ್ಣ ವಿಷಯಗಳನ್ನು ಕಲಿಸುತ್ತಿದ್ದರು. ಅವರು ಕಲಿಸುತ್ತಿದ್ದ ರೀತಿ ಒಬ್ಬ ಸ್ನೇಹಿತನದಾಗಿರುತ್ತಿತ್ತು. ಅವರು ನಮ್ಮ ತಪ್ಪುಗಳನ್ನು ತೋರಿಸು ತ್ತಿದ್ದರಷ್ಟೆ ಹೊರತು, ಯಾವುದನ್ನೂ ಅಧಿಕಾರಪೂರ್ವಕವಾಗಿ ಹೇಳುತ್ತಿರಲಿಲ್ಲ. ಹಾಗೆ ಅವರು ತಿದ್ದುತ್ತಿದ್ದಾಗ, ಯಾರ ಮನಸ್ಸಿಗೂ ನೋವಾಗುತ್ತಿರಲಿಲ್ಲ. ಬೇರೆಯವರ ಮನಸ್ಸಿಗೆ ನೋವನ್ನುಂಟುಮಾಡುವುದು ಅವರ ಸ್ವಭಾವದಲ್ಲಿ ಇರಲೇ ಇಲ್ಲ. ಕೋಲ್ಕತ್ತಾ ದಲ್ಲಿ ಒಮ್ಮೆ ಅವರಿಗೆ ಪ್ರಣಾಮ ಸಲ್ಲಿಸಲು ಬಂದ ಮಹಿಳೆಯೊಬ್ಬರು ಪ್ರಣಾಮ ಸಲ್ಲಿಸಿದ ಮೇಲೂ ಅಲ್ಲಿಂದ ಕದಲಲೇ ಇಲ್ಲ. ಅದರಿಂದ ಅಲ್ಲಿ ನಿಂತಿದ್ದ ಇತರರಿಗೆ ಮುಂದೆ ಬರಲು ತೊಂದರೆಯಾಗುತ್ತಿತ್ತು. ನಾನು ಆಕೆಗೆ ಮುಂದೆ ಹೋಗಲು ಹೇಳಿದೆ. ಮೂರು ಬಾರಿ ಹಾಗೆ ಹೇಳಿದರೂ ಆಕೆ ಕದಲಲಿಲ್ಲ. ಆಗ ನಾನು ಇತರರಿಗೆ ಸ್ಥಳಾವಕಾಶವನ್ನು ಮಾಡಿಕೊಡಬೇಕೆಂದು ಸ್ವಲ್ಪ ಒರಟಾಗಿಯೇ ಆಕೆಗೆ ಹೇಳಿದೆ. ಮಹಾರಾಜ್ ಅವರು ಏನನ್ನೂ ಹೇಳದೆ ಒಮ್ಮೆ ನನ್ನತ್ತ ದೃಷ್ಟಿ ಹಾಯಿಸಿದರು. ನಾನು ಅರ್ಥಮಾಡಿಕೊಂಡು ಸುಮ್ಮನಾದೆ. ತಮ್ಮ ಕೋಣೆಗೆ ಬಂದ ನಂತರ ಹೇಳಿದರು "ನೋಡು, ಜನರು ನಮ್ಮ ಬಳಿಗೆ ಅದೆಷ್ಟು ಪ್ರೀತಿ ಗೌರವಗಳೊಡನೆ ಬರುತ್ತಾರೆ. ನಾವು ಪೊಲೀಸರಂತೆ ವರ್ತಿಸಬಾರದು." ಇದು ನನಗೆ ಹೊಸದಾಗಿತ್ತು.

ಬಹಳಷ್ಟು ಪ್ರಸಂಗಗಳಲ್ಲಿ ಭಕ್ತರ ಬಗೆಗಿನ ಅವರಲ್ಲಿದ್ದ ಪ್ರೀತಿ ಮತ್ತು ಗೌರವ ಗಳನ್ನು ಕಾಣಬಹುದು. ೧೯೬೭ರಲ್ಲಿ ಒಮ್ಮೆ ಹೈದರಾಬಾದಿನಲ್ಲಿ ಅವರನ್ನು ಕಾಣುವುದ ಕ್ಕೆಂದು ಕೆಲವು ಭಕ್ತರು ಬಂದರು. ನನಗೆ ಈ ಕೆಲಸ ಹೊಸದಾಗಿದ್ದುದರಿಂದ, ಹಾಗೆ ಬಂದ ಭಕ್ತರನ್ನು ನೋಡಲು ನಾನು ಹಿಂದೆಮುಂದೆ ನೋಡುತ್ತಿದ್ದೆ. ಅಲ್ಲದೆ, ಸುದರ್ಶನ್ ಮಹಾರಾಜ್ ಅವರು ಕೂಡ ಆ ಸಮಯದಲ್ಲಿ ಇರಲಿಲ್ಲ. ಬಂದವರು ಕೆಲಕಾಲ ಕಾಯುತ್ತಿದ್ದು, ಕಡೆಗೆ ತಾವೇ ಒಳಗೆ ಹೋಗಿ ಮಹಾರಾಜ್ ಅವರನ್ನು ನೋಡಿ ವಿಷಯವನ್ನೆಲ್ಲಾ ತಿಳಿಸಿದರು. ಅನಂತರ ನಾನು ಮಹಾರಾಜ್ ಅವರನ್ನು ಕಾಣಲು ಅವರ ಕೋಣೆಗೆ ಹೋದಾಗ ಅವರು "ನೋಡು, ಜನರು ಇಲ್ಲಿ ಬರುವುದು ನಿನ್ನನ್ನಾಗಲೀ ಅಥವಾ ನನ್ನನ್ನಾಗಲೀ ನೋಡಲು ಅಲ್ಲ, ಅವರು ಬರುವುದು ಪರಮಹಂಸರನ್ನು ನೋಡುವುದಕ್ಕೆ. ಆದ್ದರಿಂದ, ನಾವು ಅವರನ್ನು ಸರಿಯಾಗಿ ಬರಮಾಡಿಕೊಳ್ಳಬೇಕು ಮತ್ತು ಗೌರವಿಸಬೇಕು" ಎಂದರು. ಈಗ ನನಗೆ ಮತ್ತೊಂದು ಹೊಸ ಪಾಠ. ಹೀಗೆಯೇ, ಅವರು ತಮಗೆ ಬರುತ್ತಿದ್ದ ಸಣ್ಣಪುಟ್ಟ ವಿಷಯಗಳನ್ನೊಳಗೊಂಡ ಪತ್ರಗಳಿಗೂ ಪ್ರತ್ಯುತ್ತರ ಬರೆಯುತ್ತಿದ್ದರು. ಕೆಲವು ವೇಳೆ, ಉತ್ತರಿಸಬೇಕಾದ ಪತ್ರಗಳ ಸಂಖ್ಯೆ ದೊಡ್ಡದಿದ್ದರೆ ನಾನು ಹೇಳುತ್ತಿದ್ದೆ– "ಮಹಾರಾಜ್, ಈ ಪತ್ರಕ್ಕೆ ಉತ್ತರಿಸಬೇಕಾದ ಅಗತ್ಯವಿಲ್ಲವೆಂದು ನನಗೆ ತೋರುತ್ತದೆ." "ಅದು ಸರಿಯಲ್ಲ, ನಮಗೆ ಅವರು ಪತ್ರ ಬರೆದಮೇಲೆ ಅದಕ್ಕೆ ಉತ್ತರ ಬರುತ್ತದೆಯೆಂದು

ಅವರು ನಿರೀಕ್ಷಿಸಿರುತ್ತಾರೆ ಮತ್ತು ಹಾಗೆ ನಮ್ಮಿಂದ ಉತ್ತರ ಬಂದರೆ ಅವರಿಗೆ ಬಹಳ ಸಂತೋಷವಾಗುತ್ತದೆ. (ಬೆರಳುಗಳಲ್ಲಿ, ಪೋಸ್ಟ್‌ಕಾರ್ಡ್‌ನ ಅಗಲವನ್ನು ಸೂಚಿಸುತ್ತಾ) ಒಂದು ಸಣ್ಣ ಪೋಸ್ಟ್ ಕಾರ್ಡ್ ಬರೆದು ಹಾಕು" ಎಂದು ಅವರು ಹೇಳುತ್ತಿದ್ದರು.

ತನ್ನ ಸಹಾಯಕರ ಬಗೆಗೆ ಅವರಿಗಿದ್ದ ಕಾಳಜಿಯೂ ಎದ್ದು ಕಾಣುತ್ತಿತ್ತು. ನಾವು ಅಸ್ವಸ್ಥರಾದರೆ, ಅವರೇ ನಮ್ಮ ಕೋಣೆಗಳಿಗೆ ಬರುತ್ತಿದ್ದರು. ನಾವು ಅವರೊಡನೆ ಬೇರೆಯ ಕೇಂದ್ರಗಳಿಗೆ ಹೋದಾಗ, ನಮ್ಮ ಕೋಣೆಗಳ ಹಾಗೂ ಇತರ ವ್ಯವಸ್ಥೆಯ ಬಗ್ಗೆ ವಿಚಾರಿಸುತ್ತಿದ್ದರು. ಒಮ್ಮೆ ಮಹಾರಾಜ್ ಅವರು ಹೈದರಾಬಾದಿನಿಂದ ಚೆನ್ನೈಗೆ ಹೋಗುವುದಿತ್ತು. ಮಾಮೂಲಿನಂತೆ, ನಾನು ಹಿಂದಿನ ದಿನವೇ ರೈಲಿನಲ್ಲಿ ಚೆನ್ನೈಗೆ ಹೊರಟೆ. ನಾನು ಮಾರನೆಯ ದಿನ ಚೆನ್ನೈಯನ್ನು ಬೆಳಗ್ಗೆ ೧೦ ಗಂಟೆಗೆ ತಲುಪ ಬೇಕಿತ್ತು. ಆದರೆ, ಮಾರ್ಗಮಧ್ಯದಲ್ಲಿ ತಾಂತ್ರಿಕ ದೋಷದಿಂದಾಗಿ, ನಮ್ಮ ರೈಲು ವಿಳಂಬವಾಗಿ ೧೧ ಗಂಟೆಗೆ ತಲುಪಿತು. ನನಗೆ ಮಹಾರಾಜ್ ಅವರ ಆಹಾರವನ್ನು ತಯಾರು ಮಾಡುವ ವಿಷಯದಲ್ಲಿಯೇ ಚಿಂತಿತನಾಗಿದ್ದೆ. ನಾನು ಮಠವನ್ನು ತಲುಪಿದ ಕೂಡಲೇ ಅಡುಗೆ ಮಾಡಲು ಅಡುಗೆಯ ಮನೆಗೆ ಓಡಿದೆ. ಆದರೆ ಪುಣ್ಯವಶಾತ್, ಸುದರ್ಶನ್ ಮಹಾರಾಜ್ ಅವರು ಆ ಕೆಲಸವನ್ನು ಮಾಡುತ್ತಿದ್ದರು. ನನ್ನನ್ನು ನೋಡಿದ ತಕ್ಷಣ, ಅವರು "ಮಹಾರಾಜ್ ಅವರನ್ನು ನೋಡಿದೆಯಾ? ಮೊದಲು ಹೋಗು, ಅವರು ನಿನ್ನ ಬಗ್ಗೆ ವಿಚಾರಿಸುತ್ತಿದ್ದರು" ಎಂದರು. ನಾನು ಮಹಾರಾಜ್ ಅವರ ಬಳಿಗೆ ಹೋಗಿ ಅವರಿಗೆ ಪ್ರಣಾಮವನ್ನು ಮಾಡಿ ನಿಂತೆ. ಅವರು ನಗುತ್ತಾ "ಏನೋ ಮಾಡಿ, ಕಡೆಗೂ ಬಂದೆಯಲ್ಲಾ" ಎಂದರು. ಅವರಿಗೆ ನಡೆದುದ್ದನ್ನೆಲ್ಲಾ ತಿಳಿಸಿ ಹೊರಬಂದೆ. ನನ್ನ ಬಗ್ಗೆ ಅವರು ಅಷ್ಟು ವಿಚಾರಿಸುತ್ತಿದ್ದರು. ನಾವು ಎದುರಿಗಿಲ್ಲದಿದ್ದರೆ ನಮ್ಮ ಬಗ್ಗೆ ಅವರಿಗೆ ಪ್ರೀತಿ, ಕಾಳಜಿ ಹೊರಹೊಮ್ಮುತ್ತಿತ್ತು. ಈಗ ಅವರ ಅನುಪಸ್ಥಿತಿಯಲ್ಲಿ ನಮಗೆ ಅವರ ಹಂಬಲ ನಮಗೆ ಆಗುತ್ತಿರುವಂತೆ.

ಇಂತಹುದೇ ಇನ್ನೊಂದು ಪ್ರಕರಣ. ಅದು ನಡೆದದ್ದು ೧೯೯೮ರ ಏಪ್ರಿಲ್‌ನಲ್ಲಿ. ಮಹಾರಾಜ್ ಅವರು ಕುಂಭಮೇಳದ ಸಂದರ್ಭದಲ್ಲಿ ಕಂಖಾಲ್ ಸೇವಾಶ್ರಮಕ್ಕೆ ಹೋಗಿದ್ದರು. ಒಂದು ಬೆಳಗ್ಗೆ, ಸುದರ್ಶನ್ ಮಹಾರಾಜ್ ಅವರು ಇನ್ನೊಬ್ಬ ಸಾಧುವಿನ ಜೊತೆಯಲ್ಲಿ ಗಂಗೆಗೆ ಮೀಯಲೆಂದು ಹೋಗಿದ್ದರು. ಆಗ ೧೦.೩೦ರ ಸಮಯದಲ್ಲಿ ನಾನು ಮಹಾರಾಜ್ ಅವರ ಕೋಣೆಗೆ ಹೋದಾಗ, ಅವರು ನನ್ನನ್ನು ಕೇಳಿದರು "ಅವನು (ಸುದರ್ಶನ್ ಮಹಾರಾಜ್) ಬಂದನೇ?" ಎಂದು. "ಇಲ್ಲ, ಇನ್ನೂ ಇಲ್ಲ ಮಹಾರಾಜ್" ಎಂದೆ. ೧೨ ಗಂಟೆಯ ಹೊತ್ತಿಗೆ ನಾನು ಅವರ ಕೋಣೆಗೆ ಅವರ ಆಹಾರವನ್ನು ತೆಗೆದುಕೊಂಡು ಮತ್ತೆ ಹೋದೆ. ಅವರು ಸ್ವಲ್ಪ ಚಿಂತಾಕ್ರಾಂತರಾದಂತೆ ಕಂಡಿತು. ಕೆಲಹೊತ್ತು ಸುಮ್ಮನಿದ್ದು "ಅವನಿಗೆ ಈಜಲು ಬರುತ್ತದೆಯೇ?" ಎಂದು ಕೇಳಿದರು. ನನಗೆ ಆ ವಿಚಾರ ತಿಳಿದಿರಲಿಲ್ಲ. "ನನಗೆ ಗೊತ್ತಿಲ್ಲ, ಮಹಾರಾಜ್" ಎಂದೆ. ನನ್ನ ಉತ್ತರವನ್ನು ಕೇಳಿ, ಸ್ವಲ್ಪ ಕೋಪಗೊಂಡು ಹೇಳಿದರು "ಈಜು ಬಾರದಿರುವವನು ಗಂಗೆಗೆ ಏಕೆ ಹೋಗಬೇಕಿತ್ತು? ಅವನು ಗಂಗೆಯಲ್ಲಿ ತೇಲಿ ಹೋಗಿರಬಹುದು." "ಇಲ್ಲ ಮಹಾರಾಜ್, ಯೋಚನೆ ಮಾಡಬೇಡಿ, ಅವರ ಜೊತೆಯಲಿ ಇನ್ನೂ ಕೆಲವು ಸಾಧುಗಳೂ ಹೋಗಿದ್ದಾರೆ. ಇನ್ನೇನು ಬಂದು ಬಿಡುತ್ತಾರೆ" ಎಂದು ಹೇಳಿ ಅವರನ್ನು ಸಂತೈಸಲು ಪ್ರಯತ್ನಿಸಿದೆ. ಅನಂತರ ಅವರು ಊಟ ಮಾಡಿ ವಿಶ್ರಾಂತಿ ತೆಗೆದುಕೊಂಡರು. ಸುದರ್ಶನ್ ಮಹಾರಾಜ್ ಅವರು ಎರಡು ಗಂಟೆಯ ಸುಮಾರಿಗೆ ಬಂದರು. ಅವರನ್ನು ನೋಡುತ್ತಿದ್ದಂತೆಯೇ, ನಾನು ಅವರಿಗೆ ನಡೆದುದೆಲ್ಲವನ್ನೂ ಹೇಳಿದೆ. ತಕ್ಷಣ ಅವರು ಮಹಾರಾಜ್ ಅವರ ಬಳಿಗೆ ಧಾವಿಸಿದರು. ಅವರನ್ನು ನೋಡಿದ ಮೇಲೆಯೇ ಮಹಾರಾಜ್ ಅವರಿಗೆ ನಿರಾಳವಾದದ್ದು.

ಈ ಪ್ರೀತಿ ಅವರ ಸಹಾಯಕರಿಗಷ್ಟೇ ಮೀಸಲಾಗಿರಲಿಲ್ಲ, ಇತರ ಸಾಧುಗಳು, ಬ್ರಹ್ಮಚಾರಿಗಳ ವಿಷಯದಲ್ಲಿಯೂ ಅವರ ಮಮತೆ ಅಪಾರವಾಗಿತ್ತು ಮತ್ತು ಅವರಿಗಾಗಿ ತಮ್ಮ ಕೈಯಲ್ಲಾದುದೆಲ್ಲವನ್ನೂ

ಮಾಡುತ್ತಿದ್ದರು. ಒಮ್ಮೆ ಹೊಸದಾಗಿ ಸೇರಿದ ಬ್ರಹ್ಮಚಾರಿಯೊಬ್ಬರು ತಮ್ಮ ತಂದೆತಾಯಿಗಳ ಆರ್ಥಿಕ ದುಃಸ್ಥಿತಿಯನ್ನು ವಿವರಿಸಿ ಒಂದು ಪತ್ರವನ್ನು ಮಹಾರಾಜ್ ಅವರಿಗೆ ಬರೆದಿದ್ದರು. ಅದರಲ್ಲಿ ಅವರು ತಾವು ಸಂಘದಲ್ಲಿ ಮುಂದುವರೆಯಬೇಕೇ ಅಥವಾ ಮನೆಗೆ ಹಿಂತಿರುಗಿ ತಂದೆ ತಾಯಿಗಳ ಸೇವೆಯಲ್ಲಿ ತೊಡಗಿಕೊಳ್ಳಬೇಕೇ ಎಂದು ಕೇಳಿದ್ದರು. ಈ ಪತ್ರ ಮಹಾರಾಜ್ ಅವರ ಮನವನ್ನು ಬಹಳಷ್ಟು ಕಲಕಿತು. ಅವರು ಆ ಬ್ರಹ್ಮಚಾರಿಯವರ ತಂದೆತಾಯಿಗಳಿಗೆ ಸಾಕಷ್ಟು ಹಣವನ್ನು ಕಳುಹಿಸಿ, ಬ್ರಹ್ಮಚಾರಿಗೆ ಇದರ ಬಗ್ಗೆ ಯೋಚಿಸಬೇಡ ಎಂದು ಪತ್ರ ಬರೆದರು. ಇದಾದ ಮೇಲೆ ಅವರ ಮನಸ್ಸು ನಿರಾತಂಕವಾಯಿತು.

ಮಹಾರಾಜ್ ಅವರು ಯಾರಿಂದಲೂ ಔಪಚಾರಿಕತೆಯನ್ನು ನಿರೀಕ್ಷಿಸು ತ್ತಿರಲಿಲ್ಲ. ಅವರಿಗೆ ಕೆಲಸ ಮುಖ್ಯವಾಗಿತ್ತು. ಒಂದು ಸಂಜೆ ನನ್ನ ಕೈಲಿ ಒಂದು ಪತ್ರವನ್ನು ಬರೆಸುತ್ತಿದ್ದರು, ನಾನು ಬರೆದುಕೊಳ್ಳುತ್ತಿದ್ದೆ. ತಕ್ಷಣ ಅವರಿಗೆ ಅದೇ ವಿಷಯದ ಮೇಲೆ ಬಂದಿದ್ದ ಮತ್ತೊಂದು ಪತ್ರದ ನೆನಪಾಯಿತು. "ನೋಡು, ಆ ಪತ್ರಕ್ಕೆ ಇನ್ನೂ ನಾವು ಉತ್ತರಿಸಿಲ್ಲವೆಂದು ಕಾಣುತ್ತದೆ" ಎಂದರು. ಬರೆಯುತ್ತಿದ್ದುದನ್ನು ಮುಂದುವರೆಸುತ್ತಾ ನಾನು "ಹೌದು ಮಹಾರಾಜ್, ನನಗೆ ಜ್ಞಾಪಕವಿದೆ, ಅದನ್ನು ತರುತ್ತೇನೆ" ಎಂದೆ. "ಬೇಡ, ನೀನು ಮುಂದುವರೆಸು, ನಾನೇ ತರುತ್ತೇನೆ" ಎನ್ನುತ್ತಾ ತಾವೇ ಹೋಗಿ ಆ ಪತ್ರವನ್ನು ತಂದರು. ನನಗೆ ಮುಜುಗರವಾದರೂ, ಅವರ ಸ್ವಭಾವವನ್ನು ಅರಿತಿದ್ದೆನಾದ್ದರಿಂದ ನನ್ನ ಬರವಣಿಗೆಯನ್ನು ಮುಂದುವರೆಸಿದೆ.

ಸಾಮಾನ್ಯವಾಗಿ ನಾನು ಪತ್ರಗಳನ್ನು ಟೈಪ್ ಮಾಡಿದ ನಂತರ ಅವರಿಗೆ ಕೊಡುತ್ತಿದ್ದೆ. ಅದನ್ನು ಅವರೊಮ್ಮೆ ನೋಡಿ, ತಿದ್ದಬೇಕಾದ ಆವಶ್ಯಕತೆಯಿದ್ದ ಕಡೆ ತಿದ್ದಿ ಸಹಿ ಮಾಡುತ್ತಿದ್ದರು. ಅದು ಅವರ ಪದ್ಧತಿ. ಒಮ್ಮೊಮ್ಮೆ ಅವರು ತಮ್ಮದೇ ಆದ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು. ಅದರಲ್ಲಿ ಎಷ್ಟು ಸಹಜತೆ ಹಾಗೂ ಸರಳತೆ ಇರುತ್ತಿತ್ತು! ಒಮ್ಮೆ ಹೈದರಾಬಾದಿನಲ್ಲಿ ಅಂದು ಬಂದಿದ್ದ ಪತ್ರಗಳನ್ನೆಲ್ಲಾ ತೆಗೆದುಕೊಂಡು ಅವರ ಕೋಣೆಗೆ ಹೋದೆ. ಯಾವುದೋ ಕಾರಣಕ್ಕಾಗಿ, ಪತ್ರಗಳನ್ನೆಲ್ಲಾ ಅವರ ಮುಂದೆಯೇ ಇಟ್ಟು ನನ್ನ ಕೋಣೆಗೆ ಹೋಗಿದ್ದೆ. ಹಿಂತಿರುಗಿ ಬಂದಾಗ ಮಹಾರಾಜ್ ಅವರು ಒಂದು ಪೋಸ್ಟ್ ಕಾರ್ಡನ್ನು ನನಗೆ ಕೊಟ್ಟು ಇದರಲ್ಲಿ ಸಹಿ ಮಾಡು ಎಂದರು. ನನಗೆ ಕಸಿವಿಸಿಯಾಯಿತು. ಪತ್ರವನ್ನು ತೆಗೆದುಕೊಂಡು ಓದಿದೆ. ನೋಡಿದರೆ, ಬಂದಿದ್ದ ಒಂದು ಪತ್ರಕ್ಕೆ ಉತ್ತರವನ್ನು ನಾನು ಬರೆದಂತೆ ಅವರು ಬರೆದಿದ್ದರು. ಸಾಲದೆಂಬುದಕ್ಕೆ ನನ್ನ ಸಹಿಗಾಗಿ ನನಗೆ ನೀಡುತ್ತಿದ್ದಾರೆ! ಅಂದು ರಾತ್ರಿ ಭೋಜನಶಾಲೆಯಲ್ಲಿ ಈ ಪ್ರಸಂಗವನ್ನು ನಾನು ಎಲ್ಲರಿಗೂ ಹೇಳಿದಾಗ, ಅಲ್ಲಿ ನಗದವರೇ ಇರಲಿಲ್ಲ.

ನಿಜವಾಗಿ ನನ್ನ ಕೈಬರಹ ಸುಂದರವಾಗಿರದಿದ್ದರೂ ಅಷ್ಟೇನೂ ಕೆಟ್ಟದ್ದಾಗಿಯೂ ಇರಲಿಲ್ಲ. ಕೆಲವು ವೇಳೆ, ಪೋಸ್ಟ್ ಕಾರ್ಡಿನ ಮೇಲೆ ಅವರು ಹೇಳಿದ ಹಾಗೆ ಉತ್ತರವನ್ನು ಬರೆಯುತ್ತಿದ್ದ ನನ್ನ ಕೈಬರಹ ಕೆಡುತ್ತಿತ್ತು. ಒಮ್ಮೆ ಅವರು ಅಂತಹ ಪತ್ರಕ್ಕೆ ಸಹಿ ಹಾಕುವ ಮೊದಲು ನನಗೆ ಹೇಳಿದರು "ಪತ್ರ ಬರೆಯುವ ಮೊದಲು ನೀನೊಮ್ಮೆ ಈ ಪತ್ರ ಓದುವವನ ಬಗೆಗೂ ಯೋಚಿಸು. ಅದನ್ನು ಓದುವಲ್ಲಿ ಅವನಿಗೆ ತೊಂದರೆಯಾಗಬಾರದು. ಅದನ್ನು ಮನಸ್ಸಿನಲ್ಲಿಟ್ಟುಕೊಂಡು, ನೀನು ಪತ್ರವನ್ನು ಚೆನ್ನಾಗಿ ಬರೆ." ಆಗ ನನಗೆ ನಗು ಬಂದರೂ, ಅವರ ಮಾತು ನನಗೆ ಅರ್ಥವಾಯಿತು. ನಾನು ನೇರವಾಗಿಯೇ ಹೇಳಿದೆ "ಮಹಾರಾಜ್, ನೀವು ಹೇಳುವ ವೇಗದಲ್ಲಿಯೇ ನಾನು ಬರೆದುಕೊಳ್ಳಬೇಕು. ಹಾಗಾದ್ದರಿಂದ ನನ್ನ ಕೈಬರಹ ಕೆಡುತ್ತಿದೆ." "ಹಾಗಿದ್ದರೆ, ನಾನು ನಿಧಾನವಾಗಿಯೇ ಹೇಳುತ್ತೇನೆ" ಎಂದ ಅವರಲ್ಲಿ ಯಾವ ಬಗೆಯ ಕೋಪವೂ ಇರಲಿಲ್ಲ. ಮತ್ತೆ ನನಗೆ ಅವರು ಏನನ್ನೂ ಹೇಳಲಿಲ್ಲ. ನಾನೂ ನನ್ನ ಕೈಬರಹವನ್ನು ಉತ್ತಮಪಡಿಸಿಕೊಳ್ಳುವತ್ತ ಗಮನ ಹರಿಸಿದೆ.

ಒಮ್ಮೆ ಅವರಿಗೆ ಆಹಾರವನ್ನು ಸಿದ್ಧಪಡಿಸುವಲ್ಲಿ ಒಂದು ಪ್ರಮಾದವನ್ನೇ ಮಾಡಿದೆ. ಯಾವುದೇ ಮಸಾಲೆಯನ್ನೂ ಅಥವಾ ರುಚಿಕರವಾದ ಪದಾರ್ಥಗಳನ್ನೂ ಉಪಯೋಗಿಸದ ಅವರ ಆಹಾರ ಬಹಳ

ಸರಳವಾಗಿತ್ತು. ಅದರ ಜೊತೆಗೆ ಅವರು ಪ್ರತಿದಿನ ನಾಲ್ಕು ಬಾರಿ ಬಾಳೆಹಣ್ಣನ್ನು ಸೇವಿಸುತ್ತಿದ್ದರು. ಬಾಳೆಹಣ್ಣನ್ನು ಚೆನ್ನಾಗಿ ಅರೆದು ಅವರಿಗೆ ಕೊಡಬೇಕಿತ್ತು. ಅದು ಅವರಿಗೆ ಬಹಳ ಪ್ರಿಯವಾಗಿತ್ತು. ಒಂದು ಬೆಳಗ್ಗೆ, ಅವರ ಉಪಾಹಾರವನ್ನು ಸಿದ್ಧಪಡಿಸಲು ಅಡುಗೆಮನೆಗೆ ಹೋದಾಗ ಅಲ್ಲಿ ಕೇವಲ ಇನ್ನೂ ಸಂಪೂರ್ಣವಾಗಿ ಹಣ್ಣಾಗದ, ನಾಲ್ಕು ಬಾಳೆಹಣ್ಣುಗಳಿದ್ದವು. ಅವುಗಳನ್ನು ಅರೆದರೆ ಸರಿಹೋಗಬಹುದೆಂದು ನನಗೆ ಅನಿಸಿ, ಹಾಗೆಯೇ ಮಾಡಿದೆ. ಉಪಾಹಾರವನ್ನು ಸ್ವೀಕರಿಸಿದ ಮಹಾರಾಜ್ ಅವರು ನನಗೆ ಹೇಳಿಕಳುಹಿಸಿದರು. ಅದರ ಕಾರಣ ನನಗೆ ಗೊತ್ತಾಯಿತು. ತಪ್ಪಿನ ಭಾವವನ್ನು ಮನದಲ್ಲಿಟ್ಟುಕೊಂಡೇ ಅವರ ಕೋಣೆಗೆ ಹೋದೆ. ಅವರ ತಮ್ಮ ಹಾಸಿಗೆಯ ಮೇಲೆ ಕುಳಿತಿದ್ದರು. “ಬೆಳಗ್ಗೆ ನೀನು ಉಪಯೋಗಿಸಿದ ಬಾಳೆಹಣ್ಣುಗಳಲ್ಲಿ ಇನ್ನೂ ಕೆಲವು ಉಳಿದಿವೆಯೇ?” ಎಂದು ಕೇಳಿದರು. “ಇದೆ, ಮಹಾರಾಜ್” ಎಂದು ಸಣ್ಣ ಧ್ವನಿಯಲ್ಲಿ ಗೊಣಗಿದೆ. “ಹೋಗಿ ಅದನ್ನು ತೆಗೆದುಕೊಂಡು ಬಾ” ಎಂದರು. ನಾನು ಹೋಗಿ, ಉಳಿದಿದ್ದ ಒಂದೇ ಬಾಳೆಹಣ್ಣನ್ನು ತಂದೆ. “ಅದನ್ನು ಸುಲಿದು ತಿನ್ನು” ಎಂದರು. ಅರ್ಧ ಹಣ್ಣನ್ನು ತಿನ್ನುವಷ್ಟರಲ್ಲಿಯೇ ನನಗೆ ಗಂಟಲು ಕೆರೆಯುವುದಕ್ಕೆ ಪ್ರಾರಂಭವಾಯಿತು. “ಗಂಟಲಿನಲ್ಲಿ ಕೆರೆತ ಆಗುತ್ತಿದೆಯೇ” ಎಂದು ಮಹಾರಾಜ್ ಅವರು ಕೇಳಿದರು. “ಹೌದು” ಎಂದು ಮೆಲ್ಲಗೆ ನುಡಿದೆ. “ನನಗೂ ಹಾಗೆಯೇ ಆಯಿತು. ಅದಕ್ಕಾಗಿಯೇ, ನಾನು ಅದನ್ನು ತಿನ್ನಲಾಗಲಿಲ್ಲ. ನನಗೆ ಕೊಡುವ ಮೊದಲು ನೀನೊಮ್ಮೆ ಅದರ ರುಚಿಯನ್ನು ನೋಡಿ, ಅದು ಸರಿಯಿದ್ದರೆ ನನಗೆ ಕೊಡು. ಚೆನ್ನಾಗಿಲ್ಲದಿದ್ದರೆ ನನಗೆ ಕೊಡಬೇಡ. ಅದರಲ್ಲೇನೂ ತಪ್ಪಿಲ್ಲ. ಸರಿಯೇ? ಈಗ ಹೋಗು” ಎಂದು ಹೇಳಿದ ಅವರು, ಏನೂ ನಡೆಯಲೇ ಇಲ್ಲವೆಂಬಂತೆ ಸುದ್ದಿಪತ್ರಿಕೆಯನ್ನು ಓದತೊಡಗಿದರು. ಅವರಲ್ಲಿ ಕೋಪವಿರಲಿಲ್ಲ, ಕಠಿಣ ಶಬ್ದಗಳನ್ನು ಬಳಸಲಿಲ್ಲ ಮತ್ತು ನನ್ನನ್ನು ದೂರುವಂತೆಯೂ ಮಾತನಾಡಲಿಲ್ಲ. ನನ್ನ ಅಜಾಗರೂಕತೆಯನ್ನಷ್ಟೇ ಬಹು ನಯವಾಗಿ ನನಗೆ ತೋರಿಸಿಕೊಟ್ಟಿದ್ದರು. ಆದರೂ ಅದು ಬಹಳ ಪರಿಣಾಮಕಾರಿಯಾಗಿತ್ತು. ನಾನು ಆಂತರ್ಯದಲ್ಲಿ ಬಹಳ ನೋವನ್ನು ಅನುಭವಿಸಿದೆ. ಅವರು ನನ್ನನ್ನು ಬೈದಿದ್ದರೆ, ಅದು ಅಷ್ಟು ನೋವನ್ನು ಕೊಡುತ್ತಿದ್ದಿಲ್ಲ. ನನ್ನ ವಿಷಯದಲ್ಲಿ ಅವರು ಕಠಿಣವಾಗಿ ನಡೆದುಕೊಂಡಿದ್ದಿದ್ದರೆ, ಆ ನೊವನ್ನು ೨–೩ ದಿನಗಳಲ್ಲಿ ನಾನು ಸಂಪೂರ್ಣವಾಗಿ ಮರೆತುಬಿಡುತ್ತಿದ್ದೆ. ಆದರೆ ಈಗ, ೨೦೦೫ರಲ್ಲಿ, ಆ ಘಟನೆ ನಡೆದು ಒಂಬತ್ತು ವರ್ಷಗಳಾಗಿದ್ದರೂ ಅವರು ನಯವಾಗಿ ಆಡಿದ ಅಂದಿನ ಮಾತಿನ ಪ್ರಭಾವ ನನ್ನ ಮನಸ್ಸಿನಲ್ಲಿ ಇನ್ನೂ ಸ್ಪಷ್ಟವಾಗಿ ಇದೆ. ಒಂಬತ್ತು ವರ್ಷವಷ್ಟೇ ಏಕೆ, ಅದು ನಾನು ಬದುಕಿರುವವರೆಗೂ ಇರುತ್ತದೆ ಎಂಬುದು ನನ್ನ ಭಾವನೆ.

ಎಲ್ಲರನ್ನೂ– ಅವರು ಮಂತ್ರಿಯೇ ಆಗಿರಲಿ, ಬಡಗಿಯೇ ಆಗಿರಲಿ, ಬಡವನಾಗಿರಲಿ, ಬಲ್ಲಿದನಾಗಿರಲಿ, ಚಿಕ್ಕವರಿರಲಿ, ದೊಡ್ಡವರಿರಲಿ ಎಲ್ಲರನ್ನೂ– ಮಹಾರಾಜ್ ಅವರು ಒಂದೇ ರೀತಿಯಲ್ಲಿ ನೋಡುತ್ತಿದ್ದರು. ಒಂದು ದಿನ ಮಹಾರಾಜ್ ಅವರು ಮುಂಬೈ ವಿಮಾನ ನಿಲ್ದಾಣದ ವಿಐಪಿಗಳ ಕೋಣೆಯಲ್ಲಿ ಕುಳಿತಿದ್ದರು. ಅವರ ಸಂಗಡ ಅದೇ ವಿಮಾನದಲ್ಲಿ ಹೋಗಬೇಕಿದ್ದ ನಾನು, ಅವರ ಆಹಾರದ ಚೀಲವನ್ನು ಹಿಡಿದುಕೊಂಡು ಅಲ್ಲಿಯೇ ಹೊರಗೆ ನಿಮತಿದ್ದೆ. ಅದು ವಿಐಪಿ ಕೋಣೆಯಾಗಿದ್ದರಿಂದ ಮಹಾರಾಜ್ ಅವರಲ್ಲದೆ ಅಲ್ಲಿ ಬೇರೆ ಯಾರೂ ಇರಲಿಲ್ಲ. ನಾನು ಹೊರಗೆ ನಿಂತಿರುವುದನ್ನು ನೋಡಿ ಅವರು “ಬಾ, ಇಲ್ಲೇ ಕುಳಿತುಕೋ” ಎಂದು ತಮ್ಮ ಆಸನದ ಬಳಿಯೇ ಇದ್ದ ಮತ್ತೊಂದು ಆಸನವನ್ನು ತೋರಿಸಿದರು. ನಾನು ಅವರ ಬಳಿ ಸಲಿಗೆಯಿಂದ ಇದ್ದರೂ, ಕೆಲಸವಿಲ್ಲದೆ ಅವರ ಪಕ್ಕದಲ್ಲಿ ಕುಳಿತುಕೊಳ್ಳುವುದು ಸರಿಯಲ್ಲವೆಂದು ಬಗೆದು “ಪರವಾಗಿಲ್ಲ, ಮಹಾರಾಜ್, ನನಗೆ ಇಲ್ಲಿ ಏನೂ ತೊಂದರೆಯಿಲ್ಲ” ಎಂದೆ. ನನ್ನನ್ನೇ ನೋಡುತ್ತಾ ಅವರು “ನೀನು ಇಲ್ಲಿ ಕೂರದಿದ್ದರೆ, ಮತ್ತಾರೋ ಬಂದು ಕೂರುತ್ತಾರೆ ಅಷ್ಟೆ, ಅದರ ಬದಲಿಗೆ ನೀನೇ ಬಂದು ಇಲ್ಲಿ ಕುಳಿತುಕೋ” ಎಂದರು. ಸರಳ ತರ್ಕದಿಂದ ಅವರು ನನ್ನನ್ನು ಸೋಲಿಸಿದ್ದರು. ಶ್ರೀ ರಾಮಕೃಷ್ಣರು ಹೇಳುತ್ತಿದ್ದ, ರಾಜನೊಬ್ಬ ತನ್ನ ಅಡುಗೆಯವನನ್ನು ತನ್ನ ಪಕ್ಕದಲ್ಲಿಯೇ ಕುಳಿತುಕೊಳ್ಳುವಂತೆ ಹೇಳಿದ, ಕಥೆ ನನಗೆ ಜ್ಞಾಪಕವಾಯಿತು.

ಸಂಘದ ಬಗ್ಗೆ ಮಹಾರಾಜ್ ಅವರಿಗೆ ಇದ್ದ ದೃಷ್ಟಿ ಸರಳ ಹಾಗೂ ನೇರ. ಅವರ ಪ್ರಕಾರ, ನಾವು ಏನೆಲ್ಲಾ ಮಾಡುತ್ತೇವೆಯೋ ಅದು ಶ್ರೀ ಗುರು ಮಹಾರಾಜ್ ಅವರ ಸೇವೆಯಲ್ಲದೆ ಬೇರೆಯಲ್ಲ, ಇಲ್ಲಿರುವ ಎಲ್ಲವೂ ಗುರು ಮಹಾರಾಜ್ ಅವರಿಗೆ ಮಾತ್ರ ಸೇರಿದ್ದು. ಈ ವಿಷಯದಲ್ಲಿ ಅವರ ವಿಚಾರ ಅಚಲವಾಗಿತ್ತು. ಮತ್ತು ಸ್ಪಷ್ಟವಾಗಿತ್ತು. ಒಮ್ಮೆ ಒಬ್ಬ ಬ್ರಹ್ಮಚಾರಿ ಅವರಿಗೆ ಒಂದು ಪತ್ರವನ್ನು ಬರೆದು ಮಹಾರಾಜ್ ಅವರ ಸೇವೆಯನ್ನು ಮಾಡಬೇಕೆಂಬ ತನ್ನ ಹೃದಯದ ಅಭಿಲಾಷೆಯನ್ನು ತೋಡಿಕೊಂಡಿದ್ದನು. ಆ ಪತ್ರದಲ್ಲಿ ಸಂಘದ ಅಧಿಕಾರಿಗಳಿಗೆ ತನ್ನನ್ನು ಹೈದರಾಬಾದಿಗೆ ಕಳುಹಿಸುವಂತೆ ಹೇಳಲು ಮಹಾರಾಜ್ ಅವರನ್ನು ಕೇಳಿಕೊಂಡಿದ್ದ. ಆದರೆ ಮಹಾರಾಜ್ ಅವರು ತಮ್ಮ ಉತ್ತರದಲ್ಲಿ, "ನೀನು ಸೇರಿರುವುದು ರಾಮಕೃಷ್ಣ ಸಂಘವನ್ನು, ರಂಗನಾಥಾನಂದರ ಸಂಘವನ್ನಲ್ಲ. ಇಲ್ಲಿ ನಾವು ಮಾಡುವುದೆಲ್ಲ ಗುರು ಮಹಾರಾಜರ ಸೇವೆಯಷ್ಟೆ. ಸಂಘದ ಅಧಿಕಾರಿಗಳು ನಮ್ಮನ್ನು ಎಲ್ಲಿಗೆ ಕಳುಹಿಸಿದರೆ ನಾವು ಅಲ್ಲಿಗೆ ಹೋಗಿ ಗುರು ಮಹಾರಾಜರ ಸೇವೆಯನ್ನು ಮಾಡಬೇಕು. ನಾನು ಮಾಡಿದ್ದೂ ಅದನ್ನೇ, ನೀನೂ ಅದನ್ನೇ ಮಾಡಬೇಕೆಂಬುದು ನನ್ನ ಇಚ್ಛೆ" ಎಂದು ಬರೆದಿದ್ದರು.

ಮಹಾರಾಜ್ ಅವರು ಎಲ್ಲರಲ್ಲೂ ವಿಚಾರವಂತಿಕೆಯನ್ನು, ಸ್ವಾಮೀಜಿಯವರ ಮತ್ತು ವೇದಾಂತದ ಬಗೆಗಿನ ವಿಚಾರಗಳನ್ನು ಉದ್ದೀಪಿಸುತ್ತಿದ್ದರೂ, ಅವರ ಹೃದಯದಲ್ಲಿ ಭಕ್ತಿಯ ಮಹಾ ಪ್ರವಾಹವೇ ಹರಿಯುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಅದು ಹೊರ ಹೊಮ್ಮುತ್ತಿತ್ತು. ೧೯೭೭ರಲ್ಲಿ ಒಮ್ಮೆ ನಮ್ಮ ಶಾಖಾ ಕೇಂದ್ರವೊಂದಕ್ಕೆ ಅವರು ಭೇಟಿಯನ್ನಿತ್ತರು. ನಾನು ಮುಂಚೆಯೇ ಹೋಗಿ ಅವರಿಗಾಗಿ ಕೋಣೆಯನ್ನು ಮತ್ತು ಅಡುಗೆಮನೆಯನ್ನು ಸಿದ್ಧಪಡಿಸಿದೆ. ಅವರು ಬಂದ ಸ್ವಲ್ಪ ಹೊತ್ತಿನನಂತರ ನಾನು ಅವರ ಕೋಣೆಗೆ ಹೋದಾಗ ಕೇಳಿದರು– "ಇದೇನು? ಪರಮಹಂಸರದಾಗಲೀ ಅಥವಾ ಶ್ರೀ ಮಾತೆಯವರದಾಗಲೀ ಒಂದು ಫೋಟೋ ಕೂಡ ಇಲ್ಲ. ಇದು ನಮ್ಮ ಆಶ್ರಮವೇ?" ನಾನು ಇದನ್ನು ಮೊದಲೇ ಗಮನಿಸಿದ್ದರೂ, ಅದರ ವ್ಯವಸ್ಥೆಯನ್ನು ಮಾಡಿರಲಿಲ್ಲ. ತಕ್ಷಣವೇ ಪೂಜ್ಯ ತ್ರಿಮೂರ್ತಿಗಳ ಫೋಟೋವೊಂದನ್ನು ತರಿಸಿಟ್ಟೆ. ಈ ಪ್ರಸಂಗದ ನಂತರ ಅವರು ಹೋಗುವ ಕಡೆಗಳಲ್ಲೆಲ್ಲಾ, ಅವರು ಬರುವ ಮೊದಲೇ ಪರಮಹಂಸರ ಫೋಟೋ ಇದೆಯೋ ಇಲ್ಲವೋ ಎಂಬುದನ್ನು ನಾನು ನೋಡಿ, ಇಲ್ಲದಿದ್ದರೆ ಅದರ ವ್ಯವಸ್ಥೆಯನ್ನು ಮಾಡುತ್ತಿದ್ದೆ.

ಹಾಗೆಯೇ, ಒಮ್ಮೆ ಚೆನ್ನೈ ಮಠಕ್ಕೆ ಮಹಾರಾಜ್ ಅವರು ಭೇಟಿಯಿತ್ತರು. ಅಲ್ಲಿ ಎರಡು ಮೂರು ದಿನಗಳ ದೀಕ್ಷಾ ಕಾರ್ಯಕ್ರಮವಿತ್ತು. ಅಂತಹ ದೀಕ್ಷಾ ಕಾರ್ಯಕ್ರಮವು ಎಲ್ಲೇ ನಡೆದರೂ, ಮಹಾರಾಜ್ ಅವರು, ತಮಗೆ ಅವರು ಪೂಜ್ಯ ಗುರುಗಳಾದ ಮಹಾಪುರುಷ್ ಮಹಾರಾಜ್ ಅವರು ನೀಡಿದ್ದ ಜಪಮಾಲೆಯನ್ನು ಧರಿಸಿಕೊಳ್ಳುತ್ತಿದ್ದರು. ಅದನ್ನು ಅವರು ಯಾವಾಗಲೂ ಒಂದು ಸಣ್ಣ ಸ್ಟೀಲಿನ ಸಂಪುಟದಲ್ಲಿ, ಮಹಾಪುರುಷ್ ಮಹಾರಾಜ್ ಅವರ ಚಿಕ್ಕ ಚಿತ್ರದೊಂದಿಗೆ ಇಟ್ಟುಕೊಂಡಿರುತ್ತಿದ್ದರು. ಆ ಜಪಮಾಲೆಯನ್ನು ಧರಿಸುವ ಮೊದಲು, ಆ ಸಂಪುಟವನ್ನು ಭಕ್ತಿಯಿಂದ ಹಣೆಗೆ ಒತ್ತಿಕೊಳ್ಳುತ್ತಿದ್ದರು. ಅಂತಹ ಒಂದು ಸಂದರ್ಭದಲ್ಲಿ ಆ ಸಂಪುಟವನ್ನು ಹಣೆಗೆ ಒತ್ತಿಕೊಂಡು ಅದನ್ನು ನನಗೆ ಕೊಟ್ಟು, "ಜೋಪಾನವಾಗಿ ಇಟ್ಟುಕೊಂಡಿರು. ಇದರಲ್ಲಿ ಮಹಾಪುರುಷ್‌ಜೀ ಅವರು ಇದ್ದಾರೆ!" ಎಂದು ಹೇಳಿದರು. ಅವರು ಅದನ್ನು ಬಹಳ ಗಂಭೀರವಾಗಿಯೇ ಹೇಳಿದ್ದರು.

ಪರಮಪೂಜ್ಯ ಭೂತೇಶಾನಂದ ಮಹಾರಾಜ್ ಅವರಲ್ಲಿಯೂ ಅವರಿಗೆ ಬಹಳ ಭಕ್ತಿ, ಅದಕ್ಕಿಂತಲೂ ಹೆಚ್ಚಾಗಿ ಅವರನ್ನು ಬಹಳವಾಗಿ ಇಷ್ಟಪಡುತ್ತಿದ್ದರು. ಹೈದರಾಬಾದಿನಲ್ಲಿ ಒಂದು ದಿನ ನನ್ನನ್ನು ಕರೆದು "ಇಲ್ಲಿ ಬಾ, ನಾನು ಅಧ್ಯಕ್ಷ ಮಹಾರಾಜ್ ಅವರಿಗೆ ಪತ್ರವೊಂದನ್ನು ಬರೆಯಬೇಕು" ಎಂದರು. ನಾನು ಕಾಗದ ಮತ್ತು ಪೆನ್ನನ್ನು ತೆಗೆದುಕೊಂಡು ಅಧ್ಯಕ್ಷ ಮಹಾರಾಜ್ ಅವರಿಗೆ ಯಾರೇ ಪತ್ರ ಬರೆಯಬೇಕಾದರೂ ಸಾಮಾನ್ಯವಾಗಿ ಬರೆಯುತ್ತಿದ್ದ "ಪರಮ ಪೂಜ್ಯ ಅಧ್ಯಕ್ಷ ಮಹಾರಾಜ್ ಅವರಿಗೆ" ಎಂದು ಬರೆಯಬೇಕೆಂದಿರುವಷ್ಟರಲ್ಲಿಯೇ, ಮಹಾರಾಜ್ ಅವರು "ಸಿದ್ಧವಾಗಿದ್ದೀಯಾ?, ಬರೆದುಕೊ, ನನ್ನ ಪ್ರೀತಿಯ ಅಧ್ಯಕ್ಷ ಮಹಾರಾಜ್" ಎಂದು

ಪ್ರಾರಂಭಿಸಿದರು. ನನಗೆ ಅತ್ಯಾಶ್ಚರ್ಯವಾಯಿತು. "ಮಹಾರಾಜ್, ನಾವು ಸಾಮಾನ್ಯವಾಗಿ ಅಧ್ಯಕ್ಷ ಮಹಾರಾಜ್ ಅವರಿಗೆ ಪತ್ರ ಬರೆಯುವಾಗ ಪರಮ ಪೂಜ್ಯ ಎಂದು ಆರಂಭಿಸುತ್ತೇವೆ, ಆದರೆ ನೀವು..." ಎಂದು ಹೇಳುತ್ತಿರುವಾಗಲೇ ಅವರು ತಡೆದು "ಅದರಲ್ಲೇನಿದೆ? ನಾನು ಮೈಸೂರಿನಲ್ಲಿ ಅವರೊಡನೆ ವಾಲೀಬಾಲ್ ಆಡುತ್ತಿದ್ದೆ. ನೀನು ಏನೇನೋ ಹೇಳುತ್ತಿದ್ದೀಯಲ್ಲಾ. ಸರಿ, ನೀನು (ನೀನು ಅನ್ನುವುದನ್ನು ಒತ್ತಿ ಹೇಳಿದರು) ಬಯಸಿದರೆ ಹಾಗೆಯೇ ಬರೆ" ಎಂದರು. ತಕ್ಷಣ ನನ್ನ ತಪ್ಪನ್ನು ತಿಳಿದುಕೊಂಡು "ಇಲ್ಲ ಮಹಾರಾಜ್, ನಿಮ್ಮ ಮತ್ತು ಅವರ ಮಧ್ಯೆ ನಾನು ಎಷ್ಟರವನು. ನೀವು ಹೇಳಿದುದಷ್ಟನ್ನು ಮಾತ್ರ ಬರೆದುಕೊಳ್ಳುತ್ತೇನೆ" ಎಂದು ಹೇಳಿ "ಪ್ರೀತಿಯ ಅಧ್ಯಕ್ಷ ಮಹಾರಾಜ್" ಎಂದೇ ಆರಂಭಿಸಿದೆ.

ಅವರು ಭೂತೇಶಾನಂದ ಮಹಾರಾಜ್ ಅವರ ಸಾಮರ್ಥ್ಯದ ಬಗ್ಗೆ ಆಗಾಗ್ಗೇ ಹೊಗಳುತ್ತಿದ್ದರು. ಒಮ್ಮೆ, ಬಹುಶಃ ೧೯೭೭ರ ಮಾರ್ಚ್‌ನಲ್ಲಿರಬೇಕು, ಮಹಾರಾಜ್ ಅವರು ಹೈದರಾಬಾದಿನಿಂದ ಬೇಲೂರು ಮಠಕ್ಕೆ ಚಾತುರ್ಮಾಸದ ಸಭೆಗೆಂದು ಬಂದಿದ್ದರು. ಒಂದು ದಿನ, ಸಾಯಂಕಾಲದ ಸಭೆಯ ನಂತರ ತಮ್ಮ ಕೊಠಡಿಗೆ ಬಂದು ತಮ್ಮ ಹಾಸಿಗೆಯ ಮೇಲೆ ಕುಳಿತುಕೊಳ್ಳುವುದಕ್ಕೂ ಮೊದಲು ಮಹಾರಾಜ್ ಅವರು "ಅಧ್ಯಕ್ಷ ಮಹಾರಾಜ್ ಅವರನ್ನು ನೋಡು, ಎಷ್ಟು ವಯಸ್ಸಾಗಿದೆ. ಈಗಲೂ ಈ ಎಲ್ಲಾ ವ್ಯವಹಾರಗಳನ್ನೂ ಎಷ್ಟು ಚೆನ್ನಾಗಿ ನಿಭಾಯಿಸುತ್ತಾರೆ. ನನಗೆ ಅವರ ಹಾಗೆ ಮಾಡಲಾಗುವುದಿಲ್ಲ. ಅವರು ಹೋಗುವ ಮುನ್ನ ನಾನು (ಮೇಲಕ್ಕೆ ತಮ್ಮ ಬೆರಳನ್ನು ತೋರಿಸುತ್ತಾ) ಹೋಗಬೇಕು" ಎಂದರು. ನಾನು ಮಾತನಾಡದೆ ಅವರತ್ತ ನೋಡಿದೆ. ಅವರು ತಮಾಷೆ ಮಾಡುತ್ತಿರಲಿಲ್ಲ.

ಆದರೆ, ಅವರ ಈ ಬಯಕೆ ಈಡೇರಲಿಲ್ಲ. ೧೯೯೮ರ ಆಗಸ್ಟ್‌ನಲ್ಲಿ ಭೂತೇಶಾನಂದ ಮಹಾರಾಜ್ ಅವರು ಇಹಲೋಕವನ್ನು ತ್ಯಜಿಸಿದಾಗ, ಮಹಾರಾಜ್ ಅವರು ನೆತ್ತರುನಂಜು ಹಾಗೂ ಮೂತ್ರಪಿಂಡದ ವೈಫಲ್ಯದ ಚಿಕಿತ್ಸೆಗಾಗಿ ಕೋಲ್ಕತ್ತಾದ ವುಡ್‌ಲ್ಯಾಂಡ್ಸ್ ಆಸ್ಪತ್ರೆಗೆ ದಾಖಲಾಗಿದ್ದರು. ಅವರಿಗೆ ಭೂತೇಶಾನಂದರ ಸಾವಿನ ಸುದ್ದಿಯನ್ನು ತಲುಪಿದಾಗ, ಅವರು ಸ್ವಲ್ಪ ಹೊತ್ತು ಮೌನವಾಗಿದ್ದರು. ಮರುದಿನವೋ ನಂತರವೋ, ಟ್ರಸ್ಟ್‌ನ ಹಿರಿಯ ಸದಸ್ಯರು ಆಸ್ಪತ್ರೆಗೆ ಬಂದು ಸಂಘದ ಜವಾಬ್ದಾರಿಯನ್ನು ಹೊತ್ತುಕೊಳ್ಳುವಂತೆ ಮಹಾರಾಜ್ ಅವರನ್ನು ವಿನಂತಿಸಿಕೊಂಡರು. ಅಂದು ಸಂಜೆ ನಾನು ಅವರಿಗೆ ಉಪಾಹಾರವನ್ನು ತಂದಾಗ ಈ ಎಲ್ಲಾ ವಿಷಯಗಳೂ ಗೊತ್ತಾದವು. ನಾನು ಅವರಿಗೆ ಆಹಾರವನ್ನು ತಿನ್ನಿಸುತ್ತಿದ್ದಾಗ ಅವರು ನನಗೆ "ನೋಡು, ಒಬ್ಬ ಕೇರಳದ ಅಡುಗೆಯವನು ಈಗ ಸಂಘದ ಅಧ್ಯಕ್ಷ, ತಮಾಷೆಯಲ್ಲವೇ?" ಎಂದು ಹೇಳಿದರು. ನಾನು ಮೌನವಾಗಿ ಅವರಿಗೆ ಆಹಾರವನ್ನು ತಿನ್ನಿಸುತ್ತಿದ್ದೆ. ಸ್ವಲ್ಪ ಹೊತ್ತಿನ ನಂತರ ಹೇಳಿದರು "ನಾನು ಅವರಿಗಿಂತ ಮೊದಲು ಹೋಗಬೇಕೆಂದಿದ್ದೆ, ಆದರೆ ಅವರೇ ಮೊದಲು ಹೊರಟುಹೋದರು." ನಿಶ್ಶಕ್ತಿಯಿಂದಾಗಿ ಅವರಿಗೆ ಹೆಚ್ಚು ಮಾತನಾಡಲಾಗುತ್ತಿರಲಿಲ್ಲ. ಆದರೂ, ಅವರ ಭಾವನೆಗಳ ತೀವ್ರತೆ ಸ್ಪಷ್ಟವಾಗಿ ನನಗೆ ಕಾಣಿಸುತ್ತಿತ್ತು.

ಮಹಾರಾಜ್ ಅವರದು ಬಹು ದೊಡ್ಡ ವ್ಯಕ್ತಿತ್ವವಾದರೂ, ನಾನು ಅವರಿಗೆ ಕೆಲವು ವಿಷಯಗಳಲ್ಲಿ ಸಲಹೆಯನ್ನು ಯಾವುದೇ ಅಳುಕೂ ಇಲ್ಲದೆ ಕೊಡಬಹುದಿತ್ತು. ಅವರಿಗೆ ಅದು ಸರಿಯೆನಿಸಿದರೆ ಅದನ್ನು ಅವರು ತಕ್ಷಣವೇ ಒಪ್ಪಿಕೊಳ್ಳುತ್ತಿದ್ದರು. ಒಮ್ಮೆ ಚೆನ್ನೈನ ಕೊಳಚೆ ಪ್ರದೇಶದಲ್ಲಿದ್ದ ಮಹಿಳೆಯೊಬ್ಬರು ಅವರಿಗೆ ಪತ್ರವೊಂದನ್ನು ಬರೆದು, ತನ್ನ ಕುಟುಂಬದ ಸದಸ್ಯರೊಬ್ಬರು ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿಕೊಳ್ಳಬೇಕೆಂದೂ, ಮತ್ತು ತನ್ನ ದುಃಸ್ಥಿತಿಯನ್ನೂ ತಿಳಿಸಿದ್ದಳು. ತನಗೆ ಆರ್ಥಿಕ ನೆರವೇನಾದರೂ ದೊರಕಬಹುದೇ ಎಂದು ಅವಳು ಕೇಳಿದ್ದಳು. ಮಹಾರಾಜ್ ಅವರು ಆ ಪತ್ರವನ್ನು ಓದುತ್ತಿರುವಾಗ ದುಃಖಭರಿತರಾಗಿದ್ದುದು ನನ್ನ ಅರಿವಿಗೆ ಬಂದಿತು. "ಆಕೆಗೆ ಹೇಗಾದರೂ ಸ್ವಲ್ಪ ಹಣವನ್ನು ಕಳುಹಿಸಿಕೊಡಬೇಕು. ಹೇಗೆ ಕಳುಹಿಸುವುದು? ಚೆಕ್ ಕಳುಹಿಸಲೋ ಅಥವಾ ಡ್ರಾಫ್ಟ್ ಕಳುಹಿಸಲೋ" ಎಂದು ನನ್ನನ್ನು ಕೇಳಿದರು. ಒಂದು ಕ್ಷಣ ಯೋಚಿಸಿ ನಾನು

"ಮಹಾರಾಜ್, ಆಕೆ ಬಡ ಹೆಂಗಸು. ಅವಳು ಬ್ಯಾಂಕ್‌ನಲ್ಲಿ ಖಾತೆ ಹೊಂದಿರಲಾರಳು. ಆದ್ದರಿಂದ ಚೆಕ್ ಅಥವಾ ಡ್ರಾಫ್ಟ್‌ನ್ನು ಕಳುಹಿಸುವುದು ಉಪಯೋಗಕ್ಕೆ ಬರುವುದಿಲ್ಲ. ಆಕೆಯ ವಿಳಾಸವನ್ನು ಪತ್ತೆ ಹಚ್ಚಿ ಸ್ವತಃ ಹಣವನ್ನು ನೀಡುವಂತೆ ನೀವು ಚೆನ್ನೈನ ಮೇನೇಜರ್ ಮಹಾರಾಜ್ ಅವರನ್ನು ಕೇಳಬಹುದು. ಅದು ಸುಲಭ ಮತ್ತು ಉಪಯೋಗವೂ ಆಗುತ್ತದೆ" ಎಂದೆ. ಮಹಾರಾಜ್ ಅವರು ತಕ್ಷಣ "ಬಹಳ ಒಳ್ಳೆಯ ಸಲಹೆ" ಎಂದು ಹೇಳಿದರು. ಅದರಂತೆಯೇ ಚೆನ್ನೈನ ಮೇನೇಜರ್ ಮಹಾರಾಜ್ ಅವರಿಗೆ ಪತ್ರವನ್ನು ಬರೆದರು. ಆ ಮೇನೇಜರ್ ಮಹಾರಾಜ್ ಅವರು ಆ ಬಡ ಮಹಿಳೆಯ ವಿಳಾಸವನ್ನು ಪತ್ತೆ ಹಚ್ಚಿ ಆಕೆಗೆ ಹಣವನ್ನು ತಲುಪಿಸಿದರು. ಆಕೆಯ ಮನಸ್ಸಿನ ಸ್ಥಿತಿಯನ್ನು ಶುದ್ಧಾಂತಃಕರಣವಿರುವ ಯಾರಾದರೂ ಅರ್ಥಮಾಡಿಕೊಳ್ಳಬಹುದಿತ್ತು. ಇದಾದ ಮೇಲೆ, ಆಕೆ ಚೆನ್ನೈನ ಮಠಕ್ಕೇ ತಪ್ಪದೇ ಬರಲಾರಂಭಿಸಿದಳು ಎಂಬುದು ನನಗೆ ಸ್ವಲ್ಪಕಾಲದ ನಂತರ ತಿಳಿದುಬಂತು. ಈ ಪ್ರಕರಣ ನಡೆದ ನಂತರ ಆ ಮಹಿಳೆಗಿಂತ ಮಹಾರಾಜ್ ಅವರಿಗೇ ಹೆಚ್ಚು ಆನಂದವಾಯಿತು.

ಮತ್ತೊಂದು ಸಂದರ್ಭದಲ್ಲಿ, ಯಾವುದೋ ಸಂಭಾಷಣೆಯ ನಡುವೆ ಮಹಾರಾಜ್ ಅವರು "ಹೊರದೇಶಗಳಲ್ಲಿ ಜನರು ನನ್ನ ಪ್ರವಚನಗಳನ್ನು ಬಹಳವಾಗಿ ಮೆಚ್ಚಿಕೊಳ್ಳುತ್ತಾರೆ. 'ಸ್ವಾಮೀಜಿ, ಇಂತಹ ಪ್ರವಚನವನ್ನು ನಾವು ಕೇಳಿಯೇ ಇರಲಿಲ್ಲ. ಇವು ನಮಗೆ ಹೊಸ ವಿಚಾರಗಳು' ಎನ್ನುತ್ತಾರೆ. ಆದರೆ ಭಾರತದಲ್ಲಿನ ಜನರಿಗೆ ನಮ್ಮ ಈ ಭವ್ಯ ಸತ್ಯವನ್ನು ಮೆಚ್ಚಿಕೊಳ್ಳುವ ರೀತಿಯೇ ಗೊತ್ತಿಲ್ಲ" ಎಂದರು. ಮೌನವಾಗಿ ಅವರ ಮಾತನ್ನು ಕೇಳುತ್ತಿದ್ದ ನಾನು, ನಿಧಾನವಾಗಿ ನನ್ನ ಅಭಿಪ್ರಾಯವನ್ನು ಹೇಳಿದೆ "ಮಹಾರಾಜ್, ಇದೇ ಮೊದಲ ಬಾರಿಗೆ ಈ ವಿಷಯಗಳನ್ನು ಕೇಳುತ್ತಿರು ವುದರಿಂದ ಅವರು ಹೀಗೆ ಹೇಳುತ್ತಾರೆ ಎಂದು ಎನಿಸುತ್ತದೆ. ಆದರೆ, ಇಲ್ಲಾದರೋ, ಜನರಿಗೆ ಚಿಕ್ಕ ವಯಸ್ಸಿನಿಂದಲೇ ಗೀತೆ, ಉಪನಿಷತ್ತಿನ ಬಗ್ಗೆ ಪರಿಚಯವಿರುತ್ತದೆ. ಸಂಪೂರ್ಣವಾಗಿ ಅವುಗಳ ಅರ್ಥವನ್ನು ತಿಳಿದಿಲ್ಲದಿರಬಹುದು. ಆದರೆ, ಇವರಿಗೆ ಅದು ಅಪರಿಚಿತವೇನೋ ಅಲ್ಲ. ಈ ಕಾರಣಕ್ಕಾಗಿಯೇ ಇವರು ಹೊರದೇಶದವರಂತೆ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸದಿರಬಹುದು ಎಂದುಕೊಂಡಿದ್ದೇನೆ" ಎಂದೆ. ಒಮ್ಮೆ ನನ್ನತ್ತ ನೋಡಿದರೂ ಏನೂ ಪ್ರತಿಕ್ರಿಯೆಯನ್ನು ತೋರದೆ ಮಹಾರಾಜ್ ಅವರು ತಾವು ಮಾಡುತ್ತಿದ್ದ ಕೆಲಸವನ್ನು ಮುಂದುವರಿಸಿದರು. ಅದರಿಂದ ನಾನು ಹೇಳಿದುದನ್ನು ಸಂಪೂರ್ಣವಾಗಿ ಅಲ್ಲಗಳೆಯುವಂತಿಲ್ಲ ಎಂಬಂತಿತ್ತು ಅವರ ನೋಟ. ನಾನು ಹಾಗೆ ಮಧ್ಯೆ ಮಾತನಾಡಿದುದು ಸಮಂಜಸವಲ್ಲದೆ ಇದ್ದಿರಬಹುದು, ಆದರೆ ನಾನು ಇಲ್ಲಿ ಹೇಳಹೊರಟಿರುವುದು ಎಲ್ಲರ ಮಾತನ್ನೂ ಶಾಂತವಾಗಿ ಕೇಳುವ ಅವರ ವಿಶಾಲ ದೃಷ್ಟಿ ಮತ್ತು ಹೃದಯದ ವೈಶಾಲ್ಯ.

ಅವರು ಬೇರೆಯವರ ಮನಸ್ಸಿನ ಭಾವನೆಗಳಿಗೆ ನೋವುಂಟುಮಾಡದ ಹಾಗೆ ಬಹಳ ಎಚ್ಚರ ವಹಿಸುತ್ತಿದ್ದರು. ಅಲ್ಲದೆ, ಬೇರೆಯವರ ಸಲುವಾಗಿ, ತಮ್ಮ ಆರೋಗ್ಯವನ್ನೂ, ಅನನುಕೂಲವನ್ನೂ ಲೆಕ್ಕಿಸದೆ, ತಾವು ನೋವನ್ನು ಅನುಭವಿಸಲು ಸಿದ್ಧವಿರುತ್ತಿದ್ದರು. ಒಮ್ಮೆ ಬಹುಶಃ ೧೯೭೭ರ ಜುಲೈನಲ್ಲಿರಬಹುದು. ಮಹಾರಾಜ್ ಅವರ ಕೋಲ್ಕತ್ತಾದ ಸಾಂಸ್ಕೃತಿಕ ಸಂಘದಲ್ಲಿ ತಂಗಿದ್ದರು. ಅಲ್ಲಿ ಒಂದು ದಿನದ ದೀಕ್ಷಾಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಅಂದಿನ ಪ್ರಾತಃಕಾಲ, ೬.೩೦ರಲ್ಲಿ ಮಾಮೂಲಿನಂತೆ ಅವರಿಗಾಗಿ ಬೆಳಗಿನ ಉಪಾಹಾರವನ್ನು ತಯಾರು ಮಾಡಲು ತೊಡಗಿದ್ದೆ. ೭.೦೦ ಗಂಟೆಗೆ ಅಲ್ಲಿಗೆ ಬಂದ ಸುದರ್ಶನ್ ಮಹಾರಾಜ್ ಅವರು ಮಹಾರಾಜ್ ಅವರು ಹಿಂದಿನ ರಾತ್ರಿಯೆಲ್ಲ ಅತಿಸಾರ ಹಾಗೂ ವಾಂತಿಯಿಂದ ನರಳುತ್ತಿದ್ದುದಾಗಿಯೂ ಮತ್ತು ನಿದ್ರೆಯಿಲ್ಲದೆಯೇ ರಾತ್ರಿಯನ್ನು ಕಳೆದುದಾಗಿಯೂ ಹೇಳಿ, ಅವರು ಉಪಾಹಾರವನ್ನು ಸೇವಿಸುವುದಿಲ್ಲ. ಆದ್ದರಿಂದ ಉಪಾಹಾರದ ತಯಾರಿಕೆಯ ಅಗತ್ಯವಿಲ್ಲ ಎಂದು ನನಗೆ ಹೇಳಿದರು. ಅದನ್ನು ಕೇಳಿದ ನನಗೆ ಆತಂಕವಾಯಿತು. "ಹಾಗಾದರೆ, ಇಂದಿನ ದೀಕ್ಷಾ ಕಾರ್ಯಕ್ರಮವನ್ನು ರದ್ದು ಮಾಡುವುದು ಒಳ್ಳೆಯದು. ಅವರು ಇಂದು ವಿಶ್ರಾಂತಿಯನ್ನು ತೆಗೆದುಕೊಳ್ಳಲಿ" ಎಂದು ಸಲಹೆಯನ್ನು ಕೊಟ್ಟೆ. ಆದರೆ, ಮಹಾರಾಜ್ ಅವರು ಇದನ್ನು ಒಪ್ಪಲಿಲ್ಲ ಎಂದು

ಅವರು ನನಗೆ ಹೇಳಿದರು. ಸ್ವಲ್ಪ ಸಮಯದ ನಂತರ ನಾನು ಮಹಾರಾಜ್ ಅವರನ್ನು ಕಾಣಲು ಹೋದೆ. ಅವರು ಕೇಳಿದರು "ನೀನು ಎಲ್ಲವನ್ನೂ ಕೇಳಿರುವೆಯಲ್ಲವೇ? ನಿನ್ನೆ ನನ್ನ ಆಹಾರದಲ್ಲಿ ದೋಷವೇನಾದರೂ ಇತ್ತೇ." ನಾನು "ಇಲ್ಲ ಮಹಾರಾಜ್, ಎಲ್ಲವೂ ಮಾಮೂಲಿನಂತೆಯೇ ಇದ್ದವು" ಎಂದೆ. "ಹಾಗಾದರೆ ಇದು ಹೇಗೆ ಆಯಿತು? ಈಗ ನನ್ನ ಹೊಟ್ಟೆ ಸರಿಹೋಗಿದೆ. ನಾನು ಈಗ ಏನನ್ನೂ ತೆಗೆದುಕೊಳ್ಳ ದಿದ್ದರೆ, ಅದು ಸಂಪೂರ್ಣವಾಗಿ ಸರಿಹೋಗುತ್ತದೆ. ಮಧ್ಯಾಹ್ನದ ಆಹಾರವನ್ನು ಸಿದ್ಧಪಡಿಸು. ದೀಕ್ಷಾಕಾರ್ಯಕ್ರಮವು ಮುಗಿದ ನಂತರ ಊಟ ಮಾಡುತ್ತೇನೆ" ಎಂದರು. "ಹಾಗಿದ್ದರೆ, ನೀವು ಇಂದಿನ ಕಾರ್ಯಕ್ರಮವನ್ನು ರದ್ದುಮಾಡಬಹುದು" ಎಂದು ಮತ್ತೊಮ್ಮೆ ನಿವೇದಿಸಿದೆ. "ಕೂಡದು, ಕೂಡದು, ಅವರು ದೂರದೂರದಿಂದ ಅಷ್ಟೊಂದು ನಿರೀಕ್ಷೆಗಳನ್ನು ಹೊತ್ತು ಬಂದಿರುತ್ತಾರೆ. ಕಾರ್ಯಕ್ರಮವನ್ನು ರದ್ದು ಮಾಡಿ ಅವರ ಭಾವನೆಗಳಿಗೆ ಘಾಸಿ ಮಾಡಿದರೆ ಅವರು ನೊಂದುಕೊಳ್ಳುತ್ತಾರೆ. ನಾನು ನಿಭಾಯಿಸುತ್ತೇನೆ. ನನ್ನ ಬಗ್ಗೆ ಯೋಚಿಸಬೇಡ, ಈಗ ಹೋಗು" ಎಂದು ಹೇಳಿ ತಮ್ಮ ದೈನಂದಿನ ಕೆಲಸಗಳಲ್ಲಿ ತೊಡಗಿಕೊಂಡರು. ಹೇಗೋ ದೀಕ್ಷಾ ಕಾರ್ಯಕ್ರಮವು ಯಾವುದೇ ತೊಂದರೆಯಿಲ್ಲದೆ ನಡೆದುಹೋಯಿತು. ಆದರೆ, ಅಲ್ಲಿಂದ ಮರಳಿದ ಮಹಾರಾಜ್ ಅವರು ಬಚ್ಚಲಮನೆಗೆ ಹೋಗಿ ವಾಂತಿ ಮಾಡಿದರು. ನಮಗೆಲ್ಲಾ ದಿಗಿಲಾಯಿತು. "ದೇವರು ದೊಡ್ಡವನು, ದೀಕ್ಷೆ ನೀಡುವ ಸಮಯದಲ್ಲಿ ಏನೂ ಆಗಲಿಲ್ಲ" ಎಂದು ನಮ್ಮನ್ನು ಸಂತೈಸಲೋ ಎಂಬಂತೆ ಅವರು ನುಡಿದರು. ಮಧ್ಯಾಹ್ನದ ಊಟವಾದ ಕೂಡಲೇ ಅವರನ್ನು ಸೇವಾ ಪ್ರತಿಷ್ಠಾನದ ಆಸ್ಪತ್ರೆಗೆ ಸೇರಿಸಲಾಯಿತು. ಅಲ್ಲಿ ಕೆಲವು ದಿನಗಳಿದ್ದು ನಂತರ ಅವರು ಮರಳಿದರು.

ನನ್ನ ವೈಯಕ್ತಿಕ ಜೀವನದಲ್ಲಿಯೂ ಇಂತಹುದೇ ಘಟನೆಯೊಂದು ನಡೆಯಿತು. ಅದನ್ನು ಇಲ್ಲಿ ಹೇಳುವುದು ಅಸಮಂಜಸವೇನೂ ಆಗುವುದಿಲ್ಲ. ಅದು ೧೯೯೭ರ ಅಕ್ಟೋಬರ್‌ನಲ್ಲಿ ನಡೆದದ್ದು. ಚಾತುರ್ಮಾಸದ ಸಭೆಯಲ್ಲಿ ಭಾಗವಹಿಸಲು ಮಹಾರಾಜ್ ಅವರು ಬೇಲೂರು ಮಠಕ್ಕೆ ಬಂದಿದ್ದರು. ಸಭೆಯ ಕಾರ್ಯಕ್ರಮಗಳೆಲ್ಲಾ ಮುಗಿದ ನಂತರ ಅವರು ಹಲವು ಕೇಂದ್ರಗಳಿಗೆ ಭೇಟಿಯಿತ್ತು ಒಂದು ತಿಂಗಳ ನಂತರ ಹೈದರಾಬಾದಿಗೆ ಮರಳುವ ಕಾರ್ಯಕ್ರಮವಿತ್ತು. ಆ ಸಂದರ್ಭದಲ್ಲಿ ನನಗೆ ನಮ್ಮ ಮನೆಯಿಂದ ಒಂದು ದೂರವಾಣಿ ಕರೆ ಬಂದಿತು. ನನ್ನ ತಂದೆಯವರ ಮರಣದ ಸುದ್ದಿಯು ನನಗೆ ಮುಟ್ಟಿತು. ಆ ಕರೆ ಬಂದಾಗ ನಾನು ಭೋಜನಶಾಲೆಯಲ್ಲಿ ಊಟಮಾಡುತ್ತಿದ್ದೆ. ಅಲ್ಲಿಂದ ಬರುವಾಗ ಸುದರ್ಶನ್ ಮಹಾರಾಜ್ ಅವರು ನನಗೆ ಸುದ್ದಿಯನ್ನು ತಿಳಿಸಿ, ಮಹಾರಾಜ್ ಅವರನ್ನು ಕಾಣುವಂತೆ ನನಗೆ ಹೇಳಿದರು. ನಾನು ಅವರ ಕೋಣೆಗೆ ಹೋದಾಗ, ಅವರು ಆಗಷ್ಟೇ ತಮ್ಮ ರಾತ್ರಿಯ ಊಟವನ್ನು ಮುಗಿಸಿದ್ದರು. "ನಿನಗೆ ಸುದ್ದಿ ಬಂದಿತೆ?" ಇದೇ ಅವರು ನನ್ನನ್ನು ಕೇಳಿದ ಮೊದಲ ಪ್ರಶ್ನೆ. "ಸಿಕ್ಕಿತು ಮಹಾರಾಜ್" ಎಂದೆ. "ನೀನು ಹೋಗಬಯಸುವೆಯಾ" ಪ್ರೀತಿಯಿಂದ ಕೇಳಿದರು. ಸ್ವಲ್ಪಹೊತ್ತು ಮೌನವಾಗಿದ್ದ ನಾನು, ನಂತರ ಹೇಳಿದೆ "ಮಹಾರಾಜ್, ನಮ್ಮ ತಂದೆ ತಾಯಿಗಳಿಗೆ ನಾನೇ ಚಿಕ್ಕ ಮಗ. ನಾನಿಲ್ಲದೇ ಇದ್ದರೂ ನಡೆಯಬೇಕಾದ ಕ್ರಿಯೆಗಳೆಲ್ಲವೂ ನಡೆದೇ ನಡೆಯುತ್ತವೆ. ಅಲ್ಲದೆ, ನಿಮ್ಮ ಕಾರ್ಯಕ್ರಮ ಒಂದು ತಿಂಗಳ ಪೂರ್ತಿ ಇದೆ. ಈಗ ನಾನು ಹೋದರೆ, ಒಬ್ಬರೇ ನಿಭಾಯಿಸಲು ಸುದರ್ಶನ್ ಮಹಾರಾಜ್ ಅವರಿಗೆ ಕಷ್ಟವಾಗುತ್ತದೆ. ನಾನು ಸಾಧ್ಯವಾದರೆ ನಂತರ ಸ್ವಲ್ಪದಿನಗಳ ಮಟ್ಟಿಗೆ ಹೋಗಿಬರುತ್ತೇನೆ." ಸುದರ್ಶನ್ ಮಹಾರಾಜ್ ಅವರು ನನ್ನನ್ನು ಕಳುಹಿಸಲು ಸಿದ್ಧರಿದ್ದರೂ, ನಾನು ಹೋಗಲು ಸಿದ್ಧನಿರಲಿಲ್ಲ. ಇದನ್ನೆಲ್ಲಾ ಕೇಳಿದ ಮಹಾರಾಜ್ ಅವರು "ಹಾಗಿದ್ದರೆ ಒಳ್ಳೆಯದು. ಈಗ ನನ್ನೊಂದಿಗೇ ಇರು, ನಾನು ಡಿಸೆಂಬರ್‌ನಲ್ಲಿ ತ್ರಿಶ್ಶೂರಿಗೆ ಹೋದಾಗ (ಪ್ರತಿ ವರ್ಷ ಅವರು ಅಲ್ಲಿಗೆ ಹೋಗುತ್ತಿದ್ದರು), ನೀನು ಒಂದೆರಡು ದಿನಗಳ ಮಟ್ಟಿಗೆ ನಿನ್ನ ಮನೆಯವರನ್ನು ನೋಡಿಕೊಂಡು ಬರುವೆಯಂತೆ. ಈಗ ಹೋಗಿ ನಡೆದೇ ಹೋಗುತ್ತಿದ್ದರು. ಬಹುಶಃ ಈ ಘಟನೆ ನಡೆದುದು ೧೯೯೯ರಲ್ಲಿ ಎಂದು ನನ್ನ ಜ್ಞಾಪಕ. ಬ್ರಹ್ಮಚರ್ಯ ದೀಕ್ಷೆ ಕೊಡುವುದಕ್ಕೋ ಅಥವಾ ಸಂನ್ಯಾಸ ದೀಕ್ಷೆ ಕೊಡುವುದಕ್ಕೋ

ಇರಬೇಕು, ಒಂದು ಬೆಳಗ್ಗೆ ಅವರು ಮುಖ್ಯ ಮಂದಿರಕ್ಕೆ ಹೋಗಬೇಕಿತ್ತು. ಆಗ ಚಳಿ ಹೆಚ್ಚು ಇದ್ದುದರಿಂದ, ಹಾಗೂ ಅವರ ಶ್ವಾಸಕೋಶಗಳು ಚಳಿಯಿಂದ ಬಹುಬೇಗ ತೊಂದರೆಗೆ ಒಳಗಾಗುತ್ತಿದ್ದುದರಿಂದ, ಒಂದು ಕಾರನ್ನು ಅವರಿಗಾಗಿ ವ್ಯವಸ್ಥೆ ಮಾಡಲಾಗಿತ್ತು. ಸಿದ್ಧರಾಗಿ ಹೊರಬಂದ ಅವರು ನಡೆದುಕೊಂಡೇ ಹೊರಟರು. ಅವರ ಸಹಾಯಕರಲ್ಲೊಬ್ಬರು ಓಡಿ ಹೋಗಿ "ಮಹಾರಾಜ್, ಚಳಿ ಬಹಳ ಜಾಸ್ತಿಯಿದೆ. ಇಲ್ಲಿರುವ ಕಾರಿನಲ್ಲಿ ನೀವು ಹೋಗಬಹುದು" ಎಂದರು. ಒಮದು ಕ್ಷಣ ನಿಂತ ಮಹಾರಾಜ್ ಅವರು ತಮ್ಮದೇ ಆದ ರೀತಿಯಲ್ಲಿ ಹೇಳಿದರು "ಮಂದಿರಕ್ಕೆ ಕಾರಿನಲ್ಲಿ ಹೋಗುವುದೆ? ಬೇಕಿದ್ದರೆ ನೀನು ಕಾರಿನಲ್ಲಿ ಬಾ." ಅವರು ನಿಲ್ಲದೆ ಮುಂದೆ ನಡೆದರು. ಅವರ ಹಿಂದೆ ನಾವು ಓಡಬೇಕಿತ್ತು. ಹಾಗಾಗಿ, ಕಾರನ್ನು ಹಿಂದಕ್ಕೆ ಕಳುಹಿಸಬೇಕಾಯಿತು. ಅವರು ಹೀಗೆ ನಡೆದುಕೊಳ್ಳುತ್ತಿದ್ದುದು ಒಮ್ಮೆಯಲ್ಲ ಹಲವಾರು ಬಾರಿ. ತಾವು ನಡೆಯುವ ಅವಕಾಶವನ್ನು ಎಂದೂ ಕಳೆದುಕೊಳ್ಳುವುದಿಲ್ಲ ಎಂದು ಅವರು ಹೇಳುತ್ತಿದ್ದುದನ್ನು ಹಲವಾರು ಸಾಧುಗಳು ಕೇಳಿದ್ದಾರೆ.

ಒಮ್ಮೊಮ್ಮೆ ಅವರು ಐದು ವರ್ಷದ ಹುಡುಗನ ಹಾಗೆ ನಡೆದುಕೊಳ್ಳುತ್ತಿದ್ದರು. ಇದಕ್ಕೆ ಪೂರಕವಾಗಿ ಇಲ್ಲೊಂದು ಘಟನೆ. ಒಮ್ಮೆ ನಾನು ಅವರೊಂದಿಗೆ, ಅವರ ಪಕ್ಕದ ಆಸನದಲ್ಲಿ ಕುಳಿತು ವಿಮಾನದಲ್ಲಿ ಹೋಗುತ್ತಿದ್ದೆ. ಮಹಾರಾಜ್ ಅವರು ನಾವು ಸಿದ್ಧಪಡಿಸಿ ತಂದಿದ್ದ ಉಪಾಹಾರವನ್ನು ಸೇವಿಸುತ್ತಿದ್ದರು. ಅಷ್ಟರಲ್ಲಿಯೇ ವಿಮಾನದಲ್ಲಿನ ಸಹಾಯಕರು ನನಗೆ ಉಪಾಹಾರದ ಪೊಟ್ಟಣವನ್ನು ಕೊಟ್ಟರು. ನಾನು ಅದನ್ನು ಬಿಡಿಸಿದೆ. ಅದರಲ್ಲಿ ಬಿಸಿ ಬಿಸಿಯಾದ ಇಡ್ಲಿ–ಸಾಂಬಾರ್ ಇತ್ತು. ಅದು ಮಹಾರಾಜ್ ಅವರ ಚಿಕ್ಕಂದಿನ ಪ್ರಿಯವಾದ ಆಹಾರವಾಗಿತ್ತು. ನಾನು ತಿನ್ನಲು ಮೊದಲು ಮಾಡಿದಾಗ, ಅದರ ವಾಸನೆ ಮಹಾರಾಜ್ ಅವರ ಗಮನವನ್ನು ನನ್ನತ್ತ ಸೆಳೆಯಿತು. ಅವರು "ರುಚಿ ಬಹಳ ಚೆನ್ನಾಗಿರಬೇಕು, ಅಲ್ಲವೇ? ಅದರ ವಾಸನೆಯೇ ಹೇಳುತ್ತದೆ" ಎಂದರು. ಅದು ನಿಜಕ್ಕೂ ರುಚಿಕರವಾಗಿದ್ದಿತು. "ಮಹಾರಾಜ್, ನಿಮಗಾಗಿ ಒಂದು ಪೊಟ್ಟಣವನ್ನು ತರಿಸಲೇ?" ಎಂದು ಕೇಳಿದೆ. "ಬೇಡ, ಬೇಡ, ನನ್ನ ಹೊಟ್ಟೆಗೆ ಅದು ಸರಿಯಾಗುವುದಿಲ್ಲ" ಎಂದ ಅವರ ನುಡಿಯಲ್ಲಿದ್ದ ನೋವು ನನಗೆ ಅರ್ಥವಾಯಿತು. ಅವರು ತಮ್ಮ ಉಪಾಹಾರವನ್ನು ಮುಂದುವರೆಸಿದರು.

ಇಂತಹುದೇ ಇನ್ನೊಂದು ಪ್ರಕರಣ. ಒಂದು ದಿನ ನನ್ನನ್ನು ಕರೆದು "ಇಲ್ಲಿ ಬಾ, ಸರ್ವಗತಾನಂದ ಅವರಿಗೆ ಪತ್ರ ಬರೆಯಬೇಕು" ಎಂದು ಬೋಸ್ಟನ್ನಿನಲ್ಲಿದ್ದ ಪೂಜ್ಯ ಸರ್ವಗತಾನಂದ ಮಹಾರಾಜ್ ಅವರು ಮೊದಲಿನಿಂದಲೂ ಮಹಾರಾಜ್ ಅವರಿಗೆ ಆಪ್ತರಾಗಿದ್ದರು. "ಇದನ್ನು ಬೇಗ ಟೈಪ್ ಮಾಡು. ಇದನ್ನು ತುರ್ತಾಗಿ ಕಳುಹಿಸಬೇಕಾಗಿದೆ" ಎಂದರು. ಆಗಷ್ಟೇ ಅವರ ನಿವಾಸದಲ್ಲಿ ಇ–ಮೇಲ್‌ನ್ನು ಸ್ಥಾಪಿಸಲಾಗಿತ್ತು. "ಮಹಾರಾಜ್, ಇದನ್ನು ಇ–ಮೇಲ್ ಮೂಲಕ ಕಳುಹಿಸಬಹುದು" ಎಂದೆ. "ಇದು ಬೇಗ ತಲುಪುತ್ತದೆಯೇ" ಎಂದು ಮಕ್ಕಳಂತೆ ಕೇಳಿದರು. "ಹೌದು ಮಹಾರಾಜ್, ಈ ಕ್ಷಣವೇ ತಲುಪುತ್ತದೆ" ಎಂದು ಹೇಳಿ, ಅದರಂತೆಯೇ ಇ–ಮೇಲ್ ಕಳುಹಿಸಿದೆ. ಮಾರನೆಯ ದಿನ ಬೋಸ್ಟನ್ನಿನಿಂದ ಬಂದ ಉತ್ತರದ ಪ್ರಿಂಟ್ ತೆಗೆದು ಅದನ್ನು ಮಹಾರಾಜ್ ಅವರಿಗೆ ತೋರಿಸಿದೆ. ಅವರ ಆನಂದಕ್ಕೆ ಪಾರವೇ ಇರಲಿಲ್ಲ. "ಇಷ್ಟು ಬೇಗ ನಾರಾಯಣ್ ಮಹಾರಾಜ್ (ಸರ್ವಗತಾನಂದ ಮಹಾರಾಜ್) ಅವರಿಂದ ಉತ್ತರ ಬಂದಿತೇ?" ಎಂದು ಉದ್ಗರಿಸಿದರು. ಅವರು ಅದನ್ನು ಓದುತ್ತಿರುವಾಗ ಹಿರಿಯ ಸಾಧುವೊಬ್ಬರು ಅವರನ್ನು ನೋಡಲು ಒಳಬಂದರು. ಅದೇ ಆನಂದದಲ್ಲಿದ್ದ ಮಹಾರಾಜ್ ಅವರು ಆ ಕಾಗದವನ್ನು ಅವರಿಗೆ ತೋರಿಸುತ್ತಾ "ನೋಡಿ, ನಿನ್ನೆ ತಾನೇ ತಾನು ಬರೆದ ಪತ್ರಕ್ಕೆ ಈಗಾಗಲೇ ಬೋಸ್ಟನ್ನಿನಿಂದ ಉತ್ತರ ಬಂದಿದೆ. ಇದು ಒಂದು ಅದ್ಭುತವಲ್ಲವೇ?" ಎಂದರು. ಆ ಸಾಧುಗಳಿಗೂ ನಗು ಬಂದಿತು. ಮತ್ತೊಂದು ದಿನ ಇ–ಮೇಲನ್ನು ಕೈಯಲ್ಲಿ ಹಿಡಿದುಕೊಂಡು ಓದುತ್ತಾ, ಕೇಳಿದರು "ಈ ಕಾಗದ ಎಲ್ಲಿಂದ ಬರುತ್ತದೆ?" ಇ–ಮೇಲ್‌ಗಳನ್ನು ಪ್ರಿಂಟ್ ಮಾಡಲೆಂದೇ ಅಂತಹ ತೆಳುವಾದ

ಕಾಗದವನ್ನು ನಾವು ಖರೀದಿಸಿದ್ದೆವು, ಕಾರಣ ಅದು ಸ್ವಲ್ಪ ಅಗ್ಗವಾಗಿತ್ತು. ಇಂತಹ ಕಾಗದವನ್ನು ನೋಡಿದುದರಿಂದ ಈ ಪ್ರಶ್ನೆ ಬಂದಿತು. "ನಾವು ಅದನ್ನು ಖರೀದಿಸಿದ್ದೆವು ಮಹಾರಾಜ್" ಎಂದೆ. "ಹಾಗೋ? ನಾನೆಲ್ಲೋ ಈ ಯಂತ್ರವೇ (ಕಂಪ್ಯೂಟರ್) ಇದನ್ನು ಉತ್ಪಾದಿಸಿ ಕೊಡುತ್ತದೆ ಎಂದುಕೊಂಡಿದ್ದೆ" ಎಂದು ಮುಗ್ಧತೆಯಿಂದ ಹೇಳಿದರು. ಅದು ನಿಜವಾಗಿ ನೋಡಬೇಕಾದ ದೃಶ್ಯವಾಗಿತ್ತು.

೨೦೦೦ರ ನವೆಂಬರ್‌ನಲ್ಲಿ ಮಹಾರಾಜ್ ಅವರು ಬಾಂಗ್ಲಾದಲ್ಲಿನ ಢಾಕಾ ಕೇಂದ್ರಕ್ಕೆ ಹೋಗಿದ್ದರು. ಅವರು ಅಲ್ಲಿ ಕೆಲವು ದಿನಗಳ ಕಾಲ ಇದ್ದರು. ಸಾರ್ವಜನಿಕ ಸಭೆಗಳನ್ನು, ದೀಕ್ಷಾ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಭಕ್ತರೆಲ್ಲರಿಗೂ ಸಂತೋಷ ವಾಗಿತ್ತು. ಅಲ್ಲಿಂದ ಹೊರಡುವ ಹಿಂದಿನ ದಿನದ ಸಾಯಂಕಾಲ "ನಾಳೆ ನಾವು ಹೊರಡಬೇಕು" ಎಂದೆ. "ಅದು ನನಗೆ ಗೊತ್ತು. ನೀನು ಯಾವಾಗ ಹೊರಡು ತ್ತಿದ್ದೀಯೆ?" ಎಂದರು. ಸಾಮಾನ್ಯವಾಗಿ ಅವರು ಹೊರಡುವ ಒಂದು ದಿನ ಮುಂಚೆ ನಾನು ಹೊರಡುತ್ತಿದ್ದುದರಿಂದ ಅವರು ಹೀಗೆ ಕೇಳಿದರು. "ಮಹಾರಾಜ್, ನಾವಿಬ್ಬರೂ ಒಂದೇ ವಿಮಾನದಲ್ಲಿ ಹೋಗುತ್ತಿದ್ದೇವೆ" ಎಂದೆ. ಅದಕ್ಕೆ ಅವರು ತಡವರಿಸುತ್ತಾ, "ಇದು ಸರಿಯಲ್ಲ" ಎಂದು ಹೇಳಿದರು. ನಾನು ಅವರತ್ತ ತಿರುಗಿ, "ಏಕೆ ಮಹಾರಾಜ್?" ಎಂದು ಪ್ರಶ್ನಿಸಿದೆ. "ಏಕೆಂದರೆ, ಮಾರ್ಗಮಧ್ಯದಲ್ಲಿ ಏನಾದರೂ ಸಂಭವಿಸಿದರೆ, ಬೇಲೂರು ಮಠಕ್ಕೆ ಸುದ್ದಿ ಕೊಡುವವರು ಒಬ್ಬರಾದರೂ ಇರಬೇಕಲ್ಲಾ" ಎಂದರು. ನನಗೆ ಮೊದಲು ನಗು ಬಂದಿತಾದರೂ ಅವರ ಮಾತಿನಲ್ಲಿದ್ದ ಸೂಕ್ಷ್ಮತೆ ನನಗೆ ಅರ್ಥವಾಗದೇ ಹೋಗಲಿಲ್ಲ.

ಮಹಾರಾಜ್ ಅವರು ಯಾವಾಗಲೂ ಸ್ವತಂತ್ರವಾಗಿರಲು ಬಯಸುತ್ತಿದ್ದರು. ಈ ವಿಷಯದಲ್ಲಿ ಅವರ ಆತ್ಮಶಕ್ತಿ ಗಟ್ಟಿಯಾಗಿತ್ತೆಂದರೆ, ಅಗತ್ಯವಿದ್ದಾಗಲೂ ಅವರು ಬೇರೆಯವರನ್ನು ಕರೆಯುತ್ತಿರಲಿಲ್ಲ. ಸಣ್ಣಪುಟ್ಟ ಕೆಲಸಗಳನ್ನೆಲ್ಲಾ ತಾವೇ ಮಾಡಿ ಕೊಳ್ಳುತ್ತಿದ್ದರು. ನಾವು ಅವರಿಗೆ ಸರಿಯೆನಿಸಿದ ಉತ್ತರಗಳನ್ನು ಕೊಟ್ಟಾಗಲಷ್ಟೇ ಅವರು ನಮ್ಮ ಮಾತುಗಳನ್ನು ಒಪ್ಪಿಕೊಳ್ಳುತ್ತಿದ್ದರು. ಒಮ್ಮೆ, ಬಹುಶಃ ೧೯೯೯ರಲ್ಲಿ ಇರಬಹುದು, ನಾನು ನನ್ನ ರಾತ್ರಿಯ ಪಾಳಿಯಲ್ಲಿ ಅವರ ಕೋಣೆಯಲ್ಲಿ ಮಲಗಿದ್ದೆ. ಸ್ವಿಚ್ಚನ್ನು ಹಾಕಿದ ಶಬ್ದವನ್ನು ಕೇಳಿ ನನಗೆ ಎಚ್ಚರವಾಯಿತು. ನಾನು ತಕ್ಷಣ ಎದ್ದು ನೋಡಿದರೆ, ಮಹಾರಾಜ್ ಅವರು ಶೌಚಾಲಯಕ್ಕೆ ಹೋಗುತ್ತಿದ್ದಾರೆ. ಕೋಣೆಯಲ್ಲಿದ್ದ ದೀಪವನ್ನು ಹಾಕಿದರೆ ನನಗೆ ಎಚ್ಚರವಾಗುತ್ತದೆ ಎಂದು ಕತ್ತಲಿನಲ್ಲಿಯೇ ಅವರು ಶೌಚಾಲಯದವರೆಗೂ ನಡೆದು ಹೋಗಿದ್ದರು. ನಾನು ಮೇಲೆದ್ದು, ರೂಮಿನ ದೀಪವನ್ನು ಹಾಕಿ, ಅವರಿಗೆ ಕುಡಿಯುವ ನೀರನ್ನು ಸಿದ್ಧಪಡಿಸಿ ಅವರಿಗಾಗಿ ಕಾಯುತ್ತಿದ್ದೆ. ಮೂರು–ನಾಲ್ಕು ನಿಮಿಷಗಳ ನಂತರ ಹೊರಬಂದ ಅವರು ನಾನು ಎದ್ದು ಕುಳಿತಿರುವುದನ್ನು ನೋಡಿ ಆಶ್ಚರ್ಯದಿಂದ "ಓಹ್, ನೀನು ಎದ್ದಿದ್ದೀಯಾ? ನಿನ್ನ ನಿದ್ದೆಗೆ ಭಂಗಪಡಿಸಬಾರದೆಂದು ಇದ್ದೆ" ಎಂದರು. "ಮಹಾರಾಜ್, ನೀವು ಮತ್ತೊಮ್ಮೆ ಈ ರೀತಿ ಮಾಡಬೇಡಿ, ಕತ್ತಲೆಯಲ್ಲಿ ನಡೆಯಬೇಡಿ" ಎಂದು ವಿನಂತಿಸಿ ಕೊಂಡೆ. "ಅಲ್ಲ, ಅದು ಹಾಗಲ್ಲ. ನೀನು ನಿದ್ದೆ ಮಾಡುತ್ತಿದ್ದೆ. ನಿನ್ನನ್ನು ಎಬ್ಬಿಸಲು ನನಗೆ ಮನಸ್ಸು ಬರಲಿಲ್ಲ." ನೀರು ಕುಡಿಯುತ್ತಾ ಹೇಳಿದರು. ನಾನು ನನ್ನ ವಿಚಾರವನ್ನು ಸ್ಪಷ್ಟವಾಗಿ ಹೇಳಿದೆ– "ಮಹಾರಾಜ್, ನೀವು ಕತ್ತಲೆಯಲ್ಲಿ ನಡೆಯುವಾಗ ಮುಗ್ಗರಿಸಿ ಬಿದ್ದರೆ ನನಗೆ ಎಚ್ಚರವಾಗಿಯೇ ಆಗುತ್ತದೆ. ಅಂತಹ ಸಂದರ್ಭದಲ್ಲಿ ನಿಮ್ಮನ್ನು ಮೇಲಕ್ಕೆ ಎತ್ತಲು ನನಗೊಬ್ಬನಿಗೆ ಸಾಧ್ಯವಿಲ್ಲ. ಆದುದರಿಂದ, ಇತರ ಸಹಾಯಕರನ್ನು ಎಬ್ಬಿಸಲೇಬೇಕಾಗುತ್ತದೆ. ಪರಿಸ್ಥಿತಿ ಗಂಭೀರವಾಗಿದ್ದರೆ, ನಾನು ಮಹಾ ಕಾರ್ಯದರ್ಶಿಯವರನ್ನೂ ಎಬ್ಬಿಸಬೇಕಾಗುತ್ತದೆ. ಇಷ್ಟೊಂದು ಜನರನ್ನು ಎಬ್ಬಿಸುವುದರ ಬದಲು ನನ್ನೊಬ್ಬನನ್ನು ಎಬ್ಬಿಸುವುದು ಉತ್ತಮವಲ್ಲವೇ? ಮತ್ತು ನಾನು ಅದೇ ಕೆಲಸಕ್ಕಾಗಿ ತಾನೇ ಇಲ್ಲಿರುವುದು?" ಅವರು ಅದಕ್ಕೆ ಏನೂ ಉತ್ತರವನ್ನು ಹೇಳಲಿಲ್ಲ. ಬದಲಿಗೆ, ಮಾತಿನ ದಿಕ್ಕನ್ನು ಬದಲಿಸುವ ಸಲುವಾಗಿ, "ಈ ಲೋಟವನ್ನು

ತೆಗೆದುಕೊಂಡು ಅತ್ತ ಇಟ್ಟು, ಈಗ ಮಲಗಿಕೊ" ಎಂದರು. ಅಂದಿನಿಂದ ಮತ್ತೆ ಅವರು ಯಾವಾಗಲೂ ಕತ್ತಲೆಯಲ್ಲಿ ನಡೆಯಲು ಹೋಗಲಿಲ್ಲ.

ಅವರಿಗೆ ಮಿದುಳಿನ ಆಘಾತವಾದ ಮೇಲೂ ಮಹಾರಾಜ್ ಅವರ ಈ ಮನೋಭಾವ ಕಡಿಮೆಯಾಗಲಿಲ್ಲ. ಪ್ರತಿ ಸಂಜೆ ಅವರು ತಮ್ಮ ಹಾಸಿಗೆಯ ಮೇಲೆ ಧ್ಯಾನಕ್ಕೆ ಕೂರುತ್ತಿದ್ದರು ಮತ್ತು ರಾತ್ರಿಯ ಊಟಕ್ಕೆ ಮೊದಲು ತಮ್ಮ ಹಾಸಿಗೆಯ ಹತ್ತಿರದಲ್ಲೇ ಇಟ್ಟಿರುತ್ತಿದ್ದ ಕುರ್ಚಿಯ ಮೇಲೆ ಕೂರುತ್ತಿದ್ದರು. ಮಿದುಳಿನ ಆಘಾತವಾದ ಮೇಲೆ, ಕುರ್ಚಿಯ ಮೇಲೆ ಕೂರುವಾಗ ನಾವು ಅವರಿಗೆ ಸಹಾಯ ಮಾಡುತ್ತಿದ್ದೆವು. ಆದರೂ ಉತ್ಸಾಹ ಹೆಚ್ಚಾದ ದಿನಗಳಂದು, ಅವರು ನಮ್ಮ ಸಹಾಯವನ್ನು ಸ್ವೀಕರಿಸುತ್ತಿದ್ದಿಲ್ಲ. ಒಂದು ರಾತ್ರಿ, ಅವರ ಆಹಾರವನ್ನು ತೆಗೆದುಕೊಂಡು ಅವರ ಕೋಣೆಗೆ ಹೋದಾಗ, ಅವರು ತಮ್ಮ 'ವಿಶ್ರಾಂತಿಯನ್ನು ತೆಗೆದುಕೋ' ಎಂದರು. ಇದು ಇಷ್ಟಕ್ಕೇ ಮುಗಿಯಲಿಲ್ಲ. ಡಿಸೆಂಬರ್‌ನ ಮೊದಲ ವಾರದಲ್ಲಿ ಮಹಾರಾಜ್ ಅವರು ತ್ರಿಶ್ಶೂರಿನ ಆಶ್ರಮಕ್ಕೆ ತಮ್ಮ ಭೇಟಿಯ ಬಗ್ಗೆ ಪತ್ರವನ್ನು ಬರೆಸುತ್ತಾ ಇದ್ದಾಗ "ನೀನು ನಿನ್ನ ಕುಟುಂಬದ ಸದಸ್ಯರನ್ನು ನೋಡಿ ಬರಬೇಕು. ಅದಕ್ಕಾಗಿ ರೈಲು ಟಿಕೆಟ್ಟಿನ ವ್ಯವಸ್ಥೆಯನ್ನು ಮಾಡಿಕೋ" ಎಂದು ಹೇಳಿದರು. ಅವರ ಈ ಪ್ರೀತಿ ಮತ್ತು ಅನುಕಂಪಗಳು ನನ್ನ ಹೃದಯವನ್ನು ತಟ್ಟಿದರೂ, ನನಗೆ ಇದರಿಂದ ಆಶ್ಚರ್ಯವೇನೂ ಆಗಲಿಲ್ಲ. ಕಾರಣ, ಬೇರೆಯವರ ಬಗ್ಗೆ ಚಿಂತಿಸುವುದು ಅವರ ಅನನ್ಯ ಗುಣವೇ ಆಗಿದ್ದಿತು.

ಮಹಾರಾಜ್ ಅವರು ಆಧುನಿಕ ವಿಜ್ಞಾನದ ಮೇಲೆ ಬಹಳಷ್ಟು ಮಾತನ್ನಾಡು ತ್ತಿದ್ದರೂ, ಅವರಿಗೆ ವಿದ್ಯುತ್ ಉಪಕರಣಗಳನ್ನು, ಯಂತ್ರಗಳನ್ನು ಉಪಯೋಗಿಸುವುದು ಅಷ್ಟಾಗಿ ಗೊತ್ತಿರಲಿಲ್ಲ. ಈ ವಿಷಯದಲ್ಲಿ ಅವರ ಮುಗ್ಧತೆಯನ್ನು ಕಂಡು ನಾವು ನಗುತ್ತಿದ್ದೆವು. ಅವರು ಹೈದರಾಬಾದಿನಲ್ಲಿದ್ದಾಗ, ಪ್ರತಿ ರಾತ್ರಿ ರೇಡಿಯೋನಲ್ಲಿ ಸಮಾಚಾರವನ್ನು ಕೇಳುವುದು ಅವರ ಅಭ್ಯಾಸವಾಗಿದ್ದಿತು. ರೇಡಿಯೋವನ್ನು ಹೊಂದಿದ್ದ ಒಬ್ಬ ಹಿರಿಯ ಸಾಧು ಮಹಾರಾಜ್ ಅವರಿಗಾಗಿ ಅದನ್ನು ಆಕಾಶವಾಣಿ ನಿಲಯಕ್ಕೆ ತಿರುಗಿಸಿ ಕೊಡಬೇಕು ಮತ್ತು ಸಮಾಚಾರವು ಮುಗಿದ ನಂತರ ಮತ್ತೆ ತೆಗೆದುಕೊಂಡು ಹೋಗಬೇಕು, ಇದು ನಿತ್ಯದ ಪದ್ಧತಿ. ಮಹಾರಾಜ್ ಅವರು ತಾವೇ ರೇಡಿಯೋವನ್ನು ಹಾಕಲು ಎಂದೂ ಪ್ರಯತ್ನಿಸುತ್ತಿರಲಿಲ್ಲ. ಒಮ್ಮೆ ನಾವು ಮುಂಬೈ ಕೇಂದ್ರದಲ್ಲಿ ಇದ್ದಾಗ, ಸಾಧುವೊಬ್ಬರಿಂದ ಅವರಿಗೆ ಟ್ರಾನ್ಸಿಸ್ಟರ್‌ನ್ನು ಕೊಡಿಸಿದೆ. ಸ್ವಲ್ಪ ಸಮಯದ ನಂತರ ತಮ್ಮ ಕೋಣೆಯಿಂದ ಟ್ರಾನ್ಸಿಸ್ಟರ್‌ನೊಂದಿಗೆ ಮಹಾರಾಜ್ ಅವರು ಹೊರಬಂದರು. ಅವರಿಗೆ ಆಕಾಶವಾಣಿ ನಿಲಯಕ್ಕೆ ಅದನ್ನು ಹೊಂದಿಸಲು ಬಂದಿರಲಿಲ್ಲ. ಇತರ ಸಾಧುಗಳೊಡನೆ ನಿಂತಿದ್ದ ನಾನು, ಅವರನ್ನು ಬಂದುದನ್ನು ನೋಡಿ ಅವರ ಬಳಿಗೆ ಹೋದೆ. "ಧ್ವನಿ ಸರಿಯಾಗಿ ಬರುತ್ತಿಲ್ಲ. ಹತ್ತಾರು ಜನ ಒಟ್ಟಿಗೆ ಮಾತನಾಡುತ್ತಿದ್ದಾರೆ. ನನಗೆ ಏನೂ ಅರ್ಥವಾಗುವುದಿಲ್ಲ. ತೆಗೆದುಕೋ ಇದನ್ನು" ಎಂದರು. ಅದನ್ನು ಸ್ವಿಚ್ ಆಫ್ ಮಾಡುವುದೂ ಅವರಿಗೆ ಗೊತ್ತಿರಲಿಲ್ಲ. ಅಲ್ಲಿದ್ದ ಸಾಧುಗಳೆಲ್ಲರೂ ನಗುತ್ತಿದ್ದರು. ಮತ್ತೊಮ್ಮೆ, ಹೈದರಾಬಾದಿನಲ್ಲಿ ಸ್ವಲ್ಪ ಕಾಲದವರೆಗೆ ವಿದ್ಯುತ್ ಕಡಿತ ಜಾರಿಯಲ್ಲಿತ್ತು. ಅಂದು ರಾತ್ರಿ ತುರ್ತು ದೀಪವೊಂದನ್ನು ಮಹಾರಾಜ್ ಅವರ ಕೋಣೆಯಲ್ಲಿ ಇಟ್ಟಿದ್ದರೂ, ದುರದೃಷ್ಟದಿಂದಾಗಿ ಅದರ ಸ್ವಿಚ್ಚನ್ನು ಹಾಕಿರಲಿಲ್ಲ. ಮಹಾರಾಜ್ ಅವರು ಎಷ್ಟೇ ಪ್ರಯತ್ನಪಟ್ಟರೂ ಅವರಿಗೆ ಅದರ ಸ್ವಿಚ್ಚನ್ನು ಹಾಕಲು ಆಗಲೇ ಇಲ್ಲ. ಅವರ ಈ ಕಷ್ಟವನ್ನು ಕಿಟಕಿಯಿಂದ ನೋಡುತ್ತಿದ್ದ ಬ್ರಹ್ಮಚಾರಿಯೊಬ್ಬರು ಒಳಕ್ಕೆ ಹೋಗಿ ಕ್ಷಣಮಾತ್ರದಲ್ಲಿ ಹಾಕಿಕೊಟ್ಟರು. ಮಹಾರಾಜ್ ಅವರಿಗೆ ಬಹಳ ಸಂತೋಷವಾಯಿತು. ಅಷ್ಟರಲ್ಲಿಯೇ ಊಟದ ಗಂಟೆ ಹೊಡೆದುದರಿಂದ ಬ್ರಹ್ಮಚಾರಿ ಅಲ್ಲಿಂದ ಊಟದ ಮನೆಗೆ ಹೋದರು. ಅವರಿಗೆ ಈ ದೀಪದ ವಿಷಯ ಮರೆತು ಹೋಯಿತು. ನಾವು ಊಟ ಮಾಡುತ್ತಿದ್ದಾಗ, ವಿದ್ಯುತ್ ಬಂದಿತು. ಮಹಾರಾಜ್ ಅವರಿಗೆ ತುರ್ತುದೀಪವನ್ನು ಆರಿಸಲು ಬರದೇ ಅದನ್ನು ಹಿಡಿದುಕೊಂಡು ಊಟದ ಮನೆಗೇ ಬಂದು 'ಎಲ್ಲಿ ಆ ಹುಡುಗ, ಈ ದೀಪವನ್ನು ಆರಿಸುವುದು ಅವನಿಗೆ ಗೊತ್ತು' ಎಂದರು.

ಅವರ ಕೋಣೆಯಲ್ಲಿ ನಡೆದ ಈ ವಿಷಯದ ಬಗ್ಗೆ ಏನೂ ಗೊತ್ತಿಲ್ಲದ ನಮಗೆ ಏನೊಂದೂ ಅರ್ಥವಾಗಲಿಲ್ಲ. ಆಗ ಆ ಬ್ರಹ್ಮಚಾರಿ ಬಂದು ದೀಪವನ್ನು ಆರಿಸಿದರು. "ನೋಡಿ, ನನಗೆ ಇದು ಗೊತ್ತಿರಲಿಲ್ಲ. ಅವನಿಗೆ ಗೊತ್ತು" ಎಂದು ಮಹಾರಾಜ್ ಅವರು ಉದ್ಗರಿಸಿ ಊಟದ ಮನೆಯಿಂದ ಹೊರನಡೆದರು. ಅಲ್ಲಿದ್ದವರಿಗೆಲ್ಲಾ ನಗುವೋ ನಗು.

ಮಹಾರಾಜ್ ಅವರಿಗೆ ಪುಸ್ತಕಗಳನ್ನು ಓದುವುದೆಂದರೆ ಅತೀವ ಪ್ರೀತಿ. ಎಂದಿಗೂ ಇಂಗದ ಅವರ ಜ್ಞಾನಪಿಪಾಸೆ ಎಲ್ಲರಿಗೂ ಗೊತ್ತಿದ್ದಂತಹುದು. ಅವರು ಓದುತ್ತಿರುವಾಗ ಮಧ್ಯೆ ಯಾರೂ ಅವರಿಗೆ ತೊಂದರೆ ಕೊಡಬಾರದು, ಮುಖ್ಯವಾದ ವಿಷಯಗಳಿದ್ದಾಗ ಹೊರತು. ಒಮ್ಮೆ ಅವರು ಚೆನ್ನೈನಲ್ಲಿ ಇದ್ದಾಗ, ದೀಕ್ಷೆಯನ್ನು ಸ್ವೀಕರಿಸಿದ ಬಾಲಕನೊಬ್ಬ ನನ್ನ ಬಳಿಗೆ ಬಂದು ಒಂದು ಪುಸ್ತಕವನ್ನು ಕೊಟ್ಟನು. ಅದರಲ್ಲಿ ಮಹಾರಾಜ್ ಅವರ ಹಸ್ತಾಕ್ಷರವನ್ನು ಪಡೆಯಬೇಕೆಂಬುದು ಅವನ ಆಸೆ. ನಾನು ಮಹಾರಾಜ್ ಅವರ ಕೋಣೆಗೆ ಹೋಗಿ ಅವರಿಗೆ ಈ ವಿಷಯವನ್ನು ಹೇಳಿದೆ. ತಮ್ಮ ಕೈಯಲ್ಲಿ ಇದ್ದ ಪುಸ್ತಕವನ್ನು ಕೆಳಗಿಡದೆ, ಒಮ್ಮೆ ನನ್ನ ಕೈಯಲ್ಲಿದ್ದ ಪುಸ್ತಕವನ್ನು ಹುಡುಗನಿಗೆ ಹಿಂದಿರುಗಿಸಿ, ಮಹಾರಾಜ್ ಅವರು, ಹೇಳಿದುದನ್ನು ಹೇಳಿದ. ತಕ್ಷಣ ಆ ಹುಡುಗ ಪುಸ್ತಕದ ಅಂಗಡಿಗೆ ಹೋಗಿ ನೋಡಿದರು. ನಮ್ಮ ಸಂಘದ ಸಂನ್ಯಾಸಿಯೊಬ್ಬರು ಬರೆದ ಪುಸ್ತಕ ಅದು. "ಹೇ, ಅದು ನನ್ನ ಪುಸ್ತಕವಲ್ಲ. ಅದರಲ್ಲಿ ನಾನು ಹೇಗೆ ಸಹಿ ಮಾಡಲಿ?" ಎಂದು ಕೇಳಿದರು. ನನಗೆ ಕಕ್ಕಾಬಿಕ್ಕಿಯಾಯಿತು. ಹೊರಬಂದು ಆ ಪುಸ್ತಕವನ್ನು ಅವರು ಬರೆದಿದ್ದ ಪುಸ್ತಕವನ್ನು ಖರೀದಿಸಿ ತಂದ. ನಾನು ಆ ಪುಸ್ತಕವನ್ನು ತೆಗೆದುಕೊಂಡು ಹೋಗಿ ಮಹಾರಾಜ್ ಅವರ ಮುಂದೆ ಹಿಡಿದೆ. ಅದನ್ನು ನೋಡಿ ಅವರು, "ಅದರಲ್ಲಾಗಲೇ ನನ್ನ ಹೆಸರಿದೆ, ಮತ್ತೆ ನನ್ನ ಸಹಿಯ ಅಗತ್ಯವೇನು?" ಅವರ ಮಾತನ್ನು ಕೇಳಿ ನನಗೆ ನಗೆಯನ್ನು ತಡೆಯಲಾಗಲಿಲ್ಲವಾದರೂ, ಅವರು ಓದುತ್ತಿದ್ದ ಪುಸ್ತಕ ಅವರ ಆಸಕ್ತಿಯನ್ನು ಹಿಡಿದಿಟ್ಟುಕೊಂಡಿತ್ತು ಎನ್ನುವುದು ನನಗೆ ಅರ್ಥವಾಯಿತು. ಕೆಲವು ಸಮಯದ ನಂತರ ಮತ್ತೆ ಅವರ ಬಳಿಗೆ ಹೋಗಿ ಅವರ ಹಸ್ತಾಕ್ಷರವನ್ನು ಪಡೆದು, ಪುಸ್ತಕವನ್ನು ಆ ಹುಡುಗನಿಗೆ ಹಿಂದಿರುಗಿಸಿದೆ.

ಹೆಚ್ಚು ಕಡಿಮೆ ಇಂತಹುದೇ ಇನ್ನೊಂದು ಘಟನೆ ಬೇಲೂರು ಮಠದಲ್ಲಿ ನಡೆಯಿತು. ಮಹಾರಾಜ್ ಅವರು ೧೯೭೮ರ ಸೆಪ್ಟೆಂಬರ್ ೭ರಂದು ಸಂಘದ ಅಧ್ಯಕ್ಷರಾದರು. ಅವರು ಇನ್ನೂ ಸಂಪೂರ್ಣವಾಗಿ ಗುಣಮುಖರಾಗಿಲ್ಲದಿದ್ದುದರಿಂದ ಕೋಲ್ಕತ್ತಾದ ಸಾಂಸ್ಕೃತಿಕ ಸಂಘದಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಪ್ರತಿದಿನ ಎನ್ನುವಂತೆ, ವೈದ್ಯರು ಬಂದು ಅವರನ್ನು ಪರೀಕ್ಷಿಸುತ್ತಿದ್ದರು. ವೈದ್ಯರು ಹೇಳಿದ ಮೇಲೆ, ಅವರು ಸೆಪ್ಟೆಂಬರ್ ೨೩ರಂದು ಬೇಲೂರು ಮಠಕ್ಕೆ ಬಂದರು. ಸಂಘದ ಅಧ್ಯಕ್ಷರಾದ ಮೇಲೆ ಅವರು ದೈನಂದಿನ ಕಾರ್ಯಕ್ರಮಗಳು, ಅವರ ಹೈದರಾಬಾದಿನ ಕಾರ್ಯ ಕ್ರಮಗಳಿಗಿಂತ ಭಿನ್ನವಾದವುಗಳಾಗಿದ್ದವು. ಹೈದರಾಬಾದಿನಲ್ಲಾದರೆ ಅವರಿಗೆ ಪುಸ್ತಕಗಳನ್ನು ಓದುವುದಕ್ಕೆ ಹೆಚ್ಚು ಸಮಯ ಸಿಗುತ್ತಿತ್ತು. ಭಕ್ತರು ಅವರನ್ನು ಯಾವಾಗ ಬೇಕಾದರೂ ಭೇಟಿಮಾಡಬಹುದಿತ್ತು. ಬೇಲೂರು ಮಠದಲ್ಲಿ, ಸಾಧುಗಳು ಮತ್ತು ಭಕ್ತರು ಬಂದು ಪ್ರಣಾಮ ಸಲ್ಲಿಸುವುದು ನಡೆದೇ ಇತ್ತು. ಆದರೆ ಅವರ ಓದಿನ ಹಾಗೂ ಬರವಣಿಗೆಯ ಅವಧಿ ಕಡಿಮೆಯಾಗುತ್ತಾ ಬಂದಿತು. ಒಂದು ಸಾಯಂಕಾಲ ನಾನು ಅವರ ಬಳಿಗೆ ಹೋದೆ. ಅದು ಭಕ್ತರು ಪ್ರಣಾಮ ಸಲ್ಲಿಸುವುದಕ್ಕಾಗಿ ಬರುವ ಸಮಯ. ಮಹಾರಾಜ್ ಅವರು ಪುಸ್ತಕವೊಂದನ್ನು ಆಸಕ್ತಿಯಿಂದ ಓದುತ್ತಿದ್ದರು. ಅದನ್ನು ಬಿಟ್ಟು ಬರುವುದು ಅವರಿಗೆ ಇಷ್ಟವಿರಲಿಲ್ಲ. ನಾನು ಅವರಿಗೆ ಮತ್ತೆ ಜ್ಞಾಪಿಸಿದಾಗ, ತಕ್ಷಣ ಅವರು "ಇಲ್ಲ, ಬಹಳ ಮುಖ್ಯವಾದ ಕೆಲಸವಿದೆ, ಇಂದು ಪ್ರಣಾಮ ಇಲ್ಲ" ಎಂದು ನಿಷ್ಠುರವಾಗಿ ಹೇಳಿದರು. ನನಗೆ ದಿಕ್ಕೇ ತೋರಲಿಲ್ಲ. ನಿಧಾನವಾಗಿ ನಾನು "ಮಹಾರಾಜ್, ನೀವು ಈ ರೀತಿ ಹೇಳಿದರೆ ಏನು ಮಾಡುವುದು? ಪ್ರತಿದಿನ ನೀವು ಪ್ರಣಾಮದ ಕಾರ್ಯಕ್ರಮಕ್ಕೆ ಹೋಗುತ್ತೀರಿ. ಇದ್ದಕ್ಕಿದ್ದ ಹಾಗೆ ಅದನ್ನು ಹೇಗೆ ನಿಲ್ಲಿಸುವುದು?" "ಆದರೆ ಇಂದಿನ ವಿಷಯ ಬೇರೆ. ಇಂದು

ಪ್ರಾಣಾಮ ಇಲ್ಲ" ಎಂದು ಹೇಳಿ ಮತ್ತೆ ಪುಸ್ತಕದ ಓದನ್ನು ಮತ್ತೆ ಮುಂದುವರೆಸಿದರು. "ಮಹಾರಾಜ್, ಇದಕ್ಕಾಗಿ ನಾವು ವೇಳೆಯನ್ನು ನಿಗದಿಪಡಿಸಿದ್ದೇವೆ, ಅವರೆಲ್ಲರೂ ಕಾಯುತ್ತಿದ್ದಾರೆ. ಅದನ್ನು ಈಗ ರದ್ದುಪಡಿಸುವುದು ಹೇಗೆ?" "ವೇಳೆಯನ್ನು ನಿಗದಿಪಡಿಸಬೇಕಾದರೆ ಯಾರೂ ನನ್ನನ್ನು ಕೇಳಲಿಲ್ಲ. ಆದ್ದರಿಂದ ನಾನೀಗ ಬರುವುದಿಲ್ಲ. ಬಹಳ ಮುಖ್ಯವಾದ ಕೆಲಸವಿದೆ." ಅವರು ಬರಲು ಸುತರಾಂ ಸಿದ್ಧರಿರಲಿಲ್ಲ. ಮತ್ತೆ ಅವರನ್ನು ಪೀಡಿಸಿದೆ "ಮಹಾರಾಜ್, ಇದು ಸರಿಯಲ್ಲ. ಭಕ್ತರಿಗೆ ಹಿಂದುರಿಗಿ ಹೋಗಿ ಎಂದು ಹೇಗೆ ಹೇಳುವುದು? ಅವರು ಕೋಪಗೊಳ್ಳುತ್ತಾರೆ." "ಹಾಗಿದ್ದರೆ ನೀನೇ ಹೋಗಿ ಕುಳಿತುಕೊ" ಮುಖದ ಮೇಲೆ ಹೊಡೆದ ಹಾಗೆ ಬಂದಿತು ಅವರ ಉತ್ತರ. "ಮಹಾರಾಜ್, ನಾನು ಅಲ್ಲಿ ಕುಳಿತರೆ, ಅವರು ನನ್ನನ್ನು ಚಚ್ಚಿಹಾಕುತ್ತಾರೆ ಅಷ್ಟೇ ಅಲ್ಲ, ನನ್ನನ್ನು ಸಾಯಿಸಲೂಬಹುದು. ನೀವು ಮಾತ್ರ ಅಲ್ಲಿ ಕುಳಿತುಕೊಳ್ಳಬಹುದು." "ನೀನು ನನಗೆ ಬಹಳಷ್ಟು ತೊಂದರೆ ಕೊಡುತ್ತಿದ್ದೀಯೆ. ಅಲ್ಲಿ ಅಷ್ಟೊಂದು ಮಂದಿರಗಳಿವೆ, ಅಷ್ಟೊಂದು ಸಾಧುಗಳಿದ್ದಾರೆ. ಅವರೆಲ್ಲಾ ಬಂದು ನನಗೆ ಏಕೆ ಕಾಯಬೇಕು?" ಅವರ ಓದುವಿಕೆ ಮುಂದುವರೆದೇ ಇತ್ತು. ಇದ್ದಕ್ಕಿದ್ದ ಹಾಗೆ ನನ್ನ ಮನಸ್ಸಿಗೆ ಒಂದು ವಿಷಯ ಹೊಳೆಯಿತು. "ಹೌದು ಮಹಾರಾಜ್, ಅಲ್ಲಿ ಬಹಳ ಜನ ಸಾಧುಗಳಿದ್ದಾರೆ, ಒಪ್ಪುತ್ತೇನೆ. ಆದರೆ ಅವರಿಗೆಲ್ಲಾ ಇರುವುದು ಒಬ್ಬರೇ ಅಧ್ಯಕ್ಷ ಮಹಾರಾಜ್. ಅದಕ್ಕೆಂದೇ ಅವರೆಲ್ಲಾ ಇಲ್ಲಿಗೆ ಬಂದಿದ್ದಾರೆ. ಇಲ್ಲದಿದ್ದರೆ, ಅವರು ನಿಮಗೆ ತೊಂದರೆ ಕೊಡುತ್ತಿರಲಿಲ್ಲ" ಎಂದೆ. ಕಡೆಗೆ ಇದು ಫಲಕಾರಿಯಾಯಿತು. "ಮುಟ್ಠಾಳ! ನನ್ನ ತಂಗಿಯನ್ನು ತಾ" ಎಂದು ಹೇಳಿ, ತಮ್ಮ ಕೈಯಲ್ಲಿದ್ದ ಪುಸ್ತಕವನ್ನು ಕೆಳಗಿಟ್ಟು ಸಿದ್ಧರಾದರು.

೨೦೦೧ರ ಏಪ್ರಿಲ್ ೪ರಂದು ಮಹಾರಾಜ್ ಅವರಿಗೆ, ಅವರು ಬೆಂಗಳೂರಿಗೆ ಭೇಟಿ ನೀಡಿದ್ದಾಗ, ಮಿದುಳಿನ ಆಘಾತವಾಯಿತು. ಅಲ್ಲಿಯವರೆಗೆ ಅವರು ಹತ್ತಿರದ ಸ್ಥಳಗಳಿಗೆ ಹೋಗುವುದಕ್ಕೆ ಕಾರನ್ನು ಬಳಸುತ್ತಿರಲಿಲ್ಲ. ದಿನದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಶಾರದಾ ಪೀಠಕ್ಕೆ ಹೋಗುವಾಗಲೂ ಅವರು ಹಾಸಿಗೆಯಿಂದ ಕುರ್ಚಿಯ ಕಡೆಗೆ ಹೋಗಲು ಪ್ರಯತ್ನಿಸುತ್ತಿದ್ದರು. ನಾನು ಅವರನನು ಹಿಡಿದುಕೊಳ್ಳಲು ಹೋದಾಗ, ಮಧುರವಾದ ನಗೆಯೊಂದನನು ಬೀರಿ "ನೀನು ಅಲ್ಲಿ ನಿಂತಿರು. ಬೇರೆಯವರ ಸಹಾಯವಿಲ್ಲದೇ ಹೇಗೆ ಅಲ್ಲಿಗೆ ಹೋಗುವುದು ಎಂಬುದನ್ನು ತೋರಿಸಿಕೊಡುತ್ತೇನೆ" ಎಂದರು. "ಮಹಾರಾಜ್, ನೀವು ಇತರರ ಸಹಾಯವಿಲ್ಲದೆ ಏನನ್ನಾದರೂ ಮಾಡಬಲ್ಲಿರಿ ಎಂಬುದು ನನಗೆ ಗೊತ್ತು. ಆದರೆ ನೀವು ನನ್ನ ಕೈಯನ್ನು ಮುಟ್ಟಿದರೆ, ಅದು ನನ್ನಲ್ಲಿ ಏನಾದರೂ ಉತ್ತಮ ಬದಲಾವಣೆಯನ್ನು ತರಬಹುದು" ಎಂದು, ನನ್ನ ಹಣೆಯನ್ನು ತೋರಿಸಿದೆ. ಅವರು ನಗುತ್ತಾ "ಓಹ್, ಹಾಗಾದರೆ ಬಾ ಇಲ್ಲಿ" ಎಂದರು. ಮತ್ತೊಂದು ದಿನ ಇದೇ ಪುನರಾವರ್ತನೆ ಯಾಯಿತು. ಆದರೆ ಸಂಭಾಷಣೆ ಮಾತ್ರ ಬೇರೆ. ಅವರು ಆ ಕುರ್ಚಿಯತ್ತ ಹೋಗಲು ಪ್ರಯತ್ನಿಸುತ್ತಿದ್ದರು. ನಾನು ಹಿಡಿದುಕೊಳ್ಳಲು ಹೋದೆ. "ಬೇಡ, ಅಗತ್ಯವಿಲ್ಲ. ಈ ಕೋಲು ಸಾಕು" ಎಂದು ತಮ್ಮ ಮಂಚಕ್ಕೆ ಹಾಕಿದ್ದ ಸೊಳ್ಳೆ ಪರದೆಯ ಕೋಲನ್ನು ತೋರಿಸಿದರು. ಮತ್ತೆ ನಾನು ನನ್ನ ತಲೆಯನ್ನು ಉಪಯೋಗಿಸಬೇಕಾಯಿತು. ನನ್ನ ಕೈಯನ್ನು ಮುಂದೆ ಚಾಚುತ್ತಾ ಹೇಳಿದೆ "ಮಹಾರಾಜ್, ಇದು ಜೀವವಿರುವ ಕೋಲು, ಇದು ನಿಮ್ಮೊಂದಿಗೆ ಚಲಿಸಬಲ್ಲದು. ಆದರೆ ಅದು ಜಡವಾಗಿರುವ ಕೋಲು, ಇದರ ಹಾಗೆ ಚಲಿಸಲಾರದು." ಆಗ ನಗುತ್ತಾ ನನ್ನ ಕೈಯನ್ನು ಹಿಡಿದು ಕೊಂಡರು.

ಕೆಲವು ವೇಳೆ ನನ್ನ ತಲೆಯೂ ಪ್ರಯೋಜನಕ್ಕೆ ಬರುತ್ತಿರಲಿಲ್ಲ. ಒಂದು ದಿನ ಕೋಣೆಗೆ ಆಹಾರವನ್ನು ತೆಗೆದುಕೊಂಡು ಹೋದೆ. ಅವರು ಬಂದು ಕುರ್ಚಿಯ ಮೇಲೆ ಕುಳಿತು ಹೇಳಿದರು. "ಇಂದು ನನ್ನ ಹೊಟ್ಟೆ ಸರಿಯಿಲ್ಲ. ಮೂರು ನಾಲ್ಕು ಚಮಚ ಮಾತ್ರ ತೆಗೆದುಕೊಳ್ಳುತ್ತೇನೆ. ಹೆಚ್ಚಿಗೆ ತೆಗೆದುಕೊಳ್ಳಲು ಆಗುವುದಿಲ್ಲ." ನಾನು ತಂದಿದ್ದ ಆಹಾರದಲ್ಲಿ ಚಮಚದ ತುಂಬ ತೆಗೆದುಕೊಂಡು ನಾಲ್ಕು ಬಾರಿ ಬೇರೆ ಒಂದು ತಟ್ಟೆಗೆ ಹಾಕಿದೆ. ಮಹಾರಾಜ್ ಅವರು ಅದನ್ನು ಅರ್ಥಮಾಡಿಕೊಂಡು "ನೀನು ಚಮಚದಲ್ಲಿ ತುಂಬಿಕೊಂಡಿರುವುದು ಬೆಟ್ಟದ

ಹಾಗಿದೆ. ಒಂದು ಚಮಚ ದಲ್ಲಿರುವುದೇ ನಾಲ್ಕು ಚಮಚಕ್ಕೆ ಆಗುವಷ್ಟು ಇರುವ ಹಾಗೆ ಕಾಣಿಸುತ್ತದೆ" ಎಂದರು. "ಮಹಾರಾಜ್, ಅದು ಹಾಗಲ್ಲ, ನೀವು ಸರಿಯಾಗಿ ಆಹಾರವನ್ನು ತೆಗೆದುಕೊಳ್ಳದೆ ಹೋದರೆ ನೀವು ನಿಶ್ಶಕ್ತರಾಗುತ್ತೀರಿ" ಎಂದೆ. "ನೀನು ಅದರ ಬಗ್ಗೆ ಯೋಚಿಸಬೇಡ. ನಿನ್ನ ಕೆಲಸವನ್ನು ನೀನು ಸರಿಯಾಗಿ ಮಾಡು. ನನಗೆ ಹೆಚ್ಚು ಉಣಿಸುವುದಕ್ಕೆಂದು ನನ್ನ ಮೇಲೆ ಅತಿಶಯವಾದ ಪ್ರೀತಿಯನ್ನು ತೋರಬೇಡ. ಸುಳ್ಳಾಡಬೇಡ. ಒಂದು ಚಮಚದಲ್ಲಿ ಸಹಜವಾಗಿ ಎಷ್ಟು ಹಿಡಿಸಬಹುದೋ ಅಷ್ಟನ್ನು ಮಾತ್ರ ಹಾಕು" ಎಂದು ಸ್ವಲ್ಪ ಜೋರಾಗಿಯೇ ಹೇಳಿದರು. ಆದರೆ ನಾನು ಬಿಡಲಿಲ್ಲ. "ಹಾಗೇಕೆ ಮಾಡಬಾರದು ಮಹಾರಾಜ್, ಠಾಕುರ್ ಅವರಿಗೆ ಆಹಾರ ನೀಡುವಾಗ ಶ್ರೀಮಾತೆ ಯವರೂ ಹೀಗೆಯೇ ಮಾಡುತ್ತಿದ್ದರೆಂದು ಕೇಳಿದ್ದೇನೆ" ಎಂದೆ. ಅವರಿಗಾಗಿ ತಂದಿದ್ದ ಅನ್ನದೊಂದಿಗೆ ಮೊಸರನ್ನು ಕಲಸುತ್ತಾ ಶ್ರೀಮಾತೆಯವರ ಜೀವನದ ಪ್ರಸಂಗವನ್ನು ನನ್ನ ಸಹಾಯಕ್ಕೆ ತೆಗೆದುಕೊಂಡಿದ್ದೆ. ಆದರೆ ಥಟ್ಟೆಂದು ಬಂತು ಅವರಿಂದ ಉತ್ತರ, "ಅದು ಅವರಿಗೆ ಸರಿ. ನೀನು ಮಾತೆಯವರೂ ಅಲ್ಲ, ನಾನು ಠಾಕೂರ್ ಕೂಡ ಅಲ್ಲ. ನಿನ್ನ ಕೆಲಸವನ್ನು ನೀನು ಪ್ರಾಮಾಣಿಕವಾಗಿ ಮಾಡು." ನನಗೆ ನಗುವನ್ನು ತಡೆಯಲಾಗಲಿಲ್ಲ.

ಮಹಾರಾಜ್ ಅವರ ನಡವಳಿಕೆ, ಅನೇಕರಿಗೆ ತಿಳಿದಿರುವಂತೆ ಬಹಳ ಶಿಷ್ಟತೆಯಿಂದ ಕೂಡಿರುತ್ತಿತ್ತು. ಅವರಿಗೆ ಕೋಪ ಬಂದರೂ, ಅದು ಇರುತ್ತಿದ್ದುದು ಕೇವಲ ಒಂದು ಅಥವಾ ಎರಡು ನಿಮಿಷಗಳ ಕಾಲ. ಅವರು ನಮ್ಮೊಡನೆ ಒಡನಾಡುತ್ತಿದ್ದ ರೀತಿ ನಿಜಕ್ಕೂ ಅದ್ಭುತ. ನಮ್ಮ ನಡುವೆ ಇದ್ದ ಸಂಬಂಧ ಅಂತಃಕರಣ ಜೀವಿಯಾದ ತಂದೆಯೊಡನೆ ಮಕ್ಕಳಿಗೆ ಇರುವ ಸಂಬಂಧ. ಒಮ್ಮೆ ಮಹಾರಾಜ್ ಅವರಿಂದ ದೀಕ್ಷೆ ಪಡೆದ ಒಂದು ಹುಡುಗಿ ನನ್ನನ್ನು ಕೇಳಿದಳು "ನೀವು ಎಷ್ಟೊಂದು ವರ್ಷಗಳಿಂದ ಮಹಾರಾಜ್ ಅವರ ಸಂಗಡ ಇದ್ದೀರಿ. ಅವರ ಬಗ್ಗೆ ನಿಮ್ಮ ಅಭಿಪ್ರಾಯವೇನು? ಅವರು ಸಾಕ್ಷಾತ್ಕಾರ ಪಡೆದ ಜೀವಿಯೇ?" ನನಗೆ ಕಕ್ಕಾಬಿಕ್ಕಿ ಯಾಯಿತು. ಇಂತಹ ಪ್ರಶ್ನೆಯನ್ನು ನಾನು ಎಂದೂ ಎದುರಿಸಿರದ ಕಾರಣ, ನನಗೆ ಆಕೆಯ ಪ್ರಶ್ನೆಗೆ ಹೇಗೆ ಉತ್ತರಿಸಬೇಕೆಂದು ತಿಳಿಯಲಿಲ್ಲ. "ಈ ಸಾಕ್ಷಾತ್ಕಾರದ ಬಗ್ಗೆ ಮಾತನಾಡಲು ನಾನು ಅರ್ಹನಲ್ಲ. ಆದ್ದರಿಂದ ನಿನ್ನ ಪ್ರಶ್ನೆಗೆ ಉತ್ತರ ನನ್ನ ಬಳಿ ಇಲ್ಲ. ಆದರೆ ಮಹಾರಾಜ್ ಅವರು ಒಬ್ಬ ಶಿಷ್ಟ ಮನುಷ್ಯರೆಂಬುದರ ಬಗ್ಗೆ ನನಗೆ ಎಳ್ಳಷ್ಟೂ ಸಂದೇಹವಿಲ್ಲ" ಎಂದೆ. ಆ ಹುಡುಗಿ ಏನನ್ನೂ ಮಾತನಾಡದೆ ಹಿಂದಿರುಗಿದಳು. ಅವಳ ಮನಸ್ಸಿನ ಭಾವನೆಗಳು ನನಗೆ ಗೊತ್ತಾಗಲಿಲ್ಲ. ಆದರೆ ಈ ವಿಷಯ ಅಲ್ಲಿಗೇ ಮುಗಿಯಲಿಲ್ಲ. "ನಾನು ಹಾಗೆ ಹೇಳಿದುದು ಸರಿಯೇ?" ಎಂಬ ಪ್ರಶ್ನೆ ನನ್ನ ಹೃದಯವನ್ನು ಚುಚ್ಚುತ್ತಿತ್ತು. ಒಂದು ದಿನ ಅವರಿಗೆ ಆಹಾರವನ್ನು ಕೊಡುತ್ತಿದ್ದಾಗ ಈ ಪ್ರಶ್ನೆಯನ್ನು ಅವರ ಮುಂದಿಟ್ಟೆ. "ಮಹಾರಾಜ್, ಕೆಲವು ದಿನಗಳ ಹಿಂದೆ ಒಂದು ಹುಡುಗಿ ಬಂದು ಇದ್ದಕ್ಕಿದ್ದ ಹಾಗೆ ನೀವು ಸಾಕ್ಷಾತ್ಕಾರವನ್ನು ಪಡೆದ ಜೀವಿಯೇ ಎಂದು ಕೇಳಿದಳು" ನಿಧಾನವಾಗಿ ಆರಂಭಿಸಿದೆ. ಆಹಾರವನ್ನು ಜಗಿಯುತ್ತಾ, ನನ್ನನ್ನು ಉತ್ತೇಜಿಸುವಂತೆ ಮಹಾರಾಜ್ ಅವರು "ಹೌದೇ? ಕುತೂಹಲ ಕಾರಿಯಾಗಿದೆ! ಮುಂದೆ?" ಕೇಳಿದರು. "ನಾನು ಈ ವಿಷಯದಲ್ಲಿ ಮಾತನಾಡಲು ನಾನು ಅರ್ಹನಲ್ಲ. ಆದರೆ ಇಷ್ಟು ಮಾತ್ರ ನನಗೆ ಖಾತ್ರಿಯಾಗಿ ಗೊತ್ತು. ಅವರೊಬ್ಬ ಸಭ್ಯ ಮನುಷ್ಯ. ನಾನು ಹೀಗೆ ಹೇಳಿದುದು ಸರಿಯೋ ತಪ್ಪೋ ಎಂಬುದು ನನಗೆ ಗೊತ್ತಿಲ್ಲ" ಎಂದೆ. ಅವರ ಪ್ರತಿಕ್ರಿಯೆ ಏನಿರಬಹುದೆಂದು ನಾನು ಆತಂಕದಿಂದಿದ್ದೆ. ಆದರೆ ಮಹಾರಾಜ್ ಅವರು ನಗುತ್ತಾ ಹೇಳಿದರು "ನೀನು ಹೇಳಿದುದು ಸರಿಯಾಗಿಯೇ ಇದೆ" ಎಂದರು. ನಾನು ಹೇಳಿದುದು ಸಂಪೂರ್ಣವಾಗಿ ಸರಿಯಾಗಿಯೇ ಇದೆ ಎಂಬುದನ್ನು ಅವರ ಮಾತುಗಳು ದೃಢಪಡಿಸಿತು.

ಅವರ ಶಿಷ್ಟತೆಯ ಇನ್ನೊಂದು ಪ್ರಕರಣ. ಒಂದು ದಿನ ನಾನು ಅವರ ಉಪಾಹಾರವನ್ನು ತಂದು ಅವರಿಗೆ ಊಡಿಸಲು ಆರಂಭಿಸಿದ ತಕ್ಷಣವೇ ಅವರು, "ನನ್ನ 'ಉಪನಿಷತ್ತುಗಳ ಸಂದೇಶ'ವನ್ನು ತೆಗೆದುಕೊಂಡು ಬಾ" ಎಂದರು. ಸಾಮಾನ್ಯವಾಗಿ ಅವರು ಆಹಾರವನ್ನು ಸೇವಿಸುತ್ತಿದ್ದಾಗ ಅವರಿಗೆ ಯಾವ ಪುಸ್ತಕವನ್ನೂ, ಅವರ

ಗಮನ ಬೇರೆ ಕಡೆಗೆ ತಿರುಗುತ್ತದೆಂಬ ಕಾರಣದಿಂದ, ನಾವು ಕೊಡುತ್ತಿರಲಿಲ್ಲ. ಆದ್ದರಿಂದ ನಾನು "ಮಹಾರಾಜ್ ನಿಮ್ಮ ಉಪಾಹಾರವಾದ ಮೇಲೆ ತಂದು ಕೊಡುತ್ತೇನೆ" ಎಂದೆ. ಅವರಿಗೆ ಆಹಾರ ಊಡಿಸುವಷ್ಟರಲ್ಲಿ ಹತ್ತರಿಂದ ಹದಿನೈದು ನಿಮಿಷಗಳಾಯಿತು. ಪುಸ್ತಕದ ವಿಷಯವನ್ನು ಸಂಪೂರ್ಣವಾಗಿ ಮರೆತು ನಾನು ಕೋಣೆಯಿಂದ ಹೊರಟುಹೋದೆ. ಸ್ವಲ್ಪ ಸಮಯದ ನಂತರ ಅವರ ಕೋಣೆಗೆ ಮತ್ತೆ ಬಂದಾಗ, ಅವರು ಅದೇ ಪುಸ್ತಕವನ್ನು ಓದುತ್ತಿದ್ದುದು ಕಾಣಿಸಿತು. ಅವರ ಬಳಿಗೆ ಹೋಗಿ, ಕೆಳದನಿಯಲ್ಲಿ "ಕ್ಷಮಿಸಿ ಮಹಾರಾಜ್, ನಾನು ನಿಮಗೆ ತಂದುಕೊಡಬೇಕಿದ್ದ ಆ ಪುಸ್ತಕದ ವಿಷಯವನ್ನು ಸಂಪೂರ್ಣವಾಗಿ ಮರೆತೇಬಿಟ್ಟಿದ್ದೆ" ಎಂದೆ. "ಹ್ಞಂ! ಇಲ್ಲಿ ನೋಡಿದೆ, ಅದು ಇರಲಿಲ್ಲ; ಅದು ಅಲ್ಮೈರಾದಲ್ಲಿರಬೇಕೆಂದು ಅಲ್ಲಿ ಹೋಗಿ ನೋಡಿ ತೆಗೆದುಕೊಂಡೆ" ಎಂದು ಏನೂ ಆಗದವರಂತೆ ಆದರೆ ಗಂಭೀರವಾದ ಧ್ವನಿಯಲ್ಲಿ, ತಾವು ಓದುತ್ತಿದ್ದ ಪುಸ್ತಕದಿಂದ ಕಣ್ಣನ್ನು ಮೇಲೆತ್ತದೆ, ಹೇಳಿದರು. ಅಷ್ಟಲ್ಲದೆ ಅವರಿಂದ ಬೇರಾವುದೇ ಪ್ರತಿಕ್ರಿಯೆ ಬರಲಿಲ್ಲ.

ತಾವು ಮತ್ತೆ ಹುಟ್ಟಿ ಬಂದು ಸ್ವಾಮಿ ವಿವೇಕಾನಂದರ ಕೆಲಸವನ್ನು ಮುಂದು ವರೆಸುವುದಾಗಿ ಹೇಳುತ್ತಿದ್ದರು. ಅವರಿಗೆ ಅದರಲ್ಲಿ ಅಷ್ಟೊಂದು ಉತ್ಸಾಹ! ಒಂದು ದಿನ ಅವರ ದೈನಂದಿನ ಓಡಾಟದ ಸಮಯದಲ್ಲಿ ನಮಗೆ ಹೇಳಿದರು "ನಾನು ಸತ್ತ ನಂತರ, ಮುಂದಿನ ಜನ್ಮದಲ್ಲಿ ಪುನಃ ಬಂದು ಸಂಘಕ್ಕೆ ಸೇರುತ್ತೇನೆ." "ಮತ್ತೆ ಯಾವಾಗ (ಹುಟ್ಟುತ್ತೀರಿ) ಮಹಾರಾಜ್?" ಎಂದು ನಮ್ಮಲ್ಲಿ ಒಬ್ಬರು ಕೇಳಿದರು. "ಬಹುಶಃ ನನ್ನ ಸಾವಿನ ನಂತರ, ಆದಷ್ಟು ಬೇಗನೆ." "ಆಗ ನೀವು ನನ್ನನ್ನು ಗುರುತಿಸಬಲ್ಲಿರಾ?" ಎಂದು ನಾನು ತಮಾಷೆಗಾಗಿ ಕೇಳಿದೆ. ಅವರು ಅದೇ ತಮಾಷೆಯ ದನಿಯಲ್ಲಿ, "ಇಲ್ಲ, ಇಲ್ಲ, ಅಷ್ಟುಹೊತ್ತಿಗೆ ನೀನು ಒಬ್ಬ ದೊಡ್ಡ ಸಾಧುವಾಗಿರುತ್ತೀಯೆ" ಎಂದು ತಮ್ಮ ಕೈಯನ್ನು ಮೇಲೆ ಎತ್ತಿ ಎತ್ತರವನ್ನು ಸೂಚಿಸುವಂತೆ ಹೇಳಿದರು. ಅಲ್ಲಿದ್ದವರಿಗೆಲ್ಲಾ ನಗು. "ನಾನು ಸಾವಿಗೆ ಹೆದರುವುದಿಲ್ಲ" ಎಂದು ಅವರು ಹಲವಾರು ಬಾರಿ ಹೇಳಿದ್ದರು. ಯಾರಾದರೂ ಭಕ್ತರು ಅವರ ಬಳಿ ಬಂದು ತಮ್ಮ ತಂದೆ, ತಾಯಿ, ಸೋದರ, ಸೋದರಿ, ಸ್ನೇಹಿತರು ಅಥವಾ ಇನ್ನಾರದ್ದಾದರೂ ಸಾವಿನ ವಿಷಯವನ್ನು ತಿಳಿಸಿದರೆ, ಮಹಾರಾಜ್ ಅವರು ಅವರನ್ನು ಸಂತೈಸುತ್ತಾ "ಜೀವನ ಮತ್ತು ಸಾವು ಯಾರೊಬ್ಬರ ಕೈಯಿನಲ್ಲಿಯೂ ಇರುವುದಿಲ್ಲ ಎಂದು ಪರಮಹಂಸರು ಹೇಳುತ್ತಿದ್ದರು. ಅದು ಯಾವಾಗಲೇ ಬರಲಿ, ನಾವು ಅದನ್ನು ಒಪ್ಪಿಕೊಳ್ಳಬೇಕು. ಸುಮ್ಮನೆ ಅಳುವುದರಿಂದ ಏನು ಬಂದಹಾಗೆ ಆಗುತ್ತದೆ? ಬದಲಿಗೆ, ಅಗಲಿದ ವ್ಯಕ್ತಿಗಾಗಿ ಪ್ರಾರ್ಥಿಸೋಣ. ಅದು ಆ ವ್ಯಕ್ತಿಗೆ ಬಹಳಷ್ಟು ನೆರವಾಗುತ್ತದೆ" ಎನ್ನುತ್ತಿದ್ದರು. ನಿಜವಾಗಿ ಇದು ಅನುಸರಿಸಲು ವಿವೇಕಯುತವಾದ ಮತ್ತು ವ್ಯಾವಹಾರಿಕವಾದ ಬುದ್ಧಿವಾದ.

ಪೂಜ್ಯ ಮಹಾರಾಜ್ ಅವರು ನಮ್ಮೊಡನೆ ಇಲ್ಲ. ಅವರ ಸಾವಿನ ಬಗ್ಗೆ ದುಃಖಿಸುತ್ತಾ ಕೂರುವುದರ ಬದಲು, ಅವರಿಗೆ ಪ್ರಿಯವಾಗಿದ್ದ, ಸ್ವಾಮಿ ವಿವೇಕಾನಂದರು ಪ್ರಾರಂಭಿಸಿದ, ಸೇವಾ ಚಟುವಟಿಕೆಗಳಲ್ಲಿ ನಮ್ಮನ್ನು ನಾವು ತೊಡಗಿಸಿ ಕೊಳ್ಳುವುದು ಉತ್ತಮ. ಹೀಗೆ ಮಾಡುವುದರ ಮೂಲಕ, ನಮ್ಮ ನಡುವ ಸುಂಟರಗಾಳಿಯಂತೆ ಕ್ರಿಯಾಶೀಲರಾಗಿದ್ದ, ತಮ್ಮ ಮುಂದಾಳುಗಳ ಅತ್ಯಂತ ನಿಷ್ಠಾವಂತ ಅನುಯಾಯಿಯಾಗಿದ್ದ, ನಮ್ಮ ನೆಚ್ಚಿನ, ಪೂಜ್ಯ ಮಹಾರಾಜ್ ಅವರಿಗೆ ನಮ್ಮ ಹೃದಯಪೂರ್ವಕ ಗೌರವವನ್ನು ತೋರಿಸಿದ ಹಾಗಾಗುತ್ತದೆ ಎಂಬುದು ನನ್ನ ನಂಬಿಕೆ.

* * * *

# ೧೩೪. ಪ್ರಾಯೋಗಿಕ ವೇದಾಂತದ ಸರ್ವೋತ್ತಮ ಭಾಷ್ಯಕಾರ

–ದೀಪಂಕರ್ ಮುಖ್ಯೋಪಾಧ್ಯಾಯ*

ತಾವು 'ವೇದಮೂರ್ತಿ' ಎಂದು ಸೂಕ್ತವಾಗಿ ಬಣ್ಣಿಸಿದ ಶ್ರೀ ರಾಮಕೃಷ್ಣರ ಅತ್ಯುತ್ತಮ ಭಾಷ್ಯವೇ ಆಗಿದ್ದ ಸ್ವಾಮಿ ವಿವೇಕಾನಂದರಂತೆ, ಸ್ವಾಮಿ ವಿವೇಕಾನಂದರ ಪ್ರಾಯೋಗಿಕ ವೇದಾಂತದ ಭಾಷ್ಯದ ಸಾಕಾರವೇ ಆಗಿದ್ದರು ಸ್ವಾಮಿ ರಂಗಾನಾಥಾನಂದರು.

ಅವರಿಗೇ ಅನನ್ಯವಾಗಿದ್ದ ಸರಳತೆ ಹಾಗೂ ನಿಶ್ಚಿತವಾದ ಅಭಿಪ್ರಾಯಗಳಿಂದ, ಸಾಕ್ಷಾತ್ಕಾರವೇ ಜೀವನದ ಪರಮ ಗುರಿಯೆಂಬುದನ್ನು ಸಾರಿದ ಶ್ರೀ ರಾಮಕೃಷ್ಣರು ಸಾರ್ವಕಾಲಿಕವಾದ ಒಗಟನ್ನು ಬಿಡಿಸಿದ್ದರು. ಅವರು ತಮ್ಮ ಮಾತೆಯನ್ನು ಎಲ್ಲದರಲ್ಲಿಯೂ ಕಾಣುವ ಮೂಲಕ ವೇದಾಂತದ ಮೂರ್ತಸ್ವರೂಪವೇ ಆಗಿದ್ದರು. ಕೇವಲ ಸಾಪೇಕ್ಷವಾಗಿ ಸತ್ಯವಾಗಿರುವ, ಎಲ್ಲರನ್ನೂ ಒಳಗೊಂಡಿರುವ ಸತ್ಯದ ಪ್ರತಿಬಿಂಬವಾಗಿರುವ ಈ ಆಭಾಸಿಕ ವೈವಿಧ್ಯದಲ್ಲಿ ಏಕರೂಪವಾಗಿರುವ ಆ ಕಾರಣವನ್ನು, ಜಗತ್ಕಾರಣವನ್ನು, ಪರಮ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಲು ಮಾಡುವ ಪ್ರಯತ್ನವೇ ಅವರ ಎಲ್ಲ ಉಪದೇಶದ ಸಾರ.

ಜೀವನವೆನ್ನುವುದು ವಾಸ್ತವವಾಗಿ ಇರುವುದು ಮತ್ತು ಸತತವಾಗಿ ಬದಲಾಗುತ್ತಿರುವುದೇ ಆಗಿದೆ. ಪ್ರತಿಯೊಂದು ಆತ್ಮವೂ ದೈವಿಕವಾದುದು, ಈ ದೈವಿಕತೆಯನ್ನು ಜ್ಞಾನ, ಭಕ್ತಿ, ನಿಷ್ಕಾಮ ಕರ್ಮ ಮತ್ತು ಮಾನಸಿಕ ತರಬೇತಿಗಳ ಮೂಲಕ ಸಾಕ್ಷಾತ್ಕರಿಸಿ ಕೊಳ್ಳುವುದು ನಮ್ಮ ಕರ್ತವ್ಯ ಎನ್ನುವ ಮೂಲಕ ಸ್ವಾಮಿ ವಿವೇಕಾನಂದರು ಶ್ರೀ ರಾಮಕೃಷ್ಣರ ವಿಚಾರಗಳನ್ನೇ ಇನ್ನಷ್ಟು ವಿಶಾಲ ಭಿತ್ತಿಯ ಮೇಲೆ ಚಿತ್ರಿಸಿದರು. ದೈವತ್ವವನ್ನು ಸಂಪಾದಿಸಲು, ಸಾಕ್ಷಾತ್ಕಾರವನ್ನು ಪಡೆಯಲು ಸೇವೆಯು ಒಂದು ಮಾರ್ಗ ಎಂದು ಪ್ರತಿಪಾದಿಸಿದ ಅವರು 'ಮಾನವ ಸೇವೆಯ ಮೂಲಕ ದೈವದ ಜ್ಞಾನವನ್ನು ಪಡೆಯಬಹುದು' ಎಂದ ಶ್ರೀ ರಾಮಕೃಷ್ಣರ ಸಂದೇಶಕ್ಕೆ ಕ್ರಿಯಾಶೀಲವಾದ ಒಂದು ಸ್ವರೂಪವನ್ನು ಕೊಟ್ಟರು.

ಈ ವಿಶ್ವದ ಹಿಂದಿರುವ ಸಾರ್ವಕಾಲಿಕ ನಿಗೂಢತೆಯನ್ನು ಭೇದಿಸುವುದೇ, ಆನಂದಮಯವಾಗಿರುವ ಹಾಗೆಯೇ ಒಂದು ಸವಾಲೂ ಆಗಿರುವ ನಮ್ಮ ಇಲ್ಲಿನ ಜೀವನದ ಉದ್ದೇಶವಾಗಿದೆ ಎನ್ನುವುದರ ಮೂಲಕ ಸ್ವಾಮಿ ರಂಗನಾಥಾನಂದರು ಸ್ವಾಮಿ ವಿವೇಕಾನಂದರು ಹೇಳಿದ ಅಂಶವನ್ನು ಮತ್ತಷ್ಟು ವಿಸ್ತರಿಸಿದರು. ಈ ಮೂಲಕ ನಾವು ನಮ್ಮ ಜೀವನವನ್ನು ಕ್ರಿಯಾಶೀಲವನ್ನಾಗಿಸಿಕೊಳ್ಳಬಹುದು ಮತ್ತು ಇದು ಆತ್ಮಾನ್ವೇಷಣೆಯ ಮೂಲಕ ನಮ್ಮ ಅಂತಿಮ ಗುರಿಯನ್ನು ಸಾಧಿಸಿಕೊಳ್ಳ ಬಹುದು ಎಂದು ಹೇಳಿದರು. ಇದು ಸಂನ್ಯಾಸಿಗಳಿಗೆ ಮತ್ತು ಸಾಮಾನ್ಯವಾದ ಗೃಹಸ್ಥರಿಗೂ ಸಮಾನವಾಗಿ ಅನ್ವಯವಾಗುತ್ತದೆ ಎಂಬುದನ್ನೂ ವಿವರಿಸಿದರು.

ನಾವು ಮಾಡುವ ಎಲ್ಲ ಕರ್ಮಗಳಲ್ಲಿಯೂ ಈ ಸೃಷ್ಟ್ಯಾತ್ಮಕ ಪ್ರವೃತ್ತಿಯೇ ಮೂಲ ಮಂತ್ರವಾಗಬೇಕು. ನಮ್ಮ ದೈನಂದಿನ ಬದುಕು ಕೇವಲ ಗಾಣದೆತ್ತಿನ ಬದುಕಾಗ ಬಾರದು. ಅವರ ಪ್ರಕಾರ, ಹೊಸತನವನ್ನು ಅರಸುವ ಪ್ರವೃತ್ತಿ, ಸರ್ಜನಶೀಲತೆ ಈ ಐಹಿಕ ಜೀವನಕ್ಕೆ ಆನಂದವನ್ನು ತುಂಬುತ್ತದೆ. ಆದರೆ, ಅದರ ಹಿಂದಿರುವ ಒಂದು ಪೂರ್ವಭಾವಿ ಷರತ್ತೆಂದರೆ ಒಳ್ಳೆಯವನಾಗಿರಬೇಕು, ಒಳ್ಳೆಯದನ್ನು ಮಾಡಬೇಕು ಎಂಬ ಪ್ರೇರಣೆ ಒಳಗಿನಿಂದ ಬರಬೇಕು.

---

* ಪಶ್ಚಿಮ ಬಂಗಾಳ ಸರಕಾರದ ಅರ್ಥಸಚಿವಾಲಯದ ಮುಖ್ಯ ಕಾರ್ಯದರ್ಶಿ (ಈ ಲೇಖನವು ೨೦೦೯ರ ಜನವರಿ ೧೫ರ 'ದಿ ಸ್ಟೇಟ್ಸ್‌ಮನ್' ಸಂಚಿಕೆಯಲ್ಲಿ ಪ್ರಕಟವಾಗಿದ್ದಿತು.)

ಸ್ವಾಮೀಜಿಯವರ ಪ್ರಕಾರ, ಇದಕ್ಕೆ ದೈಹಿಕ, ನೈತಿಕ ಯೋಗ್ಯತೆಗಳನ್ನು ಬೆಳೆಸಿ ಕೊಳ್ಳುವ ಹಾಗೆ, ಆಧ್ಯಾತ್ಮಿಕ ಯೋಗ್ಯತೆಯನ್ನೂ ಬೆಳೆಸಿಕೊಳ್ಳಬೇಕು. ಇಂದು ಸಮಾಜವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಲು ಇಂತಹ ಆಧ್ಯಾತ್ಮಿಕ ಪ್ರೇರಣೆಯು ಸರ್ಜನಶೀಲ ಪ್ರವೃತ್ತಿಯಿರುವ ಮಾನವರನ್ನು ಪ್ರೇರೇಪಿಸುತ್ತದೆ. ಸುಪ್ತವಾಗಿರುವ ಮಾನವನ ಸರ್ಜಶೀಲತೆಗೆ, ಕ್ರಿಯಾಶಕ್ತಿಗೆ ಹೊರಹೊಮ್ಮಲು, ತನ್ಮೂಲಕ ಸಿದ್ಧಿಯನ್ನು ಪಡೆಯಲು ದಾರಿಯನ್ನು ಇದು ತೋರಿಸುತ್ತದೆ. ಎಲ್ಲ ಪ್ರತಿಕೂಲಗಳ ನಡುವೆಯೂ ಬೆಳೆದ ನಾಗರಿಕತೆಯ ಚರಿತ್ರೆಯು ನಮಗೆ ತೋರಿಸಿ ಕೊಡುವಂತೆ, ಇಂತಹ ಒಂದು ಶೋಧನೆಯೇ ಒಂದು ಉಪಯುಕ್ತವಾದ ಅನುಭವವನ್ನು ನೀಡುತ್ತದೆ.

ಅಪಾಯಕಾರಿಯಾದ, ಆದರೆ ಬಾಳಿಗೆ ಸಮೃದ್ಧತೆಯನ್ನು ತರುವ ಈ ಆತ್ಮಾನ್ವೇಷಣೆಯ ಹಾದಿಯಲ್ಲಿ ಇನ್ನೊಂದು ಪೂರ್ವಭಾವಿ ಷರತ್ತೆಂದರೆ ಆತ್ಮವಿಶ್ವಾಸ ಮತ್ತು ಸವಾಲುಗಳನ್ನು ಎದುರಿಸಬಲ್ಲ ಸ್ಥೈರ್ಯ. ತಮ್ಮಲ್ಲಿ ತಮಗೇ ವಿಶ್ವಾಸವಿಲ್ಲ ದವರನ್ನು ಸ್ವಾಮಿ ವಿವೇಕಾನಂದರು ನಾಸ್ತಿಕರು ಎಂದು ಕರೆದರು. ಈ ಆತ್ಮವಿಶ್ವಾಸ ಇದ್ದುದರಿಂದಲೇ ನಮ್ಮ ಋಷಿಗಳು ಪರಾತ್ಪರ ಶಕ್ತಿಯನ್ನು ಎದುರುಗೊಳ್ಳಲು ಬಾಳಿನ, ವಿಶ್ವದ ನಿಗೂಢತೆಯ ಆಳಕ್ಕೆ ಇಳಿದು ಅನ್ವೇಷಿಸಬಲ್ಲವರಾಗಿದ್ದರು. ಈ ಆತ್ಮವಿಶ್ವಾಸವೇ ಮಾನವರನ್ನು ಈ ಭೂಮಿಯಲ್ಲಿ, ಅಷ್ಟೇ ಏಕೆ ಚಂದ್ರನ ಮೇಲೆ ಕೂಡ, ಉನ್ನತ ಮಟ್ಟದಲ್ಲಿ ನಿಲ್ಲಿಸಿದೆ.

ಸದಾಕಾಲವೂ ಜಾಗೃತವಾಗಿರುವ ಈ ಮಾನವನ ಜಿಜ್ಞಾಸಾಪ್ರವೃತ್ತಿಗೆ, ಎಲ್ಲವನ್ನೂ ಗೆಲ್ಲುತ್ತೇನೆ ಎಂಬ ಧೀಶಕ್ತಿಗೆ ಸ್ವಾಮಿ ರಂಗನಾಥಾನಂದರು ನಮಸ್ಕರಿ ಸುತ್ತಾರೆ. ಮಾನವನ ಸಾಧ್ಯತೆಗಳನ್ನು ವರ್ಧಿಸುವ ವಿಜ್ಞಾನದ ಬಗ್ಗೆ, ಮತ್ತು ಮನೋ–ಸಾಮಾಜಿಕ ಸ್ತರದಲ್ಲಿ ಅಂತ್ಯವನ್ನೇ ಕಾಣದ ವಿಕಸನದ ಮೂಲಕ ಅದು ತರಬಹುದಾದ ದೂರಗಾಮಿ ಬದಲಾವಣೆಗಳ ಬಗ್ಗೆ ಅವರು ಮಾತನಾಡುತ್ತಾರೆ.

ಇದು ಟ್ಯಾಗೂರ್ ಅವರು ಹೇಳುವ

**ಓಯಿ ಮಹಾಮಾನಬ ಆಸೆ...**
**ದಿಕೇ ದಿಕೇ ರೊಮಾಂಚೋ ಲಗೇ,**
**ಮಾತೋರ್ಭೂಮಿರ್ ಘಸೇ ಘಸೇ...**

ಅಥವಾ ನಜ್ರುಲ್ ಅವರು ಹೇಳುವ

**ಸಿರ್ ನೆಹರೀ, ಅಮಾರಿ,**
**ನತಸಿರ್ ಓಯಿ ಶಿಖಾರ ಹಿಮದ್ರೀರ್...**

ಎಂಬ ಭಾವನೆಗಳಿಗೆ ಹತ್ತಿರವಾಗಿದೆ.

ತ್ರಿಮೂರ್ತಿಗಳಾದ ಶ್ರೀ ರಾಮಕೃಷ್ಣ, ಶ್ರೀ ಮಾತೆ ಮತ್ತು ಸ್ವಾಮಿ ವಿವೇಕಾ ನಂದರುಗಳೇ ದೃಷ್ಟಾಂತವಾಗಿದ್ದ ಸನಾತನ ವೇದಾಂತದ ಉಪದೇಶಗಳನ್ನೇ ಸ್ವಾಮಿ ರಂಗನಾಥಾನಂದರು ಮತ್ತೆ ಸಾರಭೂತವಾಗಿ ಪ್ರತಿಧ್ವನಿಸಿದರು. ಈ ವಿಷಯಗಳನ್ನು ಅನ್ವಯಿಸಿಕೊಳ್ಳುವ ಮೂಲಕ ಮೈಗೂಡಿಸಿಕೊಳ್ಳುವ ಮೂಲಕ, ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಕೊಂಡಿರುವ ಈ ಪ್ರಪಂಚದಲ್ಲಿ ಮಾನವನು ಕಳೆದುಹೋಗಿರುವ ತನ್ನ ಸ್ವರ್ಗವನ್ನು ಮತ್ತೆ ಪಡೆದುಕೊಳ್ಳಬಹುದು ಎಂಬುದನ್ನು ಈ ಪ್ರಚಂಡ ಶಾಸ್ತ್ರವೇತ್ತರು ಪ್ರಪಂಚದ ಮೂಲೆ ಮೂಲೆಗಳಲ್ಲಿ ಮತ್ತೆ ಮತ್ತೆ ಸಾರಿದರು.

* * * *

# ೧೩೫. ಆತ್ಮಸಂಯಮದ ಅತ್ಯದ್ಭುತ ಆಧ್ಯಾತ್ಮಿಕ ಶಕ್ತಿ

**–ಸ್ಟೀಫನ್ ಎಫ್. ವಾಕರ್***

ಸ್ವಾಮಿ ರಂಗನಾಥಾನಂದರು ಮತ್ತು ನನ್ನ ಗುರುಗಳಾದ ಬೋಸ್ಟನ್‌ನ ರಾಮಕೃಷ್ಣ ವೇದಾಂತ ಸೊಸೈಟಿಯ, ಸರ್ವಗತಾನಂದರು ಅತ್ಯಂತ ಶ್ರೇಷ್ಠ ಸ್ನೇಹಿತರಾಗಿದ್ದರು. ೧೯೬೦ರ ಕಡೆಯ ಭಾಗ ಹಾಗೂ ೧೯೭೦ರಲ್ಲಿ, ಸ್ವಾಮಿ ರಂಗನಾಥಾನಂದರೊಡನೆ ಭೇಟಿಯಾಗಲು ನನಗೆ ಸಾಧ್ಯವಾದುದಕ್ಕಾಗಿ ನಾನು ಇವರಿಬ್ಬರ ಸ್ನೇಹಕ್ಕೆ ಕೃತಜ್ಞನಾಗಿದ್ದೇನೆ. ೧೬೨೦ರಲ್ಲಿ, ಉತ್ತರ ಅಮೆರಿಕಾದಲ್ಲಿ ಪ್ರಥಮವಾಗಿ ಶಾಶ್ವತವಾದ ಆಂಗ್ಲ ವಸಾಹತು ಸ್ಥಾಪಿಸಲ್ಪಟ್ಟ, ಪ್ಲಿಮೌತ್‌ನ ಸಮುದ್ರತೀರದಿಂದ, ಕೆಲವು ಮೈಲಿಗಳ ದೂರದ ಮಾರ್ಷ್‌ಫೀಲ್ಡ್‌ನಲ್ಲಿನ ವೇದಾಂತ ಸೊಸೈಟಿಯ, ಬೇಸಿಗೆ ವಿಶ್ರಾಮಧಾಮದ ಶಾರದಾ ಆಶ್ರಮವು, ಆಧ್ಯಾತ್ಮಿಕ ವಾತಾವರಣವನ್ನೂ ಮತ್ತು ನಗರದ ಬಿಸಿಲು ಸೆಖೆಗಳಿಂದ, ಬಿಡುಗಡೆಯ ಸ್ವಾಗತವನ್ನು ನೀಡುತ್ತಿತ್ತು. ಭಕ್ತರಿಗೆ ಮತ್ತು ಸಂದರ್ಶಕರಿಗಾಗಿ ನಿರ್ಮಿಸಿದ್ದ ಅತ್ಯಂತ ಸರಳವಾದ ಬೇಸಿಗೆ ಕುಟೀರಗಳು ಒದಗಿಸಿದ್ದ ಕೋಣೆಗಳಲ್ಲೊಂದರಲ್ಲಿ, ಸ್ವಾಮಿ ರಂಗನಾಥಾನಂದರು ಇಲ್ಲಿಗೆ ಬಂದಾಗ ತಮ್ಮ ಸೋದರ ಸನ್ಯಾಸಿಗಳೊಡನೆ, ತೆರೆಗಳಿಂದಾವೃತವಾಗಿದ್ದ ಮುಖಮಂಟಪದಲ್ಲಿ ಸಂವಾದಿಸುತ್ತಿದ್ದರು.

೧೯೬೯, ಜುಲೈ ೨೧ರಂದು ಚಂದ್ರನ ಮೇಲ್ಮೈನ ಮೇಲೆ, ಪ್ರಪ್ರಥಮವಾಗಿ ಮಾನವರು ಓಡಾಡುವುದನ್ನು, ಈ ಇಬ್ಬರು ಸ್ವಾಮಿಗಳೂ, ಚಿಕ್ಕದೊಂದು ಕಪ್ಪು  ಬಿಳುಪು ದೂರದರ್ಶನದ ತೆರೆಯ ಮೇಲೆ ವೀಕ್ಷಿಸುತ್ತಿದ್ದಾಗ, ಬೋಸ್ಟನ್ ಮತ್ತು ಪ್ರಾವಿಡೆನ್ಸ್ ಕೇಂದ್ರದ ಇತರ ಭಕ್ತರೊಡನೆ ನಾನು ಕೂಡಾ ಅಲ್ಲಿದ್ದೆ. ಆದರೆ ನನ್ನ ಪರಿಗಣನೆಯಲ್ಲಿ ಚಂದ್ರನ ಮೇಲಿನ ನಡಿಗೆಯು ತೀರಾ ಕ್ಷುಲ್ಲಕ ಘಟನೆಯಾಗಿತ್ತು. ಮೆಸಾಚಸೆಟ್ಸ್‌ನ ಆ ಕಾಡುಗಳಲ್ಲಿ ಉಪನಿಷತ್ ಕಾಲದ, ಅರಣ್ಯಗಳಲ್ಲಿನ ಆಶ್ರಮದ ವಾತಾವರಣವನ್ನು ಮರುಸೃಷ್ಟಿಸಿದಂತಹ ಅದ್ಭುತವಾದ ಆಧ್ಯಾತ್ಮಿಕ ಚರ್ಚೆಗಳು ಮತ್ತು ಸಂವಾದಗಳು ನನ್ನ ಮನಸ್ಸನ್ನು ಪರವಶಗೊಳಿಸಿದವು ಮತ್ತು ಆ ನೆನಪು ಎಂದೆಂದಿಗೂ ನನ್ನೊಡನೆ ಇರುತ್ತದೆ.

ಮಾರ್ಷ್‌ಫೀಲ್ಡ್‌ನ ಸಮೀಪದಲ್ಲಿ ಆದರೆ ಬೋಸ್ಟನ್‌ನ ಪಶ್ಚಿಮದಿಂದ ಮತ್ತು ತೀರದಿಂದ ದೂರದಲ್ಲಿ, ಹೆನ್ರಿ ಡೇವಿಡ್ ಥೋರೋನ, ಉದ್ದೇಶಪೂರ್ಣ ಜೀವನದ ಪ್ರಯೋಗ ತಾಣ ಎಂದು ಪ್ರಸಿದ್ಧವಾದ ವಾಲ್ಡನ್ ಕೊಳವಿತ್ತು. ಇದು ಅಮೆರಿಕಾದಲ್ಲಿ ವಾನಪ್ರಸ್ಥ ಆಶ್ರಮದ ಧ್ಯಾನಪೂರ್ಣ ಪ್ರಶಾಂತತೆಯನ್ನು (ಥೋರೊ ಹೇಳಿದ್ದಂತೆ ವನಗಳಲ್ಲಿ ವಾಸ ಮಾಡುವುದು) ಮರುಸೃಷ್ಟಿಸುವ ಥೋರೋನ ಅಭಿಲಾಷೆ–ಮಹತ್ವಾಕಾಂಕ್ಷೆಯ ಫಲವಾಗಿದ್ದು, ಅಂದಿನಿಂದಲೂ ವಾಲ್ಡನ್ ಕೊಳವು, ಅವನ ಅಭಿಮಾನಿಗಳ ಯಾತ್ರಾಸ್ಥಳವಾಗಿತ್ತು. ಆದರೆ, ಈಗ ಇಲ್ಲಿ ಮಾರ್ಷ್‌ಫೀಲ್ಡಿನಲ್ಲಿ, ಥೋರೋ ಭೇಟಿ ಮಾಡಲು ಇಷ್ಟಪಡಬಹುದಾಗಿದ್ದ ಇಬ್ಬರು ಆಧ್ಯಾತ್ಮಿಕ ದೈತ್ಯರಿರುವಂತಹ ವರ್ತಮಾನ ಕಾಲದ ಆಶ್ರಮದೊಂದು ರೂಪುಗೊಂಡಿತ್ತು.

೧೯೬೦ ಮತ್ತು ೧೯೭೦ರಲ್ಲಿ ಬೋಸ್ಟನ್ ಮತ್ತು ಕೇಂಬ್ರಿಡ್ಜ್‌ಗೆ ಸಮೀಪವಿರುವ ಹಾರ್ವರ್ಡ್ ವಿಶ್ವವಿದ್ಯಾಲಯಕ್ಕೆ ಭೇಟಿಯಿತ್ತ ಅನೇಕ ಸಂದರ್ಭಗಳಲ್ಲಿ, ಸ್ವಾಮಿ ರಂಗನಾಥಾನಂದರು, ವಿವೇಕಾನಂದರ ಮಾರ್ಗವನ್ನನುಸರಿಸುವ ಬಗೆ ಬಹಳ ಜಾಗೃತರಾಗಿದ್ದರೆಂದು ನಾನು ನಂಬುತ್ತೇನೆ. ೧೮೯೬ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದ ಬೌದ್ಧಿಕ ಸಮುದಾಯಕ್ಕೆ ವಿವೇಕಾನಂದರು ವೇದಾಂತದ ಬಗೆಗೆ ಉಪನ್ಯಾಸ ನೀಡಿದ್ದ ಕೊಠಡಿಯಲ್ಲಿಯೇ

---

* ತೌಲನಿಕ ಸಾಹಿತ್ಯದಲ್ಲಿ ಪ್ರೊಫೆಸರ್, ರುಟ್‌ಗರ್ಸ್ ವಿಶ್ವವಿದ್ಯಾಲಯ, ಯು.ಎಸ್.ಎ.


ಸ್ವಾಮಿ ರಂಗನಾಥಾನಂದರು ಉಪನ್ಯಾಸ ನೀಡಿದ್ದನ್ನು ಒಂದೇ ಒಂದು ಸಾರಿ ನಾನು ಕೇಳಿದ್ದೇನೆ. ಇತಿಹಾಸದ ಆ ಅದ್ಭುತ ಕ್ಷಣದ ಭಾವೋದ್ವಿಗ್ನತೆಯನ್ನು ಸ್ವಲ್ಪಮಟ್ಟಿಗಾದರೂ ಸ್ವಾಮಿಗಳು ಖಂಡಿತ ಮರುಸೃಷ್ಟಿಸಿದರು. ಆದರೆ ಮತ್ತೊಂದು ಸಂದರ್ಭವು ಬಹುತೇಕ ವೈಯಕ್ತಿಕ ನೆನಪಿಗೆ ಸಂಬಂಧಿಸಿದೆ. ೧೯೭೧ರ ಚಳಿಗಾಲ ಮಳೆಗಾಲದ ನಡುವೆ, ನ್ಯೂಜೆರ್ಸಿಯ ರುಟ್‌ಗರ್ಸ್ ವಿಶ್ವವಿದ್ಯಾಲಯದಲ್ಲಿ ನಮ್ಮ ಅಧಿಕಾರಗಳನ್ನು (ಹುದ್ದೆಗಳನ್ನು) ವಹಿಸಿಕೊಳ್ಳಲು, ಸ್ನಾತಕ ವಿದ್ಯಾರ್ಥಿಗಳಾಗಿ ಅಧ್ಯಯನ ಮಾಡಿದ್ದ ಹಾರ್ವರ್ಡ್‌ನಿಂದ ನಾನು ಮತ್ತು ನನ್ನ ಪತ್ನಿ ಆಗ ತಾನೇ ಹೊರಟು ಬಂದಿದ್ದೆವು. ನನ್ನ ಗುರುಗಳಿಂದ ಮತ್ತು ಆರು ವರ್ಷಗಳಿಂದ ನನ್ನನ್ನು ರೂಪಿಸಿದ್ದ ನನ್ನ ಆಧ್ಯಾತ್ಮಿಕ ನೆಲೆಯಾಗಿದ್ದ ಕೇಂದ್ರದಿಂದ ಸುಮಾರು ಇನ್ನೂರು ಮೈಲಿಗಳಷ್ಟು ದೂರ ಬೇರ್ಪಟ್ಟು ನನ್ನ ಶಿಕ್ಷಕ ವೃತ್ತಿಯನ್ನು ಸ್ವಲ್ಪ ಆತಂಕದಿಂದಲೇ ಎದುರಿಸಿದ್ದು, ನಾನು ಸಂಪೂರ್ಣವಾಗಿ ಧೃತಿಗೆಟ್ಟು, ದಿಕ್ಕೆಟ್ಟವನಂತಾಗಿದ್ದೆ. ಮಹಾಭಾಗ್ಯವೆಂಬಂತೆ, ಅದೃಷ್ಟವಶಾತ್, ಅದೇ ಸಮಯದಲ್ಲಿ ಸ್ವಾಮಿ ರಂಗನಾಥಾನಂದರು, ಟೆಂಪಲ್ ಆಫ್ ವಿಸ್‌ಡಮ್‌ನ ಅತಿಥಿಗಳಾಗಿ ಸಮೀಪದ ಪ್ರಿನ್ಸ್‌ಟನ್‌ಗೆ ಭೇಟಿ ನೀಡಿದರು. ನ್ಯೂ ಬ್ರನ್ಸ್‌ವಿಕ್ ಮತ್ತು ಪ್ರಿನ್ಸ್‌ಟನ್ ನಡುವೆ ಇರುವ ೧ನೆಯ ಮಾರ್ಗದ ಹಾದಿಬದಿಯ ಹೋಟೆಲ್‌ನ ಕೊಠಡಿಯಲ್ಲಿ ಅವರು ನಮ್ಮಿಬ್ಬರೊಡನೆಯೂ ಮಾತನಾಡಿದರು. ಅವರು ಹೇಳಿದ ಮಾತುಗಳು, ಅದಕ್ಕಿಂತಲೂ ಹೆಚ್ಚಾಗಿ ಅವರ ಸಾನ್ನಿಧ್ಯವು, ಹೊಸ ಜೀವನವ್ನು ಮತ್ತು ಹೊಸ ಅಧ್ಯಾತ್ಮಿಕ ಸಂಘರ್ಷವನ್ನು ಎದುರಿಸಲು ನನಗೆ ಧೈರ್ಯ ಹಾಗೂ ಚೈತನ್ಯಗಳನ್ನು ನೀಡಿತು.

# ಭಾಗ ೫
# ಚಿತ್ರ ಸಂಪುಟ

Blank



೧. ಬ್ರಿಟನ್ನಿನ ಮಾಜಿ ಪ್ರಧಾನ ಮಂತ್ರಿ ಜೇಮ್ಸ್ ಕ್ಯಾಲಘನ್ ಅವರೊಡನೆ
ಹೈದರಾಬಾದಿನ ರಾಮಕೃಷ್ಣ ಮಠದಲ್ಲಿ (೧೯೮೨)




೨. ಶ್ರೀಮತಿ ಇಂದಿರಾಗಾಂಧಿ ಅವರಿಂದ ಅಭಿನಂದನೆ  ಸ್ವೀಕರಿಸುತ್ತಿರುವುದು (ಬಹುಶಃ ೧೯೭೧ರಲ್ಲಿ)



೩. ಕರಾಚಿಯ ರೈಲು ನಿಲ್ದಾಣದಲ್ಲಿ ಡಾ. ಎಸ್. ರಾಧಾಕೃಷ್ಣನ್ ಅವರನ್ನು ಬರಮಾಡಿಕೊಳ್ಳುತ್ತಿರುವುದು
(ಅಕ್ಟೋಬರ್ ೧೯೪೫)




೪. ನವದೆಹಲಿಯ ರಾಮಕೃಷ್ಣ ಮಿಶನ್ನಿನಲ್ಲಿ ಭಾರತದ ಪ್ರಧಾನಮಂತ್ರಿ ಪಂಡಿತ್ ಜವಾಹರಲಾಲ್ ನೆಹರೂ ಅವರೊಡನೆ
(೨೩ ನವೆಂಬರ್ ೧೯೫೬)



೫. ಹೈದರಾಬಾದಿನ ರಾಮಕೃಷ್ಣ ಮಠದಲ್ಲಿ ಅಮೆರಿಕಾದ ರಾಯಭಾರಿ ಶ್ರೀ ಕೆನ್ನೆತ್ ಗಾಲ್‌ಬ್ರೈತ್ ಮತ್ತು ಉದ್ಯಮಿ ಶ್ರೀ ರಾಮಕೃಷ್ಣ ಬಜಾಜ್ ಅವರೊಡನೆ (೧೯೮೩)



೬. ಚಿಲಿಯ ಸ್ಯಾಂಟಿಯಾಗೊ ಪೊಲೀಸ್ ಅಧಿಕಾರಿಗಳ ತರಬೇತಿ ಶಾಲೆಯಲ್ಲಿ ಸ್ವಾಮಿಗಳಿಗೆ ಸ್ವಾಗತ (ಆಗಸ್ಟ್ ೧೯೬೯). ಎಡಬದಿಯಲ್ಲಿ ಇರುವವರು ಚಿಲಿಯಲ್ಲಿ ಭಾರತೀಯ ರಾಯಭಾರಿಯಾಗಿದ್ದ ಶ್ರೀ ಕೆ. ಎಲ್. ಮೆಹ್ತಾ



೭. ನೇಪಾಳದ ಕಠ್ಮಂಡುವಿನಲ್ಲಿ ಮಹಾಮಾನ್ಯ ರಾಜ ಮಹೇಂದ್ರ ಮತ್ತು ಭಾರತದ ರಾಯಭಾರಿ ಶ್ರೀಮನ್ ನಾರಾಯಣ್ ಅವರೊಂದಿಗೆ (೧೭ ಮೇ ೧೯೬೫



೮. ನವದೆಹಲಿಯ ರಾಮಕೃಷ್ಣ ಮಿಶನ್‌ನಲ್ಲಿ ಶ್ರೀಮತಿ ಸಿರಿಮಾವೋ ಬಂಡಾರ್‌ನಾಯಿಕೆ (ಶ್ರೀಲಂಕಾದ ಪ್ರಧಾನ ಮಂತ್ರಿಗಳು) ಅವರೊಂದಿಗೆ. ಮಧ್ಯೆ ಇರುವವರು ಭಾರತದಲ್ಲಿ ಬರ್ಮಾದ ರಾಯಭಾರಿಯಾಗಿದ್ದ ಶ್ರೀಮತಿ ಔಂಗ್‌ಸಾನ್ (೧೯೬೦)



೯. ನವದೆಹಲಿಯ ರಾಮಕೃಷ್ಣ ಮಿಶನ್ನಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಡಾ. ರಾಜೇಂದ್ರ ಪ್ರಸಾದ್ (ಭಾರತದ ಪ್ರಥಮ ರಾಷ್ಟ್ರಪತಿ) ಅವರೊಂದಿಗೆ. (೩೦ ನವೆಂಬರ್ ೧೯೫೭)



೧೦. ಅಂದಿನ ಪ್ರಧಾನಮಂತ್ರಿ ಶ್ರೀ ರಾಜೀವ್ ಗಾಂಧಿ ಅವರೊಂದಿಗೆ ನವದೆಹಲಿಯ ರಾಮಕೃಷ್ಣ ಮಿಶನ್ನಿನಲ್ಲಿ ನಡೆದ ಶ್ರೀ ರಾಮಕೃಷ್ಣರ ೧೫೦ನೆಯ ಜನ್ಮದಿನೋತ್ಸವ ಸಮಾರಂಭದಲ್ಲಿ



೧೧. ಆಂಧ್ರ ಪ್ರದೇಶದ ಅಂದಿನ ಮುಖ್ಯಮಂತ್ರಿ ಶ್ರೀ ವೆಂಗಲರಾವ್ ಮತ್ತು ಆಂಧ್ರ ಪ್ರದೇಶದ ಅಂದಿನ ರಾಜ್ಯಪಾಲರಾದ
ಶ್ರೀಮತಿ ಶಾರದಾ ಮುಖರ್ಜಿ ಅವರೊಂದಿಗೆ




೧೨. ಕೇರಳದ ಕೊಟ್ಟಾಯಮ್‌ನಲ್ಲಿ ಶ್ರೀಮತಿ ಮತ್ತು ಶ್ರೀ ಪಿ. ಸಿ. ಅಲೆಕ್ಸಾಂಡರ್ ಹಾಗೂ
ಪ॥ ಪೂ॥ ಬೆಸಲಿಯೋನ್ ಮಾರ್ ಥಾಮಸ್ ಮ್ಯಾಥುಸ್ ಅವರೊಂದಿಗೆ (೨೮ ಸೆಪ್ಟೆಂಬರ್ ೧೯೯೦)



೧೩. ಅಂದಿನ ಮುಖ್ಯಮಂತ್ರಿ ಶ್ರೀ ಎನ್. ಟಿ. ರಾಮರಾವ್ ಮತ್ತು ಶ್ರೀ ಸುಬ್ರಹ್ಮಣ್ಯಂ, ಡಾ. ಶಿವಾರೆಡ್ಡಿ ಅವರೊಂದಿಗೆ
ಭಾರತೀಯ ವಿದ್ಯಾ ಭವನದ ಹೈದರಾಬಾದ್ ಕೇಂದ್ರದ ಶಿಲಾನ್ಯಾಸ ಸಮಾರಂಭದ ಸಂದರ್ಭದಲ್ಲಿ (೧೯೮೩)




೧೪. ಅಂದಿನ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿ ಮತ್ತು ಶ್ರೀ ಏಕನಾಥ್ ಜೀ ರಾನಡೆ ಅವರೊಂದಿಗೆ
ಕನ್ಯಾಕುಮಾರಿಯಲ್ಲಿ ಸ್ವಾಮಿ ವಿವೇಕಾನಂದ ಶಿಲಾಸ್ಮಾರಕದ ಉದ್ಘಾಟನೆಯ ಸಂದರ್ಭದಲ್ಲಿ



೧೫. ಜಮ್ಮು ಮತ್ತು ಕಾಶ್ಮೀರದ ಅಂದಿನ ಮುಖ್ಯಮಂತ್ರಿ ಶ್ರೀ ಶೇಕ್ ಫಾರೂಕ್ ಅಬ್ದುಲ್ಲಾ ಅವರೊಂದಿಗೆ ಶ್ರೀ ನಗರದಲ್ಲಿ.
(ಸೆಪ್ಟೆಂಬರ್ ೧೯೮೬)



೧೬. ಹೈದರಾಬಾದಿನ ರಾಮಕೃಷ್ಣ ಮಠದಲ್ಲಿ ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿ ಅವರನ್ನು ಸನ್ಮಾನಿಸುತ್ತಿರುವುದು.



೧೭. ಶ್ರೀ ಎಲ್. ಕೆ. ಅಡ್ವಾಣಿ ಅವರೊಂದಿಗೆ ಬೇಲೂರು ಮಠದಲ್ಲಿ (೨೦೦೩)



೧೮. ಭಾರತದ ಅಂದಿನ ರಾಷ್ಟ್ರಪತಿ ಡಾ. ಎ. ಪಿ. ಜೆ. ಅಬ್ದುಲ್ ಕಲಾಂ ಅವರು ಬೇಲೂರು ಮಠದಲ್ಲಿ ಸ್ವಾಮೀಜಿ ಅವರಿಂದ ಪ್ರೀತಿಯ ಕಾಣಿಕೆಯನ್ನು ಸ್ವೀಕರಿಸುತ್ತಿರುವುದು (ಅಕ್ಟೋಬರ್ ೨೦೦೪)




೧೯. ರಾಷ್ಟ್ರಪತಿ ಶ್ರೀ ಕೆ. ಆರ್. ನಾರಾಯಣನ್ ಅವರಿಂದ ಸ್ವಾಮೀಜಿ ಅವರು ಗಾಂಧಿ
ಶಾಂತಿ ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವುದು (೧೯೯೮)



೨೦. ಡಾ. ಕರ್ಣಸಿಂಹ ಅವರೊಂದಿಗೆ  ನವದೆಹಲಿಯ ರಾಮ್ಕೃಷ್ಣ ಮಿಶನ್ನಿನಲ್ಲಿ



೨೧. ರಷ್ಯಾದ ಖ್ಯಾತ ಶಿಕ್ಷಣವೇತ್ತರಾದ ಶ್ರೀ ಇ. ವಿ. ಚೆಲಿಶೇವ್ ಅವರೊಂದಿಗೆ ದೆಹಲಿಯ ರಾಮಕೃಷ್ಣ ಮಿಶನ್‌ನಲ್ಲಿ



೨೨. ಅಮೆರಿಕಾ ಸಂಯುಕ್ತ ಸಂಸ್ಥಾನದ ಹೂಸ್ಟನ್‌ನಲ್ಲಿ ಸ್ವಾಮೀಜಿ



೨೩. ಆಸ್ಟ್ರೇಲಿಯಾದ ಲೌರಾದ ಗಣೇಶ ಆಶ್ರಮದಲ್ಲಿ ಭಕ್ತರೊಂದಿಗೆ



೨೪. ಆಸ್ಟ್ರೇಲಿಯಾದಲ್ಲಿ



೨೫. ಆಸ್ಟ್ರೇಲಿಯಾದಲ್ಲಿ (ಸ್ವಾಮಿ ರುದ್ರಾತ್ಮಾನಂದ ಅವರೊಡನೆ)



೨೬. ಆಸ್ಟ್ರೇಲಿಯಾದ ಲೌರಾದ ಗಣೇಶ ಆಶ್ರಮದಲ್ಲಿ ಸಭಿಕರನ್ನುದ್ದೇಶಿಸಿ ಮಾತನಾಡುತ್ತಿರುವುದು



೨೭. ಸ್ವಾಮೀಜಿಯವರ ಡಚ್ ನಿವಾಸ, ಆರ್ಷೋೀವೆನ್ ಕುಟುಂಬದ ಮನೆ



೨೮. ಹಾಲೆಂಡಿನಲ್ಲಿ ಭಕ್ತರೊಂದಿಗೆ



೨೯. ಮಲೇಷ್ಯಾದಲ್ಲಿ



೩೦. ಬಲ್ಗೇರಿಯಾದ ರಾಯಭಾರಿಯೊಂದಿಗೆ ಹೈದರಾಬಾದಿನ ರಾಮಕೃಷ್ಣ ಮಠದಲ್ಲಿ (೧೯ ಸೆಪ್ಟೆಂಬರ್ ೧೯೮೧)



೩೧. ಪಶ್ಚಿಮ ಜರ್ಮನಿಯಲ್ಲಿ ಮುಲ್‌ಹೀಮ್ ವೇದಾಂತ ಅಧ್ಯಯನ ವಿಹಾರದ ಭಾಗಿಗಳೊಂದಿಗೆ (೧೯೮೪)



೩೨. ಜಪಾನ್‌ನಲ್ಲಿ ಥೇರಜಾವಾ ಮತ್ತು ಅವರ ಕುಟುಂಬದೊಂದಿಗೆ– ಜೊತೆಗೆ ಇರುವವರು ನಗೋಯಾ ವಿಶ್ವವಿದ್ಯಾಲಯದ
ಪ್ರೊ. ಹಿದೆನೋರಿ ಕಿತಗಾವಾ ಮತ್ತು ಒಕಾಸ ವಿಶ್ವವಿದ್ಯಾನಿಲಯದ ಪ್ರೊ. ಹೊಕ್ಯೋ (೧೯೫೮)



೩೩. ಚಿಲಿಯ ಸ್ಯಾಂಟಿಯಾಗೋದಲ್ಲಿನ ಪೊಲೀಸ್ ಅಧಿಕಾರಿಗಳ ತರಬೇತಿ ಶಾಲೆಯಲ್ಲಿ ಅಧಿಕಾರಿಗಳನ್ನು ಉದ್ದೇಶಿಸಿ ಭಾಷಣ ಮಾಡುತ್ತಿರುವುದು. (೨೦ ಆಗಸ್ಟ್ ೧೯೬೯)



೩೪. ಝಾಂಬಿಯಾದಲ್ಲಿ ಝಾಂಬಿಯಾ ಸಂಪುಟದ ಸಚಿವರೊಂದಿಗೆ (೧೯೭೪)



೩೫. ಕೊಲಂಬಿಯಾ ಜಿಲ್ಲೆಯ ವಾಷಿಂಗ್‌ಟನ್ನಿನಲ್ಲಿನ ಭಾರತೀಯ ದೂತಾವಾಸದಲ್ಲಿ (೨೫ ಆಗಸ್ಟ್ ೧೯೭೧) –
ಭಾರತೀಯ ರಾಯಭಾರಿ ಅವರ ಪತ್ನಿ ಶ್ರೀಮತಿ ಅವರು ಮೇಖಲಾ ಝಾ ಸ್ವಾಮೀಜಿ ಅವರನ್ನು ಪರಿಚಯಿಸಿ ಕೊಡುತ್ತಿರುವುದು.



೩೬. ಕಾಬೂಲ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ನೀಡುತ್ತಿರುವುದು (೨೫ ಮಾರ್ಚ್ ೧೯೭೩) – ಅವರ ಜೊತೆಯಲ್ಲಿ ಇರುವವರು
(ಅಂದಿನ ಭಾರತೀಯ ರಾಯಭಾರಿ) ಶ್ರೀ ಕೆ. ಎಲ್. ಮೆಹ್ತಾ